THE BOOK WAS DRENCHED

TEXT PROBLEM WITHIN THE BOOK ONLY

UNIVERSAL LIBRARY
OU_200735
UNIVERSAL LIBRARY

OSMANIA UNIVERSITY LIBRARY

Call No. K294.11/V46R Accession No. K. 52

Author [illegible] H.P.

Title [illegible] Volume 2

This book should be returned on or before the date last marked below.



# ಋಗ್ವೇದಸಂಹಿತಾ

ಭಾಗ ೨೦

**ಚತುರ್ಥಾಷ್ಟಕದಲ್ಲಿ**

**ನಾಲ್ಕು, ಐದು ಮತ್ತು ಆರನೆಯ ಅಧ್ಯಾಯಗಳು**

**ಐದನೆಯ ಮಂಡಲದ ಸೂಕ್ತಗಳು, ೬೩–೮೭ ಮತ್ತು**

**ಆರನೆಯ ಮಂಡಲದ ಸೂಕ್ತಗಳು, ೧–೨೮**

Karnatak Sahitya Mandira.
Market, DHARWAR.
(Mysore State)

## ಶ್ರೀ ಜಯಚಾಮರಾಜೇಂದ್ರ ವೇದರತ್ನಮಾಲಾ

ಸಂಖ್ಯೆ—೨೦

# RIG-VEDA

ಸಾಯಣಭಾಷ್ಯಸಮೇತಾ

# ಋಗ್ವೇದಸಂಹಿತಾ

(ಕರ್ಣಾಟಕ ಭಾಷಾರ್ಥಾನುವಾದವಿವರಣೆಗಳೊಡನೆ)

**ಭಾಗ—೨೦**

**ಚತುರ್ಥಾಷ್ಟಕದಲ್ಲಿ**

**ನಾಲ್ಕು, ಐದು ಮತ್ತು ಆರನೆಯ ಅಧ್ಯಾಯಗಳು**

ಐದನೆಯ ಮಂಡಲದ ಸೂಕ್ತಗಳು, ೬೩—೮೭

ಮತ್ತು

ಆರನೆಯ ಮಂಡಲದ ಸೂಕ್ತಗಳು, ೧—೨೮

*Translated with Exhaustive and Critical Notes*
*with Explanations*
*by*

**Asthana Mahavidwan**
**H. P. VENKATA RAO,**
*Editor.*

*Printed at*
SREE SHARADA PRESS,
MYSORE.
1953

Published by the gracious permission of

His Highness

Sri Jayachamarajendra Wadiyar Bahadur,

G.C.B., G.C.S.I., Maharaja of Mysore.



ಯದುವಂಶಪಯಃಪಾರಾವಾರಸುಧಾಕರರೂ ಸತ್ಸಂಪ್ರದಾಯವೈದಿಕವಿದ್ಯಾವರ್ಧಕರೂ
ಮೈಸೂರು ದೇಶವನ್ನಾಳುವ ಧರ್ಮಪ್ರಭುಗಳೂ ಆದ ಶ್ರೀಮನ್ಮಹಾರಾಜ
**ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್,**
**ಜಿ.ಸಿ.ಬಿ., ಜಿ.ಸಿ.ಎಸ್.ಐ. ರವರು.**

ವೇದಪ್ರಕಟನಕಾರ್ಯಕ್ಕಾಗಿ ನಿಯಮಿತವಾಗಿರುವ

# ವೇದವಿಮರ್ಶನವಿದ್ವನ್ಮಂಡಲಿ

Translator & Editor :

**ಆಸ್ಥಾನ ಮಹಾವಿದ್ವಾನ್ H. P. ವೆಂಕಟರಾವ್**

**ಸಹಾಯಕ ವಿದ್ವನ್ಮಂಡಲಿ**

1. ಬ್ರ॥ ಶ್ರೀ॥ G. N. ಚಕ್ರವರ್ತಿ M.A.
   Professor of Sanskrit. Ṡt. Philomina's College, Mysore.
2. ಬ್ರ॥ ಶ್ರೀ॥ ಜಿ. ವಿಷ್ಣುಮೂರ್ತಿಭಟ್ಟರು, ಸಾಹಿತ್ಯ ವ್ಯಾಕರಣವಿದ್ವಾನ್,
   ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾಪಾಠಶಾಲಾ, ಮೈಸೂರು.
3. ಆಸ್ಥಾನ ವಿದ್ವಾನ್ ಬ್ರ॥ ಶ್ರೀ॥ H. ಗಂಗಾಧರಶಾಸ್ತ್ರಿಗಳು, ಜ್ಯೋತಿಷ ವಿದ್ವಾನ್
   ಮತ್ತು ಕರ್ಣಾಟಕ ಭಾಷಾಪಂಡಿತರು.
4. ಬ್ರ॥ ಶ್ರೀ॥ ಶ್ರೀನಿವಾಸಶಾಸ್ತ್ರಿಗಳು, ಋಗ್ವೇದ ಘನಪಾಠಿಗಳು
5. ಬ್ರ॥ ಶ್ರೀ॥ ಹಿಟ್ಟವಳ್ಳಿ ಬಿಳಿಗಿರಿರಂಗಾಜೋಯಿಸರು, ಶ್ರೌತವಿದ್ವಾನ್.
6. ಬ್ರ॥ ಶ್ರೀ॥ ಹಿಟ್ಟವಳ್ಳಿ ದೇವರಭಟ್ಟರು, ಮೀಮಾಂಸಾದರ್ಶನಪಂಡಿತರು.
7. ಬ್ರ॥ ಶ್ರೀ॥ ವೆಂಕಟರಮಣಾಚಾರ್, M.A., B.T., ಸಾಹಿತ್ಯವಿದ್ವಾನ್.
8. ಬ್ರ॥ ಶ್ರೀ॥ S. ರಂಗನಾಥನ್, ಸಾಹಿತ್ಯ ವಿದ್ವಾನ್, ಅರಮನೆ ಸರಸ್ವತೀ ಭಂಡಾರ.
9. ಬ್ರ॥ ಶ್ರೀ॥ ಪುತ್ತೂರು ಅನಂತಕೃಷ್ಣಮಾಚಾರ್, ಸಾಹಿತ್ಯವಿದ್ವಾನ್,
   Govt. Oriental Research Institute, Mysore.
10. ಬ್ರ॥ ಶ್ರೀ॥ S. ಸೀತಾರಾಮಶಾಸ್ತ್ರಿಗಳು, ರಿಟೈರ್ಡ್ ಪಂಡಿತರು.
    Govt. Oriental Research Institute, Mysore.

# ಪೀಠಿಕೆ.

ಋಕ್ಸಂಹಿತೆಯ ಈ ಭಾಗದಲ್ಲಿ ಐದನೆಯ ಮಂಡಲವು ಮುಗಿದು ಆರನೆಯ ಮಂಡಲದಲ್ಲಿ ೨೮ ಸೂಕ್ತಗಳು ವಿವೃತವಾಗಿವೆ. ಐದನೆಯ ಮಂಡಲದ ಮುಖ್ಯಋಷಿಗಳ ವಿಷಯವನ್ನು ನಾವು ಹಿಂದೆಯೇ ವಿವರಿಸಿದ್ದರೂ ಸಪ್ತವಧ್ರಿ ಎಂಬ ಋಷಿಯ ವಿಷಯದಲ್ಲಿ ಕೆಲವು ವಿಷಯಗಳನ್ನು ಇಲ್ಲಿ ಚರ್ಚಿಸುವುದು ಸೂಕ್ತವಾಗಿದೆ. ಬೃಹದ್ದೇವತಾಕಾರರು ಸಪ್ತವಧ್ರಿನಾಮದ ನಿರ್ವಚನವನ್ನು ಈ ರೀತಿ ವಿವರಿಸಿದ್ದಾರೆ—

**ಷಳಾಶ್ವಿನಾನಿ ಗರ್ಭಾರ್ಥಂ ಪಂಚಚೋಪನಿಷತ್ಸ್ತುತಿಃ ।**
**ಸಪ್ತ ಕೃತ್ವಾಪರಾಧಾನ್ವೈ ವಿಫಲೇ ದಾರಸಂಗ್ರಹೇ ॥**
**ಋಷಿಃ ಕೃತೋಽಶ್ವಮೇಧೇನ ಭಾರತೇನೇತಿ ವೈ ಶ್ರುತಿಃ ।**
**ತಮಷ್ಟಮೇಽಪರಾಧೇ ತು ವೃಕ್ಷದ್ರೋಣ್ಯಾಂ ಸ ಪಾರ್ಥಿವಃ ॥**
**ಋಬೀಸೇ ಹ ವಿನಿಕ್ಷಿಪ್ಯ ಸ್ಕನ್ನಂ ರಾತ್ರ್ಯಾ ನ್ಯಧಾರಯತ್ ।**
**ಸೋಽಶ್ವಿನಾವಿತಿ ಸೂಕ್ತೇನ ತುಷ್ಟಾವರ್ಷಿಃ ಶುಭಸ್ಪತೀ ॥**
**ತೌ ತಂ ತಸ್ಮಾತ್ಸಮುದ್ಧೃತ್ಯ ಚಕ್ರತುಃ ಸಫಲಂ ಪುನಃ ।**
**ತೃಚಃ ಸ್ವಸ್ಯೈವ ಗರ್ಭಾರ್ಥಂ ಸ್ವಪತಸ್ತಸ್ಯ ಗರ್ಭವತ್ ॥**
**ಯಥಾ ವಾತ ಇತಿ ಜ್ಞೇಯೋ ತ್ವಶ್ವಿಭ್ಯಾಮಿತರೌ ತೃಚೌ ।**
**ಸ್ರವತಾಮಪಿ ಗರ್ಭಾಣಾಂ ದೃಷ್ಟಂ ತದನುಮಂತ್ರಣಮ್ ॥**
**ಭಾವವೃತ್ತಂ ತು ತದ್ವತ್ಸ್ಯಾತ್ತಥಾ ರೂಪಂ ಹಿ ದೃಶ್ಯತೇ ।**
**ಜರಾಯುಗರ್ಭಶಬ್ದಾಭ್ಯಾಮೇತದ್ರೂಪಂ ಹಿ ದೃಶ್ಯತೇ ॥**

(ಬೃ. ದೇ. ೫-೮೨-೮೭)

೫ ನೇ ಮಂಡಲದ ೭೮ ನೇ ಸೂಕ್ತದಲ್ಲಿ ೫ ರಿಂದ ೯ ನೇ ಮಂತ್ರದವರೆಗೆ ಗರ್ಭವು ಪ್ರವಿಸಿ ಸುಖಪ್ರಸವವಾಗಲು ಪಠಿಸುವ ಋಕ್ಕುಗಳು ಗರ್ಭಸ್ರಾವಿಣ್ಯುಪನಿಷತ್ತೆಂದು ಪ್ರಸಿದ್ಧವಾಗಿದೆ. ಸಾಯಣರು ೭ ರಿಂದ ೯ ರವರೆಗಿನ ಕೊನೆಯ ಮೂರು ಮಂತ್ರಗಳು ಮಾತ್ರ ಈ ಗುಂಪಿಗೆ ಸೇರತಕ್ಕವೆಂದು ತಿಳಿಸಿದ್ದಾರೆ. ಭರತವಂಶಸ್ಥನಾದ ಅಶ್ವಮೇಧನೆಂಬ ರಾಜನ ಪತ್ನಿಯು ಸಂತತಿಯಿಲ್ಲದವಳಾಗಿದ್ದುದರಿಂದ, ಅವಳಲ್ಲಿ ಗರ್ಭೋತ್ಪತ್ತಿಯಾಗಲು ಸಹಾಯಕನಾಗಿರುವಂತೆ ಈ ಋಷಿಯನ್ನು ನೇಮಿಸಿದಾಗ ಏಳು ಸಲವೂ ಇವನ ಪ್ರಯತ್ನವು ವ್ಯರ್ಥವಾಯಿತು. ಆಗ ಪುನಃ ಎಂಟನೆಯ ಸಲ ನಿಯೋಜಿಸಲ್ಪಟ್ಟನು. **ಸಪ್ತವಧ್ರಿ** ಎಂದರೆ ಏಳು ಸಲ ಸತ್ತ್ವರಹಿತನಾದವನು. ಎಂಟನೆಯ ಸಲವೂ ಇವನ ಪ್ರಯತ್ನವು ವ್ಯರ್ಥವಾಗಲು ಇವನನ್ನು ವೃಕ್ಷದ್ರೋಣಿಯೊಳಕ್ಕೆ ಹಾಕಿ ಒಂದು ದೊಡ್ಡ ಹಳ್ಳದೊಳಕ್ಕೆ ಹಾಕಿದನು. ತಾನೇ ವೃಕ್ಷದ್ರೋಣಿಯಲ್ಲಿ ಗರ್ಭರೂಪದಲ್ಲಿದ್ದನು. ಆಗ ಆ ಋಷಿಯು ಅಶ್ವಿನೀದೇವತೆಗಳನ್ನು **ಅಶ್ವಿನಾ** ( ೫-೭೮ ) ಎಂದು ಪ್ರಾರಂಭವಾಗುವ ಸೂಕ್ತದಿಂದ ಸ್ತುತಿಸಿದನು. ಆಗ ಅವರು ಅವನನ್ನು ಆ ಹಳ್ಳದಿಂದ ಮೇಲಕ್ಕೆತ್ತಿ ಅವನಿಗೆ ಪುತ್ರೋತ್ಪಾದನ ಸಾಮರ್ಥ್ಯವುಂಟಾಗುವಂತೆ ಮಾಡಿದರು. **ಯಥಾ ವಾತಃ** (೫-೭೮-೭ ರಿಂದ ೯) ಎಂಬ ಮಂತ್ರದಿಂದಾರಂಭವಾಗುವ ಮೂರು ಮಂತ್ರಗಳೂ ಗರ್ಭದಿಂದ ಶಿಶುವು

ಹೊರಕ್ಕೆ ಬರಲು ಸುಲಭವಾದ ಅವಕಾಶವನ್ನು ಕಲ್ಪಿಸುವ ಸಲುವಾಗಿ ಅಶ್ವಿನೀದೇವತೆಗಳನ್ನು ಪ್ರಾರ್ಥಿಸತಕ್ಕ ಮಂತ್ರಗಳಾಗಿರುವವು. ಕೇವಲ ಆ ಸಂದರ್ಭದಲ್ಲಿಯೇ ಅಲ್ಲದೇ, ಸಕಲವಿಧವಾದ ಗರ್ಭವೂ ಸ್ರವಿಸಿ ಸುಲಭವಾದ ಪ್ರಸವವಾಗಲು ಸಹ ಈ ಮಂತ್ರಗಳು ಪಠಿತವಾಗುತ್ತವೆ. ಇದೇ ಸೂಕ್ತದ ವಿಷಯ ವಿಭಾಗವನ್ನು ಕುರಿತು ಸಾಯಣರು ಈ ರೀತಿ ತಿಳಿಸಿದ್ದಾರೆ. ಅವರು ತಿಳಿಸಿರುವಂತೆ ಕಥಾವಿಷಯವು ಇನ್ನೊಂದು ವಿಧವಾಗಿದೆ. (ಋ. ಸಂ. ೫-೭೮-೫ ಸಾ. ಭಾ. ಪೀಠಿಕಾ)

ಸಪ್ತವಧ್ರಿಯ ದಾಯಾದರು ಅವನನ್ನು ಒಂದು ಪೆಟ್ಟಿಗೆಯೊಳಗೆ ಹಾಕಿ ಅಲ್ಲಿ ಅವನನ್ನು ಬಂಧಿತನನ್ನಾಗಿ ಮಾಡಿ ಪೆಟ್ಟಿಗೆಗೆ ಬೀಗಮುದ್ರೆಯನ್ನು ಹಾಕಿಬಿಟ್ಟರು. ರಾತ್ರಿಕಾಲದಲ್ಲಿ ಅವನನ್ನು ಈ ರೀತಿ ಬಂಧನದಲ್ಲಿಟ್ಟು ಹಗಲಾದಾಗ ಮಾತ್ರ ಹೊರಕ್ಕೆ ಬಿಡುತ್ತಿದ್ದರು. ಈ ರೀತಿ ಅವನು ಅನೇಕ ರಾತ್ರಿಗಳನ್ನು ಪೆಟ್ಟಿಗೆಯಲ್ಲಿಯೇ ಕಳೆಯುತ್ತಾ ಬಹಳ ದುಃಖಪಡುತ್ತಿದ್ದನು. ಬಹಳ ಕಾಲದ ದುಃಖದಿಂದ ಕೃಶನಾಗಿ ಕೊನೆಗೆ ಈ ಬಂಧನದಿಂದ ಮುಕ್ತನಾಗುವ ಉಪಾಯ ವನ್ನು ಯೋಚಿಸಿದನು. ಆಗ ಅಶ್ವಿನೀದೇವತೆಗಳನ್ನು ಸ್ತುತಿಸಿ ಅವರ ಸಹಾಯವನ್ನು ಪ್ರಾರ್ಥಿಸಿದನು. ಅವರು ಬಂದು ಇವನ ಪೆಟ್ಟಿಗೆಯ ಬಾಗಿಲನ್ನು ತೆಗೆದು ಇವನು ಹೊರಕ್ಕೆ ಬರುವಂತೆ ಮಾಡಿ ತಾವು ಅದೃಶ್ಯರಾದರು. ಇವನು ಹೊರಕ್ಕೆ ಬಂದು ರಾತ್ರೆ ತನ್ನ ಪತ್ನಿಯೊಡನಿದ್ದು ಬೆಳಗಾದಮೇಲೆ ದಾಯಾದರ ಭಯದಿಂದ ಪುನಃ ಪೆಟ್ಟಿಗೆಯೊಳಕ್ಕೆ ಹೋಗಿ ಕುಳಿತುಕೊಳ್ಳುತ್ತಿದ್ದನು. ಪ್ರತಿದಿನವೂ ಹೀಗೆ ರಾತ್ರಿಕಾಲದಲ್ಲಿ ಪತ್ನಿಯೊಡನಿದ್ದು ಪ್ರಾತಃಕಾಲದಲ್ಲಿ ಯಥಾವಸ್ಥಿತನಾಗಿ ಪೆಟ್ಟಿಗೆಯಲ್ಲಿರುತ್ತಿದ್ದನು. ಆಗ ಕೃತಜ್ಞತಾಪೂರ್ವಕವಾಗಿ ಈ ಮಂತ್ರಗಳನ್ನು ಪಠಿಸಿದನು (೫ ; ೬) ಎಂದು ಸಾಯಣರು ತಿಳಿಸಿದ್ದಾರೆ.

ಆದರೆ, ಬೃಹದ್ದೇವತೆಯಲ್ಲಿ ಹೇಳಿರುವ ರೀತಿಗೂ ಸಾಯಣರು ಹೇಳಿರುವ ರೀತಿಗೂ ವ್ಯತ್ಯಾಸವಿರುತ್ತದೆ. ಸಾಯಣರ ವಿವರಣೆಯಂತೆ, ೫-೬ ನೇ ಮಂತ್ರಗಳು ಮಾತ್ರ ತನ್ನ ಬಂಧಮೋಚನಾರ್ಥವಾಗಿ ಪಠಿತವಾದವು. ಉಳಿದ ಎಂದರೆ ೭, ೮, ೯ ಈ ಮೂರು ಮಂತ್ರಗಳೂ ಸಹ **"ಗರ್ಭಸ್ರಾವಿಣೀ ಮಂತ್ರಗಳು"** ಎಂದು ಪ್ರಸಿದ್ಧವಾದವೆಂದೂ, ಈ ಮೂರೂ ಸಹ ತನ್ನ ಪತ್ನಿಯ ಗರ್ಭವು ಸ್ರವಿಸಿ ಅವಳಿಗೆ ಸುಖಪ್ರಸವವಾಗಬೇಕೆಂಬುದಾಗಿ ಅಶ್ವಿನೀದೇವತೆಗಳನ್ನು ಪ್ರಾರ್ಥಿಸುವಾಗ ಪಠಿತವಾದವು ಎಂದೂ ಮತ್ತು ನಾಲ್ಕನೆಯ ಮಂತ್ರವು ಸಪ್ತವಧ್ರಿಯ ಪಿತೃವಾದ **ಅತ್ರಿಯನ್ನು** ನಿರ್ದೇಶಿಸಿದೆಯೆಂದೂ ತಿಳಿಸಲ್ಪಟ್ಟಿದೆ. ಆದರೆ, ನಾಲ್ಕನೆಯ ಮಂತ್ರದ ವಿಷಯವೇ ಬೇರೆ ಮತ್ತು ೫ ಮತ್ತು ೬ ನೇ ಮಂತ್ರಗಳವಿಷಯವೇ ಬೇರೆಯೆಂಬ ಅಭಿಪ್ರಾಯಕ್ಕೂ ಅವಕಾಶವಿರುತ್ತದೆ. ಸೂಕ್ಷ್ಮವಾಗಿ ಪರಿಶೀಲಿಸಿದರೆ ಎರಡೂ ಒಂದೇ ವಿಷಯವನ್ನು ತಿಳಿಸುವಂತೆ ಕಾಣುತ್ತದೆ. ಹೇಗೆಂದರೆ, ಋಷಿಯು ನಾಲ್ಕನೆಯ ಮಂತ್ರದಲ್ಲಿ ತನ್ನನ್ನು ಒಬ್ಬ ದೀನಳಾದ ಯಾಚಕಳಿಗೆ ಹೋಲಿಸಿಕೊಳ್ಳುತ್ತಾನೆ **(ನಾಥಮಾನೇವ ಯೋಷಾ)** ಅಲ್ಲದೇ, ೫ ನೆಯ ಮಂತ್ರದಲ್ಲಿ ತನ್ನನ್ನು ಬಂಧಿಸಿದ್ದ ಪೆಟ್ಟಿಗೆಯನ್ನು ಪ್ರಸವಕಾಲದಲ್ಲಿ ಯಾತನೆಯನ್ನನುಭವಿಸುವ ಸ್ತ್ರೀಯ ಯೋನಿಗೆ ಹೋಲಿಸುತ್ತಾನೆ **(ಯೋನಿಃ ಸೂಷ್ಯಂತ್ಯಾ ಇವ)**. ಈ ಎರಡು ಮಂತ್ರಗಳಲ್ಲೂ ನಿರ್ದಿಷ್ಟಳಾದ ಸ್ತ್ರೀಯು ಒಬ್ಬಳೇ ಎಂದು ಹೇಳಿದರೆ ತಪ್ಪಾಗಲಾರದು. **ಅಜೋಹವೀತ್, ನಾಥಮಾನಾ** ಎಂಬ ಈ ಎರಡು ಶಬ್ದಗಳೂ ಸಹ ಆ ಸ್ತ್ರೀಯು ಯಾರೆಂದು ಖಚಿತವಾಗಿ ತಿಳಿಸಬಲ್ಲವಾಗಿವೆ. ಈ ಅಂಶವನ್ನು ಹಿಂದಿನ ಕೆಲವು ವಾಕ್ಯಗಳಲ್ಲಿ ವಿವರಿಸಿರುವ ವಿಷಯಗಳ ಆಧಾರದಿಂದ ಖಚಿತಮಾಡಬಹುದಾಗಿದೆ. ಉದಾಹರಣೆಗೆ—

**ಅಜೋಹವೀನ್ನಾಸತ್ಯಾ ಕರಾ ವಾಂ ಮಹೇ ಯಾಮನ್ಪುರುಭುಜಾ ಪುರಂಧಿಃ ।**
**ಶ್ರುತಂ ತಚ್ಛಾಸುರಿವ ವಧ್ರಿಮತ್ಯಾ ಹಿರಣ್ಯಹಸ್ತಮಶ್ವಿನಾವದತ್ತಂ ॥**

(ಋ. ಸಂ. ೧-೧೧೬-೧೩)

ಎಂಬಲ್ಲಿ **ವಧ್ರಿಮತಿ**ಯೆಂಬ ಸ್ತ್ರೀಯು ಪುತ್ರಾರ್ಥವಾಗಿ ಅಶ್ವಿನೀದೇವತೆಗಳನ್ನು ಪ್ರಾರ್ಥಿಸಿದ ಸಂದರ್ಭವು ತಿಳಿಸಿದೆ. ಇದೇ ವಧ್ರಿಮತಿಗೆ ಪುತ್ರಸಂತಾನವನ್ನು ಅಶ್ವಿನೀದೇವತೆಗಳು ಅನುಗ್ರಹಿಸಿದ ವಿಷಯವನ್ನು ಇನ್ನೂ ಇತರ ಸಂದರ್ಭಗಳಲ್ಲೂ ತಿಳಿಸಿದೆ. ಮತ್ತು ಈ ವಿಷಯವು ಪ್ರಸಿದ್ಧವಾಗಿಯೂ ಇರುತ್ತದೆ. ಉದಾಹರಣೆಗೆ—

**" ಪುತ್ರಂ ನರಾ ವಧ್ರಿಮತ್ಯಾ ಅದತ್ತಂ "** (ಋ. ಸಂ. ೧-೧೧೭-೨೪);

**" ಶ್ರುತಂ ಹವಂ ವೃಷಣಾ ವಧ್ರಿಮತ್ಯಾಃ "** (ಋ. ಸಂ. ೬-೬೨-೭);

**" ಯುವಂ ಹವಂ ವಧ್ರಿಮತ್ಯಾ ಅಗಚ್ಛತಂ "** (ಋ. ಸಂ. ೧೦-೩೯-೭)

ಇತ್ಯಾದಿ ವಾಕ್ಯಗಳಲ್ಲಿ ತಿಳಿಸಿದೆ. **ನಾಧಮಾನಾ** ಎಂಬ ವಿಶೇಷಣದಿಂದ ಅಶ್ವಿನೀದೇವತೆಗಳ ಭಕ್ತಳೂ ಸ್ತುತಿಕರ್ತಳೂ ಆದ ಸ್ತ್ರೀಯೆಂಬುದೂ ವ್ಯಕ್ತವಾಗುತ್ತದೆ **ನಾಧಮಾನಾಃ** ಎಂಬ ಪದಕ್ಕೆ ಸ್ತುತಿಕರ್ತರೆಂಬರ್ಥವು ಅನೇಕ ಕಡೆಗಳಲ್ಲಿ ಪ್ರಸಿದ್ಧವಾಗಿದೆ. (೧-೧೧೮-೧೦; ೧-೧೮೧-೭ ಇತ್ಯಾದಿ). ಈ ಮಂತ್ರಗಳಲ್ಲೆಲ್ಲಾ ವಧ್ರಿಮತಿಯೆಂಬ ಸ್ತ್ರೀಯ ಪ್ರಾರ್ಥನೆಯನ್ನು ಅಶ್ವಿನೀದೇವತೆಗಳು ಅಂಗೀಕರಿಸಿದರೆಂದಿದೆಯೇ ವಿನಹ, ಅವಳಿಗಾಗಿ ಇನ್ನೊಬ್ಬ ಪುರುಷನು ಪ್ರಾರ್ಥಿಸಿದಂತಿಲ್ಲ. ಆದರೆ, **ಸಪ್ತವಧ್ರೀ, ವಧ್ರಿಮತೀ** ಎಂಬ ಈ ಎರಡು ಶಬ್ದಗಳೂ ಸಹ ಇವರಿಬ್ಬರೂ ದಂಪತಿಗಳೆಂಬ ಅಭಿಪ್ರಾಯಕ್ಕೆ ಅವಕಾಶವನ್ನು ಕಲ್ಪಿಸುತ್ತದೆ ಆದರೆ, ಈ ವಿಷಯವನ್ನು ಸಮರ್ಥಿಸುವುದು ಹೇಗೆಂದರೆ— ಪ್ರಕೃತವಾದ ಎಂದರೆ, ೫-೭೮ ನೇ ಸೂಕ್ತದಲ್ಲಿ ೧ ರಿಂದ ೩ ನೇ ಮಂತ್ರದ ವರೆಗೆ ಸಪ್ತವಧ್ರಿಯು ಅಶ್ವಿನೀದೇವತೆಗಳನ್ನು ತನ್ನ ಯಾಗದಲ್ಲಿ ಭಾಗವಹಿಸಿ ಸೋಮವನ್ನು ಪಾನಮಾಡಬೇಕೆಂದು ಪ್ರಾರ್ಥಿಸುತ್ತಾನೆ. ೪ ರಿಂದ ೬ ನೇ ಮಂತ್ರದ ವರೆಗೆ, ತನ್ನ ಪತ್ನಿಯಲ್ಲಿ ಸುಖಪ್ರಸವದಿಂದ ಪುತ್ರೋತ್ಪತ್ತಿಯಾಗಲೆಂದು ಪ್ರಾರ್ಥಿಸುತ್ತಾನೆ. ಅಥವಾ, ಅಶ್ವಿನೀದೇವತೆಗಳು ಹಿಂದೆ ತನ್ನ ಪತ್ನಿಗೆ ಅನುಗ್ರಹಿಸಿದ್ದ ವಿಷಯವನ್ನು ನೆನೆದು ಈಗ ತಾನೂ ಸಹ ತನ್ನ ಮುಕ್ತಿಗಾಗಿ ಅಶ್ವಿನೀದೇವತೆಗಳನ್ನು ಪ್ರಾರ್ಥಿಸಿರಬಹುದು. ಆದರೆ, ಈ ಸಪ್ತವಧ್ರಿ ಯಾರೆಂದರೆ—ಇವನೇ ಪ್ರಸಿದ್ಧನಾದ ಅತ್ರಿಯೆಂದು ಹೇಳಿದರೂ ಹೇಳಬಹುದು. ಹೇಗೆಂದರೆ—

ಅಂಧಕಾರದಲ್ಲಿ ದುಃಖತಪ್ತನಾಗಿದ್ದ ಯಾವ ಅತ್ರಿಋಷಿಯನ್ನು ಅಶ್ವಿನೀದೇವತೆಗಳು **ಋಬೀಸ**ದಿಂದ (ಹಳ್ಳ) ಬಿಡಿಸಿದರೋ ಅವನೇ ಈ ಸಪ್ತವಧ್ರಿಯೆಂಬೂ ಹೇಳಬಹುದು. ಹೇಗೆಂದರೆ—

**ಯುವಮ್ಯೃಬೀಸಮುತ ತಪ್ತಮತ್ರಯ ಓಮನ್ವಂತಂ ಚಕ್ರಥುಃ ಸಪ್ತವಧ್ರಯೇ ||**
(ಋ. ಸಂ. ೧೦-೩೯-೯)

**ಅವಂತಮತ್ರಯೇ ಗೃಹಂ ಕೃಣುತಂ ಯುವಮಶ್ವಿನಾ | ಅಂತಿ ಷದ್ಭೂತು ವಾಮವಃ ||**
(ಋ. ಸಂ. ೮-೭೩-೭)

**ಪ್ರ ಸಪ್ತವಧ್ರಿರಾಶಸಾ ಧಾರಾಮಗ್ನೇರಶಾಯತ | ಅಂತಿ ಷದ್ಭೂತು ವಾಮವಃ ||**
(ಋ. ಸಂ. ೮-೭೩-೯)

ಇತ್ಯಾದಿ ಮಂತ್ರಗಳಲ್ಲಿ ಸಪ್ತವಧ್ರಿಯೆಂಬುದು ಅತ್ರಿಗೆ ವಿಶೇಷಣಪದವಿರುವಂತೆ ತೋರುತ್ತದೆ. ಎಂದರೆ ಸಪ್ತವಧ್ರಿ ಮತ್ತು ಅತ್ರಿಗಳಿಗೆ ತಾದಾತ್ಮ್ಯವನ್ನು ಹೇಳಿದಂತಾಯಿತು, ಯಾವುದು ವೃಕ್ಷದ್ರೋಣಿಯೆಂದು ಹೇಳಲ್ಪಟ್ಟಿದೆಯೋ ಅದೇ ಋಬೀಸವೆಂದೂ ತಿಳಿಸಲ್ಪಟ್ಟಿದೆ. ಬೃಹದ್ದೇವತಾವಾಕ್ಯವು ಈ ಎರಡಕ್ಕೂ ತಾದಾತ್ಮ್ಯವನ್ನೇ ತೋರಿಸಿದೆ. ಎಂದರೆ ಭೂಮಿಯ ಸುಳಿಯವರೆಗೂ ಹೋಗಿರತಕ್ಕ ಮರದ ಆಳವಾದ ಪೊಟರೆಯೆಂದು ಹೇಳಿದರೆ ಎರಡಕ್ಕೂ ತಾದಾತ್ಮ್ಯವನ್ನು ಹೇಳಿರುವುದು ಸಮಂಜಸವಾಗುತ್ತದೆ. ಆಗ **ಅಂಧಕಾರ, ಉಷ್ಣ** ಎರಡು ಗುಣಗಳೂ ಒಟ್ಟಿಗಿದ್ದವೆಂದು ಹೇಳುವುದರಲ್ಲಿಯೂ ಅರ್ಥವಿರುತ್ತದೆ. ಈ ಸಂದರ್ಭದಲ್ಲಿ ಇನ್ನೊಂದು ವಿಧವಾದ ಊಹೆಗೂ ಅವಕಾಶವಿರುತ್ತದೆ.

**ಶ್ಯಂ ಚಿದಶ್ವಂ ನ ವಾಜಿನಮರೇಣವೋ ಯಮತ್ನತ ।**
**ದೃಳ್ಹಂ ಗ್ರಂಥಿಂ ನ ವಿ ಷ್ಯತಮತ್ರಿಂ ಯವಿಷ್ಠಮಾ ರಜಃ ॥**

(ಋ. ಸಂ. ೧೦-೧೪೩-೨)

ಎಂಬಲ್ಲಿ ರಜ್ಜುವಿನಿಂದ ಬದ್ಧನಾದ ಅತ್ರಿಯು ಬಂಧನದಿಂದ ಬಿಡಿಸಲ್ಪಟ್ಟನು ಎಂಬ ವಾಕ್ಯದ ಆಧಾರದ ಮೇಲೆ **ಸಪ್ತವಧ್ರಿ**ಯೆಂಬ ಪದಕ್ಕೆ ಏಳು ಮಡಕೆಗಳುಳ್ಳ ರಜ್ಜುವಿನಿಂದ ಬದ್ಧನಾದುದರಿಂದ ಅತ್ರಿಗೆ ಸಪ್ತವಧ್ರಿಯೆಂದು ಹೇಳಬಹುದೆಂದೂ ತಿಳಿಸುವ ಮತವಿರುತ್ತದೆ. ಆದರೆ ಇವೆಲ್ಲವೂ ಪ್ರಕೃತದಲ್ಲಿ ಊಹೆಗಳಾಗಿರುತ್ತವೆ. ಮೇಲೆ ಹೇಳಿರುವ ಅರ್ಥವೇ ನಿಷ್ಕೃಷ್ಟವಾಗಿದೆಯೆಂದು ಹೇಳಲು ಇನ್ನೂ ಕೆಲವು ಪ್ರಮಾಣಗಳು ಅವಶ್ಯವಾಗಿರುತ್ತವೆ.

ಐದನೆಯ ಮಂಡಲದ ಸಮಾಪ್ತಿಯಾದೊಡನೆಯೇ ಆರನೇ ಮಂಡಲದ ಸೂಕ್ತದ್ರಷ್ಟೃವೆಂದು ಪ್ರಸಿದ್ಧನಾದ ಭರದ್ವಾಜನ ಪ್ರಭಾವವು ವಿವೃತವಾಗಿರುತ್ತದೆ. ಈ ಮಹರ್ಷಿಯ ಸೂಕ್ತಗಳು ಅನೇಕ ಆಧ್ಯಾತ್ಮಿಕವಾದ ವಿಷಯಗಳನ್ನು ತಿಳಿಸಿ ತತ್ತ್ವರಹಸ್ಯವನ್ನು ವಿವರಿಸುವುವಾಗಿರುತ್ತವೆ. ಅವುಗಳಲ್ಲಿ ಅತ್ಯಂತ ಉಪಯುಕ್ತವಾದ ವಿಷಯಗಳೂ ಅಡಕವಾಗಿರುತ್ತವೆ. ಉದಾಹರಣೆಗೆ ಋ. ಸಂ. ೬-೧೬-೧೩ ನೇ ಮಂತ್ರದಲ್ಲಿ **ಅಥರ್ವನು** ಪುಷ್ಕರದಲ್ಲಿ ಅಗ್ನಿಯನ್ನು ಮಥಿಸಿದ ವಿಷಯವನ್ನು ತಿಳಿಸಿದೆ. ಈ ಪುಷ್ಕರಶಬ್ದಾರ್ಥವನ್ನೂ ಪುಷ್ಕರದಲ್ಲಿ ಅಗ್ನಿಯು ಸ್ಥಾಪಿತನಾದನು ಎಂದರೇನು ಎಂಬವಿಷಯವನ್ನೂ ಅದೇ ಮಂತ್ರದ ವಿಶೇಷವಿಷಯಗಳಲ್ಲಿ ವಿಶದವಾಗಿ ತಿಳಿಸಿರುತ್ತೆ. **ಅಥರ್ವನ** ವಿಷಯವನ್ನೂ ಅಲ್ಲಿಯೇ ಸೂಕ್ಷ್ಮವಾಗಿ ತಿಳಿಸಿದೆ. ಅಲ್ಲಿನ ವಿಶೇಷವಿಷಯಗಳಲ್ಲಿ ಕೇವಲ ವೈದಿಕವಾಕ್ಯಗಳನ್ನೇ ಪ್ರಮಾಣವನ್ನಾಗಿಟ್ಟುಕೊಂಡು ತತ್ತ್ವಾರ್ಥಗಳ ಚರ್ಚೆಯು ನಡೆದಿರುತ್ತದೆ. ವೈದಿಕವಾಕ್ಯಗಳಲ್ಲಿ ವಿವೃತವಾಗಿರುವ ಅಂಶಗಳಿಗೂ ಪುರಾಣವಾಕ್ಯಗಳಲ್ಲಿ ವಿವೃತವಾಗಿರುವ ಅಂಶಗಳಿಗೂ ಅನೇಕ ಸಂದರ್ಭಗಳಲ್ಲಿ ವ್ಯತ್ಯಾಸವಿರುವುದರಿಂದ ಯಾವ ವಿಧವಾದ ನಿಷ್ಕರ್ಷವೂ ಪುರಾಣವಾಕ್ಯಗಳನ್ನು ಅವಲಂಬಿಸಿಲ್ಲ. ಆದರೆ, ಅಥರ್ವನ ವಿಷಯವು ವೈದಿಕವಾಕ್ಯಗಳಲ್ಲಿ ಯಾವ ರೀತಿ ವಿವೃತವಾಗಿರುವುದೋ ಅದೇ ರೀತಿ ಮಹಾಭಾರತದಲ್ಲೂ ಹೇಳಲ್ಪಟ್ಟಿರುವುದರಿಂದ ಇಲ್ಲಿ ಮಹಾಭಾರತದ ವಾಕ್ಯಗಳ ತಾತ್ಪರ್ಯವನ್ನು ಮಾತ್ರ ತಿಳಿಸಲಾಗುತ್ತದೆ. ಇದರಲ್ಲಿ ಗುಪ್ತನಾಗಿ ಅಡಗಿದ್ದ ಅಗ್ನಿಯನ್ನು ಅಥರ್ವಾಂಗಿರಸನು ಪುನಃ ಆವಿರ್ಭಾವವಾಗುವಂತೆ ಮಾಡಿದ ವಿಷಯವು ತಿಳಿಸಲ್ಪಟ್ಟಿದೆ. ಇದರ ವಿವರವು ಮಹಾಭಾತದ ಅರಣ್ಯಪರ್ವದ ೨೨೪ ನೇ ಅಧ್ಯಾಯದಲ್ಲಿ ಈ ರೀತಿ ಉಕ್ತವಾಗಿದೆ.

**ಸಹಾಗ್ನಿಯು** ಜಲವಾಸಿಯು. ಆದುದರಿಂದಲೇ ಅವನಿಗೆ ಆಪನೆಂದು ಹೆಸರು. **ಮುದಿತಾ** ಎಂಬುವಳು ಈ ಸಹಾಗ್ನಿಯ ಭಾರ್ಯೆ. ಈ ಸಹಾಗ್ನಿಯು ಮೂರು ಲೋಕಗಳಿಗೂ ಪ್ರಭುವು. ಇವನಿಗೆ ಅದ್ಭುತನೆಂಬ ಪುತ್ರನಿದ್ದನು. ಈ ಅದ್ಭುತಾಗ್ನಿಯನ್ನು ಸಕಲರೂ ವಿಶ್ವಾತ್ಮನೆಂದು ಪೂಜಿಸುತ್ತಾರೆ ಇವನಿಗೆ ಸತ್ವಭುಕ್ಕೆಂಬ ಬೇರೆ ಹೆಸರೂ ಉಂಟು. ಭೂತಾಗ್ನಿಯೇ ಇವನ ಪುತ್ರನು. ಅದ್ಭುತಾಗ್ನಿ, ಭೂತಾಗ್ನಿ ಇವರೆಲ್ಲರೂ ಪ್ರತ್ಯಕ್ಷಸ್ವರೂಪರು. ಇವರೆಲ್ಲರಿಗೂ ಮೂಲನಾದ **ಸಹಾಗ್ನಿಯು** ಮಾತ್ರ ಅಗೋಚರನು ಈ ಸಹಾಗ್ನಿಯೇ ಯಾವಾಗಲೂ ದೇವತೆಗಳಿಂದ ಹುಡುಕಲ್ಪಡುತ್ತಿರುತ್ತಾನೆ. **(ದೇವಾಸ್ತಂ ನಾಧಿಗಚ್ಛಂತಿ ಮಾರ್ಗಮಾಣಾ ಯಥಾತಥಂ** ॥ ಶ್ಲೋ. ೮). ಈ ಸಹಾಗ್ನಿಯು ತನ್ನ **ಪೌತ್ರ**ನಾದ ಶವಾಗ್ನಿಯು ಬರುವುದನ್ನು ಕಂಡು ಅದು ತನ್ನನ್ನು ಸ್ಪರ್ಶಿಸಿಬಿಡುವುದೆಂಬ ಭಯದಿಂದ ಸಮುದ್ರದಲ್ಲಿ ಪ್ರವೇಶಿಸಿದನು. ದೇವತೆಗಳು ಎಷ್ಟು ಹುಡುಕಿದರೂ ಸಿಕ್ಕಲಿಲ್ಲ. ಆಗ ಸಹಾಗ್ನಿಯು ಅಥರ್ವನನ್ನು ಸಮೀಪಿಸಿದನು. ಆಗ ಅಥರ್ವನು ತೀವ್ರತಪಸ್ಸಿನಲ್ಲಿದ್ದನು. ಆಗ ಅವನನ್ನು ಕುರಿತು "ಎಲೈ ವೀರನೇ, ನಾನು ಅಶಕ್ತನು. ನನ್ನ ಪರವಾಗಿ ನೀನೇ ದೇವತೆಗಳಿಗೆ ಹವಿಸ್ಸನ್ನು ಕೊಂಡುಹೋಗು ನಿನಗೆ ಇನ್ನುಮೇಲೆ **ಪಿಂಗಾಕ್ಷನೆಂಬ** (ಅಗ್ನಿ) ಸಂಜ್ಞೆಯಿರಲಿ"

ಎಂದು ಹೇಳಿ ತಾನು ಸಮುದ್ರದೊಳಗೆ ಬೇರೊಂದು ಸ್ಥಳದಲ್ಲಿ ಅಡಗಿಕೊಂಡನು. ಆಗ ಮತ್ಸ್ಯಗಳು ಇವನಿದ್ದ ಸ್ಥಳವನ್ನು ದೇವತೆಗಳಿಗೆ ತಿಳಿಸಿಬಿಟ್ಟವು. ಆಗ ಸಹಾಗ್ನಿಯು ಮೀನುಗಳನ್ನು ಶಪಿಸಿದನು. ಪುನಃ ಆ ಕಾರ್ಯನಿರ್ವಹಣಕ್ಕೆ ಅಥರ್ವಾಂಗಿರಸನನ್ನೇ ನಿರ್ಬಂಧಿಸಿದನು. ಆಗಲೂ ಅಥರ್ವನು ಅದಕ್ಕೆ ಒಪ್ಪಲಿಲ್ಲ. ಆಗ ಭೃಗು, ಅಂಗಿರಸ್ಸು ಮುಂತಾದ ಮಹರ್ಷಿಗಳು ಬಹಳ ಪ್ರಯಾಸಪಟ್ಟು ಅಥರ್ವನನ್ನು ತಪಸ್ಸಿನಿಂದ ಮೇಲಕ್ಕೆ ಎಬ್ಬಿಸಿದರು. ಈ ತಪೋಬಲದಿಂದ ಉತ್ತೇಜಿತನಾದ ಅಥರ್ವನು ಅಧಿಕವಾದ ತೇಜಸ್ಸಿನಿಂದ ಜ್ವಲಿಸಲಾರಂಭಿಸಿದನು. **(ಭೃಶಂ ಜಜ್ವಾಲ ತೇಜಸ್ವೀ ತಪಸಾಪ್ಯಾಯಿತಶ್ಚ ಹೀ).** ಈ ಅಥರ್ವಾಂಗಿರಸನನ್ನು ನೋಡಿ ಪುನಃ ಅಗ್ನಿಯು ಭಯಪಟ್ಟು ಮಹಾಸಮುದ್ರದಲ್ಲಿ ಅಡಗಿಕೊಂಡನು. ಅದನ್ನು ನೋಡಿ ಜಗತ್ತೆಲ್ಲವೂ ಭೀತಿಗೊಂಡಿತು. ಆಗ ಪುನಃ ದೇವತೆಗಳು ಬಂದು ಅಥರ್ವನನ್ನು ಪೂಜಿಸಿ ಅವನ ಮರೆಹೊಕ್ಕರು. ಆಗ ಅಥರ್ವನು ಎಲ್ಲರೆದುರಿಗೂ ಸಮುದ್ರವನ್ನು ಮಥಿಸಿದನು. ಮತ್ತು ಅಗ್ನಿಯನ್ನು ಅಲ್ಲಿಂದ ಬರುವಂತೆ ಆಹ್ವಾನಿಸಿದನು. ಅನಂತರ ಅಥರ್ವನಿಂದ ಆಹೂತನಾದ ಅಗ್ನಿಯು ದೇವತೆಗಳ ಹವಿಸ್ಸನ್ನು ವಹಿಸಿದನು. ಆದುದರಿಂದಲೇ ಅವನಿಗೆ **ಅಥರ್ವಾಗ್ನಿ**ಯೆಂಬ ಹೆಸರೂ ಉಂಟಾಯಿತು ಎಂದು ಅಥರ್ವನ ಮಹಿಮೆಯು ಪ್ರಶಂಸಿತವಾಗಿದೆ. ಅಥರ್ವನ ಇತರ ಗುಣಗಳನ್ನೂ ಪ್ರಭಾವಾತಿಶಯಗಳನ್ನೂ ಅನೇಕ ಕಡೆಗಳಲ್ಲಿ ತಿಳಿಸಿದೆ.

ಆರನೆಯ ಮಂಡಲದ ಪೀಠಿಕೆಯಲ್ಲಿ ಭರದ್ವಾಜನ ವೈಯಕ್ತಿಕಪ್ರಭಾವವನ್ನು ತಿಳಿಸುವಾಗ **ಅಭ್ಯಾವರ್ತಿಗೂ** ಭರದ್ವಾಜನಿಗೂ ಇರತಕ್ಕ ಸಂಬಂಧವನ್ನು ತಿಳಿಸಿದೆ. ಆದರೆ ಅದರ ವಿವರವನ್ನು ತಿಳಿಸಿಲ್ಲ. ೬ ನೇ ಮಂಡಲದ ೨೭ ನೇ ಸೂಕ್ತದಲ್ಲಿ **ಅಭ್ಯಾವರ್ತಿ** ಮತ್ತು **ಸೃಂಜಯ** ಎಂಬ ಎರಡು ಹೆಸರುಗಳು ಪ್ರಸಿದ್ಧವಾಗಿವೆ. ಇಲ್ಲಿ ಅಭ್ಯಾವರ್ತಿ ಮತ್ತು ಸೃಂಜಯ ಇವರಿಬ್ಬರ ಪರಸ್ಪರ ಸಂಬಂಧವೇನು? ಭರದ್ವಾಜನಿಗೂ ಅವರಗೂ ಇರತಕ್ಕ ಸಂಬಂಧವೇನು ಎಂಬುದನ್ನು ಪ್ರಕೃತದಲ್ಲಿ ವಿಚಾರಿಸಬೇಕಾಗಿದೆ.

**ದ್ವಯಾँ ಅಗ್ನೇ ರಥಿನೋ ವಿಂಶತಿಂ ಗಾ ವಧೂಮತೋ ಮಘವಾ ಮಹ್ಯಂ ಸಮ್ರಾಟ್ ।**
**ಅಭ್ಯಾವರ್ತೀ ಚಾಯಮಾನೋ ದದಾತಿ ದೂಣಾಶೇಯಂ ದಕ್ಷಿಣಾ ಪಾರ್ಥವಾನಾಂ ॥**

(ಋ. ಸಂ. ೬-೨೭-೮)

ಎಂಬಲ್ಲಿ ಧನವಂತನೂ, ಚಯಮಾನನ ಪುತ್ರನೂ, ಸಮ್ರಾಟನೂ ಆದ ಅಭ್ಯಾವರ್ತಿಯು ಭರದ್ವಾಜನಿಗೆ ಉದಾರವಾಗಿ ದಾನಮಾಡಿದ ವಿಷಯವನ್ನು ಅಗ್ನಿಗೆ ನಿವೇದಿಸಲಾಗಿದೆ. ಈ ಅಭ್ಯಾವರ್ತಿಯು ಇದರ ಹಿಂದಿನ ಮಂತ್ರದಲ್ಲಿ ಸ್ತುತಿಸಲ್ಪಟ್ಟಿರುವ ಸೃಂಜಯನೇ ಅಥವಾ ಬೇರೆವ್ಯಕ್ತಿಯೇ ಎಂಬುದನ್ನು ಪರಿಶೀಲಿಸಬೇಕು. “ **ಸೃಂಜಯಾಯ ತುರ್ವಶಂ ಪರಾದಾತ್** ” (ಋ. ಸಂ. ೬-೨೭-೭) ಎಂಬಲ್ಲಿ ಸೃಂಜಯನಿಗೂ ಭರದ್ವಾಜನಿಗೂ ಇರುವ ಸಖ್ಯವು ತಿಳಿಸಲ್ಪಟ್ಟಿದೆ. ಈಸೃಂಜಯನೇ ಅಭ್ಯಾವರ್ತಿಯಾದರೆ, ಆಗ ಸೃಂಜಯಸಂಜ್ಞಕರಾದ ಜನಾಂಗಕ್ಕೆ ಇವನು ಪ್ರಭುವಾಗಿರಬೇಕು. ಆದರೆ ಈ ಮಂತ್ರದಲ್ಲಿ (೭) ದೈವವಾತ ಎಂಬ ವಿಶೇಷಣವು ಸೃಂಜಯನಿಗೆ ಸಂಬಂಧಿಸಲ್ಪಡುವುದೇ ಅಥವಾ ಅವನು ಬೇರೆಯೆ ಎಂದರೆ, ಸೃಂಜಯರಲ್ಲಿ ದೈವವಾತ ಎಂಬುವನು ಪ್ರಭುವೆಂದು ತಿಳಿಯಬೇಕು.

**ಅಯಂ ಯಃ ಸೃಂಜಯೇ ಪುರೋ ದೈವವಾತೇ ಸಮಿಧ್ಯತೇ । ದ್ಯುಮಾँ ಅಮಿತ್ರದಂಭನಃ ॥**

(ಋ. ಸಂ. ೪-೧೫-೪)

ಎಂಬಲ್ಲಿ **ಸೃಂಜಯ**ನೆಂಬ ಪದವು ಅಂಕಿತನಾಮವಾಗಿದೆ. ದೇವವಾತನೆಂಬುವನ ಪುತ್ರನು **ಸೃಂಜಯನೆಂಬ** ಹೆಸರುಳ್ಳ [illegible]ಮಯಾಜಿಯು ಎಂದು ಸಾಯಣರು ಅರ್ಥಮಾಡಿದ್ದಾರೆ. ಆದರೆ ಅಲ್ಲಿಯೂ ಸಹ ಸೃಂಜಯವಂಶೋತ್ಪನ್ನನಾದ **ದೈವವಾತ** ಎಂಬ ಪುರುಷನೆಂದರ್ಥಮಾಡುವುದೇ ಸಹಜವಾಗಿರುವಂತೆ ಕಾಣುತ್ತದೆ. **ಹೇಗೆಂದರೆ,**

ಸಾಯಣರು ಋ. ಸಂ. ೪-೧೫-೪ನೇ ಮಂತ್ರದ ಭಾಷ್ಯದಲ್ಲಿ ತೈತ್ತಿರೀಯಸಂಹಿತೆಯ ಮಂತ್ರವನ್ನುದಾಹರಿಸಿ **ಸೃಂಜಯ**ರೆಂಬುವರು ಸೋಮಯಾಜಿಗಳೆಂದು ಪ್ರಸಿದ್ಧರಾಗಿರುವ ವಿಷಯವನ್ನು ತಿಳಿಸಿದ್ದಾರೆ. ಆ ಸಂಹಿತಾವಾಕ್ಯವಿವರಣವು ಈ ರೀತಿಯಿರುತ್ತದೆ—

> **ವಾಸಿಷ್ಠೋ ಹ ಸಾತ್ಯಹವ್ಯೋ ದೇವಭಾಗಂ ಪಪ್ರಚ್ಛ ಯತ್ಸೃಂಜಯಾನ್ಬಹುಯಾಜಿನೋಽ-**
> **ಯೀಯಜೋ ಯಜ್ಞೇ ಯಜ್ಞಂ ಪ್ರತ್ಯತಿಷ್ಠಿಪಾ೩ ಯಜ್ಞಪಶಾ೩ವಿತಿ ಸ ಹೋವಾಚ**
> **ಯಜ್ಞಪಶಾವಿತಿ ಸತ್ಯಾದ್ವೈ ಸೃಂಜಯಾಃ ಪರಾ ಬಭೂವುರಿತಿ ಹೋವಾಚ ॥**
> (ತೈ ಸಂ. ೬-೬-೨-೨)

ಎಂಬ ಈ ವಾಕ್ಯಗಳಲ್ಲಿ **ಸೃಂಜಯರು** ಬಹುಯಾಜಿಗಳೆಂದೂ ಸೋಮಯಾಜಿಗಳೆಂದೂ ನಿರ್ದಿಷ್ಟರಾಗಿದ್ದಾರೆ. ಆದರೆ, ಅಲ್ಲಿಯೂ ಸೃಂಜಯ ಶಬ್ದಕ್ಕೆ ಆ ಹೆಸರಿನ ದೇಶವಾಸಿಗಳೆಂದು ಭಟ್ಟಭಾಸ್ಕರರು ಅರ್ಥಮಾಡಿದ್ದಾರೆ.

ಸಾಯಣರು **ಸೃಂಜಯ** ಶಬ್ದಕ್ಕೆ ಯಾವಾಗಲೂ ಅಂಕಿತನಾಮವೆಂದೇ ಅರ್ಥಮಾಡಿದ್ದಾರೆ. ಋ. ಸಂ. ೬-೨೭-೭ ರಲ್ಲು **ಸೃಂಜಯಾಯ** ಎಂದರೆ, **ಏತನ್ನಾಮ್ನೇ ರಾಜ್ಞೇ ।** ಸೃಂಜಯನೆಂಬ ಹೆಸರುಳ್ಳ ರಾಜನಿಗೆ ಎಂದು ತಿಳಿಸಿದ್ದಾರೆ. ಅದರಂತೆಯೇ,

> **ಪ್ರಸ್ತೋಕ ಇನ್ನು ರಾಧಸಸ್ತ ಇಂದ್ರ ದಶ ಕೋಶಯೀರ್ದಶ ವಾಜಿನೋಽದಾತ್ ।**
> (ಋ ಸಂ. ೬-೪೭-೨೨)
>
> **ಮಹಿ ರಾಧೋ ವಿಶ್ವಜನ್ಯಂ ದಧಾನಾನ್ಭರದ್ವಾಜಾನ್ತ್ಸಾರ್ಞ್ಜಯೋ ಅಭ್ಯಯಷ್ಟ ।**
> (ಋ. ಸಂ. ೬-೪೭-೨೫)

ಇತ್ಯಾದಿ ಸ್ಥಳಗಳಲ್ಲೆಲ್ಲಾ ಸೃಂಜಯ ಪುತ್ರನಾದ ಪ್ರಸ್ತೋಕನೆಂದೇ ಅರ್ಥಮಾಡಿದ್ದಾರೆ. ಅಲ್ಲದೇ, ಸೃಂಜಯನಿಗೂ ಅಭ್ಯಾವರ್ತಿಗೂ ಎಲ್ಲೂ ತಾದಾತ್ಮ್ಯವನ್ನು ತೋರಿಸಿಲ್ಲ. **ದೈವವಾತಾಯ** ಎಂಬುದನ್ನು **ಸೃಂಜಯ** ಶಬ್ದಕ್ಕೆ ವಿಶೇಷವನ್ನಾಗಿ ಮಾಡದೆ, **ದೇವವಾತವಂಶೋತ್ಪನ್ನಾಯ ಅಭ್ಯಾವರ್ತಿನಾಮ್ನೇ ರಾಜ್ಞೇ ।** ದೇವವಾತ ವಂಶೋತ್ಪನ್ನನಾದ ಅಭ್ಯಾವರ್ತಿಯೆಂಬ ರಾಜನಿಗೆ ಎಂದರ್ಥಮಾಡಿದ್ದಾರೆ ಇದೇ ಸಂಹಿತಾ ವಾಕ್ಯದಲ್ಲಿ ಅಭ್ಯಾವರ್ತೀ **ಚಾಯಮಾನಃ** ಎಂಬುದಕ್ಕೆ ಚಯಮಾನನ ಪುತ್ರನಾದ ಅಭ್ಯಾವರ್ತಿಯೆಂದಿದ್ದಾರೆ (ಋ. ಸಂ. ೬-೨೭-೮). ಆದುದರಿಂದ ಚಯಮಾನನೂ ದೇವವಾತನ ವಂಶೋತ್ಪನ್ನನೆಂದಾಯಿತು. ಆದರೆ ಮೇಲೆ ಉದಾಹೃತವಾಗಿರುವ ಋ ಸಂ. ೪-೧೫-೪ ನೇ ಮಂತ್ರದಲ್ಲಿ **ಸೃಂಜಯನನ್ನು** ದೇವವಾತನ ಪುತ್ರನೆಂದಿದೆ. ಆದುದರಿಂದ ಸೃಂಜಯನಿಗೂ ಅಭ್ಯಾವರ್ತಿಗೂ ತಾದಾತ್ಮ್ಯವನ್ನು ಹೇಳಬಹುದೇ ಎಂಬುದೂ ನಿಷ್ಕೃಷ್ಟವಾಗಿಲ್ಲ. ಋ. ಸಂ. ೬-೨೭-೭ ನೇ ಮಂತ್ರದ ವಿವರಣೆಯಲ್ಲಿಯೂ ಈ ವಿಷಯವನ್ನು ಸ್ಪಷ್ಟವಾಗಿ ತಿಳಿಸಿಲ್ಲ. **ಸೃಂಜಯ**ಶಬ್ದಕ್ಕೆ ವಂಶವೆಂದರ್ಥಮಾಡುವ್ರದೇ ಸಹಜವಾಗಿರುತ್ತದೆ ಈ ಸೃಂಜಯರೂ ತೃತ್ಸುಗಳೂ ಮಿತ್ರರೆಂದುಹೇಳಲು ಅನೇಕ ಆಧಾರಗಳಿರುತ್ತವೆ. ತುರ್ವಶರು ಈ ಎರಡು ಗುಂಪಿಗೂ ದ್ವೇಷಿಗಳಾಗಿದ್ದರು.

> **ದೇವಭಾಗಃ ಶ್ರೌತರ್ಷಃ ಸ ಉಭಯೇಷಾಂ ಕುರೂಣಾಂ ಚ ಸೃಞ್ಜಯಾನಾಂ ಚ ಪುರೋಹಿತ**
> **ಆಸ ಪರಮಹಾ ವೈ ಸಾ ॥** (ಶ. ಬ್ರಾ. ೨-೪ ೪-೫)

ದೇವಭಾಗ ಶ್ರೌತರ್ಷನು ಕುರುಗಳಿಗೂ ಸೃಂಜಯರಿಗೂ ಒಟ್ಟಿಗೆ ಪುರೋಹಿತನಾಗಿದ್ದನು ಇತ್ಯಾದಿ ವಾಕ್ಯಗಳು ಈ ಅಭಿಪ್ರಾಯವನ್ನು ಸಮರ್ಥಿಸುತ್ತವೆ. ಇದೇ ಸೃಂಜಯರು ಭೃಗುವಿನ ವಿಷಯದಲ್ಲಿ ಅಪರಾಧಮಾಡಿದುದರಿಂದ

ಇವರಿಗೆ ಅನೇಕ ವಿಧದಲ್ಲಿ ನಷ್ಟವುಂಟಾಯಿತೆಂದು ಅಥರ್ವವೇದವಾಕ್ಯದಿಂದ ತಿಳಿಯುತ್ತದೆ. (ಅ. ವೇ. ೫-೧೯-೧) ಆದರೆ ಮೇಲೆ ಉದಾಹೃತವಾಗಿರುವ ತೈತ್ತಿರೀಯಸಂಹಿತಾವಾಕ್ಯವು (ತೈ. ಸಂ. ೬-೬-೨-೨) ಸೃಂಜಯರು ತಮ್ಮ ವೈದಿಕ ಕರ್ಮದಲ್ಲಿ ಒಂದು ವಿಧವಾದ ಲೋಪವನ್ನು ತೋರಿಸಿದುದರಿಂದ ಈ ನಷ್ಟವುಂಟಾಯಿತೆಂದು ಸ್ಪಷ್ಟವಾಗಿ ತಿಳಿಸಿದೆ. ಇದೇ ಸೃಂಜಯರ ದೇಶವಾವುದೆಂಬುದನ್ನು ಖಚಿತವಾಗಿ ಹೇಳಲವಕಾಶವಿಲ್ಲ ಭಟ್ಟಭಾಸ್ಕರರು ಮೇಲಿನ ಸಂಹಿತಾವಾಕ್ಯದ ಭಾಷ್ಯದಲ್ಲಿ ಕೇವಲ ದೇಶವಿಶೇಷವೆಂದು ಮಾತ್ರ ತಿಳಿಸಿದ್ದಾರೆ. ದಿವೋದಾಸರೊಂದಿಗೆ ಸಿಂಧೂನದಿಯ ಪಶ್ಚಿಮದೇಶದಲ್ಲಿದ್ದರೆಂದು Hillebrandt ಮುಂತಾದ ಪಾಶ್ಚಾತ್ಯ ಪಂಡಿತರು ಅಭಿಪ್ರಾಯಪಡುತ್ತಾರೆ. Zimmer ಎಂಬುವನು ಸಿಂಧೂನದಿಯು ಮೂಲಭಾಗವೆಂದು ತಿಳಿಸುತ್ತಾನೆ. ಆದರೆ ಎರಡು ಅಭಿಪ್ರಾಯಗಳಿಗೂ ನಿಶ್ಚಿತವಾದ ಆಧಾರಗಳನ್ನು ತಿಳಿಸಿಲ್ಲ. ಆದರೆ ಅವರ ಮಿತ್ರರಾದ ತೃತ್ಸುಗಳು ಮಧ್ಯದೇಶವರ್ತಿಗಳಾದುದರಿಂದ ಸೃಂಜಯರು ಸಿಂಧೂನದಿಯ ಪೂರ್ವಪ್ರದೇಶವನ್ನಾಕ್ರಮಿಸಿದ್ದರು ಎಂದು ಹೇಳಲವಕಾಶವಿರುತ್ತದೆ ಈ ವಂಶದ ಚರಿತ್ರೆಯ ವಿಷಯದಲ್ಲಿ ಶತಪಥಬ್ರಾಹ್ಮಣದ ವಾಕ್ಯದಲ್ಲಿ ಒಂದು ಸೂಚನೆ ಇದೆ.

> ದುಷ್ಟರೀತುರ್ಹ ಪೌಗ್‌ಂಸಾಯನಃ । ದಶಪುರುಷಗ್‌ಂರಾಜ್ಯಾದಪರುದ್ಧ ಆಸ ರೇವೋತ್ತರಸಮು
> ಹ ಪಾಟವಂ ಚಾಕ್ರಗ್‌ಂ ಸ್ಥಪತಿಗ್‌ಂ ಸೃಂಜಯಾ ಅಪರುರುಧುಃ ॥
> (ಶ. ಬ್ರಾ. ೧೨-೯-೩-೧)

ಹತ್ತು ತಲೆಮಾರಿನಿಂದಲೂ ರಾಜ್ಯವಾಳುತ್ತಿದ್ದ ಪುಂಸಾಯನವಂಶಸ್ಥನಾದ ದುಷ್ಟರೀತುವೆಂಬುವನು ಸೃಂಜಯರಿಂದ ಓಡಿಸಲ್ಪಟ್ಟನು. ರೇವೋತ್ತರ ಪಾಟವ ಚಾಕ್ರಸ್ಥಪತಿಯರನ್ನೂ ಸೃಂಜಯರು ರಾಜ್ಯದಿಂದ ಬಿಟ್ಟೋಡಿಸಿದರು. ಆಗ ಚಾಕ್ರಸ್ಥಪತಿಯು ದುಷ್ಟರೀತುವನ್ನು ಕುರಿತು ಈ ರೀತಿ ಹೇಳಿದನು.

> ಸ ಹೋವಾಚ । ದುಷ್ಟರೀತುಂ ಪೌಗ್‌ಂಸಾಯನಂ ಸೌತ್ರಾಮಣ್ಯಾ ತ್ವಾ ಯಾಜಯಾನಿ
> ಯದಿದಗ್‌ಂ ಸೃಂಜಯೇಷು ರಾಷ್ಟ್ರಂ ತತ್ತ್ವಯಿ ಧಾಸ್ಯಾಮೀತಿ ॥
> (ಶ. ಬ್ರಾ. ೧೨-೯-೩-೨)

ನಾನು ನಿನಗಾಗಿ ಸೌತ್ರಾಮಣಿಯೆಂಬ ಯಾಗವನ್ನು ಆಚರಿಸುವಂತೆ ಮಾಡುತ್ತೇನೆ. ಅದರ ಫಲವಾಗಿ ಸೃಂಜಯರಿಂದ ಅಪಹೃತವಾದ ರಾಜ್ಯವು ಪುನಃ ನಿನಗೆ ಒದಗುತ್ತದೆ ಎಂಬ ಭರವಸೆಯನ್ನು ಕೊಟ್ಟನು ಎಂದು ಸೃಂಜಯರ ವಿಜಯ ವೃತ್ತಾಂತವೂ ಇತರರೊದನೆ ಅವರ ಹೋರಾಟವೂ ವರ್ಣಿತವಾಗಿದೆ.

ಸಾಯಣರ ಭಾಷ್ಯವು ಒಂದೊಂದು ಸಲ ಒಂದೊಂದು ಅಭಿಪ್ರಾಯವನ್ನು ಕೊಡುವುದೆಂದು ಮೇಲೆ ತಿಳಿಸಿದೆ. ದೈವವಾತ ಎಂಬುದಕ್ಕೆ ಒಂದುಸಲ ಅಭ್ಯಾವರ್ತಿಯೆಂದೂ ಇನ್ನೊಂದುಸಲ ಸೃಂಜಯನೆಂದೂ ಅರ್ಥಮಾಡಿರುವ ವಿಷಯವನ್ನೂ ಮೇಲೆ ತಿಳಿಸಿದೆ. ಆದರೆ, ಅಭ್ಯಾವರ್ತಿಯೂ ಸೃಂಜಯವಂಶಸ್ಥನಾದ ಸಾಂಜರ್ಯನೂ ಬೇರೆ ಬೇರೆ ವ್ಯಕ್ತಿಗಳೆಂದು ತಿಳಿಯುತ್ತದೆ.

> ಅಭ್ಯಾವರ್ತೀ ಚಾಯಮಾನಃ ಪ್ರಸ್ತೋಕಶ್ಚೈವ ಸಾಂಜರ್ಯಃ ।
> ಅಜಗ್ಮತುರ್ಭರದ್ವಾಜಂ ಜಿತೌ ವಾರಶಿಖೈರ್ಯುಧಿ ॥
> (ಬೃ. ದೇ. ೫-೧೨೪)

ಚಯಮಾನಪುತ್ರನಾದ ಅಭ್ಯಾವರ್ತಿಯೂ ಮತ್ತು ಸೃಂಜಯಪುತ್ರನಾದ ಪ್ರಸ್ತೋಕನೂ ವಾರಶಿಖರಿಂದ (ವರಶಿಖರನೆಂಬ ಅಸುರನ ಪುತ್ರರಿಂದ) ಪರಾಜಿತರಾಗಿ ಭರದ್ವಾಜನಲ್ಲಿಗೆ ಬಂದರು.

**ಅಭಿಗಮ್ಯೋಚತುಸ್ತೌ ತಂ ಪ್ರಸಾದ್ಯಾಖ್ಯಾಯ ನಾಮನೀ ।**
**ಯುಧಿ ವಾರಶಿಖೈರ್ಬ್ರಹ್ಮನ್ನಾವಾಂ ವಿದ್ಧಿ ವಿನಿರ್ಜಿತೌ ॥**

(ಬೃ. ದೇ. ೫-೧೨೫)

ಆಗ ಅವರಿಬ್ಬರೂ ತಮ್ಮ ಹೆಸರುಗಳನ್ನು ಹೇಳಿ ಭರದ್ವಾಜನಿಗೆ ನಮಸ್ಕಾರಮಾಡಿ "ಎಲೈ ಗುರುವೇ, ನಾವಿಬ್ಬರೂ ವಾರಶಿಖರಿಂದ ಪರಾಜಿತರಾಗಿದ್ದೇವೆ.''

**ಭವತ್ಪುರೋಹಿತಾವಾವಾಂ ಕ್ಷತ್ರಬಂಧೂನ್ ಜಯೇಮಹಿ ।**
**ಕ್ಷತ್ರಂ ತದಪಿ ವಿಜ್ಞೇಯಂ ಬ್ರಹ್ಮ ಯತ್ಪಾತಿ ಶಾಶ್ವತಂ ॥**

(ಬೃ. ದೇ. ೫-೧೨೬)

ನಿನ್ನನ್ನು ಪುರೋಹಿತನನ್ನಾಗಿಟ್ಟುಕೊಂಡು ನಾವು ಇತರ ಕ್ಷತ್ರಿಯರನ್ನು ಜಯಿಸುತ್ತೇವೆ. ಬ್ರಹ್ಮಪುರೋಹಿತನನ್ನು ಶಾಶ್ವತವಾಗಿ ರಕ್ಷಿಸುವುದೇ ಕ್ಷಾತ್ರಧರ್ಮವು ಎಂದರು. ಆಗ ಭರದ್ವಾಜನು ಇವರಿಗೆ ಮಾಡಿದ ಸಹಾಯವನ್ನು ಮುಂದೆ ಭರದ್ವಾಜನ ವಿಷಯವನ್ನು ವಿವರಿಸುವಾಗ ತಿಳಿಸಿದೆ.

**ತೌ ತು ವಾರಶಿಖಾನ್ ಜಿತ್ವಾ ತತೋಽಭ್ಯಾವರ್ತಿಸಾಂಜಯೌ ।**
**ಭರದ್ವಾಜಾಯ ಗುರವೇ ದದತುರ್ವಿವಿಧಂ ವಸು ॥**

(ಬೃ. ದೇ. ೫-೧೪೫)

ಆಗ ಅವರಿಬ್ಬರೂ ವಾರಶಿಖರರನ್ನು ಜಯಿಸಿ ತಮ್ಮ ಗುರುವಾದ ಭರದ್ವಾಜನಿಗೆ ಅನೇಕ ವಿಧವಾದ ಸಂಪತ್ತನ್ನು ಒದಗಿಸಿಕೊಟ್ಟರು ಎಂದು ಭರದ್ವಾಜನ ಪ್ರಭಾವವನ್ನೂ ಈ ಮೂಲಕ ತಿಳಿಸಿದೆ.

ಅತಿಪ್ರಾಚೀನವೂ, ಅತಿಗಹನವೂ ಅತಿವಿಸ್ತಾರವೂ, ಸರ್ವಶಾಸ್ತ್ರಗಳಿಗೂ, ಮೂಲಭೂತವೂ ಆದ ಇಂತಹ ಋಗ್ವೇದಸಂಹಿತೆಯನ್ನು ಸರಳವಾದ ಕನ್ನಡ ಭಾಷೆಯಲ್ಲಿ ವಿಮರ್ಶಾನುವಾದಸಹಿತವಾಗಿ ಪ್ರಕಾಶಪಡಿಸುವುದು ಸಲಭವಾದ ಕೆಲಸವಲ್ಲ. ಆದರೂ ಇಂತಹ ಮಹತ್ಕಾರ್ಯದಿಂದ ಪಂಡಿತಪಾಮರರಾದಿಯಾದ ಸಕಲ ಜನರೂ ಜ್ಞಾನಾಭಿವೃದ್ಧಿಯನ್ನು ಪಡೆದು ಈಶ್ವರಾನುಗ್ರಹಕ್ಕೆ ಪಾತ್ರರಾಗಲೆಂಬ ಘನವಾದ ಉದ್ದೇಶದಿಂದ ಕರ್ನಾಟಕ ಸಿಂಹಾಸನಾಧೀಶ್ವರರೂ, ವೇದವಿದ್ಯಾಭಿಮಾನಿಗಳೂ, ಸ್ವಯಂಪಂಡಿತರೂ, ಪ್ರಜಾನುರಾಗಿಗಳೂ, ದೈವಭಕ್ತಿತತ್ಪರರೂ ಆದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಬಿ., ಜಿ.ಸಿ.ಎಸ್.ಐ.** ಮಹಾಪ್ರಭುವರ್ಯರೂ ಅವರ ಸರ್ಕಾರದವರೂ ಬಹುದ್ರವ್ಯಸಾಧ್ಯವಾದ ಈ ಗ್ರಂಥಪ್ರಕಟನೆಯನ್ನು ತಮ್ಮ ಉದಾರಾಶ್ರಯದಿಂದ ಪ್ರೋತ್ಸಾಹಮಾಡುತ್ತಿರುವುದು ಕರ್ನಾಟಕ ಜನಕೋಟಿಯ ಸುಕೃತವೆಂದೇ ಹೇಳಬೇಕು. ಇಂತಹ ಉದಾರಮತಿಗಳಾದ ನಮ್ಮ ಪ್ರಭುವರ್ಯರಿಗೂ, ಅವರ ಕುಟುಂಬಕ್ಕೂ ರಾಜಕುಮಾರಿಯರಿಗೂ, **ಶ್ರೀಕಂಠದತ್ತನೃಸಿಂಹರಾಜ ಒಡೆಯರ್** ಎಂಬ ಶುಭನಾಮಾಂಕಿತರಾದ ರಾಜಕುಮಾರರಿಗೂ, ಸಮಸ್ತ ಪ್ರಜಾಕೋಟಿಗೂ ಸಹ ವೇದಪುರುಷನಾದ ಸರ್ವೇಶ್ವರನು ಐಹಿಕ ಫಲಗಳಾದ ಅಯುರಾರೋಗ್ಯೈಶ್ವರ್ಯಾದಿ ಸಕಲ ಸಂಪತ್ತನ್ನೂ ಪಾರಮಾರ್ಥಿಕವಾದ ಅಧ್ಯಾತ್ಮಜ್ಞಾನವನ್ನೂ ಇತೋಽಪ್ಯತಿಶಯವಾಗಿ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಮೈಸೂರು
ವಿಜಯನಾಮ ಸಂ|| ಚೈತ್ರ ಶುದ್ಧ ಪೌರ್ಣಮಾಸೀ ಸೋಮವಾರ
ತಾ|| 30—3—1953

ಅನುವಾದಕ :
**ಹೆಚ್. ಪಿ. ವೆಂಕಟರಾವ್,**
ಆಸ್ಥಾನ ಮಹಾವಿದ್ವಾನ್.

॥ ಶ್ರೀಃ ॥

# ವಿಷಯಾನುಕ್ರಮಣಿಕೆ.

## ನಾಲ್ಕನೆಯ ಅಷ್ಟಕದಲ್ಲಿ ನಾಲ್ಕನೆಯ ಅಧ್ಯಾಯವು
## ಐದನೆಯ ಮಂಡಲದ ಸೂಕ್ತಗಳು

## ಐದನೆಯ ಮಂಡಲವು


| ಸೂಕ್ತಸಂಖ್ಯೆ | | ಪುಟಸಂಖ್ಯೆ |
|---|---|---|
| ೬೩. | ಋತಸ್ಯ ಗೋಪಾವಧಿ ಎಂಬ ಅರವತ್ತಮೂರನೆಯ ಸೂಕ್ತ | 1 |
| | ಪೀಠಿಕೆ—ಮಿತ್ರಾವರುಣರೆಂಬ ದೇವತೆಗಳ ಪರಿಚಯ | 1 |
| | ಮಿತ್ರಾವರುಣರ ಗುಣಾತಿಶಯಗಳು | 3 |
| | ವರುಣನ ವೈಯಕ್ತಿಕವಾದ ವಿಶೇಷಗುಣಗಳು ಮತ್ತು ಕ್ರಿಯೆಗಳು | 5 |
| | ಮಿತ್ರನ ವೈಯಕ್ತಿಕವಾದ ಸ್ವರೂಪವರ್ಣನೆ | 12 |
| | ಉದಕತತ್ತ್ವಕ್ಕೂ ವರುಣನಿಗೂ ಇರುವ ಸಂಬಂಧ | 14 |
| | ಸೂಕ್ತದ ವಿನಿಯೋಗ ಮತ್ತು ಋಷಿದೇವತಾ ಛಂದಸ್ಸುಗಳು | 16 |
| ೬೪. | ವರುಣಂ ವೋ ರಿಶಾದಸಂ ಎಂಬ ಅರವತ್ತನಾಲ್ಕನೆಯ ಸೂಕ್ತ | 26 |
| | ಸೂಕ್ತವಿನಿಯೋಗ, ಋಷಿದೇವತಾಛಂದಸ್ಸುಗಳು, ಪ್ರತಿಪದಾರ್ಥ ಇತ್ಯಾದಿ | 26 |
| ೬೫. | ಯಶ್ಚಿಕೇತ ಎಂಬ ಅರವತ್ತೈದನೆಯ ಸೂಕ್ತ | 35 |
| ೬೬. | ಆ ಚಿಕಿತಾನ ಎಂಬ ಅರವತ್ತಾರನೆಯ ಸೂಕ್ತ | 42 |
| ೬೭. | ಬಳಿತ್ಥಾ ದೇವ ಎಂಬ ಅರವತ್ತೇಳನೆಯ ಸೂಕ್ತ | 49 |
| ೬೮. | ಪ್ರ ವೋ ಮಿತ್ರಾಯ ಎಂಬ ಅರವತ್ತೆಂಟನೆಯ ಸೂಕ್ತ | 55 |
| ೬೯. | ತ್ರಿ ರೋಚನಾ ಎಂಬ ಅರವತ್ತೊಂಭತ್ತನೆಯ ಸೂಕ್ತ | 61 |
| ೭೦. | ಪುರೂರುಣಾ ಎಂಬ ಎಪ್ಪತ್ತನೆಯ ಸೂಕ್ತ | 67 |
| ೭೧. | ಆ ನೋ ಗಂತಂ ಎಂಬ ಎಪ್ಪತ್ತೊಂದನೆಯ ಸೂಕ್ತ | 71 |
| ೭೨. | ಆ ಮಿತ್ರೇ ವರುಣೇ ಎಂಬ ಎಪ್ಪತ್ತೆರಡನೆಯ ಸೂಕ್ತ | 74 |
| ೭೩. | ಯದದ್ಯ ಸ್ಥಃ ಎಂಬ ಎಪ್ಪತ್ತಮೂರನೆಯ ಸೂಕ್ತ | 78 |
| | ಪೀಠಿಕೆ—ಅಶ್ವಿನೀದೇವತೆಗಳ ಸೂಕ್ಷ್ಮಪರಿಚಯ | 78 |
| | ಸೂಕ್ತದ ವಿನಿಯೋಗ ಇತ್ಯಾದಿ | 79 |

| ಸೂಕ್ತಸಂಖ್ಯೆ | | ಪುಟಸಂಖ್ಯೆ |
|---|---|---|
| ೭೪. | **ಕೂಷ್ಠೋ ದೇವೌ ಎಂಬ ಎಪ್ಪತ್ತನಾಲ್ಕನೆಯ ಸೂಕ್ತ—** | 91 |
| ೭೫. | **ಪ್ರತಿ ಪ್ರಿಯತಮಂ ಎಂಬ ಎಪ್ಪತ್ತೈದನೆಯ ಸೂಕ್ತ—** | 103 |
| | **ಅಶ್ವಿನೀದೇವತೆಗಳ ರಥದ** ವೈಶಿಷ್ಟ್ಯ | 104 |
| | ಅಶ್ವಿನೀದೇವತೆಗಳ ಸಂಬಂಧದಲ್ಲಿ ಉಪಯೋಗಿಸಿರುವ **ತ್ರಿಚಕ್ರ, ತ್ರಿಬರ್ಹಿಃ, ತ್ರಿಷಧಸ್ಥ, ತ್ರಿವಂಧುರ, ತ್ರಿವಿಕ್ರಮ, ತ್ರಿಧಾತುನಾ** ಇತ್ಯಾದಿ ಶಬ್ದಗಳ ವಿವರಣೆ | 107 |
| | **ಮಧುವಿದ್ಯೆಯ** ವಿಚಾರದಲ್ಲಿ ಸ್ಕಂದಸ್ವಾಮಿಗಳೂ, ಸಾಯಣರೂ ಹೇಳಿರುವ ಪೂರ್ವೇತಿಹಾಸವು | 109 |
| | **ದಧೀಚಿಋಷಿಯ** ವೃತ್ತಾಂತ ಇತ್ಯಾದಿ | 110 |
| | **ಚ್ಯವನನೆಂಬ** ವೃದ್ಧನಾದ ಋಷಿಯನ್ನು ಅಶ್ವಿನೀದೇವತೆಗಳು ಯುವಕನನ್ನಾಗಿ ಮಾಡಿದ ವಿಷಯ ಮತ್ತು ಈ ವಿಷಯದಲ್ಲಿ ಶತಪಥಬ್ರಾಹ್ಮಣದಲ್ಲಿ ಹೇಳಿರುವ ಪೂರ್ವೇತಿಹಾಸ | 117 |
| ೭೬. | **ಆ ಭಾತ್ಯಗ್ನಿಃ ಎಂಬ ಎಪ್ಪತ್ತಾರನೆಯ ಸೂಕ್ತ** | 124 |
| ೭೭. | **ಪ್ರಾತರ್ಯಾವಾಣಾ ಎಂಬ ಎಪ್ಪತ್ತೇಳನೆಯ ಸೂಕ್ತ—** | 131 |
| ೭೮. | **ಅಶ್ವಿನಾವೇಹ ಗಚ್ಛತಂ ಎಂಬ ಎಪ್ಪತ್ತೆಂಟನೆಯ ಸೂಕ್ತ—** | 137 |
| | **ಗೌರ, ಗವಯ** ಎಂಬ ಮೃಗವಿಶೇಷಗಳ ವಿವರಣೆ | 140 |
| | **ಅತ್ರಿಋಷಿಯು** ಅಗ್ನಿಯಲ್ಲಿ ಸುಡುತ್ತಿರುವುದನ್ನು ಅಶ್ವಿನೀದೇವತೆಗಳು ನೋಡಿ ಅವನನ್ನು ಕಾಪಾಡಿದ ವಿಚಾರ | 143 |
| | **ಸಪ್ತವಧ್ರಿಯ** ವೃತ್ತಾಂತ—ಈ ಋಷಿಯನ್ನು ಇವನ ಜ್ಞಾತಿಗಳು ಪೆಟ್ಟಿಗೆಯಲ್ಲಿಟ್ಟು ಬಂಧಿಸುತ್ತಿದ್ದ ವಿಷಯ ಇತ್ಯಾದಿ | 145 |
| | **ಗರ್ಭಸ್ರಾವಿಣ್ಯುಪನಿಷತ್ತೆಂದು** ಪ್ರಸಿದ್ಧವಾದ ಋಕ್ಕುಗಳು—ಗರ್ಭಸ್ಥ **ಶಿಶುವು** ಸಕಾಲದಲ್ಲಿ ಪ್ರಸವವಾಗದಿದ್ದರೆ ಪಠಿಸಬೇಕಾದ ಮಂತ್ರಕ್ರಮ ಇತ್ಯಾದಿ | 149 |
| ೭೯. | **ಮಹೇ ನೋ ಅದ್ಯ ಎಂಬ ಎಪ್ಪತ್ತೊಂಭತ್ತನೆಯ ಸೂಕ್ತ—** | 151 |
| | ಪೀಠಿಕೆ—**ಉಷೋದೇವತೆಯ** ಸೂಕ್ಷ್ಮಪರಿಚಯ | 151 |
| | ಉಷೋದೇವತೆಯ ಗುಣಗಳನ್ನು ಪ್ರಶಂಸಿಸುವ ಶಬ್ದಗಳ (ವಿಶೇಷಣ) ವಿವರಣೆ ಇತ್ಯಾದಿ | 152 |
| | **ಇದಂ ಶ್ರೇಷ್ಠಂ** ಎಂಬ ಋಕ್ಕಿಗೆ ಯಾಸ್ಕರು ಹೇಳಿರುವ ನಿರ್ವಚನವು | 153 |
| | **ಕರ್ಕಂಧು, ವಯ್ಯ** ಎಂಬುವರನ್ನು ಅಶ್ವಿನೀದೇವತೆಗಳು ರಕ್ಷಿಸಿದ ವಿಚಾರ—ಈ ಸೂಕ್ತದ್ರಷ್ಟೃವಾದ **ಸತ್ಯಶ್ರವಾಃ** ಎಂಬ ಋಷಿಯು **ವಯ್ಯ** ಎಂಬ ಋಷಿಯ ಪುತ್ರನೆಂಬ ವಿಷಯ | 156 |

| ಸೂಕ್ತಸಂಖ್ಯೆ | | ಪುಟಸಂಖ್ಯೆ |
|---|---|---|
| ೮೦. | **ದ್ಯುತದ್ಯಾಮಾನಂ ಎಂಬ ಎಂಭತ್ತನೆಯ ಸೂಕ್ತ—** | 168 |
| ೮೧. | **ಯುಂಜತೇ ಮನಃ ಎಂಬ ಎಂಭತ್ತೊಂದನೆಯ ಸೂಕ್ತ—** | 175 |
| | ಪೀಠಿಕೆ— **ಸವಿತೃದೇವತೆಯ** ಸೂಕ್ಷ್ಮಪರಿಚಯ | 175 |
| | ದ್ಯುಲೋಕ, ಅಂತರಿಕ್ಷ ಪೃಥಿವೀಲೋಕಗಳ ಮೂರು ಅವಾಂತರ ಪ್ರಭೇದಗಳು | 187 |
| ೮೨. | **ತತ್ಸವಿತುರ್ವೃಣೀಮಹೇ ಎಂಬ ಎಂಭತ್ತೆರಡನೆಯ ಸೂಕ್ತ—** | 188 |
| | ಆ ವಿಶ್ವದೇವಂ ಸತ್ಪತಿಂ ಎಂಬ ಋಕ್ಕಿನ ವಿಶೇಷವಿನಿಯೋಗ | 196 |
| ೮೩. | **ಅಚ್ಛಾ ವದ ತವಸಂ ಎಂಬ ಎಂಭತ್ತಮೂರನೆಯ ಸೂಕ್ತ—** | 199 |
| | **ಪರ್ಜನ್ಯ** ದೇವತೆಯ ಸೂಕ್ಷ್ಮಪರಿಚಯ | 199 |
| | **ಆ ವೃಕ್ಷಾನ್ ಹಂತಿ** ಎಂಬ ಋಕ್ಕಿಗೆ ಯಾಸ್ಕರು ಹೇಳಿರುವ ನಿರ್ವಚನದ ವಿವರಣೆ | 206 |
| ೮೪. | **ಬಳಿತ್ಥಾ ಪರ್ವತಾನಾಂ ಎಂಬ ಎಂಭತ್ತನಾಲ್ಕನೆಯ ಸೂಕ್ತ—** | 217 |
| | **ಪೃಥಿವಿಯ** ಎರಡುವಿಧ ರೂಪಗಳು | 219 |
| | ಈ ಸೂಕ್ತದ ಅಂತ್ಯದಲ್ಲಿ ಪಠಿಸಬೇಕಾದ— **ವರ್ಷಂತು ತೇ ವಿಭಾವರಿ** ಎಂಬ ಪರಿಶಿಷ್ಟ ಮಂತ್ರದ ಅರ್ಥವಿವರಣೆ | 222 |
| ೮೫. | **ಪ್ರ ಸಮ್ರಾಜೇ ಎಂಬ ಎಂಭತ್ತೈದನೆಯ ಸೂಕ್ತ—** | 222 |
| | ಪೀಠಿಕೆ— **ವರುಣದೇವನ** ಸೂಕ್ಷ್ಮಪರಿಚಯ | 222 |
| ೮೬. | **ಇಂದ್ರಾಗ್ನೀ ಯಂ ಎಂಬ ಎಂಭತ್ತಾರನೆಯ ಸೂಕ್ತ** | 241 |
| ೮೭. | **ಪ್ರ ವೋ ಮಹೇ ಎಂಬ ಎಂಭತ್ತೇಳನೆಯ ಸೂಕ್ತ—** | 249 |
| | ಈ ಮಂಡಲಾಂತ್ಯದಲ್ಲಿ ಪಠಿಸಬೇಕಾದ **ಪರಿಶಿಷ್ಟಮಂತ್ರಗಳು** ಮತ್ತು ಪರಿಶಿಷ್ಟ ಮಂತ್ರಗಳ ಸ್ವರೂಪ ಇತ್ಯಾದಿ | 263 |
| | **ಆ ತೇ ಗರ್ಭೋ ಯೋನಿಮೈತು** ಎಂಬ ೯ ನೇ ಪರಿಶಿಷ್ಟಸೂಕ್ತ (೫ ಋಕ್ಕುಗಳು) ಅರ್ಥವಿವರಣೆ ಸಹಿತ | 264 |
| | **ಅಗ್ನಿರೈತು ಪ್ರಥಮೋ** ದೇವತಾನಾಂ ಎಂಬ ೧೦ ನೇ ಪರಿಶಿಷ್ಟಸೂಕ್ತ (೫ ಋಕ್ಕುಗಳು) ಅರ್ಥವಿವರಣೆ ಸಹಿತ | 265 |
| | **ಹಿರಣ್ಯವರ್ಣಾಂ** ಎಂಬ [illegible] ನೇ ಪರಿಶಿಷ್ಟಸೂಕ್ತವು— **ಶ್ರೀಸೂಕ್ತವು** (೧೫ ಋಕ್ಕುಗಳು ಮತ್ತು ಕೆಲವು ಶ್ಲೋಕಗಳು ಸಹಿತ) ಈ ಸೂಕ್ತಕ್ಕೆ ಪ್ರತಿ ಋಕ್ಕಿಗೂ ಋಷಿ ದೇವತಾ ಛಂದಸ್ಸುಗಳು, ಅಂಗನ್ಯಾಸ, ಕರನ್ಯಾಸ, ಧ್ಯಾನ ಮೊದಲಾದ ಜಪ ಕ್ರಮಗಳು, ಸಸ್ವರಮಂತ್ರ, ವಿದ್ಯಾರಣ್ಯಭಾಷ್ಯ, ಪೃಥಿವೀಧರಾಚಾರ್ಯಭಾಷ್ಯ, | |

ಸೂಕ್ತಸಂಖ್ಯೆ ಪುಟಸಂಖ್ಯೆ

ಎಂಬ ಎರಡು ಭಾಷ್ಯಗಳು, ಪ್ರತಿಪದಾರ್ಥ ಭಾವಾರ್ಥಗಳು, ಆಯಾ ಮಂತ್ರಗಳ ಜಪಕ್ರಮ, ಫಲಸ್ತುತಿ ಇವುಗಳ ವಿಷಯದಲ್ಲಿ ಇತರ ಗ್ರಂಥಗಳಲ್ಲಿ ಹೇಳಿರುವ ವಿಶೇಷವಿಷಯಗಳು ಸಹಿತ ವಿಸ್ತಾರವಾದ ವಿವರಣೆ 267

ಮಂಡಲಾಂತ್ಯದಲ್ಲಿ ಪಠಿಸುವ ಕೆಲವು ಶ್ಲೋಕಗಳು 337

ಐದನೆಯ ಮಂಡಲವು ಸಮಾಪ್ತವು.

# ಆರನೆಯ ಮಂಡಲವು

ಆರನೆಯ ಮಂಡಲದ ಪೀಠಿಕೆ—ಆರನೆಯ ಮಂಡಲದ ಸೂಕ್ತದ್ರಷ್ಟೃಗಳಾದ ಋಷಿಗಳು 339

ಮಂಡಲದ್ರಷ್ಟೃವಾದ **ಭರದ್ವಾಜಋಷಿಯ** ಪರಿಚಯ 340

೧. **ತ್ವಂ ಹ್ಯಗ್ನೇ ಪ್ರಥಮಃ ಎಂಬ ಮೊದಲನೆಯ ಸೂಕ್ತ**— 361

**ಸೀಂ** ಎಂಬ ಶಬ್ದದ ಅರ್ಥವಿವರಣೆ ಇತ್ಯಾದಿ 362

**ಮನೋತಾ ದೇವತೆಗಳ** ವಿಷಯ ವಿವರಣೆ ಇತ್ಯಾದಿ 362

**ವ್ಯಂತಃ** ಎಂಬ ಶಬ್ದದ ನಿರ್ವಚನ 368

ನಾಲ್ಕನೆಯ ಅಷ್ಟಕದಲ್ಲಿ ನಾಲ್ಕನೆಯ ಅಧ್ಯಾಯವು ಸಮಾಪ್ತವು.

# ಐದನೆಯ ಅಧ್ಯಾಯವು

## ಆರನೆಯ ಮಂಡಲದ ಸೂಕ್ತಗಳು

೨. **ತ್ವಂ ಹಿ ಕ್ಷೈತವತ್ ಎಂಬ ಎರಡನೆಯ ಸೂಕ್ತ**— 381

೩. **ಅಗ್ನೇ ಸಕ್ಷೇಷತ್ ಎಂಬ ಮೂರನೆಯ ಸೂಕ್ತ**— 397

೪. **ಯಥಾ ಹೋತರ್ಮನುಷಃ ಎಂಬ ನಾಲ್ಕನೆಯ ಸೂಕ್ತ**— 408

೫. **ಹುವೇ ವಃ ಸೂನುಂ ಎಂಬ ಐದನೆಯ ಸೂಕ್ತ** 419

**ಸಹಸಃ ಸೂನುಂ** ಎಂಬ ಶಬ್ದಗಳ ವಿವರಣೆ 421

**ಯುವಾನಂ ಯವಿಷ್ಠಂ** ಎಂಬ ಶಬ್ದಗಳು ಅಗ್ನಿಗೆ ಅನ್ವಯಿಸಿರುವ ವಿಚಾರ 421

೬. **ಪ್ರ ನವ್ಯಸಾ ಸಹಸಃ ಎಂಬ ಆರನೆಯ ಸೂಕ್ತ**— 430

೭. **ಮೂರ್ಧಾನಂ ದಿವಃ ಎಂಬ ಏಳನೆಯ ಸೂಕ್ತ**— 439

ಸೂಕ್ತದ ಪೀಠಿಕೆ—**ವೈಶ್ವಾನರಾಗ್ನಿಯ** ಪರಿಚಯ 440

**ವೈಶ್ವಾನರಾಗ್ನಿಯು** ಯಾರು ? ಇವನು ಮಧ್ಯಮಸ್ಥಾನದೇವತೆಯೇ ? 440

ಸೂಕ್ತಸಂಖ್ಯೆ | ಪುಟಸಂಖ್ಯೆ

ವೈಶ್ವಾನರನೇ ಆದಿತ್ಯನು ಎಂದು ಪೂರ್ವದ ಯಾಜ್ಞಿಕರ ಮತವು (ಈ ವಿಷಯದಲ್ಲಿ ಆಕ್ಷೇಪಸಮಾಧಾನಗಳು) 442

ವೈಶ್ವಾನರನೇ ಪಾರ್ಥಿವಾಗ್ನಿಯೂ, ಆದಿತ್ಯನಲ್ಲ ಎಂಬ ಶಾಕಪೂಣಿ ಎಂಬ ಆಚಾರ್ಯರ ಮತವು—ಈ ವಿಷಯದಲ್ಲಿ ಆಕ್ಷೇಪಸಮಾಧಾನಗಳು 444

೮. ಪೃಷ್ಟಸ್ಯ ವೃಷ್ಣಃ ಎಂಬ ಎಂಟನೆಯ ಸೂಕ್ತ— 466

೯. ಅಹಶ್ಚ ಕೃಷ್ಣಮಹಃ ಎಂಬ ಒಂಭತ್ತನೆಯ ಸೂಕ್ತ— 476

ನಾಹಂ ತಂತು ಎಂಬ ಋಕ್ಕಿಗೆ ಯಜ್ಞಪರವಾದ ಅರ್ಥವಿವರಣೆ 480

ಅದೇ ಋಕ್ಕಿಗೆ ಆಧ್ಯಾತ್ಮಪರವಾದ ಅರ್ಥವಿವರಣೆ 481

೧೦. ಪುರೋ ವೋ ಮಂದ್ರಂ ಎಂಬ ಹತ್ತನೆಯ ಸೂಕ್ತ— 489

೧೧. ಯಜಸ್ವ ಹೋತರಿಷಿತಃ ಎಂಬ ಹನ್ನೊಂದನೆಯ ಸೂಕ್ತ— 498

೧೨. ಮಧ್ಯೇ ಹೋತಾ ದುರೋಣೇ ಎಂಬ ಹನ್ನೆರಡನೆಯ ಸೂಕ್ತ— 507

೧೩. ತ್ವದ್ವಿಶ್ವಾ ಸುಭಗ ಸೌಭಗಾನಿ ಎಂಬ ಹದಿಮೂರನೆಯ ಸೂಕ್ತ— 515

೧೪. ಅಗ್ನಾ ಯೋ ಮರ್ತ್ಯಃ ಎಂಬ ಹದಿನಾಲ್ಕನೆಯ ಸೂಕ್ತ— 523

೧೫. ಇಮಾಮೂ ಷು ವೋ ಅತಿಥಿಂ ಎಂಬ ಹದಿನೈದನೆಯ ಸೂಕ್ತ— 530

ಅತಿಥಿ ಶಬ್ದಾರ್ಥವಿವರಣೆ ಇತ್ಯಾದಿ 533

ಭೃಗವಃ, ವೀತಹವ್ಯ ಎಂಬ ಶಬ್ದಗಳ ಅರ್ಥವಿವರಣೆ ಇತ್ಯಾದಿ 535

ಅಗ್ನೇ ವಿಶ್ವೇಭಿಃ ಎಂಬ ಋಕ್ಕಿಗೆ ಅಗ್ನಿಪ್ರಣಯನಕರ್ಮದಲ್ಲಿ ಐತರೇಯಬ್ರಾಹ್ಮಣದಲ್ಲಿ ವಿವರಿಸಿರುವ ಅರ್ಥವಿವರಣೆ ಇತ್ಯಾದಿ 557

೧೬. ತ್ವಮಗ್ನೇ ಯಜ್ಞಾನಾಂ ಎಂಬ ಹದಿನಾರನೆಯ ಸೂಕ್ತ— 562

ಸೋಮಯಾಗದ ಸಪ್ತಸಂಸ್ಥೆಗಳ ವಿವರಣೆ 564

ಭರತನೆಂಬ ರಾಜನ ವಿಷಯ—ಇವನ ಪಟ್ಟಾಭಿಷೇಕ ವರ್ಣನೆ—ಐತರೇಯಬ್ರಾಹ್ಮಣದಲ್ಲಿರುವಂತೆ 568

ದಿವೋದಾಸನ ವಿಷಯ 570

ಅಗ್ನಿಗೆ ಅಂಗಿರ ಎಂಬ ಹೆಸರು ಬರಲು ಕಾರಣ ಇತ್ಯಾದಿ 577

ಅಥರ್ವ ಋಷಿಯು ಅಗ್ನಿಯನ್ನು ಪುಷ್ಕರದಿಂದ ಮಥಿಸಿದ ವಿಷಯ ಇತ್ಯಾದಿ 580

ದಧ್ಯಙ್ ಅಥವಾ ದಧೀಚಿಋಷಿಯ ವೃತ್ತಾಂತ 597

ಬ್ರಹ್ಮಣಸ್ಪತೇ ಎಂಬ ಶಬ್ದದ ಅರ್ಥಾನುವಾದ ಇತ್ಯಾದಿ 615

ಸೂಕ್ತಸಂಖ್ಯೆ ಪುಟಸಂಖ್ಯೆ

ರುದ್ರನು **ತ್ರಿಪುರಸಂಹಾರ** ಮಾಡಿದ ವಿಷಯ—ಐತರೇಯಬ್ರಾಹ್ಮಣ ಮತ್ತು ತೈತ್ತಿರೀಯ ಸಂಹಿತೆಯಲ್ಲಿರುವಂತೆ 625

**ಅಗ್ನಿಮಥನ** ವೆಂಬ ಯಜ್ಞಾಂಗ ಕರ್ಮದ ವಿವರಣೆಯು—ಐತರೇಯ ಬ್ರಾಹ್ಮಣದಲ್ಲಿ ಹೇಳಿರುವಂತೆ. 628

ನಾಲ್ಕನೆಯ ಅಷ್ಟಕದಲ್ಲಿ ಐದನೆಯ ಅಧ್ಯಾಯವು ಸಮಾಪ್ತವು.

## ಆರನೆಯ ಅಧ್ಯಾಯವು

### ಆರನೇ ಮಂಡಲದ ಸೂಕ್ತಗಳು

ಆರನೇ ಅಧ್ಯಾಯದ ಪೀಠಿಕೆ 647

ಇಂದ್ರಶಬ್ದ ನಿರ್ವಚನ—ಯಾಸ್ಕರ ವಿವರಣೆಯಂತೆ 648

೧೭. **ಪಿಬಾ ಸೋಮಮಭಿ** ಎಂಬ ಹದಿನೇಳನೆಯ ಸೂಕ್ತ— 650

ಇಂದ್ರನ **ವಜ್ರಾಯುಧದ** ವರ್ಣನೆ. 666

**ಇಂದ್ರನು** ಪಶುಗಳ ಮಾಂಸವನ್ನು ಭಕ್ಷಿಸಿದ ವಿಷಯ, 667

೧೮. **ತಮು ಷ್ಟುಹಿ ಯಃ** ಎಂಬ ಹದಿನೆಂಟನೆಯ ಸೂಕ್ತ— 673

**ವಲ** ನೆಂಬ ಅಸುರನು ದೇವತೆಗಳ ಗೋ..ಗಳನ್ನು ಅಪಹರಿಸಿ ಬಚ್ಚಿಟ್ಟಿದ್ದ ವಿಷಯ— **ಪಣಿಗಳ** ವಿಷಯ ಇತ್ಯಾದಿ. 680

**ಶುಷ್ಣ** ಎಂಬ ಅಸುರನ ವಿಷಯ. 686

**ಶಂಬರ** 687

**ಪಿಪ್ರು** 687

**ಧುನಿ** ಮತ್ತು **ಚುಮುರಿ** 687

**ಕುತ್ಸ** ಮತ್ತು **ಅತಿಥಿಗ್ವನ** ವಿಷಯ. 694

೧೯. **ಮಹಾँ ಇಂದ್ರೋ ನೃವತ್** ಎಂಬ ಹತ್ತೊಂಭತ್ತನೆಯ ಸೂಕ್ತ— 699

**ಅಮಿನಃ** ಎಂಬ ಶಬ್ದದ ನಿರ್ವಚನ. 701

**ದ್ವಿಬರ್ಹಾಃ** ಎಂಬ ಶಬ್ದದ ನಿರ್ವಚನ, ಅರ್ಥವಿವರಣೆ ಇತ್ಯಾದಿ. 701

ಇಂದ್ರನಿಗೆ **ಮಹಾನ್ ಇಂದ್ರ** ಎಂಬ ಹೆಸರು ಬರಲು ಕಾರಣ; ಈ ವಿಷಯದಲ್ಲಿ ಐತರೇಯ ಬ್ರಾಹ್ಮಣದಲ್ಲಿರುವ ಪೂರ್ವೇತಿಹಾಸ, **ಪ್ರಜಾಪತಿಗೆ ಕಃ** ಎಂಬ ಹೆಸರು ಬರಲು ಕಾರಣ ಇತ್ಯಾದಿ. 702

**ಈಕ್ಷೇ** ಎಂಬ ಶಬ್ದದ ನಿರ್ವಚನ, ಅರ್ಥವಿವರಣೆ ಇತ್ಯಾದಿ 714

| ಸೂಕ್ತಸಂಖ್ಯೆ | | ಪುಟಸಂಖ್ಯೆ |
|---|---|---|
| ೨೦. | ದ್ಯೌರ್ನ ಯ ಇಂದ್ರ ಎಂಬ ಇಪ್ಪತ್ತನೆಯ ಸೂಕ್ತ— | 718 |
| | ಋಜೀಷಿನ್ ಶಬ್ದಾರ್ಥ ವಿವರಣೆ | 721 |
| | ಕುತ್ಸನಿಗೆ ಸಹಾಯಮಾಡುವುದಕ್ಕಾಗಿ ಇಂದ್ರನು ಶುಷ್ಣನೆಂಬ ಅಸುರನನ್ನು ಸಂಹರಿಸಿದ ವಿಷಯ | 724 |
| | ಋಜಿಶ್ವನ್ ಎಂಬುವನ ವಿಷಯ | 728 |
| | ವೇತಸು, ತುಗ್ರ, ದಶೋಣಿ, ತೂತುಜಿ, ಇಭ ಎಂಬ ಅಸುರರನ್ನು ಇಂದ್ರನು ಸೋಲಿಸಿದ ವಿಷಯ ಇತ್ಯಾದಿ | 730 |
| | ತುರ್ವಶ, ಯದು ಎಂಬುವರ ವಿಷಯ | 735 |
| | ದಭೀತಿಯ ವಿಷಯ | 738 |
| ೨೧. | ಇಮಾ ಉ ತ್ವಾ ಎಂಬ ಇಪ್ಪತ್ತೊಂದನೆಯ ಸೂಕ್ತ— | 739 |
| | ವಯುನ ಶಬ್ದಕ್ಕೆ ಯಾಸ್ಕರ ನಿರ್ವಚನ | 743 |
| ೨೨. | ಯ ಏಕ ಇತ್ ಎಂಬ ಇಪ್ಪತ್ತೆರಡನೆಯ ಸೂಕ್ತ— | 755 |
| | ನಕ್ಷದ್ದಾಭಂ ಎಂಬ ಶಬ್ದದ ನಿರ್ವಚನ | 758 |
| | ಅಸ್ಕೃಧೋಯುಃ ಎಂಬ ಶಬ್ದದ ನಿರ್ವಚನ, ಅರ್ಥವಿವರಣೆ | 760 |
| ೨೩. | ಸುತ ಇತ್ತ್ವಂ ನಿಮಿಶ್ಲಃ ಎಂಬ ಇಪ್ಪತ್ತಮೂರನೆಯ ಸೂಕ್ತ— | 770 |
| ೨೪. | ವೃಷಾ ಮದ ಇಂದ್ರೇ ಎಂಬ ಇಪ್ಪತ್ತನಾಲ್ಕನೆಯ ಸೂಕ್ತ— | 784 |
| | ವೃಕ್ಷಸ್ಯ ನು ತೇ ಪುರುಹೂತ ವಯಾಃ ಎಂಬ ವಾಕ್ಯಕ್ಕೆ ಯಾಸ್ಕರು ಹೇಳಿರುವ ನಿರ್ವಚನ ಮತ್ತು ಅರ್ಥವಿವರಣೆ ಇತ್ಯಾದಿ | 788 |
| ೨೫. | ಯಾ ತ ಊತಿರವಮಾ ಎಂಬ ಇಪ್ಪತ್ತೈದನೆಯ ಸೂಕ್ತ— | 797 |
| ೨೬. | ಶ್ರುಧೀ ನ ಇಂದ್ರ ಎಂಬ ಇಪ್ಪತ್ತಾರನೆಯ ಸೂಕ್ತ— | 810 |
| ೨೭. | ಕಿಮಸ್ಯ ಮದೇ ಎಂಬ ಇಪ್ಪತ್ತೇಳನೆಯ ಸೂಕ್ತ— | 821 |
| | ಸೃಂಜಯನೆಂಬ ರಾಜನ ವಿಷಯ | 831 |
| ೨೮. | ಆ ಗಾವೋ ಅಗ್ಮನ್ ಎಂಬ ಇಪ್ಪತ್ತೆಂಟನೆಯ ಸೂಕ್ತ— | 832 |
| | ಸೂಕ್ತದ ಪೀಠಿಕೆ | 832 |
| | ನ ತಾ ನಶಂತಿ ಮತ್ತು ನ ತಾ ಅರ್ವಾ ಎಂಬ ಋಕ್ಕುಗಳ ವಿಶೇಷ ವಿನಿಯೋಗ | 838 |

ವಿಷಯ ಸೂಚಿಕೆ ಸಮಾಪ್ತವು.

## ಸಂಕೇತಾಕ್ಷರಗಳ ವಿವರಣೆಯು.

ಅಥ. ಸಂ.—ಅಥರ್ವವೇದಸಂಹಿತಾ
ಆಪ. ಸೂ.—ಆಪಸ್ತಂಬಶ್ರೌತಸೂತ್ರ
ಆಪ. ಧ. ಸೂ —ಆಪಸ್ತಂಬ ಧರ್ಮ ಸೂತ್ರ
ಆಪ. ಪ. ಸೂ.—ಆಪಸ್ತಂಬ ಪರಿಭಾಷಾಸೂತ್ರ
ಆ. ಸೂ. ಅಥವಾ ಆ.—ಆಶ್ವಲಾಯನ ಶ್ರೌತಸೂತ್ರ
ಉ. ಸೂ.—ಉಣಾದಿ ಸೂತ್ರ
ಋ. ಸಂ.—ಋಗ್ವೇದ ಸಂಹಿತಾ
ಐ. ಆ.—ಐತರೇಯಾರಣ್ಯಕ
ಐ. ಉ.—ಐತರೇಯೋಪನಿಷತ್
ಐ. ಬ್ರಾ.—ಐತರೇಯ ಬ್ರಾಹ್ಮಣ
ಛಾ. ಉ.—ಛಾಂದೋಗ್ಯೋಪನಿಷತ್
ಜೈ. ಸೂ.—ಜೈಮಿನಿಯ ಪೂರ್ವಮೀಮಾಂಸಾ ಸೂತ್ರ
ಜೈ. ನ್ಯಾ. ವಿ.—ಜೈಮಿನಿಯ ನ್ಯಾಯಮಾಲಾ ವಿಸ್ತರ
ತಾ. ಬ್ರಾ.—ತಾಂಡ್ಯಮಹಾ ಬ್ರಾಹ್ಮಣ
ತೈ. ಆ. —ತೈತ್ತಿರೀಯ ಆರಣ್ಯಕ
ತೈ. ಬ್ರಾ.—ತೈತ್ತಿರೀಯ ಬ್ರಾಹ್ಮಣ
ತೈ. ಸಂ.—ತೈತ್ತಿರೀಯ ಸಂಹಿತಾ
ನಿ.—ನಿರುಕ್ತ, ನಿಘಂಟು
ಪಾ. ಸೂ.—ಪಾಣಿನೀಯ ಸೂತ್ರ
ಪಾ. ಶಿ.—ಪಾಣಿನೀಯ ಶಿಕ್ಷಾ
ಫಿ. ಅಥವಾ ಫಿ. ಸೂ.—ಫಿಟ್ ಸೂತ್ರ
ಬ್ರ. ಸೂ.—ಬ್ರಹ್ಮ ಸೂತ್ರ
ಮ. ಭಾ.—ಮಹಾಭಾರತ
ಮ. ಸ್ಮೃ.—ಮನು ಸ್ಮೃತಿ
ಮೈ. ಸಂ.—ಮೈತ್ರಾಯಣೀಯಸಂಹಿತಾ
ಯಾ. ಸ್ಮೃ.—ಯಾಜ್ಞವಲ್ಕ್ಯ ಸ್ಮೃತಿ
ವಾ. ಸಂ.—ವಾಜಸನೇಯ ಸಂಹಿತಾ
ವಾ. ಪು.—ವಾಯುಪುರಾಣ
ವಿ. ಪು.—ವಿಷ್ಣುಪುರಾಣ
ವೇ. ಸೂ.—ವೇದಾಂತ ಸೂತ್ರ
ಶ. ಬ್ರಾ.—ಶತಪಥಬ್ರಾಹ್ಮಣ
ಸಾ. ಸಂ.—ಸಾಮವೇದ ಸಂಹಿತಾ ಇತ್ಯಾದಿ.

|| ಶ್ರೀಃ ||

|| ಶ್ರೀ ಗಣಾಧಿಪತಯೇ ನಮಃ ||

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಃಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥

ಸಾಯಣಭಾಷ್ಯಸಹಿತಾ

# ಋಗ್ವೇದಸಂಹಿತಾ

ಭಾಗ—೨೦

|| ಚತುರ್ಥಾಷ್ಟಕೇ ಚತುರ್ಥೋಽಧ್ಯಾಯಃ ||

ನಾಲ್ಕನೆಯ ಅಷ್ಟಕದಲ್ಲಿ ನಾಲ್ಕನೆಯ ಅಧ್ಯಾಯವು

## ಐದನೆಯ ಮಂಡಲವು.

### ಸೂಕ್ತ—೬೨

### ಪೀಠಿಕೆ

### ಮಿತ್ರಾವರುಣರ ಸೂಕ್ಷ್ಮಪರಿಚಯ.

ಈ ಮಂಡಲದ ೬೨ ನೇ ಸೂಕ್ತದಿಂದ ೭೨ನೆಯ ಸೂಕ್ತದವರೆಗೆ ಇರುವ ೧೧ ಸೂಕ್ತಗಳಲ್ಲಿಯೂ ಮಿತ್ರಾವರುಣರನ್ನು ಸ್ತುತಿಸಲಾಗಿದೆ. ಈ ದೇವತೆಗಳ ವಿಷಯವಾದ ಸೂಕ್ಷ್ಮಪರಿಚಯವನ್ನು ಇಲ್ಲಿ ವಿವರಿಸಿದ್ದೇವೆ.

ಮಿತ್ರಾವರುಣರಿಬ್ಬರ ಸಾಹಚರ್ಯವು ಪ್ರಸಿದ್ಧವಾದುದು. ಅನೇಕ ವೇಳೆ ಇಬ್ಬರೂ ಒಟ್ಟಿಗೇ ಸ್ತುತರಾಗುತ್ತಾರೆ. ಅನೇಕ ವೇಳೆ ವರುಣನನ್ನುದ್ದೇಶಿಸಿದ ವೈಯಕ್ತಿಕವಾದ ಸ್ತುತಿಯಿರುತ್ತದೆ. ಆದರೆ ಮಿತ್ರನು ವರುಣರಹಿತನಾಗಿ ಸ್ತುತನಾಗುವುದು ಅಪರೂಪ. ಭಾಷ್ಯಕಾರರು ವಿವರಿಸುವಂತೆ ಮಿತ್ರನು ಅಹರಭಿಮಾನಿದೇವತೆಯೂ ವರುಣನು

ರಾತ್ರ್ಯಭಿಮಾನಿದೇವತೆಯಾಗಿಯೂ ಇರುವುದು ವಾಸ್ತವವಾಗಿದ್ದರೆ ಆಗ ಇಬ್ಬರ ಸಾಹಚರ್ಯವೂ ಸಹಜವಾಗಿಯೇ ಇರುತ್ತದೆ. ಸಾಯಣರು ೧-೮೯-೩ನೇ ಮಂತ್ರಕ್ಕೆ ಭಾಷ್ಯವನ್ನು ಬರೆಯುತ್ತಾ "**ಅಹರಭಿಮಾನಿನಂ ದೇವಂ। ಮಿತ್ರಂ ವಾ ಅಹರಿತಿ ಶ್ರುತೇಃ**" ಮಿತ್ರನು ಅಹಸ್ಸು ಎಂಬ ತಾದಾತ್ಮ್ಯವನ್ನು ತೋರಿಸುವ ಶ್ರುತಿವಾಕ್ಯವಿರುವುದ ರಿಂದ ಅವನು ಅಹರಭಿಮಾನದೇವತೆಯೆಂದೂ, ವರುಣನು ರಾತ್ರ್ಯಭಿಮಾನಿಯೆಂದು ಪ್ರಸಿದ್ಧಿಯಿದೆಯೆಂದೂ ತಿಳಿಸಿದ್ದಾರೆ. ಆಚ್ಛಾದನಮಾಡು ಎಂಬರ್ಥವುಳ್ಳ '**ವೃ**' ಎಂಬ ಧಾತುವಿನಿಂದ '**ವರುಣ**' ಶಬ್ದವು ನಿಷ್ಪನ್ನವಾಗಿದೆ. ಈ ದೇವತೆಯು ದುಷ್ಟರನ್ನು ತನ್ನ ಪಾಶದಿಂದ ಬಿಗಿಯುತ್ತಾನೆ ಮತ್ತು ರಾತ್ರಿಯು ವರುಣನಿಗೆ ಸಂಬಂಧಪಟ್ಟುದು. **ವೃಣೋತಿ ಪಾಪಕೃತಃ ಸ್ವಕೀಯೈಃ ಪಾಶೈರಾವೃಣೋತೀತಿ ರಾತ್ರ್ಯಭಿಮಾನಿದೇವೋ ವರುಣಃ। ಶ್ರೂಯತೇ ಚ-ವಾರುಣೀ ರಾತ್ರಿಃ।** (ತೈ. ಬ್ರಾ. ೧-೭-೧೦-೧ ಇತಿ)

೧-೧೪೧-೯ ನೇ ಮಂತ್ರಾರ್ಥದ ವಿವರಣೆಯನ್ನು ಹೇಳುವಾಗಲೂ ಸಹ ಇದೇ ನಿರ್ವಚನಗಳನ್ನು ತಿಳಿಸುತ್ತಾ ಜೊತೆಯಲ್ಲಿ **ಅರ್ಯಮನು** ಈ ದೇವತಾದ್ವಯದ ನಡುವೆ ಸೇರತಕ್ಕವನೆಂದೂ ತಿಳಿಸಿದ್ದಾರೆ. (**ಅರ್ಯಮಾ ಉಭಯೋ-ರ್ಮಧ್ಯವರ್ತೀ ದೇವಃ**) ೧-೯೦-೧ ನೇ ಮಂತ್ರದ ವಿವರಣೆಯಲ್ಲಿ (**ಅರ್ಯಮಾ ಅಹೋರಾತ್ರವಿಭಾಗಸ್ಯ ಕರ್ತಾ ಸೂರ್ಯಃ**) ಅಹೋರಾತ್ರವನ್ನು ವಿಭಾಗಮಾಡತಕ್ಕ ಸೂರ್ಯನಿಗೆ ಅರ್ಯಮನೆಂದು ಹೆಸರೆಂದು ಸೂಚಿಸಿದ್ದಾರೆ. ಪುನಃ ೨-೩೮-೮ ನೇ ಮಂತ್ರದ ಭಾಷ್ಯದಲ್ಲಿ ವರುಣನ ಸ್ವರೂಪವನ್ನು ಈ ರೀತಿ ವರ್ಣಿಸಿದೆ.

> **ಯೋನಿಂ ಸ್ಥಾನಂ ನಿಮಿಷಿ ನಿಮೇಷೇ ಸವಿತುರಸ್ತಮಯೇ ಸತಿ ವಿಶ್ರಮಾರ್ಥಂ ಪ್ರಾಣಿಭ್ಯಃ ಪ್ರಯಚ್ಛತಿ। ವರುಣಸ್ಯ ರಾತ್ರೇರ್ನಿರ್ವಾಹಕತ್ವಾತ್।**

ಸೂರ್ಯಾಸ್ತಮವಾದನಂತರ ಪ್ರಾಣಿಗಳಿಗೆ ವಿಶ್ರಾಂತಿಸ್ಥಾನವನ್ನು ಕಲ್ಪಿಸಿಕೊಡುವವನೇ ವರುಣನು. ಇವನೇ ರಾತ್ರಿಯ ವ್ಯವಹಾರಗಳಿಗೆಲ್ಲಾ ನಿರ್ವಾಹಕನು.

೧-೩೫-೧ ರಲ್ಲು **ಅಗ್ನಿ ಸವಿತೃ** ಮತ್ತು **ರಾತ್ರಿ** ಈ ದೇವತೆಗಳೊಡನೆ **ಮಿತ್ರಾವರುಣರಿಗೆ** ಆಹ್ವಾನವಿದೆ.

"ನಮ್ಮ ಕ್ಷೇಮಸಾಧನೆಗಾಗಿ ನಾನು ಅಗ್ನಿಯನ್ನು ಪ್ರಾರ್ಥಿಸಿ ಕರೆಯುತ್ತೇನೆ. ನಮ್ಮ ಸಹಾಯಾರ್ಥವಾಗಿ ಮಿತ್ರಾವರುಣರನ್ನು ಕರೆಯುತ್ತೇನೆ. ವಿಶ್ವಕ್ಕೆ ವಿಶ್ರಾಂತಿದಾಯಕಿಯಾದ ರಾತ್ರಿಯನ್ನು ಕರೆಯುತ್ತೇನೆ" ಎಂದು ಉಳಿದ ದೇವತೆಗಳೊಡನೆ ಸೇರಿಸಿ ಸ್ತುತಿಸಿದೆ. ಕೆಲವೆಡೆಗಳಲ್ಲಿ **ಸೂರ್ಯನೇ ಮಿತ್ರ**ಶಬ್ದವಾಚ್ಯನೆಂದೂ ತಿಳಿಸಿದೆ. (**ಮಿತ್ರಶಬ್ದಸ್ಯ ಸೂರ್ಯವಾಚಿತ್ವಾತ್** ತೈ. ಸಂ. ಭಾ. ೧-೮-೧೬-೧) ಅದೇ ಸಂದರ್ಭದಲ್ಲಿ **ವರುಣ**ಪದದ ನಿರ್ವಚನ ವನ್ನೂ ತಿಳಿಸುತ್ತಾ **ವರುಣಶಬ್ದಸ್ಯ ಅಂಧಕಾರವದಾವರ್ತಕವಾಚಿತ್ವಾತ್।** ಅಂಧಕಾರದಂತೆ ಸರ್ವತ್ರ ವ್ಯಾಪಿಸುವ ಸ್ವರೂಪವುಳ್ಳೋಣದರಿಂದ ವರುಣನಿಗೆ ಈ ಹೆಸರು ಪ್ರಸಿದ್ಧವಾಗಿದೆಯೆಂದು ವಿವರಿಸಿದೆ. **ಮೈತ್ರಂ ವಾ ಅಹಃ। ವಾರುಣೀ ರಾತ್ರಿಃ॥** ಎಂದು ಹೇಳಿದೆ. (ತೈ. ಬ್ರಾ. ೧-೭-೧೦-೧)

> **ನ ವಾ ಇದಂ ದಿವಾ ನ ನಕ್ತಮಾಸೀದವ್ಯಾಕೃತಂ ತೇ ದೇವಾ ಮಿತ್ರಾವರುಣಾವಬ್ರುವನ್ನಿದಂ ನೋ ವಿವಾಸಯತಮಿತಿ।** (ತೈ. ಸಂ. ೬-೪-೮-೩)
>
> **ಮಿತ್ರೋ ಅಹರಜನಯದ್ವರುಣೋ ರಾತ್ರಿಂ॥**

(ತೈ. ಸಂ. ೬-೪-೮-೩)

ಪೂರ್ವದಲ್ಲಿ ಪ್ರಪಂಚದಲ್ಲಿ ಅಹೋರಾತ್ರಗಳೆಂಬ ವಿಭಾಗವಿರಲಿಲ್ಲ. ಎಲ್ಲವೂ ಅವ್ಯಾಕೃತವಾಗಿದ್ದಿತು. ಆಗ ದೇವತೆಗಳು ಮಿತ್ರಾವರುಣರನ್ನು ಕುರಿತು 'ನೀವು ಅಹೋರಾತ್ರಗಳ ವಿಭಾಗವನ್ನುಂಟುಮಾಡಿ' ಎಂದು ಕೇಳಿಕೊಂಡುದರ ಮೇಲೆ ಮಿತ್ರನು ಅಹಸ್ಸನ್ನೂ, ವರುಣನು ರಾತ್ರಿಯನ್ನೂ ನಿರ್ಮಿಸಿದರೆಂದು ತೈತ್ತಿರೀಯಸಂಹಿತಾವಾಕ್ಯವು ತಿಳಿಸುತ್ತದೆ. ಋಕ್ಸಂಹಿತೆಯಲ್ಲಿ **ವರುಣನ** ಸ್ತುತಿಕಾಲದಲ್ಲಿ,

**ಸ ಕ್ಷಪಃ ಪರಿಷಸ್ವಜೇ ನ್ಯು೧ ಸ್ರೋ ಮಾಯಯಾ ದಧೇ ಸ ವಿಶ್ವಂ ಪರಿ ದರ್ಶತಃ ।**
(ಋ. ಸಂ. ೮-೪೧-೩)

ದರ್ಶನೀಯ ರೂಪವುಳ್ಳ ಇದೇ ವರುಣನು ರಾತ್ರಿಯನ್ನು ಆಲಿಂಗಿಸುತ್ತಾನೆ. ತನ್ನ ಮಾಯಾಶಕ್ತಿಯಿಂದ ದಿವಸವನ್ನು ಸೃಷ್ಟಿಸಿ ಸಕಲವನ್ನೂ ಆಯಾ ನಿರ್ದಿಷ್ಟವಾದ ದೇಶಕಾಲಗಳಲ್ಲಿ ಪ್ರತಿಷ್ಠಾಪಿಸುತ್ತಾನೆ, ಎಂದು ಪ್ರಶಂಸಿಸಿದೆ. ಋ ಸಂ. ೭-೮೭-೧ನೇ ಮಂತ್ರದ ಭಾಷ್ಯದಲ್ಲಿ,

**"ಅಸ್ತಂ ಗಚ್ಛನ್ ಸೂರ್ಯ ಏವ ವರುಣ ಇತ್ಯುಚ್ಯತೇ । ಸ ಹಿ ಸ್ವಗಮನೇನ ರಾತ್ರೀರ್ನಯತಿ"** ಅಸ್ತಂಗತನಾಗತಕ್ಕ ಸೂರ್ಯನಿಗೇ ವರುಣನೆಂಬ ಹೆಸರು, ಅವನು ತನ್ನ ಗಮನದಿಂದಲೇ ರಾತ್ರಿಯನ್ನೂ ನಿರ್ಮಿಸುತ್ತಾನೆ. ಎಂದು ಸಾಯಣರು ವಿವರಿಸಿದ್ದಾರೆ.

**ಅಯಂ ವೈ ಲೋಕೋ ಮಿತ್ರಃ । ಅಸೌ ವರುಣಃ ।**
(ಶ. ಬ್ರಾ. ೧೨-೯-೨-೧೨)

ಈ ಪೃಥ್ವಿಯೇ ಮಿತ್ರನು, ದ್ಯುಲೋಕವೇ ವರುಣನು ಎಂದು ಶತಪಥ ಬ್ರಾಹ್ಮಣವು ಪ್ರಶಂಸಿಸಿದೆ. ಹೀಗೆ ಇವರ ಗುಣ ವರ್ಣನವು ಅನೇಕರೀತಿಯಲ್ಲಿರುತ್ತದೆ.

## ಮಿತ್ರಾವರುಣರ ಗುಣಾತಿಶಯಗಳು

ಋಕ್ಸಂಹಿತೆಯಲ್ಲಿ ವರ್ಣಿತವಾಗಿರುವಂತೆ ಮಿತ್ರಾವರುಣರ ವಿಶೇಷಗುಣಗಳನ್ನು ಇಲ್ಲಿ ಸೂಕ್ಷ್ಮವಾಗಿ ತಿಳಿಸಲಾಗುತ್ತದೆ. ಈ ಎರಡು ದೇವತೆಗಳಲ್ಲಿ ವರುಣನು ಒಂದೊಂದು ಸಲ ಯಜಮಾನರ ಗೋಚರಕ್ಕೆ ಸಿಲುಕಬಲ್ಲನೆಂದು ಸ್ತುತನಾಗಿದ್ದಾನೆ.

"ಎಲ್ಲರಿಗೂ ಗೋಚರನಾಗತಕ್ಕ ವರುಣನನ್ನು ನಾನು ಪ್ರತ್ಯಕ್ಷವಾಗಿ ಕಂಡೆನು. ಪೃಥ್ವಿಯ ಮೇಲೆ ನಿಂತಿರತಕ್ಕ ಅವನ ರಥವನ್ನು ಸಹ ನಾನು ಪ್ರತ್ಯಕ್ಷವಾಗಿ ನೋಡಿದೆನು." (ಋ. ಸಂ. ೧-೨೫-೧೮)

"ನಾನು ವರುಣನ ದರ್ಶನವನ್ನು ಪಡೆದಾಗ ಅವನ ತೇಜಸ್ಸು ಅಗ್ನಿಯ ತೇಜಸ್ಸಿಗೆ ಸಮಾನವಾದ ಪ್ರಭೆಯುಳ್ಳದ್ದಾಗಿದ್ದಿತು." (೭-೮೮-೨)

"ಸ್ಥಿರಸಂಕಲ್ಪವುಳ್ಳವನೂ, ಮಹತ್ಸ್ವರೂಪವುಳ್ಳವನೂ ಆದ ವರುಣನು ಪ್ರಭುತ್ವವನ್ನು ಮಾಡುತ್ತಾ ತನ್ನ ನಿವಾಸಸ್ಥಾನದಲ್ಲಿ ಸುಖವಾಗಿ ಸ್ಥಿತನಾಗಿದ್ದಾನೆ." (೧-೨೫-೧೦)

"ತಾನು ಸ್ವರ್ಣಕವಚವನ್ನು ಧರಿಸಿ ನಿಂತುಕೊಂಡು ಪ್ರಭುತ್ವವನ್ನು ಮಾಡುತ್ತಿರುವಾಗ ಅವನ ಸುತ್ತಲೂ ಅವನ ಅನುಯಾಯಿಗಳೋ ಅಥವಾ ಇತರ ದೇವತೆಗಳೋ ಸುತ್ತುವರಿದು ನಿಂತಿರುತ್ತಾರೆ." (೧-೨೫-೧೩)

"ಯಜ್ಞಕರ್ತರಾದ ಯಜಮಾನರು ಯಾವ ವರುಣನ ಗೃಹವನ್ನು ಪ್ರವೇಶಿಸಿ ಅವನನ್ನು ಸಾಕ್ಷಾತ್ತಾಗಿ ಪೂಜಿಸುವರೋ, ಆ ಗೃಹಕ್ಕೆ ಸಹಸ್ರದ್ವಾರಗಳಿರುತ್ತವೆ." (೭-೮೫-೫)

"ಸಹಸ್ರ ಆಧಾರಸ್ತಂಭಗಳಿರತಕ್ಕ ಸ್ಥಿರವಾದ ಗೃಹದಲ್ಲಿ ಪ್ರಕಾಶಮಾನನಾದ ವರುಣನು ಮಿತ್ರನೊಂದಿಗೆ ವಾಸಿಸುತ್ತಾನೆ. ಇವರಿಬ್ಬರೂ ಅಪ್ರತಿಹತವಾದ ತೇಜಸ್ಸುಳ್ಳವರು" (**ರಾಜಾನಾ; ಅಹೃಣೀಯಮಾನಾ**)

(೨-೪೧-೫; ೫-೬೨-೬)

"ಜಗತ್ಪ್ರಭುಗಳಾದ ಈ ಮಿತ್ರಾವರುಣರಿಬ್ಬರೂ ಸಹ, ಅಶ್ವಗಳಿಂದ ಎಳೆಯಲ್ಪಡುವುದೂ, ಸೂರ್ಯೋದಯ ಕಾಲದಲ್ಲಿ ಹೊಂಬಣ್ಣವನ್ನು ಹೊಂದಿ ಸೂರ್ಯಾಸ್ತಮಯಕಾಲದಲ್ಲಿ ಅಯೋರೂಪಕ್ಕೆ ಪರಿವರ್ತಿಸುವುದೂ ಆದ ಉತ್ತಮವಾದ ರಥದಲ್ಲಿ ಹತ್ತಿಕುಳಿತು ತಮ್ಮ ಸಂಚಾರವನ್ನು ಕೈಗೊಳ್ಳುತ್ತಾರೆ" (೫-೬೨-೮)

"ಈ ರಥವನ್ನು ಹತ್ತಿ, ಅತ್ಯುನ್ನತವಾದ ಅಂತರಿಕ್ಷದಲ್ಲಿ ಸಂಚರಿಸುತ್ತಾ, ಇವರಿಬ್ಬರೂ ಸಹ ದ್ಯಾವಾಪೃಥಿವಿಗಳೆಲ್ಲವನ್ನೂ ಪೂರ್ಣವಾಗಿ ವೀಕ್ಷಿಸುತ್ತಾರೆ.

(೫-೬೨-೪, ೮; ೫-೬೩-೧)

"ವರುಣನು ವಿಸ್ತೃತವಾದ ಚಕ್ಷುಸ್ಸುಳ್ಳವನು. ಆದುದರಿಂದಲೇ ದೂರದೃಷ್ಟಿಯುಳ್ಳವನು"

(೧-೨೫-೫, ೧೬; ೮-೯೦-೨)

"ಇದೇ ವರುಣನು ಸಹಸ್ರದೃಷ್ಟಿಯುಳ್ಳವನು (ಸಹಸ್ರಚಕ್ಷಸ್) (೭-೩೪ ೧೦)

ಕೆಲವೆಡೆಗಳಲ್ಲಿ ವರುಣನು ಹೊಂಬಣ್ಣದ ದೂತನುಳ್ಳವನೆಂದು ಸ್ತುತನಾಗಿದ್ದಾನೆ. (**ಹಿರಣ್ಯಪಕ್ಷಂ ವರುಣಸ್ಯ ದೂತಂ**) (೧೦-೧೨೩-೬)

ಇನ್ನು ಕೆಲವೆಡೆಗಳಲ್ಲಿ ಸೂರ್ಯನು ಮಿತ್ರಾವರುಣರ ಚಕ್ಷುಸ್ಸೆಂದು ವರ್ಣಿತನಾಗಿದ್ದಾನೆ. (**ಚಕ್ಷುರ್ಮಿತ್ರಸ್ಯ ವರುಣಸ್ಯ**) (೧-೧೧೫-೧; ೭-೬೩-೧; ೭-೬೧-೧; ೧೦-೩೭-೧)

ಆದಿತ್ಯರ ಗುಂಪಿನಲ್ಲೇ ಸೇರಿದ ಅರ್ಯಮನೂ, ಮಿತ್ರಾವರುಣರೂ ಒಟ್ಟಿಗೆ **ಸೂರಚಕ್ಷಸಃ** ಎಂದು ಅನೇಕ ಕಡೆಗಳಲ್ಲಿ ವರ್ಣಿತರಾಗಿದ್ದಾರೆ. (ಉದಾ: ೭-೬೬-೧೦)

"ಮಿತ್ರಾವರುಣರು ಅತಿಕುಶಲಕ್ರಿಯೆಗೆ ಯೋಗ್ಯವಾದ ಹಸ್ತಗಳನ್ನು ಹೊಂದಿರುವರು.

"ವರುಣನು **ರಾಜಾ** ಎಂಬ ವಿಶೇಷಣದಿಂದ ಅನೇಕೆಡೆಗಳಲ್ಲಿ ನಿರ್ದಿಷ್ಟನಾಗಿದ್ದಾನೆ. ಅವನು ದೇವಮಾನವಾದಿಗಳಿಗೆಲ್ಲಾ ಪ್ರಭುವು. ಸಕಲ ಜಗತ್ತಿಗೂ ಸಾರ್ವಭೌಮನು"

(೧-೨೪-೭, ೮; ೪-೧-೨; ೫-೪೦-೭; ೭-೬೪-೧; ೧೦ ೧೦೩-೯; ೧೦-೧೭೩-೫; ೧೦-೧೩೨-೪)

"**ತ್ವಂ ವಿಶ್ವೇಷಾಂ ವರುಣಾಸಿ ರಾಜಾ ಯೇ ಚ ದೇವಾ ಅಸುರ ಯೇ ಚ ಮರ್ತಾಃ**"

(೨-೨೭-೧೦)

"ಸಕಲ ಭುವನಗಳಿಗೂ ವರುಣನೇ ರಾಜನು. (**ವಿಶ್ವಸ್ಯ ಭುವನಸ್ಯ ರಾಜಾ**) (೫-೮೫-೩)

"ಅಷ್ಟೇ ಅಲ್ಲದೇ, ಸ್ಥಾವರಜಂಗಮಾತ್ಮಕವಾದ ಸಕಲ ಭೂತಗಳಿಗೂ **ಸಮ್ರಾಟ್** ಆಗಿದ್ದಾನೆ"

(೭-೮೭-೬; ೧-೨೫-೧೦; ೨-೨೮-೬; ೫-೮೫-೧; ೬-೬೮-೯; ೮-೪೨-೧)

" ವರುಣನ ಪ್ರಭುತ್ವವು ಇತರ ಸಹಾಯಾಪೇಕ್ಷೆಯಲ್ಲ ಸ್ವತಂತ್ರನಾದ ಪ್ರಭುತ್ವವುಳ್ಳವನು (**ಸ್ವರಾಟ್**) (೨-೨೮-೧)

" **ರಾಜಾ, ಸಮ್ರಾಟ್**, ಇತ್ಯಾದಿ ವಿಶೇಷಣಗಳು ವೈಯಕ್ತಿಕವಾಗಿ **ವರುಣ**ನಿಗೆ ಪ್ರಯುಕ್ತವಾಗಿರುವಂತೆಯೇ, **ಮಿತ್ರಾವರುಣ**ರಿಬ್ಬರನ್ನೂ ಸೇರಿಸಿ ನಿರ್ದಿಷ್ಟವಾಗಿರುವ ಸನ್ನಿವೇಶಗಳೂ ಅನೇಕವಾಗಿವೆ."

(೧-೭೧-೯, ೧-೧೩೬-೧-೪, ೧-೧೩೭-೧, ೫-೬೨-೬, ೫-೬೩-೨,೩,೫, ೫-೬೫-೨. ೫-೬೮-೨, ೭-೬೪-೨, ೮-೨೩-೩೦, ೮-೨೫-೪,೭,೮, ೮-೧೦೧-೨, ೧೦-೬೫-೫.)

ಶಕ್ತಿ, ಕ್ಷಾತ್ರವೀರ್ಯ, ಪ್ರಭುತ್ವ ಮುಂತಾದ ಅಸಾಧಾರಣ ಗುಣಗಳು ಮಿತ್ರಾವರುಣರ ವಿಶೇಷ ಗುಣಗಳೆಂದು ಪ್ರಶಂಸಿಸಿದೆ. ಆದಿತ್ಯರೊಡಗೂಡಿದ ಮಿತ್ರಾವರುಣರು ಕ್ಷತ್ರಿಯರೆಂದು ಪ್ರಸಿದ್ಧರಾಗಿದ್ದಾರೆ.

(೧-೨೪-೬, ೧-೨೫-೫, ೧-೧೩೬-೧, ೫-೬೬-೨, ೫-೬೭-೧, ೫-೬೮-೧,೭, ೬-೪೯-೧, ೬-೫೧-೧೦, ೬-೬೭-೫,೬, ೭-೩೪-೧೧, ೭-೬೪-೨, ೮-೨೫-೮ ೮-೬೭-೧. ೮-೧೦೧-೨.)

ಈ ಗುಣಗಳಿರುವುದರಿಂದಲೇ. **ರುದ್ರಾಃ ಅಸುರಾಃ** ಎಂಬ ವಿಶೇಷಣಗಳಿಂದಲೂ ಇವರು ನಿರ್ದಿಷ್ಟರಾಗಿದ್ದಾರೆ. **(ಅಸುರಾ ತಾವಾರ್ಯಾ)** ದಿವ್ಯ ಗುಣಗಳಿದ್ದರೂ ಇವರು ಭಯಂಕರರು.

(೫-೭೦-೨, ೩, ೭-೩೬-೨, ೮-೨೫-೪, ೮-೨೭-೨೦, ೭-೬೫-೨.)

ದೈವೀ ಶಕ್ತಿಯನ್ನು ಸೂಚಿಸತಕ್ಕ **ಅಸುರ** ಎಂಬ ವಿಶೇಷಣವು ವರುಣ ಪರವಾಗಿಯೇ ಅಧಿಕವಾಗಿರುತ್ತದೆ. (೧-೨೪-೧೪, ೨-೨೭-೧೦, ೫ ೮೫-೫, ೬, ೮-೪೨-೧), ಇತರ ದೇವತೆಗಳ ಪರವಾಗಿಯೂ ಕೆಲವೆಡೆಗಳಲ್ಲಿ ಪ್ರಯುಕ್ತವಾಗಿದೆ.

ಉಳಿದ ಎಲ್ಲಾ ವಿಶೇಷಣಗಳಿಗಿಂತಲೂ **ಮಾಯಾ** ಎಂಬ ಪದವು ವರುಣನ ಅತ್ಯಸಾಧಾರಣವಾದ ಗುಣವನ್ನು ತಿಳಿಸುತ್ತದೆ. ವರುಣನು ಕೆಲವೆಡೆಗಳಲ್ಲಿ **ಮಾಯಿನ್** ಎಂಬ ಶಬ್ದದಿಂದಲೇ ವಾಚ್ಯನಾಗಿದ್ದಾನೆ. (೬-೪೮-೧೪; ೭-೨೮-೪; ೧೦-೯೦-೧೦; ೧೦-೧೪೭-೫). ಒಂದೆರಡು ಸನ್ನಿವೇಶಗಳಲ್ಲಿ **ಮಾಯಾ** ಎಂದು ಮಿತ್ರಾವರುಣರಿಬ್ಬರನ್ನೂ ಸಂಬೋಧಿಸಿದೆ. (೩-೬೧-೭; ೫-೬೩-೪)

ಈ **ಅಸುರಶಕ್ತಿ**ಯಿಂದಲೂ, **ಮಾಯಾಶಕ್ತಿ**ಯಿಂದಲೂ ಸಹ ಇವರಿಬ್ಬರೂ ವೃಷ್ಟಿಯನ್ನು ಸುರಿಸುತ್ತಾರೆ ಮತ್ತು ಧೃತವ್ರತರಾಗಿದ್ದಾರೆ.

## ವರುಣನ ವೈಯಕ್ತಿಕವಾದ ವಿಶೇಷಗುಣಗಳು ಮತ್ತು ಕ್ರಿಯೆಗಳು.

ವರುಣನ ಕ್ರಿಯೆಗಳೆಲ್ಲವೂ ವಿಶ್ವವ್ಯಾಪಾರಕ್ಕೆ ಸಂಬಂಧಿಸಿದವಾಗಿವೆ ಅನಂತವಾದ ಪ್ರಜ್ಞೆಯಿಂದ ಯುಕ್ತನಾದ ವರುಣನು ದ್ಯಾವಾಪೃಥಿವಿಗಳನ್ನು ನಿರ್ಮಿಸಿ ಅವುಗಳ ಧಾರಕನಾಗಿದ್ದಾನೆ ಮತ್ತು ಸಕಲ ಲೋಕಗಳಿಗೂ ಪ್ರಭುವಾಗಿ ಅವುಗಳೆಲ್ಲವನ್ನೂ ಆಕ್ರಮಿಸಿದ್ದಾನೆ. ಈ **ವರುಣವ್ರತಗಳು** ಅತ್ಯಸಾಧಾರಣವಾದವಾಗಿವೆ. (೮-೪೨-೧)

ದ್ಯುಲೋಕ, ಪೃಥಿವೀ ಮತ್ತು ಅಂತರಿಕ್ಷ ಈ ಮೂರು ಲೋಕಗಳೂ ಸಹ ಈ ವರುಣನನ್ನೇ ಆಶ್ರಯಿಸಿ ಇವನಲ್ಲಿಯೇ ಅವೆಲ್ಲವೂ ಅಂತರ್ಗತವಾಗಿವೆ. (೭-೮೭-೫)

ಇದೇ ವರುಣನು ಭ್ರಮಣಾತ್ಮಕನೂ, ಸುವರ್ಣರೂಪನೂ ಆದ ಆದಿತ್ಯನನ್ನು ಅಂತರಿಕ್ಷದಲ್ಲಿ ಪ್ರಕಾಶಿಸುವಂತೆ ಮಾಡಿದ್ದಾನೆ. (೫-೮೫-೨; ೬-೭೦ ೧; ೭-೮೬-೧; ೭ ೮೭-೬; ೮-೪೧-೪, ೫, ೧೦)

ಅಂತರಿಕ್ಷವನ್ನೆಲ್ಲಾ ವ್ಯಾಪಿಸಿ ಗಭೀರವಾದ ಶಬ್ದವನ್ನುಂಟುಮಾಡುತ್ತಿರುವ ವಾಯುವೇ ವರುಣನ ಉಸಿರು. (೭-೮೭-೨)

ಈ ವರುಣನು ಸೂರ್ಯನ ಸಂಚಾರಕ್ಕೆ ಅನಂತವಾದ ಮಾರ್ಗವನ್ನು ನಿರ್ಮಿಸಿದ್ದಾನೆ. ತನ್ನ ಆದೇಶಾನುವರ್ತಿಗಳಾಗಿ ಪ್ರವಹಿಸುವ ನದಿಗಳಿಗಾಗಿ ಕಾಲುವೆಗಳನ್ನು ತೋಡಿದ್ದಾನೆ.

(೧-೨೪-೮ ; ೨-೨೮-೪ ; ೭-೮೭-೧)

ಅವನ ಪ್ರಜ್ಞಾಕೌಶಲ್ಯದಿಂದಲೇ ನದಿಗಳು ಅನಂತವಾಗಿಯೂ, ಅಖಂಡವಾಗಿಯೂ ಸಾಗರಗಳಿಗೆ ನೀರನ್ನು ತುಂಬುತ್ತಿದ್ದರೂ ಸಹ ಅವನ್ನು ತುಂಬಿ ಎಲ್ಲೆಯನ್ನು ಮೀರುವಂತೆ ಮಾಡಲಾರವು. ಆ ವರುಣನ ಆಜ್ಞೆಗಳೆಲ್ಲವೂ ಯಾವ ರೀತಿ ಸ್ಥಿರವಾದವೋ, ಅದೇ ರೀತಿ ಅಪ್ರತಿಹತವಾದವು ಮತ್ತು ಅನುಲ್ಲಂಘನೀಯವಾದವು.

(೫-೮೫-೬ ; ೩-೫೪-೧೮)

ಸ್ಥಿರವಾದ ಪರ್ವತಗಳನ್ನಾಕ್ರಮಿಸಿ ನಿಲ್ಲುವಂತೆ ಅವೆಲ್ಲವೂ ವರುಣನನ್ನೇ ಆಶ್ರಯಿಸಿ ನಿಂತಿವೆ.

(೨-೨೮-೮ ; ೧-೨೫-೬, ೧೦ ; ೧-೪೪-೧೪ ; ೧-೧೪೧-೯ ; ೨-೧-೪ ; ೮-೨೫-೨)

ಧೃತವ್ರತನಾದ ಈ ವರುಣನ ನಿಯಮನಗಳಿಂದಲೇ ರಾತ್ರಿಕಾಲದಲ್ಲಿ ನಕ್ಷತ್ರಗಳು ಪ್ರಕಾಶಿಸುತ್ತವೆ. ಪ್ರಭಾಯುತನಾದ ಚಂದ್ರನೂ ಇವನ ವ್ರತಗಳ ಮಹಿಮೆಯಿಂದಲೇ ಪ್ರಕಾಶಿಸುತ್ತಾನೆ. ಮತ್ತು ಈ ಚಂದ್ರ ಮತ್ತು ನಕ್ಷತ್ರಗಳು ಹಗಲಿನಲ್ಲಿ ತಮ್ಮ ಪ್ರಕಾಶವನ್ನು ಕಳೆದುಕೊಳ್ಳುತ್ತವೆ. (೧-೨೪-೧೦)

ಅಂತರಿಕ್ಷದಲ್ಲಿ ಸಂಚರಿಸತಕ್ಕ ಪಕ್ಷಿಗಳಾಗಲಿ, ಅವಿಚ್ಛಿನ್ನವಾಗಿ ಹರಿಯತಕ್ಕ ನದಿಗಳಾಗಲಿ ಈ ವರುಣನ ಶಕ್ತಿಯನ್ನೂ, ಕೋಪದ ಪ್ರಭಾವವನ್ನೂ ಅರಿಯಲಾರವು. (೧-೨೪-೬)

ಆದರೆ, ಇವನ ದೂತರು ಮಾತ್ರ ಎರಡು ಲೋಕಗಳ ಸ್ಥಿತಿಗಳನ್ನೂ ಪೂರ್ಣವಾಗಿ ಅರಿಯಬಲ್ಲರು.

(೭-೮೭-೩ ; ೧-೨೪-೧೩ ; ೬-೬೭-೫)

ಅಂತರಿಕ್ಷದಲ್ಲಿ ಸಂಚರಿಸತಕ್ಕ ಪಕ್ಷಿಗಳ ಸಂಚಾರಗಳನ್ನೂ, ಸಾಗರಗಳಲ್ಲಿ ಓಡಾಡುವ ದೋಣಿಗಳ ಸಂಚಾರ ಮಾರ್ಗಗಳನ್ನೂ, ಅತ್ಯಂತ ದೂರಪ್ರದೇಶಗಳನ್ನೂ ವ್ಯಾಪಿಸುವ ವಾಯುಗತಿಗಳನ್ನೂ ಮತ್ತು ಭೂತಭವಿಷ್ಯದ್ವರ್ತಮಾನ ಕಾಲದ ಎಲ್ಲಾ ವ್ಯವಹಾರಗಳನ್ನೂ ಅರಿಯುತ್ತಾನೆ. (೧-೨೫-೭)

ವರುಣನ ಸಹಾಯವಿಲ್ಲದೇ ಯಾವ ಪ್ರಾಣಿಯೂ ಸಹ ಕಣ್ಣನ್ನೂ ಮಿಟುಕಿಸಲಾರದು. (೨-೨೮-೬)

ಮಾನವರ ಸತ್ಯಾತ್ಮಕವಾದ ವ್ಯವಹಾರಗಳನ್ನೂ ಅಸತ್ಯಾತ್ಮಕವಾದ ವ್ಯವಹಾರಗಳನ್ನೂ ಅವನು ಪ್ರತ್ಯಕ್ಷತಃ ನೋಡಿ ಅರ್ಥಮಾಡಿಕೊಂಡು ತತ್ತತ್ಫಲಗಳನ್ನು ಕೊಡುತ್ತಾನೆ. (೭-೪೯-೭)

ವಸಿಷ್ಠಋಷಿಗೆ ತತ್ತ್ವರಹಸ್ಯಗಳನ್ನು ವರುಣನು ಉಪದೇಶಮಾಡುತ್ತಾನೆ. (೭-೮೭-೪)

ಆದರೆ ಇವನ ರಹಸ್ಯತತ್ತ್ವವನ್ನೂ ಮಿತ್ರನ ತತ್ತ್ವವನ್ನೂ ಮಂದಬುದ್ಧಿಯುಳ್ಳವನೂ, ಅವಿವೇಕಿಯೂ ಆದವನಿಗೆ ತಿಳಿಸುವುದಿಲ್ಲ

ವರುಣನ ಶಕ್ತಿಯೂ ಸರ್ವಜ್ಞತ್ವವೂ ಸಹ ಅಥರ್ವವೇದದಲ್ಲಿ ಈ ರೀತಿ ವರ್ಣಿತವಾಗಿದೆ.

**ಬೃಹನ್ನೇಷಾಮಧಿಷ್ಠಾತಾ ಅಂತಿಕಾದಿವ ಪಶ್ಯತಿ ।**
**ಯಸ್ಸ್ತಾಯನ್ಮನ್ಯತೇ ಚರನ್ಸರ್ವಾಂ ದೇವಾ ಇದಂ ವಿದುಃ ॥**

(ಅ ವೇ. ೪-೧೬-೧)

ಈ ಸಕಲ ಲೋಕಗಳಿಗೂ ಪ್ರಭುವಾಗಿ ಆಳುತ್ತಿರುವವನೂ ಬೃಹತ್ಸ್ವರೂಪವುಳ್ಳವನೂ ಆದ ವರುಣನು ಎಲ್ಲಾ ಲೋಕಗಳಿಗೂ ಅತ್ಯಂತ ಸಮೀಪದಲ್ಲಿರುವಂತೆಯೇ ಆಯಾ ಲೋಕಗಳ ಸಕಲ ವ್ಯವಹಾರಗಳನ್ನೂ ತಾನು ಸಾಕ್ಷಾತ್ತಾಗಿ ನೋಡಿ ಅವೆಲ್ಲವನ್ನೂ ಕೂಲಂಕಷವಾಗಿ ಅರಿಯುತ್ತಾನೆ. ಯಾವ ಪುರುಷನಾದರೂ ರಹಸ್ಯವಾಗಿ ಅಕಾರ್ಯವನ್ನು ಮಾಡಿ ತಾನು ಯಾರಿಗೂ ತಿಳಿಯದೇ ಕೆಲಸವನ್ನು ಮಾಡಿದೆನೆಂದು ಭ್ರಮಿಸಿದರೆ ಅದು ತಪ್ಪು. ದೇವತೆಗಳು ಎಲ್ಲಾ ರಹಸ್ಯಗಳನ್ನೂ ಅರಿಯುವರು.

**ಯಸ್ತಿಷ್ಠತಿ ಚರತಿ ಯಶ್ಚ ವಂಚತಿ ಯೋ ನಿಲಾಯಂಚರತಿ ಯಃ ಪ್ರತಂಕಂ ।**
**ದ್ವೌ ಸನ್ನಿಷದ್ಯ ಯನ್ಮಂತ್ರಯೇತೇ ರಾಜಾ ತದ್ವೇದ ವರುಣಸ್ತೃತೀಯಃ ॥**

(೪-೧೬-೨)

ಯಾವನು ನಿಂತಿರುವನೋ, ಯಾವನು ಸಂಚರಿಸುವನೋ, ಯಾವನು ರಹಸ್ಯವಾಗಿ ತಪ್ಪಿಸಿಕೊಂಡು ಓಡಾಡುವನೋ, ಯಾವನು ಮನೆಯೊಳಕ್ಕೆ ರಕ್ಷಣೆಗಾಗಿ ಪ್ರವೇಶಿಸುವನೋ ಅಥವಾ ಗುಪ್ತವಾದ ಪ್ರದೇಶದಲ್ಲಿ ಅವಿತುಕೊಳ್ಳುವನೋ ಅವೆಲ್ಲವನ್ನೂ ವರುಣನು ಕಂಡುಹಿಡಿಯುವನು. ಇಬ್ಬರು ಯಾರಾದರೂ ಒಟ್ಟಿಗೆ ಕುಳಿತುಕೊಂಡು ಗುಪ್ತವಾದ ಸಂಚನ್ನು ನಡೆಸುತ್ತಿದ್ದರೆ, ವರುಣನು ಅವರಿಗೆ ತಿಳಿಯದಂತೆಯೇ ಅವರ ನಡುವೆ ಮೂರನೆಯವನಾಗಿ ಕುಳಿತು ಆ ಒಳಸಂಚನ್ನು ಅರ್ಥಮಾಡಿಕೊಳ್ಳುತ್ತಾನೆ.

**ಉತೇಯಂ ಭೂಮಿರ್ವರುಣಸ್ಯ ರಾಜ್ಞ ಉತಾಸೌ ದ್ಯೌರ್ಬೃಹತೀ ದೂರೇ ಅಂತಾ ।**
**ಉತೋ ಸಮುದ್ರೌ ವರುಣಸ್ಯ ಕುಕ್ಷೀ ಉತಾಸ್ಮಿನ್ನಲ್ಪೇ ಉದಕೇ ನಿಲೀನಃ ॥**

(೪-೧೬-೩)

ಈ ಪೃಥ್ವಿಯ ಆಡಳಿತವು ಪ್ರಭುವಾದ ವರುಣನಿಗೆ ಸೇರಿದುದು. ಅನಂತವಾದುದೂ ಬೃಹತ್ಸ್ವರೂಪವುಳ್ಳದ್ದೂ ಆದ ದ್ಯುಲೋಕವೂ ಇವನಿಗೇ ಸೇರಿದುದು. ದ್ಯಾವಾಪೃಥ್ವಿಗಳೆರಡಕ್ಕೂ ಸೇರಿದ ಸಮುದ್ರಗಳು ವರುಣನ ಜಠರಗಳು. ಈ ಅಲ್ಪಪ್ರಮಾಣವುಳ್ಳ ಈ ಕಾಸಾರದಲ್ಲಿ ವರುಣನು ಸ್ಥಿತನಾಗಿದ್ದಾನೆ.

**ಉತ ಯೋ ದ್ಯಾಮತಿಸರ್ಪಾತ್ಪರಸ್ತಾನ್ನ ಸ ಮುಚ್ಯಾತೈ ವರುಣಸ್ಯ ರಾಜ್ಞಃ ।**
**ದಿವಸ್ಪಶಃ ಪ್ರಚರಂತೀದಮಸ್ಯ ಸಹಸ್ರಾಕ್ಷಾ ಅತಿ ಪಶ್ಯಂತಿ ಭೂಮಿಂ ॥**

(೪-೧೬-೪)

ಅಂತರಿಕ್ಷವನ್ನೂ ಮೀರಿ ದಾಟಿಹೋಗತಕ್ಕವನಾದರೂ ಇದ್ದರೆ, ಅವನೂ ಸಹ ಪ್ರಭುವಾದ ವರುಣನ ಹಿಡಿತದಿಂದ ತಪ್ಪಿಸಿಕೊಂಡು ಹೋಗಲಾರನು. ಅವನ ದೂತರು ಅಂತರಿಕ್ಷದಿಂದಿಳಿದು ಈ ಪೃಥ್ವಿಯನ್ನೆಲ್ಲಾ ಆಕ್ರಮಿಸುತ್ತಾರೆ. ಮತ್ತು ಸಹಸ್ರಚಕ್ಷುಸ್ಸುಳ್ಳವರಾಗಿ ಅವರು ಪೃಥ್ವಿಯನ್ನೆಲ್ಲಾ ಪೂರ್ಣವಾಗಿ ಪರಿಶೀಲಿಸುತ್ತಾರೆ.

**ಸರ್ವಂ ತದ್ರಾಜಾ ವರುಣೋ ವಿ ಚಷ್ಟೇ ಯದಂತರಾ ರೋದಸೀ ಯತ್ಪರಸ್ತಾತ್ ।**
**ಸಂಖ್ಯಾತಾ ಅಸ್ಯ ನಿಮಿಷೋ ಜನಾನಾಂ ಅಕ್ಷಾನಿವ ಶ್ವಘ್ನೀ ನಿ ಮಿನೋತಿ ತಾನಿ ॥**

(೪-೧೬-೫)

ದ್ಯಾವಾಪೃಥ್ವಿಗಳೆರಡರ ನಡುವೆ ಇರತಕ್ಕ ಸಕಲ ಪದಾರ್ಥಗಳನ್ನೂ ವರುಣನು ಅರಿಯುತ್ತಾನೆ. ಈ ಎರಡು ಲೋಕಗಳನ್ನೂ ಮೀರಿದ ಪ್ರದೇಶಗಳಲ್ಲಿರುವ ವಸ್ತುಗಳನ್ನೂ ತಿಳಿಯುತ್ತಾನೆ. ಮಾನವರು ಕಣ್ಣುಮಿಟಕಿಸುವ ಸೂಕ್ಷ್ಮವಾದ ಅಂಶಗಳನ್ನೂ ಗಮನಿಸಿ ಅವುಗಳ ಸಂಖ್ಯೆಗಳೆಲ್ಲವನ್ನೂ ಎಣಿಸುತ್ತಾನೆ. ಜೂಜುಕಾರನು ದಾಳವನ್ನು ಎಸೆಯುವಂತೆ ಇವೆಲ್ಲವನ್ನೂ ವರುಣನು ನಿಷ್ಕೃಷ್ಟವಾಗಿ ಪರಿಶೀಲಿಸಿ ಇವೆಲ್ಲಾ ವ್ಯವಹಾರಗಳನ್ನೂ ತನ್ನ ಸ್ವಾಧೀನದಲ್ಲಿಟ್ಟುಕೊಂಡಿದ್ದಾನೆ.

**ಯೇ ತೇ ಪಾಶಾ ವರುಣ ಸಪ್ತ ಸಪ್ತ ತ್ರೇಧಾ ತಿಷ್ಠಂತಿ ವಿಷಿತಾ ರುಶಂತಃ ।**
**ಸಿನಂತು ಸರ್ವೇ ಅನೃತಂ ವದಂತಂ ಯಸ್ಸತ್ಯವಾದೀ ಅತಿ ತಂ ಸೃಜಂತು ॥**

(೪-೧೬-೬)

ಎಲೈ ವರುಣನೇ, ಏಳೇಳಾಗಿ ವಿಭಕ್ತವಾಗಿರುವುದೂ, ಮೂರುಮೂರು ಪ್ರಕಾಶಗಳಾಗಿರುವುದೂ ಆದ ನಿನ್ನ ಪಾಶಗಳೆಲ್ಲವೂ ಸಹ ಅಸತ್ಯವನ್ನು ಹೇಳತಕ್ಕ ಪುರುಷನನ್ನು ಬಿಗಿಯಾಗಿ ಬಂಧಿಸಲಿ. ಸತ್ಯವನ್ನು ಹೇಳತಕ್ಕ ಪುರುಷನ ಸಮೀಪದಲ್ಲಿ ಹೋದರೂ ಸಹ ಅವನನ್ನು ಬಂಧಿಸದಿರಲಿ.

ಈ ರೀತಿ ವರ್ಣಿತವಾಗಿರುವುದರಲ್ಲಿ, ವರುಣನು ಸಕಲ ಭೂತಗಳ ನಿಯತಿಯನ್ನೂ ತನ್ನಧೀನದಲ್ಲಿಯೇ ಇಟ್ಟುಕೊಂಡಿದ್ದಾನೆಂದು ತಿಳಿಯುತ್ತದೆ. ಸಹಸ್ರಾರು ವಿಧವಾದ ಪರಿಹಾರಗಳಿಂದ ಪ್ರಜೆಗಳ ಕಷ್ಟಗಳನ್ನು ಕೊನೆಗಾಣಿಸಲು ಸಮರ್ಥನಾದುದರಿಂದ, ತನ್ನ ಅಪರಿಮಿತವಾದುದೂ ಅಗಾಧವಾದುದೂ ಆದ ಔದರ್ಯಾತಿಶಯಗಳಿಂದ ದಯೆಯನ್ನು ತೋರಿಸಿ ಪ್ರಜೆಗಳ ಪಾಪವನ್ನು ನಾಶಗೊಳಿಸಿ ಅನುಗ್ರಹಿಸಬೇಕೆಂದು ಪ್ರಾರ್ಥಿತನಾಗಿದ್ದಾನೆ.

(೧-೨೪-೯)

ಪಾಶಗಳನ್ನು ಬಿಚ್ಚುವಂತೆ ಪಾಪಪರಿಹಾರಮಾಡಬೇಕೆಂದು ಪ್ರಾರ್ಥಿತನಾಗಿದ್ದಾನೆ.

(೨ ೨೮-೫; ೫-೮೫-೭, ೮)

ಮಾನವರ ಪ್ರಾಣಗಳನ್ನು ಅಪಹರಿಸದೆ ಅವರ ಆಯುಸ್ಸನ್ನು ವೃದ್ಧಿಪಡಿಸಬೇಕೆಂದು ಯಾಚಿತನಾಗಿದ್ದಾನೆ **(ಮಾ ನ ಆಯುಃ ಪ್ರಮೋಷೀಃ । ಪ್ರ ಣ ಆಯೂಂಷಿ ತಾರಿಷತ )**

(೧-೨೪-೧೧; ೧-೨೫ ೧೨)

ಅಜ್ಞಾನವಶದಿಂದ ವರುಣನ ನಿಯಮಗಳನ್ನು ಯಜಮಾನನು ಅಕಸ್ಮಾತ್ತಾಗಿ ಉಲ್ಲಂಘಿಸಿದರೂ ಸಹ ಅವನನ್ನು ಕ್ಷಮಿಸತಕ್ಕದ್ದೆಂದು ಬೇಡಿದೆ. (೧-೨೫-೧)

ತನ್ನ ನಿಯಮವನ್ನುಲ್ಲಂಘಿಸಿ ಪಾಪವನ್ನಾಚರಿಸುವವರನ್ನು ತನ್ನ ಪಾಶದಿಂದ ಬಂಧಿಸಿ ಅವರನ್ನು ಪೂರ್ಣವಾಗಿ ಶಿಕ್ಷಿಸುವನು ಎಂಬಂಶವು ಅನೇಕ ಸಂದರ್ಭಗಳಲ್ಲಿ ಸ್ಪಷ್ಟವಾಗಿ ತಿಳಿಸಲ್ಪಟ್ಟಿದೆ.

(೧-೨೪-೧೫; ೧ ೨೫-೨೧; ೬-೭೪-೪; ೧೦-೮೫-೨೪; ಅ.ವೇ. ೪-೧೬-೬)

ಪಾಶಯುಕ್ತರಾದ ಮಿತ್ರಾವರುಣರಿಬ್ಬರೂ ಒಟ್ಟಿಗೆ ಸ್ತುತರಾಗಿ ಕೆಲವು ಸಂದರ್ಭಗಳಲ್ಲಿ ವರ್ಣಿತರಾಗಿದ್ದಾರೆ. ಉದಾಹರಣೆಗೆ:—೭-೬೫-೩ ನೇ ಮಂತ್ರದಲ್ಲಿ ಅವರ ಸ್ತುತಿಯಿದ್ದು, ಅವರನ್ನು ಎವರುಹಾಕಿಕೊಳ್ಳತಕ್ಕ ಯಾವ ಮಾನವನೂ ಅವರನ್ನು ನಿಗ್ರಹಿಸಲು ಸಮರ್ಥನಾಗಲಾರನು ಎಂದು ಎಚ್ಚರಿಸಿದೆ ಮತ್ತು ಇವರು ಅಸತ್ಯವಿರೋಧಿಗಳೆಂದೂ ತಿಳಿಸಿದೆ ಇನ್ನು ಕೆಲವೆಡೆಗಳಲ್ಲಿ ಇಂದ್ರಾವರುಣರಿಬ್ಬರೂ ಸಹ ಪಾಶಯುಕ್ತರೇದೂ ಅಸತ್ಯವ್ಯವಹಾರವುಳ್ಳವರನ್ನು ಬಂಧಿಸಿ ಶಿಕ್ಷಿಸುವವರೆಂದೂ ತಿಳಿಸಿದೆ. (೭-೮೪-೨)

ಕ್ರೂರವಾದ ಶಿಕ್ಷೆಯನ್ನು ವಿಧಿಸುವವನಾದರೂ ಸಹ ವರುಣನು ಪಾಪಿಗಳನ್ನು ಕ್ಷಮಿಸತಕ್ಕ ಔದಾರ್ಯವನ್ನೂ ಹೊಂದಿ ಅಜ್ಞಾನದಿಂದ ಪಾಪಮಾಡಿದವರನ್ನು ಕ್ಷಮಿಸುವನು. (೭-೮೭-೭)

ಅಮರ್ತ್ಯತ್ವವನ್ನು ತನ್ನ ಪ್ರಜ್ಞೆಯಿಂದ ರಕ್ಷಿಸತಕ್ಕವನಾಗಿದ್ದಾನೆ. (೮-೪೨-೨)

ಸುಕೃತ್ತುಗಳು ಪರಲೋಕದಲ್ಲಿ ವರುಣನು ಯಮನೊಂದಿಗೆ ಉಚ್ಚಾಸ್ರಯಸ್ಥಿತಿಯಲ್ಲಿ ಪ್ರಭುತ್ವವನ್ನು ಮಾಡುವುದನ್ನು ನೋಡುವ ಭಾಗ್ಯವನ್ನು ಹೊಂದುವರು, ಎಂಬ ಆಶಂಸನವಿರುತ್ತದೆ. (೧೦-೧೪-೭)

ಈ ರೀತಿ ವರುಣನ ಮಾಹಾತ್ಮ್ಯವನ್ನು ತೋರಿಸತಕ್ಕ ಕರ್ಮಗಳೂ ಅವನ ಅಸಾಧಾರಣವಾದ ಶಕ್ತಿಗಳನ್ನು ವರ್ಣಿಸುವ ವಿಶೇಷಣಗಳೂ ಸಹ ವರುಣನ ಆಧ್ಯಾತ್ಮಿಕವಾದುದೂ, ನೈತಿಕವಾದುದೂ ಆದ ಉಚ್ಚಾಸ್ರಯಸ್ಥಿತಿಯನ್ನು ತಿಳಿಸುತ್ತದೆ. ಇಂತಹ ಉನ್ನತಸ್ಥಾನವು ಇತರ ಯಾವ ದೇವತೆಗಳಿಗೂ ಇರಲು ಸಾಧ್ಯವಿಲ್ಲ. ಮೇಲೆ ಉದಾಹೃತವಾಗಿರುವ ವಾಕ್ಯಗಳೇ ಅಲ್ಲದೇ, ಇನ್ನೂ ಅನೇಕ ಸಂದರ್ಭಗಳಲ್ಲಿ ವರುಣನ ಮಹಾತ್ಮ್ಯವನ್ನು ಪ್ರಶಂಸಿಸಿದೆ. ಅವುಗಳಲ್ಲಿ ಕೆಲವು ಮಂತ್ರಗಳ ತಾತ್ಪರ್ಯವನ್ನು ಮಾತ್ರ ತಿಳಿಸಲಾಗುತ್ತದೆ.

" ಎಲೈ ವರುಣನೇ, ಅಜ್ಞಾನದಿಂದ ಮಾಡಿದ ಪಾಪವನ್ನು ಕಂಡುಹಿಡಿಯಲು ನಾನು ಪ್ರಾಜ್ಞರನ್ನು ನಂಬಿ ಅವರನ್ನು ಪ್ರಶ್ನಿಸುತ್ತೇನೆ " ಆ ಋಷಿಗಳೆಲ್ಲರೂ ಏಕಕಂಠದಿಂದ "ವರುಣನು ನಿನ್ನಲ್ಲಿ ಕ್ರುದ್ಧನಾಗಿದ್ದಾನೆಂದು ತಿಳಿಸುತ್ತಾರೆ. ಆದುದರಿಂದ ಎಲೈ ವರುಣನೇ, ಈ ಪಾಪವನ್ನು ಮನ್ನಿಸಿ ನಮ್ಮನ್ನು ಪಾಶದಿಂದ ಬಿಡಿಸು."

"ಎಲೈ ವರುಣನೇ, ಯಾವ ಪಾಪದ ನಿಮಿತ್ತವಾಗಿ ನೀನು ಆಗ್ರಹಗೊಂಡು ನಿನ್ನ ಮಿತ್ರನೂ, ನಿನ್ನ ಆರಾಧಕನೂ ಆದ ನನ್ನನ್ನು ಉಗ್ರವಾಗಿ ಶಿಕ್ಷಿಸಲಿಚ್ಛಿಸುವಿಯೋ, ಆ ಮಹತ್ಪಾಪವಾವುದು? ತೇಜಸ್ವಿಯೂ ಅಪ್ರತಿಹತವಾದ ಶಕ್ತಿಯುಳ್ಳವನೂ ಆದ ಎಲೈ ವರುಣನೇ, ನನ್ನ ಆ ಪಾಪದ ಸ್ವರೂಪವೇನೆಂಬುದನ್ನು ತಿಳಿಸು. ನಾನು ಅದರಿಂದ ಮುಕ್ತನಾಗಿ ಅನಂತರ ನಿನ್ನ ಪೂಜಾಕಾರ್ಯವನ್ನು ಕೈಗೊಳ್ಳುತ್ತೇನೆ."

" ಹಿಂದೆ ನಮ್ಮ ಪೂರ್ವಜರು ಮಾಡಿದ ಪಾಪವು ನಮ್ಮನ್ನು ಹಿಂಬಾಲಿಸಿ ಬಂದಿದ್ದರೆ, ನಮ್ಮನ್ನು ಅದರಿಂದ ಮುಕ್ತರನ್ನಾಗಿ ಮಾಡು. ನಾನೇ ಸ್ವತಃ ಪಾಪವನ್ನಾಚರಿಸಿದ್ದರೆ, ಅದರಿಂದಲೂ ರಕ್ಷಿಸು, ಚೋರನು ಪಶುಗಳನ್ನು ಅಪಹರಿಸುವಾಗ ಅವುಗಳನ್ನು ಬಂಧನದಿಂದ ಬಿಡಿಸಿ ಸ್ವತಂತ್ರವಾಗುವಂತೆ ಮಾಡುವ ರೀತಿಯಲ್ಲಿಯೂ, ಮಾತೆಯಲ್ಲಿ ಸ್ತನ್ಯಪಾನವನ್ನು ಮಾಡುವ ಆತುರವುಳ್ಳ ಕರುವನ್ನು ರಜ್ಜುವಿನ ಬಂಧನದಿಂದ ಬಿಡಿಸುವಂತೆಯೂ ನನ್ನನ್ನು ಪಾಪರೂಪವಾದ ಬಂಧನದಿಂದ ಬಿಡಿಸು "

" ಎಲೈ ವರುಣನೇ, ಈ ಪಾಪವನ್ನು ನಾವು ಮನಃಪೂರ್ವಕವಾಗಿ ಮಾಡಿದುದಲ್ಲ. ನಮ್ಮ ಮೋಹದ ಫಲವೇ ಇದು. ಮದ್ಯಪಾನ, ಕ್ರೋಧಪರವಶತೆ, ದ್ಯೂತವ್ಯಸನ ಇತ್ಯಾದ್ಯಜ್ಞಾನದಿಂದಲೂ, ಕಾಮಾದಿವ್ಯಸನಗಳಿಂದಲೂ

ಈ ಪಾಪವನ್ನಾಚರಿಸಿದೆವು. ನಮ್ಮ ಮೇಲೆ ಪ್ರಭಾವವನ್ನು ಬೀರಿ ನಮ್ಮ ಸಂಕಲ್ಪಕ್ಕಿಂತಲೂ ಅಧಿಕವಾದ ಶಕ್ತಿಯುಳ್ಳ ಮೋಹವು ನಮ್ಮಿಂದ ಈ ಪಾಪವನ್ನು ಮಾಡಿಸಿದೆ. ನಮ್ಮ ನಿದ್ರೆಯೂ ಸಹ ನಮಗೆ ಪಾಪಸಾಧಕವೇ ಆಗಿದೆ.''

(ಋ. ಸಂ. ೭-೮೬-೩ ರಿಂದ ೬)

'' ಎಲೈ ವರುಣನೇ, ಮಣ್ಣಿನಿಂದ ನಿರ್ಮಿತವಾದ ಗೃಹಕ್ಕೆ ನನ್ನನ್ನು ಹೋಗಗೊಳಿಸಬೇಡ. ಶ್ರೇಷ್ಠವಾದ ವೀರ್ಯವುಳ್ಳ ಎಲೈ ವರುಣನೇ, ನನ್ನನ್ನು ಅನುಗ್ರಹಿಸು. ನನ್ನಲ್ಲಿ ದಯೆಯಿಡು ''.

'' ತೀಕ್ಷ್ಣವಾದ ಆಯುಧವನ್ನು ಹಿಡಿದಿರುವ ಎಲೈ ವರುಣನೇ, ವಾಯುವಿನಿಂದ ತುಂಬಿದ ಚರ್ಮದ ಚೀಲದಂತೆ ನಾನು ನಿನ್ನನ್ನು ನೋಡಿ ನಡಗುತ್ತಿದ್ದೇನೆ. ನನ್ನ ಮೇಲೆ ದಯೆಯಿಡು ''

'' ಶಕ್ತಿಯುತನೂ, ನಿರ್ಮಲನೂ ಆದ ವರುಣನೇ, ನಾನು ನಿನ್ನ ಶುದ್ಧವಾದ ಆಜ್ಞಾವರ್ತಿಯಾಗಿರಲು ಶಕ್ತಿರಹಿತನಾಗಿ ಕೇವಲ ನನ್ನ ಅಶಕ್ತಿಯಿಂದ ಮಾತ್ರವೇ ನಿನ್ನ ಆಜ್ಞೆಯನ್ನುಲ್ಲಂಘಿಸಿರುತ್ತೇನೆ. ಆದರೆ ಈ ವಿಷಯದಲ್ಲಿ ಅಶಕ್ತಿಯೇ ಕಾರಣವಾದುದರಿಂದ ಈ ಪಾಪವನ್ನು ಮನ್ನಿಸಿ ನನ್ನಲ್ಲಿ ದಯೆಯನ್ನು ತೋರಿಸು ''

'' ಉದಕಭರಿತವಾದ ಪ್ರದೇಶದಲ್ಲಿದ್ದರೂ ಸಹ ನಾನು ಬಾಯಾರಿಕೆಯಿಂದ ಬಳಲಿದ್ದೇನೆ. ನಾನು ನಿನ್ನ ಸ್ತುತಿಕರ್ತನಾದುದರಿಂದ ನನಗೆ ಕಷ್ಟವನ್ನು ಮುಂದುವರಿಸದೆ ನನ್ನಲ್ಲಿ ದಯೆಯಿಟ್ಟು ನನ್ನ ಕಷ್ಟವನ್ನು ನೀಗಿಸು

'' ಎಲೈ ವರುಣನೇ, ದಿವ್ಯ ಲೋಕವಾಸಿಗಳಾದ ದೇವತೆಗಳ ವಿಷಯದಲ್ಲಿ ನಾವು ಯಾವ ಅಪರಾಧವನ್ನು ಮಾಡಿದ್ದರೂ ಅಥವಾ ನಿನ್ನ ಆಜ್ಞೆಯನ್ನು ಉಲ್ಲಂಘಿಸುವುದರ ರೂಪದಲ್ಲಿ ನಿನ್ನ ವಿಷಯದಲ್ಲಿ ಯಾವ ಅಪರಾಧವನ್ನು ಮಾಡಿದ್ದರೂ ಅವೆಲ್ಲವೂ ನಮ್ಮ ಅಜ್ಞಾನಮೂಲಕವೆಂದು ತಿಳಿದು ನಮ್ಮನ್ನು ಆ ಪಾಪದಿಂದ ಮುಕ್ತರಾಗುವಂತೆ ಮಾಡು ಆ ಪಾಪಕಾರ್ಯಗಳಿಗಾಗಿ ನಮ್ಮನ್ನು ಶಿಕ್ಷಿಸಬೇಡ. ನಮ್ಮಲ್ಲಿ ದಯೆಯನ್ನಿಡು ''.

(೭-೮೯-೧ ರಿಂದ ೫)

ಈ ರೀತಿ ಕೆಲವೆಡೆಗಳಲ್ಲಿ ಪ್ರಾರ್ಥಿಸಿ, ಅದೇ ಋಷಿಯೇ ಬೇರೆಕಡೆಯಲ್ಲಿ ತನಗೂ ವರುಣನಿಗೂ ಇರತಕ್ಕ ಮೈತ್ರಿಯನ್ನು ಜ್ಞಾಪಿಸಿ ಹಿಂದೆ ದೇವತೆಗಳು ತನಗೆ ಮಾಡಿದ ಉಪಕಾರಗಳನ್ನೆಲ್ಲಾ ವರುಣನ ಸ್ಮರಣೆಗೆ ತಂದು ಪ್ರಕೃತ ದಲ್ಲಿ ಮಾತ್ರ ತನ್ನ ವಿಷಯದಲ್ಲಿ ವರುಣನು ನಿರ್ದಯನಾಗಿರಲು ಕಾರಣವೇನೆಂದು ಪ್ರಶ್ನಿಸಿ, ಅವನ ದಯೆಯನ್ನು ಯಾಚಿಸುತ್ತಾನೆ

'' ವರುಣನು ವಸಿಷ್ಠನನ್ನು ತನ್ನ ಸ್ವಂತ ನಾವೆಯಲ್ಲಿಯೇ ಕುಳ್ಳಿರಿಸಿಕೊಂಡಿದ್ದನು ಆ ವರುಣನ ಅನುಗ್ರಹ ದಿಂದಲೇ ವಸಿಷ್ಠನೂ ಸಹ ತನ್ನ ಜೀವಮಾನದ ಅತ್ಯುತ್ತಮವಾದ ಋಷಿತ್ವವನ್ನೂ ಹೊಂದಿದನು ಮತ್ತು ತನಗೆ ದೀರ್ಘಾಯುಸ್ಸು ಲಭಿಸಬೇಕೆಂಬ ಉದ್ದಿಶ್ಯದಿಂದಲೂ ಸಹ ಅವನನ್ನು ಪೂಜಿಸಿದನು. ''

'' ಎಲೈ ವರುಣನೇ, ನಮ್ಮಿಬ್ಬರಿಗೂ ಹಿಂದಿದ್ದ ಆ ಮೈತ್ರಿಯೆಲ್ಲಿ ? ನಮ್ಮಿಬ್ಬರಿಗೂ ಇದ್ದ ಆ ಅನ್ಯೋನ್ಯ ಭಾವವೆಲ್ಲಿ ಹೋಯಿತು ? ಸ್ವತೇಜಸ್ಸಿನಿಂದಲೇ ಬೆಳಗುತ್ತಿರುವ ಎಲೈ ವರುಣನೆ, ನಾನು ಸಹಸ್ರದ್ವಾರಗಳುಳ್ಳತಕ್ಕ ನಿನ್ನ ಗೃಹಕ್ಕೆ ಯಾಚಕನಾಗಿ ಬಂದಿರುತ್ತೇನೆ ''.

''ಎಲೈ ವರುಣನೇ, ನಿನ್ನ ಸುಹೃತ್ತಾಗಿದ್ದವನೂ, ನಿನ್ನ ಅತ್ಯಂತ ಆಪ್ತನಾಗಿದ್ದವನೂ, ನಿನ್ನವನೇ ಆಗಿದ್ದ ವನೂ, ನಿನ್ನ ಪ್ರೀತಿಗೆ ಪಾತ್ರನಾಗಿದ್ದವನೂ ಆದ ಋಷಿಯು ಅಜ್ಞಾನದಿಂದ ಪಾಪವನ್ನು ಮಾಡಿರಬಹುದು ನಿನ್ನ

ವಿಷಯದಲ್ಲಿ ಅಪರಾಧವನ್ನು ಮಾಡಿರಬಹುದು. ಆದರೆ ಆ ಪಾಪದ ಫಲವನ್ನು ಮಾತ್ರ ನಾವು (ನಾನೂ ಮತ್ತು ನನಗೆ ಸೇರಿದವರೂ) ಅನುಭವಿಸುವಂತೆ ಮಾಡಬೇಡ. ಪ್ರಾಜ್ಞನಾದ ಎಲೈ ವರುಣದೇವನೇ, ನಿನ್ನನ್ನು ಸ್ತುತಿಸತಕ್ಕ ಋಷಿಗೆ ರಕ್ಷಣೆಯನ್ನು ನೀಡು.'' (೭-೮೮-೪)

**ಮಿತ್ರಾವರುಣರ ಸಾಹಚರ್ಯದ ಸ್ವರೂಪ ಮತ್ತು ಅವರ ಕ್ರಿಯೆಗಳು.**

ವರುಣನ ಮಹತ್ತ್ವವನ್ನು ತೋರಿಸಲು ಯಾವ ಯಾವ ವಿಶೇಷಣಗಳನ್ನು ಪ್ರಯೋಗಿಸಿದೆಯೋ, ಅದೇ ವಿಶೇಷಣಗಳಿಂದ ಮಿತ್ರಾವರುಣರಿಬ್ಬರನ್ನೂ ಒಟ್ಟಿಗೆ ಸ್ತುತಿಸಿದೆ.

ಈ ಮಿತ್ರಾವರುಣರಿಬ್ಬರೂ ದ್ಯಾವಾಪೃಥ್ವಿಗಳನ್ನೆತ್ತಿಹಿಡಿದು ಅವುಗಳಿಗೆ ತಾವು ಪ್ರಭುಗಳಾಗಿದ್ದಾರೆ. ಪ್ರಕಾಶಮಾನವಾದ ದ್ಯಾವಾಪೃಥಿವಿಗಳ ಒಡೆಯರಾಗಿ, ಅಂತರಿಕ್ಷದಲ್ಲಿ ಸೂರ್ಯನನ್ನು ಸ್ಥಾಪಿಸಿದ್ದಾರೆ.''

(೫-೬೨-೩, ೫-೬೯-೧, ೪, ೫-೬೩-೭, ೬-೬೭-೫, ೭-೬೧-೪, ೧೦-೧೩೨-೨)

ಈ ಮಿತ್ರಾವರುಣರಿಬ್ಬರೂ ಎಲ್ಲಾ ಲೋಕಗಳಿಗೂ ರಕ್ಷಕರಾಗಿದ್ದಾರೆ. (**ವಿಶ್ವಸ್ಯ ಭುವನಸ್ಯ ಗೋಪಾ**)

(೨-೨೭-೪, ೫-೬೨-೯, ೭-೫೧-೨, ೮-೨೫-೧, ೧೦-೧೨೬-೪)

ಈ ಮಿತ್ರಾವರುಣರ ಆಜ್ಞಾನುವರ್ತಿಯಾಗಿಯೇ ಮಹತ್ತಾದ ಅಂತರಿಕ್ಷವೂ ಪ್ರಕಾಶಿಸುತ್ತದೆ.

(೧೦-೬೫-೫)

ಅವರೇ ವೃಷ್ಟಿಕಾರಕರಾಗಿ ಲೋಕಕ್ಕೆಲ್ಲಾ ಉಪಕಾರವನ್ನು ಮಾಡುವವರಾಗಿದ್ದಾರೆ.

(೫-೬೨-೩, ೫-೬೩-೧ ರಿಂದ ೩)

ಅವರ ದೇವತ್ವವು ದ್ಯುಲೋಕದ ವಿಸ್ತೃತಿಯನ್ನೂ ನದಿಗಳ ದೈರ್ಘ್ಯವನ್ನೂ ಮೀರಿದುದಾಗಿದೆ.

(೧-೧೫೧-೯)

(ಅರ್ಯಮನೊಂದಿಗೆ ಕೂಡಿದ) ಈ ಇಬ್ಬರು ದೇವತೆಗಳೂ ಸಹ ಯಾವರೀತಿ ಸುಕೃತ್ತುಗಳಿಗೆ ಆಕರ್ಷಕರಾಗಿದ್ದಾರೋ, ಅದೇರೀತಿ ದುಷ್ಟಕಾರ್ಯಗಳಿಗೂ, ಅಸತ್ಯಜೀವನಕ್ಕೂ ವಿರೋಧಿಗಳಾಗಿ ದುಷ್ಟಬುದ್ಧಿಯುಳ್ಳವರೂ, ಅಸತ್ಯಭಾಷಿಗಳೂ ಆದ ಮಾನವರಿಗೆ ಅತ್ಯಂತ ಭಯಂಕರರೂಪವುಳ್ಳವರೂ ಆಗಿದ್ದಾರೆ.

(೧-೧೫೨-೧, ೭-೬೬-೧೩)

ಅಮರ್ತ್ಯರಾದ ದೇವತೆಗಳಿಂದಲೂ ನಿರೋಧಿಸಲು ಸಾಧ್ಯವಿಲ್ಲದ ಇವರ ಸ್ಥಿರಸಂಕಲ್ಪಗಳಿಗನುಗುಣವಾಗಿ ಅವರು ತಮ್ಮ ಕಾರ್ಯಗಳನ್ನು ನೆರವೇರಿಸುತ್ತಾರೆ.

(೫-೬೩-೭, ೫-೬೯-೪)

ಈ ಮಿತ್ರಾವರುಣರು ಅವಿವೇಕಿಯಾಗಿ ಮೂಢನಾಗಿರುವ ಮನುಷ್ಯನನ್ನೂ ವಿವೇಕದಿಂದ ಯುಕ್ತನಾಗುವಂತೆ ಮಾಡುತ್ತಾರೆ. ಅವರು ಸರ್ವಜ್ಞರಾಗಿದ್ದಾರೆ. (೭-೬೦-೬, ೭)

(ಗೋಪಾಲಕನು) ಪಶುಗಳನ್ನು ನೋಡುವಂತೆ ಮಿತ್ರಾವರುಣರು ಅಂತರಿಕ್ಷದಿಂದಲೇ ಮಾನವರೆಲ್ಲರನ್ನೂ ವೀಕ್ಷಿಸಿ ಅವರ ವ್ಯವಹಾರಗಳನ್ನು ತಿಳಿಯುತ್ತಾರೆ.

(೭-೬೦-೩, ೯, ೧೬)

ಅವರು ಸತ್ಯಾತ್ಮಕರೆಂದೂ, ಶುದ್ಧಾತ್ಮರೆಂದೂ, ಪವಿತ್ರವಾದ ಯಜ್ಞಕಾರ್ಯಗಳಿಗೆ ಸಹಾಯಕರೆಂದೂ ಅನೇಕ ಕಡೆಗಳಲ್ಲಿ ವರ್ಣಿಸಿದೆ. (**ಋತಾವೃಧಾ; ಋತಜಾತಾ, ಋತಸ್ಯ ಗೋಪೌ, ಋತಾವಾನಾ**)

(೧ ೨-೮; ೧-೨೩-೫; ೧-೧೩೬-೪; ೨-೨೭-೪; ೫-೬೩-೧; ೫-೬೫-೨, ೫-೬೭-೪, ೭-೬೪-೨; ೭-೬೬-೧೩ ೮-೨೩-೩೦; ೮-೨೫-೮)

ಅವರಿಬ್ಬರೇ ಸತ್ಯಕ್ಕೆ ಒಡೆಯರು ಜ್ಯೋತಿಗಳಿಗೆ ಪತಿಗಳು (**ಋತಸ್ಯ ಜ್ಯೋತಿಷಸ್ಪತೀ**)
(೧-೨೩-೫)

ಇತರ ಆದಿತ್ಯರೊಡಗೂಡಿದ ಈ ಮಿತ್ರಾವರುಣರು ಪಾಪಕೃತ್ಯವನ್ನೂ ಅಸತ್ಯವನ್ನೂ ನಾಶಪಡಿಸುತ್ತಾರೆ.
(೨-೨೭-೪; ೭-೬೦-೫)

ಇವರ ಸ್ತುತಿಯನ್ನು ಪಠಿಸದೆ ಅಲಕ್ಷ್ಯಮಾಡತಕ್ಕ ಪುರುಷನು ಕ್ಷೋಭೆಯಿಂದ ನರಳುವನು.
(೧-೧೨೨-೯)

ಸ್ತುತಿಕರ್ತರು ಅಜ್ಞಾನದಿಂದ ಮಾಡಿದ ಪಾಪದ ಕ್ಷಮೆಗೆ ಇವರು ಅದಿತಿಯೊಡನೆ ಯಾಚಿತರಾಗುತ್ತಾರೆ.
(೨-೨೭-೧೪)

ಪಾಪದಿಂದ ಮುಕ್ತರನ್ನಾಗಿ ಮಾಡಲು ಇವರನ್ನು ಅರ್ಯಮನೊಂದಿಗೆ ಪ್ರಾರ್ಥಿಸಿದೆ.
(೧೦-೧೨-೬)

## ಮಿತ್ರನ ವೈಯಕ್ತಿಕವಾದ ಸ್ವರೂಪವರ್ಣನೆ

ಋಕ್ಸಂಹಿತೆಯ ಮೂರನೆಯ ಮಂಡಲದ ೫೯ ನೇ ಸೂಕ್ತದಲ್ಲಿ ಮಿತ್ರನೊಬ್ಬನೇ ಸ್ತುತನಾಗಿದ್ದಾನೆ. ಅವನ ಗುಣವರ್ಣನೆಯಿರುವ ಕೆಲವು ಮಂತ್ರಗಳ ತಾತ್ಪರ್ಯವನ್ನು ಮಾತ್ರ ಇಲ್ಲಿ ತಿಳಿಸಲಾಗಿದೆ.

"ಮಿತ್ರನು ತನ್ನ ಪ್ರಿಯವಾದ ವಾಕ್ಕನ್ನುಚ್ಚರಿಸುತ್ತಾ ಮಾನವರನ್ನು ಅವರವರ ಕರ್ಮಗಳಿಗೆ ಪ್ರೇರಿಸುತ್ತಾನೆ, ಅವನು ದ್ಯಾವಾಪೃಥಿವಿಗಳನ್ನು ದೃಢವಾಗಿ ನಿಲ್ಲುವಂತೆ ಮಾಡಿ ಅವಕ್ಕೆ ಆಸರೆಯಾಗಿದ್ದಾನೆ. ತಾನು ಕಣ್ಣನ್ನು ಸಹ ಮಿಟುಕಿಸದೆ ಸಕಲ ಭೂತಗಳನ್ನೂ ವೀಕ್ಷಿಸುತ್ತಾನೆ. ಘೃತರೂಪವಾದ ಹವಿಸ್ಸನ್ನು ಈ ಮಿತ್ರನನ್ನು ಉದ್ದೇಶಿಸಿ ಅರ್ಪಿಸಿರಿ."

"ಅದಿತಿಪುತ್ರನಾದ ಎಲೈ ಮಿತ್ರನೇ, ಅತ್ಯಂತ ಶ್ರೇಷ್ಠವಾದ ಯಜ್ಞಕಾರ್ಯಗಳಿಂದ ನಿನ್ನನ್ನು ಪೂಜಿಸಿ ನಿನಗೆ ಸ್ತುತಿಯನ್ನರ್ಪಿಸುವ ಮಾನವನಿಗೆ ಅನ್ನವು ಲಭಿಸಲಿ. ನಿನ್ನ ರಕ್ಷಣೆಗೆ ಒಳಗಾದ ಮಾನವನಿಗೆ ಮೃತ್ಯುವಾಗಲಿ, ಅಪಜಯವಾಗಲಿ ಇರುವುದೇ ಇಲ್ಲ. ಅತ್ಯಂತ ಸಮೀಪದಿಂದಾಗಲಿ ಅಥವಾ ದೂರಪ್ರದೇಶದಿಂದಾಗಲಿ, ಅಂತಹ ಮಾನವನಿಗೆ ಆಪತ್ತೆಂಬುದೇ ಇಲ್ಲ"

"ಪೂಜ್ಯನಾದ ಈ ಮಿತ್ರನೇ ಶ್ರೇಷ್ಠನು. ಇವನೇ ಪ್ರಭುವು, ಇವನೇ ಶಕ್ತಿಯುತನು ಮತ್ತು ಪ್ರಾಜ್ಞನು. ನಾವು ಇವನ ರಕ್ಷಣೆಯಲ್ಲಿ ಇರುವಂತಾಗಲಿ."

ಮಾನವರಿಗೆ ಅವರವರ ಕರ್ತವ್ಯವನ್ನು ತಿಳಿಸುವವನೂ ಮತ್ತು ಆಯಾ ಕರ್ತವ್ಯಗಳಿಗೆ ಪ್ರೇರಿಸುವವನೂ, ಪೂಜಾಕರ್ತರನ್ನನುಗ್ರಹಿಸುವವನೂ ಆದ ಈ ಮಿತ್ರನನ್ನು ಪೂಜ್ಯಭಾವದಿಂದ ಸಮೀಪಿಸಿ ಇವನ ಅನುಗ್ರಹವನ್ನು ಸಂಪಾದಿಸಲು ಯೋಗ್ಯವಾದ ಪೂಜೆಯನ್ನು ಇವನಿಗೆ ಅರ್ಪಿಸತಕ್ಕದ್ದು".

"ಮಹತ್ಸ್ವರೂಪವುಳ್ಳ ಮಿತ್ರನು ತನ್ನ ಮಾಹಾತ್ಮ್ಯದಿಂದ ಅಂತರಿಕ್ಷವನ್ನೂ ವ್ಯಾಪಿಸಿರುತ್ತಾನೆ. ತನ್ನ ಪ್ರಭಾವದಿಂದ ಪೃಥ್ವಿಯನ್ನೂ ಅತಿಕ್ರಮಿಸಿದ್ದಾನೆ"

"ಸಕಲ ದೇವತೆಗಳ ಸ್ಥಿತಿಗತಿಗಳಿಗೂ ಆಧಾರಭೂತನೂ ಸಹಾಯಕನೂ ಆದವನೂ, ಪ್ರಭಾವಶಾಲಿಯಾದ ಉಪಕಾರಿಯೂ ಆದ ಮಿತ್ರನನ್ನುದ್ದೇಶಿಸಿ ನಿಷಾದಾದಿ (ಅಥವಾ ಗಂಧರ್ವಾದಿ) ಪಂಚಜನರೂ ಸಹ ಪೂಜೆಗಳನ್ನರ್ಪಿಸುತ್ತಾರೆ" ಇತ್ಯಾದಿಯಾಗಿ ಮಿತ್ರನನ್ನೇ ಪ್ರತ್ಯೇಕವಾಗಿ ಉದ್ದೇಶಿಸಿದ ಸ್ತುತಿರೂಪವಾದ ಒಂದು ಸೂಕ್ತವಿರುತ್ತದೆ.

(ಋ. ಸಂ. ೩-೫೯-೧ ರಿಂದ ೮)

## ಮಿತ್ರಾವರುಣರ ಮಾಹಾತ್ಮ್ಯದ ವಿಷಯದಲ್ಲಿ Roth ಎಂಬ ಜರ್ಮನ್ ಪಂಡಿತನ ಅಭಿಪ್ರಾಯ.

Journal of the German Oriental Society ಎಂಬ ಪತ್ರಿಕೆಯಲ್ಲಿ ಈ ಪಂಡಿತನು ಮಿತ್ರಾವರುಣರ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ಈ ರೀತಿ ತಿಳಿಸಿದ್ದಾನೆ.

"ಆದಿತ್ಯರೆಂದು ಪರಿಗಣಿತವಾದ ದೇವತಾಸಮೂಹದಲ್ಲಿ ಮಿತ್ರಾವರುಣರ ಸಂಬಂಧವು ಪರಸ್ಪರ ನಿಕಟವಾದದು ವರುಣನನ್ನೇ ಪ್ರತ್ಯೇಕವಾಗಿ ಸ್ತುತಿಸಿರುವ ಸನ್ನಿವೇಶಗಳಿಗಿಂತಲೂ ಮಿತ್ರಾವರುಣರನ್ನೇ ಒಟ್ಟಿಗೆ ಸೇರಿಸಿ ಸ್ತುತಿಸಿರುವ ಸಂದರ್ಭಗಳೇ ವಿಶೇಷವಾಗಿವೆ. ಮಿತ್ರನನ್ನು ಪ್ರಶಂಸಿಸುವ ಸೂಕ್ತವು ಕೇವಲ ಒಂದೇ. (೩-೫೯). ಇವರಿಬ್ಬರಲ್ಲಿ ಯಾರ ಗುಣವನ್ನು ವರ್ಣಿಸಿದರೂ ಸಹ ಇಬ್ಬರಿಗೂ ಸಮಾನವಾದ ವಿಶೇಷಣವೇ ಪ್ರಯುಕ್ತವಾಗಿರುತ್ತದೆ ಆದರೆ ಸಂಹಿತಾದಿಗಳ ಕೆಲವು ವಾಕ್ಯಗಳಲ್ಲಿ ಇಬ್ಬರಿಗೂ ಇರುವ ಸೂಕ್ಷ್ಮವಾದ ವ್ಯತ್ಯಾಸವನ್ನು ವಿವರಿಸುವ ಸಂದರ್ಭಗಳೂ ಇವೆ. ಮಿತ್ರನು ಅಹಸ್ಸಿಗೆಮೂಲವಾಗಿ ಅಂತರಿಕ್ಷದಲ್ಲಿ ಪ್ರಕಾಶಿಸುವ ಜ್ಯೋತಿಸ್ಸ್ವರೂಪನು. ವರುಣನು ಸಕಲ ಲೋಕಕ್ಕೂ ಸಕಲಕಾಲಕ್ಕೂ ಪ್ರಭುವಾಗಿ ತೇಜೋರೂಪದಲ್ಲಿ ಪ್ರಕಾಶಿಸುತ್ತಿದ್ದರೂ ಸಹ, ಅಧಿಕವಾಗಿ ರಾತ್ರ್ಯಧಿದೇವತೆಯೆಂದೇ ಸ್ತುತನಾಗಿದ್ದಾನೆ. ಉದಾಹರಣೆಗೆ, ವಸಿಷ್ಠಋಷಿಯಿಂದ ನಿರ್ಮಿತವಾದ ಒಂದು ಮಂತ್ರದಲ್ಲಿ "ಎಲೈ ವರುಣನೇ, ನಿಮ್ಮಿಬ್ಬರಲ್ಲಿ ಒಬ್ಬನು (ನೀನು) ಅಪ್ರತಿಹಿತವಾದ ಶಕ್ತಿಯುಳ್ಳವನಾಗಿ, ಎಲ್ಲರಿಗೂ ಶ್ರೇಷ್ಠವಾದ ಮಾರ್ಗದರ್ಶಕನಾಗಿದ್ದೀಯೆ. ಮಿತ್ರನು ಸಕಲ ಪ್ರಜೆಗಳಿಗೂ ಚೈತನ್ಯದಾಯಿಯಾಗಿ ಅವುಗಳ ಕರ್ತವ್ಯಕ್ಕಾಗಿ ಪ್ರೇರಿಸುತ್ತಾನೆ" ಎಂದು ಸ್ತುತಿಸಲ್ಪಟ್ಟಿದೆ　　(೭—೩೬—೨)

ಎಂದರೆ, ಅಹಸ್ಸಿನ ತೇಜೋರೂಪವಾಗಿ, ಸಕಲ ಪ್ರಾಣಿಗಳಿಗೂ ಚೈತನ್ಯದಾಯಿಯಾಗಿ ಪ್ರಪಂಚಕ್ಕೆ ಆಹ್ಲಾದವನ್ನೂ, ಕಾರ್ಯತತ್ಪರತೆಯನ್ನೂ ಉಂಟುಮಾಡುವ ಸಾಮರ್ಥ್ಯವೂ, ಪ್ರಭುತ್ವವೂ ಮಿತ್ರನಿಗೆ ಸೇರಿದುದು. ಇದು ಪರಿಮಿತವಾದ ಅಧಿಕಾರ. ವರುಣನು ರಾತ್ರ್ಯಧಿದೇವತೆಯೆಂದು ವರ್ಣಿತನಾಗಿದ್ದರೂ ಸಹ ಅವನ ಪ್ರಭುತ್ವವು ಸರ್ವವ್ಯಾಪಕವಾದುದು ಮತ್ತು ಸರ್ವಕಾಲೀನವಾದುದು

"ವರುಣನು ಅಸ್ತಂಗತನಾಗತಕ್ಕ ಸೂರ್ಯನ ಸ್ವರೂಪನು" ಇತ್ಯಾದಿಯಾಗಿ ಪರಿಮಿತವಾದ ಸ್ವರೂಪ ವರ್ಣನೆಯಿದ್ದರೂ ಸಹ (೭-೮೭-೧, ಸಾ. ಭಾ), ಅದರಲ್ಲೂ ಸತ್ಯಾಂಶವಿದೆ. ವರುಣನ ನಾಮವೇ ಸೂಚಿಸುವಂತೆ, ಅವನು ಅಂತರಿಕ್ಷವ್ಯಾಪಿಯಾದ ತೇಜೋವಿಶೇಷವು. ಲೋಕದಲ್ಲಿರುವ ಸಕಲ ಅಸ್ತಿತ್ವವೂ ಸರ್ವವ್ಯಾಪಿಯಾದ ಅವನಲ್ಲೇ ಅಂತರ್ಗತವಾಗಿದೆ. ಅವನ ಸ್ವರೂಪವು ಅನಂತ. ಇಂತಹ ಅನಂತಸ್ವರೂಪವನ್ನು ಮಾನವನ ಚಕ್ಷುಸ್ಸಾಗಲಿ, ಮಾನಸಿಕವಾದ ಕಲ್ಪನೆಯಾಗಲಿ ಅರಿಯಲಾರವು. ಅತ್ಯಂತ ವಿಸ್ತೃತವಾಗಿ ಹರಡಿರತಕ್ಕ ಈ ತೇಜಸ್ಸು ಅಹಸ್ಸಿನ

ಕಾಲದಲ್ಲಿ ಕಣ್ಣಿಗೆ ಎಟುಕಲಾರದು. ರಾತ್ರಿಕಾಲದಲ್ಲಿ, ವರುಣನನ್ನು ಆವರಿಸಿದ್ದ ಮುಸುಕು ಮಾಯವಾಗಿ ಅವನ ಸ್ವರೂಪವು ಕೊಂಚವಟ್ಟಿಗೆ ತಿಳಿಯುತ್ತದೆ. ಅಲ್ಲದೇ, ಅಂತರಿಕ್ಷದಲ್ಲೂ, ಮೇಘದಲ್ಲೂ, ದ್ಯಾವಾಪೃಥಿವಿಗಳ ನಡುವೆಯೂ ವ್ಯಾಪಿಸಿದ್ದ ಇತರ ತೇಜಸ್ಸುಗಳೂ ಮರೆಯಾಗುತ್ತವೆ. ಆದುದರಿಂದ ಈ ಕಾಲದಲ್ಲಿ ಏಕಮಾತ್ರವಾಗಿ ಪ್ರಕಾಶಿಸುತ್ತಿರುವ ವರುಣನು ಮಾತ್ರ ಚಕ್ಷುಸ್ಸಿಗೂ ಗೋಚರನಾಗುತ್ತಾನೆ ''

## ಉದಕತತ್ತ್ವಕ್ಕೂ ವರುಣನಿಗೂ ಇರುವ ಸಂಬಂಧ

ಋಕ್ಸಂಹಿತೆಯಲ್ಲಿ ವರುಣನು ಸಾಗರಾಧಿದೇವತೆಯೆಂದು ಪರಿಗಣಿತನಾಗಿಲ್ಲ. ಆದರೂ ಸಹ ಕೆಲವು ಸನ್ನಿವೇಶಗಳಲ್ಲಿ ವರುಣನಿಗೂ ದ್ಯಾವಾಪೃಥಿವಿಗಳಲ್ಲಿ ವ್ಯಾಪಿಸಿರುವ ಉದಕಕ್ಕೂ ನಿಕಟವಾದ ಸಂಬಂಧವನ್ನು ತೋರಿಸಿದೆ. ಪುರಾಣಾದಿಗಳಲ್ಲಿ ವರುಣನಿಗೂ ಉದಕಕ್ಕೂ ಇರುವ ಸಂಬಂಧವನ್ನು ವರ್ಣಿಸಿ ಅವನ ಅಸಾಧಾರಣವಾದ ಕ್ರಿಯೆಗಳನ್ನು ತಿಳಿಸುವ ಸಂದರ್ಭಗಳ ಔಚಿತ್ಯವನ್ನು ಈ ವಿವರಣೆಗಳು ಸೂಚಿಸುತ್ತವೆ.

"ಶಕ್ತಿಪುತ್ರರಾದ ಎಲೈ ಋಭುಗಳೇ, ನಿಮ್ಮನ್ನು ಅಪೇಕ್ಷಿಸಿ ಮರುತ್ತುಗಳು ದ್ಯುಲೋಕದಿಂದಲೂ. ಅಗ್ನಿಯು ಪೃಥಿವಿಯಿಂದಲೂ. ವಾಯುವು ಅಂತರಿಕ್ಷದಿಂದಲೂ, ಅಂತರಿಕ್ಷಸ್ಥವಾದ ಉದಕಗಳಿಂದ ವರುಣನೂ ಆಗಮಿಸುತ್ತಾರೆ."

(೧-೧೬೧-೧೪)

"ಅಂತರಿಕ್ಷಸ್ಥವಾದವೂ, ಪ್ರವಹಿಸತಕ್ಕವೂ, ಯಾವ ಉದಕಗಳ ಪ್ರವಾಹಕ್ಕಾಗಿ ಕಾಲುವೆಗಳು ಅಗೆದು ಸಿದ್ಧವಾಗಿರುವುವೋ ಅವೂ, ಸ್ವಯಂ ಉತ್ಪನ್ನವಾದವೂ, ಸಾಗರಾಭಿಮುಖವಾಗಿ ಹರಿಯತಕ್ಕವೂ, ಪ್ರಕಾಶಮಾನವೂ, ಶುದ್ಧವೂ ಆಗಿರತಕ್ಕವೂ ಆದ ಎಲೈ ಉದಕಗಳೇ, ನಮ್ಮನ್ನು ಸಂರಕ್ಷಿರಿ." (೭-೪೯-೨)

"ಯಾವ ಉದಕಗಳ ಅಂತರ್ವರ್ತಿಯಾಗಿ ಪ್ರಭುವಾದ ವರುಣನು, ಮಾನವರ ಸತ್ಯಾಸತ್ಯರೂಪವಾದ ವ್ಯವಹಾರಗಳನ್ನು ವೀಕ್ಷಿಸುತ್ತಾ ಸಂಚರಿಸುವನೋ ಅಂತಹ ಉದಕಗಳು ನಮ್ಮನ್ನು ಸಂರಕ್ಷಿಸಲಿ.''

ಯಾವ ಉದಕಗಳ ಮಧ್ಯವರ್ತಿಗಳಾಗಿ ವರುಣಾದಿದೇವತೆಗಳು ಹರ್ಷಿಸುವರೋ, ಅಂತಹ ಉದಕಗಳು ನಮ್ಮನ್ನು ಪೂರ್ಣವಾಗಿ ಸಂರಕ್ಷಿಸಲಿ. (೭-೪೯-೩, ೪)

"ಪ್ರಭುಗಳೂ, ಯಜ್ಞರಕ್ಷಕರೂ, ಸಮುದ್ರಕ್ಕೂ ನದಿಗಳಿಗೂ ಒಡೆಯರೂ ಆದ ಎಲೈ ಮಿತ್ರಾವರುಣರೇ, ಇಲ್ಲಿ ದಯಮಾಡಿ ನಮಗೆ ಅನ್ನವನ್ನೊದಗಿಸಿಕೊಡಿ ಮತ್ತು ಅಂತರಿಕ್ಷದಿಂದ ವೃಷ್ಟಿಯನ್ನು ಸುರಿಸಿ.''

(೭-೬೪-೨)

'ಉದಕಗಳ ಅಂತರ್ವರ್ತಿಯಾದ ವರುಣನು' ಎಂದು ವರ್ಣಿತವಾಗಿರುವ ಮೇಲಿನ ಮಂತ್ರದಲ್ಲಿ (೭ ೪೯-೩) ಉಕ್ತವಾಗಿರುವ ಸಮುದ್ರವು ಅಂತರಿಕ್ಷಸ್ಥವಾದ ಸಮುದ್ರವಾಗಿರಬೇಕು. ಪುರಾಣಾದಿಗಳಲ್ಲಿ ಕೇವಲ ವರುಣನೇ ಸಮುದ್ರಸಂಬಂಧಿಯೆಂದು ವರ್ಣಿತವಾಗಿದೆ. ಆದರೆ ಉದಾಹೃತರಾಗಿರುವ ೭-೬೪-೨ ನೇ ಮಂತ್ರದಲ್ಲಿ **ಸಿಂಧುಪತೀ** ಎಂಬ ವಿಶೇಷಣವು ಮಿತ್ರಾವರುಣರಿಬ್ಬರಿಗೂ ಒಟ್ಟಿಗೆ ನಿರ್ದಿಷ್ಟವಾಗಿರುವುದೆಂದು ತಿಳಿಯುತ್ತದೆ. ಅಂತರಿಕ್ಷದಿಂದ ಅನ್ನವನ್ನೂ ವೃಷ್ಟಿಯನ್ನೂ ಸುರಿಸಿರಿ ಎಂಬ ಪ್ರಾರ್ಥನೆಯು ಅವರ **ಸಿಂಧುಪತಿತ್ವವನ್ನು** ಸಮರ್ಥಿಸುತ್ತದೆ. ೭-೪೯-೨ ನೇ ಮಂತ್ರದಲ್ಲಿ "**ಯಾ ಆಪೋ ದಿವ್ಯಾ ಉತ ವಾ ಸ್ರವಂತಿ**'' ಎಂಬ ನಿರ್ದಿಷ್ಟವಾಗಿರುವ ಉದಕಗಳು ಪೃಥಿವೀಸ್ಥವಾದ ಉದಕಗಳಾಗಿರಬೇಕು ಎಂದು Max Muller ಎಂಬ ಪಂಡಿತನ ಅಭಿಪ್ರಾಯ. ಸಾಯಣರು

**ವರುಣ**ನನ್ನು **ಸಮುದ್ರಪತಿ** ಅಥವಾ **ಸಿಂಧುಪತಿ**ಯೆಂದು ಸಾಮಾನ್ಯವಾಗಿ ನಿರ್ದೇಶಿಸದೇ ಇದ್ದರೂ ಸಹ ೧-೧೬೧-೧೪; ೮-೬೯-೧೨ ಇತ್ಯಾದಿ ಮಂತ್ರಗಳನ್ನು ವಿವರಿಸುವಾಗ **ಜಲಾಭಿಮಾನೀ ದೇವಃ** ಎಂದು ವಿವರಿಸಿದ್ದಾರೆ.

೮-೪೧-೮ ರಲ್ಲಿ ವರುಣನು ಅಂತರ್ಗತವಾದ ಸಮುದ್ರವೆಂದು ವರ್ಣಿತನಾಗಿದ್ದಾನೆ. (**ಅಪೀಚ್ಯಃ ಸಮುದ್ರಃ**) ಇದರಂತೆಯೇ, ಇನ್ನೂ ಕೆಲವು ಕಡೆಗಳಲ್ಲಿ ವರ್ಣಿತವಾಗಿದೆ. ಉದಾಹರಣೆಗೆ—

"ಎಲೈ ವರುಣನೇ, ಅಗಾಧವಾದ ಆಳವುಳ್ಳ ಪಾತಾಳಕ್ಕೆ ಪ್ರವಹಿಸಿ ಹೋಗಿಸೇರುವಂತೆ ನಿನ್ನ ದವಡೆಯೊಳಕ್ಕೆ ಸಪ್ತಸಿಂಧುಗಳೂ ಸಹ ಪ್ರವಹಿಸುತ್ತವೆ." (೮-೬೯-೧೨)

ವನಸ್ಪತಿಗಳಲ್ಲಿ ಸೋಮನು ವಾಸಮಾಡುವನು ಎಂದು ಹೇಳಿರುವಂತೆ, ವರುಣನೂ ಸಮುದ್ರಾದಿಗಳಲ್ಲಿ ವಾಸಿಸುತ್ತಾನೆ ಎಂದೂ ಪ್ರಶಂಸಿತವಾಗಿದೆ (**ವನಾ ವಸಾನೋ ವರುಣಃ**). (೯-೯೦-೨)

ಉದಕಗಳ ಶಿಶುವಾದ ವರುಣನು ಮಾತೃರೂಪವಾದ ಉದಕಗಳಲ್ಲಿ ತನ್ನ ವಸತಿಯನ್ನು ಕಲ್ಪಿಸಿಕೊಂಡನು (**ಅಪಾಂ ಶಿಶುಃ**)" ಎಂದು ವಾಜಸನೇಯಸಂಹಿತೆಯ ವಾಕ್ಯವು ಸ್ತುತಿಸುತ್ತದೆ. (ವಾ.ಸ. ೧-೭)

ಅಥರ್ವವೇದದಲ್ಲೂ ಸಹ ವರುಣನಿಗೂ ಉದಕಕ್ಕೂ ಇರುವ ಸಂಬಂಧವನ್ನು ತಿಳಿಸಿರುವ ಮಂತ್ರಗಳಲ್ಲಿ ಕೆಲವು ಮಂತ್ರಗಳ ತಾತ್ಪರ್ಯವನ್ನು ಮಾತ್ರ ಇಲ್ಲಿ ತಿಳಿಸಲಾಗುತ್ತದೆ.

" ಉದಕ ಮಧ್ಯದಿಂದ ವರುಣನೂ, ಪರ್ವತಪ್ರದೇಶದಿಂದ ಸೋಮನೂ ನಿನ್ನನ್ನು ಕರೆಯಲಿ"
(ಅ. ವೇ. ೩-೩-೩)

" ಎಲೈ ವರುಣನೇ ನನಗೆ ದಿವ್ಯಪಿತೃವಾದ ನೀನು ವೃಷ್ಟಿಯನ್ನು ಸುರಿಸಿದೊಡನೆಯೇ, ಪ್ರವಾಹಗಳು ಉಸಿರಾಡುತ್ತವೆ." (ಅ ವೇ. ೪-೧೫-೧೨)

" ವರುಣನು ಉದಕಗಳಿಗೆ ಅಧಿಪತಿಯು. ಮಿತ್ರಾವರುಣರು ವೃಷ್ಟಿಗೆ ಅಧಿಪತಿಗಳು."
(ಅ. ವೇ ೫-೨೪-೪)

" ಎಲೈ ವರುಣನೇ, ನಿನ್ನ ಹಿರಣ್ಯರೂಪವಾದ ಗೃಹವು ಉದಕಗಳಲ್ಲಿ ಸ್ಥಿತವಾಗಿದೆ."
(ಅ ವೇ. ೭-೮೩-೧)

ತೈತ್ತಿರೀಯ ಸಂಹಿತೆಯಲ್ಲಿ ಉದಕಗಳಿಗೂ ವರುಣನಿಗೂ ಇರುವ ಸಂಬಂಧವನ್ನು ಈ ರೀತಿ ತಿಳಿಸಿದೆ.

**ಆಪೋ ವರುಣಸ್ಯ ಪತ್ನಯ ಆಸನ್ತಾ ಅಗ್ನಿರಭ್ಯಧ್ಯಾಯತ್ತಾಸ್ಸಮಭವತ್ತಸ್ಯ ರೇತಃ ಪರಾಪತತ್ತದಿಯಮಭವದ್ಯದ್ದ್ವಿತೀಯಂ ಪರಾಪತತ್ತದಸಾವಭವದಿಯಂ ವೈ ವಿರಾಡಸೌ ಸ್ವರಾಟ್ ।**
(ತೈ. ಸಂ. ೫-೫-೪-೧)

ಉದಕಗಳು ವರುಣನ ಪತ್ನಿಯರು. ಅಗ್ನಿಯು ಅವುಗಳನ್ನು ಮೋಹಿಸಿದನು. ಮತ್ತು ಅವುಗಳ ಸಂಯೋಗವನ್ನೂ ಪಡೆದನು. ಅವನ ರೇತಸ್ಸೇಚನವಾಯಿತು. ಪ್ರಥಮ ಸೇಚನದ ಫಲವಾಗಿ ಈ ಪೃಥ್ವಿಯು ಉತ್ಪನ್ನವಾಯಿತು. ಎರಡನೆಯ ಸೇಚನದ ಫಲವಾಗಿ ಅಂತರಿಕ್ಷದ ಉತ್ಪತ್ತಿಯಾಯಿತು. ಈ ಪೃಥ್ವಿಯೇ **ವಿರಾಟ್**, ಅಂತರಿಕ್ಷವೇ **ಸ್ವರಾಟ್** ಎಂದಿದೆ. ಪುರಾಣಾದಿಗಳಲ್ಲಿ ವರುಣನನ್ನು ಸಾಗರಗಳಿಗೆ ಪತಿಯೆಂದು ಸ್ತುತಿಸಿದೆ.

Roth ಮತ್ತು Westergaard ಎಂಬುವರು ವರುಣನಿಗೂ ಉದಕಗಳಿಗೂ ಇರುವ ಸಂಬಂಧವು ಇತಿಹಾಸದಲ್ಲಿ ಯಾವ ಯಾವ ಸಂದರ್ಭಗಳಲ್ಲಿ ಹೇಗೆ ಹೇಗೆ ವರ್ಣಿತವಾಗಿವೆಯೆಂದು ಈ ಭಾವನೆಯ ಐತಿಹಾಸಿಕ ಬೆಳೆವಣಿಗೆಯನ್ನು ತಿಳಿಸಿದ್ದಾರೆ. (ಅದರಲ್ಲಿ ಪಾಶ್ಚಾತ್ಯ ಪದ್ಧತಿಯೂ ಸೇರಿರುವುದರಿಂದ ಅದನ್ನು ಇಲ್ಲಿ ವಿವರಿಸುವುದು ಅವಶ್ಯಕವೆಂದು ಕಂಡುಬರುವುದಿಲ್ಲ.

ಪೀಠಿಕೆ ಸಮಾಪ್ತವು.

॥ ಸಾಯಣಭಾಷ್ಯಂ ॥

**ಋತಸ್ಯ ಗೋಪಾವಿತಿ ಸಪ್ತರ್ಚಂ ಸಪ್ತಮಂ ಸೂಕ್ತಂ । ಅತ್ರೇಯಮನುಕ್ರಮಣಿಕಾ । ಋತಸ್ಯ ಸಪ್ತಾರ್ಚನಾನಾ ಜಾಗತಮಿತಿ । ಅತ್ರೇಯೋಽರ್ಚನಾನಾ ನಾಮ ಋಷಿಃ । ಜಗತೀ ಛಂದಃ । ತುಹ್ಯಾದಿಪರಿಭಾಷಯಾ ಮಿತ್ರಾವರುಣೌ ದೇವತಾ ॥ ವಿನಿಯೋಗೋ ಲೈಂಗಿಕಃ ॥**

ಅನುವಾದವು— **ಋತಸ್ಯ ಗೋಪಾ** ಎಂಬ ಈ ಸೂಕ್ತವು ಐದನೆಯ ಮಂಡಲದ ಐದನೆಯ ಅನುವಾಕದಲ್ಲಿ ಏಳನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ— **ಋತಸ್ಯ ಸಪ್ತಾರ್ಚನಾನಾ ಜಾಗತಂ** ಎಂದು ಹೇಳಿರುವುದು. ಈ ಸೂಕ್ತಕ್ಕೆ ಅರ್ಚನಾನಾ ಆತ್ರೇಯಃ ಎಂಬುವನು ಋಷಿಯು; ಮಿತ್ರಾವರುಣರು ದೇವತೆಯು; ಜಗತೀ ಛಂದಸ್ಸು. ವಿನಿಯೋಗವು ಲೈಂಗಿಕವು.

## ಸೂಕ್ತ—೬೩

ಮಂಡಲ—೫ ॥ ಅನುವಾಕ—೫ ॥ ಸೂಕ್ತ—೬೩ ॥
ಅಷ್ಟಕ—೪ ॥ ಅಧ್ಯಾಯ—೪ ॥ ವರ್ಗ—೧ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ॥
॥ ಋಷಿಃ—ಅರ್ಚನಾನಾ ಆತ್ರೇಯಃ ॥
॥ ದೇವತಾ— ಮಿತ್ರಾವರುಣೌ ॥
॥ ಛಂದಃ—ಜಗತೀ ॥

॥ ಸಂಹಿತಾಪಾಠಃ ॥

ಋತಸ್ಯ ಗೋಪಾವಧಿ ತಿಷ್ಠಥೋ ರಥಂ ಸತ್ಯಧರ್ಮಾಣಾ ಪರಮೇ
ವ್ಯೋಮನಿ ।
ಯಮತ್ರ ಮಿತ್ರಾವರುಣಾವಥೋ ಯುವಂ ತಸ್ಮೈ ವೃಷ್ಟಿರ್ಮಧುಮ-
ತ್ಪಿನ್ವತೇ ದಿವಃ ॥ ೧ ॥

॥ ಪದಪಾಠಃ ॥

ಋತಸ್ಯ । ಗೋಪಾ । ಅಧಿ । ತಿಷ್ಠಥಃ । ರಥಂ । ಸತ್ಯಽಧರ್ಮಾಣಾ । ಪರಮೇ । ವಿಽಓಮನಿ ।

ಯಂ । ಅತ್ರ । ಮಿತ್ರಾವರುಣಾ । ಅವಥಃ । ಯುವಂ । ತಸ್ಮೈ । ವೃಷ್ಟಿಃ । ಮಧುಽಮತ್ । ಪಿನ್ವತೇ ।
ದಿವಃ ॥ ೧ ॥

॥ ಸಾಯಣಭಾಷ್ಯಂ ॥

ಹೇ ಋತಸ್ಯೋದಕಸ್ಯ ಗೋಪಾ ರಕ್ಷಿತಾರೌ ಸತ್ಯಧರ್ಮಾಣಾ ಸತ್ಯಧರ್ಮಾಣೌ ಯುವಾಂ ರಥಮಧಿ ತಿಷ್ಠಥಃ । ಆರೋಹಥೋಽಸ್ಮದ್ಯಜ್ಞಮಾಗಮನಾರ್ಥಂ । ಕುತ್ರ । ಪರಮೇ ವ್ಯೋಮನಿ ನಿರತಿಶಯ ಆಕಾಶೇ । ಹೇ ಮಿತ್ರಾವರುಣೌ ಯುವಂ ಯುವಾಮತ್ರಾಸ್ಮಿನ್ಯಜ್ಞೇ ಯಂ ಯಜಮಾನಮವಥೋ ರಕ್ಷಥಃ ತಸ್ಮೈ ಯಜಮಾನಾಯ ವೃಷ್ಟಿಃ ಪರ್ಜನ್ಯೋ ಮಧುಮದುದಕಂ ದಿವೋ ದ್ಯುಲೋಕಾತ್ಪಿನ್ವತೇ । ಸಿಂಚತಿ । ವರ್ಧಯತಿ ॥

॥ ಪ್ರತಿಪದಾರ್ಥ ॥

**ಋತಸ್ಯ**—ಉದಕಕ್ಕೆ । **ಗೋಪಾ**—ರಕ್ಷಕರಾದವರೂ । **ಸತ್ಯಧರ್ಮಾಣಾ**—ಸತ್ಯಾತ್ಮಕವಾದ ಧರ್ಮವುಳ್ಳವರೂ ಆದ ಎಲೈ ಮಿತ್ರಾವರುಣರೇ ನೀವು । **ಪರಮೇ ವ್ಯೋಮನಿ**—ಅತ್ಯುತ್ಕೃಷ್ಟವಾದ ಅಂತರಿಕ್ಷದಲ್ಲಿ । **ರಥಂ**—ರಥವನ್ನು । **ಅಧಿ ತಿಷ್ಠಥಃ**—ಹತ್ತಿ ಕುಳಿತುಕೊಳ್ಳುತ್ತೀರಿ । **ಯುವಂ**—ನೀವು । **ಅತ್ರ**—ಈ ಯಜ್ಞದಲ್ಲಿ । **ಯಂ**—ಯಾವ ಯಜಮಾನನನ್ನು । **ಅವಥಃ**—ರಕ್ಷಿಸುತ್ತೀರೋ । **ತಸ್ಮೈ**—ಆ ಯಜಮಾನನಿಗೆ । **ವೃಷ್ಟಿಃ**—ಪರ್ಜನ್ಯನು । **ದಿವಃ**—ದ್ಯುಲೋಕದಿಂದ । **ಮಧುಮತ್**—ರಸವತ್ತಾದ ಉದಕವನ್ನು । **ಪಿನ್ವತೇ**—ಸುರಿಸುತ್ತಾನೆ.

॥ ಭಾವಾರ್ಥ ॥

ಉದಕಕ್ಕೆ ರಕ್ಷಕರಾದವರೂ, ಸತ್ಯಾತ್ಮಕವಾದ ಧರ್ಮವುಳ್ಳವರೂ ಆದ ಮಿತ್ರಾವರುಣರೇ, ಅತ್ಯುತ್ಕೃಷ್ಟವಾದ ಅಂತರಿಕ್ಷದಲ್ಲಿ ನೀವು ರಥವನ್ನು ಹತ್ತಿ ಕುಳಿತುಕೊಳ್ಳುತ್ತೀರಿ. ನೀವು ಈ ಯಜ್ಞದಲ್ಲಿ ಯಾವ ಯಜಮಾನನನ್ನು ರಕ್ಷಿಸುತ್ತೀರೋ, ಆ ಯಜಮಾನನಿಗಾಗಿ ಪರ್ಜನ್ಯನು ದ್ಯುಲೋಕದಿಂದ ರಸವತ್ತಾದ ಉದಕವನ್ನು ಸುರಿಸುತ್ತಾನೆ.

## English Translation.

Guardians of water, observers of truth, you ascend your car in the highest heaven : to him whom you, Mitra and Varuna, protect, the rain sends down the sweet (shower) from the sky.

। ವಿಶೇಷವಿಷಯಗಳು ।

ಈ ಸೂಕ್ತದಲ್ಲಿ ಮಳೆಯನ್ನು ಸುರಿಸುವುದರಲ್ಲಿ ಮಿತ್ರಾವರುಣರ ಅಗಾಧವಾದ ಶಕ್ತಿಯು ವರ್ಣಿತವಾಗಿದೆ.

**ಋತಸ್ಯ ಗೋಪಾ**—ಈ ಋಕ್ಕಿನಲ್ಲಿರುವ **ಋತಸ್ಯ ಗೋಪಾ** ಎಂಬ ಶಬ್ದಗಳಿಗೆ ಭಾಷ್ಯಕಾರರು **ಉದಕಸ್ಯ ರಕ್ಷಿತಾರೌ** ಎಂದರೆ ಉದಕಗಳ ಸಂರಕ್ಷಕರು ಎಂದು ಅರ್ಥ ವಿವರಣೆಮಾಡಿದ್ದಾರೆ. ಋತಶಬ್ದಕ್ಕೆ ಯಜ್ಞ ಅಥವ

ಸತ್ಯವೆಂದು ಅರ್ಥವಾಗುವುದರಿಂದ ಯಜ್ಞದ ಅಥವಾ ಸತ್ಯದ ಸಂರಕ್ಷಕರು ಎಂದೂ ಅರ್ಥಮಾಡಬಹುದು. ಇಲ್ಲಿ **ಋತ** ವೆಂದರೆ **ವರುಣಸ್ಯ ವ್ರತಂ**— ವಿಶ್ವನಿಯಮನಸಂಬಂಧವಾದ ಕರ್ಮಗಳು, Universal laws. ವಿಶ್ವದ ಅಥವಾ ಪ್ರಪಂಚದ ವ್ಯವಹಾರಗಳನ್ನು ಒಂದು ಗೊತ್ತಾದ ನಿಯಮದಲ್ಲಿಟ್ಟಿರಲು ವರುಣನ ವ್ರತವೇ (laws) ಮುಖ್ಯ ಕಾರಣವೆಂದು ಋಗ್ವೇದದಲ್ಲಿ ಅನೇಕಕಡೆ ಹೇಳಿದೆ. ಪ್ರಕೃತಸೂಕ್ತದಲ್ಲಿ ವೃಷ್ಟಿ ವಿಷಯವಾಗಿ ಮಿತ್ರಾವರುಣರ ಸ್ತುತಿ ಇರುವುದರಿಂದ ಋತಶಬ್ದಕ್ಕೆ ಉದಕವೆಂದು ಅರ್ಥಮಾಡುವುದೇ ಸಮಂಜಸವಾಗಿದೆ.

**ಸತ್ಯಧರ್ಮಾಣಾ**— ಈ ಮಿತ್ರಾವರುಣರ ಕರ್ಮಗಳು ಸತ್ಯಸ್ವರೂಪವಾಗಿರುವುದಲ್ಲದೆ ಇತರರು ಮಾಡುವ ಕರ್ಮಗಳಿಗೂ ಪ್ರೇರಕರಾಗಿ ಅವುಗಳು ಸತ್ಯದಿಂದ ಎಂದರೆ ವಿಶ್ವನಿಯಮನದ ಕಟ್ಟಿಗೆ ಒಳಪಡುವಂತೆ ಮಾಡುವ ಶಕ್ತಿಯುಳ್ಳವರು ಎಂಬರ್ಥವನ್ನು ಸೂಚಿಸುವುದು.

॥ ಸಂಹಿತಾಪಾಠಃ ॥

ಸಮ್ರಾಜಾವಸ್ಯ ಭುವನಸ್ಯ ರಾಜಥೋ ಮಿತ್ರಾವರುಣಾ ವಿದಥೇ ಸ್ವರ್ದೃಶಾ।
ವೃಷ್ಟಿಂ ವಾಂ ರಾಧೋ ಅಮೃತತ್ವಮೀಮಹೇ ದ್ಯಾವಾಪೃಥಿವೀ ವಿ ಚರಂತಿ
ತನ್ಯವಃ ॥ ೨ ॥

॥ ಪದಪಾಠಃ ॥

ಸಂ5ರಾಜೌ । ಅಸ್ಯ । ಭುವನಸ್ಯ । ರಾಜಥಃ । ಮಿತ್ರಾವರುಣಾ । ವಿದಥೇ । ಸ್ವಃ5ದೃಶಾ ।
ವೃಷ್ಟಿಂ । ವಾಂ । ರಾಧಃ । ಅಮೃತ5ತ್ವಂ । ಈಮಹೇ । ದ್ಯಾವಾಪೃಥಿವೀ ಇತಿ । ವಿ । ಚರಂತಿ । ತನ್ಯವಃ ॥೨॥

॥ ಸಾಯಣಭಾಷ್ಯಂ ॥

ಹೇ ಮಿತ್ರಾವರುಣಾ ಮಿತ್ರಾವರುಣೌ ಸಮ್ರಾಜೌ ಸಮ್ಯಗ್ರಾಜಮಾನೌ ಯುವಾಮಸ್ಯ ಭುವನಸ್ಯ ರಾಜಥಃ । ಈಶಾಥೇ । ಸ್ವರ್ದೃಶಾ ಸ್ವರ್ಗಸ್ಯ ದ್ರಷ್ಟಾರೌ ಯುವಾಂ ವಿದಥೇಽಸ್ಮದ್ಯಜ್ಞೇ ಸಮ್ರಾಜಾವಿತಿ ಸಂಬಂಧಃ । ವಾಂ ಯುವಾಂ ವೃಷ್ಟಿಂ ರಾಧೋ ಧನಂ ವೃಷ್ಟ್ಯಾಖ್ಯಂ ಧನಮಮೃತತ್ವಂ ಸ್ವರ್ಗಂ ಚೇಮಹೇ । ಪ್ರಾರ್ಥಯಾಮಹೇ । ಯುವಯೋಸ್ತನ್ಯವೋ ವಿಸ್ತೃತಾ ರಶ್ಮಯೋ ದ್ಯಾವಾಪೃಥಿವೀ ವಿ ಚರಂತಿ । ವಿವಿಧಂ ಪ್ರಾಪ್ನುವಂತಿ । ಅಥವಾ ವೃಷ್ಟಿಂ ಧನಮಮೃತತ್ವಂ ಚೇಮಹೇ ॥

॥ ಪ್ರತಿಪದಾರ್ಥ ॥

**ಅಸ್ಯ ಭುವನಸ್ಯ**— ಈ ಲೋಕಕ್ಕೆಲ್ಲಾ । **ಸಮ್ರಾಜೌ**— ಪ್ರಭುಗಳಾದವರೂ । **ಸ್ವರ್ದೃಶಾ**— ಸ್ವರ್ಗವನ್ನು ವೀಕ್ಷಿಸುವವರೂ ಆದ । **ಮಿತ್ರಾವರುಣಾ**— ಎಲೈ ಮಿತ್ರಾವರುಣರೇ । **ವಿದಥೇ**— ಈ ಯಜ್ಞದಲ್ಲಿ ।

**ರಾಜಥಃ**—ಪ್ರಕಾಶಿಸುತ್ತಿದ್ದೀರಿ । **ವಾಂ**—ನಿಮ್ಮಿಂದ । **ವೃಷ್ಟಿಂ**—ವೃಷ್ಟಿರೂಪವಾದ । **ರಾಧಃ**—ಧನವನ್ನೂ । **ಅಮೃತತ್ವಂ**—ಮರಣರಾಹಿತ್ಯವನ್ನೂ । **ಈಮಹೇ**—ಪ್ರಾರ್ಥಿಸುತ್ತೇವೆ । **ತನ್ಯವಃ**—ವಿಸ್ತೃತವಾದ ನಿಮ್ಮ ರಶ್ಮಿಗಳು । **ದ್ಯಾವಾಪೃಥಿವೀ**—ದ್ಯಾವಾಪೃಥಿವಿಗಳನ್ನೆಲ್ಲಾ । **ವಿ ಚರಂತಿ**—ವಿಧವಿಧವಾಗಿ ಸಂಚರಿಸುತ್ತವೆ.

॥ ಭಾವಾರ್ಥ ॥

ಈ ಲೋಕಕ್ಕೆಲ್ಲಾ ಪ್ರಭುಗಳಾದವರೂ, ಸ್ವರ್ಗವನ್ನು ವೀಕ್ಷಿಸುವವರೂ ಆದ ಎಲೈ ಮಿತ್ರಾವರುಣರೇ, ನೀವು ಈ ಯಜ್ಞದಲ್ಲಿ ಪ್ರಕಾಶಿಸುತ್ತಿದ್ದೀರಿ. ನಿಮ್ಮಿಂದ ನಾವು ವೃಷ್ಟಿರೂಪವಾದ ಧನವನ್ನೂ ಮರಣರಾಹಿತ್ಯವನ್ನೂ ಪ್ರಾರ್ಥಿಸುತ್ತೇವೆ. ವಿಸ್ತೃತವಾದ ನಿಮ್ಮ ರಶ್ಮಿಗಳು ದ್ಯಾವಾಪೃಥಿವಿಗಳಲ್ಲೆಲ್ಲಾ ವಿಧವಿಧವಾಗಿ ಸಂಚರಿಸುತ್ತವೆ.

## English Translation.

Imperial rulers of this world, you shine, Mitra and Varuna, at this sacrifice, the beholders of heaven : we ask of you the wealth (that is) rain, and immortality, for your forms traverse earth and heaven.

॥ ವಿಶೇಷವಿಷಯಗಳು ॥

**ಸಮ್ರಾಜೌ**—**ಸಮ್ಯಕ್ ರಾಜಮಾನೌ**—ಚೆನ್ನಾಗಿ ಪ್ರಕಾಶಿಸುತ್ತಿರುವ ಎಂಬರ್ಥವು ಇಲ್ಲಿ ಉಕ್ತವಾಗಿದೆ. **ಸಮ್ರಾಟ್** ಶಬ್ದಕ್ಕೆ ರಾಜಾಧಿರಾಜ, ಚಕ್ರವರ್ತಿ ಎಂಬ ಅರ್ಥವೂ ಇರುವುದರಿಂದ ಇಲ್ಲಿ ಆ ಅರ್ಥವನ್ನು ಹೇಳಬಹುದು.

॥ ಸಂಹಿತಾಪಾಠಃ ॥

ಸಮ್ರಾಜಾ ಉಗ್ರಾ ವೃಷಭಾ ದಿವಸ್ಪತೀ ಪೃಥಿವ್ಯಾ ಮಿತ್ರಾವರುಣಾ ವಿಚರ್ಷಣೀ ।
ಚಿತ್ರೇಭಿರಭ್ರೈರುಪ ತಿಷ್ಠಥೋ ರವಂ ದ್ಯಾಂ ವರ್ಷಯಥೋ ಅಸುರಸ್ಯ ಮಾಯಯಾ ॥ ೩ ॥

॥ ಪದಪಾಠಃ ॥

ಸಂಽರಾಜೌ । ಉಗ್ರಾ । ವೃಷಭಾ । ದಿವಃ । ಪತೀ ಇತಿ । ಪೃಥಿವ್ಯಾಃ । ಮಿತ್ರಾವರುಣಾ । ವಿಚರ್ಷಣೀ ಇತಿ ವಿಽಚರ್ಷಣೀ ।
ಚಿತ್ರೇಭಿಃ । ಅಭ್ರೈಃ । ಉಪ । ತಿಷ್ಠಥಃ । ರವಂ । ದ್ಯಾಂ । ವರ್ಷಯಥಃ । ಅಸುರಸ್ಯ । ಮಾಯಯಾ ॥

॥ ಸಾಯಣಭಾಷ್ಯಂ ॥

**ಸಮ್ರಾಜೌ ಸಮ್ಯಗ್ರಾಜಮಾನಾವುಗ್ರೋದ್ಗೂರ್ಣಬಲೌ ವೃಷಭಾ ವರ್ಷಿತಾರೌ ದಿವೋ ದ್ಯುಲೋಕಸ್ಯ ಪತೀ ಸ್ವಾಮಿನೌ ಪೃಥಿವ್ಯಾಶ್ಚ ಪತೀ ವಿಚರ್ಷಣೀ ಸರ್ವಸ್ಯ ದ್ರಷ್ಟಾರೌ ಮಿತ್ರಾವರುಣೌ । ಏವಂ ಮಹಾನುಭಾವೌ ಚಿತ್ರೇಭಿಶ್ಚಾಯನೀಯೈರಭ್ರೈರ್ಮೇಘೈಃ ಸಹ ರವಂ ಸ್ತೋತ್ರಮುಪತಿಷ್ಠಥಃ । ಪಶ್ಚಾತ್ ದ್ಯಾಂ ಚ ವರ್ಷಯಥೋಽಸುರಸ್ಯೋದಕನಿರಸಿತುಃ ಪರ್ಜನ್ಯಸ್ಯ ಮಾಯಯಾ ಪ್ರಜ್ಞಯಾ ಸಾಮರ್ಥ್ಯೇನ ॥**

॥ ಪ್ರತಿಪದಾರ್ಥ ॥

**ಸಮ್ರಾಜೌ**—ಪೂರ್ಣವಾಗಿ ಪ್ರಕಾಶಿಸುವವರೂ । **ಉಗ್ರಾ**—ಭಯಂಕರವಾದ ಶಕ್ತಿಯುಳ್ಳವರೂ । **ವೃಷಭಾ**—ವೃಷ್ಟಿಸೇಚಕರೂ । **ದಿವಃ**—ದ್ಯುಲೋಕಕ್ಕೆ । **ಪತೀ**—ಒಡೆಯರೂ । **ಪೃಥಿವ್ಯಾಃ**—ಪೃಥಿವಿಯ ಪಾಲಕರೂ । **ವಿಚರ್ಷಣೀ**—ಸಕಲವನ್ನೂ ನೋಡುವ ಶಕ್ತಿಯುಳ್ಳವರೂ ಆದ । **ಮಿತ್ರಾವರುಣಾ**—ಎಲ್ಲೈ ಮಿತ್ರಾವರುಣರೇ । **ಚಿತ್ರೇಭಿಃ**—ಆಕರ್ಷಕವಾದ । **ಅಭ್ರೈಃ**—ಮೇಘಗಳೊಡನೆ । **ರವಂ**—ನಮ್ಮ ಸ್ತುತಿ ರೂಪವಾದ ಶಬ್ದವನ್ನು ಕೇಳಲು । **ಉಪ ತಿಷ್ಠಥಃ**—ನಮ್ಮನ್ನು ಸಮೀಪಿಸಿರಿ (ಅನಂತರ) । **ಅಸುರಸ್ಯ**—ಶಕ್ತನಾದ ಪರ್ಜನ್ಯನ । **ಮಾಯಯಾ**—ಪ್ರಜ್ಞೆಯ ಸಹಾಯದಿಂದ । **ದ್ಯಾಂ**—ಅಂತರಿಕ್ಷವನ್ನು । **ವರ್ಷಯಥಃ**—ವೃಷ್ಟಿಯನ್ನು ಸುರಿಸುವಂತೆ ಮಾಡಿರಿ.

॥ ಭಾವಾರ್ಥ ॥

ಪೂರ್ಣವಾಗಿ ಪ್ರಕಾಶಿಸುವವರೂ, ಭಯಂಕರವಾದ ಶಕ್ತಿಯುಳ್ಳವರೂ, ವೃಷ್ಟಿಸೇಚಕರೂ, ದ್ಯುಲೋಕಕ್ಕೆ ಒಡೆಯರೂ, ಪೃಥಿವಿಯ ಪಾಲಕರೂ, ಸಕಲವನ್ನೂ ನೋಡುವ ಶಕ್ತಿಯುಳ್ಳವರೂ ಆದ ಎಲ್ಲೈ ಮಿತ್ರಾವರುಣರೇ, ಆಕರ್ಷಕವಾದ ಮೇಘಗಳೊಡನೆ ನಮ್ಮ ಸ್ತುತಿರೂಪವಾದ ಶಬ್ದವನ್ನು ಕೇಳಲು ನಮ್ಮನ್ನು ಸಮೀಪಿಸಿರಿ. ಅನಂತರ ಶಕ್ತನಾದ ಪರ್ಜನ್ಯನ ಪ್ರಜ್ಞೆಯ ಸಹಾಯದಿಂದ ಅಂತರಿಕ್ಷವನ್ನು ವೃಷ್ಟಿಸೇಚಕವಾಗುವಂತೆ ಮಾಡಿರಿ.

## English Translation

Imperial and mighty showerers, lords of heaven and earth, beholders of the universe, you approach, Mitra and Varuna, with variegated clouds to hear the sound (of your praises), and cause the sky to (send down) rain by the power of the emitter of showers.

॥ ಸಂಹಿತಾಪಾಠಃ ॥

ಮಾಯಾ ವಾಂ ಮಿತ್ರಾವರುಣಾ ದಿವಿ ಶ್ರಿತಾ ಸೂರ್ಯೋ ಜ್ಯೋತಿಶ್ಚರತಿ ಚಿತ್ರಮಾಯುಧಂ ।
ತಮಭ್ರೇಣ ವೃಷ್ಟ್ಯಾ ಗೂಹಥೋ ದಿವಿ ಪರ್ಜನ್ಯ ದ್ರಪ್ಸಾ ಮಧುಮಂತ ಈರತೇ ॥ ೪ ॥

॥ ಪದಪಾಠಃ ॥

ಮಾಯಾ । ವಾಂ । ಮಿತ್ರಾವರುಣಾ । ದಿವಿ । ಶ್ರಿತಾ । ಸೂರ್ಯಃ । ಜ್ಯೋತಿಃ । ಚರತಿ । ಚಿತ್ರಂ । ಆಯುಧಂ। ತಂ । ಅಭ್ರೇಣ । ವೃಷ್ಟ್ಯಾ । ಗೂಹಥಃ । ದಿವಿ । ಪರ್ಜನ್ಯ । ದ್ರಪ್ಸಾಃ । ಮಧುಽಮಂತಃ । ಈರತೇ ॥೪॥

॥ ಸಾಯಣಭಾಷ್ಯಂ ॥

ಹೇ ಮಿತ್ರಾವರುಣಾ ವಾಂ ಯುವಯೋರ್ಮಾಯಾ ದಿವಿ ಶ್ರಿತಾ । ಆಶ್ರಿತಾ । ಕೈಷಾ ಯುವಯೋರ್ಮಾಯೋಚ್ಯತೇ । ಸೂರ್ಯಃ ಸರ್ವಸ್ಯ ಪ್ರೇರಕೋ ಜ್ಯೋತಿರ್ದೀಪ್ಯಮಾನಶ್ಚಿತ್ರಂ ಚಾಯನೀಯಮಾಯುಧಮುಕ್ತಲಕ್ಷಣಾಯುಧರೂಪಶ್ಚರತಿ । ಪರಿಭ್ರಮತ್ಯಂತರಿಕ್ಷೇ ಶತ್ರುಮಾರಕತ್ವಾದಾಯುಧಮುಚ್ಯತೇ । ತಂ ಸೂರ್ಯಮಭ್ರೇಣ ಮೇಘೇನ ವೃಷ್ಟ್ಯಾ ದಿವಿ ಗೂಹಥಃ । ಗೋಪಾಯಥಃ। ಹೇ ಪರ್ಜನ್ಯ ದೇವ ತ್ವಯಾ ಮಿತ್ರಾವರುಣಾಭ್ಯಾಂ ವೃಷ್ಟ್ಯರ್ಥಂ ಪ್ರೇರಿತೇನ ಮಧುಮಂತೋ ದ್ರಪ್ಸಾ ಈರತೇ । ಈರ್ಯಂತೇ । ತ್ವತ್ಸೃಷ್ಟಾ ವಾ ಗಚ್ಛಂತಿ ॥

॥ ಪ್ರತಿಪದಾರ್ಥ ॥

**ಮಿತ್ರಾವರುಣಾ**—ಎಲೈ ಮಿತ್ರಾವರುಣರೇ । **ವಾಂ**—ನಿಮ್ಮ । **ಮಾಯಾ**—ಅಸಾಧಾರಣವಾದ ಶಕ್ತಿಯು । **ದಿವಿ**—ಅಂತರಿಕ್ಷದಲ್ಲಿ । **ಶ್ರಿತಾ**—ಸ್ಥಿತವಾಗಿದೆ (ಪ್ರಕಟವಾಗಿದೆ) । **ಸೂರ್ಯಃ**—ಸರ್ವಪ್ರೇರಕನಾದ ಸೂರ್ಯನು । **ಜ್ಯೋತಿಃ**—ಪ್ರಭಾವರೂಪನಾಗಿಯೂ । **ಚಿತ್ರಂ**—ಆಕರ್ಷಕನಾಗಿಯೂ । **ಆಯುಧಂ**—ನಿಮ್ಮ ಮಾಯಾರೂಪದ ಆಯುಧವಾಗಿಯೂ । **ಚರತಿ**—ಅಂತರಿಕ್ಷದಲ್ಲಿ ಸಂಚರಿಸುತ್ತಾನೆ । **ತಂ**—ಆ ಸೂರ್ಯನನ್ನು । **ಅಭ್ರೇಣ**—ಮೇಘದಿಂದಲೂ । **ವೃಷ್ಟ್ಯಾ**—ವೃಷ್ಟಿಯಿಂದಲೂ । **ದಿವಿ**—ಅಂತರಿಕ್ಷದಲ್ಲಿ । **ಗೂಹಥಃ**—ಆಚ್ಛಾದಿಸುತ್ತೀರಿ । **ಪರ್ಜನ್ಯ**—ಎಲೈ ಪರ್ಜನ್ಯದೇವನೇ (ಮಿತ್ರಾವರುಣರಿಂದ ಪ್ರೇರಿತನಾದ ನಿನ್ನಿಂದಲೇ) । **ಮಧುಮಂತಃ**—ಸ್ವಾದುರಸಭರಿತವಾದ । **ದ್ರಪ್ಸಾಃ**—ಉದಕಗಳು । **ಈರತೇ**—ಪ್ರವಹಿಸುತ್ತವೆ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ನಿಮ್ಮ ಅಸಾಧಾರಣವಾದ ಶಕ್ತಿಯು ಅಂತರಿಕ್ಷದಲ್ಲಿ ಸ್ಥಿತವಾಗಿದೆ. ಸರ್ವಪ್ರೇರಕನಾದ ಸೂರ್ಯನು, ಪ್ರಭಾರೂಪನಾಗಿಯೂ ಆಕರ್ಷಕನಾಗಿಯೂ, ನಿಮ್ಮ ಮಾಯಾರೂಪದ ಆಯುಧವಾಗಿಯೂ

ಅಂತರಿಕ್ಷವಲ್ಲಿ ಸಂಚರಿಸುತ್ತಾನೆ ಆ ಸೂರ್ಯನನ್ನು ನೀವು ಮೇಘದಿಂದಲೂ, ವೃಷ್ಟಿಯಿಂದಲೂ, ಅಂತರಿಕ್ಷದಲ್ಲಿ ಆಚ್ಛಾದಿಸುತ್ತೀರಿ ಎಲೈ ಪರ್ಜನ್ಯದೇವನೇ, ಮಿತ್ರಾವರುಣರಿಂದ ಪ್ರೇರಿತನಾದ ನಿನ್ನಿಂದಲೇ, ಸ್ವಾದುರಸಭರಿತವಾದ ಉದಕಗಳು ಪ್ರವಹಿಸುತ್ತವೆ.

## English Translation.

Your device, Mitra and Varuna, is manifested in heaven, when the light (that is) the sun, your wonderful weapon, moves (in the firmament) : him you invest in the sky with cloud (and) with rain ; and (your) sweet drops, Parjanya, fall (at their desire).

॥ ಸಂಹಿತಾಪಾಠಃ ॥

ರಥಂ ಯುಂಜತೇ ಮರುತಃ ಶುಭೇ ಸುಖಂ ಶೂರೋ ನ ಮಿತ್ರಾವರುಣಾ ಗವಿಷ್ಟಿಷು ।
ರಜಾಂಸಿ ಚಿತ್ರಾ ವಿ ಚರಂತಿ ತನ್ಯವೋ ದಿವಃ ಸಮ್ರಾಜಾ ಪಯಸಾ ನ ಉಕ್ಷತಂ ॥ ೫ ॥

॥ ಪದಪಾಠಃ ॥

ರಥಂ । ಯುಂಜತೇ । ಮರುತಃ । ಶುಭೇ । ಸುಽಖಂ । ಶೂರಃ । ನ । ಮಿತ್ರಾವರುಣಾ । ಗೋಽಇಷ್ಟಿಷು ।
ರಜಾಂಸಿ । ಚಿತ್ರಾ । ವಿ । ಚರಂತಿ । ತನ್ಯವಃ । ದಿವಃ । ಸಂಽರಾಜಾ । ಪಯಸಾ । ನಃ । ಉಕ್ಷತಂ ॥ ೫ ॥

॥ ಸಾಯಣಭಾಷ್ಯಂ ॥

ಹೇ ಮಿತ್ರಾವರುಣೌ ಯುವಯೋರನುಗ್ರಹಾತ್ ಮರುತಃ ಶುಭ ಉದಕಾರ್ಥಂ ಸುಖಂ ಶೋಭನಾಕ್ಷದ್ವಾರಂ ರಥಂ ಯುಂಜತೇ । ಅಶ್ವೈರ್ಯೋಜಯಂತಿ । ಶೂರೋ ನ ಶೂರ ಇವ । ಸ ಯಥಾ ಯುದ್ಧಾರ್ಥಂ ರಥಂ ಯುನಕ್ತಿ ತದ್ವತ್ । ಗವಿಷ್ಟಿಷು ಗವಾಮುದಕಾನಾಮೇಷಣೇಷು ನಿಮಿತ್ತೇಷು ಚಿತ್ರಾ ಚಾಯನೀಯಾನಿ ರಜಾಂಸಿ ಲೋಕಾನ್ ತನ್ಯವಸ್ತನಾಸ್ತೇ ಮರುತೋ ವಿ ಚರಂತಿ । ವಿವಿಧಂ ಚರಂತಿ । ತಸ್ಮಾತ್ತೈಃ ಸಹಿತೌ ಹೇ ಸಮ್ರಾಜಾ ಯುವಾಂ ದಿವೋ ದ್ಯುಲೋಕಾತ್ಪಯಸೋದಕೇನ ನೋಽಸ್ಮಾನುಕ್ಷತಂ । ಸಿಂಚತಂ ॥

॥ ಪ್ರತಿಪದಾರ್ಥ ॥

**ಹೇ ಮಿತ್ರಾವರುಣೌ**—ಎಲೈ ಮಿತ್ರಾವರುಣರೇ । **ಮರುತಃ**—ಮರುತ್ತುಗಳು । **ಶೂರೋ ನ**—ವೀರನು ತನ್ನ ರಥವನ್ನು ಯುದ್ಧಾರ್ಥವಾಗಿ ಸಿದ್ಧಪಡಿಸುವಂತೆ । **ಶುಭೇ**—ಉದಕಾರ್ಥವಾಗಿ । **ಸುಖಂ**—ಸುಖವಾಗಿ ಸಂಚರಿಸತಕ್ಕ । **ರಥಂ** – ತಮ್ಮ ರಥವನ್ನು । **ಯುಂಜತೇ**—ಅಶ್ವಗಳೊಡನೆ ಸೇರಿಸಿ ಸಿದ್ಧಪಡಿಸುತ್ತಾರೆ । **ತನ್ವಃ**—ವಿಸ್ತೃತವಾಗಿ ಹರಡಿದ ಶರೀರಗಳುಳ್ಳ ಆ ಮೇಘಗಳು । **ಗವಿಷ್ಟಿಷು**—ಉದಕಸೇಚನದ ನಿಮಿತ್ತವಾಗಿ । **ಚಿತ್ರಾ**—ಆಕರ್ಷಕವಾದ । **ರಜಾಂಸಿ**—ಲೋಕಗಳನ್ನೆಲ್ಲಾ । **ವಿ ಚರಂತಿ**—ಸಂಚರಿಸುತ್ತವೆ । **ಸಮ್ರಾಜಾ**—ಪ್ರಭುಗಳಾದ ಎಲೈ ಮಿತ್ರಾವರುಣರೇ । **ದಿವಃ**—ದ್ಯುಲೋಕದಿಂದ । **ನಃ** —ನಮಗೆ । **ಪಯಸಾ**—ವೃಷ್ಟಿಯನ್ನು । **ಉಕ್ಷತಂ**—ಸುರಿಸಿರಿ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ವೀರನು ತನ್ನ ರಥವನ್ನು ಯುದ್ಧಾರ್ಥವಾಗಿ ಸಿದ್ಧಪಡಿಸುವಂತೆ ಉದಕಾರ್ಥವಾಗಿ ಸುಖವಾಗಿ ಸಂಚರಿಸತಕ್ಕ ತಮ್ಮ ರಥವನ್ನು ಮರುತ್ತುಗಳು ಅಶ್ವಗಳೊಡನೆ ಸೇರಿಸಿ ಸಿದ್ಧಪಡಿಸುತ್ತಾರೆ. ವಿಸ್ತೃತವಾಗಿ ಹರಡಿದ ಶರೀರಗಳುಳ್ಳ ಆ ಮೇಘಗಳು ಉದಕಸೇಚನದ ನಿಮಿತ್ತವಾಗಿ ಆಕರ್ಷಕವಾದ ಲೋಕಗಳನ್ನೆಲ್ಲಾ ಸಂಚರಿಸುತ್ತವೆ. ಪ್ರಭುಗಳಾದ ಎಲೈ ಮಿತ್ರಾವರುಣರೇ, ದ್ಯುಲೋಕದಿಂದ ನಮಗೆ ವೃಷ್ಟಿಯನ್ನು ಸುರಿಸಿರಿ.

## English Translation.

The Maruts harness their easy-going chariot, Mitra and Varuna, for (the emission of) water, as a hero (harnesses his war-car): their forms traverse the different spheres to distribute the rain: do you, therefore, supreme rulers, shed upon us water from heaven.

॥ ಸಂಹಿತಾಪಾಠಃ ॥

ವಾಚಂ ಸು ಮಿತ್ರಾವರುಣಾವಿರಾವತೀಂ ಪರ್ಜನ್ಯಶ್ಚಿತ್ರಾಂ ವದತಿ ತ್ವಿಷೀಮತೀಂ ।
ಅಭ್ರಾ ವಸತ ಮರುತಃ ಸು ಮಾಯಯಾ ದ್ಯಾಂ ವರ್ಷಯತಮರುಣಾಮರೇಪಸಂ ॥ ೬ ॥

॥ ಪದಪಾಠಃ ॥

ವಾಚಂ । ಸು । ಮಿತ್ರಾವರುಣಾ । ಇರಾವತೀಂ । ಪರ್ಜನ್ಯಃ । ಚಿತ್ರಾಂ । ವದತಿ । ತ್ವಿಷಿಮತೀಂ ।
ಅಭ್ರಾ । ವಸತ । ಮರುತಃ । ಸು । ಮಾಯಯಾ । ದ್ಯಾಂ । ವರ್ಷಯತಂ । ಅರುಣಾಂ । ಅರೇಪಸಂ ॥೩॥

। ಸಾಯಣಭಾಷ್ಯಂ ॥

ಹೇ ಮಿತ್ರಾವರುಣೌ ಯುವಯೋರನುಗ್ರಹಾತ್ ಪರ್ಜನ್ಯೋ ಮೇಘಃ ಸು ಸುಷ್ಠು ಇರಾವತೀ-ಮನ್ನವತೀಮನ್ನಸಾಧಿಕಾಂ ಚಿತ್ರಾಂ ಚಾಯನೀಯಾಂ ತ್ವಿಷೀಮತೀಂ ದೀಪ್ತಿಮತೀಂ ವಾಚಂ ಗರ್ಜನಶಬ್ದಂ ವದತಿ । ಶಬ್ದಯತಿ ವೃಷ್ಟ್ಯರ್ಥಂ । ಮರುತಶ್ಚಾಭ್ರಾಭ್ರಾಣಿ ಮೇಘಾನ್ ಸು ಸುಷ್ಠು ವಸತ ಆಚ್ಛಾದಯಂತಿ ಮಾಯಯಾ ಸ್ವಪ್ರಜ್ಞಯಾ । ಯುವಾಂ ಚ ಪರ್ಜನ್ಯೇನ ಮರುದ್ಭಿಶ್ಚ ಸಹಾರುಣಾಮರುಣವರ್ಣಾಮರೇಪಸಮಪಾಪಾಂ ವೃಷ್ಟ್ಯವಿಘಾತಿನೀಂ ದ್ಯಾಂ ವರ್ಷಯತಂ ॥

॥ ಪ್ರತಿಪದಾರ್ಥ ॥

**ಮಿತ್ರಾವರುಣೌ**— ಎಲೈ ಮಿತ್ರಾವರುಣರೇ (ನಿಮ್ಮ ಪ್ರಭಾವದಿಂದಲೇ) । **ಪರ್ಜನ್ಯಃ**- ಪರ್ಜನ್ಯನು **ಸು**— ಅತಿಶಯವಾಗಿ । **ಇರಾವತೀಂ**— ಅನ್ನಸಾಧಕವಾದುದೂ । **ಚಿತ್ರಾಂ**— ಆಕರ್ಷಕವಾದೂ । **ತ್ವಿಷೀಮತೀಂ**— ಕಾಂತಿಯುತವಾದುದೂ ಆದ । **ವಾಚಂ**-- ಗರ್ಜನಶಬ್ದವನ್ನು । **ವದತಿ**-- ಪ್ರಕಟಿಸುತ್ತಾನೆ । **ಮರುತಃ** - ಮರುತ್ತುಗಳೂ ಕೂಡ । **ಮಾಯಯಾ**— ತಮ್ಮ ಪ್ರಜ್ಞಾರೂಪವಾದ ಶಕ್ತಿಯಿಂದ । **ಅಭ್ರಾ**— ಮೇಘಗಳನ್ನು । **ಸು**— ಅತಿಶಯವಾಗಿ । **ವಸತ**— ಆಚ್ಛಾದಿಸುತ್ತವೆ (ನೀವಿಬ್ಬರೂ ಸಹ) । **ಅರುಣಾಂ**— ಹೊಂಬಣ್ಣವುಳ್ಳದ್ದೂ । **ಅರೇಪಸಂ**— ಕಲ್ಮಷರಹಿತವಾದದ್ದೂ ಆದ । **ದ್ಯಾಂ** ದ್ಯುಲೋಕವನ್ನು । **ವರ್ಷಯತಂ**— ವೃಷ್ಟಿಯನ್ನು ಸುರಿಸುವಂತೆ ಮಾಡುತ್ತೀರಿ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ನಿಮ್ಮ ಪ್ರಭಾವದಿಂದಲೇ ಪರ್ಜನ್ಯನು ಅತಿಶಯವಾಗಿ ಅನ್ನಸಾಧಕವಾದುದೂ, ಆಕರ್ಷಕವಾದುದೂ, ಕಾಂತಿಯುತವಾದುದೂ ಆದ ಗರ್ಜನಶಬ್ದವನ್ನು ಪ್ರಕಟಿಸುತ್ತಾನೆ. ಮರುತ್ತುಗಳೂ ಕೂಡ ತಮ್ಮ ಪ್ರಜ್ಞಾರೂಪವಾದ ಶಕ್ತಿಯಿಂದ ಮೇಘಗಳನ್ನು ಅತಿಶಯವಾಗಿ ಆಚ್ಛಾದಿಸುತ್ತವೆ. ನೀವಿಬ್ಬರೂ ಸಹ ಹೊಂಬಣ್ಣವುಳ್ಳದ್ದೂ, ಕಲ್ಮಷರಹಿತವಾದದ್ದೂ ಆದ ದ್ಯುಲೋಕವನ್ನು ವೃಷ್ಟಿಯನ್ನು ಸುರಿಸುವಂತೆ ಮಾಡುತ್ತೀರಿ.

## English Translation.

The cloud, (through your will), Mitra aud Varuna utters a wonderful sound, indicative of radiance, and announcing (abundant) food : the Maruts thoroughly invest the clouds with (their) devices, and (along with them), you two cause the purple and faultless sky to send down rain.

॥ ಸಂಹಿತಾಪಾಠಃ ॥

ಧರ್ಮಣಾ ಮಿತ್ರಾವರುಣಾ ವಿಪಶ್ಚಿತಾ ವ್ರತಾ ರಕ್ಷೇಥೇ ಅಸುರಸ್ಯ ಮಾಯಯಾ ।
ಋತೇನ ವಿಶ್ವಂ ಭುವನಂ ವಿ ರಾಜಥಃ ಸೂರ್ಯಮಾ ಧತ್ಥೋ ದಿವಿ ಚಿತ್ರ್ಯಂ ರಥಂ ॥ ೭ ॥

॥ ಪದಪಾಠಃ ॥

ಧರ್ಮಣಾ । ಮಿತ್ರಾವರುಣಾ । ವಿಪಃऽಚಿತಾ । ವ್ರತಾ । ರಕ್ಷೇಥೇ ಇತಿ । ಅಸುರಸ್ಯ । ಮಾಯಯಾ ।
ಋತೇನ । ವಿಶ್ವಂ । ಭುವನಂ । ವಿ । ರಾಜಥಃ । ಸೂರ್ಯಂ । ಆ । ಧತ್ಥಃ । ದಿವಿ । ಚಿತ್ರ್ಯಂ । ರಥಂ॥೭॥

॥ ಸಾಯಣಭಾಷ್ಯಂ ॥

ಹೇ ಮಿತ್ರಾವರುಣಾ ವಿಪಶ್ಚಿತಾ ಪ್ರಾಜ್ಞಾ ಯುವಾಂ ಧರ್ಮಣಾ ಜಗದ್ಧಾರಕೇಣ ವೃಷ್ಟ್ಯಾದಿಲಕ್ಷಣೇನ ಕರ್ಮಣಾ ವ್ರತಾ ಯಜ್ಞಾದಿಕರ್ಮಾಣಿ ರಕ್ಷೇಥೇ । ಪಾಲಯಥಃ । ಅಸುರಸ್ಯ ಮೇಘಾನಾಂ ನಿರಸಿತುಃ ಪರ್ಜನ್ಯಸ್ಯ ಮಾಯಯಾ ಪ್ರಜ್ಞಯಾ ಚ ಋತೇನೋದಕೇನ ಯಜ್ಞೇನ ವಾ ನಿಮಿತ್ತೇನ ವಿಶ್ವಂ ಭುವನಂ ಸರ್ವಂ ಭೂತಜಾತಂ ವಿ ರಾಜಥಃ । ವಿದೀಪಯಥ ಇತ್ಯರ್ಥಃ । ಸೂರ್ಯಮಾ ಸೂರ್ಯಂ ಚ ಚಿತ್ರ್ಯಂ ಪೂಜ್ಯಂ ರಥಂ ರಂಹಣಸ್ವಭಾವಂ ದಿವಿ ದ್ಯುಲೋಕೇ ಧತ್ಥಃ । ಧಾರಯಥೋ ಜಗದುಪಕಾರಾರ್ಥಂ ॥

॥ ಪ್ರತಿಪದಾರ್ಥ ॥

**ಮಿತ್ರಾವರುಣಾ**—ಎಲೈ ಮಿತ್ರಾವರುಣರೇ । **ವಿಪಶ್ಚಿತಾ**– ಪ್ರಾಜ್ಞರಾದ ನೀವು । **ಅಸುರಸ್ಯ**—ಬಲಯುತನಾದ ಪರ್ಜನ್ಯನ । **ಮಾಯಯಾ**— ಅಸಾಧಾರಣವಾದ ಶಕ್ತಿಯ ಸಹಾಯದಿಂದಲೂ। **ಧರ್ಮಣಾ**—ನಿಮ್ಮ ವೃಷ್ಟಿವರ್ಷಣಾದಿ ಕರ್ಮಗಳಿಂದಲೂ । **ವ್ರತಾ**— ಯಜ್ಞಾದಿಕರ್ಮಗಳನ್ನು । **ರಕ್ಷೇಥೇ**— ಪಾಲಿಸುತ್ತೀರಿ। **ಋತೇನ**—ಉದಕದಿಂದ । **ವಿಶ್ವಂ ಭುವನಂ**—ಸಮಸ್ತಭುವನವನ್ನೂ । **ವಿ ರಾಜಥಃ**—ಪ್ರಕಾಶಿಸುವಂತೆ ಮಾಡುತ್ತೀರಿ । **ದಿವಿ**— ದ್ಯುಲೋಕದಲ್ಲಿ । **ಚಿತ್ರ್ಯಂ**—ಪೂಜ್ಯವಾದ । **ರಥಂ**—ರಥರೂಪನಾಗಿರುವ । **ಸೂರ್ಯಂ**— ಸೂರ್ಯನನ್ನು । **ಆ ಧತ್ಥಃ**—(ಜಗದುಪಕಾರಕ್ಕಾಗಿ) ಧಾರಣಮಾಡಿದ್ದೀರಿ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ಪ್ರಾಜ್ಞರಾದ ನೀವು ಬಲಯುತವಾದ ಪರ್ಜನ್ಯನ ಅಸಾಧಾರಣವಾದ ಶಕ್ತಿಯ ಸಹಾಯದಿಂದಲೂ, ನಿಮ್ಮ ವೃಷ್ಟಿವರ್ಷಣಾದಿ ಕರ್ಮಗಳಿಂದಲೂ, ಯಜ್ಞಾದಿಕರ್ಮಗಳನ್ನು ಪಾಲಿಸುತ್ತೀರಿ.

ಉದಕದಿಂದ ಸಮಸ್ತವನ್ನೂ ಪ್ರಕಾಶಿಸುವಂತೆ ಮಾಡುತ್ತೀರಿ. ದ್ಯುಲೋಕದಲ್ಲಿ ಪೂಜ್ಯನಾದ ರಥರೂಪದಲ್ಲಿರುವ ಸೂರ್ಯನನ್ನು ಜಗದುಪಕಾರಾರ್ಥವಾಗಿ ಧಾರಣಮಾಡಿದ್ದೀರಿ (ಸ್ಥಾಪಿಸಿದ್ದೀರಿ).

English Translation.

Sapient Mitra and Varuna· by your office you protect pious rites, through the power of the emitter of showers: you illumine the whole world with water: you sustain the sun, the adorable cha iot in the sky.

# ಅರವತ್ತನಾಲ್ಕನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ವರುಣಂ ವ ಇತಿ ಸಪ್ತರ್ಚಮಷ್ಟಮಂ ಸೂಕ್ತಮರ್ಚನಾನಸ ಆರ್ಷಂ ಮೈತ್ರಾವರುಣಂ। ಪಂಕ್ತ್ಯಂತಪರಿಭಾಷಯಾನುಷ್ಟುಭಂ । ಅಂತ್ಯಾ ಪಂಕ್ತಿಃ । ವರುಣಂ ಪಂಕ್ತ್ಯಂತಂ ತ್ವಿತ್ಯನುಕ್ರಮಣಿಕಾ । ವಿನಿಯೋಗೋ ಲೈಂಗಿಕಃ ॥**

ಅನುವಾದವು--- **ವರುಣಂ ವಃ** ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ಎಂಟನೆಯ ಸೂಕ್ತವು., ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತಕ್ಕೆ **ಅರ್ಚನಾನಾ ಆತ್ರೇಯಃ** ಎಂಬುವನು ಋಷಿಯು; ಮಿತ್ರಾವರುಣರು ದೇವತೆಯು; ಕೊನೆಯ ಋಕ್ಕು ಪಂಕ್ತಿಶ್ಛಂದಸ್ಕವು; ಉಳಿದ ಋಕ್ಕುಗಳು ಅನುಷ್ಟುಪ್‌ಛಂದಸ್ಕವು. ಅನುಕ್ರಮಣಿಕೆಯಲ್ಲಿ— **ವರುಣಂ ಪಂಕ್ತ್ಯಂತಂ ತು** ಎಂದು ಹೇಳಿರುವುದು. ವಿನಿಯೋಗವು ಲೈಂಗಿಕವು.

## ಸೂಕ್ತ—೬೪

ಮಂಡಲ—೫ ॥ ಅನುವಾಕ—೫ ॥ ಸೂಕ್ತ—೬೪ ॥
ಅಷ್ಟಕ—೪ ॥ ಅಧ್ಯಾಯ—೪ ॥ ವರ್ಗ—೨ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ॥
॥ ಋಷಿಃ—ಅರ್ಚನಾನಾ ಆತ್ರೇಯಃ ॥
॥ ದೇವತಾ—ಮಿತ್ರಾವರುಣೌ ॥
॥ ಛಂದಃ—೧-೬, ಅನುಷ್ಟುಪ್ । ೭ ಪಂಕ್ತಿಃ ॥

॥ ಸಂಹಿತಾಪಾಠಃ ॥

ವರುಣಂ ವೋ ರಿಶಾದಸಮೃಚಾ ಮಿತ್ರಂ ಹವಾಮಹೇ ।
ಪರಿ ವ್ರಜೇವ ಬಾಹ್ವೋರ್ಜಗನ್ವಾಂಸಾ ಸ್ವರ್ಣರಂ ॥ ೧ ॥

॥ ಪದಪಾಠಃ ॥

ವರುಣಂ । ವಃ । ರಿಶಾದಸಂ । ಋಚಾ । ಮಿತ್ರಂ । ಹವಾಮಹೇ ।

ಪರಿ । ವ್ರಜಾಽಇವ । ಬಾಹ್ವೋಃ । ಜಗನ್ವಾಂಸಾ । ಸ್ವಃಽನರಂ ॥ ೧ ॥

॥ ಸಾಯಣಭಾಷ್ಯಂ ॥

ವೋ ಯುವಯೋರ್ಮಧ್ಯೇ ॥ ವ್ಯತ್ಯಯೇನ ಬಹುವಚನಂ ॥ ರಿಶಾದಸಂ । ರಿಶಂತಿ ಹಿಂಸಂತೀತಿ ರಿಶಾಃ ಶತ್ರವಃ । ತೇಷಾಂ ಪ್ರೇರಕಂ ಸ್ವರ್ಣರಂ ಸ್ವರ್ಗಸ್ಯ ನೇತಾರಂ । ಏತದ್ವ್ಯವಹಿತಮುಪ್ಯುಭಯತ್ರ ಸಂಬಧ್ಯತೇ । ಏವಂವಿಧಂ ವರುಣಮುಕ್ತಲಕ್ಷಣಂ ಮಿತ್ರಂ ಚ ಋಚಾ ಮಂತ್ರೇಣ ಹವಾಮಹೇ । ಆಹ್ವಯಾಮಃ । ಅಥಾವಯೋರುಚ್ಯತೇ । ವ್ರಜೇವ ಗೋಯೂಥಾನೀವ ಬಾಹ್ವೋರ್ಬಲೇನ ಪರಿ ಜಗನ್ವಾಂಸಾ ಪರಿಗಚ್ಛಂತೌ ॥

॥ ಪ್ರತಿಪದಾರ್ಥ ॥

(ಎಲೈ ಮಿತ್ರಾವರುಣರೇ) । **ಬಾಹ್ವೋಃ**—ತನ್ನ ಬಾಹುಬಲದಿಂದ । **ಪರಿ**—ತಮ್ಮ ಮುಂಭಾಗದಲ್ಲಿ **ವ್ರಜೇವ**—ಗೋವಿನ ಹಿಂಡನ್ನು ಅಟ್ಟಿಕೊಂಡು ಹೋಗುವ ಗೋಪಾಲಕರಂತೆ । **ಜಗನ್ವಾಂಸಾ**—ಹೋಗುತ್ತಿರುವ। **ವಃ**—ನಿಮ್ಮಗಳ ನಡುವೆ । **ರಿಶಾದಸಂ**—ಶತ್ರುನಾಶಕನೂ । **ಸ್ವರ್ಣರಂ**—ಯಜಮಾನಾದಿಗಳನ್ನು ಸ್ವರ್ಗಕ್ಕೆ ಒಯ್ಯುವವನೂ ಆದ । **ವರುಣಂ**—ವರುಣನನ್ನೂ । **ಮಿತ್ರಂ**—(ಅದೇ ಗುಣಗಳುಳ್ಳ) ಮಿತ್ರನನ್ನೂ । **ಋಚಾ**—ಮಂತ್ರಗಳಿಂದ । **ಹವಾಮಹೇ**—ಪ್ರಾರ್ಥಿಸಿ ಕರೆಯುತ್ತೇವೆ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ತನ್ನ ಬಾಹುಬಲದಿಂದ ತಮ್ಮ ಮುಂಭಾಗದಲ್ಲಿ ಗೋವಿನ ಹಿಂಡನ್ನು ಅಟ್ಟಿಕೊಂಡು ಹೋಗುವ ಗೋಪಾಲಕರಂತೆ ಹೋಗುತ್ತಿರುವ ಶತ್ರುನಾಶಕನೂ ಮತ್ತು ಯಜಮಾನಾದಿಗಳನ್ನು ಸ್ವರ್ಗಕ್ಕೆ ಒಯ್ಯುವನು ಆದ ವರಣನನ್ನೂ ಅದೇ ಗುಣಗಳುಳ್ಳ ಮಿತ್ರನನ್ನೂ ಮಂತ್ರಗಳಿಂದ ಪ್ರಾರ್ಥಿಸಿ ಕರೆಯುತ್ತೇವೆ.

## English Translation.

We invoke you, Mitra and Varuna, with this hymn; each the discomfiter of foes, the conductor to heaven, like (two herdsmen) driving, by (the strength of their) arms, the herds of cattle before them.

॥ ಸಂಹಿತಾಪಾಠಃ ॥

ತಾ ಬಾ॒ಹವಾ॑ ಸುಚೇ॒ತುನಾ॒ ಪ್ರ ಯಂ॑ತಮಸ್ಮಾ॒ ಅರ್ಚ॑ತೇ ।
ಶೇವಂ॒ ಹಿ ಜಾ॒ರ್ಯಂ॑ ವಾಂ॒ ವಿಶ್ವಾ॑ಸು॒ ಕ್ಷಾಸು॒ ಜೋಗು॑ವೇ ॥ ೨ ॥

॥ ಪದಪಾಠಃ ॥

ತಾ । ಬಾ॒ಹವಾ॑ । ಸು॒ಽಚೇ॒ತುನಾ॑ । ಪ್ರ । ಯಂ॒ತಂ॒ । ಅ॒ಸ್ಮೈ॒ । ಅರ್ಚ॑ತೇ ।
ಶೇವಂ॑ । ಹಿ । ಜಾ॒ರ್ಯಂ॑ । ವಾ॒ಂ । ವಿಶ್ವಾ॑ಸು । ಕ್ಷಾಸು॑ । ಜೋಗು॑ವೇ ॥ ೨ ॥

॥ ಸಾಯಣಭಾಷ್ಯಂ ॥

ತಾ ತೌ ಯುವಾಂ ಬಾಹವಾ ಬಾಹುನಾ ಸುಚೇತುನಾ ಸುಷ್ಠು ಪ್ರಜ್ಞಾತ್ರಾ । ಪ್ರಯಾಸಭೂಯಸ್ತ್ವಂ ಜಾನತೇತ್ಯರ್ಥಃ । ಯದ್ಯಪ್ಯಾತ್ಮೇವ ಜ್ಞಾತಾ ನ ಹಸ್ತಸ್ತಥಾಪಿ ತದ್ಧರ್ಮಸ್ತತ್ರಾರೋಪ್ಯ ಸ್ತೂಯತೇ । ಯದ್ವೈತತ್ತಾವಿತ್ಯಸ್ಯ ವಿಶೇಷಣಂ । ಸುಜ್ಞಾನಾವಿತ್ಯರ್ಥಃ । ಶೋಭನಹಸ್ತೇನಾಸ್ಮಾ ಅರ್ಚತೇ ಸ್ತುವತೇ ಮಹ್ಯಂ ಪ್ರ ಯಂತಂ । ಅಭಿಮತಂ ಸುಖಂ ಪ್ರಗಮಯತಂ ॥ ಅಂತರ್ಭಾವಿತಣ್ಯರ್ಥೋ ದ್ರಷ್ಟವ್ಯಃ । ಯಮಿರ್ದಾನಕರ್ಮಾ ವಾ ದ್ರಷ್ಟವ್ಯಃ ॥ ಪ್ರಯಚ್ಛತಮಿತ್ಯರ್ಥಃ । ಜಾರ್ಯಂ ಸ್ತುತ್ಯಂ ಶೇವಂ ಸುಖಂ ವಾಂ ಯುವಯೋಃ ಸಂಬಂಧಿ ಯುವಾಭ್ಯಾಂ ಕೃತಂ ವಾ ವಿಶ್ವಾಸು ಸರ್ವಾಸು ಕ್ಷಾಸು ಭೂಮಿಷು ಜೋಗುವೇ । ಗಚ್ಛತಿ । ವ್ಯಾಪ್ನೋತಿ । ಅವತೇ ಗವತ ಇತಿ ಗತಿಕರ್ಮಸು ಪಾಠಾದಯಮಪಿ ಗತಿಕರ್ಮಾ । ಅಥವಾ ಜೋಗುವೇ ಸರ್ವತ್ರ ಶಬ್ದಯಾಮೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ತಾ**— ನೀವಿಬ್ಬರೂ । **ಸುಚೇತುನಾ**— ಪಾತ್ರಾಪಾತ್ರವನ್ನು ವಿವೇಚಿಸುವ ಪ್ರಜ್ಞೆಯುಳ್ಳ । **ಬಾಹವಾ**— ನಿಮ್ಮ ಬಾಹುಗಳಿಂದ । **ಅರ್ಚತೇ**— ನಿಮ್ಮನ್ನು ಸ್ತುತಿಸತಕ್ಕ । **ಅಸ್ಮೈ**— ನನಗೆ । **ಪ್ರ ಯಂತಂ**— (ನನ್ನ ಅಭೀಷ್ಟವನ್ನು) ನೆರವೇರಿಸಿಕೊಡಿ । **ವಾಂ**— ನಿಮ್ಮಿಂದ ದತ್ತವಾದುದೂ । **ಜಾರ್ಯಂ**— ಪ್ರಶಸ್ಯವಾದುದೂ ಆದ । **ಶೇವಂ**— ಸುಖವು । **ವಿಶ್ವಾಸು**— ಸಮಸ್ತವಾದ । **ಕ್ಷಾಸು**— ಭೂಮಿಗಳಲ್ಲೂ । **ಜೋಗುವೇ ಹಿ**— ವ್ಯಾಪಿಸಿ ಹರಡುತ್ತದೆಯಲ್ಲವೇ ?

॥ ಭಾವಾರ್ಥ ॥

ನೀವಿಬ್ಬರೂ ಸಹ ಪಾತ್ರಾಪಾತ್ರಗಳನ್ನು ವಿವೇಚಿಸುವ ಪ್ರಜ್ಞೆಯುಳ್ಳ ನಿಮ್ಮ ಬಾಹುಗಳಿಂದ ನಿಮ್ಮನ್ನು ಸ್ತುತಿಸತಕ್ಕ ನನಗೆ ನನ್ನ ಅಭೀಷ್ಟವನ್ನು ನೆರವೇರಿಸಿಕೊಡಿ. ನಿಮ್ಮಿಂದ ದತ್ತವಾದುದೂ, ಪ್ರಶಸ್ಯವಾದುದೂ ಆದ ಸುಖವು ಸಮಸ್ತವಾದ ಭೂಮಿಗಳಲ್ಲೂ ಖಂಡಿತವಾಗಿ ವ್ಯಾಪಿಸಿ ಹರಡುತ್ತದೆ.

## English Translation.

Do you two, with discriminating hand, bestow upon me, your worshipper, (what I desire); for the desirable felicity (that is given by you) spreads through all lands.

॥ ಸಂಹಿತಾಪಾಠಃ ॥

ಯನ್ನೂನಮಶ್ಯಾಂ ಗತಿಂ ಮಿತ್ರಸ್ಯ ಯಾಯಾಂ ಪಥಾ ।
ಅಸ್ಯ ಪ್ರಿಯಸ್ಯ ಶರ್ಮಣ್ಯಹಿಂಸಾನಸ್ಯ ಸಶ್ಚಿರೇ ॥ ೩ ॥

॥ ಪದಪಾಠಃ ॥

ಯತ್ । ನೂನಂ । ಅಶ್ಯಾಂ । ಗತಿಂ । ಮಿತ್ರಸ್ಯ । ಯಾಯಾಂ । ಪಥಾ ।
ಅಸ್ಯ । ಪ್ರಿಯಸ್ಯ । ಶರ್ಮಣಿ । ಅಹಿಂಸಾನಸ್ಯ । ಸಶ್ಚಿರೇ ॥ ೩ ॥

॥ ಸಾಯಣಭಾಷ್ಯಂ ॥

ಯದ್ಯದಾ ನೂನಮಿದಾನೀಂ ಗತಿಂ ಗಮನಮಶ್ಯಾಂ ಪ್ರಾಪ್ನುಯಾಂ ॥ ಯದ್ಯೋಗಾದನಿಘಾತಃ ॥ ತದಾ ಮಿತ್ರಸ್ಯ ಮಿತ್ರಭೂತಸ್ಯ ಪಥಾ ಮಾರ್ಗೇಣ ಮಿತ್ರಪ್ರಾಪಕೇಣ ಮಾರ್ಗೇಣ ಯಾಯಾಂ। ಗಚ್ಛೇಯಂ। ಮಿತ್ರೋ ನಯತು ವಿದ್ವಾನ್ । ಋಗ್ವೇ. ೧-೯೦-೧। ಇತ್ಯಾದಿಷು ಮಿತ್ರಸ್ಯೇಷ್ಟದೇಶಗಮಯಿತೃತ್ವಂ ಪ್ರಸಿದ್ಧಂ । ನ ಕೇವಲಮಹಮೇಕ ಏವ ಗಂತಾ ಕಿಂತು ಸರ್ವೇಽಪಿ ತಥಾಗಮನ್ನಿತ್ಯಾಹ। ಅಸ್ಯ ಪ್ರಿಯಸ್ಯ। ಮಿತ್ರಸ್ಯೇತ್ಯರ್ಥಃ । ಅಹಿಂಸಾನಸ್ಯಾಹಿಂಸತಃ । ಯತೋಽಯಮಹಂತಾತಃ ಪ್ರಿಯ ಇತ್ಯರ್ಥಃ । ತಸ್ಯ ಶರ್ಮಣಿ ಸುಖೇ ಗೃಹೇ ಸ್ಥಾನೇ ವಾ ಸಶ್ಚಿರೇ । ಸಂಗತಾಃ ॥

॥ ಪ್ರತಿಪದಾರ್ಥ ॥

**ಯತ್**—ಯಾವ ಕಾರಣದಿಂದ । **ಅಹಿಂಸಾನಸ್ಯ**—ಹಿಂಸೆಯನ್ನೇ ಉಂಟುಮಾಡುವವನೂ । **ಪ್ರಿಯಸ್ಯ**—ಸಕಲರಿಗೂ ಪ್ರಿಯನೂ ಆದ । **ಅಸ್ಯ**—ಈ ಮಿತ್ರನ (ಮಿತ್ರನಿಂದ ದತ್ತವಾದ) । **ಶರ್ಮಣಿ**—ಸುಖದಲ್ಲಿ । **ಸಶ್ಚಿರೇ**—(ಸಕಲ ಸನ್ಮಂಗಳಗಳೂ) ಒಟ್ಟಿಗೆ ಸೇರಿವೆಯೋ (ಆದುದರಿಂದ) । **ನೂನಂ**—ಖಂಡಿತ । **ಗತಿಂ**—ಸನ್ಮಾರ್ಗವನ್ನು । **ಅಶ್ಯಾಂ**—ಹೊಂದುವೆನು । **ಮಿತ್ರಸ್ಯ**—ಮಿತ್ರನ । **ಪಥಾ**—ಮಾರ್ಗದಲ್ಲಿಯೇ । **ಯಾಯಾಂ**—ಪಡೆಯುವೆನು.

॥ ಭಾವಾರ್ಥ ॥

ಹಿಂಸೆಯನ್ನೇ ಉಂಟುಮಾಡದವನೂ, ಸಕಲರಿಗೂ ಪ್ರಿಯನೂ ಆದ ಈ ಮಿತ್ರನಿಂದ ದತ್ತವಾದ ಸುಖದಲ್ಲಿಯೇ ಸಕಲ ಸನ್ಮಂಗಳಗಳೂ ಒಟ್ಟಿಗೆ ಸೇರಿಕೊಂಡಿವೆ. ಆದುದರಿಂದ ಅವನ ಅನುಗ್ರಹವನ್ನು ಪಡೆಯಲು ಖಂಡಿತ ಸನ್ಮಾರ್ಗಗಾಮಿಯಾಗಿಯೇ ಇದ್ದು ಮಿತ್ರನ ಮಾರ್ಗದಲ್ಲಿಯೇ ನಡೆಯುವೆನು.

English Translation.

That I may now pursue the (right) direction, may I proceed by the path of Mitra, for all (good things) are aggregated in the happiness, (the gift) of that beloved and benignant (deity).

॥ ವಿಶೇಷವಿಷಯಗಳು ॥

**ಮಿತ್ರಸ್ಯ ಪಥಾ—ಮಿತ್ರಭೂತಸ್ಯ ಮಾರ್ಗೇಣ ಮಿತ್ರಪ್ರಾಪಕೇಣ ಮಾರ್ಗೇಣ ಗಚ್ಛೇಯಂ ।** ಮಿತ್ರನಂತೆ ಪ್ರಿಯಕರವಾದ ಅಥವಾ ಮಿತ್ರನನ್ನು ದೊರಕಿಸಿಕೊಡುವ ಮಾರ್ಗದಲ್ಲಿ ಎಂದರೆ ಸನ್ಮಾರ್ಗದಲ್ಲಿ ನಡೆಯುವೆನು ಎಂದು ಭಾಷ್ಯಕಾರರು ಈ ವಾಕ್ಯಕ್ಕೆ ಅರ್ಥವಿವರಣೆಮಾಡಿ,

**ಋಜುನೀತೀ ನೋ ವರುಣೋ ಮಿತ್ರೋ ನಯತು ವಿದ್ವಾನ್ ।**
**ಅರ್ಯಮಾ ದೇವೈಃ ಸಜೋಷಾಃ ॥**

(ಋ. ಸಂ. ೧-೯೦-೧)

ಎಂಬ ಋಕ್ಕನ್ನು ಈ ವಿಷಯದಲ್ಲಿ ಉದಹರಿಸಿರುವರು.

॥ ಸಂಹಿತಾಪಾಠಃ ॥

**ಯುವಾಭ್ಯಾಂ ಮಿತ್ರಾವರುಣೋಪಮಂ ಧೇಯಾಮೃಚಾ ।**
**ಯದ್ಧ ಕ್ಷಯೇ ಮಘೋನಾಂ ಸ್ತೋತೄಣಾಂ ಚ ಸ್ಪೂರ್ಧಸೇ ॥ ೪ ॥**

॥ ಪದಪಾಠಃ ॥

**ಯುವಾಭ್ಯಾಂ । ಮಿತ್ರಾವರುಣಾ । ಉಪ್ಽಮಂ । ಧೇಯಾಂ । ಋಚಾ ।**
**ಯತ್ । ಹ । ಕ್ಷಯೇ । ಮಘೋನಾಂ । ಸ್ತೋತೄಣಾಂ । ಚ । ಸ್ಪೂರ್ಧಸೇ ॥ ೪ ॥**

॥ ಸಾಯಣಭಾಷ್ಯಂ ॥

ಹೇ ಮಿತ್ರಾವರುಣಾ ಯುವಾಭ್ಯಾಂ ದಾತವ್ಯಮುಪಮಮುಪ ಸಮೀಪೇ ಮೀಯಮಾನಂ ಧನಮೃಚಾ ಸ್ತುತ್ಯಾ ಸಾಧನೇನ ಧೇಯಾಂ । ಧಾರಯಾಮಿ । ಯದ್ಧ ಯತ್ಖಲು ಯುವಾಭ್ಯಾಂ ಸಕಾಶಾ-ದಾಪ್ತಂ ಧನಂ ಮಘೋನಾಂ ಧನವತಾಮದಾತೄಣಾಂ ಸ್ತೋತೄಣಾಂ ಚ ಕ್ಷಯೇ ಗೃಹೇ ಸ್ಪರ್ಧಸೇ ಸ್ಪರ್ಧನಾಯ ಭವತಿ । ಧನಿಕಾನಾಂ ಸ್ತೋತೄಣಾಂ ಚ ಧನಾಧಿಕ್ಯವಿಷಯೇ ಸ್ಪರ್ಧಾ ಭವತೀತ್ಯರ್ಥಃ । ಅಪರಿಮಿತಂ ಧನಂ ಭವತೀತಿ ಭಾವಃ ॥

॥ ಪ್ರತಿಪದಾರ್ಥ ॥

**ಮಿತ್ರಾವರುಣಾ**—ಎಲೈ ಮಿತ್ರಾವರುಣರೇ । **ಸ್ತೋತೄಣಾಂ**—ಸ್ತುತಿಕರ್ತರಿಗೆ (ನೀವು ಕೊಡುವ) । **ಯತ್ ಹ**—ಯಾವ ಧನವು । **ಮಘೋನಾಂ**—(ಯಜ್ಞಕರ್ತರಲ್ಲದೇ) ಧನಿಕರಾಗಿರುವವರ । **ಕ್ಷಯೇ**—ಗೃಹದಲ್ಲಿ । **ಸ್ಪರ್ಧಸೇ**—ಸ್ಪರ್ಧೆಗೆ ಕಾರಣವಾಗಿರುವದೋ (ಅಸೂಯೆಯನ್ನು ಹುಟ್ಟಿಸುವುದೋ) । **ಉಪಮಂ**—ಅಂತಹ ಧನವನ್ನು । **ಋಚಾ**—ನನ್ನ ಸ್ತುತಿಗೆ ಪ್ರತಿಫಲವಾಗಿ । **ಯುವಾಭ್ಯಾಂ**—ನಿಮ್ಮಿಂದ । **ಧೇಯಾಂ**—ಹೊಂದುವಂತಾಗಲಿ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ. ಸ್ತುತಿಕರ್ತರಿಗೆ ನೀವು ಕೊಡತಕ್ಕ ಧನವು, ಯಜ್ಞಕರ್ಮವನ್ನಾಚರಿಸದೇ ಕೇವಲ ಧನಿಕರಾಗಿರುವವರ ಧನಕ್ಕಿಂತಲೂ ಅಧಿಕವಾಗಿರುತ್ತದೆ. ಆದುದರಿಂದ ಅಂತಹ ಧನಿಕರ ಮನೆಯಲ್ಲಿ ಅಸೂಯೆಯನ್ನುಂಟುಮಾಡಿ ಸ್ಪರ್ಧೆಗೆ ಕಾರಣವಾಗುತ್ತದೆ. ಅಂತಹ ಧನವನ್ನು, ನನ್ನ ಸ್ತುತಿಗೆ ಪ್ರತಿಫಲವಾಗಿ ನಿಮ್ಮಿಂದ ನಾನು ಪಡೆಯುವಂತೆ ಅನುಗ್ರಹಿಸಿ.

English Translation.

May I obtain from you, Mitra and Varuna, by my praise, such wealth as to excite envy in the dwellings of the rich and the devout.

॥ ಸಂಹಿತಾಪಾಠಃ ॥

ಆ ನೋ ಮಿತ್ರ ಸುದೀತಿಭಿರ್ವರುಣಶ್ಚ ಸಧಸ್ಥ ಆ ।
ಸ್ವೇ ಕ್ಷಯೇ ಮಘೋನಾಂ ಸಖೀನಾಂ ಚ ವೃಧಸೇ ॥ ೫ ॥

॥ ಪದಪಾಠಃ ॥

ಆ । ನಃ । ಮಿತ್ರ । ಸುದೀತಿऽಭಿಃ । ವರುಣಃ । ಚ । ಸಧऽಸ್ಥೇ । ಆ ।
ಸ್ವೇ । ಕ್ಷಯೇ । ಮಘೋನಾಂ । ಸಖೀನಾಂ । ಚ । ವೃಧಸೇ ॥ ೫ ॥

॥ ಸಾಯಣಭಾಷ್ಯಂ ॥

ಹೇ ಮಿತ್ರ ತ್ವಂ ಚ ವರುಣಶ್ಚ ಸುದೀತಿಭಿಃ ಸುದೀಪ್ತಿಯುಕ್ತಾ ಯುವಾಂ ನೋಽಸ್ಮಭ್ಯಂ ಸಧಸ್ಥೇ ಸಹಸ್ಥಾನೇ ಯಜ್ಞ ಆ ಗಚ್ಛತಂ । ದ್ವಿತೀಯ ಆಕಾರೋಽನರ್ಥಕ ಆದರಾರ್ಥೋ ವಾ । ಕಿಮರ್ಥಮಿತ್ಯುಚ್ಯತೇ । ಮಘೋನಾಂ ಧನವತಾಂ ಹವಿಷ್ಮತಾಂ ಸಖೀನಾಂ ಚ ಯುವಯೋಃ ಸಖಿಭೂತಾನಾಮಸ್ಮಾಕಂ ಕ್ಷಯೇ ಗೃಹೇ ಸ್ವೇ ಸ್ವಕೀಯೇ ವೃಧಸೇ ವರ್ಧನಾಯ ॥

॥ ಪ್ರತಿಪದಾರ್ಥ ॥

**ಮಿತ್ರ**—ಎಲೈ ಮಿತ್ರನೇ (ನೀನೂ) । **ವರುಣಶ್ಚ**—ವರುಣನೂ ಸಹ । **ಮಘೋನಾಂ**—ಹವಿಸ್ಸಿನ ರೂಪದ ಧನವುಳ್ಳವರೂ । **ಸಖೀನಾಂ**—ನಿಮ್ಮ ಸಖಿಭೂತರೂ ಆದ ನಮ್ಮ । **ಸ್ವೇ ಕ್ಷಯೇ**—ಸ್ವಗೃಹದಲ್ಲಿ । **ವೃಧಸೇ**—ವೃದ್ಧಿಯನ್ನುಂಟುಮಾಡಲು । **ಸುದೀತಿಭಿಃ**—ಪ್ರಕಾಶಮಾನವಾದ ನಿಮ್ಮ ರಕ್ಷಣೆಗಳೊಡನೆ । **ಸದಸ್ಥೇ**—ನಮ್ಮ ಯಜ್ಞಗೃಹಕ್ಕೆ । **ಆ (ಗಚ್ಛತಂ)**—ದಯಮಾಡಿರಿ.

॥ ಭಾವಾರ್ಥ ॥

ಎಲೈ ಮಿತ್ರನೇ, ನೀನೂ ಮತ್ತು ವರುಣನೂ ಸಹ ಹವಿಸ್ಸಿನ ರೂಪದ ಧನವುಳ್ಳವರೂ, ನಿಮ್ಮ ಸಖಿಭೂತರೂ ಆದ ನಮ್ಮ ಸ್ವಗೃಹದಲ್ಲಿ ವೃದ್ಧಿಯನ್ನುಂಟುಮಾಡಲು ಪ್ರಕಾಶಮಾನವಾದ ನಿಮ್ಮ ರಕ್ಷಣೆಗಳೊಡನೆ ನಮ್ಮ ಯಜ್ಞಕ್ಕೆ ದಯಮಾಡಿರಿ.

Enlish Translation.

Come, Mitra, (come), Varuna, with your splendour to our assembly, and augment (the prosperity) of the affluent (worshipper), and of (those who are) your friends in their respective abodes

॥ ಸಂಹಿತಾಪಾಠಃ ॥

ಯುವಂ ನೋ ಯೇಷು ವರುಣಾ ಕ್ಷತ್ರಂ ಬೃಹಚ್ಚ ಬಿಭೃಥಃ ।
ಉರು ಣೋ ವಾಜಸಾತಯೇ ಕೃತಂ ರಾಯೇ ಸ್ವಸ್ತಯೇ ॥ ೬ ॥

॥ ಪದಪಾಠಃ ॥

ಯುವಂ । ನಃ । ಯೇಷು । ವರುಣಾ । ಕ್ಷತ್ರಂ । ಬೃಹತ್ । ಚ । ಬಿಭೃಥಃ ।
ಉರು । ನಃ । ವಾಜಽಸಾತಯೇ । ಕೃತಂ । ರಾಯೇ । ಸ್ವಸ್ತಯೇ ॥ ೬ ॥

॥ ಸಾಯಣಭಾಷ್ಯಂ ॥

ಹೇ ವರುಣಾ ಮಿತ್ರಾವರುಣೌ ಯುವಂ ಯುವಾಂ ನೋಽಸ್ಮಾಕಂ ಕ್ಷತ್ರಂ ಬಲಂ ಬೃಹತ್ ಬ್ರಹ್ಮ ಪರಿವೃಢಮನ್ನಂ ಚ ಯೇಷು ಸ್ತೋತ್ರೇಷು ನಿಮಿತ್ತೇಷು ಬಿಭೃಥಃ ಧಾರಯಥಃ ಯುವಾಭ್ಯಾಂ ಧೃತಮನ್ನಂ ಚ ನೋಽಸ್ಮಭ್ಯಂ ವಾಜಸಾತಯೇಽನ್ನಸ್ಯ ಲಾಭಾಯ ಯಜ್ಞಾಯ ವಾ ರಾಯೇ ಧನಾಯ ಸ್ವಸ್ತಯೇ ಕ್ಷೇಮಾಯ ಚೋರು ವಿಸ್ತೀರ್ಣಂ ಕೃತಂ । ಕುರುತಂ ॥

॥ ಪ್ರತಿಪದಾರ್ಥ ॥

**ವರುಣಾ**—ಎಲೈ ಮಿತ್ರಾವರುಣರೇ । **ಯುವಂ**—ನೀವು । **ಯೇಷು**—ಯಾವ ನಮ್ಮ ಅದೇ ಸ್ತುತಿಗಳ ಪ್ರತಿಫಲವಾಗಿ । **ಕ್ಷತ್ರಂ**—ಬಲವನ್ನೂ । **ಬೃಹತ್**—ಪ್ರಭೂತವಾದ ಅನ್ನವನ್ನೂ । **ನಃ**—ನಮಗೆ (ಕೊಡಲು) **ಬಿಭೃಥಃ**—ಧರಿಸಿರಿ । **ನಃ**—ನಮಗೆ । **ವಾಜಸಾತಯೇ**—ಅನ್ನಲಾಭಕ್ಕೂ । **ರಾಯೇ**—ಸಂಪದ್ವೃದ್ಧಿಗೂ । **ಸ್ವಸ್ತಯೇ**—ಕಲ್ಯಾಣಲಾಭಕ್ಕೂ । **ಉರು**—ಅಧಿಕವಾಗಿ । **ಕೃತಂ**—ಅನುಗ್ರಹವನ್ನು ಮಾಡಿರಿ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ನೀವು ನಮ್ಮ ಸ್ತುತಿಗಳ ಪ್ರತಿಫಲವಾಗಿ ನಮಗೆ ಕೊಡಲು ಬಲವನ್ನೂ ಪ್ರಭೂತವಾದ ಅನ್ನವನ್ನೂ ಧರಿಸಿರಿ. ನಮಗೆ ಅನ್ನಲಾಭಕ್ಕೂ, ಸಂಪದ್ವೃದ್ಧಿಗೂ ಮತ್ತು ಕಲ್ಯಾಣಲಾಭಕ್ಕೂ ನಮಗೆ ಅಧಿಕವಾದ ಅನುಗ್ರಹವನ್ನು ಮಾಡಿರಿ.

English Translation.

You, Mitra and Varuna, bring us strength and abundant (food) for (those praises) which (we offer): be largely bountiful to us in food, in riches, in prosperity.

॥ ಸಂಹಿತಾಪಾಠಃ ॥

ಉಚ್ಛಂತ್ಯಾಂ ಮೇ ಯಜತಾ ದೇವಕ್ಷತ್ರೇ ರುಶದ್ಗವಿ ।
ಸುತಂ ಸೋಮಂ ನ ಹಸ್ತಿಭಿರಾ ಪಡ್ಭಿರ್ಧಾವತಂ ನರಾ ಬಿಭ್ರತಾವರ್ಚನಾನಸಂ ॥ ೭ ॥

॥ ಪದಪಾಠಃ ॥

ಉಚ್ಛಂತ್ಯಾಂ । ಮೇ । ಯಜತಾ । ದೇವಽಕ್ಷತ್ರೇ । ರುಶತ್ಽಗವಿ ।

ಸುತಂ । ಸೋಮಂ । ನ । ಹಸ್ತಿಽಭಿಃ । ಆ । ಪಟ್ಽಭಿಃ । ಧಾವತಂ । ನರಾ । ಬಿಭ್ರತೌ ।

ಅರ್ಚನಾನಸಂ ॥ ೭ ॥

॥ ಸಾಯಣಭಾಷ್ಯಂ ॥

ಉಚ್ಛಂತ್ಯಾಮುಷಸಿ । ಮೇ ಸೋಮಮಿತಿ ಸಂಬಂಧಃ । ಯಜತಾ ಯಷ್ಟವ್ಯೌ ರುಶದ್ಗವಿ ರೋಚಮಾನರಶ್ಮೌ ಪ್ರಾತಃಸವನೇ ದೇವಕ್ಷತ್ರೇ । ದೇವಾನಾಂ ಕ್ಷತ್ರಂ ಬಲಂ ಯಸ್ಮಿನ್ ಯಜ್ಞೇ ತದ್ದೇವಕ್ಷತ್ರಂ । ತಸ್ಮಿನ್ಮೇ ಮದೀಯಂ ಸುತಮಭಿಷುತಂ ಸೋಮಂ ನ । ನೇತಿ ಸಂಪ್ರತ್ಯರ್ಥೇ । ಇದಾನೀಂ ಹಸ್ತಿಭಿರ್ಹಸ್ತವದ್ಭಿಃ ॥ ಹಂತೇರ್ಗತಿಕರ್ಮಣೋ ಹಸ್ತಶಬ್ದಃ ॥ ಗಮನಸಾಧನಪಾದವದ್ಭಿರಿತ್ಯರ್ಥಃ । ಪದ್ಭಿಃ ಪಾದವದ್ಭಿಶ್ಚ ಪಾದಚತುಷ್ಟಯೋಪೇತೈರಶ್ವೈರಾ ಧಾವತಂ ಆಗಚ್ಛತಂ ನರಾ ಹೇ ನೇತಾರೌ ಮಿತ್ರಾವರುಣೌ ॥

॥ ಪ್ರತಿಪದಾರ್ಥ ॥

**ಉಚ್ಛಂತ್ಯಾಂ**—ಉಷಸ್ಸಿನ ಆವಿರ್ಭಾವಕಾಲದಲ್ಲಿ । **ರುಶದ್ಗವಿ**—ಆದಿತ್ಯರಶ್ಮಿಯು ಪ್ರಕಾಶಿಸುತ್ತಿರುವಾಗ (ಪ್ರಾತಃಸವನಕಾಲದಲ್ಲಿ) । **ಯಜತಾ**—ಪೂಜಿಸಲ್ಪಡುವವರೂ । **ನರಾ**—ನೇತೃಗಳೂ । **ಅರ್ಚನಾನಸಂ**—ಅರ್ಚನಾನಸನನ್ನು । **ಬಿಭ್ರತೌ**—ಅನುಗ್ರಹದಿಂದ ಪೋಷಿಸತಕ್ಕವರೂ ಆದ ಎಲೈ ಮಿತ್ರಾವರುಣರೇ,। **ಮೇ**—ನನ್ನ (ನನ್ನಿಂದ) । **ಸುತಂ ಸೋಮಂ** – ಹಿಂಡಲ್ಪಟ್ಟ ಈ ಸೋಮವನ್ನಿಚ್ಛಿಸಿ । **ಹಸ್ತಿಭಿಃ**—ಹಸ್ತಗಳುಳ್ಳವೂ । **ಪದ್ಭಿಃ**—ಪಾದಗಳುಳ್ಳವೂ ಆದ ಅಶ್ವಗಳೊಡನೆ । **ಆ ಧಾವತಂ**—ಶೀಘ್ರವಾಗಿ ಬನ್ನಿರಿ.

॥ ಭಾವಾರ್ಥ ॥

ಉಷಸ್ಸಿನ ಆವಿರ್ಭಾವಕಾಲದಲ್ಲಿ (ಪ್ರಾತಃಕಾಲದಲ್ಲಿ) ಆದಿತ್ಯರಶ್ಮಿಯು ಪ್ರಕಾಶಿಸುತ್ತಿರುವಾಗ ಎಂದರೆ, ಪ್ರಾತಃಸವನಕಾಲದಲ್ಲಿ ದೇವಯಜನ ಪ್ರದೇಶದಲ್ಲಿ ಪೂಜಿಸಲ್ಪಡುವವರೂ, ನೇತೃಗಳೂ ಅರ್ಚನಾನಸನೆಂಬ ಋಷಿಯನ್ನು ಅನುಗ್ರಹದಿಂದ ಪೋಷಿಸತಕ್ಕವರೂ ಆದ ಎಲೈ ಮಿತ್ರಾವರುಣರೇ, ನನ್ನಿಂದ ಹಿಂಡಲ್ಪಟ್ಟ ಈ ಸೋಮವನ್ನಿಚ್ಛಿಸಿ ಹಸ್ತಗಳುಳ್ಳವೂ, ಪಾದಗಳುಳ್ಳವೂ ಆದ ಅಶ್ವಗಳೊಡನೆ ಶೀಘ್ರವಾಗಿ ಬನ್ನಿರಿ

## English Translation.

Deities who are to be worshipped at the sacrifice to the gods, at the (first) shining ray (of light) at dawn, behold my Soma libation poured out: hasten, with rapid steeds, leaders (of rites), propitious to Archananas

॥ ವಿಶೇಷವಿಷಯಗಳು ॥

**ಹಸ್ತಿಭಿಃ । ಹಸ್ತವದ್ಭಿಃ** — ಕುದುರೆಗಳಿಗೆ ಹಸ್ತಗಳೆಂದರೆ ಶರೀರದಲ್ಲಿ ಹಸ್ತಗಳಿರುವ ಭಾಗದಲ್ಲಿರುವ ಎರಡು ಎರಡು ಮುಂಗಾಲುಗಳು ಎಂದಭಿಪ್ರಾಯವು

## ಅರವತ್ತೈದನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಯಶ್ಚಿಕೇತೇತಿ ಷಡೃಚಂ ನವಮಂ ಸೂಕ್ತಂ ರಾತಹವ್ಯಸ್ಯಾತ್ರೇಯಸ್ಯಾರ್ಷಂ ಮೈತ್ರಾವರುಣಂ। ಯಶ್ಚಿಕೇತ ಷಡ್ರಾತಹವ್ಯ ಇತ್ಯನುಕ್ರಮಣಿಕಾ । ಪಂಕ್ತ್ಯಂತಂ ತ್ವಿತ್ಯುಕ್ತತ್ವಾತ್ ಪಂಕ್ತ್ಯಂತಪರಿಭಾಷಯಾನುಷ್ಟುಭಂ । ಅಂತ್ಯಾ ಪಂಕ್ತಿಃ ॥ ವಿನಿಯೋಗೋ ಲೈಂಗಿಕಃ ॥**

ಅನುವಾದವು—**ಯಶ್ಚಿಕೇತ** ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ಒಂಭತ್ತನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ರಾತಹವ್ಯ ಆತ್ರೇಯಃ ಎಂಬುವನು ಋಷಿಯು ; ಮಿತ್ರಾವರುಣರು ದೇವತೆಯು. ಈ ಸೂಕ್ತದ ಕೊನೆಯ ಋಕ್ಕು ಪಂಕ್ತಿಶ್ಛಂದಸ್ಕವು. ಉಳಿದ ಋಕ್ಕುಗಳು ಅನುಷ್ಟುಪ್ಛಂದಸ್ಕವು. ಅನುಕ್ರಮಣಿಕೆಯಲ್ಲಿ—**ಯಶ್ಚಿಕೇತ ಷಡ್ರಾತಹವ್ಯಃ** ಎಂದು ಹೇಳಿರುವುದು. ವಿನಿಯೋಗವು ಲೈಂಗಿಕವು.

### ಸೂಕ್ತ ೬೫

ಮಂಡಲ—೫ ॥ ಅನುವಾಕ—೫ ॥ ಸೂಕ್ತ—೬೫ ॥
ಅಷ್ಟಕ—೪ ॥ ಅಧ್ಯಾಯ—೪ ॥ ವರ್ಗ—೩ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
॥ ಋಷಿಃ—ರಾತಹವ್ಯ ಆತ್ರೇಯಃ ॥
॥ ದೇವತಾ—ಮಿತ್ರಾವರುಣೌ ॥
॥ ಛಂದಃ—೧-೫, ಅನುಷ್ಟುಪ್ । ೬. ಪಂಕ್ತಿಃ ॥

॥ ಸಂಹಿತಾಪಾಠಃ ॥

**ಯಶ್ಚಿಕೇತ ಸ ಸುಕ್ರತುರ್ದೇವತ್ರಾ ಸ ಬ್ರವೀತು ನಃ ।**
**ವರುಣೋ ಯಸ್ಯ ದರ್ಶತೋ ಮಿತ್ರೋ ವಾ ವನತೇ ಗಿರಃ ॥ ೧ ॥**

॥ ಪದಪಾಠಃ ॥

**ಯಃ । ಚಿಕೇತ । ಸಃ । ಸುಽಕ್ರತುಃ । ದೇವಽತ್ರಾ । ಸಃ । ಬ್ರವೀತು । ನಃ ।**
**ವರುಣಃ । ಯಸ್ಯ । ದರ್ಶತಃ । ಮಿತ್ರಃ । ವಾ । ವನತೇ । ಗಿರಃ ॥ ೧ ॥**

॥ ಸಾಯಣಭಾಷ್ಯಂ ॥

**ಯಃ ಸ್ತೋತಾ ಚಿಕೇತ ಜಾನಾತಿ ಸ್ತುತಿಂ ಯುವಯೋಃ ಸ ಸುಕ್ರತುಃ ಸ ಏವ ಶೋಭನಕರ್ಮಾ ದೇವತ್ರಾ ದೇವೇಷು ಸ್ತೋತೃಮಧ್ಯೇ । ಯದ್ವಾ । ದೇವೇಷು ಮಧ್ಯೇ । ಯುವಯೋರೇವ ಸ್ತುತಿಂ ಯಶ್ಚಿಕೇತ ಸ ಸುಕ್ರತುರಿತಿ । ಸ ಸುಕರ್ಮಾ ನೋಽಸ್ಮಾಕಂ ಬ್ರವೀತು । ಸ್ತುತಿಂ ಪರಮುಪದಿಶತು । ಯಸ್ಯ ದರ್ಶತೋ ದರ್ಶನೀಯೋ ವರುಣೋ ದರ್ಶನೀಯೋ ಮಿತ್ರೋ ವಾ ಮಿತ್ರಶ್ಚ । ವಾಶಬ್ದಶ್ಚಾರ್ಥೇ । ಗಿರೋಽಸ್ಮದೀಯಾಃ ಸ್ತುತೀರ್ವನತೇ ಸಂಭಜತೇ ॥**

॥ ಪ್ರತಿಪದಾರ್ಥ ॥

**ಯಃ**—ಯಾವ ಸ್ತುತಿಕರ್ತನು । **ದೇವತ್ರಾ**—ದೇವತೆಗಳ ನಡುವೆ ಸ್ಥಿರವಾಗಿರುವ । **ಚಿಕೇತ**—(ಮಿತ್ರಾವರುಣರ ಪೂಜಾಕ್ರಮವನ್ನು) ಅರಿತಿರುವನೋ। **ಸಃ**-ಅವನು । **ಸುಕ್ರತುಃ**-ಶ್ರೇಷ್ಠವಾದ ಕರ್ಮಕಾರಿಯು । **ಯಸ್ಯ**—ಯಾವ ಸ್ತುತಿಕರ್ತನ । **ಗಿರಃ**—ಸ್ತುತಿಗಳನ್ನು । **ದರ್ಶತಃ**—ದರ್ಶನೀಯರೂಪನಾದ । **ವರುಣಃ**—ವರುಣನೂ । **ವಾ**—ಮತ್ತು । **ಮಿತ್ರಃ**—ಮಿತ್ರನೂ । **ವನತೇ**—ಸ್ವೀಕರಿಸುವರೋ । **ಸಃ**—ಅಂತಹ ಸತ್ಕರ್ಮಕಾರಿಯು । **ನಃ**—ನಮಗೂ । **ಬ್ರವೀತು**—ಆ ಉತ್ತಮಮಾರ್ಗವನ್ನು ಪದೇಶಿಸಲಿ ।

॥ ಭಾವಾರ್ಥ ॥

ಯಾವ ಸ್ತುತಿಕರ್ತನು ದೇವತೆಗಳ ನಡುವೆ ಸ್ಥಿತರಾಗಿರುವ ಮಿತ್ರಾವರುಣರ ಪೂಜಾಕ್ರಮವನ್ನರಿತಿರುವನೋ, ಅವನೇ ಶ್ರೇಷ್ಠವಾದ ಕರ್ಮಕಾರಿಯು. ಯಾವ ಸ್ತುತಿಕರ್ತನ ಸ್ತುತಿಗಳನ್ನು ದರ್ಶನೀಯರೂಪನಾದ ವರುಣನೂ ಮತ್ತು ಮಿತ್ರನೂ ಸ್ವೀಕರಿಸುವರೋ, ಅಂತಹ ಸತ್ಕರ್ಮಕಾರಿಯು ನಮಗೂ ಆ ಉತ್ತಮಮಾರ್ಗವನ್ನು ಪದೇಶಿಸಲಿ.

## English Translation.

He who knows (how to honour you two), amongst the gods, is the performer of good works: let him communicate (that knowledge) to us, he of whom the graceful Varuna or Mitra accepts the laudation.

॥ ಸಂಹಿತಾಪಾಠಃ ॥

ತಾ ಹಿ ಶ್ರೇಷ್ಠವರ್ಚಸಾ ರಾಜಾನಾ ದೀರ್ಘಶ್ರುತ್ತಮಾ ।
ತಾ ಸತ್ಪತೀ ಋತಾವೃಧ ಋತಾವಾನಾ ಜನೇಜನೇ ॥ ೨ ॥

॥ ಪದಪಾಠಃ ॥

ತಾ । ಹಿ । ಶ್ರೇಷ್ಠऽವರ್ಚಸಾ । ರಾಜಾನಾ । ದೀರ್ಘಶ್ರುತ್ऽತಮಾ ।

ತಾ । ಸತ್ಪತೀ ಇತಿ ಸತ್ऽಪತೀ । ಋತಽವೃಧಾ । ಋತಽವಾನಾ । ಜನೇऽಜನೇ ॥ ೨ ॥

॥ ಸಾಯಣಭಾಷ್ಯಂ ॥

ತಾ ಹಿ ತೌ ಖಲು ಮಿತ್ರಾವರುಣೌ ಶ್ರೇಷ್ಠವರ್ಚಸಾ ಪ್ರಶಸ್ತತೇಜಸ್ಕೌ ರಾಜಾನೇಶ್ವರೌ ದೀರ್ಘಶ್ರುತ್ತಮಾ ದೂರದೇಶಾದಾಹ್ವಾನಶ್ರೋತೃತಮೌ । ತಾ ತೌ ಸತ್ಪತೀ ಸತಾಂ ಯಜಮಾನಾನಾಂ ಸ್ವಾಮಿನಾವೃತಾವೃಧಾ ಯಜ್ಞಸ್ಯೋದಕಸ್ಯ ವಾ ವರ್ಧಯಿತಾರೌ ಜನೇ ಜನೇ ಸರ್ವೇಷು ಸ್ತೋತೃಷು ನಿಮಿತ್ತೇಷ್ವೃತಾವಾನಾ ಗಮನವಂತೌ ॥

॥ ಪ್ರತಿಪದಾರ್ಥ ॥

**ಶ್ರೇಷ್ಠವರ್ಚಸಾ**—ಅತ್ಯುತ್ತಮವಾದ ತೇಜಸ್ಸುಳ್ಳವರೂ । **ರಾಜಾನಾ**—ಪ್ರಭುಗಳೂ । **ದೀರ್ಘಶ್ರುತ್ತಮಾ**—ದೂರದೇಶದಿಂದಲೇ ಆಹ್ವಾನವನ್ನು ಕೇಳಲು ಸಮರ್ಥರೂ । **ತಾ**—ಪ್ರಸಿದ್ಧರೂ । **ಸತ್ಪತೀ**—ಯಜಮಾನರ ಪಾಲಕರೂ । **ಋತಾವೃಧಾ**—ಯಜ್ಞವೃದ್ಧಿಗೆ ಕಾರಣರೂ ಆದ । **ತಾ ಹ**— ಅದೇ ಮಿತ್ರಾವರುಣರು । **ಜನೇ ಜನೇ**—ಪ್ರತಿಯೊಂದು ಮಾನವವ್ಯಕ್ತಿಯ ಹಿತಕ್ಕಾಗಿಯೂ । **ಋತಾವಾನಾ**—ಸಂಚರಿಸುವವರಾಗಿದ್ದಾರೆ

॥ ಭಾವಾರ್ಥ ॥

ಅತ್ಯುತ್ತಮವಾದ ತೇಜಸ್ಸುಳ್ಳವರೂ, ಪ್ರಭುಗಳೂ, ದೂರದೇಶದಿಂದಲೇ ಆಹ್ವಾನವನ್ನು ಕೇಳಲು ಸಮರ್ಥರೂ ಪ್ರಸಿದ್ಧರಾದ ಯಜಮಾನರ ಪಾಲಕರೂ, ಯಜ್ಞವೃದ್ಧಿಗೆ ಕಾರಣರೂ ಆದ ಅದೇ ಮಿತ್ರಾವರುಣರು ಪ್ರತಿಯೊಂದು ಮಾನವವ್ಯಕ್ತಿಯ ಹಿತಕ್ಕಾಗಿಯೂ ಸಂಚರಿಸುವವರಾಗಿದ್ದಾರೆ.

## English Translation.

They two, verily excelling in radiance, royal (deities), who hear (invocations) from the greatest distance, lords of the virtuous, favourers of the sacrifice, are in movement (for the good of) each individual man.

॥ ಸಂಹಿತಾಪಾಠಃ ॥

ತಾ ವಾಮಿಯಾನೋऽವಸೇ ಪೂರ್ವಾ ಉಪ ಬ್ರುವೇ ಸಚಾ ।

ಸ್ವಶ್ವಾಸಃ ಸು ಚೇತುನಾ ವಾಜಾँ ಅಭಿ ಪ್ರ ದಾವನೇ ॥ ೩ ॥

॥ ಪದಪಾಠಃ ॥

ತಾ । ವಾಂ । ಇಯಾನಃ । ಅವಸೇ । ಪೂರ್ವಾ । ಉಪ । ಬ್ರುವೇ । ಸಚಾ ।
ಸುಽಅಶ್ವಾಸಃ । ಸು । ಚೇತುನಾ । ವಾಜಾನ್ । ಅಭಿ । ಪ್ರ । ದಾವನೇ ॥ ೩ ॥

॥ ಸಾಯಣಭಾಷ್ಯಂ ॥

ತಾ ತೌ ಪೂರ್ವಾ ಪುರಾತನೌ ವಾಂ ಯುವಾಮಿಯಾನೋ ಗಚ್ಛನ್ ಅವಸೇ ರಕ್ಷಣಾಯ ಸಚಾ ಸಹೋಪ ಬ್ರುವೇ । ಉಪೇತ್ಯ ಸ್ತೌಮಿ । ಸ್ವಶ್ವಾಸಃ ಸ್ವಶ್ವಾ ವಯಮಾತ್ರೇಯಾಃ ಸುಚೇತುನಾ ಶೋಭನಪ್ರಜ್ಞಾನೌ ಯುವಾಂ ವಾಜಾನಭಿ ಅನ್ನಾನ್ಯಭಿಲಕ್ಷ್ಯ ಪ್ರ ಪ್ರಕರ್ಷೇಣ ದಾವನೇ ದಾನಾಯ ಸ್ತುವ ಇತಿ ಶೇಷಃ । ಯದ್ವಾ । ಸ್ವಶ್ವಾಸಃ ಸಶ್ವೌ ॥ ದ್ವಿತೀಯಾದ್ವಿವಚನಸ್ಯ ಜಸಾದೇಶಃ ॥ ಉಪ ಬ್ರುವ ಇತಿ ಸಂಬಂಧಃ ॥

॥ ಪ್ರತಿಪದಾರ್ಥ ॥

**ತಾ**—ಪ್ರಸಿದ್ಧರೂ । **ಪೂರ್ವಾ**—ಪುರಾತನರೂ ಆದ । **ವಾಂ**—ನಿಮ್ಮಿಬ್ಬರನ್ನೂ । **ಅವಸೇ**—ರಕ್ಷಣಾರ್ಥವಾಗಿ । **ಇಯಾನಃ**—ಸಮೀಪಿಸಿ । **ಸಚಾ**—ಇಬ್ಬರನ್ನೂ ಒಟ್ಟಿಗೆ । **ಉಪ ಬ್ರುವೇ**—ಸ್ತುತಿಸುತ್ತೇನೆ । **ಸ್ವಶ್ವಾಸಃ**—ಉತ್ತಮವಾದ ಅಶ್ವವುಳ್ಳವರೂ । **ಸುಚೇತುನಾ**—ಶ್ರೇಷ್ಠವಾದ ಪ್ರಜ್ಞೆಯುಳ್ಳವರೂ ಆದ ನಿಮ್ಮನ್ನು । **ವಾಜಾನಭಿ**—ಅನ್ನವನ್ನಿಚ್ಛಿಸಿ । **ದಾವನೇ**--ಆ ಅನ್ನದಾನಾರ್ಥವಾಗಿ । **ಪ್ರ**—ಅತಿಶಯವಾಗಿ ಸ್ತುತಿಸುತ್ತೇನೆ

ಭಾವಾರ್ಥ ॥

ಎಲೈ ಮಿತ್ರಾವರುಣರೇ, ಪ್ರಸಿದ್ಧರೂ, ಪುರಾತನರೂ ಆದ ನಿಮ್ಮಿಬ್ಬರನ್ನೂ ರಕ್ಷಣಾರ್ಥವಾಗಿ ಸಮೀಪಿಸಿ ಇಬ್ಬರನ್ನೂ ಒಟ್ಟಿಗೆ ಸ್ತುತಿಸುತ್ತೇನೆ. ಉತ್ತಮವಾದ ಅಶ್ವವುಳ್ಳವರೂ, ಶ್ರೇಷ್ಠವಾದ ಪ್ರಜ್ಞೆಯುಳ್ಳವರೂ ಆದ ನಿಮ್ಮನ್ನು ಅನ್ನಾರ್ಥವಾಗಿ ಅತಿಶಯವಾದ ಸ್ತುತಿಯಿಂದ ಪ್ರಶಂಸಿಸುತ್ತೇನೆ.

## Enlish Translation.

Approaching you, ancient (divinities), I invoke you together for protection : possessed of good steeds, (we praise you) who are provident to give us food.

॥ ಸಂಹಿತಾಪಾಠಃ ॥

ಮಿತ್ರೋ ಅಂಹೋಶ್ಚಿದಾದುರು ಕ್ಷಯಾಯ ಗಾತುಂ ವನತೇ ।
ಮಿತ್ರಸ್ಯ ಹಿ ಪ್ರತೂರ್ವತಃ ಸುಮತಿರಸ್ತಿ ವಿಧತಃ ॥ ೪ ॥

॥ ಪದಪಾಠಃ ॥

ಮಿತ್ರಃ । ಅಂಹೋಃ । ಚಿತ್ । ಆತ್ । ಉರು । ಕ್ಷಯಾಯ । ಗಾತುಂ । ವನತೇ ।
ಮಿತ್ರಸ್ಯ । ಹಿ । ಪ್ರಽತೂರ್ವತಃ । ಸುಽಮತಿಃ । ಅಸ್ತಿ । ವಿಧತಃ ॥ ೪ ॥

॥ ಸಾಯಣಭಾಷ್ಯಂ ॥

ಮಿತ್ರೋ ದೇವೋಽಂಹೋಶ್ಚಿತ್ ಅಂಹಸ್ವತೋಽಪಿ ಸ್ತೋತುರಾದನಂತರಮೇವೋರೂರವೇ ಕ್ಷಯಾಯ ಗೃಹಾಯ ನಿವಾಸಾಯ ವಾ ಗಾತುಮುಪಾಯಂ ವನತೇ । ಪ್ರಯಚ್ಛತಿ । ಮಿತ್ರಸ್ಯ ಹಿ ಮಿತ್ರಸ್ಯ ಖಲು ದೇವಸ್ಯ ಸುಮತಿಃ ಶೋಭನಬುದ್ಧಿಃ ಪ್ರತೂರ್ವತಃ ಪ್ರಕರ್ಷೇಣ ಹಿಂಸತೋಽಪಿ ವಿಧತಃ ಪರಿಚರತಃ ಶುಶ್ರೂಷಕಸ್ಯಾಸ್ತಿ ಹಿ । ಭವತಿ ಖಲು ॥

॥ ಪ್ರತಿಪದಾರ್ಥ ॥

**ಅಂಹೋಶ್ಚಿತ್**—ಪಾಪಿಷ್ಠನಾದ ಮಾನವವ್ಯಕ್ತಿಯಾಗಿದ್ದರೂ ಸಹ । **ಆತ್**—ಅವನು ಸ್ತುತಿಯನ್ನು ಪಠಿಸಿದೊಡನೆಯೇ । **ಮಿತ್ರಃ**—ಮಿತ್ರನು । **ಉರು**—ವಿಸ್ತೃತವಾದ । **ಕ್ಷಯಾಯ**—ಗೃಹಕ್ಕೆ । **ಗಾತುಂ**—ನಿರ್ಮಾಣಸಾಧನವನ್ನು (ಪ್ರವೇಶಮಾರ್ಗವನ್ನು) । **ವನತೇ**—ಉಂಟುಮಾಡಿಕೊಡುತ್ತಾನೆ । **ಪ್ರತೂರ್ವತಃ**—ಶತ್ರುಗಳನ್ನು ಹಿಂಸಿಸತಕ್ಕ । **ಮಿತ್ರಸ್ಯ**—ಮಿತ್ರನ । **ಸುಮತಿಃ**—ಅನುಗ್ರಹಬುದ್ಧಿಯು । **ವಿಧತಃ**—ಪೂಜೆಯನ್ನರ್ಪಿಸುವವನ ಮೇಲೆ । **ಅಸ್ತಿ ಹಿ**—ಇದ್ದೇ ಇರುತ್ತದೆ.

॥ ಭಾವಾರ್ಥ ॥

ಪಾಪಿಷ್ಠನಾದ ಮಾನವವ್ಯಕ್ತಿಯಾಗಿದ್ದರೂ ಸಹ ಅವನು ಸ್ತುತಿಯನ್ನು ಪಠಿಸಿದೊಡನೆಯೇ. ಮಿತ್ರನು ವಿಸ್ತೃತವಾದ ಗೃಹಕ್ಕೆ ಪ್ರವೇಶಮಾರ್ಗವನ್ನು ಅವನಿಗೆ ಕಲ್ಪಿಸಿಕೊಡುತ್ತಾನೆ. ಶತ್ರುಗಳನ್ನು ಹಿಂಸಿಸತಕ್ಕ ಮಿತ್ರನ ಅನುಗ್ರಹಬುದ್ಧಿಯು ಪೂಜೆಯನ್ನರ್ಪಿಸುವವನಮೇಲೆ ಇದ್ದೇ ಇರುತ್ತದೆ.

## English Translation.

Mitra grants even to the sinful (worshipper) the (means of) repairing to his spacious dwelling: the favour of Mitra, the destroyer of foes, is (granted) to (his) adorer.

॥ ಸಂಹಿತಾಪಾಠಃ ॥

ವಯಂ ಮಿತ್ರಸ್ಯಾವಸಿ ಸ್ಯಾಮ ಸಪ್ರಥಸ್ತಮೇ ।
ಅನೇಹಸಸ್ತ್ವೋತಯಃ ಸತ್ರಾ ವರುಣಶೇಷಸಃ ॥ ೫ ॥

॥ ಪದಪಾಠಃ ॥

ವಯಂ । ಮಿತ್ರಸ್ಯ । ಅವಸಿ । ಸ್ಯಾಮ । ಸಪ್ರಥಃऽತಮೇ ।

ಅನೇಹಸಃ । ತ್ವಾऽಊತಯಃ । ಸತ್ರಾ । ವರುಣऽಶೇಷಸಃ ॥ ೫ ॥

॥ ಸಾಯಣಭಾಷ್ಯಂ ॥

ವಯಂ ಯಜಮಾನಾ ಮಿತ್ರಸ್ಯ ದುಃಖನಿವಾರಕಸ್ಯ ದೇವಸ್ಯ ಸಪ್ರಥಸ್ತಮೇ ಸರ್ವತಃ ಪೃಥುತಮೇऽವಸಿ ರಕ್ಷಣೇ ವಯಂ ಸ್ಯಾಮ । ಭವೇಮ । ಕಿಂಚಾನೇಹಸೋऽಪಾಪಾಃ ತ್ವೋತಯಸ್ತ್ವಯಾ ರಕ್ಷಿತಾ ವರುಣಶೇಷಸಃ । ಶೇಷ ಇತ್ಯಪತ್ಯನಾಮ । ವಾರಕಾಃ ಪುತ್ರಾ ಯೇಷಾಂ ತೇ । ತಾದೃಶಾಃ ಸತ್ರಾ ವಯಂ ಸರ್ವೇ ಸಹೈವ ಭವೇಮ ॥

॥ ಪ್ರತಿಪದಾರ್ಥ ॥

**ಮಿತ್ರ**-(ಎಲೈ ಮಿತ್ರನೇ) **ವಯಂ**—ನಾವು । **ಅನೇಹಸಃ**—ಪಾಪರಹಿತರಾಗಿಯೂ । **ತ್ವೋತಯಃ**—ನಿನ್ನ ರಕ್ಷಣೆಗೊಳಪಟ್ಟವರಾಗಿಯೂ । **ವರುಣಶೇಷಸಃ**—ವರುಣನಿಗೆ ಸೇರಿದ ಸತ್ಪ್ರಜೆಗಳಾಗಿಯೂ (ಅಥವಾ ರಕ್ಷಿಸುವ ಪುತ್ರರುಳ್ಳವರಾಗಿಯೂ) । **ಮಿತ್ರಸ್ಯ**— ಮಿತ್ರನ । **ಸಪ್ರಥಸ್ತಮೇ**—ಅತಿಪ್ರಭೂತವಾದ । **ಅವಸಿ**—ರಕ್ಷಣೆಯಲ್ಲಿ । **ಸ್ಯಾಮ**—ಇರುವಂತಾಗಲಿ

॥ ಭಾವಾರ್ಥ ॥

ಎಲೈ ಮಿತ್ರನೇ, ನಾವು ಪಾಪರಹಿತರಾಗಿಯೂ, ನಿನ್ನ ರಕ್ಷಣೆಗೊಳಪಟ್ಟವರಾಗಿಯೂ, ವರುಣನಿಗೆ ಸೇರಿದ ಸತ್ಪ್ರಜೆಗಳಾಗಿಯೂ, ಇದ್ದು ಮಿತ್ರನ ಅತಿಪ್ರಭೂತವಾದ ರಕ್ಷಣೆಯನ್ನು ಪಡೆಯುವಂತಾಗಲಿ.

English Translation.

May we ever be in the comprehensive guardianship of Mitra, and free from sin, enjoy, (Mitra), your protection, being at the same time the children of Varuna.

॥ ಸಂಹಿತಾಪಾಠಃ ॥

ಯುವಂ ಮಿತ್ರೇಮಂ ಜನಂ ಯತಥಃ ಸಂ ಚ ನಯಥಃ ।

ಮಾ ಮಘೋನಃ ಪರಿ ಖ್ಯತಂ ಮೋ ಅಸ್ಮಾಕಮೃಷೀಣಾಂ ಗೋಪೀಥೇ ನ ಉರುಷ್ಯತಂ ॥ ೬ ॥

॥ ಪದಪಾಠಃ ॥

ಯುವಂ । ಮಿತ್ರಾ । ಇಮಂ । ಜನಂ । ಯತಥಃ । ಸಂ । ಚ । ನಯಥಃ ।

ಮಾ । ಮಘೋನಃ । ಪರಿ । ಖ್ಯತಂ । ಮೋ ಇತಿ । ಅಸ್ಮಾಕಂ । ಋಷೀಣಾಂ । ಗೋಽಪೀಥೇ । ನಃ । ಉರುಷ್ಯತಂ ॥ ೬ ॥

॥ ಸಾಯಣಭಾಷ್ಯಂ ॥

ಹೇ ಮಿತ್ರಾ ಮಿತ್ರಾವರುಣೌ ಯುವಂ ಯುವಾಮಿಮಂ ಜನಂ ಸ್ತೋತಾರಂ ಮಾಂ ಪ್ರತಿ ಯತಥಃ । ಗಚ್ಛಥಃ । ಆಗತ್ಯ ಚ ಸಂ ಚ ನಯಥಃ । ಸಂನಯಥಶ್ಚ । ಕಾಮಾನ್ ಪ್ರಾಪಯಥಃ । ಯದ್ವಾ । ಯತತ ಇತ್ಯಂತರ್ಣೀತಣ್ಯರ್ಥೋಽಯಂ । ಅಹನಿ ಯತಥಃ । ವ್ಯಾಪಾರೇಷು ಗಮಯಥಃ । ರಾತ್ರೌ ಚ ಸಂ ನಯಥಃ । ನಿರ್ವ್ಯಾಪಾರಂ ಕಾರಯಥಃ । ಮಘೋನೋ ಹವಿರ್ಲಕ್ಷಣಾನ್ನವತೋಽಸ್ಮಾನ್ಮಾ ಪರಿ ಖ್ಯತಂ । ಮಾ ಪರಿತ್ಯಜತಂ । ಮೋ ಮೈವ ಋಷೀಣಾಮಸ್ಮಾಕಂ ಪುತ್ರಾನಪಿ ಪರಿ ಖ್ಯತಂ । ಕಿಂತು ಗೋಪೀಥೇ । ಗೌಃ ಸೋಮರಸಃ । ತಸ್ಯ ಪಾನಂ ಯಸ್ಮಿನ್ ಸ ಗೋಪೀಥೋ ಯಜ್ಞಃ । ತಸ್ಮಿನ್ನ ಉರುಷ್ಯತಂ । ರಕ್ಷತಂ ॥

॥ ಪ್ರತಿಪದಾರ್ಥ ॥

**ಮಿತ್ರಾ**—ಎಲೈ ಮಿತ್ರಾವರುಣರೇ । **ಯುವಂ**—ನೀವು । **ಇಮಂ ಜನಂ**—ಈ ಸ್ತೋತೃವನ್ನು ಲಕ್ಷಿಸಿ । **ಯತಥಃ**—ಬನ್ನಿರಿ । **ಸಂ ಚ ನಯಥಃ**—ಅವನ ಇಷ್ಟಾರ್ಥವನ್ನು ಒದಗಿಸಿ ಕೊಡಿರಿ । **ಮಘೋನಃ**—ಹವಿಸ್ಸಿನ ರೂಪದ ಅನ್ನವನ್ನು ಹೊಂದಿರುವ ನಮ್ಮನ್ನು । **ಮಾ ಪರಿ ಖ್ಯತಂ**—ಪರಿತ್ಯಜಿಸಬೇಡಿರಿ । **ಋಷೀಣಾಂ**—ಋಷಿಗಳಾದ । **ಅಸ್ಮಾಕಂ**—ನಮಗೆ । **ಮೋ**—(ಪುತ್ರಾದಿಗಳನ್ನು) ತಿರಸ್ಕರಿಸಬೇಡಿರಿ। **ಗೋಪೀಥೇ**—ಸೋಮಪಾನವನ್ನು ಮಾಡುವ ಈ ಯಜ್ಞದಲ್ಲಿ । **ನಃ**—ನಮ್ಮನ್ನು । **ಉರುಷ್ಯತಂ**—ರಕ್ಷಿಸಿರಿ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ನೀವು ಈ ಸ್ತೋತೃವಿನ ಅಭಿಮುಖವಾಗಿ ಬನ್ನಿರಿ. ಅವನ ಇಷ್ಟಾರ್ಥವನ್ನು ಒದಗಿಸಿ ಕೊಡಿರಿ. ಹವಿಸ್ಸಿನ ರೂಪದ ಅನ್ನವನ್ನು ಹೊಂದಿರುವ ನಮ್ಮನ್ನು ಪರಿತ್ಯಜಿಸಬೇಡಿರಿ. ಋಷಿಗಳಾದ ನಮಗೆ ಪುತ್ರಾದಿಗಳನ್ನು ತಿರಸ್ಕರಿಸಬೇಡಿರಿ. ಸೋಮಪಾನವನ್ನು ಮಾಡುವ ಈ ಯಜ್ಞದಲ್ಲಿ ನಮ್ಮನ್ನು ರಕ್ಷಿಸಿರಿ.

## English Translation.

You come Mitra and Varuna, to this man, and guide him (to his desires): deny us not when we are rich (in offerings): (deny us not), who are (the sons) of Rishis : protect us in the presenting of the libation.

# ಅರವತ್ತಾರನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಆ ಚಿಕಿತಾನೇತಿ ಷಡೃಚಂ ದಶಮಂ ಸೂಕ್ತಂ ರಾತಹವ್ಯಸ್ಯಾರ್ಷಮಾನುಷ್ಟುಭಂ ಮೈತ್ರಾವರುಣಂ। ಅತ್ರಾನುಕ್ರಮಣಿಕಾ । ಆ ಚಿಕಿತಾನಾನುಷ್ಟುಭಂ ತ್ವಿತಿ ॥ ಆದ್ಯಸ್ತ್ಯೃಚೋ ದಶರಾತ್ರೇ ಚತುರ್ಥೇಽಹನಿ ಪ್ರಉಗಶಸ್ತ್ರೇ ಮೈತ್ರಾವರುಣಸ್ಯ । ಸೂತ್ರಿತಂ ಚ । ಆ ಚಿಕಿತಾನ ಸುಕ್ರತೂ ತ್ಯಮು ವೋ ಅಪ್ರಹಣಂ । ಆ. ೭-೧೧ । ಇತಿ ॥**

ಅನುವಾದವು— **ಆ ಚಿಕಿತಾನ** ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ಹತ್ತನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವುವು. ಈ ಸೂಕ್ತಕ್ಕೆ **ರಾತಹವ್ಯ ಆತ್ರೇಯಃ** ಎಂಬುವನು ಋಷಿಯು; ಮಿತ್ರಾವರುಣರು ದೇವತೆಯು; ಅನುಷ್ಟುಪ್‌ಛಂದಸ್ಸು. ಅನುಕ್ರಮಣಿಕೆಯಲ್ಲಿ— **ಆ ಚಿಕಿತಾನಾನುಷ್ಟುಭಂ ತು** ಎಂದು ಹೇಳಿರುವುದು. ಈ ಸೂಕ್ತದ ಮೊದಲನೆಯ ತೃಚವು ಎಂದರೆ ಮೊದಲಿನ ಮೂರು ಋಕ್ಕುಗಳು ದಶರಾತ್ರವೆಂಬ ಯಾಗದ ನಾಲ್ಕನೆಯ ದಿವಸ ಮೈತ್ರಾವರುಣನೆಂಬ ಋತ್ವಿಜನು ಪಠಿಸುವ ಪ್ರಉಗಶಸ್ತ್ರ ಮಂತ್ರಗಳಿಗಾಗಿ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ— **ಆ ಚಿಕಿತಾನಾ ಸುಕ್ರತೂ ತ್ಯಮು ವೋ ಅಪ್ರಹಣಂ** ಎಂಬ ಸೂತ್ರದಿಂದ ವಿವೃತವಾಗಿರುವುದು (ಆ. ೭-೧೧)

## ಸೂಕ್ತ—೬೬

ಮಂಡಲ—೫ ॥ ಅನುವಾಕ—೫ ॥ ಸೂಕ್ತ—೬೬ ॥
ಅಷ್ಟಕ—೪ ॥ ಅಧ್ಯಾಯ—೪ ॥ ವರ್ಗ—೪ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
॥ ಋಷಿಃ— ರಾತಹವ್ಯ ಆತ್ರೇಯಃ ॥
॥ ದೇವತಾ —ಮಿತ್ರಾವರುಣೌ ॥
॥ ಛಂದಃ—ಅನುಷ್ಟುಪ್ ॥

॥ ಸಂಹಿತಾಪಾಠಃ ॥

ಆ ಚಿಕಿತಾನ ಸುಕ್ರತೂ ದೇವೌ ಮರ್ತ ರಿಶಾದಸಾ ।
ವರುಣಾಯ ಋತಪೇಶಸೇ ದಧೀತ ಪ್ರಯಸೇ ಮಹೇ ॥ ೧ ॥

॥ ಪದಪಾಠಃ ॥

ಆ । ಚಿಕಿತಾನ । ಸುಕ್ರತೂ ಇತಿ ಸುಽಕ್ರತೂ । ದೇವೌ । ಮರ್ತ । ರಿಶಾದಸಾ ।
ವರುಣಾಯ । ಋತಽಪೇಶಸೇ । ದಧೀತ । ಪ್ರಯಸೇ । ಮಹೇ ॥ ೧ ॥

॥ ಸಾಯಣಭಾಷ್ಯಂ ॥

ಹೇ ಚಿಕಿತಾನ ಜಾನನ್ ಸ್ತುತಿಂ ಹೇ ಮರ್ತ ಮನುಷ್ಯ ರಾತಹವ್ಯ ಶ್ವಮಿತಿ ತಸ್ಯೈವ ಸಂಬೋಧನಂ । ಸುಕ್ರತೂ ಶೋಭನಕರ್ಮಾಣೌ ರಿಶಾದಸಾ ಹಿಂಸಕಾನಾಂ ಹಿಂಸಕೌ ದೇವಾವಾ । ಆಕಾರಯೇತಿ ಶೇಷಃ । ಅಹೂಯು ಚ ಋತಪೇಶಸೇ । ಪೇಶ ಇತಿ ರೂಪನಾಮ । ಋತಮುದಕಂ । ಉದಕಮೇವ ರೂಪಂ ಯಸ್ಯ ತಾದೃಶಾಯ ವರುಣಾಯ ಪ್ರಯಸೇ ॥ ಮತ್ವರ್ಥೋ ಲುಪ್ಯತೇ ॥ ಹವಿರ್ಲಕ್ಷಣಾನ್ನವತೇ ಮಹೇ ಮಹತೇ ಪೂಜ್ಯಾಯ ದಧೀತ । ದದ್ಯಾಃ । ಹವಿರಿತಿ ಶೇಷಃ । ದ್ವಿತೀಯಾರ್ಥೇ ವಾ ಚತುರ್ಥೀ । ಮಹದ್ಧವಿರ್ದಧೀತ । ಮಹತೋಽನ್ನಸ್ಯ ಲಾಭಾಯೇತಿ ವಾ ಯೋಜ್ಯಂ ॥

॥ ಪ್ರತಿಪದಾರ್ಥ ॥

**ಚಿಕಿತಾನ**—ಪೂಜಾಕ್ರಮವನ್ನು ತಿಳಿದಿರುವ । **ಮರ್ತ**—(ಸ್ತುತಿಕರ್ತನಾದ) ಎಲೈ ಮಾನವನೇ । **ಸುಕ್ರತೂ** - ಉತ್ತಮವಾದ ಕರ್ಮಕರ್ತರೂ । **ರಿಶಾದಸಾ** -ಶತ್ರುಹಿಂಸಕರೂ ಆದ । **ದೇವೌ**—ಮಿತ್ರಾವರುಣರನ್ನು । **ಆ**—ಆಹ್ವಾನಿಸು । **ಋತಪೇಶಸೇ**—ಉದಕವೇ ಸ್ವರೂಪವಾಗಿ ಉಳ್ಳವನೂ । **ಪ್ರಯಸೇ**—ಅನ್ನಭಾಗಿಯೂ । **ಮಹೇ**—ಪೂಜ್ಯನೂ ಆದ । **ವರುಣಾಯ**—ವರುಣನನ್ನುದ್ದೇಶಿಸಿ । **ದಧೀತ**—ಹವಿಸ್ಸನ್ನ ಕೊಡು.

॥ ಭಾವಾರ್ಥ ॥

ಪೂಜಾಕ್ರಮದ ಜ್ಞಾನವನ್ನು ಹೊಂದಿರುವ ಸ್ತುತಿಕರ್ತನಾದ ಎಲೈ ಮಾನವನೇ, ಉತ್ತಮವಾದ ಕರ್ಮಕರ್ತರೂ, ಶತ್ರುಹಿಂಸಕರೂ ಆದ ಮಿತ್ರಾವರುಣರನ್ನು ಆಹ್ವಾನಿಸು ಉದಕವೇ ಸ್ವರೂಪವಾಗಿ ಉಳ್ಳವನೂ, ಹವಿಸ್ಸಿನ ರೂಪದ ಅನ್ನಕ್ಕೆ ಭಾಗಿಯೂ, ಪೂಜ್ಯನೂ ಆದ ವರುಣನನ್ನುದ್ದೇಶಿಸಿ ಹವಿಸ್ಸನ್ನ ಕೊಡು.

## English Translation.

Man, endowed with intelligence, (adore) the two deities, the performers of good deeds, the destroyers of foes, offer (oblations) to the adorable accepter of (sacrificial) food, to Varuna, whose form is water.

॥ ಸಂಹಿತಾಪಾಠಃ ॥

ತಾ ಹಿ ಕ್ಷತ್ರಮವಿಹ್ರುತಂ ಸಮ್ಯಗಸುರ್ಯ೧ ಮಾಶಾತೇ ।
ಅಧ ವ್ರತೇವ ಮಾನುಷಂ ಸ್ವ೧ರ್ಣ ಧಾಯಿ ದರ್ಶತಂ ॥ ೨ ॥

॥ ಪದಪಾಠಃ ॥

ತಾ । ಹಿ । ಕ್ಷತ್ರಂ । ಅವಿಽಹ್ರುತಂ । ಸಮ್ಯಕ್ । ಅಸುರ್ಯಂ । ಆಶಾತೇ ಇತಿ ।

ಅಧ । ವ್ರತಾಽಇವ । ಮಾನುಷಂ । ಸ್ವಃ । ನ । ಧಾಯಿ । ದರ್ಶತಂ ॥ ೨ ॥

॥ ಸಾಯಣಭಾಷ್ಯಂ ॥

ತಾ ಹಿ । ಹೀತಿ ಹೇತೌ । ಯಸ್ಮಾತ್ತೌ ಕ್ಷತ್ರಂ ಬಲಮವಿಹ್ರುತಮಹಿಂಸ್ಯಮಸುರ್ಯಮಸುರವಿಘಾತಿ ಮಹದ್ಬಲಂ ಸಮ್ಯಗಾಶಾತೇ ವ್ಯಾಪ್ನುತಃ ಅಧ ಅತೋ ಹೇತೋರ್ಮಾನುಷಂ ಮನುಷ್ಯೇಷು ಪ್ರವೃತ್ತಂ ವ್ರತೇವ ಕರ್ಮೇವ ತದ್ಯಥಾ ಮನುಷ್ಯೇಷು ನಿಯತಂ ಸ್ವರ್ಣ ಸೂರ್ಯ ಇವ ಸ ಯಥಾ ದಿವಿ ದೃಶ್ಯತೇ ತದ್ವದ್ದರ್ಶತಂ ದರ್ಶನೀಯಂ ಬಲಂ ಧಾಯಿ । ಯಜ್ಞೇ ನಿಹಿತಂ ॥

॥ ಪ್ರತಿಪದಾರ್ಥ ॥

ತಾ—ಆ ಮಿತ್ರಾವರುಣರು । ಹಿ—ಯಾವ ಕಾರಣದಿಂದ । ಅವಿಹ್ರುತಂ—ಅಪ್ರತಿಹತವಾದುದೂ । ಅಸುರ್ಯಂ—ಅಸುರನಾಶಕವಾದುದೂ ಆದ । ಕ್ಷತ್ರಂ—ಬಲವನ್ನು । ಸಮ್ಯಕ್—ಪೂರ್ಣವಾಗಿ । ಆಶಾತೇ—ಹೊಂದಿದ್ದಾರೋ । ಅಧ—ಆ ಕಾರಣದಿಂದಲೇ । ಮಾನುಷಂ—ಮಾನವರಲ್ಲಿ ನಿಯಮಿತವಾದ । ವ್ರತಾ ಇವ—ಕರ್ಮಗಳಂತೆಯೂ । ಸ್ವಃ ನ—ಅಂತರಿಕ್ಷದಲ್ಲಿ ಸ್ಥಾಪಿತನಾದ ಸೂರ್ಯನಂತೆಯೂ । ದರ್ಶತಂ—ಆಕರ್ಷಕವಾದ ಶಕ್ತಿಯು । ಧಾಯಿ—(ಯಜ್ಞದಲ್ಲಿ) ಸ್ಥಾಪಿತವಾಗಿದೆ.

॥ ಭಾವಾರ್ಥ ॥

ಮಿತ್ರಾವರುಣರು ಯಾವಕಾರಣದಿಂದ ಅಪ್ರತಿಹತವಾದುದೂ, ಅಸುರನಾಶಕವಾದುದೂ ಆದ ಬಲವನ್ನು ಪೂರ್ಣವಾಗಿ ಹೊಂದಿದ್ದಾರೋ ಆ ಕಾರಣದಿಂದಲೇ, ಮಾನವರಲ್ಲಿ ನಿಯಮಿತವಾದ ಕರ್ಮಗಳಂತೆಯೂ ಅಂತರಿಕ್ಷದಲ್ಲಿ ಸ್ಥಾಪಿತನಾದ ಸೂರ್ಯನಂತೆಯೂ ಆಕರ್ಷಕವಾದ ಶಕ್ತಿಯು ಯಜ್ಞದಲ್ಲಿ ಸ್ಥಾಪಿತವಾಗಿದೆ.

## English Translation.

Inasmuch as you two are possessed of irresistible and Asura-subduing strength. therefore has holy sacrifice been established amongest men, as the sun (has been placed) in the sky.

॥ ಸಂಹಿತಾಪಾಠಃ ॥

ತಾ ವಾಮೇಷೇ ರಥಾನಾಮುರ್ವೀಂ ಗವ್ಯೂತಿಮೇಷಾಂ ।

ರಾತಹವ್ಯಸ್ಯ ಸುಷ್ಟುತಿಂ ದಧೃಕ್ಸ್ತೋಮೈರ್ಮನಾಮಹೇ ॥ ೩ ॥

॥ ಪದಪಾಠಃ ॥

ತಾ । ವಾಂ । ಏಷೇ । ರಥಾನಾಂ । ಉರ್ವೀಂ । ಗವ್ಯೂತಿಂ । ಏಷಾಂ ।

ರಾತಽಹವ್ಯಸ್ಯ । ಸುಽಸ್ತುತಿಂ । ದಧೃಕ್ । ಸ್ತೋಮೈಃ । ಮನಾಮಹೇ ॥ ೩ ॥

॥ ಸಾಯಣಭಾಷ್ಯಂ ॥

ಹೇ ಮಿತ್ರಾವರುಣೌ ತಾ ತೌ ಪ್ರಸಿದ್ಧೌ ವಾಂ ಯುವಾಂ ರಥಾನಾಮಸ್ಮದೀಯಾನಾಮೇಷಾಂ । ಪುರತೋ ವರ್ತಮಾನಾನಾಮುರ್ವೀಂ ಪ್ರಭೂತಾಂ ಗವ್ಯೂತಿಮತಿವಿಸ್ತೃತಂ ಮಾರ್ಗಮೇಷೇ ಗಂತುಂ । ಮಾರ್ಗರಕ್ಷಣಾಯೇತ್ಯರ್ಥಃ ॥ ತುಮರ್ಥೇಽಸೇನ್ಪ್ರತ್ಯಯಃ ॥ ತದರ್ಥಂ ವಾಂ ಮನಾಮಹೇ ಸ್ತುಮೋ ರಾತಹವ್ಯಸ್ಯ ಋಷೇ ರಾತಹವ್ಯಸಂಬಂಧಿಭಿಃ ಸುಷ್ಟುತಿಂ ಸುಷ್ಟುತಿಭಿಃ ಶೋಭನಸ್ತುತಿಸಾಧನೈಃ ಸ್ತೋಮೈಃ ದಧೃಕ್ ಧರ್ಷಕೌ ಯುವಾಂ ॥

॥ ಪ್ರತಿಪದಾರ್ಥ ॥

(ಎಲೈ ಮಿತ್ರಾವರುಣರೇ) **ಏಷಾಂ ರಥಾನಾಂ**—ನಮ್ಮ ಈ ರಥಗಳಿಗೆ ಮುಂಭಾಗದಲ್ಲಿ । **ಉರ್ವೀಂ**—ವಿಸ್ತೃತವಾದ । **ಗವ್ಯೂತಿಂ**—ಮಾರ್ಗವನ್ನು । **ಏಷೇ**—ಸಂಚರಿಸಲು । **ರಾತಹವ್ಯಸ್ಯ**—ರಾತಹವ್ಯನೆಂಬ ಋಷಿಯ । **ಸುಷ್ಟುತಿಂ**—ಉತ್ತಮವಾದ ಪೂಜೆಯನ್ನು । **ಸ್ತೋಮೈಃ**—ಅವನ ಸ್ತುತಿಗಳೊಡನೆ । **ದಧೃಕ್**—ಸ್ವೀಕರಿಸುವವರೂ । **ತಾ**—ಪ್ರಸಿದ್ಧರೂ ಆದ । **ವಾಂ**—ನಿಮ್ಮನ್ನು । **ಮನಾಮಹೇ**—ಸ್ತುತಿಸುತ್ತೇವೆ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ನಮ್ಮ ಈ ರಥಗಳಿಗೆ ಮುಂಭಾಗದಲ್ಲಿ ವಿಸ್ತೃತವಾದ ಮಾರ್ಗವನ್ನು ಸಂರಕ್ಷಿಸುತ್ತಾ ಸಂಚರಿಸುವುದಕ್ಕಾಗಿ ರಾತಹವ್ಯನೆಂಬ ಋಷಿಯ ಉತ್ತಮವಾದ ಪೂಜೆಯನ್ನು ಅವನ ಸ್ತುತಿಗಳೊಡನೆ ಸ್ವೀಕರಿಸುವವರೂ ಪ್ರಸಿದ್ಧರೂ ಆದ ನಿಮ್ಮನ್ನು ಸ್ತುತಿಸುತ್ತೇವೆ.

English Translation.

We glorify you both, that your chariots may precede ours by a long distance; accepting the pious worship of Rathahavya with (his) praises.

॥ ಸಂಹಿತಾಪಾಠಃ ॥

ಅಧಾ ಹಿ ಕಾವ್ಯಾ ಯುವಂ ದಕ್ಷಸ್ಯ ಪೂರ್ಭಿರದ್ಭುತಾ ।

ನಿ ಕೇತುನಾ ಜನಾನಾಂ ಚಿಕೇಥೇ ಪೂತದಕ್ಷಸಾ ॥ ೪ ॥

॥ ಪದಪಾಠಃ ॥

ಅಧ । ಹಿ । ಕಾವ್ಯಾ । ಯುವಂ । ದಕ್ಷಸ್ಯ । ಪೂಃಽಭಿಃ । ಅದ್ಭುತಾ ।

ನಿ । ಕೇತುನಾ । ಜನಾನಾಂ । ಚಿಕೇಥೇ ಇತಿ । ಪೂತಽದಕ್ಷಸಾ ॥ ೪ ॥

॥ ಸಾಯಣಭಾಷ್ಯಂ ॥

ಅಧ ಅಪಿ ಚ । ಹಿ ಪ್ರಸಿದ್ಧೌ । ಕಾವ್ಯಾ ಸ್ತುತ್ಯೌ ಯುವಂ ಯುವಾಂ ದಕ್ಷಸ್ಯ ಪ್ರವೃದ್ಧಸ್ಯ ಮಮ ಪೂರ್ಭಿಃ ಪೂರಕೈಃ ಸ್ತವೈರ್ಹೇ ಅದ್ಭುತಾವಮಹಾಂತಾವಾಶ್ಚರ್ಯಭೂತೌ ಸಂತೌ ಕೇತುನಾ ಪ್ರಜ್ಞಾನೇನಾನುಕೂಲೇನ ಮನಸಾ ಜನಾನಾಂ । ಯಜಮಾನಾನಾಮಿತ್ಯರ್ಥಃ । ಸ್ತೋತ್ರಂ ನಿ ಚಿಕೇಥೇ । ನಿತರಾಂ ಜಾನೀಥಃ । ಹೇ ಪೂತದಕ್ಷಸಾ ಶುದ್ಧಬಲೌ ಯುವಾಂ ॥

। ಪ್ರತಿಪದಾರ್ಥ ॥

(ಎಲೈ ಮಿತ್ರಾವರುಣರೇ) **ಅಧ**—ಅಲ್ಲದೇ । **ಕಾವ್ಯಾ**—ಸ್ತುತ್ಯರ್ಹರೂ । **ಪೂತದಕ್ಷಸಾ**—ಪರಿಶುದ್ಧವಾದ ಶಕ್ತಿಯುಳ್ಳವರೂ । **ದಕ್ಷಸ್ಯ**—(ನಿಮ್ಮನ್ನು ಪೂಜಿಸುವ) ಶಕ್ತಿಯುಳ್ಳ ನನ್ನ । **ಪೂರ್ಭಿಃ**—ತೃಪ್ತಿಕಾರಕಗಳಾದ ಸ್ತುತಿಗಳಿಂದ । **ಅದ್ಭುತಾ**—ಆಶ್ಚರ್ಯಗೊಂಡವರೂ ಆದ । **ಯುವಂ**—ನೀವು । **ಜನಾನಾಂ**—ಈ ಯಜಮಾನರ ಸ್ತುತಿಯನ್ನೂ ಸಹ । **ಕೇತುನಾ**—ಅನುಗ್ರಹಾತ್ಮಕವಾದ ಬುದ್ಧಿಯಿಂದ । **ನಿ ಚಿಕೇಥೇ**—ಪೂರ್ಣವಾಗಿ ಅರಿತು (ತೃಪ್ತಿಗೊಳ್ಳಿರಿ).

। ಭಾವಾರ್ಥ ॥

ಎಲೈ ಮಿತ್ರಾವರುಣರೇ, ಸ್ತುತ್ಯರ್ಹರೂ, ಪರಿಶುದ್ಧವಾದ ಶಕ್ತಿಯುಳ್ಳವರೂ, ನಿಮ್ಮನ್ನು ಪೂಜಿಸುವ ಶಕ್ತಿಯುಳ್ಳ ನನ್ನ ತೃಪ್ತಿಕಾರಕಗಳಾದ ಸ್ತುತಿಗಳಿಂದ ಆಶ್ಚರ್ಯಗೊಂಡವರೂ ಆದ ನೀವು ಈ ಯಜಮಾನರ ಸ್ತುತಿಯನ್ನೂ ಸಹ ಅನುಗ್ರಹಾತ್ಮಕವಾದ ಬುದ್ಧಿಯಿಂದ ಪೂರ್ಣವಾಗಿ ಅರಿತು ತೃಪ್ತಿಗೊಳ್ಳಿರಿ.

## English Translation.

Now, adorable and wonderful deities, (propitiated) by the former (praises) of (me, your) worshipper, do you, who are of pure vigour, consider with approving minds (the adoration) of these men

॥ ಸಂಹಿತಾಪಾಠಃ ॥

ತದೃತಂ ಪೃಥಿವಿ ಬೃಹಚ್ಛ್ರವಏಷ ಋಷೀಣಾಂ ।

ಜ್ರಯಸಾನಾವರಂ ಪೃಥ್ವತಿ ಕ್ಷರಂತಿ ಯಾಮಭಿಃ ॥ ೫ ॥

॥ ಪದಪಾಠಃ ॥

**ತತ್ । ಋತಂ । ಪೃಥಿವಿ । ಬೃಹತ್ । ಶ್ರವಃಽಏಷೇ । ಋಷೀಣಾಂ ।**
**ಜ್ರಯಸಾನೌ । ಅರಂ । ಪೃಥು । ಅತಿ । ಕ್ಷರಂತಿ । ಯಾಮಽಭಿಃ ॥ ೫ ॥**

॥ ಸಾಯಣಭಾಷ್ಯಂ ॥

**ಹೇ ಪೃಥಿವಿ ದೇವಿ ತ್ವಯಿ ತತ್ಸರ್ವೈರಭ್ಯರ್ಥ್ಯಮಾನತ್ವೇನ ಪ್ರಸಿದ್ಧಂ ಬೃಹತ್ ಪ್ರಭೂತಮೃತಮುದಕಮೃಷೀಣಾಂ ಸ್ತೋತೄಣಾಮಸ್ಮಾಕಂ ಶ್ರವಏಷೇಽನ್ನಸ್ಯೈಷಣೇ ಸತಿ ಜ್ರಯಸಾನೌ ಗಚ್ಛಂತೌ ॥ ಛಂದಸ್ಯಸಾನಚ್ ಶುಜ್ಯ್ಭ್ಯಾಂ । ಉ. ೨-೮೭ । ಇತ್ಯಸಾನಚ್ ಜ್ರಯತೇರಪಿ ಭವತಿ । ಚಿತ ಇತ್ಯಂತೋದಾತ್ತಃ । ಅರಮಲಮತ್ಯರ್ಥಂ ಪೃಥು ಯಥಾ ಭವತಿ ತಥಾ ಯಾಮಭಿರ್ಗಮನೈರತಿ ಕ್ಷರಂತಿ । ಅತ್ಯರ್ಥಂ ವರ್ಷತಃ ॥ ವ್ಯತ್ಯಯೇನ ಬಹುವಚನಂ ॥**

॥ ಪ್ರತಿಪದಾರ್ಥ ॥

**ಪೃಥಿವಿ**—ಎಲೈ ಪೃಥ್ವಿಯೇ । **ಋಷೀಣಾಂ**—ಋಷಿಗಳ । **ಶ್ರವಏಷೇ**—ಅನ್ನಸಂಪಾದನೆಗೆ ಮುಖ್ಯವಾದುದೂ । **ಬೃಹತ್**—ಪ್ರಭೂತವಾದುದೂ । **ತತ್**—ಪ್ರಸಿದ್ಧವಾದುದೂ ಆದ । **ಋತಂ**—ಉದಕವನ್ನು । **ಜ್ರಯಸಾನೌ**—ವೇಗವಾಗಿ ಸಂಚರಿಸುವ ಮಿತ್ರಾವರುಣರು । **ಯಾಮಭಿಃ**—ತಮ್ಮ ಸಂಚಾರಗಳಿಂದ । **ಅರಂ**—ತೃಪ್ತಿಸಾಧನವಾಗುವಂತೆ । **ಪೃಥು**—ಪ್ರಭೂತವಾಗಿ । **ಅತಿ ಕ್ಷರಂತಿ**—ಸುರಿಸುತ್ತಾರೆ

॥ ಭಾವಾರ್ಥ ॥

ಎಲೈ ಪೃಥ್ವಿಯೇ, ಋಷಿಗಳ ಅನ್ನಸಂಪಾದನೆಗೆ ಮುಖ್ಯವಾದುದೂ, ಪ್ರಭೂತವಾದುದೂ, ಪ್ರಸಿದ್ಧವಾದುದೂ ಆದ ಉದಕವನ್ನು ವೇಗವಾಗಿ ಸಂಚರಿಸುವ ಮಿತ್ರಾವರುಣರು ತಮ್ಮ ಸಂಚಾರಗಳಿಂದ ಎಲ್ಲರಿಗೂ ತೃಪ್ತಿಕಾರಕವಾಗುವಂತೆ ಪ್ರಭೂತವಾಗಿ ಸುರಿಸುತ್ತಾರೆ.

## English Translation.

Earth. in you is abundant water for the necessities of the Rishis : the two active (deities) dispense by their movements sufficiently copious (rain).

॥ ಸಂಹಿತಾಪಾಠಃ ॥

ಆ ಯದ್ವಾಮೀಯಚಕ್ಷಸಾ ಮಿತ್ರ ವಯಂ ಚ ಸೂರಯಃ ।
ವ್ಯಚಿಷ್ಠೇ ಬಹುಪಾಯ್ಯೇ ಯತೇಮಹಿ ಸ್ವರಾಜ್ಯೇ ॥ ೬ ॥

॥ ಪದಪಾಠಃ ॥

ಆ । ಯತ್ । ವಾಂ । ಈಯಃಽಚಕ್ಷಸಾ । ಮಿತ್ರಾ । ವಯಂ । ಚ । ಸೂರಯಃ ।

ವ್ಯಚಿಷ್ಠೇ । ಬಹುಽಪಾಯ್ಯೇ । ಯತೇಮಹಿ । ಸ್ವಽರಾಜ್ಯೇ ॥ ೬ ॥

॥ ಸಾಯಣಭಾಷ್ಯಂ ॥

ಹೇ ಈಯಚಕ್ಷಸಾ ವ್ಯಾಪ್ತದರ್ಶನೌ ಹೇ ಮಿತ್ರಾ ಮಿತ್ರಾವರುಣೌ ವಾಂ ಯುವಾಂ ಯತ್ ಯೇ ವಯಂ ಚ ಸೂರಯಃ ಸ್ತೋತಾರ ಆ ಆಹ್ವಯಾಮಃ । ವ್ಯಚಿಷ್ಠೇಽತ್ಯಂತವಿಸ್ತೃತೇ ಬಹುಪಾಯ್ಯೇ ಬಹುಭಿರ್ಗಂತವ್ಯೇ ಬಹುಭೀ ರಕ್ಷಿತವ್ಯೇ ವಾ ಸ್ವರಾಜ್ಯೇ ಸ್ವರಾಟ್‌ತ್ವಾಯ ಏವಂವಿಧರಾಜ್ಯಾರ್ಥಂ ಯತೇಮಹಿ । ಗಚ್ಛೇಮ ॥

॥ ಪ್ರತಿಪದಾರ್ಥ ॥

**ಈಯಚಕ್ಷಸಾ**— ವಿಶ್ವವನ್ನೆಲ್ಲಾ ವ್ಯಾಪಿಸುವ ದರ್ಶನಶಕ್ತಿಯುಳ್ಳ । **ಮಿತ್ರಾ**— ಎಲೈ ಮಿತ್ರಾವರುಣರೇ। **ಸೂರಯಃ**— ಸ್ತೋತೃಗಳೂ । **ಯತ್ ವಯಂ**— ನಿಮ್ಮ ಭಕ್ತರೂ ಆದ ನಾವು । **ಆ**— ನಿಮ್ಮನ್ನು ಆಹ್ವಾನಿಸುತ್ತೇವೆ । **ವ್ಯಚಿಷ್ಠೇ**— ಅತಿ ವಿಸ್ತೃತವಾದುದೂ । **ಬಹುಪಾಯ್ಯೇ**— ಅನೇಕರಿಂದ ಪ್ರವೇಶಿಸಲ್ಪಡುವುದೂ ಆದ । **ಸ್ವರಾಜ್ಯೇ**— ನಿಮ್ಮ ರಾಜ್ಯಪ್ರವೇಶಕ್ಕಾಗಿ । **ಯತೇಮಹಿ**— ನಾವು ಪ್ರಯತ್ನಿಸುತ್ತೇವೆ.

॥ ಭಾವಾರ್ಥ ॥

ವಿಶ್ವವನ್ನೆಲ್ಲಾ ವ್ಯಾಪಿಸುವ ದರ್ಶನಶಕ್ತಿಯುಳ್ಳ ಎಲೈ ಮಿತ್ರಾವರುಣರೇ, ಸ್ತೋತೃಗಳೂ ನಿಮ್ಮ ಭಕ್ತರೂ ಆದ ನಾವು ನಿಮ್ಮನ್ನು ಆಹ್ವಾನಿಸುತ್ತೇವೆ. ಅತಿ ವಿಸ್ತೃತವಾದುದೂ, ಅನೇಕರಿಂದ ಪ್ರವೇಶಿಸಲ್ಪಡುವುದೂ ಆದ ನಿಮ್ಮ ರಾಜ್ಯಪ್ರವೇಶಕ್ಕಾಗಿ ನಾವು ಪ್ರಯತ್ನಿಸುತ್ತೇವೆ.

## English Translation.

We and the devout (iuvoke) you, Mitra and Varuna, who are farseeing: may we proceed to your spacious and much frequented kingdom.

# ಅರವತ್ತೇಳನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಬಳಿತ್ಥಾ ದೇವೇತಿ ಪಂಚರ್ಚಮೇಕಾದಶಂ ಸೂಕ್ತಂ । ಅತ್ರೇಯಮನುಕ್ರಮಣಿಕಾ । ಬಳಿತ್ಥಾ ಪಂಚ ಯಜತ ಇತಿ । ಯಜತೋ ನಾಮಾತ್ರೇಯ ಋಷಿಃ । ಮಿತ್ರಾವರುಣೌ ದೇವತಾ । ಆನುಷ್ಟುಭಂ ತ್ವಿತ್ಯುಕ್ತತ್ವಾದಿದಮಪ್ಯಾನುಷ್ಟುಭಂ । ವಿನಿಯೋಗೋ ಲೈಂಗಿಕಃ ॥**

ಅನುವಾದವು—**ಬಳಿತ್ಥಾ ದೇವ** ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ಹನ್ನೊಂದನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ—**ಬಳಿತ್ಥಾ ಪಂಚ ಜಗತಃ** ಎಂದು ಹೇಳಿರುವುದು ಈ ಸೂಕ್ತಕ್ಕೆ **ಯಜತ ಆತ್ರೇಯಃ** ಎಂಬುವನು ಋಷಿಯು; ಮಿತ್ರಾವರುಣರು ದೇವತೆಯು; ಅನುಷ್ಟುಪ್ ಛಂದಸ್ಸು. ವಿನಿಯೋಗವು ಲೈಂಗಿಕವು.

## ಸೂಕ್ತ—೬೭

ಮಂಡಲ—೫ ॥ ಅನುವಾಕ—೫ ॥ ಸೂಕ್ತ—೬೭ ॥
ಅಷ್ಟಕ—೪ ॥ ಅಧ್ಯಾಯ—೪ ॥ ವರ್ಗ—೫ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೫ ॥
॥ ಋಷಿಃ—ಯಜತ ಆತ್ರೇಯಃ ॥
॥ ದೇವತಾ—ಮಿತ್ರಾವರುಣೌ ॥
॥ ಛಂದಃ—ಅನುಷ್ಟುಪ್ ॥

॥ ಸಂಹಿತಾಪಾಠಃ ॥

ಬಳಿತ್ಥಾ ದೇವ ನಿಷ್ಕೃತಮಾದಿತ್ಯಾ ಯಜತಂ ಬೃಹತ್ ।
ವರುಣ ಮಿತ್ರಾರ್ಯಮನ್ವರ್ಷಿಷ್ಠಂ ಕ್ಷತ್ರಮಾಶಾಥೇ ॥ ೧ ॥

॥ ಪದಪಾಠಃ ॥

ಬಟ್ । ಇತ್ಥಾ । ದೇವಾ । ನಿಃऽಕೃತಂ । ಆದಿತ್ಯಾ । ಯಜತಂ । ಬೃಹತ್ ।
ವರುಣ । ಮಿತ್ರ । ಅರ್ಯಮನ್ । ವರ್ಷಿಷ್ಠಂ । ಕ್ಷತ್ರಂ । ಆಶಾಥೇ ಇತಿ ॥ ೧ ॥

॥ ಸಾಯಣಭಾಷ್ಯಂ ॥

**ಹೇ ದೇವಾ ದ್ಯೋತಮಾನಾ ಹೇ ಆದಿತ್ಯಾದಿತೇಃ ಪುತ್ರೌ ಹೇ ವರುಣ ಹೇ ಅರ್ಯಮನ್ ಅರೀಣಾಂ ನಿಯಮಿತರ್ಮಿತ್ರ ದೇವ ಯುವಾಂ ಬಟ್ ಸತ್ಯಂ ನಿಷ್ಕೃತಮಬಾಧ್ಯಮಿತ್ಥೇತ್ಥಮಿದಾನೀಂ-**

ವರ್ತಮಾನಪ್ರಕಾರೇಣ ಯಜತಂ ಯಷ್ಟವ್ಯಂ ಬೃಹದತಿಪ್ರವೃದ್ಧಂ ವರ್ಷಿಷ್ಠಂ ಪ್ರವೃದ್ಧತಮಂ ಕ್ಷತ್ರಂ ಬಲಮಾಶಾಥೇ । ಅಶ್ನುವಾಥೇ । ಯದ್ವಾರ್ಯಮಾ ಪೃಥಗೇವ ನಿರ್ದೇಷ್ಟವ್ಯಃ । ದ್ವಿವಚನಂ ಬಹುವಚನೀಕರ್ತವ್ಯಂ ॥

॥ ಪ್ರತಿಪದಾರ್ಥ ॥

**ದೇವಾ**— ಪ್ರಕಾಶಮಾನರೂ । **ಅದಿತ್ಯಾ**— ಅದಿತಿ ಪುತ್ರರೂ ಆದ । **ವರುಣ ಅರ್ಯಮನ್ ಮಿತ್ರ**— ಎಲೈ ವರುಣ ಅರ್ಯಮ ಮತ್ತು ಮಿತ್ರನಾಮಕರಾದ ದೇವತೆಗಳೇ । **ಇತ್ಥಾ**— ಈ ಯಜ್ಞಕಾಲದಲ್ಲಿ । **ಬಟ್**— ಸತ್ಯವಾಗಿಯೂ । **ನಿಷ್ಕೃತಂ**— ನ್ಯೂನತೆಯಿಲ್ಲದುದೂ । **ಯಜತಂ**— ಪೂಜಾರ್ಹವಾದುದೂ । **ಬೃಹತ್**— ಪ್ರಭೂತವಾದುದೂ । **ವರ್ಷಿಷ್ಠಂ**— ಅತ್ಯಂತ ಪ್ರವೃದ್ಧವಾದುದೂ ಆದ । **ಕ್ಷತ್ರಂ**— ಬಲವನ್ನು । **ಆಶಾಥೇ**— ನೀವು ಹೊಂದಿದ್ದೀರಿ.

॥ ಭಾವಾರ್ಥ ॥

ಪ್ರಕಾಶಮಾನರೂ, ಅದಿತಿಪುತ್ರರೂ ಆದ ಎಲೈ ವರುಣ, ಅರ್ಯಮ ಮತ್ತು ಮಿತ್ರನಾಮಕರಾದ ದೇವತೆಗಳೇ, ಈ ಯಜ್ಞಕಾಲದಲ್ಲಿ ಸತ್ಯವಾಗಿಯೂ, ನ್ಯೂನತೆಯಿಲ್ಲದುದೂ, ಪೂಜಾರ್ಹವಾದುದೂ, ಪ್ರಭೂತವಾದುದೂ, ಅತ್ಯಂತ ಪ್ರವೃದ್ಧವಾದುದೂ ಆದ ಬಲವನ್ನು ನೀವು ಹೊಂದಿದ್ದೀರಿ.

## English Translation.

Divine sons of Aditi, Mitra, Varuna, Aryaman, verily you are posessed at the present time, of perfect, adorable, vast, exceeding strength.

॥ ಸಂಹಿತಾಪಾಠಃ ॥

ಆ ಯದ್ಯೋನಿಂ ಹಿರಣ್ಯಯಂ ವರುಣ ಮಿತ್ರ ಸದಥಃ ।
ಧರ್ತಾರಾ ಚರ್ಷಣೀನಾಂ ಯಂತಂ ಸುಮ್ನಂ ರಿಶಾದಸಾ ॥ ೨ ॥

॥ ಪದಪಾಠಃ ॥

ಆ । ಯತ್ । ಯೋನಿಂ । ಹಿರಣ್ಯಯಂ । ವರುಣ । ಮಿತ್ರ । ಸದಥಃ ।
ಧರ್ತಾರಾ । ಚರ್ಷಣೀನಾಂ । ಯಂತಂ । ಸುಮ್ನಂ । ರಿಶಾದಸಾ ॥ ೨ ॥

॥ ಸಾಯಣಭಾಷ್ಯಂ ॥

ಯದ್ಯಸ್ಮಾದ್ಧಿರಣ್ಯಯಂ ಹಿತರಮಣೀಯಂ ಯೋನಿಂ ಯಜ್ಞಭೂಮಿಂ ಹೇ ವರುಣ ಹೇ ಮಿತ್ರ ಆ ಸದಥಃ ಆಗಚ್ಛಥಃ ತಸ್ಮಾಚ್ಚರ್ಷಣೀನಾಂ ಮನುಷ್ಯಾಣಾಂ ಧರ್ತಾರಾ ಧಾರಕೌ ಚ ಹೇ ರಿಶಾದಸಾ ಹಿಂಸಕಾನಾಂ ಕ್ಷೇಪ್ತಾರೌ ಯುವಾಮಸ್ಮಭ್ಯಂ ಸುಮ್ನಂ ಸುಖಂ ಯಂತಂ । ಕುರುತಮಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ವರುಣ**—ಎಲೈ ವರುಣನೇ । **ಮಿತ್ರ**—ಎಲೈ ಮಿತ್ರನೇ । **ಯತ್**—ಯಾವಾಗ । **ಹಿರಣ್ಯಯಂ**—ಪ್ರಿಯಕರವೂ ಆಕರ್ಷವಾದುದೂ ಆದ । **ಯೋನಿಂ**—ಯಜ್ಞಪ್ರದೇಶಕ್ಕೆ । **ಆ ಸದಥಃ**—ನೀವು ಬರುವಿರೋ (ಆಗ) । **ಚರ್ಷಣೀನಾಂ**—ಮಾನವರ । **ಧರ್ತಾರಾ**—ಧಾರಕರೂ । **ರಿಶಾದಸಾ**—ಶತ್ರುಹಿಂಸಕರೂ ಆದ ನೀವು । **ಸುಮ್ನಂ**—ಸುಖವನ್ನು । **ಯಂತಂ**—ಉಂಟುಮಾಡುತ್ತೀರಿ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ನೀವು ಯಾವಾಗ ಪ್ರಿಯಕರವೂ, ಆಕರ್ಷಕವೂ ಆದ ಯಜ್ಞಪ್ರದೇಶಕ್ಕೆ ಬರುವಿರೋ ಆಗ ಮಾನವರ ಧಾರಕರೂ, ಶತ್ರುಹಿಂಸಕರೂ ಆದ ನೀವು ನಮಗೆಲ್ಲಾ ಸುಖವನ್ನುಂಟುಮಾಡುತ್ತೀರಿ.

English Translation.

When you come, Varuna and Mitra, to the delightful place of sacrifice, then, supporters of men, destroyers of foes, you bring felicity.

॥ ಸಂಹಿತಾಪಾಠಃ ॥

ವಿಶ್ವೇ ಹಿ ವಿಶ್ವವೇದಸೋ ವರುಣೋ ಮಿತ್ರೋ ಅರ್ಯಮಾ ।
ವ್ರತಾ ಪದೇವ ಸಶ್ಚಿರೇ ಪಾಂತಿ ಮರ್ತ್ಯಂ ರಿಷಃ ॥ ೩ ॥

॥ ಪದಪಾಠಃ ॥

ವಿಶ್ವೇ । ಹಿ । ವಿಶ್ವಽವೇದಸಃ । ವರುಣಃ । ಮಿತ್ರಃ । ಅರ್ಯಮಾ ।
ವ್ರತಾ । ಪದಾಽಇವ । ಸಶ್ಚಿರೇ । ಪಾಂತಿ । ಮರ್ತ್ಯಂ । ರಿಷಃ ॥ ೩ ॥

॥ ಸಾಯಣಭಾಷ್ಯಂ ॥

ವಿಶ್ವೇ ಹಿ ಸರ್ವೇಽಪಿ । ಹೀತಿ ಚಾರ್ಥೇ । ವಿಶ್ವವೇದಸಃ ಸರ್ವವಿದಃ ಸರ್ವಧನಾ ವಾ ವರುಣೋ ಮಿತ್ರೋಽರ್ಯಮಾ ಚೈತೇ ತ್ರಯಃ ಸರ್ವೇ ವ್ರತಾಸ್ಮದೀಯಾನಿ ಕರ್ಮಾಣಿ ಪದೇವ ಪದಾನೀವ ಸ್ಥಾನಾನೀವ ಸಶ್ಚಿರೇ । ಸಂಗತಾ ಭವಂತಿ । ಅಗತ್ಯ ಚ ಮಾಂ ಮರ್ತ್ಯಂ ರಿಷೋ ಹಿಂಸಕಾತ್ಪಾಂತಿ । ರಕ್ಷಂತಿ ॥

॥ ಪ್ರತಿಪದಾರ್ಥ ॥

**ವಿಶ್ವವೇದಸಃ**—ಸರ್ವಜ್ಞರಾದ । **ವರುಣಃ ಮಿತ್ರಃ ಅರ್ಯಮಾ ಚ**—ವರುಣ ಮಿತ್ರ ಮತ್ತು ಅರ್ಯಮಾ ಎಂದು ಪ್ರಸಿದ್ಧರಾದ । **ವಿಶ್ವೇ ಹಿ**—ಸಕಲ ದೇವತೆಗಳೂ ಸಹ । **ವ್ರತಾ**—ನಮ್ಮ ಕರ್ಮಸ್ಥಾನಗಳನ್ನು । **ಪದಾ ಇವ**—ಅವರವರ ಸ್ವಸ್ಥಾನಗಳಿರುವಂತೆಯೇ ಭಾವಿಸಿ । **ಸಶ್ಚಿರೇ**—ಒಟ್ಟಿಗೆ ಸೇರಿಕೊಳ್ಳುತ್ತಾರೆ । **ಮರ್ತ್ಯಂ** - ಯಜಮಾನನಾದ ಮಾನವನನ್ನು । **ರಿಷಃ**—ಹಿಂಸಕನಿಂದ । **ಪಾಂತಿ**—ರಕ್ಷಿಸುತ್ತಾರೆ.

॥ ಭಾವಾರ್ಥ ॥

ಸರ್ವಜ್ಞರೂ, ವರುಣ ಮಿತ್ರ ಮತ್ತು ಅರ್ಯಮಾ ಎಂದು ಪ್ರಸಿದ್ಧರೂ ಆದ ಸಕಲ ದೇವತೆಗಳೂ ಸಹ ನಮ್ಮ ಯಜ್ಞಸ್ಥಾನವನ್ನು ಅವರವರ ಸ್ವಸ್ಥಾನಗಳಿರುವಂತೆಯೇ ಭಾವಿಸಿ ಒಟ್ಟಿಗೆ ಬಂದು ಸೇರಿಕೊಳ್ಳುತ್ತಾರೆ. ಮತ್ತು ಯಜಮಾನನಾದ ಮಾನವನನ್ನು ಹಿಂಸಕನಿಂದ ರಕ್ಷಿಸುತ್ತಾರೆ.

## English Translation

Mitra, Varuna, Aryaman, who are possessed of omniscience, are all associated at our rites, as if in (their respective) stations, and protect the worshipper from the malignant.

॥ ಸಂಹಿತಾಪಾಠಃ ॥

ತೇ ಹಿ ಸತ್ಯಾ ಋತಸ್ಪೃಶ ಋತಾವಾನೋ ಜನೇಜನೇ ।
ಸುನೀಥಾಸಃ ಸುದಾನವೋಽಂಹೋಶ್ಚಿದುರುಚಕ್ರಯಃ ॥ ೪ ॥

॥ ಪದಪಾಠಃ ॥

ತೇ । ಹಿ । ಸತ್ಯಾಃ । ಋತಽಸ್ಪೃಶಃ । ಋತಽವಾನಃ । ಜನೇಽಜನೇ ।
ಸುಽನೀಥಾಸಃ । ಸುಽದಾನವಃ । ಅಂಹೋಃ । ಚಿತ್ । ಉರುಽಚಕ್ರಯಃ ॥ ೪ ॥

॥ ಸಾಯಣಭಾಷ್ಯಂ ॥

ತೇ ಹಿ ಖಲು ಸತ್ಯಾಃ ಸತ್ಯಭೂತಾಃ ಸತ್ಯಫಲಾ ವಾ ಋತಸ್ಪೃಶ ಉದಕಸ್ಪರ್ಶಸ್ಯ ಕರ್ತಾರ ಋತಾವಾನೋ ಯಜ್ಞವಂತೋ ಜನೇ ಜನೇ ಸರ್ವೇಷು ಯಜಮಾನೇಷು ಸುನೀಥಾಸಃ ಸುನಯನಾಃ ಸುದಾನವಃ ಸುದಾನಾಃ । ಹೀತಿ ಪ್ರಸಿದ್ಧವಾಚೀ ಸರ್ವತ್ರ ಸಂಬಂಧನೀಯಃ । ಏವಂ ಮಹಾನುಭಾವಾ ವರುಣಾದಯೋಽಂಹೋಶ್ಚಿತ್ । ಚಿದಪ್ಯರ್ಥೇ । ಪಾಪಿನೋಽಪಿ ಸ್ವಸ್ತೋತುರುರುಚಕ್ರಯಃ ಪ್ರಭೂತ-ಧನಾದಿಕರ್ತಾರಃ ॥

॥ ಪ್ರತಿಪದಾರ್ಥ ॥

**ತೇ ಹಿ**—ಇದೇ ದೇವತೆಗಳು । **ಸತ್ಯಾಃ**—ಸತ್ಯಾತ್ಮಕರಾಗಿಯೂ । **ಋತಸ್ಪೃಶಃ**—ಉದಕವನ್ನು ಹಂಚುವವರಾಗಿಯೂ । **ಋತಾವಾನಃ**—ಯಜ್ಞರಕ್ಷಕರಾಗಿಯೂ । **ಜನೇ ಜನೇ**—ಸಕಲ ಮಾನವ ವ್ಯಕ್ತಿಗೂ । **ಸುನೀಥಾಸಃ**—ಉತ್ತಮವಾದ ಮಾರ್ಗದರ್ಶಕರಾಗಿಯೂ । **ಸುದಾನವಃ**—ಉತ್ತಮವಾದ ದಾನಿಗಳಾಗಿಯೂ । **ಅಂಹೋಶ್ಚಿತ್**—ಪಾಪಕರ್ಮಿಯಾಗಿದ್ದರೂ (ಯಜ್ಞಕರ್ತನಾಗಿದ್ದರೆ) । **ಉರುಚಕ್ರಯಃ**—ಅವನನ್ನು ಉದ್ಧರಿಸಿ ಪ್ರಭೂತವಾಗಿ ಉಪಕಾರಮಾಡುವವರೂ ಆಗಿದ್ದಾರೆ.

॥ ಭಾವಾರ್ಥ ॥

ಇದೇ ದೇವತೆಗಳು ಸತ್ಯಾತ್ಮಕರಾಗಿಯೂ, ಉದಕವನ್ನು ಹಂಚುವವರಾಗಿಯೂ, ಯಜ್ಞರಕ್ಷಕರಾಗಿಯೂ, ಸಕಲ ಮಾನವವ್ಯಕ್ತಿಗೂ ಉತ್ತಮವಾದ ಮಾರ್ಗದರ್ಶಕರಾಗಿಯೂ, ಉತ್ತಮವಾದ ದಾನಿಗಳಾಗಿಯೂ ಪಾಪಕರ್ಮಿಯಾಗಿದ್ದರೂ ಸಹ ಯಜ್ಞಕರ್ತನಾಗಿದ್ದರೆ, ಅವನನ್ನು ಉದ್ಧರಿಸಿ ಪ್ರಭೂತವಾಗಿ ಉಪಕಾರ ಮಾಡುವವರೂ ಆಗಿದ್ದಾರೆ.

English Translation.

They verily are observers of truth, distributors of water, protectors of holy rites amongst men : guides in the right way, liberal donors : and benefactors even of the sinner (who worships them).

॥ ಸಂಹಿತಾಪಾಠಃ ॥

ಕೋ ನು ವಾಂ ಮಿತ್ರಾಸ್ತುತೋ ವರುಣೋ ವಾ ತನೂನಾಂ ।
ತತ್ಸು ವಾಮೇಷತೇ ಮತಿರತ್ರಿಭ್ಯ ಏಷತೇ ಮತಿಃ ॥ ೫ ॥

॥ ಪದಪಾಠಃ ॥

ಕಃ । ನು । ವಾಂ । ಮಿತ್ರ । ಅಸ್ತುತಃ । ವರುಣಃ । ವಾ । ತನೂನಾಂ ।

ತತ್ । ಸು । ವಾಂ । ಆ । ಈಷತೇ । ಮತಿಃ । ಅತ್ರಿಽಭ್ಯಃ । ಆ । ಈಷತೇ । ಮತಿಃ ॥ ೫ ॥

॥ ಸಾಯಣಭಾಷ್ಯಂ ॥

ಹೇ ಮಿತ್ರ ವಾಂ ಯುವಯೋರ್ಮಧ್ಯೇ ತ್ವಂ ಚ ವರುಣೋ ವಾ ಕೋ ನು ಅಸ್ತುತಃ । ಸರ್ವೈರಸ್ತೂಯಮಾನಃ ಕೋಽಸ್ತಿ । ಉಭಾವಪಿ ಸ್ತುತ್ಯಾವಿತ್ಯರ್ಥಃ । ತನೂನಾಮಿತಿ ತೃತೀಯಾರ್ಥೇ ಷಷ್ಠೀ । ತನುಭಿಃ ಸ್ತುತಿಭಿರಸ್ತುತ ಇತಿ ಸಂಬಂಧಃ ॥ ಅತ್ರ ಮಿತ್ರಶಬ್ದೇನ ಮಿತ್ರಸ್ಯೈಕಸ್ಯೈವ ಸಂಬೋಧನಂ ವರುಣೇಳಾಸ್ವಂತಃ । ಋಗ್ವೇ. ೫-೬೨-೬ । ಇತ್ಯತ್ರೇವಾತ್ರ ದ್ವಿವಚನಸೂಚಕಸ್ಯಾಕಾರಸ್ಯಾನಾಮ್ನಾನಾತ್ । ಲೋಕೇಷು ಬಹುಷು ಸಂನಿಹಿತೇಷ್ವೇಕಮೇವ ಸಂಬೋಧ್ಯ ಯುವಯೋರಿದಂ ಯುಷ್ಮಾಕಮಿದಮಿತಿ ಪ್ರಯುಂಜತೇ ॥ ತತ್ತಸ್ಮಾತ್ ಯಸ್ಮಾತ್ಸರ್ವೇ ಸ್ತುವಂತಿ ತಸ್ಮಾತ್ । ತನೂನಾಮಿತ್ಯೇತದ್ವ್ಯವಹಿತ-ಮಪ್ಯುತ್ತರತ್ರ ವಾ ಯೋಜ್ಯಂ । ತನೂನಾಮಲ್ಪಮತೀನಾಮಸ್ಮಾಕಂ ಮತಿಃ ಸ್ತುತಿರ್ವಾಂ ಯುವಾಂ ಸುಷ್ಠು ಏಷತೇ । ಅಭಿಗಚ್ಛತಿ । ಅತ್ರಿಭ್ಯೋಽತ್ರಿಗೋತ್ರೇಭ್ಯೋಽಸ್ಮಭ್ಯಮಸ್ಮದೀಯಮತಿರೇಷತೇ । ಆದರಾರ್ಥಂ ಪುನರ್ವಚನಂ ॥

॥ ಪ್ರತಿಪದಾರ್ಥ ॥

ಮಿತ್ರ—ಎಲೈ ಮಿತ್ರನೇ । ವಾಂ—ನಿಮ್ಮಲ್ಲಿ (ನೀನಾಗಲಿ) । ವಾ—ಅಥವಾ । ವರುಣಃ—ವರುಣನಾಗಲಿ । ಕಃ—ಯಾರು । ತನೂನಾಂ—ನಮ್ಮ ಸ್ತುತಿಗಳಿಂದ । ಅಸ್ತುತಃ—ಪ್ರಶಂಸಿಸಲ್ಪಟ್ಟಿಲ್ಲ । ತತ್—ಆದ್ದರಿಂದ । ಮತಿಃ—ನಮ್ಮ ಸ್ತುತಿಯು । ವಾಂ—ನಿಮ್ಮನ್ನು । ಸು—ಭಕ್ತಿಪೂರ್ವಕವಾಗಿ । ಏಷತೇ—ಸಮೀಪಿಸುತ್ತದೆ । ಅತ್ರಿಭ್ಯಃ—ಅತ್ರಿಗೋತ್ರೋತ್ಪನ್ನರಾದ ನಮ್ಮ । ಮತಿಃ—ಸ್ತುತಿಯು । ಏಷತೇ—ನಿಮ್ಮನ್ನು ಖಂಡಿತ ಸಮೀಪಿಸುತ್ತದೆ.

॥ ಭಾವಾರ್ಥ ॥

ಎಲೈ ಮಿತ್ರನೇ, ನಿಮ್ಮಲ್ಲಿ ನೀನಾಗಲಿ ಅಥವಾ ವರುಣನಾಗಲಿ, ಯಾರು ನಮ್ಮ ಸ್ತುತಿಗಳಿಂದ ಪ್ರಶಂಸಿಸಲ್ಪಟಿಲ್ಲ? ಆದುದರಿಂದಲೇ ನಮ್ಮ ಸ್ತುತಿಯು ನಿಮ್ಮನ್ನು ಭಕ್ತಿಪೂರ್ವಕವಾಗಿ ಸಮೀಪಿಸುತ್ತದೆ. ಅತ್ರಿಗೋತ್ರೋತ್ಪನ್ನರಾದ ನಮ್ಮ ಸ್ತುತಿಯು ನಿಮ್ಮನ್ನು ಖಂಡಿತ ಸಮೀಪಿಸುತ್ತದೆ.

## English Translation.

Which of you, Mitra and varuna, has not been celebrated in (our) praise, for therefore do our thoughts tend towards you ? the thoughts of the race of Atri tend towards you.

# ಅರವತ್ತೆಂಟನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಪ್ರ ವೋ ಮಿತ್ರಾಯೇತಿ ಪಂಚರ್ಚಂ ದ್ವಾದಶಂ ಸೂಕ್ತಮಾತ್ರೇಯಸ್ಯ ಯಜತಸ್ಯಾರ್ಷಂ ಗಾಯತ್ರಂ ಮೈತ್ರಾವರುಣಂ । ತಥಾ ಚಾನುಕ್ರಮ್ಯತೇ । ಪ್ರ ವೋ ಗಾಯತ್ರಮಿತಿ ॥ ಅಗ್ನಿಷ್ಟೋಮೇ ಪ್ರಾತಃಸವನೇ ಮೈತ್ರಾವರುಣಶಸ್ತ್ರ ಏತತ್ಸೂಕ್ತಂ । ಸೂತ್ರಿತಂ ಚ । ಪ್ರ ವೋ ಮಿತ್ರಾಯ ಪ್ರ ಮಿತ್ರಯೋರ್ವರುಣಯೋಃ । ಆ. ೫-೧೦ । ಇತಿ ॥ ಅಭಿಪ್ಲವಷಡಹೇ ಪೃಷ್ಠ್ಯಷಡಹೇ ಚ ಸ್ತೋಮನಿಮಿತ್ತಾವಾಪಾರ್ಥಮಿದಮಾದೀನಿ ದ್ವಿತೀಯವರ್ಜಿತಾನಿ ಚತ್ವಾರಿ ಸೂಕ್ತಾನಿ । ತಥೈವ ಸೂತ್ರಿತಂ । ಪ್ರ ವೋ ಮಿತ್ರಾಯೇತಿ ಚತುರ್ಣಾಂ ದ್ವಿತೀಯಮುದ್ಧರೇತ್ । ಆ. ೭-೫ । ಇತಿ ॥**

ಅನುವಾದವು —**ಪ್ರ ವೋ ಮಿತ್ರಾಯ** ಎಂಬ ಈ ಸೂಕ್ತವು. ಐದನೆಯ ಅನುವಾಕದಲ್ಲಿ ಹನ್ನೆರಡನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವವು. ಈ ಸೂಕ್ತಕ್ಕೆ **ಯಜತ ಆತ್ರೇಯಃ** ಎಂಬುವನು ಋಷಿಯು; ಮಿತ್ರಾವರುಣರು ದೇವತೆಯು; ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ—**ಪ್ರ ವೋ ಗಾಯತ್ರಂ** ಎಂದು ಹೇಳಿರುವುದು. ಅಗ್ನಿಷ್ಟೋಮಯಾಗದಲ್ಲಿ ಪ್ರಾತಸ್ಸವನಕಾಲದಲ್ಲಿ ಮೈತ್ರಾವರುಣನೆಂಬ ಋತ್ವಿಜನು ಪಠಿಸುವ ಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ಪ್ರ ವೋ ಮಿತ್ರಾಯ ಪ್ರ ಮಿತ್ರಯೋರ್ವರುಣಯೋಃ** ಎಂಬ ಸೂತ್ರದಿಂದ (ಆ. ೫-೧೦) ವಿವೃತವಾಗಿರುವುದು ಮತ್ತು ಅಭಿಪ್ಲವಷಡಹ ಮತ್ತು ಪೃಷ್ಠ್ಯಷಡಹವೆಂಬ ಯಾಗಗಳಲ್ಲಿಯೂ ಸ್ತೋಮಾವಾಪಕ್ಕಾಗಿ (ಸ್ತೋಮವನ್ನು ಹೆಚ್ಚಿಸುವುದಕ್ಕಾಗಿ) ಈ ಸೂಕ್ತದಿಂದ—ಎರಡನೆಯ ಸೂಕ್ತವನ್ನು ಬಿಟ್ಟು—ಮುಂದಿನ ನಾಲ್ಕು ಸೂಕ್ತಗಳ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ಪ್ರ ವೋ ಮಿತ್ರಾಯೇತಿ ಚತುರ್ಣಾಂ ದ್ವಿತೀಯಮುದ್ಧರೇತ್** ಎಂಬ ಸೂತ್ರದಿಂದ (ಆ. ೭-೫) ವಿವೃತವಾಗಿರುವುದು.

## ಸೂಕ್ತ—೬೮

ಮಂಡಲ—೫ ॥ ಅನುವಾಕ—೫ ॥ ಸೂಕ್ತ—೬೮ ॥
ಅಷ್ಟಕ—೪ ॥ ಅಧ್ಯಾಯ—೪ ॥ ವರ್ಗ—೬ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೫ ॥
॥ ಋಷಿಃ—ಯಜತ ಆತ್ರೇಯಃ ॥
॥ ದೇವತಾ— ಮಿತ್ರಾವರುಣೌ ॥
॥ ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

**ಪ್ರ ವೋ ಮಿತ್ರಾಯ ಗಾಯತ ವರುಣಾಯ ವಿಪಾ ಗಿರಾ ।**
**ಮಹಿಕ್ಷತ್ರಾವೃತಂ ಬೃಹತ್ ॥ ೧ ॥**

॥ ಪದಪಾಠಃ ॥

ಪ್ರ । ವಃ । ಮಿತ್ರಾಯ । ಗಾಯತ । ವರುಣಾಯ । ವಿಪಾ । ಗಿರಾ ।

ಮಹಿಽಕ್ಷತ್ರೌ । ಋತಂ । ಬೃಹತ್ ॥ ೧ ॥

॥ ಸಾಯಣಭಾಷ್ಯಂ ॥

ಹೇ ಮದೀಯಾ ಋತ್ವಿಜೋ ವೋ। ಯೂಯಮಿತ್ಯರ್ಥಃ। ಮಿತ್ರಾಯ ವರುಣಾಯ ಚ ವಿಪಾ ವ್ಯಾಪ್ತಯಾ ಗಿರಾ ಸ್ತುತ್ಯಾ ಪ್ರ ಗಾಯತ। ಸ್ತುತಿಂ ಕುರುತ। ಸ್ತುತ್ಯಾ ಸ್ತುವತೇಕ್ತ್ಯೇಕ್ತಪಾಕಂ ಪಚತೀತಿವತ್। ಹೇ ಮಹಿಕ್ಷತ್ರೌ ಪ್ರಭೂತಬಲೌ ಯುವಾಮೃತಂ ಯಜ್ಞಂ ಬೃಹನ್ಮಹದತಿಪ್ರಶಸ್ತಂ। ಸ್ತುತ್ಯರ್ಥಮಾಗಚ್ಛತಮಿತಿ ಶೇಷಃ। ಅಥವಾ ಮಹತ್ ಪ್ರಭೂತಮೃತಂ ಸ್ತೋತ್ರಂ ಶೃಣುತಮಿತಿ ಶೇಷಃ॥

॥ ಪ್ರತಿಪದಾರ್ಥ ॥

(ಎಲೈ ಋತ್ವಿಕ್ಕುಗಳೇ) । **ವಃ**—ನೀವು । **ಮಿತ್ರಾಯ**—ಮಿತ್ರನನ್ನೂ । **ವರುಣಾಯ**—ವರುಣನನ್ನೂ ಉದ್ದೇಶಿಸಿ । **ವಿಪಾ**—ವ್ಯಾಪಕವಾದ । **ಗಿರಾ**—ಸ್ತುತಿಯಿಂದ । **ಪ್ರ ಗಾಯತ**—ಅತಿಶಯವಾಗಿ ಪ್ರಶಂಸಿಸಿ ಸ್ತುತಿಸಿರಿ । **ಮಹಿಕ್ಷತ್ರಾ**—ಅತ್ಯಧಿಕವಾದ ಶಕ್ತಿಯುಳ್ಳ ಎಲೈ ಮಿತ್ರಾವರುಣರೇ । **ಬೃಹತ್**—ಮಹತ್ತಾದ । **ಋತಂ**—ಯಜ್ಞಕ್ಕೆ (ದಯಮಾಡಿರಿ).

॥ ಭಾವಾರ್ಥ ॥

ಎಲೈ ಋತ್ವಿಕ್ಕುಗಳೇ, ನೀವು ಮಿತ್ರನನ್ನೂ ವರುಣನನ್ನೂ ಉದ್ದೇಶಿಸಿ ವ್ಯಾಪಕವಾದ ಸ್ತುತಿಯಿಂದ ಅತಿಶಯವಾಗಿ ಪ್ರಶಂಸಿಸಿ ಸ್ತುತಿಸಿರಿ. ಅತ್ಯಧಿಕವಾದ ಶಕ್ತಿಯುಳ್ಳ ಎಲೈ ಮಿತ್ರಾವರುಣರೇ, ಮಹತ್ತಾದ ಯಜ್ಞಕ್ಕೆ ದಯಮಾಡಿರಿ.

English Translation.

Sing loud with lusty praise to Mitra and to Varuna ; (come), mighty deities, to the great sacrifice.

॥ ಸಂಹಿತಾಪಾಠಃ ॥

ಸಮ್ರಾಜಾ ಯಾ ಘೃತಯೋನೀ ಮಿತ್ರಶ್ಚೋಭಾ ವರುಣಶ್ಚ ।

ದೇವಾ ದೇವೇಷು ಪ್ರಶಸ್ತಾ ॥ ೨ ॥

॥ ಪದಪಾಠಃ ॥

ಸಂऽರಾಜಾ । ಯಾ । ಘೃತಯೋನೀ ಇತಿ ಘೃತऽಯೋನೀ । ಮಿತ್ರಃ । ಚ । ಉಭಾ । ವರುಣಃ । ಚ ।
ದೇವಾ । ದೇವೇಷು । ಪ್ರऽಶಸ್ತಾ ॥ ೨ ॥

॥ ಸಾಯಣಭಾಷ್ಯಂ ॥

ಯಾ ಯೌ ಮಿತ್ರಶ್ಚ ವರುಣಶ್ಚ । ಪರಸ್ಪರಾಪೇಕ್ಷಯಾ ಚಶಬ್ದಃ । ಉಭೋಭೌ ಸಮ್ರಾಜಾ ಸರ್ವಸ್ಯ ಸ್ವಾಮಿನೌ ಘೃತಯೋನೀ ಉದಕಸ್ಯೋತ್ಪಾದಕೌ ದೇವಾ ದ್ಯೋತಮಾನೌ ದೇವೇಷು ಮಧ್ಯೇ ಪ್ರಶಸ್ತಾ ಪ್ರಕರ್ಷೇಣ ಸ್ತುತ್ಯೌ । ತೌ ಗಾಯತೇತಿ ಪೂರ್ವತ್ರಾನ್ವಯಃ ॥

॥ ಪ್ರತಿಪದಾರ್ಥ ॥

**ಯಾ**—ಯಾವ । **ಮಿತ್ರಶ್ಚ**—ಮಿತ್ರನೂ । **ವರುಣಶ್ಚ**—ವರುಣನೂ । **ಉಭಾ**—ಇವರಿಬ್ಬರೂ । **ಸಮ್ರಾಜಾ**—ಲೋಕಕ್ಕೆಲ್ಲಾ ಸ್ವಾಮಿಗಳೋ । **ಘೃತಯೋನೀ**—ಉದಕಕ್ಕೆ ಉತ್ಪಾದಕರೋ । **ದೇವಾ**—ಪ್ರಕಾಶಮಾನರಾಗಿ । **ದೇವೇಷು**--ದೇವತೆಗಳ ನಡುವೆ । **ಪ್ರಶಸ್ತಾ**—ಅತ್ಯುತ್ತಮವಾದ ಪ್ರಶಂಸೆಗೆ ಅರ್ಹರೋ (ಅಂತಹ ಮಿತ್ರಾವರುಣರನ್ನುದ್ದೇಶಿಸಿ ಸ್ತುತಿಸಿ).

॥ ಭಾವಾರ್ಥ ॥

ಯಾವ ಮಿತ್ರಾವರುಣರಿಬ್ಬರೂ ಲೋಕಕ್ಕೆಲ್ಲಾ ಸ್ವಾಮಿಗಳೋ, ಉದಕಕ್ಕೆ ಉತ್ಪಾದಕರೋ, ಮತ್ತು ಪ್ರಕಾಶಮಾನರಾಗಿ ದೇವತೆಗಳ ನಡುವೆ ಅತ್ಯುತ್ತಮವಾದ ಪ್ರಶಂಸೆಗೆ ಅರ್ಹರೋ, ಅಂತಹ ಮಿತ್ರಾವರುಣರನ್ನುದ್ದೇಶಿಸಿ ಸ್ತುತಿಸಿರಿ.

English Translation.

The Mitra and Varuna, who are both sovereign rulers, originators of the rain, eminent deties among the gods.

॥ ಸಂಹಿತಾಪಾಠಃ ॥

ತಾ ನಃ ಶಕ್ತಂ ಪಾರ್ಥಿವಸ್ಯ ಮಹೋ ರಾಯೋ ದಿವ್ಯಸ್ಯ ।
ಮಹಿ ವಾಂ ಕ್ಷತ್ರಂ ದೇವೇಷು ॥ ೩ ॥

॥ ಪದಪಾಠಃ ॥

ತಾ । ನಃ । ಶಕ್ತಂ । ಪಾರ್ಥಿವಸ್ಯ । ಮಹಃ । ರಾಯಃ । ದಿವ್ಯಸ್ಯ ।

ಮಹಿ । ವಾಂ । ಕ್ಷತ್ರಂ । ದೇವೇಷು ॥ ೩ ॥

॥ ಸಾಯಣಭಾಷ್ಯಂ ॥

ತಾ ತೌ ದೇವೌ ನೋಽಸ್ಮದರ್ಥಂ ಪಾರ್ಥಿವಸ್ಯ ಪೃಥಿವೀಸಂಬದ್ಧಸ್ಯ ದಿವ್ಯಸ್ಯ ದಿವಿ ಭವಸ್ಯ ಚ ಮಹೋ ಮಹತೋ ರಾಯೋ ಧನಸ್ಯ ಶಕ್ತಂ । ಸಮರ್ಥೌ ಭವತಂ । ದಾತುಮಿತಿ ಶೇಷಃ । ಹೇ ದೇವೌ ವಾಂ ಯುವಯೋರ್ಮಹಿ ಮಹತ್ಪೂಜ್ಯಂ ಕ್ಷತ್ರಂ ಬಲಂ ದೇವೇಷು ಪ್ರಸಿದ್ಧಂ ಸ್ತುಮ ಇತಿ ಶೇಷಃ ॥

॥ ಪ್ರತಿಪದಾರ್ಥ ॥

**ತಾ**— ಅದೇ ಮಿತ್ರಾವರುಣರು । **ನಃ**— ನಮಗೆ ದಾನಮಾಡುವುದಕ್ಕಾಗಿ । **ಪಾರ್ಥಿವಸ್ಯ**— ಪೃಥಿವೀ ಸಂಬಂಧವಾದುದೂ । **ದಿವ್ಯಸ್ಯ**— ದ್ಯುಲೋಕಸಂಬಂಧಿಯಾದದೂ । **ಮಹಃ**— ಅತ್ಯಧಿಕವಾದುದೂ ಆದ । **ರಾಯಃ**— ಧನಕ್ಕೆ । **ಶಕ್ತಂ**— ಸಮರ್ಥರಾಗಿದ್ದಾರೆ । **ವಾಂ**-- ನಿಮ್ಮ । **ಮಹಿ**— ಮಹತ್ತಾದ । **ಕ್ಷತ್ರಂ**— ಬಲವು । **ದೇವೇಷು**— ದೇವತೆಗಳ ಮಧ್ಯೆ ಸ್ತುತ್ಯವಾದುದು

॥ ಭಾವಾರ್ಥ ॥

ಅದೇ ಮಿತ್ರಾವರುಣರು ನಮಗೆ ದಾನಮಾಡಬೇಕಾದ ಪೃಥಿವೀ ಸಂಬಂಧವಾದುದೂ, ದ್ಯುಲೋಕಸಂಬಂಧಿಯಾದುದೂ, ಅತ್ಯಧಿಕವಾದುದೂ ಆದ ಧನಕ್ಕೆ ಸಮರ್ಥರಾಗಿದ್ದಾರೆ. (ಸ್ವಾಮಿಗಳಾಗಿದ್ದಾರೆ) ನಿಮ್ಮ ಮಹತ್ತಾದ ಬಲವು ದೇವತೆಗಳ ಮಧ್ಯೆ ಸ್ತುತ್ಯವಾಗಿದೆ.

## English Translation.

They two are able (to grant us) of great terrestrial and celestial riches: great is your might among the gods.

॥ ಸಂಹಿತಾಪಾಠಃ ॥

ಋತಮೃತೇನ ಸಪಂತೇಷಿರಂ ದಕ್ಷಮಾಶಾತೇ ।

ಅದ್ರುಹಾ ದೇವೌ ವರ್ಧೇತೇ ॥ ೪ ॥

॥ ಪದಪಾಠಃ ॥

ಋತಂ । ಋತೇನ । ಸಪಂತಾ । ಇಷಿರಂ । ದಕ್ಷಂ । ಆಶಾತೇ ಇತಿ ।

ಅದ್ರುಹಾ । ದೇವೌ । ವರ್ಧೇಽತೇ ಇತಿ ॥ ೪ ॥

॥ ಸಾಯಣಭಾಷ್ಯಂ ॥

**ಋತೇನೋದಕೇನ ನಿಮಿತ್ತೇನ ಋತಂ ಯಜ್ಞಂ ಸಂಪಂತಾ ಸ್ಪೃಶಂತಾವಿಷಿರಮೇಷಣವಂತಂ ದಕ್ಷಂ ಪ್ರವೃದ್ಧಂ ಯಜಮಾನಂ ಹವಿರ್ವಾಶಾತೇ । ವ್ಯಾಪ್ನುತಃ । ಅದ್ರುಹಾದ್ರೋಗ್ಧಾರೌ ದೇವೌ ಮಿತ್ರಾವರುಣೌ ಯುವಾಂ ವರ್ಧೇತೇ । ಪ್ರವೃದ್ಧೌ ಭವತಃ ॥**

॥ ಪ್ರತಿಪದಾರ್ಥ ॥

**ಋತೇನ**—ವೃಷ್ಟಿರೂಪವಾದ ಉದಕದಿಂದ । **ಋತಂ**—ಯಜ್ಞವನ್ನು । **ಸಪಂತಾ**—ಸಾರ್ಥಕಗೊಳಿಸುತ್ತಾ । **ಇಷಿರಂ**—ಕರ್ಮಕುಶಲನೂ । **ದಕ್ಷಂ**—ಶಕ್ತನೂ ಆದ ಯಜಮಾನನ್ನು । **ಆಶಾತೇ**—ಅನುಗ್ರಹಿಸುತ್ತಾರೆ । **ಅದ್ರುಹಾ**—(ಯಜ್ಞಕರ್ತನಿಗೆ) ದ್ರೋಹವನ್ನಾಚರಿಸದಿರುವ । **ದೇವೌ**—ಎಲೈ ಮಿತ್ರಾವರುಣರೇ । **ವರ್ಧೇತೇ**—ನೀವು ಪ್ರವೃದ್ಧಮಾನರಾಗಿರಿ

॥ ಭಾವಾರ್ಥ ॥

ವೃಷ್ಟಿರೂಪವಾದ ಉದಕದಿಂದ ಯಜ್ಞವನ್ನು ಸಾರ್ಥಕಗೊಳಿಸುತ್ತಾ ಕರ್ಮಕುಶಲನೂ, ಶಕ್ತನೂ ಆದ ಯಜಮಾನನ್ನು ಮಿತ್ರಾವರುಣರು ಅನುಗ್ರಹಿಸುತ್ತಾರೆ. ಯಜ್ಞಕರ್ತನಿಗೆ ದ್ರೋಹವನ್ನಾಚರಿಸದೇ ಇರುವ ಎಲೈ ಮಿತ್ರಾವರುಣರೇ, ನೀವು ಪ್ರವೃದ್ಧಮಾನರಾಗಿರಿ.

English Translation.

Rewarding with rain the holy rite, they favour the zealous worshipper: benevolent deities, may you prosper.

॥ ಸಂಹಿತಾಪಾಠಃ ॥

ವೃಷ್ಟಿದ್ಯಾವಾ ರೀತ್ಯಾಪೇಷಸ್ಪತೀ ದಾನುಮತ್ಯಾಃ ।

ಬೃಹಂತಂ ಗರ್ತಮಾಶಾತೇ ॥ ೫ ॥

॥ ಪದಪಾಠಃ ॥

ವೃಷ್ಟಿಽದ್ಯಾವಾ । ರೀತಿಽಆಪಾ । ಇಷಃ । ಪತೀ ಇತಿ । ದಾನುಽಮತ್ಯಾಃ ।

ಬೃಹಂತಂ । ಗರ್ತಂ । ಆಶಾತೇ ಇತಿ ॥ ೫ ॥

॥ ಸಾಯಣಭಾಷ್ಯಂ ॥

ವೃಷ್ಟಿದ್ಯಾವಾ । ವೃಷ್ಟ್ಯರ್ಥಾ ದ್ಯೌಃ ಸ್ತುತಿರ್ಯಯೋಸ್ತೌ ವೃಷ್ಟಿದ್ಯಾವಾ । ಅಥವಾ ವೃಷ್ಟಿವರ್ಷಿಕಾ ದ್ಯೌರಂತರಿಕ್ಷಂ ಯಾಭ್ಯಾಂ ತೌ ತಾದೃಶೌ । ರೀತ್ಯಾಪಾ ॥ ರೀ ಗತಿರೇಷಣಯೋಃ ॥ ರೀತಿಃ ಪ್ರಾಪ್ತಿಃ । ಸೈವಾಪಾಪ್ತಿರಭಿಮತಪ್ರಾಪ್ತಿರ್ಯಯೋಸ್ತೌ ತಾದೃಶೌ । ಇಷೋಽನ್ನಸ್ಯ ಪತೀ ಸ್ವಾಮಿನೌ । ವೃಷ್ಟಿಪ್ರದತ್ವಾತ್ ಸ್ವಾಮಿತ್ವಂ । ದಾನುಮತ್ಯಾ ದಾನವತ್ಯಾಃ । ದಾತೃಪೂಜಿತಾಯಾ ಇತ್ಯರ್ಥಃ । ಏತದಿಷ್ವಿಶೇಷಣಂ। ಏವಂ ಮಹಾನುಭಾವೌ ಬೃಹಂತಂ ಮಹಾಂತಂ ಗರ್ತಂ ರಥಮಾಶಾತೇ। ವ್ಯಾಪ್ನುತಃ। ಅಧಿತಿಷ್ಠತೋ ಯೋಗಾರ್ಥಂ ॥

॥ ಪ್ರತಿಪದಾರ್ಥ ॥

**ವೃಷ್ಟಿದ್ಯಾವಾ**— ಅಂತರಿಕ್ಷದಿಂದ ವೃಷ್ಟಿಯನ್ನು ಸುರಿಸುವವರೂ । **ರೀತ್ಯಾಪಾ**— ಇಷ್ಟಾರ್ಥವನ್ನು ಪಡೆಯುವಂತೆ ಮಾಡುವವರೂ । **ದಾನುಮತ್ಯಾಃ**— ದಾನಕ್ಕೆ ಯೋಗ್ಯವಾದ । **ಇಷಃ**— ಅನ್ನಕ್ಕೆ । **ಪತೀ**— ಸ್ವಾಮಿಗಳೂ ಆದ ಮಿತ್ರಾವರುಣರು । **ಬೃಹಂತಂ**— ಮಹತ್ತಾದ । **ಗರ್ತಂ**— ರಥವನ್ನು । **ಆಶಾತೇ**— ಹತ್ತುತ್ತಾರೆ.

॥ ಭಾವಾರ್ಥ ॥

ಅಂತರಿಕ್ಷದಿಂದ ವೃಷ್ಟಿಯನ್ನು ಸುರಿಸುವವರೂ, ಇಷ್ಟಾರ್ಥವನ್ನು ಪಡೆಯುವಂತೆ ಮಾಡುವವರೂ, ದಾನಕ್ಕೆ ಯೋಗ್ಯವಾದ ಅನ್ನಕ್ಕೆ ಸ್ವಾಮಿಗಳೂ ಆದ ಮಿತ್ರಾವರುಣರು ಮಹತ್ತಾದ ರಥವನ್ನು ಹತ್ತುತ್ತಾರೆ.

## English Translation.

Senders of rain from heaven, granters of desires, lords of sustenance suited to the liberal donors (of oblations), they ascend their spacious car.

# ಅರವತ್ತೊಂಭತ್ತನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ತ್ರೀ ರೋಚನೇತಿ ಚತುರ್ಋಚಂ ತ್ರಯೋದಶಂ ಸೂಕ್ತಂ । ಉರುಚಕ್ರಿರ್ನಾಮಾತ್ರೇಯ ಋಷಿಃ । ತ್ರಿಷ್ಟುಪ್ ಛಂದಃ । ಮಿತ್ರಾವರುಣೌ ದೇವತಾ । ಅನುಕ್ರಮ್ಯತೇ ಚ । ತ್ರೀ ರೋಚನಾ ಚತುಷ್ಕಮುರುಚಕ್ರಿರಿತಿ ॥ ವಿನಿಯೋಗೋ ಲೈಂಗಿಕಃ ॥**

ಅನುವಾದವು—**ತ್ರೀ ರೋಚನಾ** ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ಹದಿಮೂರನೆಯ ಸೂಕ್ತವು. ಇದರಲ್ಲಿ ನಾಲ್ಕು ಋಕ್ಕುಗಳಿರುವವು. ಈ ಸೂಕ್ತಕ್ಕೆ ಉರುಚಕ್ರಿರಾತ್ರೇಯಃ ಎಂಬುವನು ಋಷಿಯು; ಮಿತ್ರಾವರುಣರು ದೇವತೆಯು ; ತ್ರಿಷ್ಟುಪ್‌ಛಂದಸ್ಸು. ಅನುಕ್ರಮಣಿಕೆಯಲ್ಲಿ—**ತ್ರೀ ರೋಚನಾ ಚತುಷ್ಕಮುರು-ಚಕ್ರಿಃ** ಎಂದು ಹೇಳಿರುವುದು. ವಿನಿಯೋಗವು ಲೈಂಗಿಕವು.

## ಸೂಕ್ತ ೬೯

ಮಂಡಲ—೫ ॥ ಅನುವಾಕ—೫ ॥ ಸೂಕ್ತ—೬೯ ॥
ಅಷ್ಟಕ - ೪ ॥ ಅಧ್ಯಾಯ—೪ ॥ ವರ್ಗ—೭ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೪ ॥
॥ ಋಷಿಃ — ಉರುಚಕ್ರಿರಾತ್ರೇಯಃ ॥
॥ ದೇವತಾ — ಮಿತ್ರಾವರುಣೌ ॥
॥ ಛಂದಃ — ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ತ್ರೀ ರೋಚನಾ ವರುಣ ತ್ರೀರುತ ದ್ಯೂನ್ತ್ರೀಣಿ ಮಿತ್ರ ಧಾರಯಥೋ ರಜಾಂಸಿ ।
ವಾವೃಧಾನಾವಮತಿಂ ಕ್ಷತ್ರಿಯಸ್ಯಾನು ವ್ರತಂ ರಕ್ಷಮಾಣಾವಜುರ್ಯಂ ॥

॥ ಪದಪಾಠಃ ॥

**ತ್ರೀ । ರೋಚನಾ । ವರುಣ । ತ್ರೀನ್ । ಉತ । ದ್ಯೂನ್ । ತ್ರೀಣಿ । ಮಿತ್ರ । ಧಾರಯಥಃ । ರಜಾಂಸಿ । ವವೃಧಾನೌ । ಅಮತಿಂ । ಕ್ಷತ್ರಿಯಸ್ಯ । ಅನು । ವ್ರತಂ । ರಕ್ಷಮಾಣೌ । ಅಜುರ್ಯಂ ॥ ೧ ॥**

॥ ಸಾಯಣಭಾಷ್ಯಂ ॥

**ಹೇ ವರುಣ ಹೇ ಮಿತ್ರ ಯುವಾಂ ತ್ರೀ ತ್ರೀಣಿ ರೋಚನಾ ರೋಚನಾನಿ ದ್ಯುಲೋಕಾನ್ ಧಾರಯಥ ಇತಿ ಸಂಬಂಧಃ । ಉತಾಪಿ ಚ ತ್ರೀನ್ದ್ಯೂನ್ ದ್ಯೋತಮಾನಾನಂತರಿಕ್ಷಲೋಕಾನ್ಧಾರಯೆಥಃ । ತಥಾ ತ್ರೀಣಿ ರಜಾಂಸಿ ಭೂಲೋಕಾನ್ । ಕೀದೃಶೌ ಯುವಾಂ । ವಾವೃಧಾನೌ ವರ್ಧಮಾನೌ ಕ್ಷತ್ರಿಯಸ್ಯ । ಕ್ಷತ್ರಂ ಬಲಂ । ತದ್ವತ ಇಂದ್ರಸ್ಯ । ಯದ್ವಾ । ಕ್ಷತ್ರಿಯಜಾತೀಯಸ್ಯ ಯಜಮಾನಸ್ಯಾಮತಿಂ । ರೂಪನಾಮೈತತ್ । ರೂಪಂ ವ್ರತಂ ಕರ್ಮ ಚಾಜುರ್ಯಮಜೀರ್ಣಮನಿರತಂ ವಾ ರಕ್ಷಮಾಣೌ ॥**

॥ ಪ್ರತಿಪದಾರ್ಥ ॥

**ವರುಣ**—ಎಲೈ ವರುಣನೇ । **ಮಿತ್ರ**—ಎಲೈ ಮಿತ್ರನೇ । (ನೀವಿಬ್ಬರೂ ಸಹ) **ಕ್ಷತ್ರಿಯಸ್ಯ**—ಬಲಶಾಲಿಯಾದ ಇಂದ್ರನ । **ಅಮತಿಂ**— ಸ್ವರೂಪವನ್ನು । **ವಾವೃಧಾನೌ**-- ವೃದ್ಧಿಯಾಗುವಂತೆ ಮಾಡುತ್ತಲೂ । **ಅಜುರ್ಯಂ**—ಕ್ಷಯರಹಿತವಾದ । **ವ್ರತಂ**- ಕರ್ಮವನ್ನು । **ಅನುರಕ್ಷಮಾಣೌ**— ನಿರಂತರವಾಗಿ ರಕ್ಷಿಸುತ್ತಲೂ । **ತ್ರೀ ರೋಚನಾ**—ಪ್ರಭಾಯುತವಾದ ಮೂರು ದ್ಯುಲೋಕಗಳನ್ನೂ । **ತ್ರೀನ್ ದ್ಯೂನ್**—ಪ್ರಕಾಶಮಾನವಾದ ಮೂರು ಅಂತರಿಕ್ಷಗಳನ್ನೂ । **ಉತ**— ಮತ್ತು । **ತ್ರೀಣಿ ರಜಾಂಸಿ**— ಮೂರು ಪೃಥ್ವೀಲೋಕಗಳನ್ನೂ । **ಧಾರಯಥಃ**—ಧರಿಸಿದ್ದೀರಿ

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ನೀವಿಬ್ಬರೂ ಸಹ ಬಲಶಾಲಿಯಾದ ಇಂದ್ರನ ಸ್ವರೂಪವನ್ನು ವೃದ್ಧಿಯಾಗುವಂತೆ ಮಾಡುತ್ತಲೂ, ಕ್ಷಯರಹಿತವಾದ ಕರ್ಮವನ್ನು ನಿರಂತರವಾಗಿ ರಕ್ಷಿಸುತ್ತಲೂ, ಪ್ರಭಾಯುತವಾದ ಮೂರು ದ್ಯುಲೋಕಗಳನ್ನೂ, ಪ್ರಕಾಶಮಾನವಾದ ಮೂರು ಅಂತರಿಕ್ಷಗಳನ್ನೂ ಮತ್ತು ಮೂರು ಪೃಥ್ವೀಲೋಕಗಳನ್ನೂ ಧರಿಸಿದ್ದೀರಿ.

## English Translation.

Mitra and Varuna, you uphold the three realms of light, the three heavens; the three regions (of the earth), augmenting the force of the vigorous (Indra), and protecting the imperishable rite.

॥ ಸಂಹಿತಾಪಾಠಃ ॥

ಇರಾವತೀರ್ವರುಣ ಧೇನವೋ ವಾಂ ಮಧುಮದ್ವಾಂ ಸಿಂಧವೋ ಮಿತ್ರ-
ದುಹ್ರೇ ।
ತ್ರಯಸ್ತಸ್ಥುರ್ವೃಷಭಾಸಸ್ತಿಸೃಣಾಂ ಧಿಷಣಾನಾಂ ರೇತೋಧಾ ವಿ ದ್ಯುಮಂತಃ ॥

॥ ಪದಪಾಠಃ ॥

ಇರಾವತೀಃ । ವರುಣ । ಧೇನವಃ । ವಾಂ । ಮಧುಽಮತ್ । ವಾಂ । ಸಿಂಧವಃ । ಮಿತ್ರ । ದುಹ್ರೇ ।
ತ್ರಯಃ । ತಸ್ಥುಃ । ವೃಷಭಾಸಃ । ತಿಸೃಣಾಂ । ಧಿಷಣಾನಾಂ । ರೇತಃಽಧಾಃ । ವಿ । ದ್ಯುಽಮಂತಃ ॥ ೨ ॥

॥ ಸಾಯಣಭಾಷ್ಯಂ ॥

ಹೇ ವರುಣ ಹೇ ಮಿತ್ರ ವಾಂ ಯುವಯೋರಾಜ್ಞಯಾ ಧೇನವೋ ಗಾವ ಇರಾವತೀಃ । ಇರಾ ಕ್ಷೀರಲಕ್ಷಣಾ । ತದ್ವತ್ಯೋ ಭವಂತಿ । ತಥಾ ಸಿಂಧವಃ ಸ್ಯಂದನಶೀಲಾ ಮೇಘಾ ನದ್ಯೋ ವಾ ಮಧುಮನ್ಮಧುರರಸಮುದಕಂ ದುಹ್ರೇ । ದುಹಂತಿ । ತಥಾ ತ್ರಯಸ್ತ್ರಿಸಂಖ್ಯಾಕಾ ವೃಷಭಾಸೋ ವರ್ಷಿತಾರೋ ರೇತೋಧಾ ಉದಕಸ್ಯ ಧಾರಕಾ ದ್ಯುಮಂತೋ ದೀಪ್ತಿಮಂತೋಽಗ್ನಿವಾಯ್ವಾದಿತ್ಯಾಸ್ತಿಸೃಣಾಂ ತ್ರಿಸಂಖ್ಯಾಕಾನಾಂ ಧಿಷಣಾನಾಂ ಸ್ಥಾನಾನಾಂ ಪೃಥಿವ್ಯಂತರಿಕ್ಷದ್ಯುಲೋಕಾನಾಂ ಸ್ವಾಮಿನಃ ಸಂತೋ ವಿ ವಿವಿಧಂ ಪ್ರತ್ಯೇಕಂ ತಸ್ಥುಃ । ತಿಷ್ಠಂತಿ । ಯುವಯೋರನುಗ್ರಹಾತ್ ತ್ರಯೋಽಪಿ ದೇವಾಸ್ತ್ರಿಷು ಸ್ಥಾನೇಷು ವರ್ತಂತ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

**ವರುಣ**—ಎಲೈ ವರುಣನೇ । **ಮಿತ್ರ**—ಎಲೈ ಮಿತ್ರನೇ । **ವಾಂ**—ನಿಮ್ಮ ಆಜ್ಞೆಯಿಂದ । **ಧೇನವಃ**—ಧೇನುಗಳು । **ಇರಾವತೀಃ**—ಕ್ಷೀರಭರಿತವಾಗಿವೆ । **ವಾಂ**—ನಿಮ್ಮ ಆಜ್ಞೆಯಿಂದಲೇ । **ಸಿಂಧವಃ**—ನದಿಗಳು । **ಮಧುಮತ್**—ಮಧುರವಾದ ಉದಕವನ್ನು । **ದುಹ್ರೇ**—ಒದಗಿಸುತ್ತವೆ । (ಆ ನಿಮ್ಮ ಆಜ್ಞೆಯಿಂದಲೇ) **ವೃಷಭಾಸಃ**—ವೃಷ್ಟಿಕಾರಕರೂ । **ರೇತೋಧಾಃ**—ಉದಕವನ್ನು ಧರಿಸಿರುವವರೂ । **ದ್ಯುಮಂತಃ**—ಕಾಂತಿಯುತರೂ ಆದ । **ತ್ರಯಃ**—ಅಗ್ನಿವಾಯ್ವಾದಿತ್ಯರು । **ತಿಸೃಣಾಂ ಧಿಷಣಾನಾಂ**— ಪೃಥಿವ್ಯಂತರಿಕ್ಷದ್ಯುಲೋಕರೂಪವಾದ ಮೂರು ಸ್ಥಾನಗಳಿಗೂ (ಪ್ರಭುಗಳಾಗಿ) । **ವಿತಸ್ಥುಃ**— ಪ್ರತ್ಯೇಕವಾಗಿ ಸ್ಥಾಪಿತರಾಗಿದ್ದಾರೆ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ನಿಮ್ಮ ಆಜ್ಞೆಯಿಂದ ಧೇನುಗಳು ಕ್ಷೀರಭರಿತವಾಗಿವೆ. ನಿಮ್ಮ ಆಜ್ಞೆಯಿಂದಲೇ ನದಿಗಳು ಮಧುರವಾದ ಉದಕವನ್ನು ಒದಗಿಸುತ್ತವೆ. ಅದೇ ನಿಮ್ಮ ಆಜ್ಞೆಯಿಂದಲೇ, ವೃಷ್ಟಿಕಾರಕರೂ, ಉದಕಧಾರಕರೂ, ಕಾಂತಿಯುತರೂ ಆದ ಅಗ್ನಿವಾಯ್ವಾದಿತ್ಯರು ಪೃಥಿವ್ಯಂತರಿಕ್ಷದ್ಯುಲೋಕರೂಪವಾದ ಮೂರು ಸ್ಥಾನಗಳಿಗೂ ಪ್ರಭುಗಳಾಗಿ ಪ್ರತ್ಯೇಕವಾಗಿ ಸ್ಥಾಪಿತರಾಗಿದ್ದಾರೆ.

## English Translation.

Mitra and Varuna, the cows are full of milk through your (command) and the rivers yield through your (will) sweet water; through you the three radiant receptacles and showers of rain stand severally in their three spheres.

॥ ಸಂಹಿತಾಪಾಠಃ ॥

ಪ್ರಾತರ್ದೇವೀಮದಿತಿಂ ಜೋಹವೀಮಿ ಮಧ್ಯಂದಿನ ಉದಿತಾ ಸೂರ್ಯಸ್ಯ ।
ರಾಯೇ ಮಿತ್ರಾವರುಣಾ ಸರ್ವತಾತೇಳೇ ತೋಕಾಯ ತನಯಾಯ ಶಂ ಯೋಃ ॥ ೩ ॥

॥ ಪದಪಾಠಃ ॥

ಪ್ರಾತಃ । ದೇವೀಂ । ಅದಿತಿಂ । ಜೋಹವೀಮಿ । ಮಧ್ಯಂದಿನೇ । ಉತ್ಽಇತಾ । ಸೂರ್ಯಸ್ಯ ।
ರಾಯೇ । ಮಿತ್ರಾವರುಣಾ । ಸರ್ವಽತಾತಾ । ಈಳೇ । ತೋಕಾಯ । ತನಯಾಯ । ಶಂ । ಯೋಃ ॥ ೩ ॥

॥ ಸಾಯಣಭಾಷ್ಯಂ ॥

ಅಹಮೃಷಿಃ ಪ್ರಾತಃ ಪ್ರಾತಃಕಾಲೇಽದಿತಿಮಖಂಡನೀಯಾಂ ದೇವಾನಾಂ ಜನನೀಂ ದೇವೀಂ ದ್ಯೋತಮಾನಾಂ ಜೋಹವೀಮಿ ॥ ಆಹ್ವಯಾಮಿ । ತಥಾ ಮಧ್ಯಂದಿನೇ ಸೂರ್ಯಸ್ಯೋದಿತೋದಿತಾ ತತ್ಸಮೃದ್ಧಿಕಾಲೇ ಮಾಧ್ಯಂದಿನೇ ಸವನೇ ಜೋಹವೀಮಿ । ಹೇ ಮಿತ್ರಾವರುಣಾ ಯುವಾಂ ರಾಯೇ ಧನಪ್ರಾಪ್ತ್ಯೇ ಸರ್ವತಾತೌ ಯಜ್ಞ ಈಳೇ । ಸ್ತೌಮಿ । ಪುನಃ ಕಿಮರ್ಥಂ । ತೋಕಾಯ ಪುತ್ರಾಯ ತನಯಾಯ ತತ್ಪುತ್ರಾಯ ಚ ಶಮರಿಷ್ಟಶಮನಾಯ ಯೋಃ ಸುಖಸ್ಯ ಮಿಶ್ರಣಾಯ ಚೇಳ ಇತಿ ॥

॥ ಪ್ರತಿಪದಾರ್ಥ ॥

**ದೇವೀಂ**—ದೇವತಾತ್ಮಳೂ । **ಅದಿತಿಂ**—ದೇವಮಾತೆಯೂ ಆದ ಅದಿತಿಯನ್ನು । **ಪ್ರಾತಃ**— ಪ್ರಾತಃ ಸವನದಕಾಲದಲ್ಲಿ । **ಜೋಹವೀಮಿ**—ಪ್ರಾರ್ಥಿಸಿ ಕರೆಯುತ್ತೇನೆ । **ಸೂರ್ಯಸ್ಯ ಉದಿತಾ**—ಸೂರ್ಯನು ಮೇಲಕ್ಕೆ ಬಂದಾಗ । **ಮಧ್ಯಂದಿನೇ**— ಮಾಧ್ಯಂದಿನಸವನಕಾಲದಲ್ಲಿಯೂ ಕರೆಯುತ್ತೇನೆ । **ಮಿತ್ರಾವರುಣಾ**— ಎಲೈ ಮಿತ್ರಾವರುಣರೇ । (ನಿಮ್ಮನ್ನು) **ಸರ್ವತಾತಾ**—ಯಜ್ಞದ ಸರ್ವಕಾಲದಲ್ಲೂ । **ರಾಯೇ**— ಧನಕ್ಕಾಗಿಯೂ **ತೋಕಾಯ**— ಪುತ್ರಾರ್ಥವಾಗಿಯೂ । **ತನಯಾಯ**—ತತ್ಪುತ್ರಾರ್ಥವಾಗಿಯೂ (ಮೊಮ್ಮಗನಿಗಾಗಿಯೂ) । **ಶಂಯೋಃ**—ಸುಖಪ್ರಾಪ್ತಿ ಮತ್ತು ದುಃಖನಿವಾರಣೆಗಾಗಿಯೂ ಸಹ । **ಈಳೇ**—ಸ್ತುತಿಸುತ್ತೇನೆ.

॥ ಭಾವಾರ್ಥ ॥

ದೇವತಾತ್ಮಳೂ, ದೇವಮಾತೆಯೂ ಆದ ಅದಿತಿಯನ್ನು ಪ್ರಾತಃಸವನದಕಾಲದಲ್ಲೂ, ಸೂರ್ಯನು ಮೇಲಕ್ಕೆ ಬಂದಾಗ ಮಾಧ್ಯಂದಿನಸವನದಕಾಲದಲ್ಲೂ ಪ್ರಾರ್ಥಿಸಿ ಕರೆಯುತ್ತೇನೆ. ಎಲೈ ಮಿತ್ರಾವರುಣರೇ, ನಿಮ್ಮನ್ನು ಯಜ್ಞದ ಸರ್ವಕಾಲದಲ್ಲಿಯೂ ಸಹ ಧನಕ್ಕಾಗಿಯೂ, ಪುತ್ರಾರ್ಥವಾಗಿಯೂ, ತತ್ಪುತ್ರಾರ್ಥವಾಗಿಯೂ, ಸುಖಪ್ರಾಪ್ತಿ ಮತ್ತು ದುಃಖನಿವಾರಣೆಗಾಗಿಯೂ ಸಹ ಪ್ರಾರ್ಥಿಸಿ ಕರೆಯುತ್ತೇನೆ.

## English Translation.

I invoke the divine and bright Aditi at dawn, and at mid-day, when the sun is high : I worship you, Mitra and Varuna, at all seasons, for the sake of riches, for sons and grandsons, for prosperity and happiness.

॥ ಸಂಹಿತಾಪಾಠಃ ॥

ಯಾ ಧರ್ತಾರಾ ರಜಸೋ ರೋಚನಸ್ಯೋತಾದಿತ್ಯಾ ದಿವ್ಯಾ ಪಾರ್ಥಿವಸ್ಯ ।
ನ ವಾಂ ದೇವಾ ಅಮೃತಾ ಆ ಮಿನಂತಿ ವ್ರತಾನಿ ಮಿತ್ರಾವರುಣಾ ಧ್ರುವಾಣಿ ॥

॥ ಪದಪಾಠಃ ॥

ಯಾ । ಧರ್ತಾರಾ । ರಜಸಃ । ರೋಚನಸ್ಯ । ಉತ । ಆದಿತ್ಯಾ । ದಿವ್ಯಾ । ಪಾರ್ಥಿವಸ್ಯ ।
ನ । ವಾಂ । ದೇವಾಃ । ಅಮೃತಾಃ । ಆ । ಮಿನಂತಿ । ವ್ರತಾನಿ । ಮಿತ್ರಾವರುಣಾ । ಧ್ರುವಾಣಿ ॥ ೪ ॥

॥ ಸಾಯಣಭಾಷ್ಯಂ ॥

ಯಾ ಯೌ ರೋಚನಸ್ಯ ರೋಚಮಾನಸ್ಯ ರಜಸೋ ಲೋಕಸ್ಯ । ಸ್ವರ್ಗಾಖ್ಯಸ್ಯೇತ್ಯರ್ಥಃ । ಉತಾಪಿ ಚ ಪಾರ್ಥಿವಸ್ಯ ರಜಸೋ ಯಾ ಯೌ ಧರ್ತಾರಾವಾದಿತ್ಯಾವದಿತೇಃ ಪುತ್ರೌ ದಿವ್ಯಾ ದಿವಿ ಭವೌ ತೌ ಯುವಾಮಿಳ ಇತಿ ಪೂರ್ವತ್ರ ಸಂಬಂಧಃ । ಹೇ ಮಿತ್ರಾವರುಣಾ ವಾಂ ಯುವಯೋರ್ಧ್ರುವಾಣಿ ವ್ರತಾನಿ ಕರ್ಮಾಣಿ ದೇವಾ ಅನ್ಯ ಇಂದ್ರಾದಯೋಽಮೃತಾ ಅಮರಣಧರ್ಮಾಣೋಽಪಿ ನಾ ಮಿನಂತಿ । ನ ಹಿಂಸಂತಿ । ಯತೋ ಧ್ರುವಾಣ್ಯತ ಇತ್ಯಭಿಪ್ರಾಯಃ ॥

॥ ಪ್ರತಿಪದಾರ್ಥ ॥

**ಯಾ**—ಯಾರು । **ರೋಚನಸ್ಯ**—ಪ್ರಭಾಯುತವಾದ । **ರಜಸಃ**—ದ್ಯುಲೋಕದ । **ಉತ**—ಮತ್ತು । **ಪಾರ್ಥಿವಸ್ಯ**—ಪೃಥಿವೀಲೋಕದ । **ಧರ್ತಾರಾ**—ಧಾರಕರೋ ಅಂತಹ । **ದಿವ್ಯಾ**—ದೇವತಾತ್ಮರೂ । **ಆದಿತ್ಯಾ**—ಅದಿತಿಪುತ್ರರೂ ಆದ ಮಿತ್ರಾವರುಣರನ್ನು । **ಈಳೇ**—ಸ್ತುತಿಸುತ್ತೇನೆ । **ಮಿತ್ರಾವರುಣಾ**—ಎಲೈ ಮಿತ್ರಾವರುಣರೇ । **ವಾಂ**—ನಿಮ್ಮ । **ಧ್ರುವಾಣಿ**—ಸ್ಥಿರವಾದ । **ವ್ರತಾನಿ**—ಕರ್ಮಗಳನ್ನು । **ಅಮೃತಾಃ**—ಮರಣಧರ್ಮರಹಿತರಾದ । **ದೇವಾಃ**—ಇಂದ್ರಾದಿದೇವತೆಗಳು । **ನ ಆ ಮಿನಂತಿ**—ಹಿಂಸಿಸುವುದಿಲ್ಲ.

॥ ಭಾವಾರ್ಥ ॥

ಯಾರು ಪ್ರಭಾಯುತವಾದ ದ್ಯುಲೋಕಕ್ಕೂ ಮತ್ತು ಪೃಥಿವೀಲೋಕಕ್ಕೂ ಧಾರಕರೋ ಅಂತಹ ದೇವಾತ್ಮರೂ ಅದಿತಿಪುತ್ರರೂ ಆದ ಮಿತ್ರಾವರುಣರನ್ನು ನಾನು ಸ್ತುತಿಸುತ್ತೇನೆ. ಎಲೈ ಮಿತ್ರಾವರುಣರೇ, ನಿಮ್ಮ ಸ್ಥಿರವಾದ ಕರ್ಮಗಳನ್ನು ಮರಣಧರ್ಮರಹಿತರಾದ ಇಂದ್ರಾದಿದೇವತೆಗಳು ಹಿಂಸಿಸುವುದಿಲ್ಲ. (ನಿರಾರಲಾಗುವುದಿಲ್ಲ)

## English Translation.

I worship you two, divine Adityas, who are upholders of the celestial and terrestial worlds: the immortal gods impair not, Mitra and Varuna, your eternal works.

# ಎಪ್ಪತ್ತನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಪುರೂರುಣೇತಿ ಚತುರ್‌ಋಚಂ ಚತುರ್ದಶಂ ಸೂಕ್ತಮುರುಚಕ್ರೇರಾರ್ಷಂ ಗಾಯತ್ರಂ ಮೈತ್ರಾವರುಣಂ । ಪುರೂರುಣಾ ಗಾಯತ್ರಂ ತ್ವಿತ್ಯನುಕ್ರಮಣಿಕಾ ॥ ಪೃಷ್ಠ್ಯಾಭಿಪ್ಲವಷಡಹಯೋಃ ಪ್ರಾತಃಸವನ ಆವಾಪಾರ್ಥತ್ವೇನೇದಮಪಿ ಸೂಕ್ತಂ ಪೂರ್ವಸೂಕ್ತೇನ ಸಹ ಪ್ರ ವೋ ಮಿತ್ರಾಯೇತಿ ಚತುರ್ಣಾಂ ದ್ವಿತೀಯಮುದ್ಧರೇದಿತಿ ಹ್ಯುಕ್ತಂ ॥ ಚಾತುರ್ವಿಂಶಿಕೇಽಹನಿ ಪ್ರಾತಃಸವನೇ ಮೈತ್ರಾವರುಣಶಸ್ತ್ರ ಆದ್ಯಸ್ತೃಚಃ ಷಡಹಸ್ತೋತ್ರಿಯಸಂಜ್ಞಕಃ । ಸೂತ್ರಿತಂ ಚ । ಪುರೂರುಣಾ ಚಿದ್ಧ್ಯಸ್ತಿ ಪ್ರತಿ ವಾಂ ಸೂರ ಉದಿತೇ ॥ ಆ. ೭-೨ । ಇತಿ ॥**

ಅನುವಾದವು— **ಪುರೂರುಣಾ** ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ಹದಿನಾಲ್ಕನೆಯ ಸೂಕ್ತವು. ಇದರಲ್ಲಿ ನಾಲ್ಕು ಋಕ್ಕುಗಳಿರುವವು. ಈ ಸೂಕ್ತಕ್ಕೆ **ಉರುಚಕ್ರಿರಾತ್ರೇಯಃ** ಎಂಬುವನು ಋಷಿಯು; ಮಿತ್ರಾವರುಣರು ದೇವತೆಯು, ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ— **ಪುರೂರುಣಾ ಗಾಯತ್ರಂ ತು** ಎಂದು ಹೇಳಿರುವುದು. ಪೃಷ್ಠ್ಯ ಮತ್ತು ಅಭಿಪ್ಲವಷಡಹವೆಂಬ ಯಾಗಗಳ ಪ್ರಾತಸ್ಸವನಕಾಲದಲ್ಲಿ ಸ್ತೋತ್ರಾಭಿವೃದ್ಧಿಗಾಗಿ ಹಿಂದಿನ ಸೂಕ್ತದ ಜತೆಯಲ್ಲಿ ಈ ಸೂಕ್ತದ ವಿನಿಯೋಗವೂ ಇರುವುದೆಂದು— **ಪ್ರ ವೋ ಮಿತ್ರಾಯೇತಿ ಚತುರ್ಣಾಂ ದ್ವಿತೀಯಮುದ್ಧರೇತ್** ಎಂಬ ಸೂತ್ರದಿಂದ ಹಿಂದೆಯೇ ಹೇಳಲಾಗಿದೆ ಮತ್ತು ಯಾಗದ ಇಪ್ಪತ್ತನಾಲ್ಕನೆಯ ದಿವಸ ಪ್ರಾತಸ್ಸವನಕಾಲದಲ್ಲಿ ಮೈತ್ರಾವರುಣನೆಂಬ ಋತ್ವಿಜನು ಪಠಿಸಬೇಕಾದ ಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ಮೊದಲತೃಚವನ್ನು (ಮೂರು ಋಕ್ಕುಗಳು) ಷಡಹಸ್ತೋತ್ರಿಯಸಂಜ್ಞಕಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಪುರೂರುಣಾ ಚಿದ್ಧ್ಯಸ್ತಿ ಪ್ರತಿ ವಾಂ ಸೂರ ಉದಿತೇ** ಎಂಬ ಸೂತ್ರದಿಂದ (ಆ. ೭-೨) ವಿವೃತವಾಗಿರುವುದು.

## ಸೂಕ್ತ—೭೦

ಮಂಡಲ—೫ ॥ ಅನುವಾಕ—೫ ॥ ಸೂಕ್ತ—೭೦ ॥
ಅಷ್ಟಕ—೪ ॥ ಅಧ್ಯಾಯ—೪ ॥ ವರ್ಗ—೮ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೪ ॥
॥ ಋಷಿಃ—ಉರುಚಕ್ರಿರಾತ್ರೇಯಃ ॥
॥ ದೇವತಾ—ಮಿತ್ರಾವರುಣೌ ॥
॥ ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಪುರೂರುಣಾ ಚಿದ್ಧ್ಯಸ್ತ್ಯವೋ ನೂನಂ ವಾಂ ವರುಣ ।
ಮಿತ್ರ ವಂಸಿ ವಾಂ ಸುಮತಿಂ ॥ ೧ ॥

॥ ಪದಪಾಠಃ ॥

ಪುರುऽಉರುಣಾ । ಚಿತ್ । ಹಿ । ಅಸ್ತಿ । ಅವಃ । ನೂನಂ । ವಾಂ । ವರುಣ ।
ಮಿತ್ರ । ವಂಸಿ । ವಾಂ । ಸುऽಮತಿಂ ॥ ೧ ॥

॥ ಸಾಯಣಭಾಷ್ಯಂ ॥

ಹೇ ಮಿತ್ರಾವರುಣೌ ವಾಂ ಯುವಯೋಃ ಪುರೂರುಣಾ ಚಿತ್ ॥ ಅತ್ರ ಸೋಃ ಸುಪಾಂ ಸುಲುಗಿತ್ಯಾಕಾರಃ ॥ ಪುರೋರಪಿ ಬಹು ಉರು ಬಹುತರಂ । ಅಥವಾ ಪುರು ಚ ತದುರು ಚ ಪುರೂರು । ಅತ್ಯಂತಮುರುತರಮಿತ್ಯರ್ಥಃ । ತಾದೃಗವೋ ರಕ್ಷಣಂ ನೂನಂ ನಿಶ್ಚಯೇನಾಸ್ತಿ । ಹಿ ಪ್ರಸಿದ್ಧೌ । ಚಿದಿತಿ ಪೂರಣಃ । ಹೇ ವರುಣ ಹೇ ಮಿತ್ರ ವಾಂ ಯುವಯೋಃ ಸುಮತಿಮನುಗ್ರಹಬುದ್ಧಿಂ ವಂಸಿ । ಸಂಭಜೇಯ । ಯಸ್ಮಾದವೋऽಸ್ತಿ ತಸ್ಮಾದ್ವಂಸೀತಿ ಭಾವಃ ॥

॥ ಪ್ರತಿಪದಾರ್ಥ ॥

**ವರುಣ**—ಎಲೈ ವರುಣನೇ । **ಮಿತ್ರ**—ಎಲೈ ಮಿತ್ರನೇ । **ವಾಂ**—ನಿಮ್ಮ । **ಅವಃ**—ರಕ್ಷಣವು । **ಪುರೂರುಣಾ ಚಿತ್**—ಅತ್ಯಧಿಕವಾಗಿಯೂ । **ನೂನಂ**—ಖಂಡಿತವಾಗಿಯೂ । **ಅಸ್ತಿ ಹಿ**—(ಯಾವ ನಿಮ್ಮ ಅನುಗ್ರಹದಿಂದ) ಇದ್ದೇ ಇದೆಯೋ (ಅಂತಹ) । **ವಾಂ**—ನಿಮ್ಮ । **ಸುಮತಿಂ**—ಅನುಗ್ರಹಬುದ್ಧಿಯನ್ನು **ವಂಸಿ**—ನಾವು ಅನುಭವಿಸುವಂತಾಗಲಿ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ಯಾವ ನಿಮ್ಮ ಅನುಗ್ರಹವಿದ್ದರೆ ನಿಮ್ಮ ರಕ್ಷಣವು ಅತ್ಯಧಿಕವಾದುದೂ, ಖಂಡಿತವಾಗಿಯೂ ಇದ್ದೇ ಇರುವುದೋ ಅಂತಹ ನಿಮ್ಮ ಅನುಗ್ರಹಬುದ್ಧಿಯನ್ನು ನಾವು ಅನುಭವಿಸುವಂತಾಗಲಿ.

## English Translation.

May I, Mitra and Varuna, enjoy your favour, through which there is assuredly protection.

॥ ಸಂಹಿತಾಪಾಠಃ ॥

ತಾ ವಾಂ ಸಮ್ಯಗದ್ರುಹ್ವಾಣೇಷಮಶ್ಯಾಮ ಧಾಯಸೇ ।

ವಯಂ ತೇ ರುದ್ರಾ ಸ್ಯಾಮ ॥ ೨ ॥

॥ ಪದಪಾಠಃ ॥

ತಾ । ವಾಂ । ಸಮ್ಯಕ್ । ಅದ್ರುಹ್ವಾಣಾ । ಇಷಂ । ಅಶ್ಯಾಮ । ಧಾಯಸೇ ।
ವಯಂ । ತೇ । ರುದ್ರಾ । ಸ್ಯಾಮ ॥ ೨ ॥

॥ ಸಾಯಣಭಾಷ್ಯಂ ॥

ಹೇ ಅದ್ರುಹ್ವಾಣಾ ಹೇ ಅದ್ರೋಗ್ಧಾರೌ ತಾ ತೌ ಪ್ರಸಿದ್ಧೌ ವಾಂ ಯುವಾಂ ಸಮ್ಯಕ್ ಸ್ತುಮ ಇತಿ ಶೇಷಃ । ಸ್ತೋತಾರೋ ವಯಮಿಷಮನ್ನಂ ಧಾಯಸೇ ಪಾನಾಯ ಭೋಜನಾಯಾಶ್ಯಾಮ । ಪ್ರಾಪ್ನುಯಾಮ। ಹೇ ರುದ್ರಾ ದುಃಖಾದ್ದ್ರಾವಯಿತಾರೌ ರುದದ್ಭಿರ್ದ್ರವಣೀಯೌ ವಾ ತೇ ಸ್ತೋತಾರೋ ವಯಂ ಸ್ಯಾಮ । ಭವೇಮ । ಸಮೃದ್ಧಾ ಇತಿ ಶೇಷಃ । ಯುವಾಭ್ಯಾಂ ಸ್ವಭೂತಾ ವಾ ಸ್ಯಾಮ ॥

॥ ಪ್ರತಿಪದಾರ್ಥ ॥

**ಅದ್ರುಹ್ವಾಣಾ**—ನಮಗೆ ಕೇಡಕನ್ನಾಚರಿಸದೇ ಉಪಕಾರಮಾಡತಕ್ಕ ಎಲೈ ಮಿತ್ರಾವರುಣರೇ । **ತಾ**—ಪ್ರಸಿದ್ಧರಾದ । **ವಾಂ**—ನಿಮ್ಮನ್ನು । **ಸಮ್ಯಕ್**—ಪೂರ್ಣವಾಗಿ । (**ಸ್ತುಮಃ**—ಸ್ತುತಿಸುತ್ತೇವೆ) । **ಧಾಯಸೇ**—ನಮ್ಮ ಸ್ಥಿತಿಗಾಗಿ । **ಇಷಂ**—ಅನ್ನವನ್ನು । **ಅಶ್ಯಾಮ**—ನಾವು ಹೊಂದುವಂತಾಗಲಿ । **ರುದ್ರಾ**—ಎಲೈ ದುಃಖನಾಶಕರೇ । **ವಯಂ**—ನಾವು । **ತೇ**—ನಿನ್ನ ಸ್ತುತಿಕರ್ತರಾಗಿಯೇ । **ಸ್ಯಾಮ**—ಇರುವಂತಾಗಲಿ.

॥ ಭಾವಾರ್ಥ ॥

ನಮಗೆ ಕೇಡಕನ್ನಾಚರಿಸದೇ ಉಪಕಾರಮಾಡತಕ್ಕ ಎಲೈ ಮಿತ್ರಾವರುಣರೇ. ನಿಮ್ಮನ್ನು ನಾವು ಪೂರ್ಣವಾಗಿ ಸ್ತುತಿಸುತ್ತೇವೆ. ನಮ್ಮ ಸ್ಥಿತಿಸಾಧಕವಾದ ಅನ್ನವನ್ನು ನಾವು ಹೊಂದುವಂತಾಗಲಿ. ಎಲೈ ದುಃಖನಾಶಕರೇ, ನಾವು ನಿನ್ನ ಸ್ತುತಿಕರ್ತರಾಗಿಯೇ ಇರುವಂತಾಗಲಿ.

## English Translation.

Benignant (deities), may we obtain from you, (who are) such (deities), food for our sustenance: May we, Rudras, be yours.

॥ ಸಂಹಿತಾಪಾಠಃ ॥

ಪಾತಂ ನೋ ರುದ್ರಾ ಪಾಯುಭಿರುತ ತ್ರಾಯೇಥಾಂ ಸುತ್ರಾತ್ರಾ ।
ತುರ್ಯಾಮ ದಸ್ಯೂನ್ತನೂಭಿಃ ॥ ೩ ॥

॥ ಪದಪಾಠಃ ॥

ಪಾತಂ । ನಃ । ರುದ್ರಾ । ಪಾಯುಽಭಿಃ । ಉತ । ತ್ರಾಯೇಥಾಂ । ಸುಽತ್ರಾತ್ರಾ ।
ತುರ್ಯಾಮ । ದಸ್ಯೂನ್ । ತನೂಭಿಃ ॥ ೩ ॥

॥ ಸಾಯಣಭಾಷ್ಯಂ ॥

ಹೇ ರುದ್ರೋಕ್ತರೂಪೌ ದೇವೌ ಯುವಾಂ ನೋಽಸ್ಮಾನ್ ಪಾಯುಭೀ ರಕ್ಷಣೈಃ ಪಾತಂ । ರಕ್ಷತಂ । ಉತಾಪಿ ಚ ಸುತ್ರಾತ್ರಾ ಶೋಭನೇನ ತ್ರಾಣೇನ ತ್ರಾಯೇಥಾಂ । ಪಾಲಯೇತಂ । ಇಷ್ಟಪ್ರಾಪ್ತ್ಯನಿಷ್ಟಪರಿಹಾರಭೇದೇನ ಭೇದಃ । ಸ್ತೋತ್ರಾದಿವೈಕಲ್ಯಾಚ್ಛತ್ರೋರ್ವಾ ತ್ರಾಯೇಥಾಂ ಅಭಿಮತಪ್ರಾಪಣೇನ ರಕ್ಷತಮಿತ್ಯರ್ಥಃ । ವಯಂ ಚ ತನೂಭಿಃ ಪುತ್ರಾದಿಭಿಃ ಸಹಿತಾಃ ಸ್ವೀಯೈರಂಗೈರ್ವಾ ದಸ್ಯೂನ್ ಶತ್ರೂನ್ ತುರ್ಯಾಮ । ಹಿಂಸ್ಯಾಮ ತರೇಮ ವಾ ॥

॥ ಪ್ರತಿಪದಾರ್ಥ ॥

ರುದ್ರಾ—ದುಃಖನಿವಾರಕರಾದ ಎಲೈ ದೇವತೆಗಳೇ । ನಃ—ನಮ್ಮನ್ನು । **ಪಾಯುಭಿಃ**—ನಿಮ್ಮ ರಕ್ಷಣೆಗಳಿಂದ । **ಪಾತಂ**—ರಕ್ಷಿಸಿರಿ । **ಉತ**—ಮತ್ತು । **ಸುತ್ರಾತ್ರಾ**—ಉತ್ತಮವಾದ ನಿಮ್ಮ ರಕ್ಷಣಕರ್ಮಗಳಿಂದ । **ತ್ರಾಯೇಥಾಃ**—ನಮ್ಮನ್ನು ರಕ್ಷಿಸಿರಿ । **ತನೂಭಿಃ**—ನಾವು ನಮ್ಮ ಪುತ್ರಾದಿಗಳೊಡನೆ ಸೇರಿ । **ದಸ್ಯೂನ್**—ಶತ್ರುಗಳನ್ನು । **ತುರ್ಯಾಮ**—ಹಿಂಸಿಸುವಂತಾಗಲಿ.

॥ ಭಾವಾರ್ಥ ॥

ಎಲೈ ರುದ್ರರೂಪರಾದ ದೇವತೆಗಳೇ, (ಮಿತ್ರಾವರುಣರೇ) ನಮ್ಮನ್ನು ನಿಮ್ಮ ಉತ್ತಮವಾದ ರಕ್ಷಣ ಕರ್ಮಗಳಿಂದ ಪೂರ್ಣವಾಗಿ ರಕ್ಷಿಸಿರಿ. ನಮ್ಮ ಪುತ್ರಾದಿಗಳೊಡನೆ ಕೂಡಿಕೊಂಡು ನಾವು ನಮ್ಮ ಶತ್ರುಗಳನ್ನು ಹಿಂಸಿಸುವಂತಾಗಲಿ.

## English Translation.

Protect us with your protections: preserve us with kind preservation: may we, with our descendants, overcome the Dasyus.

॥ ಸಂಹಿತಾಪಾಠಃ ॥

ಮಾ ಕಸ್ಯಾದ್ಭುತಕ್ರತೂ ಯಕ್ಷಂ ಭುಜೇಮಾ ತನೂಭಿಃ ।
ಮಾ ಶೇಷಸಾ ಮಾ ತನಸಾ ॥ ೪ ॥

॥ ಪದಪಾಠಃ ॥

ಮಾ । ಕಸ್ಯ । ಅದ್ಭುತಕ್ರತೂ ಇತ್ಯದ್ಭುತಽಕ್ರತೂ । ಯಕ್ಷಂ । ಭುಜೇಮ । ತನೂಭಿಃ ।
ಮಾ । ಶೇಷಸಾ । ಮಾ । ತನಸಾ ॥ ೪ ॥

॥ ಸಾಯಣಭಾಷ್ಯಂ ॥

ಹೇ ಅದ್ಭುತಕ್ರತೂ ಆಶ್ಚರ್ಯಕರ್ಮಾಣೌ ವಯಂ ಕಸ್ಯಾನ್ಯಸ್ಯ ಕಸ್ಯಚನ ಯಕ್ಷಂ ಪೂಜಿತಂ ಧನಂ ಮಾ ಭುಜೇಮ । ಮಾ ಭುಂಜೀಮಹಿ ತನೂಭಿರಸ್ಮದೀಯೈರವಯವೈಃ । ಯುವಯೋರನುಗ್ರಹಾತ್ಸಮೃದ್ಧಾ ವಯಮನ್ಯಯೋಚಿತಧನೇನ ಶರೀರಪೋಷಂ ನ ಕುರ್ಮ ಇತ್ಯರ್ಥಃ । ತಥಾ ಶೇಷಸಾಪತ್ಯೇನ ಸಹಿತಾ ಮಾ ಭುಜೇಮ । ತನಸಾ ಪೌತ್ರಾದಿನಾ ಸಹಿತಾ ಮಾ ಭುಜೇಮ । ಅಸ್ಮತ್ಕುಲೇ ನ ಕೇಽಪಿ ಭುಂಜೀಮಹೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ಅದ್ಭುತಕ್ರತೂ**—ಆಶ್ಚರ್ಯಕರವಾದ ಕರ್ಮವನ್ನು ಮಾಡತಕ್ಕ ಎಲೈ ದೇವತೆಗಳೇ । **ಕಸ್ಯ**—(ನೀವಲ್ಲದೇ) ಬೇರೊಬ್ಬನ । **ಯಕ್ಷಂ**— ಧನವನ್ನು । **ತನೂಭಿಃ**— ನಮ್ಮ ಶರೀರಗಳಿಂದ । **ಮಾ ಭುಜೇಮ**— ನಾವು ಅನುಭವಿಸದಂತಾಗಲಿ । **ಶೇಷಸಾ**—ನಮ್ಮ ಪುತ್ರರೊಡನೆಯೂ । **ಮಾ**—ನಾವು ಅನುಭವಿಸೆವು । **ತನಸಾ**—ಪೌತ್ರಾದಿಗಳೊಡನೆಯೂ । **ಮಾ**—(ಬೇರೆ ಧನವನ್ನು) ಅನುಭವಿಸೆವು,

॥ ಭಾವಾರ್ಥ ॥

ಅದ್ಭುತಕರ್ಮಕಾರಿಗಳಾದ ಎಲೈ ದೇವತೆಗಳೇ, ನಿಮ್ಮ ಅನುಗ್ರಹದಿಂದ ಲಬ್ಧವಾದ ಧನವಲ್ಲದೇ, ಬೇರೆ ಯಾರ ಧನವನ್ನೂ ಸಹ ನಾವು ನಮ್ಮ ಸ್ವಂತ ಶರೀರಪೋಷಣೆಗಾಗಲಿ, ಅಥವಾ ಪುತ್ರಪೌತ್ರಾದಿಗಳ ಭರಣಕ್ಕಾಗಲಿ ಅನುಭವಿಸದಂತಾಗಲಿ

Enlish Translation.

Workers of wonderous deeds, let us not depend upon the bounty of any other (than you), either in our persons, or with our sons and grandsons.

# ಎಪ್ಪತ್ತೊಂದನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಆ ನೋ ಗಂತಮಿತಿ ತೃಚಾತ್ಮಕಂ ಪಂಚದಶಂ ಸೂಕ್ತಂ ಬಾಹುವೃಕ್ತಸ್ಯಾತ್ರೇಯಸ್ಯಾರ್ಷಂ ಗಾಯತ್ರಂ ಮೈತ್ರಾವರುಣಂ । ಆ ನಸ್ತೃಚಂ ಬಾಹುವೃಕ್ತ ಇತ್ಯನುಕ್ರಮಣಿಕಾ ॥ ಉಕ್ತಃ ಸೂಕ್ತವಿನಿಯೋಗಃ ॥ ಅಗ್ನಿಷ್ಟೋಮೇ ಪ್ರಾತಃಸವನೇ ಮೈತ್ರಾವರುಣಶಸ್ತ್ರೇಽಯಮನುರೂಪಸ್ತೃಚಃ । ಸೂತ್ರಿತಂ ಚ । ಆ ನೋ ಮಿತ್ರಾವರುಣಾ ನೋ ಗಂತಂ ರಿಶಾದಸಾ । ಆ. ೫-೧೦ । ಇತಿ ॥**

ಅನುವಾದವು--ಆ **ನೋ ಗಂತಂ** ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ಹದಿನೈದನೆಯ ಸೂಕ್ತವು. ಇದರಲ್ಲಿ ಮೂರು ಋಕ್ಕುಗಳಿರುವವು. ಈ ಸೂಕ್ತಕ್ಕೆ **ಬಾಹುವೃಕ್ತ ಆತ್ರೇಯಃ** ಎಂಬುವನು ಋಷಿಯು; ಮಿತ್ರಾವರುಣರು ದೇವತೆಯು; ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ— **ಆ ನಸ್ತೃಚಂ ಬಾಹುವೃಕ್ತಃ** ಎಂದು ಹೇಳಿರುವುದು ಸೂಕ್ತದ ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ. ಅಗ್ನಿಷ್ಟೋಮಯಾಗದಲ್ಲಿ ಪ್ರಾತಸ್ಸವನ ಕಾಲದಲ್ಲಿ ಮೈತ್ರಾವರುಣನೆಂಬ ಋತ್ವಿಜನು ಪಠಿಸಬೇಕಾದ ಶಸ್ತ್ರಮಂತ್ರಗಳಲ್ಲಿ ಈ ಸೂಕ್ತವನ್ನು ಅನುರೂಪತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಆ ನೋ ಮಿತ್ರಾವರುಣಾ ನೋ ಗಂತಂ ರಿಶಾದಸಾ** ಎಂಬ ಸೂತ್ರದಿಂದ (ಆ. ೫-೧೦) ವಿವೃತವಾಗಿರುವುದು.

## ಸೂಕ್ತ—೭೧

ಮಂಡಲ—೫ ॥ ಅನುವಾಕ—೫ ॥ ಸೂಕ್ತ—೭೧ ॥
ಅಷ್ಟಕ—೪ ॥ ಅಧ್ಯಾಯ—೪ ॥ ವರ್ಗ—೯ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೩ ॥
॥ ಋಷಿಃ—ಬಾಹುವೃಕ್ತ ಆತ್ರೇಯಃ ॥
॥ ದೇವತಾ—ಮಿತ್ರಾವರುಣೌ ॥
॥ ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

**ಆ ನೋ ಗಂತಂ ರಿಶಾದಸಾ ವರುಣ ಮಿತ್ರ ಬರ್ಹಣಾ ।**
**ಉಪೇಮಂ ಚಾರುಮಧ್ವರಂ ॥ ೧ ॥**

॥ ಪದಪಾಠಃ ॥

**ಆ । ನಃ । ಗಂತಂ । ರಿಶಾದಸಾ । ವರುಣ । ಮಿತ್ರ । ಬರ್ಹಣಾ ।**
**ಉಪ । ಇಮಂ । ಚಾರುಂ । ಅಧ್ವರಂ ॥ ೧ ॥**

॥ ಸಾಯಣಭಾಷ್ಯಂ ॥

**ಹೇ ವರುಣ ಹೇ ಮಿತ್ರ ಹೇ ರಿಶಾದಸಾ ಶತ್ರೂಣಾಂ ಪ್ರೇರಕೌ ಯುವಾಂ ನೋಽಸ್ಮಾಕಮಿಮಂ ಚಾರುಂ ಚರಣೀಯಮಧ್ವರಮಹಿಂಸಕಂ ಯಜ್ಞಮುಪಾ ಗಂತಂ । ಉಪಾಗಚ್ಛತಂ । ಕೀದೃಶೌ । ಬರ್ಹಣಾ ಪರಿಬರ್ಹಣೌ ನಿಬರ್ಹಣೌ ಹಂತಾರೌ ಶತ್ರೂಣಾಂ ॥**

॥ ಪ್ರತಿಪದಾರ್ಥ ॥

**ರಿಶಾದಸಾ**—ಶತ್ರುಗಳನ್ನು ಚದುರಿಸುವವರೂ । **ಬರ್ಹಣಾ**—ಶತ್ರುನಾಶಕರೂ ಆದ । **ವರುಣ ಮಿತ್ರ**—ಎಲೈ ಮಿತ್ರ ಮತ್ತು ವರುಣ ದೇವತೆಗಳೇ । **ನಃ**—ನಮ್ಮ । **ಚಾರುಂ**—ಆಕರ್ಷಕವಾದ । **ಇಮಂ ಅಧ್ವರಂ**—ಈ ಯಾಗಕ್ಕೆ । **ಉಪ ಆ ಗಂತಂ**—ದಯಮಾಡಿರಿ.

॥ ಭಾವಾರ್ಥ ॥

ಶತ್ರುಗಳನ್ನು ಚದುರಿಸುವವರೂ, ಶತ್ರುನಾಶಕರೂ ಆದ ಎಲೈ ಮಿತ್ರ ಮತ್ತು ವರುಣದೇವತೆಗಳೇ, ನಮ್ಮ ಆಕರ್ಷಕವಾದ ಈ ಯಾಗಕ್ಕೆ ದಯಮಾಡಿರಿ.

## English Translation.

Mitra and Varuna, scatterers of foes, destroyers of enemies, come to this our accessible sacrifiee.

॥ ಸಂಹಿತಾಪಾಠಃ ॥

ವಿಶ್ವಸ್ಯ ಹಿ ಪ್ರಚೇತಸಾ ವರುಣ ಮಿತ್ರ ರಾಜಥಃ ।
ಈಶಾನಾ ಪಿಪ್ಯತಂ ಧಿಯಃ ॥ ೨ ॥

॥ ಪದಪಾಠಃ ॥

ವಿಶ್ವಸ್ಯ । ಹಿ । ಪ್ರಽಚೇತಸಾ । ವರುಣ । ಮಿತ್ರ । ರಾಜಥಃ ।
ಈಶಾನಾ । ಪಿಪ್ಯತಂ । ಧಿಯಃ ॥ ೨ ॥

॥ ಸಾಯಣಭಾಷ್ಯಂ ॥

**ಹೇ ಮಿತ್ರ ಹೇ ವರುಣ ಪ್ರಚೇತಸಾ ಪ್ರಕೃಷ್ಟಜ್ಞಾನೌ ಯುವಾಂ ವಿಶ್ವಸ್ಯ ರಾಜಥಃ । ಸರ್ವಸ್ಯ ಸ್ವಾಮಿನೌ ಭವಥಃ । ಹೀತಿ ಪ್ರಸಿದ್ಧೌ । ಹೇ ಈಶಾನಾ ಅಸ್ಮಾಕಮೀಶ್ವರೌ ಯುವಾಂ ಧಿಯೋಽಸ್ಮದೀಯಾನಿ ಕರ್ಮಾಣಿ ಪಿಪ್ಯತಂ । ಪ್ಯಾಯಯತಂ ಫಲೈಃ ॥**

॥ ಪ್ರತಿಪದಾರ್ಥ ॥

**ಮಿತ್ರ**—ಎಲೈ ಮಿತ್ರನೇ । **ವರುಣ**—ಎಲೈ ವರುಣನೇ । **ಪ್ರಚೇತಸಾ**—ಅತ್ಯುತ್ತಮವಾದ ಜ್ಞಾನವುಳ್ಳ ನೀವು । **ವಿಶ್ವಸ್ಯ**—ಸಕಲಲೋಕಕ್ಕೂ । **ರಾಜಥಃ ಹಿ**—ಪ್ರಭುಗಳಾಗಿಯೇ ಇದ್ದೀರಿ । **ಈಶಾನಾ**—ನಮ್ಮ ಸ್ವಾಮಿಗಳಾದ ನೀವು । **ಧಿಯಃ**—ನಮ್ಮ ಈ ಕರ್ಮಗಳನ್ನು । **ಪಿಪ್ಯತಂ**—ಫಲಗಳಿಂದ ತುಂಬಿರಿ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ಅತ್ಯುತ್ತಮವಾದ ಜ್ಞಾನವುಳ್ಳ ನೀವು ಸಕಲಲೋಕಕ್ಕೂ ಪ್ರಭುಗಳಾಗಿಯೇ ಇದ್ದೀರಿ ನಮ್ಮ ಸ್ವಾಮಿಗಳಾದ ನೀವು ನಮ್ಮ ಈ ಕರ್ಮಗಳನ್ನು ಫಲಗಳಿಂದ ತುಂಬಿರಿ.

## English Translation.

Sagacious Mitra and Varuna, you reign over all; bestow fulness, lords, upon our ancient rites.

॥ ಸಂಹಿತಾಪಾಠಃ ॥

ಉಪ ನಃ ಸುತಮಾ ಗತಂ ವರುಣ ಮಿತ್ರ ದಾಶುಷಃ ।
ಅಸ್ಯ ಸೋಮಸ್ಯ ಪೀತಯೇ ॥ ೩ ॥

॥ ಪದಪಾಠಃ ॥

ಉಪ । ನಃ । ಸುತಂ । ಆ । ಗತಂ । ವರುಣ । ಮಿತ್ರ । ದಾಶುಷಃ ।
ಅಸ್ಯ । ಸೋಮಸ್ಯ । ಪೀತಯೇ ॥ ೩ ॥

॥ ಸಾಯಣಭಾಷ್ಯಂ ॥

**ನೋऽಸ್ಮಾಕಂ ಸುತಮಭಿಷುತಂ ಸೋಮಂ ಪ್ರತಿ ಹೇ ವರುಣ ಹೇ ಮಿತ್ರ ಯುವಾಮುಪಾಗತಂ । ಉಪಾಗಚ್ಛತಂ । ದಾಶುಷೋ ಹವಿರ್ದಾತುರ್ಮಮಾಸ್ಯ ಸೋಮಸ್ಯ ಪೀತಯೇ ಪಾನಾಯ ॥**

॥ ಪ್ರತಿಪದಾರ್ಥ ॥

**ವರುಣ**—ಎಲೈ ವರುಣನೇ । **ಮಿತ್ರ**—ಎಲೈ ಮಿತ್ರನೇ (ನೀವಿಬ್ಬರೂ ಸಹ) । **ದಾಶುಷಃ**—ಹವಿರ್ದಾತನಾದ ನನ್ನ (ನನ್ನಿಂದ ಅರ್ಪಿತವಾದ) । **ಅಸ್ಯ ಸೋಮಸ್ಯ**—ಈ ಸೋಮರಸದ । **ಪೀತಯೇ**—ಪಾನಾರ್ಥವಾಗಿ । **ನಃ**—ನಮ್ಮ । **ಸುತಂ**—ಹಿಂಡಿ ಸಿದ್ಧವಾಗಿರುವ ಸೋಮವನ್ನು ಲಕ್ಷಿಸಿ । **ಉಪ ಆ ಗತಂ**—ನಮ್ಮಲ್ಲಿಗೆ ಬನ್ನಿರಿ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ನಮ್ಮಿಂದ ಅರ್ಪಿತವಾದ (ಅಥವಾ ಆಗುವ) ಈ ಸೋಮರಸದ ಪಾನಾರ್ಥವಾಗಿ ಈ ನಮ್ಮ ಸೋಮವನ್ನು ಲಕ್ಷಿಸಿ ನಮ್ಮಲ್ಲಿಗೆ ಬನ್ನಿರಿ.

English Translation.

Come, Mitra and Varuna, to our effused libation, to drink of the soma juice of the offerer.

## ಎಪ್ಪತ್ತೆರಡನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಆ ಮಿತ್ರೇ ವರುಣ ಇತಿ ತೃಚಾತ್ಮಕಂ ಷೋಡಶಂ ಸೂಕ್ತಂ ಬಾಹುವೃಕ್ತಸ್ಯಾರ್ಷಮೌಷ್ಣಿಹಂ ಮೈತ್ರಾವರುಣಂ। ಆ ಮಿತ್ರ ಔಷ್ಣಿಹಮಿತ್ಯನುಕ್ರಮಣಿಕಾ ॥ ದಶರಾತ್ರೇ ತೃತೀಯೇಽಹನಿ ಪ್ರಉಗಶಸ್ತ್ರೇಽಯಂ ಮೈತ್ರಾವರುಣಸ್ಯ ತೃಚಃ। ಸೂತ್ರಿತಂ ಚ। ಆ ಮಿತ್ರೇ ವರುಣೇ ವಯಮುಷ್ಣಿನಾವೇಹ ಗಚ್ಛತಂ। ಆ. ೭-೧೦। ಇತಿ ॥**

ಅನುವಾದವು— **ಆ ಮಿತ್ರೇ ವರುಣೇ** ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ಹದಿನಾರನೆಯ ಸೂಕ್ತವು. ಇದರಲ್ಲಿ ಮೂರು ಋಕ್ಕುಗಳಿರುವವು. ಈ ಸೂಕ್ತಕ್ಕೆ **ಬಾಹುವೃಕ್ತ ಆತ್ರೇಯಃ** ಎಂಬುವನು ಋಷಿಯು; ಮಿತ್ರಾವರುಣರು ದೇವತೆಯು; ಉಷ್ಣಿಕ್‌ಛಂದಸ್ಸು. ಅನುಕ್ರಮಣಿಕೆಯಲ್ಲಿ **ಆ ಮಿತ್ರ ಔಷ್ಣಿಹಂ** ಎಂದು ಎಂದು ಹೇಳಿರುವುದು. ದಶರಾತ್ರವೆಂಬ ಯಾಗದ ಮೂರನೆಯ ದಿವಸ ಪ್ರಉಗಶಸ್ತ್ರಮಂತ್ರಗಳನ್ನು ಪಠಿಸುವಾಗ ಮೈತ್ರಾವರುಣನೆಂಬ ಋತ್ವಿಜನು ಪಠಿಸುವ ತೃಚಕ್ಕಾಗಿ (ಮೂರು ಋಕ್ಕುಗಳಿಗಾಗಿ) ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ಆ ಮಿತ್ರೇ ವರುಣೇ ವಯಮುಷ್ಣಿನಾವೇಹ ಗಚ್ಛತಂ** ಎಂಬ ಸೂತ್ರದಿಂದ (ಆ ೭-೧೦) ವಿವೃತವಾಗಿರುವುದು.

### ಸೂಕ್ತ—೭೨

ಮಂಡಲ—೫ ॥ ಅನುವಾಕ—೫ ॥ ಸೂಕ್ತ—೭೨ ॥
ಅಷ್ಟಕ—೪ ॥ ಅಧ್ಯಾಯ—೪ ॥ ವರ್ಗ—೧೧ ॥
॥ **ಸೂಕ್ತದಲ್ಲಿರುವ ಋಕ್ಸಂಖ್ಯೆ—೩** ॥
॥ **ಋಷಿಃ—ಬಾಹುವೃಕ್ತ ಆತ್ರೇಯಃ** ॥
॥ **ದೇವತಾ—ಮಿತ್ರಾವರುಣೌ** ॥
॥ **ಛಂದಃ—ಉಷ್ಣಿಕ್** ॥

॥ ಸಂಹಿತಾಪಾಠಃ ॥

ಆ ಮಿತ್ರೇ ವರುಣೇ ವಯಂ ಗೀರ್ಭಿರ್ಜುಹುಮೋ ಅತ್ರಿವತ್ ।
ನಿ ಬರ್ಹಿಷಿ ಸದತಂ ಸೋಮಪೀತಯೇ ॥ ೧ ॥

॥ ಪದಪಾಠಃ ॥

ಆ । ಮಿತ್ರೇ । ವರುಣೇ । ವಯಂ । ಗೀಃಽಭಿಃ । ಜುಹುಮಃ । ಅತ್ರಿಽವತ್ ।
ನಿ । ಬರ್ಹಿಷಿ । ಸದತಂ । ಸೋಮಽಪೀತಯೇ ॥ ೧ ॥

॥ ಸಾಯಣಭಾಷ್ಯಂ ॥

ವಯಮಾತ್ರೇಯಾ ಮಿತ್ರೇ ವರುಣೇ ಮಿತ್ರಾವರುಣಯೋರರ್ಥಾಯ ಗೀರ್ಭಿರ್ಮಂತ್ರೈರಾ ಜುಹುಮಃ ಅತ್ರಿವತ್ ಅಸ್ಮದ್ಗೋತ್ರಪ್ರವರ್ತಕೋಽತ್ರಿರಿವ । ತಸ್ಮಾದ್ಧೇ ಮಿತ್ರಾವರುಣೌ ಸೋಮಪೀತಯೇ ಬರ್ಹಿಷಿ ನಿ ಷದತಂ । ನಿಷೀದತಂ ॥

॥ ಪ್ರತಿಪದಾರ್ಥ ॥

**ವಯಂ**—ಅತ್ರಿಗೋತ್ರೋತ್ಪನ್ನರಾದ ನಾವು । **ಅತ್ರಿವತ್**—ಅತ್ರಿಋಷಿಯನ್ನೇ ಅನುಸರಿಸಿ । **ಮಿತ್ರೇ**—ಮಿತ್ರನನ್ನೂ । **ವರುಣೇ**—ವರುಣನನ್ನೂ ಉದ್ದೇಶಿಸಿದ । **ಗೀರ್ಭಿಃ**— ಮಂತ್ರಗಳಿಂದ (ಪ್ರಾರ್ಥಿಸಿ) । **ಆ ಜುಹುಮಃ**—ಕರೆಯುತ್ತೇವೆ । (ಎಲೈ ಮಿತ್ರಾವರುಣರೇ) **ಸೋಮಪೀತಯೇ**—ಸೋಮಪಾನಾರ್ಥವಾಗಿ । **ಬರ್ಹಿಷಿ**—ದರ್ಭಾಸನದಮೇಲೆ । **ನಿ ಸದತಂ**—ಕುಳಿತುಕೊಳ್ಳಿರಿ.

॥ ಭಾವಾರ್ಥ ॥

ಅತ್ರಿಗೋತ್ರೋತ್ಪನ್ನರಾದ ನಾವು ಅತ್ರಿಯು ಸ್ತುತಿಸಿದಂತೆಯೇ, ಮಿತ್ರನನ್ನೂ ವರುಣನನ್ನೂ ಸ್ತುತಿಸಿ ಅದೇ ಮಂತ್ರಗಳಿಂದ ಅವರನ್ನು ಪ್ರಾರ್ಥಿಸಿ ಕರೆಯುತ್ತೇವೆ. ಎಲೈ ಮಿತ್ರಾವರುಣರೇ, ಸೋಮಪಾನಾರ್ಥವಾಗಿ ದರ್ಭಾಸನದ ಮೇಲೆ ಕುಳಿತುಕೊಳ್ಳಿರಿ.

## English Translation.

We invoke Mitra aud Varuna with hymns, like (our progenitor) Atri; sit down upon the sacred grass to drink the some libation.

॥ ಸಂಹಿತಾಪಾಠಃ ॥

ವ್ರತೇನ ಸ್ಥೋ ಧ್ರುವಕ್ಷೇಮಾ ಧರ್ಮಣಾ ಯಾತಯಜ್ಜನಾ ।

ನಿ ಬರ್ಹಿಷಿ ಸದತಂ ಸೋಮಪೀತಯೇ ॥ ೨ ॥

॥ ಪದಪಾಠಃ ॥

ವ್ರತೇನ । ಸ್ಥಃ । ಧ್ರುವಽಕ್ಷೇಮಾ । ಧರ್ಮಣಾ । ಯಾತಯತ್ಽಜನಾ ।

ನಿ । ಬರ್ಹಿಷಿ । ಸದತಂ । ಸೋಮಽಪೀತಯೇ ॥ ೨ ॥

॥ ಸಾಯಣಭಾಷ್ಯಂ ॥

ಹೇ ಮಿತ್ರಾವರುಣೌ ಯುವಾಂ ಧರ್ಮಣಾ ಜಗದ್ಧಾರಕೇಣ ವ್ರತೇನ ಕರ್ಮಣಾ ಯೋಗೇನ ಧ್ರುವಕ್ಷೇಮಾ ಸ್ಥಃ । ಅವಿಚಲಿತಸ್ಥಾನೌ ಭವಥಃ । ಯಾತಯಜ್ಜನಾ । ಯಾತಯಂತಃ ಕರ್ಮಸು ಪ್ರವರ್ತಯಂತೋ ಜನಾ ಋತ್ವಿಜೋ ಯಯೋಸ್ತೌ ಯಾತಯಜ್ಜನೌ । ಅಥವಾ ಯಾತಯಂತಃ ಶತ್ರೂನ್ ಹಿಂಸಂತೋ ಜನಾ ಭೃತ್ಯಾ ಯಯೋಸ್ತೌ । ಶಿಷ್ಟಂ ಗತಂ ॥

(ಎಲೈ ಮಿತ್ರಾವರುಣರೇ) **ಯಾತಯಜ್ಜನಾ**—ಸ್ತುತ್ಯಾದಿಗಳಿಂದ ನಿಮ್ಮನ್ನು ಪ್ರೇರಿಸುವ ಋತ್ವಿಗಾದಿಗಳುಳ್ಳ ನೀವು । **ಧರ್ಮಣಾ**—ಜಗದ್ಧಾರಕವಾದ । **ವ್ರತೇನ**—ನಿಮ್ಮ ಕರ್ಮದಿಂದ । **ಧ್ರುವಕ್ಷೇಮಾ**—ಅಚಲವಾದ ಸ್ಥಾನವುಳ್ಳವರಾಗಿ । **ಸ್ಥಃ**—ಇದ್ದೀರಿ । **ಸೋಮಪೀತಯೇ**—ಸೋಮಪಾನಾರ್ಥವಾಗಿ । **ಬರ್ಹಿಷಿ**—ದರ್ಭಾಸನದ ಮೇಲೆ । **ನಿ ಸದತಂ**—ಕುಳಿತುಕೊಳ್ಳಿರಿ.

**॥ ಭಾವಾರ್ಥ ॥**

ಎಲೈ ಮಿತ್ರಾವರುಣರೇ, ಸ್ತುತ್ಯಾದಿಗಳಿಂದ ನಿಮ್ಮನ್ನು ಪ್ರೇರಿಸುವ ಋತ್ವಿಗಾದಿಗಳುಳ್ಳ ನೀವು ಜಗದ್ಧಾರಕವಾದ ನಿಮ್ಮ ಕರ್ಮದಿಂದ ಅಚಲವಾದ ಸ್ಥಾನವುಳ್ಳವರಾಗಿ ಇದ್ದೀರಿ. ಸೋಮಪಾನಾರ್ಥವಾಗಿ ದರ್ಭಾಸನದ ಮೇಲೆ ಕುಳಿತುಕೊಳ್ಳಿರಿ.

## English Translation.

Steady are you in your functions, whom men animate by (their) devotion: come and sit down upon the sacred grass to drink the some libation.

‖ ಸಂಹಿತಾಪಾಠಃ ‖

ಮಿತ್ರಶ್ಚ ನೋ ವರುಣಶ್ಚ ಜುಷೇತಾಂ ಯಜ್ಞಮಿಷ್ಟಯೇ ।

ನಿ ಬರ್ಹಿಷಿ ಸದತಾಂ ಸೋಮಪೀತಯೇ ‖ ೩ ‖

‖ ಪದಪಾಠಃ ‖

ಮಿತ್ರಃ । ಚ । ನಃ । ವರುಣಃ । ಚ । ಜುಷೇತಾಂ । ಯಜ್ಞಂ । ಇಷ್ಟಯೇ ।

ನಿ । ಬರ್ಹಿಷಿ । ಸದತಾಂ । ಸೋಮಽಪೀತಯೇ ‖ ೩ ‖

‖ ಸಾಯಣಭಾಷ್ಯಂ ‖

**ಮಿತ್ರಶ್ಚ ವರುಣಶ್ಚೋಭೌ ನೋಽಸ್ಮಾಕಂ ಯಜ್ಞಮಿಷ್ಟಯೇಽಭೀಷ್ಟಾಯ ಜುಷೇತಾಂ । ಸೇವೇತಾಂ । ಆಗತ್ಯ ಚ ಬರ್ಹಿಷಿ ನಿ ಷದತಾಂ ನಿಷೀದತಾಂ ಸೋಮಪಾನಾಯ ‖**

‖ ಪ್ರತಿಪದಾರ್ಥ ‖

**ಮಿತ್ರಶ್ಚ**—ಮಿತ್ರನೂ । **ವರುಣಶ್ಚ**—ವರುಣನೂ । **ನಃ**—ನಮ್ಮ । **ಯಜ್ಞಂ**—ಯಜ್ಞವನ್ನು । **ಇಷ್ಟಯೇ**—ಇಷ್ಟಾರ್ಥಸಿದ್ಧಿಗಾಗಿ । **ಜುಷೇತಾಂ**—ಸ್ವೀಕರಿಸಿ ಸೇವಿಸಲಿ । **ಸೋಮಪೀತಯೇ**—ಸೋಮಪಾನಾರ್ಥವಾಗಿ । **ಬರ್ಹಿಷಿ**—ದರ್ಭಾಸನದಮೇಲೆ । **ನಿ ಸದತಾಂ**—ಬಂದು ಕುಳಿತುಕೊಳ್ಳಲಿ.

‖ ಭಾವಾರ್ಥ ‖

ಮಿತ್ರನೂ ವರುಣನೂ ಸಹ ಇಷ್ಟಾರ್ಥಸಿದ್ಧಿಯ ನಿಮಿತ್ತವಾಗಿ ನಮ್ಮ ಯಜ್ಞವನ್ನು ಸ್ವೀಕರಿಸಿ ಸೇವಿಸಲಿ. ಮತ್ತು ಸೋಮಪಾನಾರ್ಥವಾಗಿ ದರ್ಭಾಸನದಮೇಲೆ ಬಂದು ಕುಳಿತುಕೊಳ್ಳಲಿ.

## English Translation.

May Mitra and Varuna, accept with satisfaction our sacrifice; come and sit down upon the sacred grass to drink the some libation.

# ಎಪ್ಪತ್ತಮೂರನೆಯ ಸೂಕ್ತವು

## ಪೀಠಿಕೆ

### ಅಶ್ವಿನೀದೇವತೆಗಳ ಸೂಕ್ಷ್ಮಪರಿಚಯು.

ಈ ಸೂಕ್ತದಿಂದ ಮುಂದಿನ ಆರು ಸೂಕ್ತಗಳಲ್ಲಿ ಅಶ್ವಿನೀದೇವತೆಗಳನ್ನು ಸ್ತುತಿಸಲಾಗಿದೆ. ಆದುದರಿಂದ ಇಲ್ಲಿ ಇವರ ಸೂಕ್ಷ್ಮಪರಿಚಯುವನ್ನು ಹೇಳುತ್ತೇವೆ.

ಅಶ್ವಿನೀದೇವತೆಗಳು ಇಬ್ಬರು. ಒಬ್ಬನ ಹೆಸರು **ದಸ್ರಾ** ಎಂತಲೂ ಇನ್ನೊಬ್ಬನ ಹೆಸರು **ನಾಸತ್ಯಾ** ಎಂತಲೂ ಹೇಳುವ ರೂಢಿಯಿದೆ. ಆದರೂ ಈ ಶಬ್ದಗಳನ್ನು ಅನೇಕ ಸಂದರ್ಭಗಳಲ್ಲಿ ಇಬ್ಬರನ್ನೂ ಒಟ್ಟಿಗೆ ಸಂಬೋಧನೆ ಮಾಡುವುದರಲ್ಲಿ ಉಪಯೋಗಿಸುವುದು ಕಂಡುಬರುವುದು. ಇವರ ಉತ್ಪತ್ತಿ ವಿಚಾರದಲ್ಲಿ ಪುರಾಣಗಳಲ್ಲಿ ಒಂದು ಉಪಾಖ್ಯಾನವಿದೆ. ಸೂರ್ಯನ ಪತ್ನಿಯಾದ ಸಂಜ್ಞಾದೇವಿಯು ಕಾರಣಾಂತರದಿಂದ ಸೂರ್ಯನಲ್ಲಿ ಅಸಮಾಧಾನ ಗೊಂಡು ಕಾಡಿಗೆ ಹೋಗಿ ಹೆಣ್ಣುಕುದುರೆಯ ರೂಪದಿಂದ ತಪಸ್ಸನ್ನು ಮಾಡುತ್ತಿದ್ದಳೆಂದೂ ಅದನ್ನು ಸೂರ್ಯನು ತಿಳಿದು ತಾನೂ ಗಂಡುಕುದುರೆಯ ರೂಪದಿಂದ ಅವಳಿದ್ದಲ್ಲಿಗೆ ಹೋಗಿ ಕೆಲವುಕಾಲ ಇದ್ದನೆಂದೂ ಆಗ ಅವರಿಗೆ ಈ ಅಶ್ವಿನೀದೇವತೆಗಳು ಪುತ್ರರಾಗಿ ಜನಿಸಿದರೆಂದೂ ಹೇಳಲ್ಪಟ್ಟಿದೆ. ಋಗ್ವೇದದಲ್ಲಿ ಇವರ ವಿಷಯಕವಾದ ಅನೇಕ ಸೂಕ್ತಗಳಿವೆ. ಇವು ಬಹು ಗಂಭೀರವಾಗಿಯೂ ಇವರ ಗುಣಗಳನ್ನೂ, ಪರಾಕ್ರಮಗಳನ್ನೂ ಹೊಗಳುವುದಾಗಿಯೂ ಇರುವವು. ಯಜುರ್ವೇದದಲ್ಲಿ **“ ಅಶ್ವಿನೌ ವೈ ದೇವಾನಾಂ ಭಿಷಜೌ ”** ಎಂದರೆ ಈ ಅಶ್ವಿನೀದೇವತೆಗಳು ದೇವತೆಗಳ ವೈದ್ಯರೆಂದು ಹೇಳಿರುವುದು. ಹಿಂದೆ ಋಜ್ರಾಶ್ವನೆಂಬುವನು ತನ್ನ ತಂದೆಯ ಅಪ್ಪಣೆಯ ಪ್ರಕಾರ ವನದಲ್ಲಿ ಮೇಕೆಗಳನ್ನು ಮೇಯಿಸುತ್ತಿರುವಾಗ ಅಶ್ವಿನೀದೇವತೆಗಳು ವೃಕ (ತೋಳ) ರೂಪದಿಂದ ಬರಲು ಅವರಿಗೆ ನೂರು ಮೇಕೆಗಳನ್ನು ಆಹಾರಾರ್ಥವಾಗಿ ಕೊಟ್ಟನೆಂದೂ ಅದನ್ನು ತಿಳಿದು ಇವನ ತಂದೆಯು ಮಹಾಕೋಪದಿಂದ ಮಗನ ಕಣ್ಣುಗಳನ್ನು ಕೀಳಿಸಿ ಕುರುಡನನ್ನಾಗಿ ಮಾಡಿದನೆಂದೂ. ಬಳಿಕ ಋಜ್ರಾಶ್ವನು ಅಶ್ವಿನೀದೇವತೆಗಳನ್ನು ಪ್ರಾರ್ಥಿಸಲು ಅವರು ಇವನ ಸ್ತೋತ್ರಕ್ಕೆ ಸಂತೋಷಪಟ್ಟು ಇವನಿಗೆ ಕಣ್ಣುಗಳನ್ನು ಕೊಟ್ಟು ಅನುಗ್ರಹಿಸಿದರೆಂದೂ ಈ ಮಂಡಲದ ೧೧೬ ನೆಯ ಸೂಕ್ತದಲ್ಲಿ ಹೇಳಿದೆ. ಈ ದೇವತೆಗಳ ಇಂತಹ ಅನೇಕ ಪರಾಕ್ರಮಗಳೂ, ಸಾಹಸಗಳೂ ೧೧೬–೧೨೦ ನೆಯ ಸೂಕ್ತಗಳಲ್ಲಿಯೂ ಇತರ ಕಡೆಗಳಲ್ಲಿಯೂ ವರ್ಣಿಸಲ್ಪಟ್ಟಿದೆ.

ಋಗ್ವೇದದಲ್ಲಿ ಕೆಲವು ದೇವತೆಗಳನ್ನು ಸ್ತೋತ್ರಮಾಡುವಾಗ ಕೆಲವು ನಿರ್ದಿಷ್ಟವಾದ ಶಬ್ದಗಳು ಪ್ರಯೋಗಿಸಲ್ಪಟ್ಟಿದೆ. ಅಗ್ನಿಯನ್ನು ಸ್ತೋತ್ರಮಾಡುದಾಗ **ಕವಿ, ಹೋತೃ, ಗೃಹಪತಿ** ಮೊದಲಾದ ಶಬ್ದಗಳೂ ಇಂದ್ರನ ವಿಷಯವಾಗಿ, **ಶತಕ್ರತು, ವೃತ್ರಘ್ನ, ಪುರುಹೂತ, ಚಿತ್ರಭಾನು** ಮುಂತಾದ ಶಬ್ದಗಳೂ, **ಅಶ್ವಿನೀ** ದೇವತೆಗಳ ವಿಷಯವಾಗಿ **ನಾಸತ್ಯಾ, ಶುಭಸ್ಪತೀ, ನರಾ, ಪುರುಭುಜಾ,** ಮೊದಲಾದ ಶಬ್ದಗಳೂ ಉಪಯೋಗಿಸಲ್ಪಡುವವು. ಇಂಥಹ ಅನೇಕ ಶಬ್ದಗಳನ್ನು ಆಯಾಯ ದೇವತೆಗಳ ವಿಷಯದಲ್ಲಿ ಎಲ್ಲಾ ಋಷಿಗಳೂ ಉಪಯೋಗಿಸಿರುವುದರಿಂದ ಆ ಶಬ್ದಗಳಿಗೆ ಈಗ ನಮಗೆ ತೋರುವ ಅಥವಾ ರೂಢಿಯಲ್ಲಿರುವ ಅರ್ಥಗಳಲ್ಲದೆ ಒಂದು ನಿರ್ದಿಷ್ಟವಾದ ಅರ್ಥವಿದ್ದಿರಬೇಕೆಂದು

ಸ್ಪಷ್ಟವಾಗುತ್ತದೆ. ಆ ಶಬ್ದಗಳನ್ನು ಯಾವ ಅರ್ಥದಲ್ಲಿ ಋಷಿಗಳು ಉಪಯೋಗಿಸಿರುವರೆಂದು ಈಗ ಹೇಳುವುದು ಕಷ್ಟವಾಗಿದೆ. ವ್ಯಾಕರಣಾನುಸಾರವಾಗಿಯೂ ಅವಯವಾರ್ಥನಿಷ್ಪತ್ತಿಯಿಂದಲೂ ನಾವು ಯಾವುದಾದರೂ ಒಂದು ಸಮಂಜಸವಾದ ಅರ್ಥವನ್ನು ಕಲ್ಪಿಸಿದರೂ ಹಿಂದಿನ ಋಷಿಗಳ ಅಭಿಪ್ರಾಯವು ಆರೀತಿಯಾಗಿತ್ತೇ ಎಂಬುವುದು ಅನುಮಾನಾಸ್ಪದವಾಗಿದೆ. ಆ ಶಬ್ದಗಳು ಈಗ ರೂಢಿಯಲ್ಲಿದ್ದರೂ ಅವುಗಳಿಗೆ ಹಿಂದೆ ಬಳಕೆಯಲ್ಲಿದ್ದ ಅರ್ಥವು ಈಗಿರುವುದಿಲ್ಲ. ಆಧುನಿಕಸಂಸ್ಕೃತಿಯಲ್ಲಿ ಅವುಗಳ ಅರ್ಥವು ಬೇರೆಯಾಗಿರುವುದರಿಂದ ನಾವು ವ್ಯಾಖ್ಯಾನಮಾಡುವ ಅರ್ಥವು ಹಿಂದಿನ ಋಷಿಗಳ ಅಭಿಪ್ರಾಯಗಳಿಗೆ ಸರಿಯಾಗಿರುವುದೆಂದು ಹೇಳಲು ಸಾಧ್ಯವಿಲ್ಲ

**ಅಶ್ವಿನೌ** ಎಂಬ ಶಬ್ದವು ನಾಮವಾಚಕ ಎಂದರೆ ನಿರ್ದಿಷ್ಟರಾದ ವ್ಯಕ್ತಿಗಳನ್ನು ತಿಳಿಸುವುದರಿಂದ ಆ ಶಬ್ದಕ್ಕೆ ಅವಯವಾರ್ಥವನ್ನು ಕಲ್ಪಿಸುವುದು ಸರಿಯಲ್ಲ. ಅದರೂ ವೇದಾರ್ಥಯತ್ನಕಾರರು ಈ ಶಬ್ದಕ್ಕೆ— **ಅಶ್ವಃ ಅಸ್ಯಾಸ್ತೀತಿ ಅಶ್ವೀ ತೌ ಅಶ್ವಿನೌ**—ಎಂದರೆ ಕುದುರೆಯುಳ್ಳವರು ಅಥವಾ ಕುದುರೆಯಮೇಲೆ ಸವಾರಿಮಾಡುವವರು ಎಂದರ್ಥ ಮಾಡಿರುವರು. ಈ ವಿಧವಾದ ಅರ್ಥಕ್ಕೆ ಋಗ್ವೇದದಲ್ಲಿ ಅವಕಾಶವಿಲ್ಲ ಏಕೆಂದರೆ, ಅನೇಕ ಋಕ್ಕುಗಳಲ್ಲಿ ಅಶ್ವಿನೀ ದೇವತೆಗಳು ರಥವಮೇಲೆ ಕುಳಿತಿರುವಂತೆ ಸಂಬೋಧನೆ ಮಾಡಿರುವುದೇ ಹೊರತು ಕುದುರೆಯಮೇಲೆ ಕುಳಿತು ಸವಾರಿ ಮಾಡುತ್ತಿರುವಂತೆ ಎಲ್ಲಿಯೂ ಹೇಳಿಲ್ಲ. ಆದುದರಿಂದ ಅವರ ಅಭಿಪ್ರಾಯವು ಸಮಂಜಸವಾಗಿಲ್ಲ. ಆದರೆ ಅಶ್ವಿನೀ ದೇವತೆಗಳು ಅಶ್ವರೂಪದಿಂದ (ಕುದುರೆಯ ರೂಪದಿಂದ) ಇದ್ದ ಸೂರ್ಯ ಮತ್ತು ಸೂರ್ಯಪತ್ನಿಯಾದ ಸಂಜ್ಞಾದೇವಿ ಯರಿಂದ ಉತ್ಪನ್ನರಾದುದರಿಂದ ಇವರಿಗೆ **ಅಶ್ವಿನಾ** ಅಥವಾ **ಅಶ್ವಿನೌ** ಎಂಬ ಹೆಸರು ಬಂದಿರಬಹುದೆಂದು ಊಹಿಸು ವುದು ಯುಕ್ತವೆಂದು ತೋರುವುದು. **ಅಶ್ವಿನ್** ಮತ್ತು **ಅಶ್ವಿನೌ** ಎಂಬ ಎರಡು ವಿಧವಾದ ರೂಪಗಳೂ ದ್ವಿವಚನ ಗಳು. ಇವು ಪ್ರಥಮಾ ಮತ್ತು ದ್ವಿತೀಯಾವಿಭಕ್ತಿಗಳಲ್ಲಿ ಸಂದರ್ಭಾನುಸಾರ ಉಪಯೋಗಿಸಲ್ಪಟ್ಟಿರುವವು.

ಪೀಠಿಕೆ ಸಮಾಪ್ತವು.

॥ ಸಾಯಣಭಾಷ್ಯಂ ॥

**ಷಷ್ಠೇಽನುವಾಕೇ ಪಂಚದಶ ಸೂಕ್ತಾನಿ । ತತ್ರ ಯುದದ್ಯ ಸ್ಥ ಇತಿ ದಶರ್ಚಂ ಪ್ರಥಮಂ ಸೂಕ್ತ- ಮಾತ್ರೇಯಸ್ಯ ಪೌರನಾಮ್ನ ಆರ್ಷಮಾನುಷ್ಟುಭಮಾಶ್ವಿನಂ । ಅನುಕ್ರಾಂತಂ ಚ । ಯದದ್ಯ ದಶ ಪೌರ ಆಶ್ವಿನಂ ತದಾನುಷ್ಟುಭಂ ತ್ವಿತಿ । ತದಿತ್ಯುಕ್ತತ್ವಾದಿದಮಾದೀನಿ ಷಟ್ ಸೂಕ್ತಾನ್ಯಾಶ್ವಿನಾನಿ । ಅನುಷ್ಟುಭಂ ತ್ವಿತಿ ತುಶಬ್ದಾದಿದಮುತ್ತರಂ ಚ ದ್ವೇ ಅನುಷ್ಟುಭೇ ॥ ಪ್ರಾತರನುವಾಕ ಆಶ್ವಿನೇ ಕ್ರತಾವಾನುಷ್ಟುಭೇ ಛಂದಸ್ಯಾಶ್ವಿನಶಸ್ತ್ರೇ ಚೇದಮಾದಿಕೇ ದ್ವೇ ಸೂಕ್ತೇ । ಯದದ್ಯ ಸ್ಥ ಇತಿ ಸೂಕ್ತೇ । ಆ. ೪-೧೫ । ಇತಿ ಸೂತ್ರಿತಂ ॥**

ಅನುವಾದವು—ಆರನೆಯ ಅನುವಾಕದಲ್ಲಿ ಹದಿನೈದು ಸೂಕ್ತಗಳಿರುವವು. ಅವುಗಗಳಲ್ಲಿ **ಯದದ್ಯ ಸ್ಥಃ** ಎಂಬುದು ಮೊದಲನೆಯ ಸೂಕ್ತವು. ಇದರಲ್ಲಿ ಹತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಪೌರ ಆತ್ರೇಯಃ ಎಂಬುವನು ಋಷಿಯು; ಅಶ್ವಿನೀದೇವತೆಗಳು ದೇವತೆಯು; ಅನುಷ್ಟುಪ್‌ಛಂದಸ್ಸು. ಅನುಕ್ರಮಣಿಕೆಯಲ್ಲಿ— **ಯದದ್ಯ ದಶ ಪೌರ ಆಶ್ವಿನಂ ತದಾನುಷ್ಟುಭಂ ತು** ಎಂದು ಹೇಳಿರುವುದು. ಅನುಕ್ರಮಣಿಕೆಯಲ್ಲಿ **ತತ್** ಎಂಬ ಶಬ್ದಪ್ರಯೋಗವಿರುವುದರಿಂದ ಈ ಸೂಕ್ತದಿಂದ ಮುಂದಿನ ಆರು ಸೂಕ್ತಗಳೂ ಅಶ್ವಿನೀದೇವತಾಕವೆಂದು ತಿಳಿಯಬೇಕು; **ಅನುಷ್ಟುಭಂ ತು** ಎಂದು ಹೇಳಿರುವುದರಿಂದ ಈ ಸೂಕ್ತವೂ ಇದರ ಮುಂದಿನ ಸೂಕ್ತವೂ ಅನುಷ್ಟುಪ್‌ಛಂದಸ್ಸವೆಂದು.

ತಿಳಿಯಬೇಕು. ಪ್ರಾತರನುವಾಕಮಂತ್ರಪಠನಕಾಲದಲ್ಲಿ ಆಶ್ವಿನಕ್ರತುಸಂಬಂಧವಾದ ಅನುಷ್ಟುಪ್‌ಛಂದಸ್ಸಿನ ಋಕ್ಕುಗಳಿಗಾಗಿಯೂ ಆಶ್ವಿನಶಸ್ತ್ರಮಂತ್ರಗಳಿಗಾಗಿಯೂ ಈ ಸೂಕ್ತದ ಮತ್ತು ಮುಂದಿನ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ— **ಯದದ್ಯ ಸ್ಥ ಇತಿ ಸೂಕ್ತೇ** ಎಂಬ ಸೂತ್ರದಿಂದ (ಆ. ೪-೧೫) ವಿವೃತವಾಗಿರುವುದು.

## ಸೂಕ್ತ—೭೩

ಮಂಡಲ—೫ ॥ ಅನುವಾಕ—೬ ॥ ಸೂಕ್ತ—೭೩ ॥
ಅಷ್ಟಕ—೪ ॥ ಅಧ್ಯಾಯ—೪ ॥ ವರ್ಗ—೧೧, ೧೨ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೦ ॥
॥ ಋಷಿಃ—ಪೌರ ಆತ್ರೇಯಃ ॥
॥ ದೇವತಾ—ಅಶ್ವಿನೌ ॥
॥ ಛಂದಃ—ಅನುಷ್ಟುಪ್ ॥

॥ ಸಂಹಿತಾಪಾಠಃ ॥

ಯದದ್ಯ ಸ್ಥಃ ಪರಾವತಿ ಯದರ್ವಾವತ್ಯಶ್ವಿನಾ ।
ಯದ್ವಾ ಪುರೂ ಪುರುಭುಜಾ ಯದಂತರಿಕ್ಷ ಆ ಗತಂ ॥ ೧ ॥

॥ ಪದಪಾಠಃ ॥

**ಯತ್ । ಅದ್ಯ । ಸ್ಥಃ । ಪರಾऽವತಿ । ಯತ್ । ಅರ್ವಾऽವತಿ । ಅಶ್ವಿನಾ ।**
**ಯತ್ । ವಾ । ಪುರು । ಪುರುऽಭುಜಾ । ಯತ್ । ಅಂತರಿಕ್ಷೇ । ಆ । ಗತಂ ॥ ೧ ॥**

॥ ಸಾಯಣಭಾಷ್ಯಂ ॥

**ಹೇ ಪುರುಭುಜಾ ಬಹುಷು ಯಜ್ಞೇಷು ಭೋಕ್ತಾರಾವಧಿಕಂ ರಕ್ಷಿತಾರೌ ವಾ ಹೇ ಅಶ್ವಿನಾ ಯದ್ಯದ್ಯದ್ಯಾಸ್ಮಿನ್ ಕಾಲೇ ಪರಾವತ್ಯತ್ಯಂತಂ ದೂರದೇಶೇ ದ್ಯುಲೋಕೇ ಸ್ಥೋ ಭವಥಃ । ಯದ್ವಾ । ಅರ್ವಾವತ್ಯರಣವತಿ ಗಂತುಂ ಶಕ್ಯೇ ಪ್ರದೇಶೇऽಂತಿಕೇ ಸ್ಥಃ । ಯದ್ಯದಿ ವಾ ಅಥವಾ ಪುರು ಬಹುಪ್ರದೇಶೇಷು ಸ್ಥಃ । ಯದ್ಯದ್ಯಂತರಿಕ್ಷೇ ಸ್ಥಃ ತಸ್ಮಾತ್ಸರ್ವಸ್ಮಾದದ್ಯಾ ಗತಂ । ಆಗಚ್ಛತಂ ॥**

॥ ಪ್ರತಿಪದಾರ್ಥ ॥

**ಪುರುಭುಜಾ**—ಅನೇಕಯಜ್ಞಗಳಲ್ಲಿ ಭಾಗವನ್ನು ಸ್ವೀಕರಿಸತಕ್ಕ । **ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ। **ಅದ್ಯ**—ಈ ಯಜ್ಞಕಾಲದಲ್ಲಿ ನೀವು । **ಯತ್**—ಒಂದು ವೇಳೆ । **ಪರಾವತಿ**—ಅತಿದೂರಪ್ರದೇಶದಲ್ಲಿ । **ಸ್ಥಃ**—ಇದ್ದರೂ । **ಯತ್**—ಅಥವಾ । **ಅರ್ವಾವತಿ**—ಸಮೀಪ ಪ್ರದೇಶದಲ್ಲಿದ್ದರೂ । **ಯತ್ ವಾ**—ಅಥವಾ ಒಂದು ವೇಳೆ । **ಪುರು**—ಅನೇಕ ಪ್ರದೇಶಗಳಲ್ಲಿದ್ದರೂ । **ಯತ್**—ಹಾಗಿಲ್ಲದೆ । **ಅಂತರಿಕ್ಷೇ**—ಅಂತರಿಕ್ಷದಲ್ಲಿದ್ದರೂ ಸಹ । **ಆ ಗತಂ**—ನಮ್ಮಲ್ಲಿಗೆ ದಯಮಾಡಿ.

|| ಭಾವಾರ್ಥ ||

ಅನೇಕ ಯಜ್ಞಗಳಲ್ಲಿ ಭಾಗವನ್ನು ಸ್ವೀಕರಿಸತಕ್ಕ ಎಲ್ಲೈ ಅಶ್ವಿನೀದೇವತೆಗಳೇ, ಈ ಯಜ್ಞಕಾಲದಲ್ಲಿ ನೀವು ಒಂದು ವೇಳೆ ಅತಿದೂರಪ್ರದೇಶದಲ್ಲಿದ್ದರೂ; ಅಥವಾ ಸಮೀಪಸ್ಥಪ್ರದೇಶದಲ್ಲಿದ್ದರೂ, ಅಥವಾ ಅನೇಕ ಪ್ರದೇಶಗಳಲ್ಲಿದ್ದರೂ ಹಾಗಲ್ಲದೇ, ಅಂತರಿಕ್ಷದಲ್ಲಿದ್ದರೂ ಸಹ ನಮ್ಮಲ್ಲಿಗೆ ದಯಮಾಡಿ.

English Translation.

Whether, Ashwins, you are at present far off, whether you are nigh, whether you are (straying) in many places, or whether you are in mid-air, do you, who partake of many offerings, come hither.

|| ಸಂಹಿತಾಪಾಠಃ ||

ಇಹ ತ್ಯಾ ಪುರುಭೂತಮಾ ಪುರೂ ದಂಸಾಂಸಿ ಬಿಭ್ರತಾ |
ವರಸ್ಯಾ ಯಾಮ್ಯಧ್ರಿಗೂ ಹುವೇ ತುವಿಷ್ಟಮಾ ಭುಜೇ || ೨ ||

|| ಪದಪಾಠಃ ||

ಇಹ | ತ್ಯಾ | ಪುರುऽಭೂತಮಾ | ಪುರು | ದಂಸಾಂಸಿ | ಬಿಭ್ರತಾ |
ವರಸ್ಯಾ | ಯಾಮಿ | ಅಧ್ರಿಗೂ ಇತ್ಯಧ್ರಿऽಗೂ | ಹುವೇ | ತುವಿಃऽತಮಾ | ಭುಜೇ || ೨ ||

|| ಸಾಯಣಭಾಷ್ಯಂ

ಇಹಾಸ್ಮಿನ್ಯಜ್ಞೇ ತ್ಯಾ ತೌ ಪುರುಭೂತಮಾ ಪುರೂಣಾಂ ಬಹೂನಾಂ ಯಜಮಾನಾನಾಂ ಭಾವಯಿತೃತಮೌ ಪುರು ಪುರೂಣಿ ದಂಸಾಂಸಿ ಕರ್ಮಾಣಿ ಬಿಭ್ರತಾ ಧಾರಯಂತೌ ವರಸ್ಯಾ ವರಣೀಯಾವಧ್ರಿಗೂ ಅನ್ಯೈರಧೃತಗಮನಕರ್ಮಾಣೌ ಯಾಮಿ | ಉಪಾಗಚ್ಛಾಮಿ | ತುವಿಷ್ಟಮಾ ಪ್ರಭೂತತಮೌ ಭುಜೇ ಭೋಗಾಯ ಪಾಲನಾಯ ವಾ ಹುವೇ | ಆಹ್ವಯಾಮಿ ||

|| ಪ್ರತಿಪದಾರ್ಥ ||

**ಪುರುಭೂತಮಾ**— ಅನೇಕ ಯಜಮಾನರನ್ನು ಅನುಗ್ರಹದಿಂದ ಗೌರವಿಸಿದವರೂ | **ಪುರು**—ಅನೇಕ ವಿಧವಾದ | **ದಂಸಾಂಸಿ** ಕರ್ಮಗಳನ್ನು | **ಬಿಭ್ರತಾ**—ಧರಿಸಿದ್ದವರೂ | **ವರಸ್ಯಾ**—ಆದೃತರಾದವರೂ | **ಅಧ್ರಿಗೂ**— ಅಪ್ರತಿಹತವಾದ ಗಮನವುಳ್ಳವರೂ | **ತ್ಯಾ**—ಪ್ರಸಿದ್ಧರೂ ಆದ ಅಶ್ವಿನಿದೇವತೆಗಳನ್ನು | **ಇಹ**—

ಈ ಯಜ್ಞಕಾಲದಲ್ಲಿ । **ಯಾಮಿ**—ಸಮಾಪಿಸುತ್ತೇನೆ । **ತುವಿಷ್ಟಮಾ**—ಅತಿ ಪ್ರಭೂತವಾದ ಶಕ್ತಿಯುಳ್ಳ ಅಶ್ವಿನೀದೇವತೆಗಳನ್ನು । **ಭುಜೇ**—ನಮ್ಮನ್ನು ಪಾಲಿಸುವುದಕ್ಕಾಗಿ । **ಹುವೇ**—ಕರೆಯುತ್ತೇನೆ.

॥ ಭಾವಾರ್ಥ ॥

ಅನೇಕ ಯಜಮಾನರನ್ನು ಅನುಗ್ರಹದಿಂದ ಗೌರವಿಸಿದವರೂ, ಅನೇಕವಿಧವಾದ ಕರ್ಮಗಳನ್ನು ಎಸಗಿರುವವರೂ, ಆದೃತರಾದವರೂ, ಅಪ್ರತಿಹತವಾದ ಗಮನವುಳ್ಳವರೂ, ಪ್ರಸಿದ್ಧರೂ ಆದ ಅಶ್ವಿನೀದೇವತೆಗಳನ್ನು ಈ ಯಜ್ಞಕಾಲದಲ್ಲಿ ಸಮಾಪಿಸುತ್ತೇನೆ. ಅತಿ ಪ್ರಭೂತವಾದ ಶಕ್ತಿಯುಳ್ಳ ಅಶ್ವಿನೀದೇವತೆಗಳನ್ನು ನಮ್ಮನ್ನು ಪಾಲಿಸುವುದಕ್ಕಾಗಿ ಕರೆಯುತ್ತೇನೆ.

English Translation.

I approach you (to invite you) hither, you who are the encouragers of many; (who are) the achievers of many (great) exploits, most excellent and irrestible: I invoke you, who are most mighty, for protection.

॥ ಸಂಹಿತಾಪಾಠಃ ॥

ಈರ್ಮಾನ್ಯದ್ವಪುಷೇ ವಪುಶ್ಚಕ್ರಂ ರಥಸ್ಯ ಯೇಮಥುಃ ।
ಪರ್ಯ್ನ್ಯಾ ನಾಹುಷಾ ಯುಗಾ ಮಹ್ನಾ ರಜಾಂಸಿ ದೀಯಥಃ ॥ ೩ ॥

॥ ಪದಪಾಠಃ ॥

ಈರ್ಮಾ । ಅನ್ಯತ್ । ವಪುಷೇ । ವಪುಃ । ಚಕ್ರಂ । ರಥಸ್ಯ । ಯೇಮಥುಃ ।
ಪರಿ । ಅನ್ಯಾ । ನಾಹುಷಾ । ಯುಗಾ । ಮಹ್ನಾ । ರಜಾಂಸಿ । ದೀಯಥಃ ॥ ೩ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನೌ ಯುವಾಂ ರಥಸ್ಯ ಯುಷ್ಮದೀಯಸ್ಯಾನ್ಯಚ್ಚಕ್ರಮೀರ್ಮಾ ॥ ಅರ್ತೇರೀರ್ಮೇತಿ ರೂಪಂ ॥ ಗಂತರ್ಯೋರ್ಾದಿತ್ಯೇ ವಪುಷೇ ತಸ್ಯ ಶೋಭಾಯೈ ವಪುರ್ವಪುಷ್ಮತ್ ತೇಜೋವತ್ ಚಕ್ರಂ ಯೇಮಥುಃ । ನಿಯಮಿತವಂತೌ ಸ್ಥಃ । ಅನ್ಯಾನ್ಯೇನ ಚಕ್ರೇಣ ಮಹ್ನಾ ಮಹತ್ತ್ವೇನ ಸ್ವಸಾಮರ್ಥ್ಯೇನ ನಾಹುಷಾ ಯುಗಾ । ನಹುಷಾ ಮನುಷ್ಯಾಃ । ತೇಷಾಂ ಯುಗಾ ಯುಗೋಪಲಕ್ಷಿತಾನ್ ಕಾಲಾನ್ ಪ್ರಾತರಾದಿಸವನಾನ್ ಅಹೋರಾತ್ರಾದಿಕ[illegible]ನ್ನಾ ರಜಾಂಸಿ ಲೋಕಾಂಶ್ಚ ಪರಿ ದೀಯಥಃ । ಪರಿಗಚ್ಛಥಃ। ಸ್ಯಗಿಷ್ನ್ಯಸ್ಯ ಮೂರ್ಧನಿ ಚಕ್ರಂ ರಥಸ್ಯ ಯೇಮಥುಃ । ಋಗ್ವೇ. ೧-೩೦-೧೯ । ಇತ್ಯುಕ್ತಂ ॥

॥ ಪ್ರತಿಪದಾರ್ಥ ॥

(ಎಲೈ ಅಶ್ವಿನೀ ದೇವತೆಗಳೇ) **ಈರ್ಮಾ**—ಸೂರ್ಯನ ಸಂಚಾರಕಾಲದಲ್ಲಿ | **ವಪುಷೇ**—ಅವನ ತೇಜಸ್ಸನ್ನು ವೃದ್ಧಿಪಡಿಸಲು | **ರಥಸ್ಯ**—ನಿಮ್ಮ ರಥದ | **ವಪುಃ**—ತೇಜೋಯುತವಾದ | **ಅನ್ಯತ್ ಚಕ್ರಂ**—ಒಂದು ಚಕ್ರವನ್ನು | **ಯೇಮಥುಃ**—ನೀವು ತಡೆದು ನಿಲ್ಲಿಸಿದಿರಿ | **ಅನ್ಯಾ**—ಇನ್ನೊಂದು ಚಕ್ರದಿಂದ | **ಮಹ್ನಾ**—ನಿಮ್ಮ ಮಹತ್ತ್ವದೊಡನೆ | **ನಾಹುಷಾ ಯುಗಾ**—ಮಾನವರ ಅಹೋರಾತ್ರಾದಿಕಾಲಗಳನ್ನು (ನಿಯಮಿಸುವುದಕ್ಕೆ) **ರಜಾಂಸಿ**—ಲೋಕಗಳಲ್ಲೆಲ್ಲಾ | **ಪರಿ ದೀಯಥಃ**—ಸುತ್ತಿ ಸಂಚರಿಸುತ್ತೀರಿ.

॥ ಭಾವಾರ್ಥ ॥

ಎಲೈ ಅಶ್ವಿನೀ ದೇವತೆಗಳೇ, ಸೂರ್ಯನ ಸಂಚಾರಕಾಲದಲ್ಲಿ ಅವನ ತೇಜಸ್ಸನ್ನು ವೃದ್ಧಿಪಡಿಸಲು ನಿಮ್ಮ ರಥದ ತೇಜೋಯುತವಾದ ಒಂದು ಚಕ್ರವನ್ನು ನೀವು ತಡೆದು ನಿಲ್ಲಿಸಿದಿರಿ. ಇನ್ನೊಂದು ಚಕ್ರದಿಂದ ನಿಮ್ಮ ಮಹತ್ತ್ವದೊಡನೆ ಮಾನವರ ಅಹೋರಾತ್ರಾದಿಕಾಲಗಳನ್ನು ನಿಯಮಿಸುವುದಕ್ಕೆ ಲೋಕಗಳಲ್ಲೆಲ್ಲಾ ಸುತ್ತಿ ಸಂಚರಿಸುತ್ತೀರಿ.

## English Translation.

You have arrested one luminous wheel of (your) car for illumining the form (of the sun), whilst with the other you traverse the spheres (to regulate) by your power the ages of mankind.

॥ ಸಂಹಿತಾಪಾಠಃ ॥

ತದೂ ಷು ವಾಮೇನಾ ಕೃತಂ ವಿಶ್ವಾ ಯದ್ವಾಮನು ಷ್ಟವೇ ।
ನಾನಾ ಜಾತಾವರೇಪಸಾ ಸಮಸ್ಮೇ ಬಂಧುಮೇಯಥುಃ ॥ ೪ ॥

॥ ಪದಪಾಠಃ ॥

ತತ್ । ಊಂ ಇತಿ । ಸು । ವಾಂ । ಏನಾ । ಕೃತಂ । ವಿಶ್ವಾ । ಯತ್ । ವಾಂ । ಅನು । ಸ್ತವೇ ।
ನಾನಾ । ಜಾತಾ । ಅರೇಪಸಾ । ಸಂ । ಅಸ್ಮೇ ಇತಿ । ಬಂಧುಂ । ಆ । ಈಯಥುಃ ॥ ೪ ॥

॥ ಸಾಯಣಭಾಷ್ಯಂ ॥

ಹೇ ವಿಶ್ವಾ ವ್ಯಾಪ್ತೌ ಯತ್ ಯೇನ ಸ್ತೋತ್ರೇಣ ವಾಂ ಯುವಾಮನು ಷ್ಟವೇ ಅನುಸ್ತುವೇ ತದು । ಉ ಇತಿ ಪೂರಣಃ । ಏನಾನೇನ ಪಾರೇಣ ಸು ಸುಷ್ಠು ವಾಂ ಯುವಾಭ್ಯಾಂ ಕೃತಂ ಸಂಪಾದಿತಂ ಭವತು । ನಾನಾ ಪೃಥಗೇವ ಜಾತಾ ಸಮೃದ್ಧಾವರೇಪಸಾಪಾಪಾವಸ್ಮೇ ಅಸ್ಮಭ್ಯಂ ಬಂಧುಮನ್ನಂ ಧನಂ ವಾ ಸಮೇಯಥುಃ । ಸಮ್ಯಕ್ ಗಮಯಥಃ । ಸಮ್ಯಕ್ ಪ್ರಯಚ್ಛತಮಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ವಿಶ್ವಾ**—ವಿಶ್ವವ್ಯಾಪಕರಾದ ಎಲ್ಲೈಅಶ್ವಿನೀ ದೇವತೆಗಳೇ | **ಯುತ್**—ಯಾವ ಸ್ತೋತ್ರಪಠನದಿಂದ | **ವಾಂ**—ನಿಮ್ಮನ್ನು | **ಅನುಷ್ಟುವೇ**—ಸ್ತುತಿಸುತ್ತಿರುವೆನೋ | **ತದು**—ಅದೇ ಸ್ತುತಿಯು | **ಏನಾ**—ಈ ಪೌರನಿಂದ **ವಾಂ**—ನಿಮ್ಮನ್ನುದ್ದೇಶಿಸಿ | **ಸು**—ಅತಿಶಯವಾಗಿ | **ಕೃತಂ**—ಸಂಪಾದಿತವಾಗಿದೆ | **ನಾನಾ**—ವೈಯಕ್ತಿಕವಾಗಿಯೇ | **ಜಾತಾ**—ಉತ್ಪನ್ನರಾಗಿ ವೃದ್ಧಿಯನ್ನು ಹೊಂದಿದ ನೀವು | **ಅರೇಪಸಾ**—ಪಾಪರಹಿತರಾಗಿ | **ಅಸ್ಮೇ**—ನಮಗೆ | **ಬಂಧುಂ**—ಅನ್ನವನ್ನು | **ಸಂ ಆ ಈಯುಥುಃ**—ಪೂರ್ಣವಾಗಿ ಒದಗಿಸಿಕೊಡಿರಿ.

॥ ಭಾವಾರ್ಥ ॥

ವಿಶ್ವವ್ಯಾಪಕರಾದ ಎಲ್ಲೈ ಅಶ್ವಿನೀದೇವತೆಗಳೇ, ಯಾವ ಸ್ತೋತ್ರಪಠನದಿಂದ ಈಗ ನಾನು ನಿಮ್ಮನ್ನು ಸ್ತುತಿಸುತ್ತಿರುವೆನೋ, ಅದೇ ಸ್ತುತಿಯು ಈ ಪೌರಋಷಿಯಿಂದ ನಿಮ್ಮನ್ನುದ್ದೇಶಿಸಿ ಅತಿಶಯವಾಗಿ ಸಂಪಾದಿತವಾಗಿದೆ. ವೈಯಕ್ತಿಕವಾಗಿಯೇ ಉತ್ಪನ್ನರಾಗಿ ವೃದ್ಧಿಯನ್ನು ಹೊಂದಿದ ನೀವು ಪಾಪರಹಿತರಾಗಿ ನಮಗೆ ಪೂರ್ಣವಾದ ಅನ್ನವನ್ನು ಒದಗಿಸಿಕೊಡಿರಿ.

## English Translation.

May the praise, universal (deities), wherewith I laud you, be agreeble to you, as offered by this (your worshipper); and do you, who are severally born, and free from blame bestow upon us food.

---

॥ ಸಂಹಿತಾಪಾಠಃ ॥

ಆ ಯದ್ವಾಂ ಸೂರ್ಯಾ ರಥಂ ತಿಷ್ಠದ್ರಘುಷ್ಯದಂ ಸದಾ ।
ಪರಿ ವಾಮರುಷಾ ವಯೋ ಘೃಣಾ ವರಂತ ಆತಪಃ ॥ ೫ ॥

ಪದಪಾಠಃ ।

ಆ । ಯತ್ । ವಾಂ । ಸೂರ್ಯಾ । ರಥಂ । ತಿಷ್ಠತ್ । ರಘುऽಸ್ಯದಂ । ಸದಾ ।
ಪರಿ । ವಾಂ । ಅರುಷಾಃ । ವಯಃ । ಘೃಣಾ । ವರಂತೇ । ಆऽತಪಃ ॥ ೫ ॥

ಸಾಯಣಭಾಷ್ಯಂ ।

**ಹೇ ಅಶ್ವಿನೌ ವಾಂ ಯುವಯೋಃ ಸದಾ ಸರ್ವದಾ ರಘುಷ್ಯದಂ ಶೀಘ್ರಗಂ ರಥಂ ಸೂರ್ಯಾ ಯುವಯೋಃ ಪತ್ನೀ ಯದ್ಯದಾ ಆ ತಿಷ್ಠತ್ಅಸ್ಥಿತವತೀ ತದಾ ವಾಂ ಪರಿ ವರಂತೇ । ಪರಿತೋ ವೃಣ್ವಂತಿ।**

**ಕೇ । ಅರುಷಾ ಆರೋಚಮಾನಾ ಘೃಣಾ ದೀಪ್ತಾ ಆತಪ ಆತಾಪನಾಃ ಶತ್ರೂಣಾಂ ವಯೋಽಶ್ವಾಃ । ಅಥವಾತಪ ಇತಿ ವಿಶೇಷ್ಯಂ । ವಯೋ ಗಂತಾರ ಉಕ್ತಲಕ್ಷಣಾ ಆತಪಃ ಸರ್ವತಸ್ತಾಪಯಿತ್ರ್ಯೋ ದೀಪ್ತಯಃ ಪರಿ ವರಂತೇ ॥**

॥ ಪ್ರತಿಪದಾರ್ಥ ॥

ಎಲೈ ಅಶ್ವಿನೀದೇವತೆಗಳೇ, **ವಾಂ**—ನಿಮ್ಮ । **ಸದಾ**—ಸರ್ವಕಾಲದಲ್ಲಿಯೂ । **ರಘುಷ್ಯದಂ**—ವೇಗವಾಗಿ ಸಂಚರಿಸತಕ್ಕ । **ರಥಂ**—ರಥವನ್ನು । **ಸೂರ್ಯಾ**—ನಿಮ್ಮ ಪತ್ನಿಯಾದ ಸೂರ್ಯೆಯು । **ಯತ್**—ಯಾವಾಗ । **ಆ ತಿಷ್ಠತ್**—ಹತ್ತಿ ಕೂಡುವಳೋ (ಆಗ) । **ಅರುಷಾಃ**—ಆಕರ್ಷಕವಾದ ಪ್ರಭೆಯುಳ್ಳವೂ । **ಘೃಣಾ**—ಜ್ವಲಿಸತಕ್ಕವೂ । **ವಯಃ**—ಕಂಪನಾತ್ಮಕವೂ ಆದ । **ಆತಪಃ**—ರಶ್ಮಿಗಳು । **ವಾಂ**—ನಿಮ್ಮ **ಪರಿ**—ಸುತ್ತಲೂ । **ವರಂತೇ**—ಆವರಿಸಿ ವ್ಯಾಪಿಸುತ್ತವೆ.

॥ ಭಾವಾರ್ಥ ॥

ಎಲೈ ಅಶ್ವಿನಿದೇವತೆಗಳೇ, ಸರ್ವಕಾಲದಲ್ಲಿಯೂ ವೇಗವಾಗಿ ಸಂಚರಿಸತಕ್ಕ ನಿಮ್ಮ ರಥವನ್ನು ನಿಮ್ಮ ಪತ್ನಿಯಾದ ಸೂರ್ಯೆಯು ಯಾವಾಗ ಹತ್ತಿ ಕೂಡುವಳೋ ಆಗ ಆಕರ್ಷಕವಾದ ಪ್ರಭೆಯುಳ್ಳವೂ, ಜ್ವಲಿಸತಕ್ಕವೂ, ಕಂಪನಾತ್ಮಕವೂ ಆದ ರಶ್ಮಿಗಳು ನಿಮ್ಮ ಸುತ್ತಲೂ ಆವರಿಸಿ ವ್ಯಾಪಿಸುತ್ತವೆ.

## English Translation.

When Surya has ascended your ever-easy moving car, then bright-waving, resplendent rays (of light) encompass you.

॥ ವಿಶೇಷವಿಷಯಗಳು ॥

ಸೂರ್ಯೆಯು ಎಂದರೆ ಸೂರ್ಯಪುತ್ರಿಯು ಅಶ್ವಿನೀದೇವತೆಗಳ ರಥವನ್ನು ಹತ್ತಿ ಕುಳಿತಳು ಎಂಬ ವಿಷಯದಲ್ಲಿ ನಾವು ಹಿಂದೆ ಎಂದರೆ ಋ. ಸಂ. ಭಾಗ ೯, ಪುಟ 365 ಮತ್ತು 471 ನೇ ಪುಟಗಳನ್ನು ಬರೆದಿರುವುದನ್ನು ನೋಡಿ.

॥ ಸಂಹಿತಾಪಾಠಃ ॥

**ಯುವೋರತ್ರಿಶ್ಚಿಕೇತತಿ ನರಾ ಸುಮ್ನೇನ ಚೇತಸಾ ।**
**ಘರ್ಮಂ ಯದ್ವಾಮರೇಪಸಂ ನಾಸತ್ಯಾಸ್ನಾ ಭುರಣ್ಯತಿ ॥ ೭ ॥**

॥ ಪದಪಾಠಃ ॥

ಯುವೋಃ । ಅತ್ರಿಃ । ಚಿಕೇತತಿ । ನರಾ । ಸುಮ್ನೇನ । ಚೇತಸಾ ।

ಘರ್ಮಂ । ಯತ್ । ವಾಂ । ಅರೇಪಸಂ । ನಾಸತ್ಯಾ । ಆಸ್ನಾ । ಭುರಣ್ಯತಿ ॥ ೬ ॥

॥ ಸಾಯಣಭಾಷ್ಯಂ ॥

ಹೇ ನರಾ ನೇತಾರಾವಶ್ವಿನೌ ಯುವೋರ್ಯುವಯೋಃ । ಯುವಾಮಿತ್ಯರ್ಥಃ । ಅತ್ರಿರಸ್ಮತ್ಪಿತಾ ಋಷಿಃ ಸುಮ್ನೇನ ಸುಖೇನಾಗ್ನಿದಾಹೋಪಶಮರೂಪೇಣ ಹೇತುನಾ ಚೇತಸಾದರಯುಕ್ತೇನ ಮನಸಾ ಚಿಕೇತತಿ । ಜಾನಾತಿ । ಸ್ತುತವಾನಿತ್ಯರ್ಥಃ । ಸತಿ ದುಃಖೇ ಸುಖಮುಚ್ಯತೇ । ದುಃಖಸ್ಯ ಕಃ ಪ್ರಸಂಗ ಇತ್ಯತ ಆಹ । ಯದ್ಯಸ್ಮಾತ್ ಹೇ ನಾಸತ್ಯೌ ವಾಂ ಯುವಯೋರಾಸ್ನಾಸ್ಯೇನ ತನ್ನಿಷ್ಪನ್ನೇನ ಸ್ತೋತ್ರೇಣ ಘರ್ಮಂ ದೀಪ್ತಂ ದಹಂತಮಗ್ನಿಮಸುರೈಃ ಸ್ವದಾಹಾಯ ಪ್ರಕ್ಷಿಪ್ತಮರೇಪಸಮಪಾಪಂ ಸುಖಕರಂ ಭುರಣ್ಯತಿ ಪ್ರಾಪ್ತವಾನ್ ॥ ಭುರಣ್ಯತಿರ್ಗತಿಕರ್ಮಾ ॥ ಅತ್ರೇರಗ್ನೇಃ ಸಕಾಶಾದ್ರಕ್ಷಣಂ ಹಿಮೇನಾಗ್ನಿಂ ಘ್ರಂಸಂ । ಋಗ್ವೇ. ೧-೧೧೬-೮ । ಯುವಪ್ರ್ಯಬೀಸಮುತ ತಪ್ತಮತ್ರಯೇ । ಋಗ್ವೇ. ೧೦-೩೯-೯ । ಇತ್ಯಾದಿಭಿಃ ಸ್ಪಷ್ಟಂ ಪ್ರದರ್ಶಿತಂ ॥

॥ ಪ್ರತಿಪದಾರ್ಥ ॥

**ನಾಸತ್ಯಾ**—ಎಲೈ ಅಶ್ವಿನೀದೇವತೆಗಳೇ । **ಯತ್**—ಯಾವಾಗ । **ವಾಂ**—ನಿಮ್ಮನ್ನು ಪ್ರಶಂಸಿಸುವ । **ಆಸ್ನಾ**—ಸ್ತುತಿಯಿಂದ । **ಘರ್ಮಂ**—ದಹಿಸತಕ್ಕ ಅಗ್ನಿಯನ್ನು । **ಅರೇಪಸಂ**—ಹಿಂಸಾತ್ಮಕವಲ್ಲದೇ ಸುಖಕರ ವಾಗಿ । **ಭುರಣ್ಯತಿ**—ಹೊಂದಿದನೋ (ಆಗ) । **ನರಾ**—ನೇತೃಗಳಾದ ಎಲೈ ಅಶ್ವಿನೀದೇವತೆಗಳೇ । **ಅತ್ರಿಃ**—ಅತ್ರಿಯು । **ಯುವೋಃ**—ನಿಮ್ಮ ಪ್ರಭಾವವನ್ನು । **ಸುಮ್ನೇನ**—ಸುಖವನ್ನನುಭವಿಸಿದುದರಿಂದ (ಕೃತಜ್ಞತಾ ಪೂರ್ವಕವಾದ) । **ಚೇತಸಾ**—ಮನಸ್ಸಿನಿಂದ । **ಚಿಕೇತತಿ**—ಅರಿತನು.

ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನಿಮ್ಮನ್ನು ಪ್ರಶಂಸಿಸುವ ಸ್ತುತಿಯ ಮಹಿಮೆಯಿಂದ ಯಾವಾಗ ಅತ್ರಿಯು ದಾಹಾತ್ಮಕವಾದ ಅಗ್ನಿಯನ್ನು ಹಿಂಸಾಕಾರಕವಲ್ಲದೇ ಸುಖಕರವಾಗಿರುವಂತೆ ಹೊಂದಿದನೋ, ಆಗ ನೇತೃಗಳಾದ ಎಲೈ ಅಶ್ವಿನೀದೇವತೆಗಳೇ, ಅತ್ರಿಯು ಅನಿರೀಕ್ಷಿತವಾಗಿ ಸುಖವನ್ನನುಭವಿಸಿದುದರಿಂದ ನಿಮ್ಮ ಪ್ರಭಾವವನ್ನು ಕೃತಜ್ಞತಾಪೂರ್ವಕವಾದ ಮನಸ್ಸಿನಿಂದ ಅರಿತನು.

English Translation

Leaders (of rites), Atri recognized (your benevolence) with (a grateful) mind on account of the relief (you afforded him), when, Nastyas, through his praise of you, he found the (fiery) heat innocuous.

॥ ಸಂಹಿತಾಪಾಠಃ ॥

ಉಗ್ರೋ ವಾಂ ಕಕುಹೋ ಯಯಿಃ ಶೃಣ್ವೇ ಯಾಮೇಷು ಸಂತನಿಃ ।
ಯದ್ವಾಂ ದಂಸೋಭಿರಶ್ವಿನಾತ್ರಿರ್ನರಾವವರ್ತತಿ ॥ ೭ ॥

॥ ಪದಪಾಠಃ ॥

ಉಗ್ರಃ । ವಾಂ । ಕಕುಹಃ । ಯಯಿಃ । ಶೃಣ್ವೇ । ಯಾಮೇಷು । ಸಂऽತನಿಃ ।
ಯತ್ । ವಾಂ । ದಂಸಃऽಭಿಃ । ಅಶ್ವಿನಾ । ಅತ್ರಿಃ । ನರಾ । ಆऽವವರ್ತತಿ ॥ ೭ ॥

॥ ಸಾಯಣಭಾಷ್ಯಂ ॥

ಉಗ್ರ ಉದ್ಗೂರ್ಣಬಲೋ ವಾಂ ಯುವಯೋಃ ಕಕುಹ ಉಚ್ಛ್ರಿತೋ ಮಹಾನ್ ಯಯಿರ್ಗಂತಾ ಸಂತನಿಃ ಸತತಂ ಗಚ್ಛನ್ ರಥೋ ಯಾಮೇಷು ಗಮನೇಷು ಯಜ್ಞೇಷು ವಾ ಶೃಣ್ವೇ । ಶ್ರೂಯತೇ । ಹೇ ಅಶ್ವಿನಾ ಹೇ ನರಾ ಯದ್ಯಸ್ಮಾದ್ವಾಂ ಯುವಾಂ ದಂಸೋಭಿಃ ಕರ್ಮಭಿರತ್ರಿರಸ್ಮತ್ಪಿತಾವವರ್ತತಿ ಆವರ್ತಯತಿ ॥

॥ ಪ್ರತಿಪದಾರ್ಥ ॥

ಅಶ್ವಿನಾ—ಎಲೈ ಅಶ್ವಿನೀ ದೇವತೆಗಳೇ । ವಾಂ—ನಿಮ್ಮ । ಉಗ್ರಃ—ಭಯಂಕರವಾದ ಶಕ್ತಿಯುಳ್ಳದ್ದೂ । ಕಕುಹಃ—ಮಹತ್ತಾದ ದೂ । ಯಯಿಃ—ಗಮನಶೀಲವಾದುದೂ ಆದ । ಸಂತನಿಃ—ರಥವು । ಯಾಮೇಷು—ಯಜ್ಞಗಳಲ್ಲಿ । ಶೃಣ್ವೇ—ಪ್ರಸಿದ್ಧವಾಗಿದೆ । ನರಾ—ಎಲೈ ನೇತೃಗಳೇ । ವಾಂ—ನಿಮ್ಮ । ದಂಸೋಭಿಃ—ಕರ್ಮಗಳಿಂದ । ಅತ್ರಿಃ- ನಮ್ಮ ಪಿತೃವಾದ ಅತ್ರಿಯು । ಆವವರ್ತತಿ—ರಕ್ಷಿಸಲ್ಪಟ್ಟಿದ್ದಾನೆ.

॥ ಭಾವಾರ್ಥ ॥

ನೇತೃಗಳಾದ ಎಲೈ ಅಶ್ವಿನೀದೇವತೆಗಳೇ, ಭಯಂಕರವಾದ ಶಕ್ತಿಯುಳ್ಳದ್ದೂ, ಮಹತ್ತಾದುದೂ, ಗಮನಶೀಲವಾದುದೂ ಆದ ನಿಮ್ಮ ರಥವು ಯಜ್ಞಗಳಲ್ಲಿ ಪ್ರಸಿದ್ಧವಾಗಿದೆ. ಎಲೈ ನೇತೃಗಳೇ, ನಿಮ್ಮ ಕರ್ಮಗಳಿಂದ ನಮ್ಮ ಪಿತೃವಾದ ಅತ್ರಿಯು ರಕ್ಷಿಸಲ್ಪಟ್ಟಿದ್ದಾನೆ.

## English Translation.

Your strong, lofty, moving, ever-progressing (car) has been renowned at sacrifices ever since; Aswins, leaders (of rites), Atri was rescued by your acts.

॥ ಸಂಹಿತಾಪಾಠಃ ॥

ಮಧ್ವ ಊ ಷು ಮಧೂಯುವಾ ರುದ್ರಾ ಸಿಷಕ್ತಿ ಪಿಪ್ಯುಷೀ ।
ಯತ್ಸಮುದ್ರಾತಿ ಪರ್ಷಥಃ ಪಕ್ವಾಃ ಪೃಕ್ಷೋ ಭರಂತ ವಾಂ ॥ ೮ ॥

॥ ಪದಪಾಠಃ ॥

ಮಧ್ವಃ । ಊಂ ಇತಿ । ಸು । ಮಧುಽಯುವಾ । ರುದ್ರಾ । ಸಿಸಕ್ತಿ । ಪಿಪ್ಯುಷೀ ।
ಯತ್ । ಸಮುದ್ರಾ । ಅತಿ । ಪರ್ಷಥಃ । ಪಕ್ವಾಃ । ಪೃಕ್ಷಃ । ಭರಂತೆ । ವಾಂ ॥ ೮ ॥

॥ ಸಾಯಣಭಾಷ್ಯಂ ॥

**ಹೇ ಮಧೂಯುವಾ ಮಧುರಸ್ಯ ಸೋಮಾದೇರ್ಮಿಶ್ರಯಿತಾರೌ ಹೇ ರುದ್ರಾ । ರುತ್ ಸ್ತುತಿಃ । ತಯಾ ದ್ರವಣೀಯೌ ರುದ್ರಪುತ್ರೌ ವಾ ವಾಂ ಮಧ್ವೋ ಮಧುರರಸೇನ ಸು ಪಿಪ್ಯುಷೀ ಸುಷ್ಠು ಪ್ಯಾಯಯಂತೀ ಸ್ತುತಿರಸ್ಮತ್ಕೃತಾ ಸಿಷಕ್ತಿ । ಸೇವತೇ । ಯದ್ಯದಾ ಸಮುದ್ರಾ ಸಮುದ್ದ್ರವಣಸಾಧನಾನ್ಯಂತರಿಕ್ಷಾಣ್ಯತಿ ಪರ್ಷಥಃ ಅತಿಪಾರಯಥಃ । ಯಜ್ಞಂ ಪ್ರಾಪ್ನುಥ ಇತ್ಯರ್ಥಃ । ಪಕ್ವಾಃ ಪೃಕ್ಷೋಽನ್ನಾನಿ ಹವಿರ್ಲಕ್ಷಣಾನಿ ವಾಂ ಭರಂತ । ಭ್ರಿಯಂತೇ ಯಜಮಾನೈಃ ॥**

॥ ಪ್ರತಿಪದಾರ್ಥ ॥

**ಮಧುಯುವಾ**—ಮಧುರವಾದ ಸೋಮಾದಿಗಳನ್ನು ಮಿಶ್ರಣಮಾಡುವವರೂ । **ರುದ್ರಾ**—ರುದ್ರಪುತ್ರರೂ ಆದ ಎಲೈ ಅಶ್ವಿನೀದೇವತೆಗಳೇ । **ಯತ್**—ಯಾವಾಗ । **ಸಮುದ್ರಾ**–ಅಂತರಿಕ್ಷಪ್ರಾಂತಗಳನ್ನು । **ಅತಿ ಪರ್ಷಥಃ**–ನೀವು ದಾಟುವಿರೋ (ಎಂದರೆ ಯಜ್ಞಕ್ಕೆ ಬರುವಿರೋ ಆಗ) । **ಮಧ್ವಃ**—ಮಧುರವಾದ ಸೋಮರಸದಿಂದ । **ಸು ಪಿಪ್ಯುಷೀ**—ನಿಮ್ಮನ್ನು ಪೂರ್ಣವಾಗಿ ತೃಪ್ತಿಗೊಳಿಸುತ್ತಾ । **ಸಿಷಕ್ತಿ**—(ನಮ್ಮ ಸ್ತುತಿಯು) ನಿಮ್ಮನ್ನು ಸೇವಿಸುತ್ತದೆ । **ಪಕ್ವಾಃ**—ಪಕ್ವವಾದ । **ಪೃಕ್ಷಃ**—ಅನ್ನಗಳು । **ವಾಂ**—ನಿಮ್ಮಲ್ಲಿಗೆ । **ಭರಂತ**—ವಹಿಸಲ್ಪಡುತ್ತವೆ.

॥ ಭಾವಾರ್ಥ ॥

ಮಧುರವಾದ ಸೋಮಾದಿಗಳನ್ನು ಮಿಶ್ರಣಮಾಡುವವರೂ, ರುದ್ರಪುತ್ರರೂ ಆದ ಎಲೈ ಅಶ್ವಿನೀದೇವತೆಗಳೇ, ನೀವು ಯಾವಾಗ ಅಂತರಿಕ್ಷದ ಸೀಮಾಪ್ರದೇಶಗಳನ್ನು ದಾಟಿ ನಮ್ಮ ಯಜ್ಞಭೂಮಿಗೆ ಬರುವಿರೋ ಆಗ ನಮ್ಮ ಸ್ತುತಿಯು ಮಧುರವಾದ ಸೋಮರಸದಿಂದ ನಿಮ್ಮನ್ನು ಪೂರ್ಣವಾಗಿ ತೃಪ್ತಿಗೊಳಿಸುತ್ತಾ ಸೇವಿಸುತ್ತದೆ. ಪಕ್ವವಾದ ಅನ್ನಗಳು ನಿಮ್ಮಲ್ಲಿಗೆ ವಹಿಸಲ್ಪಡುತ್ತವೆ.

## English Translation.

Mixers of the Soma-juice, Rudras, (our) nutritious (adoration) bedews you well with the libation, when you traverse (the limits) of the firmament, and the prepared viands (of the sacrifice) support you.

॥ ಸಂಹಿತಾಪಾಠಃ ॥

ಸತ್ಯಮಿದ್ವಾ ಉ ಅಶ್ವಿನಾ ಯುವಾಮಾಹುರ್ಮಯೋಭುವಾ ।
ತಾ ಯಾಮನ್ಯಾಮಹೂತಮಾ ಯಾಮನ್ನಾ ಮೃಳಯತ್ತಮಾ ॥ ೯ ॥

॥ ಪದಪಾಠಃ ॥

ಸತ್ಯಂ । ಇತ್ । ವೈ । ಊಂ ಇತಿ । ಅಶ್ವಿನಾ । ಯುವಾಂ । ಆಹುಃ । ಮಯಃऽಭುವಾ ।
ತಾ । ಯಾಮನ್ । ಯಾಮಽಹೂತಮಾ । ಯಾಮನ್ । ಆ । ಮೃಳಯತ್ऽತಮಾ ॥ ೯ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾ ಯುವಾಂ ಸತ್ಯಮಿತ್ ಸತ್ಯಮೇವ । ವಾ ಇತಿ ಪಾದಪೂರಣಃ । ಮಯೋಭುವಾ ಸುಖಸ್ಯ ಭಾವಯಿತಾರಾವಾಹುಃ ಪುರಾವಿದಃ। ತಾ ತೌ ಸುಖಕರತ್ವೇನ ಪ್ರಸಿದ್ಧೌ ಯುವಾಂ ಯಾಮನ್ಯಜ್ಞೇ ಯಾಮಹೂತಮಾ ಗಮನಾರ್ಥಂ ಭೃಶಮಾಹ್ವಾತವ್ಯೌ ಭವತಮಿತಿ ಶೇಷಃ । ಯಾಮನ್ನಸ್ಮದ್ಯಜ್ಞೇऽಸ್ಮದ್ಭಾಗಮನೇ ವಾ ಮೃಳಯತ್ತಮಾ ಚಾತಿಶಯೇನ ಸುಖಯಿತಾರೌ ಭವತಂ । ಆಕಾರಶ್ಚಾರ್ಥೇ ॥

॥ ಪ್ರತಿಪದಾರ್ಥ ॥

ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । ಯುವಾಂ—ನಿಮ್ಮನ್ನು । ಸತ್ಯಮಿತ್—ಸತ್ಯವಾಗಿಯೂ । ಮಯೋಭುವಾ—ಸುಖಪ್ರದಾತೃಗಳೆಂದು। ಆಹುಃ—ಹಿಂದಿನ ಋಷಿಗಳು ಹೇಳಿದ್ದಾರೆ । ತಾ—ಅಂತಹ ನೀವು । ಯಾಮನ್—ನಮ್ಮ ಯಜ್ಞದಲ್ಲಿ । ಯಾಮಹೂತಮಾ—ನಿಮ್ಮ ಆಗಮನಕ್ಕಾಗಿ ಅನೇಕ ವಿಧದಲ್ಲಿ ಪ್ರಾರ್ಥಿತರಾಗುತ್ತೀರಿ । ಯಾಮನ್—ನಮ್ಮ ಈ ಯಜ್ಞದಲ್ಲಿ । ಮೃಳಯತ್ತಮಾ—ಅತ್ಯಂತ ಸುಖಪ್ರದರಾಗಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನೀವು ಸತ್ಯವಾಗಿಯೂ ಸುಖದಾತೃಗಳೆಂದು ಹಿಂದಿನ ಋಷಿಗಳು ನಿಮ್ಮನ್ನು ಪ್ರಶಂಸಿದ್ದಾರೆ, ಅಂತಹ ನಿಮ್ಮನ್ನು ಅನೇಕ ವಿಧದಲ್ಲಿ ಪ್ರಾರ್ಥಿಸಿ ನಿಮ್ಮನ್ನು ಈ ಯಜ್ಞಕ್ಕೆ ಕರೆಯುತ್ತೇವೆ. ನಮ್ಮ ಈ ಯಜ್ಞಕ್ಕೆ ಬಂದು ಇಲ್ಲಿ ಅನೇಕ ವಿಧದಲ್ಲಿ ಸುಖಪ್ರದರಾಗಿರಿ.

English Translation.

Truly have they called you, Aswins, the bestowers of felicity : such may you be when earnestly invoked to our sacrifice ; bountiful bestowers of felicity at our sacrifice.

|| ಸಂಹಿತಾಪಾಠಃ ||

ಇಮಾ ಬ್ರಹ್ಮಾಣಿ ವರ್ಧನಾಶ್ವಿಭ್ಯಾಂ ಸಂತು ಶಂತಮಾ ।
ಯಾ ತಕ್ಷಾಮ ರಥಾಁ ಇವಾವೋಚಾಮ ಬೃಹನ್ನಮಃ ॥ ೧೦ ॥

|| ಪದಪಾಠಃ ||

ಇಮಾ । ಬ್ರಹ್ಮಾಣಿ । ವರ್ಧನಾ । ಅಶ್ವಿಽಭ್ಯಾಂ । ಸಂತು । ಶಂಽತಮಾ ।
ಯಾ । ತಕ್ಷಾಮ । ರಥಾನ್ಽಇವ । ಅವೋಚಾಮ । ಬೃಹತ್ । ನಮಃ ॥ ೧೦ ॥

| ಸಾಯಣಭಾಷ್ಯಂ ||

ಅಥ ಸ್ತುತಿಂ ನಿಗಮಯತಿ । ಇಮೇಮಾನೀದಾನೀಂ ಕೃತಾನಿ ಬ್ರಹ್ಮಾಣಿ ಪರಿವೃಢಾನಿ ಸ್ತೋತ್ರಾಣ್ಯಶ್ವಿಭ್ಯಾಂ ವರ್ಧನಾ ವರ್ಧನಾನಿ ಸಮರ್ಧಕಾನಿ ಶಂತಮಾ ಸುಖತಮಾನಿ ಸಂತು । ಯಾ ಯಾನಿ ತಕ್ಷಾಮ ಸಂಪಾದಯಾಮ ರಥಾನಿವ ಶಿಲ್ಪೀ ಕದ್ಯಸ್ತಕ್ಷಾಮ ತಾನಿ ಸಂತು । ವಯಂ ಬೃಹತ್ ಪ್ರಭೂತಂ ಪ್ರಭೂತಫಲಪ್ರದಂ ನಮೋ ನಮಸ್ಕಾರೋಕ್ತಿಮವೋಚಾಮ ॥

। ಪ್ರತಿಪದಾರ್ಥ ।

**ರಥಾನಿವ**—ಶಿಲ್ಪಿಯು ರಥಗಳನ್ನು ಕುಶಲತೆಯಿಂದ ನಿರ್ಮಿಸುವಂತೆ । **ಯಾ**—ಯಾವ ಸ್ತುತಿಗಳನ್ನು । **ತಕ್ಷಾಮ**—ನಾವು ನಿರ್ಮಿಸುವೆವೋ । **ಇಮಾ ಬ್ರಹ್ಮಾಣಿ**—ಅಂತಹ ಈ ಸ್ತೋತ್ರಗಳು । **ಅಶ್ವಿಭ್ಯಾಂ**—ಅಶ್ವಿನೀ ದೇವತೆಗಳಿಗೆ । **ವರ್ಧನಾ**—ವೃದ್ಧಿಕಾರಕಗಳಾಗಿಯೂ । **ಶಂತಮಾ**-ಸುಖಕಾರಕಗಳಾಗಿಯೂ । **ಸಂತು**-ಆಗಿರಲಿ । **ಬೃಹತ್**—ಪ್ರಭೂತವಾಗಿ । **ನಮಃ**—ನಮಸ್ಕಾರೋಕ್ತಿಯನ್ನು । **ಅವೋಚಾಮ**—ಪಠಿಸುತ್ತೇವೆ.

॥ ಭಾವಾರ್ಥ ॥

ಶಿಲ್ಪಿಯು ರಥಗಳನ್ನು ಕುಶಲತೆಯಿಂದ ನಿರ್ಮಿಸುವಂತೆ ನಾವು ನಿರ್ಮಿಸತಕ್ಕ ಈ ಸ್ತುತಿಗಳು ಅಶ್ವಿನೀ ದೇವತೆಗಳಿಗೆ ವೃದ್ಧಿಕಾರಕಗಳಾಗಿಯೂ, ಸುಖಕಾರಕಗಳಾಗಿಯೂ ಆಗಿರಲಿ. ನಾವು ಅಶ್ವಿನೀದೇವತೆಗಳನ್ನುದ್ದೇಶಿಸಿ ಪ್ರಭೂತವಾದ ನಮಸ್ಕಾರೋಕ್ತಿಗಳನ್ನು ಪಠಿಸುತ್ತೇವೆ.

### English Translation.

May these praises exalting the Aswins be productive of happiness, the praises that we fabricate as (a wheelwright) a car: we proclaim aloud fervent adoration.

## ಎಪ್ಪತ್ತನಾಲ್ಕನೆಯ ಸೂಕ್ತವು

। ಸಾಯಣಭಾಷ್ಯಂ ॥

**ಕೂಷ್ಠ ಇತಿ ದಶರ್ಚಂ ದ್ವಿತೀಯಂ ಸೂಕ್ತಂ ಪೌರಸ್ಯಾರ್ಷಂ । ಕೂಷ್ಠ ಇತ್ಯನುಕ್ರಮಣಿಕಾ । ಪೂರ್ವತ್ರ ತುಶಬ್ದಾದಿದಮಪ್ಯಾನುಷ್ಟುಭಂ । ಆಶ್ವಿನಂ ತದಿತಿ ಪೂರ್ವೋಕ್ತತ್ವಾತ್ ॥ ಪ್ರಾತರನುವಾಕಾಶ್ವಿನಶಸ್ತ್ರಯೋಃ ಪೂರ್ವಸೂಕ್ತೇನ ಸಹೋಕ್ತೋ ವಿನಿಯೋಗಃ ॥**

ಅನುವಾದವು—**ಕೂಷ್ಠಃ** ಎಂಬ ಈ ಸೂಕ್ತವು ಆರನೆಯ ಅನುವಾದದಲ್ಲಿ ಎರಡನೆಯ ಸೂಕ್ತವು. ಇದರಲ್ಲಿ ಹತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ **ಪೌರ ಆತ್ರೇಯಃ** ಎಂಬುವನು ಋಷಿಯು; ಅಶ್ವಿನೀದೇವತೆಗಳು ದೇವತೆಯು; ಅನುಷ್ಟುಪ್‌ಛಂದಸ್ಸು. ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಹಿಂದಿನ ಸೂಕ್ತದ ವಿನಿಯೋಗದಲ್ಲಿಯೇ ಹೇಳಲಾಗಿದೆ.

### ಸೂಕ್ತ ೭೪

ಮಂಡಲ—೫ ॥ ಅನುವಾಕ—೬ ॥ ಸೂಕ್ತ—೭೪ ॥
ಅಷ್ಟಕ—೪ ॥ ಅಧ್ಯಾಯ—೪ ॥ ವರ್ಗ—೧೩, ೧೪ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೦ ॥
॥ ಋಷಿಃ—ಪೌರ ಆತ್ರೇಯಃ ॥
॥ ದೇವತಾ—ಅಶ್ವಿನೌ ॥
॥ ಛಂದಃ—ಅನುಷ್ಟುಪ್ ॥

। ಸಂಹಿತಾಪಾಠಃ ॥

**ಕೂಷ್ಠೋ ದೇವಾವಶ್ವಿನಾದ್ಯಾ ದಿವೋ ಮನಾವಸೂ ।**
**ತಚ್ಛ್ರವಥೋ ವೃಷಣ್ವಸೂ ಅತ್ರಿರ್ವಾಮಾ ವಿವಾಸತಿ ॥ ೧ ॥**

॥ ಪದಪಾಠಃ ॥

**ಕೂಽಸ್ಥಃ । ದೇವೌ । ಅಶ್ವಿನಾ । ಅದ್ಯ । ದಿವಃ । ಮನಾವಸೂ ಇತಿ ।**

**ತತ್ । ಶ್ರವಥಃ । ವೃಷಣ್ವಸೂ ಇತಿ ವೃಷಣ್ಽವಸೂ । ಅತ್ರಿಃ । ವಾಂ । ಆ । ವಿವಾಸತಿ ॥ ೧ ॥**

॥ ಸಾಯಣಭಾಷ್ಯಂ ॥

ಹೇ ದೇವೌ ಹೇ ಮನಾವಸೂ ಸ್ತುತಿಧನಾವಶ್ವಿನಾ ಅಶ್ವಿನ್ಯಾಗದಿನೇ ದಿವೋ ದ್ಯುಲೋಕಾದಾಗತ್ಯ ಕೂಸ್ಥಃ ॥ ವ್ಯತ್ಯಯೇನೈಕವಚನಂ ॥ ಕೌ ಭೂಮೌ ತಿಷ್ಠಂತೌ ಸಂತೌ ತತ್ಸ್ತೋತ್ರಂ ಶ್ರವಥಃ । ಶೃಣುಥಃ। ಹೇ ವೃಷಣ್ವಸೂ ವರ್ಷಕಧನೌ ವಾಮತ್ರಿರತ್ರೇಃ ಪುತ್ರ ಆ ವಿವಾಸತಿ । ಸರ್ವತಃ ಪರಿಚರತಿ ॥ ಅಥವಾ ಕೂ ಇತ್ಯಸ್ಯ ನಿಪಾತಸ್ಯ ಸ್ಥ ಇತ್ಯಾಖ್ಯಾತೇನ ಸಹೇತಿ ಯೋಗವಿಭಾಗಾತ್ಸಮಾಸಃ । ಐಕಸ್ವರ್ಯಂ ಚಾಧ್ಯೇತೃಸಮಯಪ್ರಾಪ್ತಂ । ಅರಾ ಇವ । ಋಗ್ವೇ. ೫-೫೮-೫ । ಇತ್ಯತ್ರ ಯಥೇವಶಬ್ದಃ ಕೂಚಿಜ್ಞಾಯತೇ। ಋಗ್ವೇ. ೧೦-೪-೫ । ಕೂಚಿತ್ಸಂತಂ । ಋಗ್ವೇ. ೧೦-೯೩-೧೧ । ಇತ್ಯಾದಿವದೇಕಪದತ್ವೇ ಅಪಿ ದ್ರಷ್ಟವ್ಯಂ ॥ ಕ್ವ ಸ್ಥಿತೌ ಭವಥಃ । ಅತ್ರಿರ್ಯುವಾಂ ಸ್ತೌತಿ ತಂ ಶೃಣುಥ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

**ದೇವೌ**—ದೇವತಾತ್ಮರೂ । **ಮನಾವಸೂ**—ಸ್ತುತಿರೂಪವಾದ ಸಂಪತ್ತುಳ್ಳವರೂ ಆದ । **ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ಅದ್ಯ**—ಈ ಯಾಗದಿನದಲ್ಲಿ । **ದಿವಃ**—ದ್ಯುಲೋಕದಿಂದ ಬಂದು । **ಕೂಸ್ಥಃ**—ಪೃಥ್ವಿಯಮೇಲೆ ಸ್ಥಿತರಾಗಿ । **ತತ್**—ನಮ್ಮ ಸ್ತುತಿಯನ್ನು । **ಶ್ರವಥಃ**—ಕೇಳಿರಿ । **ವೃಷಣ್ವಸೂ**—ಸಂಪದ್ವರ್ಷಕರಾದ । **ವಾಂ**—ನಿಮ್ಮನ್ನು । **ಅತ್ರಿಃ**—ಅತ್ರಿಪುತ್ರನು । **ಆ ವಿವಾಸತಿ**—ಸರ್ವತ್ರ ಪೂಜಿಸುತ್ತಾನೆ.

॥ ಭಾವಾರ್ಥ ॥

ದೇವತಾತ್ಮರೂ, ಸ್ತುತಿರೂಪವಾದ ಸಂಪತ್ತುಳ್ಳವರೂ ಆದ ಎಲೈ ಅಶ್ವಿನೀದೇವತೆಗಳೇ, ಈ ಯಾಗದಿನದಲ್ಲಿ ದ್ಯುಲೋಕದಿಂದ ಬಂದು ಪೃಥ್ವಿಯ ಮೇಲೆ ಸ್ಥಿತರಾಗಿ ನಮ್ಮ ಸ್ತುತಿಯನ್ನು ಕೇಳಿರಿ. ಸಂಪದ್ವರ್ಷಕರಾದ ನಿಮ್ಮನ್ನು ಅತ್ರಿಪುತ್ರನು ಸರ್ವತ್ರ ಪೂಜಿಸುತ್ತಾನೆ.

## English Translation.

Divine Adityas, affluent in praise, descended this day from heaven upon the earth, hear that (laudation) which, liberal showerers (of benefits), Atri ever addresses to you.

ಕುಹ ತ್ಯಾ ಕುಹ ನು ಶ್ರುತಾ ದಿವಿ ದೇವಾ ನಾಸತ್ಯಾ ।

ಕಸ್ಮಿನ್ನಾ ಯತಥೋ ಜನೇ ಕೋ ವಾಂ ನದೀನಾಂ ಸಚಾ ॥ ೨ ॥

॥ ಪದಪಾಠಃ ॥

ಕುಹ । ತ್ಯಾ । ಕುಹ । ನು । ಶ್ರುತಾ । ದಿವಿ । ದೇವಾ । ನಾಸತ್ಯಾ ।

ಕಸ್ಮಿನ್ । ಆ । ಯತಥಃ । ಜನೇ । ಕಃ । ವಾಂ । ನದೀನಾಂ । ಸಚಾ ॥ ೨ ॥

॥ ಸಾಯಣಭಾಷ್ಯಂ ॥

ತ್ಯಾ ತೌ ದೇವಾ ದೇವೌ ನಾಸತ್ಯಾಶ್ವಿನೌ ಕುಹ ಕುತ್ರ ತಿಷ್ಠತಃ । ನು ಅದ್ಯ ಕುಹ ಶ್ರುತಾ ಕುತ್ರ ಶ್ರುತೌ ದಿವಿ ದ್ಯುಲೋಕೇ ನಿವಸತ ಇತಿ ಶೇಷಃ । ಅಥ ಪ್ರತ್ಯಕ್ಷಕೃತಃ । ಹೇ ದೇವೌ ಯುವಾಂ ಕಸ್ಮಿನ್ ಜನೇ ಯಜಮಾನ ಆ ಯತಥಃ । ಆಗಚ್ಛಥಃ । ಕಃ ಸ್ತೋತಾ ವಾಂ ಯುವಯೋರ್ನದೀನಾಂ ಸ್ತುತೀನಾಂ ಸಚಾ ಸಹಾಯಃ ಸ್ಯಾತ್ ॥

॥ ಪ್ರತಿಪದಾರ್ಥ ॥

**ತ್ಯಾ**—ಪ್ರಸಿದ್ಧರೂ । **ದೇವಾ**—ದೇವತಾತ್ಮರೂ ಆದ । **ನಾಸತ್ಯಾ**—ಅಶ್ವಿನೀದೇವತೆಗಳು । **ಕುಹ**—ಎಲ್ಲಿದ್ದಾರೆ । **ನು**—ಈಗ । **ದಿವಿ**—ದ್ಯುಲೋಕದಲ್ಲಿ । **ಕುಹ**—ಯಾವ ಪ್ರದೇಶದಲ್ಲಿ । **ಶ್ರುತಾ**—ಖ್ಯಾತರಾಗಿದ್ದಾರೆ (ಎಲೈ ಅಶ್ವಿನಿಗಳೇ) । **ಕಸ್ಮಿನ್ ಜನೇ**—ಯಾವ ಯಜಮಾನನನ್ನು ಅನುಗ್ರಹಿಸುವುದಕ್ಕಾಗಿ । **ಆ ಯತಥಃ**—ನೀವು ಬರುತ್ತೀರಿ । **ಕಃ**—ಯಾವ ಯಜಮಾನನು । **ವಾಂ**—ನಿಮ್ಮ । **ನದೀನಾಂ**—ಸ್ತುತಿಗಳಿಗೆ । **ಸಚಾ**—ಸಹಾಯಮಾಡುತ್ತಾನೆ.

॥ ಭಾವಾರ್ಥ ॥

ಪ್ರಸಿದ್ಧರೂ, ದೇವತಾತ್ಮರೂ ಆದ ಅಶ್ವಿನೀದೇವತೆಗಳು ಈಗ ಎಲ್ಲಿದ್ದಾರೆ ? ದ್ಯುಲೋಕದ ಯಾವ ಪ್ರದೇಶದಲ್ಲಿ ಖ್ಯಾತರಾಗಿದ್ದಾರೆ? ಎಲೈ ಅಶ್ವಿನೀದೇವತೆಗಳೇ, ಯಾವ ಯಜಮಾನನನ್ನು ಅನುಗ್ರಹಿಸುವುದಕ್ಕಾಗಿ ನೀವು ವೃದ್ಧಿಗೆ ಬರುತ್ತೀರಿ ? ಯಾವ ಯಜಮಾನನು ನಿಮ್ಮ ಪರವಾದ ಸ್ತುತಿಗಳ ನಿರ್ಮಾಣಕ್ಕೆ ಸಾಹಾಯ್ಯಕನಾಗಿರುತ್ತಾನೆ ?

## English Translation.

The divine Nasatyas, where are they? where are they heard of in heaven? to what worshipper do you come? who may be the associate of your praises?

॥ ಸಂಹಿತಾಪಾಠಃ ॥

ಕಂ ಯಾಥಃ ಕಂ ಹ ಗಚ್ಛಥಃ ಕಮಚ್ಛಾ ಯುಂಜಾಥೇ ರಥಂ ।
ಕಸ್ಯ ಬ್ರಹ್ಮಾಣಿ ರಣ್ಯಥೋ ವಯಂ ವಾಮುಶ್ಮಸೀಷ್ಟಯೇ ॥ ೩ ॥

॥ ಪದಪಾಠಃ ॥

ಕಂ । ಯಾಥಃ । ಕಂ । ಹ । ಗಚ್ಛಥಃ । ಕಂ । ಅಚ್ಛ । ಯುಂಜಾಥೇ ಇತಿ । ರಥಂ ।
ಕಸ್ಯ । ಬ್ರಹ್ಮಾಣಿ । ರಣ್ಯಥಃ । ವಯಂ । ವಾಂ । ಉಶ್ಮಸಿ । ಇಷ್ಟಯೇ ॥ ೩ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನೌ ಯುವಾಂ ಕಂ ಯಜಮಾನಂ ಯಜ್ಞಂ ವಾ ಪ್ರತಿ ಯಾಥಃ । ಅಧ್ವಾನಮುಲ್ಲಂಘ್ಯ ಯಾಥಃ । ಕಂ ಹ ಕಂ ಚ ಪ್ರತಿ ಗಚ್ಛಥಃ । ಗತ್ವಾ ಚ ಕೇನ ಸಹ ಸಂಗತೌ ಭವಥಃ । ಕಂ ಚಾಚ್ಛಾಭಿಪ್ರಾಪ್ತುಂ ಯುಂಜಾಥೇ ಯೋಜಯಥೋ ರಥಮಶ್ವೈಃ । ಕಸ್ಯ ಬ್ರಹ್ಮಾಣಿ ಪರಿವೃಢಾನಿ ಸ್ತೋತ್ರಾಣಿ ರಣ್ಯಥಃ । ರಮೇಥೇ । ವಯಂ ಚ ವಾಂ ಯುವಾಮಿಷ್ಟಯೇ ಗಮನಾಯೈಷಣಾಯ ವೋಶ್ಮಸಿ । ಕಾಮಯಾಮಹೇ । ತಸ್ಮಾತ್ ಕಸ್ಯ ಚ ಯಾಗಂ ಪ್ರತಿ ನ ಗಂತವ್ಯಮಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಹೇ ಅಶ್ವಿನೌ**—ಎಲೈ ಅಶ್ವಿನೀದೇವತೆಗಳೇ । **ಕಂ**—ಯಾವ ಯಜಮಾನನನ್ನು ಲಕ್ಷಿಸಿ । **ಯಾಥಃ**—ಹೊರಟದ್ದೀರಿ । **ಕಂ ಹ**—ಯಾವನಲ್ಲಿಗೆ । **ಗಚ್ಛಥಃ**—ಹೋಗುತ್ತೀರಿ । **ಕಂ ಅಚ್ಛ**—ಯಾವ ಯಜಮಾನನ ಅಭಿಮುಖವಾಗಿ ಹೋಗಲು । **ರಥಂ**—ನಿಮ್ಮ ರಥವನ್ನು । **ಯುಂಜಾಥೇ**—ಅಶ್ವಗಳೊಡನೆ ಸೇರಿಸುತ್ತೀರಿ । **ಕಸ್ಯ**—ಯಾವ ಸ್ತುತಿಕರ್ತನ । **ಬ್ರಹ್ಮಾಣಿ**—ಸ್ತೋತ್ರಗಳನ್ನು ಕೇಳಿ । **ರಣ್ಯಥಃ**—ರಮಿಸುತ್ತೀರಿ । **ವಯಂ**—ನಾವು । **ವಾಂ**—ನಿಮ್ಮ । **ಇಷ್ಟಯೇ**—ಆಗಮನಕ್ಕಾಗಿ । **ಉಶ್ಮಸಿ**—ಇಚ್ಛಿಸುತ್ತೇವೆ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನೀವು ಯಾವ ಯಜಮಾನನನ್ನು ಲಕ್ಷಿಸಿ ಹೊರಟದ್ದೀರಿ? ಯಾವ ಯಜಮಾನನ ಅಭಿಮುಖವಾಗಿ ಹೋಗಲು ನಿಮ್ಮ ರಥಕ್ಕೆ ಅಶ್ವಗಳನ್ನು ಹೂಡುತ್ತೀರಿ? ಯಾವ ಸ್ತುತಿಕರ್ತನ ಸ್ತೋತ್ರಗಳನ್ನು ಕೇಳಿ ರಮಿಸುತ್ತೀರಿ? ನಾವು ನಿಮ್ಮ ಆಗಮನಕ್ಕಾಗಿ ಇಚ್ಛಿಸುತ್ತೇವೆ.

## English Translation.

To whom do you proceed? to whom do you repair? to (go to) whose presence do you harness you car? by whose prayers are you gratified? we are anxious for your arrival.

ಪೌರಂ ಚಿದ್ಧ್ಯುದಪ್ರುತಂ ಪೌರ ಪೌರಾಯ ಜಿನ್ವಥಃ ।
ಯದೀಂ ಗೃಭೀತತಾತಯೇ ಸಿಂಹಮಿವ ದ್ರುಹಸ್ಪದೇ ॥ ೪ ॥

॥ ಪದಪಾಠಃ ॥

ಪೌರಂ । ಚಿತ್ । ಹಿ । ಉದ‌ಽಪ್ರುತಂ । ಪೌರ । ಪೌರಾಯ । ಜಿನ್ವಥಃ ।
ಯತ್ । ಈಂ । ಗೃಭೀತಽತಾತಯೇ । ಸಿಂಹಂಽಇವ । ದ್ರುಹಃ । ಪದೇ ॥ ೪ ॥

॥ ಸಾಯಣಭಾಷ್ಯಂ ॥

ಹೇ ಪೌರ । ಇದಮಶ್ವಿನೋಃ ಸಂಬೋಧನಂ । ಪೌರೇಣ ಸ್ತುತ್ಯತ್ವೇನ ಸಂಬಂಧಾದಶ್ವಿನಾವಪಿ ಪೌರೌ ॥ ಉಭಯೋಶ್ಛಾಂದಸಮೇಕವಚನಂ ॥ ಹೇ ಪೌರಸಂಬಂಧಿನಾವಶ್ವಿನೌ ಯುವಾಂ ಪೌರಂ । ಚಿದಿತಿ ಪೂರಣಃ । ಪೌರೇಣ ವೃಷ್ಟ್ಯರ್ಥಂ ಪ್ರಾರ್ಥ್ಯಮಾನತ್ವೇನ ಸಂಬಂಧಾನ್ಮೇಘೋಽಪಿ ಪೌರಃ । ತಮುದಪ್ರುತಮುದಕಪ್ಲಾವಕಂ ಮೇಘಂ ಪೌರಾಯ ಋಷಯೇ ಮಹ್ಯಂ ಜಿನ್ವಥಃ । ಪ್ರೇರಯಥಃ । ಯದ್ವಾ ಯುವಾಂ ಗೃಭೀತತಾತಯೇ ಗೃಹೀತಯಜ್ಞಸಂತಾನಾಯ ಪೌರಾಯೇಮೇನಂ ಮೇಘಂ ಪ್ರತಿಗಚ್ಛಥೋ ದ್ರುಹೋ ದ್ರೋಹಸ್ಯ ಪದೇ ಸ್ಥಾನೇಽರಣ್ಯದೇಶೇ ಸಿಂಹಮಿವ । ಗರ್ಜಂತಂ ಪ್ರಬಲಂ ಸಿಂಹಂ ಯಥಾ ಬಲಾಚ್ಚ್ಯಾವಯಂತಿ ಶೂರಾಃ ತದ್ವಜ್ಜಿನ್ವಥ ಇತಿ ॥

॥ ಪ್ರತಿಪದಾರ್ಥ ॥

**ಪೌರ**— ಪೌರನಿಗೆ ಪೂಜ್ಯರಾದ ಎಲೈಅಶ್ವಿನೀದೇವತೆಗಳೇ । **ಪೌರಾಯ**— ಪೌರನಾಮಕನಾದ ನನಗಾಗಿ । **ಉದಪ್ರುತಂ**—ಉದಕಭರಿತವಾದುದೂ । **ಪೌರಂ ಚಿತ್**— ಪೌರನಿಗೆ ಉಪಕಾರವಾದ ವೃಷ್ಟಿಯನ್ನು ಸುರಿಸುವುದೂ ಆದ ಮೇಘವನ್ನು । **ಜಿನ್ವಥ**— ಕಳುಹಿಸಿಕೊಡಿ ಮತ್ತು ವೃಷ್ಟ್ಯರ್ಥವಾಗಿ ಪ್ರೇರಿಸಿ । **ದ್ರುಹಃ ಪದೇ**— ಹಿಂಸಾಸ್ಥಾನವಾದ ಅರಣ್ಯದಲ್ಲಿ । **ಸಿಂಹಂ ಇವ**—ಸಿಂಹವನ್ನು ಬೇಟೆಗಾರರು ಹೊಡೆದೋಡಿಸುವಂತೆ । **ಯತ್ ಈಂ**— ಯಾವ ಅದೇ ಮೇಘವನ್ನು । **ಗೃಭೀತತಾತಯೇ**—ಯಜ್ಞಕರ್ಮದಲ್ಲೇ ನಿರತನಾದ ನನ್ನಲ್ಲಿಗೆ ತ್ವರಿತವಾಗಿ ಬರುವಂತೆ ಪ್ರೇರಿಸಿ.

॥ ಭಾವಾರ್ಥ ॥

ಪೌರನಿಗೆ ಪೂಜ್ಯರಾದ ಎಲೈ ಅಶ್ವಿನೀದೇವತೆಗಳೇ, ಪೌರನಾಮಕನಾದ ನನಗಾಗಿ ಉದಕಭರಿತವಾದುದೂ ಪೌರನಿಗೆ ಉಪಕಾರಕವಾಗಿ ವೃಷ್ಟಿಯನ್ನು ಸುರಿಸುವುದೂ ಆದ ಮೇಘವನ್ನು ಕಳುಹಿಸಿಕೊಡಿ ಮತ್ತು ವೃಷ್ಟಿಯನ್ನು ಸುರಿಸುವಂತೆ ಪ್ರೇರಿಸಿ. ಹಿಂಸಾಸ್ಥಾನವಾದ ಅರಣ್ಯದಲ್ಲಿ ಬೇಟೆಗಾರರು ಸಿಂಹವನ್ನು ಹೊಡೆದಟ್ಟುವಂತೆ ಅದೇ ಮೇಘವನ್ನು ನೀವು ತ್ವರಿತವಾಗಿ ಬರುವಂತೆ ಪ್ರೇರಿಸಿ ಯಜ್ಞಕರ್ಮದಲ್ಲೇ ನಿರತನಾದ ನನ್ನಲ್ಲಿಗೆ ಬರುವಂತೆ ಕಳುಹಿಸಿ.

## English Translation.

Pauras, send to Paura the rain shedding cloud; drive it to him who is engaged in sccrifice, as (hunters chase) a lion in a forest,

॥ ಸಂಹಿತಾಪಾಠಃ ॥

ಪ್ರ ಚ್ಯವಾನಾಜ್ಜುಜುರುಷೋ ವವ್ರಿಮತ್ಕಂ ನ ಮುಂಚಥಃ ।
ಯುವಾ ಯದೀ ಕೃಥಃ ಪುನರಾ ಕಾಮಮೃಣ್ವೇ ವಧ್ವಃ ॥ ೫ ॥

॥ ಪದಪಾಠಃ ॥

ಪ್ರ । ಚ್ಯವಾನಾತ್ । ಜುಜುರುಷಃ । ವವ್ರಿಂ । ಅತ್ಕಂ । ನ । ಮುಂಚಥಃ ।
ಯುವಾ । ಯದಿ । ಕೃಥಃ । ಪುನಃ । ಆ । ಕಾಮಂ । ಋಣ್ವೇ । ವಧ್ವಃ ॥ ೫ ॥

॥ ಸಾಯಣಭಾಷ್ಯಂ ॥

ಚ್ಯವಾನಾದೃಷೇರ್ಜುಜುರುಷೋ ಜರಸಾ ಜೀರ್ಣಾತ್ಸಕಾಶಾದ್ವವ್ರಿಂ ಹೇಯಂ ಪುರಾಣಂ ರೂಪಮತ್ಕಂ ನ ಕವಚಮಿವ ಪ್ರ ಮುಂಚಥಃ । ಪ್ರಮುಂಚತಂ । ಪ್ರಾಮುಂಚತಂ ದ್ರಾಪಿಮಿವ ಚ್ಯವಾನಾದಿತ್ಯಾದಿ ಮಂತ್ರಾಂತರಂ । ಋಗ್ವೇ. ೧-೧೧೬-೧೦ । ಯದಿ ಯದಾ ಪುನರ್ಯುವಾ ಕೃಥಃ । ಯುವಾನಂ ಕುರುಥ ಇತ್ಯರ್ಥಃ । ತದಾ ವಧ್ವಃ ಸುರೂಪಾಯಾಃ ಸ್ತ್ರಿಯಃ ಕಾಮಂ ಕಮನೀಯಂ ರೂಪಮಾ ಋಣ್ವೇ । ಪ್ರಾಪ್ತವಾನ್ ॥

॥ ಪ್ರತಿಪದಾರ್ಥ ॥

**ಜುಜುರುಷಃ**—ವೃದ್ಧನಾದ । **ಚ್ಯವಾನಾತ್**— ಚ್ಯವನ ಋಷಿಯ ದೇಹದಿಂದ । **ವವ್ರಿಂ**—ಅಸಹ್ಯವಾದ ವೃದ್ಧನ ರೂಪಪನ್ನು । **ಅತ್ಕಂ ನ**—ಹಳೆಯಕವಚಪನ್ನು ಕಿತ್ತೆಸೆಯುವಂತೆ । **ಪ್ರ ಮುಂಚಥಃ**—ನಾಶಮಾಡಿದಿರಿ । **ಯದಿ**—ಯಾವಾಗ । **ಪುನಃ**—ತಿರಿಗಿಯೂ । **ಕೃಥಃ**—ಅವನನ್ನು ಯುವಕನನ್ನಾಗಿ ಮಾಡಿದಿರೋ ಆಗ ಅವನು । **ವಧ್ವಃ**—ಸ್ತ್ರೀಯರಿಗೆ ಆಕರ್ಷಕವಾಗಿರುಪಂತೆ । **ಕಾಮಂ**—ಮನೋಹರವಾದ ರೂಪವನ್ನು । **ಋಣ್ವೇ**—ಹೊಂದಿದನು.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ,. ಹಳೆಯ ಕವಚವನ್ನು ಕಿತ್ತೆಸೆಯುವಂತೆ ವೃದ್ಧನಾದ ಚ್ಯವನಋಷಿಯು ದೇಹದಿಂದ ಅಸಹ್ಯವಾದ ವಾರ್ಧಕ್ಯರೂಪವನ್ನು ನೀವು ನಾಶಮಾಡಿದಿರಿ, ಪುನಃ ಯಾವಾಗ ಅವನನ್ನು ಯುವಕನನ್ನಾಗಿ ಮಾಡಿದಿರೋ, ಆಗ ಸ್ತ್ರೀಯರಿಗೆ ಆಕರ್ಷಕವಾಗಿರುವಂತೆ ಮನೋಹರವಾದ ರೂಪವನ್ನು ಹೊಂದಿದನು.

## English Translation.

You stripped off (his aged form) like a cuirass from the decrepid Chyavana, so that when you had rendered him again a youth, he attracted the desires of women.

॥ ಸಂಹಿತಾಪಾಠಃ ॥

ಅಸ್ತಿ ಹಿ ವಾಮಿಹ ಸ್ತೋತಾ ಸ್ಮಸಿ ವಾಂ ಸಂದೃಶಿ ಶ್ರಿಯೇ ।
ನೂ ಶ್ರುತಂ ಮ ಆ ಗತಮವೋಭಿರ್ವಾಜಿನೀವಸೂ ॥ ೬ ॥

॥ ಪದಪಾಠಃ ॥

ಅಸ್ತಿ । ಹಿ । ವಾಂ । ಇಹ । ಸ್ತೋತಾ । ಸ್ಮಸಿ । ವಾಂ । ಸಂಽದೃಶಿ । ಶ್ರಿಯೇ ।
ನು । ಶ್ರುತಂ । ಮೇ । ಆ । ಗತಂ । ಅವಃಽಭಿಃ । ವಾಜಿನೀವಸೂ ಇತಿ ವಾಜಿನೀಽವಸೂ ॥ ೬ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನೌ ವಾಂ ಸ್ತೋತಾ ಪೌರೋಽಸ್ತಿ ಹಿ । ವರ್ತತೇ ಖಲು । ಹೇ ದೇವೌ ವಾಂ ಸಂದೃಶಿ ಸಂದರ್ಶನೇ ಸಂನಿಧಾನೇ ಸ್ಮಸಿ । ಸ್ಮಃ । ಭವೇಮ । ಕಿಮರ್ಥಂ । ಶ್ರಿಯೇ । ನು ಅದ್ಯ ಮೇ ಮದೀಯಮಾಹ್ವಾನಂ ಶ್ರುತಂ । ಶೃಣುತಂ । ಶ್ರುತ್ವಾ ಆ ಗತಂ । ಆಗಚ್ಛತಂ । ಕಿಂ ತೂಷ್ಣೀಂ ನೇತ್ಯಾಹ । ಅವೋಭೀ ರಕ್ಷಣೈಃ ಸಹ ವಾಜಿನೀವಸೂ ಅನ್ನವಸೂ ॥

॥ ಪ್ರತಿಪದಾರ್ಥ ॥

**ವಾಂ**—ನಿಮ್ಮ । **ಸ್ತೋತಾ**—ಸ್ತುತಿಕರ್ತನು । **ಇಹ ಹಿ**—ಇಲ್ಲಿಯೇ । **ಅಸ್ತಿ**—ಇದ್ದಾನೆ । **ಶ್ರಿಯೇ**—ನಮ್ಮ ಸಂಪದ್ವೃದ್ಧಿಗಾಗಿ । **ವಾಂ**—ನಿಮ್ಮ । **ಸಂದೃಶಿ**—ದರ್ಶನಕ್ಕೆ ಪಾತ್ರರಾಗಿಯೇ । **ಸ್ಮಸಿ**—ನಾವು ಇರುವಂತಾಗಲಿ । **ನು**—ಈ ಯಜ್ಞಕಾಲದಲ್ಲಿ । **ಮೇ**—ನನ್ನ ಸ್ತುತಿಯನ್ನು । **ಶ್ರುತಂ**—ಕೇಳಿರಿ । **ವಾಜಿನೀವಸೂ**—ಅನ್ನಸಂಪದ್ಯುಕ್ತರಾದ ನೀವು । **ಅವೋಭಿಃ**—ನಿಮ್ಮ ರಕ್ಷಣೆಗಳೊಡನೆ । **ಆಗತಂ**—ಬನ್ನಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನಿಮ್ಮ ಸ್ತುತಿಕರ್ತನಾದ ಪೌರನು ಇಲ್ಲಿಯೇ ಇದ್ದಾನೆ. ನಮ್ಮ ಸಂಪದ್ವೃದ್ಧಿಗಾಗಿ ನಾವು ನಿಮ್ಮ ದರ್ಶನಕ್ಕೆ ಪಾತ್ರರಾಗಿಯೇ ಇರುವಂತಾಗಲಿ. ಈ ಯಜ್ಞಕಾಲದಲ್ಲಿ ನನ್ನ ಸ್ತುತಿಯನ್ನು ಕೇಳಿರಿ. ಅನ್ನಸಂಪದ್ಯುಕ್ತರಾದ ನೀವು ನಿಮ್ಮ ರಕ್ಷಣೆಗಳೊಡನೆ ನಮ್ಮಲ್ಲಿಗೆ ಬನ್ನಿರಿ.

## English Translation

A glorifier of you both is here : may we be (retained) in your sight for the sake of prosperity : hear to day (my invocation) : come hither with your protections, you who are affluent in food·

॥ ಸಂಹಿತಾಪಾಠಃ ॥

ಕೋ ವಾಮದ್ಯ ಪುರೂಣಾಮಾ ವವ್ನೇ ಮರ್ತ್ಯಾನಾಂ ॥
ಕೋ ವಿಪ್ರೋ ವಿಪ್ರವಾಹಸಾ ಕೋ ಯಜ್ಞೈರ್ವಾಜಿನೀವಸೂ ॥ ೭ ॥

॥ ಪದಪಾಠಃ ॥

ಕಃ । ವಾಂ । ಅದ್ಯ । ಪುರೂಣಾಂ । ಆ । ವವ್ನೇ । ಮರ್ತ್ಯಾನಾಂ ।
ಕಃ । ವಿಪ್ರಃ । ವಿಪ್ರऽವಾಹಸಾ । ಕಃ । ಯಜ್ಞೈಃ । ವಾಜಿನೀವಸೂ ಇತಿ ವಾಜಿನೀऽವಸೂ ॥ ೭ ॥

॥ ಸಾಯಣಭಾಷ್ಯಂ ॥

ಹೇ ವಾಜಿನೀವಸೂ ಅನ್ನವಸೂ ವಾಂ ಯುವಾಮದ್ಯಾಸ್ಮಿನ್ದಿನೇ ಪುರೂಣಾಂ ಮರ್ತ್ಯಾನಾಂ ಮಧ್ಯೇ ಕ ಆ ವವ್ನೇ । ಸರ್ವತೋ ಭಜತಿ । ಹೇ ವಿಪ್ರವಾಹಸಾ ವಿಪ್ರೈರ್ಮೇಧಾವಿಭಿರ್ವಹನೀಯೌ ಕೋ ವಿಪ್ರೋ ಮೇಧಾವೀ ವವ್ನೇ । ಕೋ ಯಜಮಾನೋ ಯಜ್ಞೈರ್ವವ್ನೇ । ಅತ್ಯಂತವಿಲಂಬಮಸಹಮಾನಃ ಪುನಃ ಪುನರ್ಬ್ರೂತೇ ।

॥ ಪ್ರತಿಪದಾರ್ಥ ॥

**ವಾಜನೀವಸೂ**—ಅನ್ನವೇ ಸಂಪತ್ತಾಗಿ ಉಳ್ಳ ಎಲೈ ಅಶ್ವಿನೀದೇವತೆಗಳೇ । **ಅದ್ಯ**—ಈ ಯಾಗದ ದಿನ । **ವಾಂ**—ನಿಮ್ಮನ್ನು । **ಪುರೂಣಾಂ**—ಅನೇಕರಾದ । **ಮರ್ತ್ಯಾನಾಂ**—ಮಾನವರ ಮಧ್ಯದಲ್ಲಿ । **ಕಃ**—ಯಾವನು । **ಆ ವವ್ನೇ**—ಅಧಿಕವಾಗಿ ಪೂಜಿಸುತ್ತಿದ್ದಾನೆ । **ವಿಪ್ರವಾಹಸಾ**—ಉತ್ತಮವಾದ ಋಷಿಗಳಿಂದ ಆರಾಧಿತರಾದ ಎಲೈ ಅಶ್ವಿನೀದೇವತೆಗಳೇ । **ಕೋ ವಿಪ್ರಃ** - ಮೇಧಾವಿಯಾದ ಯಾವ ಋಷಿಯು ಸ್ತುತಿಸಿ ಆರಾಧಿಸಿದ್ದಾನೆ । **ಯಜ್ಞೈಃ**—ಯಜ್ಞಕರ್ಮಗಳಿಂದ । **ಕಃ**—ಯಾವ ಯಜಮಾನನು ನಿಮ್ಮನ್ನು ಪೂಜಿಸಿದ್ದಾನೆ ?

॥ ಭಾವಾರ್ಥ ॥

ಅನ್ನವೇ ಸಂಪತ್ತಾಗಿ ಉಳ್ಳ ಎಲೈ ಅಶ್ವಿನೀದೇವತೆಗಳೇ, ಈ ಯಾಗದ ದಿನ ನಿಮ್ಮನ್ನು ಈ ಎಲ್ಲಾ ಮಾನವರ ಮಧ್ಯದಲ್ಲೂ ಯಾವನು ಅಧಿಕವಾಗಿ ಪೂಜಿಸಿದ್ದಾನೆ ? ಉತ್ತಮವಾದ ಋಷಿಗಳಿಂದ ಸ್ತುತರಾಗತಕ್ಕ ಎಲೈ ಅಶ್ವಿನೀ

ದೇವತೆಗಳೇ, ಮೇಧಾವಿಯಾದ ಯಾವ ಋಷಿಯು ನಿಮ್ಮನ್ನು ಸ್ತುತಿಸಿ ಆರಾಧಿಸಿದ್ದಾನೆ? ಯಾವ ಯಜಮಾನನು ನಿಮ್ಮನ್ನು ಯಜ್ಞಕರ್ಮಗಳಿಂದ ಪೂಜಿಸಿದ್ದಾನೆ?

## English Translation.

Who among many mortals has this day (best) propitiated you? what wise man (has best propitiated you) who are reverenced by the wise? What (worshipper has best propitiated you) by sacrifice, you who are affluent in food?

॥ ಸಂಹಿತಾಪಾಠಃ ॥

ಆ ವಾಂ ರಥೋ ರಥಾನಾಂ ಯೇಷ್ಠೋ ಯಾತ್ವಶ್ವಿನಾ ।
ಪುರೂ ಚಿದಸ್ಮಯುಸ್ತಿರ ಆಂಗೂಷೋ ಮರ್ತ್ಯೇಷ್ವಾ ॥ ೮ ॥

॥ ಪದಪಾಠಃ ॥

ಆ । ವಾಂ । ರಥಃ । ರಥಾನಾಂ । ಯೇಷ್ಠಃ । ಯಾತು । ಅಶ್ವಿನಾ ।
ಪುರು । ಚಿತ್ । ಅಸ್ಮಽಯುಃ । ತಿರಃ । ಆಂಗೂಷಃ । ಮರ್ತ್ಯೇಷು । ಆ ॥ ೮ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾಶ್ವಿನೌ ವಾಂ ಯುವಯೋಃ ರಥ ಏಕೋಃ ರಥೋಃ ರಥಾನಾಂ ಯೇಷ್ಠ ಇತರದೇವರಥಾನಾಂ ಮಧ್ಯೇಽತಿಶಯೇನ ಗಂತಾ ಸನ್ ಆ ಯಾತು । ಕೀದೃಶಃ ಸನ್ । ಪುರೂ ಚಿತ್ಬಹೂನ್ಯಪ್ಯಸ್ಮದ್ವಿರೋಧಿನಸ್ತಿರೋ ಹಿಂಸಕಸ್ತಿರಸ್ಕರ್ತಾ ವಾಸ್ಮಯುರಸ್ಮಾನ್ ಕಾಮಯಮಾನೋಃ ಮರ್ತ್ಯೇಷು ಸರ್ವೇಷು ಯಜಮಾನೇಷು ಮಧ್ಯ ಆಂಗೂಷಃ ಸ್ತುತ್ಯಃ । ಆಕಾರಃ ಪೂರಣಃ । ಅಥವಾ ಆಂಗೂಷಃ ಸ್ತೋಮಃ । ಸ್ತವೋಽಸ್ಮಯುರಸ್ಮಾನ್ ಬಲ್ಯೈರ್ಯೋಕ್ತುಂ ಕಾಮಯಮಾನೋಃ ಮರ್ತ್ಯೇಷು ಮರ್ತ್ಯೈರಸ್ಮದೀಯೈರ್ಋತ್ವಿಗ್ಭಿಃ ಪ್ರೇರಿತಃ ಸನ್ । ಉಕ್ತಲಕ್ಷಣಾಶ್ವಿನೋಃ ರಥಸ್ಯ ವಾ ಸ್ತುತಿರಾ ಸರ್ವತಃ ಪುರೂ ಚಿತ್ ಪುರೂಣ್ಯಪಿ ಶತ್ರುಬಲಾನಿ ತಿರಃ । ತಿರಸ್ಕರೋತಿ ॥

॥ ಪ್ರತಿಪದಾರ್ಥ ॥

**ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ಪುರೂ ಚಿತ್**—ಅನೇಕ ಸಂಖ್ಯೆಯುಳ್ಳ ಶತ್ರುಗಳನ್ನೂ ಸಹ । **ತಿರಃ**—ಹಿಂಸಿಸತಕ್ಕದ್ದೂ । **ಅಸ್ಮಯುಃ**—ನಮ್ಮಲ್ಲಿಗೆ ಬರಲು ಇಚ್ಛಿಸುವುದೂ । **ಮರ್ತ್ಯೇಷು**—ಮಾನವರೆಲ್ಲರೊಳ್ಳ ।

**ಅಂಗೂಷಃ**—ಅಧಿಕವಾಗಿ ಸ್ತುತಿಸಲ್ಪಡತಕ್ಕುದೂ | **ರಥಾನಾಂ**—ರಥಗಳಲ್ಲೆಲ್ಲಾ | **ಶ್ರೇಷ್ಠಃ**—ಅತ್ಯುತ್ತಮವಾದುದೂ ಆದ | **ವಾಂ ರಥಃ**—ನಿಮ್ಮ ರಥವು | **ಆ ಯಾತು**—ನಮ್ಮಲ್ಲಿಗೆ ಬರಲಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಅನೇಕಸಂಖ್ಯೆಯುಳ್ಳ ಶತ್ರುಗಳನ್ನೂ ಸಹ ಹಿಂಸಿಸತಕ್ಕದ್ದೂ, ನಮ್ಮಲ್ಲಿಗೆ ಬರಲು ಇಚ್ಛಿಸುವುದೂ, ಮಾನವರಲ್ಲೆಲ್ಲಾ ಅಧಿಕವಾಗಿ ಸ್ತುತಿಸಲ್ಪಡತಕ್ಕದ್ದೂ, ರಥಗಳಲ್ಲೆಲ್ಲಾ ಅತ್ಯುತ್ತಮವಾದುದೂ ಆದ ನಿಮ್ಮ ರಥವು ನಮ್ಮಲ್ಲಿಗೆ ಬರಲಿ.

English Translation.

May your car, Aswins, the swiftest of the cars (of the gods), come hither well-disposed towards us, the discomfiter of numerous (foes), glorified amongst men

॥ ಸಂಹಿತಾಪಾಠಃ ॥

ಶಮೂಷು ವಾಂ ಮಧೂಯುವಾಸ್ಮಾಕಮಸ್ತು ಚರ್ಕೃತಿಃ |
ಅರ್ವಾಚೀನಾ ವಿಚೇತಸಾ ವಿಭಿಃ ಶ್ಯೇನೇವ ದೀಯತಂ ॥ ೯ ॥

॥ ಪದಪಾಠಃ ॥

ಶಂ | ಊಂ ಇತಿ | ಸು | ವಾಂ | ಮಧುಽಯುವಾ | ಅಸ್ಮಾಕಂ | ಅಸ್ತು | ಚರ್ಕೃತಿಃ |
ಅರ್ವಾಚೀನಾ | ವಿಽಚೇತಸಾ | ವಿಽಭಿಃ | ಶ್ಯೇನಾಽಇವ | ದೀಯತಂ ॥ ೯ ॥

॥ ಸಾಯಣಭಾಷ್ಯಂ ॥

ಹೇ ಮಧೂಯುವಾ ಮಧುಮಂತೌ ವಾಂ ಯುವಾಭ್ಯಾಂ ಚರ್ಕೃತಿಃ ಪುನಃಪುನಃ ಕರಣಂ ಯುವಾಭ್ಯಾಮರ್ಥಾಯ ಪುನಃಪುನಃ ಕ್ರಿಯಮಾಣಂ ಸ್ತೋತ್ರಂ ಯುವಯೋರಾಗಮನಸ್ಯಾಭ್ಯಾಸೋ ವಾಸ್ಮಾಕಂ ಸು ಸುಷ್ಠು ಶಮು ಸುಖಕರಮೇವಾಸ್ತು | ಭವತು | ಹೇ ಅರ್ವಾಚೀನಾವಾರ್ಗಸ್ಮದಭಿಮುಖಾಂಚನೌ ಹೇ ವಿಚೇತಸಾ ವಿಶಿಷ್ಟಪ್ರಜ್ಞೌ ಶ್ಯೇನೇವ ಶ್ಯೇನಾವಿವ ವಿಭಿರ್ಗಂತೃಭಿರಶ್ವೈರ್ದೀಯತಂ | ಗಚ್ಛತಂ ॥

॥ ಪ್ರತಿಪದಾರ್ಥ ॥

**ಮಧೂಯುವಾ**—ಮಧುಯುಕ್ತರಾದ ಅಶ್ವಿನೀದೇವತೆಗಳೇ । **ವಾಂ**—ನಿಮ್ಮನ್ನುದ್ದೇಶಿಸಿ । **ಚರ್ಕೃತಿಃ**—ಪುನಃಪುನಃ ನಿರ್ಮಿತವೂ ಪಠಿತವೂ ಆದ । **ಅಸ್ಮಾಕಂ**—ನಮ್ಮ ಸ್ತುತಿಗಳು । **ಸು**—ಅತಿಶಯವಾಗಿ । **ಶಮು ಅಸ್ತು**—ಸುಖಸಾಧಕವಾಗಲಿ । **ಅರ್ವಾಚೀನಾ**—ನಮ್ಮಭಿಮುಖವಾಗಿ ಇಳಿದು ಬರುವವರೂ । **ವಿಚೇತಸಾ**—ವಿಶೇಷವಾದ ಪ್ರಜ್ಞೆಯುಳ್ಳವರೂ ಆದ ನೀವು । **ಶ್ಯೇನೇವ**—ಶ್ಯೇನಪಕ್ಷಿಯಂತೆ । **ವಿಭಿಃ**—ವೇಗಗಾಮಿಗಳಾದ ಅಶ್ವಗಳೊಡನೆ । **ದೀಯತಂ**—ಶೀಘ್ರವಾಗಿ ಬನ್ನಿರಿ.

॥ ಭಾವಾರ್ಥ ॥

ಮಧುಯುಕ್ತರಾದ ಎಲೈ ಅಶ್ವಿನೀದೇವತೆಗಳೇ, ನಿಮ್ಮನ್ನುದ್ದೇಶಿಸಿ ಪುನಃಪುನಃ ನಿರ್ಮಿತವೂ ಪಠಿತವೂ ಆದ ನಮ್ಮ ಸ್ತುತಿಗಳು ಅತಿಶಯವಾಗಿ ಸುಖಸಾಧಕವಾಗಲಿ. ನಮ್ಮಭಿಮುಖವಾಗಿ ಇಳಿದು ಬರುವವರೂ, ವಿಶೇಷವಾದ ಪ್ರಜ್ಞೆಯುಳ್ಳವರೂ ಆದ ನೀವು ಶ್ಯೇನಪಕ್ಷಿಯಂತೆ ವೇಗಗಾಮಿಗಳಾದ ಅಶ್ವಗಳೊಡನೆ ಶೀಘ್ರವಾಗಿ ಇಲ್ಲಿಗೆ ಬನ್ನಿರಿ.

## English Translation.

May our repeated adoration of you two, who are desirous of the libation, be productive of felicity: descending to our presence, and exceeding in wisdom, travel with rapid (steeds), swift as to falcons.

॥ ಸಂಹಿತಾಪಾಠಃ ॥

ಅಶ್ವಿನಾ ಯದ್ಧ ಕರ್ಹಿ ಚಿಚ್ಛುಶ್ರೂಯಾತಮಿಮಂ ಹವಂ ।
ವಸ್ವೀರೂ ಷು ವಾಂ ಭುಜಃ ಪೃಂಚಂತಿ ಸು ವಾಂ ಪೃಚಃ ॥ ೧೦ ॥

॥ ಪದಪಾಠಃ ॥

ಅಶ್ವಿನಾ । ಯತ್ । ಹ । ಕರ್ಹಿ । ಚಿತ್ । ಶುಶ್ರುಯಾತಂ । ಇಮಂ । ಹವಂ ।
ವಸ್ವೀಃ । ಊಂ ಇತಿ । ಸು । ವಾಂ । ಭುಜಃ । ಪೃಂಚಂತಿ । ಸು । ವಾಂ । ಪೃಚಃ ॥ ೧೦ ॥

॥ ಸಾಯಣಭಾಷ್ಯಂ ॥

**ಹೇ ಅಶ್ವಿನಾ ಯುವಾಂ ಯದ್ಧ ಯತ್ರ ಕರ್ಹಿ ಚಿತ್ ಸ್ಥಿತವಂತೌ ಭವಥಃ ತತ್ರೇಮಂ ಮೇ ಹವಮಾಹ್ವಾನಂ ಶುಶ್ರುಯಾತಂ । ಶೃಣುತಂ । ಶ್ರುತ್ವಾಗಚ್ಛತಮಿತ್ಯರ್ಥಃ । ಕಿಮರ್ಥಮಿತ್ಯುಚ್ಯತೇ ।**

**ವಸ್ವೀಃ ಪ್ರಶಸ್ಯಾ ಭುಜೋ ಧನಾನಿ ಹವಿರ್ಲಕ್ಷಣಾನಿ ಸು ಸುಷ್ಠು ವಾಂ ಯುವಾಂ ಪೃಂಚಂತಿ । ಮಿಶ್ರಯಂತಿ । ಪ್ರಾಪ್ನುವಂತಿ । ಉ ಇತಿ ಪೂರಣಃ । ಕೀದೃಶೋ ಭುಜಃ । ವಾಂ ಯುವಾಂ ಸು ಸುಷ್ಠು ಪೃಚಃ ಸಂಪರ್ಚನಾಃ । ಯುವಾಂ ಪ್ರಾಪ್ತುಂ ಕಾಮಯಮಾನಾ ಇತ್ಯರ್ಥಃ । ಅಥವಾ ಸು ಪೃಚಃ ಸುಸಂಪರ್ಚನಾಃ ಸ್ತೋತಾರೋ ವಸ್ವೀರ್ಭುಜೋ ವಾಂ ಸುಷ್ಠು ಪೃಂಚಂತಿ । ಸಂಪರ್ಚಯಂತಿ ॥**

॥ ಪ್ರತಿಪದಾರ್ಥ ॥

**ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ಯದ್ಧ ಕರ್ಹಿ ಚಿತ್**—ನೀವು ಯಾವಯಾವ ಪ್ರದೇಶದಲ್ಲಿದ್ದರೂ ಸಹ । **ಇಮಂ ಹವಂ**—ನನ್ನಿಂದ ಪಠಿತವಾಗುವ ಈ ಸ್ತೋತ್ರವನ್ನು । **ಶುಶ್ರೂಯಾತಂ**—ಕೇಳಿರಿ । **ವಾಂ**—ನಿಮ್ಮನ್ನು । **ಸು ಪೃಚಃ**—ಆದರದಿಂದ ಸೇರಲಿಚ್ಛೆಯುಳ್ಳವೂ । **ವಸ್ವೀಃ**—ಪ್ರಶಸ್ಯವಾದುವೂ ಆದ । **ಭುಜಃ**—ಹವಿಸ್ಸಿನ ರೂಪದ ಧನಗಳು । **ವಾಂ**—ನಿಮ್ಮನ್ನು । **ಸು**—ಅತಿಶಯವಾದ ರೀತಿಯಲ್ಲಿ । **ಪೃಂಚಂತಿ**—ಬಂದು ಸೇರಿಸಿಕೊಳ್ಳುತ್ತವೆ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನೀವು ಯಾವಯಾವ ಪ್ರದೇಶದಲ್ಲಿದ್ದರೂ ಸಹ ನನ್ನಿಂದ ಪಠಿತವಾಗುವ ಈ ಸ್ತುತಿಯನ್ನು ಕೇಳಿರಿ. ನಿಮ್ಮನ್ನು ಆದರದಿಂದ ಸೇರಲಿಚ್ಛೆಯುಳ್ಳವೂ, ಪ್ರಶಸ್ಯವಾದವೂ ಆದ ಹವಿಸ್ಸಿನ ರೂಪದ ಧನಗಳು ನಿಮ್ಮನ್ನು ಅತಿಶಯವಾದ ರೀತಿಯಲ್ಲಿ ಬಂದು ಸೇರುತ್ತವೆ.

Enlish Translation.

Aswins, wherever you may be, hear this invocation : the excellent sacrificial offerings, longing for your proximity, reach you.

## ಎಪ್ಪತ್ತೈದನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಪ್ರತಿ ಪ್ರಿಯತಮಮಿತಿ ನವರ್ಚಂ ತೃತೀಯಂ ಸೂಕ್ತಂ ಅವಸ್ಯುರ್ನಾಮಾತ್ರೇಯ ಋಷಿಃ । ಪಂಕ್ತಿಶ್ಛಂದಃ । ಅಶ್ವಿನೌ ದೇವತಾ । ಅನುಕ್ರಾಂತಂ ಚ । ಪ್ರತಿ ನವಾವಸ್ಯುಃ ಪಾಂಕ್ತಮಿತಿ ॥ ಪ್ರಾತರನುವಾಕ ಆಶ್ವಿನೇ ಕ್ರತೌ ಪಾಂಕ್ತೇ ಛಂದಸ್ಯಾಶ್ವಿನಶಸ್ತ್ರೇ ಚೇದಂ ಸೂಕ್ತಂ । ಪ್ರತಿ ಪ್ರಿಯತಮಮಿತಿ ಪಾಂಕ್ತಂ । ಆ. ೪-೧೫ । ಇತಿ ಹಿ ಸೂತ್ರಿತಂ ॥**

ಅನುವಾದವು—**ಪ್ರತಿ ಪ್ರಿಯತಮಂ** ಎಂಬ ಈ ಸೂಕ್ತವು ಆರನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ **ಅವಸ್ಯುರಾತ್ರೇಯಃ** ಎಂಬುವನು ಋಷಿಯು; ಅಶ್ವಿನೀ ದೇವತೆಗಳು ದೇವತೆಯು; ಪಂಕ್ತಿಶ್ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಪ್ರತಿ ನವಾವಸ್ಯುಃ ಪಾಂಕ್ತಂ** ಎಂದು

ಹೇಳಿರುವುದು. ಪ್ರಾತರನುವಾಕ ಮತ್ತು ಆಶ್ವಿನಕ್ರತುಸಂಬಂಧವಾದ ಪಂಕ್ತಿಶ್ಛಂದಸ್ಕಿನ ಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನ ಶ್ರೌತಸೂತ್ರದ—**ಪ್ರತಿ ಪ್ರಿಯತಮ ಮಿತಿ ಪಾಂಕ್ತಂ** ಎಂಬ ಸೂತ್ರದಿಂದ (ಆ. ೪-೧೫) ವಿವೃತವಾಗಿರುವುದು.

## ಸೂಕ್ತ—೭೫

ಮಂಡಲ— ೫॥ ಅನುವಾಕ—೬ ॥ ಸೂಕ್ತ—೭೫ ॥
ಅಷ್ಟಕ—೪ ॥ ಅಧ್ಯಾಯ—೪ ॥ ವರ್ಗ—೧೫, ೧೬ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ॥
॥ ಋಷಿಃ—ಅವಸ್ಯುರಾತ್ರೇಯಃ ॥
॥ ದೇವತಾ—ಅಶ್ವಿನೌ ॥
॥ ಛಂದಃ—ಪಂಕ್ತಿಃ ॥

॥ ಸಂಹಿತಾಪಾಠಃ ॥

ಪ್ರತಿ ಪ್ರಿಯತಮಂ ರಥಂ ವೃಷಣಂ ವಸುವಾಹನಂ ।
ಸ್ತೋತಾ ವಾಮಶ್ವಿನಾವೃಷಿಃ ಸ್ತೋಮೇನ ಪ್ರತಿ ಭೂಷತಿ ಮಾಧ್ವೀ ಮಮ
ಶ್ರುತಂ ಹವಂ ॥ ೧ ॥

॥ ಪದಪಾಠಃ ॥

ಪ್ರತಿ । ಪ್ರಿಯಽತಮಂ । ರಥಂ । ವೃಷಣಂ । ವಸುಽವಾಹನಂ ।
ಸ್ತೋತಾ । ವಾಂ । ಅಶ್ವಿನೌ । ಋಷಿಃ । ಸ್ತೋಮೇನ । ಪ್ರತಿ । ಭೂಷತಿ । ಮಾಧ್ವೀ ಇತಿ । ಮಮ । ಶ್ರುತಂ । ಹವಂ ॥ ೧ ॥

॥ ಸಾಯಣಭಾಷ್ಯಂ ॥

**ಹೇ ಅಶ್ವಿನೌ । ಏಕಃ ಪ್ರತಿಶಬ್ದೋಽನುವಾದಃ । ವಾಂ ಯುವಯೋಃ ಪ್ರಿಯತಮಂ ರಥಂ ಸ್ತೋತಾ ಋಷಿರವಸ್ಯುಃ ಸ್ತೋಮೇನ ಪ್ರತಿ ಭೂಷತಿ । ಅಲಂಕರೋತಿ । ಕೀದೃಶಂ ರಥಂ । ವೃಷಣಂ ವರ್ಷಿತಾರಂ ಫಲಾನಾಂ ವಸುವಾಹನಂ ಧನಾನಾಂ ವಾಹಕಂ । ಈದೃಶಂ ರಥಮಾಗಮನಾಯ ಸ್ತೌತೀತ್ಯರ್ಥಃ । ತಸ್ಮಾತ್ ಹೇ ಮಾಧ್ವೀ ಮಧುವಿದ್ಯಾವೇದಿತಾರೌ ಮಮ ಹವಮಾಹ್ವಾನಂ ಶ್ರುತಂ ಶೃಣುತಂ ॥**

॥ ಪ್ರತಿಪದಾರ್ಥ ॥

**ಅಶ್ವಿನೌ**—ಎಲೈ ಅಶ್ವಿನೀದೇವತೆಗಳೇ । **ವಾಂ**—ನಿಮಗೆ । **ಪ್ರಿಯತಮಂ**—ಅತ್ಯಂತ ಪ್ರಿಯವಾದುದೂ । **ವೃಷಣಂ**—ಕಾಮವರ್ಷಕವಾದುದೂ । **ವಸುವಾಹನಂ**—ಧನಗಳನ್ನು ವಹಿಸತಕ್ಕದ್ದೂ ಆದ । **ರಥಂ**—

ರಥವನ್ನು । **ಸ್ತೋತಾ**—ಅವಸ್ಯುವೆಂಬ ಹೆಸರುಳ್ಳವನೂ ಸ್ತೋತೃವೂ । **ಋಷಿಃ**—ಋಷಿಯೂ ಆದ ನಾನು । **ಸ್ತೋಮೇನ**—ಸ್ತುತಿಗಳಿಂದ । **ಪ್ರತಿ ಭೂಷತಿ**—ಅಲಂಕರಿಸುತ್ತೇನೆ । **ಮಾಧ್ವೀ**—ಮಧುವಿದ್ಯೆಯನ್ನರಿತ ಎಲೈ ಅಶ್ವಿನೀದೇವತೆಗಳೇ । **ಮಮ**—ನನ್ನ । **ಹವಂ**—ಆಹ್ವಾನವನ್ನು । **ಶ್ರುತಂ**—ಕೇಳಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನಿಮಗೆ ಅತ್ಯಂತ ಪ್ರಿಯವಾದುದೂ, ಕಾಮವರ್ಷಕವಾದುದೂ, ಧನಗಳನ್ನು ವಹಿಸತಕ್ಕದ್ದೂ ಆದ ರಥವನ್ನು ಸ್ತೋತೃವೂ, ಋಷಿಯೂ, ಅವಸ್ಯುನಾಮಕನೂ ಆದ ನಾನು ಸ್ತುತಿಗಳಿಂದ ಅಲಂಕರಿಸುತ್ತೇನೆ. ಮಧುವಿದ್ಯೆಯರಿತ ಎಲೈ ಅಶ್ವಿನೀ ದೇವತೆಗಳೇ, ನನ್ನ ಆಹ್ವಾನವನ್ನು ಕೇಳಿರಿ.

## English Translation.

The Rishi, your worshipper. Aswins, graces your beloved chariot, the showerer (of benefits), the vehicle of wealth, with praises: masters of mystic lore, hear my invocation.

॥ ವಿಶೇಷವಿಷಯಗಳು ॥

ಅಶ್ವಿನೀದೇವತೆಗಳ ರಥದ ವೈಶಿಷ್ಟ್ಯವನ್ನು ಹಿಂದೆ ಸೂಕ್ಷ್ಮವಾಗಿ ಹೇಳಿದ್ದೇವೆ. ಅವರ ರಥಕ್ಕೆ ಮೂರು ಚಕ್ರಗಳು ಇರುವುವೆಂದು ಋ. ಸಂ. ೧-೩೪ ನೆಯ ಸೂಕ್ತದಲ್ಲಿಯೂ ಹೇಳಿದೆ.

**ತ್ರಿಚಕ್ರಃ ತ್ರಿವಂಧುರಃ ಮನಸಃ ಜವೀಯಾನ್** ಇತ್ಯಾದಿ ವಿಶೇಷಣಗಳ ತಾತ್ಪರ್ಯವನ್ನು ಹಿಂದೆ ವಿವರಿಸಿದೆ. ಪ್ರಕೃತದಲ್ಲಿ **ತ್ರಿಚಕ್ರಃ, ತ್ರಿವಂಧುರಃ** ಎಂಬ ವಿಶೇಷಣಗಳು ಅಶ್ವಿನೀದೇವತೆಗಳ ವಿಶ್ವವ್ಯಾಪಕತ್ವವನ್ನು ಯಾವ ರೀತಿಯಲ್ಲಿ ತಿಳಿಸುತ್ತವೆ ಎಂಬುದನ್ನು ಪರಿಶೀಲಿಸಬೇಕು. **ತ್ರಿಷು ವಿಕ್ರಮಣೇಷು** ಇತ್ಯಾದಿಯಾದ ವಾಕ್ಯಗಳಿಂದ **ವಿಷ್ಣು**ವಿನ ವ್ಯಾಪಕತ್ವವೂ, **ತ್ರೀಣಿ ಜಾನಾ ಪರಿಭೂಷಂತಿ** ಇತ್ಯಾದಿ ವಾಕ್ಯಗಳಿಂದ ಅಗ್ನಿಯ ವಿಶ್ವವ್ಯಾಪಕತ್ವವೂ ತಿಳಿಯುವಂತೆ, **ತ್ರಿಚಕ್ರಃ** ಇತ್ಯಾದಿ ವಿಶೇಷಣಗಳಿಂದ ಅಶ್ವಿನೀದೇವತೆಗಳ ಸ್ವರೂಪವು ತಿಳಿಯುತ್ತದೆ. ಅಗ್ನಿ, ವಿಷ್ಣು, ಸವಿತೃ, ಅಶ್ವಿನೀದೇವತೆಗಳು ಇವರ ವರ್ಣನೆಯೆಲ್ಲವೂ ಸಮಾನವಾದ ತತ್ತ್ವವನ್ನು ವಿವರಿಸುತ್ತದೆ ಮತ್ತು ಎಲ್ಲಾ ಸಂದರ್ಭಗಳಲ್ಲೂ ಈ ಎಲ್ಲಾ ದೇವತೆಗಳಿಗೂ ಸಮಾನವಾದ ಅಂಶವನ್ನು ವಿವರಿಸುತ್ತದೆ ಎಂಬ ವಿಷಯವು ಗಮನಾರ್ಹವಾದುದು. Hopkins ಎಂಬ ಆಂಗ್ಲ ಪಂಡಿತನು ಈ ಅಂಶವನ್ನು ವಿವರಿಸುತ್ತಾ ಈ ರೀತಿ ತಿಳಿಸಿದ್ದಾನೆ.

A comparison with the abodes of other Vedic Deities who are said to traverse the the whole Universe like Vishnu confirms the same view. One of these deitics is ಸವಿತೃ. The second deity that traverses or measures the Universe is ಅಗ್ನಿ. He Has three stations. His light is spoken of as three-fold. Athough these three stations do not seem to be always eonceived alikc, yet, one of them at any rate can be clearly identified with the third step of Vishnu. Agni somtimes represents the Sun in the Rig-Veda and Vishnu is also the same Sun under

a different name and the third or the hidden abode of Agni can therefore, be easily recognised as identical in character. The third Deity that traverses the Universe is the Aswins to whom the epithet ಪರಿಜ್ಮನ್ is applied several times in the Rig-Veda The Aswins are said to have three stations and their chariot which is to go over both the worlds alike has three wheels one of which is represented as deposited in a cave or a secret place like the third step of Vishnu which is beyond the ken of mortals. This coincidenee between the third stations of three different world-traversing Gods cannot be treated as accidental.

(J. A. O. S. Vol. 16. p. CXLIX to CL.)

ಮೇಲಿನ ವಾಕ್ಯಗಳಲ್ಲಿ ಎರಡು ಅಂಶಗಳು ಸ್ಪಷ್ಟವಾಗಿ ತಿಳಿಯುತ್ತವೆ. ಮೊದಲನೆಯದಾಗಿ—

೧. ಪೃಥಿವೀ, ದ್ಯುಲೋಕ ಮತ್ತು ಅಂತರಿಕ್ಷ ಈ ಮೂರು ಲೋಕಗಳೂ ಸಹ ಅಗ್ನಿ, ವಿಷ್ಣು ಮತ್ತು ಅಶ್ವಿನೀದೇವತೆಗಳಿಗೆ ಆವಾಸಸ್ಥಾನಗಳು; ಎರಡನೆಯದಾಗಿ,

೨ ಈ ಮೂರು ದೇವತೆಗಳಿಗೂ ಮೂರು ಪಾದಗಳಿದ್ದು, ಎಲ್ಲಾ ದೇವತೆಗಳ ಮೂರನೇ ಪಾದವೂ ಸಹ ಪುರುಷನಿಗೆ ಗಹನಾತೀತವಾದ ಲೋಕವನ್ನಾಕ್ರಮಿಸಿರುವುವು. ಈ ಎರಡು ಅಂಶಗಳೂ ಸಹ ಗಮನಾರ್ಹವಾದವು. ಮೊದಲನೆಯ ಅಂಶವನ್ನು ವರ್ಣಿಸುವ ವಾಕ್ಯಗಳಲ್ಲಿ ಕೆಲವನ್ನು ಮಾತ್ರ ಪರಿಶೀಲಿಸಿದರೆ,

**ಪ್ರ ತದ್ವಿಷ್ಣುಃ ಸ್ತವತೇ ವೀರ್ಯೇಣ ಮೃಗೋ ನ ಭೀಮಃ ಕುಚರೋ ಗಿರಿಷ್ಠಾಃ ।**
**ಯಸ್ಯೋರುಷು ತ್ರಿಷು ವಿಕ್ರಮಣೇಷ್ವಧಿಕ್ಷಿಯಂತಿ ಭುವನಾನಿ ವಿಶ್ವಾ ॥**

(ಋ. ಸಂ. ೧-೧೫೪-೨)

**ಯಸ್ಯ ತ್ರೀ ಪೂರ್ಣಾ ಮಧುನಾ ಪದಾನ್ಯಕ್ಷೀಯಮಾಣಾ ಸ್ವಧಯಾ ಮದಂತಿ ।**
**ಯ ಉ ತ್ರಿಧಾತು ಪೃಥಿವೀಮುತ ದ್ಯಾಮೇಕೋ ದಾಧಾರ ಭುವನಾನಿ ವಿಶ್ವಾ ॥**

(ಋ. ಸಂ. ೧-೧೫೪-೪)

**ತ್ರೀಣಿ ಜಾನಾ ಪರಿ ಭೂಷಂತ್ಯಸ್ಯ ಸಮುದ್ರ ಏಕಂ ದಿವ್ಯೇಕಮಪ್ಸು ।**
**ಪೂರ್ವಾಮನು ಪ್ರ ದಿಶಂ ಪಾರ್ಥಿವಾನಾಮೃತೂನ್ಪ್ರಶಾಸದ್ವಿ ದಧಾವನುಷ್ಠು ॥**

(ಋ. ಸಂ. ೧-೯೫-೩)

**ಅಗ್ನಿಸ್ತ್ರೀಣಿ ತ್ರಿಧಾತೂನ್ಯಾ ಕ್ಷೇತಿ ವಿದಥಾ ಕವಿಃ ।**
**ಸ ತ್ರೀಁರೇಕಾದಶಾಁ ಇಹ ಯಕ್ಷಚ್ಚ ಪಿಪ್ರಯಚ್ಚ ನೋ ವಿಪ್ರೋ ದೂತಃ ಪರಿಷ್ಕೃತೋ ನಭಂತಾಮನ್ಯಕೇ ಸಮೇ ॥**

(ಋ. ಸಂ. ೮-೩೯-೯)

**ತ್ರೀಣಿ ಪದಾನ್ಯಶ್ವಿನೋರಾವಿಃ ಸಾಂತಿ ಗುಹಾ ಪರಃ ।**
**ಕವೀ ಋತಸ್ಯ ಪತ್ಮಭಿರರ್ವಾಗ್ಜೀವೇಭ್ಯಸ್ಪರಿ ॥**

(ಋ. ಸಂ. ೮-೮-೨೩)

ಈ ಋಕ್ಕುಗಳಲ್ಲಿ ಮೊದಲನೆಯ ಎರಡೂ ವಿಷ್ಣುವಿನ ವ್ಯಾಪಕತ್ವವನ್ನು ವರ್ಣಿಸುತ್ತವೆ. ಅದರಂತೆ, ವಿಷ್ಣುವಿನ ಅತ್ಯಂತ ವಿಸ್ತೃತವಾದವೂ, ಮೂರು ಸಂಖ್ಯೆಗಳುಳ್ಳವೂ ಆದ ಪದಗಳ ಪ್ರಕ್ಷೇಪಗಳಲ್ಲಿ ಸಮಸ್ತವಾದ ಭೂತಜಾತಗಳೂ ನೆಲೆಸಿ ನಿಂತಿವೆ. ಮಧುರವಾದ ಅಮೃತದೊಡನೆ ತುಂಬಿದವೂ, ನಾಶರಹಿತವೂ ಆದ ವಿಷ್ಣುವಿನ ಮೂರು ಪಾದಪ್ರಕ್ಷೇಪಣಗಳೂ ತಮ್ಮ ಆಶ್ರಿತಜನರನ್ನು ಪವಿತ್ರವಾದ ಅನ್ನದಾನದಿಂದ ಸಂತೋಷಗೊಳಿಸುತ್ತವೆ. ಮತ್ತು ಅದೇ ವಿಷ್ಣುವು ಕೆಳಭಾಗದ ಸಪ್ತಲೋಕಗಳನ್ನೂ ಮತ್ತು ಮೇಲುಭಾಗದ ಸಪ್ತಲೋಕಗಳನ್ನೂ ಹೀಗೆ ಸಮಸ್ತವಾದ ಹದಿನಾಲ್ಕು ಲೋಕಗಳನ್ನೂ ಸಹ ಪೃಥಿವ್ಯಪ್ತೇಜೋರೂಪವಾದ **ತ್ರಿಧಾತು**ಗಳೊಡನೆ ಕೂಡಿಕೊಂಡಿರುವಂತೆ ಎತ್ತಿ ಹಿಡಿದಿದ್ದಾನೆಂದು ವಿಷ್ಣುವಿನ ಪಾದತ್ರಯದ ವ್ಯಾಪಕತ್ವದ ವರ್ಣನೆಯಿದೆ. ಮೂರು ಮತ್ತು ನಾಲ್ಕನೆಯ ಋಕ್ಕುಗಳಲ್ಲಿ ಅಗ್ನಿಯ ಸ್ವರೂಪವನ್ನು ತಿಳಿಸಿದೆ. ಅಗ್ನಿಗೆ ಬಡಬಾಲನ ರೂಪದಲ್ಲಿ ಸಮುದ್ರದಲ್ಲಿ ಒಂದೂ ಆದಿತ್ಯರೂಪದಲ್ಲಿ ದ್ಯುಲೋಕದಲ್ಲಿ ಒಂದೂ ವಿದ್ಯುದ್ರೂಪದಿಂದ ಅಂತರಿಕ್ಷದಿಂದ ಒಂದು ಹೀಗೆ ಮೂರು ಜನ್ಮಸ್ಥಾನಗಳಿವೆ. ಮತ್ತು ಇದೇ ಅಗ್ನಿಯು **ತ್ರಿಧಾತು**ಗಳನ್ನೂ ಆಕ್ರಮಿಸಿದ್ದಾನೆ, ಎಂದು ಅಗ್ನಿಯ ಲೋಕತ್ರಯವನ್ನೂ ವ್ಯಾಪಿಸಿರುವುದು ವರ್ಣಿಸಿದೆ. ಇದರಂತೆಯೇ ಐದನೆಯ ಋಕ್ಕಿನಲ್ಲಿ ಅಶ್ವಿನೀದೇವತೆಗಳ ಪಾದತ್ರಯದ ಮತ್ತು ವಿಷ್ಣು ಮತ್ತು ಅಗ್ನಿಗಳ ಆವಾಸ ಸ್ಥಾನಗಳನ್ನು ವರ್ಣಿಸಿರುವಂತೆಯೇ,

**ಇದಂ ಹಿ ವಾಂ ಪ್ರದಿವಿ ಸ್ಥಾನಮೋಕ ಇಮೇ ಗೃಹಾ ಅಶ್ವಿನೇದಂ ದುರೋಣಂ ।**
**ಆ ನೋ ದಿವೋ ಬೃಹತಃ ಪರ್ವತಾದಾದ್ಭ್ಯೋ ಯಾತಮಿಷಮೂರ್ಜಂ ವಹಂತಾ ॥**

(ಋ. ಸಂ. ೫-೭೬-೪)

ಎಂಬಲ್ಲಿ ಅಶ್ವಿನೀದೇವತೆಗಳಿಗೂ ಸಹ ಪೃಥಿವೀ, ಅಂತರಿಕ್ಷ ಮತ್ತು ದ್ಯುಲೋಕ ಈ ಮೂರು ಲೋಕಗಳೂ ಸಹ ಆವಾಸಸ್ಥಾನಗಳೆಂದು ವರ್ಣಿಸಿದೆ. ಈ ವಿವರಣೆಗಳಲ್ಲಿ ಇನ್ನೊಂದಂಶವನ್ನೂ ಸಹ ಗಮನಿಸಬೇಕಾಗಿದೆ. ವಿಷ್ಣುವಿನ ಪಾದಪ್ರಕ್ಷೇಪಗಳನ್ನು ವರ್ಣಿಸುವ ೧-೧೫೪-೪ ನೇ ಋಕ್ಕಿನಲ್ಲೂ, ಅಗ್ನಿಯ ವ್ಯಾಪಕತ್ವವನ್ನು ವರ್ಣಿಸುವ ೮-೩೯-೯ ನೇ ಋಕ್ಕಿನಲ್ಲೂ ಮತ್ತು ಅಶ್ವಿನೀದೇವತೆಗಳ ರಥಸಂಚಾರವನ್ನು ವರ್ಣಿಸುವ ಋಕ್ಕಿನಲ್ಲೂ (೧-೧೮೩-೧) **ತ್ರಿಧಾತು**ವೆಂಬ ಪದವು ಈ ಮೂರು ದೇವತೆಗಳ ಸಮಾನವಾದ ಸ್ವರೂಪವನ್ನು ಸೂಚಿಸುವ ಪದವಾಗಿರುತ್ತದೆ.

ಎರಡನೆಯದಾಗಿ, ಇವರೆಲ್ಲರ ತೃತೀಯಪಾದವು (ಅಥವಾ ಸ್ಥಾನವು) ಗಹನಾತೀತವಾದ ರಹಸ್ಯಸ್ಥಾನದಲ್ಲಿರುವುದೆಂಬ ವರ್ಣನೆಯು ಎಲ್ಲರಿಗೂ ಇರತಕ್ಕ ಸಮಾನ ಸ್ವರೂಪವನ್ನು ತೋರಿಸುತ್ತದೆ.

**ವಿಷ್ಣುರಿತ್ಥಾ ಪರಮಮಸ್ಯ ವಿದ್ವಾಞ್ಜಾತೋ ಬೃಹನ್ನಭಿ ಪಾತಿ ತೃತೀಯಂ ।**
**ಆಸಾ ಯದಸ್ಯ ಪಯೋ ಅಕ್ರತ ಸ್ವಂ ಸಚೇತಸೋ ಅಭ್ಯರ್ಚಂತ್ಯತ್ರ ॥**

(ಋ. ಸಂ. ೧೦-೧-೩)

**ಕಂ ಇಮಂ ವೋ ನಿಣ್ಯಮಾ ಚಿಕೇತ ವತ್ಸೋ ಮಾತೄರ್ಜನಯತ ಸ್ವಧಾಭಿಃ ।**

(ಋ. ಸಂ. ೧-೯೫-೪)

**ದ್ವೇ ಇದಸ್ಯ ಕ್ರಮಣೇ ಸ್ವರ್ದೃಶೋಽಭಿಖ್ಯಾಯ ಮರ್ತ್ಯೋ ಭುರಣ್ಯತಿ ।**
**ತೃತೀಯಮಸ್ಯ ನಕಿರಾ ದಧರ್ಷತಿ ವಯಶ್ಚನ ಪತಯಂತಃ ಪತತ್ರಿಣಃ ॥**

(ಋ. ಸಂ. ೧-೧೫೫-೫)

ಇತ್ಯಾದಿ ಋಕ್ಕುಗಳಲ್ಲಿ ಅಗ್ನಿಯ ಮೂರನೆಯ ಸ್ಥಾನವೂ ಮತ್ತು ವಿಷ್ಣುವಿನ ಮೂರನೇ ಪಾದದ ಆಕ್ರಮಣವೂ ಯಾವ ಮಾನವನಿಂದಲೂ ತಿಳಿಯಲು ಸಾಧ್ಯವಿಲ್ಲ ಎಂದು ತಿಳಿಸಿದೆ. "ಸ್ವರ್ಗಲೋಕವನ್ನು ವೀಕ್ಷಿಸುವ ವಿಷ್ಣುವಿನ ಎರಡು ಪಾದಗಳನ್ನಿಡುವ ಭೂಲೋಕ ಮತ್ತು ಅಂತರಿಕ್ಷಲೋಕಗಳನ್ನು ಮಾತ್ರ ಮಾನವನು ಸ್ತುತಿಮಾಡಿ ತಿಳಿದು ಕೊಳ್ಳುತ್ತಾನೆ. ಈ ವಿಷ್ಣುವಿನ ಮೂರನೆಯ ಪಾದವನ್ನಿಡುವ ಲೋಕವನ್ನು ಯಾವ ಮಾನವನೂ ತಿಳಿದುಕೊಳ್ಳಲು ಸಾಧ್ಯವೇ ಇಲ್ಲ" ಎಂದು ಹೇಳಿರುವಂತೆಯೇ, ಅಶ್ವಿನೀದೇವತೆಗಳ **ತ್ರಿಚಕ್ರಾತ್ಮಕವಾದ ರಥದ** ಗತಿಯನ್ನೂ ಅದರ ಗಹನಾತೀತವಾದ ಸಂಚಾರವನ್ನೂ ತಿಳಿಸಿದೆ

**ಯದಯಾತಂ ಶುಭಸ್ಪತೀ ವರೇಯಂ ಸೂರ್ಯಾಮುಪ ।**
**ಕ್ವೈಕಂ ಚಕ್ರಂ ವಾಮಾಸೀತ್ಕ್ವ ದೇಷ್ಟ್ರಾಯ ತಸ್ಥಥುಃ ॥**
**ದ್ವೇ ತೇ ಚಕ್ರೇ ಸೂರ್ಯೇ ಬ್ರಹ್ಮಾಣ ಋತುಥಾ ವಿದುಃ ।**
**ಅಥೈಕಂ ಚಕ್ರಂ ಯದ್ಗುಹಾ ತದದ್ಧಾತಯ ಇದ್ವಿದುಃ ॥**
(ಋ. ಸಂ ೧೦-೮೫-೧೫, ೧೬)

ಎಂಬಲ್ಲಿ ಅಶ್ವಿನೀದೇವತೆಗಳ ರಥದ ಮೂರು ಚಕ್ರಗಳಲ್ಲಿ ಒಂದು ಮಾತ್ರ ಯಾರ ಕಣ್ಣಿಗೂ ಗೋಚರವಾಗದೆ, ಕೇವಲ ದರ್ಶನಶಕ್ತಿಯುಳ್ಳ ಋಷಿಗಳಿಗೆ ಮಾತ್ರ ತಿಳಿಯುವುದೆಂದು ವರ್ಣಿಸಿದೆ. ಈ ವಿಧವಾಗಿ ಅಪರ ಅಸಾಧಾರಣವಾದ ಸ್ವರೂಪದ ವರ್ಣನೆಯಲ್ಲಿ ಮೂರು ದೇವತೆಗಳಿಗೂ ಸಮಾನ ಧರ್ಮವನ್ನು ಎರಡು ಮುಖ್ಯವಾದ ಅಂಶಗಳಲ್ಲಿ ತೋರಿಸಿದೆ. ಮೂರು ದೇವತೆಗಳೂ ಸಹ ಆದಿತ್ಯಸ್ವರೂಪರೇ ಎಂದೂ ಸಹ ಹಿಂದೆಲ್ಲಾ ತಿಳಿಸಿದೆ. **ತ್ರಿಚಕ್ರಃ, ತ್ರಿಬರ್ಹಿಃ, ತ್ರಿಷಧಸ್ಥಃ, ತ್ರಿವಂಧುರೇ, ತ್ರಿವಿಕ್ರಮ,** ಇತ್ಯಾದಿ ವಿಶೇಷಣಗಳಲ್ಲಿ ಒಂದು ಸಾಂಕೇತಿಕವಾದ ಅಭಿಪ್ರಾಯವು ಸೂಚಿತವಾಗಿದೆ ಅದೇ ವಿಷಯವನ್ನು ಪ್ರಕೃತವಾದ ಋಕ್ಕಿನಲ್ಲಿಯೂ ತಿಳಿಸಿದೆ. ಮತ್ತು ಮೇಲೆ ತಿಳಿಸಿದಂತೆ, **ತ್ರಿಧಾತು** ಶಬ್ದದಿಂದ ಅವರ ವಿಶ್ವವ್ಯಾಪಕತ್ವವು ಬೋಧಿತವಾಗಿದೆಯಾದುದರಿಂದ **ತ್ರಿಧಾತು** ಶಬ್ದಕ್ಕೆ ಅರ್ಥವೇನೆಂದು ತಿಳಿಯಬೇಕು.

**ತ್ರಿಧಾತುನಾ—ತ್ರಿಪ್ರಕಾರಸ್ಥಾನೋಪೇತೇನ । ಸುವರ್ಣರಜತತಾಮ್ರಧಾತುಸೋಪೇತೇನ ವಾ ರಥೇನ** ಎಂದರ್ಥಮಾಡಿದೆ. **ತ್ರಿಧಾತು** ಶಬ್ದಕ್ಕೆ ಅನೇಕ ಸ್ಥಳಗಳಲ್ಲಿ **ತ್ರಯಾಣಾಂ ಧಾತೂನಾಂ ಸಮಾಹಾರಸ್ತ್ರಿಧಾತು । ಪೃಥಿವ್ಯಪ್ತೇಜೋರೂಪಧಾತುತ್ರಯವಿಶಿಷ್ಟಂ । ಪೃಥಿವೀ, ಅಪ್** ಮತ್ತು **ತೇಜಸ್ಸು** ಈ ಮೂರು ಭೂತಗಳ ಸಮಷ್ಟಿತತ್ತ್ವವೆಂದು ತಿಳಿಸಿದೆ. ಸಾಯಣರು ಈ ಪದದ ತಾತ್ಪರ್ಯವನ್ನು ವಿವರಿಸುವಾಗ ಕೆಲವೆಡೆಗಳಲ್ಲಿ,

**ತಾಸಾಂ ತ್ರಿವೃತಂ ತ್ರಿವೃತಮೇಕೈಕಾಂ ಕರವಾಣೀತಿ ಸೇಯಂ ದೇವತೇಮಾಸ್ತಿಸ್ರೋ ದೇವತಾ ಅನೇನೈವ ಜೀವೇನಾತ್ಮಾನುಪ್ರವಿಶ್ಯ ನಾಮರೂಪೇ ವ್ಯಾಕರೋತ್ ।**
(ಛಾ. ಉ. ೬-೩-೨-೩)

ಎಂಬ ವಾಕ್ಯವನ್ನುದಾಹರಿಸಿ ಇಲ್ಲಿ **ಅನ್ನ, ಅಪ್** ಮತ್ತು **ತೇಜೋ** ರೂಪಗಳ ತತ್ತ್ವತ್ರಯವನ್ನು ಸೃಷ್ಟಿಸಿ ಅವುಗಳನ್ನು ತನ್ನ ಮಹಿಮೆಯಿಂದ ಧರಿಸಿದ ಪರಬ್ರಹ್ಮನ ಮಹತ್ತ್ವವು ಇಲ್ಲೂ ಸ್ತುತಿಸಲ್ಪಟ್ಟಿದೆಯೆಂದು ಸಾಯಣರು ತಿಳಿಸಿದ್ದಾರೆ. ಈ ವಿವರಣೆಯು **ತ್ರಿಧಾತು** ಶಬ್ದಕ್ಕೆ ಇರತಕ್ಕ ಅನೇಕ ವಿವರಣೆಗಳಲ್ಲಿ ಒಂದು ಮಾತ್ರವಾಗಿದೆ. ಇನ್ನು ಕೆಲವೆಡೆಗಳಲ್ಲಿ ಸಾಯಣರು **ತ್ರಿಧಾತು ಕಾಲತ್ರಯಂ ಗುಣತ್ರಯಂ ವಾ;** ಭೂತಭವಿಷ್ಯದ್ವರ್ತಮಾನಗಳೆಂಬ ಕಾಲ ತ್ರಯವೆಂದಾಗಲೀ ಅಥವಾ ಸತ್ತ್ವರಜಸ್ತಮೋರೂಪವಾದ ಗುಣಗಳೆಂದಾಗಲಿ ಅರ್ಥವಾಗುವುದೆಂದು ಹೇಳಿದ್ದಾರೆ.

**ಅಗ್ನಿರಸ್ಮಿ ಜನ್ಮನಾ ಜಾತವೇದಾ ಘೃತಂ ಮೇ ಚಕ್ಷುರಮೃತಂ ಮ ಆಸನ್ ।**
**ಅರ್ಕಸ್ತ್ರಿಧಾತೂ ರಜಸೋ ವಿಮಾನೋಽಜಸ್ರೋ ಘರ್ಮೋ ಹವಿರಸ್ಮಿ ನಾಮ ॥**
(ಋ. ಸಂ. ೩-೨೬-೭)

ಎಂಬ ಋಕ್ಕಿನಲ್ಲಿ ತ್ರಿಧಾತು ಶಬ್ದಕ್ಕೆ **ಪ್ರಾಣಾಪಾನವ್ಯಾನಾತ್ಮನಾ ತ್ರಿಧಾ ವರ್ತಮಾನೋಽರ್ಕೋಽರ್ಚನೀಯೋ ಯಃ ಪ್ರಾಣೋಽಸ್ತಿ ಸೋಽಪಿ ಅಹಮೇವಾಸ್ಮಿ ।** ಪ್ರಾಣ, ಅಪಾನ ಮತ್ತು ವ್ಯಾನ ಈ ಮೂರು ರೂಪಗಳ ಪ್ರಾಣತತ್ತ್ವವೆಂದೂ,

**ಯದ್ದೇವಾಃ ಶರ್ಮ ಶರಣಂ ಯದ್ಭದ್ರಂ ಯದನಾತುರಂ ।**
**ತ್ರಿಧಾತು ಯದ್ವರೂಥ್ಯಂ೧ ತದಸ್ಮಾಸು ವಿ ಯಂತನಾನೇಹಸೋ ವ ಊತಯಃ ಸು ಊತಯೋ ವ ಊತಯಃ ॥**

(ಋ. ಸಂ ೮-೪೭-೧೦)

ಎಂಬಲ್ಲಿ **ಸತ್ವರಜಸ್ತಮೋ** ರೂಪವಾದ **ತ್ರಿಗುಣ**ವೆಂದೂ ಅರ್ಥಮಾಡಿದೆ. ಅಲ್ಲದೇ,

**ಆ ಧರ್ಣಸಿರ್ಬೃಹದ್ದಿವೋ ರರಾಣೋ ವಿಶ್ವೇಭಿರ್ಗನ್ತ್ವೋಮಭಿರ್ಹುವಾನಃ ।**
**ಗ್ನಾ ವಸಾನ ಓಷಧೀರಮೃಧ್ರಸ್ತ್ರಿಧಾತುಶೃಂಗೋ ವೃಷಭೋ ವಯೋಧಾಃ ॥**
(ಋ. ಸಂ. ೫-೪೩-೧೩)

ಎಂಬಲ್ಲಿ ಅಗ್ನಿಜ್ವಾಲೆಯ ವರ್ಣನೆಯಿದೆ. ಇಲ್ಲಿ **ತ್ರಿಧಾತುಶೃಂಗಃ** ಎಂಬ ಪದಕ್ಕೆ **ತ್ರಿಪ್ರಕಾರಶೃಂಗವದುನ್ನತ-ಲೋಹಿತಶುಕ್ಲಕೃಷ್ಣವರ್ಣಜ್ವಾಲಃ । ಶುಕ್ಲ, ಕೃಷ್ಣ** ಮತ್ತು **ಲೋಹಿತ** ಎಂಬ ಮೂರು ವಿಧವಾಗಿಯೂ ಉನ್ನತವಾಗಿಯೂ ಎದ್ದಿರುವ ಜ್ವಾಲೆಗಳುಳ್ಳವನು ಎಂದು ವಿವರಿಸಿದೆ.

**ತ್ರಿರಾ ದಿವಃ ಸವಿತರ್ವಾರ್ಯಾಣಿ ದಿವೇದಿವ ಆ ಸುವ ತ್ರಿರ್ನೋ ಅಹ್ನಃ ।**
**ತ್ರಿಧಾತು ರಾಯ ಆ ಸುವಾ ವಸೂನಿ ಭಗ ತ್ರಾತರ್ಧಿಷಣೇ ಸಾತಯೇ ಧಾಃ ॥**
(ಋ. ಸಂ. ೩-೫೬-೬)

ಎಂಬಲ್ಲಿ **ವಸೂನಿ ಧನಾನಿ** ಎಂಬುದಕ್ಕೆ ವಿಶೇಷಣವಾಗಿ **ತ್ರಿಧಾತೂನಿ ಪಶುಕನಕರತ್ನಭೇದೇನ ತ್ರಿಪ್ರಕಾರಾಣಿ ।** ಪಶು, ಚಿನ್ನ ಮತ್ತು ರತ್ನ ಎಂಬ ಮೂರುವಿಧವಾದ ಧನವೆಂದರ್ಥಮಾಡಿದೆ.

**ತವ ತ್ರಿಧಾತು ಪೃಥಿವೀ ಉತ ದ್ಯೌರ್ವೈಶ್ವಾನರ ವ್ರತಮಗ್ನೇ ಸಚಂತ ।**
**ತ್ವಂ ಭಾಸಾ ರೋದಸೀ ಆ ತತಂಥಾಜಸ್ರೇಣ ಶೋಚಿಷಾ ಶೋಶುಚಾನಃ ॥**
(ಋ. ಸಂ. ೭-೫-೪)

ಎಂಬಲ್ಲಿ **ವೈಶ್ವಾನರನ** ವ್ರತವನ್ನು ಮೂರುಲೋಕಗಳೂ ಸೇವಿಸುತ್ತವೆಯೆಂದು ವರ್ಣಿಸುವಾಗ **ತ್ರಿಧಾತು, ಪೃಥಿವೀ ದ್ಯೌಃ** ಎಂದು **ತ್ರಿಧಾತುವನ್ನು ಅಂತರಿಕ್ಷ** ಪರ್ಯಾಯವಾಗಿ ಪ್ರಯೋಗಿಸಿದೆ.

**ತಸ್ಯ ಯೋ ಯೋನಿರಾತಯ ಆಸ । ತಮನು ಪರಾವೃತ್ಯ ಸಂಲುಪ್ಯಾಚ್ಛಿನತ್ಸ್ಯೈಷೇಷ್ಟಿರಭವತ್ತ-ದ್ಯದೇತಸ್ಮಿನ್ನಾತಯೇ ತ್ರಿಧಾತುರಿವ್ಯೈಷಾ ವಿದ್ಯಾ ತಸ್ಮಾತ್ತ್ರೈಧಾತವೀ ನಾಮ ।**
(ಶ. ಬ್ರಾ. ೫-೫-೫-೬)

ವೃತ್ರಾಸುರನ ವಧದ ಕಾಲದಲ್ಲಿ ತ್ರಯ್ಯಾತ್ಮಕವಾದ ವಿದ್ಯೆಯ ಆಧಾರವಿದ್ದುದರಿಂದ ಆ ಸಂದರ್ಭದಲ್ಲಿ ನೆರವೇರಿಸಿದ **ಇಷ್ಟಿಗೆ ತ್ರೈಧಾತವೀ ಇಷ್ಟಿ**ಯೆಂಬ ಹೆಸರು ಪ್ರಸಿದ್ಧವಾಗಿದೆಯೆಂಬ ಅಂಶವು ಶತಪಥಬ್ರಾಹ್ಮಣದ ವಾಕ್ಯಗಳಿಂದ ತಿಳಿಯುತ್ತದೆ.

> **ತತೋ ವೈ ಸ ಇಮಾನ್ ಲೋಕಾಗ್ ಸ್ತ್ರೇಧಾದುಹತ್ತ್ರಿಧಾತೋಸ್ತ್ರಿಧಾತುತ್ವಂ ಯಂ ಕಾಮಯೇತಾನ್ನಾದಸ್ಸ್ಯಾದಿತಿ ತಸ್ಮಾ ಏತಂ ತ್ರಿಧಾತುಂ ನಿರ್ವಪೇದಿಂದ್ರಾಯ ರಾಜ್ಞೇ ಪುರೋಡಾಶಮೇಕಾದಶಕಪಾಲಂ ||** (ತೈ. ಸಂ. ೨-೩-೬-೧)

ಎಂಬ ತೈತ್ತಿರೀಯ ಸಂಹಿತಾವಾಕ್ಯಗಳಲ್ಲಿರುವ **ತ್ರಿಧಾತು** ಶಬ್ದಕ್ಕೆ ಸಾಯಣರು ಈ ರೀತಿ ಅರ್ಥಮಾಡಿದ್ದಾರೆ.

> **ತಿಸ್ರ ಏತಾಸ್ತ್ರಿಧಾತೋರ್ದೇವತಾ ಲೋಕತ್ರಯಾತ್ಮಿಕಾಃ । ತತಃ ಖಲು ತ್ರಿಧಾತು ದೇವಾತಾನಾಂ ತ್ರಿತ್ವಾತ್ಪ್ರಜಾಪತಿಃ ಲೋಕತ್ರಯವ್ಯಾಪೀ ವ್ಯಾಪ್ತಾನಿಮಾನ್ ಲೋಕಾಂಸ್ತ್ರೇಧಾ ದುಹತ್ ತ್ರಿಪ್ರಕಾರಮದುಹತ್ । ತ್ರಯೋ ಧಾತವೋ ಧನಾನ್ಯಸ್ಮಿನ್ನಿತಿ ತ್ರಿಧಾತುಃ । ತ್ರೇಧಾ ಧಾತವ್ಯತ್ವಾತ್ಪುರೋಡಾಶಸ್ಯ । ಯದ್ವಾ ಸರ್ವಾಧಾರಲೋಕತ್ರಯಾತ್ಮಕತ್ವಾತ್ ತ್ರಿಧಾತುಃ ||** (ತೈ. ಸಂ. ಭಾಷ್ಯ)

ಲೋಕತ್ರಯದಲ್ಲಿರತಕ್ಕವರೂ, ಮೂರು ರೂಪಗಳಲ್ಲಿರತಕ್ಕವರೂ ಆದ ದೇವತೆಗಳಿಗೆ ಪುರೋಡಾಶರೂಪವಾದ ಅನ್ನವನ್ನು ಪ್ರಜಾಪತಿಯು ಮೂರುಕಾಲಗಳಲ್ಲಿ ಕಲ್ಪಿಸಿದನು, ಎಂದು **ತ್ರಿಧಾತು** ಶಬ್ದಕ್ಕೆ **ಲೋಕ, ಅನ್ನ, ಭೂತತ್ರಯ** ಇತ್ಯಾದ್ಯರ್ಥಗಳನ್ನು ಹೇಳಿದೆ. ಹೀಗೆ **ತ್ರಿಧಾತು** ಶಬ್ದವನ್ನು ನಾನಾಕಡೆಗಳಲ್ಲಿ ಬೇರೆ ಬೇರೆ ಅರ್ಥಗಳಲ್ಲಿ ಉಪಯೋಗಿಸಿದೆ. ಪ್ರಕೃತದಲ್ಲಿ **ಅಗ್ನಿ, ಅಶ್ವಿನೀ** ಮತ್ತು **ವಿಷ್ಣು** ಎಂಬ ದೇವತೆಗಳನ್ನು ಸ್ತುತಿಸಿರುವ ಋಕ್ಕುಗಳಲ್ಲಿ ಈ ಪದವನ್ನು **ಪೃಥಿವೀ, ಅಂತರಿಕ್ಷ, ದ್ಯುಲೋಕ** ಎಂಬ ಲೋಕತ್ರಯವನ್ನು ತಿಳಿಸುವ ಪರ್ಯಾಯಪದವಾಗಿ ಉಪಯೋಗಿಸಿದೆಯೆಂದು ಹೇಳಬಹುದು. ತ್ರಿಚಕ್ರ, ತ್ರಿಧಾತು ಮೊದಲಾದ ಶಬ್ದಗಳ ವಿವರಣೆಯು ಋ. ಸಂ. ಭಾಗ ೪ರಲ್ಲಿ ೩೪ನೇ ಸೂಕ್ತದಲ್ಲಿ ವಿವರಿಸಲಾಗಿದೆ.

**ಮಾಧ್ವೀ—**ಈ ಶಬ್ದವು ಮಧುವಿದ್ಯೆಯನ್ನರಿತ ಅಶ್ವಿನೀದೇವತೆಗಳನ್ನು ಸಂಬೋಧಿಸಲು ಉಪಯೋಗಿಸಿದೆ. ಮಧುವಿದ್ಯೆಯೆಂದರೇನು ಎಂಬ ವಿಷಯವನ್ನು ಇಲ್ಲಿ ವಿವರಿಸುವುದು ಅವಶ್ಯಕವಾಗಿದೆ.

ಸ್ಕಂದಸ್ವಾಮಿಗಳೂ ಸಾಯಣರೂ ಇಲ್ಲಿ ಒಂದು ಇತಿಹಾಸವನ್ನು ಹೇಳಿರುವರು. ವಾಜಸನೇಯಬ್ರಾಹ್ಮಣದಲ್ಲಿ ಈ ಇತಿಹಾಸವು ಪ್ರಸಿದ್ಧವಾಗಿರುವುದು.

> **ಆಥರ್ವಣಾಯ ದಧೀಚೇ ಮಧ್ವಾಖ್ಯಂ ಪರಂ ಬ್ರಹ್ಮ ಇಂದ್ರ ಉವಾಚ । ಪ್ರೋಚ್ಯ ಚ ಯದಿ ವಕ್ಷ್ಯಸಿ ಶಿರಸ್ತೇ ಪತಿಷ್ಯತೀತಿ । ತಮಶ್ವಿನೌ ಮಧ್ವರ್ಥಿನಾವಾಗತ್ಯ ಊಚತುಃ । ಪ್ರ ಬ್ರೂಹಿ ನೌ ಪರಂ ಬ್ರಹ್ಮೇತಿ । ಸ ತೌ ಪ್ರತ್ಯುವಾಚ । ಶಿರಃಪಾತಭಯಾನ್ನ ಬ್ರವೀಮೀತಿ । ತೌ ತಂ ಪ್ರತ್ಯೂಚತುಃ । ಅನ್ಯತ್ ತೇ ಆವಾಂ ಶಿರ ಆದಧ್ವಹೇ । ತೇನ ಪ್ರಬ್ರೂಹಿ । ಸ ತಥೇತಿ ಪ್ರಪೇದ । ತಸ್ಯಾಶ್ವಿನೌ ಶಿರಶ್ಛಿತ್ವಾ ಅಶ್ವಶಿರ ಆದಧಾತೇ । ತೇನಾಸೌ ತಾವಧ್ಯಾಪಯಾಂಚಕಾರೇತಿ । ತದೇತದಿಹೋಚ್ಯತೇ ದಧ್ಯಙ್ ಹ ಯದಿತ್ಯಾದಿನಾ ||**

ಅಥರ್ವಣಪುತ್ರನಾದ ದಧೀಚನೆಂಬ ಋಷಿಗೆ ಮಧು ಎಂದು ಹೆಸರುಳ್ಳ ಪ್ರಸಿದ್ಧವಾದ ಪರಬ್ರಹ್ಮೋಪದೇಶವನ್ನು (ಮಧುವಿದ್ಯಾ) ಇಂದ್ರನು ಮಾಡಿ, ಇದನ್ನು ನೀನು ಇತರರು ಯಾರಿಗಾದರೂ ಉಪದೇಶ ಮಾಡಿದರೆ ನಿನ್ನ ತಲೆಯು ಕೆಳಕ್ಕೆ ಬಿದ್ದುಹೋಗುವುದು ಎಂದು ಹೇಳಿದನು. ಅಶ್ವಿನೀದೇವತೆಗಳು ಮಧುವಿದ್ಯೆಯನ್ನು ಹೊಂದಲು ಆಸೆಯುಳ್ಳವರಾಗಿ, ದಧೀಚಿಋಷಿಯ ಸಮೀಪಕ್ಕೆ ಬಂದು ನಮಗೆ ಮಧುವಿದ್ಯಾಪ್ರತಿಪಾದ್ಯವಾದ ಪರಬ್ರಹ್ಮೋಪದೇಶವನ್ನು ಮಾಡು ಎಂದು ದಧೀಚಿಋಷಿಯನ್ನು ಕೇಳಿದರು. ಆಗ ಅವನು ತನ್ನ ತಲೆಯು ಬಿದ್ದುಹೋಗುವುದೆಂಬ ಭಯದಿಂದ ಅವರಿಗೆ ನಾನು ಉಪದೇಶವನ್ನು ಮಾಡುವುದಿಲ್ಲವೆಂದು ಹೇಳಿದನು. ಆಗ ಅಶ್ವಿನೀದೇವತೆಗಳು ನಿನಗೆ ಬೇರೆಯ ತಲೆಯನ್ನು ನಾವು ಸೇರಿಸುತ್ತೇವೆಯಾದಕಾರಣ ಉಪದೇಶಮಾಡು ಎಂದು ಹೇಳಲು, ಆ ಮಾತನ್ನು ಕೇಳಿ ಅದಕ್ಕೆ ಸಮ್ಮತಿಸಿದನು. ಆಗ ಅಶ್ವಿನೀದೇವತೆಗಳು ಅವನ ತಲೆಯನ್ನು ಕತ್ತರಿಸಿ ಕುದುರೆಯ ತಲೆಯನ್ನು ಸೇರಿಸಿದರು. ಅವನು ಮಧುವಿದ್ಯೆಯನ್ನು ಅವರಿಗೆ ಉಪದೇಶ ಮಾಡಿದನು ಎಂದು ಇತಿಹಾಸವು ಸ್ಕಂದಸ್ವಾಮಿ ಭಾಷ್ಯದಲ್ಲಿರುವುದು.

**ತದಿಂದ್ರೋ ಜ್ಞಾತ್ವಾ ವಜ್ರೇಣ ತಚ್ಛಿರೋ ಅಚ್ಛಿನತ್ । ಅಥಾಶ್ವಿನೌ ತಸ್ಯ ಸ್ವಕೀಯಂ ಮಾನುಷಂ ಶಿರಃ ಪ್ರತ್ಯಧತ್ತಾಂ ॥**

ಇಂದ್ರನು ಇದನ್ನು ತಿಳಿದು, ತನ್ನ ವಜ್ರಾಯುಧದಿಂದ ದಧೀಚಿಋಷಿಯ ತಲೆಯನ್ನು ಕತ್ತರಿಸಿದನು. ಅನಂತರ ಅಶ್ವಿನೀದೇವತೆಗಳು ಅವನ ಹಿಂದಿನ ಮನುಷ್ಯನ ಆಕಾರದ ತಲೆಯನ್ನೇ ದಧೀಚಿಋಷಿಯ ಶರೀರಕ್ಕೆ ಸೇರಿಸಿ ಅವನನ್ನು ರಕ್ಷಿಸಿದರು ಎಂಬ (ಕಥಾ) ಇತಿಹಾಸದ ಭಾಗವು ಸಾಯಣಭಾಷ್ಯದಲ್ಲಿ ಉಕ್ತವಾಗಿರುವುದು.

**ಅಶ್ವಸ್ಯ ಶೀರ್ಷ್ಣಾ ವಾಂ ಈಂ ಯದುವಾಚ—ಯುಷ್ಮತ್ ಸಾಮರ್ಥ್ಯೇನ ಪ್ರತಿಹಿತೇನ ಶಿರಸಾ ಯುವಾಭ್ಯಾಂ ಇಮಾಂ ಮಧುವಿದ್ಯಾಂ ಯದಾ ಚ ಉಕ್ತವಾನ್ ।** ಕುದುರೆಯ ತಲೆಯನ್ನು ತಂದು ಸೇರಿಸಿರುವ ನಿಮ್ಮ ಸಾಮರ್ಥ್ಯವನ್ನೂ, ದಧೀಚಿಋಷಿಯು ಮಧುವಿದ್ಯೆಯನ್ನು ಉಪದೇಶ ಮಾಡಿರುವುದನ್ನೂ ನೀವು ಅವನಿಗೆ ಶಿರಸ್ಸುಗಳ ಪರಿವರ್ತನೆಯಿಂದ ಉಪದೇಶವನ್ನು ಹೊಂದಿ ಅವನನ್ನು ರಕ್ಷಿಸಿರುವುದನ್ನೂ ಇಲ್ಲಿ ಪ್ರಕಟಿಸಿರುವೆನು ಎಂದು ಈ ಋಕ್ಕಿನಲ್ಲಿ ವರ್ಣಿಸಿರುತ್ತದೆ.

ದಧ್ಯಂಚ್ ಅಥವಾ ದಧೀಚಿ ಎಂಬ ಋಷಿಯು ಪುರಾಣಾದಿಗಳಲ್ಲಿ ಪ್ರಸಿದ್ಧನಾದವನು. ಭಾಷ್ಯಕಾರರು ಇಲ್ಲಿ ಒಂದು ಉಪಾಖ್ಯಾನವನ್ನು ಹೇಳಿರುವರು ಅಥರ್ವನೆಂಬುವನ ಪುತ್ರನಾದ ದಧ್ಯಂಚ್ ಎಂಬ ಋಷಿಯು ಜೀವಿಸಿದ್ದಾಗ ಅವನ ದರ್ಶನದಿಂದ ಅಸುರರು ಭೀತರಾಗಿ ಓಡಿಹೋಗಿದ್ದರು. ಅವನು ಮೃತನಾಗಿ ಸ್ವರ್ಗಕ್ಕೆ ಹೋದಬಳಿಕ ಅಸುರರು ನಿರ್ಭಯವಾಗಿ ಭೂಮಿಯೆಲ್ಲವನ್ನೂ ವ್ಯಾಪಿಸಿದರು. ಬಳಿಕ ಇಂದ್ರನು ಆ ಅಸುರರೊಡನೆ ಯುದ್ಧಮಾಡಲಶಕ್ತನಾಗಿ ಆ ಋಷಿಯನ್ನು ಹುಡುಕಿದನು. ಋಷಿಯು ಸ್ವರ್ಗಸ್ಥನಾದನೆಂದು ತಿಳಿಯಬಂದಿತು. ಆಗ ಇಂದ್ರನು ಸಮೀಪದಲ್ಲಿದ್ದವರನ್ನು ಕುರಿತು—ಆ ಋಷಿಯ ಅಂಗಗಳಲ್ಲಿ ಯಾವುದಾದರೂ ಅವಶೇಷವಿದೆಯೇ ಎಂದು ಕೇಳಲು, ಆಗ ಅವರು—ದಧೀಚಿಋಷಿಯು ಒಂದಾನೊಂದುಕಾಲದಲ್ಲಿ ಅಶ್ವಿನೀದೇವತೆಗಳಿಗೆ ಮಧುವಿದ್ಯೆಯನ್ನು ಕಲಿಸಿದ ಕುದುರೆಯ ತಲೆಬುರುಡೆಯು ಮಾತ್ರ ಇರುವುದೆಂದೂ, ಅದು ಸಹ ಎಲ್ಲಿರುವುದೋ ಗೊತ್ತಿಲ್ಲವೆಂದೂ ಹೇಳಿದರು ಆಗ ಇಂದ್ರನು ಅದನ್ನು ಹುಡುಕುವಂತೆ ಅವರಿಗೆ ಹೇಳಲು, ಅವರು ಅದು ಕುರುಕ್ಷೇತ್ರದ ಸಮೀಪದಲ್ಲಿರುವ ಶರ್ಯಣಾವತ್ ಎಂಬ ಸರೋವರದಲ್ಲಿ ಬಿದ್ದಿರುವುದನ್ನು ಹುಡುಕಿ ತೆಗೆದುಕೊಂಡು ಬಂದರು. ಇಂದ್ರನು ಆ ತಲೆಬುರುಡೆಯ ಮೂಳೆಗಳಿಂದ ಅಸುರರನ್ನು ಜಯಿಸಿದನು ಎಂದರೆ, ಒಂಭತ್ತುಸಲ ತೊಂಭತ್ತು ಎಂಟನೂರು ಹತ್ತಾವರ್ತಿ ಅಸುರರ ಮಾಯಾಜಾಲ

ವನ್ನು ವಿಫಲಗೊಳಿಸಿದನು. ಇಲ್ಲಿ ಒಂಭತ್ತುಸಲ ತೊಂಭತ್ತು ಎಂಬ ಸಂಖ್ಯೆಯನ್ನು ವಿವರಿಸುವಾಗ ಭಾಷ್ಯಕಾರರು— ಮೂರುಲೋಕಗಳಲ್ಲಿರುವ ದೇವತೆಗಳನ್ನು ಜಯಿಸಲು ಮೊದಲು ಅಸುರರಿಗೆ ಮೂರುವಿಧವಾದ ಮಾಯಾಭೇದಗಳಿದ್ದವು. ಅವುಗಳಲ್ಲಿ ಒಂದೊಂದೂ ವರ್ತಮಾನ ಭೂತ ಭವಿಷ್ಯತ್ ಎಂದು ಮೂರು ವಿಧವಾಗಿದ್ದುದರಿಂದ ಒಟ್ಟು ಒಂಭತ್ತು ವಿಧಗಳಾದವು. ಮತ್ತೆ ಆ ಒಂಭತ್ತು ಮಾಯೆಗಳು ಉತ್ಸಾಹಾದಿ ಶಕ್ತಿತ್ರಯಗಳಿಂದ ಕೂಡಿ ೯×೩=೨೭ ಆದುವು. ಮತ್ತೆ ಅವು ಸಾತ್ವಿಕಾದಿ ಗುಣತ್ರಯಗಳಿಂದ ಕೂಡಿ ೨೭×೩=೮೧ ಆದುವು. ಈ ಎಂಭತ್ತೊಂದು ಮಾಯೆಗಳು ದಶದಿಕ್ಕುಗಳಲ್ಲಿ ಆಚರಿಸಲ್ಪಡುವುದರಿಂದ ಒಟ್ಟು ೮೧×೧೦=೮೧೦ ಅಥವಾ ಒಂಭತ್ತುಸಲ ತೊಂಭತ್ತು ೯×೯೦=೮೧೦ ಆದುವು. ಈ ವಿಧವಾದ ವೃತ್ರರೂಪರಾದ ಅಸುರರ ಮಾಯಾಜಾಲಗಳನ್ನು ಇಂದ್ರನು ನಿರರ್ಥಕಗೊಳಿಸಿದನು ಎಂದು ವಿವರಿಸಿರುವರು. (ಋ. ಸಂ ೧-೮೦-೧೬)

ಸ್ಕಂದಸ್ವಾಮಿಯು ಬೇರೊಂದು ಇತಿಹಾಸವನ್ನು ಹೇಳಿರುವರು—ಪೂರ್ವದಲ್ಲಿ ಕಾಲಕಂಜರರೆಂಬ ಅಸುರರಿದ್ದರು. ಅವರು ಪ್ರಬಲರಾಗಿ ದೇವತೆಗಳನ್ನು ಕೊಲ್ಲುತ್ತಾ ತುಂಬಾ ತೊಂದರೆ ಕೊಡುತ್ತಿದ್ದರು. ಆಗ ದೇವತೆಗಳು ಬ್ರಹ್ಮನ ಸಮೀಪಕ್ಕೆ ಹೋಗಿ ಈ ಅಸುರರನ್ನು ಸಂಹಾರಮಾಡಲು ಉಪಾಯವನ್ನು ತಿಳಿಸಬೇಕೆಂದು ಪ್ರಾರ್ಥಿಸಲು, ಬ್ರಹ್ಮನು—ಎಲೈ ದೇವತೆಗಳಿರಾ, ದಧ್ಯಙ್ ಎಂಬ ಋಷಿಯು ಇರುವನು. ನೀವು ಅವನ ಸಮೀಪಕ್ಕೆ ಹೋಗಿರಿ. ಅವನು ಅಸುರರ ಸಂಹಾರ ವಿಷಯದಲ್ಲಿ ತಕ್ಕ ಉಪಾಯವನ್ನು ತಿಳಿಸುವನು ಎಂದನು. ದೇವತೆಗಳು ಬ್ರಹ್ಮನ ಮಾತಿನಂತೆ ದಧೀಚಿಋಷಿಯ ಸಮೀಪಕ್ಕೆ ಹೋಗಿ ಬ್ರಹ್ಮನು ತಮ್ಮನ್ನು ಕಳುಹಿಸಿರುವನೆಂದು ಅರಿಕೆಮಾಡಿದರು. ಆ ಋಷಿಯು ಯೋಗದೃಷ್ಟಿಯಿಂದ ಇವರು ಬಂದ ಕಾರ್ಯವನ್ನು ತಿಳಿದು ಯೋಗಸಮಾಧಿಯಿಂದ ತನ್ನ ಪ್ರಾಣಗಳನ್ನು ವಿಸರ್ಜಿಸಿದನು. ಆಗ ಆ ಋಷಿಯ ಮೂಳೆಗಳಿಂದ ಇಂದ್ರನು ಅಸುರರನ್ನು ಸಂಹಾರ ಮಾಡಿದನು. ಈ ವಿಷಯವೇ ಈ ಋಕ್ಕಿನಲ್ಲಿ ವಿವರಿಸಲ್ಪಟ್ಟಿರುವುದೆಂದು ಸ್ಕಂದಸ್ವಾಮಿಯು ಹೇಳಿರುವರು. (ಋ. ಸಂ. ೧-೮೦-೧೬)

ದಧೀಚಿಋಷಿಯ ತಲೆಯು ಕುದುರೆಯ ತಲೆಯು ಹಾಗಿದ್ದಿತೆಂದೂ, ಅದು ಅಶ್ವಿನೀದೇವತೆಗಳಿಂದ ಅವನಿಗೆ ಕೊಡಲ್ಪಟ್ಟಿದ್ದಿತೆಂದೂ ಪ್ರತೀತಿ ಇರುವುದು. ದಧೀಚಿಋಷಿಯು ಮೃತನಾದ ಮೇಲೆ ಕುದುರೆ ತಲೆಯಂತಿದ್ದ ಅವನ ಶಿರಸ್ಸನ್ನು ಇಂದ್ರನು ಹುಡುಕಿದನು. ಅದು ಒಂದು ಪರ್ವತದ ಮರೆಯಲ್ಲಿ ಶರ್ಯಣಾವತಿಯೆಂಬ ಸರೋವರದಲ್ಲಿ ಸಿಕ್ಕಿತೆಂದು ಋ. ಸಂ. ೧-೮೪-೧೩ ರಲ್ಲಿ ವಿವರಿಸಲಾಗಿರುವುದು.

ದಧೀಚಿಋಷಿಗೆ ಕುದುರೆಯ ಶಿರಸ್ಸು ಹೇಗೆ ಬಂದಿತೆಂಬ ವಿಚಾರದಲ್ಲಿ ಸ್ಕಂದಸ್ವಾಮಿಯು ಒಂದು ಪೂರ್ವೇತಿಹಾಸವನ್ನು ಹೇಳಿರುವರು. ಅಥರ್ವಣ ಪುತ್ರನಾದ ದಧೀಚಿಋಷಿಗೆ ಇಂದ್ರನು ಮಧುವೆಂಬ ಪರಬ್ರಹ್ಮನ ಸ್ವರೂಪವನ್ನು ಉಪದೇಶಮಾಡಿ, ಇದನ್ನು ಯಾರಿಗೂ ಹೇಳಕೂಡದೆಂದೂ, ಹಾಗೆ ಒಂದುವೇಳೆ ಹೇಳಿದರೆ ನಿನ್ನ ತಲೆಯು ಬಿದ್ದುಹೋಗುವುದೆಂದೂ ಹೇಳಿದ್ದನು. ಕೆಲವುಕಾಲದ ಮೇಲೆ ಅಶ್ವಿನೀದೇವತೆಗಳು ಆ ದಧೀಚಿಋಷಿಯ ಸಮೀಪಕ್ಕೆ ಬಂದು, ಇಂದ್ರನು ನಿನಗೆ ತಿಳಿಸಿದ ಬ್ರಹ್ಮಸ್ವರೂಪವನ್ನು ವಿವರಿಸೆನಲು, ದಧೀಚಿಋಷಿಯು ಅವರನ್ನು ಕುರಿತು ಈ ವಿಷಯವನ್ನು ನಾನು ನಿಮಗೆ ತಿಳಿಸಿದಲ್ಲಿ ನನ್ನ ತಲೆಯು ಬಿದ್ದುಹೋಗುವುದೆಂದು ಇಂದ್ರನು ಹೇಳಿರುವನು. ಆ ಭಯದಿಂದ ನಾನು ಹೇಳುವುದಿಲ್ಲವೆನ್ನಲು, ಅಶ್ವಿನೀದೇವತೆಗಳು ಅದಕ್ಕಾಗಿ ಚಿಂತಿಸಬೇಡ, ನಿನ್ನ ತಲೆಯು ಬಿದ್ದುಹೋದರೆ ಬೇರೆ ತಲೆಯನ್ನು ನಿನಗೆ ಕೊಡುವುವೆಂದರು. ದಧೀಚಿಯು ಅದಕ್ಕೆ ಸಮ್ಮತಿಸಿ ಹೇಳಿದನು. ಅದರಿಂದ ದಧೀಚಿಋಷಿಯ ಶಿರಸ್ಸು ಬಿದ್ದುಹೋಗಲು, ಅಶ್ವಿನೀದೇವತೆಗಳು ಒಂದು ಕುದುರೆಯ ಶಿರಸ್ಸನ್ನು ಕತ್ತರಿಸಿ ತಂದು

ದಧೀಚಿಋಷಿಯ ಶರೀರಕ್ಕೆ ಸೇರಿಸಿದರು. ಅದರಿಂದ ದಧೀಚಿಋಷಿಯ ಶಿರಸ್ಸು ಕುದುರೆಯ ಶಿರಸ್ಸಿನಂತಿರುವುದು ಎಂದು ಹಿಂದೆಯೇ ವರ್ಣಿತವಾಗಿದೆ. ಈ ವಿಷಯವನ್ನು ಕಕ್ಷೀವಾನ್ ಎಂಬ ಋಷಿಯು ಋ. ಸಂ. ೧-೧೧೬-೧೨ ಮತ್ತು ೧-೧೧೭-೨೨ ಋಕ್ಕುಗಳಲ್ಲಿ ವರ್ಣಿಸಿರುವನು.

ಈ ಋಷಿಯ ಹೆಸರು ಋಗ್ವೇದಸಂಹಿತೆಯಲ್ಲಿ ೧-೮೦-೧೬ ; ೧-೮೪-೧೩ , ೧-೮೪-೧೪ ; ೧-೧೧೬-೧೨; ೧-೧೧೭-೨೨ ; ೧-೧೩೯-೯ ಮೊದಲಾದ ಋಕ್ಕುಗಳಲ್ಲಿಯೂ- ತೈತ್ತಿರೀಯಸಂಹಿತಾ ೫-೧-೪-೪ ; ೫-೬-೬-೩ ಕಾಠಕಸಂಹಿತಾ ೧೯-೪ , ಶತಪಥಬ್ರಾಹ್ಮಣ ೪-೧-೫-೧೮ ; ೬-೪-೨-೩ ; ೧೪-೧-೧-೧೮ ; ೧೪-೧-೧-೨೦ ; ೧೪-೧-೧-೨೫ ; ೧೪-೧-೪-೧೩ ; ಬೃಹದಾರಣ್ಯಕೋಪನಿಷತ್ ೨-೫-೨೨ ; ೪-೫-೨೮ ಮೊದಲಾದ ಸ್ಥಳಗಳಲ್ಲಿ ಪಠಿತವಾಗಿದೆ.

Wilson ಎಂಬ ಪಾಶ್ಚಾತ್ಯ ಪಂಡಿತನು ಈ ವಿಷಯದಲ್ಲಿ ಈ ರೀತಿ ಬರೆಯುತ್ತಾನೆ—

We have here rather obscure allusions to a legend which was probably afterwards modified by the Puranas in which the name also occurs as Dadhicha. In the Mahabharata, Vana Parva, Vol. I, it is merely related, that the gods, being oppressed by the kalakeya Asuras, solicited from the sage Dadhicha his bones, which he gave them, and from which Twashtri fabricated the thundetholt with which Indra slew Vritra and routed the Asuras. The legend of the text differs from this: Indra—having taught the sciences called Pravargya vidya and Madhu-vidya to Dadhyanch, threatened that he would cut off his head if ever he taught them to any one else . the Aswins prevailed upon him, nevertheless, to teach them the prohibited knowledge, and, to evade Indra's threat, took off the head of the sage, replacing it by that of a horse: Indra, apprized of Dadhyanch's breach of faith, struck off his equine head with the thunderbolt: on which the Aswins restored to him his own. The Pravargya vidya is said to imply certain verses of the Rik, Yajur, and Sama Vedas, and the Madhu-vidya the Brahmana.

॥ ಸಂಹಿತಾಪಾಠಃ ॥

ಅತ್ಯಾಯಾತಮಶ್ವಿನಾ ತಿರೋ ವಿಶ್ವಾ ಅಹಂ ಸನಾ ।

ದಸ್ರಾ ಹಿರಣ್ಯವರ್ತನೀ ಸುಷುಮ್ನಾ ಸಿಂಧುವಾಹಸಾ ಮಾಧ್ವೀ ಮಮ

ಶ್ರುತಂ ಹವಂ ॥ ೭ ॥

॥ ಪದಪಾಠಃ ॥

ಅತಿಽಅಯಾತಂ । ಅಶ್ವಿನಾ । ತಿರಃ । ವಿಶ್ವಾಃ । ಅಹಂ । ಸನಾ ।

ದಸ್ರಾ । ಹಿರಣ್ಯವರ್ತನೀ ಇತಿ ಹಿರಣ್ಯಽವರ್ತನೀ । ಸುಽಸುಮ್ನಾ । ಸಿಂಧುಽವಾಹಸಾ । ಮಾಧ್ವೀ ಇತಿ ।

ಮಮ । ಶ್ರುತಂ । ಹವಂ ॥ ೨ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾ ಅತ್ಯಾಯಾತಂ । ಸರ್ವಾನ್ಯಜಮಾನಾನತಿಕ್ರಮ್ಯಾಗಚ್ಛತಂ । ಯಥಾಹಮೃಷಿರ್ವಿಶ್ವಾಃ ಸರ್ವಾ ಅಸ್ಮದ್ವಿರೋಧಿಪ್ರಜಾಃ ಸನಾ ಸದಾ ತಿರಸ್ಕರೋಮಿ । ಅಥವಾಹಂ ತಿರಃ । ತಿರಃ ಸತ ಇತಿ ಪ್ರಾಪ್ತಸ್ಯೇತಿ ನಿರುಕ್ತಂ । ೩-೨೦ । ಪ್ರಾಪ್ತಾ ವಿಶ್ವಾಃ ಸರ್ವಾಃ ಕ್ರಿಯಾ ಯುಷ್ಮದೀಯಾ ಅನುತಿಷ್ಠೇಯಮಿತ್ಯರ್ಥಃ । ಸನಾ ಸನಾತನೌ ದಸ್ರಾ ಶತ್ರೂಣಾಮುಪಕ್ಷಪಯಿತಾರೌ ಹಿರಣ್ಯವರ್ತನೀ ಹಿರಣ್ಯರಥೌ ಸುಷುಮ್ನಾ ಸುಧನೌ ಸಿಂಧುವಾಹಸಾ ನದೀನಾಂ ಪ್ರವಾಹಯಿತಾರೌ ವೃಷ್ಟಿಪ್ರೇರಣೇನ । ತಾದೃಶೌ ಯುವಾಮತ್ಯಾಯಾತಂ ॥

॥ ಪ್ರತಿಪದಾರ್ಥ ॥

**ದಸ್ರಾ**—ಶತ್ರುನಾಶಕರೂ । **ಹಿರಣ್ಯವರ್ತನೀ**—ಸುವರ್ಣನಿರ್ಮಿತವಾದ ರಥವುಳ್ಳವರೂ। **ಸುಷುಮ್ನಾ**–ಉತ್ತಮವಾದ ಧನವುಳ್ಳವರೂ । **ಸಿಂಧುವಾಹಸಾ**—ನದಿಗಳ ಪ್ರವಾಹಕ್ಕೆ ಪ್ರೇರಕರೂ ಆದ । **ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ಅತ್ಯಾಯಾತಂ**— ಉಳಿದ ಎಲ್ಲ ಯಜಮಾನರನ್ನೂ ಬಿಟ್ಟು ನನ್ನಲ್ಲಿಗೇ ದಯಮಾಡಿರಿ । **ಅಹಂ**—ನಾನು । **ಸನಾ**—ಯಾವಾಗಲೂ । **ವಿಶ್ವಾಃ**—ಸಮಸ್ತ ವಿರೋಧಿಗಳನ್ನೂ । **ತಿರಃ**—ತಿರಸ್ಕರಿಸಿ । (ಅವಹೇಳನ ಮಾಡುವಂತೆ ಸಹಾಯಮಾಡಿರಿ) **ಮಾಧ್ವೀ**—ಮಧುವಿದ್ಯಾಪಾರಂಗತರಾದ ಅಶ್ವಿನಿಗಳೇ । **ಮಮ**—ನನ್ನ । **ಹವಂ**—ಸ್ತೋತ್ರವನ್ನು (ಆಹ್ವಾನವನ್ನು) । **ಶ್ರುತಂ**— ಕೇಳಿರಿ.

॥ ಭಾವಾರ್ಥ ॥

ಶತ್ರುನಾಶಕರೂ, ಸುವರ್ಣನಿರ್ಮಿತವಾದ ರಥವುಳ್ಳವರೂ, ಉತ್ತಮವಾದ ಧನವುಳ್ಳವರೂ, ನದಿಗಳ ಪ್ರವಾಹಕ್ಕೆ ಪ್ರೇರಕರೂ ಆದ ಅಶ್ವಿನೀದೇವತೆಗಳೇ, ಉಳಿದ ಎಲ್ಲಾ ಯಜಮಾನರನ್ನೂ ಬಿಟ್ಟು ನನ್ನಲ್ಲಿಗೇ ದಯಮಾಡಿರಿ. ನಾನು ಯಾವಾಗಲೂ ಸಮಸ್ತ ವಿರೋಧಿಗಳನ್ನೂ ತಿರಸ್ಕರಿಸಿ ದೂರಮಾಡುವಂತೆ ಸಹಾಯಮಾಡಿರಿ. ಮಧುವಿದ್ಯಾ ಪಾರಂಗತರಾದ ಅಶ್ವಿನಿಗಳೇ, ನನ್ನ ಸ್ತೋತ್ರವನ್ನು ಕೇಳಿರಿ

## English Translation.

Passing by (other worshippers), come, Aswins, hither, so that I may ever overcome all (adversaries): Dasras, riding in a golden chariot,

distributors of wealth, propellers of rivers, masters of mystic lore, hear my invocation.

—o—

॥ ಸಂಹಿತಾಪಾಠಃ ॥

ಆ ನೋ ರತ್ನಾನಿ ಬಿಭ್ರತಾವಶ್ವಿನಾ ಗಚ್ಛತಂ ಯುವಂ ।
ರುದ್ರಾ ಹಿರಣ್ಯವರ್ತನೀ ಜುಷಾಣಾ ವಾಜಿನೀವಸೂ ಮಾಧ್ವೀ ಮಮ-
ಶ್ರುತಂ ಹವಂ ॥ ೩ ॥

॥ ಪದಪಾಠಃ ॥

ಆ । ನಃ । ರತ್ನಾನಿ । ಬಿಭ್ರತೌ । ಅಶ್ವಿನಾ । ಗಚ್ಛತಂ । ಯುವಂ ।
ರುದ್ರಾ । ಹಿರಣ್ಯವರ್ತನೀ ಇತಿ ಹಿರಣ್ಯऽವರ್ತನೀ । ಜುಷಾಣಾ । ವಾಜಿನೀವಸೂ ಇತಿ ವಾಜಿನೀऽವಸೂ ।
ಮಾಧ್ವೀ ಇತಿ । ಮಮ । ಶ್ರುತಂ । ಹವಂ ॥ ೩ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾ ನೋಽಸ್ಮಭ್ಯಂ ರತ್ನಾನಿ ರಮಣೀಯಾನಿ ಧನಾನಿ ಬಿಭ್ರತೌ ಧಾರಯಂತೌ ಯುವಂ ಯುವಾಂ ನೋಽಸ್ಮಾನ್ಪ್ರಾ ಆ ಗಚ್ಛತಂ । ಹೇ ರುದ್ರಾ ರುದ್ರಪುತ್ರೌ ಸ್ತುತ್ಯೌ ವಾ ಹೇ ವಾಜಿನೀವಸೂ ವಾಜಿನಧನೌ ಯುವಾಂ ಹಿರಣ್ಯವರ್ತನೀ ಹಿರಣ್ಯರಥೌ ಜುಷಾಣಾ ಯಜ್ಞಂ ಸೇವಮಾನೌ ಸಂತಾವಾ ಗಚ್ಛತಮಿತಿ । ಮಾಧ್ವೀ ಇತ್ಯಾದಿ ಗತಂ ॥

। ಪ್ರತಿಪದಾರ್ಥ ।

**ರುದ್ರಾ**—ರುದ್ರಪುತ್ರರೂ । **ಹಿರಣ್ಯವರ್ತನೀ**—ಸುವರ್ಣನಿರ್ಮಿತವಾದ ರಥವುಳ್ಳವರೂ । **ಜುಷಾಣಾ**—ಯಜ್ಞವನ್ನು ಸೇವಿಸುವವರೂ । **ವಾಜಿನೀವಸೂ**—ಅನ್ನಸಂಪದ್ಯುಕ್ತರೂ ಆದ । **ಅಶ್ವಿನಾ**—ಎಲೈ ಅಶ್ವಿನೀ ದೇವತೆಗಳೇ । **ಯುವಂ**—ನೀವು । **ನಃ**—ನಮಗೋಸ್ಕರ । **ರತ್ನಾನಿ**—ರತ್ನಗಳನ್ನು । **ಬಿಭ್ರತೌ**—ಹೊಂದಿದವರಾಗಿ । **ಆ ಗಚ್ಛತಂ**—ನಮ್ಮಲ್ಲಿಗೆ ದಯಮಾಡಿರಿ । **ಮಾಧ್ವೀ**—ಮಧುವಿದ್ಯಾಪಾರಂಗತರಾದ ಎಲೈ ಅಶ್ವಿನೀ ದೇವತೆಗಳೇ । **ಮಮ**—ನನ್ನ । **ಹವಂ**—ಸ್ತುತಿಯನ್ನು (ಆಹ್ವಾನವನ್ನು) । **ಶ್ರುತಂ**—ಕೇಳಿರಿ.

|| ಭಾವಾರ್ಥ ||

ರುದ್ರಪುತ್ರರೂ, ಸುವರ್ಣನಿರ್ಮಿತವಾದ ರಥವುಳ್ಳವರೂ, ಯಜ್ಞವನ್ನು ಸೇವಿಸುವವರೂ, ಅನ್ನಸಂಪದ್ಯುಕ್ತರೂ ಆದ ಎಲೈ ಅಶ್ವಿನೀದೇವತೆಗಳೇ, ನಮಗೋಸ್ಕರ ರಮಣೀಯವಾದ ಧನಗಳನ್ನು ಹೊಂದಿದವರಾಗಿ ನಮ್ಮಲ್ಲಿಗೆ ದಯಮಾಡಿರಿ. ಮಧುವಿದ್ಯಾಪಾರಂಗತರಾದ ಅಶ್ವಿನೀದೇವತೆಗಳೇ, ನನ್ನ ಸ್ತುತಿಯನ್ನು ಕೇಳಿರಿ.

## English Translation.

Come, Aswins, bring for us precious treasures: Rudras, riding in a golden chariot, propitiated (by sacrifice), affluent with food, masters of mystic lore, hear my invocation.

|| ವಿಶೇಷವಿಷಯಗಳು ||

ರುದ್ರಾ—ಅಶ್ವಿನೀದೇವತೆಗಳು ಹೇಗೆ ರುದ್ರಪುತ್ರರೆಂಬ ವಿಷಯವನ್ನು ಭಾಷ್ಯಕಾರರು ವಿವರಿಸಿಲ್ಲ.

|| ಸಂಹಿತಾಪಾಠಃ ||

ಸುಷ್ಟುಭೋ ವಾಂ ವೃಷಣ್ವಸೂ ರಥೇ ವಾಣೀಚ್ಯಾಹಿತಾ ।
ಉತ ವಾಂ ಕಕುಹೋ ಮೃಗಃ ಪೃಕ್ಷಃ ಕೃಣೋತಿ ವಾಪುಷೋ ಮಾಧ್ವೀ
ಮಮ ಶ್ರುತಂ ಹವಂ ॥೪॥

|| ಪದಪಾಠಃ ||

ಸುಽಸ್ತುಭಃ । ವಾಂ । ವೃಷಣ್ವಸೂ ಇತಿ ವೃಷಣ್ಽವಸೂ । ರಥೇ । ವಾಣೀಚೀ । ಆಽಹಿತಾ ।
ಉತ । ವಾಂ । ಕಕುಹಃ । ಮೃಗಃ । ಪೃಕ್ಷಃ । ಕೃಣೋತಿ । ವಾಪುಷಃ । ಮಾಧ್ವೀ ಇತಿ । ಮಮ । ಶ್ರುತಂ ।
ಹವಂ ॥ ೪ ॥

|| ಸಾಯಣಭಾಷ್ಯಂ ||

ಹೇ ವೃಷಣ್ವಸೂ ವರ್ಷಧನೌ ವರ್ಷಿತಾರೌ ವಾ ವಸೂನಾಂ ಹೇ ಅಶ್ವಿನೌ ಸುಷ್ಟುಭಃ ಸುಸ್ತೋತುರ್ಮಮ ವಾಣೀಚೀ ವಾಗ್ರೂಪಾ ಸ್ತುತಿರ್ವಾಂ ಯುವಯೋಃ ರಥ ಆಹಿತಾ । ಸ್ಥಾಪಿತಾ । ಅಸ್ಮಾಭಿಃ ಕೃತೇತ್ಯರ್ಥಃ । ಉತಾಪಿ ಚ ವಾಂ ಯುವಾಭ್ಯಾಂ ಕಕುಹೋ ಮಹಾನ್ ಮೃಗೋಽಮೃಗಯಿತಾ ವಾಪುಷೋ ವಪುಷ್ಮಾನ್ಯಜಮಾನಃ ಪೃಕ್ಷೋಽನ್ನಂ ಹವಿಃ ಕೃಣೋತಿ । ಕರೋತಿ । ತಸ್ಮಾನ್ಮಮ ಹವಂ ಶ್ರುತಮಿತಿ ॥

|| ಪ್ರತಿಪದಾರ್ಥ ||

**ವೃಷಣ್ವಸೂ**—ಧನಗಳನ್ನು ಒದಗಿಸುವ ಎಲೈ ಅಶ್ವಿನೀ ದೇವತೆಗಳೇ| **ಸುಷ್ಟುಭಃ**—ಉತ್ತಮವಾದ ಸ್ತುತಿಕರ್ತನಾದ ನನ್ನ | **ವಾಣೀಚೀ**—ಸ್ತುತಿಯು | **ವಾಂ**—ನಿಮ್ಮ | **ರಥೇ**—ರಥವನ್ನುದ್ದೇಶಿಸಿ | **ಆಹಿತಾ**—ನಿರ್ಮಿತವೂ ಪಠಿತವೂ ಆಗಿದೆ | **ಉತ**—ಮತ್ತು | **ವಾಂ**—ನಿಮ್ಮನ್ನು | **ಮೃಗಃ**—ಅರಸುವವನೂ | **ಕಕುಹಂ**—ವಿಶೇಷಗುಣವುಳ್ಳವನೂ | **ವಾಪುಷಃ**—ಮಾನವ ಶರೀರವುಳ್ಳವನೂ ಆದ ಯಜಮಾನನು | **ಪೃಕ್ಷಃ**—ಹವಿಸ್ಸನ್ನು | **ಕೃಣೋತಿ**—ಅರ್ಪಿಸುತ್ತಾನೆ | **ಮಾಧ್ವೀ**—ಮಧುವಿದ್ಯಾಸಂಪನ್ನರಾದ ಅಶ್ವಿನೀದೇವತೆಗಳೇ | **ಮಮ**—ನನ್ನ | **ಹವಂ**—ಆಹ್ವಾನವನ್ನು | **ಶ್ರುತಂ**—ಕೇಳಿರಿ.

|| ಭಾವಾರ್ಥ ||

ಧನಗಳನ್ನು ಒದಗಿಸುವ ಎಲೈ ಅಶ್ವಿನೀ ದೇವತೆಗಳೇ, ಉತ್ತಮವಾದ ಸ್ತುತಿಕರ್ತನಾದ ನನ್ನ ಸ್ತುತಿಯು ನಿಮ್ಮ ರಥವನ್ನುದ್ದೇಶಿಸಿ ನಿರ್ಮಿತವೂ ಪಠಿತವೂ ಆಗಿದೆ. ಮತ್ತು ನಿಮ್ಮನ್ನೇ ಅರಸುವವನೂ, ವಿಶೇಷ ಗುಣವುಳ್ಳವನೂ ಮಾನವ ಶರೀರವುಳ್ಳವನೂ ಆದ ಯಜಮಾನನು ಹವಿಸ್ಸನ್ನರ್ಪಿಸುತ್ತಾನೆ. ಮಧುವಿದ್ಯಾಸಂಪನ್ನರಾದ ಎಲೈ ಅಶ್ವಿನೀ ದೇವತೆಗಳೇ, ನನ್ನ ಸ್ತುತಿರೂಪವಾದ ಆಹ್ವಾನವನ್ನು ಕೇಳಿರಿ

## English Translation.

Showerers of wealth, the praise of your worshipper is addressed to your chariot; (to it), as well as to you, does this distinguished, devoted, embodied (adorer) offer sacrificial food: masters of mystic lore, hear my invocation.

|| ಸಂಹಿತಾಪಾಠಃ ||

ಬೋಧಿನ್ಮನಸಾ ರಥ್ಯೇಷಿರಾ ಹವನಶ್ರುತಾ |
ವಿಭಿಶ್ಚ್ಯವಾನಮಶ್ವಿನಾ ನಿ ಯಾಥೋ ಅದ್ವಯಾವಿನಂ ಮಾಧ್ವೀ ಮಮ
ಶ್ರುತಂ ಹವಂ ||೫||

|| ಪದಪಾಠಃ ||

ಬೋಧಿತ್ऽಮನಸಾ | ರಥ್ಯಾ | ಇಷಿರಾ | ಹವನ್ऽಶ್ರುತಾ |
ವಿऽಭಿಃ | ಚ್ಯವಾನಂ | ಅಶ್ವಿನಾ | ನಿ | ಯಾಥಃ | ಅದ್ವಯಾವಿನಂ | ಮಾಧ್ವೀ ಇತಿ | ಮಮ | ಶ್ರುತಂ |
ಹವಂ ||೫||

॥ ಸಾಯಣಭಾಷ್ಯಂ ॥

**ಹೇ ಅಶ್ವಿನಾ ಬೋಧಿನ್ಮನಸಾ ಬುಧ್ಯಮಾನಮನಸ್ಕೌ ರಥ್ಯಾ ರಥಸ್ವಾಮಿನಾವಿಷಿರಾ ಶೀಘ್ರಗಂತಾರೌ ಸರ್ವೈರ್ಗಂತವ್ಯೌ ವಾ ಹವನಶ್ರುತಾ ಹವನಸ್ಯ ಸ್ತುತೇಃ ಶ್ರೋತಾರೌ ಯುವಾಂ ವಿಭಿರಶ್ವೈಶ್ಚ್ಯವಾನಮೃಷಿಮದ್ವಯಾವಿನಂ ಮಾಯಾರಹಿತಂ ನಿ ಯಾಥಃ । ಯಥಾ ತಮೃಷಿಂ ಪ್ರಾಪ್ತವಂತೌ ತದ್ವನ್ಮಾಂ ಪ್ರತಿ ಪಥಿ ನಿ ಯಾಥಃ । ನಿತರಾಮಾಗಚ್ಛತಂ । ಪ್ರ ಚ್ಯವಾನಾಜ್ಜುಜುರುಷೋ ವವ್ರಿಂ । ಋಗ್ವೇ. ೫-೭೪-೫ ಇತಿ ಹ್ಯುಕ್ತಂ ॥**

॥ ಪ್ರತಿಪದಾರ್ಥ ॥

**ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ಬೋಧಿನ್ಮನಸಾ**—ನಮ್ಮ ಸ್ತುತಿಯನ್ನು ಅರಿಯತಕ್ಕ ಮನಸ್ಸುಳ್ಳವರಾಗಿಯೂ । **ರಥ್ಯಾ**—ರಥದ ಸ್ವಾಮಿಗಳಾಗಿಯೂ । **ಇಷಿರಾ**—ಶೀಘ್ರಗಾಮಿಗಳಾಗಿಯೂ । **ಹವನಶ್ರುತಾ**—ನಮ್ಮ ಆಹ್ವಾನವನ್ನು ಕೇಳುವವರಾಗಿಯೂ । **ವಿಭಿಃ**—ನಿಮ್ಮ ಅಶ್ವಗಳೊಡನೆ । **ಅದ್ವಯಾವಿನಂ**—ಅನನ್ಯಮನಸ್ಕನಾಗಿ ನಿಮ್ಮನ್ನೇ ಧ್ಯಾನಿಸುತ್ತಿದ್ದ । **ಚ್ಯವಾನಂ**—ಚ್ಯವಾನಋಷಿಯಲ್ಲಿಗೆ । **ನಿ ಯಾಥಃ**—ಹೊರಟಿರಿ । **ಮಾಧ್ವೀ**—ಮಧುವಿದ್ಯಾವಿಶಾರದರಾದ ಅಶ್ವಿನೀದೇವತೆಗಳೇ । **ಮಮ**—ನನ್ನ । **ಹವಂ**—ಆಹ್ವಾನವನ್ನು । **ಶ್ರುತಂ**—ಕೇಳಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನಮ್ಮ ಸ್ತುತಿಯನ್ನು ಅರಿಯತಕ್ಕ ಮನಸ್ಸುಳ್ಳವರಾಗಿಯೂ, ರಥಕ್ಕೆ ಸ್ವಾಮಿಗಳಾಗಿಯೂ, ಶೀಘ್ರಗಾಮಿಗಳಾಗಿಯೂ, ನಮ್ಮ ಆಹ್ವಾನವನ್ನು ಕೇಳುವವರಾಗಿಯೂ, ನಿಮ್ಮ ಅಶ್ವಗಳೊಡನೆ ಅನನ್ಯಮನಸ್ಕನಾಗಿ ನಿಮ್ಮನ್ನೇ ಧ್ಯಾನಿಸುತ್ತಿದ್ದ ಚ್ಯವನಋಷಿಯಲ್ಲಿಗೆ ಹೊರಟಿರಿ. ಮಧುವಿದ್ಯಾವಿಶಾರದರಾದ ಎಲೈ ಅಶ್ವಿನೀದೇವತೆಗಳೇ, ನನ್ನ ಆಹ್ವಾನವನ್ನು ಕೇಳಿರಿ.

## English Translation.

With mind attentive (to praise), riding in cars, swif-tmoving, listening to invocations, you hastened with your steeds to the single-purposed Chyavana : masters of mystic lore, hear my invocation.

॥ ವಿಶೇಷವಿಷಯಗಳು ॥

ಚ್ಯವನನೆಂಬ ಋಷಿಯು ಮುದುಕನಾಗಿದ್ದನು. ಅವನ ಶರೀರವು ನರೆತಕೂದಲು ಮತ್ತು ಸುಕ್ಕುಹಿಡಿದಿರುವ ಶರೀರ ಇವೇ ಮೊದಲಾದ ಮುಪ್ಪಿನ ಲಕ್ಷಣದಿಂದ ತುಂಬಿತ್ತು. ಇದರಿಂದ ಈ ಋಷಿಯ ಪುತ್ರರೇ ಮೊದಲಾದವರು ಇವನನ್ನು ತ್ಯಾಗಮಾಡಿದ್ದರು. ಆಗ ಚ್ಯವನಋಷಿಯು ಅಶ್ವಿನೀದೇವತೆಗಳನ್ನು ಸ್ತೋತ್ರಮಾಡಿ ಅವರನ್ನು ಮೆಚ್ಚಿಸಿ ಅವರಿಂದ ತನ್ನ ಮುಪ್ಪನ್ನು ಕಳೆದುಕೊಂಡು ಯೌವನವನ್ನು ಹೊಂದಿದನು ಎಂಬ ಇತಿಹಾಸವು ಇಲ್ಲಿ ಈ ಋಕ್ಕಿನಿಂದ ಹೇಳಲ್ಪಟ್ಟಿರುತ್ತದೆ. ಸ್ಕಂದಸ್ವಾಮಿಗಳು ಈ ಇತಿಹಾಸವನ್ನು ಬೇರೆಯ ವಿಧವಾಗಿ ಹೇಳಿರುವರು. ಈ ಇತಿಹಾಸವು ಶತಪಥಬ್ರಾಹ್ಮಣದಲ್ಲಿ ದೃಷ್ಟವಾಗಿರುವುದು.

ಅತ್ರ ಶತಪಥೇ—(ಶ. ಬ್ರಾ. ೪-೧-೫) ಅಧೀತಮಿತಿಹಾಸಮಾಚಕ್ಷತೇ । ಶರ್ಯಾತೋ ನಾಮ ರಾಜಾ ಸಂಕ್ರೀಡದ್ಭಿಃ ಕೃತಾಪರಾಧಾಯ ಕುಪಿತಾಯ ಜೀರ್ಣಾಯ ಚ್ಯವನಾಯ ಪ್ರತ್ಯಾಪತ್ತ್ಯರ್ಥಂ ಸುಕನ್ಯಾಂ ನಾಮ ಕನ್ಯಕಾಂ ದುಹಿತರಂ ದದೌ । ತಾಂ ತತ್ರಾಸೀನಾಂ ದೃಷ್ಟ್ವಾ ಅಶ್ವಿನೌ ಪುನಃ ಪುನರೂಚತುಃ । ಕಿಂ ಕಿಂ ಜೀರ್ಣೇಽಕೃತರೂಪಂ ಕಾಮಯಸೇ । ಆವಾಂ ಸಂಭಜೇತಿ । ಸಾ ತೌ ಪ್ರತ್ಯುವಾಚ । ಯಸ್ಮೈ ಮಾಂ ಪಿತಾ ಅದಾತ್ ನಾಹಂ ತಂ ಜೀವಂತಂ ಹಾಸ್ಯಾಮೀತಿ । ತದೃಷಿರ್ಜ್ಞಾತ್ವಾ ಸುಕನ್ಯಾಮುವಾಚ । ಯದಿ ತ್ವಾಮೇತೌ ಪುನರೇವಂ ಬ್ರೂಯಾತಾಂ ತತಸ್ತ್ವಮೇನೌ ಪ್ರತಿಬ್ರೂಯಾಃ । ಅಸರ್ವೌ ವಸುಸಮೃದ್ಧೌ ಸಂತೌ ಪತಿಂ ಮೇ ನಿಂದಥ ಇತಿ। ತೌ ಯದಿ ತ್ವಾಂ ಪ್ರತಿಬ್ರೂಯಾತಾಂ ಕೇನಾಸರ್ವೌ ವಸುಸಮೃದ್ಧಾ ಚೇತಿ ತತ ಏನೌ ಪ್ರತಿಬ್ರೂಯಾಃ ಪತಿಂ ಮೇ ಪುನಃ ಯುವಾನಂ ಕುರುತಂ । ಅಥ ವಾಂ ವಕ್ಷ್ಯಾಮೀತಿ । ಸಾ ತೌ ತಥೋವಾಚ । ತಾಮಶ್ವಿನೌ ಪ್ರತ್ಯೂಚತುಃ ಏತಂ ಹ್ರದಮವಕರತು ಅತೋ ಯತ್ ಕಾಮಯತೇ ತೇನ ವಯಸಾ ಯುಕ್ತ ಉತ್ತರಿಷ್ಯತೀತಿ । ಸ ಋಷಿಸ್ತಂ ಹ್ರದಮವತೀರ್ಯೋತ್ತತಾರ ಯುವಾಭೂತ್ವೇತಿ । ತದೇತದಿತಿಹಾಸೇನೋಚ್ಯತೇ ಜುಜುರುಷೋ ನಾಸತ್ಯೇತ್ಯಾದಿನಾ ॥

(ಶ. ಬ್ರಾ. ೪-೧-೫)

ಶರ್ಯಾತಿ ಎಂಬ ರಾಜನು ತನ್ನ ಪುತ್ರಿಯರು ಆಟವಾಡುತ್ತಿರುವುದರಿಂದ ಕೋಪಗೊಂಡು ಮುದುಕನಾದ ಚ್ಯವನಋಷಿಗೆ ಸುಕನ್ಯಾ ಎಂಬ ತನ್ನ ಪುತ್ರಿಯನ್ನು ಕೊಟ್ಟು ವಿವಾಹಮಾಡಿದನು. ಆ ಸುಕನ್ಯೆಯು ಚ್ಯವನಋಷಿಯ ಆಶ್ರಮದಲ್ಲಿದ್ದಾಗ ಅಲ್ಲಿಗೆ ಅಶ್ವಿನೀದೇವತೆಗಳು ಬಂದು ನೀನು (ಈ ಮುದುಕನನ್ನು) ಈ ಮುದಿಗಂಡನನ್ನು ತ್ಯಜಿಸಿ ನಮ್ಮನ್ನು ವಿವಾಹಮಾಡಿಕೋ ಎಂದು ಅನೇಕಸಾರಿ ಹೇಳಲು ಅದಕ್ಕೆ ಅವಳು—ನಮ್ಮ ತಂದೆಯು ನನ್ನನ್ನು ಈ ಋಷಿಗೆ ದಾನಮಾಡಿದನು. ನನ್ನನ್ನು ಮದುವೆಯಾದವನು ಜೀವಂತನಾಗಿರುವವರಿಗೂ ಅವನನ್ನು ನಾನು ತ್ಯಾಗಮಾಡುವುದಿಲ್ಲವೆಂದು ಹೇಳಿದಳು. ಅದನ್ನು ಚ್ಯವನಋಷಿಯು ಕೇಳಿ ಇವರು ನಿನ್ನನ್ನು ಪುನಃ ಹೀಗೆ ಪ್ರಶ್ನೆಮಾಡಿದಾಗ ನೀವು ಸರ್ವಸಂಪತ್ಸಮೃದ್ಧರಾಗಿದ್ದರೂ ನನ್ನ ಪತ್ನಿಯನ್ನು ನಿಂದಿಸಲು ಕಾರಣವೇನು ಎಂದು ಪ್ರಶ್ನೆಮಾಡು ಅದಕ್ಕೆ ಅವರು ಉತ್ತರವಾಗಿ ನಾವು ಧನಸಮೃದ್ಧರಾಗಿ ಹೇಗೆ ಇದ್ದೇವೆ ಎಂದು ನಿನ್ನನ್ನು ಕೇಳುವರು. ಆಗ ನನ್ನ ಪತಿಗೆ ಯೌವನವನ್ನು ಕೊಡಿರಿ ಅನಂತರ ನಾನು ನಿಮಗೆ ಹೇಳುವೆನು ಎಂದು ಅವರಿಗೆ ಹೇಳುವಂತೆ ಚ್ಯವನಋಷಿಯು ಹೇಳಿಕೊಟ್ಟನು. ಸುಕನ್ಯೆಯು ಅಶ್ವಿನೀದೇವತೆಗಳ ಸಂಗಡ ಚ್ಯವನಋಷಿಯು ಹೇಳಿದಹಾಗೆ ಮಾತನಾಡಿದಳು. ಅವಳ ಮಾತನ್ನು ಕೇಳಿ,

ನಿನ್ನ ಪತಿಯು ಈ ಮಡುವಿನಲ್ಲಿ ಇಳಿದು ಸ್ನಾನಮಾಡಿದರೆ ನಿನ್ನ ಇಷ್ಟವು ಸಿದ್ಧಿಸುವುದು. ನಿನ್ನ ಪತಿಯು ಯೌವನವುಳ್ಳವನಾಗುವನು ಎಂದು ಅಶ್ವಿನೀದೇವತೆಗಳು ಹೇಳಿದ ಮಾತನ್ನು ಕೇಳಿ ಅವರು ಹೇಳಿದ ಮಡುವಿನಲ್ಲಿ ಸ್ನಾನಮಾಡಿ ಯುವಕನಾಗಿ ಮೇಲಕ್ಕೆ ಬಂದನು. ಈ ಇತಿಹಾಸವು **ಜುಜುರುಷೋ ನಾಸತ್ಯೇತ್ಯಾದಿನಾ** ಎಂಬ ಋಕ್ಕಿನಿಂದ ಉಕ್ತವಾಗಿರುವುದು. ಮುದುಕನಾಗಿದ್ದ ಚ್ಯವನಋಷಿಯನ್ನು ಅಶ್ವಿನೀದೇವತೆಗಳು ಯೌವನವಂತನನ್ನಾಗಿ ಮಾಡಿದ ವಿಷಯವು ಋಗ್ವೇದದಲ್ಲಿ ಅನೇಕಕಡೆ ವಿವರಿಸಲ್ಪಟ್ಟಿರುವುದು :—

ಯುವಂ ಚ್ಯವಾನಂ ಜರಸೋಽಮುಮುಕ್ತಂ ನಿ ಪೇದವ ಊಹಥುರಾಶುಮಶ್ವಂ ।

(ಋ. ಸಂ. ೭-೭೧-೫)

ಪ್ರ ಚ್ಯವಾನಾಜ್ಜುಜುರುಷೋ ವವ್ರಿಮತ್ಕಂ ನ ಮುಂಚಥಃ ।

(ಋ. ಸಂ. ೫-೭೪-೫)

ನಿಷ್ಟೌಗ್ರ್ಯಂ ಪಾರಯಥಃ ಸಮುದ್ರಾತ್ಪುನಶ್ಚ್ಯವಾನಂ ಚಕ್ರಥುರ್ಯುವಾನಂ ।

(ಋ. ಸಂ. ೧-೧೧೭-೬)

ಯುವಂ ಚ್ಯವಾನಂ ಸನಯಂ ಯಥಾ ರಥಂ ಪುನರ್ಯುವಾನಂ ಚರಥಾಯ ತಕ್ಷಥುಃ ।

(ಋ. ಸಂ. ೧೦-೩೯-೪)

ಈ ಋಕ್ಕುಗಳಲ್ಲಿಯೂ, ಋ. ಸಂ. ೫-೭೪-೫ ; ೭-೬೮-೬ ಮೊದಲಾದ ಅನೇಕ ಋಕ್ಕುಗಳಲ್ಲಿಯೂ ಈ ವಿಷಯವು ಪ್ರಸ್ತಾಪಿಸಲ್ಪಟ್ಟಿರುವುದು.

॥ ಸಂಹಿತಾಪಾಠಃ ॥

ಆ ವಾಂ ನರಾ ಮನೋಯುಜೋಽಶ್ವಾಸಃ ಪ್ರುಷಿತಪ್ಸವಃ ।
ವಯೋ ವಹಂತು ಪೀತಯೇ ಸಹ ಸುಮ್ನೇಭಿರಶ್ವಿನಾ ಮಾಧ್ವೀ ಮಮ
ಶ್ರುತಂ ಹವಂ ॥ ೬ ॥

॥ ಪದಪಾಠಃ ॥

ಆ । ವಾಂ । ನರಾ । ಮನಃಽಯುಜಃ । ಅಶ್ವಾಸಃ । ಪ್ರುಷಿತಽಪ್ಸವಃ ।
ವಯಃ । ವಹಂತು । ಪೀತಯೇ । ಸಹ । ಸುಮ್ನೇಭಿಃ । ಅಶ್ವಿನಾ । ಮಾಧ್ವೀ ಇತಿ । ಮಮ । ಶ್ರುತಂ ।
ಹವಂ ॥ ೬ ॥

॥ ಸಾಯಣಭಾಷ್ಯಂ ॥

ಹೇ ನರಾ ಕರ್ಮಣಾಂ ನೇತಾರೌ ಹೇ ಅಶ್ವಿನೌ ವಾಂ ಯುವಾಂ ಮನೋಯುಜೋ ಮನೋಮಾತ್ರೇಣ ಯುಜ್ಯಮಾನಾಃ । ಸುಶಿಕ್ಷಿತಾ ಇತ್ಯರ್ಥಃ । ಪ್ರುಷಿತಪ್ಸವೋ ವಿಚಿತ್ರರೂಪಾ ವಯಃ ಶೀಘ್ರಗಂತಾರೋಽಶ್ವಾಸೋಽಶ್ವಾ ಆ ವಹಂತು ಪೀತಯೇ ಸೋಮಪಾನಾಯ । ಸುಮ್ನೇಭಿಃ ಸಹ ಅಸ್ಮಭ್ಯಂ ದೇಯೈಃ ಸುಖೈಸ್ತತ್ಸಾಧನೈರ್ಧನಾದಿಭಿರ್ವಾ ಸಹ ವಹಂತು ॥

॥ ಪ್ರತಿಪದಾರ್ಥ ॥

**ನರಾ**—ನೇತೃಗಳಾದ । **ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ಮನೋಯುಜಃ**—ಸಂಕಲ್ಪಮಾತ್ರದಿಂದಲೇ ರಥಕ್ಕೆ ಸೇರಿಕೊಳ್ಳತಕ್ಕವೂ । **ಪ್ರುಷಿತಾಪ್ಸವಃ**—ವಿಚಿತ್ರವಾದ ರೂಪವುಳ್ಳವೂ । **ವಯಃ**—ಶೀಘ್ರಗಾಮಿಗಳೂ ಆದ । **ಅಶ್ವಾಸಃ**—ಅಶ್ವಗಳು । **ವಾಂ**—ನಿಮ್ಮನ್ನು । **ಸುಮ್ನೇಭಿಃ ಸಹ**—ನಮಗೆ ಕೊಡಬೇಕಾದವೂ ಸುಖಕರವೂ ಆದ ಧನಗಳೊಡನೆ । **ಪೀತಯೇ**—ಸೋಮಪಾನಾರ್ಥವಾಗಿ । **ಆ ವಹಂತು**—ಕರೆತರಲಿ । **ಮಾಧ್ವೀ**—ಮಧುವಿದ್ಯಾವಿಶಾರದರಾದ ಅಶ್ವಿನೀದೇವತೆಗಳೇ । **ಮಮ**—ನನ್ನ । **ಹವಂ**—ಆಹ್ವಾನವನ್ನು । **ಶ್ರುತಂ**—ಕೇಳಿರಿ.

॥ ಭಾವಾರ್ಥ ॥

ನೇತೃಗಳಾದ ಎಲೈ ಅಶ್ವಿನೀದೇವತೆಗಳೇ, ಸಂಕಲ್ಪಮಾತ್ರದಿಂದಲೇ ರಥಕ್ಕೆ ಸೇರಿಕೊಳ್ಳತಕ್ಕವೂ, ವಿಚಿತ್ರವಾದ ರೂಪವುಳ್ಳವೂ, ಶೀಘ್ರಗಾಮಿಗಳೂ ಆದ ಅಶ್ವಗಳು ನಿಮ್ಮನ್ನು ನಮಗೆ ಕೊಡಬೇಕಾದವೂ, ಸುಖಕರವೂ ಆದ ಧನಗಳೊಡನೆ ಸೋಮಪಾನಾರ್ಥವಾಗಿ ಕರೆತರಲಿ. ಮಧುವಿದ್ಯಾವಿಶಾರದರಾದ ಎಲೈ ಅಶ್ವಿನೀದೇವತೆಗಳೇ, ನನ್ನ ಆಹ್ವಾನವನ್ನು ಕೇಳಿರಿ.

## English Translation.

Aswins, leaders (of rites), may your horses, harnessed at will, of wondrous beauty, and of rapid course, bring you hither with good gifts to drink (of the proffered beverage): masters of mystic lore, hear my invocation.

---

॥ ಸಂಹಿತಾಪಾಠಃ ॥

ಅಶ್ವಿನಾವೇಹ ಗಚ್ಛತಂ ನಾಸತ್ಯಾ ಮಾ ವಿ ವೇನತಂ ।
ತಿರಶ್ಚಿದರ್ಯಯಾ ಪರಿ ವರ್ತಿರ್ಯಾತಮದಾಭ್ಯಾ ಮಾಧ್ವೀ ಮಮ ಶ್ರುತಂ
ಹವಂ ॥೭॥

॥ ಪದಪಾಠಃ ॥

ಅಶ್ವಿನಾ । ಆ । ಇಹ । ಗಚ್ಛತಂ । ನಾಸತ್ಯಾ । ಮಾ । ವಿ । ವೇನತಂ ।
ತಿರಃ । ಚಿತ್ । ಅರ್ಯಯಾ । ಪರಿ । ವರ್ತಿಃ । ಯಾತಂ । ಅದಾಭ್ಯಾ । ಮಾಧ್ವೀ ಇತಿ । ಮಮ ।
ಶ್ರುತಂ । ಹವಂ ॥ ೭ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾವಿಹಾಸ್ಮಿನ್ಯಜ್ಞ ಆ ಗಚ್ಛತಂ । ಹೇ ನಾಸತ್ಯಾ ಮಾ ವಿ ವೇನತಂ । ವಿಗತಕಾಮೌ ಮಾ ಭವತಂ ॥ ವೇನತಿಃ ಕಾಂತಿಕರ್ಮಾ ॥ ಹೇ ಅದಾಭ್ಯಾಹಿಂಸ್ಯೌ ಪೂಜ್ಯೌ ಅರ್ಯಾಯರ್ಯೌ ಸ್ವಾಮಿನೌ ಯುವಾಂ ॥ ಸುಪಾಂ ಸುಲುಗಿತ್ಯಾದಿನಾ ಸುಪೋ ಯಾಜಾದೇಶಃ ॥ ತಿರಶ್ಚಿತ್ ಅಂತರ್ಹಿತಾ-ದ್ದೂರದೇಶಾದಪಿ ಯುವಾಂ ವರ್ತಿರಸ್ಮದ್ಯಜ್ಞಗೃಹಂ ಪರಿ ಯಾತಂ । ಆಗಚ್ಛತಂ ॥

॥ ಪ್ರತಿಪದಾರ್ಥ ॥

**ಅಶ್ವಿನೌ**—ಎಲೈ ಅಶ್ವಿನೀ ದೇವತೆಗಳೇ । **ಇಹ**—ಈ ಯಜ್ಞಕ್ಕೆ । **ಆ ಗಚ್ಛತಂ**—ಬನ್ನಿರಿ । **ನಾಸತ್ಯಾ**—ಎಲೈ ನಾಸತ್ಯರೇ । **ಮಾ ವಿ ವೇನತಂ**—ನಮ್ಮಲ್ಲಿಗೆ ಬರಲು ಇಚ್ಛೆಯಿಲ್ಲದೇ ಇರಬೇಡಿ । **ಅದಾಭ್ಯಾ**—ಅಹಿಂಸಿತರೂ । **ಅರ್ಯಾ**—ಪೂಜ್ಯರಾದ ಪ್ರಭುಗಳೂ ಆದ ನೀವು । **ತಿರಶ್ಚಿತ್**—ಕಣ್ಣಿಗೆ ಮರೆಯಾದ ದೂರ ದೇಶದಿಂದಲೂ ಸಹ । **ವರ್ತಿಃ**—ನಮ್ಮ ಯಾಗಗೃಹಕ್ಕೆ । **ಪರಿ ಯಾತಂ**—ಬನ್ನಿರಿ । **ಮಾಧ್ವೀ**—ಮಧುವಿದ್ಯಾ ವಿಶಾರದರಾದ ಅಶ್ವಿನಿಗಳೇ । **ಮಮ**—ನನ್ನ । **ಹವಂ**—ಆಹ್ವಾನವನ್ನು । **ಶ್ರುತಂ**—ಕೇಳಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ ಈ ಯಜ್ಞಕ್ಕೆ ಬನ್ನಿರಿ. ಎಲೈ ನಾಸತ್ಯರೇ, ನಮ್ಮಲ್ಲಿಗೆ ಬರಲು ಇಚ್ಛೆಯಿಲ್ಲದೇ ಇರಬೇಡಿ. ಅಹಿಂಸಿತರೂ, ಪೂಜ್ಯರಾದ ಪ್ರಭುಗಳೂ ಆದ ನೀವು ಕಣ್ಣಿಗೆ ಮರೆಯಾದ ದೂರದೇಶದಿಂದಲೂ ಸಹ ನಮ್ಮ ಯಾಗ ಗೃಹಕ್ಕೆ ಬನ್ನಿರಿ. ಮಧುವಿದ್ಯಾವಿಶಾರದರಾದ ಅಶ್ವಿನೀದೇವತೆಗಳೇ ನನ್ನ ಆಹ್ವಾನವನ್ನು ಕೇಳಿರಿ.

## English Translation.

Aswins, come hither: Nasatyas, be not unpropitious: invincible lords, come from hidden (regions) to our sacrificial hall: master of mystic lore, hear my invocation.

॥ ಸಂಹಿತಾಪಾಠಃ ॥

ಅಶ್ವಿನ್ಯಜ್ಞೇ ಅದಾಭ್ಯಾ ಜರಿತಾರಂ ಶುಭಸ್ಪತೀ ।
ಅವಸ್ಯುಮಶ್ವಿನಾ ಯುವಂ ಗೃಣಂತಮುಪ ಭೂಷಥೋ ಮಾಧ್ವೀ ಮಮ
ಶ್ರುತಂ ಹವಂ ॥ ೮ ॥

॥ ಪದಪಾಠಃ ॥

ಅಸ್ಮಿನ್ । ಯಜ್ಞೇ । ಅದಾಭ್ಯಾ । ಜರಿತಾರಂ । ಶುಭಃ । ಪತೀ ಇತಿ ।
ಅವಸ್ಯುಂ । ಅಶ್ವಿನಾ । ಯುವಂ । ಗೃಣಂತಂ । ಉಪ । ಭೂಷಥಃ । ಮಾಧ್ವೀ ಇತಿ । ಮಮ । ಶ್ರುತಂ
ಹವಂ ॥ ೮ ॥

॥ ಸಾಯಣಭಾಷ್ಯಂ ॥

ಹೇ ಅದಾಭ್ಯಾ ಅಹಿಂಸ್ಯೌ ಹೇ ಶುಭಸ್ಪತೀ ಉದಕಸ್ಯ ಸ್ವಾಮಿನಾವಶ್ವಿನಾ ಯುವಂ ಯುವಾಮಸ್ಮಿನ್ಯಜ್ಞೇ ಜರಿತಾರಂ ಸ್ತೋತಾರಮವಸ್ಯುಂ ಗೃಣಂತಂ ಸ್ತುವಂತಂ ಮಾಮುಪ ಭೂಷಥಃ । ಉಪಪ್ರಾಪ್ನುತಂ ॥

॥ ಪ್ರತಿಪದಾರ್ಥ ॥

**ಅದಾಭ್ಯಾ**—ಹಿಂಸಾರಹಿತರೂ । **ಶುಭಸ್ಪತೀ**— ಉದಕಕ್ಕೆ ಸ್ವಾಮಿಗಳೂ ಆದ । **ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ಯುವಂ**—ನೀವು । **ಅಸ್ಮಿನ್ ಯಜ್ಞೇ**—ಈ ಯಜ್ಞದಲ್ಲಿ । **ಜರಿತಾರಂ**—ಸ್ತುತಿಕರ್ತನೂ । **ಗೃಣಂತಂ**—ಸ್ತುತಿಪಾಠಕನೂ ಮತ್ತು ನಿಮ್ಮನ್ನು ಪ್ರಶಂಸಿಸುವವನೂ । **ಅವಸ್ಯುಂ**—ಅವಸ್ಯುನಾಮಕನೂ ಆದ ನನ್ನನ್ನು । **ಉಪ ಭೂಷಥಃ**—ಅನುಗ್ರಹಿಸಿರಿ । **ಮಾಧ್ವೀ**—ಮಧುವಿದ್ಯಾವಿಶಾರದರಾದ ಎಲೈ ಅಶ್ವಿನೀದೇವತೆಗಳೇ । **ಮಮ**—ನನ್ನ । **ಹವಂ**—ಸ್ತುತಿಯನ್ನು । **ಶ್ರುತಂ**—ಕೇಳಿರಿ.

॥ ಭಾವಾರ್ಥ ॥

ಹಿಂಸಾರಹಿತರೂ, ಉದಕಕ್ಕೆ ಸ್ವಾಮಿಗಳೂ ಆದ ಎಲೈ ಅಶ್ವಿನೀದೇವತೆಗಳೇ, ನೀವು ಈ ಯಜ್ಞದಲ್ಲಿ ಸ್ತುತಿನಿರ್ಮಾಪಕನೂ, ನಿಮ್ಮನ್ನು ಸ್ತುತಿಗಳಿಂದ ಪ್ರಶಂಸಿಸುವವನೂ ಆದ ನನ್ನನ್ನು ಅನುಗ್ರಹಿಸಿರಿ. ಮಧುವಿದ್ಯಾವಿಶಾರದರಾದ ಎಲೈ ಅಶ್ವಿನೀದೇವತೆಗಳೇ, ನನ್ನ ಸ್ತುತಿಯನ್ನು ಕೇಳಿರಿ.

## English Translation.

Invincible Aswins, lords of water, favour Avasyu, glorifying you at this sacrifice: masters of mystic lore, hear my invocation.

॥ ಸಂಹಿತಾಪಾಠಃ ॥

ಅಭೂದುಷಾ ರುಶತ್ಪಶುರಾಗ್ನಿರಧಾಯ್ಯೃತ್ವಿಯಃ ।
ಅಯೋಜಿ ವಾಂ ವೃಷಣ್ವಸೂ ರಥೋ ದಸ್ರಾವಮರ್ತ್ಯೋ ಮಾಧ್ವೀ ಮಮ
ಶ್ರುತಂ ಹವಂ ॥ ೯ ॥

॥ ಪದಪಾಠಃ ॥

ಅಭೂತ್ । ಉಷಾಃ । ರುಶತ್ಽಪಶುಃ । ಆ । ಅಗ್ನಿಃ । ಅಧಾಯಿ । ಋತ್ವಿಯಃ ।

ಅಯೋಜಿ । ವಾಂ । ವೃಷಣ್ವಸೂ ಇತಿ ವೃಷಣ್ಽವಸೂ । ರಥಃ । ದಸ್ರಾ । ಅಮರ್ತ್ಯಃ । ಮಾಧ್ವೀ ಇತಿ ।

ಮಮ । ಶ್ರುತಂ । ಹವಂ ॥ ೯ ॥

॥ ಸಾಯಣಭಾಷ್ಯಂ ॥

ಉಷಾ ವ್ಯುಷ್ಟಿರಭೂತ್ । ಅಗ್ನಿಶ್ಚ ರುಶತ್ಪಶುರ್ದೀಪ್ತಪಶುಮಾನ್ । ಪ್ರಕಾಶಿತಹವಿರಿತ್ಯರ್ಥಃ । ಅಥವಾ ಪಶವಃ ಕಿರಣಾಃ । ರುಶದ್ರಶ್ಮಿಃ ಸನ್ ಅಧಾಯಿ । ವೇದ್ಯಾಮಧೀಯತ ಅಗ್ನಿರಾಹವನೀಯ ಋತ್ವಿಯ ಋತಾ ಕಾಲೇ ಭವಃ । ಹೇ ವೃಷಣ್ವಸೂ ಪ್ರದತ್ತಧನೌ ಹೇ ದಸ್ರಾ ವಾಂ ಯುವಯೋರಮರ್ತ್ಯೋಽಮರಣಧರ್ಮಾ ಧ್ರುವೋ ರಥೋಽಯೋಜಿ । ಅಶ್ವೈರ್ಯುಕ್ತೋ ಭವತ್ವಿತ್ಯರ್ಥಃ ॥ ಛಂದಸಿ ಲುಙ್ಲಙ್ಲಿಟ ಇತ್ಯನೇಕೇಷ್ವರ್ಥೇಷು ಲುಙ್ ಭವತಿ। ಇಹ ಪ್ರಾರ್ಥನಾಯಾಂ॥ ಮಾಧ್ವೀ ಇತ್ಯಾದಿ ಗತಂ॥

॥ ಪ್ರತಿಪದಾರ್ಥ ॥

**ಉಷಾಃ**—ಉಷೋದೇವಿಯು । **ಅಭೂತ್**—ಆವಿರ್ಭೂತಳಾಗಿದ್ದಾಳೆ । **ಋತ್ವಿಯಃ**—ಕಾಲಾನುರೂಪವಾಗಿ ಆವಿರ್ಭವಿಸುವವನೂ । **ರುಶತ್ಪಶುಃ**—ಪ್ರಕಾಶಮಾನವಾದ ಜ್ವಾಲೆಯುಳ್ಳವನೂ ಆದ ಅಗ್ನಿಯು । **ಅಧಾಯಿ**—ವೇದಿಯಲ್ಲಿ ಸ್ಥಾಪಿತನಾಗಿದ್ದಾನೆ । **ವೃಷಣ್ವಸೂ**—ಧನಪ್ರದಾತರೂ । **ದಸ್ರಾ**—ದರ್ಶನೀಯವಾದ ರೂಪವುಳ್ಳವರೂ ಆದ ಎಲೈ ಅಶ್ವಿನೀದೇವತೆಗಳೇ । **ವಾಂ**—ನಿಮ್ಮ । **ಅಮರ್ತ್ಯಃ**—ನಾಶರಹಿತವಾದ । **ರಥಃ**—ರಥವು । **ಅಯೋಜಿ**—ಅಶ್ವಗಳೊಡನೆ ಯುಕ್ತವಾಗಿದೆ । **ಮಾಧ್ವೀ**—ಮಧುವಿದ್ಯಾವಿಶಾರದರಾದ ಅಶ್ವಿನೀದೇವತೆಗಳೇ । **ಮಮ**—ನನ್ನ । **ಹವಂ**—ಆಹ್ವಾನವನ್ನು । **ಶ್ರುತಂ**—ಕಿವಿಗೊಟ್ಟು ಕೇಳಿರಿ.

॥ ಭಾವಾರ್ಥ ॥

ಉಷೋದೇವಿಯು ಆವಿರ್ಭೂತಳಾಗಿದ್ದಾಳೆ. ಕಾಲಾನುರೂಪವಾಗಿ ಆವಿರ್ಭವಿಸುವವನೂ, ಪ್ರಕಾಶಮಾನವಾದ ಜ್ವಾಲೆಯುಳ್ಳವನೂ ಆದ ಅಗ್ನಿಯು ವೇದಿಯಲ್ಲಿ ಸ್ಥಾಪಿತನಾಗಿದ್ದಾನೆ. ಧನಪ್ರದರೂ, ದರ್ಶನೀಯವಾದ ರೂಪವುಳ್ಳವರೂ ಆದ ಅಶ್ವಿನೀದೇವತೆಗಳೇ, ನಿಮ್ಮ ಸ್ಥಿರವಾದ ರಥವು ಅಶ್ವಗಳೊಡನೆ ಯುಕ್ತವಾಗಿದೆ. ಮಧುವಿದ್ಯಾವಿಶಾರದರಾದ ಅಶ್ವಿನೀದೇವತೆಗಳೇ ನನ್ನ ಆಹ್ವಾನಕ್ಕೆ ಕಿವಿಗೊಟ್ಟು ಕೇಳಿರಿ.

## English Translation.

The dawn has come: the Agni of the season, blazing with the oblation, has been placed (upon the altar): showerers of wealth, subduers of foes, your immortal chariot has been harnessed: masters of mystic lore, hear my invocation.

# ಎಪ್ಪತ್ತಾರನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಆ ಭಾತ್ಯಗ್ನಿರಿತಿ ಪಂಚರ್ಚಂ ಚತುರ್ಥಂ ಸೂಕ್ತಂ ಭೌಮಸ್ಯಾತ್ರೇರಾರ್ಷಂ ತ್ರೈಷ್ಟುಭಮಾಶ್ವಿನಂ। ಅತ್ರಾನುಕ್ರಮಣಿಕಾ । ಆ ಭಾತಿ ಪಂಚಾತ್ರಿರಿತಿ ॥ ಪ್ರವರ್ಗ್ಯೇಽಭಿಷ್ಟವಾರ್ಥಮಿದಂ ಸೂಕ್ತಂ । ಸೂತ್ರಿತಂ ಚ । ಆ ಭಾತ್ಯಗ್ನಿರ್ಗ್ರಾವಾಣೇವ । ಅ. ೪-೬ । ಇತಿ ॥ ಪ್ರಾತರನುವಾಕ ಆಶ್ವಿನೇ ಕ್ರತೌ ತ್ರೈಷ್ಟುಭೇ ಛಂದಸ್ಯಾಶ್ವಿನಶಸ್ತ್ರೇ ಚೇದಮಾದಿಕೇ ದ್ವೇ ಸೂಕ್ತೇ । ಸೂತ್ರ್ಯತೇ ಹಿ । ಆ ಭಾತ್ಯಗ್ನಿರಿತಿ ಸೂಕ್ತೇ । ಅ. ೪-೧೫ । ಇತಿ ॥ ಅಪ್ತೋರ್ಯಾಮೇ ಹೋತುರತಿರಿಕ್ತೋಕ್ಥ್ಯ ಇದಂ ಸೂಕ್ತಂ । ಸೂತ್ರಿತಂ ಚ । ಆ ಭಾತ್ಯಗ್ನಿಃ ಕ್ಷೇತ್ರಸ್ಯ ಪತಿನಾ ವಯಮಿತಿ ಪರಿಧಾನೀಯಾ । ಅ. ೯-೧೧ । ಇತಿ ॥**

ಅನುವಾದವು—**ಆ ಭಾತ್ಯಗ್ನಿಃ** ಎಂಬ ಈ ಸೂಕ್ತವು ಆರನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು ಇದರಲ್ಲಿ ಐದು ಋಕ್ಕುಗಳಿರುವುವು. ಈ ಸೂಕ್ತಕ್ಕೆ ಮಂಡಲದ್ರಷ್ಟೃವಾದ ಅತ್ರಿರ್ಭೌಮಃ ಎಂಬುವನು ಋಷಿಯು ಅಶ್ವಿನೀದೇವತೆಗಳು ದೇವತೆಯು, ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ **ಆ ಭಾತಿ ಪಂಚಾತ್ರಿಃ** ಎಂದು ಹೇಳಿರುವುದು. ಪ್ರವರ್ಗ್ಯವೆಂಬ ಯಾಗದಲ್ಲಿ ಅಭಿಷ್ಟವಾರ್ಥವಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನ ಶ್ರೌತಸೂತ್ರದ—**ಆ ಭಾತ್ಯಗ್ನಿರ್ಗ್ರಾವಾಣೇವ** ಎಂಬ ಸೂತ್ರದಿಂದ (ಅ. ೪-೬) ವಿವೃತವಾಗಿರುವುದು. ಪ್ರಾತರನುವಾಕ ಮತ್ತು ಆಶ್ವಿನಕ್ರತುಸಂಬಂಧವಾದ ತ್ರಿಷ್ಟುಪ್‌ಛಂದಸ್ಸಿನ ಮಂತ್ರಗಳಿಗಾಗಿ ಈ ಸೂಕ್ತದ ಮತ್ತು ಮುಂದಿನ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನ ಶ್ರೌತಸೂತ್ರದ—**ಆ ಭಾತ್ಯಗ್ನಿರಿತಿ ಸೂಕ್ತೇ** ಎಂಬ ಸೂತ್ರದಿಂದ (ಅ. ೪-೧೫) ವಿವೃತವಾಗಿರುವುದು. ಮತ್ತು ಅಪ್ತೋರ್ಯಾಮವೆಂಬ ಯಾಗದಲ್ಲಿ ಹೋತೃವು ಪಠಿಸುವ ಅತಿರಿಕ್ತೋಕ್ಥ್ಯವೆಂಬ ಮಂತ್ರಪಠನಕ್ಕಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ಆ ಭಾತ್ಯಗ್ನಿಃ ಕ್ಷೇತ್ರಸ್ಯ ಪತಿನಾ ವಯಮಿತಿ ಪರಿಧಾನೀಯಾ** ಎಂಬ ಸೂತ್ರದಿಂದ (ಅ. ೯-೧೧) ವಿವೃತವಾಗಿರುವುದು.

## ಸೂಕ್ತ—೭೬

ಮಂಡಲ— ೫॥ ಅನುವಾಕ—೬ ॥ ಸೂಕ್ತ—೭೬ ॥
ಅಷ್ಟಕ—೪ ॥ ಅಧ್ಯಾಯ—೪ ॥ ವರ್ಗ—೧೭ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೫ ॥
॥ ಋಷಿಃ—ಅತ್ರಿಃ ॥
॥ ದೇವತಾ—ಅಶ್ವಿನೌ ॥
॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಆ ಭಾತ್ಯಗ್ನಿರುಷಸಾಮನೀಕಮುದ್ವಿಪ್ರಾಣಾಂ ದೇವಯಾ ವಾಚೋ ಅಸ್ಥುಃ।
ಅರ್ವಾಂಚಾ ನೂನಂ ರಥ್ಯೇಹ ಯಾತಂ ಪೀಪಿವಾಂಸಮಶ್ವಿನಾ ಘರ್ಮಮಚ್ಛ॥

॥ ಪದಪಾಠಃ ॥

ಆ । ಭಾತಿ । ಅಗ್ನಿಃ । ಉಷಸಾಂ । ಅನೀಕಂ । ಉತ್ । ವಿಪ್ರಾಣಾಂ । ದೇವऽಯಾಃ । ವಾಚಃ । ಅಸ್ಥುಃ ।
ಅರ್ವಾಂಚಾ । ನೂನಂ । ರಥ್ಯಾ । ಇಹ । ಯಾತಂ । ಪೀಪಿऽವಾಂಸಂ । ಅಶ್ವಿನಾ । ಘರ್ಮಂ । ಅಚ್ಛ ॥೧॥

॥ ಸಾಯಣಭಾಷ್ಯಂ ॥

ಉಷಸಾಮನೀಕಮನೀಕಭೂತಃ । ಅನೀಕಂ ಮುಖಂ । ಉಷಸಿ ಪ್ರಬುಧ್ಯಮಾನ ಇತ್ಯರ್ಥಃ । ತಾದೃಶೋಽಗ್ನಿರಾ ಭಾತಿ । ದೀಪ್ಯತೇ । ಯದ್ವಾ । ಉಷಸಾಂ ಮುಖಮಾ ಭಾತಿ । ದೀಪಯತಿ । ಉಷಃಕಾಲೇ ಹ್ಯಗ್ನಯಃ ಪ್ರತಿಬೋಧ್ಯಂತೇ । ಕಿಂಚ ವಿಪ್ರಾಣಾಂ ಮೇಧಾವಿನಾಂ ಸ್ತೋತೄಣಾಂ ದೇವಯಾ ದೇವಕಾಮಾ ವಾಚಃ ಸ್ತೋತ್ರಾಣ್ಯುದಸ್ಥುಃ । ಉತ್ತಿಷ್ಠಂತಿ । ಯಸ್ಮಾದೇವಂ ತಸ್ಮಾತ್ ಹೇ ರಥ್ಯಾ ರಥಸ್ವಾಮಿನಾವಶ್ವಿನಾವರ್ವಾಂಚಾಸ್ಮದಭಿಮುಖಾಂಚನೌ ನೂನಮದ್ಯಾಸ್ಮಿನ್ಯಾಗದಿನ ಇಹಾ ಯಾತಂ । ಕಂ ಪ್ರತಿ । ಪೀಪಿವಾಂಸಂ ಸ್ವಾಂಗೈಃ ಪರಿವೃಢಂ ಘರ್ಮಂ ಪ್ರದೀಪ್ತಂ ಯಜ್ಞಂ । ಯದ್ವಾ । ಪೀಪಿವಾಂಸಮಾಪ್ಯಾಯಿತಂ ವಸತೀವರೀಭಿಃ ಕ್ಷರದ್ರೂಪಂ ಸೋಮರಸಂ । ಅಥವಾ ಘೃತಾದಿನಾ ಪೀಪಿವಾಂಸಂ ಘರ್ಮಂ ಪ್ರವರ್ಗ್ಯಮಚ್ಛಾಭಿಲಕ್ಷ್ಯೇಹ ಯಾತಂ । ಪ್ರವರ್ಗ್ಯೇಽಸ್ಯ ಸೂಕ್ತಸ್ಯ ವಿನಿಯೋಗಃ ॥

॥ ಪ್ರತಿಪದಾರ್ಥ ॥

**ಅಗ್ನಿಃ**—ಅಗ್ನಿಯು । **ಉಷಸಾಂ**—ಉಷೋದೇವಿಗಳ । **ಅನೀಕಂ**—ದಿವ್ಯಮುಖಗಳನ್ನು । **ಆ ಭಾತಿ**—ಪ್ರಕಾಶಿಸುವಂತೆ ಮಾಡಿದ್ದಾನೆ । **ವಿಪ್ರಾಣಾಂ**—ಮೇಧಾವಿಗಳಾದ ಕವಿಗಳ । **ದೇವಯಾಃ**—ದೇವತೆಗಳನ್ನು ಸ್ತುತಿಸತಕ್ಕ । **ವಾಚಃ**—ಸ್ತುತಿಗಳು । **ಉತ್ ಅಸ್ಥುಃ**—ಪ್ರಕಾಶಿತವಾಗಿವೆ । **ರಥ್ಯಾ**—ರಥಕ್ಕೆ ಸ್ವಾಮಿಗಳಾದ । **ಅಶ್ವಿನಾ**—ಅಶ್ವಿನೀದೇವತೆಗಳೇ । **ನೂನಂ**—ಈ ಯಾಗದಲ್ಲಿ । **ಪೀಪಿವಾಂಸಂ**—ಸಕಲ ಸಾಮಗ್ರಿಗಳೊಡನೆಯೂ ಪುಷ್ಕಲವಾದುದೂ । **ಘರ್ಮಂ**—ಪ್ರದೀಪ್ತವಾದುದೂ ಆದ । **ಇಹ**—ಈ ಯಜ್ಞಕ್ಕೆ । **ಅಚ್ಛ ಅರ್ವಾಂಚಾ**—ನಮಗಭಿಮುಖರಾಗಿ । **ಯಾತಂ**—ಬನ್ನಿರಿ.

॥ ಭಾವಾರ್ಥ ॥

ಅಗ್ನಿಯು ಆವಿರ್ಭೂತನಾಗಿ ಉಷೋದೇವಿಗಳ ದಿವ್ಯಮುಖಗಳನ್ನು ಪ್ರಕಾಶಿಸುವಂತೆ ಮಾಡಿದ್ದಾನೆ. ಮೇಧಾವಿಗಳಾದ ಕವಿಗಳು ದೇವತೆಗಳನ್ನು ಪ್ರಶಂಸಿಸುವ ಸ್ತುತಿಗಳನ್ನು ನಿರ್ಮಿಸಿ ಪ್ರಕಾಶಪಡಿಸಿದ್ದಾರೆ. ರಥಕ್ಕೆ ಸ್ವಾಮಿಗಳಾದ ಎಲೈ ಅಶ್ವಿನೀದೇವತೆಗಳೇ, ಈ ಯಾಗದಿನದಲ್ಲಿ ಸಕಲ ಸಾಮಗ್ರಿಗಳೊಡನೆಯೂ ಪುಷ್ಕಲವಾದುದೂ, ಪ್ರದೀಪ್ತವಾದುದೂ ಆದ ಈ ಯಜ್ಞಕ್ಕೆ ನಮಗಭಿಮುಖವಾಗಿ ಬನ್ನಿರಿ.

## English Translation.

Agni lights up the face of the dawns: the devout praisers of the pious have risen up: therefore, Aswins, lords of the chariot, descending, come hither to-day to the splendid sacrifice, perfect (in all its parts).

॥ ಸಂಹಿತಾಪಾಠಃ ॥

ನ ಸಂಸ್ಕೃತಂ ಪ್ರ ಮಿಮೀತೋ ಗಮಿಷ್ಠಾಂತಿ ನೂನಮಶ್ವಿನೋಪಸ್ತುತೇಹ ।
ದಿವಾಭಿಪಿತ್ವೇಽವಸಾಗಮಿಷ್ಠಾ ಪ್ರತ್ಯವರ್ತಿಂ ದಾಶುಷೇ ಶಂಭವಿಷ್ಠಾ ॥ ೨ ॥

॥ ಪದಪಾಠಃ ॥

ನ । ಸಂಸ್ಕೃತಂ । ಪ್ರ । ಮಿಮೀತಃ । ಗಮಿಷ್ಠಾ । ಅಂತಿ । ನೂನಂ । ಅಶ್ವಿನಾ । ಉಪಽಸ್ತುತಾ । ಇಹ ।
ದಿವಾ । ಅಭಿಽಪಿತ್ವೇ । ಅವಸಾ । ಆಽಗಮಿಷ್ಠಾ । ಪ್ರತಿ । ಅವರ್ತಿಂ । ದಾಶುಷೇ । ಶಂಽಭವಿಷ್ಠಾ ॥ ೨ ॥

॥ ಸಾಯಣಭಾಷ್ಯಂ ॥

ಅಶ್ವಿನೌ ಸಂಸ್ಕೃತಂ ಘರ್ಮಂ ನ ಪ್ರ ಮಿಮೀತಃ । ನ ಹಿಂಸ್ತಃ । ಕಿಂತು ಅಂತ್ಯಂತಿಕೇ ಘರ್ಮಸಮೀಪೇ ನೂನಮಿದಾನೀಮಿಹ ಯಜ್ಞೇ ಗಮಿಷ್ಠಾ ಗಂತೃತಮಾವಶ್ವಿನಾಶ್ವಿನಾವುಪಸ್ತುತೋಪಸ್ತುತೌ ಭವತಃ । ದಿವಾಭಿಪಿತ್ವೇ ದಿವಸಸ್ಯಾಭಿಪತನೇ ಪ್ರಾತಃಕಾಲೇಽವಸಾ ರಕ್ಷಣೇನ ಸಹಾಗಮಿಷ್ಠಾಗಂತೃತಮೌ । ಅವರ್ತಿಂ ಪ್ರತಿ ದ್ವಂದ್ವಭೂತೌ । ವರ್ತಿರ್ಜೀವನಂ । ತದಭಾವೋಽವರ್ತಿಃ । ತದ್ರಹಿತಮಸ್ಮಂ ಯಥಾ ಭವತಿ ತಥಾಗಂತೃತಮೌ । ಆಗತ್ಯ ಚ ದಾಶುಷೇ ಹವಿರ್ದತ್ತವತೇ ಯಜಮಾನಾಯ ಶಂಭವಿಷ್ಠಾ ಸುಖಸ್ಯ ಭಾವಯಿತಾರೌ ಭವತಾಂ ॥

॥ ಪ್ರತಿಪದಾರ್ಥ ॥

ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । ಸಂಸ್ಕೃತಂ—ಪರಿಷ್ಕರಿಸಿ ಸಿದ್ಧಗೊಳಿಸಿದ ಈ ಘರ್ಮವನ್ನು । ನ ಪ್ರ ಮಿಮೀತಃ—ನಷ್ಟಗೊಳಿಸಬೇಡಿರಿ । ಇಹ ಅಂತಿ—ಈ ಯಜ್ಞಭಾಗದಲ್ಲಿ । ನೂನಂ ಈಗ । ಗಮಿಷ್ಠಾ—ಬಂದವರಾಗಿ । ಉಪಸ್ತುತಾ—ಸ್ತುತಿಗೆ ಪಾತ್ರರಾಗಿರಿ । ದಿವಾ ಅಭಿಪಿತ್ವೇ—ದಿವಸದ ಪ್ರಾರಂಭ ಕಾಲದಲ್ಲಿ । ಅವರ್ತಿಂ ಪ್ರತಿ—ದಾರಿದ್ರ್ಯ ನಿರೋಧಕವಾದ । ಅವಸಾ—ರಕ್ಷಣೆಯೊಂದಿಗೆ । ಆಗಮಿಷ್ಠಾ—ಬಂದವರಾಗಿ । ದಾಶುಷೇ—ಹವಿರ್ದಾತನಾದ ಯಜಮಾನನಿಗೆ । ಶಂಭವಿಷ್ಠಾ—ಸುಖಕಾರಕರಾಗಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಪರಿಷ್ಕರಿಸಿ ಸಿದ್ಧಗೊಳಿಸಿದ ಈ ಘರ್ಮವನ್ನು (ಪ್ರವರ್ಗ್ಯವೆಂಬ ಯಜ್ಞವನ್ನು) ನಷ್ಟಗೊಳಿಸಬೇಡಿರಿ ಈ ಯಜ್ಞಕ್ಕೆ ಬಂದು ನಮ್ಮ ಸ್ತುತಿಗೆ ಪಾತ್ರರಾಗಿರಿ. ದಿವಸದ ಪ್ರಾರಂಭಕಾಲದಲ್ಲಿ ದಾರಿದ್ರ್ಯ ನಿರೋಧಕವಾದ ರಕ್ಷಣೆಯೊಂದಿಗೆ ಬಂದವರಾಗಿ ಹವಿರ್ದಾತನಾದ ಯಜಮಾನನಿಗೆ ಸುಖಕಾರಕರಾಗಿರಿ.

## English Translation.

Harm not, Aswins, the perfected (rite), but coming now most quickly, be glorified on this occasion : be present at the opening of the day, with protection against destitution, and be prompt to bestow happines upon the donor (of the offering).

॥ ಸಂಹಿತಾಪಾಠಃ ॥

ಉತಾ ಯಾತಂ ಸಂಗವೇ ಪ್ರಾತರಹ್ನೋ ಮಧ್ಯಂದಿನ ಉದಿತಾ ಸೂರ್ಯಸ್ಯ।
ದಿವಾ ನಕ್ತಮವಸಾ ಶಂತಮೇನ ನೇದಾನೀಂ ಪೀತಿರಶ್ವಿನಾ ತತಾನ ॥ ೩ ॥

॥ ಪದಪಾಠಃ ॥

ಉತ । ಆ । ಯಾತಂ । ಸಂऽಗವೇ । ಪ್ರಾತಃ । ಅಹ್ನಃ। ಮಧ್ಯಂದಿನೇ । ಉತ್ऽಇತಾ । ಸೂರ್ಯಸ್ಯ ।
ದಿವಾ । ನಕ್ತಂ । ಅವಸಾ । ಶಂऽತಮೇನ। ನ। ಇದಾನೀಂ । ಪೀತಿಃ । ಅಶ್ವಿನಾ । ಆ । ತತಾನ ॥ ೩ ॥

॥ ಸಾಯಣಭಾಷ್ಯಂ ॥

ಅಹ್ನೋ ದ್ವೇಧಾ ತ್ರೇಧಾ ಪಂಚಧಾ ಪಂಚದಶಧಾ ಸಮಾನಾ ವಿಭಾಗಾಃ ಸಂತಿ। ಇಹ ಪಂಚಧಾ ವಿಭಾಗ ಆಶ್ರಿತಃ ॥ ಉತಾಪಿ ಚಾ ಯಾತಂ । ಆಗಚ್ಛತಂ । ಕದಾ । ಸಂಗವೇ ಸಂಗವಕಾಲೇ । ಸಂಗಚ್ಛಂತೇ ಗಾವೋ ದೋಹನಭೂಮಿಂ ಯಸ್ಮಿನ್ಕಾಲೇ ಸ ಸಂಗವಃ । ರಾತ್ರ್ಯಪರಕಾಲೇ ಹಿ ಗಾವೋ ವನೇ ಹಿಮತೃಣಾನಿ ಭಕ್ಷಯಿತ್ವಾ ಪುನರ್ದೋಹಾಯ ಸಂಗವೇ ಪ್ರತಿನಿವರ್ತಂತೇ । ತಥಾ ಪ್ರಾತಃಕಾಲೇಽಪಿ । ತಥಾ ಮಧ್ಯಂದಿನೇಽಹ್ನೋ ಮಧ್ಯಕಾಲೇ ಸೂರ್ಯಸ್ಯೋದಿತೋದಿತಾವಭ್ಯುದಯೇಽತ್ಯಂತಪ್ರವೃದ್ಧಸಮಯೇ। ಅಪರಾಹ್ಣ ಇತ್ಯರ್ಥಃ । ಏತತ್ಸಾಯಾಹ್ನಸ್ಯಾಪ್ಯುಪಲಕ್ಷಣಂ । ನ ಕೇವಲಮುಕ್ತೇಷ್ವೇವ ಕಾಲೇಷು ಕಿಂತರ್ಹಿ ದಿವಾ ನಕ್ತಂ ಸರ್ವದಾ ಶಂತಮೇನ ಸುಖತಮೇನಾವಸಾ ರಕ್ಷಣೇನ ಹವಿಷಾ ವಾ ನಿಮಿತ್ತೇನಾ ಯಾತಂ। ಕಿಮರ್ಥಮಾಗಮ್ಯತೇ ಪೂರ್ವಮೇವಾನ್ಯೈರ್ದೇವೈಃ ಸ್ವೀಕೃತತ್ವಾತ್ ನೇತ್ಯಾಹ। ಇದಾನೀಮಪಿ ಪೀತಿರಿತರದೇವಾನಾಂ ಪಾನಂ ನಾ ತತಾನ ನ ತನೋತ್ಯಶ್ವಿನಾಶ್ವಿನೌ ವಿಹಾಯೇತಿ ಶೇಷಃ ॥

॥ ಪ್ರತಿಪದಾರ್ಥ ॥

(ಎಲೈ ಅಶ್ವಿನೀದೇವತೆಗಳೇ) **ಸಂಗವೇ**—ಗೋವುಗಳು ಕರೆಯುವ ಕಾಲದಲ್ಲಾಗಲೀ । **ಪ್ರಾತಃ**—ಪ್ರಾತಃ ಕಾಲದಲ್ಲಾಗಲೀ । **ಮಧ್ಯಂದಿನೇ**—ಮಧ್ಯಾಹ್ನಕಾಲದಲ್ಲಿಯಾಗಲೀ । **ಸೂರ್ಯಸ್ಯ**—ಸೂರ್ಯನ । **ಉದಿತಾ**—

ಅಭ್ಯುದಯಕಾಲವಾದ ಸಾಯಂ ಸಮಯದಲ್ಲಾಗಲಿ | **ದಿವಾ ನಕ್ತಂ**—ಹಗಲು ಅಥವಾ ರಾತ್ರಿ ಇವೆರಡರಲ್ಲಿ ಯಾವ ಕಾಲದಲ್ಲಾಗಲಿ | **ಶಂತಮೇನ**—ಸುಖಭರಿತವಾದ | **ಅವಸಾ**—ರಕ್ಷಣೆಯೊಂದಿಗೆ | **ಆ ಯಾತಂ**—ಬನ್ನಿರಿ | **ಇದಾನೀಂ**—ಈ ಯಜ್ಞಕಾಲದಲ್ಲಿ | **ಪೀತಿಃ**—ಸೋಮಪಾನಕ್ಕೆ (ಆಹ್ವಾನವು) | **ಅಶ್ವಿನಾ**—ಅಶ್ವಿನೀದೇವತೆಗಳನ್ನು ಬಿಟ್ಟು | **ನ ಆ ತತಾನ**—ಇನ್ನಾವ ದೇವತೆಗೂ ವಿಸ್ತೃತವಾಗಿಲ್ಲ (ನಿರ್ದಿಷ್ಟವಾಗಿಲ್ಲ.)

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಗೋವುಗಳು ಕರೆಯುವ ಕಾಲದಲ್ಲಾಗಲಿ ಪ್ರಾತಃಕಾಲದಲ್ಲಾಗಲೀ ಮಧ್ಯಾಹ್ನ ಕಾಲದಲ್ಲಾಗಲೀ, ಸೂರ್ಯನ ಅಭ್ಯುದಯಕಾಲವಾದ ಸಾಯಂಸಮಯದಲ್ಲಾಗಲಿ ಹಗಲು ಅಥವಾ ರಾತ್ರಿ ಇವೆರಡರಲ್ಲಿ ಯಾವ ಕಾಲದಲ್ಲಾಗಲೀ ಸುಖಭರಿತವಾದ ರಕ್ಷಣೆಯೊಂದಿಗೆ ಬನ್ನಿರಿ. ಈ ಯಜ್ಞಕಾಲದಲ್ಲಿ ಸೋಮಪಾನಕ್ಕೆ ಆಹ್ವಾನವು ಅಶ್ವಿನೀದೇವತೆಗಳನ್ನು ಬಿಟ್ಟು ಇನ್ನಾವ ದೇವತೆಗೂ ವಿಸ್ತೃತವಾಗಿಲ್ಲ.

## English Translation

Whether you come at the (milking time) of the cattle, at the dawn of day, at noon, when the sum is high, or by day or by night, (come) with felicitious protection: the drinking of the Soma has not now extended beyond the Aswins.

॥ ಸಂಹಿತಾಪಾಠಃ ॥

ಇದಂ ಹಿ ವಾಂ ಪ್ರದಿವಿ ಸ್ಥಾನಮೋಕ ಇಮೇ ಗೃಹಾ ಅಶ್ವಿನೇದಂ ದುರೋಣಂ ।
ಆ ನೋ ದಿವೋ ಬೃಹತಃ ಪರ್ವತಾದಾದ್ಭ್ಯೋ ಯಾತಮಿಷಮೂರ್ಜಂ ವಹಂತಾ ॥ ೪ ॥

॥ ಪದಪಾಠಃ ॥

ಇದಂ । ಹಿ । ವಾಂ । ಪ್ರಽದಿವಿ । ಸ್ಥಾನಂ । ಓಕಃ । ಇಮೇ । ಗೃಹಾಃ । ಅಶ್ವಿನಾ । ಇದಂ । ದುರೋಣಂ ।
ಆ । ನಃ । ದಿವಃ । ಬೃಹತಃ । ಪರ್ವತಾತ್ । ಆ । ಅತ್ಽಭ್ಯಃ । ಯಾತಂ । ಇಷಂ । ಊರ್ಜಂ । ವಹಂತಾ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾ ವಾಂ ಯುವಯೋಃ ಪ್ರದಿವಿ ಪುರಾಣಮಿದಂ ಹ್ಯೋಕೋ ನಿವಾಸಯೋಗ್ಯಂ ಸ್ಥಾನಮುತ್ತರವೇದ್ಯಾಖ್ಯಂ । ಅಥ ಸೌಮಿಕವೇದ್ಯಭಿಪ್ರಾಯೇಣಾಹ । ಇಮೇ ಗೃಹಾಃ ಪ್ರಾಚೀನವಂಶಾ-

**ಪಯಃ । ಇದಂ ದುರೋಣಂ ದೇವಯಜನಗೃಹಂ । ಸೋಽಸ್ಮದರ್ಥಂ ದಿವೋ ದ್ಯುಲೋಕಾದ್ಬೃಹತಃ ಪರ್ವತಾತ್ ಪರ್ವವತೋ ಮೇಘಾದದ್ಭ್ಯೋಽಪಾಂ ಕಾರಣಾದಂತರಿಕ್ಷಾದಾ ಯಾತಂ । ಆಗಚ್ಛತಂ । ಕಿಂ ತೂಷ್ಣೀಂ । ನ । ಇಷಮೂರ್ಜಂ ಚಾನ್ನಂ ಬಲಂ ಚ । ಬಲಸಾಧನಮನ್ನಂ ಸಾರಭೂತಮಿತ್ಯರ್ಥಃ । ತಾದೃಶಂ ವಹಂತಾ ವಹಂತೌ ॥**

॥ ಪ್ರತಿಪದಾರ್ಥ ॥

**ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ಇದಂ ಹಿ**—ಈ ಪ್ರದೇಶವೇ । **ವಾಂ**—ನಿಮಗೆ । **ಪ್ರದಿವಿ**—ಪುರಾತನವಾದುದೂ । **ಓಕಃ**—ನಿವಾಸಕ್ಕೆ ಯೋಗ್ಯವಾದುದೂ ಆದ । **ಸ್ಥಾನಂ**—ಸ್ಥಾನವಾಗಿದೆ । **ಇಮೇ**—ಇವೇ । **ಗೃಹಾಃ**—ಗೃಹಗಳು । **ಇದಂ**—ಇದೇ । **ದುರೋಣಂ**—ಯಜ್ಞಸ್ಥಾನವು । **ಬೃಹತಃ**—ಮಹತ್ತಾದುದೂ । **ಅದ್ಭ್ಯಃ**—ಉದಕಪೂರಿತವಾದುದೂ । **ಪರ್ವತಾತ್**—ಮೇಘಾಚ್ಛನ್ನವಾದುದೂ ಆದ । **ದಿವಃ**—ದ್ಯುಲೋಕದಿಂದ **ನಃ**—ನಮಗೋಸ್ಕರ । **ಇಷಂ**—ಅನ್ನವನ್ನೂ । **ಊರ್ಜಂ**—ಶಕ್ತಿಯನ್ನೂ । **ವಹಂತಾ**—ಧರಿಸಿಕೊಂಡು **ಆ ಯಾತಂ**—ಬನ್ನಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಈ ಪ್ರದೇಶವೇ ನಿಮಗೆ ಪುರಾತನವಾದುದೂ ನಿವಾಸಕ್ಕೆ ಯೋಗ್ಯವಾದುದೂ ಆದ ಸ್ಥಾನವಾಗಿದೆ. ಇವೇ ನಿಮ್ಮ ಗೃಹಗಳು, ಇದೇ ನಿಮ್ಮ ಯಜ್ಞಸ್ಥಾನವು. ಮಹತ್ತಾದುದೂ, ಉದಕಪೂರಿತವಾದುದೂ ಮೇಘಾಚ್ಛನ್ನವಾದುದೂ ಆದ ದ್ಯುಲೋಕದಿಂದ ನಮಗೋಸ್ಕರ ಅನ್ನವನ್ನೂ, ಶಕ್ತಿಯನ್ನೂ ಧರಿಸಿಕೊಂಡು ಬನ್ನಿರಿ.

## English Translation.

This station, Aswins, is your ancient abode; these are your mansions, this your dwelling: come from the vast firmament, (overspread) by clouds (filled) with water, bringing to us food and strength.

॥ ಸಂಹಿತಾಪಾಠಃ ॥

ಸಮಶ್ವಿನೋರವಸಾ ನೂತನೇನ ಮಯೋಭುವಾ ಸುಪ್ರಣೀತೀ ಗಮೇಮ ।
ಆ ನೋ ರಯಿಂ ವಹತಮೋತ ವೀರಾನಾ ವಿಶ್ವಾನ್ಯಮೃತಾ ಸೌಭಗಾನಿ ॥೫॥

॥ ಪದಪಾಠಃ ॥

**ಸಂ । ಅಶ್ವಿನೋಃ । ಅವಸಾ । ನೂತನೇನ । ಮಯಃಽಭುವಾ । ಸುಽಪ್ರನೀತೀ । ಗಮೇಮ ।**

**ಆ । ನಃ । ರಯಿಂ । ವಹತಂ । ಆ । ಉತ । ವೀರಾನ್ । ಆ । ವಿಶ್ವಾನಿ । ಅಮೃತಾ । ಸೌಭಗಾನಿ ॥ ೫ ॥**

॥ ಸಾಯಣಭಾಷ್ಯಂ ॥

ವಯಂ ಸಂ ಗಮೇಮ ಸಂಗಚ್ಛೇಮಾಶ್ವಿನೋರ್ನೂತನೇನಾವಸಾನನ್ಯಕೃತೇನ ರಕ್ಷಣೇನ ಮಯೋಭುವಾ ಸುಖಸ್ಯ ಭಾವಯಿತ್ರ್ಯಾ ಸುಪ್ರಣೀತೀ ಸುಪ್ರಣೀತ್ಯಾ ಸುಷ್ಠ್ವಾಗಮನೇನ ಚ । ಅಪಿ ವೈತೇ ಉಭೇ ಅವಸೋ ವಿಶೇಷಣೇ । ಉಕ್ತಲಕ್ಷಣೇನ ಸಂ ಗಮೇಮ । ನೋಽಸ್ಮಭ್ಯಂ ರಯಿಮಾ ವಹತಂ । ಉತ ವೀರಾನ್ ಪುತ್ರಾದೀನಾ ವಹತಂ । ಹೇ ಅಮೃತಾವಮರಣಧರ್ಮಾಣೌ ವಿಶ್ವಾನಿ ಸೌಭಗಾನಿ ಸುಭಗತ್ವಾನ್ಯಾ ವಹತಂ ॥

॥ ಪ್ರತಿಪದಾರ್ಥ ॥

(**ವಯಂ**—ನಾವು) । **ಅಶ್ವಿನೋಃ**—ಅಶ್ವಿನೀದೇವತೆಗಳ । **ನೂತನೇನ**—ನೂತನವಾದುದೂ । **ಮಯೋಭುವಾ**—ಸುಖಕಾರಕವಾದುದೂ । **ಸುಪ್ರಣೀತೀ**—ಶ್ರೇಷ್ಠವಾದ ಮಾರ್ಗದರ್ಶಕವಾದುದೂ ಆದ । **ಅವಸಾ**—ರಕ್ಷಣೆಯೊಂದಿಗೆ । **ಸಂ ಗಮೇಮ**—ಒಟ್ಟಿಗೆ ಸೇರಿಕೊಳ್ಳುವಂತಾಗಲಿ । **ಅಮೃತಾ**—ಮರಣಧರ್ಮರಹಿತರಾದ ಎಲೈ ಅಶ್ವಿನಿಗಳೇ । **ನಃ**—ನಮಗೆ । **ವಿಶ್ವಾನಿ**—ಸಮಸ್ತವಾದ । **ಸೌಭಗಾನಿ**—ಸನ್ಮಂಗಳಸಾಧಕವಾದ ವಸ್ತುಗಳನ್ನು । **ಆ ವಹತಂ**—ತಂದುಕೊಡಿರಿ । **ರಯಿಂ**—ಧನವನ್ನು । **ಆ (ವಹತಂ)**—ಒದಗಿಸಿರಿ । **ಉತ**—ಮತ್ತು । **ವೀರಾನ್**—ವೀರಪುತ್ರಾದಿಗಳನ್ನು । **ಆ (ವಹತಂ)**—ಅನುಗ್ರಹಿಸಿರಿ.

॥ ಭಾವಾರ್ಥ ॥

ಅಶ್ವಿನೀದೇವತೆಗಳ ನೂತನವಾದುದೂ, ಸುಖಕಾರಕವಾದುದೂ, ಶ್ರೇಷ್ಠವಾದ ಮಾರ್ಗದರ್ಶಕವಾದುದೂ ಆದ ರಕ್ಷಣೆಯೊಂದಿಗೆ ನಾವು ಒಟ್ಟಿಗೆ ಸೇರಿಕೊಳ್ಳುವಂತಾಗಲಿ. ಮರಣಧರ್ಮರಹಿತರಾದ ಎಲೈ ಅಶ್ವಿನಿಗಳೇ, ನಮಗೆ ಸಮಸ್ತವಾದ ಸನ್ಮಂಗಳಗಳನ್ನೂ ಉಂಟುಮಾಡಿರಿ. ಧನವನ್ನು ಒದಗಿಸಿರಿ. ವೀರಪುತ್ರಾದಿಗಳನ್ನನುಗ್ರಹಿಸಿರಿ.

## English Translation.

May we be united with the Aswins by their special protection, which is the source of happiness and guide to good: bestow upon us, immortals, wealth and posterity, and all good things.

# ಎಪ್ಪತ್ತೇಳನೆಯ ಸೂಕ್ತವು

॥ ಸಾಯಣಭಾಷ್ಯಂ ॥

ಪ್ರಾತರ್ಯಾವಾಣೇತಿ ಪಂಚರ್ಚಂ ಪಂಚಮಂ ಸೂಕ್ತಮಾತ್ರೇಯಂ ತ್ರೈಷ್ಟುಭಮಾಶ್ವಿನಂ । ಪ್ರಾತರ್ಯಾವಾಣೇತಿ ಹ್ಯನುಕ್ರಾಂತಂ॥ ಪ್ರಾತರನುವಾಕಾಶ್ವಿನಶಸ್ತ್ರಯೋಃ ಪೂರ್ವಸೂಕ್ತೇನ ಸಹೋಕ್ತೋ ವಿನಿಯೋಗಃ ॥ ಅಪ್ತೋರ್ಯಾಮೇ ಮೈತ್ರಾವರುಣಾತಿರಿಕ್ತೋಕ್ಥ್ಯ ಇದಮೇವ ಶಸ್ಯಂ । ತಥಾ ಚ ಸೂತ್ರಿತಂ । ಪ್ರಾತರ್ಯಾವಾಣಾ ಕ್ಷೇತ್ರಸ್ಯ ಪತೇ ಮಧುಮಂತಮೂರ್ಮಿಂ । ಆ. ೯-೧೧ । ಇತಿ ॥

ಅನುವಾದವು—**ಪ್ರಾತರ್ಯಾವಾಣಾ** ಎಂಬ ಈ ಸೂಕ್ತವು ಆರನೆಯ ಅನುವಾಕದಲ್ಲಿ ಐದನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಮಂಡಲದ್ರಷ್ಟೃವಾದ ಅತ್ರಿಯು ಋಷಿಯು; ಅಶ್ವಿನೀದೇವತೆಗಳು ದೇವತೆಯು; ತ್ರಿಷ್ಟುಪ್‌ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಪ್ರಾತರ್ಯಾವಾಣಾ** ಎಂದು ಮೊದಲಾಗಿ ಹೇಳಿರುವುದು. ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರಮಂತ್ರಪಠನಕ್ಕಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಹಿಂದಿನ ಸೂಕ್ತದ ವಿನಿಯೋಗದಲ್ಲಿಯೇ ಹೇಳಲಾಗಿದೆ; **ಅಪ್ತೋರ್ಯಾಮ**ವೆಂಬ ಯಾಗದಲ್ಲಿ ಮೈತ್ರಾವರುಣನೆಂಬ ಋತ್ವಿಜನು ಪಠಿಸುವ **ಅತಿರಿಕ್ತೋಕ್ಥ್ಯ**ವೆಂಬ ಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತ ಸೂತ್ರದ—**ಪ್ರಾತರ್ಯಾವಾಣಾ ಕ್ಷೇತ್ರಸ್ಯ ಪತೇ ಮಧುಮಂತಮೂರ್ಮಿಂ** ಎಂಬ ಸೂತ್ರದಿಂದ (ಆ. ೯-೧೧) ವಿವೃತವಾಗಿರುವುದು.

## ಸೂಕ್ತ ೭೭

ಮಂಡಲ—೫ ॥ ಅನುವಾಕ—೬ ॥ ಸೂಕ್ತ—೭೭ ॥
ಅಷ್ಟಕ—೪ ॥ ಅಧ್ಯಾಯ—೪ ॥ ವರ್ಗ—೧೮ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೫ ॥
॥ ಋಷಿಃ—ಅತ್ರಿಃ ॥
॥ ದೇವತಾ—ಅಶ್ವಿನೌ ॥
॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಪ್ರಾತರ್ಯಾವಾಣಾ ಪ್ರಥಮಾ ಯಜಧ್ವಂ ಪುರಾ ಗೃಧ್ರಾದರರುಷಃ ಪಿಬಾತಃ।
ಪ್ರಾತರ್ಹಿ ಯಜ್ಞಮಶ್ವಿನಾ ದಧಾತೇ ಪ್ರ ಶಂಸಂತಿ ಕವಯಃ ಪೂರ್ವಭಾಜಃ॥

॥ ಪದಪಾಠಃ ॥

ಪ್ರಾತಃऽಯಾವಾನಾ । ಪ್ರಥಮಾ । ಯಜಧ್ವಂ । ಪುರಾ । ಗೃಧ್ರಾತ್ । ಅರರುಷಃ । ಪಿಬಾತಃ ।
ಪ್ರಾತಃ । ಹಿ । ಯಜ್ಞಂ । ಅಶ್ವಿನಾ । ದಧಾತೇ ಇತಿ । ಪ್ರ । ಶಂಸಂತಿ । ಕವಯಃ । ಪೂರ್ವऽಭಾಜಃ ॥೧॥

॥ ಸಾಯಣಭಾಷ್ಯಂ ॥

ಹೇ ಮದೀಯಾ ಋತ್ವಿಜಃ ಪ್ರಾತರ್ಯಾವಾಣಾ ಪ್ರಾತರೇವ ಯಜ್ಞಗಂತಾರೌ ಪ್ರಥಮಾತ ಏವೇತರೇಭ್ಯೋ ದೇವೇಭ್ಯಃ ಪೂರ್ವಭಾವಿನೌ ಪ್ರಕೃಷ್ಟತಮೌ ವಾಶ್ವಿನೌ ಯಜಧ್ವಂ । ಕಿಮರ್ಥಂ । ಪ್ರಥಮಯಾಗ ನಿಯೋಗ ಉಚ್ಯತೇ । ಗೃಧ್ರಾದಭಿಕಾಂಕ್ಷತೋಽರರುಷೋಽದಾತೂ ರಕ್ಷಃಪ್ರಭೃತೇಃ ಪುರಾ ಪೂರ್ವಂ ಪಿಬಾತಃ । ಪಿಬತಾಂ । ಅನಾಗತೌ ಕಥಂ ಯುಷ್ಮಾಂ ಶಕ್ಯಾವಿತ್ಯತ ಆಹ । ಅಶ್ವಿನಾಶ್ವಿನೌ

**ಪ್ರಾತರ್ಹಿ ಯಜ್ಞಂ ದಧಾತೇ । ಧಾರಯತಃ । ಸಂಭಜತಃ । ಪೂರ್ವಭಾಜಃ ಪೂರ್ವಕಾಲೀನಾಃ ಕವಯೋಽನೂಚಾನಾ ಋಷಯಃ ಪ್ರಾತರೇವೈತೌ ಪ್ರ ಶಂಸಂತಿ । ಯೇ ವಾ ಅನೂಚಾನಾಸ್ತೇ ಕವಯಃ । ಐ. ಬ್ರಾ. ೨-೩೮ । ಇತಿ ಹಿ ನಿಗಮಃ ॥**

**। ಪ್ರತಿಪದಾರ್ಥ ।**

**ಪ್ರಥಮಾ**— ಇತರ ದೇವತೆಗಳಿಗಿಂತಲೂ ಪೂರ್ವಭಾವಿಯಾಗಿ । **ಪ್ರಾಯರ್ಾವಾಣಾ**— ಪ್ರಾತಃಕಾಲದಲ್ಲೇ ಆಗಮಿಸುವ ಅಶ್ವಿನೀದೇವತೆಗಳನ್ನುದ್ದೇಶಿಸಿ । **ಯಜಧ್ವಂ**— ಯಾಗವನ್ನಾಚರಿಸಿರಿ । **ಗೃಧ್ರಾತ್**— ದುರಾಸೆಯುಳ್ಳವನೂ । **ಅರರುಷಃ**— ನಿರೋಧಕನೂ ಆದ ರಾಕ್ಷಸನಿಗಿಂತಲೂ । **ಪುರಾ**— ಪೂರ್ವಭಾವಿಯಾಗಿಯೇ । **ಪಿಬಾತಃ**— ಅವರು ಸೋಮವನ್ನು ಪಾನಮಾಡಲಿ । **ಅಶ್ವಿನಾ**— ಅಶ್ವಿನೀದೇವತೆಗಳು । **ಪ್ರಾತರ್ಹಿ**— ಪ್ರಾತಃಕಾಲದಲ್ಲಿಯೇ । **ಯಜ್ಞಂ**— ಯಜ್ಞಭಾಗವನ್ನು । **ದಧಾತೇ**— ವಹಿಸುತ್ತಾರೆ । **ಪೂರ್ವಭಾಜಃ**— ಪೂರ್ವಕಾಲೀನರಾದ । **ಕವಯಃ**— ಋಷಿಗಳೂ ಕೂಡ । **ಪ್ರ ಶಂಸಂತಿ**— ಅವರನ್ನು ಪ್ರಾತಃಕಾಲದಲ್ಲಿಯೇ ಪ್ರಶಂಸಿಸುತ್ತಾರೆ.

**॥ ಭಾವಾರ್ಥ ॥**

ಇತರ ದೇವತೆಗಳಿಗಿಂತಲೂ ಪೂರ್ವಭಾವಿಯಾಗಿ ಪ್ರಾತಃಕಾಲದಲ್ಲೇ ಆಗಮಿಸುವ ಅಶ್ವಿನೀದೇವತೆಗಳನ್ನುದ್ದೇಶಿಸಿ ಯಾಗವನ್ನಾಚರಿಸಿ. ದುರಾಸೆಯುಳ್ಳವನೂ, ನಿರೋಧಕನೂ ಆದ ರಾಕ್ಷಸನಿಗಿಂತಲೂ ಪೂರ್ವಭಾವಿಯಾಗಿಯೇ ಅವರು ಸೋಮವನ್ನು ಪಾನಮಾಡಲಿ. ಅಶ್ವಿನೀದೇವತೆಗಳು ಪ್ರಾತಃಕಾಲದಲ್ಲಿಯೇ ಯಜ್ಞಭಾಗವನ್ನು ವಹಿಸುತ್ತಾರೆ. ಪೂರ್ವಕಾಲೀನರಾದ ಋಷಿಗಳೂ ಕೂಡ ಅವರನ್ನು ಪ್ರಾತಃಕಾಲದಲ್ಲಿಯೇ ಪ್ರಶಂಸಿಸುತ್ತಾರೆ.

## Enlish Translation.

Worship the two who come first (of the gods) at dawn: let them drink before the greedy withholders (of the offering); for the Aswins verily claim the morning sacrifice: the ancient sages praised them (at dawn).

**। ಸಂಹಿತಾಪಾಠಃ ।**

ಪ್ರಾತರ್ಯಜಧ್ವಮಶ್ವಿನಾ ಹಿನೋತ ನ ಸಾಯಮಸ್ತಿ ದೇವಯಾ ಅಜುಷ್ಟಂ।
ಉತಾನ್ಯೋ ಅಸ್ಮದ್ಯಜತೇ ವಿ ಚಾವಃ ಪೂರ್ವಃಪೂರ್ವೋ ಯಜಮಾನೋ
ವನೀಯಾನ್ ॥ ೨ ॥

॥ ಪದಪಾಠಃ ॥

ಪ್ರಾತಃ । ಯಜಧ್ವಂ । ಅಶ್ವಿನಾ । ಹಿನೋತ । ನ । ಸಾಯಂ । ಅಸ್ತಿ । ದೇವऽಯಾಃ । ಅಜುಷ್ಟಂ ।

ಉತ । ಅನ್ಯಃ । ಅಸ್ಮತ್ । ಯಜತೇ । ವಿ । ಚ । ಆವಃ । ಪೂರ್ವಃऽಪೂರ್ವಃ । ಯಜಮಾನಃ । ವನೀಯಾನ್ ॥ ೨ ॥

॥ ಸಾಯಣಭಾಷ್ಯಂ ॥

ಹೇ ಮದೀಯಾಃ ಪುರುಷಾ ಅಶ್ವಿನಾಶ್ವಿನೌ ಪ್ರಾತಃ ಪ್ರಾತರೇವ ಯಜಧ್ವಂ । ಪೂಜಯಧ್ವಂ । ಸ್ತುಧ್ವಂ । ಹಿನೋತ । ಪ್ರಹಿಣುತ ಹವೀಂಷಿ । ಸಾಯಂ ಸಾಯಂಕಾಲೇ ಹವಿರ್ದೇವಯಾ ದೇವಗಾಮಿ ನಾಸ್ತಿ । ನ ವಿದ್ಯತೇ । ದೇವಾ ನ ಸ್ವೀಕುರ್ವಂತೀತ್ಯರ್ಥಃ । ಅಜುಷ್ಟಮಸೇವ್ಯಂ ತದ್ಭವತಿ । ಪೂರ್ವಾಹ್ಣೋ ವೈ ದೇವಾನಾಮಿತಿ ಹಿ ಶ್ರುತಿಃ । ಉತಾಸ್ಮದಸ್ಮತ್ತೋಽನ್ಯಃ ಕೋಽಪಿ ಯಜತೇ ಯಜೇತ ಸೋಮೇನ ವಿ ಚಾವಃ ವಿತರ್ಪಯೇಚ್ಚ ಹವಿಷಾ । ಅತೋಽಸ್ಮಾಸ್ವನ್ಯೇಷು ಚ ಮಧ್ಯೇ ಪೂರ್ವಃ ಪೂರ್ವೋ ಯಜಮಾನೋ ಯಃ ಪೂರ್ವಃ ಪೂರ್ವೋ ಯಷ್ಟಾ ಭವತಿ ಸ ವನೀಯಾನ್ ದೇವಾನಾಂ ಸಂಭಜನೀಯಃ ಸಂಭಾವ್ಯೋ ಭವತಿ ॥

॥ ಪ್ರತಿಪದಾರ್ಥ ॥

**ಅಶ್ವಿನಾ**—ಅಶ್ವಿನೀದೇವತೆಗಳನ್ನುದ್ದೇಶಿಸಿ । **ಪ್ರಾತಃ**—ಪ್ರಾತಃಕಾಲದಲ್ಲಿಯೇ । **ಯಜಧ್ವಂ**—ಪೂಜೆಯನ್ನರ್ಪಿಸಿ । **ಹಿನೋತ**—ಹವಿಸ್ಸುಗಳನ್ನೂ ಅರ್ಪಿಸಿರಿ । **ಸಾಯಂ**—ಸಾಯಂಕಾಲದಲ್ಲಿ ಅರ್ಪಿಸಿದ ಹವಿಸ್ಸು । **ದೇವಯಾಃ**—ದೇವತೆಗಳಿಗೆ ಪ್ರೀತಿಕರವಾಗಿ । **ನ ಅಸ್ತಿ**—ಇರುವುದಿಲ್ಲ । **ಅಜುಷ್ಟಂ**—ಆ ಕಾಲದಲ್ಲಿ ಅರ್ಪಿಸಿದ ಹವಿಸ್ಸು ಸೇವಿಸಲು ಯೋಗ್ಯವಾಗಿರುವುದಿಲ್ಲ । **ಉತ**—ಅಲ್ಲದೇ । **ಅಸ್ಮತ್**—ನಮಗಿಂತಲೂ । **ಅನ್ಯಃ**—ಬೇರೆಯ ಪುರುಷನು । **ಯಜತೇ**—ಒಂದು ವೇಳೆ ಪೂಜಿಸಿದರೂ । **ವಿ ಚಾವಃ**—ಅಥವಾ ಹವಿಸ್ಸನ್ನರ್ಪಿಸಿದರೂ (ನಮ್ಮಲ್ಲಾಗಲಿ ಅಥವಾ ಬೇರೆಯವರಲ್ಲಾಗಲಿ) । **ಪೂರ್ವಃ ಪೂರ್ವಃ**—ಎಲ್ಲರಿಗಿಂತಲೂ ಮೊದಲು ಅರ್ಪಿಸಿದ । **ಯಜಮಾನಃ**—ಯಜಮಾನನು । **ವನೀಯಾನ್**—ದೇವತೆಗಳಿಗೆ ಪ್ರೀತಿಪಾತ್ರನಾಗಿರುತ್ತಾನೆ.

॥ ಭಾವಾರ್ಥ ॥

ಅಶ್ವಿನೀದೇವತೆಗಳನ್ನುದ್ದೇಶಿಸಿ ಪ್ರಾತಃಕಾಲದಲ್ಲಿಯೇ, ಪೂಜಾಯೋಗ್ಯವಾದ ಸ್ತುತಿಯನ್ನೂ, ಹವಿಸ್ಸನ್ನೂ ಅರ್ಪಿಸಿರಿ. ಸಾಯಂಕಾಲದಲ್ಲಿ ಅರ್ಪಿಸಿದ ಹವಿಸ್ಸು ದೇವತೆಗಳಿಗೆ ಪ್ರೀತಿಕರವಾಗಿರುವುದಿಲ್ಲ. ಆ ಕಾಲದಲ್ಲಿ ಅರ್ಪಿಸಿದ ಹವಿಸ್ಸು ಸೇವಿಸಲು ಯೋಗ್ಯವಾಗಿರುವುದಿಲ್ಲ. ಅಲ್ಲದೇ, ನಮಗಿಂತಲೂ ಬೇರೆಯವನು ಒಂದುವೇಳೆ ಪೂಜಿಸಿದರೂ, ಅಥವಾ ಹವಿಸ್ಸನ್ನರ್ಪಿಸಿದರೂ ಸಹ ನಮ್ಮಲ್ಲಾಗಲಿ ಅಥವಾ ಬೇರೆಯವರಲ್ಲಾಗಲಿ ಎಲ್ಲರಿಗಿಂತಲೂ ಮೊದಲು ಅರ್ಪಿಸಿದ ಯಜಮಾನನು ಈ ದೇವತೆಗಳ ಪ್ರೀತಿಗೆ ಪಾತ್ರನಾಗುತ್ತಾನೆ.

## English Translation.

Worship the Aswins at early dawn; offer them oblations: the evening is not for the gods; it is unacceptable to them; and whether it be

any other than ourselves who worships them or propitiates them, the worshipper who is foremost (in his dovotion) is the most approved of.

॥ ಸಂಹಿತಾಪಾಠಃ ॥

ಹಿರಣ್ಯತ್ವಙ್ಮಧುವರ್ಣೋ ಘೃತಸ್ನುಃ ಪೃಕ್ಷೋ ವಹನ್ನಾ ರಥೋ ವರ್ತತೇ ವಾಂ ।
ಮನೋಜವಾ ಅಶ್ವಿನಾ ವಾತರಂಹಾ ಯೇನಾತಿಯಾಥೋ ದುರಿತಾನಿ ವಿಶ್ವಾ ॥

॥ ಪದಪಾಠಃ ॥

ಹಿರಣ್ಯಽತ್ವಕ್ । ಮಧುಽವರ್ಣಃ । ಘೃತಽಸ್ನುಃ । ಪೃಕ್ಷಃ । ವಹನ್ । ಆ । ರಥಃ । ವರ್ತತೇ । ವಾಂ ।
ಮನಃಽಜವಾಃ । ಅಶ್ವಿನಾ । ವಾತಽರಂಹಾಃ । ಯೇನ । ಅತಿಽಯಾಥಃ । ದುಃಽಇತಾನಿ । ವಿಶ್ವಾ ॥ ೩ ॥

॥ ಸಾಯಣಭಾಷ್ಯಂ ॥

ಹಿರಣ್ಯತ್ವಗಿತ್ಯೇಷಾಶ್ವಿನೇ ಪಶೌ ಹವಿಷೋ ಯಾಜ್ಯಾ । ಹಿರಣ್ಯತ್ವಙ್ಮಧುವರ್ಣೋ ಘೃತಸ್ನುರಭಿ ಕ್ರತ್ವೇಂದ್ರ ಭೂರಧ ಜ್ಮನ್ । ಆ. ೩-೮ । ಇತಿ ಹಿ ಸೂತ್ರಿತಂ ॥

ವಾಂ ಯುವಯೋಃ ರಥಃ ಪೃಕ್ಷೋಽನ್ನಮನ್ನುತಂ ವಹನ್ನಾ ವರ್ತತೇ । ಅಸ್ಮದಭಿಮುಖಮಾಗಚ್ಛತಿ । ಕೀದೃಶೋ ರಥಃ । ಹಿರಣ್ಯತ್ವಕ್ ಹಿರಣ್ಯಾಚ್ಛಾದಿತರೂಪೋ ಹಿರಣ್ಯಾವೃತೋ ಮಧುವರ್ಣೋ ಮನೋಹರವರ್ಣೋ ಘೃತಸ್ನುರುದಕಸ್ಯ ಪ್ರಸ್ನವನೋ ಮನೋಜವಾ ಮನೋವೇಗೋ ವಾತರಂಹಾ ವಾತಸದೃಶವೇಗಃ । ಹೇ ಅಶ್ವಿನಾ ಯೇನ ರಥೇನ ವಿಶ್ವಾ ಸರ್ವಾಣಿ ದುರಿತಾನಿ ದುರ್ಗಮನಾನ್ಮಾರ್ಗಾನತಿಯಾಥಃ ಅತಿಕ್ರಮ್ಯ ಗಚ್ಛಥಃ ॥

। ಪ್ರತಿಪದಾರ್ಥ ।

**ಅಶ್ವಿನಾ**— ಎಲೈ ಅಶ್ವಿನೀದೇವತೆಗಳೇ । **ಯೇನ**—ಯಾವ ರಥದಿಂದ । **ವಿಶ್ವಾ**—ಸಮಸ್ತವಾದ **ದುರಿತಾನಿ**— ಇತರರಿಂದ ದಾಟಲು ಸಾಧ್ಯವಿಲ್ಲದ ಮಾರ್ಗಗಳನ್ನೂ ಸಹ । **ಅತಿಯಾಥಃ**—ಅತಿಕ್ರಮಿಸಿ ಹೋಗುವಿರೋ (ಅಂತಹ) । **ಹಿರಣ್ಯತ್ವಕ್**—ಸುವರ್ಣಮಯವಾದ ಆಚ್ಛಾದನವುಳ್ಳದ್ದೂ । **ಮಧುವರ್ಣಃ**—ಮನೋಹರವಾದ ರೂಪವುಳ್ಳದ್ದೂ । **ಘೃತಸ್ನುಃ**—ಉದಕವನ್ನು ಸ್ರವಿಸತಕ್ಕದ್ದೂ । **ಮನೋಜವಾಃ**—ಮನಸ್ಸಿನ ವೇಗವುಳ್ಳದ್ದೂ । **ವಾತರಂಹಾಃ**—ವಾಯುವಿನಂತೆ ಶೀಘ್ರಗಾಮಿಯಾದದ್ದೂ ಆದ । **ವಾಂ ರಥಃ**—ನಿಮ್ಮ ರಥವು । **ಪೃಕ್ಷಃ**- ಅನ್ನವನ್ನು । **ವಹನ್**—ವಹಿಸಿಕೊಂಡು । **ಆ ವರ್ತತೇ**—ನಮಗಭಿಮುಖವಾಗಿ ಬರುತ್ತದೆ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಯಾವ ರಥದಿಂದ ಇತರರಿಂದ ದಾಟಲು ಸಾಧ್ಯವಿಲ್ಲದ ಸಮಸ್ತ ಮಾರ್ಗಗಳನ್ನೂ ಅತಿಕ್ರಮಿಸಿ ಹೋಗುವಿರೋ ಅಂತಹ ಸುವರ್ಣಮಯವಾದ ಆಚ್ಛಾದನವುಳ್ಳದ್ದೂ, ಉದಕವನ್ನು ಪ್ರವಿಸತಕ್ಕದ್ದೂ, ಮನಸ್ಸಿನ ವೇಗವುಳ್ಳದ್ದೂ, ವಾಯುವಿನಂತೆ ಶೀಘ್ರಗಾಮಿಯಾದದ್ದೂ ಆದ ನಿಮ್ಮ ರಥವು ಅನ್ನವನ್ನು ವಹಿಸಿಕೊಂಡು ನಮಗಭಿಮುಖವಾಗಿ ಬರುತ್ತದೆ.

## English Translation.

Your car, Aswins, approaches, coated with gold, honey-tinted, water-shedding, laden with ambrosia, as quick as thought, as rapid as the wind, wherewith you pass over all obstacles.

॥ ವಿಶೇಷವಿಷಯಗಳು ॥

**ಹಿರಣ್ಯತ್ವಕ್** ಎಂಬ ಈ ಋಕ್ಕನ್ನು ಅಶ್ವಿನೀದೇವತೆಗಳನ್ನುದ್ದೇಶಿಸಿ ಮಾಡುವ ಪಶುಯಾಗದಲ್ಲಿ ಹವಿಸ್ಸನ್ನು ಹೋಮಮಾಡುವಾಗ ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ— **ಹಿರಣ್ಯತ್ವಙ್ಮಧುವರ್ಣೋ ಘೃತಸ್ನುರಭಿ ಕ್ರತ್ವೇಂದ್ರ ಭೂರಥ ಜ್ಮನ್** ಎಂಬ ಸೂತ್ರದಿಂದ (ಆ. ೩-೮) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

**ಯೋ ಭೂಯಿಷ್ಠಂ ನಾಸತ್ಯಾಭ್ಯಾಂ ವಿವೇಷ ಚನಿಷ್ಠಂ ಪಿತ್ವೋ ರರತೇ ವಿಭಾಗೇ ।**

**ಸ ತೋಕಮಸ್ಯ ಪೀಪರಚ್ಛಮೀಭಿರನೂರ್ಧ್ವಭಾಸಃ ಸದಮಿತ್ತುತುರ್ಯಾತ್ ॥**

॥ ಪದಪಾಠಃ ॥

ಯಃ । ಭೂಯಿಷ್ಠಂ । ನಾಸತ್ಯಾಭ್ಯಾಂ । ವಿವೇಷ । ಚನಿಷ್ಠಂ । ಪಿತ್ವಃ । ರರತೇ । ವಿಽಭಾಗೇ ।

ಸಃ । ತೋಕಂ । ಅಸ್ಯ । ಪೀಪರತ್ । ಶಮೀಭಿಃ । ಅನೂರ್ಧ್ವಽಭಾಸಃ । ಸದಂ । ಇತ್ । ತುತುರ್ಯಾತ್ ॥

॥ ಸಾಯಣಭಾಷ್ಯಂ ॥

ಯೋ ಯಜಮಾನೋ ವಿಭಾಗೇ ಹವಿರ್ವಿಭಾಗವತಿ ಯಾಗೇ ನಾಸತ್ಯಾಭ್ಯಾಮಶ್ವಿಭ್ಯಾಂ ಭೂಯಿಷ್ಠಂ ಚನಿಷ್ಠಂ । ಚನ ಇತ್ಯನ್ನನಾಮ । ನಿ. ೨-೧೭ । ಬಹ್ವನ್ನಂ ಕರ್ಮ ವಿವೇಷ ಕರೋತಿ ।

ಪಿತ್ವಃ ॥ ಕರ್ಮಣಿ ಷಷ್ಠೀ ॥ ಅನ್ನಂ ಚ ರರತೇ ದದಾತಿ ಸ ಯಜಮಾನೋಽಸ್ಯಾತ್ಮನ ಏವ ತೋಕಂ ಪುತ್ರಂ ಪಿಪರತ್ ಪಾಲಯೇತ್ ಶಮೀಭಿಃ ಕರ್ಮಭಿಃ । ಅನೂರ್ಧ್ವಭಾಸೋಽನುನ್ನತತೇಜಸ್ಕಾನ್ । ಯದ್ವಾ । ಊರ್ಧ್ವಭಾಸೋಽಗ್ನಯಃ । ಅಗ್ನಿರಹಿತಾನಯಷ್ಟೄನ್ ಸದಮಿತ್ ಸದೈವ ತುತುರ್ಯಾತ್ । ಹಿಂಸ್ಯಾತ್ ॥

॥ ಪ್ರತಿಪದಾರ್ಥ ॥

**ಯಃ**—ಯಾವ ಯಜಮಾನನು । **ವಿಭಾಗೇ**—ಹವಿಸ್ಸುಗಳನ್ನು ಹಂಚುವ ಯಜ್ಞದಲ್ಲಿ । **ನಾಸತ್ಯಾಭ್ಯಾಂ**—ಅಶ್ವಿನೀದೇವತೆಗಳನ್ನುದ್ದೇಶಿಸಿ । **ಭೂಯಿಷ್ಠಂ**—ಅಧಿಕವಾಗಿ । **ಚನಿಷ್ಠಂ**—ಅನ್ನಪೂರ್ಣವಾದ ಕರ್ಮವನ್ನು । **ವಿವೇಷ**—ಆಚರಿಸುವನೋ । **ಪಿತ್ವಃ**—ಅನ್ನವನ್ನು । **ರರತೇ**—ಅರ್ಪಿಸುವವನೋ । **ಸಃ**—ಅದೇ ಯಜಮಾನನು। **ಶಮೀಭಿಃ**—ತನ್ನ ಕರ್ಮಗಳಿಂದ । **ಅಸ್ಯ**—ತನ್ನ । **ತೋಕಂ**—ಪುತ್ರನನ್ನು । **ಪಿಪರತ್**—ಪಾಲಿಸುತ್ತಾನೆ (ಅಲ್ಲದೇ) । **ಅನೂರ್ಧ್ವಭಾಸಃ**—ಊರ್ಧ್ವತೇಜಸ್ಕನಾದ ಅಗ್ನಿಯನ್ನು ಪೂಜಿಸದೇ ಇರುವ ಕರ್ಮಭ್ರಷ್ಟರನ್ನು **ಸದಮಿತ್**—ಯಾವಾಗಲೂ । **ತುತುರ್ಯಾತ್**— ಹಿಂಸಿಸಲು ಶಕ್ತನಾಗುತ್ತಾನೆ.

॥ ಭಾವಾರ್ಥ ॥

ಯಾವ ಯಜಮಾನನು ಹವಿಸ್ಸುಗಳನ್ನು ಹಂಚುವ ಯಜ್ಞದಲ್ಲಿ ಅಶ್ವಿನೀದೇವತೆಗಳನ್ನುದ್ದೇಶಿಸಿ ಅಧಿಕವಾಗಿ ಅನ್ನಪೂರ್ಣವಾದ ಕರ್ಮವನ್ನು ಆಚರಿಸುವನೋ, ಅದೇ ಯಜಮಾನನು ತನ್ನ ಕರ್ಮಗಳಿಂದ ತನ್ನ ಪುತ್ರನನ್ನು ಪಾಲಿಸುತ್ತಾನೆ. ಅಲ್ಲದೇ. ಊರ್ಧ್ವತೇಜಸ್ಕನಾದ ಅಗ್ನಿಯನ್ನು ಪೂಜಿಸದೇ ಇರುವ ಕರ್ಮಭ್ರಷ್ಟರನ್ನು ಯಾವಾಗಲೂ ಹಿಂಸಿಸಲು ಶಕ್ತನಾಗುತ್ತಾನೆ.

## English Translation.

He who, in the appointment (of the offerings), presents to the Nasatyas the most ample (share) of (the sacrificial) food, who gives (them) the largest portion of the viands, secures, by his acts, the welfare of his, son, and ever has the advantage of those who light no sacred fires.

॥ ಸಂಹಿತಾಪಾಠಃ ॥

ಸಮಶ್ವಿನೋರವಸಾ ನೂತನೇನ ಮಯೋಭುವಾ ಸುಪ್ರಣೀತೀ ಗಮೇಮ ।

ಆ ನೋ ರಯಿಂ ವಹತಮೋತ ವೀರಾನಾ ವಿಶ್ವಾನ್ಯಮೃತಾ ಸೌಭಗಾನಿ ॥೫॥

॥ ಪದಪಾಠಃ ॥

ಸಂ । ಅಶ್ವಿನೋಃ । ಅವಸಾ । ನೂತನೇನ । ಮಯಃಽಭುವಾ । ಸುಽಪ್ರನೀತಿ । ಗಮೇಮ ।

ಆ । ನಃ । ರಯಿಂ । ವಹತಂ । ಆ । ಉತ । ವೀರಾನ್ । ಆ । ವಿಶ್ವಾನಿ । ಅಮೃತಾ । ಸೌಭಗಾನಿ ॥ ೫ ॥

॥ ಸಾಯಣಭಾಷ್ಯಂ ॥

ಈ ಋಕ್ಕಿನ ಭಾಷ್ಯವು 130 ನೇ ಪೇಜಿನಲ್ಲಿದೆ.

॥ ಪ್ರತಿಪದಾರ್ಥ ॥

**(ವಯಂ**—ನಾವು) । **ಅಶ್ವಿನೋಃ**—ಅಶ್ವಿನೀದೇವತೆಗಳ । **ನೂತನೇನ**—ನೂತನವಾದುದೂ । **ಮಯೋಭುವಾ**—ಸುಖಕಾರಕವಾದುದೂ । **ಸುಪ್ರಣೀತಾ**—ಶ್ರೇಷ್ಠವಾದ ಮಾರ್ಗದರ್ಶಕವಾದುದೂ ಆದ । **ಅವಸಾ**—ರಕ್ಷಣೆಯೊಂದಿಗೆ । **ಸಂ ಗಮೇಮ**—ಒಟ್ಟಿಗೆ ಸೇರಿಕೊಳ್ಳುವಂತಾಗಲಿ । **ಅಮೃತಾ**—ಮರಣಧರ್ಮ ರಹಿತರಾದ ಎಲೈ ಅಶ್ವಿನಿಗಳೇ । **ನಃ**—ನಮಗೆ । **ವಿಶ್ವಾನಿ**—ಸಮಸ್ತವಾದ । **ಸೌಭಗಾನಿ**—ಸನ್ಮಂಗಳಸಾಧಕವಾದ ವಸ್ತುಗಳನ್ನು । **ಆ ವಹತಂ**—ತಂದುಕೊಡಿರಿ । **ರಯಿಂ**—ಧನವನ್ನು । **ಆ(ವಹತಂ)**—ಒದಗಿಸಿರಿ । **ಉತ**—ಮತ್ತು । **ವೀರಾನ್**—ವೀರ ಪುತ್ರಾದಿಗಳನ್ನು । **ಆ (ವಹತಂ)**—ಅನುಗ್ರಹಿಸಿರಿ.

॥ ಭಾವಾರ್ಥ ॥

ಅಶ್ವಿನೀದೇವತೆಗಳ ನೂತನವಾದುದೂ, ಸುಖಕಾರಕವಾದುದೂ, ಶ್ರೇಷ್ಠವಾದ ಮಾರ್ಗದರ್ಶಕವಾದುದೂ ಆದ ರಕ್ಷಣೆಯೊಂದಿಗೆ ಒಟ್ಟಿಗೆ ಸೇರಿಕೊಳ್ಳುವಂತಾಗಲಿ. ಮರಣಧರ್ಮರಹಿತರಾದ ಅಶ್ವಿನೀದೇವತೆಗಳೇ, ನಮಗೆ ಸಮಸ್ತವಾದ ಸನ್ಮಂಗಳಸಾಧಕವಾದ ವಸ್ತುಗಳನ್ನು ತಂದುಕೊಡಿರಿ, ಧನವನ್ನು ಒದಗಿಸಿರಿ. ಮತ್ತು ವೀರ ಪುತ್ರಾದಿಗಳನ್ನು ಅನುಗ್ರಹಿಸಿರಿ.

English Translation.

May we be united with the Aswins, by their special protection, which is the source of happiness, the guide to good: bestow upon us, immortals, wealth and all good things.

## ಎಪ್ಪತ್ತೆಂಟನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಅಶ್ವಿನಾವೇಹೇತಿ ನವರ್ಚಂ ಷಷ್ಠಂ ಸೂಕ್ತಂ । ಅತ್ರಾನುಕ್ರಮಣಿಕಾ । ಅಶ್ವಿನೌ ನವ ಸಪ್ತವಧ್ರಿಸ್ತ್ರ್ಯೃಷ್ಣಿಗಾದಿ ಚತುರ್ಥೀ ತ್ರಿಷ್ಟುಪ್ಪಂಚಾನುಷ್ಟುಭ ಇತಿ ಸಪ್ತವಧ್ರಿರ್ನಾಮಾತ್ರೇಯ ಋಷಿಃ । ಆದಿತಸ್ತಿಸ್ರ ಉಷ್ಣಿಹಶ್ಚತುರ್ಥೀ ತ್ರಿಷ್ಟುಪ್ ಶಿಷ್ಟಾಃ ಪಂಚಾನುಷ್ಟುಭಃ ॥ ಪ್ರಾತರನುವಾಕ ಆಶ್ವಿನೇ ಕ್ರತಾವೌಷ್ಣಿಹೇ**

**ಛಂದಸ್ಯಾಶ್ವಿನೇ ಶಸ್ತ್ರೇ ಚಾದ್ಯಸ್ತೃಚೋ ವಿನಿಯುಕ್ತಃ । ಸೂತ್ರಿತಂ ಚ । ಅಶ್ವಿನಾ ವರ್ತಿರಸ್ಮದಾಶ್ವಿನಾವೇಹ ಗಚ್ಛತಮಿತಿ ತೃಚೌ । ಆ. ೪-೧೫ । ಇತಿ ॥ ದಶರಾತ್ರೇ ತೃತೀಯೇಽಹನಿ ಪ್ರಉಗಶಸ್ತ್ರೇಽಯಮಾಶ್ವಿನಸ್ತೃಚಃ । ಸೂತ್ರಿತಂ ಚ । ಅಶ್ವಿನಾವೇಹ ಗಚ್ಛತಮಾ ಯಾಹ್ಯದ್ರಿಭಿಃ ಸುತಂ । ಆ. ೭-೧೦ । ಇತಿ ॥**

ಅನುವಾದವು—**ಅಶ್ವಿನಾವೇಹ** ಎಂಬ ಈ ಸೂಕ್ತವು ಆರನೆಯ ಅನುವಾಕದಲ್ಲಿ ಆರನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ—**ಅಶ್ವಿನೌ ನವ ಸಪ್ತವಧ್ರಿಸ್ತ್ರ್ಯುಷ್ಣಿಗಾದಿ ಚತುರ್ಥೀಂ ತ್ರಿಷ್ಟುಪ್ಪಂಚಾನುಷ್ಟುಭಃ** ಎಂದು ಹೇಳಿರುವುದು. ಈ ಸೂಕ್ತಕ್ಕೆ ಸಪ್ತವಧ್ರಿರಾತ್ರೇಯಃ ಎಂಬುವನು ಋಷಿಯು; ಅಶ್ವಿನೀದೇವತೆಗಳು ದೇವತೆಯು. ಈ ಸೂಕ್ತದ ಮೊದಲಿನ ಮೂರುಋಕ್ಕುಗಳು ಉಷ್ಣಿಕ್‌ಛಂದಸ್ಕವು ನಾಲ್ಕನೆಯದು ತ್ರಿಷ್ಟುಪ್‌ಛಂದಸ್ಕವು, ಉಳಿದ ಐದು ಋಕ್ಕುಗಳು ಅನುಷ್ಟುಪ್‌ಛಂದಸ್ಕವು. ಪ್ರಾತರನುವಾಕ ಮಂತ್ರಪಠನದಲ್ಲಿ ಆಶ್ವಿನಕ್ರತುಸಂಬಂಧವಾದ ಉಷ್ಣಿಕ್‌ಛಂದಸ್ಸಿನ ಮಂತ್ರಗಳಿಗಾಗಿಯೂ, ಆಶ್ವಿನಶಸ್ತ್ರಮಂತ್ರಗಳಿಗಾಗಿಯೂ ಈ ಸೂಕ್ತದ ಮೊದಲಿನ ಮೂರು ಋಕ್ಕುಗಳ ವಿನಿಯೋಗವಿರುವುದೆಂದು ಆಶ್ವಲಾಯನ ಶ್ರೌತಸೂತ್ರದ **ಅಶ್ವಿನಾ ವರ್ತಿರಸ್ಮದಾಶ್ವಿನಾವೇಹ ಗಚ್ಛತಮಿತಿ ತೃಚೌ** ಎಂಬ ಸೂತ್ರದಿಂದ (ಆ. ೪-೧೫) ವಿವೃತವಾಗಿರುವದು. ಮತ್ತು ದಶರಾತ್ರವೆಂಬ ಯಾಗದ ಮೂರನೆಯ ದಿವಸ ಪ್ರಉಗಶಸ್ತ್ರಮಂತ್ರಪಠನಕಾಲದಲ್ಲಿ ಈ ಸೂಕ್ತದ ಮೊದಲ ಮೂರು ಋಕ್ಕುಗಳನ್ನು ಆಶ್ವಿನಸ್ತೃಚ ಎಂದರೆ ಅಶ್ವಿನೀದೇವತೆಗಳನ್ನುದ್ದೇಶಿಸಿ ಪಠಿಸುವ ತೃಚವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **ಅಶ್ವಿನಾವೇಹ ಗಚ್ಛತಮಾ ಯಾಹ್ಯದ್ರಿಭಿಃ ಸುತಂ** ಎಂಬ ಸೂತ್ರದಿಂದ (ಆ. ೭-೧೦) ವಿವೃತವಾಗಿರುವುದು.

## ಸೂಕ್ತ—೭೮

ಮಂಡಲ—೫ ॥ ಅನುವಾಕ—೬ ॥ ಸೂಕ್ತ—೭೮ ॥
ಅಷ್ಟಕ—೪ ॥ ಅಧ್ಯಾಯ—೪ ॥ ವರ್ಗ—೧೯, ೨೦ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ॥
॥ ಋಷಿಃ—ಸಪ್ತವಧ್ರಿರಾತ್ರೇಯಃ ॥
॥ ದೇವತಾ—ಅಶ್ವಿನೌ ॥
॥ ಛಂದಃ—೧-೩, ಉಷ್ಣಿಕ್ । ೪. ತ್ರಿಷ್ಟುಪ್ । ೫-೯, ಅನುಷ್ಟುಪ್ ॥

॥ ಸಂಹಿತಾಪಾಠಃ ॥

ಅಶ್ವಿನಾವೇಹ ಗಚ್ಛತಂ ನಾಸತ್ಯಾ ಮಾ ವಿ ವೇನತಂ ।
ಹಂಸಾವಿವ ಪತತಮಾ ಸುತಾँ ಉಪ ॥ ೧ ॥

॥ ಪದಪಾಠಃ ॥

ಅಶ್ವಿನೌ । ಆ । ಇಹ । ಗಚ್ಛತಂ । ನಾಸತ್ಯಾ । ಮಾ । ವಿ । ವೇನತಂ ।
ಹಂಸೌಽಇವ । ಪತತಂ । ಆ । ಸುತಾನ್ । ಉಪ ॥ ೧ ॥

॥ ಸಾಯಣಭಾಷ್ಯಂ ॥

**ಹೇ ಅಶ್ವಿನಾವಿಹಾಸ್ಮಿನ್ಯಾಗ ಆ ಗಚ್ಛತಂ । ಹೇ ನಾಸತ್ಯಾ ಮಾ ವಿ ವೇನತಂ । ವೇನತಿಃ ಕಾಂತಿಕರ್ಮಾ । ಮಾ ವಿಕಾಮೌ ಭವತಂ । ನಿಃಸ್ಪೃಹಾವಕಾಮೌ ವಾ ನ ಭವತಮಿತ್ಯರ್ಥಃ । ಹಂಸಾವಿವ ತೌ ಯಥಾ ನಿರ್ಮಲೋದಕಮಾಗಚ್ಛತಸ್ತದ್ವತ್ ಸುತಾನಭಿಷುತಾನ್ ಸೋಮಾನುಪಾ ಪಪತಂ । ಉಪಾಗಚ್ಛತಂ ॥**

॥ ಪ್ರತಿಪದಾರ್ಥ ॥

**ಅಶ್ವಿನೌ**—ಎಲೈ ಅಶ್ವಿನೀ ದೇವತೆಗಳೇ । **ಇಹ**—ಈ ಯಾಗಕ್ಕೆ । **ಆ ಗಚ್ಛತಂ**—ದಯಮಾಡಿರಿ । **ನಾಸತ್ಯಾ**-ಎಲೈ ಅಶ್ವಿನೀದೇವತೆಗಳೇ। **ಮಾ ವಿ ವೇನತಂ**-ನಮ್ಮಲ್ಲಿ ಬರಲು ಇಚ್ಛೆಯಿಲ್ಲದೇ ಇರಬೇಡಿ। **ಹಂಸಾವಿವ**-ಎರಡು ಹಂಸಪಕ್ಷಿಗಳು ಹಾರಿ ಬರುವಂತೆ । **ಸುತಾನ್**—ಹಿಂಡಿರುವ ಸೋಮವನ್ನು ಲಕ್ಷಿಸಿ । **ಉಪ ಆ ಪತತಂ**—ದಯಮಾಡಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಈ ಯಾಗಕ್ಕೆ ದಯಮಾಡಿರಿ. ಎಲೈ ಅಶ್ವಿನೀದೇವತೆಗಳೇ, ನಮ್ಮಲ್ಲಿ ಬರಲು ನೀವು ಇಚ್ಛೆಯಿಲ್ಲದೆ ಇರಬೇಡಿ. ಎರಡು ಹಂಸಪಕ್ಷಿಗಳು ಹಾರಿ ಬರುವಂತೆ ಹಿಂಡಿರುವ ಸೋಮವನ್ನು ಲಕ್ಷಿಸಿ ದಯಮಾಡಿ.

English Translation.

Aswins, come hither: Nasatyas, be not ill-disposed; alight like two swans upon the effused libations.

॥ ಸಂಹಿತಾಪಾಠಃ ॥

ಅಶ್ವಿನಾ ಹರಿಣಾವಿವ ಗೌರಾವಿವಾನು ಯವಸಂ ।
ಹಂಸಾವಿವ ಪತತಮಾ ಸುತಾ ಉಪ ॥ ೨ ॥

॥ ಪದಪಾಠಃ ॥

ಅಶ್ವಿನಾ । ಹರಿಣೌऽಇವ । ಗೌರೌऽಇವ । ಅನು । ಯವಸಂ ।
ಹಂಸೌऽಇವ । ಪತತಂ । ಆ । ಸುತಾನ್ । ಉಪ ॥ ೨ ॥

॥ ಸಾಯಣಭಾಷ್ಯಂ ॥

**ಹೇ ಅಶ್ವಿನೌ ಹರಿಣಾವಿವ । ಗೌರಾವಿವ ಗೌರಮೃಗಾವಿವ ಚ । ತೌ ಯಥಾ ಯವಸಂ ಘಾಸಮನು ಧಾವತಃ ತಾವಿವ ಹಂಸಾವಿವ ಚ ಸೋಮಮಾಗಚ್ಛತಂ ॥**

॥ ಪ್ರತಿಪದಾರ್ಥ ॥

**ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ಹರಿಣಾವಿವ**—ಎರಡು ಜಿಂಕೆಗಳಂತೆಯೂ । **ಯವಸಂ**—ಹಸಿಯ ಹುಲ್ಲನ್ನು । **ಅನು**—ಅನುಸರಿಸುತ್ತಾ ಓಡುವ । **ಗೌರಾವಿವ**- ಗೌರ ಮೃಗಗಳಂತೆಯೂ । **ಹಂಸಾವಿವ**— ಹಾರಿಬರುತ್ತಿರುವ ಎರಡು ಹಂಸಪಕ್ಷಿಗಳಂತೆಯೂ । **ಸುತಾನ್ ಉಪ**— ಹಿಂಡಿರುವ ಸೋಮವನ್ನು ಲಕ್ಷಿಸಿ । **ಆ ಯತತಂ**—ದಯಮಾಡಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಎರಡು ಜಿಂಕೆಗಳಂತೆಯೂ, ಹಸಿಯ ಹುಲ್ಲನ್ನು ಅನುಸರಿಸಿ ಓಡುವ ಎರಡು ಗೌರಮೃಗಗಳಂತೆಯೂ, ಹಾರಿಬರುತ್ತಿರುವ ಎರಡು ಹಂಸಪಕ್ಷಿಗಳಂತೆಯೂ ಸಹ ಹಿಂಡಿರುವ ಸೋಮವನ್ನು ಲಕ್ಷಿಸಿ ದಯಮಾಡಿರಿ.

## English Translation

Like two deer, Aswins, like two wild cattle on (fresh) pasture ; like two swans alight upon the effused libation.

॥ ವಿಶೇಷವಿಷಯಗಳು ॥

**ಗೌರಾವಿವ**—ಗೌರ, ಎಂಬ ಶಬ್ದವು ಗವಯ ಶಬ್ದದೊಡನೆ ಅಶ್ವಮೇಧ ಯಜ್ಞದಲ್ಲಿ ಸೇರಿರುವ ಪಶುಗಳ ಪಟ್ಟಿಯಲ್ಲಿ ಸೇರಿರುವುದು. ಈ ವಿಷಯವಾಗಿ ತೈತ್ತಿರೀಯಸಂಹಿತೆಯಲ್ಲಿ—

**ಇಂದ್ರಾಯ ರಾಜ್ಞೇ ಸೂಕರೋ ವರುಣಾಯ ರಾಜ್ಞೇ ಕೃಷ್ಣೋ ಯಮಾಯ ರಾಜ್ಞ ಋಶ್ಯ ಋಷಭಾಯ ರಾಜ್ಞೇ ಗವಯಃ ಶಾರ್ದೂಲಾಯ ರಾಜ್ಞೇ ಗೌರಃ ಪುರುಷರಾಜಾಯ ಮರ್ಕಟಃ ಕ್ಷಿಪ್ರಶ್ಯೇನಸ್ಯ ವರ್ತಿಕಾ ನೀಲಂಗೋಃ ಕ್ರಿಮಿಃ ಸೋಮಸ್ಯ ರಾಜ್ಞಃ ಕುಲುಂಗಃ ಸಿಂಧೋಃ ಶಿಗ್ಂಶುಮಾರೋ ಹಿಮವತೋ ಹಸ್ತೀ ॥**

(ತೈ. ಸಂ. ೫-೫-೧೧-೧)

ಮತ್ತು ಯಜುರ್ವೇದ ತೈತ್ತಿರೀಯ ಸಂಹಿತೆಯ ಮತ್ತೊಂದು ಕಡೆಯಲ್ಲಿಯೂ,

**ಗವಯಮಾರಣ್ಯಮನು ತೇ ದಿಶಾಮಿ ತೇನ ಚಿನ್ವಾನಸ್ತನುವೋ ನಿಷೀದ ।**

(ತೈ ಸಂ ೪ ೨-೧೦-೩)

ಎಂದು **ಗವಯ** ಎಂಬ ಅರಣ್ಯಪಶುವನ್ನು ಅರ್ಪಿಸುವ ವಿಷಯವಾಗಿ ಹೇಳಿದೆ. **ಗೌರ** ಮತ್ತು **ಗವಯ** ಎಂಬು ಪಶುಗಳು (Gayal and Bos gavaeu) ಅರಣ್ಯದಲ್ಲಿ ವಾಸಿಸುವ ಒಂದು ವಿಧವಾದ ಜಿಂಕೆ ಮತ್ತು ಎತ್ತು. ಅಶ್ವಮೇಧಯಜ್ಞದಲ್ಲಿ ಉಪಯೋಗಿಸುವ ಸುಮಾರು ೮೧ ಅರಣ್ಯಪಶುಗಳ ಪಟ್ಟಿಯಲ್ಲಿ ತೈ. ಸಂ. ೫-೫-೧೧ ರಿಂದ ೨೮ ಅನುವಾಕಗಳಲ್ಲಿ ಉಕ್ತವಾಗಿದೆ. ಕನ್ನಡದಲ್ಲಿ ಇವುಗಳಿಗೆ ಸರಿಯಾದ ಹೆಸರುಗಳಿಲ್ಲ **ಗವಯ** ಎಂದರೆ ಒಂದು ಜಾತಿಯ ಕಾಡೆತ್ತು. ಇದರ ಹೆಸರು ಋಗ್ವೇದದಲ್ಲಿ ಕೆಲವುಕಡೆ ಮಾತ್ರ ಉಕ್ತವಾಗಿದೆ. ಆದರೆ ಮೈತ್ರಾಯಣಿಯ ಸಂಹಿತಾ ೩-೧೪-೧೦; ಕಾಠಕಸಂಹಿತಾ ೧೬-೧೭; ವಾಜಸನೇಯಸಂಹಿತಾ; ೨೪-೨೮; ಐತರೇಯಬ್ರಾಹ್ಮಣ ೨-೮; ೩-೩೪; ಶತಪಥಬ್ರಾಹ್ಮಣ ೧-೨-೩-೯; ಸಾಂಖ್ಯಾಯನಶ್ರೌತಸೂತ್ರ ೩-೧೪ ಇತ್ಯಾದಿ ಸ್ಥಳಗಳಲ್ಲಿ ಈ **ಗವಯ** ಶಬ್ದದ ಪ್ರಯೋಗವಿರುವುದು. ಈ ಶಬ್ದವು **ಗೌರ** ಎಂಬ ಶಬ್ದದೊಡನೆ ಋ. ಸಂ. ೪-೨೧-೮ ನೆಯ ಋಕ್ಕಿನಲ್ಲಿಯೂ **ಗೌರ** ಮತ್ತು **ಮಹಿಷ** ಎಂಬ ಶಬ್ದಗಳೊಡನೆ ವಾ. ಸಂ. ೨೪-೨೮, ೧೩-೪೯ ರಲ್ಲಿಯೂ ಮೈತ್ರಾಯಣಿಸಂಹಿತಾ ೨-೭-೧೭; ಕಾಠಕಸಂಹಿತಾ ೧೬-೧೭ ರಲ್ಲಿಯೂ ಪಠಿತವಾಗಿದೆ.

**ಗೌರ** ಎಂಬುದು ಸಹ ಒಂದು ಜಾತಿಯ ಕಾಡೆತ್ತು (Bos gaurus) ಇದು ಸಾಧಾರಣವಾಗಿ **ಗವಯ** ಶಬ್ದದೊಡನೆ ಋಗ್ವೇದ ೧-೧೬-೫, ೪-೨೧-೮; ೪-೫೮-೨, ೫-೭೮-೨; ೭-೬೯-೬; ೭-೯೮-೧ ಇತ್ಯಾದಿ ಸ್ಥಳಗಳಲ್ಲಿ ಉಕ್ತವಾಗಿದೆ. ಮೈತ್ರಾಯಣೀಯಸಂಹಿತಾ ೩-೧೪-೧೦; ವಾಜಸನೇಯಸಂಹಿತಾ ೨೪-೨೮; ಐತರೇಯಬ್ರಾಹ್ಮಣ ೩-೩೪ ಇತ್ಯಾದಿ ಸ್ಥಳಗಳಲ್ಲೂ ಈ ಶಬ್ದದ ಪ್ರಯೋಗವಿದೆ. ಇದು ಅರಣ್ಯಮೃಗವೆಂದು ವಾ. ಸಂ. ೧೩-೪೮ ರಲ್ಲಿ ಹೇಳಿದೆ. **ಗೌರಿ** ಎಂಬ ಹೆಣ್ಣುಮೃಗದ ಹೆಸರು ಋ. ಸಂ. ೧-೮೪-೧೦; ೪-೧೨-೬; ೯-೧೨-೩; ೧-೧೬೪-೧೧ ಎಂಬ ಋಕ್ಕುಗಳಲ್ಲಿದೆ **ಗೌರಮೃಗ** ಎಂಬ ಹೆಸರೂ ಸಹ ವಾಜಸನೇಯಸಂಹಿತಾ ೨೪-೩೨; ಐತರೇಯಬ್ರಾಹ್ಮಣ ೨-೮ ಎಂಬ ಸ್ಥಳಗಳಲ್ಲಿದೆ.

॥ ಸಂಹಿತಾಪಾಠಃ ॥

**ಅಶ್ವಿನಾ ವಾಜಿನೀವಸೂ ಜುಷೇಥಾಂ ಯಜ್ಞಮಿಷ್ಟಯೇ ।**
**ಹಂಸಾವಿವ ಪತತಮಾ ಸುತಾಁ ಉಪ ॥ ೩ ॥**

॥ ಪದಪಾಠಃ ॥

**ಅಶ್ವಿನಾ । ವಾಜಿನೀವಸೂ ಇತಿ ವಾಜಿನೀऽವಸೂ । ಜುಷೇಥಾಂ । ಯಜ್ಞಂ । ಇಷ್ಟಯೇ ।**
**ಹಂಸೌऽಇವ । ಪತತಂ । ಆ । ಸುತಾನ್ । ಉಪ ॥ ೩ ॥**

॥ ಸಾಯಣಭಾಷ್ಯಂ ॥

**ಹೇ ವಾಜಿನೀವಸೂ ಅನ್ನಾರ್ಥಂ ವಾಸಯಿತಾರಾವಶ್ವಿನಾ ಯಜ್ಞಮಸ್ಮದೀಯಮಿಷ್ಟಯೇऽಭೀಷ್ಟಾಯೈಷಣಾಯ ವಾ ಜುಷೇಥಾಂ । ಸೇವೇಥಾಂ ॥**

॥ ಪ್ರತಿಪದಾರ್ಥ ॥

**ವಾಜಿನೀವಸೂ**—ಅನ್ನಸಂಪದ್ಯುಕ್ತರಾದ । **ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ಯಜ್ಞಂ**—ನಮ್ಮ ಯಜ್ಞವನ್ನು । **ಇಷ್ಟಯೇ**—ನಿಮ್ಮ ತೃಪ್ತ್ಯರ್ಥವಾಗಿ । **ಜುಷೇಥಾಂ**—ಸೇವಿಸಿರಿ । **ಹಂಸಾವಿವ**—ಹಾರಿಬರುತ್ತಿರುವ ಎರಡು ಹಂಸಗಳಂತೆ । **ಸುತಾನ್ ಉಪ**—ಹಿಂಡಿರುವ ಸೋಮವನ್ನು ಲಕ್ಷಿಸಿ । **ಆ ಪತತಂ**—ಹಾರಿಬನ್ನಿರಿ.

॥ ಭಾವಾರ್ಥ ॥

ಅನ್ನಸಂಪದ್ಯುಕ್ತರಾದ ಎಲೈ ಅಶ್ವಿನೀದೇವತೆಗಳೇ, ನಮ್ಮ ಯಜ್ಞವನ್ನು ನಿಮ್ಮ ತೃಪ್ತ್ಯರ್ಥವಾಗಿ ಸೇವಿಸಿರಿ. ಹಾರಿಬರುತ್ತಿರುವ ಎರಡು ಹಂಸಗಳಂತೆ ಹಿಂಡಿರುವ ಸೋಮವನ್ನು ಲಕ್ಷಿಸಿ ಹಾರಿಬನ್ನಿರಿ.

English Translation.

Aswins, affluent in food, be propitiated at your pleasure by the sacrifice: alight like two swans upon the effused libation.

॥ ೪ ॥

ಅತ್ರಿರ್ಯದ್ವಾಮವರೋಹನ್ನೃಬೀಸಮಜೋಹವೀನ್ನಾಧಮಾನೇವ
ಯೋಷಾ ।
ಶ್ಯೇನಸ್ಯ ಚಿಜ್ಜವಸಾ ನೂತನೇನಾಗಚ್ಛತಮಶ್ವಿನಾ ಶಂತಮೇನ ॥ ೪ ॥

॥ ಪದಪಾಠಃ ॥

ಅತ್ರಿಃ । ಯತ್ । ವಾಂ । ಅವಽರೋಹನ್ । ಋಬೀಸಂ । ಅಜೋಹವೀತ್ । ನಾಧಮಾನಾಽಇವ ।
ಯೋಷಾ ।
ಶ್ಯೇನಸ್ಯ । ಚಿತ್ । ಜವಸಾ । ನೂತನೇನ । ಆ । ಅಗಚ್ಛತಂ । ಅಶ್ವಿನಾ । ಶಂಽತಮೇನ ॥ ೪ ॥

ಅತ್ರಿರಸ್ಮತ್ಪಿತಾ ಯದ್ಯದಾ ವಾಂ ಯುವಾಮಜೋಹವೀತ್ ಅಸ್ತೌಷೀತ್ ನಾಧಮಾನಾ ಯಾಚಮಾನಾ ಯೋಷಾ ಯೋಷಿದಿವ । ಸಾ ಯಥಾ ಪತಿಂ ಪ್ರೀಣಯತಿ ತದ್ವತ್ಕುರ್ವನ್ ಋಬೀಸಂ ತುಷಾಗ್ನಿ-

ಮಗ್ನಿಕುಂಡೇ ಕ್ಷಿಪ್ತಃ ಸನ್ ಅವರೋಹನ್ ವಿಮುಂಚನ್ ಅಜೋಹವೀತ್ । ಶ್ಯೇನಸ್ಯ ಚಿಜ್ಜವಸಾ ಶ್ಯೇನಸ್ಯ ಗರುತ್ಮತ ಇವ ವೇಗೇನ । ಚಿದಿತ್ಯುಪಮಾರ್ಥೇ । ಅಥವಾ ಶ್ಯೇನಸ್ಯ ಜವಸಾ ವೇಗೇನ ನೂತನೇನ ಪ್ರಥಮೋತ್ಪನ್ನೇನ ಸತತಂ ಗಚ್ಛತಃ ಶ್ಯೇನಸ್ಯ ಪ್ರಥಮಜವೇನ ಶಂತಮೇನಾಸ್ಮಾಕಂ ಸುಖತಮೇನ ಚ ರಥೇನ ತಂ ರಕ್ಷಿತುಮಾಗಚ್ಛತಂ ಹೇ ಅಶ್ವಿನಾ ॥

॥ ಪ್ರತಿಪದಾರ್ಥ ॥

**ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ಋಬೀಸಂ**—ಅಗ್ನಿಕುಂಡದಲ್ಲಿ ಬಿದ್ದ । **ಅತ್ರಿಃ**—ಅತ್ರಿಯು । **ಅವರೋಹನ್**—(ನಿಮ್ಮ ಸಹಾಯದಿಂದ) ಅಲ್ಲಿಂದ ತಪ್ಪಿಸಿಕೊಂಡು । **ಯತ್**—ಯಾವ ಕೃತಜ್ಞತಾಪೂರ್ವಕವಾದ ಭಕ್ತಿಯಿಂದ । **ನಾಧಮಾನಾ**—ಪತಿಯ ಪ್ರೇಮವನ್ನು ಯಾಚಿಸುವ । **ಯೋಷಾ**—ಸ್ತ್ರೀಯಂತೆ । **ವಾಂ**—ನಿಮ್ಮನ್ನು । **ಅಜೋಹವೀತ್**—ಪ್ರಾರ್ಥಿಸಿ ಕರೆದನೋ (ಆ ಕಾರಣದಿಂದ) । **ಶ್ಯೇನಸ್ಯ ಚಿತ್**—ಶ್ಯೇನಪಕ್ಷಿಯ । **ನೂತನೇನ**—ಪ್ರಥಮೋತ್ಪನ್ನವಾದ । **ಜವಸಾ**—ವೇಗದಂತಿರುವ ವೇಗದಿಂದ । **ಶಂತಮೇನ**—ಸುಖಸಾಧಕವಾದ ನಿಮ್ಮ ರಥದೊಡನೆ । **ಆ ಅಗಚ್ಛತಂ**—ದಯಮಾಡಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಅಗ್ನಿಕುಂಡದಲ್ಲಿ ಬಿದ್ದ ಅತ್ರಿಯು ನಿಮ್ಮ ಸಹಾಯದಿಂದ ಅಲ್ಲಿಂದ ತಪ್ಪಿಸಿಕೊಂಡು ಯಾವ ಕೃತಜ್ಞತಾಪೂರ್ವಕವಾದ ಭಕ್ತಿಯಿಂದ ಪತಿಯ ಪ್ರೇಮವನ್ನು ಯಾಚಿಸುವ ಸ್ತ್ರೀಯಂತೆ ನಿಮ್ಮನ್ನು ಪ್ರಾರ್ಥಿಸಿ ಕರೆದನೋ, ಆ ಕಾರಣದಿಂದ ಶ್ಯೇನಪಕ್ಷಿಯು ಪ್ರಥಮೋತ್ಪನ್ನವಾದ ವೇಗದಂತಿರುವ ವೇಗದಿಂದ ಸುಖಸಾಧಕವಾದ ನಿಮ್ಮ ರಥದೊಡನೆ ದಯಮಾಡಿರಿ.

## English Translation.

Inasmuch as Atri, escaping by your aid from the fire of chaff, conciliaties you, like a wife soliciting (the affection of a husband), therefore come with (your) propitious cars, with the new-born rapidity of the falcon.

॥ ವಿಶೇಷವಿಷಯಗಳು ॥

**ಅಶ್ವಿನಾ ಋಬೀಸಂ ಅತ್ರಿಃ ಅವರೋಹನ್**—ಎಲೈ ಅಶ್ವಿನೀದೇವತೆಗಳೇ, ಅಗ್ನಿಕುಂಡದಲ್ಲಿ ಬಿದ್ದ ಅತ್ರಿ ಋಷಿಯು ನಿಮ್ಮ ಸಹಾಯದಿಂದ ಬೆಂಕಿಯಿಂದ ತಪ್ಪಿಸಿಕೊಂಡನು. ಈ ವಿಷಯದಲ್ಲಿ—

**ಯುವಂ ಹ ಘರ್ಮಂ ಮಧುಮಂತಮತ್ರಯೇಽಪೋ ನ ಕ್ಷೋದೋಽವೃಣೀತಮೇಷೇ ।**

(ಋ. ಸಂ. ೧-೧೮೦-೪)

ಇತ್ಯಾದಿ ಋಕ್ಕುಗಳಲ್ಲಿ ಅಗ್ನಿಯಲ್ಲಿ ಬಿದ್ದು ಪರಿತಪಿಸುತ್ತಿದ್ದ ಅತ್ರಿಯನ್ನು ಅಶ್ವಿನೀದೇವತೆಗಳು ಕಾಪಾಡಿದ ವಿಷಯವು ಉಕ್ತವಾಗಿದೆ—

**ಅತ್ರೇರಿತಿಹಾಸಮಾಹುಃ । ಪ್ರವರ್ಗ್ಯೇಣ ಪ್ರಚರಂತಮತ್ರಿಂ ರಾಕ್ಷಸಾಸ್ತಪ್ತೇ ಘರ್ಮೇಽಪಾತಯನ್ ಸ ಚ ತಸ್ಯಮಾನೋಽಶ್ವಿನೌ ತುಷ್ಟಾವ । ತೌ ಚ ಸ್ತುತ್ಯಾ ಹೃಷ್ಟಮನಸಾವರಕ್ಷತಾಮಿತಿ ॥**

(ಸಾ. ಭಾ.)

ಪ್ರವರ್ಗ್ಯವೆಂಬ ಯಜ್ಞಕರ್ಮದಲ್ಲಿ ಪ್ರವೃತ್ತನಾಗಿದ್ದ ಅತ್ರಿಋಷಿಯನ್ನು ರಾಕ್ಷಸರು ಜಾಜ್ವಲ್ಯಮಾನವಾಗಿ ಉರಿಯುತ್ತಿದ್ದ ಅಗ್ನಿಯಲ್ಲಿ ತಳ್ಳಿದರು. ಆಗ ಅತ್ರಿಯು ಅಶ್ವಿನೀದೇವತೆಗಳಲ್ಲಿ ಮೊರೆ ಇಟ್ಟು ರಕ್ಷಿಸಬೇಕೆಂದು ಪ್ರಾರ್ಥಿಸಿದನು ಅವರು ಸಂತುಷ್ಟರಾಗಿ ಇವನನ್ನು ರಕ್ಷಿಸಿದರು ಎಂದಿದೆ. ಮತ್ತೂ

ಯಾಭಿಃ ಶುಚಂತಿಂ ಧನಸಾಂ ಸುಷಂಸದಂ ತಪ್ತಂ ಘರ್ಮಮೋಮ್ಯಾವಂತಮತ್ರಯೇ ।

(ಋ. ಸಂ. ೧-೧೧೨-೭)

ಹಿಮೇನಾಗ್ನಿಂ ಘ್ರಂಸಮವಾರಯೇಥಾಂ ಪಿತುಮತೀಮೂರ್ಜಮಸ್ಮಾ ಅಧತ್ತಂ ।
ಋಬೀಸೇ ಅತ್ರಿಮಶ್ವಿನಾವನೀತಮುನ್ನಿನ್ಯಥುಃ ಸರ್ವಗಣಂ ಸ್ವಸ್ತಿ ॥

(ಋ. ಸಂ. ೧-೧೧೬-೮)

ಎಂಬ ಋಕ್ಕುಗಳಲ್ಲಿಯೂ ಈ ಪ್ರಸ್ತಾಪವಿದೆ—

ಅತ್ರಿರ್ನಾಮರ್ಷಿಃ । ತಮಸುರಾ ಅಗ್ನಿಕೂಟೇ ಪ್ರಚಿಕ್ಷಿಪುಃ । ಸೋಽಶ್ವಿನೌ ತುಷ್ಟಾವ ತಮಶ್ವಿನಾವಾಗತ್ಯ ವೃಷ್ಟ್ಯಾ ನಿಶಮಯ್ಯಾಗ್ನಿಂ ತತ ಉಜ್ಜಹ್ರತುಃ । ಬಲಂ ಚಾಸುರಪ್ರತಿಬಂಧಸಮರ್ಥಮಸ್ಮೈ ಸಹಾನ್ನೇನ ದದತುರಿತಿ ॥

(ಸಾ. ಭಾ.)

ಒಂದಾನೊಂದು ಕಾಲದಲ್ಲಿ ಅಸುರರು ಅತ್ರಿಯೆಂಬ ಋಷಿಯನ್ನು ಅಗ್ನಿಕೂಟದಲ್ಲಿ ತಳ್ಳಿಬಿಟ್ಟರು. ಅವನು ಅಶ್ವಿನೀದೇವತೆಗಳನ್ನು ಪ್ರಾರ್ಥಿಸಿದನು. ಅವರು ಬಂದು ವೃಷ್ಟ್ಯುದಕದಿಂದ ಅಗ್ನಿಶಮನವನ್ನು ಮಾಡಿ ಅವನನ್ನು ಮೇಲಕ್ಕೆತ್ತಿದರು. ಅನಂತರ ಅಸುರರನ್ನು ತಡೆಗಟ್ಟಲು ಶಕ್ತಿಯನ್ನೂ, ಅನ್ನವನ್ನೂ ಕೊಟ್ಟರು ಎಂದು ಕಥೆ ಇದೆ.

॥ ಸಂಹಿತಾಪಾಠಃ ॥

ವಿ ಜಿಹೀಷ್ವ ವನಸ್ಪತೇ ಯೋನಿಃ ಸೂಷ್ಯಂತ್ಯಾ ಇವ ।
ಶ್ರುತಂ ಮೇ ಅಶ್ವಿನಾ ಹವಂ ಸಪ್ತವಧ್ರಿಂ ಚ ಮುಂಚತಂ ॥ ೫ ॥

॥ ಪದಪಾಠಃ ॥

ವಿ । ಜಿಹೀಷ್ವ । ವನಸ್ಪತೇ । ಯೋನಿಃ । ಸೂಷ್ಯಂತ್ಯಾಃऽಇವ ।
ಶ್ರುತಂ । ಮೇ । ಅಶ್ವಿನಾ । ಹವಂ । ಸಪ್ತऽವಧ್ರಿಂ । ಚ । ಮುಂಚತಂ ॥ ೫ ॥

॥ ಸಾಯಣಭಾಷ್ಯಂ ॥

ಅತ್ರ ಬ್ರುವಂತೀತಿಹಾಸಂ ಸಪ್ತವಧ್ರೇಃ ಪುರಾವಿದಃ ॥ ಭ್ರಾತೃವ್ಯಾಃ ಪೇಟಿಕಾಯಾಂ ತಮೃಷಿಂ ಪ್ರಕ್ಷಿಪ್ಯ ಯತ್ನತಃ । ಮುದ್ರಾಂ ಕೃತ್ವಾ ಗೃಹೇ ಸ್ವೀಯೇ ರಕ್ಷಯಿತ್ವಾ ನ್ಯವೇಶಯನ್ ॥ ನ ಸಂಗಚ್ಛೇತ ಭಾರ್ಯಾಂ ಸ್ವಾಂ ಯಥಾ ರಾತ್ರೌ ತಥಾ ಕೃತಂ । ಪ್ರಾತಃ ಪ್ರಾತಃ ಸಮುದ್ಘಾಟ್ಯ ನಿರ್ಗಮಯ್ಯಂತಿ ತಂ ಮುನಿಂ ॥ ಏವಂ ಸ್ಥಿತ್ವಾ ಚಿರಂ ಕಾಲಂ ಪೇಟಾಯಾಂ ದುಃಖಿತಃ ಕೃಶಃ । ಉಪಾಯಂ ಚಿಂತಯಾಮಾಸ ನಿರ್ಗಮಸ್ಯ ಚಿರಂ ಮುನಿಃ ॥ ಹೃದಿ ನಿಶ್ಚಿತ್ಯ ನಾಸತ್ಯಾವಸ್ತೌಷೀದ್ಧೃಷ್ಟಮಾನಸಃ । ತಮಶ್ವಿನೌ ಸಮಾಗತ್ಯ ಸಮುದ್ಘಾಟ್ಯ ಚ ಪೇಟಿಕಾಂ ॥ ಉದ್ಧೃತ್ಯ ತಮೃಷಿಂ ಶೀಘ್ರಂ ತಾವದೃಷ್ಟೌ ಬಭೂವತುಃ । ಸ ಋಷಿರ್ಭಾರ್ಯಯಾ ಸಾರ್ಧಂ ರಮಿತ್ವಾಥ ಪುನರ್ಭಯಾತ್ ॥ ಪ್ರಾತರೇತ್ಯ ಪುನಃ ಪೇಟಾಂ ಪ್ರವಿಶ್ಯ ಪ್ರಾಗಿವ ಸ್ಥಿತಃ । ಪೇಟಾನಿವಾಸಸಮಯೇ ದೃಷ್ಟವಾನೃಗ್ದ್ವಯಂ ತದಾ ॥

ಹೇ ವನಸ್ಪತೇ ವನಸ್ಪತಿವಿಕಾರರೂಪೇ ಪೇಟಿಕೇ ವಿ ಜಿಹೀಷ್ವ । ವಿಗಚ್ಛ । ವಿವೃತಾ ಭವ । ಸೂಷ್ಯಂತ್ಯಾ ಇವ ಪ್ರಸವೋನ್ಮುಖ್ಯಾಃ ಸ್ತ್ರಿಯಾ ಯೋನಿರಿವ ಭಗೋ ಯಥಾ ವಿವ್ರಿಯತೇ ತಥಾ ತ್ವಮಪಿ ವಿವೃತಾ ಭವ । ತದರ್ಥಂ ಹೇ ಅಶ್ವಿನಾಶ್ವಿನೌ ಮೇ ಹವಮಾಹ್ವಾನಂ ಶ್ರುತಂ । ಶೃಣುತಂ । ಶ್ರುತ್ವಾ ಚ ಸಪ್ತವಧ್ರಿಂ ಚ ಮಾಮೃಷಿಂ ಮುಂಚತಂ । ಮೋಚಯತಂ ॥

॥ ಪ್ರತಿಪದಾರ್ಥ ॥

**ವನಸ್ಪತೇ**—ಎಲೈ ವನಸ್ಪತಿಯೇ (ಪೆಟ್ಟಿಗೆಯೇ) । **ಸೂಷ್ಯಂತ್ಯಾಃ**—ಪ್ರಸವಕಾಲದಲ್ಲಿರತಕ್ಕ ಸ್ತ್ರೀಯ । **ಯೋನಿಃ ಇವ**—ಜನಕಾಂಗದಂತೆ । **ವಿ ಜಿಹೀಷ್ವ**—ವಿಸ್ತೃತವಾಗಿ ಬಾಯನ್ನು ತೆರೆ । **ಅಶ್ವಿನಾ**—ಎಲೈ ಅಶ್ವಿನೀ ದೇವತೆಗಳೇ । **ಮೇ**—ನನ್ನ । **ಹವಂ**—ಆಹ್ವಾನವನ್ನು । **ಶ್ರುತಂ**—ಕೇಳಿರಿ । **ಸಪ್ತವಧ್ರಿಂ ಚ**—ಸಪ್ತವಧ್ರಿಋಷಿಯನ್ನೂ । **ಮುಂಚತಂ**—ಬಿಡಿಸಿರಿ.

॥ ಭಾವಾರ್ಥ ॥

ಎಲೈ ವನಸ್ಪತಿಯೇ, (ಪೆಟ್ಟಿಗೆಯೇ) ಪ್ರಸವಕಾಲದಲ್ಲಿರುವ ಸ್ತ್ರೀಯ ಜನಕಾಂಗದಂತೆ ವಿಸ್ತೃತವಾಗಿ ಬಾಯನ್ನು ತೆರೆ. ಎಲೈ ಅಶ್ವಿನೀದೇವತೆಗಳೇ, ನನ್ನ ಆಹ್ವಾನವನ್ನು ಕೇಳಿರಿ. ಸಪ್ತವಧ್ರಿಯನ್ನೂ ಬಿಡಿಸಿರಿ.

## English Translation

Open, Vanaspati, like the womb of a parturient female: hear, Aswins, my invocation: set Saptavadhri free.

॥ ವಿಶೇಷವಿಷಯಗಳು ॥

ಈ ಋಕ್ಕು ಮತ್ತು ಮುಂದಿನ ಋಕ್ಕಿನ ವಿಷಯವಾಗಿ ಈ ಸೂಕ್ತದ್ರಷ್ಟೃವಾದ ಸಪ್ತವಧ್ರಿಋಷಿಯ ಸಂಬಂಧವಾದ ಒಂದು ಇತಿಹಾಸವಿದೆ—

ಅತ್ರ ಬ್ರುವಂತೀತಿಹಾಸಂ ಸಪ್ತವಧ್ರೇಃ ಪುರಾವಿದಃ ।
ಭ್ರಾತೃವ್ಯಾಃ ಪೇಟಿಕಾಯಾಂ ತಮೃಷಿಂ ಪ್ರಕ್ಷಿಪ್ಯ ಯತ್ನತಃ ॥

ಮುದ್ರಾಂ ಕೃತ್ವಾ ಗೃಹೇ ಸ್ವೀಯೇ ರಕ್ಷಯಿತ್ವಾ ನ್ಯವೇಶಯನ್ ।
ಸ ಸಂಗಚ್ಛೇತ ಭಾರ್ಯಾಂ ಸ್ವಾಂ ಯಥಾ ರಾತ್ರೌ ತಥಾ ಕೃತಂ ॥
ಪ್ರಾತಃಪ್ರಾತಃ ಸಮುದ್ಘಾಟ್ಯ ನಿರ್ಗಮಿಷ್ಯಂತಿ ತಂ ಮುನಿಂ ।
ಏವಂ ಸ್ಥಿತ್ವಾ ಚಿರಂ ಕಾಲಂ ಪೇಟಾಯಾಂ ದುಃಖಿತಃ ಕೃಶಃ ॥
ಉಪಾಯಂ ಚಿಂತಯಾಮಾಸ ನಿರ್ಗಮಸ್ಯ ಚಿರಂ ಮುನಿಃ ।
ಹೃದಿ ನಿಶ್ಚಿತ್ಯ ನಾಸತ್ಯಾವಸ್ತೌಷೀದ್ಧೃಷ್ಟಮಾನಸಃ ॥
ತಮಶ್ವಿನೌ ಸಮಾಗತ್ಯ ಸಮುದ್ಘಾಟ್ಯ ಚ ಪೇಟಿಕಾಂ ।
ಉದ್ಧೃತ್ಯ ತಮೃಷಿಂ ಶೀಘ್ರಂ ತಾವದೃಷ್ಟೌ ಬಭೂವತುಃ ॥
ಸ ಋಷಿರ್ಭಾರ್ಯಯಾ ಸಾರ್ಧಂ ರಮಿತ್ವಾಥ ಪುನರ್ಭಯಾತ್ ।
ಪ್ರಾತರೇತ್ಯ ಪುನಃ ಪೇಟಾಂ ಪ್ರವಿಶ್ಯ ಪ್ರಾಗಿವ ಸ್ಥಿತಃ ॥
ಪೇಟಾನಿವಾಸಸಮಯೇ ದೃಷ್ಟವಾನ್ಸೃಗ್ದ್ವಯಂ ತದಾ ॥

ಪೂರ್ವೇತಿಹಾಸವನ್ನರಿತವರು ಸಪ್ತವಧ್ರಿ ಋಷಿಯ ವಿಷಯದಲ್ಲಿ ಒಂದು ಕಥೆಯನ್ನು ಹೇಳುವರು. ಈ ಸಪ್ತವಧ್ರಿ ಋಷಿಯ ಸಹೋದರರ ಪುತ್ರರು ಈ ಸಪ್ತವಧ್ರಿ ಋಷಿಗೆ ಪುತ್ರರಾಗಬಾರದೆಂದು ಯೋಚಿಸಿ ಆ ಋಷಿಯು ರಾತ್ರಿಕಾಲದಲ್ಲಿ ತನ್ನ ಪತ್ನಿಯೊಡನೆ ಸಂಗಮಾಡದಂತೆ ಇರಲು ಪ್ರತಿದಿನ ರಾತ್ರಿಯೂ ಅವನನ್ನು ಅವನ ಮನೆಯಲ್ಲಿಯೇ ಒಂದು ಮರದ ಪೆಟ್ಟಿಗೆಯಲ್ಲಿ ಹಾಕಿ ಬಾಗಿಲನ್ನು ಮುಚ್ಚಿ ಬೀಗಹಾಕುತ್ತಿದ್ದರು. ಅನಂತರ ಪ್ರಾತಃಕಾಲದಲ್ಲಿದ್ದು ಬಂದು ಪೆಟ್ಟಿಗೆಯ ಬಾಗಿಲನ್ನು ತೆಗೆದು ಆ ಋಷಿಯನ್ನು ಚೆನ್ನಾಗಿ ಹೊಡೆಯುತ್ತಿದ್ದರು. ರಾತ್ರಿಯಾಗುತ್ತಲೇ ಪುನಃ ಅವನನ್ನು ಪೆಟ್ಟಿಗೆಯಲ್ಲಿ ಸೇರಿಸಿ ಬೀಗ ಹಾಕುತ್ತಿದ್ದರು. ಪ್ರಾಯಶಃ ಅವನಿಗೆ ಮಕ್ಕಳಾಗದಿದ್ದರೆ ಅವನ ಆಸ್ತಿಯು ತಮಗೆ ಸೇರಬಹುದೆಂಬ ಆಸೆಯಿಂದ ಹೀಗೆ ಮಾಡುತ್ತಿದ್ದಂತೆ ತೋರುತ್ತದೆ. ಹೀಗೆಯೇ ಬಹಳಕಾಲ ನಡೆಯುತ್ತಿರಲು ಆ ಸಪ್ತವಧ್ರಿಯು ದುಃಖದಿಂದ ಕೃಶನಾಗಿ ಇದರಿಂದ ಹೇಗೆ ಪಾರಾಗಬೇಕೆಂದು ಆಲೋಚಿಸಿ ಅಶ್ವಿನೀದೇವತೆಗಳನ್ನು ಸ್ತೋತ್ರಮಾಡಿದನು. ಅವರು ಸಂತುಷ್ಟರಾಗಿ ಅಲ್ಲಿಗೆ ಬಂದು ಆ ಪೆಟ್ಟಿಗೆಯ ಬಾಗಿಲನ್ನು ತೆರೆದು ಋಷಿಯನ್ನು ಬಿಡುಗಡೆ ಮಾಡಿ ಕೂಡಲೇ ಅದೃಶ್ಯರಾದರು. ಅದರಿಂದ ಆ ಋಷಿಯು ಸಂತೋಷಗೊಂಡು ತನ್ನ ಪತ್ನಿಯೊಡನೆ ರಾತ್ರಿಯೆಲ್ಲಾ ಯಥೇಚ್ಛವಾಗಿ ರಮಿಸಿ ಪ್ರಾತಃಕಾಲವಾಗುತ್ತಲೇ ಹಿಂದಿನಂತೆ ಎಂದರೆ ಏನೂ ತಿಳಿಯದವನಂತೆ ಪುನಃ ಪೆಟ್ಟಿಗೆಯೊಳಗೆ ಸೇರಿಕೊಳ್ಳುತ್ತಿದ್ದನು. ಹೀಗೆಯೇ ಬಹುಕಾಲ ನಡೆಯಿತು. ಪೆಟ್ಟಿಗೆಯಲ್ಲಿದ್ದಾಗಲೇ ಈ ಸಪ್ತವಧ್ರಿಋಷಿಗೆ ಈ ಋಕ್ಕು ಮತ್ತು ಮುಂದಿನ ಋಕ್ಕು ದೃಷ್ಟವಾದವು. ಎಂಬ ಈ ಕಥೆಯನ್ನು ಭಾಷ್ಯಕಾರರು ವಿವರಿಸಿದ್ದಾರೆ.

॥ ಸಂಹಿತಾಪಾಠಃ ॥

ಭೀತಾಯ ನಾಧಮಾನಾಯ ಋಷಯೇ ಸಪ್ತವಧ್ರಯೇ ।
ಮಾಯಾಭಿರಶ್ವಿನಾ ಯುವಂ ವೃಕ್ಷಂ ಸಂ ಚ ವಿ ಚಾಚಥಃ ॥ ೬ ॥

॥ ಪದಪಾಠಃ ॥

ಭೀತಾಯ । ನಾಧಮಾನಾಯ । ಋಷಯೇ । ಸಪ್ತಽವಧ್ರಯೇ ।

ಮಾಯಾಭಿಃ । ಅಶ್ವಿನಾ । ಯುವಂ । ವೃಕ್ಷಂ । ಸಂ । ಚ । ವಿ । ಚ । ಅಚಥಃ ॥ ೬ ॥

॥ ಸಾಯಣಭಾಷ್ಯಂ ॥

ಭೀತಾಯ ನಿರ್ಗಮಾದ್ವಿಭ್ಯುಷೇ ನಾಧಮಾನಾಯ ವಿಮೋಕ್ಷಂ ಯಾಚಮಾನಾಯ ಸಪ್ತವಧ್ರಯ ಋಷಯೇ ಹೇ ಅಶ್ವಿನಾಶ್ವಿನೌ ಯುವಂ ಯುವಾಂ ಮಾಯಾಭಿರ್ವೃಕ್ಷಂ ವೃಕ್ಷವಿಕಾರಾಂ ಪೇಟಿಕಾಂ ಸಂ ಚಾಚಥಃ । ಮಮ ನಿರ್ಗಮಾರ್ಥಂ ಸಂಗಚ್ಛಥಃ । ವ್ಯಚಥಶ್ಚ । ವಿಭಕ್ತಂ ಕುರುಥಃ ॥

॥ ಪ್ರತಿಪದಾರ್ಥ ॥

**ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ಭೀತಾಯ**—ಭಯಗೊಂಡವನೂ । **ನಾಧಮಾನಾಯ**—ಬಿಡುಗಡೆಗಾಗಿ ಬೇಡುವವನೂ । **ಸಪ್ತವಧ್ರಯೇ**—ಸಪ್ತವಧ್ರಿನಾಮಕನೂ ಆದ । **ಋಷಯೇ**—ಋಷಿಯಾದ ನನ್ನ ಸಹಾಯಾರ್ಥವಾಗಿ । **ಯುವಂ**—ನೀವು । **ಮಾಯಾಭಿಃ**—ನಿಮ್ಮ ಅಸಾಧಾರಣವಾದ ಶಕ್ತಿಯಿಂದ । **ವೃಕ್ಷಂ**—ವೃಕ್ಷವಿಕಾರವಾದ ಪೆಟ್ಟಿಗೆಯ ಹತ್ತಿರಕ್ಕೆ । **ಸಂ ಚಾಚಥಃ**—ಬನ್ನಿರಿ । **ವಿ ಚಾಚಥಃ**—ಅದರ ಬಾಯನ್ನು (ಬಾಗಿಲನ್ನು) ಬಿಡಿಸಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಭಯಗೊಂಡವನೂ, ಬಿಡುಗಡೆಗಾಗಿ ಬೇಡುವವನೂ, ಸಪ್ತವಧ್ರಿನಾಮಕನೂ ಆದ ಋಷಿಯ (ನನ್ನ) ಸಹಾಯಾರ್ಥವಾಗಿ ನೀವು ನಿಮ್ಮ ಅಸಾಧಾರಣವಾದ ಶಕ್ತಿಯೊಡನೆ ವೃಕ್ಷವಿಕಾರವಾದ ಪೆಟ್ಟಿಗೆಯ ಹತ್ತಿರಕ್ಕೆ ಬನ್ನಿರಿ. ಅದರ ಬಾಯನ್ನು (ಬಾಗಿಲನ್ನು) ಬಿಡಿಸಿರಿ.

English Translation.

Aswins, by your devices sunder the wicker-work for (the liberation of the) terrified, imploring Rishi, Saptavadhri.

॥ ಸಂಹಿತಾಪಾಠಃ ॥

ಯಥಾ ವಾತಃ ಪುಷ್ಕರಿಣೀಂ ಸಮಿಂಗಯತಿ ಸರ್ವತಃ ।

ಏವಾ ತೇ ಗರ್ಭ ಏಜತು ನಿರೈತು ದಶಮಾಸ್ಯಃ ॥ ೭ ॥

|| ಪದಪಾಠಃ ||

ಯಥಾ । ವಾತಃ । ಪುಷ್ಕರಿಣೀಂ । ಸಂऽಇಂಗಯತಿ । ಸರ್ವತಃ ।

ಏವ । ತೇ । ಗರ್ಭಃ । ಏಜತು । ನಿಃऽಏತು । ದಶऽಮಾಸ್ಯಃ || ೭ ||

|| ಸಾಯಣಭಾಷ್ಯಂ ||

ಏತದಾದ್ಯೃಕ್ತ್ರಯಂ ಗರ್ಭಸ್ರಾವಿಣ್ಯುಪನಿಷತ್ || ಏತದಾದ್ಯೃಕ್ತ್ರಯೇಣಾಸೌ ಸಪ್ತವಧ್ರಿಃ ಸ್ತಯೋಷಿತಃ । ಗರ್ಭಿಣ್ಯಾಃ ಪ್ರಸವಾಯಾಶು ಸ್ತುತವಾನಶ್ವಿನಾವೃಷಿಃ || ಯಥಾ ವಾತಃ ಪುಷ್ಕರಿಣೀಂ ಸರ ಆದಿಕಂ ಸರ್ವತಃ ಸಮಿಂಗಯತಿ ಸಮ್ಯಕ್ ಚಾಲಯತಿ ಏವ್ಮೇವಂ ತವ ಗರ್ಭ ಏಜತು । ಕಂಪತಾಂ । ಇತಸ್ತತಃ ಸಂಚರತು । ದಶಮಾಸ್ಯೋ ದಶಮಾಸಾನ್ ಗರ್ಭೇऽಸ್ಥಿತೋ ನಿರೈತು । ನಿರ್ಗಚ್ಛತು ||

|| ಪ್ರತಿಪದಾರ್ಥ ||

**ಯಥಾ**—ಯಾವ ರೀತಿ । **ವಾತಃ**—ವಾಯುವು । **ಪುಷ್ಕರಿಣೀಂ**—ಸರಸ್ಸನ್ನು । **ಸರ್ವತಃ**—ಸುತ್ತಲೂ । **ಸಮಿಂಗಯತಿ**—ಚಲಿಸುವಂತೆ ಮಾಡುವುದೋ । **ಏವ** ಅದೇ ರೀತಿ । **ಗರ್ಭಃ**—(ನಿನ್ನ) ಗರ್ಭವು । **ಏಜತು**—ಚಲಿಸಲಿ । **ದಶಮಾಸ್ಯಃ**—ಹತ್ತು ತಿಂಗಳು ಗರ್ಭಸ್ಥವಾದ ಶಿಶುವು । **ನಿರೈತು**—ಹೊರಕ್ಕೆ ಬರಲಿ.

|| ಭಾವಾರ್ಥ ||

ಯಾವ ರೀತಿ ವಾಯುವಿನಿಂದ ಕಂಪಿತವಾದ ಸರಸ್ಸು ಸುತ್ತಲೂ ಅಲೆಗಳಿಂದ ಚಲಿಸುವುದೋ ಅದೇ ರೀತಿ ನಿನ್ನ ಗರ್ಭವು ಚಲಿಸಲಿ. ಹತ್ತು ತಿಂಗಳು ಗರ್ಭಸ್ಥವಾದ ಶಿಶುವು ಹೊರಕ್ಕೆ ಬರಲಿ.

## English Translation.

As the wind, ruffles the lake on every side, so may your womb be stimulated, and the conception of the months come forth.

|| ವಿಶೇಷವಿಷಯಗಳು ||

ಈ ಋಕ್ಕೂ ಮುಂದಿನ ಎರಡು ಋಕ್ಕುಗಳೂ ಗರ್ಭಸ್ರಾವಿಣ್ಯುಪನಿಷತ್ತೆಂದು ಭಾಷ್ಯಕಾರರು ಹೇಳಿರುವರು—

**ಏತದಾದ್ಯೃಕ್ತ್ರಯೇಣಾಸೌ ಸಪ್ತವಧ್ರಿಃ ಸ್ತಯೋಷಿತಃ ।**
**ಗರ್ಭಿಣ್ಯಾಃ ಪ್ರಸವಾಯಾಶು ಸ್ತುತವಾನಶ್ವಿನಾವೃಷಿಃ ||**

ಸಪ್ತವಧ್ರಿಋಷಿಯು ತನ್ನ ಪತ್ನಿಗೆ ಸುಖಪ್ರಸವವಾಗಬೇಕೆಂದು ಬಯಸಿ ಈ ಮೂರು ಋಕ್ಕುಗಳಿಂದ ಅಶ್ವಿನೀದೇವತೆಗಳನ್ನು ಸ್ತೋತ್ರಮಾಡಿದನು ಎಂದಿದೆ.

ಇಲ್ಲಿಯೂ ಮುಂದಿನ ಋಕ್ಕುಗಳಲ್ಲಿಯೂ ಗರ್ಭಸ್ಥಶಿಶುವು ಹತ್ತು ತಿಂಗಳಪರ್ಯಂತ ಗರ್ಭದಲ್ಲಿರುವಂತೆ ವರ್ಣಿತವಾಗಿದೆ. ಈಗ ಸಾಧಾರಣವಾಗಿ ಒಂಭತ್ತು ತಿಂಗಳವರೆಗೆ ಮಾತ್ರ ಶಿಶುವು ಮಾತೃಗರ್ಭದಲ್ಲಿರುವುದು ರೂಢಿಯಿರುವುದು. ಆದರೆ ಆ ಕಾಲದಲ್ಲಿ ಹತ್ತುತಿಂಗಳಕಾಲ ಶಿಶುವು ಗರ್ಭಸ್ಥವಾಗಿರುವುದು ಸಾಮಾನ್ಯವಾಗಿದ್ದಿತೆಂದು ಕಂಡುಬರುವುದು. ಈಗಲೂ ಹತ್ತು ತಿಂಗಳವರೆಗೂ ಪ್ರಸವವಾಗದೆ ಇರುವ ಅನೇಕ ನಿದರ್ಶನಗಳೂ ಇವೆ. ಮತ್ತು ಋಗ್ವೇದದಲ್ಲಿಯೂ ಯಜುರ್ವೇದದ ಏಕಾಗ್ನಿ ಕಾಂಡದಲ್ಲಿಯೂ—

**ತಂ ತೇ ಗರ್ಭಂ ಹವಾಮಹೇ ದಶಮೋ ಮಾಸಿ ಸೂತವೇ ।**

(ಋ. ಸಂ. ೧೦-೧೮೪-೩)

**ಯಥೇಯಂ ಪೃಥಿವೀ ಮಹೀ ತಿಷ್ಠಂತೀ ಗರ್ಭಮಾದಧೇ ।**

**ಏವಂ ತ್ವಂ ಗರ್ಭಮಾಧತ್ಸ್ವ ದಶಮೋ ಮಾಸಿ ಸೂತವೇ ।**

.... .... .... .... .... ....

**ಪುಮಾಗ್ಂಸಂ ಗರ್ಭಮಾಧೇಹಿ ದಶಮೋ ಮಾಸಿ ಸೂತವೇ ।**

.... .... .... .... .... ....

**ತಂ ಮಾತಾ ದಶಮಾಸೋ ಬಿಭರ್ತು ಸ ಜಾಯತಾಂ ವೀರತಮಃ ಸ್ವಾನಾಂ ।**

.... .... .... .... .... ....

**ಆ ವೀರೋ ಜಾಯತಾಂ ಪುತ್ರಸ್ತೇ ದಶಮಾಸ್ಯಃ ॥**

(ತೈ. ಏ. ಅನು. ೧೩)

ಹತ್ತು ತಿಂಗಳವರೆಗೂ ಶಿಶುವು ಗರ್ಭಸ್ಥವಾಗಿರುವುದೆಂದೂ ಆರೀತಿ ಇದ್ದು ಜನಿಸುವ ಪುತ್ರನು ವೀರನಾಗುವನೆಂದೂ ಹೇಳಿದೆ. ಗರ್ಭದಲ್ಲಿ ಹತ್ತು ತಿಂಗಳಕಾಲ ಇದ್ದು ಜನಿಸುವ ಶಿಶುವು ಮುಂದೆ ಬಲಾರೋಗ್ಯಗಳಿಂದ ಕೂಡಿ ದೀರ್ಘಾಯುವಾಗಿರುವುದೆಂಬ ವಿಷಯವು ಅನುಭವವೇದ್ಯವಾಗಿದೆ.

॥ ಸಂಹಿತಾಪಾಠಃ ॥

ಯಥಾ ವಾತೋ ಯಥಾ ವನಂ ಯಥಾ ಸಮುದ್ರ ಏಜತಿ ।
ಏವಾ ತ್ವಂ ದಶಮಾಸ್ಯ ಸಹಾವೇಹಿ ಜರಾಯುಣಾ ॥ ೮ ॥

॥ ಪದಪಾಠಃ ॥

ಯಥಾ । ವಾತಃ । ಯಥಾ । ವನಂ । ಯಥಾ । ಸಮುದ್ರಃ । ಏಜತಿ ॥
ಏವ । ತ್ವಂ । ದಶऽಮಾಸ್ಯ । ಸಹ । ಅವ । ಇಹಿ । ಜರಾಯುಣಾ ॥ ೮ ॥

‖ ಸಾಯಣಭಾಷ್ಯಂ ‖

**ವಾತೋ ಯಥಾ ಕಂಪಮಾನೋ ವನಂ ಕಂಪಯತಿ ಸ್ವಯಂ । ಯಥಾ ಸಮುದ್ರಶ್ಚಲತಿ ಚಾಲ್ಯತೇ ವಾಥ ವಾಯುನಾ ‖ ಸ್ಥಿತ್ವಾ ದಶೈವ ಮಾಸಾಂಸ್ತ್ವಂ ಗರ್ಭೋಽಲ್ಪೇನ ಸುವೇಷ್ಟಿತಃ । ನಿರ್ಗಚ್ಛ ಜಠರಾನ್ಮಾತುರ್ಜರಾಯುಜಸ್ತತಃ ಪತೇಃ ‖**

‖ ಪ್ರತಿಪದಾರ್ಥ ‖

**ಯಥಾ**—ಯಾವ ರೀತಿ । **ವಾತಃ**—ಚಲಿಸುವ (ಬೀಸುವ) ವಾಯುವು । **ಯಥಾ**—ಯಾವ ರೀತಿ। **ವನಂ**—ವೃಕ್ಷಗಳನ್ನು ಕಂಪಿಸುವಂತೆ ಮಾಡುವುದೋ । **ಯಥಾ**—ಯಾವ ರೀತಿ । **ಸಮುದ್ರಃ**—(ವಾಯುವಿನಿಂದ ಚಲಿತವಾದ) ಸಮುದ್ರವು । **ಏಜತಿ**—ಕ್ಷುಭಿತವಾಗುತ್ತದೆಯೋ । **ಏವ**—ಅದೇ ರೀತಿಯಲ್ಲಿ । **ದಶಮಾಸ್ಯ**—ಹತ್ತುತಿಂಗಳು ಗರ್ಭಸ್ಥವಾಗಿದ್ದ ಎಲೈ ಶಿಶುವೇ । **ಜರಾಯುಣಾ ಸಹ**—ಗರ್ಭಕೋಶದ ಪೊರೆಯೊಡನೆ । **ಅವೇಹಿ**—ಹೊರಕ್ಕೆ ಬಾ.

‖ ಭಾವಾರ್ಥ ‖

ಯಾವ ರೀತಿ ಬೀಸುತ್ತಿರುವ ಗಾಳಿಯು ವೃಕ್ಷಗಳನ್ನೂ ಸಮುದ್ರವನ್ನೂ ಕಂಪಿಸುವಂತೆ ಮಾಡುವುದೋ, ಅದೇ ರೀತಿ ಗರ್ಭದ ಚಲನೆಯಿಂದ, ಹತ್ತು ತಿಂಗಳು ಗರ್ಭಸ್ಥವಾಗಿದ್ದ ಎಲೈ ಶಿಶುವೇ, ಗರ್ಭಕೋಶದ ಪೊರೆಯೊಡನೆ ಹೊರಕ್ಕೆ ಬಾ.

## English Translation.

As the wind, as the wood, as the ocean are agitated, so do you, gestation of ten months, invested with the uterine membranes, descend.

‖ ಸಂಹಿತಾಪಾಠಃ ‖

ದಶ ಮಾಸಾಞ್ಛಶಯಾನಃ ಕುಮಾರೋ ಅಧಿ ಮಾತರಿ ।
ನಿರೈತು ಜೀವೋ ಅಕ್ಷತೋ ಜೀವೋ ಜೀವಂತ್ಯಾ ಅಧಿ ‖ ೯ ‖

‖ ಪದಪಾಠಃ ‖

ದಶ । ಮಾಸಾನ್ । ಶಶಯಾನಃ । ಕುಮಾರಃ । ಅಧಿ । ಮಾತರಿ ‖
ನಿಃऽಏತು । ಜೀವಃ । ಅಕ್ಷತಃ । ಜೀವಃ । ಜೀವಂತ್ಯಾಃ । ಅಧಿ ‖ ೯ ‖

|| ಸಾಯಣಭಾಷ್ಯಂ ||

**ದಶ ಮಾಸಾನುಷಿತ್ವಾಸೌ ಜನನೀಜಠರೇ ಸುಖಂ । ನಿರ್ಗಚ್ಛತು ಸುಖಂ ಜೀವೋ ಜನನೀ ಚಾಪಿ ಜೀವತು ॥**

॥ ಪ್ರತಿಪದಾರ್ಥ ॥

**ದಶ ಮಾಸಾನ್**—ಹತ್ತು ತಿಂಗಳು । **ಮಾತರಿ ಅಧಿ**—ತಾಯಿಯ ಗರ್ಭದಲ್ಲಿ । **ಶಶಯಾನಃ**—ಮಲಗಿದ್ದ । **ಕುಮಾರಃ**—ಶಿಶುವು । **ಅಕ್ಷತಃ**—ಅಹಿಂಸಿತನಾಗಿಯೂ । **ಜೀವಂತ್ಯಾಃ**—ಜೀವಂತಳಾಗಿರುವ ತಾಯಿಯ ಗರ್ಭದಿಂದ । **ಜೀವಃ**—ತಾನೂ ಜೀವಂತನಾಗಿದ್ದು । **ನಿರೈತು**—ಹೊರಕ್ಕೆ ಬರಲಿ.

|| ಭಾವಾರ್ಥ ||

ಹತ್ತು ತಿಂಗಳು ತಾಯಿಯ ಗರ್ಭದಲ್ಲಿ ಮಲಗಿದ್ದ ಶಿಶುವು ಅಹಿಂಸಿತವಾಗಿ ಜೀವಂತಳಾಗಿರುವ ತಾಯಿಯ ಗರ್ಭದಿಂದ ತಾನೂ ಜೀವಂತನಾಗಿದ್ದು ಹೊರಕ್ಕೆ ಬರಲಿ.

English Translation.

May the boy who has reposed for ten months in the bosom of his mother come forth, alive, unharmed, living, from a living (parent).

# ಎಪ್ಪತ್ತೊಂಭತ್ತನೆಯ ಸೂಕ್ತವು

## ಪೀಠಿಕೆ

### ಉಷೋದೇವತೆಯ ಸೂಕ್ಷ್ಮಪರಿಚಯ.

ಈ ಸೂಕ್ತಕ್ಕೂ ಮುಂದಿನ ಸೂಕ್ತಕ್ಕೂ ಉಷಸ್ಸೇ ದೇವತೆಯು. ಉಷೋದೇವತೆಯ ವಿಷಯದಲ್ಲಿ—ಯಾಸ್ಕಮಹರ್ಷಿಗಳು—**ಉಷಾ ಕಸ್ಮಾದುಚ್ಛತೀತಿ ಸತ್ಯಾ ರಾತ್ರೇರಪರಃ ಕಾಲಃ** ॥ (ನಿ. ೨-೧೮) ಎಂದು ಹೇಳಿದ್ದಾರೆ. ಎಂದರೆ ಉಷೋದೇವತೆಯು ಯಾರು? ಅದರ ಸ್ವರೂಪವೇನು? ಅದಕ್ಕೆ ಈ ಹೆಸರು ಬರಲು ಕಾರಣವೇನು? ಎಂದು ಮೊದಲಾದ ವಿಷಯ ವಿಮರ್ಶೆಮಾಡುತ್ತಾ **ಉಷಃ ಕಸ್ಮಾತ್ । ಉಚ್ಛತೀತಿ ಸತ್ಯಾಃ । ಉಚ್ಛೀ ವಿವಾಸೇ । ವಿವಾಸಯತಿ ಹೀಯಂ ತಮಾಂಸಿ ತಸ್ಮಾದುಚ್ಛತೀತ್ಯೇವಮಸ್ಯಾ ಏತಸ್ಮಿನ್ನರ್ಮಣಿ ಸತ್ಯಾಃ ಕರ್ತರಿ ಕಾರಕೇ ಉಷಾ ಇತ್ಯೇತದಭಿಧಾನಂ ಭವತಿ । ಕಾ ಪುನರಿಯಮುಷಾ ಇತಿ । ರಾತ್ರೇರಪರಃ ಕಾಲಃ ಸ ಉಷಾ ಇತ್ಯುಚ್ಯತೇ** ॥ ಎಂದರೆ ಹೊರದೂಡು ಎಂಬರ್ಥವುಳ್ಳ ಉಚ್ಛೀ-ವಿವಾಸೇ ಎಂಬ ಧಾತುವಿನಿಂದ ಈ ಉಷಶ್ಶಬ್ದದ ನಿಷ್ಪತ್ತಿಯಾಗಿದೆಯೆಂದು ವಿವರಿಸುತ್ತಾರೆ. ಏನನ್ನು ಹೊರದೂಡುವುದು ಎಂದರೆ ಕತ್ತಲೆಯನ್ನು ಎಂದರ್ಥವು. ಕತ್ತಲೆಯನ್ನು ಹೊರದೂಡಿ ಬೆಳಕನ್ನು ಪ್ರಸರಿಸುವುದರಿಂದ ಈ ದೇವತೆಗೆ **ಉಷಾಃ** ಎಂದು ಹೆಸರು. ಆ ಕಾಲವು ಯಾವುದು ಎಂದರೆ ರಾತ್ರಿಯ ಕೊನೆಯ ಭಾಗವು. ರಾತ್ರಿಯು ಮುಗಿದು ಸೂರ್ಯೋದಯವಾಗುವುದಕ್ಕೆ

ಮುಂಚಿತವಾಗಿ ಕತ್ತಲೆ ಇಲ್ಲದ ಮತ್ತು ಬೆಳಕಾಗಿರುವ ಕಾಲಕ್ಕೆ ಉಷಃಕಾಲವೆಂದು ಹೆಸರು ಎಂದು ಅರ್ಥವಿವರಣೆ ಮಾಡಿರುವರು.

ರಾತ್ರಿಯು ಕಳೆದನಂತರ ಉಷಃಕಾಲವಾಗುವುದರಿಂದ ಉಷಃಕಾಲವು ರಾತ್ರಿಯಿಂದ ಹುಟ್ಟಿದ್ದೆಂದು ಹೇಳುವ ರೂಢಿ ಇರುವುದು. ಇದನ್ನು ಸಮರ್ಥನೆಮಾಡುವುದಕ್ಕಾಗಿ ಯಾಸ್ಕರು—

**ಇದಂ ಶ್ರೇಷ್ಠಂ ಜ್ಯೋತಿಷಾಂ ಜ್ಯೋತಿರಾಗಾಚ್ಚಿತ್ರಃ ಪ್ರಕೇತೋ ಅಜನಿಷ್ಟ ವಿಭ್ವಾ ।**
**ಯಥಾ ಪ್ರಸೂತಾ ಸವಿತುಃ ಸವಾಯ ಏವಾ ರಾತ್ರ್ಯುಷಸೇ ಯೋನಿಮಾರೈಕ್ ॥**

(ಋ. ಸಂ. ೧-೧೧೩-೧)

ಎಂಬ ಋಕ್ಕನ್ನು ಉದಹರಿಸಿರುವರು. ಮತ್ತು ಈ ಕ್ರಮವನ್ನನುಸರಿಸಿ ಉಷಃಕಾಲವಾದನಂತರ ಸೂರ್ಯೋದಯ ವಾಗುವುದರಿಂದ ಉಷಸ್ಸಿನಲ್ಲಿ ಸೂರ್ಯನು ಉತ್ಪನ್ನನಾಗುವನೆಂದು ಹೇಳುವ ವಿಷಯದಲ್ಲಿಯೂ ಯಾಸ್ಕರು—

**ರುಶದ್ವತ್ಸಾ ರುಶತೀ ಶ್ವೇತ್ಯಾಗಾದಾರೈಗು ಕೃಷ್ಣಾ ಸದನಾನ್ಯಸ್ಯಾಃ ।**
**ಸಮಾನಬಂಧೂ ಅಮೃತೇ ಅನೂಚೀ ದ್ಯಾವಾ ವರ್ಣಂ ಚರತ ಆಮಿನಾನೇ ॥**

(ಋ. ಸಂ ೧-೧೧೩-೨)

ಎಂಬ ಋಕ್ಕನ್ನು ವಿಷಯಸಮರ್ಥನೆಗಾಗಿ ಉದಾಹರಿಸಿರುವರು. (ನಿ. ೨-೨೦)

ಈ ಉಷೋದೇವತೆಯ ಸ್ವರೂಪವನ್ನು ಋಷಿಗಳು ವಿಧವಿಧವಾಗಿ ವರ್ಣನೆಮಾಡಿರುವರು. ಈ ವರ್ಣನೆಗನು ಸಾರವಾಗಿ ನಾನಾವಿಧ ವಿಶೇಷಣಗಳನ್ನು ಉಪಯೋಗಿಸಿರುವರು. ಅವುಗಳಲ್ಲಿ ಮುಖ್ಯವಾದ ಹದಿನಾರು ಶಬ್ದಗಳು ಉಷೋದೇವತೆಗೆ ಅನ್ವಯಿಸುವವು. ಅವುಗಳನ್ನು ಯಾಸ್ಕರು ಈ ರೀತಿ ಹೇಳಿರುವರು. (ನಿ. ೨-೧೯)

**ವಿಭಾವರೀ—ವಿಶೇಷಪ್ರಭಾವಯುಕ್ತಾ । ವಿಶಿಷ್ಟಪ್ರಕಾಶಯುಕ್ತಾ ।** ಬಹಳ ಪ್ರಕಾಶಮಾನವಾದ—Resplendent. ಈ ಶಬ್ದವು ಋ. ಸಂ. ೧-೩೦-೨೨; ೧-೪೮-೧; ೧-೪೮-೧೦; ೧-೯೨-೧೪; ೪-೫೨-೬; ೫-೭೯-೪; ೫-೭೯-೧೦; ೮-೪೭-೧೪ ಎಂಬ ಋಕ್ಕುಗಳಲ್ಲಿ ಪಠಿತವಾಗಿರುವುದು.

**ಸೂನರೀ—ಸುಷ್ಠು ನೇತ್ರೀ ।** ಸುಂದರವಾದ Beautiful ಈ ಶಬ್ದವು ಋ. ಸಂ. ೧-೪೮-೧೦, ೧-೪೮-೫; ೧-೪೮-೮; ೪-೫೨-೧; ೭-೮೧-೧ ಎಂಬ ಋಕ್ಕುಗಳಲ್ಲಿ ಪಠಿತವಾಗಿರುವುದು.

**ಭಾಸ್ವತೀ—ತೇಜಸ್ವತೀ। ವಿಶಿಷ್ಟಪ್ರಕಾಶನಯುಕ್ತಾ ।** ಹೊಳೆಯುತ್ತಿರುವ—Shining. ಈ ಶಬ್ದವು ಋ. ಸಂ. ೧-೯೨-೭: ೧-೧೧೩-೪ ಎಂಬ ಋಕ್ಕುಗಳಲ್ಲಿ ಪಠಿತವಾಗಿರುವುದು.

**ಓದತೀ—ಉಂದೀ ಕ್ಲೇದನೇ । ಉನತ್ತಿ ಸರ್ವಂ ನೀಹಾರೇಣೇತ್ಯೋದತೀ ।** ಹರಿಯುತ್ತಿರುವ, ಚಿಮ್ಮುತ್ತಿರುವ, ಪ್ರವಿಸುತ್ತಿರುವ, ಮಂಜಿನಿಂದ ಎಲ್ಲವನ್ನೂ ನೆನೆಯಿಸುವ—flowing, gushing & c—ಈ ಶಬ್ದವು ಋ. ಸಂ. ೧-೪೬-೬; ೮-೬೯-೨ ರಲ್ಲಿ ಮಾತ್ರವಿರುವುದು.

**ಚಿತ್ರಮಘಾ—ವಿಚಿತ್ರಧನಾ । ವಿವಿಧರಶ್ಮ್ಯೈಶ್ವರ್ಯಧನಾ ವಾ ॥** ವಿಧವಿಧವಾದ ಅಥವಾ ಪ್ರಕಾಶಮಾನ ವಾದ ಐಶ್ವರ್ಯವುಳ್ಳ—possessed of brilliant riches. ಈ ಶಬ್ದವು ಋ. ಸಂ. ೭-೭೫-೫; ೭-೭೭-೩: ೮-೫೮-೩ ರಲ್ಲಿ ಪಠಿತವಾಗಿರುವುದು.

**ಅರ್ಜುನೀ—ಶುಭ್ರವರ್ಣಾ** । ಬೆಳ್ಳಗಿರುವ. white. ಈ ಶಬ್ದವು ಋ. ಸಂ. ೧–೪೯–೩; ೫–೮೪–೨ ಎಂಬ ಋಕ್ಕುಗಳಿರುವುದು.

**ವಾಜಿನೀ—**ಅಥವಾ **ವಾಜಿನೀವತೀ— ವಾಜೋಽನ್ನಮಸ್ಯಾ ಅಸ್ತೀತಿ । ಬಹ್ವನ್ನಾ** । ಅನ್ನಯುಕ್ತವಾದ ಅಥವಾ ಅನ್ನವನ್ನು ತಂದುಕೊಡುವ—the bringer of food. ಈ ಶಬ್ದಗಳು ಋ. ಸಂ. ೩–೬–೧; ೩–೬೦–೧; ೬–೬೧–೬; ಮತ್ತು ಋ. ಸಂ. ೧–೩–೧೦; ೬–೬೧–೪; ೬–೭೫–೫; ೭–೯೬–೩; ೧೦–೭೫–೮; ೧–೪೮–೬; ೧–೪೮–೧೬; ೧–೯೨–೧೩; ೧–೯೨–೧೫; ೨–೪೧–೧೮; ೪-೫೫–೯; ೬–೬೧–೩; ೮–೨೪–೨೫ ಎಂಬ ಋಕ್ಕುಗಳಲ್ಲಿರುವುದು.

**ಸುಮ್ನಾವರೀ—ಸುಮ್ನಮಿತಿ ಸುಖನಾಮ । ತದ್ವತೀ ।** ಸಂತೋಷವನ್ನುಂಟುಮಾಡುವ—the giver of joy. ಈ ಶಬ್ದವು ಋ. ಸಂ. ೧-೧೧೩-೧೨ ನೆಯ ಋಕ್ಕಿನಲ್ಲಿ ಮಾತ್ರವಿರುವುದು.

**ಅಹನಾ, ದ್ಯೋತನಾ— ಕೃತ್ಸ್ನಂ ಜಗದ್ದ್ಯೋತನಶೀಲಾ ।** ತದ್ವತೀ । ಪ್ರಕಾಶಮಾನವಾದ bright. ಈ ಶಬ್ದಗಳು ಋ. ಸಂ. ೧–೧೨೩–೪ ನೆಯ ಋಕ್ಕಿನಲ್ಲಿರುವುದು.

**ಶ್ವೇತ್ಯಾ—ಶ್ವೇತವರ್ಣೋಷಾ । ಶ್ವಿತಾ ವರ್ಣೇ ।** ಶುಭ್ರವರ್ಣವುಳ್ಳ—the fair-caloured. ಈ ಶಬ್ದವು ಋ. ಸಂ. ೧–೧೧೩–೨; ೧೦–೭೫–೬ ರಲ್ಲಿರುವುದು

**ಅರುಷೀ—ಆರೋಚಮಾನಾ । ರಕ್ತವರ್ಣಾ ವಾ ।** ಕೆಂಪುವರ್ಣವುಳ್ಳ, ಸ್ವಲ್ಪ ಕೆಂಪಾದ ಛಾಯೆಯುಳ್ಳ the ruddy. ಈ ಶಬ್ದವು ಋ. ಸಂ. ೩-೫೫-೧೧, ೧–೫೨–೨; ೮–೯೮–೮; ಇತ್ಯಾದಿ ಋಕ್ಕುಗಳಲ್ಲಿ ಪಠಿತವಾಗಿರುವುದು.

**ಸೂನೃತಾ, ಸೂನೃತಾವತೀ, ಸೂನೃತಾವರೀ—ಪ್ರಿಯಸತ್ಯರೂಪಾ । ಪ್ರಿಯಸತ್ಯಾತ್ಮಿಕಾ ವಾಕ್ । ತಾದೃಶ್ಯಾ ವಾಚಾ ಯುಕ್ತಾ ।** ಪ್ರಿಯವಾದ ಮತ್ತು ಹಿತವಾದ ಮಾತುಗಳನ್ನಾಡುವ—the utterer of pleasent or sacred speech. ಈ ಶಬ್ದಗಳು ಋ. ಸಂ. ೧–೮–೮, ೧–೩೦–೫, ೧–೪೩–೩ ಇತ್ಯಾದಿ ಋಕ್ಕುಗಳಲ್ಲಿಯೂ ಋ. ಸಂ. ೧–೯೨–೧೪; ೧-೨೨ ೩; ೭–೮೧–೬; ಮತ್ತು ಋ. ಸಂ ೪–೫೨–೪ ಎಂಬ ಋಕ್ಕುಗಳಲ್ಲಿಯೂ ಪಠಿತವಾಗಿರುವುದು.

ಈ ಶಬ್ದಗಳು ಸಾಧಾರಣವಾಗಿ ಉಷೋದೇವತೆಯ ಪರವಾಗಿಯೇ ಉಪಯೋಗಿಸಲ್ಪಡುವುದಾದರೂ ಕೆಲವು ಸಂದರ್ಭಗಳಲ್ಲಿ ಇತರ ದೇವತೆಗಳ ಪರವಾಗಿಯೂ ಉಪಯುಕ್ತವಾಗಿರುವುದು.

ಯಾಸ್ಕರು ಮೇಲೆ ಉದಾಹರಿಸಿರುವ ಈ ಋಕ್ಕಿಗೆ ಈ ರೀತಿ ನಿರ್ವಚನವನ್ನು ಹೇಳಿರುವರು—

**ಇದಂ ಶ್ರೇಷ್ಠಂ ಜ್ಯೋತಿಷಾಂ ಜ್ಯೋತಿರಾಗಮತ್ । ಚಿತ್ರಂ ಪ್ರಕೇತನಂ ಪ್ರಜ್ಞಾತತಮಮಜನಿಷ್ಟ ವಿಭೂತತಮಂ ಯಥಾ ಪ್ರಸೂತಾ ಸವಿತುಃ ಪ್ರಸವಾಯ ರಾತ್ರಿರಾದಿತ್ಯಸ್ಯ । ಏವಂ ರಾತ್ರ್ಯುಷಸೇ ಯೋನಿಮರಿಚತ್ ಸ್ಥಾನಂ । ಸ್ತ್ರೀಯೋನಿರಭಿಯುತ ಏನಾಂ ಗರ್ಭಃ ॥**

(ನಿ. ೨-೧೯)

**ರಾತ್ರೇರಪರಃ ಕಾಲ ಉಷ ಇತ್ಯುಚ್ಯತೇ** ಎಂಬ ವಚನಾನುಸಾರವಾಗಿ ರಾತ್ರಿಯ ಕೊನೆಯ ಭಾಗವು ಎಂದರೆ ಸೂರ್ಯೋದಯಕ್ಕೆ ಮುಂಚಿತವಾದ ಕಾಲವು ಉಷಃಕಾಲವೆನಿಸುವುದು. ಈ ಉಷಃಕಾಲದ ತೇಜಸ್ಸು ಎಂದರೆ ಬೆಳಕು

ಎಲ್ಲಾ ಬೆಳಕುಗಳಿಗಿಂತಲೂ ಶ್ರೇಷ್ಠವಾದದ್ದು. ಪ್ರಪಂಚದಲ್ಲಿ ಸೂರ್ಯಚಂದ್ರನಕ್ಷತ್ರಗಳು ಪ್ರಕಾಶಯುತವಾದವು. ಇವುಗಳಲ್ಲಿ ಸೂರ್ಯನ ಬೆಳಕು ಬಹಳ ತೀಕ್ಷ್ಣವಾಗಿರುವುದು. ನಕ್ಷತ್ರಗಳ ಬೆಳಕು ನಕ್ಷತ್ರಗಳನ್ನು ಮಾತ್ರವೇ ಪ್ರಕಾಶಗೊಳಿಸುತ್ತಾ ಇತರ ಪದಾರ್ಥಗಳನ್ನು ಪ್ರಕಾಶಪಡಿಸುವುದಿಲ್ಲ ಎಂದರೆ ನಕ್ಷತ್ರಗಳ ಬೆಳಕಿನಿಂದ ಇತರ ವಸ್ತುಗಳನ್ನು ನೋಡಲು ಸಾಧ್ಯವಾಗುವುದಿಲ್ಲ ಚಂದ್ರನ ಬೆಳಕು ಶೀತಳವಾಗಿದ್ದರೂ ಹೆಚ್ಚು ಪ್ರಕಾಶವಿಲ್ಲದ್ದರಿಂದ ಪದಾರ್ಥಗಳು ಸ್ಪಷ್ಟವಾಗಿ ಕಾಣಿಸುವುದಿಲ್ಲ ಆದರೆ ಉಷಃಕಾಲದ ಬೆಳಕು ಸೂರ್ಯನ ಬೆಳಕಿನಂತೆ ತೀಕ್ಷ್ಣವೂ ಅಲ್ಲ. ಚಂದ್ರನ ಪ್ರಕಾಶದಂತೆ ಶೀತಳವೂ ಅಲ್ಲ, ಅಸ್ಪಷ್ಟವೂ ಅಲ್ಲ. ಎಲ್ಲಾ ವಸ್ತುವನ್ನೂ ಬಹಳ ಚೆನ್ನಾಗಿ ಪ್ರಕಾಶಪಡಿಸುವ ಸಾಮರ್ಥ್ಯವುಳ್ಳದ್ದಾಗಿರುವುದು. ಆದುದರಿಂದಲೇ ಈ ಉಷಃಕಾಲದ ಪ್ರಕಾಶವು ಸೂರ್ಯಚಂದ್ರನಕ್ಷತ್ರಾದಿಗಳ ಪ್ರಕಾಶಕ್ಕಿಂತಲೂ ಅತ್ಯಂತ ಶ್ರೇಷ್ಠವಾದುದೆಂದು ಇಲ್ಲಿ ಹೇಳಿರುವುದು. ಇದಲ್ಲದೆ ಈ ಉಷಃಕಾಲದ ಪ್ರಕಾಶವು ಎಲ್ಲಾ ಪ್ರದೇಶಗಳಲ್ಲಿಯೂ ಏಕಕಾಲದಲ್ಲಿ ಹರಡಿ ಮನಸ್ಸಿಗೆ ಬಹು ಆಹ್ಲಾದಕರವಾಗಿರುವುದು. ಇಂತಹ ಉಷಃಕಾಲದ ಉದಯವು ಈಗ ಪ್ರಾಪ್ತವಾಗಿರುವುದು ಇದು ಈ ಋಕ್ಕಿನ ಪೂರ್ವಾರ್ಧದ ಅನುವಾದವು.

ಪ್ರಪಂಚದಲ್ಲಿ ಸೂರ್ಯನು ಮುಳುಗಿದನಂತರ ರಾತ್ರಿಯು ಉಂಟಾಗುವುದು. ರಾತ್ರಿಯು ಕಳೆದನಂತರ ಉಷಃಕಾಲವೂ, ಉಷಃಕಾಲಾನಂತರ ಸೂರ್ಯೋದಯವೂ ಉಂಟಾಗುವುದು. ಈ ರೀತಿ ಒಂದಾಗುತ್ತಲೊಂದು ಕ್ರಮವಾಗಿ ಪ್ರಾಪ್ತವಾಗುವುದರಿಂದ ಒಂದರ ಉತ್ಪತ್ತಿಗೆ ಒಂದು ಕಾರಣವೆಂದು ಹೇಳಲ್ಪಡುವುದು. ಹೇಗೆಂದರೆ ಸೂರ್ಯನು ಅಸ್ತನಾದನಂತರ ರಾತ್ರಿಯು ಉಂಟಾಗುವುದರಿಂದ ರಾತ್ರಿಯ ಉತ್ಪತ್ತಿಗೆ ಸೂರ್ಯನು ಕಾರಣನು ಎಂದರೆ ಸೂರ್ಯನಿಂದ ರಾತ್ರಿಯು ಉತ್ಪತ್ತಿಯುಂಟಾಗುವುದು. ಅದರಂತೆಯೇ ರಾತ್ರಿಯಿಂದ ಉಷಃಕಾಲದ ಉತ್ಪತ್ತಿಯಾಗುವುದು. ಉಷಃಕಾಲದಿಂದ ಸೂರ್ಯನ ಉದಯುವಾಗುವುದು ಈ ಅಭಿಪ್ರಾಯವನ್ನೇ ಈ ಋಕ್ಕಿನಲ್ಲಿ— ರಾತ್ರಿಯು ಸೂರ್ಯನಿಂದ ಹೇಗೆ ಉತ್ಪನ್ನವಾಯಿತೋ ಹಾಗೆ ರಾತ್ರಿಯಿಂದ ಉಷಃಕಾಲವು ಆವಿರ್ಭವಿಸಿತು ಎಂದು ವರ್ಣಿಸಿರುವುದು.

(ಪೀಠಿಕೆ ಸಮಾಪ್ತವಾದುದು.)

॥ ಸಾಯಣಭಾಷ್ಯಂ ॥

**ಮಹೇ ನೋ ಅದ್ಯೇತಿ ದಶರ್ಚಂ ಸಪ್ತಮಂ ಸೂಕ್ತಮಾತ್ರೇಯಸ್ಯ ಸತ್ಯಶ್ರವಸ ಆರ್ಷಂ ಪಾಂಕ್ತಮುಷಸ್ಯಂ । ಅನುಕ್ರಮ್ಯತೇ ಚ । ಮಹೇ ದಶ ಸತ್ಯಶ್ರವಾ ಉಷಸ್ಯಂ ತು ಪಾಂಕ್ತಮಿತಿ ॥ ಪ್ರಾತರನುವಾಕ ಉಷಸ್ಯೇ ಕ್ರತೌ ಪಾಂಕ್ತೇ ಛಂದಸ್ಯಾಶ್ವಿನಶಸ್ತ್ರೇ ಚೇದಂ ಸೂಕ್ತಂ । ಸೂತ್ರ್ಯತೇ ಹಿ । ಮಹೇ ನೋ ಅದ್ಯೇತಿ ಪಾಂಕ್ತಂ । ಆ. ೪–೧೪ । ಇತಿ ॥**

ಅನುವಾದವು—**ಮಹೇ ನೋ ಅದ್ಯ** ಎಂಬ ಈ ಸೂಕ್ತವು ಆರನೆಯ ಅನುವಾಕದಲ್ಲಿ ಏಳನೆಯ ಸೂಕ್ತವು. ಇದರಲ್ಲಿ ಹತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ **ಸತ್ಯಶ್ರವಾ ಆತ್ರೇಯಃ** ಎಂಬುವನು ಋಷಿಯು; ಉಷೋದೇವತೆಯು ದೇವತೆಯು ; ಪಂಕ್ತಿಶ್ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಮಹೇ ದಶ ಸತ್ಯಶ್ರವಾ ಉಷಸ್ಯಂ ತು ಪಾಂಕ್ತಂ** ಎಂದು ಹೇಳಿರುವುದು. ಪ್ರಾತರನುವಾಕಮಂತ್ರಪಠನಕಾಲದಲ್ಲಿ ಉಷಸ್ಯಕ್ರತುಸಂಬಂಧವಾದ ಪಂಕ್ತಿ

ಶ್ಛಂದಸ್ಸಿನ ಮಂತ್ರಗಳಿಗಾಗಿಯೂ, ಆಶ್ವಿನಶಸ್ತ್ರಮಂತ್ರಗಳಿಗಾಗಿಯೂ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ--**ಮಹೇ ನೋ ಅದ್ಯೇತಿ ಪಾಂಕ್ತಂ** ಎಂಬ ಸೂತ್ರದಿಂದ (ಆ. ೪-೧೪) ವಿವೃತ ವಾಗಿರುವುದು.

## ಸೂಕ್ತ—೭೯

ಮಂಡಲ—೫ ॥ ಅನುವಾಕ—೬ ॥ ಸೂಕ್ತ—೭೯ ॥
ಅಷ್ಟಕ—೪ ॥ ಅಧ್ಯಾಯ—೪ ॥ ವರ್ಗ—೨೧,೨೨ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೦ ॥
॥ ಋಷಿಃ—ಸತ್ಯಶ್ರವ ಆತ್ರೇಯಃ ॥
॥ ದೇವತಾ—ಉಷಾಃ ॥
॥ ಛಂದಃ—ಪಂಕ್ತಿಃ ॥

॥ ಸಂಹಿತಾಪಾಠಃ ॥

**ಮಹೇ ನೋ ಅದ್ಯ ಬೋಧಯೋಷೋ ರಾಯೇ ದಿವಿತ್ಮತೀ ।**
**ಯಥಾ ಚಿನ್ನೋ ಅಬೋಧಯಃ ಸತ್ಯಶ್ರವಸಿ ವಾಯ್ಯೇ ಸುಜಾತೇ ಅಶ್ವ-**
**ಸೂನೃತೇ ॥ ೧ ॥**

॥ ಪದಪಾಠಃ ॥

**ಮಹೇ । ನಃ । ಅದ್ಯ । ಬೋಧಯ । ಉಷಃ । ರಾಯೇ । ದಿವಿತ್ಮತೀ ।**
**ಯಥಾ । ಚಿತ್ । ನಃ । ಅಬೋಧಯಃ । ಸತ್ಯऽಶ್ರವಸಿ । ವಾಯ್ಯೇ । ಸುऽಜಾತೇ । ಅಶ್ವಸೂನೃತೇ ॥೧॥**

॥ ಸಾಯಣಭಾಷ್ಯಂ ॥

**ಅದ್ಯಾಸ್ಮಿನ್ಯಾಗದಿನೇ ಹೇ ಉಷ ಉಷೋದೇವಿ ದಿವಿತ್ಮತೀ ದೀಪ್ತಿಮತೀ ತ್ವಂ ನೋऽಸ್ಮಾನ್ಮಹೇ ಮಹತೇ ರಾಯೇ ಧನಪ್ರಾಪ್ತಯೇ ಬೋಧಯ । ಪ್ರಜ್ಞಾಪಯ । ಪ್ರಕಾಶಯೇತ್ಯರ್ಥಃ । ಸತಿ ಪ್ರಕಾಶೇ ಕ್ರತುದ್ವಾರಾ ದ್ರವ್ಯಸ್ಯೋಪಾರ್ಜಯಿತುಂ ಶಕ್ಯತ್ವಾತ್ । ಯಥಾ ಚಿತ್ ಯಥೈವ ಪೂರ್ವಂ ಸೋऽಸ್ಮಾನಬೋಧಯಃ ಅತೀತೇಷು ದಿವಸೇಷು ಯಥಾ ಬೋಧಿತವತೀ ತದ್ವದದ್ಯಾಪೀತ್ಯರ್ಥಃ । ಹೇ ಸುಜಾತೇ ಶೋಭನಪ್ರಾದುರ್ಭೂತೇ ಅಶ್ವಸೂನೃತೇ । ಅಶ್ವಾರ್ಥಾ ಪ್ರಿಯಸತ್ಯಾತ್ಮಿಕಾ ಸ್ತುತಿರ್ವಾಗ್ಯಸ್ಯಾಃ ಸಾ । ಹೇ ತಾದೃಶಿ ದೇವಿ ವಾಯ್ಯೇ ವಯ್ಯಪುತ್ರೇ ಸತ್ಯಶ್ರವಸಿ ಮಯ್ಯನುಗೃಹಾಣೇತ್ಯರ್ಥಃ ॥**

॥ ಪ್ರತಿಪದಾರ್ಥ ॥

**ದೀಪ್ತಿಮತೀ**--ಕಾಂತಿಯುತಳಾದ । **ಉಷಃ**—ಎಲೈ ಉಷೋದೇವಿಯೇ । **ಯಥಾ ಚಿತ್**—ಯಾವ ರೀತಿ ಯಲ್ಲಿ । **ನಃ**—ನಮ್ಮನ್ನು । **ಅಬೋಧಯಃ**—ಹಿಂದೆಲ್ಲಾ ಎಚ್ಚರಗೊಳಿಸಿದೆಯೋ (ಅದೇ ರೀತಿ) । **ಅದ್ಯ**—

ಈ ಯಾಗದಿವಸವೂ ಸಹ । **ನಃ**—ನಮ್ಮನ್ನು । **ಮಹೇ**—ಪ್ರಭೂತವಾದ । **ರಾಯೇ**—ಧನದ ಲಾಭಕ್ಕಾಗಿ । **ಬೋಧಯ**—ಎಚ್ಚರಗೊಳಿಸು । **ಸುಜಾತೇ**—ಉತ್ತಮವಾದ ಜನ್ಮವುಳ್ಳವಳೂ । **ಅಶ್ವಸೂನೃತೇ**—ಅಶ್ವಗಳಿಗಾಗಿ ಶ್ರೇಷ್ಠವಾಗಿ ಸ್ತುತಳಾದವಳೂ ಆದ ಉಷೋದೇವಿಯೇ । **ವಾಯ್ಯೇ**—ವಯ್ಯಪುತ್ರನಾದ । **ಸತ್ಯಶ್ರವಸಿ**—ಸತ್ಯಶ್ರವಸ್ಸೆಂಬ ಹೆಸರುಳ್ಳ ನನ್ನಲ್ಲಿ ಅನುಗ್ರಹವನ್ನಿಡು.

। ಭಾವಾರ್ಥ ॥

ಕಾಂತಿಯುತಳಾದ ಉಷೋದೇವಿಯೇ, ಯಾವ ರೀತಿ ನಮ್ಮನ್ನು ಹಿಂದೆಲ್ಲಾ ಎಚ್ಚರಗೊಳಿಸಿದೆಯೋ ಅದೇ ರೀತಿ ಈ ಯಾಗದಿವಸವೂ ಸಹ ನಮ್ಮನ್ನು ಪ್ರಭೂತವಾದ ಧನದ ಲಾಭಕ್ಕಾಗಿ ಎಚ್ಚರಗೊಳಿಸು. ಉತ್ತಮವಾದ ಜನ್ಮವುಳ್ಳವಳೂ, ಅಶ್ವಗಳಿಗಾಗಿ ಶ್ರೇಷ್ಠವಾಗಿ ಸ್ತುತಳಾದವಳೂ ಆದ ಎಲೈ ಉಷೋದೇವಿಯೇ, ವಯ್ಯಪುತ್ರನೂ, ಸತ್ಯಶ್ರವಾನಾಮಕನೂ ಆದ ನನ್ನಲ್ಲಿ ಅನುಗ್ರಹವನ್ನಿಡು.

## English Translation.

Radiant Ushas, wake us up to-day for (the acquisition of) ample riches, in like manner as you have awakened us (of old): bright-born, and praised sincerely for (the gift of) horses, shew favour to Satyashravas, the son of Vayya.

|| ವಿಶೇಷವಿಷಯಗಳು ||

ಈ ಋಕ್ಕಿನಲ್ಲಿಯೂ ಮುಂದಿನ ಎರಡು ಋಕ್ಕುಗಳಲ್ಲಿಯೂ ಈ ಸೂಕ್ತದ್ರಷ್ಟೃವಾದ **ಸತ್ಯಶ್ರವಾಃ** ಎಂಬ ಋಷಿಯು ತಾನು **ವಯ್ಯ** ಎಂಬುವನ ಪುತ್ರನೆಂದೂ ಹೇಳಿಕೊಂಡಿದಾನೆ. ಕೆಲವು ಕಡೆ ವಯ್ಯನೆಂಬುವನು ರಾಜರ್ಷಿಯೆಂದೂ ಅವನನ್ನು ಅಶ್ವಿನೀದೇವತೆಗಳು ರಕ್ಷಿಸಿದರೆಂದೂ ಹೇಳಿದೆ.

**ಯಾಭಿಃ ಕರ್ಕಂಧುಂ ವಯ್ಯಂ ಚ ಜಿನ್ವಥಸ್ತಾಭಿರೂ ಷು ಊತಿಭಿರಶ್ವಿನಾ ಗತಂ** ||

(ಋ. ಸಂ. ೧-೧೧೨-೬)

ಈ ಋಕ್ಕಿನ ಭಾಷ್ಯದಲ್ಲಿ ಭಾಷ್ಯಕಾರರು ಈ ರೀತಿ ಹೇಳಿದಾರೆ—

**ಕರ್ಕಂಧುಃ ವಯ್ಯಶ್ಚ ರಾಜರ್ಷೀ ಅತಿಕ್ಷಾಮೌ ತಪಸ್ತಪ್ಯಮಾನೌ ಯದೃಚ್ಛಯಾ ಪರ್ಯಟಂತಾವಶ್ವಿನೌ ದದೃಶತುಃ । ದೃಷ್ಟ್ವಾ ಚ ತಾವಮೃತೇನಾಪ್ಯಾಯಯಾಂಚಕ್ರತುರಿತಿ । ತದೇತದಿಹೋಚ್ಯತೇ** ||

ರಾಜರ್ಷಿಗಳಾದ ಕರ್ಕಂಧು ಮತ್ತು ವಯ್ಯ ಎಂಬುವರಿಬ್ಬರೂ ಸಹ ಅತ್ಯಂತ ಕ್ಲೇಶವನ್ನುಂಟುಮಾಡತಕ್ಕ ತಪಸ್ಸನ್ನು ಆಚರಿಸುತ್ತಾ ಕಾಡಿನಲ್ಲಿ ಸಂಚರಿಸುತ್ತಿದ್ದಾಗ ಅವರನ್ನು ಅಶ್ವಿನೀದೇವತೆಗಳು ಆಕಸ್ಮಿಕವಾಗಿ ನೋಡಿದರು. ಅನಂತರ ಅವರಿಗೆ ಅಮೃತದಾನದಿಂದ ತೃಪ್ತಿಯನ್ನುಂಟುಮಾಡಿದರು ಎಂದು ಹೇಳಿದೆ. ಕರ್ಕಂಧುವಿನ ವಿಷಯವು ಈ ಋಕ್ಕಿನಲ್ಲಲ್ಲದೆ ಋಗ್ವೇದದಲ್ಲಿ ಇನ್ನೆಲ್ಲಿಯೂ ಹೇಳಲ್ಪಟ್ಟಿಲ್ಲ. ಆದರೆ ವಯ್ಯನು ಅಶ್ವಿನೀದೇವತೆಗಳಿಂದ ಮಾತ್ರವಲ್ಲದೆ ಇಂದ್ರಾದಿದೇವತೆಗಳಿಂದಲೂ ಸಹ ಸಹಾಯವನ್ನು ಪಡೆದ ಅಂಶವನ್ನು ಇತರ ಕಡೆಗಳಲ್ಲಿ ಸೂಚಿಸಿದೆ—

ತ್ವಮಾವಿಥ ನರ್ಯಂ ತುರ್ವಶಂ ಯದುಂ ತ್ವಂ ತುರ್ವೀತಿಂ ವಯ್ಯಂ ಶತಕ್ರತೋ ।
(ಋ. ಸಂ. ೧-೫೪-೬)

ಅರಮಯಃ ಸರಪಸಸ್ತರಾಯ ಕಂ ತುರ್ವೀತಯೇ ಚ ವಯ್ಯಾಯ ಚ ಸ್ರುತಿ ।
(ಋ. ಸಂ. ೨-೧೩-೧೨)

ತ್ವಂ ಮಹೀಮವನಿಂ ವಿಶ್ವಧೇನಾಂ ತುರ್ವೀತಯೇ ವಯ್ಯಾಯ ಕ್ಷರಂತೀಂ ।
(ಋ. ಸಂ. ೪-೧೯-೬)

ಇತ್ಯಾದಿ ಋಕ್ಕುಗಳಲ್ಲಿ ವಯ್ಯನ ವಿಷಯವು ಹೇಳಲ್ಪಟ್ಟಿದೆ. ಋ. ಸಂ. ೧-೫೪-೬ ನೇ ಋಕ್ಕಿನಲ್ಲಿ ಹೇಳಿರುವ **ವಯ್ಯಂ** ಎಂಬ ಶಬ್ದಕ್ಕೆ ಸಾಯಣರು **ವಯ್ಯಕುಲಜಂ ತುರ್ವೀತಿನಾಮಾನಂ ರಾಜಾನಂ** ವಯ್ಯಕುಲೋತ್ಪನ್ನನಾದ ತುರ್ವೀತಿಯೆಂಬ ರಾಜನನ್ನು ಎಂದು ವಿವರಿಸಿದ್ದಾರೆ. ಎಂದರೆ ವಯ್ಯನೂ, ಅವನ ವಂಶದಲ್ಲಿ ಹುಟ್ಟಿದ ಇತರ ರಾಜರ್ಷಿಗಳೂ ಪ್ರಸಿದ್ಧರೆಂದು ತಿಳಿಯಬರುತ್ತದೆ.

॥ ಸಂಹಿತಾಪಾಠಃ ॥

ಯಾ ಸುನೀಥೇ ಶೌಚದ್ರಥೇ ವ್ಯೌಚ್ಛೋ ದುಹಿತರ್ದಿವಃ ।
ಸಾ ವ್ಯುಚ್ಛ ಸಹೀಯಸಿ ಸತ್ಯಶ್ರವಸಿ ವಾಯ್ಯೇ ಸುಜಾತೇ ಅಶ್ವಸೂನೃತೇ ॥

॥ ಪದಪಾಠಃ ॥

ಯಾ । ಸುಽನೀಥೇ । ಶೌಚತ್‌ಽರಥೇ । ವಿ । ಔಚ್ಛಃ । ದುಹಿತಃ । ದಿವಃ ।
ಸಾ । ವಿ । ಉಚ್ಛ । ಸಹೀಯಸಿ । ಸತ್ಯಽಶ್ರವಸಿ । ವಾಯ್ಯೇ । ಸುಽಜಾತೇ । ಅಶ್ವಽಸೂನೃತೇ ॥ ೨ ॥

॥ ಸಾಯಣಭಾಷ್ಯಂ ॥

ಹೇ ದಿವೋ ದುಹಿತರ್ದಿವಃ ಸೂರ್ಯಸ್ಯ ಪುತ್ರ್ಯುಷೋ ಯಾ ತ್ವಂ ಸುನೀಥ ಏತನ್ನಾಮಕೇ ಶೌಚದ್ರಥೇ ಶುಚದ್ರಥಸ್ಯಾಪತ್ಯೇ ಪೂರ್ವಂ ವ್ಯೌಚ್ಛಃ ವ್ಯವಾಸಯಸ್ತಮಾಂಸಿ ಸಾ ತ್ವಂ ಸಹೀಯಸ್ಯತಿಶಯೇನ ಬಲವತಿ ವಾಯ್ಯೇ ವಯ್ಯಪುತ್ರೇ ಸತ್ಯಶ್ರವಸಿ ಮಯಿ ವ್ಯುಚ್ಛ । ತಮೋ ವಿವಾಸಯ । ಉಚ್ಛೀ ವಿವಾಸೇ । ವಿವಾಸೋ ವರ್ಜನಂ । ಶಿಷ್ಟಮುಕ್ತಂ ॥

॥ ಪ್ರತಿಪದಾರ್ಥ ॥

**ದಿವಃ**—ಅಂತರಿಕ್ಷದ। **ದುಹಿತಃ**—ಪುತ್ರಿಯಾದ ಎಲೈ ಉಷಸ್ಸೇ। **ಯಾ**—ಯಾವ ನೀನು। **ಶೌಚದ್ರಥೇ**—ಶುಚದ್ರಥನ ಪುತ್ರನಾದ । **ಸುನೀಥೇ**—ಸುನೀಥನಿಗಾಗಿ । **ವ್ಯೌಚ್ಛಃ**—ಕತ್ತಲನ್ನು ನಾಶಮಾಡಿ ಪ್ರಕಾಶಿಸಿದೆಯೋ।

**ಸುಜಾತೇ**—ಉತ್ತಮವಾದ ಜನ್ಮವುಳ್ಳವಳೂ । **ಅಶ್ವಸೂನೃತೇ**—ಅಶ್ವಗಳಿಗಾಗಿ ಉತ್ತಮವಾಗಿಸ್ತುತಳಾದವಳೂ ಆದ । **ಸಾ**—ಅದೇ ನೀನು । **ವಾಯ್ಯೇ**—ವಯ್ಯಪುತ್ರನೂ । **ಸಹೀಯಸಿ**—ಶಕ್ತಿಯುತನೂ । **ಸತ್ಯಶ್ರವಸಿ**—ಸತ್ಯಶ್ರವಾನಾಮಕನೂ ಆದ ನನಗಾಗಿ । **ವ್ಯುಚ್ಛ**—ಪ್ರಕಾಶಿಸು.

॥ ಭಾವಾರ್ಥ ॥

ಅಂತರಿಕ್ಷದ ಪುತ್ರಿಯಾದ ಎಲೈ ಉಷೋದೇವಿಯೇ, ಯಾವ ನೀನು ಹಿಂದೆ ಶುಚದ್ರಥನ ಪುತ್ರನಾದ ಸುನೀಥನಿಗಾಗಿ ಕತ್ತಲನ್ನು ನಾಶಮಾಡಿ ಪ್ರಕಾಶಿಸಿದೆಯೋ, ಉತ್ತಮವಾದ ಜನ್ಮವುಳ್ಳವಳೂ, ಅಶ್ವಗಳಿಗಾಗಿ ಉತ್ತಮವಾಗಿ ಸ್ತುತಳಾದವಳೂ ಆದ ಅದೇ ನೀನು ವಯ್ಯಪುತ್ರನೂ, ಶಕ್ತಿಯುತನೂ, ಸತ್ಯಶ್ರವನಾಮಕನೂ ಆದ ನನಗಾಗಿ ಪ್ರಕಾಶಿಸು.

## English Translation.

Daughter of heaven, who have dawned upon Sunitha, the son of Shuchadratha, bright-born, and praised sincerely for (the gift of) horses, dawn upon the powerful son of Vayya, Satyashravas.

॥ ವಿಶೇಷವಿಷಯಗಳು ॥

**ಶೌಚದ್ರಥೇ ಸುನೀಥೇ**—ಶುಚದ್ರಥನೂ ಅವನ ಪುತ್ರನಾದ ಸುನೀಥನೆಂಬುವನೂ ವಯ್ಯ ಎಂಬ ಪ್ರಸಿದ್ಧ ರಾಜನ ವಂಶದವರಿರಬಹುದು ಮತ್ತು ಈ ಮಂತ್ರದ್ರಷ್ಟೃವಾದ **ಸತ್ಯಶ್ರವಾಃ** ಎಂಬ ಋಷಿಯ ಪೂರ್ವೀಕರು ಅಥವಾ ಸಂಬಂಧಿಗಳಾಗಿರಬಹುದು. ಸುನೀಥ ಎಂಬ ಶಬ್ದವು ಋ. ಸಂ. ೧-೩೫-೭; ೧-೩೫-೧೦; ೨-೮-೨, ೭-೪೬-೪; ೧೦-೪೭-೨; ೩-೮-೮; ೬-೫೧-೧೧; ೧-೬೨-೧೩; ೫-೬೭-೪; ಎಂಬ ಋಕ್ಕುಗಳಲ್ಲಿ ಪಠಿತವಾಗಿದ್ದರೂ ಭಾಷ್ಯಕಾರರು ಈ ಶಬ್ದಕ್ಕೆ ಸುನಯನ ಎಂದರ್ಥಮಾಡಿರುವರು. ಈ ಸುನೀತನ ವಿಷಯವು ಹೆಚ್ಚಾಗಿ ತಿಳಿಯುವಂತಿಲ್ಲ.

---

॥ ಸಂಹಿತಾಪಾಠಃ ॥

ಸಾ ನೋ ಅದ್ಯಾಭರದ್ವಸುರ್ವ್ಯುಚ್ಛಾ ದುಹಿತರ್ದಿವಃ ।
ಯೋ ವ್ಯೌಚ್ಛಃ ಸಹೀಯಸಿ ಸತ್ಯಶ್ರವಸಿ ವಾಯ್ಯೇ ಸುಜಾತೇ ಅಶ್ವಸೂನೃತೇ॥

॥ ಪದಪಾಠಃ ॥

ಸಾ । ನಃ । ಅದ್ಯ । ಆಭರತ್ऽವಸುಃ । ವಿ । ಉಚ್ಛ । ದುಹಿತಃ । ದಿವಃ ।
ಯೋ ಇತಿ । ವಿ । ಔಚ್ಛಃ । ಸಹೀಯಸಿ । ಸತ್ಯऽಶ್ರವಸಿ । ವಾಯ್ಯೇ । ಸುऽಜಾತೇ । ಅಶ್ವऽಸೂನೃತೇ ॥೩॥

॥ ಸಾಯಣಭಾಷ್ಯಂ ॥

**ಹೇ ದುಹಿತರ್ದಿವ ಉಷ ಆಭರದ್ವಸುರಾಹೃತಧನಾ ಸಾ ಪ್ರಸಿದ್ಧಾ ತ್ವಂ ನೋಽಸ್ಮಾಕಮದ್ಯಾಸ್ಮಿನ್ದಿನೇ ವ್ಯುಚ್ಛ । ತಮೋ ವಿವಾಸಯ । ಹೇ ಸಹೀಯಸಿ ಯೋ ಯಾ । ಉಕಾರೋಽನರ್ಥಕಃ । ಯಾ ತ್ವಂ ಪೂರ್ವಂ ವ್ಯೌಚ್ಛಃ ಸಾದ್ಯಾಪೀತಿ ॥**

॥ ಪ್ರತಿಪದಾರ್ಥ ॥

**ಆಭರದ್ವಸುಃ**— ಸಂಪತ್ತನ್ನು ತರುವವಳೂ । **ದಿವಃ**— ಅಂತರಿಕ್ಷದ । **ದುಹಿತಃ**— ಪುತ್ರಿಯೂ ಆದ ಎಲೈ ಉಷೋದೇವಿಯೇ । **ಯೋ (ಯಾ)**— ಯಾವ ನೀನು । **ಸುಜಾತೇ**— ಉತ್ತಮವಾದ ಜನ್ಮವುಳ್ಳವಳೂ । **ಅಶ್ವಸೂನೃತೇ**— ಅಶ್ವಗಳಿಗಾಗಿ ಪ್ರಾರ್ಥಿತಳಾದವಳೂ ಆಗಿ । **ವಾಯ್ಯೇ**— ವಯ್ಯಪುತ್ರನೂ । **ಸಹೀಯಸಿ**— ಶಕ್ತಿಯುತನೂ ಆದ । **ಸತ್ಯಶ್ರವಸಿ**— ಸತ್ಯಶ್ರವಸ್ಸಿಗಾಗಿ । **ವ್ಯೌಚ್ಛಃ**— ಕತ್ತಲನ್ನು ನಾಶಪಡಿಸಿ ಪ್ರಕಾಶಿಸಿದೆಯೋ । **ಸಾ**— ಅದೇ ಮಹಿಮೆಯುಳ್ಳ ನೀನು । **ಅದ್ಯ**— ಈ ಯಾಗದ ದಿನ । **ನಃ**— ನಮಗಾಗಿ । **ವ್ಯುಚ್ಛ**— ಪ್ರಕಾಶಿಸು.

॥ ಭಾವಾರ್ಥ ॥

ಸಂಪತ್ತನ್ನು ತರುವವಳೂ, ಅಂತರಿಕ್ಷದ ಪುತ್ರಿಯೂ ಆದ ಎಲೈ ಉಷೋದೇವಿಯೇ, ಯಾವ ನೀನು ಉತ್ತಮವಾದ ಜನ್ಮವುಳ್ಳವಳೂ, ಅಶ್ವಗಳಿಗಾಗಿ ಪ್ರಾರ್ಥಿತಳಾದವಳೂ ಆಗಿ ವಯ್ಯಪುತ್ರನೂ, ಶಕ್ತಿಯುತನೂ ಆದ ಸತ್ಯಶ್ರವಸ್ಸಿಗಾಗಿ ಕತ್ತಲನ್ನು ನಾಶಪಡಿಸಿ ಪ್ರಕಾಶಿಸಿದೆಯೋ, ಅದೇ ಮಹಿಮೆಯುಳ್ಳ ನೀನು ಈ ಯಾಗದ ದಿನ ನಮಗಾಗಿ ಪ್ರಕಾಶಿಸು.

English Translation.

Daughter of heaven, you are the bringer of opulence ; dawn upon us to-day, as bright-born, and praised for (the gift of) horses ; you have dawned upon the powerful Satyashravas, the son of Vayya.

॥ ಸಂಹಿತಾಪಾಠಃ ॥

ಅಭಿ ಯೇ ತ್ವಾ ವಿಭಾವರಿ ಸ್ತೋಮೈರ್ಗೃಣಂತಿ ವಹ್ನಯಃ ।
ಮಘೈರ್ಮಘೋನಿ ಸುಶ್ರಿಯೋ ದಾಮನ್ವಂತಃ ಸುರಾತಯಃ ಸುಜಾತೇ-
ಅಶ್ವಸೂನೃತೇ ॥ ೪ ॥

॥ ಪದಪಾಠಃ ॥

ಅಭಿ । ಯೇ । ತ್ವಾ । ವಿಭಾಽವರಿ । ಸ್ತೋಮೈಃ । ಗೃಣಂತಿ । ವಹ್ನಯಃ ॥

ಮಘೈಃ । ಮಘೋನಿ । ಸುಽಶ್ರಿಯಃ । ದಾಮನ್ಽವಂತಃ । ಸುಽರಾತಯಃ । ಸುಽಜಾತೇ । ಅಶ್ವಽಸೂನೃತೇ ॥೪॥

॥ ಸಾಯಣಭಾಷ್ಯಂ ॥

**ಹೇ ವಿಭಾವರಿ ಪ್ರಕಾಶೋಪೇತೇ ॥ ವಿಭಾತಜ್ಬ್ಯಾಚ್ಛಂದಸೀವನಿಪಾವಿತಿ ವನಿಪ್ । ಭಾತೇರ್ವಾ ಕರ್ತರಿ ವನಿಪ್ ॥ ಉಷಸ್ತ್ವಾ ತ್ವಾಮಭಿ ಪ್ರತಿ ಯೇ ವಹ್ನಯೋ ವೋಢಾರ ಋತ್ವಿಜಃ ಸ್ತೋತಾರಃ ಸ್ತೋಮೈಃ ಸ್ತೋತ್ರೈರ್ಗೃಣಂತಿ ಸ್ತುವಂತಿ ತೇ ಸ್ತೋತಾರೋ ಮಘೈರ್ಹೇ ಮಘೋನಿ ಧನೈರ್ಧನವತಿ ತ್ವದನುಗ್ರಹಾತ್ ಸುಶ್ರಿಯೋ ಭವಂತಿ । ಸುಷ್ಠ್ವರ್ಥಿಭಿರಾಶ್ರಯಣೀಯಾ ಭವಂತಿ । ದಾಮನ್ವಂತೋ ದಾನವಂತೋ ಭವಂತಿ । ಸುರಾತಯಃ । ರಾತಿರ್ದಾನಂ । ಸುದಾನಾಶ್ಚ ಭವಂತಿ ॥**

॥ ಪ್ರತಿಪದಾರ್ಥ ॥

**ಮಘೋನಿ**—ಸಂಪದ್ಯುಕ್ತಳೂ । **ಸುಜಾತೇ**— ಉತ್ತಮವಾದ ಉತ್ಪತ್ತಿಯುಳ್ಳವಳೂ । **ಅಶ್ವಸೂನೃತೇ**— ಅಶ್ವಗಳಿಗಾಗಿ ಉತ್ತಮವಾಗಿ ಸ್ತುತಳಾದವಳೂ । **ವಿಭಾವರಿ**—ಕಾಂತಿಯುತಳೂ ಆದ ಎಲೈ ಉಷೋದೇವಿಯೇ । **ತ್ವಾ ಅಭಿ**—ನಿನ್ನನ್ನು । **ಯೇ**—ಯಾವ । **ವಹ್ನಯಃ**—ಋತ್ವಿಕ್ಕುಗಳು । **ಸ್ತೋಮೈಃ**—ಸ್ತೋತ್ರಗಳಿಂದ । **ಗೃಣಂತಿ**—ಸ್ತುತಿಸುತ್ತಾರೋ ಅವರು । **ಮಘೈಃ**— ಧನಗಳಿಂದ । **ಸುಶ್ರಿಯಃ**—ಸಂಪದ್ಯುಕ್ತರೂ । **ದಾಮನ್ವಂತಃ**— ಉದಾರವಾದ ದಾನಿಗಳೂ । **ಸುರಾತಯಃ**—ಉತ್ತಮವಾದ ಹವಿಸ್ಸನ್ನು ಅರ್ಪಿಸುವವರೂ ಆಗುತ್ತಾರೆ.

॥ ಭಾವಾರ್ಥ ॥

ಸಂಪದ್ಯುಕ್ತಳೂ, ಶ್ರೇಷ್ಠವಾದ ಉತ್ಪತ್ತಿಯುಳ್ಳವಳೂ, ಅಶ್ವಗಳಿಗಾಗಿ ಉತ್ತಮವಾಗಿ ಸ್ತುತಳಾದವಳೂ ಕಾಂತಿಯುತಳೂ ಆದ ಎಲೈ ಉಷೋದೇವಿಯೇ, ನಿನ್ನನ್ನು ಯಾವ ಋತ್ವಿಕ್ಕುಗಳು ಸ್ತೋತ್ರಗಳಿಂದ ಸ್ತುತಿಸುತ್ತಾರೆಯೋ ಅವರು ಧನಗಳಿಂದ ಸಂಪದ್ಯುಕ್ತರೂ, ಉದಾರವಾದ ದಾನಿಗಳೂ, ಉತ್ತಮವಾದ ಹವಿಸ್ಸನ್ನರ್ಪಿಸುವವರೂ ಆಗುತ್ತಾರೆ.

## English Translation.

The offerers of oblations who eulogize you, lustrous Ushas, with sacred hymns, become prosperous with affluence, (through your favour); bestower of wealth, bright-born goddess, (you are) sincerely praised for (the gift of) horses.

॥ ಸಂಹಿತಾಪಾಠಃ ॥

ಯಚ್ಚಿದ್ಧಿ ತೇ ಗಣಾ ಇಮೇ ಛದಯಂತಿ ಮಘತ್ತಯೇ ।
ಪರಿ ಚಿದ್ವಷ್ಟಯೋ ದಧುರ್ದದತೋ ರಾಧೋ ಅಹ್ರಯಂ ಸುಜಾತೇ
ಅಶ್ವಸೂನೃತೇ ॥ ೫ ॥

॥ ಪದಪಾಠಃ ॥

ಯತ್ । ಚಿತ್ । ಹಿ । ತೇ । ಗಣಾಃ । ಇಮೇ । ಛದಯಂತಿ । ಮಘತ್ತಯೇ ।

ಪರಿ । ಚಿತ್ । ವಷ್ಟಯಃ । ದಧುಃ । ದದತಃ । ರಾಧಃ । ಅಹ್ರಯಂ । ಸುಽಜಾತೇ । ಅಶ್ವಽಸೂನೃತೇ ॥೫॥

॥ ಸಾಯಣಭಾಷ್ಯಂ ॥

ಹೇ ಉಷೋ ಯಚ್ಚಿದ್ಧಿ । ಹೀತಿ ಪೂರಣಃ । ಯತ್ ಯೇ ಕೇಚನ ತೇ ತವ ಸ್ವಭೂತಾ ಇಮೇ ಪುರತೋ ವರ್ತಮಾನಾ ಗಣಾಃ ಸಂಘಭೂತಾ ಮಘತ್ತಯೇ ಧನದಾತಯೇ ಧನದಾನಾಯ ಧನವತ್ತ್ವಾ-ಯ ವಾ ಛದಯಂತಿ ಉಪಚ್ಛಂದಯಂತಿ ತೇ ಸರ್ವೇಽಪ್ಯಸ್ಮಾನ್ ಪರಿ ದಧುಃ ಪರಿತೋ ಧಾರಯಂತಿ ವಷ್ಟಯೋಽಸ್ಮಾನೇವ ಕಾಮಯಮಾನಾಃ । ಕಿಂ ಕುರ್ವಂತಃ । ಅಹ್ರಯಮಹ್ರಿಯಮಾಣಮಕ್ಷೀಣಮ-ಲಜ್ಜಾವಹಂ ವಾ ರಾಧೋ ಧನಂ ಹವಿರ್ಲಕ್ಷಣಂ ದದತೋ ಯಜಂತ ಇತ್ಯರ್ಥಃ । ಅರ್ಥಿಭ್ಯೋಽಕ್ಷೀಣಂ ದದತೋ ವಾ । ಯೇ ತ್ವಾಂ ಹವಿರ್ದದತಃ ಸ್ತುವಂತಿ ತೇ ಸರ್ವೇಽಪ್ಯಸ್ಮದರ್ಥಮೇವ ಫಲಂ ಧಾರಯಂತಿ । ಸ್ತುವಂತೀತ್ಯರ್ಥಃ । ಅಥವಾ ಯದ್ಧೀತ್ಯತ್ರ ಯದ್ಯಪೀತಿ ವ್ಯಾಖ್ಯೇಯಂ । ತಸ್ಮಿನ್ ಪಕ್ಷ ಉತ್ತರವಾಕ್ಯೇ ತಥಾಪೀತ್ಯಧ್ಯಾಹಾರ್ಯಂ । ಅವಶಿಷ್ಟಂ ಸಮಾನಂ ॥

॥ ಪ್ರತಿಪದಾರ್ಥ ॥

**ಸುಜಾತೇ**—ಶ್ರೇಷ್ಠವಾದ ಉತ್ಪತ್ತಿಯುಳ್ಳವಳೂ । **ಅಶ್ವಸೂನೃತೇ**—ಅಶ್ವಗಳಿಗಾಗಿ ಉತ್ತಮವಾಗಿ ಸ್ತುತಳಾದವಳೂ ಆದ ಎಲೈ ಉಷೋದೇವಿಯೇ । **ತೇ**—ನಿನ್ನ ಭಕ್ತರೂ । **ಇಮೇ**—ಇಲ್ಲಿ ಸೇರಿರುವವರೂ ಆದ । **ಯಚ್ಚಿದ್ಧಿ ಗಣಾಃ**—ಯಾವ ಈ ಯಜಮಾನ ಗಣಗಳು । **ಮಘತ್ತಯೇ**—ಧನದಾನಕ್ಕಾಗಿ । **ಛದಯಂತಿ**—ಇಚ್ಛಿಸುವರೋ । **ತೇ**—ಅವರೆಲ್ಲರೂ ಸಹ । **ಅಹ್ರಯಂ**—ಅಲ್ಪವಲ್ಲದ (ಪ್ರಭೂತವಾದ) । **ರಾಧಃ**—ಧನವನ್ನು । **ದದತಃ**—ನಮಗೆ ಕೊಡುತ್ತಲೂ । **ವಷ್ಟಯಃ**—ಆ ಧನಕ್ಕೆ ನಮ್ಮನ್ನೇ ಪಾತ್ರರನ್ನಾಗಿ ಮಾಡಬೇಕೆಂಬ ಆಸೆಯಿಂದಲೂ । **ಪರಿ ದಧುಃ**—ನಮ್ಮನ್ನು ಸುತ್ತಲೂ ಉಪಚರಿಸುತ್ತಾರೆ.

॥ ಭಾವಾರ್ಥ ॥

ಶ್ರೇಷ್ಠವಾದ ಉತ್ಪತ್ತಿಯುಳ್ಳವಳೂ, ಅಶ್ವಗಳಿಗಾಗಿ ಉತ್ತಮವಾಗಿ ಸ್ತುತಳಾದವಳೂ ಆದ ಎಲೈ ಉಷೋದೇವಿಯೇ, ನಿನ್ನ ಭಕ್ತರೂ, ಇಲ್ಲಿ ಸೇರಿಕೊಂಡಿರುವವರೂ ಆದ ಯಾವ ಈ ಯಜಮಾನಗಣಗಳು ಧನಕ್ಕಾಗಿ ಇಚ್ಛಿಸುವರೋ ಅವರೆಲ್ಲರೂ ಸಹ ಪ್ರಭೂತವಾದ ಧನವನ್ನು ನಮಗೆ ಕೊಡುತ್ತಲೂ, ಆ ಧನಕ್ಕೆ ನಮ್ಮನ್ನೇ ಪಾತ್ರರನ್ನಾಗಿ ಮಾಡಬೇಕೆಂಬ ಆಸೆಯಿಂದಲೂ ನಮ್ಮನ್ನು ಸುತ್ತಲೂ ಉಪಚರಿಸುತ್ತಾರೆ.

## English Translation.

These, your assembled (worshippers), who stand before you to distribute wealth, entertain towards us kindly intentions, offering unlimited

riches: bright-born goddess, (you are) sincerely praised for (the gift of horses.

॥ ಸಂಹಿತಾಪಾಠಃ ॥

ಐಷು ಧಾ ವೀರವದ್ಯಶ ಉಷೋ ಮಘೋನಿ ಸೂರಿಷು ।
ಯೇ ನೋ ರಾಧಾಂಸ್ಯಹ್ರಯಾ ಮಘವಾನೋ ಅರಾಸತ ಸುಜಾತೇ ಅಶ್ವಸೂನೃತೇ ॥ ೬ ॥

॥ ಪದಪಾಠಃ ॥

ಆ । ಏಷು । ಧಾಃ । ವೀರಽವತ್ । ಯಶಃ । ಉಷಃ । ಮಘೋನಿ । ಸೂರಿಷು ।
ಯೇ । ನಃ । ರಾಧಾಂಸಿ । ಅಹ್ರಯಾ । ಮಘಽವಾನಃ । ಅರಾಸತ । ಸುಽಜಾತೇ । ಅಶ್ವಽಸೂನೃತೇ ॥ ೬ ॥

॥ ಸಾಯಣಭಾಷ್ಯಂ ॥

ಹೇ ಉಷೋ ದೇವಿ ಮಘೋನಿ ಮಘವತಿ ತ್ವಮೇಷು ಸೂರಿಷು ಸ್ತೋತೃಷು ವಾ ವೀರವದ್ಯಶೋ ವೀರೈಃ ಪುತ್ರಾದಿಭಿರುಪೇತಮನ್ನಂ ಯಶೋ ವಾ ಆ ಧಾಃ । ಆಧೇಹಿ । ಆದೇಹಿ । ಆನಯ । ಯೇ ಮಘವಾನೋ ಧನವಂತೋ ಸೂರಯೋ ನೋಽಸ್ಮಭ್ಯಂ ತವ ಸ್ತೋತೃಭ್ಯೋ ರಾಧಾಂಸಿ ಧನಾನ್ಯಹ್ರಯಾಕ್ಷೀಣಾನ್ಯರಾಸತ ದದುಃ ತೇಷ್ವಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಸುಜಾತೇ**—ಶ್ರೇಷ್ಠವಾದ ಉತ್ಪತ್ತಿಯುಳ್ಳವಳೂ । **ಅಶ್ವಸೂನೃತೇ**—ಅಶ್ವಗಳಿಗಾಗಿ ಉತ್ತಮವಾದ ಸ್ತುತಿಗಳಿಂದ ಪ್ರಾರ್ಥಿತಳಾದವಳೂ । **ಮಘೋನಿ**—ಧನವಂತಳೂ ಆದ । **ಉಷಃ**—ಎಲೈ ಉಷೋದೇವಿಯೇ । **ಮಘವಾನಃ**—ಧನವಂತರಾದ । **ಯೇ**—ಯಾವ ನಿನ್ನ ಸ್ತುತಿಕರ್ತರು । **ನಃ**—ನಮಗೆ । **ಅಹ್ರಯಾ**—ಅನಲ್ಪಗಳಾದ **ರಾಧಾಂಸಿ**—ಧನಗಳನ್ನು । **ಅರಾಸತ**—ಕೊಡುತ್ತಾರೆಯೋ । **ಏಷು**—ಅಂತಹ । **ಸೂರಿಷು**—ಈ ಸ್ತೋತೃಗಳಲ್ಲಿ । **ವೀರವತ್**—ವೀರಪುತ್ರಾದಿಗಳಿಂದ ಕೂಡಿದ । **ಯಶಃ**—ಅನ್ನವನ್ನು । **ಆ ಧಾಃ**—ತುಂಬಿಡು.

॥ ಭಾವಾರ್ಥ ॥

ಉತ್ತಮವಾದ ಜನ್ಮವುಳ್ಳವಳೂ, ಅಶ್ವಗಳಿಗಾಗಿ ಉತ್ತಮವಾದ ಸ್ತುತಿಗಳಿಂದ ಪ್ರಾರ್ಥಿತಳಾದವಳೂ, ಧನವಂತಳೂ ಆದ ಎಲೈ ಉಷೋದೇವಿಯೇ, ಧನವಂತರಾದ ಯಾವ ನಿನ್ನ ಸ್ತುತಿಕರ್ತರು ನಮಗೆ ಪ್ರಭೂತಗಳಾದ ಧನಗಳನ್ನು ಕೊಡುತ್ತಾರೆಯೋ, ಅಂತಹ ಈ ಸ್ತೋತೃಗಳಲ್ಲಿ ವೀರಪುತ್ರಾದಿಗಳಿಂದ ಕೂಡಿದ ಅನ್ನವನ್ನು ತುಂಬಿಡು.

## Enlish Translation.

Affluent Ushas, bestow upon these (your) devout adorers food and posterity, so that, being opulent, they may, without stint, bestow riches upon us: bright-born goddess (who are) sincerely praised for (the gift of) horses.

॥ ಸಂಹಿತಾಪಾಠಃ ॥

ತೇಭ್ಯೋ ದ್ಯುಮ್ನಂ ಬೃಹದ್ಯಶ ಉಷೋ ಮಘೋನ್ಯಾ ವಹ ।
ಯೇ ನೋ ರಾಧಾಂಸ್ಯಶ್ವ್ಯಾ ಗವ್ಯಾ ಭಜಂತ ಸೂರಯಃ ಸುಜಾತೇ ಅಶ್ವ-
ಸೂನೃತೇ ॥ ೭ ॥

॥ ಪದಪಾಠಃ ॥

ತೇಭ್ಯಃ । ದ್ಯುಮ್ನಂ । ಬೃಹತ್ । ಯಶಃ । ಉಷಃ । ಮಘೋನಿ । ಆ । ವಹ ।
ಯೇ । ನಃ । ರಾಧಾಂಸಿ । ಅಶ್ವ್ಯಾ । ಗವ್ಯಾ । ಭಜಂತ । ಸೂರಯಃ । ಸುऽಜಾತೇ । ಅಶ್ವऽಸೂನೃತೇ ॥೭॥

॥ ಸಾಯಣಭಾಷ್ಯಂ ॥

ಹೇ ಉಷೋ ಮಘೋನಿ ತ್ವಂ ತೇಭ್ಯೋ ದ್ಯುಮ್ನಂ ದ್ಯೋತಮಾನಂ ಹಿರಣ್ಯಾದಿರೂಪಂ ಧನಂ ಬೃಹದ್ಯಶೋ ಮಹದನ್ನಂ ಮಹತೀಂ ಕೀರ್ತಿಂ ವಾ ತೇಭ್ಯೋ ಯಜಮಾನೇಭ್ಯ ಆ ವಹ । ಯ ಅಧ್ಯಾ ನೋऽಸ್ಮಭ್ಯಂ ರಾಧಾಂಸಿ ಧನಾನ್ಯಶ್ವ್ಯಾಶ್ವೈರ್ಯುಕ್ತಾನಿ ಗವ್ಯಾ ಗೋಭಿರ್ಯುಕ್ತಾನಿ ಗೋಸಮೂಹಾ-ನಶ್ವಸಮೂಹಾನ್ ಚ ಭಜಂತ ಭಜೇರನ್ ದದುಃ ಸೂರಯೋ ದಾತಾರಃ ॥

॥ ಪ್ರತಿಪದಾರ್ಥ ॥

**ಸುಜಾತೇ**—ಉತ್ತಮವಾದ ಜನ್ಮವುಳ್ಳವಳೂ । **ಅಶ್ವಸೂನೃತೇ**—ಅಶ್ವಗಳಿಗಾಗಿ ಉತ್ತಮವಾದ ಸ್ತುತಿಗಳಿಂದ ಪ್ರಾರ್ಥಿತಳಾದವಳೂ । **ಮಘೋನಿ**—ಧನವಂತಳೂ ಆದ । **ಉಷಃ**—ಎಲೈ ಉಷಾದೇವಿಯೇ । **ಯೇ**—ಯಾವ । **ಸೂರಯಃ**—ದಾನಿಗಳಾದ ಸ್ತೋತೃಗಳು । **ನಃ**—ನಮಗೆ । **ಅಶ್ವ್ಯಾ**—ಅಶ್ವಗಳಿಂದ ಕೂಡಿದುದೂ । **ಗವ್ಯಾ**—ಗೋವುಗಳಿಂದ ಕೂಡಿದುದೂ ಆದ । **ರಾಧಾಂಸಿ**—ಧನಗಳನ್ನು । **ಭಜಂತ**—ಕೊಡುವರೋ । **ತೇಭ್ಯಃ**—ಅವರಿಗೆ । **ದ್ಯುಮ್ನಂ**—ಪ್ರಕಾಶಮಾನವಾದ ಸುವರ್ಣಾದಿಗಳನ್ನೂ । **ಬೃಹತ್**—ಪ್ರಭೂತವಾದ । **ಯಶಃ**—ಅನ್ನವನ್ನೂ । **ಆ ವಹ**—ತಂದೊದಗಿಸು.

॥ ಭಾವಾರ್ಥ ॥

ಉತ್ತಮವಾದ ಜನ್ಮವುಳ್ಳವಳೂ, ಅಶ್ವಗಳಿಗಾಗಿ ಉತ್ತಮವಾದ ಸ್ತುತಿಗಳಿಂದ ಪ್ರಾರ್ಥಿತಳಾದವಳೂ, ಧನವಂತಳೂ ಆದ ಎಲೈ ಉಷೋದೇವಿಯೇ, ಯಾವ ದಾನಿಗಳಾದ ಸ್ತೋತೃಗಳು ನಮಗೆ ಅಶ್ವಗಳಿಂದ ಕೂಡಿದುದೂ ಗೋವುಗಳಿಂದ ಕೂಡಿದುದೂ ಆದ ಧನಗಳನ್ನು ಕೊಡುವರೋ ಅವರಿಗೆ ಪ್ರಕಾಶಮಾನಗಳಾದ ಸುವರ್ಣಾದಿಗಳನ್ನೂ ಪ್ರಭೂತವಾದ ಅನ್ನವನ್ನೂ ತಂದೊದಗಿಸು.

## English Translation

Affluent Ushas, bring wealth and abundant food to those who, liberal givers, bestow upon us riches with horses and cattle: bright-born goddess (you are) sincerely praised for (the gift of) horses.

॥ ಸಂಹಿತಾಪಾಠಃ ॥

ಉತ ನೋ ಗೋಮತೀರಿಷ ಆ ವಹಾ ದುಹಿತರ್ದಿವಃ ।
ಸಾಕಂ ಸೂರ್ಯಸ್ಯ ರಶ್ಮಿಭಿಃ ಶುಕ್ರೈಃ ಶೋಚದ್ಭಿರರ್ಚಿಭಿಃ ಸುಜಾತೇ ಅಶ್ವ-
ಸೂನೃತೇ ॥ ೮ ॥

॥ ಪದಪಾಠಃ ॥

ಉತ । ನಃ । ಗೋಽಮತೀಃ । ಇಷಃ । ಆ । ವಹ । ದುಹಿತಃ । ದಿವಃ ।
ಸಾಕಂ । ಸೂರ್ಯಸ್ಯ । ರಶ್ಮಿಽಭಿಃ । ಶುಕ್ರೈಃ । ಶೋಚತ್ಽಭಿಃ । ಅರ್ಚಿಽಭಿಃ । ಸುಽಜಾತೇ ।
ಅಶ್ವಽಸೂನೃತೇ ॥ ೮ ॥

॥ ಸಾಯಣಭಾಷ್ಯಂ ॥

ಉತಾಪಿ ಚ ನೋಽಸ್ಮಭ್ಯಂ ಗೋಮತೀರ್ಗೋಭಿರುಪೇತಾಸೀಷೋಽನ್ನಾನ್ಯಾ ವಹ ಆನಯ ಹೇ ದಿವೋ ದುಹಿತರುಷಃ। ಕದಾ। ಸೂರ್ಯಸ್ಯ ರಶ್ಮಿಭಿಃ ಸಾಕಂ ಶೋಚದ್ಭಿರ್ದೀಪಯದ್ಭಿಃ ಶುಕ್ರೈರ್ನಿರ್ಮಲೈರರ್ಚಿಭಿರಗ್ನೇಸ್ತೇಜೋಭಿಶ್ಚ ಸಾಕಂ । ಸೂರ್ಯೋದಯಕಾಲೇಽಗ್ನೀಂಧನಕಾಲೇ ಚೇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಸುಜಾತೇ**—ಉತ್ತಮವಾದ ಜನ್ಮವುಳ್ಳವಳೂ । **ಅಶ್ವಸೂನೃತೇ**—ಅಶ್ವಗಳಿಗಾಗಿ ಉತ್ತಮವಾದ ಸ್ತುತಿಗಳಿಂದ ಪ್ರಶಂಸಿತಳಾದವಳೂ । **ದಿವಃ ದುಹಿತಃ**—ಅಂತರಿಕ್ಷದ ಪುತ್ರಿಯೂ ಆದ ಎಲೈ ಉಷೋ ದೇವಿಯೇ ।

**ನಃ**—ನಮಗೆ | **ಸೂರ್ಯಸ್ಯ**—ಸೂರ್ಯನ | **ಶುಕ್ರೈಃ**—ಪ್ರಕಾಶಮಾನಗಳಾದ | **ರಶ್ಮಿಭಿಃ ಸಾಕಂ**—ರಶ್ಮಿಗಳೊಡನೆಯೂ | **ಶೋಚದ್ಭಿಃ**—ಪ್ರಜ್ವಲಿತವಾಗಿ ಪ್ರಭಾಯುತಗಳಾದ | **ಅರ್ಚಿಭಿಃ**—ಅಗ್ನಿಜ್ವಾಲೆಗಳೊಡನೆಯೂ ಸಹ | **ಗೋಮತೀಃ**—ಗೋವುಗಳಿಂದ ಕೂಡಿದ | **ಇಷಃ**—ಅನ್ನಗಳನ್ನು | **ಆ ವಹ**—ತಂದೊದಗಿಸು.

॥ ಭಾವಾರ್ಥ ॥

ಉತ್ತಮವಾದ ಜನ್ಮವುಳ್ಳವಳೂ, ಅಶ್ವಗಳಿಗಾಗಿ ಉತ್ತಮವಾದ ಸ್ತುತಿಗಳಿಂದ ಪ್ರಶಂಸಿತಳಾದವಳೂ, ಅಂತರಿಕ್ಷದ ಪುತ್ರಿಯೂ ಆದ ಎಲೈ ಉಷೋದೇವಿಯೇ, ನಮಗೆ ಸೂರ್ಯನ ಪ್ರಕಾಶಮಾನಗಳಾದ ರಶ್ಮಿಗಳೊಡನೆಯೂ ಪ್ರಜ್ವಲಿತವಾಗಿ ಪ್ರಭಾಯುತಗಳಾದ ಅಗ್ನಿಜ್ವಾಲೆಗಳೊಡನೆಯೂ ಸಹ ಗೋವುಗಳಿಂದ ಕೂಡಿದ ಅನ್ನಗಳನ್ನು ತಂದೊದಗಿಸು.

## English Translation.

Daughter of heaven, bring to us food and cattle. together with the pure rays of the sun, and the radiant flames (of the kindled fires): bright-born goddess, (you are) sincerely praised for (the gift of) horses.

॥ ಸಂಹಿತಾಪಾಠಃ ॥

ವ್ಯುಚ್ಛಾ ದುಹಿತರ್ದಿವೋ ಮಾ ಚಿರಂ ತನುಥಾ ಅಪಃ ।
ನೇತ್ತ್ವಾ ಸ್ತೇನಂ ಯಥಾ ರಿಪುಂ ತಪಾತಿ ಸೂರೋ ಅರ್ಚಿಷಾ ಸುಜಾತೇ ಅಶ್ವಸೂನೃತೇ ॥ ೯ ॥

॥ ಪದಪಾಠಃ ॥

ವಿ । ಉಚ್ಛ । ದುಹಿತಃ । ದಿವಃ । ಮಾ । ಚಿರಂ । ತನುಥಾಃ । ಅಪಃ ।
ನ । ಇತ್ । ತ್ವಾ । ಸ್ತೇನಂ । ಯಥಾ । ರಿಪುಂ । ತಪಾತಿ । ಸೂರಃ । ಅರ್ಚಿಷಾ । ಸುಽಜಾತೇ । ಅಶ್ವಽಸೂನೃತೇ ॥ ೯ ॥

॥ ಸಾಯಣಭಾಷ್ಯಂ ॥

ಹೇ ದಿವೋ ದುಹಿತರುಷಃ ತ್ವಂ ವ್ಯುಚ್ಛ । ವಿಭಾತಂ ಕುರು । ಅಪೋಽಸ್ಮದೀಯಂ ಕರ್ಮ ಪ್ರತಿ ಚಿರಂ ವಿಲಂಬಂ ಮಾ ತನುಥಾಃ । ತ್ವಾ ತ್ವಾಂ ರಿಪುಂ ಸ್ತೇನಂ ಯಥಾ ಸಂತಾಪಯತಿ ರಾಜಾದಿಸ್ತದ್ವತ್ಸೂರಃ ಸೂರ್ಯೋಽರ್ಚಿಷಾ ತೇಜಸಾ ನೇತ್ ನೈವ ತಪಾತಿ । ತಪ್ಯಾತ್ । ಶೀಘ್ರಂ ನೋದೇತ್ವಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಸುಜಾತೇ**—ಉತ್ತಮವಾದ ಜನ್ಮವುಳ್ಳವಳೂ । **ಅಶ್ವಸೂನೃತೇ**—ಅಶ್ವಗಳಿಗಾಗಿ ಉತ್ತಮವಾದ ಸ್ತುತಿಗಳಿಂದ ಪ್ರಶಂಸಿತಳಾದವಳೂ । **ದಿವಃ ದುಹಿತಃ**—ಅಂತರಿಕ್ಷದ ಪುತ್ರಿಯೂ ಆದ ಉಷೋದೇವಿಯೇ । **ವ್ಯುಚ್ಛ**—ಕತ್ತಲನ್ನು ಓಡಿಸಿ ಪ್ರಕಾಶಿಸು । **ಅಪಃ**—ನಮ್ಮ ಕರ್ಮಕ್ಕೆ । **ಚಿರಂ**—ವಿಲಂಬವನ್ನು । **ಮಾ ತನುಥಾಃ**—ಉಂಟುಮಾಡಬೇಡ । **ರಿಪ್ರಂ**—ಶತ್ರುವನ್ನೂ । **ಸ್ತೇನಂ**—ಚೋರನನ್ನೂ । **ಯಥಾ**—ಯಾವ ರೀತಿಯಲ್ಲಿ ರಾಜನಾದವನು ಹಿಂಸಿಸುವನೋ ಅದೇ ರೀತಿಯಲ್ಲಿ । **ಸೂರಃ**—ಸೂರ್ಯನು । **ತ್ವಾ**—ನಿನ್ನನ್ನು । **ಅರ್ಚಿಷಾ**—ತನ್ನ ತೇಜಸ್ಸಿನಿಂದ । **ನೇತ್ ತಪಾತಿ**—ಖಂಡಿತ ದಹಿಸಿ ಹಿಂಸಿಸದಿರಲಿ.

॥ ಭಾವಾರ್ಥ ॥

ಉತ್ತಮವಾದ ಜನ್ಮವುಳ್ಳವಳೂ, ಅಶ್ವಗಳಿಗಾಗಿ ಉತ್ತಮವಾದ ಸ್ತುತಿಗಳಿಂದ ಪ್ರಶಂಸಿತಳಾದವಳೂ, ಅಂತರಿಕ್ಷದ ಪುತ್ರಿಯೂ ಆದ ಎಲೈ ಉಷೋದೇವಿಯೇ, ನಮಗಾಗಿ ಕತ್ತಲನ್ನು ಓಡಿಸಿ ಪ್ರಕಾಶಿಸು. ನಮ್ಮ ಕರ್ಮಕ್ಕೆ ವಿಲಂಬವನ್ನುಂಟುಮಾಡಬೇಡ. ರಾಜನಾದವನು ಶತ್ರುವನ್ನೂ, ಚೋರನನ್ನೂ ಯಾವ ರೀತಿಯಲ್ಲಿ ಹಿಂಸಿಸುವನೋ ಅದೇ ರೀತಿಯಲ್ಲಿ ಸೂರ್ಯನು ನಿನ್ನನ್ನು ತನ್ನ ತೇಜಸ್ಸಿನಿಂದ ಖಂಡಿತ ದಹಿಸಿ ಹಿಂಸಿಸದಿರಲಿ.

## English Translation.

Daughter of heaven, Dawn! delay not our (sacred) rite; let not the sun scorch you with his ray, as (a prince punishes) a thief, or (subdues) an enemy: bright-born goddess, (you are) sincerely praised for (the gift of) horses.

॥ ಸಂಹಿತಾಪಾಠಃ ॥

ಏತಾವದ್ವೇದುಷಸ್ತ್ವಂ ಭೂಯೋ ವಾ ದಾತುಮರ್ಹಸಿ ।
ಯಾ ಸ್ತೋತೃಭ್ಯೋ ವಿಭಾವರ್ಯುಚ್ಛಂತೀ ನ ಪ್ರಮೀಯಸೇ ಸುಜಾತೇ
ಅಶ್ವಸೂನೃತೇ ॥ ೧೦ ॥

॥ ಪದಪಾಠಃ ॥

ಏತಾವತ್ । ವಾ । ಇತ್ । ಉಷಃ । ತ್ವಂ । ಭೂಯಃ । ವಾ । ದಾತುಂ । ಅರ್ಹಸಿ ।
ಯಾ । ಸ್ತೋತೃಽಭ್ಯಃ । ವಿಭಾಽವರಿ । ಉಚ್ಛಂತೀ । ನ । ಪ್ರಽಮೀಯಸೇ । ಸುಽಜಾತೇ । ಅಶ್ವಽಸೂನೃತೇ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ಉಷಸ್ತ್ವಮಸ್ಮಭ್ಯಂ ವಾಥವಾ ದಿಕ್ಸಿತಂ ಕಿಮೇತಾವದೇವ । ಇಚ್ಛೆಬ್ದ ಏವಕಾರಾರ್ಥಃ । ಅಸ್ಮಿನ್ ಸೂಕ್ತೇ ಪ್ರಾರ್ಥಿತಮೇವೇತ್ಯರ್ಥಃ । ಅಥವಾ ಭೂಯೋ ದಾತುಮರ್ಹಸಿ । ಅಪ್ರಾರ್ಥಿತಮಪಿ । ಯದ್ದಾತವ್ಯಮಸ್ತಿ ತತ್ಸರ್ವಂ ದೇಹೀತ್ಯರ್ಥಃ । ಹೇ ವಿಭಾವರ್ಯುಷೋ ಯಾ ತ್ವಂ ಸ್ತೋತೃಭ್ಯಸ್ತೇಷಾಂ ಲೌಕಿಕವೈದಿಕವ್ಯವಹಾರಾರ್ಥಂ ವ್ಯುಚ್ಛಂತೀ ತಮೋ ವಿವಾಸಯಂತೀ ನ ಪ್ರಮಿನಾಯಸೇ । ನ ಹಂಸಿ । ನ ಕ್ರುಧ್ಯಸೀತ್ಯರ್ಥಃ । ಸಾ ತ್ವಂ ದಾತುಮರ್ಹಸೀತಿ ॥ ಮೀಞ್ ಹಿಂಸಾಯಾಮಿತ್ಯಸ್ಮಾತ್ ಶ್ಯಾಸ್ಥಾನೇ ವ್ಯತ್ಯಯೇನ ಶ್ಯನ್ ॥

। ಪ್ರತಿಪದಾರ್ಥ ॥

**ಸುಜಾತೇ**—ಶ್ರೇಷ್ಠವಾದ ಉತ್ಪತ್ತಿಯುಳ್ಳವಳೂ । **ಅಶ್ವಸೂನೃತೇ**— ಅಶ್ವಾರ್ಥವಾಗಿ ಉತ್ತಮವಾದ ಸ್ತುತಿಗಳಿಂದ ಪ್ರಶಂಸಿತಳಾದವಳೂ ! **ವಿಭಾವರಿ**—ಕಾಂತಿಯುತಳೂ ಆದ । **ಉಷಃ**—ಎಲೈ ಉಷೋದೇವಿಯೇ । **ಯಾ**—ಯಾವ ನೀನು । **ಸ್ತೋತೃಭ್ಯಃ**—ಸ್ತೋತೃಗಳಿಗಾಗಿ । **ಉಚ್ಛಂತೀ**—ಕತ್ತಲನ್ನು ನಾಶಪಡಿಸುತ್ತಾ । **ನ ಪ್ರಮಿನಾಯಸೇ**—ಅವರಿಗೆ ಹಿಂಸಕಳಾಗುವುದಿಲ್ಲವೋ । **ತ್ವಂ**—ಅಂತಹ ನೀನು । **ಏತಾವದಿತ್**—ಈ ಪ್ರಾರ್ಥನೆಯಲ್ಲಿ ನಿರ್ದಿಷ್ಟವಾಗಿರುವುದೆಷ್ಟೋ ಅಷ್ಟು ಮಾತ್ರವಾಗಲಿ । **ವಾ**—ಅಥವಾ । **ಭೂಯಃ ವಾ**—ಇನ್ನೂ ಅಧಿಕವಾದ ಪ್ರಮಾಣದಲ್ಲಾಗಲಿ । **ದಾತುಂ**—ಕೊಡಲು । **ಅರ್ಹಸಿ**—ಸಮರ್ಥಳಾಗಿದ್ದೀಯೆ.

॥ ಭಾವಾರ್ಥ ॥

ಶ್ರೇಷ್ಠವಾದ ಉತ್ಪತ್ತಿಯುಳ್ಳವಳೂ, ಅಶ್ವಾರ್ಥವಾಗಿ ಉತ್ತಮವಾದ ಸ್ತುತಿಗಳಿಂದ ಪ್ರಶಂಸಿತಳಾದವಳೂ, ಕಾಂತಿಯುತಳೂ ಆದ ಎಲೈ ಉಷೋದೇವಿಯೇ, ಯಾವ ನಿನ್ನ ಸ್ತೋತೃಗಳಿಗಾಗಿ ಕತ್ತಲನ್ನು ನಾಶಪಡಿಸುತ್ತಾ ಅವರಿಗೆ ಹಿಂಸಕಳಾಗುವುದಿಲ್ಲವೋ ಅಂತಹ ನೀನು ಈ ಪ್ರಾರ್ಥನೆಯಲ್ಲಿ ನಿರ್ದಿಷ್ಟವಾಗಿರುವುದೆಷ್ಟೋ ಅಷ್ಟು ಮಾತ್ರವಾಗಲಿ ಅಥವಾ ಇನ್ನೂ ಅಧಿಕವಾದ ಪ್ರಮಾಣದಲ್ಲಾಗಲಿ ದಾನಮಾಡಲು ಸಮರ್ಥಳಾಗಿದ್ದೀಯು.

## English Translation.

You, Ushas, are able to give (us) whatever, indeed, (has been solicited), and much (that has not been asked for); for, radiant (divinity), you are dawning upon your adorers, you are never cruel (to them): bright-born goddes (you are) sincerely praised for (the gift of) horses.

# ಎಂಭತ್ತನೆಯ ಸೂಕ್ತವು

। ಸಾಯಣಭಾಷ್ಯಂ ।

**ದ್ಯುತದ್ಯಾಮಾನಮಿತಿ ಷಡೃಚಮಷ್ಟಮಂ ಸೂಕ್ತಂ । ತತ್ರಾನುಕ್ರಮಣಿಕಾ । ದ್ಯುತದ್ಯಾಮಾನಂ ಷಡಿತಿ । ಸತ್ಯಶ್ರವಾ ಋಷಿಃ । ಅನುಕ್ತತ್ವಾತ್ ತ್ರಿಷ್ಟುಪ್ । ಉಷಸ್ಯಂ ತ್ವಿತ್ಯುಕ್ತತ್ವಾದುಷಾ ದೇವತಾ ॥ ಪ್ರಾತರನುವಾಕ ಉಷಸ್ಯೇ ಕ್ರತೌ ತ್ರೈಷ್ಟುಭೇ ಛಂದಸ್ಯಾಶ್ವಿನಶಸ್ತ್ರೇ ಚೇದಂ ಸೂಕ್ತಂ । ಸೂತ್ರಿತಂ ಚ । ದ್ಯುತದ್ಯಾಮಾನಮುಷೋ ವಾಜೇನ । ಆ. ೪-೧೪ । ಇತಿ ॥**

ಅನುವಾದವು—**ದ್ಯುತದ್ಯಾಮಾನಂ** ಎಂಬ ಈ ಸೂಕ್ತವು ಆರನೆಯ ಅನುವಾಕದಲ್ಲಿ ಎಂಟನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ—**ದ್ಯುತದ್ಯಾಮಾನಂ ಷಟ್** ಎಂದು ಹೇಳಿರುವುದು. **ಈ** ಸೂಕ್ತಕ್ಕೆ **ಸತ್ಯಶ್ರವಾಃ** ಎಂಬುವನು ಋಷಿಯು; ಉಷಸ್ಸು ದೇವತೆಯು; ತ್ರಿಷ್ಟುಪ್‌ಛಂದಸ್ಸು. ಪ್ರಾತರನುವಾಕ ಮಂತ್ರಪಠನಕಾಲದಲ್ಲಿ ಉಷಸ್ಯಕ್ರತುಸಂಬಂಧವಾದ ತ್ರಿಷ್ಟುಪ್‌ಛಂದಸ್ಸಿನ ಮಂತ್ರಗಳಿಗಾಗಿಯೂ, ಆಶ್ವಿನಶಸ್ತ್ರಮಂತ್ರಗಳಿಗಾಗಿಯೂ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ದ್ಯುತದ್ಯಾಮಾನಮುಷೋ ವಾಜೇನ** ಎಂಬ ಸೂತ್ರದಿಂದ (ಆ. ೪-೧೪) ವಿವೃತವಾಗಿರುವುದು.

## ಸೂಕ್ತ ೮೦

ಮಂಡಲ—೫ ॥ ಅನುವಾಕ—೬ ॥ ಸೂಕ್ತ—೮೦ ॥
ಅಷ್ಟಕ—೪ ॥ ಅಧ್ಯಾಯ—೪ ॥ ವರ್ಗ—೨೩ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
॥ ಋಷಿಃ—ಸತ್ಯಶ್ರವಾ ಆತ್ರೇಯಃ ॥
॥ ದೇವತಾ—ಉಷಾಃ ॥
॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ದ್ಯುತದ್ಯಾಮಾನಂ ಬೃಹತೀಮೃತೇನ ಋತಾವರೀಮರುಣಪ್ಸುಂ ವಿಭಾತೀಂ।
ದೇವೀಮುಷಸಂ ಸ್ವರಾವಹಂತೀಂ ಪ್ರತಿ ವಿಪ್ರಾಸೋ ಮತಿಭಿರ್ಜರಂತೇ॥ ೧ ॥

। ಪದಪಾಠಃ ।

ದ್ಯುತತ್ಽಯಾಮಾನಂ । ಬೃಹತೀಂ । ಋತೇನ । ಋತಽವರೀಂ । ಅರುಣಽಪ್ಸುಂ । ವಿಽಭಾತೀಂ ।
ದೇವೀಂ । ಉಷಸಂ । ಸ್ವಃ । ಆಽವಹಂತೀಂ । ಪ್ರತಿ । ವಿಪ್ರಾಸಃ । ಮತಿಽಭಿಃ । ಜರಂತೇ ॥ ೧ ॥

॥ ಸಾಯಣಭಾಷ್ಯಂ ॥

ದ್ಯುತದ್ಯಾಮಾನಂ ದೀಪ್ತರಥಾಂ ಬೃಹತೀಂ ಮಹತೀಮೃತೇನ ಸತ್ಯೇನ ಯಜ್ಞೇನ ವರ್ಶಾವರೀಮೃತವತೀಮರುಣಪ್ಸುಮರುಣರೂಪಾಂ ವಿಭಾತೀಂ ವ್ಯುಚ್ಛಂತೀಂ ದೇವೀಂ ದ್ಯೋತಮಾನಾಮುಷಸಂ ಸ್ವರಾವಹಂತೀಂ ಸೂರ್ಯಂ ಗಚ್ಛಂತೀಂ । ಏವಂ ಮಹಾನುಭಾವಾಮುಷಸಂ ವಿಪ್ರಾಸೋ ಮೇಧಾವಿನ ಋತ್ವಿಜೋ ಮತಿಭಿಃ ಸ್ತುತಿಭಿಃ ಪ್ರತಿ ಜರಂತೇ । ಸ್ತುವಂತಿ ॥

॥ ಪ್ರತಿಪದಾರ್ಥ ॥

**ದ್ಯುತದ್ಯಾಮಾನಂ**— ಪ್ರಕಾಶಮಾನವಾದ ರಥವುಳ್ಳವಳೂ । **ಬೃಹತೀಂ**— ಮಹತ್ಸ್ವರೂಪಳೂ । **ಋತೇನ**— ಯಜ್ಞದಿಂದ । **ಋತಾವರೀಂ**— ಪೂಜಿತಳೂ । **ಅರುಣಪ್ಸುಂ**— ಹೊಂಬಣ್ಣದ ರೂಪವುಳ್ಳವಳೂ । **ವಿಭಾತೀಂ**— ತಮಸ್ಸನ್ನು ಚದುರಿಸಿ ಪ್ರಕಾಶಿಸುವವಳೂ । **ದೇವೀಂ**— ದೇವತಾತ್ಮಳೂ । **ಸ್ವರಾವಹಂತೀಂ**— ಸೂರ್ಯನ ಮುಂದೆ ಹೋಗುತ್ತಿರುವವಳೂ ಆದ । **ಉಷಸಂ**— ಉಷೋದೇವಿಯನ್ನು । **ವಿಪ್ರಾಸಃ**— ಮೇಧಾವಿಗಳಾದ ಋತ್ವಿಕ್ಕುಗಳು । **ಮತಿಭಿಃ**— ಸ್ತುತಿಗಳಿಂದ । **ಪ್ರತಿ ಜರಂತೇ**— ಸ್ತುತಿಸುತ್ತಾರೆ.

॥ ಭಾವಾರ್ಥ ॥

ಪ್ರಕಾಶಮಾನವಾದ ರಥವುಳ್ಳವಳೂ, ಮಹತ್ಸ್ವರೂಪಳೂ, ಯಜ್ಞದಿಂದ ಪೂಜಿತಳಾಗುವವಳೂ, ಹೊಂಬಣ್ಣದ ರೂಪವುಳ್ಳವಳೂ ತಮಸ್ಸನ್ನು ಚದುರಿಸಿ ಪ್ರಕಾಶಿಸುವವಳೂ, ದೇವಾತ್ಮಳೂ, ಸೂರ್ಯನ ಮುಂಭಾಗದಲ್ಲಿ ಹೋಗುವವಳೂ ಆದ ಉಷೋದೇವಿಯನ್ನು ಮೇಧಾವಿಗಳಾದ ಋತ್ವಿಕ್ಕುಗಳು ಸ್ತುತಿಗಳಿಂದ ಪ್ರಶಂಸಿಸುತ್ತಾರೆ.

## English Translation.

The wise priests celebrate with hymns the divine, bright-charioted, expanded Dawn; worshipped with holy worship, purple-tinted, radiant, leading on the sun.

॥ ಸಂಹಿತಾಪಾಠಃ ॥

ಏಷಾ ಜನಂ ದರ್ಶತಾ ಬೋಧಯಂತಿ ಸುಗಾನ್ಪಥಃ ಕೃಣ್ವತೀ ಯಾತ್ಯಗ್ರೇ ।
ಬೃಹದ್ರಥಾ ಬೃಹತೀ ವಿಶ್ವಮಿನ್ವೋಷಾ ಜ್ಯೋತಿರ್ಯಚ್ಛತ್ಯಗ್ರೇ ಅಹ್ನಾಂ ॥೨॥

॥ ಪದಪಾಠಃ ॥

ಏಷಾ । ಜನಂ । ದರ್ಶತಾ । ಬೋಧಯಂತೀ । ಸುಽಗಾನ್ । ಪಥಃ । ಕೃಣ್ವತೀ । ಯಾತಿ । ಅಗ್ರೇ ।
ಬೃಹತ್ಽರಥಾ । ಬೃಹತೀ । ವಿಶ್ವಂಽಇನ್ವಾ । ಉಷಾಃ । ಜ್ಯೋತಿಃ । ಯಚ್ಛತಿ । ಅಗ್ರೇ । ಅಹ್ನಾಂ ॥ ೨ ॥

॥ ಸಾಯಣಭಾಷ್ಯಂ ॥

**ದರ್ಶತಾ ದರ್ಶನೀಯೈಷೋಷಾ ಬೋಧಯಂತೀ । ಕಂ । ಜನಂ । ಪ್ರಸುಪ್ತಮಿತ್ಯರ್ಥಃ । ಪಥಃ ಸುಗಾನ್ ಸುಗಮನಾನ್ ಕೃಣ್ವತ್ಯಗ್ರೇ ಸೂರ್ಯಸ್ಯ ಪುರಸ್ತಾದ್ಯಾತಿ । ಗಚ್ಛತಿ । ಈದೃಶ್ಯುಷಾಃ । ಬೃಹದ್ರಥಾ ಪ್ರಭೂತರಥಾ ಬೃಹತೀ ಮಹತೀ ವಿಶ್ವಮಿನ್ವಾ ವಿಶ್ವಂ ವ್ಯಾಪ್ನುವಾನಾ ವಿಶ್ವತರ್ಪಣಾ ವಾ । ಈದೃಶ್ಯುಷಾ ಅಹ್ನಾಮಗ್ರೇ ಜ್ಯೋತಿಸ್ತೇಜೋ ಯಚ್ಛತಿ ॥**

॥ ಪ್ರತಿಪದಾರ್ಥ ॥

**ದರ್ಶತಾ**—ಆಕರ್ಷಕವಾದ ರೂಪವುಳ್ಳ । **ಏಷಾ**—ಈ ಉಷಸ್ಸು । **ಜನಂ**—ಪ್ರಜೆಗಳನ್ನು । **ಬೋಧಯಂತೀ**—ಎಚ್ಚರಗೊಳಿಸುತ್ತಾ । **ಅಗ್ರೇ**—ಸೂರ್ಯನ ಮುಂಭಾಗದಲ್ಲಿ । **ಸುಗಾನ್**—ಸುಲಭವಾಗಿ ಸಂಚರಿಸಲು ಯೋಗ್ಯವಾದ । **ಪಥಃ**—ಮಾರ್ಗಗಳನ್ನು । **ಕೃಣ್ವತೀ**—ನಿರ್ಮಿಸುತ್ತಾ । **ಯಾತಿ**—ಹೋಗುತ್ತಾಳೆ । **ಬೃಹದ್ರಥಾ**-ಬೃಹದಾಕಾರವಾದ ರಥವುಳ್ಳವಳೂ । **ಬೃಹತೀ**—ಮಹತ್ಸ್ವರೂಪಳೂ । **ವಿಶ್ವಮಿನ್ವಾ**—ವಿಶ್ವವ್ಯಾಪಕಳೂ ಆದ । **ಉಷಾಃ**—ಉಷಸ್ಸು । **ಅಹ್ನಾಂ**—ಅಹಸ್ಸುಗಳ । **ಅಗ್ರೇ**—ಪ್ರಥಮ ಭಾಗಗಳಲ್ಲಿ (ಪ್ರಾತಃಕಾಲದಲ್ಲಿ) । **ಜ್ಯೋತಿಃ**—ತೇಜಸ್ಸನ್ನು । **ಯಚ್ಛತಿ**—ಹರಡುತ್ತಾಳೆ.

॥ ಭಾವಾರ್ಥ ॥

ಆಕರ್ಷಕವಾದ ರೂಪವುಳ್ಳ ಉಷಸ್ಸು ಪ್ರಜೆಗಳನ್ನು ಎಚ್ಚರಗೊಳಿಸುತ್ತಾ ಸೂರ್ಯನ ಮುಂಭಾಗದಲ್ಲಿ ಸುಲಭವಾಗಿ ಸಂಚರಿಸಲು ಯೋಗ್ಯವಾದ ಮಾರ್ಗಗಳನ್ನು ನಿರ್ಮಿಸುತ್ತಾ ಹೋಗುತ್ತಾಳೆ. ಬೃಹದಾಕಾರವಾದ ರಥವುಳ್ಳವಳೂ ಮಹತ್ಸ್ವರೂಪಳೂ, ವಿಶ್ವವ್ಯಾಪಕಳೂ ಆದ ಉಷಸ್ಸು ಅಹಸ್ಸುಗಳ ಪ್ರಥಮಭಾಗಗಳಲ್ಲಿ (ಪ್ರಾತಃಕಾಲದಲ್ಲಿ) ತೇಜಸ್ಸನ್ನು ಹರಡುತ್ತಾಳೆ.

## English Translation.

The lovely dawn, arousing man, goes before (the sun) preparing practicable paths, riding in a spacious chariot. vast, expanding everywhere, she diffuses light at the commencement of the days.

॥ ಸಂಹಿತಾಪಾಠಃ ॥

**ಏಷಾ ಗೋಭಿರರುಣೇಭಿರ್ಯುಜಾನಾಸ್ರೇಧಂತೀ ರಯಿಮಪ್ರಾಯು ಚಕ್ರೇ।**
**ಪಥೋ ರದಂತೀ ಸುವಿತಾಯ ದೇವೀ ಪುರುಷ್ಟುತಾ ವಿಶ್ವವಾರಾ ವಿ ಭಾತಿ॥**

॥ ಪದಪಾಠಃ ॥

ಏಷಾ । ಗೋಭಿಃ । ಅರುಣೇಭಿಃ । ಯುಜಾನಾ । ಅಸ್ರೇಧಂತೀ । ರಯಿಂ । ಅಪ್ರಽಆಯು । ಚಕ್ರೇ ।

ಪಥಃ । ರದಂತೀ । ಸುವಿತಾಯ । ದೇವೀ । ಪುರುಽಸ್ತುತಾ । ವಿಶ್ವಽವಾರಾ । ವಿ । ಭಾತಿ ॥ ೩ ॥

॥ ಸಾಯಣಭಾಷ್ಯಂ ॥

ಏಷೋಷಾ ಅರುಣೇಭಿರರುಣವರ್ಣೈರ್ಗೋಭಿರ್ಬಲೀವರ್ದೈ ರಥಂ ಯುಜಾನಾ ಯೋಜಯಂತ್ಯಸ್ರೇಧಂತ್ಯಶುಷ್ಯಂತ್ಯಕ್ಷೀಣಾ ವಾ । ಕಿಂ । ರಯಿಂ ಧನಮಪ್ರಾಯ್ವಪ್ರಗಂತೃ ಅವಿಚಲಿತಂ ಚಕ್ರೇ । ಕರೋತಿ। ಕಿಂ ಕುರ್ವತೀ । ಪಥೋ ಮಾರ್ಗಾನ್ ರದಂತೀ ಪ್ರಕಾಶಯಂತೀ । ಕಿಮರ್ಥಂ । ಸುವಿತಾಯ ಸುಷ್ಠು ಗಮನಾಯ ದೇವೀ ದ್ಯೋತಮಾನಾ ಪುರುಷ್ಟುತಾ ಬಹುಭಿಃ ಸ್ತುತಾ ವಿಶ್ವವಾರಾ ಸರ್ವೈರ್ವರಣೀಯಾ ವಿ ಭಾತಿ । ಪ್ರಕಾಶಂ ಕರೋತಿ ॥

॥ ಪ್ರತಿಪದಾರ್ಥ ॥

**ಏಷಾ**—ಈ ಉಷೋದೇವಿಯು । **ಅರುಣೇಭಿಃ**—ಹೊಂಬಣ್ಣವುಳ್ಳ । **ಗೋಭಿಃ**—ಗೋವುಗಳಿಂದ । **ಯುಜಾನಾ**—ತನ್ನ ರಥವನ್ನು ಯೋಜಿಸಿ । **ಅಸ್ರೇಧಂತೀ**—ಶ್ರಮರಹಿತಳಾಗಿ । **ಅಪ್ರಾಯು**—ಸ್ಥಿರವಾದ । **ರಯಿಂ**—ಧನವನ್ನು । **ಚಕ್ರೇ**—ನಿರ್ಮಿಸುತ್ತಾಳೆ । **ದೇವೀ**—ಪ್ರಕಾಶಮಾನಳೂ । **ಪುರುಷ್ಟುತಾ**—ಅನೇಕರಿಂದ ಸ್ತುತಿಸಲ್ಪಡುವವಳೂ । **ವಿಶ್ವವಾರಾ**—ಸರ್ವರಿಗೂ ಆದೃತಳೂ ಆದ ಉಷಸ್ಸು । **ಸುವಿತಾಯ** - ಉತ್ತಮವಾದ ಸಂಚಾರಕ್ಕೆ ಯೋಗ್ಯವಾಗಿ । **ಪಥಃ**—ಮಾರ್ಗಗಳನ್ನು । **ರದಂತೀ**—ಪ್ರಕಾಶಪಡಿಸುತ್ತಾ । **ವಿ ಭಾತಿ**—ಶೋಭಿಸುತ್ತಾಳೆ.

॥ ಭಾವಾರ್ಥ ॥

ಉಷೋದೇವಿಯು ತನ್ನ ರಥಕ್ಕೆ ಹೊಂಬಣ್ಣದ ಗೋವುಗಳನ್ನು ಯೋಜಿಸಿ ಶ್ರಮರಹಿತಳಾಗಿ, ಸ್ಥಿರವಾದ ಧನವನ್ನು ನಿರ್ಮಿಸುತ್ತಾಳೆ ಪ್ರಕಾಶಮಾನಳೂ, ಅನೇಕರಿಂದ ಸ್ತುತಿಸಲ್ಪಡುವವಳೂ, ಸರ್ವರಿಗೂ ಆದೃತಳೂ ಆದ ಉಷಸ್ಸು ಸೂರ್ಯನ ಉತ್ತಮವಾದ ಸಂಚಾರಕ್ಕೆ ಯೋಗ್ಯವಾಗಿ ಮಾರ್ಗಗಳನ್ನು ಪ್ರಕಾಶಪಡಿಸುತ್ತಾ ಶೋಭಿಸುತ್ತಾಳೆ.

## English Translation.

Harnessing the purple oxen to her car, unwearied she renders riches perpetual: a goddess, praised of many, and cherished by all, she shines, manifesting the paths that lead to good.

॥ ಸಂಹಿತಾಪಾಠಃ ॥

ಏಷಾ ವ್ಯೇನೀ ಭವತಿ ದ್ವಿಬರ್ಹಾ ಆವಿಷ್ಕೃಣ್ವಾನಾ ತನ್ವಂ ಪುರಸ್ತಾತ್ ।
ಋತಸ್ಯ ಪಂಥಾಮನ್ವೇತಿ ಸಾಧು ಪ್ರಜಾನತೀವ ನ ದಿಶೋ ಮಿನಾತಿ ॥ ೪ ॥

॥ ಪದಪಾಠಃ ॥

ಏಷಾ । ವಿಽಏನೀ । ಭವತಿ । ದ್ವಿಽಬರ್ಹಾಃ । ಆವಿಃಽಕೃಣ್ವಾನಾ । ತನ್ವಂ । ಪುರಸ್ತಾತ್ ।
ಋತಸ್ಯ । ಪಂಥಾಂ । ಅನು । ಏತಿ । ಸಾಧು । ಪ್ರಜಾನತೀಽಇವ । ನ । ದಿಶಃ । ಮಿನಾತಿ ॥ ೪ ॥

॥ ಸಾಯಣಭಾಷ್ಯಂ ॥

ಏಷೋಷಾ ವ್ಯೇನೀ ಭವತಿ ವಿಶೇಷೇಣ ಶ್ವೇತಾ ಭವತಿ ದ್ವಿಬರ್ಹಾ ದ್ವಯೋಃ ಪ್ರಥಮಮಧ್ಯಮಯೋಃ ಪರಿವೃಢೋಷಾಃ ಪಶ್ಚಾತ್ತನ್ವಂ ಸ್ವೀಯಾಂ ತನೂಮಾವಿಷ್ಕೃಣ್ವಾನಾ ಪ್ರಕಟೀಕುರ್ವತೀ । ಕುತ್ರ । ಪುರಸ್ತಾತ್ ಪೂರ್ವಸ್ಯಾಂ ದಿಶಿ । ಕಿಂಚ ಋತಸ್ಯಾದಿತ್ಯಸ್ಯ ಪಂಥಾಂ ಪಂಥಾನಂ ಸಾಧು ಸಮ್ಯಗನ್ವೇತಿ । ಕಿಂಚ ಪ್ರಜಾನತೀವ ವಿಶ್ವಂ ಪ್ರಜ್ಞಾಪಯಂತೀ । ಇವೇತಿ ಸಂಪ್ರತ್ಯರ್ಥೇ । ನ ದಿಶೋ ಮಿನಾತಿ । ನ ಹಿನಸ್ತಿ । ಪ್ರತ್ಯುತ ದಿಶಃ ಪ್ರಕಾಶಯತಿ । ಅಥವಾ ಪ್ರಜಾನತೀವಾನುಗಂತವ್ಯಮಿತಿ ಪ್ರಕರ್ಷೇಣಾವಗಚ್ಛಂತೀ ಚರ್ತಸ್ಯ ಪಂಥಾಮನ್ವೇತಿ ॥

॥ ಪ್ರತಿಪದಾರ್ಥ ॥

**ಏಷಾ**—ಈ ಉಷೋದೇವಿಯು । **ದ್ವಿಬರ್ಹಾಃ**—ಪೃಥಿವ್ಯಂತರಿಕ್ಷರೂಪವಾದ ಎರಡು ಸ್ಥಾನಗಳನ್ನಾಕ್ರಮಿಸಿದ್ದರೂ । **ಪುರಸ್ತಾತ್**—ಪೂರ್ವದಿಕ್ಕಿನಲ್ಲಿ ಮಾತ್ರ । **ತನ್ವಂ**—ತನ್ನ ರೂಪವನ್ನು । **ಆವಿಷ್ಕೃಣ್ವಾನಾ**—ಪ್ರಕಾಶಪಡಿಸುತ್ತಾ । **ವ್ಯೇನೀ ಭವತಿ**—ಅತ್ಯಂತ ಶುಭ್ರವರ್ಣವುಳ್ಳವಳಾಗಿದ್ದಾಳೆ । **ಸಾಧು**—ತಾನು ಸಂಚರಿಸಬೇಕಾದ ಉತ್ತಮಮಾರ್ಗವನ್ನು । **ಪ್ರಜಾನತೀವ**—ಚೆನ್ನಾಗಿ ತಿಳಿದಿರುವಳೋ ಎಂಬಂತೆ । **ಋತಸ್ಯ**—ಆದಿತ್ಯನ । **ಪಂಥಾಂ**—ಮಾರ್ಗವನ್ನು । **ಅನ್ವೇತಿ**—ಅನುಸರಿಸಿ ಹೋಗುತ್ತಾಳೆ । **ದಿಶಃ**—ದಿಗ್ಭಾಗಗಳನ್ನು । **ನ ಮಿನಾತಿ**—ಹಿಂಸಿಸುವುದಿಲ್ಲ.

॥ ಭಾವಾರ್ಥ ॥

ಉಷೋದೇವಿಯು ಪೃಥಿವ್ಯಂತರಿಕ್ಷರೂಪವಾದ ಎರಡು ಸ್ಥಾನಗಳನ್ನಾಕ್ರಮಿಸಿದ್ದರೂ, ಪೂರ್ವದಿಕ್ಕಿನಲ್ಲಿ ಮಾತ್ರ ತನ್ನ ರೂಪವನ್ನು ಪ್ರಕಾಶಪಡಿಸುತ್ತಾ ಅತ್ಯಂತ ಶುಭ್ರವರ್ಣವುಳ್ಳವಳಾಗಿದ್ದಾಳೆ. ತಾನು ಸಂಚರಿಸಬೇಕಾದ ಉತ್ತಮಮಾರ್ಗವನ್ನು ಚೆನ್ನಾಗಿ ತಿಳಿದಿರುವಳೋ ಎಂಬಂತೆ ಆದಿತ್ಯನ ಮಾರ್ಗವನ್ನು ಅನುಸರಿಸಿ ಹೋಗುತ್ತಾಳೆ. ಯಾವ ದಿಕ್ಕನ್ನೂ ಹಿಂಸಿಸುವುದಿಲ್ಲ.

## English Translation.

Lucidly white is she, occupying the two (regions, the upper and middle firmament), and manifesting her person from the east: she traverses the path of the sun as if knowing (his course), and harms not the quarters of the horizon.

॥ ಸಂಹಿತಾಪಾಠಃ ॥

ಏಷಾ ಶುಭ್ರಾ ನ ತನ್ವೋ ವಿದಾನೋರ್ಧ್ವೇವ ಸ್ನಾತೀ ದೃಶಯೇ ನೋ ಅಸ್ಥಾತ್ ।
ಅಪ ದ್ವೇಷೋ ಬಾಧಮಾನಾ ತಮಾಂಸ್ಯುಷಾ ದಿವೋ ದುಹಿತಾ ಜ್ಯೋತಿಷಾಗಾತ್ ॥ ೫ ॥

॥ ಪದಪಾಠಃ ॥

ಏಷಾ । ಶುಭ್ರಾ । ನ । ತನ್ವಃ । ವಿದಾನಾ । ಊರ್ಧ್ವಾಽಇವ । ಸ್ನಾತೀ । ದೃಶಯೇ । ನಃ । ಅಸ್ಥಾತ್ ।
ಅಪ । ದ್ವೇಷಃ । ಬಾಧಮಾನಾ । ತಮಾಂಸಿ । ಉಷಾಃ । ದಿವಃ । ದುಹಿತಾ । ಜ್ಯೋತಿಷಾ । ಆ । ಅಗಾತ್ ॥

॥ ಸಾಯಣಭಾಷ್ಯಂ ॥

ಏಷೋಷಾಃ ಶುಭ್ರಾ ನ ಶುಭ್ರವರ್ಣಾ ನಿರ್ಮಲಾ ಸ್ವಲಂಕೃತಾ ಯೋಷಿದಿವ ತನ್ವೋಽಂಗಾನಿ ವಿದಾನಾ ಪ್ರಜ್ಞಾಪಯಂತೀ ಸ್ನಾತೀ ಸ್ನಾನಂ ಕುರ್ವಾಣೋರ್ಧ್ವೇವೋನ್ನತೇವ ಸ್ನಾನಾದುತ್ತಿಷ್ಠಂತೀವ ನೋಽಸ್ಮದರ್ಥಮಸ್ಮಾಕಂ ಪುರತೋ ವಾ ದೃಶಯೇ ಸರ್ವೇಷಾಂ ದರ್ಶನಾಯೋದಸ್ಥಾತ್ । ಪೂರ್ವಸ್ಯಾಂ ದಿಶ್ಯುತ್ತಿಷ್ಠತಿ । ಕಿಂ ಕುರ್ವತೀ । ದ್ವೇಷೋ ದ್ವೇಷ್ಯಾಣಿ ತಮಾಂಸ್ಯಪ ಬಾಧಮಾನಾ ದಿವೋ ದುಹಿತೋಷಾ ಜ್ಯೋತಿಷಾ ತೇಜಸಾ ಸಹಾಗಾತ್ । ಆಗಚ್ಛತಿ ॥

॥ ಪ್ರತಿಪದಾರ್ಥ ॥

**ಏಷಾ**—ಈ ಉಷೋದೇವಿಯು । **ಶುಭ್ರಾ ನ**—ಶುಭ್ರವಾದ ವಸ್ತ್ರಾಭರಣಗಳಿಂದ ಅಲಂಕೃತಳಾದ ಸ್ತ್ರೀಯಂತೆ । **ತನ್ವಃ**—ತನ್ನ ಅವಯವಗಳನ್ನು । **ವಿದಾನಾ**—ತೋರಿಸಿಕೊಳ್ಳುತ್ತಲೂ । **ಸ್ನಾತೀ**—ಸ್ನಾನ ಮಾಡಲಿಳಿದ ಸ್ತ್ರೀಯು । **ಊರ್ಧ್ವೇವ**—ಲಜ್ಜೆಯಿಂದ ಒಳಕುತ್ತಾ ಮೇಲಕ್ಕೆದ್ದುಬರುವಂತೆ ಆವಿರ್ಭೂತಳಾಗುತ್ತಲೂ । **ನಃ**—ನಮ್ಮ । **ದೃಶಯೇ**—ಸಂದರ್ಶನಕ್ಕಾಗಿ । **ಅಸ್ಥಾತ್**—ಉದಯಿಸಿ ನಿಂತಿದ್ದಾಳೆ । **ದಿವಃ**—

ಅಂತರಕ್ಷದ | **ದುಹಿತಾ**—ಪುತ್ರಿಯಾದ | **ಉಷಾಃ**—ಉಷೋದೇವಿಯು | **ದ್ವೇಷಃ** - ಅನಿಷ್ಟಗಳಾದ | **ತಮಾಂಸಿ**—ಕಗ್ಗತ್ತಲೆಗಳನ್ನು | **ಅಪ ಬಾಧಮಾನಾ**—ಹಿಂಸಿಸಿ ದೂರಕ್ಕೆ ಓಡಿಸುತ್ತಾ | **ಜ್ಯೋತಿಷಾ**— ತನ್ನ ತೇಜಸ್ಸಿನೊಡನೆ | **ಆಗಾತ್**—ಬರುತ್ತಾಳೆ.

॥ ಭಾವಾರ್ಥ ॥

ಈ ಉಷೋದೇವಿಯು ಶುಭ್ರವಾದ ವಸ್ತ್ರಾಭರಣಗಳಿಂದ ಅಲಂಕೃತಳಾದ ಸ್ತ್ರೀಯಂತೆ ತನ್ನ ಅವಯವಗಳನ್ನು ತೋರಿಸಿಕೊಳ್ಳುತ್ತಲೂ, ಸ್ನಾನಮಾಡಲಿಳಿದ ಸ್ತ್ರೀಯು ಲಜ್ಜೆಯಿಂದ ಬಳಕುತ್ತಾ ಮೇಲಕ್ಕೆದ್ದು ಬರುವಂತೆ ಆವಿರ್ಭೂತಳಾಗುತ್ತಲೂ ನಮ್ಮ ಸಂದರ್ಶನಕ್ಕಾಗಿ ಉದಯಿಸಿ ನಿಂತಿದ್ದಾಳೆ. ಅಂತರಿಕ್ಷದ ಪುತ್ರಿಯಾದ ಉಷೋದೇವಿಯು ಅನಿಷ್ಟಗಳಾದ ಕಗ್ಗತ್ತಲೆಗಳನ್ನು ಹಿಂಸಿಸಿ ದೂರಕ್ಕೆ ಓಡಿಸುತ್ತಾ ತನ್ನ ತೇಜಸ್ಸಿನೊಡನೆ ಬರುತ್ತಾಳೆ

## English Translation.

Exhibiting her person like a well-attired female, she stands before our eyes, (gracefully) inclining like (a woman who has been) bathing: dispersing the hostile glooms, Ushas, the daughter of heaven, comes with radiance.

॥ ಸಂಹಿತಾಪಾಠಃ ॥

ಏಷಾ ಪ್ರತೀಚೀ ದುಹಿತಾ ದಿವೋ ನೄನ್ಯೋಷೇವ ಭದ್ರಾ ನಿ ರಿಣೀತೇ ಅಪ್ಸಃ |
ವ್ಯೂರ್ಣ್ವತೀ ದಾಶುಷೇ ವಾರ್ಯಾಣಿ ಪುನರ್ಜ್ಯೋತಿರ್ಯುವತಿಃ ಪೂರ್ವಥಾಕಃ || ೬ ||

॥ ಪದಪಾಠಃ ॥

ಏಷಾ | ಪ್ರತೀಚೀ | ದುಹಿತಾ | ದಿವಃ | ನೄನ್ | ಯೋಷಾಽಇವ | ಭದ್ರಾ | ನಿ | ರಿಣೀತೇ | ಅಪ್ಸಃ | ವಿಽಊರ್ಣ್ವತೀ | ದಾಶುಷೇ | ವಾರ್ಯಾಣಿ | ಪುನಃ | ಜ್ಯೋತಿಃ | ಯುವತಿಃ | ಪೂರ್ವಽಥಾ | ಅಕರಿತ್ಯಕಃ || ೬ ||

॥ ಸಾಯಣಭಾಷ್ಯಂ ॥

ಏಷೋಷಾಃ ಪ್ರತೀಚ್ಯಭಿಮುಖಾ ಸತೀ ದಿವೋ ದುಹಿತಾ ನ್ಯಾನ್ ಸರ್ವಾನ್ ಪ್ರಾಣಿನಃ ಪ್ರತಿ ಭದ್ರಾ ಯೋಷೇವ ಕಲ್ಯಾಣವೇಷಾ ಯೋಷಿದಿವಾಪ್ನೋ ರೂಪಂ ನಿ ರಿಣೀತೇ । ಪ್ರೇರಯತಿ । ಕಿಂಚ ದಾಶುಷೇ ಹವಿರ್ದಾತ್ರೇ ಯಜಮಾನಾಯ ವಾರ್ಯಾಣಿ ವರಣೀಯಾನಿ ಧನಾನಿ ವ್ಯೃಣ್ವತೀ ಪ್ರಯ-ಚ್ಛಂತೀ ಯುವತಿರ್ನಿತ್ಯಯೌವನಾ ಸರ್ವತ್ರ ಮಿಶ್ರಯಂತೀ ವಾ ಪುನರದ್ಯಾಪಿ ಪೂರ್ವಥಾ ಪೂರ್ವಮಿವ ಜ್ಯೋತಿಸ್ತೇಜೋಽಕಃ । ಕರೋತಿ ॥

॥ ಪ್ರತಿಪದಾರ್ಥ ॥

**ದಿವಃ**—ಅಂತರಿಕ್ಷದ । **ದುಹಿತಾ**—ಪುತ್ರಿಯಾದ । **ಏಷಾ**—ಈ ಉಷೋದೇವಿಯು । **ಪ್ರತೀಚೀ**—ಪಶ್ಚಿಮಾಭಿಮುಖಳಾಗಿದ್ದು । **ಭದ್ರಾ**—ಮಂಗಳಾತ್ಮಕಳಾದ । **ಯೋಷೇವ**—ಸ್ತ್ರೀಯಂತೆ । **ನ್ಯಾನ್**—ಸಕಲ ಪ್ರಾಣಿಗಳಿಗೂ । **ಅಪ್ನಃ**—ರೂಪವನ್ನು । **ನಿ ರಿಣೀತೇ**—ಒದಗಿಸುತ್ತಾಳೆ । **ದಾಶುಷೇ**—ಹವಿರ್ದಾತನಾದ ಯಜಮಾನನಿಗೆ । **ವಾರ್ಯಾಣಿ**—ಅತ್ಯಪೇಕ್ಷಿತಗಳಾದ ಧನಗಳನ್ನು । **ವ್ಯೃಣ್ವತೀ**—ಒದಗಿಸುತ್ತಾ । **ಯುವತಿಃ**—ನಿತ್ಯತರುಣಿಯಾದ ಉಷಸ್ಸು । **ಪುನಃ**—ತಿರುಗಿಯೂ । **ಪೂರ್ವಥಾ**—ಹಿಂದಿನಂತೆಯೇ । **ಜ್ಯೋತಿಃ**—ತೇಜಸ್ಸನ್ನು । **ಅಕಃ**—ಉಂಟುಮಾಡುತ್ತಾಳೆ.

॥ ಭಾವಾರ್ಥ ॥

ಅಂತರಿಕ್ಷದ ಪುತ್ರಿಯಾದ ಉಷೋದೇವಿಯು ಪಶ್ಚಿಮಾಭಿಮುಖಳಾಗಿದ್ದು ಮಂಗಳಾತ್ಮಕಳಾದ ಸ್ತ್ರೀಯಂತೆ ಸಕಲ ಪ್ರಾಣಿಗಳಿಗೂ ರೂಪವನ್ನು ಒದಗಿಸುತ್ತಾಳೆ. ಹವಿರ್ದಾತನಾದ ಯಜಮಾನನಿಗೆ ಅತ್ಯಪೇಕ್ಷಿತಗಳಾದ ಧನಗಳನ್ನು ಒದಗಿಸುತ್ತಾ, ನಿತ್ಯತರುಣಿಯಾದ ಉಷಸ್ಸು ತಿರುಗಿಯೂ ಹಿಂದಿನಂತೆಯೇ ತೇಜಸ್ಸನ್ನು ಉಂಟುಮಾಡುತ್ತಾಳೆ.

## English Translation.

Ushas, the daughter of heaven, tending to the west puts forth her beauty like a (well-dressed) woman, bestowing precious treasures upon the offerer of adoration: she ever youthful, brings back the light as (she has done) of old.

# ಎಂಭತ್ತೊಂದನೆಯ ಸೂಕ್ತವು

## ಪೀಠಿಕೆ

### ಸವಿತೃದೇವತೆಯ ಸೂಕ್ಷ್ಮಪರಿಚಯ.

ಈ ಸೂಕ್ತದಲ್ಲಿಯೂ ಮುಂದಿನ ಸೂಕ್ತದಲ್ಲಿಯೂ ಸವಿತೃದೇವತೆಯನ್ನು ಸ್ತುತಿಸಲಾಗಿರುವುದು. ಸವಿತೃ ದೇವತೆಯ ವಿಷಯವನ್ನು ನಾವು ಹಿಂದೆ ಸೂಕ್ಷ್ಮವಾಗಿ ಹೇಳಿದೇವೆ ಆದರೂ ಅವಶ್ಯಕವಾದ ಕೆಲವು ವಿಷಯಗಳನ್ನು ಇಲ್ಲಿ ವಿವರಿಸುತ್ತೇವೆ.

ಹನ್ನೊಂದು ಸಂಪೂರ್ಣ ಸೂಕ್ತಗಳೂ, ಮತ್ತೆ ಕೆಲವು ಸೂಕ್ತಗಳ ಭಾಗಗಳೂ ಸವಿತೃವನ್ನು ಸ್ತುತಿಸುತ್ತವೆ; ಸುಮಾರು ೧೭೦ ಸಲ ಅವನ ಹೆಸರು ಬಂದಿದೆ. ಹನ್ನೊಂದು ಸೂಕ್ತಗಳಲ್ಲಿ ಮೂರು ಸೂಕ್ತಗಳು ಮಾತ್ರ ಒಂದು ಮತ್ತು ಹತ್ತನೆಯ ಮಂಡಲಗಳಲ್ಲಿಯೂ, ಉಳಿದವು ಬಾಕಿ ಮಂಡಲಗಳಲ್ಲಿಯೂ ಇವೆ. ಸವಿತೃವು ಬಹುಮಟ್ಟಿಗೆ ಸುವರ್ಣಮಯನಾದ ದೇವತೆ; ಅವನಿಗೆ ಸೇರಿದವರೂ ಅವನ ಸಲಕರಣೆಗಳೂ ಸುವರ್ಣಮಯರೆಂದೇ ವರ್ಣಿತರಾಗಿದ್ದಾರೆ. ಅವನ ಕಣ್ಣು ಬಂಗಾರದ್ದು (೧-೩೫,೮); ಕೈಗಳು ಬಂಗಾರದವು. (೧-೩೫-೯ ಮತ್ತು ೧೦); ಬಂಗಾರದ ನಾಲಿಗೆ (೬-೭೧-೩) ಯುಳ್ಳವನು. ಈ ತರಹ ವರ್ಣನೆ ಸವಿತೃವಿನ ವೈಶಿಷ್ಟ್ಯ. ಅವನ ಕೈಗಳು ಬಂಗಾರದವು. (೬-೭೧-೧ ಮತ್ತು ೫; ೭-೪೫-೨) ಅಗಲವಾದವು (೨-೩೮-೨ ; ಅಥವಾ ಸುಂದರವಾದವು. (೩-೩೩-೬) ಅವನದು ಸವಿನುಡಿ (೬-೭೧-೪) ಸುಂದರವಾದ ನಾಲಿಗೆ (೩-೫೪-೧೧) ಒಂದುಕಡೆ ಮಾತ್ರ ಕಬ್ಬಿಣದ ದವಡೆಗಳುಳ್ಳವನೆಂದಿದೆ (೬-೭೧-೪). ಅವನ ಕೇಶವು ಹಳದಿಯ ಬಣ್ಣ (೧೦-೧೩೯-೧); ಅಗ್ನಿ ಮತ್ತು ಇಂದ್ರರ ಕೇಶವೂ ಇದೇ ವರ್ಣದ್ದು ಕಪಿಲ ವರ್ಣದ ಉಡುಪು (೪-೫೩-೨). ಸ್ವರ್ಣ ದಂಡಯುಕ್ತವಾದ ಸ್ವರ್ಣರಥ (೧-೩೫-೨ ಮತ್ತು ೫) ಈ ರಥವು ಅವನಂತೆಯೇ (೫-೮೧-೨) ಅನೇಕ ಆಕಾರವುಳ್ಳದ್ದು (೧-೫೩-೩) ಅವನ ರಥಕ್ಕೆ ಎರಡು ತೇಜೋವಿಶಿಷ್ಟವಾದ ಅಶ್ವಗಳಿವೆ ಅಥವಾ ಹೆಚ್ಚು ಸಂಖ್ಯೆಯ ಮಾಸಲುಬಣ್ಣದ, ಬಿಳಿಯ ಗೊರಸಿನ ಕುದುರೆಗಳು ರಥವನ್ನು ಎಳೆಯುತ್ತವೆ. (೧-೩೫-೨ ಮತ್ತು ೫ ; ೭ ೪೫-೧).

ಅಪಾರವಾದ ತೇಜಸ್ಸು ಸವಿತೃವಿನದು. ಅವನದು ಅಮಿತವಾದ ಸುವರ್ಣಕಾಂತಿ, ಇದು ಇತರ ದೇವತೆಗಳಿಗೆ ಸಲ್ಲುವುದು ಅಪರೂಪ (೩-೩೮ ೮ ; ೭-೩೮-೧). ಆವನು ಈ ಕಾಂತಿಯನ್ನು ಹೊರಕ್ಕೆ ಚಾಚುತ್ತಾನೆ ಅಥವಾ ಚೆಲ್ಲುತ್ತಾನೆ. ಇದರಿಂದ ವಾಯುಮಂಡಲ, ಸ್ವರ್ಗ ಮತ್ತು ಭೂಮಿ, ಪ್ರಪಂಚ, ಭೂವಿವರಗಳು ಮತ್ತು ಆಕಾಶ, ಎಲ್ಲವೂ ಪ್ರಕಾಶವಾಗುತ್ತವೆ. (೧-೩೫-೭ ಮತ್ತು ೮; ೪-೧೪-೨; ೪-೫೩-೪, ೫-೮೧-೨) ದಿಗಂತದ ವರೆಗೂ ವ್ಯಾಪಿಸುವ ತನ್ನ ಬಲವಾದ ಬಂಗಾರದ ತೋಳುಗಳನ್ನು ಎತ್ತಿ, ಎಲ್ಲಾ ಪ್ರಾಣಿಗಳನ್ನೂ ಎಚ್ಚರಿಸುತ್ತಾನೆ ಮತ್ತು ಆಶೀರ್ವದಿಸುತ್ತಾನೆ. (೨-೩೮-೨ ; ೪-೫೩-೩ ಮತ್ತು ೪ ; ೬-೭೧-೧ ಮತ್ತು ೫ ; ೭-೪೫-೨). ಸವಿತೃವು ತೋಳುಗಳನ್ನೆತ್ತುವಂತೆ ಇತರ ದೇವತೆಗಳು ಎಂದು ಹೋಲಿಸುವುದರಿಂದ, ಇದೂ ಒಂದು ಅವನ ವೈಯಕ್ತಿಕ ಗುಣವೆನ್ನಬಹುದು. ಅಗ್ನಿಯು ಸವಿತೃವಿನಂತೆ ಬಾಹುಗಳನ್ನು ಎತ್ತುತ್ತಾನೆ (೧-೯೫-೭) ; ಸವಿತೃವು ತನ್ನ ತೋಳನ್ನು ಚಾಚುವಂತೆ, ಉಷಸ್ಸು ಬೆಳಕನ್ನು ಚಾಚುತ್ತಾಳೆ. (೭-೭೯-೨). ಇದರಂತೆ, ಸ್ತುತಿ ವಾಕ್ಯಗಳನ್ನು ಗಟ್ಟಿಯಾಗಿ ಉಚ್ಚರಿಸಬೇಕೆಂದು ಬೃಹಸ್ಪತಿಯು ಪ್ರಾರ್ಥಿತನಾಗಿದಾನೆ (೧-೧೯೦-೩). ಅಧೋಮುಖವೂ ಮತ್ತು ಊರ್ಧ್ವಮುಖವೂ ಆದ ಪಥದಲ್ಲಿ, ಸವಿತೃವು ತನ್ನ ಬಂಗಾರದ ರಥದಲ್ಲಿ ಕುಳಿತು, ಎಲ್ಲಾ ಪ್ರಾಣಿಗಳನ್ನೂ ಅವಲೋಕಿಸುತ್ತಾ ಹೋಗುತ್ತಾನೆ (೧-೩೫-೨ ಮತ್ತು ೩). ಉಷಃಕಾಲಕ್ಕೆ ಮುಂಚೆ ಅವನು ಅಶ್ವಿನೀದೇವತೆಗಳ ರಥವನ್ನು ಹೊರಡಿಸುತ್ತಾನೆ (೧-೩೪-೧೦). ಉಷೋದೇವಿಯ ಮಾರ್ಗವನ್ನನುಸರಿಸಿ, ತಾನೂ ಪ್ರಕಾಶಿಸುತ್ತಾನೆ (೫-೮೧-೨). ಭೂಮಿಯ ಪ್ರದೇಶಗಳನ್ನು ಅಳೆದಿದಾನೆ ; ಸ್ವರ್ಗಲೋಕದ ಮೂರು ಪ್ರದೇಶಗಳಿಗೆ ಹೋಗುತ್ತಾನೆ ; ಸೂರ್ಯನ ರಶ್ಮಿಯೊಡನೆ ಸೇರಿ ಹೋಗುತ್ತಾನೆ. (೫ ೮೧-೩ ಮತ್ತು ೪) ಋಗ್ವೇದದಲ್ಲಿ " ಸೂರ್ಯರಶ್ಮಿ " ಎಂಬ ಪದವು ಬರುವುದು ಒಂದೇಸಲ. ಅದು ಸವಿತೃವಿಗೆ ಸೇರಿದೆ. ಸೂರ್ಯರಶ್ಮಿಗಳಿಂದ ಪ್ರಕಾಶಿಸುತ್ತಾ, ಹರಿದ್ರಕೇಶನಾದ ಸವಿತೃವು ಪೂರ್ವದಿಕ್ಕಿನಲ್ಲಿ ತನ್ನ ಕಾಂತಿಯನ್ನು ಸತತವೂ ಬೀರುತ್ತಿರುತ್ತಾನೆ (೧೦-೧೩೯-೧)

ಅವನು ವಾಯುಮಂಡಲವನ್ನೂ ಮೂರು ಆಕಾಶಗಳನ್ನೂ ಊರ್ಧ್ವಲೋಕದ ಮೂರು ಬೆಳಗುತ್ತಿರುವ ಪ್ರದೇಶಗಳನ್ನೂ ಮೂರು ಸಲ ಸುತ್ತಿ ಬರುತ್ತಾನೆ (೪-೫೩-೫). ಆಕಾಶದಲ್ಲಿರುವ ಅವನು ಅನುಸರಿಸುವ ಪುರಾತನ ಮಾರ್ಗಗಳು ಶುದ್ಧವಾಗಿವೆ. ಮತ್ತು ನಡೆಯಲು ಅನುಕೂಲವಾಗಿವೆ. ಇಲ್ಲೀ, ಅವನ ಆರಾಧಕರು ಅವನನ್ನು "ರಕ್ಷಿಸು" ಎಂದು ಅರಸುತ್ತಾರೆ (೧-೩೫-೧೧). "ಮೃತನ ಜೀವವನ್ನು ಸಜ್ಜೀವಗಳಿರುವ ಸ್ಥಳಕ್ಕೆ ಸೇರಿಸು." ಎಂದು ಅವನನ್ನು ಪ್ರಾರ್ಥಿಸುತ್ತಾರೆ (೧೦-೧೭,೪) ದೇವತೆಗಳಿಗೆ ಅಮರತ್ವವನ್ನೂ, ಮನುಷ್ಯರಿಗೆ ದೀರ್ಘಾಯುಸ್ಸನ್ನೂ ಕೊಡುವವನು ಅವನೇ (೪-೫೪-೨). ತಮ್ಮ ಕರ್ಮಗಳ ಸಾಮರ್ಥ್ಯದಿಂದ ತನ್ನ ಮನೆಗೆ ಬಂದ ಋಭುಗಳಿಗೆ ಅಮರತ್ವವನ್ನು ದಯಪಾಲಿಸಿದವನೂ ಅವನೇ (೧-೧೧೦-೨ ಮತ್ತು ೩) ಸೂರ್ಯನನ್ನು ಪ್ರಾರ್ಥಿಸುವಂತೆ ಸವಿತೃವನ್ನೂ ದುಸ್ವಪ್ನ ಪರಿಹಾರಕ್ಕಾಗಿಯೂ (೫-೮೨-೪) ಮತ್ತು ಪಾಪವಿಮೋಚನೆಗಾಗಿಯೂ (೪-೫೪-೩) ಪ್ರಾರ್ಥಿಸುತ್ತಾರೆ. ಅವನು ದುರ್ದೇವತೆಗಳನ್ನೂ, ಮಾಟಗಾರರನ್ನೂ ಓಡಿಸುತ್ತಾನೆ (೧-೩೫-೧೦ ; ೭-೩೮-೭).

ಇತರ ಕೆಲವು ದೇವತೆಗಳಂತೆ ಇವನೂ ಅಸುರನು (೪-೫೩-೧). ಇವನು ಅನುಸರಿಸುವುದು ಗೊತ್ತಾದ ಕೆಲವು ನಿಯಮಗಳನ್ನು (೪-೫೩-೪ . ೧೦-೩೪-೮ , ೧೦-೧೩೯-೩). ನೀರು ಮತ್ತು ಗಾಳಿಗಳು ಅವನ ನಿಯಮಗಳಿಗೆ ಒಳಪಟ್ಟಿವೆ (೨-೩೮-೨). ನೀರುಗಳಿಗೆ ಅವನೇ ದಾರಿ ತೋರಿಸುವವನು , ಅವನಿಂದ ತಳ್ಳಲ್ಪಟ್ಟು, ಅವು ವಿಸ್ತಾರವಾಗಿ ಪ್ರವಹಿಸುತ್ತವೆ (೩-೩೩-೬ ನಿರುಕ್ತ ೨-೨೬ ನ್ನು ಹೋಲಿಸಿ). ಇತರ ದೇವತೆಗಳು ಇವನ ಮೇಲ್ಪಂಕ್ತಿಯನ್ನನುಸರಿಸುತ್ತಾರೆ (೫-೮೧-೩). ಅವನ ಮನೋನಿರ್ಧಾರವನ್ನೂ ಮತ್ತು ಅವನ ಸ್ವಾತಂತ್ರ್ಯವನ್ನೂ ಯಾರೂ ಪ್ರತಿಭಟಿಸಲಾರರು. ಇಂದ್ರ, ವರುಣ, ಮಿತ್ರ, ಅರ್ಯಮ, ರುದ್ರ ಮೊದಲಾದವರೂ ಪ್ರತಿಭಟಿಸಲಾರರು (೨-೩೮-೭ ಮತ್ತು ೯; ೫-೮೨-೨). ವಸುಗಳು, ಅದಿತಿ ವರುಣ, ಮಿತ್ರ ಮತ್ತು ಅರ್ಯಮರು ಅವನ ಕೀರ್ತಿಯನ್ನು ಪ್ರಶಂಸಿಸುತ್ತಾರೆ. (೭-೩೮-೩ ಮತ್ತು ೪). ಪೂಷಣ ಮತ್ತು ಸೂರ್ಯರಂತೆ, ಸವಿತೃವು ಚರಾಚರ ವಸ್ತುಗಳಿಗೆ ಒಡೆಯನು (೪-೫೩-೬). ಸರ್ವರಿಂದ ಅಪೇಕ್ಷಣೀಯವಾದ ವಸ್ತುಗಳೆಲ್ಲವೂ ಅವನ ಅಧೀನ. ಅವನೇ ಸ್ವರ್ಗ, ಭೂಮಿ ಮತ್ತು ಆಕಾಶಗಳಿಂದ ಶುಭಪ್ರದನಾಗುತ್ತಾನೆ (೧-೨೪-೩ ; ೨-೩೮-೧೧) ಎರಡು ಸಲ, ಅಗ್ನಿಯಂತೆ (ಗೃಹ್ಯ), ಮನೆಗೆ ಸೇರಿದವನು (ದಮೂನಃ) ಎಂತಲೂ (೧-೧೨೩-೩ ; ೬-೭೧-೪) ಕರೆಯಲ್ಪಟ್ಟಿದ್ದಾನೆ. ಇತರ ದೇವತೆಗಳ ತೆ, ಇವನೂ ಆಕಾಶಕ್ಕೆ ಆಧಾರಭೂತನು (೪-೫೩-೨ ; ೧೦-೧೪೯-೪). ಪ್ರಪಂಚಕ್ಕೆಲ್ಲಾ ಆಧಾರನು (೪-೫೪-೪). ಭೂಮಿಯನ್ನು ಕಟ್ಟುಗಳಿಂದ ಬಂಧಿಸಿ, ಸ್ಥಿರವಾಗಿ ಇಟ್ಟಿದ್ದಾನೆ. ಮತ್ತು ಆಕಾಶವನ್ನು ತೊಲೆ ತೀರುಗಳಿಲ್ಲದ ಅಂತರಾಳದಲ್ಲಿ ನಿಲ್ಲಿಸಿದ್ದಾನೆ (೧೦-೧೪೯-೧].

ಅಗ್ನಿಗೆ ಮಾತ್ರ ಸಲ್ಲುವ (ಅಪಾಂನಪಾತ್) "ನೀರಿನಿಂದ ಜನ್ಯವಾದುದು." ಎಂಬ ವಿಶೇಷಣವು ಒಂದು ಸಲವಾದರೂ ಸವಿತೃಗೆ ಹೇಳಲ್ಪಟ್ಟಿದೆ. (೧-೨೨-೬ ; ೧೦-೧೪೯-೨). ಅಲ್ಲಿಯೂ ಸವಿತೃವಿಗೆ ಹೇಳಿರುವಂತೆ ಕಾಣುತ್ತದೆ. ಯಾಸ್ಕರು (ನಿರುಕ್ತ ೧೦-೩೨) ರಲ್ಲಿ, ಈ ಮೇಲೆ ಹೇಳಿದ (೧೦-೧೪೯-೨) ನೆಯ ಮಂತ್ರದ ಮೇಲೆ ಟಿಪ್ಪಣಿ ಬರೆಯುತ್ತಾ, ಮಳೆಗೆ ಕಾರಣನಾದುದರಿಂದ ಸವಿತೃವು ಮಧ್ಯ ಪ್ರದೇಶ ದೇವತೆ ಮತ್ತು ಆಕಾಶದಲ್ಲಿರುವ ಸೂರ್ಯನಿಗೂ (ಆದಿತ್ಯ) ಸವಿತೃ ಎಂಬಭಿದಾನವಿರುವುದರಿಂದಲೂ, ಸವಿತೃವು ಈ ಮಧ್ಯ ಲೋಕದ ದೇವತೆಯೇ ಇರಬೇಕು ಎಂದು ಹೇಳಿದ್ದಾರೆ. ವೃಷ್ಟಿಕಾರಕನಾದುದರಿಂದಲೂ ವಾಯುಮಂಡಲದಲ್ಲಿಯೋ, ಮಧ್ಯಲೋಕದಲ್ಲಿಯೋ (೧-೩೫-೧೧) ಸವಿತೃವಿನ ಪಥವಿರುವುದರಿಂದಲೂ, ನೈಘಂಟುಕ ಕಾಂಡದಲ್ಲಿ ಈ ದೇವತೆಯ ಹೆಸರು ಸ್ವರ್ಗ ಮತ್ತು ಮಧ್ಯ ಲೋಕಗಳ ದೇವತೆಗಳ ಪಟ್ಟಿಯಲ್ಲಿದೆ. ಒಂದು ಸಲ ಸವಿತೃವನ್ನು ಪ್ರಜಾಪತಿಯೆಂತಲೂ

(೪-೫೩-೨) ಕರೆದಿದೆ. ಶತಪಥಬ್ರಾಹ್ಮಣದಲ್ಲಿ ಸವಿತೃ ಮತ್ತು ಪ್ರಜಾಪತಿ ಎರಡೂ ಒಂದೇ ದೇವತೆಯೆಂಬ ಅಭಿಪ್ರಾಯ ವ್ಯಕ್ತಪಡುತ್ತದೆ. (ಶ. ಬ್ರಾ. ೧೨-೩ ೫-೧). ತೈತ್ತಿರೀಯ ಬ್ರಾಹ್ಮಣದಲ್ಲಿ (೧-೬-೪-೧) ಪ್ರಜಾಪತಿಯೇ ಸವಿತೃವಾಗಿ ಪ್ರಾಣಿಗಳನ್ನು ಸೃಜಿಸಿದನೆಂದು ಹೇಳಿದೆ ಜೀವದಾನಮಾಡುವ ಶಕ್ತಿಗೆ ಅವನೊಬ್ಬನೇ ಅಧೀಶ್ವರನು. ತನ್ನ ಚಲನೆಗಳಿಂದ (ಯಾಮಭಿಃ) ಪೂಷಣನಾಗುತ್ತಾನೆ. (೫-೮೨-೫) ಪೂಷಣನು ಜೀವದಾಯಕ ಶಕ್ತಿಯುಳ್ಳವನಾಗಿ, ಪೋಷಕನಂತೆ, ಸರ್ವಪ್ರಾಣಿಗಳನ್ನೂ ಅವಲೋಕಿಸುತ್ತಾ ಸಂಚರಿಸುತ್ತಾನೆ. (೧೦-೧೩೯-೧). ಎರಡು ಮಂತ್ರಗಳಲ್ಲಿ (೩-೬೨-೯ ಮತ್ತು ೧೦) ಸವಿತೃ ಮತ್ತು ಪೂಷಣರಿಗೆ ಸಂಬಂಧವಿದೆಯೆಂದು ಹೇಳಿದೆ. ಮೊದಲನೆಯದರಲ್ಲಿ ಸರ್ವ ಪ್ರಾಣಿಗಳನ್ನೂ ನೋಡುವ ಪೂಷಣನ ಕೃಪೆಯನ್ನು ಬೇಡಿದೆ. ಎರಡನೆಯದರಲ್ಲಿ ಸವಿತೃವಿನ ಓಜಸ್ಸನ್ನೂ, ಮಹಿಮೆಯನ್ನೂ ತಿಳಿಯಲಪೇಕ್ಷಿಸುವವರ, ಆರಾಧಿಸುವವರ ಮನೋವ್ಯಾಪಾರಗಳೆಲ್ಲವೂ ತನ್ಮುಖವಾಗುವಂತೆ ಪ್ರೇರಿಸಬೇಕೆಂದು ಪ್ರಾರ್ಥಿಸಿದೆ. ಈ ಎರಡನೆಯದೇ ಪ್ರಸಿದ್ಧರಾದ ಸಾವಿತ್ರೀ ಅಥವಾ ಗಾಯತ್ರೀ ಮಂತ್ರವು. ವೇದಾಭ್ಯಾಸದ ಮೊದಲಲ್ಲಿ ಅದನ್ನು ಉಚ್ಚರಿಸುವ ಪದ್ಧತಿ ಬಂದಿದೆ. ಸವಿತೃವು ವಿಧಿನಿಯಾಮಕನಾದುದರಿಂದ ಮಿತ್ರನೆನಿಸಿಕೊಳ್ಳುತ್ತಾನೆ (೫-೮೧-೪) ಸವಿತೃವು ಕೆಲವು ಸಲ 'ಭಗ' ನೆನ್ನಿಸಿಕೊಳ್ಳುತ್ತಾನೆ. (೫-೮೧-೧ ಮತ್ತು ೨, ೭-೩೮-೧ ಮತ್ತು ೬). ಅಥವಾ ಇದೂ ಒಂದು ಅವನಿಗನ್ವಯಿಸುವ ವಿಶೇಷಣವಿರಬಹುದು. 'ಭಗ' ಎಂಬ ಪದವು (ಮನುಷ್ಯರಿಗೆ ಶುಭ ಫಲಗಳನ್ನು ಕೊಡುವ ದೇವತೆ) ಅನೇಕವೇಳೆ ಸವಿತೃವಿಗೆ ಸೇರಿಸಲ್ಪಟ್ಟು 'ಸವಿತಾ ಭಗಃ' ಎಂದು ಪ್ರಯೋಗಿಸಲ್ಪಟ್ಟಿದೆ. ಇತರ ಸ್ಥಳಗಳಲ್ಲಿ, ಸವಿತೃವಿಗೂ ಮಿತ್ರ ಪೂಷಣ ಮತ್ತು ಭಗರಿಗೂ ಭೇದ ಹೇಳಿದೆ. ಅನೇಕ ವಾಕ್ಯಗಳಲ್ಲಿ ಒಂದೇ ದೇವತೆಗೆ ಸವಿತೃ ಮತ್ತು ಸೂರ್ಯ ಎಂಬ ಎರಡು ಪದಗಳು ಉಪಯೋಗಿಸಲ್ಪಟ್ಟಿವೆ. ಸವಿತೃವು ತನ್ನ ತೇಜಸ್ಸನ್ನು ಮೇಲಕ್ಕೆ ಎತ್ತಿಹಿಡಿದು ಪ್ರಪಂಚಕ್ಕೆಲ್ಲಾ ಬೆಳಕನ್ನು ಉಂಟುಮಾಡುತ್ತಾನೆ; ಹೆಚ್ಚಾಗಿ ಪ್ರಕಾಶಿಸುತ್ತಾ ಸೂರ್ಯನು ಸ್ವರ್ಗ, ಭೂಮಿ ಮತ್ತು ಆಕಾಶಗಳನ್ನು ತನ್ನ ಕಿರಣಗಳಿಂದ ತುಂಬುತ್ತಾನೆ (೪-೧೪-೨). ಸೂರ್ಯನಿಗೆ ೭-೬೩-೧, ೨ ಮತ್ತು ೪ ನೆಯ ಋಕ್ಕುಗಳಲ್ಲಿ ಸವಿತೃವಿಗೆ ಸಲ್ಲುವ 'ಪ್ರಸವಿತೃ' ಎಂಬ ವಿಶೇಷಣವು ಉಪಯೋಗಿಸಲ್ಪಟ್ಟಿದೆ. ಅದೇ ಸೂಕ್ತದ ಮೂರನೆಯ ಮಂತ್ರದಲ್ಲಿ ಸವಿತೃವೇ ಸೂರ್ಯನೆಂದು ಹೇಳಿರುವಂತಿದೆ. ಮತ್ತೆ ಕೆಲವು ಕಡೆಯೂ (೧೦-೧೫೮-೧ ರಿಂದ ೪, ೧-೩೫-೧ ರಿಂದ ೧೧; ೧-೧೨೪-೧) ಇವರಿಬ್ಬರನ್ನೂ ಪ್ರತ್ಯೇಕಿಸುವುದೇ ದುಸ್ತರ. ಸವಿತೃವು ಸ್ವರ್ಗ ಮತ್ತು ಭೂಮಿಗಳ ಮಧ್ಯೆ ಚಲಿಸುತ್ತಾನೆ; ರೋಗವನ್ನು ಪರಿಹರಿಸುತ್ತಾನೆ; ಸೂರ್ಯನನ್ನು ಹೊರಡಿಸುತ್ತಾನೆ; (೧-೩೫-೯) ಈ ವಾಕ್ಯದಲ್ಲಿ ಸೂರ್ಯ ಸವಿತೃಗಳಿಗೆ ಭೇದವು ಸ್ಪಷ್ಟವಾಗಿ ಉಕ್ತವಾಗಿದೆ. ಸವಿತೃವು ಸೂರ್ಯನಿಗೆ ಮನುಷ್ಯರು ಪಾಪರಹಿತರೆಂದು ಹೇಳುತ್ತಾನೆ (೧-೧೨೩-೩) ಸೂರ್ಯನ ರಶ್ಮಿಗಳೊಡನೆ ಬೆರೆಯುತ್ತಾನೆ (೫-೮೧-೪) ಅಥವಾ ಸೂರ್ಯರಶ್ಮಿಗಳ ಜೊತೆ ಎಲ್ಲಿ ಪ್ರಕಾಶಿಸುತ್ತಾನೆ (೧-೧೩೯-೧; ೧೦-೧೮೧-೩ ನ್ನು ಹೋಲಿಸಿ; ೧-೧೫೭-೧; ೭-೩೫-೮ ಮತ್ತು ೧೦). ಸೂರ್ಯೋದಯಕಾಲದಲ್ಲಿ ಆರಾಧಕನನ್ನು ಪುನರುಜ್ಜೀವನಗೊಳಿಸುವಂತೆ, ಮಿತ್ರ, ಅರ್ಯಮ, ಭಗ ಇವರುಗಳಿಂದ ಯುಕ್ತನಾದ ಸವಿತೃವು ಪ್ರಾರ್ಥಿತನಾಗಿರುತ್ತಾನೆ (೭-೬೬-೪)

ಯಾಸ್ಕರ ಮತದಲ್ಲಿ ಸವಿತೃವು ಕತ್ತಲು ಪರಿಹರಿಸಲ್ಪಟ್ಟವೇಳೆ ಕಾಣಿಸಿಕೊಳ್ಳುತ್ತಾನೆ (ನಿ. ೧೨-೧೨). ಸಾಯಣರು (೫-೮೧-೪) ಉದಯಾತ್ಪೂರ್ವದಲ್ಲಿ ಸೂರ್ಯನಿಗೆ ಸವಿತೃವೆಂತಲೂ, ಉದಯ ಕಾಲದಿಂದ ಅಸ್ತಮಯ ಕಾಲದವರೆಗೂ ಸೂರ್ಯನೆಂತಲೂ ಹೆಸರೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ, ಸವಿತೃವು ಪ್ರಾಣಿಗಳನ್ನು ನಿದ್ರೆ ಹೋಗುವಂತೆ ಮಾಡುತ್ತಾನೆ (೪-೫೩-೬; ೭-೪೫-೧) ಎಂದಿರುವುದರಿಂದ, ಸವಿತೃವಿಗೆ ಸಾಯಂಕಾಲ ಮತ್ತು

ಪ್ರಾತಃಕಾಲಗಳೆರಡರೊಡನೆಯೂ ಸಂಬಂಧವಿರಬೇಕು. ಒಂದು ಸೂಕ್ತದಲ್ಲಿ (೨–೩೮) ಅಸ್ತಮಿಸುತ್ತಿರುವ ಸೂರ್ಯನೆಂದು ಹೊಗಳಲ್ಪಟ್ಟಿದಾನೆ; ಅಲ್ಲದೆ, ಸವಿತೃವಿನ ಪರವಾದ ಸೂಕ್ತಗಳೆಲ್ಲವೂ, ಸಾಯಂಕಾಲ ಕರ್ಮಗಳ ಅಥವಾ ಪ್ರಾತಃಕಾಲದ ಹವನಗಳಲ್ಲಿ ಉಪಯೋಗಿಸಬೇಕೆಂಬ ನಿಯಮವಿರುವಂತೆ ತೋರುತ್ತದೆ. ಅವನೇ ದ್ವಿಪಾದ ಮತ್ತು ಚತುಷ್ಪಾದ ಜಂತುಗಳೆಲ್ಲವನ್ನೂ ವಿಶ್ರಮಿಸಿಕೊಳ್ಳುವಂತೆ ಮಾಡಿ ಅನಂತರ ಎಚ್ಚರಗೊಳಿಸುತ್ತಾನೆ (೬–೭೧–೨; ೪–೫೩–೩ ಮತ್ತು ೭–೪೫–೧ನ್ನು ಹೋಲಿಸಿ). ತನ್ನ ಕುದುರೆಗಳನ್ನು ಬಿಚ್ಚುತ್ತಾನೆ; ಸಂಚರಿಸುತ್ತಿರುವವರನ್ನು ವಿಶ್ರಮಿಸಿಕೊಳ್ಳುವಂತೆ ಮಾಡುತ್ತಾನೆ; ಅವನ ಅಪ್ಪಣೆಯಾಯಿತೆಂದರೆ ರಾತ್ರಿಯಾಗುತ್ತದೆ; ನೆಯ್ಗೆಯವನು ತನ್ನ ಬಟ್ಟೆಯನ್ನು ಮಡಿಚುತ್ತಾನೆ. ಮತ್ತು ಕೆಲಸಗಾರನು ತನ್ನ ಅರ್ಧ ಮುಗಿದಿರುವ ಕೆಲಸವನ್ನು ಇಷ್ಟಕ್ಕೇ ನಿಲ್ಲಿಸುತ್ತಾನೆ (೨–೩೮–೩ ಮತ್ತು ೪), ಪೂರ್ವದಿಕ್ಕಿನಲ್ಲಿ ಅಗ್ನಿಯೂ, ದಕ್ಷಿಣದಲ್ಲಿ ಸೋಮನೂ ಇದಾರೆಂದು ಹೇಳುವಂತೆ, ಪಶ್ಚಿಮದಲ್ಲಿ ಸವಿತೃವು ಇದಾನೆಂದು ಹೇಳುವುದು ವಾಡಿಕೆಯಾಗಿದೆ (ಶ. ಬ್ರಾ. ೩–೨–೩–೧೮).

ಈ ಸವಿತೃ ಪದವು 'ಸೂ' ಧಾತುವಿನಿಂದ ಸಾಧಿತವಾದುದು. ಸವಿತೃ ದೇವತೆಯನ್ನು ಸ್ತುತಿಸುವಾಗ ಮಾತ್ರ ಈ ಧಾತು ನಾನಾ ರೂಪಗಳಲ್ಲಿ ಉಪಯೋಗಿಸಲ್ಪಟ್ಟಿದೆ. ಇದೇ ಅರ್ಥ ಬರಬೇಕಾದ ಸಂದರ್ಭಗಳಲ್ಲಿಯೂ ಕೂಡ, ಇತರ ದೇವತಾಕ ಮಂತ್ರಗಳಲ್ಲಿ ಬೇರೆ ಧಾತುಗಳು ಉಪಯೋಗಿಸಿರುವುದು ಕಂಡುಬರುತ್ತದೆ. ಪ್ರೋತ್ಸಾಹ, ಜಾಗೃತಿಗೊಳಿಸುವುದು, ಪುನುರುಜ್ಜೀವನಗೊಳಿಸುವುದು, ಈ ಅರ್ಥಗಳೇ ಈ ಧಾತುವಿಗೆ ವಿಶೇಷವಾಗಿ ಅಭಿಪ್ರೇತವಾಗಿವೆ. ಸವಿತೃವು ಚಲಿಸುವ ಪ್ರತಿ ವಸ್ತುವನ್ನೂ ಕಾರ್ಯತತ್ಪರರನ್ನಾಗಿ (ಪ್ರಾಸಾವೀತ್) ಮಾಡಿದ್ದಾನೆ (೧-೧೫೭-೧); (ಪ್ರಸವಸ್ಯ) ಚೇತನಕೊಡುವುದಕ್ಕೆ ನೀನೇ ಸಮರ್ಥನು (೫-೮೧-೫); ಸವಿತೃವು ನಿನಗೆ ಅಮರತ್ವವನ್ನು (ಅಸುವತ್) ಅನುಗ್ರಹಿಸಿದನು (೧-೧೧೦-೩); ಸವಿತೃವು ನಮ್ಮನ್ನು ಜಾಗೃತಿಗೊಳಿಸಲು (ಸವಾಯ) ಸನ್ನದ್ಧನಾಗಿದಾನೆ (೨-೩೮-೧); ಆಕಾಶದಿಂದ ದಿನಕ್ಕೆ ಮೂರುಸಲ ಇಷ್ಟವಾದ ವಸ್ತುಗಳನ್ನ (ಸೋಸವೀತಿ) ಕಳುಹಿಸುತ್ತಾನೆ (೩-೫೬-೬) ಎಲೈ ಸವಿತೃವೇ, ನೀನು ನಮ್ಮನ್ನು ಪಾಪರಹಿತರನ್ನಾಗಿ ಮಾಡು (ಸುವತಾತ್. ೪-೫೪-೩); ಸವಿತೃವಿನ ಬಲದಿಂದ (ಸವೇ), ಅದಿತಿಯ ವಿಷಯವಲ್ಲಿ ಪಾಪರಹಿತರಾದ ನಮಗೆ, ಸಕಲ ವರಗಳೂ ಲಬ್ಧವಾಗಲಿ (೫ ೮- , ದುಸ್ವಪ್ನಗಳನ್ನು ದೂರಮಾಡು (ಪರಾಸುವ), ಆಪತ್ತುಗಳನ್ನು ನಿವಾರಿಸು, ಒಳ್ಳೆಯದನ್ನು (ಆಸುವ) ಅನುಗ್ರಹಿಸು (೫-೮೨-೪ ಮತ್ತು ೫); ಸವಿತೃವು ರೋಗ (ಅಪಸಾವಿಶತ್) ನಿವಾರಣೆ ಮಾಡಲಿ (೧೦-೧೦೦-೮); ಐಶ್ವರ್ಯವನ್ನನುಗ್ರಹಿಸೆಂದು ಇದೇ ಧಾತುವಿನಿಂದಲೇ ಸವಿತೃವನ್ನು ಅನೇಕಕಡೆ ಪ್ರಾರ್ಥಿಸಿದೆ (೬-೫೬-೬; ಇತ್ಯಾದಿ). ಈ ರೀತಿ ಈ ಧಾತುವು ಸಂಪೂರ್ಣವಾಗಿ ಸವಿತೃವಿಗೇ ಮೀಸಲಾಗಿದೆಯೆಂದು ಹೇಳಬಹುದು. ಆದರೆ ಎರಡು ಮೂರು ಸಲ ಸೂರ್ಯನಿಗೂ ಉಪಯೋಗಿಸಿದೆ (೭-೬೩-೨ ಮತ್ತು ೪; ೧೦-೩೭-೪). ಉಷಸ್ಸಿನೊಡನೆ ೭-೭೭-೧ ರಲ್ಲಿಯೂ ವರುಣನಿಗೆ (೨-೨೮-೯) ರಲ್ಲಿಯೂ, ಆದಿತ್ಯರಿಗೆ ೮-೧೮-೧ ರಲ್ಲಿಯೂ ಮತ್ತು ಮಿತ್ರ, ಅರ್ಯಮ ಮತ್ತು ಸವಿತೃಗಳಿಗೆ ಒಟ್ಟಾಗಿ ೭ ೬೬ ೪ ರಲ್ಲಿಯೂ ಉಪಯೋಗಿಸಿದೆ. ಸವಿತೃವಿಗೇ ಈ ಧಾತು ಇಷ್ಟುಬಾರಿ ಉಪಯೋಗಿಸಿರುವುದರಿಂದ ಯಾಸ್ಕರು ಸವಿತೃವನ್ನು (ಸರ್ವಸ್ಯ ಪ್ರಸವಿತಾ, ನಿ. ೧೦-೩೧) "ಎಲ್ಲವನ್ನೂ ಉಜ್ಜೀವನಗೊಳಿಸುವವನು" ಎಂದಿದ್ದಾರೆ.

ಸವಿತೃ ಎಂಬ ಪದವು ಬರುವ ಸಂದರ್ಭಗಳಲ್ಲಿ ಬಹುಶಃ ಎಲ್ಲಾಕಡೆಗಳಲ್ಲಿಯೂ 'ದೇವ' ಎಂಬ ಪದದಿಂದ ಕೂಡಿಯೇ ಇದೆ. ಈ ಸ್ಥಳಗಳಲ್ಲೆಲ್ಲಾ 'ದೇವ' ಪದಕ್ಕೆ ವಿಶೇಷಾರ್ಥವೇನೂ ಇಲ್ಲದೆ, ಸಾಧಾರಣವಾಗಿ ದೇವತೆ ಎಂಬರ್ಥವೇ ತೋರುತ್ತದೆ. ಅದು ಹೇಗಾದರೂ ಇರಲಿ, ಎರಡು ವಾಕ್ಯಗಳಲ್ಲಂತೂ, ತ್ವಷ್ಟೃವಿಗೆ ವಿಶೇಷಣ ಪದವಾಗಿದೆ

(ದೇವಃ ತ್ವಷ್ಟಾ ಸವಿತಾ ವಿಶ್ವರೂಪಾ ೩-೫೫-೧೯ ; ೧೦-೧೦-೫) ಇಲ್ಲಿ ಈ ಪದಗಳನ್ನು ಹೀಗೆ ಜೋಡಿಸಿರುವುದನ್ನು ನೋಡಿದರೆ, ಸವಿತೃ ಮತ್ತು ತ್ವಷ್ಟೃಗಳು ಒಂದೇ ಎಂದಭಿಪ್ರಾಯವಾಗುತ್ತದೆ.

ಪ್ರಪಂಚದಲ್ಲಿ ಚೇತನವನ್ನುಂಟುಮಾಡುವ ಮತ್ತು ಚಲನ ಶಕ್ತಿಯನ್ನು ಕೊಡುವ, ಸೂರ್ಯನ ಒಂದು ಶಕ್ತಿಗೆ ಈ ಸವಿತೃ ಎಂಬ ಹೆಸರಿರಬಹುದು. ಆದರೆ ಸೂರ್ಯನಿಗೆ (ನಮಗೆ ಕಾಣುವ ಸೂರ್ಯಮಂಡಲಕ್ಕೆ ಹೋಲಿಸಿದರೆ, ಸವಿತೃವು ಬಾಹ್ಯೇಂದ್ರಿಯಗೋಚರನಾದ ದೇವತೆಯಲ್ಲವೆನ್ನಬಹುದು ಸೂರ್ಯನು ಈ ಸ್ಥೂಲವಾದ ಆಕಾಶದಲ್ಲಿ ಪರಿದೃಶ್ಯಮಾನ ವಾದ, ತೇಜಃಪುಂಜನಾದ ಮಂಡಲವೆಂತಲೂ, ಸವಿತೃವು ಮೂರ್ತಿಮತ್ತಾದ, ಆ ಸೂರ್ಯನ ದೈವೀಶಕ್ತಿಯೆಂತಲೂ ಋಗ್ವೇದದಿಂದ ತಿಳಿದುಬರುತ್ತದೆ.

ಕೆಲವರ ಪ್ರಕಾರ, ಚೇತನಗೊಳಿಸುವ ಶಕ್ತಿಯೇ ಸವಿತೃವು, ಸೂರ್ಯ ಮತ್ತು ಅವನ ಕ್ಲೃಪ್ತವಾದ ಸಂಚಾರ ಇತ್ಯಾದಿಗಳೆಲ್ಲ ಅಪ್ರಧಾನವಾದ ಅಂಶಗಳು ಸವಿತೃವಿನ ವಿಸ್ತಾರವಾದ ವಿವರಣೆಗಾಗಿ ಗಾಯತ್ರೀಮಂತ್ರದ ವಿಶೇಷ ವಿಷಯಗಳನ್ನು ನೋಡಿ (ಋ. ಸಂ. ಭಾಗ ೧೬).

(ಪೀಠಿಕೆ ಸಮಾಪ್ತವಾದುದು.)

॥ ಸಾಯಣಭಾಷ್ಯಂ ॥

**ಯುಂಜತೇ ಮನ ಇತಿ ಪಂಚರ್ಚಂ ನವಮಂ ಸೂಕ್ತಂ । ಅತ್ರೇಯಮನುಕ್ರಮಣಿಕಾ । ಯುಂಜತೇ ಪಂಚ ಶ್ಯಾವಾಶ್ವಃ ಸಾವಿತ್ರಂ ತು ಜಾಗತಮಿತಿ । ಶ್ಯಾವಾಶ್ವೋ ನಾಮಾತ್ರೇಯ ಋಷಿಃ । ಜಗತೀ ಛಂದಃ । ಸವಿತಾ ದೇವತಾ ॥ ಪೃಷ್ಠ್ಯಾಭಿಪ್ಲವಷಡಹಯೋಃ ಪ್ರಥಮೇಽಹನಿ ವೈಶ್ವದೇವಶಸ್ತ್ರೇ ಸಾವಿತ್ರನಿವಿದ್ಧಾನಮಿದಂ । ಸೂತ್ರಿತಂ ಚ । ಯುಂಜತೇ ಮನ ಇಹೇಹ ವ ಇತಿ ಚತಸ್ರಃ । ಆ. ೭-೫ । ಇತಿ ॥ ಆದ್ಯಾ ಗ್ರಾವಸ್ತೋತ್ರೇಽಪಿ । ಸೂತ್ರಿತಂ ಚ । ಯುಂಜತೇ ಮನ ಉತ ಯುಂಜತೇ ಧಿಯ ಆ ತೂ ನ ಇಂದ್ರ ಕ್ಷುಮಂತಂ । ಆ. ೫-೧೨ । ಇತಿ ॥**

ಅನುವಾದವು—**ಯುಂಜತೇ ಮನಃ** ಎಂಬ ಈ ಸೂಕ್ತವು. ಆರನೆಯ ಅನುವಾಕದಲ್ಲಿ ಒಂಭತ್ತನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ **ಯುಂಜತೇ ಪಂಚ ಶ್ಯಾವಾಶ್ವಃ ಸಾವಿತ್ರಂ ತು ಜಾಗತಂ** ಎಂದು ಹೇಳಿರುವುದು. ಈ ಸೂಕ್ತಕ್ಕೆ **ಶ್ಯಾವಾಶ್ವ ಆತ್ರೇಯ**ನೆಂಬುವನು ಋಷಿಯು ; ಸವಿತೃವು **ದೇವತೆಯು**; ಜಗತೀಛಂದಸ್ಸು. **ಪೃಷ್ಠ್ಯ** ಮತ್ತು **ಅಭಿಪ್ಲವಷಡಹ**ವೆಂಬ ಯಾಗಗಳ ಮೊದಲನೆಯ ದಿವಸ ವೈಶ್ವದೇವಶಸ್ತ್ರಮಂತ್ರಗಳನ್ನು ಪಠಿಸುವಾಗ ಈ ಸೂಕ್ತವನ್ನು ಸವಿತೃಸಂಬಂಧವಾದ ನಿವಿದ್ಧಾನಸೂಕ್ತವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಯುಂಜತೇ ಮನ ಇಹೇವ ವ ಇತಿ ಚತಸ್ರಃ** ಎಂಬ ಸೂತ್ರ ದಿಂದ (ಆ. ೭-೫) ವಿವೃತವಾಗಿರುವುದು. ಮತ್ತು ಸೋಮಾಭಿಷವಸಾಧನಗಳಾದ ಗ್ರಾವಗಳನ್ನು (ಕಲ್ಲುಗಳನ್ನು) ಸ್ತುತಿಸುವಾಗ ಈ ಸೂಕ್ತದ ಮೊದಲನೆಯ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಯುಂಜತೇ ಮನ ಉತ ಯುಂಜತೇ ಧಿಯ ಆ ತೂ ನ ಇಂದ್ರ ಕ್ಷುಮಂತಂ** ಎಂಬ ಸೂತ್ರದಿಂದ (ಆ. ೫-೧೨) ವಿವೃತ ವಾಗಿರುವುದು.

## ಸೂಕ್ತ—೮೧

ಮಂಡಲ— ೫ ॥ ಅನುವಾಕ— ೬ ॥ ಸೂಕ್ತ—೮೧ ॥

ಅಷ್ಟಕ—೪ ॥ ಅಧ್ಯಾಯ—೪ ॥ ವರ್ಗ—೨೪ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೫ ॥

ಋಷಿಃ— ಶ್ಯಾವಾಶ್ವ ಆತ್ರೇಯಃ ॥

ದೇವತಾ— ಸವಿತಾ ॥

ಛಂದಃ—ಜಗತೀ ॥

ಸಂಹಿತಾ

ಯುಂಜತೇ ಮನ ಉತ ಯುಂಜತೇ ಧಿಯೋ ವಿಪ್ರಾ ವಿಪ್ರಸ್ಯ ಬೃಹತೋ ವಿಪಶ್ಚಿತಃ ।
ವಿ ಹೋತ್ರಾ ದಧೇ ವಯುನಾವಿದೇಕ ಇನ್ಮಹೀ ದೇವಸ್ಯ ಸವಿತುಃ ಪರಿಷ್ಟುತಿಃ ॥ ೧ ॥

॥ ಪದಪಾಠಃ ॥

ಯುಂಜತೇ । ಮನಃ । ಉತ । ಯುಂಜತೇ । ಧಿಯಃ । ವಿಪ್ರಾಃ । ವಿಪ್ರಸ್ಯ । ಬೃಹತಃ । ವಿಪಃಽಚಿತಃ ।
ವಿ । ಹೋತ್ರಾಃ । ದಧೇ । ವಯುನಽವಿತ್ । ಏಕಃ । ಇತ್ । ಮಹೀ । ದೇವಸ್ಯ । ಸವಿತುಃ । ಪರಿಽಸ್ತುತಿಃ ॥

ಸಾಯಣಭಾಷ್ಯಂ ॥

ವಿಪ್ರಾ ಮೇಧಾವಿನ ಋತ್ವಿಗ್ಯಜಮಾನಾ ಮನಃ ಸ್ವೀಯಂ ಸರ್ವೇಷು ಕರ್ಮಸು ಯುಂಜತೇ । ಯೋಜಯಂತಿ । ಸವಿತ್ರನುಗ್ರಹಾಯ ಸಂಕಲ್ಪಂ ಕುರ್ವಂತೀತ್ಯರ್ಥಃ। ಉತಾಪಿ ಚ ಧಿಯಃ ಕರ್ಮಾಣ್ಯಪಿ ಯುಂಜತೇ । ಪ್ರಾಪ್ನುವಂತಿ । ಕಸ್ಯಾನುಜ್ಞಯೇತ್ಯುಚ್ಯತೇ । ವಿಪ್ರಸ್ಯ ಮೇಧಾವಿನೋ ಬೃಹತೋ ಮಹತೋ ವಿಪಶ್ಚಿತಃ ಸ್ತುತ್ಯಸ್ಯ ಜ್ಞಾನವತೋ ವಾ ಸವಿತುರನುಜ್ಞಯೇತಿ। ಸವಿತಾ ವೈ ಪ್ರಸವಾನಾಮೀಶ ಇತಿ ಹಿ ಶ್ರುತಿಃ । ಸ ಏವ ಸವಿತಾ ಹೋತ್ರಾಃ ಸಪ್ತ ಹೋತ್ರಕಾಣಾಮುಚಿತಾಃ ಕ್ರಿಯಾ ವಯುನಾವಿತ್ । ವಯುನಮಿತಿ ಪ್ರಜ್ಞಾನಾಮ । ತತ್ತದನುಷ್ಠಾನವಿಷಯಪ್ರಜ್ಞಾವೇತ್ತ್ರೈಕ ಇತ್ ಏಕ ಏವ ವಿ ದಧೇ । ಕರೋತಿ। ಪೃಥಕ್ ಪೃಥಗವಧಾರಯತಿ । ಕಿಂಚ ತಸ್ಯ ಸವಿತುರ್ದೇವಸ್ಯ ಪರಿಷ್ಟುತಿಃ ಸ್ತುತಿರ್ಮಹೀ ಮಹತ್ಯತಿಪ್ರಭೂತಾ । ಸ್ತುತ್ಯಗೋಚರೇತ್ಯರ್ಥಃ ॥

॥ ಪ್ರತಿಪದಾರ್ಥ ॥

**ವಿಪ್ರಾಃ**—ಮೇಧಾವಿಗಳಾದ ಋತ್ವಿಗ್ಯಜಮಾನರು | **ಮನಃ**—ತಮ್ಮ ಮನಸ್ಸನ್ನು | **ಯುಂಜತೇ**—ಕರ್ಮಗಳಲ್ಲೇ ಅನ್ವಯಿಸುತ್ತಾರೆ | **ಉತ**—ಮತ್ತು | **ಧಿಯಃ**—ತಮ್ಮ ಕರ್ಮಗಳನ್ನು | **ವಿಪ್ರಸ್ಯ**—ಮೇಧಾವಿಯೂ | **ಬೃಹತಃ**—ಮಹತ್ತ್ವರೂಪವುಳ್ಳವನೂ | **ವಿಪಶ್ಚಿತಃ**—ಪ್ರಾಜ್ಞನೂ ಆದ ಸವಿತೃವಿನಲ್ಲಿ | **ಯುಂಜತೇ**—ಅನ್ವಯಿಸುತ್ತಾರೆ | **ವಯುನಾವಿತ್**—ಆಯಾ ಕರ್ಮಗಳ ಸ್ವರೂಪವನ್ನು ತಿಳಿದ ಸವಿತೃವು | **ಏಕ ಇತ್**—ತಾನೊಬ್ಬನೇ | **ಹೋತ್ರಾಃ**—ಸಪ್ತಹೋತೃಗಳನ್ನೂ (ಅಥವಾ ಅವರ ಕ್ರಿಯೆಗಳನ್ನು) | **ವಿ ದಧೇ**—ವೈಯಕ್ತಿಕವಾಗಿ ನಿರ್ವಹಿಸುವಂತೆ ಮಾಡುತ್ತಾನೆ | **ದೇವಸ್ಯ**—ದೇವತಾತ್ಮನಾದ | **ಸವಿತುಃ**—ಸವಿತೃವಿನ | **ಪರಿಷ್ಟುತಿಃ**—ಸ್ತುತಿಯು | **ಮಹೀ**—ಮಾಹಾತ್ಮ್ಯಪೂರಿತವಾದುದು.

॥ ಭಾವಾರ್ಥ ॥

ಮೇಧಾವಿಗಳಾದ ಋತ್ವಿಗ್ಯಜಮಾನರು ತಮ್ಮ ಮನಸ್ಸನ್ನು ಕರ್ಮಗಳಲ್ಲೇ ಅನ್ವಯಿಸುತ್ತಾರೆ. ಮತ್ತು ತಮ್ಮ ಕರ್ಮಗಳನ್ನು ಮೇಧಾವಿಯೂ, ಮಹತ್ಸ್ವರೂಪವುಳ್ಳವನೂ, ಪ್ರಾಜ್ಞನೂ ಆದ ಸವಿತೃವಿನಲ್ಲಿ ಅನ್ವಯಿಸುತ್ತಾರೆ. ಆಯಾ ಕರ್ಮಗಳ ಸ್ವರೂಪವನ್ನು ತಿಳಿದ ಸವಿತೃವು ತಾನೊಬ್ಬನೇ ಸಪ್ತಹೋತೃಗಳನ್ನೂ ವೈಯಕ್ತಿಕವಾಗಿ ಅವರವರ ಕರ್ಮಗಳನ್ನು ನಿರ್ವಹಿಸುವಂತೆ ಮಾಡುತ್ತಾನೆ. ದೇವತಾತ್ಮನಾದ ಸವಿತೃವಿನ ಸ್ತುತಿಯು ಮಾಹಾತ್ಮ್ಯಪೂರಿತವಾದುದು.

## English Translation.

The wise apply their minds: they perform sacred rites for the propitiation of the intelligent, great, adorable Savitri: he alone, knowing their functions, directs the priests: verily, great is the praise of the divine Savitri.

॥ ವಿಶೇಷವಿಷಯಗಳು ॥

ವಿಪ್ರಾಃ ಮನಃ ಯುಂಜತೇ | **ಮೇಧಾವಿನಃ ಋತ್ವಿಗ್ಯಜಮಾನಾಃ ಸ್ವೀಯಂ ಮನಃ ಸರ್ವೇಷು ಕರ್ಮಸು ಯೋಜಯಂತಿ | ಸವಿತ್ರನುಗ್ರಹಾಯ ಸಂಕಲ್ಪಂ ಕುರ್ವಂತೀತ್ಯರ್ಥಃ** | ಮೇಧಾವಿಗಳಾದ ಎಂದರೆ ಬುದ್ಧಿವಂತರಾದ ಋತ್ವಿಕ್ಕುಗಳೂ, ಯಜಮಾನನೂ ಯಜ್ಞಸಂಬಂಧವಾದ ಸಮಸ್ತ ಕರ್ಮಗಳಲ್ಲಿಯೂ ತಮ್ಮ ಮನಸ್ಸನ್ನು ಸೇರಿಸುತ್ತಾರೆ. ಎಂದರೆ ಸಮಸ್ತ ಕಾರ್ಯಕಲಾಪಗಳನ್ನೂ ಮನಃಪೂರ್ವಕವಾಗಿ ಸವಿತೃದೇವನಿಗೆ ಸಂತೋಷವುಂಟಾಗುವಂತೆ ನೆರವೇರಿಸುತ್ತಾರೆ ಎಂದಭಿಪ್ರಾಯವು.

ವಿಪ್ರಸ್ಯ ಬೃಹತಃ ವಿಪಶ್ಚಿತಃ—**ಮೇಧಾವಿನಃ ಮಹತಃ ಸ್ತುತ್ಯಸ್ಯ ಜ್ಞಾನವತೋ ವಾ ಸವಿತುಃ ಅನುಜ್ಞಯೇತಿ** | ಈ ಸವಿತೃದೇವನು ಬಹಳ ಬುದ್ಧಿವಂತನು, ಪ್ರಜ್ಞಾವಂತನು, ಸಕಲ ಕರ್ಮಗಳ ಸ್ವರೂಪವನ್ನು ತಿಳಿದಿರುವವನು, ಸಪ್ತಹೋತೃಗಳ ಕರ್ಮಗಳನ್ನು ಚೆನ್ನಾಗಿ ತಿಳಿದಿರುವವನು. ಈ ಸಪ್ತಹೋತೃಗಳೂ ಇತರ

ಋತ್ವಿಗ್ಯಜಮಾನರೂ ಮಾಡಬೇಕಾದ ಸಕಲ ಕರ್ಮಗಳನ್ನೂ ಈ ಸವಿತೃ ದೇವನೊಬ್ಬನೇ ಮಾಡಬಲ್ಲನು. ಇವನ ಶಕ್ತಿಯು ಅಸಾಧಾರಣವಾದುದು ಆದುದರಿಂದಲೇ **ಸವಿತಾ ವೈ ಪ್ರಸವಾನಾಮೀಶೇ** (ಐ. ಬ್ರಾ. ೭-೧೬) ಎಂಬ ಐತರೇಯ ಬ್ರಾಹ್ಮಣವಾಕ್ಯವು ಇದನ್ನು ಸಮರ್ಥಿಸುವುದು.

॥ ಸಂಹಿತಾಪಾಠಃ ॥

ವಿಶ್ವಾ ರೂಪಾಣಿ ಪ್ರತಿ ಮುಂಚತೇ ಕವಿಃ ಪ್ರಾಸಾವೀದ್ಭದ್ರಂ ದ್ವಿಪದೇ ಚತುಷ್ಪದೇ ।

ವಿ ನಾಕಮಖ್ಯತ್ಸವಿತಾ ವರೇಣ್ಯೋಽನು ಪ್ರಯಾಣಮುಷಸೋ ವಿ ರಾಜತಿ ॥

॥ ಪದಪಾಠಃ ॥

**ವಿಶ್ವಾ । ರೂಪಾಣಿ । ಪ್ರತಿ । ಮುಂಚತೇ । ಕವಿಃ । ಪ್ರ । ಅಸಾವೀತ್ । ಭದ್ರಂ । ದ್ವಿಽಪದೇ । ಚತುಃಽಪದೇ ।**

**ವಿ । ನಾಕಂ । ಅಖ್ಯತ್ । ಸವಿತಾ । ವರೇಣ್ಯಃ । ಅನು । ಪ್ರಽಯಾನಂ । ಉಷಸಃ । ವಿ । ರಾಜತಿ ॥ ೨ ॥**

॥ ಸಾಯಣಭಾಷ್ಯಂ ॥

**ಹವಿರ್ಧಾನಪ್ರವರ್ತನೇ ರರಾಟ್ಯಾಮವನದ್ಧಾಯಾಂ ವಿಶ್ವಾ ರೂಪಾಣೀತ್ಯೇಷಾನುವಚನೀಯಾ । ಸೂತ್ರಿತಂ ಚ । ವಿಶ್ವಾ ರೂಪಾಣಿ ಪ್ರತಿ ಮುಂಚತೇ ಕವಿರಿತಿ ವ್ಯವಸ್ತಾಯಾಂ । ಆ. ೪-೯ । ಇತಿ ॥**

**ಕವಿರ್ಮೇಧಾವೀ ಸವಿತಾ ವಿಶ್ವಾ ಸರ್ವಾಣಿ ರೂಪಾಣ್ಯಾತ್ಮನಿ ಪ್ರತಿ ಮುಂಚತೇ । ಬಧ್ನಾತಿ । ಧಾರಯತಿ । ಕಿಂಚ ಭದ್ರಂ ಕಲ್ಯಾಣಂ ಗಮನಾದಿವಿಷಯಂ ಪ್ರಾಸಾವೀತ್ । ಅನುಜಾನಾತಿ । ಕಸ್ಮೈ । ದ್ವಿಪದೇ ಮನುಷ್ಯಾಯ ಚತುಷ್ಪದೇ ಗವಾಶ್ವಾದಿಕಾಯ । ಕಿಂಚ ಸವಿತಾ ಸರ್ವಸ್ಯ ಪ್ರೇರಕೋ ದೇವೋ ವರೇಣ್ಯೋ ವರಣೀಯಃ ಸನ್ ವ್ಯಖ್ಯತ್ । ಖ್ಯಾಪಯತಿ । ಪ್ರಕಾಶಯತಿ । ಕಿಂ । ನಾಕಂ । ನಾಸ್ಮಿನ್ನಕಂ ದುಃಖಮಸ್ತೀತಿ ನಾಕಃ ಸ್ವರ್ಗಃ । ಯಜಮಾನಾರ್ಥಂ ಸ್ವರ್ಗಂ ಪ್ರಕಾಶಯತೀತ್ಯರ್ಥಃ । ಸ ದೇವ ಉಷಸಃ ಪ್ರಯಾಣಮುದಯಮನು ವಿ ರಾಜತಿ । ಪ್ರಕಾಶತೇ । ಸವಿತುರುದಯಾತ್ಪೂರ್ವಂ ಹ್ಯುಷಾ ಉದೇತಿ ॥**

॥ ಪ್ರತಿಪದಾರ್ಥ ॥

**ಕವಿಃ**— ಮೇಧಾವಿಯಾದ ಸವಿತೃವು । **ವಿಶ್ವಾ**— ಸಮಸ್ತವಾದ । **ರೂಪಾಣಿ**— ರೂಪಗಳನ್ನೂ । **ಪ್ರತಿ ಮುಂಚತೇ** — ತನ್ನಲ್ಲೇ ಧರಿಸಿಕೊಳ್ಳುತ್ತಾನೆ । **ದ್ವಿಪದೇ** — ಎರಡು ಕಾಲುಳ್ಳ ಮಾನವಾದಿಗಳಿಗೂ । **ಚತುಷ್ಪದೇ**— ನಾಲ್ಕು ಕಾಲುಗಳುಳ್ಳ ಗವಾದಿಗಳಿಗೂ । **ಭದ್ರಂ**— ಕಲ್ಯಾಣವನ್ನು । **ಪ್ರಾಸಾವೀತ್**— ನಿರ್ಮಿಸಿದ್ದಾನೆ । **ವರೇಣ್ಯಃ**— ಅತ್ಯಂತ ಪೂಜ್ಯನಾದ । **ಸವಿತಾ**— ಸವಿತೃವು । **ನಾಕಂ**— ಸ್ವರ್ಗವನ್ನು ।

**ವಿ ಅಖ್ಯತ್**— ಪ್ರಕಾಶಿಸುವಂತೆ ಮಾಡಿದನು । **ಉಷಸಃ**—ಉಷೋದೇವಿಯ । **ಪ್ರಯಾಣಂ ಅನು**—ಉದಯದ ಮಾರ್ಗವನ್ನನುಸರಿಸಿ ಅದನ್ನು । **ವಿ ರಾಜತಿ**—ಪ್ರಕಾಶಿಸುವಂತೆ ಮಾಡುತ್ತಾನೆ ।

॥ ಭಾವಾರ್ಥ ॥

ಮೇಧಾವಿಯಾದ ಸವಿತೃವು ಸಮಸ್ತವಾದ ರೂಪಗಳನ್ನೂ ತನ್ನಲ್ಲೇ ಧರಿಸಿಕೊಳ್ಳುತ್ತಾನೆ. ಎರಡು ಕಾಲುಳ್ಳ ಮಾನವಾದಿಗಳಿಗೂ, ನಾಲ್ಕುಕಾಲುಳ್ಳ ಗವಾದಿಗಳಿಗೂ ಕಲ್ಯಾಣವನ್ನುಂಟುಮಾಡಿದ್ದಾನೆ. ಅತ್ಯಂತ ಪೂಜ್ಯನಾದ ಸವಿತೃವು ಸ್ವರ್ಗವನ್ನು ಪ್ರಕಾಶಿಸುವಂತೆ ಮಾಡಿದ್ದಾನೆ. ಉಷೋದೇವಿಯ ಉದಯದ ಮಾರ್ಗವನ್ನನುಸರಿಸಿ ಅದನ್ನು ಪ್ರಕಾಶಿಸುವಂತೆ ಮಾಡಿ ತಾನೂ ಪ್ರಕಾಶಿಸುತ್ತಾನೆ.

## English Translation.

The wise Savitri comprehends all forms (in himself): he has engendered what is good for biped and quadruped: the adorable Savitri has illumed the heaven, and shines in sequence to the passage of the Dawn.

॥ ವಿಶೇಷವಿಷಯಗಳು ॥

ಹವಿರ್ಧಾನಪ್ರವರ್ತನವೆಂಬ ಸೋಮಾನಯನಕ್ಕಾಗಿ ಇರುವ ಗಾಡಿಗಳನ್ನು ತರುವಾಗ **ವಿಶ್ವಾ ರೂಪಾಣಿ** ಎಂಬ ಈ ಋಕ್ಕನ್ನು ಅನುವಚಸೀಯಾ ಋಕ್ಕನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ವಿಶ್ವಾರೂಪಾಣಿ ಪ್ರತಿ ಮುಂಚತೇ ಕವಿರಿತಿ ವ್ಯವಸ್ತಾಯೋಂ** ಎಂಬ ಸೂತ್ರದಿಂದ (ಆ. ೪-೯) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಯಸ್ಯ ಪ್ರಯಾಣಮನ್ವನ್ಯ ಇದ್ಯಯುರ್ದೇವಾ ದೇವಸ್ಯ ಮಹಿಮಾನ-
ಮೋಜಸಾ।
ಯಃ ಪಾರ್ಥಿವಾನಿ ವಿಮಮೇ ಸ ಏತಶೋ ರಜಾಂಸಿ ದೇವಃ ಸವಿತಾ
ಮಹಿತ್ವನಾ ॥ ೩ ॥

॥ ಪದಪಾಠಃ ॥

ಯಸ್ಯ । ಪ್ರಯಾನಂ । ಅನು । ಅನ್ಯೇ । ಇತ್ । ಯಯುಃ । ದೇವಾಃ । ದೇವಸ್ಯ । ಮಹಿಮಾನಂ ।
ಓಜಸಾ ।
ಯಃ । ಪಾರ್ಥಿವಾನಿ । ವಿಮಮೇ । ಸಃ । ಏತಶಃ । ರಜಾಂಸಿ । ದೇವಃ । ಸವಿತಾ । ಮಹಿತ್ವನಾ ॥ ೪॥

॥ ಸಾಯಣಭಾಷ್ಯಂ ॥

**ಅನ್ಯ ಇದ್ದೇವಾ ಅನ್ಯೇಽಪ್ಯಗ್ನ್ಯಾದಯೋ ಯಸ್ಯ ದೇವಸ್ಯ ದ್ಯೋತಮಾನಸ್ಯ ಸವಿತುಃ ಪ್ರಯಾಣಮನು ಯಯುರ್ಗಚ್ಛಂತಿ ಪ್ರಾಪ್ನುವಂತಿ। ಕಿಂ ಮಹಿಮಾನಂ ಮಹತ್ತ್ವಂ। ಸವಿತುರುದಯಾಭಾವೇಽಗ್ನಿಹೋತ್ರಾದ್ಯನಿಷ್ಪತ್ತೇಸ್ತೇಷಾಂ ಹವಿಃಸ್ವತ್ವಾದ್ಯಭಾವಾತ್। ಓಜಸಾ ಬಲೇನ ಚ ಯುಕ್ತಾ ಭವಂತಿ। ಯಃ ಸವಿತಾ ಪಾರ್ಥಿವಾನಿ ರಜಾಂಸಿ ಪೃಥಿವ್ಯಾದಿಲೋಕಾನ್ಮಹಿತ್ವನಾ ಸ್ವಮಹತ್ತ್ವೇನ ವಿಮಮೇ ಪರಿಚ್ಛಿನತ್ತಿ ಸ ದೇವ ಏತಶ ಏತವರ್ಣಃ ಶುಭ್ರಃ ಶೋಭಮಾನಃ ಸನ್। ರಾಜತ ಇತಿ ಶೇಷಃ॥ ಯುವಶಾ ಶಾಕ್ಯನೋತನ। ಋಗ್ವೇ. ೧-೧೬೧-೭। ಇತ್ಯಾದಿವದೇತಶ ಇತ್ಯಾದಿಶಕಾರೋಪಜನಶ್ಛಾಂದಸಃ॥**

॥ ಪ್ರತಿಪದಾರ್ಥ ॥

**ದೇವಸ್ಯ**—ದೇವತಾತ್ಮನಾದ। **ಯಸ್ಯ**—ಯಾವ ಸವಿತೃವಿನ। **ಪ್ರಯಾಣಂ ಅನು**—ಸಂಚಾರ ಮಾರ್ಗವನ್ನೇ ಅನುಸರಿಸಿ। **ಅನ್ಯೇ ಇತ್ ದೇವಾಃ**—ಇತರ ದೇವತೆಗಳೆಲ್ಲರೂ ಸಹ। **ಓಜಸಾ**—ಶಕ್ತಿಯೊಡಗೂಡಿದ। **ಮಹಿಮಾನಂ**—ಮಹತ್ವವನ್ನು। **ಯಯುಃ**—ಪಡೆಯುತ್ತಾರೆ। **ದೇವಃ**—ದೇವತಾತ್ಮನಾದ। **ಯಃ ಸವಿತಾ**—ಯಾವ ಸವಿತೃವು। **ಮಹಿತ್ವನಾ**—ತನ್ನ ಮಾಹಾತ್ಮ್ಯದಿಂದ। **ಪಾರ್ಥಿವಾನಿ ರಜಾಂಸಿ**—ಪೃಥಿವಿಯೇ ಮುಂತಾದ ಮೂರು ಲೋಕಗಳನ್ನೂ। **ವಿಮಮೇ**—ನಿರ್ಮಿಸಿ ವಿಭಾಗಮಾಡಿದನೋ। **ಸಃ**—ಅದೇ ಸವಿತೃವು। **ಏತಶಃ**—ಶುಭ್ರವರ್ಣನಾಗಿ ಪ್ರಕಾಶಿಸುತ್ತಿದ್ದಾನೆ.

॥ ಭಾವಾರ್ಥ ॥

ದೇವತಾತ್ಮನಾದ ಸವಿತೃವಿನ ಸಂಚಾರಮಾರ್ಗವನ್ನೇ ಅನುಸರಿಸಿ ಇತರ ದೇವತೆಗಳೆಲ್ಲರೂ ಸಹ ಶಕ್ತಿಯೊಡಗೂಡಿದ ಮಹತ್ವವನ್ನು ಪಡೆಯುತ್ತಾರೆ. ದೇವತಾತ್ಮನಾದ ಯಾವ ಸವಿತೃವು ತನ್ನ ಮಾಹಾತ್ಮ್ಯದಿಂದ ಪೃಥಿವಿಯೇ ಮುಂತಾದ ಮೂರು ಲೋಕಗಳನ್ನೂ ನಿರ್ಮಿಸಿ ವಿಭಾಗಮಾಡಿದನೋ ಅದೇ ಸವಿತೃವು ಶುಭ್ರವರ್ಣನಾಗಿ ಪ್ರಕಾಶಿಸುತ್ತಿದ್ದಾನೆ.

English Translation.

After the passage of which divine (being) the other deities proceed to (obtain) majesty with power; he who by his greatness has measured out the terrestrial regions, the divine Savitri, (is) resplendent.

॥ ಸಂಹಿತಾಪಾಠಃ ॥

ಉತ ಯಾಸಿ ಸವಿತಸ್ತ್ರೀಣಿ ರೋಚನೋತ ಸೂರ್ಯಸ್ಯ ರಶ್ಮಿಭಿಃ ಸಮುಚ್ಯಸಿ।
ಉತ ರಾತ್ರೀಮುಭಯತಃ ಪರೀಯಸ ಉತ ಮಿತ್ರೋ ಭವಸಿ ದೇವ
ಧರ್ಮಭಿಃ ॥ ೪ ॥

॥ ಪದಪಾಠಃ ॥

ಉತ । ಯಾಸಿ । ಸವಿತರಿತಿ । ತ್ರೀಣಿ । ರೋಚನಾ । ಉತ । ಸೂರ್ಯಸ್ಯ । ರಶ್ಮಿಽಭಿಃ । ಸಂ । ಉಚ್ಯಸಿ ।
ಉತ । ರಾತ್ರೀಂ । ಉಭಯತಃ । ಪರಿ । ಈಯಸೇ । ಉತ । ಮಿತ್ರಃ । ಭವಸಿ । ದೇವ । ಧರ್ಮಽಭಿಃ ॥

॥ ಸಾಯಣಭಾಷ್ಯಂ ॥

ಹೇ ಸವಿತರ್ದೇವ ಉತಾಪಿ ಚ ತ್ರೀಣಿ ರೋಚನಾ ರೋಚಮಾನಾನ್ ದ್ಯುಲೋಕಾನ್ಯಾಸಿ । ಗಚ್ಛಸಿ । ತಿಸ್ರೋ ದಿವಃ ಪೃಥಿವೀಃ । ಋಗ್ವೇ. ೪-೫೩-೫। ಇತ್ಯುಕ್ತಂ । ಉತಾಪಿ ಚ ಸೂರ್ಯಸ್ಯ ರಶ್ಮಿಭಿಃ ಸಮುಚ್ಯಸಿ । ಸಂಗಚ್ಛಸಿ ॥ ಉಚ ಸಮವಾಯೆ ಇತ್ಯಸ್ಯೇದಂ ರೂಪಂ ॥ ಉದಯಾತ್ಪೂರ್ವಭಾವೀ ಸವಿತೋದಯಾಸ್ತಮಯವರ್ತೀ ಸೂರ್ಯ ಇತಿ । ಉತಾಪಿ ಚ ರಾತ್ರೀಮುಭಯತ ಉಭಯಪಾರ್ಶ್ವೇ ಪರೀಯಸೇ । ಪರಿಗಚ್ಛಸಿ । ಉತಾಪಿ ಚ ಹೇ ದೇವ ಸವಿತಸ್ತ್ವಂ ಧರ್ಮಭಿರ್ಜಗದ್ಧಾರಕೈಃ ಕರ್ಮಭಿ-ರ್ಮಿತ್ರೋ ಭವಸಿ । ಮಿತ್ರಾಖ್ಯೋ ದೇವೋ ಭವಸಿ । ಅಥವಾ ಪ್ರಕಾಶಾದಿಪ್ರದಾನೇನ ಸಖಾ ಭವಸಿ ಸರ್ವಜಗತಾಂ ॥

॥ ಪ್ರತಿಪದಾರ್ಥ ॥

**ಉತ**—ಅಲ್ಲದೇ । **ಸವಿತಃ**—ಎಲೈ ಸವಿತೃದೇವನೇ । **ತ್ರೀಣಿ ರೋಚನಾ** — ಪ್ರಕಾಶಮಾನಗಳಾದ ಮೂರು ಲೋಕಗಳನ್ನೂ । **ಯಾಸಿ** — ಸಂಚರಿಸುತ್ತೀಯೆ । **ಉತ** — ಮತ್ತು । **ಸೂರ್ಯಸ್ಯ**—ಸೂರ್ಯನ । **ರಶ್ಮಿಭಿಃ**—ಕಿರಣಗಳೊಂದಿಗೆ । **ಸಮುಚ್ಯಸಿ** - ಸೇರಿಕೊಳ್ಳುತ್ತೀಯೆ । **ಉತ**—ಮತ್ತು । **ರಾತ್ರೀಂ**—ರಾತ್ರಿಯನ್ನು । **ಉಭಯತಃ**—ಎರಡು ಪಾರ್ಶ್ವಗಳಲ್ಲೂ । **ಪರಿ ಈಯಸೇ** — ಸುತ್ತುವರಿದು ಸಂಚರಿಸುತ್ತೀಯೆ । **ಉತ**—ಇವೆಲ್ಲಕ್ಕಿಂತಲೂ ಅಧಿಕವಾಗಿ । **ದೇವ**—ದೇವತಾತ್ಮನಾದ ಎಲೈ ಸವಿತೃವೇ । **ಧರ್ಮಭಿಃ**—ಜಗದ್ಧಾರಕವಾದ ಕರ್ಮಗಳಿಂದ । **ಮಿತ್ರಃ**—ಮಿತ್ರರೂಪನಾಗಿ । **ಭವಸಿ**—ಆಗುತ್ತೀಯೆ.

॥ ಭಾವಾರ್ಥ ॥

ಎಲೈ ಸವಿತೃದೇವನೇ, ನೀನು ಪ್ರಕಾಶಮಾನಗಳಾದ ಮೂರು ಲೋಕಗಳನ್ನು ಸಂಚರಿಸುತ್ತೀಯೆ. ಸೂರ್ಯನ ಕಿರಣಗಳೊಂದಿಗೆ ಐಕ್ಯನಾಗುತ್ತೀಯೆ. ರಾತ್ರಿಯನ್ನು ಎರಡು ಪಾರ್ಶ್ವಗಳಲ್ಲೂ ಸುತ್ತುವರೆದು ಸಂಚರಿಸುತ್ತೀಯೆ. ಇವೆಲ್ಲಕ್ಕಿಂತಲೂ ಅಧಿಕವಾಗಿ, ನಿನ್ನ ಜಗದಾಧಾರಕವಾದ ಕರ್ಮಗಳಿಂದ ಮಿತ್ರರೂಪನಾಗಿ ಆಗುತ್ತೀಯೆ.

## English Translation.

Either you traverse, Savitri, the three regions, or combine with the rays of Surya; or you pass, between the night on either hand; or you divine Savitri, are Mitra, through your (benevolent) functions.

। ವಿಶೇಷವಿಷಯಗಳು ।

**ತ್ರೀಣಿ ರೋಚನೋತ ಸೂರ್ಯಸ್ಯ**—ಸೂರ್ಯನು ಮೂರು ಪ್ರಕಾರವಾದ ಅಂತರಿಕ್ಷ ಲೋಕಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡಿದ್ದಾನೆಂಬ ಋಕ್ಕನ್ನು ಭಾಷ್ಯಕಾರರು ಉದಾಹರಿಸಿದ್ದಾರೆ—

**ತ್ರಿರಂತರಿಕ್ಷಂ ಸವಿತಾ ಮಹಿತ್ವನಾ ತ್ರೀ ರಜಾಂಸಿ ಪರಿಭೂಸ್ತ್ರೀಣಿ ರೋಚನಾ ।**
**ತಿಸ್ರೋ ದಿವಃ ಪೃಥಿವೀಸ್ತಿಸ್ರ ಇನ್ವತಿ ತ್ರಿಭಿರ್ವ್ರತೈರಭಿ ನೋ ರಕ್ಷತಿ ತ್ಮನಾ ॥**

(ಋ. ಸಂ. ೪-೫೩-೫)

ಸವಿತೃವು ಮೂರು ವಿಧವಾದ ಅಂತರಿಕ್ಷ ಲೋಕಗಳನ್ನು, ಮೂರು ವಿಧವಾದ ಪೃಥಿವೀ ಲೋಕಗಳನ್ನೂ ತನ್ನಧೀನದಲ್ಲಿಟ್ಟುಕೊಂಡು ಅವುಗಳನ್ನು ಸ್ವಪ್ರೇರಣೆಯಿಂದ ಸಂರಕ್ಷಿಸುವನು ಎಂಬಭಿಪ್ರಾಯವು ಇಲ್ಲಿ ಸೂಚಿತವಾಗಿದೆ. ಅವುಗಳು ಯಾವುವೆಂದರೆ ವಾಯು, ವಿದ್ಯುತ್, ವರುಣ ಅಥವಾ ಅಗ್ನಿ, ವಾಯು, ಆದಿತ್ಯ ಎಂಬ ಲೋಕಗಳು ಅಂತರಿಕ್ಷಲೋಕದ ಅವಾಂತರಭೇದಗಳು. ಅದರಂತೆಯೇ ಇಂದ್ರ ಪ್ರಜಾಪತಿ, ಸತ್ಯ ಎಂಬ ಮೂರು ಲೋಕಗಳು ದ್ಯುಲೋಕದ ಅವಾಂತರಭೇದಗಳೂ; ಇದರಂತೆಯೇ ಪೃಥಿವೀ (ಭೂ) ಲೋಕಕ್ಕೆ ಮೂರು ಅವಾಂತರಭೇದಗಳಿರುವವು ಎಂದು ಭಾಷ್ಯಕಾರರು ವಿವರಿಸಿದ್ದಾರೆ.

। ಸಂಹಿತಾಪಾಠಃ ।

ಉತೇಶಿಷೇ ಪ್ರಸವಸ್ಯ ತ್ವಮೇಕ ಇದುತ ಪೂಷಾ ಭವಸಿ ದೇವ ಯಾಮಭಿಃ ।
ಉತೇದಂ ವಿಶ್ವಂ ಭುವನಂ ವಿ ರಾಜಸಿ ಶ್ಯಾವಾಶ್ವಸ್ತೇ ಸವಿತಃ ಸ್ತೋಮ-
ಮಾನಶೇ ॥ ೫ ॥

। ಪದಪಾಠಃ ।

ಉತ । ಈಶಿಷೇ । ಪ್ರ॒ಸವಸ್ಯ । ತ್ವಂ । ಏಕಃ । ಇತ್ । ಉತ । ಪೂಷಾ । ಭವಸಿ । ದೇವ । ಯಾಮ॑ಽಭಿಃ ।
ಉತ । ಇದಂ । ವಿಶ್ವಂ । ಭುವನಂ । ವಿ । ರಾಜಸಿ । ಶ್ಯಾವಽಅಶ್ವಃ । ತೇ । ಸವಿತರಿತಿ । ಸ್ತೋಮಂ ।
ಆನಶೇ ॥ ೫ ॥

। ಸಾಯಣಭಾಷ್ಯಂ ।

ಹೇ ಸವಿತಸ್ತ್ವಮೇಕ ಇತ್ ಏಕ ಏವ ಪ್ರಸವಸ್ಯ ಸರ್ವಕರ್ಮಾನುಜ್ಞಾಕರಣಸ್ಯೇಶಿಷೇ । ಸಮರ್ಥೋ ಭವಸಿ । ಯೇ ಲೌಕಿಕಂ ಗಮನಾದಿರೂಪಂ ವೈದಿಕಮಗ್ನಿಹೋತ್ರಾದಿರೂಪಂ ಕರ್ಮಾನುತಿಷ್ಠಂತಿ ತೇಷಾಂ ಸರ್ವೇಷಾಮನುಜ್ಞಾತುಮೇಕ ಏವ ಪ್ರಭವಸಿ । ಉತಾಪಿ ಚ ಪೂಷಾ ಪೋಷಕೋ ಭವಸಿ ಹೇ ದೇವ ಯಾಮಭಿರ್ಗಮನೈಃ । ಉತಾಪಿ ಚೇದಂ ವಿಶ್ವಂ ಭುವನಂ ಭೂತಜಾತಂ ವಿ ರಾಜಸಿ ।

**ಈಶಿಷೇ ಧಾರಯಿತುಂ । ಯಸ್ಮಾದೇವಂ ಮಹಾನುಭಾವಸ್ತಸ್ಮಾತ್ ಹೇ ಸವಿತಸ್ತೇ ತುಭ್ಯಂ ಶ್ಯಾವಾಶ್ವ ಋಷಿಃ ಸ್ತೋಮಂ ಸ್ತೋತ್ರಮಾನಶೇ । ವ್ಯಾಪ್ನೋತಿ । ಕರೋತೀತ್ಯೇವಮಾತ್ಮಾನಂ ಪರೋಕ್ಷತಯಾ ನಿರ್ದಿಶನ್ನಾಹ ॥**

ಪ್ರತಿಪದಾರ್ಥ

(ಎಲೈ ಸವಿತೃವೇ) **ತ್ವಂ**— ನೀನು । **ಏಕ ಇತ್**—ಒಬ್ಬನೇ । **ಪ್ರಸವಸ್ಯ**— ಉತ್ಪನ್ನವಾದ ಸಕಲ ಪ್ರಾಣಿಗಳಿಗೂ । **ಈಶಿಷೇ**—ಪ್ರಭುವಾಗಿದ್ದೀಯೆ । **ಉತ**— ಮತ್ತು **ದೇವ**— ಎಲೈ ಸವಿತೃವೇ । **ಯಾಮಭಿಃ**— ನಿನ್ನ ಸಂಚಾರಕಾರ್ಯಗಳಿಂದ । **ಪೂಷಾ** -ಪೂಷರೂಪದಲ್ಲಿ । **ಭವಸಿ**—ಆಗಿದ್ದೀಯೆ । **ಉತ**—ಅಲ್ಲದೇ । **ಇದಂ ವಿಶ್ವಂ ಭುವನಂ**—ಈ ಸಕಲ ಜಗತ್ತನ್ನೂ । **ವಿ ರಾಜಸಿ**—ಆಳುತ್ತೀಯೆ । **ಸವಿತಃ**— ಎಲೈ ಸವಿತೃದೇವನೇ । **ಶ್ಯಾವಾಶ್ವಃ**—ಶ್ಯಾವಾಶ್ವಋಷಿಯು । **ತೇ**—ನಿನ್ನನ್ನುದ್ದೇಶಿಸಿ । **ಸ್ತೋಮಂ**—ಈ ಸ್ತೋತ್ರವನ್ನು । **ಆನಶೇ** — ಅರ್ಪಿಸುತ್ತಾನೆ.

ಭಾವಾರ್ಥ

ಎಲೈ ಸವಿತೃವೇ, ಉತ್ಪನ್ನವಾದ ಸಕಲ ಪ್ರಾಣಿಗಳಿಗೂ ನೀನೊಬ್ಬನೇ ಪ್ರಭುವಾಗಿದ್ದೀಯೆ, ನಿನ್ನ ಸಂಚಾರ ಕಾರ್ಯಗಳಿಂದ ನೀನೇ ಪೂಷದೇವನೆನಿಸಿಕೊಳ್ಳುತ್ತೀಯೆ. ಸಕಲ ಜಗತ್ತಿಗೂ ನೀನೇ ಸಾರ್ವಭೌಮನಾಗಿ ಎಲ್ಲವನ್ನೂ ಆಳುತ್ತೀಯೆ. ಎಲೈ ಸವಿತೃದೇವನೇ, ಶ್ಯಾವಾಶ್ವಋಷಿಯು ನಿನ್ನನ್ನುದ್ದೇಶಿಸಿ ಈ ಸ್ತುತಿಯನ್ನರ್ಪಿಸುತ್ತಾನೆ.

## English Translation.

You alone rule over (the actions of) living beings: you are Pushan divine (Savitri), by your movements; you are sovereign over the whole world: Shyavashwa offers praise, Savitri, to you.

# ಎಂಭತ್ತೆರಡನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ತತ್ಸವಿತುರಿತಿ ನವರ್ಚಂ ದಶಮಂ ಸೂಕ್ತಂ ಶ್ಯಾವಾಶ್ವಸ್ಯಾರ್ಷಂ । ಅತ್ರೇಯಮನುಕ್ರಮಣಿಕಾ । ತತ್ಸವಿತುರ್ನವ ಗಾಯತ್ರಮಾದ್ಯಾನುಷ್ಟುಬಿತಿ । ಪ್ರಥಮಾನುಷ್ಟುಪ್ ಶಿಷ್ಟಾ ಗಾಯತ್ರ್ಯಃ । ಸಾವಿತ್ರಂ ತ್ವಿತ್ಯುಕ್ತತ್ವಾತ್ಸಾವಿತ್ರಂ ॥ ಅಗ್ನಿಷ್ಟೋಮೇ ವೈಶ್ವದೇವಶಸ್ತ್ರಸ್ಯಾದ್ಯಸ್ತೃಚಃ ಪ್ರತಿಪತ್ ಅದ್ಯಾ ನೋ ದೇವೇತ್ಯನುಚರಃ । ಸೂತ್ರಿತಂ ಚ । ತತ್ಸವಿತುರ್ವೃಣೀಮಹೇಽದ್ಯಾ ನೋ ದೇವ ಸವಿತರಿತಿ ವೈಶ್ವದೇವಸ್ಯ ಪ್ರತಿಪದನುಚರೌ । ಆ. ೫. ೧೮. । ಇತಿ ॥**

ಅನುವಾದವು—**ತತ್ಸವಿತುಃ** ಎಂಬ ಈ ಸೂಕ್ತವು ಆರನೆಯ ಅನುವಾಕದಲ್ಲಿ ಹತ್ತನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ **ತತ್ಸವಿತುರ್ನವ ಗಾಯತ್ರಮಾದ್ಯಾನುಷ್ಟುಪ್** ಎಂದು ಹೇಳಿರುವುದು. ಈ ಸೂಕ್ತಕ್ಕೆ ಶ್ಯಾವಾಶ್ವ ಆತ್ರೇಯಃ ಎಂಬುವನು ಋಷಿಯು, ಸವಿತೃವು ದೇವತೆಯು. ಈ ಸೂಕ್ತದ ಮೊದಲನೆಯ ಋಕ್ಕು ಅನುಷ್ಟುಪ್‌ಛಂದಸ್ಕವು ಉಳಿದ ಋಕ್ಕುಗಳು ಗಾಯತ್ರೀಛಂದಸ್ಕವು. ಅಗ್ನಿಷ್ಟೋಮಯಾಗದಲ್ಲಿ ವೈಶ್ವದೇವಶಸ್ತ್ರಮಂತ್ರಗಳಿಗಾ ಈ ಸೂಕ್ತದ ಮೊದಲನೆಯ ಮೂರುಋಕ್ಕುಗಳನ್ನು ಪ್ರತಿಪತ್ ತೃಚವನ್ನಾಗಿಯೂ **ಅದ್ಯಾ ನೋ ದೇವ** ಎಂದು ಮೊದಲಾಗುವ ಮೂರು ಋಕ್ಕುಗಳನ್ನು (ಈ ಸೂಕ್ತದ ೪-೬ ಋಕ್ಕುಗಳು) ಅನುಚರ ತೃಚವನ್ನಾಗಿಯೂ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ತತ್ಸವಿತುರ್ವೃಣೀಮಹೇಽದ್ಯಾ ನೋ ದೇವ ಸವಿತರಿತಿ ವೈಶ್ವದೇವಸ್ಯ ಪ್ರತಿಪದನುಚರೌ** ಎಂಬ ಸೂತ್ರದಿಂದ (ಆ. ೫-೧೮) ವಿವೃತವಾಗಿರುವುದು.

## ಸೂಕ್ತ—೮೨

ಮಂಡಲ—೫ ‖ ಅನುವಾಕ—೬ ‖ ಸೂಕ್ತ—೮೨ ‖
ಅಷ್ಟಕ—೪ ‖ ಅಧ್ಯಾಯ—೪ ‖ ವರ್ಗ—೨೫, ೨೬ ‖
‖ ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ‖
‖ ಋಷಿಃ—ಶ್ಯಾವಾಶ್ವ ಆತ್ರೇಯಃ ‖
‖ ದೇವತಾ—ಸವಿತಾ ‖
‖ ಛಂದಃ—೧ ಅನುಷ್ಟುಪ್ | ೨-೯. ಗಾಯತ್ರೀ ‖

‖ ಸಂಹಿತಾಪಾಠಃ ‖

ತತ್ಸವಿತುರ್ವೃಣೀಮಹೇ ವಯಂ ದೇವಸ್ಯ ಭೋಜನಂ |
ಶ್ರೇಷ್ಠಂ ಸರ್ವಧಾತಮಂ ತುರಂ ಭಗಸ್ಯ ಧೀಮಹಿ ‖ ೧ ‖

‖ ಪದಪಾಠಃ ‖

ತತ್ | ಸವಿತುಃ | ವೃಣೀಮಹೇ | ವಯಂ | ದೇವಸ್ಯ | ಭೋಜನಂ |
ಶ್ರೇಷ್ಠಂ | ಸರ್ವಽಧಾತಮಂ | ತುರಂ | ಭಗಸ್ಯ | ಧೀಮಹಿ ‖ ೧ ‖

‖ ಸಾಯಣಭಾಷ್ಯಂ ‖

**ತತ್ ಪ್ರಾಪ್ಯತ್ವೇನ ಪ್ರಸಿದ್ಧಂ ಭೋಜನಂ ಭೋಗ್ಯಂ ಧನಂ ವಯಂ ಸ್ತೋತಾರೋ ವೃಣೀಮಹೇ ಪ್ರಾರ್ಥಯಾಮಃ | ಕಸ್ಯ | ಧನಂ | ಸವಿತುಃ ಪ್ರೇರಕಸ್ಯ ದೇವಸ್ಯ ಸ್ವಭೂತಂ | ಲಬ್ಧ್ವಾ ಚ ಶ್ರೇಷ್ಠಂ ಪ್ರಶಸ್ಯಂ ಸರ್ವಧಾತಮಂ ಸರ್ವಧಾತೃತಮಂ | ಸರ್ವಭೋಗಪ್ರದಮಿತ್ಯರ್ಥಃ | ತುರಂ ಶತ್ರೂಣಾಂ ಹಿಂಸಕಂ | ಧನೇನ ಶತ್ರೂನ್ಹಂತುಂ ಶಕ್ಯತ್ವಾತ್ | ತಾದೃಶಂ ಧನಂ ಭಗಸ್ಯ ಭಜನೀಯಸ್ಯ ಸವಿತುರನು**

ಗ್ರಹಾದ್ಧೀಮಹಿ । ಧಾರಯಾಮ । ಉಪಭೋಗಂ ಕರವಾಮೇತ್ಯರ್ಥಃ । ಅಥವಾ ಧನಂ ವೃಣೀಮಹೇಽರ್ಥಿತ್ವಾಚ್ಚ ಲಭೇಮಹೀತಿ ॥

॥ ಪ್ರತಿಪದಾರ್ಥ ॥

**ದೇವಸ್ಯ**—ದೇವತಾತ್ಮನಾದ । **ಸವಿತುಃ**—ಸವಿತೃವಿನ । **ತತ್**—ಪ್ರಸಿದ್ಧವಾದುದೂ । **ಭೋಜನಂ**—ಭೋಗಕ್ಕೆ ಯೋಗ್ಯವಾದುದೂ ಆದ ಐಶ್ವರ್ಯವನ್ನು (ಪಡೆಯುವುದಕ್ಕಾಗಿ) । **ವಯಂ**—ನಾವು । **ವೃಣೀಮಹೇ**—ಅಪೇಕ್ಷಿಸಿ ಪ್ರಾರ್ಥಿಸುತ್ತೇವೆ । **ಭಗಸ್ಯ**—ಪೂಜ್ಯನಾದ ಭಗನ (ಸವಿತೃವಿನ) । **ಶ್ರೇಷ್ಠಂ**—ಅತ್ಯುತ್ತಮವಾದುದೂ । **ಸರ್ವಧಾತಮಂ**—ಅತಿಶಯವಾಗಿ ಭೋಗಕ್ಕೆ ಯೋಗ್ಯವಾದುದೂ । **ತುರಂ**—ಶತ್ರುಹಿಂಸಕವಾದುದೂ ಆದ ಧನವನ್ನು । **ಧೀಮಹಿ**—ನಾವು ಹೊಂದುವಂತಾಗಲಿ.

॥ ಭಾವಾರ್ಥ ॥

ದೇವತಾತ್ಮನಾದ ಸವಿತೃವಿನ ಪ್ರಸಿದ್ಧವಾದುದೂ, ಭೋಗಕ್ಕೆ ಯೋಗ್ಯವಾದುದೂ ಆದ ಐಶ್ವರ್ಯವನ್ನು ಪಡೆಯುವುದಕ್ಕಾಗಿ ನಾವು ಅಪೇಕ್ಷಿಸಿ ಪ್ರಾರ್ಥಿಸುತ್ತೇವೆ. ಪೂಜ್ಯನಾದ ಭಗನ ಅತ್ಯುತ್ತಮವಾದುದೂ, ಅತಿಶಯವಾಗಿ ಭೋಗಕ್ಕೆ ಯೋಗ್ಯವಾದುದೂ, ಶತ್ರುಹಿಂಸಕವಾದುದೂ ಆದ ಧನವನ್ನು ನಾವು ಹೊಂದುವಂತಾಗಲಿ.

English Translation.

We solicit of the divine Savitri enjoyable (wealth); may we receive from Bhaga that which is excellent, all-sustaining, destructive of foes.

ಅಸ್ಯ ಹಿ ಸ್ವಯಶಸ್ತರಂ ಸವಿತುಃ ಕಚ್ಚನ ಪ್ರಿಯಂ ।
ನ ಮಿನಂತಿ ಸ್ವರಾಜ್ಯಂ ॥ ೨ ॥

॥ ಪದಪಾಠಃ ॥

ಅಸ್ಯ । ಹಿ । ಸ್ವಯಶಃಽತರಂ । ಸವಿತುಃ । ಕತ್ । ಚನ । ಪ್ರಿಯಂ ।
ನ । ಮಿನಂತಿ । ಸ್ವಽರಾಜ್ಯಂ ॥ ೨ ॥

|| ಸಾಯಣಭಾಷ್ಯಂ ||

**ಅಸ್ಯ ಸವಿತುಃ ಸ್ವಯಶಸ್ತರಂ ಸ್ವಯಮಸಾಧಾರಣಂ ಯಶೋ ಯಸ್ಯಾತಿಶಯೇನ ಭವತಿ ತತ್ತಾದೃಶಂ ಪ್ರಿಯಂ ಸರ್ವೇಷಾಂ ಪ್ರಿಯಭೂತಂ ಸ್ವರಾಜ್ಯಂ ಸ್ವಯಮೇವ ರಾಜಮಾನತ್ವಮೈಶ್ವರ್ಯಂ ಕಚ್ಚನ ಕೇಚಿದಪ್ಯಸುರಾದಯೋ ನ ಮಿನಂತಿ । ನ ಹಿಂಸಂತಿ ||**

|| ಪ್ರತಿಪದಾರ್ಥ ||

**ಅಸ್ಯ**—ಪ್ರಸಿದ್ಧನಾದ । **ಸವಿತುಃ**—ಸವಿತೃದೇವನ । **ಸ್ವಯಶಸ್ತರಂ**—ತನ್ನ ಅಸಾಧಾರಣವಾದ ಯಶಸ್ಸಿಗೆ ಯಾವುದು ತಾನೇ ಕಾರಣವಾಗಿದೆಯೋ ಅಂತಹುದೂ । **ಪ್ರಿಯಂ**—ಲೋಕಕ್ಕೆಲ್ಲಾ ಪ್ರಿಯಕರವಾದುದೂ ಆದ । **ಸ್ವರಾಜ್ಯಂ**—ಸಾರ್ವಭೌಮತ್ವವನ್ನು । **ಕಚ್ಚನ**—ಯಾವ ವಿರೋಧಿಯೂ ಸಹ । **ನ ಮಿನಂತಿ**—ಹಿಂಸಿಸಲಾರನು.

|| ಭಾವಾರ್ಥ ||

ತನ್ನ ಮಹಿಮೆಯಿಂದಲೇ ಅಸಾಧಾರಣವಾದ ಯಶಸ್ಸಿಗೆ ಕಾರಣವಾಗಿರುವುದೂ, ಲೋಕಕ್ಕೆಲ್ಲಾ ಪ್ರಿಯಕರವಾದುದೂ ಆದ ಸವಿತೃವಿನ ಸಾರ್ವಭೌಮತ್ವವನ್ನೂ ಐಶ್ವರ್ಯವನ್ನೂ ಯಾವ ವಿರೋಧಿಯೂ ಹಿಂಸಿಸಲಾರನು.

## English Translation.

Nothing impairs the sovereignty of this Savitri, which is most especially renowned and beloved

|| ಸಂಹಿತಾಪಾಠಃ ||

ಸ ಹಿ ರತ್ನಾನಿ ದಾಶುಷೇ ಸುವಾತಿ ಸವಿತಾ ಭಗಃ ।

ತಂ ಭಾಗಂ ಚಿತ್ರಮೀಮಹೇ || ೩ ||

|| ಪದಪಾಠಃ ||

ಸಃ । ಹಿ । ರತ್ನಾನಿ । ದಾಶುಷೇ । ಸುವಾತಿ । ಸವಿತಾ । ಭಗಃ ।

ತಂ । ಭಾಗಂ । ಚಿತ್ರಂ । ಈಮಹೇ || ೩ ||

|| ಸಾಯಣಭಾಷ್ಯಂ ||

**ಸ ಹಿ ಸ ಖಲು ಸವಿತಾ ಭಗೋ ಭಜನೀಯೋ ದೇವೋ ದಾಶುಷೇ ಹವಿರ್ದಾತ್ರೇ ಮಹ್ಯಂ ರತ್ನಾನಿ ರಮಣೀಯಾನಿ ಧನಾನಿ ಸುವಾತಿ । ಪ್ರೇರಯತಿ । ಪ್ರಯಚ್ಛತಿ । ತಂ ದೇವಂ ಭಾಗಂ ಭಜನೀಯಂ ಚಿತ್ರಂ ಚಾಯನೀಯಂ ಧನಮೀಮಹೇ । ಯಾಚಾಮಹೇ ||**

|| ಪ್ರತಿಪದಾರ್ಥ ||

**ಭಗಃ**—ಪೂಜ್ಯನಾದ | **ಸ ಹಿ ಸವಿತಾ**—ಅದೇ ಸವಿತೃದೇವನು | **ದಾಶುಷೇ**—ಹವಿರ್ದಾತನಾದ ಯಜಮಾನನಿಗೆ | **ರತ್ನಾನಿ**—ರಮಣೀಯವಾದ ಧನಗಳನ್ನು | **ಸುವಾತಿ**—ಕೊಡುತ್ತಾನೆ | **ಚಿತ್ರಂ**—ಆಕರ್ಷಕವಾದ | **ತಂ ಭಾಗಂ**—ಆ ಐಶ್ವರ್ಯದಲ್ಲಿ ಒಂದು ಭಾಗವನ್ನು (ಆ ಪ್ರಶಸ್ಯವಾದ ಐಶ್ವರ್ಯವನ್ನು) | **ಈಮಹೇ**—ನಾವು ಅಪೇಕ್ಷಿಸಿ ಪ್ರಾರ್ಥಿಸುತ್ತೇವೆ

|| ಭಾವಾರ್ಥ ||

ಪೂಜ್ಯನಾದ ಸವಿತೃವು ಹವಿರ್ದಾತನಾದ ಯಜಮಾನನಿಗೆ ರಮಣೀಯವಾದ ಧನಗಳನ್ನು ಕೊಡುತ್ತಾನೆ. ಆಕರ್ಷಕವಾದುದೂ, ಪೂಜ್ಯವಾದುದೂ ಆದ ಆ ಐಶ್ವರ್ಯವನ್ನು ನಾವು ಅಪೇಕ್ಷಿಸಿ ಪ್ರಾರ್ಥಿಸುತ್ತೇವೆ.

English Translation.

That savitri, who is Bhaga, bestows precious treasnre on the donor of the offering: we solicit (of him) a valuable portion.

|| ಸಂಹಿತಾಪಾಠಃ ||

ಅದ್ಯಾ ನೋ ದೇವ ಸವಿತಃ ಪ್ರಜಾವತ್ಸಾವೀಃ ಸೌಭಗಂ |
ಪರಾ ದುಃಷ್ವಪ್ನ್ಯಂ ಸುವ || ೪ ||

|| ಪದಪಾಠಃ ||

ಅದ್ಯ | ನಃ | ದೇವ | ಸವಿತರಿತಿ | ಪ್ರಜಾಽವತ್ | ಸಾವೀಃ | ಸೌಭಗಂ |
ಪರಾ | ದುಃಽಸ್ವಪ್ನ್ಯಂ | ಸುವ || ೪ ||

|| ಸಾಯಣಭಾಷ್ಯಂ ||

ಅದ್ಯಾ ನ ಇತಿ ಚತುರ್ಥೀಪಂಚಮೀಭ್ಯಾಮನೋಜ್ಞಸ್ವಪ್ನದರ್ಶನೇ ಪ್ರತ್ಯೃಚಂ ಜುಹುಯಾತ್ | ಅದ್ಯಾ ನೋ ದೇವ ಸವಿತರಿತಿ ದ್ವಾಭ್ಯಾಂ | ಆ. ಗೃ. ೩-೬-೬ | ಇತಿ ಸೂತ್ರಿತಂ ||

ಹೇ ಸವಿತರ್ದೇವ ನೋಽಸ್ಮಭ್ಯಮದ್ಯಾಸ್ಮಿನ್ನ್ಯಾಗದಿನೇ ಪ್ರಜಾವತ್ಪುತ್ರಾದ್ಯುಪೇತಂ ಸೌಭಗಂ ಧನಂ ಸಾವೀಃ | ಪ್ರೇರಯ | ದುಃಷ್ವಪ್ನ್ಯಂ ದುಃಸ್ವಪ್ನಂ ದುಃಸ್ವಪ್ನವದ್ದುಃಖಕರಂ ದಾರಿದ್ರ್ಯಂ ಪರಾ ಸುವ ದೂರೇ ಪ್ರೇರಯ ||

॥ ಪ್ರತಿಪದಾರ್ಥ ॥

**ದೇವ**—ಪೂಜ್ಯನಾದ | **ಸವಿತಃ**—ಎಲೈ ಸವಿತೃದೇವನೇ | **ಅದ್ಯ**—ಈ ಯಾಗದಿನದಲ್ಲಿ | **ನಃ**—ನಮಗೆ | **ಪ್ರಜಾವತ್**—ಪುತ್ರಾದಿಗಳಿಂದ ಕೂಡಿದ | **ಸೌಭಗಂ**—ಧನವನ್ನು | **ಸಾವೀಃ**—ಒದಗಿಸಿಕೊಡು | **ದುಃಷ್ವಪ್ನ್ಯಂ**—ದುಃಸ್ವಪ್ನದಂತೆ ದುಃಖಕರವಾದ ದಾರಿದ್ರ್ಯಾದ್ಯುಪದ್ರವಗಳನ್ನು | **ಪರಾ ಸುವ**—ದೂರಕ್ಕೆ ಓಡಿಸು.

॥ ಭಾವಾರ್ಥ ॥

ಪೂಜ್ಯನಾದ ಎಲೈ ಸವಿತೃದೇವನೇ, ಈ ಯಾಗದಲ್ಲಿ ನಮಗೆ ಪುತ್ರಾದಿಗಳಿಂದ ಕೂಡಿದ ಧನವನ್ನು ಒದಗಿಸಿಕೊಡು. ದುಃಸ್ವಪ್ನದಂತೆ ದುಃಖಕರವಾದ ದಾರಿದ್ರ್ಯಾದ್ಯುಪದ್ರವಗಳನ್ನು ದೂರಕ್ಕೆ ಓಡಿಸು.

English Translation.

Grant us to-day, divine Savitri, affluence with progeny, and drive away evil dreams.

॥ ವಿಶೇಷವಿಷಯಗಳು ॥

ಕೆಟ್ಟಸ್ವಪ್ನ (ದುಃಸ್ವಪ್ನ) ವಾದಲ್ಲಿ ಅದರ ದೋಷಪರಿಹಾರಕ್ಕಾಗಿ **ಅದ್ಯಾ ನಃ** ಎಂಬ ಈ ಋಕ್ಕಿನಿಂದಲೂ **ವಿಶ್ವಾನಿ ದೇವ** ಎಂಬ ಇದರ ಮುಂದಿನ ಋಕ್ಕಿನಿಂದಲೂ ಆಜ್ಯದಿಂದ ಅಗ್ನಿಯಲ್ಲಿ ಹೋಮಮಾಡಬೇಕೆಂದು ಆಶ್ವಲಾಯನ ಗೃಹ್ಯಸೂತ್ರದ—**ಅದ್ಯಾ ನೋ ದೇವ ಸವಿತರಿತಿ ದ್ವಾಭ್ಯಾಂ** ಎಂಬ ಸೂತ್ರದಿಂದ (ಆ. ಗೃ. ೩-೬-೬) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ವಿಶ್ವಾನಿ ದೇವ ಸವಿತರ್ದುರಿತಾನಿ ಪರಾ ಸುವ |
ಯದ್ಭದ್ರಂ ತನ್ನ ಆ ಸುವ ॥ ೫ ॥

॥ ಪದಪಾಠಃ ॥

ವಿಶ್ವಾನಿ | ದೇವ | ಸವಿತಃ | ದುಃऽಇತಾನಿ | ಪರಾ | ಸುವ |
ಯತ್ | ಭದ್ರಂ | ತತ್ | ನಃ | ಆ | ಸುವ ॥ ೫ ॥

॥ ಸಾಯಣಭಾಷ್ಯಂ ॥

ಹೇ ಸವಿತರ್ದೇವ ತ್ವಂ ವಿಶ್ವಾನಿ ದುರಿತಾನಿ ಪರಾ ಸುವ | ಯದ್ಭದ್ರಂ ಪ್ರಜಾಪಶುಗೃಹಾದಿಕಂ ತನ್ನೋऽಸ್ಮಭ್ಯಮಾ ಸುವ | ಅಸ್ಮದಭಿಮುಖಂ ಪ್ರೇರಯ | ಪ್ರಜಾ ವೈ ಭದ್ರಂ ಪಶವೋ ಭದ್ರಂ ಗೃಹಂ ಭದ್ರಮಿತಿ ಹಿ ಶ್ರುತಿಃ ॥

॥ ಪ್ರತಿಪದಾರ್ಥ ॥

**ದೇವ**—ಪೂಜ್ಯನಾದ । **ಸವಿತಃ**—ಎಲೈ ಸವಿತೃವೇ । **ವಿಶ್ವಾನಿ**—ಸಮಸ್ತವಾದ । **ದುರಿತಾನಿ**—ಪಾಪಗಳನ್ನೂ (ದೌರ್ಭಾಗ್ಯಗಳನ್ನೂ) । **ಪರಾ ಸುವ**—ದೂರಕ್ಕೆ ಓಡಿಸಿ ನಾಶಮಾಡು । **ನಃ**—ನಮಗೆ । **ಯತ್**—ಯಾವುದು । **ಭದ್ರಂ**—ಮಂಗಳಕರವೋ । **ತತ್**—ಅದನ್ನು । **ಆ ಸುವ**—ಒದಗಿಸಿಕೊಡು.

॥ ಭಾವಾರ್ಥ ॥

ಪೂಜ್ಯನಾದ ಎಲೈ ಸವಿತೃವೇ, ನಮ್ಮ ಸಮಸ್ತವಾದ ಪಾಪಗಳನ್ನೂ, ದೌರ್ಭಾಗ್ಯಗಳನ್ನೂ ದೂರಕ್ಕೆ ಓಡಿಸಿ ನಾಶಮಾಡು. ನಮಗೆ ಯಾವುದು ಮಂಗಳಕರವೋ ಅದನ್ನು ಒದಗಿಸಿಕೊಡು.

## English Translation.

Remove from us, divine Savitri, all misfortunes: bestow upon us that which is good.

॥ ಸಂಹಿತಾಪಾಠಃ ॥

ಅನಾಗಸೋ ಅದಿತಯೇ ದೇವಸ್ಯ ಸವಿತುಃ ಸವೇ ।
ವಿಶ್ವಾ ವಾಮಾನಿ ಧೀಮಹಿ ॥ ೬ ॥

॥ ಪದಪಾಠಃ ॥

ಅನಾಗಸಃ । ಅದಿತಯೇ । ದೇವಸ್ಯ । ಸವಿತುಃ । ಸವೇ ।
ವಿಶ್ವಾ । ವಾಮಾನಿ । ಧೀಮಹಿ ॥ ೬ ॥

॥ ಸಾಯಣಭಾಷ್ಯಂ ॥

ವಯಮನುಷ್ಠಾತಾರಃ ಸವಿತುಃ ಪ್ರೇರಕಸ್ಯ ದೇವಸ್ಯ ಸವೇಽನುಜ್ಞಾಯಾಂ ಸತ್ಯಾಮದಿತಯೇಽಖಂಡನೀಯಾಯೈ ದೇವ್ಯೈ ಭೂಮ್ಯಾ ಅನಾಗಸಃ ಸ್ಯಾಮ । ಅನಪರಾಧಿನೋ ಭವೇಮ । ಭೂಮ್ಯಾಂ ಹಿ ಪಾಪಾಃ ಸಂಭವಂತಿ । ಅಪಗತೇಷ್ವಾಗಃಸು ವಿಶ್ವಾ ಸರ್ವಾಣಿ ವಾಮಾನಿ ವನನೀಯಾನಿ ಧನಾನಿ ಧೀಮಹಿ । ಧಾರಯಾಮ ॥

॥ ಪ್ರತಿಪದಾರ್ಥ ॥

**ದೇವಸ್ಯ**—ದೇವತಾತ್ಮನಾದ | **ಸವಿತುಃ**—ಸವಿತೃವಿನ | **ಸವೇ**—ಆಜ್ಞಾಪಾಲಕರಾಗಿದ್ದು | (**ವಯಂ**—ನಾವು) | **ಅದಿತಯೇ**—ಅದಿತಿದೇವಿಯ ವಿಷಯದಲ್ಲಿ | **ಅನಾಗಸಃ**—ಪಾಪರಹಿತರಾಗಿರೋಣ | **ವಿಶ್ವಾ**—ಸಮಸ್ತವಾದ | **ವಾಮಾನಿ**—ಅಪೇಕ್ಷಿತಧನಗಳನ್ನೂ ಕೂಡ | **ಧೀಮಹಿ**—ಹೊಂದೋಣ.

॥ ಭಾವಾರ್ಥ ॥

ನಾವು ದೇವತಾತ್ಮನಾದ ಸವಿತೃವಿನ ಆಜ್ಞಾಪಾಲಕರಾಗಿದ್ದು ಅದಿತಿದೇವಿಯ ವಿಷಯದಲ್ಲಿ ಪಾಪರಹಿತರಾಗಿರೋಣ. ಸಮಸ್ತವಾದ ಅಪೇಕ್ಷಿತಧನಗಳನ್ನೂ ಹೊಂದೋಣ.

## English Translation.

Let us be void of offence towards Aditi, according to the will of the divine Savitri: may we be possessed of all-desired (riches).

---

॥ ಸಂಹಿತಾಪಾಠಃ ॥

ಆ ವಿಶ್ವದೇವಂ ಸತ್ಪತಿಂ ಸೂಕ್ತೈರದ್ಯಾ ವೃಣೀಮಹೇ |

ಸತ್ಯಸವಂ ಸವಿತಾರಂ || ೭ ||

॥ ಪದಪಾಠಃ ॥

ಆ | ವಿಶ್ವऽದೇವಂ | ಸತ್ऽಪತಿಂ | ಸುऽಉಕ್ತೈಃ | ಅದ್ಯ | ವೃಣೀಮಹೇ |

ಸತ್ಯऽಸವಂ | ಸವಿತಾರಂ || ೭ ||

॥ ಸಾಯಣಭಾಷ್ಯಂ ॥

ಚಾತುರ್ಮಾಸ್ಯೇಷು ವೈಶ್ವದೇವೇ ಪರ್ವಣಿ ಸಾವಿತ್ರಸ್ಯ ದ್ವಾದಶಕಪಾಲಸ್ಯಾ ವಿಶ್ವದೇವಮಿತ್ಯನುವಾಕ್ಯಾ | ಸೂತ್ರಿತಂ ಚ | ಆ ವಿಶ್ವದೇವಂ ಸತ್ಪತಿಂ ವಾಮಮದ್ಯ ಸವಿತಃ | ಅ. ೨-೧೬ | ಇತಿ || ಪ್ರಾಯಣೀಯ ಏಷೈವ ಸವಿತುರನುವಾಕ್ಯಾ | ಸೂತ್ರಿತಂ ಚ | ಆ ವಿಶ್ವದೇವಂ ಸತ್ಪತಿಂ ಯ ಇಮಾ ವಿಶ್ವಾ ಜಾತಾನಿ | ಅ. ೪ ೩ | ಇತಿ || ದೇವಸುವಾಂ ಹವಿಃಷ್ವೇಷೈವ ಸವಿತುರನುವಾಕ್ಯಾ | ಸೂತ್ರಿತಂ ಚ | ಆ ವಿಶ್ವದೇವಂ ಸತ್ಪತಿಂ ನ ಪ್ರಮಿಯೇ ಸವಿತುರ್ದೈವ್ಯಸ್ಯ ತತ್ | ಅ. ೪-೧೧ | ಇತಿ ||

**ವಿಶ್ವದೇವಂ । ವಿಶ್ವೇ ದೇವಾ ಯಸ್ಯ ವಶೇ ಭವಂತಿ ತಂ ತಾದೃಶಂ । ತಂ ಹಿ ಸರ್ವಾತ್ಮತ್ವಾದಿಂದ್ರಂ ಮಿತ್ರಂ ವರುಣಮಗ್ನಿಮಾಹುರಿತ್ಯಾದಿಶ್ರುತೇರಿತರೇಷಾಂ ತದ್ವಿಭೂತಿತ್ವಾತ್ । ಸತ್ಪತಿಂ ಸತಾಮನುಷ್ಠಾ-ತೄಣಾಂ ಪಾಲಕಂ ಸತ್ಯಸವಂ ಸತ್ಯಾನುಜ್ಞಂ ಸವಿತಾರಂ ದೇವಮದ್ಯಾಸ್ಮಿನ್ಯಾಗದಿನೇ ಸೂಕ್ತೈರಾ ವೃಣೀ-ಮಹೇ । ಸಂಭಜಾಮಹೇ ॥**

॥ ಪ್ರತಿಪದಾರ್ಥ ॥

**ವಿಶ್ವದೇವಂ**— ಸಕಲ ದೇವತೆಗಳಲ್ಲೂ ಅಂತರ್ಯಾಮಿಯಾಗಿರುವವನೂ । **ಸತ್ಪತಿಂ**—ಸಜ್ಜನರ ಪಾಲಕನೂ **ಸತ್ಯಸವಂ**—ಸತ್ಯಾತ್ಮಕವಾದ ನಿಯಮನವುಳ್ಳವನೂ ಆದ । **ಸವಿತಾರಂ**--ಸವಿತೃದೇವನನ್ನು । **ಅದ್ಯ**— ಈ ಯಾಗದ ದಿನ । **ಸೂಕ್ತೈಃ**— ಉತ್ತಮವಾದ ಸ್ತುತಿಗಳಿಂದ । **ಆ ವೃಣೀಮಹೇ**— ಸ್ತುತಿಸಿ ಪೂಜಿಸುತ್ತೇವೆ.

॥ ಭಾವಾರ್ಥ ॥

ಸಕಲ ದೇವತೆಗಳಲ್ಲೂ ಅಂತರ್ಯಾಮಿಯಾಗಿರುವವನೂ, ಸಜ್ಜನರ ಪಾಲಕನೂ, ಸತ್ಯಾತ್ಮಕವಾದ ನಿಯಮನವುಳ್ಳವನೂ ಆದ ಸವಿತೃದೇವನನ್ನು ಈ ಯಾಗದ ದಿನ ಉತ್ತಮವಾದ ಸ್ತುತಿಗಳಿಂದ ಸ್ತುತಿಸಿ ಪೂಜಿಸುತ್ತೇವೆ.

## English Translation.

We glorify to-day with hymns Savitri, the protector of the good, the observer of truth, (identical with) all the gods.

॥ ವಿನಿಯೋಗಃ ॥

ಚಾತುರ್ಮಾಸ್ಯವೆಂಬ ಯಾಗದಲ್ಲಿ ವೈಶ್ವದೇವಪರ್ವದಲ್ಲಿ ಸವಿತೃದೇವತೆಯನ್ನುದ್ದೇಶಿಸಿ ಮಾಡುವ ದ್ವಾದಶಕಪಾಲಹೋಮದಲ್ಲಿ **ಆ ವಿಶ್ವದೇವಂ** ಎಂಬ ಈ ಋಕ್ಕನ್ನು ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಆ ವಿಶ್ವದೇವಂ ಸತ್ಪತಿಂ ವಾಮಮದ್ಯ ಸವಿತಃ** ಎಂಬ ಸೂತ್ರದಿಂದ (ಆ. ೨-೧೬) ವಿವೃತವಾಗಿರುವುದು. ಪ್ರಾಯಣೀಯೇಷ್ಟಿಯಲ್ಲಿಯೂ ಇದೇ ಋಕ್ಕನ್ನೇ ಸವಿತೃದೇವತೆಯನ್ನುದ್ದೇಶಿಸಿ ಮಾಡುವ ಹೋಮದಲ್ಲಿ ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ— **ಆ ವಿಶ್ವದೇವಂ ಸತ್ಪತಿಂ ಯು ಇವಾ ವಿಶ್ವಾ ಜಾತಾನಿ** ಎಂಬ ಸೂತ್ರದಿಂದ (ಆ. ೪-೩) ವಿವೃತವಾಗಿರುವುದು. ಮತ್ತು ದೇವಸುವ ಎಂಬ ಆಹುತಿಗಳಲ್ಲಿ ಈ ಋಕ್ಕನ್ನು ಸವಿತೃದೇವತೆಯನ್ನುದ್ದೇಶಿಸಿ ಮಾಡುವ ಹೋಮದಲ್ಲಿ ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ— **ಆ ವಿಶ್ವದೇವಂ ಸತ್ಪತಿಂ ನ ಪ್ರಮಿಯೇ ಸವಿತುರ್ದೈವ್ಯಸ್ಯ ತತ್** ಎಂಬ ಸೂತ್ರದಿಂದ (ಆ.೪-೧೧) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

**ಯ ಇಮೇ ಉಭೇ ಅಹನೀ ಪುರ ಏತ್ಯಪ್ರಯುಚ್ಛನ್ ।**
**ಸ್ವಾಧೀರ್ದೇವಃ ಸವಿತಾ ॥ ೮ ॥**

॥ ಪದಪಾಠಃ ॥

ಯಃ । ಇಮೇ ಇತಿ । ಉಭೇ ಇತಿ । ಅಹನೀ ಇತಿ । ಪುರಃ । ಏತಿ । ಅಪ್ರಽಯುಚ್ಛನ್ ।
ಸುಽಆಧೀಃ । ದೇವಃ । ಸವಿತಾ ॥ ೮ ॥

॥ ಸಾಯಣಭಾಷ್ಯಂ ॥

ಯಃ ಸವಿತಾ ದೇವಃ ಸ್ವಾಧೀಃ ಶೋಭನಾಧ್ಯಾನಃ ಸುಕರ್ಮಾ ವಾ ಸನ್ ಇಮೇ ಅಹನೀ ರಾತ್ರ್ಯಹನೀ ತಯೋಃ ಪುರಃ ಪುರಸ್ತಾದಪ್ರಯುಚ್ಛನ್ ಅಪ್ರಮಾದ್ಯನ್ನೇತಿ ಗಚ್ಛತಿ ತಮಾ ವೃಣೀಮಹ ಇತಿ ಸಂಬಂಧಃ ॥

॥ ಪ್ರತಿಪದಾರ್ಥ ॥

ಯಃ—ಯಾವ ಸವಿತೃದೇವನು । ಇಮೇ ಉಭೇ ಅಹನೀ—ಈ ಅಹೋರಾತ್ರಗಳೆರಡಕ್ಕೂ । ಪುರಃ—ಮುಂಭಾಗದಲ್ಲಿ (ಮಾರ್ಗದರ್ಶಕನಾಗಿ) । ಅಪ್ರಯುಚ್ಛನ್—ಬಹಳ ಜಾಗರೂಕತೆಯಿಂದ । ಏತಿ—ಸಂಚರಿಸುವನೋ (ಅಂತಹ) । ದೇವಃ—ದೇವತಾತ್ಮನಾದ । ಸವಿತಾ—ಸವಿತೃವು । ಸ್ವಾಧೀಃ—ಉತ್ತಮವಾದ ಧ್ಯಾನಕ್ಕೆ ವಿಷಯನಾಗಿದ್ದಾನೆ.

॥ ಭಾವಾರ್ಥ ॥

ಯಾವ ಸವಿತೃದೇವನು ಅಹೋರಾತ್ರಗಳೆರಡಕ್ಕೂ ಮಾರ್ಗದರ್ಶಕನಾಗಿ ಪ್ರಮಾದರಹಿತನಾಗಿಯೂ ಬಹಳ ಜಾಗರೂಕನಾಗಿಯೂ ಸಂಚರಿಸುವನೋ ಅದೇ ದೇವನು ಉತ್ತಮವಾದ ಧ್ಯಾನಕ್ಕೆ ವಿಷಯನಾಗಿದ್ದಾನೆ.

## English Translation.

The divine object of meditation, Savitri, who, ever vigilant, precedes both night and day.

---

॥ ಸಂಹಿತಾಪಾಠಃ ॥

ಯ ಇಮಾ ವಿಶ್ವಾ ಜಾತಾನ್ಯಾಶ್ರಾವಯತಿ ಶ್ಲೋಕೇನ ।
ಪ್ರ ಚ ಸುವಾತಿ ಸವಿತಾ ॥ ೯ ॥

॥ ಪದಪಾಠಃ ॥

ಯಃ । ಇಮಾ । ವಿಶ್ವಾ । ಜಾತಾನಿ । ಆಽಶ್ರಾವಯತಿ । ಶ್ಲೋಕೇನ ।
ಪ್ರ । ಚ । ಸುವಾತಿ । ಸವಿತಾ ॥ ೯ ॥

॥ ಸಾಯಣಭಾಷ್ಯಂ ॥

**ಪ್ರಾಯಣೀಯೇ ಯ ಇಮಾ ವಿಶ್ವೇತಿ ಸವಿತುರ್ಯಾಜ್ಯಾ । ಸೂತ್ರಿತಂ ಚ । ಯ ಇಮಾ ವಿಶ್ವಾ ಜಾತಾನಿ ಸುತ್ರಾವಾಣಂ ಪೃಥಿವೀಂ ದ್ಯಾಮನೇಹಸಂ । ಆ. ೪-೩। ಇತಿ ॥ ಅಶ್ವಮೇಧೇಽಶ್ವಮುತ್ಸೃಜ್ಯಾನುಸವನಂ ಸಾವಿತ್ರೀಷ್ಟಿಃ ಕಾರ್ಯಾ । ತಸ್ಯಾಮೇಷಾ ಮಾಧ್ಯಂದಿನೇ ಸವನೇಽನುವಾಕ್ಯಾ । ಸೂತ್ರಿತಂ ಚ । ಯ ಇಮಾ ವಿಶ್ವಾ ಜಾತಾನ್ಯಾ ದೇವೋ ಯಾತು ಸವಿತಾ ಸುರತ್ನಃ । ಆ. ೧೦-೬ । ಇತಿ ॥**

**ಯೋ ದೇವ ಇಮೇಮಾನಿ ವಿಶ್ವಾ ಸರ್ವಾಣಿ ಜಾತಾನ್ಯುತ್ಪನ್ನಾನ್ ಪ್ರಾಣಿನಃ । ಜಂಗಮಾನೀತ್ಯರ್ಥಃ । ತಾನ್ ಶ್ಲೋಕೇನ ಯಶಸಾಶ್ರಾವಯತಿ । ಸರ್ವೇಽಪ್ಯಸ್ಯ ಸ್ತುತಿಂ ಶೃಣ್ವಂತೀತ್ಯರ್ಥಃ । ಅಥವಾ ಗರ್ಜನಶಬ್ದೇನ ಸರ್ವಾಣೀಮಾನ್ಯುತ್ಪನ್ನಾನ್ಯಾಶ್ರಾವಯತಿ ವೃಷ್ಟ್ಯುನ್ಮುಖಃ ಸನ್ । ಕಿಂಚ ಸವಿತಾ ಪ್ರ ಸುವಾತಿ ಪ್ರೇರಯತಿ ತಂ ವೃಣೀಮಹ ಇತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಯಃ**—ಯಾವ । **ಸವಿತಾ**—ಸವಿತೃದೇವನು । **ವಿಶ್ವಾ**—ಸಮಸ್ತವಾದ । **ಇಮಾ ಜಾತಾನಿ**—ಪ್ರಾಣಿಗಳನ್ನೂ । **ಶ್ಲೋಕೇನ**—ತನ್ನ ಮಹಿಮೆಯಿಂದ । **ಆಶ್ರಾವಯತಿ**—ಪ್ರಕಾಶಪಡಿಸುವನೋ । **ಚ**—ಮತ್ತು । **ಪ್ರ ಸುವಾತಿ**—ಸಕಲ ಪ್ರಾಣಿಗಳಿಗೂ ಚೈತನ್ಯವನ್ನು ಉಂಟುಮಾಡುವನೋ (ಅಂತಹ ಸವಿತೃದೇವನನ್ನು ಪೂಜಿಸುತ್ತೇವೆ.)

॥ ಭಾವಾರ್ಥ ॥

ಯಾವ ಸವಿತೃದೇವನು ಸಕಲ ಪ್ರಾಣಿಗಳನ್ನೂ ತನ್ನ ಮಹಿಮೆಯಿಂದ ಪ್ರಕಾಶಪಡಿಸುವನೋ ಮತ್ತು ಸಕಲ ಪ್ರಾಣಿಗಳಿಗೂ ಚೈತನ್ಯವನ್ನುಂಟುಮಾಡುವನೋ, ಅಂತಹ ಸವಿತೃದೇವನನ್ನು ನಾವು ಪೂಜಿಸುತ್ತೇವೆ.

English Translation.

Savitri, who proclaims his glory to all these living beings, and gives them life.

॥ ವಿಶೇಷವಿಷಯಗಳು ॥

ಪ್ರಾಯಣೀಯೇಷ್ಟಿಯಲ್ಲಿ **ಯ ಇಮಾ ವಿಶ್ವಾ** ಎಂಬ ಈ ಋಕ್ಕನ್ನು ಸವಿತೃದೇವತೆಯನ್ನುದ್ದೇಶಿಸಿ ಮಾಡುವ ಹೋಮದಲ್ಲಿ ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **ಯ ಇಮಾ ವಿಶ್ವಾ ಜಾತಾನಿ ಸುತ್ರಾವಾಣಂ ಪೃಥಿವೀಂ ದ್ಯಾಮನೇಹಸಂ** ಎಂಬ ಸೂತ್ರದಿಂದ (ಆ. ೪-೩) ವಿವೃತವಾಗಿರುವುದು. ಮತ್ತು ಅಶ್ವಮೇಧಯಜ್ಞದಲ್ಲಿ ಅಶ್ವವನ್ನು ಸಂಚಾರಾರ್ಥವಾಗಿ ಬಿಟ್ಟನಂತರ ಸಾವಿತ್ರೀಷ್ಟಿಯೆಂಬ ಅನುಸವನವನ್ನು ಮಾಡಬೇಕು. ಆ ಇಷ್ಟಿಯಲ್ಲಿ ಮಾಧ್ಯಂದಿನ ಸವನಕಾಲದಲ್ಲಿ ಈ ಋಕ್ಕನ್ನು ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಯ ಇಮಾ ವಿಶ್ವಾ ಜಾತಾನ್ಯಾ ದೇವೋ ಯಾತು ಸವಿತಾ ಸುರತ್ನಃ** ಎಂಬ ಸೂತ್ರದಿಂದ (ಆ. ೧೦-೬) ವಿವೃತವಾಗಿರುವುದು.

# ಎಂಭತ್ತಮೂರನೆಯ ಸೂಕ್ತವು

## ಪೀಠಿಕೆ

### ಪರ್ಜನ್ಯದೇವತೆಯ ಸೂಕ್ಷ್ಮಪರಿಚಯ.

ಪರ್ಜನ್ಯದೇವತೆಯ ವಿಷಯವು ಋಗ್ವೇದದಲ್ಲಿ ಅನೇಕ ಋಕ್ಕುಗಳಲ್ಲಿ ಸೂಚಿತವಾಗಿದ್ದರೂ ಆ ದೇವತೆಯನ್ನು **ಮಾತ್ರ** ಸ್ತುತಿಸುವ ಸೂಕ್ತಗಳು ಮೂರೇ ಮೂರು. ಅವುಗಳಲ್ಲಿಯೂ ಪ್ರಕೃತವಿಷಯವಾದ ೮೩ ನೆಯ ಸೂಕ್ತವು **ಬಹಳ** ಮುಖ್ಯವಾದುದು. ಇದರಲ್ಲಿ ಒಟ್ಟು ಹತ್ತು ಋಕ್ಕುಗಳಿರುವವು. ಈ ಋಕ್ಕುಗಳಲ್ಲಿ ಪರ್ಜನ್ಯದೇವತೆಯ ಸ್ವರೂಪವು ಚೆನ್ನಾಗಿ ವಿವರಿಸಲ್ಪಟ್ಟಿರುವುದು. ಈ ಪರ್ಜನ್ಯದೇವತೆಯು ಯಾರು ಎಂಬ ವಿಷಯದಲ್ಲಿ ಯಾಸ್ಕರು—

**ಪರ್ಜನ್ಯಃ । ಪರ್ಜನ್ಯಸ್ತೃಪೇರಾದ್ಯಂತವಿಪರೀತಸ್ಯ ತರ್ಪಯಿತಾ ಜನ್ಯಃ ।**
**ಪರೋ ಜೇತಾ ವಾ । ಪರೋ ಜನಯಿತಾ ವಾ । ಪ್ರಾರ್ಜಯಿತಾ ವಾ ರಸಾನಾಂ ॥**

(ನಿ. ೧೦-೧೦)

ಎಂದು ನಿರ್ವಚನವನ್ನು ಹೇಳಿರುವರು. ಎಂದರೆ, ಪರ್ಜನ್ಯ ಶಬ್ದವು ತೃಪ ತೃಪ್ತೌ (ತೃಪ್ತಿಗೊಳಿಸು) ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಈ ಧಾತುವಿನ ಅಕ್ಷರಗಳನ್ನು ಹಿಂದುಮುಂದು ಮಾಡುವುದರಿಂದ ಮತ್ತು ಜನ್ಯ ಎಂಬ (ವಿಶೇಷಣ) ಶಬ್ದವನ್ನು ಸೇರಿಸುವುದರಿಂದ ಪರ್ಜನ್ಯ ಎಂದಾಗುವುದು. ಹೇಗೆಂದರೆ ತೃಪ ಎಂಬಲ್ಲಿ ಮೊದಲನೆಯ ಅಕ್ಷರದ ಋ (ರ್) ಕಾರವನ್ನು ಕೊನೆಯಲ್ಲಿ ಕೊನೆಯ ಅಕ್ಷರವಾದ ಪಕಾರವನ್ನು ಮೊದಲಲ್ಲಿಯೂ ಸೇರಿಸಿದರೆ ಪ+ರ್=ಪರ್ ಎಂದಾಗುವುದು. ಇದಕ್ಕೆ ಜನ್ಯ ಎಂಬುದನ್ನು ಸೇರಿಸಿದರೆ ಪ+ರ್=ಜನ್ಯ ಪರ್ಜನ್ಯ ಎಂದಾಗುವುದು. ಜನರಿಗೆ ಅತ್ಯಾವಶ್ಯಕವಾದ ಮತ್ತು ಆಹಾರಾದಿಗಳಿಗೆ ಸಾಧನವಾದ ವೃಷ್ಟಿ (ಮಳೆ) ಯನ್ನು ಸುರಿಸುವುದರಿಂದ **ಜನವನ್ನು ತೃಪ್ತಿಗೊಳಿಸುವ** ದೇವನೆಂದು ಪರ್ಜನ್ಯಶಬ್ದದ ಅವಯವಾರ್ಥವು. **ಅಥವಾ ಪರೋ ಜೇತಾ ವಾ—** ಉತ್ಕೃಷ್ಟವಾದ ಜಯಶಾಲಿಯು ಎಂದೂ ಅರ್ಥವಾಗಬಹುದು. **ಅಥವಾ ಪರೋ ಜನಯಿತಾ ವಾ**—ಅಥವಾ ಈ ದೇವನು ಮಳೆಯನ್ನು ಸುರಿಸುವುದರಿಂದ ಸಸ್ಯಾದಿಗಳನ್ನೂ, ಆಹಾರಾದಿಗಳನ್ನೂ, ಉತ್ಪತ್ತಿಮಾಡುವವನು ಎಂದೂ ಅರ್ಥವಾಗಬಹುದು. **ಅಥವಾ ಪ್ರಾರ್ಜಯಿತಾ ವಾ ರಸಾನಾಂ**—ರಸವೆಂದರೆ ಉದಕ. ವೃಷ್ಟಿಯ ಮೂಲಕ ಉದಕವನ್ನು ಜನರಿಗೆ ಒದಗಿಸುವವನಾದ್ದರಿಂದ ಈ ದೇವನಿಗೆ ಪರ್ಜನ್ಯನೆಂದು ಹೆಸರು ಎಂದು ಪರ್ಜನ್ಯ ಶಬ್ದದ ರೂಪನಿಷ್ಪತ್ತಿಯನ್ನು ಯಾಸ್ಕರು ವಿವರಿಸಿದ್ದಾರೆ. ಈ ಅರ್ಥವನ್ನು ವಿವರಿಸುವುದಕ್ಕಾಗಿ ಇದೇ ಸೂಕ್ತದ ಎರಡನೆಯ ಋಕ್ಕನ್ನು ಉದಾಹರಣೆಯಾಗಿ ಕೊಟ್ಟು ಅದರ ನಿರ್ವಚನವನ್ನೂ ಹೇಳಿದ್ದಾರೆ. ಅದನ್ನು ನಾವು ಆ ಋಕ್ಕಿನ ವಿಶೇಷ ವಿಷಯಗಳಲ್ಲಿ ವಿವರಿಸಿದ್ದೇವೆ. ಮುಖ್ಯಾಭಿಪ್ರಾಯವೇನೆಂದರೆ ಗುಡುಗು, ಸಿಡಿಲು, ಮಿಂಚು, ಬಿರುಗಾಳಿ ಇವುಗಳಿಂದ ಕೂಡಿದ ವೃಷ್ಟಿಗೆ ಕಾರಣನಾದ ದೇವನೇ ಪರ್ಜನ್ಯನೆಂದು ಈ ಸೂಕ್ತದಲ್ಲಿ ಸ್ತುತಿಸಲಾಗಿದೆ.

ಈ ಪರ್ಜನ್ಯನು ಈ ಸೂಕ್ತದಲ್ಲಲ್ಲದೆ ಏಳನೆಯ ಮಂಡಲದ ೧೦೧ ಮತ್ತು ೧೦೨ ನೆಯ ಸೂಕ್ತಗಳಲ್ಲಿಯೂ ಸ್ತುತಿಸಲ್ಪಟ್ಟಿದ್ದಾನೆ. ೧೦೧ ರಲ್ಲಿ ಆರು ಋಕ್ಕುಗಳೂ ೧೦೨ ರಲ್ಲಿ ಮೂರು ಋಕ್ಕುಗಳೂ ಮಾತ್ರ ಇವೆ. **ಆದರೆ ಪ್ರಕೃತಸೂಕ್ತದಲ್ಲಿರುವಂತೆ** ಪರ್ಜನ್ಯನ ಸ್ವರೂಪ, ಗುಣ ಮೊದಲಾದವು ಅಷ್ಟು ವಿಶದವಾಗಿ **ವಿವೃತವಾಗಿಲ್ಲ. ೭ ನೆಯ**

ಮಂಡಲದ ೧೦೩ನೇ ಸೂಕ್ತಕ್ಕೆ ಮಂಡೂಕಾ; (ಕಪ್ಪೆಗಳು) ದೇವತೆಯಾಗಿದ್ದರೂ ವಿಕಲ್ಪದಿಂದ (ಅರ್ಥ) ಈ ಸೂಕ್ತವೂ ಪರ್ಜನ್ಯಪರವಾಗಿಯೇ ಇರುವುದು.

ಪರ್ಜನ್ಯನು ಸಂಚರಿಸುವ ಸಮಸ್ತ ಪ್ರಾಣಿಗಳಿಗೂ ಪ್ರಭುವಾಗಿದ್ದಾನೆ. (**ಯೋ ವಿಶ್ವಸ್ಯ ಜಗತೋ ದೇವ ಈಶೇ**—ಋ. ಸಂ. ೭-೧೦೧-೨), ಈ ದೇವನಲ್ಲಿ ಸಮಸ್ತ ಲೋಕಗಳೂ ಮತ್ತು ಅಂತರಿಕ್ಷಸ್ಥವಾದ ಮೂರು ಲೋಕಗಳೂ ಸ್ಥಾಪಿತವಾಗಿವೆ. ಎಂದರೆ ಈ ದೇವನೇ ಸಮಸ್ತ ಲೋಕಗಳಿಗೂ ಆಧಾರಭೂತನು. (**ಯಸ್ಮಿನ್ವಿಶ್ವಾ ಭುವನಾನಿ ತಸ್ಥುಸ್ತಿಸ್ರೋ ದ್ಯಾವಸ್ತ್ರೇಧಾ ಸಸ್ರುರಾಪಃ**—ಋ. ಸಂ. ೭-೧೦೧-೪); ಈ ದೇವನಲ್ಲಿಯೇ ಸಮಸ್ತ ಪ್ರಾಣಿಗಳ ಆತ್ಮವೂ ನೆಲಸಿರುವುದು. ಎಂದರೆ ಚರಾಚರಾತ್ಮಕವಾದ ಸಮಸ್ತ ಪ್ರಾಣಿಗಳನ್ನೂ ಈ ದೇವನೇ ಪ್ರೇರೇಪಿಸುವವನು (**ತಸ್ಮಿನ್ನಾತ್ಮಾ ಜಗತಸ್ತಸ್ಥುಷಶ್ಚ**—ಋ ಸಂ. ೭-೧೦೧-೬); ಈ ದೇವನು ಸ್ವರ್ಗದ ಅಥವಾ ದ್ಯುದೇವತೆಯ ಪುತ್ರನೆಂದು (**ದಿವಸ್ಪುತ್ರಾಯ**—ಋ.ಸಂ. ೭-೧೦೨-೧) ಹೇಳಿದೆ. ಪರ್ಜನ್ಯದೇವತೆಯ ವಿಷಯವು ಮೇಲೆ ಹೇಳಿದ ಸೂಕ್ತಗಳಲ್ಲಲ್ಲದೆ ಋ. ಸಂ. ೪-೫೭-೮, ೫-೬೩-೪, ೬; ೬-೫೨-೬; ೭-೫೫-೧೦; ೮-೬-೧; ೮-೨೧-೧೮; ೯-೨-೯; ೯-೨೨-೨; ೧೦-೬೬-೬; ೧೦-೯೮-೧, ೮, ೧೦-೧೬೯-೨; ಎಂಬ ಋಕ್ಕುಗಳಲ್ಲಿಯೂ ಉಕ್ತವಾಗಿದೆ. ಮತ್ತು ಋ. ಸಂ. ೬-೪೯-೬; ೬-೫೦-೧೨; ೧೦-೬೫-೯; ೧೦-೬೬-೧೦ ಎಂಬ ಋಕ್ಕುಗಳಲ್ಲಿ ವಾತ (ವಾಯು) ದೇವತೆಯೊಡನೆಯೂ, ಋ. ಸಂ. ೬-೫೨-೧೬ ರಲ್ಲಿ ಅಗ್ನಿಯೊಡನೆಯೂ ದ್ವಂದ್ವದೇವತೆಯಾಗಿ **ಪರ್ಜನ್ಯಾವಾತಾ, ವಾತಾಪರ್ಜನ್ಯಾ, ಅಗ್ನೀಪರ್ಜನ್ಯೌ**) ಸ್ತುತನಾಗಿದ್ದಾನೆ. ಮತ್ತು ಋ. ಸಂ. ೯-೮೨-೩ ರಲ್ಲಿ ಪರ್ಜನ್ಯನು ಸೋಮಲತೆಯ ತಂದೆಯೆಂಬ ((**ಪರ್ಜನ್ಯ ಪಿತಾ ಮಹಿಷಸ್ಯ ಪರ್ಣಿನಃ**) ವರ್ಣನೆ ಇದೆ.

ಋಗ್ವೇದದಲ್ಲಿ ಈ ದೇವತೆಯ ಸ್ಥಾನ ಬಹಳ ಅಮುಖ್ಯ. ಮೂರೇ ಸೂಕ್ತದಲ್ಲಿ ಈ ದೇವತೆಯನ್ನು ಸ್ತುತಿಸಿರುವುದು, ಈ ಹೆಸರು ಬರುವುದೇ ಮೂವತ್ತು ಸಲ. ಅಥರ್ವವೇದದಲ್ಲಿಯೂ (೪-೧೫) ಒಂದು ಸೂಕ್ತ ಪರ್ಜನ್ಯದೇವತಾಕವಾದುದು ಆದರೆ ಆ ಸೂಕ್ತದಲ್ಲಿನ ಋಕ್ಕುಗಳು ಬಹಳಮಟ್ಟಿಗೆ ಋಗ್ವೇದದಿಂದ ಆರಿಸಿಕೊಂಡವು. ಈ ಮುಂದಿನ ವಾಕ್ಯಗಳಲ್ಲಿ ಸಾಧಾರಣವಾಗಿ ಪರ್ಜನ್ಯ ಎಂದರೆ, ಪರಿಚಿತವಾದ ಮೋಡ ಎಂಬುದೇ ಆಗಿದೆ ಮಳೆ ಮೋಡಗಳು (ಪರ್ಜನ್ಯ) ಭೂಮಿಯನ್ನು ಚೇತನಗೊಳಿಸುತ್ತವೆ. (೧-೧೬೪-೫೧). ಮರುತ್ತುಗಳು ಹಗಲಿನಲ್ಲಿಯೂ ಜಲವಾಹಕವಾದ ಮೋಡಗಳಿಂದ (ಪರ್ಜನ್ಯ) ಕತ್ತಲು ಉಂಟುಮಾಡುತ್ತಾರೆ. (೧-೩೮-೯). ಅವರು ಎರಡು ಲೋಕಗಳಲ್ಲಿಯೂ ಮೋಡಗಳನ್ನು ಹರಡುತ್ತಾರೆ (೫-೫೩-೬). ಮಳೆ ಬೀಳುವಂತೆ ಮಾಡಬೇಕೆಂದೂ, ಮಳೆ ಮೋಡವನ್ನು ಕಳುಹಿಸುವಂತೆಯೂ ಬೃಹಸ್ಪತಿಯನ್ನು ಪ್ರಾರ್ಥಿಸಿದೆ (೧೦-೯೮-೧ ಮತ್ತು ೮). ಸೋಮವು ಮಳೆ ಮೋಡದಂತೆ ಪ್ರವಹಿಸುತ್ತದೆ (೯-೨-೯) ಮತ್ತು ಸೋಮಬಿಂದುಗಳು, ಮೋಡದಿಂದ ಮಳೆಯು ಬೀಳುವಂತೆ ಬೀಳುತ್ತವೆ (೯-೨೨-೨). ಅಥರ್ವವೇದದಲ್ಲಿ ಮಳೆಗರೆಯುವ 'ವಶಾ' ಎಂಬ ಗೋವನ್ನು ಸ್ತುತಿಸುವಾಗ "ಪರ್ಜನ್ಯನೇ, ನಿನ್ನ ಕೆಚ್ಚಲು ಎಂದು" ಎಂದು ಹೇಳಿದೆ (ಅ. ವೇ. ೧೦-೧೦-೭). ಆದರೆ (ವಾ. ಸಂ. ೧೨-೬) ರಲ್ಲಿ ಪರ್ಜನ್ಯ ಎಂದರೆ ಸ್ತನಯಿತ್ನು (ಸಿಡಿಲು) ಎಂತಲೂ (ಶ. ಬ್ರಾ ೧೪-೫-೫-೧೦) ರಲ್ಲಿ, ದ್ಯೌಃ (ವಾ. ಸಂ. ೧೨-೬) ಎಂಬರ್ಥದಲ್ಲಿಯೂ ಪ್ರಯುಕ್ತವಾಗಿದೆ. ಕೆಲವು ಸಂದರ್ಭಗಳಲ್ಲಿ ಉದ್ದಿಷ್ಟವಾದುದು ರೂಢಾರ್ಥವೇ ಅಥವಾ ದೇವತಾರ್ಥವೇ ಎಂದು ಹೇಳುವುದು ಕಷ್ಟ. ಪರ್ಜನ್ಯನಂತೆ ಅಗ್ನಿಯ ಸಾಮರ್ಥ್ಯವು ಪ್ರತಿಧ್ವನಿಯನ್ನು ಕೊಡುತ್ತದೆ (೮-೯೧-೫). ಪರ್ಜನ್ಯನಿಂದ ಎಚ್ಚರಿಸಲ್ಪಟ್ಟು ಕಪ್ಪೆಗಳು ವಟಗುಟ್ಟುತ್ತವೆ (೭-೧೦೩-೧). ಪರ್ಜನ್ಯ ಎಂದರೆ ದೇವತೆಯೆಂದೇ ಸ್ಪಷ್ಟವಾಗಿ ಅನೇಕ ವಾಕ್ಯಗಳಲ್ಲಿ

ತೋರಿಬರುತ್ತದೆ. ಅಂತಹ ಸಂದರ್ಭಗಳಲ್ಲಿ ನೋಡವು, ಕೆಚ್ಚಲು, ಬಾನೆ, ನೀರಿನ ಚೀಲ ಮೊದಲಾದ ಹೆಸರಿನಿಂದ ಕರೆಯಲ್ಪಡುತ್ತದೆ (೫-೮೩-೮ ಮತ್ತು ೯; ೭-೧೦೧-೪). ಸ್ವಲ್ಪಮಟ್ಟಿಗೆ ಪರ್ಜನ್ಯ ದೇವತೆಯು ವೃಷಭ ಮೊದಲಾದ ಪ್ರಾಣಿಯೆಂದು ವರ್ಣಿತವಾಗಿದೆ. ವೇಗವಾಗಿ ಹರಿಯುವ ನೀರಿನಿಂದ ಕೂಡಿದ ಮತ್ತು ಗಟ್ಟಿಯಾಗಿ ಗುಟುರುಹಾಕುವ ಗೂಳಿ (೫-೮೩-೧; ೫-೮೩-೭ ಮತ್ತು ೯ ಗಳನ್ನು ಹೋಲಿಸಿ; ಅ. ವೇ. ೪-೧೫-೧) ಬುಸುಗುಟ್ಟುತ್ತಿರುವ ಉದಕಮಯವಾದ ವೃಷಭದಿಂದ ಬರುವ ಮತ್ತು ಭೋರ್ಗರೆಯುತ್ತಿರುವ ನೀರು ಭೂಮಿಯನ್ನು ಸಂತೋಷಪಡಿಸುತ್ತದೆ. (ಅ. ವೇ. ೪-೧೫-೧). ಪರ್ಜನ್ಯನು ಒಂದೊಂದು ಸಲ ಗೊಡ್ಡು ಹಸು, ಒಂದೊಂದು ವೇಳೆ ಹಾಲು ಕೊಡುವ ಹಸು, ಪರ್ಜನ್ಯನು ತನ್ನ ದೇಹವನ್ನು ಇಷ್ಟಬಂದಂತೆ ಉಪಯೋಗಿಸುತ್ತಾನೆ (೭-೧೦೧-೩) ಎಂಬ ವರ್ಣನೆಗಳಿವೆ.

ಮಳೆಗರೆಯುವುದೇ ಪರ್ಜನ್ಯನ ಮುಖ್ಯಕಾರ್ಯ. ಜಲಮಯವಾದ ರಥದಲ್ಲಿ ಓಡಾಡುತ್ತಾ (೫-೮೩-೭) ನೀರಿನ ಚೀಲವನ್ನು ಬಿಚ್ಚಿ, ಅಧೋಮುಖವಾಗಿ ಹಿಡಿಯುತ್ತಾನೆ. ರಥಿಕನು ಅಶ್ವಗಳನ್ನು ಹುರಿದುಂಬಿಸುವಂತೆ, ಪರ್ಜನ್ಯನು ವೃಷ್ಟಿದೂತರನ್ನು ಪ್ರದರ್ಶಿಸುತ್ತಾನೆ, ಮಳೆಗರೆದಾಗ, ದೂರದಿಂದ ಸಿಂಹಗರ್ಜನೆಯಾಗುತ್ತದೆ. ಮಳೆಯನ್ನು ಸುರಿಸುತ್ತಾ, ಗರ್ಜಿಸುವ ಪರ್ಜನ್ಯನು, ನಮ್ಮ ಸ್ವರ್ಗೀಯ ಜನಕನಂತೆ (ಅಸುರ), ಬರುತ್ತಾನೆ (೫-೮೩-೩ ಮತ್ತು ೬). ಮಳೆಯನ್ನು ಸುರಿಸುವಂತೆಯೂ (೭-೧೦೧-೫), ಸುರಿಸಿದ ಮೇಲೆ ನಿಲ್ಲಿಸುವಂತೆಯೂ (೫-೮೩-೧೦) ಪ್ರಾರ್ಥಿತನಾಗಿದಾನೆ. ಪರ್ಜನ್ಯ ಮತ್ತು ಮರುತ್ತಗಳು ಮಳೆ ಸುರಿಸುವುವು ಮಿತ್ರ ಮತ್ತು ವರುಣರಿಗೆ ಅಧೀನರಾಗಿದ್ದುಕೊಂಡೇ (೫-೬೩-೩ ರಿಂದ ೬), ಅನೇಕ ಸಲ ಅವನು ಆರ್ಭಟಿಸುತ್ತಾನೆ ಎಂದೂ ಹೇಳಿದೆ (೫-೮೩). ಆರ್ಭಟಿಸುತ್ತಾ ಅವನು ವೃಕ್ಷಗಳು, ಪಿಶಾಚಿಗಳು, ದುಷ್ಟರು, ಎಲ್ಲರನ್ನೂ ಉರುಳಿಸುತ್ತಾನೆ. ಪ್ರಪಂಚವೇ ಅವನ ಆಯುಧಕ್ಕೆ ಹೆದರಿದೆ. (೫-೮೩-೨). ಅವನು ಮತ್ತು ವಾತ, ಇಬ್ಬರೂ ಆ ಆಯುಧವನ್ನು ಪ್ರಯೋಗಿಸುವವರು (೧೦-೬೬-೧೦). ಸಿಡಿಲಿಗೂ ಸ್ವಲ್ಪ ಸಂಬಂಧವಿದೆ. ಪರ್ಜನ್ಯನು ಬೀಜಗಳಿಂದ ಭೂಮಿಯನ್ನು ಚೇತನಗೊಳಿಸುವಾಗ, ಗಾಳಿಬೀಸುತ್ತದೆ ಮತ್ತು ಸಿಡಿಲು ಹೊಡೆಯುತ್ತದೆ. (೫-೮೩-೪) ಪರ್ಜನ್ಯನು ಸಿಡಿಲಿನಿಂದೊಡಗೂಡಿ ಸಾಗರದಲ್ಲಿ ಗರ್ಜಿಸುತ್ತಾನೆ. (ಅ. ವೇ. ೧೯-೩೦-೪).

ಮಳೆಗರೆಯುವವನಾದುದರಿಂದ, ಪರ್ಜನ್ಯನು ಸಸ್ಯಗಳ ಅಭಿವೃದ್ಧಿಗೆ ಕಾರಣನು. ಭೂಮಿಯಲ್ಲಿ ಬೀಜವನ್ನು ಬಿತ್ತಿದಾಗ ಗಿಡಗಳು ಏಳುತ್ತವೆ. ಎಲ್ಲಾ ತರಹ ಸಸ್ಯಗಳೂ ಅವನ ಕಾರ್ಯಕ್ಷೇತ್ರಕ್ಕೆ ಒಳಪಟ್ಟಿವೆ; ಪುಷ್ಟಿಗೋಸ್ಕರ ಅವನು ಗಿಡಗಳನ್ನು ಉತ್ಪತ್ತಿಮಾಡಿದ್ದಾನೆ (೫-೮೩-೪, ೫ ಮತ್ತು ೧೦; ೬-೫೨-೬ನ್ನು ಹೋಲಿಸಿ, ಅ. ವೇ. ೪-೧೫-೨, ೩ ಮತ್ತು ೧೫; ೮-೭-೨೧). ಗಿಡಗಳನ್ನು ಹೆಚ್ಚಿಸುವವನೂ. ಫಲಿಸುವಂತೆ ಮಾಡುವವನೂ ಅವನೇ. ಆ ದೇವತೆಯಿಂದ ರಕ್ಷಿತವಾಗಿ ಸಸ್ಯಗಳು ಒಳ್ಳೆಯ ಫಲ ಬಿಡುತ್ತವೆ (೭-೧೦೧-೧ ಮತ್ತು ೫). ಅವನ ಕಾರ್ಯದಿಂದಲೇ ಜೊಂಡು ಮತ್ತು ಹುಲ್ಲು ಬೆಳೆಯುತ್ತವೆ (೭-೧೦೨-೧; ೫-೭೫-೧೫ನ್ನು ಹೋಲಿಸಿ; ಅ. ವೇ. ೧-೨-೧; ೧-೩-೧; ೧೯-೩೦-೫). ಪರ್ಜನ್ಯನು ಗಿಡಗಳಲ್ಲಿ ಮಾತ್ರವಲ್ಲದೆ, ಹಸುಗಳು, ಹೆಣ್ಣು ಕುದುರೆಗಳು ಮತ್ತು ಸ್ತ್ರೀಯರಲ್ಲಿಯೂ ಅಂಕುರವನ್ನು (ಗರ್ಭಾಣುವನ್ನು), ಸ್ಥಾಪಿಸುತ್ತಾನೆ (೭-೧೦೨-೨) ಮತ್ತು ಫಲಶಕ್ತಿಗಾಗಿ ಪ್ರಾರ್ಥಿತನಾಗಿದಾನೆ (೫-೮೩-೭; ೬-೫೨-೧೬ನ್ನು ಹೋಲಿಸಿ). ಅವನು ಎಲ್ಲವನ್ನೂ ಫಲವಂತವನ್ನಾಗಿ ಮಾಡುವ ವೃಷಭ, ಪ್ರಪಂಚದಲ್ಲಿರುವ ಚರಾಚರ ವಸ್ತುಗಳೆಲ್ಲವರ ಆತ್ಮವೂ ಅವನಲ್ಲಿದೆ (೭-೧೦೧-೬; ೧-೧೫-೧ನ್ನು ಹೋಲಿಸಿ).

ಅವನು ಪ್ರಪಂಚವೆಲ್ಲವನ್ನೂ ಆಳುವ, ಸರ್ವಸ್ವಾತಂತ್ರ್ಯವುಳ್ಳ ರಾಜನು; ಅವನಲ್ಲಿಯೇ ಎಲ್ಲಾ ಜೀವಗಳೂ, ಮೂರು ಲೋಕಗಳೂ ಸ್ಥಾಪಿತವಾಗಿವೆ. ಅವನಲ್ಲಿಯೇ ತ್ರಿವಿಧವಾದ ನೀರು ಹರಿಯುತ್ತದೆ (೭-೧೦೧-೨, ೪ ಮತ್ತು ೫) ಈ ಜನನ ಶಕ್ತಿಯಿಂದಲೇ, ಅವನಿಗೆ ಜನಕನೆಂಬ ವಿಶೇಷಣವು ಅನೇಕಸಲ ಉಪಯೋಗಿಸಲ್ಪಟ್ಟಿದೆ (೭-೧೦೧-೩; ೯-೮೨-೩; ಅ. ವೇ ೪-೧೫-೧೨; ೧೨-೧-೧೨) ಅವನು ನಮ್ಮ (ಅಸಸುಃ ಪಿತಾ) ಸ್ವರ್ಗೀಯಜನಕನು (೫-೮೩-೬).

ಭೂಮಿಯು ಅವನ ಪತ್ನಿಯೆಂದು ಧ್ವನಿತವಾಗುತ್ತದೆ (೫-೮೩-೪; ೭-೧೦೧-೩; ೧-೧೬೦-೩ ನ್ನು ಹೋಲಿಸಿ). ಅಥರ್ವವೇದದಲ್ಲಿ (೧೨-೧-೧೨) ಭೂಮಿಯು ತಾಯಿಯು, ಪರ್ಜನ್ಯನು ತಂದೆಯೆಂದೂ, ಮತ್ತೊಂದು ಕಡೆ (೧೦-೧೦-೬) ಸ್ಪಷ್ಟವಾಗಿ **ವಶಾ** ಎಂಬುವಳು ಅವನ ಪತ್ನಿಯೆಂದೂ ಹೇಳಿದೆ. ವೃಷಭನೆನ್ನಿಸಿ ಕೊಳ್ಳುವುದರಲ್ಲಿ ಮತ್ತು ಗುಡುಗು, ಸಿಡಿಲು ಮತ್ತು ಮಳೆಗಳಿಗೆ ಸಂಬಂಧಿಸಿರುವುದರಲ್ಲಿಯೂ ಪರ್ಜನ್ಯನು ದ್ಯುದೇವತೆಗೆ ಸಮಾನನು (೧೦-೪೫ ೪; ೨-೪-೬; ೨-೨೭-೧೫ ಗಳನ್ನು ಹೋಲಿಸಿ) ಒಂದು ಕಡೆ ಪರ್ಜನ್ಯನು ದ್ಯುದೇವತೆಯ ಮಗನು (೭-೧೦೨- ) ಎಂದಿದೆ. ಪರ್ಜನ್ಯನೇ ಒಂದು ವತ್ಸ (ಕರು)ವನ್ನು ಉತ್ಪತ್ತಿಮಾಡುತ್ತಾನೆ; ಇದೇ ಗಿಡಗಳ ಅಂಕುರ (೭-೧೦೧-೧; ೫ ೮೩-೧ ನ್ನು ಹೋಲಿಸಿ) ಈ ಕರುವು ಸಿಡಿಲು ಅಥವಾ ಸೋಮವಿರಬಹುದು. ಒಂದು ಕಡೆ ಪರ್ಜನ್ಯನು ಸೋಮಕ್ಕೆ ತಂದೆಯೆಂದೂ (೯-೮೨-೩), ಅದು ಪರ್ಜನ್ಯನಿಂದ ಅಭಿವೃದ್ಧಿಯಾಯಿತೆಂದೂ (೯-೧೧೩-೩) ಹೇಳಿದೆ.

ಪರ್ಜನ್ಯನಿಗೆ ಇತರ ಅನೇಕ ದೇವತೆಗಳೊಡನೆ ಸಂಬಂಧವಿದೆ. ಆದರೆ ಸಂಬಂಧ ಹೆಚ್ಚಾಗಿರುವುದು ವಾತನೊಡನೆಯೇ. ಅಗ್ನಿಯೊಡನೆ ಒಂದುಸಲ ಹೊರತಾಗಿ, ವಾತನು ದ್ವಂದ್ವ ದೇವತೆಯಾಗಿ ಉಕ್ತನಾಗಿರುವುದು ಪರ್ಜನ್ಯನೊಡನೆಯೆ. ಮರುತರೂ ಪರ್ಜನ್ಯನೊಡನೆ ಸ್ತುತರಾಗಿದಾರೆ (೫-೬೩-೬; ೫-೮೩-೫); ಅವರು ಪರ್ಜನ್ಯನನ್ನು ಸ್ತುತಿಸುತ್ತಾರೆ (ಅ. ವೇ. ೪-೧೫-೪). ಎರಡು ಮಂತ್ರಗಳಲ್ಲಿ ಅಗ್ನಿಯು ಇವನೊಡನೆ ಸ್ತುತನಾಗಿದಾನೆ. (೬-೫೨-೬ ಮತ್ತು ೧೬). ವೃಷ್ಟಿಯುಕ್ತನಾದ ಪರ್ಜನ್ಯನಿಗೂ, ಇಂದ್ರನಿಗೂ ಸಮಾನ ಧರ್ಮಗಳು ಅನೇಕ ಇವೆ (೮ ೬-೧) ಇಬ್ಬರು ದೇವತೆಗಳಿಗೂ, ಪ್ರಕೃತಿಯ ಒಂದೇ ಅಂಶವು ಆಧಾರವಾಗಿದೆ; ಆದರೆ ಪರ್ಜನ್ಯನ ವಿಷಯದಲ್ಲಿ ಇದು ಹೆಚ್ಚು ಸ್ಪಷ್ಟವಾಗಿದೆ.

ಈ ಪದದ ನಿಷ್ಪತ್ತಿ ಸ್ಪಷ್ಟವಾಗಿಲ್ಲ. ಋಗ್ವೇದದಲ್ಲಿ ಈ ರೂಪದಿಂದ ರೂಢಾರ್ಥವಾದ ಮೋಡವೂ, ಮೇಘಾಭಿಮಾನಿದೇವತೆಯೂ ಅಭಿಪ್ರೇತವಾಗಿವೆ. ಬ್ರಾಹ್ಮಣಗಳಲ್ಲಿಯೂ ಈ ಎರಡು ಅರ್ಥಗಳೂ ರೂಢಿಯಲ್ಲಿದ್ದಂತಿವೆ. ಮಹಾಭಾರತದಲ್ಲಿ ಇಂದ್ರ ಮತ್ತು ಪರ್ಜನ್ಯರು ಇಬ್ಬರೂ ಒಂದೇ ಎಂದು ಭಾವಿಸಲ್ಪಟ್ಟಿದಾರೆ.

ಈ ಸೂಕ್ತದ ಮುಖ್ಯಾಭಿಪ್ರಾಯವನ್ನು Muir ಎಂಬ ಪಾಶ್ಚಾತ್ಯಪಂಡಿತನು ಈ ರೀತಿ ವರ್ಣಿಸಿದಾನೆ—

1 "Address the powerful (god) with these words; laud Parjanya; worship him with reverence · the procreative and stimulating fructifier, resounding, sheds his seed and impregnates the plants.

2. He splits the trees, he destroys the Rakshasas; the whole creation is afraid of the mighty stroke; even the innocent man flees before the vigorous god, when Parjanya thundering smites the evil doers.

3. Like a charioteer urging forward his horses with a whip, the god brings into view his showery scouts. From afar the lion's roarings arise, when Parjanya charges the clouds with rain.

4 The winds blow, the lightnings fall, the plants shoot up ; the heaven fructifies ; food is produced for all created things, when Parjanya, thundering, replenishes the earth with moisture

5. Parjanya, before whose agency the earth bows down, at whose operation all hoofed cattle quiver ; by whose action plants (spring up) of every form ; grant your mighty protection.

6. Gran to us, Maruts, the rain of the sky ; replenish the streams of the procreative horse , come hither with this your thunder, our divine father, shedding waters.

7. Resound, thunder, Impregnate, rush hither and thither with your watery chariot. Draw on forward with you, your opened and inverted water-skin ; let the hills and dale. be levelled

8. Raise aloft your vast water vessel, and pour down showers ; let the discharged rivulets roll on forward ; mosisten the heaven and earth with fatness ; lat there be well-filled drinking-places for the cows

9 When you, Parjanya, resounding and thundering, slay the evil-doers, the whole universe rejoiees, whatever lives upon the earth.

10 You have shed down rain : now desist ; you have made the waterless wastes fit to be traversed ; you have generated plants for food, and you have fulfilled the desires of living creatures

(ಪೀಠಿಕೆ ಸಮಾಪ್ತವಾದುದು)

॥ ಸಾಯಣಭಾಷ್ಯಂ ॥

ಅಚ್ಛಾ ವದೇತಿ ದಶರ್ಚಮೇಕಾದಶಂ ಸೂಕ್ತಂ ಭೌಮಸ್ಯಾತ್ರೇರಾರ್ಷಂ । ಆತ್ರೇಯಮನುಕ್ರಮಣಿಕಾ । ಅಚ್ಛ ದಶಾತ್ರಿಃ ಪಾರ್ಜನ್ಯಮುಪಾದ್ಯಾಸ್ತಿಸ್ರೋ ಜಗತ್ಯ ಉಪಾಂತ್ಯಾನುಷ್ಟುಬಿತಿ । ಯತ್ಪರ್ಜನ್ಯೇತ್ಯೇಷಾ ನವಮ್ಯನುಷ್ಟುಪ್ ವಿ ವೃಕ್ಷಾನಿತ್ಯಾದ್ಯಾಸ್ತಿಸ್ರೋ ಜಗತ್ಯಃ ಶಿಷ್ಟಾಃ ಷಟ್ ತ್ರಿಷ್ಟುಭಃ । ಪರ್ಜನ್ಯೋ ದೇವತಾ ॥ ಅನೇನ ಸೂಕ್ತೇನ ಪ್ರತ್ಯೃಚಂ ವಾ ದಿಶ ಉಪಸ್ಥೇಯಾಃ । ಸೂತ್ರಿತಂ ಚ । ಸಂಸ್ಥಿತಾಯಾಂ ಸರ್ವಾ ದಿಶ ಉಪತಿಷ್ಠೇತಾಚ್ಛಾ ವದ ತವಸಂ ಗೀರ್ಭಿರಾಭಿರಿತಿ ಚತಸೃಭಿಃ ಪ್ರತ್ಯೃಚಂ ಸೂಕ್ತೇನ ವಾ । ಆ. ೨-೧೩ । ಇತಿ ॥

ಅನುವಾದವು—**ಅಚ್ಛಾ ವದ** ಎಂಬ ಈ ಸೂಕ್ತವು ಆರನೆಯ ಅನುವಾಕದಲ್ಲಿ ಹನ್ನೊಂದನೆಯ ಸೂಕ್ತವು. ಇದರಲ್ಲಿ ಹತ್ತು ಋಕ್ಕುಗಳಿರುವುವು. ಈ ಸೂಕ್ತಕ್ಕೆ ಮಂಡಲದ್ರಷ್ಟೃವಾದ ಅತ್ರಿಯು ಋಷಿಯು. ಪರ್ಜನ್ಯನು ದೇವತೆಯು; ಈ ಸೂಕ್ತದ **ಯತ್ಪರ್ಜನ್ಯ** ಎಂಬ ಒಂಭತ್ತನೆಯ ಋಕ್ಕು ಅನುಷ್ಟುಪ್‌ಛಂದಸ್ಕವು. **ವಿವೃಕ್ಷಾನ್** ಎಂದು ಮೊದಲಾಗುವ ಮೂರು ಋಕ್ಕುಗಳು (೨-೪ ಋಕ್ಕುಗಳು) ಜಗತೀ ಛಂದಸ್ಕವು. ಅನುಕ್ರಮಣಿಕೆಯಲ್ಲಿ **ಅಚ್ಛ ದಶಾತ್ರಿಃ ಪಾರ್ಜನ್ಯಮುಪಾದ್ಯಾಸ್ತಿಸ್ರೋ ಜಗತ್ಯ ಉಪಾಂತ್ಯಾನುಷ್ಟುಪ್** ಎಂದು ಹೇಳಿರುವುದು. ಈ ಸೂಕ್ತದ ಪ್ರತಿಋಕ್ಕಿನಿಂದಲೂ ಅಥವಾ ಒಟ್ಟು ಸೂಕ್ತದಿಂದಲೂ ದಿಕ್ಕುಗಳನ್ನುದ್ದೇಶಿಸಿ ಉಪಸ್ಥಾನ (ಪ್ರಾರ್ಥನೆ) ಮಾಡಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಸಂಸ್ಥಿತಾಯಾಂ ಸರ್ವಾ ದಿಶ ಉಪತಿಷ್ಠೇತಾಚ್ಛಾ ವದ ತವಸಂ ಗೀರ್ಭಿರಾಭಿರಿತಿ ಚತಸೃಭಿಃ ಪ್ರತ್ಯೃಚಂ ಸೂಕ್ತೇನ** ವಾ ಎಂಬ ಈ ಸೂತ್ರದಿಂದ (ಆ. ೨-೧೩) ವಿವೃತವಾಗಿರುವುದು.

## ಸೂಕ್ತ ೮೩

ಮಂಡಲ—೫ || ಅನುವಾಕ—೬ || ಸೂಕ್ತ—೮೩ ||
ಅಷ್ಟಕ—೪ || ಅಧ್ಯಾಯ—೪ || ವರ್ಗ—೨೬, ೨೮ ||
|| ಸೂಕ್ತದಲ್ಲಿರುವ ಋಕ್ಸಂಖ್ಯೆ—೧೦ ||
|| ಋಷಿಃ—ಅತ್ರಿಃ ||
|| ದೇವತಾ—ಪರ್ಜನ್ಯಃ ||
|| ಛಂದಃ—೧, ೫-೮. ತ್ರಿಷ್ಟುಪ್ | ೨-೪. ಜಗತೀ | ೯. ಅನುಷ್ಟುಪ್ ||

|| ಸಂಹಿತಾಪಾಠಃ ||

ಅಚ್ಛಾ ವದ ತವಸಂ ಗೀರ್ಭಿರಾಭಿಃ ಸ್ತುಹಿ ಪರ್ಜನ್ಯಂ ನಮಸಾ ವಿವಾಸ |
ಕನಿಕ್ರದದ್ವೃಷಭೋ ಜೀರದಾನೂ ರೇತೋ ದಧಾತ್ಯೋಷಧೀಷು ಗರ್ಭಂ ||

|| ಪದಪಾಠಃ ||

ಅಚ್ಛ | ವದ | ತವಸಂ | ಗೀಃऽಭಿಃ | ಆಭಿಃ | ಸ್ತುಹಿ | ಪರ್ಜನ್ಯಂ | ನಮಸಾ | ಆ | ವಿವಾಸ |
ಕನಿಕ್ರದತ್ | ವೃಷಭಃ | ಜೀರಽದಾನುಃ | ರೇತಃ | ದಧಾತಿ | ಓಷಧೀಷು | ಗರ್ಭಂ || ೧ ||

|| ಸಾಯಣಭಾಷ್ಯಂ ||

ಹೇ ಸ್ತೋತಸ್ತ್ವಸಂ ಬಲವಂತಂ ಪರ್ಜನ್ಯಮಚ್ಛಾಭಿಪ್ರಾಪ್ಯ ವದ | ಪ್ರಾರ್ಥಯ || ಪರ್ಜನ್ಯಶಬ್ದೋ ಯಾಸ್ಕೇನ ಬಹುಧಾ ನಿರುಕ್ತಃ | ಪರ್ಜನ್ಯಸ್ತೃಪೇರಾದ್ಯಂತವಿಪರೀತಸ್ಯ ತರ್ಪಯಿತಾ ಜನ್ಯಃ ಪರೋ ಜೇತಾ ವಾ ಜನಯಿತಾ ವಾ ಪ್ರಾರ್ಜಯಿತಾ ವಾ ರಸಾನಾಂ | ನಿ. ೧೦-೧೦ | ಇತಿ || ಆಭಿರ್ಗೀರ್ಭಿಃ

**ಸ್ತುತಿವಾಗ್ಭಿಃ ಸ್ತುಹಿ । ನಮಸಾನ್ನೇನ ಹವಿರ್ಲಕ್ಷಣೇನಾ ವಿವಾಸ । ಸರ್ವತಃ ಪರಿಚರ। ಯಃ ಪರ್ಜನ್ಯೋ ವೃಷಭೋऽಪಾಂ ವರ್ಷಿತಾ ಜೀರದಾನುಃ ಕ್ಷಿಪ್ರದಾನಃ ಕನಿಕ್ರದತ್ ಗರ್ಜನಶಬ್ದಂ ಕುರ್ವನ್ನೋಷಧೀಷು ಗರ್ಭಂ ಗರ್ಭಸ್ಥಾನೀಯಂ ರೇತ ಉದಕಂ ದಧಾತಿ ಸ್ಥಾಪಯತಿ ತಂ ಸ್ತುಹಿ ॥**

॥ ಪ್ರತಿಪದಾರ್ಥ ॥

(**ಹೇ ಸ್ತೋತಃ**—ಎಲೈ ಸ್ತೋತೃವೇ । **ತವಸಂ**—ಶಕ್ತಿಯುತನಾದ । **ಪರ್ಜನ್ಯಂ**—ಪರ್ಜನ್ಯದೇವನನ್ನು । **ಅಚ್ಛ**—ಸಮೀಪಿಸಿ । **ವದ**—ಪ್ರಾರ್ಥಿಸು । **ಅಭಿಃ ಗೀರ್ಭಿಃ**—ಈ ಸ್ತುತಿಗಳಿಂದ । **ಸ್ತುಹಿ**—ಸ್ತುತಿಸು । **ನಮಸಾ**—ಹವಿಸ್ಸಿನ ರೂಪದ ಅನ್ನದಿಂದ । **ಆ ವಿವಾಸ**—ಪೂರ್ಣವಾಗಿ ಉಪಚರಿಸು । **ವೃಷಭಃ**—ವೃಷ್ಟಿಯನ್ನು ಸುರಿಸುವವನೂ । **ಜೀರದಾನುಃ**—ಕ್ಷಿಪ್ರವಾಗಿ ಇಷ್ಟಾರ್ಥಗಳನ್ನು ದಾನಮಾಡತಕ್ಕವನೂ ಆದ ಪರ್ಜನ್ಯನು । **ಕನಿಕ್ರದತ್**—ಗರ್ಜನಶಬ್ದವನ್ನು ಮಾಡುತ್ತಾ । **ಓಷಧೀಷು**—ಓಷಧಿಗಳಲ್ಲಿ (ಸಸ್ಯಾದಿಗಳಲ್ಲಿ)। **ಗರ್ಭಂ**—ಗರ್ಭಸ್ಥಾನೀಯವಾದ । **ರೇತಃ**—ಉದಕವನ್ನು । **ದಧಾತಿ**—ಸ್ಥಾಪಿಸುತ್ತಾನೆ.

॥ ಭಾವಾರ್ಥ ॥

ಎಲೈ ಸ್ತೋತೃವೇ, ಶಕ್ತಿಯುತನಾದ ಪರ್ಜನ್ಯದೇವನನ್ನು ಸಮೀಪಿಸಿ ಪ್ರಾರ್ಥಿಸು. ಈ ಸ್ತುತಿಗಳಿಂದ ಪ್ರಶಂಸಿಸು. ಹವಿಸ್ಸಿನ ರೂಪದ ಅನ್ನದಿಂದ ಪೂರ್ಣವಾಗಿ ಉಪಚರಿಸು. ವೃಷ್ಟಿಯನ್ನು ಸುರಿಸುವವನೂ, ಕ್ಷಿಪ್ರವಾಗಿ ಇಷ್ಟಾರ್ಥಗಳನ್ನು ದಾನಮಾಡತಕ್ಕವನೂ ಆದ ಪರ್ಜನ್ಯನು ಗರ್ಜನಶಬ್ದವನ್ನು ಮಾಡುತ್ತಾ ಓಷಧಿಗಳಲ್ಲಿ (ಸಸ್ಯಾದಿಗಳಲ್ಲಿ) ಗರ್ಭಸ್ಥಾನೀಯವಾದ ಉದಕವನ್ನು ಸ್ಥಾಪಿಸುತ್ತಾನೆ.

## English Translation.

Address the mighty Parjanya who is present : praise him with these hymns ; worship him with reverence, him who is the thunderer, the showerer, the bountful, who impregnates the plants with rain.

॥ ಸಂಹಿತಾಪಾಠಃ ॥

ವಿ ವೃಕ್ಷಾನ್ ಹಂತ್ಯುತ ಹಂತಿ ರಕ್ಷಸೋ ವಿಶ್ವಂ ಬಿಭಾಯ ಭುವನಂ ಮಹಾವಧಾತ್ ।

ಉತಾನಾಗಾ ಈಷತೇ ವೃಷ್ಣ್ಯಾವತೋ ಯತ್ಪರ್ಜನ್ಯಃ ಸ್ತನಯನ್ ಹಂತಿ ದುಷ್ಕೃತಃ ॥ ೨ ॥

॥ ಪದಪಾಠಃ ॥

ವಿ । ವೃಕ್ಷಾನ್ । ಹಂತಿ । ಉತ । ಹಂತಿ । ರಕ್ಷಸಃ । ವಿಶ್ವಂ । ಬಿಭಾಯ । ಭುವನಂ । ಮಹಾಽವಧಾತ್ ।

ಉತ । ಅನಾಗಾಃ । ಈಷತೇ । ವೃಷ್ಣ್ಯಽವತಃ । ಯತ್ । ಪರ್ಜನ್ಯಃ । ಸ್ತನಯನ್ । ಹಂತಿ । ದುಃಽಕೃತಃ ॥

॥ ಸಾಯಣಭಾಷ್ಯಂ ॥

ಅಯಂ ಮಂತ್ರೋ ನಿರುಕ್ತೇ ಸ್ಪಷ್ಟಂ ವ್ಯಾಖ್ಯಾತಃ । ತದೇವಾತ್ರ ಲಿಖ್ಯತೇ । ಪರ್ಜನ್ಯೋ ವಿಹಂತಿ ವೃಕ್ಷಾನ್ವಿಹಂತಿ ಚ ರಕ್ಷಾಂಸಿ ಸರ್ವಾಣಿ ಚಾಸ್ಮಾದ್ಭೂತಾನಿ ಬಿಭ್ಯತಿ ಮಹಾವಧಾತ್ ಮಹಾನ್ ಹ್ಯಸ್ಯ ವಧಃ। ಅಪ್ಯನಪರಾಧೋ ಭೀತಃ ಪಲಾಯತೇ ವರ್ಷಕರ್ಮವತೋ ಯತ್ಪರ್ಜನ್ಯಃ ಸ್ತನಯನ್ಹಂತಿ ದುಷ್ಕೃತಃ ಪಾಪಕೃತಃ । ನಿ. ೧೦-೧೧ । ಇತಿ ॥

॥ ಪ್ರತಿಪದಾರ್ಥ ॥

(**ಪರ್ಜನ್ಯಃ**—ಪರ್ಜನ್ಯನು) । **ವೃಕ್ಷಾನ್**—ವೃಕ್ಷಗಳನ್ನು । **ವಿ ಹಂತಿ**—ಉರುಳಿಸುತ್ತಾನೆ । **ಉತ**—ಮತ್ತು । **ರಕ್ಷಸಃ**—ರಾಕ್ಷಸರನ್ನು । **ಹಂತಿ**—ನಾಶಪಡಿಸುತ್ತಾನೆ । **ಮಹಾವಧಾತ್**—ತನ್ನ ಮಹತ್ತಾದ ಆಯುಧದಿಂದ । **ವಿಶ್ವಂ ಭುವನಂ**—ಸಕಲ ಲೋಕವನ್ನೂ । **ಬಿಭಾಯ**—ಹೆದರಿಸುತ್ತಾನೆ । **ಯತ್**—ಯಾವಾಗ । **ಪರ್ಜನ್ಯಃ**—ಪರ್ಜನ್ಯನು । **ಸ್ತನಯನ್**—ಗರ್ಜನೆಮಾಡುತ್ತಾ । **ದುಷ್ಕೃತಃ**—ಪಾಪಿಗಳನ್ನು । **ಹಂತಿ**—ಕೊಲ್ಲುತ್ತಾನೋ (ಆಗ) । **ವೃಷ್ಣ್ಯವತಃ**—ವೃಷ್ಟಿಕಾರಕನಾದ ಈ ಪರ್ಜನ್ಯನಿಂದ । **ಉತ ಅನಾಗಾಃ**—ನಿರಪರಾಧಿಗಳೂ ಸಹ । **ಈಷತೇ**—(ಬೆದರಿ) ಓಡುತ್ತಾರೆ.

॥ ಭಾವಾರ್ಥ ॥

ಪರ್ಜನ್ಯನು ವೃಕ್ಷಗಳನ್ನು ಉರುಳಿಸುತ್ತಾನೆ. ಮತ್ತು ರಾಕ್ಷಸರನ್ನು ನಾಶಪಡಿಸುತ್ತಾನೆ. ತನ್ನ ಮಹತ್ತಾದ ಆಯುಧದಿಂದ ಸಕಲ ಲೋಕವನ್ನೂ ಗದರಿಸುತ್ತಾನೆ. ಯಾವಾಗ ಪರ್ಜನ್ಯನು ಗರ್ಜನೆಮಾಡುತ್ತಾ ಪಾಪಿಗಳನ್ನು ಕೊಲ್ಲುವನೋ ಆಗ ವೃಷ್ಟಿಕಾರಕನಾದ ಈ ಪರ್ಜನ್ಯನಿಂದ ನಿರಪರಾಧಿಗಳೂ ಸಹ ಬೆದರಿ ಓಡುತ್ತಾರೆ.

## English Translation.

He strikes down the trees, he destroys the Rakshasas, he terrifies the whole world by his mighty weapon : even the innocent man flies from the sender of rain, when Parjanya, thundering, slays the wicked.

॥ ವಿಶೇಷವಿಷಯಗಳು ॥

ಈ ಋಕ್ಕಿಗೆ ಯಾಸ್ಕರು ನಿರ್ವಚನವನ್ನು ಹೇಳಿದಾರೆ—

> ವಿಹಂತಿ ವೃಕ್ಷಾನ್ ವಿಹಂತಿ ಚ ರಕ್ಷಾಂಸಿ ಸರ್ವಾಣಿ ಚಾಸ್ಮಾದ್ಭೂತಾನಿ ಬಿಭ್ಯತಿ ಮಹಾವಧಾನ್ಮ-
> ಹಾನ್ ಹ್ಯಸ್ಯ ವಧೋಽಪ್ಯನಪರಾಧೋ ಭೀತಃ ಪಲಾಯತೇ ವರ್ಷಕರ್ಮವತಃ ಯತ್ಪರ್ಜನ್ಯಃ
> ಸ್ತನಯನ್ ಹಂತಿ ದುಷ್ಕೃತಃ ಪಾಪಕೃತಃ ॥ (ನಿ. ೧೦-೧೧)

ಈ ಪರ್ಜನ್ಯದೇವನು ವೃಕ್ಷಗಳನ್ನು ಹೊಡೆದು ಉರುಳಿಸುತ್ತಾನೆ. ಮತ್ತು ರಾಕ್ಷಸರನ್ನೂ ಪ್ರಹರಿಸುತ್ತಾನೆ. ಈ ವಿಧವಾದ ವಿಧ್ವಂಸನವನ್ನು (ನಾಶಕರ್ಮವನ್ನು) ನೋಡಿ ಸಮಸ್ತ ಪ್ರಾಣಿಗಳೂ ಭಯಪಡುತ್ತವೆ. ಈ ಹನನ ಕರ್ಮವು ಬಹಳ ಭಯಂಕರವಾಗಿರುವುದು. ನಿರಪರಾಧಿಯೂ ಸಹ ಬಹಳ ಭಯದಿಂದ ಈ ಭಯಂಕರ ಕಾರ್ಯವನ್ನು ನೋಡಿ ಓಡಿಹೋಗುವನು. ಈ ಪರ್ಜನ್ಯನ ಮುಖ್ಯ ಕಾರ್ಯವು ವೃಷ್ಟಿಯನ್ನು ಸುರಿಸುವುದೇ ಆಗಿದೆ. ವೃಷ್ಟಿಯನ್ನು ಸುರಿಸುವಾಗ ಸಿಡಿಲು ಮಿಂಚುಗಳೊಡನೆ ಮಹಾ ಆರ್ಭಟದಿಂದ ಭಯಂಕರನಾಗಿ ಗೋಚರಿಸುತ್ತಾ ಪಾಪಕರ್ಮ ಮಾಡುವವರನ್ನು ಹೊಡೆದು ಕೊಲ್ಲುತ್ತಾನೆ ಎಂದು ಮುಖ್ಯಾಭಿಪ್ರಾಯವು. ಇಲ್ಲಿ ಸಿಡಿಲು, ವೃಕ್ಷಗಳಿಗೂ, ಪ್ರಾಣಿಗಳಿಗೂ ತಗಲಿ ಅವುಗಳು ನಾಶವಾಗುವುದರಿಂದ ಈ ವಿಷಯವನ್ನೇ ಇಲ್ಲಿ ಪರ್ಜನ್ಯನು ಪಾಪಕರ್ಮಿಗಳನ್ನು ಹೊಡೆದು ಕೊಲ್ಲುತ್ತಾನೆ ಎಂಬ ವಾಕ್ಯದಿಂದ ವರ್ಣಿಸಲಾಗಿದೆ.

। ಸಂಹಿತಾಪಾಠಃ ।

ರಥೀವ ಕಶಯಾಶ್ವಾಁ ಅಭಿಕ್ಷಿಪನ್ನಾವಿರ್ದೂತಾನ್ಕೃಣುತೇ ವರ್ಷ್ಯಾಁ೩ ಅಹ।
ದೂರಾತ್ಸಿಂಹಸ್ಯ ಸ್ತನಥಾ ಉದೀರತೇ ಯತ್ಪರ್ಜನ್ಯಃ ಕೃಣುತೇ ವರ್ಷ್ಯಂ೧
ನಭಃ ॥ ೩ ॥

। ಪದಪಾಠಃ ॥

ರಥೀಽಇವ । ಕಶಯಾ । ಅಶ್ವಾನ್ । ಅಭಿಽಕ್ಷಿಪನ್ । ಆವಿಃ । ದೂತಾನ್ । ಕೃಣುತೇ । ವರ್ಷ್ಯಾನ್ ।
ಅಹ ।
ದೂರಾತ್ । ಸಿಂಹಸ್ಯ । ಸ್ತನಥಾಃ । ಉತ್ । ಈರತೇ । ಯತ್ । ಪರ್ಜನ್ಯಃ । ಕೃಣುತೇ । ವರ್ಷ್ಯಂ ।
ನಭಃ ॥ ೩ ॥

॥ ಸಾಯಣಭಾಷ್ಯಂ ॥

ರಥೀವ ರಥಸ್ವಾಮೀವ । ಸ ಯಥಾ ಕಶಯಾಶ್ವಾನಭಿಕ್ಷಿಪನ್ ದೂತಾನ್ ಭಟಾನಾವಿಷ್ಕರೋತಿ ತದ್ವದಸೌ ಪರ್ಜನ್ಯೋಽಪಿ ಕಶಯಾಶ್ವಾನ್ಮೇಘಾನಭಿಕ್ಷಿಪನ್ ಅಭಿಪ್ರೇರಯನ್ ವರ್ಷ್ಯಾನ್ ವರ್ಷಕಾನ್ ದೂತಾನ್ ದೂತವದ್ವೃಷ್ಟಿಪ್ರೇರಕಾನ್ಮೇಘಾನ್ ಮರುತೋ ವಾವಿಷ್ಕೃಣುತೇ । ಪ್ರಕಟಯತಿ । ಅಹೇತಿ ಪೂರಣಃ । ಏವಂ ಸತಿ ಸಿಂಹಸ್ಯ ॥ ಸಹತೇರ್ಹಿಂಸತೇರ್ವಾ ಶಬ್ದಕರ್ಮಣಃ ಸಿಂಹಶಬ್ದಃ ॥ ಅವರ್ಷಣೇನಾಭಿಭವಿತುಃ ಶಬ್ದಯಿತುರ್ವಾ ಮೇಘಸ್ಯ ಸ್ತನಥಾ ಗರ್ಜನಶಬ್ದಾ ದೂರಾದುದೀರತೇ । ಉದ್ಗಚ್ಛಂತಿ । ಕದಾ । ಯದ್ಯದಾ ಪರ್ಜನ್ಯೋ ನಭೋಽಂತರಿಕ್ಷಂ ವರ್ಷ್ಯಂ ವರ್ಷೋಪೇತಂ ಕೃಣುತೇ ಕರೋತಿ ತದಾ ॥

॥ ಪ್ರತಿಪದಾರ್ಥ ॥

**ರಥೀವ**—ರಥವನ್ನು ಹೊಡೆಯುವ ಸಾರಥಿಯು ತನ್ನ ಚಾವಟಿಯಿಂದ ಅಶ್ವಗಳನ್ನು ಹೊಡೆದು ರಥದಲ್ಲಿರುವ ಯೋಧರನ್ನು ಕರೆತಂದು ಯಾವ ರೀತಿ ಎಲ್ಲರಿಗೂ ಗೋಚರವಾಗುವಂತೆ ಮಾಡುವನೋ, ಆ ರೀತಿ (ಪರ್ಜನ್ಯನೂ ಸಹ) । **ಕಶಯಾ**—ತನ್ನ ಚಾವಟಿಗಳಿಂದ । **ಅಶ್ವಾನ್**—ಮೇಘಗಳನ್ನು । **ಅಭಿಕ್ಷಿಪನ್**—ಪ್ರೇರಿಸುತ್ತಾ । **ವರ್ಷ್ಯಾನ್**—ವೃಷ್ಟಿಕಾರಕವೂ । **ದೂತಾನ್**—ದೂತರಂತಿರುವುವೂ ಆದ ಮೇಘಗಳನ್ನು । **ಆವಿಷ್ಕೃಣುತೇ**—ಎಲ್ಲರಿಗೂ ಗೋಚರವಾಗುವಂತೆ ಮಾಡುತ್ತಾನೆ । **ಯತ್**—ಯಾವಾಗ । **ಪರ್ಜನ್ಯಃ**—ಪರ್ಜನ್ಯನು । **ನಭಃ**—ಅಂತರಿಕ್ಷವನ್ನು । **ವರ್ಷ್ಯಂ**—ವೃಷ್ಟಿಯಿಂದ ಪೂರಿತವಾದುದನ್ನಾಗಿ । **ಕೃಣುತೇ**—ಮಾಡುತ್ತಾನೆಯೋ (ಆಗ) । **ಸಿಂಹಸ್ಯ**—ಸಿಂಹದಂತೆ ಶಬ್ದಮಾಡುವ ಮೇಘಗಳ । **ಸ್ತನಥಾಃ**—ಗರ್ಜನ ಶಬ್ದಗಳು । **ದೂರಾತ್**—ದೂರದಿಂದಲೇ । **ಉದೀರತೇ**—ಪ್ರಕಟಿತವಾಗುತ್ತವೆ (ಕೇಳಿಸುತ್ತವೆ).

॥ ಭಾವಾರ್ಥ ॥

ರಥವನ್ನು ಹೊಡೆಯುವ ಸಾರಥಿಯು ತನ್ನ ಚಾವಟಿಯಿಂದ ಅಶ್ವಗಳನ್ನು ಹೊಡೆದು ರಥದಲ್ಲಿರುವ ಯೋಧರನ್ನು ಕರೆತಂದು ಯಾವ ರೀತಿ ಎಲ್ಲರಿಗೂ ಗೋಚರವಾಗುವಂತೆ ಮಾಡುವನೋ, ಆ ರೀತಿ ಪರ್ಜನ್ಯನೂ ಸಹ ತನ್ನ ಚಾವಟಿಗಳಿಂದ ಮೇಘಗಳನ್ನು ಪ್ರೇರಿಸುತ್ತಾ ವೃಷ್ಟಿಕಾರಕವೂ, ದೂತರಂತಿರುವುವೂ ಆದ ಮೇಘಗಳನ್ನು ಎಲ್ಲರಿಗೂ ಗೋಚರವಾಗುವಂತೆ ಮಾಡುತ್ತಾನೆ. ಯಾವಾಗ ಪರ್ಜನ್ಯನು ಅಂತರಿಕ್ಷವನ್ನು ವೃಷ್ಟಿಯಿಂದ ಪೂರಿತವಾದುದನ್ನಾಗಿ ಮಾಡುತ್ತಾನೆಯೋ ಆಗ ಸಿಂಹದಂತೆ ಶಬ್ದಮಾಡುವ ಮೇಘಗಳ ಗರ್ಜನ ಶಬ್ದಗಳು ದೂರದಿಂದಲೇ ಕೇಳಿಬರುತ್ತವೆ.

## English Translation.

As a charioteer, urging his horses with his whip, brings into view the messenger (of war), so Parjanya, (driving the clouds before him), make manifest the messengers of the rain: the roaring of the lion (like cloud) proclaims from afar that Parjanya overspreads the sky with rainy clouds.

॥ ಸಂಹಿತಾಪಾಠಃ ॥

ಪ್ರ ವಾತಾ ವಾಂತಿ ಪತಯಂತಿ ವಿದ್ಯುತ ಉದೋಷಧೀರ್ಜಿಹತೇ ಪಿನ್ವತೇ ಸ್ವಃ।
ಇಡಾ ವಿಶ್ವಸ್ಮೈ ಭುವನಾಯ ಜಾಯತೇ ಯತ್ಪರ್ಜನ್ಯಃ ಪೃಥಿವೀಂ ರೇತಸಾವತಿ॥

॥ ಪದಪಾಠಃ ॥

ಪ್ರ । ವಾತಾಃ । ವಾಂತಿ । ಪತಯಂತಿ । ವಿ॒ಽದ್ಯುತಃ । ಉತ್ । ಓಷಧೀಃ । ಜಿಹತೇ । ಪಿನ್ವತೇ । ಸ್ವ॒ಃ-
ರಿತಿ ಸ್ವಃ ।

ಇರಾ । ವಿಶ್ವಸ್ಮೈ । ಭುವನಾಯ । ಜಾಯತೇ । ಯತ್ । ಪರ್ಜನ್ಯಃ । ಪೃಥಿವೀಂ । ರೇತಸಾ । ಅವತಿ ॥೪॥

॥ ಸಾಯಣಭಾಷ್ಯಂ ॥

ಪ್ರ ವಾತಾ ಇತಿ ಚತುರ್ಥೀ ಪರ್ಜನ್ಯಸ್ಯ ಚರೋರ್ಯಾಜ್ಯಾ । ಸೂತ್ರಿತಂ ಚ । ಪ್ರ ವಾತಾ ವಾಂತಿ ಪತಯಂತಿ ವಿದ್ಯುತ ಇತ್ಯಗ್ನ್ಯಾಧೇಯಪ್ರಭೃತಿ । ಆ. ೨-೧೫ । ಇತಿ ॥

ಪ್ರ ವಾಂತಿ ವಾತಾ ವೃಷ್ಟ್ಯರ್ಥಂ । ಪತಯಂತಿ ಗಚ್ಛಂತಿ ಸಮಂತಾತ್ಸಂಚರಂತಿ ವಿದ್ಯುತಃ । ಓಷಧೀರೋಷಧಯ ಉಜ್ಜಿಹತೇ । ಉದ್ಗಚ್ಛಂತಿ । ಪ್ರವರ್ಧಂತೇ । ಸ್ವರಂತರಿಕ್ಷಂ ಪಿನ್ವತೇ । ಕ್ಷರತಿ । ಇರಾ ಭೂಮಿರ್ವಿಶ್ವಸ್ಮೈ ಸರ್ವಸ್ಮೈ ಭುವನಾಯ ಸರ್ವಜಗದ್ಧಿತಾಯ ಜಾಯತೇ । ಸಮರ್ಥಾ ಭವತಿ । ಕದೈವಮಿತಿ । ಯದ್ಯದಾ ಪರ್ಜನ್ಯೋ ದೇವಃ ಪೃಥಿವೀಂ ರೇತಸೋದಕೇನಾವತಿ ರಕ್ಷತಿ ಅಭಿಗಚ್ಛತಿ ವಾ ತದೈವಂ ಭವತಿ ॥

॥ ಪ್ರತಿಪದಾರ್ಥ ॥

**ಯತ್**—ಯಾವಾಗ । **ಪರ್ಜನ್ಯಃ**—ಪರ್ಜನ್ಯದೇವನು । **ಪೃಥಿವೀಂ**—ಪೃಥಿವಿಯನ್ನು । **ರೇತಸಾ**—ಉದಕದಿಂದ । **ಅವತಿ**—ಫಲವತ್ತನ್ನಾಗಿ ಮಾಡಿ ರಕ್ಷಿಸುವನೋ (ಆಗ) । **ವಾತಾಃ**—ವಾಯುಗಳು । **ಪ್ರ ವಾಂತಿ**—ಪ್ರಬಲವಾಗಿ ಬೀಸುತ್ತವೆ । **ವಿದ್ಯುತಃ**—ಮಿಂಚುಗಳು । **ಪತಯಂತಿ**—ಅಂತರಿಕ್ಷದಿಂದ ಸಿಡಿದು ಬೀಳುತ್ತವೆ । **ಓಷಧೀಃ**—ಓಷಧಿಗಳು । **ಉತ್ ಜಿಹತೇ**—ಆವಿರ್ಭೂತವಾಗಿ ಬೆಳೆಯುತ್ತವೆ । **ಸ್ವಃ**—ಅಂತರಿಕ್ಷವು । **ಪಿನ್ವತೇ**—ದ್ರವೀಭೂತವಾಗುತ್ತದೆ । **ಇರಾ**—ಪೃಥ್ವಿಯು । **ವಿಶ್ವಸ್ಮೈ**—ಸಮಸ್ತವಾದ । **ಭುವನಾಯ**—ಲೋಕಕ್ಕೂ । **ಜಾಯತೇ**—ಯೋಗ್ಯವಾದ (ವಾಸಸ್ಥಾನವಾಗಿ) ಆಗುತ್ತದೆ.

॥ ಭಾವಾರ್ಥ ॥

ಯಾವಾಗ ಪರ್ಜನ್ಯದೇವನು ಪೃಥ್ವಿಯನ್ನು ಉದಕದಿಂದ ಫಲವತ್ತನ್ನಾಗಿ ಮಾಡಿ ರಕ್ಷಿಸುವನೋ, ಆಗ ವಾಯುಗಳು ಪ್ರಬಲವಾಗಿ ಬೀಸುತ್ತವೆ. ಮಿಂಚುಗಳು ಅಂತರಿಕ್ಷದಿಂದ ಸಿಡಿದು ಬೀಳುತ್ತವೆ. ಓಷಧಿಗಳು ಆವಿರ್ಭೂತವಾಗುತ್ತವೆ ಅಂತರಿಕ್ಷವು ದ್ರವೀಭೂತವಾಗುತ್ತದೆ. ಪೃಥ್ವಿಯು ಸಮಸ್ತಲೋಕಕ್ಕೂ ಯೋಗ್ಯವಾದ ವಾಸಸ್ಥಾನವಾಗುತ್ತದೆ.

## English Translation.

The winds blow strong, the lightning flash, the plants spring up, the the firmament dissolves : earth becomes (fit) for all creatures when Parjanya fertilizes the soil with showers.

॥ ವಿಶೇಷವಿಷಯಗಳು ॥

**ಪ್ರವಾತಾ** ಎಂಬ ಈ ಸೂಕ್ತದ ನಾಲ್ಕನೆಯ ಋಕ್ಕನ್ನು ಪರ್ಜನ್ಯದೇವತೆಯನ್ನುದ್ದೇಶಿಸಿ ಚರುಹೋಮ ಮಾಡುವಾಗ ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಪ್ರ ವಾತಾ ವಾಂತಿ ಪತಯಂತಿ ವಿದ್ಯುತ ಇತ್ಯಗ್ನಾ ಕ್ಯ ಧೇಯಪ್ರಭೃತಿ** ಎಂಬ ಸೂತ್ರದಿಂದ (ಆ. ೨-೧೫) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

೮ಯಸ್ಯ ವ್ರತೇ ಪೃಥಿವೀ ನಂನಮೀತಿ ಯಸ್ಯ ವ್ರತೇ ಶಫವಜ್ಜರ್ಭುರೀತಿ ।
ಯಸ್ಯ ವ್ರತ ಓಷಧೀರ್ವಿಶ್ವರೂಪಾಃ ಸ ನಃ ಪರ್ಜನ್ಯ ಮಹಿ ಶರ್ಮ ಯಚ್ಛ ॥

॥ ಪದಪಾಠಃ ॥

ಯಸ್ಯ । ವ್ರತೇ । ಪೃಥಿವೀ । ನಂನಮೀತಿ । ಯಸ್ಯ । ವ್ರತೇ । ಶಫಽವತ್ । ಜರ್ಭುರೀತಿ ।
ಯಸ್ಯ । ವ್ರತೇ । ಓಷಧೀಃ । ವಿಶ್ವಽರೂಪಾಃ । ಸಃ । ನಃ । ಪರ್ಜನ್ಯ । ಮಹಿ । ಶರ್ಮ । ಯಚ್ಛ ॥ ೫ ॥

॥ ಸಾಯಣಭಾಷ್ಯಂ ॥

**ಯಸ್ಯ ಪರ್ಜನ್ಯಸ್ಯ ವ್ರತೇ ಕರ್ಮಣಿ ಪೃಥಿವೀ ನಂನಮೀತಿ ಅತ್ಯರ್ಥಂ ನಮತಿ ಸರ್ವೇಷಾಮಧೋ ಭವತಿ । ಯಸ್ಯ ವ್ರತೇ ಶಫವತ್ ಪಾದೋಪೇತಂ ಗವಾದಿಕಂ ಜರ್ಭುರೀತಿ ಭ್ರಿಯತೇ ಪೂರ್ಯತೇ ಗಚ್ಛತೀತಿ ವಾ । ಯಸ್ಯ ವ್ರತೇ ಕರ್ಮಣ್ಯೋಷಧೀರೋಷಧ್ಯೋ ವಿಶ್ವರೂಪಾ ನಾನಾರೂಪಾ ಭವಂತಿ ಹೇ ಪರ್ಜನ್ಯ ಸ ಮಹಾಂಸ್ತ್ವಂ ನೋಽಸ್ಮಭ್ಯಂ ಮಹಿ ಶರ್ಮ ಮಹತ್ ಸುಖಂ ಯಚ್ಛ । ಪ್ರಯಚ್ಛ ॥**

॥ ಪ್ರತಿಪದಾರ್ಥ ॥

**ಯಸ್ಯ**—ಯಾವ ನಿನ್ನ । **ವ್ರತೇ**—ಕರ್ಮದ ಪ್ರಭಾವದಿಂದ । **ಪೃಥಿವೀ**—ಪೃಥಿವಿಯು । **ನಂನಮೀತಿ**—ನಮ್ರತೆಯಿಂದ ಕೂಡಿರುವುದೋ । **ಯಸ್ಯ**—ಯಾವ ನಿನ್ನ । **ವ್ರತೇ**—ಕರ್ಮಗಳ ಮಾಹಾತ್ಮ್ಯದಿಂದ । **ಶಫವತ್**—ಗೊರಸುಗಳುಳ್ಳ ಪಶ್ವಾದಿಗಳು । **ಜರ್ಭುರೀತಿ**—ಪುಷ್ಟವಾಗಿ ಬೆಳೆಯುವುವೋ । **ಯಸ್ಯ**—ಯಾವ ನಿನ್ನ । **ವ್ರತೇ**—ಕರ್ಮದ ಪ್ರಭಾವವಾಗಿ । **ಓಷಧೀಃ**—ಓಷಧಿಗಳು । **ವಿಶ್ವರೂಪಾಃ**—ನಾನಾರೂಪಾತ್ಮಕವಾಗಿ ಬೆಳೆಯುವುವೋ । **ಸಃ**—ಅಂತಹ ನೀನು । **ಪರ್ಜನ್ಯ**—ಎಲೈ ಪರ್ಜನ್ಯದೇವನೇ । **ನಃ**—ನಮಗೆ । **ಮಹಿ**—ಮಹತ್ತಾಗಿ (ಪ್ರಭೂತವಾಗಿ) । **ಶರ್ಮ**—ಸುಖವನ್ನು । **ಯಚ್ಛ**—ಒದಗಿಸಿಕೊಡು.

॥ ಭಾವಾರ್ಥ ॥

ಎಲೈ ಪರ್ಜನ್ಯದೇವನೇ, ಯಾವ ನಿನ್ನ ಕರ್ಮದ ಪ್ರಭಾವದಿಂದ ಪೃಥಿವಿಯು ನಮ್ರತೆಯಿಂದ ಕೂಡಿರುವುದೋ, ಯಾವ ನಿನ್ನ ಕರ್ಮಗಳ ಮಾಹಾತ್ಮ್ಯದಿಂದಲೇ, ಗೊರಸುಗಳುಳ್ಳ ಪಶ್ವಾದಿಗಳೂ ಪುಷ್ಟವಾಗಿ ಬೆಳೆಯುವುವೋ. ಯಾವ ನಿನ್ನ ಕರ್ಮದ ಪ್ರಭಾವವಾಗಿ ಓಷಧಿಗಳು ನಾನಾ ರೂಪಾತ್ಮಕವಾಗಿ ಬೆಳೆಯುವುವೋ ಅಂತಹ ನೀನು ನಮಗೆ ಪ್ರಭೂತವಾಗಿ ಸುಖವನ್ನು ಒದಗಿಸಿಕೊಡು.

## English Translation.

O Parjanya, through whose function the earth is bowed down : through whose function hoofed cattle thrive ; through whose function plants assume all kinds of forms, grant us great felicity.

॥ ಸಂಹಿತಾಪಾಠಃ ॥

ದಿವೋ ನೋ ವೃಷ್ಟಿಂ ಮರುತೋ ರರೀಧ್ವಂ ಪ್ರ ಪಿನ್ವತ ವೃಷ್ಣೋ ಅಶ್ವಸ್ಯ ಧಾರಾಃ ।
ಅರ್ವಾಙೇತೇನ ಸ್ತನಯಿತ್ನುನೇಹ್ಯಪೋ ನಿಷಿಂಚನ್ನಸುರಃ ಪಿತಾ ನಃ ॥ ೬ ॥

॥ ಪದಪಾಠಃ ॥

ದಿವಃ । ನಃ । ವೃಷ್ಟಿಂ । ಮರುತಃ । ರರೀಧ್ವಂ । ಪ್ರ । ಪಿನ್ವತ । ವೃಷ್ಣಃ । ಅಶ್ವಸ್ಯ । ಧಾರಾಃ ।
ಅರ್ವಾಙ್ । ಏತೇನ । ಸ್ತನಯಿತ್ನುನಾ । ಆ । ಇಹಿ । ಅಪಃ । ನಿಽಸಿಂಚನ್ । ಅಸುರಃ । ಪಿತಾ । ನಃ ॥

॥ ಸಾಯಣಭಾಷ್ಯಂ ॥

ಹೇ ಮರುತೋ ಯೂಯಂ ದಿವೋಽಂತರಿಕ್ಷಸಕಾಶಾತ್ ನೋಽಸ್ಮದರ್ಥಂ ವೃಷ್ಟಿಂ ರರೀಧ್ವಂ । ದತ್ತ । ವೃಷ್ಣೋ ವರ್ಷಕಸ್ಯಾಶ್ವಸ್ಯ ವ್ಯಾಪಕಸ್ಯ ಮೇಘಸ್ಯ ಸಂಬಂಧಿನ್ಯೋ ಧಾರಾ ಉದಕಧಾರಾ ಪ್ರ ಪಿನ್ವತ । ಪ್ರಕ್ಷರತ । ಹೇ ಪರ್ಜನ್ಯ ತ್ವಮೇತೇನ ಸ್ತನಯಿತ್ನುನಾ ಗರ್ಜತಾ ಮೇಘೇನ ಸಹಾರ್ವಾಙ್ ಅಸ್ಮದಭಿಮುಖಮೇಹಿ । ಆಗಚ್ಛ । ಕಿಂ ಕುರ್ವನ್ । ಅಪೋಽಂಭಾಂಸಿ ನಿಷಿಂಚನ್ ಸ ದೇವೋಽಸುರ ಉದಕಾನಾಂ ನಿರಸಿತಾಪಿ ಸನ್ ನೋಽಸ್ಮಾಕಂ ಪಿತಾ ಪಾಲಕಶ್ಚ ॥

॥ ಪ್ರತಿಪದಾರ್ಥ ॥

**ಮರುತಃ**—ಎಲೈ ಮರುತ್ತುಗಳೇ | **ದಿವಃ**—ಅಂತರಿಕ್ಷದಿಂದ | **ನಃ**—ನಮಗಾಗಿ | **ವೃಷ್ಟಿಂ**—ವೃಷ್ಟಿಯನ್ನು | **ರರೀಧ್ವಂ**—ಸುರಿಸಿ ಕಳುಹಿಸಿಕೊಡಿ | **ವೃಷ್ಣಃ**—ವೃಷ್ಟಿಕಾರಕವೂ | **ಅಶ್ವಸ್ಯ**—ವ್ಯಾಪಕವೂ ಆದ ಮೇಘಕ್ಕೆ ಸಂಬಂಧಿಸಿದ | **ಧಾರಾಃ**—ಉದಕಧಾರೆಗಳನ್ನು | **ಪ್ರ ಪಿನ್ವತ**—ವೃದ್ಧಿಪಡಿಸಿರಿ ಮತ್ತು ಪ್ರಭೂತವಾಗಿ ಸುರಿಸಿರಿ (ಎಲೈ ಪರ್ಜನ್ಯನೇ) | **ಏತೇನ**—ಗರ್ಜಿಸುತ್ತಿರುವ ಈ ಮೇಘದಿಂದ | **ಅಪಃ**—ಉದಕವನ್ನು | **ನಿಷಿಂಚನ್**—ವೃಷ್ಟಿರೂಪದಲ್ಲಿ ಸುರಿಸುತ್ತಾ | **ಅರ್ವಾಙ್**—ನಮಗಭಿಮುಖವಾಗಿ | **ಏಹಿ**—ದಯಮಾಡು | **ಅಸುರಃ**—ಶಕ್ತಿಯುತನಾದ ನೀನು (ವೃಷ್ಟಿಕಾರಕನಾಗಿ) | **ನಃ**—ನಮಗೆ | **ಪಿತಾ**—ಪಾಲಕನಾಗಿದ್ದೀಯೆ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ನಮಗಾಗಿ ಅಂತರಿಕ್ಷದಿಂದ ವೃಷ್ಟಿಯನ್ನು ಸುರಿಸಿರಿ. ವೃಷ್ಟಿಕಾರಕವೂ, ವ್ಯಾಪಕವೂ ಆದ ಮೇಘಕ್ಕೆ ಸಂಬಂಧಿಸಿದ ಉದಕಧಾರೆಗಳನ್ನು ವೃದ್ಧಿಪಡಿಸಿರಿ ಮತ್ತು ಪ್ರಭೂತವಾಗಿ ಸುರಿಸಿರಿ. ಎಲೈ ಪರ್ಜನ್ಯನೇ, ಗರ್ಜಿಸುತ್ತಿರುವ ಈ ಮೇಘದಿಂದ ಉದಕವನ್ನು ವೃಷ್ಟಿರೂಪದಲ್ಲಿ ಸುರಿಸುತ್ತಾ ದಯಮಾಡು. ಶಕ್ತಿಯುತನಾದ ನೀನು ವೃಷ್ಟಿಕಾರಕನಾಗಿ ನಮಗೆ ಪಾಲಕನಾಗಿದ್ದೀಯೆ.

## English Translation

Send down for us, Maruts, the rain from heaven : drops of the rainy charger descend : come down Parjanya, sprinkling water by this thundering (cloud) , you who are the sender of rain, our protector.

॥ ಸಂಹಿತಾಪಾಠಃ ॥

ಅಭಿ ಕ್ರಂದ ಸ್ತನಯ ಗರ್ಭಮಾ ಧಾ ಉದನ್ವತಾ ಪರಿ ದೀಯಾ ರಥೇನ |
ದೃತಿಂ ಸು ಕರ್ಷ ವಿಷಿತಂ ನ್ಯಂಚಂ ಸಮಾ ಭವಂತೂದ್ವತೋ ನಿಪಾದಾಃ ||

॥ ಪದಪಾಠಃ ॥

ಅಭಿ | ಕ್ರಂದ | ಸ್ತನಯ | ಗರ್ಭಂ | ಆ | ಧಾಃ | ಉದನ್ऽವತಾ | ಪರಿ | ದೀಯ | ರಥೇನ |
ದೃತಿಂ | ಸು | ಕರ್ಷ | ವಿऽಸಿತಂ | ನ್ಯಂಚಂ | ಸಮಾಃ | ಭವಂತು | ಉತ್ऽವತಃ | ನಿऽಪಾದಾಃ || ೭ ||

॥ ಸಾಯಣಭಾಷ್ಯಂ ॥

**ಅಭಿ ಭೂಮ್ಯಭಿಮುಖಂ ಕ್ರಂದ । ಶಬ್ದಯ । ತದೇವ ಪುನರುಚ್ಯತೇ ದಾರ್ಢ್ಯಾರ್ಥಂ । ಸ್ತನಯ । ಗರ್ಜ । ಗರ್ಭಂ ಗರ್ಭಸ್ಥಾನೀಯಮುದಕಮೋಷಧೀಷ್ವಾ ಧಾಃ । ಆಧೇಹಿ । ತದರ್ಥಮುದನ್ವತೋದಕವತಾ ರಥೇನ ಪರಿ ದೀಯ । ಪರಿತೋ ಗಚ್ಛ । ದೃತಿಂ ದೃತಿವದುದಕಧಾರಕಂ ಮೇಘಂ ವಿಷಿತಂ ವಿಶೇಷೇಣ ಸಿತಂ ಬದ್ಧಂ ನ್ಯಂಚಂ ನ್ಯಕ್ ಅಧೋಮುಖಂ ಸು ಸುಷ್ಠು ಕರ್ಷ । ಆಕರ್ಷ ವೃಷ್ಟ್ಯರ್ಥಂ । ಯದ್ವಾ । ವಿಷಿತಂ ವಿಮುಕ್ತಬಂಧನಮೇವಂ ಕರ್ಷ । ಏವಂ ಕೃತ ಉದ್ವತ ಊರ್ಧ್ವವಂತ ಉನ್ನತಪ್ರದೇಶಾ ನಿಪಾದಾ ನ್ಯಗ್ಭೂತಪಾದಾ ನಿಕೃಷ್ಟಪಾದಾ ವಾ ನಿಮ್ನೋನ್ನತಪ್ರದೇಶಾಃ ಸಮಾ ಏಕಸ್ಥಾ ಭವಂತು । ಉದಕಪೂರ್ಣಾ ಭವಂತ್ವಿತ್ಯರ್ಥಃ ॥**

॥ ಪ್ರತಿಪದಾರ್ಥ ॥

(ಎಲೈ ಪರ್ಜನ್ಯನೇ) । **ಅಭಿ**—ಪೃಥ್ವಿಗಭಿಮುಖವಾಗಿ । **ಕ್ರಂದ**—ಶಬ್ದಮಾಡು । **ಸ್ತನಯ**—ಗರ್ಜಿಸು । **ಗರ್ಭಂ**—ಗರ್ಭರೂಪದ ಉದಕವನ್ನು । **ಆ ಧಾಃ**—(ಓಷಧಿಗಳಲ್ಲಿ) ಸ್ಥಾಪಿಸಿ ತುಂಬು । **ಉದನ್ವತಾ**—ಉದಕದೊಡನೆ ಪೂರ್ಣವಾದ । **ರಥೇನ**—ರಥದೊಡನೆ । **ಪರಿ ದೀಯ**—ಸರ್ವತ್ರ ಸಂಚರಿಸು । **ದೃತಿಂ**—ಚರ್ಮದ ಚೀಲದಂತಿರುವ ಮೇಘವನ್ನು । **ವಿಷಿತಂ**—ಅತಿಶಯವಾಗಿ ಪರಿಷ್ಕೃತವನ್ನಾಗಿ ಮಾಡಿ । **ನ್ಯಂಚಂ**—ಅಧೋಮುಖವಾಗಿ । **ಸು ಕರ್ಷ**—ವೃಷ್ಟ್ಯರ್ಥವಾಗಿ ಪ್ರೇರಿಸು । **ಉದ್ವತಃ**—ಉನ್ನತ ಪ್ರದೇಶಗಳೂ । **ನಿಪಾದಾಃ**—ತಗ್ಗು ಪ್ರದೇಶಗಳೂ । **ಸಮಾಃ**—ಒಂದೇ ರೀತಿಯಲ್ಲಿ । **ಭವಂತು**—ಉದಕ ಭರಿತವಾಗಲಿ.

॥ ಭಾವಾರ್ಥ ॥

ಎಲೈ ಪರ್ಜನ್ಯನೇ, ಪೃಥ್ವಿಗಭಿಮುಖವಾಗಿ ಶಬ್ದಮಾಡು. ಚೆನ್ನಾಗಿ ಗರ್ಜಿಸಿ ಓಷಧಿಗಳ ಗರ್ಭರೂಪವಾದ ಉದಕವನ್ನು ಅವುಗಳಲ್ಲಿ ಸ್ಥಾಪಿಸಿ ತುಂಬು. ಉದಕದೊಡನೆ ಪೂರ್ಣವಾದ ರಥದೊಡನೆ ಸರ್ವತ್ರ ಸಂಚರಿಸು. ಚರ್ಮದ ಚೀಲದಂತಿರುವ ಮೇಘವನ್ನು ಪರಿಷ್ಕೃತವನ್ನಾಗಿ ಮಾಡಿ ಅಧೋಮುಖವಾಗಿ ವೃಷ್ಟ್ಯರ್ಥವಾಗಿ ಪ್ರೇರಿಸು. ಉನ್ನತಪ್ರದೇಶಗಳೂ, ತಗ್ಗುಪ್ರದೇಶಗಳೂ, ಒಂದೇ ರೀತಿಯಲ್ಲಿ ಉದಕಭರಿತವಾಗಲಿ.

## English Translation.

Cry aloud over (the earth); thunder; impregnate the plants; traverse (the sky) with your water-laden chariot, draw open the tight-fastened, downward-turned water bag, and may the low places be made level.

॥ ಸಂಹಿತಾಪಾಠಃ ॥

ಮಹಾಂತಂ ಕೋಶಮುದಚಾ ನಿ ಷಿಂಚ ಸ್ಯಂದಂತಾಂ ಕುಲ್ಯಾ ವಿಷಿತಾಃ ಪುರಸ್ತಾತ್ ।
ಘೃತೇನ ದ್ಯಾವಾಪೃಥಿವೀ ವ್ಯುಂಧಿ ಸುಪ್ರಪಾಣಂ ಭವತ್ವಘ್ನ್ಯಾಭ್ಯಃ ॥ ೮ ॥

॥ ಪದಪಾಠಃ ॥

ಮಹಾಂತಂ । ಕೋಶಂ । ಉತ್ । ಅಚ । ನಿ । ಸಿಂಚ । ಸ್ಯಂದಂತಾಂ । ಕುಲ್ಯಾಃ । ವಿಽಸಿತಾಃ । ಪುರಸ್ತಾತ್ ।
ಘೃತೇನ । ದ್ಯಾವಾಪೃಥಿವೀ ಇತಿ । ವಿ । ಉಂಧಿ । ಸುಽಪ್ರಪಾನಂ । ಭವತು । ಅಘ್ನ್ಯಾಭ್ಯಃ ॥ ೮ ॥

॥ ಸಾಯಣಭಾಷ್ಯಂ ॥

ಹೇ ಪರ್ಜನ್ಯ ತ್ವಂ ಮಹಾಂತಂ ಪ್ರವೃದ್ಧಂ ಕೋಶಂ ಕೋಶಸ್ಥಾನೀಯಂ ಮೇಘಮುದಚ । ಉದ್ಗಚ್ಛ । ಉದ್ಗಮಯ ವಾ । ತಥಾ ಕೃತ್ವಾ ನಿ ಷಿಂಚ । ನೀಚೈಃ ಕ್ಷಾರಯ । ಕುಲ್ಯಾ ನದ್ಯೋ ವಿಷಿತಾ ವಿಮುಕ್ತಾಃ ಸತ್ಯಃ ಸ್ಯಂದಂತಾಂ ಪ್ರವಹಂತು ಪುರಸ್ತಾತ್ ಪೂರ್ವಾಭಿಮುಖಂ । ಪ್ರಾಯೇಣ ನದ್ಯಃ ಪ್ರಾಚ್ಯ ಸ್ಯಂದಂತೇ । ಘೃತೇನೋದಕೇನ ದ್ಯಾವಾಪೃಥಿವೀ ದಿವಂ ಚ ಪೃಥಿವೀಂ ಚ ವ್ಯುಂಧಿ । ಕ್ಲೇದಯಾತ್ಯಧಿಕಂ । ಅಘ್ನ್ಯಾಭ್ಯೋ ಗೋಭ್ಯಃ ಸುಪ್ರಪಾಣಂ ಸುಷ್ಠು ಪ್ರಕರ್ಷೇಣ ಪಾತವ್ಯಮುದಕಂ ಭವತು ॥

॥ ಪ್ರತಿಪದಾರ್ಥ ॥

(ಎಲೈ ಪರ್ಜನ್ಯನೇ) । **ಮಹಾಂತಂ** — ಬೃಹತ್ಸ್ವರೂಪವುಳ್ಳ । **ಕೋಶಂ** — ಚೀಲದಂತಿರುವ ಮೇಘವನ್ನು । **ಉದಚ**—ಮೇಲಕ್ಕೆ ಎತ್ತಿಹಿಡಿ । **ನಿಷಿಂಚ**—(ಉದಕವನ್ನು) ಕೆಳಕ್ಕೆ ಸುರಿಸು । **ಕುಲ್ಯಾಃ**—ನದಿಗಳು । **ವಿಷಿತಾಃ**—ತಡೆಯಿಲ್ಲದೇ । **ಪುರಸ್ತಾತ್**—ಪೂರ್ವಾಭಿಮುಖವಾಗಿ । **ಸ್ಯಂದಂತಾಂ**—ಪ್ರವಹಿಸಲಿ । **ಘೃತೇನ**—ಉದಕದಿಂದ । **ದ್ಯಾವಾಪೃಥಿವೀ**—ದ್ಯಾವಾಪೃಥಿವಿಗಳನ್ನು । **ವ್ಯುಂಧಿ**—ತೊಯ್ಯುವಂತೆ ಮಾಡು । **ಅಘ್ನ್ಯಾಭ್ಯಃ**—ಗೋವುಗಳಿಗೆ । **ಸುಪ್ರಪಾಣಂ**—ಪಾನಯೋಗ್ಯವಾದ ಉದಕವು । **ಭವತು**—ತುಂಬಿಹರಿಯಲಿ.

॥ ಭಾವಾರ್ಥ ॥

ಎಲೈ ಪರ್ಜನ್ಯನೇ, ಬೃಹತ್ಸ್ವರೂಪವುಳ್ಳದ್ದೂ, ಚೀಲದಂತಿರುವುದೂ ಆದ ಮೇಘವನ್ನು ಮೇಲಕ್ಕೆತ್ತಿ ಹಿಡಿ. ಉದಕವನ್ನು ಕೆಳಕ್ಕೆ ಸುರಿಸು. ನದಿಗಳು ತಡೆಯಿಲ್ಲದೇ, ಪೂರ್ವಾಭಿಮುಖವಾಗಿ ಹರಿಯಲಿ. ದ್ಯಾವಾಪೃಥಿವಿಗಳನ್ನು ಉದಕದಿಂದ ತೊಯ್ಯುವಂತೆ ಮಾಡು. ಗೋವುಗಳಿಗೆ ಪಾನಯೋಗ್ಯವಾದ ಉದಕವು ತುಂಬಿ ಹರಿಯಲಿ.

## English Translation.

Raise on high the mighty sheath (of rain), pour down (its contents); let the rivers flow unimpeded to the east; saturate with water both heaven and earth, and let there be abundant beverage for the cows.

॥ ಸಂಹಿತಾಪಾಠಃ ॥

ಯತ್ಪರ್ಜನ್ಯ ಕನಿಕ್ರದತ್ಸ್ತನಯನ್ ಹಂಸಿ ದುಷ್ಕೃತಃ ।
ಪ್ರತೀದಂ ವಿಶ್ವಂ ಮೋದತೇ ಯತ್ಕಿಂ ಚ ಪೃಥಿವ್ಯಾಮಧಿ ॥ ೯ ॥

॥ ಪದಪಾಠಃ ॥

ಯತ್ । ಪರ್ಜನ್ಯ । ಕನಿಕ್ರದತ್ । ಸ್ತನಯನ್ । ಹಂಸಿ । ದುಃಽಕೃತಃ ।
ಪ್ರತಿ । ಇದಂ । ವಿಶ್ವಂ । ಮೋದತೇ । ಯತ್ । ಕಿಂ । ಚ । ಪೃಥಿವ್ಯಾಂ । ಅಧಿ ॥ ೯ ॥

॥ ಸಾಯಣಭಾಷ್ಯಂ ॥

ಹೇ ಪರ್ಜನ್ಯ ಯದ್ಯದಾ ತ್ವಂ ಕನಿಕ್ರದದತ್ಯರ್ಥಂ ಶಬ್ದಯನ್ ಸ್ತನಯನ್ ದುಷ್ಕೃತಃ ಪಾಪಕೃತೋ ಮೇಘಾನ್ ಹಂಸಿ ವಿದಾರಯಸಿ ತದಾನೀಮಿದಂ ವಿಶ್ವಂ ಜಗತ್ ಪ್ರತಿ ಮೋದತೇ । ವಿಶ್ವಂ ವಿಶೇಷ್ಯತೇ । ಯತ್ಕಿಂಚ ಪೃಥಿವ್ಯಾಮಧಿ ಭೂಮ್ಯಾಮಧಿಷ್ಠಿತಂ ಯಚ್ಚರಾಚರಾತ್ಮಕಂ ತದಿದಂ ವಿಶ್ವಂ ಮೋದತೇ । ಹೃಷ್ಯತಿ । ವೃಷ್ಟೇಃ ಸರ್ವಜಗತ್ಪ್ರೀತಿಕಾರಣತ್ವಂ ಪ್ರಸಿದ್ಧಂ ॥

॥ ಪ್ರತಿಪದಾರ್ಥ ॥

ಪರ್ಜನ್ಯ—ಎಲೈ ಪರ್ಜನ್ಯನೇ । ಯತ್—ಯಾವಾಗ । ಕನಿಕ್ರದತ್—ನೀನು ಗರ್ಜನಾರೂಪವಾದ ಶಬ್ದವನ್ನು ಮಾಡುವೆಯೋ (ಮತ್ತು) । ಸ್ತನಯನ್—ಗರ್ಜಿಸುತ್ತಾ । ದುಷ್ಕೃತಃ—ಪಾಪಿಗಳನ್ನು । ಹಂಸಿ—ಕೊಲ್ಲುವೆಯೋ (ಆಗ) । ಇದಂ ವಿಶ್ವಂ—ಈ ಸಮಸ್ತಲೋಕವೂ । ಪ್ರತಿ ಮೋದತೇ—ಸಂತೋಷಪಡುತ್ತದೆ । ಪೃಥಿವ್ಯಾಂ ಅಧಿ—ಪೃಥ್ವಿಯ ಮೇಲೆ । ಯತ್ಕಿಂಚ—ಯಾವ ಯಾವ ಚೇತನಗಳಿವೆಯೋ (ಅವೆಲ್ಲವೂ ಸಂತೋಷಪಡುತ್ತವೆ)

॥ ಭಾವಾರ್ಥ ॥

ಎಲೈ ಪರ್ಜನ್ಯನೇ, ನೀನು ಯಾವಾಗ ಗರ್ಜನಾರೂಪವಾದ ಶಬ್ದವನ್ನು ಮಾಡುವೆಯೋ, ಮತ್ತು ಗರ್ಜಿಸುತ್ತಾ ಪಾಪಿಗಳನ್ನು ಕೊಲ್ಲುವೆಯೋ, ಆಗ ಸಕಲಲೋಕವೂ ಸಂತೋಷಪಡುತ್ತದೆ. ಪೃಥ್ವಿಯ ಮೇಲಿರತಕ್ಕ ಸಕಲ ಚೇತನವೂ ಸಂತೋಷಪಡುತ್ತದೆ.

## English Translation.

When, Parjanya, sounding loud and thundering, you destroy the wicked (clouds), this whole (world) rejoices, and all that is upon the earth.

॥ ಸಂಹಿತಾಪಾಠಃ ॥

ಅವರ್ಷೀರ್ವರ್ಷಮುದು ಷೂ ಗೃಭಾಯಾಕರ್ಧನ್ವಾನ್ಯತ್ಯೇತವಾ ಉ ।
ಅಜೀಜನ ಓಷಧೀರ್ಭೋಜನಾಯ ಕಮುತ ಪ್ರಜಾಭ್ಯೋಽವಿದೋ ಮನೀ-
ಷಾಂ ॥ ೧೦ ॥

॥ ಪದಪಾಠಃ ॥

ಅವರ್ಷೀಃ । ವರ್ಷಂ । ಉತ್ । ಊಂ ಇತಿ । ಸು । ಗೃಭಾಯ । ಅಕಃ । ಧನ್ವಾನಿ । ಅತಿಽಏತವೈ । ಊಂ ಇತಿ ।

ಅಜೀಜನಃ । ಓಷಧೀಃ । ಭೋಜನಾಯ । ಕಂ । ಉತ । ಪ್ರಽಜಾಭ್ಯಃ । ಅವಿದಃ । ಮನೀಷಾಂ ॥ ೧೦ ॥

॥ ಸಾಯಣಭಾಷ್ಯಂ ॥

ಇಯಮತಿವೃಷ್ಟಿವಿಮೋಚನೀ ॥ ಹೇ ಪರ್ಜನ್ಯ ತ್ವಮವರ್ಷೀಃ । ವೃಷ್ಟವಾನಸಿ । ವರ್ಷಮುದು ಷೂ ಗೃಭಾಯ । ಉತ್ಕೃಷ್ಟಂ ಸು ಸುಷ್ಠು ಗೃಭಾಯ । ಗೃಹಾಣ । ಪರಿಹರೇತ್ಯರ್ಥಃ । ಧನ್ವಾನಿ ನಿರುದಕ-ಪ್ರದೇಶಾನಕಃ । ಜಲವತಃ ಕೃತವಾನಸಿ । ಕಿಮರ್ಥಂ । ಅತ್ಯೇತವಾ ಉ । ಅತಿಕ್ರಮ್ಯ ಗಂತುಂ । ಓಷಧೀರಜೀಜನಃ । ಉದಪಾದಯಃ । ಕಿಮರ್ಥಂ । ಭೋಜನಾಯ ಧನಾಯ ಭೋಗಾಯ ವಾ । ಕಮಿತ್ಯಯಂ ಶಿಶಿರಂ ಜೀವನಾಯ ಕಂ । ನಿ. ೧-೧೦ । ಇತಿವತ್ಪಾದಪೂರಣಃ । ಉತಾಪಿ ಚ ಪ್ರಜಾಭ್ಯಃ ಸಕಾಶಾತ್ ಮನೀಷಾಂ ಸ್ತುತಿಮವಿದಃ । ಪ್ರಾಪ್ತವಾನಸಿ ॥

॥ ಪ್ರತಿಪದಾರ್ಥ ॥

(ಎಲೈ ಪರ್ಜನ್ಯನೇ) **ಅವರ್ಷೀಃ** — ನೀನು ವೃಷ್ಟಿಯನ್ನು ಸುರಿಸಿದ್ದೀಯೆ । **ವರ್ಷಮುದು**— ಅನುಸ್ಯೂತವಾಗಿ ಬೀಳತಕ್ಕ ಅದೇ ವೃಷ್ಟಿಯನ್ನು । **ಷೂ ಗೃಭಾಯ**—(ಅತಿಯಾಗದಂತೆ) ತಡೆದಿಡು । **ಧನ್ವಾನಿ**— ನೀರಿಲ್ಲದ ಮರುಳುಗಾಡುಗಳನ್ನು । **ಅತ್ಯೇತವಾ ಉ**—ದಾಟಲು ಅನುಕೂಲವಾಗುವಂತೆ । **ಅಕಃ**—ಉದಕ ಭರಿತವನ್ನಾಗಿ ಮಾಡಿದೆ । **ಓಷಧೀಃ**—ಓಷಧಿಗಳನ್ನು । **ಭೋಜನಾಯ**—ಮಾನವರ ಉಪಭೋಗಕ್ಕೆ ಯೋಗ್ಯ ವಾಗುವಂತೆ । **ಅಜೀಜನಃ**— ಉತ್ಪಾದನಮಾಡಿರುವೆ । **ಪ್ರಜಾಭ್ಯಃ**— ಋತ್ವಿಗಾದಿ ಮಾನವರಿಂದ । **ಮನೀಷಾಂ**— ಸ್ತುತಿಯನ್ನೂ । **ಅವಿದಃ**— ಪಡೆದಿರುವೆ.

॥ ಭಾವಾರ್ಥ ॥

ಎಲೈ ಪರ್ಜನ್ಯನೇ, ನೀನು ವೃಷ್ಟಿಯನ್ನು ಸುರಿಸಿದ್ದೀಯೆ. ಅನುಸ್ಯೂತವಾಗಿ ಬೀಳತಕ್ಕ ಅದೇ ವೃಷ್ಟಿಯನ್ನು ನಮಗೆ ತೊಂದರೆಯಾಗುವ ರೀತಿಯಲ್ಲಿ ಬೀಳದಂತೆ ತಡೆದಿಡು. ನೀರಿಲ್ಲದ ಮರುಳುಗಾಡುಗಳನ್ನು ದಾಟಲು ಅನುಕೂಲವಾಗುವಂತೆ ಉದಕಭರಿತವನ್ನಾಗಿ ಮಾಡಿದೆ. ಓಷಧಿಗಳನ್ನು ಮಾನವರ ಉಪಭೋಗಕ್ಕೆ ಯೋಗ್ಯವಾಗುವಂತೆ ಉತ್ಪಾದನಮಾಡಿರುವೆ. ಋತ್ವಿಗಾದಿ ಮಾನವರಿಂದ ಸ್ತುತಿಯನ್ನೂ ಪಡೆದಿರುವೆ.

## English Translation.

You have rained : now check well the rain : you have made the deserts capable of being crossed : you have given birth to plans for (man's) enjoyment : verily you have obtained laudation from the people.

# ಎಂಭತ್ತನಾಲ್ಕನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಬಳಿತ್ಥೇತಿ ತೃಚಾತ್ಮಕಂ ದ್ವಾದಶಂ ಸೂಕ್ತಂ ಭೌಮಸ್ಯಾತ್ರೇರಾರ್ಷಂ ಪೃಥಿವೀದೇವತಾಕಮಾನುಷ್ಟುಭಂ । ಅನುಕ್ರಾಂತಂ ಚ । ಬಳಿತ್ಥಾ ತೃಚಂ ಪಾರ್ಥಿವಮಾನುಷ್ಟುಭಮಿತಿ ॥ ಸೂಕ್ತವಿನಿಯೋಗೋ ಲೈಂಗಿಕಃ । ಆದ್ಯಾ ದೇವಾನಾಂ ಹವಿಃಷು ಪೃಥಿವ್ಯಾ ಅನುವಾಕ್ಯಾ । ಬಳಿತ್ಥಾ ಪರ್ವತಾನಾಂ ದೃಳ್ಹಾ ಚಿತ್ಯಾ ವನಸ್ಪತೀನ್ । ಆ. ೬-೧೪ । ಇತಿ ಹಿ ಸೂತ್ರಿತಂ ॥ ಭೂಮಿಸ್ತೋಮೇ ಚೈಷಾ ಮರುತ್ವತೀಯಶಸ್ತ್ರೇ ಸೂಕ್ತಮುಖೀಯಾ । ಆ. ೯-೫ ॥**

ಅನುವಾದವು—**ಬಳಿತ್ಥಾ** ಎಂಬ ಈ ಸೂಕ್ತವು ಆರನೆಯ ಅನುವಾಕದಲ್ಲಿ ಹನ್ನೆರಡನೆಯ ಸೂಕ್ತವು. ಇದರಲ್ಲಿ ಮೂರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಅತ್ರಿಯು ಋಷಿಯು. ಪೃಥಿವಿಯು ಅಥವಾ ಮಧ್ಯಸ್ಥಾನ ದೇವತೆಯು (ಅಂತರಿಕ್ಷ) ದೇವತೆಯು. ಅನುಷ್ಟುಪ್‌ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಬಳಿತ್ಥಾ ತೃಚಂ ಪಾರ್ಥಿವಮಾನುಷ್ಟುಭಂ** ಎಂದು ಹೇಳಿರುವುದು ಸೂಕ್ತವಿನಿಯೋಗವು ಲೈಂಗಿಕವು. ದೇವತೆಗಳನ್ನುದ್ದೇಶಿಸಿ ಹವಿಸ್ಸನ್ನು ಹೋಮಮಾಡುವಾಗ ಈ ಸೂಕ್ತದ ಮೊದಲನೆಯ ಋಕ್ಕನ್ನು ಪೃಥಿವೀದೇವತೆಯ ಹೋಮದಲ್ಲಿ ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಬಳಿತ್ಥಾ ಪರ್ವತಾನಾಂ ದೃಳ್ಹಾ ಚಿದ್ಯಾ ವನಸ್ಪತೀನ್** ಎಂಬ ಸೂತ್ರದಿಂದ (ಆ. ೬-೧೪) ವಿವೃತವಾಗಿರುವುದು ಮತ್ತು ಭೂಮಿಯನ್ನುದ್ದೇಶಿಸಿ ಪಠಿಸುವ ಸ್ತೋಮಮಂತ್ರಗಳಲ್ಲಿ ಈ ಮೊದಲನೆಯ ಋಕ್ಕನ್ನೂ ಮರುತ್ವತೀಯಶಸ್ತ್ರಮಂತ್ರಗಳ ಮೊದಲನೆಯ ಋಕ್ಕನ್ನಾಗಿ ಪಠಿಸಬೇಕೆಂದೂ ನಿರ್ದಿಷ್ಟವಾಗಿರುವುದು (ಆ. ೯-೫).

## ಸೂಕ್ತ—೮೪

ಮಂಡಲ—೫ ॥ ಅನುವಾಕ—೬ ॥ ಸೂಕ್ತ—೮೪ ॥

ಅಷ್ಟಕ—೪ ॥ ಅಧ್ಯಾಯ—೪ ॥ ವರ್ಗ—೨೯ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೩ ॥

॥ ಋಷಿಃ—ಅತ್ರಿಃ ॥

॥ ದೇವತಾ—ಪೃಥಿವೀ ॥

॥ ಛಂದಃ—ಅನುಷ್ಟುಪ್ ॥

॥ ಸಂಹಿತಾಪಾಠಃ ॥

ಬಳಿತ್ಥಾ ಪರ್ವತಾನಾಂ ಖಿದ್ರಂ ಬಿಭರ್ಷಿ ಪೃಥಿವಿ ।

ಪ್ರ ಯಾ ಭೂಮಿಂ ಪ್ರವತ್ವತಿ ಮಹ್ನಾ ಜಿನೋಷಿ ಮಹಿನಿ ॥ ೧ ॥

॥ ಪದಪಾಠಃ ॥

ಬಟ್ । ಇತ್ಥಾ । ಪರ್ವತಾನಾಂ । ಖಿದ್ರಂ । ಬಿಭರ್ಷಿ । ಪೃಥಿವಿ ।

ಪ್ರ । ಯಾ । ಭೂಮಿಂ । ಪ್ರವತ್ವತಿ । ಮಹ್ನಾ । ಜಿನೋಷಿ । ಮಹಿನಿ ॥ ೧ ॥

॥ ಸಾಯಣಭಾಷ್ಯಂ ॥

ದ್ವಿರೂಪಾ ಪೃಥಿವೀ ಚೈಷಾ ಪ್ರತ್ಯಕ್ಷದೇವತಾಪಿ ಚ । ಮಧ್ಯಸ್ಥಾನಾ ದೇವತೋಕ್ತಾ ಸಾತ್ರ ಸಂಬೋಧ್ಯ ವರ್ಣ್ಯತೇ ॥ ಹೇ ಪೃಥಿವಿ ಪ್ರಥನವತಿ ಮಧ್ಯಸ್ಥಾನದೇವತೇ । ತ್ವಮಿತ್ಥೇತ್ಥಮಮುನಾಂತರಿಕ್ಷೇ ವಾ ಬಟ್ ಸತ್ಯಂ ಪರ್ವತಾನಾಂ ಮೇಘಾನಾಂ ವಾ ಖಿದ್ರಂ ಛೇದನಂ ಭೇದನಂ ಬಿಭರ್ಷಿ । ಧಾರಯಸಿ । ಹೇ ಮಹನಿ ಮಹತಿ ಹೇ ಪ್ರವತ್ವತಿ ಪ್ರಕರ್ಷವತಿ ಪ್ರವಣೋದಕವತಿ ವಾ ಯಾ ತ್ವಂ ಭೂಮಿಂ ಪ್ರತ್ಯಕ್ಷಾಂ ಪೃಥಿವೀಂ ಮಹ್ನಾ ಮಹತ್ತ್ವೇನ ಮಹತೋದಕೇನ ವಾ ಜಿನೋಷಿ ಪ್ರಕರ್ಷೇಣ ಪ್ರೀಣಯಸಿ ॥

॥ ಪ್ರತಿಪದಾರ್ಥ ॥

**ಪೃಥಿವಿ**—ಎಲೈ ಮಧ್ಯಸ್ಥಾನದೇವತೆಯೇ । (**ತ್ವಂ**—ನೀನು) । **ಬಟ್**—ಸತ್ಯವಾಗಿಯೂ । **ಇತ್ಥಾ**—ಈ ಪ್ರಕಾರವಾಗಿ । **ಪರ್ವತಾನಾಂ**—ಮೇಘಗಳ । **ಖಿದ್ರಂ**—ರಂಧ್ರಗಳನ್ನು । **ಬಿಭರ್ಷಿ**—ಧರಿಸಿರುತ್ತೀಯೆ । **ಪ್ರವತ್ವತಿ**—ಅತಿಶಯವಾದ ಗುಣಗಳುಳ್ಳವಳೂ । **ಮಹಿನಿ**—ಮಾಹಾತ್ಮ್ಯವುಳ್ಳವಳೂ ಆದ ಎಲೈ ದೇವತೆಯೇ । **ಯಾ**—ಯಾವ ಅದೇ ನೀನು । **ಮಹ್ನಾ**—ನಿನ್ನ ಮಹತ್ವದಿಂದ । **ಭೂಮಿಂ**—ಪೃಥ್ವಿಯನ್ನು । **ಪ್ರ ಜಿನೋಷಿ**—ಅತಿಶಯವಾಗಿ ಸಂತೋಷಗೊಳಿಸುತ್ತೀಯೆ.

॥ ಭಾವಾರ್ಥ ॥

ಎಲೈ ಮಧ್ಯಸ್ಥಾನದೇವತೆಯೇ, ನೀನು ಮೇಘಗಳ ಖಂಡಗಳನ್ನು ಅತಿಶಯವಾಗಿ ಧರಿಸಿದ್ದೀಯೆ. ಉತ್ಕೃಷ್ಟವಾದ ಗುಣಗಳುಳ್ಳವಳೂ, ಮಾಹಾತ್ಮ್ಯವುಳ್ಳವಳೂ-ಆದ ಎಲೈ ದೇವತೆಯೇ, ನೀನು ಅದೇ ಗುಣಗಳಿಂದ ಪೃಥ್ವಿಯನ್ನು ಅತಿಶಯವಾಗಿ ಸಂತೋಷಗೊಳಿಸುತ್ತೀಯೆ.

Enlish Translation.

Verily you sustain here, Prithivi, the fracture of the mountains: mighty and most excellent, you are she who delights the earth by your greatness.

॥ ವಿಶೇಷವಿಷಯಗಳು ॥

ಈ ಸೂಕ್ತದ ವಿಷಯದಲ್ಲಿ ಭಾಷ್ಯಕಾರರು—

**ದ್ವಿರೂಪಾ ಪೃಥಿವೀ ಚೈಷಾ ಪ್ರತ್ಯಕ್ಷಾ ದೇವತಾಪಿ ಚ ।**
**ಮಧ್ಯಸ್ಥಾನಾ ದೇವತೋಕ್ತಾ ಸಾತ್ರ ಸಂಬೋಧ್ಯ ವಕ್ಷ್ಯತೇ ॥**

ಎಂದು ಹೇಳಿದಾರೆ. ಎಂದರೆ ಈ ಸೂಕ್ತಕ್ಕೆ ಪೃಥಿವಿಯು ದೇವತೆಯು. ಈ ಪೃಥಿವಿಯು ಎರಡುವಿಧ. ನಮ್ಮ ಕಣ್ಣುಗಳಿಗೆ ಪ್ರತ್ಯಕ್ಷವಾಗಿ ಗೋಚರವಾಗುತ್ತಿರುವ ಪೃಥಿವೀ ಅಥವಾ ಭೂಮಿಯೆಂಬುದು ಒಂದುವಿಧ. ಈ ಪೃಥಿವ್ಯಭಿಮಾನಿಯಾದ ದೇವತೆಯು ಮಧ್ಯಸ್ಥಾನದೇವತೆಯೆಂದು ಪ್ರಸಿದ್ಧವಾಗಿರುವುದು. ಇದು ಎರಡನೆಯ ವಿಧ. ಈ ಎರಡನೆಯ ವಿಧವಾದ ಮಧ್ಯಮಸ್ಥಾನದೇವತೆಯನ್ನೇ ಈ ಸೂಕ್ತದಲ್ಲಿ ಸಂಬೋಧಿಸಿ ಸ್ತುತಿಸಲಾಗಿದೆ ಎಂದಭಿಪ್ರಾಯವು.

**ಪೃಥಿವಿ**—ಪೃಥಿವೀ ಅಥವಾ ಪೃಥ್ವೀಶಬ್ದವು ಇಪ್ಪತ್ತೊಂದು ಪೃಥಿವೀ (ಭೂಮಿ) ನಾಮಗಳಲ್ಲಿಯೂ (ನಿ. ೧-೫) ಹದಿನಾರು ಅಂತರಿಕ್ಷನಾಮಗಳಲ್ಲಿಯೂ (ನಿ. ೧-೧೦) ಪಠಿತವಾಗಿದೆ. ಮತ್ತು ಪೃಥ್ವೀ (ದ್ವಿವಚನಾಂತ ಶಬ್ದ) ಎಂಬ ಶಬ್ದವು ದ್ಯಾವಾಪೃಥಿವಿನಾಮಗಳಲ್ಲಿಯೂ (ನಿ. ೩-೩೦) ಪಠಿತವಾಗಿದೆ.

**ಪೃಥು ವಿಸ್ತೀರ್ಣೇ** ಎಂಬ ಧಾತುವಿನಿಂದ ಪೃಥಿವೀ ಎಂಬ ಶಬ್ದದ ರೂಪ ನಿಷ್ಪತ್ತಿಯಾಗಿದೆ. ಪೃಥಿವೀ ಎಂದರೆ ಅತ್ಯಂತವಿಸ್ತಾರವಾದ ಪ್ರದೇಶ. ಈ ಅರ್ಥವು ಪೃಥಿವಿಗೂ ಅಥವಾ ಭೂಮಿಗೂ ಮತ್ತು ಅಂತರಿಕ್ಷ(ಆಕಾಶ)ಕ್ಕೂ ಅನ್ವಯಿಸುವುದು. ಪೃಥಿವಿಗಿಂತಲೂ ಅಂತರಿಕ್ಷವೇ ಹೆಚ್ಚು ವಿಸ್ತಾರವಾಗಿರುವುದರಿಂದ ಋಗ್ವೇದದಲ್ಲಿ ಅನೇಕಕಡೆ ಅಂತರಿಕ್ಷ ಎಂಬ ಅರ್ಥವನ್ನು ಸೂಚಿಸುವುದಕ್ಕಾಗಿ ಪೃಥಿವೀಶಬ್ದದ ಪ್ರಯೋಗವಿದೆ. ಪ್ರಕೃತಸೂಕ್ತದಲ್ಲಿ ಅಂತರಿಕ್ಷದಲ್ಲಿರುವ ಮಾಧ್ಯಮಿಕಾ ದೇವತೆಯೇ ಇಲ್ಲಿ ಸ್ತುತವಾಗಿದೆ. ಈ ಋಕ್ಕಿಗೆ ಯಾಸ್ಕರು ನಿರ್ವಚನವನ್ನು ಹೇಳಿದಾರೆ—

**ಸತ್ಯಂ ತ್ವಂ ಪರ್ವತಾನಾಂ ಮೇಘಾನಾಂ ಖೇದನಂ ಛೇದನಂ ಬಲಮುಮುತ್ರ ಧಾರಯಸಿ ಪೃಥಿವಿ ಪ್ರಜಿನ್ವಸಿ ಯಾ ಭೂಮಿಂ ಪ್ರಣವತಿ ಮಹತ್ತ್ವೇನ ಮಹತೀತ್ಯುದಕವತೀತಿ ವಾ ॥**

(ನಿ. ೧೧-೩೭)

ಎಲೈ ಮಧ್ಯಮಸ್ಥಾನದೇವತೆಯೇ, ನೀನು ನಿಜವಾಗಿಯೂ ಅಂತರಿಕ್ಷದಲ್ಲಿದ್ದುಕೊಂಡು ಮೇಘಗಳನ್ನು ಪ್ರಹರಿಸುತ್ತಾ ಅಥವಾ ಭೇದಿಸುತ್ತಾ ನಿನ್ನ ಬಲವನ್ನು ಅಂತರಿಕ್ಷದಲ್ಲಿ ಪ್ರಕಾಶಪಡಿಸುತ್ತೀಯೆ. ಎಲೈ ಮಹತ್ಸ್ವರೂಪವುಳ್ಳ (ಬೃಹದಾಕಾರವುಳ್ಳ) ದೇವತೆಯೇ, ನೀನು ಉದಕಸ್ವರೂಪದಿಂದಿದ್ದು ಅಥವಾ ಉದಕವನ್ನು ಧರಿಸಿದ್ದು ನಿನ್ನ ಅಸಾಧಾರಣ ಮಹಿಮೆಯಿಂದ ಭೂಮಿಯನ್ನು ನೆನೆಯುವಂತೆ ಮಾಡಿ ಸಂತೋಷಗೊಳಿಸುತ್ತೀಯೆ ಎಂದು ಮುಖ್ಯಾಭಿಪ್ರಾಯವು

॥ ಸಂಹಿತಾಪಾಠಃ ॥

ಸ್ತೋಮಾಸಸ್ತ್ವಾ ವಿಚಾರಿಣಿ ಪ್ರತಿ ಷ್ಟೋಭಂತ್ಯಕ್ತುಭಿಃ ।
ಪ್ರ ಯಾ ವಾಜಂ ನ ಹೇಷಂತಂ ಪೇರುಮಸ್ಯಸ್ಯರ್ಜುನಿ ॥ ೨ ॥

॥ ಪದಪಾಠಃ ॥

ಸ್ತೋಮಾಸಃ । ತ್ವಾ । ವಿऽಚಾರಿಣಿ । ಪ್ರತಿ । ಸ್ತೋಭಂತಿ । ಅಕ್ತುऽಭಿಃ ।
ಪ್ರ । ಯಾ । ವಾಜಂ । ನ । ಹೇಷಂತಂ । ಪೇರುಂ । ಅಸ್ಯಸಿ । ಅರ್ಜುನಿ ॥ ೨ ॥

॥ ಸಾಯಣಭಾಷ್ಯಂ ॥

ಹೇ ವಿಚಾರಿಣಿ ವಿವಿಧಂಚರಣಶೀಲೇ ಪೃಥಿ ವಿ ದೇವಿ ತ್ವಾ ತ್ವಾಂ ಸ್ತೋಮಾಸಃ ಸ್ತೋತಾರೋऽಕ್ತುಭಿರ್ಗಮನಶೀಲೈಃ ಸ್ತೋತ್ರೈಃ ಪ್ರತಿ ಷ್ಟೋಭಂತಿ । ಅಭಿಷ್ಟುವಂತಿ । ಕಿಂಚ ಯಾ ತ್ವಂ ಹೇಷಂತಂ ಶಬ್ದಯಂತಂ ವಾಜಂ ನ ಅಶ್ವಮಿವೋದ್ವೃತ್ತಂ ಪೇರುಂ ಪೂರಕಂ ಮೇಘಂ ಪ್ರಾಸ್ಯಸಿ ಪ್ರಕ್ಷಿಪಸಿ ಹೇ ಅರ್ಜುನಿ ಶುಭ್ರವರ್ಣೇ ಗಮನಶೀಲೇ ವಾ ॥

॥ ಪ್ರತಿಪದಾರ್ಥ ॥

**ಅರ್ಜುನಿ**—ಶುಭ್ರವರ್ಣಾತ್ಮಕಳೂ । **ವಿಚಾರಿಣಿ**—ನಾನಾವಿಧದಲ್ಲಿ ಸಂಚಾರಕ್ರಮವುಳ್ಳವಳೂ ಆದ ಎಲೈ ದೇವಿಯೇ । **ಯಾ**—ಯಾವ ನೀನು । **ಹೇಷಂತಂ**—ಶಬ್ದಮಾಡುವ । **ವಾಜಂ ನ**—ಅಶ್ವವನ್ನು ಕೆಳಭಾಗಕ್ಕೆ ಬೀಳಿಸುವಂತೆ । **ಪೇರುಂ**— ಉದಕಪೂರ್ಣವಾದ ಮೇಘವನ್ನು । **ಪ್ರಾಸ್ಯಸಿ**—ಅಧೋಭಾಗಕ್ಕೆ ಬಿಳಿಸುತ್ತೀಯೋ । **ತ್ವಾ**—ಅದೇ ನಿನ್ನನ್ನು । **ಸ್ತೋಮಾಸಃ**—ಸ್ತೋತೃಗಳು । **ಅಕ್ತುಭಿಃ**—ತಮ್ಮ ತಮ್ಮ ಸ್ತುತಿಗಳಿಂದಲೇ । **ಪ್ರತಿ ಷ್ಟೋಭಂತಿ**—ಸ್ತುತಿಸುತ್ತಾರೆ ।

॥ ಭಾವಾರ್ಥ ॥

ಶುಭ್ರವರ್ಣಾತ್ಮಕಳೂ, ನಾನಾವಿಧವಾದ ಸಂಚಾರವುಳ್ಳವಳೂ ಆದ ಎಲೈ ಮಧ್ಯಸ್ಥಾನದೇವಿಯೇ, ಶಬ್ದ ಮಾಡುತ್ತಿರುವ ಅಶ್ವವನ್ನು ಕೆಳಭಾಗಕ್ಕೆ ಬೀಳಿಸುವಂತೆ ಉದಕಪೂರ್ಣವೂ ಗರ್ಜನಶಬ್ದದಿಂದ ಕೂಡಿದುದೂ ಆದ ಮೇಘವನ್ನು ಅಧೋಭಾಗಕ್ಕೆ ಬೀಳಿಸುವ ನಿನ್ನನ್ನು ಸ್ತೋತೃಗಳು ತಮ್ಮ ತಮ್ಮ ಸ್ತುತಿಗಳಿಂದ ಪ್ರಶಂಸಿಸಿ ಪೂಜಿಸುತ್ತಾರೆ.

## English Translation.

Wanderer in various ways your worshipers hymn you with (sacred) songs ; you who, bright-hued, toss the swollen (cloud) like a neighing horse.

॥ ಸಂಹಿತಾಪಾಠಃ ॥

ದೃಳ್ಹಾ ಚಿದ್ಯಾ ವನಸ್ಪತೀನ್‌ಕ್ಷ್ಮಯಾ ದರ್ಧರ್ಷ್ಯೋಜಸಾ ।
ಯತ್ತೇ ಅಭ್ರಸ್ಯ ವಿದ್ಯುತೋ ದಿವೋ ವರ್ಷಂತಿ ವೃಷ್ಟಯಃ ॥ ೩ ॥

॥ ಪದಪಾಠಃ ॥

ದೃಳ್ಹಾ । ಚಿತ್ । ಯಾ । ವನಸ್ಪತೀನ್ । ಕ್ಷ್ಮಯಾ । ದರ್ಧರ್ಷಿ । ಓಜಸಾ ।
ಯತ್ । ತೇ । ಅಭ್ರಸ್ಯ । ವಿಽದ್ಯುತಃ । ದಿವಃ । ವರ್ಷಂತಿ । ವೃಷ್ಟಯಃ ॥ ೩ ॥

॥ ಸಾಯಣಭಾಷ್ಯಂ ॥

ದೇವಾನಾಂ ಹವಿಃಷು ದೃಳ್ಹಾ ಚಿದಿತಿ ಪೃಥಿವ್ಯಾ ಯಾಜ್ಯಾ । ಏಷೈವ ಭೂಮಿಸ್ತೋಮೇ ನಿಷ್ಕೇವಲ್ಯೇ ಸೂಕ್ತಮುಖೀಯಾ । ಸೂತ್ರಂ ತು ಪೂರ್ವಮೇವೋದಾಹೃತಂ ॥

ಹೇ ಪೃಥಿವಿ ಯಾ ತ್ವಂ ದೃಳ್ಹಾ ಚಿತ್ ॥ ಸುಪಾಂ ಸುಲುಗಿತಿ ತೃತೀಯಾಯಾ ಆಕಾರಃ ॥ ದೃಢಯಾ ಕ್ಷ್ಮಯಾ ಭೂಮ್ಯಾ ಸಹ ವನಸ್ಪತೀನ್ ವೃಕ್ಷಾನೋಜಸಾ ಬಲೇನ ದರ್ಧರ್ಷಿ ಧಾರಯಸಿ । ಅಥವಾ ದೃಢೇತಿ ವಿಧೇಯವಿಶೇಷಣಂ । ವನಸ್ಪತೀನ್ ದೃಢಾನ್ ಕೃತ್ವಾ ಧಾರಯಸೀತ್ಯರ್ಥಃ । ಯದ್ಯಸ್ಯಾಸ್ತೇ ತವ ಸಂಬಂಧಿನೋ ವೃಷ್ಟಯೋ ವರ್ಷಕಾ ಮೇಘಾ ವಿದ್ಯುತೋ ವಿದ್ಯೋತಮಾನಾದಭ್ರಸ್ಯ॥ ಪಂಚಮ್ಯರ್ಥೇ ಷಷ್ಠೀ ॥ ಅಭ್ರಾದಪಾಂ ಹರ್ತುರ್ದಿವೋಽಂತರಿಕ್ಷಾದಾದಿತ್ಯಾದ್ವಾ ವರ್ಷಂತಿ । ಅಥವಾ ಯದ್ಯಸ್ಯಾಸ್ತೇ ತವಾಭ್ರಸ್ಯ ಮೇಘಸ್ಯ ವೃಷ್ಟಯ ಉದಕಸಂಘಾತಾ ವಿದ್ಯುತೋ ವಿದ್ಯೋತಮಾನಾಯಾ ದಿವಃ ಸಕಾಶಾದ್ವರ್ಷಂತಿ ಪತಂತಿ ॥

॥ ಪ್ರತಿಪದಾರ್ಥ ॥

(ಎಲೈ ಮಧ್ಯಸ್ಥಾನದೇವಿಯೇ) **ಯತ್**—ಯಾವಾಗ । **ತೇ**—ನಿನ್ನ ಸಂಬಂಧಿಯಾದ । **ಅಭ್ರಸ್ಯ**—ಮೇಘದಿಂದ । **ವೃಷ್ಟಯಃ**—ವೃಷ್ಟಿಪ್ರವಾಹಗಳು । **ವಿದ್ಯುತಃ**—ಪ್ರಕಾಶಮಾನವಾದ । **ದಿವಃ**—ಅಂತರಿಕ್ಷದಿಂದ । **ವರ್ಷಂತಿ**—ಸುರಿಯುತ್ತವೆಯೋ (ಆಗ) । **ಯಾ**—ಯಾವ ಪ್ರಸಿದ್ಧಳಾದ ಅದೇ ನೀನು । **ದೃಳ್ಹಾ ಚಿತ್**—ಅತ್ಯಂತ ದೃಢವಾದ । **ಕ್ಷ್ಮಯಾ**—ಭೂಮಿಯೊಡಗೂಡಿ । **ಓಜಸಾ**—ನಿನ್ನ ಶಕ್ತಿಯಿಂದ । **ವನಸ್ಪತೀನ್**—ವೃಕ್ಷಗಳನ್ನು । **ದರ್ಧರ್ಷಿ**—ಭದ್ರವಾಗಿ ನಿಲ್ಲಿಸುತ್ತೀಯೆ ।

‖ ಭಾವಾರ್ಥ ‖

ಎಲೈ ಮಧ್ಯಸ್ಥಾನದೇವಿಯೇ, ಯಾವಾಗ ನಿನ್ನ ಸಂಬಂಧಿಯಾದ ಮೇಘದಿಂದ ವೃಷ್ಟಿಪ್ರವಾಹಗಳು ಪ್ರಕಾಶಮಾನವಾದ ಅಂತರಿಕ್ಷದಿಂದ ಸುರಿಯುತ್ತವೆಯೋ, ಆಗ ಪ್ರಸಿದ್ಧಳಾದ ನೀನು ನಿನ್ನ ಶಕ್ತಿಯಿಂದ ಸ್ಥಿರವಾದ ಭೂಮಿಯೊಡಗೂಡಿ ವೃಕ್ಷಗಳನ್ನು ಭದ್ರವಾಗಿ ನಿಲ್ಲಿಸುತ್ತೀಯೆ.

English Translation.

You who, with solid earth, sustain by your strength the forest lords, when the showers of your cloud fall from the shining sky.

‖ ವಿಶೇಷವಿಷಯಗಳು ‖

ದೇವತೆಗಳನ್ನುದ್ದೇಶಿಸಿ ಹವಿಸ್ಸನ್ನು ಹೋಮಮಾಡುವಾಗ ಪೃಥಿವೀದೇವತೆಯ ಹೋಮದಲ್ಲಿ **ದೃಳ್ಹಾ ಚಿತ್** ಎಂಬ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದೂ, ಭೂಮಿಯನ್ನು ಪ್ರಶಂಸಿಸುವ ಸ್ತೋಮಪಠನಕಾಲದಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಗಳಲ್ಲಿ ಈ ಋಕ್ಕನ್ನು ಸೂಕ್ತದ ಪ್ರಾರಂಭವಲ್ಲಿ ಪಠಿಸಬೇಕೆಂದೂ ಆಶ್ವಲಾಯನ ಶ್ರೌತಸೂತ್ರದಲ್ಲಿ ಹೇಳಲಾಗಿದೆ. ಆ ವಿವರವನ್ನು ಹಿಂದೆಯೇ ಹೇಳಲಾಗಿದೆ.

ಈ ಸೂಕ್ತದ ಅಂತ್ಯದಲ್ಲಿ ಪಠಿಸಬೇಕಾದ ಒಂದು ಪರಿಶಿಷ್ಟಮಂತ್ರವಿರುವುದು—

**ವರ್ಷಂತು ತೇ ವಿಭಾವರಿ ದಿವೋ ಅಭ್ರಸ್ಯ ವಿದ್ಯುತಃ ।**
**ರೋಹಂತು ಸರ್ವಬೀಜಾನ್ಯವ ಬ್ರಹ್ಮದ್ವಿಷೋ ಜಹಿ ॥**

ಎಲೈ ಪ್ರಕಾಶಮಾನವಾದ ಮಧ್ಯಮಸ್ಥಾನದೇವತೆಯೇ, ನಿನ್ನ ಅನುಗ್ರಹದಿಂದ ಅಂತರಿಕ್ಷದಲ್ಲಿರುವ ಸಿಡಿಲು ಮಿಂಚುಗಳಿಂದ ಸಹಿತವಾದ ಮೇಘಗಳು ವೃಷ್ಟಿಯನ್ನು ಸುರಿಸಲಿ. ಆ ವೃಷ್ಟಿಯಿಂದ ಆಪ್ಯಾಯನಗೊಂಡ ಭೂಮಿಯಲ್ಲಿರುವ ಸಮಸ್ತ ಬೀಜಾದಿಗಳು ಮೊಳಕೆಯಾಗಿ ಮತ್ತು ಸಸಿಯಾಗಿ ಬೆಳೆಯಲಿ. ಎಲೈ ದೇವತೆಯೇ, ನೀನು ಬ್ರಹ್ಮದ್ವೇಷಿಗಳನ್ನು ನಾಶಗೊಳಿಸು ಎಂಬ ಪ್ರಾರ್ಥನೆಯು ಇಲ್ಲಿ ಉಕ್ತವಾಗಿದೆ.

# ಎಂಭತ್ತೈದನೆಯ ಸೂಕ್ತವು

## ಪೀಠಿಕೆ

### ವರುಣದೇವನ ಸೂಕ್ಷ್ಮಪರಿಚಯ.

ವರುಣನು ಅತಿಶ್ರೇಷ್ಠನಾದ ದೇವತೆ, ಇಂದ್ರನಿಗೆ ಸಮಾನನು. ವರುಣದೇವತಾಕವಾದ ಮಂತ್ರಗಳ ಸಂಖ್ಯೆ ಬಹಳ ಕಡಿಮೆ. ಆತನನ್ನು ಮಾತ್ರ ಸ್ತುತಿಸುವ ಸೂಕ್ತಗಳು ಹನ್ನೆರಡು. ಮಂತ್ರಸಂಖ್ಯಾದೃಷ್ಟಿಯಿಂದ ನೋಡುವುದಾದರೆ ಅವನು ಮೂರನೆಯ ದರ್ಜೆಯ ದೇವತೆಯಾಗುವನು. ಅಥವಾ ಈತನ ಜೊತೆ ದೇವತೆಯಾದ ಮಿತ್ರ ಮತ್ತು ಈತನನ್ನು

ಒಟ್ಟಾಗಿ ಸ್ತುತಿಸುವ ಇಪ್ಪತ್ತುನಾಲ್ಕು ಸೂಕ್ತಗಳನ್ನು ತೆಗೆದುಕೊಂಡರೂ, ತಾರತಮ್ಯದ ಪಟ್ಟಿಯಲ್ಲಿ ಐದನೆಯ ಸ್ಥಾನ ಬರುತ್ತದೆ. ಅಶ್ವಿನೀದೇವತೆಗಳಿಗಿಂತಲೂ ಬಹಳಮಟ್ಟಿಗೆ ಕೆಳಗೂ ಮರುತ್ತುಗಳಿಗೆ ಸಮವೂ ಆದ ಸ್ಥಾನವಿದೆ ವರುಣ ದೇವತಾಕವಾದ ಮಂತ್ರಗಳ ಸಂಖ್ಯೆ ವರುಣನ ನಿಜವಾದ ಸ್ಥಾನವನ್ನಾಗಲೀ ಆತನ ಶ್ರೈಷ್ಠ್ಯವನ್ನಾಗಲೀ ವ್ಯಕ್ತಪಡಿಸುವುದಿಲ್ಲ.

ವರುಣನಿಗೆ ಮಾನುಷ ದೇಹ, ಮಾನುಷ ವ್ಯಾಪಾರಗಳುಂಟು. ಆದರೆ ಭೌತಿಕ ಶರೀರ ಮತ್ತು ವ್ಯಾಪಾರಗಳಿಗಿಂತ ಹೆಚ್ಚಾಗಿ ಆತನ ನೈತಿಕ ವ್ಯಾಪಾರಗಳ ಕಡೆಗೇ ಗಮನವಿದ್ದಂತೆ ತೋರುತ್ತದೆ. ಅವನ ದೇಹ ಮತ್ತು ಸಲಕರಣೆಗಳ ವಿವರಣೆ ಬಹಳ ಕಡಿಮೆ; ಈತನ ಕಾರ್ಯಗಳ ವಿವರಣೆಯೇ ಹೆಚ್ಚು. ಅವನಿಗೆ ಮುಖ, ಕಣ್ಣು, ತೋಳುಗಳು ಕೈಗಳು ಮತ್ತು ಪಾದಗಳಿವೆ. ಅವನು ಕೈಗಳನ್ನಾಡಿಸುತ್ತಾನೆ, ರಥ ನಡೆಯಿಸುತ್ತಾನೆ; ಕುಳಿತುಕೊಳ್ಳುತ್ತಾನೆ, ತಿನ್ನುತ್ತಾನೆ ಮತ್ತು ಪಾನಮಾಡುತ್ತಾನೆ. ವರುಣನ ಮುಖ (ಅನೀಕಂ) ವನ್ನು ಅಗ್ನಿಯ ಮುಖವೆಂದೇ ಭಾವಿಸಿದೆ. (೭-೮೮-೨; ಮತ್ತು ೭-೮೭-೬ ನ್ನು ಹೋಲಿಸಿ) ಮಿತ್ರ ವರುಣರಿಗೆ ಸೂರ್ಯನೇ ನೇತ್ರ (೧-೧೧೫-೧; ೬-೫೧-೧; ೭-೬೧-೧; ೭-೬೩-೧, ೧೦-೩೭-೧) ಸೂರ್ಯನು ಇವರಿಗೆ ನೇತ್ರಪ್ರಾಯನೆಂಬ ವಿಷಯವು ಮಿತ್ರಾವರುಣ ದೇವತಾಕವಾದ ಸೂಕ್ತಗಳ ಮೊದಲನೆಯ ಮಂತ್ರದಲ್ಲಿಯೇ ಇರುವುದರಿಂದ, ಮಿತ್ರಾವರುಣರ ಪ್ರಸ್ತಾಪ ಬಂದಾಗಲೆಲ್ಲಾ, ಮೊದಲು ಗೋಚರವಾಗುವುದೇ ಈ ಅಂಶವೆಂದು ತೋರುತ್ತದೆ. ಸೂರ್ಯದೇವತಾಕವಾದ ಸೂಕ್ತವೊಂದರಲ್ಲಿ (೧-೫೦-೬) ವರುಣನು ತನ್ನ ನೇತ್ರದಿಂದ ಮಾನವರನ್ನು ವೀಕ್ಷಿಸುತ್ತಾನೆ ಎನ್ನುವಾಗ ಆ ನೇತ್ರವು ಸೂರ್ಯನೇ ಇರಬೇಕು. ಅದ್ಯಮ, ಮಿತ್ರ ಮತ್ತು ವರುಣರು ಸೂರ್ಯನೇತ್ರರು ೭-೬೬-೧೦. ವಿಶೇಷಣವು ಎಲ್ಲಾ ದೇವತೆಗಳಿಗೂ ಉಪಯೋಗಿಸಿದೆ. ವರುಣನು ದೂರ ದೃಷ್ಟಿಯುಳ್ಳವನು (೧-೨೫-೫ ರಿಂದ ೧೬; ೮-೯೦-೨ ಮತ್ತು ಸಹಸ್ರಾಕ್ಷನು ೭-೩೪-೧೦) ಮಿತ್ರ ಮತ್ತು ವರುಣರು ತಮ್ಮ ತೋಳುಗಳನ್ನು ವಿಸ್ತರಿಸಿ (೫-೬೪-೨, ೭-೬೨-೫) ಸೂರ್ಯನ ಕಿರಣಗಳನ್ನೇ ತೋಳುಗಳನ್ನಾಗಿಮಾಡಿಕೊಂಡು ರಥವನ್ನು ಓಡಿಸುತ್ತಾರೆ. ಸವಿತೃ ಮತ್ತು ತ್ವಷ್ಟೃಗಳಂತೆ ಅವರೂ ಸುಂದರವಾದ ಹಸ್ತಗಳುಳ್ಳವರು. (ಸುಪಾಣೀ). ಮಿತ್ರಾ ವರುಣರು ತಮ್ಮ ಪಾದಗಳಿಂದ ಶೀಘ್ರವಾಗಿ ಹೋಗುತ್ತಾರೆ (೫-೬೪-೭) ಮತ್ತು ವರುಣನು ದುಷ್ಕೃತ್ಯಗಳನ್ನು ಹೊಳೆಯುವ ಪಾದಗಳಿಂದ ತುಳಿಯುತ್ತಾನೆ (೮-೪೧-೮). ಅವನು ಯಾಗಶಾಲೆಯಲ್ಲಿ ಹರಡಿರುವ ದರ್ಭೆಗಳಮೇಲೆ ಕುಳಿತು (೧-೨೬-೪, ೫-೭೨-೨) ಮಿತ್ರನೊಡನೆ, ಇತರ ದೇವತೆಗಳಂತೆ ಸೋಮಪಾನಮಾಡುತ್ತಾನೆ (೪-೪೧-೩ ಮುಂತಾದುವು). ವರುಣನು ಸುವರ್ಣಮಯವಾದ ಮೇಲುಹೊದಿಕೆ ಅಥವಾ ನಿಲುವಂಗಿಯನ್ನೂ (ದ್ರಾಪಿ). ಮತ್ತು ಹೊಳೆಯುವ ಉಡುಪನ್ನೂ ಧರಿಸುತ್ತಾನೆ (೧-೨೫-೧೩). ತುಪ್ಪದಿಂದ ಮಾಡಿದ, ಹೊಳೆಯುವ ಉಡುಪುಳ್ಳವನೆಂದೂ ಕೆಲವುಕಡೆ (೫-೬೨-೪; ೭-೬೪-೧). ಇರುವುದು ಯಜ್ಞದಲ್ಲಿ ಮಾಡುವ ಆಜ್ಯ ಹೋಮಕ್ಕೇ ಅನ್ವಯಿಸಬೇಕು. ಅವರಿಬ್ಬರೂ ಹಾಕಿಕೊಂಡಿರುವ 'ಥಳಥಳಿಸುವ ಬಟ್ಟೆಗಳೂ' ಇದೇ ಅರ್ಥದಲ್ಲಿರಬೇಕು. (೧ ೧೫೨-೧) ಶತಪಥ ಬ್ರಾಹ್ಮಣದಲ್ಲೊಂದು ಸ್ಥಳದಲ್ಲಿ ಮಾತ್ರ (೧೩-೩-೬-೫) ವರುಣನನ್ನು ಸುಂದರನೂ ಬೋಳಾಗಿರುವ ತಲೆಯುಳ್ಳವನೂ ಹಳದಿಯ ಕಣ್ಣುಳ್ಳವನೂ ಆದ ಮುದುಕನೆಂದು ಚಿತ್ರಿಸಿದೆ. ಆತನ ಸಲಕರಣೆಗಳಲ್ಲಿ ಬಹಳ ಮುಖ್ಯವಾದುದು ಅವನ ರಥ. ಅದು ಸೂರ್ಯನಂತೆ ಕಾಂತಿಯುಕ್ತವಾದುದು. (೧-೧೨೨-೧೫). ಆಸನ ಮತ್ತು ಚಾಟಿಗಳುಳ್ಳದ್ದು. (೫-೬೨-೭) ಮತ್ತು ದೃಢವಾಗಿ ಹೂಡಿಸಿವ ಕುದುರೆಗಳು ಅವನನ್ನು ಎಳೆಯುತ್ತವೆ, (೫-೬೨-೪). ಮಿತ್ರ ಮತ್ತು ವರುಣರು ಆಕಾಶದಲ್ಲಿ ಬಹಳ ಎತ್ತರವಾದ ಪ್ರದೇಶದಲ್ಲಿ ರಥಾರೋಹಣ ಮಾಡುತ್ತಾರೆ (೫-೬೩-೧). ಆ ರಥವನ್ನು ಭೂಮಿಯಮೇಲೆ ನೋಡಬೇಕೆಂಬ ಹಂಬಲ, ಕವಿಗೆ (೫-೬೩-೨) ಇರುವುದು.

ಮಿತ್ರ ಮತ್ತು ವರುಣರ ವಾಸಗೃಹವು ಸುವರ್ಣಮಯವಾದುದು. ಮತ್ತು ಮೇಲು ಲೋಕದಲ್ಲಿದೆ (೫-೬೭-೨ ; ೧-೧೩೬-೨) ಮತ್ತು ವರುಣನು ತನ್ನ ಪ್ರಾಸಾದದಲ್ಲಿ ಕುಳಿತು, ಪ್ರಪಂಚದಲ್ಲಿ ನಡೆಯುವುದನ್ನೆಲ್ಲಾ ನೋಡುತ್ತಾನೆ (೧-೨೫-೧೦ ಮತ್ತು ೧೧) ವರುಣನ ಮತ್ತು ಮಿತ್ರನ ಆಸನವು (ಸದಸ್) ದೊಡ್ಡದು. ಬಹಳ ಎತ್ತರವಾದುದು, ಸಹಸ್ರ ಸ್ತಂಬಗಳನ್ನಾಶ್ರಯಿಸಿ, ದೃಢವಾಗಿದೆ. (೫-೬೮-೫ ; ೨-೪೧-೫) ಮತ್ತು ಅವರ ಮನೆಗೆ ಸಹಸ್ರ ದ್ವಾರಗಳಿವೆ (೭-೮೮-೫) ಸರ್ವದರ್ಶಿಯಾದ ಸೂರ್ಯನು ತನ್ನ ವಾಸಸ್ಥಾನದಿಂದ ಹೊರಟು, ಮಿತ್ರ ಮತ್ತು ವರುಣರ ಮನೆಗೆ, ಮನುಷ್ಯರ ಕೆಲಸಗಳನ್ನು ತಿಳಿಸಲು, ಹೋಗುತ್ತಾನೆ (೭-೬೦-೧ ಮತ್ತು ೩) ; ಮತ್ತು ಅವರ ಪ್ರಿಯವಾದ ಮನೆಯನ್ನು ಪ್ರವೇಶಿಸುತ್ತಾನೆ (೧-೧೫೨-೪). ಅತ್ಯುನ್ನತವಾದ ಸ್ವರ್ಗಲೋಕದಲ್ಲೇ, ಪಿತೃಗಳು ವರುಣನನ್ನು ಸಂದರ್ಶಿಸುವುದು (೧೦-೧೪-೮). ಶತಪಥಬ್ರಾಹ್ಮಣದಲ್ಲಿ--ವರುಣನು ಜಗತ್ತಿಗೇ ಒಡೆಯ, ಆಕಾಶದ ಮಧ್ಯದಲ್ಲಿ ಕುಳಿತಿದ್ದಾನೆ ಮತ್ತು ಅಲ್ಲಿಂದ ತನ್ನ ಸುತ್ತಲೂ ಇರುವ ಶಿಕ್ಷೆ ವಿಧಿಸುವ ಪ್ರದೇಶಗಳನ್ನು ಪರಿಶೀಲಿಸುತ್ತಾನೆ ಎಂಬ ವಿವರಣೆ ಇದೆ (೧-೧-೬-೧)

ಕೆಲವು ಸ್ಥಳಗಳಲ್ಲಿ ವರುಣನಿಗೆ ಗೂಢಚಾರರಿದ್ದಾರೆಂದು ಹೇಳಿದೆ. ಅವರು ಅವನ ಸುತ್ತಲೂ ಕುಳಿತಿದ್ದಾರೆ. (೧-೨೪-೧೩). ಅವರು ಸ್ವರ್ಗ ಮತ್ತು ಭೂಲೋಕಗಳೆರಡನ್ನೂ ನೋಡುತ್ತಾರೆ. ಯಾಗಗಳ ವಿಚಾರವನ್ನು ಚೆನ್ನಾಗಿ ತಿಳಿದ ಇವರು ಸ್ತುತಿಪ್ರೇರಕರಾಗುತ್ತಾರೆ, (೭-೮೭-೩). ಮಿತ್ರ ಮತ್ತು ವರುಣರ ಗೂಢಚಾರರು ಪ್ರತ್ಯೇಕವಾಗಿ ಮನೆಗಳನ್ನು ಪ್ರವೇಶಿಸುತ್ತಾರೆ (೭-೬೧-೩), ಮೋಸಹೋಗುವುದಿಲ್ಲ, ಬುದ್ಧಿವಂತರು (೬-೬೭-೫) ಅಥರ್ವವೇದದಲ್ಲಿ (ಅ. ವೇ. ४-೧೬-४), ವರುಣನ ಚಾರರು ಸ್ವರ್ಗದಿಂದಿಳಿದು ಬಂದು, ಪ್ರಪಂಚವನ್ನೆಲ್ಲಾ ಸುತ್ತಿ. ಸಾವಿರಾರು ಕಣ್ಣುಗಳಿಂದ ನೋಡುತ್ತಾರೆ ಎಂದಿದೆ. ಇಲ್ಲಿ ಚಾರರೆಂದರೆ ನಕ್ಷತ್ರಗಳೇ ಇರಬೇಕು. ಆದರೆ ಋಗ್ವೇದದಲ್ಲಿ ನಕ್ಷತ್ರಗಳು ವರುಣಾದಿ ದೇವತೆಗಳ ಚಾರರಾಗಿ ಅವರಗೆ ಪ್ರಪಂಚದ ವಿದ್ಯಮಾನಗಳನ್ನು ತಿಳಿಸುತ್ತಾರೆ ಎಂಬುದಕ್ಕೆ ಆಧಾರವಿಲ್ಲ. ಪ್ರಾಯಶಃ ಲೌಕಿಕ ರಾಜರುಗಳಂತೆ, ಇವರಿಗೂ ಚಾರರುಂಟೆಂದು ವರ್ಣನೆಯಿರಬಹುದು. ಅಥವಾ, ಚಾರರು ಮಿತ್ರ ವರಣರಿಗೆ ಮಾತ್ರವಲ್ಲ; ಅಗ್ನಿ (४-४-೩) ಸೋಮ (೯-೭೩-४ ಮತ್ತು ೭) ಇಂದ್ರನೊಡನೆ ಯುದ್ಧಮಾಡಿದ ರಾಕ್ಷಸರು (೧-೩೩-೮) ಮತ್ತು ಇತರ ದೇವತೆಗಳು, ಇವರಿಗೆಲ್ಲಾ (೧೦-೧೦-೮) ಚಾರರಿದ್ದಾರೆ. ಆದಿತ್ಯರು ಗೂಢಚಾರರಂತೆ ಎತ್ತರವಾದ ಪ್ರದೇಶದಿಂದ ನೋಡುತ್ತಾರೆ (೮-४೭-೧೧) ಎಂದಿದೆ. ವರುಣನ 'ಬಂಗಾರದ ರೆಕ್ಕೆಗಳುಳ್ಳ ದೂತನು' (೧೦-೧೨೩-೬) ಸೂರ್ಯನೇ ಇರಬೇಕು.

ವರುಣನು ಒಂಟಿಯಾಗಿ ಅಥವಾ ಮಿತ್ರಸಹಿತನಾಗಿ, ಯಮ ಮತ್ತು ಇತರ ದೇವತೆಗಳಂತೆ ಅನೇಕಕಡೆ ರಾಜನೆಂದು ಕರೆಯಲ್ಪಟ್ಟಿದ್ದಾನೆ. (೧-೨४-೭, ೮ ಇತ್ಯಾದಿ). ಅವನು, ದೇವತೆಗಳು ಮತ್ತು ಮನುಷ್ಯರು ಎಲ್ಲರಿಗೂ ರಾಜನು (೧೦-೧೩೨-४ ; ೨-೨೭-೧೦) ಇಡೀ ಜಗತ್ತಿಗೂ (೫-೮೫-೩) ಮತ್ತು ಸಕಲ ಚರಾಚರ ವಸ್ತುಗಳಿಗೂ (೭-೮೭-೬) ರಾಜನು. ಸಾಮಾನ್ಯವಾಗಿ ಇಂದ್ರನು ಮಾತ್ರ ಸ್ವಾವಲಂಬಿಯಾದ ರಾಜನೆಂಬ ವರ್ಣನೆ ಇದೆ. ಆದರೆ ವರುಣನೂ ಸ್ವಾವಲಂಬಿಯು (೨-೨೮-೧). ರಾಜನೆನ್ನುವುದಕ್ಕಿಂತ ಹೆಚ್ಚು ಸಂದರ್ಭಗಳಲ್ಲಿ, ವರುಣ ಅಥವಾ ಮಿತ್ರಾವರುಣರು ಸಂರಾಟ್ ಎಂದು ಕರೆಯಲ್ಪಟ್ಟಿದ್ದಾರೆ. ಈ ವಿಶೇಷಣವು ಅಗ್ನಿಗೂ ಕಂಡುಬರುತ್ತದೆ. ಆದರೆ ಹೆಚ್ಚಾಗಿ ಇದು ಇಂದ್ರನಿಗೇ ಸಲ್ಲತಕ್ಕದ್ದು. ಇಂದ್ರನ ಎರಡರಷ್ಟು ಸಲ, ವರುಣಾ ಅಥವಾ ಮಿತ್ರಾವರುಣರಿಗೆ ಸಂರಾಟ್ ಎಂಬ

ಪ್ರಯೋಗವಿದೆ. ಇಂದ್ರ ದೇವತಾಕವಾದ ಪ್ರತಿ ಎಂಟು ಹತ್ತು ಸೂಕ್ತಗಳಿಗೆ, ವರುಣ ದೇವತಾಕವಾದ ಸೂಕ್ತವಿರುವುದು ಒಂದೇ ಎಂದಮೇಲೆ, ಈ ವಿಶೇಷಣವು ವರುಣನಿಗೇ ಸಲ್ಲತಕ್ಕದ್ದೆಂದು ಹೇಳಬಹುದು.

'ಕ್ಷತ್ರ' ಎಂಬ ವಿಶೇಷಣವು ಸಾಧಾರಣವಾಗಿ ಮಿತ್ರನಿಂದೊಡಗೂಡಿಯೂ, ಎರಡುಸಲ ಅರ್ಯಮನ ಜೊತೆಯಲ್ಲಿಯೂ, ವರುಣನಿಗೇ ಅನ್ವಯಿಸುತ್ತದೆ. ಇದಲ್ಲದೆ, ಅಗ್ನಿ, ಬೃಹಸ್ಪತಿ ಮತ್ತು ಅಶ್ವಿನೀದೇವತೆಗಳಿಗೆ ಒಂದೊಂದು ಸಲ ಮಾತ್ರ ಉಪಯೋಗಿಸಿರುವುದು ಕಂಡುಬರುತ್ತದೆ. ಇದೇರೀತಿ (ಕ್ಷತ್ರಿಯ) 'ಆಳುವವನು' ಎಂಬುದು ಬರುವ ಐದು ಸಂದರ್ಭಗಳಲ್ಲಿ, ನಾಲ್ಕುಸಲ ವರುಣ ಅಥವಾ ಆದಿತ್ಯರಿಗೂ, ಒಂದೇ ಒಂದು ಸಲ ಇತರ ದೇವತೆಗಳಿಗೂ ಹೇಳಿದೆ. 'ಅಸುರ' ಎಂಬುದು ವರುಣ ಅಥವಾ ಮಿತ್ರಾವರುಣರಿಗೇ ಇಂದ್ರ ಅಥವಾ ಅಗ್ನಿಗಿಂತ ಹೆಚ್ಚುಸಲ, ಉಪಯೋಗಿಸಿರುವುದು. ವರುಣದೇವತಾಕ ಸೂಕ್ತಗಳ ಅಲ್ಪಸಂಖ್ಯೆಯನ್ನು ಗಣನೆಗೆ ತಂದುಕೊಂಡರೆ, ಅಸುರರೆಂಬ ವಿಶೇಷಣವೂ ವರುಣನಿಗೇ ಹೆಚ್ಚಾಗಿ ಅನ್ವಯಿಸುವುದೆನ್ನಬೇಕು. ಇವರನ್ನು ದೇವತೆಗಳಲ್ಲಿ ರಹಸ್ಯಪ್ರಕೃತಿಯವರು, ಪೂಜ್ಯರು (ಅಸುರಾಃ ಆರ್ಯಾಃ) ಎಂದು ಕರೆದಿದೆ (೭-೬೫-೨).

ಮಿತ್ರ ಮತ್ತು ವರುಣರ ದೈವಿಕಶಕ್ತಿಯನ್ನು "ಮಾಯಾ" ಎಂಬ ಪದದಿಂದ ವರ್ಣಿಸಿದೆ. ಈ ದೇವತೆಗಳಿಗೆ ಅನ್ವಯಿಸಿದರೆ ಒಳ್ಳೆಯದನ್ನು ಮಾಡಲು ಅವರಿಗಿರುವ ಗೂಢವಾದ ಶಕ್ತಿ ಎಂತಲೂ, ರಾಕ್ಷಸರಿಗೆ ಅನ್ವಯಿಸುವ ಸಂದರ್ಭದಲ್ಲಿ ಅದೇ ಪದಕ್ಕೆ ಕೆಟ್ಟದ್ದನ್ನು ಮಾಡಲು ಅವರಿಗಿರುವ ಗೂಢವಾದ ಶಕ್ತಿ ಎಂತಲೂ ಅರ್ಥ. ಒಳ್ಳೆಯ ಅರ್ಥದಲ್ಲಿ ಮಿತ್ರಾವರುಣರಿಗೆ ಈ ಪದವು ಸಲ್ಲುತ್ತದೆ. ಕೆಟ್ಟ ಅರ್ಥದಲ್ಲಿ ರಾಕ್ಷಸರಿಗೆ ಅನ್ವಯಿಸುತ್ತದೆ ಇದೇರೀತಿ "ಅಸುರ" ಎಂಬ ಪದವೂ "ಸಾಮಾನ್ಯರಿಗೆ ತಿಳಿಯಲಸಾಧ್ಯನು." ಎಂಬರ್ಥದಲ್ಲಿ ಶ್ರೇಷ್ಠರಾದ ದೇವತೆಗಳಿಗೂ, "ಸುರರಲ್ಲದವರು" ಎಂಬರ್ಥದಲ್ಲಿ ರಾಕ್ಷಸರಿಗೂ ಹೊಂದುತ್ತದೆ. ತನ್ನಲ್ಲಿ ನಿಗೂಢವಾದ ಈ ಮಾಯಾಶಕ್ತಿಯಿಂದ ವರುಣನು ವಾಯುಮಂಡಲದಲ್ಲಿ ನಿಂತು, ಅಳತೆ ಕಡ್ಡಿಯಿಂದ ಅಳೆಯುವಂತೆ, ಸೂರ್ಯನಿಂದ ಭೂಮಿಯನ್ನು ಅಳೆಯುತ್ತಾನೆ (೫-೮೫-೫); ಮಿತ್ರ ಮತ್ತು ವರುಣರು ಉಷಸ್ಸನ್ನು ಕಳುಹಿಸುತ್ತಾರೆ (೩-೬೧-೭); ಸೂರ್ಯನು ಅಂತರಿಕ್ಷವನ್ನು ದಾಟುವಂತೆ ಮಾಡಿ, ಅವನನ್ನು ಮಳೆ ಮೋಡಗಳಿಂದ ಮುಸಕಾಗುವಂತೆ ಮಾಡುತ್ತಾರೆ, ಆಗ ಮಧುಮಿಶ್ರಿತವಾದ (ಸಿಹಿಯಾದ) ಹನಿಗಳು ಉದುರುತ್ತವೆ (೫-೬೩-೪); ಆಕಾಶವು ಮಳೆಗರೆಯುವಂತೆ ಮಾಡುತ್ತಾರೆ, ಮತ್ತು ಅಸುರನ (ದ್ಯುದೇವತೆ ಅಥವಾ ಪರ್ಜನ್ಯನ) ಅಡಗಿದ ಬಲದಿಂದ ಈ ಮೇಲೆ ಹೇಳಿದ ಕಾರ್ಯಗಳೆಲ್ಲವೂ ನಡೆಯುವಂತೆ ಮಾಡುತ್ತಾರೆ. ಆದ್ದರಿಂದ ಈ 'ಮಾಯಾ' ಎಂಬ ಪದವು ದೇವತೆಗಳಲ್ಲಿ ಮುಖ್ಯವಾಗಿ ವರುಣನಿಗೇ ಹೇಳಿದೆ. (೬-೪೮-೧೪; ೭-೨೮-೪; ೧೦-೯೯-೧೦; ೧೦-೧೪೭-೫).

ಇಂದ್ರನ ಸಂಬಂಧವಾದ ಕಥೆಗಳು ಅನೇಕ ಇವೆ. ಆದರೆ ವರುಣನ ವಿಷಯದಲ್ಲಿ ಇದಕ್ಕೆ ತೀರಾ ವಿರುದ್ಧವಾಗಿವೆ. ಒಂದಾದರೂ ಕಥೆಗಳಿಲ್ಲ. ಭೌತಿಕ ಮತ್ತು ನೈತಿಕ ವಿಧಿಗಳ ನಿಯಾಮಕನೆಂದು ಬಹಳವಾಗಿ ಹೊಗಳಿದೆ. ಪ್ರಕೃತಿ ನಿಯಮಗಳನ್ನು ನಿರ್ಧರಿಸುವವನು ವರುಣನು. ಅವನೇ ಭೂಮಿ ಮತ್ತು ಸ್ವರ್ಗಗಳನ್ನು ಸ್ಥಾಪಿಸಿದನು. ಮತ್ತು ಎಲ್ಲಾ ಲೋಕಗಳಲ್ಲಿಯೂ ವಾಸಿಸುತ್ತಾನೆ (೮-೪೨-೧) ಮೂರು ಊರ್ಧ್ವಲೋಕಗಳು ಮತ್ತು ಮೂರು ಭೂಲೋಕಗಳು ಅವನಲ್ಲಿವೆ (೭-೮೭-೫) ವರುಣ ಮತ್ತು ಮಿತ್ರರು ಪ್ರಪಂಚವೆಲ್ಲವನ್ನೂ ಆಳುತ್ತಾರೆ (೫-೬೩-೭). ಅಥವಾ ಎರಡು ಲೋಕಗಳನ್ನೂ ಸುತ್ತುವರೆಯುತ್ತಾರೆ (೭-೬೧-೪). ಅವರೇ ಸಮಸ್ತ ಜಗತ್ತಿಗೂ ರಕ್ಷಕರು (೨-೨೭-೪ ಇತ್ಯಾದಿ) ವರುಣನ ಅಪ್ಪಣೆಯಿಂದಲೇ ಸ್ವರ್ಗ ಮತ್ತು ಭೂಮಿಗಳನ್ನು ಬೇರೆ ಬೇರೆ ಇಟ್ಟಿರುವುದು.

(೬-೭೦-೧ ; ೭-೮೬-೧ ; ೮-೪೧-೧೦) ಮಿತ್ರನ ಸಹಾಯದಿಂದ, ವರುಣನು ಸ್ವರ್ಗ ಭೂಮಿಗಳಿಗೆ (೫ ೬೨-೩) ಅಥವಾ ಸ್ವರ್ಗ, ಭೂಮಿ ಮತ್ತು ಆಕಾಶಗಳಿಗೆ ಆಧಾರಭೂತನಾಗಿದ್ದಾನೆ (೫-೬೯-೧ ಮತ್ತು ೪). ಆಕಾಶದಲ್ಲಿ ಬಂಗಾರದ ಚೆಂಡು (ಸೂರ್ಯನು) ಪ್ರಕಾಶಿಸುವಂತೆ ಮಾಡಿದ್ದಾನೆ (೭-೮೭-೫). ಅವನು ಉದಕದಲ್ಲಿ ಅಗ್ನಿಯನ್ನೂ ಆಕಾಶದಲ್ಲಿ ಸೂರ್ಯನನ್ನೂ, ಬೆಟ್ಟದ ಮೇಲೆ ಸೋಮವನ್ನೂ, ಇಟ್ಟಿದ್ದಾನೆ (೫-೮೫-೨). ಸೂರ್ಯನಿಗೋಸ್ಕರ ಅಗಲವಾದ ದಾರಿಯನ್ನು ಮಾಡಿದ್ದಾನೆ (೧-೨೪-೮ ; ೭-೮೭-೧) ವರುಣ, ಮಿತ್ರ ಮತ್ತು ಆರ್ಯಮರು ಸೂರ್ಯನಿಗೋಸ್ಕರ ದಾರಿಯನ್ನು ಬಿಡಿಸುತ್ತಾರೆ (೭-೬೦ ೪). ಸೂರ್ಯನ ಅಶ್ವಗಳು ಓಡುವ ಸ್ಥಳಗಳಲ್ಲೆಲ್ಲಾ, ಮಿತ್ರ ಮತ್ತು ವರುಣರ ಅಧಿಕಾರವು ಸ್ಥಾಪಿತವಾಗುತ್ತದೆ (೫-೬೨-೧). ಆಕಾಶದಲ್ಲಿ ಶಬ್ದಮಾಡುತ್ತಾ ಬೀಸುವ ಗಾಳಿಯೇ ವರುಣನ ಉಸಿರು (೭-೮೭-೨).

ವರುಣನ ಅಪ್ಪಣೆಗಳಿಂದಲೇ (ವ್ರತಾನಿ), ಚಂದ್ರನು ರಾತ್ರಿಯವೇಳೆ ಪ್ರಕಾಶಿಸುತ್ತಾನೆ. ಮತ್ತು ಅಂತರಿಕ್ಷದಲ್ಲಿ ಬಹಳ ಮೇಲೆ ಇರುವ ನಕ್ಷತ್ರಗಳು ರಾತ್ರಿ ಕಾಲದಲ್ಲಿ ಮಾತ್ರ ಕಾಣಿಸಿಕೊಂಡು, ಹಗಲು ಮರೆಯಾಗುತ್ತವೆ. (೧-೨೪-೧೦) ವರುಣನು ರಾತ್ರಿಗಳನ್ನು ಆಲಂಗಿಸಿಕೊಳ್ಳುತ್ತಾನೆ (ಪರಿಷಸ್ವಜೇ) ತನ್ನ ಗೂಢವಾದ ಶಕ್ತಿಯಿಂದಲೇ ಪ್ರಾತಃಕಾಲ ಅಥವಾ ಹಗಲು (ಉಸ್ರಾಃ) ಆಗುವಂತೆ ಮಾಡುತ್ತಾನೆ. (೮-೪೧-೩) ಇದರಿಂದ ವರುಣನಿಗೂ ರಾತ್ರಿಗೂ ಇರುವ ಸಂಬಂಧವು ಅವನಿಗೂ ಹಗಲಿಗೂ ಇರುವುದಕ್ಕಿಂತ ಹೆಚ್ಚು ಸಮೀಪವಾದುದೆಂದು ಸೂಚಿತವಾಗುವುದಿಲ್ಲ. ನಿಜವಾಗಿ ನೋಡಿದರೆ ವರುಣನ ಜೊತೆಯಲ್ಲಿ ಯಾವಾಗಲೂ ಇರುವವನು ಸೂರ್ಯನೇ ಹೊರತು, ರಾತ್ರಿ ಅಥವಾ ಚಂದ್ರರಲ್ಲ. ಒಟ್ಟಿನಲ್ಲಿ ವರುಣನೇ ಹಗಲಿನ ಬೆಳಕಿಗೂ ಮತ್ತು ರಾತ್ರಿಯ ಬೆಳಕಿಗೂ ನಿಯಾಮಕನು ಆದರೆ ಸೂರ್ಯನು (ಮಿತ್ರನು) ಹಗಲಿನ ಬೆಳಕಿಗೆ ಮಾತ್ರ ನಿಯಾಮಕನು.

ಬ್ರಾಹ್ಮಣಗಳಲ್ಲಿ, ವರುಣನಿಗೂ ರಾತ್ರಿಗೂ ಅಥವಾ ರಾತ್ರಿಯ ಕಾಲದ ಆಕಾಶಕ್ಕೂ ವಿಶೇಷ ಸಂಬಂಧ ಹೇಳಿದೆ. ಮಿತ್ರನು ಹಗಲನ್ನೂ, ವರುಣನು ರಾತ್ರಿಯನ್ನೂ ಸೃಜಿಸಿದನು (ತೈ. ಸಂ. ೬-೪-೮-೩); ಹಗಲು ಮಿತ್ರನಿಗೂ, ರಾತ್ರಿ ವರುಣನಿಗೂ ಸೇರಿದುದು (ತೈ. ಸಂ. ೨-೧-೭-೪) ಶತಪಥಬ್ರಾಹ್ಮಣದಲ್ಲಿ ಭೂಲೋಕವು ಮಿತ್ರನೆಂದೂ, ಸ್ವರ್ಗಲೋಕವು ವರುಣನೆಂದೂ ಸ್ಪಷ್ಟವಾಗಿ ಹೇಳಿದೆ.

ಒಂದೊಂದು ಸ್ಥಳದಲ್ಲಿ ವರುಣನು ಋತುಗಳನ್ನು ವಿಭಜಿಸಿದನೆಂದು ಹೇಳಿದೆ. ಅವನಿಗೆ ಹನ್ನೆರಡು ತಿಂಗಳುಗಳೂ ತಿಳಿದಿವೆ (೧-೨೫-೮) ; ಮಿತ್ರ, ವರುಣ ಮತ್ತು ಅರ್ಯಮರು ಶರತ್ಕಾಲ, ತಿಂಗಳು, ಹಗಲು ಮತ್ತು ರಾತ್ರಿಗಳನ್ನು ವಿಂಗಡಿಸಿದರು (೭-೬೬-೧೧).

ಉದಕವನ್ನು ಕ್ರಮಪಡಿಸುವವನೂ ಅವನೇ ಎಂದು ಅನೇಕ ಕಡೆ ಹೇಳಿದೆ. ನದಿಗಳು ಹರಿಯುವಂತೆ ಮಾಡಿದವನೂ ಅವನೇ; ಅವನ ಅಪ್ಪಣೆಮೇರೆಯೇ ಅವುಗಳು ಸತತವಾಗಿ ಪ್ರವಹಿಸುತ್ತವೆ (೨-೨೮-೪). ನದಿಗಳು ವೇಗವಾಗಿ ಸಮುದ್ರದೊಳಕ್ಕೆ ನೀರುತಂದು ಸುರಿಯುತ್ತಿದ್ದರೂ, ಅದನ್ನು ತುಂಬದಿರುವುದು ಅವನ ಹುದುಗಿದ ಶಕ್ತಿಯಿಂದಲೇ (೫-೮೫-೬). ವರುಣ ಮತ್ತು ಮಿತ್ರರು ನದಿಗಳ ಒಡೆಯರು (೭-೬೪-೨). ವರುಣನು ಸಾಗರಗಳಿಗೆ ಒಡೆಯನೆಂಬುದು ಸಿದ್ಧವಾದ ಅಂಶವಾದರೂ, ಋಗ್ವೇದದಲ್ಲಿ ಬರುವುದು ಬಹಳ ಅಪರೂಪ. ಪ್ರಾಯಶಃ, ಇದು ಬಹಳ ಅಮುಖ್ಯವೆಂಬುದೇ ಇದಕ್ಕೆ ಕಾರಣವಿರಬಹುದು ಸಮುದ್ರದ ನೀರಿನಲ್ಲಿ ಸೇರಿಹೋಗುವ ವರುಣನನ್ನು ಅಂತರಿಕ್ಷದಲ್ಲಿರುವ ಮರುತ್ತುಗಳು, ಭೂಮಿಯಲ್ಲಿರುವ ಅಗ್ನಿ ಮತ್ತು ವಾತಾವರಣದಲ್ಲಿರುವ ವಾಯು ಇವರಿಗೆ

ಹೋಲಿಸಿದೆ (೧-೧೬೧-೧೪). ಏಳು ನದಿಗಳು, ಭೋರ್ಗರೆಯುತ್ತಿರುವ ಆಳವಾದ ಕಮರಿಯಂತಿರುವ ವರುಣನ ಬಾಯೊಳಗೆ ಧುಮುಕುತ್ತವೆ (೮-೫೮-೧೨) ಎಂಬುದು ಸಾಗರಕ್ಕೇ ಅನ್ವಯಿಸಿರಬೇಕು. ವರುಣನು ಆಕಾಶದಂತೆ (ದ್ಯೌಃ) ಸಮುದ್ರದೊಳಕ್ಕೆ ಇಳಿಯುತ್ತಾನೆ (೭-೮೭-೬). ಸಾಧಾರಣವಾಗಿ, ವರುಣನಿಗೆ ಸಂಬಂಧ ಇರುವುದೆಲ್ಲಾ ವಾಯುಮಂಡಲದಲ್ಲಿ ಇರುವ ನೀರಿನೊಡನೆಯೇ. ಮರೆಮಾಡಿಕೊಂಡಿರುವ ಸಾಗರದಂತೆ, ವರುಣನು ಆಕಾಶಕ್ಕೆ ಏರುತ್ತಾನೆ (೮-೪೧-೮). ಮನುಷ್ಯರ ಸತ್ಯಾಸತ್ಯಗಳನ್ನು ನೋಡುತ್ತಾ, ಸಿಹಿಯಾಗಿ ಹನಿಹನಿಯಾಗಿ ಕೆಳಕ್ಕೆ ಬೀಳುವ ನೀರಿನ ಮಧ್ಯದಲ್ಲಿ, ವರುಣನು ಸಂಚರಿಸುತ್ತಾನೆ (೭-೪೯-೩). ವರುಣನು ನೀರಿನ ಬಟ್ಟೆಯನ್ನೇ ಧರಿಸುತ್ತಾನೆ (೯-೯೦-೨, ೮-೬೯-೧೧ ಮತ್ತು ೧೨ ಕ್ಕೆ ಹೋಲಿಸಿ) ವೃಷ್ಟಿಗಾಗಿ ಪ್ರಾರ್ಥಿಸಲ್ಪಡುವ ದೇವತೆಗಳಲ್ಲಿ ವರುಣ ಮತ್ತು ಮಿತ್ರರೇ ಪ್ರಮುಖರು. ಪರ್ವತಗಳೆಲ್ಲಾ ಮೋಡಗಳಿಂದ ಆವೃತವಾಗಿರುವಾಗ, ಬುಡಮೇಲಾದ (ಮೋಡದಿಂದ) ಬಾನೆಯಿಂದ, ಸ್ವರ್ಗ, ಭೂಮಿ ಮತ್ತು ಆಕಾಶಗಳಿಗೆ ನೀರ್ಗರೆದು, ಭೂಮಿಯನ್ನೆಲ್ಲಾ ತೇವವಾಗಿ ಮಾಡುವವನು ವರುಣನು, (೫-೮೫-೩ ಮತ್ತು ೪). ಮಿತ್ರ ಮತ್ತು ವರುಣರ ಹತ್ತಿರ, ಕ್ಷೀರಪ್ರದವಾದ ಗೋವುಗಳು ಮತ್ತು ಜೇನು ತುಪ್ಪದ ನದಿಗಳು ಇವೆ (೫-೬೯-೨). ಮಳೆಯಿಂದ ಯುಕ್ತವಾದ ಆಕಾಶ ಮತ್ತು ಪ್ರವಹಿಸುತ್ತಿರುವ ನದಿಗಳೂ ಇವೆ (೫-೬೮-೫) ಹುಲ್ಲುಗಾವಲುಗಳನ್ನು ಘೃತದಿಂದ (ಮಳೆಯಿಂದ) ಲೂ ಮತ್ತು ಇತರ ಪ್ರದೇಶಗಳನ್ನು ಮಧುವಿನಿಂದಲೂ ನೆನೆಯಿಸುತ್ತಾರೆ (೩-೬೨-೧೬) ಅವರು ಆಕಾಶದಿಂದ ಮಳೆ ಮತ್ತು ದಣಿವಾರಿಸುವ ಪದಾರ್ಥಗಳನ್ನು ಕಳುಹಿಸುತ್ತಾರೆ (೭-೬೪-೨) ಸ್ವರ್ಗೀಯೋದಕದ ಮಳೆಯು ಅವರಿಂದಲೇ ಬರುತ್ತದೆ (೮-೨೫-೬). ಒಂದು ಇಡೀ ಸೂಕ್ತವೇ ಅವರ ಮಳೆಗರೆಯುವ ಶಕ್ತಿಯನ್ನು ಸ್ತುತಿಸುತ್ತದೆ (೫-೬೩) ಅಂತರಿಕ್ಷದ ಮತ್ತು ಸ್ವರ್ಗದ ದೇವತೆಗಳ ಪಟ್ಟಿಗಳೆರಡರಲ್ಲಿಯೂ ವರುಣನ ಹೆಸರು ಬಂದಿರುವುದಕ್ಕೆ, ಅವನಿಗೆ ನೀರು ಮತ್ತು ಮಳೆಯೊಡನಿರುವ ನಿಕಟಸಂಬಂಧವೇ ಕಾರಣವಿರಬೇಕು. ಬ್ರಾಹ್ಮಣಗಳಲ್ಲಿ, ಮಿತ್ರಾವರುಣರೂ ಮಳೆಯ ದೇವತೆಗಳು. ಅಥರ್ವವೇದದಲ್ಲಿ ವರುಣನಿಗೆ ಸಂರಾಜತ್ವ ಹೇಳಿಲ್ಲ, ಆದರೆ, ನೀರಿನ ಮೇಲಿರುವ ಅಧಿಕಾರ ಮಾತ್ರ ಹಾಗೆಯೇ ಉಳಿದಿದೆ. ಸೋಮನಿಗೆ ಪರ್ವತದೊಡನೆ ಬಾಂಧವ್ಯವಿರುವಂತೆ ವರುಣನಿಗೆ ನೀರಿನ ಬಾಂಧವ್ಯ (ಅ. ವೇ. ೪-೧೫-೧೨). ಅವನ ಬಂಗಾರದ ಮನೆಯು ನೀರಿನಲ್ಲಿದೆ (ಅ. ವೇ. ೭-೮೩-೧). ಅವನು ನೀರಿಗೆಲ್ಲಾ ಒಡೆಯನು; ಅವನು ಮತ್ತು ಮಿತ್ರರು ಮಳೆಯ ಒಡೆಯರು (ಅ. ವೇ. ೫-೨೪-೪ ಮತ್ತು ೫). ಯಜುರ್ವೇದದಲ್ಲಿ ಅವನು ಮಳೆಯ ಶಿಶುವೆಂದೂ, ತಾಯಿಯಂತಿರುವ ನೀರಿನಲ್ಲಿ ಮನೆಮಾಡಿಕೊಂಡಿರುವನೆಂದೂ (ವಾ. ಸಂ. ೧೦-೭) ಹೇಳಿದೆ. ನೀರುಗಳು ವರುಣನ ಪತ್ನಿಯರು, (ತೈ. ಸಂ. ೫-೫-೪-೧) ಮಿತ್ರ ಮತ್ತು ವರುಣರು ನೀರಿಗೆ ನಾಯಕರು (ತೈ. ಸಂ. ೬-೪-೩-೨).

ವರುಣನ ಶಾಸನಗಳು ಚೆನ್ನಾಗಿ ಸ್ಥಾಪಿತವಾಗಿವೆಯೆಂದು ಪದೇಪದೇ ಹೇಳಲ್ಪಟ್ಟಿವೆ. ಈ ಕಾರಣದಿಂದಲೇ ಅವನಿಗೆ ಧೃತವ್ರತ ಎಂದು ಹೆಸರು. ಮಿತ್ರಾವರುಣರಿಗಿಬ್ಬರಿಗೂ ಈ ವಿಶೇಷಣವು ಸಂದಿದೆ. ದೇವತೆಗಳೂ ಸಹ ವರುಣನ (೮-೪೧-೭), ಅಥವಾ ವರುಣ ಮಿತ್ರ ಮತ್ತು ಅರ್ಯಮರ ಅಪ್ಪಣೆಗಳನ್ನು ಪಾಲಿಸುತ್ತಾರೆ. ಅನಾದಿದೇವತೆಗಳೂ ಕೂಡ ಅವರ ಧೃತವ್ರತಗಳನ್ನು ಮೀರಲಾರರು. (೫-೬೯-೪; ೫-೬೩-೭ನ್ನು ಹೋಲಿಸಿ) ಮಿತ್ರಾವರುಣರು ನಿಯಮ (ಋತ) ಮತ್ತು ಬೆಳಕಿಗೆ ನಿಯಾಮಕರು. ಈ ಶಾಸನಗಳ ಬಲದಿಂದಲೇ ಅವರು ನಿಯಮಗಳಿಗೆ ಬೆಂಬಲಕೊಡಲು ಸಾಧ್ಯವಾಗಿದೆ (೫-೨೩-೫). ಈ ಗುಣವು ವಿಶೇಷವಾಗಿ ಇವರಿಬ್ಬರಲ್ಲಿ ಒಂದೊಂದು ವೇಳೆ ಆದಿತ್ಯರಲ್ಲಿ ಅಥವಾ ಇತರ ಸಾಧಾರಣ ದೇವತೆಗಳಲ್ಲಿ ಕಂಡುಬರುತ್ತದೆ. ಅವರು (ಋತ) ಸತ್ಯ ಮತ್ತು ನ್ಯಾಯವನ್ನು ಅಭಿವೃದ್ಧಿಗೊಳಿಸುವವರು (೧-೨-೮).

ವರುಣ ಅಥವಾ ಆದಿತ್ಯರು ನಿಯಮಗಳ ರಕ್ಷಕರು (ಋತಸ್ಯ ಗೋಪಾಃ) ಎಂದು ಕರೆಯಲ್ಪಟ್ಟಿದ್ದಾರೆ. ಅಗ್ನಿ, ಸೋಮರಿಗೂ ಇದು ಅನ್ವಯಿಸಿದೆ. ಋತಾವನ್ ನಿಯಮಗಳನ್ನು ಪಾಲಿಸುವವನು ಎಂಬ ವಿಶೇಷಣವು ಸಾಧಾರಣವಾಗಿ ಅಗ್ನಿಯ ವಿಷಯದಲ್ಲಿ ಪ್ರಯೋಗಿಸಿದೆ. ಮಿತ್ರಾವರುಣರಿಗೂ ಅನೇಕವೇಳೆ ಇದು ಪ್ರಯೋಗಿಸಿರುವುದು ಕಂಡುಬರುತ್ತದೆ.

ವರುಣನ ಶಕ್ತಿಯು ಅಗಾಧವಾದುದು; ಹಾರುವ ಪಕ್ಷಿಗಳಾಗಲೀ, ಹರಿಯುವ ನದಿಗಳಾಗಲೀ ಅವನ ರಾಜ್ಯದ ಗಡಿ ಮೇರೆಯನ್ನು ಸೇರಲಾರವು, ಅವನ ಶಕ್ತಿಯನ್ನು ಮೀರಲಾರವು; ಅವನ ಕೋಪವನ್ನು ತಡೆಯಲಾರವು (೧-೨೪-೬). ಮಿತ್ರಾವರುಣರ ಸೀಮೆಯನ್ನು ಆಕಾಶ ಮತ್ತು ನದಿಗಳೂ ಕೂಡ ತಲುಪಿಲ್ಲ.(೧-೧೫೧-೯) ಸಮಸ್ತವೂ ವರುಣನಲ್ಲಿಯೇ ಅಡಗಿವೆ, ಎಲ್ಲಾ ಪ್ರಾಣಿಗಳ ವಸತಿಗಳೂ ಅವನಲ್ಲಿಯೇ ಇವೆ (೮-೪೧ ಮತ್ತು ೭) ಮೂರು ಸ್ವರ್ಗ ಲೋಕಗಳೂ ಮತ್ತು ಮೂರು ಭೂಲೋಕಗಳೂ ಅವನಲ್ಲಿಯೇ ನಿಹಿತವಾಗಿವೆ (೭-೮೭-೫). ವರುಣನು ಸರ್ವಜ್ಞನು. ಆಕಾಶದಲ್ಲಿ ಪಕ್ಷಿಗಳ ಹಾರಾಟ, ಸಮುದ್ರದಲ್ಲಿ ನಾವೆಗಳ ಸಂಚಾರ ದೂರಗಾಮಿಯಾದ ವಾಯುವಿನಗತಿ, ಇವೆಲ್ಲವೂ ಅವನಿಗೆ ತಿಳಿದಿದೆ. ಹಿಂದೆ ಕಳೆದುಹೋದ ಅಥವಾ ಮುಂದೆ ಬರುವ ಎಲ್ಲಾ ಪದಾರ್ಥಗಳನ್ನೂ ಅವನು ನೋಡುತ್ತಾನೆ (೧-೨೫-೭,೯,೧೧) ಮನುಷ್ಯರ ಸತ್ಯಾಸತ್ಯಗಳ ಸಾಕ್ಷಿಯಾಗಿದ್ದಾನೆ. (೭-೪೯-೩) ಅವನಿಲ್ಲದೆ ಪ್ರಾಣಿಗಳು ಕಣ್ಣುರೆಪ್ಪೆ ಕೂಡ ಮಿಟಕಿಸಲಾರವು (೨-೨೮-೬) ಮನುಷ್ಯನ ನಿಮೇಷಗಳ ಸಂಖ್ಯೆಯು ಅವನಿಗೆ ಗೊತ್ತು ; ಪ್ರತಿಯೊಬ್ಬ ಮನುಷ್ಯನು ಮಾಡುವ ಕಾರ್ಯಗಳು, ಯೋಜನೆಗಳು, ಉಪಾಯಗಳು ಎಲ್ಲವೂ ವರುಣನಿಗೆ ತಿಳಿಯುತ್ತವೆ. (ಅ. ವೇ ೪-೧೬-೨ ಮತ್ತು ೫). ಸ್ವರ್ಗ ಮತ್ತು ಭೂಲೋಕಗಳಲ್ಲಿ ಮತ್ತು ಅವುಗಳಿಂದಾಚೆ ಇರುವುದೆಲ್ಲವನ್ನೂ ಅವನು ಗ್ರಹಿಸಬಲ್ಲನು. ಆಕಾಶದಾಚೆ ಎಷ್ಟೇದೂರ ಓಡಿಹೋದರೂ, ಯಾರೂ ವರುಣನ ದೃಷ್ಟಿಪಥವನ್ನು ಬಿಟ್ಟುಹೋಗಲಾಗುವುದಿಲ್ಲ. (ಅ. ವೇ. ೪-೧೬-೪ ಮತ್ತು ೫) ಈ ಸರ್ವಜ್ಞತ್ವವು ವರುಣನ ವೈಯಕ್ತಿಕ ಗುಣವೆಂಬುವುದಕ್ಕೆ ಈ ವಿಷಯದಲ್ಲಿ ಅಗ್ನಿಯನ್ನು ಇವನಿಗೆ ಹೋಲಿಸಿರುವುದೇ ಆಧಾರ

ನೀತಿನಿಯಾಮಕನಾಗಿ, ವರುಣನು ಇತರ ಎಲ್ಲಾ ದೇವತೆಗಳಿಗಿಂತ ಬಹಳ ಉತ್ತಮ ಸ್ಥಾನದಲ್ಲಿದ್ದಾನೆ. ಪಾಪವೆಂದರೆ ಅವನಿಗೆ ಬಹಳ ಕೋಪಬರುತ್ತದೆ. ಅವನ ನಿಯಮಗಳನ್ನುಂಲ್ಲಂಘಿಸಿದರೂ ಕೋಪ. ಇವೆರಡಕ್ಕೂ ಅವನು ಬಹಳ ಕ್ರೂರ ಶಿಕ್ಷೆಯನ್ನು ವಿಧಿಸುತ್ತಾನೆ. (೭-೮೬-೩ ಮತ್ತು ೪) ಪಾಪಿಗಳನ್ನು ಬಂಧಿಸುವ ಪಾಶವು ಅನೇಕ ಕಡೆ ಉಕ್ತವಾಗಿದೆ (೧-೨೪-೧೫; ೧-೨೫-೧೧; ೬-೭೪-೪; ೧೦-೮೫-೨೪) ಏಳು ಅಥವಾ ಮೂರು ಪದರವಾಗಿ ಹಾಕಲ್ಪಟ್ಟ, ಆ ಪಾಶವು ಅನೃತವಾದಿಯನ್ನು ಬಂಧಿಸುತ್ತದೆ. ಸತ್ಯವಾದಿಯನ್ನು ಬಿಟ್ಟುಬಿಡುತ್ತದೆ. (ಅ. ವೇ. ೪-೧೬-೬) ಅನೇಕ ಶೃಂಖಲೆಗಳನ್ನಿಟ್ಟುಕೊಂಡು, ಮಿತ್ರ ಮತ್ತು ವರುಣರು ಅನೃತನಿರೋಧಕರಾಗಿದ್ದಾರೆ. (೭-೬೫-೩) ಇಂದ್ರ ಸಹಚರಿತನಾದ ವರುಣನು ಹಗ್ಗವಲ್ಲದ ಬಂಧನಗಳಿಂದ ಕಟ್ಟುತ್ತಾನೆ. (೭-೮೪-೨) ಎಂದು ಒಂದು ಸ್ಥಳದಲ್ಲಿ ಹೇಳಿದೆ. ಇಡೀ ವೇದದಲ್ಲಿ ಒಂದೇ ಒಂದು ಕಡೆ ಈ 'ಪಾಶ' ವೆಂಬ ಪದ ಅಗ್ನಿದೇವತಾಕ ಮಂತ್ರದಲ್ಲಿ ಬಂದಿದೆ. ಅದೂ ಅವನ ಭಕ್ತರನ್ನು ಬಂಧಿಸಿರುವ ಪಾಶವನ್ನು ಬಿಡಿಸು ಎಂದು ಪ್ರಾರ್ಥಿಸುವ ಸಂದರ್ಭದಲ್ಲಿ. ಆದ್ದರಿಂದ ಈ ಪಾಶಬಂಧನ ಮತ್ತು ಮೋಚನ ಕಾರ್ಯಗಳು ವರುಣನವೇ. ಕೆಲವರು ಈ ಪಾಶ ಮತ್ತು ಅದರಿಂದ ಬಂಧನವೆಂಬುದು ನೀರನ್ನು ಅಡ್ಡಗಟ್ಟುವುದಕ್ಕೆ ಸಂಬಂಧಿಸಿದುದೆಂತಲೂ, ಮತ್ತೆ ಕೆಲವರು ರಾತ್ರಿ ಸಂಬಂಧವಾದ ಬಂಧನಗಳೆಂದೂ ಅಭಿಪ್ರಾಯಪಡುತ್ತಾರೆ ಆದರೆ ನೈತಿಕವಾಗಿ ಪತಿತರನ್ನು ಬಂಧಿಸುವ ಕಟ್ಟುಗಳು ಎಂದು ವ್ಯಂಗ್ಯವಾಗಿ ಹೇಳಿದೆಯೆನ್ನಬಹುದು. ಮಿತ್ರನಿಂದ ಕೂಡಿದ ವರುಣನು ಅನೃತವನ್ನು ಓಡಿಸುವವನು, ದ್ವೇಷಿಸುವವನು ಮತ್ತು ಶಿಕ್ಷಿಸುವವನು. (೧-೧೫೨-೧; ೭-೬೦-೫;

೬-೬೬-೧೩). ಅವರು ತಮ್ಮ ಪೂಜೆಯ ವಿಷಯದಲ್ಲಿ ತಾತ್ಸಾರದಿಂದಿರುವವರನ್ನು ಶಿಕ್ಷಿಸುತ್ತಾರೆ;(೧-೧೨೨-೯). ಆದರೆ ವರುಣನು ಪಶ್ಚಾತ್ತಾಪಪಡುವವರನ್ನು ಮನ್ನಿಸುತ್ತಾನೆ; ಹಗ್ಗದಂತೆ ಬಿಚ್ಚುತ್ತಾನೆ. ಮತ್ತು ಪಾಪಪರಿಹಾರಮಾಡುತ್ತಾನೆ. (೨-೨೮ ೫, ೫-೮೫-೭ ಮತ್ತು ೮) ಸ್ವತಃ ಮಾಡಿದ ಪಾಪದಿಂದ ಮಾತ್ರವಲ್ಲ, ಅವನ ಪೂರ್ವಿಕರು ಮಾಡಿದ ಪಾಪದಿಂದಲೂ, ಮನುಷ್ಯನನ್ನು ಬಿಡುಗಡೆಮಾಡುತ್ತಾನೆ (೭-೮೬-೫). ತನ್ನಿಂದ ವಿಧಿಸಲ್ಪಟ್ಟ ನಿಯಮಗಳನ್ನೇ ಪ್ರತಿನಿತ್ಯವೂ ಉಲ್ಲಂಘಿಸಿ, ಅನಂತರ ಪಶ್ಚಾತ್ತಾಪಪಡುವವರನ್ನೂ ಉಳಿಸಿಕೊಡುತ್ತಾನೆ. (೧-೨೫-೧); ಮತ್ತು ತನ್ನ ಆಜ್ಞೆಗಳನ್ನು ವಿಸ್ಮೃತಿಯಿಂದ ಉಲ್ಲಂಘಿಸಿದವರಲ್ಲಿ ಕನಿಕರ ತೋರಿಸುತ್ತಾನೆ (೭-೮೯-೫). ಪ್ರಾಪಂಚಿಕ ಪದಾರ್ಥಗಳಿಗಾಗಿ ಪ್ರಾರ್ಥನೆಯಿಲ್ಲದ ಇತರ ದೇವತಾಕವಾದ ಸ್ತುತಿಯೇ ಇಲ್ಲವೆನ್ನಬಹುದು. ಅದೇ ರೀತಿ ಅಪರಾಧಕ್ಷಮಾಪ್ರಾರ್ಥನೆಯಿಲ್ಲದ ವರುಣದೇವತಾಕವಾದ ಮಂತ್ರವೇ ಇಲ್ಲ.

ವರುಣನಲ್ಲಿ ನೂರುಗಟ್ಟಲೆ, ಸಾವಿರಗಟ್ಟಲೆ ಔಷಧಿಗಳು ಇವೆ; ಅವನು ಮೃತ್ಯುವನ್ನು ದೂರಮಾಡುತ್ತಾನೆ ಮತ್ತು ಪಾಪವನ್ನೂ ಪರಿಹಾರಮಾಡುತ್ತಾನೆ (೧-೨೫-೯). ಅವನು ಪ್ರಾಣಾಪಹಾರ ಮಾಡಬಲ್ಲನು; ಜೀವದಾನವನ್ನೂ ಮಾಡಬಲ್ಲನು (೧-೨೪-೧೧ ; ೧-೨೫-೧೨ ; ೭-೮೮-೪ ; ೭-೮೯-೧). ನಿತ್ಯತ್ವವನ್ನು ರಕ್ಷಣೆಮಾಡುವುದರಲ್ಲಿ ಬಹಳ ಕುಶಲನು (೮-೪೨ ೨). ಯೋಗ್ಯರಾದವರು ಆನಂದವಾಗಿ ರಾಜ್ಯವಾಳುತ್ತಿರುವ ಇಬ್ಬರು ರಾಜರನ್ನು—ವರುಣ ಮತ್ತು ಯಮರನ್ನು—ಆಮುಷ್ಮಿಕಲೋಕದಲ್ಲಿ ನೋಡಬಯಸುತ್ತಾರೆ (೧೦-೧೪-೭).

ಅವನ ಸ್ವರ್ಗಲೋಕದ ವಾಸಗೃಹದಲ್ಲಿ ಅವನೊಡನೆ ಅವನ ಆರಾಧಕರು ವ್ಯವಹರಿಸುತ್ತಾರೆ. ಮಾನಸಿಕ ಚಕ್ಷುಸ್ಸಿನಿಂದ ಅವನನ್ನು ನೋಡುತ್ತಾರೆ (೫-೨೫-೧೮ ; ೭-೮೮-೨). ಅಂತಹವರೊಡನೆ ವರುಣನು ಸರಿಸಮಾನರಂತೆ ವರ್ತಿಸುತ್ತಾನೆ (೭-೮೮-೪, ೬).

ವರುಣನ ನಿಜವಾದ ಸ್ಥಾನವೇನು, ಅವನ ಸ್ವಭಾವವೇನು ಎಂಬುದನ್ನು ತಿಳಿಯೋಣ. ಈವರೆಗೆ ತಿಳಿದಿರುವುದರಿಂದ ಇಷ್ಟು ನಿಶ್ಚಿತವಾಗುತ್ತದೆ ವರುಣನೂ, ಮಿತ್ರನೂ ಸೂರ್ಯನಿಗೆ ಸಂಬಂಧಿಸಿದವರು. ವರುಣನು ಮಿತ್ರನಿಗಿಂತ ಹೆಚ್ಚಾಗಿ ಸಂಬಂಧಪಡೆದಿದ್ದಾನೆ. ವರುಣನಿಗೆ ಹೋಲಿಸಿದರೆ, ಮಿತ್ರನಿಗೆ ವ್ಯಕ್ತಿತ್ವವೇ ಇಲ್ಲದಂತಾಗುವುದು. ಮಿತ್ರನು ಸೌರವ್ಯೂಹಕ್ಕೆ ಸೇರಿದ ದೇವತಾಗ್ರಹ. ವರುಣನು ಪ್ರಕೃತಿಯ ಬೇರೆ ಒಂದಂಶವನ್ನು ಪ್ರತಿಬಿಂಬಿಸಬೇಕು. ವರುಣ ಪದಕ್ಕೆ ಮೂಲಭೂತವಾದ ವೃ ಧಾತುವಿಗೆ ಆವರಿಸು ಎಂದರ್ಥ. ಅದರಿಂದ ವರುಣ ಎಂದರೆ ಆವರಿಸುವವನು ಅಥವಾ ಆವರಿಸುವುದು ಎಂದರ್ಥವಾಗುತ್ತದೆ. ಆದ್ದರಿಂದ ವರುಣ ಎಂಬುದರಿಂದ ಪರಿದೃಶ್ಯಮಾನವಾದ ಗುಮ್ಮಟವನ್ನು ತೆಗೆದುಕೊಳ್ಳಬಹುದು. ವರುಣ ಪದದಿಂದ ಈ ವಸ್ತುವನ್ನು ತೆಗೆದುಕೊಂಡರೆ ವರುಣನಿಂದ ಕೃತವಾದ ಕಾರ್ಯಗಳೆಲ್ಲಕ್ಕೂ ಅವಕಾಶವಿರುತ್ತದೆ. ಸೂರ್ಯನಿಗಿಂತ ಬಹಳ ವಿಸ್ತಾರವಾದ ದೊಡ್ಡ ಪದಾರ್ಥ. ಸೂರ್ಯನಿಗೂ, ವರುಣನಿಗೂ ನಿಕಟ ಬಾಂಧವ್ಯವಿದೆ; ಅವಕಾಶವಿಲ್ಲದೇ ಸೂರ್ಯಮಂಡಲವನ್ನು ಚಿಂತಿಸುವ ಹಾಗೆಯೇ ಇಲ್ಲ, ಸೂರ್ಯನು ವರುಣನ ಕಣ್ಣು; ಈ ಕಣ್ಣು (ಸೂರ್ಯನು) ಪ್ರಪಂಚದಲ್ಲಿ ನಡೆಯುವುದೆಲ್ಲವನ್ನೂ ವರುಣನಿಗೆ ತಿಳಿಸುತ್ತದೆ; ವರುಣನು ದೂರದೃಷ್ಟಿಯುಳ್ಳವನು; ಹಗಲು ಮತ್ತು ರಾತ್ರಿ ವೇಳೆಗಳೆರಡರಲ್ಲಿಯೂ ಪ್ರಪಂಚವು ವರುಣನ ಲಕ್ಷ್ಯದಲ್ಲಿರುತ್ತದೆ; ಇತ್ಯಾದಿಗಳೆಲ್ಲವೂ ಹೊಂದುತ್ತವೆ. ಅಲ್ಲದೆ, ಇನ್ನಾವ್ಯವನಾದರೂ ಆಕಾಶದಷ್ಟು ಸುಲಭವಾಗಿ ಸಂರಾಜತ್ವವನ್ನು ಪಡೆಯಲು ಸಾಧ್ಯವಿಲ್ಲ; ಏಕೆಂದರೆ, ಸೂರ್ಯನೇ ಮೊದಲಾದ ತೇಜೋರಾಶಿ

ಗಳಿಗೆಲ್ಲ ಆಶ್ರಯವಾಗಿ ಭೂಮಿಗೆ ಬಹಳ ದೂರದಲ್ಲಿ, ಮೇಲುಗಡೆ ಇರುವ ಆಕಾಶವು, ಅಹರ್ನಿಶಿಯೂ ಚರಾಚರ ವಸ್ತುಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು, ಅನುಲ್ಲಂಘನೀಯವಾದ ಶಾಸನಕರ್ತೃವಾದ ದೇವತೆ ಎಂದು ಊಹಿಸುವುದು ಕಷ್ಟವಾಗಲಾರದು.

(ಪೀಠಿಕೆ ಸಮಾಪ್ತವಾದುದು.)

॥ ಸಾಯಣಭಾಷ್ಯಂ ॥

**ಪ್ರ ಸಮ್ರಾಜ ಇತ್ಯಷ್ಟರ್ಚಂ ತ್ರಯೋದಶಂ ಸೂಕ್ತಮಾತ್ರೇಯಂ ತ್ರೈಷ್ಟುಭಂ ವಾರುಣಂ । ಅನುಕ್ರಮ್ಯತೇ ಚ । ಪ್ರ ಸಮ್ರಾಜೇಽಷ್ಟೌ ವಾರುಣಮಿತಿ । ವಿನಿಯೋಗೋ ಲೈಂಗಿಕಃ ॥**

ಅನುವಾದವು—**ಪ್ರ ಸಮ್ರಾಜೇ** ಎಂಬ ಈ ಸೂಕ್ತವು ಆರನೆಯ ಅನುವಾಕದಲ್ಲಿ ಹದಿಮೂರನೆಯ ಸೂಕ್ತವು. ಇದರಲ್ಲಿ ಎಂಟು ಋಕ್ಕುಗಳಿರುವವು. ಈ ಸೂಕ್ತಕ್ಕೆ ಅತ್ರಿಯು ಋಷಿಯು ; ವರುಣನು ದೇವತೆಯು ; ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಪ್ರ ಸಮ್ರಾಜೇಽಷ್ಟೌ ವಾರುಣಂ** ಎಂದು ಹೇಳಿರುವುದು. ವಿನಿಯೋಗವು ಲೈಂಗಿಕವು.

## ಸೂಕ್ತ—೮೫

ಮಂಡಲ— ೫॥ ಅನುವಾಕ—೬ ॥ ಸೂಕ್ತ—೮೫ ॥
ಅಷ್ಟಕ—೪ ॥ ಅಧ್ಯಾಯ—೪ ॥ ವರ್ಗ—೩೦, ೩೧ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೮ ॥
॥ ಋಷಿಃ—ಅತ್ರಿಃ ॥
॥ ದೇವತಾ—ವರುಣಃ ॥
॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಪ್ರ ಸಮ್ರಾಜೇ ಬೃಹದರ್ಚಾ ಗಭೀರಂ ಬ್ರಹ್ಮ ಪ್ರಿಯಂ ವರುಣಾಯ ಶ್ರುತಾಯ ।
ವಿ ಯೋ ಜಘಾನ ಶಮಿತೇವ ಚರ್ಮೋಪಸ್ತಿರೇ ಪೃಥಿವೀಂ ಸೂರ್ಯಾಯ ॥

॥ ಪದಪಾಠಃ ॥

ಪ್ರ । ಸಂಽರಾಜೇ । ಬೃಹತ್ । ಅರ್ಚ । ಗಭೀರಂ । ಬ್ರಹ್ಮ । ಪ್ರಿಯಂ । ವರುಣಾಯ । ಶ್ರುತಾಯ ।
ವಿ । ಯಃ । ಜಘಾನ । ಶಮಿತಾಽಇವ । ಚರ್ಮ । ಉಪಽಸ್ತಿರೇ । ಪೃಥಿವೀಂ । ಸೂರ್ಯಾಯ ॥ ೧ ॥

‖ ಸಾಯಣಭಾಷ್ಯಂ ‖

**ಅತ್ರಿಃ ಸ್ವಾತ್ಮಾನಂ ಸಂಬೋಧ್ಯ ಬ್ರವೀತಿ । ಹೇ ಅತ್ರೇ ತ್ವಂ ಸಮ್ರಾಜೇ ಸಮ್ಯಗ್ರಾಜಮಾನಾಯೇಶ್ವರಾಯ ಶ್ರುತಾಯ ಸರ್ವತ್ರ ಶ್ರೂಯಮಾಣಾಯ ವರುಣಾಯೋಪದ್ರವಸ್ಯ ನಿವಾರಕಾಯ ಜನಾನಾಮಾವರಕಾಯೈತನ್ನಾಮಕಾಯ ದೇವಾಯ ಬೃಹತ್ ಪ್ರಭೂತಂ ಗಭೀರಂ ದುರವಗಾಹಂ ಬಹ್ವರ್ಥೋಪೇತಂ ಪ್ರಿಯಂ ಪ್ರಿಯಭೂತಂ ಬ್ರಹ್ಮ ಸ್ತೋತ್ರರೂಪಂ ಕರ್ಮ ಪ್ರಾರ್ಚ । ಪ್ರಾರ್ಚಯ । ಪ್ರೋಚ್ಚಾರಯೇತ್ಯರ್ಥಃ । ಯೋ ವರುಣಃ ಶಮಿತೇವ ಚರ್ಮ ಶಮಿತಾ ಪಶುವಿಶಸನಕರ್ತಾ ಯಥೋಪಸ್ತರಣಾಯ ಚರ್ಮ ಹಂತಿ ತದ್ವತ್ಪೃಥಿವೀಂ ವಿಸ್ತೀರ್ಣಮಂತರಿಕ್ಷಂ ॥ ತೃತೀಯಸ್ಯಾಂ ಪೃಥಿವ್ಯಾಮಿತಿ ಶ್ರುತೇರಂತರಿಕ್ಷಸ್ಯಾಪಿ ಪೃಥಿವೀಶಬ್ದವಾಚ್ಯತ್ವಂ ॥ ಸೂರ್ಯಾಯ ಸೂರ್ಯಸ್ಯೋಪಸ್ತಿರ ಉಪಸ್ತರಣಾಯ ವಿ ಜಘಾನ ವಿಸ್ತಾರಯಾಮಾಸ । ವಿಸ್ತೃತಂ ಹಿ ವ್ಯವಹಾರಯೋಗ್ಯಂ ಭವತಿ ತಸ್ಮಾದ್ವ್ಯವಹಾರಾಯಾಂತರಿಕ್ಷಂ ವಿಸ್ತಾರಿತವಾನ್ । ಉರುಂ ಹಿ ರಾಜಾ ವರುಣಶ್ಚಕಾರ । ಋಗ್ವೇ. ೧-೨೪-೮ । ಇತಿ ಹ್ಯುಕ್ತಂ ॥**

‖ ಪ್ರತಿಪದಾರ್ಥ ‖

**ಶಮಿತಾ**—ಪಶುಚ್ಛೇದನ ಮಾಡುವ ಶಮಿತೃವು । **ಚರ್ಮ ಇವ**—ಚರ್ಮವನ್ನು ಹರಡುವಂತೆ । **ಯಃ**—ಯಾವ ವರುಣನು । **ಸೂರ್ಯಾಯ**—ಸೂರ್ಯನ । **ಉಪಸ್ತಿರೇ**—ಸಂಚಾರಕ್ಕಾಗಿ । **ಪೃಥಿವೀಂ**—ಅಂತರಿಕ್ಷವನ್ನು । **ವಿ ಜಘಾನ**—ವಿಸ್ತರಿಸಿ ಹರಡಿದನೋ ಅಂತಹ । **ಸಮ್ರಾಜೇ**—ಸಾರ್ವಭೌಮನಾಗಿ ಪ್ರಕಾಶಿಸುವವನೂ । **ಶ್ರುತಾಯ**—ಪ್ರಸಿದ್ಧನೂ ಆದ । **ವರುಣಾಯ**—ವರುಣದೇವನನ್ನುದ್ದೇಶಿಸಿ **ಬೃಹತ್**—ಪ್ರಭೂತವಾದುದೂ । **ಗಭೀರಂ**—ಅತಿಶಯವಾದ ಅರ್ಥಗಳಿಂದ ಕೂಡಿದುದೂ । **ಪ್ರಿಯಂ**—ಪ್ರೀತಿಕಾರಕವಾದುದೂ ಆದ । **ಬ್ರಹ್ಮ**—ಸ್ತೋತ್ರವನ್ನು । **ಪ್ರ ಅರ್ಚ**—ಪಠಿಸಿ ಅರ್ಪಿಸಿರಿ.

‖ ಭಾವಾರ್ಥ ‖

ಎಲೈ ಅತ್ರಿಯೇ, ಪಶುಚ್ಛೇದನಮಾಡುವ ಶಮಿತೃವು ಚರ್ಮವನ್ನು ಹರಡುವಂತೆ, ಯಾವ ವರುಣನು ಸೂರ್ಯನ ಸಂಚಾರಕ್ಕಾಗಿ ಅಂತರಿಕ್ಷವನ್ನು ವಿಸ್ತರಿಸಿ ಹರಡಿದನೋ ಅಂತಹ ಸಾರ್ವಭೌಮನಾಗಿ ಪ್ರಕಾಶಿಸುವವನೂ ಪ್ರಸಿದ್ಧನೂ ಆದ ವರುಣದೇವನನ್ನುದ್ದೇಶಿಸಿ ಪ್ರಭೂತವಾದುದೂ ಅತಿಶಯವಾದ ಅರ್ಥಗಳಿಂದ ಕೂಡಿದುದೂ ಪ್ರೀತಿಕಾರಕವಾದುದೂ ಆದ ಸ್ತೋತ್ರವನ್ನು ಪಠಿಸಿ ಅರ್ಪಿಸಿರಿ.

## English Translation.

Offer a solemn, profound, and acceptable prayer to the imperial and renowned Varuna, who has spread the firmament as a bed for the sun, as the immolator (spreads) the skin of the victim.

‖ ವಿಶೇಷವಿಷಯಗಳು ‖

**ಶಮಿತಾ ಚರ್ಮ ಇವ**—ಪಶುಚ್ಛೇದನ ಮಾಡುವ ಶಮಿತೃವು ಪಶುವಿನ ಚರ್ಮವನ್ನು ಹರಡುವಂತೆ । ಯಜ್ಞದಲ್ಲಿ ಪಶುವನ್ನು ಕೊಂದು ಕತ್ತರಿಸುವವನಿಗೆ ಶಮಿತೃವೆಂದು ಹೆಸರು. ಯಜ್ಞದಲ್ಲಿ ಪಶುವನ್ನು ಕೊಂದಮೇಲೆ

ಆ ಪಶುವಿನ ಚರ್ಮವನ್ನು ಶಮಿತೃವು ಒಣಗುವುದಕ್ಕಾಗಿ ಬಿಸಲಲ್ಲಿ ಅಗಲವಾಗಿ ಹರಡುವನು. ಈ ರೀತಿ ಅಗಲವಾಗಿ ಹರಡುವ ವಿಷಯವನ್ನು ಉಪಮಾನವಾಗಿ ಹೇಳಿ ವರುಣನು ಸೂರ್ಯನ ಸಂಚಾರಕ್ಕಾಗಿ ಅಂತರಿಕ್ಷವನ್ನು ವಿಸ್ತಾರ ವಾಗುವಂತೆ ಹರಡಿ ದೊಡ್ಡದನ್ನಾಗಿ ಮಾಡಿದನು ಎಂದು ವರುಣನ ಅಸಾಧಾರಣಸಾಮರ್ಥ್ಯವನ್ನು ವಿವರಿಸಿ ಈ ವಿಷಯ ಸಮರ್ಥನೆಗಾಗಿ—

**ಉರುಂ ಹಿ ರಾಜಾ ವರುಣಶ್ಚಕಾರ ಸೂರ್ಯಾಯ ಪಂಥಾಮನ್ವೇತವಾ ಉ॥**

ಎಂಬ ಋಕ್ಕನ್ನು ಉದಾಹರಿಸಿರುವರು. (ಋ. ಸಂ. ೧-೨೪-೮)

॥ ಸಂಹಿತಾಪಾಠಃ ॥

ವನೇ॑ಷು॒ ವ್ಯ೧॑ನ್ತರಿ॑ಕ್ಷಂ ತತಾನ॒ ವಾಜ॒ಮರ್ವ॑ತ್ಸು॒ ಪಯ॑ ಉಸ್ರಿ॒ಯಾಸು॑ ।
ಹೃ॒ತ್ಸು ಕ್ರತುಂ॒ ವರು॑ಣೋ ಅ॒ಪ್ಸ್ವ೧॒॑ಗ್ನಿಂ ದಿ॒ವಿ ಸೂರ್ಯ॑ಮದಧಾ॒ತ್ಸೋಮ॒-
ಮದ್ರೌ॑ ॥ ೨ ॥

॥ ಪದಪಾಠಃ ॥

**ವನೇ॑ಷು । ವಿ । ಅ॒ನ್ತರಿ॑ಕ್ಷಂ । ತ॒ತಾ॒ನ॒ । ವಾಜಂ॑ । ಅರ್ವ॑ತ್ಽಸು । ಪಯಃ॑ । ಉ॒ಸ್ರಿ॒ಯಾಸು॑ ।**
**ಹೃ॒ತ್ಽಸು । ಕ್ರತುಂ॑ । ವರು॑ಣಃ । ಅ॒ಪ್ಽಸು । ಅ॒ಗ್ನಿಂ । ದಿ॒ವಿ । ಸೂರ್ಯಂ॑ । ಅ॒ದ॒ಧಾ॒ತ್ । ಸೋಮಂ॑ ।**
**ಅದ್ರೌ॑ ॥ ೨ ॥**

॥ ಸಾಯಣಭಾಷ್ಯಂ ॥

**ಅಯಂ ವರುಣೋ ವನೇಷು ವೃಕ್ಷಾಗ್ರೇಷ್ವಂತರಿಕ್ಷಂ ವಿ ತತಾನ । ವಿಸ್ತಾರಿತವಾನ್ । ತಥಾ ವಾಜಸನೇಯಕಂ । ವನೇಷು ಹೀದಮೇಷು ವೃಕ್ಷಾಗ್ರೇಷ್ವಂತರಿಕ್ಷಂ ವಿತತಂ ತಸ್ಮಾದಾಹ ವನೇಷು ವ್ಯಂತರಿಕ್ಷಂ ತತಾನೇತಿ । ವಾಜಂ ಬಲಮರ್ವತ್ಸ್ವಶ್ವೇಷು ವಿ ತತಾನ । ಪಯಃ ಕ್ಷೀರಮುಸ್ರಿಯಾಸು ಗೋಷು । ಉಸ್ರಿಯೇತಿ ಗೋನಾಮ । ಉತ್ಸ್ರಾವಿಣೋಽಸ್ಯಾಂ ಭೋಗಾ ಇತಿ ತದ್ವ್ಯುತ್ಪತ್ತಿಃ । ಹೃತ್ಸು ಹೃದಯೇಷು ಕ್ರತುಂ ಕರ್ಮಸಂಕಲ್ಪಂ । ಯದ್ಧಿ ಮನಸಾ ಧ್ಯಾಯತಿ ತತ್ಕರ್ಮಣಾ ಕರೋತಿ । ಅಪ್ಸೂದಕೇಷ್ವಗ್ನಿಂ ವೈದ್ಯುತಮೌರ್ವಂ ವಾ । ಸರ್ವತ್ರ ವಿ ತತಾನೇತಿ ಸಂಬಂಧಃ । ಕಿಂಚ ದಿವಿ ದ್ಯುಲೋಕೇ ಸೂರ್ಯಮದಧಾತ್ । ಸ್ಥಾಪಿತವಾನ್ । ಸೋಮಂ ಚಾದ್ರೌ ಪರ್ವತೇಽದಧಾತ್ ॥**

॥ ಪ್ರತಿಪದಾರ್ಥ ॥

**ವರುಣಃ**—ಆದೇ ಪ್ರಸಿದ್ಧವಾದ ವರುಣದೇವನು । **ವನೇಷು**—ವೃಕ್ಷಗಳ ಊರ್ಧ್ವಭಾಗಗಳಲ್ಲಿ । **ಅಂತರಿಕ್ಷಂ**—ಅಂತರಿಕ್ಷವನ್ನು । **ವಿ ತತಾನ**—ವಿಸ್ತರಿಸಿದ್ದಾನೆ । **ಅರ್ವತ್ಸು**—ಅಶ್ವಗಳಲ್ಲಿ । **ವಾಜಂ**—

ಬಲವನ್ನು (ವಿಸ್ತರಿಸಿದ್ದಾನೆ) | **ಉಸ್ರಿಯಾಸು**—ಗೋವುಗಳಲ್ಲಿ | **ಪಯಃ**—ಕ್ಷೀರವನ್ನೂ | **ಹೃತ್ಸು**—ಹೃದಯಗಳಲ್ಲಿ | **ಕ್ರತುಂ**—ಕರ್ಮಪ್ರೇರಕವಾದ ಸಂಕಲ್ಪವನ್ನೂ | **ಅಪ್ಸು**—ಉದಕಗಳಲ್ಲಿ | **ಅಗ್ನಿಂ**—ಅಗ್ನಿಯನ್ನೂ | **ದಿವಿ**—ದ್ಯುಲೋಕದಲ್ಲಿ | **ಸೂರ್ಯಂ**—ಸೂರ್ಯನನ್ನೂ | **ಅದಧಾತ್**—ಸ್ಥಾಪಿಸಿದ್ದಾನೆ | **ಅದ್ರೌ**—ಪರ್ವತದಲ್ಲಿ | **ಸೋಮಂ**—ಸೋಮವನ್ನು (ಇರಿಸಿದ್ದಾನೆ).

|| ಭಾವಾರ್ಥ ||

ಪ್ರಸಿದ್ಧವಾದ ವೃಕ್ಷಗಳ ಊರ್ಧ್ವಭಾಗಗಳಲ್ಲಿ ಅಂತರಿಕ್ಷವನ್ನೂ, ಅಶ್ವಗಳಲ್ಲಿ ಬಲವನ್ನೂ, ಗೋವುಗಳಲ್ಲಿ ಕ್ಷೀರವನ್ನೂ, ಹೃದಯಗಳಲ್ಲಿ ಕರ್ಮಪ್ರೇರಕವಾದ ಸಂಕಲ್ಪವನ್ನೂ ವಿಸ್ತರಿಸಿ ಹರಡಿದ್ದಾನೆ. ಉದಕಗಳಲ್ಲಿ ಅಗ್ನಿಯನ್ನೂ ದ್ಯುಲೋಕದಲ್ಲಿ ಸೂರ್ಯನನ್ನೂ, ಪರ್ವತದಲ್ಲಿ ಸೋಮವನ್ನೂ ಸ್ಥಾಪಿಸಿದ್ದಾನೆ.

## English Translation.

He has extended the firmament over the tops of the trees, has given strength to horses, milk to cows, determination to the heart : he has placed fire in the waters, the sun in heaven, the Soma-plant in the mountain.

**ವನೇಷು ವಿ ಅಂತರಿಕ್ಷಂ ತತಾನ**—ವೃಕ್ಷಾಗ್ರಗಳಲ್ಲಿ ಅಂತರಿಕ್ಷವನ್ನು ವಿಸ್ತಾರವಾಗುವಂತೆ ಮಾಡಿದನು ಎಂದರೆ ಭೂಮಿಯಮೇಲೆ ಇರುವ ಜನರಿಗೆ ಅಂತರಿಕ್ಷವು ವೃಕ್ಷಾಗ್ರಗಳಲ್ಲಿ ಇರುವಂತೆ ಕಂಡುಬರುವುದು. ಅದನ್ನು ವಿಸ್ತಾರವಾಗುವಂತೆ ಮಾಡಿದನು ಎಂದು ವರ್ಣಿಸಲಾಗಿದೆ. ಮತ್ತು ಅಶ್ವಗಳಲ್ಲಿ ಬಲವನ್ನೂ, ಗೋವುಗಳಲ್ಲಿ ಹಾಲನ್ನೂ ಮನಸ್ಸಿನಲ್ಲಿ ಸಂಕಲ್ಪವನ್ನೂ, ಉದಕದಲ್ಲಿ ಅಗ್ನಿಯನ್ನೂ, ಅಂತರಿಕ್ಷದಲ್ಲಿ ಸೂರ್ಯನನ್ನೂ, ಪರ್ವತ ಪ್ರದೇಶದಲ್ಲಿ ಸೋಮಲತೆಗಳನ್ನೂ ಸ್ಥಾಪಿಸಿರುವವನು ವರುಣನೇ ಆಗಿರುವನು. ಆದುದರಿಂದ ವರುಣನ ಸಾಮರ್ಥ್ಯವು ಅತಿಶಯವಾದುದು ಎಂದು ವರ್ಣಿಸಲಾಗಿದೆ.

|| ಸಂಹಿತಾಪಾಠಃ ||

ನೀಚೀನಬಾರಂ ವರುಣಃ ಕಬಂಧಂ ಪ್ರ ಸಸರ್ಜ ರೋದಸೀ ಅಂತರಿಕ್ಷಂ |
ತೇನ ವಿಶ್ವಸ್ಯ ಭುವನಸ್ಯ ರಾಜಾ ಯವಂ ನ ವೃಷ್ಟಿರ್ವ್ಯುನತ್ತಿ ಭೂಮ || ೩ ||

|| ಪದಪಾಠಃ ||

ನೀಚೀನऽಬಾರಂ | ವರುಣಃ | ಕಬಂಧಂ | ಪ್ರ | ಸಸರ್ಜ | ರೋದಸೀ ಇತಿ | ಅಂತರಿಕ್ಷಂ |
ತೇನ | ವಿಶ್ವಸ್ಯ | ಭುವನಸ್ಯ | ರಾಜಾ | ಯವಂ | ನ | ವೃಷ್ಟಿಃ | ವಿ | ಉನತ್ತಿ | ಭೂಮ || ೩ ||

॥ ಸಾಯಣಭಾಷ್ಯಂ ॥

**ನೀಚೀನಬಾರಮಧೋಮುಖಬಿಲಂ ಪ್ರ ಸಸರ್ಜ । ಕೃತವಾನ್ । ಕಂ । ಕವಂಧಂ । ಕವನಮುದಕಂ । ತದ್ಧೀಯತೇಽತ್ರೇತಿ ಕವಂಧೋ ಮೇಘಃ । ತಂ ತಥಾಕರೋತ್ । ಅಥವಾ ಕವಂಧಮುದಕಂ । ತದುದಕಂ ನೀಚೀನಬಾರಂ ನೀಚೀನನಿರ್ಗಮನಬಿಲಂ ಚಕಾರ । ಮೇಘಂ ವಿದಾರ್ಯೋದಕಮಧೋಮುಖಂ ಚಕಾರೇತ್ಯರ್ಥಃ । ಕಿಂ ಪ್ರತೀತ್ಯುಚ್ಯತೇ । ರೋದಸೀ ದ್ಯಾವಾಪೃಥಿವ್ಯಾವಂತರಿಕ್ಷಂ ಚ ಪ್ರತಿ । ಲೋಕತ್ರಯಹಿತಾಯೇತ್ಯರ್ಥಃ । ತೇನೋದಕೇನ ವಿಶ್ವಸ್ಯ ಸರ್ವಸ್ಯ ಭುವನಸ್ಯ ಭೂತಜಾತಸ್ಯ ರಾಜಾ ಸ್ವಾಮೀ ವರುಣೋ ಭೂಮ ಭೂಮಿಂ ವ್ಯುನತ್ತಿ । ಕ್ಲೇದಯತಿ । ವೃಷ್ಟಿಃ ಸೇಕ್ತ್ರೀ ಪುಮಾನ್ಯವಂ ನ ಯವಮಿವ ಯವಾನ್ಯಥಾ ಪ್ರರೋಹಾಯ ಸರ್ವತ್ರ ಪ್ರಸಾರಯತಿ ತದ್ವದ್ಭೂಮಿಂ ಸರ್ವತ್ರೋನತ್ತಿ । ಅಥವಾ ವೃಷ್ಟಿರ್ವರುಣ ಇತಿ ಸಂಬಂಧಃ । ವರ್ಷಕಃ ಪರ್ಜನ್ಯ ಇತ್ಯರ್ಥಃ । ಅಸ್ಮಿನ್ಪಕ್ಷೇ ಯವಂ ಪುರುಷ ಇವೇತಿ ಪುರುಷಶಬ್ದೋಽಧ್ಯಾಹಾರ್ಯಃ । ಅತ್ರ ನೀಚೀನಬಾರಂ ವರುಣಃ ಕವಂಧಂ । ನಿ. ೧೦-೪ । ಇತ್ಯಾದಿನಿರುಕ್ತಂ ದ್ರಷ್ಟವ್ಯಂ ॥**

॥ ಪ್ರತಿಪದಾರ್ಥ ॥

**ವರುಣಃ**—ವರುಣನು । **ರೋದಸೀ**—ದ್ಯಾವಾಪೃಥಿವಿಗಳಿಗಾಗಿಯೂ । **ಅಂತರಿಕ್ಷಂ**—ಅಂತರಿಕ್ಷಕ್ಕಾಗಿಯೂ । **ಕಬಂಧಂ**—ಮೇಘವನ್ನು **ನೀಚೀನಬಾರಂ**—ಅಧೋಮುಖವಾಗಿ । **ಪ್ರ ಸಸರ್ಜ**—ನೀರನ್ನು ಸುರಿಸುವಂತೆ ಮಾಡಿದನು । **ವೃಷ್ಟಿಃ**—ವೃಷ್ಟಿಯು । **ಯವಂ ನ**—ಯವಧಾನ್ಯವನ್ನು ತೋಯಿಸುವಂತೆ । **ವಿಶ್ವಸ್ಯ ಭುವನಸ್ಯ**—ಸಮಸ್ತವಾದ ಪ್ರಪಂಚಕ್ಕೂ । **ರಾಜಾ**—ಪ್ರಭುವಾದ ವರುಣನು । **ತೇನ**—ಇದೇ ಉದಕದಿಂದ । **ಭೂಮ**—ಭೂಮಿಯನ್ನು । **ವ್ಯುನತ್ತಿ**—ತೋಯಿಸುತ್ತಾನೆ.

ಭಾವಾರ್ಥ ॥

ವರುಣನು ದ್ಯಾವಾಪೃಥಿವಿಗಳಿಗಾಗಿಯೂ, ಅಂತರಿಕ್ಷಕ್ಕಾಗಿಯೂ, ಮೇಘವನ್ನು ಅಧೋಮುಖವಾಗಿ ನೀರನ್ನು ಸುರಿಸುವಂತೆ ಮಾಡಿದನು. ವೃಷ್ಟಿಯು ಯವಧಾನ್ಯವನ್ನು ಪೂರ್ಣವಾಗಿ ತೋಯಿಸುವಂತೆ, ಸಮಸ್ತವಾದ ಪ್ರಪಂಚಕ್ಕೂ ಪ್ರಭುವಾದ ವರುಣನು ಇದೇ ಉದಕದಿಂದ ಭೂಮಿಯನ್ನು ತೋಯಿಸುತ್ತಾನೆ.

## English Translation.

Varuna has set free the (water of the) downward opening cloud for the (benefit of the) heaven, the earth, and the firmament; thence is he monarch of all the world, watering the soil as the rain bedews the barley.

॥ ವಿಶೇಷವಿಷಯಗಳು ॥

ಈ ಋಕ್ಕಿಗೆ ಯಾಸ್ಕರು ನಿರ್ವಚನವನ್ನು ಹೇಳಿದ್ದಾರೆ—

> **ನೀಚೀನದ್ವಾರಂ ವರುಣಃ ಕಬಂಧಂ ಮೇಘಂ । ಕವನಮುದಕಂ ಭವತಿ ತದಸ್ಮಿನ್ ಧೀಯತೇ ಉದಕಮಪಿ ಕಬಂಧಮುಚ್ಯತೇ ಬಂಧಿರನಿಭೃತತ್ವೇ ಕಮನಿಭೃತಂ ಚ ಪ್ರಸೃಜತಿ ದ್ಯಾವಾಪೃಥಿವ್ಯೌ ಚಾಂತರಿಕ್ಷಂ ಚ ಮಹತ್ತ್ವೇನ ತೇನ ಸರ್ವಸ್ಯ ಭುವನಸ್ಯ ರಾಜಾ ಯವಮಿವ ವೃಷ್ಟಿರ್ವ್ಯುನತ್ತಿ ಭೂಮಿಂ ॥** (ನಿ. ೧೦-೪)

**ನೀಚೀನಬಾರಂ** ಎಂದರೆ ನೀಚೀನದ್ವಾರಂ—ಕೆಳಮುಖವಾಗಿ ; ಮೇಘವು ಎತ್ತರವಾದ ಅಂತರಿಕ್ಷದಲ್ಲಿದ್ದು ಕೆಳಗಿರುವ ಭೂಮಿಯಮೇಲೆ ವೃಷ್ಟಿಯನ್ನು ಸುರಿಸುವುದರಿಂದ ಮೇಘದ ಬಾಯಿ ಅಥವಾ ದ್ವಾರವು ಕೆಳಮುಖವಾಗಿ ರುವುದೆಂದು ವರ್ಣಿಸಿದೆ. ಕವನದಂದರೆ ಉದಕವು, ಅಂತಹ ಉದಕವು ಬಂಧಿಸಿ ಇಡಲ್ಪಟ್ಟಿರುವ ಸ್ಥಾನಕ್ಕೆ ಕಬಂಧ ಎಂದರೆ ಮೇಘವೆಂದು ಹೆಸರು. ಅಥವಾ ಕಬಂಧವೆಂದರೆ ಉದಕವೆಂದೂ ಅರ್ಥವಾಗಬಹುದು ಏಕೆಂದರೆ ಹರಡುವ ಅಥವಾ ಹರಿದುಹೋಗುವ ಸ್ವಭಾವವಿರುವ ಉದಕವನ್ನು ಬಂಧಿಸಿ ಒಂದುಕಡೆ ಇರುವಂತೆ ಮಾಡುವ ಸ್ಥಿತಿಯಿರುವು ದಕ್ಕೆ ಉದಕ ಅಥವಾ ಮೇಘವೆಂದು ಹೆಸರು. ವರುಣನು ಇಂತಹ ಮೇಘದ ಅಧಃಪ್ರದೇಶದಲ್ಲಿ ದ್ವಾರವನ್ನು ಮಾಡಿ ಅದರ ಉದಕಗಳನ್ನು ಕೆಳಮುಖವಾಗಿ ಭೂಮಿಯಮೇಲೆ ಬೀಳುವಂತೆ ಮಾಡುತ್ತಾನೆ. ಇದಲ್ಲದೆ ಅದೇ ವರುಣನು ದ್ಯಾವಾಪೃಥಿವಿಗಳನ್ನು ಅಂತರಿಕ್ಷವನ್ನೂ ಸೃಷ್ಟಿಸುತ್ತಾನೆ (ನಿರ್ಮಿಸುತ್ತಾನೆ) ಸಕಲ ಲೋಕಗಳಿಗೂ ಅಧಿಪತಿಯಾದ ಆ ವರುಣನು ತನ್ನ ಮಹಾಮಹಿಮೆಯಿಂದಲೇ ಯವಧಾನ್ಯದ ಸಸಿಗಳನ್ನು ಉದಕವು ನೆನೆಸುವಂತೆ ಭೂಮಿಯನ್ನು ಉದಕಗಳಿಂದ ತೋಯಿಸುತ್ತಾನೆ ಎಂದು ಮುಖ್ಯಾಭಿಪ್ರಾಯ.

॥ ಸಂಹಿತಾಪಾಠಃ ॥

ಉನತ್ತಿ ಭೂಮಿಂ ಪೃಥಿವೀಮುತ ದ್ಯಾಂ ಯದಾ ದುಗ್ಧಂ ವರುಣೋ ವಷ್ಟ್ಯಾದಿತ್ ।
ಸಮಭ್ರೇಣ ವಸತ ಪರ್ವತಾಸಸ್ತವಿಷೀಯಂತಃ ಶ್ರಥಯಂತ ವೀರಾಃ ॥ ೪ ॥

॥ ಪದಪಾಠಃ ॥

ಉನತ್ತಿ । ಭೂಮಿಂ । ಪೃಥಿವೀಂ । ಉತ । ದ್ಯಾಂ । ಯದಾ । ದುಗ್ಧಂ । ವರುಣಃ । ವಷ್ಟಿ । ಆತ್ । ಇತ್ ।
ಸಂ । ಅಭ್ರೇಣ । ವಸತ । ಪರ್ವತಾಸಃ । ತವಿಷೀಽಯಂತಃ । ಶ್ರಥಯಂತ । ವೀರಾಃ ॥ ೪ ॥

॥ ಸಾಯಣಭಾಷ್ಯಂ ॥

**ವರುಣೋ ಭೂಮಿಂ ಪೃಥಿವೀಂ ಪ್ರಥಿತಮಂತರಿಕ್ಷಂ । ಅಂತರಿಕ್ಷಸ್ಯಾಪಿ ಪೃಥಿವೀಶಬ್ದವಾಚ್ಯತ್ವಂ ಪೂರ್ವಮುಕ್ತಂ । ಉತಾಪಿ ಚ ದ್ಯಾಂ ದ್ಯುಲೋಕಮುನತ್ತಿ । ಕ್ಲೇದಯತಿ । ಯದಾಯಂ ದುಗ್ಧಮುದಕ-ಪೂರಣಂ ವಷ್ಟಿ ಕಾಮಯತೇ । ಅಥವಾ ದುಗ್ಧಮುದಕಂ । ತೇನ ತತ್ಕಾರ್ಯಮೋಷಧ್ಯಾದಿಕಂ ಲಕ್ಷ್ಯತೇ। ಓಷಧ್ಯಾದಯಃ ಪ್ರವರ್ಧಂತಾಮಿತಿ ಯದಾ ಕಾಮಯತೇ ಆದಿದನಂತರಮೇವ ಸಂ ವಸತ । ಸಮಾಚ್ಛಾ-ದಯಂತಿ । ಕೇ । ಪರ್ವತಾಸಃ ಪರ್ವವಂತೋಽದ್ರಯಃ । ಕೇನ । ಅಭ್ರೇಣ ಮೇಘೇನ । ಕಿಂಚ ತವಿಷೀಯಂತೋ ಬಲಮಿಚ್ಛಂತೋ ವೀರಾ ವಿಶೇಷೇಣ ವೃಷ್ಟೇಃ ಪ್ರೇರಯಿತಾರೋ ಮರುತಃ ಶ್ರಥಯಂತ । ಶ್ರಥಯಂತಿ ಮೇಘಾನ್ ॥**

॥ ಪ್ರತಿಪದಾರ್ಥ ॥

**ಯದಾ**—ಯಾವಾಗ । **ವರುಣಃ**—ವರುಣನು । **ದುಗ್ಧಂ**—ಮೇಘವನ್ನು ಕರೆಯಲು (ವೃಷ್ಟಿಯನ್ನು ಸುರಿಸಲು) । **ವಷ್ಟಿ**—ಅಪೇಕ್ಷಿಸುತ್ತಾನೆಯೋ (ಆಗ) । **ಭೂಮಿಂ**—ಪೃಥ್ವಿಯನ್ನೂ । **ಪೃಥಿವೀಂ**—ಅಂತರಿಕ್ಷವನ್ನೂ । **ಉತ**—ಮತ್ತು । **ದ್ಯಾಂ**—ದ್ಯುಲೋಕವನ್ನೂ । **ಉನತ್ತಿ**—ಉದಕದಿಂದ ತೋಯಿಸುತ್ತಾನೆ । **ಆದಿತ್**—ಆ ಒಡನೆಯೇ । **ಪರ್ವತಾಸಃ**—ಪರ್ವತಗಳು । **ಅಭ್ರೇಣ**—ಮೇಘಗಳಿಂದ । **ಸಂ ವಸಂತ**—ಆಚ್ಛಾದನಮಾಡಿಕೊಳ್ಳುತ್ತವೆ । **ತವಿಷೀಯಂತಃ**—ಬಲದಿಂದ ಉತ್ಸಾಹವನ್ನು ಹೊಂದಿದ । **ವೀರಾಃ**—ಮರುತ್ತುಗಳು । **ಶ್ರಥಯಂತ**—ಮೇಘಗಳನ್ನು ಚಲಿಸುವಂತೆ ಮಾಡುತ್ತವೆ.

॥ ಭಾವಾರ್ಥ ॥

ವರುಣನು ವೃಷ್ಟಿಯನ್ನು ಸುರಿಸಬೇಕೆಂದಿಚ್ಛಿಸಿದೊಡನೆಯೇ, ಪೃಥ್ವಿಯನ್ನೂ ಅಂತರಿಕ್ಷವನ್ನೂ ಮತ್ತು ದ್ಯುಲೋಕವನ್ನೂ ಉದಕದಿಂದ ತೋಯಿಸುತ್ತಾನೆ. ಆ ಒಡನೆಯೇ, ಪರ್ವತಗಳು ಮೇಘಗಳಿಂದ ತಮ್ಮ ಶಿಖರಗಳನ್ನು ಆಚ್ಛಾದನಮಾಡಿಕೊಳ್ಳುತ್ತವೆ. ಬಲದಿಂದ ಉತ್ಸಾಹವನ್ನು ಹೊಂದಿದ ಮರುತ್ತುಗಳು ಮೇಘಗಳನ್ನು ಚಲಿಸುವಂತೆ ಮಾಡುತ್ತವೆ.

## English Translation.

Varuna waters earth, mid-air, and heaven, when he pleases (to send forth) the milk (of the cloud): thereupon the mountains clothe (their summits) with the rain-cloud, and the hero, (Maruts), exulting in their strength, compel (the clouds) to relax.

॥ ಸಂಹಿತಾಪಾಠಃ ॥

ಇಮಾಮೂ ಷ್ವಾಸುರಸ್ಯ ಶ್ರುತಸ್ಯ ಮಹೀಂ ಮಾಯಾಂ ವರುಣಸ್ಯ ಪ್ರ ವೋಚಂ ।
ಮಾನೇನೇವ ತಸ್ಥಿವಾँ ಅಂತರಿಕ್ಷೇ ವಿ ಯೋ ಮಮೇ ಪೃಥಿವೀಂ ಸೂರ್ಯೇಣ ॥ ೫ ॥

॥ ಪದಪಾಠಃ ॥

ಇಮಾಂ । ಊಂ ಇತಿ । ಸು । ಅಸುರಸ್ಯ । ಶ್ರುತಸ್ಯ । ಮಹೀಂ । ಮಾಯಾಂ । ವರುಣಸ್ಯ । ಪ್ರ । ವೋಚಂ ।
ಮಾನೇನಽಇವ । ತಸ್ಥಿಽವಾನ್ । ಅಂತರಿಕ್ಷೇ । ವಿ । ಯಃ । ಮಮೇ । ಪೃಥಿವೀಂ । ಸೂರ್ಯೇಣ ॥ ೫ ॥

॥ ಸಾಯಣಭಾಷ್ಯಂ ॥

ಆಸುರಸ್ಯಾಸುರಸಂಬಂಧಿನಃ । ಅಸುರಾಣಾಮಸ್ಯ ಚ ವಧ್ಯಘಾತಕಭಾವಃ ಸಂಬಂಧಃ । ಅಸುರಹಂತುರಿತ್ಯರ್ಥಃ । ಅಥವಾಸುರೋ ಮೇಘಃ । ಪ್ರಾಣದಾನಾತ್ತತ್ಸಂಬಂಧಿನಃ ಶ್ರುತಸ್ಯ ವಿಶ್ರುತಸ್ಯ ಮಹೀಂ ಮಹತೀಮಿಮಾಂ ಮಾಯಾಂ ಪ್ರಜ್ಞಾಂ ಪ್ರ ವೋಚಂ । ಪ್ರಬ್ರವೀಮಿ । ಕೈಷಾ ಮಾಯೇತಿ ಸೋಚ್ಯತೇ । ಯೋ ವರುಣೋಽಂತರಿಕ್ಷೇ ತಸ್ಥಿವಾನ್ ತಿಷ್ಠನ್ಮಾನೇನೇವ ದಂಡೇನೇವ ಸೂರ್ಯೇಣ ಪೃಥಿವೀಮಂತರಿಕ್ಷಂ ವಿ ಮಮೇ ಪರಿಚ್ಛಿನತ್ತಿ ತಸ್ಯೈಷಾ ಮಾಯಾ ॥

॥ ಪ್ರತಿಪದಾರ್ಥ ॥

**ಯಃ**—ಯಾರು | **ಅಂತರಿಕ್ಷೇ**—ಅಂತರಿಕ್ಷದಲ್ಲಿ | **ತಸ್ಥಿವಾನ್**—ಸ್ಥಿತನಾಗಿ | **ಮಾನೇನೇವ**—ಅಳೆಯುವ ಕೋಲಿನಿಂದಲೋ ಎಂಬಂತೆ | **ಸೂರ್ಯೇಣ**—ಸೂರ್ಯನಿಂದ | **ಪೃಥಿವಿಂ**—ಅಂತರಿಕ್ಷವನ್ನು | **ವಿ ಮಮೇ**—ಅಳೆಯುವವನೋ ಅಂತಹ | **ಆಸುರಸ್ಯ**—ಅಸುರಹಂತಕನೂ | **ಶ್ರುತಸ್ಯ**—ಪ್ರಖ್ಯಾತನೂ ಆದ ವರುಣನ | **ಮಹೀಂ**—ಮಹತ್ತಾದ | **ಇಮಾಂ ಮಾಯಾಂ**—ಈ ಅಲೌಕಿಕವಾದ ಶಕ್ತಿಯನ್ನು | **ಪ್ರ ವೋಚಂ**—ಸ್ತುತಿಸಿ ಪಠಿಸುತ್ತೇನೆ.

॥ ಭಾವಾರ್ಥ ॥

ಅಂತರಿಕ್ಷದಲ್ಲಿ ಸ್ಥಿತನಾಗಿ ಅಳೆಯುವ ಕೋಲಿನಿಂದಲೋ ಎಂಬಂತೆ ಯಾರು ಸೂರ್ಯನಿಂದ ಅಂತರಿಕ್ಷವನ್ನು ಅಳೆಯುವನೋ ಅಂತಹ ಅಸುರಹಂತಕನೂ ಪ್ರಖ್ಯಾತನೂ ಆದ ವರುಣನ ಮಹತ್ತಾದ ಅಲೌಕಿಕ ಶಕ್ತಿಯನ್ನು ಸ್ತುತಿಸಿ ಪಠಿಸುತ್ತೇನೆ.

## English Translation.

I proclaim this great device ef the renowned Varuna, the destroyer of the Asuras, who abiding in the mid-heaven, has meted the firmament by the sun, as if by a measure.

॥ ಸಂಹಿತಾಪಾಠಃ ॥

ಇಮಾಮೂ ನು ಕವಿತಮಸ್ಯ ಮಾಯಾಂ ಮಹೀಂ ದೇವಸ್ಯ ನಕಿರಾ ದಧರ್ಷ ।

ಏಕಂ ಯದುದ್ನಾ ನ ಪೃಣಂತ್ಯೇನೀರಾಸಿಂಚಂತೀರವನಯಃ ಸಮುದ್ರಂ ॥

॥ ಪದಪಾಠಃ ॥

ಇಮಾಂ । ಊಂ ಇತಿ । ನು । ಕವಿಽತಮಸ್ಯ । ಮಾಯಾಂ । ಮಹೀಂ । ದೇವಸ್ಯ । ನಕಿಃ । ಆ । ದಧರ್ಷ ।
ಏಕಂ । ಯತ್ । ಉದ್ನಾ । ನ । ಪೃಣಂತಿ । ಏನೀಃ । ಆಽಸಿಂಚಂತೀಃ । ಅವನಯಃ । ಸಮುದ್ರಂ ॥ ೬ ॥

॥ ಸಾಯಣಭಾಷ್ಯಂ ॥

ಕವಿತಮಸ್ಯ ಪ್ರಕೃಷ್ಟಪ್ರಜ್ಞಸ್ಯ ದೇವಸ್ಯ ದ್ಯೋತಮಾನಸ್ಯ ಸ್ತುತ್ಯಸ್ಯ ವಾ ವರುಣಸ್ಯೇಮಾಂ ಸರ್ವಪ್ರಸಿದ್ಧಾಂ ಮಹೀಂ ಮಹತೀಂ ಮಾಯಾಂ ಪ್ರಜ್ಞಾಂ ನಕಿರ್ನೈವಾ ದಧರ್ಷ । ನ ಹಿನಸ್ತಿ ಕಶ್ಚಿದಪಿ । ಊ ನ್ವಿತಿ ಪೂರಣೌ । ಯದ್ಯಸ್ಮಾದೇಕಂ ಸಮುದ್ರಮುದ್ನೋದಕೇನ ನ ಪೃಣಂತಿ ನ ಪೂರಯಂತಿ । ಕಾಃ । ಏನೀರೇನ್ಯಃ ಶುಭ್ರಾ ಗಮನಶೀಲಾ ವಾಸಿಂಚಂತೀರುದಕಮಾಸೇಚಯಂತ್ಯೋಽವನಯೋ ನದ್ಯಃ । ಬಹ್ವ್ಯೋ ನದ್ಯಃ ಸರ್ವದೋದಕೇನ ಪೂರಯಂತ್ಯೋಽಪಿ ನೈಕಮಪಿ ಸಮುದ್ರಂ ಪೂರಯಂತೀತಿ । ಇದಂ ವರುಣಸ್ಯ ಮಹತ್ಕರ್ಮೇತಿ । ಅತ್ರಾಂತರಿಕ್ಷವಿಸ್ತಾರಾದಿಸಮುದ್ರಾಪೂರಣಪರ್ಯಂತಂ ಕರ್ಮ ಪರಮೇಶ್ವರಸ್ಯೈವೋಚಿತಂ ನ ವರುಣಸ್ಯೇತಿ ನ ವಾಚ್ಯಂ ತಸ್ಯ ವರುಣಾದಿರೂಪಾವಸಾನಾತ್ । ಏಷ ಬ್ರಹ್ಮೇತ್ಯಾದಿ ಶ್ರುತೇಃ ॥

॥ ಪ್ರತಿಪದಾರ್ಥ ॥

**ಯತ್**— ಯಾವ ವರುಣನ ಮಹಿಮೆಯಿಂದ । **ಏನೀಃ**— ಪ್ರವಹಿಸತಕ್ಕವೂ । **ಆ ಸಿಂಚಂತೀಃ**— ಉದಕಭರಿತವಾದವೂ ಆದ । **ಅವನಯಃ**—(ಅನೇಕ) ನದಿಗಳೂ ಸಹ । **ಏಕಂ ಸಮುದ್ರಂ**— ಒಂದೇ ಸಮುದ್ರವನ್ನೂ । **ಉದ್ನಾ**— [illegible] । **ನ ಪೃಣಂತಿ**— ತುಂಬಲಾರವೋ ಅಂತಹ । **ಕವಿತಮಸ್ಯ**— ಅತ್ಯುತ್ಕೃಷ್ಟವಾದ ಪ್ರಜ್ಞೆಯುಳ್ಳವನೂ । **ದೇವಸ್ಯ**— ಪ್ರಕಾಶಮಾನನೂ ಆದ ವರುಣನ । **ಇಮಾಂ**— ಪ್ರಸಿದ್ಧವಾದುದೂ । **ಮಹೀಂ**— ಮಹತ್ತಾದುದೂ ಆದ । **ಮಾಯಾಂ**— ಪ್ರಜ್ಞೆಯನ್ನು । **ನಕಿಃ**— ಯಾರೂ ಕೂಡ । **ಆ ದಧರ್ಷ**— ಪ್ರತಿಭಟಿಸಲಾರರು.

॥ ಭಾವಾರ್ಥ ॥

ಅನೇಕ ನದಿಗಳು ಪ್ರವಾಹಭರಿತಗಳಾಗಿ ಬಂದು ಹರಿದರೂ ಸಹ ತುಂಬಲಾರದಷ್ಟು ಆಳವು ಸಮುದ್ರಕ್ಕಿರುವುದು ವರುಣನ ಮಹಿಮೆಯೇ ಆಗಿದೆ. ಇಂತಹ ಅತ್ಯುತ್ಕೃಷ್ಟವಾದ ಪ್ರಜ್ಞೆಯುಳ್ಳವನೂ. ಪ್ರಕಾಶಮಾನನೂ ಆದ ವರುಣನ ಪ್ರಸಿದ್ಧವಾದುದೂ ಮಹತ್ತಾದುದೂ ಆದ ಪ್ರಜ್ಞೆಯನ್ನು ಯಾರೂ ಕೂಡ ಪ್ರತಿಭಟಿಸಲಾರರು.

## English Translation.

No one has counteracted the divice of the most sagacious divinity, whereby the lucid water-shedding rivers do not fill the ocean with water.

॥ ಸಂಹಿತಾಪಾಠಃ ॥

ಅರ್ಯಮ್ಯಂ ವರುಣ ಮಿತ್ರ್ಯಂ ವಾ ಸಖಾಯಂ ವಾ ಸದಮಿದ್ಭ್ರಾತರಂ ವಾ ।
ವೇಶಂ ವಾ ನಿತ್ಯಂ ವರುಣಾರಣಂ ವಾ ಯತ್ಸೀಮಾಗಶ್ಚಕೃಮಾ ಶಿಶ್ರಥಸ್ತತ್ ॥

॥ ಪದಪಾಠಃ ॥

ಅರ್ಯಮ್ಯಂ । ವರುಣ । ಮಿತ್ರ್ಯಂ । ವಾ । ಸಖಾಯಂ । ವಾ । ಸದಂ । ಇತ್ । ಭ್ರಾತರಂ । ವಾ ।
ವೇಶಂ । ವಾ । ನಿತ್ಯಂ । ವರುಣ । ಅರಣಂ । ವಾ । ಯತ್ । ಸೀಂ । ಆಗಃ । ಚಕೃಮ । ಶಿಶ್ರಥಃ । ತತ್ ॥೭॥

॥ ಸಾಯಣಭಾಷ್ಯಂ ॥

ಹೇ ವರುಣ ಅರ್ಯಮ್ಯಂ । ಅರ್ಯಮ್ಣ್ಯವಾರ್ಯಮ್ಯಃ ॥ ಸ್ವಾರ್ಥಿಕೋ ಯತ್ । ಅರ್ತೇರಿದಂ ರೂಪಂ ॥ ಪ್ರದಾತಾರಮಿತ್ಯರ್ಥಃ । ಅಥವೇರಣಾನ್ಮನನಾಚ್ಚ ಶಾಸ್ತೀತ್ಯರ್ಯಮಾ ಗುರುಃ । ತಂ । ವಾ ಅಥವಾ ಮಿತ್ರ್ಯಂ ॥ ಞಿಮಿದಾ ಸ್ನೇಹನ ಇತ್ಯಸ್ಮಾನ್ಮಿತ್ರಂ । ಸ್ವಾರ್ಥಿಕೋ ಯತ್॥ ಅನುರಕ್ತಮಿತ್ಯರ್ಥಃ। ವಾ ಅಥವಾ ಸಖಾಯಂ ಸಮಾನಖ್ಯಾನಂ ಸದಮಿತ್ಸರ್ವದೈವ ಭ್ರಾತರಂ ವಾ । ನಿತ್ಯಂ ನಿರಂತರಂ ವೇಶಂ ನಿಕಟನಿಕೇತನವರ್ತಿನಂ ವಾ । ಅರಣಂ ವಾ । ಅಶಬ್ದಮಿತ್ಯರ್ಥಃ । ಅಥವಾರಣಮುದಾತಾರಂ ವಾ ನಿತ್ಯಂ ನಿರಂತರಂ । ಏತಾನ್ಪ್ರತಿ ಯತ್ಸೀಂ ಯದೇತದಾಗೋಽಪರಾಧಂ ಚಕೃಮ ತಚ್ಛಿಶ್ರಥಃ । ಅಸ್ಮತ್ತೋ ವಿನಾಶಯ ॥

॥ ಪ್ರತಿಪದಾರ್ಥ ॥

**ವರುಣ**—ಎಲೈ ವರುಣನೇ । **ಅರ್ಯಮ್ಯಂ**—ನಮಗೆ ಉಪಕಾರಮಾಡಿದವನಾಗಲಿ । **ಮಿತ್ರ್ಯಂ**—ಸ್ನೇಹಿತನಿಗಾಗಲಿ । **ವಾ**—ಅಥವಾ । **ಸಖಾಯಂ**—ಒಡನಾಡಿಗಾಗಲಿ । **ವಾ**—ಅಥವಾ । **ಸದಮಿತ್**—ಸರ್ವದಾ । **ಭ್ರಾತರಂ**—ಒಡಹುಟ್ಟಿದವನಿಗಾಗಲಿ । **ನಿತ್ಯಂ**—ಸರ್ವದಾ । **ವೇಶಂ ವಾ**—ಪಕ್ಕದಲ್ಲೇ ವಾಸ ಮಾಡುವವನಿಗಾಗಲಿ । **ಅರಣಂ ವಾ**—ಅಥವಾ ಮೂಕನಿಗಾಗಲಿ । **ಯತ್ ಸೀಂ**—ಯಾವುದೇ ವಿಧವಾದ । **ಆಗಃ**—ಪಾಪವನ್ನು ಅಥವಾ ಹಿಂಸೆಯನ್ನು । **ಚಕೃಮ**—ಮಾಡಿದ್ದೇವೆಯೋ । **ತತ್**—ಆ ಎಲ್ಲಾ ಪಾಪಗಳನ್ನೂ । **ಶಿಶ್ರಥಃ**—ನಾಶಮಾಡು.

॥ ಭಾವಾರ್ಥ ॥

ಎಲೈ ವರುಣನೇ, ನಮಗೆ ಉಪಕಾರಮಾಡಿದವನ ವಿಷಯದಲ್ಲಾಗಲಿ, ಅಥವಾ ನಮ್ಮ ಸ್ನೇಹಿತನಿಗಾಗಲಿ, ಒಡನಾಡಿಗಾಗಲಿ, ಒಡಹುಟ್ಟಿದವನಿಗಾಗಲಿ ಅಥವಾ ಮೂಕನಿಗಾಗಲಿ ಯಾವುದೇ ವಿಧವಾದ ಹಿಂಸೆಯನ್ನು ಆಚರಿಸಿದ್ದರೂ ಸಹ ಆ ಎಲ್ಲಾ ಪಾಪಕಾರ್ಯಗಳನ್ನು ನಾಶಮಾಡು ಮತ್ತು ಆ ಪಾಪವು ನಮಗಂಟದಿರುವಂತೆ ಮಾಡಿ ಕ್ಷಮಿಸು.

## English Translation.

If, Varuna, we have ever committed on offence against a benefactor, a friend, a companion, a brother, a near neighbour, or Varuna, a dumb man, remove it from us.

॥ ಸಂಹಿತಾಪಾಠಃ ॥

ಕಿತವಾಸೋ ಯದ್ರಿರಿಪುರ್ನ ದೀವಿ ಯದ್ವಾ ಘಾ ಸತ್ಯಮುತ ಯನ್ನ ವಿದ್ಮ ।
ಸರ್ವಾ ತಾ ವಿ ಷ್ಯ ಶಿಥಿರೇವ ದೇವಾಧಾ ತೇ ಸ್ಯಾಮ ವರುಣ ಪ್ರಿಯಾಸಃ ॥ ೮ ॥

॥ ಪದಪಾಠಃ ॥

ಕಿತವಾಸಃ । ಯತ್ । ರಿರಿಪುಃ । ನ । ದೀವಿ । ಯತ್ । ವಾ । ಘ । ಸತ್ಯಂ । ಉತ । ಯತ್ । ನ । ವಿದ್ಮ ।
ಸರ್ವಾ । ತಾ । ವಿ । ಸ್ಯ । ಶಿಥಿರಾಽಇವ । ದೇವ । ಅಧ । ತೇ । ಸ್ಯಾಮ । ವರುಣ । ಪ್ರಿಯಾಸಃ ॥ ೮ ॥

॥ ಸಾಯಣಭಾಷ್ಯಂ ॥

ಕಿತವಾಸಃ ಕಿತವಾ ದ್ಯೂತಕೃತಃ । ಕಿಂ ತವಾಸ್ತಿ ಸರ್ವಂ ಮಯಾ ಜಿತಮಿತಿ ವದತೀತಿ ಕಿತವಃ । ನ ದೀವಿ ನ ದೇವನೇ ದ್ಯೂತೇ ಯಥಾ ಯದ್ರಿರಿಪುರ್ಲೇಪಯಂತಿ ಪಾಪಮಾರೋಪಯಂತಿ ತಥಾಸ್ಮಾಸು ದ್ವೇಷ್ಟಾರೋ ಮಯಿ ತ್ವಮೇತತ್ಪಾಪಮಕರೋರಿತ್ಯಾಕ್ಷಿಪಂತಿ ॥ ಅತ್ರ ಪುರಸ್ತಾದುಪಚಾರೋಽಪಿ ನಕಾರ ಉಪಮಾರ್ಥೀಯಃ ॥ ವಾ ಅಥವಾ । ಘೇತಿ ಪೂರಣಃ । ಯತ್ಪಾಪಂ ಸತ್ಯಮಾರೋಪಮಂತರೇಣ ಕೃತವಂತಃ ಸ್ಮಃ । ಉತಾಪಿ ಚ ಯತ್ಕೃತಂ ಪಾಪಂ ನ ವಿದ್ಮ ನ ಜಾನೀಮಃ ತಾ ತಾನಿ ಸರ್ವಾ ಸರ್ವಾಣಿ ಶಿಥಿರೇವ ಶಿಥಿಲಾನೀವ ಶಿಥಿಲಬಂಧನಾನಿ ಫಲಾನೀವ ವಿ ಷ್ಯ । ವಿಮೋಚಯ ॥ ಸ್ಯತಿರುಪಸೃಷ್ಟೋ ವಿಮೋಚನೇ ॥ ಹೇ ದೇವ ಅಧಾನಂತರಂ ತೇ ತವ ಪ್ರಿಯಾಸಃ ಪ್ರಿಯಾಃ ಸ್ಯಾಮ । ಭವೇಮ ॥

॥ ಪ್ರತಿಪದಾರ್ಥ ॥

**ದೇವ**—ದೇವತಾತ್ಮನಾದ । **ವರುಣ**—ಎಲೈ ವರುಣನೇ । **ದೀವಿ**—ದ್ಯೂತಾದಿಗಳಲ್ಲಿ । **ಕಿತವಾಸೋ ನ**—ಜೂಜುಗಾರರಂತೆ । **ಯತ್ ರಿರಿಪುಃ**—ಯಾವ ಮೋಸಕಾರ್ಯವನ್ನು (ಮನಃಪೂರ್ವಕವಾಗಿ) ಆಚರಿಸಿರುವೆವೋ । **ವಾ**—ಅಥವಾ । **ಯತ್**—ಯಾವ ಪಾಪಕಾರ್ಯವನ್ನು । **ಸತ್ಯಂ**—ಖಂಡಿತವಾಗಿಯೂ । **ನ ವಿದ್ಮ**—ನಾವು ತಿಳಿಯದೇ ಮಾಡಿರುವೆವೋ । **ಸರ್ವಾ ತಾ**—ಆ ಎಲ್ಲಾ ಪಾಪಗಳನ್ನೂ ಸಹ । **ಶಿಥಿರೇವ**—(ತೊಂಜೆಯಿಂದ) ಶಿಥಿಲವಾಗಿ ಫಲಗಳು ಕೆಳಗೆ ಬೀಳುವಂತೆ । **ವಿಷ್ಯ**—ನಮ್ಮಿಂದ ದೂರ ತಳ್ಳು । **ಅಧ**—ಅನಂತರವೇ । **ತೇ**—ನಿನಗೆ । **ಪ್ರಿಯಾಸಃ**—ಪ್ರೀತಿಪಾತ್ರರಾಗಿ । **ಸ್ಯಾಮ**—ನಾವು ಆಗುವೆವು.

॥ ಭಾವಾರ್ಥ ॥

ದೇವತಾತ್ಮನಾದ ಎಲೈ ವರುಣನೇ, ದ್ಯೂತಾದಿಗಳಲ್ಲಿ ಜೂಜುಗಾರರು ಯಾವ ರೀತಿ ಮೋಸಕಾರ್ಯವನ್ನು ಮನಃಪೂರ್ವಕವಾಗಿ ಮಾಡುವರೋ ಅದೇ ರೀತಿ ಮೋಸಕಾರ್ಯವನ್ನು ನಾವು ಮಾಡಿದ್ದರೂ, ಅಥವಾ ನಮ್ಮ ಅಜ್ಞಾನದಿಂದ ಯಾವ ಪಾಪಕಾರ್ಯವನ್ನು ಮಾಡಿದ್ದರೂ, ಆ ಎಲ್ಲಾ ಪಾಪವನ್ನೂ ಸಹ ಮರದ ಕೊಂಬೆಯಿಂದ ಶಿಥಿಲಿತವಾದ ಫಲವು ಕೆಳಕ್ಕೆ ಬೀಳುವಂತೆ ನಮ್ಮಿಂದ ದೂರಮಾಡು, ಅನಂತರವೇ ನಾವು ನಿನಗೆ ಪ್ರೀತಿಪಾತ್ರರಾಗುತ್ತೇವೆ. ಮತ್ತು ಹಾಗೆ ಆಗುವಂತೆ ಅನುಗ್ರಹಿಸು.

English Translation.

If, like gamesters, who cheat at play, (we commit offences) knowingly, or (those) of which we know not, divine Varuna, extricate us from them all, as if from loosened (bonds), so that we may be dear, Varuna, to you.

# ಎಂಭತ್ತಾರನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಇಂದ್ರಾಗ್ನೀ ಯಮಿತಿ ಷಡೃಚಂ ಚತುರ್ದಶಂ ಸೂಕ್ತಮತ್ರೇರಾರ್ಷಮಾನುಷ್ಟುಭಮೈಂದ್ರಾಗ್ನಂ । ಷಷ್ಠೀ ವಿರಾಟ್ಪೂರ್ವಾ । ಆದ್ಯೌ ದಶಕಾವಷ್ಟಕಾಸ್ತ್ರಯಃ । ಅನು. ೯-೧೧ । ಇತಿ ಪರಿಭಾಷಿತತ್ವಾತ್ । ತಥಾ ಚಾನುಕ್ರಾಂತಂ । ಇಂದ್ರಾಗ್ನೀ ಷಳೈಂದ್ರಾಗ್ನಮಾನುಷ್ಟುಭಂ ವಿರಾಟ್ಪೂರ್ವಾಂತಮಿತಿ ॥ ವಿನಿಯೋಗೋ ಲೈಂಗಿಕಃ ॥**

ಅನುವಾದವು—**ಇಂದ್ರಾಗ್ನೀ ಯಂ** ಎಂಬ ಈ ಸೂಕ್ತವು ಆರನೆಯ ಅನುವಾಕದಲ್ಲಿ ಹದಿನಾಲ್ಕನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಅತ್ರಿಯು ಋಷಿಯು, ಇಂದ್ರಾಗ್ನಿಗಳು ದೇವತೆಯು. ಅನುಷ್ಟುಪ್ ಛಂದಸ್ಸು. ಆರನೆಯ ಋಕ್ಕು ಮಾತ್ರ ವಿರಾಟ್ಪೂರ್ವಾ ಎಂಬ ಛಂದಸ್ಸಿನದು. ಛಂದೋಽನುಕ್ರಮಣಿಕೆಯಲ್ಲಿ— **ಆದ್ಯೌ ದಶಕಾವಷ್ಟಕಾಸ್ತ್ರಯಃ ।** ಎಂದರೆ, ಈ ಛಂದಸ್ಸಿನ ಋಕ್ಕುಗಳಲ್ಲಿ ಒಟ್ಟು ಐದುಪಾದಗಳಿದ್ದು, ಮೊದಲನೇ ಎರಡು ಪಾದಗಳಿಗೆ ಹತ್ತು ಹತ್ತು ಅಕ್ಷರಗಳೂ, ಕೊನೆಯ ಮೂರು ಪಾದಗಳಿಗೆ ಎಂಟೆಂಟು ಅಕ್ಷರಗಳೂ ಇರುವವು ಎಂದು ವಿರಾಟ್ಪೂರ್ವಾ ಎಂಬ ಈ ಛಂದಸ್ಸಿನ ಲಕ್ಷಣವು ಛಂದೋಽನುಕ್ರಮಣಿಕೆಯಲ್ಲಿ ಹೇಳಿದೆ. ಈ ಛಂದಸ್ಸಿಗೆ **ಪಂಕ್ತ್ಯುತ್ತರಾ** ಎಂದೂ ಹೆಸರಿರುವುದು (ಛಂ. ಅನು. ೯-೧೧). ಅನುಕ್ರಮಣಿಕೆಯಲ್ಲಿ—**ಇಂದ್ರಾಗ್ನೀ ಷಳೈಂದ್ರಾಗ್ನಮಾನುಷ್ಟುಭಂ ವಿರಾಟ್ಪೂರ್ವಾಂತಂ** ಎಂದು ಹೇಳಿರುವುದು. ವಿನಿಯೋಗವು ಲೈಂಗಿಕವು.

## ಸೂಕ್ತ—೮೬

ಮಂಡಲ—೫ ॥ ಅನುವಾಕ—೬ ॥ ಸೂಕ್ತ—೮೬ ॥
ಅಷ್ಟಕ—೪ ॥ ಅಧ್ಯಾಯ—೪ ॥ ವರ್ಗ—೩೨ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
॥ ಋಷಿಃ—ಅತ್ರಿಃ ॥
॥ ದೇವತಾ—ಇಂದ್ರಾಗ್ನೀ ॥
॥ ಛಂದಃ—೧-೫, ಅನುಷ್ಟುಪ್ । ೬. ವಿರಾಟ್‌ಪೂರ್ವಾ ॥

॥ ಸಂಹಿತಾಪಾಠಃ ॥

**ಇಂದ್ರಾಗ್ನೀ ಯಮವಥ ಉಭಾ ವಾಜೇಷು ಮರ್ತ್ಯಂ ।**
**ದೃಳ್ಹಾ ಚಿತ್ಸ ಪ್ರ ಭೇದತಿ ದ್ಯುಮ್ನಾ ವಾಣೀರಿವ ತ್ರಿತಃ ॥ ೧ ॥**

॥ ಪದಪಾಠಃ ॥

**ಇಂದ್ರಾಗ್ನೀ ಇತಿ । ಯಂ । ಅವಥಃ । ಉಭಾ । ವಾಜೇಷು । ಮರ್ತ್ಯಂ ।**
**ದೃಳ್ಹಾ । ಚಿತ್ । ಸಃ । ಪ್ರ । ಭೇದತಿ । ದ್ಯುಮ್ನಾ । ವಾಣೀಃಽಇವ । ತ್ರಿತಃ ॥ ೧ ॥**

॥ ಸಾಯಣಭಾಷ್ಯಂ ॥

**ಹೇ ಇಂದ್ರಾಗ್ನೀ ಉಭೋಭೌ ಪರಸ್ಪರಾವಿಯುಕ್ತೌ ಯುವಾಂ ಯಂ ಮರ್ತ್ಯಮವಥೋ ರಕ್ಷಥೋ ವಾಜೇಷು ಸಂಗ್ರಾಮೇಷು ಸ ಮರ್ತ್ಯೋ ದೃಳ್ಹಾ ಚಿತ್ ದೃಢಾನ್ಯಪಿ ದ್ಯುಮ್ನಾ ದ್ಯೋತಮಾನಾನಿ ಧನಾನಿ ಶತ್ರುಸಂಬಂಧೀನಿ ಭೇದತಿ । ಭಿನತ್ತಿ । ತ್ರಿತ ಋಷಿರ್ವಾಣೀರಿವ ಪ್ರತಿವಾದಿವಾಕ್ಯಾನೀವ । ಅಥವಾ ತ್ರಿಷು ಸ್ಥಾನೇಷು ವರ್ತಮಾನೋಽಗ್ನಿಃ ಶತ್ರೂಣಾಂ ವಾಕ್ಯಾನೀವ ॥**

॥ ಪ್ರತಿಪದಾರ್ಥ ॥

**ಇಂದ್ರಾಗ್ನೀ**—ಎಲೈ ಇಂದ್ರಾಗ್ನಿಗಳೇ । **ಉಭಾ**—ನೀವಿಬ್ಬರೂ ಕೂಡಿ । **ಯಂ**—ಯಾವ । **ಮರ್ತ್ಯಂ**—ಮಾನವನನ್ನು । **ಅವಥಃ**—ರಕ್ಷಿಸುತ್ತೀರೋ । **ಸಃ**—ಆ ಯಜಮಾನನಾದ ಮಾನವನು । **ತ್ರಿತಃ**—ತ್ರಿತನೆಂಬ ಋಷಿಯು । **ವಾಣೀರಿವ**—ಪ್ರತಿಪಕ್ಷದವರ ವಾಕ್ಕುಗಳನ್ನು ಭೇದಿಸಿದಂತೆ । **ವಾಜೇಷು**—ಯುದ್ಧಗಳಲ್ಲಿ । **ದೃಳ್ಹಾ ಚಿತ್**—ಅತ್ಯಂತ ಶಕ್ತಿಯುಕ್ತವಾಗಿದ್ದರೂ ಸಹ । **ದ್ಯುಮ್ನಾ**—ಶತ್ರುಸಂಪತ್ತುಗಳನ್ನು । **ಪ್ರ ಭೇದತಿ**—ಭೇದಿಸಿ ಚದುರಿಸುತ್ತಾನೆ.

|| ಭಾವಾರ್ಥ ||

ಎಲೈ ಇಂದ್ರಾಗ್ನಿಗಳೇ, ನೀವಿಬ್ಬರೂ ಕೂಡಿಕೊಂಡು ಯಾವ ಮಾನವನನ್ನು ರಕ್ಷಿಸುತ್ತೀರೋ, ಆ ಮಾನವನು (ಯಜಮಾನನು) ಸಂಗ್ರಾಮಗಳಲ್ಲಿ ಶತ್ರುಗಳ ಧನವು ಅತ್ಯಂತ ದೃಢವಾಗಿ ರಕ್ಷಿತವಾಗಿದ್ದರೂ ಸಹ ತ್ರಿತನು ಪ್ರತಿಪಕ್ಷದವರ ವಾಕ್ಯಗಳನ್ನು ಭೇದಿಸಿದಂತೆ ಭೇದಿಸಿ ಚದುರಿಸುತ್ತಾನೆ.

## English Translation.

Indra and Agni, the mortal whom you both protect scatters the the substantial treasures (of his enemies), as Trita (confutes) the words (of his opponents).

|| ಸಂಹಿತಾಪಾಠಃ ||

ಯಾ ಪೃತನಾಸು ದುಷ್ಟರಾ ಯಾ ವಾಜೇಷು ಶ್ರವಾಯ್ಯಾ ।
ಯಾ ಪಂಚ ಚರ್ಷಣೀರಭೀಂದ್ರಾಗ್ನೀ ತಾ ಹವಾಮಹೇ ॥ ೨ ॥

|| ಪದಪಾಠಃ ||

ಯಾ । ಪೃತನಾಸು । ದುಸ್ತರಾ । ಯಾ । ವಾಜೇಷು । ಶ್ರವಾಯ್ಯಾ ।
ಯಾ । ಪಂಚ । ಚರ್ಷಣೀಃ । ಅಭಿ । ಇಂದ್ರಾಗ್ನೀ ಇತಿ । ತಾ । ಹವಾಮಹೇ ॥ ೨ ॥

|| ಸಾಯಣಭಾಷ್ಯಂ ||

ಯಾ ಯಾವಿಂದ್ರಾಗ್ನೀ ಪೃತನಾಸು .ದುಷ್ಟರಾ ದುಷ್ಟರಾವನಭಿಭಾವ್ಯೌ । ಯಾ ಯೌ ಚ ವಾಜೇಷು ಸಂಗ್ರಾಮೇಷ್ವನ್ನೇಷು ವಾ ಶ್ರವಾಯ್ಯಾ ಶ್ರವಾಯ್ಯೌ ಸ್ತುತ್ಯೌ । ಯಾ ಯೌ ಪಂಚ ಚರ್ಷಣೀಃ । ಚರ್ಷಣಯೋ ಮನುಷ್ಯಾಃ । ತಾನಭಿ । ರಕ್ಷತ ಇತಿ ಶೇಷಃ । ತಾ ತೌ ಮಹಾನುಭಾವೌ ಹವಾಮಹೇ । ಸ್ತುಮಃ ॥

|| ಪ್ರತಿಪದಾರ್ಥ ||

ಇಂದ್ರಾಗ್ನೀ—ಎಲೈ ಇಂದ್ರಾಗ್ನಿಗಳೇ । **ಯಾ**—ಯಾವ ನೀವು । **ಪೃತನಾಸು**—ಶತ್ರುಸೈನ್ಯಗಳ ನಡುವೆ । **ದುಷ್ಟರಾ**—ಅಪ್ರತಿಹತರೋ । **ಯಾ**—ಯಾವ ನೀವು । **ವಾಜೇಷು**—ಯುದ್ಧಗಳಲ್ಲಿ । **ಶ್ರವಾಯ್ಯಾ**—ಪ್ರಶಂಸಿತರೋ । **ಯಾ**—ಯಾವ ನೀವು । **ಪಂಚ ಚರ್ಷಣೀಃ**—ಮಾನವಾದಿ ಪಂಚಜನರನ್ನೂ । **ಅಭಿ**—ಪೂರ್ಣವಾಗಿ ರಕ್ಷಿಸುವಿರೋ । **ತಾ**—ಅಂತಹ ಪೂಜ್ಯರಾದ ನಿಮ್ಮನ್ನು । **ಹವಾಮಹೇ**—ಸ್ತುತಿಸುತ್ತೇವೆ.

‖ ಭಾವಾರ್ಥ ‖

ಎಲೈ ಇಂದ್ರಾಗ್ನಿಗಳೇ, ಯಾವ ನೀವು ಶತ್ರುಸೈನ್ಯಗಳ ನಡುವೆ ಅಪ್ರತಿಹರೋ, ಯಾವ ನೀವು ಸಂಗ್ರಾಮುಗಳಲ್ಲಿ ಪ್ರಶಂಸಿತರೋ, ಯಾವ ನೀವು ಮಾನವಾದಿ ಪಂಚಜನರನ್ನೂ ಪೂರ್ಣವಾಗಿ ರಕ್ಷಿಸುವಿರೋ ಅಂತಹ ಪೂಜ್ಯರಾದ ನಿಮ್ಮನ್ನು ನಾವು ಸ್ತುತಿಸಿ ಕರೆಯುತ್ತೇವೆ.

English Translation.

We invoke the two, Indra and Agni, who are irresistible in conflicts, who are renowned in battles, who protect the five (classes of) men.

‖ ಸಂಹಿತಾಪಾಠಃ ‖

ತಯೋರಿದಮವಚ್ಛವಸ್ತಿಗ್ಮಾ ದಿದ್ಯುನ್ಮಘೋನೋಃ ।
ಪ್ರತಿ ದ್ರುಣಾ ಗಭಸ್ತ್ಯೋರ್ಗವಾಂ ವೃತ್ರಘ್ನ ಏಷತೇ ॥ ೩ ॥

‖ ಪದಪಾಠಃ ‖

ತಯೋಃ । ಇತ್ । ಅಮ್ಽವತ್ । ಶವಃ । ತಿಗ್ಮಾ । ದಿದ್ಯುತ್ । ಮಘೋನೋಃ ।
ಪ್ರತಿ । ದ್ರುಣಾ । ಗಭಸ್ತ್ಯೋಃ । ಗವಾಂ । ವೃತ್ರಽಘ್ನೇ । ಆ । ಈಷತೇ ॥ ೩ ॥

‖ ಸಾಯಣಭಾಷ್ಯಂ ‖

ಅಮವದಭಿಭಾವುಕಂ ಶವೋ ಬಲಂ ತಯೋರಿತ್ ತಯೋರೇವ । ಮಘೋನೋರ್ಮಘವತೋ-ರನ್ನವತೋರ್ಧನವತೋರ್ವಾ ತಯೋರ್ದಿದ್ಯುತ್ ವಜ್ರಂ ತಿಗ್ಮಾ ತೀಕ್ಷ್ಣಂ ವರ್ತತೇ ಗಭಸ್ತ್ಯೋರ್ಹ-ಸ್ತಯೋಃ । ಏವಂಭೂತೌ ದೇವೌ ಗವಾಮುದಕಾನಾಂ ಪಣಿಭಿರಪಹೃತಾನಾಂ ವಾ ಗವಾಂ ಲಾಭಾಯ ದ್ರುಣಾ ದ್ರುವಿಕಾರೇಣ ಗಮನಶೀಲೇನ ವೈಕೇನ ರಥೇನ ವೃತ್ರಘ್ನ ಆವರಕಮೇಘಹನನಾಯ ತಥಾವಿಧ-ವೃತ್ರಾಸುರವಧಾಯ ವಾ ಪ್ರತೀಷತೇ । ಪ್ರತಿಗಚ್ಛತಃ ॥

‖ ಪ್ರತಿಪದಾರ್ಥ ‖

**ತಯೋಃ ಇತ್**—ಇದೇ ಇಂದ್ರಾಗ್ನಿಗಳ । **ಶವಃ**—ಬಲವು । **ಅಮವತ್**—ಶತ್ರುಗಳನ್ನು ನಿರೋಧಿಸುವುದಾಗಿದೆ । **ಮಘೋನೋಃ**—ಧನವಂತರಾದ ಇವರಿಬ್ಬರ । **ದಿದ್ಯುತ್**—ಪ್ರಕಾಶಮಾನವಾದ ವಜ್ರಾಯುಧವು । **ತಿಗ್ಮಾ**—ತೀಕ್ಷ್ಣವಾಗಿ । **ಗಭಸ್ತ್ಯೋಃ**—ಇವರ ಬಾಹುಗಳಲ್ಲಿ (ಪ್ರಕಾಶಿಸುತ್ತದೆ) (ಇಂತಹ ಮಹಾನುಭಾವರು) ।

**ಗವಾಂ**—ಗೋವುಗಳ ಲಾಭಕ್ಕಾಗಿಯೂ । **ವೃತ್ರಘ್ನೇ**—ವೃತ್ರನ ನಾಶಕ್ಕಾಗಿಯೂ । **ದ್ರುಣಾ**—ವೇಗವಾಗಿ ಓಡುವ ಒಂದೇ ರಥದಲ್ಲಿ ಕುಳಿತು । **ಪ್ರತಿ ಈಷತೇ**—ಹೊರಡುತ್ತಾರೆ.

|| ಭಾವಾರ್ಥ ||

ಪ್ರಸಿದ್ಧರಾದ ಇಂದ್ರಾಗ್ನಿಗಳ ಬಲವು ಶತ್ರುಗಳನ್ನು ನಿರೋಧಿಸುವುದಾಗಿದೆ. ಧನವಂತರಾದ ಇವರಿಬ್ಬರ ಪ್ರಕಾಶಮಾನವಾದ ವಜ್ರಾಯುಧ ಇವರ ಬಾಹುಗಳಲ್ಲಿ ತೀಕ್ಷ್ಣವಾಗಿ ಪ್ರಕಾಶಿಸುತ್ತದೆ ಇಂತಹ ಮಹಾನುಭಾವರು ಗೋವುಗಳ ಲಾಭಕ್ಕಾಗಿಯೂ, ವೃತ್ರನ ನಾಶಕ್ಕಾಗಿಯೂ ಸಹ ವೇಗವಾಗಿ ಓಡುವ ಒಂದೇ ರಥದಲ್ಲಿ ಕುಳಿತು ಹೊರಡುತ್ತಾರೆ.

## English Translation.

Overpowering is the might of these two: the bright (lightning) is shining in the hands of Maghavan, as they go together in one chariot for the (recovery of the) cows, and the destruction of Vritra.

|| ಸಂಹಿತಾಪಾಠಃ ||

**ತಾ ವಾಮೇಷೇ ರಥಾನಾಮಿಂದ್ರಾಗ್ನೀ ಹವಾಮಹೇ ।**

**ಪತೀ ತುರಸ್ಯ ರಾಧಸೋ ವಿದ್ವಾಂಸಾ ಗಿರ್ವಣಸ್ತಮಾ || ೪ ||**

|| ಪದಪಾಠಃ ||

ತಾ । ವಾಂ । ಏಷೇ । ರಥಾನಾಂ । ಇಂದ್ರಾಗ್ನೀ ಇತಿ । ಹವಾಮಹೇ ।

ಪತೀ ಇತಿ । ತುರಸ್ಯ । ರಾಧಸಃ । ವಿದ್ವಾಂಸಾ । ಗಿರ್ವಣಃऽತಮಾ || ೪ ||

|| ಸಾಯಣಭಾಷ್ಯಂ ||

ಹೇ ದೇವೌ ತಾ ತೌ ವಕ್ಷ್ಯಮಾಣಗುಣೌ ವಾಂ ಯುವಾಂ ಹವಾಮಹೇ । ಸ್ತುಮಃ । ಕಿಮರ್ಥಂ । ರಥಾನಾಮೇಷೇ ಯುದ್ಧೇ ರಥಾನಾಂ ಪ್ರೇರಣಾಯ । ಕೀದೃಶೌ ಯುವಾಂ । ಇಂದ್ರಾಗ್ನೀ ಇಂದ್ರಮಗ್ನಿಂ ಚ ಪರಸ್ಪರಯುಗ್ಮಭೂತೌ ತುರಸ್ಯ ಜಂಗಮರೂಪಸ್ಯ ರಾಧಸೋ ಧನಾದಿಲಕ್ಷಣಸ್ಯ ಪತೀ ಸ್ವಾಮಿನೌ ವಿದ್ವಾಂಸಾ ಸರ್ವಜ್ಞೌ ಗಿರ್ವಣಸ್ತಮಾ ಗೀರ್ಭಿರ್ವನನೀಯತಮೌ । ಈದೃಶೌ ಯುವಾಂ ಹವಾಮಹೇ ||

॥ ಪ್ರತಿಪದಾರ್ಥ ॥

**ಇಂದ್ರಾಗ್ನೀ**—ಎಲೈ ಇಂದ್ರಾಗ್ನಿಗಳೇ | **ತುರಸ್ಯ**—ಜಂಗಮಾತ್ಮಕವಾದ | **ರಾಧಸಃ**—ಧನಕ್ಕೆಲ್ಲಾ **ಪತೀ**—ಒಡೆಯರೂ | **ವಿದ್ವಾಂಸಾ**—ಸರ್ವಜ್ಞರೂ , **ಗಿರ್ವಣಸ್ತಮಾ**—ಅತ್ಯಂತ ಶ್ರೇಷ್ಠವಾದ ಸ್ತುತಿಗಳಿಗೆ ಪಾತ್ರರೂ ಆದ | **ತಾ ವಾಂ**—ಅಂತಹ ನಿಮ್ಮನ್ನು | **ರಥಾನಾಂ**—ನಿಮ್ಮ ರಥಗಳನ್ನು | **ಏಷೇ**—ಯುದ್ಧಾರ್ಥವಾಗಿ ಕಳುಹಿಸಲು | **ಹವಾಮಹೇ**—ಪ್ರಾರ್ಥಿಸಿ ಸ್ತುತಿಸುತ್ತೇವೆ.

॥ ಭಾವಾರ್ಥ ॥

ಎಲೈ ಇಂದ್ರಾಗ್ನಿಗಳೇ, ಜಂಗಮಾತ್ಮಕವಾದ ಧನಕ್ಕೆಲ್ಲಾ ಒಡೆಯರೂ, ಸರ್ವಜ್ಞರೂ, ಅತ್ಯಂತ ಶ್ರೇಷ್ಠವಾದ ಸ್ತುತಿಗಳಿಗೆ ಪಾತ್ರರೂ ಆದ ನಿಮ್ಮನ್ನು ನಿಮ್ಮ ರಥಗಳನ್ನು ಯುದ್ಧಾರ್ಥವಾಗಿ ಕಳುಹಿಸಲು ಪ್ರಾರ್ಥಿಸಿ ಸ್ತುತಿಸುತ್ತೇವೆ.

English Translation.

We invoke you both, Indra and Agni, for (sending) your chariots to the combat, lords of moveable wealth, all-knowing, most deserving of praise.

॥ ಸಂಹಿತಾಪಾಠಃ ॥

ತಾ ವೃಧಂತಾವನು ದ್ಯೂನ್ಮರ್ತಾಯ ದೇವಾವದಭಾ |
ಅರ್ಹಂತಾ ಚಿತ್ಪುರೋ ದಧೇಂಽಶೇವ ದೇವಾವರ್ವತೇ || ೫ ||

॥ ಪದಪಾಠಃ ॥

ತಾ | ವೃಧಂತೌ | ಅನು | ದ್ಯೂನ್ | ಮರ್ತಾಯ | ದೇವೌ | ಅದಭಾ |
ಅರ್ಹಂತಾ | ಚಿತ್ | ಪುರಃ | ದಧೇ | ಅಂಶಾಽಇವ | ದೇವೌ | ಅರ್ವತೇ || ೫ ||

॥ ಸಾಯಣಭಾಷ್ಯಂ ॥

ತಾ ತಾವನು ದ್ಯೂನ್ ಪ್ರತಿದಿನಂ ವೃಧಂತೌ ವರ್ಧಮಾನೌ | ಸರ್ವದಾ ಪ್ರವೃದ್ಧಾವಿತ್ಯರ್ಥಃ | ವರ್ಧನೇ ದೃಷ್ಟಾಂತಃ | ಮರ್ತೇವ ಮನುಷ್ಯಾವಿವ | ತೌ ಯಥಾ ಪ್ರತಿದಿನಂ ವರ್ಧೇತೇ | ದೇವೌ ದ್ಯೋತಮಾನಾವದಭಾಹಿಂಸ್ಯಾವರ್ಹಂತಾ ಚಿತ್ ಪ್ರಕರ್ಷೇಣ ಪೂಜ್ಯೌ | ಚಿದಿತಿ ಪೂಜಾಯಾಂ | ತಾದೃಶೌ ಮಹಾನುಭಾವೌ ದೇವಾವರ್ವತೇಽಶ್ವಲಾಭಾಯ ಪುರೋ ದಧೇ ಪುರಸ್ಕುರ್ವೇ | ಅಂಶೇವ | ಅಂಶೋ ನಾಮ ದ್ವಾದಶಾದಿತ್ಯಮಧ್ಯವರ್ತೀ ದೇವಃ | ಸ ಭಗಸ್ತ್ವಾಪ್ಯುಪಲಕ್ಷಕಃ | ಅಂಶಾವಿವ | ಆದಿತ್ಯಾವಿವ | ದೀಪ್ತಾವಿತ್ಯರ್ಥಃ ||

॥ ಪ್ರತಿಪದಾರ್ಥ ॥

(ಎಲೈ ಇಂದ್ರಾಗ್ನಿಗಳೇ) **ಮರ್ತೇವ**—ಮಾನವರಂತೆ | **ಅನು ದ್ಯೂನ್**-- ಪ್ರತಿದಿನವೂ | **ವೃಧಂತಾ**—ವೃದ್ಧಿಯನ್ನು ಹೊಂದುವವರೂ | **ದೇವೌ**—ಪ್ರಕಾಶಮಾನರೂ | **ಅದಭಾ**—ಅಹಿಂಸಿತರೂ | **ಅಂಶಾ ಇವ**—ಆದಿತ್ಯರಂತೆ | **ದೇವೌ**—ಪ್ರಕಾಶಮಾನರಾಗಿ | **ಅರ್ಹಂತಾ ಚಿತ್**—ಅತ್ಯಂತ ಪೂಜ್ಯರಾಗಿರುವವರೂ ಆದ | **ತಾ**—ನಿಮ್ಮನ್ನು | **ಅರ್ವತೇ**—ಅಶ್ವಲಾಭಕ್ಕಾಗಿ | **ಪುರಃ ದಧೇ**—ಪುರಸ್ಕರಿಸಿ ಪೂಜಿಸುತ್ತೇವೆ.

। ಭಾವಾರ್ಥ ॥

ಎಲೈ ಇಂದ್ರಾಗ್ನಿಗಳೇ, ಮಾನವರಂತೆ ಪ್ರತಿದಿನವೂ ವೃದ್ಧಿಯನ್ನು ಹೊಂದುವವರೂ, ಪ್ರಕಾಶಮಾನರೂ, ಅಹಿಂಸಿತರೂ, ಆದಿತ್ಯರಂತೆ ಪ್ರಕಾಶಮಾನರಾಗಿ ಪೂಜ್ಯರಾಗಿರುವವರೂ ಆದ ನಿಮ್ಮನ್ನು ಅಶ್ವಲಾಭಕ್ಕಾಗಿ ಪುರಸ್ಕರಿಸಿ ಪೂಜಿಸುತ್ತೇವೆ.

English Translation.

I adore you, irresistible deities, for (the sake of obtaining) horses: you who are increasing day by day like mortals, who are worthy of worship, like two Adityas.

॥ ಸಂಹಿತಾಪಾಠಃ ॥

ಏವೇಂದ್ರಾಗ್ನಿಭ್ಯಾಮಹಾವಿ ಹವ್ಯಂ ಶೂಷ್ಯಂ ಘೃತಂ ನ ಪೂತಮದ್ರಿಭಿಃ ।
ತಾ ಸೂರಿಷು ಶ್ರವೋ ಬೃಹದ್ರಯಿಂ ಗೃಣತ್ಸು ದಿಧೃತಮಿಷಂ ಗೃಣತ್ಸು ದಿಧೃತಂ ॥ ೬ ॥

॥ ಪದಪಾಠಃ ॥

ಏವ । ಇಂದ್ರಾಗ್ನಿಽಭ್ಯಾಂ । ಅಹಾವಿ । ಹವ್ಯಂ । ಶೂಷ್ಯಂ । ಘೃತಂ । ನ । ಪೂತಂ । ಅದ್ರಿಽಭಿಃ ।
ತಾ । ಸೂರಿಷು । ಶ್ರವಃ । ಬೃಹತ್ । ರಯಿಂ । ಗೃಣತ್ಽಸು । ದಿಧೃತಂ । ಇಷಂ । ಗೃಣತ್ಽಸು । ದಿಧೃತಂ ॥ ೬ ॥

॥ ಸಾಯಣಭಾಷ್ಯಂ ॥

ಏವ್ವೈವಮಿದಾನೀಂ ಕ್ರಿಯಮಾಣಪ್ರಕಾರೇಣ । ಸ್ತುತಿಸಾಹಿತ್ಯೇನೇತ್ಯರ್ಥಃ । ಇಂದ್ರಾಗ್ನಿಭ್ಯಾಂ ಹವ್ಯಂ ಹವಿರಹಾವಿ । ಪರಿತ್ಯಕ್ತಮಾಸೀತ್ । ಕೀದೃಶಂ ತತ್ । ಶೂಷ್ಯಂ ಬಲಕರಂ । ಕಿಮಿವ । ಅದ್ರಿಭಿರ್ಗ್ರಾವಭಿಃ ಪೂತಮಭಿಷುತಂ ಘೃತಂ ನ ಸೋಮರಸಮಿವ । ತದ್ಯಥಾ ಯುವಾಭ್ಯಾಂ ಪ್ರದೀಯತೇ

**ತದ್ವಚ್ಛರುಪುರೋಡಾಶಾದಿಕಮಪಿ । ತಾ ತೌ ದೇವೌ ಸೂರಿಷು ಮೇಧಾವಿಷ್ವಸ್ಮಾಸು ಬೃಹತ್ ಪ್ರಭೂತಂ ಶ್ರವೋಽನ್ನಂ ಯಶೋ ವಾ ರಯಿಂ ಧನಂ ಚ ದಿಧೃತಂ। ಧಾರಯತಂ । ಇಷಮನ್ನಂ ಗೃಣತ್ಸು ಸ್ತುವತ್ಸು ದಿಧೃತಂ । ಪುನರುಕ್ತಿರಾದರಾರ್ಥಾ ॥**

॥ ಪ್ರತಿಪದಾರ್ಥ ॥

**ಅದ್ರಿಭಿಃ**—ಜಜ್ಜುವ ಕಲ್ಲುಗಳಿಂದ । **ಪೂತಂ**—ಹಿಂಡಲ್ಪಟ್ಟ । **ಘೃತಂ ನ**—ಸೋಮರಸದಂತೆ । **ಶೂಷ್ಯಂ**—ಶಕ್ತಿಕರವಾದ । **ಹವ್ಯಂ**—ಹವಿಸ್ಸು । **ಇಂದ್ರಾಗ್ನಿಭ್ಯಾಂ**—ಇಂದ್ರನನ್ನೂ ಅಗ್ನಿಯನ್ನೂ ಒಟ್ಟಿಗೆ ಉದ್ದೇಶಿಸಿ । **ಏವ**—ಪ್ರಕೃತವಾದ ವಿಧಿಗನುಸಾರವಾಗಿ । **ಅಹಾವಿ**—ಅರ್ಪಿತವಾಗಿದೆ । **ತಾ**—ಅದೇ ದೇವತೆಗಳು। **ಸೂರಿಷು**—ಮೇಧಾವಿಗಳೂ । **ಗೃಣತ್ಸು**—ಅವರನ್ನು ಸ್ತುತಿಸುವವರೂ ಆದ ನಮ್ಮಲ್ಲಿ । **ಬೃಹತ್**—ಪ್ರಭೂತವಾದ । **ಶ್ರವಃ**—ಅನ್ನವನ್ನೂ । **ರಯಿಂ**—ಧನವನ್ನೂ । **ದಿಧೃತಂ**—ತುಂಬಿಡಲಿ । **ಗೃಣತ್ಸು**—ಅವರನ್ನು ಸ್ತುತಿಸುವವರಿಗೆ । **ಇಷಂ**—ಅನ್ನವನ್ನು । **ದಿಧೃತಂ**—ತುಂಬಿಕೊಡಲಿ.

॥ ಭಾವಾರ್ಥ ॥

ಸೋಮಲತೆಗಳನ್ನು ಜಜ್ಜಿ ಹಿಂಡುವ ಕಲ್ಲುಗಳಿಂದ ಹಿಂಡಲ್ಪಟ್ಟ ಸೋಮರಸದಂತೆ ಶಕ್ತಿಕರವಾದ ಹವಿಸ್ಸು ಇಂದ್ರನನ್ನೂ, ಅಗ್ನಿಯನ್ನೂ ಒಟ್ಟಿಗೆ ಉದ್ದೇಶಿಸಿ ಅರ್ಪಿತವಾಗಿದೆ. ಅದೇ ದೇವತೆಗಳು ಮೇಧಾವಿಗಳೂ, ಅವರನ್ನು ಸ್ತುತಿಸುವವರೂ ಆದ ನಮ್ಮಲ್ಲಿ ಪ್ರಭೂತವಾದ ಅನ್ನವನ್ನೂ, ಧನವನ್ನೂ ತುಂಬಿಡಲಿ. ಅವರನ್ನು ಸ್ತುತಿಸುವವರಿಗೆ ಅನ್ನವನ್ನು ತುಂಬಿಕೊಡಲಿ.

## English Translation.

The invigorating oblation has been offered, like the Soma-juice expressed by the sounding stones : bestow food upon the pious; great riches upon those who praise you; bestow food also upon those who praise you.

# ಎಂಭತ್ತೇಳನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಪ್ರ ವೋ ಮಹ ಇತಿ ನವರ್ಚಂ ಪಂಚದಶಂ ಸೂಕ್ತಮೇವಯಾಮರುದಾಖ್ಯಸ್ಯಾತ್ರೇಯಸ್ಯ ಮುನೇರಾರ್ಷಂ ಮರುದ್ದೇವತಾಕಮತಿಜಗತೀಚ್ಛಂದಸ್ಕಂ । ತಥಾ ಚಾನುಕ್ರಮಣಿಕಾ । ಪ್ರ ವೋ ನವೈವಯಾಮರುನ್ಮಾರುತಮತಿಜಾಗತಮಿತಿ ॥ ದಶರಾತ್ರೇ ಷಷ್ಠೇಽಹನಿ ತೃತೀಯಸವನೇಽಚ್ಛಾವಾಕಶಸ್ತ್ರ ಇದಂ ಸೂಕ್ತಂ । ಸೂತ್ರಿತಂ ಚ । ಏವಯಾಮರುದುಕ್ಥ್ಯೋ ವೃಷಾಕಪಿನಾ । ಆ. ೮-೪ । ಇತಿ ॥**

ಅನುವಾದವು— **ಪ್ರ ವೋ ಮಹೇ** ಎಂಬ ಈ ಸೂಕ್ತವು ಆರನೆಯ ಅನುವಾಕದಲ್ಲಿ ಹದಿನೈದನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಅತ್ರಿಗೋತ್ರೋದ್ಭವನಾದ **ಏವಯಾಮರುತ್** ಎಂಬುವನು ಋಷಿಯು, ಮರುತ್ತುಗಳು ದೇವತೆಯು, ಅತಿಜಗತೀಛಂದಸ್ಕವು. ಅನುಕ್ರಮಣಿಕೆಯಲ್ಲಿ—**ಪ್ರ ವೋ ನವೈವಯಾಮರುನ್ಮಾರುತಮತಿಜಾಗತಂ** ಎಂದು ಹೇಳಿರುವುದು. ದಶರಾತ್ರವೆಂಬ ಯಾಗದ ಆರನೆಯ ದಿವಸ ತೃತೀಯಸವನ ಕಾಲದಲ್ಲಿ ಅಚ್ಛಾವಾಕನೆಂಬ ಋತ್ವಿಜನು ಪಠಿಸುವ ಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ— **ಏವಯಾಮರುದುಕ್ಥ್ಯೇ ವೃಷಾಕಪಿನಾ** ಎಂಬ ಸೂತ್ರದಿಂದ (೯ ೮-೪) ವಿವೃತವಾಗಿರುವುದು.

## ಸೂಕ್ತ—೮೭

ಮಂಡಲ— ೫॥ ಅನುವಾಕ—೬ ॥ ಸೂಕ್ತ—೮೭ ॥
ಅಷ್ಟಕ—೪ ॥ ಅಧ್ಯಾಯ—೪ ॥ ವರ್ಗ—೩೩, ೩೪ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ॥
॥ ಋಷಿಃ—ಏವಯಾಮರುದಾತ್ರೇಯಃ ॥
॥ ದೇವತಾ—ಮರುತಃ ॥
॥ ಛಂದಃ—ಅತಿಜಗತೀ ॥

॥ ಸಂಹಿತಾಪಾಠಃ ॥

ಪ್ರ ವೋ ಮಹೇ ಮತಯೋ ಯಂತು ವಿಷ್ಣವೇ ಮರುತ್ವತೇ ಗಿರಿಜಾ
ಏವಯಾಮರುತ್ ।
ಪ್ರ ಶರ್ಧಾಯ ಪ್ರಯಜ್ಯವೇ ಸುಖಾದಯೇ ತವಸೇ ಭಂದದಿಷ್ಟಯೇ
ಧುನಿವ್ರತಾಯ ಶವಸೇ ॥ ೧ ॥

॥ ಪದಪಾಠಃ ॥

ಪ್ರ । ವಃ । ಮಹೇ । ಮತಯಃ । ಯಂತು । ವಿಷ್ಣವೇ । ಮರುತ್ವತೇ । ಗಿರಿऽಜಾಃ । ಏವಯಾಮರುತ್ ।
ಪ್ರ । ಶರ್ಧಾಯ । ಪ್ರऽಯಜ್ಯವೇ । ಸುऽಖಾದಯೇ । ತವಸೇ । ಭಂದತ್ऽಇಷ್ಟಯೇ । ಧುನಿऽವ್ರತಾಯ ।
ಶವಸೇ ॥ ೧ ॥

॥ ಸಾಯಣಭಾಷ್ಯಂ ॥

ಪ್ರ ಯಂತು ಪ್ರಗಚ್ಛಂತು ಗಿರಿಜಾ ವಾಚಿ ನಿಷ್ಪನ್ನಾ ಮತಯಃ ಸ್ತುತಯಃ । ಕಸ್ಮೈ। ವಸ್ತುಭ್ಯಂ॥ ವಚನವ್ಯತ್ಯಯಃ ॥ ವಿಷ್ಣವೇ ವ್ಯಾಪ್ತಾಯೇಂದ್ರಾಯ ವಿಷ್ಣವೇ ವಾ ಮರುತ್ವತೇ ಮರುದ್ಭಿಸ್ತದ್ವತೇ ।

ತಸ್ಯ ಸ್ತುತಯ ಇತ್ಯುಚ್ಯತೇ । ಏವಯಾಮರುತ್ ಏತನ್ನಾಮಕಸ್ಯ ಋಷೇಃ ॥ ಷಷ್ಠ್ಯಾ ಲುಕ್ ॥ ಅಥವಾಯಮೃಷಿರ್ಗಿರಿಜಾಃ ಸ್ತುತೇರ್ಜನಯಿತಾ ಭವತಿ । ಉತ್ತರಾರ್ಧೇ ಮರುತ್ಸ್ತುತಿಃ । ಕಿಂಚ ಪ್ರ ಯಂತು ಸ್ತುತಯಃ । ತಸ್ಮೈ । ಶರ್ಧಾಯ ಬಲಾಯ ಮಾರುತಾಯ । ಇತರತ್ಸರ್ವಂ ಬಲವಿಶೇಷಣಂ । ಪ್ರಯಜ್ಯವೇ ಪ್ರಕರ್ಷೇಣ ಯಷ್ಟವ್ಯಾಯ ಸುಖಾದಯೇ ಶೋಭನಾಭರಣಾಯ । ಖಾದಿರಾಭರಣವಿಶೇಷಃ । ಹಸ್ತೇಷು ಖಾದಿಶ್ಚ । ಋಗ್ವೇ. ೧-೧೬೮-೩ । ಪತ್ಸು ಖಾದಯಃ । ಋಗ್ವೇ. ೫-೫೪-೧೧ । ಇತಿ ಚ ಶ್ರುತೇಃ । ತವಸೇ ಬಲವತೇ ಭಂದದಿಷ್ಟಯೇ । ಸ್ತುತಿರೂಪೇಷ್ಟಿರ್ಯಸ್ಯ ತದ್ಭಂದದಿಷ್ಟಿ । ತಸ್ಮೈ ಧುನಿವ್ರತಾಯ ಮೇಘಾನಾಂ ಚಾಲನಂ ಕರ್ಮ ಯಸ್ಯ ತಾದೃಶಾಯ ಶವಸೇ ಗಮನವತೇ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) । **ಏವಯಾ ಮರುತ್**— ಏವಯಾಮರುತ್ತೆಂಬ ಋಷಿಯ । **ಗಿರಿಜಾಃ**— ವಾಕ್ಕಿನಿಂದ ಉತ್ಪನ್ನನಾದ। **ಮತಯಃ**— ಸ್ತುತಿಗಳು । **ಮಹೇ**— ಮಹತ್ಸ್ವರೂಪನೂ। **ಮರುತ್ವತೇ**— ಮರುತ್ತುಗಳಿಂದ ಕೂಡಿದವನೂ । **ವಿಷ್ಣವೇ**— ವ್ಯಾಪಕನೂ ಆದ । **ವಃ**— ನಿನ್ನನ್ನುದ್ದೇಶಿಸಿ । **ಪ್ರ ಯಂತು**— ಅತಿಶಯವಾಗಿ ಅರ್ಪಿತವಾಗಲಿ । **ಪ್ರ ಯಜ್ಯವೇ**— ಅತ್ಯಂತ ಪೂಜ್ಯವಾದುದೂ । **ಸುಖಾದಯೇ**— ಉತ್ತಮವಾದ ಆಭರಣವುಳ್ಳದೂ । **ತವಸೇ**— ಶಕ್ತಿಯುತವಾದುದೂ । **ಭಂದದಿಷ್ಟಯೇ**— ಸ್ತುತಿರೂಪವಾದ ಯಜ್ಞವುಳ್ಳದ್ದೂ । **ಧುನಿವ್ರತಾಯ**— ಮೇಘಗಳನ್ನು ಚಲಿಸುವಂತೆ ಮಾಡತಕ್ಕದ್ದೂ । **ಶವಸೇ**— ವೇಗಗಾಮಿಯಾದುದೂ ಆದ । **ಶರ್ಧಾಯ**— ಮರುತ್ಸಂಘವನ್ನುದ್ದೇಶಿಸಿ । **ಪ್ರ (ಯಂತು)**— ಅತಿಶಯವಾಗಿ ಹೋಗಿ ಸೇರಲಿ.

॥ ಭಾವಾರ್ಥ ॥

ಎಲೈ ಇಂದ್ರನೇ, ಏವಯಾಮರುತ್ತೆಂಬ ಋಷಯ ವಾಕ್ಕಿನಿಂದ ನಿರ್ಮಿತವಾದ ಸ್ತುತಿಗಳು ಮಹತ್ಸ್ವರೂಪನೂ, ಮರುತ್ತುಗಳಿಂದ ಕೂಡಿದವನೂ, ವ್ಯಾಪಕನೂ ಆದ ನಿನ್ನನ್ನುದ್ದೇಶಿಸಿ ಅತಿಶಯವಾಗಿ ಅರ್ಪಿತವಾಗಲಿ ಮತ್ತು ಅತ್ಯಂತ ಪೂಜ್ಯವಾದುದೂ, ಉತ್ತಮವಾದ ಆಭರಣವುಳ್ಳದ್ದೂ, ಶಕ್ತಿಯುತವಾದುದೂ ಸ್ತುತಿರೂಪವಾದ ಯಜ್ಞವುಳ್ಳದ್ದೂ, ಮೇಘಗಳನ್ನು ಚಲಿಸುವಂತೆ ಮಾಡತಕ್ಕದ್ದೂ, ವೇಗಗಾಮಿಯಾದುದೂ ಆದ ಮರುತ್ಸಂಘವನ್ನು ದ್ದೇಶಿಸಿಈ ಸ್ತುತಿಗಳು ಅತಿಶಯವಾಗಿ ಹೋಗಿ ಸೇರಲಿ.

## English Translation

May the voice-born praises of Evayamarut reach you, Vishnu, attended by the Maruths: (may they reach) the strong, the adorable, the brilliantly-adorned, the vigorous, praise-loving, cloud-scattering, quick-moving company of the Maruts.

॥ ಸಂಹಿತಾಪಾಠಃ ॥

ಪ್ರ ಯೇ ಜಾತಾ ಮಹಿನಾ ಯೇ ಚ ನು ಸ್ವಯಂ ಪ್ರ ವಿದ್ಮನಾ ಬ್ರುವತ
ಏವಯಾಮರುತ್ ।
ಕ್ರತ್ವಾ ತದ್ವೋ ಮರುತೋ ನಾಧೃಷೇ ಶವೋ ದಾನಾ ಮಹ್ನಾ ತದೇಷಾ-
ಮಧೃಷ್ಟಾಸೋ ನಾದ್ರಯಃ ॥ ೨ ॥

॥ ಪದಪಾಠಃ ॥

ಪ್ರ । ಯೇ । ಜಾತಾಃ । ಮಹಿನಾ । ಯೇ । ಚ । ನು । ಸ್ವಯಂ । ಪ್ರ । ವಿದ್ಮನಾ । ಬ್ರುವತೇ । ಏವಯಾ-
ಮರುತ್ ।
ಕ್ರತ್ವಾ । ತತ್ । ವಃ । ಮರುತಃ । ನ । ಆಽಧೃಷೇ । ಶವಃ । ದಾನಾ । ಮಹಾ । ತತ್ । ಏಷಾಂ ।
ಅಧೃಷ್ಟಾಸಃ । ನ । ಅದ್ರಯಃ ॥ ೨ ॥

॥ ಸಾಯಣಭಾಷ್ಯಂ ॥

ಯೇ ಮಹಿನಾ ಮಹತಾ ವಿಷ್ಣುನೇಂದ್ರೇಣ ವಾ ಸಹ ಪ್ರ ಜಾತಾಃ ಪ್ರಾದುರ್ಭೂತಾಸ್ತಾನ್ಪ್ರವತೇ। ಯೇ ಚ ನು ಕ್ಷಿಪ್ರಂ ಸ್ವಯಮೇವ ವಿದ್ಮನಾ ಯಜ್ಞಗಮನವಿಷಯಜ್ಞಾನೇನ ಸಹ ಪ್ರ ಜಾತಾಃ ಪ್ರಾದುರ್ಭೂತಾಸ್ತಾನ್ಮರುತ ಏವಯಾಮರುದ್ಪ್ರವತೇ । ಸ್ತೌತಿ ॥ ಪ್ರೇತ್ಯೆಯಮಾಖ್ಯಾತೇನ ವಾ ಸಂಬಂಧನೀಯಃ । ಬ್ರುವತ ಇತಿ ವ್ಯತ್ಯಯೇನ ಬಹುವಚನಂ । ಏಕವಚನೇ ವಾ ಛಾಂದಸಃ ಶಃ । ನಿಘಾತಾಭಾವಶ್ಛಾಂದಸಃ ॥ ಅಥ ಪ್ರತ್ಯಕ್ಷವಾದಃ । ಹೇ ಮರುತೋ ವೋ ಯುಷ್ಮಾಕಂ ತತ್ಪ್ರಸಿದ್ಧಂ ಶವೋ ಬಲಂ ಕ್ರತ್ವಾ ಚಾಲನಾದಿರೂಪೇಣ ಕರ್ಮಣಾ ಯುಕ್ತಂ ನಾಧೃಷೇ । ಕೈಶ್ಚಿದಪ್ಯಾಧರ್ಷಣೀಯಂ ನ ಭವತಿ । ಅನ್ಯೇಷಾಮಸುರಾದೀನಾಂ ಕ್ರತ್ವಾ ಕರ್ಮಣಾ ವಾನಭಿಭಾವ್ಯಂ ಭವತಿ ॥ ಕೃತ್ಯಾರ್ಥೇ ಕೇನ್॥ ಕಿಂಚೈಷಾಂ ವೋ ತತ್ ಬಲಂ ದಾನಾಭಿಮತದಾನೇನ ಮಹ್ನಾ ಮಹತ್ತ್ವೇನ ಚೋಪೇತಂ । ಯೂಯಂ ಪ್ರಬಲಾಃ । ಅಧೃಷ್ಟಾಸೋಽಧರ್ಷಣೀಯಾಃ । ತತ್ರ ದೃಷ್ಟಾಂತಃ । ಅದ್ರಯೋ ನ । ತೇ ಯಥಾಧೃಷ್ಯಾಸ್ತದ್ವದ್ಯೂಯಮಪಿ ॥

॥ ಪ್ರತಿಪದಾರ್ಥ ॥

**ಯೇ**—ಯಾವ ಮರುತ್ತುಗಳು । **ಮಹಿನಾ**—ಮಹಾತ್ಮನಾದ ಇಂದ್ರನೊಡನೆ । **ಪ್ರ ಜಾತಾಃ**—ಉತ್ಪನ್ನರಾದರೋ । **ಯೇ ಚ**—ಯಾರು । **ನು**—ಕ್ಷಿಪ್ರವಾಗಿ । **ಸ್ವಯಂ**—ಸ್ವತಃ । **ವಿದ್ಮನಾ**—ಯಜ್ಞಗಮನ ಜ್ಞಾನವುಳ್ಳವರಾಗಿ । **ಪ್ರ (ಜಾತಾಃ)**-ಉತ್ಪನ್ನರಾದರೋ ಅಂತಹ ಮರುತ್ತುಗಳನ್ನು । **ಏವಯಾಮರುತ್**—ಏವಯಾಮರುತ್ತೆಂಬ ಋಷಿಯು । **ಬ್ರುವತೇ**—ಸ್ತುತಿಸುತ್ತಾನೆ । **ಮರುತಃ**—ಎಲೈ ಮರುತ್ತುಗಳೇ । **ವಃ**—

ನಿಮ್ಮ | **ತತ್**—ಪ್ರಸಿದ್ಧವಾದ | **ಶವಃ**—ಬಲವು | **ಕ್ರತ್ವಾ**—ಅಸಾಧಾರಣವಾದ ಕರ್ಮಗಳಿಂದ ಕೂಡಿ | **ನ ಆಧೃಷೇ**—ಅಪ್ರತಿಹತವಾಗಿರುತ್ತದೆ | **ಏಷಾಂ**—ನಿಮ್ಮ | **ತತ್**—ಅದೇ ಬಲವು | **ದಾನಾ**—ಅಭಿಮತ ಪ್ರದಾನಗಳಿಂದಲೂ ಕೂಡಿ | **ಮಹ್ನಾ**—ಮಹತ್ತ್ವದಿಂದಲೂ | **ಅದ್ರಯೋ ನ**—ಪರ್ವತಗಳಂತೆ | **ಅಧೃಷ್ವಾಸಃ**—ಚಲನರಹಿತವಾಗಿರುತ್ತವೆ (ಸ್ಥಿರವಾಗಿರುತ್ತವೆ).

॥ ಭಾವಾರ್ಥ ॥

ಯಾವ ಮರುತ್ತುಗಳು ಮಹಾತ್ಮನಾದ ಇಂದ್ರನೊಡನೆ ಉತ್ಪನ್ನರಾದರೋ, ಯಾರು ಕ್ಷಿಪ್ರವಾಗಿ ಸ್ವತಃ ಯಜ್ಞಗಮನವುಳ್ಳವರಾಗಿ ಉತ್ಪನ್ನರಾದರೋ ಅಂತಹ ಮರುತ್ತುಗಳನ್ನು ಏವಯಾಮರುತ್ತೆಂಬ ಋಷಿಯು ಸ್ತುತಿಸುತ್ತಾನೆ. ಎಲೈ ಮರುತ್ತುಗಳೇ, ನಿಮ್ಮ ಪ್ರಸಿದ್ಧವಾದ ಬಲವು ಅಸಾಧಾರಣವಾದ ಕರ್ಮಗಳಿಂದ ಕೂಡಿ ಅಪ್ರತಿಹತವಾಗಿರುತ್ತದೆ. ನಿಮ್ಮ ಅದೇ ಬಲವು ಅಭಿಮತಪ್ರದಾನಾದಿಗಳಿಂದಲೂ, ಮಹತ್ತ್ವದಿಂದಲೂ ಕೂಡಿ ಪರ್ವತಗಳಂತೆ ಅಚಲವಾಗಿರುತ್ತದೆ

## English Translation.

Evayamarut glorifies those who are manifested with the great (Indra), who appear spontaneously and speedily with the knowledge (that the sacrifice is prepared): your strength in action, Maruts, is not to be resisted, (though qualified) by (your) infinite liberality: you are immoveable as mountains.

॥ ಸಂಹಿತಾಪಾಠಃ ॥

ಪ್ರ ಯೋ ದಿವೋ ಬೃಹತಃ ಶೃಣ್ವಿರೇ ಗಿರಾ ಸುಶುಕ್ವಾನಃ ಸುಭ್ವ ಏವಯಾ-
ಮರುತ್ ।
ನ ಯೇಷಾಮಿರೀ ಸಧಸ್ಥ ಈಷ್ಟ ಆ ಅಗ್ನಯೋ ನ ಸ್ವವಿದ್ಯುತಃ ಪ್ರ ಸ್ಯಂ-
ದ್ರಾಸೋ ಧುನೀನಾಂ ॥ ೩ ॥

॥ ಪದಪಾಠಃ ॥

ಪ್ರ । ಯಃ । ದಿವಃ । ಬೃಹತಃ । ಶೃಣ್ವಿರೇ । ಗಿರಾ । ಸುऽಶುಕ್ವಾನಃ । ಸುऽಭ್ವಃ । ಏವಯಾಮರುತ್ ।
ನ । ಯೇಷಾಂ । ಇರೀ । ಸಧऽಸ್ಥೇ । ಈಷ್ಟೇ । ಆ । ಅಗ್ನಯಃ । ನ । ಸ್ವऽವಿದ್ಯುತಃ । ಪ್ರ । ಸ್ಯಂದ್ರಾಸಃ ।
ಧುನೀನಾಂ ॥ ೩ ॥

॥ ಸಾಯಣಭಾಷ್ಯಂ ॥

ಯೇ ಮರುತೋ ಬೃಹತೋ ದಿವೋ ದ್ಯುಲೋಕಾದಾಗಚ್ಛಂತಃ ಪ್ರ ಶೃಣ್ವಿರೇ ಶೃಣ್ವಂತಿ ತಾನ್ಮರುತೋ ಗಿರೈವಯಾಮರುತ್ಸ್ತೌತಿ ತವಾನ್ । ಕೀದೃಶಾಸ್ತೇ । ಶುಶುಕ್ವಾನೋ ದೀಪ್ತಾಃ ಸುಭ್ವಃ ಸುಷ್ಠು ಭವಂತಃ । ಯೇಷಾಂ ಮರುತಾಂ ಸಧಸ್ಥೇ ಸಹಸ್ಥಾನೇ ಸ್ವಕೀಯೇ ನಿವಾಸೇ ತಿಷ್ಠತಾಮಿರೀರಿತಾ ಪ್ರೇರಿತಾ ನೇಷ್ಟ ಆ । ನೇಶತೇ ಚ ಚಾಲಯಿತುಂ । ಆ ಇತಿ ಚಾರ್ಥೇ । ಅಗ್ನಯೋ ನ ಅಗ್ನಯ ಇವ ಸ್ವವಿದ್ಯುತಃ ಸ್ವಯಮೇವ ವಿದ್ಯೋತಮಾನಾ ಧುನೀನಾಂ ನದೀನಾಂ ಸ್ಯಂದ್ರಾಸೋ ವರ್ಷಣೇನ ಚಾಲಯಿತಾರಶ್ಚ ॥

॥ ಪ್ರತಿಪದಾರ್ಥ ॥

**ಯೇಷಾಂ**—ಯಾವ ಮರುತ್ತುಗಳ । **ಸದಸ್ಥೇ**—ಗೃಹದಲ್ಲಿ । **ಇರೀ**—ಅವರನ್ನು ಚಲಿಸುವಂತೆ ಮಾಡ ತಕ್ಕ ಶೂರನು । **ಆ ನ ಈಷ್ಟೇ**—ಯಾವನೂ ಸಮರ್ಥನಾಗುವುದಿಲ್ಲವೋ (ಮತ್ತು ಯಾವ ಮರುತ್ತುಗಳು) । **ಅಗ್ನಯೋ ನ**—ಅಗ್ನಿಗಳಂತೆ । **ಸ್ವವಿದ್ಯುತಃ**-ಸ್ವಯಂ ಪ್ರಕಾಶಿತಗಳಾದ । **ಧುನೀನಾಂ**-ನದಿಗಳ (ಪ್ರವಾಹಕ್ಕೆ)। **ಸ್ಯಂದ್ರಾಸಃ**—ಪ್ರೇರಕಗಳಾಗಿ ಆಗುವರೋ (ಮತ್ತು) । **ಯೇ**—ಯಾವ ಮರುತ್ತುಗಳು । **ಬೃಹತಃ**—ಮಹತ್ತಾದ । **ದಿವಃ**—ದ್ಯುಲೋಕದಿಂದ ಬಂದು । **ಪ್ರ ಶೃಣ್ವಿರೇ**—ನಮ್ಮ ಸ್ತುತಿಗಳನ್ನು ಕೇಳುವರೋ ಅಂತಹವರೂ । **ಶುಶುಕ್ವಾನಃ**—ಅತಿಶಯವಾಗಿ ಪ್ರಕಾಶಿಸುವವರೂ । **ಸುಭ್ವಃ**—ಅಸಾಧಾರಣವಾಗಿರುವವರೂ ಆದ ಮರುತ್ತುಗಳನ್ನು । **ಏವಯಾಮರುತ್**—ಏವಯಾಮರುತ್ತೆಂಬ ಋಷಿಯು । **ಗಿರಾ**—ತನ್ನ ಸ್ತುತಿಗಳಿಂದ ಸ್ತುತಿಸುತ್ತಾನೆ

॥ ಭಾವಾರ್ಥ ॥

ಯಾವ ಮರುತ್ತುಗಳ ಗೃಹದಲ್ಲಿ ಅವರನ್ನು ಚಲಿಸುವಂತೆ ಮಾಡತಕ್ಕ ಶೂರನಾವನೂ ಸಮರ್ಥನಾಗುವುದಿಲ್ಲವೋ, ಮತ್ತು ಯಾವ ಮರುತ್ತುಗಳು ಅಗ್ನಿಗಳಂತೆ ಸ್ವಯಂಪ್ರಕಾಶಕಳಾದ ನದಿಗಳ ಪ್ರವಾಹಕ್ಕೆ ಪ್ರೇರಕಗಳಾಗಿ ಆಗುವರೋ ಮತ್ತು ಯಾರು ಮಹತ್ತಾದ ದ್ಯುಲೋಕದಿಂದ ಬಂದು ನಮ್ಮ ಸ್ತುತಿಗಳನ್ನು ಕೇಳುವರೋ ಅಂತಹ ಅತಿಶಯವಾಗಿ ಪ್ರಕಾಶಿಸುವವರೂ, ಅಸಾಧಾರಣರಾಗಿರುವವರೂ ಆದ ಮರುತ್ತುಗಳನ್ನು ಏವಯಾಮರುತ್ತೆಂಬ ಋಷಿಯು ತನ್ನ ಸ್ತುತಿಗಳಿಂದ ಪ್ರಶಂಸಿಸುತ್ತಾನೆ.

## English Translation.

Evayamarut glorifies with praise those who, (coming) brilliant and happy from the vast heaven, hear (his invocation); in whose dwelling there is no one able to disturb them, and, who, like self-radiant fires, are the impellers of the rivers.

॥ ಸಂಹಿತಾಪಾಠಃ ॥

ಸ ಚಕ್ರಮೇ ಮಹತೋ ನಿರುರುಕ್ರಮಃ ಸಮಾನಸ್ಮಾತ್ಸದಸ ಏವಯಾ-
ಮರುತ್ ।
ಯದಾಯುಕ್ತ ತ್ಮನಾ ಸ್ವಾದಧಿ ಷ್ಣುಭಿರ್ವಿಷ್ಪರ್ಧಸೋ ವಿಮಹಸೋ
ಜಿಗಾತಿ ಶೇವೃಧೋ ನೃಭಿಃ ॥ ೪ ॥

॥ ಪದಪಾಠಃ ॥

ಸಃ । ಚಕ್ರಮೇ । ಮಹತಃ । ನಿಃ । ಉರುऽಕ್ರಮಃ । ಸಮಾನಸ್ಮಾತ್ । ಸದಸಃ । ಏವಯಾಮರುತ್ ।
ಯದಾ । ಅಯುಕ್ತ । ತ್ಮನಾ । ಸ್ವಾತ್ । ಅಧಿ । ಸ್ನುऽಭಿಃ । ವಿऽಸ್ಪರ್ಧಸಃ । ವಿऽಮಹಸಃ । ಜಿಗಾತಿ ।
ಶೇऽವೃಧಃ । ನೃऽಭಿಃ ॥ ೪ ॥

॥ ಸಾಯಣಭಾಷ್ಯಂ ॥

ಸ ಮರುದ್ಗಣೋ ಮಹತಃ ಪ್ರವೃದ್ಧಾತ್ಸಮಾನಸ್ಮಾತ್ಸರ್ವೇಷಾಂ ಸಾಧಾರಣಾತ್ಸದಸಃ ಸ್ಥಾನಾ-ದಂತರಿಕ್ಷಾದುರುಕ್ರಮೋ ವಿಸ್ತೀರ್ಣಕ್ರಮಣಃ ಸನ್ ನಿಶ್ಚಕ್ರಮೇ । ನಿರಗಚ್ಛತ್। ಏವಯಾಮರುದೃಷಿರ್ಯದಾ ಸ್ವಾತ್ಸ್ವಕೀಯಸ್ಥಾನಾತ್ । ಅಧೀತಿ ಪಂಚಮ್ಯರ್ಥಾನುವಾದೀ । ತ್ಮನಾತ್ಮನೈವ ಸ್ನುಭಿರ್ಗಂತೃಭಿರ್ನೃಭಿಃ ಸ್ವನೇತೃಭಿರಶ್ವೈರಯುಕ್ತ ಯುಕ್ತೋऽಭವದಾಗಮನಪ್ರಾರ್ಥನಾಯ। ಅಥ ಬಹುವದುಚ್ಯತೇ। ತದಾನೀಂ ವಿಸ್ಪರ್ಧಸೋ ವಿವಿಧಸ್ಪರ್ಧಾಃ । ಅಹಂ ಪುರತೋ ಗಚ್ಛಾಮ್ಯಹಂ ಪುರತೋ ಗಚ್ಛಾಮೀತಿ ತೇಷಾಂ ಸ್ಪರ್ಧಾ । ಅಥವಾ ವಿಗತಸ್ಪರ್ಧಾಃ । ನ ಹ್ಯೇಷಾಂ ಸಾರ್ಧಂ ಸ್ಪರ್ಧಕಾಃ ಸಂತಿ । ವಿಮಹಸೋ ವಿಶಿಷ್ಟ-ಬಲಾಃ ಶೇವೃಧಃ ಶೇವಸ್ಯ ಸುಖಸ್ಯ ವರ್ಧಯಿತಾರೋ ಜಿಗಾತಿ । ನಿರ್ಗಚ್ಛಂತಿ ॥ ವ್ಯತ್ಯಯೇನೈಕವಚನಂ ॥

॥ ಪ್ರತಿಪದಾರ್ಥ ॥

**ಯದಾ**—ಯಾವಾಗ । **ಏವಯಾಮರುತ್**—ಏವಯಾಮರುತ್ತೆಂಬ ಋಷಿಯು । **ಸ್ವಾತ್ ಅಧಿ**—ತನ್ನ ಸ್ವಸ್ಥಾನದಲ್ಲಿದ್ದು (ಪ್ರಾರ್ಥನೆಗಾಗಿ ಕಾದಿದ್ದನೋ ಆಗ) । **ತ್ಮನಾ**—ತನ್ನ । **ಸ್ನುಭಿಃ**—ಗಮನಾರ್ಹವಾದ । **ನೃಭಿಃ**—ಅಶ್ವಗಳೊಡನೆ । **ಅಯುಕ್ತ**—(ಮರುದ್ಗಣವು) ಕೂಡಿಕೊಂಡಿತು (ಅನಂತರ) । **ಸಃ**—ಆ ಮರುದ್ಗಣವು । **ಮಹತಃ**—ಅತ್ಯಂತ ವಿಸ್ತೃತವಾದುದೂ । **ಸಮಾನಸ್ಮಾತ್**—ಎಲ್ಲರಿಗೂ ಸಾಧಾರಣವಾದುದೂ ಆದ । **ಸದಸಃ**—ಅಂತರಿಕ್ಷಪ್ರದೇಶದಿಂದ । **ಉರುಕ್ರಮಃ**—ವಿಸ್ತೃತವಾದ ಸಂಚಾರಪದ್ಧತಿಯುಳ್ಳದ್ದಾಗಿ । **ನಿಃ ಚಕ್ರಮೇ**—ಹೊರಹೊರಟಿತು । **ವಿಸ್ಪರ್ಧಸಃ**—ಪರಸ್ಪರ ಸ್ಪರ್ಧೆಯಿಂದ ಕೂಡಿದವರೂ । **ವಿಮಹಸಃ**—ಅತಿಶಯವಾದ ಶಕ್ತಿಯಿಂದ ಕೂಡಿದವರೂ । **ಶೇವೃಧಃ**—ಸುಖವರ್ಧಕರೂ ಆದ ಮರುತ್ತುಗಳು । **ಜಿಗಾತಿ**—ಹೊರಡುತ್ತಾರೆ.

॥ ಭಾವಾರ್ಥ ॥

ಏವಯಾಮರುತ್ತೆಂಬ ಋಷಿಯು ತನ್ನ ಸ್ವಸ್ಥಾನದಲ್ಲಿ ಮರುತ್ತುಗಳಿಗಾಗಿ ಪ್ರಾರ್ಥಿಸಿದೊಡನೆಯೇ, ಮರುತ್ತುಗಳು ಗಮನಾರ್ಹವಾದ ಅಶ್ವಯುಕ್ತರಾಗಿ ಅತ್ಯಂತ ವಿಸ್ತೃತವಾದುದೂ ಮತ್ತು ಎಲ್ಲರಿಗೂ ಸಾಧಾರಣವಾದುದೂ ಆದ ಅಂತರಿಕ್ಷದಿಂದ ಹೊರಟರು. ಯಜ್ಞಗಮನಕ್ಕಾಗಿ ಪರಸ್ಪರ ಸ್ಪರ್ಧೆಯಿಂದ ಕೂಡಿದವರೂ, ಅತಿಶಯವಾದ ಶಕ್ತಿಯುಳ್ಳವರೂ, ಸುಖವರ್ಧಕರೂ ಆದ ಮರುತ್ತುಗಳು ಯಜ್ಞಾರ್ಥವಾಗಿ ಹೊರಡುತ್ತಾರೆ.

English Translation.

That wide-spreading troop (of Maruts) has issued from a spacious common dwelling-place, (where) Evayamarut (awaits them) when their car has been spontaneously harnessed with its rapid horses; and, emulous, vigorous, and conferring hapiness, they sally forth.

॥ ಸಂಹಿತಾಪಾಠಃ ॥

ಸ್ವನೋ ನ ವೋಽಮವಾನ್ರೇಜಯದ್ವೃಷಾ ತ್ವೇಷೋ ಯಯಿಸ್ತವಿಷ ಏವಯಾಮರುತ್ ।
ಯೇನಾ ಸಹಂತ ಋಂಜತ ಸ್ವರೋಚಿಷಃ ಸ್ಥಾರಶ್ಮಾನೋ ಹಿರಣ್ಯಯಾಃ ಸ್ವಾಯುಧಾಸ ಇಷ್ಮಿಣಃ ॥ ೫ ॥

॥ ಪದಪಾಠಃ ॥

ಸ್ವನಃ । ನಃ । ವಃ । ಅಮಽವಾನ್ । ರೇಜಯತ್ । ವೃಷಾ । ತ್ವೇಷಃ । ಯಯಿಃ । ತವಿಷಃ । ಏವಯಾ-ಮರುತ್ ।
ಯೇನ । ಸಹಂತಃ । ಋಂಜತ । ಸ್ವಽರೋಚಿಷಃ । ಸ್ಥಾಃಽರಶ್ಮಾನಃ । ಹಿರಣ್ಯಯಾಃ । ಸುಽಆಯುಧಾಸಃ । ಇಷ್ಮಿಣಃ ॥ ೫ ॥

॥ ಸಾಯಣಭಾಷ್ಯಂ ॥

ಹೇ ಮರುತೋ ವೋ ಯುಷ್ಮಾಕಂ ಸ್ವನೋ ವೇಗಜನಿತಃ ಶಬ್ದೋ ನ ರೇಜಯತ್ ನ ಕಂಪಯತ್ವೇವಯಾಮರುತಂ ಮಾಂ ॥ ಸುಪಾಂ ಸುಲುಗಿತಿ ದ್ವಿತೀಯಾಲುಕ್ ॥ ಸ್ವನೋ ವಿಶೇಷ್ಯತೇ ।

ಅಮವಾನ್ ಬಲವಾನ್ ವೃಷಾ ವರ್ಷಿತಾ ವೃಷ್ಟೇಸ್ತ್ವೇಷೋ ದೀಪ್ತೋ ಯ.ಯಿರ್ಗಂತಾ ತವಿಷಃ ಪ್ರವೃದ್ಧಃ । ಯೇನ ಸ್ವನೇನ ಸಂಹತಃ ಶತ್ರೂನಭಿಭವಂತೋ ಯೂಯಮೃಂಜತ । ಪ್ರಸಾಧಯಥ ॥ ಲಡರ್ಥೇ ಲೋಟ್ ॥ ಕೀದೃಶಾ ಯೂಯಂ । ಸ್ವರೋಚಿಷಃ ಸ್ವಾಯತ್ತರಶ್ಮಯಃ ಸ್ಥಾರಶ್ಮಾನಃ ಸ್ಥಿರರಶ್ಮಯೋ ಹಿರಣ್ಯಯಾ ಹಿರಣ್ಯಾಭರಣಾಃ ಸ್ವಾಯುಧಾಸಃ ಸ್ವಾಯತ್ತಾಯುಧಾ ಇಷ್ಮಿಣೋಽನ್ನವಂತೋ ಗಮನವಂತೋ ವಾ ॥

॥ ಪ್ರತಿಪದಾರ್ಥ ॥

(ಎಲೈ ಮರುತ್ತುಗಳೇ) **ಸ್ವರೋಚಿಷಃ**– ಸ್ವಾಯತ್ತವಾದ ಕಾಂತಿಯುಳ್ಳವರೂ । **ಸ್ಥಾರಶ್ಮಾನಃ**— ಸ್ಥಿರವಾದ ರಶ್ಮಿಗಳುಳ್ಳವರೂ । **ಹಿರಣ್ಯಯಾಃ**—ಸುವರ್ಣನಿರ್ಮಿತವಾದ ಆಭರಣವುಳ್ಳವರೂ । **ಸ್ವಾಯುಧಾಸಃ**—ಸ್ವತಃ ಹೊಂದಿರುವ ಆಯುಧವುಳ್ಳವರೂ । **ಇಷ್ಮಿಣಃ**—ಅನ್ನವಂತರೂ ಆದ ನೀವು । **ಯೇನ**— ಯಾವ ನಿಮ್ಮ ಶಬ್ದದಿಂದ । **ಸಹಂತಃ**—ಶತ್ರುಗಳನ್ನು ಎದುರಿಸುತ್ತಾ । **ಋಂಜತ**—ಲೋಕವನ್ನು ಅಲಂಕರಿಸುವಿರೋ ಅಂತಹ । **ಅಮವಾನ್**—ಶಕ್ತಿಯುತವಾದುದೂ । **ವೃಷಾ**—ವೃಷ್ಟಿಕಾರಕವಾದುದೂ । **ತ್ವೇಷಃ**—ಪ್ರಭಾಯುತವಾದುದೂ । **ಯಯಿಃ**—ಸಂಚಾರಾತ್ಮಕವಾದುದೂ । **ತವಿಷಃ**—ಪ್ರವೃದ್ಧವಾದುದೂ ಆದ । **ವಃ ಸ್ವನಃ**—ನಿಮ್ಮ ಧ್ವನಿಯು । **ಏವಯಾಮರುತ್**—ಏವಯಾಮರುತ್ತಾದ ನನ್ನನ್ನು । **ನ ರೇಜಯತ್**— ಗಾಬರಿಗೊಳಿಸದಿರಲಿ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ಸ್ವಾಯುತ್ತವಾದ ಕಾಂತಿಯುಳ್ಳವರೂ, ಸ್ಥಿರವಾದ ರಶ್ಮಿಗಳುಳ್ಳವರೂ, ಸುವರ್ಣ ನಿರ್ಮಿತವಾದ ಆಭರಣವುಳ್ಳವರೂ, ಸ್ವತಃ ಹೊಂದಿರುವ ಆಯುಧವುಳ್ಳವರೂ, ಅನ್ನವಂತರೂ ಆದ ನೀವು ಯಾವ ನಿಮ್ಮ ಶಬ್ದದಿಂದ ಶತ್ರುಗಳನ್ನು ಎದುರಿಸುತ್ತಾ ಲೋಕವನ್ನು ಲಂಕರಿಸುವಿರೋ ಅಂತಹ ಶಕ್ತಿಯುತವಾದುದೂ, ವೃಷ್ಟಿಕಾರಕವಾದುದೂ, ಪ್ರಭಾಯುತವಾದುದೂ, ಸಂಚಾರಾತ್ಮಕವಾದುದೂ ಆದ ನಿಮ್ಮ ಧ್ವನಿಯು ಏವಯಾ ಮರುತ್ತಾದ ನನ್ನನ್ನು ಗಾಬರಿಗೊಳಿಸದಿರಲಿ.

## English Translation.

Let not the sound (of your approach, Maruts), which is mighty, the announcer of rain, the shedder of light, diffusive, loud, alarm Evayamarut: that sound wherewith, overcoming (your foes), you who are self-irradiating, lasting-rayed, ornamented with golden ornaments, self-weaponed, bestowing food, accomplish your functions

॥ ಸಂಹಿತಾಪಾಠಃ ॥

ಅಪಾರೋ ವೋ ಮಹಿಮಾ ವೃದ್ಧಶವಸಸ್ತ್ವೇಷಂ ಶವೋಽವತ್ವೇವಯಾ-
ಮರುತ್ ।
ಸ್ಥಾತಾರೋ ಹಿ ಪ್ರಸಿತೌ ಸಂದೃಶಿ ಸ್ಥನ ತೇ ನ ಉರುಷ್ಯತಾ ನಿದಃ ಶುಶು-
ಕ್ವಾಂಸೋ ನಾಗ್ನಯಃ ॥ ೬ ॥

॥ ಪದಪಾಠಃ ॥

ಅಪಾರಃ । ವಃ । ಮಹಿಮಾ । ವೃದ್ಧಽಶವಸಃ । ತ್ವೇಷಂ । ಶವಃ । ಅವತು । ಏವಯಾಮರುತ್ ।
ಸ್ಥಾತಾರಃ । ಹಿ । ಪ್ರಽಸಿತೌ । ಸಂಽದೃಶಿ । ಸ್ಥನ । ತೇ । ನಃ । ಉರುಷ್ಯತ । ನಿದಃ । ಶುಶುಕ್ವಾಂಸಃ । ನ ।
ಅಗ್ನಯಃ ॥ ೬ ॥

॥ ಸಾಯಣಭಾಷ್ಯಂ ॥

ಹೇ ಮರುತೋ ವೋ ಯುಷ್ಮಾಕಂ ಮಹಿಮಾಪಾರೋಽನವಧಿಕಃ । ಹೇ ವೃದ್ಧಶವಸಃ ಪ್ರವೃದ್ಧಬಲಾಸ್ತ್ವೇಷಂ ದೀಪ್ತಂ ಶವೋ ಯುಷ್ಮಾಕಂ ಬಲಮವತು ರಕ್ಷತ್ವೇವಯಾಮರುತಂ ಮಾಂ ॥ ದ್ವಿತೀಯೈಕವಚನಸ್ಯ ಲುಕ್ ॥ ಯೂಯಂ ಪ್ರಸಿತೌ ಪ್ರಬಲಬಂಧನೇ ನಿಯಮನವತಿ ಯಜ್ಞೇ ಸಂದೃಶಿ ಸಂದರ್ಶನೇ ನಿಮಿತ್ತೇ ಸ್ಥಾತಾರೋ ಹಿ ಸ್ಥಾನನಿಯಮೇನ ತಿಷ್ಠಂತೋ ಭವಥ ಖಲು । ತೇ ನೋಽಸ್ಮಾನ್ನಿದೋ ನಿಂದಕಾಚ್ಛತ್ರೋಃ ಸಕಾಶಾದುರುಷ್ಯತ । ರಕ್ಷತ । ಅಗ್ನಯ ಇವ ಶುಶುಕ್ವಾಂಸೋ ಯೂಯಮಿತಿ ॥

॥ ಪ್ರತಿಪದಾರ್ಥ ॥

(ಎಲೈ ಮರುತ್ತುಗಳೇ) **ವಃ**—ನಿಮ್ಮ । **ಮಹಿಮಾ**—ಪ್ರಭಾವವು । **ಅಪಾರಃ**—ಕೊನೆಯಿಲ್ಲದುದಾಗಿದೆ । **ವೃದ್ಧಶ್ರವಸಃ**—ಅತ್ಯಧಿಕವಾದ ಬಲವುಳ್ಳ ಎಲೈ ಮರುತ್ತುಗಳೇ । **ತ್ವೇಷಂ**—ಪ್ರಕಾಶಮಾನವಾದ । **ಶವಃ**—ನಿಮ್ಮ ಬಲವು । **ಏವಯಾ ಮರುತ್**—ಏವಯಾಮರುತ್ತಾದ ನನ್ನನ್ನು । **ಅವತು**—ರಕ್ಷಿಸಲಿ । **ಪ್ರಸಿತೌ**—ನಿಯಮ ರೂಪವುಳ್ಳ ಯಜ್ಞದಲ್ಲಿ । **ಸಂದೃಶಿ**—ಸಂದರ್ಶನದ ನಿಮಿತ್ತವಾಗಿ । **ಸ್ಥಾತಾರೋ ಹಿ ಸ್ಥನ**—ನೀವು ನಿಯತವಾಗಿ ಇರಲೇಬೇಕು । **ಅಗ್ನಯಃ ನ**—ಅಗ್ನಿಗಳಂತೆ । **ಶುಶುಕ್ವಾಂಸಃ**—ಪ್ರಕಾಶಮಾನರಾದ । **ತೇ**—ನೀವು । **ನಃ**—ನಮ್ಮನ್ನು । **ನಿದಃ**—ನಿಂದಕರಾದ ಶತ್ರುಗಳಿಂದ । **ಉರುಷ್ಯತ**—ರಕ್ಷಿಸಿರಿ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ನಿಮ್ಮ ಪ್ರಭಾವವು ಕೊನೆಯಿಲ್ಲದುದಾಗಿದೆ. ಅತ್ಯಧಿಕವಾದ ಬಲವುಳ್ಳ ಮರುತ್ತುಗಳೇ, ಪ್ರಕಾಶಮಾನವಾದ ನಿಮ್ಮ ಬಲವು ಏವಯಾಮರುತ್ತಾದ ನನ್ನನ್ನು ರಕ್ಷಿಸಲಿ. ನಿಯಮಾತ್ಮಕವಾದ ಈ ಯಜ್ಞದಲ್ಲಿ

ನೀವು ಸಂದರ್ಶನದ ನಿಯತವಾಗಿ ಇರಲೇಬೇಕು. ಅಗ್ನಿಗಳಂತೆ ಪ್ರಕಾಶಮಾನರಾದ ನೀವು ನಮ್ಮನ್ನು ನಿಂದಕರಾದ ಶತ್ರುಗಳಿಂದ ರಕ್ಷಿಸಿರಿ.

## English Translation.

Possessors of vast strength, may your unbounded greatness, your brilliant vigour, protect Evayamarut, for you are regulators for overseeing (what is fit for) the limits of the sacrifice: preserve us from those who revile us, you, who are like blazing fires.

॥ ಸಂಹಿತಾಪಾಠಃ ॥

ತೇ ರುದ್ರಾಸಃ ಸುಮಖಾ ಅಗ್ನಯೋ ಯಥಾ ತುವಿದ್ಯುಮ್ನಾ ಅವಂತ್ವೇವ-
ಯಾಮರುತ್ ।
ದೀರ್ಘಂ ಪೃಥು ಪಪ್ರಥೇ ಸದ್ಮ ಪಾರ್ಥಿವಂ ಯೇಷಾಮಜ್ಮೇಷ್ವಾ ಮಹಃ
ಶರ್ಧಾಂಸ್ಯದ್ಭುತೈನಸಾಂ ॥ ೭ ॥

॥ ಪದಪಾಠಃ ॥

ತೇ । ರುದ್ರಾಸಃ । ಸುऽಮಖಾಃ । ಅಗ್ನಯಃ । ಯಥಾ । ತುವಿऽದ್ಯುಮ್ನಾಃ । ಅವಂತು । ಏವಯಾ-
ಮರುತ್ ।
ದೀರ್ಘಂ । ಪೃಥು । ಪಪ್ರಥೇ । ಸದ್ಮ । ಪಾರ್ಥಿವಂ । ಯೇಷಾಂ । ಅಜ್ಮೇಷು । ಆ । ಮಹಃ । ಶರ್ಧಾಂಸಿ ।
ಅದ್ಭುತऽಏನಸಾಂ ॥ ೭ ॥

॥ ಸಾಯಣಭಾಷ್ಯಂ ॥

ಹೇ ಮರುತೋ ರುದ್ರಾಸೋ ರುದ್ರಪುತ್ರಾಃ ಸುಮಖಾಃ ಶೋಭನಯಜ್ಞಾ ಅಗ್ನಯೋ ಯಥಾ ಅಗ್ನಯ ಇವ ತುವಿದ್ಯುಮ್ನಾಃ ಪ್ರಭೂತದೀಪ್ತಯಃ । ಅಥವಾ ಅಗ್ನಿಸದೃಶಾಸ್ತುವಿದ್ಯುಮ್ನಾಃ ಪ್ರಭೂತ-ಧನಾ ಅವಂತು ರಕ್ಷಂತ್ವೇವಯಾಮರುದೇತನ್ನಾಮಾನಮೃಷಿಂ ಮಾಂ । ಪಾರ್ಥಿವಂ। ಪೃಥಿವ್ಯತ್ರಾಂತರಿಕ್ಷಂ। ತತ್ಸಂಬಂಧಿ ದೀರ್ಘಮಾಯತಂ ಪೃಥು ವಿಸ್ತೀರ್ಣಂ ಸದ್ಮ ಸದನಂ ಪಪ್ರಥೇ। ಮರುದ್ಭಿಃ ಪ್ರಥಿತಮಭೂತ್। ಅದ್ಭುತೈನಸಾಮಪಾಪಾನಾಂ ಯೇಷಾಮಜ್ಮೇಷು ಗಮನೇಷು ಮಹೋ ಮಹಾಂತಿ ಶರ್ಧಾಂಸಿ ಚಾ ಗಚ್ಛಂತೀತಿ ಶೇಷಃ ॥

‖ ಪ್ರತಿಪದಾರ್ಥ ‖

**ಅಗ್ನಯೋ ಯಥಾ**—ಅಗ್ನಿಗಳಂತೆ | **ತುವಿದ್ಯುಮ್ನಾಃ**—ಪ್ರಭೂತವಾದ ಕಾಂತಿಯುಳ್ಳವರೂ | **ರುದ್ರಾಸಃ**—ರುದ್ರಪುತ್ರರೂ | **ಸುಮಖಾಃ**—ಉತ್ತಮವಾದ ಯಜ್ಞವಂತರೂ ಆದ | **ತೇ**—ಅದೇ ಮರುತ್ತುಗಳು | **ಏವಯಾಮರುತ್**—ಏವಯಾಮರುತ್ತಾದ ನನ್ನನ್ನು | **ಅವಂತು**—ರಕ್ಷಿಸಲಿ | **ಪಾರ್ಥಿವಂ**—ಅಂತರಿಕ್ಷಸಂಬಂಧಿಯಾದುದೂ | **ದೀರ್ಘಂ**—ಅತಿ ದೀರ್ಘವಾದುದೂ | **ಪೃಥು**—ವಿಸ್ತೃತವಾದುದೂ ಆದ | **ಸದ್ಮ**—ಸದನವು | **ಪಪ್ರಥೇ**—ಮರುತ್ತುಗಳಿಂದ ಪ್ರಕಾಶಿತವಾಯಿತು | **ಅದ್ಭುತೈನಸಾಂ**—ಪಾಪರಹಿತರಾದ | **ಯೇಷಾಂ**—ಯಾವ ಇದೇ ಮರುತ್ತುಗಳ | **ಅಜ್ಮೇಷು**—ಗಮನಕಾಲದಲ್ಲಿ | **ಮಹಃ**—ಮಹತ್ತಾದ | **ಶರ್ಧಾಂಸಿ**—ತೇಜೋಯುತವಾದ ಬಲಗಳು | **ಆ**—ಪ್ರಸರಿಸುತ್ತವೆ.

‖ ಭಾವಾರ್ಥ ‖

ಅಗ್ನಿಗಳಂತೆ ಪ್ರಭೂತವಾದ ಕಾಂತಿಯುಳ್ಳವರೂ, ರುದ್ರಪುತ್ರರೂ ಉತ್ತಮವಾದ ಯಜ್ಞವಂತರೂ ಆದ ಮರುತ್ತುಗಳು ಏವಯಾಮರುತ್ತಾದ ನನ್ನನ್ನು ರಕ್ಷಿಸಲಿ. ಅಂತರಿಕ್ಷಸಂಬಂಧಿಯಾದುದೂ, ಅತಿ ದೀರ್ಘವಾದುದೂ, ವಿಸ್ತೃತವಾದುದೂ ಆದ ಅವರ ಸದನವು ಮರುತ್ತುಗಳಿಂದಲೇ ಪ್ರಕಾಶಿತವಾಯಿತು. ಪಾಪರಹಿತರಾದ ಇದೇ ಮರುತ್ತುಗಳ ಗಮನಕಾಲದಲ್ಲಿ ಮಹತ್ತಾದುದೂ ತೇಜೋಯುತವಾದುದೂ ಆದ ಶಕ್ತಿಯು ಸುತ್ತಲೂ ಪ್ರಸರಿಸುತ್ತದೆ.

## English Translation.

May those Rudras, the objects of worship, like resplendent fires, protect Evayamarut: they, whose ethereal dwelling, extended and wide, has been made illustrious (by them), and of whom, exempt from blame, the mighty energies (are manifested) in their courses.

‖ ಸಂಹಿತಾಪಾಠಃ ‖

**ಅದ್ವೇಷೋ ನೋ ಮರುತೋ ಗಾತುಮೇತನ ಶ್ರೋತಾ ಹವಂ ಜರಿತುರೇವ-**
**ಯಾಮರುತ್ |**
**ವಿಷ್ಣೋರ್ಮಹಃ ಸಮನ್ಯವೋ ಯುಯೋತನ ಸ್ಮದ್ರಥ್ಯೋ೧ ನ ದಂಸನಾಪ**
**ದ್ವೇಷಾಂಸಿ ಸನುತಃ || ೮ ||**

॥ ಪದಪಾಠಃ ॥

ಅದ್ವೇಷಃ । ನಃ । ಮರುತಃ । ಗಾತುಂ । ಆ । ಇತನ । ಶ್ರೋತ । ಹವಂ । ಜರಿತುಃ । ಏವಯಾಮರುತ್ । ವಿಷ್ಣೋಃ । ಮಹಃ । ಸ್ಃಮನ್ಯವಃ । ಯುಯೋತನ । ಸ್ಮತ್ । ರಥ್ಯಃ । ನ । ದಂಸನಾ । ಅಪ । ದ್ವೇಷಾಂಸಿ । ಸನ೭ತರಿತಿ ॥ ೮ ॥

॥ ಸಾಯಣಭಾಷ್ಯಂ ॥

ಹೇ ಮರುತೋ ಅದ್ವೇಷೋಽದ್ವೇಷಸೋ ಯೂಯಂ ನೋಽಸ್ಮಾಕಂ ಗಾತುಂ ಗಮನಸ್ವಭಾವಂ ಸ್ತೋತ್ರಂ ಪ್ರತ್ಯೇತನ । ಆಗಚ್ಛತ । ತದರ್ಥಂ ಜರಿತುಃ ಸ್ತೋತುರೇವಯಾಮರುದೇವಯಾಮರುತೋ ಮಮ ಹವಂ ಶ್ರೋತ । ಶೃಣುತ । ವಿಷ್ಣೋರ್ವ್ಯಾಪಕಸ್ಯೇಂದ್ರಸ್ಯ ಮಹೋ ಮಹತೋ ಹೇ ಸಮನ್ಯವಃ ಸಮಾನಯಜ್ಞಾ ಯುಯೂಂ ಸ್ಮತ್। ಅಯಂ ಪ್ರಶಸ್ತನಾಮ । ಪ್ರಶಸ್ತಾ ರಥ್ಯೋ ನ ರಥಿನೋ ಯೋದ್ಧಾರ ಇವ । ತೇ ಯಥಾ ಶತ್ರೂನಪಾಕುರ್ವಂತಿ ತದ್ವದಸ್ಮಾಕಂ ದಂಸನಾ ಕರ್ಮಣಾ ಸನುತಃ । ಅಂತರ್ಹಿತನಾಮೈತತ್ । ಅಂತರ್ಹಿತಾನ್ ದ್ವೇಷಾಂಸಿ ದ್ವೇಷ್ಟ್ರೂನ್ ಅಪ ಯುಯೋತನ । ದೂರೇ ವಿಯೋಜಯತ। ಪೃಥಕ್ಕುರುತ ॥

॥ ಪ್ರತಿಪದಾರ್ಥ ॥

**ಮರುತಃ**— ಎಲೈ ಮರುತ್ತುಗಳೇ । **ಅದ್ವೇಷಃ**— ಶತ್ರುರಹಿತರಾದ ನೀವು । **ನಃ**— ನಮ್ಮ । **ಗಾತುಂ**— ಸ್ತುತಿಗಭಿಮುಖವಾಗಿ । **ಏತನ**— ಬನ್ನಿರಿ । **ಜರಿತುಃ**— ಸ್ತೋತೃವಾದ । **ಏವಯಾಮರುತ್**— ಏವಯಾಮರುತ್ತೆಂಬ ನನ್ನ । **ಹವಂ**— ಆಹ್ವಾನವನ್ನು । **ಶ್ರೋತ**— ಕೇಳಿರಿ । **ವಿಷ್ಣೋಃ**— ವ್ಯಾಪಕನಾದ ಇಂದ್ರನ । **ಮಹಃ**— ಮಹತ್ವಕ್ಕೆ । **ಸಮನ್ಯವಃ**— ಸಮಾನವಾದ ಯಜ್ಞಭಾಗಿಗಳಾದ ನೀವು । **ಸ್ಮತ್**— ಪ್ರಶಸ್ತರಾದ । **ರಥ್ಯೋ ನ**— ಯೋಧರಂತೆ । **ದಂಸನಾ**— ನಿಮ್ಮ ಕರ್ಮಗಳಿಂದ । **ಸನುತಃ**— ಗುಪ್ತರಾಗಿರತಕ್ಕ । **ದ್ವೇಷಾಂಸಿ**— ಶತ್ರುಗಳನ್ನು । **ಅಪ ಯುಯೋತನ**— ದೂರಕ್ಕೆ ಅಟ್ಟಿರಿ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ಶತ್ರುರಹಿತರಾದ ನೀವು ನಮ್ಮ ಸ್ತುತಿಗಭಿಮುಖವಾಗಿ ಬನ್ನಿರಿ. ಸ್ತೋತೃವಾದ ಏವಯಾಮರುತ್ತೆಂಬ ನನ್ನ ಆಹ್ವಾನವನ್ನು ಕೇಳಿರಿ. ವ್ಯಾಪಕನಾದ ಇಂದ್ರನ ಮಹತ್ವಕ್ಕೆ ಸಮಾನವಾದ ಯಜ್ಞಭಾಗಿಗಳಾದ ನೀವು ಪ್ರಶಸ್ತರಾದ ಯೋಧರಂತೆ ನಿಮ್ಮ ಕರ್ಮಗಳಿಂದ ಅಡಗಿಕೊಂಡಿರತಕ್ಕ ನಮ್ಮ ಶತ್ರುಗಳನ್ನು ದೂರಕ್ಕೆ ಅಟ್ಟಿರಿ.

## English Translation.

Maruts, devoid of enmity, come to our proffered praise, hear the invocation of your adorer, Evayamarut: do you, who are associated in the worship of Vishnu, drive away, as warriors (scatter their enemies), our secret foes.

॥ ಸಂಹಿತಾಪಾಠಃ ॥

ಗಂತಾ ನೋ ಯಜ್ಞಂ ಯಜ್ಞಿಯಾಃ ಸುಶಮಿ ಶ್ರೋತಾ ಹವಮರಕ್ಷ
ಏವಯಾಮರುತ್ ।
ಜ್ಯೇಷ್ಠಾಸೋ ನ ಪರ್ವತಾಸೋ ವ್ಯೋಮನಿ ಯೂಯಂ ತಸ್ಯ ಪ್ರಚೇತಸಃ
ಸ್ಯಾತ ದುರ್ಧರ್ತವೋ ನಿದಃ ॥ ೯ ॥

॥ ಪದಪಾಠಃ ॥

ಗಂತ । ನಃ । ಯಜ್ಞಂ । ಯಜ್ಞಿಯಾಃ । ಸುऽಶಮಿ । ಶ್ರೋತ । ಹವಂ । ಅರಕ್ಷಃ । ಏವಯಾಮರುತ್ । ಜ್ಯೇಷ್ಠಾಸಃ । ನ । ಪರ್ವತಾಸಃ । ವಿऽಓಮನಿ । ಯೂಯಂ । ತಸ್ಯ । ಪ್ರऽಚೇತಸಃ । ಸ್ಯಾತ । ದುಃऽಧರ್ತವಃ । ನಿದಃ ॥ ೯ ॥

॥ ಸಾಯಣಭಾಷ್ಯಂ ॥

ಅಧ್ಯಾಯೋಪಾಕರಣೋತ್ಸರ್ಗಯೋರ್ವಿನಿಯುಕ್ತಾ । ಆ. ಗೃ. ೩-೫ ॥

ಹೇ ಯಜ್ಞಿಯಾ ಮರುತೋ ಯೂಯಂ ನೋऽಸ್ಮಾಕಂ ಯಜ್ಞಂ ಗಂತ । ಆಗಚ್ಛತ । ಸುಶಮಿ ಶೋಭನಕರ್ಮ ಯಥಾ ಭವತಿ ತಥಾ । ಸುಕರ್ಮತ್ವಾಯೇತ್ಯರ್ಥಃ । ತದರ್ಥಂ ನೋ ಹವಮಸ್ಮದೀಯಮಾಹ್ವಾನಂ ಶ್ರೋತ । ಶೃಣುತ ॥ ಅರಕ್ಷೋ ರಕ್ಷೋವರ್ಜಿತಾ ಯೂಯಂ ॥ ಲಿಂಗವಚನಯೋರ್ವ್ಯತ್ಯಯಃ ॥ ಜ್ಯೇಷ್ಠಾಸೋ ನ ಜ್ಯೇಷ್ಠಾ ಇವ ಪರ್ವತಾಸೋ ವಿಂಧ್ಯಾದಯ ಇವಾತಿಪ್ರವೃದ್ಧಾ ವ್ಯೋಮನ್ಯಂತರಿಕ್ಷೇ ವರ್ತಮಾನಾಃ ಪ್ರಚೇತಸೋ ಯೂಯಂ ತಸ್ಯ ನಿದೋ ನಿಂದಕಸ್ಯ ದುರ್ಧರ್ತವೋ ದುರ್ಧರಾಃ ಸ್ಯಾತ । ಭವತ ॥

॥ ಪ್ರತಿಪದಾರ್ಥ ॥

**ಯಜ್ಞಿಯಾಃ**—ಪೂಜಾರ್ಹರಾದ ಎಲೈ ಮರುತ್ತುಗಳೇ । **ಏವಯಾಮರುತ್ ನಃ**—ಏವಯಾಮರುತ್ತೆಂಬ ನನ್ನ । **ಯಜ್ಞಂ**—ಯಜ್ಞಕ್ಕೆ । **ಸುಶಮಿ**—(ನನ್ನ ಯಜ್ಞವು) ಉತ್ತಮವಾದ ಕರ್ಮಯುಕ್ತವಾಗುವಂತೆ ಆಗಲು । **ಗಂತ**—ಬನ್ನಿರಿ । **ಹವಂ**—ನಮ್ಮ ಆಹ್ವಾನವನ್ನು । **ಶ್ರೋತ**—ಕೇಳಿರಿ । **ಅರಕ್ಷಃ**—ಶತ್ರುರಹಿತರೂ । **ಜ್ಯೇಷ್ಠಾಸಃ**—ಅತಿ ಪ್ರಾಚೀನವಾದ । **ಪರ್ವತಾಸಃ ನ**—ವಿಂಧ್ಯಾದಿ ಪರ್ವತಗಳಂತೆ । **ವ್ಯೋಮನಿ**—ಅಂತರಿಕ್ಷದಲ್ಲಿ ಸ್ಥಿತರೂ । **ಪ್ರಚೇತಸಃ**—ಉತ್ಕೃಷ್ಟವಾದ ಜ್ಞಾನವುಳ್ಳವರೂ ಆದ । **ಯೂಯಂ**—ನೀವು । **ತಸ್ಯ ನಿದಃ**—ದೂಷಕನಾದ ಶತ್ರುವಿಗೆ । **ದುರ್ಧರ್ತವಃ**—ಅಸಹಿಷ್ಣುಗಳಾಗಿ । **ಸ್ಯಾತ**—ಆಗಿರಿ.

॥ ಭಾವಾರ್ಥ ॥

ಪೂಜಾರ್ಹರಾದ ಎಲೈ ಮರುತ್ತುಗಳೇ, ಏವಯಾಮರುತ್ತೆಂಬ ಹೆಸರುಳ್ಳ ನನ್ನ ಯಜ್ಞಕರ್ಮವು ಸಫಲವಾಗಲು ನನ್ನ ಯಜ್ಞಕ್ಕೆ ಬನ್ನಿರಿ. ನನ್ನ ಆಹ್ವಾನವನ್ನು ಕೇಳಿರಿ. ಶತ್ರುರಹಿತರೂ ಅತಿ ಪ್ರಾಚೀನವಾದ ವಿಂಧ್ಯಾದಿಪರ್ವತಗಳಂತೆ ಅಂತರಿಕ್ಷಸ್ಥರೂ ಉತ್ಕೃಷ್ಟವಾದ ಜ್ಞಾನವುಳ್ಳವರೂ ಆದ ನೀವು ದೂಷಕನಾದ ಶತ್ರುವಿಗೆ ಅಸಹಿಷ್ಣುಗಳಾಗಿ ಆಗಿರಿ.

## English Translation.

Adorable Maruts come to our sacrifice, so that it may be prosperous: hear, undeterred by Rakshasas, the invocation of Evayamarut: abiding like lofty mountains in mid-heaven, do you, who are profoundly wise, be ever intolerant of the reviler.

**ಇತಿ ಸಾಯಣಾಚಾರ್ಯವಿರಚಿತೇ ಮಾಧವೀಯೇ**
**ವೇದಾರ್ಥಪ್ರಕಾಶೇ ಚತುರ್ಥಾಷ್ಟಕೇ ಪಂಚಮೇ ಮಂಡಲೇ**
**ಷಷ್ಠೋಽನುವಾಕಃ**
**॥ ಸಮಾಪ್ತಂ ಚ ಪಂಚಮಂ ಮಂಡಲಂ ॥**

ಇಲ್ಲಿಗೆ ಐದನೆಯ ಮಂಡಲವು ಸಮಾಪ್ತವಾದುದು.

॥ ಶುಭಂ ಭೂಯಾತ್ ॥

# ಪರಿಶಿಷ್ಟಮಂತ್ರಗಳು

## ಮಂಡಲಸ್ಯಾಂತೇ ಪಠಿತವ್ಯಾನಿ ಪರಿಶಿಷ್ಟಮಂತ್ರಾಣಿ

ಈ ಮಂಡಲದ ಕೊನೆಯಲ್ಲಿ ಪಠಿಸಬೇಕಾದ ಪರಿಶಿಷ್ಟಸೂಕ್ತಗಳು.

ಪರಿಶಿಷ್ಟಮಂತ್ರಗಳೆಂದರೇನೆಂಬುವುದನ್ನು ನಾವು ಋ. ಸಂ. ಭಾಗ ೧, 41-42 ನೇ ಪುಟಗಳಲ್ಲಿ ಸೂಕ್ಷ್ಮವಾಗಿ ವಿವರಿಸಿದೇವೆ. ಪರಿಶಿಷ್ಟಗಳಲ್ಲಿ ಎರಡು ವಿಧ. ಪರಿಶಿಷ್ಟಸೂತ್ರಗಳು ಮತ್ತು ಪರಿಶಿಷ್ಟಮಂತ್ರಗಳು ಎಂದು. ಪರಿಶಿಷ್ಟ ಸೂತ್ರಗಳು ಸಾಮಾನ್ಯವಾಗಿ ಹಿಂದಿನ ಸೂತ್ರಗ್ರಂಥಗಳಂತೆ ಬಹಳ ಅಡಕವಾದವುಗಳಲ್ಲ. ಅನುಷ್ಟುಪ್ ಛಂದಸ್ಸಿನಲ್ಲಿ ಬರೆದ್ದಗ್ರಂಥಗಳಾಗಿವೆ. ಈ ಗ್ರಂಥಗಳಲ್ಲಿನ ವಿಷಯವು ವೇದಗಳಿಗೆ ಸಂಬಂಧಪಟ್ಟಿದ್ದರೂ ಬರೆದಿರುವ ಶೈಲಿ ಆಧುನಿಕ ಶೈಲಿ ಯಂತಿದೆ. ವೇದಾಂಗಗಳಾದ ಸೂತ್ರಗ್ರಂಥಗಳಲ್ಲಿ ಬಿಟ್ಟುಹೋಗಿರುವ ಅಥವಾ ಬಹುಸೂಕ್ಷ್ಮವಾಗಿ ಸೂಚಿಸಿರುವ ಯಜ್ಞ ಯಾಗಾದಿಕರ್ಮಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಇವುಗಳಲ್ಲಿ ವಿಸ್ತಾರವಾಗಿ ವಿವರಿಸಿರುವುದು ಕಂಡುಬರುತ್ತದೆ. ಪ್ರಾಯಶಃ ವೇದಾಂಗಭೂತವಾದ ಕಲ್ಪಸೂತ್ರಾದಿಗಳನ್ನು ರಚಿಸುವಾಗ ಗ್ರಂಥಕರ್ತೃಗಳು ಈ ವಿಷಯಗಳನ್ನು ಮುಖ್ಯ ವಲ್ಲವೆಂದೋ ಅಥವಾ ಸಾಧಾರಣವಾಗಿ ಎಲ್ಲರಿಗೂ ತಿಳಿದಿರುವ ಅಲ್ಪವಿಷಯಗಳೆಂದೋ ಬಿಟ್ಟುಬಿಟ್ಟಿರಬಹುದು. ಆದರೆ ಕಾಲಕಳೆಯುತ್ತಾ ಬಂದಂತೆ ಜನಗಳಿಗೆ ಯಜ್ಞಾದಿಕರ್ಮಗಳ ಬಳಕೆಯು ಕಡಿಮೆಯಾಗುತ್ತಾ ಬಂತು ಯಜ್ಞಗಳನ್ನು ಸಾಂಗವಾಗಿ ನೆರವೇರಿಸಲು ಸಹಾಯವಾಗುವಂತೆ ಅತಿ ಸಣ್ಣಸಣ್ಣ ವಿಷಯಗಳನ್ನೂ ಗ್ರಂಥಗಳಲ್ಲಿ ಬರೆದಿಟ್ಟರು. ಅಂತಹವು ಗಳೇ ಈ ಪರಿಶಿಷ್ಟಗ್ರಂಥಗಳು. **ಪರಿಶಿಷ್ಟ**ವೆಂದರೆ-ಹಿಂದೆ ಹೇಳದೆ ಇನ್ನೂ ಹೇಳಬೇಕಾಗಿಉಳಿದಿರುವ ಭಾಗವೆಂದರ್ಥವು.

ಈ ಪರಿಶಿಷ್ಟಗ್ರಂಥಗಳಲ್ಲಿ **ಆಶ್ವಲಾಯನಗೃಹ್ಯಪರಿಶಿಷ್ಟ**ವೆಂಬುದು ಮುಖ್ಯವಾದುದು. ಇದರಲ್ಲಿ ನಾಲ್ಕು ಅಧ್ಯಾಯಗಳಿವೆ. ಇದರಲ್ಲಿ ಹೇಳಿರುವ ವಿಷಯಗಳೆಲ್ಲವೂ ಋಗ್ವೇದಕ್ಕೆ ಸಂಬಂಧಪಟ್ಟದ್ದೇ ಆಗಿದೆ **ಗೋಭಿಲಸಂಗ್ರಹ ಪರಿಶಿಷ್ಟ**ವೆಂಬುದು ಸಾಮವೇದಕ್ಕೆ ಸೇರಿದ ಮತ್ತೊಂದು ಪರಿಶಿಷ್ಟವು. ಇದರಲ್ಲಿ ಗೃಹ್ಯಕರ್ಮಗಳ ವಿಷಯಗಳನ್ನೂ ಹೇಳಿರುವುದಲ್ಲದೆ ಕಾಮ್ಯಾದಿಕರ್ಮಗಳ ವಿವರಗಳೂ ಇವೆ. ಇದಕ್ಕೆ ಸಂಬಂಧಿಸಿದಂತೆ **ಕರ್ಮಪ್ರದೀಪ**ವೆಂಬ ಮತ್ತೊಂದು ಗ್ರಂಥವಿದೆ ಈ ಗ್ರಂಥಕ್ಕೆ **ಸಾಮಗೃಹ್ಯ, ಛಾಂದೋಗ್ಯಗೃಹ್ಯಪರಿಶಿಷ್ಟ, ಛಂದೋಪರಿಶಿಷ್ಟ, ಗೋಭಿಲಸ್ಮೃತಿ** ಮುಂತಾದ ಹೆಸರುಗಳಿವೆ. ಇದನ್ನು ಶುಕ್ಲಯಜುರ್ವೇದಕ್ಕೆ ಸೇರಿದ ಕಾತ್ಯಾಯನಋಷಿಯು ರಚಿಸಿದ್ದೆಂದು ಹೇಳುವರು. ಮತ್ತೆ ಕೆಲವರು ಗೋಭಿಲಋಷಿಯೇ ಇದನ್ನು ರಚಿಸಿರುವನೆಂದು ಹೇಳುವರು. ಇದರಲ್ಲಿ ಹೇಳಿರುವ ವಿಷಯಗಳೆಲ್ಲವೂ ಗೃಹ್ಯಸಂಗ್ರಹದಲ್ಲಿರುವಂತೆಯೇ ಇರುವುವು. ಇತರ ವಿಷಯಗಳೂ ಇರುವವು.

ಇದಲ್ಲದೆ ಶುಕ್ಲಯಜುರ್ವೇದಕ್ಕೆ ಕಾತ್ಯಾಯನಮಹರ್ಷಿಯು ಅನೇಕ ಪರಿಶಿಷ್ಟಗಳನ್ನೂ ಬರೆದಿರುವರೆಂದು ಹೇಳಲಾಗಿದೆ. ಅವುಗಳಲ್ಲಿ ಮೂರು ಗ್ರಂಥಗಳು ಮುಖ್ಯವು. **ನಿಗಮಪರಿಶಿಷ್ಟ**ದಲ್ಲಿ ಶಬ್ದಗಳ ವಿವರಣೆ ಇದೆ. **ಪ್ರವರಾಧ್ಯಾಯ**ದಲ್ಲಿ ಋಷಿಗಳ ಗೋತ್ರಪ್ರವರಗಳ ವಂಶಾವಳಿಯ ವಿವರಗಳಿವೆ. ವಿವಾಹಾದಿಗಳಲ್ಲಿ ಗೋತ್ರಗಳನ್ನು ನಿರ್ಧರಿಸಲು ಇದು ಸಹಾಯಕವಾಗಿದೆ. ಚರಣವ್ಯೂಹದಲ್ಲಿ ವೇದಗಳ ನಾನಾಶಾಖೆಗಳ ಹೆಸರುಗಳು ವರ್ಣಿತವಾಗಿವೆ. ಇವೆಲ್ಲವೂ ಪರಿಶಿಷ್ಟಗ್ರಂಥಗಳ ವಿಷಯವಾಯಿತು.

ಇನ್ನು ಪರಿಶಿಷ್ಟಮಂತ್ರಗಳೇನೆಂಬುದನ್ನು ವಿಚಾರಮಾಡೋಣ. ಮಹಾಭಾರತದ ಶಾಂತಿಪರ್ವದ ೩೩೩ನೆಯ ಅಧ್ಯಾಯದ ೧೦ ನೆಯ ಶ್ಲೋಕಕ್ಕೆ ವ್ಯಾಖ್ಯಾನಮಾಡುವಾಗ ಟೀಕಾಕಾರರು ಪರಿಶಿಷ್ಟ ಅಥವಾ ಖಿಲಮಂತ್ರಗಳ ಲಕ್ಷಣವನ್ನು ಈ ರೀತಿ ಹೇಳಿದಾರೆ—

**ಪರಶಾಖೀಯಂ ಸ್ವಶಾಖಾಯಾಮಪೇಕ್ಷಾವಶಾತ್ಪಠ್ಯತೇ ತತ್ಖಿಲಮುಚ್ಯತೇ ।**

ಎಂದರೆ ಸ್ವಶಾಖೆಯಲ್ಲಿಲ್ಲದ ಮಂತ್ರಗಳನ್ನು [ವೇದದ ಶಾಖೆಗಳು ಎಂದರೇನು ಎಂಬುವ ವಿಷಯವನ್ನು ನಾವು ಋ. ಸಂ. ಭಾ. ೧ ಪ್ರಕರಣ ೪ ರಲ್ಲಿ 44-47 ಪುಟಗಳಲ್ಲಿ ವಿಸ್ತಾರವಾಗಿ ವಿವರಿಸಿದೇವೆ] ಪರಶಾಖೆಯಿಂದ (ಬೇರೆ ಶಾಖೆಯಿಂದ) ತೆಗೆದುಕೊಂಡು ಉಪಯೋಗಿಸಬೇಕಾದ ಸಂದರ್ಭಗಳು ಬರಬಹುದು. ಆಗ ಆ ಅನ್ಯಶಾಖೆಯಿಂದ ತೆಗೆದುಕೊಂಡ ಮಂತ್ರಗಳು ಕ್ರಮೇಣ ರೂಢಿಯಲ್ಲಿ ಬಳಕೆಗೆ ಬಂದು ಖಿಲ ಅಥವಾ ಪರಿಶಿಷ್ಟಮಂತ್ರಗಳೆಂದು ಪರಿಗಣಿಸಲ್ಪಟ್ಟಿದೆಯೆಂದು ವೇದಶಾಸ್ತ್ರಜ್ಞರು ಹೇಳುವರು. ಋಗ್ವೇದಕ್ಕೆ ಸಂಬಂಧಿಸಿದಂತೆ ಇಂತಹ ಪರಿಶಿಷ್ಟಸೂಕ್ತಗಳು ಒಟ್ಟು ೩೬ ಇವೆ. ಈ ಸಂಖ್ಯೆಯಲ್ಲಿ ವ್ಯತ್ಯಾಸವೂ ಇರುವುದು. ಇದುವರೆಗೆ ಎಂದರೆ ೧-೪ ಮಂಡಲಗಳಲ್ಲಿ ಪರಿಶಿಷ್ಟಮಂತ್ರಗಳನ್ನು ಸೂಕ್ತದ ಕೊನೆಯಲ್ಲಿ ಅಥವಾ ಮಂಡಲದ ಕೊನೆಯಲ್ಲಿ ವಿವರಿಸಿದೇವೆ. ಈಗ ಈ ಐದನೆಯ ಮಂಡಲದ ಕೊನೆಯಲ್ಲಿ ಪಠಿಸಲ್ಪಡಬೇಕಾದ ಪರಿಶಿಷ್ಟಮಂತ್ರಗಳನ್ನು ಮಾತ್ರ ಇಲ್ಲಿ ವಿವರಿಸುವೆವು.

ಪ್ರಕೃತ ಕೆಳಗೆ ಕೊಟ್ಟಿರುವ ಎರಡು ಸೂಕ್ತಗಳು ಋಗ್ವೇದದ ಈಗ ಬಳಕೆಯಲ್ಲಿರುವ ಯಾವ ಶಾಖೆಯಲ್ಲಿಯೂ ಇರುವುದಿಲ್ಲ. ಅನೇಕ ಶಾಖೆಗಳು ಲುಪ್ತವಾಗಿರುವುದರಿಂದ ಈ ಸೂಕ್ತಗಳು ಯಾವ ಶಾಖೆಗೆ ಸೇರಿದವೆಂಬುದನ್ನು ಖಚಿತವಾಗಿ ಹೇಳಲಾಗುವುದಿಲ್ಲ. ಆದರೆ ಈ ಮಂತ್ರಗಳು ಕೃಷ್ಣಯಜುರ್ವೇದದ ತೈತ್ತಿರೀಯಶಾಖೆಯ ಏಕಾಗ್ನಿ ಕಾಂಡವೆಂಬ ಭಾಗದ ಮೊದಲನೆಯ ಪ್ರಪಾಠಕದ ೪, ೧೩, ೧೪ ನೆಯ ಖಂಡಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳೊಡನೆ ಪಠಿತವಾಗಿವೆ. ಕ್ರಮವೂ, ಸ್ವರವೂ ವ್ಯತ್ಯಸ್ತವಾಗಿದೆ. ಈಗ ಈ ಮಂಡಲದ ಅಂತ್ಯದಲ್ಲಿ ಪಠಿಸಬೇಕಾದ ಸೂಕ್ತಗಳನ್ನೂ ಅವುಗಳ ಮುಖ್ಯಾಭಿಪ್ರಾಯವನ್ನೂ ವಿವರಿಸುತ್ತೇವೆ.

ಸೂಚನೆ—ಕೆಳಗಿನ ಎರಡು ಸೂಕ್ತಗಳನ್ನು ಗರ್ಭಾಧಾನಕಾಲದಲ್ಲಿ ವರನು ವಧುವನ್ನು ಸಂಬೋಧಿಸಿ ಹೇಳುವ ಮಂತ್ರಗಳಾಗಿವೆ.

## ಪರಿಶಿಷ್ಟ ಸೂಕ್ತ—೯.

**ಆ ತೇ ಗರ್ಭೋ ಯೋನಿಮೈತು ಪುಮಾನ್ಬಾಣ ಇವೇಷುಧಿಂ ।**
**ಆ ವೀರೋ ಜಾಯತಾಂ ಪುತ್ರಸ್ತೇ ದಶಮಾಸ್ಯಃ** ॥ ೧ ॥

**ಕರೋಮಿ ತೇ ಪ್ರಾಜಾಪತ್ಯಮಾ ಗರ್ಭೋ ಯೋನಿಮೈತು ತೇ ।**
**ಅನೂನಃ ಪೂರ್ಣೋ ಜಾಯತಾಮಶ್ಲೋಣೋಽಪಿಶಾಚಧೀತಃ** ॥ ೨ ॥

**ಪುಮಾಂಸ್ತೇ ಪುತ್ರೋ ನಾರಿ ತಂ ಪುಮಾನನುಜಾಯತಾಂ ।**
**ತಾನಿ ಭದ್ರಾಣಿ ಬೀಜಾನ್ಯೃಷಭಾ ಜನಯಂತಿ ನೌ** ॥ ೩ ॥

**ಯಾನಿ ಭದ್ರಾಣಿ ಬೀಜಾನ್ಯೃಷಭಾ ಜನಯಂತಿ ನಃ ।**
**ತೈಸ್ತ್ವಂ ಪುತ್ರಾನ್ ವಿಂದಸ್ವ ಸಾ ಪ್ರಸೂರ್ಧೇನುಕಾ ಭವ** ॥ ೪ ॥

**ಕಾಮಃ ಸಮೃದ್ಧ್ಯತಾಂ ಮಹ್ಯಮಪರಾಜಿತಮೇವ ಮೇ ।**
**ಯಂ ಕಾಮಂ ಕಾಮಯೇ ದೇವ ತಂ ಮೇ ವಾಯೋ ಸಮರ್ಧಯ** ॥ ೫ ॥

## ಮುಖ್ಯಾಭಿಪ್ರಾಯವು.

(೧) ಎಲೈ ಸ್ತ್ರೀಯೇ, ನಿನ್ನ ಯೋನಿಯನ್ನು ಪುರುಷ ಶಿಶುರೂಪವಾದ ಗರ್ಭವು ಸೇರಲಿ ಎಂದರೆ ಪುತ್ರ ಸಂತಾನವಾಗುವುದಕ್ಕಾಗಿ ಬತ್ತಳಿಕೆಯಿಂದ ಬಾಣವು ಯಾವರೀತಿ ನೇರವಾಗಿ ಮತ್ತು ವೇಗವಾಗಿ ನಿರ್ದಿಷ್ಟಸ್ಥಾನವನ್ನು ಸೇರುವುದೋ ಅದರಂತೆ ಪುರುಷರೇತಸ್ಸು ನೇರವಾಗಿ ನಿನ್ನ ಯೋನಿಗೆ ಸೇರಿ ಗರ್ಭವನ್ನುಂಟುಮಾಡಲಿ. ಮತ್ತು ಹತ್ತು ತಿಂಗಳವರೆಗೂ ಗರ್ಭದಲ್ಲಿದ್ದನಂತರ ವೀರನಾದ ಪುತ್ರನು ಜನಿಸಲಿ.

(೨) ಎಲೈ ಸ್ತ್ರೀಯೇ, ಪ್ರಜಾಪತಿಕರ್ಮವೆಂದು ಹೇಳಲ್ಪಡುವ ರೇತಸ್ಸಿಂಚನವನ್ನು ನಿನ್ನ ಯೋನಿಯಲ್ಲಿ ವಿಸರ್ಜಿಸುವೆನು. ಆದರಿಂದ ನಿನಗೆ ಗರ್ಭೋತ್ಪತ್ತಿಯಾಗಿ ಹತ್ತುತಿಂಗಳು ಕಳೆದ ಬಳಿಕ ಅವಯವಗಳಲ್ಲಿ ನ್ಯೂನತೆ ಇಲ್ಲದ, ಚೆನ್ನಾಗಿ ಬೆಳೆದಿರುವ, ಕುರುಡೂ, ಕಿವುಡೂ ಅಲ್ಲದ ಮತ್ತು ಪಿಶಾಚಾದಿ ಗ್ರಹಪೀಡಿತವಲ್ಲದ ಶಿಶುವು ಉತ್ಪನ್ನವಾಗಲಿ.

(೩) ಎಲೈ ಸ್ತ್ರೀಯೇ, ನಿನಗೆ ಮೊದಲಬಾರಿ ಪುತ್ರನೇ (ಗಂಡುಮಗುವೇ) ಉತ್ಪನ್ನನಾಗಲಿ. ಅನಂತರ ಅದನ್ನನುಸರಿಸಿ ಇನ್ನೂ ಕೆಲವು ಪುತ್ರಸಂತಾನಗಳಾಗಲಿ. ಹೀಗೆ ನಮಗೆ (ಗಂಡ ಹೆಂಡಿರಾದ ನಮ್ಮಿಬ್ಬರಿಗೆ) ಉತ್ಪನ್ನರಾದ ಪುತ್ರರು ರೇತಸ್ಸೇಚನ ಸಮರ್ಥರಾಗಿ ಮುಂದೆ ಅವರೂ ಮಂಗಳಕರವಾದ ಸಂತತಿಯನ್ನು ವೃದ್ಧಿಗೊಳಿಸಲಿ.

(೪) ಎಲೈ ಸ್ತ್ರೀಯೇ, ಹಿಂದೆ ಹೇಳಿದಂತೆ ಸೇಚನಸಮರ್ಥರಾದ ನಮ್ಮ ಪುತ್ರಸಂತತಿಯು ಮುಂದೆಯೂ ಸಂತಾನೋತ್ಪತ್ತಿಯನ್ನು ಮಾಡುತ್ತಾ ಅಭಿವೃದ್ಧಿಯಾಗಲಿ. ಇಂತಹ ಪುತ್ರಸಂತತಿಯಿಂದ ಕರುವನ್ನು ಹಾಕಿದ ಹಸುವು ಯಾವರೀತಿ ತನ್ನ ಕರುವನ್ನು ನೋಡಿ ಸಂತೋಷಪಡುವುದೋ ಅದರಂತೆ ನೀನು ನಿನ್ನ ಪುತ್ರಸಂತತಿಯನ್ನು ನೋಡಿ ಸಂತೋಷಪಡು.

(೫) ಎಲೈ ವಾಯುದೇವನೇ, ನನ್ನ ಕಾಮವು ಎಂದರೆ ಪುತ್ರನಾಗಬೇಕೆಂಬ ನನ್ನ ಬಯಕೆಯು ಸಮೃದ್ಧವಾಗಲಿ ಅಥವಾ ಈಡೇರಲಿ. ಈ ಬಯಕೆಯು ಅಥವಾ ಕಾಮವು ಯಾರಿಂದಲೂ ಬಾಧಿಸಲ್ಪಡದಿರಲಿ. ಎಲೈ ವಾಯುದೇವನೇ, ನನಗೆ ಪುತ್ರನಾಗಬೇಕೆಂಬ ಯಾವ ಬಯಕೆ ಇರುವುದೋ ಆ ಬಯಕೆಯು ಪೂರ್ಣವಾಗುವಂತೆ ಅನುಗ್ರಹಿಸು.

## ಪರಿಶಿಷ್ಟ ಸೂಕ್ತ—೧೦.

**ಅಗ್ನಿರೈತು ಪ್ರಥಮೋ ದೇವತಾನಾಂ ಸೋಽಸ್ಯೈ ಪ್ರಜಾಂ ಮುಂಚತು ಮೃತ್ಯುಪಾಶಾತ್ ।**
**ತದಯಂ ರಾಜಾ ವರುಣೋಽನುಮನ್ಯತಾಂ ಯಥೇಯಂ ಸ್ತ್ರೀ ಪೌತ್ರಮಘಂ ನ ರೋದಾತ್ ॥೧॥**
**ಇಮಾಮಗ್ನಿಸ್ತ್ರಾಯತಾಂ ಗಾರ್ಹಪತ್ಯಃ ಪ್ರಜಾಮಸ್ಯೈ ನಯತು ದೀರ್ಘಮಾಯುಃ ।**
**ಅಶೂನ್ಯೋಪಸ್ಥಾ ಜೀವತಾಮಸ್ತು ಮಾತಾ ಪೌತ್ರಮಾನಂದಮಭಿ ಪ್ರಬುಧ್ಯತಾಮಿಯಂ ॥ ೨ ॥**
**ಮಾ ತೇ ಗೃಹೇ ನಿಶಿ ಘೋಷ ಉತ್ಥಾದನ್ಯತ್ರ ತ್ವದ್ರುದತ್ಯಃ ಸಂ ವಿಶಂತು ।**
**ಮಾ ತ್ವಂ ವಿಕೇಶ್ಯುರ ಆ ವಧಿಷ್ಠಾ ಜೀವಪತ್ನೀ ಪತಿಲೋಕೇ ವಿರಾಜ ಪಶ್ಯಂತೀ ಪ್ರಜಾಂ ಸುಮನಸ್ಯಮಾನಾ ॥ ೩ ॥**
**ಅಪ್ರಜಸ್ತಾಂ ಪೌತ್ರಮೃತ್ಯುಂ ಪಾಪ್ಮಾನಮುತ ವಾಘಂ ।**
**ಶೀರ್ಷ್ಣಃ ಸ್ರಜಮಿವೋನ್ಮುಚ್ಯ ದ್ವಿಷದ್ಭ್ಯಃ ಪ್ರತಿಮುಂಚಾಮಿ ಪಾಶಂ ॥ ೪ ॥**

**ದೇವಕೃತಂ ಬ್ರಾಹ್ಮಣಂ ಕಲ್ಪಮಾನಂ ತೇನ ಹನ್ಮಿ ಯೋನಿಷದಃ ಪಿಶಾಚಾನ್ ।**
**ಕ್ರವ್ಯಾದೋ ಮೃತ್ಯೂನಧರಾನ್ ಪಾತಯಾಮಿ ದೀರ್ಘಮಾಯುಸ್ತವ ಜೀವಂತು ಪುತ್ರಾಃ ॥ ೫ ॥**

## ಮುಖ್ಯಾಭಿಪ್ರಾಯವು.

ಸೂಚನೆ—ಈ ಮಂತ್ರಗಳನ್ನು ಸಾಧಾರಣವಾಗಿ ವಿವಾಹಹೋಮದಲ್ಲಿ ಪ್ರಧಾನಾಹುತಿಮಂತ್ರಗಳನ್ನಾಗಿ ಉಪಯೋಗಿಸುವರು.

(೧) ದೇವತೆಗಳಲ್ಲೆಲ್ಲಾ ಮೊದಲು ಅಗ್ನಿಯು ಇಲ್ಲಿಗೆ ಬರಲಿ. ಬಂದನಂತರ ಆ ಅಗ್ನಿಯು ಈ ಸ್ತ್ರೀಯ ಪ್ರಜೆಯನ್ನು ಎಂದರೆ ಸಂತಾನವನ್ನು (ಶಿಶುವನ್ನು) ಮೃತ್ಯುಭಯದಿಂದ ರಕ್ಷಿಸಿ ಕಾಪಾಡಲಿ. ಇದನ್ನು ಪ್ರಭುವಾದ ವರುಣನೂ ಸಹ ಅನುಮೋದಿಸಲಿ. ಎಂದರೆ, ಈ ಸ್ತ್ರೀಯು ತನ್ನ ಪುತ್ರನ ನಿಮಿತ್ತವಾಗಿ ಯಾವ ವಿಧವಾದ ವ್ಯಸನವನ್ನೂ ಹೊಂದದೆ ಆ ಕಾರಣದಿಂದ ರೋದನವನ್ನು ಮಾಡದಂತೆ ಅಗ್ನೀವರುಣರು ಅನುಗ್ರಹಿಸಲಿ.

(೨) ಈ ವಧುವನ್ನು ಈ ಗಾರ್ಹಪತ್ಯಾಗ್ನಿಯು (ವಿವಾಹಪ್ರಧಾನಹೋಮಕ್ಕಾಗಿ ಗೃಹದಲ್ಲಿ ಪ್ರತಿಷ್ಠಿತವಾದ ಅಗ್ನಿಯು) ಚೆನ್ನಾಗಿ ಕಾಪಾಡಲಿ. ಮತ್ತು ಈ ಕನ್ಯೆಯು ಪಡೆಯುವ ಶಿಶುವನ್ನು ಸಹ ದೀರ್ಘಾಯುವನ್ನಾಗಿ ಮಾಡಿ ರಕ್ಷಿಸಲಿ. ಈ ಸ್ತ್ರೀಯ ತೊಡೆಯು ಯಾವಾಗಲೂ ಖಾಲಿಯಾಗದಿರಲಿ. ಎಂದರೆ, ತೊಡೆಯ ಮೇಲೆ ಯಾವಾಗಲೂ ಶಿಶುವನ್ನು ಇಟ್ಟುಕೊಂಡಿರಲಿ ಮತ್ತು ಮಕ್ಕಳುಗಳೂ ಜೀವಂತರಾಗಿರಲಿ. ಈ ಸ್ತ್ರೀಯು ತಾಯಿಯಾಗಿ ತನ್ನ ಪುತ್ರನ ಸಂಬಂಧವಾದ ಆನಂದವನ್ನು ಚೆನ್ನಾಗಿ ಅನುಭವಿಸುವಂತಾಗಲಿ.

(೩) ಎಲೈ ಕನ್ಯೆಯೇ, ನಿನ್ನ ಮನೆಯಲ್ಲಿ ರಾತ್ರಿಕಾಲದಲ್ಲಿ (ಮತ್ತು ಹಗಲಿನಲ್ಲೂ) ಆರ್ತಾಲಾಪವು ಎಂದರೆ ದುಃಖದಿಂದ ಅಳುವುದೇ ಮುಂತಾದ ರೋದನವು ಆಗದಿರಲಿ. ಅಳುವುದೇ ಮೊದಲಾದ ಸಮಸ್ತ ದುಃಖಗಳೂ ದೂರವಾಗಿ ಬೇರೆ ಕಡೆಗೆ ಹೊರಟುಹೋಗಲಿ. ದುಃಖದಿಂದ ತಲೆಯನ್ನು ಕೆದರಿಕೊಂಡು ಪ್ರಲಾಪಿಸುತ್ತಾ ಎದೆಯನ್ನು ಹೊಡೆದುಕೊಳ್ಳುವುದೇ ಮುಂತಾದ ಕೆಟ್ಟ ಕಾರ್ಯಗಳು ಆಗದಿರಲಿ. ನಿನಗೆ ಪತಿವಿಯೋಗವಾಗಲಿ, ಪುತ್ರವಿಯೋಗವಾಗಲಿ ಆಗದಿರಲಿ. ಪತಿಯೊಡನೆ ಗೃಹದಲ್ಲಿ ಬಹುಕಾಲ ಜೀವಿಸಿದ್ದು ಮಕ್ಕಳುಗಳು ಸಂತೋಷದಿಂದ ನಲಿದಾಡುವುದನ್ನು ನೋಡಿ ಸಂತೋಷಪಡುವಂತಾಗಲಿ.

(೪) ಎಲೈ ಸ್ತ್ರೀಯೇ, ಮಕ್ಕಳಾಗದಿರುವುದು, ಅಥವಾ ಮಗುವು ಹುಟ್ಟಿ ಸಾಯುವುದು, ಅಥವಾ ದುಃಖ, ಪಾಪಕರ್ಮಗಳ ಫಲವಾದ ಇತರ ವಿಧವಾದ ವ್ಯಸನಗಳು ಇವುಗಳೆಲ್ಲವನ್ನೂ (ಅಗ್ನಿಯಾದ ನಾನು) ಬಾಡಿಹೋದ ಹೂವಿನ ಹಾರವನ್ನು ಕಂಠದಿಂದ ತೆಗೆದುಹಾಕುವಂತೆ, ತೆಗೆದುಹಾಕಿ (ಪರಿಹಾರಮಾಡಿ) ನಿನ್ನನ್ನು ಸಂರಕ್ಷಿಸುವೆನು.

(೫) ಎಲೈ ಸ್ತ್ರೀಯೇ, (ಅಗ್ನಿಯಾದ ನಾನು) ದೈವಯತ್ನದಿಂದಾಗಲಿ, ಬ್ರಾಹ್ಮಣಶಾಪದಿಂದಾಗಲಿ, ಬೇರೆ ಕಾರಣದಿಂದಾಗಲಿ ಉಂಟಾಗಬಹುದಾದ ಪಾಪವನ್ನೂ ದುಃಖವನ್ನೂ ನಾಶಮಾಡುವೆನು ನಿನ್ನ ಗರ್ಭದಲ್ಲಿರುವ ಶಿಶುವನ್ನು ಪೀಡಿಸುವ ಪಿಶಾಚಾದಿ ಗ್ರಹಗಳನ್ನೂ, ಯಕ್ಷರಾಕ್ಷಸಾದಿಗಳನ್ನೂ, ಅಪಮೃತ್ಯುವನ್ನೂ ಹೊಡೆದು ಬೀಳಿಸಿ ಧ್ವಂಸಮಾಡುವೆನು. ನಿನ್ನ ಪುತ್ರರು ದೀರ್ಘಾಯುಷ್ಯವುಳ್ಳವರಾಗಿ ಬಹುಕಾಲ ಜೀವಿಸಲಿ.

॥ ಶ್ರೀಸೂಕ್ತವು ॥

## ಪರಿಶಿಷ್ಟಸೂಕ್ತ—೧೧.

## ಪೀಠಿಕೆ

ಶ್ರೀಸೂಕ್ತವು ಋಗ್ವೇದಸಂಹಿತೆಯ ಐದನೆಯ ಮಂಡಲದ ಅಂತ್ಯದಲ್ಲಿ ಪಠಿಸಬೇಕಾದ ಪರಿಶಿಷ್ಟಮಂತ್ರಗಳಲ್ಲಿ ಸೇರಿರುವುದು. ಈ ಸೂಕ್ತವನ್ನು ಪ್ರತಿದಿನವೂ ಅಭಿಷೇಕ, ಪೂಜೆ, ಪಾರಾಯಣ ಮುಂತಾದ ಕ್ರಮಗಳಲ್ಲಿ ಪಠಿಸುವ ರೂಢಿಯಿರುವುದರಿಂದ ಇದು ಸರ್ವಜನೋಪಯೋಗಿಯಾಗಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಆದುದರಿಂದ ಈ ಶ್ರೀಸೂಕ್ತವನ್ನು ಅವಶ್ಯಕವಾದ ಭಾಷ್ಯ, ವಿವರಣೆ, ವಿಶೇಷ ಸಂಗತಿ ಮುಂತಾದ ವಿವರಗಳೊಡನೆ ಇಲ್ಲಿ ಬರೆಯಲಾಗಿದೆ. ಈ ಸೂಕ್ತಕ್ಕೆ ಅನೇಕ ಭಾಷ್ಯಗಳಿದ್ದರೂ ಅವುಗಳಲ್ಲಿ ಶ್ರೀವಿದ್ಯಾರಣ್ಯಭಾಷ್ಯ, ಪೃಥ್ವೀಧರಾಚಾರ್ಯ ಭಾಷ್ಯ ಎಂಬಿವು ಮುಖ್ಯವಾದವು. ಆದುದರಿಂದ ಈ ಎರಡು ಭಾಷ್ಯಗಳನ್ನು ಅವುಗಳ ಅನುಸಾರವಾಗಿ ಪ್ರತಿ ಮಂತ್ರದ ಪ್ರತಿಪದಾರ್ಥ, ಭಾವಾರ್ಥ, ಮಂತ್ರಕ್ಕೆ ಸಂಬಂಧಿಸಿದಂತೆ ಇತರ ಗ್ರಂಥಗಳಲ್ಲಿರುವ ಫಲಶ್ರುತಿ ಮೊದಲಾದ ವಿಶೇಷ ವಿಷಯಗಳು, ಜಪಮಾಡುವವರ ಉಪಯೋಗಾರ್ಥವಾಗಿ ಪ್ರತಿಮಂತ್ರಕ್ಕೂ ಋಷಿದೇವತಾಛಂದಸ್ಸುಗಳು, ಅಂಗನ್ಯಾಸ ಕರನ್ಯಾಸ, ಧ್ಯಾನಶ್ಲೋಕ ಮುಂತಾದ ಉಪಯುಕ್ತವಿಷಯಗಳೆಲ್ಲವನ್ನೂ ಸೇರಿಸಲಾಗಿದೆ. ಈ ಸೂಕ್ತದ ಫಲಶ್ರುತಿಯಲ್ಲಿ ಹೇಳಿರುವಂತೆ—ಶ್ರಿಯಃ **ಪಂಚದಶರ್ಚಂ ಚ ಶ್ರೀಕಾಮಃ ಸತತಂ ಜಪೇತ್ ।** ಈ ಸೂಕ್ತದಲ್ಲಿ ಹದಿನೈದು ಋಕ್ಕುಗಳು ಮಾತ್ರವಿರುವವು. ಹದಿನಾರನೆಯದು ಈ ಸೂಕ್ತದ ಫಲಶ್ರುತಿಯನ್ನು ವಿವರಿಸುವುದು. ಅನಂತರ ಪಠಿಸುವ ಮಂತ್ರಗಳು ಶ್ಲೋಕರೂಪದಲ್ಲಿದ್ದು, ದೇವಿಯ ಗುಣಗಳನ್ನೂ ಮಹಿಮೆಯನ್ನೂ ವರ್ಣಿಸುವುದಾಗಿವೆ. ಇವುಗಳಿಗೆ ಭಾಷ್ಯವಿರುವುದಿಲ್ಲ. ಅವುಗಳನ್ನು ಪಠಿಸುವ ರೂಢಿ ಇರುವುದರಿಂದ ಅವುಗಳೆಲ್ಲವನ್ನೂ ಅವುಗಳ ಮುಖ್ಯಾಭಿಪ್ರಾಯವನ್ನೂ ಮಾತ್ರ ವಿವರಿಸಿರುತ್ತೇ.

॥ ಶ್ರೀಃ ॥

॥ ಅಥ ಶ್ರೀಸೂಕ್ತಂ ॥

**ವೇದಾರ್ಥಸ್ಯ ಪ್ರಕಾಶೇನ ತಮೋಹಾರ್ದಂ ನಿವಾರಯನ್ ।**
**ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥**

॥ ಋಷಯಃ—ಆನಂದ, ಕರ್ದಮ, ಶ್ರೀದ, ಚಿಕ್ಲೀತಾಃ, ಶ್ರೀಪುತ್ರಾಃ ॥
॥ ದೇವತಾ—ಶ್ರೀರಗ್ನಿಶ್ಚ ॥
॥ ಛಂದಃ—ಅನುಷ್ಟುಪ್ । ೪. ಬೃಹತೀ । ೫-೬. ತ್ರಿಷ್ಟುಪ್ । ೧೫. ಪ್ರಸ್ತಾರಪಂಕ್ತಿಃ ॥

**॥ ಅಥ ಸಮಷ್ಟಿಸೂಕ್ತಸ್ಯ ಋಷಿದೇವತಾಛಂದಾಂಸಿ ॥**

**ಓಂ ಹಿರಣ್ಯವರ್ಣಾಮಿತಿ ಪಂಚದಶರ್ಚಸ್ಯ ಸೂಕ್ತಸ್ಯ ಶ್ರೀ ಆನಂದಕರ್ದಮಚಿಕ್ಲೀತೇಂದಿರಾ ಋಷಯಃ । ಶ್ರೀರಗ್ನಿರ್ದೇವತಾ । ಆದ್ಯಾಸ್ತಿಸ್ರೋಽನುಷ್ಟುಭಃ । ಚತುರ್ಥೀ ಬೃಹತೀ । ಪಂಚಮೀಷಷ್ಠ್ಯೌ ತ್ರಿಷ್ಟುಭೌ । ತತೋಽಷ್ಟಾವನುಷ್ಟುಭಃ । ಅಂತ್ಯಾ ಪ್ರಸ್ತಾರಪಂಕ್ತಿಃ ॥ ಹಿರಣ್ಯವರ್ಣಾಮಿತಿ**

ಬೀಜಂ । ತಾಂ ಮ ಆ ವಹ ಜಾತವೇದ ಇತಿ ಶಕ್ತಿಃ । ಕೀರ್ತಿವೃದ್ಧಿಂ ದದಾತು ಮ ಇತಿ ಕೀಲಕಂ ॥ ಮಮ ಶ್ರೀಮಹಾಲಕ್ಷ್ಮೀಪ್ರಸಾದಸಿದ್ಧ್ಯರ್ಥೇ ಜಪೇ ವಿನಿಯೋಗಃ ॥

ಅಥಾಂಗನ್ಯಾಸಃ

ಓಂ ಹಿರಣ್ಯವರ್ಣಾಂ ಹರಿಣೀಂ ಸುವರ್ಣರಜತಸ್ರಜಾಂ ।
ಚಂದ್ರಾಂ ಹಿರಣ್ಮಯಾಂ ಲಕ್ಷ್ಮೀಂ ಜಾತವೇದೋ ಮ ಆ ವಹ—ಶಿರಸಿ ॥

ಓಂ ತಾಂ ಮ ಆ ವಹ ಜಾತವೇದೋ ಲಕ್ಷ್ಮೀಮನಪಗಾಮಿನೀಂ ।
ಯಸ್ಯಾಂ ಹಿರಣ್ಯಂ ವಿಂದೇಯಂ ಗಾಮಶ್ವಂ ಪುರುಷಾನಹಂ—ನೇತ್ರಯೋಃ ॥

ಓಂ ಅಶ್ವಪೂರ್ವಾಂ ರಥಮಧ್ಯಾಂ ಹಸ್ತಿನಾದಪ್ರಮೋದಿನೀಂ ।
ಶ್ರಿಯಂ ದೇವೀಮುಪ ಹ್ವಯೇ ಶ್ರೀರ್ಮಾ ದೇವೀ ಜುಷತಾಂ—ಕರ್ಣಯೋಃ ॥

ಓಂ ಕಾಂಸೋಸ್ಮಿತಾಂ ಹಿರಣ್ಯಪ್ರಾಕಾರಾಮಾರ್ದ್ರಾಂ ಜ್ವಲಂತೀಂ ತೃಪ್ತಾಂ ತರ್ಪಯಂತೀಂ ।
ಪದ್ಮೇ ಸ್ಥಿತಾಂ ಪದ್ಮವರ್ಣಾಂ ತಾಮಿಹೋಪ ಹ್ವಯೇ ಶ್ರಿಯಂ—ನಾಸಿಕಾಯಾಂ ।

ಓಂ ಓಂ ಚಂದ್ರಾಂ ಪ್ರಭಾಸಾಂ ಯಶಸಾ ಜ್ವಲಂತೀಂ ಶ್ರಿಯಂ ಲೋಕೇ ದೇವಜುಷ್ಟಾ-ಮುದಾರಾಂ ।
ತಾಂ ಪದ್ಮಿನೀಮೀಂ ಶರಣಮಹಂ ಪ್ರಪದ್ಯೇಽಲಕ್ಷ್ಮೀರ್ಮೇ ನಶ್ಯತಾಂ ತ್ವಾಂ ವೃಣೇ—ಮುಖೇ॥

ಓಂ ಆದಿತ್ಯವರ್ಣೇ ತಪಸೋಽಧಿ ಜಾತೋ ವನಸ್ಪತಿಸ್ತವ ವೃಕ್ಷೋಽಥ ಬಿಲ್ವಃ ।
ತಸ್ಯ ಫಲಾನಿ ತಪಸಾ ನುದಂತು ಮಾಯಾಂತರಾ ಯಾಶ್ಚ ಬಾಹ್ಯಾ ಅಲಕ್ಷ್ಮೀಃ—ಕಂಠೇ ॥

ಓಂ ಉಪೈತು ಮಾಂ ದೇವಸಖಃ ಕೀರ್ತಿಶ್ಚ ಮಣಿನಾ ಸಹ ।
ಪ್ರಾದುರ್ಭೂತೋಽಸ್ಮಿ ರಾಷ್ಟ್ರೇಽಸ್ಮಿನ್ ಕೀರ್ತಿವೃದ್ಧಿಂ ದದಾತು ಮೇ—ಬಾಹ್ವೋಃ ॥

ಓಂ ಕ್ಷುತ್ಪಿಪಾಸಾಮಲಾಂ ಜ್ಯೇಷ್ಠಾಮಲಕ್ಷ್ಮೀಂ ನಾಶಯಾಮ್ಯಹಂ ।
ಅಭೂತಿಮಸಮೃದ್ಧಿಂ ಚ ಸರ್ವಾಂ ನಿರ್ಣುದ ಮೇ ಗೃಹಾತ್—ಹೃದಯೇ ॥

ಓಂ ಗಂಧದ್ವಾರಾಂ ದುರಾಧರ್ಷಾಂ ನಿತ್ಯಪುಷ್ಟಾಂ ಕರೀಷಿಣೀಂ ।
ಈಶ್ವರೀಂ ಸರ್ವಭೂತಾನಾಂ ತಾಮಿಹೋಪ ಹ್ವಯೇ ಶ್ರಿಯಂ—ನಾಭೌ ॥

ಓಂ ಮನಸಃ ಕಾಮಮಾಕೂತಿಂ ವಾಚಃ ಸತ್ಯಮಶೀಮಹಿ ।
ಪಶೂನಾಂ ರೂಪಮನ್ನಸ್ಯ ಮಯಿ ಶ್ರೀಃ ಶ್ರಯತಾಂ ಯಶಃ—ಗುಹ್ಯೇ ॥

ಓಂ ಕರ್ದಮೇನ ಪ್ರಜಾ ಭೂತಾ ಮಯಿ ಸಂಭವ ಕರ್ದಮ ।
ಶ್ರಿಯಂ ವಾಸಯ ಮೇ ಕುಲೇ ಮಾತರಂ ಪದ್ಮಮಾಲಿನೀಂ—ಪಾದೌ ॥

ಓಂ ಆಪಃ ಸೃಜಂತು ಸ್ನಿಗ್ಧಾನಿ ಚಿಕ್ಲೀತ ವಸ ಮೇ ಗೃಹೇ ।
ನಿ ಚ ದೇವೀಂ ಮಾತರಂ ಶ್ರಿಯಂ ವಾಸಯ ಮೇ ಕುಲೇ—ಊರ್ವೋಃ ॥

ಓಂ ಆರ್ದ್ರಾಂ ಪುಷ್ಕರಿಣೀಂ ಪುಷ್ಟಿಂ ಪಿಂಗಲಾಂ ಪದ್ಮಮಾಲಿನೀಂ ।
ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮ ಆ ವಹ— ಜಾನ್ವೋಃ ॥

ಓಂ ಆರ್ದ್ರಾಂ ಯಃ ಕರಿಣೀಂ ಯಷ್ಟಿಂ ಸುವರ್ಣಾಂ ಹೇಮಮಾಲಿನೀಂ ।
ಸೂರ್ಯಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮ ಆ ವಹ— ಜಂಘಯೋಃ ॥

ಓಂ ತಾಂ ಮ ಆ ವಹ ಜಾತವೇದೋ ಲಕ್ಷ್ಮೀಮನಪಗಾಮಿನೀಂ ।
ಯಸ್ಯಾಂ ಹಿರಣ್ಯಂ ಪ್ರಭೂತಂ ಗಾವೋ ದಾಸ್ಯೋಽಶ್ವಾನ್ವಿಂದೇಯಂ ಪುರುಷಾನಹಂ—॥
ಪಾದಯೋಃ

॥ ಇತ್ಯಂಗನ್ಯಾಸಃ ॥

॥ ಅಥ ಕರನ್ಯಾಸಃ ॥

ಓಂ ನಮೋ ಭಗವತ್ಯೈ ಮಹಾಲಕ್ಷ್ಮ್ಯೈ ಹಿರಣ್ಯವರ್ಣಾಯೈ—ಅಂಗುಷ್ಠಾಭ್ಯಾಂ ನಮಃ ।
,, ,, ಹರಿಣ್ಯೈ—ತರ್ಜನೀಭ್ಯಾಂ ನಮಃ ।
,, ,, ಸುವರ್ಣರಜತಸ್ರಜಾಯೈ—ಮಧ್ಯಮಾಭ್ಯಾಂ ನಮಃ ।
,, ,, ಚಂದ್ರಾಯೈ—ಅನಾಮಿಕಾಭ್ಯಾಂ ನಮಃ ।
,, ,, ಹಿರಣ್ಮಯ್ಯೈ—ಕನಿಷ್ಠಿಕಾಭ್ಯಾಂ ನಮಃ ।
,, ,, ಲಕ್ಷ್ಮ್ಯೈ—ಕರತಲಕರಪೃಷ್ಠಾಭ್ಯಾಂ ನಮಃ ।
,, ,, ಹಿರಣ್ಯವರ್ಣಾಯೈ—ಹೃದಯಾಯ ನಮಃ ।
,, ,, ಹರಿಣ್ಯೈ—ಶಿರಸೇ ಸ್ವಾಹಾ ।
,, ,, ಸುವರ್ಣರಜತಸ್ರಜಾಯೈ—ಶಿಖಾಯೈ ವಷಟ್ ।
,, ,, ಚಂದ್ರಾಯೈ—ಕವಚಾಯ ಹುಂ ।
,, ,, ಹಿರಣ್ಮಯ್ಯೈ—ನೇತ್ರತ್ರಯಾಯ ವೌಷಟ್ ।
,, ,, ಲಕ್ಷ್ಮ್ಯೈ—ಅಸ್ತ್ರಾಯ ಫಟ್ ।

ಭೂರ್ಭುವಸ್ಸುವರೋಮಿತಿ ದಿಗ್ಬಂಧಃ.

॥ ಧ್ಯಾನಂ ॥

ಅರುಣಕಮಲಸಂಸ್ಥಾ ತದ್ರಜಃಪುಂಜವರ್ಣಾ
ಕರಕಮಲಧೃತೇಷ್ಟಾಭೀತಿಯುಗ್ಮಾಂಬುಜಾತಾ ।
ಮಣಿಮುಕುಟವಿಚಿತ್ರಾಲಂಕೃತಿಃ ಪದ್ಮಮಾಲಾ
ಭವತು ಭುವನಮಾತಾ ಸಂತತಂ ಶ್ರೀಃ ಶ್ರಿಯೈ ನಃ ॥

ಕಮಲಂ ಕಲಶಂ ಧೇನುಂ ಜ್ಞಾನಮಂಜಲಿಮೇವ ಚ ।
ಪಂಚ ಮುದ್ರಾಃ ಪ್ರದರ್ಶ್ಯಾಥ ಶ್ರೀಸೂಕ್ತಂ ಪ್ರಜಪೇದ್ಬುಧಃ ॥

ಮುಖ್ಯಾಭಿಪ್ರಾಯವು— ಈ ಶ್ರೀದೇವಿಯು ಕೆಂಪು ಬಣ್ಣದ ಪದ್ಮಪುಷ್ಪದಲ್ಲಿ ಮಂಡಿಸಿರುವಳು. ಅದೇ ಅರುಣ ಕಮಲದಂತೆ ದೇದೀಪ್ಯಮಾನವಾದ ಶುಭ್ರಕಾಂತಿಯಿಂದ ಬೆಳಗುತ್ತಿರುವಳು. ತನ್ನ ಎರಡು ಕೈಗಳಲ್ಲಿ ಇಷ್ಟ, ಅಭಯ ಮುದ್ರೆಗಳನ್ನೂ, ಇನ್ನೆರಡು ಕೈಗಳಲ್ಲಿ ಕಮಲಪುಷ್ಪಗಳನ್ನೂ ಧರಿಸಿರುವಳು. ನಾನಾವಿಧವಾದ ರತ್ನಗಳಿಂದ ನಿರ್ಮಿತವಾದ ಕಿರೀಟವನ್ನೂ, ಕಮಲಪುಷ್ಪಗಳ ಹಾರವನ್ನೂ ಧರಿಸಿರುವಳು. ನಾನಾವಿಧವಾದ ವಿಚಿತ್ರಾಲಂಕಾರಗಳಿಂದ ಶೋಭಿಸುತ್ತಿರುವಳು. ಸಕಲ ಲೋಕಗಳಿಗೂ ಮಾತೆಯಾದ ಇಂತಹ ಶ್ರೀದೇವಿಯು ನಮಗೆ ಯಾವಾಗಲೂ ಸಂಪದ್ವೃದ್ಧಿಯನ್ನುಂಟುಮಾಡುತ್ತಾ ನಮ್ಮ ವಿಷಯದಲ್ಲಿ ಅನುಗ್ರಹಬುದ್ಧಿಯಿಂದಿರಲಿ.

ಈರೀತಿ ಧ್ಯಾನಮಾಡಿ, ಕಮಲ, ಕಲಶ, ಧೇನು, ಜ್ಞಾನ, ಅಂಜಲಿ ಎಂಬ ಐದು ವಿಧವಾದ ಮುದ್ರೆಗಳನ್ನು ಪ್ರದರ್ಶನಮಾಡಿ ಅನಂತರ ವಿವೇಕಿಯಾದ ಪುರುಷನು ಈ ಶ್ರೀಸೂಕ್ತವನ್ನು ಜಪಮಾಡಬೇಕು.

—: ಜಪಮಂತ್ರ :—

**ಹಿರಣ್ಯವರ್ಣಾಂ ಹರಿಣೀಂ ಸುವರ್ಣರಜತಸ್ರಜಾಂ ।**

.. ........................... . ...............................

**ಯಸ್ಯಾಂ ಹಿರಣ್ಯಂ ಪ್ರಭೂತಂ ಗಾವೋ ದಾಸ್ಯೋಽಶ್ವಾನ್ ವಿಂದೇಯಂ ಪುರುಷಾನಹಂ ॥ ೧೫ ॥**

[ಎಂಬ ಹದಿನೈದು ಋಕ್ಕುಗಳನ್ನು ಯಥಾಶಕ್ತಿ ಜಪ ಮಾಡಬೇಕು. ಈ ಋಕ್ಕುಗಳನ್ನು ಅರ್ಥವಿವರಣೆಯ ಕಾಲದಲ್ಲಿ ಪ್ರತ್ಯೇಕವಾಗಿ ವಿವರಿಸಿರುವುದರಿಂದ ಅವೆಲ್ಲವನ್ನೂ ಸೇರಿಸಿ ಜಪ ಮಾಡಬೇಕು.]

—: ಪ್ರತ್ಯೇಕವಿಧಿಃ :—

**ಸೂಕ್ತಸ್ಯೈವ ವಿಧಿಃ ಪ್ರೋಕ್ತಃ ಪ್ರತ್ಯೇಕಂ ಚ ವದಾಮ್ಯಹಂ ॥**

ಒಂದೆ ಸಮಷ್ಟಿಸೂಕ್ತಜಪದ ವಿಧಾನವನ್ನು ಹೇಳಿದ್ದಾಯಿತು ಈಗ ಒಂದೊಂದು ಋಕ್ಕನ್ನೂ ಪ್ರತ್ಯೇಕವಾಗಿ ಜಪಮಾಡುವ ವಿಧಾನವನ್ನೂ, ಅವುಗಳ ಅಂಗನ್ಯಾಸ, ಧ್ಯಾನ, ಅರ್ಥವಿವರಣೆ ಫಲಶ್ರುತಿ ಮೊದಲಾದ ವಿಷಯವನ್ನು ವಿವರಿಸಲಾಗುವುದು.

## ಪ್ರಥಮಾ ಋಕ್

**ಅಸ್ಯ ಶ್ರೀಸೂಕ್ತಸ್ಥಪ್ರಥಮ ಋಙ್ಮಹಾಮಂತ್ರಸ್ಯ । ಜಾತವೇದ ಋಷಿಃ । ಅನುಷ್ಟುಪ್ ಛಂದಃ । ಸರ್ವಸೌಭಾಗ್ಯದಾಯಿನೀ ಶ್ರೀ ಮಹಾಲಕ್ಷ್ಮೀರ್ದೇವತಾ । ಹಿರಣ್ಯವರ್ಣಾಮಿತಿ ಬೀಜಂ । ಸ್ವಾಹಾ ಶಕ್ತಿಃ । ಶ್ರೀಂ ಹ್ರೀಂ ಕ್ಲೀಂ ಕೀಲಕಂ (ಅಥವಾ ಶ್ರೀಂ ಬೀಜಂ । ಹ್ರೀಂ ಶಕ್ತಿಃ । ಕ್ಲೀಂ ಕೀಲಕಂ ಇತಿ ಪಾಠಾಂತರಂ) ಶ್ರೀಸೂಕ್ತ ಪ್ರಥಮ ಋಙ್ಮಹಾಮಂತ್ರಪ್ರಸಾದಸಿದ್ಧ್ಯರ್ಥೇ ಜಪೇ ವಿನಿಯೋಗಃ । ಓಂ ಹಿರಣ್ಯವರ್ಣಾಂ-ಅಂಗುಷ್ಠಾಭ್ಯಾಂ ನಮಃ । ಓಂ ಹರಿಣೀಂ-ತರ್ಜನೀಭ್ಯಾಂ ನಮಃ । ಓಂ ಸುವರ್ಣರಜತಸ್ರಜಾಂ—ಮಧ್ಯಮಾಭ್ಯಾಂ ನಮಃ । ಓಂ ಚಂದ್ರಾಂ—ಅನಾಮಿಕಾಭ್ಯಾಂ ನಮಃ । ಓಂ ಹಿರಣ್ಮಯೀಂ—ಕನಿಷ್ಠಿಕಾಭ್ಯಾಂ ನಮಃ । ಓಂ ಲಕ್ಷ್ಮೀಂ— ಕರತಲಕರಪೃಷ್ಠಾಭ್ಯಾಂ ನಮಃ । ಓಂ ಹಿರಣ್ಯವರ್ಣಾಂ—ಹೃದಯಾಯ ನಮಃ । ಓಂ ಹರಿಣೀಂ--ಶಿರಸೇ ಸ್ವಾಹಾ । ಓಂ ಸುವರ್ಣರಜತಸ್ರಜಾಂ—ಶಿಖಾಯೈ ವಷಟ್ । ಓಂ ಚಂದ್ರಾಂ—ಕವಚಾಯ ಹುಂ । ಓಂ ಹಿರಣ್ಮಯೀಂ—ನೇತ್ರತ್ರಯಾಯ ವೌಷಟ್ । ಓಂ**

ಲಕ್ಷ್ಮೀಂ—ಅಸ್ತ್ರಾಯ ಫಟ್ ॥ ಭೂರ್ಭುವಸ್ಸುವರೋಮಿತಿ ದಿಗ್ಬಂಧಃ ॥ ಅಥ ಧ್ಯಾನಂ ॥ ಕಾಂತ್ಯಾ ಕಾಂಚನಸಂನಿಭಾಂ ಹರಗಿರಿಪ್ರಖ್ಯೈಶ್ಚತುರ್ಭಿರ್ಗಜೈರ್ಹಸ್ತೋತ್ಕ್ಷಿಪ್ತಹಿರಣ್ಮಯಾಮೃತಘಟೈರಾಸಿಚ್ಯಮಾನಾಂ ಶ್ರಿಯಂ । ನಾನಾರತ್ನಸಮುಜ್ಜ್ವಲಾಂ ಕರಲಸತ್ಪದ್ಮಾಂ ಕಿರೀಟೋಜ್ಜ್ವಲಾಂ ಕ್ಷೌಮಾಬದ್ಧನಿತಂಬಬಿಂಬಲಸಿತಾಂ ವಂದೇಽರವಿಂದಸ್ಥಿತಾಂ ॥ ಇತಿ ಧ್ಯಾತ್ವಾ । ನಿರ್ದಿಷ್ಟಸಂಖ್ಯಯಾ ಜಪಂ ಕೃತ್ವಾ ಉತ್ತರನ್ಯಾಸಂ ಚ ಕೃತ್ವಾ ದೇವ್ಯೈ ಜಪಸಮರ್ಪಣಂ ಕುರ್ಯಾತ್ । ಏವಮುತ್ತರತ್ರ ತತ್ತನ್ಮಂತ್ರಜಪಂ ಕುರ್ಯಾತ್.

### ಮೊದಲನೆಯ ಋಕ್

ಹಿರಣ್ಯವರ್ಣಾಂ ಹರಿಣೀಂ ಸುವರ್ಣರಜತಸ್ರಜಾಂ ।
ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮ ಆ ವಹ ॥ ೧ ॥

॥ ಶ್ರೀ ವಿದ್ಯಾರಣ್ಯಭಾಷ್ಯಂ ॥

ಹೇ ಜಾತವೇದಃ ಜಾತಪ್ರಜ್ಞ ಅಗ್ನೇ ತ್ವಂ ಹಿರಣ್ಯವರ್ಣಾಂ ಹಿರಣ್ಯಸ್ಯ ಸುವರ್ಣಸ್ಯೇವ ವರ್ಣಃ ಕಾಂತಿರ್ಯಸ್ಯಾಸ್ತಾಂ ಹರಿಣೀಂ ಹರಿತವರ್ಣಾಂ ಹರಿಣೀರೂಪಧರಾಂ ವಾ–"ಶ್ರೀರ್ಧೃತ್ವಾ ಹರಿಣೀರೂಪಮರಣ್ಯೇ ಸಂಚಚಾರ ಹ" ಇತಿ ಪುರಾಣಾತ್, ಸುವರ್ಣರಜತಸ್ರಜಾಂ ಸುವರ್ಣಸ್ಯ ಪುಷ್ಪಾಣಿ ಸುವರ್ಣಾನಿ ಏವಂ ರಜತಸ್ಯ ರಜತಾನಿ ತೇಷಾಂ ಸ್ರಜೋ ಮಾಲಾ ಯಸ್ಯಾಸ್ತಾಂ ಸ್ರಕ್ಸಾಹಚರ್ಯಾತ್ಪುಷ್ಪಾಣೀತ್ಯವಗಮ್ಯತೇ । ಪುಷ್ಪಸಾದೃಶ್ಯಾತ್ "ಪುಷ್ಪಫಲೇತ್ಯಾದಿನಾ" ಲುಕ್ ಆಬಂ ಚೈವ ಹಲಂತಾನಾಂ ಇತ್ಯಾಪ್। ಯದ್ವಾ ಸುವರ್ಣರಜತವಿಕೃತಶೃಂಖಲಾಂ—ಸುಷ್ಠು:ವರ್ಣೋ ಯಸ್ಯ ತತ್ಸುವರ್ಣಂ ಯದ್ರಜತಂ ಚ ತತ್ಪುಷ್ಪಸ್ರಜಾಂ ತದ್ವಿಕೃತಶೃಂಖಲಾಂ ವಾ । ಚಂದ್ರಾಂ ಚಂದ್ರವತ್ ಪ್ರಕಾಶಮಾನಾಂ ತದ್ರೂಪೇಣಾವಸ್ಥಿತಾಂ ವಾ । ಹಿರಣ್ಮಯೀಂ ಹಿರಣ್ಯಸ್ವರೂಪಾಂ ಹಿರಣ್ಯವಿಗ್ರಹಾಂ ವಾ । ಲಕ್ಷ್ಮೀಂ ಲಕ್ಷಣವತೀಂ "ಲಕ್ಷ್ಮೀರ್ಲಾಕ್ಷಾ ಲಕ್ಷಣಾದಿತಿ" ನಿರುಕ್ತಾತ್ । ಏವಂರೂಪಾಂ ಶ್ರಿಯಂ ಮೇ ಮಹ್ಯಂ ಮದರ್ಥಮಾವಹ ಆಹ್ವಯ । ಅಗ್ನೇರ್ದೇವಹೋತೃತ್ವಾದಾಹ್ವಾನಂ ತದಧೀನಮಿತಿಭಾವಃ ॥

॥ ಪ್ರತಿಪದಾರ್ಥ ॥

(ಹೇ) **ಜಾತವೇದಃ**—ಸಮಸ್ತವನ್ನೂ ತಿಳಿದಿರುವ ಎಲೈ ಅಗ್ನಿಯೇ (ನೀನು)। **ಹಿರಣ್ಯವರ್ಣಾಂ**—ಚಿನ್ನದಂತೆ ಅತಿಪ್ರಕಾಶಮಾನವಾದ ಶರೀರಕಾಂತಿಯಿಂದ ಶೋಭಿಸುವವಳೂ। **ಹರಿಣೀಂ**—ಗೌರ(ಹರಿತ) ವರ್ಣಶರೀರವುಳ್ಳವಳೂ ಅಥವಾ ಹೆಣ್ಣುಜಿಂಕೆಯ ರೂಪವನ್ನು ಧರಿಸಿರುವವಳೂ। **ಸುವರ್ಣರಜತಸ್ರಜಾಂ**—ಸುವರ್ಣನಿರ್ಮಿತವಾದ ಪುಷ್ಪಗಳಿಂದಲೂ, ಬೆಳ್ಳಿಯಿಂದ ನಿರ್ಮಿತವಾದ ಪುಷ್ಪಗಳಿಂದಲೂ ರಚಿತವಾದ ಹಾರವನ್ನು ಧರಿಸಿರುವವಳೂ ಅಥವಾ ಚಿನ್ನದ ಬಣ್ಣವಾದ ಹಳದಿಯ ಹೂವುಗಳಿಂದಲೂ, ಬೆಳ್ಳಿಯ ವರ್ಣವಾದ ಬಿಳಿಯ ಹೂವುಗಳಿಂದಲೂ ನಿರ್ಮಿತ

ವಾದ ಹಾರವನ್ನು ಧರಿಸಿರುವವಳೂ । **ಚಂದ್ರಾಂ**-ಚಂದ್ರನಂತೆ ಪ್ರಕಾಶಿಸುತ್ತಿರುವವಳೂ। **ಹಿರಣ್ಮಯೀಂ**—ಸುವರ್ಣ ಮಯವಾದ ಶರೀರವುಳ್ಳವಳೂ । **ಲಕ್ಷ್ಮೀಂ**—ಸಲ್ಲಕ್ಷಣಗಳಿಂದ ಯುಕ್ತಳಾದವಳೂ ಆದ ಶ್ರೀದೇವಿಯೆಂಬ ದೇವತೆ ಯನ್ನು । **ಮೇ**—ನನ್ನ ಬಳಿಗೆ । **ಆ ವಹ**—ಕರೆದುಕೊಂಡು ಬಾ.

॥ ಭಾವಾರ್ಥ ॥

ಸಮಸ್ತವನ್ನೂ ತಿಳಿದಿರುವ ಎಲೈ ಅಗ್ನಿಯೇ, ನೀನು ಚಿನ್ನದಂತಿರುವ ಶರೀರಕಾಂತಿಯಿಂದ ಬೆಳಗುತ್ತಿರುವವಳೂ ಗೌರವರ್ಣವುಳ್ಳವಳೂ ಅಥವಾ ಹೆಣ್ಣು ಜಿಂಕೆಯ ರೂಪವನ್ನು ಧರಿಸಿರುವವಳೂ, ಚಿನ್ನ ಬೆಳ್ಳಿ ಇವುಗಳಿಂದ ನಿರ್ಮಿತ ವಾದ ಪುಷ್ಪಹಾರವನ್ನು ಧರಿಸಿರುವವಳೂ, ಚಂದ್ರನಂತೆ ಆಹ್ಲಾದಕರವಾದ ಕಾಂತಿಯುಳ್ಳವಳೂ, ಸುವರ್ಣಮಯವಾದ ಶರೀರವುಳ್ಳವಳೂ, ಸಮಸ್ತ ಸಲ್ಲಕ್ಷಣಗಳಿಂದ ಕೂಡಿರುವವಳೂ ಆದ ಶ್ರೀದೇವಿಯೆಂಬ ದೇವತೆಯನ್ನು ನನ್ನ ಒಳಿಗೆ ಕರೆದುಕೊಂಡು ಬಾ

॥ ವಿಶೇಷವಿಷಯಗಳು ॥

**ಹರಿಣೀಂ—ಹರಿತವರ್ಣಾಂ ಹರಿಣೀರೂಪಧರಾಂ ವಾ । ಶ್ರೀರ್ಧೃತ್ವಾ ಹರಿಣೀರೂಪಮರಣ್ಯೇ ಸಂಚಚಾರ ಹ । ಹರಿಣೀಂ** ಎಂಬ ಶಬ್ದಕ್ಕೆ ಎರಡು ವಿಧವಾದ ಅರ್ಥವನ್ನು ಹೇಳಿರುವರು. ಹರಿದ್ವರ್ಣ ಎಂದರೆ ಅರಿಸಿನದಂತೆ ಗೌರವರ್ಣವುಳ್ಳವಳು. ಅಥವಾ ಶ್ರೀದೇವಿಯು ಹೆಣ್ಣುಜಿಂಕೆಯ ರೂಪನ್ನು ಧರಿಸಿ ಸಂಚರಿಸುತ್ತಿದ್ದಳೆಂದು ಪುರಾಣಾದಿಗಳಲ್ಲಿ ಹೇಳಿರುವುದನ್ನು ಉದಾಹರಿಸಿದ್ದಾರೆ.

**ಸುವರ್ಣರಜತಸ್ರಜಾಂ**—ಈ ಶಬ್ದಕ್ಕೂ ಎರಡು ವಿಧವಾದ ಅರ್ಥವನ್ನು ಹೇಳಿದ್ದಾರೆ ಚಿನ್ನ, ಬೆಳ್ಳಿ ಇವುಗಳಿಂದ ನಯನ ಮನೋಹರವಾಗಿ ರಚಿತವಾದ ಪುಷ್ಪಗಳಿಂದ ನಿರ್ಮಿಸಿದ ಹಾರವನ್ನು ಧರಿಸಿರುವವಳು ಅಥವಾ ಚಿನ್ನದ ವರ್ಣದ ಎಂದರೆ ಹಳದೀ ಬಣ್ಣದ ಹೂವುಗಳು ಬೆಳ್ಳಿಯಂತೆ ಬೆಳ್ಳಗಿರುವ ಬಿಳೀ ಹೂವುಗಳು ಇವುಗಳಿಂದ ಕಟ್ಟಿದ ದಿವ್ಯಹಾರವನ್ನು ಧರಿಸಿರುವವಳು ಎಂದು ಎರಡು ವಿಧ ಅರ್ಥವಿವರಣೆಮಾಡಿದ್ದಾರೆ.

**ಲಕ್ಷ್ಮೀಂ—ಲಕ್ಷಣವತೀಂ ।** ಸಲ್ಲಕ್ಷಣಯುಕ್ತಳಾದವಳು ಎಂದು ·ಭಾಷ್ಯಕಾರರ ವಿವರಣೆಯು. ಲಕ್ಷ್ಮೀ ಶಬ್ದದ ವಿಷಯದಲ್ಲಿ ಯಾಸ್ಕರು **ಸಕ್ತುಮಿವತಿತಉನಾ** ಎಂಬ (ಋ. ಸಂ. ೧೦-೭೧-೨) ಋಕ್ಕಿಗೆ ನಿರ್ವಚನವನ್ನು ಹೇಳುವಾಗ—

**ಲಕ್ಷ್ಮೀರ್ಲಾಭಾದ್ವಾ ಲಕ್ಷಣಾದ್ವಾ (ಲಪ್ಸ್ಯನಾದ್ವಾ) ಲಾಂಛನಾದ್ವಾ ಲಷತೇರ್ವಾಸ್ಯಾತ್ ಪ್ರೇಪ್ಸಾ-ಕರ್ಮಣೋ ಲಗ್ಯತೇರ್ವಾ ಸ್ಯಾದಾಶ್ಲೇಷಕರ್ಮಣೋ ಲಜ್ಜತೇರ್ವಾ ಸ್ಯಾದಶ್ಲಾಘಾಕರ್ಮಣಃ ॥**

(ನಿ. ೪-೯)

ಎಂದು ನಿರ್ವಚನವನ್ನು ಹೇಳಿದ್ದಾರೆ. ಎಂದರೆ **ಲಕ್ಷ್ಮೀಃ** ಎಂಬ ಶಬ್ದವು **ಲಾಭಾದ್ವಾ** ಹೊಂದುವುದು, ಪಡೆಯುವುದು, **ಲಕ್ಷಣಾದ್ವಾ**—ನಿರ್ದಿಷ್ಟಮಾಡುವುದು, **ಲಪ್ಸ್ಯನಾತ್**—ಹೊಂದಬೇಕೆಂಬ ಅಪೇಕ್ಷೆ ಇರುವುದು. **ಲಾಂಛನಾದ್ವಾ**— ಗುರುತು ಅಥವಾ ಚಿಹ್ನೆಮಾಡುವುದು ಎಂಬ ಅರ್ಥಸೂಚಕಗಳಾದ ಶಬ್ದಗಳಿಂದ ನಿಷ್ಪನ್ನವಾಗಿದೆ. ಅಥವಾ ಅಪೇಕ್ಷಿಸು ಎಂಬರ್ಥವುಳ್ಳ ಲಷತಿ ಧಾತುವಿನಿಂದಾಗಲಿ, ಅಂಟಿಕೊಳ್ಳು, ಕಚ್ಚಿಕೊಳ್ಳು ಎಂಬರ್ಥವುಳ್ಳ ಲಗ್ಯತಿ ಧಾತುವಿನಿಂದಾಗಲಿ, ಶ್ಲಾಘಿಸಬೇಡ ಎಂಬರ್ಥವುಳ್ಳ ಲಜ್ಜತಿಧಾತುವಿನಿಂದಾಗಲಿ ನಿಷ್ಪನ್ನವಾಗಬಹುದು ಎಂದು ಈ ಶಬ್ದದ ಅರ್ಥವನ್ನೂ ರೂಪನಿಷ್ಪತ್ತಿಯನ್ನೂ ವಿವರಿದ್ದಾರೆ.

**ಚಂದ್ರಾಂ**—ಚಂದ್ರಶಬ್ದವು ಹಿರಣ್ಯನಾಮಗಳಲ್ಲಿ ಉಕ್ತವಾಗಿದೆ (ನಿ. ೬-೧೦) ಮತ್ತು ಚಂದ್ರ ಶಬ್ದಕ್ಕೆ—

**ಚಂದ್ರಶ್ಚಂದತೇಃ ಕಾಂತಿಕರ್ಮಣಃ । ಚಂದನಮಿತ್ಯಪ್ಯಸ್ಯ ಭವತಿ । ಚಾರು ದ್ರಮತಿ ಚಿರಂ ದ್ರಮತಿ ಚಮೇರ್ವಾ ಪೂರ್ವಂ ॥ ಚಾರು ರುಚೇರ್ವಿಪರೀತಸ್ಯ ॥**

(ನಿ. ೧೧-೫)

ಎಂದರೆ ಪ್ರಕಾಶಿಸು ಎಂಬರ್ಥವುಳ್ಳ **ಚಂದ್** ಧಾತುವಿನಿಂದ ನಿಷ್ಪನ್ನವಾದ ಚಂದ್ರಶಬ್ದಕ್ಕೆ ಪ್ರಕಾಶಿಸುವ ಎಂದರ್ಥವು. **ಚಂದನ** (ಗಂಧ) ಎಂಬ ಶಬ್ದವೂ ಇದೇ ಧಾತುವಿನಿಂದ ನಿಷ್ಪನ್ನವಾಗಿದೆ. **ಚಾರು—ರುಚೇರ್ವಿಪರೀತಸ್ಯ** ಎಂದರೆ **ರುಚಿ** ಶಬ್ದದಲ್ಲಿರುವ ರಕಾರ ಚಕಾರಗಳ ಸ್ಥಾನವ್ಯತ್ಯಾಸಮಾಡುವುದರಿಂದ ಚಾರು ಎಂದಾಗಿ ಅತಿಶಯವಾದ **ಕಾಂತಿ** ಯಿಂದ ಬೆಳಗುವ ಎಂಬರ್ಥವೇ ಪ್ರಕೃತ ಋಕ್ಕಿನಲ್ಲಿ ವಿವೃತವಾಗಿರುವುದು

ಈ ಋಕ್ಕಿನಲ್ಲಿ ಅಗ್ನಿಯನ್ನು ಸಂಬೋಧಿಸಿ ಶ್ರೀ ದೇವತೆಯನ್ನು ಕರೆತರಬೇಕೆಂದು ಪ್ರಾರ್ಥಿಸಲಾಗಿದೆಯಷ್ಟೆ. ಏಕೆಂದರೆ ಅಗ್ನಿಯೇ ಸಕಲದೇವತೆಗಳನ್ನು ಕರೆತರುವ ಹೋತೃ (ಆಹ್ವಾನ ಮಾಡುವವನು) ವಾಗಿರುವನು. **ಅಗ್ನೇ ದೇವಾನಿಹಾ ವಹ** ಇತ್ಯಾದಿ ಅನೇಕ ಶ್ರುತಿವಾಕ್ಯಗಳು ಅಗ್ನಿಯು ದೇವತೆಗಳನ್ನು ಯಜ್ಞಭೂಮಿಗೆ ಕರೆತರುವ ದೂತ ನಾಗಿರುವನು ಎಂಬ ವಿಷಯವನ್ನು ಸಮರ್ಥಿಸುವುವು.

॥ ಅಥ ಪೃಥ್ವೀಧರಾಚಾರ್ಯಭಾಷ್ಯಂ ॥

**ಹೇ ಜಾತವೇದಃ ಅಗ್ನೇ । ಹಿರಣ್ಯವರ್ಣಾಂ ಸ್ವರ್ಣಕಾಂತಿಂ ಹರಿಣೀಂ ಹರಿತವರ್ಣಾಂ ಹರಿದ್ರಾಭಾಂ ಸುವರ್ಣರಜತಸ್ರಜಾಂ ಹೇಮರೌಪ್ಯಮಯಕಮಲಮಾಲಾಂ ಚಂದ್ರಾಂ ಸಕಲಜನಾಹ್ಲಾದ-ಕಾರಿಣೀಂ ಹಿರಣ್ಮಯೀಂ ಹಿರಣ್ಯಸ್ವರೂಪಾಮೇತಾದೃಶೀಂ ಲಕ್ಷ್ಮೀಂ ಮೇ ಮಮ ಸರ್ವಾಭೀಷ್ಟಸಾಧನಾಯ ಆವಹ ಪ್ರೇಷಯ ॥**

॥ ಪ್ರತಿಪದಾರ್ಥ ॥

**(ಹೇ) ಜಾತವೇದಃ**—ಎಲೈ ಅಗ್ನಿಯೇ । **ಹಿರಣ್ಯವರ್ಣಾಂ**—ಸುವರ್ಣದಂತೆ ಕಾಂತಿವಿಶಿಷ್ಟಳೂ । **ಹರಿಣೀಂ**—ಗೌರವರ್ಣವಾದ ಶರೀರಕಾಂತಿಯಿಂದ ಬೆಳಗುವವಳೂ । **ಸುವರ್ಣರಜತಸ್ರಜಾಂ**—ಚಿನ್ನ ಬೆಳ್ಳಿಗಳಿಂದ ನಿರ್ಮಿತವಾದ ಹೂವುಗಳಿಂದ ರಚಿತವಾದ ಹಾರವನ್ನು ಧರಿಸಿರುವವಳೂ । **ಚಂದ್ರಾಂ**—ಸಕಲ ಜನರಿಗೂ ಆಹ್ಲಾದ ವನ್ನುಂಟುಮಾಡುವವಳೂ । **ಹಿರಣ್ಮಯೀಂ**—ಹಿರಣ್ಯಸ್ವರೂಪವುಳ್ಳವಳೂ ಆದ । **ಲಕ್ಷ್ಮೀಂ**—ಲಕ್ಷ್ಮೀ ಎಂಬ ಹೆಸರಿನಿಂದ ಪ್ರಸಿದ್ಧಳಾದ ಶ್ರೀದೇವತೆಯನ್ನು । **ಮೇ**—ನನ್ನ ಸಮೀಪಕ್ಕೆ । **ಆವಹ**—ಕಳುಹಿಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಸುವರ್ಣದಂತೆ ಕಾಂತಿವಿಶಿಷ್ಟಳೂ, ಗೌರವರ್ಣದ ಶರೀರಕಾಂತಿಯಿಂದ ಬೆಳಗುವವಳೂ, ಚಿನ್ನ, ಬೆಳ್ಳಿ ಮೊದಲಾದ ಬೆಲೆಯುಳ್ಳ ವಸ್ತುಗಳಿಂದ ನಿರ್ಮಿತವಾದ ಹೂವುಗಳಿಂದ ಕಟ್ಟಿದ ಹಾರವನ್ನು ಧರಿಸಿರುವವಳೂ, ಸಕಲ ಜನರಿಗೂ ಆಹ್ಲಾದ (ಸಂತೋಷ) ವನ್ನುಂಟುಮಾಡುವವಳೂ, ಸುವರ್ಣಮಯವಾದ ಶರೀರವುಳ್ಳವಳೂ ಲಕ್ಷ್ಮೀ ಎಂಬ ಹೆಸರಿನಿಂದ ಪ್ರಸಿದ್ಧಳೂ ಆದ ಶ್ರೀದೇವತೆಯನ್ನು ನನ್ನ ಬಳಿಗೆ ಕಳುಹಿಸು ಅಥವಾ ಕರೆದುಕೊಂಡು ಬಾ.

॥ ವಿಶೇಷವಿಷಯಗಳು ॥

ಶ್ರೀಕಂಠಭಾಷ್ಯವೆಂಬ ಗ್ರಂಥದಲ್ಲಿ ಈ ರೀತಿ ಹೇಳಿರುವುದು—

ಓಂ ಹಿರಣ್ಯವರ್ಣಾಮಿತಿ ಸೂಕ್ತೇನಾಗ್ನಿಂ ಪ್ರಾರ್ಥಯೇತ್ । ಅಗ್ನಿಸ್ತುಷ್ಟೋ ಯಜಮಾನಾಯ ಶ್ರಿಯಂ ಪ್ರಯಚ್ಛತಿ । ಅಗ್ನಿಸ್ತು ರುದ್ರ ಏವ । "ರುದ್ರೋ ವಾ ಏಷೋಽಗ್ನಿಃ" ಇತಿ ಶ್ರುತೇಃ । ರುದ್ರೋ ಹಿ ಪುರುಷಃ । "ಪುರುಷೋ ವೈ ರುದ್ರಃ" ಇತಿ ಶ್ರುತೇಃ । ತಸ್ಯ ಪತ್ನೀ ಭಗವತ್ಯೇವ ಲಕ್ಷ್ಮೀಃ । "ಶ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ" ಇತಿ ಪುರುಷಸೂಕ್ತೋಕ್ತೇಃ । ಪುರುಷೋ ಮಹಾದೇವಃ ಶಿವಃ । ವೇದಾಹಮೇತಂ ಪುರುಷಂ ಮಹಾಂತಮಿತಿ ತತ್ರೈವೋಕ್ತೇಃ । ತಥಾ ಚ ಅಗ್ನಿಸ್ವರೂಪಿಣಃ ಪರಮೇಶ್ವರಸ್ಯೋಪಾಸನೇನ ತಚ್ಛಕ್ತಿವಿಭೂತೇರ್ಮಹಾಲಕ್ಷ್ಮ್ಯಾಃ ಪ್ರಾಪ್ತಿರ್ಭವಿಷ್ಯತೀತಿ ಸಿದ್ಧಂ । "ಧನಾರ್ಥಿಭಿರಗ್ನಿರುಪಾಸ್ಯ ಐಶ್ವರ್ಯಾರ್ಥಿಭಿರೀಶ್ವರ" ಇತ್ಯಾದಿ ಸ್ಮರ್ಯತೇ ।

ಆರೋಗ್ಯಂ ಭಾಸ್ಕರಾದಿಚ್ಛೇಚ್ಛ್ರಿಯಮಿಚ್ಛೇದ್ಧುತಾಶನಾತ್ ।
ಐಶ್ವರ್ಯಮೀಶ್ವರಾದಿಚ್ಛೇನ್ಮೋಕ್ಷಮಿಚ್ಛೇಜ್ಜನಾರ್ದನಾತ್ ॥

ಇತಿ । ಸೂಕ್ತೇ ಋಚಃ ಪಂಚದಶ । ಹಿರಣ್ಯವರ್ಣಾಮಿತಿ ಪ್ರಥಮಾ ಋಕ್ । ಅಸ್ಯಾ ಅರ್ಥಃ— ಹಿರಣ್ಯವರ್ಣಾಂ ಹಿರಣ್ಯವರ್ಣರೂಪಾಂ —

ಜ್ಞಾನಮಾತ್ಮನಿ ಭಾ ಸೂರ್ಯೇ ಚಂದ್ರೇ ಜ್ಯೋತ್ಸ್ನಾ ಚ ಖೇ ಧ್ವನಿಃ ।
ವರ್ಣೋ ಹಿರಣ್ಯೇ ಪಯಸಿ ಘೃತಂ ತ್ವಮಸಿ ಮಾತೃಕೇ ॥

ಇತಿ ಶ್ರೀಸ್ತುತಾವಗಸ್ತ್ಯೋಕ್ತೇಃ ।

ಹಿರಣ್ಯವರ್ಣಾಂ ಮಣಿನೂಪುರಾಂಘ್ರಿಂ ಪ್ರಸನ್ನವಕ್ತ್ರಾಂ ಶುಕಪದ್ಮಹಸ್ತಾಂ ।
ವಿಶಾಲನೇತ್ರೀಂ ಪ್ರಣಮಾಮಿ ಗೌರೀಂ ವಚೋವಿದಂ ವಾಚಮುದೀರಯಂತೀಂ ॥

ಇತಿ ಜೈಮಿನ್ಯುಕ್ತೇಃ । ಹಿರಣ್ಯವರ್ಣಸದೃಗ್ವರ್ಣಾಂ ವಾ । "ತಪ್ತಸ್ವರ್ಣಸವರ್ಣಾಭಾಮಿತಿ" ಶ್ರೀ ಪುರಾಣಾಚ್ಚ । ಹರಿಣೀಂ ಹರಿಣೀರೂಪಾಂ—

ಯಜ್ಞೋಽಗ್ನಿರ್ಮೃಗರೂಪೇಣ ಧಾವತಿ ಸ್ಮ ಪುರಾಧ್ವರೇ ।
ರುದ್ರಸ್ತ್ರಾಸಕೃತಸ್ಯ ತಚ್ಛಕ್ತಿಂ ಮೃಗೀಂ ಜಗ್ರಾಹ ವೈಷ್ಣವೀಂ ॥

ಇತಿ ವೈವರ್ತದಕ್ಷಾಧ್ವರಾಧ್ಯಾಯೋಕ್ತೇಃ । ಅಥ ವಾ ಹರಿಣೀಂ ಹರಿದ್ರಾಭಾಂ ಹರಿದ್ರಾಚೂರ್ಣಲಿಪ್ತತ್ವಾದ್ವಾ । "ಹರಿಣೀಂ ಪೂಜಯೇದ್ದುರ್ಗಾಂ ಹರಿದ್ರಾಚೂರ್ಣನಿರ್ಮಿತಾಂ" ಇತಿ ಹರಿದ್ರಾಗೌರೀವ್ರತಕಲ್ಪೋಕ್ತೇಃ । ಸುವರ್ಣರಜತಸ್ರಜಾಂ ಸುವರ್ಣಮಯ್ಯಃ ರಜತಮಯ್ಯಶ್ಚ ಸ್ರಜಃ ಹಾರಾಃ ಯಸ್ಯಾಂ ತಾಂ । ಚಂದ್ರಾಂ ಚದಿ ಆಹ್ಲಾದನೇ ದೀಪ್ತೌ ಚ ರಕಿ ಚಂದ್ರಾಮಿತಿ ಟಾಬಂತರೂಪಂ ಆಹ್ಲಾದಿಕಾಂ ಪ್ರಕಾಶಿಕಾಂ ಚ । ಜ್ಞಾನಾನಂತಸ್ವರೂಪಿಣೀಮಿತಿ ಯಾವತ್ । ಚಂದ್ರೇ ವಿದ್ಯಮಾನಾ ಚಾಂದ್ರೀ ಚಂದ್ರಿಕಾ ಚಂದ್ರೇತಿ ವಿವಕ್ಷ್ಯತೇ । "ಪೌರ್ಣಮಾಸ್ಯಾಂ ಚಂದ್ರಬಿಂಬೇ ಧ್ಯಾತ್ವಾ ಶ್ರೀಲಲಿತಾಂಬಿಕಾಮಿತಿ" ಹಯ-

ಗ್ರೀವೋಕ್ತೇಃ । ಹಿರಣ್ಮಯೀಂ ವಿಕಾರಾರ್ಥೇ ಮಯಟ್ ಹಿರಣ್ಯಾತ್ಮನಾ ವಿಕೃತಾಂ । "ತತ್ಸುವರ್ಣಮ-ಭವತ್" ಇತಿ ಶ್ರುತೇಃ । ಪವಿತ್ರಮಯೀಂ ವಾ—"ಪವಿತ್ರಂ ವೈ ಹಿರಣ್ಯಂ" ಇತಿ ಶ್ರುತೇಃ । ಮೂಲಪ್ರ-ಕೃತಿರ್ಜಗತಃ ಪರಿಣಾಮ್ಯುಪಾದಾನತ್ವೇನ ಸೈವ ಹಿರಣ್ಯರೂಪೇಣ ಪರಿಣತೇತಿ ಭಾವಃ ॥

ಹಿರಣ್ಯರೇತಸಃ ಶಂಭೋಃ ಶಕ್ತಿಃ ಪ್ರೋಕ್ತಾ ಹಿರಣ್ಮಯೀ ।
ಧನಾರ್ಥಿಭಿರುಪಾಸ್ಯೈಷಾ ಜಾತವೇದಸಿ ಸರ್ವದಾ ॥

ಇತಿ ಕಾಲಿಕಾಪುರಾಣವಚನಾತ್ । ಪ್ರಾಚುರ್ಯಾರ್ಥೇ ಮಯಟ್ । ಹಿರಣ್ಮಯೀಂ ಹಿರಣ್ಯಪ್ರಚುರಾಂ । ಪ್ರಾಚುರ್ಯಂ ಚ ಸ್ವಸಮಾನಾಧಿಕರಣಸ್ವಜಾತೀಯಾಲ್ಪತ್ವರೂಪಂ ಸ್ವವ್ಯಧಿಕರಣವಿಜಾತೀಯಾಲ್ಪತ್ವ-ರೂಪಂ ವಾ । ತೇನ ಚ ಧನಾಧಿಕಾಂ ಭಾಗ್ಯಸಮೃದ್ಧಾಂ ವಿತ್ತಪೂರ್ಣಾಮಿತಿ ಭಾವಃ । ಲಕ್ಷ್ಮೀಂ ಶೋಭಾಸಂಪತ್ತಿಪದ್ಮಾರೂಪಾಂ । "ಶೋಭಾ ಸಂಪತ್ತಿಪದ್ಮಾಸು ಲಕ್ಷ್ಮೀಃ ಶ್ರೀರಪಿ ಕಥ್ಯತೇ'' ಇತಿ ಕೋಶಾತ್ । ಯದ್ವಾ ಲಕ್ಷಣವತೀಂ—

ಲಲಿತಾ ಶಾರದಾ ಲಕ್ಷ್ಮೀರೇಕೈವ ಭಗವತ್ಯುಮಾ ।
ತತ್ತಲ್ಲಕ್ಷಣಸಂಯುಕ್ತಾ ಪುರುಷಾರ್ಥಪ್ರದಾ ನೃಣಾಂ ॥

ಇತಿ ದೇವೀಪುರಾಣೋಕ್ತೇಃ । ತಾದೃಶೀಂ ಶ್ರಿಯಂ ಮೇ ಮಹ್ಯಮಾವಹ ಆಕಾರಯೇತಿ ಜಾತವೇದ-ಸಮಗ್ನಿಂ ಪ್ರಾರ್ಥಯೇತ್ ॥

## ಅನುವಾದವು

**ಹಿರಣ್ಯವರ್ಣಾಂ** ಎಂಬ ಈ ಸೂಕ್ತದಿಂದ ಅಗ್ನಿಯನ್ನು ಪ್ರಾರ್ಥಿಸಬೇಕು. ಅಗ್ನಿಯು ಯಜಮಾನನ ಸ್ತುತಿಯಿಂದ ಸಂತುಷ್ಟನಾಗಿ ಅವನಿಗೆ ಐಶ್ವರ್ಯವನ್ನು ಕೊಡುವನು. ಈ ಅಗ್ನಿಯು ಯಾರೆಂದರೆ ರುದ್ರನೇ ಆಗಿರುವನು. **ರುದ್ರೋ ವಾ ಏಷೋಽಗ್ನಿಃ** ಎಂದು ಶ್ರುತಿವಾಕ್ಯವಿರುವುದು. ಮತ್ತು **ರುದ್ರೋ ಹಿ ಪುರುಷಃ । ಪುರುಷೋ ವೈ ರುದ್ರಃ** ಎಂದು ಮುಂತಾದ ಅನೇಕ ಶ್ರುತಿವಾಕ್ಯಗಳು, ಪುರುಷನೇ ರುದ್ರನು ಎಂಬ ವಿಷಯವನ್ನು ಸಮರ್ಥಿಸುವವು. ಆ ರುದ್ರನ ಪತ್ನಿಯಾದ ಉಮಾದೇವಿಯೇ ಲಕ್ಷ್ಮಿಯು. **ಹ್ರೀಶ್ಚ (ಶ್ರೀಶ್ಚ) ತೇ ಲಕ್ಷ್ಮೀಶ್ಚ ಪತ್ನ್ಯೌ**— ಶ್ರೀದೇವಿಯೂ, ಲಕ್ಷ್ಮಿಯೂ ನಿನ್ನ ಪತ್ನಿಯರು ಎಂದು ಪುರುಷಸೂಕ್ತದಲ್ಲಿ (ಯಜುರ್ವೇದ) ಹೇಳಿದೆ. ಇಲ್ಲಿ ಪುರುಷನೆಂದರೆ ಮಹಾದೇವನು, ಶಿವನು. **ವೇದಾಹಮೇತಂ ಪುರುಷಂ ಮಹಾಂತಂ** ಎಂಬ ಶ್ರುತಿವಾಕ್ಯವೂ ಇದನ್ನು ಸಮರ್ಥಿಸುವುದು. ಮತ್ತು ಅಗ್ನಿಸ್ವರೂಪಿಯಾದ ಪರಮೇಶ್ವರನ ಉಪಾಸನೆಯಿಂದ ಆ ಈಶ್ವರನ ಶಕ್ತಿವಿಶೇಷವಾದ ಮಹಾಲಕ್ಷ್ಮಿಯು ಅನುಗ್ರಹವುಂಟಾಗುವುದೆಂಬುದು ಪ್ರಸಿದ್ಧವು. **ಧನಾರ್ಥಿಭಿರುಗ್ನಿರುಪಾಸ್ಯ ಐಶ್ವರ್ಯಾರ್ಥಿಭಿರೀ-ಶ್ವರಃ**— ಧನವನ್ನಪೇಕ್ಷಿಸುವವರು ಅಗ್ನಿಯನ್ನೂ, ಐಶ್ವರ್ಯವನ್ನಪೇಕ್ಷಿಸುವವರು ಈಶ್ವರನನ್ನು ಉಪಾಸನೆಮಾಡಬೇಕೆಂದು ಸ್ಮೃತಿವಾಕ್ಯವೂ ಇರುವುದು.

ಮತ್ತು—

**ಆರೋಗ್ಯಂ ಭಾಸ್ಕರಾದಿಚ್ಛೇಚ್ಛ್ರಿಯಮಿಚ್ಛೇದ್ಧುತಾಶನಾತ್ ।**
**ಐಶ್ವರ್ಯಮೀಶ್ವರಾದಿಚ್ಛೇನ್ಮೋಕ್ಷಮಿಚ್ಛೇಜ್ಜನಾರ್ದನಾತ್ ॥**

ವಿವೇಕಿಯಾದ ಪುರುಷನು ಸೂರ್ಯನ ಅನುಗ್ರಹದಿಂದ ಆರೋಗ್ಯಲಾಭವನ್ನೂ ಅಗ್ನಿಯ ಅನುಗ್ರಹದಿಂದ ಸಂಪತ್ತನ್ನೂ (ಧನವನ್ನೂ) ಈಶ್ವರನ ಅನುಗ್ರಹದಿಂದ ಐಶ್ವರ್ಯವನ್ನೂ, ವಿಷ್ಣುವಿನ ಅನುಗ್ರಹದಿಂದ ಮೋಕ್ಷವೆಂಬ ಪುರುಷಾರ್ಥವನ್ನೂ ಬಯಸುವನು ಎಂದು ಆರ್ಯೋಕ್ತಿಯೂ ಇರುವುದು.

ಈ ಶ್ರೀಸೂಕ್ತದಲ್ಲಿ ಹದಿನೈದು ಋಕ್ಕುಗಳಿರುವವು. ಅವುಗಳಲ್ಲಿ **ಹಿರಣ್ಯವರ್ಣಾಂ** ಎಂಬುದು ಮೊದಲನೆಯ ಋಕ್ಕು. ಇದರ ಅರ್ಥವು ಈ ಪ್ರಕಾರವಿರುವುದು—**ಹಿರಣ್ಯವರ್ಣಾಂ** ಎಂದರೆ ಸುವರ್ಣದಂತೆ ಥಳಥಳಿಸುವ ಶರೀರ ಕಾಂತಿಯುಳ್ಳವಳು ಎಂದರ್ಥವು. ಅಗಸ್ತ್ಯಪ್ರಣೀತವಾದ ಶ್ರೀಸ್ತುತಿಯಲ್ಲಿ—

**ಜ್ಞಾನಮಾತ್ಮನಿ ಭಾ ಸೂರ್ಯೇ ಚಂದ್ರೇ ಜ್ಯೋತ್ಸ್ನಾ ಚ ಖೇ ಧ್ವನಿಃ ।**
**ವರ್ಣೋ ಹಿರಣ್ಯೇ ಪಯಸಿ ಘೃತಂ ತ್ವಮಸಿ ಮಾತೃಕೇ ॥**

ಎಂದು ಹೇಳಿದೆ. ಎಂದರೆ ಕೆಲವು ಗುಣಗಳು ಕೆಲವು ವಸ್ತುಗಳಲ್ಲಿ ಸಾರಭೂತವಾಗಿಯೂ ಸ್ವಭಾವಸಿದ್ಧವಾಗಿಯೂ ನೆಲೆಸಿರುವವು. ಹೇಗೆಂದರೆ—ಆತ್ಮನಲ್ಲಿ ಜ್ಞಾನ, ಸೂರ್ಯನಲ್ಲಿ ಪ್ರಕಾಶ, ಚಂದ್ರನಲ್ಲಿ ಬೆಳದಿಂಗಳು, ಆಕಾಶದಲ್ಲಿ ಶಬ್ದವು, ಚಿನ್ನದಲ್ಲಿ ಶ್ರೇಷ್ಠವಾದ ಬಣ್ಣವು, ಹಾಲಿನಲ್ಲಿ ಘೃತವು (ತುಪ್ಪ) ಯಾವರೀತಿ ಶ್ರೇಷ್ಠಗುಣಗಳಾಗಿರುವವೋ ಅದರಂತೆ ಎಲೈ ಮಾತೆಯೇ ನೀನು ದೇವತೆಗಳಲ್ಲಿ ಶ್ರೇಷ್ಠಳು ಎಂಬಭಿಪ್ರಾಯವು ಇಲ್ಲಿ ಸೂಚಿತವಾಗಿದೆ. ಆದುದರಿಂದ ಹಿರಣ್ಯದ (ಸುವರ್ಣದ) ಬಣ್ಣವು ಅತಿಶ್ರೇಷ್ಠವೆಂದು ಹೇಳಿರುವುದಕ್ಕಾಗಿಯೇ ಈ ಶ್ಲೋಕವನ್ನು ಉದಾಹರಿಸಿದಾರೆ. ಜೈಮಿನಿಋಷಿಯೂ ಕೂಡ ಗೌರಿಯನ್ನು ಸ್ತುತಿಸುವಾಗ **ಹಿರಣ್ಯವರ್ಣಾಂ** ಎಂಬ ವಿಶೇಷಣವನ್ನೇ ಉಪಯೋಗಿಸಿರುವರು.—

**ಹಿರಣ್ಯವರ್ಣಾಂ ಮಣಿನೂಪುರಾಂಘ್ರಿಂ ಪ್ರಸನ್ನವಕ್ತ್ರಾಂ ಶುಕಪದ್ಮಹಸ್ತಾಂ ।**
**ವಿಶಾಲನೇತ್ರೀಂ ಪ್ರಣಮಾಮಿ ಗೌರೀಂ ವಚೋವಿದಂ ವಾಚಮುದೀರಯಂತೀಂ ॥**

ಎಂಬ ಈ ಶ್ಲೋಕದಲ್ಲಿ **ಹಿರಣ್ಯವರ್ಣಾಂ** ಎಂಬ ಪದಕ್ಕೆ **ಹಿರಣ್ಯವರ್ಣಸದೃಗ್ವರ್ಣಾಂ ವಾ ತಪ್ತಸ್ವರ್ಣಸವರ್ಣಾಭಾಮಿತಿ ಶ್ರೀಪುರಾಣಾಚ್ಚ ।** ಪುಟವಿಕ್ಕಿದ ಚಿನ್ನವು ಯಾವರೀತಿ ಪ್ರಕಾಶಿಸುವುದೋ ಅಂತಹ ಪ್ರಕಾಶಯುಕ್ತವಾದ ಶರೀರಕಾಂತಿಯುಳ್ಳವಳು ಎಂದರ್ಥವು.

**ಹರಿಣೀಂ**—ಹರಿಣೀರೂಪಾಂ । ಹೆಣ್ಣುಜಿಂಕೆಯ ರೂಪವನ್ನು ಧರಿಸಿರುವವಳು, ಈ ವಿಷಯದಲ್ಲಿ—

**ಯಜ್ಞೋಽಗ್ನಿರ್ಮೃಗರೂಪೇಣ ಧಾವತಿ ಸ್ಮ ಪುರಾಧ್ವರೇ ।**
**ರುದ್ರಸ್ತಾಂ ಸ್ವಸ್ಯ ತಚ್ಛಕ್ತಿಂ ಮೃಗೀಂ ಜಗ್ರಾಹ ವೈಷ್ಣವೀಂ ॥**

ಎಂದು ದಕ್ಷಾಧ್ವರವೆಂಬ ಗ್ರಂಥದಲ್ಲಿ ಹೇಳಿದೆ. ಎಂದರೆ ಒಂದು ಸಮಯದಲ್ಲಿ ಯಜ್ಞಸ್ವರೂಪನಾದ ಅಗ್ನಿಯು ಮೃಗರೂಪವನ್ನು ಧರಿಸಿ ಓಡಿಹೋಗುತ್ತಿದ್ದನು. ರುದ್ರನು ಅದನ್ನು ಕಂಡು ತನ್ನ ಶಕ್ತಿಯನ್ನು ಉಪಯೋಗಿಸಿ ಯಜ್ಞರೂಪದಿಂದಿರುವ (ಯಜ್ಞೋ ವೈ ವಿಷ್ಣುಃ ಎಂದಿರುವುದರಿಂದ ವೈಷ್ಣವೀಂ ಎಂಬ ಶಬ್ದಕ್ಕೆ ಯಜ್ಞರೂಪಿಯಾದ ಎಂದರ್ಥವು) ಆ ಹೆಣ್ಣುಜಿಂಕೆಯನ್ನು ಹಿಡಿದುಕೊಂಡನು ಎಂದಭಿಪ್ರಾಯವು. ಆದುದರಿಂದ ಇಲ್ಲಿ ಶ್ರೀದೇವತೆಯನ್ನು ಹರಿಣೀರೂಪಧರಿಸಿರುವವಳೆಂದು ಸ್ತುತಿಸಲಾಗಿದೆ ಇದಲ್ಲದೆ—

**ಹರಿಣೀಂ ಪೂಜಯೇದ್ದುರ್ಗಾಂ ಹರಿದ್ರಾಚೂರ್ಣನಿರ್ಮಿತಾಂ ।**

ಎಂದು ಹರಿದ್ರಾ ಗೌರೀವ್ರತಕಲ್ಪದಲ್ಲಿ ಹೇಳಿರುವಂತೆ ಹರಿದ್ರಾಚೂರ್ಣ (ಅರಿಶಿನ) ದಿಂದ ಲಿಪ್ತವಾದ ಅಥವಾ ನಿರ್ಮಿತವಾದ ಶರೀರವುಳ್ಳವಳು ಆದ್ದರಿಂದ ಗೌರವರ್ಣವುಳ್ಳವಳು ಎಂದೂ ಅರ್ಥಮಾಡಬಹುದು.

**ಸುವರ್ಣರಜತಸ್ರಜಾಂ**—ಸುವರ್ಣ, ಬೆಳ್ಳಿ ಮುಂತಾದ ವಸ್ತುಗಳಿಂದ ರಚಿತವಾದ ಹಾರವನ್ನು ಧರಿಸಿರುವವಳು.

**ಚಂದ್ರಾಂ—ಚದಿ ಆಹ್ಲಾದನೇ ದೀಪ್ತೌ ಚ ।** ಆಹ್ಲಾದಕರವಾದ ಕಾಂತಿಯಿಂದ ಬೆಳಗುತ್ತಿರುವವಳು ಅಥವಾ ಜ್ಞಾನಾನಂತಸ್ವರೂಪಿಣಿಯಾದವಳು ಎಂದೂ ಹೇಳಬಹುದು. ಮತ್ತು ಚಂದ್ರನಲ್ಲಿ ಇರುವ ಪ್ರಕಾಶಕ್ಕೆ **ಚಾಂದ್ರೀ ಚಂದ್ರಿಕಾ ಚಂದ್ರಾ** ಎಂಬ ಹೆಸರುಗಳಿರುವವು.

**ಪೌರ್ಣಮಾಸ್ಯಾಂ ಚಂದ್ರಬಿಂಬೇ ಧ್ಯಾತ್ವಾ ಶ್ರೀ ಲಲಿತಾಂಬಿಕಾಂ ।**

ಎಂಬ ಉಕ್ತಿಯಂತೆ ಪೌರ್ಣಮಿಯಲ್ಲಿ ಬೆಳಗುತ್ತಿರುವ ಪೂರ್ಣ ಚಂದ್ರಬಿಂಬದಲ್ಲಿ ಶ್ರೀ ಲಲಿತಾದೇವಿಯನ್ನು ಧ್ಯಾನ ಮಾಡಬೇಕು ಎಂದು ಹೇಳಿರುವುದರಿಂದ ಚಂದ್ರಾಂ ಎಂಬ ವಿಶೇಷಣವು ಇಲ್ಲಿ ಪ್ರಯುಕ್ತವಾಗಿದೆ.

**ಹಿರಣ್ಮಯೀಂ**—ಸುವರ್ಣಮಯವಾದ ಶರೀರವುಳ್ಳವಳು । **ತತ್ಸುವರ್ಣಗ್ಂ ಹಿರಣ್ಯಮಭವತ್ । ತತ್ಸುವರ್ಣಸ್ಯ ಹಿರಣ್ಯಸ್ಯ ಜನ್ಮ । ಯ ಏವಗ್ಂ ಸುವರ್ಣಸ್ಯ ಜನ್ಮವೇದ । ಸುವರ್ಣ ಆತ್ಮನಾ ಭವತಿ ।** ಮತ್ತು **ಪವಿತ್ರಂ ವೈ ಹಿರಣ್ಯಂ** ಇತ್ಯಾದಿ ಶ್ರುತಿವಾಕ್ಯಗಳು ಹಿರಣ್ಯ ಅಥವಾ ಸುವರ್ಣದ ಶ್ರೇಷ್ಠತೆಯನ್ನು ಪ್ರತಿಪಾದಿಸುವವು.

**ಹಿರಣ್ಯರೇತಸಃ ಶಂಭೋಃ ಶಕ್ತಿಃ ಪ್ರೋಕ್ತಾ ಹಿರಣ್ಮಯೀ ।**
**ಧನಾರ್ಥಿಭಿರುಪಾಸ್ಯೈಷಾ ಜಾತವೇದಸಿ ಸರ್ವದಾ ॥**

ಎಂದು ಕಾಲಿಕಾಪುರಾಣವಚನವಿರುವುದು. ಎಂದರೆ ಮಹಾಮಹಿಮನಾದ ಈಶ್ವರನ ಹಿರಣ್ಯರೂಪವಾದ ರೇತಸ್ಸಿನ ಶಕ್ತಿಗೆ ಹಿರಣ್ಮಯೀ ಎಂಬ ಹೆಸರಿರುವುದು. ಈ ದೇವತೆಯು ಯಾವಾಗಲೂ ಅಗ್ನಿಯಲ್ಲಿ ನೆಲಸಿರುವಳು. ಧನವನ್ನಪೇಕ್ಷಿಸುವವರು ಈ ದೇವಿಯನ್ನು ಉಪಾಸನೆಮಾಡಬೇಕು ಎಂದು ಹೇಳಿರುವುದು.

**ಲಕ್ಷ್ಮೀಂ**—ಶೋಭಾ, ಸಂಪತ್ತು, ಪದ್ಮ, ಇವುಗಳ ರೂಪದಲ್ಲಿರುವ ಶ್ರೀ ದೇವಿಯು ಎಂದಭಿಪ್ರಾಯವು. ಈ ವಿಷಯದಲ್ಲಿ

**ಶೋಭಾಸಂಪತ್ತಿಪದ್ಮಾಸು ಲಕ್ಷ್ಮೀಃ ಶ್ರೀರಪಿ ಕಥ್ಯತೇ ।**

ಎಂದು ಕೋಶವಾಕ್ಯವಿರುವುದು. ಲಕ್ಷ್ಮೀಃ ಎಂಬ ಶಬ್ದಕ್ಕೆ ಶೋಭಾ—ಪ್ರಕಾಶ, ಸಂಪತ್ತಿ—ಐಶ್ವರ್ಯ, ಪದ್ಮ-ಕಮಲ ಈ ವಸ್ತುಗಳನ್ನು ಲಕ್ಷ್ಮೀಸ್ವರೂಪವೆಂದು ವರ್ಣಿಸುವುದು ರೂಢಿಯಾಗಿದೆ. ಇದಲ್ಲದೆ—

**ಲಲಿತಾ ಶಾರದಾ ಲಕ್ಷ್ಮೀರೇಕೈವ ಭಗವತ್ಯುಮಾ ।**
**ತತ್ತಲ್ಲಕ್ಷಣಸಂಯುಕ್ತಾ ಪುರುಷಾರ್ಥಪ್ರದಾ ನೃಣಾಂ ॥**

ಎಂದು ದೇವೀಪುರಾಣವಚನವಿರುವುದು. ಎಂದರೆ ಲಲಿತಾ, ಶಾರದಾ, ಲಕ್ಷ್ಮೀಃ ಭಗವತೀ, ಉಮಾ ಎಂಬ ಹೆಸರುಗಳು ಬೇರೆಬೇರೆಯಾಗಿ ತೋರುವುದಾದರೂ ಇವೆಲ್ಲವೂ ಒಂದೇ ದೇವತೆಯನ್ನು ನಿರ್ದೇಶಿಸುವುದು. ಆ ದೇವತೆಯು ಹೆಸರಿಗೆ ತಕ್ಕಂತೆ ಆಯಾಯ ಲಕ್ಷಣಗಳಿಂದ ಕೂಡಿ ತನ್ನನ್ನು ಭಜಿಸುವ ಭಕ್ತರಿಗೆ ಅವರು ಅಪೇಕ್ಷಿಸುವ ಪುರುಷಾರ್ಥಗಳನ್ನು ಅನುಗ್ರಹಿಸುವಳು ಎಂದಿದೆ. ಆದುದರಿಂದ ಲಕ್ಷ್ಮೀಶಬ್ದಕ್ಕೆ ಆಯಾ ಲಕ್ಷಣಯುಕ್ತಳಾದವಳು ಎಂದರ್ಥವು ವಿವೃತವಾಗಿದೆ. ಇಂತಹ ಗುಣವಿಶಿಷ್ಟಳಾದ ಶ್ರೀದೇವತೆಯನ್ನು ನನ್ನ ಅಭೀಷ್ಟಸಿದ್ಧಿಗಾಗಿ ನನ್ನ ಸಮೀಪಕ್ಕೆ ಕರೆತರಬೇಕೆಂದು ಅಗ್ನಿಯನ್ನು ಪ್ರಾರ್ಥಿಸಲಾಗಿದೆ.

ಶತಾನಂದವೃತ್ತಿ ಎಂಬ ಗ್ರಂಥದಲ್ಲಿ ಈ ರೀತಿ ಹೇಳಿರುವುದು—

|| ಶತಾನಂದವೃತ್ತಿಃ ||

ಓಂ ಹಿರಣ್ಯವರ್ಣೇತ್ಯಸ್ಯ ಪಂಚದಶರ್ಚಸ್ಯ ಸೂಕ್ತಸ್ಯ । ಜಾತವೇದಾ ಅಗ್ನಿರ್ದುರ್ಗಾಮಹಾಲಕ್ಷ್ಮೀರ್ದೇವತಾ । ಶ್ರೀಂ ಬೀಜಂ । ಹ್ರೀಂ ಶಕ್ತಿಃ । ಕ್ಲೀಂ ಕೀಲಕಂ । ಲಕ್ಷ್ಮೀಪ್ರಸಾದಸಿಧ್ಯರ್ಥೇ ಜಪೇ ವಿನಿಯೋಗಃ । ಶ್ರೀಮಿತ್ಯಾದಿಷಡಂಗನ್ಯಾಸಃ । ಧ್ಯಾನಂ ॥

ಯಾ ಸಾ ಪದ್ಮಾಸನಸ್ಥಾ ವಿಪುಲಕಟಿತಟೀಪದ್ಮಪತ್ರಾಯತಾಕ್ಷೀ
ಗಂಭೀರಾವರ್ತನಾಭಿಸ್ತನಭರನಮಿತಾ ಶುಭ್ರವಸ್ತ್ರೋತ್ತರೀಯಾ ।
ಲಕ್ಷ್ಮೀರ್ದಿವ್ಯೈರ್ಗಜೇಂದ್ರೈರ್ಮಣಿಗಣಖಚಿತೈಃ ಸ್ನಾಪಿತಾ ಹೇಮಕುಂಭೈ-
ರ್ನಿತ್ಯಂ ಸಾ ಪದ್ಮಹಸ್ತಾ ಮಮ ವಸತುಗೃಹೇ ಸರ್ವಮಾಂಗಲ್ಯಯುಕ್ತಾ ॥
ಹಿರಣ್ಯವರ್ಣಾಮಿತಿ ಋಕ್ ಪ್ರಾಥಮಿಕೀ ।
ಹಿರಣ್ಯಂ ವಿಷ್ಣುರಾಖ್ಯಾತಸ್ತಸ್ಯ ವರ್ಣಸ್ತು ವೈಷ್ಣವೀ ।
ಲಕ್ಷ್ಮೀರ್ಹಿರಣ್ಯವರ್ಣೇತಿ ಶ್ರೂಯತೇ ಕನಕಪ್ರಭಾ ॥

ಇತಿ ಶ್ರೀಪುರಾಣಾತ್ ॥ ಹರಿಣೀಂ—

ಹರಿಣೀಂ ತು ಹರೇಃ ಪತ್ನೀಂ ದಾರಿದ್ರ್ಯಪರಿಹಾರಿಣೀಂ ।
ಪ್ರಪದ್ಯೇಽಹಂ ಹರಿದ್ರಾಭಾಂ ಹರಿಣಾಕ್ಷೀಂ ಹಿರಣ್ಮಯೀಂ ॥ ಇತಿ ಆಥರ್ವಣಿಕಸ್ಮೃತೇಃ ॥

ಸುವರ್ಣರಜತಸ್ರಜಾಂ—

ಪಿಶಂಗಧವಳಾಭಿಶ್ಚ ಸ್ರಗ್ಭಿರಮ್ಲಾನಮೂರ್ತಿಭಿಃ ।
ಸೌವರ್ಣೈಃ ಕಮಲೈರ್ನಿತ್ಯಂ ರಾಜತೈಃ ಶ್ರೀರ್ವಿಭೂಷಿತಾ ॥

ಇತಿ ಮಹಾಲಕ್ಷ್ಮೀಕೋಶೇ । ಚಂದ್ರಾಂ ಚಂದ್ರವತ್ ಪ್ರಕಾಶಮಾನಾಂ—"ಚಂದ್ರಾಂ ಚಂದ್ರನಿಭಾಸ್ಯಾಂ ಚಪಲಾಂ ಚಂದ್ರಸ್ಯ ಸೋದರೀಂ ಕಲಯೇ" । ಇತಿ ಸುಧೋದ್ಧರಣೇ ॥ ಹಿರಣ್ಮಯೀಂ ಹಿರಣ್ಯರೂಪೇಣಾಭಿವ್ಯಕ್ತಾಂ । ಹಿಂಕಾರೋ ವಜ್ರಃ ರಮಗ್ನಿಃ ತನ್ಮಯೀಂ ತತ್ಕಾಂತಿಪ್ರಚುರಾಂ । ದಂಭೋಲ್ಯಾತ್ಮಕ ದಿವ್ಯತೇಜಃಪುಂಜಮಂಜುಲಾಂ ರಿಪುನಿಗ್ರಾಹಿಕಾಂ ಪಾಪಘ್ನೀಮಿತಿ ವಾ । ಲಕ್ಷ್ಮೀಂ ಲಕ್ಷ್ಮವತೀಂ—

ಜ್ಞಾನೈಶ್ವರ್ಯಸುಖಾರೋಗ್ಯಧನಧಾನ್ಯ ಜಯಾದಿಕಂ ।
ಲಕ್ಷ್ಮ್ಯ ಯಸ್ಯಾಸ್ಸಮುದ್ದಿಷ್ಟಂ ಸಾ ಲಕ್ಷ್ಮೀತಿ ನಿಗದ್ಯತೇ ॥

ಇತಿ ನಿರುಕ್ತಸಾರೋಕ್ತೇಃ ।

**ಹೇ ಜಾತವೇದಃ ಶಾಸ್ತ್ರಯೋನೇ ಭೋ ಭಗವನ್ ತ್ವದೀಯಾಂ ಲಕ್ಷ್ಮೀಂ ಮೇ ಮಹ್ಯಂ ಆವಹ ಆಕರ್ಷಯೇತಿ ಯಜ್ಞಪುರುಷಂ ಪ್ರಾರ್ಥಯೇತ್ । "ತೇನ ನಾರಾಯಣಃ ಪ್ರೀತೋ ಲಕ್ಷ್ಮೀಂ ಭಕ್ತಾಯ ದಾಸ್ಯತೀತಿ ತತ್ರೈವೋಕ್ತೇಃ ॥**

## ಅನುವಾದವು

**ಹಿರಣ್ಯವರ್ಣಾಂ** ಎಂದು ಪ್ರಾರಂಭವಾಗುವ ಈ ಶ್ರೀಸೂಕ್ತಕ್ಕೆ ಹಿಂದೆ ಹೇಳಿದ ಆನಂದಕರ್ದಮ ಮೊದಲಾದವರು ಋಷಿಗಳು; ಜಾತವೇದಾ ಅಗ್ನಿ, ದುರ್ಗಾ, ಮಹಾಲಕ್ಷ್ಮೀ ಎಂಬುವರು ದೇವತೆಗಳು, ಶ್ರೀಂ ಎಂಬುದು ಬೀಜವು, ಹ್ರೀಂ ಎಂಬುದು ಶಕ್ತಿಯು; ಕ್ಲೀಂ ಎಂಬುದು ಕೀಲಕವು. ಶ್ರೀಲಕ್ಷ್ಮೀಪ್ರಸಾದಸಿದ್ಧಿಗಾಗಿ ಈ ಸೂಕ್ತದ ಜಪವನ್ನು ಮಾಡಬೇಕು. ಅಂಗನ್ಯಾಸಾದಿಗಳನ್ನು ಹಿಂದೆಯೇ ಹೇಳಲಾಗಿದೆ. ಧ್ಯಾನಕ್ಕಾಗಿ ಈ ಶ್ಲೋಕವನ್ನು ಪಠಿಸಬೇಕು.

**ಯಾ ಸಾ ಪದ್ಮಾಸನಸ್ಥಾ ವಿಪುಲಕಟಿತಟೀ ಪದ್ಮಪತ್ರಾಯತಾಕ್ಷೀ**
**ಗಂಭೀರಾವರ್ತನಾಭಿಸ್ತನಭರನಮಿತಾ ಶುಭ್ರವಸ್ತ್ರೋತ್ತರೀಯಾ ।**
**ಲಕ್ಷ್ಮೀರ್ದಿವ್ಯೈರ್ಗಜೇಂದ್ರೈರ್ಮಣಿಗಣಖಚಿತೈಃ ಸ್ನಾಪಿತಾ ಹೇಮಕುಂಭೈ-**
**ರ್ನಿತ್ಯಂ ಸಾ ಪದ್ಮಹಸ್ತಾ ಮಮ ವಸತು ಗೃಹೇ ಸರ್ವಮಾಂಗಲ್ಯಯುಕ್ತಾ ।**

ಲಕ್ಷ್ಮೀ ಎಂಬ ನಾಮಾಂಕಿತೆಯಾದ ಶ್ರೀ ದೇವಿಯು ಪದ್ಮಾಸನದಲ್ಲಿ ಮಂಡಿಸಿರುವಳು. ಈ ದೇವಿಯು ವಿಸ್ತಾರವಾದ ಕಟಿಪಶ್ಚಾದ್ಭಾಗದಿಂದಲೂ, ಪದ್ಮಪತ್ರದಂತೆ ವಿಶಾಲವಾದ ನೇತ್ರಗಳಿಂದಲೂ, ಆಳವಾದ ನಾಭಿಪ್ರದೇಶದಿಂದಲೂ, ಪ್ರಕಾಶಿಸುತ್ತಿರುವಳು. ಸ್ತನಗಳ ಭಾರದಿಂದ ಬಗ್ಗಿದಂತಿರುವ ಶರೀರವುಳ್ಳವಳಾಗಿ ಶುಭ್ರವಾದ ವಸ್ತ್ರವನ್ನು ಧರಿಸಿರುವಳು ನಾನಾರತ್ನಖಚಿತವಾದುದೂ ಗಜಶ್ರೇಷ್ಠಗಳಿಂದ ಕಂಗೊಳಿಸುತ್ತಿರುವುದೂ ಆದ ಸುವರ್ಣಕಲಶೋದಗಳಿಂದ ಅಭಿಷಿಕ್ತಳಾಗಿ ಕೈಗಳಲ್ಲಿ ಪದ್ಮಪುಷ್ಪವನ್ನು ಧರಿಸಿ ಮಂಗಳಕರವಾದ ಸಮಸ್ತ ಆಭರಣಾದಿಗಳಿಂದ ವಿರಾಜಿಸುತ್ತಾ ಇರುವ ಈ ಶ್ರೀ ದೇವಿಯು ಸರ್ವಸೌಭಾಗ್ಯಪ್ರದಳಾಗಿ ಯಾವಾಗಲೂ ತನ್ನ ಮನೆಯಲ್ಲಿ ವಾಸಮಾಡುತ್ತಿರಲಿ ಎಂದು ಮುಖ್ಯಾಭಿಪ್ರಾಯವು.

**ಹಿರಣ್ಯವರ್ಣಾಂ** ಎಂದು ಪ್ರಾರಂಭವಾಗುವ ಈ ಮಂತ್ರವು ಈ ಸೂಕ್ತದ ಮೊದಲನೆಯ ಋಕ್ಕು. **ಹಿರಣ್ಯಂ ವಿಷ್ಣುರಾಖ್ಯಾತಸ್ತಸ್ಯ ವರ್ಣಸ್ತು ವೈಷ್ಣವೀಂ** ಎಂಬ ಶ್ಲೋಕಾನುಸಾರವಾಗಿ ಹಿರಣ್ಯ ಎಂದರೆ ವಿಷ್ಣುವು. ವರ್ಣವೆಂದರೆ ಆವನ ಪತ್ನಿಯು. ಆದುದರಿಂದ ಹಿರಣ್ಯವರ್ಣಾಂ ಎಂಬ ಶಬ್ದಕ್ಕೆ ವಿಷ್ಣುಪತ್ನಿಯೆಂದು ಅರ್ಥವು.

**ಲಕ್ಷ್ಮೀರ್ಹಿರಣ್ಯವರ್ಣೇತಿ ಶ್ರೂಯತೇ ಕನಕಪ್ರಭಾ ।**

ಎಂಬ ಶ್ರೀ ಪುರಾಣವಚನಾನುಸಾರವಾಗಿ ಲಕ್ಷ್ಮಿಯು ಹಿರಣ್ಯವರ್ಣಾ—ಎಂದರೆ ಚಿನ್ನದ ಕಾಂತಿಯಂತಿರುವ ಶರೀರವುಳ್ಳವಳು ಎಂದಭಿಪ್ರಾಯವು.

**ಹರಿಣೀಂ ತು ಹರೇಃ ಪತ್ನೀಂ ದಾರಿದ್ರ್ಯಪರಿಹಾರಿಣೀಂ ।**
**ಪ್ರಪದ್ಯೇಽಹಂ ಹರಿದ್ರಾಭಾಂ ಹರಿಣಾಕ್ಷೀಂ ಹಿರಣ್ಮಯೀಂ ॥**

ಎಂದು ಆಥರ್ವಣಿಕಸ್ತುತಿಯಲ್ಲಿ ಹೇಳಲಾಗಿದೆ ಈ ಶ್ಲೋಕವು **ಹರಿಣೀಂ** ಎಂಬ ಶಬ್ದದ ಅರ್ಥವನ್ನು ವಿವರಿಸುವುದು. **ಹರಿಣೀ** ಎಂದರೆ ಹರಿಯ ಪತ್ನಿಯು ಈ ದೇವತೆಯು ದಾರಿದ್ರ್ಯವನ್ನು ಪರಿಹಾರಮಾಡುವಳು. ಚಿನ್ನದ ಬಣ್ಣವಾದ ಹಳದೀ (ಗೌರ) ವರ್ಣದ ಶರೀರಕಾಂತಿಯಿಂದಲೂ, ಹೆಣ್ಣು ಜಿಂಕೆಯ ಕಣ್ಣುಗಳಂತೆ ಇರುವ ವಿಶಾಲನೇತ್ರಗಳಿಂದಲೂ, ಸುವರ್ಣಮಯವಾದ ಶರೀರದಿಂದಲೂ ಬೆಳಗುತ್ತಿರುವಳು ಎಂದು ಮುಖ್ಯಾರ್ಥವು.

**ಸುವರ್ಣರಜತಸ್ರಜಾಂ**—ಮಹಾಲಕ್ಷ್ಮೀಕೋಶವೆಂಬ ಗ್ರಂಥದಲ್ಲಿ ಈ ರೀತಿ ಹೇಳಿರುವುದು—

**ಪಿಶಂಗಧವಲಾಭಿಶ್ಚ ಸ್ರಗ್ಭಿರಮ್ಲಾನಮೂರ್ತಿಭಿಃ ।**
**ಸೌವರ್ಣೈಃ ಕಮಲೈರ್ನಿತ್ಯಂ ರಾಜತ್ಯೈಶ್ರೀರ್ವಿಭೂಷಿತಾ ॥**

ಎಂದರೆ ಹಳದಿಯವರ್ಣದ ಮತ್ತು ಬಿಳುಪಾಗಿರುವ, ಯಾವಾಗಲೂ ಬಾಡದಿರುವ ಪುಷ್ಪಗಳಿಂದಲೂ, ಸುವರ್ಣ (ಚಿನ್ನ) ಬೆಳ್ಳಿಗಳಿಂದ ನಿರ್ಮಿತವಾದ ಕಮಲಪುಷ್ಪಗಳಿಂದ ಕಟ್ಟಿದ ಹಾರಗಳಿಂದ ಈ ಶ್ರೀದೇವತೆಯು ಅಲಂಕೃತಳಾಗಿ ಶೋಭಿಸುತ್ತಿರುವಳು

**ಚಂದ್ರಾಂ**—ಸುಧೋದ್ಧರಣವೆಂಬ ಗ್ರಂಥದಲ್ಲಿ—

**ಚಂದ್ರಾಂ ಚಂದ್ರನಿಭಾಸ್ಯಾಂ ಚಪಲಾಂ ಚಂದ್ರಸ್ಯ ಸೋದರೀಂ ಕಲಯೇ ।**

ಎಂದು ಹೇಳಿರುವುದು. ಅಲ್ಲಿ ಚಂದ್ರಶಬ್ದಕ್ಕೆ ಚಂದ್ರಬಿಂಬಕ್ಕೆ ಸದೃಶವಾದ ಮುಖಕಮಲದಿಂದ ಬೆಳಗುವವಳು ಅಥವಾ ಚಂದ್ರನ ಸೋದರಿಯು ಎಂಬ ಅರ್ಥವಿವರಣೆ ಇದೆ. ಹಿಂದೆ ದೇವಾಸುರರು ಅಮೃತಕ್ಕಾಗಿ ಸಮುದ್ರಮಥನವನ್ನು ಮಾಡಿದಾಗ ಚಂದ್ರನೂ, ಲಕ್ಷ್ಮಿಯೂ ಅಲ್ಲಿ ಉತ್ಪನ್ನರಾದರು ಎಂದು ಪುರಾಣಾದಿಗಳಲ್ಲಿ ಹೇಳಿರುವುದರಿಂದ ಲಕ್ಷ್ಮಿಯು ಚಂದ್ರನ ಸೋದರಿಯು ಎಂದು ಇಲ್ಲಿ ವಿವರಿಸಿದೆ.

**ಹಿರಣ್ಮಯೀಂ**—ಸುವರ್ಣವಿಗ್ರಹವುಳ್ಳವಳು ಎಂದರೆ ಸುವರ್ಣಮಯವಾದ ಶರೀರವುಳ್ಳವು ಅಥವಾ ಹಿಂ ಎಂಬ ವರ್ಣಕ್ಕೆ ವಜ್ರವೆಂದೂ, ರಕಾರಕ್ಕೆ ಅಗ್ನಿಯೆಂದೂ ನಿರ್ದೇಶವಿರುವುದರಿಂದ ಥಳಥಳಿಸುವ ವಜ್ರದಂತೆಯೂ, ಉಜ್ಜ್ವಲವಾಗಿ ಪ್ರಕಾಶಿಸುವ ಅಗ್ನಿಯಂತೆಯೂ ಇರುವ ಶರೀರಕಾಂತಿಯಿಂದ ಬೆಳಗುವವಳು ಎಂದರ್ಥವು.

**ಲಕ್ಷ್ಮೀಂ—ಲಕ್ಷ್ಮವತೀಂ ।** ಸರ್ವ ಲಕ್ಷಣಯುಕ್ತಳಾದವಳು—

**ಜ್ಞಾನೈಶ್ವರ್ಯಸುಖಾರೋಗ್ಯಧನಧಾನ್ಯಜಯಾದಿಕಂ ।**

ಎಂಬ ವಚನ ಪ್ರಕಾರ ಲಕ್ಷಣಗಳೆಂದರೆ ಜ್ಞಾನ, ಐಶ್ವರ್ಯ, ಸುಖ, ಆರೋಗ್ಯ, ಧನ, ಧಾನ್ಯ, ಜಯ ಇವುಗಳಿಂದ ಯುಕ್ತಳಾಗಿರುವವಳು ಎಂದರೆ ತನ್ನ ಭಕ್ತರಿಗೆ ಇವುಗಳನ್ನು ಕೊಡುವವಳು ಎಂಬಭಿಪ್ರಾಯವು ಲಕ್ಷ್ಮೀ ಶಬ್ದದಿಂದ ಭಾಸವಾಗುವುದು.

**ಜಾತವೇದಃ**—ಸಮಸ್ತವನ್ನೂ ತಿಳಿದಿರುವ ಅಗ್ನಿಯು; ಸರ್ವಜ್ಞನು. ಅಥವಾ ವೇದಗಳಲ್ಲಿ ಪ್ರತಿಪಾದ್ಯನಾಗಿರುವವನು. ಮಹಾಭಾರತದಲ್ಲಿ—

**ವೇದಾಸ್ತ್ವದರ್ಥಂ ಜಾತಾಶ್ಚ ಜಾತವೇದಾಸ್ತತೋ ಹ್ಯಸಿ ।**

ಎಂದು ಹೇಳಿರುವುದು ಎಂದರೆ, ಎಲೈ ಅಗ್ನಿಯೇ ವೇದಗಳು ನಿನಗಾಗಿಯೇ ಎಂದರೆ ನಿನ್ನನ್ನು ಸ್ತುತಿಸುವುದಕ್ಕಾಗಿಯೇ ಉಂಟಾಗಿರುವುವು. ಆದುದರಿಂದ ನೀನು ಜಾತವೇದಾಃ ಎಂಬ ಹೆಸರಿನಿಂದ ಪ್ರಸಿದ್ಧನಾಗಿರುವೆ ಎಂದಭಿಪ್ರಾಯವು.

ಎಲೈ ಅಗ್ನಿಯೇ, ಲಕ್ಷ್ಮಿಯನ್ನು ನನಗೆ ಅನುಗ್ರಹವನ್ನುಂಟುಮಾಡುವುದಕ್ಕಾಗಿ ಕರೆದುಕೊಂಡು ಬಾ ಎಂದು ಯಜ್ಞಪುರುಷನಾದ ಅಗ್ನಿಯನ್ನು ಈ ಋಕ್ಕಿನಲ್ಲಿ ಪ್ರಾರ್ಥಿಸಲಾಗಿದೆ.

ಮಂತ್ರಕಲ್ಪಾರ್ಣವೆಂಬ ಗ್ರಂಥದಲ್ಲಿ ಈ ರೀತಿ ಹೇಳಿದೆ—

|| ಮಂತ್ರಕಲ್ಪಾರ್ಣವೇ ||

**ಹಿರಣ್ಯವರ್ಣಾಮಿತ್ಯುಕ್ತಾಂ ಶ್ರೀಸೂಕ್ತೇ ಪ್ರಥಮಾಮೃಚಂ ।**
**ಶ್ರೀಂ ಹ್ರೀಂ ಕ್ಲೀಮಿತಿ ವಿನ್ಯಸ್ಯ ಹಿರಣ್ಯಪ್ರತಿಮಾಂ ಯಜೇತ್ ॥**
**ಲಕ್ಷ್ಮೀಂ ಸಂಪೂಜ್ಯ ಹಾರಿದ್ರಚೂರ್ಣಸೌವರ್ಣಪಂಕಜೈಃ ।**
**ರಾಜತೈಃ ಪುಂಡರೀಕೈಶ್ಚ ಪೂಜಯೇದ್ಗಾಸ್ಸುವಾಸಿನೀಃ ॥**
**ಪೂರ್ಣೇಂದೌ ಪೂರ್ಣಕುಂಭೇ ವಾ ಧ್ಯಾತ್ವಾ ನಾರಾಯಣೀಂ ಪರಾಂ ।**
**ಪ್ರಾಪ್ಯಾಕ್ಷಮಾಲಾಂ ಸೌವರ್ಣೀಂ ಕಮಲಾಸನಸಂಸ್ಥಿತಃ ॥**
**ಋಚಂ ತು ಪ್ರಜಪೇದಾದ್ಯಾಂ ಪ್ರತ್ಯಹಂ ತ್ರಿಸಹಸ್ರಕಂ ।**
**ತ್ರಿಸಂಧ್ಯಮೇವಂ ಲಕ್ಷಾಂತೇ ಕ್ಷೀರೈರಯುತತರ್ಪಣಂ ॥**
**ಸಹಸ್ರಮಾಜ್ಯಹೋಮಶ್ಚ ಶತಬ್ರಾಹ್ಮಣಭೋಜನಂ ।**
**ಸುವಾಸಿನೀನಾಂ ದಶಕಂ ಸಾಲಂಕಾರಮಥಾರ್ಚಯೇತ್ ॥**
**ಏಕಾಂ ಧೇನುಂ ಸವತ್ಸಾಂ ಚ ಶ್ರೋತ್ರಿಯಾಯ ಪ್ರದಾಪಯೇತ್ ।**
**ಇತ್ಥಮಕ್ಷರಲಕ್ಷಾಂತಂ ಯೋ ಜಪೇನ್ನಿಯತವ್ರತಃ ॥**
**ಹಿರಣ್ಯಪೂರ್ಣಸ್ತೇಜಸ್ವೀ ಧನಾಢ್ಯೋ ಭೋಗಭಾಗ್ಯವಾನ್ ।**
**ಜೀವೇಚ್ಚಿರಂ ಶರೀರಾಂತೇ ಚಂದ್ರಸಾಯುಜ್ಯಮಾಪ್ನುಯಾತ್ ॥**

ಅನುವಾದವು—ಶ್ರೀಸೂಕ್ತದಲ್ಲಿ **ಹಿರಣ್ಯವರ್ಣಾಂ** ಎಂಬುದು ಮೊದಲನೆಯ ಋಕ್ಕು. ಈ ಮಂತ್ರವನ್ನು ಜಪಮಾಡಬೇಕಾದರೆ **ಶ್ರೀಂ ಹ್ಲೀಂ ಕ್ಲೀಂ** ಎಂಬ ಬೀಜಾಕ್ಷರಸಹಿತವಾಗಿ ನ್ಯಾಸಾದಿಗಳನ್ನು ಮಾಡಿ ಸುವರ್ಣನಿರ್ಮಿತನಾದ ಪ್ರತಿಮೆಯನ್ನು ಇಟ್ಟು ಅದರಲ್ಲಿ ಲಕ್ಷ್ಮೀ ಎಂಬ ದೇವತೆಯನ್ನು ಆವಾಹನೆಮಾಡಿ, ಅರಿಸಿನ, ಕುಂಕುಮ, ಸುವರ್ಣನಿರ್ಮಿತವಾದ ಕಮಲಪುಷ್ಪಗಳು, ಬೆಳ್ಳಿಯಿಂದ ಮಾಡಿದ ಪದ್ಮಪುಷ್ಪಗಳು, ನಾನಾವಿಧ ಇತರ ಪುಷ್ಪಗಳು ಸುಗಂಧದ್ರವ್ಯಗಳು ಮೊದಲಾದವುಗಳಿಂದ ಪೂಜಿಸಬೇಕು ಮತ್ತು ಗೋವುಗಳನ್ನೂ ಸುವಾಸಿನಿಯರನ್ನೂ ಯಥಾಶಕ್ತಿ ಪೂಜಿಸಬೇಕು. ಪೂರ್ಣಚಂದ್ರನಲ್ಲಿ ಈ ಲಕ್ಷ್ಮಿಯು ನೆಲೆಸಿರುವಂತೆ ಧ್ಯಾನಮಾಡಬೇಕು. ಅಥವಾ ಶುದ್ಧೋದಕದಿಂದ ತುಂಬಿದ ಕಲಶದಲ್ಲಿಯಾಗಲಿ ಲಕ್ಷ್ಮಿಯನ್ನು ಆವಾಹನೆಮಾಡಿ ಧ್ಯಾನಮಾಡಬೇಕು. ಅನಂತರ ಜಪಮಾಲೆಯನ್ನು ಕೈಯಲ್ಲಿ ಹಿಡಿದುಕೊಂಡು, ಪದ್ಮಾಸನಾಸೀನನಾಗಿ ಈ ದೇವಿಯನ್ನು ಸುವರ್ಣಮಯವಾಗಿರುವಂತೆ ಧ್ಯಾನಮಾಡುತ್ತಾ **ಹಿರಣ್ಯವರ್ಣಾಂ** ಎಂಬ ಈ ಸೂಕ್ತದ ಮೊದಲನೆಯ ಋಕ್ಕನ್ನು ಪ್ರತಿದಿನಸವೂ ಪ್ರಾತಃಮಧ್ಯಾಹ್ನಸಾಯಂಕಾಲಗಳಲ್ಲಿ

ದಿನಕ್ಕೆ ಮೂರುಸಾವಿರಸಂಖ್ಯೆಯಷ್ಟು ಜಪಮಾಡಬೇಕು ಈ ರೀತಿ ಒಂದು ಲಕ್ಷ ಜಪಮಾಡಿದ ಬಳಿಕ ಹಾಲಿನಿಂದ ತರ್ಪಣವನ್ನು ಕೊಡಬೇಕು. ವಿಧಿಪೂರ್ವಕವಾಗಿ ಪ್ರತಿಷ್ಠಿಸಿ ಸಂಸ್ಕೃತವಾದ ಅಗ್ನಿಯಲ್ಲಿ ಒಂದುಸಾವಿರ ಆಜ್ಯಾಹುತಿಗಳನ್ನು ಹೋಮಮಾಡಬೇಕು. ನೂರುಮಂದಿ ಬ್ರಾಹ್ಮಣರಿಗೆ ಭೋಜನಮಾಡಿಸಬೇಕು. ಹತ್ತುಮಂದಿ ಸುವಾಸಿನಿಯರನ್ನು ನಾನಾವಿಧ ಅಲಂಕಾರಾದಿಗಳಿಂದಲೂ ವಸ್ತ್ರಾಭರಣಗಳಿಂದಲೂ ಪೂಜಿಸಿ ತೃಪ್ತಿಪಡಿಸಬೇಕು. ಅನಂತರ ಕರುವಿನಿಂದ ಸಹಿತವಾದ ಒಂದು ಉತ್ತಮವಾದ ಗೋವನ್ನು ಚೆನ್ನಾಗಿ ಅಲಂಕರಿಸಿ ಶ್ರೋತ್ರಿಯನಾದ ಬ್ರಾಹ್ಮಣನಿಗೆ ದಾನಮಾಡಬೇಕು. ಈ ಕ್ರಮದಿಂದ ಮಂತ್ರದಲ್ಲಿ ಎಷ್ಟು ಅಕ್ಷರಗಳಿರುವುವೋ ಅಷ್ಟು ಲಕ್ಷಸಂಖ್ಯಾಕವಾಗಿ ನಿಯಮದಿಂದ ಯಾವ ಪುರುಷನು ಜಪಮಾಡುವನೋ ಅವನು ಯಥೇಚ್ಛವಾಗಿ ಸುವರ್ಣವನ್ನು ಪಡೆಯುವನು. ತೇಜಸ್ವಿಯೂ ಧನಾಢ್ಯನೂ ಆಗಿ ಸಕಲಭೋಗಗಳನ್ನೂ ಅನುಭವಿಸುವನು. ದೀರ್ಘಾಯುವಾಗಿ ಬಹುಕಾಲಪರ್ಯಂತರ ಜೀವಿಸಿದು ಅಂತ್ಯದಲ್ಲಿ ಚಂದ್ರಸಾಯುಜ್ಯವೆಂಬ ಉತ್ತಮ ಪದವಿಯನ್ನು ಹೊಂದುವನು.

ಇಲ್ಲಿಗೆ ಮೊದಲನೆಯ ಋಕ್ಕಿನ ಅರ್ಥವಿವರಣೆ ಸಮಾಪ್ತವು.

|| ದ್ವಿತೀಯಾ ಋಕ್ ||

[ಅಸ್ಯ ಶ್ರೀಸೂಕ್ತದ್ವಿತೀಯ ಋಙ್ಮಹಾಮಂತ್ರಸ್ಯ । ಜಾತವೇದಾ ಋಷಿಃ । ಶ್ರೀರಾಜ್ಯಲಕ್ಷ್ಮೀರ್ದೇವತಾ । ಅನುಷ್ಟುಪ್ ಛಂದಃ । ಶ್ರೀಂ ಬೀಜಂ । ಹ್ರೀಂ ಶಕ್ತಿಃ । ಕ್ಲೀಂ ಕೀಲಕಂ । ಮಮ ರಾಜ್ಯಲಕ್ಷ್ಮೀಪ್ರಸಾದಸಿದ್ಧ್ಯರ್ಥೇ ಜಪೇ ವಿನಿಯೋಗಃ ॥ ಓಂ ಶ್ರೀಂ ತಾಂ ಮ ಆವಹ—ಅಂಗುಷ್ಠಾಭ್ಯಾಂ ನಮಃ । ಓಂ ಹ್ರೀಂ ಜಾತವೇದೋ ಲಕ್ಷ್ಮೀಂ—ತರ್ಜನೀಭ್ಯಾಂ ನಮಃ । ಓಂ ಕ್ಲೀಂ ಅನಪಗಾಮಿನೀಂ—ಮಧ್ಯಮಾಭ್ಯಾಂ ನಮಃ । ಓಂ ಕ್ಲೀಂ ಯಸ್ಯಾಂ ಹಿರಣ್ಯಂ ವಿಂದೇಯಂ—ಅನಾಮಿಕಾಭ್ಯಾಂ ನಮಃ । ಓಂ ಹ್ರೀಂ ಗಾಮಶ್ವಂ—ಕನಿಷ್ಠಿಕಾಭ್ಯಾಂ ನಮಃ । ಓಂ ಶ್ರೀಂ ಪುರುಷಾನಹಂ - ಕರತಲಕರಪೃಷ್ಠಾಭ್ಯಾಂ ನಮಃ॥ ಓಂ ಶ್ರೀಂ ತಾಂ ಮ ಆವಹ ಹೃದಯಾಯ ನಮಃ । ಓಂ ಹ್ರೀಂ ಜಾತವೇದೋಲಕ್ಷ್ಮೀಂ-ಶಿರಸೇ ಸ್ವಾಹಾ । ಓಂ ಕ್ಲೀಂ ಅನಪಗಾಮಿನೀಂ—ಶಿಖಾಯೈ ವಷಟ್ । ಓಂ ಕ್ಲೀಂ ಯಸ್ಯಾಂ ಹಿರಣ್ಯಂ ವಿಂದೇಯಂ—ಕವಚಾಯ ಹುಂ । ಓಂ ಹ್ರೀಂ ಗಾಮಶ್ವಂ—ನೇತ್ರತ್ರಯಾಯ ವೌಷಟ್ । ಓಂ ಶ್ರೀಂ ಪುರುಷಾನಹಂ—ಅಸ್ತ್ರಾಯ ಫಟ್ । ಭೂರ್ಭುವಸ್ಸುವರೋಮಿತಿ ದಿಗ್ಬಂಧಃ ॥ ಧ್ಯಾನಂ । ಕೇಯೂರೈರ್ಮೇಖಲಾದ್ಯೈರ್ನವಮಣಿಖಚಿತೈರ್ಭೂಷಣೈರ್ಭಾಸಮಾನಾಂ ಕರ್ಪೂರಾಮೋದವಕ್ತ್ರಾಮಪರಿಮಿತಕೃಪಾಪೂರ್ಣನೇತ್ರಾರವಿಂದಾಂ । ಹೇಮಾಭಾಂ ದಿವ್ಯವಸ್ತ್ರಾಂ ಮೃಗಮದತಿಲಕಾಂ ಪದ್ಮವಕ್ತ್ರಾಮುದಾರಾಂ ಶ್ರೀಲಕ್ಷ್ಮೀಂ ಪದ್ಮಹಸ್ತಾಂ ನತಜನವರದಾಂ ಸರ್ವಭೂತ್ಯೈ ನಮಾಮಿ ।]

|| ಎರಡನೆಯ ಋಕ್ ||

ಓಂ ತಾಂ ಮ ಆವಹ ಜಾತವೇದೋ ಲಕ್ಷ್ಮೀಮನಪಗಾಮಿನೀಂ ।

ಯಸ್ಯಾಂ ಹಿರಣ್ಯಂ ವಿಂದೇಯಂ ಗಾಮಶ್ವಂ ಪುರುಷಾನಹಂ ॥ ೨ ॥

|| ಶ್ರೀವಿದ್ಯಾರಣ್ಯಭಾಷ್ಯಂ ||

**ಹೇ ಜಾತವೇದಃ ಅನಪಗಾಮಿನೀಮಪಗಮನರಹಿತಾಂ ಅನಪಾಯಿನೀಮಿತ್ಯರ್ಥಃ । ತಾಂ ವಕ್ಷ್ಯಮಾಣಾಂ ಲಕ್ಷ್ಮೀಂ ಮೇ ಮಹ್ಯಮಾವಹ ಆಹ್ವಯ । ಯಸ್ಯಾಂ ಶ್ರೀದೇವ್ಯಾಮಾಹೂತಾಯಾಂ ಸತ್ಯಾಂ ಹಿರಣ್ಯಂ ಸುವರ್ಣಂ ಗಾಂ ಧೇನುಮಶ್ವಂ ವಾಜಿನಂ ಪುರುಷಾನ್ ಪುತ್ರಮಿತ್ರದಾಸಭೂತಾನ್ ಅಹಂ ವಿಂದೇಯಂ ಪ್ರಾಪ್ನುಯಾಂ ||**

|| ಪೃಥ್ವೀಧರಾಚಾರ್ಯಭಾಷ್ಯಂ ||

**ಹೇ ಜಾತವೇದಃ ಶ್ರೌತಾಗ್ನೇ ಯಸ್ಯಾಂ ಲಕ್ಷ್ಮ್ಯಾಮಾಗತಾಯಾಂ ಸತ್ಯಾಂ ಅಹಂ ಪುರುಷಾನ್ ಪುತ್ರಾದೀನ್ ಗಾಂ ಪಶೂನ್ ಅಶ್ವಂ ತುರಗಾದಿವಾಹನವಿಶೇಷಾನ್ ಹಿರಣ್ಯಂ ಕನಕಾದಿವಸ್ತೂನಿ ವಿಂದೇಯಂ ಲಭೇಯಂ ತಾಮನಪಗಾಮಿನೀಂ ಕದಾಚಿದಪಿ ಮಾಂ ತ್ಯಕ್ತ್ವಾ ಅನ್ಯತ್ರ ಗಂತುಮನುದ್ಯುಕ್ತಾಂ ಮದೇಕಾಶ್ರಯನಿಷ್ಠಾಂ ಲಕ್ಷ್ಮೀಂ ಮೇ ಮದರ್ಥಮಾವಹ ಪ್ರೇಷಯ ||**

|| ಪ್ರತಿಪದಾರ್ಥ ||

**(ಹೇ) ಜಾತವೇದ:** —ಎಲೈ ಅಗ್ನಿಯೇ । **ಅನಪಗಾಮಿನೀಂ**—ಯಾವಾಗಲೂ ನನ್ನನ್ನು ಬಿಟ್ಟು ಹೋಗದಿರುವ ಎಂದರೆ ನನ್ನ ಗೃಹದಲ್ಲಿ ಸ್ಥಿರವಾಗಿ ನೆಲೆಸಿರುವ । **ತಾಂ**— ಪ್ರಸಿದ್ಧಳಾದ । **ಲಕ್ಷ್ಮೀಂ**—ಲಕ್ಷ್ಮೀನಾಮಕಳಾದ ಶ್ರೀದೇವಿಯನ್ನು । **ಮೇ**— ನನ್ನನ್ನು ಅನುಗ್ರಹಿಸುವುದಕ್ಕಾಗಿ । **ಆ ವಹ**— ಕರೆದುಕೊಂಡು ಬಾ । **ಯಸ್ಯಾಂ**— ಯಾವ ಶ್ರೀದೇವಿಯು ನನ್ನ ಬಳಿಗೆ ಬರಲಾಗಿ । (**ಅಹಂ**— ನಾನು) ।**ಹಿರಣ್ಯಂ**—ಸುವರ್ಣವನ್ನೂ । **ಗಾಂ**— ಗೋವುಗಳನ್ನೂ । **ಅಶ್ವಂ**--ಅಶ್ವಗಳನ್ನೂ । **ಪುರುಷಾನ್**-— ಪುತ್ರಪೌತ್ರಭೃತ್ಯಾದಿ ಜನರನ್ನೂ । **ವಿಂದೇಯಂ**- ಪಡೆಯುವೆನೋ (**ತಾಂ ಲಕ್ಷ್ಮೀಂ ಮೇ ಆವಹ**--ಅಂತಹ ಶ್ರೀದೇವಿಯನ್ನು ನನ್ನಬಳಿಗೆ ಕರೆದುಕೊಂಡುಬಾ.)

ಭಾವಾರ್ಥ ||

ಎಲೈ ಅಗ್ನಿಯೇ, ಯಾವ ಶ್ರೀದೇವಿಯು ನನ್ನ ಮನೆಗೆ ಬಂದರೆ ಅವಳ ಅನುಗ್ರಹದಿಂದ ನಾನು ಸುವರ್ಣ, ಗೋಸಂಪತ್ತು, ಅಶ್ವಸಂಪತ್ತು, ಪುತ್ರಪೌತ್ರಭೃತ್ಯಾದಿಗಳು ಇವುಗಳೆಲ್ಲವನ್ನೂ ಪಡೆಯುವೆನೋ ಅಂತಹ ಮಹಾಮಹಿಮಾನ್ವಿತೆಯಾದ ಲಕ್ಷ್ಮೀ ಎಂಬ ನಾಮಾಂಕಿತಳಾದ ಶ್ರೀದೇವಿಯನ್ನು ನನ್ನ ಸಮೀಪಕ್ಕೆ ಕರೆದುಕೊಂಡುಬಾ.

|| ವಿಶೇಷವಿಷಯಗಳು ||

|| ಚಿದ್ವಿಲಾಸವೃತ್ತಿಃ ||

**ತಾಂ ಹಿರಣ್ಯವರ್ಣತ್ವಾದಿಲಕ್ಷಣೋಪೇತಾಮನಪಗಾಮಿನೀಂ ವಿಷ್ಣೋರನಪಾಯಿನೀಂ ಲಕ್ಷ್ಮೀಂ—**

**ರಾಘವತ್ವೇ ಭವತ್ಸೀತಾ ರುಕ್ಮಿಣೀ ಕೃಷ್ಣಜನ್ಮನಿ ।**

**ಅನ್ಯೇಷ್ವಪ್ಯವತಾರೇಷು ವಿಷ್ಣೋರೇವಾನಪಾಯಿನೀ ||**

**ಇತಿ ಪರಾಶರಪುರಾಣಾತ್ ||**

**ಆವಹೇತಿ ಜಾತವೇದಸಂ ಪ್ರಾರ್ಥಯೇತ್ । ಆಗತಾಯಾಂ ಚ ತಸ್ಯಾಂ ಕಿಂ ತೇ ಫಲಮಿತಿ ಚೇದುಚ್ಯತೇ-ಯಸ್ಯಾಮಿತಿ । ಯಸ್ಯಾಮಾಗತಾಯಾಂ ಹಿರಣ್ಯಂ ಗಾಮಶ್ವಂ ಪುರುಷಾಂಶ್ಚಾಹಂ**

ವಿಂದೇಯಂ—"ಗಾವಸ್ತಥಾ ಹಸ್ತಿಹಿರಣ್ಯಮಶ್ವಾನಿತಿ" ರಾಜ್ಯಲಕ್ಷ್ಮೀಹೃದಯೋಕ್ತೇ ।ಃ ಶ್ರೀಮಿತ್ಯಾದಿ-ಬೀಜತ್ರಯೇಣ ನ್ಯಾಸಃ । ಧ್ಯಾನಂ ।

ಚತುರಂಗಬಲೋಪೇತಾಂ ಧನಧಾನ್ಯಸುಖೇಶ್ವರೀಂ ।
ಅಶ್ವಾರೂಢಾಮಹಂ ವಂದೇ ರಾಜಲಕ್ಷ್ಮೀಂ ಹಿರಣ್ಮಯೀಂ ॥ ಇತಿ ॥

॥ ಮಂತ್ರಕಲ್ಪಾರ್ಣವೇ ॥

ಋಚಂ ದ್ವಿತೀಯಂ ಶ್ರೀಸೂಕ್ತೇ ಪ್ರತಿಸಾಯಂ ಸಹಸ್ರಕಂ ।
ಪ್ರಜಪೇನ್ನಿಯತಾಹಾರಃ ಪ್ರತ್ಯಕ್ಷರಸಹಸ್ರಕಂ ॥
ತ್ರಯಸ್ತ್ರಿಂಶದ್ದಿನೇ ರಾತ್ರೌ ಸ್ವಪ್ನೇ ಲಕ್ಷ್ಮೀಃ ಪ್ರಸೀದತಿ ।
ಶಾಂತಿಕರ್ಮಾದಿಕಂ ಸರ್ವಂ ಪ್ರಾಗುಕ್ತವದುಪಾಚರೇತ್ ॥
ಅವಿಘ್ನೇನ ಜಪಸ್ಸಿದ್ಧ್ಯೇದ್ಯದಿ ಲಕ್ಷ್ಮೀಪ್ರಸಾದತಃ ।
ಅನಪಾಯಾಂ ಶ್ರಿಯಂ ಯಾತಿ ಹಿರಣ್ಯಂ ಗೋನರಾದಿಕಾನ್ ॥
ಅನಪಾಯಾ ಭವೇಲ್ಲಕ್ಷ್ಮೀಸ್ತಸ್ಯ ಜನ್ಮನಿ ನಾನ್ಯಥಾ ॥ ಇತಿ ॥

## ಅನುವಾದವು

(ಚಿದ್ವಿಲಾಸವೃತ್ತಿ) ಹಿಂದಿನ ಋಕ್ಕಿನಲ್ಲಿ ಹಿರಣ್ಯವರ್ಣತ್ವಾದಿಲಕ್ಷಣಗಳುಳ್ಳವಳು ಎಂದು ಈ ದೇವತೆಯನ್ನು ವರ್ಣಿಸಿ ಈ ಋಕ್ಕಿನಲ್ಲಿ ಅನಪಗಾಮಿನೀಂ ಎಂಬ ವಿಶೇಷಣದಿಂದ ಈ ದೇವತೆಯ ಮಹತ್ತ್ವವನ್ನು ವರ್ಣಿಸಿದೆ. **ಅನಪಗಾಮಿನೀಂ** ಎಂಬ ಶಬ್ದಕ್ಕೆ ಎರಡು ವಿಧವಾದ ಅರ್ಥಗಳನ್ನು ಭಾಷ್ಯದಲ್ಲಿ ಹೇಳಿದೆ. **ಕದಾಚಿದಪಿ ಮಾಂ ತ್ಯಕ್ತ್ವಾ ಅನ್ಯತ್ರ ಗಂತುಮನುದ್ಯುಕ್ತಾಂ ಮದೇಕಾಶ್ರಯನಿಷ್ಠಾಂ**—ಯಾವ ಕಾಲಕ್ಕೂ ನನ್ನನ್ನು ತ್ಯಜಿಸಿ ಹೋಗದೇ ಯಾವಾಗಲೂ ನನ್ನ ಸಮೀಪದಲ್ಲಿಯೇ ಇರುವ ಎಂಬುದು ಒಂದು ವಿಧವಾದ ಅರ್ಥವು. ತನ್ನ ಪತಿಯನ್ನು ಬಿಟ್ಟಗಲದೆ ಯಾವಾಗಲೂ ಜತೆಯಲ್ಲಿಯೇ ಇರುವವಳೆಂದು ಎರಡನೆಯ ಅರ್ಥವು. ಈ ಅರ್ಥವನ್ನು ಸಮರ್ಥಿಸುವುದಕ್ಕಾಗಿ

ರಾಘವತ್ವೇ ಭವತ್ಸೀತಾ ರುಕ್ಮಿಣೀ ಕೃಷ್ಣಜನ್ಮನಿ ।
ಅನ್ಯೇಷ್ವಪ್ಯವತಾರೇಷು ವಿಷ್ಣೋರೇಷಾನಪಾಯಿನೀ ॥

ಎಂದು ಪರಾಶರಪುರಾಣದ ವಚನವು ಉದಾಹೃತವಾಗಿದೆ. ಈ ಲಕ್ಷ್ಮಿಯು ತನ್ನ ಪತಿಯಾದ ವಿಷ್ಣುವನ್ನು ಅಗಲದೆ ಯಾವಾಗಲೂ ಜತೆಯಲ್ಲಿಯೇ ಇರುವಳು. ರಾಮಾವತಾರದಲ್ಲಿ ಸೀತೆಯಾಗಿಯೂ, ಕೃಷ್ಣಾವತಾರದಲ್ಲಿ ರುಕ್ಮಿಣಿಯೆಂದೂ, ಇತರ ಅವತಾರಗಳಲ್ಲಿ ಬೇರೆ ಬೇರೆ ಹೆಸರುಗಳಿಂದಲೂ ಪ್ರಸಿದ್ಧವಾಗಿ ಯಾವಾಗಲೂ ವಿಷ್ಣುವನ್ನು ಸಂತೋಷಪಡಿಸುತ್ತಾ ಜತೆಯಲ್ಲಿಯೇ ಇರುವಳು ಎಂದು ಮುಖ್ಯಾಭಿಪ್ರಾಯವು.

ಇಲ್ಲಿ ಲಕ್ಷ್ಮಿಯನ್ನು ಕರೆದುಕೊಂಡು ಬಾ ಎಂದು ಅಗ್ನಿಯನ್ನು ಪ್ರಾರ್ಥಿಸಲಾಗಿದೆ. ಏತಕ್ಕಾಗಿ ಕರೆದುಕೊಂಡು ಬರಬೇಕು? ಈ ದೇವಿಯು ಬಂದರೆ ಆಗುವ ಪ್ರಯೋಜನವೇನು ಎಂದರೆ ಅವನ್ನು ಈ ಋಕ್ಕಿನ ಉತ್ತರಾರ್ಧದಲ್ಲಿ ವಿವರಿಸಲಾಗಿದೆ. ಈ ದೇವಿಯು ನನ್ನ ಬಳಿಗೆ ಬಂದರೆ ದೇವಿಯ ಅನುಗ್ರಹದಿಂದ ಧನಕನಕಸಂಪತ್ತು, ಗೋವುಗಳು, ಅಶ್ವಗಳು, ಪುತ್ರಪೌತ್ರಾದಿಗಳ ಲಾಭ ಇವೆಲ್ಲವೂ ನನಗೆ ದೊರಕುವುದೆಂದು ಋಷಿಯ ಆಶಯವು. ರಾಜ್ಯಲಕ್ಷ್ಮೀ

ಹೃದಯವೆಂಬ ಗ್ರಂಥದಲ್ಲಿ—**ಗಾವಸ್ತಥಾ ಹಸ್ತಿಹಿರಣ್ಯಮಶ್ವಾನ್**— ಈ ದೇವಿಯ ಅನುಗ್ರಹದಿಂದ ಗೋವುಗಳು, ಆನೆಗಳು, ಸುವರ್ಣ, ಅಶ್ವಗಳು ಇವೆಲ್ಲವೂ ಲಭಿಸುವವು ಎಂದು ಹೇಳಿದೆ. ಈ ಋಕ್ಕಿನ ಪ್ರಾರಂಭದಲ್ಲಿ ಹೇಳಿರುವಂತೆ ಶ್ರೀಂ ಮೊದಲಾದ ಬೀಜಾಕ್ಷರಗಳಿಂದ ನ್ಯಾಸವನ್ನು ಮಾಡಿ—

**ಚತುರಂಗಬಲೋಪೇತಾಂ ಧನಧಾನ್ಯಸುಖೇಶ್ವರೀಂ ।**
**ಅಶ್ವಾರೂಢಾಮಹಂ ವಂದೇ ರಾಜಲಕ್ಷ್ಮೀಂ ಹಿರಣ್ಮಯೀಂ ॥**

ಎಂಬ ಶ್ಲೋಕದಿಂದ ಧ್ಯಾನಮಾಡಬೇಕು. ರಾಜಲಕ್ಷ್ಮೀರೂಪದಿಂದಿರುವ ಈ ದೇವತೆಯು ಹಸ್ತ್ಯಶ್ವರಥ ಪದಾತಿಗಳೆಂಬ ನಾಲ್ಕುವಿಧವಾದ ಸೈನ್ಯದಿಂದ ಕೂಡಿರುವಳು. ಧನ, ಧಾನ್ಯ, ಸುಖಗಳಿಗೆ ಒಡೆಯಳು, ಉತ್ತಮಾಶ್ವದ ಮೇಲೆ ಕುಳಿತಿರುವಳು. ಸುವರ್ಣಮಯವಾದ ಶರೀರವುಳ್ಳವಳು ಇಂತಹ ಲಕ್ಷಣಯುಕ್ತಳಾದ ರಾಜಲಕ್ಷ್ಮೀಯೆಂಬ ದೇವತೆಯನ್ನು ಭಕ್ತಿಯಿಂದ ನಮಸ್ಕರಿಸುತ್ತೇನೆ ಎಂದು ಈ ಶ್ಲೋಕದ ಮುಖ್ಯಾಭಿಪ್ರಾಯವು

(ಮಂತ್ರಕಲ್ಪಾರ್ಣವ)

ಶ್ರೀಸೂಕ್ತದ ಎರಡನೆಯ ಋಕ್ಕಾದ **ತಾಂ ಮ ಆವಹ** ಎಂಬ ಋಕ್ಕನ್ನು ಪ್ರತಿದಿನ ಸಾಯಂಕಾಲವೂ ಒಂದು ಸಹಸ್ರ ಸಂಖ್ಯೆಯಷ್ಟು ಜಪಮಾಡಬೇಕು ಜಪಮಾಡುವಕಾಲದಲ್ಲಿ ಆಹಾರಾದಿಗಳಲ್ಲಿ ನಿಯಮದಿಂದಿರಬೇಕು ಮಂತ್ರದಲ್ಲಿರುವ ಪ್ರತಿಯೊಂದು ಅಕ್ಷರಕ್ಕೂ ಒಂದೊಂದು ಸಹಸ್ರಸಂಖ್ಯೆಯಷ್ಟು ಎಂದರೆ ಮೂವತ್ತಮೂರು ಸಹಸ್ರ ಸಂಖ್ಯೆಯಷ್ಟು ಜಪಮಾಡಬೇಕು. ಹೀಗೆ ಮಾಡಿದರೆ ಮೂವತ್ತಮೂರನೆಯ ದಿನ ರಾತ್ರಿಯಲ್ಲಿ ಲಕ್ಷ್ಮೀದೇವಿಯು ಸ್ವಪ್ನದಲ್ಲಿ ಪ್ರತ್ಯಕ್ಷಳಾಗಿ ಪ್ರಸನ್ನಳಾಗುವಳು. ಈ ಮಂತ್ರದ ಜಪಾದಿಗಳನ್ನು ಹಿಂದೆ ಹೇಳಿದ ವಿಧಿನಿಯಮಗಳನ್ನನುಸರಿಸಿ ಮಾಡಬೇಕು. ಲಕ್ಷ್ಮೀಪ್ರಸಾದದಿಂದ ಜಪವು ನಿರ್ವಿಘ್ನವಾಗಿ ನಡೆದು ಸಮಾಪ್ತವಾದಲ್ಲಿ ಜಪಮಾಡುವ ಪುರುಷನು ಯಾವಾಗಲೂ ನಷ್ಟವಾಗದಿರುವ ಐಶ್ವರ್ಯ, ಸುವರ್ಣ, ಗೋವುಗಳು, ಪುತ್ರಪೌತ್ರಾದಿಗಳು ಮೊದಲಾದುವನ್ನು ಪಡೆದು ಸುಖಿಸುವನು. ಆ ಪುರುಷನಿಗೆ ಲಕ್ಷ್ಮಿಯು ಪ್ರತಿ ಜನ್ಮದಲ್ಲಿಯೂ ಒಲಿದು ಅನುಗ್ರಹಮಾಡುವಳು. ಲಕ್ಷ್ಮಿಯ ಅನುಗ್ರಹಪ್ರಾಪ್ತಿಗಾಗಿ ಇದಲ್ಲದೆ ಬೇರೆ ಉಪಾಯವಿಲ್ಲ.

ಎರಡನೆಯ ಋಕ್ಕಿನ ವಿವರಣೆಯು ಸಮಾಪ್ತವು.

॥ ತೃತೀಯಾ ಋಕ್ ॥

**[ಅಸ್ಯ ಶ್ರೀಸೂಕ್ತತೃತೀಯ ಋಙ್ಮಹಾಮಂತ್ರಸ್ಯ । ಆನಂದ ಋಷಿಃ । ಶ್ರೀಲಕ್ಷ್ಮೀರ್ದೇವತಾ । ಅನುಷ್ಟುಪ್ ಛಂದಃ । ಶ್ರೀಲಕ್ಷ್ಮೀರ್ದೇವತಾ । ಉಕಾರೋ ಬೀಜಂ । ತಕಾರಶ್ಶಕ್ತಿಃ । ಶ್ರೀಂ ಕೀಲಕಂ । ಸರ್ವಸೌಭಾಗ್ಯದಾಯಿನೀ ಮಹಾಲಕ್ಷ್ಮೀದೇವತಾಪ್ರಸಾದಸಿದ್ಧ್ಯರ್ಥೇ ಜಪೇ ವಿನಿಯೋಗಃ ॥ ಓಂ ಅಶ್ವಪೂರ್ವಾಂ—ಅಂಗುಷ್ಠಾಭ್ಯಾಂ ನಮಃ । ಓಂ ರಥಮಧ್ಯಾಂ—ತರ್ಜನೀಭ್ಯಾಂ ನಮಃ । ಓಂ ಹಸ್ತಿ-ನಾದಪ್ರಬೋಧಿನೀಂ—ಮಧ್ಯಮಾಭ್ಯಾಂ ನಮಃ । ಓಂ ಶ್ರಿಯಂ ದೇವೀಂ—ಅನಾಮಿಕಾಭ್ಯಾಂ ನಮಃ । ಓಂ ಉಪಹ್ವಯೇ—ಕನಿಷ್ಠಿಕಾಭ್ಯಾಂ ನಮಃ । ಓಂ ಶ್ರೀರ್ಮಾ ದೇವೀರ್ಜುಷತಾಂ—ಕರತಲಕರಪೃ-**

ಷ್ಠಾಭ್ಯಾಂ ನಮಃ । ಓಂ ಅಶ್ವಪೂರ್ವಾಂ—ಹೃದಯಾಯ ನಮಃ । ಓಂ ರಥಮಧ್ಯಾಂ—ಶಿರಸೇ ಸ್ವಾಹಾ । ಓಂ ಹಸ್ತಿನಾದಪ್ರಬೋಧಿನೀಂ—ಶಿಖಾಯೈ ವಷಟ್ । ಓಂ ಶ್ರಿಯಂ ದೇವೀಂ—ಕವಚಾಯ ಹುಂ। ಓಂ ಉಪಹ್ವಯೇ—ನೇತ್ರತ್ರಯಾಯ ವೌಷಟ್ । ಓಂ ಶ್ರೀರ್ಮಾ ದೇವೀರ್ಜುಷತಾಂ—ಅಸ್ತ್ರಾಯ ಫಟ್ । ಭೂರ್ಭುವಸ್ಸುವರೋಮಿತಿ ದಿಗ್ಬಂಧಃ । ಧ್ಯಾನಂ । [ತಟಿದ್ವರ್ಣಾಪೂರ್ಣಾಂ ಶಶಿಲಸನತಾಟಂಕಯುಗಳಾಂ ದರಸ್ಮೇರಾಧೀರಾಂ ಕರಕಲಿತಪದ್ಮಾಂ ದ್ವಿನಯನಾಂ । ಲಸದ್ಗ್ರೀವಾಂ ಕ್ಷೌಮಾಂಶುಕವಿಶದನಾಭೀಸರಸಿಜಾಂ ಭಜಾಮಿ ತ್ವಾಂ ದೇವೀಂ ಪ್ರಣತಜನಸೌಭಾಗ್ಯಜನನೀಂ ॥ ಇತಿ ಧ್ಯಾತ್ವಾ ಜಪಂ ಕುರ್ಯಾತ್]

|| ಮೂರನೆಯ ಋಕ್ ||

ಓಂ ಅಶ್ವಪೂರ್ವಾಂ ರಥಮಧ್ಯಾಂ ಹಸ್ತಿನಾದಪ್ರಬೋಧಿನೀಂ ।
ಶ್ರಿಯಂ ದೇವೀಮುಪಹ್ವಯೇ ಶ್ರೀರ್ಮಾ ದೇವೀರ್ಜುಷತಾಂ ॥ ೩ ॥

|| ಶ್ರೀವಿದ್ಯಾರಣ್ಯಭಾಷ್ಯಂ ||

ಅಶ್ವಪೂರ್ವಾಮಶ್ವಾ ಪೂರ್ವೇ ಪುರೋಗಾಃ ಯಸ್ಯಾಸ್ತಾಂ । ರಥಮಧ್ಯಾಂ ರಥಾಃ ಮಧ್ಯೇ ಯಸ್ಯಾಸ್ತಾಂ । ಹಸ್ತಿನಾದಪ್ರಬೋಧಿನೀಂ ಹಸ್ತಿನಾಂ ನಾದೇನ ಬೃಂಹಿತೇನ ಪ್ರಬೋಧಿನೀಂ ಪ್ರಕರ್ಷೇಣ ಜ್ಞಾಪಿಕಾಂ । ದೇವೀಂ ದೇವನಶೀಲಾಂ ದ್ಯೋತನಶೀಲಾಂ ವಾ । ಶ್ರಿಯಂ ಶ್ರಯಣೀಯಾಂ ಸೇನಾರೂಪಾಮುಪಹ್ವಯೇ ಸಮೀಪಂ ಪ್ರತ್ಯಾಹ್ವಯೇ । ಏತಾದೃಶೀ ದೇವೀ ಶ್ರೀಃ ಮಾ ಮಾಂ ಜುಷತಾಂ ಸೇವತಾಂ ॥

|| ಪೃಥ್ವೀಧರಾಚಾರ್ಯಭಾಷ್ಯಂ ||

ಯಸ್ಯಾಸ್ಸೇನಾರೂಪಾಯಾ ಅಶ್ವಾಃ ಪುರೋಗಾಮಿನಸ್ತಾಮಶ್ವಪೂರ್ವಾಂ ರಥಾ ಏವ ಮಧ್ಯೇ ಯಸ್ಯಾಸ್ತಾಂ ರಥಮಧ್ಯಾಮಾಗಮನಕಾಲೇ ಗಜಧ್ವನೀನಾಂ ಜ್ಞಾಪಯಿತ್ರೀಂ ಹಸ್ತಿನಾದಪ್ರಬೋಧಿನೀಂ ದೇವೀಂ ಕ್ರೀಡಾದಿಲಕ್ಷಣಶೀಲಾಂ ಶ್ರಿಯಂ ಲಕ್ಷ್ಮೀಮಹಮುಪಹ್ವಯೇ ಮತ್ಸಮೀಪಮಾಗಚ್ಛೇತ್ಯಾಹ್ವಯೇ । ಆಹೂತಾ ಚ ಮಯಾ ಶ್ರೀರ್ದೇವೀಃ ದೇವೀಃ ವಚನವ್ಯತ್ಯಯಶ್ಛಾಂದಸಃ ಮಾ ಮಾಂ ಜುಷತಾಂ ಸೇವತಾಂ ॥

॥ ಪ್ರತಿಪದಾರ್ಥ ॥

**ಅಶ್ವಪೂರ್ವಾಂ**—(ತನ್ನ) ಸೇನೆಯ ಮುಂಭಾಗದಲ್ಲಿ ಅಶ್ವಗಳುಳ್ಳವಳೂ । **ರಥಮಧ್ಯಾಂ**—ಸೇನೆಯ ಮಧ್ಯಭಾಗದಲ್ಲಿ ರಥವುಳ್ಳವಳೂ । **ಹಸ್ತಿನಾದಪ್ರಬೋಧಿನೀಂ**—ಆನೆಗಳ ಬೃಂಹಿತಾಧ್ವನಿಯಿಂದ ಸೇನೆಯ ಸ್ವರೂಪವನ್ನು ಸೂಚಿಸುವವಳೂ । **ದೇವೀಂ**—ಪ್ರಕಾಶಮಾನಳಾದವಳೂ ಅಥವಾ ಕ್ರೀಡಾದಿ ಲಕ್ಷಣಶೀಲಳೂ ಆದ । **ಶ್ರಿಯಂ**—ಶ್ರೀದೇವಿಯನ್ನು । **ಅಹಂ**—ನಾನು । **ಉಪಹ್ವಯೇ**—ನನ್ನ ಸಮೀಪಕ್ಕೆ ಬರುವಂತೆ ಪ್ರಾರ್ಥಿಸಿ ಕರೆಯುತ್ತೇನೆ । **ಶ್ರೀಃ ದೇವೀಃ**—ನನ್ನಿಂದ ಆಹ್ವಾನಿತಳಾದ ಶ್ರೀದೇವಿಯು । **ಮಾ**—ನನ್ನನ್ನು । **ಜುಷತಾಂ**—ಸೇವಿಸಲಿ.

॥ ಭಾವಾರ್ಥ ॥

ಶ್ರೀದೇವತೆಯ ಸೈನ್ಯದ ಮುಂಭಾಗದಲ್ಲಿ ಅಶ್ವಗಳಿರುವವು. ಮಧ್ಯದಲ್ಲಿ ರಥವಿರುವುದು. ಆನೆಗಳ ಬೃಂಹಿತಾ ಧ್ವನಿಯಿಂದ ಶೋಭಿಸುತ್ತಿರುವುದು. ಇಂತಹ ಸೈನ್ಯದ ಮಧ್ಯದಲ್ಲಿರುವ ರಥದಲ್ಲಿ ಕುಳಿತು ಪ್ರಕಾಶಿಸುತ್ತಿರುವ ಶ್ರೀದೇವತೆಯನ್ನು ನನ್ನ ಸಮೀಪಕ್ಕೆ ಬರುವಂತೆ ಪ್ರಾರ್ಥಿಸಿ ಕರೆಯುತ್ತೇನೆ. ನನ್ನ ಪ್ರಾರ್ಥನೆಯನ್ನು ಕೇಳಿ ಬಂದ ಆ ದೇವಿಯು ನನ್ನ ಸಮೀಪದಲ್ಲಿದ್ದು ನನಗೆ ಅನುಗ್ರಹವನ್ನುಂಟುಮಾಡಲಿ.

ಮಂತ್ರಕಲ್ಪವರ್ಣನೇ—

**ಶ್ರೀಸೂಕ್ತೇ ತು ತೃತೀಯರ್ಚಃ ಶ್ರೀಬೀಜೇನ ಸಮಾಯುತಂ ।**
**ನ್ಯಾಸಂ ಕೃತ್ವಾ ಜಪೇನ್ನಿತ್ಯಂ ಪ್ರಾತಃ ಪ್ರಾತಃ ಸಹಸ್ರಕಂ ॥**
**ಆದ್ವಾದಶಾಬ್ದಾತ್ಸಿದ್ಧಿಃ ಸ್ಯಾದನ್ಯದುರ್ಗಾವಿಧಾನವತ್ ।**
**ಮಂತ್ರಸಿದ್ಧೋ ಭವೇದ್ರಾಜಾ ಶತ್ರೂನ್ ಜಿತ್ವಾ ಲಭೇಚ್ಛ್ರಿಯಂ ॥**

ಅನುವಾದವು— ಶ್ರೀಸೂಕ್ತದಲ್ಲಿರುವ ಈ ಮೂರನೆಯ ಋಕ್ಕನ್ನು ಶ್ರೀ ಎಂಬ ಬೀಜಾಕ್ಷರಸಹಿತವಾಗಿ ನ್ಯಾಸ ಮಾಡಿ ಪ್ರತಿದಿನ ಪ್ರಾತಃಕಾಲವೂ ಒಂದೊಂದು ಸಾವಿರಸಂಖ್ಯೆಯಷ್ಟು ಜಪಮಾಡಬೇಕು ಈ ರೀತಿ ಹನ್ನೆರಡುವರ್ಷ ಪರ್ಯಂತಕಾಲ ಜಪಮಾಡಿ ದುರ್ಗಾಪೂಜಾವಿಧಿಯಂತೆ ಆಚರಿಸಿದಲ್ಲಿ ಜಪಮಾಡುವ ರಾಜನಿಗೆ ಮಂತ್ರಸಿದ್ಧಿಯಾಗುವುದು. ಅವನು ತನ್ನ ಶತ್ರುರಾಜರನ್ನು ಜಯಿಸಿ ಅಪರಿಮಿತವಾದ ಸಂಪತ್ತನ್ನು ಪಡೆಯುವನು.

ಇಲ್ಲಿಗೆ ಮೂರನೆಯ ಋಕ್ಕಿನ ವಿವರಣೆ ಸಮಾಪ್ತವು

॥ ಚತುರ್ಥೀ ಋಕ್ ॥

**[ಅಸ್ಯ ಶ್ರೀಶ್ರೀಸೂಕ್ತ ಚತುರ್ಥಋಙ್ಮಹಾಮಂತ್ರಸ್ಯ । ಆನಂದ ಋಷಿಃ । ಶ್ರೀಲಕ್ಷ್ಮೀರ್ದೇವತಾ । ಬೃಹತೀಛಂದಃ । ಕಾಂ ಬೀಜಂ । ಹ್ರೀಂ ಶಕ್ತಿಃ । ಶ್ರೀಂ ಕೀಲಕಂ । ಶ್ರೀ ಲಕ್ಷ್ಮೀದೇವತಾ ಪ್ರಸಾದ-ಸಿದ್ಧ್ಯರ್ಥೇ ಜಪೇ ವಿನಿಯೋಗಃ ॥ ಓಂ ಕಾಂಸೋಸ್ಮಿತಾಂ— ಅಂಗುಷ್ಠಾಭ್ಯಾಂ ನಮಃ । ಓಂ ಹಿರಣ್ಯ ಪ್ರಾಕಾರಾಂ—ತರ್ಜನೀಭ್ಯಾಂ ನಮಃ । ಓಂ ಆದ್ರಾಂ ಜ್ವಲಂತೀಂ—ಮಧ್ಯಮಾಭ್ಯಾಂ ನಮಃ । ಓಂ ತೃಪ್ತಾಂ ತರ್ಪಯಂತೀಂ-ಅನಾಮಿಕಾಭ್ಯಾಂ ನಮಃ । ಓಂ ಪದ್ಮೇಸ್ಥಿತಾಂ ಪದ್ಮವರ್ಣಾಂ-ಕನಿಷ್ಠಿಕಾಭ್ಯಾಂ ನಮಃ । ತಾಮಿಹೋಪಹ್ವಯೇ ಶ್ರಿಯಂ— ಕರತಲಕರಪೃಷ್ಠಾಭ್ಯಾಂ ನಮಃ । ಓಂ ಕಾಂಸೋಸ್ಮಿತಾಂ— ಹೃದಯಾಯ ನಮಃ । ಓಂ ಹಿರಣ್ಯಪ್ರಾಕಾರಾಂ—ಶಿರಸೇ ಸ್ವಾಹಾ । ಓಂ ಆದ್ರಾಂ ಜ್ವಲಂತೀಂ-ಶಿಖಾಯೈ ವಷಟ್ । ಓಂ ತೃಪ್ತಾಂ ತರ್ಪಯಂತೀಂ — ಕವಚಾಯ ಹುಂ । ಓಂ ಪದ್ಮೇ ಸ್ಥಿತಾಂ ಪದ್ಮವರ್ಣಾಂ— ನೇತ್ರತ್ರಯಾಯ ವೌಷಟ್ । ಓಂ ತಾಮಿಹೋಪಹ್ವಯೇ ಶ್ರಿಯಂ— ಅಸ್ತ್ರಾಯ ಫಟ್ ॥ ಭೂರ್ಭುವಸ್ಸು-ವರೋಮಿತಿ ದಿಗ್ಬಂಧಃ ॥ ಧ್ಯಾನಂ । ಯಾ ಸಾ ಪದ್ಮಾಸನಸ್ಥಾ ವಿಪುಲಕಟಿತಟೀ ಪದ್ಮಪತ್ರಾಯತಾಕ್ಷೀ**

ಗಂಭೀರಾವರ್ತನಾಭಿಸ್ತನಭರನಮಿತಾ ಶುಭ್ರವಸ್ತ್ರೋತ್ತರೀಯಾ । ಲಕ್ಷ್ಮೀರ್ದಿವ್ಯೈರ್ಗಜೇಂದ್ರೈರ್ಮಣಿಗಣಖಚಿತೈಃ ಸ್ನಾಪಿತಾ ಹೇಮಕುಂಭೈರ್ನಿತ್ಯಂ ಸಾ ಪದ್ಮಹಸ್ತಾ ಮಮ ವಸತು ಗೃಹೇ ಸರ್ವಮಾಂಗಲ್ಯಯುಕ್ತಾ ॥ ]

ನಾಲ್ಕನೆಯ ಋಕ್ಕು

ಓಂ ಕಾಂಸೋಸ್ಮಿತಾಂ ಹಿರಣ್ಯಪ್ರಾಕಾರಾಮಾರ್ದ್ರಾಂ ಜ್ವಲಂತೀಂ ತೃಪ್ತಾಂ

ತರ್ಪಯಂತೀಂ ।

ಪದ್ಮೇ ಸ್ಥಿತಾಂ ಪದ್ಮವರ್ಣಾಂ ತಾಮಿಹೋಪಹ್ವಯೇ ಶ್ರಿಯಂ ॥೪॥

॥ ಶ್ರೀ ವಿದ್ಯಾರಣ್ಯಭಾಷ್ಯಂ ॥

ಕಾಂ ವಾಙ್ಮನಸೋರಗೋಚರಾಂ ದುರ್ನಿರೂಪಸ್ವರೂಪಾಮಿತ್ಯರ್ಥಃ ಬ್ರಹ್ಮರೂಪಾಂ ವಾ "ಕೋ ಹಿ ತೇ ನಾಮ ಪ್ರಜಾಪತೇ" ಇತಿ ಶ್ರುತ್ಯಂತರಾತ್ "ಕ ಇತಿ ಬ್ರಹ್ಮಣೋ ನಾಮ" ಇತಿ ಪುರಾಣಾಚ್ಚ । ಸೋಸ್ಮಿತಾಂ ಆ ಈಷತ್ ಉತ್ ಉದ್ಗತಂ ಯತ್ ಸ್ಮಿತಂ ಹಾಸಃ ತೇನ ಸಹಿತಾಂ । ಉದಂತ್ಯಲೋಪಶ್ಛಾಂದಸಃ । ಹಿರಣ್ಯಪ್ರಾಕಾರಾಂ ಹಿರಣ್ಯಸ್ಯ ಪ್ರಾಕಾರೋ ವರ್ಣಃ ಪ್ರಕೃಷ್ಟಾ ಆಕೃತಿರ್ವಾ ಯಸ್ಯಾಸ್ತಾಂ । ಆರ್ದ್ರಾಂ ಕ್ಲಿನ್ನಾಂ—ಕ್ಷೀರೋದಧೇರುತ್ಪನ್ನತ್ವಾತ್ । ಆರ್ದ್ರಾನಕ್ಷತ್ರೋತ್ಪನ್ನಾಂ ರುದ್ರರೂಪಾಂ ವಾ । ರುದ್ರಶಬ್ದೋಽತ್ರ ಮೂರ್ಧನ್ಯಸ್ವರಾದಿಃ—" ಆರ್ದ್ರಯಾ ರುದ್ರಃ ಪ್ರಥಮಾನ ಏತಿ" ಇತ್ಯಾದೌ ತಥಾದರ್ಶನಾತ್ । ಅಸ್ಯ ಬಾಹುಲಕಂ । ಜ್ವಲಂತೀಂ ಪ್ರಕಾಶಮಾನಾಂ । ತೃಪ್ತಾಂ ಪೂರ್ಣಕಾಮಾಂ । ಅಪಿ ಚ ತರ್ಪಯಂತೀಂ ಭಕ್ತಾನ್ ಮನೋರಥೈರಿತಿ ಶೇಷಃ । ಪದ್ಮೇ ಸ್ಥಿತಾಂ ಕಮಲೇ ಆಸೀನಾಂ । ಪದ್ಮವರ್ಣಾಂ ಕಮಲವದಚ್ಛಾಯಚ್ಛವಿಂ । ತಾಂ ಪ್ರಸಿದ್ಧಾಂ ಶ್ರಿಯಂ । ಉಪಹ್ವಯೇ ಆಹ್ವಯೇ ॥ ೪ ॥

॥ ಪೃಥ್ವೀಧರಾಚಾರ್ಯಭಾಷ್ಯಂ ॥

ಸೋಸ್ಮಿತಾಮುತ್ಕೃಷ್ಟಸ್ಮಿತೇನ ಸಹಿತಾಂ । ಹಿರಣ್ಯಪ್ರಾಕಾರಾಂ ಸುವರ್ಣಾವರಣಾಂ । ಆರ್ದ್ರಾಂ ಶೀತಲಗುಣಾಂ ಜ್ವಲಂತೀಂ ಜ್ಯೋತಿಃಸ್ವರೂಪಾಂ । ತೃಪ್ತಾಂ ಭಕ್ತಿಪೂಜಾದಿಭಿರಿತಿ ಯಾವತ್ । ತರ್ಪಯಂತೀಂ ವರಪ್ರಸಾದಾನುಗ್ರಹವಿಶೇಷೈಃ ಸ್ವಭಕ್ತಾನಾಂ ವಾಂಛಾಪೂರ್ತಿಕಾರಿಣೀಂ । ಪದ್ಮವರ್ಣಾಂ ಕಮಲವದ್ಭಾಸಮಾನಾಂ । ಪದ್ಮೇ ಸ್ಥಿತಾಂ ಪದ್ಮಾಧಿಷ್ಠಿತಾಂ । ತಾಂ ವಾಣೀಂ ವಾಕ್ಯರೂಪಾಂ ತಾಂ ಶ್ರಿಯಂ । ಇಹ ಮತ್ಸಮೀಪಂ ಪ್ರತಿ ಉಪಹ್ವಯೇ ಆವಾಹನಂ ಕರೋಮೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ಕಾಂ**—ವಾಙ್ಮನಗಳಿಗೆ ಅಗೋಚರವಾದ ಬ್ರಹ್ಮಸ್ವರೂಪವುಳ್ಳವಳೂ । **ಸೋಸ್ಮಿತಾಂ**—ಸ್ವಲ್ಪವಾಗಿ ಮಂದಹಾಸವನ್ನು (ಮುಗುಳುನಗೆಯನ್ನು) ಸೂಸುತ್ತಿರುವವಳೂ । **ಹಿರಣ್ಯಪ್ರಾಕಾರಾಂ**—ಚಿನ್ನದ ವರ್ಣದಂತೆ ಇರುವ ಉತ್ಕೃಷ್ಟವಾದ ವರ್ಣ ಅಥವಾ ಆಕಾರವುಳ್ಳವಳೂ । **ಆರ್ದ್ರಾಂ**—ಕ್ಲಿನ್ನವಾದ ಶೀತಲಗುಣವುಳ್ಳವಳೂ

ಅಥವಾ ಆರ್ದ್ರಾನಕ್ಷತ್ರದಲ್ಲಿ ಉತ್ಪನ್ನವಾದ ರುದ್ರರೂಪವುಳ್ಳವಳೂ | ಜ್ವಲಂತೀಂ— ಪ್ರಕಾಶಮಾನಳೂ ಅಥವಾ ಜ್ಯೋತಿಸ್ಸ್ವರೂಪಳಾದವಳೂ | ತೃಪ್ತಾಂ — ಪೂರ್ಣಕಾಮಳೂ ಅಥವಾ ಭಕ್ತರ ಪೂಜಾದಿಗಳಿಂದ ಸಂತುಷ್ಟಳಾದವಳೂ | ತರ್ಪಯಂತೀಂ— ಭಕ್ತರಿಗೆ ವರಪ್ರಸಾದಾನುಗ್ರಹಗಳಿಂದ ಅವರವರ ಅಭೀಷ್ಟಗಳನ್ನು ಪೂರ್ತಿಗೊಳಿಸುವವಳೂ | ಪದ್ಮೇಸ್ಥಿತಾಂ— ಕಮಲದಲ್ಲಿ ಕುಳಿತಿರುವವಳೂ ಅಥವಾ ಕಮಲವೇ ಆಸನವಾಗಿ ವುಳ್ಳವಳೂ | ಪದ್ಮವರ್ಣಾಂ— ಕಮಲದಂತೆ ಅರುಣಚ್ಛಾಯೆಯಿಂದ ಕೂಡಿದ ಶರೀರಕಾಂತಿಯುಳ್ಳವಳೂ ಆದ | ತಾಂ ಶ್ರಿಯಂ— ಪ್ರಸಿದ್ಧಳಾದ ಆ ಶ್ರೀದೇವಿಯನ್ನು | ಇಹ— ನನ್ನ ಸಮೀಪದಲ್ಲಿ ಇರುವಂತೆ | ಉಪ ಹ್ವಯೇ— ಪ್ರಾರ್ಥಿಸಿ ಕರೆಯುತ್ತೇನೆ.

|| ಭಾವಾರ್ಥ ||

ನಾನು ಆಹ್ವಾನಮಾಡುವ ಈ ಶ್ರೀದೇವತೆಯು ವಾಙ್ಮನಗಳಿಗೂ ಅಗೋಚರವಾದ ಬ್ರಹ್ಮಸ್ವರೂಪವುಳ್ಳವಳು. ಮಂದಹಾಸದಿಂದ ಯುಕ್ತವಾದ ಮುಖಕಾಂತಿಯಿಂದಲೂ, ಚಿನ್ನದ ವರ್ಣದಂತಿರುವ ಶರೀರಕಾಂತಿಯಿಂದಲೂ ಶೋಭಿಸುತ್ತಿರುವಳು. ಜ್ಯೋತಿಃಸ್ವರೂಪಳಾಗಿ ಮಹಾಪ್ರಕಾಶದಿಂದ ಬೆಳಗುತ್ತಿದ್ದರೂ ಚಂದ್ರನ ಕಾಂತಿಯಂತೆ ಶೀತಲ ಗುಣವುಳ್ಳವಳು. ಪೂರ್ಣಕಾಮಳು, ಭಕ್ತರಿಗೆ ಅವರವರು ಅಪೇಕ್ಷಿಸುವ ಅಭೀಷ್ಟಗಳನ್ನು ಕೊಟ್ಟು ಅವರನ್ನು ತೃಪ್ತಿಪಡಿಸುವವಳು. ಕಮಲವನ್ನೇ ಆಸನವನ್ನಾಗಿ ಮಾಡಿಕೊಂಡು ಅದರಲ್ಲಿ ಕುಳಿತು ಕಮಲದ ಅರುಣಚ್ಛಾಯೆಯಂತೆ ಶುಭ್ರವಾದ ಶರೀರಕಾಂತಿಯಿಂದ ಬೆಳಗುತ್ತಿರುವ ಆ ಶ್ರೀದೇವಿಯನ್ನು ನನ್ನ ಸಮೀಪಕ್ಕೆ ಬರುವಂತೆ ಪ್ರಾರ್ಥಿಸಿ ಕರೆಯುತ್ತೇನೆ.

|| ವಿಶೇಷವಿಷಯಗಳು ||

|| ಸೂಕ್ತಾರ್ಥತತ್ವಾಕರೇ ಅನುಷ್ಠಾನಪ್ರಕರಣೇ ||

**ಋಚಂ ಚತುರ್ಥೀಂ ಶ್ರೀಸೂಕ್ತೇ ಪ್ರಜಪೇದಷ್ಟಲಕ್ಷಕಂ |**
**ಸಹಸ್ರಂ ಪ್ರತ್ಯಹಂ ಜಪ್ತ್ವಾ ತ್ರಿಸಾಹಸ್ರಂ ಭೃಗೋರ್ದಿನೇ ||**
**ರಾಕಾಯಾಂ ಪಂಚಸಾಹಸ್ರಂ ಕ್ಷೀರಾಹಾರೋ ಜಿತೇಂದ್ರಿಯಃ |**
**ಪಲಾಶಸಮಿಧಾ ಹೋಮಃ ಪಯಸಾ ಗೋಘೃತೇನ ಚ ||**
**ತರ್ಪಣಾಶೀತಿಸಾಹಸ್ರಂ ಹೋಮಶ್ಚಾಷ್ಟಸಹಸ್ರಕಃ |**
**ಬ್ರಾಹ್ಮಣಾಷ್ಟಶತೀ ಪೂಜ್ಯಾ ಶ್ರೀವಾಗ್ಬೀಜಯುತಂ ನ್ಯಸೇತ್ ||**
**ಸಂವತ್ಸರಸ್ಯ ತತ್ಪ್ರಾಪ್ತಿರ್ಭವಿಷ್ಯತಿ ನ ಸಂಶಯಃ |**
**ಆಪಂಚಪೂರುಷಂ ಸಿದ್ಧ್ಯಾ ನಾತ್ರ ಕಾರ್ಯಾ ವಿಚಾರಣಾ || ಇತಿ ||**
**ಶ್ರೀಂ ಐಮಿತಿ ಸಪಲ್ಲವನ್ಯಾಸಃ || ಧ್ಯಾನಂ—**
**ವರದಾಭಯಶುಕಪುಸ್ತಕಕರಕಲಿತಾಂ ಕಮಲಮಧ್ಯಗಾಂ ಕಲಯೇ |**
**ಕಮಲಾಂ ಸಸ್ಮಿತವದನಾಂ ಕನಕಾವರ್ಣಸ್ಥಿತಾಂ ಕಾಂಚಿತ್ ||**

## ಅನುವಾದವು

ಈ ಸೂಕ್ತದಲ್ಲಿರುವ **ಕಾಂ ಸೋಸ್ಮಿತಾಂ** ಎಂಬ ನಾಲ್ಕನೆಯ ಋಕ್ಕನ್ನು ಪ್ರತಿದಿನವೂ ಒಂದೊಂದು ಸಾವಿರದಂತೆಯೂ, ಶುಕ್ರವಾರದಿನಗಳಲ್ಲಿ ಮೂರುಸಾವಿರದಂತೆಯೂ, ಪೌರ್ಣಮಾಸಿಯಲ್ಲಿ ಹದಿನೈದು ಸಹಸ್ರ

ದಂತೆಯೂ, ಒಟ್ಟು ಎಂಟುಲಕ್ಷ ಸಂಖ್ಯೆಯಷ್ಟು ಜಪ ಮಾಡಬೇಕು ಜಪಮಾಡುವ ದಿನಗಳಲ್ಲಿ ಹಾಲನ್ನು ಮಾತ್ರ ಸೇವಿಸುತ್ತಾ ಜಿತೇಂದ್ರಿಯನಾಗಿ ಜಪಮಾಡಬೇಕು. ಪಲಾಶಸಮಿತ್ತು, ಹಾಲು, ಹಸುವಿನ ತುಪ್ಪ ಎಂಬ ಈ ಹೋಮದ್ರವ್ಯಗಳಿಂದ ಅಗ್ನಿಯಲ್ಲಿ ಮಂತ್ರಪೂರ್ವಕವಾಗಿ ಎಂಟುಸಹಸ್ರ ಸಂಖ್ಯೆಯಷ್ಟು ಹೋಮಮಾಡಬೇಕು. ಎಂಭತ್ತುಸಹಸ್ರ ಸಂಖ್ಯೆಯಷ್ಟು ತರ್ಪಣವನ್ನು ಮಾಡಬೇಕು. ಜಪಕಾಲದಲ್ಲಿ ಶ್ರೀಬೀಜವಾಗ್ಬೀಜಸಹಿತವಾಗಿ ನ್ಯಾಸ ಮಾಡಬೇಕು. ನೂರೆಂಟುಮಂದಿ ಬ್ರಾಹ್ಮಣರನ್ನು ಪೂಜಾದಿಗಳಿಂದ ತೃಪ್ತಿಪಡಿಸಬೇಕು. ಹೀಗೆ ಮಾಡಿದಲ್ಲಿ ಮಂತ್ರಸಿದ್ಧಿಯಾಗಿ ಸಂಪತ್ಸಮೃದ್ಧಿಯುಂಟಾಗುವುದು. ಈ ವಿಷಯದಲ್ಲಿ ಸಂಶಯವಿಲ್ಲ. ಶ್ರೀಂ ಐಂ ಎಂಬ ಬೀಜಾಕ್ಷರ ಸಹಿತವಾಗಿ ನ್ಯಾಸಮಾಡಿ, ವರದಾಭಯಶುಕಪುಸ್ತಕಕರಕಲಿತಾಂ ಕಮಲಮಧ್ಯಗಾಂ ಕಲಯೇ । ಕಮಲಾಂ ಸಸ್ಮಿತ ವದನಾಂ ಕನಕಾವರಣಸ್ಥಿತಾಂ ಕಾಂಚಿತ್ । ಎಂಬ ಶ್ಲೋಕದಿಂದ ಧ್ಯಾನಮಾಡಬೇಕು. ಎಂದರೆ— ಈ ಶ್ರೀದೇವಿಯು ತನ್ನ ನಾಲ್ಕು ಕೈಗಳಲ್ಲಿ ಕ್ರಮವಾಗಿ ವರದಹಸ್ತ, ಅಭಯಹಸ್ತ ಎಂಬ ಮುದ್ರೆಗಳನ್ನೂ ಗಿಣಿ, ಪುಸ್ತಕ ಇವುಗಳನ್ನೂ ಧರಿಸಿ ಕಮಲಮಧ್ಯದಲ್ಲಿ ಆಸೀನಳಾಗಿರುವಳು. ಚಿನ್ನದ ವರ್ಣದ ಶರೀರಕಾಂತಿಯಿಂದ ಬೆಳಗುತ್ತಿರುವವಳೂ, ಮಂದಹಾಸಯುಕ್ತಳೂ ಆದ ಈ ಶ್ರೀದೇವಿಯನ್ನು ನಾನು ಧ್ಯಾನಿಸುತ್ತೇನೆ ಎಂದು ಈ ಶ್ಲೋಕದ ಮುಖ್ಯಾಭಿಪ್ರಾಯವು.

॥ ಪಂಚಮೀ ಋಕ್ ॥

[ಓಂ ಅಸ್ಯ ಶ್ರೀ ಶ್ರೀಸೂಕ್ತಪಂಚಮಋಙ್ಮಹಾಮಂತ್ರಸ್ಯ । ಆನಂದ ಋಷಿಃ । ಸರ್ವೈಶ್ವರ್ಯಪ್ರದಾಯಿನೀ ಶ್ರೀಮಹಾಲಕ್ಷ್ಮೀರ್ದೇವತಾ । ತ್ರಿಷ್ಟುಪ್ ಛಂದಃ । ಚಂ ಬೀಜಂ । ಣಂ ಶಕ್ತಿಃ । ಶ್ರೀಂ ಕೀಲಕಂ । ಸರ್ವದಾರಿದ್ರ್ಯನಾಶಿನೀ ಶ್ರೀಮಹಾಲಕ್ಷ್ಮೀಪ್ರಸಾದಸಿದ್ಧ್ಯರ್ಥೇ ಜಪೇ ವಿನಿಯೋಗಃ ।

ಓಂ ಹ್ರಾಂ ಚಂದ್ರಾಂ ಪ್ರಭಾಸಾಂ- ಅಂಗುಷ್ಠಾಭ್ಯಾಂ ನಮಃ। ಓಂ ಹ್ರೀಂ ಯಶಸಾ ಜ್ವಲಂತೀಂ- ತರ್ಜನೀಭ್ಯಾಂ ನಮಃ । ಓಂ ಹ್ರೂಂ ಶ್ರಿಯಂ ಲೋಕೇ ದೇವಜುಷ್ಟಾಮುದಾರಾಂ-ಮಧ್ಯಮಾಭ್ಯಾಂನಮಃ । ಓಂ ಹ್ರೈಂ ತಾಂ ಪದ್ಮಿನೀಮೀಂ ಶರಣಮಹಂ ಪ್ರಪದ್ಯೇ-ಅನಾಮಿಕಾಭ್ಯಾಂ ನಮಃ । ಓಂ ಹ್ರೌಂ ಅಲಕ್ಷ್ಮೀರ್ಮೇ ನಶ್ಯತಾಂ—ಕನಿಷ್ಠಿಕಾಭ್ಯಾಂ ನಮಃ । ಓಂ ಹ್ರಃ ತ್ವಾಂ ವೃಣೇ—ಕರತಲಕರಪೃಷ್ಠಾಭ್ಯಾಂ ನಮಃ । ಓಂ ಹ್ರಾಂ ಚಂದ್ರಾಂ ಪ್ರಭಾಸಾಂ—ಹೃದಯಾಯ ನಮಃ । ಓಂ ಹ್ರೀಂ ಯಶಸಾಜ್ವಲಂತೀಂ—ಶಿರಸೇ ಸ್ವಾಹಾ । ಓಂ ಹ್ರೂಂ ಶ್ರಿಯಂ ಲೋಕೇ ದೇವಜುಷ್ಟಾಮುದಾರಾಂ—ಶಿಖಾಯೈ ವಷಟ್ । ಓಂ ಹ್ರೈಂ ತಾಂ ಪದ್ಮಿನೀಮೀಂ ಶರಣಮಹಂ ಪ್ರಪದ್ಯೇ-ಕವಚಾಯ ಹುಂ । ಓಂ ಹ್ರೌಂ ಅಲಕ್ಷ್ಮೀರ್ಮೇ ನಶ್ಯತಾಂ- ನೇತ್ರತ್ರಯಾಯ ವೌಷಟ್ । ಓಂ ಹ್ರಃ ತ್ವಾಂ ವೃಣೇ—ಅಸ್ತ್ರಾಯ ಫಟ್ । ಭೂರ್ಭುವಸ್ಸುವರೋಮಿತಿ ದಿಗ್ಬಂಧಃ ॥ ಧ್ಯಾನಂ ॥ ತೇಜೋಮಂಡಲಮಧ್ಯಗಾಂ ದ್ವಿನಯನಾಂ ದಿವ್ಯಾಂಬರಾಲಂಕೃತಾಂ ದೇವೀಂ ಪದ್ಮವರಾಭಯಾಂ ಕರತಲೈಶ್ಚಿಂತಾಮಣಿಂ ಬಿಭ್ರತೀಂ । ನಾನಾದಿವ್ಯವಿಭೂಷಣಾಂ ಚ ಭಜತಾಂ ದೌರ್ಭಾಗ್ಯಸಂಹಾರಿಣೀಂ ನಾನಾಭೀಷ್ಟವರಪ್ರದಾನನಿರತಾಂ ವಂದೇ ಪರಾಂ ದೇವತಾಂ ॥]

## ಐದನೆಯ ಋಕ್ಕು

ಚಂದ್ರಾಂ ಪ್ರಭಾಸಾಂ ಯಶಸಾ ಜ್ವಲಂತೀಂ ಶ್ರಿಯಂ ಲೋಕೇ ದೇವಜು-
ಷ್ಟಾಮುದಾರಾಂ ।
ತಾಂ ಪದ್ಮನೀಮೀಂ ಶರಣಮಹಂ ಪ್ರಪದ್ಯೇ ಅಲಕ್ಷ್ಮೀರ್ಮೇ ನಶ್ಯತಾಂ
ತ್ವಾಂ ವೃಣೇ ॥ ೫ ॥

॥ ಶ್ರೀವಿದ್ಯಾರಣ್ಯಭಾಷ್ಯಂ ॥

**ಅತ್ರಾಹಂಶಬ್ದಪ್ರಕ್ಷೇಪಃ ಪ್ರಾಮಾದಿಕಃ । ಚಂದ್ರಾಂ ಚಂದ್ರವತ್ ಪ್ರಕಾಶಮಾನಾಂ ಪ್ರಭಾಸಾಂ ಪ್ರಕೃಷ್ಟಾ ಭಾಃ ಕಾಂತಿರ್ಯಸ್ಯಾಸ್ತಾಂ । ಅಹಂ ಚೇತ್ಯಾಪ್ । ಯಶಸಾ ಕೀರ್ತ್ಯಾ ಜ್ವಲಂತೀಂ ಪ್ರಕಾಶಮಾನಾಂ । ದೇವಜುಷ್ಟಾಂ ದೇವೈರಿಂದ್ರಾದ್ಯೈಸ್ಸೇವಿತಾಂ ಪ್ರೀತಾಂ ವಾ । ಉದಾರಾಂ ಪ್ರಗಲ್ಭಾಂ ವಾ ಪದ್ಮಿನೀಂ ಪದ್ಮಲತಾರೂಪಾಂ ಪದ್ಮಾಕಾರಾಂ ವಾ । ಈಮಿತಿನಿಪಾತಃ ಅನರ್ಥಕಃ— "ಮಿತಾಕ್ಷರೇಷ್ವನರ್ಥಕಾಃ ಕಮೀಮಿದ್ವಿತಿ" ಯಾಸ್ಕವಚನಾತ್ । ಈಕಾರವಾಚ್ಯಾಂ ವಾ ತಾಂ ಶ್ರಿಯಂ ಲೋಕೇ ಇಹಲೋಕೇ ಶರಣಂ ರಕ್ಷಿತ್ರೀಂ ಪ್ರಪದ್ಯೇ ಪ್ರಪನ್ನೋಽಸ್ಮಿ । ಅಹಮಿತಿ ಶೇಷಃ । ಅತಃ ಹೇ ಶ್ರೀಃ ಮೇ ಮಮ ಅಲಕ್ಷ್ಮೀಃ ಅಶ್ರೀಃ ನಶ್ಯತಾಂ ನಾಶಂ ಪ್ರಾಪ್ನೋತು । ತ್ವಾಂ ವೃಣೇ ಶರಣತ್ವೇನ ಕುರ್ವೇ ॥**

॥ ಪೃಥ್ವೀಧರಾಚಾರ್ಯಭಾಷ್ಯಂ ॥

ಚಂದ್ರಾಂ ಸಂತೋಷಕಾರಿಣೀಂ ಪ್ರಭಾಸಾಂ ಪ್ರಕರ್ಷೇಣ ಭಾಸ್ವತೀಂ । ಲೋಕೇ ಲೋಕೇಷು ಚತುರ್ದಶಸು । ಯಶಸಾ ಜ್ವಲಂತೀಮೈಶ್ವರ್ಯಸಂಪದೌದಾರ್ಯಾದಿಪ್ರಯುಕ್ತಕೀರ್ತ್ಯಾ ಪ್ರಕಾಶಮಾನಾಂ । ಅತ ಏವ ದೇವಜುಷ್ಟಾಮಿಂದ್ರಾದಿಸೇವಿತಾಂ । ಉದಾರಾಂ ವಿಸ್ತಾರಾಂ ಸರ್ವವ್ಯಾಪಿನೀಮಿತ್ಯರ್ಥಃ । ಪದ್ಮಿನೀಂ ಕರಧೃತಕಮಲಾಮಿತಿ ಯಾವತ್ । ಈಂ ಈಕಾರವಾಚ್ಯಾಂ ತಾದೃಶೀಂ ಶ್ರಿಯಮಹಂ ಶರಣಂ ಪ್ರಪದ್ಯೇ ರಕ್ಷಕೀ ಭವೇತಿ ವ್ರಜಾಮಿ । ಮೇ ಮಮ ಅಲಕ್ಷ್ಮೀರ್ಯಾ ಸಾ ನಶ್ಯತಾಂ ನಾಶಂ ಪ್ರಾಪ್ನೋತು । ತ್ವಾಂ ಲಕ್ಷ್ಮೀಮಹಂ ವೃಣೇ ಮದಾಶ್ರಿತಜ್ಯೇಷ್ಠಾನಿಸ್ಸಾರಣಾಯ ತ್ವಾಂ ಪ್ರತಿ ವರಣಂ ಕರಿಷ್ಯೇ । ನಾತ್ರಾಹಂಶಬ್ದಃ ಪ್ರಕ್ಷಿಪ್ತಃ—"ಸಾರ್ವದೇಶಿಕಶಿಷ್ಟಪಾಠಸಂಪ್ರತಿಪತ್ತೇ" ರಿತ್ಯಾಸ್ತರೀಯಾಃ । ದಾಕ್ಷಿಣಾತ್ಯಪಾಠೇ ತದದರ್ಶನಾತ್ಪ್ರಕ್ಷಿಪ್ತ ಏವ ॥

॥ ಪ್ರತಿಪದಾರ್ಥ ॥

**ಚಂದ್ರಾಂ**—ಚಂದ್ರನಂತೆ ಕಾಂತಿಯುಕ್ತಳೂ । **ಪ್ರಭಾಸಾಂ**—ಉತ್ಕೃಷ್ಟವಾದ ಶರೀರಕಾಂತಿಯಿಂದ ಬೆಳಗುವವಳೂ । **ಯಶಸಾ**—ಕೀರ್ತಿಯಿಂದ ಎಂದರೆ ಐಶ್ವರ್ಯ, ಸಂಪತ್, ಔದಾರ್ಯಾದಿ ಗುಣಗಳಿಂದ ಉಂಟಾಗುವ ಕೀರ್ತಿಯಿಂದ । **ಜ್ವಲಂತೀ**—ಪ್ರಸಿದ್ಧಳೂ ಅಥವಾ ಪ್ರಕಾಶಮಾನಳೂ । **ದೇವಜುಷ್ಟಾಂ**—ಇಂದ್ರಾದಿ

ದೇವತೆಗಳಿಂದ ಸೇವಿಸಲ್ಪಡುವವಳೂ । **ಉದಾರಾಂ** - ಭಕ್ತರಿಗೆ ಬಹಳವಾಗಿ ವರಾದಿಗಳನ್ನು ಕೊಡುವವಳೂ ಅಥವಾ ವಿಸ್ತಾರವಾಗಿ ಎಲ್ಲೆಲ್ಲಿಯೂ ವ್ಯಾಪಿಸಿರುವವಳೂ । **ಪದ್ಮಿನೀಂ**— ಕೈಗಳಲ್ಲಿ ಪದ್ಮಗಳನ್ನು ಧರಿಸಿರುವವಳೂ ಅಥವಾ ಪದ್ಮಲತೆಯಂತೆ ಬಳಕುತ್ತಿರುವ ಶರೀರವುಳ್ಳವಳೂ ಅಥವಾ ಪದ್ಮದಂತೆ ನಯನಮನೋಹರವಾದ ಶರೀರಾ ಕೃತಿಯುಳ್ಳವಳೂ ಆದ । **ತಾಂ ಈಂ ಶ್ರಿಯಂ**— ಪ್ರಸಿದ್ಧಳೂ ಆದ ಆ ಶ್ರೀದೇವಿಯನ್ನೇ । **ಅಹಂ**— ನಾನು । **ಶರಣಂ ಪ್ರಪದ್ಯೇ**— ಮರೆಹೊಗುತ್ತೇನೆ ಎಂದರೆ ರಕ್ಷಣೆಗಾಗಿ ಆಶ್ರಯಿಸುತ್ತೇನೆ (ಈ ದೇವಿಯ ಅನುಗ್ರಹದಿಂದ) । **ಮೇ**— ನನ್ನ । **ಅಲಕ್ಷ್ಮೀಃ**— ದೌರ್ಭಾಗ್ಯ ದಾರಿದ್ರ್ಯಾದಿಗಳು । **ನಶ್ಯತಾಂ**— ನಾಶವಾಗಲಿ (ಎಲೈ ದೇವಿಯೇ ನಾನು) । **ತ್ವಾಂ**— ನಿನ್ನನ್ನು । **ವೃಣೇ**— ನನ್ನ ರಕ್ಷಣೆಗಾಗಿ ಪ್ರಾರ್ಥಿಸಿ ಕರೆಯುತ್ತೇನೆ.

॥ ವಿಶೇಷವಿಷಯಗಳು ।

**॥ ಭಾಗಧೇಯಭೂಷಣಂ ॥**

**ಶ್ರೀಸೂಕ್ತೇ ಪ್ರಥಮೇ ವರ್ಗೇ ಪ್ರಜಪೇತ್ಪಂಚವಿಂಶತಿಮ್ಯೃಚಂ ।**
**ಮಾಯಾಬೀಜೇನ ವಿನ್ಯಸ್ಯ ಭಕ್ತಿತೋ ಭುವನೇಶ್ವರೀಂ ॥**
**ಅಕ್ಷೀಣಭಾಸಾಂ ಚಂದ್ರಾಖ್ಯಾಂ ಜ್ವಲಂತೀಂ ಯಶಸಾ ಶ್ರಿಯಂ ।**
**ದೇವೈರ್ಜುಷ್ಟಾಮುದಾರಾಂ ಚ ಪದ್ಮಿನೀಮೀಂ ಭಜಾಮ್ಯಹಂ ॥**
**ತ್ವಾಂ ವೃಣೇ ತ್ವತ್ಪ್ರಸಾದೇನ ಮಮಾಲಕ್ಷ್ಮೀರ್ವಿನಶ್ಯತು ।**
**ಪ್ರತ್ಯಹಂ ತ್ವೇಕಸಾಹಸ್ರಂ ಗೋಷ್ಠಸ್ಥಃ ಪ್ರಜಪೇದೃಚಂ ॥**
**ಅಖಂಡದೀಪಂ ಪ್ರಜ್ವಾಲ್ಯ ಗೋಘೃತೇನ ಜಿತೇಂದ್ರಿಯಃ ।**
**ಪ್ರತ್ಯಕ್ಷರತ್ರಿಸಾಹಸ್ರಜಪಾನ್ಮುಚ್ಯೇತ ಸಂಕಟೈಃ ॥**
**ಮಂಡಲೈಶ್ಚ ತ್ರಿಭಿಃ ಪೂರ್ಣೈರ್ದಾರಿದ್ರ್ಯಾನ್ಮುಚ್ಯತೇ ಧ್ರುವಂ ।**
**ದೀಕ್ಷಿತಶ್ಚ ತಿಲೈರ್ಹುತ್ವಾ ವಿರಜಾಮಂಗದೇವತಾಂ ॥**
**ಅಮಿಕ್ಷಾಶೀ ಧನಂ ಪ್ರಾಪ್ಯ ಭೂಮಿಸ್ಥಂ ರಾಜವಂದಿತಃ ।**
**ಸಂಗ್ರಾಮೇ ವಿಜಯಂ ಪ್ರಾಪ್ಯ ಚಾಂದ್ರೀಂ ಗತಿಮವಾಪ್ನುಯಾತ್ ॥**
**ಅಹಸ್ಸು ಪ್ರಜಪೇತ್ಸೌರೀಂ ದಕ್ಷಿಣೋತ್ತರಮಾರ್ಗಗಾಂ ।**
**ತಿಲೈಃ ಶ್ವೇತೈಸ್ಸಹಾಜ್ಯೇನ ಜುಹುಯಾತ್ಪಾವಕೇ ಸ್ವಕೇ ॥**
**ಜಪಾದ್ದಶಾಂಶಂ ಸಂತರ್ಪ್ಯ ಗಂಧಕರ್ಪೂರವಾರಿಭಿಃ ।**
**ಹೋಮಂ ಕೃತ್ವಾ ದಶಾಂಶಂ ಚ ಪೂಜಯೇಚ್ಚ ಸುವಾಸಿನೀಃ ॥**
**ಕಮಲೈರರ್ಚಯೇದ್ದೇವೀಂ ಗೋಭ್ಯೋ ಘಾಸಂ ಪ್ರದಾಪಯೇತ್ ।**
**ಏತತ್ಪುಣ್ಯಪ್ರಭಾವೇಣ ದರಿದ್ರೋಽಪಿ ಧನೀ ಭವೇತ್ ॥**

**ಹ್ರೀಮಿತ್ಯಾದಿ ಷಡಂಗನ್ಯಾಸಃ । ಧ್ಯಾನಂ—**

**ಆಕಾಶಪದ್ಮಾಕರಚಂದ್ರಬಿಂಬಸ್ಥಲೋಲ್ಲಸಂತೀಂ ಪರಿಪೂರ್ಣಕಾಂತಿಂ ।**
**ಪದ್ಮಸ್ಥಿತಾಂ ಪದ್ಮಕರಾಂ ಪ್ರಪದ್ಯೇ ಲಕ್ಷ್ಮೀಮಲಕ್ಷ್ಮೀವಿನಿವೃತ್ತಯೇಽಹಂ ॥ ಇತಿ.**

# ಅನುವಾದವು

ಶ್ರೀ ಸೂಕ್ತದಲ್ಲಿರುವ ಈ ಐದನೇ ಋಕ್ಕನ್ನು ಮಾಯಾಬೀಜ (ಹ್ರೀಂ) ಸಹಿತವಾಗಿ ನ್ಯಾಸಮಾಡಿ ಭಕ್ತಿಯಿಂದ ಶ್ರೀದೇವತೆಯನ್ನು ಧ್ಯಾನಿಸುತ್ತಾ ಜಪಮಾಡಬೇಕು. ಆ ದೇವಿಯು ಯಾವಾಗಲೂ ನ್ಯೂನತೆಯಿಲ್ಲದಿರುವ ಪ್ರಕಾಶದಿಂದ ಬೆಳಗುತ್ತಿರುವಳು. ಚಂದ್ರನಂತೆ ಶೀತಲಕಾಂತಿ ವಿಶಿಷ್ಟಳಾಗಿ ಆಹ್ಲಾದಕರಳಾಗಿರುವಳು. ತನ್ನ ಭಕ್ತರ ವಿಷಯದಲ್ಲಿ ವರಾನುಗ್ರಹ ಅಭೀಷ್ಟ, ದಾರಿದ್ರ್ಯಾನಿಷ್ಟಪರಿಹಾರ ಮೊದಲಾದ ವರಗಳನ್ನು ಅನುಗ್ರಹಿಸುತ್ತಾ ಔದಾರ್ಯಾದಿ ಯಶಸ್ಸಿನಿಂದ ಪ್ರಸಿದ್ಧಳಾಗಿರುವಳು. ಇಂದ್ರಾದಿ ಸಮಸ್ತ ದೇವತೆಗಳಿಂದಲೂ ಸೇವಿಸಲ್ಪಡುವಳು. ಪದ್ಮವೆಂಬ ಆಸನದಲ್ಲಿ ಕುಳಿತು ಹಸ್ತಗಳಲ್ಲಿ ಪದ್ಮಗಳನ್ನು ಹಿಡಿದು ಪ್ರಕಾಶಿಸುತ್ತಿರುವ ಈ ಶ್ರೀದೇವಿಯನ್ನು ನಾನು ಯಾವಾಗಲೂ ಭಜಿಸುತ್ತೇನೆ. ಮತ್ತು ನನ್ನ ದೌರ್ಭಾಗ್ಯದಾರಿದ್ರ್ಯನಾಶಕ್ಕಾಗಿಯೂ, ಅನುಗ್ರಹಕ್ಕಾಗಿಯೂ ಆ ದೇವಿಯನ್ನು ಪ್ರಾರ್ಥಿಸಿ ಕರೆಯುತ್ತೇನೆ ಎಂದು ಪ್ರಾರ್ಥನೆಮಾಡಬೇಕು. ಹಸುಗಳನ್ನು ಕಟ್ಟುವ ಕೊಟ್ಟಿಗೆಯಲ್ಲಿ ಅಥವಾ ಬೇರೆ ಶುದ್ಧ ಪ್ರದೇಶದಲ್ಲಿ ಕುಳಿತು ಅನನ್ಯಮನಸ್ಕನಾಗಿ ಪ್ರತಿ ದಿವಸವೂ ಒಂದೊಂದು ಸಾವಿರ ಸಂಖ್ಯೆಯಷ್ಟು ಜಪ ಮಾಡಬೇಕು. ಜಪಕಾಲದಲ್ಲಿ ಹಸುವಿನ ತುಪ್ಪವನ್ನು ಹಾಕಿ ದೀಪಗಳನ್ನಿಟ್ಟು ಅದು ಆರಿಹೋಗದಂತೆ ನೋಡಿಕೊಳ್ಳಬೇಕು. ಈ ಋಕ್ಕಿನಲ್ಲಿರುವ ಪ್ರತಿ ಅಕ್ಷರಕ್ಕೂ ಮೂರು ಮೂರು ಸಾವಿರ ಸಂಖ್ಯೆಯಷ್ಟು ಜಪ ಮಾಡಿದರೆ ಸಮಸ್ತ ಸಂಕಟಗಳಿಂದಲೂ ಪಾರಾಗುವನು. ಈ ಋಕ್ಕಿನ ಜಪವನ್ನು ಮೂರು ಮಂಡಲಕಾಲ (ಮಂಡಲವೆಂದರೆ ನಲವತ್ತೆಂಟು ದಿನಗಳು) ಬಿಡದೆ ಜಪ ಮಾಡಿದರೆ ದಾರಿದ್ರ್ಯವು ಖಂಡಿತವಾಗಿಯೂ ಪರಿಹಾರವಾಗುವುದು. ದೀಕ್ಷೆಯನ್ನು ಕೈಗೊಂಡು ಎಂದರೆ ಶುಚಿರ್ಭೂತನಾಗಿ ಸಂಕಲ್ಪವನ್ನು ಮಾಡಿ ತಿಲ (ಎಳ್ಳು) ದ್ರವ್ಯದಿಂದ ಅಗ್ನಿಯಲ್ಲಿ ಈ ಮಂತ್ರಪೂರ್ವಕವಾಗಿ ಅಂಗದೇವತೆಯಾದ ವಿರಜಾ ಎಂಬ ದೇವತೆಸಹಿತವಾಗಿ ಹೋಮಮಾಡಿದರೆ ಭೂಮಿಯಲ್ಲಿ ಹಾಕಿರುವ ಗೂಢವಾದ ನಿಧಿಯು ಸಿಕ್ಕುವುದು. ರಾಜಸನ್ಮಾನಿತನಾಗುವನು, ಯುದ್ಧದಲ್ಲಿ ಜಯಶಾಲಿಯಾಗುವನು. ಕೊನೆಗೆ ಚಂದ್ರಲೋಕ ಪ್ರಾಪ್ತಿಯೂ ಆಗುವುದು. ಹಗಲಿನಲ್ಲಿ ದಕ್ಷಿಣೋತ್ತರ ಮಾರ್ಗದಲ್ಲಿ ಸಂಚರಿಸುವ ಸೂರ್ಯನನ್ನು ಧ್ಯಾನಿಸುತ್ತಾ ಜಪವನ್ನು ಮಾಡಿ ಬಿಳೀ ಎಳ್ಳಿನಿಂದಲೂ, ಆಜ್ಯದಿಂದಲೂ ಅಗ್ನಿಯಲ್ಲಿ ಹೋಮಮಾಡಬೇಕು. ಜಪಸಂಖ್ಯೆಯ ಹತ್ತರಲ್ಲಿ ಒಂದು ಭಾಗದಷ್ಟು ತರ್ಪಣವನ್ನು ಗಂಧಕರ್ಪೂರ ಮಿಶ್ರಿತವಾದ ಉದಕದಿಂದ ಮಾಡಬೇಕು. ಅನಂತರ ತರ್ಪಣ ಸಂಖ್ಯೆಯ ಹತ್ತರಲ್ಲಿ ಒಂದು ಅಂಶದಷ್ಟು ಹೋಮಮಾಡಿ ಸುವಾಸಿನಿಯರನ್ನು (ಮುತ್ತೈದೆ) ಪೂಜಿಸಬೇಕು. ಕಮಲ ಪುಷ್ಪಗಳಿಂದ ಶ್ರೀದೇವಿಯನ್ನು ಪೂಜಿಸಿ ಗೋವುಗಳಿಗೆ ಹುಲ್ಲು ಮೊದಲಾದ ಆಹಾರವನ್ನು ನೀಡಬೇಕು. ಹೀಗೆ ಮಾಡುವುದರಿಂದ ಎಂದರೆ ಈ ಜಪಹೋಮಗಳ ಪುಣ್ಯಪ್ರಭಾವದಿಂದ ಎಷ್ಟೇ ದರಿದ್ರನಾಗಿದ್ದರೂ ಧನಿಕನಾಗುವನು. ಮಂತ್ರನ್ಯಾಸಕಾಲದಲ್ಲಿ ಹ್ರೀಂ ಎಂಬ ಬೀಜಾಕ್ಷರಸಹಿತವಾಗಿ ನ್ಯಾಸಮಾಡಿ ಕೆಳಗೆ ಕೊಟ್ಟಿರುವ ಶ್ಲೋಕದಂತೆ ಧ್ಯಾನ ಮಾಡಬೇಕು.—ಆಕಾಶಪದ್ಮಾಕರಚಂದ್ರಬಿಂಬಪ್ಲವೋಲ್ಲಸಂತೀಂ ಪರಿಪೂರ್ಣಕಾಂತಿಂ । ಪದ್ಮಸ್ಥಿತಾಂ ಪದ್ಮಕರಾಂ ಪ್ರಪದ್ಯೇ ಲಕ್ಷ್ಮೀಮಲಕ್ಷ್ಮೀವಿನಿವೃತ್ತಯೇಽಹಂ ॥

ಇಲ್ಲಿಗೆ ಐದನೆಯ ಋಕ್ಕಿನ ವಿವರಣೆ ಸಮಾಪ್ತವು.

|| ಷಷ್ಠೀ ಋಕ್ ||

[ಅಸ್ಯ ಶ್ರೀಶ್ರೀಸೂಕ್ತಸ್ಯ ಆದಿತ್ಯವರ್ಣೇತಿ ಷಷ್ಠಋಙ್ಮಹಾಮಂತ್ರಸ್ಯ । ಆನಂದ ಋಷಿಃ । ಶ್ರೀಮಹಾಲಕ್ಷ್ಮೀರ್ದೇವತಾ । ತ್ರಿಷ್ಟುಪ್ಛಂದಃ । ಆಂ ಬೀಜಂ । ಶ್ರೀಂ ಶಕ್ತಿಃ । ಹ್ರೀಂ ಕೀಲಕಂ । ಸರ್ವಾರ್ಥಸಿದ್ಧಯೇ ಮಹಾಲಕ್ಷ್ಮೀಪ್ರಸಾದಸಿದ್ಧ್ಯರ್ಥೇ ಜಪೇ ವಿನಿಯೋಗಃ

ಓಂ ಆದಿತ್ಯವರ್ಣೇ ತಪಸೋಽಧಿಜಾತಃ—ಅಂಗುಷ್ಠಾಭ್ಯಾಂ ನಮಃ । ಓಂ ವನಸ್ಪತಿಸ್ತವ—ತರ್ಜನೀಭ್ಯಾಂ ನಮಃ । ಓಂ ವೃಕ್ಷೋಽಥ ಬಿಲ್ವಃ—ಮಧ್ಯಮಾಭ್ಯಾಂ ನಮಃ । ಓಂ ತಸ್ಯ ಫಲಾನಿ ತಪಸಾ ನುದಂತು—ಅನಾಮಿಕಾಭ್ಯಾಂ ನಮಃ । ಓಂ ಮಾಯಾಂತರಾಯಾಶ್ಚ—ಕನಿಷ್ಠಿಕಾಭ್ಯಾಂ ನಮಃ । ಓಂ ಬಾಹ್ಯಾ ಅಲಕ್ಷ್ಮೀಃ—ಕರತಲಕರಪೃಷ್ಠಾಭ್ಯಾಂ ನಮಃ ॥ ಓಂ ಆದಿತ್ಯವರ್ಣೇ ತಪಸೋಽಧಿಜಾತಃ—ಹೃದಯಾಯ ನಮಃ । ಓಂ ವನಸ್ಪತಿಸ್ತವ—ಶಿರಸೇ ಸ್ವಾಹಾ । ಓಂ ವೃಕ್ಷೋಽಥ ಬಿಲ್ವಃ—ಶಿಖಾಯೈ ವಷಟ್ । ಓಂ ತಸ್ಯ ಫಲಾನಿ ತಪಸಾ ನುದಂತು—ಕವಚಾಯ ಹುಂ । ಓಂ ಮಾಯಾಂತರಾಯಾಶ್ಚ—ನೇತ್ರತ್ರಯಾಯ ವೌಷಟ್ । ಓಂ ಬಾಹ್ಯಾ ಅಲಕ್ಷ್ಮೀಃ—ಅಸ್ತ್ರಾಯ ಫಟ್ ॥ ಭೂರ್ಭುವಸ್ಸುವರೋಮಿತಿ ದಿಗ್ಬಂಧಃ ॥ ಅಥ ಧ್ಯಾನಂ ॥ ಶ್ರೀಮನ್ಮಂಟಪಮಧ್ಯಚಕ್ರವಿಲಸತ್ತತ್ತ್ವಾರ್ಣ ಸಸಂಸ್ಥಸ್ಯ ಮೇ ದೇವೀಂ ದಕ್ಷಿಣವಕ್ಷಸಿ ಪ್ರಣಯಿನೀಂ ಪದ್ಮಾವರಂ ಬಿಭ್ರತೀಂ। ಕೋಟೀರಾಂಗದಹಾರನೂಪುರಲಸತ್ತಾಟಂಕನಾಸಾಮಣಿಂ ಕಸ್ತೂರೀತಿಲಕಾಂಚಿತಾಂ ಶಶಿಮುಖೀಂ ವಂದೇ ಪರಾಂ ದೇವತಾಂ ॥ ಉದ್ಯದಾದಿತ್ಯಸಂಕಾಶಾಂ ಬಿಲ್ವಕಾನನಮಧ್ಯಗಾಂ । ತನುಮಧ್ಯಾಂ ಶ್ರಿಯಂ ಧ್ಯಾಯೇದಲಕ್ಷ್ಮೀಪರಿಹಾರಿಣೀಂ ॥ ಇತಿ ಧ್ಯಾತ್ವಾ ಜಪಂ ಕುರ್ಯಾತ್ ॥]

ಆರನೆಯ ಋಕ್

ಆದಿತ್ಯವರ್ಣೇ ತಪಸೋಽಧಿಜಾತೋ ವನಸ್ಪತಿಸ್ತವ ವೃಕ್ಷೋಽಥ ಬಿಲ್ವಃ ।
ತಸ್ಯ ಫಲಾನಿ ತಪಸಾನುದಂತು ಮಾಯಾಂತರಾಯಾಶ್ಚ ಬಾಹ್ಯಾ ಅಲಕ್ಷ್ಮೀಃ ॥

॥ ಶ್ರೀ ವಿದ್ಯಾರಣ್ಯಭಾಷ್ಯಂ ॥

ವೃಕ್ಷೋಥೇತ್ಯಥಪದಮಪಿ ಬಾಹುಲಕಾತ್ । ಆದಿತ್ಯವರ್ಣೇ ಆದಿತ್ಯಸ್ಯ ಸೂರ್ಯಸ್ಯ ವರ್ಣ ಇವ ವರ್ಣೋ ಯಸ್ಯಾಸ್ತಸ್ಯಾಸ್ಸಂಬೋಧನಂ । ಹೇ ಶ್ರೀಃ ತವ ತಪಸಃ ನಿಯಮಾದ್ಧೇತೋಃ ವನಸ್ಪತಿಃ "ಅಪುಷ್ಪಾಃ ಫಲವಂತೋ ಯೇ ತೇ ವನಸ್ಪತಯಃ ಸ್ಮೃತಾಃ" ಇತಿ ಶಾಸನಾತ್। ಬಿಲ್ವಃ ಬಿಲ್ವನಾಮಕಃ ವೃಕ್ಷಃ ದ್ರುಮಃ ಅಧಿಜಾತಃ ಪ್ರಾದುರ್ಭೂತಃ ತ್ವತ್ಕರಾದಿತಿ ಶೇಷಃ । "ಬಿಲ್ವೋ ಲಕ್ಷ್ಮ್ಯಾಃ ಕರೇಽಭವದಿತಿ" ವಾಮನಪುರಾಣೇ ಕಾತ್ಯಾಯನವಚನಾತ್ । ಅಥ ಅನಂತರಂ ತಸ್ಯ ಬಿಲ್ವಸ್ಯ ಫಲಾನಿ ಪಕ್ವಶಲಾಟುಕಾನಿ ತಪಸಾ ತ್ವದನುಗ್ರಹೇಣೇತ್ಯರ್ಥಃ । ಅಂತರಾ ಅಂತರಿಂದ್ರಿಯಸಂಬಂಧಿನೀಃ ಮಾಯಾ ಅಜ್ಞಾನಂ ತತ್ಕಾರ್ಯಾಣಿ ಚ । ಬಾಹ್ಯಾಃ ಬಹಿರಿಂದ್ರಿಯಸಂಬಂಧಿನ್ಯಃ ಯಾಸ್ತಾಃ ಅಲಕ್ಷ್ಮೀಃ ಅಶ್ರಿಯಃ ನುದನ್ತು ಅಪನುದನ್ತು ನಿವಾರಯಂತ್ವಿತ್ಯರ್ಥಃ ॥ ೬ ॥

## ॥ ಪೃಥ್ವೀಧರಾಚಾರ್ಯಭಾಷ್ಯಂ ॥

**ಅಥೇತ್ಯನಂತರಾರ್ಥಃ । ಹೇ ಆದಿತ್ಯವರ್ಣೇ ಸೂರ್ಯಸಮಾನಕಾಂತೇ ತಪಸಃ ತಪಶ್ಚರ್ಯಾರ್ಥಂ ವನಸ್ಪತಿಃ ಯೋ ಬಿಲ್ವವೃಕ್ಷಃ ತವ ನಿವಾಸಯೋಗ್ಯಃ ಅಧಿಜಾತಃ ಉತ್ಪನ್ನಃ “ ಬಿಲ್ವಾಟವ್ಯಾಂ ಮಹಾ-ಲಕ್ಷ್ಮೀರೂಪಾಸ್ತೇ ಬಿಲ್ವನಾಯಿಕೇತಿ ” ಭಾರ್ಗವಪುರಾಣಾತ್ । ತಸ್ಯ ತ್ವತ್ಕರಜಾತಸ್ಯ ಬಿಲ್ವವೃಕ್ಷಸ್ಯ “ ತನುಮಧ್ಯಾ ಸ್ವಹಸ್ತಾತ್ತಂ ಬಿಲ್ವದ್ರುಂ ಸಮುಪಾಶ್ರಿತೇತಿ ” ಭಾರ್ಗವತಂತ್ರೋಕ್ತೇಶ್ಚ । ಪ್ರಸೂನಾದೀನಿ ಫಲಾನಿ ಮಾ ಮಾಂ ಪ್ರತಿ ಅಂತರಾಃ ಅಂತರ್ಗತಾಃ ಅಲಕ್ಷ್ಮೀಃ ಯಾ ಬಾಹ್ಯಾಶ್ಚ ಅಲಕ್ಷ್ಮೀಃ ತಾಃ ತವ ತವ ತಪಸಾ ಕರಣೇನ ಮದಾಶ್ರಿತಾನ್ತರ್ಗತಬಾಹ್ಯಾಲಕ್ಷ್ಮೀರೂಪದುರ್ಗತೀಸ್ಸರ್ವಾ ನುದಂತ್ವಿತ್ಯಾಶಯಃ ॥**

॥ ಪ್ರತಿಪದಾರ್ಥ ॥

**ಆದಿತ್ಯವರ್ಣೇ**—ಸೂರ್ಯನ ಕಾಂತಿಯಂತೆ ಅತಿಪ್ರಕಾಶಮಾನವಾದ ಶರೀರಕಾಂತಿಯುಳ್ಳ ಎಲ್ಲೆ ಶ್ರೀದೇವತೆಯೇ। **ತವ**—ನಿನ್ನ । **ತಪಸಾ (ತಪಸಃ)**—ನಿಯಮನದಿಂದ ಅಥವಾ ಅನುಗ್ರಹದಿಂದ। **ವನಸ್ಪತಿಃ**—ಕುಸುಮರಹಿತವಾಗಿ ಫಲವನ್ನು ಬಿಡತಕ್ಕ । **ಬಿಲ್ವಃ ವೃಕ್ಷಃ**—ಬಿಲ್ವ ಎಂಬ ವೃಕ್ಷವು । **ಅಧಿಜಾತಃ**—ಉತ್ಪನ್ನವಾಯಿತು । **ಅಥ**—ಅನಂತರ । **ತಸ್ಯ**—ಆ ಬಿಲ್ವವೃಕ್ಷದ । **ಫಲಾನಿ**—ಫಲಗಳು । **ತಪಸಾ**—ನಿನ್ನ ಅನುಗ್ರಹದಿಂದ । **ಯಾಃ**—ಯಾವ । **ಅಂತರಾ**—ಅಂತರಿಂದ್ರಿಯ ಸಂಬಂಧವಾದ । **ಮಾಯಾ**—ಅಜ್ಞಾನ ಮತ್ತು ಅದರ ದುಷ್ಪರಿಣಾಮಗಳು । **ಬಾಹ್ಯಾಃ ಚ**—ಮತ್ತು ಬಹಿರಿಂದ್ರಿಯ ಸಂಬಂಧವಾದ । **ಅಲಕ್ಷ್ಮೀಃ**—ದುಃಖ ದಾರಿದ್ರ್ಯ ದೌರ್ಭಾಗ್ಯಾದಿಗಳು । **ಯಾಃ (ತಾಃ)**—ಯಾವವಿರುವವೋ ಅವುಗಳನ್ನು । **ನುದಂತು**—ನಾಶ ಮಾಡಲಿ (ನಿವಾರಣೆಮಾಡಲಿ).

॥ ಭಾವಾರ್ಥ ॥

ಸೂರ್ಯನ ಕಾಂತಿಯಂತೆ ಮಹಾಪ್ರಕಾಶದಿಂದ ಬೆಳಗುವ ಶರೀರವುಳ್ಳ ಎಲೈ ಶ್ರೀದೇವತೆಯೇ, ನಿನ್ನ ಆಜ್ಞೆಯಿಂದ (ಅನುಗ್ರಹದಿಂದ) ಹೂವನ್ನು ಬಿಡದೆ ಫಲವನ್ನು ಮಾತ್ರ ಬಿಡುವ ಬಿಲ್ವವೆಂಬ ವೃಕ್ಷವು ಪ್ರಾದುರ್ಭೂತವಾಯಿತು. ಆಬಳಿಕ ಆ ಬಿಲ್ವವೃಕ್ಷದ ಫಲಗಳು ಮಾನವರ ಅಂತರಿಂದ್ರಿಯಗತವಾದ ಅಜ್ಞಾನವನ್ನೂ, ಬಾಹ್ಯೇಂದ್ರಿಯ ಸಂಬಂಧವಾದ ದುಃಖದಾರಿದ್ರ್ಯಗಳನ್ನು ಪರಿಹರಿಸಲಿ.

॥ ವಿಶೇಷವಿಷಯಗಳು ॥

## ॥ ಸಾರಸ್ವತಸಿದ್ಧಾಂ ॥

**ಆದಿತ್ಯವರ್ಣೇ ತರುಣಾರ್ಕವದರುಣವರ್ಣೇ । “ ಅರುಣಾಂ ಕರುಣಾತರಂಗಿತಾಕ್ಷೀಮಿತಿ ” ಬಾಲಾರೂಪಮತ್ರ ಸೂಚಿತಂ ಭವತಿ । ವನಸ್ಪತಿಬಿಲ್ವೋ ವೃಕ್ಷಃ ತವ ತಪಸೋಽಧಿಜಾತಃ । ನೀವಾತಟ-ನೀತಟೇ ಬಿಲ್ವಾರಣ್ಯಂ ತ್ವತ್ತಪಸೋ ಜಾತಮಿತಿ ಭಾವಃ ।**

**ತನುಮಧ್ಯಾ ಪುರಾ ಬಾಲಾ ನೀವಾತಟಮುಪಾಶ್ರಿತಾ ।**
**ಬಿಲ್ವಾರಣ್ಯೇ ತಪಶ್ಚಕ್ರೇ ಲಕ್ಷ್ಮೀರ್ಲೋಕಹಿತಾರ್ಥಿನೀ ॥**

ಇತಿ ಕಾಲಿಕಾಪುರಾಣವಚನಾತ್ । ತಸ್ಯ ಬಿಲ್ವಸ್ಯ ಫಲಾನಿ ತ್ವತ್ತಪಸಾ ಸಶಕ್ತಿಕಾನಿ ಮಾ ಮಯಿ ಸ್ಥಿತಾಃ ಅಂತರಾಃ ಹೃದ್ಗತಾಜ್ಞಾನಪಾಪಾದಿರೂಪಿಣ್ಯಃ ಬಾಹ್ಯಾಃ ದಾರಿದ್ರ್ಯಾದಿರೂಪಿಣ್ಯಃ ಯಾಃ ದುರ್ಗತಯಃ ತಾಃ ಅಲಕ್ಷ್ಮೀಃ ನುದಂತು ನಿರಾಸಯಂತು ।

ಬಿಲ್ವನಾಥಪ್ರಿಯಾಯಾಸ್ತು ನಾರಾಯಣ್ಯಾಸ್ತಪೋಬಲಾತ್ ।
ಬಿಲ್ವಾರಣ್ಯಂ ಫಲತ್ಯದ್ಯ ಲೋಕಾಲಕ್ಷ್ಮೀನಿವೃತ್ತಯೇ ॥

ಇತಿ ಬ್ರಹ್ಮಾಂಡಪುರಾಣವಚನಾತ್ । ತತ್ರತ್ಯಬಿಲ್ವಫಲಸ್ನಾನಾಶನಾದಿಕಮಲಕ್ಷ್ಮೀಪರಿಹಾರಕಂ ಭವತೀತಿ ಭಾವಃ ॥

॥ ಸೌಭಾಗ್ಯ ಸಂಜೀವನೇ ॥

ದ್ವಿತೀಯವರ್ಗೇ ಪ್ರಥಮಾಮೃಚಂ ಜಪೇತ್ಪ್ರೀಣಾತಿ ಬಾಲಾ ತರುಣಾರುಣಶ್ರೀಃ ।
ಯಸ್ಯಾಸ್ತಪೋಯೋಗಬಲೇನ ಬಿಲ್ವಫಲಾನ್ಯಲಕ್ಷ್ಮೀಂ ಶಮಯಂತಿ ನೄಣಾಂ ॥
ತನುಮಧ್ಯಾಂ ಮಹಾಲಕ್ಷ್ಮೀಂ ಬಾಲಾಂ ತ್ರಿಪುರಸುಂದರೀಂ ।
ತ್ರಿಬಿಲ್ವಪತ್ರೈಸ್ಸಂಪೂಜ್ಯ ಸಹಸ್ರಂ ಪ್ರಜಪೇದೃಚಂ ॥
ತಿಷ್ಟುಪ್ ಶಿವಾಕ್ಷರಾ ಯಸ್ಮಾಚ್ಛಿವಲಕ್ಷಜಪಂ ಚರೇತ್ ।
ಬಿಲ್ವಸ್ಯ ಹವಿಷಾ ಹೋಮ ಆಜ್ಯಹೋಮಶ್ಚ ಶಸ್ಯತೇ ॥
ಐಶ್ವರ್ಯಕಾಮೋಽರ್ಚಯೇದ್ದೇವೀಂ ಬಿಲ್ವಪತ್ರೈರ್ದರಿದ್ರಯಾ ।
ರುದ್ರಲಕ್ಷಪ್ರದೀಪೈಶ್ಚ ನೀರಾಜನವಿಧಿಂ ಚರೇತ್ ॥
ಪಕ್ವಬಿಲ್ವಫಲಾಹಾರಸ್ಸತತಂ ನಿಯತವ್ರತಃ ।
ಶಾಂತಿಂ ಕೃತ್ವಾ ವಿಧಾನೇನ ಜಗದಂಬಾಪ್ರಸಾದತಃ ॥
ಅಲಕ್ಷ್ಮೀಂ ಪರಿಭೂಯಾಥ ಮಹಾಲಕ್ಷ್ಮೀಂ ಸ್ಥಿರಾಂ ಲಭೇತ್ ॥

ಇತಿ ॥ ಐಂ ಕ್ಲೀಂ ಸೌಃ ಐಂ ಹ್ರೀಂ ಶ್ರೀಂ। ಇತಿ ಬೀಜಷಟ್ಕೇನ ಅನುಲೋಮವಿಲೋಮಪರಿವರ್ತಿತೇನ ಷಟ್ತ್ರಿಂಶನ್ನ್ಯಾಸಾಃ । ಧ್ಯಾನಂ—

ಉದ್ಯದಾದಿತ್ಯಸಂಕಾಶಾಂ ಬಿಲ್ವಕಾನನಮಧ್ಯಗಾಂ ।
ತನುಮಧ್ಯಾಂ ಶ್ರಿಯಂ ಧ್ಯಾಯೇದಲಕ್ಷ್ಮೀಪರಿಹಾರಿಣೀಂ ॥

ಇತಿ ॥ ಅಸ್ಯ ಮಂತ್ರಸ್ಯ ವಿಧಿವದೇಕಾದಶಲಕ್ಷಜಪಾತ್ ಸಾರಸ್ವತಸಿದ್ಧಿಃ। ಚತುಶ್ಚತ್ವಾರಿಂಶಲ್ಲಕ್ಷಜಪಾನ್ಮಹದೈಶ್ವರ್ಯಭೋಗಭಾಗ್ಯಾಭಿವೃದ್ಧಿಃ । ಸಾವತ್ಪಾರಾಯಣಮಾತ್ರೇಣಾಪಿ ಸಭಕ್ತಿಕೇನ ತದುಚಿತಫಲಸಿದ್ಧಿರಿತಿ ತತ್ತ್ವಂ। ಪಂಚದಶಾಕ್ಷರ್ಯಾಂ ಷಷ್ಠೋ ಹಕಾರಃ ಷಷ್ಠೀಮಿಮಾಮೃಚಂ ಲಕ್ಷಯತಿ। ಷಷ್ಠ್ಯಾಃ ಗಾಯತ್ರ್ಯಾಃ ಪ್ರಣವಾರ್ಥಾಭಿವ್ಯಂಜಕತ್ವೇನ ಹಾರ್ದಾಜ್ಞಾನನಿವೃತ್ತಿದ್ವಾರಾ ಮೋಕ್ಷದಾಯಕತ್ವಂ ಚ ಸಿದ್ಧಮಿತಿ ಫಲಿತಂ ॥

॥ ಸ್ಕಾಂದೇ ಸನತ್ಕುಮಾರಸಂಹಿತಾಯಾಂ ಬಿಲ್ವಮಾಹಾತ್ಮ್ಯೇ ॥

ಶಿವಲಿಂಗಾರ್ಚನೋದ್ಯೋಗೀ ಜಗದ್ರಕ್ಷಣದೀಕ್ಷಿತಃ ।
ಮಹಾವಿಷ್ಣುಸ್ತಪಶ್ಚಕ್ರೇ ತಸ್ಯೈವ ಸಹಚಾರಿಣೀ ॥

ಮಹಾಲಕ್ಷ್ಮೀಸ್ತಪಸ್ತೇಪೇ ಭರ್ತೃಸೇವಾಪರಾಯಣಾ ।
ತದಾ ಬಿಲ್ವತರುರ್ಜಾತೋ ಲಕ್ಷ್ಮೀದಕ್ಷಿಣಹಸ್ತತಃ ॥
ತತ್ಪತ್ರೈರರ್ಚಯಾಮಾಸ ಮಹಾವಿಷ್ಣುಶ್ಚ ಶಂಕರಂ ।
ಬಿಲ್ವಪತ್ರಾರ್ಚಿತಸ್ತುಷ್ಟೋ ಮಹಾದೇವೋ ದಯಾನಿಧಿಃ ।
ಸರ್ವದೇವೋತ್ತಮತ್ವಂ ಚ ಸರ್ವಸ್ವಾತಂತ್ರ್ಯಮೇವ ಚ ।
ಪ್ರದದೌ ಸರ್ವಪೂಜ್ಯತ್ವಂ ಸರ್ವಸಿದ್ಧಿಂ ಚ ವಿಷ್ಣವೇ ॥
ಶ್ರೀವೃಕ್ಷ ಇತಿ ವಿಖ್ಯಾತೋ ಬಿಲ್ವದ್ರುರ್ದೇವಪೂಜಿತಃ ।
ತ್ರಿಗುಣೈಸ್ತ್ರಿದಲೈಃ ಪತ್ರೈಸ್ತ್ರಿಮೂರ್ತಿಪ್ರೀತಿದಾಯಕಃ ॥
ತ್ರಯೀಮಯೋಽಯಂ ವಿಖ್ಯಾತೋ ನೀತೋ ದೇವೈಶ್ಚ ನಂದನಂ ।
ಕೈಲಾಸೇಽಪಿ ಚ ವೈಕುಂಠೇ ಶ್ವೇತದ್ವೀಪೇ ಸುರಾಲಯೇ ॥
ಮಂದರಾದಿಷು ಪುಣ್ಯೇಷು ಕ್ಷೇತ್ರೇಷು ಸಕಲೇಷ್ವಪಿ ।
ಪೂಜ್ಯಂತೇ ಬಿಲ್ವತರವಃ ಶ್ರೀವೃಕ್ಷಾ ಇತಿ ನಾರದ ॥
ಫಲಾನಿ ಶ್ರೀತಪೋಯೋಗಾದ್ಯಸ್ಯಾಲಕ್ಷ್ಮೀನಿರಾಸನೇ ।
ಲಕ್ಷ್ಮೀಪ್ರಾಪ್ತ್ಯೈ ಪಟೀಯಾಂಸಿ ಸೇವ್ಯಂತೇ ಪುಣ್ಯಶಾಲಿಭಿಃ ॥
ಜ್ಞಾನಪ್ರದಮಿಮಂ ವೃಕ್ಷಂ ದಾರಿದ್ರ್ಯಪರಿಹಾರಕಂ ।
ಶ್ರೀಪ್ರಿಯಂ ಯೋಽರ್ಚಯೇದ್ಬಿಲ್ವಂ ಸ ನರೋ ಭಾಗ್ಯವಾನ್ಭವೇತ್ ॥
ಶ್ರೀಯಂತ್ರಂ ಬಿಲ್ವಪತ್ರೈಸ್ತು ಶಿವಲಿಂಗಮಥಾಪಿ ವಾ ।
ಯೋಽರ್ಚಯೇದನ್ವಹಂ ಭಕ್ತ್ಯಾ ಪುರುಷಾರ್ಥಾನ್ಸಮಶ್ನುತೇ ॥

ಇತ್ಯಾದಿ । ಕಾಲಿದಾಸಕೃತದೇವೀಸ್ತೋತ್ರೇ ಚ ಬಿಲ್ವಾರ್ಚನಪ್ರಾಶಸ್ತ್ಯಮುಕ್ತಂ॥ ಚಂಡಿ ತ್ವಚ್ಚರಣಾಂಬುಜಾರ್ಚನವಿಧೌ ಬಿಲ್ವೀದಲೋಲ್ಲುಂಠನಾತ್ತ್ರುಟ್ಯತ್ಕಂಟಕಕೋಟಿಭಿಃ ಪರಿಚಯಂ ಯೇಷಾಂ ನ ಜಗ್ಮುಃ ಕರಾಃ । ತೇ ದಂಡಾಂಕುಶಚಕ್ರಚಾಪಕುಲಿಶಶ್ರೇಣೀಶತೈರಂಚಿತಾ ಜಾಯಂತೇ ಪೃಥಿವೀಭುಜಃ ಕಥಮಿವಾಂಭೋಜಪ್ರಭೈಃ ಪಾಣಿಭಿಃ ॥ ಇತಿ ೬ ॥

## ಅನುವಾದವು

**ಸಾರಸ್ವತ ಸಿದ್ಧಿಯೆಂಬ ಗ್ರಂಥದಲ್ಲಿ** ಈ ರೀತಿ ಅರ್ಥವಿವರಣೆ ಇದೆ—

**ಆದಿತ್ಯವರ್ಣೇ**—ಆಗತಾನೆ ಉದಯಿಸುತ್ತಿರುವ ಬಾಲಸೂರ್ಯನಂತೆ ಕೆಂಪುಛಾಯೆಯುಳ್ಳ ಶರೀರ ಕಾಂತಿಯಿಂದ ಬೆಳಗುತ್ತಿರುವವಳು ಎಂದರ್ಥವು **ಅರುಣಾಂ ಕರುಣಾತರಂಗಿತಾಕ್ಷೀಂ** ಎಂಬಂತೆ ಇಲ್ಲಿ ಬಾಲ ಸೂರ್ಯನ ಕಾಂತಿಯನ್ನು ದೃಷ್ಟಾಂತವಾಗಿ ಹೇಳಿದೆ

**ವನಸ್ಪತಿಃ ಬಿಲ್ವಃ—ಅಪುಷ್ಪಾಃ ಫಲವಂತೋ ಯೇ ತೇ ವನಸ್ಪತಯಃ ಸ್ಮೃತಾಃ** । ಸಾಧಾರಣವಾಗಿ ವೃಕ್ಷಗಳು ಮೊದಲು ಹೂವುಗಳನ್ನು ಬಿಟ್ಟು ಅನಂತರ ಫಲಭರಿತವಾಗುವವು. ಆದರೆ ಕೆಲವು ಜಾತಿಯ ವೃಕ್ಷಗಳು ಪುಷ್ಪವನ್ನು ಬಿಡದೆ ಫಲವನ್ನೇ ಬಿಡುವವು. ಇವುಗಳನ್ನು ವನಸ್ಪತಿ ಎಂದು ಕರೆಯುವರು. ಬಿಲ್ವವೃಕ್ಷವು ಈ ವನಸ್ಪತಿ

ಜಾತಿಗೆ ಸೇರಿದುದು. ಇಂತಹ ಬಿಲ್ವವೃಕ್ಷವು ನಿನ್ನ ಅನುಗ್ರಹದಿಂದ ಉತ್ಪನ್ನವಾಯಿತು ಎಂದು ದೇವಿಯ ಮಹತ್ಸ್ವರೂಪವನ್ನು ಇಲ್ಲಿ ವರ್ಣಿಸಿದೆ. ಕೆಲವುಕಡೆ ಈ ದೇವಿಯು ತಪಸ್ಸುಮಾಡುವುದಕ್ಕಾಗಿ ನೀವಾ ಎಂಬ ನದಿಯ ತೀರದಲ್ಲಿ ಬಿಲ್ವವೃಕ್ಷಗಳ ವನವು ಉತ್ಪನ್ನವಾಯಿತೆಂದು ಹೇಳಿದೆ—

**ತನುಮಧ್ಯಾ ಪುರಾ ಬಾಲಾ ನೀವಾತಟಮುಪಾಶ್ರಿತಾ ।**
**ಬಿಲ್ವಾರಣ್ಯೇ ತಪಶ್ಚಕ್ರೇ ಲಕ್ಷ್ಮೀರ್ಲೋಕಹಿತಾರ್ಥಿನೀ ॥**

ಎಂದು ಕಾಲಿಕಾಪುರಾಣವಚನವಿರುವುದು ಎಂದರೆ ಪೂರ್ವದಲ್ಲಿ ಕೃಶವಾದ ಉದರವುಳ್ಳವಳೂ, ಬಾಲಿಕೆಯೂ ಆದ ಲಕ್ಷ್ಮಿಯು ನೀವಾ ಎಂಬ ನದಿಯ ತೀರದಲ್ಲಿದ್ದ ಬಿಲ್ವಾರಣ್ಯದಲ್ಲಿ ಲೋಕಹಿತಾರ್ಥವಾಗಿ ತಪಸ್ಸನ್ನು ಮಾಡಿದಳು ಎಂದಿದೆ. ಈ ಬಿಲ್ವವೃಕ್ಷದ ಶ್ರೇಷ್ಠತೆ ಏನು ಎಂದರೆ, ಅದರ ಮಾಹಾತ್ಮ್ಯವನ್ನು ಈ ಮಂತ್ರದ ಉತ್ತರಾರ್ಧದಲ್ಲಿ ವಿವರಿಸಲಾಗಿದೆ.

**ಬಿಲ್ವನಾಥಪ್ರಿಯಾಯಾಸ್ತೇ ನಾರಾಯಣ್ಯಾಸ್ತಪೋಬಲಾತ್ ।**
**ಬಿಲ್ವಾರಣ್ಯಂ ಫಲತ್ಯದ್ಯ ಲೋಕಾಲಕ್ಷ್ಮೀನಿವೃತ್ತಯೇ ॥**

ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ. ಎಂದರೆ ಲಕ್ಷ್ಮೀದೇವಿಯ ತಪೋಬಲದಿಂದ ಈಶ್ವರನಿಗೆ ಪ್ರಿಯವಾದ ಬಿಲ್ವಾರಣ್ಯವೆಂಬ ಬಿಲ್ವವೃಕ್ಷಗಳ ವನವು ಲೋಕದಲ್ಲಿರುವ ಜನರ ದಾರಿದ್ರ್ಯದಿದೌರ್ಭಾಗ್ಯಪರಿಹಾರಕ್ಕಾಗಿ ಈಗಲೂ ಫಲಿಸುತ್ತದೆ ಎಂದು ಹೇಳಿದೆ. ಎಂದರೆ ಆ ಬಿಲ್ವಾರಣ್ಯಸ್ಥವಾದ ಬಿಲ್ವವೃಕ್ಷದ ಫಲಗಳಿಂದ ಸ್ನಾನಾಶನಾದಿಗಳನ್ನು ಮಾಡಿದರೆ ಅಶ್ರೇಯಸ್ಸು, ದಾರಿದ್ರ್ಯ ಮುಂತಾದ ಸಂಕಟಗಳು ಪರಿಹಾರವಾಗುವವು ಎಂದಭಿಪ್ರಾಯವು.

**ಸೌಭಾಗ್ಯಸಂಜೀವನವೆಂಬ ಗ್ರಂಥದಲ್ಲಿ—**

ಈ ಶ್ರೀಸೂಕ್ತದ ಎರಡನೆಯ ವರ್ಗದ ಮೊದಲನೆಯ ಋಕ್ಕನ್ನು ಎಂದರೆ ಈ ಸೂಕ್ತದ ಆರನೆಯ ಋಕ್ಕನ್ನು ಜಪಮಾಡುವುದರಿಂದ ಬಾಲಾರ್ಕಸೂರ್ಯನಂತೆ ತೇಜಃಪುಂಜಶರೀರಾನ್ವಿತಳೂ, ಬಾಲಿಕೆಯೂ ಆದ ಶ್ರೀದೇವಿಯು ಸಂತುಷ್ಟಳಾಗುವಳು. ಆ ದೇವಿಯ ತಪೋಯೋಗಬಲದಿಂದ ಬಿಲ್ವಫಲಗಳು ಮನುಷ್ಯರ ದುಃಖದಾರಿದ್ರ್ಯಗಳನ್ನು ನಾಶಮಾಡುವವು ಎಂದು ಹೇಳಿದೆ.

ಈ ಮಹಾಲಕ್ಷ್ಮಿಯೆಂಬ ದೇವತೆಯು ತೆಳ್ಳಗಿರುವ ಶರೀರದಿಂದ ಬೆಳಗುತ್ತಿರುವಳು. ಬಾಲಿಕಾರೂಪದಿಂದಲೂ, ತ್ರಿಪುರಸುಂದರೀ ಎಂಬ ಹೆಸರಿನಿಂದಲೂ ಪ್ರಸಿದ್ಧಳಾದ ಈ ಮಹಾಲಕ್ಷ್ಮಿಯನ್ನು ಬಿಲ್ವಪತ್ರೆಗಳಿಂದ ಪೂಜೆಮಾಡಿ ಈ ಋಕ್ಕನ್ನು ಸಹಸ್ರ ಸಂಖ್ಯೆಯಷ್ಟು ಜಪಮಾಡಬೇಕು. ಈ ರೀತಿ ಒಂದುಲಕ್ಷ ಜಪಮಾಡಿದ ಮೇಲೆ ಬಿಲ್ವಪತ್ರೆ, ಹವಿಸ್ಸು (ಚರು, ಅನ್ನ) ಆಜ್ಯ ಇವುಗಳಿಂದ ಅಗ್ನಿಯಲ್ಲಿ ಮಂತ್ರಪೂರ್ವಕವಾಗಿ ಹೋಮಮಾಡಬೇಕು. ದೇವಿಯನ್ನು ನಾನಾವಿಧ ಆಭರಣಾದಿಗಳಿಂದಲೂ ಅರಿಸಿನ ಮೊದಲಾದ ಮಂಗಳದ್ರವ್ಯಗಳಿಂದಲೂ ಪೂಜಿಸಿ ಒಂದುಲಕ್ಷ ಸಂಖ್ಯೆಯಷ್ಟು ದೀಪಗಳನ್ನು ಹಚ್ಚಿ ಕರ್ಪೂರನೀರಾಜನವನ್ನು ಬೆಳಗಬೇಕು ಅನಂತರ ಸಾಧಕನು ನಿಯಮದಿಂದ ವ್ರತವನ್ನಾಚರಿಸುತ್ತಾ ಜಪಕಾಲದಲ್ಲಿ ಚೆನ್ನಾಗಿ ಪಕ್ವವಾದ ಬಿಲ್ವಫಲಗಳನ್ನು ಆಹಾರವನ್ನಾಗಿ ಸೇವಿಸುತ್ತಾ ಹೋಮಾದಿಗಳನ್ನು ಸಾಂಗಗೊಳಿಸಬೇಕು. ಹೀಗೆ ಮಾಡಿದಲ್ಲಿ ಜಗನ್ಮಾತೆಯಾದ ಶ್ರೀದೇವಿಯ ಅನುಗ್ರಹದಿಂದ ದುಃಖದಾರಿದ್ರ್ಯದಿಗಳು ನಾಶವಾಗಿ ಶಾಶ್ವತವಾದ ಐಶ್ವರ್ಯಾದಿಸಂಪತ್ತುಗಳು ಲಭಿಸುವವು ಈ ಋಕ್ಕಿನ ಜಪ

**ಕಾಲದಲ್ಲಿ** ಐಂ, ಕ್ಲೀಂ ಸೌಃ ಐಂ ಹ್ರೀಂ ಶ್ರೀಂ ಎಂಬ ಆರು ಬೀಜಾಕ್ಷರಗಳನ್ನು ಅನುಲೋಮವಿಲೋಮಕ್ರಮದಿಂದ ಪಠಿಸುತ್ತಾ ಮುವತ್ತಾರು ನ್ಯಾಸಗಳನ್ನು ಮಾಡಿ—

**ಉದ್ಯದಾದಿತ್ಯಸಂಕಾಶಾಂ ಬಿಲ್ವಕಾನನಮಧ್ಯಗಾಂ ।**
**ತನುಮಧ್ಯಾಂ ಶ್ರಿಯಂ ಧ್ಯಾಯೇದಲಕ್ಷ್ಮೀಪರಿಹಾರಿಣೀಂ ॥**

ಉದಯಿಸುತ್ತಿರುವ ಸೂರ್ಯನಂತೆ ಶರೀರಕಾಂತಿಯಿಂದ ಬೆಳಗುತ್ತಿರುವಳೂ, ಬಿಲ್ವಾರಣ್ಯ ಮಧ್ಯದಲ್ಲಿ ಇರುವವಳೂ, ಕೃಶೋದರಿಯೂ, ದುಃಖದಾರಿದ್ರ್ಯಗಳನ್ನು ಪರಿಹಾರಮಾಡುವವಳೂ ಆದ ಶ್ರೀದೇವತೆಯನ್ನು ಧ್ಯಾನಿಸುತ್ತೇನೆ ಎಂಬ ಅರ್ಥವಿರುವ ಮೇಲಿನ ಶ್ಲೋಕದಿಂದ ಧ್ಯಾನಮಾಡಬೇಕು. ಈ ಮಂತ್ರವನ್ನು ವಿಧಿಪೂರ್ವಕವಾಗಿ ಹನ್ನೊಂದು ಲಕ್ಷ ಸಂಖ್ಯೆಯಷ್ಟು ಜಪಮಾಡಿದರೆ ಸರಸ್ವತೀ ದೇವಿಯ ಅನುಗ್ರಹವುಂಟಾಗುವುದು. ನಲವತ್ತುನಾಲ್ಕು ಲಕ್ಷ ಜಪ ಮಾಡಿದರೆ ಮಹದೈಶ್ವರ್ಯ ಭೋಗಭಾಗ್ಯಾದಿಗಳು ಲಭಿಸುವವು. ಭಕ್ತಿಯಿಂದ ಮೇಲೆ ಹೇಳಿದ ಸಂಖ್ಯೆಯಷ್ಟು ಮಂತ್ರಪಾರಾಯಣ ಮಾತ್ರದಿಂದಲೇ ಅಷ್ಟೇ ಫಲಸಿದ್ಧಿಯು ಉಂಟಾಗುವುದು. ಪಂಚದಶಾಕ್ಷರೀ ಮಹಾಮಂತ್ರದ ಆರನೆಯ ಅಕ್ಷರವಾದ ಹಕಾರವು ಈ ಆರನೆಯ ಋಕ್ಕನ್ನು ನಿರ್ದೇಶಿಸುವುದು. ಈ ಆರನೆಯ ಋಕ್ಕು ಗಾಯತ್ರೀ ಮಹಾಮಂತ್ರ ಮತ್ತು ಪ್ರಣವಮಂತ್ರದ ಮುಖ್ಯಾರ್ಥವನ್ನೊಳಗೊಂಡಿರುವುದರಿಂದ ಈ ಋಕ್ಕಿನ ಜಪವು ಅಜ್ಞಾನನಿವೃತ್ತಿದ್ವಾರಾ ಮೋಕ್ಷವನ್ನು ಒದಗಿಸಿಕೊಡುವುದೆಂಬ ವಿಷಯವು ಅನುಭವಸಿದ್ಧವಾಗಿದೆ.

**ಸ್ಕಾಂದಪುರಾಣದ ಸನತ್ಕುಮಾರಸಂಹಿತೆಯಲ್ಲಿ** ಬಿಲ್ವಮಹಾತ್ಮ್ಯೆಯ ವರ್ಣನೆಯನ್ನು ಹೇಳುವಾಗ ಈ ರೀತಿ ವಿವರಿಸಲಾಗಿದೆ—

ಒಂದಾನೊಂದು ಕಾಲದಲ್ಲಿ ಲೋಕರಕ್ಷಣೆಯಲ್ಲಿ ಪ್ರವೃತ್ತನಾಗಿದ್ದ ಶ್ರೀ ಮಹಾವಿಷ್ಣುವು ಶಿವಲಿಂಗಾರ್ಚನೆಯಲ್ಲಿ ನಿರತನಾಗಿ ತಪಸ್ಸನ್ನು ಮಾಡುತ್ತಿದ್ದನು. ಆ ವಿಷ್ಣುವಿನ ಪತ್ನಿಯಾದ ಮಹಾಲಕ್ಷ್ಮಿಯೂ ಸಹ ತನ್ನ ಪತಿಯನ್ನು ಸೇವಿಸುತ್ತಾ ತಾನೂ ತಪಸ್ಸನ್ನು ಮಾಡುತ್ತಿದ್ದಳು. ಆಗ ಆ ಲಕ್ಷ್ಮಿಯ ಬಲಗೈಯಿಂದ ಬಿಲ್ವವೃಕ್ಷವು ಉತ್ಪನ್ನವಾಯಿತು. ಮಹಾವಿಷ್ಣುವು ಆ ಬಿಲ್ವವೃಕ್ಷದ ಪತ್ರೆಗಳಿಂದ ಶಿವನನ್ನು ಪೂಜಿಸಿದನು. ವಿಷ್ಣುವು ಮಾಡಿದ ಬಿಲ್ವಪತ್ರಾರ್ಚನೆಯಿಂದ ಮಹಾದೇವನಾದ ಶಿವನು ಸಂತುಷ್ಟನಾಗಿ ದಯಾರ್ದ್ರದೃಷ್ಟಿಯಿಂದ ವಿಷ್ಣುವಿಗೆ ಸಮಸ್ತ ದೇವತೆಗಳಲ್ಲಿಯೂ ಶ್ರೇಷ್ಠತ್ವವನ್ನೂ, ಸರ್ವಸ್ವಾತಂತ್ರ್ಯವನ್ನೂ, ಸರ್ವಪೂಜ್ಯತ್ವವನ್ನೂ, ಸರ್ವಸಿದ್ಧಿಯನ್ನೂ ಅನುಗ್ರಹಿಸಿದನು. ಅಲ್ಲಿಂದಾಗಾಯಿತು ಬಿಲ್ವವೃಕ್ಷಕ್ಕೆ ಶ್ರೀವೃಕ್ಷವೆಂದು ಹೆಸರು ಪ್ರಸಿದ್ಧವಾಯಿತು. ಮತ್ತು ಆ ಬಿಲ್ವವೃಕ್ಷವು ದೇವತೆಗಳಿಗೂ ಪೂಜಾರ್ಹವಾಯಿತು. ಮೂರು ಎಲೆಗಳಿಂದ ಕೂಡಿದ ಅದರ ದಳವು ಸತ್ತ್ವರಜಸ್ತಮೋಗುಣಗಳೆಂಬ ತ್ರಿಗುಣಗಳ ಸಂಕೇತವಾಗಿ ಬ್ರಹ್ಮ ವಿಷ್ಣು ಮಹೇಶ್ವರರೆಂಬ ತ್ರಿಮೂರ್ತಿಗಳಿಗೂ ಪ್ರೀತಿದಾಯಕವಾಯಿತು. ಇದರ ದಳದಲ್ಲಿರುವ ಮೂರು ಪತ್ರಗಳೂ ಋಗ್ಯಜುಸ್ಸಾಮಗಳೆಂಬ ಮೂರು ವೇದಗಳ ಸ್ವರೂಪವೆಂದು ಪ್ರಸಿದ್ಧಿಯನ್ನು ಪಡೆಯಿತು. ದೇವತೆಗಳು ಆ ವೃಕ್ಷವನ್ನು ತೆಗೆದುಕೊಂಡು ಹೋಗಿ ತಮ್ಮ ನಂದನ ವನದಲ್ಲಿ ನೆಟ್ಟರು. ಇಷ್ಟೇ ಅಲ್ಲದೆ, ಎಲೈ ನಾರದನೇ ಕೇಳು. ಶ್ರೀವೃಕ್ಷವೆಂಬ ಹೆಸರಿನಿಂದ ಪ್ರಖ್ಯಾತವಾದ ಆ ಬಿಲ್ವವೃಕ್ಷವು ಕೈಲಾಸ, ವೈಕುಂಠ, ಶ್ವೇತದ್ವೀಪ ಮೊದಲಾದ ಸ್ಥಳಗಳಲ್ಲಿಯೂ, ಸ್ವರ್ಗದಲ್ಲಿಯೂ, ದೇವಮಂದಿರಗಳಲ್ಲಿಯೂ, ಸಮಸ್ತ ಪುಣ್ಯಕ್ಷೇತ್ರಗಳಲ್ಲಿಯೂ ವೃದ್ಧಿಯನ್ನೈದುತ್ತಾ ಸಕಲರಿಂದಲೂ ಪೂಜಿಸಲ್ಪಡುತ್ತಿರುವುದು. ಲಕ್ಷ್ಮಿಯು ಮಾಡಿದ ತಪೋಯೋಗಬಲದಿಂದ ಈ ಬಿಲ್ವವೃಕ್ಷದ ಫಲಗಳು ಮಹತ್ತ್ವವನ್ನು ಪಡೆದವು. ಲಕ್ಷ್ಮೀದೇವಿಯ ಅನುಗ್ರಹವನ್ನು ಬಯಸುವ ಪುಣ್ಯಾತ್ಮರು ಈ ವೃಕ್ಷದ ಫಲಗಳನ್ನು ಸೇವಿಸು

ತ್ತಾರೆ. ಈ ವೃಕ್ಷದ ಮಹಿಮೆಯು ಅತಿಶಯವಾಗಿರುವುದು. ಇದನ್ನು ಪೂಜಿಸುವುದರಿಂದ ಜ್ಞಾನಪ್ರಾಪ್ತಿಯಾಗುವುದು. ದಾರಿದ್ರ್ಯಪರಿಹಾರವಾಗುವುದು. ಶ್ರೀದೇವಿಗೆ ಪ್ರಿಯತಮವಾದ ಈ ವೃಕ್ಷವನ್ನು ಪೂಜಿಸುವ ಪುರುಷನು ಭಾಗ್ಯವಂತನಾಗುವನು ಮತ್ತು ಯಾವ ಪುರುಷನು ಶ್ರೀಯಂತ್ರವನ್ನೂ, ಶಿವಲಿಂಗವನ್ನೂ ಭಕ್ತಿಯುತನಾಗಿ ಬಿಲ್ವಪತ್ರಿಗಳಿಂದ ಪ್ರತಿದಿನವೂ ಪೂಜಿಸುವನೋ ಆ ಪುರುಷನು ಸಮಸ್ತ ಪುರುಷಾರ್ಥಗಳನ್ನೂ ಪಡೆದು ಸುಖಿಸುವನು.

ಕಾಳಿದಾಸನೆಂಬ ಮಹಾಕವಿಯಿಂದ ಪ್ರಣೀತವಾದ ದೇವೀಸ್ತೋತ್ರದಲ್ಲಿ ಈ ಬಿಲ್ವಾರ್ಚನೆಯ ಮಹಿಮೆಯನ್ನು ಈ ರೀತಿ ವರ್ಣಿಸಿದೆ—

**ಚಂಡಿ ತ್ವಚ್ಚರಣಾಂಬುಜಾರ್ಚನವಿಧೌ ಬಿಲ್ವೀದಲೋಲ್ಲುಂಠನಾತ್**
**ತ್ರುಟ್ಯತ್ಕಂಟಕಕೋಟಿಭಿಃ ಪರಿಚಯಂ ಯೇಷಾಂ ನ ಜಗ್ಮುಃ ಕರಾಃ ।**
**ತೇ ದಂಡಾಂಕುಶಚಕ್ರಚಾಪಕುಲಿಶ ಶ್ರೇಣೀಶತೈರಂಚಿತಾ**
**ಜಾಯಂತೇ ಪೃಥಿವೀಭುಜಃ ಕಥಮಿವಾಂಭೋಜಪ್ರಭೈಃ ಪಾಣಿಭಿಃ ॥**

ಎಲೈ ಚಂಡಿಯೇ, ನಿನ್ನ ಚರಣಾರವಿಂದಗಳನ್ನು ಅರ್ಚನೆಮಾಡುವಾಗ ಯಾರು ಬಿಲ್ವಪತ್ರಿಗಳಿಂದ ಭಕ್ತಿಯುತವಾಗಿ ಪೂಜಿಸುವರೋ ಆ ಪುರುಷರ ಹಸ್ತಗಳಿಗೆ ಕೋಟಿಗಟ್ಟಲೆ ಕಷ್ಟಸಂಕಟಗಳ ಪರಿಚಯವು ಯಾವಾಗಲೂ ಆಗುವುದಿಲ್ಲ. ಎಂದರೆ ದೇವಿಯನ್ನು ಪೂಜಿಸಿದ ಆದ ಕೈಗಳಿಗೆ ಕಷ್ಟಕೆಲಸಗಳನ್ನು ಮಾಡುವ ಸಂಭವವಿರುವುದಿಲ್ಲ. ಆ ಪುರುಷರು ತಾವು ಮಾಡಿದ ಬಿಲ್ವಾರ್ಚನದ ಮಾಹಾತ್ಮ್ಯದಿಂದ ದಂಡ, ಅಂಕುಶ, ಚಕ್ರ, ಬಿಲ್ಲು, ವಜ್ರಾಯುಧ ಮೊದಲಾದ ಅನೇಕ ರಾಜಲಕ್ಷಣಗಳಿಂದ ಕೂಡಿದ ಕಮಲಗಳಂತೆ ಕೋಮಲವಾದ ಹಸ್ತವುಳ್ಳ ರಾಜರಾಗಿ ಹುಟ್ಟುವರಲ್ಲಾ, ಇದು ಹೇಗೆ ಎಂಬುದು ವಿಸ್ಮಯಕರವಾಗಿದೆ.

ಇಲ್ಲಿಗೆ ಆರನೆಯ ಋಕ್ಕಿನ ಅರ್ಥವಿವರಣೆ ಸಮಾಪ್ತವು.

॥ ಅಥ ಸಪ್ತಮೀ ಋಕ್ ॥

**[ಓಂ ಅಸ್ಯ ಶ್ರೀಶ್ರೀಸೂಕ್ತಸಪ್ತಮಋಙ್ಮಹಾಮಂತ್ರಸ್ಯ । ವಾಸುದೇವ ಋಷಿಃ । ಮಣಿಮಾಲಿನೀ ಲಕ್ಷ್ಮೀರ್ದೇವತಾ । ಅನುಷ್ಟುಪ್ ಛಂದಃ । ಉಂ ಶ್ರೀಂ ಬೀಜಂ । ಮಂ ಬ್ಲೂಂ ಶಕ್ತಿಃ । ಶ್ರೀಂ ಕೀಲಕಂ । ಸರ್ವಕಾಮ್ಯಾರ್ಥಸಿದ್ಧ್ಯರ್ಥೇ ರಾಜರಾಜೇಶ್ವರೀ ಮಹಾಲಕ್ಷ್ಮೀಪ್ರಸಾದಸಿದ್ಧ್ಯರ್ಥೇ ಜಪೇ ವಿನಿಯೋಗಃ ॥**

**ಓಂ ಉಪೈತು ಮಾಂ-ಅಂಗುಷ್ಠಾಭ್ಯಾಂ ನಮಃ । ಓಂ ದೇವಸಖಃ-ತರ್ಜನೀಭ್ಯಾಂ ನಮಃ । ಓಂ ಕೀರ್ತಿಶ್ಚ ಮಣಿನಾ ಸಹ-ಮಧ್ಯಮಾಭ್ಯಾಂ ನಮಃ । ಓಂ ಪ್ರಾದುರ್ಭೂತೋಽಸ್ಮಿ-ಅನಾಮಿಕಾಭ್ಯಾಂ ನಮಃ । ಓಂ ರಾಷ್ಟ್ರೇಽಸ್ಮಿನ್-ಕನಿಷ್ಠಿಕಾಭ್ಯಾಂ ನಮಃ । ಓಂ ಕೀರ್ತಿಮೃದ್ಧಿಂ ದದಾತು ಮೇ-ಕರತಲಕರಪೃಷ್ಠಾಭ್ಯಾಂ ನಮಃ ॥ ಓಂ ಉಪೈತು ಮಾಂ-ಹೃದಯಾಯ ನಮಃ ಓಂ ದೇವಸಖಃ-ಶಿರಸೇ ಸ್ವಾಹಾ । ಓಂ ಕೀರ್ತಿಶ್ಚ ಮಣಿನಾ ಸಹ-ಶಿಖಾಯೈ ವಷಟ್ । ಪ್ರಾದುರ್ಭೂತೋಽಸ್ಮಿ-ಕವಚಾಯ ಹುಂ । ಓಂ ರಾಷ್ಟ್ರೇಽಸ್ಮಿನ್-ನೇತ್ರತ್ರಯಾಯ ವೌಷಟ್ । ಓಂ ಕೀರ್ತಿಮೃದ್ಧಿಂ ದದಾತು ಮೇ-ಅಸ್ತ್ರಾಯ ಫಟ್ । ಭೂರ್ಭುವಸ್ಸುವರೋಮಿತಿ ದಿಗ್ಬಂಧಃ ॥ ಧ್ಯಾನಂ ॥ ರಾಜರಾಜೇಶ್ವರೀಂ ಲಕ್ಷ್ಮೀಂ ವರದಾಂ**

ಮಣಿಮಾಲಿನೀಂ । ದೇವೀಂ ದೇವಪ್ರಿಯಾಂ ಕೀರ್ತಿಂ ವಂದೇ ಕಾಮ್ಯಾರ್ಥಸಿದ್ಧಯೇ ॥ ಹೇಮಾಭಾಂ ಪೀತವಸ್ತ್ರಾಂ ಕುಚಭರನಮಿತಾಂ ಮಧ್ಯದೇಶೇ ಕೃಶಾಂಗೀಂ ಕಾಂಸ್ಯಂ ಪುಲ್ಲಾಂಭೋಜಯುಗ್ಮಾಂ ಕರಕಮಲಯುಗೇ ಧಾರಯಂತೀಮಭೀತಿಂ । ಮುಕ್ತಾಹಾರಾಮುದಾರಾಂ ಮಣಿಮಯಮುಕುಟಾಂ ಶೋಭಮಾನಾಂ ಚ ಪದ್ಮಾಂ ಭಕ್ತಾಭೀಷ್ಟಾರ್ಥದಾನಪ್ರಥಿತಗುಣಗಣಾಂ ನೌಮ್ಯಹಂ ವಿಶ್ವಭೂತಿಂ ॥ ಇತಿ ಧ್ಯಾತ್ವಾ ॥

॥ ಏಳನೆಯ ಋಕ್ ॥

ಓಂ ಉಪೈತು ಮಾಂ ದೇವಸಖಃ ಕೀರ್ತಿಶ್ಚ ಮಣಿನಾ ಸಹ ।

ಪ್ರಾದುರ್ಭೂತೋಽಸ್ಮಿ ರಾಷ್ಟ್ರೇಽಸ್ಮಿನ್ ಕೀರ್ತಿಮೃದ್ಧಿಂ ದದಾತು ಮೇ ॥

॥ ಶ್ರೀ ವಿದ್ಯಾರಣ್ಯಭಾಷ್ಯಂ ॥

ಹೇ ಶ್ರೀಃ । ದೇವಸಖಃ ದೇವೋ ಮಹಾದೇವಸ್ತಸ್ಯ ಸಖಾ ಕುಬೇರಃ ಕೀರ್ತಿಃ ಕೀರ್ತ್ಯಭಿಮಾನಿನೀ ತದಾಖ್ಯಾ ದಕ್ಷಕನ್ಯಾ ದೇವತಾ ಮಣಿನಾ ಚಿಂತಾಮಣಿನಾ ಮಣಿಭದ್ರೇಣ ಕೋಶಾಧ್ಯಕ್ಷೇಣ ವಾ ಸಹ ಸಹಿತಃ ಅಹಂ ಅಸ್ಮಿನ್ ರಾಷ್ಟ್ರೇ ಜನಪದೇ ಪ್ರಾದುರ್ಭೂತಃ ಉತ್ಪನ್ನಃ ಅಸ್ಮಿ ಆಸಂ । ಸ ದೇವಸಖಸ್ತತ್ಸಂಬಂಧಿಸಂಗತ್ಯಾ ಕೀರ್ತಿಂ ಯಶಃ ಕೋಶಂ ವಾ ಋದ್ಧಿಂ ಸರ್ವಭೋಗ್ಯಸಮೃದ್ಧಿಂ ಮೇ ಮಹ್ಯಂ ದದಾತು ಯಚ್ಛತು ॥

॥ ಪೃಥ್ವೀಧರಭಾಷ್ಯಂ ॥

ದೇವಸಖಃ ಕುಬೇರಃ ಕೀರ್ತಿಃ ಯಶಶ್ಚ ಮಣಿನಾ ಚಿಂತಾಮಣಿನಾ ಸಹ ಮಾಮುಪೈತು ಮಾಂ ಪ್ರಾಪ್ನೋತು । ಅಸ್ಮಿನ್ ರಾಷ್ಟ್ರೇ ಮರ್ತ್ಯಲೋಕೇ ಪ್ರಾದುರ್ಭೂತೋಽಸ್ಮಿ ಜಾತಃ । ತ್ವಯಾಽನ್ವೇಷಣೀಯಸ್ತ್ವತ್ಕಟಾಕ್ಷಲಕ್ಷ್ಯ ಇತಿ ಯಾವತ್ । ಸ ದೇವೋ ಮೇ ಮಹ್ಯಂ ಕೀರ್ತಿಂ ದಿಗಂತವಿಶ್ರಾಂತಂ ಯಶಃ ಋದ್ಧಿಮಷ್ಟೈಶ್ವರ್ಯಸಮೃದ್ಧಿಂ ಚ ದದಾತು ಪ್ರಯಚ್ಛತು ॥

॥ ಪ್ರತಿಪದಾರ್ಥ ॥

**(ಎಲೈ ಶ್ರೀದೇವಿಯೇ) ದೇವಸಖಃ**—ಮಹಾದೇವನಾದ ಈಶ್ವರನ ಸ್ನೇಹಿತನೆಂದು ಪ್ರಸಿದ್ಧನಾದ ಕುಬೇರನೂ । **ಕೀರ್ತಿಶ್ಚ**—ಕೀರ್ತ್ಯಭಿಮಾನಿದೇವತೆಯಾದ ದಕ್ಷಕನ್ಯೆಯೂ । **ಮಣಿನಾ ಸಹ**—ಚಿಂತಾಮಣಿಯಿಂದ ಅಥವಾ ಕೋಶಾಧ್ಯಕ್ಷನಾದ ಮಣಿಭದ್ರನಿಂದ ಸಹಿತವಾಗಿ । **ಮಾಂ ಉಪೈತು**—ನನ್ನ ಸಮೀಪಕ್ಕೆ ಬರಲಿ । **(ಅಹಂ**—ನಾನು) । **ಅಸ್ಮಿನ್ ರಾಷ್ಟ್ರೇ**—ಈ ಮರ್ತ್ಯಲೋಕದಲ್ಲಿ ಅಥವಾ ಈ ದೇಶದಲ್ಲಿ । **ಪ್ರಾದುರ್ಭೂತಃ ಅಸ್ಮಿ**—(ನಿನ್ನ ಅನುಗ್ರಹ ಸಂಪಾದನೆಗಾಗಿ) ಉತ್ಪನ್ನನಾಗಿರುವೆನು (ಆದುದರಿಂದ) । **(ಸ ದೇವಸಖಃ**—ತ್ರ್ಯಂಬಕ ಸಖನಾದ ಕುಬೇರನು) । **ಮೇ**—ನನಗೆ । **ಕೀರ್ತಿಂ**—ದಿಗಂತವಿಶ್ರಾಂತವಾದ ಕೀರ್ತಿಯನ್ನೂ । **ಋದ್ಧಿಂ**—ಸರ್ವಭೋಗ್ಯಸಮೃದ್ಧಿಯನ್ನೂ । **ದದಾತು**—ಕೊಡಲಿ.

॥ ಭಾವಾರ್ಥ ॥

ಎಲೈ ಶ್ರೀದೇವಿಯೇ, ತ್ರ್ಯಂಬಕಸಖನಾದ ಕುಬೇರನೂ, ಕೀರ್ತ್ಯಭಿಮಾನಿದೇವತೆಯಾದ ದಕ್ಷಕನ್ಯೆಯೂ, ಚಿಂತಾಮಣಿಯಿಂದ ಅಥವಾ ಕೋಶಾಧ್ಯಕ್ಷನಾದ ಮಣಿಭದ್ರನೆಂಬ ದೇವನಿಂದ ಸಹಿತವಾಗಿ ನನಗೆ ಅನುಗ್ರಹಮಾಡುವುದಕ್ಕಾಗಿ ನನ್ನ ಸಮೀಪಕ್ಕೆ ಬರಲಿ. ನಿನ್ನ ಅನುಗ್ರಹ ಸಂಪಾದನೆಗಾಗಿಯೇ ನಾನು ಈ ದೇಶದಲ್ಲಿ ಉತ್ಪನ್ನನಾಗಿರುವೆನು. ಆದುದರಿಂದ ದೇವಸಖನಾದ ಕುಬೇರನು ನನಗೆ ದಿಗಂತವಿಶ್ರಾಂತವಾದ ಕೀರ್ತಿಯನ್ನು ಸರ್ವಭೋಗ್ಯಸಮೃದ್ಧಿಯನ್ನೂ ಕೊಟ್ಟು ಅನುಗ್ರಹಿಸಲಿ

|| ವಿಶೇಷವಿಷಯಗಳು ||

|| ಅಂಡವಲ್ಲೀ ||

ಹೇ ಶ್ರೀಃ ತ್ವದುಪಾಸಕೋಽಹಂ ಯಸ್ಮಾದಸ್ಮಿನ್ ರಾಷ್ಟ್ರೇ ಮರ್ತ್ಯಲೋಕೇ ಪ್ರಾದುರ್ಭೂತೋ ಜಾತೋಽಸ್ಮಿ ತಸ್ಮಾದಹಂ ಮಾನವಜನ್ಮಸಾಧಾರಣಾನುಪಪತ್ತಿಮಸಹಮಾನಸ್ತ್ವಾಂ ಪ್ರಾರ್ಥಯೇ ದ್ವಿತೀಯತ್ವಾನ್ಮಮ ತ್ವದಾಜ್ಞಪ್ತೋ ಮಾಮುದ್ಧರ್ತುಂ ದೇವಸಖಃ ಕುಬೇರಃ "ಭವಾಯ ದೇವಾಯ ನಮಃ" ಇತ್ಯಾದೌ ದೇವಶಬ್ದೋ ಮಹಾದೇವೇ ರೂಢಃ ತಸ್ಯ ಸಖಾ ದೇವಸಖಃ ರಾಜಾಹಸ್ಸಖಿಭ್ಯಷ್ಟಚ್ | "ಕುಬೇರಸ್ತ್ರ್ಯಂಬಕಸಖಃ" ಇತ್ಯಭಿದಾನಂ |

ಕುಬೇರಸ್ತಪಸಾ ಪೂರ್ವಂ ತೋಷಯಾಮಾಸ ಶಂಕರಂ |
ಶಿವಾರ್ಥಂ ತು ಮಹಾಲಕ್ಷ್ಮೀಃ ಕುಬೇರಸ್ಯ ವಶೇ ಸ್ಥಿತಾ ||
ತಸ್ಮಾಲ್ಲಕ್ಷ್ಮೀಪ್ರದಾನಾಯ ಕುಬೇರೋಽಧಿಕೃತೋಽಭವತ್ |
ತಸ್ಮಾದ್ಧಿ ಭಕ್ತವಾತ್ಸಲ್ಯಂ ಶ್ರೀದೇವ್ಯಾ ಪ್ರಕಟೀಕೃತಂ ||
ಅನುಗೃಹ್ಣಾತಿ ಯಂ ಯಂ ಶ್ರೀಸ್ತಂ ಕುಬೇರೋಽನುಧಾವತಿ |

ಇತಿ ಈಶಾನಸಂಹಿತಾವಚನಾತ್ | ಕೀರ್ತಿರ್ಯಶೋಭಿಮಾನಿನೀ ದೇವತಾ —

ಕೀರ್ತಿರ್ಮತಿಃ ಪ್ರಕೃತಿಃ ಪುಷ್ಟಿಸ್ಸಮೃದ್ಧಿಸ್ತುಷ್ಟಿರೇವ ಚ |
ಧೃತಿಃ ಸ್ಮೃತಿರ್ಬಲಂ ಮೇಧಾ ಶ್ರದ್ಧಾರೋಗ್ಯಜಯಾದಿಕಾಃ ||
ದೇವತಾರೂಪಯುಕ್ ಸರ್ವಾಸ್ತತ್ತದ್ದೇವಾಂಶಗಾ ನೃಪ |
ಮಹಾಲಕ್ಷ್ಮೀಮುಪಾಸಂತೇ ತಸ್ಯಾಃ ಕಿಂಕರ್ಯ ಏವ ತಾಃ ||

ಇತಿ ಭಾರ್ಗವಸಂಹಿತಾವಚನಾತ್ | ಕೀರ್ತಿರ್ಲಕ್ಷ್ಮೀಪ್ರೇಷ್ಯಾ ಮಣಿನಾ ಚಿಂತಾಮಣಿನಾ ಸಹ —

ಕಾಮಧೇನುಃ ಕಲ್ಪವೃಕ್ಷಸ್ಸುಧಾ ಚಿಂತಾಮಣಿಸ್ತಥಾ |
ಐರಾವತೋಚ್ಚೈಃಶ್ರವಸಾವಪ್ಸರಃ ಕೌಸ್ತುಭೇಂದವಃ ||
ಮಹಾಲಕ್ಷ್ಮ್ಯಂಶಗಾಃ ಸರ್ವೇ ಕ್ಷೀರಸಾಗರಸಂಭವಾಃ |
ಶ್ರಿಯಮೇವೋಪಜೀವಂತಿ ತೇಷಾಂ ದೇವಾಶ್ಚ ದೇವತಾಃ ||

ಇತಿ ಸೌರಸಂಹಿತಾವಚನಾತ್ । ಮಾಮುಪೈತು ಕೀರ್ತಿಮೃದ್ಧಿಂ ಚ ಮೇ ದದಾತು
ಮತ್ಸನಿಧಿಮಾಗತ್ಯ ತ್ವದಾಜ್ಞಯಾ ತೇ ಮದಿಷ್ಟಂ ಸಾಧಯಂತ್ವಿತಿ ಭಾವಃ ॥ ೭ ॥

॥ ಶ್ರೀರತ್ನಕೋಶೇ ॥

ಅನುಷ್ಟುಭರ್ಚಂ ಶ್ರೀಸೂಕ್ತೇ ಸಪ್ತಮಿಮಾಂ ಪ್ರಜಪೇದ್ಬುಧಃ ।
ದ್ವಾತ್ರಿಂಶಲ್ಲಕ್ಷಪರ್ಯಾಪ್ತ್ಯೋ ಸಿದ್ಧಿಂ ಪ್ರಾಪ್ನೋತಿ ನಾನ್ಯಥಾ ॥
ಕುಬೇರಾದ್ಯಾಸ್ತಸ್ಯ ದೇವಾಃ ಪ್ರತ್ಯಕ್ಷಾಃ ಸ್ಯುರ್ನ ಸಂಶಯಃ ।
ಚಿಂತಾಮಣ್ಯಾದಿರತ್ನಾನಿ ನವಾಪಿ ನಿಧಯಸ್ತಥಾ ॥
ವಶೇ ತಸ್ಯಾ ಭವಿಷ್ಯಂತಿ ಸಿದ್ಧಮಂತ್ರಸ್ಯ ಯೋಗಿನಃ ।
ಭೂತಪ್ರೇತಪಿಶಾಚಾದಿಗ್ರಹಪೀಡಾನಿವಾರಣಂ ॥
ಪ್ರಯತಃ ಪ್ರಜಪೇನ್ಮಂತ್ರಂ ರಾತ್ರಿಕಾಲೇ ವಿಶೇಷತಃ ।
ದೂರ್ವಾಭಿರ್ಬಿಲ್ವಪತ್ರೈಶ್ಚ ಸಕುಶೈಶ್ಚ ಕುಶೇಶಯೈಃ ॥
ಸಹರಿದ್ರಾಕ್ಷತಯವೈಸ್ತಂಡುಲೈಶ್ಚ ಸಮೌಕ್ತಿಕೈಃ ।
ಕುಂಕುಮೈರರ್ಚಯೇದ್ದೇವೀಂ ಪ್ರಸೂನೈಶ್ಚ ವಿಶೇಷತಃ ॥
ಕೇತಕೀಕುಂದಮಂದಾರೈಸ್ತುಲಸೀದಮನಾದಿಭಿಃ ।
ಲಕ್ಷ್ಮೀನಾಮ್ನಾಂ ಸಹಸ್ರೇಣ ಶ್ರೀಬೀಜಸಹಿತೇನ ಚ ॥
ಶ್ರೀಯಂತ್ರಂ ಪೂಜಯೇನ್ನಿತ್ಯಂ ನಿತ್ಯಕರ್ಮಾವಿರೋಧತಃ ।
ಪ್ರಜಪೇತ್ತುಲ್ಯಗಾಯತ್ರೀಂ ಪುರಶ್ಚರಣದೀಕ್ಷಿತಃ ॥
ಸಪಾಶಾಂಕುಶಮಾಯಾಂ ಚ ಸಹಾಕರ್ಷಣಪಲ್ಲವಂ ।
ಸ್ವಾಹಾಂತಂ ಚ ನಮೋಂತಂ ಚ ಶ್ರೀಮಂತ್ರಮೃಚಿ ಯೋಜಯೇತ್ ॥
ಸಪ್ರವಾಲಾಕ್ಷಮಾಲಾಕಸ್ತ್ರಿಸಂಧ್ಯಂ ನಿಯತೋ ಜಪೇತ್ ।
ಧೂಪಯೇದ್ಯಕ್ಷಧೂಪೈಶ್ಚ ಘೃತದೀಪೈಶ್ಚ ಭಾಸಯೇತ್ ।
ದ್ರಾಕ್ಷಾಫಲಂ ಚ ಖರ್ಜೂರಂ ರಂಭಾಕ್ಷೀರೇಕ್ಷುಸಂಯುತಂ ।
ಮಧ್ವಾಜ್ಯದಾಡಿಮೀಚೂತನಾರಿಕೇಲಾನ್ಸಮರ್ಚಯೇತ್ ॥
ಸುವಾಸಿನೀಸ್ಸಮಭ್ಯರ್ಚ್ಯ ಸ್ತುತ್ವಾऽನ್ಯೈಃಸ್ತೋತ್ರಪಾಠಕೈಃ ।
ಹುತ್ವಾಪಾಮಾರ್ಗಸಮಿಧೋ ಘೃತಾಹುತಿಪುರಸ್ಸರಾಃ ॥
ಕಟ್ವಾಮ್ಲಲವಣಾದೀನಿ ತ್ಯಕ್ತ್ವಾ ನಿಯತಭುಗ್ವ್ರತೀ ।
ಸಾರ್ಧದ್ವಿವತ್ಸರೇ ಸಿದ್ಧಿಂ ಪ್ರಾಪ್ನುಯಾನ್ನಾತ್ರ ಸಂಶಯಃ ॥ ಇತಿ ॥

ಓಂ ಹ್ರೀಂ ಕ್ರೋಂ ಐಂ ಶ್ರೀಂ ಹ್ರೀಂ ಓಂ ಹ್ರೀಂ ಕ್ರೋಂ ಇತಿ ಬೀಜನವಕಂ ಪ್ರತಿನ್ಯಾಸಂ ಯೋಜಯೇತ್ । ಅಸ್ಯ ಮಂತ್ರಸ್ಯ ಕುಬೇರ ಋಷಿಃ । ಮಣಿಮಾಲಿನೀ ಲಕ್ಷ್ಮೀರ್ದೇವತಾ । ಅನುಷ್ಟುಪ್ ಛಂದಃ । ಶ್ರೀಂ ಬ್ಲೂಂ ಕ್ಲೀಂ ಬೀಜಾನಿ । ಧ್ಯಾನಂ ॥

**ರಾಜರಾಜೇಶ್ವರೀಂ ಲಕ್ಷ್ಮೀಂ ವರದಾಂ ಮಣಿಮಾಲಿನೀಂ |**
**ದೇವೀಂ ದೇವಪ್ರಿಯಾಂ ಕೀರ್ತಿಂ ವಂದೇ ಕಾಮ್ಯಾರ್ಥಸಿದ್ಧಯೇ ||**

## ಅನುವಾದವು

ಎಲೈ ಶ್ರೀದೇವಿಯೇ, ನಿನ್ನ ಉಪಾಸಕನಾದ ನಾನು ನಿನ್ನ ಕಟಾಕ್ಷವನ್ನು ಬಯಸಿ ಈ ಲೋಕದಲ್ಲಿ ಅಥವಾ ಈ ದೇಶದಲ್ಲಿ ಹುಟ್ಟಿರುವೆನು. ಸಾಧಾರಣವಾಗಿ ಮನುಷ್ಯರಿಗೆ ಉಂಟಾಗುವ ಕಷ್ಟದಾರಿದ್ರ್ಯಗಳು ನನಗೂ ಇದ್ದೇ ಇವೆ. ಆದುದರಿಂದ ನಿನ್ನ ಆಜ್ಞೆಯಂತೆ ದೇವಸಖನಾದ ಕುಬೇರನು ನನ್ನ ಸಮೀಪಕ್ಕೆ ಬಂದು ನನಗೆ ಸರ್ವಸೌಭಾಗ್ಯ ಸಂಪದೈಶ್ವರ್ಯಗಳನ್ನೂ, ಕೀರ್ತಿಯನ್ನೂ ಅನುಗ್ರಹಿಸಲಿ ಎಂಬ ಮುಖ್ಯಾಭಿಪ್ರಾಯವು ಈ ಋಕ್ಕಿನಲ್ಲಿ ಸೂಚಿತವಾಗಿದೆ.

**ದೇವಸಖಃ**—ಕುಬೇರನು **ಭವಾಯ ದೇವಾಯ ನಮಃ** ಎಂಬ ಶ್ರುತಿವಾಕ್ಯದಲ್ಲಿ ದೇವಾಯ ಎಂದರೆ ಮಹಾದೇವನು, ಈಶ್ವರನು ಎಂಬರ್ಥವು ಪ್ರಸಿದ್ಧವಾಗಿದೆ. ಈ ಮಹಾದೇವನಿಗೆ ಸಖನಾದವನು ಎಂದರೆ—ಕುಬೇರಸ್ತ್ರ್ಯಂಬಕಸಖಃ ಎಂಬ ಕೋಶವಚನಾನುಸಾರವಾಗಿ ಕುಬೇರನು ಎಂದರ್ಥವು ನಿರ್ದಿಷ್ಟವಾಗಿರುವುದು

**ಮಣಿನಾ**—ಈ ಶಬ್ದಕ್ಕೆ ಸರ್ವಾಭೀಷ್ಟಗಳನ್ನೂ ಕೊಡುವ ಚಿಂತಾಮಣಿ ಎಂಬ ರತ್ನವೆಂದಾಗಲಿ, ಅಥವಾ ಕುಬೇರನಲ್ಲಿರುವ ದ್ರವ್ಯಕ್ಕೆ ಕೋಶಾಧಿಪತಿಯಾದ ಮಣಿಭದ್ರನೆಂಬ ದೇವನಾಗಲಿ ಆಗಬಹುದೆಂದು ಭಾಷ್ಯಕಾರರು ಅರ್ಥವಿವರಣೆಮಾಡಿದ್ದಾರೆ.

ಪೂರ್ವದಲ್ಲಿ ಕುಬೇರನು. ತಪಸ್ಸುಮಾಡಿ ಶಂಕರನನ್ನು ಸಂತೋಷಪಡಿಸಿದನು. ಇವನ ತಪಸ್ಸಿಗೆ ಮೆಚ್ಚಿ ಮಹಾದೇವನು ಸಂಪತ್ತಿಗೆ ಅಭಿಮಾನಿದೇವತೆಯಾದ ಲಕ್ಷ್ಮೀಯನ್ನು ಕುಬೇರನ ವಶದಲ್ಲಿರುವಂತೆ ಅನುಗ್ರಹಿಸಿದನು. ಆಗಿನಿಂದ ಐಶ್ವರ್ಯಾಭಿಮಾನಿಯಾದ ಲಕ್ಷ್ಮೀಯು ಕುಬೇರನ ಗೃಹದಲ್ಲಿ ಸರ್ವದಾ ನೆಲಸಿ ವಾಸಿಸುತ್ತಿರುವಳು ಎಂದು ಪ್ರಸಿದ್ಧವಾಗಿದೆ. ಆದುದರಿಂದ ಲಕ್ಷ್ಮೀಕಟಾಕ್ಷಸಂಪಾದನೆಗಾಗಿ ಈ ಋಕ್ಕಿನಲ್ಲಿ ಕುಬೇರನನ್ನು ಸ್ತುತಿಸಲಾಗಿದೆ. ಇದಲ್ಲದೆ ಲಕ್ಷ್ಮೀಯು ತನ್ನ ಭಕ್ತರಲ್ಲಿಟ್ಟಿರುವ ವಾತ್ಸಲ್ಯದಿಂದ ಯಾರು ಯಾರು ಕುಬೇರನನ್ನು ಶ್ರೇಯಸ್ಸಿಗಾಗಿ ಪ್ರಾರ್ಥಿಸುವರೋ ಅವರುಗಳಿಗೆ ಅನುಗ್ರಹ ಮಾಡುತ್ತಾಳೆ ಎಂದು ಈಶಾನಸಂಹಿತಾವಚನವಿರುವುದು.

**ಕೀರ್ತಿಃ**— ಕೀರ್ತಿ ಎಂದರೆ ಯಶಸ್ಸಿಗೆ ಅಭಿಮಾನಿದೇವತೆಯು ಎಂದರ್ಥವು. ಭಾರ್ಗವಸಂಹಿತೆಯೆಂಬ ಗ್ರಂಥದಲ್ಲಿ—ಕೀರ್ತಿ, ಮತಿ, ದ್ಯುತಿ, ಪುಷ್ಟಿ, ಸಮೃದ್ಧಿ, ತುಷ್ಟಿ, ಶ್ರುತಿ, ಸ್ಮೃತಿ, ಬಲ, ಮೇಧಾ, ಶ್ರದ್ಧಾ, ಆರೋಗ್ಯ, ಜಯ ಇವುಗಳ ಅಭಿಮಾನಿದೇವತೆಗಳು ಮಹಾಲಕ್ಷ್ಮೀಯ ಶಕ್ತಿಸ್ವರೂಪರಾಗಿ ಆಯಾ ಅಂಶದಿಂದಿದ್ದು ಕೈಂಕರ್ಯಭಾವದಿಂದ ಮಹಾಲಕ್ಷ್ಮೀಯನ್ನು ಸೇವಿಸುತ್ತಿರುವರು ಎಂದು ಹೇಳಿದೆ. ಆದುದರಿಂದ ಕೀರ್ತಿಃ ಎಂದರೆ ಮಹಾಲಕ್ಷ್ಮೀಯ ಅನಂತ ಶಕ್ತಿಗಳಲ್ಲಿ ಒಂದಾದ ಕೀರ್ತ್ಯಭಿಮಾನಿದೇವತೆಯು ಎಂದು ತಿಳಿಯಬೇಕು.

**ಮಣಿನಾ—ಚಿಂತಾಮಣಿನಾ ಸಹ |** ಚಿಂತಾಮಣಿಯೆಂಬ ಅನರ್ಘ್ಯ ರತ್ನವು ಸೌರಸಂಹಿತೆಯಲ್ಲಿ—

**ಕಾಮಧೇನುಃ ಕಲ್ಪವೃಕ್ಷಃ ಸುಧಾ ಚಿಂತಾಮಣಿಸ್ತಥಾ |**
**ಐರಾವತೋಚ್ಚೈಃಶ್ರವಸಾವಪ್ಸರಃ ಕೌಸ್ತುಭೇಂದವಃ ||**
**ಮಹಾಲಕ್ಷ್ಮ್ಯಂಶಗಾಃ ಸರ್ವೇ ಕ್ಷೀರಸಾಗರಸಂಭವಾಃ |**
**ಶ್ರಿಯಮೇವೋಪಜೀವಂತಿ ತೇಷಾಂ ದೇವಾಶ್ಚ ದೇವತಾಃ ||**

ಕಾಮಧೇನು, ಕಲ್ಪವೃಕ್ಷ, ಅಮೃತ, ಚಿಂತಾಮಣಿ, ಐರಾವತ ಎಂಬ ಆನೆ, ಉಚ್ಚೈಃಶ್ರವಸ್ ಎಂಬ ಕುದರೆ, ಅಪ್ಸರಃ ಎಂಬ ಸ್ತ್ರೀಯರು, ಕೌಸ್ತುಭಮಣಿ, ಚಂದ್ರ ಇವೆಲ್ಲವೂ ಕ್ಷೀರಸಮುದ್ರ ಮಥನಕಾಲದಲ್ಲಿ ಉತ್ಪನ್ನವಾಗಿ ಮಹಾ ಲಕ್ಷ್ಮಿಯ ಅಂಶಗಳೇ ಆಗಿದ್ದು:ಮಹಾಲಕ್ಷ್ಮಿಯನ್ನೇ ಆಶ್ರಯಿಸಿರುತ್ತವೆ. ಇವುಗಳಿಗೆಲ್ಲಾ ತತ್ತದಭಿಮಾನಿದೇವತೆಗಳೇ, ದೇವತೆಗಳು ಎಂದು ಹೇಳಿದೆ.

**ಪ್ರಾದುರ್ಭೂತೋಽಸ್ಮಿ ರಾಷ್ಟ್ರೇಽಸ್ಮಿನ್ ಕೀರ್ತಿಮೃದ್ಧಿಂ ದದಾತು ಮೇ**— ಮೇಲೆ ಹೇಳಿದ ಕುಬೇರ, ಕೀರ್ತ್ಯಭಿಮಾನಿದೇವತೆ, ಚಿಂತಾಮಣ್ಯಭಿಮಾನಿದೇವತೆ ಇವರೆಲ್ಲರೂ ನನ್ನ ಸಮೀಪಕ್ಕೆ ಬಂದು ನನಗೆ ಕೀರ್ತಿಯನ್ನು, ಭೋಗಭಾಗ್ಯಸಮೃದ್ಧಿ ಯನ್ನೂ ಅನುಗ್ರಹಿಸಲಿ ಎಂದು ಮುಖ್ಯಾಭಿಪ್ರಾಯವು.

(ಶ್ರೀರತ್ನಕೋಶೇ)

ಶ್ರೀಸೂಕ್ತದ ಏಳನೆಯಋಕ್ ಅನುಷ್ಟುಪ್‌ಛಂದಸ್ಕವು. ಈ ಋಕ್ಕನ್ನು ವಿವೇಕಿಯಾದ ಪುರುಷನು ಮೂವತ್ತೆರಡು ಲಕ್ಷಸಂಖ್ಯೆಯಷ್ಟು ಜಪಮಾಡಬೇಕು. ಆರೀತಿ ಮಾಡಿದರೆ ಮಂತ್ರಸಿದ್ಧಿಯಾಗುವುದು. ಹಾಗೆ ಮಾಡದಿದ್ದರೆ ಸಿದ್ಧಿಯಾಗುವುದಿಲ್ಲ. ಮತ್ತು ಆರೀತಿ ಜಪಮಾಡುವುದರಿಂದ ಆ ಋಕ್ಕಿನಲ್ಲಿ ಪ್ರತಿಪಾದಿತರಾದ ಕುಬೇರಾದಿದೇವತೆಗಳು ಸಾಧಕನಿಗೆ ಪ್ರತ್ಯಕ್ಷರಾಗುವರು. ಚಿಂತಾಮಣಿಯೇ ಮೊದಲಾದ ನವಸಿಧಿಗಳು ಅವನ ವಶವಾಗುವುದು. ಭೂತ ಪ್ರೇತ ಪಿಶಾಚ ಗ್ರಹಪೀಡ ಇವುಗಳ ಬಾಧೆಯು ನಿವಾರಣೆಯಾಗುವುದು ಈ ಮಂತ್ರವನ್ನು ವಿಶೇಷವಾಗಿ ನಿಯಮ ದಿಂದ ರಾತ್ರಿಕಾಲದಲ್ಲಿ ಜಪಮಾಡಬೇಕು. ದೂರ್ವೆ, ಬಿಲ್ವಪತ್ರ, ಕುಶ, ದರ್ಭೆ, ಅಕ್ಕಿಯನ್ನು ಅರಿಸಿನದಿಂದ ಕಲಸಿ ಮಾಡಿದ ಮಂತ್ರಾಕ್ಷತೆ, ಮತ್ತು, ಕುಂಕುಮ, ನಾನಾವಿಧಪುಷ್ಪಗಳು, ತಾಳೇ ಹೂವು, ಕುಂದಪುಷ್ಪ, ಮಂದಾರಪುಷ್ಪ, ತುಲಸಿ, ದವನ ಇವುಗಳಿಂದ ನಿತ್ಯಕರ್ಮಾನುಷ್ಠಾನಾನಂತರ ಶ್ರೀಯಂತ್ರವನ್ನು ಬೀಜಾಕ್ಷರಸಹಿತವಾದ ಶ್ರೀಲಕ್ಷ್ಮೀಸಹಸ್ರನಾಮಗಳಿಂದ ಅರ್ಚನೆಮಾಡಬೇಕು. ಲಕ್ಷ್ಮೀಗಾಯತ್ರೀಮಂತ್ರವನ್ನೂ ಪುರಶ್ಚರಣವಿಧಿ ಪ್ರಕಾರ ವಾಗಿ ಜಪಮಾಡಬೇಕು. ಮಂತ್ರಜಪಮಾಡುವಾಗ ಪಾಶ, ಅಂಕುಶ, ಮಾಯಾ ಮೊದಲಾದ ಬೀಜಾಕ್ಷರಸಹಿತ ವಾಗಿಯೂ, ಮಂತ್ರದ ಕೊನೆಯಲ್ಲಿ ಸ್ವಾಹಾ ಮತ್ತು ನಮಃ ಎಂಬ ಪದಗಳನ್ನು ಸೇರಿಸಿಯೂ ಹವಳದ ಜಪಸರದಿಂದ ಮೂರು ಕಾಲಗಳಲ್ಲಿಯೂ ಜಪಮಾಡಬೇಕು. ಅನಂತರ ಅರ್ಚನಕಾಲದಲ್ಲಿ ಧೂಪ, ಹಸುವಿನ ತುಪ್ಪಹಾಕಿ ಹೊತ್ತಿಸಿದ ದೀಪ, ಇವುಗಳನ್ನೂ ಸಮರ್ಪಿಸಿ, ದ್ರಾಕ್ಷಿ, ಖರ್ಜೂರ, ಬಾಳೇಹಣ್ಣು, ಹಾಲು, ಕಬ್ಬು, ಜೇನುತುಪ್ಪ, ತುಪ್ಪ, ದಾಳಿಂಬೆಹಣ್ಣು, ಮಾವಿನಹಣ್ಣು, ತೆಂಗಿನಕಾಯಿ ಇವುಗಳನ್ನೆಲ್ಲಾ ನೈವೇದ್ಯಮಾಡಬೇಕು. ಸುವಾಸಿನಿ ಯರನ್ನು ವಸ್ತ್ರಾಲಂಕಾರಗಳಿಂದ ಪೂಜಿಸಿ ನಾನಾವಿಧಸ್ತೋತ್ರಗಳಿಂದ ದೇವಿಯನ್ನು ಸ್ತುತಿಸಬೇಕು. ಅಗ್ನಿಯಲ್ಲಿ ಅಪಾಮಾರ್ಗಸಮಿತ್ತುಗಳಿಂದಲೂ ಆಜ್ಯದಿಂದಲೂ ಮಂತ್ರಪೂರ್ವಕವಾಗಿ ಹೋಮಮಾಡಬೇಕು. ಜಪಕರ್ತನು ವ್ರತಾನುಷ್ಠಾನಕಾಲದಲ್ಲಿ ಕಹಿ, ಹುಳಿ, ಉಪ್ಪು, ಮೊದಲಾದ ವಸ್ತುಗಳನ್ನು ತ್ಯಜಿಸಿ ನಿಯತಾಹಾರವುಳ್ಳವನಾಗಿ ಜಪ ಮಾಡಬೇಕು. ಈ ರೀತಿ ಮಾಡಿದರೆ ಎರಡೂವರೆ ವರ್ಷದಲ್ಲಿ ಮಂತ್ರಸಿದ್ಧಿಯಾಗುವುದು. ಈ ವಿಷಯದಲ್ಲಿ ಸಂಶಯವಿಲ್ಲ.

ಈ ಋಕ್ಕಿನ ಜಪಮಾಡುವಾಗ ಆಂ ಹ್ರೀಂ ಕ್ರೋಂ ಐಂ ಶ್ರೀಂ ಹ್ರೀಂ ಆಂ ಹ್ರೀಂ ಕ್ರೋಂ ಎಂಬ ಒಂಭತ್ತು ಬೀಜಾಕ್ಷರಗಳಸಹಿತವಾಗಿ ನ್ಯಾಸಮಾಡಬೇಕು. ಈ ಮಂತ್ರಕ್ಕೆ ಕುಬೇರನು ಋಷಿಯು ; ಮಣಿಮಾಲಿನೀ ಲಕ್ಷ್ಮೀ ದೇವತೆಯು ; ಅನುಷ್ಟುಪ್‌ಛಂದಸ್ಸು. ಶ್ರೀಂ ಬೀಜವು, ಬ್ಲೂಂ ಶಕ್ತಿಯು, ಕ್ಲೀಂ ಕೀಲಕವು, ಧ್ಯಾನಶ್ಲೋಕವು—

ರಾಜರಾಜೇಶ್ವರೀಂ ಲಕ್ಷ್ಮೀಂ ವರದಾಂ ಮಣಿಮಾಲಿನೀಂ ।
ದೇವೀಂ ದೇವಪ್ರಿಯಾಂ ಕೀರ್ತಿಂ ವಂದೇ ಕಾಮ್ಯಾರ್ಥಸಿದ್ಧಯೇ ॥

ತನ್ನನ್ನು ಪೂಜಿಸುವ ಭಕ್ತರಿಗೆ ಅವರವರ ಇಷ್ಟಾನುಸಾರ ವರವನ್ನು ಕೊಡುವವಳೂ, ನಾನಾರತ್ನಮಯಾಭರಣಶೋಭಿತಳೂ, ಮಹಾದೇವನಿಗೆ ಪ್ರಿಯಳಾದವಳೂ ಆದ್ಯ ರಾಜರಾಜೇಶ್ವರೀ ಎಂಬ ಅಭಿಧಾನದಿಂದ ಪ್ರಸಿದ್ಧಳೂ ಆದ ಲಕ್ಷ್ಮೀ ಎಂಬ ದೇವತೆಯನ್ನು ನನ್ನ ಅಭೀಷ್ಟಸಿದ್ಧಿಗಾಗಿ ನಮಸ್ಕರಿಸುತ್ತೇನೆ ಎಂದು ಧ್ಯಾನ ಶ್ಲೋಕಾಭಿಪ್ರಾಯವು.

ಇಲ್ಲಿಗೆ ಏಳನೆಯ ಋಕ್ಕಿನ ಅರ್ಥವಿವರಣೆ ಸಮಾಪ್ತವು.

॥ ಅಥಾಷ್ಟಮೀ ಋಕ್ ॥

**[ಓಂ ಅಸ್ಯ ಶ್ರೀಶ್ರೀಸೂಕ್ತಸ್ಯಾಷ್ಟಮಋಙ್ಮಹಾಮಂತ್ರಸ್ಯ । ಶ್ರೀಮಹಾವಿಷ್ಣುರ್ಋಷಿಃ । ಸರ್ವೈಶ್ವರ್ಯಕಾರಿಣೀ ಮಹಾಲಕ್ಷ್ಮೀರ್ದೇವತಾ । ಅನುಷ್ಟುಪ್ ಛಂದಃ । ಕ್ಷುಂ ಬೀಜಂ । ಹಂ ಶಕ್ತಿಃ । ಶ್ರೀಂ ಕೀಲಕಂ । ಶ್ರೀಮಹಾಲಕ್ಷ್ಮೀಪ್ರಸಾದಸಿದ್ಧ್ಯರ್ಥೇ ಜಪೇ ವಿನಿಯೋಗಃ ॥**

ಓಂ ರಂ ಕ್ಷುತ್ಪಿಪಾಸಾಮಲಾಂ ಜ್ಯೇಷ್ಠಾಂ—ಅಂಗುಷ್ಠಾಭ್ಯಾಂ ನಮಃ । ಓಂ ಹ್ರೀಂ ಅಲಕ್ಷ್ಮೀಂ—ತರ್ಜನೀಭ್ಯಾಂ ನಮಃ । ಓಂ ಶ್ರೀಂ ನಾಶಯಾಮ್ಯಹಂ—ಮಧ್ಯಮಾಭ್ಯಾಂ ನಮಃ । ಓಂ ಹ್ರೀಂ ಅಭೂತಿಮಸಮೃದ್ಧಿಂ ಚ—ಅನಾಮಿಕಾಭ್ಯಾಂ ನಮಃ । ಓಂ ರಂ ಸರ್ವಾನ್ನಿರ್ಣುದ—ಕನಿಷ್ಠಿಕಾಭ್ಯಾಂ ನಮಃ । ಓಂ ರಂ ಹ್ರೀಂ ಶ್ರೀಂ ಹ್ರೀಂ ರಂ ಮೇ ಗೃಹಾತ್—ಕರತಲಕರಪೃಷ್ಠಾಭ್ಯಾಂ ನಮಃ । ಓಂ ರಂ ಕ್ಷುತ್ಪಿಪಾಸಾಮಲಾಂ ಜ್ಯೇಷ್ಠಾಂ—ಹೃದಯಾಯ ನಮಃ । ಓಂ ಹ್ರೀಂ ಅಲಕ್ಷ್ಮೀಂ—ಶಿರಸೇ ಸ್ವಾಹಾ । ಓಂ ಶ್ರೀಂ ನಾಶಯಾಮ್ಯಹಂ—ಶಿಖಾಯೈ ವಷಟ್ । ಓಂ ಹ್ರೀಂ ಅಭೂತಿಮಸಮುಸಮೃದ್ಧಿಂ ಚ—ಕವಚಾಯ ಹುಂ । ಓಂ ರಂ ಸರ್ವಾನ್ನಿರ್ಣುದ—ನೇತ್ರತ್ರಯಾಯ ವೌಷಟ್ । ಓಂ ರಂ ಹ್ರೀಂ ಶ್ರೀಂ ಹ್ರೀಂ ರಂ ಮೇ ಗೃಹಾತ್—ಅಸ್ತ್ರಾಯ ಫಟ್ । ಭೂರ್ಭುವಸ್ಸುವರೋಮಿತಿ ದಿಗ್ಬಂಧಃ ॥ ಧ್ಯಾನಂ

ಧ್ಯಾಯೇದ್ದೇವೀಂ ಮಹಾಲಕ್ಷ್ಮೀಂ ದಾರಿದ್ರ್ಯೋಚ್ಚಾಟಕಾರಿಣೀಂ ।
ಪಂಕಜಾಸನಮಧ್ಯೇ ತು ಸುಖಾಸೀನಾಂ ಶುಚಿಸ್ಮಿತಾಂ ॥
ಹೇಮಾಂಬರಧರಾಂ ಹೇಮಪದ್ಮಪೀಠೋಪರಿ ಸ್ಥಿತಾಂ ।
ಮುಕ್ತಾಮಾಣಿಕ್ಯವೈಢೂರ್ಯೋಪೇತಕ್ವಣಿತನೂಪುರಾಂ ॥
ರತ್ನಬದ್ಧಸ್ರಜಾಂ ಚೈವ ರತ್ನಕುಂಡಲಮಂಡಿತಾಂ ।
ವಿಚಿತ್ರರತ್ನವದ್ಭೂಷಾಂ ವಿಚಿತ್ರಾವಯವೈರ್ಯುತಾಂ ॥
ಪದ್ಮದ್ವಯಧರಾಂ ಚೈವ ವರದಾಭಯಧಾರಿಣೀಂ ।
ಚಾಮರಾಭ್ಯಾಂ ವೀಜ್ಯಮಾನಾಂ ಸಿತಚ್ಛತ್ರೋಪಶೋಭಿತಾಂ ॥
ಶಂಖಪದ್ಮನಿಧಿಭ್ಯಾಂ ಚ ಸೇವಿತಾಂ ಪಾದಮೂಲತಃ ।

ಜ್ಯೇಷ್ಠಾಪ್ರಹರಣೋದ್ಯುಕ್ತಾಮಸಮೃದ್ಧಿವಿನಾಶಿನೀಂ ||
ಅಭೂತಿಹರಣಾಂ ದೇವೀಂ ಧ್ಯಾಯೇತ್ಸಂಪತ್ಪ್ರದಾಯಿನೀಂ ।

ಅಜ್ಞಾನಪಾತಕತಮಸ್ಸ್ಥಿತಿಸೂರ್ಯರಶ್ಮಿಂ ದೌರ್ಭಾಗ್ಯಭೂಧರವಿದಾರಣವಜ್ರಮೀಡೇ ।
ರೋಗಾರ್ತಿಘೋರಫಣಿಮರ್ದನಪಕ್ಷಿರಾಜಂ ಲಕ್ಷ್ಮೀಪದದ್ವಯಮನರ್ಥಹರಂ ಸುಖಾರ್ಥೀ || ]

|| ಎಂಟನೆಯ ಋಕ್ ||

ಓಂ ಕ್ಷುತ್ಪಿಪಾಸಾಮಲಾಂ ಜ್ಯೇಷ್ಠಾಮಲಕ್ಷ್ಮೀಂ ನಾಶಯಾಮ್ಯಹಂ ।

ಅಭೂತಿಮಸಮೃದ್ಧಿಂ ಚ ಸರ್ವಾಂ ನಿರ್ಣುದ ಮೇ ಗೃಹಾತ್ || ೮ ||

॥ ಶ್ರೀ [illegible] ॥

ಕ್ಷುತ್ಪಿಪಾಸಾಮಲಾಂ [illegible] ಜ್ಯೇಷ್ಠಾಂ ಶ್ರಿಯಃ ಪ್ರಾಗುತ್ಪನ್ನಾಮಿ-
ತ್ಯರ್ಥಃ । ಅಲಕ್ಷ್ಮೀಮಹಂ [illegible] ನಾಶ[illegible] । ಹೇ ಶ್ರೀಃ ತ್ವಮಭೂತಿಮ-
ಸಂಪತ್ತಿಂ ತಥಾ ಸರ್ವಾಮಸಮೃದ್ಧಿಂ [illegible] ಮಮ ಗೃಹಾತ್ ನಿರ್ಣುದ ನಿಷ್ಕಾ-
ಸಯ || ೮ ||

॥ ಪೃಥ್ವೀಧರಾಚಾರ್ಯಭಾಷ್ಯಂ ||

[illegible] ಜ್ಯೇಷ್ಠಾಂ ಶ್ರಿಯಃ
ಅಗ್ರಜಾಂ [illegible] ಸಮುದ್ರಮಥನ[illegible] ಲಕ್ಷ್ಮ್ಯಾಃ [illegible] ಕೃತಾಮಹಂ। ಏತಾ
ದೃಶೀಮ[illegible]ಕ್ಷ್ಮೀಂ ನಾಶಯಾಮಿ । [illegible] ಅಭೂತಿಮನೈ-
ಶ್ವರ್ಯಂ ಸರ್ವಾಮಸಮೃದ್ಧಿಂ [illegible] ಚ ಮೇ ಗೃಹಾತ್ ಮಮ ಗೇಹಾತ್
ನಿರ್ಣುದ [illegible] ನಿರಾಸಯೇತ್ಯರ್ಥಃ ||

॥ ಪ್ರತಿಪದಾರ್ಥ ॥

(ಹೇ ಅಗ್ನೇ— ಎಲೈ ಅಗ್ನಿಯೇ) । ಕ್ಷುತ್ಪಿಪಾಸಾಮಲಾಂ—ಹಸಿವು ಬಾಯಾರಿಕೆಗಳಿಂದ ಕೃಶಳಾಗಿಯೂ ಮಲಿನಳಾಗಿಯೂ ಇರುವ । ಜ್ಯೇಷ್ಠಾಂ—(ಸಮುದ್ರ ಮಥನಕಾಲದಲ್ಲಿ) ಲಕ್ಷ್ಮಿಗಿಂತಲೂ ಪೂರ್ವದಲ್ಲಿ ಉತ್ಪನ್ನಳಾದ । ಅಲಕ್ಷ್ಮೀಂ— ದರಿದ್ರದೇವತೆಯನ್ನು । ಅಹಂ— ನಾನು । ನಾಶಯಾಮಿ —ನಾಶಪಡಿಸುತ್ತೇನೆ (ಆದುದರಿಂದ ಎಲೈ ಅಗ್ನಿಯೇ) । ಅಭೂತಿಂ— ಐಶ್ವರ್ಯರಾಹಿತ್ಯವನ್ನೂ । ಅಸಮೃದ್ಧಿಂ— ಸಮೃದ್ಧಿಯಿಲ್ಲದಿರುವುದನ್ನೂ ಎಂದರೆ ದಾರಿದ್ರ್ಯವನ್ನೂ । ಸರ್ವಾಂ— ಇವೆಲ್ಲವನ್ನೂ । ಮೇ —ನನ್ನ । ಗೃಹಾತ್——ಮನೆಯಿಂದ । ನಿರ್ಣುದ— ಹೊಡೆದೋಡಿಸು

॥ ಭಾವಾರ್ಥ ॥

ಎಲೈ ಅಗ್ನಿಯೇ (ಅಥವಾ ಶ್ರೀದೇವತೆಯೇ) ಹಸಿವು ಬಾಯಾರಿಕೆಗಳಿಂದ ಬಳಲಿ ಕೃಶಾಂಗಿಯೂ, ಕೊಳಕಾದ ಶರೀರದಿಂದ ಕೂಡಿಯೂ ಇರುವ, ಕ್ಷೀರಸಮುದ್ರಮಥನಕಾಲದಲ್ಲಿ ಲಕ್ಷ್ಮಿಗಿಂತ ಮೊದಲೇ ಉತ್ಪನ್ನಳಾದ್ದರಿಂದ ಲಕ್ಷ್ಮಿಗೆ

ಜ್ಯೇಷ್ಠ ಸಹೋದರಿಯಾಗಿರುವ ದರಿದ್ರಾಭಿಮಾನಿದೇವತೆಯನ್ನು ನಾನು ನಾಶಪಡಿಸುತ್ತೇನೆ. ಎಲೈ ಅಗ್ನಿಯೇ, ಅನಂತರ ಐಶ್ವರ್ಯವಿಲ್ಲದೆ ಇರುವ ಹೀನಸ್ಥಿತಿಯನ್ನೂ, ದಾರಿದ್ರ್ಯವನ್ನೂ ನನ್ನ ಮನೆಯಿಂದ ಹೊರಹೊರಡಿಸು.

|| ವಿಶೇಷವಿಷಯಗಳು ||

|| ಲಕ್ಷ್ಮೀಯಾಮಳೇ ||

ಪ್ರಜಪೇದ್ವಿಧಿನಾ ನಿತ್ಯಂ ಶ್ರೀ ಸೂಕ್ತೇ ಚರ್ಚಮಷ್ಟಮೀಂ ।
ಪ್ರತ್ಯಕ್ಷರಸಹಸ್ರಂ ಚ ಗಾಯತ್ರೀಮಪಿ ತಾವತೀಂ ॥
ಶ್ರೀಗಾಯತ್ರೀದಶಾಂಶಂ ತು ಲಕ್ಷ್ಮೀಮಂತ್ರಂ ಶತಾಂಶಕಂ ।
ಅನಿಷ್ಟಪರಿಹಾರಾರ್ಥೋ ಮಂತ್ರೋಽಯಂ ಪರಿಕೀರ್ತಿತಃ ॥
ದೌರ್ಭಾಗ್ಯಂ ಶಮಯೇದೇವ ದುರ್ಲಿಪಿಂ ಪರಿಮಾರ್ಜಯೇತ್ ।
ವೀರಾಸನಸಮಾಸೀನಃ ಅಗ್ನಿಹೋತ್ರಪುರಸ್ಥಿತಃ ।
ಫಲಾಶೀ ಪ್ರಜಪೇನ್ಮಂತ್ರಂ ಭಕ್ತ್ಯಾ ರುದ್ರಾಕ್ಷಮಾಲಯಾ ।
ತಿಲಹೋಮಂ ಪ್ರಕುರ್ವೀತ ವಿರಜಾಮಪಿ ಹಾವಯೇತ್ ॥
ಘೃತೇನ ಜುಹುಯಾಲ್ಲಕ್ಷ್ಮೀಂ ದೌರ್ಭಾಗ್ಯಂ ತಸ್ಯ ನಶ್ಯತಿ ।
ಸೌಭಾಗ್ಯಂ ಜಾಯತೇ ತಸ್ಯ ನಾತ್ರ ಕಾರ್ಯಾ ವಿಚಾರಣಾ ॥

ರಂ ಹ್ರೀಂ ಶ್ರೀಂ ಹ್ರೀಂ ರಂ ಇತಿ ಬೀಜಪಂಚಕೇನ ಸಮಂತ್ರಾಂಗನ್ಯಾಸಃ ॥ ಧ್ಯಾನಂ—

ಅಜ್ಞಾನಪಾತಕತಮಸ್ತತಿತೀವ್ರರಶ್ಮಿಂ ದೌರ್ಭಾಗ್ಯಭೂಧರವಿದಾರಣವಜ್ರಮೀಡೇ ।
ರೋಗಾರ್ತಿಘೋರಫಣಿಮರ್ದನಪಕ್ಷಿರಾಜಂ ಲಕ್ಷ್ಮೀಪದದ್ವಯಮನರ್ಥಹರಂ ಸುಖಾರ್ಥೀ ॥
ಖಡ್ಗಂ ಸಪಾತಚಕ್ರಂ ಚ ಕಮಲಂ ವರಮೇವ ಚ ।
ಕರೈಶ್ಚತುರ್ಭಿರ್ಬಿಭ್ರಾಣಾಂ ಧ್ಯಾಯೇಚ್ಚಂದ್ರಾನನಾಂ ಶ್ರಿಯಂ ॥

## ಅನುವಾದವು

ಲಕ್ಷ್ಮೀಯಾಮಳವೆಂಬ ಗ್ರಂಥದಲ್ಲಿ ಈ ರೀತಿ ಹೇಳಿದೆ—

ಶ್ರೀಸೂಕ್ತದಲ್ಲಿರುವ ಎಂಟನೆಯ ಋಕ್ಕನ್ನು ಪ್ರತಿದಿನವೂ ವಿಧಿಪೂರ್ವಕವಾಗಿ ಜಪಮಾಡಮಾಡಬೇಕು. ಮಂತ್ರದಲ್ಲಿ ಎಷ್ಟು ಅಕ್ಷರಗಳಿರುವವೋ ಅಷ್ಟು ಸಹಸ್ರ ಸಂಖ್ಯೆಯಷ್ಟು ಜಪಮಾಡಬೇಕು. ಅನಂತರ ಲಕ್ಷ್ಮೀ ಗಾಯತ್ರೀ ಮಂತ್ರವನ್ನು ಮೇಲೆ ಹೇಳಿದ ಸಂಖ್ಯೆಯಲ್ಲಿ ನೂರನೆಯ ಒಂದಂಶವನ್ನೂ ಶ್ರೀ ಗಾಯತ್ರೀಮಂತ್ರವನ್ನೂ ಹತ್ತರಲ್ಲಿ ಒಂದಂಶವನ್ನು ಜಪಮಾಡಬೇಕು. ಈ ಮಂತ್ರಜಪದಿಂದ ದೌರ್ಭಾಗ್ಯ, ಬಡತನ ಮೊದಲಾದ ಅನಿಷ್ಟಗಳು ಪರಿಹಾರವಾಗುವುದೆಂದು ಪ್ರಸಿದ್ಧಿಯಾಗಿದೆ. ಜಪಮಾಡುವ ಪುರುಷನು ಅಗ್ನಿಹೋತ್ರಾದಿಕರ್ಮಗಳನ್ನು ಮಾಡಿ ಅಗ್ನಿಹೋತ್ರಾಗ್ನಿಯ ಅಭಿಮುಖವಾಗಿ ವೀರಾಸನದಲ್ಲಿ ಕುಳಿತು ಜಪಮಾಲೆಗಾಗಿ ರುದ್ರಾಕ್ಷಿಸರವನ್ನು ಕೈಯಲ್ಲಿ ಹಿಡಿದು ಭಕ್ತಿಯಿಂದ ಜಪಮಾಡಬೇಕು. ಜಪದಿನದಲ್ಲಿ ಫಲಾದಿಗಳನ್ನು ಮಾತ್ರ ಭುಜಿಸುತ್ತಾ ನಿಯತಾಹಾರವುಳ್ಳವನಾಗಿರಬೇಕು. ಜಪಾನಂತರ ಅಗ್ನಿಯಲ್ಲಿ ತಿಲಹೋಮವನ್ನೂ, ವಿರಜಾಹೋಮವನ್ನೂ ಮಾಡಬೇಕು. ಲಕ್ಷ್ಮೀದೇವತೆಯನ್ನುದ್ದೇಶಿಸಿ ಮಂತ್ರಪೂರ್ವಕವಾಗಿ ಆಜ್ಯದಿಂದ ಹೋಮಮಾಡಿದರೆ ಆ ಪುರುಷನ ದುಃಖದಾರಿದ್ರ್ಯಗಳು ನಾಶವಾಗಿ

ಸಕಲಸಂಪತ್ಸೌಭಾಗ್ಯಗಳೂ ಉಂಟಾಗುವವು. ಈ ವಿಷಯದಲ್ಲಿ ಅನುಮಾನಪಡಬೇಕಾಗಿಲ್ಲ. ಈ ಮಂತ್ರ ಜಪ ಮಾಡುವಾಗ ರಂ ಹ್ರೀಂ ಶ್ರೀಂ ಹ್ರೀಂ ರಂ ಎಂಬ ಐದು ಬೀಜಾಕ್ಷರಸಹಿತವಾಗಿ ನ್ಯಾಸಮಾಡಿ ಈ ಕೆಳಗೆ ಕೊಟ್ಟಿರುವ ಧ್ಯಾನಶ್ಲೋಕಗಳನ್ನು ಪಠಿಸಿ ಧ್ಯಾನಮಾಡಬೇಕು.

**ಅಜ್ಞಾನಪಾತಕಶತಮಸ್ತತಿತೀವ್ರರಶ್ಮಿಂ ದೌರ್ಭಾಗ್ಯಭೂಧರವಿದಾರಣವಜ್ರಮೀಡೇ ।**
**ರೋಗಾರ್ತಿಘೋರಫಣಿಮರ್ದನಪಕ್ಷಿರಾಜಂ ಲಕ್ಷ್ಮೀಪದದ್ವಯಮನರ್ಥಹರಂ ಸುಖಾರ್ಥೀ ॥**

**ಖಡ್ಗಂ ಸಪಾತಚಕ್ರಂ ಚ ಕಮಲಂ ವರಮೇವ ಚ ।**
**ಕರೈಶ್ಚತುರ್ಭಿರ್ಬಿಭ್ರಾಣಾಂ ಧ್ಯಾಯೇಚ್ಚಂದ್ರಾನನಾಂ ಶ್ರಿಯಂ ॥**

ಶ್ರೀ ಲಕ್ಷ್ಮೀದೇವತೆಯ ಪದದ್ವಯವು ಅಜ್ಞಾನ ಪಾತಕ ಎಂಬ ಕತ್ತಲೆಯನ್ನು ಪರಿಹರಿಸುವುದರಲ್ಲಿ ತೀಕ್ಷ್ಣವಾದ ಸೂರ್ಯರಶ್ಮಿಯಂತಿರುವುದು, ದೌರ್ಭಾಗ್ಯವೆಂಬ ಪರ್ವತವನ್ನು ಸೀಳುವ ವಜ್ರಾಯುಧದಂತಿರುವುದು. ರೋಗ, ಸಂಕಟ ಎಂಬ ಘೋರವಾದ ಸರ್ಪಗಳನ್ನು ಧ್ವಂಸಮಾಡುವ ಪಕ್ಷಿರಾಜನಾದ ಗರುಡನಂತಿರುವುದು ಇಂತಹ ಅನರ್ಥಗಳನ್ನು ಪರಿಹಾರಮಾಡುವ ಶಕ್ತಿಸಾಮರ್ಥ್ಯವುಳ್ಳ ಶ್ರೀ ಲಕ್ಷ್ಮೀದೇವಿಯ ಪಾದಯುಗಳವನ್ನು ಸ್ತೋತ್ರಮಾಡುತ್ತೇನೆ.

ಈ ಶ್ರೀದೇವತೆಯು ತನ್ನ ನಾಲ್ಕು ಕೈಗಳಲ್ಲಿ ಖಡ್ಗ, ಚಕ್ರ, ಕಮಲ, ವರಹಸ್ತ ಇವುಗಳನ್ನು ಧರಿಸಿ ಚಂದ್ರನಂತೆ ನಯನಮನೋಹರವಾದ ಕಾಂತಿಯಿಂದ ಬೆಳಗುತ್ತಿರುವಳು. ಇಂತಹ ಶ್ರೀದೇವತೆಯನ್ನು ಧ್ಯಾನಮಾಡಬೇಕು. ಎಂದು ಧ್ಯಾನಶ್ಲೋಕಗಳ ಮುಖ್ಯಾಭಿಪ್ರಾಯವು.

ಇಲ್ಲಿಗೆ ಎಂಟನೆಯ ಋಕ್ಕಿನ ಅರ್ಥವಿವರಣೆ ಸಮಾಪ್ತವು.

॥ ಅಥ ನವಮೀಋಕ್ ॥

**[ಅಸ್ಯ ಶ್ರೀಶ್ರೀಸೂಕ್ತನವಮಋಚೋ ಗಂಧದ್ವಾರೇತಿ ಮಹಾಮಂತ್ರಸ್ಯ । ಶ್ರೀಮಹಾವಿಷ್ಣುರ್ಋಷಿಃ । ಶ್ರೀಮಹಾಲಕ್ಷ್ಮೀರ್ದೇವತಾ । ಅನುಷ್ಟುಪ್ ಛಂದಃ ॥ ಗಂ ಬೀಜಂ । ಹ್ರೀಂ ಶಕ್ತಿಃ । ಶ್ರೀಂ ಕೀಲಕಂ । ಶ್ರೀಮಹಾಲಕ್ಷ್ಮೀಪ್ರಸಾದ ಸಿಧ್ಯರ್ಥೇ ಗಂಧದ್ವಾರೇತಿ ಮಂತ್ರಜಪೇ ವಿನಿಯೋಗಃ ॥**

**ಓಂ ಗಂಧದ್ವಾರಾಂ— ಅಂಗುಷ್ಠಾಭ್ಯಾಂ ನಮಃ । ಓಂ ದುರಾಧರ್ಷಾಂ— ತರ್ಜನೀಭ್ಯಾಂ ನಮಃ । ಓಂ ನಿತ್ಯಪುಷ್ಟಾಂ— ಮಧ್ಯಮಾಭ್ಯಾಂ ನಮಃ । ಓಂ ಕರೀಷಿಣೀಂ— ಅನಾಮಿಕಾಭ್ಯಾಂ ನಮಃ । ಓಂ ಈಶ್ವರೀಂ ಸರ್ವಭೂತಾನಾಂ— ಕನಿಷ್ಠಿಕಾಭ್ಯಾಂ ನಮಃ । ಓಂ ತಾಮಿಹೋಪಹ್ವಯೇ ಶ್ರಿಯಂ— ಕರತಲಕರಪೃಷ್ಠಾಭ್ಯಾಂ ನಮಃ । ಓಂ ಗಂಧದ್ವಾರಾಂ— ಹೃದಯಾಯ ನಮಃ । ಓಂ ದುರಾಧರ್ಷಾಂ— ಶಿರಸೇ ಸ್ವಾಹಾ । ಓಂ ನಿತ್ಯಪುಷ್ಟಾಂ— ಶಿಖಾಯೈ ವಷಟ್ । ಓಂ ಕರೀಷಿಣೀಂ— ಕವಚಾಯ ಹುಂ ॥ ಓಂ ಈಶ್ವರೀಂ ಸರ್ವಭೂತಾನಾಂ— ನೇತ್ರತ್ರಯಾಯ ವೌಷಟ್ । ಓಂ ತಾಮಿಹೋಪಹ್ವಯೇ ಶ್ರಿಯಂ— ಅಸ್ತ್ರಾಯ ಫಟ್ ॥ ಭೂರ್ಭುವಸ್ಸುವರೋಮಿತಿ ದಿಗ್ಬಂಧಃ ॥ ಅಥ ಧ್ಯಾನಂ ॥**

ಕಲ್ಪದ್ರೋಃ ಪಾದಮೂಲೇ ದ್ಯುತಿಕನಕನಿಭಾಚಾರುಸಿಂಹಾಸನಸ್ಥಾಂ
ಹಸ್ತೈಃ ಪದ್ಮೌ ವರದಮಭಯಂ ಧಾರಯಂತೀಂ ಚ ಮಾಲಾಂ ।
ನಾನಾಭೂಷಾಂ ಸುವೇಷಾಂ ಮಣಿಮಕುಟಧರಾಂ ದಿವ್ಯಗಂಧಾನುಲೇಪಾಂ
ಧ್ಯಾಯೇತ್ಸಂಪೂರ್ಣಕಾಮಪ್ರದಕರಕಮಲಾಂ ಕಂಬುಕಂಠೀಂ ಹೃದಬ್ಜೇ ॥

ಏವಂ ಧ್ಯಾತ್ವಾ ಜಪೇನ್ಮಂತ್ರಂ ಲಕ್ಷಂ ಸರ್ವಾರ್ಥಸಿದ್ಧಯೇ]

॥ ಒಂಭತ್ತನೆಯ ಋಕ್ಕು ॥

ಗಂಧದ್ವಾರಾಂ ದುರಾಧರ್ಷಾಂ ನಿತ್ಯಪುಷ್ಟಾಂ ಕರೀಷಿಣೀಂ ।
ಈಶ್ವರೀಂ ಸರ್ವಭೂತಾನಾಂ ತಾಮಿಹೋಪಹ್ವಯೇ ಶ್ರಿಯಂ ॥ ೯ ॥

॥ ಸಾಯಣಭಾಷ್ಯಂ ॥

ಗಂಧಃ ಘ್ರಾಣಗ್ರಾಹ್ಯೋ ಗುಣಃ ದ್ವಾರಂ ಲಕ್ಷಣಂ ಯಸ್ಯಾಸ್ತಾಂ ದುರಾಧರ್ಷಾಂ ಕೇನಾಪಿ ಧರ್ಷಿತುಮಶಕ್ಯಾಂ ನಿತ್ಯಪುಷ್ಟಾಂ ನಿತ್ಯಂ ಸದಾ ಸಸ್ಯಾದಿಭಿಃ ಪುಷ್ಟಾಂ ಸಮೃದ್ಧಾಂ ಕರೀಷಿಣೀಂ ಕರೀಷಃ ಶುಷ್ಕಗೋಮಯಂ [illegible] ಯೇವಾ । ಸರ್ವಭೂತಾನಾಂ ಸಕಲಪ್ರಾಣಿನಾಮೀಶ್ವರೀಂ [illegible] ತಾಮಿಹ [illegible] ಶ್ರಿಯಮುಪಹ್ವಯೇ ಉಪಾಹ್ವಯೇ ।

॥ ಪೃಥ್ವೀಧರಭಾಷ್ಯಂ ॥

ಹೇ ಅಗ್ನೇ ಗಂಧದ್ವಾರಾಂ ಗಂಧಪ್ರಧಾನಾಂ ಪೃಥ್ವೀರೂಪಾಂ ದುರಾಧರ್ಷಾಂ ದುಸ್ಸಹಾಂ ಕೇನಾಪಿ ಧರ್ಷಿತುಮಶಕ್ಯಾಮಿತ್ಯರ್ಥಃ । ನಿತ್ಯಪುಷ್ಟಾಂ ನಿತ್ಯಂ ಸಸ್ಯಾದಿಭಿಃ ಪೋಷಣಶೀಲಾಂ ಕರೀಷಿಣೀಂ ಶುಷ್ಕಗೋಮಯವತೀಂ ಅನೇನ ಪೃಥಿವ್ಯಾ ಅಸಂಖ್ಯ[illegible]ತ್ವಂ ವ್ಯಜ್ಯತೇ । ಸರ್ವಭೂತಾನಾಂ ಸಮಸ್ತಪ್ರಾಣಿನಾಮೀಶ್ವರೀಂ ನಿಯಾಮಿಕಾಂ ಪ್ರಭುರೂಪಾಂ ತಾಂ ಶ್ರಿಯಂ ಲಕ್ಷ್ಮೀಮಿಹ ಅಸ್ಮಿನ್ ದೇಶೇ ಅಹಮುಪಹ್ವಯೇ ಮತ್ಸನಿಧಾನಂ ಪ್ರತ್ಯಾಗಚ್ಛೇತಿ ಆಹ್ವಾನಂ ಕರೋಮೀತ್ಯರ್ಥಃ । ವಿಷ್ಣುಪತ್ನೀಂ ಮಹಾದೇವೀಮಿತಿ ಭೂಸೂಕ್ತೇ ।

ಶ್ರೀರ್ಭೂರ್ನೀಲಾ ರಮಾ ದುರ್ಗಾ ಸೀತಾ ಸತ್ಯಾ ಚ ಭಾಮಿನೀ ।
ರುಕ್ಮಿಣೀತುಲಸೀರಾಧಾಸ್ಸರ್ವಾ ಲಕ್ಷ್ಮ್ಯಂಶಸಂಭವಾಃ ॥

ಇತಿ ಶ್ರೀರಹಸ್ಯೇ ॥ ೯ ॥

॥ ಪ್ರತಿಪದಾರ್ಥ ॥

(ಹೇ ಅಗ್ನೇ—ಎಲೈ ಅಗ್ನಿಯೆ) । ಗಂಧದ್ವಾರಾಂ—ಗಂಧಗುಣವೇ ಲಕ್ಷಣವಾಗಿವುಳ್ಳ, ಎಂದರೆ ಪೃಥ್ವೀರೂಪವುಳ್ಳ । ದುರಾಧರ್ಷಾಂ—ಯಾರಿಂದಲೂ ಧರಿಸಲು ಅಶಕ್ಯವಾದ । ನಿತ್ಯಪುಷ್ಟಾಂ—ಸಸ್ಯಾದಿಗಳಿಂದ

ಸಹಿತಳಾಗಿ ಸದಾ ಕಾಲದಲ್ಲಿಯೂ ಪುಷ್ಟಳಾಗಿರುವ ಎಂದರೆ ಸಸ್ಯಸಮೃದ್ಧಿಯಿಂದ ಕೂಡಿದ । **ಕರೀಷಿಣೀಂ**— ಶುಷ್ಕಗೋಮಯದಿಂದ ಕೂಡಿದ ಎಂದರೆ ಅಸಂಖ್ಯಾತಪಶುಸಂಪತ್ತಿನಿಂದ ಕೂಡಿದ । **ಸರ್ವಭೂತಾನಾಂ**—ಸಮಸ್ತ ಪ್ರಾಣಿಗಳಿಗೂ । **ಈಶ್ವರೀಂ**— ಒಡೆಯಳಾದ । **ತಾಂ**— ಪೃಥ್ವೀರೂಪದಿಂದಿರುವ । **ಶ್ರಿಯಂ**— ಶ್ರೀದೇವತೆಯನ್ನು । **ಇಹ**— ನಾನು ಇರುವ ಪ್ರದೇಶಕ್ಕೆ । **ಉಪ ಹ್ವಯೇ**— ಪ್ರಾರ್ಥಿಸಿ ಕರೆಯುತ್ತೇನೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಗಂಧವೇ ಲಕ್ಷಣವಾಗಿವುಳ್ಳ ಪೃಥ್ವೀರೂಪಧಾರಿಯೂ, ಯಾರಿಂದಲೂ ಧರಿಸಲು ಸಾಧ್ಯವಿಲ್ಲದ ಆಕಾರ ಅಥವಾ ಭಾರವುಳ್ಳವಳೂ, ಯಾವಾಗಲೂ ಸಸ್ಯಾದಿಗಳಿಂದಲೂ, ಅಸಂಖ್ಯಾತಪಶುಸಂಪತ್ತಿನಿಂದಲೂ ಸರ್ವರಿಗೂ ಪುಷ್ಟಿಪ್ರದಳಾಗಿರುವವಳೂ, ಸಮಸ್ತ ಪ್ರಾಣಿಗಳಿಗೂ ಪ್ರಭುವಾಗಿ ನಿಯಾಮಕಳಾದವಳೂ, ಪೃಥ್ವೀರೂಪದಿಂದಿರುವವಳೂ ಆದ ಶ್ರೀದೇವತೆಯನ್ನು ನನ್ನ ಸಮೀಪಕ್ಕೆ ಬರುವಂತೆ ಪ್ರಾರ್ಥಿಸಿ ಕರೆಯುತ್ತೇನೆ.

॥ ವಿಶೇಷವಿಷಯಗಳು ॥

**॥ ವೈಖಾನಸವಿದ್ಯಾಯಾಂ ॥**

**ಋಚಮಾನುಷ್ಟುಭೀಂ ಗಂಧದ್ವಾರಾಮಿತಿ ಜಪೇಚ್ಛ್ರಿಯಃ ।**
**ಷಷ್ಟ್ಯುತ್ತರಶತಾನಾಂ ತು ಸಹಸ್ರಾಣಾಂ ಚ ಸಂಖ್ಯಯಾ ॥**
**ಪದ್ಮಾಕ್ಷಮಾಲಯಾ ಪದ್ಮಾಸನಸ್ಥಸ್ಸಹ ಪಾರ್ಥಿವಂ ।**
**ಬೀಜಂ ವಿನ್ಯಸ್ಯ ಮಂತ್ರೇಣ ಶ್ರೀಬೀಜೇನ ಚ ತಜ್ಜಪೇತ್ ॥**
**ಕೇಸರೀಚಂದ್ರಕಸ್ತೂರೀಶ್ರೀಖಂಡಾದ್ಯೈರ್ಮನೋಹರೈಃ ।**
**ಗಂಧದ್ರವ್ಯೈಸ್ಸಮಭ್ಯರ್ಚ್ಯ ಸ್ಥಂಡಿಲೇ ಶ್ರಿಯಮರ್ಚಯೇತ್ ॥**
**ಗೋವೃಂದಾನುಗತಾಂ ಧ್ಯಾತ್ವಾ ಸುರಭಿಂ ಸಸ್ಯಮಾಲಿನೀಂ ।**
**ಪೃಥುಲಾಂ ಪ್ರಾಣಿನಾಮೀಶಾಂ ದುರ್ಧರ್ಷಾಂ ಶ್ರಿಯಮರ್ಚಯೇತ್ ॥**

**ಕೃಷಿಫಲಪ್ರದಃ ಧನಧಾನ್ಯಪಶುಸಮೃದ್ಧಿಕರಃ ಪುಣ್ಯಗಂಧಪ್ರದಃ ಮಹತ್ತ್ವಪಾದಕಃ ಪ್ರಭುತ್ವಸಾಧಕಶ್ಚ ಮಂತ್ರೋಽಯಂ ॥ ೯ ॥**

## ಅನುವಾದವು

ಈ ಋಕ್ಕಿನಲ್ಲಿ ಶ್ರೀದೇವತೆಯನ್ನು ಪೃಥ್ವೀರೂಪದಲ್ಲಿರುವಂತೆ ಭಾವಿಸಿ ಸ್ತುತಿಸಲಾಗಿದೆ. ಈ ವಿಷಯದಲ್ಲಿ—

**ಶ್ರೀರ್ಭೂರ್ನೀಲಾ ರಮಾ ದುರ್ಗಾ ಸೀತಾ ಸತ್ಯಾ ಚ ಭಾಮಿನೀ ।**
**ರುಕ್ಮಿಣೀತುಲಸೀರಾಧಾಃ ಸರ್ವಾ ಲಕ್ಷ್ಮ್ಯಂಶಸಂಭವಾಃ ॥**

ಎಂದು ಶ್ರೀರಹಸ್ಯವೆಂಬ ಗ್ರಂಥದಲ್ಲಿ ಹೇಳಿದೆ. ಎಂದರೆ ಶ್ರೀದೇವಿ, ಭೂದೇವಿ (ಪೃಥಿವೀ) ನೀಲಾ, ರಮಾ, ದುರ್ಗಾ, ಸೀತಾ, ಸತ್ಯಭಾಮಾ, ರುಕ್ಮಿಣೀ, ತುಲಸೀ, ರಾಧಾ ಎಂಬ ದೇವಿಯರೆಲ್ಲಾ ಲಕ್ಷ್ಮೀದೇವತೆಯ ಅಂಶಸಂಭೂತರರೆಂದು ಹೇಳಿರುವುದರಿಂದ ಈ ಋಕ್ಕಿನಲ್ಲಿ ಶ್ರೀದೇವತೆಯನ್ನು ಪೃಥ್ವೀರೂಪಧರಳೆಂದು ವರ್ಣಿಸಿದೆ.

**ಗಂಧದ್ವಾರಾಂ—ಗಂಧಃ ಘ್ರಾಣಗ್ರಾಹ್ಯೋ ಗುಣಃ ದ್ವಾರಂ ಲಕ್ಷಣಂ ಯಸ್ಯಾಸ್ತಾಂ** । ಪೃಥಿವ್ಯಾದಿ ಪಂಚಭೂತಗಳಿಗೆ ಶಬ್ದಸ್ಪರ್ಶಾದಿ ಮುಖ್ಯ ಗುಣಗಳಿರುವವು. ಹೇಗೆಂದರೆ ಆಕಾಶಕ್ಕೆ—ಶಬ್ದಗುಣವೂ, ವಾಯುವಿಗೆ—ಸ್ಪರ್ಶವೂ, ತೇಜಸ್ಸಿಗೆ—ರೂಪವೂ, ಉದಕಕ್ಕೆ—ರಸವೂ, ಪೃಥಿವಿಗೆ—ಗಂಧವೂ ಮುಖ್ಯ ಗುಣಗಳೆಂದು ಶ್ರುತಿವಾಕ್ಯಗಳಲ್ಲಿ ಹೇಳಿದೆ. ಆದುದರಿಂದ ಇಲ್ಲಿ ಪೃಥ್ವಿಯನ್ನು ನಿರ್ದೇಶಿಸುವಾಗ ಅದರ ಗುಣವಾದ ಗಂಧವನ್ನು ಲಕ್ಷಣವನ್ನಾಗಿ ಹೇಳಿದೆ. ಆದ್ದರಿಂದಲೇ **ಗಂಧವತೀ ಪೃಥಿವೀ** ಎಂದು ಹೇಳುವುದು ರೂಢಿಯಾಗಿದೆ.

**ದುರಾಧರ್ಷಾಂ**—ಪೃಥ್ವಿಯು ಇತರ ಸಾಮಾನ್ಯವಸ್ತುಗಳಂತಿರದೆ ಆಕಾರದಲ್ಲಿ ಬಹಳ ದೊಡ್ಡದಾಗಿಯೂ, ಅತ್ಯಂತ ಭಾರವಾಗಿಯೂ ಇರುವುದರಿಂದ ಇದನ್ನು ಧರಿಸಲು (ಹೊರಲು) ಯಾರಿಂದಲೂ ಸಾಧ್ಯವಿಲ್ಲ ಎಂಬ ಅಭಿಪ್ರಾಯವು **ದುರಾಧರ್ಷಾಂ** ಎಂಬ ವಿಶೇಷಣದಿಂದ ಸೂಚಿತವಾಗಿದೆ.

**ನಿತ್ಯಪುಷ್ಟಾಂ—**ಭೂಮಿಯಮೇಲೆ ಯಾವಾಗಲೂ ಸಸ್ಯಾದಿಗಳು, ವೃಕ್ಷಗಳು, ವನಸ್ಪತಿಗಳು ಸಮೃದ್ಧವಾಗಿ ಬೆಳೆದು ಅವುಗಳಿಂದ ಸಮಸ್ತ ಪ್ರಾಣಿಗಳಿಗೂ ಪುಷ್ಟಿಕರವಾದ ಆಹಾರವು ದೊರಕುವುದರಿಂದ ಸರ್ವರಿಗೂ ಪುಷ್ಟಿಪ್ರದಳು ಎಂದು ಪೃಥ್ವಿಯನ್ನು ವರ್ಣಿಸಿದೆ.

**ಕರೀಷಿಣೀಂ—ಶುಷ್ಕಗೋಮಯಸಮೃದ್ಧವತೀಂ** । ಕರೀಷವೆಂದರೆ ಒಣಗಿದ ಗೋಮಯ (ಸಗಣಿ) ಎಂದು ಭಾಷ್ಯಕಾರರು ಅರ್ಥವಿವರಣೆ ಮಾಡಿದಾರೆ. ಗೋಮಯವಿದ್ದರೆ ಪಶುಗಳೂ ಇರಲೇಬೇಕು. ಆದುದರಿಂದ ಶುಷ್ಕಗೋಮಯದಿಂದ ಕೂಡಿದವಳು ಎಂದರೆ—ಆ ಗೋಮಯಕ್ಕೆ ಕಾರಣಭೂತವಾದ ಗೋವುಗಳೇ ಮೊದಲಾದ ಪಶುಸಂಪತ್ತಿನಿಂದ ಕೂಡಿರುವವಳು ಎಂದಭಿಪ್ರಾಯವು. ಪ್ರಾಣಿಗಳಿಗೆ ಅಥವಾ ಜನರಿಗೆ ಪುಷ್ಟಿಕರವಾದ ಆಹಾರವು ದೊರೆಯಬೇಕಾದರೆ ಸಸ್ಯಸಮೃದ್ಧಿಯೂ, ಪಶುಸಮೃದ್ಧಿಯೂ ಇರಲೇಬೇಕು. ಈ ಎರಡುವಿಧವಾದ ಪುಷ್ಟಿಯನ್ನು ಹೊಂದಿರುವವಳು ಎಂದು ಪೃಥ್ವಿಯನ್ನು ಸ್ತುತಿಸಲಾಗಿದೆ

ವೈಖಾನಸವಿದ್ಯೆಯೆಂಬ ಗ್ರಂಥದಲ್ಲಿ ಈ ಋಕ್ಕನ್ನು ಜಪಮಾಡಬೇಕಾದ ಕ್ರಮವನ್ನು ಈರೀತಿ ವಿವರಿಸಿದೆ—ಈ ಶ್ರೀಸೂಕ್ತದ **ಗಂಧದ್ವಾರಾಂ** ಎಂಬ ಅನುಷ್ಟುಪ್ ಛಂದಸ್ಸಿನ ಋಕ್ಕನ್ನು ಒಂದುಲಕ್ಷ ಅರವತ್ತುಸಾವಿರದ ಸಂಖ್ಯೆಯಷ್ಟು ಜಪಮಾಡಬೇಕು. ಸಾಧಕನು ಪದ್ಮಾಸನಾಸೀನನಾಗಿ ಪದ್ಮಾಕ್ಷವೆಂಬ ಜಪಮಾಲೆಯನ್ನು ಕೈಯಲ್ಲಿ ಹಿಡಿದು ಪೃಥಿವೀ ಬೀಜಾಕ್ಷರ ಶ್ರೀಬೀಜಾಕ್ಷರಗಳಿಂದ ಸಹಿತವಾಗಿ ನ್ಯಾಸಮಾಡಿ ಈ ಋಕ್ಕನ್ನು ಜಪಮಾಡಬೇಕು ಚೆನ್ನಾಗಿ ಸ್ಥಂಡಿಲವನ್ನು ನಿರ್ಮಿಸಿ, ಅದನ್ನು ರಂಗವಲ್ಯಾದಿಗಳಿಂದ ಅಲಂಕರಿಸಿ, ಅದರ ಮೇಲೆ ಶ್ರೀದೇವತೆಯನ್ನು ಸ್ಥಾಪಿಸಿ, ಕೇಸರಿ, ಚಂದ್ರ, ಕಸ್ತೂರಿ, ಶ್ರೀಗಂಧ, ಮನೋಹರವಾದ ಮತ್ತು ಸುವಾಸಿತವಾದ ಮಂಗಳದ್ರವ್ಯಗಳು ಇವುಗಳಿಂದ ಶ್ರೀದೇವತೆಯನ್ನು ಪೃಥ್ವೀರೂಪದಿಂದಿರುವಂತೆ ಭಾವಿಸಿ ಅದರಲ್ಲಿ ಗೋಸಮೂಹವೂ ಸುವಾಸಿತವಾದ ಸಸ್ಯಸಮೃದ್ಧಿಯೂ ಇರುವಂತೆಯೂ ಅತಿ ವಿಸ್ತಾರವಾಗಿಯೂ ಸರ್ವ ಪ್ರಾಣಿಗಳಿಗೂ ಒಡೆಯಳಾಗಿಯೂ ಯಾರಿಂದಲೂ ಸಹಿಸಲು ಸಾಧ್ಯವಿಲ್ಲದ ಅಸದೃಶಶಕ್ತಿಸಾಮರ್ಥ್ಯಾದಿಗಳುಳ್ಳವಳಾಗಿರುವಂತೆಯೂ ಧ್ಯಾನಿಸುತ್ತಾ ಶ್ರೀದೇವತೆಯನ್ನು ಪೂಜೆಮಾಡಬೇಕು. ಈ ರೀತಿ ದೇವಿಯನ್ನು ಅರ್ಚಿಸಿ ಈ ಮಂತ್ರವನ್ನು ಜಪಮಾಡುವುದರಿಂದ ಕೃಷಿಫಲ ಎಂದರೆ ವ್ಯವಸಾಯೋತ್ಪನ್ನಗಳಾದ ಧಾನ್ಯಾದಿಗಳು, ಧನ, ಪಶುಸಮೃದ್ಧಿ ಇವೆಲ್ಲವೂ ಲಭಿಸುವುದು. ಶ್ರೇಯಸ್ಸು, ಗಣ್ಯತೆ, ಪ್ರಭುತ್ವ ಮುಂತಾದ ಪ್ರಶಸ್ತಿಗಳೂ ಲಭಿಸುವವು.

ಇಲ್ಲಿಗೆ ಒಂಭತ್ತನೆಯ ಋಕ್ಕಿನ ವಿವರಣೆ ಸಮಾಪ್ತವು.

|| ದಶಮಿಾ ಋಕ್ ||

[ಅಸ್ಯ ಶ್ರೀ ಶ್ರೀಸೂಕ್ತಮನಸಃಕಾಮಮಿತಿ ದಶಮಋಙ್ಮಹಾಮಂತ್ರಸ್ಯ । ಕಾಮ ಋಷಿಃ। ಶ್ರೀಮಹಾಲಕ್ಷ್ಮೀರ್ದೇವತಾ । ಅನುಷ್ಟುಪ್‌ಛಂದಃ। ಮಂ ಬೀಜಂ। ಶಂ ಶಕ್ತಿಃ। ಶ್ರೀಃ ಕೀಲಕಂ। ಮಹಾಲಕ್ಷ್ಮೀಪ್ರಸಾದಸಿದ್ಧ್ಯರ್ಥೇ ಜಪೇ ವಿನಿಯೋಗಃ ||

ಓಂ ಓಂ ಮನಸಃ ಕಾಮಮಾಕೂತಿಂ—ಅಂಗುಷ್ಠಾಭ್ಯಾಂ ನಮಃ। ಓಂ ಐಂ ವಾಚಸ್ಸತ್ಯಂ—ತರ್ಜನೀಭ್ಯಾಂ ನಮಃ। ಓಂ ಲಂ ಅಶೀಮಹಿ—ಮಧ್ಯಮಾಭ್ಯಾಂ ನಮಃ। ಓಂ ವಂ ಪಶೂನಾಂ ರೂಪಮನ್ನಸ್ಯ—ಅನಾಮಿಕಾಭ್ಯಾಂ ನಮಃ। ಓಂ ಶ್ರೀಂ ಮಯಿಶ್ರೀಃ—ಕನಿಷ್ಠಿಕಾಭ್ಯಾಂ ನಮಃ। ಓಂ ಓಂ ಐಂ ಲಂ ವಂ ಶ್ರೀಂ ಶ್ರಯತಾಂ ಯಶಃ—ಕರತಲಕರಪೃಷ್ಠಾಭ್ಯಾಂ ನಮಃ। ಓಂ ಓಂ ಮನಸಃ ಕಾಮಮಾಕೂತಿಂ—ಹೃದಯಾಯ ನಮಃ। ಓಂ ಐಂ ವಾಚಸ್ಸತ್ಯಂ—ಶಿರಸೇ ಸ್ವಾಹಾ। ಓಂ ಲಂ ಅಶೀಮಹಿ—ಶಿಖಾಯೈ ವಷಟ್। ಓಂ ವಂ ಪಶೂನಾಂ ರೂಪಮನ್ನಸ್ಯ-ಕವಚಾಯ ಹುಂ। ಓಂ ಶ್ರೀಂ ಮಯಿ ಶ್ರೀಃ—ನೇತ್ರತ್ರಯಾಯ ವೌಷಟ್। ಓಂ ಓಂ ಐಂ ಲಂ ವಂ ಶ್ರೀಂ ಶ್ರಯತಾಂ ಯಶಃ—ಅಸ್ತ್ರಾಯ ಫಟ್ || ಭೂರ್ಭುವಸ್ಸುವರೋಮಿತಿ ದಿಗ್ಬಂಧಃ || ಧ್ಯಾನಂ ||

ಕಾಂತ್ಯಾ ಕಾಂಚನಸನ್ನಿಭಾಂ ದ್ವಿನಯನಾಂ ಕಲ್ಹಾರಮಾಲಾವತೀಂ
ಕಸ್ತೂರೀತಿಲಕಾಂ ಕರೈಶ್ಚ ಕಮಲೇ ಕಂಠೇನ ಮುಕ್ತಾವಳೀಂ।
ಶೇಷಾಶೇಷವಿಶೇಷಭೂಷಣರತಾಂ ಸಂಬಿಭ್ರತೀಂ ಕುಂಡಲಾಂ
ಪದ್ಮಾಕ್ಷೀಂ ಭಜ ಸರ್ವದಾಭಿಲಷಿತಪ್ರಾಪ್ತ್ಯೈ ಸಮೃದ್ಧಶ್ರಿಯೈ ||

ಏವಂ ಧ್ಯಾತ್ವಾ ಜಪೇನ್ಮಂತ್ರಲಕ್ಷಮಾತ್ರಮತಂದ್ರಿತಃ || ]

|| ಹತ್ತನೆಯ ಋಕ್ಕು ||

ಮನಸಃ ಕಾಮಮಾಕೂತಿಂ ವಾಚಃ ಸತ್ಯಮಶೀಮಹಿ।
ಪಶೂನಾಂ ರೂಪಮನ್ನಸ್ಯ ಮಯಿ ಶ್ರೀಃ ಶ್ರಯತಾಂ ಯಶಃ ||

|| ಶ್ರೀ ವಿದ್ಯಾರಣ್ಯಭಾಷ್ಯಂ ||

ಹೇ ಶ್ರೀಃ ಮನಸಃ ಕಾಮಂ ಮನೋರಥಮಾಕೂತಿಂ ಸಂಕಲ್ಪಂ ವಾಚಃ ವಾಗಿಂದ್ರಿಯಸ್ಯ ಸತ್ಯಂ ಯಾಥಾರ್ಥ್ಯಂ ಪಶೂನಾಂ ಗೋಮಹಿಷ್ಯಾದೀನಾಂ ರೂಪಂ ಕ್ಷೀರಾದಿ ಅನ್ನಸ್ಯ ಅದನೀಯಸ್ಯ ಯವವ್ರೀಹ್ಯಾದೇಃ ರೂಪಂ ಭಕ್ಷ್ಯಾದಿಚತುರ್ವಿಧಮಶೀಮಹಿ ಲಭೇಮಹಿ। ಶ್ರೀಃ ಸಂಪತ್ ಯಶಃ ಕೀರ್ತಿಶ್ಚ ಮಯಿ ತ್ವದುಪಾಸಕೇ ಶ್ರಯತಾಂ ಆಶ್ರಯತಾಂ ||

|| ಪೃಥ್ವೀಧರಭಾಷ್ಯಂ ||

ಮಮ ಮನಸಃ ಕಾಮಂ ಭೂರಿಮನೋರಥಮಾಕೂತಿಂ ಸಂತೋಷಂ ವಾಚಸ್ಸತ್ಯಂ ವಚಸಾಂ ಯಥಾರ್ಥತಾಂ ಪಶೂನಾಂ ರೂಪಂ ಗಜಾಶ್ವಗೋಮಹಿಷ್ಯಾದಿಪ್ರಾಚುರ್ಯಮನ್ನಸ್ಯ ರೂಪಂ ಭಕ್ಷ್ಯ-ಭೋಜ್ಯಾದಿಕಂ ಯಶಃ ಕೀರ್ತಿಂ ಚ ಯಸ್ಯಾಸ್ಸಕಾಶಾತ್ ವಯಮಶೀಮಹಿ ಲಭೇಮಹಿ । ತಾದೃಶೀ ಶ್ರೀರ್ಲಕ್ಷ್ಮೀಃ ಮಯಿ ಶ್ರಯತಾಂ ಸನ್ನಿಧತ್ತಾಂ ||

॥ ಪ್ರತಿಪದಾರ್ಥ ॥

**ಮನಸಃ**—ಮನಸ್ಸಿನ | **ಕಾಮಂ**—ಇಷ್ಟಾರ್ಥವನ್ನು | **ಆಕೂತಿಂ**—ಸಂಕಲ್ಪವನ್ನು ಅಥವಾ ಸಂತೋಷ ವನ್ನೂ | **ವಾಚಃ**—ವಾಕ್ಯಗಳ | **ಸತ್ಯಂ**—ಯಾಥಾರ್ಥ್ಯವನ್ನೂ | **ಪಶೂನಾಂ ರೂಪಂ**—ಗೋಮಹಿಷ್ಯಾದಿರೂಪ ದಿಂದಿರುವ ಪಶುಸಂಪತ್ತನ್ನೂ | **ಅನ್ನಸ್ಯ (ರೂಪಂ)**—ಅನ್ನಾದ್ಯಾಹಾರಗಳಿಗೆ ಅವಶ್ಯಕವಾದ ಯವವ್ರೀಹ್ಯಾದಿ ಧಾನ್ಯಗಳ ರಾಶಿಯನ್ನೂ | **ಅಶೀಮಹಿ**—ನಾವು ಪಡೆಯುವಂತಾಗಲಿ | **ಶ್ರೀಃ**—ಸಂಪದಾದ್ಯೈಶ್ವರ್ಯವೂ **ಯಶಃ**—ಕೀರ್ತಿಯೂ | **ಮಯಿ**—ನನ್ನಲ್ಲಿ | **ಶ್ರಯತಾಂ**—ಆಶ್ರಯಿಸಿರಲಿ.

॥ ಭಾವಾರ್ಥ ॥

ನಮ್ಮ ಸಮಸ್ತ ಮನೋಭೀಷ್ಟಗಳನ್ನೂ, ಸಂಕಲ್ಪಸಿದ್ಧಿಯನ್ನೂ, ಸಂತುಷ್ಟಿಯನ್ನೂ, ಮಾತುಗಳಲ್ಲಿ ಸತ್ಯತೆ ಯನ್ನೂ ಗೋಮಹಿಷ್ಯಾದಿ ಪಶುಸಂಪತ್ತನ್ನೂ, ವ್ರೀಹಿಯವಾದಿ ಧಾನ್ಯಸಮೃದ್ಧಿಯನ್ನೂ ಶ್ರೀದೇವತೆಯ ಅನುಗ್ರಹ ದಿಂದ ನಾವು ಪಡೆಯುವಂತಾಗಲಿ ಮತ್ತು ಸಂಪತ್ಸಮೃದ್ಧಿಯೂ ಕೀರ್ತಿಯೂ ನನ್ನನ್ನು ಆಶ್ರಯಿಸಿರಲಿ.

॥ ವಿಶೇಷವಿಷಯಗಳು ॥

|| ಮಂತ್ರಕಲ್ಪಾರ್ಣವೇ ||

ಮನಸಃ ಕಾಮಮಿತ್ಯಾದ್ಯಾಂ ಶ್ರೀಸೂಕ್ತೇ ದಶಮೀಮೃಚಂ ।
ಮನೋವಾಞ್ಛಿತತೋ ನಿತ್ಯಮಷ್ಟಲಕ್ಷಜಪಂ ಚರೇತ್ ||
ವಾಕ್ಸಿದ್ಧಿರ್ಭೋಗಸಿದ್ಧಿಶ್ಚ ಭೋಗ್ಯಲಾಭೋ ಭವೇದ್ಧ್ರುವಂ ||

ಓಂ ಐಂ ಲಂ ವಂ ಶ್ರೀಮಿತಿ ಸಪಲ್ಲವಂ ನ್ಯಾಸಃ || ಧ್ಯಾನಂ—

ತಾಂ ಧ್ಯಾಯೇತ್ಸತ್ಯಸಂಕಲ್ಪಾಂ ಲಕ್ಷ್ಮೀಂ ಕ್ಷೀರೋದನಪ್ರಿಯಾಂ ।
ಖ್ಯಾತಾಂ ಸರ್ವೇಷು ಭೂತೇಷು ತತ್ತ್ವಜ್ಞಾನಬಲಕ್ರಿಯಾಂ ||

## ಅನುವಾದವು

ಶ್ರೀಸೂಕ್ತದ ಹತ್ತನೆಯ ಋಕ್ಕಾದ **ಮನಸಃಕಾಮಮಾಕೂತಿಂ** ಎಂಬ ಮಂತ್ರವನ್ನು ಮನಶ್ಶುದ್ಧಿಯಿಂದ ಪ್ರತಿದಿನವೂ ಎಂಟು ಲಕ್ಷ ಸಂಖ್ಯೆಯಷ್ಟಾಗುವವರೆಗೆ ಜಪ ಮಾಡಬೇಕು. ಹೀಗೆ ಮಾಡಿದರೆ ವಾಕ್ಸಿದ್ಧಿ, ಭೋಗಸಿದ್ಧಿ ಭೋಗಸಾಧನವಾದ ಐಶ್ವರ್ಯ ಇವೆಲ್ಲವೂ ಖಂಡಿತವಾಗಿ ಲಭಿಸುವವು ಈ ಮಂತ್ರ ಜಪಮಾಡುವಕಾಲದಲ್ಲಿ ಓಂ ಐಂ ಲಂ ವಂ ಶ್ರೀಂ ಎಂಬ ಬೀಜಾಕ್ಷರಸಹಿತವಾಗಿ ನ್ಯಾಸಮಾಡಿ ಜಪಮಾಡಬೇಕು. ಧ್ಯಾನವನ್ನು ಈ ರೀತಿ ಮಾಡಬೇಕು.

ತಾಂ ಧ್ಯಾಯೇತ್ಸತ್ಯಸಂಕಲ್ಪಾಂ ಲಕ್ಷ್ಮೀಂ ಕ್ಷೀರೋದನಪ್ರಿಯಾಂ ।
ಖ್ಯಾತಾಂ ಸರ್ವೇಷು ಭೂತೇಷು ತತ್ತ್ವಜ್ಞಾನಬಲಕ್ರಿಯಾಂ ॥

ಎಂಬ ಶ್ಲೋಕದಂತೆ ಧ್ಯಾನವನ್ನು ಮಾಡಿ ಜಪ ಮಾಡಬೇಕ. ಸತ್ಯಸಂಕಲ್ಪವುಳ್ಳವಳೂ, ಕ್ಷೀರಾನ್ನ (ಹಾಲನ್ನ) ಪ್ರಿಯಳೂ, ಸಮಸ್ತ ಪ್ರಾಣಿಗಳಲ್ಲಿಯೂ ಅಂತರಾತ್ಮರೂಪದಿಂದ ನೆಲೆಸಿ ಅವುಗಳಿಗೆ ಜ್ಞಾನ, ಬಲ ಕ್ರಿಯೆಗಳನ್ನು ಪ್ರಚೋದಿಸುವವಳೂ ಆದ ಶ್ರೀದೇವತೆಯನ್ನು ಧ್ಯಾನಿಸತಕ್ಕದ್ದು ಎಂದು ಧ್ಯಾನಶ್ಲೋಕದ ಮುಖ್ಯಾಭಿಪ್ರಾಯವು.

|| ಏಕಾದಶೀ ಋಕ್ ||

[ಓಂ ಅಸ್ಯ ಶ್ರೀ ಶ್ರೀಸೂಕ್ತಸ್ಯ ಏಕಾದಶೀ ಋಕ್ ಕರ್ದಮೇನೇತ್ಯನುಷ್ಟುಪ್ ಮಂತ್ರಸ್ಯ । ಕರ್ದಮ ಋಷಿಃ । ಮಹಾಲಕ್ಷ್ಮೀರ್ದೇವತಾ । ಅನುಷ್ಟುಪ್ ಛಂದಃ । ಕಂ ಬೀಜಂ । ವಂ ಶಕ್ತಿಃ । ಶ್ರೀಂ ಕೀಲಕಂ । ಮಹಾಲಕ್ಷ್ಮೀಪ್ರಸಾದಸಿದ್ಧ್ಯರ್ಥೇ ಜಪೇ ವಿನಿಯೋಗಃ ॥

ಓಂ ಕರ್ದಮೇನ ಪ್ರಜಾಭೂತಾ-ಅಂಗುಷ್ಠಾಭ್ಯಾಂ ನಮಃ । ಓಂ ಮಯಿ ಸಂಭವ-ತರ್ಜನೀಭ್ಯಾಂ ನಮಃ । ಓಂ ಕರ್ದಮ-ಮಧ್ಯಮಾಭ್ಯಾಂ ನಮಃ । ಓಂ ಶ್ರಿಯಂ ವಾಸಯ ಮೇ ಕುಲೇ-ಅನಾಮಿಕಾಭ್ಯಾಂ ನಮಃ । ಓಂ ಮಾತರಂ-[illegible] ಪದ್ಮಮಾಲಿನೀಂ-ಕರತಲಕರಪೃಷ್ಠಾಭ್ಯಾಂ ನಮಃ । ಓಂ ಕರ್ದಮೇನ ಪ್ರಜಾಭೂ[illegible] । ಓಂ ಮಯಿ ಸಂಭವ-ಶಿರಸೇ ಸ್ವಾಹಾ । ಓಂ ಕರ್ದಮ-ಶಿಖಾಯೈ [illegible] ಕುಲೇ-ಕವಚಾಯ ಹುಂ । ಓಂ ಮಾತರಂ-ನೇತ್ರತ್ರಯಾಯ ವೌಷಟ್ । [illegible] ಪದ್ಮಮಾಲಿನೀಂ-ಅಸ್ತ್ರಾಯ ಫಟ್ । ಭೂರ್ಭುವಸ್ಸುವರೋಮಿತಿ ದಿಗ್ಬಂಧಃ ॥ ಧ್ಯಾನಂ ॥

ಧ್ಯಾಯೇದ್ಸ್ಫಾಟಿಕಸಂನಿಭಾಂ [illegible] ದಿವ್ಯಾಂಬರಾಲಂಕೃತಾಂ ।
ಸತ್ಫುಲ್ಲೋದರಪದ್ಮಕೋಮಲ[illegible] ಯುಗ ಶ್ರೀಮತ್ಕರಾಂಭೋರುಹಾಂ ॥
ನಾನಾರತ್ನಕಿರೀಟಕುಂಡಲ[illegible] ಭುಜಾಂ ಪದ್ಮಿನೀಂ ।
ಸರ್ವಾರ್ಥಾಭೀಷ್ಟಫಲಪ್ರದಾನನಿರತಾಂ ಸಂಸ್ಮೃತ್ಯ ಸದಾ ॥

ಏವಂ ಧ್ಯಾತ್ವಾ ಜಪೇಲ್ಲಕ್ಷಂ ಮಹಾಲಕ್ಷ್ಮೀಯುತಂ ಜಪೇತ್ ॥]

|| ಪನ್ನೊಂದನೆಯ ಋಕ್ಕು ||

ಕರ್ದಮೇನ ಪ್ರಜಾಭೂತಾ ಮಯಿ ಸಂಭವ ಕರ್ದಮ ।
ಶ್ರಿಯಂ ವಾಸಯ ಮೇ ಕುಲೇ ಮಾತರಂ ಪದ್ಮಮಾಲಿನೀಂ ॥ ೧೧ ॥

|| ಶ್ರೀ ವಿದ್ಯಾರಣ್ಯಭಾಷ್ಯಂ ||

ಕರ್ದಮೇನ ಕರ್ದಮಾಖ್ಯಪುತ್ರೇಣ ಪ್ರಜಾಭೂತಾ ಪ್ರಕೃಷ್ಟಂ ಪ್ರಜಾ ಅಪತ್ಯಂ ಯಸ್ಯಾಃ ಸಾ ಸಪುತ್ರೇತ್ಯರ್ಥಃ ॥ "ಪ್ರಾಜಾಪತ್ಯಮಿತಿ" ಯಾಸ್ಕವಚನಾತ್ । ಭೂತಾ ಅಭವತ್ । ಅತಃ ಹೇ ಕರ್ದಮ

**ಶ್ರೀಪುತ್ರ ತ್ವಂ ಮಯಿ ಮದೀಯಗೃಹೇ ಸಂಭವ ಸಂವಸ । ಪದ್ಮಮಾಲಿನೀಂ ಕಮಲಮಾಲಾಧಾರಿಣೀಂ ಮಾತರಂ ತವ ಜನನೀಂ ಶ್ರಿಯಂ ಲಕ್ಷ್ಮೀಂ ಮೇ ಮಮ ಕುಲೇ ವಂಶೇ ವಾಸಯ ನಿವಾಸಯ ॥**

**॥ ಪೃಥ್ವೀಧರಭಾಷ್ಯಂ ॥**

**ಹೇ ಕರ್ದಮ ಶ್ರೀಪುತ್ರ ಮಯಿ ಸಂಭವ ಮಯಿ ಪ್ರಸಾದಂ ಕುರು । ಯತಃ ಶ್ರೀಃ ತ್ವಯಾ ಕರ್ದಮೇನ ಪ್ರಜಾಭೂತಾ ಪುತ್ರವತೀ ಜಾತಾ । ತಸ್ಮಾನ್ಮಾತರಂ ತವ ಜನನೀಂ ಪದ್ಮಿನೀಂ ಪದ್ಮರಚಿತ-ಮಾಲಿಕಾಂ ಶ್ರಿಯಂ ಲಕ್ಷ್ಮೀಂ ಮಮ ಕುಲೇ ವಂಶೇ ವಾಸಯ ಪ್ರತಿಷ್ಠಾಪಯ । ತ್ವತ್ಪರಾ ಸತೀ ವಾಸಂ ಕರೋತ್ವಿತ್ಯರ್ಥಃ ॥**

**। ಪ್ರತಿಪದಾರ್ಥ ।**

**ಕರ್ದಮೇನ**—ಕರ್ದಮ ಎಂಬ ಹೆಸರಿನ ಪುತ್ರನಿಂದ (ಶ್ರೀದೇವಿಯು) । **ಪ್ರಜಾಭೂತಾ**—ಪುತ್ರವತಿಯಾಗಿದ್ದಾಳೆ (ಆದ್ದರಿಂದ) । **ಕರ್ದಮ**—ಎಲೈ ಶ್ರೀಪುತ್ರನಾದ ಕರ್ದಮನೇ (ನೀನು) । **ಮಯಿ**—ನನ್ನಲ್ಲಿ ಅಥವಾ ನನ್ನ ಗೃಹದಲ್ಲಿ । **ಸಂಭವ**—ವಾಸವಮಾಡಿಕೊಂಡಿರು ಅಥವಾ ನನ್ನಲ್ಲಿ ಅನುಗ್ರಹಮಾಡು । **ಪದ್ಮ-ಮಾಲಿನೀಂ**—ಕಮಲಪುಷ್ಪಗಳಿಂದ ಕಟ್ಟಿದ ಮಾಲೆಯನ್ನು ಧರಿಸಿರುವ । **ಮಾತರಂ ಶ್ರಿಯಂ**—ನಿನ್ನ ಜನನಿಯಾದ ಶ್ರೀದೇವಿಯನ್ನು । **ಮೇ**—ನನ್ನ । **ಕುಲೇ**—ವಂಶಸಂಭೂತರಲ್ಲಿ ಅಥವಾ ವಂಶದಲ್ಲಿ । **ವಾಸಯ**—ವಾಸ ಮಾಡುವಂತೆ ಪ್ರೇರಿಸು.

**॥ ಭಾವಾರ್ಥ ॥**

ಈ ಶ್ರೀದೇವತೆಯು ಕರ್ದಮನೆಂಬ ಪುತ್ರನನ್ನು ಪಡೆದು ಆ ಕಾರಣದಿಂದ ಪುತ್ರವತಿಯೆಂದು ಪ್ರಖ್ಯಾತಳಾಗಿದ್ದಾಳೆ. ಎಲೈ ಶ್ರೀಪುತ್ರನಾದ ಕರ್ದಮನೇ, ನನ್ನ ಗೃಹದಲ್ಲಿ ವಾಸಮಾಡುತ್ತಾ ನನ್ನಲ್ಲಿ ಅನುಗ್ರಹಮಾಡು ಮತ್ತು ಕಮಲಪುಷ್ಪಮಾಲಾಲಂಕೃತಳಾದ, ಮತ್ತು ನಿನ್ನ ಜನನಿಯಾದ ಶ್ರೀದೇವಿಯನ್ನು ನನ್ನ ವಂಶದಲ್ಲಿ ವಾಸ ಮಾಡುವಂತೆ ಪ್ರೇರಿಸು ಅಥವಾ ಅನುಗ್ರಹಿಸು.

**॥ ಮಂತ್ರಕಲ್ಪಾರ್ಣವೇ ॥**

**ಕರ್ದಮೇನೇತ್ಯಾದಿಕಾಂ ತು ಶ್ರೀಸೂಕ್ತೈಕಾದಶೀಮೃಚಂ ।**
**ಗಾಂ ಸವತ್ಸಾಂ ಸಂಪೂಜ್ಯ ಜಪೇದಕ್ಷರಲಕ್ಷಕಂ ॥**

**ವಂ ಶ್ರೀಂ ವಮಿತಿ ನ್ಯಾಸಃ ॥ ಧ್ಯಾನಂ—**

**ಸವತ್ಸಾ ಗೌರಿವ ಪ್ರೀತಾ ಕರ್ದಮೇನ ತಥೇಂದಿರಾ ।**
**ಕಲ್ಯಾಣೀ ಮದ್ಗೃಹೇ ನಿತ್ಯಂ ನಿವಸೇತ್ಪದ್ಮಮಾಲಿನೀ ॥**

**ಮಂತ್ರಸಿದ್ಧೌ ತು ಚಿರಾವಿಚ್ಛಿನ್ನವಂಶಪರಂಪರಾಭಿವೃದ್ಧಿರಖಂಡಿತೈಶ್ವರ್ಯಲಾಭಶ್ಚ ಭವತಿ । ಸಂತಾನಸೌಭಾಗ್ಯಪ್ರದೋಽಯಂ ಮಂತ್ರಃ । ಪದ್ಮಾಕ್ಷಮಾಲಯಾ ಗೋಷ್ಠೇ ಪ್ರಜಪೇತ್ । ಬಾಲೇಭ್ಯಃ ಪಯೋ ದದ್ಯಾದ್ಬಾಲಿಕಾಭ್ಯಶ್ಚ ಪ್ರತ್ಯಹಂ ಸುವಾಸಿನೀಮರ್ಚಯೇತ್ಸಪುತ್ರಾಮಿತಿ ॥**

# ಅನುವಾದವು

**ಕರ್ದಮೇನ** ಎಂದು ಪ್ರಾರಂಭವಾಗುವ ಈ ಮಂತ್ರವು ಶ್ರೀಸೂಕ್ತದಲ್ಲಿ ಹನ್ನೊಂದನೆಯ ಋಕ್ಕು. ವತ್ಸಸಹಿತವಾದ ಗೋವನ್ನು ಪೂಜೆಮಾಡಿ ಈ ಋಕ್ಕಿನ ಜಪಮಾಡಬೇಕು. ಮಂತ್ರದಲ್ಲಿ ಎಷ್ಟು ಅಕ್ಷರಗಳಿರುವವೋ ಅಷ್ಟು ಲಕ್ಷಜಪಮಾಡಬೇಕು. ಜಪಮಾಡುವುದಕ್ಕೆ ಮುಂಚೆ ವಂ ಶ್ರೀಂ ವಂ ಎಂಬ ಬೀಜಾಕ್ಷರ ಸಹಿತವಾಗಿ ನ್ಯಾಸಮಾಡಿ ಅನಂತರ ಜಪಮಾಡಬೇಕು. ವತ್ಸದಿಂದ (ಕರು) ಸಹಿತವಾದ ಗೋವು ಯಾವರೀತಿ ತನ್ನ ಕರುವನ್ನು ಪ್ರೀತಿಯಿಂದ ನೋಡಿ ಸಂತೋಷಪಡುವುದೋ ಅದರಂತೆ ಶ್ರೀದೇವಿಯೂ ಸಹ ತನ್ನ ಪುತ್ರನಾದ ಕರ್ದಮನ ಜತೆಯಲ್ಲಿದ್ದರೆ ಪ್ರೀತಳಾಗುತ್ತಾಳೆ ಕಮಲಪುಷ್ಪಮಾಲೆಯನ್ನು ಧರಿಸಿ ದಿವ್ಯಾಲಂಕಾರಶೋಭಿತಳಾದ ಶ್ರೀದೇವಿಯು ನನ್ನ ಮನೆಯಲ್ಲಿ ಕಲ್ಯಾಣವನ್ನುಂಟುಮಾಡುತ್ತಾ ಯಾವಾಗಲೂ ವಾಸಮಾಡುತ್ತಿರಲಿ ಎಂದು ಮುಖ್ಯಾಭಿಪ್ರಾಯವು.

ಈ ಮಂತ್ರಜಪವನ್ನು ಮಾಡಿ ಮಂತ್ರಸಿದ್ಧಿಯಾದರೆ ಯಾವಾಗಲೂ ವಿಚ್ಛಿನ್ನವಾಗದ ವಂಶಪರಂಪರೆಯೂ ಅಖಂಡೈಶ್ವರ್ಯಪ್ರಾಪ್ತಿಯೂ ಲಭಿಸುವುದು. ಈ ಮಂತ್ರಜಪವು ಸಂತಾನಸೌಭಾಗ್ಯವನ್ನು ಕೊಡುವುದು, ಗೋವುಗಳನ್ನು ಕಟ್ಟುವ ಕೊಟ್ಟಿಗೆಯಲ್ಲಿ ಕುಳಿತು ಪದ್ಮಾಕ್ಷಮಾಲೆಯನ್ನು ಜಪಸರವನ್ನಾಗಿ ಮಾಡಿಕೊಂಡು ಈ ಮಂತ್ರವನ್ನು ಜಪಮಾಡಬೇಕು. ಅನಂತರ ಬಾಲಕಬಾಲಕಿಯರಿಗೆ ಹಾಲನ್ನು ಕೊಡಬೇಕು. ಮತ್ತು ಪ್ರತಿದಿವಸವೂ ಸಣ್ಣ ಮಕ್ಕಳಿರುವ ಎಂದರೆ ಪುತ್ರವತಿಯರಾದ ಸುವಾಸಿನಿಯರನ್ನು ವಸ್ತ್ರಾದ್ಯಲಂಕಾರಗಳಿಂದ ಪೂಜಿಸಬೇಕು.

ಇಲ್ಲಿಗೆ ಹನ್ನೊಂದನೆಯ ಋಕ್ಕಿನ ವಿವರಣೆ ಸಮಾಪ್ತವು.

|| ಅಥ ದ್ವಾದಶೀ ಋಕ್ ||

**[ಓಂ ಅಸ್ಯ ಶ್ರೀಶ್ರೀಸೂಕ್ತಸ್ಯ ಆಪಃಸೃಜಂತ್ವಿತಿ ದ್ವಾದಶಋಙ್ಮಹಾಮಂತ್ರಸ್ಯ । ಚಿಕ್ಲೀತೋ ಭಗವಾನೃಷಿಃ । ಅಮೃತೇಶ್ವರೀ ದೇವತಾ । ಅನುಷ್ಟುಪ್ ಛಂದಃ । ಅಂ ಬೀಜಂ । ಲಂ ಶಕ್ತಿಃ । ಶ್ರೀಂ ಕೀಲಕಂ । ಚಿಕ್ಲೀತಮಾತೃಶ್ರೀ ಲಕ್ಷ್ಮೀದೇವತಾಪ್ರಸಾದಸಿದ್ಧ್ಯರ್ಥೇ ಜಪೇ ವಿನಿಯೋಗಃ ॥**

**ಓಂ ಆಪಃಸೃಜಂತು ಸ್ನಿಗ್ಧಾನಿ—ಅಂಗುಷ್ಠಾಭ್ಯಾಂ ನಮಃ । ಓಂ ಚಿಕ್ಲೀತ ವಸ—ತರ್ಜನೀಭ್ಯಾಂ ನಮಃ । ಓಂ ಮೇ ಗೃಹೇ—ಮಧ್ಯಮಾಭ್ಯಾಂ ನಮಃ । ಓಂ ನಿ ಚ ದೇವೀಂ ಮಾತರಂ—ಅನಾಮಿಕಾಭ್ಯಾ ನಮಃ । ಓಂ ಶ್ರಿಯಂ ವಾಸಯ—ಕನಿಷ್ಠಿಕಾಭ್ಯಾಂ ನಮಃ । ಓಂ ಮೇ ಕುಲೇ—ಕರತಲಕರಪೃಷ್ಠಾಭ್ಯಾಂ ನಮಃ । ಓಂ ಆಪಃಸ್ರಜಂತು ಸ್ನಿಗ್ಧಾನಿ—ಹೃದಯಾಯ ನಮಃ । ಓಂ ಚಿಕ್ಲೀತ ವಸ—ಶಿರಸೇ ಸ್ವಾಹಾ । ಓಂ ಮೇ ಗೃಹೇ—ಶಿಖಾಯೈ ವಷಟ್ । ಓಂ ನಿ ಚ ದೇವೀಂ ಮಾತರಂ—ಕವಚಾಯ ಹುಂ । ಓಂ ಶ್ರಿಯಂ ವಾಸಯ—ನೇತ್ರತ್ರಯಾಯ ವೌಷಟ್ । ಓಂ ಮೇ ಕುಲೇ—ಅಸ್ತ್ರಾಯ ಫಟ್ ॥ ಭೂರ್ಭುವಸ್ಸುವರೋಮಿತಿ ದಿಗ್ಬಂಧಃ । ಧ್ಯಾನಂ ॥**

**ಧ್ಯಾಯೇತ್ಕಲ್ಪತರೋರ್ಮೂಲೇ ರತ್ನಸಿಂಹಾಸನೇ ಸ್ಥಿತಾಂ ।**
**ಪದ್ಮದ್ವಯಧರಾಂ ಪದ್ಮಾಂ ವರದಾಭಯಧಾರಿಣೀಂ ॥**
**ಸರ್ವರತ್ನವಿಚಿತ್ರಾಂಗೀಂ ರಕ್ತಶ್ರೀಪಾದಪೀಠಿಕಾಂ ।**
**ಹೇಮದಂಡಸಿತಚ್ಛತ್ರಚಾಮರದ್ವಯವೀಜಿತಾಂ ॥**

ರತ್ನಾಢ್ಯೈರಭಿಷಿಂಚಂತೀಂ ಭಕ್ತಂಗಜಕರೋದ್ಧೃತೈಃ ।
ಏವಂ ಧ್ಯಾತ್ವಾ ಜಪೇಲ್ಲಕ್ಷಂ ಭವೇದ್ಧನಪತಿಃಸ್ವಯಂ ॥ ]

॥ ಹನ್ನೆರಡನೆಯ ಋಕ್ ॥

ಆಪಃ ಸೃಜಂತು ಸ್ನಿಗ್ಧಾನಿ ಚಿಕ್ಲೀತ ವಸ ಮೇ ಗೃಹೇ ।

ನಿ ಚ ದೇವೀಂ ಮಾತರಂ ಶ್ರಿಯಂ ವಾಸಯ ಮೇ ಕುಲೇ ॥ ೧೨ ॥

॥ ಶ್ರೀ ವಿದ್ಯಾರಣ್ಯಭಾಷ್ಯಂ ॥

ಆಪಃ ಅ[illegible]ಪಾನಿಸ್ನಾ[illegible] ಸ್ನಿಗ್ಧಾನಿ [illegible] ಕಾರ್ಯಾಣಿ ಸೃಜಂತು ಉದ್ಭಾವಯಂತು । ಅ[illegible]ಂ ಸ್ನೇಹಗುಣವತ್ತ್ವಾ[illegible] । ಹೇ [illegible] ಚಿಕ್ಲೀತಃ ಶ್ರೀಪುತ್ರ ಮೇ ಮಮ ಗೃಹೇ ಗೇಹೇ ನಿವಸ ಚ ವಾಸಂ ಕುರು । [illegible] ಚ [illegible]ವೀಂ ಮಾತರಂ ಶ್ರಿಯಂ ಮೇ ಮಮ ಕುಲೇ ನಿವಾಸಯ ಸಂವಾಸಯ ॥ ೧೨ ॥

॥ [illegible] ॥

(ಋ.) [illegible] —ನನ್ನ । ಗೃಹೇ—ಮನೆಯಲ್ಲಿ । ವಸ—[illegible] । [illegible] ಅಥವಾ ಕ್ರೀಡಾಗುಣ ವಿಶಿಷ್ಟ[illegible] । ಮಾತರಂ—[illegible] । ಮೇ—ನನ್ನ । ಕುಲೇ—ವಂಶ[illegible] ಸಿ[illegible] [illegible].

[illegible]

॥ ಸೂಕ್ತ[illegible] ॥

[illegible] ಸರ್ವಮ[illegible]ಗತ್ ।
ನಾರಾ[illegible] ಯ[illegible] ಸ ಹಿ ನಾರಾಯಣ [illegible] ॥
[illegible] ಯೇ[illegible] ।
ತಸ್ಯ [illegible] ಶಕ್ತಿರ್ದೇ[illegible] ನಾರಾಯಣ[illegible] ಸ್ಮೃ[illegible] ॥
[illegible]ದ್ಭ್ಯ[illegible] ಜಾತಾ ಅಗ್ನಿ[illegible] ।
ನಾಯ[illegible] ಹ್ಯ[illegible] ವತ್ಸ[illegible]ರ್ವಮುಸ್ಪೃಥ ॥
ಜೀವಂ ಜೀವಂಸಂ ದಿವ್ಯಮುಮೃತಂ ಜಲಮುಚ್ಯತೇ ।
ಜಾಯತೇ ಲೀಯತೇ ಯತ್ರ ಜಗತ್ತಜ್ಜಲನಿರ್ಮಿತಂ ॥
ತಜ್ಜಲಾಸಿಚ ಶಾಂತಾತ್ಮಾ ಚಿರಂ ಜಲಮುಪಾಸತೇ ।
ತಸ್ಮಾತ್ಸರ್ವನಿದಾನಾನಾಮಪಾಂ ಸ್ರಷ್ಟೃತ್ವಮುಚ್ಯತೇ ॥

ಅಪ್ಸು ಪ್ರತಿಷ್ಠಿತಃ ಸ್ನೇಹಸ್ತೇನೈವ ಪರಮಾಣವಃ ।
ಜಗದ್ಭಾವಾಯ ಸಂಬದ್ಧಾಸ್ತದ್ಭಾನೌ ಸ್ಯಾಜ್ಜಗಲ್ಲಯಃ ॥
ತಸ್ಮಾದುಪಾಸಕೋ ದೇವೀಂ ಪ್ರಾರ್ಥಯೇದಪ್ಸ್ವರೂಪಿಣೀಂ ।
ಭೋಗ್ಯದ್ರವ್ಯಾಣಿ ಸರ್ವಾಣಿ ಮಮ ಸ್ನಿಗ್ಧಾನಿ ಮಾತೃಕಾ ॥
ಸೃಜತು ಶ್ರೀರಪಾಂ ದೇವೀ ಭೋಗಭಾವಾಯ ಭಾಮಿನೀ ।
ಶ್ರೀದೇವ್ಯಾಸ್ತನಯೋ ಜಜ್ಞೇ ಚಿಕ್ಲೀತೋ ನಾಮ ಮನ್ಮಥಃ ॥
ಅಬನ್ನವಿಕೃತೌ ಚಿತ್ತೇ ಜಾತಃ ಕಾಮೋ ಹಿ ಚಿತ್ತಜಃ ।
ಅಯಮೇವ ಹಿ ಸಂಸಾರಹೇತುಃ ಸರ್ವಾರ್ಥಸಾಧಕಃ ॥
ಜಗತ್ಕಾಮಹಿತಂ ಸರ್ವಂ ಯೇನ ದ್ವೈತಫಲೋದಯಃ ।
ಯಶ್ಚ ಕಾಮಹತೋ ದೇಹೀ ಶ್ರೋತ್ರಿಯೋ ಬ್ರಹ್ಮಣಿ ಸ್ಥಿತಃ ॥
ಬ್ರಹ್ಮ ಸಂಪತ್ಸ್ಯತೇ ತಸ್ಯ ಕರ್ತವ್ಯಂ ನ ಹಿ ವಿದ್ಯತೇ ।
ಲಕ್ಷ್ಮ್ಯಾಸ್ತ್ರಿವರ್ಗರೂಪಾಯಾಃ ಪ್ರಾಪ್ತಿಃ ಕಾಮನಿಬಂಧನಾ ॥
ತಸ್ಮಾಚ್ಚಿಕ್ಲೀತನಾಮಾನಂ ಲಕ್ಷ್ಮೀಪುತ್ರಂ ಹಿ ದುರ್ಜಯಂ ।
ಕಾಮದೇವಂ ಸಮಾರಾಧ್ಯ ಯತ್ನತಃ ಪ್ರಾಪ್ನುಯಾಚ್ಛ್ರಿಯಂ ॥
ಲಕ್ಷ್ಮೀಃ ಪ್ರಯತ್ನಸಾಧ್ಯಾ ಹಿ ಯತ್ನಃ ಕಾಮಸಮುದ್ಭವಃ ।
ತಸ್ಯ ಧರ್ಮಾವಿರುದ್ಧಸ್ಯ ವಿಭೂತಿತ್ತ್ವಂ ಹರೇದ್ಯತಃ ॥
ಚಿಕ್ಲೀತ ಶ್ರೀಸುತ ಸ್ವಾಮಿಂಶ್ಚಿರಂ ನಿವಸ ಮದ್ಗೃಹೇ ।
ಮತ್ಕುಲೇ ಸುಚಿರಂ ತಿಷ್ಠ ಮಚ್ಚಿತ್ತೇ ಸಂನಿಧಿಂ ಕುರು ॥
ತ್ವದಾಗಮನಮಾತ್ರೇಣ ತ್ವನ್ಮಾತಾ ತ್ವಾಮನುವ್ರಜೇತ್ ।
ತ್ವಯಿ ಪ್ರೀತಿಪರಾ ಸಾ ಹಿ ತವಚ್ಛಂದೋನುವರ್ತಿನೀ ॥
ಶ್ರೀದೇವೀಂ ತಾಂ ಮಮ ಗೃಹೇ ಚಿರಂ ವಾಸಯ ಮಾತರಂ ।
ನಮೋಽಸ್ತು ತುಭ್ಯಂ ಚಿಕ್ಲೀತ ಶ್ರೀದೇವ್ಯೈ ಚ ನಮೋ ನಮಃ ॥
ಏತತ್ತಾತ್ಪರ್ಯಕಾಂ ಸೂಕ್ತೇ ಪ್ರಜಪೇದ್ದ್ವಾದಶೀಮೃಚಂ ।
ಚಂದ್ರಮಾ ಋಷಿರೇತಸ್ಯ ದೇವತಾ ತ್ವಮೃತೇಶ್ವರೀ ॥
ಚಿಕ್ಲೀತಮಾತಾ ಶ್ರೀಶ್ಛಂದೋನುಷ್ಟುಬ್ವಂ ಬೀಜಮುಚ್ಯತೇ ।
ಚತುಃಷಷ್ಟಿಸಹಸ್ರಾಣಿ ಪ್ರಜಪೇನ್ಮಂತ್ರಸಿದ್ಧಯೇ ॥
ನದ್ಯಾಸ್ಸಮುದ್ರಗಾಮಿನ್ಯಾಸ್ತೀರೇ ಬಿಲ್ವತರೋಸ್ತಟೇ ।
ಜಲಕುಂಭಂ ಸಮಭ್ಯರ್ಚ್ಯ ಚೇಷ್ಟಿಂ ಚಾಭೀಷ್ಟಕಾಂ ಚರೇತ್ ॥
ಯಚ್ಚ ಯಾಜುಷಶಾಖಾಯಾಮುಕ್ತಮಾರುಣಕೇತುಕೇ ।
ತೇನ ಮಂತ್ರೇಣ ಸಹಿತಂ ಸ್ವಶಾಖೋಕ್ತವಿಧಿಂ ಚರೇತ್ ॥
ಪ್ರಪಾಠನಂ ಪ್ರಕುರ್ವೀತ ದದ್ಯಾತ್ಪಾನೀಯಮೇವ ಚ ।

**ಸುವಾಸಿನೀಭ್ಯೋ ವಿಪ್ರೇಭ್ಯಸ್ತದಪತ್ಯೇಭ್ಯ ಏವ ಚ ||**
**ಭೂತಾಪ್ಯಾಯನತೋ ದೇವೀ ತುಷ್ಯತಿ ಶ್ರೀರ್ಹರಿಪ್ರಿಯಾ |**
**ತಸ್ಯಾನ್ನಂ ಭೋಗ್ಯಜಾತಂ ಚ ತದಿಚ್ಛಾಸಮಕಾಲಿಕಂ ||**
**ಹಿತಂ ಮೃಷ್ಟಂ ಸಮೃದ್ಧಂ ಚ ಶುದ್ಧಂ ಯಾವದಪೇಕ್ಷಿತಂ |**
**ತತ್ಕುಟುಂಬಸ್ಯ ಪರ್ಯಾಪ್ತಂ ತದಾಶ್ರಿತಜನಸ್ಯ ಚ ||**
**ತದಾವಾಸೇ ತತ್ಕುಲೇ ಚ ಮಹಾಲಕ್ಷ್ಮೀಃ ಸ್ಥಿರಾ ಭವೇತ್ || ಇತಿ ||**

## ಅನುವಾದವು

**ಆಪೋ ವಾ ಇದಮಗ್ರೇ ಸಲಿಲಮಾಸೀತ್** ಎಂಬ ಶ್ರುತಿವಚನಪ್ರಕಾರ ಪೂರ್ವದಲ್ಲಿ ಸಮಸ್ತ ವಿಶ್ವವನ್ನೂ ಉದಕವೇ ಆವರಿಸಿದ್ದಿತು, ಬೇರೆ ವಸ್ತುವೇ ಇರಲಿಲ್ಲ. ಆ ನೀರಿನಿಂದ ದೃಶ್ಯಮಾನವಾದ ಈ ಸಮಸ್ತ ಜಗತ್ತೂ ಉತ್ಪನ್ನವಾಯಿತು. ಉದಕಕ್ಕೆ **ಆಪೋ ನಾರಾ ಇತಿ ಪ್ರೋಕ್ತಾಃ** ಎಂಬಂತೆ ನಾರಾಃ ಎಂದು ಹೆಸರು. ಈ ಆಪ ಅಥವಾ ಉದಕವೇ ಯಾವ ದೇವನಿಗೆ ನಿವಾಸಸ್ಥಾನವಾಗಿದ್ದಿತೋ ಆ ದೇವನಿಗೆ ನಾರಾಯಣನೆಂದು ಹೆಸರಾಯಿತು. ಮತ್ತು ಆ ನಾರಾಯಣನ ನಿವಾಸಸ್ಥಾನರೂಪವಾದ ಆ ಉದಕಗಳು ನರಾನ್ ಎಂದರೆ ಮನುಷ್ಯರನ್ನು ಉತ್ಪತ್ತಿಮಾಡಿತು. ಎಂದರೆ ಉದಕದಿಂದಲೇ ಮಾನವರಾದಿ ಸಮಸ್ತ ಜಗತ್ತೂ ಆವಿರ್ಭೂತವಾಯಿತು ಆದುದರಿಂದ ಜಗದುತ್ಪತ್ತಿಗೆ ಕಾರಣಭೂತವಾದ ಆ **ನಾರಾಃ** ಎಂಬ ಉದಕಗಳೇ ನಾರಾಯಣೀ ಎಂಬ ಹೆಸರಿನಿಂದ ನಾರಾಯಣನ ಸ್ವಭಾವಸಿದ್ಧವಾದ ಶಕ್ತಿದೇವಿಯೆನಿಸಿತು. ಅನಂತರ ಆಪಸ್ತತ್ತ್ವದಿಂದ ಎಂದರೆ ಉದಕದಿಂದ **ಅದ್ಭ್ಯಃ ಪೃಥಿವೀ** ಎಂಬ ಶ್ರುತಿವಾಕ್ಯೋಕ್ತಿಯಂತೆ ಪೃಥಿವಿಯು ಉತ್ಪನ್ನವಾಯಿತು. ಅನಂತರ ಹಾಗೆಯೇ ಅಗ್ನಿ, ವಾಯು, ಸೂರ್ಯ, ಚಂದ್ರ ಮೊದಲಾದವರ ಉತ್ಪತ್ತಿಯೂ ಆಯಿತು. ಈ ಉದಕ ಅಥವಾ ನೀರಿನಿಂದ ಜೀವನಾಧಾರವಾದ ರಸ ಎಂದರೆ ಅಮೃತವು ಉತ್ಪನ್ನವಾದುದರಿಂದ ನೀರಿಗೆ ಜಲವೆಂದು ಹೆಸರಾಯಿತು. ಅಥವಾ ಚರಾಚರಾತ್ಮಕವಾದ ಈ ಸಮಸ್ತ ಜಗತ್ತೂ ಈ ನೀರಿನಿಂದಲೇ ಹುಟ್ಟಿ ನೀರಿನಲ್ಲಿಯೇ ಲಯವಾಗುವುದರಿಂದ ನೀರಿಗೆ ಜಲವೆಂದು ಹೆಸರಾಯಿತು. ಇಂತಹ ಜಲದಿಂದ ಶುದ್ಧನಾದ ಪುರುಷನು ಶಾಂತಾತ್ಮನಾಗಿ ಜಲತತ್ತ್ವವನ್ನು ಉಪಾಸನೆಮಾಡುತ್ತಾನೆ. ಆದ್ದರಿಂದ ಜಲವೇ ಸಮಸ್ತಕ್ಕೂ ಕಾರಣವಾಗಿರುವುದರಿಂದ ಜಲಕ್ಕೆ ಸೃಷ್ಟಿಮಾಡುವ ಶಕ್ತಿಯಿರುವುದೆಂದು ಹೇಳಲ್ಪಡುತ್ತದೆ. ಜಲದಲ್ಲಿ ಸ್ನೇಹ (ಪರಸ್ಪರ ಅಂಟಿಕೊಳ್ಳುವ ಗುಣ) ವೆಂಬ ಗುಣವಿರುವುದು. ಆದುದರಿಂದ ಜಗತ್ತಿಗೆ ಮೂಲಾಧಾರಗಳಾದ ಪರಮಾಣುಗಳು ಆ ನೀರಿನ ಸ್ನೇಹಶಕ್ತಿಯಿಂದ ಪರಸ್ಪರ ಸಂಮಿಳಿತಳಾಗಿ ಜಗದುತ್ಪತ್ತಿಗೆ ಕಾರಣವಾಯಿತು. ಅಂತ್ಯದಲ್ಲಿ ಸ್ನೇಹಾಭಾವದಿಂದ ಜಗಲ್ಲಯಕ್ಕೂ ಅಪ್ಪೇ ಕಾರಣವಾಗುವುದು ಆದುದರಿಂದ ದೇವಿಯನ್ನು ಉಪಾಸನೆಮಾಡಬೇಕು. ಜಲಶಕ್ತಿರೂಪದಿಂದಿರುವಂತೆ ಎಂದರೆ ಜಲರೂಪದಲ್ಲಿರುವಂತೆ ದೇವಿಯನ್ನು ಧ್ಯಾನಿಸಿ ಉಪಾಸನೆ ಮಾಡಬೇಕು. ನನಗೆ ಅತ್ಯಂತ ಪ್ರೀತಿಪಾತ್ರವಾದ ಸಮಸ್ತ ಭೋಗ ದ್ರವ್ಯಗಳನ್ನೂ ಅಪ್ಸ್ವರೂಪಿಣಿಯೂ ಜಗನ್ಮಾತೆಯೂ ಆದ ದೇವಿಯು ನನ್ನ ಭೋಗಾನುಭವಕ್ಕಾಗಿ ಸೃಷ್ಟಿಸಲಿ ಎಂದು ಪ್ರಾರ್ಥಿಸಬೇಕು. ಈ ಶ್ರೀದೇವಿಗೆ ಚಿಕ್ಲೀತ ಎಂಬ ಹೆಸರಿನ ಪುತ್ರನು ಹುಟ್ಟಿದನು. ಇವನನ್ನು ಮನ್ಮಥನೆಂದು ಹೇಳುವರು. ಅಪ್ಪಿನ (ಜಲದ) ಮುಖ್ಯಗುಣವು ಸ್ನೇಹವೆಂದು ಹಿಂದೆಯೇ ಹೇಳಿದೆಯಷ್ಟೆ. ಈ ಅಪ್ಸ್ವರೂಪಿಣಿಯಾದ ಶ್ರೀದೇವಿಯ ಚಿಕ್ಲೀತನೆಂಬ ಪುತ್ರನು ಅಬ್ವಿಕಾರವಾದ ದೇವಿಯ ಚಿತ್ತದಿಂದ ಉತ್ಪನ್ನನಾದುದರಿಂದ ಇವನಿಗೆ ಚಿತ್ತಜ, ಕಾಮ ಎಂಬ ಹೆಸರುಗಳಾದವು. ಚಿತ್ತದಲ್ಲಿ ಆವಿರ್ಭವಿಸುವ ಕಾಮವೇ

ಸಂಸಾರಕ್ಕೆ ಕಾರಣವಾಗಿರುವುದು. ಮತ್ತು ಸರ್ವಾರ್ಥಸಾಧಕವಾಗಿಯೂ ಇರುವುದಲ್ಲದೆ ಜನರ ಮನಸ್ಸಿನಲ್ಲಿ ದ್ವೈತ ಭಾವಕ್ಕೆ ಎಡೆಗೊಟ್ಟು ಜಗದ್ವ್ಯವಹಾರಗಳಿಗೂ ಕಾರಣವಾಗಿರುವುದು. ಎಂದರೆ ಕಾಮದಿಂದ (ಕಾಮವೆಂದರೆ ಅಪೇಕ್ಷೆ ಯೆಂದೂ ಅರ್ಥವು.) ಕೂಡಿದ ಮನುಷ್ಯನು ಜಗದ್ವ್ಯವಹಾರಗಳಲ್ಲಿ ತೊಡಗಿರುವನು. ಈ ಜಗದ್ವ್ಯವಹಾರವೇ ದ್ವೈತ ಭಾವನೆಯು. ಆದರೆ ಕಾಮರಹಿತನಾದ ಪುರುಷನು ದ್ವೈತಭಾವವರ್ಜಿತನಾಗಿ— ಸಮಸ್ತವೂ ಬ್ರಹ್ಮನೇ ಆಗಿರುವುದು, ಬ್ರಹ್ಮನನ್ನು ಬಿಟ್ಟು ಬೇರೆ ವಸ್ತುವೇ ಇಲ್ಲ ಎಂಬ ಅದ್ವೈತಭಾವವನ್ನು ಹೊಂದಿ ಶ್ರೋತ್ರಿಯನೆನಿಸಿ ಬ್ರಹ್ಮಧ್ಯಾನ ದಲ್ಲಿಯೇ ತಲ್ಲೀನನಾಗಿರುವನು. ಈ ಜಗತ್ತಿನಲ್ಲಿ ಅವನು ಮಾಡಬೇಕಾದ ಕರ್ತವ್ಯ ಕರ್ಮವು ಯಾವುದೂ ಇರುವುದಿಲ್ಲ. ತ್ರಿವರ್ಗಸ್ವರೂಪಳಾದ ಶ್ರೀ ಲಕ್ಷ್ಮೀದೇವಿಯ ಪ್ರಾಪ್ತಿಯು ಪುತ್ರನಾದ ಕಾಮ ಅಥವಾ ಚಿಕ್ಲೀತನ ಮೂಲಕವೇ ಆಗ ಬೇಕಾಗಿರುವುದು. ಆದುದರಿಂದ ಜಯಿಸಲಸಕ್ಯನಾದ ಕಾಮದೇವನೆಂದು ಪ್ರಸಿದ್ಧನಾದ ಚಿಕ್ಲೀತನೆಂಬ ಲಕ್ಷ್ಮೀಪುತ್ರ ನನ್ನು ಪ್ರಯತ್ನಪೂರ್ವಕವಾಗಿ ಆರಾಧನೆಮಾಡಿ ಅವನ ಅನುಗ್ರಹ ಸಂಪಾದನೆಮಾಡಿದರೆ ಶ್ರೀದೇವಿಯ ಅನುಗ್ರಹವೂ ಆಗಿ ಐಶ್ವರ್ಯಪ್ರಾಪ್ತಿಯಾಗುವುದು. ಲಕ್ಷ್ಮಿಯನ್ನು ಒಲಿಸಿಕೊಳ್ಳಬೇಕಾದರೆ ಪ್ರಯತ್ನದಿಂದ ಸಾಧ್ಯ. ಆ ಪ್ರಯತ್ನವು ಕಾಮದೇವ (ಲಕ್ಷ್ಮೀಪುತ್ರ) ನಿಂದಲೇ ಲಭಿಸಬೇಕು. ಆದುದರಿಂದ ಧರ್ಮಕ್ಕೆ ವಿರುದ್ಧವಲ್ಲದ ಪ್ರಯತ್ನ ಮತ್ತು ಸಾಧನೆ ಗಳಿಂದ ಲಕ್ಷ್ಮೀಪುತ್ರನನ್ನೂ, ಲಕ್ಷ್ಮೀದೇವತೆಯನ್ನೂ ತೃಪ್ತಿಪಡಿಸಿ ಐಶ್ವರ್ಯಾದಿಸಂಪತ್ಸಮೃದ್ಧಿಯನ್ನು ಪಡೆಯಬೇಕು.

ಎಲೈ ಶ್ರೀಸುತನಾದ ಚಿಕ್ಲೀತನೇ, ಎಲೈ ಸ್ವಾಮಿಯೇ, ನೀನು ನನ್ನ ಮನೆಯಲ್ಲಿ ಬಹುಕಾಲ ವಾಸಮಾಡು. ನನ್ನ ವಂಶದಲ್ಲಿ ಸದಾಕಾಲದಲ್ಲಿಯೂ ನೆಲಸಿರು. ನನ್ನ ಮನಸ್ಸಿನಲ್ಲಿ ಪ್ರಸನ್ನಭಾವದಿಂದ ನೆಲೆಸಿರು. ನೀನು ನನ್ನ ಗೃಹಕ್ಕೆ ಬಂದದ್ದೇ ಆದರೆ ನಿನ್ನಲ್ಲಿರುವ ಪ್ರೀತಿಯಿಂದ ನಿನ್ನ ಜನನಿಯಾದ ಶ್ರೀದೇವಿಯು ನಿನ್ನನ್ನು ಹಿಂಬಾಲಿಸಿ ಬಂದೇ ಬರುವಳು. ನಿನ್ನ ಮಾತೆಯಾದ ಆ ಶ್ರೀದೇವಿಯನ್ನು ನನ್ನ ಮನೆಯಲ್ಲಿ ಬಹುಕಾಲವಾಸಮಾಡುವಂತೆ ಪ್ರೇರಿಸು. ಎಲೈ ಚಿಕ್ಲೀತನೇ, ಇದೋ ನಿನಗೆ ನಮಸ್ಕಾರವು, ನಿನ್ನ ಮಾತೆಯಾದ ಶ್ರೀದೇವಿಗೂ ಅನೇಕ ನಮಸ್ಕಾರಗಳು.

ಮೇಲೆ ಹೇಳಿದ ಅರ್ಥಾಭಿಪ್ರಾಯಗಳನ್ನೊಳಗೊಂಡಿರುವ ಶ್ರೀಸೂಕ್ತದ ಹನ್ನೆರಡನೆಯ ಋಕ್ಕನ್ನು ನಿಯಮಿತ ಮನಸ್ಕನಾಗಿ ಜಪಮಾಡಬೇಕು. ಈ ಋಕ್ಕಿಗೆ ಚಂದ್ರನು ಋಷಿಯು ; ಚಿಕ್ಲೀತಮಾತೆಯಾದ ಶ್ರೀದೇವಿಯೇ ದೇವತೆಯು ; ಅನುಷ್ಟುಪ್ ಛಂದಸ್ಸು. ಸಂ ಎಂಬುದು ಬೀಜವು. ಈ ಮಂತ್ರವು ಸಿದ್ಧಿಬೇಕಾದರೆ ಅರವತ್ತುನಾಲ್ಕು ಸಹಸ್ರ ಸಂಖ್ಯೆಯಷ್ಟು ಜಪಮಾಡಬೇಕು. ಸಮುದ್ರಗಾಮಿನಿಯಾದ ನದಿಯ ತೀರದಲ್ಲಿಯಾಗಲಿ ಬಿಲ್ವವೃಕ್ಷದ ಕೆಳ ಗಾಗಲಿ ಶುದ್ಧಪ್ರದೇಶದಲ್ಲಿ ಜಲದಿಂದ ಪೂರ್ಣವಾದ ಕಲಶವನ್ನು ಸ್ಥಾಪಿಸಿ ಅದರಲ್ಲಿ ದೇವತೆಯನ್ನು ಆವಾಹನೆಮಾಡಿ ಯಥಾವಿಧಿಯಾಗಿ ಅರ್ಚನೆಮಾಡಬೇಕು. ಯಜುಶ್ಶಾಖೆಯಲ್ಲಿ ಆರುಣಕೇತಕವೆಂಬ ಮಂತ್ರಗಳಲ್ಲಿ ಹೇಳಿರುವ ವಿಧಿ ನಿಯಮಗಳನ್ನನುಸರಿಸಿ ಅದರಲ್ಲಿ ಹೇಳಿರುವ ತಂತ್ರದಂತೆ ಸ್ವಶಾಖೋಕ್ತಪ್ರಕಾರವಾಗಿ ಪೂಜೆಮಾಡಬೇಕು. ಪೂಜಾ ನಂತರ ಬ್ರಾಹ್ಮಣರನ್ನೂ ಸುವಾಸನಿಯರನ್ನೂ ಅವರ ಮಕ್ಕಳನ್ನೂ ಆಹ್ವಾನಮಾಡಿ ಅವರಿಗೆ ಪಾನಕವೇ ಮೊದಲಾದ ಪಾನೀಯಗಳನ್ನು ಕೊಟ್ಟು ತೃಪ್ತಿಪಡಿಸಬೇಕು. ಈ ವಿಧವಾದ ಭೂತತೃಪ್ತಿಯಿಂದ ಶ್ರೀಹರಿಪ್ರಿಯಳಾದ ಶ್ರೀದೇವಿಯು ಸಂತುಷ್ಟಳಾಗುವಳು. ಈ ರೀತಿ ಪೂಜಾದಿಗಳನ್ನು ಆಚರಿಸುವ ಪುರುಷನಿಗೂ ಅವನ ಕುಟುಂಬವರ್ಗದವರಿಗೂ ಆಶ್ರಿತಜನರಿಗೂ ಅವನು ಅಪೇಕ್ಷಿಸುವಷ್ಟು ಹಿತಕರವೂ, ಸಮೃದ್ಧವೂ, ಶುದ್ಧವೂ ಆದ ಮೃಷ್ಟಾನ್ನವೂ, ಅನೇಕ ವಿಧ ಭೋಗ್ಯವಸ್ತುಗಳೂ ಯಥೇಚ್ಛವಾಗಿ ಲಭಿಸುವವು. ಅವನ ಮನೆಯಲ್ಲಿಯೂ ಅವನ ವಂಶದಲ್ಲಿಯೂ ಮಹಾಲಕ್ಷ್ಮಿಯು ಸ್ಥಿರವಾಗಿ ನೆಲೆಸಿರುವಳು.

ಇಲ್ಲಿಗೆ ಹನ್ನೆರಡನೆಯ ಋಕ್ಕಿನ ವಿವರಣೆ ಸಮಾಪ್ತವು

|| ಅಥ ತ್ರಯೋದಶೀ ಋಕ್ ||

[ಅಸ್ಯ ಶ್ರೀಶ್ರೀಸೂಕ್ತಸ್ಯ ಆರ್ದ್ರಾಂ ಪುಷ್ಕರಿಣೀಮಿತಿ ತ್ರಯೋದಶಋಙ್ಮಹಾಮಂತ್ರಸ್ಯ । ಜಾತವೇದಾ ಋಷಿಃ । ಶ್ರೀ ಮಹಾಲಕ್ಷ್ಮೀರ್ದೇವತಾ । ಅನುಷ್ಟುಪ್ ಛಂದಃ । ಅಂ ಬೀಜಂ । ಸ್ವಾಹಾ ಶಕ್ತಿಃ । ಶ್ರೀಂ ಕೀಲಕಂ । ಶ್ರೀಮಹಾಲಕ್ಷ್ಮೀಪ್ರಸಾದಸಿದ್ಧ್ಯರ್ಥೇ ಜಪೇ ವಿನಿಯೋಗಃ ||

ಓಂ ಆರ್ದ್ರಾಂ ಪುಷ್ಕರಿಣೀಂ ಪುಷ್ಟಿಂ-ಅಂಗುಷ್ಠಾಭ್ಯಾಂ ನಮಃ । ಓಂ ಪಿಂಗಲಾಂ-ತರ್ಜನೀಭ್ಯಾಂ ನಮಃ । ಓಂ ಪದ್ಮಮಾಲಿನೀಂ-ಮಧ್ಯಮಾಭ್ಯಾಂ ನಮಃ । ಓಂ ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ-ಅನಾಮಿಕಾಭ್ಯಾಂ ನಮಃ । ಓಂ ಜಾತವೇದಃ-ಕನಿಷ್ಠಿಕಾಭ್ಯಾಂ ನಮಃ । ಓಂ ಮ ಆವಹ-ಕರತಲಕರಪೃಷ್ಠಾಭ್ಯಾಂ ನಮಃ । ಓಂ ಆರ್ದ್ರಾಂ ಪುಷ್ಕರಿಣೀಂ ಪುಷ್ಟಿಂ-ಹೃದಯಾಯ ನಮಃ । ಓಂ ಪಿಂಗಲಾಂ-ಶಿರಸೇ ಸ್ವಾಹಾ । ಓಂ ಪದ್ಮಮಾಲಿನೀಂ-ಶಿಖಾಯೈ ವಷಟ್ । ಓಂ ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ-ಕವಚಾಯ ಹುಂ । ಓಂ ಜಾತವೇದಃ—ನೇತ್ರತ್ರಯಾಯ ವೌಷಟ್ । ಓಂ ಮ ಆ ವಹ—ಅಸ್ತ್ರಾಯ ಫಟ್ || ಭೂರ್ಭುವಸ್ಸುವರೋಮಿತಿ ದಿಗ್ಬಂಧಃ || ಧ್ಯಾನಂ ||

ಧ್ಯಾಯೇತ್ಕಲ್ಪತರೋರ್ಮೂಲೇ ರತ್ನಸಿಂಹಾಸನೇ ಸ್ಥಿತಾಂ ।
ಪದ್ಮದ್ವಯಧರಾಂ ಪದ್ಮಾಂ ವರದಾಭಯಧಾರಿಣೀಂ ||
ಸರ್ವರತ್ನವಿಚಿತ್ರಾಂಗೀಂ ರಕ್ತಶ್ರೀಪಾದಪೀಠಿಕಾಂ ।

ನಿಯತಃ ಪ್ರಜಪೇನ್ಮಂತ್ರೀ ಲಕ್ಷಸಂಖ್ಯಾ ಜಪೇನ್ಮನುಂ । ಪಿಪಾಸಾನಾಶನಂ ಬುದ್ಧಿದಾಯಕಂ ಪ್ರಥಮಂ ಸ್ಮೃತಂ । ಅಭೂತಿಮಸಮೃದ್ಧಿಂ ಚ ದ್ವಿತೀಯೇನ ವಿನಾಶಯೇತ್ ||]

|| ಹದಿಮೂರನೆಯ ಋಕ್ಕು ||

ಆರ್ದ್ರಾಂ ಪುಷ್ಕರಿಣೀಂ ಪುಷ್ಟಿಂ ಪಿಂಗಲಾಂ ಪದ್ಮಮಾಲಿನೀಂ ।
ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮ ಆವಹ || ೧೩ ||

|| ಶ್ರೀ ವಿದ್ಯಾರಣ್ಯಭಾಷ್ಯಂ ||

ಆರ್ದ್ರಾಮಿತಿ । ಆರ್ದ್ರಾಂ ಆರ್ದ್ರಗಂಧಾಂ ಪುಷ್ಕರಿಣೀಂ ಅಭಿಷೇಕೋದ್ಯುಕ್ತದಿಗ್ಗಜಶುಂಡಾಗ್ರಾಂ ಪುಷ್ಕರಶಬ್ದೋ ಗಜಶುಂಡಾಗ್ರವಾಚಕಃ ಪದ್ಮವತೀಂ ವಾ ಪದ್ಮಲತಾರೂಪಾಂ ವಾ ಪುಷ್ಟಿಂ ಪುಷ್ಟ್ಯಭಿಮಾನಿನೀಂ ಪುಷ್ಟಿರೂಪಾಂ ವಾ—"ಪುಷ್ಟಿರೂಪೇಣ ಸಂಸ್ಥಿತೇತಿ" ಮಾರ್ಕಂಡೇಯವಚನಾತ್ । ಪಿಂಗಲಾಂ ಪಿಂಗಳವರ್ಣಾಂ । ಪದ್ಮಮಾಲಿನೀಮಿತ್ಯಾದಿ ಸಿದ್ಧಮನ್ಯತ್ ||

|| ಪೃಥ್ವೀಧರಭಾಷ್ಯಂ ||

**ಹೇಜಾತವೇದಃ ಸಂಸ್ಕೃತಾಗ್ನೇ ಆರ್ದ್ರಾಂ ಶೀತಲಗುಣಾಂ ಪುಷ್ಕರಿಣೀಂ ಗಜಶುಂಡಾಗ್ರವತೀಂ ವಾ ಪುಷ್ಟಿಂ ಪೋಷಣಕರೀಂ ಸುವರ್ಣಾಂ ಶೋಭನಕಾಂತಿಂ ಹೇಮಮಾಲಿನೀಂ ಹೇಮಪದ್ಮರಚಿತಸ್ರ-ಗ್ವಿಣೀಂ ಸೂರ್ಯಾಮೈಶ್ವರ್ಯರೂಪಾಂ ಹಿರಣ್ಮಯೀಂ ಸ್ವರ್ಣರೂಪಾಂ ಮೇ ಮದರ್ಥಮಾವಹ ಆವಾಹನಂ ಕುರು ||**

| ಪ್ರತಿಪದಾರ್ಥ ||

**(ಹೇ) ಜಾತವೇದಃ**—ಎಲೈ ಅಗ್ನಿಯೇ | **ಆರ್ದ್ರಾಂ**—ಶೀತಲಗುಣವುಳ್ಳ | **ಪುಷ್ಕರಿಣೀಂ**—ಅಭಿಷೇಕಕ್ಕಾಗಿ ಆನೆಯ ಸೊಂಡಲುಗಳ ತುದಿಯಿಂದ ಜಲಸಿಕ್ತಳಾಗಿರುವವಳೂ | **ಪುಷ್ಟಿಂ**—ಪುಷ್ಟಿಸ್ವರೂಪಳೂ ಅಥವಾ ಪುಷ್ಟ್ಯಭಿಮಾನಿದೇವತೆಯಾದವಳೂ | **ಪಿಂಗಲಾಂ**—ಹರಿದ್ವರ್ಣ (ಗೌರ, ಹಳದಿ) ಯುಕ್ತವಾದ ಶರೀರವುಳ್ಳವಳೂ | **ಪದ್ಮಮಾಲಿನೀಂ**—ಕಮಲಪುಷ್ಪಗಳಿಂದ ಕಟ್ಟಿದ ಹಾರವನ್ನು ಧರಿಸಿರುದವಳೂ | **ಚಂದ್ರಾಂ**—ಚಂದ್ರನಂತೆ ಆಹ್ಲಾದಕರವಾದ ರೂಪವುಳ್ಳವಳೂ | **ಹಿರಣ್ಮಯೀಂ**—ಸವರ್ಣಾಭರಣಯುಕ್ತಳೂ ಅಥವಾ ಸುವರ್ಣಮಯವಾದ ಶರೀರದಿಂದ ಶೋಭಿಸುವವಳೂ ಆದ | **ಲಕ್ಷ್ಮೀಂ**—ಶ್ರೀಮಹಾಲಕ್ಷ್ಮಿಯನ್ನು ಅಥವಾ ಶ್ರೀದೇವತೆಯನ್ನು | **ಮೇ**—ನನಗಾಗಿ (ನನಗೆ ಅನುಗ್ರಹವನ್ನುಂಟುಮಾಡುವುದಕ್ಕಾಗಿ) | **ಆವಹ**—ಕರೆದುಕೊಂಡು ಬಾ.

| ಭಾವಾರ್ಥ ||

ಶ್ರೀಲಕ್ಷ್ಮೀದೇವಿಯು ಅತಿಪ್ರಕಾಶದಿಂದ ಬೆಳಗುತ್ತಿರುವವಳಾದರೂ ಶೀತಳವಾದ ಕಾಂತಿಯಿಂದ ಕೂಡಿ ನಯನಮನೋಹರಳಾಗಿರುವಳು. ಈ ದೇವಿಗೆ ಅಭಿಷೇಕಮಾಡುವುದಕ್ಕಾಗಿ ಆನೆಗಳು ತಮ್ಮ ಸೊಂಡಲುಗಳಿಂದ ನೀರನ್ನು ತೆಗೆದುಕೊಂಡು ಸರೋವರದಲ್ಲಿ ಸಿದ್ಧವಾಗಿ ನಿಂತಿರುವವು. ಸರ್ವಪ್ರಾಣಿಗಳಿಗೂ ಪುಷ್ಟಿಪ್ರದಳಾಗಿಯೂ ಗೌರವರ್ಣದಿಂದ ಶೋಭಿಸುವ ಶರೀರಕಾಂತಿಯುಳ್ಳವಳಾಗಿಯೂ ಕಮಲಪುಷ್ಪಗಳ ಹಾರವನ್ನು ಧರಿಸಿ ಸುವರ್ಣಾಕೃತಿಯಿಂದ ಬೆಳಗುತ್ತಾ ಚಂದ್ರನಂತೆ ಸರ್ವರಿಗೂ ಆಹ್ಲಾದಕಳಾಗಿರುವಳು. ಎಲೈ ಅಗ್ನಿಯೇ, ಇಂತಹ ಗುಣವಿಶಿಷ್ಟಳಾದ ಮಹಾಲಕ್ಷ್ಮಿಯನ್ನು ನನ್ನ ಬಳಿಗೆ ಕರೆದುಕೊಂಡು ಬಾ.

ಈ ಋಕ್ಕಿನಲ್ಲಿಯೂ ಮುಂದಿನ ಋಕ್ಕಿನಲ್ಲಿಯೂ ಶ್ರೀದೇವತೆಯನ್ನು ಗಜಲಕ್ಷ್ಮೀಸ್ವರೂಪದಿಂದಿರುವಂತೆ ಸ್ತುತಿಸಲಾಗಿದೆ. ಈ ಋಕ್ಕಿನಲ್ಲಿ ಚಂದ್ರಮಂಡಲಾಂತರ್ಗತಳಾಗಿರುವಂತೆಯೂ, ಮುಂದಿನ ಋಕ್ಕಿನಲ್ಲಿ ಸೂರ್ಯಮಂಡಲಾಂತರ್ಗತಳೆಂದೂ ವರ್ಣಿಸಿದೆ. ಹದಿನಾಲ್ಕನೆಯ ಋಕ್ಕಿನ ವಿಶೇಷವಿಷಯಗಳು ಈ ಹದಿಮೂರನೆಯ ಋಕ್ಕಿಗೂ ಅನ್ವಯಿಸುವವು.

## ಅಥ ಚತುರ್ದಶೀ ಋಕ್

**ಓಂ ಅಸ್ಯ ಶ್ರೀಶ್ರೀಸೂಕ್ತಸ್ಯ ಚತುರ್ದಶ್ಯೃಙ್ಮಹಾಮಂತ್ರಸ್ಯ | ಜಾತವೇದಾ ಋಷಿಃ | ಶ್ರೀರಾಜ್ಯಲಕ್ಷ್ಮೀರ್ದೇವತಾ | ಅನುಷ್ಟುಪ್ ಛಂದಃ | ಶ್ರೀಂ ಬೀಜಂ | ಹಂ ಶಕ್ತಿಃ | ಹ್ರೀಂ ಕೀಲಕಂ | ಶ್ರೀರಾಜ್ಯಲಕ್ಷ್ಮೀಪ್ರಸಾದಸಿದ್ಧ್ಯರ್ಥೇ ಜಪೇ ವಿನಿಯೋಗಃ ||**

ಓಂ ಆರ್ದ್ರಾಂ ಪುಷ್ಕರಿಣೀಂ ಯಷ್ಟಿಂ— ಅಂಗುಷ್ಠಾಭ್ಯಾಂ ನಮಃ । ಓಂ ಸುವರ್ಣಾಂ—ತರ್ಜನೀಭ್ಯಾಂ ನಮಃ । ಓಂ ಹೇಮಮಾಲಿನೀಂ—ಮಧ್ಯಮಾಭ್ಯಾಂ ನಮಃ । ಓಂ ಸೂರ್ಯಾಂ ಹಿರಣ್ಮಯೀಂ ಅನಾಮಿಕಾ ಭ್ಯಾಂ ನಮಃ । ಓಂ ಲಕ್ಷ್ಮೀ—ಕನಿಷ್ಠಿಕಾಭ್ಯಾಂ ನಮಃ । ಓಂ ಜಾತವೇದೋ ಮ ಆ ವಹ ಕರತಲಕರಪೃಷ್ಠಾಭ್ಯಾಂ ನಮಃ । ಓಂ ಆರ್ದ್ರಾಂ ಪುಷ್ಕರಿಣೀಂ ಯಷ್ಟಿಂ—ಹೃದಯಾಯ ನಮಃ । ಓಂ ಹೇಮಮಾಲಿನೀಂ—ಶಿಖಾಯೈ ವಷಟ್ । ಓಂ ಸೂರ್ಯಾಂ ಹಿರಣ್ಮಯೀಂ—ಕವಚಾಯ ಹುಂ । ಓಂ ಲಕ್ಷ್ಮೀಂ—ನೇತ್ರತ್ರಯಾಯ ವೌಷಟ್। ಓಂ ಜಾತವೇದೋ ಮ ಆವಹ— ಅಸ್ತ್ರಾಯ ಫಟ್ ॥ ಭೂರ್ಭುವಸ್ಸುವರೋಮಿತಿ ದಿಗ್ಬಂಧಃ ॥ ಧ್ಯಾನಂ ॥

ಪದ್ಮಂ ಮಣಿಮಯಂ ಕುಂಭಮಿಕ್ಷುಚಾಪಂ ಚ ಬಿಭ್ರತೀಂ ।
ಪುಷ್ಪಬಾಣಂ ಮಹಾಲಕ್ಷ್ಮೀಂ ಧ್ಯಾಯೇದ್ರಾಜ್ಯಪ್ರದಾಯಿನೀಂ ॥

ಏವಂ ಧ್ಯಾತ್ವಾ ಜಪೇಲ್ಲಕ್ಷಂ ರಾಜ್ಯಲಕ್ಷ್ಮೀಂ ಸಮಶ್ನುತೇ ॥

॥ ಹದಿನಾಲ್ಕನೆಯ ಋಕ್ಕು ॥

**ಆರ್ದ್ರಾಂ ಯಃಕರಿಣೀಂ ಯಷ್ಟಿಂ ಸುವರ್ಣಾಂ ಹೇಮಮಾಲಿನೀಂ ।**
**ಸೂರ್ಯಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋ ಮ ಆವಹ ॥ ೧೪ ॥**

॥ ಶ್ರೀ ವಿದ್ಯಾರಣ್ಯಭಾಷ್ಯಂ ॥

ಆರ್ದ್ರಾಂ ಪೂರ್ವೋಕ್ತಾಂ ಯಃಕರಿಣೀಂ ಯಷ್ಟಿಕರಾಂ ವೇತ್ರಹಸ್ತಾಮಿತ್ಯರ್ಥಃ । ಟಿಲೋಪಶ್ಛಾಂದಸಃ । ತದ್ವತೀಂ ದಂಡಕಾರಿಣೀಂ ದಂಡಕರಾಂ ವಾ । ಯಷ್ಟಿಂ ದಂಡರೂಪಾಂ "ಧರ್ಮದಂಡಸ್ವರೂಪಿಣೀ" ಮಿತಿ ಬ್ರಾಹ್ಮೋಕ್ತೇಃ । ಸುವರ್ಣಾಂ ಶೋಭನವರ್ಣಾಂ ರುಕ್ಮರೂಪಿಣೀಂ ರುಕ್ಮಿಣೀಂ ರುಕ್ಮದೇವತಾಂ ವಾ ಹೇಮಮಾಲಿನೀಂ ಹೇಮವಿಕೃತಶೃಂಖಲಾದಿಮಾಲಾವತೀಂ ಸೂರ್ಯಾಂ ಸೂರ್ಯವತ್ಪ್ರಕಾಶಮಾನಾಂ ತದ್ರೂಪಾಂ ವಾ । ಸಿದ್ಧಮನ್ಯತ್ ॥

॥ ಪೃಥ್ವೀಧರಾಚಾರ್ಯಭಾಷ್ಯಂ ॥

ಹೇ ಅಗ್ನೇ ಆರ್ದ್ರಾಂ ಪೂರ್ವೋಕ್ತಾಂ ಪುಷ್ಕರಿಣೀಂ ಕರಿಹಸ್ತಾಗ್ರವತೀಂ ಯಷ್ಟಿಂ ಪಾಕಶಾಲಾದಿದಂಡರೂಪಾಂ, ಇಷ್ಟಿಮಿತಿಪಾಠೇ ಯಾಗಸ್ವರೂಪಾಂ ಪಿಂಗಳಾಂ ಕದ್ರೂವರ್ಣಾಂ ಪದ್ಮಮಾಲಿನೀಂ ಪೂರ್ವೋಕ್ತರೂಪಾಂ ಚಂದ್ರಾಂ ಸಂತೋಷಕರೀಂ ಚಂದ್ರಮಂಡಲವಾಸಿನೀಂ ಚಂದ್ರರೂಪಾಂ ಕರ್ಪೂರಧಾರಿಣೀಂ ವಾ ಹಿರಣ್ಮಯೀಂ ಸುವರ್ಣಮಯೀಂ ಧನರೂಪಾಂ ಧನಪ್ರಚುರಾಂ ವಾ ಲಕ್ಷ್ಮೀಂ ಮೇ ಮದರ್ಥಂ ಮಮೇತಿ ಪಾಠೇ ಮತ್ಸಂಬಂಧಿಪ್ರಯೋಜನಾಯ ಆವಹ ॥

॥ ಪ್ರತಿಪದಾರ್ಥ ॥

**(ಹೇ) ಜಾತವೇದಃ**— ಎಲೈ ಅಗ್ನಿಯೇ । **ಆರ್ದ್ರಾಂ**—ಶೀತಲಸ್ವಭಾವವುಳ್ಳ ಅಥವಾ ಶೀತಲಕಾಂತಿ ವಿಶಿಷ್ಟಳೂ । **ಯಷ್ಟಿಂ ಯಃಕರಿಣೀಂ**—ಕೈಯಲ್ಲಿ ಬೆತ್ತ ಅಥವಾ ದಂಡವನ್ನು (ಧರ್ಮದಂಡವನ್ನು) ಹಿಡಿದಿರು

ವವಳೂ | **ಸುವರ್ಣಾಂ**—ಶೋಭನವರ್ಣವುಳ್ಳವಳೂ | **ಹೇಮಮಾಲಿನೀಂ**—ಸುವರ್ಣನಿರ್ಮಿತವಾದ ಪುಷ್ಪ ಹಾರವನ್ನು ಧರಿಸಿರುವವಳೂ | **ಸೂರ್ಯಾಂ**—ಸೂರ್ಯನಂತೆ ಅತಿ ಪ್ರಕಾಶದಿಂದ ಬೆಳಗುವವಳೂ ಅಥವಾ ಸೂರ್ಯರೂಪದಿಂದಿರುವವಳೂ | **ಹಿರಣ್ಮಯೀಂ**—ಸುವರ್ಣಾಭರಣಾಲಂಕೃತಳೂ ಅಥವಾ ಸುವರ್ಣಮಯವಾದ ಶರೀರದಿಂದ ಶೋಭಿಸುವವಳೂ ಆದ | **ಲಕ್ಷ್ಮೀಂ**—ಮಹಾಲಕ್ಷ್ಮೀ ಎಂಬ ದೇವತೆಯನ್ನು | **ಮೇ**—ನನ್ನ ಸಮೀಪಕ್ಕೆ | **ಆ ವಹ**—ಕರೆದುಕೊಂಡು ಬಾ,

|| ಭಾವಾರ್ಥ ||

ಎಲೈ ಅಗ್ನಿಯೇ, ಶೀತಲಸ್ವಭಾವವುಳ್ಳವಳೂ ಅಥವಾ ಚಂದ್ರನಂತೆ ಶೀತಲ ಕಾಂತಿವಿಶಿಷ್ಟಳೂ, ಕೈಯಲ್ಲಿ ದಂಡವನ್ನು ಹಿಡಿದಿರುವವಳೂ, ಶೋಭನವರ್ಣವುಳ್ಳವಳೂ, ಸುವರ್ಣಮಯವಾದ ಪುಷ್ಪಹಾರವನ್ನು ಧರಿಸಿ ಸೂರ್ಯನಂತೆ ತೇಜೋಽತಿಶಯದಿಂದ ಬೆಳಗುತ್ತಿರುವವಳೂ ಅಥವಾ ಸೂರ್ಯಸ್ವರೂಪಳೂ, ಸುವರ್ಣಾಭರಣಾಲಂಕೃತಳೂ ಅಥವಾ ಸುವರ್ಣಮಯವಾದ ಶೋಭನಾಂಗವುಳ್ಳವಳೂ ಆದ ಮಹಾಲಕ್ಷ್ಮೀ ಎಂಬ ದೇವತೆಯನ್ನು ನನ್ನ ಸಮೀಪಕ್ಕೆ ಕರೆದುಕೊಂಡು ಬಾ.

|| ವಿಶೇಷವಿಷಯಗಳು ||

|| ಶ್ರೀತತ್ತ್ವೇ ||

**ಮಮಕಾರೋ ಮದಶ್ಚೇತಿ ವರ್ತೇತೇ ಪಾರ್ಶ್ವಯೋರ್ದ್ವಯೋಃ |**
**ದೇವತೇ ಗಜರೂಪಿಣ್ಯೌ ಶ್ರೀದೇವೀಮಭಿಷಿಂಚತಃ ||**
**ತಯೋಃ ತುಂಡಾಗ್ರಯೋರ್ಭಾತಿ ಆಶಾಪ್ರೀತ್ಯಾಹ್ವಯಾವುಭೌ |**
**ಸುವರ್ಣಕಲಶೌ ತಾಭ್ಯಾಂ ತೃಪ್ತಿಪೂರ್ಣಾಂಭಸಾಽನ್ವಹಂ ||**
**ಹೃತ್ಪದ್ಮವಾಸಿನೀ ದೇವೀ ಚಿದ್ರೂಪಿಣ್ಯಭಿಷಿಚ್ಯತೇ |**
**ದೇಹೇ ಗೃಹಾತ್ಮಕೇ ವಿಷ್ವಕ್ಸಹಾನಂದೇನ ವಿಷ್ಣುನಾ ||**
**ಏತಾವಾನ್ ಗಜಲಕ್ಷ್ಮ್ಯಾಸ್ತು ವಿಭೂತೇರ್ವಿಸ್ತರೋ ಧ್ರುವಃ |**
**ತಾಂ ಸ್ಮರೇದಭಿಷೇಕಾದ್ರಾಂ ಪುಷ್ಟಿದಾಂ ಪುಷ್ಟಿರೂಪಿಣೀಂ ||**
**ರುಕ್ಮಾಭಾಂ ಸ್ವಪ್ನಧೀಗಮ್ಯಾಂ ಸುವರ್ಣಾಂ ಸ್ವರ್ಣಮಾಲಿನೀಂ |**
**ಸೂರ್ಯಾಮೈಶ್ವರ್ಯರೂಪಾಂ ಚ ಸಾವಿತ್ರೀಂ ಸೂರ್ಯರೂಪಿಣೀಂ ||**
**ಆತ್ಮಸಂಜ್ಞಾಂ ಚ ಚಿದ್ರೂಪಾಂ ಜ್ಞಾನದೃಷ್ಟಿಸ್ವರೂಪಿಣೀಂ |**
**ಚಕ್ಷುಃಪ್ರಕಾಶದಾಂ ಚೈವ ಹಿರಣ್ಯಪ್ರಚುರಾಂ ತಥಾ ||**
**ಸ್ವರ್ಣಾತ್ಮನಾವಿರ್ಭೂತಾಂ ಚ ಜಾತವೇದೋ ಮ ಆವಹ |**
**ಋಚಮೇತಾಂ ಜಪೇನ್ನಿತ್ಯಂ ಪಶ್ಯನ್ನರ್ಕಂ ದಿವಾ ದ್ವಿಜಃ ||**
**ಪದ್ಮಾಕರೇ ತಟಾಕೇ ವಾ ಪ್ರತ್ಯಹಂ ತ್ರಿಸಹಸ್ರಕಂ |**
**ಮಂಡಲತ್ರಯಪರ್ಯಂತಂ ವ್ರತದೀಕ್ಷಾಪರಾಯಣಃ ||**
**ಸುವಾಸಿನೀಶತಂ ಪೂಜ್ಯಂ ಸಾಲಂಕಾರಂ ಸದಕ್ಷಿಣಂ |**

ಸಿದ್ಧೌ ಗಜಾಂತರೈಶ್ವರ್ಯಮಾರೋಗ್ಯಂ ಭಾಗ್ಯಮೇವ ಚ ||
ಸರ್ವಾರ್ಥಸಿದ್ಧಿಮಂತೇ ತು ಸೂರ್ಯಸಾಯುಜ್ಯಮಾಪ್ನುಯಾತ್ |
ಮೈತ್ರ್ಯಾದಿವೃತ್ತಿಭಿಶ್ಚಾರ್ದ್ರಾಂ ವಿರಾಜಃಕರುಣಾಂ ಶ್ರಿಯಂ ||
ದಯಾರ್ದ್ರಾಂ ವೇತ್ರಹಸ್ತಾಂ ಚ ವ್ರತದಂಡಸ್ವರೂಪಿಣೀಂ |
ಪಿಂಗಳಾಭಾಂ ಪ್ರಸನ್ನಾಸ್ಯಾಂ ಪದ್ಮಮಾಲಾಧರಾಂ ತಥಾ ||
ಚಂದ್ರಸ್ಥಾಂ ಚಂದ್ರರೂಪಾಂ ಚ ಚಂದ್ರಾಂ ಚಂದ್ರಧರಾಂ ತಥಾ |
ಹಿರಣ್ಮಯೀಂ ಮಹಾಲಕ್ಷ್ಮೀಮೃಚಮೇತಾಂ ಜಪೇನ್ನಿಶಿ ||
ಆರಭ್ಯ ಶುಕ್ಲಪಂಚಮ್ಯಾಮಾಸ್ವೇವ ದಶರಾತ್ರಿಷು |
ಪ್ರಾಪ್ತ್ಯೈಕೋತ್ತರವೃದ್ಧ್ಯೈವ ಜಪೇದ್ವ್ರತಪರಾಯಣಃ ||
ದ್ವಾತ್ರಿಂಶನ್ಮಾಸಪರ್ಯಂತಂ ಪುರಶ್ಚರಣಮುಚ್ಯತೇ |
ಚಂದ್ರಮಂಡಲಮಾಲಕ್ಷ್ಯ ಲಕ್ಷ್ಮೀಂ ಶ್ರೀಲಲಿತಾಂಬಿಕಾಂ ||
ಸಿದ್ಧೌ ತು ಸಾರ್ವಭೌಮತ್ವಂ ವಶೀಕರಣಮೇವ ಚ |
ಪೂರ್ಣಾನಂದಪ್ರತಿಷ್ಠಾಂ ಚ ಕೀರ್ತಿಭೋಗಂ ಮಹದ್ಧನಂ |
ಪ್ರಾಪ್ಯಾಂತೇ ಚಂದ್ರಸಾಯುಜ್ಯಂ ಪ್ರಾಪ್ನೋತ್ಯೇವ ನ ಸಂಶಯಃ || ಇತಿ ||

## ಅನುವಾದವು

ಮಮಕಾರ ಮತ್ತು ಮದ ಎಂಬ ಇಬ್ಬರು ದೇವತೆಯರು ಶ್ರೀದೇವಿಯ ಎಡಬಲಪಾರ್ಶ್ವಗಳಲ್ಲಿ ಗಜರೂಪದಿಂದಿದ್ದು, ತಮ್ಮ ಸೊಂಡಲುಗಳಲ್ಲಿ ಆಶಾ, ಪ್ರೀತಿ ಎಂಬ ಎರಡು ಸುವರ್ಣಕಲಶಗಳಲ್ಲಿ ತೃಪ್ತಿಯೆಂಬ ಉದಕವನ್ನು ತುಂಬಿಕೊಂಡು, ಹೃದಯಕಮಲದಲ್ಲಿ ವಾಸಿಸುತ್ತಿರುವವಳೂ, ಚಿದ್ರೂಪಸ್ವರೂಪಿಣಿಯೂ, ದೇಹವೆಂಬ ಮನೆಯಲ್ಲಿ ಆನಂದಸ್ವರೂಪನಾದ ವಿಷ್ಣುವಿನೊಡನೆ ಆಸನದಲ್ಲಿ ಕುಳಿತಿರುವವಳೂ ಆದ ಶ್ರೀದೇವಿಯನ್ನು ಪ್ರತಿದಿನವೂ ಅಭಿಷೇಕ ಮಾಡುತ್ತಿರುವರು. ಈ ವಿಧವಾದ ವೈಭವವು ಗಜಲಕ್ಷ್ಮಿಯ ವಿಭೂತಿವಿಶೇಷವೆಂದು ಹೇಳಲ್ಪಡುವುದು. ಈ ಗಜಲಕ್ಷ್ಮಿಯನ್ನು ಈರೀತಿ ಧ್ಯಾನಮಾಡಬೇಕು— ಈ ದೇವಿಯು ಅಭಿಷಿಕ್ತೋದಕದಿಂದ ತೊಯಿದ ಶರೀರವುಳ್ಳವಳಾಗಿರುವಳು. ಪುಷ್ಟ್ಯಭಿಮಾನಿದೇವತೆಯಾಗಿ ಸಕಲರಿಗೂ ಪುಷ್ಟಿಪ್ರದಳಾಗಿರುವಳು. ಬೆಳ್ಳಿಯಂತೆ ಶುಭ್ರವಾದ ಕಾಂತಿಯಿಂದ ಬೆಳಗುತ್ತಿರುವಳು, ಸ್ವಪ್ನದಲ್ಲಿ ಗೋಚರಳಾಗುವಳು, ಸುವರ್ಣದ ಕಾಂತಿಯಿಂದ ಬೆಳಗುತ್ತಾ ಸುವರ್ಣನಿರ್ಮಿತ ಹಾರವನ್ನು ಧರಿಸಿರುವಳು. ಸೂರ್ಯನಂತೆ ಕಾಂತಿಯುತಳೂ, ಐಶ್ವರ್ಯಮೂರ್ತಿಯೂ ಆಗಿರುವಳು. ಆತ್ಮಸ್ವರೂಪಿಣಿಯೂ, ಚಿದ್ರೂಪಿಣಿಯೂ, ಜ್ಞಾನದೃಷ್ಟಿಸ್ವರೂಪಿಣಿಯೂ, ಕಣ್ಣುಗಳಿಗೆ ಪ್ರಕಾಶವನ್ನು ಕೊಡುವವಳೂ, ಸುವರ್ಣಮಯಶರೀರಕಾಂತಿಯುತಳೂ, ಸುವರ್ಣಮಯವಾದ ಶರೀರದಿಂದ ಆವಿರ್ಭೂತಳಾದವಳೂ ಆದ ಈ ಗಜಲಕ್ಷ್ಮೀ ಎಂಬ ದೇವತೆಯನ್ನು ಎಲೈ ಅಗ್ನಿಯೇ, ನನ್ನ ಸಮೀಪಕ್ಕೆ ಕರೆದುಕೊಂಡುಬಾ ಎಂದು ಧ್ಯಾನಮಾಡಬೇಕು.

ಈ ರೀತಿ ಧ್ಯಾನಮಾಡುತ್ತಾ ಸರೋವರದಲ್ಲಿಯಾಗಲೀ, ಕೆರೆಯಲ್ಲಿಯಾಗಲೀ ನೀರಿನಲ್ಲಿ ನಿಂತು ಸೂರ್ಯನನ್ನು ನೋಡುತ್ತಾ ಈ ಋಕ್ಕನ್ನು ಪ್ರತಿದಿನವೂ ಮೂರು ಸಹಸ್ರ ಸಂಖ್ಯೆಯಷ್ಟು ಜಪ ಮಾಡಬೇಕು. ಈ ರೀತಿಯಾಗಿ ಮೂರು ಮಂಡಲ ಪರ್ಯಂತ (ಮಂಡಲವೆಂದರೆ ನಲವತ್ತೆಂಟು ದಿನಗಳು) ವ್ರತದ ದೀಕ್ಷೆಯನ್ನು ಕೈಗೊಂಡು ಜಪ

ಮಾಡಿ ಕೊನೆಯಲ್ಲಿ ನೂರುಮಂದಿ ಸುವಾಸಿನೀ ಸ್ತ್ರೀಯರನ್ನು ವಸ್ತ್ರಾಲಂಕಾರ ದಕ್ಷಿಣೆಗಳಿಂದ ಪೂಜಿಸಿ ಸಂತೋಷಪಡಿಸಬೇಕು. ಈ ರೀತಿ ಮಾಡುವುದರಿಂದ ಮಂತ್ರಸಿದ್ಧಿಯಾಗಿ ಗಜಾದ್ವೈಶ್ವರ್ಯ, ಆರೋಗ್ಯಭಾಗ್ಯ, ಸಕಲ ಕಾರ್ಯಗಳಲ್ಲಿಯೂ ಸಿದ್ಧಿ, ಇವುಗಳನ್ನು ಪಡೆದು ಸುಖಿಸುವನು. ಕೊನೆಗೆ ದೇಹಾವಸಾನದಲ್ಲಿ ಸೂರ್ಯಸಾಯುಜ್ಯವೆಂಬ ಉತ್ತಮವಾದ ಪದವಿಯನ್ನೂ ಪಡೆಯುವನು.

ಈ ಮಂತ್ರವನ್ನು ಜಪ ಮಾಡುವಾಗ ಶ್ರೀದೇವತೆಯು ತನ್ನ ಭಕ್ತರಲ್ಲಿ ಸ್ನೇಹ, ವಾತ್ಸಲ್ಯ, ಪ್ರೀತಿ, ದಯಾದ್ರ್ರದೃಷ್ಟಿ ಮುಂತಾದ ಗುಣಯುಕ್ತಳಾಗಿರುವಂತೆಯೂ, ಕೈಯಲ್ಲಿ ದಂಡವನ್ನು ಧರಿಸಿ ಜನರು ನಿಯಮಪರಿಪಾಲನ ಮಾಡುವುದಕ್ಕಾಗಿ ಧರ್ಮದಂಡಸ್ವರೂಪಿಣಿಯಾಗಿರುವಂತೆಯೂ, ಗೌರವರ್ಣದ ಶರೀರಕಾಂತಿಯಿಂದಲೂ, ಚಂದ್ರನಂತೆ ಆಹ್ಲಾದಕರವಾದ ಸ್ವರೂಪವುಳ್ಳವಳಾಗಿರುವಂತೆಯೂ, ಚಂದ್ರಬಿಂಬವನ್ನು ಧರಿಸಿರುವಂತೆಯೂ ಸುವರ್ಣಮಯ ಶರೀರಾಕೃತಿಯಿಂದ ಒಪ್ಪುತ್ತಿರುವ ಮಹಾಲಕ್ಷ್ಮೀ ಸ್ವರೂಪಿಣಿಯಾಗಿರುವಂತೆಯೂ ಧ್ಯಾನಮಾಡಿ ಈ ಋಕ್ಕನ್ನು ರಾತ್ರಿ ಕಾಲದಲ್ಲಿ ಜಪ ಮಾಡಬೇಕು. ಪುರಶ್ಚರಣವನ್ನು ಮಾಡಬೇಕೆಂದು ಬಯಸುವ ಪುರುಷನು ಶುಕ್ಲಪಕ್ಷದ ಪಂಚಮೀ ದಿನ ಜಪವನ್ನು ಪ್ರಾರಂಭಿಸಿ ಅಲ್ಲಿಂದ ಮುಂದೆ ಹತ್ತು ದಿನಗಳವರೆಗೆ ಪ್ರತಿದಿನವೂ ರಾತ್ರಿಕಾಲದಲ್ಲಿ ಒಂದೊಂದು ಸಹಸ್ರ ಸಂಖ್ಯೆಯಷ್ಟು ಜಪವನ್ನು ಹೆಚ್ಚುಮಾಡುತ್ತಾ ಪೌರ್ಣಮಾಸಿಯವರೆಗೆ ಜಪಮಾಡಬೇಕು. ಆ ದಿವಸ ಚಂದ್ರಮಂಡಲವನ್ನು ನಿರೀಕ್ಷಿಸುತ್ತಾ ಆ ಮಂಡಲದಲ್ಲಿ ಶ್ರೀ ಲಲಿತಾಂಬಿಕಾ ಎಂದು ಪ್ರಸಿದ್ಧಳಾದ ಶ್ರೀ ಮಹಾಲಕ್ಷ್ಮಿಯು ಆ ಚಂದ್ರ ಬಿಂಬದಲ್ಲಿ ನೆಲಸಿರುವಂತೆ ಭಾವಿಸಬೇಕು. ಈ ರೀತಿ ಹನ್ನೆರಡು ತಿಂಗಳವರೆಗೆ ಪ್ರತಿ ತಿಂಗಳಲ್ಲಿಯೂ ಪಂಚಮೀ ದಿನದಿಂದ ಪೌರ್ಣಮಾಸ್ಯವರೆಗೆ ಜಪಮಾಡಬೇಕು. ಈ ರೀತಿ ಜಪಮಾಡುವುದಕ್ಕೆ ಪುರಶ್ಚರಣವಿಧಿಯೆಂದು ಹೆಸರು ಪುರಶ್ಚರಣವಿಧಿಯಿಂದ ಮಾಡುವ ಜಪಕ್ರಮವು ಸಿದ್ಧಿಸಿದರೆ ಸಾಧಕನು ಸಾರ್ವಭೌಮನಾಗುವನು. ಎಲ್ಲರೂ ಇವನ ವಶವರ್ತಿಗಳಾಗುವರು. ಪೂರ್ಣಾನಂದವೂ, ಕೀರ್ತಿಯೂ, ಭೋಗಸಾಧನಗಳೂ, ಧನಸಮೃದ್ಧಿಯೂ ಲಭಿಸುವುವು ಈ ಲೋಕದಲ್ಲಿ ಸಮಸ್ತ ಭೋಗಗಳನ್ನೂ ಬಹುಕಾಲ ಅನುಭವಿಸಿ ದೇಹಾವಸಾನದಲ್ಲಿ ಚಂದ್ರಸಾಯುಜ್ಯವೆಂಬ ಮಹತ್ಪದವಿಯನ್ನೂ ಪಡೆಯುವನು.

ಇಲ್ಲಿಗೆ ಹದಿನಾಲ್ಕನೆಯ ಋಕ್ಕಿನ ಅರ್ಥವಿವರಣೆ ಸಮಾಪ್ತವು.

॥ ಅಥ ಪಂಚದಶೀ ಋಕ್ ॥

**[ಓಂ ಅಸ್ಯ ಶ್ರೀ ಶ್ರೀಸೂಕ್ತಸ್ಥ ಋಕ್ಪಂಚದಶೀಮಹಾಮಂತ್ರಸ್ಯ । ಅಂಗಿರಾ ಋಷಿಃ। ಶ್ರೀ ಲಕ್ಷ್ಮೀ ರ್ದೇವತಾ । ಅನುಷ್ಟುಪ್‌ಛಂದಃ । ಅಥವಾ ಕುಬೇರ ಋಷಿಃ । ಶ್ರೀಮಹಾಲಕ್ಷ್ಮೀರ್ದೇವತಾ । ಪ್ರಸ್ತಾರ ಪಂಕ್ತಿಶ್ಛಂದಃ। ಹ್ರೀಂ ಬೀಜಂ। ಶ್ರೀಂ ಶಕ್ತಿಃ । ಹ್ರೀಂ ಕೀಲಕಂ । ಶ್ರೀ ರಾಜ್ಯಸಿಂಹಾಸನಸ್ಥಮಹಾಲಕ್ಷ್ಮೀ-ಪ್ರಸಾದ ಸಿದ್ಧ್ಯರ್ಥೇ ಜಪೇ ವಿನಿಯೋಗಃ ॥**

**ಓಂ ಹ್ರೀಂ ತಾಂ ಮ ಆವಹ— ಅಂಗುಷ್ಠಾಭ್ಯಾಂ ನಮಃ। ಓಂ ಶ್ರೀಂ ಜಾತವೇದಃ-ತರ್ಜನೀಭ್ಯಾಂ ನಮಃ । ಓಂ ಹ್ರೀಂ ಲಕ್ಷ್ಮೀಮನಪಗಾಮಿನೀಂ— ಮಧ್ಯಮಾಭ್ಯಾಂ ನಮಃ । ಯಸ್ಯಾಂ ಹಿರಣ್ಯಂ— ಅನಾಮಿಕಾಭ್ಯಾಂ—ನಮಃ। ಓಂ ಶ್ರೀಂ ಪ್ರಭೂತಂ ಗಾವೋ ದಾಸ್ಯೋಽಶ್ವಾನ್— ಕನಿಷ್ಠಿಕಾಭ್ಯಾಂ ನಮಃ।**

ಓಂ ಹ್ರೀ ಪುರುಷಾನಹಂ—ಕರತಲಕರಪೃಷ್ಠಾಭ್ಯಾಂ ನಮಃ ॥ ಓಂ ಹ್ರೀಂ ತಾಂ ಮ ಆವಹ-ಹೃದಯಾಯ ನಮಃ । ಓಂ ಹ್ರೀಂ ಲಕ್ಷ್ಮೀಮನಪಗಾಮಿನೀಂ—ಶಿಖಾಯೈ ವಷಟ್ । ಓಂ ಶ್ರೀಂ ಜಾತವೇದಃ—ಶಿರಸೇ ಸ್ವಾಹಾ । ಓಂ ಹ್ರೀಂ ಲಕ್ಷ್ಮೀಮನಪಗಾಮಿನೀಂ—ಶಿಖಾಯೈ ವಷಟ್ । ಓಂ ಹ್ರೀಂ ಯಸ್ಯಾಂ ಹಿರಣ್ಯಂ-ಕವಚಾಯ ಹುಂ । ಓಂ ಶ್ರೀಂ ಪ್ರಭೂತಂ ಗಾವೋ ದಾಸ್ಯೋಽಶ್ವಾನ್-ನೇತ್ರತ್ರಯಾಯ ವೌಷಟ್ । ಓಂ ಹ್ರೀಂ ಪುರುಷಾನಹಂ—ಅಸ್ತ್ರಾಯ ಫಟ್ ॥ ಭೂರ್ಭುವಸ್ಸುವರೋಮಿತಿ ದಿಗ್ಬಂಧಃ ॥ ಧ್ಯಾನಂ ॥

ಧ್ಯಾಯೇಲ್ಲಕ್ಷ್ಮೀಂ ಪ್ರಹಸಿತಮುಖೀಂ ರಾಜ್ಯಸಿಂಹಾಸನಸ್ಥಾಂ
ಮುದ್ರಾಶಕ್ತೀಃ ಸಕಲವಿನುತಾಂ ಸರ್ವಸಂಸೇವ್ಯಮಾನಾಂ ।
ಅಗ್ನೌ ಪೂಜ್ಯಾಮಖಿಲಜನನೀಂ ಹೇಮವರ್ಣಾಂ ಹಿರಣ್ಯಾಂ
ಭಾಗ್ಯೋಪೇತಾಂ ಭುವನಸುಖದಾಂ ಭಾರ್ಗವೀಂ ಭೂತಧಾತ್ರೀಂ ॥

ಇತಿ ಧ್ಯಾತ್ವಾ ಜಪಂಕುರ್ಯಾತ್ ॥]

### ಹದಿನೈದನೆಯ ಋಕ್ಕು

## ತಾಂ ಮ ಆವಹ ಜಾತವೇದೋ ಲಕ್ಷ್ಮೀಮನಪಗಾಮಿನೀಂ ।
## ಯಸ್ಯಾಂ ಹಿರಣ್ಯಂ ಪ್ರಭೂತಂ ಗಾವೋ ದಾಸ್ಯೋಽಶ್ವಾನ್ವಿಂದೇಯಂ
## ಪುರುಷಾನಹಂ ॥ ೧೫ ॥

### ॥ ಶ್ರೀ ವಿದ್ಯಾರಣ್ಯಭಾಷ್ಯಂ ॥

ಇಯಂ ಋಕ್ ದ್ವಿತೀಯಯಾ ಋಚಾ ವ್ಯಾಖ್ಯಾತಾ । ಪ್ರಭೂತಂ ಭೂಯಿಷ್ಠಂ ಗಾವಃ ಗಾಃ । ದಾಸ್ಯಃ ಪರಿಚಾರಿಕಾಃ । ಉಭಯತ್ರ ತಸರ್ಥೇ ಜಸ್ । ಇಯಾನ್ ವಿಶೇಷಃ ॥

### ॥ ಪೃಥ್ವೀಧರಭಾಷ್ಯಂ ॥

ಹೇ ಜಾತವೇದಃ ಅಗ್ನೇ ಯಸ್ಯಾಂ ಲಕ್ಷ್ಮ್ಯಾಮಾಗತಾಯಾಂ ಸತ್ಯಾಂ ಪ್ರಭೂತಂ ಹಿರಣ್ಯಂ ಪುಷ್ಕಲಂ ಧನಂ ಗಾವಃ ಗೋಮಹಿಷ್ಯಾದೀನ್ ದಾಸ್ಯಃ ದಾಸೀಜನಾನ್ ಅಶ್ವಾನ್ ತುರಗಾದೀನ್ ಪುರುಷಾನ್ ಪುತ್ರಮಿತ್ರಕಲತ್ರಾದೀನ್ ವಿಂದೇಯಮಹಂ ಲಭೇಯಂ । ಅನಪಗಾಮಿನೀಂ ನಿವೃತ್ತಿರಹಿತಾಂ ತಾಂ ತಾದೃಶೀಂ ಲಕ್ಷ್ಮೀಂ ಶ್ರಿಯಂ ಮೇ ಮದರ್ಥಂ ಆವಹ ಆವಾಹನಂ ಕುರು ॥

### ॥ ಪ್ರತಿಪದಾರ್ಥ ॥

**(ಹೇ) ಜಾತವೇದಃ**—ಎಲೈ ಅಗ್ನಿಯೇ । **ಅನಪಗಾಮಿನೀಂ**—ಯಾವಾಗಲೂ ನನ್ನನ್ನು ಬಿಟ್ಟು ಹೋಗದಿರುವ ಎಂದರೆ ನನ್ನ ಗೃಹದಲ್ಲಿ ಸ್ಥಿರವಾಗಿ ನೆಲಸಿರುವ । **ತಾಂ**—ಪ್ರಸಿದ್ಧಳಾದ । **ಲಕ್ಷ್ಮೀಂ**—ಮಹಾಲಕ್ಷ್ಮೀ

ಎಂದು ಪ್ರಸಿದ್ಧಳಾದ ಶ್ರೀದೇವಿಯನ್ನು | **ಮೇ**—ನನ್ನ ಬಳಿಗೆ ಅಥವಾ ನನಗೆ ಅನುಗ್ರಹಮಾಡುವುದಕ್ಕಾಗಿ | **ಆ ವಹ**—ಕರೆದುಕೊಂಡು ಬಾ | **ಯಸ್ಯಾಂ**—ಯಾವ ಶ್ರೀದೇವಿಯು ನನ್ನ ಬಳಿಗೆ ಬರಲಾಗಿ | **(ಅಹಂ**—ನಾನು) | **ಪ್ರಭೂತಂ**—ಬಹಳವಾದ | **ಹಿರಣ್ಯಂ**—ಸುವರ್ಣವನ್ನು ಅಥವಾ ಧನಕನಕಾದಿಸಂಪತ್ತನ್ನೂ | **ಗಾವಃ**—ಗೋವುಗಳನ್ನೂ (ಪಶುಸಂಪತ್ತನ್ನೂ) | **ದಾಸ್ಯಃ**—ದಾಸದಾಸೀಜನರನ್ನು ಎಂದರೆ ಭೃತ್ಯರನ್ನೂ | **ಅಶ್ವಾನ್**—ಅಶ್ವಗಳನ್ನೂ | **ಪುರುಷಾನ್**—ಪುತ್ರಮಿತ್ರಕಳತ್ರಾದಿ ಜನರನ್ನೂ | **ವಿಂದೇಯಂ**—(ದೇವಿಯ ಅನುಗ್ರಹದಿಂದ) ಪಡೆಯುವೆನೋ | **(ತಾಂ ಲಕ್ಷ್ಮೀಂ ಮೇ ಆವಹ**—ಅಂತಹ ಶ್ರೀದೇವತೆಯನ್ನು ನನ್ನ ಬಳಿಗೆ ಕರೆದುಕೊಂಡು ಬಾ).

॥ ಭಾವಾರ್ಥ ॥

ಎಲೈ ಅಗ್ನಿಯೇ, ಯಾವ ಶ್ರೀದೇವತೆಯು ನನ್ನ ಮನೆಗೆ ಬಂದರೆ ಆ ದೇವಿಯ ಅನುಗ್ರಹದಿಂದ ನಾನು ಬಹಳವಾದ ಧನಕನಕಾದಿಸಂಪತ್ತನ್ನೂ, ಗೋವುಗಳೇ ಮೊದಲಾದ ಪಶುಸಂಪತ್ತನ್ನೂ, ದಾಸದಾಸೀಜನರನ್ನೂ, ಅಶ್ವಗಳನ್ನೂ, ಪುತ್ರಮಿತ್ರಕಳತ್ರಾದಿ ಬಂಧುವರ್ಗದವರನ್ನೂ ಪಡೆಯುವಂತಾಗುವುದೋ ಅಂತಹ ಶ್ರೀದೇವತೆಯನ್ನು ನನ್ನ ಬಳಿಗೆ ಕರೆದುಕೊಂಡು ಬಾ.

॥ ವಿಶೇಷವಿಷಯಗಳು ॥

**॥ ಮಂತ್ರಕಲ್ಪಾರ್ಣವೇ ॥**

**ಪಂಚದಶ್ಯಾ ಋಚಃ ಕುಬೇರಋಷಿಃ ಪ್ರಸ್ತಾರಪಂಕ್ತಿಶ್ಛಂದಃ । ಹ್ರೀಂ ಶ್ರೀಂ ಹ್ರೀಮಿತಿ ಬೀಜಾನಿ ದ್ವಿಧಾವಿಭಕ್ತಮಂತ್ರೇಣ ಸಬೀಜತ್ರಯೇಣ ಪಲ್ಲವೇನ ತ್ರಿವಾರಮನುಲೋಮವಿಲೋಮಪರಿವರ್ತನತಃ ಷೋಢಾ ನ್ಯಾಸಾಃ । ಧ್ಯಾನಂ—**

**ಧ್ಯಾಯೇಲ್ಲಕ್ಷ್ಮೀಂ ಪ್ರಹಸಿತಮುಖೀಂ ರಾಜ್ಯಸಿಂಹಾಸನಸ್ಥಾಂ**
**ಮುದ್ರಾಶಕ್ತಿಂ ಸಕಲವಿನುತಾಂ ಸರ್ವಸಂಸೇವ್ಯಮಾನಾಂ ।**
**ಅಗ್ನೌ ಪೂಜ್ಯಾಮಖಿಲಜನನೀಂ ಹೇಮವರ್ಣಾಂ ಹಿರಣ್ಯಾಂ**
**ಭಾಗ್ಯೋಪೇತಾಂ ಭುವನಸುಖದಾಂ ಭಾರ್ಗವೀಂ ಭೂತಿಧಾತ್ರೀಂ ॥**

**ಮಂತ್ರೋಽಯಂ ಧಾನ್ಯರಾಶೇರುಪರಿ ಪದ್ಮಾಕ್ಷಮಾಲಯಾ ತುಲಸೀಕಾಷ್ಠಮಾಲಯಾ ವಾ ಪ್ರತ್ಯಹಮಷ್ಟೋತ್ತರತ್ರಿಸಹಸ್ರಪ್ರಕಾರೇಣ ಸಹಸ್ರದಿವಸಜಪಾತ್ಸಿದ್ಧೋ ಭವತಿ । ವ್ಯಾಘ್ರಾಜಿನೇ ಮಹೇಂದ್ರನೀಲಾಕ್ಷಮಾಲಯಾ ಪಂಚಲಕ್ಷಜಪಾಚ್ಛತ್ರೂನ್ ಜಯತಿ । ವಸ್ತ್ರಾಸನೇ ದರ್ಭಾಸ್ತರಣೇ ವಾ ರುದ್ರಾಕ್ಷಮಾಲಯಾ ನವಲಕ್ಷಜಪಾದ್ವಿದ್ಯಾಂ ಪ್ರಾಪ್ನೋತಿ । ವೇತ್ರಾಸನೇ ಸುವರ್ಣಾಕ್ಷಮಾಲಯಾ ಕೋಟಿಜಪಾದ್ರಾಜ್ಯಂ ಪ್ರಾಪ್ನುಯಾತ್ । ಐಹಿಕಸರ್ವಕಾಮಪ್ರದೋಽಯಂ ಮಂತ್ರಃ । ಅರ್ಥತಸ್ತ್ವೇಷಾ ದ್ವಿತೀಯಾಮೃಚಮನುಕರೋತಿ । ಅನ್ಯದನ್ಯತ್ರೋಕ್ತಮೇವೇತಿ ಸಮಾನಂ ॥**

**॥ ಇತಿ ಪಂಚದಶೀ ಋಗ್ವಿವೃತಾ ॥**

**ಇತಿ ಶ್ರೀಸೂಕ್ತಭಾಷ್ಯಂ**

## ಅನುವಾದವು

ಶ್ರೀಸೂಕ್ತದ ಹದಿನೈದನೆಯ ಋಕ್ಕಾದ **ತಾಂ ಮ ಆವಹ** ಎಂಬ ಈ ಋಕ್ಕಿಗೆ ಕುಬೇರನು ಋಷಿಯು ; ಲಕ್ಷ್ಮೀಯು ದೇವತೆಯು ; ಪ್ರಸ್ತಾರಪಂಕ್ತಿಶ್ಛಂದಸ್ಸು. ಮಂತ್ರವನ್ನು ನ್ಯಾಸಕ್ಕೆ ಅನುಕೂಲವಾಗುವಂತೆ ಎರಡು ಭಾಗ ವಿಭಾಗಿಸಿ ಮೂರು ಬೀಜಾಕ್ಷರಗಳನ್ನು ಅನುಲೋಮ ವಿಲೋಮಕ್ರಮದಿಂದ ಸೇರಿಸಿ ಷೋಢಾನ್ಯಾಸವನ್ನು ಮಾಡಬೇಕು. ಧ್ಯಾನಶ್ಲೋಕವು ಈ ರೀತಿ ಇರುವುದು.

**ಧ್ಯಾಯೇಲ್ಲಕ್ಷ್ಮೀಂ ಪ್ರಹಸಿತಮುಖೀಂ ರಾಜ್ಯಸಿಂಹಾಸನಸ್ಥಾಂ**
**ಮುದ್ರಾಶಕ್ತಿಂ ಸಕಲವಿನುತಾಂ ಸರ್ವಸಂಸೇವ್ಯಮಾನಾಂ**
**ಅಗ್ನೌ ಪೂಜ್ಯಾಮಖಿಲಜನನೀಂ ಹೇಮವರ್ಣಾಂ ಹಿರಣ್ಯಾಂ**
**ಭಾಗ್ಯೋಪೇತಾಂ ಭುವನಸುಖದಾಂ ಭಾರ್ಗವೀಂ ಭೂತಿಧಾತ್ರೀಂ ॥**

ಈ ಲಕ್ಷ್ಮೀನಾಮಾಂಕಿತಳಾದ ಶ್ರೀದೇವಿಯು ರಾಜ್ಯಸಿಂಹಾಸನದಲ್ಲಿ ಕುಳಿತು ಮುಖದಲ್ಲಿ ಮಂದಹಾಸವನ್ನು ಸೂಸುತ್ತಾ ಹಸ್ತಗಳಲ್ಲಿ ವರದಾಭಯದಾದಿಮುದ್ರೆಗಳನ್ನು ಧರಿಸಿ ಪ್ರಕಾಶಿಸುತ್ತಿರುವಳು. ಸಕಲಜನರಿಂದಲೂ ಸ್ತುತಿಸಲ್ಪಡುವಳು ಅಗ್ನಿಯಲ್ಲಿ ಆವಾಹಿತಳಾಗಿ ಪೂಜಾರ್ಹಳಾಗಿರುವಳು. ಸಮಸ್ತ ಜಗತ್ತಿಗೂ ಜನನಿಯಾಗಿರುವಳು. ಹಿರಣ್ಯವರ್ಣದ ದೇಹಕಾಂತಿಯಿಂದ ಶೋಭಿಸುತ್ತಿರುವಳು. ಈ ದೇವಿಯ ಶರೀರವು ಸುವರ್ಣಮಯವೇ ಆಗಿರುವುದು. ಭಾಗ್ಯಕ್ಕೆ ಒಡೆಯಳಾದ್ದರಿಂದ ಸಕಲ ಲೋಕದ ಜನರಿಗೂ ಸುಖವನ್ನುಂಟುಮಾಡುವಳು. ಭೃಗುಕುಲೋತ್ಪನ್ನಳೂ ಐಶ್ವರ್ಯಾದಿ ವಿಭೂತಿಯನ್ನು ಧರಿಸಿರುವವಳೂ ಆದ ಈ ಶ್ರೀದೇವತೆಯನ್ನು ಈ ರೀತಿ ಧ್ಯಾನಿಸಬೇಕು ಎಂದು ಮುಖ್ಯಾಭಿಪ್ರಾಯವು.

ಜಪಮಾಡುವ ಸಾಧಕನು ಧಾನ್ಯರಾಶಿಯಮೇಲೆ ಕುಳಿತುಕೊಂಡು ಪದ್ಮಾಕ್ಷಮಾಲೆ ಅಥವಾ ತುಲಸೀಕಾಷ್ಠ ಮಾಲೆ ಇವುಗಳಲ್ಲಿ ಒಂದನ್ನು ಜಪಸರವನ್ನಾಗಿ ಮಾಡಿಕೊಂಡು, ಪ್ರತಿದಿನವೂ ಈ ಋಕ್ಕನ್ನು ಮೂರುಸಾವಿರದ ನೂರೆಂಟು ಸಂಖ್ಯೆಯಂತೆ ಸಹಸ್ರದಿವಸಗಳವರೆಗೆ ಜಪಮಾಡುತ್ತಾ ಬಂದರೆ ಆ ಪುರುಷರಿಗೆ ಮಂತ್ರಸಿದ್ಧಿಯಾಗುವುದು. ಆಸನಕ್ಕಾಗಿ ವ್ಯಾಘ್ರಾಜಿನ ಎಂದರೆ—ಹುಲಿಯ ಚರ್ಮವನ್ನು ಹಾಸಿಕೊಂಡು, ಅದರ ಮೇಲೆ ಕುಳಿತು, ಇಂದ್ರನೀಲ ಮಣಿಯ ಜಪಮಾಲೆಯಿಂದ ಐದುಲಕ್ಷ ಸಂಖ್ಯೆಯಷ್ಟು ಜಪಮಾಡಿದರೆ ಯುದ್ಧಾದಿಗಳಲ್ಲಿ ಶತ್ರುಗಳನ್ನು ಜಯಿಸಿ ದಿಗ್ವಿಜಯವನ್ನು ಪಡೆಯುವನು. ವಸ್ತ್ರವನ್ನು ಹಾಸಿ ಅದರ ಮೇಲೆ ಅಥವಾ ದರ್ಭಾಸನದಮೇಲೆ ಕುಳಿತು ರುದ್ರಾಕ್ಷ ಮಾಲೆಯಿಂದ ಒಂಭತ್ತುಲಕ್ಷ ಸಂಖ್ಯೆಯಷ್ಟು ಜಪಮಾಡಿದರೆ ಸಕಲ ವಿದ್ಯಾಪ್ರಾಪ್ತಿಯುಂಟಾಗುವುದು. ವೇತ್ರಾಸನದಲ್ಲಿ ಎಂದರೆ—ಬೆತ್ತದಿಂದ ಮಾಡಿದ ಆಸನದಲ್ಲಿ ಕುಳಿತು, ಸುವರ್ಣಮಣಿಯುಕ್ತವಾದ ಜಪಸರದಿಂದ ಒಂದುಕೋಟಿಸಂಖ್ಯೆ ಯಷ್ಟು ಜಪಮಾಡಿದರೆ ರಾಜ್ಯಲಾಭವಾಗುವುದು. ಈ ಮಂತ್ರವು ಐಹಿಕ ಎಂದರೆ, ಈ ಲೋಕದಲ್ಲಿ ಅನುಭವಿಸ ಲ್ಪಡುವ ಸಮಸ್ತ ಇಷ್ಟಾರ್ಥಗಳನ್ನು ಕೊಡುವುದು. ಅರ್ಥವಿಷಯದಲ್ಲಿ ಈ ಮಂತ್ರವು ಈ ಸೂಕ್ತದ ಎರಡನೆಯ ಋಕ್ಕಿನಂತೆಯೇ ಇದೆ.

ಇಲ್ಲಿಗೆ ಹದಿನೈದನೆಯ ಋಕ್ಕಿನ ಅರ್ಥವಿವರಣೆ ಸಮಾಪ್ತವು.

ಇಲ್ಲಿಗೆ ಶ್ರೀಸೂಕ್ತವು ಸಮಾಪ್ತವು.

|| ನಿರುಕ್ತಕಾರೋಕ್ತಫಲಸ್ತುತಿಃ ||

ಯಃ ಶುಚಿಃ ಪ್ರಯತೋ ಭೂತ್ವಾ ಜುಹುಯಾದಾಜ್ಯಮನ್ವಹಂ ।
ಶ್ರಿಯಃ ಪಂಚದಶರ್ಚಂ ಚ ಶ್ರೀಕಾಮಃ ಸತತಂ ಜಪೇತ್ ॥ ೧೬ ॥

॥ ಪ್ರತಿಪದಾರ್ಥ ॥

**ಯಃ**—ಯಾವ ಪುರುಷನು । **ಶ್ರೀಕಾಮಃ**—ಸಂಪತ್ತನ್ನು ಅಪೇಕ್ಷಿಸುವವನೋ ಆ ಪುರುಷನು । **ಪ್ರಯತಃ**—ಪ್ರಯತ್ನಪೂರ್ವಕವಾಗಿಯೂ । **ಶುಚಿಃಭೂತ್ವಾ**—ಸ್ನಾನಾದಿಗಳಿಂದ ಶುಚಿರ್ಭೂತನಾಗಿಯೂ ಆಗಿ । **ಶ್ರಿಯಃ**—ಶ್ರೀದೇವತೆಯನ್ನು ಪ್ರತಿಪಾದಿಸುವ ಈ ಶ್ರೀಸೂಕ್ತದ । **ಪಂಚದಶರ್ಚಂ**—ಹದಿನೈದು ಋಕ್ಕುಗಳಿಂದಲೂ । **ಅನ್ವಹಂ**—ಪ್ರತಿದಿನವೂ । **ಆಜ್ಯಂ**—ಆಜ್ಯಾಹುತಿಪೂರ್ವಕವಾಗಿ । **ಜುಹುಯಾತ್**—ಸಂಸ್ಕೃತಾಗ್ನಿಯಲ್ಲಿ ಹೋಮಮಾಡಬೇಕು । **ಚ**—ಮತ್ತು ಈ ಸೂಕ್ತದ ಹದಿನೈದು ಋಕ್ಕುಗಳನ್ನು । **ಸತತಂ**—ಯಾವಾಗಲೂ ಎಂದರೆ ಪ್ರತಿದಿನವೂ । **ಜಪೇತ್**—ಜಪಮಾಡಬೇಕು.

॥ ಭಾವಾರ್ಥ ॥

ಯಾವ ಪುರುಷನು ತನಗೆ ಶ್ರೀದೇವಿಯ ಅನುಗ್ರಹವೂ ಸಂಪತ್ತೂ ಲಭಿಸಬೇಕೆಂದು ಇಚ್ಛಿಸುವನೋ ಆ ಪುರುಷನು ಪ್ರಯತ್ನಪೂರ್ವಕವಾಗಿ ಸ್ನಾನಾದಿಗಳಿಂದ ಶುದ್ಧನಾಗಿ ಈ ಶ್ರೀಸೂಕ್ತದ ಹದಿನೈದು ಋಕ್ಕುಗಳಿಂದ ಸಂಸ್ಕೃತಾಗ್ನಿಯಲ್ಲಿ ಪ್ರತಿದಿನವೂ ಆಜ್ಯಾಹುತಿಗಳನ್ನು ಹೋಮಮಾಡಬೇಕು. ಮತ್ತು ಈ ಸೂಕ್ತನನ್ನು ವಿಧಿಪೂರ್ವಕವಾಗಿ ಪ್ರತಿದಿನವೂ ಜಪ ಮಾಡಬೇಕು.

॥ ವಿಶೇಷವಿಷಯಗಳು ॥

|| ನಿರುಕ್ತಕಾರೋಕ್ತಫಲಸ್ತುತಿಃ ||

ಓಂ । ಯಃ ಶುಚಿಃ ಪ್ರಯತೋ ಭೂತ್ವಾ ಜುಹುಯಾದಾಜ್ಯಮನ್ವಹಂ ।
ಶ್ರಿಯಃ ಪಂಚದಶರ್ಚಂ ಚ ಶ್ರೀಕಾಮಃ ಸತತಂ ಜಪೇತ್ ॥ ೧೬ ॥

**ಯಃ ಶ್ರೀಕಾಮಃ ಸ ಶುಚಿಃ ಪ್ರಯತಶ್ಚ ಭೂತ್ವಾ ಸತತಂ ಸಂಕಲ್ಪದಿನಾದಿ ಪಂಚದಶಾಬ್ದೇಷು ಪ್ರತ್ಯಹಂ ಸ್ವಶಾಖೋಕ್ತವಿಧಾನೇನಾಗ್ನಿಂ ಸಂಸ್ಕೃತ್ಯ ಶ್ರೀಸೂಕ್ತಪಂಚದಶಋಗ್ಭಿಃ ಪಂಚದಶಾಜ್ಯಾಹುತೀರ್ಹುತ್ವಾ ತತಃ ಪರಂ ಶ್ರಿಯಃ ಶ್ರೀಸೂಕ್ತಪಂಚದಶರ್ಚಂ ಸಾಕಲ್ಯೇನೈಕವಾರಮಿತಿ ಯಥಾಶಕ್ತ್ಯಖಂಡ-ಪಾರಾಯಣಂ ಕುರ್ಯಾತ್ । ಅಥವಾ ಪಂಚದಶವಾರಮಖಂಡಪಾರಾಯಣಂ ಕೃತ್ವಾ ತತ ಏಕೈಕಾ-ಮೃಚಂ ವಿಧಿವದ್ಯಥಾಸಂಖ್ಯಂ ಜಪೇತ್ । ತದಶಕ್ತೌ ಲೌಕಿಕೇಽಗ್ನಾವಪಿ ಪಂಚದಶ ಋಗ್ಭಿಃ ಪ್ರತ್ಯಹಂ ಪಂಚದಶಾಜ್ಯಾಹುತೀರ್ಹುತ್ವಾ ಪಂಚದಶ ವಾರಂ ಶ್ರೀಸೂಕ್ತಂ ಜಪೇತ್ತಸ್ಯ ಶ್ರೀಕಾಮಸ್ಯ ತಸ್ಮಿನ್ನೇವ**

ಜನ್ಮನಿ ಮಹತೀ ಶ್ರೀಪ್ರಾಪ್ತಿರ್ಭವಿಷ್ಯತೀತಿ ವಿಜ್ಞಾಯತೇ । ವಿಧಿವದನುಷ್ಠಾನಾಸಮರ್ಥಸ್ಯ ತು ಜನ್ಮಾಂತರೇ ಫಲಾನುಭವೋ ಭವಿಷ್ಯತೀತಿ ಸಿದ್ಧಾಂತಃ ॥ ತದುಕ್ತಂ ಮಂತ್ರರಹಸ್ಯೇ ॥

ಅಧಿಕಾರೀ ಯಥಾದೇಶೇ ಯಥಾಕಾಲೇ ಯಥಾಮನುಂ ।
ಯಾವದ್ವಿಧಾನಸಂಧಾನಃ ಪ್ರಜಪೇತ್ತಾದೃಶಂ ಫಲಂ ॥
ಕಾಲದೇಶಕ್ರಿಯಾರೂಪಾದ್ಯನುರೂಪಂ ಲಭೇನ್ನರಃ ।
ಅತ್ಯುತ್ಕಟೇನ ಪುಣ್ಯೇನ ತಸ್ಮಿನ್ನೇವ ಹಿ ಜನ್ಮನಿ ॥
ತತ್ಫಲಂ ಪ್ರಾಪ್ನುಯಾತ್ಸಿದ್ಧೋ ನಾತ್ರ ಕಾರ್ಯಾ ವಿಚಾರಣಾ ।
ಪುಣ್ಯಸ್ಯಾನುತ್ಕಟತ್ವೇ ತು ಚಿರಾತ್ಕಿಂಚಿತ್ಫಲಂ ಲಭೇತ್ ॥
ಪ್ರತಿಬಂಧಕಬಾಹುಲ್ಯೇ ಫಲಂ ಜನ್ಮಾಂತರೇ ಭವೇತ್ ।
ನ ದೇವತೋಷಣಂ ವ್ಯರ್ಥಂ ಭವಿಷ್ಯತಿ ಕದಾಚನ ॥
ತಸ್ಮಾನ್ಮಂತ್ರಂ ಜಪೇದ್ಯೋಗೀ ಯತಃ ಶುದ್ಧೇಂದ್ರಿಯಕ್ರಿಯಃ ॥ ಇತಿ ॥

## ಅನುವಾದವು

ಧನಧಾನ್ಯಾದಿಸಂಪತ್ತನ್ನು ಅಪೇಕ್ಷಿಸುವ ಪುರುಷನು ಶುಚಿರ್ಭೂತನಾಗಿ ಸಂಕಲ್ಪಮಾಡಿದ ದಿನದಿಂದ ಹದಿನೈದು ವರ್ಷಗಳವರೆಗೆ ಸಂಸ್ಕೃತಾಗ್ನಿಯಲ್ಲಿ ಈ ಶ್ರೀಸೂಕ್ತದ ಪ್ರತಿ ಋಕ್ಕಿನಿಂದಲೂ ಒಂದೊಂದರಂತೆ ಹದಿನೈದು ಆಜ್ಯಾಹುತಿಗಳನ್ನು ಅಗ್ನಿಯಲ್ಲಿ ಹೋಮಮಾಡಿ ಪ್ರತಿದಿನವೂ ಆ ಹದಿನೈದು ಋಕ್ಕುಗಳನ್ನು ವಿಧ್ಯುಕ್ತವಾಗಿ ಜಪಮಾಡಬೇಕು. ಅಥವಾ ಯಥಾಶಕ್ತಿ ಪಾರಾಯಣವನ್ನಾದರೂ ಮಾಡಬೇಕು. ಅಥವಾ ಹದಿನೈದು ಋಕ್ಕುಗಳನ್ನು ಒಟ್ಟಿಗೆಸೇರಿಸಿ ಅಖಂಡಪಾರಾಯಣಮಾಡಿ ಅನಂತರ ಪ್ರತಿಯೊಂದು ಋಕ್ಕನ್ನೂ ಕ್ಲುಪ್ತಸಂಖ್ಯೆಯಷ್ಟು ಜಪಮಾಡಬೇಕು. ಅಷ್ಟು ಮಾಡಲೂ ಶಕ್ತಿಯಿಲ್ಲದಿದ್ದರೆ ಪ್ರತಿದಿನವೂ ಲೌಕಿಕಾಗ್ನಿಯಲ್ಲಿಯೇ ಹದಿನೈದು ಋಕ್ಕುಗಳಿಂದ ಹದಿನೈದು ಆಜ್ಯಾಹುತಿಗಳನ್ನು ಹೋಮಮಾಡಿ ಅನಂತರ ಹದಿನೈದಾವರ್ತಿ ಶ್ರೀಸೂಕ್ತವನ್ನು ಜಪಮಾಡಬೇಕು. ಇದರಿಂದ ಸಂಪತ್ತನ್ನಿಚ್ಛಿಸುವ ಪುರುಷನಿಗೆ ಈ ಜನ್ಮದಲ್ಲಿಯೇ ಬಹಳವಾದ ಐಶ್ವರ್ಯಪ್ರಾಪ್ತಿಯಾಗುವುದು ಎಂಬ ವಿಷಯವು ಅನುಭವಸಿದ್ಧವಾಗಿದೆ. ವಿಧಿಪ್ರಕಾರವೂ, ಸ್ವಲ್ಪವೂ ನ್ಯೂನತೆಯಿಲ್ಲದಂತೆ ಅನುಷ್ಠಾನಮಾಡಲು ಶಕ್ತಿಯಿಲ್ಲದಿದ್ದರೆ ಯಥಾಶಕ್ತಿಯಾಗಿ ಜಪಾದಿಗಳನ್ನು ಮಾಡಿದರೂ ಅದಕ್ಕನುಸಾರವಾಗಿ ಫಲಪ್ರಾಪ್ತಿಯು ಆಗೇ ಆಗುವುದು. ಜಪಾದಿಗಳನ್ನು ಮಾಡುವಾಗ ಅನೇಕ ವಿಘ್ನಗಳು ಬಂದೊದಗಿ ಅನುಷ್ಠಾನವು ಪೂರ್ತಿಯಾಗದಿದ್ದರೆ ಮುಂದಿನ ಜನ್ಮದಲ್ಲಿ ಫಲಾನುಭವವು ಉಂಟಾಗುವುದು ಎಂಬುದು ಸಿದ್ಧಾಂತವು. ಈ ವಿಷಯವು ಮಂತ್ರರಹಸ್ಯವೆಂಬ ಗ್ರಂಥದಲ್ಲಿ ಈ ರೀತಿ ಹೇಳಲ್ಪಟ್ಟಿದೆ.

ಈ ಸೂಕ್ತವನ್ನು ಜಪಮಾಡಲು ಅಧಿಕಾರಿಯಾದ ಪುರುಷನು ಸ್ವಲ್ಪವೂ ನ್ಯೂನತೆ ಇಲ್ಲದಂತೆ ವಿಧ್ಯುಕ್ತನಾಗಿ ಜಪಾನುಷ್ಠಾನಮಾಡಲು ಕಾರಣಾಂತರಗಳಿಂದ ಅಸಮರ್ಥನಾದರೂ ದೇಶಕಾಲಕ್ಕೆ ತಕ್ಕಂತೆ ಎಂದರೆ ಸಂದರ್ಭೋಚಿತವಾಗಿ ಈ ಮಂತ್ರವನ್ನು ಎಷ್ಟರಮಟ್ಟಿಗೆ ಜಪಮಾಡುವನೋ ಅಷ್ಟರಮಟ್ಟಿಗೆ ಫಲವು ಲಭಿಸುವುದು. ಅತ್ಯುತ್ಕಟವಾದ ಪುಣ್ಯಪ್ರಭಾವದಿಂದ ಈ ಜನ್ಮದಲ್ಲಿಯೇ ಮಂತ್ರಸಿದ್ಧಿಯಾಗಿ ಅದರ ಫಲವೂ ಲಭಿಸುವುದು. ಈ ವಿಷಯದಲ್ಲಿ ಸಂಶಯವಿಲ್ಲ. ಪುಣ್ಯಪ್ರಭಾವವು ಅಷ್ಟು ಅತಿಶಯವಾಗಿಲ್ಲದಿದ್ದರೆ ಕೆಲವು ಕಾಲದಮೇಲೆ ಸ್ವಲ್ಪಮಟ್ಟಿಗೆ ಫಲವು ಲಭಿಸುವುದು.

ಅನೇಕ ವಿಘ್ನಗಳುಂಟಾಗಿ ಜಪಾನುಷ್ಠಾನ ನಡೆಯದಿದ್ದರೆ ಅದುವರೆಗೆ ಅನುಷ್ಠಾನಮಾಡಿದ ಜಪವು ಎಷ್ಟೇ ಅಲ್ಪವಾಗಿದ್ದರೂ ಅದರ ಫಲವು ಮುಂದಿನ ಜನ್ಮದಲ್ಲಿ ದೊರೆಯುವುದು. ದೇವತಾಪ್ರೀತಿಗಾಗಿ ಮಾಡಿದ ಜಪಾರ್ಚನಾದಿಗಳು ಯಾವ ಕಾಲಕ್ಕೂ ವ್ಯರ್ಥವಾಗುವುದಿಲ್ಲ. ಆದುದರಿಂದ ಯೋಗಿಯಾದವನು (ಅಥವಾ ಜಪಮಾಡುವವನು) ಜಿತೇಂದ್ರಿಯನೂ, ಶುದ್ಧನೂ ಆಗಿ ಈ ಶ್ರೀಸೂಕ್ತ ಮಂತ್ರಗಳನ್ನು ಭಕ್ತಿಯಿಂದ ಜಪಮಾಡಬೇಕು

ಇಲ್ಲಿಗೆ ಫಲಸ್ತುತಿ ಋಕ್ಕಿನ ಅರ್ಥವಿವರಣೆ ಸಮಾಪ್ತವು.

[ಸೂಚನೆ—ಋಗ್ವೇದಪರಿಶಿಷ್ಟ ಮಂತ್ರಗಳಲ್ಲಿ ಹೇಳಿರುವ ಶ್ರೀಸೂಕ್ತದಲ್ಲಿ ಹದಿನೈದು ಋಕ್ಕಗಳು ಮಾತ್ರವಿರುವವು. ಫಲಸ್ತುತಿಯನ್ನು ವಿವರಿಸುವ ಒಂದು ಋಕ್ಕು ಇದರ ಅಂತ್ಯದಲ್ಲಿರುವುದು. ಇದು ನಿರುಕ್ತಕಾರೋಕ್ತ ಶ್ರೀಸೂಕ್ತದ ಫಲಸ್ತುತಿರೂಪಮಂತ್ರವೆಂದು ಪ್ರಸಿದ್ಧವು. ಇವುಗಳನ್ನು ಪಠಿಸಿದನಂತರ ಲಕ್ಷ್ಮೀ ಅಥವಾ ಶ್ರೀದೇವತೆಯನ್ನು ಸ್ತುತಿಸುವ ಕೆಲವು ಶ್ಲೋಕಗಳನ್ನು ಪಠಿಸುವುದು ರೂಢಿಯಲ್ಲಿದೆ. ಇವು ಸುಲಭಭಾಷೆಯಲ್ಲಿರುವುದರಿಂದ ಇವುಗಳಿಗೆ ಯಾರೂ ಭಾಷ್ಯಾದಿಗಳನ್ನು ಬರೆದಿರುವುದಿಲ್ಲ. ಇವುಗಳ ಸಂಖ್ಯೆಯಲ್ಲಿಯೂ ಪಠಿಸುವಕ್ರಮದಲ್ಲಿಯೂ ಅಲ್ಲಲ್ಲಿ ಬಳಕೆಯಲ್ಲಿರುವಂತೆ ವ್ಯತ್ಯಾಸವೂ, ಪಾಠಾಂತರವೂ ಕಂಡುಬರುವುದು. ಸಾಧ್ಯವಾದ ಮಟ್ಟಿಗೆ ಇವುಗಳನ್ನು ಪಠಿಸುವ ರೂಢಿಯಲ್ಲಿರುವ ಕ್ರಮದಂತೆಯೇ ಈ ಶ್ಲೋಕಗಳನ್ನೂ ಅವುಗಳ ಮುಖ್ಯಾಭಿಪ್ರಾಯವನ್ನೂ ಇಲ್ಲಿ ವಿವರಿಸಲಾಗಿದೆ.]

**ಪದ್ಮಾಸನೇ ಪದ್ಮಊರೂ ಪದ್ಮಾಕ್ಷೀ ಪದ್ಮಸಂಭವೇ ।**
**ತ್ವಂ ಮಾಂ ಭಜಸ್ವ ಪದ್ಮಾಕ್ಷೀ ಯೇನ ಸೌಖ್ಯಂ ಲಭಾಮ್ಯಹಂ ॥**

ಎಲೈ ಮಹಾಲಕ್ಷ್ಮಿಯೇ, ನೀನು ಪದ್ಮವನ್ನೇ ಆಸನವನ್ನಾಗಿ ಮಾಡಿಕೊಂಡು ಅದರಲ್ಲಿ ಕುಳಿತಿರುವೆ. ನಿನ್ನ ತೊಡೆಗಳು ಪದ್ಮದಂತೆ ಕೋಮಲವಾಗಿವೆ. ನಿನ್ನ ಕಣ್ಣುಗಳು ಪದ್ಮದಂತೆ ವಿಶಾಲವಾಗಿಯೂ ಮನೋಹರವಾಗಿಯೂ ಇವೆ. ನೀನು ಪದ್ಮದಲ್ಲಿಯೇ ಹುಟ್ಟಿದವಳು. ಎಲೈ ಪದ್ಮದಂತೆ ಮನೋಹರವಾದ ಕಣ್ಣುಗಳುಳ್ಳ ಲಕ್ಷ್ಮಿಯೇ, ನೀನು ನನ್ನಲ್ಲಿ ಅನುಗ್ರಹಮಾಡಿ ನನ್ನ ಬಳಿಗೆ ಬಂದು ನನ್ನ ಆಶ್ರಯ (ವಾಸಸ್ಥಾನ) ದಲ್ಲಿರು. ಅದರಿಂದ ನಾನು ಸೌಖ್ಯವನ್ನು ಪಡೆಯುವಂತಾಗುವುದು.

**ಅಶ್ವದಾಯಿ ಗೋದಾಯಿ ಧನದಾಯಿ ಮಹಾಧನೇ ।**
**ಧನಂ ಮೇ ಜುಷತಾಂ ದೇವಿ ಸರ್ವಕಾಮಾರ್ಥಸಿದ್ಧಯೇ ॥**

ಮಹಾಧನವುಳ್ಳ ಎಲೈ ಲಕ್ಷ್ಮಿಯೇ, ನೀನು ಭಕ್ತರಿಗೆ ಅಶ್ವಗಳನ್ನೂ ಗೋವುಗಳನ್ನೂ ಧನಗಳನ್ನೂ ಕೊಡುವವಳು. ಆದುದರಿಂದ ಎಲೈ ದೇವಿ, ಸರ್ವಕಾಮಾರ್ಥಸಿದ್ಧಿಗಾಗಿ ಎಂದರೆ ನಾನು ಅಪೇಕ್ಷಿಸುವ ಸಕಲ ಇಷ್ಟಾರ್ಥಗಳೂ ನೆರವೇರುವುದಕ್ಕಾಗಿ ನನಗೆ ಧನವನ್ನು ಕೊಟ್ಟು ಅನುಗ್ರಹಿಸು.

**ಪುತ್ರಪೌತ್ರಧನಂ ಧಾನ್ಯಂ ಹಸ್ತ್ಯಶ್ವಾದಿಗವೇ ರಥಂ ।**
**ಪ್ರಜಾನಾಂ ಭವಸಿ ಮಾತಾ ಆಯುಷ್ಮಂತಂ ಕರೋತು ಮಾಂ ॥**

ಸಮಸ್ತ ಪ್ರಜೆಗಳಿಗೂ ತಾಯಿಯಾದ ಎಲೈ ದೇವಿಯೇ, ಮಕ್ಕಳು, ಮೊಮ್ಮಕ್ಕಳು, ಧನ, ಧಾನ್ಯ, ಆನೆ, ಕುದುರೆ, ಗೋವುಗಳು, ರಥ ಇವೆಲ್ಲವನ್ನೂ ನನಗೆ ಕೊಟ್ಟು ನನ್ನನ್ನು ದೀರ್ಘಾಯುಷ್ಯವಂತನನ್ನಾಗಿ ಮಾಡಿ ಅನುಗ್ರಹಿಸು.

ಚಂದ್ರಾಭಾಂ ಲಕ್ಷ್ಮೀಮೀಶಾನಾಂ ಸೂರ್ಯಾಭಾಂ ಶ್ರಿಯಮೀಶ್ವರೀಂ ।
ಚಂದ್ರಸೂರ್ಯಾಗ್ನಿ ಸಂಕಾಶಾಂ ಶ್ರೀಮಹಾಲಕ್ಷ್ಮೀಮುಪಾಸ್ಮಹೇ ॥

ಚಂದ್ರನಂತೆ ಶೀತಳವಾದ ಮತ್ತು ಮನೋಹರವಾದ ಕಾಂತಿಯಿಂದ ಒಪ್ಪುತ್ತಿರುವವಳೂ, ಸಮಸ್ತ ಜಗತ್ತಿಗೂ ಒಡೆಯಳೂ, ಸೂರ್ಯನಂತೆ ಅತ್ಯಂತ ತೇಜಸ್ಸಿನಿಂದ ಬೆಳಗುವವಳೂ, ಐಶ್ವರ್ಯಕ್ಕೆ ಒಡೆಯಳೂ, ಚಂದ್ರ, ಸೂರ್ಯ, ಅಗ್ನಿ ಇವರೆಲ್ಲರ ಒಟ್ಟು ತೇಜಸ್ಸನ್ನು ಕೂಡಿಸಿದರೆ ಉಂಟಾಗುವ ಅತಿಶಯವಾದ ತೇಜಸ್ಸಿನಿಂದ ಬೆಳಗುವವಳೂ ಆದ ಶ್ರೀಮಹಾಲಕ್ಷ್ಮೀ ಎಂಬ ದೇವತೆಯನ್ನು ನಾವು ಉಪಾಸನೆಮಾಡುತ್ತೇವೆ.

ಧನಮಗ್ನಿರ್ಧನಂ ವಾಯುರ್ಧನಂ ಸೂರ್ಯೋ ಧನಂ ವಸುಃ ।
ಧನಮಿಂದ್ರೋ ಬೃಹಸ್ಪತಿರ್ವರುಣಂ ಧನಮಶ್ನುತೇ ॥

ಎಲೈ ದೇವಿಯೇ, ಅಗ್ನಿ, ವಾಯು, ಸೂರ್ಯ, ಅಷ್ಟವಸುಗಳು, ಇಂದ್ರ, ಬೃಹಸ್ಪತಿ, ವರುಣ ಮೊದಲಾದ ದೇವತೆಗಳು ನಿನ್ನ ಅನುಗ್ರಹದಿಂದಲೇ ತಾವು ಅಪೇಕ್ಷಿಸುವ ಧನವನ್ನೂ ಐಶ್ವರ್ಯಸಂಪತ್ತನ್ನೂ ಅನುಭವಿಸುತ್ತಾರೆ.

ವೈನತೇಯ ಸೋಮಂ ಪಿಬ ಸೋಮಂ ಪಿಬತು ವೃತ್ರಹಾ ।
ಸೋಮಂ ಧನಸ್ಯ ಸೋಮಿನೋ ಮಹ್ಯಂ ದದಾತು ಸೋಮಿನಃ ॥

ಎಲೈ ವಿನತಾಪುತ್ರನಾದ ಗರುಡನೇ, ಸೋಮರಸವನ್ನು (ಅಥವಾ ಅಮೃತವನ್ನು) ಪಾನಮಾಡು. ವೃತ್ರಾಸುರ ಸಂಹಾರಕನಾದ ಎಲೈ ಇಂದ್ರನೇ, ನೀನೂ ಸೋಮಪಾನಮಾಡು. ಎಲೈ ಸೋಮಪಾನಾರ್ಹರಾದ ಸಮಸ್ತ ದೇವತೆಗಳೇ, ಧನದಿಂದ ಪ್ರಾಪ್ತವಾಗುವ ಸೋಮವನ್ನು ನೀವೆಲ್ಲರೂ ಪಾನಮಾಡಿ. ಸೋಮಪಾನಮಾಡುವ ನನಗೂ ಧನಾದಿಗಳನ್ನು ಒದಗಿಸಿಕೊಡಿ.

ನ ಕ್ರೋಧೋ ನ ಚ ಮಾತ್ಸರ್ಯೋ ನ ಲೋಭೋ ನಾಶುಭಾ ಮತಿಃ ।
ಭವಂತು ಕೃತಪುಣ್ಯಾನಾಂ ಭಕ್ತಾನಾಂ ಶ್ರೀಸೂಕ್ತಂ ಜಪೇತ್ಸದಾ ॥

ಶ್ರೀದೇವಿಯ ಭಕ್ತರೂ ಸದಾ ಕಾಲದಲ್ಲಿಯೂ ಶ್ರೀಸೂಕ್ತವನ್ನು ಜಪಿಸುವವರೂ ಆದ ಪುಣ್ಯಾತ್ಮರಿಗೆ ಕೋಪ, ಮಾತ್ಸರ್ಯ (ಅಸೂಯೆ) ಲೋಭ (ಜಿಪುಣತ್ವ) ಕೆಟ್ಟಕಾರ್ಯಗಳಲ್ಲಿ ಮನಸ್ಸು ಈ ದುರ್ಗುಣಗಳಿರುವುದಿಲ್ಲ.

ವರ್ಷಂತು ತೇ ವಿಭಾವರಿ ದಿವೋ ಅಭ್ರಸ್ಯ ವಿದ್ಯುತಃ ।
ರೋಹಂತು ಸರ್ವಬೀಜಾನ್ಯವ ಬ್ರಹ್ಮದ್ವಿಷೋ ಜಹಿ ॥

ಎಲೈ ಪ್ರಕಾಶಮಾನಳಾದ ಶ್ರೀದೇವಿಯೇ, ನಿನ್ನ ಅನುಗ್ರಹದಿಂದ ಸಿಡಿಲು, ಮಿಂಚುಗಳಿಂದ ಸಹಿತವಾದ ಅಂತರಿಕ್ಷಸ್ಥವಾದ ಮೇಘಗಳು ವೃಷ್ಟಿಯನ್ನು ಸುರಿಸಲಿ. ಆ ವೃಷ್ಟಿಯಿಂದ ಆಪ್ಯಾಯನಗೊಂಡು ಭೂಮಿಯಲ್ಲಿರುವ ಸಮಸ್ತ ಬೀಜಾದಿಗಳು ಮೊಳಕೆಯಾಗಿ ಮತ್ತು ಸಸಿಯಾಗಿ ಬೆಳೆಯಲಿ. ಎಲೈ ದೇವತೆಯೇ, ನೀನು ಬ್ರಹ್ಮದ್ವೇಷಿಗಳನ್ನು ನಾಶಮಾಡು.

**ಪದ್ಮಪ್ರಿಯೇ ಪದ್ಮಿನಿ ಪದ್ಮಹಸ್ತೇ ಪದ್ಮಾಲಯೇ ಪದ್ಮದಳಾಯತಾಕ್ಷಿ ।**
**ವಿಶ್ವಪ್ರಿಯೇ ವಿಷ್ಣುಮನೋನುಕೂಲೇ ತ್ವತ್ಪಾದಪದ್ಮಂ ಮಯಿ ಸಂನಿಧತ್ಸ್ವ ॥**

ಎಲೈ ಮಹಾಲಕ್ಷ್ಮಿಯೇ, ನಿನಗೆ ಪದ್ಮವು ಅಥವಾ ಕಮಲವು ಪ್ರಿಯವಾಗಿರುವುದು. ನೀನು ಪದ್ಮದಿಂದಲೇ ಆವಿರ್ಭೂತಳಾದವಳು. ನಿನ್ನ ಎರಡು ಹಸ್ತಗಳಲ್ಲಿಯೂ ಪದ್ಮಗಳನ್ನು ಧರಿಸಿರುವೆ. ಪದ್ಮವೇ ನಿನಗೆ ಆವಾಸಸ್ಥಾನವಾಗಿರುವುದು. ನಿನ್ನ ಕಣ್ಣುಗಳು ಕಮಲಪುಷ್ಪದ ದಳಗಳಂತೆ ವಿಸ್ತಾರವಾಗಿಯೂ, ಮನೋಹರವಾಗಿಯೂ ಇರುವವು. ಸಮಸ್ತ ಪ್ರಪಂಚಕ್ಕೂ ಎಂದರೆ ಸಮಸ್ತಜನರಿಗೂ ನೀನು ಪ್ರೀತಿಪಾತ್ರಳಾಗಿರುವೆ. ನಿನ್ನ ಪತಿಯಾದ ವಿಷ್ಣುವಿನ ಮನಸ್ಸಿನಂತೆ ಅನುಸರಿಸಿ ನಡೆಯುವೆ ಇಂತಹ ಗುಣವಿಶಿಷ್ಟಳಾದ ನೀನು ನಿನ್ನ ಭಕ್ತನಾದ ನನ್ನಲ್ಲಿ ಪದ್ಮದಂತೆ ಕೋಮಲವಾದ ಪಾದಗಳನ್ನು ಇಟ್ಟು ಅನುಗ್ರಹಮಾಡು

**ಯಾ ಸಾ ಪದ್ಮಾಸನಸ್ಥಾ ವಿಪುಲಕಟಿತಟೀ ಪದ್ಮಪತ್ರಾಯತಾಕ್ಷೀ**
**ಗಂಭೀರಾವರ್ತನಾಭಿಸ್ತನಭರನಮಿತಾ ಶುಭ್ರವಸ್ತ್ರೋತ್ತರೀಯಾ ।**
**ಲಕ್ಷ್ಮೀರ್ದಿವ್ಯೈರ್ಗಜೇಂದ್ರೈರ್ಮಣಿಗಣಖಚಿತೈಃ ಸ್ನಾಪಿತಾ ಹೇಮಕುಂಭೈ-**
**ರ್ನಿತ್ಯಂ ಸಾ ಪದ್ಮಹಸ್ತಾ ಮಮ ವಸತು ಗೃಹೇ ಸರ್ವಮಾಂಗಲ್ಯಯುಕ್ತಾ ॥**

ಶ್ರೀಮಹಾಲಕ್ಷ್ಮೀ ಎಂಬ ನಾಮಾಂಕಿತೆಯಾದ ಶ್ರೀದೇವಿಯು ಪದ್ಮಾಸನದಲ್ಲಿ ಮಂಡಿಸಿರುವಳು. ಈ ದೇವಿಯು ವಿಸ್ತಾರವಾದ ಕಟಿಪಶ್ಚಾದ್ಭಾಗದಿಂದಲೂ ಪದ್ಮಪತ್ರದಂತೆ ವಿಶಾಲವಾದ ನೇತ್ರಗಳಿಂದಲೂ, ಆಳವಾದ ನಾಭಿಪ್ರದೇಶದಿಂದಲೂ ಪ್ರಕಾಶಿಸುತ್ತಿರುವಳು. ಸ್ತನಗಳ ಭಾರದಿಂದ ಬಗ್ಗಿದಂತಿರುವ ಶರೀರವುಳ್ಳವಳಾಗಿ ಶುಭ್ರವಾದ ವಸ್ತ್ರವನ್ನು ಧರಿಸಿರುವಳು. ನಾನಾರತ್ನಖಚಿತವಾದ ಸುವರ್ಣಕಲಶಗಳಲ್ಲಿ ಇರುವ ಶುದ್ಧಜಲದಿಂದ ಗಜಶ್ರೇಷ್ಠಗಳ ಸೊಂಡಿಲುಗಳಿಂದ ಅಭಿಷಿಕ್ತಳಾಗಿ ಕೈಗಳಲ್ಲಿ ಪದ್ಮಪುಷ್ಪವನ್ನು ಧರಿಸಿ, ಮಂಗಳಕರವಾದ ಸಮಸ್ತ ಆಭರಣಗಳಿಂದ ವಿರಾಜಿಸುತ್ತಲಿರುವ ಈ ಮಹಾಲಕ್ಷ್ಮಿಯು ಸರ್ವಸೌಭಾಗ್ಯಯುಕ್ತಳಾಗಿಯೂ ಮಂಗಳಪ್ರದಳಾಗಿಯೂ ಯಾವಾಗಲೂ ನನ್ನ ಮನೆಯಲ್ಲಿ ವಾಸಮಾಡುತ್ತಿರಲಿ.

**ಲಕ್ಷ್ಮೀಂ ಕ್ಷೀರಸಮುದ್ರರಾಜತನಯಾಂ ಶ್ರೀರಂಗಧಾಮೇಶ್ವರೀಂ**
**ದಾಸೀಭೂತಸಮಸ್ತದೇವವನಿತಾಂ ಲೋಕೈಕದೀಪಾಂಕುರಾಂ ।**
**ಶ್ರೀಮನ್ಮಂದಕಟಾಕ್ಷಲಬ್ಧವಿಭವದ್ಬ್ರಹ್ಮೇಂದ್ರಗಂಗಾಧರಾಂ**
**ತ್ವಾಂ ತ್ರೈಲೋಕ್ಯಕುಟುಂಬಿನೀಂ ಸರಸಿಜಾಂ ವಂದೇ ಮುಕುಂದಪ್ರಿಯಾಂ ॥**

ಶ್ರೀಮಹಾಲಕ್ಷ್ಮಿಯು ಸಮುದ್ರಮಥನಕಾಲದಲ್ಲಿ ಉತ್ಪನ್ನಳಾದುದರಿಂದ ಸಮುದ್ರಗಳಲ್ಲಿ ಶ್ರೇಷ್ಠವಾದ ಕ್ಷೀರಸಮುದ್ರದ ಪುತ್ರಿಯೆಂದು ಪ್ರಸಿದ್ಧಳಾಗಿರುವಳು. ಶ್ರೀರಂಗಕ್ಷೇತ್ರದಲ್ಲಿ ಶ್ರೀರಂಗಾಭಿಧಾನದಿಂದ ನೆಲೆಸಿರುವ ಶ್ರೀವಿಷ್ಣುವಿನ ಪತ್ನಿಯಾಗಿರುವಳು. ಈ ಲಕ್ಷ್ಮಿಯನ್ನು ಸಮಸ್ತದೇವತಾಸ್ತ್ರೀಯರೂ ದೇವಿಯ ಅನುಗ್ರಹಕ್ಕಾಗಿ ದಾಸೀಭಾವದಿಂದ ಸೇವಿಸುತ್ತಿರುವರು. ಸಮಸ್ತಲೋಕಗಳನ್ನು ಬೆಳಗುವ ಸೂರ್ಯನಿಗೆ ಸಮಾನವಾದ ಕಾಂತಿಯಿಂದ ಬೆಳಗುತ್ತಿರುವಳು. ಈ ದೇವಿಯ ಮಂದಹಾಸದಿಂದ ಲಬ್ಧವಾಗುವ ಅನುಗ್ರಹಕ್ಕಾಗಿ ಬ್ರಹ್ಮ, ಇಂದ್ರ, ಈಶ್ವರ ಮೊದಲಾದ ದೇವತೆಗಳು ಹಾತೊರೆಯುತ್ತಿರುವರು. ಮೂರು ಲೋಕಗಳಿಗೂ ಜನನಿಯಂತೆ ಪೋಷಕಳಾಗಿರುವಳು. ಪದ್ಮಪುಷ್ಪದಲ್ಲಿ ಆವಿರ್ಭೂತಳಾಗಿ ಶ್ರೀ ವಿಷ್ಣುವಿಗೆ ಪ್ರೀತಿಪಾತ್ರಳಾದ ಈ ಮಹಾಲಕ್ಷ್ಮೀ ಎಂಬ ದೇವತೆಯನ್ನು ಭಕ್ತಿಯಿಂದ ನಮಸ್ಕರಿಸುತ್ತೇನೆ.

**ಸಿದ್ಧಲಕ್ಷ್ಮೀರ್ಮೋಕ್ಷಲಕ್ಷ್ಮೀರ್ಜಯಲಕ್ಷ್ಮೀಃ ಸರಸ್ವತೀ ।**
**ಶ್ರೀರ್ಲಕ್ಷ್ಮೀರ್ವರಲಕ್ಷ್ಮೀಶ್ಚ ಪ್ರಸನ್ನಾ ಭವ ಸರ್ವದಾ ॥**

ಎಲೈ ಮಹಾಲಕ್ಷ್ಮಿಯೇ, ನಿನ್ನನ್ನು ಭಜಿಸುವವರಿಗೆ ಸರ್ವಾರ್ಥಗಳೂ ಸಿದ್ಧಿಸುವುದರಿಂದ ನಿನಗೆ ಸಿದ್ಧಲಕ್ಷ್ಮಿ ಎಂದು ಹೆಸರಾಗಿದೆ, ಮೋಕ್ಷಪ್ರದಳಾಗಿರುವುದರಿಂದ ಮೋಕ್ಷಲಕ್ಷ್ಮಿಯೆಂದೂ, ಯುದ್ಧಾದಿಗಳಲ್ಲಿಯೂ, ಸರ್ವಕಾರ್ಯಗಳಲ್ಲಿಯೂ ಜಯಪ್ರದಳಾಗಿರುವುದರಿಂದ ಜಯಲಕ್ಷ್ಮಿಯೆಂದೂ, ವೇದಾಭಿಮಾನಿಯಾದುದರಿಂದ ಸರಸ್ವತಿಯೆಂದೂ, ಸಂಪತ್ತಿಗೆ ಒಡೆಯಳಾದ್ದರಿಂದ ಶ್ರೀದೇವತೆಯೆಂದೂ, ಭಕ್ತರಿಗೆ ಅವರವರು ಇಚ್ಛಿಸುವ ವರಗಳನ್ನು ಕೊಡುವುದರಿಂದ ವರಲಕ್ಷ್ಮಿಯೆಂದೂ ನಾನಾವಿಧವಾದ ಶ್ರೇಷ್ಠನಾಮಗಳಿಂದ ಸ್ತುತಿಸಲ್ಪಡುವೆ. ಇಂತಹ ನೀನು ನನ್ನ ವಿಷಯದಲ್ಲಿ ಯಾವಾಗಲೂ ಪ್ರಸನ್ನಚಿತ್ತಳಾಗಿಯೇ ಇರು.

**ವರಾಂಕುಶೌ ಪಾಶಮಭೀತಿಮುದ್ರಾಂ ಕರೈರ್ವಹಂತೀಂ ಕಮಲಾಸನಸ್ಥಾಂ ।**
**ಬಾಲಾರ್ಕಕೋಟಿಪ್ರತಿಭಾಂ ತ್ರಿಣೇತ್ರಾಂ ಭಜೇಽಹಮಾದ್ಯಾಂ ಜಗದೀಶ್ವರೀಂ ತಾಂ ॥**

ಈ ಮಹಾಲಕ್ಷ್ಮಿಯು ಕಮಲದಲ್ಲಿ ಅಥವಾ ಪದ್ಮಾಸನದಲ್ಲಿ ಕುಳಿತು ತನ್ನ ನಾಲ್ಕು ಕೈಗಳಲ್ಲಿ ವರದಹಸ್ತ, ಅಂಕುಶ, ಪಾಶ ಅಭಯಮುದ್ರೆ ಇವುಗಳನ್ನು ಧರಿಸಿ ತ್ರಿನೇತ್ರಗಳಿಂದಲೂ, ಏಕಕಾಲದಲ್ಲಿ ಉದಯಿಸುತ್ತಿರುವ ಕೋಟಿಸೂರ್ಯರ ಕಾಂತಿಯಿಂದಲೂ ಬೆಳಗುತ್ತಿರುವಳು. ಜಗತ್ತಿಗೆಲ್ಲಾ ಒಡೆಯಳಾದ ಈ ದೇವಿಯನ್ನು ನಾನು ಭಕ್ತಿಭಾವದಿಂದ ಭಜಿಸುತ್ತೇನೆ.

**ಸರ್ವಮಂಗಳಮಾಂಗಲ್ಯೇ ಶಿವೇ ಸರ್ವಾರ್ಥಸಾಧಕೇ ।**
**ಶರಣ್ಯೇ ತ್ರ್ಯಂಬಕೇ ದೇವಿ ನಾರಾಯಣಿ ನಮೋಽಸ್ತು ತೇ ॥**

ಎಲೈ ದೇವಿ, ನೀನು ಸಮಸ್ತ ಮಂಗಳವಸ್ತುಗಳಿಗೂ ಮಾಂಗಲ್ಯಸ್ವರೂಪಳಾಗಿರುವವಳು. ಎಂದರೆ ಶ್ರೇಷ್ಠಳಾಗಿರುವೆ ಅಥವಾ ಸರ್ವರಿಗೂ ಮಂಗಳವನ್ನುಂಟುಮಾಡುವವಳು ಭಕ್ತರ ಸಮಸ್ತ ಇಷ್ಟಾರ್ಥಗಳನ್ನು ಸಾಧಿಸಿಕೊಡುವವಳು ; ಶರಣಾರ್ಹಳು. ಮಹೇಶ್ವರ ಪತ್ನಿಯೆಂದೂ, ನಾರಾಯಣನ ಪತ್ನಿಯೆಂದೂ ವಿವಿಧನಾಮಗಳಿಂದ ಸ್ತುತಿಸಲ್ಪಡುವವಳು, ಇಂತಹ ನಿನಗೆ ಇದೋ ನಮಸ್ಕಾರವು.

**ವಿಷ್ಣುಪತ್ನೀಂ ಕ್ಷಮಾಂ ದೇವೀಂ ಮಾಧವೀಂ ಮಾಧವಪ್ರಿಯಾಂ ।**
**ವಿಷ್ಣೋಃ ಪ್ರಿಯಸಖೀಂ ದೇವೀಂ ನಮಾಮ್ಯಚ್ಯುತವಲ್ಲಭಾಂ ॥**

ವಿಷ್ಣುವಿನ ಪತ್ನಿಯೂ, ಕ್ಷಮಾಸ್ವರೂಪಳೂ ಲಕ್ಷ್ಮೀಪತಿಯಾದ ಮಾಧವನಿಗೆ ಅತ್ಯಂತಪ್ರಿಯಳಾದವಳೂ, ವಿಷ್ಣುವಿಗೆ ಪ್ರಿಯಮಿತ್ರನಂತಿರುವವಳೂ ಆದ ಶ್ರೀಮಹಾವಿಷ್ಣುವಿನ ಪತ್ನಿಯಾದ ಶ್ರೀಮಹಾಲಕ್ಷ್ಮಿಯನ್ನು ನಮಸ್ಕರಿಸುತ್ತೇನೆ.

**ಮಹಾಲಕ್ಷ್ಮ್ಯೈ ಚ ವಿದ್ಮಹೇ ವಿಷ್ಣುಪತ್ನ್ಯೈ ಚ ಧೀಮಹಿ ।**
**ತನ್ನೋ ಲಕ್ಷ್ಮೀಃ ಪ್ರಚೋದಯಾತ್ ॥**

ವಿಷ್ಣುಪತ್ನಿಯೆಂಬಭಿಧಾನಯುಕ್ತಳಾದ ಶ್ರೀಮಹಾಲಕ್ಷ್ಮಿಯ ಯಾವ ದಿವ್ಯಶಕ್ತಿಯು ನಮ್ಮನ್ನು ಎಲ್ಲಾ ಕಾರ್ಯಗಳಲ್ಲಿಯೂ ಪ್ರೇರಿಸುವುದೋ ಅಂತಹ ಶ್ರೀಲಕ್ಷ್ಮಿಯನ್ನು ಧ್ಯಾನಮಾಡೋಣ.

ಶ್ರೀರ್ವರ್ಚಸ್ಯಮಾಯುಷ್ಯಮಾರೋಗ್ಯಮಾವಿಧಾತ್ಪವಮಾನಂ ಮಹೀಯತೇ ।
ಧನಂ ಧಾನ್ಯಂ ಪಶುಂ ಬಹುಪುತ್ರಲಾಭಂ ಶತಸಂವತ್ಸರಂ ದೀರ್ಘಮಾಯುಃ ॥

ಶ್ರೀಸೂಕ್ತವನ್ನು ಜಪಿಸುವವರಿಗೆ ಶ್ರೀಮಹಾಲಕ್ಷ್ಮಿಯು, ವರ್ಚಸ್ಸು (ಮುಖದಲ್ಲಿ ಕಳೆ, ಕಾಂತಿ) ದೀರ್ಘಾಯುಸ್ಸು, ಆರೋಗ್ಯ, ಶ್ರೀಸ್ಮತಿ, ಧನ, ಧಾನ್ಯ, ಪಶುಸಂಪತ್ತು, ಅನೇಕ ಪುತ್ರಸಂತತಿ, ನೂರುವರ್ಷ ಪೂರ್ಣಾಯುಸ್ಸು ಇವುಗಳೆಲ್ಲವನ್ನೂ ಕೊಟ್ಟು ಅನುಗ್ರಹಿಸುವಳು. ಆ ಪುರುಷನು ಸಕಲರಿಂದಲೂ ಪೂಜಿತನಾಗಿ ಗೌರವಿಸಲ್ಪಡುತ್ತಾನೆ.

॥ ಶ್ರೀಸೂಕ್ತಂ ಸಮಾಪ್ತಂ ॥

ಇಲ್ಲಿಗೆ ಶ್ರೀಸೂಕ್ತದ ಅರ್ಥವಿವರಣೆ ಸಮಾಪ್ತವು

ಶುಭಂ ಭೂಯಾತ್

---

## ಮಂಡಲಾಂತ್ಯದಲ್ಲಿ ಪಠಿಸುವ ಕೆಲವು ಶ್ಲೋಕಗಳು.

ವಿಶ್ವೇಶ್ವರ ವಿರೂಪಾಕ್ಷ ವಿಶ್ವರೂಪ ಸದಾಶಿವ ।
ಶರಣಂ ಭವ ಭೂತೇಶ ಕರುಣಾಕರ ಶಂಕರ ॥
ಹರ ಶಂಭೋ ಮಹಾದೇವ ವಿಶ್ವೇಶಾಮರವಲ್ಲಭ ।
ಶಿವ ಶಂಕರ ಸರ್ವಾತ್ಮನ್ ನೀಲಕಂಠ ನಮೋಽಸ್ತು ತೇ ॥
ಮೃತ್ಯುಂಜಯಾಯ ರುದ್ರಾಯ ನೀಲಕಂಠಾಯ ಶಂಭವೇ ।
ಅಮೃತೇಶಾಯ ಸರ್ವಾಯ ಮಹಾದೇವಾಯ ತೇ ನಮಃ ॥
ಏತಾನಿ ಶಿವನಾಮಾನಿ ಯಃ ಪಠೇನ್ನಿಯತಃ ಸಕೃತ್ ।
ನಾಸ್ತಿ ಮೃತ್ಯುಭಯಂ ತಸ್ಯ ಪಾಪರೋಗಾದಿ ಕಿಂಚನ ॥
ಯಜ್ಞೇಶಾಚ್ಯುತ ಗೋವಿಂದ ಮಾಧವಾನಂತ ಕೇಶವ ।
ಕೃಷ್ಣ ವಿಷ್ಣೋ ಹೃಷೀಕೇಶ ವಾಸುದೇವ ನಮೋಽಸ್ತು ತೇ ॥
ಕೃಷ್ಣಾಯ ಗೋಪಿನಾಥಾಯ ಚಕ್ರಿಣೇ ಮುರವೈರಿಣೇ ।
ಅಮೃತೇಶಾಯ ಗೋಪಾಯ ಗೋವಿಂದಾಯ ನಮೋ ನಮಃ ॥
ವಾಸನಾದ್ವಾಸುದೇವೋಽಸಿ ವಾಸಿತಂ ತೇ ಜಗತ್ರಯಂ ।
ಸರ್ವಭೂತನಿವಾಸೋಽಸಿ ವಾಸುದೇವ ನಮೋಽಸ್ತು ತೇ ॥
ದಶ ಸಪ್ತ ಚ ನಾಮಾನಿ ಮಂಡಲಾಂತೇಷು ಯಃ ಪಠೇತ್ ।
ಸ ಶಿವಸ್ಯ ಪದಂ ಗತ್ವಾ ಶಿವಲೋಕೇ ಮಹೀಯತೇ ॥
ಏತಾನಿ ಶಿವನಾಮಾನಿ ಮಂಡಲಾಂತೇ ಸಕೃತ್ಪಠೇತ್ ॥

**ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।**
**ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥**

**ಇತಿ ಶ್ರೀಮದ್ರಾಜಾಧಿರಾಜ ಪರಮೇಶ್ವರ ವೈದಿಕಮಾರ್ಗಪ್ರವರ್ತಕ ಶ್ರೀ ವೀರಬುಕ್ಕ ಭೂಪಾಲಸಾಮ್ರಾಜ್ಯ-ಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ ವೇದಾರ್ಥಪ್ರಕಾಶೇ ಋಕ್ಸಂಹಿತಾಭಾಷ್ಯೇ ಪಂಚಮಂ ಮಂಡಲಂ ಸಮಾಪ್ತಂ**

॥ ಓಂ ತತ್ಸತ್ ॥

ಇಲ್ಲಿಗೆ ಶ್ರೀಸಾಯಣಭಾಷ್ಯಸಹಿತವೂ ಕರ್ನಾಟಕ ಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯಲ್ಲಿ
ಐದನೆಯ ಮಂಡಲವು ಸಮಾಪ್ತವಾದುದು.

---

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರನಮೋಽಸ್ತು ತೇ ॥

॥ ಶುಭಂ ಭೂಯಾತ್ ॥
॥ ಮಂಗಳಂ ॥

|| ಶ್ರೀಃ ||

|| ಶ್ರೀ ಗಣಾಧಿಪತಯೇ ನಮಃ ||

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಃಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥

## ಸಾಯಣಭಾಷ್ಯಸಹಿತಾ

# ಋಗ್ವೇದಸಂಹಿತಾ

## || ಅಥ ಷಷ್ಠಂ ಮಂಡಲಂ ||

## ಆರನೆಯ ಮಂಡಲವು.

### ಪೀಠಿಕೆ

### ಆರನೆಯ ಮಂಡಲದ ಸೂಕ್ತದ್ರಷ್ಟೃಗಳಾದ ಋಷಿಗಳು.

ಋಕ್ಸಂಹಿತೆಯಲ್ಲಿ ಆರನೆಯ ಮಂಡಲವು ಭಾರದ್ವಾಜಮಂಡಲವೆಂದು ಪ್ರಸಿದ್ಧವಾಗಿದೆ. ಭರದ್ವಾಜ ಸಂತತಿಯ ಇತರ ಋಷಿಗಳೂ ಈ ಮಂಡಲದ ಕೆಲವು ಸೂಕ್ತಗಳ ದ್ರಷ್ಟೃಗಳಾಗಿದ್ದರೂ ಸಹ, ಭರದ್ವಾಜದೃಷ್ಟವಾದ ಸೂಕ್ತಗಳೇ ಅತ್ಯಧಿಕವಾಗಿರುವುದರಿಂದ ಈ ಮಂಡಲವು ಈ ಹೆಸರಿನಿಂದಲೇ ಪ್ರಸಿದ್ಧವಾಗಿದೆ.

**ಸಪುತ್ರಸ್ಯ ತು ತಸ್ಯೈತನ್ಮಂಡಲಂ ಷಷ್ಠಮುಚ್ಯತೇ ।**

(ಬೃ. ದೇ. ೫-೧೦೩)

ಪುತ್ರಸಹಿತನಾದ ಭರದ್ವಾಜದೃಷ್ಟವಾದ ಈ ಮಂಡಲಕ್ಕೆ ಭಾರದ್ವಾಜಮಂಡಲವೆಂಬ ಹೆಸರು ಪ್ರಸಿದ್ಧವಾಗಿದೆಯೆಂದು ಶೌನಕಾದಿಗಳು ಸ್ಪಷ್ಟವಾಗಿ ತಿಳಿಸಿದ್ದಾರೆ. **ಸುಹೋತ್ರ, ಶುನಹೋತ್ರ, ನರ, ಶಂಯು, ಗರ್ಗ, ಋಜಿಶ್ವಾ, ಪಾಯು** ಇವರಿಷ್ಟು ಮಂದಿ ಋಷಿಗಳೂ ಭಾರದ್ವಾಜಸಂತತಿಯವರಾಗಿ ಆರನೆಯ ಮಂಡಲದ ಸೂಕ್ತದ್ರಷ್ಟೃಗಳೆಂದು ಶಂಸಿತರಾಗಿದ್ದಾರೆ. ಭಾರದ್ವಾಜಸಂತತಿಯು ಅತ್ಯಂತ ಪ್ರಾಚೀನವಾದುದು. ಭರದ್ವಾಜನೆಂಬ ಹೆಸರು ಸಹ, ವೇದ, ಪುರಾಣ ಮತ್ತು ಇತಿಹಾಸಗಳಲ್ಲೆಲ್ಲಾ ಅತ್ಯಂತ ಪ್ರಸಿದ್ಧವಾದುದಾಗಿದೆ. ಆದರೆ, ಈ ಎಲ್ಲಾ ಕಡೆಯೂ ಪ್ರಶಂಸಿತ

ನಾಗಿರುವ ಋಷಿಯು ಒಬ್ಬನೇ ಎಂದು ತಿಳಿಯಬಾರದು. ಭರದ್ವಾಜನೆಂಬ ಹೆಸರುಳ್ಳ ಮೂರು ನಾಲ್ಕು ಮುಂದಿ ಋಷಿಗಳು ಪುರಾಣೇತಿಹಾಸಾದಿಗಳಲ್ಲಿ ಖ್ಯಾತರಾಗಿದ್ದಾರೆ. ಪ್ರಕೃತದಲ್ಲಿ ವೈದಿಕವಾಙ್ಮಯದಲ್ಲಿ ನಿರ್ದಿಷ್ಟರಾದ ಭರದ್ವಾಜಋಷಿಗಳ ಪರಿಚಯವೇ ಮುಖ್ಯವಾದರೂ ಸಹ, ಇತರ ಭರದ್ವಾಜರ ವೈಯಕ್ತಿಕವಾದ ಸ್ವರೂಪವೂ ತಿಳಿಯಬೇಕಾದುದು ಅವಶ್ಯವಾಗಿರುವುದರಿಂದ ಮೊದಲು ವೈದಿಕವಾಕ್ಯಗಳಲ್ಲಿ ನಿರ್ದಿಷ್ಟರಾಗಿರುವ ಋಷಿಗಳ ಪ್ರಭಾವ ಗಳನ್ನು ಪರಿಶೀಲಿಸಿ ಅನಂತರ ಪುರಾಣೇತಿಹಾಸಾದಿಗಳಲ್ಲಿ ಈ ನಾಮವು ಎಷ್ಟು ಕಡೆಗಳಲ್ಲಿ ಮತ್ತು ಯಾವ ಯಾವ ಸಂದರ್ಭಗಳಲ್ಲಿ ಪ್ರಸಿದ್ಧವಾಗಿದೆಯೆಂದು ನೋಡಬಹುದು

## ಭರದ್ವಾಜ ಋಷಿಯ ಪರಿಚಯ

### ಋಕ್ಸಂಹಿತೆಯ ಆರನೆಯ ಮಂಡಲದ ಸೂಕ್ತದ್ರಷ್ಟೃ.

ಋಕ್ಸಂಹಿತೆಯ ಸೂಕ್ತದ್ರಷ್ಟೃವಾದ ಭರದ್ವಾಜನು ಆಂಗಿರಸವಂಶದವನು ಇವನು ಬೃಹಸ್ಪತಿಪುತ್ರನು. ಇವನ ವಂಶದ ಮಹತ್ತ್ವವನ್ನೂ ಇವನ ಉತ್ಪತ್ತಿಕ್ರಮವನ್ನೂ ಬ್ರಹ್ಮದೇವತೆಯಲ್ಲಿ ಈ ರೀತಿ ತಿಳಿಸಿದೆ—

**ತ್ರಿಸಾಂವತ್ಸರಿಕಂ ಸತ್ರಂ ಪ್ರಜಾಕಾಮಃ ಪ್ರಜಾಪತಿಃ ।**
**ಆಹರತ್ಸಹಿತಃ ಸಾಧ್ಯೈರ್ವಿಶ್ವೇದೇವೈಃ ಸಹೇತಿ ಚ ॥**
(ಬೃ. ದೇ. ೫-೯೭)

ಪ್ರಜಾಪತಿಯು ಸಂತಾನೇಚ್ಛೆಯುಳ್ಳವನಾಗಿ ತ್ರಿಸಾಂವತ್ಸರಿಕವಾದ ಸತ್ರವನ್ನಾಚರಿಸಿದನು. ಆ ಕಾಲದಲ್ಲಿ ಅವನಿಗೆ ಸಾಧ್ಯರೂ ಮತ್ತು ವಿಶ್ವೇದೇವತೆಗಳೂ ಸಹಾಯಕರಾದರು.

**ತತ್ರ ವಾಗ್ದೀಕ್ಷಣೀಯಾಯಾಮಾಜಗಾಮ ಶರೀರಿಣೀ ।**
**ತಾಂ ದೃಷ್ಟ್ವಾ ಯುಗಪತ್ತತ್ರ ಕಸ್ಯಾಥ ವರುಣಸ್ಯ ಚ ॥**
(ಬೃ. ದೆ. ೫-೯೮)

ಈ ಕರ್ಮಕಾಲದಲ್ಲಿ ವಾಗ್ದೇವತೆಯು ಸಶರೀರಿಣಿಯಾಗಿ ಆ ಸ್ಥಳಕ್ಕೆ ಬಂದಳು. ಆ ಕಾಲದಲ್ಲಿ ಪ್ರಜಾಪತಿಯೂ ಮತ್ತು ವರುಣನೂ ಒಟ್ಟಿಗೆ ಅವಳನ್ನು ನೋಡಿದರು. ಸುಂದರವೂ, ಆತ್ಯಾಕರ್ಷಕವೂ ಆದ ಅವಳ ರೂಪವನ್ನು ನೋಡಿ ಅವರಿಬ್ಬರಿಗೂ ಸಹ ಒಟ್ಟಿಗೆ ಚಿತ್ತವಿಕಾರವುಂಟಾಯಿತು.

**ಶುಕ್ರಂ ಚಸ್ಕಂದ ತದ್ವಾಯುರಗ್ನೌ ಪ್ರಾಸ್ಯದ್ಯದೃಚ್ಛಯಾ ।**
**ತತೋಽರ್ಚಿಭ್ಯೋ ಭೃಗುರ್ಜಜ್ಞೇ ಅಂಗಾರೇಷ್ವಂಗಿರಾ ಋಷಿಃ ॥**
(ಬೃ. ದೇ. ೫-೯೯)

ಆಗ ಒಡನೆಯೇ ಅವರಿಬ್ಬರಿಗೂ ವೀರ್ಯಸ್ಖಲನವಾಯಿತು. ಆಗ ವಾಯುವು ಅವನ್ನು ತನ್ನ ಇಷ್ಟಬಂದಂತೆ ಅಗ್ನಿಯಲ್ಲಿ ಅರ್ಪಿಸಿದನು. ಆಗ ಆ ಅಗ್ನಿಯ ಜ್ವಾಲೆಯಿಂದ **ಭೃಗುವೂ** ಮತ್ತು ಅಂಗಾರಗಳಿಂದ **ಅಂಗಿರಸ್ಸೂ** ಉತ್ಪನ್ನರಾದರು.

**ಯೋಽಂಗಿರೇಭ್ಯ ಋಷಿರ್ಜಜ್ಞೇ ತಸ್ಯ ಪುತ್ರೋ ಬೃಹಸ್ಪತಿಃ ।**
**ಬೃಹಸ್ಪತೇರ್ಭರದ್ವಾಜೋ ವಿದಥೀತಿ ಯ ಉಚ್ಯತೇ ॥**
(ಬೃ. ದೇ, ೫-೧೦೨)

ಅಂಗಾರಗಳಿಂದ ಉತ್ಪನ್ನನಾದ ಅಂಗಿರಾ ಋಷಿಯಿಂದ ಬೃಹಸ್ಪತಿಯು ಜನಿಸಿದನು ಬೃಹಸ್ಪತಿಯ ಪುತ್ರನೇ **ಭರದ್ವಾಜನು.** ಇವನಿಗೆ ವಿದಥಿಯೆಂಬ ನಾಮಾಂತರವೂ ಇರುತ್ತದೆ.

**ಮರುತ್ಸ್ವಾಸೀದ್ಭುರುರ್ಯಶ್ಚ ಸ ವಿವಾಂಗಿರಸೋ ನಪಾತ್ ।**
**ಸಪುತ್ರಸ್ಯ ತು ತಸ್ಯೈತತ್ ಮಂಡಲಂ ಷಷ್ಠಮುಚ್ಯತೇ ॥**

(ಬೃ. ದೇ. ೫–೧೦೩)

ವಿದಥಿಯೆಂಬ ಅಪರನಾಮವುಳ್ಳ ಇದೇ ಭಾರದ್ವಾಜನು ಅಂಗಿರಸ್ಸಿನ ಪೌತ್ರನು. ಋಕ್ಸಂಹಿತೆಯ ಆರನೆಯ ಮಂಡಲದ ಸೂಕ್ತಗಳು ಈ ಭಾರದ್ವಾಜನಿಂದಲೂ, ಇವನ ಪುತ್ರಪೌತ್ರಾದಿಗಳಿಂದಲೂ ನಿರ್ಮಿತವಾದವು ಎಂಬುದು ಶ್ರುತಿಗಳಲ್ಲಿಯೂ ಕೆಲವೆಡೆಗಳಲ್ಲಿ ಪ್ರಸಿದ್ಧವಾದ ವಿಷಯವಾಗಿದೆ. ಇದು ಭರದ್ವಾಜನ ಆರ್ಷಸಂತತಿಯ ವರ್ಣನವು.

ಈ ಭಾರದ್ವಾಜನು ಅಭ್ಯಾವರ್ತಿಯೆಂಬುವನ ಗೃಹಪುರೋಹಿತನು. ಮತ್ತು ಅವನಿಂದ ಅನೇಕ ವಿಧದಲ್ಲಿ ಪೂಜಿತನಾಗಿ ಅವನಿಗೆ ಅನೇಕವಿಧದಲ್ಲಿ ಸಹಾಯಮಾಡಿದ್ದಾನೆಂದು ಋಕ್ಸಂಹಿತಾವಾಕ್ಯಗಳಿಂದ ತಿಳಿಯುತ್ತದೆ. ಇದೇ ಅಂಶವನ್ನು ಬೃಹದ್ದೇವತೆಯಲ್ಲಿ ಈ ರೀತಿ ತಿಳಿಸಿದೆ—

**ಅಭ್ಯಾವರ್ತೀ ಚಾಯಮಾನಃ ಪ್ರಸ್ತೋಕಶ್ಚೈವ ಸಾಂಜ್ಞಯಃ ।**
**ಅಜಗ್ಮತುರ್ಭರದ್ವಾಜಂ ಜಿತೌ ವಾರಶಿಖೈರ್ಯುಧಿ ॥**

(ಬೃ. ದೇ. ೫–೧೨೪)

ವಾರಶಿಖರೆಂಬ ಗುಂಪಿನವರಿಂದ ಸೋಲಿಸಲ್ಪಟ್ಟ ಅಭ್ಯಾವರ್ತಿಚಾಯಮಾನನೂ, ಮತ್ತು ಸೃಂಜಯಪುತ್ರನಾದ ಪ್ರಸ್ತೋಕನೂ ಸಹ ಭರದ್ವಾಜನಲ್ಲಿಗೆ ಬಂದು ಅವನ ಸಹಾಯವನ್ನಪೇಕ್ಷಿಸಿದರು.

**ಅಭಿಗಮ್ಯೋಚತುಸ್ತೌ ತಂ ಪ್ರಸಾದ್ಯಾಖ್ಯಾಯ ನಾಮನೀ ।**
**ಯುಧಿ ವಾರಶಿಖೈರ್ಬ್ರಹ್ಮನ್ನಾವಾಂ ವಿದ್ಧಿ ವಿನಿರ್ಜಿತೌ ॥**

(ಬೃ. ದೇ. ೫–೧೨೫)

ಆಗ ಅಭ್ಯಾವರ್ತಿಚಾಯಮಾನನೂ, ಸೃಂಜಯಪುತ್ರನಾದ ಪ್ರಸ್ತೋಕನೂ ಸಹ ಭರದ್ವಾಜನಲ್ಲಿಗೆ ಬಂದು, ಅವನಿಗೆ ವಿಧ್ಯುಕ್ತವಾದ ಪೂಜಾದಿಗಳನ್ನರ್ಪಿಸಿ, ತಮ್ಮ ನಾಮಧೇಯೋಚ್ಚಾರಣೆಯೊಂದಿಗೆ ಅಭಿವಾದನವನ್ನು ಮಾಡಿ ಈ ರೀತಿ ಹೇಳಿದರು. "ಎಲೈ ಬ್ರಹ್ಮಜ್ಞಾನಿಯಾದ ಗುರುವೇ, ನಾವು **ವಾರಶಿಖ**ರಿಂದ ನಿರ್ಜಿತರಾದೆವು ಎಂಬುದನ್ನು ತಿಳಿ" ಎಂದು ತಮ್ಮ ಸೋಲನ್ನೂ, ಸೋಲಿಗೆ ಕಾರಣರಾದ ಶತ್ರುಜನರ ವಿಷಯವನ್ನೂ ಪೂರ್ಣವಾಗಿ ತಿಳಿಸಿದರು. ಅನಂತರ,

**ಭವತ್ಪುರೋಹಿತಾವಾವಾಂ ಕ್ಷತ್ರಬಂಧೂಞ್ಜಯೇವಹಿ ।**
**ಕ್ಷತ್ರಂ ತದಪಿ ವಿಜ್ಞೇಯಂ ಬ್ರಹ್ಮ ಯತ್ಪಾತಿ ಶಾಶ್ವತಂ ॥**

(ಬೃ. ದೇ. ೫–೧೨೬)

ಎಲೈ ಮಹರ್ಷಿಯೇ, ನೀನು ನಮಗೆಲ್ಲಾ ಕುಲಪುರೋಹಿತನಾಗಿದ್ದೀಯೆ. ನಿನ್ನ ಸಹಾಯದಿಂದ ನಾವು ಕ್ಷತ್ರಬಂಧುಗಳನ್ನೆಲ್ಲಾ ಜಯಿಸಬಲ್ಲೆವು. ಯಾವ ಶಕ್ತಿಯು ಬ್ರಹ್ಮಶಕ್ತಿಯನ್ನು ರಕ್ಷಿಸಿ ಪೂಜಿಸಬಲ್ಲದೋ ಅದೇ ನಿಜವಾದ

ಕ್ಷತ್ರಶಕ್ತಿಯು. ಉಳಿದವೆಲ್ಲಾ ಕೇವಲ ನಾಮಮಾತ್ರ ಕ್ಷತ್ರಪಂಗಡಕ್ಕೆ ಸೇರಿ ದುಷ್ಟಕರ್ಮಗಳಲ್ಲಿ ಪ್ರವೃತ್ತವಾದವು. ಆದುದರಿಂದ ಅಂತಹ ದುಷ್ಟಶಕ್ತಿಗಳನ್ನು ನಾಶಮಾಡಲು ನಮಗೆ ಸಹಾಯಮಾಡು ಎಂದು ಪ್ರಾರ್ಥಿಸಲಾಗಿ ಆಗ,

**ಋಷಿಸ್ತೌ ತು ತಥೇತ್ಯುಕ್ತ್ವಾ ಪಾಯುಂ ಪುತ್ರಮಭಾಷತ ।**
**ಅಥರ್ವಣೀಯೌ ಶತ್ರೂಣಾಂ ಕುರುಷ್ವೈತೌ ನೃಪಾವಿತಿ ॥**

(ಬೃ ದೇ. ೫-೧೨೭.)

ಭರದ್ವಾಜ ಋಷಿಯು ಅವರಿಗೆ ಸಹಾಯಮಾಡುವುದಾಗಿ ಒಪ್ಪಿಕೊಂಡು, ತನ್ನ ಅನುಮತಿಯನ್ನು ಅವರಿಗೆ ತಿಳಿಸಿ ನಂತರ ತನ್ನ ಪುತ್ರನಾದ **ಪಾಯು**ವನ್ನು ಕುರಿತು ಈ ರೀತಿ ಅನುಜ್ಞೆಮಾಡಿದನು— "ನೀನು ಈ ಇಬ್ಬರು ರಾಜರುಗಳಿಗೂ ಸಹಾಯವನ್ನು ನೀಡಿ ಇವರು ತಮ್ಮ ಶತ್ರುಗಳನ್ನು ಜಯಿಸುವಂತೆಯೂ ಮತ್ತು ಜಯಿಸಿದನಂತರ ಯಾವ ಶತ್ರುಗಳಿಂದಲೂ ಪ್ರತಿಭಟಿಸಲ್ಪಡದಿರುವವರಾಗುವಂತೆಯೂ ಇವರಿಗೆ ಶಕ್ತಿದಾಯಕನಾಗು." ಎನ್ನಲು ತಂದೆಯಿಂದ ಆಜ್ಞಪ್ತನಾದ ಪಾಯುವು ಹಾಗೆಯೇ ಆಗಲೆಂದು ಒಪ್ಪಿಕೊಂಡು ಅವರಿಗೆ ಅನೇಕವಿಧದಲ್ಲಿ ಸಹಾಯಕನಾದನು. ಎಂದಿರುವ ವಿವರವನ್ನು ಮುಂದೆ **ಪಾಯು**ವಿನ ವಿಷಯವನ್ನು ತಿಳಿಸುವಾಗ ವಿವರಿಸಲಾಗುತ್ತದೆ.

ಹೀಗೆ ಭಾರದ್ವಾಜನು ಜನ್ಮತಃ ದೈವಾಂಶಸಂಭೂತನೆಂದೂ ಮತ್ತು ಲೌಕಿಕವಾದ ವ್ಯವಹಾರಗಳಲ್ಲೂ ಕ್ಷಾತ್ರಧರ್ಮವನ್ನು ಉದ್ಧಾರಮಾಡತಕ್ಕ ಬ್ರಹ್ಮತೇಜಸ್ಸನ್ನು ಹೊಂದಿ ಅನೇಕ ಕ್ಷತ್ರಿಯರಿಗೆ ಸಹಾಯಕನಾಗಿ ಬ್ರಹ್ಮ ರಕ್ಷಣೆಗೆ ಸಹಾಯಮಾಡಿದನೆಂದೂ ಪ್ರಶಂಸಿತನಾಗಿದ್ದಾನೆ. ಆದುದರಿಂದ ಋಕ್ಸಂಹಿತೆಯ ಸೂಕ್ತದ್ರಷ್ಟೃವೆಂದು ಪ್ರಸಿದ್ಧನಾದ ಭರದ್ವಾಜನ ಈ ಎರಡು ವಿಧವಾದ ಪ್ರಭಾವಗಳನ್ನೂ ಯಾವ ಯಾವ ಸಂದರ್ಭಗಳಲ್ಲಿ ಯಾವ ರೀತಿ ಪ್ರಶಂಸಿಸಿದೆ, ಮತ್ತು ನಾನಾವಿಧವಾದ ಮಹತ್ವಗಳೇನು ಎಂಬ ವಿಷಯವನ್ನು ಪ್ರಕೃತ ಸೂಕ್ಷ್ಮವಾಗಿ ಪರಿಶೀಲಿಸ ಬಹುದು. ಋಕ್ಸಂಹಿತೆಯಲ್ಲಿ, ಭರದ್ವಾಜನು ತನ್ನ ವಂಶದ ವಿಷಯವನ್ನು ತಾನೇ ಈ ರೀತಿ ತಿಳಿಸಿದ್ದಾನೆ.

**ಧನ್ಯಾ ಚಿದ್ಧಿ ತ್ವೇ ಧಿಷಣಾ ವಷ್ಟಿ ಪ್ರ ದೇವಾಞ್ಜನ್ಮ ಗೃಣತೇ ಯಜಧ್ಯೈ ।**
**ವೇಪಿಷ್ಠೋ ಅಂಗಿರಸಾಂ ಯದ್ಧ ವಿಪ್ರೋ ಮಧು ಚ್ಛಂದೋ ಭವತಿ ರೇಭ ಇಷ್ಟೌ ॥**

(ಋ ಸಂ. ೬-೧೧-೩)

ಅಂಗಿರಸ್ಸುಗಳ ಮಧ್ಯದಲ್ಲೆಲ್ಲಾ ಅತಿಶಯವಾಗಿ ಸ್ತುತಿಕರ್ತನಾದ ಈ ಭರದ್ವಾಜನು (**ರೇಭಃ ಸ್ತೋತಾ ಭರದ್ವಾಜಃ**) ಧನಾರ್ಥವಾಗಿ ನೆರವೇರತಕ್ಕ ಯಜ್ಞದಲ್ಲಿ ಅಗ್ನಿಯನ್ನು ಉದ್ದೇಶಿಸಿ ಅತ್ಯತಿಶಯರಾದ ಸ್ತುತಿಗಳನ್ನರ್ಪಿಸುತ್ತಾನೆ. ಎಂದು ಅಂಗಿರಸ್ಸಿನ ವಂಶಕ್ಕೆ ತಾನು ಸೇರಿದವನೆಂದು ಹೇಳಿಕೊಂಡಿದ್ದಾನೆ. ಅಲ್ಲದೇ,

**ಯಾಭಿಃ ಸೂರ್ಯಂ ಪರಿಯಾಥಃ ಪರಾವತಿ ಮಂಧಾತಾರಂ ಕ್ಷೈತ್ರಪತ್ಯೇಷ್ವಾವತಂ ।**
**ಯಾಭಿರ್ವಿಪ್ರಂ ಪ್ರ ಭರದ್ವಾಜಮಾವತಂ ತಾಭಿರೂ ಷು ಊತಿಭಿರಶ್ವಿನಾಗತಂ ॥**

(ಋ. ಸಂ. ೧-೧೧೨-೧೩)

ಎಲೈ ಅಶ್ವಿನೀದೇವತೆಗಳೇ, ತಮೋರೂಪದ ರಾಹುವಿನಿಂದ ಆವೃತನಾದ ದೂರದೇಶದಲ್ಲಿರತಕ್ಕ ಸೂರ್ಯನನ್ನು ಗ್ರಹಣದಿಂದ ಬಿಡಿಸಲು ಯಾವ ರಕ್ಷಣೆಗಳೊಡನೆ ಮುಂದುವರೆದು ಹೋದಿರೋ, ಮತ್ತು ಮಾಂಧಾತೃ ಋಷಿಯನ್ನು ತನ್ನ

ಪ್ರಭುತ್ವದ ಕರ್ತವ್ಯ ನಿರ್ವಹಣಗಳಲ್ಲಿ ಯಾವ ಸಹಾಯಗಳಿಂದ ರಕ್ಷಿಸಿದಿರೋ, ಅಲ್ಲದೇ, ಯಾವ ರಕ್ಷಣೆಗಳಿಂದ **ಮೇಧಾವಿಯಾದ ಭರದ್ವಾಜ ಋಷಿಯನ್ನು** ಅನ್ನಪ್ರದಾನದಿಂದ ಚೆನ್ನಾಗಿ ರಕ್ಷಿಸಿದಿರೋ **ಆ ಎಲ್ಲಾ ರಕ್ಷಣೆಗಳಿಂದಲೂ** ನಮ್ಮಲ್ಲಿಗೂ ಆದರದಿಂದ ಬನ್ನಿ ಎಂದಿರುವಾಗ **ಭರದ್ವಾಜನು** ದೇವತೆಗಳ ಸಹಾಯವನ್ನು ಪಡೆದ ಕ್ರಮವನ್ನು ತಿಳಿಸಿದೆ. ಧನವನ್ನು ಅಪೇಕ್ಷಿಸಿದ ಭರದ್ವಾಜನನ್ನು ಅಶ್ವಿನೀದೇವತೆಗಳು ತಮ್ಮ ರಥದಲ್ಲಿಯೇ ಕುಳ್ಳಿರಿಸಿಕೊಂಡು ಬಂದು ಅವನಿಗೆ ಪ್ರಭೂತವಾಗಿ ಧನವನ್ನು ಕೊಟ್ಟರೆಂಬ ಕಥೆಯಿದೆ. **(ಭರದ್ವಾಜಋಷಿರ್ಧನಕಾಮೋಽಶ್ವಿನೌ ತುಷ್ಟಾವ। ತಸ್ಯ ಸ್ವರಥೇನಾನೀಯಾಶ್ವಿನೌ ಪ್ರಭೂತಂ ಧನಂ ದದತುರಿತಿ। ಸಾ. ಭಾ.).** ಅತ್ಯಧಿಕವಾದ ಮಾಹಾತ್ಮ್ಯವಿದ್ದುದರಿಂದಲೇ ದೇವತೆಗಳೆಲ್ಲರೂ ಸಾಕ್ಷಾತ್ತಾಗಿ ಬಂದು ಭರದ್ವಾಜನನ್ನು ಅನುಗ್ರಹಿಸುತ್ತಿದ್ದರು. ಅತ್ಯತಿಶಯವಾದ ಬ್ರಹ್ಮಚರ್ಯಪಾಲನವೇ ಈ ಮಹತ್ತ್ವಗಳಲ್ಲೊಂದಾಗಿದೆ. ಈ ಅಂಶವನ್ನು ವಿವರಿಸುತ್ತಾ ತೈತ್ತಿರೀಯಬ್ರಾಹ್ಮಣದಲ್ಲಿ ಒಂದು ಇತಿಹಾಸರೂಪವಾದ ಸನ್ನಿವೇಶವನ್ನು ಈ ರೀತಿ ತಿಳಿಸಿದೆ—

> **ಭರದ್ವಾಜೋ ಹ ತ್ರಿಭಿರಾಯುರ್ಭಿರ್ಬ್ರಹ್ಮಚರ್ಯಮುವಾಸ। ತಗ್ಂ ಹ ಜೀರ್ಣಿಗ್ಂ ಸ್ಥವಿರಗ್ಂ ಶಯಾನಂ। ಇಂದ್ರ ಉಪ ಪ್ರಜ್ಯೋವಾಚ। ಭರದ್ವಾಜ। ಯತ್ತೇ ಚತುರ್ಥಮಾಯುಃ ದದ್ಯಾಂ। ಕಿಮೇನೇನ ಕುರ್ಯಾ ಇತಿ। ಬ್ರಹ್ಮಚರ್ಯಮೇವೈನೇನ ಚರೇಯಮಿತಿ ಹೋವಾಚ। ತಗ್ಂ ಹ ತ್ರೀನ್ಗಿರಿರೂಪಾನವಿಜ್ಞಾತಾನಿವ ದರ್ಶಯಾಂಚಕಾರ। ತೇಷಾಗ್ಂ ಹೈಕೈಕಸ್ಮಾನ್ಮುಷ್ಟಿನಾದದೇ। ಸ ಹೋವಾಚ। ಭರದ್ವಾಜೇತ್ಯಾಮಂತ್ರ್ಯ। ವೇದಾ ವಾ ಏತೇ। ಅನಂತಾ ವೈ ವೇದಾಃ। ಏತದ್ವಾ ಏತೈಸ್ತ್ರಿಭಿರಾಯುರ್ಭಿರನ್ವವೋಚಥಾಃ। ಅಥ ತ ಇತರದ-ನನೂಕ್ತಮೇವ ಏಹೀಮಂ ವಿದ್ಧಿ। ಅಯಂ ವೈ ಸರ್ವವಿದ್ಯೇತಿ। ತಸ್ಮೈ ಹೈತಮಗ್ನಿಗ್ಂ ಸಾವಿತ್ರಮುವಾಚ। ತಗ್ಂ ಸ ವಿದಿತ್ವಾ। ಅಮೃತೋ ಭೂತ್ವಾ। ಸ್ವರ್ಗಂ ಲೋಕಮಿಯಾಯ। ಆದಿತ್ಯಸ್ಯ ಸಾಯುಜ್ಯಂ। ಅಮೃತೋ ಹೈವ ಭೂತ್ವಾ। ಸ್ವರ್ಗಂ ಲೋಕಮೇತಿ। ಆದಿತ್ಯಸ್ಯ ಸಾಯುಜ್ಯಂ। ಯ ಏವಂ ವೇದ। ಏಷೋ ಏವ ತ್ರಯೀವಿದ್ಯಾ। ಯಾವಂತಗ್ಂ ಹ ವೈ ತ್ರಯ್ಯಾ ವಿದ್ಯಯಾ ಲೋಕಂ ಜಯತಿ। ತಾವಂತಂ ಲೋಕಂ ಜಯತಿ। ಯ ಏವಂ ವೇದ॥**
>
> (ತೈ ಬ್ರಾ. ೩-೧೦-೧೧-೩ ರಿಂದ ೬)

ಭರದ್ವಾಜಮಹರ್ಷಿಯು ಮೂರುಜನ್ಮಗಳಲ್ಲಿಯೂ ಕ್ರಮವಾಗಿ ಬ್ರಹ್ಮಚರ್ಯವನ್ನು ಪಾಲಿಸುತ್ತಾ ಬಂದನು. ಮೂರನೆಯ ಜನ್ಮದ ಕೊನೆಯಲ್ಲಿ ಅವನು ವೃದ್ಧನಾಗಿ ದೈಹಿಕವಾದ ಅಶಕ್ತಿಯಿಂದ ಕೂಡಿ ಕೊನೆಯ ಅವಸ್ಥೆಯಲ್ಲಿದ್ದಾಗ ಇಂದ್ರನು ಅವನನ್ನು ಸಮೀಪಿಸಿ "ಎಲೈ ಭರದ್ವಾಜನೇ, ನಿನಗೆ ನಾಲ್ಕನೆಯ ಜನ್ಮವನ್ನು ಕೊಟ್ಟರೆ ಅದರಿಂದ ನೀನು ಯಾವ ಪ್ರಯೋಜನವನ್ನು ಹೊಂದುವೆ? ಅದನ್ನು ಯಾವ ರೀತಿ ಉಪಯೋಗಿಸಿಕೊಳ್ಳುತ್ತೀಯೇ?" ಎಂದು ಪ್ರಶ್ನಿಸಿದನು. ಆಗ ಭರದ್ವಾಜನು "ನಾನು ಆ ನಾಲ್ಕನೆಯ ಜನ್ಮವನ್ನೂ ಸಹ ಇತರ ಮೂರು ಜನ್ಮಗಳನ್ನು ಉಪಯೋಗಿಸಿಕೊಂಡಂತೆಯೇ ಬ್ರಹ್ಮಚರ್ಯಪಾಲನೆಗಾಗಿ ಉಪಯೋಗಿಸಿಕೊಳ್ಳುತ್ತೇನೆ" ಎಂದನು. ಆಗ ಇಂದ್ರನು ಪರ್ವತಾಕಾರದಲ್ಲಿದ್ದ ಮತ್ತು ಅತ್ಯದ್ಭುತವಾದ ಮೂರು ಮಹದ್ವಸ್ತುಗಳನ್ನು ತೋರಿಸಿದನು. ಅವುಗಳಲ್ಲಿ ಪ್ರತಿಯೊಂದರಿಂದಲೂ ಒಂದೊಂದು ಹಿಡಿಯ ಪ್ರಮಾಣವನ್ನು ತೆಗೆದುಕೊಂಡು ಭರದ್ವಾಜನನ್ನು ಕುರಿತು, "ಎಲೌ ಭರದ್ವಾಜನೇ, ಇವೇ ಮೂರು ವೇದಗಳು, ಇವು ಅನಂತವಾಗಿವೆ. ನಿನ್ನ ಹಿಂದಿನ ಮೂರು ಜನ್ಮಗಳಲ್ಲೂ ನೀನು ಈ ಮೂರುವೇದಗಳ ಇಷ್ಟು ಭಾಗಗ

ಳನ್ನು ಮಾತ್ರ ಅಧ್ಯಯನಮಾಡಿ ಪಠಿಸಿರುವೆ. ಉಳಿದುದನ್ನು ನೀನು ಪ್ರಕಾಶಪಡಿಸಿಲ್ಲ. ಈಗ ಈ **ಅಗ್ನಿಸಾವಿತ್ರ** ವನ್ನು ಅಧ್ಯಯನಮಾಡಿ ಅದನ್ನು ಮನನಮಾಡು. ಅದೇ **ವಿಶ್ವಜ್ಞಾನವನ್ನು** ಬೋಧಿಸುವ ಮಹಾವಿದ್ಯೆಯಾಗಿದೆ'' ಎಂದನು. ಈ ರೀತಿ ಭರದ್ವಾಜನ ಮಹಿಮೆಯನ್ನು ತೈತ್ತಿರೀಯಬ್ರಾಹ್ಮಣದಲ್ಲಿ ಪ್ರಶಂಸಿಸಿದೆ. ಶಕ್ತಿಗಳಲ್ಲೆಲ್ಲಾ ಶ್ರೇಷ್ಠವಾದ ಕ್ಷಾತ್ರಶಕ್ತಿಗೆ ಆಧಾರವೂ ಮೂಲವೂ ಆದ ಬೃಹತ್ಸಾಮವು ಭರದ್ವಾಜನಿಂದಲೇ ನಿರ್ಮಿತವಾದುದು ಎಂದು ಬೃಹತ್ಸಾಮದ ಪ್ರಭಾವವನ್ನು ವರ್ಣಿಸುವಾಗಲೂ ಕ್ಷಾತ್ರಪ್ರಭಾವವನ್ನು ಪ್ರಶಂಸಿಸುವಾಗಲೂ ಸಹ ಭರದ್ವಾಜನ ಮಹಿಮೆಯು ಅತಿಶಯವಾಗಿ ಸ್ತುತವಾಗಿದೆ. ಇದೇ ವಿಷಯವನ್ನು ಋಕ್ಸಂಹಿತೆಯಲ್ಲಿಯೇ ಪ್ರಶಂಸಿಸುತ್ತಾ ಈ ರೀತಿ ತಿಳಿಸಿದೆ.

**ಅವಿಂದನ್ ತೇ ಅತಿಹಿತಂ ಯದಾಸೀದ್ಯಜ್ಞಸ್ಯ ಧಾಮ ಪರಮಂ ಗುಹಾ ಯತ್ ।**
**ಧಾತುರ್ದ್ಯುತಾನಾತ್ಸವಿತುಶ್ಚ ವಿಷ್ಣೋರ್ಭರದ್ವಾಜೋ ಬೃಹದಾ ಚಕ್ರೇ ಅಗ್ನೇಃ ॥**
(ಋ. ಸಂ. ೧೦-೧೮೧-೨)

ಯಜ್ಞಾದಿಗಳಿಗೆ ಧಾರಕವಾಗಿಯೂ, ಉತ್ತಮವಾದ ಶರೀರರೂಪವುಳ್ಳದ್ದಾಗಿಯೂ ಇದ್ದ ಬೃಹತ್ಸಾಮವು ಗುಹೆಯಲ್ಲಿ ಎಂದರೆ, ಯಾರಿಗೂ ತಿಳಿಯದ ಗಭೀರವಾದ ಪ್ರದೇಶದಲ್ಲಿ ಅಡಗಿಕೊಂಡಿದ್ದಿತು. ಅದನ್ನು **ಧಾತ್ರಾದಿಗಳು** ಸಾಕ್ಷಾತ್ಕರಿಸಿ ಲೋಕಕ್ಕೆ ಪ್ರಕಾಶಿತವಾಗುವಂತೆ ಮಾಡಿದರು. ಭರದ್ವಾಜನು ಈ ಧಾತೃವಿನಿಂದಲೂ, ಸವಿತೃ, ವಿಷ್ಣು ಮತ್ತು ಅಗ್ನಿ ಇವರುಗಳಿಂದಲೂ ಸಹ ಇದೇ ಬೃಹತ್ಸಾಮವನ್ನು ತಾನು ಪಡೆದು ಯಜ್ಞಾದಿಗಳಿಗೆ ಅನುಕೂಲ ವಾಗುವಂತೆ ಮಾಡಿದನು, ಎಂದಿರುವ ಇದೇ ಅಂಶವನ್ನು ಐತರೇಯಬ್ರಾಹ್ಮಣದಲ್ಲಿ ವರ್ಣಿಸುತ್ತಾ,

**ತಮು ಷ್ಟುಹಿ ಯೋ ಅಭಿಭೂತ್ಯೋಜಾ ಇತಿ ಸೂಕ್ತಮಭಿವದಭಿಭೂತ್ಯೈ ರೂಪಂ । ಅಷಾಳ್ಹ-ಮುಗ್ರಂ ಸಹಮಾನಮಾಭಿರಿತ್ಯುಗ್ರವತ್ಸಹಮಾನವತ್ತತ್ ಕ್ಷತ್ರಸ್ಯ ರೂಪಂ । ತತ್ಪಂಚದಶರ್ಚಂ ಭವತ್ಯೋಜೋ ವಾ ಇಂದ್ರಿಯಂ ವೀರ್ಯಂ ಪಂಚದಶ ಓಜಃ ಕ್ಷತ್ರಂ ವೀರ್ಯಂ ರಾಜನ್ಯಸ್ತದೇ-ನಮೋಜಸಾ ಕ್ಷತ್ರೇಣ ವೀರ್ಯೇಣ ಸಮರ್ಧಯತಿ ತದ್ಭಾರದ್ವಾಜಂ ಭವತಿ ಭಾರದ್ವಾಜಂ ವೈ ಬೃಹದಾರ್ಷೇಯೇಣ ಸಲೋಮಾ ಏಷ ಹ ವಾವ ಕ್ಷತ್ರಿಯೆಯಜ್ಞಃ ಸಮೃದ್ಧೋ ಯೋ ಬೃಹತ್ಪೃಷ್ಠಸ್ತಸ್ಮಾದ್ಯತ್ರ ಕ್ವ ಚ ಕ್ಷತ್ರಿಯೋ ಯಜೇತ ಬೃಹದೇವ ತತ್ರ ಪೃಷ್ಠಂ ಸ್ಯಾತ್ತತ್ಸಮೃದ್ಧಂ ॥**
(ಐ. ಬ್ರಾ. ೩೬-೩)

ಎಂದು ಭರದ್ವಾಜನನ್ನೂ ತದೀಯವಾದ ಬೃಹತ್ಸಾಮವನ್ನೂ ಪ್ರಶಂಸಿಸಿದೆ. **"ತಮು ಷ್ಟುಹಿ"** ಎಂಬ ಮಂತ್ರವು (ಋ. ಸಂ. ೬-೧೮-೧) ಭರದ್ವಾಜಕೃತವಾದುದು. **ಇಂದ್ರ** ಪ್ರಶಂಸಾಕವಾದುದು. ಇಲ್ಲಿ **ಅಭಿ** ಶಬ್ದಪ್ರಯೋಗವು ಜಯಸೂಚಕವಾಗಿರುವುದಾಗಿದೆ. **ಅಷಾಳ್ಹ, ಉಗ್ರ, ಸಹಮಾನ** ಇವೆಲ್ಲವೂ ಸಹ ಕ್ಷತ್ರಿಯನ ಭಯಂಕರವೂ, ಶತ್ರುವನ್ನು ಪ್ರತಿಭಟಿಸುವ ಶಕ್ತಿಯುಳ್ಳದ್ದೂ ಆದ ಪ್ರಭಾವವನ್ನು ಸೂಚಿಸುತ್ತವೆ. ಈ ಸೂಕ್ತದಲ್ಲಿರುವ ಮಂತ್ರಗಳ ಸಂಖ್ಯೆಯು ಹದಿನೈದು. **ಪಂಚದಶ** (ಸ್ತೋಮ)ವು ಓಜಸ್ಸು, ಕ್ಷತ್ರ, ವೀರ್ಯ ಇವುಗಳಿಗೆ ಸಂಕೇತವಾಗಿದೆ. ರಾಜನ್ಯನೇ ಈ ಸಕಲ ಗುಣಗಳನ್ನೂ ಹೊಂದಿದೆ. ಓಜಸ್ಸು. ವೀರ್ಯ, ಕ್ಷತ್ರ ಇಂತಹ ರಾಜನ್ಯಪ್ರಭಾವವನ್ನು ಹೊಂದಿರುವ ಮಂತ್ರಗಳುಳ್ಳ ಸೂಕ್ತವು ಭಾರದ್ವಾಜಕೃತಿಯಾಗಿದೆ. ಅದರಂತೆಯೇ **ಬೃಹತ್ಸಾಮವೂ** ಭರದ್ವಾಜಸಂಬಂಧಿಯಾದದು. ಈ ಎರಡರ ನಿರ್ಮಾಣವೂ ಭರದ್ವಾಜರಿಗೇ ಸೇರಿದುದರಿಂದ ಎರಡರ ಪ್ರಭಾವವೂ ಒಂದೇ **ಆಗಿದೆ.**

ಆದುದರಿಂದ ಯಾವ ಕ್ಷತ್ರಿಯನ ಯಜ್ಞವು **ಬೃಹತ್ಸಾಮ** ರೂಪವಾದ ಪೃಷ್ಠವನ್ನು ಹೊಂದಿರುವುದೋ ಆ ಯಜ್ಞವೇ ಪೂರ್ಣತ್ವವನ್ನು ಹೊಂದಿರುತ್ತದೆ. ಆದುದರಿಂದ ಯಾವ ಕ್ಷತ್ರಿಯನಾಗಲಿ ಯಾವ ಸಂದರ್ಭದಲ್ಲಾಗಲಿ ಯಜ್ಞವನ್ನು ನಿರ್ವಹಿಸಬೇಕೆಂದಿಚ್ಛಿಸಿದರೆ, ಆಗ **ಬೃಹತ್ಸಾಮ** ವನ್ನೇ **ಪೃಷ್ಠ**ವನ್ನಾಗಿ ಕಲ್ಪಿಸಬೇಕು. ಆಗ ತಾನೇ ಯಜ್ಞವು ಪರಿಪೂರ್ಣತೆಯನ್ನು ಹೊಂದುತ್ತದೆ ಎಂದು ಕ್ಷತ್ರಪ್ರಭಾವವನ್ನು ಪರಿಪೂರ್ಣಗೊಳಿಸತಕ್ಕ ಬೃಹತ್ಸಾಮಕ್ಕೆ ಭರದ್ವಾಜ ಮಹರ್ಷಿಯು ಮೂಲನು ಎಂದು ಅವನ ಕೃತಿಯನ್ನು ಸ್ತುತಿಸಿದೆ. ಈ ಬೃಹತ್ಸಾಮದ ಮಹಿಮೆಯನ್ನು ಅರಿತರೆ, ಇದಕ್ಕೆ ಕರ್ತೃವಾದ ಮಹರ್ಷಿಯ ಸ್ವರೂಪವು ಇನ್ನೂ ಅಧಿಕವಾಗಿ ತಿಳಿಯುವುದರಿಂದ, ಈ ಸಾಮದ ಸ್ವರೂಪವೇನು, ಇದರ ಮಹಿಮೆಯೇನು ಎಂಬುದನ್ನು ತಿಳಿಯಲು ಪ್ರಕೃತ ಅವಶ್ಯವಾಗಿರುತ್ತದೆ.

ಮಹಾವ್ರತದ ವರ್ಣನೆಯನ್ನು ಹೇಳುವಾಗ ದಕ್ಷಿಣಪಕ್ಷ ಮತ್ತು ಉತ್ತರಪಕ್ಷ ಎಂದು ಮಹಾವ್ರತದ ಎರಡು (Right wing and left wing). ಅವುಗಳಲ್ಲಿ **ರಥಂತರ**ಸಾಮವು ದಕ್ಷಿಣಪಕ್ಷ ಮತ್ತು **ಬೃಹತ್**ಸಾಮವು ಉತ್ತರಪಕ್ಷ. ವಸಿಷ್ಠಕೃತವಾದ ರಥಂತರವು ಅಗ್ನಿಪ್ರತಿಬಿಂಬಕ ಮತ್ತು ಶತಸಂಖ್ಯಾಕವಾದುದು. ಭರದ್ವಾಜಕೃತವಾದ ಬೃಹತ್ಸಾಮವೂ ಅದೇ ಸಂಖ್ಯೆಯುಳ್ಳದ್ದು. ಆದರ ಸ್ವರೂಪವನ್ನು ಐತರೇಯಾರಣ್ಯಕದಲ್ಲಿ ಈ ರೀತಿ ತಿಳಿಸಿದೆ—

**ಅಥಾತ ಉತ್ತರಃ ಪಕ್ಷಃ । ಸೋಽಸೌ ಲೋಕಃ ಸೋಽಸಾವಾದಿತ್ಯಸ್ತನ್ಮನಸ್ತದ್ಬೃಹತ್ಸ ಭರದ್ವಾಜಸ್ತಚ್ಛತಂ ತಾನಿ ಷಡ್ವಿಧಾಣಿ ಭವಂತಿ ।** (ಐ. ಆ. ೧-೪-೨)

ಬೃಹತ್ಸಾಮವೇ ಉತ್ತರಪಕ್ಷವು (Left wing). ಅದು ಮೇಲಿನ ಲೋಕವು, ಅದೇ ಆದಿತ್ಯನು, ಅದೇ ಮನಸ್ಸು. ಅದು ಭಾರದ್ವಾಜವು ಅದು ಶತಸಂಖ್ಯಾಕವು. ಅದರ ವಿಧ್ಯಗಳು ಆರು ವಿಧವಾಗಿವೆ. ಈ ಶತಸಂಖ್ಯೆಯು ಯಾವುದೆಂದರೆ:—

**ತ್ವಾಮಿದ್ಧಿ ಹವಾಮಹೇ ತ್ವಂ ಹ್ಯೇಹಿ ಚೇರವ ಇತಿ ಬೃಹತಃ ಸ್ತೋತ್ರಿಯಾನುರೂಪೌ ಪ್ರಗಾಥೌ । ಚತಸ್ರಃ ಸತೀಃ ಷಡ್‌ಬೃಹತೀಃ ಕರೋತಿ । ತಮು ಷ್ಟುಹಿ ಯೋ ಅಭಿಭೂತ್ಯೋಜಾಃ ಸುತ ಇತ್ತ್ವಂ ನಿಮಿಶ್ಲ ಇಂದ್ರ ಸೋಮ ಇತಿ ತ್ರೀಣ್ಯಭೂರೇಕೋ ರಯಿಪತೇ ರಯೀಣಾಮಿತ್ಯಷ್ಟೌ ಸೂಕ್ತಾನಿ । ಕಥಾ ಮಹಾಮವೃಧತ್ಕಸ್ಯ ಹೋತುರಿತಿ ಸಂಪಾತಃ । ಇಂದ್ರೋ ಮದಾಯ ವಾವೃಧ ಇತಿ ಪಂಕ್ತಿಃ ।** (ಐ. ಆ. ೫-೨-೩)

| | | | |
|---|---|---|---|
| ೬-೪೬-೧ | ತ್ವಾಮಿದ್ಧಿ ಹವಾಮಹೇ | ೧ | ಮಂತ್ರ. |
| ೬-೪೬-೨ | ಸ ತ್ವಂ ನಶ್ಚಿತ್ರ | ೧ | ,, |
| .. | ಪುನರಾವೃತ್ತಿ | ೧ | ,, |
| ೮-೬೧-೭ | ತ್ವಂ ಹ್ಯೇಹಿ | ೧ | ,, |
| ೮-೬೧-೮ | ತ್ವಂ ಪುರೂ ಸಹಸ್ರಾಣಿ | ೧ | ,, |
| ,, | ಪುನರಾವೃತ್ತಿ | ೧ | ,, |

| | | | |
|---|---|---|---|
| ೬–೧೮–೧ ರಿಂದ ೧೫ | ತಮು ಷ್ಟುಹಿ ಎಂಬ ಸೂಕ್ತ | ೧೫ | ಮಂತ್ರಗಳು. |
| ೬–೨೩–೧ ರಿಂದ ೧೦ | ಸುತ ಇತ್ತ್ವಂ ನಿಮಿಶ್ಲಃ ಎಂಬ ಸೂಕ್ತ | ೧೦ | ,, |
| ೬–೨೪–೧ ರಿಂದ ೧೦ | ವೃಷಾ ಮದ ಇಂದ್ರೇ ಎಂಬ ಸೂಕ್ತ | ೧೦ | ,, |
| ೬–೨೫–೧ ರಿಂದ ೯ | ಯಾ ತ ಊತಿರವಮಾ ಎಂಬ ಸೂಕ್ತ | ೯ | ,, |
| ೬–೩೧ ರಿಂದ ೩೮ ನೇ | ಸೂಕ್ತಗಳು ಪೂರ್ತ | ೪೦ | ,, |
| ೪–೨೩–೧ ರಿಂದ ೧೧ | ಕಥಾಮುಹಾಮವೃಧತ್ಕಸ್ಯ ಎಂಬ ಸೂಕ್ತ | ೧೧ | ,, |
| | | ೧೦೧ | |
| ೧–೮೧–೧ | ಇಂದ್ರೋ ಮದಾಯ ವಾವೃಧೇ | ೧ | |
| | ಒಟ್ಟು | ೧೦೨ | ಮಂತ್ರಗಳು. |

ಇವುಗಳಲ್ಲಿ ೬–೪೬–೨ ಮತ್ತು ೮–೬೧–೮ ಈ ಪುನರಾವೃತ್ತಿಗಳನ್ನು ಬಿಟ್ಟರೆ ಒಟ್ಟು ೧೦೦ ಮಂತ್ರಗಳೂ ಭರದ್ವಾಜ ಕೃತವಾದ ಬೃಹತ್ಸಾಮಮಂತ್ರಗಳು. (ಇವುಗಳಲ್ಲಿ ಭರ್ಗ ಮತ್ತು ಗೋತಮ ಈ ಋಷಿಗಳ ಎರಡು ಮಂತ್ರಗಳೂ ಸೇರಿವೆ).

ಈ ಮಂತ್ರಗಳನ್ನೊಳಗೊಂಡ ಬೃಹತ್ಸಾಮದೊಡನೆ ಆದಿತ್ಯನಿಗೂ ಮತ್ತು ಮನಸ್ಸಿಗೂ ತಾದಾತ್ಮ್ಯವನ್ನು ಹೇಳಿದೆ. ಆದರೆ ಇಲ್ಲಿ ಇನ್ನೊಂದು ಅಂಶವನ್ನು ತಿಳಿಯಬೇಕು. ಸಾಧಾರಣವಾಗಿ ಚಂದ್ರನಿಗೂ ಮನಸ್ಸಿಗೂ ಸಾಕ್ಷಾತ್ಸಂಬಂಧವಿರುವುದೆಂಬ ವಿಷಯವು ಪ್ರಸಿದ್ಧವಾಗಿದೆ. ಪ್ರಕೃತ ಆದಿತ್ಯ ಮತ್ತು ಮನಸ್ಸು ಇವೆರಡನ್ನೂ ಒಟ್ಟಿಗೆ ಹೇಳಿರುವುದರಿಂದ ಆದಿತ್ಯ ಮತ್ತು ಚಂದ್ರ ಈ ಎರಡೂ ಒಂದೇ ತತ್ತ್ವಗಳ ಎರಡು ಭಾಗಗಳೆಂದು ತಿಳಿಯತಕ್ಕದ್ದೆಂದು ಸಾಯಣರು ತಿಳಿಸಿದ್ದಾರೆ. ಬೃಹತ್ಸಾಮವೇ ಮನಸ್ತತ್ತ್ವಪ್ರತಿಪಾದಕವಾದ ಆದಿತ್ಯನು. ಇದರ ಕರ್ತೃವೇ ಭರದ್ವಾಜನು ಎಂದಿದೆ. ಭರದ್ವಾಜಕೃತವಾದ ಈ ಬೃಹತ್ಸಾಮದ ಮಹತ್ಸ್ವರೂಪವನ್ನು ಛಾಂದೋಗ್ಯದಲ್ಲಿ ಈ ರೀತಿ ಪ್ರಶಂಸಿಸಿದೆ.

**.. ........ಏತದ್ಬೃಹದಾದಿತ್ಯೇ ಪ್ರೋತಂ ಸ ಯ ಏವಮೇತತ್ ಬೃಹದಾದಿತ್ಯೇ ಪ್ರೋತಂ ವೇದ ತೇಜಸ್ವ್ಯನ್ನಾದೋ ಭವತಿ ಸರ್ವಮಾಯುರೇತಿ ಜ್ಯೋಗ್ಜೀವತಿ ಮಹಾನ್ಪ್ರಜಯಾ ಪಶು- ಭಿರ್ಭವತಿ ಮಹಾನ್ ಕೀರ್ತ್ಯಾ ತಪಂತಂ ನ ನಿಂದೇತ್ತದ್ವ್ರತಂ ।**

(ಛಾ. ಉ. ೨–೧೪–೨)

ಈ ಬೃಹತ್ಸಾಮವು ಸೂರ್ಯನಲ್ಲಿ ಪ್ರೋತವಾಗಿದೆಯೆಂಬ ತತ್ತ್ವವನ್ನು ಯಾವನು ಅರಿಯುವನೋ ಅವನು ತೇಜಸ್ವಿ ಯಾಗುತ್ತಾನೆ. ಅನ್ನಸಂಪದ್ಯುಕ್ತನೂ, ಆಯುಷ್ಮಂತನೂ ಪ್ರಭಾವಯುತವಾದ ಜೀವನವುಳ್ಳವನೂ, ಸತ್ಪ್ರಜಾ ಮತ್ತು ಪಶುಗಳುಳ್ಳವನೂ ಆಗಿ ಅತ್ಯಂತ ಕೀರ್ತಿಯುತನಾಗಿ ಬದಕುತ್ತಾನೆ ಎಂದಿದೆ.

ಇಂತಹ ಪ್ರಭಾವವುಳ್ಳ ಬೃಹತ್ಸಾಮಮಂತ್ರಗಳನ್ನು ನಿರ್ಮಿಸಿದವನೇ ಭರದ್ವಾಜನು. ಇವನು ಋಷಿಗಳಲ್ಲೆಲ್ಲಾ ಅತ್ಯುತ್ತಮವಾದ ಸ್ಥಾನವನ್ನು ಪಡೆದವನು.

**ಭರದ್ವಾಜೋ ಹ ವಾ ಋಷೀಣಾಮನೂಚಾನತಮೋ ದೀರ್ಘಜೀವಿತಮಸ್ತಪಸ್ವಿತಮ ಆಸ ಸ ಏತೇನ ಸೂಕ್ತೇನ ಪಾಪ್ಮಾನಮಪಾಹತ ತದ್ಯದ್ಭಾರದ್ವಾಜಂ ಶಂಸತಿ ಪಾಪ್ಮನೋಽಪಹತ್ಯಾ ಅನೂಚಾನೋ ದೀರ್ಘಜೀವೀ........ತಸ್ಮಾದ್ಭಾರದ್ವಾಜಂ ಶಂಸತಿ ।**

(ಐ. ಆ. ೧–೨-೨)

ಭರದ್ವಾಜಮಹರ್ಷಿಯು ಋಷಿಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದ ಜ್ಞಾನವುಳ್ಳವನು. ಅತ್ಯಂತ ದೀರ್ಘವಾದ ಆಯುಸ್ಸುಳ್ಳವನು ಮತ್ತು ಅತ್ಯತಿಶಯವಾದ ತಪಃಪ್ರಭಾವವುಳ್ಳವನು. ಅವನು **"ಪಿಬಾ ಸೋಮಮಭಿ ಯಮುಗ್ರ"** (ಋ. ಸಂ. ೬-೧೭) ಎಂಬ ಸೂಕ್ತವನ್ನು ಪಠಿಸಿ ಪಾಪವನ್ನು ನಾಶಮಾಡಿದನು. ಆದುದರಿಂದಲೇ, ಯಾವನು ಈ ಭಾರದ್ವಾಜ ಸೂಕ್ತವನ್ನು ಪಠಿಸುವನೋ ಅವನು ಪಾಪರಹಿತನೂ, ದೀರ್ಘಜೀವಿಯೂ, ಅತಿಶಯವಾದ ತಪಃಪ್ರಭಾವವುಳ್ಳವನೂ ಆಗುತ್ತಾನೆ ಎಂದು ಪ್ರಶಂಸಿಸಿದೆ. ಹೇಗೆಂದರೆ ಭರದ್ವಾಜನ ಸ್ವರೂಪವೇ ಅಂತಹುದಾಗಿದೆ.

**ಏಷ ಉ ಏವ ಬಿಭ್ರದ್ವಾಜಃ ಪ್ರಜಾ ವೈ ವಾಜಸ್ತಾ ಏಷ ಬಿಭರ್ತಿ ಯದ್ಬಿಭರ್ತಿ ತಸ್ಮಾದ್ಭರದ್ವಾ- ಜಸ್ತಸ್ಮಾದ್ಭರದ್ವಾಜ ಇತ್ಯಾಚಕ್ಷತ ಏತಮೇವ ಸಂತಂ ।**

(ಐ. ಆ. ೨-೨-೨)

**ವಾಜ** ವೆಂದರೆ, ಪ್ರಜೆ ಅಥವಾ ಶಕ್ತಿ ಅಥವಾ ಅನ್ನಸಂಪತ್ತು. ಈ ಎಲ್ಲಾ ಸಂಪತ್ತುಗಳನ್ನೂ ಹೊಂದಿರುವುದ ರಿಂದಲೇ ಭರದ್ವಾಜನೆಂಬ ಹೆಸರು ಪ್ರಸಿದ್ಧವಾಯಿತು ಎಂದು ಐತರೇಯಾರಣ್ಯಕದಲ್ಲಿ ಈ ಪದದ ಶಬ್ದ ನಿರ್ವಚನ ವಿರುತ್ತದೆ, ಮನಸ್ಸುಳ್ಳವನೇ ಅನ್ನವಂತನು. ಆದಿತ್ಯನೇ (ಅಥವಾ ಚಂದ್ರನೇ) ಮನಸ್ತತ್ತ್ವವುಳ್ಳವನು ಆದುದರಿಂದ ಭರದ್ವಾಜನೆಂದರೆ ಮನಸ್ತತ್ತ್ವ ಪ್ರತಿಪಾದಕನೆಂದರ್ಥ. ಹೇಗೆಂದರೆ,

**ಮನೋ ವೈ ಭರದ್ವಾಜ ಋಷಿರನ್ನಂ ವಾಜೋ ಯೋ ವೈ ಮನೋ ಬಿಭರ್ತಿ ಸೋಽನ್ನಂ ವಾಜಂ ಭರತಿ ತಸ್ಮಾನ್ಮನೋ ಭರದ್ವಾಜಋಷಿಃ ॥**

(ಶ. ಬ್ರಾ. ೮-೧-೧-೯)

ಭರದ್ವಾಜಋಷಿಯೇ ಮನಸ್ತತ್ತ್ವವು. ವಾಜವೆಂದರೆ ಅನ್ನ. ಮನಸ್ಸನ್ನು ಹೊಂದಿರತಕ್ಕವನು ಮಾತ್ರ ಅನ್ನವನ್ನು ಹೊಂದಿರುತ್ತಾನೆ. ಆದುದರಿಂದ ಭರದ್ವಾಜನೆಂದರೆ ಅನ್ನವಂತನು ಅಥವಾ ಅನ್ನಮೂಲವಾದ ಮನಸ್ತತ್ತ್ವವುಳ್ಳವನು ಎಂದರ್ಥವೆಂದು ಶತಪಥಬ್ರಾಹ್ಮಣವು ತಿಳಿಸುತ್ತದೆ. ಇದೇ ತತ್ತ್ವವನ್ನು ತೈತ್ತಿರೀಯಸಂಹಿತೆಯಲ್ಲಿ ಈ ರೀತಿ ತಿಳಿಸಿದೆ.

**ಅಯಂ ಪುರೋ ಭುವ ........ ಪಂಚದಶಾದ್ಬೃಹದ್ಬೃಹತೋ ಭರದ್ವಾಜ ಋಷಿಃ ಪ್ರಜಾಪತಿ- ಗೃಹೀತಯಾ ತ್ವಯಾ ಮನೋ ಗೃಹ್ಣಾಮಿ ಪ್ರಜಾಭ್ಯೋಽಯಂ ಪಶ್ಚಾದ್ವಿಶ್ವವ್ಯಚಾಃ ।**

(ತೈ. ಸಂ. ೪-೩-೨-೧)

ಪಂಚದಶಸ್ತೋಮದಿಂದ ಬೃಹತ್ಸಾಮವೂ, ಆದರಿಂದ ಭರದ್ವಾಜಋಷಿಯೂ ಉತ್ಪನ್ನವಾಗಿರುವುವು. (ಇಲ್ಲಿ ಬೃಹ ತ್ಸಾಮವೆಂದರೆ ಬೃಹತ್ಸಾಮತತ್ತ್ವವೆಂದರ್ಥ. ಬೃಹತ್ಸಾಮಮಂತ್ರಗಳಲ್ಲಿ ಎಂದು ಭಾಷ್ಯದಲ್ಲಿ ವಿವರಿಸಿದೆ). ಇವುಗಳ ಆಧಾರದಮೇಲೆ ಪ್ರಜಾಸಂತತಿಗೆ ಸಹಾಯಾರ್ಥವಾದ ಮನಸ್ತತ್ತ್ವವು ಪ್ರತಿಗ್ರಹಿಸಲ್ಪಡುವುದು ಎಂದು ಪ್ರಜಾಸಂಪ ತ್ತಿಗೂ ಮನಸ್ತತ್ತ್ವಕ್ಕೂ ಇರುವ ಕಾರ್ಯಕಾರಣಭಾವವನ್ನೂ, ಇವೆರಡಕ್ಕೂ ಭರದ್ವಾಜನಿಗೂ ಇರುವ ಸಾಕ್ಷಾತ್ಸಂಬಂಧ ವನ್ನೂ ತಿಳಿಸಿದೆ.

ಭರದ್ವಾಜಮಹರ್ಷಿಯು ಅಗ್ನಿಷ್ಟೋಮಯಾಗದಲ್ಲಿಯೂ ತನ್ನ ಪ್ರಭಾವವನ್ನು ಬೀರಿ, ಅಗ್ನಿಷ್ಟೋಮವು ಶುದ್ಧವೂ ಸಫಲವೂ ಆಗುವಂತೆ ಮಾಡಿದ್ದಾನೆ. ಅದು ಹೇಗೆಂದರೆ;—ಈ ಸಂದರ್ಭವನ್ನು ಐತರೇಯಬ್ರಾಹ್ಮಣದಲ್ಲಿ ಕಥಾರೂಪದಲ್ಲಿ ವಿವರಿಸಿದೆ.

ಅಗ್ನಿಷ್ಟೋಮಂ ವೈ ದೇವಾ ಅಶ್ರಯಂತೋಕ್ಥಾನ್ಯಸುರಾಸ್ತೇ ಸಮಾವದ್ವೀರ್ಯಾ ಏವಾಸನ್ನ ವ್ಯಾವರ್ತಂತ ತಾನ್ಭರದ್ವಾಜ ಋಷೀಣಾಮಪಶ್ಯದಿಮೇ ವಾ ಅಸುರಾ ಉಕ್ಥೇಷು ಶ್ರಿತಾಸ್ತಾನೇಷಾಂ ನ ಕಶ್ಚನ ಪಶ್ಯತೀತಿ ಸೋಽಗ್ನಿಮುದಹ್ವಯತ್ ।

ಏಹ್ಯೂ ಷು ಬ್ರವಾಣಿ ತೇಽಗ್ನ ಇತ್ಥೇತರಾ ಗಿರ ಇತಿ ಅಸುರ್ಯಾ ಹ ವಾ ಇತರಾ ಗಿರಃ । ಸೋಽಗ್ನಿರುಪೋತ್ತಿಷ್ಠನ್ನಬ್ರವೀತ್ಕಿಂಸ್ವಿದೇವ ಮಹ್ಯಂ ಕೃಶೋ ದೀರ್ಘಃ ಪಲಿತೋ ವಕ್ಷ್ಯತೀತಿ ಭರದ್ವಾಜೋ ಹ ವೈ ಕೃಶೋ ದೀರ್ಘಃ ಪಲಿತ ಆಸ । ಸೋಽಬ್ರವೀದಿಮೇ ವಾ ಅಸುರಾ ಉಕ್ಥೇಷು ಶ್ರಿತಾಸ್ತಾನ್ನೋ ನ ಕಶ್ಚನ ಪಶ್ಯತೀತಿ । ತಾನಗ್ನಿರಶ್ವೋ ಭೂತ್ವಾಭ್ಯತ್ಯದ್ರವತ್ ॥

(ಐ. ಬ್ರಾ. ೧೫-೪೯)

ದೇವತೆಗಳು ಅಗ್ನಿಷ್ಟೋಮವನ್ನಾಶ್ರಯಿಸಿದಾಗ ಅಸುರರು ಉಕ್ಥವನ್ನಾಶ್ರಯಿಸಿದರು. ಆಗ ಅವರಿಗೂ ದೇವತೆಗಳಷ್ಟೇ ಶಕ್ತಿಯುಂಟಾಯಿತು. ದೇವತೆಗಳಾರು ಅಸುರರಾರು ಎಂಬ ಪ್ರಭೇದವೇ ತಿಳಿಯಲಾಗಲಿಲ್ಲ. ಆದರೆ, ಋಷಿಗಳಿಗೆಲ್ಲಾ ಪ್ರಧಾನನಾದ ಭರದ್ವಾಜನಿಗೆ ಮಾತ್ರ ಈ ಪ್ರಭೇದವು ಅರ್ಥವಾಯಿತು. ''ಉಕ್ಥದಲ್ಲಿ ಅಸುರರು ಅಡಗಿದ್ದಾರೆ. ಈ ವಿಷಯವನ್ನು ದೇವತೆಗಳಾರೂ ನೋಡಿಲ್ಲ'' ಎಂದು ಅಗ್ನಿಯನ್ನು ಕರೆದನು. ಅಗ್ನಿಯು ಭರದ್ವಾಜನಲ್ಲಿಗೆ ಬಂದು ಏತಕ್ಕಾಗಿ ತನ್ನನ್ನು ಭರದ್ವಾಜನು ಕರೆದನು ಎಂದು ಪ್ರಶ್ನಿಸಿದನು. ಆಗ ಭರದ್ವಾಜನು ಈ ರೀತಿ ತಿಳಿಸಿದನು--

'' ಎಲೈ ಅಗ್ನಿಯೇ, ನಿನಗೆ ಇತರರ (ಎಂದರೆ ಅಸುರರ) ವಾಕ್ಕುಗಳ ಸ್ವರೂಪವೇನೆಂಬುದನ್ನು ತಿಳಿಸುತ್ತೇನೆ '' ಎಂದನು. ಅಗ್ನಿಯು ಏಳುತ್ತಾ " ಕೃಶದೇಹವುಳ್ಳವನೂ, ದೀರ್ಘವಾದ ಶರೀರವುಳ್ಳವನೂ, ಪಲಿತನೂ (ನೆರೆತ ಕೂದಲುಳ್ಳವನೂ) ಆದ ಈ ಭರದ್ವಾಜನು ನನ್ನನ್ನು ಏತಕ್ಕೆ ಕರೆದನು ? ಇವನು ನನಗೆ ಏನು ಹೇಳಬಲ್ಲನು " ಎಂದು ಆಶ್ಚರ್ಯಪಟ್ಟನು. ಅಗ್ನಿಯು ವರ್ಣಿಸಿದಂತೆಯೇ ಭರದ್ವಾಜನು ಕೃಶವಾದ ಕಾಯವುಳ್ಳವನೂ, ದೀರ್ಘವಾದ ದೇಹವುಳ್ಳವನೂ ಆಗಿದ್ದನು. ಅಗ್ನಿಯು ಸಮೀಪಿಸಿದೊಡನೆಯೇ ಭರದ್ವಾಜನು, " ಈ ಅಸುರರು ಉಕ್ಥದಲ್ಲಿ ಅಡಗಿದ್ದಾರೆ, ನಿಮ್ಮಲ್ಲಿ ಯಾರೂ ಇವರನ್ನು ನೋಡಲಾರಿರಿ '' ಎಂದನು. ಆಗ ಅಗ್ನಿಯು ಅಶ್ವರೂಪಿಯಾಗಿ ಅಲ್ಲಿಗೆ ಧಾವಿಸಿದನು. ಆದುದರಿಂದಲೇ ಅವನು **ಸಾಕಮಶ್ವಸಾಮಕ್ಕೆ** ಮೂಲನಾದನು. ಅನಂತರ **ಪ್ರಮಂಹಿಷ್ಠೀಯ** ಸಾಮದ ಸಹಾಯದಿಂದ ಅಸುರರನ್ನು ದೇವತೆಗಳು ಓಡಿಸಿದರು ಎಂಬ ಕಥಾಸಂದರ್ಭವು ಭರದ್ವಾಜನ ಮಹಿಮೆಯನ್ನು ಪ್ರಶಂಸಿಸಿ ಭರದ್ವಾಜನ ಪ್ರಭಾವವು ದೇವತೆಗಳ ಪ್ರಭಾವಕ್ಕಿಂತಲೂ ಅಧಿಕವೆಂದೂ, ದೇವತೆಗಳಿಗೆ ತಿಳಿಯದ ರಹಸ್ಯ ವಿಷಯವೂ ಸಹ ಭರದ್ವಾಜನಿಗೆ ತಿಳಿಯಿತೆಂದೂ ವಿವರಿಸಿದೆ.

ಇದೇ ಅಗ್ನಿಷ್ಟೋಮಯಾಗದಲ್ಲಿ ಅತಿ ಮುಖ್ಯವಾಗಿ ಪಠಿಸಬೇಕಾದ **ಯಜ್ಞಾಯಜ್ಞೀಯ** ಮಂತ್ರಗಳೂ ಸಹ ಭರದ್ವಾಜನ ಕೃತಿಗಳೆಂದು ಪ್ರಸಿದ್ಧವಾಗಿದೆ. ಈ ಯಜ್ಞಾಯಜ್ಞೀಯ ಮಂತ್ರಗಳ ಪ್ರಭಾವವನ್ನು ತಿಳಿಸುವಾಗಲೂ ಸಹ ಭರದ್ವಾಜಕೃತವಾದ **ಬೃಹತ್** ಮತ್ತು ಅದರ ತತ್ವವನ್ನು ಪ್ರತಿಬಿಂಬಿಸುವ ಮನಸ್ತತ್ತ್ವ ಅಲ್ಲದೇ ಹಿಂದೆ ತಿಳಿಸಿರುವಂತೆ ಇವುಗಳಿಗೆ ಆಧಾರವಾದ ಆದಿತ್ಯನ ಪರಿಭ್ರಮಣಪ್ರದೇಶವಾದ ಅಂತರಿಕ್ಷ ಇವುಗಳಿಗೂ ಮತ್ತು **ಯಜ್ಞಾಯಜ್ಞೀಯ** ಮಂತ್ರಗಳಿಂದ ಪ್ರತಿಪಾದಿತವಾಗುವ ತತ್ತ್ವಕ್ಕೂ ಇರುವ ಸಾಕ್ಷಾತ್ಸಂಬಂಧವನ್ನು ತಿಳಿಸಿದೆ.

**ಬೃಹದುತ್ತಾರೇ ಪಕ್ಷೇ । ದ್ಯೌರ್ವೈ ಬೃಹದ್ದ್ಯೌರ್ಹಿ ಬರ್ಹಿಷ್ಠಾ ದಿವಮೇವಾಸ್ಯೈತದುತ್ತರಂ ಪಕ್ಷಂ ಕರೋತ್ಯಥೋ ಉತ್ತರಮೇವಾಸ್ಯೈತತ್ಪಕ್ಷಮನಸ್ಥಿಕಮಮೃತಂ ಕರೋತಿ ॥**

(ಶ. ಬ್ರಾ. ೯-೧-೨-೩೭)

ರಥಂತರಸಾಮದ ಪಠನವಾದನಂತರ ಬೃಹತ್ಸಾಮಮಂತ್ರವು ಪಠನವಾಗುತ್ತದೆ. ದ್ಯುಲೋಕವೇ ಈ ಬೃಹತ್ಸಾಮ ತತ್ವವು. ದ್ಯುಲೋಕವೇ ವಿಶ್ವಗಳೆಲ್ಲೆಲ್ಲಾ ಅತ್ಯಂತ ವಿಸ್ತೃತವಾದುದು. ಬೃಹತ್ತನ್ನು ಅಗ್ನಿಗೆ ಉತ್ತರಪಕ್ಷವಾಗುವಂತೆ ಮಾಡಿದರೆ ದ್ಯುಲೋಕವನ್ನೇ ಮಾಡಿದಂತಾಯಿತು. ಎಂದರೆ ಅದರ ಅತ್ಯತಿಶಯವಾದ ವಿಸ್ತೃತಿಯನ್ನು ತೋರಿಸುತ್ತದೆ.

**ಯಜ್ಞಾಯಜ್ಞಿಯಂ ಪುಚ್ಛಂ । ಚಂದ್ರಮಾ ವೈ ಯಜ್ಞಾಯಜ್ಞಿಯಂ । ಯೋ ಹಿ ಕಶ್ಚ ಯಜ್ಞಃ ಸಂತಿಷ್ಠತ ಏತಮೇವ ತಸ್ಯಾಹುತೀನಾಂ ರಸಃ ॥**

(ಶ. ಬ್ರಾ. ೯-೧-೨-೩೯.)

ಚಂದ್ರತತ್ತ್ವವನ್ನು ಪ್ರತಿಬಿಂಬಿಸತಕ್ಕ **ಯಜ್ಞಾಯಜ್ಞಿಯವೇ** ಈ ಕರ್ಮದ ಪುಚ್ಛವು. ಎಂದರೆ, ಸೋಮಯಾಗದಲ್ಲಿ ಅಗ್ನಿಷ್ಟೋಮಪ್ರಕರಣದ ಚರಮಭಾಗದಲ್ಲಿ ಈ ಯಜ್ಞಾಯಜ್ಞಿಯ ಮಂತ್ರವು ಪಠಿತವಾಗಿ ಪರಿಪೂರ್ಣತೆಯನ್ನು ಹೊಂದಿ ಯಜ್ಞಾಹುತಿಯ ಸಾರವು ಚಂದ್ರಲೋಕವನ್ನು ಸೇರುತ್ತದೆ ಎಂದು ತಾತ್ಪರ್ಯ.

ಪ್ರಕೃತದಲ್ಲಿ ಇನ್ನೊಂದಂಶವನ್ನೂ ಗಮನಿಸಬೇಕು **ಯಜ್ಞಾಯಜ್ಞಾ ವಃ ಸಮನಾ** ಎಂಬುದು ೧-೧೬೮-೧ನೇ ಮಂತ್ರ. ಇದು ಅಗಸ್ತ್ಯಕೃತ. ಅಲ್ಲದೇ ೬-೪೮-೧ನೇ ಮಂತ್ರವಾದ **ಯಜ್ಞಾ ಯಜ್ಞಾ ವೋ ಅಗ್ನಯೇ** ಎಂಬುದು **ಶಂಯುಕೃತ** ವಾದುದು ಆದರೆ ಭರದ್ವಾಜಕೃತಿಯೆಂದು ಈ ಯಜ್ಞಾಯಜ್ಞೀಯ ಮಂತ್ರಗಳಿಗೆ ಯಾವ ರೀತಿ ಹೇಳಬಹುದು ಎಂಬ ಆಶಂಕೆಗೂ ಅವಕಾಶವಿರುತ್ತದೆ. ಪ್ರಕೃತದಲ್ಲಿ ಈ ಚರ್ಚೆಯನ್ನು ವಿಸ್ತರಿಸುವುದು ಅನಾವಶ್ಯಕ. ಯಜ್ಞಾಯಜ್ಞಿಯ ಮಂತ್ರಗಳ ಪಠನದಲ್ಲಿ ನಾಲ್ಕು ವಿಧವಾದ ಶ್ರುತಿಪ್ರಭೇದಗಳಿರುತ್ತವೆ. ಅವೆಲ್ಲಕ್ಕೂ ಭರದ್ವಾಜನೇ ನಿರ್ಮಾಪಕನು ಎಂದು ಸದ್ಯಃ ಸಮಾಧಾನವನ್ನು ಹೇಳಬಹುದು.

" In the case of the **ಅಗ್ನಿಷ್ಟೋಮಸಾಮನ್**, however, the word **ಸಾಮನ್** cannot be taken in its narrow acceptation, but the term has to be understood in the sense of " a hymn chanted in praise of **ಅಗ್ನಿ**". The words commonly used for this chant, are the first two verses of Rig-Veda. VI. 48, a hymn indeed admirably adapted for the purpose of singing Agni's praises, for the first verse beginning " **ಯಜ್ಞಾಯಜ್ಞಾ ವೋ ಅಗ್ನಯೇ** " the chief tune-book, the **ಗ್ರಾಮಗೇಯಗಾನ**, has preserved four different tunes, all of which are ascribed to the Rishi Bharadvaja. "

[Sacred Books of the East Vol.41. Eggling. Satapatha Brahmana Pt.III.p.XIV

ಆದುದರಿಂದ, ಈ ಸಂದರ್ಭದಲ್ಲಿ ಭರದ್ವಾಜನ ಸೂಕ್ತದ್ರಷ್ಟೃತ್ವವನ್ನೂ ಸೂಕ್ತಪಠನಕಾಲದಲ್ಲಿ ಅವನಿಂದ ನಿಯಮಿತವಾದ ಕ್ರಮವನ್ನೂ ಗಮನಿಸಬೇಕಾಗಿದೆ. ಉಳಿದ ಚರ್ಚೆಗಳಿಗೆ ಸದ್ಯಃ ಅವಕಾಶವಿಲ್ಲ.

ಇದೇ ದೈವಾಂಶಸಂಭೂತನೂ, ದೇವತೆಗಳಿಗಿಂತಲೂ ಅಧಿಕವಾದ ಪ್ರಭಾವವುಳ್ಳವನೂ ಆದ ಈ ಭರದ್ವಾಜನು ಲೌಕಿಕವಾದ ವ್ಯವಹಾರಗಳಲ್ಲೂ ಕ್ಷಾತ್ರಧರ್ಮವನ್ನು ಉದ್ಧಾರಮಾಡತಕ್ಕ ಬ್ರಹ್ಮತೇಜಸ್ಸನ್ನು ಹೊಂದಿ ಅನೇಕ ಕ್ಷತ್ರಿಯರಿಗೆ ಸಹಾಯಕನಾಗಿ ಬ್ರಹ್ಮರಕ್ಷಣೆಗೆ ಸಹಾಯಮಾಡಿದನೆಂಬ ವಿಷಯವನ್ನು ಹಿಂದೆ ಸೂಚಿಸಿ ಅಭ್ಯಾವರ್ತಿಜಾಯಮಾನನಿಗೂ, ಪ್ರಸ್ತೋಕನಿಗೂ ಸಹಾಯಕನಾಗಿದ್ದುದನ್ನು ಸೂಕ್ಷ್ಮವಾಗಿ ತಿಳಿಸಿದೆ. ಈ ವಿಧವಾದ ಸಹಾಯಗಳಿಗಾಗಿಯೇ,

**ತೌ ತು ವಾರಶಿಖಾಞ್ಜಿತ್ವಾ ತತೋಽಭ್ಯಾವರ್ತಿಸಾಞ್ಜಯೌ ।**
**ಭರದ್ವಾಜಾಯ ಗುರವೇ ದದತುರ್ವಿವಿಧಂ ವಸು ॥**
(ಬೃ. ದೇ. ೫-೧೩೯)

ಇದೇ ಅಭ್ಯಾವರ್ತಿಜಾಯಮಾನನೂ, ಸಾಂಜಯನೂ ಸಹ ವಾರಶಿಖರರನ್ನು ಪೂರ್ಣವಾಗಿ ಜಯಿಸಿ ತಮಗೆ ಗುರುವಾದ ಭರದ್ವಾಜನಿಗೆ ಅಪರಿಮಿತವಾದ ಬೆಲೆಯುಳ್ಳ ಸಂಪತ್ತನ್ನು ಕಾಣಿಕೆಯಾಗಿ ಅರ್ಪಿಸಿದರು. ಈ ಕಾಣಿಕೆಯನ್ನು ತೆಗೆದುಕೊಂಡು ಹೋಗುತ್ತಿರುವಾಗ ದಾರಿಯಲ್ಲಿ,

**ಭರದ್ವಾಜಶ್ಚ ಗರ್ಗಶ್ಚ ದೃಷ್ಟ್ವಾವಿಂದ್ರೇಣ ವೈ ಪಥಿ ।**
**ದ್ವಯಾನ್ ಪ್ರಸ್ತೋಕ ಇತ್ಯಾಭಿರ್ದಾನಂ ತತ್ರ ಚ ತಸ್ಯ ತು ॥**
(ಬೃ. ದೇ. ೫-೧೪೦)

ಭರದ್ವಾಜನೂ ಅವನಪುತ್ರನಾದ ಗರ್ಗನೂ ಸಹ ದಾರಿಯಲ್ಲಿ ಹೋಗುತ್ತಿರುವಾಗ ಇಂದ್ರನಿಂದ ನೋಡಲ್ಪಟ್ಟರು. ಆಗ, **"ದ್ವಯಾँ ಅಗ್ನೇ ರಥಿನೋ ವಿಂಶತಿಂ"** (ಋ. ಸಂ. ೬-೨೭-೮), ಎಂಬ ಮಂತ್ರದಿಂದಲೂ, **ಪ್ರಸ್ತೋಕ** ಇನ್ನು **ರಾಧಸಸ್ತ ಇಂದ್ರ** (೬-೪೭-೨೨) ಎಂಬ ಮಂತ್ರದಿಂದಲೂ ಅವರಿಬ್ಬರಿಂದ ದತ್ತವಾದ ಸಂಪತ್ತನ್ನು ಇಂದ್ರನೆದುರಿಗೆ ಪ್ರಶಂಸಿಸಿ ಅವರಿಬ್ಬರಿಗೂ ಶ್ರೇಯಸ್ಸನ್ನು ಕೋರಿದರು ಎಂಬ ವಿಷಯವೂ ಬೃಹದ್ದೇವತಾದಿಗಳಲ್ಲಿ ಪ್ರಸಿದ್ಧವಾಗಿದೆ. ಆದರೆ ಐತಿಹಾಸಿಕದೃಷ್ಟಿಯಿಂದ ಪರಿಶೀಲಿಸಿದರೆ ಈ ಸನ್ನಿವೇಶಗಳು ಸ್ವಲ್ಪ ಸಮಸ್ಯಾತ್ಮಕವಾಗಿರುತ್ತವೆ. ಅಭ್ಯಾವರ್ತಿ ಮತ್ತು ಪ್ರಸ್ತೋಕ ಇವರಿಬ್ಬರೂ ಸೃಂಜಯವಂಶದವರೆಂದು ವರ್ಣಿತರಾಗಿದ್ದಾರೆ. ಆದರೆ ಕೆಲವೆಡೆಗಳಲ್ಲಿ ಅಭ್ಯಾವರ್ತಿಯು ಜಯಮಾನನ ಪುತ್ರನೆಂದೂ ಇನ್ನು ಕೆಲವೆಡೆಗಳಲ್ಲಿ ಸೃಂಜಯನ ಪುತ್ರನೆಂದು ನಿರ್ದಿಷ್ಟನಾಗಿದ್ದಾನೆ. ಅಭ್ಯಾವರ್ತಿಗೆ ದೈವವಾತನೆಂಬ ವಿಶೇಷಣವೂ ಇರುತ್ತದೆ. ಇಷ್ಟೇ ಅಲ್ಲದೆ ಕೆಲವು ಸಂಹಿತಾವಾಕ್ಯಗಳು ಭರದ್ವಾಜನೂ ಮತ್ತು ದಿವೋದಾಸನೂ ಒಂದೇ ಎಂಬ ಸಂಶಯಕ್ಕೂ ಅವಕಾಶವನ್ನು ಕಲ್ಪಿಸಿವೆ. ಇಂತಹ ಸಂದರ್ಭಗಳಲ್ಲಿ ದಿವೋದಾಸನಿಗೂ ಸೃಂಜಯವಂಶದವರಿಗೂ ಇರತಕ್ಕ ಸಂಬಂಧವೇನು ಎಂಬ ವಿಷಯವನ್ನೂ ಸಹ ಪರಿಶೀಲಿಸಬೇಕಾಗುತ್ತದೆ. ಪ್ರಥಮತಃ, ಅಭ್ಯಾವರ್ತಿಯ ನಿರ್ದೇಶವೂ ಭರದ್ವಾಜನಿಗೂ ಅಭ್ಯಾವರ್ತಿಗೂ ಇರುವ ಗುರುಶಿಷ್ಯಸಂಬಂಧವೂ ಋಕ್ಸಂಹಿತೆಯಲ್ಲಿ ಯಾವ ಯಾವಸಂದರ್ಭದಲ್ಲಿ ಉಕ್ತವಾಗಿದೆಯೆಂಬುದನ್ನು ಪರಿಶೀಲಿಸಬೇಕು. ಪ್ರಕೃತದಲ್ಲಿ ಭರದ್ವಾಜನ ಸಂಬಂಧವಾದ ವಿಷಯವನ್ನುಮಾತ್ರ ಪರಿಶೀಲಿಸುತ್ತಿರುವುದರಿಂದ ಮೊದಲು ಭರದ್ವಾಜನ ನಿಷ್ಕೃಷ್ಟವಾದ ಸ್ಥಾನವನ್ನು ಐತಿಹಾಸಿಕ ದೃಷ್ಟಿಯಿಂದ ಪರಿಶೀಲಿಸಿ ನಂತರ ಸಂದರ್ಭಾನುಸಾರವಾಗಿ ಅತ್ಯವಶ್ಯವಾದರೆ ಮೇಲಿನ ವಿಷಯಗಳನ್ನು ಯಥೋಚಿತವಾಗಿ ವಿಮರ್ಶಿಸಬಹುದಾಗಿದೆ.

ದಿವೋದಾಸ ಎಂಬ ಪದವು ಕೆಲವೆಡೆಗಳಲ್ಲಿ ಭರದ್ವಾಜನಿಗೆ ವಿಶೇಷಣವಾಗಿರುತ್ತದೆ. ಭರದ್ವಾಜಪದವು ಕೆಲವೆಡೆಗಳಲ್ಲಿ ದಿವೋದಾಸನಿಗೆ ವಿಶೇಷಣವಾಗಿರುತ್ತದೆ. ಇದೇ ದಿವೋದಾಸಪದವು ಇನ್ನು ಕೆಲವೆಡೆಗಳಲ್ಲಿ ಭರದ್ವಾಜ

ನಿಂದ ಸಹಾಯವನ್ನು ಪಡೆದ ಪ್ರಸ್ತೋಕನಿಗೆ ವಿಶೇಷಣವಾಗಿರುತ್ತದೆ. ಇಂತಹ ಸಂದರ್ಭಗಳನ್ನು ಆಧಾರವಾಗಿಟ್ಟುಕೊಂಡು ದಿವೋದಾಸ ಮತ್ತು ಭರದ್ವಾಜ ಇವರಿಬ್ಬರೂ ಒಂದೇ ಎಂದು ಹೇಳುವವರೂ ಉಂಟು. (ದಿವೋದಾಸ ಅತಿಥಿಗ್ವನ ವಿಷಯವನ್ನು ಋಗ್ವೇದಸಂಹಿತಾ; ಭಾಗ ೮. ಪುಟ 788ರಲ್ಲಿ ಸೂಕ್ಷ್ಮವಾಗಿ ತಿಳಿಸಿದೆ.) ಈ ಅಭಿಪ್ರಾಯವು ಅಷ್ಟು ಸರಿಯಾಗಿರಲಾರದು. ಹೇಗೆಂದರೆ;—

**ತಮಿಮಾ ವಾರ್ಯಾ ಪುರು ದಿವೋದಾಸಾಯ ಸುನ್ವತೇ ।**
**ಭರದ್ವಾಜಾಯ ದಾಶುಷೇ ॥**

(ಋ. ಸಂ. ೬-೧೬-೫)

ಎಂಬ ಋಕ್ಕಿನಲ್ಲಿ **ದಿವೋದಾಸಾಯ** ಎಂಬ ಪದವು **ಭರದ್ವಾಜಾಯ** ಎಂಬುದಕ್ಕೆ ವಿಶೇಷಣವಾಗಿರುತ್ತದೆಂದೂ, ಆದುದರಿಂದ ದಿವೋದಾಸ ಮತ್ತು ಭರದ್ವಾಜ ಎಂಬಿಬ್ಬರೂ ಒಂದೇ ಎಂದೂ, ಬೇರೆ ಬೇರೆ ವ್ಯಕ್ತಿಗಳಲ್ಲವೆಂದೂ ಕೆಲವು ಆಂಗ್ಲ ಪಂಡಿತರು ಅಭಿಪ್ರಾಯಪಡುತ್ತಾರೆ. ಆದರೆ ಇದು ತಪ್ಪು. ಸಾಯಣರು ಈ ಸಂದರ್ಭದಲ್ಲಿ ಎರಡು ಪದಗಳನ್ನೂ ಸರಿಯಾಗಿ ವಿವರಿಸಿದ್ದಾರೆ. **ಲುಪ್ತೋಪಮಾ ಏತತ್** ಎಂದರೆ, **ಯಥಾ ದಿವೋದಾಸಾಯ ಪ್ರಾದಾಃ ತಥಾ ಭರದ್ವಾಜಾಯ ದೇಹಿ**—ಯಾವ ರೀತಿ ದಿವೋದಾಸನಿಗೆ ಸಂಪತ್ತನ್ನೊದಗಿಸಿದೆಯೋ ಆ ರೀತಿ ಭರದ್ವಾಜನಾದ ನನಗೂ ಸಂಪತ್ತನ್ನು ಒದಗಿಸು ಎಂದು ತಾತ್ಪರ್ಯವೆಂದು ಹೇಳಿರುವುದರಿಂದ ಇಬ್ಬರೂ ವ್ಯಕ್ತ್ಯಂತರಗಳೆಂಬುದು ಸ್ಪಷ್ಟವಾಗಿದೆ. ಇದರಂತೆಯೇ,

**ಯದಯಾತಂ ದಿವೋದಾಸಾಯ ವರ್ತಿರ್ಭರದ್ವಾಜಾಯಾಶ್ವಿನಾ ಹಯಂತಾ ।**
**ರೇವದುವಾಹ ಸಚನೋ ರಥೋ ವಾಂ ವೃಷಭಶ್ಚ ಶಿಂಶುಮಾರಶ್ಚ ಯುಕ್ತಾ ॥**

(ಋ. ಸ. ೧-೧೧೬-೧೮)

ಎಂಬ ಋಕ್ಕಿನಲ್ಲಿಯೂ ಸಹ ಇಬ್ಬರೂ ಒಂದೇ ವ್ಯಕ್ತಿಗಳೆಂಬ ಸಂಶಯಕ್ಕೆ ಅವಕಾಶವಿರುತ್ತದೆ. ಆದರೆ, **ಭರದ್ವಾಜಾಯ** ಎಂಬುದಕ್ಕೆ ವಾಜವನ್ನು (ಅನ್ನವನ್ನು) ಭರಿಸಿರುವವನು ಎಂದರ್ಥ. ಹವಿಸ್ಸಿನ ರೂಪವಾದ ಅನ್ನವನ್ನು ಭರಿಸಿರುವ ದಿವೋದಾಸನಿಗೆ ಎಂದು ತಾತ್ಪರ್ಯವೆಂದು ಸಾಯಣರು ತಿಳಿಸಿದ್ದಾರೆ. ಆದುದರಿಂದ ಈ ಸಂದರ್ಭದಲ್ಲೂ ಸಂಶಯಕ್ಕೆ ಅವಕಾಶವಿಲ್ಲ.

**ಅಶಿಕ್ಷೋ ಯತ್ರ ಶಚ್ಯಾ ಶಚೀವೋ ದಿವೋದಾಸಾಯ ಸುನ್ವತೇ ಸುತಕ್ರೇ ಭರದ್ವಾಜಾಯ ಗೃಣತೇ ವಸೂನಿ ।** (ಋ. ಸಂ. ೬-೩೧-೪)

ಇತ್ಯಾದಿ ಸಂದರ್ಭಗಳಲ್ಲೂ ಸಹ ಪ್ರತ್ಯೇಕವಾದ ವ್ಯಕ್ತಿಗಳೆಂದೇ ತಿಳಿಯುತ್ತದೆ. ಆದರೆ,

**ಪ್ರಸ್ತೋಕ ಇನ್ನು ರಾಧಸಸ್ತ ಇಂದ್ರ ದಶ ಕೋಶಯೀರ್ದಶ ವಾಜಿನೋಽದಾತ್ ।**
**ದಿವೋದಾಸಾದತಿಥಿಗ್ವಸ್ಯ ರಾಧಃ ಶಾಂಬರಂ ವಸು ಪ್ರತ್ಯಗ್ರಭೀಷ್ಮ ॥**

(ಋ. ಸಂ. ೬-೪೭-೨೨)

ಎಂಬಲ್ಲಿ **ಪ್ರಸ್ತೋಕ** ಮತ್ತು **ದಿವೋದಾಸ** ಈ ಎರಡು ಹೆಸರುಗಳೂ ಒಂದೇ ವ್ಯಕ್ತಿಯ ನಾಮಾಂತರಗಳು ಎಂದು ಸಾಯಣರೇ ವಿವರಿಸಿದ್ದಾರೆ. **ದಿವೋದಾಸಾತ್ ಏತತ್ಸಂಜ್ಞಾತ್ ಪ್ರಸ್ತೋಕಾತ್** । ದಿವೋದಾಸನೆಂಬ ಸಂಜ್ಞಾಂತರ

ವುಳ್ಳ ಪ್ರಸ್ತೋಕನಿಗೆ ಎಂದರ್ಥಮಾಡಿ, ಎರಡೂ ಒಂದೇ ವ್ಯಕ್ತಿಯನ್ನು ನಿರ್ದೇಶಿಸುವುದೆಂಬುದನ್ನು ತಿಳಿಸಿದ್ದಾರೆ. ಪ್ರಸ್ತೋಕನೂ, ದಿವೋದಾಸನೂ ಒಂದೇ ಆದರೆ ಭರದ್ವಾಜನು ದಿವೋದಾಸನ ಪುರೋಹಿತನೆಂದು ಹೇಳುವುದರಿಂದ ಪ್ರಸ್ತೋಕನ ಪುರೋಹಿತನೆಂದೇ ಹೇಳಬೇಕಾಗುತ್ತದೆ. ಹಾಗಾದರೆ, ದಿವೋದಾಸನಿಗೂ ಸಾಂರ್ಜಯನೆಂಬ ವಿಶೇಷಣವುಂಟೇ, ಮತ್ತು ಇವನೂ ಸೃಂಜಯನ ಪುತ್ರನೆಂದು ಪ್ರಸಿದ್ಧನಾಗಿದ್ದಾನೆಯೇ ಎಂಬ ವಿಷಯವೂ ಪರಿಶೀಲನಾರ್ಹವಾದುದಾಗಿದೆ.

**ಇಯಮದದಾದ್ರಭಸಮೃಣಚ್ಯುತಂ ದಿವೋದಾಸಂ ವಧ್ರ್ಯಶ್ವಾಯ ದಾಶುಷೇ ।**

(ಋ. ಸಂ. ೬-೬೧-೧)

ಈ ಸರಸ್ವತಿಯು ವಧ್ರ್ಯಶ್ವನಾಮಕನಾದ ಋಷಿಗೆ ದಿವೋದಾಸನೆಂಬ ಪುತ್ರನನ್ನು ಅನುಗ್ರಹಿಸಿದಳು ಎಂದಿರುತ್ತದೆ. ಈ ವಧ್ರ್ಯಶ್ವನಿಗೂ ಪ್ರಸ್ತೋಕಪಿತೃವೆಂದು ಪ್ರಸಿದ್ಧನಾದ ಸೃಂಜಯನಿಗೂ ಯಾವ ಸಂದರ್ಭದಲ್ಲೂ ಯಾವ ಸಂಬಂಧವನ್ನೂ ತಿಳಿಸಿಲ್ಲ. ಸೃಂಜಯನೆಂಬುದು ಕೇವಲ ಅಂಕಿತನಾಮವೇ ಅಲ್ಲ. ಅದು ಒಂದು ಜನಾಂಗದ ಸಂಕೇತನಾಮವಾದರೂ ವಧ್ರ್ಯಶ್ವನ ನಾಮವು ಆ ಗುಂಪಿನಲ್ಲೂ ಸೇರಿಲ್ಲ ಎಂದರೆ ಭರದ್ವಾಜನನ್ನು ಗೌರವಿಸಿದ ಪ್ರಸ್ತೋಕನೂ ದಿವೋದಾಸನೂ ಬೇರೆ ಬೇರೆ ವ್ಯಕ್ತಿಗಳೇ ಅಥವಾ ಒಂದೇ ವ್ಯಕ್ತಿಯ ನಾಮಾಂತರವೇ ಎಂದು ಹೇಳುವುದು ಸುಲಭಸಾಧ್ಯವಲ್ಲ. ಈ ವಿಮರ್ಶೆಯನ್ನು ಆ ಸಂದರ್ಭದಲ್ಲಿ ಮಾಡಲಾಗುವುದು. ಪ್ರಕೃತದಲ್ಲಿ ಮೇಲೆ ಉದಾಹೃತವಾದ ೬-೪೭-೨೨ನೇ ಮಂತ್ರದ ಭಾಷ್ಯದಲ್ಲಿ ಸಾಯಣರು ವಿವರಿಸಿರುವ **ದಿವೋದಾಸಾತ್ ಏತತ್ಸಂಜ್ಞಕಾತ್ ಪ್ರಸ್ತೋಕಾತ್** ಎಂಬ ವಾಕ್ಯದ ಆಧಾರದ ಮೇಲೆ ಈ ಎರಡು ಹೆಸರುಗಳೂ ಒಂದೇ ವ್ಯಕ್ತಿಯಲ್ಲಿ ತಾದಾತ್ಮ್ಯವನ್ನು ಹೊಂದುತ್ತವೆಯೆಂದು ಮಾತ್ರ ಹೇಳಬಹುದು. ಪಂಚವಿಂಶಬ್ರಾಹ್ಮಣದಲ್ಲಿ ಭರದ್ವಾಜನು ದಿವೋದಾಸನಿಗೆ ಪುರೋಹಿತನಾಗಿದ್ದನೆಂಬುದನ್ನು ಸ್ಪಷ್ಟವಾಗಿಯೇ ತಿಳಿಸಿದೆ. (ಪಂ. ಬ್ರಾ. ೧೫-೩-೭) ಇದೇ ಭರದ್ವಾಜನು ದಿವೋದಾಸಪುತ್ರನಾದ ಅಥವಾ ತದ್ವಂಶೀಯನಾದ ಪ್ರತರ್ದನನಿಗೆ ರಾಜ್ಯವನ್ನು ಕೊಟ್ಟನು ಎಂದು ಕಾಠಕಸಂಹಿತೆಯಲ್ಲಿ ತಿಳಿಸಿರುತ್ತೆ (೨೧-೧೦). ಆದರೆ, ಪ್ರಸ್ತೋಕನ ಪುರೋಹಿತನಾಗಿದ್ದ ಭರದ್ವಾಜನೂ, ಇವನೂ ಒಂದೇ ವ್ಯಕ್ತಿಯೇ ಅಥವಾ ಬೇರೆ ಬೇರೆ ವ್ಯಕ್ತಿಗಳೇ ಎಂದು ಹೇಳುವುದು ಕಷ್ಟವಾದುದಾಗಿದೆ ವೈದಿಕವಾಕ್ಯಗಳಲ್ಲೂ, ಪುರಾಣಾದಿಗಳಲ್ಲೂ ಸಹ ಭರದ್ವಾಜನೆಂಬ ಹೆಸರುಳ್ಳ ಬೇರೆ ಬೇರೆ ವ್ಯಕ್ತಿಗಳು ಅನೇಕರು ಪ್ರಸಿದ್ಧರಾಗಿದ್ದಾರೆ. ಆದರೆ, ಪ್ರಕೃತದಲ್ಲಿ ವೈದಿಕವಾಕ್ಯಗಳಲ್ಲಿ ಪ್ರಶಂಸಿತವಾಗಿರುವ ಬೃಹಸ್ಪತಿಪುತ್ರನಾದ ಭರದ್ವಾಜನೊಬ್ಬನೇ ಸ್ತುತನಾಗಿದ್ದಾನೆಂದು ಮಾತ್ರ ಭಾವಿಸಿ ಅವನ ಮಹಿಮೆಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಮಾಡಬೇಕು. ವೈದಿಕವಾಕ್ಯಗಳಲ್ಲೇ ಇಬ್ಬರು ಭರದ್ವಾಜರು ಎಂದು ಹೇಳುವುದಕ್ಕೂ ಅವಕಾಶವಿದೆ ಆದರೆ, ಅದಕ್ಕೆ ನಮಗೆ ನಿಷ್ಕೃಷ್ಟವಾದ ಆಧಾರವು ದೊರೆಯಲು ಸುಲಭಸಾಧ್ಯವಲ್ಲದುದರಿಂದ ಒಬ್ಬನೇ ಎಂದು ನಾವು ಇಟ್ಟುಕೊಳ್ಳಬಹುದು. ಭರದ್ವಾಜನ ಪ್ರಭಾವವನ್ನು ತೈತ್ತಿರೀಯಬ್ರಾಹ್ಮಣ, ಐತರೇಯಬ್ರಾಹ್ಮಣ, ಐತರೇಯ ಆರಣ್ಯಕ ಮುಂತಾದ ವೈದಿಕವಾಕ್ಯಗಳಲ್ಲಿ ವರ್ಣಿಸಿರುವುದನ್ನು ಮೇಲೆ ಸೂಕ್ಷ್ಮವಾಗಿ ತಿಳಿಸಿದೆ. ಇದೇ ಭರದ್ವಾಜಪದಕ್ಕೆ ಆಧ್ಯಾತ್ಮಿಕವಾದ ದೃಷ್ಟಿಯಿಂದಲೂ ತಾತ್ಪರ್ಯವನ್ನು ಕೆಲವೆಡೆಗಳಲ್ಲಿ ಹೇಳಿದೆ. ಉದಾಹರಣೆಗೆ—

**ಇಮಾವೇವ ಗೋತಮಭರದ್ವಾಜಾವಯಮೇವ ಗೋತಮೋಽಯಂ ಭರದ್ವಾಜಃ ॥**

(ಬೃ. ಉ. ೨-೨-೪)

ಈ ಶ್ರೋತ್ರೇಂದ್ರಿಯಗಳೇ ಗೋತಮಭರದ್ವಾಜರು. ಅವುಗಳಲ್ಲಿ ಒಂದು ಗೋತಮನು ಮತ್ತು ಇನ್ನೊಂದು ಭರದ್ವಾಜ ಎಂದು ಆ ಮಹರ್ಷಿಯು ಯಾವ ತತ್ತ್ವವನ್ನು ಪ್ರತಿಬಿಂಬಿಸುವನು ಎಂಬ ವಿಷಯವನ್ನು ತಿಳಿಸಿದೆ

## ಪುರಾಣೇತಿಹಾಸಗಳಲ್ಲಿ ಪ್ರಸಿದ್ಧವಾಗಿರುವ ಭರದ್ವಾಜರು

ವೈದಿಕವಾಙ್ಮಯದಲ್ಲಿ ಪ್ರಶಂಸಿತನಾಗಿರುವ ಭರದ್ವಾಜನೇ ಮಹಾಭಾರತಾದಿಗಳಲ್ಲಿಯೂ ಪ್ರಸಿದ್ಧನಾಗಿದ್ದಾನೆ. ಮಹಾಭಾರತ, ಶ್ರೀಮದ್ಭಾಗವತ, ವಿಷ್ಣುಪುರಾಣ ಮತ್ತು ಮತ್ಸ್ಯಪುರಾಣಗಳಲ್ಲಿ ಭರದ್ವಾಜಋಷಿಯ ವಂಶ, ಉತ್ಪತ್ತಿ ಮತ್ತು ಸ್ವರೂಪ ಇವುಗಳ ವರ್ಣನಗಳು ಬೃಹದ್ದೇವತೆಯಲ್ಲಿ ಮೇಲೆ ವರ್ಣಿತವಾದಂತೆಯೇ ಇರುವ ವಿಷಯವು ಪ್ರಸಿದ್ಧವಾಗಿದೆ. ಇವನು ಬೃಹಸ್ಪತಿಪುತ್ರನು. ಬೃಹಸ್ಪತಿಪುತ್ರನಾದ ಈ ಭರದ್ವಾಜನು ಭರತಪುತ್ರನೆಂದು ಪುರಾಣಗಳಲ್ಲಿ ವರ್ಣಿತನಾಗಿದ್ದಾನೆ. ಈ ವಿಷಯವು ಶ್ರೀಮದ್ಭಾಗವತದಲ್ಲಿ ಈ ರೀತಿ ತಿಳಿಸಲ್ಪಟ್ಟಿದೆ.

**ತಸ್ಯಾಸನ್ನೃಪ ವೈದರ್ಭ್ಯಃ ಪತ್ನ್ಯಸ್ತಿಸ್ರಃ ಸುಸಂಮತಾಃ ।**
**ಜಘ್ನುಸ್ತ್ಯಾಗಭಯಾತ್ಪುತ್ರಾನ್ನಾನುರೂಪಾ ಇತೀರಿತೇ ॥**
**ತಸ್ಯೈವಂ ವಿತಥೇ ವಂಶೇ ತದರ್ಥಂ ಯಜತಸ್ಸುತಂ ।**
**ಮರುತ್ಸ್ತೋಮೇನ ಮರುತೋ ಭರದ್ವಾಜಮುಪಾದದುಃ ॥**

(ಭಾಗವತ. ೯-೨೦-೩೪, ೩೫)

(ಇಂದ್ರನಿಗಿಂತಲೂ ಅಧಿಕವಾದ ಐಶ್ವರ್ಯವುಳ್ಳ) ಆ ಭರತನಿಗೆ ವಿದರ್ಭರಾಜನ ಪುತ್ರಿಯರಾದ ಮೂವರು ಪತ್ನಿಯರಿದ್ದರು. ಅವರಲ್ಲಿ ಹುಟ್ಟಿದ ಮಕ್ಕಳನ್ನು ಕಂಡು ಪತಿಯಾದ ಭರತನು "ಇವರು ನನ್ನ ಘನತೆಗೆ ತಕ್ಕ ಪುತ್ರರಲ್ಲ" ಎಂದು ಹೇಳಿಬಿಡಲಾಗಿ ಆಗ ಅವನ ಪತ್ನಿಯರು ತಮ್ಮ ಪತಿಯು ತಮ್ಮಲ್ಲಿ ಎಲ್ಲಿ ವ್ಯಭಿಚಾರಶಂಕೆಯನ್ನಿಡುವನೋ ಮತ್ತು ಎಲ್ಲಿ ತಮ್ಮನ್ನು ತ್ಯಾಗಮಾಡಿಬಿಡುವನೋ ಎಂದು ಹೆದರಿ ಆ ಮಕ್ಕಳನ್ನೆಲ್ಲಾ ಕೊಂದುಬಿಟ್ಟರು. ಕೊನೆಗೆ ಸಂತಾನವಿಲ್ಲದೆ ವಂಶದ ವಿಚ್ಛಿತ್ತಿಯು ಆಗುವ ಸನ್ನಿವೇಶವು ಬರಲಾಗಿ ಭರತನು ಸಂತಾನೇಚ್ಛೆಯುಳ್ಳವನಾಗಿ ಮರುತ್ಸ್ತೋಮವೆಂಬ ಯಾಗವನ್ನು ಮಾಡಿ ಮರುತ್ತುಗಳನ್ನು ಪೂಜಿಸಿದನು. ಆಗ ಭರತನ ಶುದ್ಧಿಯುತವಾದ ಪೂಜಾದಿಗಳಿಂದ ಮರುತ್ತುಗಳು ಸಂತುಷ್ಟರಾಗಿ ಅವನಿಗೆ ಭರದ್ವಾಜನೆಂಬ ಪುತ್ರನನ್ನನುಗ್ರಹಿಸಿದರು. ಆ ಭರದ್ವಾಜನ ಉತ್ಪತ್ತಿಕ್ರಮವು ಈ ರೀತಿ ಇರುತ್ತದೆ.

**ಅಂತರ್ವತ್ನ್ಯಾಂ ಭ್ರಾತೃಪತ್ನ್ಯಾಂ ಮೈಥುನಾಯ ಬೃಹಸ್ಪತಿಃ ।**
**ಪ್ರವೃತ್ತೋ ವಾರಿತೋ ಗರ್ಭಂ ಶಪ್ತ್ವಾ ವೀರ್ಯಮುಪಾಸೃಜತ್ ॥**
**ತಂ ತ್ಯಕ್ತುಕಾಮಾಂ ಮಮತಾಂ ಭರ್ತುಸ್ತ್ಯಾಗವಿಶಂಕಿತಾಂ ।**
**ನಾಮನಿರ್ವಚನಂ ತಸ್ಯ ಶ್ಲೋಕಮೇತಂ ಸುರಾ ಜಗುಃ ॥**
**ಮೂಢೇ ಭರ ದ್ವಾಜಮಿಮಂ ಭರ ದ್ವಾಜಂ ಬೃಹಸ್ಪತೇ ।**
**ಯಾತೌ ಯದುಕ್ತ್ವಾ ಪಿತರೌ ಭರದ್ವಾಜಸ್ತತಸ್ತ್ವಯಂ ॥**
**ಚೋದ್ಯಮಾನಾ ಸುರೈರೇವಂ ಮತ್ವಾ ವಿತಥಮಾತ್ಮಜಂ ।**
**ವ್ಯಸೃಜನ್ಮರುತೋಽಬಿಭ್ರನ್ ದತ್ತೋಽಯಂ ವಿತಥೇಽನ್ವಯೇ ॥**

(ಭಾಗವತ. ೯-೨೦-೩೫ ರಿಂದ ೩೯)

ಬೃಹಸ್ಪತಿಗೆ ಉಚಥ್ಯನೆಂಬ ಒಬ್ಬ ತಮ್ಮನಿದ್ದನು. ಅವನಿಗೆ ಮಮತೆಯೆಂಬ ಪತ್ನಿಯಿದ್ದಳು. ಆ ತಮ್ಮನ ಪತ್ನಿಯು ಗರ್ಭವತಿಯಾಗಿದ್ದ ಕಾಲದಲ್ಲಿ ಬೃಹಸ್ಪತಿಯು ಅವಳನ್ನು ಮೋಹಿಸಿ ಕಾಮಾತುರನಾಗಿ ರಹಸ್ಯವಾಗಿ ಅವಳೊಡನೆ

ಸಂಭೋಗಿಸತೊಡಗಿದನು. ಆಗ ಆಕೆಯ ಗರ್ಭರೂಪದಲ್ಲಿದ್ದ ಶಿಶುವು ಬೃಹಸ್ಪತಿಯನ್ನು ಕುರಿತು “ ಎಲೈ ಬೃಹಸ್ಪತಿಯೇ ನಾನು ಗರ್ಭರೂಪದಲ್ಲಿರುವಾಗ ನಿನ್ನ ವೀರ್ಯವು ಇಲ್ಲಿ ಸ್ಥಿತವಾಗಲು ಸಾಧ್ಯವಿಲ್ಲ. ಆದುದರಿಂದ ನಿನ್ನ ವೀರ್ಯವನ್ನು ತಡೆದಿಡು, ಅದರ ಸ್ಖಲನವಾಗಕೂಡದು ” ಎಂದು ಅವನಿಗೆ ಹೇಳಿತು. ಆಗ ಬೃಹಸ್ಪತಿಗೆ ಕೋಪಬಂದಿತು. ಕ್ರುದ್ಧನಾದ ಅವನು ಆ ಗರ್ಭವನ್ನು ಕುರಿತು, “ ಎಲೈ ಗರ್ಭವೇ, ನೀನು ಅಂಧತ್ವವನ್ನು ಹೊಂದು ಎಂದು ಅದಕ್ಕೆ ಶಾಪವನ್ನು ಕೊಟ್ಟು ನಿರ್ಬಂಧದಿಂದ ತನ್ನ ವೀರ್ಯವನ್ನು ಅದರ ಜೊತೆಯಲ್ಲಿಯೇ ಸ್ಥಾಪಿಸಿದನು ಅಂಧತ್ವವನ್ನು ಹೊಂದಿದ್ದರೂ ಸಹ ಆ ಗರ್ಭವು ಹೊಸದಾದ ಆ ವೀರ್ಯವನ್ನು ಹೊರಕ್ಕೆ ತಳ್ಳಿಬಿಟ್ಟಿತು. ನಂತರ ಪೃಥ್ವಿಯ ಮೇಲೆ ಚೆಲ್ಲಿಹೋದ ಆ ವೀರ್ಯವು ಒಡನೆಯೇ ಪುತ್ರರೂಪವನ್ನೇ ಹೊಂದಿತು ಆಗ ಮಮತೆಯು ತನ್ನ ಪುತ್ರರೂಪದಲ್ಲಿ ಜನಿಸಿದ ಆ ಮಗುವನ್ನು ತಾನು ರಕ್ಷಿಸಿ ಪೋಷಿಸಿದರೆ ತನ್ನಲ್ಲಿ ವ್ಯಭಿಚಾರಶಂಕೆಯಿಂದ ತನ್ನ ಪತಿಯು ತನ್ನನ್ನು ಎಲ್ಲಿ ತ್ಯಾಗಮಾಡಿ ಬಿಡುವನೋ ಎಂಬ ಹೆದರಿಕೆಯಿಂದ ಆ ಮಗುವನ್ನೇ ತ್ಯಜಿಸಲು ಇಚ್ಛಿಸಿದಳು. ಅವಳ ದೃಢಸಂಕಲ್ಪವನ್ನು ನೋಡಿ ದೇವತೆಗಳು, ಅವಳ ಪತಿಗೆ ಯಾವ ವಿಧವಾದ ಶಂಕೆಯೂ ಉಂಟಾಗದಂತೆಯೂ, ಅಲ್ಲಿ ಜನಿಸಿದ ಆ ಮಗುವಿನ ನಾಮಕ್ಕನುಸಾರವಾಗಿಯೂ ಇರುವಂತೆ ಬೃಹಸ್ಪತಿ ಮತ್ತು ಮಮತೆಯರಿಗೆ ಒಂದು ಸಂವಾದವನ್ನು ಉಂಟುಮಾಡಿ ಈ ರೀತಿ ಅವನ್ನು ತಿಳಿಸಿದರು. ಆ ಸಂವಾದದ ತಾತ್ಪರ್ಯವು ಸ್ವಾರಸ್ಯವಾಗಿರುತ ದೆ. ಅದೇನೆಂದರೆ,

ಬೃಹಸ್ಪತಿ :—ಎಲೈ ಮೂಢಳಾದ ಮಮತೆಯೇ, ಒಬ್ಬ ಪುರುಷನ ಸ್ವಕ್ಷೇತ್ರದಲ್ಲಿ ಬೇರೊಬ್ಬ ಪುರುಷನ ಸಹವಾಸದಿಂದ ಪುತ್ರನು ಉತ್ಪನ್ನನಾದರೆ, ಆ ಕ್ಷೇತ್ರಪಾಲಕನಿಗೂ ಅವನು ಪುತ್ರನೇ ಆಗುತ್ತಾನೆ. ಆ ಕಾರಣದಿಂದ ನೀನು ನಿನ್ನ ಪತಿಗೆ ಹೆದರಬೇಕಾಗಿಲ್ಲ. ನಮ್ಮಿಬ್ಬರಿಗೂ ಸಮನಾದ ಈ ಪುತ್ರನನ್ನು ನೀನು ತ್ಯಾಗಮಾಡದೆ ಇವನನ್ನು ರಕ್ಷಿಸಿ ಸಲಹು” ಎಂದು ಹೇಳಿದನು.

ಮಮತಾ :—“ ಎಲೈ ಬೃಹಸ್ಪತಿಯೇ, ನೀನು ಕಳ್ಳತನದಿಂದ ಬಂದು ನನ್ನಲ್ಲಿ ವ್ಯಭಿಚರಿಸಿದುದರಿಂದ ಈ ಪುತ್ರನು ಉತ್ಪನ್ನನಾದನು. ಇವನು ಅತಿಕ್ರಮಪ್ರವೇಶದಿಂದ ಉತ್ಪನ್ನನಾದುದರಿಂದ ಇವನನ್ನು ನೀನೇ ಸಲಹಬೇಕಲ್ಲದೇ, ನಾನು ಸಲಹಲು ಕಾರಣವೇ ಇಲ್ಲ ಎಂದಳು.

ಈ ರೀತಿ ಇಬ್ಬರೂ ಸಹ ತಮ್ಮ ತಮ್ಮ ವೈಯಕ್ತಿಕ ಕಾರಣಗಳನ್ನುಹೇಳಿ ಆ ಮಗುವನ್ನು ಅಲ್ಲಿಯೇ ತ್ಯಾಗಮಾಡಿ ಹೊರಟುಹೋದನು. ಆ ಕಾಲದಿಂದಲೇ ಅವನಿಗೆ **ಭರದ್ವಾಜನೆಂದು** ಹೆಸರುಂಟಾಯಿತು. ದೇವತೆಗಳು ಈ ರೀತಿಯಾದ ಸಮಾಧಾನವನ್ನುಂಟುಮಾಡುವ ಸಂವಾದವನ್ನು ರಚಿಸಿ ಮಮತೆಗೆ ಬೋಧನಾರೂಪದಲ್ಲಿ ತಿಳಿಸಿದರೂ ಸಹ ಅವಳು ಒಪ್ಪದೇ ತನ್ನ ಪತಿಯಲ್ಲದವನ ರೇತಸ್ಸಿನಿಂದ ಉತ್ಪನ್ನವಾದ ಆ ಮಗುವನ್ನು ಅಲ್ಲಿಯೇ ತ್ಯಜಿಸಿ ಹೊರಟುಹೋದಳು ಆಗ ಮರುತ್ತುಗಳು ಆ ಪುತ್ರನನ್ನು ಸಲಹಿ, ಸಂತಾನಾಪೇಕ್ಷಿಯಾದ ಭರತನಿಗೆ ಪುತ್ರರೂಪದಲ್ಲಿ ಅನುಗ್ರಹಿಸಿ ಕೊಟ್ಟರು ಎಂಬುದಾಗಿ ಶುಕಮುನಿಯು ಪರೀಕ್ಷಿದ್ರಾಜನಿಗೆ ತಿಳಿಸಿದನು. ಉಚಥ್ಯನ ಪತ್ನಿಯಲ್ಲಿ ಬೃಹಸ್ಪತಿಯಿಂದ ಜನಿಸಿದುದರಿಂದ ಇವನಿಗೆ ಭರದ್ವಾಜನೆಂದೂ ಮತ್ತು **ವಿತಥ**ವಾಗಿದ್ದ ಎಂದರೆ ಸಂತಾನಶೂನ್ಯವಾಗಿ ವ್ಯರ್ಥವಾಗಿದ್ದ ಭರತವಂಶದ ಅಭಿವೃದ್ಧಿಗೆ ಕಾರಣನಾದುದರಿಂದ ಇವನಿಗೆ **ವಿತಥ**ನೆಂದೂ ಹೆಸರಾಯಿತು. ಈ ರೀತಿ ಒಂದು ಸಂಸಾರಕ್ಕೆ ಸಂತತಿರಕ್ಷಣೆಯನ್ನು ನೀಡಿದ್ದುದರಿಂದಲೂ ಹೀಗೆಯೇ ಸಕಲ ದೇವಮಾನಾದಿಗಳನ್ನೂ ರಕ್ಷಿಸುವ ಸಾಮರ್ಥ್ಯವನ್ನು ಹೊಂದಿದುದರಿಂದಲೂ ಇವನಿಗೆ ಭರದ್ವಾಜನೆಂಬ ಹೆಸರು ಪ್ರಸಿದ್ಧವಾಯಿತು. ಇದೇ ತಾತ್ಪರ್ಯವನ್ನು ಈ ಋಷಿಯೇ ತಿಳಿಸುತ್ತಾ ಮಹಾಭಾರತದಲ್ಲಿ ತನ್ನ ನಾಮನಿರ್ವಚನವನ್ನು ಈ ರೀತಿ ಹೇಳಿದ್ದಾನೆ.

ಭರೇಽಸುತಾನ್ಭರೇ ಪೋಷ್ಯಾನ್ಭರೇ ದೇವಾನ್ ಭರೇ ದ್ವಿಜಾನ್ ।
ಭರೇ ಭಾರ್ಯಾಮಹಂ ವ್ಯಾಜಾದ್ಭರದ್ವಾಜೋಽಸ್ಮಿ ಶೋಭನೇ ॥
(ಮಹಾಭಾರತ. ಅನುಶಾಸನಪರ್ವ ಕುಂ. ೧೪೨-೩೫)

ನಾನು ಸುತರಹಿತರನ್ನೂ, ಪೋಷಣೆಗೆ ಯೋಗ್ಯರಾದವರನ್ನೂ, ದೇವತೆಗಳನ್ನೂ, ದ್ವಿಜರನ್ನೂ, ಪತ್ನಿಯನ್ನೂ ಭರಿಸುವ ಶಕ್ತಿಯನ್ನು ಹೊಂದಿದ್ದೇನೆ. ಯಾವ ಕಾರಣದಿಂದಾದರೂ ಸರಿ, ಇಂತಹ ಭರಣಯೋಗ್ಯರಾದವರನ್ನು ಭರಿಸುವ ಶಕ್ತಿಯನ್ನು ಹೊಂದಿರುವುದರಿಂದ ನನಗೆ ಭರದ್ವಾಜನೆಂದು ಹೆಸರು, ಎಂದು ಭರದ್ವಾಜನಿಗೂ ಯಾತುಧಾನಿಗೂ ನಡೆದಿರುವ ಸಂಭಾಷಣೆಯ ವಿವರವು ತಿಳಿಸುತ್ತದೆ.

ಆರ್ಷೇಯೋಪನಿಷತ್ತಿನಲ್ಲಿ ಭರದ್ವಾಜ ಮತ್ತು ಗೋತಮ ಇವರಿಬ್ಬರಿಗೂ ತತ್ತ್ವವಿಚಾರದಲ್ಲಿ ಚರ್ಚೆಯುಂಟಾಗಿ ಇವರಿಬ್ಬರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಾರೆ. ಅದೇ ಆಧ್ಯಾತ್ಮಿಕವಿಚಾರವಾದ ಚರ್ಚೆಯು ಮಹಾಭಾರತದಲ್ಲಿ ಭೃಗುವಿಗೂ, ಭರದ್ವಾಜನಿಗೂ ಸಂಭಾಷಣೆಯ ರೂಪದಲ್ಲಿರುತ್ತದೆ. ಯುಧಿಷ್ಠಿರನು ಭೀಷ್ಮನನ್ನು ಕುರಿತು ಜಗತ್ಸೃಷ್ಟಿವಿಚಾರವನ್ನು ವಿವರಿಸಬೇಕೆಂದು ಪ್ರಾರ್ಥಿಸಿದಾಗ ಭೀಷ್ಮನು ಇದೇ ವಿಚಾರದಲ್ಲಿ ಭೃಗುವಿಗೂ ಭರದ್ವಾಜನಿಗೂ ನಡೆದ ಸಂಭಾಷಣೆಯನ್ನು ತಿಳಿಸುತ್ತಾನೆ. ಈ ಸಂಭಾಷಣವು ಮಹಾಭಾರತದ ಶಾಂತಿಪರ್ವದ ೧೮೦ ನೇ ಅಧ್ಯಾಯದಿಂದ ೧೯೦ ನೇ ಅಧ್ಯಾಯದ ವರೆಗಿರುತ್ತದೆ. ಆದರೆ ಪ್ರಕೃತದಲ್ಲಿ ಉದಾಹರಣೆಗಾಗಿ ಭರದ್ವಾಜನು ಭೃಗುವನ್ನು ಪ್ರಶ್ನಿಸಿದ ಒಂದೆರಡು ಸನ್ನಿವೇಶಗಳನ್ನು ಮಾತ್ರ ತಿಳಿಸಿ ಭರದ್ವಾಜನ ಆಧ್ಯಾತ್ಮಿಕ ದೃಷ್ಟಿಯ ಪರಿಚಯವನ್ನು ಸೂಕ್ಷ್ಮವಾಗಿ ಮಾಡಿಕೊಡಲಾಗಿದೆ.

**ಭೀಷ್ಮ ಉವಾಚ :—**

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಂ ।
ಭೃಗುಣಾಭಿಹಿತಂ ಶ್ರೇಷ್ಠಂ ಭರದ್ವಾಜಾಯ ಪೃಚ್ಛತೇ ॥
ಕೈಲಾಸಶಿಖರೇ ದೃಷ್ಟ್ವಾ ದೀಪ್ಯಮಾನಮಿವೌಜಸಾ ।
ಭೃಗುಂ ಮಹರ್ಷಿಮಾಸೀನಂ ಭರದ್ವಾಜೋಽನ್ವಪೃಚ್ಛತ ॥
ಸಸಾಗರಃ ಸಗಗನಃ ಸಶೈಲಃ ಸವಲಾಹಕಃ ।
ಸಭೂಮಿಃ ಸಾಗ್ನಿಪವನಃ ಲೋಕೋಽಯಂ ಕೇನ ನಿರ್ಮಿತಃ ॥
ಕಥಂ ಸೃಷ್ಟಾನಿ ಭೂತಾನಿ ಕಥಂ ವರ್ಣವಿಭಕ್ತಯಃ ।
ಶೌಚಾಶೌಚಂ ಕಥಂ ತೇಷಾಂ ಧರ್ಮಾಧರ್ಮಾವಥೋ ಕಥಂ ॥
(ಶಾ. ಪ. ೧೮೫ ರಿಂದ ೧೨)

ಧರ್ಮರಾಜನಿಂದ ಪ್ರಶ್ನಿಸಲ್ಪಟ್ಟ ಭೀಷ್ಮನು ಹಿಂದೆ ಇತಿಹಾಸಪ್ರಸಿದ್ಧವಾದ ಭೃಗುಭರದ್ವಾಜರ ಸಂಭಾಷಣರೂಪವಾದ ಸನ್ನಿವೇಶವನ್ನು ವಿವರಿಸುತ್ತಾನೆ. ಹಿಂದೆ ಕೈಲಾಸಶಿಖರದಲ್ಲಿ ವಾಸಿಸುತ್ತಿದ್ದವನೂ, ಉಗ್ರತೇಜಸ್ಸುಳ್ಳವನೂ ಆದ ಭೃಗುಮಹರ್ಷಿಯನ್ನು ಕುರಿತು ಭರದ್ವಾಜನು ಈರೀತಿ ಪ್ರಶ್ನಿಸಿದನು. "ಎಲೈ ಮಹರ್ಷಿಯೇ, ಸಾಗರ, ಗಗನ, ಶೈಲ, ಮೇಘ, ಭೂಮಿ, ಅಗ್ನಿ, ವಾಯು ಇತ್ಯಾದಿ ಸಕಲ ಭೂತಗಳಿಂದಲೂ ಕೂಡಿದ ಈ ವಿಶ್ವವು ಯಾರಿಂದ ಹೇಗೆ ಸೃಷ್ಟವಾಯಿತು ? ಪ್ರಾಣಿಗಳ ಅದರಲ್ಲೂ ಮಾನವರ ಸೃಷ್ಟಿಯಾದುದು ಹೇಗೆ? ಧರ್ಮಾಧರ್ಮಗಳ ವಿಭಾಗವು

ಹೇಗಾಯಿತು ? ಪರಲೋಕದ ಸ್ವರೂಪವೇನು ? ಜೀವಿಗಳ ಅಂತಿಮವಾದ ಗುರಿಯೇನು? ಜನ್ಮ ಮತ್ತು ಮರಣ ವೆಂದರೇನು? ಇತ್ಯಾದಿಯಾಗಿ ಪ್ರಶ್ನಿಸಲಾಗಿ ಭೃಗುಮಹರ್ಷಿಯು,

**ನಾರಾಯಣೋ ಜಗನ್ಮೂರ್ತಿರಂತರಾತ್ಮಾ ಸನಾತನಃ ।**
**ಕೂಟಸ್ಥೋಽಕ್ಷರ ಅವ್ಯಕ್ತೋ ನಿರ್ಲೇಪೋ ವ್ಯಾಪಕಃ ಪ್ರಭುಃ ॥**

ಸರ್ವಾಂತರ್ಯಾಮಿಯೂ, ಜಗದ್ವ್ಯಾಪಿಯೂ ಸನಾತನನೂ, ಕೂಟಸ್ಥನೂ, ಅಕ್ಷರನೂ, ಅವ್ಯಕ್ತನೂ, ದೋಷ ರಹಿತನೂ, ಸಕಲ ಲೋಕಗಳಿಗೂ ಪ್ರಭುವೂ ಆದ ಶ್ರೀಮನ್ನಾರಾಯಣನೇ ಸಕಲ ಜಂಗಮಾಜಂಗಮಾತ್ಮಕವಾದ ವಿಶ್ವಕ್ಕೂ ಸೃಷ್ಟಿಕರ್ತನು ಮತ್ತು ನಿಯಾಮಕನು ಇತ್ಯಾದಿಯಾಗಿ ಸೃಷ್ಟಿಪ್ರಕಾರವನ್ನು ತಿಳಿಸಿದ್ದಾನೆ. ಪುನಃ ಭರದ್ವಾಜನ **" ಕಿಂ ತಸ್ಯ ಧರ್ಮಾಚರಣಂ ಕಿಂ ವಾ ಧರ್ಮಸ್ಯ ಲಕ್ಷಣಂ "** ಇತ್ಯಾದಿ ಪ್ರಶ್ನೆಗಳಿಗೂ ಭೃಗುವು ಸ್ವಧರ್ಮಸ್ವರೂಪವನ್ನು ವಿವರಿಸಿದ್ದಾನೆ. ಗ್ರಂಥವಿಸ್ತಾರಭಯದಿಂದ ಈ ವಿಷಯವನ್ನು ವಿಶದವಾಗಿ ವಿವರಿಸಿಲ್ಲ.

ಪುನಃ ಯುಧಿಷ್ಠಿರನನ್ನು ಧರ್ಮರಾಜನು ಇನ್ನೊಂದು ಸಂದರ್ಭದಲ್ಲಿ ಧರ್ಮದ ವಿಚಾರದಲ್ಲಿ ಪ್ರಶ್ನಿಸುತ್ತಾನೆ– " ಕಾಲಸ್ವಭಾವದಿಂದ ಧರ್ಮವು ಕ್ಷೀಣಿಸಿ ಕಳ್ಳಕಾಕರರು ಮುಂತಾದ ಶತ್ರುಗಳಿಂದ ಪೀಡೆಯುಂಟಾದರೆ ಏನುಮಾಡ ಬೇಕು?" ಎಂದು ಕೇಳಿದಾಗ ಭೀಷ್ಮನು " ಈ ವಿಚಾರದಲ್ಲಿ ಭರದ್ವಾಜನು ಶತ್ರುಂತಪನಿಗೆ ಹೇಳಿದ್ದನ್ನು ಈಗ ನಾನೂ ಹೇಳುತ್ತೇನೆ ಕೇಳು—"ರಾಜನಿಗೆ ಮುಖ್ಯಸಾಧನ ದಂಡ" ಇತ್ಯಾದಿಯಾಗಿ ಭರದ್ವಾಜನಿಂದ ಉಪದಿಷ್ಟವಾದ ದಂಡ ನೀತಿಯನ್ನು ವಿವರಿಸುತ್ತಾನೆ.

ಹೀಗೆ ಬೃಹದ್ದೇವತೆಯಲ್ಲಿಯೂ ಭಾಗವತಾದಿಗಳಲ್ಲಿಯೂ ವಿವರಿಸಿದಂತೆಯೇ, ಮತ್ಸ್ಯಪುರಾಣದಲ್ಲಿಯೂ ಸಹ ಭರದ್ವಾಜನ ಉತ್ಪತ್ತಿ ಮತ್ತು ಪ್ರಭಾವಗಳು ವರ್ಣಿತವಾಗಿವೆ. ಆದರೆ, ಬೃಹದ್ದೇವತೆಯಲ್ಲಿ ಮರುತ್ತುಗಳು ಭರತನಿಗೆ ಭರದ್ವಾಜನನ್ನು ಪುತ್ರನನ್ನಾಗಿ ಮಾಡಿಕೊಟ್ಟ ವಿಷಯ ಮಾತ್ರ ಇಲ್ಲ. ಮತ್ಸ್ಯಪುರಾಣದ ವಾಕ್ಯಗಳು ಈ ರೀತಿ ಇವೆ.

**॥ ಋಷಯ ಊಚುಃ ॥**

**ಭರತಸ್ಯ ಭರದ್ವಾಜಃ ಪುತ್ರಾರ್ಥಂ ಮಾರುತೈಃ ಕಥಂ ।**
**ಸಂಕ್ರಾಮಿತೋ ಮಹಾತೇಜಾಸ್ತನ್ನೋ ಬ್ರೂಹಿ ಯಥಾತಥಂ ॥**

**॥ ಸೂತ ಉವಾಚ ॥**

**ಪತ್ನ್ಯಾಮಾಪನ್ನಸತ್ತ್ವಾಯಾಮುಶಿಜಃ ಸ ಸ್ಥಿತೋ ಭುವಿ ।**
**ಭ್ರಾತುರ್ಭಾರ್ಯಾಂ ಸ ದೃಷ್ಟ್ವಾ ತು ಬೃಹಸ್ಪತಿರುವಾಚ ಹ ॥**

.... .... .... .... ....

.... .... .... .... ....

**ಸಂಕ್ರಾಮಿತೋ ಭರದ್ವಾಜೋ ಮರುದ್ಭಿರ್ಭರತಂ ಪ್ರತಿ ॥**

(ಮತ್ಸ್ಯಪುರಾಣ ಅಧ್ಯಾಯ ೪೯)

ಮೇಲೆ ಭಾಗವತದಲ್ಲಿ ಯಾವರೀತಿ ಭರದ್ವಾಜನ ಉತ್ಪತ್ತ್ಯಾದಿ ವಿಷಯಗಳು ವರ್ಣಿತವಾಗಿವೆಯೋ ಅದೇ ವಿಷಯವೇ ಮತ್ಸ್ಯಪುರಾಣದಲ್ಲೂ ಅದೇ ವಿವರಣೆಗಳಿಂದಲೇ ತಿಳಿಸಲ್ಪಟ್ಟಿದೆಯಾದುದರಿಂದ ಈ ಭಾಗವನ್ನು ವಿಸ್ತರಿಸಿ ವಿವರಿಸಿಲ್ಲ.

ಮಹಾಭಾರತದ ಅರಣ್ಯಪರ್ವದಲ್ಲಿ ವರ್ಣಿತನಾಗಿರುವ ಭರದ್ವಾಜನು ಮೇಲೆ ಹೇಳಿದ ಭರದ್ವಾಜನಿಗಿಂತಲೂ ಬೇರೆಯಾಗಿರಬೇಕು. ಅರಣ್ಯಪರ್ವದಲ್ಲಿ ವಿವೃತನಾಗಿರುವವನೂ ಒಬ್ಬ ಋಷಿ. ಇವನ ವಿಷಯವನ್ನು ಅರಣ್ಯಪರ್ವದ ೧೩೭-೧೪೦ ನೇ ಪರ್ವಗಳಲ್ಲಿ ವಿವರಿಸಿ. ಇವನ ವಿಚಾರವನ್ನು ಪ್ರಕೃತದಲ್ಲಿ ಅತ್ಯಂತ ಸಂಗ್ರಹರೂಪದಲ್ಲಿ ಮಾತ್ರ ತಿಳಿಸಲಾಗುತ್ತದೆ.

ಭರದ್ವಾಜಶ್ಚ ರೈಭ್ಯಶ್ಚ ಸಖಾಯೌ ಸಂಬಭೂವತುಃ ।
ತಾವೂಷತುರಿಹಾತ್ಯಂತಂ ಪ್ರೀಯಮಾಣೌ ವನಾಂತರೇ ॥
(ವ. ಪ. ೧೩೭-೧೨)

ರೈಭ್ಯನೂ, ಭರದ್ವಾಜನೂ ಮಿತ್ರರಾಗಿದ್ದರು. ಪರಸ್ಪರ ಪ್ರೀತಿಯಿಂದಿದ್ದರು. ಭರದ್ವಾಜನಿಗೆ ಯವಕ್ರೀತನೆಂಬ ಮಗನಿದ್ದನು. ಅವನು ರೈಭ್ಯನಲ್ಲಿ ಒಂದೆರಡು ಸಲ ಬಹಳ ಅವಿವೇಕದಿಂದ ವ್ಯವಹರಿಸಲು ರೈಭ್ಯಮುನಿಯು ಕಲ್ಪಿಸಿದ ಕ್ಷುದ್ರದೇವತೆಯು ಯವಕ್ರೀತನನ್ನು ಕೊಂದಿತು. ಪುತ್ರಶೋಕವನ್ನು ತಾಳಲಾರದೆ ಭರದ್ವಾಜನು ಅಗ್ನಿಪ್ರವೇಶ ಮಾಡಿದನು ಆಗ ರೈಭ್ಯನು ಭರದ್ವಾಜನನ್ನು ಬದುಕಿಸಿದನು (ವನಪರ್ವ ೧೩೭-೧೪೦). ಭರದ್ವಾಜನೆಂಬ ಮತ್ತೊಬ್ಬ ಮಹರ್ಷಿಯು ಮಹಾಭಾರತದ ಶಲ್ಯಪರ್ವದಲ್ಲಿ ವರ್ಣಿತನಾಗಿದ್ದಾನೆ.

ಭರದ್ವಾಜಸ್ಯ ವಿಪ್ರರ್ಷೇಃ ಸ್ಕನ್ನಂ ರೇತೋ ಮಹಾತ್ಮನಃ ।
ದೃಷ್ಟ್ವಾಪ್ಸರಸಮಾಯಾಂತೀಂ ಘೃತಾಚೀಂ ಪೃಥುಲೋಚನಾಂ ॥
ಸ ತು ಜಗ್ರಾಹ ತದ್ರೇತಃ ಕರೇಣ ಜಪತಾಃ ವರಃ ।
ತದಾಪತತ್ಪರ್ಣಪುಟೇ ತತ್ರ ಸಾ ಸಂಭವತ್ಸುತಾ ॥
ತಸ್ಯಾಸ್ತು ಜಾತಕರ್ಮಾದಿ ಕೃತ್ವಾ ಸರ್ವಂ ತಪೋಧನಃ ।
ನಾಮ ಚಾಸ್ಯಾಃ ಸ ಕೃತವಾನ್ಭರದ್ವಾಜೋ ಮಹಾಮುನಿಃ ॥
ಶ್ರುತಾವತೀತಿ ಧರ್ಮಾತ್ಮಾ ದೇವರ್ಷಿಗಣಸಂಸದಿ ।
(ಮ. ಭಾ. ಶಲ್ಯಪರ್ವ ೪೯-೬೨ ರಿಂದ ೬೫)

ಭರದ್ವಾಜನು ಒಂದುಸಲ ಘೃತಾಚೀಯೆಂಬ ಅಪ್ಸರಸ್ತ್ರೀಯನ್ನು ನೋಡಿ ಮೋಹಿತನಾದಾಗ ಅವನ ರೇತಃಸ್ಖಲನವಾಯಿತು. ಆಗ ಅದನ್ನು ಪರ್ಣಪುಟದಲ್ಲಿಟ್ಟಾಗ ಓರ್ವ ಪುತ್ರೀ ಜನನವಾಯಿತು. ಅವಳಿಗೆ ಜಾತಕರ್ಮಾದಿಗಳನ್ನು ಮಾಡಿದನು. ಅವಳೇ ದೇವರ್ಷಿಗಳ ಸಮೂಹದಲ್ಲೆಲ್ಲಾ ಶ್ರುತಾವತೀಯೆಂದು ಪ್ರಸಿದ್ಧಳಾದಳು. ಇತ್ಯಾದಿಯಾಗಿ ವರ್ಣಿತವಾಗಿದೆ.

ಶ್ರೀಮದ್ರಾಮಾಯಣದಲ್ಲಿ ಪ್ರಶಂಸಿತನಾಗಿರುವ ಭರದ್ವಾಜನು ಮತ್ತೊಬ್ಬ ಮಹರ್ಷಿ. ಇವನು ವಾಲ್ಮೀಕಿ ಮಹರ್ಷಿಯ ಶಿಷ್ಯನು (ರಾ. ಬಾಲಕಾಂಡ ೨). ಈತನು ಪ್ರಯಾಗಕ್ಷೇತ್ರದಲ್ಲಿ ವಾಸಮಾಡುತ್ತಿದ್ದನು. ಶ್ರೀರಾಮನು ದಂಡಕಾರಣ್ಯಕ್ಕೆ ಹೊರಟಾಗ ಈತನಲ್ಲಿಗೆ ಹೋಗಿ ತನಗೆ ವಾಸಯೋಗ್ಯವಾದ ಪ್ರದೇಶವಾವುದೆಂದು ಕೇಳಿ ಅಲ್ಲಿಂದ ಹತ್ತು ಗಾವುದದ ದೂರದಲ್ಲಿ ಚಿತ್ರಕೂಟಪರ್ವತವಿರುವುದೆಂದೂ ಅದೇ ವಾಸಯೋಗ್ಯವಾದ ಪ್ರದೇಶವೆಂದೂ ತಿಳಿದು ಅಲ್ಲಿಂದ ಚಿತ್ರಕೂಟಕ್ಕೆ ಬಂದು ಸೇರಿದನು. ರಾಮಾಯಣದಲ್ಲಿ ಈ ಮಹರ್ಷಿಯ ಸ್ವರೂಪವು ಈ ರೀತಿ ವರ್ಣಿತವಾಗಿದೆ.

ಸ ಪ್ರವಿಶ್ಯ ಮಹಾತ್ಮಾನಮೃಷಿಂ ಶಿಷ್ಯಗಣೈರ್ವೃತಂ ।
ಸಂಶಿತವ್ರತಮೇಕಾಗ್ರಂ ತಪಸಾ ಲಬ್ಧಚಕ್ಷುಷಂ ॥
ಹುತಾಗ್ನಿಹೋತ್ರಂ ದೃಷ್ಟ್ವೈವ ಮಹಾಭಾಗಂ ಕೃತಾಂಜಲಿಃ ।
ರಾಮಃ ಸೌಮಿತ್ರಿಣಾ ಸಾರ್ಧಂ ಸೀತಯಾ ಚಾಭ್ಯವಾದಯತ್ ॥

(ಅಯೋಧ್ಯಾಕಾಂಡ. ೫೪-೧೦ ರಿಂದ ೧೨)

ಅನಂತರ ಪರಾಕ್ರಮಶಾಲಿಗಳಾದ ರಾಮಲಕ್ಷ್ಮಣರಿಬ್ಬರೂ ಸೀತಾಸಮೇತರಾಗಿ ಭರದ್ವಾಜಋಷಿಯ ದರ್ಶನವನ್ನು ಪಡೆಯಲೋಸುಗ ಸ್ವಲ್ಪಹೊತ್ತು ದೂರದಲ್ಲಿಯೇ ನಿಂತು ನಿರೀಕ್ಷಿಸುತ್ತಿದ್ದರು. ಸ್ವಲ್ಪ ಹೊತ್ತಾದ ಬಳಿಕ ಶ್ರೀರಾಮನು ಆಶ್ರಮದೊಳಕ್ಕೆ ಹೋಗಿ ಮಹಾನುಭಾವನೂ, ಶಿಷ್ಯಸಮೂಹದಿಂದ ಸುತ್ತುವರೆಯಲ್ಪಟ್ಟವನೂ, ಮಹಾ ತೀಕ್ಷ್ಣವಾದ ವ್ರತನಿಯಮವುಳ್ಳವನೂ, ಧ್ಯಾನಪರನೂ, ತಪಸ್ಸಿನಿಂದ ಲಬ್ಧವಾದ ಜ್ಞಾನದೃಷ್ಟಿಯುಳ್ಳವನೂ, ಪೂಜ್ಯನೂ ಅಗ್ನಿಹೋತ್ರವನ್ನು ನೆರವೇರಿಸಿಕುಳಿತಿರುವವನೂ ಆದ ಭರದ್ವಾಜನನ್ನು ನೋಡಿದರು ಎಂದು ಈ ಮಹರ್ಷಿಯನ್ನು ಸ್ತುತಿಸಿದೆ.

ಉಪಾನಯತ ಧರ್ಮಾತ್ಮಾ ಗಾಮರ್ಘ್ಯಮುದಕಂ ತತಃ ।
ನಾನಾವಿಧಾನ್ನರಸಾನ್ ವನ್ಯಮೂಲಫಲಾಶ್ರಯಾನ್ ॥
ತೇಭ್ಯೋ ದದೌ ತಪ್ತತಪಾ ವಾಸಂ ಚೈವಾಭ್ಯಕಲ್ಪಯತ್ ॥

(ಅಯೋಧ್ಯಾ. ೫೪-೧೭, ೧೮)

ಅನಂತರ ಭರದ್ವಾಜಮುನಿಯು ಬುದ್ಧಿಶಾಲಿಯಾಗಿರುವ ಆತನನ್ನು ಸನ್ಮಾನಿಸಲು ಅರ್ಘ್ಯೋದಕವನ್ನೂ ಗೋವನ್ನೂ ತೆಗೆದುಕೊಂಡು ಬಂದನು. ಮತ್ತು ತಪೋವಂತರಲ್ಲಿ ಶ್ರೇಷ್ಠನಾದ ಆ ಭರದ್ವಾಜಮುನಿಯು ಸೀತಾರಾಮ ಲಕ್ಷ್ಮಣರಿಗೆ ಕಂದಮೂಲಫಲಗಳನ್ನೂ ನಾನಾವಿಧವಾದ ಅನ್ನಪಾನಾದಿಗಳನ್ನೂ ಸಮರ್ಪಿಸಿದನು. ಮತ್ತು ಅವರಿಗೆ ವಾಸ ಮಾಡಲು ಯೋಗ್ಯವಾದ ಸ್ಥಾನವನ್ನೂ ಕಲ್ಪಿಸಿಕೊಟ್ಟನು.

ಭರತನು ಶ್ರೀರಾಮನನ್ನು ಅಯೋಧ್ಯೆಗೆ ಕರೆತರಲು ಹೋದಾಗ ಭರತನ ಅಭಿಪ್ರಾಯವನ್ನು ತಿಳಿದ ಅವನನ್ನು ಶ್ಲಾಘಿಸಿ ಅವನಿಗೂ ಅವನ ಪರಿವಾರಕ್ಕೂ ಔತಣವನ್ನು ಮಾಡಿಸಿದನು.

ರಾವಣವಧಾನಂತರ ಶ್ರೀರಾಮನು ಸೀತಾಲಕ್ಷ್ಮಣಾದಿಗಳೊಂದಿಗೆ ಅಯೋಧ್ಯೆಗೆ ಹೊರಟು ನಡುದಾರಿಯಲ್ಲಿ ಈತನ ಆಶ್ರಮಕ್ಕೆ ಬಂದನು. ಆಗ ಭರದ್ವಾಜನು ಎಲ್ಲರಿಗೂ ಔತನವನ್ನು ಮಾಡಿಸಿದನು.

ಹೀಗೆ ಭರದ್ವಾಜಮಹರ್ಷಿಯ ವೈಭವವು ಅನೇಕಕಡೆಗಳಲ್ಲಿ ವರ್ಣಿತವಾಗಿದೆ ಆದರೆ ಋಗ್ವೇದದಲ್ಲಿ ಕಂಡುಬರುವ ಭರದ್ವಾಜನಲ್ಲದೇ ಇನ್ನೆಷ್ಟುಮಂದಿ ಈ ಹೆಸರಿನ ಮಹರ್ಷಿಗಳಿದ್ದರೆಂದು ನಿಷ್ಕೃಷ್ಟರಾಗಿ ಹೇಳಲು ಸಾಧ್ಯವಿಲ್ಲ. ಋಕ್ಸಂಹಿತೆಯಲ್ಲಿ ಈ ಮಹರ್ಷಿಪ್ರಣೀತವಾದ ಸೂಕ್ತಗಳು ಯಾವುವೆಂದರೆ,

೬–೧ ರಿಂದ ೩೦; ೬–೩೭ ರಿಂದ ೪೩; ೬–೫೩ ರಿಂದ ೭೪; ೯–೬೭–೧ ರಿಂದ ೩; ೧೦–೧೩೭–೧.

ಪುರಾಣ ಮತ್ತು ಇತಿಹಾಸಗಳಲ್ಲಿ ಭರತಪುತ್ರನೆಂದು ಪ್ರಸಿದ್ಧನಾಗಿರುವ ಭರದ್ವಾಜನೂ ಮತ್ತು ಋಕ್ಸಂಹಿತಾ ಸೂಕ್ತದ್ರಷ್ಟೃವಾದ ಭರದ್ವಾಜನೂ ಒಂದೇ ವ್ಯಕ್ತಿಯೇ ಅಥವಾ ಬೇರೆ ಬೇರೆಯೇ ಎಂಬ ವಿಷಯದಲ್ಲಿ ನಿಷ್ಕೃಷ್ಟವಾದ

ಅಭಿಪ್ರಾಯವನ್ನು ಹೇಳುವುದು ಸುಲಭವಲ್ಲ. ಶ್ರೀಮದ್ಭಾಗವತ ಮತ್ತು ಮತ್ಸ್ಯಪುರಾಣಗಳಲ್ಲಿ ಭರದ್ವಾಜನು ಭರತ ಪುತ್ರನಾದುದು ಹೇಗೆ ಎಂಬುದನ್ನು ವಿವರಿಸಿರುವ ವಿಷಯವನ್ನು ಮೇಲೆ ತಿಳಿಸಿದೆ. ಋಕ್ಸಂಹಿತೆಯಲ್ಲಿಯೂ ಸಹ ಭರದ್ವಾಜನು ಭರತನನ್ನು ತನ್ನ ಹಿರಿಯನೆಂದು ಹೇಳಿಕೊಳ್ಳುವ ಪ್ರಕರಣವು ಸ್ಪಷ್ಟವಾಗಿದೆ. ಹೇಗೆಂದರೆ,

**ತ್ವಾಮೀಳೇ ಅಧ ದ್ವಿತಾ ಭರತೋ ವಾಜಿಭಿಃ ಶುನಂ । ಈಜೇ ಯಜ್ಞೇಷು ಯಜ್ಞಿಯಂ ॥**

(ಋ. ಸಂ. ೬-೧೬-೪)

ಎಂಬಲ್ಲಿ **ಭರತನು** ಅಗ್ನಿಯನ್ನು ಪೂಜಿಸಿದ ಪ್ರಕರಣವನ್ನು ಭರದ್ವಾಜನು ಪ್ರಶಂಸಿಸಿದ್ದಾನೆ. ಸಾಯಣರು ಇಲ್ಲಿ **ಭರತ** ಶಬ್ದಕ್ಕೆ, **ದೌಷ್ಯಂತಿರೇತತ್ಸಂಜ್ಞೋ ರಾಜಾ** । ದುಷ್ಯಂತಪುತ್ರನಾದ ಭರತನೇ ಇಲ್ಲಿ ನಿರ್ದಿಷ್ಟನಾಗಿದ್ದಾನೆ ಎಂದು ತಿಳಿಸಿದ್ದಾರೆ. ಈ ಭರದ್ವಾಜನು ಭರತನಿಗೆ ಸಾಕ್ಷಾತ್ಪುತ್ರನಲ್ಲ ಮರುತ್ತುಗಳು ಮಾತಾಪಿತೃಗಳಿಂದ ತ್ಯಕ್ತನಾದ ಭರದ್ವಾಜನನ್ನು ತಂದು ಭರತನಿಗೆ ಒಪ್ಪಿಸಿದರು ಎಂದು ಪುರಾಣಗಳು ವರ್ಣಿಸಿರುವುದನ್ನು ಮೇಲೆ ತಿಳಿಸಿದೆ. ವೈದಿಕ ಪ್ರಕರಣಗಳಲ್ಲೂ ಸಹ ಭರದ್ವಾಜನಿಗೂ ಮರುತ್ತುಗಳಿಗೂ ಇರುವ ಸಾಕ್ಷಾತ್ಸಂಬಂಧವನ್ನು ತಿಳಿಸಿದೆ. ಮೇಲೆ ಉದಾಹೃತವಾಗಿರುವ ಬೃಹದ್ದೇವತಾವಾಕ್ಯದಲ್ಲಿ **"ಮರುತ್ವಾಸ್ತಸೀದ್ಗುರುರ್ಯಶ್ಚ"** (ಬೃ ದೇ. ೫-೧೦೩) ಎಂಬ ವಾಕ್ಯದಲ್ಲಿ ಭರದ್ವಾಜನು ಮರುತ್ತುಗಳಿಗೆ ಗುರುವಾಗಿದ್ದನು ಎಂಬ ಅಂಶವನ್ನು ತಿಳಿಸಿದೆ. (ಆದರೆ ಪುರಾಣಗಳಲ್ಲಿ ಮರುತ್ತುಗಳಿಗೆ ಗುರುವೆಂಬ ಅಂಶವನ್ನು ತಿಳಿಸಿಲ್ಲ.) ಆದುದರಿಂದ, ಉದಾಹೃತವಾಗಿರುವ ಮೇಲಿನ ಮಂತ್ರದಿಂದ (೬-೧೬-೪) ಭರದ್ವಾಜನು, ಭರತನು ತನಗೆ ಪೂಜ್ಯನೂ ಆದರ್ಶಪುರುಷನೂ, ಆಗಿದ್ದನು ಎಂದು ಹೇಳಿದಂತಾಯಿತು.

ಎರಡನೆ ದಾಗಿ, ಭರದ್ವಾಜನು ಮಮತೆಯ ಪುತ್ರನೆಂದು ಪುರಾಣಗಳಲ್ಲಿ ಹೇಳಿರುವಂತೆಯೇ ಬೃಹದ್ದೇವತಾ ವಾಕ್ಯವೂ ಸಹ ಮಮತೆಯ ಪುತ್ರನೆಂದು ತಿಳಿಸುತ್ತದೆ. ಇದೇ ಸಂಬಂಧವನ್ನು ಋಕ್ಸಂಹಿತಾವಾಕ್ಯವೂ ಸೂಚಿಸು ವುದೆಂದು ಕೆಲವು ಪ್ರಕರಣಗಳಿಂದ ಊಹಿಸಬಹುದಾಗಿದೆ. ಉದಾಹರಣೆಗೆ,

**ತಮು ದ್ಯುಮಃ ಪುರ್ವಣೀಕ ಹೋತರಗ್ನೇ ಅಗ್ನಿಭಿರ್ಮನುಷ ಇಧಾನಃ ।**
**ಸ್ತೋಮಂ ಯಮಸ್ಮೈ ಮಮತೇವ ಶೂಷಂ ಘೃತಂ ನ ಶುಚಿ ಮತಯಃ ಪವಂತೇ ॥**

(ಋ. ಸಂ. ೬-೧೦-೨)

ಎಂಬಲ್ಲಿ ಭರದ್ವಾಜನು **ಮಮತೆ**ಯನ್ನು ತನ್ನ ಆದರ್ಶಸ್ತ್ರೀಯೆಂದು ತಿಳಿದಿರುವ ಅಂಶವು ಸ್ಪಷ್ಟವಾಗಿದೆ. ಆದರೆ ಇಲ್ಲಿ ಸಾಯಣರು **ಮಮತೆ**ಯೆಂದರೆ, ದೀರ್ಘತಮಸ್ಸಿನ ಮಾತೆಯೆಂದು ಅರ್ಥಮಾಡಿದ್ದಾರೆ. ಭರದ್ವಾಜನ ಮಾತೆಯೇ ಯಾಕಾಗಿರಬಾರದು ಎಂಬ ಪ್ರಶ್ನೆಗೂ ಅವಕಾಶವಿರುತ್ತದೆ. ಭರದ್ವಾಜನು ತನ್ನ ಮಾತೆಯೇ ತನಗೆ ಆದರ್ಶವ್ಯಕ್ತಿ ಯೆಂದು ಹೇಳಿರುವುದು ಸಂಭವವೂ ಸಹಜವೂ ಆಗಿರುತ್ತದೆ.

**"ಏತೇನ ಹ ವಾ ಐಂದ್ರೇಣ ಮಹಾಭಿಷೇಕೇಣ ದೀರ್ಘತಮಾ ಮಾಮತೇಯೋ ಭರತಂ ದೌಷ್ಯಂತಿಮಭಿಷಿಷೇಚ"** (ಐ. ಬ್ರಾ. ೩೯-೨೩)

ಎಂಬಲ್ಲಿ ಮಮತಾಪುತ್ರನಾದ ದೀರ್ಘತಮಸ್ಸು ದುಷ್ಯಂತನ ಪುತ್ರನಾದ ಭರತನ ಅಭಿಷೇಕವನ್ನು ನೆರವೇರಿಸಿದನು ಎಂದಿರುತ್ತದೆ. ಆಗ ದೀರ್ಘತಮಸ್ಸಿನ ಮಾತೆಯಾದ ಮಮತೆಯೂ ಭರದ್ವಾಜನ ಮಾತೆಯಾದ ಮಮತೆಯೂ

ಬೇರೆಬೇರೆವ್ಯಕ್ತಿಯೆಂದು ಹೇಳಬಹುದೇ ಎಂಬ ಪ್ರಶ್ನೆಗೂ ಅವಕಾಶವಿರುತ್ತದೆ. ಯಾವುದನ್ನೂ ನಿಷ್ಕೃಷ್ಟವಾಗಿ ಹೇಳಲು ಸರಿಯಾದ ಆಧಾರವಿಲ್ಲ.

ಒಟ್ಟಿನಲ್ಲಿ, ಅನೇಕ ಅಂಶಗಳಿಂದ ವೈದಿಕವಾಙ್ಮಯದಲ್ಲಿ ಪ್ರಸಿದ್ಧನಾದ ಭರದ್ವಾಜನೂ ಭಾಗವತ ಮತ್ತು ಮತ್ಸ್ಯಪುರಾಣಗಳಲ್ಲಿ ವರ್ಣಿತನಾಗಿರುವ ಭರದ್ವಾಜನೂ ಒಂದೇ ವ್ಯಕ್ತಿಯೆಂದು ಹೇಳಲು ಅವಕಾಶವಾಗಿರುತ್ತದೆ. ಈ ಮಹರ್ಷಿಯ ಕೃತಿಗಳಾದ ಆರನೆಯ ಮಂಡಲದ ಅನೇಕ ಸೂಕ್ತಗಳಲ್ಲಿ ಇವನ ದಿವ್ಯವಾದ ಪ್ರತಿಭೆಯೂ ಕಾವ್ಯಾತ್ಮಕವಾದ ಶೈಲಿಯೂ ಯಾವ ರೀತಿಯಲ್ಲಿ ವ್ಯಕ್ತವಾಗಿದೆಯೆಂಬುದನ್ನು ಆಯಾ ಪ್ರಕರಣಗಳಲ್ಲಿ ತಿಳಿಯಬಹುದಾಗಿದೆ.

# ಮೊದಲನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಭಾರದ್ವಾಜೇ ಷಷ್ಠೇ ಮಂಡಲೇ ಷಡನುವಾಕಾಃ । ತತ್ರ ಪ್ರಥಮೇಽನುವಾಕೇ ಪಂಚದಶ ಸೂಕ್ತಾನಿ । ತತ್ರ ತ್ವಂ ಹ್ಯಗ್ನ ಇತಿ ತ್ರಯೋದಶರ್ಚಂ ಪ್ರಥಮಂ ಸೂಕ್ತಂ । ತ್ವಂ ಹ್ಯಗ್ನೇ ಸಪ್ತೋನೇತಿ ಬಾರ್ಹಸ್ಪತ್ಯೋ ಭರದ್ವಾಜಃ ಷಷ್ಠಂ ಮಂಡಲಮಪಶ್ಯದಿತ್ಯನುಕ್ರಾಂತತ್ವಾತ್ ಮಂಡಲದ್ರಷ್ಟಾ ಸ ಏವ ಭರದ್ವಾಜ ಋಷಿಃ । ಅನಾದೇಶಪರಿಭಾಷಯಾ ತ್ರಿಷ್ಟುಪ್ । ಮಂಡಲಾದಿಪರಿಭಾಷಯಾಗ್ನಿರ್ದೇವತಾ ॥ ಪಶೋರ್ಹವಿಷ್ಯವದೀಯಮಾನೇ ಮೈತ್ರಾವರುಣೇನಾನುವಚನೀಯಮಿದಂ ಮನೋತಾಸೂಕ್ತಂ । ಸೂತ್ರಿತಂ ಚ । ತ್ವಂ ಹ್ಯಗ್ನೇ ಪ್ರಥಮ ಇತ್ಯನ್ವಾಹ । ಆ. ೩-೬ । ಇತಿ ॥ ಪ್ರಾತರನುವಾಕ ಆಗ್ನೇಯೇ ಕ್ರತೌ ತ್ರೈಷ್ಟುಭೇ ಛಂದಸ್ಯೇತದಾದಿಸೂಕ್ತಷಟ್ಕಂ ದ್ವಿತೀಯವರ್ಜಂ । ಸೂತ್ರಿತಂ ಚ । ತ್ವಂ ಹ್ಯಗ್ನೇ ಪ್ರಥಮ ಇತಿ ಷಣ್ಣಾಂ ದ್ವಿತೀಯಮುದ್ಧರೇತ್ । ಆ. ೪-೧೩ । ಇತಿ ॥ ಆದ್ಯೋಪಾಕರಣೇ ವಿನಿಯುಕ್ತಾ। ಸೂತ್ರಂ ತು ಪೂರ್ವೇ ಮಂತ್ರ ಉಕ್ತಂ ॥**

ಅನುವಾದವು—ಭರದ್ವಾಜಋಷಿದೃಷ್ಟವಾದ ಈ ಆರನೆಯ ಮಂಡಲದಲ್ಲಿ ಆರು ಅನುವಾಕಗಳಿರುವವು. ಮೊದಲನೆಯ ಅನುವಾಕದಲ್ಲಿ ಹದಿನೈದು ಸೂಕ್ತಗಳಿರುವವು ಅವುಗಳಲ್ಲಿ **ತ್ವಂ ಹ್ಯಗ್ನೇ** ಎಂಬ ಸೂಕ್ತವು ಮೊದಲನೆಯದು. ಇದರಲ್ಲಿ ಹದಿಮೂರು ಋಕ್ಕುಗಳಿರುವವು ಅನುಕ್ರಮಣಿಕೆಯಲ್ಲಿ **ತ್ವಂ ಹ್ಯಗ್ನೇ ಸಪ್ತೋನೇತಿ ಬಾರ್ಹಸ್ಪತ್ಯೋ ಭರದ್ವಾಜಃ ಷಷ್ಠಂ ಮಂಡಲಮಪಶ್ಯತ್** ಎಂದು ಹೇಳಿರುವುದರಿಂದ ಈ ಸೂಕ್ತಕ್ಕೆ ಮಂಡಲದ್ರಷ್ಟೃವಾದ ಭರದ್ವಾಜನೇ ಋಷಿಯು ; ಅಗ್ನಿಯು ದೇವತೆಯು, ತ್ರಿಷ್ಟುಪ್ ಛಂದಸ್ಸು ಪಶುಹೋಮಮಾಡುವಾಗ ಹವಿಸ್ಸಿನ ಅವದಾನಕರ್ಮದಲ್ಲಿ ಮೈತ್ರಾವರುಣನೆಂಬ ಋತ್ವಿಜನು ಪಠಿಸಬೇಕಾದ ಅನುವಚನೀಯ ಸೂಕ್ತಗಳಲ್ಲಿ ಈ ಸೂಕ್ತವನ್ನು ಮನೋತಾ ಸೂಕ್ತವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ತ್ವಂ ಹ್ಯಗ್ನೇ ಪ್ರಥಮ ಇತ್ಯನ್ವಾಹ** ಎಂಬ ಸೂತ್ರದಿಂದ (ಆ. ೩-೬) ವಿವೃತವಾಗಿರುವುದು ; ಮತ್ತು ಪ್ರಾತರನುವಾಕ ಮಂತ್ರಪಠನಕಾಲದಲ್ಲಿ ಆಗ್ನೇಯ ಕ್ರತುಸಂಬಂಧವಾದ ತ್ರಿಷ್ಟುಪ್ ಛಂದಸ್ಸಿನ ಮಂತ್ರಗಳಿಗಾಗಿ ಈ ಸೂಕ್ತದಿಂದ ಮುಂದಿನ—ಎರಡನೆಯ ಸೂಕ್ತವನ್ನು ಮಾತ್ರ ಬಿಟ್ಟು—ಆರು ಸೂಕ್ತಗಳ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ— **ತ್ವಂ ಹ್ಯಗ್ನೇ ಪ್ರಥಮ ಇತಿ ಷಣ್ಣಾಂ ದ್ವಿತೀಯಮುದ್ಧರೇತ್** ಎಂಬ ಸೂತ್ರದಿಂದ (ಆ. ೪-೧೩) ವಿವೃತವಾಗಿರುವುದು. ಈ ಸೂಕ್ತದ ಮೊದಲನೆಯ ಋಕ್ಕನ್ನು ಅಧ್ಯಾಯೋಪಾಕರಣ ಉತ್ಸರ್ಜನಗಳ ಪ್ರಧಾನ ಹೋಮಗಳಲ್ಲಿ ಉಪಯೋಗಿಸಬೇಕೆಂದು ಆಶ್ವಲಾಯನಗೃಹ್ಯಸೂತ್ರದ—ಅ. ೩-೫ ನೆಯ ಸೂತ್ರದಲ್ಲಿ ಹೇಳಿರುವುದು.

## ಸೂಕ್ತ ೧

ಮಂಡಲ—೬ ‖ ಅನುವಾಕ—೧ ‖ ಸೂಕ್ತ—೧ ‖

ಅಷ್ಟಕ—೪ ‖ ಅಧ್ಯಾಯ—೧ ‖ ವರ್ಗ—೩೫ ‖

‖ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೩ ‖

‖ ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ‖

‖ ದೇವತಾ—ಅಗ್ನಿಃ ‖

‖ ಛಂದಃ—ತ್ರಿಷ್ಟುಪ್ ‖

‖ ಸಂಹಿತಾಪಾಠಃ ‖

ತ್ವಂ ಹ್ಯಗ್ನೇ ಪ್ರಥಮೋ ಮನೋತಾಸ್ಯಾ ಧಿಯೋ ಅಭವೋ ದಸ್ಮ ಹೋತಾ ।
ತ್ವಂ ಸೀಂ ವೃಷನ್ನಕೃಣೋರ್ದುಷ್ಟರೀತು ಸಹೋ ವಿಶ್ವಸ್ಮೈ ಸಹಸೇ ಸಹಧ್ಯೈ ‖

‖ ಪದಪಾಠಃ ‖

ತ್ವಂ । ಹಿ । ಅಗ್ನೇ । ಪ್ರಥಮಃ । ಮನೋತಾ । ಅಸ್ಯಾಃ । ಧಿಯಃ । ಅಭವಃ । ದಸ್ಮ । ಹೋತಾ ।
ತ್ವಂ । ಸೀಂ । ವೃಷನ್ । ಅಕೃಣೋಃ । ದುಸ್ತರೀತು । ಸಹಃ । ವಿಶ್ವಸ್ಮೈ । ಸಹಸೇ । ಸಹಧ್ಯೈ ‖ ೧ ‖

‖ ಸಾಯಣಭಾಷ್ಯಂ ‖

ಹೇ ಅಗ್ನೇ ಪ್ರಥಮೋ ದೇವಾನಾಂ ಮಧ್ಯೇ ಪ್ರಥಮಃ ಪ್ರತಮಃ ಪ್ರಕೃಷ್ಟತಮಃ ಪೂರ್ವಭಾವೀ ವಾ ತ್ವಂ ಮನೋತಾ ಹಿ ದೇವಾನಾಂ ಮನೋ ಯಸ್ಮಿನ್ನೋತಂ ಸಂಬದ್ಧಂ ಭವತಿ ತಾದೃಶೋ ಭವತಿ । ಹಿಶಬ್ದೋಽಗ್ನಿಃ ಸರ್ವಾ ಮನೋತಾಗ್ನೌ ಮನೋತಾಃ ಸಂಗಚ್ಛಂತೇ । ಐ. ಬ್ರಾ. ೨-೧೦ । ಇತ್ಯಾದಿಬ್ರಾಹ್ಮಣಪ್ರಸಿದ್ಧಿದ್ಯೋತನಾರ್ಥಃ । ಹೇ ದಸ್ಮ ದರ್ಶನೀಯ ಅಸ್ಯಾ ಧಿಯೋಽಸ್ಯ ಕರ್ಮಣೋ ಹೋತಾ ದೇವಾನಾಮಾಹ್ವಾತಾಭವಃ । ಭವಸಿ । ಹೇ ವೃಷನ್ ಕಾಮಾನಾಂ ವರ್ಷಿತಃ ತ್ವಂ ಸೀಂ ಸರ್ವತೋ ದುಷ್ಟರೀತು ದುರ್ಹಿಂಸ್ಯಮಹಿಂಸ್ಯಂ ಸಹೋ ಬಲಮಕೃಣೋಃ । ಅಕರೋಃ । ಕಿಮರ್ಥಂ । ವಿಶ್ವಸ್ಮೈ ಸಹಸೇ ಸರ್ವಸ್ಮಾದಪಿ ಬಲವತಃ ಶತ್ರೋಃ ಸಹಧ್ಯಾ ಅಭಿಭವನಾಯ ‖

‖ ಪ್ರತಿಪದಾರ್ಥ ‖

ಅಗ್ನೇ—ಎಲೈ ಅಗ್ನಿಯೇ । ಪ್ರಥಮಃ—ದೇವತೆಗಳಲ್ಲೆಲ್ಲಾ ಶ್ರೇಷ್ಠನಾದ । ತ್ವಂ ಹಿ—ನೀನೇ । ಮನೋತಾ—ಎಲ್ಲರ ಮನಸ್ಸಿಗೂ ಆಕರ್ಷಕನಾಗಿದ್ದೀಯೆ । ದಸ್ಮ—ದರ್ಶನೀಯವಾದ ರೂಪವುಳ್ಳ ಎಲೈಅಗ್ನಿಯೇ। ಅಸ್ಯಾಃ ಧಿಯಃ—ಈ ಕರ್ಮಕ್ಕೆ । ಹೋತಾ—ಹೋತೃವಾಗಿ । ಅಭವಃ—ಆಗಿದ್ದೀಯೆ । ವೃಷನ್—ಕಾಮವರ್ಷಕನಾದ ಎಲೈ ಅಗ್ನಿಯೇ। ತ್ವಂ—ನೀನು । ಸೀಂ—ಸರ್ವತ್ರ। ವಿಶ್ವಸ್ಮೈ—ಸಮಸ್ತವಾದ । ಸಹಸೇ—

ಶಕ್ತಿಯುತರಾದ ಶತ್ರುಗಳ । **ಸಹಧ್ಯೈ**—ಪ್ರತಿಭಟನೆಗಾಗಿ । **ದುಷ್ಟರೀತು**— ಅಪ್ರತಿಹತವಾದ । **ಸಹಃ**— ಶಕ್ತಿಯನ್ನು । **ಅಕೃಣೋಃ**— ನಮುಗುಂಟುಮಾಡು.

॥ ಭಾವಾರ್ಥ ॥

ಎಲೈ ಅಗ್ನಿಯೇ, ದೇವತೆಗಳಲ್ಲೆಲ್ಲಾ ಪ್ರಮುಖನಾದ ನೀನು ಎಲ್ಲರಮನಸ್ಸನ್ನೂ ಆಕರ್ಷಿಸುವವನಾಗಿದ್ದೀಯೆ. ದರ್ಶನೀಯವಾದ ರೂಪವುಳ್ಳ ಎಲೈ ಅಗ್ನಿಯೇ, ನೀನು ಈ ಕರ್ಮಕ್ಕೆ ಹೋತೃವಾಗಿದ್ದೀಯೆ ಕಾಮವರ್ಷಕನಾದ ಎಲೈ ಅಗ್ನಿಯೇ, ಶಕ್ತಿಯುತರಾದ ನಮ್ಮ ಸಮಸ್ತ ಶತ್ರುಗಳನ್ನೂ ಪ್ರತಿಭಟಿಸಲು ಬೇಕಾದ ಶಕ್ತಿಯನ್ನು ನಮಗೆ ಒದಗಿಸು. ನಾವು ಸರ್ವತ್ರ ಶತ್ರುಗಳನ್ನು ಎದುರಿಸಿ ಸೋಲಿಸುವಂತಾಗಲಿ.

## English Translation.

You, Agni, are the first of the gods ; a deity to whom their minds are devoted ; pleasing of aspect, you are the invoker of the deities at this rite : showerer (of benefits), bestow upon us unsurpasstble strength, wherewith to sustain all (hostile) prowess

॥ ವಿಶೇಷವಿಷಯಗಳು ॥

**ಪ್ರಥಮಃ**-ಮುಖ್ಯನು, ಶ್ರೇಷ್ಠನು. ಯಾಸ್ಕರು ಪ್ರಥಮಶಬ್ದಕ್ಕೆ **ಪ್ರಥಮ ಇತಿ ಮುಖ್ಯನಾಮ ಪ್ರತಮೋ ಭವತಿ** (ನಿ. ೨-೨೨) ಎಂದು ನಿರ್ವಚನವನ್ನು ಹೇಳಿದ್ದಾರೆ. ಪ್ರಥಮವೆಂದರೆ ಮುಖ್ಯವೆಂದರ್ಥವು. ಎಂದರೆ, ಪ್ರಕೃಷ್ಟತಮ, ಉತ್ತಮ, ಶ್ರೇಷ್ಠ ಎಂಬರ್ಥವನ್ನು ಸೂಚಿಸುವುದು.

**ಸೀಂ**—ಸರ್ವತ್ರ. **ಸೀಮಿತಿ ಪರಿಗ್ರಹಾರ್ಥೀಯೋ ವಾ ಪದಪೂರಣೋ ವಾ** (ನಿ. ೧-೭) ಎಂದು ಯಾಸ್ಕರು ಹೇಳಿದ್ದಾರೆ. ಎಂದರೆ ಸೀಂ ಎಂಬ ಪದಕ್ಕೆ ಪರಿಗ್ರಹಾರ್ಥ (ಸ್ವೀಕರಿಸು ಎಂಬರ್ಥ) ದಲ್ಲಿ ಪ್ರಯೋಗವಿರುವುದು ಮತ್ತು ವಾಕ್ಯಪೂರಣಕ್ಕಾಗಿಯೂ ಈ ಶಬ್ದದ ವಿನಿಯೋಗವಿರುವುದೆಂದು ಹೇಳಿ ಅದರ ಸಮರ್ಥನೆಗಾಗಿ—

**ಪ್ರ ಸೀಮಾದಿತ್ಯೋ ಅಸೃಜದ್ವಿಧರ್ತಾ ಋತಂ ಸಿಂಧವೋ ವರುಣಸ್ಯ ಯಂತಿ ।**

(ಋ. ಸಂ ೨-೨೮-೪)

ಎಂಬ ಋಕ್ಕನ್ನು ಉದಾಹರಿಸಿ **ಪ್ರಸೀಮಾದಿತ್ಯೋ ಅಸೃಜತ್। ಪ್ರಾಸೃಜದಿತಿ ವಾ ಪ್ರಾಸೃಜತ್ಸರ್ವತ ಇತಿ ವಾ। ವಿಸೀಮತಃಸುರುಚೋ ವೇನ ಆವಃ ಇತಿವಾ ।** ಎಂದು ಹೇಳಿರುವರು. ಈ ಋಕ್ಕಿನಲ್ಲಿ ಸೀಂ ಎಂಬ ಶಬ್ದವು ಪದಪೂರಣಕ್ಕಾಗಿ ಉಪಯೋಗಿಸಲಾಗಿರುವುದು ಅಥವಾ **ಸರ್ವತಃ**—ಎಲ್ಲಾ ಕಡೆಯಲ್ಲಿಯೂ ಎಂಬ ಅರ್ಥವನ್ನು ಬೇಕಾದರೂ ಹೇಳಬಹುದು. ಈ ವಿಷಯದಲ್ಲಿ **ವಿಸೀಮತಃ ಸುರುಚೋ ವೇನ ಆವಃ** (ವಾ. ಸಂ ೧೩-೩) ಎಂಬ ಇನ್ನೊಂದು ಉದಾಹರಣೆಯೂ ಇರುವುದು ಎಂದು ಹೇಳಿದ್ದಾರೆ.

**ಮನೋತಾ**—ಈ ಶಬ್ದದ ಅರ್ಥವಿವರಣೆ ಮಾಡುವಾಗ ಸಾಯಣರು ಐತರೇಯ ಬ್ರಾಹ್ಮಣದಲ್ಲಿ—**ಮನೋತಾಯೈ ಹವಿಷೋಽವದೀಯಮಾನಸ್ಯಾನುಬ್ರೂಹೀತ್ಯಾಹಾಧ್ವರ್ಯುಃ** ಎಂಬ ಮಂತ್ರದ ಭಾಷ್ಯದಲ್ಲಿ ಈ ರೀತಿ

ಹೇಳಿರುವರು **ದೇವಾನಾಂ ಮನಾಂಸ್ಯೋತಾನಿ ದೃಢಂ ಪ್ರವಿಷ್ಟಾನಿ ಯಸ್ಯಾಂ ದೇವತಾಯಾಂ ಸಾ ಮನೋತಾ।** ದೇವತೆಗಳ ಮನಸ್ಸಿನಲ್ಲಿ ಯಾವ ವಿಷಯವು ದೃಢವಾಗಿ ನೆಲೆಸಿರುವುದೋ ಅದಕ್ಕೆ ಮನೋತಾ ಎಂದು ಹೆಸರು ಎಂಬಭಿಪ್ರಾಯವು. ಐತರೇಯ ಬ್ರಾಹ್ಮಣದಲ್ಲಿ ಈ ಶಬ್ದಪ್ರಯೋಗವಿರುವ ಸನ್ನಿವೇಶವನ್ನು ಇಲ್ಲಿ ಸೂಚಿಸಲಾಗಿದೆ—

> **ಮನೋತಾಯೈ ಹವಿಷೋಽವದೀಯಮಾನಸ್ಯಾನುಬ್ರೂಹೀತ್ಯಾಹಾಧ್ವರ್ಯುಃ। ತ್ವಂ ಹ್ಯಗ್ನೇ ಪ್ರಥಮೋ ಮನೋತೇತಿ ಸೂಕ್ತಮನ್ವಾಹ।**
>
> (ಐ. ಬ್ರಾ. ೬-೧೦)

ಯಜ್ಞದಲ್ಲಿ ಪಶುವಿನ ವಪಾಹೋಮಾನಂತರದಲ್ಲಿ ಅಧ್ವರ್ಯುವು ಮೈತ್ರಾವರುಣನೆಂಬ ಋತ್ವಿಜನನ್ನುದ್ದೇಶಿಸಿ **ಮನೋತಾಯೈ ಹವಿಷೋಽವದೀಯಮಾನಸ್ಯಾನುಬ್ರೂಹಿ** ಎಂದು ಪ್ರೈಷಮಂತ್ರದಿಂದ ನಿರ್ದೇಶಿಸುವನು. ಆಗ ಮೈತ್ರಾವರುಣನು **ತ್ವಂ ಹ್ಯಗ್ನೇ ಪ್ರಥಮೋ ಮನೋತಾ** ಎಂಬ [(ಋ. ಸಂ. ೬-೧) ಸೂಕ್ತವನ್ನು ಪಠಿಸುವನು.

ಇಲ್ಲಿ ಸ್ವಲ್ಪ ವಿವರಣೆಯು ಅವಶ್ಯಕವಾಗಿರುವುದು ಯಜ್ಞದಲ್ಲಿ ಪಶುಹೋಮಮಾಡುವಾಗ ಮೊದಲು ವಪಾ ಮತ್ತು ಪುರೋಡಾಶಗಳ ಹೋಮಮಾಡುವರು. ಅನಂತರ ಪಶುವಿನ ಇತರ ಅವಯವಗಳನ್ನು ಬೇರೆ ಬೇರೆ ಹೋಮಮಾಡುವರು ವಪಾ ಹೋಮಾನಂತರ ಪಶುವಿನ ಅವಯವಗಳನ್ನು ಜುಹೂ, ಮತ್ತು ಉಪಭೃತ್ ಎಂಬ ಹೆಸರಿನ ಮರದ ಸೌಟುಗಳಲ್ಲಿಟ್ಟು ಆಜ್ಯ (ತುಪ್ಪ) ವನ್ನು ಸುರಿದು ಹೋಮಮಾಡುವರು. ಈ ಅವಯವಗಳ ಆಹುತಿಗಳು ಹನ್ನೊಂದು ಇರುವುವು. ಈ ಅವಯವ ಹೋಮಮಾಡುವಾಗ ಅಧ್ವರ್ಯುವು ಜುಹೂ, ಉಪಭೃತ್ ಎಂಬ ಸೌಟುಗಳನ್ನು ಒಂದರಮೇಲೊಂದನ್ನಿಟ್ಟು ಅದರಲ್ಲಿ ಪಶುವಿನ ಅವಯವವನ್ನು ಒಂದೊಂದಾಗಿ ಇಟ್ಟು ಆಯಾ ಸಂದರ್ಭಕ್ಕನುಸಾರವಾಗಿ ಮಂತ್ರವನ್ನು ಪಠಿಸುವಾಗ ಹೋಮಮಾಡುವನು. ಹೀಗೆ ಹೋಮಮಾಡುವ ಪಶುವಿನ ಅವಯವಗಳಾವುವೆಂದರೆ ಪಶುವಿನ ಹೃದಯ, ನಾಲಿಗೆ, ಎದೆ, ಎರಡು ಪಾರ್ಶ್ವಗಳು, ಯಕೃತ್, ವಾಖೌ ಅಥವಾ ಅತಕ್ನಾ ಎಂಬ ಭಾಗಗಳು ಎಡಭಾಗದ ಬೆನ್ನಲಬು (ಸವ್ಯಂ ದೋಃ) ಸೊಂಟದ ಬಲಭಾಗ, ವೃಷಣದ ಮಧ್ಯಭಾಗ ಇವೆಲ್ಲವೂ ಜುಹೂ ಎಂಬ ಸೌಟಿನಲ್ಲಿಟ್ಟು ಹೋಮಮಾಡಲಾಗುವುದು. ಉಳಿದ ಭಾಗಗಳು ಎಂದರೆ ಬಲಭಾಗದ ಬೆನ್ನಲಬು, ವೃಷಣ ಉಳಿದ ಭಾಗ, ಸೊಂಟದ ಎಡಭಾಗ ಇವುಗಳನ್ನು ಉಪಭೃತ್ ಎಂಬ ಸೌಟಿನಲ್ಲಿಟ್ಟು ಹೋಮಮಾಡಲಾಗುವುದು. ವರ್ಷಿಷ್ಠ ಎಂಬ ಶಿಶ್ನಭಾಗವನ್ನೂ ಬಾಲವನ್ನೂ ಕತ್ತರಿಸಿ ಪ್ರತ್ಯೇಕವಾಗಿ ಹೋಮಮಾಡುವರು ಮೇಲೆ ಹೇಳಿದ ಪಶುವಿನ ಅವಯವಗಳನ್ನು ಬೇಯಿಸಿ ಅದರಮೇಲೆ ತುಪ್ಪವನ್ನು ಸುರಿದು ಹೋಮಮಾಡುವಾಗ ಅಧ್ವರ್ಯುವು ಹೋತೃವನ್ನುದ್ದೇಶಿಸಿ ಮೇಲೆ ಹೇಳಿದ **ಮನೋತಾಯೈ ಹವಿಷೋಽವದೀಯಮಾನಸ್ಯಾನು-ಬ್ರೂಹಿ**—ಎಂದರೆ ಹವಿಸ್ಸಿನಿಂದ ಮಿಶ್ರಿತವಾದ ಪಶುವಿನ ಅವಯವಗಳನ್ನು ಅಪೇಕ್ಷಿಸುವ ದೇವತೆಗಳನ್ನು ಉದ್ದೇಶಿಸಿ ಹೋಮಮಾಡುವುದಕ್ಕಾಗಿ ಸಂದರ್ಭೋಚಿತವಾದ ಮಂತ್ರಗಳನ್ನು ಹೇಳು—ಎಂದು ನಿರ್ದೇಶಿಸುವನು. ಆಗ ಹೋತೃವರ್ಗದಲ್ಲಿರುವ ಮೈತ್ರಾವರುಣನು ಪ್ರಸಕ್ತಸೂಕ್ತವಾದ **ತ್ವಂ ಹ್ಯಗ್ನೇ ಪ್ರಥಮಃ** ಎಂಬ ಸೂಕ್ತವನ್ನು ಪಠಿಸುವನು. ಪಶುವಿನ ಅವಯವಗಳನ್ನು ಅಪೇಕ್ಷಿಸುವವರಾದ್ದರಿಂದ ಈ ದೇವತೆಗಳಿಗೆ ಮನೋತಾ (ಮನಸ್ಸಿನಲ್ಲಿ ಅಪೇಕ್ಷೆ ಇರುವ ಅಥವಾ ನೆಲೆಸಿರುವ) ಎಂದು ಹೆಸರು ಈ ದೇವತೆಗಳು ಯಾರೆಂದರೆ—ಅಗ್ನಿ, ಸೋಮ, ಅಗ್ನಿಷೋಮೌ, ಇಂದ್ರಾಗ್ನೀ ಅಶ್ವಿನೌ, ವನಸ್ಪತಿ, ದೇವಾ ಆಜ್ಯಪಾ (ಆಜ್ಯಪಾನಮಾಡುವ ದೇವತೆಗಳು) ಎಂಬ ದೇವತೆಗಳು. ಇವರಲ್ಲಿ ಅಗ್ನಿಯೇ ಮೊದಲನೆಯವನೂ, ಮುಖ್ಯನಾದವನೂ ಆಗಿರುವುದರಿಂದ ಈ ಸೂಕ್ತದಲ್ಲಿ ಅಥವಾ ಪಶುವಿನ ಅವಯವ ಹೋಮದಲ್ಲಿ

**ತ್ವಂ ಹ್ಯಗ್ನೇ ಪ್ರಥಮೋ ಮನೋತಾ**—ಎಲೈ ಅಗ್ನಿಯೇ, ಪಶುವಿನ ಅವಯವಗಳನ್ನು ಅಪೇಕ್ಷಿಸುವ ದೇವತೆಗಳಲ್ಲಿ ನೀನೇ ಮೊದಲನೆಯವನೂ ಅಥವಾ ಶ್ರೇಷ್ಠನೂ ಆಗಿರುವೆ ಎಂದು ಅಗ್ನಿಯನ್ನು ಸ್ತುತಿಸಲಾಗಿದೆ.

> **ತದಾಹುರ್ಯದನ್ಯದೇವತ್ಯ ಉತ ಪಶುರ್ಭವತ್ಯಥ ಕಸ್ಮಾದಾಗ್ನೇಯಿರೇವ ಮನೋತಾಯೈ ಹವಿಷೋಽವದೀಯಮಾನಸ್ಯಾನ್ವಾಹೇತಿ ।**

ಮನೋತಾ ದೇವತೆಗಳಲ್ಲಿ ಅಗ್ನಿಯು ಮೊದಲನೆಯವನಾದರೂ ಸೋಮ ಮೊದಲಾದ ಇತರ ದೇವತೆಗಳೂ ಇರುವರು. ಆದರೆ ಮನೋತಾಸೂಕ್ತಕ್ಕಾಗಿ ಪಠಿಸುವ **ತ್ವಂ ಹ್ಯಗ್ನೇ ಪ್ರಥಮೋ ಮನೋತಾ** ಎಂಬ ಈ ಸೂಕ್ತದಲ್ಲಿ ಕೇವಲ ಅಗ್ನಿಯನ್ನು ಮಾತ್ರ ಸ್ತುತಿಸಲಾಗಿದೆ. ಇತರ ಮನೋತಾದೇವತೆಗಳ ವಿಷಯವಿಲ್ಲ ಹೀಗಿರಲಾಗಿ ಇತರ ಮನೋತಾದೇವತೆಗಳನ್ನು ಸ್ತುತಿಸಲು ಈ ಕೇವಲ ಅಗ್ನಿಪರವಾದ ಸೂಕ್ತವನ್ನು ಪಠಿಸುವುದು ತಪ್ಪಲ್ಲವೇ ಎಂದು ಕೆಲವರು ವಾದಿಸುವರು. ಅದಕ್ಕೆ ಸಮಾಧಾನವನ್ನು ಹೇಳುವರು—

> **ತಿಸ್ರೋ ವೈ ದೇವಾನಾಂ ಮನೋತಾಸ್ತಾಸು ಹಿ ತೇಷಾಂ ಮನಾಂಸ್ಯೋತಾನಿ ವಾಗ್ವೈ ದೇವಾನಾಂ ಮನೋತಾ ತಸ್ಯಾಂ ಹಿ ತೇಷಾಂ ಮನಾಂಸ್ಯೋತಾನಿ ಗೌರ್ವೈ ದೇವಾನಾಂ ಮನೋತಾ ತಸ್ಯಾಂ ಹಿ ತೇಷಾಂ ಮನಾಂಸ್ಯೋತಾನ್ಯಗ್ನಿರ್ವೈ ದೇವಾನಾಂ ಮನೋತಾ ತಸ್ಮಿನ್ಹಿ ತೇಷಾಂ ಮನಾಂಸ್ಯೋತಾನ್ಯಗ್ನಿಃ ಸರ್ವಾ ಮನೋತಾ ಅಗ್ನೌ ಮನೋತಾಃ ಸಂಗಚ್ಛಂತೇ ತಸ್ಮಾದಾಗ್ನೇಯಿರೇಹ ಮನೋತಾಯೈ ಹವಿಷೋಽವದೀಯಮಾನಸ್ಯಾನ್ವಾಹಾ ।**
>
> (ಐ ಬ್ರಾ. ೬-೧೦)

ಮನೋತಾ ದೇವತೆಗಳಲ್ಲಿಯೂ ಅಗ್ನಿ, ಗೌಃ (ಗೋವು), ವಾಕ್ (ವಾಗ್ದೇವತೆ) ಎಂಬುವರು ಮುಖ್ಯರಾದವರು, ಏಕೆಂದರೆ ಎಲ್ಲಾ ದೇವತೆಗಳ ಮನಸ್ಸೂ ಈ ಮೂರು ದೇವತೆಗಳಲ್ಲಿಯೇ ಅಡಗಿರುವುದು. ಈ ಮೂರು ದೇವತೆಗಳಲ್ಲಿಯೂ ಅಗ್ನಿಯೇ ಮುಖ್ಯನಾದವನು. ಈ ಅಗ್ನಿಯ ಮೂಲಕವೇ ಇತರ ದೇವತೆಗಳಿಗೆ ಹವಿಸ್ಸು ಅರ್ಪಿಸಲ್ಪಡುವುದು. ಆದುದರಿಂದ ಎಲ್ಲಾ ದೇವತೆಗಳ ಪರವಾಗಿ ಮುಖ್ಯದೇವತೆಯಾದ ಅಗ್ನಿಯನ್ನು ಸ್ತುತಿಸಿರುವ **ಈ ತ್ವಂ ಹ್ಯಗ್ನೇ ಪ್ರಥಮಃ** ಎಂಬ ಸೂಕ್ತವನ್ನು ಪಠಿಸಲಾಗಿದೆ. ಮನೋತಾ ದೇವತೆಗಳಲ್ಲಿ ಮುಖ್ಯನಾದ ಅಗ್ನಿಯನ್ನು ಸ್ತುತಿಸುವುದರಿಂದ ಎಲ್ಲಾ ದೇವತೆಗಳನ್ನೂ ಸ್ತುತಿಸಿದಂತಾಗುವುದು ಎಂದು ಮುಖ್ಯಾಭಿಪ್ರಾಯವು.

---

॥ ಸಂಹಿತಾಪಾಠಃ ॥

**ಅಧಾ ಹೋತಾ ನ್ಯಸೀದೋ ಯಜೀಯಾನಿಳಸ್ಪದ ಇಷಯನ್ನೀಡ್ಯಃ ಸನ್ ।**

**ತಂ ತ್ವಾ ನರಃ ಪ್ರಥಮಂ ದೇವಯಂತೋ ಮಹೋ ರಾಯೇ ಚಿತಯಂತೋ ಅನು ಗ್ಮನ್ ॥ ೨ ॥**

॥ ಪದಪಾಠಃ ॥

ಅಧ । ಹೋತಾ । ನಿ । ಅಸೀದಃ । ಯಜೀಯಾನ್ । ಇಳಃ । ಪದೇ । ಇಷಯನ್ । ಈಡ್ಯಃ । ಸನ್ ।

ತಂ । ತ್ವಾ । ನರಃ । ಪ್ರಥಮಂ । ದೇವಯಂತಃ । ಮಹಃ । ರಾಯೇ । ಚಿತಯಂತಃ । ಅನು । ಗ್ಮನ್ ॥

॥ ಸಾಯಣಭಾಷ್ಯಂ ॥

ಅಧಾಧುನಾ ಹೇ ಅಗ್ನೇ ಯಜೀಯಾನತಿಶಯೇನ ಯಷ್ಟಾ ತ್ವಂ ಹೋತಾ ಹೋಮನಿಷ್ಪಾದಕಃ ಸನ್ ಇಳೋ ಭೂಮ್ಯಾ ವೇದಿಲಕ್ಷಣಾಯಾಃ ಪದೇ ಸ್ಥಾನೇ ನ್ಯಸೀದಃ । ನಿಷಣ್ಣವಾನಸಿ । ಕಿಂ ಕುರ್ವನ್। ಇಷಯನ್ ಪಶುಪುರೋಡಾಶಾದಿಲಕ್ಷಣಮನ್ನಮಿಚ್ಛನ್ ಈಡ್ಯಃ ಸ್ತುತ್ಯಃ ಸನ್ । ತಂ ತಾದೃಶಂ ತ್ವಾ ತ್ವಾಂ ಪ್ರಥಮಮಿತರದೇವತಾಭ್ಯಃ ಪೂರ್ವಂ ದೇವಯಂತೋ ದೇವಂ ತ್ವಾಮಾತ್ಮನ ಇಚ್ಛಂತೋ ನರೋ ನೇತಾರೋ ಮನುಷ್ಯಾ ಋತ್ವಿಗ್ಯಜಮಾನಾ ಮಹೋ ಮಹತೇ ರಾಯೇ ಧನಾಯ ಚಿತಯಂತೋ ಜಾನಂತಃ ಸ್ತುತ್ಯಾ ಜ್ಞಾಪಯಂತೋ ವಾ ಅನು ಗ್ಮನ್ । ಅನ್ವಗಚ್ಛನ್ ಪೂರ್ವಂ ॥

॥ ಪ್ರತಿಪದಾರ್ಥ ॥

**ಅಧ**—ಈಗ (ಈ ಯಜ್ಞಕಾಲದಲ್ಲಿ) । **ಯಜೀಯಾನ್**—ಪೂಜ್ಯನೂ । **ಹೋತಾ**—ಹೋಮಸಂಪಾದಕನೂ ಆದ ನೀನು । **ಇಷಯನ್**—ಪುರೋಡಾಶಾದಿರೂಪವಾದ ಅನ್ನವನ್ನು ಇಚ್ಛಿಸುತ್ತಲೂ । **ಈಡ್ಯಃ**—ಸ್ತುತಿಗೆ ಅರ್ಹನಾಗಿಯೂ । **ಸನ್**—ಇರುತ್ತಾ । **ಇಳಃ**—ಯಜ್ಞವೇದಿರೂಪವಾದ ಪೃಥಿವಿಯ । **ಪದೇ**—ಸ್ಥಾನದಲ್ಲಿ । **ನ್ಯಸೀದಃ**—ಕುಳಿತುಕೊ । **ಪ್ರಥಮಂ ತಂ ತ್ವಾ**—ಅಂತಹ ಪ್ರಧಾನನಾದ ನಿನ್ನನ್ನು । **ದೇವಯಂತಃ**—ದೇವತೆಗಳನ್ನು ಪೂಜಿಸಿ ಅವರ ಅನುಗ್ರಹವನ್ನು ಹೊಂದಲಿಚ್ಛಿಸುವ । **ನರಃ**—ನೇತೃಗಳು (ಋತ್ವಿಗಾದಿಗಳು) । **ಮಹಃ**—ಮಹತ್ತಾದ । **ರಾಯೇ**—ಧನಲಾಭಕ್ಕಾಗಿ । **ಚಿತಯಂತಃ**—ಧ್ಯಾನಿಸುತ್ತಾ । **ಅನು ಗ್ಮನ್**—(ನಿನ್ನನ್ನು) ಸಮೀಪಿಸಿದ್ದಾರೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಪೂಜ್ಯನೂ ಹೋಮಸಂಪಾದಕನೂ ಆದ ನೀನು ಈ ಯಜ್ಞಕಾಲದಲ್ಲಿ ಪುರೋಡಾಶಾದಿರೂಪವಾದ ಅನ್ನವನ್ನು ಇಚ್ಛಿಸುತ್ತಲೂ, ಸ್ತುತಿಗೆ ಅರ್ಹನಾಗಿಯೂ ಇರುತ್ತಾ ಯಜ್ಞವೇದಿಯಸ್ಥಾನದಲ್ಲಿ ಕುಳಿತುಕೊ. ಎಲ್ಲಾ ದೇವತೆಗಳಿಗೂ ಪ್ರಧಾನನಾದ ನಿನ್ನನ್ನು ದೇವಪೂಜಾನಿರತರಾದ ಋತ್ವಿಗಾದಿಗಳು ಮಹತ್ತಾದ ಧನಲಾಭಕ್ಕಾಗಿ ಧ್ಯಾನಿಸುತ್ತಾ ಸಮೀಪಿಸಿದ್ದಾರೆ.

English Translation.

Offerer of the oblation, frequent celebrator of sacrifice, now sit down on the foot-mark of Ila, accepting the (sacrificial) food, and being glorified : devout men, expectant of great riches, have recourse to you as to the first (of the gods).

॥ ಸಂಹಿತಾಪಾಠಃ ॥

ವೃತೇವ ಯಂತಂ ಬಹುಭಿರ್ವಸವ್ಯೈಸ್ತ್ವೇ ರಯಿಂ ಜಾಗೃವಾಂಸೋ-
ಅನು ಗ್ಮನ್ ।
ರುಶಂತಮಗ್ನಿಂ ದರ್ಶತಂ ಬೃಹಂತಂ ವಪಾವಂತಂ ವಿಶ್ವಹಾ ದೀದಿವಾಂಸಂ॥

॥ ಪದಪಾಠಃ ॥

ವೃತಾಽಇವ । ಯಂತಂ । ಬಹುಽಭಿಃ । ವಸವ್ಯೈಃ । ತ್ವೇ ಇತಿ । ರಯಿಂ । ಜಾಗೃಽವಾಂಸಃ । ಅನು । ಗ್ಮನ್ ।
ರುಶಂತಂ । ಅಗ್ನಿಂ । ದರ್ಶತಂ । ಬೃಹಂತಂ । ವಪಾಽವಂತಂ । ವಿಶ್ವಹಾ । ದೀದಿಽವಾಂಸಂ ॥ ೩ ॥

॥ ಸಾಯಣಭಾಷ್ಯಂ ॥

ವೃತೇವ ಮಾರ್ಗೇಣ । ಇವೇತಿ ಸಂಪ್ರತ್ಯರ್ಥೇ । ಲೋಕದ್ವಯಮಧ್ಯಗತೇನ ಮಾರ್ಗೇಣ ಬಹುಭಿರನೇಕೈರ್ವಸವ್ಯೈರ್ವಸುಭಿಃ ॥ ಸ್ವಾರ್ಥಿಕಸ್ತದ್ಧಿತಪ್ರತ್ಯಯಃ ॥ ಯಜಮಾನಾನಾಂ ನಿವಾಸಯೋಗ್ಯೈರ್ವಾ ಸಾರ್ಧಂ ಯಂತಂ ಗಚ್ಛಂತಂ ತ್ವಾಮನು ಗ್ಮನ್। ಅನುಗಚ್ಛಂತಿ। ಸಂಭಜಂತೇ ಯಜಮಾನಾಃ। ಕೀದೃಶಾಸ್ತ್ವೇ । ತ್ವೇ ತ್ವಯಿ ದೇವೇ ರಯಿಂ ಧನಂ ಜಾಗೃವಾಂಸಃ । ಪ್ರಯಚ್ಛಂತ ಇತ್ಯರ್ಥಃ । ಕೀದೃಶಂ ತ್ವಾಮಿತ್ಯುಚ್ಯತೇ । ರುಶಂತಂ ದೀಪ್ತವರ್ಣಮಗ್ನಿಮಂಗನಾದಿಗುಣವಿಶಿಷ್ಟಂ ದರ್ಶತಂ ದರ್ಶನೀಯಂ ಬೃಹಂತಂ ಮಹಾಂತಂ ವಪಾವಂತಂ ವಿಶ್ವಹಾ ಸರ್ವೇಷು ಕಾಲೇಷು ದೀದಿವಾಂಸಂ ದೀಪ್ಯಮಾನಂ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ತ್ವೇ**—ನಿನ್ನಲ್ಲಿ । **ರಯಿಂ**—ಧನವನ್ನು (ಅಪೇಕ್ಷಿಸಿ) । **ಜಾಗೃವಾಂಸಃ**—ನಿನ್ನ ಪೂಜೆಯಲ್ಲಿ ನಿರತರಾದ ಯಜಮಾನರು । **ರುಶಂತಂ**—ಪ್ರಕಾಶಮಾನವಾದ ವರ್ಣವುಳ್ಳವನೂ । **ಅಗ್ನಿಂ**—ಅಂಗನಾದಿ ಗುಣವುಳ್ಳವನೂ । **ದರ್ಶತಂ**—ಆಕರ್ಷಕವಾದ ರೂಪವುಳ್ಳವನೂ । **ಬೃಹಂತಂ**—ಬೃಹತ್ಸ್ವರೂಪವುಳ್ಳವನೂ । **ವಪಾವಂತಂ**—ಹವಿರಾದ್ಯನ್ನ ವಿಶಿಷ್ಟನೂ । **ವಿಶ್ವಹಾ**—ಸಕಲ ಕಾಲಗಳಲ್ಲೂ । **ದೀದಿವಾಂಸಂ**—ಬೆಳಗುತ್ತಿರುವವನೂ । **ಬಹುಭಿಃ**—ಅನೇಕಸಂಖ್ಯಾತರಾದ । **ವಸವ್ಯೈಃ**—ವಸುಗಳೊಡನೆ । **ವೃತೇವ**—ಅಂತರಿಕ್ಷಮಾರ್ಗದಲ್ಲಿ । **ಯಂತಂ**—ಹೋಗುತ್ತಿರುವವನೂ ಆದ ನಿನ್ನನ್ನು । **ಅನು ಗ್ಮನ್**—ಸಮೀಪಿಸಿ ಬಂದಿದ್ದಾರೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಿನ್ನ ಪೂಜೆಯಲ್ಲಿ ನಿರತರಾದ ಯಜಮಾನರು ನಿನ್ನಲ್ಲಿ ಧನವನ್ನಪೇಕ್ಷಿಸಿ, ಪ್ರಕಾಶಮಾನವಾದ ವರ್ಣವುಳ್ಳವನೂ, ಅಂಗನಾದಿ ಗುಣವುಳ್ಳವನೂ, ಆಕರ್ಷಕವಾದ ರೂಪವುಳ್ಳವನೂ, ಬೃಹತ್ಸ್ವರೂಪವುಳ್ಳವನೂ,

ಹವಿರಾದ್ಯನ್ನವಿಶಿಷ್ಟನೂ, ಸಕಲ ಕಾಲಗಳಲ್ಲಿಯೂ ಬೆಳಗುತ್ತಿರುವವನೂ, ಅನೇಕ ಸಂಖ್ಯಾತವಾದ ವಸುಗಳೊಡನೆ ಅಂತರಿಕ್ಷಮಾರ್ಗದಲ್ಲಿ ಹೋಗುತ್ತಿರುವವನೂ ಆದ ನಿನ್ನನ್ನು ಸಮೀಪಿಸಿ ಬಂದಿದ್ದಾರೆ.

## English Translation.

Those who are assiduous in (worshipping) you for riches follow you, going with many Vasus by the path (of the firmament); you, the radiant Agni, of goodly aspect, mighty, fed with burnt-offerings, and blazing every day.

---

॥ ಸಂಹಿತಾಪಾಠಃ ॥

ಪದಂ ದೇವಸ್ಯ ನಮಸಾ ವ್ಯಂತಃ ಶ್ರವಸ್ಯವಃ ಶ್ರವ ಆಪನ್ನಮೃಕ್ತಂ ।
ನಾಮಾನಿ ಚಿದ್ದಧಿರೇ ಯಜ್ಞಿಯಾನಿ ಭದ್ರಾಯಾಂ ತೇ ರಣಯಂತ ಸಂದೃ-
ಷ್ಟೌ ॥ ೪ ॥

॥ ಪದಪಾಠಃ ॥

ಪದಂ । ದೇವಸ್ಯ । ನಮಸಾ । ವ್ಯಂತಃ । ಶ್ರವಸ್ಯವಃ । ಶ್ರವಃ । ಆಪನ್ । ಅಮೃಕ್ತಂ ।
ನಾಮಾನಿ । ಚಿತ್ । ದಧಿರೇ । ಯಜ್ಞಿಯಾನಿ । ಭದ್ರಾಯಾಂ । ತೇ । ರಣಯಂತ । ಸಂऽದೃಷ್ಟೌ ॥ ೪ ॥

॥ ಸಾಯಣಭಾಷ್ಯಂ ॥

ದೇವಸ್ಯ ದ್ಯೋತಮಾನಸ್ಯಾಗ್ನೇಃ ಪದಮಾವಹನೀಯಸ್ಥಾನಂ ನಮಸಾ ಹವಿಷಾ ಸ್ತೋತ್ರೇಣ ವಾ ವ್ಯಂತೋ ಗಚ್ಛಂತಃ ಶ್ರವಸ್ಯವೋಽನ್ನಮಿಚ್ಛಂತಃ ಪೂರ್ವೇ ಯಜಮಾನಾಃ ಶ್ರವಃ ಸರ್ವತ್ರ ಶ್ರೂಯಮಾಣಮನ್ನಮಮೃಕ್ತಮನ್ಯೈರಪರಿಬಾಧ್ಯಮಾಪನ್ । ಆಪ್ನುವಂತಿ । ಹೇ ಅಗ್ನೇ ತೇ ತವ ಭದ್ರಾಯಾಂ ಸ್ತುತ್ಯಾಯಾಂ ಸಂದೃಷ್ಟೌ ನಿಮಿತ್ತಾಯಾಂ ರಣಯಂತ । ರಮಯಂತಿ । ಯಜ್ಞಿಯಾನಿ ಯಜ್ಞಯೋಗ್ಯಾನಿ ನಾಮಾನಿ ನಮನೀಯಾನಿ ವೈಶ್ವಾನರೋ ಜಾತವೇದಾ ಇತ್ಯಾದೀನಿ ದಧಿರೇ । ಧಾರಯಂತಿ । ಅಥವಾ ನಮನಸಾಧನಾನಿ ಸ್ತೋತ್ರಾಣಿ ದಧಿರೇ ॥

। ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ದೇವಸ್ಯ**—ಪೂಜ್ಯನಾದ ನಿನ್ನ । **ಪದಂ**—ಆವಹನೀಯರೂಪವಾದ ಸ್ಥಾನವನ್ನು । **ನಮಸಾ**—ಹವಿಸ್ಸಿನರೂಪದ ಅನ್ನದೊಡನೆ । **ವ್ಯಂತಃ**—(ಯಜ್ಞಕ್ಕಾಗಿ) ಬಂದು ಸೇರುವವರೂ । **ಶ್ರವಸ್ಯವಃ**—ಅನ್ನಾಪೇಕ್ಷಿಗಳೂ ಆದ ಯಜಮಾನರು । **ಅಮೃಕ್ತಂ**—ಯಾರಿಂದಲೂ ಅಪಹರಿಸಲಾಗದ । **ಶ್ರವಃ**—ಅನ್ನವನ್ನು ।

**ಅಶನ್**— ಹೊಂದಿರುತ್ತಾರೆ | **ತೇ**— ನಿನ್ನ | **ಭದ್ರಾಯಾಂ**— ಮಂಗಳಕರವಾದ | **ಸಂದೃಷ್ಟೌ**— ದರ್ಶನದ ನಿಮಿತ್ತವಾಗಿ | **ರಣಯಂತ**— ಹರ್ಷಿಸುತ್ತಾರೆ | **ಯಜ್ಞಿಯಾನಿ**— ಪೂಜಾಯೋಗ್ಯವಾದ | **ನಾಮಾನಿ ಚಿತ್**— ಜಾತವೇದಾ ಇತ್ಯಾದಿ ನಾಮಗಳನ್ನೂ ಕೂಡ | **ದಧಿರೇ**— ಧ್ಯಾನರೂಪದಲ್ಲಿ ಹೊಂದುತ್ತಾರೆ (ಪಠಿಸುತ್ತಾರೆ).

॥ ಭಾವಾರ್ಥ ॥

ಎಲೈ ಅಗ್ನಿಯೇ, ಪೂಜ್ಯನಾದ, ನಿನ್ನ ಆಹವನೀಯ ರೂಪವಾದ ಸ್ಥಾನವನ್ನು ಹವಿಸ್ಸಿನರೂಪವಾದ ಅನ್ನದೊಡನೆ ನಿನ್ನ ಪೂಜೆಗಾಗಿ ಬಂದು ಸೇರುವವರೂ, ಅನ್ನಾಪೇಕ್ಷಿಗಳೂ ಆದ ಯಜಮಾನರು, ಯಾರಿಂದಲೂ ಅಪಹರಿಸಲಾಗದ ಅನ್ನವನ್ನು ಸಿದ್ಧಪಡಿಸಿದ್ದಾರೆ. ನಿನ್ನ ಮಂಗಳಕರವಾದ ದರ್ಶನದ ನಿಮಿತ್ತವಾಗಿ ಹರ್ಷಿಸುತ್ತಾರೆ. ಪೂಜಾಯೋಗ್ಯವಾದ ಜಾತವೇದಾ ಇತ್ಯಾದಿ ನಿನ್ನ ನಾಮಗಳನ್ನು ಸಹ ಪಠಿಸುತ್ತಾರೆ.

## English Translation.

Men desirous of food obtain abundance unopposed when repairing to the station of the divinity with oblations ; and when delighting, Agni, in your auspicious persence, they repeat those your names which are to be uttered at sacrifices.

॥ ವಿಶೇಷವಿಷಯಗಳು ॥

**ವ್ಯಂತಃ—ಗಚ್ಛಂತಃ** | ಯಾಸ್ಕರು ಈ ಶಬ್ದಕ್ಕೆ ನಿರ್ವಚನವನ್ನು ಈ ರೀತಿ ಹೇಳಿದಾರೆ—

**ವ್ಯಂತಃ | ವ್ಯಂತ ಇತ್ಯೇಷೋಽನೇಕಕರ್ಮಾ | ಪದಂ ದೇವಸ್ಯ ನಮಸಾ ವ್ಯಂತಃ ಇತಿ ಪಶ್ಯತಿಕರ್ಮಾ | ವ್ರೀಹಿ ಶೂರ ಪುರೋಳಾಶಂ ಇತಿ ಖಾದತಿಕರ್ಮಾ | ವೀತಂ ಪಾತಂ ಪಯಸ ಉಸ್ರಿಯಾಯಾಃ ಅಶ್ನೀತಂ ಪಿಬತಂ ಪಯಸ ಉಸ್ರಿಯಾಯಾಃ | ಉಸ್ರಿಯೇತಿ ಗೋನಾಮ | ಉಸ್ರಾವಿಣೋಽಸ್ಯಾಂ ಭೋಗಾಃ | ಉಸ್ರೇತಿ ಚ ||**

(ನಿ. ೪-೧೯)

ಎಂದರೆ— **ಪದಂ ದೇವಸ್ಯ ನಮಸಾ ವ್ಯಂತಃ** (ಋ. ಸಂ. ೬-೧-೪) ಎಂಬ ಋಕ್ಕಿನಲ್ಲಿ ವ್ಯಂತಃ ಎಂಬ ಶಬ್ದವು ನೋಡುವುದು ಎಂಬರ್ಥದಲ್ಲಿ ಪ್ರಯುಕ್ತವಾಗಿದೆ. ಸಾಯಣರು ಸಮೀಪಿಸುವರು ಎಂದರ್ಥಮಾಡಿದ್ದಾರೆ.

**ಇಮಾ ಬ್ರಹ್ಮ ಬ್ರಹ್ಮವಾಹಃ** (ಋ ಸಂ. ೩-೪೧-೩) ಎಂಬ ಋಕ್ಕಿನಲ್ಲಿ ತಿನ್ನುವುದು ಎಂಬರ್ಥದಲ್ಲಿ ಈ ಶಬ್ದದ ಪ್ರಯೋಗವಿದೆ.

**ಉತ ವಾಂ ವಿಕ್ಷು** (ಋ. ಸಂ. ೧-೧೫೩-೪) ಎಂಬ ಋಕ್ಕಿನಲ್ಲಿಯೂ **ವೀತಂ** ಎಂಬ ಶಬ್ದಕ್ಕೆ ತಿನ್ನುವುದು ಎಂದೇ ಅರ್ಥವಿರುವುದು. **ಉಸ್ರಿಯಾ** ಎಂಬ ಶಬ್ದಕ್ಕೆ ಗೋವು ಎಂದರ್ಥವು. ಏಕೆಂದರೆ ಈ ಗೋವಿನಲ್ಲಿ ಭೋಗ ಸಾಧನಗಳಾದ ಕ್ಷೀರಾದಿಗಳು ಸ್ರವಿಸುತ್ತವೆ ಎಂದರೆ ಕರೆಯುತ್ತವೆ. ಆದುದರಿಂದ ಉಸ್ರಿಯಾ ಅಥವಾ ಉಸ್ರಾ ಎಂಬ ಶಬ್ದಕ್ಕೆ ಗೋವು ಎಂದರ್ಥವು ಎಂದು ನಿರ್ವಚನದ ಮುಖ್ಯಾಭಿಪ್ರಾಯವು.

॥ ಸಂಹಿತಾಪಾಠಃ ॥

ತ್ವಾಂ ವರ್ಧಂತಿ ಕ್ಷಿತಯಃ ಪೃಥಿವ್ಯಾಂ ತ್ವಾಂ ರಾಯ ಉಭಯಾಸೋ ಜನಾ-
ನಾಂ ।
ತ್ವಂ ತ್ರಾತಾ ತರಣೇ ಚೇತ್ಯೋ ಭೂಃ ಪಿತಾ ಮಾತಾ ಸದಮಿನ್ಮಾನು
ಷಾಣಾಂ ॥ ೫ ॥

॥ ಪದಪಾಠಃ ॥

ತ್ವಾಂ । ವರ್ಧಂತಿ । ಕ್ಷಿತಯಃ । ಪೃಥಿವ್ಯಾಂ । ತ್ವಾಂ । ರಾಯಃ । ಉಭಯಾಸಃ । ಜನಾನಾಂ ।
ತ್ವಂ । ತ್ರಾತಾ । ತರಣೇ । ಚೇತ್ಯಃ । ಭೂಃ । ಪಿತಾ । ಮಾತಾ । ಸದಂ । ಇತ್ । ಮಾನುಷಾಣಾಂ ॥ ೫ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಾಂ ಕ್ಷಿತಯೋ ಮನುಷ್ಯಾ ಋತ್ವಿಜಃ ಪೃಥಿವ್ಯಾಂ ವೇದಿಲಕ್ಷಣಾಯಾಂ ವರ್ಧಂತಿ । ವರ್ಧಯಂತಿ । ಉಭಯಾಸ ಉಭಯವಿಧಾನಿ ಪಶ್ವಪಶುರೂಪಾಣಿ ಜನಾನಾಂ ಯಜಮಾನಾನಾಂ ಸಂಬಂಧೀನಿ ರಾಯೋ ಧನಾನ್ಯೃತ್ವಿಜೋಽಧ್ವರ್ಯ್ವಾದಯಸ್ತ್ವಾಂ ತ್ವಾಮುದ್ದಿಶ್ಯ ವರ್ಧಂತಿ । ಅಥವೋಭಯವಿಧಾನಿ ಧನಾನಿ ಗವಾದೀನಿ ಜನಾನಾಂ ಪುತ್ರಾದೀನಾಮರ್ಥಾಯ ಪ್ರಾಪ್ತುಂ ತ್ವಾಂ ವರ್ಧಂತಿ । ಹೇ ತರಣೇ ದುಃಖಾತ್ತಾರಕಾಗ್ನೇ ತ್ವಂ ಚೇತ್ಯೋ ಜ್ಞಾತವ್ಯಃ ಸ್ತುತ್ಯಃ ಸನ್ ತ್ರಾತಾ ರಕ್ಷಿತಾ ಭೂಃ । ಭವಸಿ । ಕಿಂಚ ಮಾನುಷಾಣಾಂ ಮನುಷ್ಯಾಣಾಂ ಸ್ತೋತೄಣಾಮಸ್ಮಾಕಂ ಸದಮಿತ್ಸರ್ವದಾ ಪಿತಾ ಮಾತಾ ಚ ಮಾತಾಪಿತೃಸ್ಥಾನೀಯೋ ಭೂಃ । ಭವಸಿ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ತ್ವಾಂ**—ನಿನ್ನನ್ನು । **ಕ್ಷಿತಯಃ**—ಯಜಮಾನರು । **ಪೃಥಿವ್ಯಾಂ**—ವೇದಿಸ್ಥಾನದಲ್ಲಿ । **ವರ್ಧಂತಿ**—ಪ್ರವೃದ್ಧನಾಗುವಂತೆ ಮಾಡುತ್ತಾರೆ । **ಜನಾನಾಂ**—ಮಾನವರಿಗೆ । **ಉಭಯಾಸಃ**—ಪಶು ಮತ್ತು ಧನರೂಪವಾದ । **ರಾಯಃ**—ಸಂಪತ್ತನ್ನೊದಗಿಸುವ । **ತ್ವಾಂ**—ನಿನ್ನನ್ನು (ಆ ಸಂಪತ್ತುಗಳಿಗಾಗಿ ಪೂಜಿಸುತ್ತಾರೆ) । **ತರಣೇ**—ರಕ್ಷಕನಾದ ಎಲೈ ಅಗ್ನಿಯೇ । **ತ್ವಂ**—ನೀನು । **ಚೇತ್ಯಃ**—ಪೂಜ್ಯನಾದ । **ತ್ರಾತಾ**—ರಕ್ಷಕನಾಗಿ । **ಭೂಃ**—ಆಗಿದ್ದೀಯೆ । **ಮಾನುಷಾಣಾಂ**—ಮಾನವರಿಗೆ । **ಸದಮಿತ್**—ಸರ್ವಕಾಲದಲ್ಲಿಯೂ । **ಮಾತಾ**—ಮಾತೃರೂಪನಾಗಿಯೂ । **ಪಿತಾ**—ಪಿತೃರೂಪನಾಗಿಯೂ ಇದ್ದೀಯೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಿನ್ನನ್ನು ಯಜಮಾನರು ವೇದಿಸ್ಥಾನದಲ್ಲಿ ಪ್ರಜ್ವಲಿತನಾಗಿ ಪ್ರವೃದ್ಧಮಾನನಾಗುವಂತೆ ಮಾಡುತ್ತಾರೆ. ಮಾನವರಿಗೆ ಪಶು ಮತ್ತು ಧನರೂಪವಾದ ಸಂಪತ್ತನ್ನೊದಗಿಸುವ ನಿನ್ನನ್ನು ಆ ಸಂಪತ್ತುಗಳಿಗಾಗಿ

ಪೂಜಿಸುತ್ತಾರೆ. ರಕ್ಷಕನಾದ ಎಲೈ ಅಗ್ನಿಯೇ, ನೀನು ಪೂಜ್ಯನಾದ ರಕ್ಷಕನಾಗಿ ಆಗಿದ್ದೀಯೆ. ಮಾನವರಿಗೆ ಸರ್ವಕಾಲ ದಲ್ಲೂ ಮಾತೃವೂ, ಪಿತೃವೂ ಆಗಿದ್ದೀಯೆ.

English Translation.

Men exalt you upon earth : they exalt you for both kinds of affluence, (cattle and treasure, which you bestow upon) men : you who extricate (us from evil) are to be known as our preserver, as the unfailing father and mother of mankind.

|| ಸಂಹಿತಾಪಾಠಃ ||

ಸಪರ್ಯೇಣ್ಯಃ ಸ ಪ್ರಿಯೋ ವಿಕ್ಷ್ವ೧ಗ್ನಿರ್ಹೋತಾ ಮಂದ್ರೋ ನಿ ಷಸಾದಾ ಯಜೀಯಾನ್ ।

ತಂ ತ್ವಾ ವಯಂ ದಮ ಆ ದೀದಿವಾಂಸಮುಪ ಜ್ಞುಬಾಧೋ ನಮಸಾ ಸದೇಮ ॥ ೬ ॥

॥ ಪದಪಾಠಃ ॥

ಸಪರ್ಯೇಣ್ಯಃ । ಸಃ । ಪ್ರಿಯಃ । ವಿಕ್ಷು । ಅಗ್ನಿಃ । ಹೋತಾ । ಮಂದ್ರಃ । ನಿ । ಸಸಾದ । ಯಜೀಯಾನ್ ।

ತಂ । ತ್ವಾ । ವಯಂ । ದಮೇ । ಆ । ದೀದಿऽವಾಂಸಂ । ಉಪ । ಜ್ಞುऽಬಾಧಃ । ನಮಸಾ । ಸದೇಮ ॥

॥ ಸಾಯಣಭಾಷ್ಯಂ ॥

ಸೋಽಗ್ನಿಃ ಸಪರ್ಯೇಣ್ಯಃ ಪೂಜ್ಯಃ ಪ್ರಿಯಃ ಕಾಮಾನಾಂ ಪೂರಕೋ ವಿಕ್ಷು ಪ್ರಜಾಸು ಹೋತಾ ಹೋಮನಿಷ್ಪಾದಕೋ ಮಂದ್ರೋ ಮದನೀಯೋ ಯಜೀಯಾನತಿಶಯೇನೇತರದೇವಾನಾಂ ಯಷ್ಟಾ ಯಜನೀಯೋ ವಾ । ಏವಂ ಮಹಾನುಭಾವೋಽಗ್ನಿರ್ನಿ ಷಸಾದ । ನಿಷಣ್ಣೋಽಭೂತ್ । ಅಥ ಪ್ರತ್ಯಕ್ಷ-ಕೃತಃ । ತಂ ತ್ವಾ ತಾದೃಶಂ ತ್ವಾಂ ವಯಂ ಯಜಮಾನಾ ದಮೇ ಗೃಹೇ ದೀದಿವಾಂಸಂ ದೀಪ್ಯಮಾನಂ ಜ್ಞುಬಾಧಃ ಜಾನುನೀ ಬಾಧಯಂತೋಽವನತಜಾನವಃ ಪ್ರಣತಾಃ ಸಂತೋ ನಮಸಾ ಸ್ತೋತ್ರೇಣೋಪಾ ಸದೇಮ । ಆಸಾದಯೇಮ । ಅಥವೋಪಾಸೀದೇಮೇತ್ಯೇವಮಾಶಾಸ್ತೇ ॥

॥ ಪ್ರತಿಪದಾರ್ಥ ॥

ಸಪರ್ಯೇಣ್ಯಃ—ಪೂಜಾಯೋಗ್ಯನೂ । ಪ್ರಿಯಃ—ಕಾಮಪೂರಕನೂ । ವಿಕ್ಷು—ಪ್ರಜೆಗಳ ನಡುವೆ । ಹೋತಾ—ಹೋಮಸಂಪಾದಕನೂ । ಮಂದ್ರಃ—ಆಹ್ಲಾದಕಾರಕನೂ । ಯಜೀಯಾನ್—ಅತಿಶಯವಾಗಿ

ಯಜ್ಞವನ್ನು ನಿರ್ವಹಿಸುವವನೂ ಆದ । **ಸಃ ಅಗ್ನಿಃ**— ಅದೇ ಅಗ್ನಿಯು । **ನಿಷಸಾದ**— ಸ್ಥಾಪಿತನಾಗಿದ್ದಾನೆ (ಎಲೈ ಅಗ್ನಿಯೇ) । **ದೀದಿವಾಂಸಂ**— ಪ್ರಕಾಶಮಾನನಾದ । **ತಂ ತ್ವಾ**— ಅಂತಹ ನಿನ್ನನ್ನು । **ವಯಂ**— ನಾವು । **ದಮೇ**— ಯಜ್ಞಗೃಹದಲ್ಲಿ । **ಜ್ಞುಬಾಧಃ**— ಮೊಣಕಾಲೂರಿ ನಮಸ್ಕರಿಸುತ್ತಾ । **ನಮಸಾ**- ಸ್ತುತಿಪೂರ್ವಕವಾಗಿ । **ಉಪ ಆ ಸದೇಮ**— ಸಮೀಪಿಸುತ್ತೇವೆ.

॥ ಭಾವಾರ್ಥ ॥

ಪೂಜಾಯೋಗ್ಯನೂ, ಕಾಮಪೂರಕನೂ, ಪ್ರಜೆಗಳ ನಡುವೆ ಹೋಮಸಂಪಾದಕನೂ, ಆಹ್ಲಾದಕಾರಕನೂ, ಅತಿಶಯವಾಗಿ ಯಜ್ಞವನ್ನು ನಿರ್ವಹಿಸುವವನೂ ಆದ ಅಗ್ನಿಯು ಯಜ್ಞಗೃಹದಲ್ಲಿ ಸ್ಥಾಪಿತನಾಗಿದ್ದಾನೆ. ಎಲೈ ಅಗ್ನಿಯೇ, ಪ್ರಕಾಶಮಾನನಾದ ನಿನ್ನನ್ನು ನಾವು ಮೊಣಕಾಲೂರಿ ನಮಸ್ಕರಿಸುತ್ತಾ ಸ್ತುತಿಪೂರ್ವಕವಾಗಿ ಸಮೀಪಿಸುತ್ತೇವೆ.

## English Translation.

Agni, who is adorable, affectionate, the offerer of oblations amongst men, the giver of delight, the celebrator of worship, has sat down (upon the altar: let us approach you, kindled in our dwellings, on bended knees, with praise.

॥ ಸಂಹಿತಾಪಾಠಃ ॥

ತಂ ತ್ವಾ ವಯಂ ಸುಧ್ಯೋ೩ ನವ್ಯಮಗ್ನೇ ಸುಮ್ನಾಯವ ಈಮಹೇ ದೇವ-
ಯಂತಃ ।
ತ್ವಂ ವಿಶೋ ಅನಯೋ ದೀದ್ಯಾನೋ ದಿವೋ ಅಗ್ನೇ ಬೃಹತಾ ರೋಚನೇನ ॥

॥ ಪದಪಾಠಃ ॥

ತಂ । ತ್ವಾಂ । ವಯಂ । ಸುಽಧ್ಯಃ । ನವ್ಯಂ । ಅಗ್ನೇ । ಸುಮ್ನಽಯವಃ । ಈಮಹೇ । ದೇವಽಯಂತಃ ।
ತ್ವಂ । ವಿಶಃ । ಅನಯಃ । ದೀದ್ಯಾನಃ । ದಿವಃ । ಅಗ್ನೇ । ಬೃಹತಾ । ರೋಚನೇನ ॥ ೭ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತಂ ತಾದೃಶಂ ಮಹಾನುಭಾವಂ ನವ್ಯಂ ಸ್ತುತ್ಯಂ ತ್ವಾ ತ್ವಾಂ ಸುಧ್ಯಃ ಶೋಭನಬುದ್ಧಯಃ ಸುಮ್ನಾಯವಃ ಸುಖಮಿಚ್ಛಂತೋ ದೇವಯಂತೋ ದೇವಂ ತ್ವಾಮಿಚ್ಛಂತೋ ವಯಮೀ-

ಮಹೇ । ಯಾಚಾಮಹೇ । ಸ್ತುಮ ಇತ್ಯರ್ಥಃ । ಹೇ ಅಗ್ನೇ ತ್ವಂ ದೀದ್ಯಾನೋ ದೀಪ್ಯಮಾನಃ ಸನ್ । ಕೇನ । ಬೃಹತಾ ಮಹತಾ ರೋಚನೇನ ರೋಚಮಾನೇನ ತೇಜಸಾ ದೀದ್ಯಾನೋ ವಿಶಃ ಪ್ರಜಾಃ ಸ್ತೋತೄನಸ್ಮಾನ್ ದಿವಃ ಸ್ವರ್ಗಮನಯಃ । ಅಗಮಯಃ । ರೋಚನೇನಾದಿತ್ಯೇನ ದಿವಮಗಮಯ ಇತಿ ವಾ ಸಂಬಂಧಃ । ಆದಿತ್ಯಮಾರ್ಗೇಣೇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ನವ್ಯಂ**—ಸ್ತುತ್ಯನಾದ । **ತಂ ತ್ವಾ**—ಅದೇ ನಿನ್ನನ್ನು । **ಸುಧ್ಯಃ**—ಶ್ರೇಷ್ಠವಾದ ಬುದ್ಧಿಯುಳ್ಳವರೂ । **ಸುಮ್ನಾಯವಃ**—ಧನಾಪೇಕ್ಷಿಗಳೂ । **ದೇವಯಂತಃ**—ದೇವತೆಗಳ ಅನುಗ್ರಹವನ್ನು ಇಚ್ಛಿಸುವವರೂ ಆದ । **ವಯಂ**—ನಾವು । **ಈಮಹೇ**—ಯಾಚಿಸುತ್ತೇವೆ । **ಅಗ್ನೇ**—ಎಲೈ ಅಗ್ನಿಯೇ । **ಬೃಹತಾ**—ಪ್ರಭೂತವಾದ । **ರೋಚನೇನ**—ಕಾಂತಿಯೊಡನೆ । **ದೀದ್ಯಾನಃ**—ಪ್ರಕಾಶಿಸುವ । **ತ್ವಂ**—ನೀನು । **ವಿಶಃ**—ಯಜಮಾನರನ್ನು । **ದಿವಃ**—ಸ್ವರ್ಗಕ್ಕೆ । **ಅನಯಃ**—ಕರೆದೊಯ್ಯುತ್ತೀಯೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಸ್ತುತ್ಯನಾದ ನಿನ್ನನ್ನು ಶ್ರೇಷ್ಠವಾದ ಬುದ್ಧಿಯುಳ್ಳವರೂ, ಧನಾಪೇಕ್ಷಿಗಳೂ, ದೇವತೆಗಳ ಅನುಗ್ರಹವನ್ನಿಚ್ಛಿಸುವವರೂ ಆದ ನಾವು ಸ್ತುತಿಸುತ್ತೇವೆ. ಎಲೈ ಅಗ್ನಿಯೇ, ಪ್ರಭೂತವಾದ ಕಾಂತಿಯೊಡನೆ ಪ್ರಕಾಶಿಸುವ ನೀನು ಯಜಮಾನರನ್ನು ಸ್ವರ್ಗಕ್ಕೆ ಕರೆದೊಯ್ಯುತ್ತೀಯೆ.

English Translation.

Intelligent, hoping for happiness, and devout, we glorify you, adorable Agni; shining with exceeding lustre, lead men to heaven.

॥ ಸಂಹಿತಾಪಾಠಃ ॥

ವಿಶಾಂ ಕವಿಂ ವಿಶ್ಪತಿಂ ಶಶ್ವತೀನಾಂ ನಿತೋಶನಂ ವೃಷಭಂ ಚರ್ಷಣೀನಾಂ ।
ಪ್ರೇತೀಷಣಿಮಿಷಯಂತಂ ಪಾವಕಂ ರಾಜಂತಮಗ್ನಿಂ ಯಜತಂ ರಯೀಣಾಂ ॥ ೮ ॥

॥ ಪದಪಾಠಃ ॥

ವಿಶಾಂ । ಕವಿಂ । ವಿಶ್ಪತಿಂ । ಶಶ್ವತೀನಾಂ । ನಿऽತೋಶನಂ । ವೃಷಭಂ । ಚರ್ಷಣೀನಾಂ ।
ಪ್ರೇತಿऽಇಷಣಿಂ । ಇಷಯಂತಂ । ಪಾವಕಂ । ರಾಜಂತಂ । ಅಗ್ನಿಂ । ಯಜತಂ । ರಯೀಣಾಂ ॥ ೮ ॥

॥ ಸಾಯಣಭಾಷ್ಯಂ ॥

**ಶಶ್ವತೀನಾಂ ನಿತ್ಯಾನಾಂ ವಿಶಾಮೃತ್ವಿಗ್ಯಜಮಾನಲಕ್ಷಣಾನಾಂ ವಿಶ್ಪತಿಂ ಸ್ವಾಮಿನಂ ಕವಿಂ ಕ್ರಾಂತದರ್ಶಿನಂ ನಿತೋಶನಂ ಶತ್ರೂಣಾಂ ಹಿಂಸಕಂ ವೃಷಭಂ ಕಾಮಾನಾಂ ವರ್ಷಕಂ ಚರ್ಷಣೀನಾಂ ಸ್ತೋತೄಣಾಂ ಮನುಷ್ಯಾಣಾಂ ಪ್ರೇತೀಷಣಿಂ ಪ್ರಾಪ್ತಗಮನಮಿಷಯಂತಮನ್ನಂ ಕುರ್ವಂತಂ ಪಾವಕಂ ಶೋಧಕಂ ರಾಜಂತಂ ದೀಪ್ಯಮಾನಂ ದೀಪಯಂತಂ ವಾ ರಯೀಣಾಂ ಲಾಭಾಯ ಯಜತಂ ಯಷ್ಟವ್ಯಮಗ್ನಿಂ ಸ್ತುಮ ಇತಿ ಶೇಷಃ ॥**

॥ ಪ್ರತಿಪದಾರ್ಥ ॥

**ಶಶ್ವತೀನಾಂ**—ಯಾವಾಗಲೂ ಯಜ್ಞಕರ್ತರಾದ । **ವಿಶಾಂ**—ಋತ್ವಿಗಾದಿಗಳಿಗೆ । **ವಿಶ್ಪತಿಂ**—ಒಡೆಯನೂ । **ಕವಿಂ**—ಕ್ರಾಂತದರ್ಶಿಯೂ । **ನಿತೋಶನಂ**—ಶತ್ರುಹಿಂಸಕನೂ । **ವೃಷಭಂ**—ಕಾಮವರ್ಷಕನೂ । **ಚರ್ಷಣೀನಾಂ**—ಸ್ತೋತೃಗಳಿಗೆ । **ಪ್ರತೀಷಣಿಂ**—ಇಷ್ಟಾರ್ಥಪ್ರಾಪಕನೂ । **ಇಷಯಂತಂ**—ಅನ್ನವನ್ನು ಒದಗಿಸುವವನೂ । **ಪಾವಕಂ**—ಶುದ್ಧಿಕಾರಕನೂ । **ರಾಜಂತಂ**—ಪ್ರಕಾಶಮಾನನೂ । **ರಯೀಣಾಂ**—ಧನಗಳಿಗಾಗಿ । **ಯಜತಂ**—ಪೂಜಿಸಲ್ಪಡುವವನೂ ಆದ । **ಅಗ್ನಿಂ**—ಅಗ್ನಿಯನ್ನು (ಸ್ತುತಿಸಿ ಪೂಜಿಸುತ್ತೇವೆ.)

॥ ಭಾವಾರ್ಥ ॥

ನಿತ್ಯವೂ ಯಜ್ಞಮಾಡತಕ್ಕ ಋತ್ವಿಗಾದಿಗಳಿಗೆ ಒಡೆಯನೂ, ಕ್ರಾಂತದರ್ಶಿಯೂ, ಶತ್ರುಹಿಂಸಕನೂ, ಕಾಮವರ್ಷಕನೂ, ಸ್ತೋತೃಗಳಿಗೆ ಇಷ್ಟಾರ್ಥಪ್ರಾಪಕನೂ ಅನ್ನವನ್ನು ಒದಗಿಸುವವನೂ, ಶುದ್ಧಿಕಾರಕನೂ, ಪ್ರಕಾಶಮಾನನೂ ಧನಗಳಿಗಾಗಿ ಪೂಜಿಸಲ್ಪಡುವವನೂ ಆದ ಅಗ್ನಿಯನ್ನು ನಾವು ಸ್ತುತಿಸಿ ಪೂಜಿಸುತ್ತೇವೆ.

## English Translation.

(We glorify) the lord of men, of ever-existing men; the wise, the destroyer (of foes), the showerer (of benefits) on mankind, the moving, the bestower of food, the purifier, the resplendent, Agni, who is worshipped for (the sake of) riches.

॥ ಸಂಹಿತಾಪಾಠಃ ॥

**ಸೋ ಅಗ್ನ ಈಜೇ ಶಶಮೇ ಚ ಮರ್ತೋ ಯಸ್ತ ಆನಟ್ ಸಮಿಧಾ ಹವ್ಯದಾತಿಂ ।**

**ಯ ಆಹುತಿಂ ಪರಿ ವೇದಾ ನಮೋಭಿರ್ವಿಶ್ವೇತ್ಸ ವಾಮಾ ದಧತೇ ತ್ವೋತಃ ॥**

॥ ಪದಪಾಠಃ ॥

ಸಃ । ಅಗ್ನೇ । ಈಜೇ । ಶಶಮೇ । ಚ । ಮರ್ತಃ । ಯಃ । ತೇ । ಆನಟ್ । ಸಂಽಇಧಾ । ಹವ್ಯಽದಾತಿಂ । ಯಃ । ಆಽಹುತಿಂ । ಪರಿ । ವೇದ । ನಮಃಽಭಿಃ । ವಿಶ್ವಾ । ಇತ್ । ಸಃ । ವಾಮಾ । ದಧತೇ । ತ್ವಾಽಊತಃ ॥ ೯ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಾಂ ಸ ಮರ್ತಃ ಸ ಯಜಮಾನ ಈಜೇ । ಯಜತೇ । ಶಶಮೇ ಚ । ಸ್ತೌತಿ । ಶಶಮಾನ ಇತಿ ಸ್ತುತಿಕರ್ಮಸು ಪಾಠಾದಿದಮಪಿ ಸ್ತುತಿಕರ್ಮ । ಯೋ ಯಜಮಾನಸ್ತೇ ತವ ಸಮಿಧಾ ಸಹ ಹವ್ಯದಾತಿಂ ಹವಿಷಾಂ ದಾನಮಾನಟ್ ಕರೋತಿ । ಕಿಂಚ ಯೋ ಯಜಮಾನೋ ನಮೋಭಿಃ ಸ್ತುತಿಭಿರಾಹುತಿಮಾಜ್ಯಾದಿಲಕ್ಷಣಾಂ ಪರಿ ವೇದ ಪರಿತೋ ವೇತ್ತಿ । ದದಾತೀತ್ಯರ್ಥಃ । ಸ ಯಜಮಾನಸ್ತ್ವೋತಸ್ತ್ವಯಾ ರಕ್ಷಿತಃ ಸನ್ ವಿಶ್ವೇತ್ ಸರ್ವಾಣಿ ವಾಮಾ ವನನೀಯಾನಿ ಧನಾನಿ ದಧತೇ । ಧಾರಯತಿ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಯಃ ಮರ್ತಃ**—ಯಾವ ಯಜಮಾನನು । **ತೇ**—ನಿನಗೆ । **ಸಮಿಧಾ**—ಸಮಿತ್ತುಗಳೊಡನೆ । **ಹವ್ಯದಾತಿಂ**—ಹವಿರ್ದಾನವನ್ನು । **ಆನಟ್**—ಅರ್ಪಿಸುವನೋ । **ಯಃ**—ಯಾವ ಯಜಮಾನನು । **ನಮೋಭಿಃ**—ಸ್ತುತಿಗಳೊಡನೆ । **ಆಹುತಿಂ**—ಆಜ್ಯಾಹುತಿಯನ್ನು । **ಪರಿ ವೇದ**—ಸುತ್ತಲೂ ಅರ್ಪಿಸುವನೋ । **ಸಃ**—ಅವನೇ । **ಈಜೇ**—(ನಿಜವಾಗಿಯೂ) ಪೂಜಿಸುತ್ತಾನೆ । **ಶಶಮೇ ಚ**—ಸ್ತುತಿಸುತ್ತಾನೆ । **ಸಃ**—ಅದೇ ಯಜಮಾನನು । **ತ್ವೋತಃ**—ನಿನ್ನಿಂದ ರಕ್ಷಿತನಾಗಿ । **ವಿಶ್ವೇತ್**—ಸಕಲವಾದ । **ವಾಮಾ**—ಆಕರ್ಷಕವಾದ ಧನಗಳನ್ನೂ । **ದಧತೇ**—ಹೊಂದುತ್ತಾನೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಯಾವ ಯಜಮಾನನು, ನಿನಗೆ ಸಮಿತ್ತುಗಳೊಡನೆ ಹವಿರ್ದಾನವನ್ನು ಅರ್ಪಿಸುವನೋ, ಯಾವ ಯಜಮಾನನು ಸ್ತುತಿಗಳೊಡನೆ ಆಜ್ಯಾಹುತಿಯನ್ನು ಸುತ್ತಲೂ ಅರ್ಪಿಸುವನೋ, ಅವನೇ ನಿಜವಾಗಿಯೂ ನಿನ್ನನ್ನು ಪೂಜಿಸುತ್ತಾನೆ ಮತ್ತು ಸ್ತುತಿಸುತ್ತಾನೆ. ಅದೇ ಯಜಮಾನನು ನಿನ್ನಿಂದ ರಕ್ಷಿತನಾಗಿ ಆಕರ್ಷಕವಾದ ಸಕಲ ಧನಗಳನ್ನೂ ಹೊಂದುತ್ತಾನೆ.

## English Translation.

The man, Agni, who worships you, who praises you, who offers oblations to you with kindled fuel, who presents burnt-offerings to you with prostrations, he verily, protected by you, obtains all desired wealth.

॥ ವಿಶೇಷವಿಷಯಗಳು ।

**ಶಶಮೇ**—ಸ್ತುತಿಸುತ್ತಾನೆ. **ಶಶಮಾನಃ** ಎಂಬ ಶಬ್ದವು (ಪೂಜಿಸು ಎಂಬರ್ಥವುಳ್ಳ) ಅರ್ಚತಿನಾಮಗಳಲ್ಲಿ ಪಠಿತವಾಗಿದೆ (ನಿ. ೩-೧೪) ಮತ್ತು ಸ್ತುತಿಸು ಎಂಬರ್ಥದಲ್ಲಿಯೂ ಈ ಶಬ್ದಪ್ರಯೋಗವಿರುವುದು.

> **ಶಶಮಾನಃ । ಶಂಸಮಾನಃ । ಯೋ ವಾಂ ಯಜ್ಞೈಃ ಶಶಮಾನೋ ಹ ದಾಶತಿ ಕವಿರ್ಹೋತಾ ಯಜತಿ ಮನ್ಮಸಾಧನಃ** (ಋ. ಸಂ. ೧-೧೫೧-೭) **ಇತಿ ನಿಗಮೋ ಭವತಿ ॥**
> (ನಿ. ೬-೮)

ಎಂದು ಹೇಳಿದಾರೆ. ಶಶಮಾನಃ ಎಂಬ ಶಬ್ದಕ್ಕೆ ಸ್ತುತಿಸಲ್ಪಡುವವನು, ಪ್ರಶಂಸಿತನು ಎಂದರ್ಥವಾಗುವುದೆಂದು ಹೇಳಿ ಅದರ ಸಮರ್ಥನೆಗಾಗಿ **ಯೋ ವಾಂ ಯಜ್ಞೈಃ** ಎಂಬ ಋಕ್ಕನ್ನು ಉದಹರಣೆಯಾಗಿ ಕೊಟ್ಟದಾರೆ.

॥ ಸಂಹಿತಾಪಾಠಃ ॥

ಅಸ್ಮಾ ಉ ತೇ ಮಹಿ ಮಹೇ ವಿಧೇಮ ನಮೋಭಿರಗ್ನೇ ಸಮಿಧೋತ ಹವ್ಯೈಃ ।
ವೇದೀ ಸೂನೋ ಸಹಸೋ ಗೀರ್ಭಿರುಕ್ಥೈರಾ ತೇ ಭದ್ರಾಯಾಂ ಸುಮತೌ ಯತೇಮ ॥ ೧೦ ॥

॥ ಪದಪಾಠಃ ॥

ಅಸ್ಮೈ । ಊಂ ಇತಿ । ತೇ । ಮಹಿ । ಮಹೇ । ವಿಧೇಮ । ನಮಃऽಭಿಃ । ಅಗ್ನೇ । ಸಂऽಇಧಾ । ಉತ । ಹವ್ಯೈಃ ।
ವೇದಿ । ಸೂನೋ ಇತಿ । ಸಹಸಃ । ಗೀಃऽಭಿಃ । ಉಕ್ಥೈಃ । ಆ । ತೇ । ಭದ್ರಾಯಾಂ । ಸುऽಮತೌ । ಯತೇಮ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಮಹೇ ಮಹತೇಽಸ್ಮೈ ತೇ ತುಭ್ಯಂ ಮಹಿ ಮಹದತ್ಯಧಿಕಂ ವಿಧೇಮ । ಪರಿಚರೇಮ। ಕೈರಿತ್ಯುಚ್ಯತೇ । ನಮೋಭಿರ್ನಮಸ್ಕಾರೈಃ ಸಮಿಧಾ ವಾ ಉತಾಪಿ ಚ ಹವ್ಯೈರ್ಹವಿರ್ಭಿಃ । ಹೇ ಸಹಸಃ ಸೂನೋ ವೇದೀ ವೇದ್ಯಾಂ ಗೀರ್ಭಿಃ ಸ್ತೋತ್ರೈರುಕ್ಥೈಃ ಶಸ್ತ್ರೈಶ್ಚ ವಿಧೇಮೇತಿ ಸಂಬಂಧಃ । ಕಿಂಚ ತೇ ತವ ಭದ್ರಾಯಾಂ ಸ್ತುತ್ಯಾಯಾಂ ಸುಮತೌ ಶೋಭನಾನುಗ್ರಹಬುದ್ಧಾವಾ ಯತೇಮ । ಆಗಚ್ಛೇಮ । ಭವೇಮೇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ। **ಮಹೇ**—ಮಹಾತ್ಮನಾದ। **ಅಸ್ಮೈ ತೇ**—ನಿನಗೆ। **ನಮೋಭಿಃ**—ನಮಸ್ಕಾರಗಳೊಡನೆಯೂ। **ಸಮಿಧಾ**—ಸಮಿತ್ತುಗಳೊಡನೆಯೂ। **ಉಕ್ಥೈಃ**—ಶಸ್ತ್ರಮಂತ್ರಗಳೊಡನೆಯೂ। **ಮಹಿ**—ಅಧಿಕವಾಗಿ। **ವಿಧೇಮ**—ಪೂಜೆಯನ್ನರ್ಪಿಸುತ್ತೇವೆ। **ಸಹಸಃ ಸೂನೋ**—ಶಕ್ತಿಪುತ್ರನಾದ ಎಲೈ ಅಗ್ನಿಯೇ। **ವೇದೀ**—ಯಜ್ಞವೇದಿಯಲ್ಲಿ। **ಗೀರ್ಭಿಃ**—ಸ್ತುತಿಗಳೊಡನೆಯೂ। **ಉಕ್ಥೈಃ**—ಮಂತ್ರಗಳೊನೆಯೂ (ಪೂಜಿಸುತ್ತೇವೆ) (ಮತ್ತು)। **ತೇ**—ನಿನ್ನ। **ಭದ್ರಾಯಾಂ**—ಮಂಗಳಾತ್ಮಕವೂ। **ಸುಮತೌ**—ಅನುಗ್ರಹಾತ್ಮಕವೂ ಆದ ಬುದ್ಧಿಯಲ್ಲಿ। **ಆ ಯತೇಮ**—ಆಶ್ರಿತರಾಗಿರುವಂತಾಗಲಿ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಮಹಾತ್ಮನಾದ ನಿನಗೆ ನಮಸ್ಕಾರಗಳೊಡನೆಯೂ, ಸಮಿತ್ತುಗಳೊಡನೆಯೂ, ಶಸ್ತ್ರಮಂತ್ರಗಳೊಡನೆಯೂ ಅಧಿಕವಾಗಿ ಪೂಜೆಯನ್ನರ್ಪಿಸುತ್ತೇವೆ. ಶಕ್ತಿಪುತ್ರನಾದ ಅಗ್ನಿಯೇ, ಯಜ್ಞವೇದಿಯಲ್ಲಿ ಸ್ತುತಿಗಳೊಡನೆಯೂ ಶಸ್ತ್ರಮಂತ್ರಗಳೊಡನೆಯೂ ನಿನ್ನನ್ನು ಪೂಜಿಸುತ್ತೇವೆ. ಮಂಗಳಾತ್ಮಕವಾದ ನಿನ್ನ ಅನುಗ್ರಹಬುದ್ಧಿಯು ನಮ್ಮ ಮೇಲೆ ಇರುವಂತೆ ಪೂಜಿಸುತ್ತೇವೆ.

## English Translation.

To you, mighty Agni, we offer exceeding adoration with prostrations, with fuel, with oblations: (we glorify you) on the altar, son of strength, with hymns and with prayers: may we be successful in our efforts (to gain) your auspicious favour.

॥ ಸಂಹಿತಾಪಾಠಃ ॥

ಆ ಯಸ್ತತಂಥ ರೋದಸೀ ವಿ ಭಾಸಾ ಶ್ರವೋಭಿಶ್ಚ ಶ್ರವಸ್ಯ೧ಸ್ತರುತ್ರಃ।
ಬೃಹದ್ಭಿರ್ವಾಜೈಃ ಸ್ಥವಿರೇಭಿರಸ್ಮೇ ರೇವದ್ಭಿರಗ್ನೇ ವಿತರಂ ವಿ ಭಾಹಿ॥ ೧೧ ॥

॥ ಪದಪಾಠಃ ॥

ಆ। ಯಃ। ತತಂಥ। ರೋದಸೀ ಇತಿ। ವಿ। ಭಾಸಾ। ಶ್ರವಃಽಭಿಃ। ಚ। ಶ್ರವಸ್ಯಃ। ತರುತ್ರಃ।
ಬೃಹತ್ಽಭಿಃ। ವಾಜೈಃ। ಸ್ಥವಿರೇಭಿಃ। ಅಸ್ಮೇ ಇತಿ। ರೇವತ್ಽಭಿಃ। ಅಗ್ನೇ। ವಿಽತರಂ। ವಿ। ಭಾಹಿ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಯಸ್ತ್ವಂ ರೋದಸೀ ದ್ಯಾವಾಪೃಥಿವ್ಯೌ ಭಾಸಾ ದೀಪ್ತ್ಯಾ ವ್ಯಾ ತತಂಥ ವ್ಯತನೋಃ। ಕಿಂಚ ತರುತ್ರಸ್ತಾರಕಸ್ತ್ವಂ ಶ್ರವೋಭಿಃ ಸ್ತುತಿಭಿಃ ಶ್ರವಸ್ಯಶ್ಚ ಭವಸಿ ಹೇ ತಾದೃಶಾಗ್ನೇ ಬೃಹದ್ಭಿರ್ಮಹದ್ಭಿರ್ವಾಜೈರನ್ನೈಃ ಸ್ಥವಿರೇಭಿಃ ಸ್ಥವಿರೈಃ ಸ್ಥೂಲೈ ರೇವದ್ಭೀ ರಯಿಮದ್ಭಿರಸ್ಮೇ ಅಸ್ಮದರ್ಥಂ ವಿತರಂ ವಿಶಿಷ್ಟತರಂ ವಿ ಭಾಹಿ । ವಿಶೇಷೇಣ ದೀಪ್ಯಸ್ವ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । ಯಃ—ಯಾವ ನೀನು । ರೋದಸೀ—ದ್ಯಾವಾಪೃಥಿವಿಗಳೆರಡನ್ನೂ । ಭಾಸಾ—ನಿನ್ನ ತೇಜಸ್ಸಿನಿಂದ । ವಿ ಆ ತತಂಥ—ವಿಸ್ತರಿಸಿ ವ್ಯಾಪಿಸಿದ್ದೀಯೋ । (ಮತ್ತು) ತರುತ್ರಃ-ರಕ್ಷಕನಾಗಿ । ಶ್ರವೋಭಿಃ—ಸ್ತುತಿಗಳಿಂದ । ಶ್ರವಸ್ಯಃ—ಪೂಜ್ಯನಾಗಿದ್ದೀಯೋ । (ಅಂತಹ ನೀನು) ಬೃಹದ್ಭಿಃ—ಅಧಿಕವಾದ । ವಾಜೈಃ—ಅನ್ನಗಳೊಡನೆಯೂ । ಸ್ಥವಿರೇಭಿಃ—ಪ್ರಭೂತವಾದ । ರೇವದ್ಭಿಃ—ಧನಗಳೊಡನೆಯೂ । ವಿತರಂ-ಅಧಿಕವಾಗಿ । ಅಸ್ಮೇ—ನಮಗೋಸ್ಕರ । ವಿಭಾಹಿ—ಪ್ರಕಾಶಿಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಯಾವ ನೀನು ದ್ಯಾವಾಪೃಥಿವಿಗಳೆರಡನ್ನೂ ನಿನ್ನ ತೇಜಸ್ಸಿನಿಂದ ವಿಸ್ತರಿಸಿ ವ್ಯಾಪಿಸಿದ್ದೀಯೋ ಮತ್ತು ರಕ್ಷಕನಾಗಿದ್ದು ಸ್ತುತಿಗಳಿಂದ ಪೂಜಿಸಲ್ಪಡುವೆಯೋ, ಅಂತಹ ನೀನು ಅಧಿಕವಾದ ಅನ್ನಗಳೊಡನೆಯೂ, ಪ್ರಭೂತವಾದ ಧನಗಳೊಡನೆಯೂ ನಮಗೋಸ್ಕರ ಅಧಿಕವಾಗಿ ಪ್ರಕಾಶಿಸು.

## English Translation.

Do you, Agni, who have spread heaven and earth with light, who are the preserver (of man), and (who are) to be glorified with praises, shine brightly upon us with abundant food, and with substantial riches.

॥ ಸಂಹಿತಾಪಾಠಃ ॥

ನೃವದ್ವಸೋ ಸದಮಿದ್ಧೇಹ್ಯಸ್ಮೇ ಭೂರಿ ತೋಕಾಯ ತನಯಾಯ ಪಶ್ವಃ ।
ಪೂರ್ವೀರಿಷೋ ಬೃಹತೀರಾರೇಅಘಾ ಅಸ್ಮೇ ಭದ್ರಾ ಸೌಶ್ರವಸಾನಿ ಸಂತು ॥

॥ ಪದಪಾಠಃ ॥

ನೃವತ್ । ವಸೋ ಇತಿ । ಸದಂ । ಇತ್ । ಧೇಹಿ । ಅಸ್ಮೇ ಇತಿ । ಭೂರಿ । ತೋಕಾಯ । ತನಯಾಯ । ಪಶ್ವಃ ।

ಪೂರ್ವೀಃ । ಇಷಃ । ಬೃಹತೀಃ । ಆರೇಅಘಾಃ । ಅಸ್ಮೇ ಇತಿ । ಭದ್ರಾ । ಸೌಶ್ರವಸಾನಿ । ಸಂತು ॥ ೧೨ ॥

॥ ಸಾಯಣಭಾಷ್ಯಂ ॥

ಹೇ ವಸೋ ವಾಸಕ ಧನವನ್ನಾಗ್ನೇ ನೃವತ್ ಮನುಷ್ಯೈರುಪೇತಂ ಧನಂ ಸದಮಿತ್ಸರ್ವದಾಸ್ಮೇ ಅಸ್ಮಾಸು ಧೇಹಿ । ಸ್ಥಾಪಯ । ಕಿಂಚ ಭೂರಿ ಪ್ರಭೂತಾನ್ ಪಶ್ವಃ ಪಶೂಂಶ್ಚ ಧೇಹಿ । ಕಿಮರ್ಥಂ । ತೋಕಾಯಾಸ್ಮತ್ಪುತ್ರಾಯ ತನಯಾಯ ತತ್ಪುತ್ರಾಯ । ಕಿಂಚ ಪೂರ್ವೀಃ ಪೂರಯಿತ್ರ್ಯಃ ಕಾಮಾನಾಂ ಬಹ್ವ್ಯೋ ವಾ ಬೃಹತೀರ್ಮಹತ್ಯ ಅರೇಅಘಾಃ । ಅರೇ ದೂರೇಽಘಾನಿ ಯಾಸು ತಾಃ । ತಾದೃಶ್ಯ ಇಷ ಉಕ್ತಲಕ್ಷಣಾನ್ಯನ್ನಾನಿ ಭದ್ರಾ ಭದ್ರಾಣಿ ಸೌಶ್ರವಸಾನಿ ಸುಶ್ರವಸ್ತ್ವಾನ್ಯಸ್ಮೇ ಅಸ್ಮಾಸು ಸಂತು । ಭವಂತು ॥

॥ ಪ್ರತಿಪದಾರ್ಥ ॥

**ವಸೋ**— ಧನವಂತನಾದ ಎಲೈ ಅಗ್ನಿಯೇ। **ನೃವತ್** – ಮನುಷ್ಯರಿಂದೊಡಗೂಡಿದ ಧನವನ್ನು। **ಅಸ್ಮೇ**— ನಮಗೆ । **ಸದಮಿತ್**—ಸರ್ವದಾ । **ಧೇಹಿ**—ಒದಗಿಸು । **ತೋಕಾಯ**—ನಮ್ಮ ಪುತ್ರರಿಗೂ । **ತನಯಾಯ**— ಮೊಮ್ಮಕ್ಕಳೂ । **ಭೂರಿ**—ಪ್ರಭೂತವಾದ । **ಪಶ್ವಃ**—ಪಶುಗಳನ್ನು (ಒದಗಿಸು) । **ಪೂರ್ವೀಃ**—ಅಧಿಕವಾಗಿ ತೃಪ್ತಿದಾಯಕವಾದವೂ । **ಬೃಹತೀಃ**—ಪ್ರಭೂತವಾದವೂ । **ಅರೇಅಘಾಃ**—ಪಾಪರಹಿತವಾದವೂ ಆದ । **ಇಷಃ**—ಅನ್ನಗಳನ್ನು ಒದಗಿಸು । **ಭದ್ರಾ**—ಮಂಗಳಾತ್ಮಕವಾದವೂ । **ಸೌಶ್ರವಸಾನಿ**—ಕೀರ್ತಿದಾಯಕವೂ ಆದ ಸ್ಥಿತಿಗಳು । **ಅಸ್ಮೇ ಸಂತು**—ನಮಗುಂಟಾಗಲಿ.

॥ ಭಾವಾರ್ಥ ॥

ಧನವಂತನಾದ ಅಗ್ನಿಯೇ, ಮಾನವರಿಂದೊಡಗೂಡಿದ ಧನವನ್ನು ನಮಗೆ ಸರ್ವದಾ ಒದಗಿಸು. ನಮ್ಮ ಪುತ್ರರಿಗೂ ತತ್ಪುತ್ರರಿಗೂ ಪ್ರಭೂತವಾದ ಪಶುಗಳನ್ನು ಒದಗಿಸು. ಅಧಿಕವಾಗಿ ತೃಪ್ತಿದಾಯಕವೂ, ಬೃಹತ್ಪ್ರಮಾಣವುಳ್ಳವೂ, ಪಾಪರಹಿತವೂ ಆದ ಅನ್ನಗಳನ್ನೂ ಒದಗಿಸು. ಮಂಗಳಾತ್ಮಕವೂ, ಕೀರ್ತಿದಾಯಕವೂ ಆದ ಸ್ಥಿತಿಗಳು ನಮಗುಂಟಾಗಲಿ.

## English Translation.

Possessor of wealth, bestow upon us at all times opulence conjoined with dependants, and (grant) abundance of cattle to our sons and grandsons: may there be to us abundant food, satisfying our wishes, and free from blame; and may there be auspicious and reputable (means of subsistence).

॥ ಸಂಹಿತಾಪಾಠಃ ॥

ಪುರೂಣ್ಯಗ್ನೇ ಪುರುಧಾ ತ್ವಾಯಾ ವಸೂನಿ ರಾಜನ್ವಸುತಾ ತೇ ಅಶ್ಯಾಂ ।
ಪುರೂಣಿ ಹಿ ತ್ವೇ ಪುರುವಾರ ಸಂತ್ಯಗ್ನೇ ವಸು ವಿಧತೇ ರಾಜನಿ ತ್ವೇ ॥ ೧೩॥

|| ಪದಪಾಠಃ ||

ಪುರೂಣಿ । ಅಗ್ನೇ । ಪುರುಧಾ । ತ್ವಾऽಯಾ । ವಸೂನಿ । ರಾಜನ್ । ವಸುತಾ । ತೇ । ಅಶ್ಯಾಂ ।

ಪುರೂಣಿ । ಹಿ । ತ್ವೇ ಇತಿ । ಪುರುऽವಾರ । ಸಂತಿ । ಅಗ್ನೇ । ವಸು । ವಿಧತೇ । ರಾಜನಿ । ತ್ವೇ ಇತಿ ॥

॥ ಸಾಯಣಭಾಷ್ಯಂ ॥

ಪುರೂಣ್ಯಗ್ನ ಇತಿ ತ್ರಯೋದಶ್ಯೃಖಾಸಂಭರಣೀಯೇಷ್ಟಾವಗ್ನೇಃ ಕ್ಷತ್ರವತೋऽನುವಾಕ್ಯಾ । ಸೂತ್ರಿತಂ ಚ । ಪುರೂಣ್ಯಗ್ನೇ ಪುರುಧಾ ತ್ವಾಯಾ ಸ ಚಿತ್ರ ಚಿತ್ರಂ ಚಿತಯಂತಮಸ್ಮೇ। ಆ. ೪-೧ । ಇತಿ ॥

ಹೇ ಅಗ್ನೇ ರಾಜನ್ ತೇ ತವ ಪುರೂಣಿ ಬಹೂನಿ ಪುರುಧಾ ಗವಾಶ್ವಾದಿರೂಪೇಣ ಬಹುಪ್ರಕಾ-ರಾಣಿ ವಸೂನಿ ಧನಾನಿ ವಸುತಾ ವಸುತಾಯೈ ವಸುಮತ್ತ್ವಾಯಾಶ್ಯಾಂ । ವ್ಯಾಪ್ನುಯಾಂ ಭುಂಜೀಯ ವಾ ॥ ಅತ್ರ ಭರತಸ್ವಾಮೀ ವಸುತಾತ ಇತ್ಯೇಕಪದಂ ಸಪ್ತಮ್ಯಂತಂ ಚಕಾರ ಭಟ್ಟಭಾಸ್ಕರಮಿಶ್ರೋऽಪ್ಯೇ-ಕಪದಂ ಸಂಬುದ್ಧ್ಯಂತಂ ಚಕಾರ ॥ ಹೇ ಪುರುವಾರ ಬಹುಭಿರ್ವರಣೀಯಾಗ್ನೇ ರಾಜನಿ ರಾಜಮಾನೇ ತ್ವೇ ತ್ವಯಿ ಪುರೂಣಿ ಬಹೂನಿ ವಸು ವಸೂನಿ ತ್ವೇ ತ್ವಾಂ ವಿಧತೇ ಪರಿಚರತೇ ಮಹ್ಯಂ ದಾತವ್ಯಾನಿ ಸಂತಿ ॥

॥ ಪ್ರತಿಪದಾರ್ಥ ॥

**ರಾಜನ್**—ಪ್ರಭುವಾದ । **ಅಗ್ನೇ**—ಎಲೈ ಅಗ್ನಿಯೇ । **ತೇ**—ನಿನಗೆ ಸಂಬಂಧಿಸಿದ । **ಪುರೂಣಿ**—ಅಧಿಕವಾದವೂ । **ಪುರುಧಾ**—ಗವಾಶ್ವಾದಿರೂಪದಿಂದ ನಾನಾಬಗೆಯಾದವೂ ಆದ । **ವಸೂನಿ**—ಧನಗಳನ್ನು । **ವಸುತಾ**—ಸಂಪದ್ವೃದ್ಧಿಗಾಗಿ । **ತ್ವಾಯಾ**—ನಿನ್ನಿಂದ । **ಅಶ್ಯಂ**—ನಾನು ಪಡೆಯುವಂತಾಗಲಿ । **ಪುರುವಾರ**—ಅನೇಕರಿಂದ ಆದೃತನಾದ । **ಅಗ್ನೇ**—ಎಲೈ ಅಗ್ನಿಯೇ । **ರಾಜನಿ**—ಪ್ರಕಾಶಮಾನನಾದ । **ತ್ವೇ**—ನಿನ್ನಲ್ಲಿ । **ವಸು**—ಧನಗಳು । **ತ್ವೇ**—ನಿನ್ನನ್ನು । **ವಿಧತೇ**—ಸೇವಿಸುವ ನನಗಾಗಿ । **ಸಂತಿ ಹಿ**—ಸ್ಥಾಪಿತವಾಗಿವೆಯಲ್ಲವೇ,

|| ಭಾವಾರ್ಥ ||

ಪ್ರಭುವಾದ ಎಲೈ ಅಗ್ನಿಯೇ, ನಿನಗೆ ಸಂಬಂಧಿಸಿದ ಅಧಿಕವಾದವೂ, ಗವಾಶ್ವಾದಿರೂಪದಿಂದ ನಾನಾಬಗೆಯಾದವೂ ಆದ ಧನಗಳನ್ನು ಸಂಪದ್ವೃದ್ಧಿಗಾಗಿ ನಿನ್ನಿಂದ ನಾನು ಪಡೆಯುವಂತಾಗಲಿ. ಅನೇಕರಿಂದ ಆದೃತನಾದ ಎಲೈ ಅಗ್ನಿಯೇ, ಪ್ರಕಾಶಮಾನನಾದ ನಿನ್ನಲ್ಲಿರುವ ಧನಗಳು ನಿನ್ನನ್ನು ಸೇವಿಸುವ ನನಗಾಗಿ ಸ್ಥಾಪಿತವಾಗಿವೆಯಲ್ಲವೇ ?

## English Translation.

Royal Agni, may I obtain from you your many and various treasures whereby to be enriched; for, Agni, who are the desired of multitudes, infinite are the riches (aggregated) in you, fit, monarch, for your worshipper.

॥ ವಿಶೇಷವಿಷಯಗಳು ॥

**ಪುರೂಣ್ಯಗ್ನೇ** ಎಂಬ ಈ ಋಕ್ಕನ್ನು ಉಖಾಸಂಭರಣವೆಂಬ ಇಷ್ಟಿಯಲ್ಲಿ ಅಗ್ನಿಯನ್ನುದ್ದೇಶಿಸಿ ಹೋಮಮಾಡುವಾಗ ಕ್ಷತ್ರಿಯನಾದವನು (ಯಜಮಾನ) ಪಠಿಸಬೇಕಾದ ಅನುವಾಕ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ— **ಪುರೂಣ್ಯಗ್ನೇ ಪುರುಧಾ ತ್ವಾಯಾ ಸ ಚಿತ್ರ ಚಿತ್ರಂ ಚಿತಯಂತಮಸ್ಮೇ** ಎಂಬ ಸೂತ್ರದಿಂದ (೪. ೪-೧) ವಿವೃತವಾಗಿರುವುದು.

**ವಸುತಾ ತೇ**— ಪದಪಾಠದಲ್ಲಿ ವಸುತಾ, ತೇ ಎಂದು ಪದವಿಭಾಗವು ಸ್ಪಷ್ಟವಾಗಿ ನಿರ್ದೇಶಿಸಿದ್ದರೂ ಭರತಸ್ವಾಮಿ ಎಂಬುವರು, ತಮ್ಮ ಭಾಷ್ಯದಲ್ಲಿ ಈ ಋಕ್ಕಿನ ಅರ್ಥವಿವರಣೆ ಮಾಡುವಾಗ ವಸುತಾತೇ ಎಂದು ಒಂದೇ ಪದವನ್ನಾಗಿ ಭಾವಿಸಿ ಅದು ಸಪ್ತಮ್ಯಂತಪದವೆಂದೂ ಭಟ್ಟಭಾಸ್ಕರಮಿಶ್ರ ಎಂಬುವರು ಅದನ್ನು. ಸಂಬುದ್ಧ್ಯಂತವಾದ ಶಬ್ದವೆಂದು ಹೇಳಿ ಆ ಪ್ರಕಾರ ಅರ್ಥವಿವರಣೆಮಾಡಿದಾರೆ ಎಂದು ಸಾಯಣರು ಇಲ್ಲಿ ಎಂದರೆ ತಮ್ಮ ಭಾಷ್ಯದಲ್ಲಿ ಸೂಚಿಸಿದಾರೆ. ಋಗ್ವೇದದ ಪದಪಾಠಕಾರರಾದ ಶೌನಕಾದಿಋಷಿಗಳು ಹೇಳಿರುವ ಪದವಿಭಾಗವನ್ನು ಬಿಟ್ಟು ಬೇರೆವಿಧವಾಗಿ ಸಮಯಕ್ಕೆ ತಕ್ಕಂತೆ ಪದವಿಭಾಗ ಮಾಡಿ ನಾನಾವಿಧವಾಗಿ ಅರ್ಥವಿರಣೆಮಾಡುವುದು ಸರಿಯಲ್ಲವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ

**ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।**
**ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥**

**ಇತಿ ಶ್ರೀಮದ್ರಾಜಾಧಿರಾಜ ಪರಮೇಶ್ವರ ವೈದಿಕಮಾರ್ಗಪ್ರವರ್ತಕ ಶ್ರೀ ವೀರಬುಕ್ಕಭೂಪಾಲಸಾಮ್ರಾಜ್ಯ - ಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ ವೇದಾರ್ಥಪ್ರಕಾಶೇ ಋಕ್ಸಂಹಿತಾಭಾಷ್ಯೇ ಚತುರ್ಥಾಷ್ಟಕೇ ಚತುರ್ಥೋಽಧ್ಯಾಯಃ ಸಮಾಪ್ತಃ**

॥ ಓಂ ತತ್ಸತ್ ॥

ಇಲ್ಲಿಗೆ ಶ್ರೀಸಾಯಣಭಾಷ್ಯಸಹಿತವೂ ಕರ್ನಾಟಕ ಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯ ನಾಲ್ಕನೆಯ ಅಷ್ಟಕದಲ್ಲಿ
ನಾಲ್ಕನೆಯ ಅಧ್ಯಾಯವು ಸಮಾಪ್ತವಾದುದು.

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತು ತೇ ॥

॥ ಶುಭಂ ಭೂಯಾತ್ ॥

॥ ಮಂಗಳಂ ॥

॥ ಶ್ರೀಃ ॥

॥ ಶ್ರೀ ಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಃಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥

## ಸಾಯಣಭಾಷ್ಯಸಹಿತಾ

# ಋಗ್ವೇದಸಂಹಿತಾ

## ॥ ಚತುರ್ಥಾಷ್ಟಕೇ ಪಂಚಮೋಽಧ್ಯಾಯಃ ॥

### ನಾಲ್ಕನೆಯ ಅಷ್ಟಕದಲ್ಲಿ ಐದನೆಯ ಅಧ್ಯಾಯವು

## ಐದನೆಯ ಮಂಡಲದಲ್ಲಿ ಎರಡನೆಯ ಸೂಕ್ತವು

॥ ಸಾಯಣಭಾಷ್ಯಂ ॥

ಅಥ ಪಂಚಮೋಽಧ್ಯಾಯ ಆರಭ್ಯತೇ ॥ ಷಷ್ಠಮಂಡಲಸ್ಯ ಷಡನುವಾಕಾತ್ಮಕಸ್ಯ ಪ್ರಥಮೇಽನುವಾಕೇ ಪಂಚದಶ ಸೂಕ್ತಾನಿ । ತತ್ರ ತ್ವಂ ಹೀತ್ಯೇಕಾದಶರ್ಚಂ ದ್ವಿತೀಯಂ ಸೂಕ್ತಂ ಭರದ್ವಾಜಸ್ಯಾರ್ಷಮಾಗ್ನೇಯಂ । ಅಂತ್ಯಾ ಷಟ್‌ಪಂಚಾಶದಕ್ಷರಾ ಶಕ್ವರ್ಯಾದಿತೋ ದಶಾನುಷ್ಟುಭಃ । ಅನುಕ್ರಮ್ಯತೇ ಹಿ । ತ್ವಂ ಹ್ಯೇಕಾದಶಾನುಷ್ಟುಭಂ ಶಕ್ವರ್ಯಂತಮಿತಿ ॥ ಪ್ರಾತರನುವಾಕ ಆಗ್ನೇಯೇ ಕ್ರತಾವಾನುಷ್ಟುಭೇ ಛಂದಸೀದಂ ಸೂಕ್ತಮುತ್ತಮಾವರ್ಜಂ ವಿನಿಯುಕ್ತಂ । ಸೂತ್ರ್ಯತೇ ಹಿ । ತ್ವಂ ಹಿ ಕ್ಷೈತವದಗ್ನಾ ಯೋ ಹೋತಾಜನಿಷ್ಟ । ಆ. ೪. ೧೩. । ಇತಿ ॥ ಆಶ್ವಿನಶಸ್ತ್ರೇ ಚೈತತ್ ಸಂಶನೀಯಂ ಪ್ರಾತರನುವಾಕನ್ಯಾಯೇನೇತ್ಯತಿದಿಷ್ಟತ್ವಾತ್ ॥ ಅಂಗಿರಸಾಂ ದ್ವಿರಾತ್ರೇ ದ್ವಿತೀಯೇಽಹನೀದಮೇವ ಸೂಕ್ತಮಾಜ್ಯಶಸ್ತ್ರಂ । ಸೂತ್ರಿತಂ ಚ । ತ್ವಂ ಹಿ ಕ್ಷೈತವದಿತಿ ಚಾಜ್ಯಂ । ಆ. ೧೦. ೨. । ಇತಿ ॥

ಅನುವಾದವು—ಈ ಸೂಕ್ತದಿಂದ ನಾಲ್ಕನೆಯ ಅಷ್ಟಕದ ಐದನೆಯ ಅಧ್ಯಾಯವು ಪ್ರಾರಂಭವಾಗುವುದು. ಹಿಂದೆ ಹೇಳಿದಂತೆ ಆರನೆಯ ಮಂಡಲದ ಮೊದಲನೆಯ ಅನುವಾಕದಲ್ಲಿ ಹದಿನೈದು ಸೂಕ್ತಗಳಿರುವವು. ಅವುಗಳಲ್ಲಿ **ತ್ವಂ ಹಿ ಕ್ಷೈತವತ್** ಎಂಬ ಈ ಸೂಕ್ತವು ಎರಡನೆಯದು. ಇದರಲ್ಲಿ ಹನ್ನೊಂದು ಋಕ್ಕುಗಳಿರುವುವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು ; ಅಗ್ನಿಯು ದೇವತೆಯು. ಈ ಸೂಕ್ತದ ಮೊದಲನೆಯ ಹತ್ತು ಋಕ್ಕುಗಳು ಅನುಷ್ಟುಪ್ ಛಂದಸ್ಕವು. ಕೊನೆಯ ಋಕ್ಕು ಐವತ್ತಾರು ಅಕ್ಷರಗಳುಳ್ಳ ಶಕ್ವರೀ ಎಂಬ ಛಂದಸ್ಸಿನದು. ಅನುಕ್ರಮಣಿಕೆಯಲ್ಲಿ **ತ್ವಂ ಹ್ಯೇಕಾದಶಾನುಷ್ಟುಭಂ** ಎಂದು ಹೇಳಿರುವುದು. ಪ್ರಾತರನುವಾಕ ಮಂತ್ರಪಠನಕಾಲದಲ್ಲಿ ಆಗ್ನೇಯಕ್ರತುಸಂಬಂಧವಾದ ಅನುಷ್ಟುಪ್ ಛಂದಸ್ಸಿನ ಋಕ್ಕುಗಳಿಗಾಗಿ ಕೊನೆಯ ಒಂದು ಋಕ್ಕನ್ನು ಬಿಟ್ಟು ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ತ್ವಂ ಹಿ ಕ್ಷೈತವದಗ್ನಾ ಯೋ ಹೋತಾ ಜನಿಷ್ಟ** ಎಂಬ ಸೂತ್ರದಿಂದ (ಆ. ೪-೧೩) ವಿವೃತವಾಗಿರುವುದು. ಪ್ರಾತರನುವಾಕಮಂತ್ರದಲ್ಲಿ ಈ ಸೂಕ್ತವನ್ನು ಪಠಿಸಬೇಕೆಂದಿರುವುದರಿಂದ ಆಶ್ವಿನಶಸ್ತ್ರಮಂತ್ರಗಳಿಗೂ ಇದರ ವಿನಿಯೋಗವಿರುವುದೆಂದು ಹೇಳಿದಹಾಗಾಯಿತು. ಅಂಗಿರಾ ಋಷಿಗಳು ಆಚರಿಸುವ ದ್ವಿರಾತ್ರವೆಂಬ ಯಾಗದ ಎರಡನೆಯ ದಿವಸ ಈ ಸೂಕ್ತವನ್ನು ಆಜ್ಯಮಂತ್ರಗಳಿಗಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ತ್ವಂ ಹಿ ಕ್ಷೈತವದಿತಿ ಚಾಜ್ಯಂ** ಎಂಬ ಸೂತ್ರದಿಂದ (ಆ ೧೦-೨) ವಿವೃತವಾಗಿರುವುದು.

## ಸೂಕ್ತ ೨

ಮಂಡಲ—೬ ॥ ಅನುವಾಕ—೧ ॥ ಸೂಕ್ತ—೨ ॥

ಅಷ್ಟಕ—೪ ॥ ಅಧ್ಯಾಯ—೫ ॥ ವರ್ಗ—೧, ೨ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೧ ॥

॥ ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ॥

॥ ದೇವತಾ—ಅಗ್ನಿಃ ॥

॥ ಛಂದಃ—೧—೧೦, ಅನುಷ್ಟುಪ್ । ೧೧. ಶಕ್ವರೀ ॥

॥ ಸಂಹಿತಾಪಾಠಃ ॥

**ತ್ವಂ ಹಿ ಕ್ಷೈತವದ್ಯಶೋಽಗ್ನೇ ಮಿತ್ರೋ ನ ಪತ್ಯಸೇ ।**

**ತ್ವಂ ವಿಚರ್ಷಣೇ ಶ್ರವೋ ವಸೋ ಪುಷ್ಟಿಂ ನ ಪುಷ್ಯಸಿ ॥ ೧ ॥**

॥ ಪದಪಾಠಃ ॥

**ತ್ವಂ । ಹಿ । ಕ್ಷೈತ್ಽವತ್ । ಯಶಃ । ಅಗ್ನೇ । ಮಿತ್ರಃ । ನ । ಪತ್ಯಸೇ ।**

**ತ್ವಂ । ವಿಽಚರ್ಷಣೇ । ಶ್ರವಃ । ವಸೋ ಇತಿ । ಪುಷ್ಟಿಂ । ನ । ಪುಷ್ಯಸಿ ॥ ೧ ॥**

॥ ಸಾಯಣಭಾಷ್ಯಂ ॥

**ಹೇ ಅಗ್ನೇ ತ್ವಂ ಹಿ ತ್ವಂ ಖಲು ಕ್ಷೈತವತ್ । ಕ್ಷಿತಿಃ ಕ್ಷಯೋಽಪಚಯಃ । ತತ್ಸಂಬಂಧಿ ಕ್ಷೈತಂ ಶುಷ್ಕಂ ಕಾಷ್ಠಂ । ತದ್ಯುಕ್ತಂ ಯಶೋಽನ್ನಂ ಹವಿರ್ಲಕ್ಷಣಂ ಪತ್ಯಸೇ । ಅಭಿಪತಸಿ । ಗಚ್ಛಸಿ । ತತ್ರ ದೃಷ್ಟಾಂತಃ । ಮಿತ್ರೋ ನ । ಅಹರಭಿಮಾನೀ ದೇವೋ ಮಿತ್ರಃ । ಸ ಇವ । ಯದ್ವಾ ಯಶ ಇತಿ ಗೃಹನಾಮ । ಕ್ಷೈತವತ್ । ಕ್ಷೈತಂ ನಿವಾಸಕಂ ಹವಿರ್ಲಕ್ಷಣಮನ್ನಂ । ತದ್ಯುಕ್ತಂ ಯಜಮಾನಗೃಹಂ ಮಿತ್ರಭೂತಃ ಪುರುಷ ಇವಾಭಿಪತಸಿ । ಯದ್ವಾ ಪತ್ಯತಿರೈಶ್ವರ್ಯಕರ್ಮಾ । ಈದೃಶಮನ್ನಂ ಪತ್ಯಸೇ । ಈಶಿಷೇ । ಅತಃ ಕಾರಣಾತ್ ಹೇ ವಿಚರ್ಷಣೇ ವಿಶೇಷೇಣ ಸರ್ವಸ್ಯ ದ್ರಷ್ಟರ್ವಸೋ ವಾಸಕಾಗ್ನೇ ತ್ವಂ ಶ್ರವಃ ಶ್ರವಣೀಯಮನ್ನಂ ಯಜಮಾನಗೃಹಸ್ಥಂ ನ । ಅಯಂ ನಶಬ್ದಶ್ಚಾರ್ಥೇ । ಅನ್ನಕಾರ್ಯಭೂತಾಂ ಪುಷ್ಟಿಂ ಚ ಪುಷ್ಯಸಿ । ವರ್ಧಯಸಿ ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ತ್ವಂ ಹಿ**—ನೀನು । **ಮಿತ್ರೋ ನ**—ಮಿತ್ರನಂತೆ । **ಕ್ಷೈತವತ್**—ಕಾಷ್ಠಯುಕ್ತವಾದ । **ಯಶಃ**—ಹವಿಸ್ಸನ್ನು ಸ್ವೀಕರಿಸುವುದಕ್ಕಾಗಿ । **ಪತ್ಯಸೇ**—ಅಭಿಲಕ್ಷಿಸಿ ಬರುತ್ತೀಯೆ । **ವಿಚರ್ಷಣೇ**—ಸಕಲವನ್ನೂ ಪೂರ್ಣವಾಗಿ ನೋಡಬಲ್ಲವನೂ । **ವಸೋ**—ವಸತಿದಾಯಕನೂ ಆದ । **ತ್ವಂ**—ನೀನು । **ಶ್ರವಃ**—ಯಜಮಾನ ಗೃಹದಲ್ಲಿ ಅನ್ನಸಂಪತ್ತನ್ನೂ । **ನ**—ಮತ್ತು । **ಪುಷ್ಟಿಂ**—ಪುಷ್ಟಿಪ್ರದವಾದ ಪಶು ಸಂಪತ್ತನ್ನೂ । **ಪುಷ್ಯಸಿ**—ವೃದ್ಧಿಪಡಿಸುತ್ತೀಯೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ನೀನು ಕಾಷ್ಠಯುಕ್ತವಾದ ಹವಿಸ್ಸನ್ನು ಉದ್ದೇಶಿಸಿ ಮಿತ್ರನಂತೆ ಬರುತ್ತೀಯೆ. ಸಕಲವನ್ನೂ ಪೂರ್ಣವಾಗಿ ನೋಡಬಲ್ಲವನೂ ವಸತಿದಾಯಕನೂ ಆದ ನೀನು ಯಜಮಾನನ ಗೃಹದಲ್ಲಿ ಅನ್ನಸಂಪತ್ತನ್ನೂ ಇತರ ವಿಧವಾದ ಪುಷ್ಟಿಪ್ರದವಾದ ಪಶುಸಂಪತ್ತನ್ನೂ ವೃದ್ಧಿಪಡಿಸುತ್ತೀಯೆ.

## English Translation.

You alight, Agni, like Mitra, upon the oblation offered with the dry fuel: therefore, beholder of all, possessor of riches, you cherish us with food and nourishment.

॥ ವಿಶೇಷವಿಷಯಗಳು ॥

**ಅಗ್ನೇ ತ್ವಂ ಹಿ ಮಿತ್ರೋ ನ ಕ್ಷೈತವತ್ ಯಶಃ ಪತ್ಯಸೇ**— ಈ ವಾಕ್ಯಕ್ಕೆ ಭಾಷ್ಯಕಾರರು ಎರಡು ಮೂರು ವಿಧ ಅರ್ಥಗಳನ್ನು ಹೇಳಿದಾರೆ—

(೧) **ಕ್ಷಿತಿಃ ಕ್ಷಯೋಽಪಚಯಃ ತತ್ಸಂಬಂಧಿ ಕ್ಷೈತಂ ಶುಷ್ಕಂ ಕಾಷ್ಠಂ । ತದ್ಯುಕ್ತಂ ಯಶಃ ಅನ್ನಂ ಹವಿರ್ಲಕ್ಷಣಂ ಪತ್ಯಸೇ ಅಭಿಪತಸಿ ಗಚ್ಛಸಿ ॥** ಇಲ್ಲಿ ಕ್ಷಿತಿಯೆಂದರೆ ಮರದಿಂದ ಬಿದ್ದ ಉದುರಿದ ಎಂದರ್ಥವು ಕ್ಷೈತಂ ಎಂದರೆ ಆ ಸಂಬಂಧವಾದ ಒಣಗಿದ ಕಾಷ್ಠವು. ಕ್ಷೈತವತ್ ಎಂದರೆ, ಒಣಗಿದ ಕಾಷ್ಠ ಅಥವಾ

ಸಮಿತ್ತುಗಳಿಂದ ಸಹಿತವಾದ ಎಂದಭಿಪ್ರಾಯವು. ಯಶಃ ಎಂದರೆ ಅನ್ನ ಅಥವಾ ಅನ್ನರೂಪದಲ್ಲಿರುವ ಹವಿಸ್ಸು. ಆದುದರಿಂದ ಈ ವಾಕ್ಯಕ್ಕೆ ಎಲೈ ಅಗ್ನಿಯೇ, ಸಮಿತ್ತುಗಳಿಂದ ಸಹಿತವಾದ ಹವಿಸ್ಸನ್ನು ಸ್ವೀಕರಿಸುವುದಕ್ಕಾಗಿ ನೀನು ಅಹರಭಿಮಾನಿದೇವತೆಯಾದ ಮಿತ್ರನಂತೆ ಅದನ್ನು ಲಕ್ಷಿಸಿ ಬರುತ್ತೀಯೆ ಎಂದು ಒಂದು ವಿಧವಾದ ಅರ್ಥವು.

(೨) **ಯದ್ವಾ ಯಶ ಇತಿ ಗೃಹನಾಮ। ಕ್ಷೈತವತ್ ಕ್ಷೈತಂ ನಿವಾಸಕಂ ಹವಿರ್ಲಕ್ಷಣಮನ್ನಂ ತದ್ಯುಕ್ತಂ ಯಜಮಾನಗೃಹಂ ಮಿತ್ರಭೂತಃ ಪುರುಷ ಇವಾಭಿಪತಸಿ॥** ಅಥವಾ ಯಶವೆಂದರೆ ಗೃಹಕ್ಕೆ ಹೆಸರು. ಕ್ಷೈತವೆಂದರೆ, ವಾಸಿಸುವ ಅಥವಾ ಇರುವ ಎಂದರ್ಥವು. ಎಲೈ ಅಗ್ನಿಯೇ, ಯಜಮಾನನ ಗೃಹದಲ್ಲಿರುವ ಉತ್ತಮವಾದ ಅನ್ನಾರ್ಥವಾಗಿ ಯಜಮಾನನ ಸ್ನೇಹಿತನಾದ ಪುರುಷನು ಅವನ ಮನೆಗೆ ಬರುವಂತೆ ನೀನು ಯಜಮಾನನ ಗೃಹದಲ್ಲಿ ಸಿದ್ಧವಾಗಿರುವ ಹವಿರ್ಲಕ್ಷಣರೂಪವಾದ ಅನ್ನವನ್ನು ಅಭಿಲಕ್ಷಿಸಿ ಬರುತ್ತೀಯೇ ಎಂದು ಇನ್ನೊಂದು ವಿಧವಾದ ಅರ್ಥವು

(೩) **ಯದ್ವಾ ಪತ್ಯತಿರೈಶ್ವರ್ಯಕರ್ಮಾ। ಈದೃಶಮನ್ನಂ ಪತ್ಯಸೇ ಈಶಿಷೇ।** ಅಥವಾ ಪತ್ಯತಿ ಧಾತುವಿಗೆ ಐಶ್ವರ್ಯಾರ್ಥವಿರುವುದರಿಂದ ಎಲೈ ಅಗ್ನಿಯೇ, ನೀನು ಯಜಮಾನನ ಗೃಹದಲ್ಲಿರುವ ಹವಿರ್ಲಕ್ಷಣರೂಪವಾದ ಅನ್ನಕ್ಕೆ ಸ್ವಾಮಿಯಾಗಿದ್ದೀಯೇ. ಆದುದರಿಂದ ಆ ಅನ್ನವನ್ನು ಅಭಿಲಕ್ಷಿಸಿ ಅಲ್ಲಿಗೆ ಬರುತ್ತೀಯೇ ಎಂದು ಮತ್ತೊಂದು ವಿಧವಾದ ಅರ್ಥವು.

ತ್ವಾಂ ಹಿ ಷ್ಮಾ ಚರ್ಷಣಯೋ ಯಜ್ಞೇಭಿರ್ಗೀರ್ಭಿರೀಳತೇ ।
ತ್ವಾಂ ವಾಜೀ ಯಾತ್ಯವೃಕೋ ರಜಸ್ತೂರ್ವಿಶ್ವಚರ್ಷಣಿಃ ॥ ೨ ॥

॥ ಪದಪಾಠಃ ॥

ತ್ವಾಂ । ಹಿ । ಸ್ಮ । ಚರ್ಷಣಯಃ । ಯಜ್ಞೇಭಿಃ । ಗೀಃऽಭಿಃ । ಈಳತೇ ।
ತ್ವಾಂ । ವಾಜೀ । ಯಾತಿ । ಅವೃಕಃ । ರಜಃऽತೂಃ । ವಿಶ್ವऽಚರ್ಷಣಿಃ ॥ ೨ ॥

॥ ಸಾಯಣಭಾಷ್ಯಂ ॥

**ಹೇ ಅಗ್ನೇ ತ್ವಾಂ ಹಿ ಸ್ಮ ತ್ವಾಮೇವ ಖಲು ಚರ್ಷಣಯೋ ಮನುಷ್ಯಾ ಯಜ್ಞೇಭಿರ್ಯಜ್ಞಸಾಧನೈರ್ಹವಿರ್ಭಿರ್ಗೀರ್ಭಿಃ ಸ್ತುತಿಭಿರೀಳತೇ । ಸ್ತುವಂತಿ । ಅಪಿ ಚ ವಾಜೀ। ವಾಜೋ ಗಮನಂ। ತದ್ವಾನ್ ಸೂರ್ಯಸ್ತ್ವಾಂ ಯಾತಿ। ಗಚ್ಛತಿ । ಪ್ರವಿಶತೀತ್ಯರ್ಥಃ । ತಥಾ ಚ ಶ್ರೂಯತೇ। ಅಗ್ನಿಂ ವಾವಾದಿತ್ಯಃ ಸಾಯಂ ಪ್ರವಿಶತಿ ತಸ್ಮಾದಗ್ನಿರ್ದೂರಾನ್ನಕ್ತಂ ದದೃಶ ಇತಿ। ವಾಜಿಶಬ್ದಶ್ಚ ಸೂರ್ಯವಾಚಕತ್ವೇನ ಕ್ವಚಿತ್ ಶ್ರೂಯತೇ। ಅಗ್ನಿರ್ವಾಯುಃ ಸೂರ್ಯಸ್ತೇ ವೈ ವಾಜಿನಃ। ತೈ. ಬ್ರಾ. ೧. ೬. ೩. ೯. ।**

**ಇತಿ ವಾಯುಃ ಸಪ್ತಿರಾದಿತ್ಯೋ ವಾಜೀತಿ ಚ । ಕೀದೃಶೋ ವಾಜೀ । ಅವೃಕೋ ಹಿಂಸಕರಹಿತೋ ರಜಸ್ತೂಃ । ಉದಕಮತ್ರ ರಜ ಉಚ್ಯತೇ । ತಸ್ಯ ವೃಷ್ಟಿಲಕ್ಷಣಸ್ಯ ಪ್ರೇರಯಿತಾ । ಯದ್ವಾ । ರಜಸಾಂ ಲೋಕಾನಾಂ ತರಿತಾ ಗಂತಾ ವಿಶ್ವಚರ್ಷಣಿಃ ಸರ್ವಸ್ಯ ದ್ರಷ್ಟಾ ॥**

। ಪ್ರತಿಪದಾರ್ಥ ॥

**ಅಗ್ನೇ**—(ಎಲೈ ಅಗ್ನಿಯೇ) । **ಚರ್ಷಣಯಃ**—ಪ್ರಜೆಗಳು । **ತ್ವಾಂ ಹಿ ಸ್ಮ**—ನಿನ್ನನ್ನೇ । **ಯಜ್ಞೇಭಿಃ**—ಯಜ್ಞಸಾಧನಗಳಾದ ಹವಿಸ್ಸುಗಳಿಂದಲೂ । **ಗೀರ್ಭಿಃ**—ಸ್ತುತಿಗಳಿಂದಲೂ । **ಈಳತೇ**—ಸ್ತುತಿಸುತ್ತಾರೆ । **ಅವೃಕಃ**—ಹಿಂಸಕನಲ್ಲದವನೂ । **ರಜಸ್ತೂಃ**—ವೃಷ್ಟ್ಯುದಕವನ್ನು ಸುರಿಸುವವನೂ । **ವಿಶ್ವಚರ್ಷಣಿಃ**—ಸಕಲ ವಿಶ್ವಗಳನ್ನೂ ನೋಡತಕ್ಕವನೂ । **ವಾಜೀ**—ಭ್ರಮಣಾತ್ಮಕನೂ ಆದ ಸೂರ್ಯನು । **ತ್ವಾಂ**—ನಿನ್ನನ್ನು । **ಯಾತಿ**—ಸಮೀಪಿಸುತ್ತಾನೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಪ್ರಜೆಗಳು ನಿನ್ನನ್ನೇ ಯಜ್ಞಸಾಧನಗಳಾದ ಹವಿಸ್ಸುಗಳಿಂದಲೂ, ಸ್ತುತಿಗಳಿಂದಲೂ ಪ್ರಶಂಸಿಸುತ್ತಾರೆ. ಅಹಿಂಸಕನೂ ವೃಷ್ಟ್ಯುದಕವನ್ನು ಸುರಿಸುವವನೂ, ಸಕಲವಿಶ್ವಗಳನ್ನೂ ನೋಡತಕ್ಕವನೂ, ಭ್ರಮಣಾತ್ಮಕನೂ ಆದ ಸೂರ್ಯನು ನಿನ್ನನ್ನು ಸಮೀಪಿಸುತ್ತಾನೆ.

## English Translation.

Men verily worship you with sacrifice and with praises: the inoffensive sun, the sender of rain, the beholder of the universe, proceeds to you

॥ ವಿಶೇಷವಿಷಯಗಳು ॥

**ತ್ವಾಂ ವಾಜೀ ಅವೃಕಃ ರಜಸ್ತೂಃ ವಿಶ್ವಚರ್ಷಣಿಃ ಯಾತಿ**—ಇಲ್ಲಿ ಸೂರ್ಯನು ಅಗ್ನಿಯನ್ನು ಸಮೀಪಿಸಿ ಅದರಲ್ಲಿ ಪ್ರವೇಶಿಸುತ್ತಾನೆ ಎಂಬರ್ಥವನ್ನು ಹೇಳಿ ಭಾಷ್ಯಕಾರರು ಈ ಅರ್ಥಸಮರ್ಥನೆಗಾಗಿ ತೈತ್ತಿರೀಯಬ್ರಾಹ್ಮಣ ಶ್ರುತಿವಾಕ್ಯವನ್ನು ಉದಾಹರಿಸಿದ್ದಾರೆ—

**ಅಗ್ನಿಂ ವಾವಾದಿತ್ಯಃ ಸಾಯಂ ಪ್ರವಿಶತಿ । ತಸ್ಮಾದಗ್ನಿರ್ದೂರಾನ್ನಕ್ತಂ ದದೃಶೇ ।**
(ತೈ. ಬ್ರಾ. ೨-೧-೨-೯)

ಸೂರ್ಯನು ಸಾಯಂಕಾಲದಲ್ಲಿ ಅಗ್ನಿಯಲ್ಲಿ ಪ್ರವೇಶಿಸಿ ಅದರಲ್ಲಿ ಐಕ್ಯನಾಗುವನು ಎಂಬರ್ಥವು ಇಲ್ಲಿ ವಿವೃತವಾಗಿದೆ.

**ವಾಜೀ** ವಾಜೀ ಎಂಬ ಶಬ್ದಕ್ಕೆ ಸೂರ್ಯನೆಂಬ ಅರ್ಥವಿರುವ **ವಾಯುಃ ಸಪ್ತಿರಾದಿತ್ಯೋ ವಾಜೀ** (ತೈ. ಬ್ರಾ. ೧-೭-೮) ಎಂಬ ಶ್ರುತಿವಾಕ್ಯವನ್ನು ಉದಾಹರಿಸಿರುವರು.

॥ ಸಂಹಿತಾಪಾಠಃ ॥

ಸಜೋಷಸ್ತ್ವಾ ದಿವೋ ನರೋ ಯಜ್ಞಸ್ಯ ಕೇತುಮಿಂಧತೇ ।
ಯದ್ಧ ಸ್ಯ ಮಾನುಷೋ ಜನಃ ಸುಮ್ನಾಯುರ್ಜುಹ್ವೇ ಅಧ್ವರೇ ॥ ೩ ॥

॥ ಪದಪಾಠಃ ॥

ಸಽಜೋಷಃ । ತ್ವಾ । ದಿವಃ । ನರಃ । ಯಜ್ಞಸ್ಯ । ಕೇತುಂ । ಇಂಧತೇ ।
ಯತ್ । ಹ । ಸ್ಯಃ । ಮಾನುಷಃ । ಜನಃ । ಸುಮ್ನಽಯುಃ । ಜುಹ್ವೇ । ಅಧ್ವರೇ ॥ ೩ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಸಜೋಷಃ ಸಜೋಷಸಃ ಸಹ ಪ್ರೀಯಮಾಣಾ ದಿವಃ ಸ್ತುತೇರ್ನರೋ ನೇತಾರ ಋತ್ವಿಜೋ ಯಜ್ಞಸ್ಯ ಕೇತುಂ ಪ್ರಜ್ಞಾಪಕಂ ತ್ವಾ ತ್ವಾಮಿಂಧತೇ । ಸಮಿದ್ಧಂ ಕುರ್ವಂತಿ । ಕದೇತಿ ಚೇದುಚ್ಯತೇ । ಯದ್ಧ ಯದಾ ಖಲು ಸ್ಯ ಸ ಮಾನುಷೋ ಮನೋರಪತ್ಯಭೂತೋ ಜನೋ ಜಾತೋ ಯಜಮಾನೋ ಹೋತಾ ವಾ ಸುಮ್ನಾಯುಃ ಸುಮ್ನಂ ಸುಖಮಾತ್ಮನ ಇಚ್ಛನ್ ಅಧ್ವರೇ ಹಿಂಸಾಪ್ರತ್ಯವಾಯರಹಿತೇ ಯಜ್ಞೇ ಜುಹ್ವೇ ತ್ವಾಮಾಹ್ವಯತಿ ತದೇತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಯದ್ಧ**—ಯಾವಾಗ । **ಸ್ಯಃ**—ಯಜಮಾನನೆಂದು ಪ್ರಸಿದ್ಧನಾದವನೂ । **ಮಾನುಷಃ ಜನಃ**—ಮನುಸಂಬಂಧಿಯಾದವನೂ ಆದ ಪುರುಷನು । **ಸುಮ್ನಾಯುಃ**—ಸುಖವನ್ನು ಪಡೆಯಲಿಚ್ಛೆಯಿಂದ । **ಅಧ್ವರೇ**—ಯಜ್ಞದಲ್ಲಿ । **ಜುಹ್ವೇ**—ನಿನ್ನನ್ನು ಪ್ರಾರ್ಥಿಸಿ ಕರೆಯುವನೋ (ಆಗ) । **ಸಜೋಷಃ**—ಸಮಾನವಾದ ಪ್ರೀತಿಯುಳ್ಳವರೂ । **ದಿವಃ**—ಸ್ತುತಿಗಳಿಗೆ । **ನರಃ**—ನೇತೃಗಳೂ ಆದ ಋತ್ವಿಕ್ಕುಗಳು । **ಯಜ್ಞಸ್ಯ**—ಯಜ್ಞಕ್ಕೆ । **ಕೇತುಂ**—ಪ್ರಜ್ಞಾಪಕನಾದ । **ತ್ವಾಂ**—ನಿನ್ನನ್ನು । **ಇಂಧತೇ**—ಪ್ರಜ್ವಲಿತನನ್ನಾಗಿ ಮಾಡುತ್ತಾರೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಮನುಸಂಬಂಧಿಯಾದ ಯಜ್ಞಕರ್ತನು ಸುಖವನ್ನು ಪಡೆಯಬೇಕೆಂಬಿಚ್ಛೆಯಿಂದ ಯಾವಾಗ ನಿನ್ನನ್ನು ಪ್ರಾರ್ಥಿಸಿ ಯಜ್ಞಕ್ಕೆ ಕರೆಯುವನೋ, ಆಗ ಸಮಾನವಾದ ಪ್ರೀತಿಯುಳ್ಳವರೂ, ಸ್ತುತಿಗಳಿಗೆ ನೇತೃಗಳೂ ಆದ ಋತ್ವಿಕ್ಕುಗಳು ಯಜ್ಞಕ್ಕೆ ಪ್ರಜ್ಞಾಪಕನಾದ ನಿನ್ನನ್ನು ಪ್ರಜ್ವಲಿತನನ್ನಾಗಿ ಮಾಡುತ್ತಾರೆ.

## English Translation.

The offerers of praise, sympathizing in satisfaction, kindle you the banner of the sacrifice, when man, the descendant of Manu, desiring happiness, invokes you to the rite.

॥ ಸಂಹಿತಾಪಾಠಃ ॥

ಋಧದ್ಯಸ್ತೇ ಸುದಾನವೇ ಧಿಯಾ ಮರ್ತಃ ಶಶಮತೇ ।
ಊತೀ ಷ ಬೃಹತೋ ದಿವೋ ದ್ವಿಷೋ ಅಂಹೋ ನ ತರತಿ ॥ ೪ ॥

॥ ಪದಪಾಠಃ ॥

ಋಧತ್ । ಯಃ । ತೇ । ಸುಽದಾನವೇ । ಧಿಯಾ । ಮರ್ತಃ । ಶಶಮತೇ ।

ಊತೀ । ಸಃ । ಬೃಹತಃ । ದಿವಃ । ದ್ವಿಷಃ । ಅಂಹಃ । ನ । ತರತಿ ॥ ೪ ॥

॥ ಸಾಯಣಭಾಷ್ಯಂ ॥

**ಋಧತ್ । ಸ ಯಜಮಾನ ಋಧ್ನುಯಾತ್ ಹೇ ಅಗ್ನೇ ಸುದಾನವೇ ಶೋಭನದಾನಾಯ ತುಭ್ಯಂ ॥ ಷಷ್ಠ್ಯರ್ಥೇ ಚತುರ್ಥೀ ॥ ತವ ಸಂಬಂಧಿನಾ ಧಿಯಾ ಕರ್ಮಣಾ ಯೋ ಮರ್ತೋ ಮರಣಧರ್ಮಾ ಯಜಮಾನಃ ಶಶಮತೇ ಶಾಮ್ಯತಿ । ಯದ್ವಾ । ಶಮತಿಃ ಸ್ತುತಿಕರ್ಮಾ । ತ್ವದರ್ಥಂ ಕರ್ಮಣಾ ಯುಕ್ತಃ ಸನ್ ಸ್ತೌತಿ । ಸ ಯಜಮಾನೋ ಬೃಹತೋ ಮಹತೋ ದಿವೋ ದೀಪ್ತಸ್ಯ ತವ ಸಂಬಂಧಿನ್ಯೋತೀ ಊತ್ಯಾ ರಕ್ಷಯಾ ದ್ವಿಷೋ ದ್ವೇಷ್ಟ್ರ್ನಂಹೋ ನ ಆಹನನಶೀಲಂ ಪಾಪಮಿವ ತರತಿ । ಅತಿಕ್ರಾಮತಿ ॥**

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಯಃ**—ಯಾವ । **ಮರ್ತಃ**—ಮಾನವನಾದ ಯಜಮಾನನು । **ಸುದಾನವೇ ತೇ**—ಶ್ರೇಷ್ಠವಾದ ದಾನಾರ್ಹನಾದ ನಿನ್ನನ್ನುದ್ದೇಶಿಸಿ । **ಧಿಯಾ**—ಉತ್ತಮವಾದ ಕರ್ಮದೊಡನೆ ಕೂಡಿ । **ಶಶಮತೇ**—ಸ್ತುತಿಯನ್ನರ್ಪಿಸುವನೋ । **ಸಃ**—ಆ ಯಜಮಾನನು । **ಋಧತ್**—ಅಭಿವೃದ್ಧಿಯನ್ನು ಹೊಂದಲಿ । (**ಸಃ**—ಅದೇ ಮಾನವನು) । **ಬೃಹತಃ**—ಮಹತ್ಸ್ವರೂಪನೂ । **ದಿವಃ**—ಪ್ರಕಾಶಮಾನನೂ ಆದ ನಿನ್ನ । **ಊತೀ**—ರಕ್ಷಣೆಗಳೊಡನೆ । **ಅಂಹೋ ನ**—ಪಾಪಗಳನ್ನು ದಾಟುವಂತೆ । **ದ್ವಿಷಃ**—ತನ್ನ ಶತ್ರುಗಳನ್ನೆಲ್ಲಾ । **ತರತಿ**—ದಾಟುತ್ತಾನೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಮಾನವನಾದ ಯಾವ ಯಜಮಾನನು ಶ್ರೇಷ್ಠವಾದ ದಾನಗಳನ್ನು ಕೊಡತಕ್ಕ ನಿನ್ನನ್ನು ದ್ದೇಶಿಸಿ ಉತ್ತಮವಾದ ಕರ್ಮದೊಡಗೂಡಿದ ಸ್ತುತಿಯನ್ನರ್ಪಿಸುವನೋ, ಆ ಯಜಮಾನನು ಅಭಿವೃದ್ಧಿಯನ್ನು ಹೊಂದಲಿ ಅದೇ ಮಾನವನು, ಮಹತ್ಸ್ವರೂಪನೂ ಪ್ರಕಾಶಮಾನನೂ ಆದ ನಿನ್ನ ರಕ್ಷಣೆಗಳೊಡನೆ ತನ್ನ ಸಕಲ ಪಾಪಗಳನ್ನು ದಾಟುವಂತೆ ತನ್ನ ಶತ್ರುಗಳನ್ನೂ ಜಯಿಸುತ್ತಾನೆ.

## English Translation.

May the mortal prosper who propitiates you, (his) benefactor, by holy rites: through the protection of you who are resplendent, he overcomes those who hate him, as if they were mortal sins.

॥ ಸಂಹಿತಾಪಾಠಃ ॥

ಸಮಿಧಾ ಯಸ್ತ ಆಹುತಿಂ ನಿಶಿತಿಂ ಮರ್ತ್ಯೋ ನಶತ್ ।
ವಯಾವಂತಂ ಸ ಪುಷ್ಯತಿ ಕ್ಷಯಮಗ್ನೇ ಶತಾಯುಷಂ ॥ ೫ ॥

॥ ಪದಪಾಠಃ ॥

ಸಂऽಇಧಾ । ಯಃ । ತೇ । ಆऽಹುತಿಂ । ನಿऽಶಿತಿಂ । ಮರ್ತ್ಯಃ । ನಶತ್ ।
ವಯಾऽವಂತಂ । ಸಃ । ಪುಷ್ಯತಿ । ಕ್ಷಯಂ । ಅಗ್ನೇ । ಶತऽಆಯುಷಂ ॥ ೫ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಸಮಿಧಾ ಸಮಿಂಧನಹೇತುಭೂತೇನೇಧ್ಮೇನ ಸಹ ತೇ ತ್ವದೀಯಾಂ ನಿಶಿತಿಂ ನಿಶಿತಾಂ ತನೂಕೃತಾಂ ಮಂತ್ರಸಂಸ್ಕೃತಾಮಾಹುತಿಂ ಯೋ ಮರ್ತ್ಯೋ ಮನುಷ್ಯೋ ನಶತ್ ವ್ಯಾಪ್ನುಯಾತ್ । ನಶತಿರ್ವ್ಯಾಪ್ತಿಕರ್ಮಾ । ಸ ಮನುಷ್ಯೋ ಯಜಮಾನೋ ವಯಾವಂತಂ । ವಯಾಃ ಶಾಖಾಃ ಪುತ್ರಪೌತ್ರಾದಿಲಕ್ಷಣಾಃ । ತದ್ಯುಕ್ತಂ ಶತಾಯುಷಂ ಬಹುವಿಧಾನ್ನಂ ಚಿರಕಾಲಜೀವನಂ ವಾ ಕ್ಷಯಂ ಗೃಹಂ ಪುಷ್ಯತಿ । ಪೋಷಯತಿ । ವರ್ಧಯತಿ । ತತ್ರ ಚಿರಕಾಲಮವತಿಷ್ಠತ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಅಗ್ನೇ**— ಎಲೈ ಅಗ್ನಿಯೇ । **ಯಃ ಮರ್ತ್ಯಃ**—ಮಾನವನಾದ ಯಾವ ಯಜಮಾನನು । **ಸಮಿಧಾ**—ಇಧ್ಮಗಳಿಂದ । **ತೇ**—ನಿನ್ನ । **ನಿಶಿತಿಂ**—ಮಂತ್ರದಿಂದ ಸಂಸ್ಕೃತವಾದ । **ಆಹುತಿಂ**—ಆಹುತಿಯನ್ನು । **ನಶತ್**—ತುಂಬಿ ಪಕ್ವವಾಗುವಂತೆ ಮಾಡುವನೋ । **ಸಃ**—ಅದೇ ಯಜಮಾನನು । **ವಯಾವಂತಂ**—ಪುತ್ರಪೌತ್ರಾದಿ ಶಾಖೆಗಳಿಂದ (ಸಂತತಿಗಳಿಂದ) ಕೂಡಿದುದೂ । **ಶತಾಯುಷಂ**—ದೀರ್ಘಾಯುಸ್ಸಿನಿಂದ ಕೂಡಿದುದೂ ಆದ । **ಕ್ಷಯಂ**—ಗೃಹವನ್ನು । **ಪುಷ್ಯತಿ**—ಬೆಳೆಸುತ್ತಾನೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಮಾನವನಾದ ಯಾವ ಯಜಮಾನನು ನಿನ್ನ ಮಂತ್ರಸತ್ಕೃತವಾದ ಆಹುತಿಯನ್ನು ಇಧ್ಮಗಳಿಂದ ತುಂಬಿಸಿ ಪಕ್ವವಾಗುವಂತೆ ಮಾಡುವನೋ ಅದೇ ಯಜಮಾನನು ಪುತ್ರಪೌತ್ರಾದಿಶಾಖೆಗಳಿಂದ ಕೂಡಿದುದೂ, ದೀರ್ಘಾಯುಸ್ಸಿನಿಂದ ಕೂಡಿದುದೂ ಆದ ಗೃಹವನ್ನು ಬೆಳೆಸುತ್ತಾನೆ.

## English Translation.

The mortal who feeds your consecrated burnt-offering with fuel enjoys, Agni, a dwelling peopled with descendants, and a life of a hundred years.

॥ ಸಂಹಿತಾಪಾಠಃ ॥

ತ್ವೇಷಸ್ತೇ ಧೂಮ ಋಣ್ವತಿ ದಿವಿ ಷಞ್ಛುಕ್ರ ಆತತಃ ।
ಸೂರೋ ನ ಹಿ ದ್ಯುತಾ ತ್ವಂ ಕೃಪಾ ಪಾವಕ ರೋಚಸೇ ॥ ೬ ॥

॥ ಪದಪಾಠಃ ॥

ತ್ವೇಷಃ । ತೇ । ಧೂಮಃ । ಋಣ್ವತಿ । ದಿವಿ । ಸನ್ । ಶುಕ್ರಃ । ಆಽತತಃ ।
ಸೂರಃ । ನ । ಹಿ । ದ್ಯುತಾ । ತ್ವಂ । ಕೃಪಾ । ಪಾವಕ । ರೋಚಸೇ ॥ ೬ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವೇಷೋ ದೀಪ್ತಸ್ಯ ತೇ ತವ ಶುಕ್ರೋ ನಿರ್ಮಲಃ ಶುಭ್ರವರ್ಣೋ ವಾ ಧೂಮೋ ದಿವ್ಯಂತರಿಕ್ಷ ಆತತೋ ವಿಸ್ತೀರ್ಣಃ ಸನ್ ಋಣ್ವತಿ । ಮೇಘಾತ್ಮನಾ ಪರಿಣತೋ ಗಚ್ಛತಿ । ಅಪಿ ಚ ಹೇ ಪಾವಕ ಶೋಧಕಾಗ್ನೇ ಸೂರೋ ನ ಸೂರ್ಯ ಇವ ಕೃಪಾಭಿಮುಖೀಕರಣಸಮರ್ಥಯಾ ಸ್ತುತ್ಯಾ ಸ್ತೂಯಮಾನಸ್ತ್ವಂ ದ್ಯುತಾ ದೀಪ್ತ್ಯಾ ರೋಚಸೇ ಹಿ । ದೀಪ್ಯಸೇ ಖಲು ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ತ್ವೇಷಃ**—ಪ್ರಕಾಶಮಾನನಾದ । **ತೇ**—ನಿನ್ನ । **ಶುಕ್ರಃ**—ಶುಭ್ರವರ್ಣವುಳ್ಳ । **ಧೂಮಃ**—ಧೂಮವು । **ದಿವಿ**—ಅಂತರಿಕ್ಷದಲ್ಲಿ । **ಆತತಃ ಸನ್**—ವಿಸ್ತೃತವಾಗಿ ಹರಡಿ । **ಋಣ್ವತಿ**—ಮೇಘ ರೂಪದಲ್ಲಿ ಪರಿಣಮಿಸುತ್ತದೆ । **ಪಾವಕ**—ಶುದ್ಧಿಕಾರಕನಾದ ಎಲೈ ಅಗ್ನಿಯೇ । **ಕೃಪಾ**—ನಿನ್ನ ಕೃಪೆಯನ್ನು ಪಡೆಯಲು ಸಮರ್ಥವಾದ ಸ್ತುತಿಯಿಂದ ಪ್ರಶಂಸಿತನಾದ । **ತ್ವಂ**—ನೀನು । **ದ್ಯುತಾ**—ನಿನ್ನ ಕಾಂತಿಯಿಂದ । **ಸೂರೋ ನ**—ಸೂರ್ಯನಂತೆ । **ರೋಚಸೇ ಹಿ**—ಪ್ರಕಾಶಿಸುತ್ತೀಯಲ್ಲವೇ ?

॥ ಭಾವಾರ್ಥ ॥

ಎಲೈ ಅಗ್ನಿಯೇ, ಪ್ರಕಾಶಮಾನನಾದ ನಿನ್ನ ಶುಭ್ರವರ್ಣವುಳ್ಳ ಧೂಮವು ಅಂತರಿಕ್ಷದಲ್ಲಿ ವಿಸ್ತೃತವಾಗಿ ಹರಡಿ ಮೇಘರೂಪದಲ್ಲಿ ಪರಿಣಮಿಸುತ್ತದೆ. ಶುದ್ಧಿಕಾರಕನಾದ ಎಲೈ ಅಗ್ನಿಯೇ, ನಿನ್ನ ಕೃಪೆಯನ್ನು ಪಡೆಯಲು ಸಮರ್ಥವಾದ ಸ್ತುತಿಯಿಂದ ಪ್ರಶಂಸಿತನಾದ ನೀನು ನಿನ್ನ ಕಾಂತಿಯಿಂದ ಸೂರ್ಯನಂತೆ ಪ್ರಕಾಶಿಸುತ್ತೀಯಲ್ಲವೇ?

## English Translation.

The pure smoke of you the resplendent spreads through firmament, matures (in clouds), and you, the purifier, shine with radiance like the sun, when propitiated by praise.

॥ ಸಂಹಿತಾಪಾಠಃ ॥

ಅಧಾ ಹಿ ವಿಕ್ಷ್ವೀಡ್ಯೋಽಸಿ ಪ್ರಿಯೋ ನೋ ಅತಿಥಿಃ ।
ರಣ್ವಃ ಪುರೀವ ಜೂರ್ಯಃ ಸೂನುರ್ನ ತ್ರಯಯಾಯ್ಯಃ ॥ ೭ ॥

॥ ಪದಪಾಠಃ ॥

ಅಧ । ಹಿ । ವಿಕ್ಷು । ಈಡ್ಯಃ । ಅಸಿ । ಪ್ರಿಯಃ । ನಃ । ಅತಿಥಿಃ ।
ರಣ್ವಃ । ಪುರಿಽಇವ । ಜೂರ್ಯಃ । ಸೂನುಃ । ನ । ತ್ರಯಯಾಯ್ಯಃ ॥ ೭ ॥

॥ ಸಾಯಣಭಾಷ್ಯಂ ॥

ಅಧಾಪಿ ಚ ವಿಕ್ಷು ಪ್ರಜಾಸು ಹೇ ಅಗ್ನೇ ತ್ವಮೀಡ್ಯಃ ಸ್ತುತ್ಯೋಽಸಿ । ಭವಸಿ । ಹಿ ಯಸ್ಮಾದರ್ಥೇ । ಯಸ್ಮಾದೇವಂ ತಸ್ಮಾನ್ನೋಽಸ್ಮಾಕಮತಿಥಿಃ । ಲುಪ್ತೋಪಮಮೇತತ್ । ಅತಿಥಿರಿವ ಪ್ರಿಯೋಽಸಿ । ಯದ್ವಾ । ಹವಿರ್ವಹನಾಯ ಸತತಗಾಮೀ ಭೂತ್ವಾಸ್ಮಾಕಂ ಪ್ರಿಯೋಽಸಿ । ತಥಾ ಪುರೀವ ನಗರ್ಯಾಂ ಜೂರ್ಯೋ ಜೀರ್ಣೋ ವೃದ್ಧೋ ಹಿತೋಪದೇಷ್ಟಾ ರಾಜೇವ ರಣ್ವೋ ರಮಣೀಯೋ ಗಂತವ್ಯೋ ವಾ ಭವಸಿ । ತಥಾ ಸೂನುರ್ನ ಪುತ್ರ ಇವ ತ್ರಯಯಾಯ್ಯೋ ಯಜಮಾನೈಸ್ತ್ರಾತವ್ಯಃ ಪಾಲಯಿತವ್ಯೋ ಭವಸಿ ॥ ತ್ರಾಯತೇರೇತದ್ರೂಪಂ ॥ ಯದ್ವೈತತ್ಸೂನೋರ್ವಿಶೇಷಣಂ । ವಿದ್ಯಾತಪಃಕರ್ಮಲಕ್ಷಣಂ ತ್ರಯಂ ಯಾತೀತಿ ತ್ರಯಯಾಯ್ಯಃ ॥ ಯಾತೇರೌಣಾದಿಕ ಆಯ್ಯಪ್ರತ್ಯಯಃ । ಸ್ಪೃಹಯಾಯ್ಯ ಇತಿ ಯಥಾ । ಅಥವಾ ತ್ರಯಯಾಯ್ಯೋ ಜನ್ಮತ್ರಯಂ ಪ್ರಾಪ್ತಃ । ಜನ್ಮತ್ರಯಂ ಸ್ಮರ್ಯತೇ । ಮಾತುರಗ್ರೇಽಧಿಜನನಂ ದ್ವಿತೀಯಂ ಮೌಂಜಿಬಂಧನಾತ್ । ತೃತೀಯಂ ಯಜ್ಞದೀಕ್ಷಾಯಾ ಇತಿ ಜನ್ಮತ್ರಯಂ ಸ್ಮೃತಂ । ಮನು. ೨-೧೬೯ । ಇತಿ । ತಾದೃಶಃ ಪುತ್ರ ಇತಿ । ರಣ್ವೋ ರಮಣೀಯೋಽಸಿ ॥

॥ ಪ್ರತಿಪದಾರ್ಥ ॥

(ಅಗ್ನೇ—ಎಲೈ ಅಗ್ನಿಯೆ) । ಅಧ ಹಿ—ನೀನು ಮಹದ್ಗುಣಗಳನ್ನು ಹೊಂದಿರುವುದರಿಂದಲೇ । ವಿಕ್ಷು—ಪ್ರಜೆಗಳಲ್ಲೆಲ್ಲಾ । ಈಡ್ಯಃ—ಸ್ತುತ್ಯನಾಗಿ । ಅಸಿ—ಆಗಿದ್ದೀಯೆ । ನಃ—ನಮಗೆ । ಪ್ರಿಯಃ—ಪ್ರೀತಿಪಾತ್ರ

ನಾದ | **ಅತಿಥಿಃ**— ಅತಿಥಿಯಾಗಿದ್ದೀಯೆ | **ಪುರಿ**— ಪಟ್ಟಣದಲ್ಲಿ | **ಜೂರ್ಯಃ ಇವ**—(ಸಕಲರಿಗೂ ಹಿತೋಪದೇಶಕನಾದ) ವೃದ್ಧನು | **ರಣ್ವಃ**—ಹಿತಕರನೂ ಪ್ರಿಯನೂ ಆಗಿರುವಂತೆಯೂ | **ತ್ರಯಯಾಯ್ಯಃ**—ಯಜಮಾನರಿಂದ ರಕ್ಷಿತನಾಗಿರತಕ್ಕ | **ಸೂನುಃ ನ**— ಪುತ್ರನಂತೆಯೂ (ಪ್ರೀತಿಪಾತ್ರನಾಗಿದ್ದೀಯೆ).

|| ಭಾವಾರ್ಥ ||

ಎಲೈ ಅಗ್ನಿಯೇ, ನೀನು ಮಹದ್ಗುಣಗಳನ್ನು ಹೊಂದಿರುವುದರಿಂದಲೇ ಪ್ರಜೆಗಳಲ್ಲೆಲ್ಲಾ ನೀನು ಸ್ತುತ್ಯನಾಗಿದ್ದೀಯೆ. ನಮಗೆ ಪ್ರೀತಿಪಾತ್ರನಾದ ಅತಿಥಿಯಾಗಿದ್ದೀಯೆ. ಪಟ್ಟಣದಲ್ಲಿ ಸಕಲರಿಗೂ ಹಿತೋಪದೇಶಕನಾದ ವೃದ್ಧನು ಹಿತಕರನೂ, ಪ್ರಿಯನೂ ಆಗಿರುವಂತೆಯೂ ಮತ್ತು ಯಜಮಾನರಿಂದ ಗೃಹದಲ್ಲಿ ರಕ್ಷಿತನಾಗತಕ್ಕ ಪುತ್ರನು ಪ್ರಿಯನಾಗಿರುವಂತೆಯೂ, ನೀನು ಸಕಲರಿಗೂ ಪ್ರೀತಿಪಾತ್ರನಾಗಿದ್ದೀಯೆ.

## English Translation.

You are now to be praised amongst the people, for you are our well beloved guest, venerated like an elder in the city, and to be cherished like a son.

|| ಸಂಹಿತಾಪಾಠಃ ||

ಕ್ರತ್ವಾ ಹಿ ದ್ರೋಣೇ ಅಜ್ಯಸೇಽಗ್ನೇ ವಾಜೀ ನ ಕೃತ್ವ್ಯಃ |
ಪರಿಜ್ಮೇವ ಸ್ವಧಾ ಗಯೋಽತ್ಯೋ ನ ಹ್ವಾರ್ಯಃ ಶಿಶುಃ || ೮ ||

|| ಪದಪಾಠಃ ||

ಕ್ರತ್ವಾ | ಹಿ | ದ್ರೋಣೇ | ಅಜ್ಯಸೇ | ಅಗ್ನೇ | ವಾಜೀ | ನ | ಕೃತ್ವ್ಯಃ |
ಪರಿಜ್ಮಾಽಇವ | ಸ್ವಧಾ | ಗಯಃ | ಅತ್ಯಃ | ನ | ಹ್ವಾರ್ಯಃ | ಶಿಶುಃ || ೮ ||

|| ಸಾಯಣಭಾಷ್ಯಂ ||

ಹೇ ಅಗ್ನೇ ಕ್ರತ್ವಾ ಕರ್ಮಣಾ ಮಂಥನರೂಪೇಣ ದ್ರೋಣೇ ದ್ರುಮೇ ಕಾಷ್ಠೇಽರಣ್ಯಾಂ ವಿದ್ಯಮಾನಸ್ತ್ವಮಜ್ಯಸೇ ಹಿ | ವ್ಯಜ್ಯಸೇ ಖಲು | ತಥಾ ವಾಜೀ ನ ವೇಜನವಾನಶ್ವ ಇವ ಕೃತ್ವ್ಯಃ | ಕೃತ್ವೀತಿ ಕರ್ಮನಾಮ | ಹವಿರ್ವಹನಾದೀನಾಂ ಕರ್ಮಣಾಂ ಕರ್ತಾ | ಸ ಯಥಾ ಪುರುಷಂ ವಹತಿ ತದ್ವದ್ಧವಿರ್ವಹನಮಗ್ನೇರಶ್ವಸಾದೃಶ್ಯಂ | ತಥಾ ಪರಿಜ್ಮೇವ ಪರಿತಃ ಸರ್ವತ್ರ ಗಂತಾ ವಾಯುರಿವ ದಾವಾನಲಾದಿರೂಪೇಣ ಸರ್ವತ್ರ ಗಂತಾ ತ್ವಂ ಸ್ವಧಾ | ಅನ್ನನಾಮೈತತ್ | ಅನ್ನಂ ಗಯೋ ಗೃಹಂ

**ಚ ಭವಸಿ । ಉಭಯೋರ್ದಾತೇತ್ಯರ್ಥಃ । ಅಪಿ ಚ ಶಿಶುರ್ಜಾತಮಾತ್ರೋ ಬಾಲೋಽಪಿ ತ್ವಮತ್ಯೋ ನ ಸತತಗಾಮೀ ಜಾತ್ಯಶ್ವ ಇವ ಹ್ವಾರ್ಯಃ ಕುಟಿಲಮಿತಸ್ತತೋ ಗಂತಾಸಿ ॥ ಹ್ವೃ ಕೌಟಿಲ್ಯೇ ಇತ್ಯಸ್ಯೈತದ್ರೂಪಂ ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ದ್ರೋಣೇ**—ಕಾಷ್ಠರೂಪವಾದ ಅರಣಿಯಲ್ಲಿ ಸ್ಥಿತನಾಗಿದ್ದ ನೀನು । **ಕ್ರತ್ವಾ**—ಮಥನರೂಪವಾದ ಕ್ರಿಯೆಯಿಂದ । **ಅಜ್ಯಸೇ ಹಿ**— ಆವಿರ್ಭೂತನಾಗುತ್ತೀಯೆ । **ವಾಜೀ ನ**—ವೇಗಶಾಲಿಯಾದ ಅಶ್ವದಂತೆ । **ಕೃತ್ವ್ಯಃ**—ಹವಿರ್ವಹನಾದಿ ಕರ್ಮಯುಕ್ತನಾಗಿದ್ದೀಯೆ । **ಪರಿಜ್ಮೇವ**—ಸರ್ವತ್ರ ಸಂಚಾರಿಯಾದ ವಾಯುವಿನಂತೆ ಸರ್ವವ್ಯಾಪಿಯಾಗಿದ್ದೀಯೆ । **ಸ್ವಧಾ**—ಹವಿಸ್ಸಿನ ರೂಪದ ಅನ್ನವೂ । **ಗಯಃ**—ಗೃಹವೂ (ನೀನೇ ಆಗಿದ್ದೀಯೆ) । **ಶಿಶುಃ**—ಆಗತಾನೇ ಉತ್ಪನ್ನನಾಗಿದ್ದರೂ ಸಹ । **ಅತ್ಯೋ ನ**—ಶೀಘ್ರಗಾಮಿಯಾದ ಅಶ್ವದಂತೆ । **ಹ್ವಾರ್ಯಃ**— ಕುಟಿಲಗತಿಯುಳ್ಳವನಾಗಿ ಎಲ್ಲೆಲ್ಲೂ ಸಂಚರಿಸುತ್ತೀಯೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಕಾಷ್ಠರೂಪವಾದ ಅರಣಿಯಲ್ಲಿ ಸ್ಥಿತನಾಗಿದ್ದ ನೀನು ಮಥನರೂಪವಾದ ಕ್ರಿಯೆಯಿಂದ ಆವಿರ್ಭೂತನಾಗುತ್ತೀಯೆ. ವೇಗಶಾಲಿಯಾದ ಅಶ್ವದಂತೆ ಹವಿರ್ವಹನಾದಿ ಕರ್ಮಯುಕ್ತನಾಗಿದ್ದೀಯೆ. ಸರ್ವತ್ರ ಸಂಚಾರಿಯಾದ ವಾಯುವಿನಂತೆ ಸರ್ವವ್ಯಾಪಿಯಾಗಿದ್ದೀಯೆ ಹವಿಸ್ಸಿನ ರೂಪದ ಅನ್ನವೂ ಗೃಹವೂ ನೀನೇ ಆಗಿದ್ದೀಯೆ. ಆಗ ತಾನೇ ಉತ್ಪನ್ನನಾಗಿ ಶಿಶುರೂಪದಲ್ಲಿದ್ದರೂ ಸಹ ಶೀಘ್ರಗಾಮಿಯಾದ ಅಶ್ವದಂತೆ ಕುಟಿಲಗತಿಯುಳ್ಳವನಾಗಿ ಎಲ್ಲೆಲ್ಲೂ ಸಂಚರಿಸುತ್ತೀಯೆ.

## English Translation.

You are manifested in the timber, Agni, by the act of attrition: you are the bearer (of the oblation), as a horse (is of his rider): you are like the circumambient wind: you are food and dwelling; you are like a (new-born) babe, and variable (in movement) as a horse.

॥ ಸಂಹಿತಾಪಾಠಃ ॥

**ತ್ವಂ ತ್ಯಾ ಚಿದಚ್ಯುತಾಗ್ನೇ ಪಶುರ್ನ ಯವಸೇ ।**

**ಧಾಮಾ ಹ ಯತ್ತೇ ಅಜರ ವನಾ ವೃಶ್ಚಂತಿ ಶಿಕ್ವಸಃ ॥ ೯ ॥**

॥ ಪದಪಾಠಃ ॥

ತ್ವಂ । ತ್ಯಾ । ಚಿತ್ । ಅಚ್ಯುತಾ । ಅಗ್ನೇ । ಪಶುಃ । ನ । ಯವಸೇ ।

ಧಾಮ । ಹ । ಯತ್ । ತೇ । ಅಜರ । ವನಾ । ವೃಶ್ಚಂತಿ । ಶಿಕ್ವಸಃ ॥ ೯ ॥

॥ ಸಾಯಣಭಾಷ್ಯಂ ॥

ಕಾರೀರ್ಯಾಮಗ್ನೇರ್ಧಾಮಚ್ಛದೋ ವೈಕಲ್ಪಿಕ್ಯನುವಾಕ್ಯಾ। ತ್ವಂ ತ್ಯೇತಿ । ಸೂತ್ರಿತಂ ಚ । ತ್ವಂ ತ್ಯಾ ಚಿದಚ್ಯುತಾ ಧಾಮಂತೇ ವಿಶ್ವಂ ಭುವನಮಧಿಶ್ರಿತಂ । ಆ. ೨-೧೩ । ಇತಿ ॥

ಹೇ ಅಗ್ನೇ ತ್ವಂ ತ್ಯಾ ತಾನಿ ಕಾಷ್ಠಾನಿ। ಚಿಚ್ಛಬ್ದೋಽಪಿಶಬ್ದಸಮಾನಾರ್ಥೋ ಭಿನ್ನಕ್ರಮಃ । ಅಚ್ಯುತಾಚ್ಯುತಾನಿ ಚ್ಯಾವಯಿತುಮಶಕ್ಯಾನ್ಯಪಿ । ಅತ್ಸೀತಿ ಶೇಷಃ । ತತ್ರ ದೃಷ್ಟಾಂತಃ । ಯವಸೇ ಘಾಸೇ ವಿಸೃಷ್ಟಃ ಪಶುರ್ನ ಪಶುರಿವ । ಸ ಯಥಾ ಸರ್ವಂ ಭಕ್ಷಯತಿ ತಥಾ ತ್ವಂ ಪ್ರೌಢಕಾಷ್ಠಾದೀನಿ ಕ್ಷಣಮಾತ್ರೇಣ ದಹಸೀತ್ಯರ್ಥಃ । ಹೇ ಅಜರ ಜರಾರಹಿತಾಗ್ನೇ ಯದ್ಯಸ್ಯ ॥ ಸುಪಾಂ ಸುಲುಗಿತಿ ಷಷ್ಠ್ಯಾ ಲುಕ್ ॥ ಶಿಕ್ವಸೋ ದೀಪ್ತಸ್ಯ ತೇ ತವ ಧಾಮ ಧಾಮಾನಿ ತೇಜಾಂಸಿ ವನಾ ವನನೀಯಾನಿ ಸಂಭಜನೀಯಾನ್ಯರಣ್ಯಾನಿ ವೃಶ್ಚಂತಿ ಛಿಂದಂತಿ ತಕ್ಷಂತಿ ಸ ತ್ವಮಿತಿ ಪೂರ್ವತ್ರಾನ್ವಯಃ । ಹೇತ್ಯೇತತ್ಪಾದಪೂರಣಂ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಯವಸೇ**—ಹುಲ್ಲುಗಾವಲಿನಲ್ಲಿ ಮೇಯಲು ಬಿಟ್ಟ । **ಪಶುಃ ನ**—ಪಶುವು ಹುಲ್ಲನ್ನು ಪೂರ್ಣವಾಗಿ ಭಕ್ಷಿಸುವಂತೆ । **ತ್ವಂ**—ನೀನು । **ತ್ಯಾಂ**—ವೃಕ್ಷಾದಿಗಳನ್ನು । **ಅಚ್ಯುತಾ ಚಿತ್**—ದೃಢವಾದ ಮೂಲಗಳನ್ನು ಹೊಂದಿದಾಗ್ಯೂ (ಪೂರ್ಣವಾಗಿ ದಹಿಸಿ ಉರುಳಿಸುತ್ತೀಯೆ) । **ಅಜರ**—ಜರಾರಹಿತನಾದ ಎಲೈ ಅಗ್ನಿಯೇ। **ಶಿಕ್ವಸಃ**—ಪ್ರಕಾಶಮಾನನಾದ । **ಯತ್ ತೇ**—ಯಾವ ಅದೇ ನಿನ್ನ । **ಧಾಮ**—ತೇಜಸ್ಸುಗಳು । **ವನಾ**—ವನಸಂಬಂಧಿಯಾದ ಸಕಲ ವೃಕ್ಷಾದಿಗಳನ್ನೂ । **ವೃಶ್ಚಂತಿ ಹಿ**—ದಹಿಸಿ ಭಕ್ಷಿಸುತ್ತವೆಯಲ್ಲವೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಹುಲ್ಲುಗಾವಲಿನಲ್ಲಿ ಮೇಯಲು ಬಿಟ್ಟ ಪಶುವು ಹುಲ್ಲನ್ನು ಪೂರ್ಣವಾಗಿ ಭಕ್ಷಿಸುವಂತೆ, ನೀನು ವೃಕ್ಷಾದಿಗಳನ್ನು ಅವು ದೃಢವಾದ ಮೂಲವನ್ನು ಹೊಂದಿದ್ದಾಗ್ಯೂ ಪೂರ್ಣವಾಗಿ ದಹಿಸಿ ಉರುಳಿಸುತ್ತೀಯೆ. ಜರಾರಹಿತನಾದ ಎಲೈ ಅಗ್ನಿಯೇ, ಪ್ರಕಾಶಮಾನನಾದ ನಿನ್ನ ತೇಜಸ್ಸುಗಳು ವನಸಂಬಂಧಿಯಾದ ಸಕಲ ವೃಕ್ಷಗಳನ್ನು ದಹಿಸಿ ಭಕ್ಷಿಸುತ್ತಿವೆಯಲ್ಲವೇ ?

## English Translation.

You :consume, Agni, the unfallen (trees) as an animal (feeds) upon pasture, when, undecaying deity, the flames of you who are resplendent shear the forests.

|| ವಿಶೇಷವಿಷಯಗಳು. ||

ಕಾರೀರ್ಯೇಷ್ಟಿಯಲ್ಲಿ ಧಾಮಚ್ಛತ್ ಅಗ್ನಿಯನ್ನುದ್ದೇಶಿಸಿ ಮಾಡುವ ವೈಕಲ್ಪಿಕ ಪುರೋಡಾಶಹೋಮದಲ್ಲಿ **ತ್ವಂ ತ್ಯಾ** ಎಂಬ ಈ ಋಕ್ಕನ್ನು ಅನುವಾಕ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ- **ತ್ವಂ ತ್ಯಾ ಚಿದಚ್ಯುತಾ ಧಾಮಂತೇ ವಿಶ್ವಂ ಭುವನಮಧಿಶ್ರಿತಮಿತಿ ವಾ** ಎಂಬ ಸೂತ್ರದಿಂದ (ಆ. ೨-೧೩) ವಿವೃತವಾಗಿರುವುದು.

|| ಸಂಹಿತಾಪಾಠಃ ||

ವೇಷಿ ಹ್ಯಧ್ವರೀಯತಾಮಗ್ನೇ ಹೋತಾ ದಮೇ ವಿಶಾಂ ।
ಸಮೃಧೋ ವಿಶ್ಪತೇ ಕೃಣು ಜುಷಸ್ವ ಹವ್ಯಮಂಗಿರಃ ॥ ೧೦ ॥

|| ಪದಪಾಠಃ ||

**ವೇಷಿ । ಹಿ । ಅಧ್ವರಿऽಯತಾಂ । ಅಗ್ನೇ । ಹೋತಾ । ದಮೇ । ವಿಶಾಂ ।**
**ಸಂऽಋಧಃ । ವಿಶ್ಪತೇ । ಕೃಣು । ಜುಷಸ್ವ । ಹವ್ಯಂ । ಅಂಗಿರಃ ॥ ೧೦ ॥**

|| ಸಾಯಣಭಾಷ್ಯಂ ||

**ಹೆ ಅಗ್ನೇ ಅಧ್ವರೀಯತಾಮಧ್ವರಂ ಯಜ್ಞಮಾತ್ಮನ ಇಚ್ಛತಾಂ ವಿಶಾಂ ಯಜಮಾನಾನಾಂ ದಮೇ ಗೃಹೇ ತ್ವಂ ಹೋತಾ ದೇವಾನಾಮಾಹ್ವಾತಾ ಸನ್ ವೇಷಿ ಹಿ ಸ್ತುತಿಂ ಹವೀಂಷಿ ವಾ ಯತಃ ಕಾಮಯಸೇ ಅತಃ ಕಾರಣಾದ್ವಿಶ್ಪತೇ ವಿಶಾಂ ಪಾಲಕಾಗ್ನೇ ಸಮೃಧಃ ಸಮೃದ್ಧಾನಸ್ಮಾನ್ಯಜಮಾನಾನ್ । ಕೃಣು । ಕುರು । ಕೃತ್ವಾ ಚ ಹೇ ಅಂಗಿರೋऽಂಗನಾದಿಗುಣಯುಕ್ತ ಅಂಗಾರರೂಪ ವಾಗ್ನೇ ಹವ್ಯಮಸ್ಮದೀಯಂ ಹವಿರ್ಜುಷಸ್ವ । ಸೇವಸ್ವ ॥**

|| ಪ್ರತಿಪದಾರ್ಥ ||

**ಅಗ್ನೇ**—ಎಲೈ ಅಗ್ನಿಯೇ । **ಅಧ್ವರೀಯತಾಂ**— ಯಜ್ಞೇಚ್ಛುಗಳಾದ । **ವಿಶಾಂ**— ಯಜಮಾನರ । **ದಮೇ**—ಗೃಹದಲ್ಲಿ । **ಹೋತಾ**— ಹೋತೃವಾಗಿದ್ದು । **ವೇಷಿ ಹಿ**— ಹವಿರಾದಿಗಳನ್ನು ಇಚ್ಛಿಸುತ್ತೀಯೆ । **ವಿಶ್ಪತೇ**— ಪ್ರಜಾಪಾಲಕನಾದ ಅಗ್ನಿಯೇ । **ಸಮೃಧಃ**—(ಯಜಮಾನರನ್ನು) ಸಂಪದ್ಯುಕ್ತರನ್ನಾಗಿ । **ಕೃಣು**— ಮಾಡು (ಅನಂತರ) । **ಅಂಗಿರಃ**— ಅಂಗನಾದಿಗುಣಯುಕ್ತನಾದ ಎಲೈ ಅಗ್ನಿಯೇ । **ಹವ್ಯಂ**— ನಮ್ಮ ಹವಿಸ್ಸನ್ನು । **ಜುಷಸ್ವ**—ಸೇವಿಸು.

॥ ಭಾವಾರ್ಥ ॥

ಅಂಗಿರಾರೂಪನಾದ ಎಲೈ ಅಗ್ನಿಯೇ, ಯಜ್ಞೇಚ್ಛುಗಳಾದ ಯಜಮಾನರ ಗೃಹದಲ್ಲಿ ಹೋತೃವಾಗಿದ್ದು ನೀನು ಹವಿರಾದಿಗಳನ್ನು ಇಚ್ಛಿಸುತ್ತೀಯೆ. ಪ್ರಜಾಪಾಲಕನಾದ ಎಲೈ ಅಗ್ನಿಯೇ, ನೀನು ಯಜಮಾನರನ್ನೆಲ್ಲಾ ಸಂಪದ್ಯುಕ್ತರನ್ನಾಗಿ ಮಾಡಿ ಅನಂತರ ಅವರ ಹವಿಸ್ಸನ್ನು ಸ್ವೀಕರಿಸಿ ಸೇವಿಸು.

## English Translation.

You enter as the ministrant priest into the habitations of men who wish to perform sacrificc : render them prosperous, benefactor of mankind : be propitiated, Angiras, by oblation.

॥ ಸಂಹಿತಾಪಾಠಃ ॥

ಅಚ್ಛಾ ನೋ ಮಿತ್ರಮಹೋ ದೇವ ದೇವಾನಗ್ನೇ ವೋಚಃ ಸುಮತಿಂ ರೋದಸ್ಯೋಃ ।
ವೀಹಿ ಸ್ವಸ್ತಿಂ ಸುಕ್ಷಿತಿಂ ದಿವೋ ನೄನ್ದ್ವಿಷೋ ಅಂಹಾಂಸಿ ದುರಿತಾ ತರೇಮ ತಾ ತರೇಮ ತವಾವಸಾ ತರೇಮ ॥ ೧೧ ॥

॥ ಪದಪಾಠಃ ॥

ಅಚ್ಛ । ನಃ । ಮಿತ್ರ್ಽಮಹಃ । ದೇವ । ದೇವಾನ್ । ಅಗ್ನೇ । ವೋಚಃ । ಸುಽಮತಿಂ । ರೋದಸ್ಯೋಃ ।
ವೀಹಿ । ಸ್ವಸ್ತಿಂ । ಸುಽಕ್ಷಿತಿಂ । ದಿವಃ । ನೄನ್ । ದ್ವಿಷಃ । ಅಂಹಾಂಸಿ । ದುಃಽಇತಾ । ತರೇಮ । ತಾ ।
ತರೇಮ । ತವ । ಅವಸಾ । ತರೇಮ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ಮಿತ್ರಮಹೋಽನುಕೂಲದೀಪ್ತೇ ದೇವ ದಾನಾದಿಗುಣಯುಕ್ತಾಗ್ನೇ ರೋದಸ್ಯೋರ್ದ್ಯಾವಾಪೃಥಿವ್ಯೋರ್ವರ್ತಮಾನಸ್ತ್ವಂ ದೇವಾನ್ಸ್ತುತ್ಯಾನಿಂದ್ರಾದೀನಚ್ಛಾಭಿಮುಖ್ಯೇನ ನೋಽಸ್ಮಾಕಂ ಸುಮತಿಂ ಸ್ತುತಿಂ ವೋಚಃ । ಬ್ರೂಹಿ । ದಿವಃ ಸ್ತುತೇರ್ನೄನ್ನೇತೄನಸ್ಮಾನ್ ಸುಕ್ಷಿತಿಂ ಶೋಭನನಿವಾಸಯುಕ್ತಂ ಸ್ವಸ್ತಿಮವಿನಾಶಂ ವೀಹಿ । ಗಮಯ ॥ ದ್ವೇತಿರಶ್ರಾಂತಭಾಗವಿತಣ್ಯರ್ಥೋ ದ್ರಷ್ಟವ್ಯಃ ॥ ವಯಂ

**ಚ ದ್ವಿಷೋ ದ್ವೇಷ್ಟೄನ್ ಶತ್ರೂನಂಹಾಂಸಿ ಪಾಪಾನಿ ದುರಿತಾ ತತ್ಫಲರೂಪಾಣಿ ದುರ್ಗಮನಾನಿ ತರೇಮ । ಅತಿಕ್ರಾಮೇಮ । ತಥಾ ತಾ ತಾನಿ ವ್ಯವಹಿತಾನಿ ಜನ್ಮಾಂತರಕೃತಾನಿ ಚ ಪಾಪಾದೀನಿ ತರೇಮ । ಉಕ್ತ ಏವಾರ್ಥೋ ದಾರ್ಢ್ಯಾಯ ಪುನರುಚ್ಯತೇ । ಹೇ ಅಗ್ನೇ ತವಾವಸಾ ರಕ್ಷಣೇನ ದ್ವೇಷ್ಟೄಪ್ರಭೃತೀನತ್ಯಂತಂ ತರೇಮ ॥**

**ಮಿತ್ರಮಹಃ**— ಅನುಕೂಲಕಾರಿಯಾದ ಪ್ರಭೆಯುಳ್ಳವನೂ । **ದೇವ**—ದೇವತಾತ್ಮನೂ ಆದ । **ಅಗ್ನೇ**—ಎಲೈ ಅಗ್ನಿಯೇ । **ರೋದಸ್ಯೋಃ**—ದ್ಯಾವಾಪೃಥಿವಿಗಳಲ್ಲೆಲ್ಲಾ ವ್ಯಾಪಿಸಿರುವ ನೀನು । **ದೇವಾನ್ ಅಚ್ಛ**—ದೇವತೆಗಳಿಗೆ ಅಭಿಮುಖವಾಗಿ । **ನಃ**—ನಮ್ಮ । **ಸುಮತಿಂ**—ಸ್ತೋತ್ರವನ್ನು । **ವೋಚಃ**—ಪಠಿಸಿ ಅರ್ಪಿಸು । **ದಿವಃ**—ಸ್ತುತಿಗಳಿಗೆ । **ನೄನ್**—ನಿರ್ವಾಪಕರಾದ ನಮ್ಮನ್ನು (ಸ್ತೋತ್ರಗಳನ್ನರ್ಪಿಸುವ ನಮ್ಮನ್ನು) । **ಸುಕ್ಷಿತಿಂ**—ಶ್ರೇಷ್ಠವಾದ ಗೃಹಾದಿಗಳಿಂದ ಕೂಡಿದುದೂ । **ಸ್ವಸ್ತಿಂ**—ನಾಶರಹಿತವಾದುದೂ ಆದ ಶ್ರೇಯಸ್ಸಿನೊಡನೆ । **ವೀಹಿ**—ಸೇರಿಸು । **ವಯಂ**—ನಾವು । **ದ್ವಿಷಃ**—ನಮ್ಮ ಶತ್ರುಗಳನ್ನೂ । **ಅಂಹಾಂಸಿ**—ಪಾಪಗಳನ್ನೂ । **ದುರಿತಾ**—ದುಃಖಕಾರಕಗಳಾದ ಪಾಪಫಲಗಳನ್ನೂ । **ತರೇಮ**—ದಾಟುವಂತಾಗಲಿ । **ತಾ**—ಜನ್ಮಾಂತರದ ಪಾಪಸಂಸ್ಕಾರಗಳನ್ನೂ । **ತರೇಮ**—ದಾಟುವಂತಾಗಲಿ (ಎಲೈ ಅಗ್ನಿಯೇ) । **ತವ**—ನಿನ್ನ । **ಅವಸಾ**—ರಕ್ಷಣೆಯೊಡನೆ ಕೂಡಿದವರಾಗಿ । **ತರೇಮ**—ಆ ದುಃಖಸಾಧನಗಳನ್ನೆಲ್ಲಾ ಎದುರಿಸಿ ದುಃಖದಿಂದ ಪಾರಾಗುವಂತಾಗಲಿ.

॥ ಭಾವಾರ್ಥ ॥

ಅನುಕೂಲಕಾರಿಯಾದ ಪ್ರಭೆಯುಳ್ಳವನೂ, ದೇವತಾತ್ಮನೂ ಆದ ಎಲೈ ಅಗ್ನಿಯೇ, ದ್ಯಾವಾಪೃಥಿವಿಗಳಲ್ಲೆಲ್ಲಾ ವ್ಯಾಪಿಸಿರುವ ನೀನು ದೇವತೆಗಳಿಗೆ ಅಭಿಮುಖನಾಗಿ ನಮ್ಮ ಸ್ತೋತ್ರವನ್ನು ಪಠಿಸಿ ಅರ್ಪಿಸು. ಸ್ತುತಿಗಳಿಗೆ ನಿರ್ವಾಪಕರಾದ ನಮ್ಮನ್ನು ಶ್ರೇಷ್ಠವಾದ ಗೃಹಾದಿಗಳಿಂದ ಕೂಡಿದುದೂ, ನಾಶರಹಿತವಾದುದೂ ಆದ ಶ್ರೇಯಸ್ಸಿನೊಡನೆ ಸೇರಿಸು. ನಾವು ನಮ್ಮ ಶತ್ರುಗಳನ್ನೂ, ಪಾಪಗಳನ್ನೂ ದುಃಖಕಾರಕಗಳಾದ ಪಾಪಫಲಗಳನ್ನೂ ದಾಟುವಂತಾಗಲಿ. ಎಲೈ ಅಗ್ನಿಯೇ, ನಿನ್ನ ರಕ್ಷಣೆಯೊಡನೆ ಕೂಡಿದವರಾಗಿ ಆ ದುಃಖಸಾಧನಗಳನ್ನೆಲ್ಲಾ ಎದುರಿಸಿ ದುಃಖದಿಂದ ಪಾರಾಗುವಂತಾಗಲಿ.

## English Translation

Divine Agni, reverenced as a friend, you are abiding in heaven and earth, communicate our praise to the gods: conduct the offerer of adoration to domestic felicity ; and may we overcome our adversaries, our iniquities, our difficulties : may we overcome those (sins of a prior existence) may we overcome them by your protection.

# ಮೂರನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಅಗ್ನೇ ಸ ಕ್ಷೇಷದಿತ್ಯಷ್ಟರ್ಚಂ ತೃತೀಯಂ ಸೂಕ್ತಂ ಭರದ್ವಾಜಸ್ಯಾರ್ಷಂ ತ್ರೈಷ್ಟುಭಮಾಗ್ನೇಯಂ। ಅನುಕ್ರಾಂತಂ ಚ । ಅಗ್ನೇಽಷ್ಟಾವಿತಿ ॥ ಪ್ರಾತರನುವಾಕಾಶ್ವಿನಶಸ್ತ್ರಯೋರುಕ್ತೋ ವಿನಿಯೋಗಃ ॥**

ಅನುವಾದವು— **ಅಗ್ನೇ ಸ ಕ್ಷೇಷತ್** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಎಂಟು ಋಕ್ಕುಗಳಿರುವವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು ; ಅಗ್ನಿಯು ದೇವತೆಯು ; ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ— **ಅಗ್ನೇಽಷ್ಟೌ** ಎಂದು ಹೇಳಿರುವುದು. ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರಮಂತ್ರಪಠನಕ್ಕಾಗಿ ಈ ಸೂಕ್ತದ ವಿನಿಯೋಗವಿರುವುದು.

## ಸೂಕ್ತ—೩

ಮಂಡಲ—೬ ॥ ಅನುವಾಕ—೧ ॥ ಸೂಕ್ತ—೩ ॥

ಅಷ್ಟಕ—೪ ॥ ಅಧ್ಯಾಯ—೫ ॥ ವರ್ಗ— ೩, ೪ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೮ ॥

॥ ಋಷಿಃ— ಭಾರದ್ವಾಜೋ ಬಾರ್ಹಸ್ಪತ್ಯಃ ॥

॥ ದೇವತಾ —ಅಗ್ನಿಃ ॥

॥ ಛಂದಃ—ತ್ರಿಷ್ಟುಪ್ ।

॥ ಸಂಹಿತಾಪಾಠಃ ॥

ಅಗ್ನೇ ಸ ಕ್ಷೇಷದೃತಪಾ ಋತೇಜಾ ಉರು ಜ್ಯೋತಿರ್ನಶತೇ ದೇವಯುಷ್ಟೇ।
ಯಂ ತ್ವಂ ಮಿತ್ರೇಣ ವರುಣಃ ಸಜೋಷಾ ದೇವ ಪಾಸಿ ತ್ಯಜಸಾ ಮರ್ತ-
ಮಂಹಃ ॥೧ ॥

॥ ಪದಪಾಠಃ ॥

ಅಗ್ನೇ । ಸಃ । ಕ್ಷೇಷತ್ । ಋತಽಪಾಃ । ಋತೇಽಜಾಃ । ಉರು । ಜ್ಯೋತಿಃ । ನಶತೇ । ದೇವಽಯುಃ । ತೇ ।

ಯಂ । ತ್ವಂ । ಮಿತ್ರೇಣ । ವರುಣಃ । ಸಽಜೋಷಾಃ । ದೇವ । ಪಾಸಿ । ತ್ಯಜಸಾ । ಮರ್ತಂ । ಅಂಹಃ ॥ ೧ ॥

ಹೇ ಅಗ್ನೇ ಸ ಯಜಮಾನಃ ಕ್ಷೇಷತ್ । ಕ್ಷಿಯತಿ । ನಿವಸತಿ । ಚಿರಕಾಲಂ ಜೀವೇದಿತ್ಯರ್ಥಃ । ಕೀದೃಶೋ ಯಜಮಾನಃ । ಋತಪಾ ಋತಸ್ಯ ಯಜ್ಞಸ್ಯ ಪಾಲಕ ಋತೇಜಾ ಯಜ್ಞನಿಮಿತ್ತಂ ಜಾತಃ । ಉಷಿತ್ವಾ ಚ ತೇ ತ್ವದೀಯಂ ದೇವಯುರ್ದೇವಾನಾತ್ಮನ ಇಚ್ಛನ್ ಸ ಯಜಮಾನ ಉರು ವಿಸ್ತೀರ್ಣಂ ಜ್ಯೋತಿಃ ಸೂರ್ಯಾಖ್ಯಂ ನಶತೇ । ಪ್ರಾಪ್ನೋತಿ । ಹೇ ದೇವ ದ್ಯೋತಮಾನಾಗ್ನೇ ಯಂ ಮರ್ತಂ ಮನುಷ್ಯಂ ಯಜಮಾನಂ ಮಿತ್ರೇಣ ವರುಣಃ ॥ ತೃತೀಯಾರ್ಥೇ ಪ್ರಥಮಾ ॥ ವರುಣೇನ ಚ ಸಜೋಷಾಃ ಸಹ ಪ್ರೀಯಮಾಣಸ್ತ್ವಂ ತ್ಯಜಸಾ ತ್ಯಾಜನಸಾಧನೇನಾಯುಧೇನಾಂಹೋಽಂಹಸಃ ಪಾಪಾತ್ಪಾಸಿ ರಕ್ಷಸಿ ಸ ಯಜಮಾನ ಇತಿ ಪೂರ್ವತ್ರ ಸಂಬಂಧಃ ॥

॥ ಪ್ರತಿಪದಾರ್ಥ ॥

**ದೇವ**—ದೇವತಾತ್ಮನಾದ । **ಅಗ್ನೇ**—ಎಲೈ ಅಗ್ನಿಯೇ । **ಯಂ ಮರ್ತಂ**—ಯಾವ ಯಜಮಾನನನ್ನು । **ಮಿತ್ರೇಣ**—ಮಿತ್ರನೊಡನೆಯೂ । **ವರುಣಃ**—ವರುಣನೊಡನೆಯೂ ಕೂಡಿಕೊಂಡು । **ತ್ವಂ**- ನೀನು । **ತ್ಯಜಸಾ**—ತೀಕ್ಷ್ಣವಾದ ಆಯುಧವಿಶಿಷ್ಟನಾಗಿ । **ಅಂಹಃ**—ಪಾಪದಿಂದ । **ಪಾಸಿ**—ರಕ್ಷಿಸುವೆಯೋ ಅಂತಹ । **ಋತಪಾಃ**—ಯಜ್ಞಪಾಲಕನೂ । **ಋತೇಜಾಃ**—ಯಜ್ಞಕ್ಕಾಗಿಯೇ ಉತ್ಪನ್ನನಾದವನೂ ಆದ । **ಸಃ**—ಆ ಯಜಮಾನನು । **ಕ್ಷೇಷತ್**—ಉತ್ತಮವಾದ ಜೀವನವನ್ನು ಹೊಂದುತ್ತಾನೆ । **ತೇ**—ನಿನ್ನ । **ದೇವಯುಃ**—ಪೂಜೆಯನ್ನಿಚ್ಛಿಸಿದ ಅದೇ ಯಜಮಾನನು । **ಉರು**—ಅತಿವಿಸ್ತೃತವಾದ । **ಜ್ಯೋತಿಃ**—ಸೂರ್ಯರೂಪವಾದ ಜ್ಯೋತಿಯನ್ನು । **ನಶತೇ**—ಹೊಂದುತ್ತಾನೆ

॥ ಭಾವಾರ್ಥ ॥

ದೇವಾತ್ಮನಾದ ಎಲೈ ಅಗ್ನಿಯೇ, ನೀನು ಮಿತ್ರನೊಡನೆಯೂ ವರುಣನೊಡನಯೂ ಕೂಡಿಕೊಂಡು ತೀಕ್ಷ್ಣವಾದ ಅಯುಧವಿಶಿಷ್ಟನಾಗಿ ಯಾವ ಯಜಮಾನನನ್ನು ಪಾಪದಿಂದ ರಕ್ಷಿಸಿವೆಯೋ, ಅಂತಹ ಯಜ್ಞಪಾಲಕನೂ ಯಜ್ಞಕ್ಕಾಗಿಯೇ ಉತ್ಪನ್ನನಾದವನೂ ಆದ ಆ ಯಜಮಾನನು ಉತ್ತಮವಾದ ಜೀವನವನ್ನು ಹೊಂದುತ್ತಾನೆ ನಿನ್ನ ಪೂಜೆಯನ್ನಿಚ್ಛಿಸಿದ ಅದೇ ಯಜಮಾನನು ಅತ್ಯಂತ ವಿಸ್ತೃತವಾದ ಜ್ಯೋತಿಯನ್ನು ಹೊಂದುತ್ತಾನೆ.

## English Translation.

The offerer of sacrifice, born for religious rites, who lives devoted Agni, to you obtains abundant light, and is a man whom you, sympathizing in satisfaction with Mitra, and Varuna, protect by your shield from iniquity.

|| ಸಂಹಿತಾಪಾಠಃ ||

ಈಜೇ ಯಜ್ಞೇಭಿಃ ಶಶಮೇ ಶಮೀಭಿರ್ಋಧದ್ವಾರಾಯಾಗ್ನಯೇ ದದಾಶ ।

ಏವಾ ಚನ ತಂ ಯಶಸಾಮಜುಷ್ಟಿರ್ನಾಂಹೋ ಮರ್ತಂ ನಶತೇ ನ ಪ್ರದೃ-

ಪ್ತಿಃ || ೨ ||

|| ಪದಪಾಠಃ ||

ಈಜೇ । ಯಜ್ಞೇಭಿಃ । ಶಶಮೇ । ಶಮೀಭಿಃ । ಋಧತ್‌ऽವಾರಾಯ । ಅಗ್ನಯೇ । ದದಾಶ ।

ಏವ । ಚನ । ತಂ । ಯಶಸಾಂ । ಅಜುಷ್ಟಿಃ । ನ । ಅಂಹಃ । ಮರ್ತಂ । ನಶತೇ । ನ । ಪ್ರऽದೃಪ್ತಿಃ । ೨ ||

|| ಸಾಯಣಭಾಷ್ಯಂ ||

ಯೋ ಯಜಮಾನ ಋಧದ್ವಾರಾಯ ಋಧತ್ಸಮೃದ್ಧಂ ವಾರಂ ವರಣೀಯಂ ಧನಂ ಯಸ್ಯ ತಾದೃಶಾಯಾಗ್ನಯೇ ದದಾಶ ಹವೀಂಷಿ ದದಾತಿ ಸ ಯಜಮಾನೋ ಯಜ್ಞೇಭಿಃ ಸರ್ವೈರ್ಯಜ್ಞೈರೀಜೇ । ಇಷ್ಟವಾನ್ ಭವತಿ । ತಥಾ ಶಮೀಭಿಃ ಕರ್ಮಭಿಃ ಕೃಚ್ಛ್ರಚಾಂದ್ರಾಯಣಾದಿಭಿಃ ಶಶಮೇ । ಶಾಂತಶ್ಚ ಭವತಿ । ಅಗ್ನೇರ್ಯೇನ ಯೋಗೇನ ಸರ್ವಂ ಫಲಂ ಲಭತ ಇತ್ಯರ್ಥಃ । ಅಪಿ ಚ ತಂ ಯಜಮಾನಂ ಯಶಸಾಂ ಯಶಸ್ವಿನಾಂ ಪುತ್ರಾಣಾಮಜುಷ್ಟಿರಪ್ರಾಪ್ತಿರ್ನೈವ ನಶತೇ ನೈವ ಪ್ರಾಪ್ನೋತಿ । ಪುತ್ರವಾನ್ಭವತ್ಯೇ-ವೇತ್ಯರ್ಥಃ । ತಥಾ ಮರ್ತಂ ಮನುಷ್ಯಂ ತಮಂಹಃ ಪಾಪಂ ನ ನಶತೇ । ತಥಾ ಪ್ರದೃಪ್ತಿರನರ್ಥಹೇತುಃ ಪ್ರದರ್ಪಶ್ಚ ತಂ ನ ಪ್ರಾಪ್ನೋತಿ ||

|| ಪ್ರತಿಪದಾರ್ಥ ||

**ಯಃ**—ಯಾವ ಯಜಮಾನನು । **ಋಧದ್ವಾರಾಯ**—ಅಪೇಕ್ಷಿತವಾದ ಧನಸಮೃದ್ಧಿಯಿಂದ ಕೂಡಿದ । **ಅಗ್ನಯೇ**—ಅಗ್ನಿಯನ್ನುದ್ದೇಶಿಸಿ । **ದದಾಶ**—ಹವಿಸ್ಸನ್ನರ್ಪಿಸುವನೋ (ಅವನು) । **ಯಜ್ಞೇಭಿಃ**—ಸಕಲ ಯಜ್ಞಗಳೊಡನೆಯೂ । **ಈಜೇ**—ಯಜ್ಞವನ್ನು ನೆರವೇರಿಸಿದಂತೆಯೇ ಸರಿ । **ಶಮೀಭಿಃ**—ಕೃಚ್ಛ್ರಚಾಂದ್ರಾಯಣಾದಿ ಸಕಲ ಕರ್ಮಗಳೊಡನೆಯೂ ಕೂಡಿ । **ಶಶಮೇ**—ಪ್ರಶಾಂತಚಿತ್ತನಾಗುವನು । **ತಂ**—ಆ ಯಜಮಾನನನ್ನು । **ಯಶಸಾಂ**--ಯಶಸ್ಸಿಗೆ ಕಾರಣಗಳಾದ ಪುತ್ರಾದಿಗಳ । **ಅಜುಷ್ಟಿಃ**—ಅಪ್ರಾಪ್ತಿಯು । **ನ ಏವ ನಶತೇ**—ಹೊಂದುವುದೇ ಇಲ್ಲ । **ಮರ್ತಂ**—ಅದೇ ಯಜಮಾನನನ್ನು । **ಅಂಹಃ**—ಪಾಪವು । **ನ**—ಸಮೀಪಿಸುವುದಿಲ್ಲ । **ಪ್ರದೃಪ್ತಿಃ**—ಅನರ್ಥಹೇತುವಾದ ದುರಭಿಮಾನವು । **ನ**—ಸಮೀಪಿಸುವುದಿಲ್ಲ.

|| ಭಾವಾರ್ಥ ||

ಯಾವ ಯಜಮಾನನು ಅಪೇಕ್ಷಿತವಾದ ಧನಸಮೃದ್ಧಿಯಿಂದ ಕೂಡಿದ ಅಗ್ನಿಯನ್ನುದ್ದೇಶಿಸಿ ಹವಿಸ್ಸನ್ನರ್ಪಿಸುವನೋ ಅವನು ಸಕಲ ಯಜ್ಞಕರ್ಮಗಳನ್ನೂ ನೆರವೇರಿಸಿದ ಫಲವನ್ನೂ ಪ್ರಶಾಂತಚಿತ್ತತೆಯನ್ನೂ ಹೊಂದುವನು.

ಅವನಿಗೆ ಯಶಃಕಾರಕಗಳಾದ ಪುತ್ರಾದಿಗಳ ಅಭಾವವೇ ಇರುವುದಿಲ್ಲ. ಆ ಯಜಮಾನನನ್ನು ಯಾವ ವಿಧವಾದ ಪಾಪವಾಗಲಿ ಅಥವಾ ಅನರ್ಥಹೇತುವಾದ ದುರಭಿಮಾನವಾಗಲಿ ಸಮೀಪಿಸುವುದಿಲ್ಲ.

## English Translation.

He who has presented (oblations) to Agni, the possessor of desired (wealth), sacrifices with (all) sacrifices, and is senctified by (all) holy acts : him, the want of excellent (posterity) does not afflict, nor does sin or pride affect such a mortal.

॥ ಸಂಹಿತಾಪಾಠಃ ॥

ಸೂರೋ ನ ಯಸ್ಯ ದೃಶತಿರರೇಪಾ ಭೀಮಾ ಯದೇತಿ ಶುಚತಸ್ತ ಆ ಧೀಃ ।
ಹೇಷಸ್ವತಃ ಶುರುಧೋ ನಾಯಮಕ್ತೋಃ ಕುತ್ರಾ ಚಿದ್ರಣ್ವೋ ವಸತಿರ್ವ-
ನೇಜಾಃ ॥ ೩ ॥

॥ ಪದಪಾಠಃ ॥

ಸೂರಃ । ನ । ಯಸ್ಯ । ದೃಶತಿಃ । ಅರೇಪಾಃ । ಭೀಮಾ । ಯತ್ । ಏತಿ । ಶುಚತಃ । ತೇ । ಆ । ಧೀಃ ।
ಹೇಷಸ್ವತಃ । ಶುರುಧಃ । ನ । ಅಯಂ । ಅಕ್ತೋಃ । ಕುತ್ರ । ಚಿತ್ । ರಣ್ವಃ । ವಸತಿಃ । ವನೇऽಜಾಃ ॥

॥ ಸಾಯಣಭಾಷ್ಯಂ ॥

ಸೂರೋ ನ ಸೂರ್ಯಸ್ಯೇವ ಯಸ್ಯಾಗ್ನೇರ್ದೃಶತಿರ್ದರ್ಶನಮರೇಪಾಃ ಪಾಪರಹಿತಂ । ಹೇ ಅಗ್ನೇ ಯತ್ ಯಸ್ಯ ತೇ ತವ ಶುಚತೋ ಜ್ವಲತೋ ಧೀರ್ಧಾರಯಿತ್ರೀ ಜ್ವಾಲಾ ಭೀಮಾ ಭಯಂಕರಾ ಸತೀ ಆ ಸಮಂತಾದೇತಿ ಗಚ್ಛತಿ । ಯೋऽಯಮಗ್ನಿರ್ಹೇಷಸ್ವತಃ ಶಬ್ದಯುಕ್ತಾಃ ಶುರುಧೋ ನ ಶುಚಃ ಶೋಕಸ್ಯ ರೋಧಯಿತ್ರೀರ್ಗಾಶ್ಚಾಕ್ತೋಃ । ಅಕ್ತುರಿತಿ ರಾತ್ರಿನಾಮ । ತೇನ ಚ ತತ್ರ ಸಂಚಾರೀ ರಾಕ್ಷಸಾದಿರ್ಲಕ್ಷ್ಯತೇ । ರಾಕ್ಷಸಾದೇಃ ಸ್ವಭೂತಾ ದದಾತೀತಿ ಶೇಷಃ । ಸೋऽಯಂ ವಸತಿಃ ಸರ್ವೇಷಾಮಾವಾಸಭೂತೋ ವನೇಜಾ ಅರಣ್ಯೇ ಜಾಯಮಾನಃ ಕುತ್ರಾ ಚಿತ್ ಕ್ವಚಿದೇವ ಸ್ಥಾನೇ ಪರ್ವತಾಗ್ರಾದೌ ರಣ್ವೋ ರಮಣೀಯೋ ಭವತಿ ॥

॥ ಪ್ರತಿಪದಾರ್ಥ ॥

**ಸೂರೋ ನ**—(ಎಲೈ ಅಗ್ನಿಯೇ) ಸೂರ್ಯನ ತೇಜಸ್ಸಿನಂತೆ । **ಯಸ್ಯ**—ಯಾವ ನಿನ್ನ । **ದೃಶತಿಃ**—ಆವಿರ್ಭಾವವು । **ಅರೇಪಾಃ**—ದೋಷರಹಿತವಾಗಿರುವುದೋ । **ಯತ್ ತೇ**—ಯಾವ ನಿನ್ನ । **ಶುಚತಃ**—

ಪ್ರಕಾಶಮಾನವಾದ | **ಧೀಃ**— ಜ್ವಾಲೆಯು | **ಅಕ್ತೋಃ**—ರಾತ್ರಿಕಾಲದಲ್ಲಿ | **ಹೇಷಸ್ವತಃ**—ಗುಟುರು ಹಾಕಿಕೊಂಡು ಸಂಚರಿಸುವ | **ಕುರುಧೋ ನ**—ಗೂಳಿಗಳಂತೆ | **ಭೀಮಾ**—ಭಯಂಕರವಾಗಿ | **ಆ**—ಸುತ್ತಲೂ | **ಏತಿ**—ಸಂಚರಿಸುವುದೋ ಅಂತಹುದೂ | **ವಸತಿಃ**—ಸಕಲರಿಗೂ ಆವಾಸಭೂತವಾದುದೂ | **ವನೇಜಾಃ**—ಅರಣ್ಯದಲ್ಲಿ ಉತ್ಪನ್ನವಾದುದೂ ಆದ | **ಅಯಂ**—ನಿನ್ನ ಸ್ವರೂಪವು | **ಕುತ್ರಾ ಚಿತ್**—ಎಲ್ಲಾ ಪ್ರದೇಶಗಳಲ್ಲೂ | **ರಣ್ವಃ**—ರಮಣೀಯವಾಗಿರುತ್ತದೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಸೂರ್ಯನ ತೇಜಸ್ಸಿನಂತೆ ಯಾವ ನಿನ್ನ ಆವಿರ್ಭಾವವು ದೋಷರಹಿತವಾಗಿರುವುದೋ, ಯಾವ ನಿನ್ನ ಪ್ರಕಾಶಮಾನವಾದ ಜ್ವಾಲೆಯು ರಾತ್ರಿಕಾಲದಲ್ಲಿ ಗುಟುರುಹಾಕಿಕೊಂಡು ಸಂಚರಿಸುವ ಗೂಳಿಗಳಂತೆ ಭಯಂಕರವಾಗಿ ಸುತ್ತಲೂ ಸಂಚರಿಸುವುದೋ ಅಂತಹುದೂ, ಸಕಲರಿಗೂ ಆವಾಸಭೂತವಾದುದೂ, ಅರಣ್ಯದಲ್ಲಿ ಉತ್ಪನ್ನವಾದುದೂ ಆದ ನಿನ್ನ ಸ್ವರೂಪವು ಎಲ್ಲಾ ಪ್ರದೇಶಗಳಲ್ಲೂ ರಮಣೀಯವಾಗಿರುತ್ತದೆ.

## English Translation.

When the fearful flames of you, whose appearance is (as) faultless as (that of) the sun, spread on every side as (if they were) the lowing heifers of the night, then this Agni, the asylum of all, generated in the woods, is everywhere beautiful.

॥ ಸಂಹಿತಾಪಾಠಃ ॥

ತಿಗ್ಮಂ ಚಿದೇಮ ಮಹಿ ವರ್ಪೋ ಅಸ್ಯ ಭಸದಶ್ವೋ ನ ಯಮಸಾನ ಆಸಾ।
ವಿಜೇಹಮಾನಃ ಪರಶುರ್ನ ಜಿಹ್ವಾಂ ದ್ರವಿರ್ನ ದ್ರಾವಯತಿ ದಾರು ಧಕ್ಷತ್ ॥

॥ ಪದಪಾಠಃ ॥

ತಿಗ್ಮಂ । ಚಿತ್ । ಏಮ । ಮಹಿ । ವರ್ಪಃ । ಅಸ್ಯ । ಭಸತ್ । ಅಶ್ವಃ । ನ । ಯಮಸಾನಃ । ಆಸಾ ।
ವಿಽಜೇಹಮಾನಃ । ಪರಶುಃ । ನ । ಜಿಹ್ವಾಂ । ದ್ರವಿಃ । ನ । ದ್ರವಯತಿ । ದಾರು । ಧಕ್ಷತ್ ॥ ೪ ॥

॥ ಸಾಯಣಭಾಷ್ಯಂ ॥

ಅಸ್ಯಾಗ್ನೇರೇಮ ಗಮನಭೂತೋ ಮಾರ್ಗಸ್ತಿಗ್ಮಂ ತೀಕ್ಷ್ಣಂ ಸ್ಪ್ರಷ್ಟುಮಶಕ್ಯತ್ವಾತ್ । ಅಸ್ಯ ಚ ವರ್ಪೋ ರೂಪಂ ಮಹಿ ಮಹತ್ ಪ್ರಭೂತಂ ಭಸತ್ । ದೀಪ್ಯತೇ ॥ ಭಸ ಭರ್ತ್ಸನದೀಪ್ತ್ಯೋರಿತಿ

**ಧಾತುಃ ॥ ಕೀದೃಶೋಽಗ್ನಿಃ । ಅಶ್ವೋ ನ ಅಶ್ವ ಇವಾಸಾಸ್ಯೇನ ಯವಸಾನಸ್ತೃಣಾದಿಕಂ ನಿಯಚ್ಛನ್ । ತಥಾ ಪರಶುರ್ನ । ಯಥಾ ಪರಶುಃ ಸ್ವಕೀಯಾಂ ಧಾರಾಂ ಕಾಷ್ಠೇ ಪ್ರಕ್ಷಿಪತಿ ತಥಾ ಸ್ವಕೀಯಾಂ ಜಿಹ್ವಾಂ ಜ್ವಾಲಾಂ ವಿಜೇಹಮಾನಸ್ತರುಗುಲ್ಮಾದೌ ಪ್ರಕ್ಷಿಪನ್ । ತಥಾ ದಾರು ಕಾಷ್ಠಂ ಧಕ್ಷತ್ ದಹನ್ ದ್ರವಿರ್ನ । ದ್ರವಿರ್ದ್ರಾವಯಿತಾ ಸ್ವರ್ಣಕಾರಃ । ಸ ಯಥಾ ಸ್ವರ್ಣಾದಿಕಂ ದ್ರಾವಯತಿ ತಥಾ ಸರ್ವಂ ವನಂ ದ್ರಾವಯತಿ । ಮೂರ್ತಭೂತಂ ಭಸ್ಮಸಾತ್ಕರೋತೀತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಅಸ್ಯ**—ಈ ಅಗ್ನಿಯ । **ಏಮ**—ಸಂಚಾರಮಾರ್ಗವು । **ತಿಗ್ಮಂ**—ತೀಕ್ಷ್ಣವಾಗಿದೆ । **ವರ್ಪಃ**—ರೂಪವು । **ಮಹಿ**—ಪ್ರಭೂತವಾದದ್ದಾಗಿದೆ । **ಆಸಾ**—ಮುಖದಿಂದ । **ಯವಸಾನಃ**—ಹುಲ್ಲನ್ನು ಮೇಯುತ್ತಿರುವ । **ಅಶ್ವೋ ನ**—ಅಶ್ವದಂತೆ । **ಭಸತ್**—ಕಾಂತಿಯುಕ್ತವಾಗಿದೆ । **ಪರಶುರ್ನ**—ಕೊಡಲಿಯ ಅಲಗು ಕಾಷ್ಠವನ್ನೂ ಪ್ರವೇಶಿಸುವಂತೆ । **ಜಿಹ್ವಾಂ**—ಜ್ವಾಲೆಯನ್ನು । **ವಿಜೇಹಮಾನಃ**—ತರುಗುಲ್ಮಾದಿಗಳಲ್ಲಿ ಪ್ರಸರಿಸಿ । **ದಾರು**—ವೃಕ್ಷಾದಿಗಳನ್ನು । **ಧಕ್ಷನ್**—ದಹಿಸುತ್ತಾ । **ದ್ರವಿರ್ನ**—ಸ್ವರ್ಣಕಾರನು ಸ್ವರ್ಣಾದಿಗಳನ್ನು ಕರಗಿಸುವಂತೆ । **ದ್ರಾವಯತಿ**—(ಅಗ್ನಿಯೂ) ದಹಿಸಿ ಕರಗಿಸುತ್ತಾನೆ.

॥ ಭಾವಾರ್ಥ ॥

ಈ ಅಗ್ನಿಯ ಸಂಚಾರಮಾರ್ಗವು ತೀಕ್ಷ್ಣವಾಗಿಯೂ, ರೂಪವು ಪ್ರಭೂತವಾದದ್ದಾಗಿಯೂ, ಮುಖದಿಂದ ಹುಲ್ಲನ್ನು ಮೇಯುತ್ತಿರುವ ಅಶ್ವದಂತೆ ಕಾಂತಿಯುಕ್ತವಾಗಿದೆ. ಕೊಡಲಿಯ ಅಲಗು ಕಾಷ್ಠಗಳಲ್ಲಿ ಪ್ರವೇಶಿಸುವಂತೆ ಅಗ್ನಿಯು ಜ್ವಾಲೆಯು ತರುಗುಲ್ಮಾದಿಗಳಲ್ಲಿ ಪ್ರಸರಿಸಿ ವೃಕ್ಷಾದಿಗಳನ್ನು ದಹಿಸುತ್ತಾ ಸ್ವರ್ಣಕಾರನು ಸ್ವರ್ಣಾದಿಗಳನ್ನು ಕರಗಿಸುವಂತೆ ಅಗ್ನಿಯೂ ಎಲ್ಲವನ್ನೂ ದಹಿಸಿ ಕರಗಿಸುತ್ತಾನೆ.

## English Translation.

Sharp is his path, and his vast body shines like a horse champing fodder with his mouth, darting forth his tongue like a hatchet and burning timber to ashes like a goldsmith who fuses (metal).

॥ ಸಂಹಿತಾಪಾಠಃ ॥

**ಸ ಇದಸ್ತೇವ ಪ್ರತಿ ಧಾದಸಿಷ್ಯಞ್ಛಿಶೀತ ತೇಜೋಽಯಸೋ ನ ಧಾರಾಂ ।**

**ಚಿತ್ರಧ್ರಜತಿರರತಿರ್ಯೋ ಅಕ್ತೋರ್ವೇರ್ನ ದ್ರುಷದ್ವಾ ರಘುಪತ್ಮಜಂಹಾಃ ॥**

|| ಪದಪಾಠಃ ||

ಸಃ । ಇತ್ । ಅಸ್ತಾಽಇವ । ಪ್ರತಿ । ಧಾತ್ । ಅಸಿಷ್ಯನ್ । ಶಿಶೀತ । ತೇಜಃ । ಅಯಸಃ । ನ । ಧಾರಾಂ । ಚಿತ್ರಽಧ್ರಜತಿಃ । ಅರತಿಃ । ಯಃ । ಅಕ್ತೋಃ । ವೇಃ । ನ । ದ್ರುಽಸದ್ವಾ । ರಘುಪತ್ಮಽಜಂಹಾಃ ॥ ೫ ॥

|| ಸಾಯಣಭಾಷ್ಯಂ ||

ಸ ಇತ್ಸ ಖಲ್ವಗ್ನಿರಸ್ತೇವ ಬಾಣಾದೇಃ ಕ್ಷೇಪ್ತೇವ ಪ್ರತಿ ಧಾತ್ । ಸ್ವಕೀಯಜ್ವಾಲಾಂ ಪ್ರತಿಧತ್ತೇ । ಯಥಾ ಧನ್ವೀ ಲಕ್ಷ್ಯಾಭಿಮುಖ್ಯೇನ ಬಾಣಂ ಸಂಧತ್ತೇ ತಥಾ ಜ್ವಾಲಾಂ ಸಂಧತ್ತ ಇತ್ಯರ್ಥಃ । ಪ್ರತಿಧಾಯ ಚಾಸಿಷ್ಯನ್ ಜ್ವಾಲಾಂ ಪ್ರಕ್ಷೇಪ್ಸ್ಯನ್ ತೇಜಃ ಸ್ವಕೀಯಂ ಶಿಶೀತ । ನಿಶ್ಯತಿ । ತೀಕ್ಷ್ಣೀಕರೋತಿ । ತತ್ರ ದೃಷ್ಟಾಂತಃ । ಅಯಸೋ ನ ಧಾರಾಂ । ಯಥಾಯೋಮಯಸ್ಯ ಪರಶ್ವಾದೇರ್ಧಾರಾಂ ಪ್ರಕ್ಷೇಪ್ತುಕಾಮಸ್ತೀಕ್ಷ್ಣೀಕರೋತಿ ತದ್ವತ್। ತೀಕ್ಷ್ಣೀಕೃತ್ಯ ಚ ಚಿತ್ರಧ್ರಜತಿರ್ವಿಚಿತ್ರಗತಿರಕ್ತೋ ರಾತ್ರೇರರತಿರಭಿಗಂತಾ ವೇರ್ನ ಪಕ್ಷೀವ ದ್ರುಷದ್ವಾ ವೃಕ್ಷೇಷು ಸೀದನ್ ರಘುಪತ್ಮಜಂಹಾ ಲಘುಪತನಸಮರ್ಥಪಾದಃ । ಏವಂಭೂತಃ ಸನ್ ಯೋಽಗ್ನಿರ್ವರ್ತತೇ ಸ ಇತಿ ಪೂರ್ವತ್ರಾನ್ವಯಃ ॥

|| ಪ್ರತಿಪದಾರ್ಥ ||

**ಚಿತ್ರಧ್ರಜತಿಃ**—ವಿಚಿತ್ರವಾದ ಗಮನವುಳ್ಳವನಾಗಿಯೂ । **ಅಕ್ತೋಃ**—ರಾತ್ರಿಕಾಲದಲ್ಲಿ । **ಅರತಿಃ**—ಸಂಚರಿಸುವವನಾಗಿಯೂ । **ವೇಃ ನ**—ಪಕ್ಷಿಯಂತೆ । **ದ್ರುಸದ್ವಾ**—ವೃಕ್ಷದಲ್ಲಿ ಅಡಗಿಕೊಂಡು । **ರಘುಪತ್ಮಜಂಹಾಃ**—ವೇಗವಾಗಿ ಸಂಚರಿಸಲು ಯೋಗ್ಯವಾದ ಲಘುವಾದ ಪಾದವುಳ್ಳವನೂ ಆದ । **ಯಃ**—ಯಾವ ಅಗ್ನಿಯುಂಟೋ । **ಸ ಇತ್**—ಅದೇ ಅಗ್ನಿಯು । **ಅಸ್ತಾ ಇವ**—ಬಿಲ್ಲುಗಾರನು ವೇಗವಾಗಿ ತನ್ನ ಬಾಣವನ್ನು ಬಿಡುವಂತೆ **ಪ್ರತಿ ಧಾತ್**—ತನ್ನ ಜ್ವಾಲೆಯನ್ನು ತೀವ್ರವಾಗಿ ಪ್ರಸರಿಸುತ್ತಾನೆ । **ಅಯಸಃ**—ಉಕ್ಕಿನಿಂದ ಮಾಡಿದ ಆಯುಧದ । **ಧಾರಾಂ ನ**—ಅಲಗನ್ನು (ಯೋಧನು) ಉಜ್ಜಿ ಹರಿತವಾಗಿ ಮಾಡಿಕೊಳ್ಳುವಂತೆ । **ಅಸಿಷ್ಯನ್**—ತನ್ನ ಜ್ವಾಲೆಯನ್ನು ಪ್ರರಿಸುವ ಉದ್ದಿಶ್ಯದಿಂದ । **ತೇಜಃ**—ತನ್ನ ತೇಜಸ್ಸನ್ನು । **ಶಿಶೀತ**—ತೀಕ್ಷ್ಣವಾಗಿ ಮಾಡಿಕೊಳ್ಳುತ್ತಾನೆ.

|| ಭಾವಾರ್ಥ ||

ವಿಚಿತ್ರವಾದ ಗಮನವುಳ್ಳವನಾಗಿಯೂ, ರಾತ್ರಿಕಾಲದಲ್ಲಿ ಸಂಚರಿಸುವವನಾಗಿಯೂ, ಪಕ್ಷಿಯಂತೆ ವೃಕ್ಷದಲ್ಲಿ ಅಡಗಿಕೊಂಡು ವೇಗವಾಗಿ ಸಂಚರಿಸಲು ಯೋಗ್ಯವಾದ ಲಘುವಾದ ಪಾದವುಳ್ಳವನಾಗಿಯೂ ಇರುವ ಯಾವ ಅಗ್ನಿಯುಂಟೋ ಅದೇ ಅಗ್ನಿಯು ಬಿಲ್ಲುಗಾರನು ವೇಗವಾಗಿ ತನ್ನ ಬಾಣವನ್ನು ಲಕ್ಷ್ಯದ ಕಡೆಗೆ ಬಿಡುವಂತೆ ತನ್ನ ಜ್ವಾಲೆಯನ್ನು ತೀವ್ರವಾಗಿ ಪ್ರಸರಿಸುತ್ತಾನೆ. ಉಕ್ಕಿನಿಂದ ಮಾಡಿದ ಆಯುಧದ ಅಲಗನ್ನು ಯೋಧನು ಉಜ್ಜಿ ಹರಿತವಾಗಿ ಮಾಡಿಕೊಳ್ಳುವಂತೆ ತನ್ನ ಜ್ವಾಲೆಯನ್ನು ಪ್ರಸರಿಸುವ ಉದ್ದಿಶ್ಯದಿಂದ ತನ್ನ ತೇಜಸ್ಸನ್ನು ತೀಕ್ಷ್ಣವಾಗಿ ಮಾಡಿಕೊಳ್ಳುತ್ತಾನೆ

## English Translation.

He casts (afar his flames) as an archer (his arrows), and sharpens when about to dart his radiance, as (a warrior whets) the edge of his iron

(weapons), he who, variously moving, passes through the night, like the light-falling foot of a bird perched upon a tree.

॥ ಸಂಹಿತಾಪಾಠಃ ॥

ಸ ಈಂ ರೇಭೋ ನ ಪ್ರತಿ ವಸ್ತ ಉಸ್ರಾಃ ಶೋಚಿಷಾ ರಾರಪೀತಿ ಮಿತ್ರಮಹಾಃ ।
ನಕ್ತಂ ಯ ಈ ಮರುಷೋ ಯೋ ದಿವಾ ನೄನಮರ್ತ್ಯೋ ಅರುಷೋ ಯೋ ದಿವಾ ನೄನ್ ॥ ೬ ॥

॥ ಪದಪಾಠಃ ॥

ಸಃ । ಈಂ । ರೇಭಃ । ನ । ಪ್ರತಿ । ವಸ್ತೇ । ಉಸ್ರಾಃ । ಶೋಚಿಷಾ । ರರಪೀತಿ । ಮಿತ್ರಽಮಹಾಃ ।
ನಕ್ತಂ । ಯಃ । ಈಂ । ಅರುಷಃ । ಯಃ । ದಿವಾ । ನೄನ್ । ಅಮರ್ತ್ಯಃ । ಅರುಷಃ । ಯಃ । ದಿವಾ । ನೄನ್ ॥

॥ ಸಾಯಣಭಾಷ್ಯಂ ॥

ಸ ಈಂ ಸೋಽಯಮಗ್ನೀ ರೇಭೋ ನ ಸ್ತುತ್ಯಃ ಸೂರ್ಯ ಇವೋಸ್ರಾ ದೀಪ್ತಾ ಜ್ವಾಲಾಃ ಪ್ರತಿ ವಸ್ತೇ । ಆಚ್ಛಾದಯತಿ । ತಥಾ ಮಿತ್ರಮಹಾಃ ಸರ್ವೇಷಾಮನುಕೂಲಪ್ರಕಾಶಃ ಸನ್ ಶೋಚಿಷಾ ತೇಜಸಾ ರಾರಪೀತಿ । ಭೃಶಂ ಶಬ್ದಂ ಕರೋತಿ । ಯ ಈಮಯಮಗ್ನಿರ್ನಕ್ತಂ ರಾತ್ರಾವರುಷ ಆರೋಚಮಾನಃ ಸನ್ ದಿವಾಹನೀವ ನೄನ್ಮನುಷ್ಯಾನ್ ಸ್ವಸ್ವಕಾರ್ಯೇ ಪ್ರೇರಯತಿ । ಪುನರ್ಯಚ್ಛಬ್ದಃ ಪೂರಕಃ । ತಥಾಮರ್ತ್ಯೋಽಮರಣಧರ್ಮಾರುಷ ಆರೋಚಮಾನೋ ರೋಷರಹಿತೋ ವಾ ಯೋಽಗ್ನಿರ್ದಿವಾ ದ್ಯೋತಮಾನೇನ ತೇಜಸಾ ನೄನ್ನೇತೄ ನಾತ್ಮೀಯಾನ್ರಶ್ಮೀನ್ ಪ್ರೇರಯತಿ । ಸ ಇತಿ ಪೂರ್ವತ್ರ ಸಂಬಂಧಃ । ಯದ್ವಾ । ನಕ್ತಂ ರಾತ್ರೌ ಯೋಽಯಮಗ್ನಿರರುಷ ಆರೋಚಮಾನೋ ಯಶ್ಚ ಮರಣರಹಿತೋಽಗ್ನಿರ್ದಿವಾಹ್ನಿ ನೄನ್ನೇತೄನ್ ದೇವಾನ್ಸ್ವಭಿರ್ಭಿಃ ಸಂಯೋಜಯತಿ । ಯೋ ದಿವಾ ನೄನಿತಿ ಪುನರುಕ್ತಿರಾದರಾರ್ಥಾ ॥

॥ ಪ್ರತಿಪದಾರ್ಥ ॥

**ಸ ಈಂ**—ಅದೇ ಅಗ್ನಿಯು । **ರೇಭೋ ನ**—ಸ್ತುತ್ಯನಾದ ಸೂರ್ಯನಂತೆ । **ಉಸ್ರಾಃ**—ತನ್ನ ಜ್ವಾಲೆಗಳನ್ನು । **ಪ್ರತಿ ವಸ್ತೇ**—ಹೊದ್ದಿಕೆಯನ್ನಾಗಿ ಮಾಡಿಕೊಳ್ಳುತ್ತಾನೆ । **ಮಿತ್ರಮಹಾಃ**—ಅನುಕೂಲಕರವಾದ ಪ್ರಕಾಶವುಳ್ಳವನಾಗಿ । **ಶೋಚಿಷಾ**—ತನ್ನ ಪ್ರಭೆಯಿಂದ । **ರಾರಪೀತಿ**—ಅಧಿಕವಾದ ಶಬ್ದವನ್ನು ಮಾಡುತ್ತಾನೆ.

**ಯಃ ಈಂ**—ಯಾವ ಅದೇ ಅಗ್ನಿಯು । **ನಕ್ತಂ**—ರಾತ್ರಿಕಾಲದಲ್ಲಿ । **ಅರುಷಃ**—ಪ್ರಕಾಶಮಾನನಾಗಿದ್ದು **ದಿವಾ**—ಅಹಸ್ಸುಗಳಲ್ಲಿ । **ನೄನ್**—ಮಾನವಾದಿಗಳನ್ನು (ಅವರವರ ಕಾರ್ಯಕ್ಕೆ ಪ್ರೇರಿಸುತ್ತಾನೆ) । **ಅಮರ್ತ್ಯಃ**—ಮರಣಧರ್ಮರಹಿತನೂ । **ಅರುಷಃ**—ಆಕರ್ಷಕವಾದ ಕಾಂತಿಯುತನೂ ಆದ । **ಯಃ**—ಯಾವ ಅದೇ ಅಗ್ನಿಯು । **ದಿವಾ**—ಪ್ರಕಾಶಮಾನವಾದ ತೇಜಸ್ಸಿನಿಂದ । **ನೄನ್**—ರಶ್ಮಿಗಳನ್ನು ಪ್ರಸರಿಸುತ್ತಾನೆ.

॥ ಭಾವಾರ್ಥ ॥

ಸ್ತುತ್ಯನಾದ ಸೂರ್ಯನು ತನ್ನ ರಶ್ಮಿಗಳನ್ನೇ ತನ್ನ ಹೊದ್ದಿಕೆಯನ್ನಾಗಿ ಮಾಡಿಕೊಳ್ಳುವಂತೆ ಹಿಂದೆ ವರ್ಣಿತವಾದ ಮಹದ್ಗುಣಗಳುಳ್ಳ ಅಗ್ನಿಯು ತನ್ನ ಜ್ವಾಲೆಗಳನ್ನೇ ತನ್ನ ಹೊದ್ದಿಕೆಯನ್ನಾಗಿ ಮಾಡಿಕೊಳ್ಳುತ್ತಾನೆ. ಅನುಕೂಲಕರವಾದ ಪ್ರಕಾಶವುಳ್ಳವನಾಗಿ ತನ್ನ ಪ್ರಭೆಯಿಂದ ಅಧಿಕವಾದ ಶಬ್ದವನ್ನುಂಟುಮಾಡುತ್ತಾನೆ. ಯಾವ ಅದೇ ಅಗ್ನಿಯು ರಾತ್ರಿಕಾಲದಲ್ಲೆಲ್ಲಾ ಪ್ರಕಾಶಮಾನವಾಗಿದ್ದು ಅಹಸ್ಸುಗಳಲ್ಲಿ ಮಾನವಾದಿಗಳನ್ನು ಅವರವರ ಕಾರ್ಯಕ್ಕೆ ಪ್ರೇರಿಸುತ್ತಾನೆ. ಮರಣಧರ್ಮರಹಿತನೂ ಆಕರ್ಷಕವಾದ ಕಾಂತಿಯುತನೂ ಆದ ಅದೇ ಅಗ್ನಿಯು ಪ್ರಕಾಶಮಾನವಾದ ತೇಜಸ್ಸಿನಿಂದ ತನ್ನ ರಶ್ಮಿಗಳನ್ನು ಪ್ರಸರಿಸುತ್ತಾನೆ.

English Translation.

Like the adorable sun, he clothes himself with brilliant (rays): diffusing friendly light, he crackles with (his flame): (he it is) who is luminous by night, and who lights men (to their work) by day; who is immortal and radiant; who lights men by day.

॥ ಸಂಹಿತಾಪಾಠಃ ॥

ದಿವೋ ನ ಯಸ್ಯ ವಿಧತೋ ನವೀನೋದ್ವೃಷಾ ರುಕ್ಷ ಓಷಧೀಷು ನೂನೋತ್ ।
ಘೃಣಾ ನ ಯೋ ಧ್ರಜಸಾ ಪತ್ಮನಾ ಯನ್ನಾ ರೋದಸೀ ವಸುನಾ ದಂ ಸುಪತ್ನೀ ॥ ೭ ॥

॥ ಪದಪಾಠಃ ॥

ದಿವಃ । ನ । ಯಸ್ಯ । ವಿಧತಃ । ನವೀನೋತ್ । ವೃಷಾ । ರುಕ್ಷಃ । ಓಷಧೀಷು । ನೂನೋತ್ ।
ಘೃಣಾ । ನ । ಯಃ । ಧ್ರಜಸಾ । ಪತ್ಮನಾ । ಯನ್ । ಆ । ರೋದಸೀ ಇತಿ । ವಸುನಾ । ದಂ । ಸುಪತ್ನೀ ಇತಿ ಸುಽಪತ್ನೀ ॥ ೭ ॥

॥ ಸಾಯಣಭಾಷ್ಯಂ ॥

**ದಿವೋ ನ ದೀಪ್ತಸ್ಯ ಸೂರ್ಯಸ್ಯೇವ ವಿಧತೋ ವಿಧಾತೂ ರಶ್ಮೀಕುರ್ವತೋ ಯಸ್ಯಾಗ್ನೇರ್ನವೀನೋತ್ ಭೃಶಂ ಶಬ್ದೋಽಭೂತ್ । ಏತದೇವ ವ್ಯಾಚಷ್ಟೇ । ವೃಷಾ ಕಾಮಾನಾಂ ವರ್ಷಿತಾ ರುಕ್ಷೋ ದೀಪ್ತಃ ಸೋಽಗ್ನಿರೋಷಧೀಷು ದಹ್ಯಮಾನಾಸು ನೂನೋತ್ । ಭೃಶಂ ಶಬ್ದಮಕರೋತ್ । ಯಶ್ಚ ಘೃಣಾ ನ ಸಂಚಲನಶೀಲೇನ ದೀಪ್ತೇನೇವ ಧ್ರಜಸಾ ಗಮನಶೀಲೇನ ತೇಜಸಾ ಪತ್ಮನೇತಸ್ತತ ಉತ್ಪತತಾ ಯನ್ ಗಚ್ಛನ್ ವರ್ತತೇ ಸೋಽಗ್ನಿರ್ದಮಂ ಅಸ್ಮಚ್ಛತ್ರೂನ್ ದಮಯನ್ ಸುಪತ್ನೀ ಶೋಭನಪತಿಕೇ ರೋದಸೀ ದ್ಯಾವಾಪೃಥಿವ್ಯೌ ವಸುನಾ ಧನೇನಾ ಪೂರಯತಿ ॥**

॥ ಪ್ರತಿಪದಾರ್ಥ ॥

**ದಿವೋ ನ**—ಪ್ರಕಾಶಮಾನನಾದ ಸೂರ್ಯನಂತೆ । **ವಿಧತಃ**—ರಶ್ಮಿಗಳನ್ನು ಪ್ರಸರಿಸುವ । **ಯಸ್ಯ**—ಯಾವ ಅಗ್ನಿಯ । **ನವೀನೋತ್**—ಶಬ್ದವುಂಟಾಯಿತೋ । **ವೃಷಾ**—ಕಾಮವರ್ಷಕನೂ । **ರುಕ್ಷಃ**—ಪ್ರಕಾಶಮಾನನೂ ಆದ ಅದೇ ಅಗ್ನಿಯು । **ಓಷಧೀಷು**—ದಹಿಸಲ್ಪಡುತ್ತಿರುವ ಓಷಧ್ಯಾದಿಗಳಲ್ಲಿ । **ನೂನೋತ್**—ಅಧಿಕವಾಗಿ ಶಬ್ದವನ್ನುಂಟುಮಾಡಿದನು । **ಯಃ**—ಯಾವ ಅದೇ ಅಗ್ನಿಯು । **ಘೃಣಾ ನ**—ಸಂಚರಣರೂಪವಾದ ಕಾಂತಿಯಂತೆಯೂ । **ಧ್ರಜಸಾ**—ಗಮನಾತ್ಮಕವಾದ ತೇಜಸ್ಸಿನಂತೆಯೂ । **ಪತ್ಮನಾ**—ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಂಚರಿಸುವ ರೀತಿಯಿಂದ । **ಯನ್**—ಓಡಾಡುತ್ತಲೂ । **ದಮ್**—ನಮ್ಮ ಶತ್ರುಗಳನ್ನು ನಾಶಪಡಿಸುತ್ತಲೂ । **ಸುಪತ್ನೀ**—ಉತ್ತಮ ಪಾಲಕರಾದ । **ರೋದಸೀ**—ದ್ಯಾವಾಪೃಥಿವಿಗಳನ್ನು । **ವಸುನಾ**—ತೇಜೋರೂಪವಾದ ಸಂಪತ್ತಿನಿಂದ । **ಆ (ಪೂರಯತಿ)**—ತುಂಬುತ್ತಾನೆ.

॥ ಭಾವಾರ್ಥ ॥

ಪ್ರಕಾಶಮಾನನಾದ ಸೂರ್ಯನಂತೆ ರಶ್ಮಿಗಳನ್ನು ಪ್ರಸರಿಸುವ ಯಾವ ಅಗ್ನಿಯ ಶಬ್ದವುಂಟಾಯಿತೋ, ಕಾಮವರ್ಷಕನೂ, ಪ್ರಕಾಶಮಾನನೂ ಆದ ಅದೇ ಅಗ್ನಿಯು ದಹಿಸಲ್ಪಡುತ್ತಿರುವ ಓಷಧ್ಯಾದಿಗಳಲ್ಲಿ ಅಧಿಕವಾಗಿ ಶಬ್ದವನ್ನುಂಟುಮಾಡಿದನು. ಯಾವ ಅದೇ ಅಗ್ನಿಯು ಸಂಚರಣರೂಪವಾದ ತೇಜಸ್ಸಿನಂತೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಚಲಿಸುತ್ತಲೂ, ನಮ್ಮ ಶತ್ರುಗಳನ್ನು ನಾಶಮಾಡುತ್ತಲೂ, ಉತ್ತಮ ಪಾಲಕರಾದ ದ್ಯಾವಾಪೃಥಿವಿಗಳನ್ನು ತೇಜೋರೂಪವಾದ ಸಂಪತ್ತಿನಿಂದ ತುಂಬುತ್ತಾನೆ.

## English Translation.

Of whom a sound is heard when scattering his rays like (that) of the sun: the brilliant showerer (of benefits) clamours among the (burning) plants; he who, moving not with a shifting, variable motion, but, humbling (our foes), fills the well-wedded earth and heaven with wealth.

॥ ಸಂಹಿತಾಪಾಠಃ ॥

ಧಾಯೋಭಿರ್ವಾ ಯೋ ಯುಜ್ಯೇಭಿರರ್ಕೈರ್ವಿದ್ಯುನ್ನ ದವಿದ್ಯೋತ್ಸ್ವೇಭಿಃ
ಶುಷ್ಮೈಃ ।
ಶರ್ಧೋ ವಾ ಯೋ ಮರುತಾಂ ತತಕ್ಷ ಋಭುರ್ನ ತ್ವೇಷೋ ರಭಸಾನೋ
ಅದ್ಯೌತ್ ॥ ೮ ॥

॥ ಪದಪಾಠಃ ॥

ಧಾಯಃಽಭಿಃ । ವಾ । ಯಃ । ಯುಜ್ಯೇಭಿಃ । ಅರ್ಕೈಃ । ವಿಽದ್ಯುತ್ । ನ । ದವಿದ್ಯೋತ್ । ಸ್ವೇಭಿಃ ।
ಶುಷ್ಮೈಃ ।
ಶರ್ಧಃ । ವಾ । ಯಃ । ಮರುತಾಂ । ತತಕ್ಷ । ಋಭುಃ । ನ । ತ್ವೇಷಃ । ರಭಸಾನಃ । ಅದ್ಯೌತ್ ॥ ೮ ॥

॥ ಸಾಯಣಭಾಷ್ಯಂ ॥

ಯೋಽಗ್ನಿರ್ಧಾಯೋಭಿರ್ವಾ ಧಾರಕೈರಶ್ವೈರಿವ ಯುಜ್ಯೇಭಿರ್ಯೋಜ್ಯೈಃ ಸ್ವಯಮೇವ ಯುಜ್ಯಮಾನೈರರ್ಕೈರರ್ಚನೀಯೈರ್ದೀಪ್ತಿಭಿರ್ಗಚ್ಛತಿ । ಸೋಽಗ್ನಿರ್ವಿದ್ಯುನ್ನ ವಿದ್ಯುದಿವ ಸ್ವೇಭಿಃ ಸ್ವಕೀಯೈಃ ಶುಷ್ಮೈಃ ಶೋಷಕೈಸ್ತೇಜೋಭಿರ್ದವಿದ್ಯೋತ್ । ವಿದ್ಯೋತತೇ । ಯಶ್ಚ ಮರುತಾಮೇತತ್ಸಂಜ್ಞಕಾನಾಂ ದೇವಾನಾಂ ಶರ್ಧೋ ವಾ ಬಲಮಿವ ತತಕ್ಷ ತನೂಕರೋತಿ ಸರ್ವಂ ತೀಕ್ಷ್ಣೀಕರೋತಿ । ಶೋಷಯತೀತಿ ಯಾವತ್ । ಸೋಽಯಮೃಭುರ್ನ ಉರು ಭಾಸಮಾನಃ ಸೂರ್ಯ ಇವ ತ್ವೇಷೋ ದೀಪ್ತೋ ರಭಸಾನೋ ವೇಗಂ ಕುರ್ವನ್ ಅದ್ಯೌತ್ । ವಿದ್ಯೋತತೇ । ಪ್ರಕಾಶತೇ ॥

॥ ಪ್ರತಿಪದಾರ್ಥ ॥

**ಯಃ**— ಯಾವ ಅಗ್ನಿಯು । **ಯುಜ್ಯೇಭಿಃ**— ರಥಕ್ಕೆ ಯೋಜಿಸಲು ಯೋಗ್ಯವಾದುದೂ । **ಧಾಯೋಭಿರ್ವಾ**— ಭಾರವನ್ನು ಧರಿಸುವವೂ ಆದ ಅಶ್ವಗಳಂತೆ । **ಅರ್ಕೈಃ**— ಪೂಜ್ಯವಾದ ರಶ್ಮಿಗಳಿಂದ ಕೂಡಿದವನೂ । **ವಿದ್ಯುನ್ನ**— ವಿದ್ಯುತ್ತಿನಂತೆ । **ಸ್ವೇಭಿಃ**— ತನ್ನದೇ ಆದ । **ಶುಷ್ಮೈಃ**— ತೇಜಸ್ಸುಗಳಿಂದ । **ದವಿದ್ಯೋತ್**— ಪ್ರಕಾಶಿಸುವನೋ ಅಂತಹವನೂ (ಮತ್ತು) । **ಯಃ**— ಯಾರು । **ಮರುತಾಂ**— ಮರುತ್ತುಗಳ । **ಶರ್ಧೋ ವಾ**— ಸಂಘದಂತೆ । **ತತಕ್ಷ**— ತೀಕ್ಷ್ಣವನ್ನಾಗಿ ಮಾಡುವನೋ (ಎಲ್ಲವನ್ನೂ ದಹಿಸುವನೋ) ಅದೇ ಅಗ್ನಿಯು । **ಋಭುರ್ನ**— ಪ್ರಕಾಶಮಾನನಾದ ಸೂರ್ಯನಂತೆ । **ತ್ವೇಷಃ**— ಕಾಂತಿಯುತನೂ । ರಭಸಾನಃ— ವೇಗಗಾಮಿಯೂ ಆಗಿ । **ಅದ್ಯೌತ್**— ಪ್ರಕಾಶಿಸುತ್ತಾನೆ.

॥ ಭಾವಾರ್ಥ ॥

ಯಾವ ಅಗ್ನಿಯು ರಥಕ್ಕೆ ಹೂಡಲು ಯೋಗ್ಯವಾದವೂ, ಭಾರವನ್ನು ಹೊರುವವೂ ಆದ ಅಶ್ವಗಳಂತೆ ಪೂಜ್ಯವಾದ ರಶ್ಮಿಗಳಿಂದ ಕೂಡಿದವನೂ, ವಿದ್ಯುತ್ತಿನಂತೆ ತನ್ನದೇ ಆದ ತೇಜಸ್ಸುಗಳಿಂದ ಪ್ರಕಾಶಿಸುವವನೂ ಮತ್ತು ಮರುತ್ತುಗಳ ಸಂಘದಂತೆ ಎಲ್ಲವನ್ನೂ ದಹಿಸುವವನೂ ಆಗಿರುವನೋ ಅದೇ ಅಗ್ನಿಯು ಪ್ರಕಾಶಮಾನನಾದ ಸೂರ್ಯನಂತೆ ಕಾಂತಿಯುತನೂ, ವೇಗಗಾಮಿಯೂ ಆಗಿ ಪ್ರಕಾಶಿಸುತ್ತಾನೆ.

## English Translation.

He who (goes) with sacred (rays), as if with self-harnessed, well-governed (steeds), who shines like lightning with his own scorching (flames), who impairs the vigour of Maruts, he glows radiant and rapid as the wide-shining sun.

# ನಾಲ್ಕನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಯಥಾ ಹೋತರಿತ್ಯಷ್ಟರ್ಚಂ ಚತುರ್ಥಂ ಸೂಕ್ತಂ ಭರದ್ವಾಜಸ್ಯಾರ್ಷಂ ತ್ರೈಷ್ಟುಭಮಾಗ್ನೇಯಂ। ಯಥಾ ಹೋತರಿತ್ಯನುಕ್ರಾಂತಂ ॥ ಪ್ರಾತರನುವಾಕಾಶ್ವಿನಶಸ್ತ್ರಯೋರುಕ್ತೋ ವಿನಿಯೋಗಃ ॥**

ಅನುವಾದವು—ಯಥಾ ಹೋತಃ ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು ಇದರಲ್ಲಿ ಎಂಟು ಋಕ್ಕುಗಳಿರುವವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು ; ಅಗ್ನಿಯು ದೇವತೆಯು ; ತ್ರಿಷ್ಟುಪ್ ಛಂದಸ್ಸು. :ಅನುಕ್ರಮಣಿಕೆಯಲ್ಲಿ—**ಯಥಾ ಹೋತಃ** ಎಂದು ಹೇಳಿರುವುದು. ಪ್ರಾತರನುವಾಕ ಮತ್ತು ಆಶ್ವಿನ ಶಸ್ತ್ರಮಂತ್ರ ಪಠನಕ್ಕಾಗಿ ಈ ಸೂಕ್ತದ ವಿನಿಯೋಗವಿರುವುದು.

## ಸೂಕ್ತ—೪

ಮಂಡಲ— ೬॥ ಅನುವಾಕ—೧ ॥ ಸೂಕ್ತ—೪ ॥

ಅಷ್ಟಕ—೪ ॥ ಅಧ್ಯಾಯ—೫ ॥ ವರ್ಗ—೫, ೬ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೮ ॥

॥ ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ॥

॥ ದೇವತಾ—ಅಗ್ನಿಃ ॥

॥ ಛಂದಃ— ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಯಥಾ ಹೋತರ್ಮನುಷೋ ದೇವತಾತಾ ಯಜ್ಞೇಭಿಃ ಸೂನೋ ಸಹಸೋ ಯಜಾಸಿ ।
ಏವಾ ನೋ ಅದ್ಯ ಸಮನಾ ಸಮಾನಾನುಶನ್ನಗ್ನ ಉಶತೋ ಯಕ್ಷಿ ದೇವಾನ್ ॥ ೧ ॥

॥ ಪದಪಾಠಃ ॥

ಯಥಾ । ಹೋತಃ । ಮನುಷಃ । ದೇವಽತಾತಾ । ಯಜ್ಞೇಭಿಃ । ಸೂನೋ ಇತಿ । ಸಹಸಃ । ಯಜಾಸಿ ।
ಏವ । ನಃ । ಅದ್ಯ । ಸಮನಾ । ಸಮಾನಾನ್ । ಉಶನ್ । ಅಗ್ನೇ । ಉಶತಃ । ಯಕ್ಷಿ । ದೇವಾನ್ ॥ ೧ ॥

॥ ಸಾಯಣಭಾಷ್ಯಂ ॥

ಹೇ ಹೋತರ್ದೇವಾನಾಮಾಹ್ವಾತಃ ಸಹಸಃ ಸೂನೋ ಬಲಸ್ಯ ಪುತ್ರಾಗ್ನೇ ಯಥಾ ಯೇನ ಪ್ರಕಾರೇಣ ಮನುಷೋ ಮನೋಃ ಪ್ರಜಾಪತೇರ್ಯಜಮಾನಸ್ಯ ದೇವತಾತಾ । ಯಜ್ಞನಾಮೈತತ್ । ದೇವತಾತೌ ಯಜ್ಞೇ ಯಜ್ಞೇಭಿರ್ಯಜಮಾನಸಾಧನೈರ್ಹವಿರ್ಭಿರ್ಯಜಾಸಿ ದೇವಾನ್ಯಜಸಿ ಏವ್ಮೇವಂ ಹೇ ಅಗ್ನೇ ನೋಽಸ್ಮಾಕಮದ್ಯಾಸ್ಮಿನ್ಯಜ್ಞೇ ಸಮಾನಾನ್ ತ್ವತ್ಸದೃಶಾನಿಂದ್ರಾದೀನುಶನ್ ಕಾಮಯಮಾನಸ್ತ್ವಮುಶತಃ ಕಾಮಯಮಾನಾನ್ಯಷ್ಟವ್ಯಾನ್ ದೇವಾನ್ ಸಮನಾ ಕ್ಷಿಪ್ರಂ ಯಕ್ಷಿ । ಯಜ । ಯದ್ವಾ ಸಮಾನಂ ಮನ್ಯಂತೇಽಸ್ಮಿನ್ ದೇವಾನಿತಿ ಸಮನೋ ಯಜ್ಞಃ । ತಸ್ಮಿನ್ನಿತಿ ಯೋಜ್ಯಂ ॥

॥ ಪ್ರತಿಪದಾರ್ಥ ॥

**ಹೋತಃ**—ದೇವತೆಗಳನ್ನು ಆಹ್ವಾನಮಾಡುವವನೂ । **ಸಹಸಃ ಸೂನೋ**—ಶಕ್ತಿಪುತ್ರನೂ ಆದ ಅಗ್ನಿಯೇ। **ಯಥಾ**—ಯಾವ ರೀತಿಯಲ್ಲಿ। **ಮನುಷಃ**—ಯಜ್ಞಕರ್ತನಾದ ಮನುವಿನ। **ದೇವತಾತಾ**—ಯಜ್ಞದಲ್ಲಿ। **ಯಜ್ಞೇಭಿಃ**—ಯಜ್ಞಸಾಧನಗಳಾದ ಹವಿಸ್ಸುಗಳಿಂದ। **ಯಜಾಸಿ**—ದೇವತೆಗಳನ್ನು ಪೂಜಿಸದೆಯೋ। **ಏವ**—ಅದೇ ರೀತಿಯಲ್ಲಿ। **ಅಗ್ನೇ**—ಎಲೈ ಅಗ್ನಿಯೇ। **ನಃ**—ನಮ್ಮ। **ಅದ್ಯ**—ಈ ಯಜ್ಞದಲ್ಲಿ। **ಸಮಾನಾನ್**—ನಿನ್ನಂತೆಯೇಪೂಜ್ಯರಾದ ಇಂದ್ರಾದಿಗಳನ್ನು। **ಉಶನ್**—ಪೂಜಿಸಲಿಚ್ಛಿಸಿ। **ಉಶತಃ**—ಯಜ್ಞೇಚ್ಛುಗಳಾದ। **ದೇವಾನ್**—ಅದೇ ದೇವತೆಗಳನ್ನು। **ಸಮನಾ**—ಕ್ಷಿಪ್ರವಾಗಿ। **ಯಕ್ಷಿ**—ಪೂಜಿಸು.

॥ ಭಾವಾರ್ಥ ॥

ಹೋತೃರೂಪನೂ, ಶಕ್ತಿಪುತ್ರನೂ ಆದ ಎಲೈ ಅಗ್ನಿಯೇ- ಯಾವ ರೀತಿಯಲ್ಲಿ ಯಜ್ಞಕರ್ತನಾದ ಮನುವಿನ ಯಜ್ಞದಲ್ಲಿ ಯಜ್ಞಸಾಧನಗಳಾದ ಹವಿಸ್ಸುಗಳಿಂದ ದೇವತೆಗಳನ್ನು ಪೂಜಿಸಿದೆಯೋ ಅದೇ ರೀತಿಯಲ್ಲಿ ಎಲೈ ಅಗ್ನಿಯೇ,

ನಮ್ಮ ಈ ಯಜ್ಞದಲ್ಲಿ ನಿನ್ನಂತೆಯೇ ಪೂಜ್ಯರಾದ ಇಂದ್ರಾದಿಗಳನ್ನು ಪೂಜಿಸಲಿಚ್ಛಿಸಿ ಯಜ್ಞೇಚ್ಛುಗಳಾದ ಆದೇ ದೇವತೆಗಳನ್ನು ಕ್ಷಿಪ್ರವಾಗಿ ಪೂಜಿಸು.

## English Translation.

Son of strength, invoker (of the gods), in like manner as at the worship of the gods by Manu you offered worship with sacrifies, so now, Agni, with willing mind, worship for us the assenting deities, regarding them as your equals.

॥ ಸಂಹಿತಾಪಾಠಃ ॥

ಸ ನೋ ವಿಭಾವಾ ಚಕ್ಷಣಿರ್ನ ವಸ್ತೋರಗ್ನಿರ್ವನ್ದಾರು ವೇದ್ಯಶ್ಚನೋ ಧಾತ್ ।
ವಿಶ್ವಾಯುರ್ಯೋ ಅಮೃತೋ ಮರ್ತ್ಯೇಷೂಷರ್ಭುದ್ಭೂದತಿಥಿರ್ಜಾತವೇದಾಃ ॥ ೨ ॥

॥ ಪದಪಾಠಃ ॥

ಸಃ । ನಃ । ವಿಭಾಽವಾ । ಚಕ್ಷಣಿಃ । ನ । ವಸ್ತೋಃ । ಅಗ್ನಿಃ । ವಂದಾರು । ವೇದ್ಯಃ । ಚನಃ । ಧಾತ್ ।
ವಿಶ್ವಽಆಯುಃ । ಯಃ । ಅಮೃತಃ । ಮರ್ತ್ಯೇಷು । ಉಷಃಽಭುತ್ । ಭೂತ್ । ಅತಿಥಿಃ । ಜಾತಽವೇದಾಃ ।

॥ ಸಾಯಣಭಾಷ್ಯಂ ॥

ವಸ್ತೋರಹನಿ ಚಕ್ಷಣಿರ್ನ ಪ್ರಕಾಶಕಃ ಸೂರ್ಯ ಇವ ವಿಭಾವಾ ವಿಶೇಷೇಣ ದೀಪ್ಯಮಾನೋ ವೇದ್ಯಃ ಸರ್ವೈರ್ಜ್ಞಾತವ್ಯೋ ಲಂಭನೀಯೋ ವಾ ಸೋಽಗ್ನಿರ್ನೋಽಸ್ಮಭ್ಯಂ ವಂದಾರು ವಂದನೀಯಂ ಸ್ತುತ್ಯಂ ಚನೋಽನ್ನಂ ಧಾತ್ । ದಧಾತು । ಪ್ರಯಚ್ಛತ್ವಿತ್ಯರ್ಥಃ । ವಿಶ್ವಾಯುಃ ಸರ್ವಾನ್ನಃ ಸರ್ವೇಷಾಂ ಜೀವನಹೇತುರ್ಯೋಽಮೃತೋ ಮರಣರಹಿತೋಽತಿಥಿರ್ಹವಿರ್ವಹನಾಯ ಸತತಗಾಮೀ ಜಾತವೇದಾ ಜಾತಾನಾಂ ವೇದಿತಾ ಜಾತಧನೋ ವಾ ಏವಂಭೂತೋ ಯೋಽಗ್ನಿರ್ಮರ್ತ್ಯೇಷು ಮನುಷ್ಯೇಷು ಯಜಮಾನೇಷೂಷರ್ಭುದ್ಭೂತ್ ಉಷಃಕಾಲೇಽಗ್ನಿಹೋತ್ರಹೋಮಾರ್ಥಂ ಪ್ರಬುದ್ಧೋ ಭವತಿ ಸ ಇತಿ ಪೂರ್ವತ್ರಾನ್ವಯಃ ॥

॥ ಪ್ರತಿಪದಾರ್ಥ ॥

**ವಸ್ತೋಃ**—ಹಗಲಿನಲ್ಲಿ | **ಚಕ್ಷಣಿರ್ನ**—ಪ್ರಕಾಶಕನಾದ ಸೂರ್ಯನಂತೆ | **ವಿಭಾವಾ**—ಪ್ರಕಾಶಮಾನನೂ| **ವೇದ್ಯಃ**—ಸಕಲರಿಂದ ತಿಳಿಯಲ್ಪಡುವವನೂ | **ವಿಶ್ವಾಯುಃ**—ಸಕಲರಿಗೂ ಜೀವನಹೇತುವೂ | **ಅಮೃತಃ**—ಮರಣರಹಿತನೂ | **ಅತಿಥಿಃ**—ಅತಿಥಿರೂಪನೂ | **ಜಾತವೇದಾಃ**—ಜಾತವೇದೋರೂಪನೂ (ಮತ್ತು) | **ಯಃ**—ಯಾವನು | **ಮರ್ತ್ಯೇಷು**—ಮಾನವರ ನಡುವೆ | **ಉಷರ್ಬುದ್ಧ್ಯೋತ್**—(ಅಗ್ನಿಹೋತ್ರಾರ್ಥವಾಗಿ) ಉಷಃ ಕಾಲದಲ್ಲೇ ಪ್ರಬುದ್ಧನಾಗುವನೋ ಅಂತಹವನೂ ಆದ | **ಸಃ ಅಗ್ನಿಃ**—ಅದೇ ಅಗ್ನಿಯು | **ನಃ**—ನಮಗೆ | **ವಂದಾರು**—ಸ್ತುತ್ಯವಾದ | **ಚನಃ**—ಅನ್ನವನ್ನು | **ಧಾತ್**—ಕೊಡಲಿ.

॥ ಭಾವಾರ್ಥ ॥

ಅಹಸ್ಸಿನಲ್ಲಿ ಪ್ರಕಾಶಿಸುವ ಸೂರ್ಯನಂತೆ ಪ್ರಕಾಶಮಾನನೂ, ಸಕಲರಿಂದಲೂ ತಿಳಿಯಲ್ಪಡುವವನೂ, ಸಕಲರಿಗೂ ಜೀವನಾಧಾರಕನೂ, ಮರಣರಹಿತನೂ, ಅತಿಥಿರೂಪನೂ, ಜಾತವೇದೋರೂಪನೂ, ಮತ್ತು ಮಾನವರ ನಡುವೆ ಅಗ್ನಿಹೋತ್ರಾರ್ಥವಾಗಿ ಉಷಃಕಾಲದಲ್ಲೇ ಪ್ರಬುದ್ಧನಾಗುವವನೂ ಆದ ಅದೇ ಅಗ್ನಿಯು ನಮಗೆ ಪ್ರಶಂಸಾರ್ಹವಾದ ಅನ್ನವನ್ನು ಒದಗಿಸಲಿ.

English Translation.

May that Agni, who, like the illuminator of the day, is resplendent and cognizable (by all), grant us commendable food; he who is the life of all, immortal, who knows all that exists, who is our guest, waking amongst men at dawn.

॥ ಸಂಹಿತಾಪಾಠಃ ॥

ದ್ಯಾವೋ ನ ಯಸ್ಯ ಪನಯಂತ್ಯಭ್ವಂ ಭಾಸಾಂಸಿ ವಸ್ತೇ ಸೂರ್ಯೋ ನ ಶುಕ್ರಃ |
ವಿ ಯ ಇನೋತ್ಯಜರಃ ಪಾವಕೋಽಶ್ನಸ್ಯ ಚಿಚ್ಛಿಶ್ನಥ ತ್ಪೂರ್ವ್ಯಾಣಿ ॥ ೩ ॥

॥ ಪದಪಾಠಃ ॥

ದ್ಯಾವಃ | ನ | ಯಸ್ಯ | ಪನಯಂತಿ | ಅಭ್ವಂ | ಭಾಸಾಂಸಿ | ವಸ್ತೇ | ಸೂರ್ಯಃ | ನ | ಶುಕ್ರಃ |
ವಿ | ಯಃ | ಇನೋತಿ | ಅಜರಃ | ಪಾವಕಃ | ಅಶ್ನಸ್ಯ | ಚಿತ್ | ಶಿಶ್ನಥತ್ | ಪೂರ್ವ್ಯಾಣಿ ॥ ೩ ॥

॥ ಸಾಯಣಭಾಷ್ಯಂ ॥

ನೇತಿ ಸಂಪ್ರತ್ಯರ್ಥೇ । ಉಕ್ತಂ ಚ । ಅಸ್ತ್ಯುಪಮಾರ್ಥಸ್ಯ ಸಂಪ್ರತ್ಯರ್ಥೇ ಪ್ರಯೋಗಃ । ನಿ. ೭-೩೧ । ಇತಿ ॥ ದ್ಯಾವಃ ಸ್ತೋತಾರಃ ಸಂಪ್ರತೀದಾನೀಂ ಯಸ್ಯಾಗ್ನೇರಭ್ವಂ ಮಹತ್ಕರ್ಮ ಪನಯಂತಿ ಸ್ತುವಂತಿ ಸೋಽಗ್ನಿಃ ಸೂರ್ಯೋ ನ ಸೂರ್ಯ ಇವ ಶುಕ್ರಃ ಶುಕ್ಲವರ್ಣಃ ಸನ್ ಭಾಸಾಂಸಿ ತೇಜಾಂಸಿ ವಸ್ತೇ । ಆಚ್ಛಾದಯತಿ । ಯಶ್ಚಾಜರೋ ಜರಾರಹಿತಃ ಪಾವಕಃ ಸರ್ವಸ್ಯ ಶೋಧಕೋಽಗ್ನಿರ್ವಿನೋತಿ ಭಾಸಾ ಸರ್ವಂ ವ್ಯಾಪ್ನೋತಿ ಸೋಽಯಮಶ್ನಸ್ಯ ಚಿತ್ ವ್ಯಾಪನಶೀಲಸ್ಯಾಪಿ ರಾಕ್ಷಸಾದೇಃ ಪೂರ್ವ್ಯಾಣಿ ಚಿರಂತನಾನಿ ಪುರಾಣಿ ಶಿಶ್ನಥತ್ । ಹಿನಸ್ತಿ ॥ ಶ್ನಥ ಕ್ನಥ ಹಿಂಸಾರ್ಥಾ ಇತಿ ಧಾತುಃ ॥

॥ ಪ್ರತಿಪದಾರ್ಥ ॥

ದ್ಯಾವಃ—ಸ್ತೋತೃಗಳು । ನ—ಈಗ । ಯಸ್ಯ—ಯಾವ ಅಗ್ನಿಯ । ಅಭ್ವಂ—ಮಹತ್ಕರ್ಮವನ್ನು । ಪನಯಂತಿ—ಸ್ತುತಿಸುವರೋ (ಆ ಅಗ್ನಿಯು) । ಸೂರ್ಯೋ ನ—ಸೂರ್ಯನಂತೆ । ಶುಕ್ರಃ—ಶುಭ್ರವರ್ಣವುಳ್ಳವನಾಗಿ । ಭಾಸಾಂಸಿ—ತೇಜಸ್ಸುಗಳನ್ನು । ವಸ್ತೇ—ಹೊದ್ದಿಸುತ್ತಾನೆ । ಯಃ—ಯಾವನು । ಅಜರಃ—ಜರಾರಹಿತನೂ । ಪಾವಕಃ—ಶುದ್ಧಿಕಾರಕನೂ ಆಗಿದ್ದಾನೋ ಅದೇ ಅಗ್ನಿಯು । ವಿ ಇನೋತಿ—ತನ್ನ ಪ್ರಭೆಯಿಂದ ಎಲ್ಲವನ್ನೂ ವ್ಯಾಪಿಸುತ್ತಾನೆ । ಅಶ್ನಸ್ಯ ಚಿತ್—ಅನೇಕ ಕಡೆಗಳಲ್ಲಿ ಹರಡಿದ್ದರೂ ಸಹ । ಪೂರ್ವ್ಯಾಣಿ—ಅಸುರರ ಪಟ್ಟಣಗಳನ್ನು । ಶಿಶ್ನಥತ್—ಪೂರ್ಣವಾಗಿ ನಾಶಮಾಡುತ್ತಾನೆ.

॥ ಭಾವಾರ್ಥ ॥

ಸ್ತೋತೃಗಳು ಈಗ ಯಾವ ಅಗ್ನಿಯ ಮಹತ್ಕರ್ಮವನ್ನು ಸ್ತುತಿಸುವರೋ ಆ ಅಗ್ನಿಯು ಸೂರ್ಯನಂತೆ ಶುಭ್ರವರ್ಣವುಳ್ಳವನಾಗಿ ತನ್ನ ತೇಜಸ್ಸುಗಳನ್ನು ಸರ್ವತ್ರ ಹೊದ್ದಿಸುತ್ತಾನೆ (ಹರಡುತ್ತಾನೆ) ಯಾರು ಜರಾರಹಿತನೂ ಶುದ್ಧಿಕಾರಕನೂ ಆಗಿದ್ದಾನೋ ಅದೇ ಅಗ್ನಿಯು ತನ್ನ ಪ್ರಭೆಯಿಂದ ಸರ್ವತ್ರ ವ್ಯಾಪಿಸುತ್ತಾನೆ. ಅಸುರ ಪಟ್ಟಣಗಳು ನಾನಾಕಡೆಗಳಲ್ಲಿ ಪ್ರಸರಿಸಿ ಹರಡಿದ್ದರೂ ಅವನ್ನು ಪೂರ್ಣವಾಗಿ ನಾಶಮಾಡುತ್ತಾನೆ.

## English Translation.

Whose great deeds his worshippers now celebrate, who is clothed with light, radiant as the sun, exempt from decay, the purifier, he illumes (all things), aud destroys the ancient cities of the dispersed (evil beings).

—o—

॥ ಸಂಹಿತಾಪಾಠಃ ॥

ವದ್ಮಾ ಹಿ ಸೂನೋ ಅಸ್ಯದ್ಮಸದ್ವಾ ಚಕ್ರೇ ಅಗ್ನಿರ್ಜನುಷಾಜ್ಮಾನ್ನಂ ।

ಸ ತ್ವಂ ನ ಊರ್ಜಸನ ಊರ್ಜಂ ಧಾ ರಾಜೇವ ಜೇರವೃಕೇ ಕ್ಷೇಷ್ಯಂತಃ ॥೪॥

॥ ಪದಪಾಠಃ ॥

ವದ್ಮಾ । ಹಿ । ಸೂನೋ ಇತಿ । ಅಸಿ । ಅದ್ಮಽಸದ್ವಾ । ಚಕ್ರೇ । ಅಗ್ನಿಃ । ಜನುಷಾ । ಅಜ್ಮ । ಅನ್ನಂ ।
ಸಃ । ತ್ವಂ । ನಃ । ಊರ್ಜಽಸನೇ । ಊರ್ಜಂ । ಧಾಃ । ರಾಜಾಽಇವ । ಜೇಃ । ಅವೃಕೇ । ಕ್ಷೇಷಿ ।
ಅಂತರಿತಿ ॥ ೪ ॥

॥ ಸಾಯಣಭಾಷ್ಯಂ ॥

ಹೇ ಸೂನೋ ಸಹಸಃ ಪುತ್ರ । ಯದ್ವಾ ಷೂ ಪ್ರೇರಣೇ । ಸರ್ವಸ್ಯ ಪ್ರೇರಕಾಗ್ನೇ ವದ್ಮಾ ವದನೀಯಃ ಸ್ತುತ್ಯೋಽಸಿ ಹಿ । ಪರಃ ಪಾದಃ ಪರೋಕ್ಷಕೃತಃ । ಅದ್ಮಸದ್ವಾದ್ಮಸ್ವದನೀಯೇಷು ಹವಿಃಷು ಸೀದನ್ ಹವಿಃಸ್ವೀಕರಣಾಯೋಪವಿಶನ್ನಗ್ನಿರ್ಜನುಷಾ ಜನ್ಮನಾ ಸ್ವಭಾವತ ಏವಾಜ್ಮ । ಗೃಹನಾಮೈತತ್ । ಗೃಹಮನ್ನಂ ಚ ಯಜಮಾನಾನಾಂ ಚಕ್ರೇ । ಕರೋತಿ । ಊರ್ಜಸನ ಊರ್ಜಸ್ಯಾನ್ನಸ್ಯ ದಾತರಗ್ನೇ ನೋಽಸ್ಮಭ್ಯಂ ಸ ತಾದೃಶಸ್ತ್ವಮೂರ್ಜಮನ್ನಂ ಧಾಃ । ದೇಹಿ । ತಥಾ ರಾಜೇವ ಜೇಃ । ಅಸ್ಮಚ್ಛತ್ರೂನ್ ಜಯ । ಏತತ್ಸರ್ವಾರ್ಥಮವೃಕೇ ರಾಕ್ಷಸಾದಿಭಿರ್ಬಾಧಕೈರ್ವಿಯುಕ್ತೇಽಸ್ಮದೀಯೇಽಗ್ನ್ಯಗಾರೇಽಂತರ್ಮಧ್ಯೇ ಕ್ಷೇಷಿ ನಿವಸ ॥

॥ ಪ್ರತಿಪದಾರ್ಥ ॥

**ಸೂನೋ**—ಎಲೈ ಶಕ್ತಿಪುತ್ರನಾದ ಅಗ್ನಿಯೇ । **ವದ್ಮಾ ಅಸಿ**—ನೀನು ವಂದನೀಯನಾಗಿದ್ದೀಯೆ । **ಅದ್ಮಸದ್ವಾ**—ಹವಿಸ್ಸುಗಳ ನಡುವೆ ಸ್ಥಿತನಾಗಿರುವ । **ಅಗ್ನಿಃ**—ಅಗ್ನಿಯು । **ಜನುಷಾ**—ಸ್ವಾಭಾವಿಕವಾಗಿಯೇ **ಅಜ್ಮ**—ಗೃಹವನ್ನೂ । **ಅನ್ನಂ**—ಅನ್ನವನ್ನೂ । **ಚಕ್ರೇ**—(ಯಜಮಾನನಿಗೆ) ಒದಗಿಸುತ್ತಾನೆ । **ಊರ್ಜಸನೇ**—ಅನ್ನದಾತೃವಾದ ಎಲೈ ಅಗ್ನಿಯೇ । **ನಃ**—ನಮಗೆ । **ಸಃ ತ್ವಂ**—ಪ್ರಸಿದ್ಧನಾದ ನೀನು । **ಊರ್ಜಂ**—ಅನ್ನವನ್ನು । **ಧಾಃ**—ಕೊಡು । **ರಾಜೇವ**—ಪ್ರಭುವಿನಂತೆ । **ಜೇಃ**—ಜಯವನ್ನು ಹೊಂದು । **ಅವೃಕೇ**—ರಾಕ್ಷಸಾದಿಗಳ ಬಾಧಾರಹಿತವಾದ ನಮ್ಮ ಯಜ್ಞಗೃಹದ । **ಅಂತಃ**—ಮಧ್ಯಭಾಗದಲ್ಲಿ । **ಕ್ಷೇಷಿ**—ವಾಸಮಾಡು.

॥ ಭಾವಾರ್ಥ ॥

ಎಲೈ ಶಕ್ತಿಪುತ್ರನಾದ ಅಗ್ನಿಯೇ, ನೀನು ವಂದನೀಯನಾಗಿದ್ದೀಯೆ. ಹವಿಸ್ಸುಗಳ ನಡುವೆ ಸ್ಥಿತನಾಗಿರುವ ಅಗ್ನಿಯು ಯಜಮಾನನಿಗೆ ಅಪ್ರಾರ್ಥಿತವಾಗಿಯೇ ಗೃಹವನ್ನೂ ಅನ್ನವನ್ನೂ ಒದಗಿಸುತ್ತಾನೆ. ಅನ್ನದಾತೃವಾದ ಎಲೈ ಅಗ್ನಿಯೇ, ಪ್ರಸಿದ್ಧನಾದ ನೀನು ನಮಗೆ ಅನ್ನವನ್ನು ಒದಗಿಸಿಕೊಡು, ಪ್ರಭುವಿನಂತೆ ಜಯಶೀಲನಾಗಿರು. ರಾಕ್ಷಸಾದಿಗಳಿಂದ ರಹಿತವಾದ ನಮ್ಮ ಯಜ್ಞಗೃಹದ ನಡುವೆ ವಾಸಮಾಡು.

## English Translation

Son of strength, you are to be praised; Agni, sitting upon the (sacrificial) viands, has given (to his worshippers), from their birth, habitat-

ion and food ; giver of strength, bestow strength upon us ; triumph like a prince, so that you may abide in our unassailed (dwelling).

---

॥ ಸಂಹಿತಾಪಾಠಃ ॥

ನಿತಿಕ್ತಿ ಯೋ ವಾರಣಮನ್ನಮತ್ತಿ ವಾಯುರ್ನ ರಾಷ್ಟ್ರ್ಯತ್ಯೇತ್ಯಕ್ತೂನ್ ।
ತುರ್ಯಾಮ ಯಸ್ತ ಆದಿಶಾಮರಾತೀರತ್ಯೋ ನ ಹ್ರುತಃ ಪತತಃ ಪರಿಹ್ರುತ್ ॥ ೫ ॥

॥ ಪದಪಾಠಃ ॥

ನಿಽತಿಕ್ತಿ । ಯಃ । ವಾರಣಂ । ಅನ್ನಂ । ಅತ್ತಿ । ವಾಯುಃ । ನ । ರಾಷ್ಟ್ರೀ । ಅತಿ । ಏತಿ । ಅಕ್ತೂನ್ ।
ತುರ್ಯಾಮ । ಯಃ । ತೇ । ಆಽದಿಶಾಂ । ಅರಾತೀಃ । ಅತ್ಯಃ । ನ । ಹ್ರುತಃ । ಪತತಃ । ಪರಿಽಹ್ರುತ್ ॥

॥ ಸಾಯಣಭಾಷ್ಯಂ ॥

ಯೋಽಗ್ನಿರ್ವಾರಣಂ ತಮಸಾಂ ನಿವಾರಕಂ ಸ್ವಕೀಯಂ ತೇಜೋ ನಿತಿಕ್ತಿ ನಿಶ್ಯತಿ ತೀಕ್ಷ್ಣೀಕರೋತಿ ॥ ತಿಜ ನಿಶಾನ ಇತಿ ಧಾತುಃ ॥ ಯಶ್ಚಾನ್ನಂ ಯಜ್ವಭಿರ್ದೀಯಮಾನಂ ಹವಿರ್ಲಕ್ಷಣಮತ್ತಿ ಭಕ್ಷಯತಿ । ತಥಾ ಚ ಶ್ರೂಯತೇ । ಅನ್ನಾದೋ ವಾ ಏಷೋಽನ್ನಪತಿರ್ಯದಗ್ನಿರಿತಿ । ಸೋಽಗ್ನಿರ್ವಾಯುರ್ನ ವಾಯುರಿವ ರಾಷ್ಟ್ರೀ । ಈಶ್ವರನಾಮೈತತ್ । ರಾಷ್ಟ್ರಂ ರಾಜ್ಯಂ । ತದ್ವಾನ್ । ವಾಯುರ್ಯಥಾ ಸ್ವಮಾಹಾತ್ಮ್ಯೇನ ಸರ್ವಮೀಷ್ಟೇ ತದ್ವತ್ । ಸರ್ವಸ್ಯೇಶ್ವರ ಇತ್ಯರ್ಥಃ । ತಾದೃಶಃ ಸನ್ ಅಕ್ತೂನ್ ರಾತ್ರೀರತ್ಯೇತಿ । ಅತಿಕ್ರಾಮತಿ । ತದ್ಗತಮಂಧಕಾರಂ ತಿರಸ್ಕರೋತೀತ್ಯರ್ಥಃ । ವಯಂ ಚ ತ್ವತ್ಪ್ರಸಾದಾತ್ತುರ್ಯಾಮ ತಂ ಹಿಂಸ್ಯಾಮ ಯೋ ಜನಸ್ತೇ ತುಭ್ಯಮಾದಿಶಾಮಾದಿಶ್ಯಮಾನಾನಾಂ ದೀಯಮಾನಾನಾಂ ಹವಿಷಾಮರಾತೀರರಾತಿರದಾತಾ ॥ ಛಾಂದಸೋ ದೀರ್ಘಃ ॥ ಯದ್ವಾ । ಅರಾತೀರ್ಧನಸ್ಯಾದಾತೄನ್ ತೇ ತ್ವಾಂ ಪ್ರತ್ಯಾದಿಶಾಮಾದೇಷ್ಟೄಣಾಮಾಚಕ್ಷಾಣಾನಾಮಸ್ಮಾಕಂ ಯೋ ಜನೋ ವಿರೋಧೀ ತಂ ಹಿಂಸ್ಯಾಮ । ತ್ವಂ ಚಾತ್ಯೋ ನ ಶೀಘ್ರಗಾಮೀ ಜಾತ್ಯಶ್ವ ಇವ ಹ್ರುತೋ ಹಿಂಸಕಾನ್ಪತತ ಅಭಿಮುಖ್ಯೇನ ಗಚ್ಛತಃ ಶತ್ರೂನ್ ಪರಿಹ್ರುತ್ ಪರಿಗತ್ಯ ಹಂತಾ ಭವ ॥ ಹ್ವರತೇರ್ಹಿಂಸಾರ್ಥಸ್ಯೈತದ್ರೂಪಂ ॥

॥ ಪ್ರತಿಪದಾರ್ಥ ॥

ಯಃ—ಯಾವ ಅಗ್ನಿಯು । ವಾರಣಂ—ಅಂಧಕಾರನಿವಾರಕವಾದ ತೇಜಸ್ಸನ್ನು । ನಿತಿಕ್ತಿ—ತೀವ್ರವಾದುದನ್ನಾಗಿ ಮಾಡುವನೋ (ಯಾರು) । ಅನ್ನಂ—ಹವಿಸ್ಸಿನ ರೂಪದ ಅನ್ನವನ್ನು । ಅತ್ತಿ—ಭಕ್ಷಿಸುವನೋ

(ಆ ಅಗ್ನಿಯು) | **ವಾಯುರ್ನ**—ವಾಯುವಿನಂತೆ | **ರಾಷ್ಟ್ರೀ**—ಸರ್ವೇಶ್ವರನಾಗಿ | **ಅಕ್ತೂನ್**—ರಾತ್ರಿಗಳನ್ನು **ಅತ್ಯೇತಿ**—ದಾಟುತ್ತಾನೆ (ರಾತ್ರಿಯ ಅಂಧಕಾರವನ್ನು ಕೊನೆಗಾಣಿಸುತ್ತಾನೆ) | **ತುರ್ಯಾಮ**—(ನಾವೂ ಆ ಅಂಧಕಾರವನ್ನು ದಾಟೋಣ | **ಯಃ**—ಯಾವ ಮಾನವನು | **ತೇ**—ನಿನಗೆ ಅರ್ಪಿತವಾಗಬೇಕಾದ | **ಆದಿಶಾಂ**—ಹವಿಸ್ಸುಗಳನ್ನು | **ಅರಾತೀಃ**—ದಾನಮಾಡದಿರುವನೋ (ಅವನನ್ನೂ ನಾಶಮಾಡೋಣ) (ನೀನೂ ಸಹ) **ಅತ್ಯೋ ನ**—ವೇಗಗಾಮಿಯಾದ ಅಶ್ವದಂತೆ | **ಹ್ರುತಃ**—ಹಿಂಸಕರೂ | **ಪತತಃ**—ನಮ್ಮೆದುರು ಬೀಳುವವರೂ ಆದ ಶತ್ರುಗಳನ್ನು | **ಪರಿಹ್ರುತ್**—ಎದುರುಬಿದ್ದು ನಾಶಗೊಳಿಸು.

॥ ಭಾವಾರ್ಥ ॥

ಯಾವ ಅಗ್ನಿಯು ಅಂಧಕಾರನಿವಾರಕವಾದ ತೇಜಸ್ಸನ್ನು ತೀವ್ರವಾಗಿ ಮಾಡುವನೋ, ಯಾರು ಹವಿಸ್ಸಿನ ರೂಪದ ಅನ್ನವನ್ನು ಭಕ್ಷಿಸುವನೋ ಆ ಅಗ್ನಿಯು ವಾಯುವಿನಂತೆ ಸರ್ವೇಶ್ವರನಾಗಿ ರಾತ್ರಿಗಳನ್ನು ದಾಟುತ್ತಾನೆ. ಎಂದರೆ ರಾತ್ರಿಯ ಅಂಧಕಾರಗಳನ್ನು ಕೊನೆಗಾಣಿಸುತ್ತಾನೆ. ನಾವೂ ಆ ಅಂಧಕಾರವನ್ನು ದಾಟೋಣ. ಎಲೈ ಅಗ್ನಿಯೇ, ಯಾವ ಮಾನವನು ನಿನಗೆ ಅರ್ಪಿತವಾಗಬೇಕಾದ ಹವಿಸ್ಸುಗಳನ್ನು ದಾನಮಾಡದಿರುವನೋ ಅವನನ್ನೂ ನಾವು ನಾಶಮಾಡುವಂತಾಗಲಿ. ನೀನೂ ಸಹ ವೇಗಗಾಮಿಯಾದ ಅಶ್ವದಂತೆ ಹಿಂಸಕರೂ ನಮ್ಮೆದುರು ಬೀಳುವವರೂ ಆದ ಶತ್ರುಗಳನ್ನು ಎದುರುಬಿದ್ದು ನಾಶಗೊಳಿಸು.

English Translation.

He who whets his (gloom)-dispersing (radiance), who eats the (offered) oblation, a sovereign like Vayu, overcomes the nights; may we prevail (over him) who is not a donor of the oblations that are due, (Agni) to you and (swift) as a horse, be the destroyer of the foes assailing (us).

॥ ಸಂಹಿತಾಪಾಠಃ ॥

ಆ ಸೂರ್ಯೋ ನ ಭಾನುಮದ್ಭಿರರ್ಕೈರಗ್ನೇ ತತಂಥ ರೋದಸೀ ವಿ ಭಾಸಾ ।
ಚಿತ್ರೋ ನಯತ್ಪರಿ ತಮಾಂಸ್ಯಕ್ತಃ ಶೋಚಿಷಾ ಪತ್ಮನ್ನೌಶಿಜೋ ನ ದೀಯನ್ ॥ ೬ ॥

॥ ಪದಪಾಠಃ ॥

ಆ । ಸೂರ್ಯಃ । ನ । ಭಾನುಮತ್‌ಽಭಿಃ । ಅರ್ಕೈಃ । ಅಗ್ನೇ । ತತಂಥ । ರೋದಸೀ ಇತಿ । ವಿ । ಭಾಸಾ ।
ಚಿತ್ರಃ । ನಯತ್ । ಪರಿ । ತಮಾಂಸಿ । ಅಕ್ತಃ । ಶೋಚಿಷಾ । ಪತ್ಮನ್ । ಔಶಿಜಃ । ನ । ದೀಯನ್ ॥ ೬ ॥

॥ ಸಾಯಣಭಾಷ್ಯಂ ॥

**ಹೇ ಅಗ್ನೇ ರೋದಸೀ ದ್ಯಾವಾಪೃಥಿವ್ಯೌ ಭಾಸಾ ದೀಪ್ತ್ಯಾ ವ್ಯಾ ತತಂಥ । ವಿಶೇಷೇಣಾಚ್ಛಾದಯಸಿ । ತತ್ರ ದೃಷ್ಟಾಂತಃ । ಭಾನುಮದ್ಭಿಃ ಪ್ರಭಾವದ್ಭಿರರ್ಕೈರರ್ಚನೀಯೈಃ ಕಿರಣೈಃ ಸೂರ್ಯೋ ನ । ಯಥಾ ಸೂರ್ಯ ಆತನೋತಿ ತದ್ವತ್ । ಪರೋಽರ್ಥರ್ಚಃ ಪರೋಕ್ಷಕೃತಃ । ಪತ್ಮನ್ । ಪತತ್ಯಸ್ಮಿನ್ನಿತಿ ಪತ್ಮ ಮಾರ್ಗಃ । ತಸ್ಮಿನ್ನೌಶಿಜೋ ನ । ಉಶಿಜಃ ಸ್ತೋತಾರಃ । ಸ್ತುತ್ಯತಯಾ ತತ್ಸಂಬಂಧ್ಯೌಶಿಜಃ ಸೂರ್ಯಃ । ಸ ಇವ ದೀಯನ್ ಗಚ್ಛನ್ ಶೋಚಿಷಾ ತೇಜಸಾಕ್ತಃ ಸಂಶ್ಲಿಷ್ಟಃ ಅತ ಏವ ಚಿತ್ರಶ್ಚಾಯನೀಯೋಽಗ್ನಿಸ್ತಮಾಂಸಿ ನೈಶಾನ್ಯಂಧಕಾರಾಣಿ ಪರಿ ಣಯತ್ । ಪರಿಣಯತಿ । ಪರಿತೋ ಗಮಯತಿ । ಸರ್ವಸ್ಮಾದಪಿ ದಿಗ್ಭಾಗಾನ್ನಿವರ್ತಯತೀತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಭಾನುಮದ್ಭಿಃ**—ಪ್ರಭಾಯುತಗಳಾದವೂ । **ಅರ್ಕೈಃ**—ಪೂಜ್ಯವಾದವೂ ಆದ ಕಿರಣಗಳಿಂದ । **ಸೂರ್ಯೋ ನ**—ಸೂರ್ಯನು ಸರ್ವತ್ರ ಪ್ರಸರಿಸುವಂತೆ । **ರೋದಸೀ**—ದ್ಯಾವಾಪೃಥಿವಿಗಳನ್ನು **ಭಾಸಾ**—ನಿನ್ನ ಕಾಂತಿಯಿಂದ । **ವಿ ಆ ತತಂಥ**—ವ್ಯಾಪಿಸಿ ಹರಡಿದ್ದೀಯೆ । **ಪತ್ಮನ್**—ಸಂಚಾರಮಾರ್ಗದಲ್ಲಿ । **ಔಶಿಜೋ ನ**—ಸೂರ್ಯನಂತೆ । **ದೀಯನ್**—ಸಂಚರಿಸುತ್ತಾ । **ಶೋಚಿಷಾ**—ಸ್ವತೇಜಸ್ಸಿನಿಂದ । **ಅಕ್ತಃ**—ಕೂಡಿಕೊಂಡಿರುವವನೂ । **ಚಿತ್ರಃ**—ಆಕರ್ಷಕನೂ ಆದ ಅಗ್ನಿಯು । **ತಮಾಂಸಿ**—ರಾತ್ರಿಯ ಕಗ್ಗತ್ತಲೆಯನ್ನು **ಪರಿಣಯತ್**—ದೂರವಾಗಿ ಅಟ್ಟುತ್ತಾನೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಪ್ರಭಾಯುತಗಳಾದವೂ, ಪೂಜ್ಯವಾದವೂ ಆದ ಕಿರಣಗಳಿಂದ ಸೂರ್ಯನು ಸರ್ವತ್ರ ಪ್ರಸರಿಸುವಂತೆ ದ್ಯಾವಾಪೃಥಿವಿಗಳನ್ನು ನಿನ್ನ ಕಾಂತಿಯಿಂದ ವ್ಯಾಪಿಸಿ ಹರಡಿದ್ದೀಯೆ ಸಂಚಾರ ಮಾರ್ಗದಲ್ಲಿ ಸೂರ್ಯನಂತೆ ಸಂಚರಿಸುತ್ತಾ ಸ್ವತೇಜಸ್ಸಿನಿಂದ ಕೂಡಿಕೊಂಡಿರುವವನೂ, ಆಕರ್ಷಕನೂ ಆದ ಅಗ್ನಿಯು ರಾತ್ರಿಯ ಕಗ್ಗತ್ತಲೆಯನ್ನು ದೂರವಾಗಿ ಅಟ್ಟುತ್ತಾನೆ

English Translation.

You overspread, Agni, heaven and earth with radiance, like the sun with his lustrous rays; the wonderful Agni disperses the glooms like the adorned (sun) moving on his path, imbued with light.

॥ ಸಂಹಿತಾಪಾಠಃ ॥

ತ್ವಾಂ ಹಿ ಮಂದ್ರತಮಮರ್ಕಶೋಕೈರ್ವವೃಮಹೇ ಮಹಿ ನಃ ಶ್ರೋಷ್ಯಗ್ನೇ।

ಇಂದ್ರಂ ನ ತ್ವಾ ಶವಸಾ ದೇವತಾ ವಾಯುಂ ಪೃಣಂತಿ ರಾಧಸಾ ನೃತಮಾಃ॥

॥ ಪದಪಾಠಃ ॥

**ತ್ವಾಂ । ಹಿ । ಮಂದ್ರಽತಮಂ । ಅರ್ಕಽಶೋಕೈಃ । ವವೃಮಹೇ । ಮಹಿ । ನಃ । ಶ್ರೋಷಿ । ಅಗ್ನೇ । ಇಂದ್ರಂ । ನ । ತ್ವಾ । ಶವಸಾ । ದೇವತಾ । ವಾಯುಂ । ಪೃಣಂತಿ । ರಾಧಸಾ । ನೃಽತಮಾಃ ॥ ೬ ॥**

॥ ಸಾಯಣಭಾಷ್ಯಂ ॥

**ಹೇ ಅಗ್ನೇ ಮಂದ್ರತಮಂ ಸ್ತುತ್ಯತಮಂ ತ್ವಾಮರ್ಕಶೋಕೈರರ್ಚನೀಯೈಃ ಪೂಜನೀಯೈಃ ಶೋಕೈರ್ದೀಪ್ತಿಭಿರ್ಯುಕ್ತಂ ಹಿ ಯಸ್ಮಾತ್ ವವೃಮಹೇ ವೃಣೀಮಹೇ ಸಂಭಜಾಮಹೇ । ಯದ್ವಾ ಅರ್ಕಶೋಕೈರರ್ಚನೀಯೈಃ ಪ್ರಶಸ್ತೈರ್ದೀಪ್ತಿಕರಣೈಃ ಸ್ತೋತ್ರೈಃ ಸಾಧನಭೂತೈಸ್ತ್ವಾಂ ಸಂಭಜಾಮಹೇ ತಸ್ಮಾನ್ಮಹಿ ಮಹನ್ನೋಽಸ್ಮದೀಯಂ ಸ್ತೋತ್ರಂ ಶ್ರೋಷಿ । ಶೃಣು । ಹೇ ಅಗ್ನೇ ನೃತಮಾಃ ಸ್ತುತೀನಾಂ ನೇತೃತಮಾ ಋತ್ವಿಜಃ ಶವಸಾ ಬಲೇನ ವಾಯುಂ ಗಂತಾರಂ । ಯದ್ವಾ । ವಾಯುಮಿವ ಶವಸಾ ಯುಕ್ತಮಿಂದ್ರಂ ನ ಇಂದ್ರಮಿವ ದೇವತಾ ದೇವತಾತ್ಮಾನಂ ತ್ವಾಂ ರಾಧಸಾ ಹವಿರ್ಲಕ್ಷಣೇನ ಧನೇನ ಪೃಣಂತಿ । ಪ್ರೀಣಯಂತಿ । ದೇವತಾಶಬ್ದಾತ್ ದ್ವಿತೀಯಾಯಾಃ ಸುಪಾಂ ಸುಲುಗಿತಿ ಲುಕ್ ॥**

॥ ಪ್ರತಿಪದಾರ್ಥ ॥

ಅಗ್ನೇ— ಎಲೈ ಅಗ್ನಿಯೇ । **ಮಂದ್ರತಮಂ**—ಅತ್ಯಂತ ಸ್ತುತ್ಯನಾದ । **ತ್ವಾಂ**—ನಿನ್ನನ್ನು । **ಅರ್ಕಶೋಕೈಃ**—ಪೂಜ್ಯವಾದ ಸ್ತೋತ್ರಗಳಿಂದ । **ವವೃಮಹೇ**—ಆರಾಧಿಸುತ್ತೇವೆ । **ಮಹಿ**—ಮಹತ್ತಾದ । **ನಃ**—ನಮ್ಮ ಸ್ತೋತ್ರವನ್ನು । **ಶ್ರೋಷಿ**—ಕೇಳು । **ನೃತಮಾಃ**—ನರರಲ್ಲಿ ಶ್ರೇಷ್ಠರಾದ ಋತ್ವಿಕ್ಕುಗಳು । **ಶವಸಾ ವಾಯುಂ**—ಶಕ್ತಿಯುತನಾದ ವಾಯುವಿನಂತೆಯೂ । **ಇಂದ್ರಂ ನ**—ಇಂದ್ರನಂತೆಯೂ । **ದೇವತಾ ತ್ವಾ**—ದೇವತಾತ್ಮನಾದ ನಿನ್ನನ್ನು । **ರಾಧಸಾ**—ಹವಿಸ್ಸಿನ ರೂಪದ ಅನ್ನದಿಂದ । **ಪೃಣಂತಿ**—ತೃಪ್ತಿಗೊಳಿಸುತ್ತಾರೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಅತ್ಯಂತ ಸ್ತುತ್ಯನಾದ ನಿನ್ನನ್ನು ಪೂಜ್ಯವಾದ ಸ್ತೋತ್ರಗಳಿಂದ ಆರಾಧಿಸುತ್ತೇವೆ. ಮಹತ್ತಾದ ನಮ್ಮ ಸ್ತೋತ್ರವನ್ನು ಕೇಳು. ಶಕ್ತಿಯುತನಾದ ವಾಯುವಿನಂತೆಯೂ, ಇಂದ್ರನಂತೆಯೂ ದೇವತಾತ್ಮನಾದ ನಿನ್ನನ್ನು ನರರಲ್ಲಿ ಶ್ರೇಷ್ಠರಾದ ಋತ್ವಿಕ್ಕುಗಳು ಹವಿಸ್ಸಿನ ರೂಪದ ಅನ್ನದಿಂದ ತೃಪ್ತಿಗೊಳಿಸುತ್ತಾರೆ.

## English Translation.

We celebrate you, who are most adorable, with sacred praises: hear Agni, our laudation: the leaders (of rites) earnestly honour you with offerings, you who are divine like Indra, and like Vayu in strength,

॥ ಸಂಹಿತಾಪಾಠಃ ॥

ನೂ ನೋ ಅಗ್ನೇಽವೃಕೇಭಿಃ ಸ್ವಸ್ತಿ ವೇಷಿ ರಾಯಃ ಪಥಿಭಿಃ ಪರ್ಷ್ಯಂಹಃ ।

ತಾ ಸೂರಿಭ್ಯೋ ಗೃಣತೇ ರಾಸಿ ಸುಮ್ನಂ ಮದೇಮ ಶತಹಿಮಾಃ ಸುವೀರಾಃ॥

॥ ಪದಪಾಠಃ ॥

ನು । ನಃ । ಅಗ್ನೇ । ಅವೃಕೇಭಿಃ । ಸ್ವಸ್ತಿ । ವೇಷಿ । ರಾಯಃ । ಪಥಿಽಭಿಃ । ಪರ್ಷಿ । ಅಂಹಃ ।

ತಾ । ಸೂರಿಽಭ್ಯಃ । ಗೃಣತೇ । ರಾಸಿ । ಸುಮ್ನಂ । ಮದೇಮ । ಶತಽಹಿಮಾಃ । ಸುಽವೀರಾಃ ॥ ೮ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ನೋಽಸ್ಮಾನವೃಕೇಭಿಃ । ವೃಕಾಃ ಸ್ತೇನಾಃ । ತದ್ರಹಿತೈಃ ಪಥಿಭಿರ್ಮಾರ್ಗೈ ರಾಯೋ ಧನಾನಿ ನು ಕ್ಷಿಪ್ರಂ ಸ್ವಸ್ತಿ ಕ್ಷೇಮೇಣ ವೇಷಿ । ಗಮಯ । ಪ್ರಾಪಯ । ಅಂಹೋಽಂಹಸಃ ಪಾಪಾತ್ಪರ್ಷಿ । ಉತ್ಕೃಷ್ಟಲಕ್ಷಣೈರ್ಮಾರ್ಗೈಃ ಪಾರಯ ಚಾಸ್ಮಾನ್ । ಯಾನಿ ತ್ವಯಾ ಸೂರಿಭ್ಯಃ ಸ್ತೋತೃಭ್ಯೋ ದೇಯಾನಿ ಸುಮ್ನಾನಿ ತಾ ತಾನಿ ಸುಮ್ನಂ ಸುಮ್ನಾನಿ ಸುಖಾನಿ ಗೃಣತೇ ಸ್ತುವತೇ ಮಹ್ಯಂ ರಾಸಿ । ದೇಹಿ । ವಯಂ ಚ ಶತಹಿಮಾಃ ಶತಂ ಹೇಮಂತಾನ್ ಸಂವತ್ಸರಾನ್ ಸುವೀರಾಃ । ವೀರ್ಯಾಜ್ಜಾಯಂತ ಇತಿ ವೀರಾಃ ಪುತ್ರಾದಯಃ । ಶೋಭನಪುತ್ರಪೌತ್ರಾದಿಸಹಿತಾಃ ಸಂತೋ ಮದೇಮ । ಹೃಷ್ಯಾಮ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ನಃ**—ನಮ್ಮನ್ನು । **ಅವೃಕೇಭಿಃ**—ಚೋರರಹಿತವಾದ । **ಪಥಿಭಿಃ**—ಮಾರ್ಗಗಳಿಂದ । **ಸ್ವಸ್ತಿ**—ಕ್ಷೇಮದೊಡನೆ । **ನು**—ಕ್ಷಿಪ್ರವಾಗಿ । **ರಾಯಃ**—ಧನದ ಸನ್ನಿಧಿಗೆ । **ವೇಷಿ**—ಕರೆದುಕೊಂಡು ಹೋಗು । **ಅಂಹಃ**—ಪಾಪದಿಂದ । **ಪರ್ಷಿ**—ಬಿಡಿಸು । **ಸೂರಿಭ್ಯಃ**—ನಿನ್ನ ಸ್ತೋತೃಗಳಿಗೆ ಕೊಡಲು ಅರ್ಹವಾದವೂ । **ತಾ**—ಪ್ರಸಿದ್ಧವಾದವೂ ಆದ । **ಸುಮ್ನಂ**—ಧನಗಳನ್ನು । **ಗೃಣತೇ**—ಪ್ರಕೃತದಲ್ಲಿ ಸ್ತುತಿಸುವ ನನಗೆ । **ರಾಸಿ**—ಕೊಡು । **ಶತಹಿಮಾಃ**—ನೂರು ಸಂವತ್ಸರಗಳವರೆಗೆ । **ಸುವೀರಾಃ**—ಶ್ರೇಷ್ಠರಾದ ಪುತ್ರಾದಿಗಳಿಂದ ಸಹಿತರಾಗಿ । **ಮದೇಮ**—ನಾವು ಹರ್ಷಪಡುವಂತಾಗಲಿ.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಮ್ಮನ್ನು ಚೋರರಹಿತವಾದ ಮಾರ್ಗಗಳಿಂದ ಕ್ಷೇಮದೊಡನೆ ಕ್ಷಿಪ್ರವಾಗಿ ಧನದ ಸನ್ನಿಧಿಗೆ ಕರೆದುಕೊಂಡು ಹೋಗು. ನಮ್ಮನ್ನು ಪಾಪರಹಿತರನ್ನಾಗಿ ಮಾಡು. ನಿನ್ನ ಸ್ತೋತೃಗಳಿಗೆ ಕೊಡಲು ಅರ್ಹವಾದವೂ ಪ್ರಸಿದ್ಧವಾದವೂ ಆದ ಧನಗಳನ್ನು ಪ್ರಕೃತದಲ್ಲಿ ನಿನ್ನನ್ನು ಸ್ತುತಿಸುವ ನನಗೆ ಕೊಡು. ನೂರು ವರ್ಷಗಳ ಪರ್ಯಂತ ಶ್ರೇಷ್ಠವಾದ ಪುತ್ರಾದಿಗಳಿಂದ ಸಹಿತರಾಗಿ ನಾವು ಹರ್ಷಪಡುವಂತಾಗಲಿ.

### English Translation.

Quickly conduct us, Agni, by unmolested paths, to riches and prosperity : (convey us) beyond sin : those delights which you give to ,your adorers (extend) to him who (now) glorifies you, and may we, living for a hundred winters, and blessed with excellent posterity, be happy.

## ಐದನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಹುವೇ ವ ಇತಿ ಸಪ್ತರ್ಚಂ ಪಂಚಮಂ ಸೂಕ್ತಂ ಭರದ್ವಾಜಸ್ಯಾರ್ಷಂ ತ್ರೈಷ್ಟುಭಮಾಗ್ನೇಯಂ । ತಥಾ ಚಾನುಕ್ರಮ್ಯತೇ । ಹುವೇ ವಃ ಸಪ್ತೇತಿ । ಪ್ರಾತರನುವಾಕಾಶ್ವಿನಶಸ್ತ್ರಯೋರುಕ್ತೋ ವಿನಿಯೋಗಃ॥**

ಅನುವಾದವು—**ಹುವೇ ವಃ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಐದನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು; ಅಗ್ನಿಯು ದೇವತೆಯು; ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಹುವೇ ವಃ ಸಪ್ತ** ಎಂದು ಹೇಳಿರುವುದು. ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರ ಮಂತ್ರಪಠನಕ್ಕಾಗಿ ಈ ಸೂಕ್ತದ ವಿನಿಯೋಗವಿರುವುದು.

### ಸೂಕ್ತ—೫

ಮಂಡಲ—೬ ॥ ಅನುವಾಕ—೧ ॥ ಸೂಕ್ತ—೫ ॥
ಅಷ್ಟಕ—೪ ॥ ಅಧ್ಯಾಯ—೫ ॥ ವರ್ಗ—೭ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ॥
॥ ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ॥
॥ ದೇವತಾ—ಅಗ್ನಿಃ ॥
॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಹುವೇ ವಃ ಸೂನುಂ ಸಹಸೋ ಯುವಾನಮದ್ರೋಘವಾಚಂ ಮತಿಭಿರ್ಯವಿಷ್ಠಂ ।
ಯ ಇನ್ವತಿ ದ್ರವಿಣಾನಿ ಪ್ರಚೇತಾ ವಿಶ್ವವಾರಾಣಿ ಪುರುವಾರೋ ಅಧ್ರುಕ್ ॥

॥ ಪದಪಾಠಃ ॥

ಹುವೇ । ವಃ । ಸೂನುಂ । ಸಹಸಃ । ಯುವಾನಂ । ಅದ್ರೋಘ್ಽವಾಚಂ । ಮತಿಽಭಿಃ । ಯವಿಷ್ಠಂ ।

ಯಃ । ಇನ್ವತಿ । ದ್ರವಿಣಾನಿ । ಪ್ರಽಚೇತಾಃ । ವಿಶ್ವಽವಾರಾಣಿ । ಪುರುಽವಾರಃ । ಅಧ್ರುಕ್ ॥ ೧ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ವಃ ॥ ವ್ಯತ್ಯಯೇನ ಬಹುವಚನಂ ॥ ತ್ವಾಂ ಮತಿಭಿರ್ಮನನೀಯೈಃ ಸ್ತೋತ್ರೈ-ರ್ಹುವೇ । ಆಹ್ವಯಾಮಿ । ಕೀದೃಶಂ । ಸಹಸೋ ಬಲಸ್ಯ ಸೂನುಂ ಪುತ್ರಂ । ಅಗ್ನಿರ್ಹಿ ಬಲೇನ ಮಥ್ಯಮಾನೋ ಜಾಯತೇ। ಯುವಾನಂ ನಿತ್ಯತರುಣಂ ಫಲಸ್ಯ ಮಿಶ್ರಯಿತಾರಂ ವಾ ಅದ್ರೋಘವಾಚಂ। ಅದ್ರೋಗ್ಧ್ವ್ರಾ ಪ್ರಶಸ್ತಾ ಸ್ತುತಿರೂಪಾ ವಾಕ್ ಯಸ್ಮಿನ್ ಪ್ರಯುಜ್ಯತೇ ತಾದೃಶಂ । ಯುವಿಷ್ಠಮತಿ-ಶಯೇನ ಯುವಾನಂ । ಪ್ರಚೇತಾಃ ಪ್ರಕೃಷ್ಟಜ್ಞಾನಃ ಪುರುವಾರಃ ಪುರುಭಿರ್ಬಹುಭಿರ್ವರಣೀಯಃ ಸಂಭಜನೀಯೋಽಧ್ರುಗದ್ರೋಗ್ಧಾ ಯಜಮಾನಾನಾಂ ಏವಂಭೂತೋ ಯೋಽಗ್ನಿರ್ವಿಶ್ವವಾರಾಣಿ ಸರ್ವೈ-ರ್ವರಣೀಯಾನಿ ·ಸಂಭಜನೀಯಾನಿ ಪ್ರಶಸ್ಯಾನಿ ದ್ರವಿಣಾನಿ ಧನಾನೀನ್ವತಿ ಪ್ರೇರಯತಿ । ಸ್ತೋತೃಭ್ಯೋ ದದಾತೀತಿ ಯಾವತ್ । ತಂ ತ್ವಾಂ ಹುವ ಇತಿ ಪೂರ್ವತ್ರ ಸಂಬಂಧಃ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಪ್ರಚೇತಾಃ**—ಉತ್ತಮವಾದ ಜ್ಞಾನವುಳ್ಳವನೂ । **ಪುರುವಾರಃ**—ಅನೇಕರಿಂದ ಆದೃತನೂ । **ಅಧ್ರುಕ್**—ಯಜಮಾನಾದಿಗಳಿಗೆ ಕೆಡಕನ್ನು ಮಾಡದಿರುವವನೂ ಆದ । **ಯಃ**—ಯಾವ ನೀನು। **ವಿಶ್ವವಾರಾಣಿ**— ಸಕಲರಿಗೂ ಅಪೇಕ್ಷಿತವಾದವೂ । **ಸಂಭಜನೀಯಾನಿ**—ಪ್ರಶಸ್ಯವಾದವೂ ಆದ । **ದ್ರವಿಣಾನಿ**—ಧನಗಳನ್ನು । **ಇನ್ವತಿ**—ಯಜಮಾನರಿಗೆ ಕೊಡುವೆಯೋ ಅಂತಹ । **ಸಹಸಃ ಸೂನುಂ**—ಶಕ್ತಿಪುತ್ರನೂ । **ಯುವಾನಂ**—ನಿತ್ಯತರುಣನೂ । **ಅದ್ರೋಘವಾಚಂ**—ಸ್ತುತ್ಯಾತ್ಮಕವಾದ ವಾಕ್ಕಿಗೆ ಪಾತ್ರನೂ ಆದ । **ವಃ**—ನಿನ್ನನ್ನು । **ಮತಿಭಿಃ**—ಪೂಜ್ಯವಾದ ಸ್ತೋತ್ರಗಳಿಂದ । **ಹುವೇ**—ಪ್ರಾರ್ಥಿಸಿ ಕರೆಯುತ್ತೇನೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಉತ್ತಮವಾದ ಜ್ಞಾನವುಳ್ಳವನೂ, ಅನೇಕರಿಂದ ಆದೃತನೂ, ಯಜಮಾನಾದಿಗಳಿಗೆ ಕೆಡಕನ್ನು ಮಾಡದಿರುವವನೂ ಆದ ಯಾವ ನೀನು ಸಕಲರಿಗೂ ಅಪೇಕ್ಷಿತವಾದವೂ ಪ್ರಶಸ್ಯವಾದವೂ ಆದ ಧನಗಳನ್ನು ಯಜಮಾನರಿಗೆ ಕೊಡುವೆಯೋ, ಅಂತಹ ಶಕ್ತಿಪುತ್ರನೂ ನಿತ್ಯತರುಣನೂ ಸ್ತುತ್ಯಾತ್ಮಕವಾದ ವಾಕ್ಕಿಗೆ ಪಾತ್ರನೂ ಆದ ನಿನ್ನನ್ನು ಪೂಜ್ಯವಾದ ಸ್ತೋತ್ರಗಳಿಂದ ಪ್ರಾರ್ಥಿಸಿ ಕರೆಯುತ್ತೇನೆ.

## English Translation.

I invoke you, Agni, the son of strenth, the irreproachable, the very young ; you who are wise, the sought of many. the merciful. who bestow treasures acceptalbe to all.

॥ ವಿಶೇಷವಿಷಯಗಳು ।

**ವಃ—ತ್ವಾಂ** । ನಿನ್ನನ್ನು; ಇಲ್ಲಿ ಏಕವಚನಕ್ಕೆ ಬದಲಾಗಿ ಬಹುವಚನಪ್ರಯೋಗವಿದೆ. **ಸರ್ವೇ ವಿಧಯಶ್ಛಂದಸಿ ವಿಕಲ್ಪ್ಯಂತೇ**—ಎಂದರೆ ಛಂದೋಬದ್ಧವಾದ ಋಕ್ಕುಗಳಲ್ಲಿ ಅಥವಾ ವೇದವಾಕ್ಯಗಳಲ್ಲಿ ವಿಭಕ್ತಿ, ವಚನ, ಲಿಂಗ ಮೊದಲಾದ ವಿಧಿನಿಯಮಗಳು ವ್ಯಾಕರಣಬದ್ಧವಾಗಿಯೂ, ಸಾಹಿತ್ಯ ಅಥವಾ ಭಾಷಾಪ್ರಯೋಗಕ್ಕೆ ಅನುಸಾರವಾಗಿಯೂ ಇರಬೇಕಾಗಿಲ್ಲ. ಎಂದರೆ ವ್ಯಾಕರಣಾದಿ ನಿಯಮಗಳಿಗೆ ಅನುಸಾರವಾಗಿ ಇರಲೂ ಬಹುದು, ಇಲ್ಲದಿರಲೂ ಬಹುದು. ಈ ರೀತಿ ಇರುವ ಪ್ರಯೋಗಗಳು ವಿರುದ್ಧವೇನೂ ಅಲ್ಲ ಎಂದಭಿಪ್ರಾಯವು. ಛಂದಸ್ಸಿನ ಅನುಕೂಲಕ್ಕಾಗಿ ವಿಭಕ್ತಿವಚನಗಳ ವ್ಯತ್ಯಯವು ಋಗ್ವೇದದಲ್ಲಿ ವಿಶೇಷವಾಗಿದೆ. ಪ್ರಕೃತ ಋಕ್ಕಿನಲ್ಲಿ ಯುಷ್ಮಚ್ಛಬ್ದದ ದ್ವಿತೀಯೈಕವಚನಾಂತ ಶಬ್ದವಾದ **ತ್ವಾಂ** ಎಂಬ ಪದಕ್ಕೆ ಬದಲಾಗಿ ಅದೇ ವಿಭಕ್ತಿಯ ಬಹುವಚನವಾದ **ವಃ** ಎಂಬ ಶಬ್ದದ ಪ್ರಯೋಗವಿದೆ

**ಸೂನುಂ ಸಹಸಃ**—ಶಕ್ತಿಪುತ್ರನು ; ಯಜ್ಞದಲ್ಲಿ ಅರಣಿಗಳೆಂಬ ಮರದ ತುಂಡುಗಳಲ್ಲಿ ಮೊಸರನ್ನು ಕಡೆಯುವಂತೆ ಅಗ್ನಿಯನ್ನು ಕಡೆದು ಉತ್ಪತ್ತಿಮಾಡುವರು. ಹೀಗೆ ಕಡೆಯುವಾಗ ಬಹಳ ಬಲವನ್ನು ಅಥವಾ ಶಕ್ತಿಯನ್ನು ಉಪಯೋಗಿಸಿ ಕಡೆಯಬೇಕಾಗಿರುವುದರಿಂದ ಅಗ್ನಿಯು ಬಲಪ್ರಯೋಗದಿಂದ ಉತ್ಪನ್ನನಾದವನು ಅಥವಾ ಬಲದ ಪುತ್ರನು ಎಂದು ಅಗ್ನಿಯನ್ನು ಕರೆಯುವುದು ಋಗ್ವೇದದಲ್ಲಿ ವಿಶೇಷ ರೂಢಿ ಇದೆ. **ಸಹಸಃ ಸೂನು, ಸಹಸಃ ಪುತ್ರ, ಸಹಸಃ ಯಹು** ಇತ್ಯಾದಿ ಶಬ್ದಗಳು ಇದೇ ಅರ್ಥವನ್ನು ಸೂಚಿಸುವವು.

**ಯುವಾನಂ ಯವಿಷ್ಠಂ**—ಅಗ್ನಿಯನ್ನು ತರುಣನೆಂದು ಹೇಳುವುದು ರೂಢಿಯಾಗಿದೆ. ಏಕೆಂದರೆ ಮನುಷ್ಯಾದಿ ಪ್ರಾಣಿಗಳಿಗೆ ಯೌವನವೆಂಬ ಅವಸ್ಥೆಯು (ಅತಿಶಯವಾದ ಸಾಮರ್ಥ್ಯದಿಂದ ಕೂಡಿರುವ ಕಾಲವು) ಒಂದು ನಿರ್ದಿಷ್ಟಕಾಲದಲ್ಲಿ ಮಾತ್ರವಿರುವುದು. ಈ ಅವಸ್ಥೆಯು ಬಾಲ್ಯಕ್ಕೂ, ವಾರ್ಧಕ್ಯಕ್ಕೂ ಮಧ್ಯಮವಾದ ಅವಸ್ಥೆಯು. ಈ ಅವಸ್ಥೆಗೆ ಕಾಲಪರಿಮಿತಿ ಇರುವುದರಿಂದ ಯಾವ ಪ್ರಾಣಿಯೇ ಆಗಲಿ ಯಾವಾಗಲೂ ಯೌವನಾವಸ್ಥೆಯಲ್ಲಿ ಇರುವುದು ಸಾಧ್ಯವಿಲ್ಲ. ಶಕ್ತಿಯು ಕ್ರಮವಾಗಿ ಕಮ್ಮಿಯಾಗುತ್ತಾ ಬಂದು ವಾರ್ಧಕ್ಯಾವಸ್ಥೆಯನ್ನು ಹೊಂದಲೇ ಬೇಕಾಗಿರುವುದು. ಆದರೆ ಅಗ್ನಿಯ ವಿಷಯವು ಹಾಗಲ್ಲ. ಅಗ್ನಿಯನ್ನು ಮಥನಮಾಡಿದಾಗ ಒಂದು ಸಣ್ಣ ಕಿಡಿಯು ಮಾತ್ರ ಉತ್ಪನ್ನವಾಗುವುದರಿಂದ ಆಗ ಅದನ್ನು-ಶಿಶುವೆಂದು ಕರೆಯುವರು. **(ಶಿಶುಂ ಜಾತಂನ ಬಿಭ್ರತಿ)** ಎಂದರೆ ಅಗ್ನಿಯ ಆ ಅವಸ್ಥೆಗೆ ಶೈಶವಾವಸ್ಥೆಯೆಂದು ಹೆಸರು. ಅನಂತರ ಅದನ್ನು ಅಗ್ನಿಕುಂಡದಲ್ಲಿ ಸ್ಥಾಪಿಸಿ ಸಮಿತ್ತು, ಆಜ್ಯ ಮೊದಲಾದ ದ್ರವ್ಯಗಳಿಂದ ಪ್ರಜ್ವಲಿಸುವಂತೆ ಮಾಡುವರು. ಆಗ ಅಗ್ನಿಯು ಯೌವನಾವಸ್ಥೆಯಲ್ಲಿರುವಂತೆ ಹೇಳಲಾಗುವುದು ಎಲ್ಲಿಯವರೆಗೆ ಎಂದರೆ ಎಷ್ಟು ಕಾಲದವರೆಗೆ ಕಾಷ್ಠಾದಿಗಳನ್ನು ಹಾಕುವರೋ ಅಲ್ಲಿಯವರೆಗೆ ಅಗ್ನಿಯು ಜಾಜ್ವಲ್ಯಮಾನವಾಗಿ ಪ್ರಕಾಶಿಸುತ್ತಾ ಯೌವನಾವಸ್ಥೆಯಲ್ಲಿಯೇ ಇರುವನು. ಅಗ್ನಿಯ ಈ ಸ್ಥಿತಿಗೆ ಕಾಲದ ಅವಧಿಯೇನೂ ಇಲ್ಲ. ಎಷ್ಟು ಕಾಲದವರೆಗೆ ಬೇಕಾದರೂ ಕಾಷ್ಠಾದಿಗಳನ್ನು ಹಾಕುತ್ತಾ ಅಗ್ನಿಯನ್ನು ಉಜ್ವಲವಾಗಿ (ಯೌವನಾವಸ್ಥೆಯಲ್ಲಿ) ಇಟ್ಟಿರಬಹುದು. ಆದುದರಿಂದಲೇ ಅಗ್ನಿಯನ್ನು **ಯುವಾ, ಯವಿಷ್ಠ**-ತರುಣ, ಅತಿಶಯವಾದ ತರುಣ ಎಂದು ಮೊದಲಾಗಿ ಸ್ತುತಿಸಲಾಗಿರುವುದು)

**ಅದ್ರೋಘವಾಚಂ**—ದ್ರೋಹಕರವಾದ ಅಥವಾ ನಿಂದಾರೂಪವಾದ ವಾಕ್ಯಗಳಿಲ್ಲದ ಎಂದರೆ ಪ್ರಶಸ್ತವಾದ ಸ್ತುತಿರೂಪವಾದ ಎಂದರ್ಥವು.

**ಪುರುವಾರಃ— ಪುರುಭಿರ್ಬಹುಭಿಃ ವರಣೀಯಃ** । ಅನೇಕರಿಂದ ಅಥವಾ ಯಜ್ಞಮಾಡುವ ಅನೇಕ ಯಜಮಾನರಿಂದ ಅಪೇಕ್ಷಿತನಾದವನು. ಅಗ್ನಿಯಿಲ್ಲದೆ ಯಜ್ಞಮಾಡಲು ಸಾಧ್ಯವಿಲ್ಲದ್ದರಿಂದ ಅಗ್ನಿಯನ್ನು ಯಜ್ಞಮಾಡುವರೆಲ್ಲರೂ ಅಪೇಕ್ಷಿಸುವರು. ಈ ಶಬ್ದದ ಪ್ರಯೋಗವು ಅಗ್ನಿ ಇಂದ್ರ ಮೊದಲಾದ ಅನೇಕ ದೇವತೆಗಳ ವಿಷಯದಲ್ಲಿಯೂ ಇರುವುದು. **ವಿಶ್ವವಾರಾಣಿ** ಎಂಬ ಶಬ್ದದ ಅರ್ಥಪ್ರಯೋಗಗಳೂ ಪುರುವಾರ ಎಂಬ ಶಬ್ದದಂತೆಯೇ ಇವೆ. ಪ್ರಕೃತ ಋಕ್ಕಿನಲ್ಲಿ ಎಲ್ಲರಿಗೂ ಬೇಕಾದ ಧನಗಳನ್ನು ಎಂದರ್ಥವನ್ನು ವಿವರಿಸಲಾಗಿದೆ.

**ಅಧ್ರುಕ್— ಅದ್ರೋಗ್ಧಾ ಯಜಮಾನಾನಾಂ**— ಯಜ್ಞಮಾಡುವ ಯಜಮಾನರೇ ಮೊದಲಾದವರ ವಿಷಯದಲ್ಲಿ ದ್ರೋಹ ಅಥವಾ ಕೇಡುಕನ್ನು ಮಾಡದಿರುವವನು ಎಂದು ಈ ಶಬ್ದವನ್ನು ಅಗ್ನಿಗೆ ವಿಶೇಷಣವನ್ನಾಗಿ ಉಪಯೋಗಿಸಿದೆ.

। ಸಂಹಿತಾಪಾಠಃ ।

**ತ್ವೇ ವಸೂನಿ ಪುರ್ವಣೀಕ ಹೋತರ್ದೋಷಾ ವಸ್ತೋರೇರಿರೇ ಯಜ್ಞಿಯಾಸಃ।**
**ಕ್ಷಾಮೇವ ವಿಶ್ವಾ ಭುವನಾನಿ ಯಸ್ಮಿನ್ತ್ಸಂ ಸೌಭಗಾನಿ ದಧಿರೇ ಪಾವಕೇ ॥**

। ಪದಪಾಠಃ ।

**ತ್ವೇ ಇತಿ । ವಸೂನಿ । ಪುರುऽಅನೀಕ । ಹೋತಃ । ದೋಷಾ । ವಸ್ತೋಃ । ಆ। ಈರಿರೇ। ಯಜ್ಞಿಯಾಸಃ।**
**ಕ್ಷಾಮ್ऽಇವ । ವಿಶ್ವಾ । ಭುವನಾನಿ । ಯಸ್ಮಿನ್ । ಸಂ । ಸೌಭಗಾನಿ । ದಧಿರೇ । ಪಾವಕೇ ॥ ೨ ॥**

। ಸಾಯಣಭಾಷ್ಯಂ ।

**ಹೇ ಪುರ್ವಣೀಕ ಬಹುಜ್ವಾಲ ಹೋತರ್ದೇವಾನಾಮಾಹ್ವಾತರಗ್ನೇ ತ್ವೇ ತ್ವಯಿ ದೋಷಾ ರಾತ್ರೌ ವಸ್ತೋರಹನಿ ಚ ಯಜ್ಞಿಯಾಸೋ ಯಜ್ಞಾರ್ಹಾ ಯಜಮಾನಾ ವಸೂನಿ ಹವಿರ್ಲಕ್ಷಣಾನಿ ಧನಾನ್ಯೇರಿರೇ । ಆಭಿಮುಖ್ಯೇನ ಪ್ರೇರಯಂತಿ । ಪ್ರಾಪಯಂತಿ । ಜುಹ್ವತೀತ್ಯರ್ಥಃ । ವಿಶ್ವಾ ವಿಶ್ವಾನಿ ಸರ್ವಾಣಿ ಭುವನಾನಿ ಭೂತಜಾತಾನಿ ಕ್ಷಾಮೇವ ಕ್ಷಮಾಯಾಂ ಭೂಮ್ಯಾಮಿವ ಯಸ್ಮಿನ್ ಪಾವಕೇ ಶೋಧಕೇಽಗ್ನೌ ಸೌಭಗಾನಿ ಧನಾನಿ ಸಂದಧಿರೇ ದೇವಾಃ ಸಮ್ಯಗ್ನಿಹಿತವಂತಃ । ಅಗ್ನೌ ವಾಮಂ ವಸು ಸಂ ನ್ಯದಧತ । ತೈ. ಸಂ. ೧-೫-೧ ೧ । ಇತಿ ಬ್ರಾಹ್ಮಣಂ । ತಸ್ಮಿಂಸ್ತ್ವಯೀತಿ ಪೂರ್ವತ್ರ ಯೋಜ್ಯಂ ॥**

॥ ಪ್ರತಿಪದಾರ್ಥ ॥

**ಪುರ್ವಣೀಕ**— ಪ್ರಭೂತವಾದ ಜ್ವಾಲೆಯುಳ್ಳವನೂ । **ಹೋತಃ**— ಹೋತೃರೂಪನೂ ಆದ ಅಗ್ನಿಯೇ । **ತ್ವೇ**— ನಿನ್ನಲ್ಲಿ । **ದೋಷಾ**— ರಾತ್ರಿಯೂ । **ವಸ್ತೋಃ**— ಹಗಲೂ । **ಯಜ್ಞಿಯಾಸಃ**— ಯಜ್ಞಮಾಡಲು ಯೋಗ್ಯರಾದ ಯಜಮಾನರು । **ವಸೂನಿ**— ಹವಿಸ್ಸಿನ ರೂಪದ ಧನಗಳನ್ನು । **ಏರಿರೇ**— ಅರ್ಪಿಸುತ್ತಾರೆ ।

**ವಿಶ್ವಾ**—ಸಮಸ್ತವಾದ। **ಭುವನಾನಿ**—ಭೂತಜಾತಗಳನ್ನೂ। **ಕ್ಷಾಮೇವ**—ಪೃಥ್ವಿಯಲ್ಲಿಯೇ ಸ್ಥಾಪಿಸಿರುವಂತೆ। **ಯಸ್ಮಿನ್ ಪಾವಕೇ**—ಶುದ್ಧಿಕಾರಕನಾದ ನಿನ್ನಲ್ಲಿಯೇ। **ಸೌಭಗಾನಿ**—ಮಂಗಳಾತ್ಮಕಗಳಾದ ಸಕಲ ಧನಗಳನ್ನೂ। **ಸಂ ದಧಿರೇ**—ದೇವತೆಗಳು ಸ್ಥಾಪಿಸಿದ್ದಾರೆ.

॥ ಭಾವಾರ್ಥ ॥

ಪ್ರಭೂತವಾದ ಜ್ವಾಲೆಯುಳ್ಳವನೂ, ಹೋತೃರೂಪನೂ ಆದ ಅಗ್ನಿಯೇ, ಯಜ್ಞಮಾಡಲು ಯೋಗ್ಯರಾದ ಯಜಮಾನರು ಹಗಲೂ ರಾತ್ರಿಯೂ ಸಹ ಹವಿಸ್ಸಿನ ರೂಪದ ಧನಗಳನ್ನು ನಿನ್ನಲ್ಲೇ ಅರ್ಪಿಸುತ್ತಾರೆ. ಸಮಸ್ತವಾದ ಭೂತಜಾತಗಳನ್ನೂ ಪೃಥ್ವಿಯಲ್ಲಿಯೇ ಸ್ಥಾಪಿಸಿರುವಂತೆ ಶುದ್ಧಿಕಾರಕನಾದ ನಿನ್ನಲ್ಲಿಯೇ ಮಂಗಳಾತ್ಮಕಗಳಾದ ಸಕಲ ಧನಗಳನ್ನೂ ದೇವತೆಗಳು ಸ್ಥಾಪಿಸಿದ್ದಾರೆ.

## English Translation.

Bright-blazing Agni, invoker of the gods, to you the adorahle deities have appropriated, by night and day, the riches (of the oblation): they have deposited in the purifier (Agni) all good things, as they have placed all beings upon earth.

॥ ಸಂಹಿತಾಪಾಠಃ ॥

ತ್ವಂ ವಿಕ್ಷು ಪ್ರದಿವಃ ಸೀದ ಆಸು ಕ್ರತ್ವಾ ರಥೀರಭವೋ ವಾರ್ಯಾಣಾಂ ।
ಅತ ಇನೋಷಿ ವಿಧತೇ ಚಿಕಿತ್ವೋ ವ್ಯಾನುಷಗ್ಜಾತವೇದೋ ವಸೂನಿ ॥ ೩ ॥

॥ ಪದಪಾಠಃ ॥

ತ್ವಂ । ವಿಕ್ಷು । ಪ್ರऽದಿವಃ । ಸೀದಃ । ಆಸು । ಕ್ರತ್ವಾ । ರಥೀಃ । ಅಭವಃ । ವಾರ್ಯಾಣಾಂ ।
ಅತಃ । ಇನೋಷಿ । ವಿಧತೇ । ಚಿಕಿತ್ವಃ । ವಿ । ಆನುಷಕ್ । ಜಾತऽವೇದಃ । ವಸೂನಿ ॥ ೩ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಂ ಪ್ರದಿವಃ। ಪುರಾಣನಾಮೈತತ್। ಪುರಾತನಕಾಲೀನಾಸು ವಿಕ್ಷು ಪ್ರಜಾಸ್ವಾಸು ಪರಿದೃಶ್ಯಮಾನಾಸು ಚ ಸೀದಃ। ಸೀದಸಿ। ವಿಶ್ವಾಂತರಾತ್ಮನಾ ವರ್ತಸೇ। ತಥಾ ಕ್ರತ್ವಾತ್ಮೀಯೇನ ಕರ್ಮಣಾ ವಾರ್ಯಾಣಾಂ ವರಣೀಯಾನಾಂ ಧನಾನಾಂ ರಥೀರಭವಃ। ರಂಹಯಿತಾ ಯಜಮಾನೇಭ್ಯಃ ಪ್ರಾಪಯಿತಾಭೂಃ। ಅತಃ ಕಾರಣಾತ್ ಹೇ ಚಿಕಿತ್ವೋ ವಿದ್ವನ್ ಜಾತವೇದೋ ಜಾತಾನಾಂ ಪ್ರಾಣಿನಾಂ

ಜಾತವೇದಃ ವಿಧತೇ ಪರಿಚರತೇ ಯಜಮಾನಾಯ ವಸೂನಿ ಧನಾನ್ಯಾನುಷಗನುಷಕ್ತಂ ಸತತಂ ಯಥಾ ಭವತಿ ತಥಾ ವೀನೋಷಿ । ವಿವಿಧಂ ಪ್ರೇರಯಸಿ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ತ್ವಂ**—ನೀನು । **ಪ್ರದಿವಃ**—ಪ್ರಾಚೀನಸಂತತಿಗೆ ಸೇರಿದ । **ಆಸು ವಿಕ್ಷು**—ಈ ಪ್ರಜೆಗಳಲ್ಲಿಯೇ । **ಸೀದಃ**—ವೈಶ್ವಾನರರೂಪದಲ್ಲಿದ್ದೀಯೆ । **ಕ್ರತ್ವಾ**—ನಿನ್ನ ಕರ್ಮದಿಂದ । **ವಾರ್ಯಾಣಾಂ**—ಅಪೇಕ್ಷಿತವಾದ ಧನಗಳಿಗೆ । **ರಥೀಃ ಅಭವಃ**—ವಾಹಕನಾಗಿ ಆಗಿದ್ದೀಯೆ । **ಅತಃ**—ಆದುದರಿಂದಲೇ । **ಚಿಕಿತ್ವಃ**—ಪ್ರಾಜ್ಞನೂ । **ಜಾತವೇದಃ**—ಜಾತವೇದೋರೂಪನೂ ಆದ ಎಲೈ ಅಗ್ನಿಯೇ । **ವಿಧತೇ**—ನಿನ್ನನ್ನು ಪೂಜಿಸುವ ಯಜಮಾನನಿಗೆ । **ವಸೂನಿ**—ಧನಗಳನ್ನು । **ಅನುಷಕ್**—ಸರ್ವದಾ (ಶಾಶ್ವತವಾಗಿರುವಂತೆ) । **ವಿ ಇನೋಷಿ**—ಒದಗಿಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ನೀನು ಪ್ರಾಚೀನಸಂತತಿಗೆ ಸೇರಿದ ಈ ಪ್ರಜೆಗಳಲ್ಲಿಯೇ ವೈಶ್ವಾನರರೂಪದಲ್ಲಿದ್ದೀಯೆ. ಯಜಮಾನರಿಂದ ಅಪೇಕ್ಷಿತವಾದ ಧನಗಳಿಗೆ ನೀನು ನಿನ್ನ ಕರ್ಮದಿಂದಲೇ ವಾಹಕನಾಗಿದ್ದೀಯೆ. ಆದುದರಿಂದಲೇ ಪ್ರಾಜ್ಞನೂ ಜಾತವೇದೋರೂಪನೂ ಆದ ಎಲೈ ಅಗ್ನಿಯೇ, ನಿನ್ನನ್ನು ಪೂಜಿಸುವ ಯಜಮಾನನಿಗೆ ಶಾಶ್ವತವಾಗಿರತಕ್ಕ ಧನಗಳನ್ನು ಒದಗಿಸು.

## English Translation.

You abide from of old in these people, and by your deeds have been (to them) the conveyer of good things, thence, sage Jatavedas, you bestow continually wealth upon the sacrificer.

॥ ಸಂಹಿತಾಪಾಠಃ ॥

ಯೋ ನಃ ಸನುತ್ಯೋ ಅಭಿದಾಸದಗ್ನೇ ಯೋ ಅಂತರೋ ಮಿತ್ರಮಹೋ ವನುಷ್ಯಾತ್ ।
ತಮಜರೇಭಿರ್ವೃಷಭಿಸ್ತವ ಸ್ವೈಸ್ತಪಾ ತಪಿಷ್ಠ ತಪಸಾ ತಪಸ್ವಾನ್ ॥ ೪ ॥

॥ ಪದಪಾಠಃ ॥

ಯಃ । ನಃ । ಸನುತ್ಯಃ । ಅಭಿऽದಾಸತ್ । ಅಗ್ನೇ । ಯಃ । ಅಂತರಃ । ಮಿತ್ರಽಮಹಃ । ವನುಷ್ಯಾತ್ ।
ತಂ । ಅಜರೇಭಿಃ । ವೃಷಽಭಿಃ । ತವ । ಸ್ವೈಃ । ತಪ । ತಪಿಷ್ಠ । ತಪಸಾ । ತಪಸ್ವಾನ್ ॥ ೪ ॥

॥ ಸಾಯಣಭಾಷ್ಯಂ ॥

**ಪ್ರವರ್ಗ್ಯೇಽಭಿಷ್ಟವೇ ಯೋ ನಃ ಸನುತ್ಯ ಇತಿ ದ್ವೃಚಃ। ಸೂತ್ರಿತಂ ಚ। ಯೋ ನಃ ಸನುತ್ಯೋ ಅಭಿದಾಸದಗ್ನೇ ಭವಾ ನೋ ಅಗ್ನೇ ಸುಮನಾ ಉಪೇತಾವಿತಿ ದ್ವೃಚಾಃ। ಆ. ೪-೬। ಇತಿ॥**

**ಹೇ ಅಗ್ನೇ ಯಃ ಶತ್ರುಃ ಸನುತ್ಯಃ। ಸನುತರಿತ್ಯಂತರ್ಹಿತನಾಮ। ಅಂತರ್ಹಿತೇ ದೇಶೇ ವರ್ತಮಾನಃ ಸನ್ ನೋಽಸ್ಮಾನಭಿದಾಸತ್ ಉಪಕ್ಷಯತಿ ಬಾಧತೇ। ಯಶ್ಚಾಂತರೋಽಭ್ಯಂತರವರ್ತೀ ಸನ್ ಹೇ ಮಿತ್ರಮಹೋಽನುಕೂಲದೀಪ್ತೇ ಮಿತ್ರಾಣಾಂ ಮಹಯಿತರ್ವಾಗ್ನೇ ವನುಷ್ಯಾತ್ ಹಿಂಸ್ಯಾತ್ ತಮುಭಯವಿಧಂ ಹೇ ತಪಿಷ್ಠ ತ್ವಂ ತಪನಾಗ್ನೇ ತಪಸಾ ತೇಜಸಾ ತಪಸ್ವಾನ್ ತೇಜಸ್ವೀ ತ್ವಮಜರೇಭಿರ್ಜರಾರಹಿತೈರ್ವೃಷಭಿರ್ವರ್ಷಿತೃಭಿರ್ವೃಷ್ಟಿಹೇತುಭೂತೈಸ್ತವ ಸ್ವೈಃ ಸ್ವಭೂತೈರಸಾಧಾರಣೈಸ್ತೇಜೋಭಿಸ್ತಪ। ದಹ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ। **ಮಿತ್ರಮಹಃ**—ಮಿತ್ರನಂತೆ ಅನುಕೂಲಕಾರಿಯೂ। **ತಪಿಷ್ಠ**—ಅತ್ಯಂತ ಉಗ್ರವಾಗಿ ದಹಿಸುವವನೂ। **ತಪಸಾ**—ತೇಜಸ್ಸಿನಿಂದ। **ತಪಸ್ವಾನ್**—ಪ್ರಜ್ವಲಿಸುವವನೂ ಆದ ನೀನು। **ಯಃ**—ಯಾವ ಶತ್ರುವು। **ಸನುತ್ಯಃ**—ರಹಸ್ಯದಲ್ಲಿದ್ದುಕೊಂಡು। **ನಃ**—ನಮ್ಮನ್ನು। **ಅಭಿಧಾಸತ್**—ಹಿಂಸಿಸುವನೋ (ಮತ್ತು)। **ಯಃ**—ಯಾವನು। **ಅಂತರಃ**—ಹತ್ತಿರದಲ್ಲೇ ಇದ್ದುಕೊಂಡು। **ವನುಷ್ಯಾತ್**—ಹಿಂಸಿಸುವನೋ। **ತಂ**—ಆ ಎರಡು ವಿಧವಾದ ಶತ್ರುಗಳನ್ನೂ। **ಅಜರೇಭಿಃ**—ಜರಾರಹಿತವಾದವೂ। **ವೃಷಭಿಃ**—ವೃಷ್ಟಿಹೇತುವಾದವೂ ಆದ। **ತವ ಸ್ವೈಃ**—ನಿನ್ನ ತೇಜಸ್ಸುಗಳಿಂದ। **ತಪ**—ದಹಿಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಮಿತ್ರನಂತೆ ಅನುಕೂಲಕಾರಿಯೂ, ಅತ್ಯಂತ ಉಗ್ರವಾಗಿ ದಹಿಸುವವನೂ, ತೇಜಸ್ಸಿನಿಂದ ಪ್ರಜ್ವಲಿಸುವವನೂ ಆದ ನೀನು ಯಾವ ಶತ್ರುವು ರಹಸ್ಯದಲ್ಲಿದ್ದುಕೊಂಡು ನಮ್ಮನ್ನು ಹಿಂಸಿಸುವನೋ ಮತ್ತು ಯಾವನು ಹತ್ತಿರದಲ್ಲೇ ಇದ್ದುಕೊಂಡು ಹಿಂಸಿಸುವನೋ ಆ ಎರಡು ವಿಧವಾದ ಶತ್ರುಗಳನ್ನೂ ಸಹ ಜರಾರಹಿತವಾದವೂ, ವೃಷ್ಟಿಹೇತುವಾದವೂ, ಆದ ನಿನ್ನ ತೇಜಸ್ಸುಗಳಿಂದ ದಹಿಸು.

## English Translation.

You, protector of (your) friends, are most resplendent blazing with radiance consume; your own imperishable flames him who injures us abiding in secret, or when near to us designs us harm.

ಪ್ರವರ್ಗ್ಯವೆಂಬ ಯಾಗದಲ್ಲಿ—**ಯೋ ನಃ ಸನುತ್ಯಃ** ಎಂಬ ಈ ಋಕ್ಕನ್ನು ಅಭಿಷ್ಟವದಲ್ಲಿ ಎರಡನೆಯ ಋಕ್ಕನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಯೋ ನಃ ಸನುತ್ಯೋ ಅಭಿದಾಸದಗ್ನೇ ಭವಾ ನೋ ಅಗ್ನೇ ಸುಮನಾ ಉಪೇತಾವಿತಿ ದ್ವೃಚಾಃ** ಎಂಬ ಸೂತ್ರದಿಂದ (ಆ. ೪-೬) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಯಸ್ತೇ ಯಜ್ಞೇನ ಸಮಿಧಾ ಯ ಉಕ್ಥೈರರ್ಕೇಭಿಃ ಸೂನೋ ಸಹಸೋ ದದಾಶತ್ ।
ಸ ಮರ್ತ್ಯೇಷ್ವಮೃತ ಪ್ರಚೇತಾ ರಾಯಾ ದ್ಯುಮ್ನೇನ ಶ್ರವಸಾ ವಿ ಭಾತಿ ॥

॥ ಪದಪಾಠಃ ॥

ಯಃ । ತೇ । ಯಜ್ಞೇನ । ಸಂऽಇಧಾ । ಯಃ । ಉಕ್ಥೈಃ । ಅರ್ಕೇಭಿಃ । ಸೂನೋ ಇತಿ । ಸಹಸಃ । ದದಾಶತ್ ।
ಸಃ । ಮರ್ತ್ಯೇಷು । ಅಮೃತ । ಪ್ರऽಚೇತಾಃ । ರಾಯಾ । ದ್ಯುಮ್ನೇನ । ಶ್ರವಸಾ । ವಿ । ಭಾತಿ ॥ ೫ ॥

॥ ಸಾಯಣಭಾಷ್ಯಂ ॥

ಹೇ ಸಹಸಃ ಸೂನೋ ಬಲಸ್ಯ ಪುತ್ರಾಗ್ನೇ ತೇ ತ್ವಾಂ ಯೋ ಯಜಮಾನೋ ಯಜ್ಞೇನ ಯಾಗೇನ ದದಾಶತ್ ಪರಿಚರತಿ । ಯಶ್ಚ ಸಮಿಧಾ ಸಮಿಂಧನಸಾಧನೇನೇಧ್ಮೇನ । ಯಶ್ಚೋಕ್ಥೈಃ ಶಸ್ತ್ರೈರರ್ಕೇಭಿರರ್ಚನೀಯೈಃ ಸ್ತೋತ್ರೈಶ್ಚ ಪರಿಚರತಿ ಹೇ ಅಮೃತ ಮರಣಧರ್ಮರಹಿತಾಗ್ನೇ ಸ ಯಜಮಾನೋ ಮರ್ತ್ಯೇಷು ಮನುಷ್ಯೇಷು ಪ್ರಚೇತಾಃ ಪ್ರಕೃಷ್ಟಜ್ಞಾನಃ ಸನ್ ರಾಯಾ ಧನೇನ ದ್ಯುಮ್ನೇನ ದ್ಯೋತಮಾನೇನ ಶ್ರವಸಾ ಶ್ರವಣೀಯೇನಾನ್ನೇನ ಯಶಸಾ ವಾ ವಿ ಭಾತಿ । ವಿಶೇಷೇಣ ಪ್ರಕಾಶತೇ ॥

॥ ಪ್ರತಿಪದಾರ್ಥ ॥

**ಸಹಸಃ ಸೂನೋ**—ಶಕ್ತಿಪುತ್ರನೂ । **ಅಮೃತ**—ಮರಣಧರ್ಮರಹಿತನೂ ಆದ ಎಲೈ ಅಗ್ನಿಯೇ । **ಯಃ**—ಯಾವ ಯಜಮಾನನು । **ತೇ**—ನಿನ್ನನ್ನು । **ಯಜ್ಞೇನ**—ಯಾಗದಿಂದ । **ದದಾಶತ್**—ಉಪಚರಿಸುವನೋ । **ಯಃ**—ಯಾರು । **ಸಮಿಧಾ**—ಸಮಿತ್ತುಗಳಿಂದಲೂ । **ಉಕ್ಥೈಃ**—ಶಸ್ತ್ರಮಂತ್ರಗಳಿಂದ । **ಅರ್ಕೇಭಿಃ**—ಪ್ರಶಸ್ಯವಾದಸ್ತುತಿಗಳಿಂದ ಲೂ ಸ್ತುತಿಸುವರೊ । **ಸಃ**—ಅದೇ ಯಜಮಾನನು । **ಮರ್ತ್ಯೇಷು**—ಮಾನವರಲ್ಲಿ । **ಪ್ರಚೇತಾಃ**—ಉತ್ತಮವಾದ ಜ್ಞಾನವುಳ್ಳವನಾಗಿ । **ರಾಯಾ**—ಧನದೊಡನೆಯೂ । **ದ್ಯುಮ್ನೇನ**—ಪ್ರಕಾಶಮಾನವಾದ । **ಶ್ರವಸಾ**—ಅನ್ನದೊಡನೆಯೂ ಕೂಡಿ । **ವಿ ಭಾತಿ**—ಅತಿಶಯವಾಗಿ ಪ್ರಕಾಶಿಸುತ್ತಾನೆ.

॥ ಭಾವಾರ್ಥ ॥

ಶಕ್ತಿಪುತ್ರನೂ ಮರಣಧರ್ಮರಹಿತನೂ ಆದ ಅಗ್ನಿಯೇ, ಯಾವ ಯಜಮಾನನು ನಿನ್ನನ್ನು ಯಾಗದಿಂದಲೂ ಸಮಿತ್ಸಾಧನಗಳಿಂದಲೂ ಶಸ್ತ್ರಮಂತ್ರಗಳಿಂದಲೂ ಪ್ರಶಸ್ಯವಾದ ಸ್ತುತಿಗಳಿಂದಲೂ ಉಪಚರಿಸಿ ಪೂಜಿಸುವನೋ ಅದೇ

ಯಜಮಾನನು ಮಾನವರಲ್ಲಿ ಉತ್ತಮವಾದ ಜ್ಞಾನವುಳ್ಳವನಾಗಿ ಧನದೊಡನೆಯೂ ಪ್ರಕಾಶಮಾನವಾದ ಅನ್ನದೊಡನೆಯೂ ಕೂಡಿ ಅತಿಶಯವಾಗಿ ಪ್ರಕಾಶಿಸುತ್ತಾನೆ

English Translation.

He who propitiates you, son of strength, with sacrifice, with fuel, with prayers, with praises, shines immortal amongst men, eminent in wisdom and possessed of splendid opulence and (abuudant) food.

॥ ಸಂಹಿತಾಪಾಠಃ ॥

ಸ ತತ್ಕೃಧೀಷಿತಸ್ತೂಯಮಗ್ನೇ ಸ್ಪೃಧೋ ಬಾಧಸ್ವ ಸಹಸಾ ಸಹಸ್ವಾನ್ ।
ಯಚ್ಛಸ್ಯಸೇ ದ್ಯುಭಿರಕ್ತೋ ವಚೋಭಿಸ್ತಜ್ಜುಷಸ್ವ ಜರಿತುರ್ಘೋಷಿ ಮನ್ಮ ॥

॥ ಪದಪಾಠಃ ॥

ಸಃ । ತತ್ । ಕೃಧಿ । ಇಷಿತಃ । ತೂಯಂ । ಅಗ್ನೇ । ಸ್ಪೃಧಃ । ಬಾಧಸ್ವ । ಸಹಸಾ । ಸಹಸ್ವಾನ್ ।
ಯತ್ । ಶಸ್ಯಸೇ । ದ್ಯುಽಭಿಃ । ಅಕ್ತಃ । ವಚಃಽಭಿಃ । ತತ್ । ಜುಷಸ್ವ । ಜರಿತುಃ । ಘೋಷಿ । ಮನ್ಮ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಸ ತ್ವಮಿಷಿತಃ ಪ್ರೇಷಿತಃ ಸನ್ ತೂಯಂ ಕ್ಷಿಪ್ರಂ ತತ್ಕೃಧಿ । ಕುರು । ಕಿಂ ತದಿತ್ಯತ ಆಹ । ಸಹಸ್ವಾನ್ ಬಲವಾಂಸ್ತ್ವಂ ಸ್ಪೃಧಃ ಸ್ಪರ್ಧಮಾನಾನ್ ಸಹಸಾ ಬಲೇನ ಪರೇಷಾಮಭಿಭವನಸಮರ್ಥೇನ ತೇಜಸಾ ವಾ ಬಾಧಸ್ವ । ವಿನಾಶಯ । ದ್ಯುಭಿರ್ದ್ಯೋತಮಾನೈಸ್ತೇಜೋಭಿರಕ್ತಃ ಸಂಸಿಕ್ತಸ್ತ್ವಂ ವಚೋಭಿಃ ಸ್ತುತಿರೂಪೈರ್ವಾಕ್ಯೈರ್ಯಚ್ಛಸ್ಯಸೇ ಯತ್ಸ್ತೂಯಸೇ । ತ್ವಾಮುದ್ದಿಶ್ಯ ಯತ್ ಸ್ತೋತ್ರಂ ಸ್ತೋತೃಭಿಃ ಕ್ರಿಯತ ಇತ್ಯರ್ಥಃ । ತನ್ಮನ್ಮ ಮನನೀಯಂ ಘೋಷಿ ಘೋಷಣೀಯಂ ಜರಿತುಃ ಸ್ತೋತ್ರಂ ಜುಷಸ್ವ । ಸೇವಸ್ವ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಸಃ**—ಪ್ರಸಿದ್ಧನಾದ ನೀನು । **ಇಷಿತಃ**—ಪ್ರಾರ್ಥಿತನಾಗಿ । **ತೂಯಂ**—ಕ್ಷಿಪ್ರವಾಗಿಯೇ । **ತತ್**—ನಮ್ಮಿಂದ ಅಪೇಕ್ಷಿತವಾದುದನ್ನು । **ಕೃಧಿ**—ನೆರವೇರಿಸು । **ಸಹಸ್ವಾನ್**—ಶಕ್ತಿಯುತನಾದ ನೀನು । **ಸ್ಪೃಧಃ** ನಮ್ಮೊಡನೆ ಹೋರಾಡುವ ಶತ್ರುಗಳನ್ನು । **ಸಹಸಾ**—ನಿನ್ನ ಶಕ್ತಿಯುತವಾದ

ತೇಜಸ್ಸಿನಿಂದ | **ಬಾಧಸ್ವ**—ನಾಶಪಡಿಸು | **ದ್ಯುಭಿಃ**—ಪ್ರಕಾಶಮಾನವಾದ ತೇಜಸ್ಸುಗಳೊಡನೆ | **ಅಕ್ತಃ**—ಕೂಡಿಕೊಂಡಿರುವ ನೀನು | **ವಚೋಭಿಃ**—ಸ್ತುತಿರೂಪವಾದ ವಾಕ್ಯಗಳಿಂದ | **ಯತ್ ಶಸ್ಯಸೇ**—ಯಾವ ನಿಮಿತ್ತವಾಗಿ ಪ್ರಶಂಸಿಸಲ್ಪಡುವೆಯೋ | **ತತ್**—ಆ ಉದ್ದಿಶ್ಯಸಾಧನೆಗಾಗಿಯೇ | **ಮನ್ಮ**—ಧ್ಯಾನಾತ್ಮಕವಾದುದೂ | **ಘೋಷಿ**—ಘೋಷಣಾತ್ಮಕವಾದುದೂ ಆದ | **ಜರಿತುಃ**—ಸ್ತುತಿಕರ್ತನ ಸ್ತೋತ್ರವನ್ನು | **ಜುಷಸ್ವ**—ಸೇವಿಸು.

|| ಭಾವಾರ್ಥ ||

ಎಲೈ ಅಗ್ನಿಯೇ, ಪ್ರಸಿದ್ಧನಾದ ನೀನು ನಮ್ಮಿಂದ ಪ್ರಾರ್ಥಿತನಾದೊಡನೆಯೇ, ನಮ್ಮ ಇಷ್ಟಾರ್ಥಗಳನ್ನು ನೆರವೇರಿಸು. ಶಕ್ತಿಯುತನಾದ ನೀನು ನಮ್ಮೊಡನೆ ಹೋರಾಡುವ ಶತ್ರುಗಳನ್ನು ನಿನ್ನ ಶಕ್ತಿಯುತವಾದ ತೇಜಸ್ಸಿನಿಂದ ನಾಶಪಡಿಸು. ಪ್ರಕಾಶಮಾನವಾದ ತೇಜಸ್ಸುಗಳೊಡನೆ ಕೂಡಿಕೊಂಡಿರುವ ನೀನು ಸ್ತುತಿರೂಪವಾದ ವಾಕ್ಯಗಳಿಂದ ಯಾವ ನಿಮಿತ್ತವಾಗಿ ಪ್ರಶಂಸಿಸಲ್ಪಡುವೆಯೋ, ಆ ಉದ್ದಿಶ್ಯಸಾಧನೆಗಾಗಿಯೇ ಧ್ಯಾನಾತ್ಮಕವಾದುದೂ, ಘೋಷಣಾತ್ಮಕವಾದುದೂ ಆದ ಸ್ತುತಿಕರ್ತನ ಸ್ತೋತ್ರವನ್ನು ಸೇವಿಸು.

English Translation.

Accomplish quickly, Agni, that for with you are solicited : endowed with strength, oppose by strength our adversaries : be pleased, you are annointed with radiance, by the loud vociferation of your worshipper, by whom you are adored with hymns.

|| ಸಂಹಿತಾಪಾಠಃ ||

ಅಶ್ಯಾಮ ತಂ ಕಾಮಮಗ್ನೇ ತವೋತೀ ಅಶ್ಯಾಮ ರಯಿಂ ರಯಿವಃ ಸುವೀರಂ |
ಅಶ್ಯಾಮ ವಾಜಮಭಿ ವಾಜಯಂತೋಽಶ್ಯಾಮ ದ್ಯುಮ್ನಮಜರಾಜರಂ ತೇ||

|| ಪದಪಾಠಃ ||

ಅಶ್ಯಾಮ | ತಂ | ಕಾಮಂ | ಅಗ್ನೇ | ತವ | ಊತೀ | ಅಶ್ಯಾಮ | ರಯಿಂ | ರಯಿಽವಃ | ಸುವೀರಂ |
ಅಶ್ಯಾಮ | ವಾಜಂ | ಅಭಿ | ವಾಜಯಂತಃ | ಅಶ್ಯಾಮ | ದ್ಯುಮ್ನಂ | ಅಜರ | ಅಜರಂ | ತೇ || ೭ ||

॥ ಸಾಯಣಭಾಷ್ಯಂ ॥

ಅಗ್ನಯೇ ಕಾಮಾಯ ಪುರೋಡಾಶಮಷ್ಟಾಕಪಾಲಮಿತ್ಯಸ್ಯಾಶ್ಯಾಮೇತ್ಯೇಷಾ ಯಾಜ್ಯಾ । ಸೂತ್ರಿತಂ ಚ । ಅಶ್ಯಾಮ ತಂ ಕಾಮಮಗ್ನೇ ತವೋತೀತಿ ಕಾಮಾಯ । ಆ. ೨-೧೦ । ಇತಿ ॥

ಹೇ ಅಗ್ನೇ ತವ ಸಂಬಂಧಿನ್ಯೋತೀ ಊತ್ಯಾ ರಕ್ಷಯಾ ತಂ ಕಾಮಮಶ್ಯಾಮ। ಪ್ರಾಪ್ನುಯಾಮ। ತಮೇವ ಕಾಮಂ ವಿವೃಣೋತಿ । ಹೇ ರಯಿವೋ ಧನವನ್ನಗ್ನೇ ಸುವೀರಂ ಶೋಭನಪುತ್ರಾದಿಯುಕ್ತಂ ರಯಿಂ ಧನಮಶ್ಯಾಮ । ಪ್ರಾಪ್ನುಯಾಮ । ತಥಾ ವಾಜಯಂತೋ ವಾಜಮನ್ನಮಾತ್ಮನ ಇಚ್ಛಂತೋ ವಯಂ ವಾಜಂ ತ್ವಯಾ ದತ್ತಮನ್ನಮಭಿ ಅಭಿಮುಖ್ಯೇನಾಶ್ಯಾಮ । ಪ್ರಾಪ್ನುಯಾಮ । ಹೇ ಅಜರ ಜರಾರಹಿತಾಗ್ನೇ ತ್ವದೀಯಮಜರಂ ಜರಾರಹಿತಂ ದ್ಯುಮ್ನಂ ದ್ಯೋತಮಾನಂ ಯಶಶ್ಚಾಶ್ಯಾಮ । ಪ್ರಾಪ್ನುಯಾಮ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ತವ**—ನಿನ್ನ ಸಂಬಂಧಿಯಾದ । **ಊತೀ**—ರಕ್ಷಣೆಯಿಂದ । **ತಂ ಕಾಮಂ**—ನಮ್ಮ ಇಷ್ಟಾರ್ಥವನ್ನು । **ಅಶ್ಯಾಮ**—ನಾವು ಪಡೆಯುವಂತಾಗಲಿ । **ರಯಿವಃ**—ಧನವಂತನಾದ ಎಲೈ ಅಗ್ನಿಯೇ । **ಸುವೀರಂ**—ಶ್ರೇಷ್ಠರಾದ ಪುತ್ರಾದಿಗಳಿಂದ ಕೂಡಿದ । **ರಯಿಂ**—ಧನವನ್ನು । **ಅಶ್ಯಾಮ**—ನಾವು ಹೊಂದಿರುವಂತಾಗಲಿ । **ವಾಜಯಂತಃ**—ಅನ್ನಾಪೇಕ್ಷಿಗಳಾದ ನಾವು । **ವಾಜಂ**—ನಿನ್ನಿಂದ ಕೊಡಲ್ಪಟ್ಟ ಅನ್ನವನ್ನು । **ಅಭಿ**—ಅಭಿಮುಖವಾಗಿಯೇ । **ಅಶ್ಯಾಮ**—ಅನುಭವಿಸುವಂತಾಗಲಿ । **ಅಜರ**—ಜರಾರಹಿತನಾದ ಎಲೈ ಅಗ್ನಿಯೇ । **ತೇ**—ನಿನ್ನ । **ಅಜರಂ**—ನಾಶರಹಿತವಾದುದೂ । **ದ್ಯುಮ್ನಂ**—ಪ್ರಕಾಶಮಾನವಾದುದೂ ಆದ ಯಶಸ್ಸನ್ನು । **ಅಶ್ಯಾಮ**—ನಾವೂ ಹೊಂದುವಂತಾಗಲಿ.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಿನ್ನ ರಕ್ಷಣೆಯಿಂದ ನಮ್ಮ ಇಷ್ಟಾರ್ಥವನ್ನು ನಾವು ಪಡೆಯುವಂತಾಗಲಿ. ಧನವಂತನಾದ ಅಗ್ನಿಯೇ, ಶ್ರೇಷ್ಠವಾದ ಪುತ್ರಾದಿಗಳಿಂದ ಕೂಡಿದ ಧನವನ್ನು ನಾವು ಹೊಂದಿರುವಂತಾಗಲಿ. ಅನ್ನಾಪೇಕ್ಷಿಗಳಾದ ನಾವು ನಿನ್ನಿಂದ ಕೊಡಲ್ಪಟ್ಟ ಅನ್ನವನ್ನು ಒಡನೆಯೇ ಅನುಭವಿಸುವಂತಾಗಲಿ. ಜರಾರಹಿತನಾದ ಅಗ್ನಿಯೇ, ನಿನ್ನ ನಾಶರಹಿತವಾದುದೂ ಪ್ರಕಾಶಮಾನವಾದುದೂ ಆದ ಯಶಸ್ಸನ್ನು ನಾವೂ ಹೊಂದುವಂತಾಗಲಿ.

## English Translation.

May we obtain through your protetion, Agni, that which we desire: giver of riches, may we obtain of you riches and descendants: desiring food, may we obtain food: may we obtain, imperihable Agni, impershable fame (through you).

॥ ವಿಶೇಷವಿಷಯಗಳು ॥

**ಅಗ್ನಯೇ ಕಾಮಾಯ ಪುರೋಡಾಶಮಷ್ಟಾಕಪಾಲಂ**—ಎಂದು ಅಗ್ನಿಯನ್ನುದ್ದೇಶಿಸಿ ಪುರೋಡಾಶ ಹೋಮಮಾಡುವಾಗ—**ಅಶ್ಯಾಮ ತಂ** ಎಂಬ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಅಶ್ಯಾಮ ತಂ ಕಾಮಮಗ್ನೇ ತವೋತೀತಿ ಕಾಮಾಯ** ಎಂಬ ಸೂತ್ರದಿಂದ (ಆ. ೨-೧೦) ವಿವೃತವಾಗಿರುವುದು.

# ಆರನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಪ್ರ ನವ್ಯಸೇತಿ ಸಪ್ತರ್ಚಂ ಷಷ್ಠಂ ಸೂಕ್ತಂ ಭರದ್ವಾಜಸ್ಯಾರ್ಷಂ ತ್ರೈಷ್ಟುಭಮಾಗ್ನೇಯಂ। ಪ್ರ ನವ್ಯಸೇತ್ಯನುಕ್ರಾಂತಂ ॥ ಪ್ರಾತರನುವಾಕಾಶ್ವಿನಶಸ್ತ್ರಯೋರುಕ್ತೋ ವಿನಿಯೋಗಃ ॥**

ಅನುವಾದವು—**ಪ್ರ ನವ್ಯಸಾ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಆರನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು; ಅಗ್ನಿಯು ದೇವತೆಯು ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಪ್ರ ನವ್ಯಸಾ** ಎಂದು ಹೇಳಿರುವುದು. ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರ ಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದು.

## ಸೂಕ್ತ ೬

ಮಂಡಲ—೬ ॥ ಅನುವಾಕ—೧ ॥ ಸೂಕ್ತ—೬ ॥
ಅಷ್ಟಕ—೪ ॥ ಅಧ್ಯಾಯ—೫ ॥ ವರ್ಗ—೮ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ॥
॥ ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ॥
॥ ದೇವತಾ—ಅಗ್ನಿಃ ॥
॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಪ್ರ ನವ್ಯಸಾ ಸಹಸಃ ಸೂನುಮಚ್ಛಾ ಯಜ್ಞೇನ ಗಾತುಮವ ಇಚ್ಛಮಾನಃ ।
ವೃಶ್ಚದ್ವನಂ ಕೃಷ್ಣಯಾಮಂ ರುಶಂತಂ ವೀತೀ ಹೋತಾರಂ ದಿವ್ಯಂ ಜಿಗಾತಿ ॥

॥ ಪದಪಾಠಃ ॥

ಪ್ರ । ನವ್ಯಸಾ । ಸಹಸಃ । ಸೂನುಂ । ಅಚ್ಛ । ಯಜ್ಞೇನ । ಗಾತುಂ । ಅವಃ । ಇಚ್ಛಮಾನಃ ।
ವೃಶ್ಚತ್ಽವನಂ । ಕೃಷ್ಣಽಯಾಮಂ । ರುಶಂತಂ । ವೀತೀ । ಹೋತಾರಂ । ದಿವ್ಯಂ । ಜಿಗಾತಿ ॥ ೧ ॥

॥ ಸಾಯಣಭಾಷ್ಯಂ ॥

ಗಾತುಮುಪಗಂತವ್ಯಂ ಸ್ತೋತವ್ಯಂ ವಾ ಸಹಸಃ ಸೂನುಂ ಬಲಸ್ಯ ಪುತ್ರಮಗ್ನಿಮವೋಽನ್ನಂ ರಕ್ಷಣಂ ವಾ ಇಚ್ಛಮಾನ ಇಚ್ಛನ್ ಸ್ತೋತಾ ನವ್ಯಸಾ ನವತರೇಣ ಯಜ್ಞೇನ ಯುಕ್ತಃ ಸನ್ ಅಚ್ಛಾಭಿಮುಖ್ಯೇನ ಪ್ರ ಜಿಗಾತಿ । ಪ್ರಕರ್ಷೇಣ ಗಚ್ಛತಿ । ಕೀದೃಶಮಗ್ನಿಂ । ವೃಕ್ಣದ್ವನಂ ವೃಕ್ಣಂ ಛಿನ್ನಂ ದಗ್ಧಂ ವನಂ ಯೇನ ತಾದೃಶಂ ಕೃಷ್ಣಯಾಮಂ ಕೃಷ್ಣವರ್ತ್ಮಾನಂ ರುಶಂತಂ ಶ್ವೇತವರ್ಣಂ ವೀತೀ ವೀತ್ಯಾ ಕಾಂತೇನ ಯಜ್ಞೇನ ಹೋತಾರಂ ಯಷ್ಟಾರಂ ದಿವ್ಯಂ ದಿವಿ ಭವಂ ॥

॥ ಪ್ರತಿಪದಾರ್ಥ ॥

**ಅವಃ**— ಅನ್ನವನ್ನು । **ಇಚ್ಛಮಾನಃ**— ಅಪೇಕ್ಷಿಸುವ ಸ್ತೋತೃವು । **ನವ್ಯಸಾ** — ನೂತನವಾದ । **ಯಜ್ಞೇನ**— ಯಜ್ಞಯುಕ್ತನಾಗಿ । **ವೃಕ್ಣದ್ವನಂ**— ವನವೃಕ್ಷಗಳನ್ನು ದಹಿಸುವವನೂ । **ಕೃಷ್ಣಯಾಮಂ**— ಕಪ್ಪಾದ ಮಾರ್ಗವುಳ್ಳವನೂ । **ರುಶಂತಂ**— ಪ್ರಕಾಶಮಾನನೂ । **ವೀತೀ**— ಕಾಂತಿಯುತವಾದ ಯಜ್ಞದಿಂದ । **ಹೋತಾರಂ**— ದೇವತೆಗಳನ್ನು ಪೂಜಿಸುವವನೂ । **ದಿವ್ಯಂ**— ದೇವಲೋಕೋತ್ಪನ್ನನೂ । **ಗಾತುಂ**— ಸ್ತುತಿಯೋಗ್ಯನೂ । **ಸಹಸಃ ಸೂನುಂ**— ಶಕ್ತಿಪುತ್ರನೂ ಆದ ಅಗ್ನಿಯನ್ನೂ । **ಪ್ರ ಜಿಗಾತಿ**— ಸಮೀಪಿಸುತ್ತಾನೆ.

॥ ಭಾವಾರ್ಥ ॥

ಅನ್ನವನ್ನು ಅಪೇಕ್ಷಿಸುವ ಸ್ತೋತೃವು ನೂತನವಾದ ಯಜ್ಞಯುಕ್ತನಾಗಿ ವನವೃಕ್ಷಗಳನ್ನು ದಹಿಸುವವನೂ ಕಪ್ಪಾದ ಮಾರ್ಗವುಳ್ಳವನೂ ಪ್ರಕಾಶಮಾನನೂ, ಕಾಂತಿಯುತವಾದ ಯಜ್ಞದಿಂದ ದೇವತೆಗಳನ್ನು ಪೂಜಿಸುವವನೂ, ದೇವಲೋಕೋತ್ಪನ್ನನೂ, ಸ್ತುತಿಯೋಗ್ಯನೂ, ಶಕ್ತಿಪುತ್ರನೂ ಆದ ಅಗ್ನಿಯನ್ನು ಸಮೀಪಿಸುತ್ತಾನೆ.

## English Translation.

He who is desirous of food has recourse with a new sacrifice, approachable son of strenght, (Agni), to you, the consumer of forests, the dark-pathed, the bright-shining, the ministrant (to the gods) of (sacrificial) food, the divine;

॥ ಸಂಹಿತಾಪಾಠಃ ॥

ಸ ಶ್ವಿತಾನಸ್ತನ್ಯತೂ ರೋಚನಸ್ಥಾ ಅಜರೇಭಿರ್ನಾನದದ್ಭಿರ್ಯವಿಷ್ಠಃ ।

ಯಃ ಪಾವಕಃ ಪುರುತಮಃ ಪುರೂಣಿ ಪೃಥೂನ್ಯಗ್ನಿರನುಯಾತಿ ಭರ್ವನ್ ॥

॥ ಪದಪಾಠಃ ॥

ಸಃ । ಶ್ವಿತಾನಃ । ತನ್ಯತುಃ । ರೋಚನಸ್ಥಾಃ । ಅಜರೇಭಿಃ । ನಾನದತ್ಽಭಿಃ । ಯವಿಷ್ಠಃ ।

ಯಃ । ಪಾವಕಃ । ಪುರುಽತಮಃ । ಪುರೂಣಿ । ಪೃಥೂನಿ । ಅಗ್ನಿಃ । ಅನುಽಯಾತಿ । ಭರ್ವನ್ ॥ ೨ ॥

॥ ಸಾಯಣಭಾಷ್ಯಂ ॥

ಸೋಽಗ್ನಿಃ ಶ್ವಿತಾನಃ ಶ್ವೇತಮಾನಃ ಶ್ವೇತವರ್ಣೋ ವರ್ತತೇ । ತನ್ಯತುಃ ಶಬ್ದಕಾರೀ ರೋಚನಸ್ಥಾಃ । ರೋಚಂತೇಽಸ್ಮಿನ್ ಗ್ರಹನಕ್ಷತ್ರಾದೀನೀತಿ ರೋಚನಮಂತರಿಕ್ಷಂ । ತತ್ರ ಸ್ಥಿತೋಽಜರೇಭಿರ್ಜರಾರಹಿತೈರ್ನಾನದದ್ಭಿರತ್ಯರ್ಥಂ ಶಬ್ದಂ ಕುರ್ವದ್ಭಿರ್ಮರುದ್ಭಿರ್ಯುಕ್ತೋ ರಶ್ಮಿಭಿರ್ವಾ ಯವಿಷ್ಠೋ ಯುವತಮಃ । ಯಃ ಪಾವಕಃ ಶೋಧಕೋಽಗ್ನಿಃ ಪುರುತಮೋಽತಿಶಯೇನ ಪ್ರಭೂತಃ ಸನ್ ಪುರೂಣಿ ಬಹೂನಿ ಪೃಥೂನಿ ಸ್ಥೂಲಾನಿ ಕಾಷ್ಠಾನಿ ಭರ್ವನ್ ಭಕ್ಷಯನ್ ಅನುಯಾತಿ ಅನುಗಚ್ಛತಿ ಸ ಇತ್ಥಮಿತ್ಥಂ ವರ್ತತ ಇತಿ ಪೂರ್ವತ್ರ ಸಂಬಂಧಃ ॥

॥ ಪ್ರತಿಪದಾರ್ಥ ॥

ತನ್ಯತುಃ—ಶಬ್ದಕಾರಿಯೂ । ರೋಚನಸ್ಥಾಃ—ತೇಜೋಮಂಡಲಗಳಿಂದ ಕೂಡಿದ ಅಂತರಿಕ್ಷಸ್ಥನೂ । ಅಜರೇಭಿಃ—ಜರಾರಹಿತವಾದವೂ । ನಾನದದ್ಭಿಃ—ಅತಿಯಾಗಿ ಶಬ್ದವನ್ನುಂಟುಮಾಡುವುವೂ ಆದ ರಶ್ಮಿಗಳಿಂದ ಕೂಡಿದವನೂ । ಯವಿಷ್ಠಃ—ಅತ್ಯಂತ ಯುವಕನೂ ಆದ । ಯಃ—ಯಾವ । ಪಾವಕಃ—ಶುದ್ಧಿಕಾರಕನಾದ । ಅಗ್ನಿಃ—ಅಗ್ನಿಯು । ಪುರುತಮಃ—ಅತಿ ಪ್ರಭೂತನಾಗಿದ್ದು । ಪುರೂಣಿ—ಅನೇಕ ವಿಧವಾದವೂ । ಪೃಥೂನಿ—ಸ್ಥೂಲವಾದುವೂ ಆದ ಕಾಷ್ಠಾದಿಗಳನ್ನು । ಭರ್ವನ್—ಭಕ್ಷಿಸುತ್ತಾ । ಅನುಯಾತಿ—ಸಂಚರಿಸುವನೋ । ಸಃ—ಅಂತಹ ಅಗ್ನಿಯು । ಶ್ವಿತಾನಃ—ಶ್ವೇತವರ್ಣವುಳ್ಳವನಾಗಿದ್ದಾನೆ.

॥ ಭಾವಾರ್ಥ ॥

ಶಬ್ದಕಾರಿಯೂ, ತೇಜೋಮಂಡಲಗಳಿಂದ ಕೂಡಿದ ಅಂತರಿಕ್ಷಸ್ಥನೂ, ಜರಾರಹಿತವಾದವೂ ಅತಿಯಾಗಿ ಶಬ್ದವನ್ನುಂಟುಮಾಡುವುವೂ ಆದ ರಶ್ಮಿಗಳಿಂದ ಕೂಡಿದವನೂ, ಅತ್ಯಂತ ಯುವಕನೂ ಆದ ಯಾವ ಶುದ್ಧಿಕಾರಕನಾದ ಅಗ್ನಿಯು ಅತಿ ಪ್ರಭೂತನಾಗಿದ್ದು ಅನೇಕ ವಿಧವಾದವೂ, ಸ್ಥೂಲವಾದವೂ ಆದ ಕಾಷ್ಠಾದಿಗಳನ್ನು ಭಕ್ಷಿಸುತ್ತಾ ಸಂಚರಿಸುವನೋ ಅಂತಹ ಅಗ್ನಿಯು ಶ್ವೇತವರ್ಣವುಳ್ಳವನಾಗಿದ್ದಾನೆ. (ಪ್ರಕಾಶಿಸುತ್ತಿದ್ದಾನೆ)

## English Translation.

(You who are) white-hued, vociferous, abiding in the firmament, (associated) with the imperishable, resounding (winds), the youngest (of the gods, Agni, who, purifying and most vast, proceeds, feeding upon numerous and substantial (forests).

|| ವಿಶೇಷವಿಷಯಗಳು ||

ಗಾರ್ಹಪತ್ಯ ಮೊದಲಾದ ಅಗ್ನಿಗಳ ಸಂಸರ್ಗವು ಕಾರಣಾಂತರದಿಂದ ಉಂಟಾದಲ್ಲಿ ಆ ದೋಷಪ್ರಾಯಶ್ಚಿತ್ತಕ್ಕಾಗಿ **ಅಗ್ನಯೇ ವಿವಿಚಯೇ** ಎಂದು ಅಗ್ನಿಯನ್ನುದ್ದೇಶಿಸಿ ಇಷ್ಟಿಯನ್ನು ಮಾಡಬೇಕು. ಆಗ **ವಿ ತೇ ವಿಷ್ವಕ್** ಎಂಬ ಈ ಋಕ್ಕನ್ನು ಆ ಇಷ್ಟಿಯಲ್ಲಿ ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ— ಆ. ೩-೧೩ ಎಂಬ ಸೂತ್ರದಲ್ಲಿ ನಿರ್ದೇಶಿಸಿರುವುದು.

|| ಸಂಹಿತಾಪಾಠಃ ||

ವಿ ತೇ ವಿಷ್ವಗ್ವಾತಜೂತಾಸೋ ಅಗ್ನೇ ಭಾಮಾಸಃ ಶುಚೇ ಶುಚಯಶ್ಚರಂತಿ।
ತುವಿಮ್ರಕ್ಷಾಸೋ ದಿವ್ಯಾ ನವಗ್ವಾ ವನಾ ವನಂತಿ ಧೃಷತಾ ರುಜಂತಃ ॥ ೩ ॥

|| ಪದಪಾಠಃ ||

ವಿ । ತೇ । ವಿಷ್ವಕ್ । ವಾತಽಜೂತಾಸಃ । ಅಗ್ನೇ । ಭಾಮಾಸಃ । ಶುಚೇ । ಶುಚಯಃ । ಚರಂತಿ ।
ತುವಿಽಮ್ರಕ್ಷಾಸಃ । ದಿವ್ಯಾಃ । ನವಽಗ್ವಾಃ । ವನಾ । ವನಂತಿ । ಧೃಷತಾ । ರುಜಂತಃ ॥ ೩ ॥

|| ಸಾಯಣಭಾಷ್ಯಂ ||

ಗಾರ್ಹಪತ್ಯಾದೀನಾಂ ಮಿಥಃ ಸಂಸರ್ಗೇಽಗ್ನಯೇ ವಿವಿಚಯ ಇಷ್ಟಿಃ ಕರ್ತವ್ಯಾ । ತತ್ರ ವಿ ತ ಇತ್ಯೇಷಾನುವಾಕ್ಯಾ । ಆ. ೩-೧೩ ॥

ಹೇ ಶುಚೇ ಶುದ್ಧ ದೀಪ್ತ ವಾಗ್ನೇ ತೇ ತ್ವದೀಯಾ ವಾತಜೂತಾಸೋ ವಾತೇನ ಪ್ರೇರಿತಾಃ ಶುಚಯೋ ನಿರ್ಮಲಾ ಭಾಮಾಸೋ ದೀಪ್ತಯೋ ವಿಷ್ವಕ್ ಸರ್ವತೋ ವಿ ಚರಂತಿ । ವಿವಿಧಂ ಗಚ್ಛಂತಿ । ತುವಿಮ್ರಕ್ಷಾಸೋ ಬಹುಕಾಷ್ಠಾನಿ ಸ್ಪೃಶಂತೋ ದಿವ್ಯಾ ದಿವಿ ದ್ಯೋತಮಾನೇಽಗ್ನೌ ಭವಾ ನವಗ್ವಾ ನೂತನಗಮನಾಸ್ತೇ ರಶ್ಮಯೋ ವನಾ ವನಾನಿ ವನಂತಿ । ಸಂಭಜಂತೇ । ದಹಂತೀತ್ಯರ್ಥಃ । ಕಿಂ ಕುರ್ವಂತಃ । ಧೃಷತಾ ಧರ್ಷಕೇಣ ತೇಜಸಾ ರುಜಂತೋ ವನಾನಿ ಭಂಜಯಂತಃ ॥

|| ಪ್ರತಿಪದಾರ್ಥ ||

**ಶುಚೇ**—ಪರಿಶುದ್ಧನಾದ । **ಅಗ್ನೇ**—ಅಗ್ನಿಯೇ । **ತೇ**—ನಿನ್ನ । **ವಾತಜೂತಾಸಃ**—ವಾಯುವಿನಿಂದ ಪ್ರೇರಿತವಾದವೂ । **ಶುಚಯಃ**—ನಿರ್ಮಲವಾದವೂ ಆದ । **ಭಾಮಾಸಃ**—ತೇಜಸ್ಸುಗಳು । **ವಿಷ್ವಕ್**—ಸರ್ವತ್ರ । **ವಿ ಚರಂತಿ**—ಸಂಚರಿಸುತ್ತವೆ । **ತುವಿಮ್ರಕ್ಷಾಸಃ**—ಅನೇಕ ಕಾಷ್ಠಗಳನ್ನು ದಹಿಸುವುವೂ । **ದಿವ್ಯಾಃ**—ದ್ಯೋತಮಾನವಾದವೂ । **ನವಗ್ವಾಃ**—ನೂತನವಾದ ಸ್ವರೂಪವುಳ್ಳವೂ ಆದ ನಿನ್ನ ರಶ್ಮಿಗಳು । **ಧೃಷತಾ**—

ಶತ್ರುಧರ್ಷಕವಾದ ತೇಜಸ್ಸುಗಳಿಂದ | **ರುಜಂತಃ**—ವನಗಳನ್ನು ನಾಶಪಡಿಸುತ್ತಾ | **ವನಾ**—ವನಗಳನ್ನು | **ವನಂತಿ**—ದಹಿಸುತ್ತವೆ.

॥ ಭಾವಾರ್ಥ ॥

ಪರಿಶುದ್ಧನಾದ ಎಲೈ ಅಗ್ನಿಯೇ, ವಾಯುವಿನಿಂದ ಪ್ರೇರಿತವಾದವೂ, ನಿರ್ಮಲವಾದವೂ ಆದ ನಿನ್ನ ತೇಜಸ್ಸುಗಳು ಸರ್ವತ್ರ ಸಂಚರಿಸುತ್ತವೆ. ಅನೇಕ ಕಾಷ್ಠಗಳನ್ನು ದಹಿಸುವುವೂ, ದ್ಯೋತಮಾನವಾದವೂ ನೂತನವಾದ ಸ್ವರೂಪವುಳ್ಳವೂ ಆದ ನಿನ್ನ ರಶ್ಮಿಗಳು ಶತ್ರುಧರ್ಷಕವಾದ ತೇಜಸ್ಸುಗಳಿಂದ ವನಗಳನ್ನು ನಾಶಪಡಿಸುತ್ತಾ ವನಗಳನ್ನು ದಹಿಸುತ್ತವೆ.

## English Translation·

Pure Agni, your bright flames, fanned by the wind, spread wide in every direction, consuming abundant (fuel); divine, fresh-rising, they play upon the woods, enveloping them in lustre.

॥ ಸಂಹಿತಾಪಾಠಃ ॥

ಯೇ ತೇ ಶುಕ್ರಾಸಃ ಶುಚಯಃ ಶುಚಿಷ್ಮಃ ಕ್ಷಾಂ ವಪಂತಿ ವಿಷಿತಾಸೋ
ಅಶ್ವಾಃ ।
ಅಧ ಭ್ರಮಸ್ತ ಉರ್ವಿಯಾ ವಿ ಭಾತಿ ಯಾತಯಮಾನೋ ಅಧಿ ಸಾನು
ಪೃಶ್ನೇಃ ॥ ೪ ॥

॥ ಪದಪಾಠಃ ॥

ಯೇ । ತೇ । ಶುಕ್ರಾಸಃ । ಶುಚಯಃ । ಶುಚಿಷ್ಮಃ । ಕ್ಷಾಂ । ವಪಂತಿ । ವಿऽಸಿತಾಸಃ । ಅಶ್ವಾಃ ।
ಅಧ । ಭ್ರಮಃ । ತೇ । ಉರ್ವಿಯಾ । ವಿ । ಭಾತಿ । ಯಾತಯಮಾನಃ । ಅಧಿ । ಸಾನು । ಪೃಶ್ನೇಃ ॥ ೪ ॥

॥ ಸಾಯಣಭಾಷ್ಯಂ ॥

**ಹೇ ಶುಚಿಷ್ಮೋ ದೀಪ್ತಿಮನ್ನಗ್ನೇ ತೇ ತವ ಶುಕ್ರಾಸಃ ಶುಭ್ರಾ ಯೇ ಶುಚಯೋ ದೀಪ್ತಯೋ ಕ್ಷಾಂ ಪೃಥಿವೀಂ ಭೂಮಿಂ ವಪಂತಿ ಮುಂಡಯಂತಿ । ಕೇಶಸ್ಥಾನೀಯಾನೋಷಧಿವನಸ್ಪತೀನ್ ದಹಂತೀ- ತ್ಯರ್ಥಃ । ಅಗ್ನಿರ್ಹ ದಾತಿ ರೋಮಾ ಪೃಥಿವ್ಯಾಃ । ಋಗ್ವೇ- ೧-೬೫-೪ । ಇತಿ ನಿಗಮಾಂತರಂ । ತೇ**

ರಶ್ಮಯೋ ವಿಷಿತಾಸೋ ವಿಮುಕ್ತಾ ಅಶ್ವಾ ಇವ । ಇತಸ್ತತೋ ಗಚ್ಛಂತೀತಿ ಶೇಷಃ । ಅಧಾಸ್ಮಿನ್ಕಾಲೇ ತೇ ತ್ವದೀಯೋ ಭ್ರಮೋ ಭ್ರಮಣಶೀಲೋ ಜ್ವಾಲಾಸಮೂಹಃ ಪೃಶ್ನೇರ್ನಾನಾರೂಪಾಯಾ ಭೂಮೇರಧಿ ಉಪರಿ ಸಾನು ಸಮುಚ್ಛ್ರಿತಂ ದೇಶಂ ಪರ್ವತಾಗ್ರಾದಿಕಂ ಪ್ರತಿ ಯಾತಯಮಾನಃ ಸ್ವಕೀಯಮಗ್ರಂ ವ್ಯಾಪಾರಯನ್ ಉರ್ವಿಯೋರು ಬಹುಲಂ ವಿ ಭಾತಿ । ವಿಶೇಷೇಣ ಪ್ರಕಾಶತೇ ॥

॥ ಪ್ರತಿಪದಾರ್ಥ ॥

**ಶುಚಿಷ್ಮಃ**—ಪ್ರಕಾಶಯುತನಾದ ಎಲೈ ಅಗ್ನಿಯೇ । **ತೇ**—ನಿನ್ನ । **ಶುಕ್ರಾಸಃ**—ಶುಭ್ರಗಳಾದ । **ಯೇ ಶುಚಯಃ**—ಯಾವ ಪ್ರಭೆಗಳು । **ಕ್ಷಾಂ**—ಭೂಮಿಯನ್ನು (ಓಷಧ್ಯಾದಿಗಳನ್ನು) । **ವಪಂತಿ**—ಛೇದಿಸುತ್ತವೆಯೋ (ದಹಿಸುತ್ತವೆಯೋ) ಆ ರಶ್ಮಿಗಳು । **ವಿಷಿತಾಸಃ**—ಕಡಿವಾಣಗಳನ್ನು ಕಳಚಿಬಿಟ್ಟ ಅಶ್ವಗಳಂತೆ (ಎಲ್ಲಾ ಕಡೆಗಳಲ್ಲೂ ಸಂಚರಿಸುತ್ತವೆ) । **ಅಧ**—ಇದೇ ಕಾಲದಲ್ಲಿ । **ತೇ**—ನಿನ್ನ । **ಭ್ರಮಃ**—ಭ್ರಮಣಾತ್ಮಕವಾದ ಜ್ವಾಲಾಸಮೂಹ ಗಳು । **ಪೃಶ್ನೇಃ**—ನಾನಾರೂಪಾತ್ಮಕವಾದ ಪೃಥ್ವಿಯ । **ಅಧಿ**—ಮೇಲ್ಭಾಗವಾದ । **ಸಾನು**—ಪರ್ವತದ ತಪ್ಪಲು ಪ್ರದೇಶವನ್ನು । **ಯಾತಯಮಾನಃ**—ಆಶ್ರಯಿಸಿಕೊಂಡು । **ಉರ್ವಿಯಾ**—ಅತ್ಯಂತ ವಿಸ್ತೃತವಾಗಿ ಪ್ರಸರಿಸಿ । **ವಿ ಭಾತಿ**—ಅತಿಶಯವಾಗಿ ಪ್ರಕಾಶಿಸುತ್ತದೆ.

॥ ಭಾವಾರ್ಥ ॥

ಪ್ರಕಾಶಯುತನಾದ ಎಲೈ ಅಗ್ನಿಯೇ, ನಿನ್ನ ಶುಭ್ರಗಳಾದ ಯಾವ ಪ್ರಭೆಗಳು ಭೂಮಿಯಲ್ಲಿರುವ ಓಷಧ್ಯಾದಿ ಗಳನ್ನು ಛೇದಿಸುತ್ತವೆಯೋ ಎಂದರೆ ದಹಿಸುತ್ತವೆಯೋ ಆ ರಶ್ಮಿಗಳು ಕಡಿವಾಣಗಳನ್ನು ಕಳಚಿಬಿಟ್ಟ ಅಶ್ವಗಳಂತೆ ಎಲ್ಲಾ ಕಡೆಗಳಲ್ಲೂ ಸಂಚರಿಸುತ್ತವೆ. ಇದೇ ಕಾಲದಲ್ಲಿ ನಿನ್ನ ಭ್ರಮಣಾತ್ಮಕವಾದ ಜ್ವಾಲಾಸಮೂಹಗಳು ನಾನಾರೂಪಾ ತ್ಮಕವಾದ ಪೃಥ್ವಿಯ ಮೇಲ್ಭಾಗವಾದ ಪರ್ವತದ ತಪ್ಪಲು ಪ್ರದೇಶವನ್ನು ಆಶ್ರಯಿಸಿಕೊಂಡು ಅತ್ಯಂತ ವಿಸ್ತೃತವಾಗಿ ಪ್ರಸರಿಸಿ ಅತಿಶಯವಾಗಿ ಪ್ರಕಾಶಿಸುತ್ತದೆ.

## English Translation.

Resplendent Agni, your bright rays, horses let loose (from the rein), shear the earth ; your (band of flame), mounting above the high-lands of the many-tinted (earth), blazes fiercely.

॥ ಸಂಹಿತಾಪಾಠಃ ॥

ಅಧ ಜಿಹ್ವಾ ಪಾಪತೀತಿ ಪ್ರ ವೃಷ್ಣೋ ಗೋಷುಯುಧೋ ನಾಶನಿಃ ಸೃಜಾನಾ।
ಶೂರಸ್ಯೇವ ಪ್ರಸಿತಿಃ ಕ್ಷಾತಿರಗ್ನೇರ್ದುರ್ವರ್ತುರ್ಭೀಮೋ ದಯತೇ ವನಾನಿ॥

॥ ಪದಪಾಠಃ ॥

**ಅಧ । ಜಿಹ್ವಾ । ಪಾಪತೀತಿ । ಪ್ರ । ವೃಷ್ಣಃ । ಗೋಷುಽಯುಧಃ । ನ । ಅಶನಿಃ । ಸೃಜಾನಾ ।**
**ಶೂರಸ್ಯಽಇವ । ಪ್ರಽಸಿತಿಃ । ಕ್ಷಾತಿಃ । ಅಗ್ನೇಃ । ದುಃಽವರ್ತುಃ । ಭೀಮಃ । ದಯತೇ । ವನಾನಿ ॥ ೫ ॥**

॥ ಸಾಯಣಭಾಷ್ಯಂ ॥

**ಅಧಾಪಿ ಚ ವೃಷ್ಣೋ ವರ್ಷಿತುರಗ್ನೇರ್ಜಿಹ್ವಾ ಜ್ವಾಲಾ ಪ್ರ ಪಾಪತೀತಿ। ಪ್ರಕರ್ಷೇಣ ಪುನಃಪುನಃ ಪತತಿ । ಗಚ್ಛತಿ । ತತ್ರ ದೃಷ್ಟಾಂತಃ । ಗೋಷುಯುಧೋ ನಾಶನಿಃ ಸೃಜಾನಾ । ಅಸುರಪ್ರಹೃತಾಸು ಗೋಷು ಯುಧ್ಯನ್ನಿಂದ್ರೋ ಗೋಷುಯುತ್। ತಸ್ಮಾತ್ಸೃಜ್ಯಮಾನಾಶನಿರ್ವಜ್ರ ಇವ । ತಥಾ ಶೂರಸ್ಯೇವ ಶೌರ್ಯೋಪೇತಸ್ಯ ನರಸ್ಯ ಪ್ರಸಿತಿಃ ಪ್ರಬಂಧನಂ ಯಥಾನ್ಯೈರ್ದುಃಸಹಮೇವಮಗ್ನೇಃ ಕ್ಷಾತಿರ್ಜ್ವಾಲಾ ಸೋಢುಮಶಕ್ಯೇತ್ಯರ್ಥಃ॥ ಕ್ಷೀಯಂತೇ ದಹ್ಯಂತೇಽಸ್ಯಾಮೋಷಧಿವನಸ್ಪತಯ ಇತಿ ಕ್ಷಾಯತೇರಧಿಕರಣೇ ಕ್ತಿನ್ ॥ ಅಪಿ ಚ ದುರ್ವರ್ತುರ್ವಾರಕೋಽನ್ಯೈರ್ವಾರಯಿತುಮಶಕ್ಯೋ ಭೀಮೋ ಭಯಂಕರೋಽಗ್ನಿರ್ವನಾನಿ ದಯತೇ । ದಹತಿ ॥ ದಯತಿರತ್ರ ದಹತಿಕರ್ಮಾ ॥**

॥ ಪ್ರತಿಪದಾರ್ಥ ॥

**ಅಧ**—ಮತ್ತು । **ವೃಷ್ಣಃ**—ವೃಷ್ಟಿಕಾರಕನಾದ ಅಗ್ನಿಯ । **ಜಿಹ್ವಾ**—ಜ್ವಾಲೆಯು । **ಸೃಜಾನಾ**—ಪ್ರಹತವಾದ । **ಗೋಷುಯುಧಃ**—ಗೋಪಾಲಕನಾದ ಇಂದ್ರನ । **ಅಶನಿಃ ನ**—ವಜ್ರಾಯುಧದಂತೆ । **ಪ್ರ ಪಾಪತೀತಿ**—ಅತಿಶಯವಾದ ವೇಗದಲ್ಲಿ ಬೀಳುತ್ತದೆ (ಪ್ರಸರಿಸುತ್ತದೆ) । **ಶೂರಸ್ಯೇವ**—ವೀರನ । **ಪ್ರಸಿತಿಃ**—ಪ್ರಹಾರದಂತೆ । **ಅಗ್ನೇಃ**—ಅಗ್ನಿಯ । **ಕ್ಷಾತಿಃ**—ಜ್ವಾಲೆಯು (ಸಹಿಸಲಸಾಧ್ಯವಾದುದಾಗಿದೆ)। **ದುರ್ವರ್ತುಃ**—ಯಾರಿಂದಲೂ ತಡೆಯಲಾರದ ಶಕ್ತಿಯುಳ್ಳವನೂ। **ಭೀಮಃ**—ಭಯಂಕರನೂ ಆದ ಅಗ್ನಿಯು । **ವನಾನಿ**—ವನವೃಕ್ಷಗಳನ್ನು । **ದಯತೇ**—ದಹಿಸುತ್ತಾನೆ.

॥ ಭಾವಾರ್ಥ ॥

ವೃಷ್ಟಿಕಾರಕನಾದ ಅಗ್ನಿಯ ಜ್ವಾಲೆಯು ಗೋಪಾಲಕನಾದ ಇಂದ್ರನಿಂದ ಪ್ರಹತವಾದ ವಜ್ರಾಯುಧದಂತೆ ಅತಿಶಯವಾದ ವೇಗದಲ್ಲಿ ಪ್ರಸರಿಸುತ್ತದೆ. ವೀರನ ಪ್ರಹಾರದಂತೆ ಅಗ್ನಿಯ ಜ್ವಾಲೆಯು ಸಹಿಸಲಸಾಧ್ಯವಾದುದಾಗಿದೆ. ಯಾರಿಂದಲೂ ತಡೆಯಲಾರದ ಶಕ್ತಿಯುಳ್ಳವನೂ, ಭಯಂಕರನೂ ಆದ ಅಗ್ನಿಯು ವನವೃಕ್ಷಗಳನ್ನು ದಹಿಸುತ್ತಾನೆ.

## English Translation.

The flame of the showerer. (Agni), repeatedly descends like the hurled thunderbolt of the rescuer of the cattle : like the prowess of a hero is the destroying (energy) of Agni: irresistible and fearful, he consumes the forests.

॥ ಸಂಹಿತಾಪಾಠಃ ॥

ಆ ಭಾನುನಾ ಪಾರ್ಥಿವಾನಿ ಜ್ರಯಾಂಸಿ ಮಹಸ್ತೋದಸ್ಯ ಧೃಷತಾ ತತಂಥ ।
ಸ ಬಾಧಸ್ವಾಪ ಭಯಾ ಸಹೋಭಿಃ ಸ್ಪೃಧೋ ವನುಷ್ಯನ್ವನುಷೋ ನಿ
ಜೂರ್ವ ॥ ೬ ॥

॥ ಪದಪಾಠಃ ॥

ಆ । ಭಾನುನಾ । ಪಾರ್ಥಿವಾನಿ । ಜ್ರಯಾಂಸಿ । ಮಹಃ । ತೋದಸ್ಯ । ಧೃಷತಾ । ತತಂಥ ।
ಸಃ । ಬಾಧಸ್ವ । ಅಪ । ಭಯಾ । ಸಹಃಽಭಿಃ । ಸ್ಪೃಧಃ । ವನುಷ್ಯನ್ । ವನುಷಃ । ನಿ । ಜೂರ್ವ ॥ ೬ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಭಾನುನಾ ದೀಪ್ತ್ಯಾ ಪಾರ್ಥಿವಾನಿ ಪೃಥಿವ್ಯಾಂ ಭವಾನಿ ಜ್ರಯಾಂಸಿ ॥ ಜ್ರಯತಿರ್ಗತಿಕರ್ಮಾ ॥ ಗಂತವ್ಯಾನಿ ಸ್ಥಾನಾನಿ ಮಹೋ ಮಹತಸ್ತೋದಸ್ಯ ಪ್ರೇರಕಸ್ಯ ಧೃಷತಾ ಧರ್ಷಕೇಣ ರಶ್ಮಿನಾ ಸಹಾ ತತಂಥ । ಆಸ್ತೃಣಾಸಿ । ಆಚ್ಛಾದಯಸಿ । ಸ ತ್ವಂ ಭಯಾ ಭಯಕರಣಾನ್ಯಪ ಬಾಧಸ್ವ । ತಥಾ ಸಹೋಭಿರಭಿಭವನಸಮರ್ಥೈರ್ಬಲೈಸ್ತೇಜೋಭಿರ್ವಾ ಸ್ಪೃಧಃ ಸ್ಪರ್ಧಮಾನಾನ್ವನುಷ್ಯನ್ ಹಿಂಸನ್ ವನುಷೋ ಹಿಂಸಕಾನ್ । ಶತ್ರೂನಿತಿ । ನಿ ಜೂರ್ವ । ನಿಜಹಿ ॥ ಜೂರ್ವತಿರ್ಹಂತಿಕರ್ಮಾ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಮಹಃ**—ಮಹತ್ಸ್ವರೂಪವುಳ್ಳವನೂ । **ತೋದಸ್ಯ**—ಪ್ರೇರಕನೂ ಆದ ನಿನ್ನ **ಧೃಷತಾ**—ಶಕ್ತಿಯುತವಾದ । **ಭಾನುನಾ**—ಕಾಂತಿಗಳಿಂದ । **ಪಾರ್ಥಿವಾನಿ**—ಪೃಥಿವೀ ಸಂಬಂಧವಾದ । **ಜ್ರಯಾಂಸಿ**—ಗಂತವ್ಯ ಪ್ರದೇಶಗಳನ್ನು । **ಆ ತತಂಥ**—ವ್ಯಾಪಿಸಿ ಹೊದ್ದಿಸಿದ್ದೀಯೆ । **ಸಃ**—ಅಂತಹ ನೀನು । **ಭಯಾ**—ನಮಗೆ ಭಯಜನಕವಾದ ಎಲ್ಲಾ ಮೂಲಗಳನ್ನೂ । **ಅಪ ಬಾಧಸ್ವ**—ನಾಶಪಡಿಸು । **ಸಹೋಭಿಃ**—ಶಕ್ತಿಯುತವಾದ ತೇಜಸ್ಸುಗಳಿಂದ । **ಸ್ಪೃಧಃ**—ನಮ್ಮೊಡನೆ ಹೋರಾಡುವ ಶತ್ರುಗಳನ್ನು । **ವನುಷ್ಯನ್**—ಹಿಂಸಿಸುತ್ತಾ । **ವನುಷಃ**—ನಮಗೆ ಹಿಂಸಕರಾದ ಶತ್ರುಗಳನ್ನು । **ನಿಜೂರ್ವ**—ಜಯಿಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಮಹತ್ಸ್ವರೂಪವುಳ್ಳವನೂ ಪ್ರೇರಕನೂ ಆದ ನಿನ್ನ ಶಕ್ತಿಯುತವಾದ ಪ್ರಭೆಗಳಿಂದ ಪೃಥಿವೀ ಸಂಬಂಧವಾದ ಗಂತವ್ಯಪ್ರದೇಶಗಳನ್ನೆಲ್ಲಾ ವ್ಯಾಪಿಸಿ ಹೊದ್ದಿಸಿದ್ದೀಯೆ. ಅಂತಹ ನೀನು ನಮಗೆ ಭಯಜನಕವಾದ ಎಲ್ಲಾ ಮೂಲಗಳನ್ನೂ ನಾಶಪಡಿಸು. ಶಕ್ತಿಯುತವಾದ ತೇಜಸ್ಸುಗಳಿಂದ ನಮ್ಮೊಡನೆ ಹೋರಾಡುವ ಶತ್ರುಗಳನ್ನು ಹಿಂಸಿಸುತ್ತಾ ನಮಗೆ ಹಿಂಸಕರಾದ ಶತ್ರುಗಳನ್ನು ಜಯಿಸು.

## English Translation.

You overspread the accessible places of the earth with light by the energy of your powerful, exciting (influence) : you disperse all perils and, baffling (our) adversaries by your mighty (powers), destroy (our) foes.

॥ ಸಂಹಿತಾಪಾಠಃ ॥

ಸ ಚಿತ್ರ ಚಿತ್ರಂ ಚಿತಯಂತಮಸ್ಮೇ ಚಿತ್ರಕ್ಷತ್ರ ಚಿತ್ರತಮಂ ವಯೋಧಾಂ ।
ಚಂದ್ರಂ ರಯಿಂ ಪುರುವೀರಂ ಬೃಹಂತಂ ಚಂದ್ರ ಚಂದ್ರಾಭಿರ್ಗೃಣತೇ
ಯುವಸ್ವ ॥ ೭ ॥

॥ ಪದಪಾಠಃ ॥

ಸಃ । ಚಿತ್ರ । ಚಿತ್ರಂ । ಚಿತಯಂತಂ । ಅಸ್ಮೇ ಇತಿ । ಚಿತ್ರಽಕ್ಷತ್ರ । ಚಿತ್ರಽತಮಂ । ವಯಃಽಧಾಂ ।
ಚಂದ್ರಂ । ರಯಿಂ । ಪುರುಽವೀರಂ । ಬೃಹಂತಂ । ಚಂದ್ರ । ಚಂದ್ರಾಭಿಃ । ಗೃಣತೇ । ಯುವಸ್ವ ॥ ೭ ॥

॥ ಸಾಯಣಭಾಷ್ಯಂ ॥

ಉಖಾಸಂಭರಣೀಯೇಷ್ಟಾವಗ್ನೇಃ ಕ್ಷತ್ರವತಃ ಸ ಚಿತ್ರೇತ್ಯೇಷಾ ಯಾಜ್ಯಾ । ಸೂತ್ರಿತಂ ಚ । ಸ ಚಿತ್ರ ಚಿತ್ರಂ ಚಿತಯಂತಮಸ್ಮೇ ಅಗ್ನಿರೀಶೇ ಬೃಹತಃ ಕ್ಷತ್ರಿಯಸ್ಯ । ಆ. ೪-೧ । ಇತಿ ॥

ಹೇ ಚಿತ್ರ ಚಾಯನೀಯ ಹೇ ಚಿತ್ರಕ್ಷತ್ರ ವಿಚಿತ್ರಬಲ ಚಾಯನೀಯಧನ ವಾ ಹೇ ಚಂದ್ರಾಹ್ಲಾದಕಾಗ್ನೇ ಸ ತಾದೃಶಸ್ತ್ವಂ ಚಂದ್ರಾಭಿರಾಹ್ಲಾದಯಿತ್ರೀಭಿಃ ಸ್ತುತಿಭಿರ್ಗೃಣತೇ ಸ್ತುವತೇ। ವಚನವ್ಯತ್ಯಯಃ। ಸ್ತುವದ್ಭ್ಯೋಽಸ್ಮೇ ಅಸ್ಮಭ್ಯಂ ದಾತುಂ ರಯಿಂ ಧನಂ ಯುವಸ್ವ । ಪೃಥಕ್ಕುರು । ಕೀದೃಶಂ ರಯಿಂ । ಚಿತ್ರಂ ಚಾಯನೀಯಂ ಚಿತಯಂತಂ ಜ್ಞಾಪಯಂತಂ। ಧನೇನ ಹಿ ಪುರುಷಃ ಪ್ರಖ್ಯಾಯತೇ । ಚಿತ್ರತಮಮತಿಶಯೇನಾಶ್ಚರ್ಯಭೂತಂ ವಯೋಧಾಂ ವಯಸೋಽನ್ನಸ್ಯ ಧಾತಾರಂ ಪ್ರದಾತಾರಂ ಚಂದ್ರಮಾಹ್ಲಾದಕಂ ಪುರುವೀರಂ ಪುರುಭಿರ್ಬಹುಭಿರ್ವೀರೈಃ ಪುತ್ರಪೌತ್ರಾದಿಭಿರ್ಯುಕ್ತಂ ಬೃಹಂತಂ ಮಹಾಂತಂ । ಈದೃಶಂ ಧನಮಸ್ಮಭ್ಯಂ ಪ್ರಯಚ್ಛೇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಚಿತ್ರ**—ಆಕರ್ಷಕನೂ । **ಚಿತ್ರಕ್ಷತ್ರ**—ವಿಚಿತ್ರವಾದ ಬಲವುಳ್ಳವನೂ । **ಚಂದ್ರ**—ಆಹ್ಲಾದಕ ಸ್ವರೂಪವುಳ್ಳವನೂ ಆದ ಎಲೈ ಅಗ್ನಿಯೇ । **ಸಃ**—ಅಂತಹ ನೀನು । **ಚಂದ್ರಾಭಿಃ**—ಆಹ್ಲಾದವನ್ನುಂಟುಮಾಡುವ ಸ್ತುತಿಗಳಿಂದ ।

**ಗೃಣತೇ**—ನಿನ್ನನ್ನು ಸ್ತುತಿಸುವ । **ಅಸ್ಮೇ**—ನಮಗೆಲ್ಲಾ । **ಚಿತ್ರಂ**—ಆಕರ್ಷಕವಾದುದೂ । **ಚಿಕಯಂತಂ**—(ಕರ್ತವ್ಯವನ್ನು) ಜ್ಞಾಪಿಸತಕ್ಕದ್ದೂ । **ಚಿತ್ರತಮಂ**—ಆಶ್ಚರ್ಯಕಾರಕವಾದುದೂ । **ವಯೋಧಾಂ**—ಅನ್ನವನ್ನು ಕೊಡತಕ್ಕದ್ದೂ । **ಚಂದ್ರಂ**—ಸಂತೋಷದಾಯಕವಾದುದೂ । **ಪುರುವೀರಂ**—ವೀರಪುತ್ರಾದಿಗಳಿಂದ ಕೂಡಿದುದೂ । **ಬೃಹಂತಂ**—ಪ್ರಭೂತವಾದುದೂ ಆದ । **ರಯಿಂ**—ಧನವನ್ನು । **ಯುವಸ್ವ**—ವಿಭಾಗಮಾಡಿಟ್ಟಿರು.

ಆಕರ್ಷಕನೂ, ವಿಚಿತ್ರವಾದ ಬಲವುಳ್ಳವನೂ, ಆಹ್ಲಾದಕಸ್ವರೂಪವುಳ್ಳವನೂ ಆದ ಎಲೈ ಅಗ್ನಿಯೇ, ಪ್ರಸಿದ್ಧನಾದ ನೀನು ಆಹ್ಲಾದವನ್ನುಂಟುಮಾಡುವ ಸ್ತುತಿಗಳಿಂದ ನಿನ್ನನ್ನು ಸ್ತುತಿಸುವ ನಮಗೆಲ್ಲಾ ಆಕರ್ಷಕವಾದುದೂ, ನಮ್ಮ ಕರ್ತವ್ಯವನ್ನು ಜ್ಞಾಪಿಸತಕ್ಕದ್ದೂ, ಆಶ್ಚರ್ಯಕಾರಕವಾದುದೂ, ಅನ್ನವನ್ನು ಕೊಡತಕ್ಕದ್ದೂ, ವೀರಪುತ್ರಾದಿಗಳಿಂದ ಕೂಡಿದುದೂ, ಪ್ರಭೂತವಾದುದೂ ಆದ ಧನವನ್ನು ವಿಭಾಗಮಾಡಿ ಇಟ್ಟಿರು. (ಕೊಡು)

## English Translation.

Wonderful Agni, of wonderful strength, bestower of delight, grant to us, and to him who praises you with gratifying (praises), most wonderful riches, conferring fame, supplying food, comprehending male descendants, delectable and infinite.

॥ ವಿಶೇಷವಿಷಯಗಳು ॥

ಉಖಾಸಂಭರಣವೆಂಬ ಯಾಗದಲ್ಲಿ ಅಗ್ನಿಯನ್ನುದ್ದೇಶಿಸಿ ಮಾಡುವ ಹೋಮದಲ್ಲಿ ಯಜ್ಞಮಾಡುವ ಯಜಮಾನನು ಕ್ಷತ್ರಿಯನಾಗಿದ್ದರೆ **ಸಚಿತ್ರ** ಎಂಬ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಸ ಚಿತ್ರ ಚಿತ್ರಂ ಚಿಕಯಂತಮಸ್ಮೇ ಅಗ್ನಿರೀಶೇ ಬೃಹತಃ ಕ್ಷತ್ರಿಯಸ್ಯ** ಎಂಬ ಸೂತ್ರದಿಂದ (ಆ. ೪-೧) ವಿವೃತವಾಗಿರುವುದು.

# ಏಳನೆಯ ಸೂಕ್ತವು

ಈ ಸೂಕ್ತದಲ್ಲಿಯೂ ಮುಂದಿನ ಎರಡು ಸೂಕ್ತಗಳಲ್ಲಿಯೂ ವೈಶ್ವಾನರಾಗ್ನಿಯನ್ನು ಸ್ತುತಿಸಲಾಗಿದೆ. ವೈಶ್ವಾನರಾಗ್ನಿಯ ವಿಷಯವಾಗಿ ನಾವು ಹಿಂದೆ ಅನೇಕ ವಿವರಣೆಗಳನ್ನು ಕೊಟ್ಟಿದ್ದರೂ ಯಾಸ್ಕರು ತಮ್ಮ ನಿರುಕ್ತದಲ್ಲಿ ವಿಸ್ತಾರವಾಗಿ ಹೇಳಿರುವ ವಿಷಯಗಳನ್ನೂ ಈ ವಿಷಯದಲ್ಲಿ ಇತರ ಋಷಿಗಳ ಭಿನ್ನಾಭಿಪ್ರಾಯಗಳ ವಿಮರ್ಶೆಯನ್ನೂ ಇಲ್ಲಿ ವಿವರಿಸಲಾಗಿದೆ.

## ಪೀಠಿಕೆ

### ವೈಶ್ವಾನರಾಗ್ನಿಯ ಸೂಕ್ತಪರಿಚಯ.

**ವೈಶ್ವಾನರಃ । ಇತಿ ತ್ರೀಣಿ ಪದಾನಿ । ವೈಶ್ವಾನರಃ ಕಸ್ಮಾದ್ವಿಶ್ವಾನ್ನರಾನ್ನಯತಿ । ವಿಶ್ವ ಏನಂ ನರಾ ನಯಂತೀತಿ ವಾ । ಅಪಿ ವಾ ವಿಶ್ವಾನರ ಏವ ಸ್ಯಾತ್ ಪ್ರತ್ಯೃತಃ ಸರ್ವಾಣಿ ಭೂತಾನಿ ತಸ್ಯ ವೈಶ್ವಾನರಃ ॥** (ನಿ. ೭-೨೧)

ಈಗ ವೈಶ್ವಾನರಶಬ್ದ ವಿವರಣೆಯನ್ನು ಮಾಡುವೆವು. ಈ ವೈಶ್ವಾನರಶಬ್ದವು **ವಿಶ್ವಾನ್ ನರಾನ್ ನಯತಿ** ಎಂಬ ಮೂರು ಪದಗಳ ಅರ್ಥವನ್ನೊಳಗೊಂಡಿರುವ ದೇವತೆಯನ್ನು ಸೂಚಿಸುವ ಶಬ್ದವಾಗಿದೆ. ವೈಶ್ವಾನರನಿಗೆ ಈ ಹೆಸರು ಏತಕ್ಕೆ ಬಂತು ಎಂದರೆ—ಈ ದೇವನು **ವಿಶ್ವಾನ್ ನರಾನ್ ನಯತಿ**—ಸಮಸ್ತ ಜನರನ್ನೂ ಸನ್ಮಾರ್ಗದಲ್ಲಿ ಒಯ್ಯುತ್ತಾನೆ ಎಂದರೆ ಸಮಸ್ತ ಜದರಿಗೂ ಸನ್ಮಾರ್ಗಪ್ರವರ್ತಕನು. ಆದ್ದರಿಂದ ಈ ದೇವನಿಗೆ ವೈಶ್ವಾನರನೆಂದು ಹೆಸರು. ಅಥವಾ—**ವಿಶ್ವ ಏನಂ ನರಾ ನಯಂತೀತಿ ವಾ**—ಅಥವಾ ಸರ್ವರೂ ಈ ದೇವನನ್ನು ತಾವು ಮಾಡುವ ಯಜ್ಞಾದಿಗಳಲ್ಲಿ ಉತ್ತರವೇದಿಗೆ ಒಯ್ಯುವರು ಎಂದರೆ ಯಜ್ಞಗಳಲ್ಲಿ ಅಗ್ನಿಪ್ರಣಯನವೆಂಬ ಕಾರ್ಯವನ್ನು ಮಾಡುವಾಗ ಅಗ್ನಿಯನ್ನು ಮಥನಮಾಡಿ ಉತ್ಪತ್ತಿಮಾಡಿದ ಸ್ಥಾನದಿಂದ ವಿಧ್ಯುಕ್ತವಾಗಿ ಉತರವೇದಿಯ ಬಳಿಗೆ ತೆಗೆದುಕೊಂಡು ಹೋಗಿ ಅಲ್ಲಿ ಸ್ಥಾಪಿಸುವರು. ಅಥವಾ ಸರ್ವರೂ ತಮ್ಮ ತಮ್ಮ ಗೃಹಗಳಲ್ಲಿ ಅಗ್ನಿಯನ್ನು ತೆಗೆದುಕೊಂಡು ಹೋಗಿ ಪಚನಕಾರ್ಯಕ್ಕಾಗಿ ಮಹಾನಸ ಮೊದಲಾದ ಸ್ಥಳಗಳಲ್ಲಿ ಸ್ಥಾಪಿಸುವರು. ಆದುದರಿಂದ ಈ ಅಗ್ನಿಗೆ ವೈಶ್ವಾನರನೆಂದು ಹೆಸರು. ಅಥವಾ ವಿಶ್ವಾನರನೇ ವೈಶ್ವಾನರನು. ಈ ವಿಶ್ವಾನರನು ಸಮಸ್ತ ಪ್ರಾಣಿಗಳ ಶರೀರದಲ್ಲಿ ವ್ಯಾಪಿಸಿ ಜಾಠರಾಗ್ನಿ ರೂಪದಿಂದ ಇದ್ದು ಪ್ರಾಣಿಗಳು ಭುಜಿಸುವ ಆಹಾರಾದಿಗಳನ್ನು ಪಚನಮಾಡುವನು. ಆದುದರಿಂದ ಸರ್ವಪ್ರಾಣಿಗಳ ಶರೀರದಲ್ಲಿರುವ ವಿಶ್ವಾನರನೇ ವೈಶ್ವಾನರಾಗ್ನಿಯು.

**ವೈಶ್ವಾನರಸ್ಯ ಸುಮತೌ ಸ್ಯಾಮ ರಾಜಾ ಹಿಕಂ ಭುವನಾನಾಮಭಿ ಶ್ರೀಃ ।**
**ಇತೋ ಜಾತೋ ವಿಶ್ವಮಿದಂ ವಿಚಷ್ಟೇ ವೈಶ್ವಾನರೋ ಯತತೇ ಸೂರ್ಯೇಣ ॥**
(ಋ. ಸಂ. ೧-೯೮-೧)

ಎಂಬ ಈ ಋಕ್ಕು ವೈಶ್ವಾನರಾಗ್ನಿಯನ್ನು ಸ್ತುತಿಸುವುದು. ನಾವು ವೈಶ್ವಾನರಾಗ್ನಿಯ ಅನುಗ್ರಹಾತ್ಮಕವಾದ ಬುದ್ಧಿಗೆ ಪಾತ್ರರಾಗೋಣ. ಏಕೆಂದರೆ ಈ ವೈಶ್ವಾನರಾಗ್ನಿಯು ರಾಜನು. ರಾಜನು ಸಕಲ ಲೋಕಗಳಿಗೂ ಆಶ್ರಯಭೂತನು. ಈ ಪ್ರಪಂಚದಲ್ಲಿ ಉತ್ಪನ್ನನಾಗಿ ಸಮಸ್ತ ವಿಶ್ವವನ್ನೂ ವೀಕ್ಷಿಸುತ್ತಿರುವನು. ಸೂರ್ಯನಿಂದ ಸಹಿತವಾಗಿ ಎಲ್ಲವನ್ನೂ ವ್ಯಾಪಿಸಿರುವನು ಎಂದು ಈ ಋಕ್ಕಿನ ಮುಖ್ಯಾಭಿಪ್ರಾಯವು.

### ವೈಶ್ವನರಾಗ್ನಿಯು ಯಾರು? ಇವನು ಮಧ್ಯಮಸ್ಥಾನದೇವತೆಯೇ?

**ಇತೋ ಜಾತಃ ಸರ್ವಮಿದಮಭಿವಿಪಶ್ಯತಿ ವೈಶ್ವಾನರಃ ಸಂಯತತೇ ಸೂರ್ಯೇಣ ರಾಜಾ ಯಃ ಸರ್ವೇಷಾಂ ಭೂತಾನಾಮಭಿಶ್ರಯಣೀಯಸ್ತಸ್ಯ ವಯಂ ವೈಶ್ವಾನರಸ್ಯ ಕಲ್ಯಾಣ್ಯಾಂ ಮತೌ ಸ್ಯಾಮೇತಿ । ತತ್ಕೋ-ವೈಶ್ವಾನರಃ । ಮಧ್ಯಮ ಇತ್ಯಾಚಾರ್ಯಾಃ ॥** (ನಿ. ೭-೨೨)

ಎಂದು ಈ ಋಕ್ಕಿನ ನಿರ್ವಚನವು. ಈ ವೈಶ್ವಾನರಾಗ್ನಿಯು ಈ ಲೋಕದಲ್ಲಿಯೇ ಜನಿಸಿ ವಿಶ್ವವೆಲ್ಲವನ್ನೂ ನೋಡಲು ಸಮರ್ಥನಾಗಿರುವನು. ಸೂರ್ಯನಿಂದ ಸಹಿತನಾಗಿ ವಿಶ್ವವೆಲ್ಲವನ್ನೂ ವ್ಯಾಪಿಸಿರುವನು. ಇಂತಹ ವೈಶ್ವಾನರಾಗ್ನಿಯ ಉತ್ತಮವಾದ ಬುದ್ಧಿ ಎಂದರೆ ಅನುಗ್ರಹಕ್ಕೆ ಪಾತ್ರರಾಗೋಣ. ಇವನೇ ರಾಜನು ಮತ್ತು ಸೃಷ್ಟಿಸಲ್ಪಟ್ಟ ಸಮಸ್ತ ಪ್ರಾಣಿವರ್ಗಗಳಿಗೂ ಆಶ್ರಯಭೂತನು. ಆದರೆ ಈ ವೈಶ್ವಾನರನು ಯಾರು? ಇವನ ಸ್ವರೂಪವೇನು? ಎಂದರೆ, ಕೆಲವು ಆಚಾರ್ಯರು ಈ ವೈಶ್ವಾನರನು ಮಧ್ಯಮಸ್ಥಾನದಲ್ಲಿ (ಅಂತರಿಕ್ಷದಲ್ಲಿ) ನೆಲಸಿರುವ ದೇವತೆಯೆಂದು ಹೇಳುವರು. ಏಕೆಂದರೆ ಈ ವೈಶ್ವಾನರನೇ ವೃಷ್ಟಿಗೆ (ಮಳೆಗೆ) ಕಾರಣಭೂತನಾಗಿರುವನು ಎಂದು ಅವರ ಅಭಿಪ್ರಾಯವಿರುವುದು. ಆದುದರಿಂದ ವೃಷ್ಟಿಕರ್ಮ ವಿಷಯದಲ್ಲಿ ಈ ವೈಶ್ವಾನರನ ಪಾತ್ರವನ್ನು ವಿವರಿಸುವ ಋಕ್ಕನ್ನು ಇಲ್ಲಿ ಉದಾಹರಿಸಲಾಗಿದೆ--

**ಪ್ರ ನೂ ಮಹಿತ್ವಂ ವೃಷಭಸ್ಯ ವೋಚಂ ಯಂ ಪೂರವೋ ವೃತ್ರಹಣಂ ಸಚಂತೇ ।**
**ವೈಶ್ವಾನರೋ ದಸ್ಯುಮಗ್ನಿರ್ಜಘನ್ವಾँ ಅಧೂನೋತ್ಕಾಷ್ಠಾ ಅವ ಶಂಬರಂ ಭೇತ್ ॥**

(ಋ. ಸಂ. ೧-೫೯-೬)

ಇಷ್ಟಾರ್ಥಪ್ರದನಾದ ಈ ವೈಶ್ವಾನರಾಗ್ನಿಯ ಮಹಿಮೆಯನ್ನು ನಾನು ವಿಶೇಷವಾಗಿ ವರ್ಣಿಸುವೆನು. ವೃತ್ರಹಂತಕನಾದ ಈ ವೈಶ್ವಾನರಾಗ್ನಿಯನ್ನು ಅನೇಕ ಜನರು ಭಕ್ತಿಯಿಂದ ಸೇವಿಸುವರು. ಈ ವೈಶ್ವಾನರಾಗ್ನಿಯು ದಸ್ಯುವಾದ ವೃತ್ರನನ್ನು ಸಂಹಾರಮಾಡಿದನು ಶಂಬರಾಸುರನನ್ನು (ಮೇಘವನ್ನು) ಸೀಳಿ (ಕೊಂದು) ಮೇಘಗಳಲ್ಲಿ ಸಂಗೃಹೀತವಾಗಿದ್ದ ಉದಕಗಳನ್ನು ಭೂಮಿಯ ಮೇಲೆ ವೃಷ್ಟಿರೂಪದಿಂದ ಉದುರಿ ಬೀಳುವಂತೆ ಮಾಡಿದನು. ಎಂದು ಈ ಋಕ್ಕಿನ ಮುಖ್ಯಾಭಿಪ್ರಾಯವು.

ಈ ಋಕ್ಕಿನ ನಿರ್ವಚನವು--

**ಪ್ರಬ್ರವೀಮಿ ತನ್ಮಹಿತ್ವಂ ಮಹಾಭಾಗ್ಯಂ ವೃಷಭಸ್ಯ ವರ್ಷಿತುರಪಾಂ ಯಂ ಪೂರವಃ ಪೂರಯಿತವ್ಯಾ ಮನುಷ್ಯಾ ವೃತ್ರಹಣಂ ಮೇಘಹನಂ ಸಚಂತೇ ಸೇವಂತೇ ವರ್ಷಕಾಮಾಃ । ದಸ್ಯುರ್ದಸ್ಯತೇಃ ಕ್ಷಯಾರ್ಥಾದುಪದಸ್ಯಂತ್ಯಸ್ಮಿನ್ರಸಾ ಉಪದಾಸಯತಿ ಕರ್ಮಾಣಿ ತಮಗ್ನಿರ್ವೈಶ್ವಾನರೋ ಘ್ನನ್ನವಾಧೂನೋದಪಃ ಕಾಷ್ಠಾ ಅಭಿನಚ್ಛಂಬರಂ ಮೇಘಂ ॥** (ನಿ. ೭-೨೩)

ಎಂದು ಇರುವುದು. ಉದಕ ವೃಷ್ಟಿಯನ್ನು ಸುರಿಸುವ ಈ ವೈಶ್ವಾನರಾಗ್ನಿಯ ಮಹಾಮಹಿಮೆಯನ್ನು (ಸಾಮರ್ಥ್ಯಾತಿಶಯವನ್ನು) ನಾನು ವಿಶೇಷರೀತಿಯಿಂದ ವರ್ಣಿಸುವೆನು. ಇಷ್ಟಾರ್ಥಗಳನ್ನು ಬಯಸುವವರೂ, ವೃಷ್ಟಿಯನ್ನು ಅಪೇಕ್ಷಿಸುವವರೂ ಆದ ಜನರು ಪೂಜ್ಯಭಾವದಿಂದ ವೃತ್ರಾಸುರನನ್ನು (ಮೇಘವನ್ನು) ಧ್ವಂಸಮಾಡುವ ಈ ವೈಶ್ವಾನರಾಗ್ನಿಯನ್ನು ಸ್ತುತ್ಯಾದಿಗಳಿಂದ ಸೇವಿಸುವರು. ದಸ್ಯುಶಬ್ದವು ದಸ್ ನಾಶಮಾಡು ಎಂಬ ಧಾತುವಿನಿಂದ ನಿಷ್ಪನ್ನವಾಗಿ ಉದಕವನ್ನು ಭೂಮಿಯಮೇಲೆ ಬೀಳದಂತೆ ತಡೆದು ನಾಶಗೊಳಿಸುವ ದುಷ್ಟನು ಎಂಬರ್ಥವನ್ನು ಸೂಚಿಸುವುದು. ವೈಶ್ವಾನರಾಗ್ನಿಯು ಇಂತಹ ದಸ್ಯುವಾದ ಶಂಬರನನ್ನು (ಮೇಘವನ್ನು—ಶಂಬರಶಬ್ದವು ಮೇಘನಾಮಗಳಲ್ಲಿ ಪಠಿತವಾಗಿದೆ) ಪ್ರಹರಿಸಿ ಮೇಘದಲ್ಲಿ ಶೇಖರವಾಗಿದ್ದ ಉದಕಗಳನ್ನು ಚದುರಿಸಿ ಭೂಮಿಯಮೇಲೆ ವೃಷ್ಟಿರೂಪದಿಂದ ಬೀಳುವಂತೆ ಮಾಡಿದನು ಎಂದು ಮುಖ್ಯಾಭಿಪ್ರಾಯವು.

## ವೈಶ್ವಾನರನೇ ಆದಿತ್ಯನು ಎಂದು ಪೂರ್ವದ ಯಾಜ್ಞಿಕರ ಮತವು

(ಈ ವಿಷಯದಲ್ಲಿ ಆಕ್ಷೇಪ ಸಮಾಧಾನಗಳು)

**ಅಥಾಸಾವಾದಿತ್ಯ ಇತಿ ಪೂರ್ವೇ ಯಾಜ್ಞಿಕಾಃ । ಏಷಾಂ ಲೋಕಾನಾಂ ರೋಹೇಣ ಸವನಾನಾಂ ರೋಹ ಆಮ್ನಾತೋ ರೋಹಾತ್ ಪ್ರತ್ಯವರೋಹಶ್ಚಿಕೀರ್ಷಿತಸ್ತಾಮನುಕೃತಿಂ ಹೋತಾಗ್ನಿಮಾರುತೇ ಶಸ್ತ್ರೇ ವೈಶ್ವಾನರೀಯೇಣ ಸೂಕ್ತೇನ ಪ್ರತಿಪದ್ಯತೇ ಸೋಽಪಿ ನ ಸ್ತೋತ್ರಿಯಮಾದ್ರಿಯೇತಾಗ್ನೇಯೋ ಹಿ ಭವತಿ । ತತ ಆಗಚ್ಛತಿ ಮಧ್ಯಸ್ಥಾನಾ ದೇವತಾ ರುದ್ರಂ ಚ ಮರುತಶ್ಚ ತತೋಽಗ್ನಿಮಿಹಸ್ಥಾನಮತ್ರೈವ ಸ್ತೋತ್ರಿಯಂ ಶಂಸತಿ ॥**

(ನಿ. ೭-೨೩)

ಯಜ್ಞಾನುಷ್ಠಾನಕರ್ಮಗಳಲ್ಲಿ ಕುಶಲರಾದ ಕೆಲವು ಪೂರ್ವಕಾಲದ ಆಚಾರ್ಯರುಗಳು--ನಮ್ಮ ಕಣ್ಣಿಗೆ ಕಾಣಿಸುತ್ತಿರುವ ಈ ಆದಿತ್ಯನೇ ವೈಶ್ವಾನರನು ಎಂದು ಹೇಳುವರು. ಇದಕ್ಕೆ ಕಾರಣವನ್ನು ಇವರು ಈರೀತಿ ಹೇಳುವರು. ಯಜ್ಞಕರ್ಮಗಳಾದ ಪ್ರಾತಃಸವನಾದಿಗಳಲ್ಲಿ ರೋಹ, ಅವರೋಹ ಎಂದರೆ ಆರೋಹಣ ಪ್ರತ್ಯವರೋಹಣ ಎಂಬ ಕ್ರಮವಿರುವುದು. ಲೋಕಗಳಲ್ಲಿಯೂ ಈರೀತಿ ಇರುವುದು. ಎಂದರೆ ಪೃಥವೀ (ಕೆಳಗಿನಸ್ಥಾನ) ಅಂತರಿಕ್ಷ (ಮಧ್ಯಸ್ಥಾನ) ದ್ಯೌಃ (ಸ್ವರ್ಗಸ್ಥಾನ) ಅದರಂತೆ ಸವನಗಳಲ್ಲಿಯೂ ಪ್ರಾತಃಸವನ. ಮಾಧ್ಯಂದಿನಸವನ, ತೃತೀಯಸವನ ಎಂಬ ಮೂರು ಸವನಗಳಿರುವವು. ಯಜ್ಞಾದಿಗಳಲ್ಲಿ ಹೋತೃವು ಪ್ರಾತಃಸವನಕಾಲದಲ್ಲಿ ಪೃಥಿವೀಸ್ಥಾನ ದೇವತೆಗಳನ್ನು ಮಾಂಧ್ಯದಿನಸವನದಲ್ಲಿ ಮಧ್ಯಸ್ಥಾನ ದೇವತೆಗಳನ್ನೂ, ತೃತೀಯಸವನದಲ್ಲಿ ದ್ಯುಸ್ಥಾನ (ಸ್ವರ್ಗ) ದೇವತೆಗಳನ್ನೂ ಆಹ್ವಾನಿಸಿ ಸ್ತುತಿಸುವನು. ಇದು ಆರೋಹಣಕ್ರಮವು. ಆರೋಹಣವಾದನಂತರ ಪ್ರತ್ಯವರೋಹಣ ಕ್ರಮವು ಇರುವುದು. ಎಂದರೆ ಮೊದಲು ದ್ಯುಸ್ಥಾನದೇವತೆಗಳು, ಅನಂತರ ಮಧ್ಯಮಸ್ಥಾನ ದೇವತೆಗಳು, ಅನಂತರ ಪೃಥಿವೀ ಸ್ಥಾನ ದೇವತೆಗಳು ಕ್ರಮವಾಗಿ ಸ್ತುತಿಸಲ್ಪಡುವರು. ಇದು ಪ್ರತ್ಯವರೋಹಣ ಕ್ರಮವು. ಪ್ರತ್ಯವರೋಹಣ ಕ್ರಮದಲ್ಲಿ ಮೊದಲು ವೈಶ್ವಾನರಾಗ್ನಿಯನ್ನು-**ವೈಶ್ವಾನರಾಯ ಪೃಥುಪಾಜಸೇ** (ಋ. ಸಂ. ೩-೩-೧) ಎಂಬ ಸೂಕ್ತದಿಂದಲೂ, ಅನಂತರ ಮಧ್ಯಸ್ಥಾನದೇವತೆಗಳಾದ ರುದ್ರ ಮತ್ತು ಮರುತ್ತುಗಳನ್ನು **ಆತೇ ಪಿತರ್ಮರುತಾಂ** (ಋ. ಸಂ ೨ ೩೩-೧) ಎಂಬ ಸೂಕ್ತದಿಂದಲೂ ಅನಂತರ ಪೃಥಿವೀಸ್ಥಾನ ದೇವತೆಯಾದ ಅಗ್ನಿಯನ್ನು—**ಯಜ್ಞಾಯಜ್ಞಾವೋ ಅಗ್ನಯೇ** (ಋ. ಸಂ. ೬-೪೮-೧) ಎಂಬ ಸೂಕ್ತದಿಂದಲೂ ಸ್ತುತಿಸುವರು. ಅವರೋಹಣಕ್ರಮದಲ್ಲಿ ಮೊದಲು ವೈಶ್ವಾನರಾಗ್ನಿಯ ಸ್ತುತಿ ಇರುವುದರಿಂದ ಈ ಆದಿತ್ಯನು ದ್ಯುಸ್ಥಾನದೇವತೆಯಾಗಿರುವುದರಿಂದಲೂ ಈ ವೈಶ್ವಾನರಾಗ್ನಿಯೇ ಆದಿತ್ಯನ ಎಂದು ಇವರ ವಾದಸರಣಿಯು.

**ಅಥಾಪಿ ವೈಶ್ವಾನರೀಯೋ ದ್ವಾದಶಕಪಾಲೋ ಭವತ್ಯೇತಸ್ಯ ಹಿ ದ್ವಾದಶವಿಧಂ ಕರ್ಮ ।**

ಇದಲ್ಲದೆ ವೈಶ್ವಾನರಾಗ್ನಿಗೆ ಯಾವಾಗಲೂ ದ್ವಾದಶಕಪಾಲಗಳ ಹವಿಸ್ಸನ್ನು ಹೋಮಮಾಡುವರು. **ಆದಿತ್ಯಂ ದ್ವಾದಶಕಪಾಲಂ** ಎಂದು ಆದಿತ್ಯನಿಗೂ ದ್ವಾದಶಕಪಾಲಗಳ ಹೋಮವು ಉಕ್ತವಾಗಿದೆ. ದ್ವಾದಶಮಾಸಗಳನ್ನು ಸೂಚಿಸುವ ದ್ವಾದಶ ವಿಭಾಗಗಳ ಹೋಮವು ಆದಿತ್ಯನಿಗೆ ಉಕ್ತವಾಗಿರುವಂತೆಯೇ ವೈಶ್ವಾನರಾಗ್ನಿಗೂ ಉಕ್ತವಾಗಿರುವುದು ಆದುದರಿಂದ ಈ ವೈಶ್ವಾನರಾಗ್ನಿಯೇ ಆದಿತ್ಯನು.

**ಅಥಾಪಿ ಬ್ರಾಹ್ಮಣಂ ಭವತ್ಯಸೌ ವಾ ಆದಿತ್ಯೋಽಗ್ನಿರ್ವೈಶ್ವಾನರಃ ॥**

ಇದಲ್ಲದೆ— ಈ ಆದಿತ್ಯನೇ ವೈಶ್ವಾನರಾಗ್ನಿಯು ಎಂದು ಬ್ರಾಹ್ಮಣವಾಕ್ಯವೂ ಇರುವುದು.

**ಅಥಾಪಿ ನಿವಿತ್ ಸೌರ್ಯವೈಶ್ವಾನರೀ ಭವತ್ಯಾ ಯೋ ದ್ಯಾಂ ಭಾತ್ಯಾ ಪೃಥಿವೀಮಿತ್ಯೇಷ ಹಿ ದ್ಯಾದಾಪೃಥಿವ್ಯಾವಾಭಾಸಯತಿ ।**

ನಿವಿನ್ಮಂತ್ರವೆಂದರೆ ಒಂದು ದೇವತೆಯನ್ನು ಸ್ತುತಿಸುವ, ಶಸ್ತ್ರಮಂತ್ರಗಳ ಮಧ್ಯದಲ್ಲಿ ಆ ದೇವತೆಯ ವೈಶಿಷ್ಟ್ಯತೆಯನ್ನು ಸ್ತುತಿಸುವ ಒಂದು ನಿರ್ದಿಷ್ಟವಾದ ಮಂತ್ರವು. ಇದು ಶಸ್ತ್ರಮಂತ್ರಗಳ ಮಧ್ಯದಲ್ಲಿ ಸೇರಿಸಿ ಪಠಿಸುವ ಪ್ರತ್ಯೇಕ ಮಂತ್ರವು. ಇಲ್ಲಿ ಆದಿತ್ಯ ಪರವಾದ ನಿವಿನ್ಮಂತ್ರಗಳನ್ನು ಪಠಿಸುವಾಗ ಸೌರ್ಯವೈಶ್ವಾನರೀಯಮಂತ್ರವನ್ನು ಪಠಿಸುವರು. ಎಂದರೆ ಆ ನಿವಿನ್ಮಂತ್ರವು ಸೂರ್ಯನನ್ನೂ, ವೈಶ್ವಾನರಾಗ್ನಿಯನ್ನೂ ಸ್ತುತಿಸುವುದು. (ಆ ದೇವತೆಗಳ ಗುಣಗಾನ ಮಾಡುವುದು) ಆ ಮಂತ್ರವು --**ಆ ಯೋ ದ್ಯಾಂ ಭಾತ್ಯಾ ಪೃಥಿವೀಂ** ಎಂದು ಪ್ರಾರಂಭವಾಗಿ ಅದರಲ್ಲಿ ದ್ಯಾವಾಪೃಥಿವಿಗಳನ್ನು ತನ್ನ ಸ್ವಪ್ರಕಾಶದಿಂದ ಬೆಳಗುವ ಎಂಬರ್ಥವಿರುವುದು. ದ್ಯಾವಾಪೃಥಿವಿಗಳನ್ನು ಸ್ವಪ್ರಕಾಶದಿಂದ ಬೆಳಗುವವನು ಆದಿತ್ಯನೇ ಆದ್ದರಿಂದ ಈ ಮಂತ್ರಪ್ರತಿಪಾದಿತನಾದ ವೈಶ್ವಾನರಾಗ್ನಿಯೂ ಆದಿತ್ಯನೇ ಎಂದಾಯಿತು.

**ಅಥಾಪಿ ಛಾಂದೋಮಿಕಂ ಸೂಕ್ತಂ ಸೌರ್ಯವೈಶ್ವಾನರಂ ಭವತಿ ದಿವ ಪೃಷ್ಠೋ ಅರೋಚತ ಇತ್ಯೇಷ ಹಿ ದಿವಿ ಪೃಷ್ಠೋ ಅರೋಚತೇತಿ ।**

ಮತ್ತು ಛಾಂದೋಮಿಕಸೂಕ್ತವಾದ **ದಿವಿ ಪೃಷ್ಠೋ ಅರೋಚತ** (ಸಾ. ಸಿಂ. ೩೩-೯೨) ಎಂಬ ಸೂಕ್ತವೂ ಸೌರ್ಯ ವೈಶ್ವಾನರದೇವತಾಕವಾದುದು. ಇದರಲ್ಲಿ ಸ್ವರ್ಗದ ಪೃಷ್ಠಭಾಗದಲ್ಲಿ [(ಕೆಳಭಾಗದಲ್ಲಿ) ಪ್ರಕಾಶಿಸುತ್ತಿರುವನು ಎಂದಿರುವುದು. ಸ್ವರ್ಗದಲ್ಲಿ ಪ್ರಕಾಶಿಸುತ್ತಿರುವವನು ಎಂದರೆ ಆದಿತ್ಯನೇ. ಈ ಸೂಕ್ತದಿಂದಲೇ ವೈಶ್ವಾನರನನ್ನು ಸ್ತುತಿಸಿರುವುದರಿಂದ ಈ ವೈಶ್ಯಾನರಾಗ್ನಿಯೇ ಆದಿತ್ಯನು ಎಂದಾಯಿತು.

**ಅಥಾಪಿ ಹವಿಷ್ಪಾಂತೀಯಂ ಸೂಕ್ತಂ ಸೌರ್ಯವೈಶ್ವಾನರಂ ಭವತಿ ।**

ಮತ್ತು **ಹವಿಷ್ಪಾಂತಮಜರಂ** (ಋ.ಸಂ. ೧೦-೮೮-೧) ಎಂಬ ಹವಿಷ್ಪಾಂತೀಯಸೂಕ್ತಕ್ಕೆ (ಹವಿಸ್ಸನ್ನು ಪಾನಮಾಡುವ ಕಾಲದಲ್ಲಿ ಪಠಿಸುವ ಸೂಕ್ತ) ಸೂರ್ಯ ಮತ್ತು ವೈಶ್ವಾನರಾಗ್ನಿಗಳು ದೇವತೆಯು ಎಂದರೆ ಈ ಸೂಕ್ತವು ಸೌರ್ಯ ವೈಶ್ವರಾಗ್ನಿ ದೇವತಾಕವು. ಈ ಸೂಕ್ತದ—

**ವಿಶ್ವಸ್ಮಾ ಅಗ್ನಿಂ ಭುವನಾಯ ದೇವಾ ವೈಶ್ವಾನರಂ ಕೇತುಮಹ್ನಾಮಕೃಣ್ವನ್ ।**

(ಋ. ಸಂ. ೧೦-೮೮-೨)

ಎಂಬ ಋಕ್ಕಿನಲ್ಲಿ—ದೇವತೆಗಳು, ಸಮಸ್ತ ಲೋಕಕ್ಕೂ ಬೆಳಕನ್ನುಂಟುಮಾಡುವುದಕ್ಕೋಸ್ಕರ ಈ ವೈಶ್ವಾನರಾಗ್ನಿಯನ್ನು ಅಹಸ್ಸುಗಳನ್ನು (ದಿನಗಳನ್ನೂ, ಹಗಲುಗಳನ್ನೂ) ಕಲ್ಪಿಸುವಂತೆ ನಿಯಮಿಸಿದರು ಎಂದಿದೆ. ಅಹಸುಗಳನ್ನುಂಟುಮಾಡುವವನು ಸೂರ್ಯನೇ ಆದ್ದರಿಂದಲೂ ಈ ವೈಶ್ವಾನರಾಗ್ನಿಯೂ ಅಹಸ್ಸುಗಳನ್ನುಂಟುಮಾಡುವ ಸಾಮರ್ಥ್ಯವುಳ್ಳವನಾದ್ದರಿಂದಲೂ ಈ ವೈಶ್ವಾನರಾಗ್ನಿಯೂ, ಆದಿತ್ಯನೂ ಒಂದೇ ವ್ಯಕ್ತಿಯು ಎಂದರೆ ಈ ವೈಶ್ವಾನರಾಗ್ನಿಯೇ ಆದಿತ್ಯನು ಇವೆಲ್ಲವೂ ಪೂರ್ವಾಚಾರ್ಯರಾದ ಯಾಜ್ಞಿಕರ ಮತವು.

## ವೈಶ್ವಾನರನೇ ಪಾರ್ಥಿವಾಗ್ನಿಯು(ಆದಿತ್ಯನಲ್ಲ) ಎಂಬ ಶಾಕಪೂಣಿಯವರ ಮತವು.

(ಈ ವಿಷಯದಲ್ಲಿ ಆಕ್ಷೇಪಸಮಾಧಾನಗಳು)

**ಅಯಮೇವಾಗ್ನಿರ್ವೈಶ್ವಾನರ ಇತಿ ಶಾಕಪೂಣಿಃ । ವಿಶ್ವಾನರಾವೇತೇ ಉತ್ತರೇ ಜ್ಯೋತಿಷೀ ವೈಶ್ವಾನರೋಽಯಂ ಯತ್ತಾಭ್ಯಾಂ ಜಾಯತೇ । ಕಥಂ ತ್ವಯಮೇತಾಭ್ಯಾಂ ಜಾಯತ ಇತಿ ಯತ್ರ ವೈದ್ಯುತಃ ಶರಣಮಭಿಹಂತಿ ಯಾವದನುಪಾತ್ತೋ ಭವತಿ ಮಧ್ಯಮಧರ್ಮೈವ ತಾವದ್ಭವತ್ಯುದಕೇಂಧನಃ ಶರೀರೋಪಶಮನ ಉಪಾದೀಯಮಾನ ಏವಾಯಂ ಸಂಪದ್ಯತ ಉದಕೋಪಶಮನಃ ಶರೀರದೀಪ್ತಿಃ ॥**

ಈ ಪಾರ್ಥಿವಾಗ್ನಿಯೇ ವೈಶ್ವಾನರಾಗ್ನಿಯೆಂದು ಶಾಕಪೂಣಿ ಎಂಬ ಆಚಾರ್ಯರ ಮತವು. ಏಕೆಂದರೆ ದ್ಯುಸ್ಥಾನದಲ್ಲಿರುವ ಆದಿತ್ಯಪ್ರಕಾಶ, ಮಧ್ಯಮಸ್ಥಾನದಲ್ಲಿರುವ ವೈದ್ಯುತಪ್ರಕಾಶ ಎಂಬ ಎರಡು ಪ್ರಕಾಶಗಳಿಂದ (ವಿಶ್ವಾನರಾಗ್ನಿಗಳಿಂದ) ಪಾರ್ಥಿವಾಗ್ನಿಯು ಉತ್ಪನ್ನವಾಗುವುದು. ಆದುದರಿಂದ ವಿಶ್ವಾನರಾಗ್ನಿಗಳಿಂದ ಉತ್ಪನ್ನವಾದ ಅಗ್ನಿಗೆ ವೈಶ್ವಾನರಾಗ್ನಿಯೆಂದು ಹೆಸರು. ಎಂದರೆ ಪಾರ್ಥಿವಾಗ್ನಿಯೇ ವೈಶ್ವಾನರಾಗ್ನಿಯು ಆದಿತ್ಯಪ್ರಕಾಶ, ವೈದ್ಯುತಪ್ರಕಾಶಗಳೆಂಬ ಎರಡು ಜ್ಯೋತಿಗಳಿಂದ ಪಾರ್ಥಿವಾಗ್ನಿಯು ಹೇಗೆ ಉತ್ಪನ್ನವಾಗುವುದು ಎಂದರೆ ಅದನ್ನು ವಿವರಿಸುವರು. ಸ್ಥಾನದಲ್ಲಿಯೂ, ಸ್ವಭಾವದಲ್ಲಿಯೂ ವ್ಯತ್ಯಾಸವನ್ನು ಹೊಂದದೆ ಇರುವ ಆದಿತ್ಯನ ಜ್ಯೋತಿಯು ಪ್ರಥಮಧರ್ಮವೆನಿಸುವುದು. ಎಂದರೆ ಈ ಆದಿತ್ಯಜ್ಯೋತಿಯು ಇದ್ದಲ್ಲಿಯೇ ಇದ್ದು ತನ್ನ ರಶ್ಮಿಗಳ ಮೂಲಕ ಸಮುದ್ರಾದಿ ಜಲಾಶಯಗಳ ಉದಕಗಳನ್ನು ಹೀರಿ ಆ ಉದಕಗಳನ್ನು ಮೇಘಗಳನ್ನಾಗಿ ಪರಿವರ್ತಿಸುವುದು ಇದು ಮೊದಲನೇ ಜ್ಯೋತಿಯ ಕಾರ್ಯವು. ಇನ್ನು ವೈದ್ಯುತಾಗ್ನಿಯು ಎರಡನೆಯದೆಂದು ಹೇಳಲ್ಪಡುವುದು. ಈ ವೈದ್ಯುತಾಗ್ನಿಯ ಸ್ವಭಾವವು ಮಧ್ಯಮಧರ್ಮ ಎಂದರೆ ಬೇರೆಯಾಗಿರುವುದು. ಈ ವೈದ್ಯುತಾಗ್ನಿಯು ಉದಕಗಳ (ಮೇಘಗಳ) ಮಧ್ಯದಲ್ಲಿ ಸಂಚರಿಸುವ ಸ್ವಭಾವವುಳ್ಳದ್ದೂ ಮತ್ತು ಜನರಿಗೆ ಆಶ್ರಯಭೂತವಾದ ವೃಕ್ಷ, ಗೃಹ ಮೊದಲಾದುವನ್ನು ಹೊಡೆದು ನಾಶಪಡಿಸುವ ಸ್ವಭಾವವುಳ್ಳದ್ದು ಎಂದರೆ ಈ ವೈದ್ಯುತಾಗ್ನಿಯು ಉದಕಗಳಲ್ಲಿ ಸಂಚರಿಸಲು ಸಾಮರ್ಥ್ಯವುಳ್ಳದ್ದಾಗಿರುವುದರಿಂದ (ಸಾಧಾರಣಾಗ್ನಿಯನ್ನು ಆರಿಸುವಂತೆ) ಉದಕದಿಂದ ಇದನ್ನು ಶಮನಗೊಳಿಸಲು (ಆರಿಸಲು) ಸಾಧ್ಯವಿಲ್ಲ ಮತ್ತು ಸಾಧಾರಣಾಗ್ನಿಯು ವೃಕ್ಷ, ಮರ ಮೊದಲಾದ ವಸ್ತುಗಳಿಂದ ಉದ್ದೀಪ್ತವಾಗಿ ಉರಿಯತೊಡಗುವುದು. ಆದರೆ ವೈದ್ಯುತಾಗ್ನಿಯು ವೃಕ್ಷಾದಿಗಳಿಗೆ ಸ್ಪರ್ಶವಾದರೆ ಅದು ಅಲ್ಲಿಯೇ ಶಮನವಾಗುವುದು ಎಂದರೆ ಅದರ ಶಕ್ತಿಯು ಅಲ್ಲಿಗೇ ಸಮಾಪ್ತಿಯಾಗುವುದು. ವೃಕ್ಷಾದಿಗಳಿಂದ ಅಭಿವೃದ್ಧಿಯಾಗುವುದಿಲ್ಲ. ಮತ್ತು ಈ ವೈದ್ಯುತಾಗ್ನಿಯನ್ನು ಹಸ್ತಾದಿಗಳಿಂದ ಹಿಡಿದುಕೊಳ್ಳಲಾಗುವುದಿಲ್ಲ. ಇದು ವೈದ್ಯುತಾಗ್ನಿಯ ಸ್ವಭಾವವು. ಆದರೆ ಪಾರ್ಥಿವಾಗ್ನಿಯ (ಸಾಧಾರಣಾಗ್ನಿಯ) ಸ್ವಭಾವವು ಇದಕ್ಕೆ ತೀರಾ ವಿರುದ್ಧವಾಗಿದೆ. ಪಾರ್ಥಿವಾಗ್ನಿಯನ್ನು ಕಾಷ್ಠಾದಿಗಳಿಂದ ವೃದ್ಧಿಪಡಿಸಬಹುದು. ಉದಕಗಳಿಂದ ಶಮನಗೊಳಿಸಬಹುದು ಹಸ್ತಾದಿಗಳಿಂದ ಧರಿಸಬಹುದು. ಇವು ಪಾರ್ಥಿವಾಗ್ನಿಯ ಸ್ವಭಾವಗುಣಗಳು ದ್ಯುಸ್ಥಾನಜ್ಯೋತಿ ಮತ್ತು ಮಧ್ಯಸ್ಥಾನಜ್ಯೋತಿ ಎಂಬ ಎರಡು ಜ್ಯೋತಿಗಳಿಂದ ಪಾರ್ಥಿವಾಗ್ನಿಯ ಉತ್ಪತ್ತಿಯಾಗಿದೆಯೆಂಬ ವಿಷಯದಲ್ಲಿ ವಿವರಣೆಯು ಅವಶ್ಯಕವು. ದ್ಯುಸ್ಥಾನಜ್ಯೋತಿಯಾದ ಆದಿತ್ಯನು ತನ್ನ ರಶ್ಮಿಗಳ ಮೂಲಕ ಸಮುದ್ರಾದಿ ಜಲಾಶಯಗಳ ಉದಕಗಳನ್ನು ಆಕರ್ಷಿಸಿ ಮೇಘಗಳಾಗಿ ಪರಿವರ್ತಿಸುವನು. ಆ ಮೇಘಗಳಲ್ಲಿ ಗೋಚರಿಸುವ ವೈದ್ಯುತಾಗ್ನಿಯು ವೃಕ್ಷಾದಿಗಳಿಗೆ ಸ್ಪರ್ಶಿಸುವಾಗ ಪಾರ್ಥಿವಾಗ್ನಿಯು ಉತ್ಪನ್ನವಾಗಿ ಉರಿಯುವುದೆಂಬ

ವಿಷಯವು ಲೋಕಪ್ರಸಿದ್ಧವಾಗಿದೆ. ಆದುದರಿಂದ ದ್ಯುಸ್ಥಾನಜ್ಯೋತಿ ಮತ್ತು ಮಧ್ಯಸ್ಥಾನಜ್ಯೋತಿಗಳೆರಡರಿಂದಲೂ ಪಾರ್ಥಿವಾಗ್ನಿಯು ಇಲ್ಲಿ ಉತ್ಪತ್ತಿಯಾಗುವುದೆಂದು ಇಲ್ಲಿ ವಿವರಿಸಿದೆ. ಆದ್ದರಿಂದ ವಿಶ್ವಾನರಾಗ್ನಿಗಳಾದ ಎರಡು ಜ್ಯೋತಿಗಳಿಂದ ಉತ್ಪನ್ನವಾದ ಪಾರ್ಥಿವಾಗ್ನಿಗೆ ವೈಶ್ವಾನರಾಗ್ನಿಯೆಂದು ಹೆಸರು.

**ಅಥಾದಿತ್ಯಾದುದೀಚೀಪ್ರಥಮಸಮಾವೃತ್ತೆ ಆದಿತ್ಯೇ ಕಂಸಂ ವಾ ಮಣಿಂ ವಾ ಪರಿಮೃಜ್ಯ ಪ್ರತಿಸ್ವರೇ ಯತ್ರ ಶುಷ್ಕಗೋಮಯಮಸಂಸ್ಪರ್ಶಯನ್ ಧಾರಯತಿ ಯತ್ ಪ್ರದೀಪ್ಯತೇ ಸೋಽಯಮೇವ ಸಂಪದ್ಯತೇ ।**

ಆದಿತ್ಯನಿಂದ ಪಾರ್ಥಿವಾಗ್ನಿಯು ಉತ್ಪತ್ತಿಯಾಗುವ ವಿಷಯದಲ್ಲಿ ಇನ್ನೊಂದುದಾಹರಣೆಯನ್ನು ಕೊಡುವರು. ಸೂರ್ಯನು ಅಂತರಿಕ್ಷದಲ್ಲಿ ಉತ್ತರದಿಕ್ಕಿಗಭಿಮುಖವಾಗಿ ಬಂದಾಗ ಎಂದರೆ ಮಧ್ಯಾಹ್ನಸಮಯದಲ್ಲಿ ಬಹಳ ತಾಪ ಯುಕ್ತನಾಗಿರುವಾಗ ಚೆನ್ನಾಗಿ ಥಳಥಳಿಸುವ ತಾಮ್ರದ ತಗಡನ್ನಾಗಲಿ, ಕನ್ನಡಿಯನ್ನಾಗಲಿ ಸೂರ್ಯನಿಗೆ ಎದುರಾಗಿ ಹಿಡಿದು ಅದರ ರಶ್ಮಿಗಳು ಕೇಂದ್ರೀಕೃತವಾಗಿ (ಒಟ್ಟುಗೂಡಿ) ನೇರದಮೇಲೆ ಇಟ್ಟಿರುವ ಒಣಗಿದ ಬೆರಣಿಯ ಪುಡಿಯ ಮೇಲೆ ಬೀಳುವಂತೆ ಮಾಡಿದರೆ ತಕ್ಷಣವೇ ಅಗ್ನಿಯು ಹೊತ್ತಿಕೊಳ್ಳುವುದು. ಎಂದರೆ ಆದಿತ್ಯನಿಂದ ಪಾರ್ಥಿವಾಗ್ನಿಯ ಉತ್ಪತ್ತಿಯಾಗುವುದು ಎಂಬುದಕ್ಕೆ ಇದೂ ಒಂದು ಉದಾಹರಣೆಯು.

**ಅಥಾಪ್ಯಾಹ—ವೈಶ್ವಾನರೋ ಯತತೇ ಸೂರ್ಯೇಣ—ನ ಚ ಪುನರಾತ್ಮನಾತ್ಮಾ ಸಂಯತ-ತೇಽನ್ಯೇನೈವಾನ್ಯಃ ಸಂಯತತ ಇತಿ ಇಮಮಾದಧಾತ್ಯಮುತೋಽಮುಷ್ಯ ರಶ್ಮಯಃ ಪ್ರಾದುರ್ಭವಂತೀತೋಽಸ್ಯಾರ್ಚಿಷಸ್ತಯೋರ್ಭಾಸೋಃ ಸಂಸಂಗಂ ದೃಷ್ಟ್ವೈವಮವಕ್ಷ್ಯತ್ ।**

ಹಿಂದೆ ಹೇಳಿದ ಉದಾಹರಣೆಯಲ್ಲಿ—**ವೈಶ್ವಾನರೋ ಯತತೇ ಸೂರ್ಯೇಣ ।** ಎಂಬ ವಾಕ್ಯದಲ್ಲಿ ವೈಶ್ವಾನರಾಗ್ನಿಯು ಸೂರ್ಯನೊಡನೆ ಸೇರಿ ವಿಸ್ತೃತನಾಗುವನು ಎಂದರೆ ಎಲ್ಲವನ್ನೂ ವ್ಯಾಪಿಸುವನು ಎಂಬರ್ಥವನ್ನು ಮಂತ್ರದ್ರಷ್ಟೃವಾದ ಋಷಿಯು ಹೇಳಿದಾನೆ. ಸೂರ್ಯನ ಸ್ಥಾನವು ವ್ಯತ್ಯಸ್ತವಾಗುವುದಿಲ್ಲವಾದ್ದರಿಂದ ಸೂರ್ಯನು ತನ್ನ ಸ್ಥಾನದಿಂದ ಮುಂದಕ್ಕೆ ವೈಶ್ವಾನರಾಗ್ನಿಯೊಡನೆ ಹೋಗಿ ವ್ಯಾಪಿಸುವನು ಎಂಬುದು ಅಸಂಭವವು. ಒಂದು ವಸ್ತುವು ಒಂದೇ ಕಾಲದಲ್ಲಿ ಒಂದು ಸ್ಥಾನದಲ್ಲಿರಬಹುದೇ ಹೊರತು ಅಲ್ಲಿಯೂ ಇದ್ದು ಮುಂದಕ್ಕೆ ಹೋಗಲು ಸಾಧ್ಯವಿಲ್ಲ. ಅದರ ಜತೆಗೆ ಬೇರೆ ವಸ್ತುವು ಸೇರಿದರೆ ಮಾತ್ರ ಬೇರೆ ಸ್ಥಳವನ್ನು ವ್ಯಾಪಿಸಬಲ್ಲುದು. ಆದ್ದರಿಂದ ಇಲ್ಲಿ ಸೂರ್ಯನೇ ಬೇರೆ, ವೈಶ್ವಾನರಾಗ್ನಿಯೇ ಬೇರೆ, ಇಬ್ಬರೂ ಸೇರಿ ಎಲ್ಲವನ್ನೂ ವ್ಯಾಪಿಸಲು ಸಮರ್ಥರು. ಇಲ್ಲಿ ಪಾರ್ಥಿವಾಗ್ನಿಯನ್ನು ಇಲ್ಲಿಯೇ (ಭೂಮಿಯಲ್ಲಿಯೇ) ಹೊತ್ತಿಸುವರು. ಆದಿತ್ಯನ ಪ್ರಕಾಶವು ದ್ಯುಲೋಕದಿಂದ ರಶ್ಮಿಗಳ ಮೂಲಕ ಹೊರಟು ಭೂಮಿಯಲ್ಲಿರುವ ಪಾರ್ಥಿವಾಗ್ನಿಯನ್ನು ಸಂಧಿಸುವುದು. ಎಂದರೆ ಸೂರ್ಯನ ಪ್ರಕಾಶವೂ, ಅಗ್ನಿಯ ಪ್ರಕಾಶವೂ ಒಂದಾಗಿ ಸೇರಿ ಆ ಪ್ರಕಾಶವು ರಶ್ಮಿಗಳ ಮೂಲಕ ಎಲ್ಲೆಲ್ಲಿಯೂ ಹರಡುವುದು ಎಂಬ ಅಭಿಪ್ರಾಯವನ್ನೇ ಮಂತ್ರದ್ರಷ್ಟೃವಾದ ಋಷಿಯು ಮನಸ್ಸಿನಲ್ಲಿಟ್ಟುಕೊಂಡು **ವೈಶ್ವಾನರೋ ಯತತೇ ಸೂರ್ಯೇಣ** ಎಂಬ ವಾಕ್ಯವನ್ನು ಹೇಳಿರುವನು

**ಅಥ ಯಾನ್ಯೇತಾನ್ಯೌತ್ತಮಿಕಾನಿ ಸೂಕ್ತಾನಿ ಭಾಗಾನಿ ವಾ ಸಾವಿತ್ರಾಣಿ ವಾ ಸೌರ್ಯಾಣಿ ವಾ ಪೌಷ್ಣಾನಿ ವಾ ವೈಷ್ಣವಾನಿ ವಾ ವೈಶ್ವದೇವ್ಯಾನಿ ವಾ ತೇಷು ವೈಶ್ವಾನರೀಯಾಃ ಪ್ರವಾದಾ**

**ಅಥವಿಷ್ಯನ್ನಾದಿತ್ಯಕರ್ಮಣಾ ಚೈನಮುಸ್ತೋಷ್ಯನ್ನಿತ್ಯುದೇಷೀತ್ಯಸ್ತಮೇಷೀತಿ ವಿಪರ್ಯೇಷೀತಿ ॥ ಆಗ್ನೇಯೇಷ್ವೇವ ಹಿ ಸೂಕ್ತೇಷು ವೈಶ್ವಾನರೀಯಾಃ ಪ್ರವಾದಾ ಭವಂತಿ । ಅಗ್ನಿಕರ್ಮಣಾ ಚೈನಂ ಸ್ತೌತೀತಿ ಪಚಸೀತಿ ವಹಸೀತಿ ॥**

ಒಂದುವೇಳೆ ವೈಶ್ವಾನರನೇ ಆದಿತ್ಯನಾಗಿದ್ದಪಕ್ಷದಲ್ಲಿ ಆದಿತ್ಯ ಅಥವ ಸವಿತೃಸಂಬಂಧವಾದ ಸೂಕ್ತಗಳಲ್ಲಿಯೂ ಅಥವಾ ಋಕ್ಕುಗಳಲ್ಲಿಯೂ ಅಥವಾ ಸೂರ್ಯ, ಪೂಷಾ, ವಿಷ್ಣು, ವಿಶ್ವೇದೇವತೆಗಳು ಪ್ರತಿಪಾದಿತರಾಗಿರುವ ಸೂಕ್ತಗಳಲ್ಲಿಯೂ ವೈಶ್ವಾನರಾಗ್ನಿಗೆ ಆದಿತ್ಯಪರವಾದ ಗುಣಗಳು, ವೈಶಿಷ್ಟ್ಯಗಳು ಎಂದರೆ (ಸೂರ್ಯನ ವಿಷಯದಲ್ಲಿ ಹೇಳುವಂತೆ) ನೀನು ಉದಯಿಸುತ್ತೀಯೆ, ಮುಳುಗುತ್ತೀಯೆ, ಅಂತರಿಕ್ಷದಲ್ಲಿ ಸಂಚರಿಸುತ್ತೀಯೆ ಎಂದು ಮೊದಲಾದ ಅರ್ಥಬೋಧಕಗಳಾದ ವಾಕ್ಯಾದಿಗಳಿಂದ ಸ್ತುತಿಸಲ್ಪಡಬೇಕಾಗಿದ್ದಿತು. ಆದರೆ ಹಾಗಿಲ್ಲ ಅಗ್ನಿಸಂಬಂಧವಾದ ಸೂಕ್ತಗಳಲ್ಲಿ ಮಾತ್ರ ಅಗ್ನಿಯ ಗುಣಗಳಾದ ಹವಿರ್ವಹನ, ಪಾಚನ ದಹನ ಮೊದಲಾದ ಕ್ರಿಯೆಗಳನ್ನು ವರ್ಣಿಸುವ ವಾಕ್ಯಗಳೇ ವೈಶ್ವಾನರಾಗ್ನಿಗೂ ಅನ್ವಯಿಸುವಂತೆ ಹೇಳಲ್ಪಟ್ಟಿದೆ. ಎಂದರೆ ಅಗ್ನಿಯ ಗುಣಗಳನ್ನೇ ವೈಶ್ವಾನರಾಗ್ನಿಗೂ ಅನ್ವಯಿಸಿ ವರ್ಣಿಸಿದೆ. ಆದ್ದರಿಂದ ವೈಶ್ವಾನರಾಗ್ನಿಯು ಪಾರ್ಥಿವಾಗ್ನಿಯೇ ಹೊರತು ಆದಿತ್ಯನಲ್ಲ

**ಯಥೋ ಏತದ್ವರ್ಷಕರ್ಮಣಾ ಹ್ಯೇನಂ ಸ್ತೌತೀತ್ಯಸ್ಮಿನ್ನಪ್ಯೇತದುಪಪದ್ಯತೇ ।**
**ಸಮಾನಮೇತದುದಕಮುಚ್ಚೈತ್ಯವ ಚಾಹಭಿಃ ।**
**ಭೂಮಿಂ ಪರ್ಜನ್ಯಾ ಜಿನ್ವಂತಿ ದಿವಂ ಜಿನ್ವಂತ್ಯಗ್ನಯಃ ॥**

(ಋ. ಸಂ. ೧-೧೬೪ ೫೧)

**ಇತಿ ಸಾ ನಿಗದವ್ಯಾಖ್ಯಾತಾ ॥**

(ನಿ. ೭-೨೩)

ಈ ವೈಶ್ವಾನರಾಗ್ನಿಯನ್ನು ವೃಷ್ಟಿಕರ್ಮಕ್ಕೆ ಪ್ರೇರಕನನ್ನಾಗಿ ಸ್ತುತಿಸುವ ಮಂತ್ರಗಳಿರುವವು. ಆದುದರಿಂದ ವೃಷ್ಟಿ ಕರ್ಮಕ್ಕೆ ಆದಿತ್ಯನು ಪ್ರೇರಕನಾದುದರಿಂದ ವೈಶ್ವಾನರಾಗ್ನಿಗೂ ಆದಿತ್ಯನಗುಣಗಳಿದ್ದಂತಾಯಿತು ಆದುದರಿಂದ ವೈಶ್ವಾನರಾಗ್ನಿಯೇ ಆದಿತ್ಯನು ಎಂದು ಹೇಳಬಹುದಲ್ಲವೇ? ಎಂದರೆ, ಹಾಗಲ್ಲ. ಹಗಲುಗಳು ರಾತ್ರಿಕಳೆದನಂತರ ಮತ್ತೆ ಮತ್ತೆ ಪ್ರಾಪ್ತವಾಗುವಂತೆ ಉದಕಗಳು ಭೂಮಿಯಿಂದ ಮೇಲಕ್ಕೂ (ಅಂತರಿಕ್ಷಕ್ಕೂ) ಅಂತರಿಕ್ಷದಿಂದ ಭೂಮಿಗೂ ಮತ್ತೆ ಮತ್ತೆ ಬರುತ್ತಿರುವವು. ಆದುದರಿಂದ ಉದಕಗಳಿಗೂ, ಹಗಲುಗಳಿಗೂ ಸಮಾನಧರ್ಮವಿದ್ದಂತಾಯಿತು. ಆದ್ದರಿಂದ ಭೂಮಿಯನ್ನು ವೃಷ್ಟ್ಯುದಕದಿಂದ ಪರ್ಜನ್ಯದೇವತೆಯು ತೃಪ್ತಿಪಡಿಸುವನು. ಸ್ವರ್ಗವನ್ನು ಅಗ್ನಿಗಳು ತೃಪ್ತಿ ಪಡಿಸುವವು. ಅಗ್ನಿಯು ಸ್ವರ್ಗವನ್ನು ತೃಪ್ತಿಪಡಿಸುವುದು ಹೇಗೆಂದರೆ—ಯಜ್ಞದಲ್ಲಿ ಯಜಮಾನನು ಅಗ್ನಿಯಲ್ಲಿ ಹೋಮಮಾಡುವ ಹವಿರಾದಿಗಳು ಸೂಕ್ಷ್ಮರೂಪದಿಂದ ಎಂದರೆ ಧೂಮಾಕಾರದಿಂದ ದೇವಯೋಗ್ಯವಾದ ರೂಪವನ್ನು ಹೊಂದಿ ದೇವತೆಗಳಿಗೆ ತೃಪ್ತಿಯನ್ನುಂಟುಮಾಡುವವು. ದೇವತೆಗಳು ಪ್ರೀತರಾಗಿ ಭೂಲೋಕನಿವಾಸಿಗಳಿಗೆ ವೃಷ್ಟಿಯ ಮೂಲಕ ತೃಪ್ತಿಯನ್ನುಂಟುಮಾಡುವವರು. ಇದಲ್ಲದೆ—**ಅಗ್ನೌ ಪ್ರಾಸ್ತಾಹುತಿಃ ಸಮ್ಯಗಾದಿತ್ಯಮುಪತಿಷ್ಠತೇ** ಎಂಬ ವಾಕ್ಯಾನುಸಾರವಾಗಿ ಅಗ್ನಿಯಲ್ಲಿ ಅರ್ಪಿಸಿದ ಆಹುತಿಯು ಸ್ವರ್ಗದಲ್ಲಿರುವ ಆದಿತ್ಯನನ್ನು ಸಂತೋಷಗೊಳಿಸುತ್ತದೆ ಎಂದಿರುವುದರಿಂದ ಅಗ್ನಿಯು ಸ್ವರ್ಗ ಅಥವಾ ಆದಿತ್ಯನನ್ನು ತೃಪ್ತಿಪಡಿಸಿದಂತಾಯಿತು ವೃಷ್ಟಿಯು ಭೂಲೋಕದಿಂದ ಸ್ವರ್ಗಕ್ಕೂ ಸ್ವರ್ಗದಿಂದ ಭೂಮಿಗೂ ಪರಸ್ಪರ ಸಹಾಯಮಾಡುವ ಸಾಧನವಾಯಿತು. ಈ ಕಾರಣಗಳಿಂದ ಅಗ್ನಿ

ಯನ್ನು ಅಥವಾ ವೈಶ್ವಾನರಾಗ್ನಿಯನ್ನು ವೃಷ್ಟಿಕರ್ಮಕ್ಕೆ ಕಾರಣನೆಂದು ಸ್ತುತಿಸಿರುವುದೇ ಹೊರತು ವೈಶ್ವಾನರನೇ ಆದಿತ್ಯನೆಂದು ಇದರಿಂದ ಸ್ಪಷ್ಟಪಡುವುದಿಲ್ಲ. ಈ ಋಕ್ಕಿನ ಅಭಿಪ್ರಾಯವು ಸ್ಪಷ್ಟವಾಗಿರುವುದರಿಂದ ಹೆಚ್ಚು ವಿವರಣೆಯ ಅವಶ್ಯಕತೆಯಿಲ್ಲ.

**ಕೃಷ್ಣಂ ನಿಯಾನಂ ಹರಯಃ ಸುಪರ್ಣಾ ಅಪೋ ವಸಾನಾ ದಿವಮುತ್ಪತಂತಿ ।**
**ತ ಆವವೃತ್ರನ್ತ್ಸದನಾದೃತಸ್ಯಾದಿದ್ಘೃತೇನ ಪೃಥಿವೀ ವ್ಯುದ್ಯತೇ ॥**

(ಋ. ಸಂ. ೧-೧೬೪-೪೭)

**ಕೃಷ್ಣಂ ನಿರಯಣಂ ರಾತ್ರಿರಾದಿತ್ಯಸ್ಯ ಹರಯಃ ಸುಪರ್ಣಾ ಹರಣಾ ಆದಿತ್ಯರಶ್ಮಯಸ್ತೇ ಯದಾಮುತೋಽರ್ವಾಂಚಃ ಪರ್ಯಾವರ್ತಂತೇ ಸಹಸ್ಥಾನಾದುದಕಸ್ಯಾದಿತ್ಯಾದಥ ಘೃತೇನೋದಕೇನ ಪೃಥಿವೀ ವ್ಯುದ್ಯತೇ ಘೃತಮಿತ್ಯುದಕನಾಮ ಜಿಘರ್ತೇಃ ಸಿಂಚತಿಕರ್ಮಣಃ ॥**

(ನಿ. ೭-೨೪)

ಉದಕವನ್ನು ವಹಿಸಿರತಕ್ಕವೂ, ಶ್ರೇಷ್ಠವಾದ ಸಂಚಾರವುಳ್ಳವೂ ಆದ ರಶ್ಮಿಗಳು ಕಪ್ಪುಬಣ್ಣವುಳ್ಳದ್ದೂ, ನಿಯತವಾದ ಗತಿಯುಳ್ಳದ್ದೂ ಆದ ಮೇಘವನ್ನು (ಅಥವಾ ರಾತ್ರೆಯನ್ನು) ಉದಕದಿಂದ ಆಚ್ಛಾದಿತವಾಗುವಂತೆ ಮಾಡಿ ಎಂದರೆ ಉದಕದಿಂದ ಕೂಡಿ ದ್ಯುಲೋಕಾಭಿಮುಖವಾಗಿ ಮೇಲಕ್ಕೆ ಪ್ರಸರಿಸುತ್ತವೆ. ಪುನಃ ಅವು ಉದಕದ ಸ್ಥಾನವಾದ ಆದಿತ್ಯನಿಂದ ಹಿಂತಿರುಗುತ್ತವೆ. ಒಡನೆಯೇ ಪೃಥ್ವಿಯು ಉದಕದಿಂದ ತೋಯಲ್ಪಡುತ್ತದೆ (ನೆನೆಸಲ್ಪಡುತ್ತದೆ).

ನಿರಯಣವೆಂದರೆ ಇಲ್ಲಿ ಸಂಚಾರಮಾರ್ಗವೆಂದು ಹೇಳಬಹುದು. ನಿರ್ಗಮನಮಾರ್ಗವೆಂದು ಈ ಶಬ್ದಕ್ಕೆ ಸಾಧಾರಣವಾದ ಅರ್ಥವಿರುತ್ತದೆ. ಆದಿತ್ಯನ ಸಂಚಾರಮಾರ್ಗಗಳೆರಡು. ಒಂದು ಕೃಷ್ಣವರ್ಣದ್ದು, ಇನ್ನೊಂದು ಶುಕ್ಲವರ್ಣದ್ದು. ಕೃಷ್ಣವರ್ಣದ ಸಂಚಾರಮಾರ್ಗಕ್ಕೆ ರಾತ್ರಿಯೆಂದಾಗಲಿ, ದಕ್ಷಿಣಾಯನವೆಂದಾಗಲಿ, ಅರ್ಥಮಾಡಬಹುದು. ಅಥವಾ ದಕ್ಷಿಣಾಯನ ಸಂಚಾರವನ್ನೇ ಆದಿತ್ಯನ ರಾತ್ರಿಸಂಚಾರವೆಂದು ಹೇಳಬಹುದು. ದುರ್ಗಾಚಾರ್ಯರು ಮೇಲಿನ ನಿರುಕ್ತವಾಕ್ಯಕ್ಕೆ ಈರೀತಿ ವ್ಯಾಖ್ಯಾನವನ್ನು ಬರೆದಿರುತ್ತಾರೆ—

**ನಿಯಾನಂ ನಿರಯಣಂ ನಿರ್ಗತಿಃ (ನಿರ್ಯಾತಿ) ನಿರ್ಗಚ್ಛಂತ್ಯೇತದಿತಿ ನಿಯಾನಂ ವರ್ತ್ಮ ಪಂಥಾಃ । ತಚ್ಚ ಪುನರೇತತ್ । ರಾತ್ರಿಃ ಆದಿತ್ಯಸ್ಯ । ದ್ವೇ ಹ್ಯಸ್ಯಾಯನೇ ಶುಕ್ಲಂ ಚೋತ್ತರಂ ಕೃಷ್ಣಂ ಚ ದಕ್ಷಿಣಂ । ಸಾ ಹಿ ದೈವೀರಾತ್ರಿರಭಿಪ್ರೇತಾ । ತತೋ ಬ್ರವೀತಿ ರಾತ್ರಿರಾದಿತ್ಯಸ್ಯ ಜ್ಯೋತಿಷಃ । ಸ ಏಷ ಭಗವಾನಾದಿತ್ಯೋ ಯದಾ ಜಗದನುಗ್ರಹಾಯ ಗರ್ಭಮುದಕಮಾತ್ಮನ್ಯಾಧಿತ್ಸುರುತ್ತರಾಯಣಂ ಪ್ರತಿಪದ್ಯತೇ ತದೈತೇ ಹರಯಃ ರಸಹರಣಾಃ ಸುಪರ್ಣಾಸ್ತಸ್ಯ ರಶ್ಮಯಃ ಸರ್ವಸ್ಮಾದಸ್ಮಾಲ್ಲೋಕಾದಪೋವಸಾನಾಃ ಆತ್ಮನ್ಯಾಚ್ಛಾದಯಂತಃ ಆದದಾನಾಃ ದಿವಂ ದ್ಯೋತನವಂತಮೇತಮಾದಿತ್ಯಂ ಪ್ರತ್ಯುತ್ಪತಂತಿ ।**

(ನಿರುಕ್ತವ್ಯಾಖ್ಯಾ ೭-೨೪)

ಆದಿತ್ಯನ ಗತಿಯು ಎರಡು ವಿಧವಾಗಿರುತ್ತದೆ. ಒಂದು ಉತ್ತರಾಯಣಕ್ಕೂ ಮತ್ತೊಂದು ದಕ್ಷಿಣಾಯನಕ್ಕೂ ಸಂಬಂಧಿಸಿದುದು. ಒಂದನ್ನು ಶುಕ್ಲವೆಂದೂ ಇನ್ನೊಂದನ್ನು ಕೃಷ್ಣವೆಂದೂ ಕರೆದಿದೆ. ಇಲ್ಲಿ ರಾತ್ರಿಯೆಂಬುದು ಕೃಷ್ಣಾಯನಕ್ಕೆ ಪರ್ಯಾಯವಾದ ಪದವಾಗಿದೆ — **ಕೃಷ್ಣಂ ನಿಯಾನಂ ನಿಯಮನಂ ರಾತ್ರಿಃ । ದೇವಾನಾಂ ಹಿ ರಾತ್ರಿರ್ದಕ್ಷಿ**

**ಣಾಯನಂ । ತತ್ಪ್ರತಿ ತಸ್ಮಿನ್ವರ್ಷಾಕಾಲೇ ಇತ್ಯರ್ಥಃ ।** ದೇವತೆಗಳ ರಾತ್ರಿಕಾಲಕ್ಕೆ ದಕ್ಷಿಣಾಯನವೆಂದು ಹೆಸರು. ಆದಿತ್ಯನು ಉತ್ತರಾಯಣದ ಗತಿಯನ್ನನುಸರಿಸುತ್ತಿದ್ದಾಗ ಅವನ ರಶ್ಮಿಗಳೆಲ್ಲವೂ ಪ್ರಪಂಚದಲ್ಲಿ ಪ್ರಸರಿಸಿ ಎಲ್ಲಾ ಪ್ರದೇಶಗಳಿಂದಲೂ ಉದಕವನ್ನು ಸಂಗ್ರಹಿಸಿ ಈ ರಾತ್ರಿಕಾಲಕ್ಕೆ ಸರಿಯಾಗಿ ಪುನಃ ಆದಿತ್ಯನನ್ನು ಸೇರುವವು. ಇದೇ ವರ್ಷಾಕಾಲವು. ಈ ಕಾಲದಲ್ಲಿ ವೃಷ್ಟಿಯು ಬಹಳವಾಗಿ ಸುರಿಯುವುದು. ಘೃತವೆಂದರೆ ಉದಕಕ್ಕೆ ಹೆಸರು. **ಜಿಘೃತಿ**–ಸಿಂಪಡಿಸು ಎಂಬ ಧಾತುವಿನಿಂದ ಘೃತಶಬ್ದವು ನಿಷ್ಪನ್ನವಾಗಿದೆ

> **ಅಥಾಪಿ ಬ್ರಾಹ್ಮಣಂ ಭವತ್ಯಗ್ನಿರ್ವಾ ಇತೋ ವೃಷ್ಟಿಂ ಸಮೀರಯತಿ ಧಾಮಚ್ಛದಿತಿ ಖಲು ಭೂತ್ವಾ ವರ್ಷತಿ ಮರುತಃ ಸೃಷ್ಟಾಂ ವೃಷ್ಟಿಂ ನಯಂತಿ ।**
>
> **ಯದಾ ಖಲು ವಾಸಾವಾದಿತ್ಯೋಽಗ್ನಿಂ ರಶ್ಮಿಭಿಃ ಪರ್ಯಾವರ್ತತೇಽಥ ವರ್ಷತೀತಿ ।**
>
> **ಯಥೋ ಏತದ್ರೋಹಾತ್ ಪ್ರತ್ಯವರೋಹಿಶ್ಚಿಕೀರ್ಷಿತ ಇತ್ಯಾಮ್ನಾಯವಚನಾದೇತದ್ಭವತಿ ।**
>
> **ಯಥೋ ಏತದ್ವೈಶ್ವಾನರೀಯೋ ದ್ವಾದಶಕಪಾಲೋ ಭವತೀತ್ಯನಿರ್ವಚನಂ ಕಪಾಲಾನಿ ಭವಂತ್ಯಸ್ತಿ ಹಿ ಸೌರ್ಯ ಏಕಕಪಾಲಃ ಪಂಚಕಪಾಲಶ್ಚ ।**
>
> **ಯಥೋ ಏತದ್ಬ್ರಾಹ್ಮಣಂ ಭವತೀತಿ–ಬಹುಭಕ್ತಿವಾದೀನಿ ಹಿ ಬ್ರಾಹ್ಮಣಾನಿ ಭವಂತಿ–ಪೃಥಿವೀ ವೈಶ್ವಾನರಃ ಸಂವತ್ಸರೋ ವೈಶ್ವಾನರೋ ಬ್ರಾಹ್ಮಣೋ ವೈಶ್ವಾನರ ಇತಿ ॥**

ಇದಲ್ಲದೆ ಅನೇಕ ಬ್ರಾಹ್ಮಣವಾಕ್ಯಗಳೂ ಈ ಅರ್ಥವನ್ನು ಸಮರ್ಥಿಸುವವು. ಹೇಗೆಂದರೆ 'ಅಗ್ನಿಯು ಈ ಲೋಕದಿಂದ ಮಳೆಯನ್ನು ಸುರಿಸುತ್ತಾನೆ' ಎಂಬ ಬ್ರಾಹ್ಮಣವಾಕ್ಯವಿದೆ— **ಅಗ್ನೇರ್ವೈ ಧೂಮೋ ಜಾಯತೇ, ಧೂಮಾದಭ್ರಂ, ಅಭ್ರಾತ್ ವೃಷ್ಟಿರಿತಿ ಹ ವಿಜ್ಞಾಯತೇ**—ಅಗ್ನಿಯಿಂದ ಧೂಮವು (ಹೊಗೆಯು) ಉತ್ಪನ್ನವಾಗುವುದು. ಧೂಮದಿಂದ ಮೇಘವೂ ಮೇಘದಿಂದ ವೃಷ್ಟಿಯೂ ಉಂಟಾಗುವುದು ಎಂದು ತಿಳಿಯಬೇಕು ಎಂದರ್ಥವು ಅಥವಾ ಈ ಆದಿತ್ಯನು ಅಗ್ನಿಯನ್ನು ತನ್ನ ರಶ್ಮಿಗಳಿಂದ ಹಿಂತಿರುಗುವಂತೆ ಮಾಡಿದಾಗ ಮಳೆ ಬರುತ್ತದೆ. ಅಥವಾ ರೋಹಪ್ರತ್ಯವರೋಹಕ್ರಮದಿಂದ ಎಂದರೆ ಅಗ್ನಿಯಲ್ಲಿ ಅರ್ಪಿಸಿದ ಆಹುತಿಯ ಸೂಕ್ಷ್ಮರೂಪದಿಂದ ಧೂಮವಾಗಿ ಸ್ವರ್ಗದಲ್ಲಿರುವ ದೇವತೆಗಳಿಗೆ ಸೇರಿ ಅವರು ತೃಪ್ತಿಗೊಂಡು ಆದರಿಂದ ವೃಷ್ಟಿಕರ್ಮವುಂಟಾಗುವುದು ಎಂದು ಹೇಳುವುದಕ್ಕೆ ಬ್ರಾಹ್ಮಣವಾಕ್ಯ ಹೊರತು ಮತ್ಯಾವ ಆಧಾರವೂ ಇಲ್ಲ. ವೈಶ್ವಾನರಾಗ್ನಿಗೆ ದ್ವಾದಶಕಪಾಲವೆಂದೂ ಸೂರ್ಯನಿಗೆ ಏಕ (ಒಂದು) ಕಪಾಲ ಅಥವಾ ಐದು ಕಪಾಲಗಳ ಹವಿಸ್ಸೆಂದೂ ಹೇಳಿರುವುದು ಈ ವಿಷಯಕ್ಕೆ ಸಂಬಂಧಪಟ್ಟಿದ್ದಲ್ಲ. ಅದು ಯಜ್ಞಾಂಗಗಳಾದ ಕಾರ್ಯಗಳಿಗೆ ಮಾತ್ರ ಸಂಬಂಧಪಟ್ಟಿರುವುದು. ಇನ್ನು ಕೆಲವು ಬ್ರಾಹ್ಮಣವಾಕ್ಯಗಳಲ್ಲಿ— **ಪೃಥಿವೀ, ವೈಶ್ವಾನರಃ** ಇತ್ಯಾದಿ ವಾಕ್ಯಗಳಲ್ಲಿ—ಪೃಥವಿಯು ವೈಶ್ವಾನರನು, ಸಂವತ್ಸರವೂ ವೈಶ್ವಾನರನು, ಬ್ರಾಹ್ಮಣನೂ ವೈಶ್ವಾನರನು, ಎಂದು ಹೇಳಿರುವುದು ಸರಿಯಷ್ಟೆ. ಈ ಸಂದರ್ಭದಲ್ಲಿ ಪೃಥವೀ ಮೊದಲಾದ ದೇವತೆಗಳೇ ವೈಶ್ವಾನ್ನರಾಗ್ನಿಯೆಂದಲ್ಲ. ವೈಶ್ವಾನರನು ಪೃಥಿವೀ ಮೊದಲಾದ ದೇವತೆಗಳ ಗುಣಗಳನ್ನು ಹೊಂದಿರುವನೆಂದು ವೈಶ್ವಾನರನ ಗುಣವರ್ಣನೆ ಮಾಡುವುದಕ್ಕಾಗಿ ಹೇಳಿರುವ ಸ್ತುತಿವಾಕ್ಯಗಳು ಎಂದು ತಿಳಿಯಬೇಕು.

> **ಯಥೋ ಏತನ್ನಿವಿತ್ಸಾರ್ಯವೈಶ್ವಾನರೀ ಭವತೀತ್ಯಸ್ಯೈವ ಸಾ ಭವತಿ ಯೋ ವಿಡ್ಭ್ಯೋ ಮಾನುಷೀಭ್ಯೋ ದೀದೇತ್- ಇತ್ಯೇಷ ಹಿ ವಿಡ್ಭ್ಯೋ ಮಾನುಷೀಭ್ಯೋ ದೀಪ್ಯತೇ ।**

**ಯಥೋ ಏತಚ್ಛಾಂದೋಮಿಕಂ ಸೂಕ್ತಂ ಸೌರ್ಯವೈಶ್ವಾನರಂ ಭವತೀತ್ಯಸ್ಯೈವೈತದ್ಭವತಿ ಜಮದಗ್ನಿಭಿರಾಹುತ ಇತಿ । ಜಮದಗ್ನಯಃ ಪ್ರಜಮಿತಾಗ್ನಯೋ ವಾ ಪ್ರಜ್ವಲಿತಾಗ್ನಯೋ ವಾ ತೈರಭಿಹುತೋ ಭವತಿ ॥**　　　　(ನಿ. ೭-೨೪)

ಸೂರ್ಯನನ್ನೂ, ವೈಶ್ವಾನರನನ್ನೂ ಸ್ತುತಿಸತಕ್ಕ ಒಂದು ಸಿವಿತ್ಸೂಕವಿದೆ. ಈ ಸೂಕ್ತವನ್ನು ಅಗ್ನಿಮಾರುತಶಸ್ತ್ರದಲ್ಲಿ ಪಠಿಸುವರು.

**ಅಗ್ನಿರ್ವೈಶ್ವಾನರಃ ಸೋಮಸ್ಯ ಮತ್ಸತ್ । ವಿಶ್ವೇಷಾಂ ದೇವಾನಾಂ ಸಮಿತ್ । ಅಜಸ್ರಂ ದೈವ್ಯಂ ಜ್ಯೋತಿಃ । ಯೋ ವಿಡ್ಭ್ಯೋ ಮಾನುಷೀಭ್ಯೋ ದೀದೇತ್ । ದ್ಯುಷು ಪೂರ್ವಾಸು ದಿದ್ಯುತಾನಃ । ಅಜರ ಉಷಸಾಮನೀಕೇ । ಆ ಯೋ ದ್ಯಾಂ ಭಾತ್ಯಾ ಪೃಥಿವೀಂ । ಊರ್ವಮಂತರಿಕ್ಷಂ । ಜ್ಯೋತಿಷಾ ಯಜ್ಞಾಯ ಶರ್ಮ ಸಂಯತ್ । ಅಗ್ನಿರ್ವೈಶ್ವಾನರ ಇಹ ಶ್ರವದಿಹ ಸೋಮಸ್ಯ ಮತ್ಸತ್ । ಪ್ರೇಮಾಂ ದೇವೋ ದೇವಹೂತಿಮವತು ದೇವ್ಯಾ ಧಿಯಾ । ಪ್ರೇದಂ ಬ್ರಹ್ಮ ಪ್ರೇದಂ ಕ್ಷತ್ರಂ । ಪ್ರೇಮಂ ಸುನ್ವಂತಂ ಯಜಮಾನಮವತು । ಚಿತ್ರಶ್ಚಿತ್ರಾಭಿರೂತಿಭಿಃ । ಶ್ರವದ್ಬ್ರಹ್ಮಣ್ಯಾವಸಾಗಮತ್ ॥**

ಎಂಬ ಈ ಸೂಕ್ತವೇ ಅಗ್ನಿಮಾರುತಶಸ್ತ್ರದಲ್ಲಿ ವೈಶ್ವಾನರಾಗ್ನಿಯನ್ನುದ್ದೇಶಿಸಿ ಪಠಿಸಲ್ಪಡುವುದು. ಈ ಮಂತ್ರದ ಮಧ್ಯದಲ್ಲಿ—**ಯೋ ವಿಡ್ಭ್ಯೋ ಮಾನುಷೀಭ್ಯೋ ದೀದೇತ್**—ಎಂಬ ವಾಕ್ಯವಿದೆ. ಇದಕ್ಕೆ ಈ ದೇವನು ಮಾನವರಾದ ಪ್ರಜೆಗಳಿಗೂ ಉಪಕಾರಾರ್ಥವಾಗಿ ಪ್ರಕಾಶಿಸುವವನು ಸೂರ್ಯನೇ ಆದ್ದರಿಂದ ಇಲ್ಲಿ ಸೂರ್ಯನನ್ನೇ ವೈಶ್ವಾನರ ಎಂಬ ಶಬ್ದದಿಂದ ಸಂಬೋಧಿಸಿದೆ ಆದ್ದರಿಂದ ಸೂರ್ಯನಿಗೂ, ವೈಶ್ವಾನರಾಗ್ನಿಗೂ ವ್ಯತ್ಯಾಸವಿಲ್ಲ ಎಂದರೆ, ಹಾಗಲ್ಲ. ಈ ಮಂತ್ರವು ಅಗ್ನಿಯನ್ನೇ ಉದ್ದೇಶಿಸಿ ಪಠಿತವಾಗಿದೆ. ಯಜ್ಞವೇದಿಯಲ್ಲಿ ಪಾರ್ಥಿವಾಗ್ನಿಯೇ ಯಜ್ಞಮಾಡುವ ಯಜಮಾನರು ಮೊದಲಾದ ಪ್ರಜೆಗಳ ಉಪಕಾರಕ್ಕಾಗಿ ಪ್ರಕಾಶಿಸುತ್ತಿರುವನು ಎಂಬ ಅರ್ಥವೂ ಈ ಮಂತ್ರಕ್ಕೆ ಅನ್ವಯಿಸುವುದು. ಆದ್ದರಿಂದ ವೈಶ್ವಾನರಗ್ನಿಯು ಸೂರ್ಯನಲ್ಲ, ಪಾರ್ಥಿವಾಗ್ನಿಯೇ ಆಗಿರುವನು ಎಂದು ಹೇಳಬೇಕು. ಇವಲ್ಲದೆ ದಶರಾತ್ರವೆಂಬ ಛಾಂದೋಮಿಕ ಯಜ್ಞದಲ್ಲಿ **ಜಮದಗ್ನಿಭಿರಾಹುತಃ** ಎಂಬ ಸೌರ್ಯವೈಶ್ವಾನರಸೂಕ್ತವನ್ನು ಪಠಿಸುವರು. ಈ ಸೂಕ್ತವೂ ಸಹ ಸೂರ್ಯನಿಗೆ ಸಂಬಂಧಪಡುವುದಿಲ್ಲ. ಅಗ್ನಿಗೇ ಅನ್ವಯಿಸುವುದು. ಏಕೆಂದರೆ, **ಜಮದಗ್ನಿ** ಶಬ್ದಕ್ಕೆ ಚೆನ್ನಾಗಿ ಹೊತ್ತಿಸಲ್ಪಟ್ಟು ಧಗಧಗನೆ ಉರಿಯುತ್ತಿರುವ ಅಗ್ನಿಯೆಂದರ್ಥವು. ಯಜ್ಞಾದಿಗಳಲ್ಲಿ ಅಗ್ನಿಯಲ್ಲಿ ಹೋಮಮಾಡುವಾಗ ಅಗ್ನಿಯನ್ನು ಸಮಿದಾಜ್ಯಾದಿದ್ರವ್ಯಗಳಿಂದ ಪ್ರಜ್ವಲಿತವಾಗಿಮಾಡಿ ಚೆನ್ನಾಗಿ ಉರಿಯುತ್ತಿರುವ ಆ ಅಗ್ನಿಯಲ್ಲಿಯೇ ಹೋಮಾದಿಗಳನ್ನು ಮಾಡುವುದು ರೂಢಿಯು. ಆದ್ದರಿಂದ ಇದು ಆದಿತ್ಯ (ಅಥವಾ ಸೂರ್ಯ) ನನ್ನು ನಿರ್ದೇಶಿಸದೆ ಪಾರ್ಥಿವಾಗ್ನಿಯನ್ನೇ ನಿರ್ದೇಶಿಸುವುದೆಂದಭಿಪ್ರಾಯವು.

**ಯಥೋ ಏತದ್ಧವಿಷ್ಪಾಂತೀಯಂ ಸೂಕ್ತಂ ಸೌರ್ಯವೈಶ್ವಾನರಂ ಭವತೀತ್ಯಸ್ಯೈವ ತದ್ಭವತಿ।**
**ಹವಿಷ್ಪಾಂತಮಜರಂ ಸ್ವರ್ವಿದಿ ದಿವಿಸ್ಪೃಶ್ಯಾಹುತಂ ಜುಷ್ಟಮಗ್ನೌ ।**
**ತಸ್ಯ ಭರ್ಮಣೇ ಭುವನಾಯ ದೇವಾ ಧರ್ಮಣೇ ಕಂ ಸ್ವಧಯಾ ಪಪ್ರಥಂತ ॥**

(ಋ. ಸಂ. ೧೦-೮೮-೧)

**ಹವಿರ್ಯೋತ್ಪಾನೀಯಮಜರಂ ಸೂರ್ಯವಿದಿ ದಿವಿಸ್ಪೃಶ್ಯಭಿಹುತಂ ಜುಷ್ಟಮಗ್ನೌ ತಸ್ಯ ಭರಣಾಯ ಚ ಭಾವನಾಯ ಚ ಧಾರಣಾಯ ಚ ಚೈತೇಭ್ಯಃ ಸರ್ವೇಭ್ಯಃ ಕರ್ಮಭ್ಯ ಇಮಮಗ್ನಿಮನ್ನೇನಾಪಪ್ರಥಂತೇತಿ ||** (ನಿ ೭-೨೫)

ಇಲ್ಲವೆ **ಹವಿಷ್ಪಾಂತಮಜರಂ** ಎಂಬ ಸೂಕ್ತವು ಸೌರ್ಯವೈಶ್ವಾನರಾಗ್ನಿದೇವತಾಕವು. ಈ ಸೂಕ್ತದಲ್ಲಿ ಸ್ತುತಿಸ ಲಾಗುವ ವೈಶ್ವಾನರನೇ ಆದಿತ್ಯನು ಎಂದು ಹೇಳುವುದಾದರೆ, ಅದು ಸರಿಯಲ್ಲ ಅಲ್ಲಿ ಹೇಳಿರುವ ವೈಶ್ವಾನರಗ್ನಿಯೇ ಪಾರ್ಥಿವಾಗ್ನಿಯು. ಇದರ ಅರ್ಥವನ್ನು ಪರಿಶೀಲಿಸಿದರೆ ವಿಷಯವು ಸ್ಪಷ್ಟವಾಗುವುದು. ಜರಾರಹಿತವಾದುದೂ ಎಂದರೆ ನಾಶರಹಿತವಾದುದೂ, ಆಹ್ಲಾದಕರವಾದುದೂ ಆದ ಹವಿಸ್ಸನ್ನು ಪಾನಮಾಡುವುದಕ್ಕೆ ಪೂರ್ವದಲ್ಲಿ ತನ್ನ ಪ್ರಕಾಶದಿಂದ ಸ್ವರ್ಗವನ್ನು ಮುಟ್ಟುತ್ತಿರುವ ಮತ್ತು ಸೂರ್ಯನನ್ನು ಚೆನ್ನಾಗಿ ತಿಳಿದಿರುವ ಈ ಅಗ್ನಿಯಲ್ಲಿ ಈ ಹವಿಸ್ಸು ಹೋಮಮಾಡಲ್ಪಡುವುದು. ದೇವತೆಗಳು ಈ ಹವಿಸ್ಸಿನ ಭರಣ, ಧಾರಣ, ಭಾವನಾದಿಕರ್ಮಗಳಿಗಾಗಿ ಅದನ್ನು ಅನ್ನದೊಡನೆ ಸೇರಿಸಿ ವೃದ್ಧಿಪಡಿಸುವರು ಎಂದು ಈ ಋಕ್ಕಿನ ಮುಖ್ಯಾಭಿಪ್ರಾಯವು. ಈ ಸೂಕ್ತದಲ್ಲಿ ಅಥವಾ ಋಕ್ಕಿನಲ್ಲಿ ಉಕ್ತವಾಗಿರುವ ಹವಿಸ್ಸನ್ನು ಪಾನಮಾಡುವುದಕ್ಕೆ ಪೂರ್ವಭಾವಿಯಾಗಿ ಅಗ್ನಿಯಲ್ಲಿ ಹೋಮಮಾಡುವರು. ಈ ಹವಿಸ್ಸು ನಾಶರಹಿತವಾಗಿಯೂ ಮನಸ್ಸಿಗೆ (ಪಾನಮಾಡಲು) ಆಹ್ಲಾದಕರವಾಗಿಯೂ ಇರುವುದು. ಇದನ್ನು ತನ್ನ ಜ್ವಾಲೆಗಳಿಂದ ಆಕಾಶ (ಸ್ವರ್ಗ) ಮುಟ್ಟುತ್ತಿರುವ ಎಂದರೆ ಚೆನ್ನಾಗಿ ಪ್ರಜ್ವಲಿತವಾದ ಮತ್ತು ಸೂರ್ಯನ ವಿಷಯದಲ್ಲಿ ಪ್ರಜ್ಞೆಯುಳ್ಳ ಯಜ್ಞಾಗ್ನಿಯಲ್ಲಿ ಹೋಮಮಾಡುವರು. ಈ ಹವಿಸ್ಸು ಧಾರಣ, ಪೋಷಣ, ಭರಣ, ಭಾವನಾ ಮೊದಲಾದ ಶಕ್ತಿಸಾಮರ್ಥ್ಯಗಳುಳ್ಳದ್ದನ್ನಾಗಿ ಮಾಡುವುದಕ್ಕಾಗಿ ದೇವತೆಗಳು ಇದರ ಜೊತೆಗೆ ಅನ್ನವನ್ನು ಸೇರಿಸಿ ವೃದ್ಧಿಯಾಗುವಂತೆ ಮಾಡುವರು. ಇಲ್ಲಿ ಹವಿಸ್ಸನ್ನು ಹೋಮಮಾಡುವ ವಿಷಯವು ಉಕ್ತವಾಗಿರುವುದರಿಂದ ಹೋಮವು ಅಗ್ನಿಗೇ ಎಂದರೆ ಪಾರ್ಥಿವಾಗ್ನಿಗೇ ಸಂಬಂಧಪಟ್ಟಿದ್ದು, ಸೂರ್ಯನಿಗೆ ಸಂಬಂಧಪಟ್ಟಿದ್ದಲ್ಲ ಅಗ್ನಿಯಲ್ಲಿ ಹೋಮ ಮಾಡುವರೇ ಹೊರತು ಸೂರ್ಯನಲ್ಲಲ್ಲ. ಆದುದರಿಂದ ಈ ಸೂಕ್ತದಲ್ಲಿ ಪ್ರತಿಪಾದಿತನಾದ ವೈಶ್ವಾನರದೇವತೆಯು ಆದಿತ್ಯ ಅಥವಾ ಸೂರ್ಯನಲ್ಲ, ಪಾರ್ಥಿವಾಗ್ನಿಯೆಂದೇ ಹೇಳಬೇಕು.

ಅಥಾಪ್ಯೃಹ--

**ಅಪಾಮುಪಸ್ಥೇ ಮಹಿಷಾ ಅಗೃಭ್ಣತ ವಿಶೋ ರಾಜಾನಮುಪ ತಸ್ಥುರ್ಗ್ಮಿಯಂ |**
**ಆ ದೂತೋ ಅಗ್ನಿರಭರದ್ವಿವಸ್ವತೋ ವೈಶ್ವಾನರಂ ಮಾತರಿಶ್ವಾ ಪರಾವತಃ ||**

(ಋ. ಸಂ. ೬-೮-೪)

**ಅಪಾಮುಪಸ್ಥ ಉಪಸ್ಥಾನೇ ಮಹತ್ಯಂತರಿಕ್ಷಲೋಕ ಆಸೀನಾ ಮಹಾಂತ ಇತಿ ವಾಗೃಹ್ಣತ ಮಾಧ್ಯಮಿಕಾ ದೇವಗಣಾ ವಿಶ ಇವ ರಾಜಾನಮುಪತಸ್ಥುರ್ಗ್ಮಿಯಮೃಗ್ಮಂತಮಿತಿ ವಾರ್ಚನೀಯಮಿತಿ ವಾ ಪೂಜನೀಯಮಿತಿ ವಾಹರದ್ಯಂ ದೂತೋ ದೇವಾನಾಂ ವಿವಸ್ವತ ಆದಿತ್ಯಾದ್ವಿವಸ್ವಾದ್ವಿವಾಸನವಾನ್ ಪ್ರೇರಿತವತಃ ಪರಾಗತಾದ್ವಾಪಿ ವಾಸ್ಯಾಗ್ನೇರ್ವೈಶ್ವಾನರಸ ಮಾತರಿಶ್ವಾನಮಾಹರ್ತಾರಮಾಹ ||**

**ಮಾತರಿಶ್ವಾ ವಾಯುರ್ಮಾತರ್ಯಂತರಿಕ್ಷೇ ಶ್ವಸಿತಿ ಮಾತರ್ಯಾಶ್ವನಿತೀತಿ ವಾ ||**

(ನಿ. ೭-೨೬)

ಮತ್ತು ಈ ವಿಷಯದಲ್ಲಿ ಇನ್ನೊಂದು ಋಕ್ಕಿನ ಉದಾಹರಣೆಯನ್ನು ಹೇಳಿರುವರು. ಉದಕಗಳ ಅಂಕಪ್ರದೇಶದ ಸಮೀಪದಲ್ಲಿ ಎಂದರೆ ವಿಸ್ತಾರವಾದ ಅಂತರಿಕ್ಷಲೋಕದಲ್ಲಿ ಇರುವ ಮಹಾಮಹಿಮರಾದ ಮಾಧ್ಯಮಿಕ (ಅಂತರಿಕ್ಷಸ್ಥ) ದೇವತೆಗಳು ಈ ಅಗ್ನಿಯನ್ನು ಸ್ವಾಗತಿಸಿದರು. ಹೇಗೆಂದರೆ ಪ್ರಜೆಗಳು ತಮ್ಮ ರಾಜನನ್ನು ಯಾವರೀತಿ ಆದರಾತಿಶಯಗಳಿಂದ ಬರಮಾಡಿಕೊಳ್ಳುವರೋ ಅದರಂತೆ ದೇವತೆಗಳು ಮಂತ್ರಪ್ರತಿಪಾದ್ಯನೂ, ಪೂಜ್ಯನೂ, ಗೌರವಾರ್ಹನೂ, ಆದ ಈ ಅಗ್ನಿಯನ್ನು ಸ್ವಾಗತಿಸಿ ಸತ್ಕರಿಸಿದರು. ಅಂತರಿಕ್ಷದಲ್ಲಿ ವಾಸಿಸುವ ಮಾತರಿಶ್ವನು (ವಾಯುವು) ಮೊದಲು ದೇವತೆಗಳಿಂದ ಪ್ರೇರಿತನಾಗಿ ಬಹುದೂರಪ್ರದೇಶದಲ್ಲಿರುವ ಆದಿತ್ಯನಿಂದ ವೈಶ್ವಾನರಾಗ್ನಿಯನ್ನು ತಂದನು. ವೈಶ್ವಾನರಾಗ್ನಿಯು ಮೊದಲು ಅಂತರಿಕ್ಷದಲ್ಲಿ ಮಾತರಿಶ್ವನಿಗೇ ಗೋಚರಿಸಿದನು. ಆ ಮಾತರಿಶ್ವನು ಬಹುದೂರಪ್ರದೇಶದಲ್ಲಿದ್ದ ಆದಿತ್ಯನ ಸಮೀಪದಿಂದ ವೈಶ್ವಾನರಾಗ್ನಿಯನ್ನು ತಂದನು. ಮಾತರಿಶ್ವನೆಂದರೆ ವಾಯುವು. ಈ ವಾಯುವು ಅಂತರಿಕ್ಷದಲ್ಲಿ ವಾಸಮಾಡುವುದರಿಂದಾಗಲಿ, ಅಂತರಿಕ್ಷದಲ್ಲಿ ವೇಗವಾಗಿ ಸಂಚಾರಮಾಡುವುದರಿಂದಾಗಲಿ ವಾಯುವಿಗೆ ಮಾತರಿಶ್ವಾ ಎಂಬ ಹೆಸರು ಬಂದಿರುವುದು. ಇಲ್ಲಿ ಗಮನಿಸಬೇಕಾದ ವಿಷಯವೇನೆಂದರೆ— ಅಂತರಿಕ್ಷ ದೇವತೆಗಳು ಅಗ್ನಿಯನ್ನು ಸೂರ್ಯನಿರುವ ಪ್ರದೇಶದಿಂದ ತಂದರು ಎಂದು ಹೇಳಿದೆ. ಸೂರ್ಯನನ್ನು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ತರಲು ಯಾರಿಂದಲೂ ಸಾಧ್ಯವಿಲ್ಲ. ಅಗ್ನಿಯನ್ನು ಮಾತ್ರ ತರಬಹುದು. ಆದುದರಿಂದ ಇಲ್ಲಿ ವೈಶ್ವಾನರನೆಂದರೆ ಪಾರ್ಥಿವಾಗ್ನಿಯೇ ಉಕ್ತವಾಗಿರುವುದೆಂದು ತಿಳಿಯಬೇಕು. ಇದಲ್ಲದೆ ಅನೇಕ ಮಂತ್ರಗಳಲ್ಲಿ ಸೂರ್ಯನ (ಆದಿತ್ಯನ) ಗುಣಗಳು ವೈಶ್ವಾನರಾಗ್ನಿಗೆ ಉಕ್ತವಾಗಿವೆ— ಹವಿಷ್ಪಾಂತಸೂಕ್ತದ ೧೨ನೆಯ ಋಕ್ಕಾದ **ವಿಶ್ವಸ್ಮಾ ಅಗ್ನಿಂ ಭುವನಾಯ ದೇವಾ ವೈಶ್ವಾನರಂ ಕೇತುಮಹ್ನಾಮಕೃಣ್ವನ್** ಎಂಬ ಮಂತ್ರದಲ್ಲಿ ದೇವತೆಗಳು ವೈಶ್ವಾನರಾಗ್ನಿಯನ್ನು ಅಹಸ್ಸುಗಳಿಗೆ (ಹಗಲುಗಳಿಗೆ, ದಿನಗಳಿಗೆ) ಕರ್ತನನ್ನಾಗಿ ಮಾಡಿದರು ಎಂದು ಹೇಳಿದೆ. ದಿನಗಳಿಗೆ ಕರ್ತನೆಂಬ ಗುಣವು ಸೂರ್ಯನಿಗೆ ಸಲ್ಲತಕ್ಕದ್ದಾದರೂ ಇಲ್ಲಿ ಈ ವೈಶ್ವಾನರಾಗ್ನಿಗೆ ಈ ಗುಣವು ಉಕ್ತವಾಗಿದೆ. ಏಕೆಂದರೆ ಈ ಅಗ್ನಿಯು— **ಅಗ್ನಿಃ ಸರ್ವಾ ದೇವತಾಃ** (ಐ. ಬ್ರಾ. ೨-೧-೨), **ಇಂದ್ರಂ ಮಿತ್ರಂ ವರುಣಮಗ್ನಿಮಾಹುಃ** (೧-೧೬೪-೪೬). ಇತ್ಯಾದಿ ಮಂತ್ರಗಳಲ್ಲಿ ಈ ಅಗ್ನಿಯೇ ಸರ್ವದೇವತಾತ್ಮಕನೆಂದು ಹೇಳಿರುವುದರಿಂದ ಸೂರ್ಯನೇ ಮೊದಲಾದ ಇತರ ದೇವತೆಗಳ ಗುಣಗಳನ್ನು ಅಗ್ನಿಯಲ್ಲಿ ಆರೋಪಿಸುವುದು ಸಾಮಾನ್ಯವಾದುದಾಗಿದೆ. ಆದುದರಿಂದ ವೈಶ್ವಾನರಾಗ್ನಿಯೇ ಪಾರ್ಥಿವಾಗ್ನಿಯು, ಆದಿತ್ಯನಲ್ಲ.

**ಅಥೈನಮೇತಾಭ್ಯಾಂ ಸರ್ವಾಣಿ ಸ್ಥಾನಾನ್ಯಭ್ಯಾಪಾದಂ ಸ್ತೌತಿ ।**
**ಮೂರ್ಧಾ ಭುವೋ ಭವತಿ ನಕ್ತಮಗ್ನಿಸ್ತತಃ ಸೂರ್ಯೋ ಜಾಯತೇ ಪ್ರಾತರುದ್ಯನ್ ।**
**ಮಾಯಾಮೂ ತು ಯಜ್ಞಿಯಾನಾಮೇತಾಮಪೋ ಯತ್ತೂರ್ಣಿಶ್ಚರತಿ ಪ್ರಜಾನನ್ ॥**

(ಋ. ಸಂ. ೧೦-೮೮-೬)

**ಮೂರ್ಧಾ ಮೂರ್ತಮಸ್ಮಿನ್ಧೀಯತೇ ಮೂರ್ಧಾ ಯಃ ಸರ್ವೇಷಾಂ ಭೂತಾನಾಂ ಭವತಿ ನಕ್ತಮಗ್ನಿಸ್ತತಃ ಸೂರ್ಯೋ ಜಾಯತೇ ಪ್ರಾತರುದ್ಯನ್ ಸ ಏವ ಪ್ರಜ್ಞಾಂ ತ್ವೇತಾಂ ಮನ್ಯಂತೇ ಯಜ್ಞಿಯಾನಾಂ ದೇವಾನಾಂ ಯಜ್ಞಸಂಪಾದಿನಾಮಪೋ ಯತ್ಕರ್ಮ ಚರತಿ ಪ್ರಜಾನನ್ ಸರ್ವಾಣಿ ಸ್ಥಾನಾನ್ಯನು ಸಂಚರತೇ ತ್ವರಮಾಣಃ ॥**

(ನಿ. ೭-೨೭)

**ಪಾರ್ಥಿವಾಗ್ನಿ**ಯು ಅನೇಕ ಸನ್ನಿವೇಶಗಳಲ್ಲಿ ಸೂರ್ಯ ಮೊದಲಾದ ಇತರ ದೇವತಾವಿಶೇಷಗಳ ಗುಣವೈಶಿಷ್ಟ್ಯವನ್ನೊಳಗೊಂಡಿರುವಂತೆ ಸ್ತುತಿಸಲ್ಪಟ್ಟಿರುವುದು. ಈ ವಿಷಯದಲ್ಲಿ ನಿರುಕ್ತಕಾರರು ಎರಡು ಋಕ್ಕುಗಳನ್ನು ಉದಾಹರಣೆಯಾಗಿ ಕೊಟ್ಟಿರುವರು—ಸರ್ವಪ್ರಾಣಿವರ್ಗಕ್ಕೂ ಅಗ್ನಿಯು ಜೀವಿಸಲು ಅತ್ಯವಶ್ಯಕವಾಗಿರುವುದು. ಅಗ್ನಿಯಿಲ್ಲದಿದ್ದರೆ (ಶರೀರದಲ್ಲಿರುವ ಶಾಖ, ಇದನ್ನು ವೈಶ್ವಾನರಾಗ್ನಿಯೆಂದು ಕರೆಯುವರು) ಜೀವಿಸುವುದು ಸಾಧ್ಯವಿಲ್ಲ. ಇಂತಹ ಅಗ್ನಿಯು (ಸೂರ್ಯರೂಪದಲ್ಲಿರುವ ಅಗ್ನಿಯು) ರಾತ್ರಿಕಾಲದಲ್ಲಿ ಸಮಸ್ತ ಪ್ರಾಣಿಗಳನ್ನೂ ಒಳಗೊಂಡ ಪ್ರಪಂಚಕ್ಕೆ ಅಧಿಪತಿಯಾಗಿ ಬೆಳಗುವನು. ಪ್ರಾತಃಕಾಲದಲ್ಲಿ ಅದೇ ಅಗ್ನಿಯು ಸೂರ್ಯರೂಪದಿಂದ ಉದಯಿಸುವನು ಇಂತಹ ಅಗ್ನಿಯ ಅಸಾಧಾರಣವಾದ ಶಕ್ತಿಸಾಮರ್ಥ್ಯವನ್ನು ಎಂದರೆ ಹಗಲಿನಲ್ಲಿ ಸೂರ್ಯರೂಪದಿಂದಲೂ ರಾತ್ರಿಯಲ್ಲಿ ಅಗ್ನಿರೂಪದಿಂದಲೂ ಇದ್ದು ತನ್ನ ಕರ್ತವ್ಯಕರ್ಮವನ್ನು ನೆರವೇರಿಸುತ್ತಿರುವುದನ್ನು ದೇವತೆಗಳು ತಿಳಿಯಬಲ್ಲರು.

ಇಲ್ಲಿ ಅಗ್ನಿಯು ರಾತ್ರೆಗೆ ಅಧಿಪತಿಯೆಂದು ಹೇಳಿದೆ. ಅಧಿಪತಿಯೆಂಬ ಅರ್ಥವನ್ನು ಸೂಚಿಸುವುದಕ್ಕಾಗಿ ಈ ಋಕ್ಕಿನಲ್ಲಿ **ಮೂರ್ಧಾ** ಎಂಬ ಶಬ್ದದ ಪ್ರಯೋಗವಿದೆ. ಈ ಶಬ್ದಕ್ಕೆ ಅಧಿಪತಿಯೆಂಬ ಅರ್ಥವು ಹೇಗಾಯಿತೆಂದರೆ ಶರೀರದ ನಾನಾ ಅವಯವಗಳಲ್ಲಿ ಮೂರ್ಧಾ ಅಥವಾ ಶಿರಸ್ಸೇ ಮುಖ್ಯವಾದುದು **ಸರ್ವಸ್ಯ ಗಾತ್ರಸ್ಯ ಶಿರಃ ಪ್ರಧಾನಂ** ಎಂಬ ಉಕ್ತಿಯಿರುವುದು. ಆದ್ದರಿಂದ ಇಲ್ಲಿ ಮೂರ್ಧಾ ಶಬ್ದಪ್ರಯೋಗವು ಅಧಿಪತಿಯೆಂಬರ್ಥವನ್ನು ಸೂಚಿಸುವುದು. ಈ ಅಗ್ನಿಯು ರಾತ್ರೆ ಕಾಲದಲ್ಲಿ ಸಮಸ್ತ ಪ್ರಾಣಿಗಳಿಗೂ ಅಧಿಪತಿಯಾಗಿರುವನು ಎಂದರೆ ಸೂರ್ಯನ ಶಾಖವಿಲ್ಲದಿರುವ ರಾತ್ರೆ ಕಾಲದಲ್ಲಿ ಅಗ್ನಿಯೇ ಪ್ರಾಣಿಗಳಿಗೆ ಶಾಖವನ್ನೂ, ಪ್ರಕಾಶವನ್ನೂ ಒದಗಿಸಿಕೊಟ್ಟು ಸೂರ್ಯನ ಕರ್ತವ್ಯವನ್ನು ನಿರ್ವಹಿಸುವನು ಎಂದಭಿಪ್ರಾಯವು. ಪ್ರಾತಃಕಾಲದಲ್ಲಿ ಈ ಅಗ್ನಿಯೇ ಸೂರ್ಯನಾಗಿ ಉದಯಿಸಿ ಪ್ರಾಣಿಗಳನ್ನು ರಕ್ಷಿಸುವನು ದೇವತೆಗಳ ಈ ವಿಧವಾದ ಶಕ್ತಿಸಾಮರ್ಥ್ಯಗಳನ್ನು ಯಜ್ಞಮಾಡುವ ಋಷಿಗಳೇ ಮೊದಲಾದವರು ತಿಳಿಯಬಲ್ಲರು. ಅಗ್ನಿಗೆ ಈ ಕರ್ತವ್ಯವನ್ನು ಮಾಡುವುದಕ್ಕಾಗಿ ಎಂದರೆ ಸಮಸ್ತ ಪ್ರದೇಶದಲ್ಲಿಯೂ ವೇಗವಾಗಿ ಸಂಚರಿಸಲು ಶಕ್ತಿಯಿರುವುದೆಂದಭಿಪ್ರಾಯವು. ಈ ಋಕ್ಕಿನಲ್ಲಿ ಸೂರ್ಯನ ಕರ್ತವ್ಯವನ್ನು ಅಗ್ನಿಯು ನೆರವೇರಿಸುವನೆಂದು ಹೇಳಿರುವುದು ಅಗ್ನಿಯ ಅಸಾಧಾರಣ ಗುಣದ ಪ್ರಶಂಸವಾಗಿದೆಯೇ ಹೊರತು ಅಗ್ನಿಯೇ ಆದಿತ್ಯನಲ್ಲ ಅಥವಾ ಅಗ್ನಿಗೆ ಇತರ ದೇವತೆಗಳ ಶಕ್ತಿಸಾಮರ್ಥ್ಯಗಳಿರುವವು ಎಂಬ ವಿಷಯವು ಈ ಋಕ್ಕಿನಲ್ಲಿ ಸೂಚಿತವಾಗಿದೆ ಎಂದು ತಿಳಿಯಬೇಕು.

**ತಸ್ಯೋತ್ತರಾ ಭೂಯಸೇ ನಿರ್ವಚನಾಯ ।**
**ಸ್ತೋಮೇನ ಹಿ ದಿವಿ ದೇವಾಸೋ ಅಗ್ನಿಮಜೀಜನಞ್ಛಕ್ತಿಭೀ ರೋದಸಿಪ್ರಾಂ ।**
**ತಮೂ ಅಕೃಣ್ವನ್ತ್ರೇಧಾ ಭುವೇ ಕಂ ಸ ಓಷಧೀಃ ಪಚತಿ ವಿಶ್ವರೂಪಾಃ ॥**

(ಋ. ಸಂ. ೧೦–೮೮–೧೦)

**ಸ್ತೋಮೇನ ಹಿ ಯಂ ದಿವಿ ದೇವಾ ಅಗ್ನಿಮಜನಯಞ್ಛಕ್ತಿಭಿಃ ಕರ್ಮಭಿರ್ದ್ಯಾವಾ ಪೃಥಿವ್ಯೋಃ ಪೂರಣಂ ತಮಕುರ್ವಂಸ್ತ್ರೇಧಾಭಾವಾಯ ಪೃಥಿವ್ಯಾಮಂತರಿಕ್ಷೇ ದಿವೀತಿ ಶಾಕಪೂಣಿಃ ಯದಸ್ಯ ದಿವಿ ತೃತೀಯಂ ತದಾಸಾವಾದಿತ್ಯ ಇತಿ ಹಿ ಬ್ರಾಹ್ಮಣಂ ತದಂಗೀಕೃತ್ಯ ಸ್ತೌತಿ ॥**

(ನಿ. ೭–೨೮)

ದೇವತೆಗಳು ಸ್ತೋತ್ರದಿಂದ ಅಗ್ನಿಯನ್ನು ಸ್ವರ್ಗದಲ್ಲಿ ಉತ್ಪತ್ತಿಮಾಡಿದರು. ಆ ಅಗ್ನಿಯು ತನ್ನ ಶಕ್ತಿಸಾಮರ್ಥ್ಯಗಳಿಂದ ದ್ಯಾವಾಪೃಥಿವಿಗಳನ್ನು (ಸ್ವರ್ಗ ಮತ್ತು ಭೂಮಿಗಳನ್ನು) ತುಂಬಿ ಪ್ರಕಾಶಿಸಿದನು ಮತ್ತೆ ಆ ದೇವತೆಗಳು ಆ ಅಗ್ನಿಯನ್ನು ಮೂರು ರೂಪಗಳುಳ್ಳವನನ್ನಾಗಿಮಾಡಿದರು. ಆ ಅಗ್ನಿಯು ಎಲ್ಲಾ ಸಸ್ಯವರ್ಗವನ್ನೂ (ಓಷಧಿಗಳನ್ನೂ) ಪಕ್ವಮಾಡುತ್ತಾನೆ ಎಂದರೆ ಬೆಳೆಸಿ ಅಭಿವೃದ್ಧಿಮಾಡುತ್ತಾನೆ.

ದೇವತೆಗಳು ಯಾವ ಅಗ್ನಿಯನ್ನು ಸ್ತೋಮದಿಂದ (ಸ್ತೋತ್ರದಿಂದ) ಸ್ವರ್ಗದಲ್ಲಿ ಉತ್ಪತ್ತಿಮಾಡಿ ಸ್ಥಾಪಿಸಿದರೋ ಆ ಅಗ್ನಿಯು ತನ್ನ ಶಕ್ತಿಸಾಮರ್ಥ್ಯಗಳಿಂದ ಸ್ವರ್ಗವನ್ನೂ ಭೂಮಿಯನ್ನೂ ವ್ಯಾಪಿಸಿದನು. ಎಂದರೆ ಪೃಥಿವೀ, ಅಂತರಿಕ್ಷ, ಸ್ವರ್ಗ, ಎಂಬ ಮೂರು ಸ್ಥಾನಗಳಲ್ಲಿರುವುದಕ್ಕಾಗಿ ದೇವತೆಗಳು ಅಗ್ನಿಯನ್ನು ಉತ್ಪತ್ತಿ ಮಾಡಿದರು ಎಂದು ಶಾಕಪೂಣಿ ಎಂಬ ಆಚಾರ್ಯರು ಹೇಳುವರು. ಈ ವಿಷಯದಲ್ಲಿ **ಯದಸ್ಯ ದಿವಿ ತೃತೀಯಂ ತದಸಾವಾದಿತ್ಯಃ** –ಅಗ್ನಿಯ ಯಾವ ಮೂರನೆಯ ರೂಪವು ಸ್ವರ್ಗದಲ್ಲಿ ಪ್ರಕಾಶಿಸುತ್ತಿರುವುದೋ ಅದೇ ನಮ್ಮ ಕಣ್ಣಿಗೆ ಕಾಣಿಸುತ್ತಿರುವ ಆದಿತ್ಯನು ಎಂದು ಬ್ರಾಹ್ಮಣವಾಕ್ಯವೂ ಇರುವುದು. ಈ ಅಭಿಪ್ರಾಯವನ್ನೇ ಸ್ವೀಕರಿಸಿ ಋಷಿಯು ಅಗ್ನಿಯನ್ನು ಮುಂದಿನ ಋಕ್ಕಿನಲ್ಲಿ ಸ್ತುತಿಸುವನು.

**ಅಥೈನಮೇತಯಾದಿತ್ಯೀಕೃತ್ಯ ಸ್ತೌತಿ ।**
**ಯದೇದೇನಮದಧುರ್ಯಜ್ಞಿಯಾಸೋ ದಿವಿ ದೇವಾಃ ಸೂರ್ಯಮಾದಿತೇಯಂ ।**
**ಯದಾ ಚರಿಷ್ಣೂ ಮಿಥುನಾವಭೂತಾಮಾದಿತ ಪ್ರಾಪಶ್ಯನ್ ಭುವನಾನಿ ವಿಶ್ವಾ ॥**

(ಋ. ಸಂ. ೧೦-೮೮-೧೧)

**ಯದ್ಧೈನಮದಧುರ್ಯಜ್ಞಿಯಾಃ ಸರ್ವೇ ದಿವಿ ದೇವಾಃ ಸೂರ್ಯಮಾದಿತೇಯಮದಿತೇಃ ಪುತ್ರಂ ಯದಾ ಚರಿಷ್ಣೂ ಮಿಥುನೌ ಪ್ರಾದುರಭೂತಾಂ ಸರ್ವದಾ ಸಹಚಾರಿಣಾವುಷಾಶ್ಚಾದಿತ್ಯಶ್ಚ । ಮಿಥುನೌ ಕಸ್ಮಾನ್ಮಿನೋತಿಃ ಶ್ರಯತಿಕರ್ಮಾ, ಥು ಇತಿ ನಾಮಕರಣಸ್ಥಕಾರೋ ವಾ ನಯತಿಃ ಪರೋ. ವನಿರ್ವಾ, ಸಮಾಶ್ರಿತಾವನ್ಯೋಽನ್ಯಂ ನಯತೋ, ವನುತೋ ವಾ, ಮನುಷ್ಯಮಿಥುನಾವಪ್ಯೇತಸ್ಮಾದೇವ, ಮೇಥಂತಾವನ್ಯೋಽನ್ಯಂ ವನುತ ಇತಿ ವಾ ॥**

ಈ ಅಗ್ನಿಯೇ ಆದಿತ್ಯನೆಂಬ ಅಭಿಪ್ರಾಯವನ್ನಂಗೀಕರಿಸಿ ಋಷಿಯು ಈ ಋಕ್ಕಿನಿಂದ ಸ್ತೋತ್ರಮಾಡುವನು ಯಜ್ಞಾರ್ಹರಾದ ದೇವತೆಗಳು ಅದಿತಿಯ ಪುತ್ರನಾದ ಸೂರ್ಯನನ್ನು ಸ್ವರ್ಗದಲ್ಲಿ ಯಾವಾಗ ಸ್ಥಾಪಿಸಿದರೋ ಮತ್ತು ಯಾವಾಗ ಈ ಮಿಥುನ ದೇವತೆಗಳು (ಉಷಸ್ಸು ಮತ್ತು ಆದಿತ್ಯ) ಸೃಷ್ಟಿಸಲ್ಪಟ್ಟು ಜತೆಯಲ್ಲಿಯೇ ಸಂಚರಿಸಲು ಪ್ರಾರಂಭಿಸಿದರೋ ಆಗ ಅವರು ಲೋಕದ ಸಮಸ್ತ ಪ್ರಾಣಿಗಳನ್ನೂ ನೋಡಿದರು.

ಯಜ್ಞಾರ್ಹರಾದ ಎಂದರೆ ಯಜ್ಞಾದಿಗಳಲ್ಲಿ ಸ್ತುತರಾದ ದೇವತೆಗಳು ಅದಿತಿಪುತ್ರನಾದ ಆದಿತ್ಯನನ್ನು (ಸೂರ್ಯನನ್ನು) ಸ್ವರ್ಗದಲ್ಲಿ ಸ್ಥಾಪಿಸಿದರೋ ಮತ್ತು ಮಿಥುನಭೂತರಾದ ಎಂದರೆ ಯಾವಾಗಲೂ ಜತೆಯಲ್ಲಿಯೇ ಇರುವ ಇಬ್ಬರ (ಉಷಾಃ ಮತ್ತು ಆದಿತ್ಯ ಎಂಬ ಇಬ್ಬರ) ಸೃಷ್ಟಿಯಾಯಿತೋ ಆಗಿನಿಂದಲೂ ಈ ಉಷಸ್ಸು ಮತ್ತು ಆದಿತ್ಯ ಎಂಬ ದೇವತೆಗಳೀರ್ವರೂ ಯಾವಾಗಲೂ ಜತೆಯಲ್ಲಿಯೇ ಸಂಚರಿಸುತ್ತಾ ಪ್ರಪಂಚದಲ್ಲಿರುವ ಸಮಸ್ತ ಪ್ರಾಣಿವರ್ಗವನ್ನು ನೋಡಲು ಶಕ್ತರಾದರು.

ಇಲ್ಲಿ **ಮಿಥುನಶಬ್ದದ** ನಿರ್ವಚನವನ್ನು ಹೇಳಿದ್ದಾರೆ. ಶ್ರಯಣಿಕರ್ಮಾರ್ಥವನ್ನು (ಆಶ್ರಯಿಸುವುದು ಎಂಬರ್ಥವನ್ನು) ಸೂಚಿಸುವ ಮಿನೋತಿಧಾತುವಿನಿಂದ ಮಿಥುನಶಬ್ದವು ನಿಷ್ಪನ್ನವಾಗಿದೆ. ಹೇಗೆಂದರೆ—ಮಿಥುನ ಶಬ್ದದಲ್ಲಿರುವ **ಮಿ** ಎಂಬ ಧಾತುವಿಗೆ ಆಶ್ರಯಿಸು ಎಂಬರ್ಥವಿರುವುದು **ಥು** ಅಥವಾ ಥಕಾರವು ಪ್ರತ್ಯಯವು. ಕೊನೆಯ ಅಕ್ಷರವಾದ **ನ** ಎಂಬ ಅಕ್ಷರವು ನಯತಿಧಾತುವಿನಿಂದ (ನಯತಿಃ ಪರಃ) ನಿಷ್ಪನ್ನವಾಗಿ ಮತ್ತೊಬ್ಬರನ್ನು **ನಯತಿ** ಎಂದರೆ ಒಯ್ಯುವುದು ಎಂಬರ್ಥವನ್ನು ಸೂಚಿಸುವುದು ಎಂದರೆ ಮಿಥುನ ಶಬ್ದಕ್ಕೆ ಒಬ್ಬರು ಮತ್ತೊಬ್ಬರನ್ನು ಪರಸ್ಪರ ಆಶ್ರಯಿಸಿ ಜತೆಯಲ್ಲಿರುವುದು ಎಂದರ್ಥವಾಗುವುದು. **ಸಮಾಶ್ರಿತೌ ಅನ್ಯೋನ್ಯಂ ಪ್ರತಿ ಆತ್ಮಾನಂ ನಯತಃ ಕಾಲಂ ವಾ ಸಮಾಶ್ರಿತೌ ಭವತಃ ಪರಸ್ಪರಂ ಸಂಭಕ್ತೌ**—ಎಂದರೆ ಮಿಥುನೌ ಎಂಬ ಶಬ್ದವು ಒಬ್ಬರನ್ನೊಬ್ಬರು ಪರಸ್ಪರ ಆಶ್ರಯಿಸಿರುವುದು ಅಥವಾ ಕಾಲವಿಷಯದಲ್ಲಿ ಒಂದು ಕಾಲವಾದನಂತರ ಮತ್ತೊಂದು ಕಾಲವು ಬರುವುದು (ರಾತ್ರಿ, ಹಗಲು ಇತ್ಯಾದಿ) ಎಂಬರ್ಥವನ್ನು ಸೂಚಿಸುವುದು ಮನುಷ್ಯರ ವಿಷಯದಲ್ಲಿಯೂ ಮಿಥುನ ಶಬ್ದಕ್ಕೆ ಪರಸ್ಪರ ಆಶ್ರಯಿಸಿರುವ ಅಥವಾ ಅನ್ಯೋನ್ಯವಾಗಿ ಜತೆಯಲ್ಲಿಯೇ ಕಾಲಕಳೆಯುವ ಇಬ್ಬರು ವ್ಯಕ್ತಿಗಳು ಎಂಬರ್ಥವಿರುವುದು

**ಅಥೈನಮೇತಯಾಗ್ನೇಯ್ಯಾ ಸ್ತೌತಿ ।**
**ಯತ್ರಾ ವದೇತೇ ಅವರಃ ಪರಶ್ಚ ಯಜ್ಞನ್ಯೋಃ ಕತರೋ ನೌ ವಿ ವೇದ ।**
**ಆ ಶೇಕರಿತ್ಸಧಮಾದಂ ಸಖಾಯೋ ನಕ್ಷಂತ ಯಜ್ಞಂ ಕ ಇದಂ ವಿ ವೋಚತ್ ॥**
(ಋ. ಸಂ. ೧೦-೮೮-೧೭)

**ಯತ್ರ ವಿವದೇತೇ ದೇವ್ಯೌ ಹೋತಾರಾವಯಂ ಚಾಗ್ನಿರಸೌ ಚ ಮಧ್ಯಮಃ ಕತರೋ ನೌ ಯಜ್ಞೇ ಭೂಯೋ ವೇದೇತ್ಯಾಶಕ್ನುವಂತಿ ಸತ್ಸಹಮದನಂ ಸಮಾನಖ್ಯಾನಾ ಋತ್ವಿಜಸ್ತೇಷಾಂ ಯಜ್ಞಂ ಸಮಶ್ನುವಾನಾನಾಂ ಕೋ ನ ಇದಂ ವಿವಕ್ಷ್ಯತೀತಿ ॥** (ನಿ. ೭-೩೦)

ಈ ವೈಶ್ವಾನರಾಗ್ನಿಯನ್ನು ಪಾರ್ಥಿವಾಗ್ನಿಯೆಂದೇ ಸ್ವೀಕರಿಸಿ ಈ ಋಕ್ಕಿನಿಂದ ಋಷಿಯು ಸ್ತುತಿಸಿರುವನು. ಯಜ್ಞ ವಿಷಯವನ್ನು ತಿಳಿದಿರುವ ಕೆಳಗಿನ ಮತ್ತು ಮೇಲಿನ ಅಗ್ನಿಗಳಲ್ಲಿ ಯಾರು ಹೆಚ್ಚಾಗಿ ತಿಳಿದಿರುವರು? ಈ ವಿಷಯವನ್ನು ನಿರ್ಧರಿಸಲು ಯಾರು ಸಮರ್ಥರು? ಯಜ್ಞದಲ್ಲಿ ಸಮಾನಭಾಗಗಳನ್ನು ವಹಿಸುವ ಋತ್ವಿಜರೇ ಮೊದಲಾದವರು ಇದನ್ನು ನಿಶ್ಚಯಿಸಲು ಸಮರ್ಥರು.

**ದೈವ್ಯೌ ಹೋತಾರೌ**— ಎಂದರೆ ದೇವತಾಸ್ವರೂಪರಾದ ಹೋತೃಗಳು. ದೇವತೆಗಳನ್ನು ಯಜ್ಞದಲ್ಲಿ ಆಹ್ವಾನಮಾಡುವ ಹೋತೃನಾಮಕನಾದ ಅಗ್ನಿಯು. ಇಲ್ಲಿ **ಹೋತಾರೌ** ಎಂದು ದ್ವಿವಚನಾಂತಶಬ್ದವಿರುವುದರಿಂದ ಪೃಥಿವಿಯಲ್ಲಿ ಸ್ಥಾಪಿತನಾಗಿರುವ ಪಾರ್ಥಿವಾಗ್ನಿ (ಯಜ್ಞಾಗ್ನಿ) ಮತ್ತು ಮಧ್ಯಮಸ್ಥಾನದಲ್ಲಿರುವ ವಾಯು ಅಥವಾ ವಿದ್ಯುದಗ್ನಿ ಯೆಂಬ ಇಬ್ಬರು ದೇವತೆಗಳು ಈ ಇಬ್ಬರೂ ಅಗ್ನಿಯ ರೂಪಾಂತರಗಳೇ ಆಗಿರುವುದರಿಂದ ಇವರನ್ನು **ಹೋತಾರೌ** ಎಂಬ ದ್ವಿವಚನಾಂತ ಶಬ್ದದಿಂದ ಸಂಬೋಧಿಸಲಾಗಿದೆ. **ಅವರಃ ಪರಶ್ಚ** ಎಂದರೆ -ಕೆಳಗಿನ ಮತ್ತು ಮೇಲಿನ ಎಂದರ್ಥವು. ಕೆಳಗೆ ಎಂದರೆ ಪೃಥಿವೀಸ್ಥಾನದಲ್ಲಿರುವ ಪಾರ್ಥಿವಾಗ್ನಿಯೆಂದೂ ಪರಃ ಎಂದರೆ ಮಧ್ಯಮ ಸ್ಥಾನದಲ್ಲಿರುವ ಅಗ್ನಿ (ವಿದ್ಯುತ್) ಎಂದು ತಿಳಿಯಬೇಕು ಈ ಇಬ್ಬರಲ್ಲಿ ಯಾರಿಗೆ ಹೆಚ್ಚಾಗಿ ತಿಳುವಳಿಕೆ ಇದೆ ? ಯಜ್ಞಾದಿ ಕರ್ಮಗಳಲ್ಲಿ ಸಮಾನಭಾಗಗಳನ್ನು ಎಂದರೆ ಮುಖ್ಯಪಾತ್ರಗಳನ್ನು ವಹಿಸಿ ಯಜ್ಞವಿಷಯವನ್ನು ಚೆನ್ನಾಗಿ ತಿಳಿದಿರುವ ಋತ್ವಿಜರಲ್ಲಿ ಯಾವ ಋತ್ವಿಜನು ಈ ವಿಷಯವನ್ನು ನಿರ್ಧರಿಸಲು ಸಮರ್ಥನು ?

ತಸ್ಯೋತ್ತರಾ ಭೂಯಸೇ ನಿರ್ವಚನಾಯ ।
ಯಾವನ್ಮಾತ್ರಮುಷಸೋ ನ ಪ್ರತೀಕಂ ಸುಪರ್ಣ್ಯೋ೩ವಸತೇ ಮಾತರಿಶ್ವಃ ।
ತಾವದ್ದಧಾತ್ಯುಪ ಯಜ್ಞಮಾಯನ್ಬ್ರಾಹ್ಮಣೋ ಹೋತುರವರೋ ನಿಷೀದನ್ ॥

(ಋ. ಸಂ. ೧೦-೮೮-೧೯)

ಯಾವನ್ಮಾತ್ರಮುಷಸಃ ಪ್ರತ್ಯಕ್ತಂ ಭವತಿ ಪ್ರತಿದರ್ಶನಮಿತಿ ವಾಸ್ತ್ಯುಪಮಾನಸ್ಯ ಸಂಪ್ರತ್ಯರ್ಥೇ ಪ್ರಯೋಗ ಇಹೇವ ನಿಧೇಹೀತಿ ಯಥಾ ಸುಪರ್ಣ್ಯಃ ಸುಪತನಾ ಏತಾ ರಾತ್ರಯೋ ವಸತೇ ಮಾತರಿಶ್ವನ್ ಜ್ಯೋತಿರ್ವರ್ಣಸ್ಯ ತಾವದುಪದಧಾತಿ ಯಜ್ಞಮಾಗಚ್ಛನ್ ಬ್ರಾಹ್ಮಣೋ ಹೋತಾಸ್ಯಾಗ್ನೇರ್ಹೋತುರವರೋ ನಿಷೀದನ್ ॥

(ನಿ. ೭-೩೧)

ಈ ವಿಷಯದಲ್ಲಿ ಇನ್ನೂ ಒಂದು ಋಕ್ಕನ್ನು ಉದಾಹರಣೆಯಾಗಿ ಕೊಟ್ಟಿದ್ದಾರೆ. ಹಿಂದಿನ ಋಕ್ಕಿನಲ್ಲಿ ಅಗ್ನಿ ವಾಯು ವಾಯುಗಳನ್ನು ಸ್ತುತಿಸಿದೆ. ಈ ಋಕ್ಕಿನಲ್ಲಿ ಕೇವಲ ಅಗ್ನಿಯನ್ನೇ ಸ್ತುತಿಸಲಾಗಿದೆ. ಮಾತರಿಶ್ವನು (ವಾಯುವು) ಒಬ್ಬ ಪುರುಷನನ್ನು ಕುರಿತು--ದೇವತೆಗಳ ಹೋತೃವಾದ ಅಗ್ನಿಗೆ ಇರುವ ವಿಜ್ಞಾನವನ್ನು (ಯಜ್ಞಾನುಷ್ಠಾನಕರ್ಮದಲ್ಲಿರುವ ತಿಳುವಳಿಕೆಯನ್ನು), ಯಜ್ಞದಲ್ಲಿ ಭಾಗವಹಿಸುವ ಮನುಷ್ಯಹೋತೃವಾದ ಬ್ರಾಹ್ಮಣನು ಧರಿಸಬಲ್ಲನೇ ಎಂದರೆ ತಿಳಿಯಬಲ್ಲನೇ ಎಂದು ಕೇಳಲಾಗಿ ಅದಕ್ಕೆ ಆ ಪುರುಷನು ಈ ರೀತಿ ಪ್ರತ್ಯುತ್ತರವನ್ನು ಹೇಳಿರುವನು.

ಎಲೈ ಮಾತರಿಶ್ವನೇ, ಉತ್ತಮವಾದ ರೆಕ್ಕೆಗಳುಳ್ಳ ಪಕ್ಷಿಗಳು ಎಲ್ಲಿಯವರೆಗೆ (ಎಷ್ಟು ಹೊತ್ತಿನವರೆಗೆ) ಉಷಸ್ಸನ್ನು ಧರಿಸಿರುವವೋ ಅಲ್ಲಿಯವರೆಗೆ ಯಜ್ಞವೇದಿಯಲ್ಲಿ ಯಜ್ಞಾಗ್ನಿಯ ಸಮೀಪದಲ್ಲಿ ಅಗ್ನಿಗಿಂತ ನೀಚಸ್ಥಾನದಲ್ಲಿ ಕುಳಿತಿರುವ ಮನುಷ್ಯಹೋತೃವಾದ ಬ್ರಾಹ್ಮಣನು ಅದನ್ನು ಧರಿಸುವನು (ಎಂದರೆ ಅಗ್ನಿಯ ಅನುಗ್ರಹದಿಂದ ಸ್ವಲ್ಪಮಟ್ಟಿಗೆ ತಿಳಿಯುವನು )

ಈ ಋಕ್ಕಿನಲ್ಲಿರುವ **ನ** ಎಂಬ ಶಬ್ದಕ್ಕೆ ಉಪಮಾರ್ಥವಿರುವುದಿಲ್ಲ. ಸಂಪ್ರತ್ಯರ್ಥ (ಈಗ ಎಂಬ ಅರ್ಥ) ವಿರುವುದು. ಹೇಗೆಂದರೆ **ಇಹ** ಎಂಬ ಶಬ್ದಕ್ಕೆ ಇಲ್ಲಿ ಎಂಬರ್ಥವಿದ್ದರೂ **ಇಹೈವ ನಿಧೇಹಿ** ಎಂಬ ವಾಕ್ಯಕ್ಕೆ ಈಗಲೇ ಇಡು ಎಂಬರ್ಥವಿರುವಂತೆ ಎಂದು ತಿಳಿಯಬೇಕು. ಆದ್ದರಿಂದ **ಯಾವನ್ಮಾತ್ರಮುಷಸೋ ನ ಪ್ರತೀಕಂ** ಎಂಬ ವಾಕ್ಯಕ್ಕೆ ರಾತ್ರಿಯ ಕೊನೆಯಲ್ಲಿರುವ ಉಷಃಕಾಲವು ಎಲ್ಲಿಯವರೆಗೆ ಎಂದರೆ ಎಷ್ಟುಕಾಲದವರೆಗೆ (ಸ್ವಲ್ಪಕಾಲ ಮಾತ್ರ) ವ್ಯಾಪಿಸಿರುವುದೋ ಅಷ್ಟುಕಾಲಮಾತ್ರ ಎಂದರ್ಥವು. **ಸುಪರ್ಣ್ಯಃ ಸುಪತನಾ ಏತಾ ರಾತ್ರಯೋ ವಸತೇ ಮಾತರಿಶ್ವನ್** ಎಂಬ ವಾಕ್ಯಕ್ಕೆ ಎಲೈ ಮಾತರಿಶ್ವನೇ, ಉತ್ತಮವಾದ ರೆಕ್ಕೆಗಳುಳ್ಳ ಪಕ್ಷಿಗಳು ಹಾರಾಡುತ್ತಾ ಉಷಃಕಾಲವನ್ನು ಧರಿಸುವವು ಎಂದರ್ಥವು ಎಂದರೆ ಇಲ್ಲಿ ಪಕ್ಷಿಗಳು ಎಂದರೆ ರಾತ್ರಿಗಳು ಎಂದರ್ಥ ಇದನ್ನು ಸೂಚಿಸುವ ಸುಪರ್ಣ್ಯ ಶಬ್ದಕ್ಕೆ ನಾನಾವಿಧ ರೆಕ್ಕೆಗಳು ಎಂಬರ್ಥವು. ಉಷಃಕಾಲದ ನಾನಾವಿಧ (ಉತ್ತಮವಾದ) ಬಣ್ಣಗಳು ಎಂಬರ್ಥವನ್ನು ಸೂಚಿಸುವುದು. ಆದ್ದರಿಂದ ಸುಪರ್ಣ್ಯಃ ಎಂದರೆ ರಾತ್ರಿಯ ಅಂತ್ಯಭಾಗದಲ್ಲಿ ಉಷಸ್ಸು ಉದಯಿಸುವಾಗ ಆ ಉಷಸ್ಸು ನಾನಾವಿಧ ಅಥವಾ ರಮಣೀಯವಾದ ಬಣ್ಣಗಳುಳ್ಳದ್ದಾಗಿರುವುದು ಎಂಡಭಿಪ್ರಾಯವು. ಈ ಉಷಃಕಾಲದ ಪ್ರಮಾಣವು ಅತ್ಯಲ್ಪವಾಗಿರುವುದು. ಉಷಃಕಾಲಾನಂತರ ಅತಿಶೀಘ್ರವಾಗಿ ಸೂರ್ಯೋದಯವಾಗುವುದರಿಂದ ಉಷಃಕಾಲವು ಪ್ರಮಾಣದಲ್ಲಿ ಅತ್ಯಲ್ಪವಾಗಿರುವುದು. ಬಹುಸ್ವಲ್ಪಕಾಲದವರೆಗೆ ಮಾತ್ರ ಎಂದಭಿ

ಪ್ರಾಯವು. ಮನುಷ್ಯಹೋತೃವು ದೇವಹೋತೃವಾದ ಅಗ್ನಿಗಿಂತ ಕನಿಷ್ಠನು. ಆದುದರಿಂದ ಮನುಷ್ಯಹೋತೃವಾದ ಬ್ರಾಹ್ಮಣನು ಯಜ್ಞವೇದಿಯಲ್ಲಿ ಪ್ರತಿಷ್ಠಾಪಿತನಾಗಿರುವ ಅಗ್ನಿಗಿಂತ ನೀಚಸ್ಥಾನದಲ್ಲಿ ಕುಳಿತು ಅತ್ಯಲ್ಪಕಾಲದವರೆಗೆ ಮಾತ್ರ ವಿಶೇಷಪ್ರಾಜ್ಞನಾದ ಅಗ್ನಿಯ ಅನುಗ್ರಹದಿಂದ ಹೋತೃಕರ್ಮವನ್ನು ನೆರವೇರಿಸುವನು ಎಂದು ಮುಖ್ಯಾಭಿಪ್ರಾಯವು. ಇದರಿಂದ-ಮನುಷ್ಯನ ಅತ್ಯಲ್ಪವೂ ಅಗ್ನಿಯ ಮಹತ್ತ್ವವೂ ವ್ಯಕ್ತಪಡುವುದು. ಈ ಋಕ್ಕಿನಲ್ಲಿ ಮನುಷ್ಯಹೋತೃವಾದ ಬ್ರಾಹ್ಮಣನು ಯಜ್ಞವೇದಿಯಲ್ಲಿ ಕುಳಿತು ದೇವಹೋತೃವಾದ ಅಗ್ನಿಯನ್ನು ಸ್ತುತಿಸುತ್ತಾ ಹೋತೃಕರ್ಮವನ್ನು ನೆರವೇರಿಸುವನು ಎಂದು ಹೇಳಿರುವುದರಿಂದ ಇಲ್ಲಿ ವೈಶ್ವಾನರಾಗ್ನಿಯೆಂದರೆ ಪಾರ್ಥಿವಾಗ್ನಿಯನ್ನೇ ಸ್ತುತಿಸಲಾಗಿದೆ. ಆದಿತ್ಯನನ್ನಲ್ಲ ಎಂದು ಸ್ಪಷ್ಟವಾಗಿ ವ್ಯಕ್ತವಾಗಿರುವುದು

> **ಹೋತೃಜಪಸ್ತ್ವಗ್ನಿರ್ವೈಶ್ವಾನರೀಯೋ ಭವತಿ ದೇವ ಸವಿತರೇತಂ ತ್ವಾ ವೃಣತೇಽಗ್ನಿಂ ಹೋತ್ರಾಯ ಸಹ ಪಿತ್ರಾ ವೈಶ್ವಾನರೇಣೇತೀಮಮೇವಾಗ್ನಿಂ ಸವಿತಾರಮಾಹ ಸರ್ವಸ್ಯ ಪ್ರಸವಿತಾರಂ ಮಧ್ಯಮಂ ವೋತ್ತಮಂ ವಾ ಪಿತರಂ ।**

> **ಯಸ್ತು ಸೂಕ್ತಂ ಭಜತೇ ಯಸ್ಮೈ ಹವಿರ್ನಿರುಪ್ಯತೇಽಯಮೇವ ಸೋಽಗ್ನಿರ್ವೈಶ್ವಾನರಃ । ನಿಪಾತಮೇವೈತೇ ಉತ್ತರೇ ಜ್ಯೋತಿಷೀ ಏತೇನ ನಾಮಧೇಯೇನ ಭಜೇತೇ ಭಜೇತೇ ॥**
>
> (ನಿ. ೭-೩೧)

ಯಜ್ಞದಲ್ಲಿ ಹೋತೃವು ಪಠಿಸುವ ಜಪಮಂತ್ರಾದಿಗಳು ವೈಶ್ವಾನರನನ್ನೇ ಸಂಬೋಧಿಸಿ ಸ್ತುತಿಸುತ್ತವೆ. ಅಗ್ನಿಯನ್ನಲ್ಲ, ಮಂತ್ರಜಪವು---**ದೇವಸವಿತರೇತಂ ತ್ವಾ ವೃಣತೇಽಗ್ನಿಂ ಹೋತ್ರಾಯ ಸಹ ಪಿತ್ರಾ ವೈಶ್ವಾನರೇಣ** ಎಂದಿರುವುದು. ಎಲೈ ಪ್ರಕಾಶಮಾನನಾದ ಸವಿತೃದೇವನೇ, ಸ್ತೋತ್ರಮಾಡುವುದಕ್ಕಾಗಿ ಹೋತೃವು ನಿನ್ನನ್ನೇ ಎಂದರೆ ಅಗ್ನಿಯನ್ನೇ ನಿನ್ನ ತಂದೆಯಾದ ವೈಶ್ವಾನರನೊಡನೆ ಆರಿಸಿಕೊಂಡಿರುವನು ಎಂಬ ವಾಕ್ಯಕ್ಕೆ ವಿವರಣೆಯು ಅವಶ್ಯಕವು. ಇಲ್ಲಿ ಋಷಿಯು ಅಗ್ನಿಯನ್ನು ಸವಿತೃವೆಂದೇ ಕರೆದಿರುವನು. ಇಲ್ಲಿ ಸವಿತೃವೆಂದರೆ (ಸವಿತೃ ಶಬ್ದಕ್ಕೆ) **ಸಮಸ್ತವಸ್ತುಜಾತ** (ಅಥವಾ ಪ್ರಾಣಿಗಳ) ಉತ್ಪತ್ತಿಕಾರಕನು ಎಂದರ್ಥವು. ಈ ಅರ್ಥದಲ್ಲಿಯೇ ಇಲ್ಲಿ ಈ ಶಬ್ದ ಪ್ರಯೋಗವಿರುವುದು. ಮಧ್ಯಮಸ್ಥಾನೀಯವಾದ ವಾಯುವನ್ನು ಅಥವಾ ಉತ್ತಮ (ಸ್ವರ್ಗ) ಸ್ಥಾನೀಯವಾದ ಆದಿತ್ಯನನ್ನು ತಂದೆಯೆಂದು ಸಂಬೋಧಿಸಿರುವನು.

ಸೂಕ್ತದಲ್ಲಿ ಯಾವ ದೇವನನ್ನು ಸ್ತುತಿಸಲಾಗಿದೆಯೋ, ಯಾವ ದೇವನಿಗಾಗಿ (ಯಾವ ದೇವತೆಯನ್ನು ಉದ್ದೇಶಿಸಿ) ಹವಿಸ್ಸು ಹೋಮ ಮಾಡಲ್ಪಡುವುದೋ ಆ ವೈಶ್ವಾನರನೇ ಈ ಪಾರ್ಥಿವಾಗ್ನಿಯು.

**ಸೂರ್ಯೋ ವೈಶ್ವಾನರಃ । ಅಗ್ನಿರ್ವೈಶ್ವಾನರಃ ।** ಎಂದು ಮೊದಲಾದ ವಾಕ್ಯಗಳಲ್ಲಿ ಹೇಳಿರುವಂತೆ, ಮಧ್ಯಮಸ್ಥಾನದಲ್ಲಿರುವ ವಿದ್ಯುದ್ರೂಪವಾದ ಜ್ಯೋತಿಯೂ ಸ್ವರ್ಗಸ್ಥಾನದಲ್ಲಿರುವ ಆದಿತ್ಯರೂಪವಾದ ಜ್ಯೋತಿಯೂ ಇವೆರೆಡು ಜ್ಯೋತಿಗಳೂ ವೈಶ್ವಾನರ ಎಂಬ ಒಂದೇ ಹೆಸರಿನಿಂದ ವ್ಯವಹರಿಸಲ್ಪಡುವವು. ಎಂದರೆ ವೈಶ್ವಾನರ ಶಬ್ದದಿಂದ ವ್ಯವಹರಿಸಲ್ಪಡುವ ಪಾರ್ಥಿವಾಗ್ನಿಯು ಸ್ವರ್ಗದಲ್ಲಿ ಆದಿತ್ಯರೂಪದಿಂದಲೂ, ಅಂತರಿಕ್ಷದಲ್ಲಿ ವೈದ್ಯುತರೂಪದಿಂದಲೂ, ಪೃಥ್ವಿಯಲ್ಲಿ ಪಾರ್ಥಿವಾಗ್ನಿರೂಪದಿಂದಲೂ ಮೂರು ರೂಪಗಳಿಂದ ಪ್ರಕಾಶಿಸುತ್ತಿರುವನು ಎಂದು ಮುಖ್ಯಾಭಿಪ್ರಾಯವು

॥ ಸಾಯಣಭಾಷ್ಯಂ ॥

**ಮೂರ್ಧಾನಮಿತಿ ಸಪ್ತರ್ಚಂ ಸಪ್ತಮಂ ಸೂಕ್ತಂ ಭರದ್ವಾಜಸ್ಯಾರ್ಷಂ ವೈಶ್ವಾನರಾಗ್ನಿದೇವತಾಕಂ । ಷಷ್ಠೀಸಪ್ತಮ್ಯೌ ಜಗತ್ಯೌ ಶಿಷ್ಟಾಃ ಪಂಚ ತ್ರಿಷ್ಟುಭಃ । ತಥಾ ಚಾನುಕ್ರಾಂತಂ । ಮೂರ್ಧಾನಂ ವೈಶ್ವಾನರೀಯಂ ಹಿ ದ್ವಿಜಗತ್ಯಂತಮಿತಿ । ಗತಃ ಸೂಕ್ತವಿನಿಯೋಗಃ ॥ ವಿಷುವತ್ಯಾಗ್ನಿಮಾರುತೇ ಆದ್ಯಸ್ತೃಚೋ ವೈಕಲ್ಪಿಕಃ ಸ್ತೋತ್ರಿಯಃ । ತಥೈವ ಸೂತ್ರಿತಂ ಚ । ಮೂರ್ಧಾನಂ ದಿವೋ ಅರತಿಂ ಪೃಥಿವ್ಯಾ ಮೂರ್ಧಾ ದಿವೋ ನಾಭಿರಗ್ನಿಃ ಪೃಥಿವ್ಯಾ ಇತಿ ವಾ । ಆ. ೮-೬ । ಇತಿ ॥**

ಅನುವಾದವು—**ಮೂರ್ಧಾನಂ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಏಳನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವುವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು; ವೈಶ್ವಾನರಾಗ್ನಿಯು ದೇವತೆಯು; ಈ ಸೂಕ್ತದ ಆರು ಮತ್ತು ಏಳನೆಯ ಋಕ್ಕುಗಳು ಜಗತೀಛಂದಸ್ಕವು, ಉಳಿದ ಐದು ಋಕ್ಕುಗಳು ತ್ರಿಷ್ಟುಪ್‌ಛಂದಸ್ಕವು ಅನುಕ್ರಮಣಿಕೆಯಲ್ಲಿ—**ಮೂರ್ಧಾನಂ ವೈಶ್ವಾನರೀಯಂ ಹಿ ದ್ವಿಜಗತ್ಯಂತಂ** ಎಂದು ಹೇಳಿರುವುದು. ಸೂಕ್ತವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ ವಿಷುವತಿಯೆಂಬ ಯಾಗದಲ್ಲಿ ಆಗ್ನಿಮಾರುತಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ಮೊದಲನೆಯ ಮೂರು ಋಕ್ಕುಗಳನ್ನೂ ವೈಕಲ್ಪಿಕಸ್ತೋತ್ರೀಯ ಮಂತ್ರಗಳನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಮೂರ್ಧಾನಂ ದಿವೋ ಅರತಿಂ ಪೃಥಿವ್ಯಾ ಮೂರ್ಧಾ ದಿವೋ ನಾಭಿರಗ್ನಿಃ ಪೃಥಿವ್ಯಾ ಇತಿ ವಾ** ಎಂಬ ಸೂತ್ರದಿಂದ (ಆ ೮-೬) ವಿವೃತವಾಗಿರುವುದು.

## ಸೂಕ್ತ—೭

ಮಂಡಲ—೬ ॥ ಅನುವಾಕ—೧ ॥ ಸೂಕ್ತ—೭ ॥
ಅಷ್ಟಕ—೪ ॥ ಅಧ್ಯಾಯ—೫ ॥ ವರ್ಗ—೯ ॥

**॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ॥**
**॥ ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ॥**
**॥ ದೇವತಾ—ವೈಶ್ವಾನರಃ ॥**
॥ ಛಂದಃ—೧-೫, ತ್ರಿಷ್ಟುಪ್ । ೬-೭ ಜಗತೀ ॥

॥ ಸಂಹಿತಾಪಾಠಃ ॥

ಮೂರ್ಧಾನಂ ದಿವೋ ಅರತಿಂ ಪೃಥಿವ್ಯಾ ವೈಶ್ವಾನರಮೃತ ಆ ಜಾತಮಗ್ನಿಂ ।
ಕವಿಂ ಸಮ್ರಾಜಮತಿಥಿಂ ಜನಾನಾಮಾಸನ್ನಾ ಪಾತ್ರಂ ಜನಯಂತ ದೇವಾಃ ॥

॥ ಪದಪಾಠಃ ॥

**ಮೂರ್ಧಾನಂ । ದಿವಃ । ಅರತಿಂ । ಪೃಥಿವ್ಯಾಃ । ವೈಶ್ವಾನರಂ । ಋತೇ । ಆ । ಜಾತಂ । ಅಗ್ನಿಂ ।**
**ಕವಿಂ । ಸಂಽರಾಜಂ । ಅತಿಥಿಂ । ಜನಾನಾಂ । ಆಸನ್ । ಆ । ಪಾತ್ರಂ । ಜನಯಂತ । ದೇವಾಃ ॥ ೧ ॥**

॥ ಸಾಯಣಭಾಷ್ಯಂ ॥

ಮೂರ್ಧಾನಂ ಶಿರೋಭೂತಂ । ಕಸ್ಯ । ದಿವೋ ದ್ಯುಲೋಕಸ್ಯ ಪೃಥಿವ್ಯಾಃ ಪ್ರಥಿತಾಯಾ ಭೂಮೇರರತಿಂ ಗಂತಾರಂ । ಯದ್ವಾ । ಗಂತವ್ಯಂ ಸ್ವಾಮಿನಂ ವೈಶ್ವಾನರಂ ವಿಶ್ವೇಷಾಂ ನರಾಣಾಂ ಸಂಬಂಧಿನಮೃತೇ । ಋತಮಿತಿ ಸತ್ಯಸ್ಯ ಯಜ್ಞಸ್ಯ ವಾ ನಾಮ । ನಿಮಿತ್ತಸಪ್ತಮ್ಯೇಷಾ । ಋತನಿಮಿತ್ತಮಾ ಅಭಿಮುಖ್ಯೇನ ಜಾತಂ ಸೃಷ್ಟ್ಯಾದಾವುತ್ಪನ್ನಂ ಕವಿಂ ಕ್ರಾಂತದರ್ಶಿನಂ ಸಮ್ರಾಜಂ ಸಮ್ಯಗ್ರಾಜಮಾನಂ ಜನಾನಾಂ ಯಜಮಾನಾನಾಮತಿಥಿಂ ಹವಿರ್ವಹನಾಂ ಸತತಂ ಗಂತಾರಂ । ಯದ್ವಾ । ಅತಿಥಿವತ್ಪೂಜ್ಯಂ । ಆಸನ್ನಾಸನ್ಯಸ್ಯೇ ॥ ದ್ವಿತೀಯಾರ್ಥೇ ಸಪ್ತಮೀ ॥ ಆಸ್ಯಭೂತಂ । ಅಗ್ನಿಲಕ್ಷಣೇನಾಸ್ಯೇನ ಹಿ ದೇವಾ ಹವೀಂಷಿ ಭುಂಜತೇ । ಪಾತ್ರಂ ಪಾತಾರಂ ರಕ್ಷಕಂ । ಯದ್ವಾ । ಆಸ್ಯೇನ ಧಾರಕಂ । ಏವಂಗುಣವಿಶಿಷ್ಟಂ ವೈಶ್ವಾನರಾಗ್ನಿಂ ದೇವಾಃ ಸ್ತೋತಾರ ಋತ್ವಿಜೋ ದೇವಾ ಏವ ವಾ ಆ ಜನಯಂತ । ಯಜ್ಞಾಭಿಮುಖ್ಯೇನಾಜೀಜನನ್ । ಅರಣ್ಯೋಃ ಸಕಾಶಾದುದಪಾದಯನ್ ॥

॥ ಪ್ರತಿಪದಾರ್ಥ ॥

**ದಿವಃ**—ಸ್ವರ್ಗಲೋಕಕ್ಕೆ । **ಮೂರ್ಧಾನಂ** - ಶಿರೋರೂಪನೂ । **ಪೃಥಿವ್ಯಾಃ**—ಭೂಮಿಗೆ । **ಅರತಿಂ**—ಸ್ವಾಮಿಯೂ । **ಋತೇ**—ಯಜ್ಞಾರ್ಥವಾಗಿ । **ಆ ಜಾತಂ**— ಉತ್ಪನ್ನನಾದವನೂ । **ಕವಿಂ**—ಕ್ರಾಂತದರ್ಶಿಯೂ । **ಸಮ್ರಾಜಂ**— ಪೂರ್ಣಪ್ರಕಾಶಕನೂ । **ಜನಾನಾಂ**— ಯಜಮಾನರಿಗೆ । **ಅತಿಥಿಂ**—ಅತಿಥಿರೂಪನೂ । **ಆಸನ್**—ಮುಖರೂಪವಾದ । **ಪಾತ್ರಂ**—(ಹವಿರ್ವಹನದ) ಪಾತ್ರೆಯುಳ್ಳವನೂ ಆದ । **ವೈಶ್ವಾನರಂ ಅಗ್ನಿಂ**—ವೈಶ್ವಾನರೂಪನಾದ ಅಗ್ನಿಯನ್ನು । **ದೇವಾಃ**—ದೇವತೆಗಳು (ಋತ್ವಿಕ್ಕುಗಳು) । **ಆ ಜನಯಂತ**—ಉತ್ಪನ್ನ ಮಾಡಿದರು.

॥ ಭಾವಾರ್ಥ ॥

ದ್ಯುಲೋಕಕ್ಕೆ ಶಿರೋರೂಪನೂ, ಭೂಮಿಗೆ ಸ್ವಾಮಿಯೂ, ಯಜ್ಞಾರ್ಥವಾಗಿ ಉತ್ಪನ್ನನಾದವನೂ, ಕ್ರಾಂತದರ್ಶಿಯೂ ಪೂರ್ಣಪ್ರಕಾಶಕನೂ, ಯಜಮಾನರಿಗೆ ಅತಿಥಿರೂಪನೂ, ಮುಖರೂಪವಾದ ಹವಿರ್ವಹನಪಾತ್ರೆಯುಳ್ಳವನೂ ಆದ ವೈಶ್ವಾನರರೂಪನಾದ ಅಗ್ನಿಯನ್ನು ದೇವತೆಗಳು ಉತ್ಪನ್ನಮಾಡಿದರು.

## English Translation.

The gods have generated Vaishwanara, Agni as the brow of heaven, the unceasing pervader of earth, born for (the celebration of) sacrifice, wise, imperial. the guest of men, in whose mouth (is) the vessel (that conveys the the oblation to the gods).

। ಸಂಹಿತಾಪಾಠಃ ।

ನಾಭಿಂ ಯಜ್ಞಾನಾಂ ಸದನಂ ರಯೀಣಾಂ ಮಹಾಮಾಹಾವಮಭಿ ಸಂ ನವಂತ ।
ವೈಶ್ವಾನರಂ ರಥ್ಯಮಧ್ವರಾಣಾಂ ಯಜ್ಞಸ್ಯ ಕೇತುಂ ಜನಯಂತ ದೇವಾಃ ॥

॥ ಪದಪಾಠಃ ॥

ನಾಭಿಂ । ಯಜ್ಞಾನಾಂ । ಸದನಂ । ರಯೀಣಾಂ । ಮಹಾಂ । ಆऽಹಾವಂ । ಅಭಿ । ಸಂ । ನವಂತ ।
ವೈಶ್ವಾನರಂ । ರಥ್ಯಂ । ಅಧ್ವರಾಣಾಂ । ಯಜ್ಞಸ್ಯ । ಕೇತುಂ । ಜನಯಂತ । ದೇವಾಃ ॥ ೨ ॥

॥ ಸಾಯಣಭಾಷ್ಯಂ ॥

ಯಜ್ಞಾನಾಂ ಜ್ಯೋತಿಷ್ಟೋಮಾದಿಯಾಗಾನಾಂ ನಾಭಿಂ ನಹನಂ ಬಂಧಕಂ ತಥಾ ರಯೀಣಾಂ ಧನಾನಾಂ ಸದನಂ ಸ್ಥಾನಮೇಕನಿಲಯಂ ಮಹಾಂ ಮಹಾಂತಮಾಹಾವಂ । ಆಹೂಯಂತೇಽಸ್ಮಿನ್ನಾಹುತಯ ಇತ್ಯಾಹಾವಃ । ತಾದೃಶಂ । ಯದ್ವಾ । ವೃಷ್ಟ್ಯುದಕಧಾರಣಮಾಹಾವಂ ನಿಪಾನಸ್ಥಾನೀಯಂ । ಏವಂಭೂತಮಗ್ನಿಮಭಿ ಅಭಿತಃ ಸಂ ನವಂತ । ಸ್ತೋತಾರಃ ಸಮ್ಯಕ್ ಸ್ತುವಂತಿ । ತಥಾ ವೈಶ್ವಾನರಂ ವಿಶ್ವೇಷಾಂ ನರಾಣಾಂ ಸಂಬಂಧಿನಮಧ್ವರಾಣಾಂ ಯಜ್ಞಾನಾಂ ರಥ್ಯಂ ರಥಿನಂ । ಯಥಾ ರಥೀ ಸ್ವರಥಂ ನಯತಿ ತದ್ವನ್ನೇತಾರಂ ಗ್ರಾಹಯಿತಾರಂ ಗಮಯಿತಾರಂ ಯಜ್ಞಸ್ಯ ಕೇತುಂ ಪ್ರಜ್ಞಾಪಕಂ । ಏವಂವಿಧಮಗ್ನಿಂ ದೇವಾಃ ಸ್ತೋತಾರ ಋತ್ವಿಜೋ ದೇವಾ ಏವ ವಾ ಜನಯಂತ ಜನಯಂತಿ । ಮಥನೇನೋತ್ಪಾದಯಂತಿ

। ಪ್ರತಿಪದಾರ್ಥ ॥

**ಯಜ್ಞಾನಾಂ**—ಜ್ಯೋತಿಷ್ಟೋಮಾದಿಯಾಗಗಳಿಗೆ । **ನಾಭಿಂ**—ನಾಭಿರೂಪನೂ (ಬಂಧಕನೂ) । **ರಯೀಣಾಂ**—ಧನಗಳಿಗೆ । **ಸದನಂ**—ಆಶ್ರಯಸ್ಥಾನನೂ । **ಮಹಾಂ**—ಮಹತ್ಸ್ವರೂಪವುಳ್ಳವನೂ । **ಆಹಾವಂ**—ಹವಿಸ್ಸುಗಳನ್ನು ಸ್ವೀಕರಿಸುವವನೂ ಆದ ಅಗ್ನಿಯನ್ನು । **ಅಭಿ**—ಸುತ್ತಲೂ । **ಸಂ ನವಂತ**—(ಸ್ತೋತೃಗಳು) ಸ್ತುತಿಸುತ್ತಾರೆ । (**ವೈಶ್ವಾನರಂ**—ಸಕಲ ಮಾನವರಿಗೂ ನೇತೃವೂ) । **ಅಧ್ವರಾಣಾಂ**—ಯಜ್ಞಗಳಿಗೆ । **ರಥ್ಯಂ**—ನಿರ್ವಾಹಕನೂ । **ಯಜ್ಞಸ್ಯ**—ಯಜ್ಞಕ್ಕೆ । **ಕೇತುಂ**—ಪ್ರಜ್ಞಾಪಕನೂ ಆದ । **ವೈಶ್ವಾನರಂ**—ವೈಶ್ವಾನರ ರೂಪಿಯೂ ಆದ ಅಗ್ನಿಯನ್ನು । **ದೇವಾಃ**—ದೇವತೆಗಳು । **ಜನಯಂತ**—ಉತ್ಪನ್ನಮಾಡಿದರು.

। ಭಾವಾರ್ಥ ॥

ಜ್ಯೋತಿಷ್ಟೋಮಾದಿ ಯಾಗಗಳಿಗೆ ನಾಭಿರೂಪನೂ, ಧನಗಳಿಗೆ ಆಶ್ರಯಸ್ಥಾನನೂ, ಮಹತ್ಸ್ವರೂಪವುಳ್ಳವನೂ, ಹವಿಸ್ಸುಗಳನ್ನು ಸ್ವೀಕರಿಸುವವನೂ ಆದ ಅಗ್ನಿಯನ್ನು ಸ್ತೋತೃಗಳು ಸುತ್ತಲೂ ನಿಂತು ಸ್ತುತಿಸುತ್ತಾರೆ. ಸಕಲ ಮಾನವರಿಗೂ ನೇತೃವೂ, ಯಜ್ಞಗಳಿಗೆ ನಿರ್ವಾಹಕನೂ, ಯಜ್ಞಕ್ಕೆ ಪ್ರಜ್ಞಾಪಕನೂ ಆದ ವೈಶ್ವಾನರೂಪಿಯಾದ ಅಗ್ನಿಯನ್ನು ದೇವತೆಗಳು ಉತ್ಪನ್ನಮಾಡಿದರು.

## English Translation.

(The worhippers) glorify together, (Agni), the bond of sacrifices, the abode of riches the great receptacle of burnt-offerings : the gods generate Vaishwanara, the conveyer of oblations, the emblem, of sacrifice.

॥ ಸಂಹಿತಾಪಾಠಃ ॥

ತ್ವದ್ವಿಪ್ರೋ ಜಾಯತೇ ವಾಜ್ಯಗ್ನೇ ತ್ವದ್ವೀರಾಸೋ ಅಭಿಮಾತಿಷಾಹಃ ।
ವೈಶ್ವಾನರ ತ್ವಮಸ್ಮಾಸು ಧೇಹಿ ವಸೂನಿ ರಾಜನ್ತ್ಸ್ಪೃಹಯಾಯ್ಯಾಣಿ ॥ ೩ ॥

॥ ಪದಪಾಠಃ ॥

ತ್ವತ್ । ವಿಪ್ರಃ । ಜಾಯತೇ । ವಾಜಿ । ಅಗ್ನೇ । ತ್ವತ್ । ವೀರಾಸಃ । ಅಭಿಮಾತಿಽಸಹಃ ।
ವೈಶ್ವಾನರ । ತ್ವಂ । ಅಸ್ಮಾಸು । ಧೇಹಿ । ವಸೂನಿ । ರಾಜನ್ । ಸ್ಪೃಹಯಾಯ್ಯಾಣಿ ॥ ೩ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ವಾಜೀ ಹವಿರ್ಲಕ್ಷಣಾನ್ನವಾನ್ಪುರುಷಸ್ತ್ವತ್ ತ್ವತ್ತಃ ಸಕಾಶಾತ್ ವಿಪ್ರೋ ಮೇಧಾವೀ ಜಾಯತೇ । ತುಭ್ಯಂ ಹವಿರ್ದಾನೇನ ಮೇಧಾವೀ ಭವತಿ । ತಥಾ ವೀರಾಸೋ ವೀರಾಸ್ತ್ವತ್ ತ್ವತ್ತೋಽಭಿಮಾತಿಷಾಹೋಽಭಿಮಾತೀನಾಂ ಶತ್ರೂಣಾಮಭಿಭವಿತಾರೋ ಜಾಯಂತೇ । ಯಸ್ಮಾದೇವಂ ತಸ್ಮಾತ್ ಹೇ ವೈಶ್ವಾನರ ರಾಜನ್ ರಾಜಮಾನಾಗ್ನೇ ತ್ವಮಸ್ಮಾಸು ತ್ವದ್ಭಕ್ತೇಷು ಸ್ಪೃಹಯಾಯ್ಯಾಣಿ ಸ್ಪೃಹಣೀಯಾನಿ ವಸೂನಿ ಧನಾನಿ ಧೇಹಿ । ನಿಧೇಹಿ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ವಾಜೀ**—ಹವಿಸ್ಸನ್ನು ಹೊಂದಿರುವ ಯಜಮಾನನು । **ತ್ವತ್**—ನಿನ್ನ ಸಹಾಯದಿಂದಲೇ । **ವಿಪ್ರಃ**—ಮೇಧಾವಿಯಾಗಿ । **ಜಾಯತೇ**—ಉತ್ಪನ್ನನಾಗುತ್ತಾನೆ । **ವೀರಾಸಃ**—ವೀರರೂ ಸಹ । **ತ್ವತ್**—ನಿನ್ನ ಸಹಾಯದಿಂದಲೇ । **ಅಭಿಮಾತಿಷಾಹಃ**—ಶತ್ರುನಾಶಕವಾದ ಶಕ್ತಿಯುಳ್ಳವರಾಗಿ (ಆಗುತ್ತಾರೆ) । **ರಾಜನ್**—ಪ್ರಕಾಶಮಾನನೂ । **ವೈಶ್ವಾನರ**—ವೈಶ್ವಾನರರೂಪನೂ ಆದ ಎಲೈಅಗ್ನಿಯೇ । **ತ್ವಂ**—ನೀನು । **ಅಸ್ಮಾಸು**—ನಮ್ಮಲ್ಲಿ । **ಸ್ಪೃಹಯಾಯ್ಯಾಣಿ**—ಅತ್ಯಂತ ಆದರಕ್ಕೆ ಪಾತ್ರವಾದ । **ವಸೂನಿ**—ಧನಗಳನ್ನು । **ಧೇಹಿ**—ತುಂಬಿಡು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಹವಿಸ್ಸನ್ನು ಹೊಂದಿರುವ ಯಜಮಾನನು ನಿನ್ನ ಸಹಾಯದಿಂದಲೇ ಮೇಧಾವಿಯಾಗಿ ಉತ್ಪನ್ನನಾಗುತ್ತಾನೆ. ವೀರರೂ ಸಹ ನಿನ್ನ ಸಹಾಯದಿಂದಲೇ ಶತ್ರುನಾಶಕವಾದ ಶಕ್ತಿಯುಳ್ಳವರಾಗಿ ಆಗುತ್ತಾರೆ. ಪ್ರಕಾಶಮಾನನೂ ವೈಶ್ವಾನರರೂಪನೂ ಆದ ಎಲೈ ಅಗ್ನಿಯೇ, ನೀನು ನಮ್ಮಲ್ಲಿ ಅತ್ಯಂತ ಆದರಕ್ಕೆ ಪಾತ್ರವಾದ ಧನಗಳನ್ನು ತುಂಬಿಡು.

English Translation.

The offerer of (sacrificial) food becomes wise, Agni, from you: from you heroes become the vanquishers of foes: therefore royal Vaishwanara, bestow upon us enviable riches.

॥ ಸಂಹಿತಾಪಾಠಃ ॥

ತ್ವಾಂ ವಿಶ್ವೇ ಅಮೃತ ಜಾಯಮಾನಂ ಶಿಶುಂ ನ ದೇವಾ ಅಭಿ ಸಂ ನವಂತೇ।
ತವ ಕ್ರತುಭಿರಮೃತತ್ವಮಾಯನ್ವೈಶ್ವಾನರ ಯತ್ಪಿತ್ರೋರದೀದೇಃ ॥ ೪ ॥

॥ ಪದಪಾಠಃ ॥

ತ್ವಾಂ । ವಿಶ್ವೇ । ಅಮೃತ । ಜಾಯಮಾನಂ । ಶಿಶುಂ । ನ । ದೇವಾಃ । ಅಭಿ । ಸಂ । ನವಂತೇ ।
ತವ । ಕ್ರತುಽಭಿಃ । ಅಮೃತಽತ್ವಂ । ಆಯನ್ । ವೈಶ್ವಾನರ । ಯತ್ । ಪಿತ್ರೋಃ । ಅದೀದೇಃ ॥ ೪ ॥

॥ ಸಾಯಣಭಾಷ್ಯಂ ॥

ಹೇ ಅಮೃತ ಮರಣಧರ್ಮರಹಿತಾಗ್ನೇ ವಿಶ್ವೇ ಸರ್ವೇ ದೇವಾಃ ಸ್ತೋತಾರೋ ಜಾಯಮಾನಮರಣ್ಯೋಃ ಸಕಾಶಾದುತ್ಪದ್ಯಮಾನಂ ತ್ವಾಂ ಶಿಶುಂ ನ ಪುತ್ರಮಿವಾಭಿ ಸಂ ನವಂತೇ । ಅಭಿಸಂಸ್ತುವಂತಿ । ಯದ್ವಾ । ದೀವ್ಯಂತೀತಿ ದೇವಾ ರಶ್ಮಯಃ । ತೇ ಸರ್ವೇ ಜಾಯಮಾನಂ ತ್ವಾಮಭಿ ಸಂ ನವಂತೇ । ಅಭಿಸಂಗಚ್ಛಂತೇ ಯಥಾ ಪಿತರಃ ಪುತ್ರಮಭಿಗಚ್ಛಂತಿ । ಅಪಿ ಚ ಹೇ ವೈಶ್ವಾನರಾಗ್ನೇ ಯದ್ಯದಾ ಪಿತ್ರೋಃ ಪಾಲಯಿತ್ರ್ಯೋರ್ದ್ಯಾವಾಪೃಥಿವ್ಯೋರ್ಮಧ್ಯೇಽದೀದೇಃ ದೀಪ್ಯಸೇ ತದಾನೀಂ ತವ ತ್ವದೀಯೈಃ ಕ್ರತುಭಿಃ ಕರ್ಮಭಿರ್ಜ್ಯೋತಿಷ್ಟೋಮಾದಿಭಿರ್ಯಾಗೈರಮೃತತ್ವಂ ದೇವತ್ವಮಾಯನ್ । ಯಜಮಾನಾಃ ಪ್ರಾಪ್ನುವಂತಿ ॥

॥ ಪ್ರತಿಪದಾರ್ಥ ॥

**ಅಮೃತ**-ಮರಣಧರ್ಮರಹಿತನಾದ ಎಲೈ ಅಗ್ನಿಯೇ। **ವಿಶ್ವೇ**—ಸಮಸ್ತವಾದ । **ದೇವಾಃ**-ಸ್ತೋತೃಗಳೂ ಸಹ । **ಜಾಯಮಾನಂ**—ಅರಣಿಯಿಂದ ಉತ್ಪನ್ನನಾದ । **ತ್ವಾಂ**—ನಿನ್ನನ್ನು । **ಶಿಶುಂ ನ** ಎಳೆಯ ಮಗುವಿನಂತೆ । **ಅಭಿ ಸಂ ನವಂತೇ**—ಆದರಿಸಿ ಪೂಜಿಸುತ್ತಾರೆ। **ವೈಶ್ವಾನರ**—ವೈಶ್ವಾನರರೂಪಿಯಾದ ಅಗ್ನಿಯೇ । **ಯತ್**—ಯಾವಾಗ । **ಪಿತ್ರೋಃ**—ಲೋಕಪಾಲಕಗಳಾದ ದ್ಯಾವಾಪೃಥಿವಿಗಳ ಮಧ್ಯೆ। **ಅದೀದೇಃ**—ನೀನು ಪ್ರಕಾಶಿಸುವೆಯೋ (ಆಗ) । **ತವ**—ನಿನ್ನ ಸಂಬಂಧಿಯಾದ । **ಕ್ರತುಭಿಃ**—ಯಾಗಾದಿ ಕರ್ಮಗಳಿಂದ । **ಅಮೃತತ್ವಂ**—ಮರಣರಾಹಿತ್ಯವನ್ನು । **ಆಯನ್**—(ಯಜಮಾನಾದಿಗಳು) ಪಡೆಯುತ್ತಾರೆ.

॥ ಭಾವಾರ್ಥ ॥

ಮರಣಧರ್ಮರಹಿತನಾದ ಎಲೈ ಅಗ್ನಿಯೇ, ಸಮಸ್ತ ಸ್ತೋತೃಗಳೂ ಸಹ ಅರಣಿಯಿಂದ ಉತ್ಪನ್ನನಾದ ನಿನ್ನನ್ನು ಎಳೆಯ ಮಗುವಿನಂತೆ ಆದರಿಸಿ ಪೂಜಿಸುತ್ತಾರೆ. ವೈಶ್ವಾನರರೂಪಿಯಾದ ಎಲೈ ಅಗ್ನಿಯೇ, ಯಾವಾಗ ಲೋಕಪಾಲಕಗಳಾದ ದ್ಯಾವಾಪೃಥಿವಿಗಳ ಮಧ್ಯೆ ನೀನು ಪ್ರಕಾಶಿಸುವೆಯೋ, ಆಗ ನಿನ್ನ ಸಂಬಂಧಿಯಾದ ಯಾಗಾದಿ ಕರ್ಮಗಳಿಂದ ಯಜಮಾನಾದಿಗಳು ಮರಣರಾಹಿತ್ಯವನ್ನು ಪಡೆಯುತ್ತಾರೆ

English Translation.

All the worshippers together praise you, immortal Agni, when born like an infact : when you shine Vishwanara, between the parental (heaven and earth), they obtain immortality through your (sacred) rites·

॥ ಸಂಹಿತಾಪಾಠಃ ॥

ವೈಶ್ವಾನರ ತವ ತಾನಿ ವ್ರತಾನಿ ಮಹಾನ್ಯಗ್ನೇ ನಕಿರಾ ದಧರ್ಷ ।
ಯಜ್ಜಾಯಮಾನಃ ಪಿತ್ರೋರುಪಸ್ಥೇಽವಿಂದಃ ಕೇತುಂ ವಯುನೇಷ್ವಹ್ನಾಂ॥

॥ ಪದಪಾಠಃ ॥

ವೈಶ್ವಾನರ । ತವ । ತಾನಿ । ವ್ರತಾನಿ । ಮಹಾನಿ । ಅಗ್ನೇ । ನಕಿಃ । ಆ । ದಧರ್ಷ ।
ಯತ್ । ಜಾಯಮಾನಃ । ಪಿತ್ರೋಃ । ಉಪಽಸ್ಥೇ । ಅವಿಂದಃ । ಕೇತುಂ । ವಯುನೇಷು । ಅಹ್ನಾಂ ॥೫॥

॥ ಸಾಯಣಭಾಷ್ಯಂ ॥

**ಹೇ ವೈಶ್ವಾನರ ವಿಶ್ವೇಷಾಂ ನರಾಣಾಂ ಸಂಬಂಧಿನ್ನಗ್ನೇ ತವ ತ್ವದೀಯಾನಿ ತಾನಿ ಪ್ರಸಿದ್ಧಾನಿ ವ್ರತಾನಿ ಕರ್ಮಾಣಿ ಮಹಾನಿ ಮಹಾಂತಿ ನಕಿರಾ ದಧರ್ಷ । ನ ಕಶ್ಚನಾನ್ಯೋ ಧರ್ಷಯತಿ । ಬಾಧತೇ ।**

**ಯದ್ಯದಾ ತ್ವಂ ಪಿತ್ರೋರ್ದ್ಯಾವಾಪೃಥಿವ್ಯೋರುಪಸ್ಥ ಉಪಸ್ಥಾನೇಽಂತರಿಕ್ಷೇ ವಯುನೇಷು ಗಂತವ್ಯೇಷು ಮಾರ್ಗೇಷು ಜಾಯಮಾನಃ ಸನ್ ಅಹ್ನಾಂ ಕೇತುಂ ಪ್ರಜ್ಞಾಪಕಂ ಸೂರ್ಯಂ ಸ್ವರ್ಭಾನುನಾವೃತಮವಿಂದಃ ಅಲಂಭಯಃ । ತಮೋರೂಪಮಸುರಂ ಸ್ವತೇಜಸಾ ನಿವಾರಯನ್ನಸ್ಥಾಪಯ ಇತ್ಯರ್ಥಃ । ತದಾ ತಾನಿ ವ್ರತಾನೀತಿ ಪೂರ್ವತ್ರಾನ್ವಯಃ ॥**

॥ ಪ್ರತಿಪದಾರ್ಥ ॥

**ವೈಶ್ವಾನರ**—ವೈಶ್ವಾನರರೂಪಿಯಾದ । **ಅಗ್ನೇ**—ಅಗ್ನಿಯೇ । **ತವ**—ನಿನ್ನ । **ತಾನಿ**—ಪ್ರಸಿದ್ಧವಾದವೂ । **ಮಹಾನಿ**—ಮಹತ್ವಭಾವವುಳ್ಳವೂ ಆದ । **ವ್ರತಾನಿ**—ಕರ್ಮಗಳನ್ನು । **ನಕಿಃ ಆ ದಧರ್ಷ**—ಯಾರೂ ತಡೆಗಟ್ಟಲಾರರು । **ಯತ್**—ಯಾವಾಗ । **ಪಿತ್ರೋಃ**—ನಿನಗೆ ಪಿತೃಪ್ರಾಯರಾದ ದ್ಯಾವಾಪೃಥಿವಿಗಳ । **ಉಪಸ್ಥೇ**—ಉತ್ಸಂಗದಲ್ಲಿ । **ಜಾಯಮಾನಃ**—ಉತ್ಪನ್ನನಾಗುವೆಯೋ (ಆಗ) । **ಅಹ್ನಾಂ ಕೇತುಂ**—ಅಹಸ್ಸಿಗೆ ಪ್ರಜ್ಞಾಪಕನಾದ ಸೂರ್ಯನನ್ನು । **ವಯುನೇಷು**—ಅಂತರಿಕ್ಷಮಾರ್ಗಗಳಲ್ಲಿ । **ಅವಿಂದಃ**—ಸ್ಥಾಪಿಸುವೆ.

॥ ಭಾವಾರ್ಥ ॥

ವೈಶ್ವಾನರರೂಪಿಯಾದ ಎಲೈ ಅಗ್ನಿಯೇ, ನಿನ್ನ ಪ್ರಸಿದ್ಧವಾದವೂ, ಮಹತ್ವಭಾವವುಳ್ಳವೂ ಆದ ಕರ್ಮಗಳನ್ನು ಯಾರೂ ತಡೆಗಟ್ಟಲಾರರು ಯಾವಾಗ ನಿನಗೆ ಪಿತೃಪ್ರಾಯವಾದ ದ್ಯಾವಾಪೃಥಿವಿಗಳ ಉತ್ಸಂಗದಲ್ಲಿ ನೀನು ಉತ್ಪನ್ನನಾಗುವೆಯೋ ಆಗ ಅಹಸ್ಸಿಗೆ ಪ್ರಜ್ಞಾಪಕನಾದ ಸೂರ್ಯನನ್ನು ಅಂತರಿಕ್ಷಮಾರ್ಗಗಳಲ್ಲಿ ಸ್ಥಾಪಿಸುವೆ.

## English Translation

Agni, Vaishwanara, these your mighty deeds no one can resist; when born on the lap of your parents, you have stationed the banner of the days on the paths of the firmament.

॥ ಸಂಹಿತಾಪಾಠಃ ॥

ವೈಶ್ವಾನರಸ್ಯ ವಿಮಿತಾನಿ ಚಕ್ಷಸಾ ಸಾನೂನಿ ದಿವೋ ಅಮೃತಸ್ಯ ಕೇತುನಾ ।
ತಸ್ಯೇದು ವಿಶ್ವಾ ಭುವನಾಧಿ ಮೂರ್ಧನಿ ವಯಾಇವ ರುರುಹುಃ ಸಪ್ತ ವಿಸ್ರುಹಃ ॥ ೬ ॥

॥ ಪದಪಾಠಃ ॥

ವೈಶ್ವಾನರಸ್ಯ । ವಿಽಮಿತಾನಿ । ಚಕ್ಷಸಾ । ಸಾನೂನಿ । ದಿವಃ । ಅಮೃತಸ್ಯ । ಕೇತುನಾ ।
ತಸ್ಯ । ಇತ್ । ಊಂ ಇತಿ । ವಿಶ್ವಾ । ಭುವನಾ । ಅಧಿ । ಮೂರ್ಧನಿ । ವಯಾಃಽಇವ । ರುರುಹುಃ । ಸಪ್ತ । ವಿಽಸ್ರುಹಃ ॥ ೬ ॥

॥ ಸಾಯಣಭಾಷ್ಯಂ ॥

ವೈಶ್ವಾನರಸ್ಯ ವಿಶ್ವನರಹಿತಸ್ಯಾಗ್ನೇಶ್ಚಕ್ಷಸಾ ತೇಜಸಾಽಮೃತಸ್ಯೋದಕಸ್ಯ ಕೇತುನಾ ಪ್ರಜ್ಞಾಪಕೇನ ದಿವೋ ದ್ಯುಲೋಕಸ್ಯ ಸಾನೂನಿ ಸಮುಚ್ಛ್ರಿತಸ್ಥಲಾನಿ ನಕ್ಷತ್ರರೂಪಾಣಿ ವಿಮಿತಾನಿ ನಿರ್ಮಿತಾನಿ। ಯದ್ವಾ। ದಿವೋಽಂತರಿಕ್ಷಸ್ಯ ಸಾನೂನಿ ಸಮುಚ್ಛ್ರಿತಪ್ರದೇಶಾ ಮೇಘಾತ್ಮಕಾ ವಿಮಿತಾನಿ ನಿರ್ಮಿತಾಃ । ಧೂಮವಿಕಾರತ್ವಾತ್ತೇಷಾಂ । ತಸ್ಯೇದು ತಸ್ಯೈವ ವೈಶ್ವಾನರಸ್ಯ ಮೂರ್ಧನಿ ಮೂರ್ಧಸ್ಥಾನೀಯ ಉಪರಿವರ್ತಮಾನೇ ಧೂಮೇ ಮೇಘಾತ್ಮನಾ ಪರಿಣತೇ ವಿಶ್ವಾ ವಿಶ್ವಾನಿ ವ್ಯಾಪ್ತಾನಿ ಭುವನಾ ಭುವನಾನ್ಯುದಕಾನ್ಯಧಿ ವಸಂತಿ । ಯದ್ವಾ । ವೈಶ್ವಾನರಾತ್ಮಕಸ್ಯ ಪರಬ್ರಹ್ಮಣೋ ಮೂರ್ಧನ್ಯುಪರಿಪ್ರದೇಶೇ ಸರ್ವಾಣಿ ಭೂತಜಾತಾನ್ಯಧಿವಸಂತಿ । ತಥಾ ವಯಾಃ ಶಾಖಾ ಇವ ಸಪ್ತ ಸರ್ಪಣಶೀಲಾಃ ಸಪ್ತಸಂಖ್ಯಾ ವಾ ವಿಸ್ರುಹೋ ನದ್ಯಶ್ಚ ಗಂಗಾದ್ಯಾ ರುರುಹುಃ । ರೋಹಂತಿ । ಅಸ್ಮಾದೇವ ವೈಶ್ವಾನರಾತ್ ಪ್ರಾದುರ್ಭವಂತಿ । ಆಹುತಿದ್ವಾರಾ ಸಕಲಂ ಜಗದಗ್ನೇಃ ಸಕಾಶಾದುತ್ಪದ್ಯತ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಅಮೃತಸ್ಯ**—ವೃಷ್ಟ್ಯುದಕಕ್ಕೆ । **ಕೇತುನಾ**—ಪ್ರಜ್ಞಾಪಕವಾದ । **ವೈಶ್ವಾನರಸ್ಯ**—ವೈಶ್ವಾನರಾಗ್ನಿಯ । **ಚಕ್ಷಸಾ**—ತೇಜಸ್ಸಿನಿಂದ । **ದಿವಃ**—ದ್ಯುಲೋಕದ । **ಸಾನೂನಿ**—ಸಮುಚ್ಛ್ರಿತಪ್ರದೇಶಗಳು । **ವಿಮಿತಾನಿ**—ನಿರ್ಮಿತವಾಗಿವೆ । **ತಸ್ಯೇದು**—ಅದೇ ವೈಶ್ವಾನರಾಗ್ನಿಯ । **ಮೂರ್ಧನಿ**—ಊರ್ಧ್ವಭಾಗದಲ್ಲಿ ಮೇಘರೂಪದಲ್ಲಿ ಪರಿಣತವಾಗಿರುವ ಧೂಮದಲ್ಲಿಯೇ । **ವಿಶ್ವಾ ಭುವನಾ**—ಸಮಸ್ತ ಉದಕಗಳೂ । **ಅಧಿ (ವಸಂತಿ)**—ನೆಲೆಸಿವೆ । **ಸಪ್ತ ವಿಸ್ರುಹಃ**—ಪ್ರವಾಹಾತ್ಮಕಗಳಾದ ಸಪ್ತನದಿಗಳೂ ಸಹ । **ವಯಾ ಇವ**—ಶಾಖೆಗಳಂತೆ । **ರುರುಹುಃ**—ಈ ವೈಶ್ವಾನರನಿಂದಲೇ ಪ್ರಾದುರ್ಭೂತವಾಗುತ್ತವೆ.

॥ ಭಾವಾರ್ಥ ॥

ವೃಷ್ಟ್ಯುದಕಕ್ಕೆ ಪ್ರಜ್ಞಾಪಕವಾದ ವೈಶ್ವಾನರಾಗ್ನಿಯ ತೇಜಸ್ಸಿನಿಂದ ದ್ಯುಲೋಕದ ಸಮುಚ್ಛ್ರಿತಪ್ರದೇಶಗಳು ನಿರ್ಮಿತವಾಗಿವೆ. ಅದೇ ವೈಶ್ವಾನರಾಗ್ನಿಯ ಊರ್ಧ್ವಭಾಗದಲ್ಲಿ ಮೇಘರೂಪದಲ್ಲಿ ಪರಿಣತವಾಗಿರುವ ಧೂಮದಲ್ಲಿಯೇ ಸಮಸ್ತ ಉದಕಗಳೂ ನೆಲೆಸಿವೆ. ಪ್ರವಾಹಾತ್ಮಕಗಳಾದ ಸಪ್ತನದಿಗಳೂ ಸಹ ಶಾಖೆಗಳಂತೆ ಈ ವೈಶ್ವಾನರನಿಂದಲೇ ಪ್ರಾದುರ್ಭೂತವಾಗುತ್ತವೆ.

## English Translation.

The summits of the fimament are measured by the light of Vaishwanara, the manifester of ambrosial (rain): all the regions are overspread (by the vapour) on his brow, and the seven gliding (streams) spring from thence like branches.

|| ಸಂಹಿತಾಪಾಠಃ ||

ವಿ ಯೋ ರಜಾಂಸ್ಯಮಿಮೀತ ಸುಕ್ರತುರ್ವೈಶ್ವಾನರೋ ವಿ ದಿವೋ ರೋಚನಾ ಕವಿಃ ।
ಪರಿ ಯೋ ವಿಶ್ವಾ ಭುವನಾನಿ ಪಪ್ರಥೇಽದಬ್ಧೋ ಗೋಪಾ ಅಮೃತಸ್ಯ ರಕ್ಷಿತಾ || ೭ ||

|| ಪದಪಾಠಃ ||

ವಿ । ಯಃ । ರಜಾಂಸಿ । ಅಮಿಮೀತ । ಸುಽಕ್ರತುಃ । ವೈಶ್ವಾನರಃ । ವಿ । ದಿವಃ । ರೋಚನಾ । ಕವಿಃ ।
ಪರಿ । ಯಃ । ವಿಶ್ವಾ । ಭುವನಾನಿ । ಪಪ್ರಥೇ । ಅದಬ್ಧಃ । ಗೋಪಾಃ । ಅಮೃತಸ್ಯ । ರಕ್ಷಿತಾ || ೭ ||

|| ಸಾಯಣಭಾಷ್ಯಂ ||

ಸುಕ್ರತುಃ ಸುಕರ್ಮಾ ವೈಶ್ವಾನರೋ ವಿಶ್ವೇಷಾಂ ನರಾಣಾಂ ಹಿತೋ ಯೋಽಗ್ನೀ ರಜಾಂಸ್ಯುದಕಾನಿ ಲೋಕಾನ್ವಾ ವ್ಯಮಿಮೀತ ನಿರ್ಮಿತವಾನ್ । ತಥಾ ದಿವೋ ದ್ಯುಲೋಕಸ್ಯ ಸಂಬಂಧೀನಿ ರೋಚನಾ ರೋಚಮಾನಾನಿ ದೀಪ್ಯಮಾನಾನಿ ನಕ್ಷತ್ರಾದೀನಿ ಕವಿಃ ಕ್ರಾಂತದರ್ಶೀ ಸನ್ ಯೋಽಗ್ನಿರ್ವ್ಯಮಿಮೀತ । ಯಶ್ಚ ವಿಶ್ವಾ ಸರ್ವಾಣಿ ಭುವನಾನಿ ಭೂತಜಾತಾನಿ ವ್ಯಾಪ್ತಾನ್ಯುದಕಾನಿ ವಾ ಪರಿ ಪಪ್ರಥೇ ಪರಿತೋಽಪ್ರಥಯತ್ ಸೋಽಯಮದಬ್ಧಃ ಕೇನಾಪ್ಯಹಿಂಸಿತೋ ಗೋಪಾಃ ಸರ್ವಸ್ಯ ಗೋಪಾಯಿತಾ ರಕ್ಷಿತಾಮೃತಸ್ಯಾಮರಣಹೇತೋರುದಕಸ್ಯ ರಕ್ಷಿತಾ ಪಾಲಯಿತಾ ಸನ್ ವರ್ತತ ಇತಿ ಶೇಷಃ ||

|| ಪ್ರತಿಪದಾರ್ಥ ||

**ಸುಕ್ರತುಃ**—ಉತ್ತಮವಾದ ಕರ್ಮಕರ್ತನಾದ । **ಯಃ**—ಯಾರು । **ರಜಾಂಸಿ**—ಲೋಕಗಳನ್ನೆಲ್ಲಾ **ವ್ಯಮಿಮೀತ**—ನಿರ್ಮಿಸಿದನೋ । **ಕವಿಃ (ಯಃ)**—ಕ್ರಾಂತದರ್ಶಿಯಾದ ಯಾರು । **ದಿವಃ**—ಅಂತರಿಕ್ಷದ । **ರೋಚನಾ**—ತೇಜೋಮಂಡಲಗಳನ್ನು । **ವಿ (ಅಮಿಮೀತ)**—ನಿರ್ಮಿಸಿದನೋ । **ಯಃ**—ಯಾರು । **ವಿಶ್ವಾ**—ಸಮಸ್ತವಾದ । **ಭುವನಾನಿ**—ಲೋಕಗಳನ್ನೂ । **ಪರಿ ಪಪ್ರಥೇ**—ಸುತ್ತಲೂ ವ್ಯಾಪಿಸಿರುವನೋ । **(ಸಃ) ವೈಶ್ವಾನರಃ**-ಅದೇ ವೈಶ್ವಾನರರೂಪಿಯಾದ ಅಗ್ನಿಯು । **ಅದಬ್ಧಃ**-ಅಪ್ರತಿಹತನಾಗಿಯೂ । **ಗೋಪಾಃ**-ಜಗದ್ರಕ್ಷಕನಾಗಿಯೂ ಇದ್ದು । **ಅಮೃತಸ್ಯ**—ಅಮೃತರೂಪವಾದ ಉದಕಕ್ಕೆಲ್ಲಾ । **ರಕ್ಷಿತಾ**—ಪಾಲಕನಾಗಿದ್ದಾನೆ.

|| ಭಾವಾರ್ಥ ||

ಉತ್ತಮವಾದ ಕರ್ಮಕರ್ತನಾದ ಯಾರು ಲೋಕಗಳನ್ನೆಲ್ಲಾ ನಿರ್ಮಿಸಿರುವನೋ, ಕ್ರಾಂತದರ್ಶಿಯಾದ ಯಾರು ಅಂತರಿಕ್ಷದ ತೇಜೋಮಂಡಲಗಳನ್ನು ನಿರ್ಮಿಸಿರುವನೋ, ಯಾರು ಸಮಸ್ತವ ದ ಲೋಕಗಳನ್ನು ಸುತ್ತಲೂ

ವ್ಯಾಪಿಸಿರುವನೋ ಅದೇ ವೈಶ್ವಾನರರೂಪಿಯಾದ ಅಗ್ನಿಯು ಅಪ್ರತಿಹತನಾಗಿಯೂ, ಜಗದ್ರಕ್ಷಕನಾಗಿಯೂ ಇದ್ದು ಅಮೃತರೂಪವಾದ ಉದಕಕ್ಕೆಲ್ಲಾ ಪಾಲಕನಾಗಿದ್ದಾನೆ.

## English Translation.

Vaishwanara, the performer of sacred acts, is he who made the regions ; foreseeing (he has made) the luminaries of heaven, and has spread throughout all worlds; the irresistible guardian (of all), the protector of ambrosial (rain).

# ಎಂಟನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಪೃಕ್ಷಸ್ಯೇತಿ ಸಪ್ತರ್ಚಮಷ್ಟಮಂ ಸೂಕ್ತಂ ಭರದ್ವಾಜಸ್ಯಾರ್ಷಂ ವೈಶ್ವಾನರಾಗ್ನಿದೇವತಾಕಂ । ಆದಿತಃ ಷಡ್ಜಗತ್ಯಃ ಸಪ್ತಮೀ ತ್ರಿಷ್ಟುಪ್ । ತಥಾ ಚಾನುಕ್ರಾಂತಂ । ಪೃಕ್ಷಸ್ಯಾಂತ್ಯಾ ತ್ರಿಷ್ಟುಬಿತಿ ॥ ಚಾತುರ್ವಿಂಶಿಕೇಽಹನ್ಯಾಗ್ನಿಮಾರುತ ಇದಂ ಸೂಕ್ತಂ ವೈಶ್ವಾನರೀಯನಿವಿದ್ಧಾನಂ । ಸೂತ್ರಿತಂ ಚ । ಪೃಕ್ಷಸ್ಯ ವೃಷ್ಣೋ ವೃಷ್ಣೇ ಶರ್ಧಾಯ । ಆ. ೭-೪ । ಇತಿ ॥ ಅಭಿಪ್ಲವಿಕೇ ಪೃಷ್ಠ್ಯಾಭಿಪ್ಲವಷಡಹಯೋಃ ಪಂಚಮೇಽಹನೀದಮೇವ ಸೂಕ್ತಂ ವೈಶ್ವಾನರನಿವಿದ್ಧಾನಂ । ಸೂತ್ರಿತಂ ಚ । ಪೃಕ್ಷಸ್ಯ ವೃಷ್ಣೋ ವೃಷ್ಣೇ ಶರ್ಧಾಯ ನೂ ಚಿತ್ಸಹೋಜಾ ಇತ್ಯಾಗ್ನಿಮಾರುತಂ । ಆ. ೭-೭ । ಇತಿ ॥ ವಿಷುವತ್ಯಾಗ್ನಿಮಾರುತ ಆದ್ಯೌ ತೃಚೌ ಸ್ತೋತ್ರಿಯಾನುರೂಪೌ । ಸೂತ್ರಿತಂ ಚ । ಪೃಕ್ಷಸ್ಯ ವೃಷ್ಣೋ ಅರುಷಸ್ಯ ನೂ ಸಹ ಇತಿ ಸ್ತೋತ್ರಿಯಾನುರೂಪೌ । ಆ. ೮-೬ । ಇತಿ ॥**

ಅನುವಾದವು—**ಪೃಕ್ಷಸ್ಯ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಎಂಟನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು; ವೈಶ್ವಾನರಾಗ್ನಿಯು ದೇವತೆಯು; ಈ ಸೂಕ್ತದ ಮೊದಲಿನ ಆರು ಋಕ್ಕುಗಳು ಜಗತೀಛಂದಸ್ಕವು. ಏಳನೆಯದು ತ್ರಿಷ್ಟುಪ್‌ಛಂದಸ್ಕವು. ಅನುಕ್ರಮಣಿಕೆಯಲ್ಲಿ—**ಪೃಕ್ಷಸ್ಯಾಂತ್ಯಾ ತ್ರಿಷ್ಟುಪ್** ಎಂದು ಹೇಳಿರುವುದು. ಚಾತುರ್ವಿಂಶಿಕವೆಂಬ ಯಾಗದಲ್ಲಿ ಆಗ್ನಿಮಾರುತ ಶಸ್ತ್ರಮಂತ್ರಗಳ ಮಧ್ಯದಲ್ಲಿ ಈ ಸೂತ್ರವನ್ನು ವೈಶ್ವಾನರೀಯನಿವಿದ್ಧಾನಸೂಕ್ತವನ್ನಾಗಿ ಸೇರಿಸಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಪೃಕ್ಷಸ್ಯ ವೃಷ್ಣೋ ವೃಷ್ಣೇ ಶರ್ಧಾಯ** ಎಂಬ ಸೂತ್ರದಿಂದ (ಆ. ೭-೪) ವಿವೃತವಾಗಿರುವುದು. ಪೃಷ್ಠ್ಯ ಮತ್ತು ಅಭಿಪ್ಲವಷಡಹವೆಂಬ ಯಾಗಗಳಲ್ಲಿ ಐದನೆಯ ದಿವಸ ಈ ಸೂಕ್ತವನ್ನು ಅಭಿಪ್ಲವಸಂಬಂಧವಾದ ಮಂತ್ರಗಳಲ್ಲಿ ವೈಶ್ವಾನರೀಯನಿವಿದ್ಧಾನಸೂಕ್ತವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಪೃಕ್ಷಸ್ಯ ವೃಷ್ಣೋ ವೃಷ್ಣೇ ಶರ್ಧಾಯ ನೂ ಚಿತ್ಸಹೋಜಾ ಇತ್ಯಾಗ್ನಿಮಾರುತಂ** ಎಂಬ ಸೂತ್ರದಿಂದ (ಆ. ೭-೭) ವಿವೃತವಾಗಿರುವುದು. ಮತ್ತು ವಿಷುವತಿಯೆಂಬ ಯಾಗದ ಆಗ್ನಿಮಾರುತಶಸ್ತ್ರಮಂತ್ರ

ಗಳಿಗಾಗಿ ಈ ಸೂಕ್ತದ ಮೊದಲಿನ ಎರಡು ತೃಚಗಳನ್ನು (ಆರು ಋಕ್ಕುಗಳನ್ನು) ಅನುರೂಪಸ್ತೋತ್ರಮಂತ್ರಗಳನ್ನಾಗಿ ಪಠಿಸಬೇಕೆಂದು ಅಶ್ವಲಾಯನಶ್ರೌತಸೂತ್ರದ— **ಪೃಕ್ಷಸ್ಯ ವೃಷ್ಣೋ ಅರುಷಸ್ಯ ನೂ ಸಹ ಇತಿ ಸ್ತೋತ್ರಿಯಾನು-ರೂಪೌ** ಎಂಬ ಸೂತ್ರದಿಂದ (ಆ. ೮-೬) ವಿವೃತವಾಗಿರುವುದು.

## ಸೂಕ್ತ ೮

ಮಂಡಲ—೬ ॥ ಅನುವಾಕ—೧ ॥ ಸೂಕ್ತ—೮ ॥
ಅಷ್ಟಕ—೪ ॥ ಅಧ್ಯಾಯ—೫ ॥ ವರ್ಗ—೧೦ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ॥
॥ ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ॥
॥ ದೇವತಾ—ವೈಶ್ವಾನರಃ ॥
॥ ಛಂದಃ—೧-೬. ಜಗತೀ । ೭. ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಪೃಕ್ಷಸ್ಯ ವೃಷ್ಣೋ ಅರುಷಸ್ಯ ನೂ ಸಹಃ ಪ್ರ ನು ವೋಚಂ ವಿದಥಾ ಜಾತ-
ವೇದಸಃ ।
ವೈಶ್ವಾನರಾಯ ಮತಿರ್ನವ್ಯಸೀ ಶುಚಿಃ ಸೋಮಇವ ಪವತೇ ಚಾರು-
ರಗ್ನಯೇ ॥೧॥

॥ ಪದಪಾಠಃ ॥

ಪೃಕ್ಷಸ್ಯ । ವೃಷ್ಣಃ । ಅರುಷಸ್ಯ । ನು । ಸಹಃ । ಪ್ರ । ನು । ವೋಚಂ । ವಿದಥಾ । ಜಾತಽವೇದಸಃ ।
ವೈಶ್ವಾನರಾಯ । ಮತಿಃ । ನವ್ಯಸೀ । ಶುಚಿಃ । ಸೋಮಃಽಇವ । ಪವತೇ । ಚಾರುಃ । ಅಗ್ನಯೇ ॥ ೧ ॥

॥ ಸಾಯಣಭಾಷ್ಯಂ ॥

ಪೃಕ್ಷಸ್ಯ ಸಂಪೃಕ್ತಸ್ಯ ವ್ಯಾಪ್ತಸ್ಯ । ಯದ್ವಾ । ಪೃಕ್ಷಂ ಹವಿರ್ಲಕ್ಷಣಮನ್ನಂ । ತದ್ವತಃ । ವೃಷ್ಣೋ ವರ್ಷಿತುರರುಷಸ್ಯಾರೋಚಮಾನಸ್ಯ ಜಾತವೇದಸೋ ಜಾತಾನಾಂ ವೇದಿತುರ್ವೈಶ್ವಾನರಸ್ಯಾಗ್ನೇಃ ಸಹೋ ಬಲಮಭಿಭವನಸಮರ್ಥಂ ವಿದಥಾ ವಿದಥೇ ಯಜ್ಞೇ ನು ಕ್ಷಿಪ್ರಂ ಪ್ರ ವೋಚಂ । ಪ್ರಬ್ರವೀಮಿ । ಪ್ರಕರ್ಷೇಣ ಸ್ತೌಮೀತ್ಯರ್ಥಃ । ಏಕೋ ನುಶಬ್ದಃ ಪೂರಕಃ । ನವ್ಯಸೀ ನವತರಾ ಶುಚಿರ್ನಿರ್ಮಲಾ ಯದ್ವಾ ಸ್ತೋತೄಣಾಂ ಶೋಧಯಿತ್ರೀ ಚಾರುಃ ಶೋಭನಾ ಮತಿರ್ಮನನೀಯಾ ಸ್ತುತಿಶ್ಚಾಸ್ಮೈ ವೈಶ್ವಾನ-ರಾಯಾಗ್ನಯೇ ಪವತೇ । ಮತ್ಸಕಾಶಾತ್ಸ್ರವತಿ । ಸ್ವಯಮೇವ ನಿರ್ಗಚ್ಛತೀತ್ಯರ್ಥಃ । ಸೋಮ ಇವ । ಯಥಾ ಸೋಮೋ ದಶಾಪವಿತ್ರಾತ್ಸ್ರವತಿ ತದ್ವತ್ ॥

॥ ಪ್ರತಿಪದಾರ್ಥ ॥

**ಪೃಕ್ಷಸ್ಯ**—ಸರ್ವವ್ಯಾಪಕನೂ । **ವೃಷ್ಣಃ**—ಕಾಮವರ್ಷಕನೂ । **ಅರುಷಸ್ಯ**—ಪ್ರಕಾಶಮಾನನೂ ಆದ । **ಜಾತವೇದಸಃ**—ಜಾತವೇದೋರೂಪನಾದ ಅಗ್ನಿಯ । **ಸಹಃ**—ಅಸಾಧಾರಣವಾದ ಶಕ್ತಿಯನ್ನು । **ವಿದಥಾ**—ಯಜ್ಞದಲ್ಲಿ । **ನು**—ಈಗಲೇ । **ಪ್ರ ವೋಚಂ**—ಪ್ರಶಂಸಿಸುತ್ತೇನೆ । **ನವ್ಯಸೀ**—ನೂತನವಾದುದೂ । **ಶುಚಿಃ**—ನಿರ್ಮಲವಾದುದೂ । **ಚಾರುಃ**—ಮನೋಹರವಾದುದೂ ಆದ । **ಮತಿಃ**—ಸ್ತುತಿಯು । **ವೈಶ್ವಾನರಾಯ**—ವೈಶ್ವಾನರರೂಪಿಯಾದ । **ಅಗ್ನಯೇ**—ಅಗ್ನಿಯನ್ನುದ್ದೇಶಿಸಿ । **ಸೋಮ ಇವ**—ಸೋಮರಸದ ಪ್ರವಾಹದಂತೆ । **ಪವತೇ**—ತಡೆಯಿಲ್ಲದೆ ಪ್ರವಹಿಸುತ್ತದೆ.

॥ ಭಾವಾರ್ಥ ॥

ಸರ್ವವ್ಯಾಪಕನೂ, ಕಾಮವರ್ಷಕನೂ, ಪ್ರಕಾಶಮಾನನೂ, ಜಾತವೇದೋರೂಪನೂ ಆದ ಅಗ್ನಿಯ ಅಸಾಧಾರಣಶಕ್ತಿಯನ್ನು ಯಜ್ಞದಲ್ಲಿ ಈಗಲೇ ಪ್ರಸಂಸಿಸುತ್ತೇನೆ ನೂತನವಾದುದೂ, ನಿರ್ಮಲವಾದುದೂ ಮನೋಹರವಾದುದೂ ಆದ ಆ ಸ್ತುತಿಯು ವೈಶ್ವಾನರರೂಪಿಯಾದ ಅಗ್ನಿಯನ್ನುದ್ದೇಶಿಸಿ ಸೋಮರಸದ ಪ್ರವಾಹದಂತೆ ತಡೆಯಿಲ್ಲದೇ ಪ್ರವಹಿಸುತ್ತದೆ.

## English Translation.

I commemorate promptly at the holy ceremony the might of the all-pervading| jatavedas, the showerer, the radiant : new, pure, and graceful praise issues (from me), like the Soma juice (from the filter) to Agni Vaishwanara.

॥ ಸಂಹಿತಾಪಾಠಃ ॥

ಸ ಜಾಯಮಾನಃ ಪರಮೇ ವ್ಯೋಮನಿ ವ್ರತಾನ್ಯಗ್ನಿರ್ವ್ರತಪಾ ಅರಕ್ಷತ ।
ವ್ಯಂ೧ತರಿಕ್ಷಮಮಿಮೀತ ಸುಕ್ರತುರ್ವೈಶ್ವಾನರೋ ಮಹಿನಾ ನಾಕಮ-
ಸ್ಪೃಶತ್ ॥ ೨ ॥

॥ ಪದಪಾಠಃ ॥

ಸಃ । ಜಾಯಮಾನಃ । ಪರಮೇ । ವಿಽಓಮನಿ । ವ್ರತಾನಿ । ಅಗ್ನಿಃ । ವ್ರತಽಪಾಃ । ಅರಕ್ಷತ ।

ವಿ । ಅಂತರಿಕ್ಷಂ । ಅಮಿಮೀತ । ಸುಽಕ್ರತುಃ । ವೈಶ್ವಾನರಃ । ಮಹಿನಾ । ನಾಕಂ । ಅಸ್ಪೃಶತ್ ॥ ೨ ॥

॥ ಸಾಯಣಭಾಷ್ಯಂ ॥

**ಸ ವೈಶ್ವಾನರೋಽಗ್ನಿರ್ವ್ರತಪಾ ವ್ರತಸ್ಯ ಪಾಲಕಃ ಪರಮ ಉತ್ಕೃಷ್ಟೇ ವ್ಯೋಮನಿ ವ್ಯೋಮ್ನ್ಯಾಕಾಶೇ ಜಾಯಮಾನಃ ಸೂರ್ಯಾತ್ಮನಾ ಪ್ರಾದುರ್ಭವನ್ ವ್ರತಾನಿ ಕರ್ಮಾಣಿ ಲೌಕಿಕಾನಿ ವೈದಿಕಾನಿ ಚಾರಕ್ಷತ । ರಕ್ಷತಿ । ಅಂತರಿಕ್ಷಂ ಚ ವ್ಯಮಿಮೀತ । ಏತದುಪಲಕ್ಷಿತಾಂಸ್ತ್ರೀನ್ ಲೋಕಾನ್ನಿರ್ಮಿತವಾನ್ । ತಥಾ ಸುಕ್ರತುಃ ಶೋಭನಕರ್ಮಾ ವೈಶ್ವಾನರೋಽಗ್ನಿರ್ಮಹಿನಾ ಸ್ವಮಹಿಮ್ನಾ ತೇಜಸಾ ನಾಕಂ ದ್ಯುಲೋಕಮಸ್ಪೃಶತ್ । ಸ್ಪೃಶತಿ ಸ್ಮ ॥**

॥ ಪ್ರತಿಪದಾರ್ಥ ॥

**ಸಃ**—ವೈಶ್ವಾನರರೂಪಿಯಾದ । **ಅಗ್ನಿಃ**—ಅಗ್ನಿಯು । **ವ್ರತಪಾಃ**—ಕರ್ಮಪಾಲಕನಾಗಿ । **ಪರಮೇ**—ಉತ್ಕೃಷ್ಟವಾದ । **ವ್ಯೋಮನಿ**—ಅಂತರಿಕ್ಷದಲ್ಲಿ । **ಜಾಯಮಾನಃ**—(ಸೂರ್ಯರೂಪದಲ್ಲಿ) ಉತ್ಪನ್ನನಾಗಿ । **ವ್ರತಾನಿ**—ಮಾನವರ ವೈದಿಕಕರ್ಮಗಳನ್ನು । **ಅರಕ್ಷತ**—ಸಂರಕ್ಷಿಸುತ್ತಾನೆ । **ಅಂತರಿಕ್ಷಂ**—ಅಂತರಿಕ್ಷವನ್ನೂ । **ವಿ ಅಮಿಮೀತ**—ನಿರ್ಮಿಸಿದ್ದಾನೆ । **ಸುಕ್ರತುಃ**—ಉತ್ತಮವಾದ ಕರ್ಮಕರ್ತನಾದ । **ವೈಶ್ವಾನರಃ**—ವೈಶ್ವಾನರಾಗ್ನಿಯು । **ಮಹಿನಾ**—ತನ್ನ ಮಾಹಾತ್ಮ್ಯದಿಂದ । **ನಾಕಂ**—ದ್ಯುಲೋಕವನ್ನು । **ಅಸ್ಪೃಶತ್**—ಆಕ್ರಮಿಸಿದ್ದಾನೆ.

॥ ಭಾವಾರ್ಥ ॥

ವೈಶ್ವಾನರರೂಪಿಯಾದ ಅಗ್ನಿಯು ಕರ್ಮಪಾಲಕನಾಗಿ ಉತ್ಕೃಷ್ಟವಾದ ಅಂತರಿಕ್ಷದಲ್ಲಿ ಸೂರ್ಯರೂಪದಲ್ಲಿ ಉತ್ಪನ್ನನಾಗಿ ಮಾನವರ ವೈದಿಕಕರ್ಮಗಳನ್ನು ಸಂರಕ್ಷಿಸುತ್ತಾನೆ. ಅಂತರಿಕ್ಷವನ್ನೂ ನಿರ್ಮಿಸಿದ್ದಾನೆ. ಉತ್ತಮವಾದ ಕರ್ಮಕರ್ತನಾದ ವೈಶ್ವಾನರಾಗ್ನಿಯು ತನ್ನ ಮಾಹಾತ್ಮ್ಯದಿಂದ ದ್ಯುಲೋಕವನ್ನು ಆಕ್ರಮಿಸಿದ್ದಾನೆ.

## English Translation.

That Agni who, as soon as born in the highest heaven, the protector of sacred rits, protects the pious acts (of men), he has made the manifold firmament : Vaishwanara, the performer of good deeds, has attained heaven by his greatness.

॥ ಸಂಹಿತಾಪಾಠಃ ॥

ವ್ಯಸ್ತಭ್ನಾದ್ರೋದಸೀ ಮಿತ್ರೋ ಅದ್ಭುತೋಂತರ್ವಾವದಕೃಣೋಜ್ಜ್ಯೋತಿಷಾ ತಮಃ ।

ವಿ ಚರ್ಮಣೀವ ಧಿಷಣೇ ಅವರ್ತಯದ್ವೈಶ್ವಾನರೋ ವಿಶ್ವಮಧತ್ತ

ವೃಷ್ಣ್ಯಂ ॥ ೩ ॥

॥ ಪದಪಾಠಃ ॥

ವಿ । ಅಸ್ತಭ್ನಾತ್ । ರೋದಸೀ ಇತಿ । ಮಿತ್ರಃ । ಅದ್ಭುತಃ । ಅಂತಃऽವಾವತ್ । ಅಕೃಣೋತ್ । ಜ್ಯೋತಿಷಾ । ತಮಃ ।

ವಿ । ಚರ್ಮಣೀ ಇವೇತಿ ಚರ್ಮಣೀऽಇವ । ಧಿಷಣೇ ಇತಿ । ಅವರ್ತಯತ್ । ವೈಶ್ವಾನರಃ । ವಿಶ್ವಂ । ಅಧತ್ತ । ವೃಷ್ಣ್ಯಂ ॥ ೩ ॥

॥ ಸಾಯಣಭಾಷ್ಯಂ ॥

ಮಿತ್ರೋ ಮಿತ್ರಭೂತಃ ಸರ್ವೇಷಾಮದ್ಭುತೋ ಮಹಾನ್ ಆಶ್ಚರ್ಯಭೂತೋ ವಾ ವೈಶ್ವಾನರೋಽಗ್ನೀ ರೋದಸೀ ದ್ಯಾವಾಪೃಥಿವ್ಯೌ ವ್ಯಸ್ತಭ್ನಾತ್ । ವಿಶೇಷೇಣ ಸ್ತಂಭಿತವಾನ್ । ಯಥಾಧೋ ನ ಪತತಸ್ತಥಾ ಸ್ವಕೀಯದೇಶೇ ಸ್ಥಾಪಿತವಾನಿತ್ಯರ್ಥಃ । ತಥಾ ಜ್ಯೋತಿಷಾ ತೇಜಸಾ ತಮೋಽಂಧಕಾರಂ ಚಾಂತರ್ವಾವದಂತರ್ಹಿತಂ ತಿರೋಹಿತಮಕೃಣೋತ್। ಅಕರೋತ್ ॥ ವಾವದಿತಿ ವಾತೇರ್ಗತಿಕರ್ಮಣೋ ಯಙ್ಲುಗಂತಸ್ಯ ರೂಪಂ ॥ ಅಪಿ ಚ ಧಿಷಣೇ ಧಾರಯಿತ್ರ್ಯೌ ದ್ಯಾವಾಪೃಥಿವ್ಯೌ ಚರ್ಮಣೀ ಇವ ಯಥಾ ಪಶೋರ್ವಿಶಸಿತಾ ದ್ವೇ ಚರ್ಮಣೀ ಶೋಷಣಾರ್ಥಂ ಪ್ರಸಾರಯತಿ ತಥಾ ವ್ಯವರ್ತಯತ್ । ವಿವೃತೇ ವಿಸ್ತೃತೇ ಅಕರೋತ್ । ಕಿಂ ಬಹುನಾ ವೈಶ್ವಾನರೋಽಯಮಗ್ನಿರ್ವಿಶ್ವಂ ಸರ್ವಂ ವೃಷ್ಣ್ಯಂ ವೀರ್ಯಮಧತ್ತ । ಧತ್ತೇ । ಧಾರಯತಿ ॥

॥ ಪ್ರತಿಪದಾರ್ಥ ॥

**ಮಿತ್ರಃ**—ಸಕಲರಿಗೂ ಮಿತ್ರಭೂತನೂ । **ಅದ್ಭುತಃ**—ಆಶ್ಚರ್ಯಸ್ವರೂಪವುಳ್ಳವನೂ ಆದ ವೈಶ್ವಾನರಾಗ್ನಿಯು । **ರೋದಸೀ**—ದ್ಯಾವಾಪೃಥಿವಿಗಳೆರಡನ್ನೂ । **ವ್ಯಸ್ತಭ್ನಾತ್**—ಎತ್ತಿ ಹಿಡಿದಿದ್ದಾನೆ । **ಜ್ಯೋತಿಷಾ**—ತೇಜಸ್ಸಿನಿಂದ । **ತಮಃ**—ಅಂಧಕಾರವನ್ನು । **ಅಂತರ್ವಾವತ್**—ಮರೆಮಾಡಿದ್ದಾನೆ । **ಧಿಷಣೇ**—ದ್ಯಾವಾಪೃಥಿವಿಗಳನ್ನು । **ಚರ್ಮಣೀವ**—ಯಜ್ಞಪಶುವನ್ನು ವಿಶಸನಮಾಡುವವನು ಚರ್ಮಗಳನ್ನು ಹರಡುವಂತೆ । **ವಿ ಅವರ್ತಯತ್**—ವಿಸ್ತೃತವಾಗಿ ಹರಡಿದ್ದಾನೆ । **ವೈಶ್ವಾನರಃ**—ವೈಶ್ವಾನರರೂಪನಾದ ಅಗ್ನಿಯು । **ವಿಶ್ವಂ**—ಸಮಸ್ತವಾದ । **ವೃಷ್ಣ್ಯಂ**—ಉತ್ಪಾದಕಸಾಮರ್ಥ್ಯವನ್ನೂ । **ಅಧತ್ತ**—ಹೊಂದಿದ್ದಾನೆ.

। ಭಾವಾರ್ಥ ॥

ಸಕಲರಿಗೂ ಮಿತ್ರಭೂತನೂ, ಆಶ್ಚರ್ಯಸ್ವರೂಪವುಳ್ಳವನೂ ಆದ ವೈಶ್ವಾನರಾಗ್ನಿಯು ದ್ಯಾವಾಪೃಥಿವಿಗಳೆರಡನ್ನೂ ಎತ್ತಿ ಹಿಡಿದಿದ್ದಾನೆ. ತೇಜಸ್ಸಿನಿಂದ ಅಂಧಕಾರವನ್ನು ಮರೆಮಾಡಿದ್ದಾನೆ. ಯಜ್ಞಪಶುವನ್ನು ಛೇದನಮಾಡುವ

ಶಮಿತೃವು ಚರ್ಮಗಳೆರಡನ್ನೂ ಹರಡುವಂತೆ ದ್ಯಾವಾಪೃಥಿವಿಗಳನ್ನು ಅಗ್ನಿಯು ವಿಸ್ತೃತವಾಗಿ ಹರಡಿದ್ದಾನೆ. ವೈಶ್ವಾನರರೂಪಿಯಾದ ಅಗ್ನಿಯು ಸಮಸ್ತವಾದ ಉತ್ಪಾದಕಸಾಮರ್ಥ್ಯವನ್ನೂ ಹೊಂದಿದ್ದಾನೆ.

## English Translation.

The friend (of all), the wonderful (Agni), has upheld heaven and earth : he has hidden darkness within light : he has spread out the two sustaining (worlds, heaven and earth), like two skins : Vaishwanara comprehends all (creative) energy.

॥ ಸಂಹಿತಾಪಾಠಃ ॥

ಅಪಾಮುಪಸ್ಥೇ ಮಹಿಷಾ ಅಗೃಭ್ಣತ ವಿಶೋ ರಾಜಾನಮುಪ ತಸ್ಥು-
ರ್ಋಗ್ಮಿಯಂ ।
ಆ ದೂತೋ ಅಗ್ನಿಮಭರದ್ವಿವಸ್ವತೋ ವೈಶ್ವಾನರಂ ಮಾತರಿಶ್ವಾ ಪರಾ-
ವತಃ ॥ ೪ ॥

॥ ಪದಪಾಠಃ ॥

ಅಪಾಂ । ಉಪಽಸ್ಥೇ । ಮಹಿಷಾಃ । ಅಗೃಭ್ಣತ । ವಿಶಃ । ರಾಜಾನಂ । ಉಪ । ತಸ್ಥುಃ । ಋಗ್ಮಿಯಂ ।
ಆ । ದೂತಃ । ಅಗ್ನಿಂ । ಅಭರತ್ । ವಿವಸ್ವತಃ । ವೈಶ್ವಾನರಂ । ಮಾತರಿಶ್ವಾ । ಪರಾಽವತಃ ॥ ೪ ॥

॥ ಸಾಯಣಭಾಷ್ಯಂ ॥

ಅಪ ಇತ್ಯಂತರಿಕ್ಷನಾಮ । ಅಪಾಮಂತರಿಕ್ಷಸ್ಯೋಪಸ್ಥ ಉಪಸ್ಥಾನೇ ಮಧ್ಯೇ ಮಹಿಷಾಃ । ಮಹನ್ನಾಮೈತತ್ । ಮಹಾಂತೋ ಮರುತೋಽಗೃಭ್ಣತ । ಅಗೃಹ್ಣನ್ । ಇಮಂ ವೈಶ್ವಾನರಂ ವೈದ್ಯುತಾತ್ಮನಾ ವರ್ತಮಾನಮಜಾನನ್ನಿತ್ಯರ್ಥಃ । ಗೃಹೀತ್ವಾ ಚ ವಿಶಃ ಪ್ರಜಾ ರಾಜಾನಂ ಸ್ವಾಮಿನಮೃಗ್ಮಿಯಮರ್ಚನೀಯಮುಪ ತಸ್ಥುಃ । ಅಸ್ತುವನ್ । ಅಪಿ ಚೇಮಂ ವೈಶ್ವಾನರಮಗ್ನಿಂ ಪುರಾ ಸೂರ್ಯಸಮೀಪೇ ವಿದ್ಯಮಾನಂ ದೂತೋ ವೇಗವಾನ್ ದೇವಾನಾಂ ದೂತೋ ವಾ ಮಾತರಿಶ್ವಾ ವಾಯುಃ ಪರಾವತೋ ದೂರದೇಶಾದ್ವಿವಸ್ವತ ಆದಿತ್ಯಾದಾಭರತ್ । ಇಮಂ ಲೋಕಂ ಪ್ರತ್ಯಾಜಹಾರ ॥

॥ ಪ್ರತಿಪದಾರ್ಥ ॥

**ಅಪಾಂ**—ಅಂತರಿಕ್ಷದ । **ಉಪಸ್ಥೇ**—ಮಧ್ಯಭಾಗದಲ್ಲಿರತಕ್ಕ । **ಮಹಿಷಾಃ**—ಮಹತ್ಸ್ವರೂಪವುಳ್ಳ ಮರುತ್ತುಗಳು । **ಅಗೃಭ್ಣತ**—(ವಿದ್ಯುದ್ರೂಪದಲ್ಲಿರುವ ವೈಶ್ವಾನರನ ಸ್ವರೂಪವನ್ನು) ಗ್ರಹಿಸಿದವು । **ವಿಶಃ**—ಸಕಲ ಪ್ರಜೆಗಳೂ । **ರಾಜಾನಂ**—ಸ್ವಾಮಿಯಾದವನೂ । **ಋಗ್ಮಿಯಂ**—ಪೂಜ್ಯನೂ ಆದ ಈ ಅಗ್ನಿಯನ್ನು । **ಉಪ ತಸ್ಥುಃ**—ಸ್ತುತಿಸಿದರು । **ವೈಶ್ವಾನರಂ**—ವೈಶ್ವಾನರರೂಪಿಯಾದ । **ಅಗ್ನಿಂ**—ಅಗ್ನಿಯನ್ನು । **ದೂತಃ**—ದೇವದೂತನಾದ । **ಮಾತರಿಶ್ವಾ**—ವಾಯುವು । **ಪರಾವತಃ**—ಅತ್ಯಂತ ದೂರದೇಶಸ್ಥನಾದ । **ವಿವಸ್ವತಃ**—ಆದಿತ್ಯನಿಂದ । **ಆ ಭರತ್**—ಸ್ವೀಕರಿಸಿ ಕರೆತಂದಿದ್ದಾನೆ.

॥ ಭಾವಾರ್ಥ ॥

ಅಂತರಿಕ್ಷದ ಮಧ್ಯಭಾಗದಲ್ಲಿರತಕ್ಕ ಮಹತ್ಸ್ವರೂಪವುಳ್ಳ ಮರುತ್ತುಗಳು ವಿದ್ಯುದ್ರೂಪದಲ್ಲಿರುವ ವೈಶ್ವಾನರನ ಸ್ವರೂಪವನ್ನು ಗ್ರಹಿಸಿದವು. ಪೂಜ್ಯನೂ, ಪ್ರಭುವೂ ಆದ ಈ ಅಗ್ನಿಯನ್ನು ಸಕಲ ಪ್ರಜೆಗಳೂ ಸ್ತುತಿಸಿದರು. ವೈಶ್ವಾನರರೂಪಿಯಾದ ಅಗ್ನಿಯನ್ನು ದೇವದೂತನಾದ ವಾಯುವು ಅತ್ಯಂತ ದೂರದೇಶಸ್ಥನಾದ ಆದಿತ್ಯನಿಂದ ಸ್ವೀಕರಿಸಿ ಕರೆತಂದಿದ್ದಾನೆ.

## English Translation.

The mighty Maruts have seized upon him on the lap of the waters (in the firmament), and men have acknowledged him as their adorable sovereign : Matarishwan, the mess-nger of the gods, has brought Agni Vaishwanara (hither) from the distant (sphere of the) sun.

॥ ಸಂಹಿತಾಪಾಠಃ ॥

ಯುಗೇಯುಗೇ ವಿದಥ್ಯಂ ಗೃಣದ್ಭ್ಯೋಽಗ್ನೇ ರಯಿಂ ಯಶಸಂ ಧೇಹಿ
ನವ್ಯಸೀಂ ।
ಪವ್ಯೇವ ರಾಜನ್ನಘಶಂಸಮಜರ ನೀಚಾ ನಿ ವೃಶ್ಚ ವನಿನಂ ನ ತೇಜಸಾ ॥ ೫ ॥

॥ ಪದಪಾಠಃ ॥

ಯುಗೇಽಯುಗೇ । ವಿದಥ್ಯಂ । ಗೃಣತ್ಽಭ್ಯಃ । ಅಗ್ನೇ । ರಯಿಂ । ಯಶಸಂ । ಧೇಹಿ । ನವ್ಯಸೀಂ ।
ಪವ್ಯಾಽಇವ । ರಾಜನ್ । ಅಘಽಶಂಸಂ । ಅಜರ । ನೀಚಾ । ನಿ । ವೃಶ್ಚ । ವನಿನಂ । ನ । ತೇಜಸಾ ॥ ೫ ॥

|| ಸಾಯಣಭಾಷ್ಯಂ ||

ಹೇ ಅಗ್ನೇ ಯುಗೇ ಯುಗೇ ಕಾಲೇ ಕಾಲೇ ವಿದಥ್ಯಂ । ವಿದಥೋ ಯಜ್ಞಃ । ತದರ್ಹಂ ತ್ವಾಮುದ್ದಿಶ್ಯ ನವ್ಯಸೀಂ ನವತರಾಂ ಸ್ತುತಿಂ ಗೃಣದ್ಭ್ಯ ಉಚ್ಚಾರಯಿತೃಭ್ಯೋಽಸ್ಮಭ್ಯಂ ರಯಿಂ ಧನಂ ಯಶಸಂ ಯಶಸ್ವಿನಂ ಪುತ್ರಂ ಚ ಧೇಹಿ । ವಿಧೇಹಿ । ಕುರು । ಕಿಂಚ ಹೇ ರಾಜನ್ ರಾಜಮಾನಾಜರ ಜರಾರಹಿತಾಗ್ನೇ ಪವ್ಯೇವ ವಜ್ರೇಣೇವಾತ್ಮೀಯೇನ ತೇಜಸಾ ವನಿನಂ ನ ವೃಕ್ಷಮಿವಾಘಶಂಸಮಘಸ್ಯಾನರ್ಥಸ್ಯ ಶಂಸಿತಾರಂ ಶತ್ರುಂ ನೀಚಾ ನೀಚೀನೋ ನ್ಯಗ್ಭೂತೋ ಯಥಾ ಭವತಿ ತಥಾ ನಿ ವೃಶ್ಚ । ನಿಜಹಿ ||

|| ಪ್ರತಿಪದಾರ್ಥ ||

**ಅಗ್ನೇ**—ಎಲೈ ಅಗ್ನಿಯೇ । **ಯುಗೇ ಯುಗೇ**—ಪ್ರತಿ ಯುಗದಲ್ಲಿಯೂ । **ವಿದಥ್ಯಂ**—ಯಜ್ಞಾರ್ಹನಾದ ನಿನ್ನನ್ನುದ್ದೇಶಿಸಿ । **ನವ್ಯಸೀಂ**—ನೂತನವಾಗಿ ನಿರ್ಮಿಸಿದ ಸ್ತುತಿಯನ್ನು । **ಗೃಣದ್ಭ್ಯಃ**—ಪಠಿಸತಕ್ಕ ನನಗೆ । **ರಯಿಂ**—ಧನವನ್ನೂ । **ಯಶಸಂ**—ಯಶಸ್ವಿಯಾದ ಪುತ್ರಾದಿಗಳನ್ನೂ । **ಧೇಹಿ**—ಒದಗಿಸು । **ಅಜರ**—ಮರಣರಹಿತನಾದವನೂ । **ರಾಜನ್**—ಪ್ರಕಾಶಮಾನನೂ ಆದ ಎಲೈ ಅಗ್ನಿಯೇ । **ಪವ್ಯೇವ**—ವಜ್ರಾಯುಧವಂತೆ ತೀಕ್ಷ್ಣವಾದ । **ತೇಜಸಾ**—ನಿನ್ನ ತೇಜಸ್ಸಿನಿಂದ । **ವನಿನಂ ನ**—ವೃಕ್ಷವನ್ನು ಛೇದಿಸುವಂತೆ । **ಅಘಶಂಸಂ**—ನಮಗೆ ಕೇಡನ್ನು ಬಯಸುವ ಶತ್ರುವನ್ನು । **ನೀಚಾ**—ಕೆಳಕ್ಕೆ ಉರುಳಿಬೀಳುವಂತೆ । **ನಿ ವೃಶ್ಚ**—ಛೇದಿಸು.

। ಭಾವಾರ್ಥ ।

ಎಲೈ ಅಗ್ನಿಯೇ, ಯಜ್ಞಾರ್ಹನಾದ ನಿನ್ನನ್ನುದ್ದೇಶಿಸಿ ಪ್ರತಿ ಯುಗದಲ್ಲಿಯೂ ನೂತನವಾಗಿ ನಿರ್ಮಿಸಿದ ಸ್ತುತಿಯನ್ನು ಪಠಿಸತಕ್ಕ ನಮಗೆ ಧನವನ್ನೂ ಯಶಸ್ವಿಯಾದ ಪುತ್ರಾದಿಗಳನ್ನೂ ಒದಗಿಸು. ಮರಣರಹಿತನಾದವನೂ ಪ್ರಕಾಶಮಾನನೂ ಆದ ಎಲೈ ಅಗ್ನಿಯೇ, ವಜ್ರಾಯುಧದಂತೆ ತೀಕ್ಷ್ಣವಾದ ನಿನ್ನ ತೇಜಸ್ಸಿನಿಂದ ವೃಕ್ಷವನ್ನು ಛೇದಿಸುವಂತೆ ನಮಗೆ ಕೇಡನ್ನು ಬಯಸುವ ಶತ್ರುವನ್ನು ಕೆಳಕ್ಕೆ ಉರುಳಿಬೀಳುವಂತೆ ಛೇದಿಸು.

## English Translation.

To those. Agni, who repeat new (praises) to you the object of their woreship from age to age, grant riches and famous (posterity) : strike down undecaying sovereign, the sinner with your blaze like the thunderbolt, as if he were a tree.

॥ ಸಂಹಿತಾಪಾಠಃ ॥

ಅಸ್ಮಾಕಮಗ್ನೇ ಮಘವತ್ಸು ಧಾರಯಾನಾಮಿ ಕ್ಷತ್ರಮಜರಂ ಸುವೀ-
ರ್ಯಂ ।
ವಯಂ ಜಯೇಮ ಶತಿನಂ ಸಹಸ್ರಿಣಂ ವೈಶ್ವಾನರ ವಾಜಮಗ್ನೇ ತವೋ-
ತಿಭಿಃ ॥ ೬ ॥

॥ ಪದಪಾಠ ॥

ಅಸ್ಮಾಕಂ । ಅಗ್ನೇ । ಮಘವತ್ಽಸು । ಧಾರಯ । ಅನಾಮಿ । ಕ್ಷತ್ರಂ । ಅಜರಂ । ಸುಽವೀರ್ಯಂ ।
ವಯಂ । ಜಯೇಮ । ಶತಿನಂ ಸಹಸ್ರಿಣಂ । ವೈಶ್ವಾನರ । ವಾಜಂ । ಅಗ್ನೇ । ತವ । ಊತಿಽಭಿಃ ॥ ೬ ॥

॥ ಸಾಯಣಭಾಷ್ಯಂ ॥

**ಹೇ ಅಗ್ನೇ ಅಸ್ಮಾಕಂ ॥ ಸಪ್ತಮ್ಯರ್ಥೇ ಷಷ್ಠೀ ॥ ಅಸ್ಮಾಸು ಮಘವತ್ಸು ಹವಿರ್ಲಕ್ಷಣೇನ ಧನೇನ ಯುಕ್ತೇಷು ಕ್ಷತ್ರಂ ಧನಂ ಧಾರಯ । ಸ್ಥಾಪಯ । ಕೀದೃಶಂ । ಅನಾಮ್ಯನಮನೀಯಮನಪ-ಹಾರ್ಯಮಜರಂ ಜರಾರಹಿತಮನಶ್ವರಂ ಸುವೀರ್ಯಂ ಶೋಭನವೀರ್ಯೋಪೇತಂ । ಕಿಂಚ ಹೇ ವೈಶ್ವಾನರಾಗ್ನೇ ತವೋತಿಭಿಸ್ತ್ವತ್ಸಂಬಂಧಿಭೀ ರಕ್ಷಣೈರ್ವಯಂ ಶತಿನಂ ಶತಸಂಖ್ಯಾಯುಕ್ತಂ ಶತಪುರುಷ-ಯುಕ್ತಂ ವಾ ತಥಾ ಸಹಸ್ರಿಣಂ ವಾಜಮನ್ನಂ ಜಯೇಮ । ಲಭೇಮಹಿ ॥**

॥ ಪ್ರತಿಪದಾರ್ಥ ॥

**ಅಗ್ನೇ**— ಎಲೈ ಅಗ್ನಿಯೇ । **ಮಘವತ್ಸು**—ಹವಿಸ್ಸಿನ ರೂಪದ ಧನವುಳ್ಳ । **ಅಸ್ಮಾಸು**—ನಮ್ಮಲ್ಲಿ । **ಅನಾಮಿ**—ಅಪಹರಿಸಲಾಗದಿರುವುದೂ। **ಅಜರಂ**—ನಾಶರಹಿತವಾದುದೂ। **ಸುವೀರ್ಯಂ**-ಶ್ರೇಷ್ಠವಾದ ಪುತ್ರಾದ್ಯುಕ್ತವಾದುದೂ ಆದ । **ಕ್ಷತ್ರಂ**-ಧನವನ್ನು । **ಧಾರಯ**—ಸ್ಥಾಪಿಸು । **ವೈಶ್ವಾನರ**—ವೈಶ್ವಾನರರೂಪಿಯಾದ । **ಅಗ್ನೇ**—ಎಲೈ ಅಗ್ನಿಯೇ । **ತವ ಊತಿಭಿಃ**—ನಿನ್ನ ರಕ್ಷಣೆಯಿಂದ ಕೂಡಿದ । **ವಯಂ**—ನಾವು । **ಶತಿನಂ**—ಶತಸಂಖ್ಯಾಕವಾದುದೂ । **ಸಹಸ್ರಿಣಂ**—ಸಹಸ್ರಸಂಖ್ಯಾಕವಾದುದೂ ಆದ । **ವಾಜಂ**—ಅನ್ನವನ್ನು । **ಜಯೇಮ**—ಹೊಂದುವಂತಾಗಲಿ

॥ ಭಾವಾರ್ಥ ॥

ಎಲೈ ಅಗ್ನಿಯೇ, ಹವಿಸ್ಸಿನ ರೂಪದ ಧನವುಳ್ಳ ನಮ್ಮಲ್ಲಿ ಚೋರರಿಂದ ಅಪಹೃತವಾಗದಿರುವುದೂ, ನಾಶರಹಿತವಾದುದೂ, ಶ್ರೇಷ್ಠವಾದ ಪುತ್ರಾದ್ಯುಕ್ತವಾದುದೂ ಆದ ಧನವನ್ನು ಸ್ಥಾಪಿಸು. ವೈಶ್ವಾನರರೂಪಿಯಾದ ಎಲೈ ಅಗ್ನಿಯೇ, ನಿನ್ನ ರಕ್ಷಣೆಯಿಂದ ಕೂಡಿದ ನಾವು ಶತಸಂಖ್ಯಾಕವಾದುದೂ ಸಹಸ್ರಸಂಖ್ಯಾಕವಾದುದೂ ಆದ ಎಂದರೆ, ಬಹಳವಾದ ಅನ್ನವನ್ನು ಹೊಂದುವಂತಾಗಲಿ.

## English Translation.

Grrnt, Agni, to us who are affluent in (offerings), wealth that cannot be taken away, that is exempt from decay, and that comprehends excellent male descendants: may we obtain, Agni Vishwanara, hundreds and thousands of viands through your protection.

॥ ಸಂಹಿತಾಪಾಠಃ ॥

ಅದಬ್ಧೇಭಿಸ್ತವ ಗೋಪಾಭಿರಿಷ್ಟೇಽಸ್ಮಾಕಂ ಪಾಹಿ ತ್ರಿಷಧಸ್ಥ ಸೂರೀನ್ ।
ರಕ್ಷಾ ಚ ನೋ ದದುಷಾಂ ಶರ್ಧೋ ಅಗ್ನೇ ವೈಶ್ವಾನರ ಪ್ರ ಚ ತಾರೀಃ
ಸ್ತವಾನಃ ॥ ೭ ॥

॥ ಪದಪಾಠಃ ॥

ಅದಬ್ಧೇಭಿಃ । ತವ । ಗೋಪಾಭಿಃ । ಇಷ್ಟೇ । ಅಸ್ಮಾಕಂ । ಪಾಹಿ । ತ್ರಿಽಸಧಸ್ಥ । ಸೂರೀನ್ ।
ರಕ್ಷ । ಚ । ನಃ । ದದುಷಾಂ । ಶರ್ಧಃ । ಅಗ್ನೇ । ವೈಶ್ವಾನರ । ಪ್ರ । ಚ । ತಾರೀಃ । ಸ್ತವಾನಃ ॥ ೭ ॥

॥ ಸಾಯಣಭಾಷ್ಯಂ ॥

ಹೇ ಇಷ್ಟೇ ಯಷ್ಟವ್ಯ ಏಷಣೀಯ ವಾ ತ್ರಿಷಧಸ್ಥ ತ್ರಿಷು ಲೋಕೇಷು ಸಹಾವಸ್ಥಾಯಿನ್ ಯದ್ವಾಹವನೀಯಾದಿಷು ತ್ರಿಷ್ವಾಯತನೇಷು ಯಷ್ಟವ್ಯೈರ್ದೇವೈಃ ಸಹಾವತಿಷ್ಠಮಾನಾಗ್ನೇ ಅದಬ್ಧೇಭಿಃ ಕೇನಾಪ್ಯಹಿಂಸಿತೈಸ್ತವ ತ್ವದೀಯೈರ್ಗೋಪಾಭಿರ್ಗೋಪಕೈ ರಕ್ಷಕೈಸ್ತೇಜೋಭಿರಸ್ಮಾಕಂ ಸೂರೀನಸ್ಮದೀಯಾನ್ ಸ್ತೋತೄನ್ ಪಾಹಿ । ರಕ್ಷ । ಹೇ ವೈಶ್ವಾನರಾಗ್ನೇ ದದುಷಾಂ ಹವೀಂಷಿ ದತ್ತವತಾಂ ನೋಽಸ್ಮಾಕಂ ಶರ್ಧೋ ಬಲಂ ರಕ್ಷ ಚ । ಸ್ತವಾನಃ ಸ್ತೂಯಮಾನಸ್ತ್ವಂ ಪ್ರ ಚ ತಾರೀಃ । ಪ್ರವರ್ಧಯ ಚ ॥

॥ ಪ್ರತಿಪದಾರ್ಥ ॥

**ಇಷ್ಟೇ**—ಯಜ್ಞಾರ್ಹನಾದವನೂ । **ತ್ರಿಷಧಸ್ಥ**—ಮೂರು ಲೋಕಗಳಲ್ಲಿಯೂ ಸ್ಥಿತಿಯುಳ್ಳವನೂ ಆದ ಎಲೈ ಅಗ್ನಿಯೇ । **ಅದಬ್ಧೇಭಿಃ**—ಅಪ್ರತಿಹತವಾದ । **ತವ**—ನಿನ್ನ । **ಗೋಪಾಭಿಃ**—ರಕ್ಷಕವಾದ ತೇಜಸ್ಸುಗಳಿಂದ । **ಸೂರೀನ್**—ನಿನ್ನ ಸ್ತುತಿಕರ್ತರಾದ । **ಅಸ್ಮಾಕಂ**—ನಮ್ಮನ್ನು । **ಪಾಹಿ**—ರಕ್ಷಿಸು । **ವೈಶ್ವಾನರ**—ವೈಶ್ವಾನರರೂಪಿಯಾದ । **ಅಗ್ನೇ**—ಎಲೈ ಅಗ್ನಿಯೇ । **ದದುಷಾಂ** - ಹವಿಸ್ಸನ್ನರ್ಪಿಸತಕ್ಕ । **ನಃ**—ನಮ್ಮ ।

**ಶರ್ಧಃ**—ಬಲವನ್ನು | **ರಕ್ಷ ಚ**—ರಕ್ಷಿಸು | **ಸ್ತವಾನಃ**—ನಮ್ಮಿಂದ ಸ್ತುತನಾಗತಕ್ಕ ನೀನು | **ಪ್ರ ಚ ತಾರೀಃ**—ವೃದ್ಧಿಯನ್ನುಂಟುಮಾಡು ಅಥವಾ (ಪಾಪದಿಂದ) ದಾಟಿಸು.

|| ಭಾವಾರ್ಥ ||

ಯಜ್ಞಾರ್ಹನಾದವನೂ ಮೂರು ಲೋಕಗಳಲ್ಲಿಯೂ ಸ್ಥಿತಿಯುಳ್ಳವನೂ ಆದ ಎಲೈ ಅಗ್ನಿಯೇ, ಅಪ್ರತಿಹತವಾದ ನಿನ್ನ ರಕ್ಷಕವಾದ ತೇಜಸ್ಸುಗಳಿಂದ ನಿನ್ನ ಸ್ತುತಿಕರ್ತರಾದ ನಮ್ಮನ್ನು ರಕ್ಷಿಸು. ವೈಶ್ವಾನರರೂಪಿಯಾದ ಎಲೈ ಅಗ್ನಿಯೇ, ಹವಿಸ್ಸನ್ನರ್ಪಿಸತಕ್ಕ ನಮ್ಮ ಬಲವನ್ನು ರಕ್ಷಿಸು. ನಮ್ಮಿಂದ ಸ್ತುತನಾಗತಕ್ಕ ನೀನು ಪ್ರವೃದ್ಧನಾಗು.

## English Translation.

Adored Agni, present in the three worlds, protect your worshippers with your irresistible protections, preserve the strength of us who offer (oblations): glorified (by us), Agni Vaishwanara, transport us (beyond evil.

# ಒಂಭತ್ತನೆಯ ಸೂಕ್ತವು

| ಸಾಯಣಭಾಷ್ಯಂ |

**ಅಹಶ್ಚೇತಿ ಸಪ್ತರ್ಚಂ ನವಮಂ ಸೂಕ್ತಂ ಭರದ್ವಾಜಸ್ಯಾರ್ಷಂ ವೈಶ್ವಾನರಾಗ್ನಿದೇವತಾಕಂ | ಅನುಕ್ರಾಂತಂ ಚ | ಅಹಶ್ಚೇತಿ || ವ್ಯೂಳ್ಹೇ ದಶರಾತ್ರೇ ಷಷ್ಠೇಽಹನ್ಯಾಗ್ನಿಮಾರುತಶಸ್ತ್ರೇ ವೈಶ್ವಾನರನಿವಿದ್ಧಾನಮಿದಂ | ಸೂತ್ರ್ಯತೇ ಹಿ | ಅಹಶ್ಚ ಕೃಷ್ಣಂ ಮಧ್ವೋ ವೋ ನಾಮ | ಆ. ೮-೮ | ಇತಿ ||**

ಅನುವಾದವು—**ಅಹಶ್ಚ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಒಂಭತ್ತನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು; ವೈಶ್ವಾನರಾಗ್ನಿಯು ದೇವತೆಯು; ತ್ರಿಷ್ಟುಪ್‌ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಅಹಶ್ಚ** ಎಂದು ಮೊದಲಾಗಿ ಹೇಳಿರುವುದು. ವ್ಯೂಳ್ಹವೆಂಬ ದಶರಾತ್ರಯಾಗದ ಆರನೆಯ ದಿವಸ ಆಗ್ನಿಮಾರುತಶಸ್ತ್ರಮಂತ್ರಗಳಲ್ಲಿ ಈ ಸೂಕ್ತವನ್ನು ನಿವಿದ್ಧಾನೀಯಸೂಕ್ತವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಅಹಶ್ಚ ಕೃಷ್ಣಂ ಮಧ್ವೋ ವೋ ನಾಮ** ಎಂಬ ಸೂತ್ರದಿಂದ (ಆ. ೮-೮) ವಿವೃತವಾಗಿರುವುದು.

## ಸೂಕ್ತ—೯

ಮಂಡಲ—೬ || ಅನುವಾಕ—೧ || ಸೂಕ್ತ—೯ ||
ಅಷ್ಟಕ—೪ || ಅಧ್ಯಾಯ—೫ || ವರ್ಗ—೧೧ ||
|| ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ||
|| ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ||
|| ದೇವತಾ—ವೈಶ್ವಾನರಃ ||
|| ಛಂದಃ—ತ್ರಿಷ್ಟುಪ್ ||

॥ ಸಂಹಿತಾಪಾಠಃ ॥

ಅಹಶ್ಚ ಕೃಷ್ಣಮಹರರ್ಜುನಂ ಚ ವಿ ವರ್ತೇತೇ ರಜಸೀ ವೇದ್ಯಾಭಿಃ ।
ವೈಶ್ವಾನರೋ ಜಾಯಮಾನೋ ನ ರಾಜಾವಾತಿರಜ್ಜ್ಯೋತಿಷಾಗ್ನಿಸ್ತ-
ಮಾಂಸಿ ॥ ೧ ॥

॥ ಪದಪಾಠಃ ॥

ಅಹರಿತಿ । ಚ । ಕೃಷ್ಣಂ । ಅಹಃ । ಅರ್ಜುನಂ । ಚ । ವಿ । ವರ್ತೇತೇ ಇತಿ । ರಜಸೀ ಇತಿ । ವೇದ್ಯಾಭಿಃ ।
ವೈಶ್ವಾನರಃ । ಜಾಯಮಾನಃ । ನ । ರಾಜಾ । ಅವ । ಅತಿರತ್ । ಜ್ಯೋತಿಷಾ । ಅಗ್ನಿಃ । ತಮಾಂಸಿ ॥ ೧ ॥

॥ ಸಾಯಣಭಾಷ್ಯಂ ॥

ಅಹರತಿ ಪುರುಷೋಽಸ್ಮಿನ್ಕರ್ಮಾಣೀತ್ಯಹಃ । ಕೃಷ್ಣಂ ಕೃಷ್ಣವರ್ಣಂ । ಏತಚ್ಛಾಮಾನಾಧಿಕರಣ್ಯಾದಹಃಶಬ್ದೋ ರಾತ್ರಿವಾಚಕಃ । ತಮಸಾ ಕೃಷ್ಣವರ್ಣಾ ರಾತ್ರಿಶ್ಚಾರ್ಜುನಂ ಚ ಸೌರೇಣ ತೇಜಸಾ ಶುಕ್ಲವರ್ಣಮಹೋ ದಿವಸಶ್ಚ ರಜಸೀ ಸ್ವಸ್ವಭಾಸಾ ಸರ್ವಂ ಜಗದ್ರಂಜಯಂತೌ ವೇದ್ಯಾಭಿರ್ವೇದಿತವ್ಯಾಭಿರನುಕೂಲತಯಾ ಜ್ಞಾತವ್ಯಾಭಿಃ ಸ್ವಪ್ರವೃತ್ತಿಭಿರ್ವಿ ವರ್ತೇತೇ । ವಿವಿಧಂ ಪರ್ಯಾವರ್ತೇತೇ । ಯದ್ವಾ। ರಜಸೀ ದ್ಯಾವಾಪೃಥಿವ್ಯೌ । ಉಪಲಕ್ಷಣಮೇತತ್ । ಲೋಕತ್ರಯಂ ಪ್ರತ್ಯಾವರ್ತೇತೇ । ಏತಚ್ಚ ವೈಶ್ವಾನರಾಗ್ನೇರಾಜ್ಞಯೇತಿ ಶೇಷಃ । ಸ ಹಿ ದೇವತಾತ್ವೇನಾತ್ರ ಪ್ರತಿಪಾದ್ಯಃ । ಸ ಚ ವೈಶ್ವಾನರೋಽಗ್ನಿರ್ಜಾಯಮಾನೋ ನ ರಾಜಾ ಪ್ರಾದುರ್ಭವನ್ ಪ್ರವರ್ಧಮಾನೋ ರಾಜೇವ ಜ್ಯೋತಿಷಾ ತೇಜಸಾ ತಮಾಂಸ್ಯವಾತಿರತ್ ॥ ಅವತಿರತಿರ್ವಧಕರ್ಮಾ ॥ ಅವತಿರತಿ । ವಿನಾಶಯತಿ ॥

॥ ಪ್ರತಿಪದಾರ್ಥ ॥

**ಕೃಷ್ಣಂ**—ಕತ್ತಲಿನಿಂದ ಕೂಡಿದ । **ಅಹಃ**—(ದಿನದ) ರಾತ್ರಿಕಾಲವೂ । **ಅರ್ಜುನಂ ಚ**—ಸ್ವತೇಜಸ್ಸಿನಿಂದ ಕೂಡಿದ । **ಅಹಃ**—ಹಗಲುಕಾಲವೂ । **ರಜಸೀ**—ಜಗತ್ತನ್ನು ಪ್ರಕಾಶಗೊಳಿಸುತ್ತಾ । **ವೇದ್ಯಾಭಿಃ**—ಎಲ್ಲರಿಗೂ ಗೋಚರವಾಗತಕ್ಕ ತಮ್ಮ ಭ್ರಮಣಗಳಿಂದ । **ವಿ ವರ್ತೇತೇ**—ಪರ್ಯಾಯರೂಪದಲ್ಲಿ ಸಂಚರಿಸುತ್ತವೆ (ಇವು ವೈಶ್ವಾನರನ ಆಜ್ಞಾಧೀನವಾಗಿವೆ) । **ವೈಶ್ವಾನರಃ**—ವೈಶ್ವಾನರರೂಪನಾದ । **ಅಗ್ನಿಃ**—ಅಗ್ನಿಯು । **ಜಾಯಮಾನಃ**—ಉತ್ಪನ್ನನಾದೊಡನೆಯೇ । **ರಾಜಾ ನ**—ಪ್ರಭುವಿನಂತೆ ಪ್ರಕಾಶಿಸುತ್ತಾ । **ಜ್ಯೋತಿಷಾ**—ತನ್ನ ತೇಜಸ್ಸಿನಿಂದ । **ತಮಾಂಸಿ**—ಕಗ್ಗತ್ತಲೆಗಳನ್ನು । **ಅವಾತಿರತ್**—ನಾಶಮಾಡಿದ್ದಾನೆ.

॥ ಭಾವಾರ್ಥ ॥

ಅಂಧಕಾರಯುಕ್ತವಾದ ರಾತ್ರಿಕಾಲವೂ ಸ್ವತೇಜಸ್ಸಿನಿಂದ ಕೂಡಿದ ಹಗಲೂ ಸಹ ವೈಶ್ವಾನರನ ಆಜ್ಞಾಧೀನವಾಗಿ ಜಗತ್ತನ್ನು ಪ್ರಕಾಶಗೊಳಿಸುತ್ತಾ ಎಲ್ಲರಿಗೂ ಗೋಚರಿಸತಕ್ಕ ತಮ್ಮ ಭ್ರಮಣಗಳಿಂದ ಪರ್ಯಾಯರೂಪದಲ್ಲಿ

ಸಂಚರಿಸುತ್ತವೆ. ವೈಶ್ವಾನರರೂಪಿಯಾದ ಅಗ್ನಿಯು ಉತ್ಪನ್ನನಾದೊಡನೆಯೇ ಪ್ರಭುವಿನಂತೆ ಪ್ರಕಾಶಿಸುತ್ತಾ ತನ್ನ ತೇಜಸ್ಸಿನಿಂದ ಕತ್ತಲೆಯನ್ನು ಪೂರ್ಣವಾಗಿ ನಾಶಮಾಡಿದ್ದಾನೆ.

### English Translation.

The dark day and the light day revolve alternate, affecting (the world) by their recognizable (properties): Agni Vaishwanara, manifested like a prince, dispels darkness by his lustre.

॥ ಸಂಹಿತಾಪಾಠಃ ॥

ನಾಹಂ ತಂತುಂ ನ ವಿ ಜಾನಾಮ್ಯೋತುಂ ನ ಯಂ ವಯಂತಿ ಸಮರೇಽ-
ತಮಾನಾಃ।
ಕಸ್ಯ ಸ್ವಿತ್ಪುತ್ರ ಇಹ ವಕ್ತ್ವಾನಿ ಪರೋ ವದಾತ್ಯವರೇಣ ಪಿತ್ರಾ ॥ ೨ ॥

॥ ಪದಪಾಠಃ ॥

ನ । ಅಹಂ । ತಂತುಂ । ನ । ವಿ । ಜಾನಾಮಿ । ಓತುಂ । ನ । ಯಂ । ವಯಂತಿ । ಸಂಽಅರೇ । ಅತಮಾನಾಃ ।
ಕಸ್ಯ । ಸ್ವಿತ್ । ಪುತ್ರಃ । ಇಹ । ವಕ್ತ್ವಾನಿ । ಪರಃ । ವದಾತಿ । ಅವರೇಣ । ಪಿತ್ರಾ ॥ ೨ ॥

॥ ಸಾಯಣಭಾಷ್ಯಂ ॥

ವೈಶ್ವಾನರಸ್ಯ ಮಹತ್ತ್ವಮಾಖ್ಯಾಸ್ಯನ್ನೃಷಿಸ್ತದರ್ಥಂ ಯಜ್ಞಂ ವಸ್ತ್ರಾತ್ಮಕತಯಾ ರೂಪಯನ್ ತಸ್ಯ ದುರ್ಜ್ಞಾನತ್ವಮನಯಾ ಪ್ರತಿಪಾದಯತೀತಿ ಯಜ್ಞವಾದಿನೋ ಮನ್ಯಂತೇ । ತಂತುಂ । ತಂತವಃ ಪಟಸ್ಯ ಪ್ರಾಗಾಯತಾನಿ ಸೂತ್ರಾಣಿ । ತಾನಿ ಚ ಯಜ್ಞಾತ್ಮಕಸ್ಯ ವಸ್ತ್ರಸ್ಯ ಗಾಯತ್ರ್ಯಾದೀನಿ ಛಂದಾಂಸಿ ಸ್ತುತಶಸ್ತ್ರಾಣಿ ಚ । ತಾನ್ಯಹಂ ನ ವಿ ಜಾನಾಮಿ । ತಥೋತುಂ । ಓತವಸ್ತಿರಶ್ಚೀನಾನಿ ಸೂತ್ರಾಣಿ । ತಾನಿ ಚಾತ್ರ ಯಜೂಂಷ್ಯಾಧ್ವರ್ಯವಾಣಿ ಕರ್ಮಾಣಿ ಚ । ತಾನ್ಯಹಂ ನ ವಿ ಜಾನಾಮಿ । ಅಪಿ ಚೈತದುಭಯ-ಸಾಧ್ಯಂ ತಂ ಪಟಂ ಯಜ್ಞಲಕ್ಷಣಂ ನ ವಿ ಜಾನಾಮಿ ಯಂ ಪಟಂ ಯಜ್ಞಲಕ್ಷಣಂ ಸಮರೇ ಸಂಗಮನೇ ದೇವಯಜನೇಽತಮಾನಾಃ ಸತತಂ ಚೇಷ್ಟಮಾನಾ ಋತ್ವಿಜೋ ವಯಂತಿ ತಂತೂನೋತೂಂಶ್ಚ ಸಂತನ್ವಂತಿ । ವಸ್ತ್ರರೂಪೇಣ ನಿಷ್ಪಾದಯಂತೀತ್ಯರ್ಥಃ । ಇಹಾಸ್ಮಿನ್ ಲೋಕೇ ಕಸ್ಯ ಸ್ವಿತ್ । ಸ್ವಿದಿತಿ ವಿತರ್ಕೇ । ಕಸ್ಯ ಖಲು ಪುತ್ರೋ ಮನುಷ್ಯೋ ವಕ್ತ್ವಾನಿ ವಕ್ತವ್ಯಾನಿ ತಾನೀಮಾನಿ ಪರಃ ಪರಸ್ತಾದ-

ಮುಷ್ಮಿನ್ ಲೋಕೇ ವರ್ತಮಾನೋ ಯಃ ಸೂರ್ಯಸ್ತಸ್ಯ ಪಿತ್ರಾವರೇಣಾವಸ್ತಾದಸ್ಮಿನ್ ಲೋಕೇ ವರ್ತಮಾನೇನ ವೈಶ್ವಾನರಾಗ್ನಿನಾನುಶಿಷ್ಟಃ ಸನ್ ವದಾತಿ । ವದೇತ್ । ನ ಕಶ್ಚಿದಪಿ ಪ್ರವದಿತುಂ ಶಕ್ನೋತೀತ್ಯರ್ಥಃ ॥ ಏತಚ್ಚ ಸಂಪ್ರದಾಯವಿದ್ಭಿರುಕ್ತಂ । ವೈಶ್ವಾನರಸ್ಯ ಪುತ್ರೋಽಸೌ ಪರಸ್ತಾದ್ದಿವಿ ಯಃ ಸ್ಥಿತಃ । ಛಂದಾಂಸ್ಯಧ್ವರವಸ್ತ್ರಸ್ಯ ಸ್ತುತಶಸ್ತ್ರಾಣಿ ತಂತವಃ ॥ ಯಜೂಂಷಿ ಚೇಷ್ಟಾಶ್ಚೋತುಃ ಸ್ಯಾದ್ವಸ್ತ್ರಂ ವಾತವ್ಯಮಧ್ವರಃ । ಪರಃ ಪರಃ ಸ್ಥಿತಃ ಸೂರ್ಯಃ ಪಿತಾಗ್ನಿಃ ಪಾರ್ಥಿವೋ ಮತ ಇತಿ ॥ ರೂಪಕತಯಾ ಜಗತ್ಸೃಷ್ಟೇರ್ದುರ್ಜ್ಞಾನತ್ವಮನಯಾ ಪ್ರತಿಪಾದಯತೀತ್ಯಾತ್ಮವಿದೋ ಮನ್ಯಂತೇ । ತಂತುಂ ತಂತೂನ್ ತಂತುಸ್ಥಾನಾನಿ ಸೂಕ್ಷ್ಮಾಣಿ ವಿಯದಾದೀನ್ಯಪಂಚೀಕೃತಾನಿ ಭೂತಾನಿ ನ ವಿಜಾನಾಮಿ। ಓತುಮೋತೂನ್ ಪಂಚೀಕೃತಾನಿ ಸ್ಥೂಲಾನ್ಯೋತುಸ್ಥಾನೀಯಾನ್ಯಪಿ ವಿಯದಾದೀನಿ ನ ವಿಜಾನಾಮಿ । ನ ಚ ತತ್ಕಾರ್ಯಂ ಪಟಸ್ಥಾನೀಯಂ ಪ್ರಪಂಚಂ ವಿಜಾನಾಮಿ ಯಂ ಪ್ರಪಂಚಂ ಸಮರೇ ತಂತೂನಾಮೋತೂನಾಂ ಚ ಸಂಗಮನೇಽತಮಾನಾಃ ಸತತಂ ಚೇಷ್ಟಮಾನಾಃ ಸಂಸಾರಿಣೋ ವಯಂತಿ ಉತ್ಪಾದಯಂತಿ। ತೇಷಾಂ ಭೋಗಾರ್ಥಮೀಶ್ವರಃ ಸೃಜತೀತಿ ಕರ್ತೃತ್ವಮುಪಚರ್ಯತೇ । ಇಹಾಸ್ಮಿನ್ವಿಷಯೇ ಪರಃ ಪರಸ್ತಾದ್ದ್ಯುಭ್ವೇರವಿಷಯೇ ವರ್ತಮಾನಾನಿ ವಕ್ತ್ವಾನಿ ವಕ್ತವ್ಯಾನೀಮಾನ್ಯವರೇಣಾರ್ವಾಚೀನೇನ ಸೃಷ್ಟ್ಯುತ್ತರಕಾಲಮುತ್ಪನ್ನೇನ ಪಿತ್ರಾ ಸ್ವಜನಕೇನಾಽನುಶಿಷ್ಟಃ ಸನ್ ಕಸ್ಯ ಖಲು ಪುತ್ರೋ ವದಾತಿ । ವದೇತ್ । ಸೃಷ್ಟ್ಯುತ್ಪತ್ತೇಃ ಪ್ರಾಚೀನಂ ವೃತ್ತಾಂತಮಜಾನಾನಃ ಕಶ್ಚಿದಪಿ ನ ವದೇದಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಅಹಂ**—ನಾನು (ಯಜ್ಞರೂಪವಾದ) । **ತಂತುಂ**—ವಸ್ತ್ರದ ನೇಯ್ಗೆಗೆ ಹಾಸುರೂಪವಾದ ಸೂತ್ರಗಳ ಸ್ವರೂಪವನ್ನು । **ನ ವಿ ಜಾನಾಮಿ**—ಅರಿತಿಲ್ಲ । **ಓತುಂ**—(ಹೊಕ್ಕು ಎಂಬ ಸಂಜ್ಞೆಯಿಂದ ಕರೆಯಲ್ಪಡುವ) ಸೂತ್ರಗಳನ್ನೂ । **ನ**—ಅರಿತಿಲ್ಲ । **ಯಂ**—ಯಾವ ಯಜ್ಞರೂಪವಾದ ವಸ್ತ್ರವನ್ನು । **ಸಮರೇ**—ಯಜ್ಞಕಾಲದಲ್ಲಿ। **ಅತಮಾನಾಃ**—ಕಾರ್ಯನಿರತರಾದ ಋತ್ವಿಕ್ಕುಗಳು । **ವಯಂತಿ**—ನೇಯುವರೋ ಅದನ್ನೂ । **ನ**—ನಾನು ಅರಿಯೆ । **ಅವರೇಣ**—ಈ ಲೋಕದಲ್ಲಿರತಕ್ಕ । **ಪಿತ್ರಾ**—ವೈಶ್ವಾನರರೂಪಿಯಾದ ಪಿತೃವಿನಿಂದ (ಉಪದಿಷ್ಟನಾಗಿ) । **ಪರಃ**—ಪರಲೋಕದ (ಪುತ್ರರೂಪನಾದ) ಸೂರ್ಯನು । **ವದಾತಿ**—ಯಾವ ವಾಕ್ಯವನ್ನು ಪಠಿಸಬಲ್ಲನೋ ಅಂತಹ **ಇಹ**—ಈ ಯಜ್ಞಕಾಲದಲ್ಲಿ । **ವಕ್ತ್ವಾನಿ**—ಪಠಿಸಲು ಯೋಗ್ಯವಾದ ವಾಕ್ಯಗಳನ್ನು । **ಕಸ್ಯ ಸ್ವಿತ್**—ಈ ಯಜ್ಞಗೃಹದಲ್ಲಿರುವ ಯಾವ ಯಜಮಾನನ । **ಪುತ್ರಃ**—ಪುತ್ರನು (ಪಠಿಸಬಲ್ಲನು? ಯಾರಿಂದಲೂ ಸಾಧ್ಯವಿಲ್ಲ).

॥ ಭಾವಾರ್ಥ ॥

ಯಜ್ಞರೂಪವಾದ ವಸ್ತ್ರದ ನೇಯ್ಗೆಗೆ ಬೇಕಾದ ಹಾಸುರೂಪವಾದ ಸೂತ್ರಗಳ ಸ್ವರೂಪವನ್ನಾಗಲಿ ಅಥವಾ ಹೊಕ್ಕು ಎಂಬ ಸಂಜ್ಞೆಯಿಂದ ಕರೆಯಲ್ಪಡುವ ಸೂತ್ರಗಳನ್ನಾಗಲಿ ನಾನು ಅರಿತಿಲ್ಲ. ಕಾರ್ಯನಿರತರಾದ ಈ ಋತ್ವಿಕ್ಕುಗಳು ನೇಯತಕ್ಕ ಯಜ್ಞರೂಪವಾದ ವಸ್ತ್ರದ ಸ್ವರೂಪವನ್ನೂ ನಾನು ಅರಿಯೆ. ಈ ಲೋಕದಲ್ಲಿರತಕ್ಕ ವೈಶ್ವಾನರರೂಪಿಯಾದ ಪಿತೃವಿನಿಂದ ಉಪದಿಷ್ಟನಾಗಿ ಪರಲೋಕದಲ್ಲಿ ಪುತ್ರರೂಪದಲ್ಲಿರುವ ಸೂರ್ಯನು ಪಠಿಸಬಲ್ಲುದೂ ಈ ಯಜ್ಞಕಾಲದಲ್ಲಿ ಪಠಿಸಬೇಕಾದುದೂ ಆದ ವಾಕ್ಯಗಳನ್ನು ಇಲ್ಲಿರುವ ಯಜಮಾನರಾಗಲಿ, ತತ್ಪುತ್ರರಾಗಲಿ ಯಾರೂ ಪಠಿಸಲು ಸಾಧ್ಯವಿಲ್ಲ.

## English Translation.

I understand not the threads (of the warp), nor the threads of the woof, nor that (cloth) which those who are assiduous in united exertion weave: of what (man) may the son declare the words that are to be spoken in the next world, (instructed) by a father abiding below.

॥ ವಿಶೇಷವಿಷಯಗಳು ॥

ಈ ಋಕ್ಕಿಗೆ ಭಾಷ್ಯಕಾರರು ಎರಡು ವಿಧವಾದ ಅರ್ಥಗಳನ್ನು ಹೇಳಿದ್ದಾರೆ. ಯಜ್ಞಪರವಾಗಿ ಒಂದು, ಅಧ್ಯಾತ್ಮಪರವಾಗಿ ಮತ್ತೊಂದು. ಈ ಎರಡು ವಿಧ ಅರ್ಥಗಳೂ ಈ ಋಕ್ಕಿಗೆ ಸರಿಯಾಗಿ ಹೊಂದಿಕೊಳ್ಳುತ್ತವೆ. ಈ ಋಕ್ಕಿನಲ್ಲಿ ಋಷಿಯು ಯಜ್ಞಸ್ವರೂಪ ಅಥವಾ ಆತ್ಮಸ್ವರೂಪವನ್ನು ತಾನು ತಿಳಿದಿಲ್ಲವೆಂದೂ ಮುಂದಿನ ಋಕ್ಕಿನಲ್ಲಿ ಈ ವಿಷಯವನ್ನು ವೈಶ್ವಾನರಾಗ್ನಿಯು ಮಾತ್ರ ತಿಳಿದಿರುವನೆಂದೂ ವೈಶ್ವಾನರಾಗ್ನಿಯ ಮಹತ್ತ್ವವನ್ನು ವರ್ಣಿಸಿದ್ದಾನೆ.

## ಯಜ್ಞಪರವಾದ ಅರ್ಥವಿವರಣೆಯು

**ನ ಅಹಂ ತಂತುಂ ವಿ ಜಾನಾಮಿ— ತಂತವಃ ಪಟಸ್ಯ ಪ್ರಾಗಾಯತನಾನಿ ಸೂತ್ರಾಣಿ । ತಾನಿ ಚ ಯಜ್ಞಾತ್ಮಕಸ್ಯ ವಸ್ತ್ರಸ್ಯ ಗಾಯತ್ರ್ಯಾದೀನಿ ಛಂದಾಂಸಿ ಸ್ತುತಶಸ್ತ್ರಾಣಿ ಚ । ತಾನಿ ಅಹಂ ನ ವಿ ಜಾನಾಮಿ।** ಇಲ್ಲಿ ಯಜ್ಞವನ್ನು ವಸ್ತ್ರಕ್ಕೆ (ಬಟ್ಟೆಗೆ) ಹೋಲಿಸಿದೆ. ಬಟ್ಟೆಯನ್ನು ನೇಯುವಾಗ ದಾರಗಳನ್ನು ಉಪಯೋಗಿಸುವರು. ಆ ದಾರಗಳಲ್ಲಿ ಎರಡು ವಿಧ. ಉದ್ದುದ್ದವಾಗಿ ಕೆಲವು ದಾರಗಳನ್ನು ಮಗ್ಗದಲ್ಲಿ ಜೋಡಿಸಿರುವರು. ಇವುಗಳಿಗೆ ಹಾಸುಗಳೆಂದು ಹೆಸರು. ಈ ಹಾಸುಗಳನ್ನು ಅಡ್ಡಲಾಗಿ ಒಳಹೊಕ್ಕು ಸೇರಿಸುವ ದಾರಗಳಿಗೆ ಹೊಕ್ಕುಗಳೆಂದು ಹೆಸರು. ಈ ಹೊಕ್ಕುಗಳನ್ನು ಮಗ್ಗದ ಸಹಾಯದಿಂದ ಒಂದೊಂದೇ ದಾರವನ್ನು ಹಾಸುಗಳಲ್ಲಿ ಸೇರಿಸಿ ಬಟ್ಟೆಯನ್ನು ನೇಯುವರು. ಇದು ವಸ್ತ್ರನಿರ್ಮಾಣ ಎಂದರೆ ಬಟ್ಟೆಯನ್ನು ನೇಯುವ ಕ್ರಮವು. ಈ ಕ್ರಮವನ್ನೇ ಉದಾಹರಣೆಯಾಗಿ ತೆಗೆದುಕೊಂಡು ಈ ಋಕ್ಕಿನ ಅರ್ಥವನ್ನು ವಿವರಿಸಲಾಗಿದೆ. ಇಲ್ಲಿ ಎಂದರೆ ಯಜ್ಞದಲ್ಲಿ ಗಾಯತ್ರಿಯೇ ಮೊದಲಾದ ಛಂದಸ್ಸುಗಳೂ, ಶಸ್ತ್ರಮಂತ್ರಗಳೂ ಬಟ್ಟೆ ನೇಯುವುದಕ್ಕಾಗಿ ಉಪಯೋಗಿಸುವ ಹಾಸುಗಳು ಎಂಬ ದಾರಗಳು. ಇವುಗಳನ್ನು ನಾನು ತಿಳಿದಿಲ್ಲ ಎಂದು ಋಷಿಯು ಹೇಳಿಕೊಂಡಿರುವನು ಎಂದರೆ ಯಜ್ಞಗಳಲ್ಲಿ ಬಳಸಲಾಗುವ ಗಾಯತ್ರ್ಯಾದಿ ನಾನಾವಿಧ ಛಂದಸ್ಸುಗಳ ಮತ್ತು ಆಶ್ವಿನ, ನಿಷ್ಕೇವಲ್ಯ, ಆಗ್ನಿಮಾರುತ, ಆಜ್ಯ ಮೊದಲಾದ ಶಸ್ತ್ರಮಂತ್ರಗಳ ಸ್ವರೂಪಾದಿಗಳನ್ನು ನಾನು ತಿಳಿದಿಲ್ಲ ಎಂದರೆ ನನ್ನ ತಿಳುವಳಿಕೆಯು ಅತ್ಯಲ್ಪವಾದುದು ಎಂದು ತನ್ನ ಅಲ್ಪತ್ವವನ್ನು (ವೈಶ್ವಾನರಾಗ್ನಿಯ ಮಹತ್ವವನ್ನು ತಿಳಿಸುವುದಕ್ಕಾಗಿ) ಋಷಿಯು ಹೇಳಿದ್ದಾನೆ

**ತಥಾ ಓತುಂ ನ (ವಿ ಜಾನಾಮಿ)— ಓತವಸ್ತಿರಶ್ಚೀನಾನಿ ಸೂತ್ರಾಣಿ । ತಾನಿ ಚಾತ್ರ ಯಜೂಂಷ್ಯಾಧ್ವರ್ಯವಾಣಿ ಕರ್ಮಾಣಿ ಚ । ತಾನ್ಯಹಂ ನ ವಿ ಜಾನಾಮಿ ।** ಮತ್ತು ಹೊಕ್ಕುಗಳೆಂಬ ದಾರಗಳನ್ನು ನಾನು ತಿಳಿದಿಲ್ಲ. ಇಲ್ಲಿ (ಯಜ್ಞದಲ್ಲಿ) ಹೊಕ್ಕುಗಳೆಂಬ ಅಡ್ಡದಾರಗಳೆಂದರೆ— ಯಜುರ್ವೇದ ಮಂತ್ರಗಳು, ಮತ್ತು ಅಧ್ವರ್ಯು ಮೊದಲಾದ ಋತ್ವಿಜರು ಯಜ್ಞಾದಿಗಳಲ್ಲಿ ನೆರವೇರಿಸುವ ಯಜ್ಞಾಂಗಕರ್ಮಗಳು. ಇವುಗಳ ಸ್ವರೂಪಗಳೂ ನನಗೆ ತಿಳಿದಿಲ್ಲ ಎಂದು ಋಷಿಯು ಹೇಳಿದಾನೆ.

**ಸಮರೇ ಅತಮಾನಾಃ ಯಂ ವಯಂತಿ (ತದಪಿ ಅಹಂ) ನ (ಜಾನಾಮಿ)— ಅಪಿ ಚೈತದುಭಯ ಸಾಧ್ಯಂ ತಂ ಪಟಂ ಯಜ್ಞಲಕ್ಷಣಂ ನ ವಿ ಜಾನಾಮಿ। ಯಂ ಪಟಂ ಯಜ್ಞಲಕ್ಷಣಂ ಸಮರೇ ಸಂಗಮನೇ ದೇವಯಜನೇ ಸತತಂ ವೇಷ್ಟಮಾನಾ ಋತ್ವಿಜಃ ವಯಂತಿ ತಂತೂನೋತೂಂಶ್ಚ ಸಂತನ್ವಂತಿ ವಸ್ತ್ರರೂಪೇಣ ನಿಷ್ಪಾದಯಂತಿ ತದಪಿ ನಾಹಂ ಜಾನಾಮಿ ।** ಇದಲ್ಲದೆ ಹಾಸು ಹೊಕ್ಕುಗಳನ್ನು ಸೇರಿಸಿ ನೇಯುವ ಕ್ರಮವೂ ನನಗೆ ತಿಳಿಯದು. ಎಂದರೆ, ಯಜ್ಞಗಳಲ್ಲಿ ಋತ್ವಿಗಾದಿಗಳು ನಾನಾವಿಧ ಕರ್ಮಗಳನ್ನು ನೆರವೇರಿಸುವಾಗ ಪಠಿಸುವ ಮಂತ್ರಗಳು, ಆಯಾ ಕಾಲದಲ್ಲಿ ನೆರವೇರಿಸಬೇಕಾದ ಯಜ್ಞಾಂಗಕರ್ಮಗಳು ಇವುಗಳನ್ನು ಯಾವಾಗ, ಹೇಗೆ ಮಾಡಬೇಕು ಎಂಬ ಕ್ರಮವೂ ಸಹ ನನಗೆ ಗೊತ್ತಿಲ್ಲ ಎಂದು ಋಷಿಯು ಹೇಳಿದಾನೆ.

**ಕಸ್ಯ ಸ್ವಿತ್ ಪುತ್ರ ಇಹ ವಕ್ತ್ವಾನಿ ಪರಃ ಅವರೇಣ ಪಿತ್ರಾ ವದಾತಿ- ಕಸ್ಯ ಖಲು ಪುತ್ರಃ ಮನುಷ್ಯಃ ವಕ್ತವ್ಯಾನಿ ತಾನೀಮಾನಿ ಅಮುಷ್ಮಿನ್ ಲೋಕೇ ವರ್ತಮಾನಸ್ಯ ಸೂರ್ಯಸ್ಯ ಪಿತ್ರಾ ಅಸ್ಮಿನ್‌ಲೋಕೇ ವರ್ತಮಾನೇನ ವೈಶ್ವಾನರಾಗ್ನಿನಾನುಶಿಷ್ಟ್ವಾನ್ ವದೇತ್ । ನ ಕಶ್ಚಿದಪಿ ಪ್ರವದಿತುಂ ಶಕ್ನೋತೀತ್ಯರ್ಥಃ ॥** ಇದಲ್ಲದೆ ಈ ವಿಷಯಗಳ ಪರವಾಗಿ ಹೇಳಬೇಕಾದುದನ್ನು ಅಂತರಿಕ್ಷದಲ್ಲಿ ಬೆಳಗುತ್ತಿರುವ ಸೂರ್ಯನಿಂದಲೂ, ಭೂಮಿಯಲ್ಲಿ ಯಜ್ಞಾದಿಗಳಲ್ಲಿ ಪ್ರಕಾಶಿಸುತ್ತಿರುವ ವೈಶ್ವಾನರಾಗ್ನಿಯಿಂದಲೂ ಸಹಿತನಾಗಿ ಯಾವ ಮನುಷ್ಯನು ತಾನೇ ನಿಖರವಾಗಿ ಹೇಳಬಲ್ಲನು? ಯಾರಿಂದಲೂ ಸಾಧ್ಯವಿಲ್ಲ.

ಇಲ್ಲಿ ಸೂರ್ಯನನ್ನು ವೈಶ್ವಾನರಾಗ್ನಿಯ ಪುತ್ರನೆಂದು ವರ್ಣಿಸಲಾಗಿದೆ. ಈ ವಿಷಯವನ್ನು ಸಂಪ್ರದಾಯಜ್ಞರಾದ ಕೆಲವು ಮಹರ್ಷಿಗಳು ಈರೀತಿ ಹೇಳುತ್ತಾರೆ—

**ವೈಶ್ವಾನರಸ್ಯ ಪುತ್ರೋಽಸೌ ಪರಸ್ತಾದ್ದಿವಿ ಯಃ ಸ್ಥಿತಃ ।**
**ಛಂದಾಂಸ್ಯಧ್ವರವಸ್ತ್ರಸ್ಯ ಸ್ತುತಶಸ್ತ್ರಾಣಿ ತಂತವಃ ॥**
**ಯಜೂಂಷಿ ಚೇಷ್ಟಾಶ್ಚೋತುಃ ಸ್ಯಾದ್ವಸ್ತ್ರಂ ವಾತವ್ಯಮಧ್ವರಃ ।**
**ಪರಃ ಪರಃ ಸ್ಥಿತಃ ಸೂರ್ಯಃ ಪಿತಾಗ್ನಿಃ ಪಾರ್ಥಿವೋ ಮತಃ ॥**

ಎಂದರೆ—ಅಂತರಿಕ್ಷದಲ್ಲಿ ಪ್ರಕಾಶಿಸುತ್ತಿರುವ ಈ ಸೂರ್ಯನೇ ವೈಶ್ವಾನರಾಗ್ನಿಯ ಪುತ್ರನು; ಯಜ್ಞಗಳಲ್ಲಿ ಪಠಿಸುವ ಛಂದಸ್ಸುಗಳೂ, ಶಸ್ತ್ರಮಂತ್ರಗಳೂ ಯಜ್ಞವೆಂಬ ವಸ್ತ್ರದ ಹಾಸುದಾರಗಳು; ಯಜುರ್ವೇದ ಮಂತ್ರಗಳೂ, ಋತ್ವಿಕ್ಕುಗಳು ಮಾಡುವ ಯಜ್ಞಾಂಗ ಕರ್ಮಗಳೂ ಈ ವಸ್ತ್ರದ ಹೊಕ್ಕುದಾರಗಳು. ಯಜ್ಞವೇ ವಸ್ತ್ರವು. ಸ್ವರ್ಗದಲ್ಲಿರುವ ಸೂರ್ಯನಿಗೆ ಯಜ್ಞಾಗ್ನಿಯೇ ತಂದೆಯು. ಎಂದು ಈ ಋಕ್ಕಿನಲ್ಲಿ ಹೇಳಿರುವ ವಿಷಯಗಳನ್ನು ಎಂದರೆ ವಸ್ತ್ರವನ್ನೂ ಅದನ್ನು ನೇಯುವ ಕ್ರಮವನ್ನೂ ಯಜ್ಞದಲ್ಲಿ ಉಪಯೋಗಿಸುವ ಛಂದಸ್ಸು ಮತ್ತು ಮಂತ್ರಗಳಿಗೂ, ಯಜ್ಞಕ್ಕೂ ಹೋಲಿಸಿ ಅರ್ಥವಿವರಣೆಮಾಡಿದ್ದಾರೆ.

## ಅಧ್ಯಾತ್ಮಪರವಾದ ಅರ್ಥವಿವರಣೆ

ಈ ದೃಷ್ಟಾಂತದಲ್ಲಿ ತಂತು (ದಾರ) ಗಳನ್ನು ಪೃಥಿವ್ಯಾದಿಪಂಚಭೂತಗಳಿಗೂ ವಸ್ತ್ರವನ್ನು ಜಗತ್ಸೃಷ್ಟಿಗೂ ಹೋಲಿಸಲಾಗಿದೆ.

**ನ ಅಹಂ ತಂತುಂ ವಿ ಜಾನಾಮಿ—ತಂತುಸ್ಥಾನಾನಿ ಸೂಕ್ಷ್ಮಾಣಿ ವಿಯದಾದೀನ್ಯಪಂಚೀಕೃತಾನಿ ಭೂತಾನಿ ನ ವಿಜಾನಾಮಿ ।** ಜಗತ್ಸೃಷ್ಟಿಗೆ ಪೂರ್ವದಲ್ಲಿ ಪ್ರಜಾಪತಿಯು **ಪೃಥಿವ್ಯಪ್ತೇಜೋವಾಯುರಾಕಾಶ**

ಎಂದರೆ ಪೃಥಿವೀ, ಜಲ, ತೇಜಸ್ಸು, ವಾಯು, ಆಕಾಶ ಎಂಬ ಪಂಚಭೂತಗಳನ್ನು ಸೃಷ್ಟಿಸಿ ಅವುಗಳ ಪಂಚೀಕರಣ ವಿಧಾನದಿಂದ (ಎಂದರೆ ಒಂದರಲ್ಲೊಂದನ್ನು ಮಿಶ್ರಮಾಡುವುದರಿಂದ) ಈ ದೃಶ್ಯಮಾನವಾದ ಜಗತ್ತನ್ನು ಸೃಷ್ಟಿಸಿದನು. ಆದುದರಿಂದ ಜಗತ್ಸೃಷ್ಟಿಗೆ ಕಾರಣಭೂತವಾದ ಆಕಾಶಾದಿ ಪಂಚಭೂತಗಳೇ ಇಲ್ಲಿ ವಸ್ತ್ರದ ಹಾಸುದಾರಗಳು. ಅವುಗಳ ಸ್ವರೂಪವನ್ನು ನಾನು ತಿಳಿದಿಲ್ಲ ಎಂದು ಋಷಿಯು ಹೇಳಿದ್ದಾನೆ.

**ತಥಾ ಓತುಂ ನ (ವಿ ಜಾನಾಮಿ)-ಓತೂನ್ ಪಂಚೀಕೃತಾನಿ ಸ್ಥೂಲಾನ್ಯೋತುಸ್ಥಾನೀಯಾನ್ಯಪಿ ವಿಯದಾದೀನಿ ನ ವಿಜಾನಾಮಿ।** ಹಾಗೆಯೇ ಇಲ್ಲಿ ಹೊಕ್ಕದಾರುಗಳೆಂದರೆ ಆಕಾಶಾದಿಪಂಚಭೂತಗಳ ಪಂಚೀಕರಣ ವಾದ (ಮಿಶ್ರಣದಿಂದ) ಉಂಟಾಗುವ ನಮ್ಮ ಕಣ್ಣಿಗೆ ಕಾಣಿಸುವ ಈ ಪ್ರಪಂಚದ ಅನೇಕ ವಸ್ತುಗಳು. ಇವುಗಳ ಸ್ವರೂಪವನ್ನು ನಾನು ತಿಳಿದಿಲ್ಲ.

**ಸಮರೇ ಅತಮಾನಾಃ ಯಂ ವಯಂತಿ (ತದಪಿ ಅಹಂ) ನ (ಜಾನಾಮಿ)—ನ ಚ ತತ್ಕಾರ್ಯಂ ಪಟಸ್ಥಾನೀಯಂ ಪ್ರಪಂಚಂ ವಿಜಾನಾಮಿ ಯಂ ಪ್ರಪಂಚಂ ಸಮರೇ ತಂತೂನಾಮೋತೂನಾಂ ಚ ಸಂಗಮೇಽತಮಾನಾಃ ಸತತಂ ಚೇಷ್ಟಮಾನಾಃ ಸಂಸಾರಿಣೋ ವಯಂತಿ ಉತ್ಪಾದಯಂತಿ ತದಪಿ ನ ಜಾನಾಮಿ।** ಆಕಾಶಾದಿಪಂಚಭೂತಗಳೂ ಅವುಗಳ ಪಂಚೀಕರಣದಿಂದ ಉಂಟಾಗುವ ವಸ್ತುಗಳೂ ಇವುಗಳಿಂದ ಜಗತ್ಕರ್ತನು ಪ್ರಪಂಚವನ್ನು ಸೃಷ್ಟಿಸುವನು ಆ ಪ್ರಪಂಚದಲ್ಲಿ ಸಂಸಾರಿಗಳಾದ ಜೀವಾತ್ಮರು ತಮ್ಮ ತಮ್ಮ ಕರ್ಮ ಗಳಿಂದ ತಮ್ಮ ತಮ್ಮ ಸ್ಥಿತಿಗಳನ್ನು ನಿಯಮಿಸಿಕೊಳ್ಳುವರು. ಇವುಗಳನ್ನೂ ನಾನು ತಿಳಿದಿಲ್ಲ.

**ಕಸ್ಯ ಸ್ವಿತ್ ಪುತ್ರ ಇಹ ವಕ್ತ್ವಾನಿ ಪರಃ ಅವರೇಣ ಪಿತ್ರಾ ವದಾತಿ ಇಹಾಸ್ಮಿನ್ವಿಷಯೇ ಪರಃ ಪರಸ್ತಾದ್ದ್ಯುಪ್ರದೇಶವಿಷಯೇ ವರ್ತಮಾನಾನಿ ವಕ್ತವ್ಯಾನೀಮಾನ್ಯವರೇಣಾರ್ವಾಚೀನೇನ ಸೃಷ್ಟ್ಯುತ್ತರ- ಕಾಲಉತ್ಪನ್ನೇನ ಪಿತ್ರಾ ಸ್ವಜನಕೇನಾನುಶಿಷ್ಟಃ ಸನ್ ಕಸ್ಯ ಖಲು ಪುತ್ರೋ ವದಾತಿ। ಸ್ವೋತ್ಪತ್ತೇಃ ಪ್ರಾಚೀನಂ ವೃತ್ತಾಂತಮಜಾನಾನಃ ಕಶ್ಚಿದಪಿ ನ ವದೇದಿತ್ಯರ್ಥಃ।** ಈ ಸೃಷ್ಟಿವಿಷಯದಲ್ಲಿ ಈಗ ನಡೆಯು ತ್ತಿರುವುದನ್ನೂ, ಹಿಂದೆ ನಡೆದ ವಿಷಯಗಳನ್ನೂ ಎಂದರೆ ಸೃಷ್ಟಿಗೆ ಪೂರ್ವದಲ್ಲಿ ಇದ್ದ ಸ್ಥಿತಿಗಳನ್ನೂ, ಸೃಷ್ಟಿಯು ಹೇಗೆ ಉಂಟಾಯಿತು ಎಂಬ ವಿಷಯವನ್ನೂ ತಂದೆಯಿಂದ ಜನಿಸಿದ ಯಾವ ಪುತ್ರನು ತಾನೇ ತಿಳಿಯಬಲ್ಲನು? ಎಂದರೆ ತಾನು ಹುಟ್ಟುವುದಕ್ಕೆ ಪೂರ್ವದಲ್ಲಿ ನಡೆದ ವಿದ್ಯಮಾನಗಳನ್ನು ಯಾವ ಮನುಷ್ಯನು ತಾನೇ ಇತರರ ಸಹಾಯವಿಲ್ಲದೆ ತಿಳಿಯಬಲ್ಲನು? ಯಾರೂ ತಿಳಿಯಲಾರರು ಎಂದಭಿಪ್ರಾಯವು.

॥ ಸಂಹಿತಾಪಾಠಃ ॥

ಸ ಇತ್ತಂತುಂ ಸ ವಿ ಜಾನಾತ್ಯೋತುಂ ಸ ವಕ್ತ್ವಾನ್ಯೃತುಥಾ ವದಾತಿ।

ಯ ಈಂ ಚಿಕೇತದಮೃತಸ್ಯ ಗೋಪಾ ಅವಶ್ಚರನ್ಪರೋ ಅನ್ಯೇನ ಪಶ್ಯನ್॥೩॥

॥ ಪದಪಾಠಃ ॥

ಸಃ । ಇತ್ । ತಂತುಂ । ಸಃ । ವಿ । ಜಾನಾತಿ । ಓತುಂ । ಸಃ । ವಕ್ತ್ವಾನಿ । ಋತುಽಥಾ । ವದಾತಿ ।

ಯಃ । ಈಂ । ಚಿಕೇತತ್ । ಅಮೃತಸ್ಯ । ಗೋಪಾಃ । ಅವಃ । ಚರನ್ । ಪರಃ । ಅನ್ಯೇನ । ಪಶ್ಯನ್ ॥೩॥

॥ ಸಾಯಣಭಾಷ್ಯಂ ॥

ಯದ್ಯಪ್ಯುಕ್ತೇನ ಪ್ರಕಾರೇಣ ದುರ್ಜ್ಞಾನಾನಿ ತಥಾಪ್ಯೇತಾನಿ ವೈಶ್ವಾನರೋಽಗ್ನಿರ್ಜಾನಾತಿ ವದತಿ ಚೇತ್ಯನಯಾ ಪ್ರತಿಪಾದಯತಿ । ಸ ಇತ್ ಸ ಏವ ವೈಶ್ವಾನರೋಽಗ್ನಿಸ್ತಂತುಂ ತಂತುಸ್ಥಾನೀಯಾನಿ ಗಾಯತ್ರ್ಯಾದೀನಿ ಛಂದಾಂಸಿ ಸ್ತುತಶಸ್ತ್ರಾಣಿ ವಿ ಜಾನಾತಿ । ತಥಾ ಸ ಏವೌತುಮೋತುಸ್ಥಾನೀಯಾನಿ ಯಜೂಂಷ್ಯಾಧ್ವರ್ಯವಾಣಿ ಚ ಕರ್ಮಾಣಿ ವಿ ಜಾನಾತಿ । ಋತುಥಾ ಕಾಲೇ ಕಾಲೇ ತತ್ತದನುಷ್ಠಾನಸಮಯೇ ವಕ್ತ್ವಾನಿ ವಕ್ತವ್ಯಾನಿ ಚ ತಾನಿ ವದಾತಿ । ವದತಿ । ವದೇತ್ । ಯೋಽಯಂ ವೈಶ್ವಾನರೋಽಮೃತಸ್ಯ ಗೋಪಾ ಉದಕಸ್ಯ ಗೋಪಾಯಿತಾ ರಕ್ಷಿತಾವೋಽವಸ್ತಾದ್ಭೂಲೋಕೇ ಚರನ್ ಪಾರ್ಥಿವಾಗ್ನಿರೂಪೇಣ ಸಂಚರನ್ ಪರಃ ಪರಸ್ತಾದ್ದಿವ್ಯನ್ಯೇನ ಸೂರ್ಯಾತ್ಮನಾ ಪಶ್ಯನ್ ಸರ್ವಂ ಜಗತ್ಪ್ರಕಾಶಯನ್ ಈಮಿಮಾನಿ ಪರಿ ದೃಶ್ಯಮಾನಾನಿ ಸರ್ವಾಣಿ ಭೂತಾನಿ ಚಿಕೇತತ್ ಜಾನಾತಿ ಸ ಏವೇತಿ ಪೂರ್ವತ್ರ ಸಂಬಂಧಃ । ಯದ್ವಾ । ಸ ಇತ್ ಸ ಏವ ತಂತುಂ ತಂತುಸ್ಥಾನೀಯಾನಿ ಸೂಕ್ಷ್ಮಭೂತಾನಿ ವಿ ಜಾನಾತಿ ನಾನ್ಯಃ ಕಶ್ಚಿತ್ । ತಥೌತುಮೋತುಸ್ಥಾನೀಯಾನಿ ಸ್ಥೂಲಭೂತಾನಿ ಚ ಸ ಏವ ವಿ ಜಾನಾತಿ । ಸ ಏವ ವಕ್ತ್ವಾನಿ । ವಕ್ತವ್ಯಾನ್ಯುಪದೇಷ್ಟವ್ಯಾನೀಮಾನ್ಯೃತುಥಾ ಕಾಲೇ ಕಾಲೇ ಯದಾ ಯದಾ ವಿದ್ಯಾಸಂಪ್ರದಾಯೋಚ್ಛೇದಸ್ತದಾ ತದಾ ವದಾತಿ । ವದೇತ್ । ಕೋಽಸೌ ಯೋ ವಿಜಾನೀಯಾದ್ವದೇಚ್ಚೇತ್ಯತ ಆಹ । ಯೋ ವೈಶ್ವಾನರೋ ವಿಶ್ವನರಾತ್ಮಕಃ ಪರಮಾತ್ಮಾಮೃತಸ್ಯಾಮೃತತ್ವಸ್ಯ ಮೋಕ್ಷಣಸ್ಯ ಗೋಪಾ ರಕ್ಷಿತಾವೋಽವಸ್ತಾತ್ಸಂಸಾರದಶಾಯಾಂ ಚರನ್ ಅಂತಃಕರಣೋಪೇತೋ ಜೀವಾತ್ಮಭಾವೇನ ಸಂಚರನ್ ಪರಃ ಪರಸ್ತಾದವಿದ್ಯಾಯಾ ಊರ್ಧ್ವಂ ವರ್ತಮಾನೇನಾನ್ಯೇನೋಕ್ತವಿಲಕ್ಷಣೇನ ನಿರುಪಾಧಿಕೇನ ಸಚ್ಚಿದಾದಿಲಕ್ಷಣೇನ ರೂಪೇಣ ಪಶ್ಯನ್ ಸರ್ವಂ ಜಗತ್ಪ್ರಕಾಶಯನ್ ಈಮಿಮಾನಿ ಚಿಕೇತತ್ ಜಾನಾತಿ । ತಥಾ ಚ ಪರಮಾತ್ಮಾನಂ ಪ್ರಕೃತ್ಯ ಶ್ರೂಯತೇ । ತಮೇವ ಭಾಂತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ । ಶ್ವೇ. ಉ. ೬-೧೪ । ಇತಿ ॥

ಪ್ರತಿಪದಾರ್ಥ

ಯಃ—ಯಾವ ವೈಶ್ವಾನರಾಗ್ನಿಯು । ಅಮೃತಸ್ಯ—ಉದಕದ । ಗೋಪಾಃ—ರಕ್ಷಕನಾಗಿ । ಅವಃ—ಭೂಲೋಕದಲ್ಲಿ । ಚರನ್—ಪಾರ್ಥಿವಾಗ್ನಿರೂಪದಲ್ಲಿ ಸಂಚರಿಸುತ್ತಾ । ಪರಃ—ದ್ಯುಲೋಕದಲ್ಲಿ । ಅನ್ಯೇನ—ಸೂರ್ಯರೂಪದಲ್ಲಿ । ಪಶ್ಯನ್—ಸಕಲ ಜಗತ್ತನ್ನೂ ವೀಕ್ಷಿಸುತ್ತಾ । ಈಂ—ಪ್ರಕೃತವಾದ ಸಕಲಭೂತಗಳನ್ನೂ । ಚಿಕೇತತ್—ತಿಳಿಯುವನೋ । ಸ ಇತ್—ಅದೇ ವೈಶ್ವಾನರಾಗ್ನಿಯು । ತಂತುಂ—ವಸ್ತ್ರಕ್ಕೆ ತಂತುಗಳೇ ಅವಯವಗಳಾಗಿರುವಂತೆ । ವಿ ಜಾನಾತಿ—ಪೂರ್ಣವಾಗಿ ಅರಿಯುತ್ತಾನೆ । ಸಃ—ಅವನೇ । ಓತುಂ—ಓತುರೂಪ

ವಾದ ಯಜ್ಞಾದಿಗಳನ್ನೂ ಅರಿಯುತ್ತಾನೆ। **ಋತುಥಾ**— ಆಯಾ ಕಾಲಾನುಗುಣವಾಗಿ। **ವಕ್ತ್ವಾನಿ**— ಪಠಿಸಬೇಕಾದ ವಾಕ್ಯಗಳನ್ನು। **ವದಾತಿ**— ಪಠಿಸುತ್ತಾನೆ.

॥ ಭಾವಾರ್ಥ ॥

ಯಾವ ವೈಶ್ವಾನರಾಗ್ನಿಯು ಉದಕದ ರಕ್ಷಕನಾಗಿ ಭೂಲೋಕದಲ್ಲಿ ಪಾರ್ಥಿವಾಗ್ನಿರೂಪದಲ್ಲಿ ಸಂಚರಿಸುತ್ತಾ ದ್ಯುಲೋಕದಲ್ಲಿ ಸೂರ್ಯರೂಪದಲ್ಲಿ ಸಕಲ ಜಗತ್ತನ್ನೂ ವೀಕ್ಷಿಸುತ್ತಾ ಪ್ರಕೃತವಾದ ಸಕಲಭೂತಗಳನ್ನೂ ತಿಳಿಯುವನೋ ಅದೇ ವೈಶ್ವಾನರಾಗ್ನಿಯು ವಸ್ತ್ರಕ್ಕೆ ತಂತುಗಳೇ ಅವಯವಗಳಾಗಿರುವಂತೆ ಯಜ್ಞಾವಯವಗಳಾದ ಸ್ತುತಿ ಶಸ್ತ್ರಗಳನ್ನು ಪೂರ್ಣವಾಗಿ ಅರಿಯುತ್ತಾನೆ. ಅವನೇ ಓತುರೂಪವಾದ ಯಜ್ಞಾದಿಗಳನ್ನೂ ಅರಿಯುತ್ತಾನೆ. ಆಯಾ ಯಜ್ಞ ಕಾಲಾನುಗುಣವಾಗಿ ಪಠಿಸಬೇಕಾದ ವಾಕ್ಯಗಳನ್ನೂ ಪಠಿಸುತ್ತಾನೆ.

## English Translation.

He verily knows the threads of the warp and of the woof, he speaks in due season what is to be said, who comprehends all this (universe) ; who is the protector of ambrosial water, sojourning both above and below, and contemplating (the world) under a different (manifestation).

॥ ಸಂಹಿತಾಪಾಠಃ ॥

ಅಯಂ ಹೋತಾ ಪ್ರಥಮಃ ಪಶ್ಯತೇಮಮಿದಂ ಜ್ಯೋತಿರಮೃತಂ ಮರ್ತ್ಯೇಷು ।
ಅಯಂ ಸ ಜಜ್ಞೇ ಧ್ರುವ ಆ ನಿಷತ್ತೋಽಮರ್ತ್ಯಸ್ತನ್ವಾ೩ ವರ್ಧಮಾನಃ ॥೪॥

॥ ಪದಪಾಠಃ ॥

ಅಯಂ । ಹೋತಾ । ಪ್ರಥಮಃ । ಪಶ್ಯತ । ಇಮಂ । ಇದಂ । ಜ್ಯೋತಿಃ । ಅಮೃತಂ । ಮರ್ತ್ಯೇಷು ।
ಅಯಂ । ಸಃ । ಜಜ್ಞೇ । ಧ್ರುವಃ । ಆ । ನಿಽಸತ್ತಃ । ಅಮರ್ತ್ಯಃ । ತನ್ವಾ । ವರ್ಧಮಾನಃ ॥ ೪ ॥

। ಸಾಯಣಭಾಷ್ಯಂ ।

ಅಯಂ ವೈಶ್ವಾನರೋಽಗ್ನಿಃ ಪ್ರಥಮ ಆದ್ಯೋ ಹೋತಾ । ಮಾನುಷೋ ಹಿ ಹೋತಾ ದ್ವಿತೀಯಃ । ಹೇ ಮನುಷ್ಯಾಸ್ತಮಿಮಂ ಪಶ್ಯತ । ಭಜತೇತ್ಯರ್ಥಃ । ಮರ್ತ್ಯೇಷು ಮರಣಸ್ವಭಾವೇಷು ಶರೀರೇಷ್ವಮೃತಂ ಮರಣರಹಿತಮಿದಂ ವೈಶ್ವಾನರಾಖ್ಯಂ ಜ್ಯೋತಿರ್ಜಾಠರರೂಪೇಣ ವರ್ತತ ಇತ್ಯರ್ಥಃ ।

**ಅಪಿ ಚ ಸೋಽಯಮಗ್ನಿರ್ಧ್ರುವೋ ನಿಶ್ಚಲ ಆ ಸಮಂತಾನ್ನಿಷತ್ತೋ ನಿಷಣ್ಣಃ ಸರ್ವವ್ಯಾಪೀ ಅತ ಏವಾಮರ್ತ್ಯೋ ಮರಣರಹಿತೋಽಪಿ ತನ್ವಾ ಶರೀರೇಣ ಸಂಬಂಧಾತ್ ಜಜ್ಞೇ । ಜಾಯತೇ । ವರ್ಧಮಾನಶ್ಚ ಭವತೀತ್ಯುಪಚರ್ಯತೇ ॥**

॥ ಪ್ರತಿಪದಾರ್ಥ ॥

**ಅಯಂ**— ಈ ವೈಶ್ವಾನರಾಗ್ನಿಯು । **ಪ್ರಥಮಃ ಹೋತಾ**— ಹೋತೃಗಳಲ್ಲೆಲ್ಲಾ ಮೊದಲನೆಯವನು । (ಎಲೈ ಮಾನವರೇ) **ಇಮಂ**— ಈ ವೈಶ್ವಾನರನನ್ನು । **ಪಶ್ಯತ**— ನೋಡಿರಿ । **ಇದಂ ಜ್ಯೋತಿಃ**— ವೈಶ್ವಾನರರೂಪಿಯಾದ ಈ ಜ್ಯೋತಿಯು । **ಮರ್ತ್ಯೇಷು**— ಮಾನವರಲ್ಲಿ । **ಅಮೃತಂ**— ಮರಣರಹಿತವಾದುದು । **ಸಃ ಅಯಂ**- ಅದೇ ಈ ದೇವನು । **ಧ್ರುವಃ**— ನಿಶ್ಚಲನಾಗಿಯೂ । **ಆ ನಿಷತ್ತಃ**— ಸರ್ವತ್ರ ವ್ಯಾಪಕನಾಗಿಯೂ । **ಅಮರ್ತ್ಯಃ**- ಮರಣರಹಿತನಾಗಿಯೂ ಇದ್ದರೂ ಸಹ । **ತನ್ವಾ**— ಶರೀರವನ್ನು ಹೊಂದಿದವನಾಗಿ । **ಜಜ್ಞೇ**— ಉತ್ಪನ್ನನಾಗಿದ್ದಾನೆ । **ವರ್ಧಮಾನಃ**— ವೃದ್ಧಿಯನ್ನೂ ಹೊಂದುತ್ತಾನೆ.

॥ ಭಾವಾರ್ಥ ॥

ಈ ವೈಶ್ವಾನರಾಗ್ನಿಯು ಹೋತೃಗಳಲ್ಲೆಲ್ಲಾ ಮೊದಲನೆಯವನು. ಎಲೈ ಮಾನವರೇ, ಈ ವೈಶ್ವಾನರನನ್ನು ವೈಶ್ವಾನರರೂಪಿಯಾದ ಈ ಜ್ಯೋತಿಯು ಮಾನವರಲ್ಲಿ ಮರಣರಹಿತವಾದುದು. ಅದೇ ಈ ದೇವನು ನಿಶ್ಚಲನಾಗಿಯೂ, ಸರ್ವವ್ಯಾಪಕನಾಗಿಯೂ, ಮರಣರಹಿತನಾಗಿಯೂ ಇದ್ದರೂ ಸಹ ಶರೀರವನ್ನು ಹೊಂದಿ ಉತ್ಪನ್ನನಾಗಿದ್ದಾನೆ. ವೃದ್ಧಿಯನ್ನೂ ಹೊಂದುತ್ತಾನೆ

## English Translation.

This Vaishwanara is the first offerer of burnt-offerings : behold him : this is the light immortal amongst mortals : he has been born in a bodily shape, immovable, all-pervading, immortal, ever increasing.

॥ ಸಂಹಿತಾಪಾಠಃ ॥

ಧ್ರುವಂ ಜ್ಯೋತಿರ್ನಿಹಿತಂ ದೃಶಯೇ ಕಂ ಮನೋ ಜವಿಷ್ಠಂ ಪತಯತ್ಸ್ವಂತಃ ।
ವಿಶ್ವೇ ದೇವಾಃ ಸಮನಸಃ ಸಕೇತಾ ಏಕಂ ಕ್ರತುಮಭಿ ವಿ ಯಂತಿ ಸಾಧು ॥

॥ ಪದಪಾಠಃ ॥

ಧ್ರುವಂ । ಜ್ಯೋತಿಃ । ನಿಽಹಿತಂ । ದೃಶಯೇ । ಕಂ । ಮನಃ । ಜವಿಷ್ಠಂ । ಪತಯತ್ಽಸು । ಅಂತರಿತಿ । ವಿಶ್ವೇ । ದೇವಾಃ । ಸಽಮನಸಃ । ಸಽಕೇತಾಃ । ಏಕಂ । ಕ್ರತುಂ । ಅಭಿ । ವಿ । ಯಂತಿ । ಸಾಧು ॥ ೫ ॥

॥ ಸಾಯಣಭಾಷ್ಯಂ ॥

ಧ್ರುವಂ ನಿಶ್ಚಲಂ ಮನೋ ಮನಸಃ ತಸ್ಮಾದಪಿ ಜವಿಷ್ಠಮತಿಶಯೇನ ವೇಗವತ್ ಈದೃಶಂ ವೈಶ್ವಾನರಾಖ್ಯಂ ಜ್ಯೋತಿಃ ಪತಯತ್ಸು ಗಚ್ಛತ್ಸು ಜಂಗಮೇಷು ಪ್ರಾಣಿಷ್ವಂತರ್ಮಧ್ಯೇ ನಿಹಿತಂ । ಪ್ರಜಾಪತಿನಾ ಸ್ಥಾಪಿತಂ । ಕಿಮರ್ಥಂ । ದೃಶಯೇ ಕಂ । ದರ್ಶನಾರ್ಥಂ । ಕಿಂಚ ವಿಶ್ವೇ ಸರ್ವೇ ದೇವಾಶ್ಚ ಸಮನಸಃ ಸಮಾನಮನಸ್ಕಾಃ ಸಕೇತಾಃ ಸಮಾನಪ್ರಜ್ಞಾಶ್ಚ ಸಂತ ಏಕಂ ಮುಖ್ಯಂ ಗಂತಾರಂ ವಾ ಕ್ರತುಂ ಕರ್ಮಣಾಂ ಕರ್ತಾರಂ ಸಾಧು ಸಮ್ಯಕ್ ಅಭಿ ವಿ ಯಂತಿ । ಆಭಿಮುಖ್ಯೇನ ವಿವಿಧಂ ಪ್ರಾಪ್ನುವಂತಿ । ಸೇವಂತ ಇತ್ಯರ್ಥಃ । ಯದ್ವಾ । ಪತಯತ್ಸು ಗಚ್ಛತ್ಸು ಪ್ರಾಣಿಷ್ವಂತರ್ಮಧ್ಯೇ ಹೃದಯೇ ಮನೋ ಜವಿಷ್ಠಂ ಮನಸೋಽಪ್ಯತಿಶಯೇನ ವೇಗಯುಕ್ತಂ ಧ್ರುವಂ ನಿಶ್ಚಲಂ ನಿರ್ವಿಕಲ್ಪಂ । ತಥಾ ಚ ವಾಜಸನೇಯಕಂ । ಅನೇಜದೇಕಂ ಮನಸೋ ಜವೀಯಃ । ವಾ. ಸಂ. ೪೦-೪ । ಇತಿ । ಜ್ಯೋತಿರ್ಬ್ರಹ್ಮ ಚೈತನ್ಯಂ ನಿಹಿತಂ । ನ ಕೇನಚಿತ್ ಸ್ಥಾಪಿತಂ । ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ । ತೈ. ಆ. ೮-೧ । ಇತಿ ಹಿ ಶ್ರೂಯತೇ । ಕಿಮರ್ಥಂ । ದೃಶಯೇ ದರ್ಶನಾರ್ಥಂ । ಜ್ಞಾನೇನ ಹಿ ಸರ್ವಂ ಜಾನಂತಿ । ಅಪಿ ಚ । ದೀವ್ಯಂತೀತಿ ದೇವಾ ಇಂದ್ರಿಯಾಣಿ । ವಿಶ್ವೇ ಸರ್ವೇ ದೇವಾ ಸರ್ವಾಣೀಂದ್ರಿಯಾಣಿ ಚಕ್ಷುರಾದ್ಯಾಃ ಸಮನಸೋ ಮನಸಾ ಸಹ ವರ್ತಮಾನಾಃ ಸಕೇತಾಃ ಸತೇಜಸ್ಕಾಃ ಸಂತ ಏಕಮದ್ವಿತೀಯಂ ಕ್ರತುಂ ಸೃಷ್ಟ್ಯಾದೀನಾಂ ಕರ್ಮಣಾಂ ಕರ್ತಾರಂ ವಿಶ್ವಾನರಾತ್ಮಕಂ ಪರಮಾತ್ಮಾನಮಭಿಲಕ್ಷ್ಯ ಸಾಧು ಸಮ್ಯಕ್ ವಿ ಯಂತಿ । ವಿವಿಧಂ ಗಚ್ಛಂತಿ । ದೇವಾ ಏವ ವೇಮಮಭಿ ವಿ ಯಂತಿ । ಆಭಿಮುಖ್ಯೇನ ವಿವಿಧಮುಪಯಂತಿ । ಉಪಾಸತ ಇತ್ಯರ್ಥಃ । ತಥಾ ಚ ಶ್ರೂಯತೇ । ತದ್ದೇವಾ ಜ್ಯೋತಿಷಾಂ ಜ್ಯೋತಿರಾಯುರ್ಹೋಪಾಸತೇಽಮೃತಂ । ಶ. ಬ್ರಾ. ೧೪-೭-೨-೨೦ । ಇತಿ ॥

॥ ಪ್ರತಿಪದಾರ್ಥ ॥

**ಧ್ರುವಂ**—ನಿಶ್ಚಲವಾದುದೂ । **ಮನಃ**—ಮನಸ್ಸಿಗಿಂತಲೂ । **ಜವಿಷ್ಠಂ**—ಅತ್ಯಂತ ವೇಗಶಾಲಿಯಾದುದೂ ಆದ । **ಜ್ಯೋತಿಃ**—ವೈಶ್ವಾನರನ ಜ್ಯೋತಿಯು । **ಪತಯತ್ಸು**—ಜಂಗಮಾತ್ಮಕವಾದ ಪ್ರಾಣಿಗಳಲ್ಲಿ । **ಅಂತಃ**—ನಡುವೆ । **ದೃಶಯೇ ಕಂ**—ದರ್ಶನಾರ್ಥವಾಗಿ । **ನಿಹಿತಂ**—(ಪ್ರಜಾಪತಿಯಿಂದ) ಸ್ಥಾಪಿತವಾಗಿದೆ । **ವಿಶ್ವೇ**—ಸಮಸ್ತವಾದ । **ದೇವಾಃ**—ದೇವತೆಗಳೆಲ್ಲರೂ । **ಸಮನಸಃ**—ಒಂದೇ ಮನಸ್ಸುಳ್ಳವರಾಗಿಯೂ । **ಸಕೇತಾಃ**—ಒಂದೇ ವಿಧವಾದ ಪ್ರಜ್ಞೆಯುಳ್ಳವರಾಗಿಯೂ । **ಏಕಂ**—ಮುಖ್ಯನೂ । **ಕ್ರತುಂ**—ಕರ್ಮಕರ್ತನೂ ಆದ ವೈಶ್ವಾನರನನ್ನು । **ಸಾಧು**—ಉತ್ತಮವಾಗಿ । **ಅಭಿ ವಿ ಯಂತಿ**—ಸಮೀಪಿಸಿ ಸೇವಿಸುತ್ತಾರೆ.

ಭಾವಾರ್ಥ ॥

ನಿಶ್ಚಲವಾದುದೂ, ಮನಸ್ಸಿಗಿಂತಲೂ ಅತ್ಯಂತ ವೇಗಶಾಲಿಯಾದುದೂ ಆದ ವೈಶ್ವಾನರನ ಜ್ಯೋತಿಯು ಜಂಗಮಾತ್ಮಕವಾದ ಪ್ರಾಣಿಗಳ ನಡುವೆ ದರ್ಶನಾರ್ಥವಾಗಿಯೂ, ಮಾರ್ಗದರ್ಶಕವಾಗಿಯೂ ಪ್ರಜಾಪತಿಯಿಂದ ಸ್ಥಾಪಿತವಾಗಿದೆ. ಸಮಸ್ತವಾದ ದೇವತೆಗಳೆಲ್ಲರೂ ಒಂದೇ ಮನಸ್ಸುಳ್ಳವರಾಗಿಯೂ, ಒಂದೇ ವಿಧವಾಗ ಪ್ರಜ್ಞೆಯುಳ್ಳವರಾಗಿಯೂ ಮುಖ್ಯನೂ ಕರ್ಮಕರ್ತನೂ ಆದ ವೈಶ್ವಾನರನನ್ನು ಸಮೀಪಿಸಿ ಉತ್ತಮವಾಗಿ ಸೇವಿಸುತ್ತಾರೆ.

## English Translation

A steady light, swifter than throught, stationed among moving beings to show (the way) to happiness : all the gods being of one mind, and of like wisdom, proceed respectfully to the presence of the one (chief) agent, (Vaishwanara).

॥ ಸಂಹಿತಾಪಾಠಃ ॥

ವಿ ಮೇ ಕರ್ಣಾ ಪತಯತೋ ವಿ ಚಕ್ಷುರ್ವೀ೩ದಂ ಜ್ಯೋತಿರ್ಹೃದಯ ಆಹಿತಂ ಯತ್ ।

ವಿಮೇ ಮನಶ್ಚರತಿ ದೂರಆಧೀಃ ಕಿಂ ಸ್ವಿದ್ವಕ್ಷ್ಯಾಮಿ ಕಿಮು ನೂ ಮನಿಷ್ಯೇ ॥

॥ ಪದಪಾಠಃ ॥

ವಿ । ಮೇ । ಕರ್ಣಾ । ಪತಯತಃ । ವಿ । ಚಕ್ಷುಃ । ವಿ । ಇದಂ । ಜ್ಯೋತಿಃ । ಹೃದಯೇ । ಆऽಹಿತಂ । ಯತ್ ।

ವಿ । ಮೇ । ಮನಃ । ಚರತಿ । ದೂರೇऽಆಧೀಃ । ಕಿಂ । ಸ್ವಿತ್ । ವಕ್ಷ್ಯಾಮಿ । ಕಿಂ । ಊಂ ಇತಿ । ನು । ಮನಿಷ್ಯೇ ॥ ೬ ॥

॥ ಸಾಯಣಭಾಷ್ಯಂ ॥

ವೈಶ್ವಾನರಂ ಶ್ರೋತುಕಾಮಸ್ಯ ಮೇ ಮಮ ಕರ್ಣಾ ಕರ್ಣೌ ವಿ ಪತಯತಃ । ವಿವಿಧಂ ಗಚ್ಛತಃ । ಶ್ರೋತವ್ಯಾನಾಂ ತದೀಯಗುಣಾನಾಂ ಬಹುತ್ವಾತ್ । ತಥಾ ವೈಶ್ವಾನರಂ ದಿದೃಕ್ಷಮಾಣಸ್ಯ ಮಮ ಚಕ್ಷುರಿಂದ್ರಿಯಂ ವಿ ಪತಯತಿ । ವಿವಿಧಂ ಗಚ್ಛತಿ । ದ್ರಷ್ಟವ್ಯಾನಾಂ ತದೀಯರೂಪಾಣಾಂ ಬಹುತ್ವಾತ್ । ತಥಾ ಜ್ಯೋತಿಃ ಪ್ರಕಾಶಕಂ ಹೃದಯೇ ಹೃದಯಪುಂಡರೀಕ ಆಹಿತಂ ನಿಹಿತಂ ಯದ್ಬುದ್ಧ್ಯಾಖ್ಯಂ ತತ್ತ್ವಮಿದಮಪಿ ವಿ ಪತಯತಿ । ವಿವಿಧಂ ಗಚ್ಛತಿ ವೈಶ್ವಾನರಾತ್ಮಾನಂ ಜ್ಞಾತುಂ । ಅಪಿ ಚ ದೂರಆಧೀಃ । ದೂರೇ ವಿಪ್ರಕೃಷ್ಟೇ ವಿಷಯ ಆಧೀರಾಧ್ಯಾನಂ ಯಸ್ಯ ತಾದೃಶಂ ॥ ಛಾಂದಸೋ ಲಿಂಗವ್ಯತ್ಯಯಃ ॥ ಮೇ ಮದೀಯಂ ಮನಶ್ಚ ವಿ ಚರತಿ । ವಿವಿಧಂ ಪ್ರವರ್ತತೇ । ಏವಮಹಮಹಮಿಕಯಾ ಸರ್ವೇಷ್ವಿಂದ್ರಿಯೇಷು ಪ್ರವೃತ್ತೇಷು ಕಿಂ ಸ್ವಿದಹಂ ವೈಶ್ವಾನರಸ್ಯ ರೂಪಮಿತಿ ವಕ್ಷ್ಯಾಮಿ । ಕಿಮು ನು ಕಮು ಖಲು ಸಂಪ್ರತಿ ಮನಿಷ್ಯೇ । ಮನಸಾ ಪ್ರಪತ್ಸ್ಯೇ । ವೈಶ್ವಾನರಸ್ಯ ಗುಣಾನಾಮನಂತತ್ವಾತ್ ಮಂದಪ್ರಜ್ಞೇನ ಮಯಾ ಜ್ಞಾತುಂ ನ ಶಕ್ಯತ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಮೇ**—ನನ್ನ । **ಕರ್ಣಾ**—ಕಿವಿಗಳು (ಶ್ರೋತ್ರೇಂದ್ರಿಯಗಳು) । **ವಿ ಪತಯತಃ**—(ವೈಶ್ವಾನರನ ಗುಣಗಳನ್ನು ಕೇಳಲು) ಸುತ್ತಲೂ ಪ್ರಸರಿಸುತ್ತವೆ । **ಚಕ್ಷುಃ**—ಕಣ್ಣುಗಳು । **ವಿ**—(ಅವನ ದಿವ್ಯ ಸ್ವರೂಪವನ್ನು ನೋಡಲು) ಪ್ರಸರಿಸುತ್ತವೆ । **ಹೃದಯೇ**—ಹೃತ್ಪುಂಡರೀಕದಲ್ಲಿ । **ಆಹಿತಂ**—ಸ್ಥಾಪಿತವಾಗಿರುವ । **ಯತ್ ಜ್ಯೋತಿಃ**—ಯಾವ ಪ್ರಕಾಶವಾದ ಬುದ್ಧಿತತ್ವವುಂಟೋ । **ಇದಂ**—ಆ ಬುದ್ಧಿಯೂ ಸಹ । **ವಿ**—(ಅವನನ್ನು ತಿಳಿಯಲು) ಸುತ್ತಲು ವ್ಯಾಪಿಸುತ್ತದೆ । **ದೂರಆಧೀಃ**—ದೂರದಲ್ಲಿರುವ ವಿಷಯವನ್ನೂ ಗ್ರಹಿಸಬಲ್ಲ । **ಮೇ**—ನನ್ನ । **ಮನಃ**—ಮನಸ್ಸು । **ವಿ ಚರತಿ**—ಎಲ್ಲೆಲ್ಲೂ ಸಂಚರಿಸುತ್ತದೆ । **ಕಿಂ ಸ್ವಿತ್ ವಕ್ಷ್ಯಾಮಿ**—ವೈಶ್ವಾನರನ ಯಾವ ಗುಣಗಳನ್ನು ಪ್ರಶಂಸಿಸಲಿ ? । **ಕಿಂ ನು ಮನಿಷ್ಯೇ**—ಯಾವ ಸ್ವರೂಪವನ್ನು ತಿಳಿಯಲಿ ?

॥ ಭಾವಾರ್ಥ ॥

ವೈಶ್ವಾನರನ ಅನಂತಗುಣಗಳನ್ನು ಕೇಳಲು ನನ್ನ ಕಿವಿಗಳು ಸುತ್ತಲೂ ಪ್ರಸರಿಸುತ್ತವೆ. ಅವನ ಅನಂತ ಸ್ವರೂಪವನ್ನು ನೋಡಲು ನನ್ನ ಚಕ್ಷುರಿಂದ್ರಿಯಗಳು ಸುತ್ತಲೂ ಹರಡುತ್ತವೆ. ಹೃತ್ಪುಂಡರೀಕದಲ್ಲಿ ನಿಹಿತವಾಗಿರುವ ನನ್ನ ಬುದ್ಧಿತತ್ವವೂ ಅವನನ್ನು ತಿಳಿಯಲು ತವಕಪಡುತ್ತಿದೆ. ದೂರದಲ್ಲಿರುವ ವಿಷಯವನ್ನೂ ಗ್ರಹಿಸಬಲ್ಲ ನನ್ನ ಮನಸ್ಸು ಎಲ್ಲೆಲ್ಲೂ ಸಂಚರಿಸುತ್ತದೆ. ವೈಶ್ವಾನರನ ಅನಂತಗುಣಗಳಲ್ಲಿ ಯಾವುದನ್ನು ಪ್ರಶಂಸಿಸಲಿ ? ಅನಂತ ಸ್ವರೂಪಗಳಲ್ಲಿ ಯಾವುದನ್ನು ಅರಿಯಲಿ ?

## English Translation.

My ears are turned (to hear him), my eyes (to behold hlm) ; this light that in placed in the heart (seeks to know him), my mind, the receptacle of distant (objects), hastens (towards him) : what shall I declare (him) ? how shall I comprehend him ?

॥ ಸಂಹಿತಾಪಾಠಃ ॥

ವಿಶ್ವೇ ದೇವಾ ಅನಮಸ್ಯನ್ಭಿಯಾನಾಸ್ತ್ವಾಮಗ್ನೇ ತಮಸಿ ತಸ್ಥಿವಾಂಸಂ ।
ವೈಶ್ವಾನರೋಽವತೂತಯೇ ನೋಽಮರ್ತ್ಯೋಽವತೂತಯೇ ನಃ ॥ ೭ ॥

॥ ಪದಪಾಠಃ ॥

ವಿಶ್ವೇ । ದೇವಾಃ । ಅನಮಸ್ಯನ್ । ಭಿಯಾನಾಃ । ತ್ವಾಂ । ಅಗ್ನೇ । ತಮಸಿ । ತಸ್ಥಿಽವಾಂಸಂ ।
ವೈಶ್ವಾನರಃ । ಅವತು । ಊತಯೇ । ನಃ । ಅಮರ್ತ್ಯಃ । ಅವತು । ಊತಯೇ । ನಃ ॥ ೭ ॥

॥ ಸಾಯಣಭಾಷ್ಯಂ ॥

ಹೇ ವೈಶ್ವಾನರ ತಮಸ್ಯಂಧಕಾರೇ ತಸ್ಥಿವಾಂಸಂ ಸ್ಥಿತವಂತಂ ತ್ವಾಂ ವಿಶ್ವೇ ಸರ್ವೇ ದೇವಾ ಅನಮಸ್ಯನ್। ನಮಸ್ಕುರ್ವಂತಿ । ಕುತೋ ಹೇತೋಃ । ಭಿಯಾನಾ ಅಂಧಕಾರಾದ್ಭೀತಾಃ । ತಾದೃಶೋಽಮರ್ತ್ಯೋ ಮರಣರಹಿತೋ ವೈಶ್ವಾನರೋಽಗ್ನಿರ್ನೋಽಸ್ಮಾನೂತಯೆ ಊತ್ಯಾ ರಕ್ಷಣೇನಾವತು । ರಕ್ಷತು । ಪುನರುಕ್ತಿರಾದರಾರ್ಥಾ ॥

॥ ಪ್ರತಿಪದಾರ್ಥ ॥

(ಎಲೈ ವೈಶ್ವಾನರನೇ) **ತಮಸಿ**—ಅಂಧಕಾರದಲ್ಲಿ । **ತಸ್ಥಿವಾಂಸಂ**—ಅಡಗಿರುವ । **ತ್ವಾಂ**—ನಿನಗೆ । **ವಿಶ್ವೇ ದೇವಾಃ**—ಸಕಲ ದೇವತೆಗಳೂ । **ಭಿಯಾನಾಃ**—ಬೆದರಿದವರಾಗಿ । **ಅನಮಸ್ಯನ್**—ನಮಸ್ಕರಿಸುತ್ತಾರೆ । **ವೈಶ್ವಾನರಃ**—ಅಂತಹ ವೈಶ್ವಾನರನು । **ನಃ**—ನಮ್ಮನ್ನು । **ಊತಯೇ**—ರಕ್ಷಣೆಯೊಡನೆ । **ಅವತು**—ರಕ್ಷಿಸಲಿ । **ಅಮರ್ತ್ಯಃ**—ಮರಣಧರ್ಮರಹಿತನಾದ ಅಗ್ನಿಯು । **ಊತಯೇ**—ರಕ್ಷಣೆಯೊಡನೆ । **ಅವತು**—ರಕ್ಷಿಸಲಿ.

॥ ಭಾವಾರ್ಥ ॥

ಎಲೈ ವೈಶ್ವಾನರನೇ ಅಂಧಕಾರದಲ್ಲಿ ಅಡಗಿರುವ ನಿನಗೆ ಸಕಲದೇವತೆಗಳೂ ಬೆದರಿದವರಾಗಿ ನಮಸ್ಕರಿಸುತ್ತಾರೆ. ಮರಣಧರ್ಮರಹಿತನಾದ ಅಂತಹ ವೈಶ್ವಾನರನು ನಮ್ಮನ್ನು ಅವನ ರಕ್ಷಣೆಗಳೊಡನೆ ರಕ್ಷಿಸಲಿ.

## English Translation.

All the gods, alarmed, venerate you, Agni, abiding in darkness : may Vaishwanara preserve us with his protection : may the immortal Agni preserve us with his protection.

# ಹತ್ತನೆಯ ಸೂಕ್ತವು

॥ ಸಾಯಣಭಾಷ್ಯಂ ॥

ಪುರೋ ವ ಇತಿ ಸಪ್ತರ್ಚಂ ದಶಮಂ ಸೂಕ್ತಂ ಭರದ್ವಾಜಸ್ಯಾರ್ಷಮಾಗ್ನೇಯಂ । ಸಪ್ತಮೀ ವಿಂಶಿಕಾ ದ್ವಿಪದಾ ವಿರಾಟ್ ಶಿಷ್ಟಾಸ್ತ್ರಿಷ್ಟುಭಃ । ತಥಾ ಚಾನುಕ್ರಾಂತಂ । ಪುರೋ ವೋ ದ್ವಿಪದಾಂತಂ ॥ ಪ್ರಾತರನುವಾಕ ಅಗ್ನೇಯೇ ಕ್ರತೌ ತ್ರೈಷ್ಟುಭೇ ಛಂದಸೀದಮಾದೀನಿ ಚತ್ವಾರಿ ಸೂಕ್ತಾನಿ । ಸೂತ್ರಿತಂ ಚ । ಪುರೋ ವೋ ಮಂದ್ರಮಿತಿ ಚತ್ವಾರಿ ತಂ ಸುಪ್ರತೀಕಮಿತಿ ಷಟ್ । ಆ. ೪-೧೩ । ಇತಿ ॥

ಅನುವಾದವು—**ಪುರೋ ವಃ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹತ್ತನೆಯ ಸೂಕ್ತವು. ಇವರಲ್ಲಿ ಏಳು ಋಕ್ಕುಗಳಿರುವುವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು; ಅಗ್ನಿಯು ದೇವತೆಯು ; ಈ ಸೂಕ್ತದ

ಏಳನೆಯ ಋಕ್ಕು ದ್ವಿಪದಾ ವಿರಾಟ್‌ಛಂದಸ್ಕವು; ಉಳಿದ ಋಕ್ಕುಗಳು ತ್ರಿಷ್ಟುಪ್‌ಛಂದಸ್ಕವು. ಅನುಕ್ರಮಣಿಕೆಯಲ್ಲಿ **ಪುರೋ ವೋ ದ್ವಿಪದಾಂತಂ** ಎಂದು ಹೇಳಿರುವುದು ಪ್ರಾತರನುವಾಕಮಂತ್ರಪಠನಕಾಲದಲ್ಲಿ ಆಗ್ನೇಯಕ್ರತು ಸಂಬಂಧವಾದ ತ್ರಿಷ್ಟುಪ್‌ಛಂದಸ್ಸಿನ ಮಂತ್ರಗಳಿಗಾಗಿ ಈ ಸೂಕ್ತದಿಂದ ಮುಂದಿನ ನಾಲ್ಕು ಸೂಕ್ತಗಳ ವಿನಿಯೋಗ ವಿರುವುದೆಂದು ಆಶ್ವಲಾಯನಶ್ರೌತಸೂತ್ರದ— **ಪುರೋ ವೋ ಮಂದ್ರಮಿತಿ ಚತ್ವಾರಿ ತಂ ಸುಪ್ರತೀಕಮಿತಿ ಷಟ್** ಎಂಬ ಸೂತ್ರದಿಂದ (ಆ. ೪-೧೩) ವಿವೃತವಾಗಿರುವುದು.

## ಸೂಕ್ತ—೧೦

ಮಂಡಲ—೬ ॥ ಅನುವಾಕ—೧ ॥ ಸೂಕ್ತ—೧೦ ॥
ಅಷ್ಟಕ—೪ ॥ ಅಧ್ಯಾಯ—೫ । ವರ್ಗ ೧೨ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ ೭ ॥
॥ ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ।
॥ ದೇವತಾ - ಅಗ್ನಿಃ ॥
॥ ಛಂದಃ—೧-೬. ತ್ರಿಷ್ಟುಪ್ । ೭. ದ್ವಿಪದಾ ॥

॥ ಸಂಹಿತಾಪಾಠಃ ॥

ಪುರೋ ವೋ ಮಂದ್ರಂ ದಿವ್ಯಂ ಸುವೃಕ್ತಿಂ ಪ್ರಯತಿ ಯಜ್ಞೇ ಅಗ್ನಿಮಧ್ವರೇ
ದಧಿಧ್ವಂ ।
ಪುರ ಉಕ್ಥೇಭಿಃ ಸ ಹಿ ನೋ ವಿಭಾವಾ ಸ್ವಧ್ವರಾ ಕರತಿ ಜಾತವೇದಾಃ ॥೧॥

॥ ಪದಪಾಠಃ ॥

ಪುರಃ । ವಃ । ಮಂದ್ರಂ । ದಿವ್ಯಂ । ಸುಽವೃಕ್ತಿಂ । ಪ್ರಽಯತಿ । ಯಜ್ಞೇ । ಅಗ್ನಿಂ । ಅಧ್ವರೇ । ದಧಿಧ್ವಂ ।
ಪುರಃ । ಉಕ್ಥೇಭಿಃ । ಸಃ । ಹಿ । ನಃ । ವಿಭಾಽವಾ । ಸುಽಅಧ್ವರಾ । ಕರತಿ । ಜಾತಽವೇದಾಃ ॥ ೧ ॥

॥ ಸಾಯಣಭಾಷ್ಯಂ ॥

ಹೇ ಋತ್ವಿಗ್ಯಜಮಾನಾ ವೋ ಯೂಯಂ ಮಂದ್ರಂ ಮೋದನಂ ಸ್ತುತ್ಯಂ ವಾ ದಿವ್ಯಂ ದಿವಿ ಭವಂಸುವೃಕ್ತಿಂ ಸುಷ್ಠು ದೋಷೈರ್ವರ್ಜಿತಂ ಸುಖೇನಾವರ್ಜನೀಯಂ ವಾ ಏವಂಗುಣಮಗ್ನಿಂ ಪ್ರಯತಿ ಪ್ರಗಚ್ಛತಿ.ಪ್ರವರ್ತಮಾನೇಽಧ್ವರೇ ರಕ್ಷಃಪ್ರಭೃತಿಭಿರಹಿಂಸ್ಯೇ ಹಿಂಸಾಪ್ರತ್ಯವಾಯರಹಿತೇ ವಾಸ್ಮಿನ್ಯಜ್ಞೇ ಪುರೋ ದಧಿಧ್ವಂ । ಪುರಸ್ತಾದಾಹವನೀಯರೂಪೇಣ ಧಾರಯತ । ಯದ್ವಾ । ಪುರೋಧಸಂ ಕುರುತ । ಉಕ್ಥೇಭಿಃ ಸ್ತುತಶಸ್ತ್ರೈಶ್ಚ ಪುರೋ ದಧಿಧ್ವಂ । ವಿಭಾವಾ ವಿಶೇಷೇಣ ದೀಪ್ಯಮಾನೋ ಜಾತವೇದಾ ಜಾತಾನಾಂ ವೇದಿತಾ ಸೋಽಗ್ನಿರ್ಹಿ ಯಸ್ಮಾತ್ ನೋಽಸ್ಮಾನ್ ಸ್ವಧ್ವರಾ ಶೋಭನಯಾಗಾನ್ ಕರತಿ ಕರೋತಿ ತಸ್ಮಾತ್ಪುರೋ ದಧಿಧ್ವಮಿತ್ಯನ್ವಯಃ ॥

॥ ಪ್ರತಿಪದಾರ್ಥ ॥

(ಎಲೈ ಋತ್ವಿಗ್ಯಜಮಾನರೇ) ವಃ—ನೀವು । ಮಂದ್ರಂ—ಸ್ತುತ್ಯನೂ । ದಿವ್ಯಂ—ದ್ಯುಲೋಕೋತ್ಪನ್ನನೂ । ಸುವೃಕ್ತಿಂ—ದೋಷರಹಿತನೂ ಆದ । ಅಗ್ನಿಂ—ಅಗ್ನಿಯನ್ನು । ಪ್ರಯತಿ—ಪ್ರಕೃತದಲ್ಲಿ ನೆರವೇರುವುದೂ । ಅಧ್ವರೇ—ಹಿಂಸಾರಹಿತವಾದುದೂ ಆದ । ಯಜ್ಞೇ—ಯಜ್ಞದಲ್ಲಿ । ಪುರಃ—ಮುಂಭಾಗದಲ್ಲಿ । ದಧಿಧ್ವಂ—ಧರಿಸಿ ಸ್ಥಾಪಿಸಿರಿ । ಉಕ್ಥೇಭಿಃ—ಸ್ತುತಿಶಸ್ತ್ರಮಂತ್ರಗಳೊಡನೆ । ಪುರಃ—ಮುಂಭಾಗದಲ್ಲಿ (ಸ್ಥಾಪಿಸಿರಿ) । ಸ ಹಿ—ಅದೇ ಅಗ್ನಿಯು । ನಃ—ನಮ್ಮನ್ನು । ಸ್ವಧ್ವರಾ—ಶ್ರೇಷ್ಠವಾದ ಯಜ್ಞವಂತರನ್ನಾಗಿ । ಕರತಿ—ಮಾಡುತ್ತಾನೆ.

॥ ಭಾವಾರ್ಥ ॥

ಎಲೈ ಋತ್ವಿಗ್ಯಜಮಾನರೇ, ನೀವು ಸ್ತುತ್ಯನೂ, ದ್ಯುಲೋಕೋತ್ಪನ್ನನೂ, ದೋಷರಹಿತನೂ ಆದ ಅಗ್ನಿಯನ್ನು ಪ್ರಕೃತದಲ್ಲಿ ನೆರವೇರುವುದೂ ಹಿಂಸಾರಹಿತವಾದುದೂ ಆದ ಯಜ್ಞದಲ್ಲಿ ಸ್ತುತಿಶಸ್ತ್ರಮಂತ್ರಗಳೊಡನೆ ನಿಮ್ಮ ಮುಂಭಾಗದಲ್ಲಿ ಸ್ಥಾಪಿಸಿರಿ. ಅದೇ ಅಗ್ನಿಯು ನಮ್ಮನ್ನು ಶ್ರೇಷ್ಠವಾದ ಯಜ್ಞವಂತರನ್ನಾಗಿ ಮಾಡುತ್ತಾನೆ.

English Translation.

Place before you at progressive, uninterrupted sacrifice, the divine, adorable, pefect Agni, with prayers ; for he, the resplandent Jatavedas, makes us prosperous in sacred rites.

॥ ಸಂಹಿತಾಪಾಠಃ ॥

ತಮು ದ್ಯುಮಃ ಪುರ್ವಣೀಕ ಹೋತರಗ್ನೇ ಅಗ್ನಿಭಿರ್ಮನುಷ ಇಧಾನಃ ।
ಸ್ತೋಮಂ ಯಮಸ್ಮೈ ಮಮತೇವ ಶೂಷಂ ಘೃತಂ ನ ಶುಚಿ ಮತಯಃ ಪವಂತೇ ॥ ೨ ॥

॥ ಪದಪಾಠಃ ॥

ತಂ । ಊಂ ಇತಿ । ದ್ಯುಽಮಃ । ಪುರುಽಅನೀಕ । ಹೋತಃ । ಅಗ್ನೇ । ಅಗ್ನಿಽಭಿಃ । ಮನುಷಃ । ಇಧಾನಃ ।
ಸ್ತೋಮಂ । ಯಂ । ಅಸ್ಮೈ । ಮಮತಾಽಇವ । ಶೂಷಂ । ಘೃತಂ । ನ । ಶುಚಿ । ಮತಯಃ । ಪವಂತೇ ॥

॥ ಸಾಯಣಭಾಷ್ಯಂ ॥

ಹೇ ದ್ಯುಮೋ ದೀಪ್ತಿಮನ್ ಪುರ್ವಣೀಕ ಬಹುಜ್ವಾಲ ಹೋತರ್ದೇವಾನಾಮಾಹ್ವಾತರಗ್ನೇ ಅಗ್ನಿಭಿಸ್ತ್ವಾವಯವಭೂತೈರನ್ಯೈರಗ್ನಿಭಿಃ ಸಾರ್ಧಮಿಧಾನಃ ಸಮಿಧ್ಯಮಾನೋ ದೀಪ್ತಃ ಸನ್ ಮನುಷೋ ಮನುಷ್ಯಸ್ಯ ಸ್ತೋತುಸ್ತಮು ತಂ ಸ್ತೋಮಂ ಶೃಣ್ವಿತಿ ಶೇಷಃ । ಉ ಇತಿ ಪಾದಪೂರಣಂ । ಯಂ ಸ್ತೋಮಂ ಸ್ತೋತ್ರಂ ಶೂಷಂ ಸುಖಕರಂ ಘೃತಂ ನ ಪವಿತ್ರಾಭ್ಯಾಮುತ್ಪೂತಂ ಘೃತಮಿವ ಶುಚಿ ಶುದ್ಧಮಸ್ಮಾ ಅಗ್ನಯೇ ಮತಯೋ ಮಂತಾರಃ ಸ್ತೋತಾರೋ ಮಮತೇವ । ಮಮತಾ ನಾಮ ಬೃಹ-ವಾದಿನೀ ದೀರ್ಘತಮಸೋ ಮಾತಾ । ಸೇವ ಪವಂತೇ ಪುನಂತಿ ಸಂಸ್ಕುರ್ವಂತಿ । ದೋಷವರ್ಜಿತಮು-ಚ್ಚಾರಯಂತೀತ್ಯರ್ಥಃ । ತಂ ಸ್ತೋಮಮಿತ್ಯನ್ವಯಃ ॥

॥ ಪ್ರತಿಪದಾರ್ಥ ॥

**ದ್ಯುಮಃ**— ಪ್ರಭಾಯುತನೂ । **ಪುರ್ವಣೀಕ**— ಅನೇಕ ಜ್ವಾಲೆಗಳುಳ್ಳವನೂ । **ಹೋತಃ**— ದೇವತೆಗಳನ್ನು ಯಜ್ಞಕ್ಕೆ ಕರೆಯುವವನೂ ಆದ । **ಅಗ್ನೇ** ಎಲೈ ಅಗ್ನಿಯೇ । **ಅಗ್ನಿಭಿಃ**— ನಿನ್ನ ಅವಯವಗಳಾದ ಇತರ ಅಗ್ನಿಗಳೊಡನೆ । **ಇಧಾನಃ**— ಪ್ರಜ್ವಲಿತನಾಗಿ । **ಶೂಷಂ**— ಸುಖಕರವಾದುದೂ । **ಘೃತಂ ನ**— ಶುದ್ಧವಾದುದೂ ಆದ ಘೃತದಂತೆ । **ಶುಚಿ**— ಪರಿಶುದ್ಧವಾದ । **ಯಂ ಸ್ತೋಮಂ**— ಯಾವ ಸ್ತೋತ್ರವನ್ನು । **ಮತಯಃ**— ಸ್ತೋತೃಗಳು । **ಅಸ್ಮೈ**— ಈ ಅಗ್ನಿಯನ್ನುದ್ದೇಶಿಸಿ । **ಮಮತಾ ಇವ**— ಮಮತೆಯೆಂಬ ಸ್ತ್ರೀಯು ಅರ್ಪಿಸಿದಂತೆ । **ಪವಂತೇ**— ಪರಿಶುದ್ಧವಾಗಿ ಅರ್ಪಿಸುವರೋ । **ಮನುಷಃ**— ಮಾನವನ । **ತಮು**— ಅದೇ ಸ್ತೋತ್ರವನ್ನು (ಕೇಳು)

॥ ಭಾವಾರ್ಥ ॥

ಪ್ರಭಾಯುತನೂ ಅನೇಕ ಜ್ವಾಲೆಗಳುಳ್ಳವನೂ ದೇವತೆಗಳನ್ನು ಯಜ್ಞಕ್ಕೆ ಕರೆಯುವವನೂ ಆದ ಎಲೈ ಅಗ್ನಿಯೇ, ನಿನ್ನ ಅವಯವಗಳಾದ ಇತರ ಅಗ್ನಿಗಳೊಡನೆ ನೀನು ಪ್ರಜ್ವಲಿತನಾಗಿ ಸುಖಕರವಾದುದೂ, ಶುದ್ಧವಾದುದೂ ಆದ ಘೃತದಂತೆ ಪರಿಶುದ್ಧವಾದ ಯಾವ ಸ್ತೋತ್ರವನ್ನು ಮಾನವರಾದ ಈ ಸ್ತೋತೃಗಳು ಅಗ್ನಿಯನ್ನುದ್ದೇಶಿಸಿ ಮಮತೆಯೆಂಬ ಸ್ತ್ರೀಯು ಅರ್ಪಿಸಿದಂತೆ ಪರಿಶುದ್ಧವಾಗಿ ಅರ್ಪಿಸುವರೋ ಅದೇ ಸ್ತೋತ್ರವನ್ನು ಕೇಳು.

## English Translation.

Brilliant, may-rayed Agni, invoker of the gods, kindled with many fires, (hear) this (praise) of men which delightful praise, pure as the clarified butter (that has been filtered) his worshippers offer unto him as Mamata (formerly offered it).

॥ ಸಂಹಿತಾಪಾಠಃ ॥

ಪೀಪಾಯ ಸ ಶ್ರವಸಾ ಮರ್ತ್ಯೇಷು ಯೋ ಅಗ್ನಯೇ ದದಾಶ ವಿಪ್ರ ಉಕ್ಥೈಃ ।
ಚಿತ್ರಾಭಿಸ್ತಮೂತಿಭಿಶ್ಚಿತ್ರಶೋಚಿರ್ವ್ರಜಸ್ಯ ಸಾತಾ ಗೋಮತೋ ದಧಾತಿ ॥

॥ ಪದಪಾಠಃ ॥

ಪೀಪಾಯ । ಸಃ । ಶ್ರವಸಾ । ಮರ್ತ್ಯೇಷು । ಯಃ । ಅಗ್ನಯೇ । ದದಾಶ । ವಿಪ್ರಃ । ಉಕ್ಥೈಃ ।
ಚಿತ್ರಾಭಿಃ । ತಂ । ಊತಿಽಭಿಃ । ಚಿತ್ರಽಶೋಚಿಃ । ವ್ರಜಸ್ಯ । ಸಾತಾ । ಗೋಽಮತಃ । ದಧಾತಿ ॥ ೩ ॥

॥ ಸಾಯಣಭಾಷ್ಯಂ ॥

ಸ ಯಜಮಾನೋ ಮರ್ತ್ಯೇಷು ಮನುಷ್ಯೇಷು ಮಧ್ಯೇ ಶ್ರವಸಾನ್ನೇನ ಪೀಪಾಯ ವರ್ಧತೇ ವಿಪ್ರೋ ಮೇಧಾವೀ ಯೋ ಯಜಮಾನ ಉಕ್ಥೈಃ ಸ್ತುತಿಭಿಃ ಸಾರ್ಧಂ ಹವೀಂಷಿ ದದಾಶ ಪ್ರಯಚ್ಛತಿ । ತಂ ಯಜಮಾನಂ ಚಿತ್ರಶೋಚಿರ್ವಿಚಿತ್ರದೀಪ್ತಿರಗ್ನಿಶ್ಚಿತ್ರಾಭಿರಾಶ್ಚರ್ಯಭೂತಾಭಿರೂತಿಭೀ ರಕ್ಷಾಭಿರ್ಗೋಮತೋ ಗೋಭಿರ್ಯುಕ್ತಸ್ಯ ವ್ರಜಸ್ಯ ಗೋಷ್ಠಸ್ಯ ಸಾತಾ ಸಾತೌ ಸಂಭಜನೇ ದಧಾತಿ । ಧಾರಯತಿ ॥

॥ ಪ್ರತಿಪದಾರ್ಥ ॥

**ವಿಪ್ರಃ**—ಮೇಧಾವಿಯಾದ । **ಯಃ**—ಯಾವ ಯಜಮಾನನು । **ಉಕ್ಥೈಃ**—ಸ್ತುತಿಗಳೊಡಗೂಡಿದ ಹವಿಸ್ಸುಗಳನ್ನು । **ಅಗ್ನಯೇ**—ಅಗ್ನಿಯನ್ನುದ್ದೇಶಿಸಿ **ದದಾಶ**—ಅರ್ಪಿಸುವನೋ । **ಸಃ**—ಅದೇ ಯಜಮಾನನು । **ಮರ್ತ್ಯೇಷು**—ಮಾನವರ ನಡುವೆ । **ಶ್ರವಸಾ**—ಅನ್ನಯುಕ್ತನಾಗಿ । **ಪೀಪಾಯ**—ವೃದ್ಧಿಯನ್ನು ಹೊಂದುತ್ತಾನೆ । **ತಂ**—ಅದೇ ಯಜಮಾನನನ್ನು । **ಚಿತ್ರಶೋಚಿಃ**—ಅನೇಕ ವಿಧವಾದ ಪ್ರಕಾಶಗಳುಳ್ಳ ಅಗ್ನಿಯು । **ಚಿತ್ರಾಭಿಃ**—ನಾನಾವಿಧವಾದ । **ಊತಿಭಿಃ**—ರಕ್ಷಣೆಗಳೊಡನೆ ಕೂಡಿದ । **ಗೋಮತಃ**—ಗೋವುಗಳ । **ವ್ರಜಸ್ಯ**—ಸಮೂಹವನ್ನು । **ಸಾತಾ**—ಅನುಭವಿಸುವ ಸ್ಥಿತಿಯಲ್ಲಿ । **ದಧಾತಿ**—ಇರಿಸುತ್ತಾನೆ.

॥ ಭಾವಾರ್ಥ ॥

ಮೇಧಾವಿಯಾದ ಯಾವ ಯಜಮಾನನು ಸ್ತುತಿಗಳೊಡಗೂಡಿದ ಹವಿಸ್ಸುಗಳನ್ನು ಅಗ್ನಿಯನ್ನುದ್ದೇಶಿಸಿ ಅರ್ಪಿಸುವನೋ, ಅದೇ ಯಜಮಾನನು ಮಾನವರ ನಡುವೆ ಅನ್ನಯುಕ್ತನಾಗಿ ವೃದ್ಧಿಯನ್ನು ಹೊಂದುತ್ತಾನೆ. ಅದೇ ಯಜಮಾನನನ್ನು ಅನೇಕ ವಿಧವಾದ ಪ್ರಕಾಶಗಳುಳ್ಳ ಅಗ್ನಿಯು ನಾನಾವಿಧವಾದ ರಕ್ಷಣೆಗಳೊಡನೆ ಕೂಡಿದ ಗೋವುಗಳ ಸಮೂಹವನ್ನು ಅನುಭವಿಸುವಂತೆ ಮಾಡುತ್ತಾನೆ.

## English Translation.

He thrives in abundance amongst men, who pious, presents tc Agni (oblations) with prayers : the wonderfully radiant Agni places him with marvellous protection in the enjoyment of pasturage full of herds of cattle.

॥ ಸಂಹಿತಾಪಾಠಃ ॥

ಆ ಯಃ ಪಪ್ರೌ ಜಾಯಮಾನ ಉರ್ವೀ ದೂರೇದೃಶಾ ಭಾಸಾ ಕೃಷ್ಣಾಧ್ವಾ ।
ಅಧ ಬಹು ಚಿತ್ತಮ ಊರ್ಮ್ಯಾಯಾಸ್ತಿರಃ ಶೋಚಿಷಾ ದದೃಶೇ ಪಾವಕಃ ॥

॥ ಪದಪಾಠಃ ॥

ಆ । ಯಃ । ಪಪ್ರೌ । ಜಾಯಮಾನಃ । ಉರ್ವೀ ಇತಿ । ದೂರೇಽದೃಶಾ । ಭಾಸಾ । ಕೃಷ್ಣಽಅಧ್ವಾ ।
ಅಧ । ಬಹು । ಚಿತ್ । ತಮಃ । ಊರ್ಮ್ಯಾಯಾಃ । ತಿರಃ । ಶೋಚಿಷಾ । ದದೃಶೇ । ಪಾವಕಃ ॥ ೪ ॥

॥ ಸಾಯಣಭಾಷ್ಯಂ ॥

ಕೃಷ್ಣಾಧ್ವಾ ಕೃಷ್ಣವರ್ತ್ಮಾ ಯೋಽಗ್ನಿರ್ಜಾಯಮಾನಃ ಪ್ರಾದುರ್ಭವನ್ ಉರ್ವೀ ವಿಸ್ತೀರ್ಣೇ ದ್ಯಾವಾಪೃಥಿವ್ಯೌ ದೂರೇದೃಶಾ ದೂರೇ ದೃಶ್ಯಮಾನಯಾ ಭಾಸಾ ದೀಪ್ತ್ಯಾ ಆ ಪಪ್ರೌ ಆಪೂರಯತಿ ಸ ಪಾವಕೋಽಗ್ನಿರಧಾನಂತರಮೂರ್ಮ್ಯಾಯಾಃ । ರಾತ್ರಿನಾಮೈತತ್ । ರಾತ್ರೇಃ ಸಂಬಂಧಿ ಬಹು ಚಿತ್ ಬಹ್ವಪಿ ತಮೋಽಂಧಕಾರಂ ಶೋಚಿಷಾ ದೀಪ್ತ್ಯಾ ತಿರಸ್ಕುರ್ವನ್ ದದೃಶೇ । ದೃಶ್ಯತೇ ॥

॥ ಪ್ರತಿಪದಾರ್ಥ ॥

**ಕೃಷ್ಣಾಧ್ವಾ**—ಕಪ್ಪುವರ್ಣದ ಮಾರ್ಗವುಳ್ಳ । **ಯಃ**—ಯಾವ ಅದೇ ಅಗ್ನಿಯು । **ಜಾಯಮಾನಃ**—ಉತ್ಪನ್ನನಾದೊಡನೆಯೇ । **ಉರ್ವೀ**—ವಿಸ್ತೃತವಾದ ದ್ಯಾವಾಪೃಥಿವಿಗಳೆರಡನ್ನೂ । **ದೂರೇದೃಶಾ**—ದೂರದಿಂದಲೇ ಕಾಣಲ್ಪಡುವ । **ಭಾಸಾ**—ಪ್ರಭೆಯಿಂದ । **ಆ ಪಪ್ರೌ**—ತುಂಬುತ್ತಾನೆ । **ಪಾವಕಃ**—ಶುದ್ಧಿಕಾರಕನಾದ ಅಗ್ನಿಯು । **ಅಧ**—ಅನಂತರ । **ಊರ್ಮ್ಯಾಯಾಃ**—ರಾತ್ರಿಸಂಬಂಧಿಯಾದ । **ತಮಃ**—ಅಂಧಕಾರವನ್ನು । **ಬಹುಚಿತ್**—ಅತ್ಯಧಿಕವಾಗಿದ್ದರೂ ಸಹ । **ಶೋಚಿಷಾ**—ತನ್ನ ಪ್ರಭೆಯಿಂದ । **ತಿರಃ**—ನಾಶಮಾಡುವವನಾಗಿ । **ದದೃಶೇ**—ಕಾಣುತ್ತಾನೆ. (ಪ್ರಕಾಶಿಸುತ್ತಾನೆ)

॥ ಭಾವಾರ್ಥ ॥

ಕಪ್ಪುವರ್ಣದ ಮಾರ್ಗವುಳ್ಳ ಅದೇ ಅಗ್ನಿಯು ಉತ್ಪನ್ನನಾದೊಡನೆಯೇ ವಿಸ್ತೃತವಾದ ದ್ಯಾವಾಪೃಥಿವಿಗಳೆರಡನ್ನೂ ದೂರದಿಂದಲೇ ಕಾಣಲ್ಪಡುವ ಪ್ರಭೆಯಿಂದ ತುಂಬುತ್ತಾನೆ. ಶುದ್ಧಿಕಾರಕನಾದ ಅಗ್ನಿಯು ಅನಂತರ ರಾತ್ರಿಯ ಅತ್ಯಧಿಕವಾದ ಅಂಧಕಾರವನ್ನೂ ತನ್ನ ಪ್ರಭೆಯಿಂದ ನಾಶಮಾಡಿ ಪ್ರಕಾಶಿಸುತ್ತಾನೆ.

English Translation.

The dark-pathed, as soon as generated, filled with his afar-seen light the two spacious (worlds) : he, the purifier, is now heheld dispersing with his radiance the thick glooms of night.

॥ ಸಂಹಿತಾಪಾಠಃ ॥

ನೂ ನಶ್ಚಿತ್ರಂ ಪುರುವಾಜಾಭಿರೂತೀ ಅಗ್ನೇ ರಯಿಂ ಮಘವದ್ಭ್ಯಶ್ಚ ಧೇಹಿ।
ಯೇ ರಾಧಸಾ ಶ್ರವಸಾ ಚಾತ್ಯನ್ಯಾನ್ತ್ಸುವೀರ್ಯೇಭಿಶ್ಚಾಭಿ ಸಂತಿ ಜನಾನ್॥

॥ ಪದಪಾಠಃ ॥

ನು । ನಃ । ಚಿತ್ರಂ । ಪುರುऽವಾಜಾಭಿಃ । ಊತೀ । ಅಗ್ನೇ । ರಯಿಂ । ಮಘವತ್ऽಭ್ಯಃ । ಚ । ಧೇಹಿ ।
ಯೇ । ರಾಧಸಾ । ಶ್ರವಸಾ । ಚ । ಅತಿ । ಅನ್ಯಾನ್ । ಸುऽವೀರ್ಯೇಭಿಃ । ಚ । ಅಭಿ । ಸಂತಿ । ಜನಾನ್॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಮಘವದ್ಭ್ಯೋ ಹವಿರ್ಲಕ್ಷಣಧನಯುಕ್ತೇಭ್ಯೋ ನೋऽಸ್ಮಭ್ಯಂ ಪುರುವಾಜಾಭಿರ್ಬಹ್ವನ್ನೈರೂತೀ ಊತಿಭೀ ರಕ್ಷಣೈಃ ಸಹ ಚಿತ್ರಂ ಚಾಯನೀಯಂ ರಯಿಂ ಧನಂ ನು ಕ್ಷಿಪ್ರಂ ಧೇಹಿ । ದೇಹಿ । ಪ್ರಯಚ್ಛ । ಚಶಬ್ದೋ ವಕ್ಷ್ಯಮಾಣೇನ ಸಮುಚ್ಚಯಾರ್ಥಃ । ಯೇ ರಾಧಸಾ ಧನೇನ ಶ್ರವಸಾನ್ನೇನ ಚ ಸುವೀರ್ಯೇಭಿಃ ಶೋಭನೈರ್ವೀರ್ಯೈಶ್ಚಾನ್ಯಾನ್ ಜನಾನ್ಮನುಷ್ಯಾನತಿ ಅತಿಶಯೇನಾಭಿ ಸಂತಿ ಅಭಿಭವಂತಿ ತಾದೃಶಾನ್ಪುತ್ರಾಂಶ್ಚಾಸ್ಮಭ್ಯಂ ದೇಹೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಮಘವದ್ಭ್ಯಃ**—ಹವಿಸ್ಸಿನ ರೂಪದ ಧನವನ್ನು ಹೊಂದಿರತಕ್ಕ । **ನಃ**—ನಮಗೆ । **ಪುರುವಾಜಾಭಿಃ**—ಅನೇಕ ವಿಧವಾದ ಅನ್ನಗಳೊಡನೆಯೂ । **ಊತೀ**—ರಕ್ಷಣೆಗಳೊಡನೆ ಕೂಡಿದುದೂ । **ಚಿತ್ರಂ**—ಆಕರ್ಷಕವಾದುದೂ ಆದ । **ರಯಿಂ**—ಧನವನ್ನು । **ನು**—ಶೀಘ್ರವಾಗಿ । **ಧೇಹಿ**—

**ಕೊಡು** | **ಯೇ**—ಯಾರು | **ರಾಧಸಾ**—ಧನದಿಂದಲೂ | **ಶ್ರವಸಾ**—ಅನ್ನದಿಂದಲೂ | **ಸುವೀರ್ಯೇಭಿಃ**—ಅನೇಕ ವಿಧವಾದ ಶಕ್ತಿಗಳಿಂದಲೂ | **ಅನ್ಯಾನ್ ಜನಾನ್**—ಇತರ ಮನುಷ್ಯರನ್ನು | **ಅತಿ**—ಅತಿಶಯವಾಗಿ | **ಅಭಿ ಸಂತಿ**—ಮೀರಿಸುವರೋ (ಅಂತಹ ಪುತ್ರರನ್ನೂ ಕೊಡು).

॥ ಭಾವಾರ್ಥ ॥

ಎಲೈ ಅಗ್ನಿಯೇ, ಹವಿಸ್ಸಿನ ರೂಪದ ಧನವನ್ನು ಹೊಂದಿರತಕ್ಕ ನಮಗೆ ವಿನೇಕವಿಧವಾದ ಅನ್ನಗಳೊಡನೆಯೂ, ರಕ್ಷಣೆಗಳೊಡನೆಯೂ ಕೂಡಿದುದೂ ಆಕರ್ಷಕವಾದುದೂ ಆದ ಧನವನ್ನು ಶೀಘ್ರವಾಗಿ ಕೊಡು ಯಾರು ಧನದಿಂದಲೂ ಅನ್ನದಿಂದಲೂ ಅನೇಕವಿಧವಾದ ಶಕ್ತಿಗಳಿಂದಲೂ ಇತರ ಮನುಷ್ಯರನ್ನು ಅತಿಶಯವಾಗಿ ಮೀರಿಸುವರೋ ಅಂತಹ ಪುತ್ರರನ್ನೂ ಕೊಡು.

## English Translation.

Bestow quickly, Agni, upon us who are affluent (in oblations), wondrous wealth, with abundant viands, and protections, such as enrich other men with wealth, with food, and with male descendants.

---

॥ ಸಂಹಿತಾಪಾಠಃ ॥

ಇಮಂ ಯಜ್ಞಂ ಚನೋ ಧಾ ಅಗ್ನ ಉಶನ್ಯಂ ತ ಆಸಾನೋ ಜುಹುತೇ ಹವಿಷ್ಮಾನ್ ।
ಭರದ್ವಾಜೇಷು ದಧಿಷೇ ಸುವೃಕ್ತಿಮವೀರ್ವಾಜಸ್ಯ ಗಧ್ಯಸ್ಯ ಸಾತೌ ॥ ೬ ॥

॥ ಪದಪಾಠಃ ॥

ಇಮಂ । ಯಜ್ಞಂ । ಚನಃ । ಧಾಃ । ಅಗ್ನೇ । ಉಶನ್ । ಯಂ । ತೇ । ಆಸಾನಃ । ಜುಹುತೇ । ಹವಿಷ್ಮಾನ್ ।
ಭರತ್ऽವಾಜೇಷು । ದಧಿಷೇ । ಸುऽವೃಕ್ತಿಂ । ಅವೀಃ । ವಾಜಸ್ಯ । ಗಧ್ಯಸ್ಯ । ಸಾತೌ ॥ ೬ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಉಶನ್ ಕಾಮಯಮಾನಸ್ತ್ವಮಿಮಂ ಪುರೋವರ್ತಿ ಯಜ್ಞಂ ಯಾಗಸಾಧನಂ ಚನೋ ಹವಿರ್ಲಕ್ಷಣಮನ್ನಂ ಧಾಃ । ಧೇಹಿ । ಸ್ವಾತ್ಮನಿ ಧಾರಯ । ಯಂ ಚ ಪುರೋಡಾಶಾದಿಕಮಾಸಾನ ಆಸೀನ ಉಪವಿಶನ್ ಹವಿಷ್ಮಾನ್ಹವಿರ್ಯುಕ್ತೋ ಯಜಮಾನಸ್ತೇ ತುಭ್ಯಂ ತ್ವದರ್ಥಂ ಜುಹುತೇ

ಜುಹೋತಿ ತಮಿಮಮಿತ್ಯನ್ವಯಃ । ಅಪಿ ಚ ಭರದ್ವಾಜೇಷ್ವೃಷಿಷು ಸುವೃಕ್ತಿಂ ಸುಷ್ಠು ದೋಷೈರ್ವರ್ಜಿತಾಂ ಸ್ತುತಿಂ ದಧಿಷೇ । ಧಾರಯ । ಗಧ್ಯಸ್ಯ ॥ ಗಧ್ಯತಿರ್ಮಿಶ್ರೀಭಾವಕರ್ಮಾ ॥ ಮಿಶ್ರಣೀಯಸ್ಯ ಪ್ರಾಪ್ಯಸ್ಯ ವಾಜಸ್ಯಾನ್ನಸ್ಯ ಸಾತೌ ಸಂಭಜನೇ ನಿಮಿತ್ತಭೂತೇಽವೀಃ । ತಾನ್ಯಷೀನ್ರಕ್ಷ ಚ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಆಸಾನಃ**—ಆಸನದಲ್ಲಿ ಕುಳಿತಿರುವವನೂ । **ಹವಿಷ್ಮಾನ್**—ಹವಿಸ್ಸನ್ನು ಹೊಂದಿರುವವನೂ ಆದ ಯಜಮಾನನು । **ಯಂ**—ಯಾವ ಪುರೋಡಾಶವನ್ನು । **ತೇ**—ನಿನ್ನನ್ನುದ್ದೇಶಿಸಿ । **ಜುಹುತೇ**—ಅರ್ಪಿಸುವನೋ । **ತಂ**—ಅದನ್ನೇ । **ಉಶನ್**—ಅಪೇಕ್ಷಿಸಿ । **ಯಜ್ಞಂ**—ಯಜ್ಞಸಾಧನವಾದ । **ಇಮಂ ಚನಃ**—ಈ ಹವಿಸ್ಸನ್ನು । **ಧಾಃ**—ನಿನ್ನಲ್ಲಿ ಧರಿಸು । **ಭರದ್ವಾಜೇಷು**—ಭರದ್ವಾಜ ಸಂತತಿಯ ಋಷಿಗಳ । **ಸುವೃಕ್ತಿಂ**—ಶುದ್ಧವಾದ ಸ್ತುತಿಗಳನ್ನು । **ದಧಿಷೇ**—ನಿನ್ನಲ್ಲಿ ಧರಿಸು । **ಗಧ್ಯಸ್ಯ**—ಅನೇಕವಿಧವಾದ **ವಾಜಸ್ಯ**—ಅನ್ನದ । **ಸಾತೌ**—ಪ್ರಾಪ್ತಿಗಾಗಿ । **ಅವೀಃ** - ಅವರನ್ನು ರಕ್ಷಿಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಆಸನದಲ್ಲಿ ಕುಳಿತಿರುವವನೂ, ಹವಿಸ್ಸನ್ನು ಹೊಂದಿರುವವನೂ ಆದ ಯಜಮಾನನು ನಿನ್ನನ್ನುದ್ದೇಶಿಸಿ ಯಾವ ಪುರೋಡಾಶವನ್ನರ್ಪಿಸುವನೋ ಅದನ್ನೇ ಅಪೇಕ್ಷಿಸಿ ಯಜ್ಞಸಾಧನವಾದ ಈ ಹವಿಸ್ಸನ್ನು ನಿನ್ನಲ್ಲಿ ಧರಿಸು. ಭರದ್ವಾಜಸಂತತಿಯ ಋಷಿಗಳ ಶುದ್ಧವಾದ ಸ್ತುತಿಗಳನ್ನು ನಿನ್ನಲ್ಲಿ ಧರಿಸು. ಮತ್ತು ಅವರಿಗೆ ಅನೇಕ ವಿಧವಾದ ಅನ್ನವನ್ನು ಕೊಟ್ಟು ರಕ್ಷಿಸು.

English Translation.

Agni, desirous (of the offering), accept this sacrifice, this food which the presenter (of the oblation), sitting down (before you), offers unto you : accept the blameless (praises) of the Bharadwaja (race), and favour them that they may obtain many sorts of food.

॥ ಸಂಹಿತಾಪಾಠಃ ॥

ವಿ ದ್ವೇಷಾಂಸೀನುಹಿ ವರ್ಧಯೇಳಾಂ ಮದೇಮ ಶತಹಿಮಾಃ ಸುವೀರಾಃ॥೭॥

॥ ಪದಪಾಠಃ ॥

ವಿ । ದ್ವೇಷಾಂಸಿ । ಇನುಹಿ । ವರ್ಧಯ । ಇಳಾಂ । ಮದೇಮ । ಶತಽಹಿಮಾಃ । ಸುಽವೀರಾಃ ॥ ೭ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ದ್ವೇಷಾಂಸಿ ದ್ವೇಷ್ಟ್ರೂನ್ ಶತ್ರೂನ್ ವೀನುಹಿ । ವಿವಿಧಂ ಗಮಯ । ಇಳಾಮನ್ನಂ ಚಾಸ್ಮದೀಯಂ ವರ್ಧಯ। ವಯಂ ಚ ಸುವೀರಾಃ ಶೋಭನೈರ್ವೀರೈಃ ಪುತ್ರಪೌತ್ರಾದಿಭಿರುಪೇತಾಃ ಸಂತಃ ಶತಹಿಮಾಃ ಶತಂ ಹೇಮಂತಾನ್ ಸಂವತ್ಸರಾನ್ಮದೇಮ । ಮೋದೇಮ। ತೃಪ್ತಾ ಭೂಯಾಸ್ಮ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ದ್ವೇಷಾಂಸಿ**—ನಮ್ಮ ಶತ್ರುಗಳನ್ನು । **ವಿ ಇನುಹಿ**—ನಾನಾಕಡೆಗಳಿಗೆ ಚದುರಿಸು । **ಇಳಾಂ**—ನಮ್ಮ ಅನ್ನವನ್ನು । **ವರ್ಧಯ**—ವೃದ್ಧಿಪಡಿಸು । **ಸುವೀರಾಃ**—ಉತ್ತಮವಾದ ಪುತ್ರರೊಡಗೂಡಿ । **ಶತಹಿಮಾಃ**—ನೂರುಸಂವತ್ಸರಗಳನ್ನು । **ಮದೇಮ**—ನಾವು ಸಂತೋಷದಿಂದ ಕಳೆಯುವಂತಾಗಲಿ.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಮ್ಮ ಶತ್ರುಗಳನ್ನು ನಾನಾಕಡೆಗಳಿಗೆ ಚದುರಿಸು. ನಮ್ಮ ಅನ್ನವನ್ನು ವೃದ್ಧಿಪಡಿಸು. ಉತ್ತಮವಾದ ಪುತ್ರರೊಡಗೂಡಿ ನಾವು ನೂರುಸಂವತ್ಸರಗಳನ್ನು ಸಂತೋಷದಿಂದ ಕಳೆಯುವಂತಾಗಲಿ.

## English Translation.

Scatter (our) enemies; augment our abundance, and may we, blessed with virtuous male descendants, enjoy happiness for a hundred winters.

# ಹನ್ನೊಂದನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಯಜಸ್ವ ಹೋತರಿತಿ ಷಡೃಚಮೇಕಾದಶಂ ಸೂಕ್ತಂ ಭರದ್ವಾಜಸ್ಯಾರ್ಷಂ ತ್ರೈಷ್ಟುಭಮಾಗ್ನೇಯಂ । ಅನುಕ್ರಮ್ಯತೇ ಚ । ಯಜಸ್ವ ಷಡಿತಿ ॥ ಪ್ರಾತರನುವಾಕಾಶ್ವಿನಶಸ್ತ್ರಯೋರುಕ್ತೋ ವಿನಿಯೋಗಃ॥**

ಅನುವಾದವು—**ಯಜಸ್ವ ಹೋತಃ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹನ್ನೊಂದನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು; ಅಗ್ನಿಯು ದೇವತೆಯು; ತ್ರಿಷ್ಟುಪ್‌ಛಂದಸ್ಸು. ಅನುಕ್ರಮಣಿಕೆಯಲ್ಲಿ -- **ಯಜಸ್ವ ಷಟ್** ಎಂದು ಹೇಳಿರುವುದು. ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರಮಂತ್ರಪಠನಕ್ಕಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಹಿಂದೆಯೇ ಹೇಳಲಾಗಿದೆ.

## ಸೂಕ್ತ—೧೧

ಮಂಡಲ—೬ ॥ ಅನುವಾಕ—೧ ॥ ಸೂಕ್ತ—೧೧ ॥
ಅಷ್ಟಕ—೪ ॥ ಅಧ್ಯಾಯ—೫ ॥ ವರ್ಗ—೧೩ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
॥ ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ॥
॥ ದೇವತಾ—ಅಗ್ನಿಃ ॥
॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಯಜಸ್ವ ಹೋತರಿಷಿತೋ ಯಜೀಯಾನಗ್ನೇ ಬಾಧೋ ಮರುತಾಂ ನ ಪ್ರಯುಕ್ತಿ ।
ಆ ನೋ ಮಿತ್ರಾವರುಣಾ ನಾಸತ್ಯಾ ದ್ಯಾವಾ ಹೋತ್ರಾಯ ಪೃಥಿವೀ ವವೃತ್ಯಾಃ ॥ ೧ ॥

|| ಪದಪಾಠಃ ||

ಯಜಸ್ವ । ಹೋತಃ । ಇಷಿತಃ । ಯಜೀಯಾನ್ । ಅಗ್ನೇ । ಬಾಧಃ । ಮರುತಾಂ । ನ । ಪ್ರಯುಕ್ತಿ ।
ಆ । ನಃ । ಮಿತ್ರಾವರುಣಾ । ನಾಸತ್ಯಾ । ದ್ಯಾವಾ । ಹೋತ್ರಾಯ । ಪೃಥಿವೀ ಇತಿ । ವವೃತ್ಯಾಃ ॥ ೧ ॥

॥ ಸಾಯಣಭಾಷ್ಯಂ ॥

ಹೇ ಹೋತರ್ದೇವಾನಾಮಾಹ್ವಾತರಗ್ನೇ ಯಜೀಯಾನ್ಯಷ್ಟೃತಮಸ್ತ್ವಮಿಷಿತಃ ಪ್ರೇಷಿತೋಽಸ್ಮಾಭಿಃ ಪ್ರಾರ್ಥಿತಃ ಸನ್ । ನೇತಿ ಸಂಪ್ರತ್ಯರ್ಥೇ । ಸಂಪ್ರತಿ ಪ್ರಯುಕ್ತಿ ಪ್ರಯುಕ್ತೌ ಪ್ರಯುಜ್ಯಮಾನೇ ಯಜ್ಞೇ ಮರುತಾಂ ದೇವಾನಾಂ ಬಾಧಃ ಶತ್ರೂಣಾಂ ಬಾಧಕಂ ಗಣಂ ಯಜಸ್ವ । ಯದ್ವೈತದ್ವಾಕ್ಯದ್ವಯಂ । ಹೇ ಹೋತರಗ್ನೇ ಯಜಸ್ವ ದೇವಾನಿತ್ಯೇಕಂ ವಾಕ್ಯಂ । ಪ್ರಯುಜ್ಯತ ಇತಿ ಪ್ರಯುಕ್ತಿ ಬಲಂ। ಮರುತಾಂ ನ ಪ್ರಯುಕ್ತಿ ಮರುತಾಂ ಬಲಮಿವಾಸ್ಮಚ್ಛತ್ರೂನ್ ಬಾಧಃ ಬಾಧಸ್ವೇತಿ ದ್ವಿತೀಯಂ ವಾಕ್ಯಂ । ಅಪಿ ಚ ಮಿತ್ರಾವರುಣಾ । ಅಹರಭಿಮಾನೀ ದೇವೋ ಮಿತ್ರೋ ವರುಣೋ ರಾತ್ರ್ಯಭಿಮಾನೀ । ತೌ ಚ ನಾಸತ್ಯಾ ಸತ್ಯಸ್ಯ ನೇತಾರೌ ಸತ್ಯಸ್ವಭಾವಾವೇವ ವಾ ನಾಸಿಕಾಪ್ರಭವೌ ವಾಶ್ವಿನೌ ದ್ಯಾವಾಪೃಥಿವೀ ದಿವಂ ಚ ಪೃಥಿವೀಂ ಚ ಏತಾಂಶ್ಚ ದೇವಾನ್ ಹೋತ್ರಾಯಾಸ್ಮದ್ಯಜ್ಞಾಯ ತದರ್ಥಮಾ ವವೃತ್ಯಾಃ । ಆವರ್ತಯ । ಆವಹೇತ್ಯರ್ಥಃ ॥

॥ ಪ್ರತಿಪದಾರ್ಥ ॥

ಹೋತಃ—ದೇವತೆಗಳನ್ನು ಯಜ್ಞಕ್ಕೆ ಕರೆಯತಕ್ಕ । ಅಗ್ನೇ—ಎಲೈ ಅಗ್ನಿಯೇ । ಯಜೀಯಾನ್—ಅತ್ಯಂತ ಪೂಜ್ಯನಾದ ನೀನು । ಇಷಿತಃ—ನಮ್ಮಿಂದ ಪ್ರಾರ್ಥಿತನಾಗಿ । ನ—ಪ್ರಕೃತದಲ್ಲಿ । ಪ್ರಯುಕ್ತಿ—ನೆರವೇರತಕ್ಕ ಯಜ್ಞದಲ್ಲಿ । ಮರುತಾಂ—ಮರುತ್ತುಗಳ । ಬಾಧಃ—ಶತ್ರುನಾಶಕವಾದ ಸಂಘವನ್ನು । ಯಜಸ್ವ—ಪೂಜಿಸು । ಮಿತ್ರಾವರುಣಾ—ಮಿತ್ರಾವರುಣರನ್ನೂ । ನಾಸತ್ಯಾ—ಅಶ್ವಿನೀದೇವತೆಗಳನ್ನೂ । ದ್ಯಾವಾಪೃಥಿವೀ—ದ್ಯಾವಾಪೃಥಿವಿಗಳನ್ನೂ । ನಃ ಹೋತ್ರಾಯ—ನಮ್ಮ ಯಜ್ಞಾರ್ಥವಾಗಿ । ಆ ವವೃತ್ಯಾಃ—ಕರೆದುಕೊಂಡು ಬಾ.

॥ ಭಾವಾರ್ಥ ॥

ದೇವತೆಗಳನ್ನು ಯಜ್ಞಕ್ಕೆ ಕರೆಯತಕ್ಕ ಎಲೈ ಅಗ್ನಿಯೇ, ಅತ್ಯಂತ ಪೂಜ್ಯನಾದ ನೀನು ನಮ್ಮಿಂದ ಪ್ರಾರ್ಥಿತನಾಗಿ ಪ್ರಕೃತದಲ್ಲಿ ನೆರವೇರತಕ್ಕ ಯಜ್ಞದಲ್ಲಿ ಮರುತ್ತುಗಳ ಶತ್ರುನಾಶಕವಾದ ಸಂಘವನ್ನು ಪೂಜಿಸು. ಮಿತ್ರಾವರುಣರನ್ನೂ, ಅಶ್ವಿನೀದೇವತೆಗಳನ್ನೂ, ದ್ಯಾವಾಪೃಥಿವಿಗಳನ್ನೂ ನಮ್ಮ ಯಜ್ಞಾರ್ಥವಾಗಿ ಕರೆದುಕೊಂಡು ಬಾ.

English Translation.

Agni invoker of the gods, you who are adorable, being instigated by us, worship at our present rite the foe-repelling (troop) of the Maruts and bring to our sacrifice Mitra and Varuna, the Nasatyas and Heaven and Earth.

॥ ಸಂಹಿತಾಪಾಠಃ ॥

ತ್ವಂ ಹೋತಾ ಮಂದ್ರತಮೋ ನೋ ಅಧ್ರುಗಂತರ್ದೇವೋ ವಿದಥಾ ಮರ್ತ್ಯೇಷು ।
ಪಾವಕಯಾ ಜುಹ್ವಾ೩ ವಹ್ನಿರಾಸಾಗ್ನೇ ಯಜಸ್ವ ತನ್ವಂ೧ ತವ ಸ್ವಾಂ ॥೨॥

॥ ಪದಪಾಠಃ ॥

ತ್ವಂ । ಹೋತಾ । ಮಂದ್ರಽತಮಃ । ನಃ । ಅಧ್ರುಕ್ । ಅಂತಃ । ದೇವಃ । ವಿದಥಾ । ಮರ್ತ್ಯೇಷು ।
ಪಾವಕಯಾ । ಜುಹ್ವಾ । ವಹ್ನಿಃ । ಆಸಾ । ಅಗ್ನೇ । ಯಜಸ್ವ । ತನ್ವಂ । ತವ । ಸ್ವಾಂ ॥ ೨ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಂ ಮರ್ತ್ಯೇಷು ಮನುಷ್ಯೇಷ್ವಂತರ್ಮಧ್ಯೇ ವರ್ತಮಾನೋ ವಿದಥಾ ವಿದಥೇ ಯಜ್ಞೇ ಹೋತಾ ದೇವಾನಾಮಾಹ್ವಾತಾ ಭವಸಿ । ಕೀದೃಶಸ್ತ್ವಂ । ಮಂದ್ರತಮಃ ಸ್ತುತ್ಯತಮೋ ನೋಽಸ್ಮಾಕಮಧ್ರುಗದ್ರೋಗ್ಧಾ ಸ್ವಾರ್ಥಂ ದ್ರೋಹರಹಿತೋ ವಾ । ಸರ್ವದಾ ಮಿತ್ರಭೂತ ಇತ್ಯರ್ಥಃ । ದೇವೋ ದಾನಾದಿಗುಣಯುಕ್ತಃ । ಅಪಿ ಚ ಹೇ ಅಗ್ನೇ ಜುಹ್ವಾ । ಹೂಯಂತೇಽಸ್ಯಾಮಾಹುತಯ ಇತಿ ಜುಹೂರ್ಜ್ವಾಲಾ । ತಯಾ ಪಾವಕಯಾ ಶೋಧಯಿತ್ರ್ಯಾಸಾಸ್ಯೇನ ದೇವಾನಾಮಾಸ್ಯಭೂತಯಾ ವಹ್ನಿರ್ಹವಿಷಾಂ ವೋಢಾ ತ್ವಂ ತವ ಸ್ವಾಂ ಸ್ವಭೂತಾಂ ಸ್ವಿಷ್ಟಕೃದಾಖ್ಯಾಂ ತನ್ವಂ ತನೂಂ ಯಜಸ್ವ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಮಂದ್ರತಮಃ**—ಅತ್ಯಂತ ಸ್ತುತ್ಯನೂ । **ನಃ**—ನಮಗೆ । **ಅಧ್ರುಕ್**—ಕೇಡನ್ನು ಬಯಸದಿರುವವನೂ । **ದೇವಃ**—ದೇವತಾತ್ಮನೂ ಆದ । **ತ್ವಂ**—ನೀನು । **ಮರ್ತ್ಯೇಷು ಅಂತಃ**—ಮಾನವರ ನಡುವೆ (ನೆರವೇರುವ) । **ವಿದಥಾ**—ಯಜ್ಞದಲ್ಲಿ । **ಹೋತಾ**—ದೇವತೆಗಳಿಗೆ ಆಹ್ವಾನವನ್ನು ಕೊಡುವವನಾಗಿದ್ದೀಯೆ । **ಅಗ್ನೇ**—ಎಲೈ ಅಗ್ನಿಯೇ । **ವಹ್ನಿಃ**—ದೇವತೆಗಳಿಗೆ ಹವಿಸ್ಸನ್ನು ವಹಿಸುವ ನೀನು । **ಪಾವಕಯಾ**—ಶುದ್ಧಿಕಾರಕವೂ । **ಆಸಾ**—ದೇವತೆಗಳ ಮುಖರೂಪವೂ ಆದ । **ಜುಹ್ವಾ**—ನಿನ್ನ ಜ್ವಾಲೆಯ ಮೂಲಕ । **ತವ**—ನಿನ್ನ । **ಸ್ವಾಂ ತನ್ವಂ**—ಸ್ವಿಷ್ಟಕೃತ್ತೆಂಬ ಸ್ವರೂಪವನ್ನು । **ಯಜಸ್ವ**—ಪೂಜಿಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಅತ್ಯಂತ ಸ್ತುತ್ಯನೂ, ನಮಗೆ ಕೇಡನ್ನು ಬಯಸದಿರುವವನೂ ದೇವಾತ್ಮನೂ ಆದ ನೀನು ಮಾನವರ ನಡುವೆ ನೆರವೇರತಕ್ಕ ಈ ಯಜ್ಞದಲ್ಲಿ ದೇವತೆಗಳಿಗೆ ಆಹ್ವಾನವನ್ನು ಕೊಡುವವನಾಗಿದ್ದೀಯೆ. ಎಲೈ ಅಗ್ನಿಯೇ, ದೇವತೆಗಳಿಗೆ ಹವಿಸ್ಸನ್ನು ವಹಿಸುವ ನೀನು ಶುದ್ಧಿಕಾರಕವೂ, ದೇವತೆಗಳಿಗೆ ಮುಖರೂಪವೂ ಆದ ನಿನ್ನ ಜ್ವಾಲೆಯ ಮೂಲಕ ನಿನ್ನ ಸ್ವಿಷ್ಟಕೃತ್ತೆಂಬ ಶರೀರವನ್ನು ಪೂಜಿಸು.

## English Translation.

You are amidst mortals at the celebration (of sacrifice), the invoker of the gods ( you who are) most deserving of praise, a divinity doing us no harm ; the bearer (of the oblation) offers (the gods), Agni your own body with purifying flame as if with their mouth.

॥ ಸಂಹಿತಾಪಾಠಃ ॥

ಧನ್ಯಾ ಚಿದ್ಧಿ ತ್ವೇ ಧಿಷಣಾ ವಷ್ಟಿ ಪ್ರ ದೇವಾಞ್ಜನ್ಮ ಗೃಣತೇ ಯಜಧ್ಯೈ ।
ವೇಪಿಷ್ಠೋ ಅಂಗಿರಸಾಂ ಯದ್ಧ ವಿಪ್ರೋ ಮಧು ಚ್ಛಂದೋ ಭನತಿ ರೇಭ ಇಷ್ಟೌ ॥ ೩ ॥

॥ ಪದಪಾಠಃ ॥

ಧನ್ಯಾ । ಚಿತ್ । ಹಿ । ತ್ವೇ ಇತಿ । ಧಿಷಣಾ । ವಷ್ಟಿ । ಪ್ರ । ದೇವಾನ್ । ಜನ್ಮ । ಗೃಣತೇ । ಯಜಧ್ಯೈ ।
ವೇಪಿಷ್ಠಃ । ಅಂಗಿರಸಾಂ । ಯತ್ । ಹ । ವಿಪ್ರಃ । ಮಧು । ಛಂದಃ । ಭನತಿ । ರೇಭಃ । ಇಷ್ಟೌ ॥ ೩ ॥

॥ ಸಾಯಣಭಾಷ್ಯಂ ॥

ಧನ್ಯಾ ಧನಮಿಚ್ಛಂತೀ ಧನಹೇತುಭೂತಾ ಧಿಷಣಾ ಸ್ತುತಿರ್ಹೇ ಅಗ್ನೇ ತ್ವೇ ತ್ವಾಂ ವಷ್ಟಿ। ಕಾಮಯತೇ। ಚಿದಿತ್ಯೇತತ್ಪಾದಪೂರಣಂ। ಕಿಮರ್ಥಂ। ದೇವಾನ್ಯಷ್ಟವ್ಯಾನಿಂದ್ರಾದೀನ್ ಪ್ರ ಯಜಧ್ಯೈ ಪ್ರಕರ್ಷೇಣ ಯಷ್ಟುಂ ತ್ವದೀಯಂ ಜನ್ಮ ಪ್ರಾದುರ್ಭಾವಂ ಗೃಣತೇ ಸ್ತುವತೇ ಯಜಮಾನಾಯೇದೃ-ಗ್ಭೂತಯಜಮಾನಾರ್ಥಂ। ಯದ್ಧ ಯದಾ ಖಲ್ವಂಗಿರಸಾಮೃಷೀಣಾಂ ಮಧ್ಯೇ ವೇಪಿಷ್ಠೋಽತಿಶಯೇನ ಸ್ತುತೇಃ ಪ್ರೇರಯಿತಾ ವಿಪ್ರೋ ಮೇಧಾವೀ ರೇಭಃ ಸ್ತೋತಾ ಭರದ್ವಾಜ ಇಷ್ಟೌ ಯಜ್ಞೇ ಮಧು ಮಧುಮನ್ಮದಕರಂ ಛಂದಃ ಸ್ತೋತ್ರಂ ಭನತಿ ಉಚ್ಚಾರಯತಿ ತದಾ ಧಿಷಣಾ ವಷ್ಟೀತ್ಯನ್ವಯಃ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಯದ್ಧ**—ಯಾವಾಗ। **ಅಂಗಿರಸಾಂ**—ಅಂಗಿರಸ್ಸುಗಳ ನಡುವೆ। **ವೇಪಿಷ್ಠಃ**—ಅತಿಶಯವಾಗಿ ಸ್ತುತಿಸತಕ್ಕವನೂ। **ವಿಪ್ರಃ**—ಮೇಧಾವಿಯೂ। **ರೇಭಃ**—ಸ್ತೋತೃವೂ ಆದ ಭರದ್ವಾಜನು। **ಇಷ್ಟೌ**—ಯಜ್ಞದಲ್ಲಿ। **ಮಧು**—ಸಂತೋಷಕರವಾದ। **ಛಂದಃ**—ಸ್ತೋತ್ರವನ್ನು। **ಭನತಿ**—ಪಠಿಸುವನೋ (ಆಗ)। **ದೇವಾನ್**—ಇಂದ್ರಾದಿದೇವತೆಗಳನ್ನು। **ಪ್ರ ಯಜಧ್ಯೈ**—ಅತಿಶಯವಾಗಿ ಪೂಜಿಸಲು। **ಜನ್ಮ**—ನಿನ್ನ ಪ್ರಾದುರ್ಭಾವವನ್ನು। **ಗೃಣತೇ**—ಸ್ತುತಿಸತಕ್ಕ ಯಜಮಾನನಿಗಾಗಿ। **ಧನ್ಯಾ**—ಧನಾಪೇಕ್ಷೆಯಿಂದ ಪಠಿಸಲ್ಪಡುವ। **ಧಿಷಣಾ**—ಸ್ತೋತ್ರವು। **ತ್ವೇ**—ನಿನ್ನನ್ನು। **ವಷ್ಟಿ**—ಇಚ್ಛಿಸಿ ಪ್ರಶಂಸಿಸುತ್ತದೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಅಂಗಿರಸ್ಸುಗಳ ನಡುವೆ ಅತಿಶಯವಾಗಿ ಸ್ತುತಿಸತಕ್ಕವನೂ, ಮೇಧಾವಿಯೂ, ಸ್ತೋತೃವೂ ಆದ ಭರದ್ವಾಜನು ಯಜ್ಞದಲ್ಲಿ ಸಂತೋಷಕರವಾದ ಸ್ತೋತ್ರವನ್ನು ಪಠಿಸುವ ಕಾಲದಲ್ಲಿ ಇಂದ್ರಾದಿದೇವತೆಗಳನ್ನು ವಿಧ್ಯುಕ್ತವಾಗಿ ಪೂಜಿಸಲು ನಿನ್ನ ಪ್ರಾದುರ್ಭಾವವನ್ನು ಪ್ರಶಂಸಿಸುವ ಯಜಮಾನನಿಗಾಗಿ ಧನಾಪೇಕ್ಷೆಯಿಂದ ಪಠಿಸುವ ಸ್ತುತಿಯು ನಿನ್ನನ್ನು ಇಚ್ಛಿಸಿ ಪ್ರಶಂಸಿಸುತ್ತದೆ.

## English Translation.

Praise, solicitous of wealth, is ever addressed, Agni, to you inasmuch as your manifestation (enables) the worshipper to sacrifice to the gods when the pious sage, the most earnest adorer amongst the Angirasas, the reciter (of the hymn), repeats at the ceremony, the gratifying measure.

॥ ಸಂಹಿತಾಪಾಠಃ ॥

ಅದಿದ್ಯುತತ್ಸ್ವಪಾಕೋ ವಿಭಾವಾಗ್ನೇ ಯಜಸ್ವ ರೋದಸೀ ಉರೂಚೀ ।
ಆಯುಂ ನ ಯಂ ನಮಸಾ ರಾತಹವ್ಯಾ ಅಂಜಂತಿ ಸುಪ್ರಯಸಂ ಪಂಚ
ಜನಾಃ ॥ ೪ ॥

॥ ಪದಪಾಠಃ ॥

ಅದಿದ್ಯುತತ್ । ಸು । ಅಪಾಕಃ । ವಿऽಭಾವಾ । ಅಗ್ನೇ । ಯಜಸ್ವ । ರೋದಸೀ ಇತಿ । ಉರೂಚೀ ಇತಿ ।
ಆಯುಂ । ನ । ಯಂ । ನಮಸಾ । ರಾತऽಹವ್ಯಾಃ । ಅಂಜಂತಿ । ಸುऽಪ್ರಯಸಂ । ಪಂಚ । ಜನಾಃ ॥ ೪ ॥

॥ ಸಾಯಣಭಾಷ್ಯಂ ॥

ಅಯಮಗ್ನಿಃ ಸ್ವದಿದ್ಯುತತ್ । ಸುಷ್ಠು ದ್ಯೋತತೇ । ದೀಪ್ಯತೇ । ಕಥಂಭೂತಃ । ಅಪಾಕಃ । ಪಾಕಃ ಪಕ್ವಪ್ರಜ್ಞೋ ಮೂರ್ಖಃ । ತದ್ವಿಲಕ್ಷಣೋऽಪಾಕಃ । ವಿಭಾವಾ ದೀಪ್ತಿಮಾನ್ । ಶೇಷಃ ಪ್ರತ್ಯಕ್ಷಕೃತಃ । ಹೇ ಅಗ್ನೇ ಸ ತ್ವಮುರೂಚೀ ಉರು ವಿಸ್ತೀರ್ಣಮಂಚಂತ್ಯೌ ವಿಸ್ತೃತೇ ರೋದಸೀ ದ್ಯಾವಾಪೃಥಿವ್ಯೌ ಯಜಸ್ವ । ಹವಿಷಾ ಪೂಜಯ । ಆಯುಂ ನ ಮನುಷ್ಯಮತಿಥಿಮಿವ ಯಂ ಪಂಚ ಜನಾ ಮನುಷ್ಯಾ ಋತ್ವಿಗ್ಯಜಮಾನಲಕ್ಷಣಾ ರಾತಹವ್ಯಾ ದತ್ತಹವಿಷ್ಕಾಃ ಸಂತಃ ಸುಪ್ರಯಸಂ ಶೋಭನಹವಿರ್ಲಕ್ಷಣಮಗ್ನಿಂ ನಮಸಾನ್ನೇನ ಹವಿರ್ಲಕ್ಷಣೇನಾಂಜಂತಿ ಸಿಂಚಂತಿ ತರ್ಪಯಂತಿ ಸ ತ್ವಂ ಯಜಸ್ವೇತ್ಯನ್ವಯಃ ॥

॥ ಪ್ರತಿಪದಾರ್ಥ ॥

**ಅಪಾಕಃ**—ಪೂರ್ಣಪ್ರಜ್ಞೆಯುಳ್ಳವನೂ । **ವಿಭಾವಾ**—ಪ್ರಕಾಶಮಾನನೂ ಆದ ಅಗ್ನಿಯು । **ಸು**—ಅತಿಶಯವಾಗಿ । **ಅದಿದ್ಯುತತ್**—ಪ್ರಕಾಶಿಸುತ್ತಿದ್ದಾನೆ । **ಸುಪ್ರಯಸಂ**—ಶ್ರೇಷ್ಠವಾದ ಹವಿಸ್ಸುಳ್ಳ । **ಯಂ**—ಯಾವ ನಿನ್ನನ್ನು । **ಪಂಚಜನಾಃ**—ಋತ್ವಿಗ್ಯಜಮಾನಾದಿ ಮಾನವರೆಲ್ಲರೂ । **ರಾತಹವ್ಯಾಃ**—ಹವಿಸ್ಸುಗಳನ್ನರ್ಪಿಸುತ್ತಾ । **ಆಯುಂ ನ**—ಮಾನವನಾದ ಅತಿಥಿಯಂತೆ । **ನಮಸಾ**—ನಮಸ್ಕಾರಗಳಿಂದ । **ಅಂಜಂತಿ**—ತೃಪ್ತಿಪಡಿಸುತ್ತಾರೋ (ಅಂತಹ) । **ಅಗ್ನೇ**—ಎಲೈ ಅಗ್ನಿಯೇ (ನೀನು) । **ಉರೂಚೀ**—ಅತ್ಯಂತ ವಿಸ್ತೃತವಾದ । **ರೋದಸೀ**—ದ್ಯಾವಾಪೃಥಿವಿಗಳನ್ನು । **ಯಜಸ್ವ**—ಹವಿಸ್ಸಿನಿಂದ ಪೂಜಿಸು.

॥ ಭಾವಾರ್ಥ ॥

ಪೂರ್ಣಪ್ರಜ್ಞೆಯುಳ್ಳವನೂ, ಪ್ರಕಾಶಮಾನನೂ ಆದ ಅಗ್ನಿಯು ಅತಿಶಯವಾಗಿ ಪ್ರಕಾಶಿಸುತ್ತಿದ್ದಾನೆ. ಎಲೈ ಅಗ್ನಿಯೇ, ಶ್ರೇಷ್ಠವಾದ ಹವಿಸ್ಸುಳ್ಳ ಯಾವ ನಿನ್ನನ್ನು ಸಕಲ ಮಾನವರೂ ಹವಿಸ್ಸುಗಳನ್ನರ್ಪಿಸುತ್ತಾ ನಮಸ್ಕಾರಗಳಿಂದ ತೃಪ್ತಿಪಡಿಸುತ್ತಾರೆಯೋ ಅಂತಹ ನೀನು ಅತ್ಯಂತ ವಿಸ್ತೃತವಾದ ದ್ಯಾವಾಪೃಥಿವಿಗಳನ್ನು ಹವಿಸ್ಸಿನಿಂದ ಪೂಜಿಸು.

## English Translation.

The brilliant Agni, mature in wisdom, has shone resplendently; offer worship to the wide-spread heaven and earth, you whom well-fed, the five races of men, bearing oblations, propitiate, with (sacrificial) food, as if you were a mortal guest.

॥ ಸಂಹಿತಾಪಾಠಃ ॥

ವೃಂಜೇ ಹ ಯನ್ನಮಸಾ ಬರ್ಹಿರಗ್ನಾವಯಾಮಿ ಸ್ರುಗ್ಘೃತವತೀ ಸುವೃಕ್ತಿಃ ।
ಅಮ್ಯಕ್ಷಿ ಸದ್ಮ ಸದನೇ ಪೃಥಿವ್ಯಾ ಅಶ್ರಾಯಿ ಯಜ್ಞಃ ಸೂರ್ಯೇ ನ ಚಕ್ಷುಃ ॥

॥ ಪದಪಾಠಃ ॥

ವೃಂಜೇ । ಹ । ಯತ್ । ನಮಸಾ । ಬರ್ಹಿಃ । ಅಗ್ನೌ । ಅಯಾಮಿ । ಸ್ರುಕ್ । ಘೃತಽವತೀ । ಸುಽವೃಕ್ತಿಃ ।
ಅಮ್ಯಕ್ಷಿ । ಸದ್ಮ । ಸದನೇ । ಪೃಥಿವ್ಯಾಃ । ಅಶ್ರಾಯಿ । ಯಜ್ಞಃ । ಸೂರ್ಯೇ । ನ । ಚಕ್ಷುಃ ॥ ೫ ॥

॥ ಸಾಯಣಭಾಷ್ಯಂ ॥

ಯದ್ಧ ಯದಾ ಖಲು ನಮಸಾ ಹವಿಷಾ ಸಹಾಗ್ನಾವಗ್ನಿಸಮೀಪೇ ಬರ್ಹಿರ್ವೃಂಜೇ ॥ ವೃಜಿಶ್ಛೇದನಾರ್ಥಃ ॥ ಛಿದ್ಯತೇ । ಆಹ್ರಿಯತ ಇತ್ಯರ್ಥಃ । ಸುವೃಕ್ತಿಃ ಸುಷ್ಠು ದೋಷೈರ್ವರ್ಜಿತಾ ಘೃತವತೀ ಘೃತಪೂರ್ಣಾ ಸ್ರುಗಯಾಮಿ । ನಿಯಮ್ಯತೇ । ಬರ್ಹಿಷ್ಯಾಸಾದ್ಯತೇ । ತಥಾ ಪೃಥಿವ್ಯಾ ಭೂಮೇಃ ಸದನೇ ಸ್ಥಾನೇ ಸದ್ಮ ಹವಿರಾಸಾದನಾರ್ಥಾ ವೇದಿರಮ್ಯಕ್ಷಿ ॥ ಮ್ಯಕ್ಷತಿರ್ಗತಿಕರ್ಮಾ ॥ ಗಮ್ಯತೇ । ಪರಿಗೃಹ್ಯತೇ । ತದಾನೀಂ ಯಜ್ಞೋಽಶ್ರಾಯಿ । ಯಜಮಾನ ಆಶ್ರಿತೋ ಭವತಿ । ತತ್ರ ದೃಷ್ಟಾಂತಃ । ಸೂರ್ಯೇ ನ ಚಕ್ಷುಃ । ಯಥಾ ಸೂರ್ಯೇ ಸರ್ವಸ್ಯ ಪ್ರೇರಕ ಆದಿತ್ಯೇ ಪ್ರಕಾಶಕಂ ತೇಜಃ ಸಮವೈತಿ ತದ್ವತ್ ॥

॥ ಪ್ರತಿಪದಾರ್ಥ ॥

**ಯತ್ ಹ**—ಯಾವಾಗ । **ನಮಸಾ**—ಹವಿಸ್ಸಿನೊಡನೆ । **ಅಗ್ನೌ**—ಅಗ್ನಿಯ ಸಮೀಪದಲ್ಲಿ । **ಬರ್ಹಿಃ**—ಆಸನಾರ್ಥವಾದ ದರ್ಭವು । **ವೃಞ್ಜೇ**—ಕತ್ತರಿಸಲ್ಪಡುವುದೋ (ಯಾವಾಗ) । **ಸುವೃಕ್ತಿಃ**—ದೋಷವರ್ಜಿತವಾದುದೂ । **ಘೃತವತೀ**—ಘೃತಪೂರ್ಣವಾದುದೂ ಆದ । **ಸ್ರುಕ್**—ಹವಿಷ್ಪಾತ್ರೆಯು । **ಅಯಾಮಿ**—ದರ್ಭಾಸನದ ಮೇಲೆ ಇಡಲ್ಪಡುವುದೋ (ಮತ್ತು ಯಾವಾಗ) । **ಪೃಥಿವ್ಯಾಃ**—ಭೂಮಿಯ । **ಸದನೇ**—ಕ್ಲುಪ್ತವಾದ ಸ್ಥಾನದಲ್ಲಿ । **ಸದ್ಮ**—ಯಜ್ಞವೇದಿಯು । **ಅಮ್ಯಕ್ಷಿ**—ಸ್ವೀಕೃತವಾಗುವುದೋ (ಆ ಒಡನೆಯೇ) ।

**ಸೂರ್ಯೇ**— ಆದಿತ್ಯನಲ್ಲಿ | **ಚಕ್ಷುಃ ನ**— ಪ್ರಕಾಶವು ಆಶ್ರಯವನ್ನು ಹೊಂದುವಂತೆ | **ಯಜ್ಞಃ**— ಯಜ್ಞವು | **ಅಶ್ರಾಯಿ**— ಯಜಮಾನನಲ್ಲಿ ಆಶ್ರಯವನ್ನು ಹೊಂದುತ್ತದೆ.

|| ಭಾವಾರ್ಥ ||

ಹವಿಸ್ಸಿನ ಸಮೇತರಾಗಿ ಅಗ್ನಿಯ ಸಮೀಪದಲ್ಲಿ ಆಸನಾರ್ಥವಾದ ದರ್ಭವು ಯಾವಾಗ ಕತ್ತರಿಸಲ್ಪಡುವುದೋ ಯಾವಾಗ ದೋಷವರ್ಜಿತವಾದುದೂ, ಘೃತಪೂರ್ಣವಾದುದೂ ಆದ ಹವಿಷ್ಪಾತ್ರೆಯು ದರ್ಭಾಸನದ ಮೇಲೆ ಇಡಲ್ಪಡುವುದೋ ಮತ್ತು ಯಾವಾಗ ಭೂಮಿಯ ಕ್ಲುಪ್ತವಾದ ಸ್ಥಾನದಲ್ಲಿ ಯಜ್ಞವೇದಿಯು ಸ್ವೀಕೃತವಾಗುವುದೋ ಆ ಒಡನೆಯೇ ಆದಿತ್ಯನಲ್ಲಿ ಪ್ರಕಾಶವು ಆಶ್ರಯವನ್ನು ಹೊಂದುವಂತೆ ಯಜ್ಞವು ಯಜಮಾನನಲ್ಲಿ ಆಶ್ರಯವನ್ನು ಹೊಂದುತ್ತದೆ.

## English Translation.

When the holy grass has been cut, (to be presented) to Agni, with the oblation, when the well-trimmed ladle, filled with butter, has been lifted up, then your receptacle (the alter) has been prepared on the surfaee of the earth, and the sacred rite is had recourse to as light (concentrates) in the sun.

|| ಸಂಹಿತಾಪಾಠಃ ||

ದಶಸ್ಯಾ ನಃ ಪುರ್ವಣೀಕ ಹೋತರ್ದೇವೇಭಿರಗ್ನೇ ಅಗ್ನಿಭಿರಿಧಾನಃ |
ರಾಯಃ ಸೂನೋ ಸಹಸೋ ವಾವಸಾನಾ ಅತಿ ಸ್ರಸೇಮ ವೃಜನಂ ನಾಂಹಃ ||

|| ಪದಪಾಠಃ ||

ದಶಸ್ಯ | ನಃ | ಪುರುऽಅನೀಕ | ಹೋತರಿತಿ | ದೇವೇಭಿಃ | ಅಗ್ನೇ | ಅಗ್ನಿऽಭಿಃ | ಇಧಾನಃ |
ರಾಯಃ | ಸೂನೋ ಇತಿ | ಸಹಸಃ | ವಾವಸಾನಾಃ | ಅತಿ | ಸ್ರಸೇಮ | ವೃಜನಂ | ನ | ಅಂಹಃ || ೬ ||

|| ಸಾಯಣಭಾಷ್ಯಂ ||

ಹೇ ಪುರ್ವಣೀಕ ಬಹುಜ್ವಾಲ ಹೋತರ್ದೇವಾನಾಮಾಹ್ವಾತರಗ್ನೇ ದೇವೇಭಿರ್ದೇವೈರ್ದ್ಯೋತಮಾನೈರನ್ಯೈರಗ್ನಿಭಿಸ್ತ್ವದ್ವಿಭೂತಿಭೂತೈಃ ಸಾರ್ಧಮಿಧಾನ ಇಧ್ಯಮಾನೋ ದೀಪ್ಯಮಾನಃ ಸನ್

**ನೋಽಸ್ಮಭ್ಯಂ ರಾಯೋ ಧನಾನಿ ದಶಸ್ಯ । ಪ್ರಯಚ್ಛ । ಹೇ ಸಹಸಃ ಸೂನೋ ಬಲಸ್ಯ ಪುತ್ರಾಗ್ನೇ ವಾವಸಾನಾ ಹವಿಷಾ ತ್ವಾಮಾಚ್ಛಾದಯಂತೋ ವಯಂ ವೃಜನಂ ನ ಶತ್ರುಮಿವಾಂಹಃ ಪಾಪಮತಿ ಸ್ರಸೇಮ । ಅತಿಗಚ್ಛೇಮ । ಅತಿಕ್ರಾಮೇಮೇತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಪುರ್ವಣೀಕ**—ಅನೇಕ ಜ್ವಾಲೆಗಳುಳ್ಳವನೂ । **ಹೋತಃ**—ಹೋತೃರೂಪನೂ ಆದ । **ಅಗ್ನೇ**—ಎಲೈ ಅಗ್ನಿಯೇ । **ದೇವೇಭಿಃ**—ಪ್ರಕಾಶಮಾನವೂ (ನಿನ್ನ ಅ[illegible]ಯವ ವಿಶೇಷಗಳೂ ಆದ) । **ಅಗ್ನಿಭಿಃ**—ಇತರ ಅಗ್ನಿಗಳೊಡನೆ । **ಇಧಾನಃ**—ಪ್ರಜ್ವಲಿತನಾಗಿ । **ನಃ**—[illegible] । **ರಾಯಃ**—ಧನಗಳನ್ನು । **ದಶಸ್ಯ**—ಕೊಡು । **ಸಹಸಃ ಸೂನೋ**—ಶಕ್ತಿಪುತ್ರನಾದ ಅಗ್ನಿಯೇ । [illegible] ಹವಿಸ್ಸಿನಿಂದ ನಿನ್ನನ್ನು ಹೊದ್ದಿಸುವ ನಾವು । **ವೃಜನಂ ನ**—ಶತ್ರುವಿನಂತೆ । **ಅಂಹಃ**—ಪ[illegible] । **ಅತಿ [illegible]ೇಮ**—ದಾಟುವಂತಾಗಲಿ.

॥ ಭಾವಾರ್ಥ ॥

ಅನೇಕ ಜ್ವಾಲೆಗಳುಳ್ಳವನೂ, ಹೋತೃರೂಪನೂ ಆದ ಎಲೈ ಅಗ್ನಿಯೇ. ಪ್ರಕಾಶಮಾನವೂ ನಿನ್ನ ಅವಯವ ವಿಶೇಷಗಳೂ ಆದ ಇತರ ಅಗ್ನಿಗಳೊಡನೆ ಪ್ರಜ್ವಲಿತನಾಗಿ ನಮಗೆ ಧನಗಳನ್ನು ಕೊಡು. ಶಕ್ತಿಪುತ್ರನಾದ ಅಗ್ನಿಯೇ, ಹವಿಸ್ಸಿನಿಂದ ನಿನ್ನನ್ನು ಹೊದ್ದಿಸುವ ನಾವು ಶತ್ರುವಿನಂತೆ ಪಾಪವನ್ನು ದಾಟುವಂತಾಗಲಿ.

## English Translation.

Agni, many-rayed, invoker of the gods, blazing with brilliant fires bestow upon us riches; and may we, Son of strength clothing you with oblations, overcome iniquity (like) a foe.

# ಹನ್ನೆರಡನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಮಧ್ಯೇ ಹೋತೇತಿ ಷಡೃಚಂ ದ್ವಾದಶಂ ಸೂಕ್ತಂ ಭರದ್ವಾಜಸ್ಯಾರ್ಷಂ ತ್ರೈಷ್ಟುಭಮಾಗ್ನೇಯಂ। ಮಧ್ಯ ಇತ್ಯನುಕ್ರಾಂತಂ ॥ ಪ್ರಾತರನುವಾಕಾಶ್ವಿನಶಸ್ತ್ರಯೋರುಕ್ತೋ ವಿನಿಯೋಗಃ ॥**

ಅನುವಾದವು— **ಮಧ್ಯೇ ಹೋತಾ**—ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹನ್ನೆರಡನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು; ಅಗ್ನಿಯು ದೇವತೆಯು; ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ— **ಮಧ್ಯೇ** ಎಂದು ಮೊದಲಾಗಿ ಹೇಳಿರುವುದು. ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಹಿಂದೆಯೇ ಹೇಳಲಾಗಿದೆ.

## ಸೂಕ್ತ—೧೨

ಮಂಡಲ—೬ ॥ ಅನುವಾಕ—೧ ॥ ಸೂಕ್ತ—೧೨ ॥
ಅಷ್ಟಕ—೪ ॥ ಅಧ್ಯಾಯ—೫ ॥ ವರ್ಗ—೧೪ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
॥ ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ॥
॥ ದೇವತಾ—ಅಗ್ನಿಃ ॥
॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಮಧ್ಯೇ ಹೋತಾ ದುರೋಣೇ ಬರ್ಹಿಷೋ ರಾಳಗ್ನಿಸ್ತೋದಸ್ಯ ರೋದಸೀ ಯಜಧ್ಯೈ ।
ಅಯಂ ಸ ಸೂನುಃ ಸಹಸ ಋತಾವಾ ದೂರಾತ್ಸೂರ್ಯೋ ನ ಶೋಚಿಷಾ ತತಾನ ॥ ೧ ॥

॥ ಪದಪಾಠಃ ॥

ಮಧ್ಯೇ । ಹೋತಾ । ದುರೋಣೇ । ಬರ್ಹಿಷಃ । ರಾಟ್ । ಅಗ್ನಿಃ । ತೋದಸ್ಯ । ರೋದಸೀ ಇತಿ । ಯಜಧ್ಯೈ ।
ಅಯಂ । ಸಃ । ಸೂನುಃ । ಸಹಸಃ । ಋತಽವಾ । ದೂರಾತ್ । ಸೂರ್ಯಃ । ನ । ಶೋಚಿಷಾ । ತತಾನ ॥

॥ ಸಾಯಣಭಾಷ್ಯಂ ॥

ಹೋತಾ ದೇವಾನಾಮಾಹ್ವಾತಾ ಬರ್ಹಿಷೋ ಯಜ್ಞಸ್ಯ ರಾಟ್ ರಾಜಾಗ್ನಿಸ್ತೋದಸ್ಯ । ತುದ್ಯತೇ ತಪಸಾ ಪೀಡ್ಯತ ಇತಿ ತೋದೋ ಯಜಮಾನಃ । ತಸ್ಯ ದುರೋಣೇ ಗೃಹೇ ಮಧ್ಯೇ ನಿಷೀದತೀತಿ ಶೇಷಃ । ಕಿಮರ್ಥಂ । ರೋದಸೀ ದ್ಯಾವಾಪೃಥಿವ್ಯೌ ಯಜಧ್ಯೈ ಯಷ್ಟುಂ । ಸ ತಾದೃಶೋಽಯಂ ಸಹಸಃ ಸೂನುಃ ಸಹಸಸ್ಪುತ್ರ ಋತಾವಾ ಸತ್ಯವಾನ್ಯಜ್ಞವಾನ್ವಾಗ್ನಿಃ ಸೂರ್ಯೋ ನ ಸೂರ್ಯ ಇವ ದೂರಾದ್ದೂರತ ಏವ ಶೋಚಿಷಾ ತೇಜಸಾ ತತಾನ । ಆತನೋತಿ । ವಿಸ್ತಾರಯತಿ । ದೂರದೇಶೇ ವರ್ತಮಾನೋಽಪಿ ಸೂರ್ಯ ಇವ ಸರ್ವಂ ಜಗದ್ವ್ಯಾಪಯತೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ಹೋತಾ**—ಹೋತೃರೂಪನೂ । **ಬರ್ಹಿಷಃ**—ಯಜ್ಞಕ್ಕೆ । **ರಾಟ್**—ಪ್ರಭುವೂ ಆದ । **ಅಗ್ನಿಃ**—ಅಗ್ನಿಯು । **ರೋದಸೀ**—ದ್ಯಾವಾಪೃಥಿವಿಗಳನ್ನು । **ಯಜಧ್ಯೈ**—ಪೂಜಿಸಲು । **ತೋದಸ್ಯ**—ಯಜಮಾನನ ।

**ದುರೋಣೇ**—ಯಜ್ಞಗೃಹದ । **ಮಧ್ಯೇ**—ಮಧ್ಯಭಾಗದಲ್ಲಿ (ಸ್ಥಿತನಾಗಿದ್ದಾನೆ) । **ಋತಾವಾ**—ಸತ್ಯವಂತನೂ । **ಸಹಸಃ ಸೂನುಃ**—ಶಕ್ತಿಪುತ್ರನೂ ಆದ । **ಸ ಅಯಂ**—ಅದೇ ಅಗ್ನಿಯು । **ಸೂರೋ ನ**—ದೂರಸ್ಥನಾದ ಸೂರ್ಯನು ಜಗತ್ತನ್ನೆಲ್ಲಾ ತನ್ನ ಕಿರಣಗಳಿಂದ ವ್ಯಾಪಿಸುವಂತೆ । **ದೂರಾತ್**—ಬಹುದೂರದಿಂದಲೇ । **ಶೋಚಿಷಾ**—ತನ್ನ ತೇಜಸ್ಸಿನಿಂದ । **ತತಾನ**—ವಿಸ್ತರಿಸಿ ವ್ಯಾಪಿಸುತ್ತಾನೆ.

ಹೋತೃರೂಪನೂ ಯಜ್ಞಕ್ಕೆ ಪ್ರಭುವೂ ಆದ ಅಗ್ನಿಯು ದ್ಯಾವಾಪೃಥಿವಿಗಳನ್ನು ಪೂಜಿಸಲು ಯಜಮಾನನ ಯಜ್ಞಗೃಹದ ಮಧ್ಯಭಾಗದಲ್ಲಿ ಸ್ಥಿತನಾಗಿದ್ದಾನೆ. ಸೂರ್ಯನು ದೂರದಲ್ಲಿದ್ದರೂ ಸಹ ತನ್ನ ಕಿರಣಗಳಿಂದ ಜಗತ್ತನ್ನೆಲ್ಲಾ ವ್ಯಾಪಿಸುವಂತೆ, ಸತ್ಯವಂತನೂ, ಶಕ್ತಿಪುತ್ರನೂ ಆದ ಅದೇ ಅಗ್ನಿಯು ಬಹುದೂರದಿಂದಲೇ ತನ್ನ ತೇಜಸ್ಸನ್ನು ವಿಸ್ತೃತವಾಗಿ ಹರಡಿ ಜಗತ್ತನ್ನು ಪ್ರಕಾಶಗೊಳಿಸುತ್ತಾನೆ.

## English Translation.

Agni, the inovker of the gods, the lord of sacrifice, abides in the dwelling of the institutor of the rite, to offer sacrifice to heaven and earrh; he the Son of strength, the observer of truth, has overspread (the world) from afar, like the sun, with light.

॥ ಸಂಹಿತಾಪಾಠಃ ॥

ಆ ಯಸ್ಮಿನ್ತ್ವೇ ಸ್ವಪಾಕೇ ಯಜತ್ರ ಯಕ್ಷದ್ರಾಜನ್ತ್ಸರ್ವತಾತೇವ ನು ದ್ಯೌಃ ।
ತ್ರಿಷಧಸ್ಥಸ್ತತರುಷೋ ನ ಜಂಹೋ ಹವ್ಯಾ ಮಘಾನಿ ಮಾನುಷಾ ಯಜ-
ಧ್ಯೈ ॥ ೨ ॥

॥ ಪದಪಾಠಃ ॥

ಆ । ಯಸ್ಮಿನ್ । ತ್ವೇ ಇತಿ । ಸು । ಅಪಾಕೇ । ಯಜತ್ರ । ಯಕ್ಷತ್ । ರಾಜನ್ । ಸರ್ವತಾತಾಽಇವ । ನು । ದ್ಯೌಃ ।
ತ್ರಿಽಸಧಸ್ಥಃ । ತತರುಷಃ । ನ । ಜಂಹಃ । ಹವ್ಯಾ । ಮಘಾನಿ । ಮಾನುಷಾ । ಯಜಧ್ಯೈ ॥ ೨ ॥

॥ ಸಾಯಣಭಾಷ್ಯಂ ॥

ದ್ಯೌಃ ಸ್ತೋತಾ ಸರ್ವತಾತೇವ । ಇವಶಬ್ದಃ ಪೂರಕಃ । ಯಜ್ಞನಾಮೈತತ್ । ಸರ್ವತಾತಾ ಸರ್ವೈಸ್ತಾಯಮಾನೇ ಯಜ್ಞೇ । ಯದ್ವಾ । ಸರ್ವಶಬ್ದಾತ್ಸ್ವಾರ್ಥಿಕಸ್ತಾತಿಲ್ಪ್ರತ್ಯಯಃ । ಸರ್ವಃ ಸ್ತೋತಾ

ಹೇ ಯಜತ್ರ ಯಷ್ಟವ್ಯ ರಾಜನ್ ರಾಜಮಾನಾಗ್ನೇ ಅಪಾಕೇ ಪ್ರಾಜ್ಞೇ ತ್ವೇ ಯಸ್ಮಿಂಸ್ತ್ವೇ ತ್ವಯಿ ಸು ಅತ್ಯಂತಂ ನು ಕ್ಷಿಪ್ರಮಾ ಯಕ್ಷತ್ ಆಯಜತಿ ಹವೀಂಷಿ ಜುಹೋತಿ ತ್ರಿಷಧಸ್ಥಸ್ತ್ರಿಷು ಲೋಕೇಷು ಸಹ ಸ್ಥಿತಃ । ಯದ್ವಾ । ಗಾರ್ಹಪತ್ಯಾದಿರೂಪೇಣ ತ್ರಿಧಾವಸ್ಥಿತಃ । ತಾದೃಶಸ್ತ್ವಂ ತತರುಷೋ ನ ತರಿತಾ ಸೂರ್ಯ ಇವ ಜಂಹಃ ಶೀಘ್ರಂ ಗಂತಾ ಭವ ॥ ಜಂಹ ಇತಿ ಹಂತೇರ್ಗತಿಕರ್ಮಣೋ ರೂಪಂ ॥ ಯದ್ವಾ ॥ ತೄ ಪ್ಲವನತರಣಯೋರಿತ್ಯಸ್ಮಾತ್ಕ್ವಸೌ ರೂಪಂ ತತರ್ವಾನಿತಿ । ತಸ್ಯ ಷಷ್ಠ್ಯಾಂ ರೂಪಮೇತತ್ತತರುಷ ಇತಿ ॥ ತರಿತುಃ ಸೂರ್ಯಸ್ಯೇವ ಜಂಹೋ ವೇಗಸ್ತವ ಭವತ್ವಿತ್ಯರ್ಥಃ । ಕಿಮರ್ಥಂ । ಮಘಾನಿ ಮಂಹನೀಯಾನಿ ಪ್ರಶಸ್ಯಾನಿ ಮಾನುಷಾ ಮನುಷ್ಯಾಣಾಂ ಸಂಬಂಧೀನಿ ಹವ್ಯಾ ಹವ್ಯಾನಿ ಹವೀಂಷಿ ಯಜಧ್ಯೈ ಯಷ್ಟುಂ ದೇವೇಭ್ಯೋ ದಾತುಂ ॥

॥ ಪ್ರತಿಪದಾರ್ಥ ॥

**ಯಜತ್ರ**—ಪೂಜ್ಯನೂ । **ರಾಜನ್**—ಪ್ರಕಾಶಮಾನನೂ ಆದ ಎಲೈ ಅಗ್ನಿಯೇ । **ಸರ್ವತಾತೇವ**—ಯಜ್ಞದಲ್ಲಿ । **ದ್ಯೌಃ**—ಸ್ತೋತೃವು । **ಅಪಾಕೇ**—ಪ್ರಾಜ್ಞನಾದ । **ಯಸ್ಮಿನ್ ತ್ವೇ**—ಯಾವ ನಿನ್ನಲ್ಲಿ । **ಸು**—ಅತಿಶಯವಾಗಿಯೂ । **ನು**—ಕ್ಷಿಪ್ರವಾಗಿಯೂ । **ಆ ಯಕ್ಷತ್**—ಹವಿಸ್ಸನ್ನರ್ಪಿಸುವನೋ । **ತ್ರಿಷಧಸ್ಥಃ**—ಮೂರು ಲೋಕಗಳನ್ನೂ ವ್ಯಾಪಿಸಿರುವ ಅಂತಹ ನೀನು । **ಮಾನುಷಾ**—ಮಾನವರಿಂದ ಅರ್ಪಿತವಾದವೂ । **ಮಘಾನಿ**—ಪೂಜ್ಯವಾದವೂ ಆದ । **ಹವ್ಯಾ**—ಹವಿಸ್ಸುಗಳನ್ನು । **ಯಜಧ್ಯೈ**—ದೇವತೆಗಳಿಗೆ ವಹಿಸಿ ಹಂಚಲು । **ತತುರುಷೋ ನ**—ಸೂರ್ಯನಂತೆ । **ಜಂಹಃ**—ಶೀಘ್ರಗಾಮಿಯಾಗು ।

॥ ಭಾವಾರ್ಥ ॥

ಪೂಜ್ಯನೂ ಪ್ರಕಾಶಮಾನನೂ ಆದ ಅಗ್ನಿಯೇ, ಯಜ್ಞದಲ್ಲಿ ಸ್ತೋತೃವು ಪ್ರಾಜ್ಞನಾದ ಯಾವ ನಿನ್ನಲ್ಲಿ ಅತಿಶಯವಾಗಿಯೂ ಕ್ಷಿಪ್ರವಾಗಿಯೂ ಹವಿಸ್ಸನ್ನರ್ಪಿಸುವನೋ, ಮೂರು ಲೋಕಗಳನ್ನೂ ವ್ಯಾಪಿಸಿರುವ ಅಂತಹ ನೀನು ಮಾನವರಿಂದ ಅರ್ಪಿತವಾದವೂ ಪೂಜ್ಯವಾದವೂ ಆದ ಹವಿಸ್ಸುಗಳನ್ನು ವಹಿಸಿ ದೇವತೆಗಳಿಗೆ ಹಂಚಲು ಸೂರ್ಯನಂತೆ ಶೀಘ್ರಗಾಮಿಯಾಗು.

## English Translation.

Adorable and resplendent Agni, to whom, mature in wisdom, the worshipper offers oblations at every sacred rite, you who are present in the three (worlds) move with the speed of the traverser (of the sky, the sun) to convey the valuable oblations of men (to the gods).

॥ ಸಂಹಿತಾಪಾಠಃ ॥

ತೇಜಿಷ್ಠಾ ಯಸ್ಯಾರತಿರ್ವನೇರಾಟ್ ತೋದೋ ಅಧ್ವನ್ನ ವೃಧಸಾನೋ
ಅದ್ಯೌತ್ ।
ಅದ್ರೋಘೋ ನ ದ್ರವಿತಾ ಚೇತತಿ ತ್ಮನ್ನಮರ್ತ್ಯೋಽವರ್ತ್ರ ಓಷಧೀಷು ॥

॥ ಪದಪಾಠಃ ॥

ತೇಜಿಷ್ಠಾ । ಯಸ್ಯ । ಅರತಿಃ । ವನೇಽರಾಟ್ । ತೋದಃ । ಅಧ್ವನ್ । ನ । ವೃಧಸಾನಃ । ಅದ್ಯೌತ್ ।
ಅದ್ರೋಘಃ । ನ । ದ್ರವಿತಾ । ಚೇತತಿ । ತ್ಮನ್ । ಅಮರ್ತ್ಯಃ । ಅವರ್ತ್ರಃ । ಓಷಧೀಷು ॥ ೩ ॥

॥ ಸಾಯಣಭಾಷ್ಯಂ ॥

ಯಸ್ಯಾಗ್ನೇರರತಿರ್ಗಂತ್ರೀ ಜ್ವಾಲಾ ತೇಜಿಷ್ಠಾತಿಶಯೇನ ತೇಜಸ್ವಿನೀ ಸತೀ ವನೇರಾಟ್ ದಾವರೂಪೇಣಾರಣ್ಯೇ ರಾಜಮಾನಾ ವರ್ತತೇ ವೃಧಸಾನೋ ವರ್ಧಮಾನಃ ಸೋಽಗ್ನಿಸ್ತೋದೋ ಅಧ್ವನ್ ನ। ತೋದಃ ಸರ್ವಸ್ಯ ಪ್ರೇರಕಃ ಸೂರ್ಯಃ। ಸ ಇವಾಧ್ವನಿ ಸ್ವಮಾರ್ಗೇಽಂತರಿಕ್ಷೇಽದ್ಯೌತ್ । ಪ್ರಕಾಶತೇ। ಅಪಿ ಚಾದ್ರೋಘೋ ನ ಅದ್ರೋಗ್ಧವ್ಯಃ । ಯದ್ವಾ। ಪ್ರಾಣರೂಪೇಣ ಸರ್ವೇಷಾಮದ್ರೋಗ್ಧಾ ವಾಯುರಿವ ಶಾದ್ವಶೋಽಮರ್ತ್ಯೋ ಮರಣರಹಿತಃ ಸೋಽಗ್ನಿರೋಷಧೀಷು। ಓಷಃ ಪಾಕ ಏಷು ಧೀಯತ ಇತ್ಯೋಷಧಯೋ ವನಾನಿ। ತೇಷು ದ್ರವಿತಾ ಶೀಘ್ರಗಾಮೀ ಸನ್ ಅವತ್ರಃ ಕೇನಾಪ್ಯವಾರಣೀಯಶ್ಚ ಭವನ್ ತ್ಮನ್ನಾತ್ಮನಾ ಸ್ವಪ್ರಕಾಶೇನೈವ ಚೇತತಿ। ಚೇತಯತಿ। ಸರ್ವಂ ಜಗತ್ ಜ್ಞಾಪಯತಿ ॥

॥ ಪ್ರತಿಪದಾರ್ಥ ॥

**ಯಸ್ಯ**—ಯಾವ ಅಗ್ನಿಯ । **ಅರತಿಃ**—ಪ್ರಸರಿಸುವ ಜ್ವಾಲೆಯು । **ತೇಜಿಷ್ಠಾ**—ಅತಿಶಯವಾದ ಕಾಂತಿಯುಳ್ಳದ್ದಾಗಿ । **ವನೇರಾಟ್**—ಅರಣ್ಯದಲ್ಲಿ ದಾವಾನಲರೂಪದಲ್ಲಿ ಪ್ರಕಾಶಿಸುವುದೋ। **ವೃಧಸಾನಃ**—ವೃದ್ಧಿಯನ್ನು ಹೊಂದುವ ಅದೇ ಅಗ್ನಿಯು । **ತೋದಃ**—ಸೂರ್ಯನು । **ಅಧ್ವನ್ನ**—ತನ್ನ ಸಂಚಾರಮಾರ್ಗವಾದ ಅಂತರಿಕ್ಷವಲ್ಲಿ ಪ್ರಕಾಶಿಸುವಂತೆ । **ಅದ್ಯೌತ್**—ಪ್ರಕಾಶಿಸುತ್ತಾನೆ । **ಅದ್ರೋಘೋ ನ**– ವಾಯುವಿನಂತೆ । **ಅಮರ್ತ್ಯಃ**—ಮರಣಧರ್ಮರಹಿತನಾದ ಅಗ್ನಿಯು । **ಓಷಧೀಷು**—ಓಷಧಿಗಳಲ್ಲಿ । **ದ್ರವಿತಾ** – ಶೀಘ್ರಗಾಮಿಯಾಗಿದ್ದುಕೊಂಡು । **ಅವರ್ತ್ರಃ**—ಅಪ್ರತಿಹತವಾದ ಪ್ರಸರವುಳ್ಳವನಾಗಿ । **ತ್ಮನ್**—ತನ್ನ ಸ್ವಪ್ರಕಾಶದಿಂದಲೇ । **ಚೇತತಿ**—ಜಗತ್ತನ್ನೆಲ್ಲಾ ಪ್ರಕಾಶಗೊಳಿಸುತ್ತಾನೆ.

॥ ಭಾವಾರ್ಥ ॥

ಯಾವ ಅಗ್ನಿಯ ಜ್ವಾಲೆಯು ಸರ್ವತ್ರ ಪ್ರಸರಿಸುತ್ತಾ ಅತಿಶಯವಾದ ಕಾಂತಿಯುಳ್ಳದ್ದಾಗಿ ಅರಣ್ಯದಲ್ಲಿ ದಾವಾನಲರೂಪದಲ್ಲಿ ಪ್ರಕಾಶಿಸುವುದೋ, ವೃದ್ಧಿಯನ್ನು ಹೊಂದತಕ್ಕ ಅಗ್ನಿಯು ತನ್ನ ಸಂಚಾರಮಾರ್ಗವಾದ

ಅಂತರಿಕ್ಷದಲ್ಲಿ ಪ್ರಕಾಶಿಸುವ ಸೂರ್ಯನಂತೆ ಕಂಗೊಳಿಸುತ್ತಾನೆ. ಮತ್ತು ವಾಯುವಿನಂತೆ ಮರಣಧರ್ಮರಹಿತನಾದ ಅಗ್ನಿಯು ಓಷಧಿಗಳಲ್ಲಿ ಶೀಘ್ರಪ್ರಸರಣವುಳ್ಳವನಾಗಿದ್ದುಕೊಂಡು ತನ್ನ ಪ್ರಭೆಯಿಂದ ಜಗತ್ತನ್ನೆಲ್ಲಾ ಪ್ರಕಾಶಗೊಳಿಸುತ್ತಾನೆ.

## English Translation.

He whose pure and spreading flame blazes in the forest, shines with increasing intensity, like the sun on his (celestial) path: rushing like the innoxious (wind) amongst the plants, immortal, unimpeded, he lights up (all things) by his own (lustre).

॥ ಸಂಹಿತಾಪಾಠಃ ॥

ಸಾಸ್ಮಾಕೇಭಿರೇತರೀ ನ ಶೂಷೈರಗ್ನಿಃ ಷ್ಟವೇ ದಮ ಆ ಜಾತವೇದಾಃ ।
ದ್ರ್ವನ್ನೋ ವನ್ವನ್ ಕ್ರತ್ವಾ ನಾರ್ವೋಸ್ರಃ ಪಿತೇವ ಜಾರಯಾಯಿ ಯಜ್ಞೈಃ ॥ ೪ ॥

॥ ಪದಪಾಠಃ ॥

ಸಃ । ಅಸ್ಮಾಕೇಭಿಃ । ಏತರಿ । ನ । ಶೂಷೈಃ । ಅಗ್ನಿಃ । ಸ್ತವೇ । ದಮೇ । ಆ । ಜಾತಽವೇದಾಃ ।
ದ್ರುಽಅನ್ನಃ । ವನ್ವನ್ । ಕ್ರತ್ವಾ । ನ । ಅರ್ವಾ । ಉಸ್ರಃ । ಪಿತಾಽಇವ । ಜಾರಯಾಯಿ । ಯಜ್ಞೈಃ ॥ ೪ ॥

॥ ಸಾಯಣಭಾಷ್ಯಂ ॥

ಜಾತವೇದಾ ಜಾತಧನೋ ಜಾತಪ್ರಜ್ಞೋ ವಾ ಸೋಽಗ್ನಿರಸ್ಮಾಕೇಭಿರಸ್ಮದೀಯೈಃ ಸ್ತೋತೃಭಿರೇತರೀ ನ । ಏತರಿ ಗಂತರಿ ಯಾಚಮಾನೇ ಪುರುಷೇ ವಿದ್ಯಮಾನಾನಿ ಸ್ತೋತ್ರಾಣಿ ಯಥಾತ್ಯಂತಂ ಸುಖಕರಾಣಿ ತಥಾ ಶೂಷೈಃ ಸುಖಕರೈಃ ಸ್ತೋತ್ರೈರ್ದಮೇಽಸ್ಮದೀಯೇ ಯಜ್ಞಗೃಹ ಆ ಆಭಿಮುಖ್ಯೇನ ಸ್ತವೇ । ಸ್ತೂಯತೇ । ಅಪಿ ಚ ದ್ರ್ವನ್ನಃ । ದ್ರುರ್ದ್ರುಮಃ । ಸ ಏವಾನ್ನಂ ಯಸ್ಯ ಸ ತಥೋಕ್ತಃ । ಅತ ಏವ ವನ್ವನ್ ವನಾನಿ ಸಂಭಜನ್ ಕ್ರತ್ವಾ ನ ಕ್ರತುನಾತ್ಮೀಯೇನ ಕರ್ಮಣಾ ಅರ್ವಾ ಗಂತಾ ಚ ಭವತಿ । ತತ್ರ ದೃಷ್ಟಾಂತಃ । ಉಸ್ರಃ ಪಿತೇವ । ಪಿತಾ ಪಾಲಯಿತಾ ವತ್ಸಾನಾಂ ಜನಕೋ ವೋಸ್ರೋ ವೃಷಭ ಇವ । ಸ ಯಥಾ ಮೈಥುನಾರ್ಥಂ ಶೀಘ್ರಂ ಗಚ್ಛತಿ ತದ್ವತ್ । ಯಜ್ಞೈರ್ಯಜ್ಞವದ್ಭಿರ್ಯಜಮಾನೈಶ್ಚ ಜಾರಯಾಯಿ । ಸ್ತೂಯತೇ ॥ ಜರತೇಃ ಸ್ತುತಿಕರ್ಮಣ ಏತದ್ರೂಪಂ ॥

॥ ಪ್ರತಿಪದಾರ್ಥ ॥

**ಜಾತವೇದಾಃ**—ಜಾತವೇದೋರೂಪನಾದ | **ಸಃ ಅಗ್ನಿಃ**—ಅದೇ ಅಗ್ನಿಯು | **ಅಸ್ಮಾಕೇಭಿಃ**—ಸ್ತೋತೃಗಳಾದ ನಮ್ಮಿಂದ | **ಏತರಿ ನ**—ಯಾಚಕನಲ್ಲಿರುವ ಉತ್ತಮವಾದ ಸ್ತುತಿಗಳಂತೆ | **ಶೂಷೈಃ**—ಸುಖಕರಗಳಾದ ಸ್ತೋತ್ರಗಳಿಂದ | **ದಮೇ**—ನಮ್ಮ ಯಜ್ಞಗೃಹದಲ್ಲಿ | **ಆ ಸ್ತವೇ**—ಅತಿಶಯವಾಗಿ ಸ್ತುತಿಸಲ್ಪಡುತ್ತಾನೆ | **ದ್ರ್ವನ್ನಃ**—ವೃಕ್ಷಭಕ್ಷಕನೂ | **ವನ್ವನ್**—ವನದಾಹಕನೂ ಆಗಿ | **ಉಸ್ರಃ ಪಿತೇವ**—ವೃಷಭದಂತೆ | **ಕ್ರತ್ವಾ ನ**—ತನ್ನ ಕರ್ಮನಿರತನಾಗಿ | **ಅರ್ವಾ**—ಶೀಘ್ರಗಾಮಿಯಾಗುತ್ತಾನೆ | **ಯಜ್ಞೈಃ**—ಯಜಮಾನರಿಂದ | **ಜಾರಯಾಯಿ**—(ಉತ್ಪತ್ನನಾಗುತ್ತಾನೆ) ಸ್ತುತಿಸಲ್ಪಡುತ್ತಾನೆ.

॥ ಭಾವಾರ್ಥ ॥

ಜಾತವೇದೋರೂಪನಾದ ಅಗ್ನಿಯು ಯಾಚಕನಲ್ಲಿರುವ ಉತ್ತಮವಾದ ಸ್ತುತಿಗಳಂತೆ ಸುಖಕರಗಳಾದ ಸ್ತುತಿಗಳನ್ನು ನಿರ್ಮಿಸಿರುವ ನಮ್ಮಿಂದ ಯಜ್ಞಗೃಹದಲ್ಲಿ ಅತಿಶಯವಾಗಿ ಸ್ತುತಿಸಲ್ಪಡುತ್ತಾನೆ. ವೃಕ್ಷಗಳೇ ಅನ್ನವಾಗಿ ಉಳ್ಳವನೂ, ವನಭಕ್ಷಕನೂ ಆಗಿ ವೃಷಭದಂತೆ ತನ್ನ ಕರ್ಮನಿರತನಾಗಿ ಶೀಘ್ರಗಾಮಿಯಾಗುತ್ತಾನೆ. ಮತ್ತು ಯಜ್ಞಕರ್ತರಿಂದ ಉತ್ಪನ್ನನಾಗಿ ಸ್ತುತಿಸಲ್ಪಡುತ್ತಾನೆ.

## English Translation.

Agni, who knows all that exists, is propitiated in our dwelling by our praises, like those gratifying (commendations which proceed) from one soliciting (a favour) : feeder upon trees, consumer of forests, impetuous in act as bull, the (progenitor of calves), he is glorified by the celebration of sacrifices.

॥ ವಿಶೇಷವಿಷಯಗಳು ॥

**ಜಾರಯಾಯಿ**—ಎಂಬ ಶಬ್ದಕ್ಕೆ ಯಾಸ್ಕರು-- **ಉಸ್ರ ಇವ ಗೋಪಿತಾಜಾಯಿ ಯಜ್ಞೈಃ** (ನಿ. ೬-೧೫) ಎಂದು ನಿರ್ವಚನವನ್ನು ಹೇಳಿದ್ದಾರೆ. **ಜಾರಯಾಯಿ** ಎಂದರೆ **ಅಜಾಯಿ**—ಉತ್ಪನ್ನನಾಗಿದ್ದಾನೆ ಎಂದರ್ಥವು. ವೃಷಭವು ತನ್ನ ಗೋವುಗಳ ಹಿಂಡನ್ನು ಯಾವ ರೀತಿ ರಕ್ಷಿಸುವುದೋ ಹಾಗೆಯೇ ಅಗ್ನಿಯು ತನ್ನನ್ನು ಯಜ್ಞಾರ್ಥವಾಗಿ ಪೂಜಿಸುವವರನ್ನು ರಕ್ಷಿಸುವುದಕ್ಕಾಗಿ ಈ ಯಜ್ಞಭೂಮಿಯಲ್ಲಿ ಉತ್ಪನ್ನನಾಗಿದ್ದಾನೆ ಎಂದಭಿಪ್ರಾಯವು.

॥ ಸಂಹಿತಾಪಾಠಃ ॥

ಅಧ ಸ್ಮಾಸ್ಯ ಪನಯಂತಿ ಭಾಸೋ ವೃಥಾ ಯತ್ತಕ್ಷದನುಯಾತಿ ಪೃಥ್ವೀಂ |
ಸದ್ಯೋ ಯಃ ಸ್ಯಂದ್ರೋ ವಿಷಿತೋ ಧವೀಯಾನೃಣೋ ನ ತಾಯುರತಿ
ಧನ್ವಾ ರಾಟ್ ॥ ೫ ॥

॥ ಪದಪಾಠಃ ॥

ಅಧ । ಸ್ಮ । ಅಸ್ಯ । ಪನಯಂತಿ । ಭಾಸಃ । ವೃಥಾ । ಯತ್ । ತಕ್ಷತ್ । ಅನುऽಯಾತಿ । ಪೃಥ್ವೀಂ । ಸದ್ಯಃ । ಯಃ । ಸ್ಯಂದ್ರಃ । ವಿऽಸಿತಃ । ಧವೀಯಾನ್ । ಋಣಃ । ನ । ತಾಯುಃ । ಅತಿ । ಧನ್ವ । ರಾಟ್॥

॥ ಸಾಯಣಭಾಷ್ಯಂ ॥

ಅಥಾಸ್ಮಿಂಲ್ಲೋಕೇ । ಸ್ಮೇತಿ ಪೂರಕಃ। ಅಸ್ಯಾಗ್ನೇರ್ಭಾಸೋ ರಶ್ಮೀನ್ ಪನಯಂತಿ । ಸ್ತೋತಾರಃ ಸ್ತುವಂತಿ । ಯದ್ಯದಾ ವೃಥಾನಾಯಾಸೇನ ತಕ್ಷತ್ ತಕ್ಷನ್ ತನೂಕುರ್ವನ್ ವನಾನಿ ಸಮ್ಯಗ್ದಹನ್ ಪೃಥ್ವೀಂ ವಿಸ್ತೀರ್ಣಾಮರಣ್ಯಭುವಮನುಯಾತ್ಯನುಗಚ್ಛತಿ ತದಾನೀಂ ಪನಯಂತೀತ್ಯನ್ವಯಃ । ಯೋऽಗ್ನಿಃ ಸ್ಯಂದ್ರಃ ಸ್ಯಂದನವಾನ್ ವಿಷಿತೋ ವಿಮುಕ್ತಃ ಪ್ರತಿಬಂಧರಹಿತಃ ಅತ ಏವ ಸದ್ಯಃ ಶೀಘ್ರಂ ಧವೀಯಾನ್ ಗಂತೃತಮೋ ಭವತಿ । ಕ ಇವ । ಋಣೋ ನ ತಾಯುಃ ॥ ಋಣೋऽತಿರ್ಗತಿಕರ್ಮಾ ॥ ತಾಯುರಿತಿ ಸ್ತೇನನಾಮ । ಯಥಾ ಸ್ತೇನಃ ಶೀಘ್ರಂ ಗಂತಾ ಭವತಿ ತದ್ವತ್ಸೋऽಯಮಗ್ನಿರ್ಧನ್ವ ಮರುಭೂಮಿಮತಿಕ್ರಮ್ಯ ರಾಟ್ । ರಾಜತೇ । ಯದ್ವಾ । ಧನ್ವಂತ್ಯಸ್ಮಾದಾಪ ಇತಿ ಧನ್ವಾಂತರಿಕ್ಷಂ । ಅತಿಶಯೇನಾಂತರಿಕ್ಷಮಾಕ್ರಮ್ಯ ರಾಜತೇ ॥

॥ ಪ್ರತಿಪದಾರ್ಥ ॥

**ಯತ್**—ಯಾವಾಗ । **ವೃಥಾ**—ಕೊಂಚವೂ ಶ್ರಮವಿಲ್ಲದೇ । **ತಕ್ಷತ್**—ವನಗಳನ್ನು ಪೂರ್ಣವಾಗಿ ದಹಿಸುತ್ತಾ । **ಪೃಥ್ವೀಂ**—ವನಪ್ರದೇಶಗಳನ್ನು । **ಅನುಯಾತಿ**—ಆಕ್ರಮಿಸುವನೋ (ಆ ಕಾಲದಲ್ಲಿ) । **ಅಧ**—ಈ ಲೋಕದಲ್ಲಿ । **ಅಸ್ಯ**—ಈ ಅಗ್ನಿಯ । **ಭಾಸಃ**—ರಶ್ಮಿಗಳನ್ನು । **ಪನಯಂತಿ**—ಸ್ತೋತೃಗಳು ಸ್ತುತಿಸುತ್ತಾರೆ । **ಯಃ**—ಅದೇ ಅಗ್ನಿಯು । **ಸ್ಯಂದ್ರಃ**—ಕಂಪನವುಳ್ಳವನಾಗಿಯೂ । **ವಿಷಿತಃ**—ಪ್ರತಿಬಂಧರಹಿತನಾಗಿಯೂ । **ಋಣೋ ನ ತಾಯುಃ**—ಚೋರನು ಧನವನ್ನು ಅಪಹರಿಸಿಕೊಂಡು ಓಡುವಂತೆ । **ಸದ್ಯಃ**—ಶೀಘ್ರವಾಗಿ । **ಧವೀಯಾನ್**—ಓಡುತ್ತಾ ಸರ್ವತ್ರ ಪ್ರಸರಿಸುವನು । **ಧನ್ವ**—ಮರುಭೂಮಿಗಳನ್ನೆಲ್ಲಾ ಆಕ್ರಮಿಸಿ । **ಅತಿ ರಾಟ್**—ಅತ್ಯಂತ ಪ್ರಕಾಶಪಡಿಸುತ್ತಾನೆ.

॥ ಭಾವಾರ್ಥ ॥

ಅಗ್ನಿಯು ಕೊಂಚವೂ ಪ್ರಯಾಸವಿಲ್ಲದೇ ವನಗಳನ್ನು ಪೂರ್ಣವಾಗಿ ದಹಿಸುತ್ತಾ ವನಪ್ರದೇಶಗಳನ್ನು ಆಕ್ರಮಿಸುವ ಕಾಲದಲ್ಲಿ ಈ ಲೋಕದ ಜನಗಳೆಲ್ಲಾ ಅಗ್ನಿಯ ರಶ್ಮಿಗಳನ್ನು ಪ್ರಶಂಸಿಸುತ್ತಾರೆ. ಅದೇ ಅಗ್ನಿಯು ಕಂಪನವುಳ್ಳವನಾಗಿಯೂ. ಪ್ರತಿಬಂಧಕರಹಿತನಾಗಿಯೂ ಚೋರನು ಧನವನ್ನು ಅಪಹರಿಸಿಕೊಂಡು ಓಡುವಂತೆ ಶೀಘ್ರವಾಗಿ ಸರ್ವತ್ರ ಪ್ರಸರಿಸುವನು. ಮತ್ತು ಮರುಭೂಮಿಗಳನ್ನೆಲ್ಲಾ ಆಕ್ರಮಿಸಿ ಅತ್ಯಂತ ಪ್ರಕಾಶಪಡಿಸುತ್ತಾನೆ.

## English Translation.

Th y glorify his flames in this world: when, easily thinning the woods, they spread over the earth: he, who glides along unarrested, and rapid in movement as a fast flying thief, shines over the desert.

॥ ಸಂಹಿತಾಪಾಠಃ ॥

ಸ ತ್ವಂ ನೋ ಅರ್ವನ್ನಿದಾಯಾ ವಿಶ್ವೇಭಿರಗ್ನೇ ಅಗ್ನಿಭಿರಿಧಾನಃ ।
ವೇಷಿ ರಾಯೋ ವಿ ಯಾಸಿ ದುಚ್ಛುನಾ ಮದೇಮ ಶತಹಿಮಾಃ ಸುವೀರಾಃ ॥

॥ ಪದಪಾಠಃ ॥

ಸಃ । ತ್ವಂ । ನಃ । ಅರ್ವನ್ । ನಿದಾಯಾಃ । ವಿಶ್ವೇಭಿಃ । ಅಗ್ನೇ । ಅಗ್ನಿಽಭಿಃ । ಇಧಾನಃ ।
ವೇಷಿ । ರಾಯಃ । ವಿ । ಯಾಸಿ । ದುಚ್ಛುನಾಃ । ಮದೇಮ । ಶತಽಹಿಮಾಃ । ಸುಽವೀರಾಃ ॥ ೬ ॥

॥ ಸಾಯಣಭಾಷ್ಯಂ ॥

ಹೇ ಅರ್ವನ್ ಗಂತರಗ್ನೇ ಸ ತಾದೃಶಸ್ತ್ವಂ ನಿದಾಯಾ ನಿಂದಿತ್ರ್ಯಾಃ ಪ್ರಜಾಯಾ ನಿಂದಾಯಾ ಏವ ವಾ ಪಾಹೀತಿ ಶೇಷಃ । ಕಥಂಭೂತಃ ಸನ್ । ವಿಶ್ವೇಭಿಃ ಸರ್ವೈರಗ್ನಿಭಿಸ್ತ್ವಚ್ಛಾಖಾಭೂತೈರಿಧಾನ ಇಧ್ಯಮಾನಃ ಸನ್। ರಾಯೋ ಧನಾನಿ ಚಾಸ್ಮಾನ್ ವೇಷಿ । ಗಮಯ । ಯದ್ವಾ । ಹವಿರ್ಲಕ್ಷಣಾನಿ ಧನಾನಿ ವೇಷಿ । ಕಾಮಯಸೇ । ದುಚ್ಛುನಾ ದುಃಖಕಾರಿಣೀಃ ಶತ್ರುಸೇನಾ ವಿ ಯಾಸಿ ಚ । ವಿವಿಧಂ ಗಮಯಸಿ ಚ । ವಯಂ ಚ ಸುವೀರಾಃ ಶೋಭನಪುತ್ರಪೌತ್ರಾಃ ಸಂತಃ ಶತಹಿಮಾಃ ಶತಂ ಸಂವತ್ಸರಾನ್ಮದೇಮ । ಮೋದೇಮ ॥

॥ ಪ್ರತಿಪದಾರ್ಥ ॥

**ಅರ್ವನ್**—ಶೀಘ್ರಗಾಮಿಯಾದ । **ಅಗ್ನೇ**—ಎಲೈ ಅಗ್ನಿಯೇ । **ಸಃ**—ಮೇಲೆ ವರ್ಣಿತವಾದ ಗುಣಗಳುಳ್ಳ । **ತ್ವಂ**—ನೀನು । **ವಿಶ್ವೇಭಿಃ**—ಸಮಸ್ತರೂ ನಿನ್ನ ಶಾಖಾರೂಪರೂ ಆದ । **ಅಗ್ನಿಭಿಃ**—ಅಗ್ನಿಗಳೊಂದಿಗೆಲ್ಲಾ । **ಇಧಾನಃ**—ಪ್ರಜ್ವಲಿತನಾಗಿ । **ನಃ**—ನಮ್ಮನ್ನು । **ನಿದಾಯಾಃ**—ನಿಂದೆಗಳಿಂದ ತಪ್ಪಿಸು । **ರಾಯಃ**—ಧನಗಳನ್ನು । **ವೇಷಿ**—ಒದಗಿಸು । **ದುಚ್ಛುನಾಃ**—ದುಃಖಕಾರಿಗಳಾದ ಶತ್ರುಗಳನ್ನು । **ವಿ ಯಾಸಿ**—ದೂರಕ್ಕೆ ಚದುರಿಸು । (**ವಯಂ**—ನಾವು) । **ಸುವೀರಾಃ**—ವೀರಪುತ್ರರೊಡಗೂಡಿ । **ಶತಹಿಮಾಃ**—ನೂರು ಸಂವತ್ಸರಗಳು । **ಮದೇಮ**—ಹರ್ಷದಿಂದಿರುವಂತಾಗಲಿ

॥ ಭಾವಾರ್ಥ ॥

ಶೀಘ್ರಗಾಮಿಯಾದ ಎಲೈ ಅಗ್ನಿಯೇ, ಮೇಲೆ ವರ್ಣಿತವಾದ ಗುಣಗಳುಳ್ಳ ನೀನು ನಿನ್ನ ಶಾಖಾರೂಪರಾದ (ಆಹವನೀಯ, ಗಾರ್ಹಪತ್ಯ ಮೊದಲಾದ) ಸಮಸ್ತ ಅಗ್ನಿಗಳೊಂದಿಗೂ ಪ್ರಜ್ವಲಿತನಾಗಿ ನಮ್ಮನ್ನು ನಿಂದೆಗಳಿಂದ ತಪ್ಪಿಸು ಮತ್ತು ನಮಗೆ ಧನಗಳನ್ನು ಒದಗಿಸಿ ಕೊಡು. ದುಃಖಕಾರಿಗಳಾದ ಶತ್ರುಗಳನ್ನು ದೂರಕ್ಕೆ ಚದುರಿಸು. ನಾವು ವೀರಪುತ್ರರೊಡಗೂಡಿ ನೂರುಸಂವತ್ಸರಗಳವರೆಗೆ ಹರ್ಷದಿಂದಿರುವಂತಾಗಲಿ.

## English Translation.

Quick-moving Agni, kindled with all (your) fires, (guard) us from reproach : you bestow riches, you scatter adversaries : may we, blessed with excellent male descendants, enjoy happiness for a hundred winters.

# ಹದಿಮೂರನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ತ್ವದ್ವಿಶ್ವೇತಿ ಷಡೃಚಂ ತ್ರಯೋದಶಂ ಸೂಕ್ತಂ ಭರದ್ವಾಜಸ್ಯಾರ್ಷಂ ತ್ರೈಷ್ಟುಭಮಾಗ್ನೇಯಂ । ತ್ವದ್ವಿಶ್ವೇತ್ಯನುಕ್ರಾಂತಂ ॥ ಪ್ರಾತರನುವಾಕಾಶ್ವಿನಶಸ್ತ್ರಯೋರುಕ್ತೋ ವಿನಿಯೋಗಃ ॥**

ಅನುವಾದವು—**ತ್ವದ್ವಿಶ್ವಾ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹದಿಮೂರನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು ; ಅಗ್ನಿಯು ದೇವತೆಯು ; ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ **ತ್ವದ್ವಿಶ್ವಾ** ಎಂದು ಮೊದಲಾಗಿ ಹೇಳಿರುವುದು. ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಹಿಂದೆಯೇ ಹೇಳಲಾಗಿದೆ.

## ಸೂಕ್ತ—೧೩

ಮಂಡಲ—೬ ॥ ಅನುವಾಕ—೧ ॥ ಸೂಕ್ತ—೧೩ ॥

ಅಷ್ಟಕ—೪ ॥ ಅಧ್ಯಾಯ—೫ ॥ ವರ್ಗ—೧೫ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥

॥ ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ॥

॥ ದೇವತಾ—ಅಗ್ನಿಃ ॥

॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ತ್ವದ್ವಿಶ್ವಾ ಸುಭಗ ಸೌಭಗಾನ್ಯಗ್ನೇ ವಿ ಯಂತಿ ವನಿನೋ ನ ವಯಾಃ ।
ಶ್ರುಷ್ಟೀ ರಯಿರ್ವಾಜೋ ವೃತ್ರತೂರ್ಯೇ ದಿವೋ ವೃಷ್ಟಿರೀಡ್ಯೋ ರೀತಿ-
ರಪಾಂ ॥ ೧ ॥

॥ ಪದಪಾಠಃ ॥

ತ್ವತ್ । ವಿಶ್ವಾ । ಸುಽಭಗ । ಸೌಭಗಾನಿ । ಅಗ್ನೇ । ವಿ । ಯಂತಿ । ವನಿನಃ । ನ । ವಯಾಃ ।

ಶ್ರುಷ್ಟೀ । ರಯಿಃ । ವಾಜಃ । ವೃತ್ರಽತೂರ್ಯೇ । ದಿವಃ । ವೃಷ್ಟಿಃ । ಈಡ್ಯಃ । ರೀತಿಃ । ಅಪಾಂ ॥ ೧ ॥

॥ ಸಾಯಣಭಾಷ್ಯಂ ॥

ಹೇ ಸುಭಗ ಶೋಭನಧನಾಗ್ನೇ ವಿಶ್ವಾ ವಿಶ್ವಾನಿ ಸರ್ವಾಣಿ ಸೌಭಗಾನಿ ಧನಾನಿ ತ್ವತ್ತ್ವತ್ತೋ ವಿ ಯಂತಿ । ವಿವಿಧಂ ನಿರ್ಗಚ್ಛಂತಿ । ಹಿರಣ್ಯಮೂಲತ್ವಾತ್ಸರ್ವೇಷಾಂ ಧನಾನಾಂ ಹಿರಣ್ಯಂ ಚಾಗ್ನೇಃ ಸಕಾಶಾದುತ್ಪನ್ನಂ । ತಸ್ಯ ರೇತಃ ಪರಾಪತತ್ತದ್ಧಿರಣ್ಯಮಭವತ್ । ತೈ. ಬ್ರಾ. ೧-೧-೩-೮ । ಇತಿ ಶ್ರುತೇಃ । ನಿರ್ಗಮನೇ ದೃಷ್ಟಾಂತಃ । ವನಿನೋ ನ ವಯಾಃ । ಯಥಾ ವೃಕ್ಷಾಚ್ಛಾಖಾ ವಿವಿಧಂ ನಿರ್ಗಚ್ಛಂತಿ ತದ್ವತ್। ತಥಾ ರಯಿಃ ಪಶುಸಂಘಶ್ಚ ತ್ವತ್ಸಕಾಶಾದೇವ ಶ್ರುಷ್ಟೀ ಕ್ಷಿಪ್ರಂ ವ್ಯೇತಿ । ನಿರ್ಗಚ್ಛತಿ । ಪಶವೋ ವೈ ರಯಿಃ ಪಶೂನೇವಾವರುಂಧ ಇತಿ ತೈತ್ತಿರೀಯಕಂ । ವೃತ್ರತೂರ್ಯೇ ವೃತ್ರಾಣಾಂ ಶತ್ರೂಣಾಂ ಹಿಂಸಕೇ ಸಂಗ್ರಾಮೇ ಶತ್ರೂನ್ ಜೇತುಂ ವಾಜೋ ಬಲಂ ಚ ತ್ವತ್ತೋ ವ್ಯೇತಿ । ದಿವೋಽಂತರಿಕ್ಷಾದ್ಯಾ ವೃಷ್ಟಿಃ ಸಾಪಿ ತ್ವತ್ತ ಏವ ವ್ಯೇತಿ । ಅಗ್ನೌ ಪ್ರಾಸ್ತಾಹುತಿಃ ಸಮ್ಯಗಾದಿತ್ಯಮುಪತಿಷ್ಠತೇ । ಆದಿತ್ಯಾಜ್ಜಾಯತೇ ವೃಷ್ಟಿರ್ವೃಷ್ಟೇರನ್ನಂ ತತಃ ಪ್ರಜಾ ಇತಿ ಸ್ಮರಣಾತ್ । ಅತಸ್ತ್ವಮೀಡ್ಯಃ ಸರ್ವೈಃ ಸ್ತುತ್ಯಃ ಸನ್ ಅಪಾಮುದಕಾನಾಂ ರೀತಿರ್ಗಮಯಿತಾ ಭವಸಿ ॥

॥ ಪ್ರತಿಪದಾರ್ಥ ॥

**ಸುಭಗ**—ಶ್ರೇಷ್ಠವಾದ ಧನವುಳ್ಳ । **ಅಗ್ನೇ**—ಎಲೈ ಅಗ್ನಿಯೇ । **ವಿಶ್ವಾ**—ಸಮಸ್ತವಾದ । **ಸೌಭಗಾನಿ**—ಧನಗಳೂ ಸಹ । **ವಯಾಃ**—ಪಕ್ಷಿಗಳು । **ವನಿನಃ ನ**—ವೃಕ್ಷದಿಂದ ಹೊರಕ್ಕೆ ಹೋಡುವಂತೆ । **ತ್ವತ್**—ನಿನ್ನಿಂದಲೇ । **ವಿ ಯಂತಿ**—ಹೊರಕ್ಕೆ ಹೊರಡುತ್ತವೆ । **ರಯಿಃ**—ಪಶ್ವಾದಿಧನವೂ । **ಶ್ರುಷ್ಟೀ**—ನಿನ್ನಿಂದಲೇ ಪ್ರಾದುರ್ಭೂತವಾಗತಕ್ಕದ್ದು । **ವೃತ್ರತೂರ್ಯೇ**—ವೃತ್ರನಾಶಕವಾದ ಸಂಗ್ರಾಮದಲ್ಲಿ । **ವಾಜಃ**—ಬಲವೂ । **ದಿವಃ**—ಅಂತರಿಕ್ಷದಿಂದ । **ವೃಷ್ಟಿಃ**—ವೃಷ್ಟಿಯೂ (ನಿನ್ನ ಸಂಕಲ್ಪದಿಂದಲೇ ಉತ್ಪನ್ನವಾಗತಕ್ಕವು) । **ಅಪಾಂ**—ಉದಕಗಳಿಗೆ । **ರೀತಿಃ**—ಪ್ರೇರಕನಾದ ನೀನು । **ಈಡ್ಯಃ**—ಸ್ತುತ್ಯನಾಗಿದ್ದೀಯೆ

॥ ಭಾವಾರ್ಥ ॥

ಶ್ರೇಷ್ಠವಾದ ಧನವುಳ್ಳ ಎಲೈ ಅಗ್ನಿಯೇ, ವೃಕ್ಷದಿಂದ ಪಕ್ಷಿಗಳು ಹೊರಕ್ಕೆ ಹೊರಡುವಂತೆ ಸಮಸ್ತವಾದ ಧನಗಳೂ ಸಹ ನಿನ್ನಿಂದಲೇ ಪ್ರಾದುರ್ಭೂತವಾಗುತ್ತವೆ ಪಶ್ವಾದಿಧನಗಳೂ, ವೃತ್ರನಾಶಕವಾದ ಸಂಗ್ರಾಮಕ್ಕೆ ಬೇಕಾದ ಬಲವೂ ಅಂತರಿಕ್ಷದಿಂದ ವೃಷ್ಟಿಯೂ ನಿನ್ನ ಸಂಕಲ್ಪದಿಂದಲೇ ಉತ್ಪನ್ನವಾಗತಕ್ಕವು. ಉದಕಗಳಿಗೆ ಪ್ರೇರಕನಾದ ನೀನು ಅತ್ಯಂತ ಸ್ತುತ್ಯನಾಗಿದ್ದೀಯೆ.

## English Translation.

Auspicious Agni, all good things proceed from you, like branches (from the trunk) of a tree, renowned riches, vigour for the destruction of foes, the rain of heaven : you are to be glorified, the sender of the waters.

॥ ಸಂಹಿತಾಪಾಠಃ ॥

ತ್ವಂ ಭಗೋ ನ ಆ ಹಿ ರತ್ನಮಿಷೇ ಪರಿಜ್ಮೇವ ಕ್ಷಯಸಿ ದಸ್ಮವರ್ಚಾಃ ।
ಅಗ್ನೇ ಮಿತ್ರೋ ನ ಬೃಹತ ಋತಸ್ಯಾಸಿ ಕ್ಷತ್ತಾ ವಾಮಸ್ಯ ದೇವ ಭೂರೇಃ ॥೨॥

॥ ಪದಪಾಠಃ ॥

ತ್ವಂ । ಭಗಃ । ನಃ । ಆ । ಹಿ । ರತ್ನಂ । ಇಷೇ । ಪರಿಜ್ಮಾಽಇವ । ಕ್ಷಯಸಿ । ದಸ್ಮಽವರ್ಚಾಃ ।
ಅಗ್ನೇ । ಮಿತ್ರಃ । ನ । ಬೃಹತಃ । ಋತಸ್ಯ । ಅಸಿ । ಕ್ಷತ್ತಾ । ವಾಮಸ್ಯ । ದೇವ । ಭೂರೇಃ ॥ ೨ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಭಗೋ ಭಜನೀಯಸ್ತ್ವಂ ನೋಽಸ್ಮಭ್ಯಂ ರತ್ನಂ ರಮಣೀಯಂ ಧನಮೇಷೇ । ಆಗಮಯ । ಪ್ರಯಚ್ಛ ॥ ಇಣ್ ಗತಾವಿತ್ಯಸ್ಯೈತದ್ರೂಪಂ । ಹೀತಿ ಪೂರಕಃ ॥ ದಸ್ಮವರ್ಚಾ ದರ್ಶನೀಯದೀಪ್ತಿಸ್ತ್ವಂ ಪರಿಜ್ಮೇವ ಪರಿತೋ ಗಂತಾ ವಾಯುರಿವ ಕ್ಷಯಸಿ । ಸರ್ವತ್ರ ನಿವಸಸಿ । ಯದ್ವಾ । ಕ್ಷಯತಿರೈಶ್ವರ್ಯಕರ್ಮಾ । ಸರ್ವಸ್ಯೇಶಿಷೇ । ಹೇ ಅಗ್ನೇ ಮಿತ್ರೋ ನ ಪ್ರಮೀತೇಸ್ತ್ರಾಯಕೋ ದೇವ ಇವ ಬೃಹತೋ ಮಹತ ಋತಸ್ಯೋದಕಸ್ಯ ಯಜ್ಞಸ್ಯ ವಾ ಕ್ಷತ್ತಾಸಿ ॥ ಕ್ಷದತಿರತ್ರ ದಾನಕರ್ಮಾ ॥ ದಾತಾ ಭವಸಿ । ತಥಾ ಹೇ ದೇವ ದ್ಯೋತಮಾನಾಗ್ನೇ ಭೂರೇರ್ಬಹುಲಸ್ಯ ವಾಮಸ್ಯ ವನನೀಯಸ್ಯ ಧನಸ್ಯ ಚ ದಾತಾ ಭವಸೀತ್ಯನುಷಂಗಃ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಭಗಃ**—ಪೂಜ್ಯನಾದ । **ತ್ವಂ**—ನೀನು । **ನಃ**—ನಮಗೆ । **ರತ್ನಂ**—ರಮಣೀಯವಾದ ಧನವನ್ನು । **ಆ ಇಷೇ**—ದಯಪಾಲಿಸು । **ದಸ್ಮವರ್ಚಾಃ**—ಆಕರ್ಷಕವಾದ ಕಾಂತಿಯುಳ್ಳ ನೀನು । **ಪರಿಜ್ಮೇವ**—ಸರ್ವವ್ಯಾಪಕವಾದ ವಾಯುವಿನಂತೆ । **ಕ್ಷಯಸಿ**—(ಎಲ್ಲೆಲ್ಲೂ) ವಾಸಿಸುತ್ತೀಯೆ । **ಅಗ್ನೇ**—ಎಲೈ ಅಗ್ನಿಯೇ । **ಮಿತ್ರೋ ನ**—ಮಿತ್ರದೇವನಂತೆ । **ಬೃಹತಃ**—ಮಹತ್ತಾದ । **ಋತಸ್ಯ**—ಉದಕಕ್ಕೆ । **ಕ್ಷತ್ತಾ ಅಸಿ**—ದಾತೃವಾಗಿದ್ದೀಯೆ । **ದೇವ**—ಪ್ರಕಾಶಮಾನನಾದ ಎಲೈ ಅಗ್ನಿಯೇ । **ಭೂರೇಃ**—ಅತ್ಯಧಿಕವಾದುದೂ । **ವಾಮಸ್ಯ**—ಆಕರ್ಷಕವಾದುದೂ ಆದ ಧನಕ್ಕೆ (ದಾತೃವಾಗಿದ್ದೀಯೆ).

॥ ಭಾವಾರ್ಥ ॥

ಎಲೈ ಅಗ್ನಿಯೇ, ಪೂಜ್ಯನಾದ ನೀನು ನಮಗೆ ರಮಣೀಯವಾದ ಧನವನ್ನು ದಯಪಾಲಿಸು. ಆಕರ್ಷಕವಾದ ಕಾಂತಿಯುಳ್ಳ ನೀನು ಸರ್ವವ್ಯಾಪಕವಾದ ವಾಯುವಿನಂತೆ ಎಲ್ಲೆಲ್ಲೂ ವಾಸಿಸುತ್ತೀಯೆ. ಎಲೈ ಅಗ್ನಿಯೇ, ಮಿತ್ರದೇವನಂತೆ ನೀನು ಮಹತ್ತಾದ ಉದಕಕ್ಕೆ ದಾತೃವಾಗಿದ್ದೀಯೆ. ಪ್ರಕಾಶಮಾನನಾದ ಎಲೈ ಅಗ್ನಿಯೇ, ಅತ್ಯಧಿಕವಾದುದೂ, ಆಕರ್ಷಕವಾದುದೂ ಆದ ಧನಕ್ಕೆ ನೀನು ದಾತೃವಾಗಿದ್ದೀಯೆ.

English Translation.

You are adorable; bestow upon us precious wealth : beautiful with radiance, you pass (around) like the ciricumambient (wind): you, divine Agni, are like Mitra, the giver of abundant water and ample wealth.

॥ ಸಂಹಿತಾಪಾಠಃ ॥

ಸ ಸತ್ಪತಿಃ ಶವಸಾ ಹಂತಿ ವೃತ್ರಮಗ್ನೇ ವಿಪ್ರೋ ವಿ ಪಣೇರ್ಭರ್ತಿ ವಾಜಂ ।
ಯಂ ತ್ವಂ ಪ್ರಚೇತ ಋತಜಾತ ರಾಯಾ ಸಜೋಷಾ ನಪ್ತ್ರಾಪಾಂ ಹಿನೋಷಿ ॥ ೩ ॥

॥ ಪದಪಾಠಃ ॥

ಸಃ । ಸತ್ಽಪತಿಃ । ಶವಸಾ । ಹಂತಿ । ವೃತ್ರಂ । ಅಗ್ನೇ । ವಿಪ್ರಃ । ವಿ । ಪಣೇಃ । ಭರ್ತಿ । ವಾಜಂ ।
ಯಂ । ತ್ವಂ । ಪ್ರಽಚೇತಃ । ಋತಽಜಾತಃ । ರಾಯಾ । ಸಽಜೋಷಾಃ । ನಪ್ತ್ರಾ । ಅಪಾಂ । ಹಿನೋಷಿ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಸತ್ಪತಿಃ ಸತಾಂ ಪಾಲಯಿತಾ ಸ ಪುರುಷೋ ವೃತ್ರಮಾವರಕಂ ಶತ್ರುಂ ಶವಸಾ ಬಲೇನ ಹಂತಿ। ಸ ಚ ವಿಪ್ರೋ ಮೇಧಾವೀ ಸನ್ ಪಣೇರ್ವಣಿಜ ಏತನ್ನಾಮ್ನೋಽಸುರಸ್ಯ ವಾಜಮನ್ನಂ ಬಲಂ ವಾ ವಿ ಭರ್ತಿ । ವಿಯುಜ್ಯ ಹರತಿ ॥ ಹೃಗ್ರಹೋರ್ಭ ಇತಿ ಭತ್ವಂ ॥ ಹೇ ಪ್ರಚೇತಃ ಪ್ರಕೃಷ್ಟಜ್ಞಾನ ಋತಜಾತ । ಋತಮಿತಿ ಯಜ್ಞನಾಮ । ತದರ್ಥಂ ಜಾತಾಗ್ನೇ ಅಪಾಂ ನಪ್ತ್ರಾ ನ ಪಾತಯಿತ್ರಾ ಪುತ್ರೇಣ ಮಧ್ಯಮಸ್ಥಾನೇನ ವೈದ್ಯುತಾಗ್ನಿನಾ ಸಜೋಷಾಃ ಸಂಗತಸ್ತ್ವಂ ಯಂ ಪುರುಷಂ ರಾಯಾ॥ ಚತುರ್ಥ್ಯರ್ಥೇ ತೃತೀಯಾ ॥ ಧನಾರ್ಥಂ ಹಿನೋಷಿ ಪ್ರೇರಯಸಿ ಸ ಹಂತೀತ್ಯನ್ವಯಃ ॥

॥ ಪ್ರತಿಪದಾರ್ಥ ॥

**ಪ್ರಚೇತಃ**—ಉತ್ತಮವಾದ ಜ್ಞಾನವುಳ್ಳವನೂ । **ಋತಜಾತ**—ಯಜ್ಞಾರ್ಥವಾಗಿ ಉತ್ಪನ್ನನಾದವನೂ ಆದ । **ಅಗ್ನೇ**—ಅಗ್ನಿಯೇ । **ತ್ವಂ**—ನೀನು । **ಅಪಾಂ ನಪ್ತ್ರಾ**—ಉದಕಗಳ ಪಾಲಕನಾದ ವೈದ್ಯುತಾಗ್ನಿಯೊಡನೆ । **ಸಜೋಷಾಃ**—ಕೂಡಿಕೊಂಡು । **ಯಂ**—ಯಾವ ಯಜಮಾನನನ್ನು । **ರಾಯಾ** - ಧನಾರ್ಥವಾಗಿ । **ಹಿನೋಷಿ**—ಪ್ರೇರಿಸುತ್ತೀಯೋ । **ಸತ್ಪತಿಃ**—ಸಜ್ಜನರ ಪಾಲಕನಾದ । **ಸಃ**—ಅದೇ ಯಜಮಾನನು । **ವೃತ್ರಂ**—ತನ್ನನ್ನು ಆಕ್ರಮಿಸುವ ಶತ್ರುವನ್ನು । **ಶವಸಾ**—ಬಲದಿಂದ । **ಹಂತಿ**—ಕೊಲ್ಲುತ್ತಾನೆ । **ವಿಪ್ರಃ**—ಮೇಧಾವಿಯಾಗಿ । **ಪಣೇಃ**—ಅಸುರನ । **ವಾಜಂ**—ಅನ್ನವನ್ನು । **ವಿ ಭರ್ತಿ**—ಕಸಿದುಕೊಳ್ಳುತ್ತಾನೆ.

॥ ಭಾವಾರ್ಥ ॥

ಉತ್ತಮವಾದ ಜ್ಞಾನವುಳ್ಳವನೂ, ಯಜ್ಞಾರ್ಥವಾಗಿ ಉತ್ಪನ್ನನಾದವನೂ ಆದ ಎಲೈ ಅಗ್ನಿಯೇ, ಉದಕಗಳ ಪಾಲಕನಾದ ವೈದ್ಯುತಾಗ್ನಿಯೊಡನೆ ನೀನು ಕೂಡಿಕೊಂಡು ಯಾವ ಯಜಮಾನನನ್ನು ಧನಾರ್ಥವಾಗಿ ಪ್ರೇರಿಸುತ್ತೀಯೋ ಸಜ್ಜನರ ಪಾಲಕನಾದ ಅದೇ ಯಜಮಾನನು ತನ್ನನ್ನು ಆಕ್ರಮಿಸುವ ಶತ್ರುವನ್ನು ತನ್ನ ಬಲದಿಂದ ಕೊಲ್ಲುತ್ತಾನೆ. ಮೇಧಾವಿಯಾಗಿ ಅಸುರನ ಅನ್ನವನ್ನು ಕಸಿದುಕೊಳ್ಳುತ್ತಾನೆ.

## English Translation

That man, the protector of the virtuous, destroys, Agni, his enemy by his strength, and baffles, intelligent, the might of (the Asura) Pani, whom you, the wise, the parent of sacrifice, consentient with the grandson of the waters, encourage (in the hope) of riches.

॥ ಸಂಹಿತಾಪಾಠಃ ॥

ಯಸ್ತೇ ಸೂನೋ ಸಹಸೋ ಗೀರ್ಭಿರುಕ್ಥೈರ್ಯಜ್ಞೈರ್ಮರ್ತೋ ನಿಶಿತಿಂ
ವೇದ್ಯಾನಟ್ ।
ವಿಶ್ವಂ ಸ ದೇವ ಪ್ರತಿ ವಾರಮಗ್ನೇ ಧತ್ತೇ ಧಾನ್ಯಂ೧ ಪತ್ಯತೇ ವಸವ್ಯೈಃ ॥೪॥

॥ ಪದಪಾಠಃ ॥

ಯಃ । ತೇ । ಸೂನೋ ಇತಿ । ಸಹಸಃ । ಗೀಃಽಭಿಃ । ಉಕ್ಥೈಃ । ಯಜ್ಞೈಃ । ಮರ್ತಃ । ನಿಽಶಿತಿಂ ।
ವೇದ್ಯಾ । ಆನಟ್ ।
ವಿಶ್ವಂ । ಸಃ । ದೇವ । ಪ್ರತಿ । ವಾ । ಅರಂ । ಅಗ್ನೇ । ಧತ್ತೇ । ಧಾನ್ಯಂ । ಪತ್ಯತೇ । ವಸವ್ಯೈಃ ॥ ೪ ॥

॥ ಸಾಯಣಭಾಷ್ಯಂ ॥

**ಹೇ ಸಹಸಃ ಸೂನೋ ಬಲಸ್ಯ ಪುತ್ರಾಗ್ನೇ ತೇ ತವ ನಿಶಿತಿಂ ತೈಕ್ಷ್ಣ್ಯಂ ಯೋ ಮರ್ತೋ ಮನುಷ್ಯೋ ಯಜಮಾನೋ ಗೀರ್ಭಿಃ ಸ್ತುತಿಭಿರುಕ್ಥೈಃ ಶಸ್ತ್ರೈರ್ಯಜ್ಞೈರ್ಯಜಮಾನಸಾಧನೈರ್ಹವಿರ್ಭಿಶ್ಚ ವೇದ್ಯಾ ವೇದ್ಯಾಯಾಂ ಯಜ್ಞಭೂಮಾವಾನಟ್ ಪ್ರಾಪಯತಿ ಸ ಮರ್ತೋ ಹೇ ದೇವ ದ್ಯೋತಮಾನಾಗ್ನೇ ವಿಶ್ವಂ ಸರ್ವಮರಂ ಪರ್ಯಾಪ್ತಂ । ವಾಶಬ್ದಶ್ಚಾರ್ಥೇ । ಧಾನ್ಯಂ ಚ ಪ್ರತಿ ಧತ್ತೇ । ಪ್ರತಿಧಾರಯತಿ । ವಸವ್ಯೈರ್ವಸುಭಿಶ್ಚ ಪತ್ಯತೇ । ಸಂಗಚ್ಛತೇ ॥**

॥ ಪ್ರತಿಪದಾರ್ಥ ॥

**ಸಹಸಃ ಸೂನೋ**—ಶಕ್ತಿಪುತ್ರನೂ । **ದೇವ**--ದೇವತಾತ್ಮನೂ ಆದ । **ಅಗ್ನೇ**—ಎಲೈ ಅಗ್ನಿಯೇ, **ತೇ**—ನಿನ್ನ । **ನಿಶಿತಿಂ**—ತೀಕ್ಷ್ಣವಾದ ತೇಜಸ್ಸನ್ನು । **ಯಃ ಮರ್ತಃ**—ಯಾವ ಮಾನವನು । **ಗೀರ್ಭಿಃ**—ಸ್ತುತಿಗಳಿಂದಲೂ । **ಉಕ್ಥೈಃ**—ಮಂತ್ರಗಳಿಂದಲೂ । **ಯಜ್ಞೈಃ**—ಯಜ್ಞಸಾಧನಗಳಾದ ಹವಿಸ್ಸುಗಳಿಂದಲೂ । **ವೇದ್ಯಾ**—ಯಜ್ಞಭೂಮಿಗೆ । **ಆನಟ್**—ಬರಮಾಡಿಕೊಳ್ಳುವನೋ । **ಸಃ**—ಆ ಮಾನವನು (ಯಜಮಾನನು) । **ವಿಶ್ವಂ**—ಸಮಸ್ತವಾದುದೂ । **ಅರಂ**—ತೃಪ್ತಿದಾಯಕವಾದುದೂ ಆದ । **ಧಾನ್ಯಂ**—ಧಾನ್ಯವನ್ನು । **ಪ್ರತಿ ಧತ್ತೇ**—ಹೊಂದುವನು । **ವಸವ್ಯೈಃ**—ಧನಗಳೊಂದಿಗೂ । **ಪತ್ಯತೇ**—ಸೇರಿಕೊಳ್ಳುವನು.

॥ ಭಾವಾರ್ಥ ॥

ಶಕ್ತಿಪುತ್ರನೂ, ದೇವಾತ್ಮನೂ ಆದ ಎಲೈ ಅಗ್ನಿಯೇ, ನಿನ್ನ ತೀಕ್ಷ್ಣವಾದ ತೇಜಸ್ಸನ್ನು ಯಾವ ಮಾನವನು ಸ್ತುತಿಗಳಿಂದಲೂ ಶಸ್ತ್ರಮಂತ್ರಗಳಿಂದಲೂ ಯಜ್ಞಸಾಧನಗಳಾದ ಹವಿಸ್ಸುಗಳಿಂದಲೂ ಯಜ್ಞಭೂಮಿಗೆ ಬರಮಾಡಿಕೊಳ್ಳುವನೋ ಆ ಮಾನವನು ಸಮಸ್ತವಾದುದೂ ತೃಪ್ತಿದಾಯಕವಾದುದೂ ಆದ ಧಾನ್ಯವನ್ನು ಹೊಂದುವನು ಧನಗಳೊಂದಿಗೂ ಸೇರಿಕೊಳ್ಳುವನು.

## English Translation.

The mortal who by praise, by prayers, by sacrifices, attracts, Son of strength, your heightened (radiance) to the altar, enjoys all-sufficiency and corn, and abounds in wealth.

॥ ಸಂಹಿತಾಪಾಠಃ ॥

ತಾ ನೃಭ್ಯ ಆ ಸೌಶ್ರವಸಾ ಸುವೀರಾಗ್ನೇ ಸೂನೋ ಸಹಸಃ ಪುಷ್ಯಸೇ ಧಾಃ ।
ಕೃಣೋಷಿ ಯಚ್ಛವಸಾ ಭೂರಿ ಪಶ್ವೋ ವಯೋ ವೃಕಾಯಾರಯೇ ಜಸುರಯೇ ॥ ೫ ॥

॥ ಪದಪಾಠಃ ॥

ತಾ । ನೃಽಭ್ಯಃ । ಆ । ಸೌಶ್ರವಸಾ । ಸುಽವೀರಾ । ಅಗ್ನೇ । ಸೂನೋ ಇತಿ । ಸಹಸಃ । ಪುಷ್ಯಸೇ । ಧಾಃ ।
ಕೃಣೋಷಿ । ಯತ್ । ಶವಸಾ । ಭೂರಿ । ಪಶ್ವಃ । ವಯಃ । ವೃಕಾಯ । ಅರಯೇ । ಜಸುರಯೇ ॥ ೫ ॥

॥ ಸಾಯಣಭಾಷ್ಯಂ ॥

ಹೇ ಸಹಸಃ ಸೂನೋ ಸಹಸಸ್ಪುತ್ರಾಗ್ನೇ ಸುವೀರಾ ಶೋಭನೈಃ ಪುತ್ರೈರುಪೇತಾನಿ ಸೌಶ್ರವಸಾ ಸುಶ್ರವಾಂಸಿ ಶೋಭನಾನ್ಯನ್ನಾನಿ ತಾ ತಾನಿ ನೃಭ್ಯಃ ಶತ್ರುಜನೇಭ್ಯ ಆಹೃತ್ಯ ಧಾಃ । ಅಸ್ಮಾಸು ಧೇಹಿ । ಕಿಮರ್ಥಂ । ಪುಷ್ಯಸೇ ಪೋಷಾರ್ಥಂ । ಯದ್ವಾ । ನೃಭ್ಯಃ ಸ್ತುತೀನಾಂ ನೇತೃಭ್ಯೋಽಸ್ಮಭ್ಯಮಾಧೇಹಿ । ಅಭಿಮುಖ್ಯೇನ ಪ್ರಯಚ್ಛ । ಶವಸಾ ಬಲೇನ ಯುಕ್ತಸ್ತ್ವಂ ಭೂರಿ ಬಹುಲಂ ಪಶ್ವಃ ಪಶೋಃ ಸಂಬಂಧಿ ದಧ್ಯಾದಿಲಕ್ಷಣಂ ಯದ್ವಯೋಽನ್ನಂ ವೃಕಾಯಾದಾತ್ರೇ ಜಸುರಯ ಉಪಕ್ಷಪಯಿತ್ರೆ ಅರಯೇ ಶತ್ರವೇ ಕೃಣೋಷಿ ಕರೋಷಿ ತದನ್ನಮಾಹೃತ್ಯ ಪ್ರಯಚ್ಛೇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಸಹಸಃ ಸೂನೋ**—ಶಕ್ತಿಪುತ್ರನಾದ । **ಅಗ್ನೇ**—ಎಲೈ ಅಗ್ನಿಯೇ । **ಸುವೀರಾ**—ಶ್ರೇಷ್ಠವಾದ ಪುತ್ರರಿಂದೊಡಗೂಡಿದುದೂ । **ಸೌಶ್ರವಸಾ**—ಉತ್ತಮವಾದ ಅನ್ನಯುಕ್ತವಾದುದೂ । **ತಾ**—ಪ್ರಸಿದ್ಧವಾದುದೂ ಆದ ಧನಗಳನ್ನು । **ನೃಭ್ಯಃ**—ಸ್ತೋತೃಗಳಾದ ನಮಗಾಗಿ । **ಆ ಧಾಃ**—ತುಂಬಿಡು । **ಶವಸಾ**—ಶಕ್ತಿಯುತನಾದ ನೀನು । **ಭೂರಿ**—ಪ್ರಭೂತವಾದುದೂ । **ಪಶ್ವಃ**—ಪಶುಸಂಬಂಧಿಯಾದ ಕ್ಷೀರಾದಿರೂಪವಾದುದೂ ಆದ । **ಯತ್ ವಯಃ**—ಯಾವ ಅನ್ನವನ್ನು । **ವೃಕಾಯ**—ದಾನರಹಿತನೂ । **ಜಸುರಯೇ**—ಹಿಂಸಕನೂ ಆದ । **ಅರಯೇ**—ಶತ್ರುವಿಗಾಗಿ । **ಕೃಣೋಷಿ**—ಉತ್ಪನ್ನಮಾಡುವೆಯೋ (ಆ ಅನ್ನವನ್ನೂ ನಮಗಾಗಿಯೇ ಸಿದ್ಧಪಡಿಸು).

॥ ಭಾವಾರ್ಥ ॥

ಶಕ್ತಿಪುತ್ರನಾದ ಎಲೈ ಅಗ್ನಿಯೇ, ಶ್ರೇಷ್ಠವಾದ ಪುತ್ರರಿಂದೊಡಗೂಡಿದುದೂ ಉತ್ತಮವಾದ ಅನ್ನಯುಕ್ತವಾದುದೂ, ಪ್ರಸಿದ್ಧವಾದುದೂ ಆದ ಧನವನ್ನು ಸ್ತೋತೃಗಳಾದ ನಮಗಾಗಿ ತುಂಬಿಡು ಶಕ್ತಿಯುತನಾದ ನೀನು ಪ್ರಭೂತವಾದುದೂ ಪಶುಸಂಬಂಧಿಯಾದ ಕ್ಷೀರಾದಿರೂಪವಾದುದೂ ಆದ ಯಾವ ಅನ್ನವನ್ನು ದಾನರಹಿತನೂ ಹಿಂಸಕನೂ ಆದ ಶತ್ರುವಿಗಾಗಿ ಉತ್ಪನ್ನಮಾಡುವೆಯೋ ಆ ಅನ್ನವನ್ನು ನಮಗಾಗಿಯೇ ಸಿದ್ಧಪಡಿಸು.

## English Translation.

Grant, Son of strength, to men (who praise you), those abundant viands and excellent descendants, (that may contribute) to their prosperity: grant also that copious sustenance from cattle, which by your strength you take away from a churlish and malignant adversary.

|| ಸಂಹಿತಾಪಾಠಃ ||

ವದ್ಮಾ ಸೂನೋ ಸಹಸೋ ನೋ ವಿಹಾಯಾ ಅಗ್ನೇ ತೋಕಂ ತನಯಂ ವಾಜಿ ನೋ ದಾಃ |

ವಿಶ್ವಾಭಿರ್ಗೀರ್ಭಿರಭಿ ಪೂರ್ತಿಮಶ್ಯಾಂ ಮದೇಮ ಶತಹಿಮಾಃ ಸುವೀರಾಃ ||

|| ಪದಪಾಠಃ ||

ವದ್ಮಾ | ಸೂನೋ ಇತಿ | ಸಹಸಃ | ನಃ | ವಿಽಹಾಯಾಃ | ಅಗ್ನೇ | ತೋಕಂ | ತನಯಂ | ವಾಜಿ | ನಃ | ದಾಃ |

ವಿಶ್ವಾಭಿಃ | ಗೀಃಽಭಿಃ | ಅಭಿ | ಪೂರ್ತಿಂ | ಅಶ್ಯಾಂ | ಮದೇಮ | ಶತಽಹಿಮಾಃ | ಸುಽವೀರಾಃ || ೬ ||

|| ಸಾಯಣಭಾಷ್ಯಂ ||

ಹೇ ಸಹಸಃ ಸೂನೋಽಗ್ನೇ ವಿಹಾಯಾಃ | ಮಹನ್ನಾಮೈತತ್ | ಮಹಾಂಸ್ತ್ವಂ ನೋಽಸ್ಮಾಕಂ ವದ್ಮಾ ವದಿತಾ ಹಿತೋಪದೇಷ್ಟಾ ಭವ | ಅಪಿ ಚ ತೋಕಂ ಪುತ್ರಂ ತನಯಂ ತತ್ಪುತ್ರಂ ಚ ವಾಜಿ ಅನ್ನಯುಕ್ತಂ ನೋಽಸ್ಮಭ್ಯಂ ದಾಃ | ದೇಹಿ | ಅಹಂ ಸ್ತೋತಾ ವಿಶ್ವಾಭಿಃ ಸರ್ವಾಭಿರ್ಗೀರ್ಭಿಸ್ತ್ವದ್ವಿಷಯಾಭಿಃ ಪೂರ್ತಿಂ ಕಾಮಾನಾಂ ಪೂರ್ತಿಮಭ್ಯಶ್ಯಾಂ | ಅಭಿಪ್ರಾಪ್ನುಯಾಂ | ಅನ್ಯದ್ಗತಂ ||

**ಸಹಸಃ ಸೂನೋ**—ಶಕ್ತಿಪುತ್ರನಾದ | **ಅಗ್ನೇ**—ಎಲೈ ಅಗ್ನಿಯೇ | **ವಿಹಾಯಾಃ**—ಮಹಾತ್ಮನಾದ ನೀನು | **ನಃ**—ನಮಗೆ | **ವದ್ಮಾ**—ಹಿತೋಪದೇಶಕನಾಗಿರು | **ತೋಕಂ**—ಪುತ್ರನನ್ನೂ | **ತನಯಂ**—ಪೌತ್ರನನ್ನೂ | **ವಾಜಿ**—ಅನ್ನವನ್ನೂ | **ನಃ**—ನಮಗೆ | **ದಾಃ**—ಕೊಡು | **ವಿಶ್ವಾಭಿಃ**—ಸಮಸ್ತವಾದ | **ಗೀರ್ಭಿಃ**—ಸ್ತುತಿಗಳ ಮೂಲಕ | **ಪೂರ್ತಿಂ**—ನನ್ನ ಇಷ್ಟಾರ್ಥಸಿದ್ಧಿಯನ್ನು | **ಅಭಿ ಅಶ್ಯಾಂ**—ನಾನು ಹೊಂದುವಂತಾಗಲಿ | **ಸುವೀರಾಃ**—ಉತ್ತಮರಾದ ಪುತ್ರರಿಂದೊಡಗೂಡಿದವರಾಗಿ | **ಶತಹಿಮಾಃ**—ನೂರುಸಂವತ್ಸರಗಳು | **ಮದೇಮ**—ನಾವು ಸಂತೋಷಪಡುವಂತಾಗಲಿ.

|| ಭಾವಾರ್ಥ ||

ಶಕ್ತಿಪುತ್ರನಾದ ಎಲೈ ಅಗ್ನಿಯೇ, ಮಹಾತ್ಮನಾದ ನೀನು ನಮಗೆ ಹಿತೋಪದೇಶಕನಾಗಿರು. ಪುತ್ರನನ್ನೂ ಪೌತ್ರನನ್ನೂ ಅನ್ನವನ್ನೂ ನಮಗೆ ಕೊಡು. ಸಮಸ್ತವಾದ ಸ್ತುತಿಗಳ ಮೂಲಕ ನನ್ನ ಇಷ್ಟಾರ್ಥಸಿದ್ಧಿಯನ್ನು ನಾನು ಹೊಂದುವಂತಾಗಲಿ. ಉತ್ತಮರಾದ ಪುತ್ರರಿಂದೊಡಗೂಡಿದವರಾಗಿ ನಾವು ನೂರುಶತಸಂವತ್ಸರಗಳವರೆಗೆ ಸಂತೋಷಪಡುವಂತಾಗಲಿ.

## English Translation.

Agni, Son of strength, you are mighty, be our councillor: give us sons and grandsons, together with food: may I, by all my praises, obtain the fulfilment of my desires: may we, blessed with excellent male descendants, enjoy happiness for a hundred winters

# ಹದಿನಾಲ್ಕನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಅಗ್ನಾ ಯು ಇತಿ ಷಡೃಚಂ ಚತುರ್ದಶಂ ಸೂಕ್ತಂ ಭರದ್ವಾಜಸ್ಯಾರ್ಷಮಾಗ್ನೇಯಂ । ಷಷ್ಠೀ ಶಕ್ವರೀ ಶಿಷ್ಟಾಃ ಪಂಚಾನುಷ್ಟುಭಃ । ತಥಾ ಚಾನುಕ್ರಾಂತಂ । ಅಗ್ನಾ ಯು ಅನುಷ್ಟುಭಂ ಶಕ್ವರ್ಯಂತಮಿತಿ ॥ ಪ್ರಾತರನುವಾಕ ಆಗ್ನೇಯೇ ಕ್ರತಾವಾಶ್ವಿನಶಸ್ತ್ರೇ ಚೇದಂ ಸೂಕ್ತಂ । ಸೂತ್ರಿತಂ ಚ । ಅಗ್ನಾ ಯೋ ಹೋತಾಜನಿಷ್ಟ । ಆ. ೪-೧೩ । ಇತಿ ॥ ಅತ್ರೇಶ್ಚತುರ್ವೀರಾಖ್ಯೇ ಚತೂರಾತ್ರೇಽಹೀನೇ ತೃತೀಯೇಽಹನೀದಂ ಸೂಕ್ತಮಾಜ್ಯಶಸ್ತ್ರಂ । ಸೂತ್ರಿತಂ ಚ । ಅಗ್ನಾ ಯೋ ಮರ್ತ್ಯೋ ದುವ ಇತಿ ತೃತೀಯೇ । ಆ. ೧೦-೨ । ಇತಿ ॥**

ಅನುವಾದವು—**ಅಗ್ನಾ ಯಃ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹದಿನಾಲ್ಕನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು; ಅಗ್ನಿಯು ದೇವತೆಯು. ಈ ಸೂಕ್ತದ ಆರನೆಯ ಋಕ್ಕು ಶಕ್ವರೀಛಂದಸ್ಕವು. ಉಳಿದ ಐದು ಋಕ್ಕುಗಳು ಅನುಷ್ಟುಪ್ಛಂದಸ್ಕವು. ಅನುಕ್ರಮಣಿಕೆಯಲ್ಲಿ—**ಅಗ್ನಾ ಯು ಅನುಷ್ಟುಭಂ ಶಕ್ವರ್ಯಂತಂ** ಎಂದು ಹೇಳಿರುವುದು. ಪ್ರಾತರನುವಾಕ ಮಂತ್ರಗಳಲ್ಲಿ ಆಗ್ನೇಯಕ್ರತುಸಂಬಂಧವಾದ ಮಂತ್ರಗಳಿಗಾಗಿಯೂ, ಆಶ್ವಿನಶಸ್ತ್ರಮಂತ್ರಗಳಿಗಾಗಿಯೂ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ಅಗ್ನಾ ಯೋ ಹೋತಾಜನಿಷ್ಟ** ಎಂಬ ಸೂತ್ರದಿಂದ (ಆ. ೪-೧೩) ವಿವೃತವಾಗಿರುವುದು. ಮತ್ತು ಅತ್ರಿಋಷಿಯು ನೆರವೇರಿಸಿದ ಚತುರ್ವೀರವೆಂಬ ಚತೂರಾತ್ರ (ನಾಲ್ಕು ದಿವಸಗಳವರೆಗೆ ಮಾಡುವ ಯಜ್ಞ) ಯಾಗದಲ್ಲಿ ಅಹೀನಸೂಕ್ತವನ್ನು ಪಠಿಸುವಾಗ ಮೂರನೆಯ ದಿವಸದಲ್ಲಿ ಈ ಸೂಕ್ತವನ್ನು ಆಜ್ಯಶಸ್ತ್ರಮಂತ್ರಗಳಿಗಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಅಗ್ನಾ ಯೋ ಮರ್ತ್ಯೋ ದುವ ಇತಿ ತೃತೀಯೇ** ಎಂಬ ಸೂತ್ರದಿಂದ (ಆ. ೧೦-೨) ವಿವೃತವಾಗಿರುವುದು.

## ಸೂಕ್ತ—೧೪

ಮಂಡಲ— ೬॥ ಅನುವಾಕ—೧ ॥ ಸೂಕ್ತ—೧೪ ॥
ಅಷ್ಟಕ—೪ ॥ ಅಧ್ಯಾಯ—೫ ॥ ವರ್ಗ—೧೬ ॥

॥ **ಸೂಕ್ತದಲ್ಲಿರುವ ಋಕ್ಸಂಖ್ಯೆ—೬** ॥
॥ **ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ** ॥
॥ **ದೇವತಾ—ಅಗ್ನಿಃ** ॥
॥ ಛಂದಃ—೧-೫. ಅನುಷ್ಟುಪ್ । ೬. ಶಕ್ವರೀ ॥

॥ ಸಂಹಿತಾಪಾಠಃ ॥

ಅಗ್ನಾ ಯೋ ಮರ್ತ್ಯೋ ದುವೋ ಧಿಯಂ ಜುಜೋಷ ಧೀತಿಭಿಃ ।
ಭಸನ್ನು ಷ ಪ್ರ ಪೂರ್ವ್ಯ ಇಷಂ ವುರೀತಾವಸೇ ॥ ೧ ॥

॥ ಪದಪಾಠಃ ॥

ಅಗ್ನಾ । ಯಃ । ಮರ್ತ್ಯಃ । ದುವಃ । ಧಿಯಂ । ಜುಜೋಷ । ಧೀತಿऽಭಿಃ ।
ಭಸತ್ । ನು । ಸಃ । ಪ್ರ । ಪೂರ್ವ್ಯಃ । ಇಷಂ । ವುರೀತ । ಅವಸೇ ॥ ೧ ॥

॥ ಸಾಯಣಭಾಷ್ಯಂ ॥

ಯೋ ಮರ್ತ್ಯೋ ಮನುಷ್ಯೋऽಗ್ನಾಗ್ನಾವಗ್ನಿವಿಷಯಂ ದುವಃ ಪರಿಚರಣಂ ಧಿಯಂ ಕರ್ಮ ಚ ಯಜ್ಞಾದಿಲಕ್ಷಣಂ ಧೀತಿಭಿಃ ಸ್ತುತಿಭಿಃ ಸಾರ್ಧಂ ಜುಜೋಷ ಸೇವತೇ ಆಚರತಿ ಸ ಮರ್ತ್ಯಃ ಪೂರ್ವ್ಯಃ ಪೂರ್ವೇಷಾಂ ಮುಖ್ಯಃ ಸನ್ ನು ಕ್ಷಿಪ್ರಂ ಪ್ರ ಭಸತ್ । ಪ್ರಭಾಸೇತ । ಪ್ರಕೃಷ್ಟಪ್ರಕಾಶವಾನ್ ಭವೇತ್ । ಅವಸೇ ಪುತ್ರಾದೀನಾಂ ರಕ್ಷಣಾರ್ಥಮಿಷಮನ್ನಂ ಚ ವುರೀತ । ವೃಣೀತ । ಸಂಭಜೇತ । ತತ್ಪ್ರಸಕಾಶಾಲ್ಲಭೇತೇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಯಃ**—ಯಾವ । **ಮರ್ತ್ಯಃ**—ಮಾನವನು । **ಅಗ್ನಾ**—ಅಗ್ನಿಯನ್ನುದ್ದೇಶಿಸಿದ । **ದುವಃ**—ಪೂಜೆಯನ್ನೂ । **ಧಿಯಂ**—ಯಾಗಾದಿಕರ್ಮವನ್ನೂ । **ಧೀತಿಭಿಃ**—ಸ್ತುತಿಗಳೊಡಗೂಡಿ । **ಜುಜೋಷ**—ಆಚರಿಸುವನೋ । **ಸಃ**—ಅದೇ ಮಾನವನು । **ಪೂರ್ವ್ಯಃ**—ಎಲ್ಲರಿಗಿಂತಲೂ ಮುಖ್ಯನಾಗಿ । **ನು**—ಕ್ಷಿಪ್ರವಾಗಿಯೂ । **ಪ್ರ ಭಸತ್**—ಪ್ರಕಾಶಿಸುತ್ತಾನೆ । **ಅವಸೇ**—ಪುತ್ರಾದಿಗಳ ರಕ್ಷಣಾರ್ಥವಾಗಿ । **ಇಷಂ**—ಅನ್ನವನ್ನು । **ವುರೀತ**—ಹೊಂದುವನು.

॥ ಭಾವಾರ್ಥ ॥

ಯಾವ ಮಾನವನು ಅಗ್ನಿಯನ್ನುದ್ದೇಶಿಸಿ ಪೂಜೆಯನ್ನೂ ಯಾಗಾದಿ ಕರ್ಮವನ್ನೂ ಸ್ತುತಿಗಳೊಡಗೂಡಿ ಆಚರಿಸುವನೋ ಅದೇ ಮಾನವನು ಎಲ್ಲರಿಗಿಂತಲೂ ಮುಖ್ಯನಾಗಿ ಕ್ಷಿಪ್ರದಲ್ಲಿಯೇ ಪ್ರಕಾಶಿಸುತ್ತಾನೆ. ಪುತ್ರಾದಿಗಳ ರಕ್ಷಣಾರ್ಥವಾಗಿ ಅನ್ನವನ್ನು ಹೊಂದುವನು.

## English Translation.

May the mortal who propitiates Agni by devotion and worship, together with praises, quickiy become distinguished as first (amongst men), and acquire ample food for the support (of his children).

|| ಸಂಹಿತಾಪಾಠಃ ||

ಅಗ್ನಿರಿದ್ಧಿ ಪ್ರಚೇತಾ ಅಗ್ನಿರ್ವೇಧಸ್ತಮ ಋಷಿಃ ।

ಅಗ್ನಿಂ ಹೋತಾರಮೀಳತೇ ಯಜ್ಞೇಷು ಮನುಷೋ ವಿಶಃ ॥ ೨ ||

|| ಪದಪಾಠಃ ||

ಅಗ್ನಿಃ । ಇತ್ । ಹಿ । ಪ್ರಽಚೇತಾಃ । ಅಗ್ನಿಃ । ವೇಧಃಽತಮಃ । ಋಷಿಃ ।

ಅಗ್ನಿಂ । ಹೋತಾರಂ । ಈಳತೇ । ಯಜ್ಞೇಷು । ಮನುಷಃ । ವಿಶಃ || ೨ ||

|| ಸಾಯಣಭಾಷ್ಯಂ ||

ಅಗ್ನಿರಿದಗ್ನಿರೇವ ಪ್ರಚೇತಾಃ ಪ್ರಕೃಷ್ಟಜ್ಞಾನವಾನ್ ನಾನ್ಯಃ ಕಶ್ಚಿತ್ । ಹಿ ಯಸ್ಮಾದೇವಂ ತಸ್ಮಾದ್ವೇಧಸ್ತಮೋ ವಿಧಾತೃತಮೋಽತಿಶಯೇನ ಹವಿರ್ವಹನಾದೀನಾಂ ಕರ್ಮಣಾಂ ಕರ್ತಾ ಋಷಿಃ ಸರ್ವಸ್ಯ ದ್ರಷ್ಟಾ ಚ ಭವತಿ । ಮನುಷೋ ಮನುಷ್ಯಸ್ಯ ಯಜಮಾನಸ್ಯ ವಿಶಃ ಪ್ರಜಾ ಋತ್ವಿಗ್ಲಕ್ಷಣಾ ಹೋತಾರಂ ದೇವಾನಾಮಾಹ್ವಾತಾರಂ ತಾದೃಶಮಗ್ನಿಂ ಯಜ್ಞೇಷು ಯಾಗೇಷ್ವೀಳತೇ । ಸ್ತುವಂತಿ ||

|| ಪ್ರತಿಪದಾರ್ಥ ||

**ಅಗ್ನಿರಿತ್**—ಅಗ್ನಿಯೊಬ್ಬನೇ । **ಪ್ರಚೇತಾಃ**—ಉತ್ತಮವಾದ ಜ್ಞಾನವುಳ್ಳವನು । **ಹಿ**—ಆದುದರಿಂದಲೇ । **ವೇಧಸ್ತಮಃ**—ಉತ್ತಮವಾದ ಕರ್ಮಕರ್ತನು । **ಋಷಿಃ**—ಸಕಲವನ್ನೂ ದರ್ಶನಮಾಡುವ ಶಕ್ತಿಯುಳ್ಳವನು । **ಮನುಷಃ**—ಮಾನವನಾದ ಯಜಮಾನನಿಗೆ ಸಂಬಂಧಿಸಿದ । **ವಿಶಃ**—ಪ್ರಜೆಗಳೆಲ್ಲರೂ । **ಹೋತಾರಂ**—ದೇವತೆಗಳನ್ನು ಯಜ್ಞಕ್ಕೆ ಕರೆಯತಕ್ಕ । **ಅಗ್ನಿಂ**—ಅಗ್ನಿಯನ್ನು । **ಯಜ್ಞೇಷು**—ಯಜ್ಞಗಳಲ್ಲಿ । **ಈಳತೇ**—ಸ್ತುತಿಸುತ್ತಾರೆ.

|| ಭಾವಾರ್ಥ ||

ಅಗ್ನಿಯೊಬ್ಬನೇ ಉತ್ತಮವಾದ ಜ್ಞಾನವುಳ್ಳವನು. ಆದುದರಿಂದಲೇ ಉತ್ತಮವಾದ ಕರ್ಮಕರ್ತನು. ಸಕಲವನ್ನೂ ದರ್ಶನಮಾಡುವ ಶಕ್ತಿಯುಳ್ಳವನು. ಮಾನವನಾದ ಯಜಮಾನನಿಗೆ ಸಂಬಂಧಿಸಿದ ಪ್ರಜೆಗಳೆಲ್ಲರೂ ದೇವತೆಗಳನ್ನು ಯಜ್ಞಕ್ಕೆ ಕರೆಯತಕ್ಕ ಅಗ್ನಿಯನ್ನು ಯಜ್ಞಗಳಲ್ಲಿ ಸ್ತುತಿಸುತ್ತಾರೆ.

## English Translation.

Agni verily is most wise; he is the chief performer of religious rites a holy sage: the progeny of men glorify Agni as the invoker of the gods at sacrifices.

॥ ಸಂಹಿತಾಪಾಠಃ ॥

ನಾನಾ ಹ್ಯ೧ಗ್ನೇಽವಸೇ ಸ್ಪರ್ಧಂತೇ ರಾಯೋ ಅರ್ಯಃ ।
ತೂರ್ವಂತೋ ದಸ್ಯುಮಾಯವೋ ವ್ರತೈಃ ಸೀಕ್ಷಂತೋ ಅವ್ರತಂ ॥ ೩ ॥

॥ ಪದಪಾಠಃ ॥

ನಾನಾ । ಹಿ । ಅಗ್ನೇ । ಅವಸೇ । ಸ್ಪರ್ಧಂತೇ । ರಾಯಃ । ಅರ್ಯಃ ।
ತೂರ್ವಂತಃ । ದಸ್ಯುಂ । ಆಯವಃ । ವ್ರತೈಃ । ಸೀಕ್ಷಂತಃ । ಅವ್ರತಂ ॥ ೩ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಅರ್ಯೋಽರೇಃ ಶತ್ರೋ ರಾಯೋ ಧನಾನ್ಯವಸೇ ತ್ವತ್ಸ್ತೋತೄಣಾಂ ರಕ್ಷಣಾರ್ಥಂ ನಾನಾ ಶತ್ರುಸಕಾಶಾತ್ಪೃಥಗ್ಭೂತಾಃ ಸ್ಪರ್ಧಂತೇ । ಅಹಮೇವ ಪಾಲಯಾನ್ಯಹಮೇವ ಪಾಲಯಾನೀತಿ ಸ್ಪರ್ಧಾಂ ಕುರ್ವಂತಿ । ಆಯವೋ ಮನುಷ್ಯಾಸ್ತೇ ಚ ಸ್ತೋತಾರೋ ದಸ್ಯುಮುಪಕ್ಷಪಯಿತಾರಂ ಶತ್ರುಂ ತೂರ್ವಂತೋ ಹಿಂಸಂತೋ ವ್ರತೈಸ್ತ್ವದ್ದೇವತ್ಯೈರ್ಯಾಗೈರವ್ರತಂ ವ್ರತವಿರೋಧಿನಂ ಚ ಪುರುಷಂ ಸೀಕ್ಷಂತಃ ಸೋಢುಮಭಿಭವಿತುಮಿಚ್ಛಂತೋ ಭವಂತಿ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಅವಸೇ**—ನಿನ್ನ ಸ್ತೋತೃಗಳನ್ನು ರಕ್ಷಿಸಲು । **ಅರ್ಯಃ**—ಶತ್ರುಗಳಿಂದ । **ನಾನಾ**—ಅನೇಕವಿಧವಾಗಿ ಅಪಹೃತವಾದ । **ರಾಯಃ**—ಧನಗಳು । **ಸ್ಪರ್ಧಂತೇ**—ಯಜಮಾನನ ರಕ್ಷಣೆಯಲ್ಲಿ ಸ್ಪರ್ಧಿಸುತ್ತವೆ । **ಆಯವಃ**—ನಿನ್ನ ಸ್ತುತಿಕರ್ತರಾದ ಮಾನವರು । **ದಸ್ಯುಂ**—ಹಿಂಸಕನಾದ ಶತ್ರುವನ್ನು । **ತೂರ್ವಂತಃ**—ಹಿಂಸಿಸುತ್ತಾ। **ವ್ರತೈಃ**—ಯಜ್ಞಾದಿಕರ್ಮಗಳಿಂದ। **ಅವ್ರತಂ**—ಕರ್ಮಭ್ರಷ್ಟನನ್ನು। **ಸೀಕ್ಷಂತಃ**—ಎದುರಿಸಲು ಶಕ್ತರಾಗುವರು.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಿನ್ನ ಸ್ತೋತೃವನ್ನು ರಕ್ಷಿಸಲು ಅನೇಕವಿಧದಲ್ಲಿ ಅಪಹರಿಸಲ್ಪಟ್ಟ ಧನಗಳು ಯಜಮಾನನ ರಕ್ಷಣೆಯಲ್ಲಿ ನಾನು ತಾನೆಂದು ಸ್ಪರ್ಧಿಸುತ್ತವೆ. ನಿನ್ನ ಸ್ತುತಿಕರ್ತನಾದ ಮಾನವರು ಹಿಂಸಕನಾದ ಶತ್ರುವನ್ನು ಹಿಂಸಿಸುತ್ತಾ ಯಜ್ಞಾದಿಕರ್ಮಗಳಿಂದ ಕರ್ಮಭ್ರಷ್ಟನನ್ನು ಎದುರಿಸಲು ಶಕ್ತರಾಗುತ್ತಾರೆ.

## English Translation.

The manifold treasures of the enemy (detached from them) are emulous, Agni, for the presrvation (of your worshippers) : men who worship

you, triumphing over the spoiler, seek to shame him who celebrates no sacred rite by (their) observances.

॥ ಸಂಹಿತಾಪಾಠಃ ॥

ಅಗ್ನಿರಪ್ಸಾಮೃತೀಷಹಂ ವೀರಂ ದದಾತಿ ಸತ್ಪತಿಂ ।
ಯಸ್ಯ ತ್ರಸಂತಿ ಶವಸಃ ಸಂಚಕ್ಷಿ ಶತ್ರವೋ ಭಿಯಾ ॥ ೪ ॥

॥ ಪದಪಾಠಃ ॥

ಅಗ್ನಿಃ । ಅಪ್ಸಾಂ । ಋತಿಽಸಹಂ । ವೀರಂ । ದದಾತಿ । ಸತ್ಽಪತಿಂ ।
ಯಸ್ಯ । ತ್ರಸಂತಿ । ಶವಸಃ । ಸಂಽಚಕ್ಷಿ । ಶತ್ರವಃ । ಭಿಯಾ ॥ ೪ ॥

॥ ಸಾಯಣಭಾಷ್ಯಂ ॥

ಅಯಮಗ್ನಿರ್ವೀರಂ ಪುತ್ರಂ ದದಾತಿ । ಸ್ತೋತೃಭ್ಯಃ ಪ್ರಯಚ್ಛತಿ । ಕೀದೃಶಂ ಪುತ್ರಂ । ಅಪ್ಸಾಮುಪಾಪ್ತವ್ಯಾನಾಂ ಕರ್ಮಣಾಂ ಸನಿತಾರಂ ಸಂಭಕ್ತಾರಮೃತೀಷಹಮೃತೀನಾಮರಾತೀನಾಂ ಸೋಢಾರಮಭಿಭವಿತಾರಂ ಸತ್ಪತಿಂ ಸತಾಂ ಕರ್ಮಣಾಂ ಪಾಲಯಿತಾರಂ । ಯಸ್ಯ ವೀರಸ್ಯ ಸಂಚಕ್ಷಿ ಸಂದರ್ಶನೇ ಸತಿ ಶವಸೋ ಬಲಾತ್ ಭಿಯಾ ಭೀತ್ಯಾ ಶತ್ರವಸ್ತ್ರಸಂತಿ ಉದ್ವಿಜಂತೇ ತಂ ವೀರಮಿತ್ಯನ್ವಯಃ ॥

। ಪ್ರತಿಪದಾರ್ಥ ।

**ಯಸ್ಯ**—ಯಾವ ವೀರಪುತ್ರನ । **ಸಂ ಚಕ್ಷಿ**—ದರ್ಶನಮಾತ್ರದಿಂದಲೇ । **ಶವಸಃ**—ಅವನ ಬಲದ । **ಭಿಯಾ**—ಭೀತಿಯಿಂದ । **ಶತ್ರವಃ**—ಶತ್ರುಗಳೆಲ್ಲರೂ । **ತ್ರಸಂತಿ**—ಬೆದರಿ ಓಡುವರೋ ಅಂತಹ । **ಅಪ್ಸಾಂ**—ಕರ್ಮಕರ್ತನೂ । **ಋತೀಷಹಂ**—ಶತ್ರುಗಳನ್ನು ಸೋಲಿಸುವವನೂ । **ಸತ್ಪತಿಂ**—ಸಜ್ಜನರ ಪಾಲಕನೂ ಆದ । **ವೀರಂ**—ವೀರಪುತ್ರನನ್ನು । **ಅಗ್ನಿಃ**—ಅಗ್ನಿಯು । **ದದಾತಿ**—ಸ್ತೋತೃವಿಗೆ ಕೊಡುತ್ತಾನೆ.

। ಭಾವಾರ್ಥ ॥

ಯಾವ ವೀರಪುತ್ರನ ದರ್ಶನಮಾತ್ರದಿಂದಲೇ ಅವನ ಬಲದ ಭೀತಿಯಿಂದ ಶತ್ರುಗಳೆಲ್ಲರೂ ಬೆದರಿ ಓಡುವರೋ ಅಂತಹ ಕರ್ಮಕರ್ತನೂ ಶತ್ರುಗಳನ್ನು ಸೋಲಿಸುವವನೂ ಸಜ್ಜನರ ಪಾಲಕನೂ ಆದ ವೀರಪುತ್ರನನ್ನು ಅಗ್ನಿಯು ಸ್ತೋತೃವಿಗೆ ಕೊಡುತ್ತಾನೆ.

## English Translation.

Agni bestows (upon his worshippers) a male descendant, (the performer of good) works, the subduer of foes, the protector of the virtuous, at whose appearance his enemies tremble through fear of his prowess.

॥ ಸಂಹಿತಾಪಾಠಃ ॥

ಅಗ್ನಿರ್ಹಿ ವಿದ್ಮನಾ ನಿದೋ ದೇವೋ ಮರ್ತಮುರುಷ್ಯತಿ ।
ಸಹಾವಾ ಯಸ್ಯಾವೃತೋ ರಯಿರ್ವಾಜೇಷ್ವವೃತಃ ॥ ೫ ॥

॥ ಪದಪಾಠಃ ॥

ಅಗ್ನಿಃ । ಹಿ । ವಿದ್ಮನಾ । ನಿದಃ । ದೇವಃ । ಮರ್ತಂ । ಉರುಷ್ಯತಿ ।
ಸಹऽವಾ । ಯಸ್ಯ । ಅವೃತಃ । ರಯಿಃ । ವಾಜೇಷು । ಅವೃತಃ ॥ ೫ ॥

॥ ಸಾಯಣಭಾಷ್ಯಂ ॥

**ಸಹಾವಾ । ಸಹೋ ಬಲಂ । ತದ್ವಾನ್ ದೇವೋ ದಾನಾದಿಗುಣಯುಕ್ತೋऽಗ್ನಿರ್ವಿದ್ಮನಾ ಜ್ಞಾನೇನ ಯುಕ್ತಃ ಸನ್ ತಂ ಮರ್ತಂ ಮನುಷ್ಯಂ ಯಜಮಾನಂ ನಿದೋ ನಿಂದಕಾದುರುಷ್ಯತಿ । ರಕ್ಷತಿ । ಹೀತಿ ಪೂರಕಃ । ಯಸ್ಯ ಮರ್ತಸ್ಯ ರಯಿರ್ಹವಿರ್ಲಕ್ಷಣಂ ಧನಮವೃತೋ ರಕ್ಷಃಪ್ರಭೃತಿಭಿರನಾಚ್ಛಾದಿತಂ ವಾಜೇಷು ಯಜ್ಞೇಷ್ವವೃತೋऽನ್ಯೈರ್ಯಜಮಾನೈರಸಂಭಕ್ತಂ ತಂ ಹವಿಷ್ಮಂತಂ ಯಜಮಾನಮುರುಷ್ಯತೀತ್ಯನ್ವಯಃ ॥**

॥ ಪ್ರತಿಪದಾರ್ಥ ॥

**ಯಸ್ಯ**—ಯಾವ ಮಾನವನ (ಯಜಮಾನನ) । **ರಯಿಃ**—ಧನವು । **ಅವೃತಃ**—ಅಸುರರಿಂದ ಅಪಹೃತವಾಗದೆ । **ವಾಜೇಷು**—ಯಜ್ಞಗಳಲ್ಲಿ । **ಅವೃತಃ**—ಇತರ ಯಜಮಾನರಿಂದ ಹೊಂದಲ್ಪಡುವುದಿಲ್ಲವೋ (ಅಂತಹ) । **ಮರ್ತಂ**—ಯಜಮಾನನನ್ನು । **ಸಹಾವಾ**—ಶಕ್ತಿವಂತನೂ । **ದೇವಃ**—ದಾನಾದಿಗುಣಯುಕ್ತನೂ ಆದ । **ಅಗ್ನಿಃ**—ಅಗ್ನಿಯು । **ವಿದ್ಮನಾ**—ಜ್ಞಾನಯುಕ್ತನಾಗಿ । **ನಿದಃ**—ನಿಂದಕರಿಂದ । **ಉರುಷ್ಯತಿ**—ರಕ್ಷಿಸುತ್ತಾನೆ.

॥ ಭಾವಾರ್ಥ ॥

ಯಾವ ಯಜಮಾನನ ಧನವು ಅಸುರರಿಂದಲೂ ಅಪಹೃತವಾಗದೆ ಯಜ್ಞದಲ್ಲಿ ಇತರ ಯಜಮಾನರಿಂದಲೂ ಹೊಂದಲ್ಪಡುವುದಿಲ್ಲವೋ ಅಂತಹ ಯಜಮಾನನನ್ನು ಶಕ್ತಿವಂತನೂ ದಾನಾದಿಗುಣಯುಕ್ತನೂ ಆದ ಅಗ್ನಿಯು ಜ್ಞಾನಯುಕ್ತನಾಗಿ ನಿಂದಕರಿಂದ ರಕ್ಷಿಸುತ್ತಾನೆ.

## English Translation.

The mighty and divine Agni, endowed with knowledge, protects the mortal from reproach whose rich (offerings) are unobstructed (by evil spirits), and unshared by other (offerers) at sacrifices.

॥ ಸಂಹಿತಾಪಾಠಃ ॥

ಅಚ್ಛಾ ನೋ ಮಿತ್ರಮಹೋ ದೇವ ದೇವಾನಗ್ನೇ ವೋಚಃ ಸುಮತಿಂ ರೋದಸ್ಯೋಃ ।
ವೀಹಿ ಸ್ವಸ್ತಿಂ ಸುಕ್ಷಿತಿಂ ದಿವೋ ನೄನ್ದ್ವಿಷೋ ಅಂಹಾಂಸಿ ದುರಿತಾ ತರೇಮ ತಾ ತರೇಮ ತವಾವಸಾ ತರೇಮ ॥ ೬ ॥

॥ ಪದಪಾಠಃ ॥

ಅಚ್ಛ । ನಃ । ಮಿತ್ರಽಮಹಃ । ದೇವ । ದೇವಾನ್ । ಅಗ್ನೇ । ವೋಚಃ । ಸುಽಮತಿಂ । ರೋದಸ್ಯೋಃ । ವೀಹಿ । ಸ್ವಸ್ತಿಂ । ಸುಽಕ್ಷಿತಿಂ । ದಿವಃ । ನೄನ್ । ದ್ವಿಷಃ । ಅಂಹಾಂಸಿ । ದುಃಽಇತಾ । ತರೇಮ । ತಾ । ತರೇಮ । ತವ । ಅವಸಾ । ತರೇಮ ॥ ೬ ॥

॥ ಸಾಯಣಭಾಷ್ಯಂ ॥

ವ್ಯಾಖ್ಯಾತೇಯಂ ॥ ಅಕ್ಷರಾರ್ಥಸ್ತು । ಅನುಕೂಲದೀಪ್ತೇ ದಾನಾದಿಗುಣಯುಕ್ತಾಗ್ನೇ ದ್ಯಾವಾಪೃಥಿವ್ಯೋರಭಿಗತಸ್ತ್ವಮಸ್ಮದೀಯಾಂ ಸುಷ್ಟುತಿಂ ಯಷ್ಟವ್ಯಾನ್ ದೇವಾನ್ಪ್ರತಿ ವೋಚಃ । ಬ್ರೂಹಿ । ಸ್ತುತೇರ್ನೇತ್ರ್ಯಾನಸ್ಮಾಂಶ್ಚ ಸುನಿವಾಸಮವಿನಾಶಂ ಗಮಯ । ವಯಂ ಚ ತ್ವತ್ಪ್ರಸಾದಾದ್ದ್ವೇಷ್ಟ್ರ್ಯಾನ್ ಪಾಪಾನಿ ತತ್ಫಲಾನಿ ದುರ್ಗಮನಾನಿ ಚಾತಿಕ್ರಾಮೇಮ । ವ್ಯವಹಿತಾನಿ ಜನ್ಮಾಂತರಕೃತಾನಿ ಚ ತಾನ್ಯತಿಕ್ರಾಮೇಮ । ತ್ವದೀಯೇನ ರಕ್ಷಣೇನಾತ್ಯಂತಮತಿಕ್ರಾಮೇಮೇತಿ ॥

॥ ಪ್ರತಿಪದಾರ್ಥ ॥

ಮಿತ್ರಮಹಃ—ಅನುಕೂಲಕಾರಿಯಾದ ಪ್ರಭೆಯುಳ್ಳವನೂ । ದೇವ—ದೇವತಾತ್ಮನೂ ಆದ । ಅಗ್ನೇ—ಎಲೈ ಅಗ್ನಿಯೇ । ರೋದಸ್ಯೋಃ—ದ್ಯಾವಾಪೃಥಿವಿಗಳಲ್ಲೆಲ್ಲಾ (ವ್ಯಾಪಿಸಿರುವ ನೀನು) । ದೇವಾನ್ ಅಚ್ಛ—ದೇವತೆಗಳಿಗೆ ಅಭಿಮುಖವಾಗಿ । ನಃ—ನಮ್ಮ । ಸುಮತಿಂ—ಸ್ತೋತ್ರವನ್ನು । ವೋಚಃ—ಪಠಿಸು (ಅರ್ಪಿಸು) । ದಿವಃ—ಸ್ತುತಿಗಳಿಗೆ । ನೄನ್—ನಿರ್ಮಾಪಕರಾದ ನಮ್ಮನ್ನು । ಸುಕ್ಷಿತಿಂ—ಶ್ರೇಷ್ಠವಾದ ಗೃಹಗಳಿಂದ ಕೂಡಿ

ದುದೂ | **ಸ್ವಸ್ತಿಂ**—ನಾಶರಹಿತವಾದುದೂ ಆದ ಶ್ರೇಯಸ್ಸಿನೊಡನೆ | **ವೀಹಿ**—ಸೇರಿಸು | **ವಯಂ**—ನಾವು | **ದ್ವಿಷಃ**—ನಮ್ಮ ಶತ್ರುಗಳನ್ನೂ | **ಅಂಹಾಂಸಿ**—ಪಾಪಗಳನ್ನೂ | **ದುರಿತಾ**—ದುಃಖಕಾರಕಗಳಾದ ಪಾಪದ ಫಲಗಳನ್ನೂ | **ತರೇಮ**—ದಾಟುವಂತಾಗಲಿ | **ತಾ**—ಜನ್ಮಾಂತರದ ಪಾಪಸಂಸ್ಕಾರಗಳನ್ನೂ | **ತರೇಮ**—ದಾಟುವಂತಾಗಲಿ (ಎಲೈ ಅಗ್ನಿಯೇ) | **ತವ**—ನಿನ್ನ | **ಅವಸಾ**—ರಕ್ಷಣೆಯೊಡನೆ ಕೂಡಿದವರಾಗಿ | **ತರೇಮ**—ಆ ದುಃಖವನ್ನೆಲ್ಲಾ ದಾಟುವಂತಾಗಲಿ.

॥ ಭಾವಾರ್ಥ ॥

ಅನುಕೂಲಕಾರಿಯಾದ ಪ್ರಭೆಯುಳ್ಳವನೂ, ದೇವತಾತ್ಮನೂ ಆದ ಎಲೈ ಅಗ್ನಿಯೇ, ದ್ಯಾವಾಪೃಥಿವಿಗಳಲ್ಲೆಲ್ಲಾ ವ್ಯಾಪಿಸಿರುವ ನೀನು ದೇವತೆಗಳಿಗೆ ಅಭಿಮುಖನಾಗಿ ನಮ್ಮ ಸ್ತುತಿಗಳನ್ನು ಪಠಿಸಿ ಅರ್ಪಿಸು. ಸ್ತುತಿನಿರ್ಮಾಪಕರೂ ಪಾಠಕರೂ ಆದ ನಮ್ಮನ್ನು ಶ್ರೇಷ್ಠವಾದ ಗೃಹಾದಿಗಳಿಂದ ಕೂಡಿದುದೂ ನಾಶರಹಿತವಾದುದೂ ಆದ ಶ್ರೇಯಸ್ಸಿನೊಡನೆ ಸೇರಿಸು. ನಾವು ನಮ್ಮ ಶತ್ರುಗಳನ್ನೂ ಪಾಪಗಳನ್ನೂ ದುಃಖಕಾರಕಗಳಾದ ಪಾಪಫಲಗಳನ್ನೂ ದಾಟುವಂತಾಗಲಿ. ಎಲೈ ಅಗ್ನಿಯೇ, ನಿನ್ನ ರಕ್ಷಣೆಯೊಡನೆ ಕೂಡಿದವರಾಗಿ ನಾವು ಆ ದುಃಖಗಳನ್ನೆಲ್ಲಾ ದಾಟುವಂತಾಗಲಿ.

## English Translation.

Divine Agni, revered as a freind, who, abiding in heaven and earth communicates our praise to the gods, conduct the offerer of adoration to domestic felicity, and may we overcome our adversaries, our difficulties : may we overcome them by your protection.

# ಹದಿನೈದನೆಯ ಸೂಕ್ತವು

। ಸಾಯಣಭಾಷ್ಯಂ ।

**ಇಮಮೂ ಷು ವ ಇತ್ಯೇಕೋನವಿಂಶತ್ಯೃಚಂ ಪಂಚದಶಂ ಸೂಕ್ತಮಾಂಗಿರಸಸ್ಯ ವೀತಹವ್ಯಸ್ಯ ಭರದ್ವಾಜಸ್ಯ ವಾರ್ಷಮಾಗ್ನೇಯಂ । ಆದೌ ನವ ಜಗತ್ಯಸ್ತೃತೀಯಾಷಷ್ಠ್ಯೌ ತು ಶಕ್ವರ್ಯತಿಶಕ್ವರ್ಯೌ ಪಂಚದಶೀ ಶಕ್ವರೀ ಸಪ್ತದಶ್ಯನುಷ್ಟುಬಷ್ಟಾದಶೀ ಬೃಹತೀ ದಶಮ್ಯಾದ್ಯಾಃ ಪಂಚ ಷೋಡಶ್ಯೇಕೋನ-ವಿಂಶೀ ಚೇತಿ ಸಪ್ತ ತ್ರಿಷ್ಟುಭಃ । ತಥಾ ಚಾನುಕ್ರಾಂತಂ। ಇಮಮೂ ಷ್ವೇಕೋನಾ ವೀತಹವ್ಯ ಋಷಿರ್ವಾ ಜಾಗತಂ ಪ್ರಾಗ್ದಶಮ್ಯಾಸ್ತೃತೀಯಾಪಂಚದಶ್ಯೌ ಶಕ್ವರ್ಯೌ ಷಷ್ಠ್ಯತಿಶಕ್ವರ್ಯನುಷ್ಟುಬ್ಬೃಹತ್ಯಾವುಪಾಂತ್ಯೇ ಇತಿ ॥ ಪ್ರಾತರನುವಾಕ ಆಗ್ನೇಯೇ ಕ್ರತಾವಾಶ್ವಿನಶಸ್ತ್ರೇ ಚಾದಿತೋ ನವರ್ಚಃ । ಸೂತ್ರಿತಂ ಚ । ಇಮಮೂ ಷು ವೋ ಅತಿಥಿಮುಷರ್ಬುಧಮಿತಿ ನವ । ಆ. ೪-೧೩ ॥ ಇತಿ ॥ ದಶರಾತ್ರೇ ಪಂಚಮೇಽಹನಿ ನವರ್ಚಮಾಜ್ಯಶಸ್ತ್ರಂ । ಸೂತ್ರಿತಂ ಚ । ಇಮಮೂ ಷು ವೋ ಅತಿಥಿಮುಷರ್ಬುಧಮಿತಿ ನವಾಜ್ಯಂ । ಆ. ೭-೧೨ । ಇತಿ ॥**

ಅನುವಾದವು—**ಇಮಮೂ ಷು ವಃ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹದಿನೈದನೆಯ ಸೂಕ್ತವು. ಇದರಲ್ಲಿ ಹತ್ತೊಂಭತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಅಂಗಿರಸಗೋತ್ರೋತ್ಪನ್ನನಾದ ವೀತಹವ್ಯನೆಂಬುವನು ಅಥವಾ ಭರದ್ವಾಜನು ಋಷಿಯು; ಅಗ್ನಿಯು ದೇವತೆಯು; ಈ ಸೂಕ್ತದಲ್ಲಿ ಮೂರು ಮತ್ತು ಆರನೆಯ ಋಕ್ಕುಗಳನ್ನು ಬಿಟ್ಟು ಉಳಿದ ಮೊದಲಿನ ಒಂಭತ್ತು ಋಕ್ಕುಗಳು ಜಗತೀಛಂದಸ್ಕವು. ಮೂರನೆಯ ಋಕ್ಕು ಶಕ್ವರೀ ಮತ್ತು ಆರನೆಯ ಋಕ್ಕು ಅತಿಶಕ್ವರೀಛಂದಸ್ಕವು. ಹದಿನೈದನೆಯ ಋಕ್ಕು ಶಕ್ವರೀ, ಹದಿನೇಳನೆಯ ಋಕ್ಕು ಅನುಷ್ಟುಪ್, ಹದಿನೆಂಟನೆಯ ಋಕ್ಕು ಬೃಹತೀ, ಹತ್ತರಿಂದ ಹದಿನಾಲ್ಕರವರೆಗಿನ ಐದು ಋಕ್ಕುಗಳೂ, ಹದಿನಾರನೆಯದೂ, ಹತ್ತೊಂಭತ್ತನೆಯ ಋಕ್ಕೂ ಒಟ್ಟು ಏಳು ಋಕ್ಕುಗಳು ತ್ರಿಷ್ಟುಪ್‌ಛಂದಸ್ಕವು. ಅನುಕ್ರಮಣಿಕೆಯಲ್ಲಿ—**ಇಮಮೂ ಷ್ವೇಕೋನಾ ವೀತಹವ್ಯ ಋಷಿರ್ವಾ ಜಾಗತಂ ಪ್ರಾಗ್ದಶಮ್ಯಾಸ್ತೃತೀಯಾಪಂಚದಶ್ಯೌ ಶಕ್ವರ್ಯೌ ಷಷ್ಠ್ಯತಿಶಕ್ವರ್ಯನುಷ್ಟುಬ್ಬೃಹತ್ಯಾ ಉಪಾಂತ್ಯೇ** ಎಂದು ಹೇಳಿರುವುದು. ಪ್ರಾತರನುವಾಕ ಮಂತ್ರಪಠನದಲ್ಲಿ ಆಗ್ನೇಯಕ್ರತುಸಂಬಂಧವಾದ ಮಂತ್ರಗಳಿಗಾಗಿಯೂ, ಆಶ್ವಿನಶಸ್ತ್ರಮಂತ್ರಗಳಿಗಾಗಿಯೂ ಈ ಸೂಕ್ತದ ಮೊದಲಿನ ಒಂಭತ್ತು ಋಕ್ಕುಗಳ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ಇಮಮೂ ಷು ವೋ ಅತಿಥಿಮುಷರ್ಬುಧಮಿತಿ ನವ** ಎಂಬ ಸೂತ್ರದಿಂದ (ಆ ೪-೧೩) ವಿವೃತವಾಗಿರುವುದು. ಮತ್ತು ದಶರಾತ್ರವೆಂಬ ಯಾಗದ ಐದನೆಯ ದಿವಸ ಈ ಸೂಕ್ತದ ಮೊದಲನೆಯ ಒಂಭತ್ತು ಋಕ್ಕುಗಳನ್ನು ಆಜ್ಯಶಸ್ತ್ರಮಂತ್ರಗಳಿಗಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಇಮಮೂ ಷು ವೋ ಅತಿಥಿಮುಷರ್ಬುಧಮಿತಿ ನವಾಜ್ಯಂ** ಎಂಬ ಸೂತ್ರದಿಂದ (ಆ ೭-೧೨) ವಿವೃತವಾಗಿರುವುದು.

## ಸೂಕ್ತ—೧೫

ಮಂಡಲ—೬ ‖ ಅನುವಾಕ—೧ ‖ ಸೂಕ್ತ—೧೫ ‖

ಅಷ್ಟಕ—೪ ‖ ಅಧ್ಯಾಯ—೫ ‖ ವರ್ಗ—೧೭, ೧೮, ೧೯, ೨೦ ‖

‖ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೯ ‖

‖ ಋಷಿಃ—ಭರದ್ವಾಜೋ ಬಾರ್ಹಸ್ಪತ್ಯೋ ವೀತಹವ್ಯೋ ವಾ ‖

‖ ದೇವತಾ—ಅಗ್ನಿಃ ‖

‖ ಛಂದಃ—೧, ೨, ೪, ೫, ೭-೯. ಜಗತೀ । ೩, ೧೫. ಶಕ್ವರೀ । ೬. ಅತಿಶಕ್ವರೀ ೧೦-೧೪, ೧೬, ೧೯. ತ್ರಿಷ್ಟುಪ್ । ೧೭. ಅನುಷ್ಟುಪ್ । ೧೮. ಬೃಹತೀ ‖

‖ ಸಂಹಿತಾಪಾಠಃ ‖

ಇಮಮೂ ಷು ವೋ ಅತಿಥಿಮುಷರ್ಬುಧಂ ವಿಶ್ವಾಸಾಂ ವಿಶಾಂ ಪತಿಮೃಂಜಸೇ ಗಿರಾ ।

ವೇತೀದ್ದಿವೋ ಜನುಷಾ ಕಚ್ಚಿದಾ ಶುಚಿರ್ಜ್ಯೋಕ್ಚಿದತ್ತಿ ಗರ್ಭೋ ಯದಚ್ಯುತಂ ‖ ೧ ‖

॥ ಪದಪಾಠಃ ॥

ಇಮಂ । ಊಂ ಇತಿ । ಸು । ವಃ । ಅತಿಥಿಂ । ಉಷಃಽಬುಧಂ । ವಿಶ್ವಾಸಾಂ । ವಿಶಾಂ । ಪತಿಂ । ಋಂಜಸೇ ।
ಗಿರಾ ।

ವೇತಿ । ಇತ್ । ದಿವಃ । ಜನುಷಾ । ಕತ್ । ಚಿತ್ । ಆ । ಶುಚಿಃ । ಜ್ಯೋಕ್ । ಚಿತ್ । ಅತ್ತಿ । ಗರ್ಭಃ ।
ಯತ್ । ಅಚ್ಯುತಂ ॥ ೧ ॥

॥ ಸಾಯಣಭಾಷ್ಯಂ ॥

ಹೇ ವೀತಹವ್ಯ ಋಷೇ ಭರದ್ವಾಜ ವಾ ವಸ್ತ್ವಂ ॥ ವಿಭಕ್ತಿವಚನಯೋರ್ವ್ಯತ್ಯಯಃ ॥ ಇಮಮು ಇಮಮೇವಾಗ್ನಿಂ ಗಿರಾ ಸ್ತುತ್ಯಾ ಸ್ವೃಂಜಸೇ ಸುಷ್ಠು ಪ್ರಸಾಧಯ ॥ ಋಂಜತಿಃ ಪ್ರಸಾಧನಕರ್ಮೇತಿ ಯಾಸ್ಕಃ ॥ ಕೀದೃಶಂ । ಅತಿಥಿಂ ಸತತಂ ಗಂತಾರಂ । ಯದ್ವಾ । ಅತಿಥಿವತ್ಪೂಜ್ಯಂ । ಉಷರ್ಬುಧಮುಷಸಿ ಪ್ರಬುದ್ಧಂ ವಿಶ್ವಾಸಾಂ ಸರ್ವಾಸಾಂ ವಿಶಾಂ ಪ್ರಜಾನಾಂ ಪತಿಂ ಪಾಲಯಿತಾರಂ । ಜನುಷಾ ಜನ್ಮನಾ ಸ್ವತ ಏವ ಶುಚಿಃ ಶುದ್ಧೋ ನಿರ್ಮಲೋ ವಾಗ್ನಿಃ ಕಚ್ಚಿತ್ ಕದಾಚಿತ್ ಕಸ್ಮಿಂಶ್ಚಿದ್ಯಾಗಕಾಲೇ ದಿವೋ ದ್ಯುಲೋಕಾದಾ ವೇತಿ । ಆಗಚ್ಛತಿ । ತದಾನೀಂ ಪ್ರಸಾಧಯೇತ್ಯನ್ವಯಃ । ಏವಂ ಪ್ರಸಾಧಿತೋಽಗ್ನಿ-ರ್ಗರ್ಭೋರಣ್ಯೋರ್ಮಧ್ಯೇ ಗರ್ಭವದ್ವರ್ತಮಾನಃ । ಯದ್ವಾ । ದ್ಯಾವಾಪೃಥಿವ್ಯೋರ್ಗರ್ಭಭೂತಃ ಸನ್ ಯದ್ಧವಿರಚ್ಯುತಂ ಚ್ಯುತಿರಹಿತಂ ನಿತ್ಯಮಗ್ನಿಹೋತ್ರಾದಿಸಾಧನಭೂತಂ ಪಯಃಪ್ರಭೃತಿಕಂ ತತ್ ಜ್ಯೋಕ್ಚಿತ್ ಚಿರಕಾಲಮತ್ತಿ । ಭಕ್ಷಯತಿ ॥

॥ ಪ್ರತಿಪದಾರ್ಥ ॥

(ಎಲೈ ಋಷಿಯೇ) **ಜನುಷಾ**—ಸ್ವಾಭಾವಿಕವಾಗಿಯೇ । **ಶುಚಿಃ**—ಶುದ್ಧನಾದ ಅಗ್ನಿಯು । **ಕಚ್ಚಿತ್**—ಈ ಯಾಗಕಾಲದಲ್ಲಿ । **ದಿವಃ**—ದ್ಯುಲೋಕದಿಂದ **ಆ ವೇತಿ**—ಬರುತ್ತಾನೆ (ಇಂತಹ) । **ಅತಿಥಿಃ**—ಅತಿಥಿಯಂತೆ ಪೂಜ್ಯನೂ । : **ಉಷರ್ಬುಧಂ**—ಉಷಃಕಾಲದಲ್ಲೇ ಎಚ್ಚರಗೊಳ್ಳುವವನೂ । **ವಿಶ್ವಾಸಾಂ**—ಸಮಸ್ತವಾದ । **ವಿಶಾಂ**—ಪ್ರಜೆಗಳಿಗೂ । **ಪತಿಂ**—ಪಾಲಕನೂ ಆದ । **ಇಮಮು**—ಈ ಅಗ್ನಿಯನ್ನೇ । **ವಃ**—ನೀನು । **ಗಿರಾ**—ಸ್ತುತಿಯಿಂದ । **ಸು**—ಅತಿಶಯವಾಗಿ । **ಋಂಜಸೇ**—ಆರಾಧಿಸು । **ಗರ್ಭಃ**—ಅರಣಿಯಲ್ಲಿ ಗರ್ಭರೂಪನಾಗಿರುವ ಅಗ್ನಿಯು । **ಯತ್**—ಯಾವ ಹವಿಸ್ಸು । **ಅಚ್ಯುತಂ**—ನಾಶರಹಿತವಾಗಿರುವುದೋ ಅದನ್ನು । **ಜ್ಯೋಕ್ಚಿತ್**—ಚಿರಕಾಲ । **ಅತ್ತಿ**—ಸ್ವೀಕರಿಸಿ ಭಕ್ಷಿಸುತ್ತಾನೆ.

॥ ಭಾವಾರ್ಥ ॥

ಎಲೈ ಋಷಿಯೇ, ಸ್ವಾಭಾವಿಕವಾಗಿಯೇ ಜನ್ಮತಃ ಶುದ್ಧನಾದ ಅಗ್ನಿಯು ಯಾಗಕಾಲದಲ್ಲಿ ದ್ಯುಲೋಕದಿಂದ ಬರುತ್ತಾನೆ. ಇಂತಹ ಅತಿಥಿಯಂತೆ ಪೂಜ್ಯನೂ ಉಷಃಕಾಲದಲ್ಲೇ ಎಚ್ಚರಗೊಳ್ಳುವವನೂ ಸಮಸ್ತವಾದ ಪ್ರಜೆಗಳಿಗೂ ಪಾಲಕನೂ ಆದ ಈ ಅಗ್ನಿಯನ್ನೇ ನೀನು ಸ್ತುತಿಸಿ ಅತಿಶಯವಾಗಿ ಆರಾಧಿಸು. ಅರಣಿಯಲ್ಲಿ ಗರ್ಭರೂಪನಾಗಿರುವ ಅಗ್ನಿಯು ನಾಶರಹಿತವಾಗಿರುವ ಹವಿಸ್ಸನ್ನು ಚಿರಕಾಲ ಸ್ವೀಕರಿಸಿ ಭಕ್ಷಿಸುತ್ತಾನೆ.

## English Translation.

Propitiate by praises this guest who wakes at dawn, the cherisher of all people, who on every occasion descends, pure of origin, from heaven, and, present as the embryo (in the wood of attrition), consumes immediately the offered (oblation).

|| ವಿಶೇಷವಿಷಯಗಳು ||

**ವಃ—ತ್ವಂ । ತ್ವಂ**—ನೀನು ಎಂಬ ಶಬ್ದಕ್ಕೆ ಬದಲಾಗಿ ವಃ ಎಂಬ ಯುಷ್ಮಚ್ಛಬ್ದದ ದ್ವಿತೀಯಾ ಬಹುವಚನದ ಪ್ರಯೋಗವಿದೆ. ಈ ರೀತಿ ವಿಭಕ್ತವಚನಗಳ ವ್ಯತ್ಯಾಸವು ಋಗ್ವೇದದಲ್ಲಿ ಅನೇಕಕಡೆಗಳಲ್ಲಿದೆ.

**ಋಂಜತಿಃ—ಋಂಜತಿಃ ಪ್ರಸಾಧನಕರ್ಮಾ ।** ಸಂತೋಷಪಡಿಸು, ಆರಾಧಿಸು ಎಂಬರ್ಥದಲ್ಲಿ ಋಂಜತಿ ಶಬ್ದದ ಪ್ರಯೋಗವಿದೆಯೆಂದು ಯಾಸ್ಕರು ಹೇಳಿ ಉದಾಹರಣೆಗಾಗಿ **ಆ ವ ಋಂಜಸೇ ಊರ್ಜಾಂ ವ್ಯುಷ್ಟಿಷು ಇತ್ಯಪಿ ನಿಗಮೋ ಭವತಿ** ಎಂಬ ಶ್ರುತಿವಾಕ್ಯವನ್ನು ಕೊಟ್ಟಿದ್ದಾರೆ.

**ಅತಿಥಿಂ**—ಅಗ್ನಿಯನ್ನು ಅತಿಥಿಯಂತೆ ಪೂಜ್ಯನೆಂದು ಪ್ರಶಂಸೆ ಮಾಡುವುದು ಸಾಧಾರಣವಾಗಿದೆ. ಯಾಸ್ಕರು ಈ ಶಬ್ದದ ನಿರ್ವಚನವನ್ನು ಹೇಳುವಾಗ—

**ಜುಷ್ಟೋ ದಮೂನಾ ಅತಿಥಿರ್ದುರೋಣ ಇಮಂ ನೋ ಯಜ್ಞಮುಪ ಯಾಹಿ ವಿದ್ವಾನ್ ।**

(ಋ.ಸಂ. ೫-೪-೭)

ಎಂಬ ಋಕ್ಕನ್ನು ಉದಾಹರಿಸಿ—**ಅತಿಥಿರಭ್ಯತಿತೋ ಗೃಹಾನ್ ಭವತಿ ಅಭ್ಯೇತಿ ತಿಥಿಷು ಪರಕುಲಾನೀತಿ ವಾ ಪರಗೃಹಾಣೀತಿ ವಾ ಅಯಮಪೀತರೋ ಅತಿಥಿರೇತಸ್ಮಾದೇವ** (ನಿ. ೪-೪) ಅತಿಥಿ ಎಂದರೆ ಇನ್ನೊಬ್ಬರ ಮನೆಗೆ ಪೂರ್ವಭಾವಿ ವರ್ತಮಾನವನ್ನು ಕೊಡದೆ ಅಕಸ್ಮಾತ್ತಾಗಿ ಹೋಗುವನು ಅಥವಾ ಇಂತಹ ದಿನವೇ ಬರಬೇಕೆಂಬ ನಿರ್ಬಂಧವಿಲ್ಲದೆ (ಅ+ತಿಥಿ) ಎಂದರೆ ವಿಧಿನಿಯಮವಿಲ್ಲದೆ ಬರುವವನು ಎಂದು ಅರ್ಥವು. ದುರ್ಗಾಚಾರ್ಯರು ಈ ಶಬ್ದದ ವಿವರಣೆಯನ್ನು ಈ ರೀತಿ ಹೇಳಿರುವರು—ಇವನು (ಅತಿಥಿಯು) ಮನೆಗಳನ್ನು ಹುಡುಕಿಕೊಂಡು ಬರುವವನಾದ ಕಾರಣ ಅತಿಥಿಯೆನಿಸುವನು. ಅಥವಾ ಪೂರ್ಣಮಿಯೇ ಮೊದಲಾದ ತಿಥಿಗಳಲ್ಲಿ ಯಜ್ಞಮಾಡುವವರ ಮನೆಗಳಿಗೆ ಬಂದು ಸೇರುವನು. ಈ ಅರ್ಥವು ವಿಶೇಷವಾಗಿ ಅಗ್ನಿಗೇ ಅನ್ವಯಿಸುವುದು.

**ಗರ್ಭಃ—ಅರಣ್ಯೋರ್ಮಧ್ಯೇ ಗರ್ಭವದ್ವರ್ತಮಾನಃ । ಯದ್ವಾ । ದ್ಯಾವಾಪೃಥಿವ್ಯೋರ್ಗರ್ಭಭೂತಃ ।** ಅರಣಿಗಳೆಂಬ ಮರದ ತುಂಡುಗಳಲ್ಲಿ ಅಗ್ನಿಯನ್ನು ಕಡೆದು ಉತ್ಪತ್ತಿಮಾಡುವುದರಿಂದ ಅಗ್ನಿಯು ಉತ್ಪತ್ತಿಗೆ ಪೂರ್ವದಲ್ಲಿ ಅರಣಿಗಳಲ್ಲಿ ಗರ್ಭರೂಪದಲ್ಲಿ ಅಡಗಿಕೊಂಡಿರುವನೆಂದು ಅರ್ಥವು. ಅಥವಾ ದ್ಯಾವಾಪೃಥಿವಿಗಳ ನಡುವೆ ಯಜ್ಞಭೂಮಿಯಲ್ಲಿ ಆಹವನೀಯಾದ್ಯಗ್ನಿಕುಂಡಗಳಲ್ಲಿ ಸ್ಥಾಪಿತವಾಗಿರುವನು ಎಂದೂ ಹೇಳಬಹುದು.

॥ ಸಂಹಿತಾಪಾಠಃ ॥

ಮಿತ್ರಂ ನ ಯಂ ಸುಧಿತಂ ಭೃಗವೋ ದಧುರ್ವನಸ್ಪತಾವೀಡ್ಯಮೂರ್ಧ್ವ-
ಶೋಚಿಷಂ ।
ಸ ತ್ವಂ ಸುಪ್ರೀತೋ ವೀತಹವ್ಯೇ ಅದ್ಭುತ ಪ್ರಶಸ್ತಿಭಿರ್ಮಹಯಸೇ ದಿವೇ-
ದಿವೇ ॥ ೨ ॥

॥ ಪದಪಾಠಃ ॥

ಮಿತ್ರಂ । ನ । ಯಂ । ಸುऽಧಿತಂ । ಭೃಗವಃ । ದಧುಃ । ವನಸ್ಪತೌ । ಈಡ್ಯಂ । ಊರ್ಧ್ವऽಶೋಚಿಷಂ ।
ಸಃ । ತ್ವಂ । ಸುऽಪ್ರೀತಃ । ವೀತऽಹವ್ಯೇ । ಅದ್ಭುತ । ಪ್ರಶಸ್ತಿऽಭಿಃ । ಮಹಯಸೇ । ದಿವೇऽದಿವೇ ॥ ೨ ॥

॥ ಸಾಯಣಭಾಷ್ಯಂ ॥

ವನಸ್ಪತಾವರಣ್ಯಾಂ ಸುಧಿತಂ ಸುಷ್ಠು ನಿಹಿತಮೀಡ್ಯಂ ಸ್ತುತ್ಯಮೂರ್ಧ್ವಶೋಚಿಷಮುಚ್ಛ್ರಿತ-ತೇಜಸ್ಕಂ ಯಮಗ್ನಿಂ ತ್ವಾಂ ಮಿತ್ರಂ ನ ಮಿತ್ರಮಿವ ಸಖಿಭೂತಮಿವ ಭೃಗವೋ ಮಹರ್ಷಯೋ ದಧುಃ। ಅದಧುಃ ಗೃಹೇ ಸ್ಥಾಪಿತವಂತಃ ಹೇ ಅದ್ಭುತ ಮಹನ್ನಗ್ನೇ ಸ ತಾದೃಶಸ್ತ್ವಂ ವೀತಹವ್ಯ ಏತತ್ಸಂಜ್ಞ ಋಷೌ ಸುಪ್ರೀತಃ ಸುಷ್ಠು ಪ್ರೀಯಮಾಣೋ ಭವ। ಯತೋ ದಿವೇ ದಿವೇ ಪ್ರತಿದಿನಂ ಪ್ರಶಸ್ತಿಭಿಃ ಪ್ರಕೃಷ್ಟೈಃ ಸ್ತೋತ್ರೈರ್ಮಹಯಸೇ ಪೂಜ್ಯಸೇ। ಭರದ್ವಾಜ ಋಷಿರ್ಹಿತ್ ವೀತಹವ್ಯೇ ದತ್ತಹವಿಷ್ಕೇ ಭರದ್ವಾಜ ಇತಿ ಯೋಜನೀಯಂ ॥

॥ ಪ್ರತಿಪದಾರ್ಥ ॥

**ಅದ್ಭುತ**—ಮಹತ್ಸ್ವರೂಪವುಳ್ಳ ಎಲೈ ಅಗ್ನಿಯೇ । **ವನಸ್ಪತೌ**—ಅರಣಿಯಲ್ಲಿ । **ಸುಧಿತಂ**—ಸುಪ್ತನಾಗಿದ್ದವನೂ । **ಈಡ್ಯಂ**—ಸ್ತುತ್ಯನೂ । **ಊರ್ಧ್ವಶೋಚಿಷಂ**—ಮೇಲ್ಭಾಗಕ್ಕೆ ಉನ್ನತವಾಗಿ ಹರಡಿದ ತೇಜಸ್ಸುಳ್ಳವನೂ ಆದ । **ಯಂ**—ಯಾವ ನಿನ್ನನ್ನು । **ಮಿತ್ರಂ ನ**—ಸುಹೃತ್ತಿನಂತೆ । **ಭೃಗವಃ**—ಭೃಗುಮಹರ್ಷಿಗಳು । **ದಧುಃ**—ಸ್ಥಾಪಿಸಿದರೋ । **ಸಃ**—ಅಂತಹ । **ತ್ವಂ**—ನೀನು । **ವೀತಹವ್ಯೇ**—ವೀತಹವ್ಯನೆಂಬ ಋಷಿಯ ವಿಷಯದಲ್ಲಿ । **ಸುಪ್ರೀತಃ**—ಅನುಗ್ರಹಪರನಾಗು (ಆದುದರಿಂದಲೇ) । **ದಿವೇದಿವೇ**—ಪ್ರತಿದಿನವೂ । **ಪ್ರಶಸ್ತಿಭಿಃ**—ಉತ್ತಮವಾದ ಸ್ತೋತ್ರಗಳಿಂದ । **ಮಹಯಸೇ**—ಪೂಜಿಸಲ್ಪಡುತ್ತೀಯೆ.

॥ ಭಾವಾರ್ಥ ॥

ಮಹತ್ಸ್ವರೂಪವುಳ್ಳ ಎಲೈ ಅಗ್ನಿಯೇ, ಅರಣಿಯಲ್ಲಿ ಸುಪ್ತನಾಗಿದ್ದವನೂ ಸ್ತುತ್ಯನೂ ಮೇಲ್ಭಾಗಕ್ಕೆ ಉನ್ನತವಾಗಿ ಹರಡಿದ ತೇಜಸ್ಸುಳ್ಳವನೂ ಆದ ಯಾವ ನಿನ್ನನ್ನು ಸುಹೃತ್ತಿನಂತೆ ಭೃಗುಮಹರ್ಷಿಗಳು ಸ್ಥಾಪಿಸಿದರೋ ಅಂತಹ

ನೀನು ವೀತಹವ್ಯನೆಂಬ ಹೆಸರಿನ ಋಷಿಯ ವಿಷಯದಲ್ಲಿ ಅನುಗ್ರಹಪರನಾಗಿರು. ಆದುದರಿಂದಲೇ ಪ್ರತಿದಿನವೂ ಉತ್ತಮವಾದ ಸ್ತೋತ್ರಗಳಿಂದ ಪೂಜಿಸಲ್ಪಡುತ್ತೀಯೆ.

## English Translation.

Wonderful Agni, whom, adorable and upward flaming, the Bhrigus regard as a friend, deposited in the wood of (attrition), be pleased with Vitahavya, since you are glorified by (his) praise every day.

|| ವಿಶೇಷವಿಷಯಗಳು ||

**ವನಸ್ಪತೌ ಸುಧಿತಂ**—ವನಸ್ಪತಿಯೆಂದರೆ ದೊಡ್ಡ ವೃಕ್ಷವು. ಇಲ್ಲಿ ವೃಕ್ಷವಿಕಾರವಾದ (ಮರದ) ತುಂಡುಗಳು. ಇವುಗಳಿಗೆ ಅರಣಿಗಳೆಂದು ಹೆಸರು. ಈ ಅರಣಿಗಳು ಎರಡು, ಕೆಳಗಡೆ ದೊಡ್ಡದೂ ಅಗಲವೂ ಆಗಿರುವುದು ಒಂದು. ಅದರಮೇಲೆ ಕೋಲಿನಂತಿರುವ ಇನ್ನೊಂದು ಮರದ ತುಂಡನ್ನಿಟ್ಟು ಕಡೆದು ಅಗ್ನಿಯನ್ನು ಉತ್ಪತ್ತಿಮಾಡುವರು. ಇದು ಎರಡನೆಯ ಮರದ ತುಂಡು. ಆದುದರಿಂದ ಈ ಅರಣಿಯೆಂಬ ಮರದ ತುಂಡಿನಲ್ಲಿ ಅಗ್ನಿಯು ಗೂಢವಾಗಿ ಇರುವನೆಂದೂ ಕಡೆದನಂತರ ಎಲ್ಲರಿಗೂ ಕಾಣಿಸುವಂತೆ ಆವಿರ್ಭೂತನಾಗುವನೆಂದೂ ಮುಖ್ಯಾಭಿಪ್ರಾಯವು.

**ಭೃಗವಃ**—ಈ ಶಬ್ದಕ್ಕೆ ಯಾಸ್ಕರು—**ಅರ್ಚಿಷಿ ಭೃಗುಃ ಸಂಬಭೂವ|| ಭೃಗುರ್ಭೃಜ್ಯಮಾನೋ ನ ದೇಹೇ** (ನಿ. ೩-೧೭) ಎಂದು ನಿರ್ವಚನವನ್ನು ಹೇಳಿರುವರು. ಎಂದರೆ ಭೃಗು ಎಂಬ ಮಹರ್ಷಿಯು ಅಗ್ನಿಯ ಜ್ವಾಲೆಗಳಲ್ಲಿ ಉತ್ಪನ್ನನಾದವನು. ಜ್ವಾಲೆಗಳಿಂದ ದಹಿಸಲ್ಪಟ್ಟರೂ ಅವನ ಶರೀರಕ್ಕೆ ಯಾವ ಬಾಧೆಯೂ ಉಂಟಾಗದೆ ಇದ್ದನು. ಈ ವಿಷಯದಲ್ಲಿ ನಿರುಕ್ತವ್ಯಾಖ್ಯಾಕಾರರಾದ ದುರ್ಗಾಚಾರ್ಯರು **ಪ್ರಜಾಪತಿನಾ ಕಿಲ ಶುಕ್ರಮಾತ್ಮೀಯಮಾದಾಯ ಅಗ್ನೌ ಹುತಂ। ತತಃ ಅರ್ಚಿಷಿ ಜ್ವಾಲಾಯಾಂ ಭೃಗುರ್ನಾಮ ಮಹರ್ಷಿಃ ಸಂಬಭೂವ**—ಎಂದರೆ ಪೂರ್ವದಲ್ಲಿ ಪ್ರಜಾಪತಿಯು ತನ್ನ ರೇತಸ್ಸನ್ನು ಗ್ರಹಿಸಿ ಅದನ್ನು ಅಗ್ನಿಯಲ್ಲಿ ಹೋಮ ಮಾಡಿದನು. ।ಆಗ ಅದರಿಂದ ,ಅಗ್ನಿಜ್ವಾಲೆಯುಂಟಾಗಿ ಅದರಲ್ಲಿ ಭೃಗಋಷಿಯು ಉತ್ಪನ್ನನಾದನು. ಅಗ್ನಿಯ ಜ್ವಾಲೆಯಿಂದ ಇವನು ದಹಿಸಲ್ಪಡದಿರುವ ಕಾರಣ. ಇವನಿಗೆ ಭೃಗುವೆಂದು ಹೆಸರಾಯಿತು ಎಂದು ಹೇಳಿದ್ದಾರೆ.

**ವೀತಹವ್ಯೇ**—ವೀತಹವ್ಯ ಎಂಬುವನು ಈ ಸೂಕ್ತದ ದ್ರಷ್ಟೃವಾದ ಋಷಿಯು. ಈ ಶಬ್ದಕ್ಕೆ ದತ್ತಹವಿಷ್ಕೇ ಅಗ್ನಿಯಲ್ಲಿ ಹವಿಸ್ಸನ್ನು ಅರ್ಪಿಸಿರುವ ಎಂದರ್ಥವು. ಈ ಸೂಕ್ತಕ್ಕೆ ವೀತಹವ್ಯ ಅಥವಾ ಭರದ್ವಾಜನೆಂಬ ಋಷಿಯು ದ್ರಷ್ಟೃವಾಗಿರುವನು ಎಂದು ಹಿಂದೆಯೇ ಹೇಳಿದೆ. ವೀತಹವ್ಯ ಎಂಬ ಶಬ್ದಕ್ಕೂ ಭರದ್ವಾಜಶಬ್ದಕ್ಕೂ ಸ್ವಲ್ಪ ಹೆಚ್ಚು ಕಡಿಮೆ ಅರ್ಥವು ಒಂದೇ ವಿಧವಾಗಿರುವುದರಿಂದ ಇವರಿಬ್ಬರೂ ಒಂದೇ ವ್ಯಕ್ತಿಯೇ ಅಥವಾ ಬೇರೆ ಬೇರೆ ವ್ಯಕ್ತಿಗಳೇ ಎಂಬ ವಿಷಯವು ಸಂಶಯಾಸ್ಪದವಾಗಿದೆ. ಇಬ್ಬರೂ ಅಂಗಿರಸಗೋತ್ರೋತ್ಪನ್ನರು. ಭರದ್ವಾಜಶಬ್ದಕ್ಕೆ ಯಾಸ್ಕರು—**ಭರಣಾದ್ಭರದ್ವಾಜಃ** । (ನಿ. ೩-೧೭) ಎಂದರೆ ಅಗ್ನಿಗೆ ಅರ್ಪಿಸುವುದಕ್ಕಾಗಿ ಹವಿರಾದಿಗಳನ್ನು ಧರಿಸಿ ನಿಂತಿರುವ ಎಂದರ್ಥವು. ಈ ಅರ್ಥವನ್ನು ಸಾಯಣರು ಮುಂದಿನ ಋಕ್ಕಿನಲ್ಲಿ **ಭರದ್ವಾಜಾಯ—ಸಂಭೃತಹವಿರ್ಲಕ್ಷಣಾನ್ನಾಯ** ಎಂಬ ಶಬ್ದಗಳಿಂದ ಸ್ಪಷ್ಟಪಡಿಸಿರುವರು. ಪ್ರಕೃತ ಋಕ್ಕಿನಲ್ಲಿ ಯಾವ ಅರ್ಥವನ್ನು ಬೇಕಾದರೂ ಹೇಳಬಹುದು.

|| ಸಂಹಿತಾಪಾಠಃ ||

ಸ ತ್ವಂ ದಕ್ಷಸ್ಯಾವೃಕೋ ವೃಧೋ ಭೂರರ್ಯಃ ಪರಸ್ಯಾಂತರಸ್ಯ ತರುಷಃ ।
ರಾಯಃ ಸೂನೋ ಸಹಸೋ ಮರ್ತ್ಯೇಷ್ವಾ ಛರ್ದಿರ್ಯಚ್ಛ ವೀತಹವ್ಯಾಯ
ಸಪ್ರಥೋ ಭರದ್ವಾಜಾಯ ಸಪ್ರಥಃ ॥ ೩ ॥

॥ ಪದಪಾಠಃ ॥

ಸಃ । ತ್ವಂ । ದಕ್ಷಸ್ಯ । ಅವೃಕಃ । ವೃಧಃ । ಭೂಃ । ಅರ್ಯಃ । ಪರಸ್ಯ । ಅಂತರಸ್ಯ । ತರುಷಃ ।
ರಾಯಃ । ಸೂನೋ ಇತಿ । ಸಹಸಃ । ಮರ್ತ್ಯೇಷು । ಆ । ಛರ್ದಿಃ । ಯಚ್ಛ । ವೀತऽಹವ್ಯಾಯ ।
ಸऽಪ್ರಥಃ । ಭರತ್ऽವಾಜಾಯ । ಸऽಪ್ರಥಃ ॥ ೩ ॥

|| ಸಾಯಣಭಾಷ್ಯಂ ||

ಹೇ ಅಗ್ನೇ ಸ ತಾದೃಶೋऽವೃಕೋ ಬಾಧಕರಹಿತಸ್ತ್ವಂ ದಕ್ಷಸ್ಯಾನುಷ್ಠಾನಸಮರ್ಥಸ್ಯ ವೃಧೋ ವರ್ಧಯಿತಾ ಭೂಃ। ಭವಸಿ । ತಥಾ ಪರಸ್ಯ ವಿಪ್ರಕೃಷ್ಟಸ್ಯಾರ್ಯೋऽರೇಃ ಶತ್ರೋರಂತರಸ್ಯಾತಿಕತರಸ್ಯ ಸಂನಿಕೃಷ್ಟಸ್ಯ ಶತ್ರೋಸ್ತರುಷಸ್ತರಿತಾ ಭವಸಿ । ಅತಃ ಕಾರಣಾತ್ ಹೇ ಸಹಸಃ ಸೂನೋ ಸಪ್ರಥಃ ಸರ್ವತಃ ಪೃಥುಸ್ತ್ವಂ ಮರ್ತ್ಯೇಷು ಮನುಷ್ಯೇಷು ಮಧ್ಯೇ ಭರದ್ವಾಜಾಯ ಸಂಭೃತಹವಿರ್ಲಕ್ಷಣಾನ್ನಾಯ ವೀತಹವ್ಯಾಯ । ವೀತಂ ಗಮಿತಂ ಹವ್ಯಂ ಹವಿರ್ಯೇನ ತಾದೃಶಾಯ ಭಾರದ್ವಾಜಾಯೇತಿ ವಾ ಯೋಜ್ಯಂ। ರಾಯೋ ಧನಾನಿ ಛರ್ದಿರ್ಗೃಹಮಾ ಯಚ್ಛ । ಪ್ರಯಚ್ಛ । ಸಪ್ರಥ ಇತಿ ಪುನರುಕ್ತಿರಾದರಾರ್ಥಾ ||

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಅವೃಕಃ**—ತಡೆಯಿಲ್ಲದ ಶಕ್ತಿಯುಳ್ಳ । **ಸಃ ತ್ವಂ**—ಅದೇ ನೀನು । **ದಕ್ಷಸ್ಯ**—ಕರ್ಮಾಚರಣೆಯ ಶಕ್ತಿಯುಳ್ಳ ಯಜಮಾನನ । **ವರ್ಧಯಿತಾ**—ವೃದ್ಧಿಕಾರಕನಾಗಿ । **ಭೂಃ**—ಆಗಿದ್ದೀಯೆ । **ಪರಸ್ಯ**—ದೂರದಲ್ಲಿರತಕ್ಕ । **ಅರ್ಯಃ**—ಶತ್ರುವಿನಿಂದಲೂ । **ಅಂತರಸ್ಯ**—ಸಮೀಪದಲ್ಲಿರುವ ಶತ್ರುವಿನಿಂದಲೂ । **ತರುಷಃ**—ನಮ್ಮನ್ನು ದಾಟಿಸುವವನಾಗು । **ಸಹಸಃ ಸೂನೋ**—ಶಕ್ತಿಪುತ್ರನಾದ ಎಲೈ ಅಗ್ನಿಯೇ । **ಸಪ್ರಥಃ**—ಎಲ್ಲರಿಗಿಂತಲೂ ಅಧಿಕನಾದ ನೀನು । **ಮರ್ತ್ಯೇಷು**—ಮಾನವರಲ್ಲಿ । **ಭರದ್ವಾಜಾಯ**—ಹವಿಸ್ಸನ್ನು ಸಂಗ್ರಹಿಸಿ ಇಟ್ಟಿರುವ । **ವೀತಹವ್ಯಾಯ**—ವೀತಹವ್ಯನಿಗೆ (ಅಥವಾ ವೀತಹವ್ಯನಾದ ಭರದ್ವಾಜನಿಗೆ) । **ರಾಯಃ**—ಧನಗಳನ್ನೂ । **ಗೃಹಂ**—ಗೃಹವನ್ನೂ । **ಆ ಯಚ್ಛ**—ಕೊಡು.

॥ ಭಾವಾರ್ಥ ॥

ಎಲೈ ಅಗ್ನಿಯೇ, ತಡೆಯಿಲ್ಲದ ಶಕ್ತಿಯುಳ್ಳ ನೀನು ಕರ್ಮಾಚರಣೆಯ ಶಕ್ತಿಯುಳ್ಳ ಯಜಮಾನನಿಗೆ ವೃದ್ಧಿಕಾರಕನಾಗಿ ಆಗಿದ್ದೀಯೆ. ದೂರದಲ್ಲಿರತಕ್ಕ ಶತ್ರುವಿನಿಂದಲೂ, ಸಮೀಪದಲ್ಲಿರುವ ಶತ್ರುವಿನಿಂದಲೂ ನಮ್ಮನ್ನು ದಾಟಿಸುವವನಾಗು. ಶಕ್ತಿಪುತ್ರನಾದ ಎಲೈ ಅಗ್ನಿಯೇ, ಎಲ್ಲರಿಗಿಂತಲೂ ಅಧಿಕನಾದ ನೀನು ಮಾನವರಲ್ಲಿ ಅಧಿಕವಾಗಿ ಹವಿಸ್ಸನ್ನು ಸಂಗ್ರಹಿಸಿ ಅರ್ಪಿಸಲು ಸಿದ್ಧನಾಗಿರುವ ಭರದ್ವಾಜನಿಗೆ ಧನಗಳನ್ನೂ ಗೃಹವನ್ನೂ ಕೊಡು.

English Translation.

Agni, you, who are unresisted, become the benefactor of him who is skilled (in sacred rites), his defender against a near or distant enemy : Son of strength, who are ever renowned, grant wealth and a dwelling to Vitahavya, the offerer of the oblation.

॥ ಸಂಹಿತಾಪಾಠಃ ॥

ದ್ಯುತಾನಂ ವೋ ಅತಿಥಿಂ ಸ್ವರ್ಣರಮಗ್ನಿಂ ಹೋತಾರಂ ಮನುಷಃ ಸ್ವಧ್ವರಂ ।

ವಿಪ್ರಂ ನ ದ್ಯುಕ್ಷವಚಸಂ ಸುವೃಕ್ತಿಭಿರ್ಹವ್ಯವಾಹಮರತಿಂ ದೇವಮೃಂಜಸೇ ॥

॥ ಪದಪಾಠಃ ॥

ದ್ಯುತಾನಂ । ವಃ । ಅತಿಥಿಂ । ಸ್ವಃऽನರಂ । ಅಗ್ನಿಂ । ಹೋತಾರಂ । ಮನುಷಃ । ಸುऽಅಧ್ವರಂ ।

ವಿಪ್ರಂ । ನ । ದ್ಯುಕ್ಷऽವಚಸಂ । ಸುವೃಕ್ತಿऽಭಿಃ । ಹವ್ಯऽವಾಹಂ । ಅರತಿಂ । ದೇವಂ । ಋಂಜಸೇ ॥ ೪ ॥

॥ ಸಾಯಣಭಾಷ್ಯಂ ॥

ಹೇ ವೀತಹವ್ಯ ತ್ವಂ ಸುವೃಕ್ತಿಭಿಃ ಶೋಭನಾಭಿಃ ಸ್ತುತಿಭಿರ್ಹವ್ಯವಾಹಂ ಹವಿಷಾಂ ವೋಢಾರಂ ದೇವಮಗ್ನಿಮೃಂಜಸೇ । ಪ್ರಸಾಧಯ । ಕೀದೃಶಂ । ದ್ಯುತಾನಂ ದೀಪ್ಯಮಾನಂ ವೋ ಯುಷ್ಮಾಕಮತಿಥಿಮತಿಥಿವತ್ಪೂಜ್ಯಂ ಸ್ವರ್ಣರಂ ಸ್ವರ್ಗಸ್ಯ ನೇತಾರಂ ಮನುಷೋ ಮನೋಃ ಪ್ರಜಾಪತೇರ್ಯಜ್ಞೇ ಹೋತಾರಂ ದೇವಾನಾಮಾಹ್ವಾತಾರಂ ಸ್ವಧ್ವರಂ ಶೋಭನಯಜ್ಞಂ ವಿಪ್ರಂ ನ ಮೇಧಾವಿನಂ ವಿಪಶ್ಚಿತಮಿವ ದ್ಯುಕ್ಷವಚಸಂ । ದೀಪ್ತೇರ್ನಿವಾಸಭೂತಂ ದ್ಯುಕ್ಷಂ । ತಾದೃಶವಾಕ್ಯೋಪೇತಮರತಿಮರ್ಯಂ ಸ್ವಾಮಿನಂ॥

॥ ಪ್ರತಿಪದಾರ್ಥ ॥

(ಎಲೈ ವೀತಹವ್ಯನೇ) **ದ್ಯುತಾನಂ**—ಪ್ರಕಾಶಮಾನನೂ | **ವಃ**—ನಿಮಗೆ | **ಅತಿಥಿಂ**—ಅತಿಥಿಯಂತೆ ಪೂಜ್ಯನೂ | **ಸ್ವರ್ಣರಂ**—ಸ್ವರ್ಗಕ್ಕೆ ಒಯ್ಯುವವನೂ | **ಮನುಷಃ**—ಮನುವಿನ ಯಜ್ಞದಲ್ಲಿ | **ಹೋತಾರಂ**—ಹೋತೃವಾದವನೂ | **ಸ್ವಧ್ವರಂ**—ಉತ್ತಮವಾದ ಯಜ್ಞಕರ್ತನೂ | **ವಿಪ್ರಂ ನ**—ಪ್ರಾಜ್ಞನಾದ ಸ್ತುತಿಕರ್ತನಂತೆ| **ದ್ಯುಕ್ಷವಚಸಂ**—ಕಾಂತಿಯುತವಾದ ವಾಕ್ಕುಳ್ಳವನೂ | **ಅರತಿಂ**—ಪೂಜ್ಯನೂ | **ಹವ್ಯವಾಹಂ**—ಹವಿಸ್ಸನ್ನು ವಹಿಸುವವನೂ | **ದೇವಂ**—ದೇವತಾತ್ಮನೂ ಆದ | **ಅಗ್ನಿಂ**—ಅಗ್ನಿಯನ್ನು | **ಸುವೃಕ್ತಿಭಿಃ**—ಉತ್ತಮವಾದ ಸ್ತುತಿಗಳಿಂದ | **ಋಂಜಸೇ**—ಅಲಂಕರಿಸು.

॥ ಭಾವಾರ್ಥ ॥

ಎಲೈ ವೀತಹವ್ಯನೇ, ಪ್ರಕಾಶಮಾನನೂ, ನಿಮಗೆ ಅತಿಥಿಯಂತೆ ಪೂಜ್ಯನೂ, ಸ್ವರ್ಗಕ್ಕೆ ಒಯ್ಯುವವನೂ, ಮನುವಿನ ಯಜ್ಞದಲ್ಲಿ ಹೋತೃವಾದವನೂ, ಉತ್ತಮವಾದ ಯಜ್ಞಕರ್ತನೂ, ಪ್ರಾಜ್ಞನಾದ ಸ್ತುತಿಕರ್ತನಂತೆ ಕಾಂತಿಯುತವಾದ ವಾಕ್ಕುಳ್ಳವನೂ, ಪೂಜ್ಯನೂ, ಹವಿಸ್ಸನ್ನು ವಹಿಸುವವನೂ, ದೇವತಾತ್ಮನೂ ಆದ ಅಗ್ನಿಯನ್ನು ಉತ್ತಮವಾದ ಸ್ತುತಿಗಳಿಂದ ಅಲಂಕರಿಸು (ಸ್ತೋತ್ರಮಾಡು)

## English Translation.

Propitiate with pious praises the radiant Agni, your guest, the guide to heaven, the invoker of the gods (at the sacrifice) of Manu, the celebrator of holy rites, the speaker of brilliant words like a learned sage, the bearer of oblations (to the gods), the lord, the divine.

॥ ಸಂಹಿತಾಪಾಠಃ ॥

ಪಾವಕಯಾ ಯಶ್ಚಿತಯಂತ್ಯಾ ಕೃಪಾ ಕ್ಷಾಮನ್ರುರುಚ ಉಷಸೋ ನ ಭಾನುನಾ ।

ತೂರ್ವನ್ನ ಯಾಮನ್ನೇತಶಸ್ಯ ನೂ ರಣ ಆ ಯೋ ಘೃಣೇ ನ ತತೃಷಾಣೋ ಅಜರಃ ॥ ೫ ॥

॥ ಪದಪಾಠಃ ॥

ಪಾವಕಯಾ । ಯಃ । ಚಿತಯಂತ್ಯಾ । ಕೃಪಾ । ಕ್ಷಾಮನ್ । ರುರುಚೇ । ಉಷಸಃ । ನ । ಭಾನುನಾ । ತೂರ್ವನ್ । ನ । ಯಾಮನ್ । ಏತಶಸ್ಯ । ನು । ರಣೇ । ಆ । ಯಃ । ಘೃಣೇ । ನ । ತತೃಷಾಣಃ । ಅಜರಃ ॥ ೫ ॥

॥ ಸಾಯಣಭಾಷ್ಯಂ ॥

ಯೋಽಗ್ನಿಃ ಪಾವಕಯಾ ಶೋಧಯಿತ್ರ್ಯಾ ಚಿತಯಂತ್ಯಾ ಚೇತಯಂತ್ಯಾ ಪ್ರಜ್ಞಾಪಯಂತ್ಯಾ ಕೃಪಾ ದೀಪ್ತ್ಯಾ ಕ್ಷಾಮನ್ ಭೂಮ್ಯಾಂ ರುರುಚೇ ದೀಪ್ಯತೇ । ಉಷಸೋ ನ ಭಾನುನಾ । ಯಥೋಷಸಃ ಪ್ರಕಾಶೇನ ಭಾಸಂತೇ ತದ್ವತ್ । ಅಪಿ ಚ ಯಾಮನ್ ಯಾಮನಿ ಸಂಗ್ರಾಮೇ ತೂರ್ವನ್ನ ಶತ್ರೂನ್ ಹಿಂಸನ್ ಪುರುಷ ಇವೈತಶಸ್ಯೈತತ್ಸಂಜ್ಞಸ್ಯ ಋಷೇ ರಣೇ ಸೂರ್ಯೇಣ ಸಹ ಸಂಗ್ರಾಮೇ ಸಹಾಯಾರ್ಥಂ ಯೋಽಗ್ನಿರ್ನು ಕ್ಷಿಪ್ರಮಾ ಘೃಣೇ ಆದೀಪ್ಯತೇ । ಪ್ರೈತಶಂ ಸೂರ್ಯೇ ಪಸ್ಪೃಧಾನಂ । ಋಗ್ವೇ. ೧-೬೧-೧೫ । ಇತಿ ನಿಗಮಾಂತರಂ । ನೂನಂ ಸರ್ವೇ ದೇವಾಸ್ತಸ್ಯ ಸಾಹಾಯ್ಯಮಕಾರ್ಷುಃ । ಯಶ್ಚ ತತೃಷಾಣಸ್ತೃಷಿತಃ ಪ್ರಭಾವೇನ ಸರ್ವಭಕ್ಷಣಶೀಲೋಽಜರೋ ಜರಾರಹಿತಶ್ಚ ಭವತಿ ತಂ ದೇವಮ್ಯಂಜಸ ಇತಿ ಪೂರ್ವಸ್ಯಾಮೃಚಿ ಸಂಬಂಧಃ ॥

॥ ಪ್ರತಿಪದಾರ್ಥ ॥

**ಭಾನುನಾ**—ತನ್ನ ಕಾಂತಿಯಿಂದ । **ಉಷಸೋ ನ**—ಉಷಸ್ಸು ಪ್ರಕಾಶಿಸುವಂತೆ । **ಯಃ**—ಯಾವ ಅಗ್ನಿಯು । **ಪಾವಕಯಾ**—ಶುದ್ಧಿಕಾರಕವಾದುದೂ । **ಚಿತಯಂತ್ಯಾ**—ಚೈತನ್ಯದಾಯಿಯಾದುದೂ ಆದ । **ಕೃಪಾ**—ಪ್ರಭೆಯಿಂದ । **ಕ್ಷಾಮನ್**—ಪೃಥ್ವಿಯಲ್ಲಿ । **ರುರುಚೇ**—ಪ್ರಕಾಶಿಸುವನೋ । **ಯಃ**—ಯಾವ ಅಗ್ನಿಯು । **ನು**—ಕ್ಷಿಪ್ರವಾಗಿ । **ಯಾಮನ್**—ಸಂಗ್ರಾಮದಲ್ಲಿ । **ತೂರ್ವನ್ನ**—ಹಿಂಸಕನಾದ ಪುರುಷನಂತೆ । **ಏತಶಸ್ಯ**—ಏತಶನು ನಡೆಸುವ । **ರಣೇ**—ಯುದ್ಧರಂಗದಲ್ಲಿ । **ಆ ಘೃಣೇ**—ಪ್ರಕಾಶಿಸುವನೋ । (**ಯಃ**—ಯಾರು) । **ತತೃಷಾಣಃ**—ಸಕಲವನ್ನೂ ಭಕ್ಷಿಸುವ ಸ್ವಭಾವವುಳ್ಳವನಾಗಿಯೂ । **ಅಜರಃ**—ಜರಾರಹಿತನಾಗಿಯೂ ಇರುವನೋ (ಅಂತಹ ಅಗ್ನಿಯನ್ನು ಪ್ರಶಂಸಿಸು).

॥ ಭಾವಾರ್ಥ ॥

ತನ್ನ ಕಾಂತಿಯಿಂದ ಉಷಸ್ಸು ಪ್ರಕಾಶಿಸುವಂತೆ ಯಾವ ಅಗ್ನಿಯು ಶುದ್ಧಿಕಾರಕವಾದುದೂ, ಚೈತನ್ಯದಾಯಿಯಾದುದೂ ಆದ ಪ್ರಭೆಯಿಂದ ಪೃಥ್ವಿಯಲ್ಲಿ ಪ್ರಕಾಶಿಸುವನೋ, ಯಾವ ಅಗ್ನಿಯು ಸಂಗ್ರಾಮದಲ್ಲಿ ವೀರನು ಮುನ್ನುಗ್ಗುವಂತೆ ಏತಶನ ರಣರಂಗದಲ್ಲಿ ಏತಶನ ಸಹಾಯಾರ್ಥವಾಗಿ ಕ್ಷಿಪ್ರವಾಗಿ ಪ್ರಕಾಶಿಸುವನೋ, ಯಾರು ಸಕಲವನ್ನೂ ಭಕ್ಷಿಸುವ ಸ್ವಭಾವವುಳ್ಳವನಾಗಿಯೂ, ಜರಾರಹಿತನಾಗಿಯೂ ಇರುವನೋ, ಅಂತಹ ಅಗ್ನಿಯನ್ನು ಪ್ರಶಂಸಿಸು.

## English Translation

(Propitiate him) who shines upon the earth with purifying and enlightening lustre, as the dawns with light; him, who like (a warrior) discomfiting (his foes) quickly blazed forth in the contest in defence of Etasha; him, who is satiated (with food), exempt from decay.

॥ ವಿಶೇಷವಿಷಯಗಳು ॥

**ಏತಶಸ್ಯ**—ಏತಶ ಶಬ್ದಕ್ಕೆ ಎರಡುವಿಧವಾದ ಅರ್ಥವಿರುವುದು ಸೂರ್ಯಾಶ್ವಕ್ಕೆ ಏತಶವೆಂದು ಹೆಸರು. ಮತ್ತು ಏತಶನೆಂಬ ಒಬ್ಬ ಋಷಿಯು. ಪ್ರಕೃತ ಋಕ್ಕಿನಲ್ಲಿ ಏತಶನೆಂಬ ಋಷಿಯೊಡನೆ ನಡೆದ ಯುದ್ಧದಲ್ಲಿ ಎಂಬರ್ಥ ವಿರುವುದು. ಋ. ಸಂ. ೧-೬೧-೧೫ ಮತ್ತು ಋ ಸಂ. ೧-೧೨೧-೧೩ ನೆಯ ಋಕ್ಕುಗಳಲ್ಲಿಯೂ ಈ ವಿಷಯದ ಪ್ರಸ್ತಾಪವಿದೆ. ಭಾಷ್ಯಕಾರರು ಇದನ್ನು ವಿವರಿಸುತ್ತಾ ಒಂದು ಪೂರ್ವೇತಿಹಾಸವನ್ನು ಹೇಳಿದಾರೆ.

**ಸ್ವಶ್ವನಾಮಾ ಕಶ್ಚಿದ್ರಾಜಾ । ಸ ಚ ಪುತ್ರಾರ್ಥಂ ಸೂರ್ಯಮುಪಾಸ್ತೇ । ಸ ಚ ಸೂರ್ಯಃ ಪುತ್ರರೂಪೇಣ ಸ್ವಯಮೇವ ತತ್ರೋತ್ಪನ್ನಃ ಸನ್ ಏತಶಾಖ್ಯೇನ ಮಹರ್ಷಿಣಾ ಸಾರ್ಧಂ ಯುದ್ಧಂ ಚಕಾರ । ತದಾನೀಂ ಸ ಋಷಿಃ ಯುದ್ಧೇ ಜಯಾರ್ಥಮಿಂದ್ರಂ ತುಷ್ಟಾವ । ಸ ಇಂದ್ರಃ ತೇನ ಸ್ತೂಯಮಾನಃ ಸನ್ ಸ್ವಶ್ವಪುತ್ರಸ್ಯ ಸೂರ್ಯಸ್ಯ ಸಂಬಂಧಿನಃ ಸಂಗ್ರಾಮಾತ್ ಏನಮಪಾಲಯದಿತಿ ॥** (ಸಾ. ಭಾ. ೧-೬೧-೧೫)

ಪೂರ್ವದಲ್ಲಿ ಸ್ವಶ್ವನೆಂಬ ಹೆಸರಿನ ಒಬ್ಬ ರಾಜನಿದ್ದನು ಅವನು ತನಗೆ ಪುತ್ರನಾಗಬೇಕೆಂದು ಸೂರ್ಯನನ್ನು ಉಪಾಸನೆ ಮಾಡಿದನು. ಆಗ ಸೂರ್ಯನು ತಾನೇ ಅವನಿಗೆ ಪುತ್ರನಾಗಿ ಹುಟ್ಟಿದನು. ಈ ಪುತ್ರನು ಏತಶ ಎಂಬ ಋಷಿಯೊಡನೆ ಯುದ್ಧಮಾಡುತ್ತಿದ್ದಾಗ ಈ ಏತಶನೆಂಬ ಋಷಿಯು ಯುದ್ಧದಲ್ಲಿ ತನಗೆ ಜಯವು ಲಭಿಸುವುದಕ್ಕಾಗಿ ಇಂದ್ರನನ್ನು ಸ್ತುತಿಸಿದನು. ಆಗ ಇಂದ್ರನು ಅವನ ಸ್ತುತಿಗೆ ಸಂತೋಷಪಟ್ಟು ಸ್ವಶ್ವಪುತ್ರನ ಸಂಬಂಧವಾದ ಯುದ್ಧದಲ್ಲಿ ಏತಶ ಋಷಿಯನ್ನು ಸಂರಕ್ಷಿಸಿದನು ಎಂಬ ವಿಷಯವು ಇಲ್ಲಿ ಸೂಚಿತವಾಗಿದೆ. ಆದರೆ ಪ್ರಕೃತ ಋಕ್ಕಿನಲ್ಲಿ ಈ ಏತಶ ಋಷಿಯ ಸಹಾಯಾರ್ಥವಾಗಿ ಅಗ್ನಿಯು ಪ್ರಕಾಶಿಸಿದನು ಎಂದಿದೆ. ವೃತ್ರಹನನವೇ ಮೊದಲಾದ ಇಂದ್ರನ ಅನೇಕ ಸಾಹಸ ಕರ್ಮಗಳಲ್ಲಿ, ಅಗ್ನಿಯಲ್ಲಿ, ಇಂದ್ರನ ಗುಣಗಳನ್ನೂ ಆರೋಪಿಸಿ ಸ್ತುತಿಸಿರುವುದು ಋಗ್ವೇದದಲ್ಲಿ ಅನೇಕ ಕಡೆ ಕಂಡುಬಂದಿದೆ ಅಂತಹ ಸಂದರ್ಭಗಳಲ್ಲಿ ಇದೂ ಒಂದು ಉದಾಹರಣೆಯೆಂದು ಹೇಳಬಹುದು.

॥ ಸಂಹಿತಾಪಾಠಃ ॥

ಅಗ್ನಿಮಗ್ನಿಂ ವಃ ಸಮಿಧಾ ದುವಸ್ಯತ ಪ್ರಿಯಂಪ್ರಿಯಂ ವೋ ಅತಿಥಿಂ ಗೃಣೀಷಣಿ ।

ಉಪ ವೋ ಗೀರ್ಭಿರಮೃತಂ ವಿವಾಸತ ದೇವೋ ದೇವೇಷು ವನತೇ ಹಿ
ವಾರ್ಯಂ ದೇವೋ ದೇವೇಷು ವನತೇ ಹಿ ನೋ ದುವಃ ॥ ೬ ॥

॥ ಪದಪಾಠಃ ॥

ಅಗ್ನಿಂಽಅಗ್ನಿಂ । ವಃ । ಸಂಽಇಧಾ । ದುವಸ್ಯತ । ಪ್ರಿಯಂಽಪ್ರಿಯಂ । ವಃ । ಅತಿಥಿಂ । ಗೃಣೀಷಣಿ ।
ಉಪ । ವಃ । ಗೀಃಽಭಿಃ । ಅಮೃತಂ । ವಿವಾಸತ । ದೇವಃ । ದೇವೇಷು । ವನತೇ । ಹಿ । ವಾರ್ಯಂ ।
ದೇವಃ । ದೇವೇಷು । ವನತೇ । ಹಿ । ನಃ । ದುವಃ ॥ ೬ ॥

॥ ಸಾಯಣಭಾಷ್ಯಂ ॥

ಹೇ ಅಸ್ಮದೀಯಾಃ ಸ್ತೋತಾರೋ ವೋ ಯೂಯಂ ಪ್ರಿಯಂ ಪ್ರಿಯಮತ್ಯಂತಂ ಪ್ರಿಯಂ ವೋ ಯುಷ್ಮಾಕಮತಿಥಿಮತಿಥಿವತ್ಪೂಜ್ಯಂ ಗೃಣೀಷಣಿ ಶಬ್ದನೀಯಂ ಸ್ತುತ್ಯಮಗ್ನಿಮಗ್ನಿಮಗ್ನಿಮೇವ । ನಾನ್ಯಂ ದೇವಮಿತ್ಯರ್ಥಃ । ಸಮಿಧಾ ಸಮಿಂಧನೇನ ಸಮಿದ್ಭಿರ್ವಾ ದುವಸ್ಯತ । ಪರಿಚರತ । ಯದ್ವಾ । ಗೃಣೀಷಣೀತಿ ಸಪ್ತಮ್ಯಂತಂ । ಗೃಣೀಷಣಿ ಸ್ತೋತ್ರೇ ವಿಷಯತಯಾ ವರ್ತಮಾನಂ । ಅಪಿ ಚ ವೋ ಯೂಯಮಮೃತಮಮರಣಮಗ್ನಿಂ ಗೀರ್ಭಿಃ ಸ್ತುತಿಭಿರುಪೇತ್ಯ ವಿವಾಸತ ಪರಿಚರತ । ಹಿ ಯಸ್ಮಾತ್ ದೇವೇಷು ಮಧ್ಯೇ ದೇವೋ ದಾನಾದಿಗುಣಯುಕ್ತೋಽಗ್ನಿರ್ವಾರ್ಯಂ ವರಣೀಯಂ ಸಮಿದಾದಿಕಂ ವನತೇ ಸಂಭಜತೇ । ಹಿ ಯಸ್ಮಾಚ್ಚ ದೇವೇಷು ಮಧ್ಯೇ ದೇವೋಽಗ್ನಿರ್ನೋಽಸ್ಮಾಕಂ ದುವಃ ಪರಿಚರಣಂ ವನತೇ ಸಂಭಜತೇ ತಸ್ಮಾದ್ದುವಸ್ಯತೇತ್ಯನ್ವಯಃ ॥

॥ ಪ್ರತಿಪದಾರ್ಥ ॥

(ಎಲೈ ಸ್ತೋತೃಗಳೇ) **ವಃ**—ನೀವು । **ಪ್ರಿಯಂಪ್ರಿಯಂ**—ಅತ್ಯಂತ ಪ್ರಿಯನಾದವನೂ । **ವಃ**—ನಿಮಗೆ । **ಅತಿಥಿಂ**—ಅತಿಥಿಯಂತೆ ಪೂಜ್ಯನಾದವನೂ । **ಗೃಣೀಷಣಿ**—ಅತ್ಯಂತ ಸ್ತುತ್ಯನೂ ಆದ । **ಅಗ್ನಿಮಗ್ನಿಂ**—ಅಗ್ನಿಯನ್ನೇ । **ಸಮಿಧಾ**—ಸಮಿತ್ತುಗಳನ್ನು ಅರ್ಪಿಸುವುದರಿಂದ । **ದುವಸ್ಯತ**—ಪೂಜಿಸಿರಿ । **ಹಿ**—ಯಾವ ಕಾರಣದಿಂದ । **ದೇವೇಷು**—ದೇವತೆಗಳ ನಡುವೆ । **ದೇವಃ**—ಪೂಜ್ಯನಾದ ಅಗ್ನಿಯು । **ವಾರ್ಯಂ**—ಅಪೇಕ್ಷಿತವಾದ ಸಮಿತ್ತನ್ನು । **ವನತೇ**—ಸ್ವೀಕರಿಸುವನೋ । **ಹಿ**—ಯಾವ ಕಾರಣದಿಂದ । **ದೇವೇಷು**—ದೇವತೆಗಳ ನಡುವೆ । **ದೇವಃ**—ಪೂಜ್ಯನಾದ ಅಗ್ನಿಯು । **ನಃ ದುವಃ**—ನಮ್ಮ ಉಪಚಾರಗಳನ್ನು । **ವನತೇ**—ಸ್ವೀಕರಿಸುವನೋ (ಆದುದರಿಂದಲೇ) । **ವಃ**—ನೀವು । **ಅಮೃತಂ**—ಮರಣಧರ್ಮರಹಿತನಾದ ಅಗ್ನಿಯನ್ನು । **ಗೀರ್ಭಿಃ**—ಸ್ತುತಿಗಳಿಂದ । **ಉಪ ವಿವಾಸತ**—ಉಪಚರಿಸಿರಿ.

॥ ಭಾವಾರ್ಥ ॥

ಎಲೈ ಸ್ತೋತೃಗಳೇ, ಅತ್ಯಂತ ಪ್ರಿಯನಾದವನೂ, ನಿಮಗೆ ಅತಿಥಿಯಂತೆ ಪೂಜ್ಯನಾದವನೂ, ಅತ್ಯಂತ ಸ್ತುತ್ಯನೂ ಆದ ಅಗ್ನಿಯನ್ನೇ, ಸಮಿದಾದಿಗಳಿಂದ ಪೂಜಿಸಿರಿ. ಯಾವ ಕಾರಣದಿಂದ ದೇವತೆಗಳ ಮಧ್ಯೆ ಪೂಜ್ಯನಾದ ಅಗ್ನಿಯು ತನ್ನಿಂದ ಅಪೇಕ್ಷಿತವಾದ ಸಮಿತ್ತುಗಳನ್ನೂ ನಮ್ಮ ಸೇವೆಗಳನ್ನೂ ಆದರದಿಂದ ಸ್ವೀಕರಿಸುವನೋ, ಆದುದರಿಂದಲೇ, ನೀವು ಮರಣಧರ್ಮರಹಿತನಾದ ಅಗ್ನಿಯನ್ನು ಸಮೀಪಿಸಿ ಸ್ತುತಿಗಳಿಂದ ಉಪಚರಿಸಿರಿ.

English Translation.

Worship repeatedly the adorable Agni with fuel; (him) who is ever your dear friend, your guest: approach the immortal Agni with praises, for he, a god among gods, accepts our homage.

॥ ಸಂಹಿತಾಪಾಠಃ ॥

ಸಮಿದ್ಧಮಗ್ನಿಂ ಸಮಿಧಾ ಗಿರಾ ಗೃಣೇ ಶುಚಿಂ ಪಾವಕಂ ಪುರೋ ಅಧ್ವರೇ ಧ್ರುವಂ ।
ವಿಪ್ರಂ ಹೋತಾರಂ ಪುರುವಾರಮದ್ರುಹಂ ಕವಿಂ ಸುಮ್ನೈರೀಮಹೇ ಜಾತವೇದಸಂ ॥ ೭ ॥

॥ ಪದಪಾಠಃ ॥

ಸಂऽಇದ್ಧಂ । ಅಗ್ನಿಂ । ಸಂऽಇಧಾ । ಗಿರಾ । ಗೃಣೇ । ಶುಚಿಂ । ಪಾವಕಂ । ಪುರಃ । ಅಧ್ವರೇ । ಧ್ರುವಂ । ವಿಪ್ರಂ । ಹೋತಾರಂ । ಪುರುऽವಾರಂ । ಅದ್ರುಹಂ । ಕವಿಂ । ಸುಮ್ನೈಃ । ಈಮಹೇ । ಜಾತऽವೇದಸಂ ॥

॥ ಸಾಯಣಭಾಷ್ಯಂ ॥

ದಶಮೇಽಹನ್ಯಾಗ್ನಿಮಾರುತೇ ಸಮಿದ್ಧಮಿತಿ ತೃಚೋ ಜಾತವೇದಸ್ಯನಿವಿದ್ಧಾನಾರ್ಥಃ । ಸೂತ್ರಿತಂ ಚ । ಸಮಿದ್ಧಮಗ್ನಿಂ ಸಮಿಧಾ ಗಿರಾ ಗೃಣ ಇತಿ ತೃಚಶ್ಚ । ಅ. ೮-೧೨ । ಇತಿ ॥

ಸಮಿದ್ಧಂ ಸಮ್ಯಗ್ದೀಪ್ತಮಗ್ನಿಂ ಸಮಿಧಾ ಸಮಿಂಧನಹೇತುಭೂತಯಾ ಗಿರಾ ಸ್ತುತ್ಯಾ ಗೃಣೇ । ಸ್ತೌಮಿ । ಯದ್ವಾ । ಸಮಿಧಾ ಸಮಿದ್ಭಿರ್ದಾರುಭಿಃ ಸಮಿದ್ಧಂ ಸಮ್ಯಗಿದ್ಧಂ । ಅಪಿ ಚ ಶುಚಿಂ ಸ್ವಯಂ ಶುದ್ಧಂ ಪಾವಕಂ ಸರ್ವೇಷಾಂ ಶೋಧಕಂ ಧ್ರುವಂ ನಿಶ್ಚಲಂ ತಮಗ್ನಿಮಧ್ವರೇ ಯಜ್ಞೇ ಪುರಸ್ಕರೋಮೀತಿ

**ಶೇಷಃ । ತಥಾ ವಿಪ್ರಂ ಮೇಧಾವಿನಂ ಹೋತಾರಂ ದೇವಾನಾಮಾಹ್ವಾತಾರಂ ಪುರುವಾರಂ ಬಹುಭಿರ್ವರಣೀಯಮದ್ರುಹಮದ್ರೋಗ್ಧಾರಂ ಸರ್ವೇಷಾಮನುಕೂಲಂ ಕವಿಂ ಕ್ರಾಂತದರ್ಶಿನಂ ಜಾತವೇದಸಂ ಜಾತಾನಾಂ ವೇದಿತಾರಮಗ್ನಿಂ ಸುಮ್ನೈಃ ಸುಖಕರೈಃ ಸ್ತೋತ್ರೈರೀಮಹೇ । ಸಂಭಜಾಮಹೇ । ಯದ್ವಾ ದ್ವಿತೀಯಾರ್ಥೇ ತೃತೀಯಾ । ಸುಮ್ನಾನಿ ಧನಾನೀಮಹೇ । ಯಾಚಾಮಹೇ ॥**

॥ ಪ್ರತಿಪದಾರ್ಥ ॥

**ಸಮಿಧಾ**—ಸಮಿತ್ತುಗಳಿಂದ । **ಸಮಿದ್ಧಂ**—ಪ್ರಜ್ವಲಿತನಾದ । **ಅಗ್ನಿಂ**—ಅಗ್ನಿಯನ್ನು । **ಗಿರಾ**—ಸ್ತುತಿಗಳಿಂದ । **ಗೃಣೇ**—ಸ್ತುತಿಸುತ್ತೇನೆ । **ಶುಚಿಂ**—ಸ್ವಯಂಶುದ್ಧನೂ । **ಪಾವಕಂ**—ಶುದ್ಧಿಕಾರಕನೂ । **ಧ್ರುವಂ**—ಸ್ಥಿರನೂ ಆದ ಅಗ್ನಿಯನ್ನು । **ಅಧ್ವರೇ**—ಯಜ್ಞದಲ್ಲಿ । **ಪುರಃ**—ಪೂಜಿಸುತ್ತೇನೆ । **ವಿಪ್ರಂ**—ಮೇಧಾವಿಯೂ । **ಹೋತಾರಾಂ**—ಹೋತೃರೂಪನೂ । **ಪುರುವಾರಂ**—ಅನೇಕರಿಂದ ಅಪೇಕ್ಷಿತನೂ। **ಅದ್ರುಹಂ**—ದ್ರೋಹರಹಿತನೂ । **ಕವಿಂ**—ಕ್ರಾಂತದರ್ಶಿಯೂ । **ಜಾತವೇದಸಂ**—ಸರ್ವಜ್ಞನೂ ಆದ ಅಗ್ನಿಯನ್ನು । **ಸುಮ್ನೈಃ**—ಸುಖಕಾರಕಗಳಾದ ಸ್ತುತಿಗಳಿಂದ । **ಈಮಹೇ**—ಸ್ತುತಿಸುತ್ತೇವೆ.

॥ ಭಾವಾರ್ಥ ॥

ಸಮಿತ್ತುಗಳಿಂದ ಪ್ರಜ್ವಲಿತನಾದ ಅಗ್ನಿಯನ್ನು ನಾನು ಸ್ತುತಿಗಳಿಂದ ಸ್ತುತಿಸುತ್ತೇನೆ. ಸ್ವಯಂಶುದ್ಧನೂ, ಇತರರನ್ನು ಶುದ್ಧಿಗೊಳಿಸುವವನೂ ಸ್ಥಿರನೂ ಆದ ಅಗ್ನಿಯನ್ನು ನಾನು ಯಜ್ಞದಲ್ಲಿ ಪೂಜಿಸುತ್ತೇನೆ. ಮೇಧಾವಿಯೂ ಹೋತೃರೂಪನೂ ಅನೇಕರಿಂದ ಅಪೇಕ್ಷಿತನೂ ದ್ರೋಹರಹಿತನೂ ಕ್ರಾಂತದರ್ಶಿಯೂ ಸರ್ವಜ್ಞನೂ ಆದ ಅಗ್ನಿಯನ್ನು ಸುಖಕಾರಕಗಳಿಂದ ಸ್ತುತಿಗಳಿಂದ ಸ್ತುತಿಸುತ್ತೇವೆ.

## English Translation.

I glorify with praise the kindled Agni, pure, purifying, permanent, (placed) before (us) at the sacrifice : let us celebrate with pleasant (hymns) the wise Agni, the invoker of the gods, the adored of many, the benevolent the far-seeing, him who knows all that exists.

। ವಿಶೇಷವಿಷಯಗಳು ।

ಯಜ್ಞದ ಹತ್ತನೆಯ ದಿವಸ ಅಗ್ನಿಮಾರುತಶಸ್ತ್ರಮಂತ್ರಪಠನಕಾಲದಲ್ಲಿ **ಸಮಿದ್ಧಮಗ್ನಿಂ** ಎಂದು ಮೊದಲಾಗುವ ಈ ಸೂಕ್ತದ ೭-೯ ಎಂಬ ಮೂರು ಋಕ್ಕುಗಳನ್ನು ಜಾತವೇದಸ್ ಎಂಬ ಅಗ್ನಿಯನ್ನು ಸ್ತುತಿಸುವ ನಿವಿದ್ಧಾನೀಯ ಸೂಕ್ತ ಮಂತ್ರಗಳಿಗಾಗಿ ಉಪಯೋಗಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಸಮಿದ್ಧಮಗ್ನಿಂ ಸಮಿಧಾ ಗಿರಾ ಗೃಣ ಇತಿ ತೃಚಶ್ಚ** ಎಂಬ ಸೂತ್ರದಿಂದ (ಆ. ೮-೧೨) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ತ್ವಾಂ ದೂತಮಗ್ನೇ ಅಮೃತಂ ಯುಗೇಯುಗೇ ಹವ್ಯವಾಹಂ ದಧಿರೇ
ಪಾಯುಮೀಡ್ಯಂ ।
ದೇವಾಸಶ್ಚ ಮರ್ತಾಸಶ್ಚ ಜಾಗೃವಿಂ ವಿಭುಂ ವಿಶ್ಪತಿಂ ನಮಸಾ ನಿ ಷೇದಿರೇ ॥

॥ ಪದಪಾಠಃ ॥

ತ್ವಾಂ । ದೂತಂ । ಅಗ್ನೇ । ಅಮೃತಂ । ಯುಗೇऽಯುಗೇ । ಹವ್ಯऽವಾಹಂ । ದಧಿರೇ । ಪಾಯುಂ ।
ಈಡ್ಯಂ ।
ದೇವಾಸಃ । ಚ । ಮರ್ತಾಸಃ । ಚ । ಜಾಗೃವಿಂ । ವಿऽಭುಂ । ವಿಶ್ಪತಿಂ । ನಮಸಾ । ನಿ । ಸೇದಿರೇ ॥೮॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಾಂ ದೇವಾಸೋ ದೇವಾಶ್ಚ ಮರ್ತಾಸೋ ಮನುಷ್ಯಾಶ್ಚ ದೂತಂ ದಧಿರೇ । ವಿದಧಿರೇ । ಕೃತವಂತಃ । ಕೀದೃಶಂ ತ್ವಾಂ । ಅಮೃತಮಮರಣಂ ಯುಗೇ ಯುಗೇ ಕಾಲೇ ಕಾಲೇ ತತ್ತದ್ಯಾಗಾನುಷ್ಠಾನಸಮಯೇ ಹವ್ಯವಾಹಂ ಹವ್ಯಾನಾಂ ಹವಿಷಾಂ ವೋಢಾರಂ ಪಾಯುಂ ಪಾಲಯಿತಾರಮೀಡ್ಯಂ ಸ್ತುತ್ಯಂ । ಅಪಿ ಚ ತ ಉಭಯವಿಧಾ ಜಾಗೃವಿಂ ಜಾಗರಣಶೀಲಂ ವಿಭುಂ ವ್ಯಾಪ್ತಂ ವಿಶ್ಪತಿಂ ವಿಶಾಂ ಪ್ರಜಾನಾಂ ಪಾಲಯಿತಾರಂ ತಮಗ್ನಿಂ ನಮಸಾ ನಮಸ್ಕಾರೇಣ ಹವಿರ್ಲಕ್ಷಣಾನ್ನೇನ ವಾ ನಿ ಷೇಧಿರೇ । ಉಪಸೇದಿರೇ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । ಅಮೃತಂ—ಮರಣಧರ್ಮರಹಿತನಾದ । ತ್ವಾಂ—ನಿನ್ನನ್ನು । ಯುಗೇ ಯುಗೇ—ಪ್ರತಿಯುಗದಲ್ಲಿಯೂ ಸಹ । ದೇವಾಸಃ—ದೇವತೆಗಳೂ । ಮರ್ತಾಸಃ ಚ—ಮಾನವರೂ । ದೂತಂ—ದೂತನನ್ನಾಗಿ । ದಧಿರೇ—ಹೊಂದಿದ್ದಾರೆ । ಹವ್ಯವಾಹಂ—ಹವಿರ್ವಾಹಕನೂ । ಪಾಯುಂ—ಪಾಲಕನೂ । ಈಡ್ಯಂ—ಸ್ತುತ್ಯನೂ । ಜಾಗೃವಿಂ—ಪ್ರಬುದ್ಧನೂ । ವಿಭುಂ—ವ್ಯಾಪಕನೂ । ವಿಶ್ಪತಿಂ—ಪ್ರಜೆಗಳ ಪಾಲಕನೂ ಆದ ಅಗ್ನಿಯನ್ನು । ನಮಸಾ—ನಮಸ್ಕಾರಗಳಿಂದ । ನಿಷೇದಿರೆ—ಸಮೀಪಿಸಿ ಪೂಜಿಸಿದರು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಮರಣಧರ್ಮರಹಿತನಾದ ನಿನ್ನನ್ನು ಪ್ರತಿಯುಗದಲ್ಲಿಯೂ ಸಹ ದೇವತೆಗಳೂ, ಮಾನವರೂ ದೂತನನ್ನಾಗಿ ಹೊಂದಿದ್ದಾರೆ. ಮತ್ತು ಅವರು ಹವಿರ್ವಾಹಕನೂ, ಪಾಲಕನೂ, ಸ್ತುತ್ಯನೂ, ಪ್ರಬುದ್ಧನೂ, ವ್ಯಾಪಕನೂ ಪ್ರಜೆಗಳ ಪಾಲಕನೂ ಆದ ಅಗ್ನಿಯನ್ನು ನಮಸ್ಕಾರಗಳಿಂದ ಸಮೀಪಿಸಿ ಪೂಜಿಸಿದರು.

## English Translation.

You, Agni, have gods and men in every age retained as their messenger, immortal bearer of oblations, beneficent, adorable: they have placed him with reverence (upon the altar), vigilant, prevading, the proteeter of mankind,

॥ ಸಂಹಿತಾಪಾಠಃ ॥

ವಿಭೂಷನ್ನಗ್ನ ಉಭಯಾಁ ಅನು ವ್ರತಾ ದೂತೋ ದೇವಾನಾಂ ರಜಸೀ
ಸಮೀಯಸೇ ।
ಯತ್ತೇ ಧೀತಿಂ ಸುಮತಿಮಾವೃಣೀಮಹೇಽಧ ಸ್ಮಾ ನಸ್ತ್ರಿವರೂಥಃ ಶಿವೋ
ಭವ ॥ ೯ ॥

॥ ಪದಪಾಠಃ ॥

ವಿಽಭೂಷನ್ । ಅಗ್ನೇ । ಉಭಯಾನ್ । ಅನು । ವ್ರತಾ । ದೂತಃ । ದೇವಾನಾಂ । ರಜಸೀ ಇತಿ । ಸಂ । ಈಯಸೇ ।
ಯತ್ । ತೇ । ಧೀತಿಂ । ಸುಽಮತಿಂ । ಆಽವೃಣೀಮಹೇ । ಅಧ । ಸ್ಮ । ನಃ । ತ್ರಿಽವರೂಥಃ । ಶಿವಃ । ಭವ ॥ ೯ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಉಭಯಾನುಭಯವಿಧಾನ್ ದೇವಾನ್ಮನುಷ್ಯಾಂಶ್ಚ ವಿಭೂಷನ್ ವಿಶೇಷೇಣ ಭೂಷಯನ್ ಅಲಂಕುರ್ವನ್ ತ್ವಮನು ವ್ರತಾ ವ್ರತಾನ್ಯನು ವ್ರತೇಷು ಕರ್ಮಸು ಯಾಗೇಷು ದೇವಾನಾಂ ದೂತಃ ಸನ್ ರಜಸೀ ದ್ಯಾವಾಪೃಥಿವ್ಯೌ ಸಮೀಯಸೇ । ಸಂಚರಸಿ । ದೇವಾನಾನೇತುಂ ದ್ಯುಲೋಕಂ ಗಚ್ಛಸಿ ಹವೀಂಷಿ ಚ ನೇತುಮಿಮಂ ಲೋಕಂ । ಕಿಂಚ ಯದ್ಯಸ್ಮಾತ್ತೇ ತುಭ್ಯಂ ತ್ವದರ್ಥಂ ಧೀತಿಂ ಕರ್ಮ ಸುಮತಿಂ ಶೋಭನಾಂ ಸ್ತುತಿಂ ಚಾವೃಣೀಮಹೇ ವಯಂ ಸಂಭಜಾಮಹೇ ಅಥಾತಃ ಕಾರಣಾತ್ ತ್ರಿವರೂಥಸ್ತ್ರಿಸ್ಥಾನಸ್ತ್ವಂ ನೋಽಸ್ಮಾಕಂ ಶಿವಃ ಸುಖಕರೋ ಭವ । ಸ್ಮೇತ್ಯೇತತ್ಪಾದಪೂರಣಂ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಉಭಯಾನ್**—ದೇವಮಾನವಾದಿಗಳನ್ನೆಲ್ಲಾ । **ವಿಭೂಷನ್**—ಅನುಗ್ರಹಿಸುತ್ತಾ । **ಅನು ವ್ರತಾ**—ಸಕಲ ಕರ್ಮಗಳಲ್ಲೂ । **ದೇವಾನಾಂ**—ದೇವತೆಗಳಿಗೆ । **ದೂತಃ**—ದೂತನಾಗಿದ್ದುಕೊಂಡು । **ರಜಸೀ**—ದ್ಯಾವಾಪೃಥಿವಿಗಳನ್ನೆಲ್ಲಾ । **ಸಮೀಯಸೇ**—ಸಂಚರಿಸುತ್ತೀಯೆ । **ಯತ್**—ಯಾವ ನಿಮಿತ್ತವಾಗಿ । **ತೇ**—ನಿನ್ನನ್ನುದ್ದೇಶಿಸಿ । **ಧೀತಿಂ**—ಕರ್ಮವನ್ನೂ । **ಸುಮತಿಂ**—ಉತ್ತಮವಾದ ಸ್ತುತಿಯನ್ನೂ । **ಅವೃಣೀಮಹೇ**—ಸಂಪಾದಿಸುವೆವೋ । **ಅಧ**—ಆ ಕಾರಣದಿಂದಲೇ । **ತ್ರಿವರೂಥಃ**—ಪೃಥಿವ್ಯಾದಿ ಮೂರು ಸ್ಥಾನಗಳಲ್ಲೂ ಇರುವ ನೀನು । **ನಃ**—ನಮಗೆ । **ಶಿವಃ**—ಸುಖಕರನಾಗಿ । **ಭವ**—ಆಗಿರು.

॥ ಭಾವಾರ್ಥ ॥

ಎಲೈ ಅಗ್ನಿಯೇ, ದೇವಮಾನವಾದಿಗಳನ್ನೆಲ್ಲಾ ಅನುಗ್ರಹಿಸುತ್ತಾ ಸಕಲ ಕರ್ಮಗಳಲ್ಲೂ ದೇವತೆಗಳಿಗೆ ದೂತನಾಗಿದ್ದುಕೊಂಡು ನೀನು ಯಾವಾಗಲೂ ದ್ಯಾವಾಪೃಥಿವಿಗಳನ್ನೆಲ್ಲಾ ವ್ಯಾಪಿಸಿ ಸಂಚರಿಸುತ್ತೀಯೆ. ಯಾವ ನಿಮಿತ್ತವಾಗಿ ನಿನ್ನನ್ನುದ್ದೇಶಿಸಿ ಕರ್ಮವನ್ನೂ ಉತ್ತಮವಾದ ಸ್ತುತಿಯನ್ನೂ ಅರ್ಪಿಸುವೆವೋ ಆ ಕಾರಣದಿಂದಲೇ ಪೃಥಿವ್ಯಾದಿ ಮೂರು ಸ್ಥಾನಗಳಲ್ಲೂ ಇರುವ ನೀನು ನಮಗೆ ಸುಖಕರನಾಗಿರು

## English Translation.

Showing grace, Agni, to both (gods and men), and at each sacred rite the messenger of the gods, you traverse earth and heaven : inasmuch as we offer you worship and praise, therefore you, who are the guardian of the three (regions), be auspicious to us.

॥ ವಿ[illegible] ॥

**ರಜಸೀ ಸಮೀಯಸೇ**—**ದ್ಯಾವಾಪೃಥಿವ್ಯೌ ಸಂಚರಸಿ । ದೇವಾನಾನೇತುಂ ದ್ಯುಲೋಕಂ ಗಚ್ಛಸಿ ಹವೀಂಷಿ ಚ ನೇತುಮಿಮಂ—ಲೋಕಂ** । ಸ್ವರ್ಗಲೋಕದಲ್ಲಿಯೂ, ಭೂಲೋಕದಲ್ಲಿಯೂ ನೀನು ಸಂಚರಿಸುತ್ತೀಯೆ ಎಂದು ಇಲ್ಲಿ ಅಗ್ನಿಯನ್ನು ಸ್ತುತಿಸಿದೆ. ಹೇಗೆಂದರೆ ಅಗ್ನಿಯು ದೇವತೆಗಳಿಗೆ ಹವಿಸ್ಸನ್ನು ವಹಿಸುವ ದೂತನಾಗಿರುವುದರಿಂದ ಭೂಲೋಕದಲ್ಲಿ ಮನುಷ್ಯ ಯಜಮಾನರು ಮಾಡುವ ಯಜ್ಞಾದಿಗಳಲ್ಲಿ ದೇವತೆಗಳನ್ನು ಯಜ್ಞಭೂಮಿಗೆ ಕರತರಲು ದ್ಯುಲೋಕಕ್ಕೂ ಯಜ್ಞದಲ್ಲಿ ದೇವತೆಗಳನ್ನುದ್ದೇಶಿಸಿ ಅಗ್ನಿಯಲ್ಲಿ ಅರ್ಪಿಸುವ ಹವಿಸ್ಸುಗಳನ್ನು ಸ್ವೀಕರಿಸುವುದಕ್ಕಾಗಿ ಭೂಮಿಗೂ ಬರುವನು ಎಂದಭಿಪ್ರಾಯವು.

**ತ್ರಿವರೂಥಃ**—ಮೂರು ಸ್ಥಾನಗಳಲ್ಲಿ ಇರುವವನು. ಎಂದರೆ ಅಗ್ನಿಯು ಆದಿತ್ಯರೂಪದಿಂದ ಸ್ವರ್ಗದಲ್ಲಿಯೂ ವಿದ್ಯುದ್ರೂಪದಿಂದ (ಮಿಂಚು) ಅಂತರಿಕ್ಷದಲ್ಲಿಯೂ, ಪಾರ್ಥಿವಾಗ್ನಿ (ಯಜ್ಞಾಗ್ನಿ ಅಥವಾ ಲೌಕಿಕಾಗ್ನಿ) ರೂಪದಿಂದ ಪೃಥಿವಿಯಲ್ಲಿಯೂ ಇರುವವನಾದ್ದರಿಂದ ಅಗ್ನಿಯು ಮೂರು ಸ್ಥಾನಗಳಲ್ಲಿರುವವನೆಂದು ವರ್ಣಿಸುವುದು ರೂಢಿಯು.

॥ ಸಂಹಿತಾಪಾಠಃ ॥

ತಂ ಸುಪ್ರತೀಕಂ ಸುದೃಶಂ ಸ್ವಂಚಮವಿದ್ವಾಂಸೋ ವಿದುಷ್ಟರಂ ಸಪೇಮ ।

ಸ ಯಕ್ಷದ್ವಿಶ್ವಾ ವಯುನಾನಿ ವಿದ್ವಾನ್ಪ್ರ ಹವ್ಯಮಗ್ನಿರಮೃತೇಷು ವೋಚತ್॥

॥ ಪದಪಾಠಃ ॥

ತಂ । ಸುಽಪ್ರತೀಕಂ । ಸುಽದೃಶಂ । ಸುಽಅಂಚಂ । ಅವಿದ್ವಾಂಸಃ । ವಿದುಃಽತರಂ । ಸಪೇಮ ।

ಸಃ । ಯಕ್ಷತ್ । ವಿಶ್ವಾ । ವಯುನಾನಿ । ವಿದ್ವಾನ್ । ಪ್ರ । ಹವ್ಯಂ । ಅಗ್ನಿಃ । ಅಮೃತೇಷು । ವೋಚತ್ ॥

॥ ಸಾಯಣಭಾಷ್ಯಂ ॥

ಪ್ರಾತರನುವಾಕಾಶ್ವಿನಶಸ್ತ್ರಯೋರಾಗ್ನೇಯೇ ಕ್ರತೌ ತ್ರೈಷ್ಟುಭೇ ಛಂದಸಿ ತಂ ಸುಪ್ರತೀಕಮಿತ್ಯಾದ್ಯಾಃ ಷಡೃಚಃ । ಸೂತ್ರಿತಂ ಚ । ತಂ ಸುಪ್ರತೀಕಮಿತಿ ಷಟ್ । ಆ. ೪–೧೩ । ಇತಿ ॥

ಅವಿದ್ವಾಂಸೋ ವೈದುಷ್ಯರಹಿತಾ ಅಲ್ಪಮತಯೋ ವಯಂ ವಿದುಷ್ಟರಂ ವಿದ್ವತ್ತರಂ ಸರ್ವಜ್ಞಂ ತಮಗ್ನಿಂ ಸಪೇಮ । ಪರಿಚರೇಮ । ಕೀದೃಶಂ । ಸುಪ್ರತೀಕಂ ಶೋಭನಾಂಗಂ ಸುದೃಶಂ ಶೋಭನದ್ರಷ್ಟಾರಂ ಸ್ವಂಚಂ ಸುಷ್ಠ್ವಂಚಂತಂ ಗಚ್ಛಂತಂ । ಕಿಂಚ ಸ ತಾದೃಶೋಽಗ್ನಿರ್ಯಕ್ಷತ್ । ದೇವಾನ್ಯಜತು । ವಿಶ್ವಾ ಸರ್ವಾಣಿ ವಯುನಾನಿ । ಜ್ಞಾನನಾಮೈತತ್ । ಇಹ ತು ಜ್ಞಾತವ್ಯೇ ವರ್ತತೇ । ಜ್ಞಾತವ್ಯಾನ್ಯರ್ಥಜಾತಾನಿ ವಿದ್ವಾನ್ ಜಾನನ್ನಗ್ನಿರಮೃತೇಷು ಮರಣರಹಿತೇಷು ದೇವೇಷು ಹವ್ಯಮಸ್ಮದೀಯಂ ಹವಿಃ ಪ್ರ ವೋಚತ್ । ಪ್ರಬ್ರವೀತು । ಯುಷ್ಮದರ್ಥಂ ಹವಿಃ ಕಲ್ಪಿತಂ ತದರ್ಥಂ ಯೂಯಮಾಗಚ್ಛತೇತ್ಯೇವಂ ಕಥಯತು ॥

॥ ಪ್ರತಿಪದಾರ್ಥ ॥

**ಅವಿದ್ವಾಂಸಃ**—ಅಲ್ಪಜ್ಞಾನಿಗಳಾದ ನಾವು । **ವಿದುಷ್ಟರಂ**—ಅತ್ಯಂತ ಜ್ಞಾನಿಯಾದವನೂ । **ಸುಪ್ರತೀಕಂ**—ಶ್ರೇಷ್ಠವಾದ ಅಂಗವುಳ್ಳವನೂ । **ಸುದೃಶಂ**—ಶ್ರೇಷ್ಠವಾದ ರೂಪವುಳ್ಳವನೂ । **ಸ್ವಂಚಂ**—ಉತ್ತಮವಾದ ಗಮನವುಳ್ಳವನೂ ಆದ । **ತಂ**—ಅಗ್ನಿಯನ್ನು । **ಸಪೇಮ**—ಪೂಜಿಸುತ್ತೇವೆ । **ಸಃ**—ಅದೇ ಅಗ್ನಿಯು । **ಯಕ್ಷತ್**—ದೇವತೆಗಳನ್ನು ಪೂಜಿಸಲಿ । **ವಿಶ್ವಾ**—ಸಮಸ್ತವಾದ । **ವಯುನಾನಿ**—ಜ್ಞಾನಗಳನ್ನೂ । **ವಿದ್ವಾನ್**—ತಿಳಿದಿರುವ । **ಅಗ್ನಿಃ**—ಅಗ್ನಿಯು । **ಅಮೃತೇಷು**—ಮರಣಧರ್ಮರಹಿತರಾದ ದೇವತೆಗಳಲ್ಲಿ । **ಹವ್ಯಂ**—ನಮ್ಮ ಹವಿಸ್ಸನ್ನು । **ಪ್ರ ವೋಚತ್**—ಪ್ರಶಂಸಿಸಲಿ.

॥ ಭಾವಾರ್ಥ ॥

ಅಲ್ಪಜ್ಞಾನಿಗಳಾದ ನಾವು ಅತ್ಯಂತ ಜ್ಞಾನಿಯಾದವನೂ, ಶ್ರೇಷ್ಠವಾದ ಅಂಗವುಳ್ಳವನೂ, ಒಳ್ಳೆಯ ರೂಪವುಳ್ಳವನೂ, ಉತ್ತಮವಾದ ಗಮನವುಳ್ಳವನೂ ಆದ ಅಗ್ನಿಯನ್ನು ಪೂಜಿಸುತ್ತೇವೆ. ಅದೇ ಅಗ್ನಿಯು ದೇವತೆಗಳನ್ನು ಪೂಜಿಸಲಿ. ಸಮಸ್ತವಾದ ಜ್ಞಾನವನ್ನೂ ಹೊಂದಿರುವ ಅಗ್ನಿಯು ಮರಣಧರ್ಮರಹಿತರಾದ ದೇವತೆಗಳಲ್ಲಿ ನಮ್ಮ ಹವಿಸ್ಸನ್ನು ಪ್ರಶಂಸಿಸಲಿ.

## English Translation.

We of little wisdom adore the most wise Agni, the well-formed, the well-looking, the graceful-moving : may Agni, who knows all things that are to be known, offer the sacrifice : may he announce the oblation to the immortals.

॥ ವಿಶೇಷವಿಷಯಗಳು ॥

ಪ್ರಾತರನುವಾಕಮಂತ್ರಪಠನಕಾಲದಲ್ಲಿ ಆಗ್ನೇಯಕ್ರತುಸಂಬಂಧವಾದ ತ್ರಿಷ್ಟುಪ್‌ಛಂದಸ್ಸಿನ ಮಂತ್ರಗಳಿಗಾಗಿ ಈ ಸೂಕ್ತದ **ತಂ ಸುಪ್ರತೀಕಂ** ಎಂದು ಮೊದಲಾಗುವ ಆರು ಋಕ್ಕುಗಳ ವಿನಿಯೋಗವಿರುವುದೆಂದು ಆಶ್ವಲಾಯನ ಶ್ರೌತಸೂತ್ರದ—**ತಂ ಸುಪ್ರತೀಕಮಿತಿ ಷಟ್** ಎಂಬ ಸೂತ್ರದಿಂದ (ಆ. ೪-೧೩) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ತಮಗ್ನೇ ಪಾಸ್ಯುತ ತಂ ಪಿಪರ್ಷಿ ಯಸ್ತ ಆನಟ್ಕವಯೇ ಶೂರ ಧೀತಿಂ ।
ಯಜ್ಞಸ್ಯ ವಾ ನಿಶಿತಿಂ ವೋದಿತಿಂ ವಾ ತಮಿತ್ಪೃಣಕ್ಷಿ ಶವಸೋತ ರಾಯಾ ॥

॥ ಪದಪಾಠಃ ॥

ತಂ । ಅಗ್ನೇ । ಪಾಸಿ । ಉತ । ತಂ । ಪಿಪರ್ಷಿ । ಯಃ । ತೇ । ಆನಟ್ । ಕವಯೇ । ಶೂರ । ಧೀತಿಂ ।
ಯಜ್ಞಸ್ಯ । ವಾ । ನಿಽಶಿತಿಂ । ವಾ । ಉತ್ಽಇತಿಂ । ವಾ । ತಂ । ಇತ್ । ಪೃಣಕ್ಷಿ । ಶವಸಾ । ಉತ । ರಾಯಾ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತಂ ಪುರುಷಂ ಪಾಸಿ । ರಕ್ಷಸಿ । ಉತಾಪಿ ಚ ತಂ ಪಿಪರ್ಷಿ । ಕಾಮೈಃ ಪೂರಯಸಿ । ಯಃ ಪುರುಷೋ ಹೇ ಶೂರ ಶೌರ್ಯವನ್ನಗ್ನೇ ಕವಯೇ ಕ್ರಾಂತದರ್ಶನಾಯ ತೇ ತುಭ್ಯಂ ತ್ವದರ್ಥಂ ಧೀತಿಂ ಕರ್ಮ ಸ್ತುತಿಂ ವಾನಟ್ ಪ್ರಾಪ್ನೋತಿ । ಯದ್ವಾ । ಕ್ರಿಯಾಗ್ರಹಣಂ ಕರ್ತವ್ಯಮಿತಿ ಕರ್ಮಣಃ ಸಂಪ್ರದಾನತ್ವಾಚ್ಚತುರ್ಥೀ । ಕವಿಂ ತ್ವಾಂ ಧೀತಿಮಾನಟ್ ಪ್ರಾಪಯತಿ । ತಂ ಪಾಸೀತ್ಯನ್ವಯಃ । ಅಪಿ ಚ ಯಜ್ಞಸ್ಯ ಯಾಗಸ್ಯ ವಾ । ತತ್ಸಾಧನಭೂತಸ್ಯ ಹವಿಷೋ ವಾ ನಿಶಿತಂ ವಾ । ನಿಶಿತಿಃ ಸಂಸ್ಕಾರಃ । ತಂ ವೋದಿತಿಮುದ್ಗಮನಂ ವಾನಟ್ ಪ್ರಾಪಯತಿ ತಮಿತ್ತಮೇವ ಶವಸಾ ಬಲೇನ ಪೃಣಕ್ಷಿ । ಪೂರಯಸಿ ಉತಾಪಿ ಚ ರಾಯಾ ಧನೇನ ಪೂರಯಸಿ ॥

॥ ಪ್ರತಿಪದಾರ್ಥ ॥

**ಶೂರ**—ಶೌರ್ಯೋಪೇತನಾದ । **ಅಗ್ನೇ**—ಎಲೈ ಅಗ್ನಿಯೇ । **ಕವಯೇ**—ಕ್ರಾಂತದರ್ಶಿಯಾದ । **ತೇ**—ನಿನ್ನನ್ನುದ್ದೇಶಿಸಿ । **ಯಃ**—ಯಾವ ಪುರುಷನು । **ಧೀತಿಂ**—ಸ್ತುತಿಯನ್ನು । **ಆನಟ್**—ಅರ್ಪಿಸುವನೋ । **ತಂ**—ಆ ಪುರುಷನನ್ನು । **ಪಾಸಿ**—ರಕ್ಷಿಸುತ್ತೀಯೆ । **ಉತ**—ಮತ್ತು । **ತಂ**—ಅವನನ್ನು । **ಪಿಪರ್ಷಿ**—ಇಷ್ಟಾರ್ಥಗಳಿಂದ ತುಷ್ಟಿಗೊಳಿಸುತ್ತೀಯೆ । **ಯಜ್ಞಸ್ಯ**—ಯಾಗದ । **ವಾ**—ಅಥವಾ (ಹವಿಸ್ಸುಗಳ) । **ನಿಶಿತಿಂ**—ಸಂಸ್ಕಾರವನ್ನಾಗಲಿ । **ವಾ**—ಅಥವಾ । **ಉದಿತಿಂ**—ಪರಿಷ್ಕಾರಪೂರಕವಾದ ಅರ್ಪಣೆಯನ್ನಾಗಲಿ (ಯಾವನು ಕೈಗೊಳ್ಳುವನೋ) । **ತಮಿತ್**—ಅದೇ ಪುರುಷನನ್ನೇ । **ಶವಸಾ**—ಬಲದೊಡನೆ । **ಪೃಣಕ್ಷಿ**—ತುಂಬುತ್ತೀಯೆ । **ಉತ**—ಮತ್ತು । **ರಾಯಾ**—ಧನದೊಡನೆ (ತುಂಬುತ್ತೀಯೆ).

॥ ಭಾವಾರ್ಥ ॥

ಶೌರ್ಯೋಪೇತನಾದ ಎಲೈ ಅಗ್ನಿಯೇ, ಕ್ರಾಂತದರ್ಶಿಯಾದ ನಿನ್ನನ್ನುದ್ದೇಶಿಸಿ ಯಾವ ಪುರುಷನು ಸ್ತುತಿಯನ್ನು ಅರ್ಪಿಸುವನೋ ಆ ಪುರುಷನನ್ನು ನೀನು ರಕ್ಷಿಸುತ್ತೀಯೆ. ಮತ್ತು ಅವನನ್ನು ಇಷ್ಟಾರ್ಥಗಳಿಂದ ತುಷ್ಟಿಗೊಳಿಸುತ್ತೀಯೆ. ಯಾಗದ ಅಥವಾ ಹವಿಸ್ಸುಗಳ ಸಂಸ್ಕಾರವನ್ನಾಗಲಿ ಅಥವಾ ಪರಿಷ್ಕಾರಪೂರ್ವಕವಾದ ಅರ್ಪಣೆಯನ್ನಾಗಲಿ ಯಾವನು ಕೈಗೊಳ್ಳುವನೋ ಅದೇ ಪುರುಷನನ್ನೇ ನೀನು ಬಲದೊಡನೆಯೂ ಧನದೊಡನೆಯೂ ತುಂಬುತ್ತೀಯೆ.

## English Translation.

You cherish, you protect, Agni, that man who offers worship, hero, to you, the far-seeing : you reward with strength and with riches him (who undertakes) the insititution, (who effects) the accomplishment, of the sacrifice.

॥ ಸಂಹಿತಾಪಾಠಃ ॥

ತ್ವಮಗ್ನೇ ವನುಷ್ಯತೋ ನಿ ಪಾಹಿ ತ್ವಮು ನಃ ಸಹಸಾವನ್ನವದ್ಯಾತ್ ।
ಸಂ ತ್ವಾ ಧ್ವಸ್ಮನ್ವದಭ್ಯೇತು ಪಾಥಃ ಸಂ ರಯಿಃ ಸ್ಪೃಹಯಾಯ್ಯಃ ಸಹಸ್ರೀ॥

॥ ಪದಪಾಠಃ ॥

ತ್ವಂ । ಅಗ್ನೇ । ವನುಷ್ಯತಃ । ನಿ । ಪಾಹಿ । ತ್ವಂ । ಊಂ ಇತಿ । ನಃ । ಸಹಸಾऽವನ್ । ಅವದ್ಯಾತ್ ।
ಸಂ । ತ್ವಾ । ಧ್ವಸ್ಮನ್ऽವತ್ । ಅಭಿ । ಏತು । ಪಾಥಃ । ಸಂ । ರಯಿಃ । ಸ್ಪೃಹಯಾಯ್ಯಃ । ಸಹಸ್ರೀ॥೧೨॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಂ ವನುಷ್ಯತೋ ಹಿಂಸಕಾಚ್ಛತ್ರೋರ್ನಿ ನಿತರಾಮಸ್ಮಾನ್ರಕ್ಷ । ಹೇ ಸಹಸಾವನ್ ಬಲವನ್ನಗ್ನೇ ತ್ವಮು ತ್ವಮೇವ ನೋಽಸ್ಮಾನವದ್ಯಾತ್ಪಾಪಾತ್ ನಿ ಪಾಹಿ । ತ್ವಾ ತ್ವಾಂ ಧ್ವಸ್ಮನ್ವತ್ ಧ್ವಂಸನವತ್ ಧ್ವಸ್ತದೋಷಂ ಪಾಥೋ ಹವಿರ್ಲಕ್ಷಣಮಸ್ಮಾಭಿರ್ದತ್ತಮನ್ನಂ ಸಮಭ್ಯೇತು । ಸಮ್ಯಗಭಿಗಚ್ಛತು। ಸ್ಪೃಹಯಾಯ್ಯಃ ಸ್ಪೃಹಣೀಯಃ ಸಹಸ್ರೀ ಸಹಸ್ರಸಂಖ್ಯಾಯುಕ್ತೋ ರಯಿಸ್ತ್ವಯಾ ದತ್ತಂ ಧನಂ ಸಮ್ಯಗಭಿಗಚ್ಛತು ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ವನುಷ್ಯತಃ**—ಹಿಂಸಕನಾದ ಶತ್ರುವಿನಿಂದ । **ನಿ ಪಾಹಿ**—ಪೂರ್ಣವಾಗಿ ರಕ್ಷಿಸು । **ಸಹಸಾವನ್**—ಬಲಶಾಲಿಯಾದ ಎಲೈ ಅಗ್ನಿಯೇ । **ತ್ವಮು**—ನೀನೇನೆ । **ನಃ**—ನಮ್ಮನ್ನು । **ಅವದ್ಯಾತ್**—ಪಾಪಗಳಿಂದ (ತಪ್ಪಿಸು) । **ಧ್ವಸ್ಮನ್ವತ್**—ದೋಷರಹಿತವಾದುದೂ । **ಪಾಥಃ**—ಹವಿಸ್ಸಿನ ರೂಪದ್ದೂ ಆದ ಅನ್ನವು । **ತ್ವಾ**—ನಿನ್ನನ್ನು । **ಸಮಭ್ಯೇತು**—ಬಂದು ಸೇರಲಿ । **ಸ್ಪೃಹಯಾಯ್ಯಃ**—ಆದೃತವಾದುದೂ । **ಸಹಸ್ರೀ**—ಸಹಸ್ರಸಂಖ್ಯಾಕವಾದುದೂ ಆದ । **ರಯಿಃ**—ಸಂಪತ್ತು । **ಸಂ**—ನಿನ್ನಿಂದ ನಮಗೆ ಬಂದು ಸೇರಲಿ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಹಿಂಸಕನಾದ ಶತ್ರುವಿನಿಂದ ನಮ್ಮನ್ನು ಪೂರ್ಣವಾಗಿ ರಕ್ಷಿಸು. ಬಲಶಾಲಿಯಾದ ಎಲೈ ಅಗ್ನಿಯೇ, ನೀನೇ ನಮ್ಮನ್ನು ಪಾಪಗಳಿಂದ ತಪ್ಪಿಸು. ದೋಷರಹಿತವಾದುದೂ ಹವಿಸ್ಸಿನ ರೂಪದ್ದೂ ಆದ ಅನ್ನವು ನಿನ್ನನ್ನು ಬಂದು ಸೇರಲಿ. ಆದರಣೆಗೆ ಪಾತ್ರವಾದುದೂ, ಸಹಸ್ರಸಂಖ್ಯಾಕವಾದುದೂ ಆದ ಸಂಪತ್ತು ನಿನ್ನಿಂದ ನಮಗೆ ಬಂದು ಸೇರಲಿ.

## English Translation.

Protect us, Agni, from the malignant, preserve us, mighty one, from wickedness : may the offering come to you free from defects ; may desirable riches, by thousands, (reach us).

॥ ಸಂಹಿತಾಪಾಠಃ ॥

ಅಗ್ನಿರ್ಹೋತಾ ಗೃಹಪತಿಃ ಸ ರಾಜಾ ವಿಶ್ವಾ ವೇದ ಜನಿಮಾ ಜಾತವೇದಾಃ।
ದೇವಾನಾಮುತ ಯೋ ಮರ್ತ್ಯಾನಾಂ ಯಜಿಷ್ಠಃ ಸ ಪ್ರ ಯಜತಾಮೃ-
ತಾವಾ ॥ ೧೩ ॥

॥ ಪದಪಾಠಃ ॥

ಅಗ್ನಿಃ । ಹೋತಾ । ಗೃಹऽಪತಿಃ । ಸಃ । ರಾಜಾ । ವಿಶ್ವಾ । ವೇದ । ಜನಿಮಾ । ಜಾತऽವೇದಾಃ ।

ದೇವಾನಾಂ । ಉತ । ಯಃ । ಮರ್ತ್ಯಾನಾಂ । ಯಜಿಷ್ಠಃ । ಸಃ । ಪ್ರ । ಯಜತಾಂ । ಋತऽವಾ ॥೧॥

॥ ಸಾಯಣಭಾಷ್ಯಂ ॥

ವ್ಯೂಳ್ಹೇ ದಶರಾತ್ರೇ ಪಂಚಮೇऽಹನ್ಯಾಗ್ನಿಮಾರುತೇऽಗ್ನಿರ್ಹೋತೇತಿ ತೃಚೋ ಜಾತವೇದಸ್ಯನಿವಿದ್ಧಾನೀಯಃ । ಸೂತ್ರಿತಂ ಚ । ಅಗ್ನಿರ್ಹೋತಾ ಗೃಹಪತಿಃ ಸ ರಾಜೇತಿ ತಿಸ್ರಃ । ಆ. ೮-೮ । ಇತಿ ॥ ಪತ್ನೀಸಂಯಾಜೇಷು ಗೃಹಪತೇರಾದ್ಯಾನುವಾಕ್ಯಾ । ಸೂತ್ರಿತಂ ಚ । ಅಗ್ನಿರ್ಹೋತಾ ಗೃಹಪತಿಃ ಸ ರಾಜಾ ಹವ್ಯವಾಳಗ್ನಿರಜರಃ ಪಿತಾ ನ ಇತಿ ಪತ್ನೀಸಂಯಾಜಾಃ । ಆ. ೧-೧೦ । ಇತಿ । ಆಶ್ವಿನಶಸ್ತ್ರಸ್ಯೈಷೈವ ಪ್ರತಿಪತ್ । ಸೂತ್ರಿತಂ ಚ । ಅಗ್ನಿರ್ಹೋತಾ ಗೃಹಪತಿಃ ಸ ರಾಜೇತಿ ಪ್ರತಿಪದೇಕಪಾತಿನೀ ಪಚ್ಛಃ । ಆ. ೬-೫ । ಇತಿ ॥

ಹೋತಾ ದೇವಾನಾಮಾಹ್ವಾತಾ ರಾಜಾ ರಾಜಮಾನಃ ಸೋऽಗ್ನಿರ್ಗೃಹಪತಿರ್ಗೃಹಾಣಾಂ ಪತಿರಧಿಪತಿರ್ಭವತಿ । ತಥಾ ವಿಶ್ವಾ ವಿಶ್ವಾನಿ ಸರ್ವಾಣಿ ಜನಿಮ ಜನ್ಮಾನಿ ಜನ್ಮವಂತಿ ಭೂತಜಾತಾನಿ ಜಾತವೇದಾ ಜಾತಪ್ರಜ್ಞಃ ಸನ್ ವೇದ । ವೇತ್ತಿ । ಜಾನಾತಿ । ಯೋऽಗ್ನಿರ್ದೇವಾನಾಮಿಂದ್ರಾದೀನಾಮುತಾಪಿ ಚ ಮರ್ತ್ಯಾನಾಂ ಮನುಷ್ಯಾಣಾಂ ಚ ಮಧ್ಯೇ ಯಜಿಷ್ಠೋऽತಿಶಯೇನ ಯಷ್ಟಾ ಭವತಿ ಋತಾವಾ । ಋತಂ ಸತ್ಯಂ ಯಜ್ಞೋ ವಾ । ತದ್ವಾನ್ ಸೋऽಗ್ನಿಃ ಪ್ರ ಯಜತಾಂ । ಪ್ರಕರ್ಷೇಣ ದೇವಾನ್ಯಜತು ॥

॥ ಪ್ರತಿಪದಾರ್ಥ ॥

**ಹೋತಾ**—ಹೋಮಸಂಪಾದಕನೂ । **ರಾಜಾ**—ಪ್ರಕಾಶಮಾನನೂ ಆದ । **ಸಃ ಅಗ್ನಿಃ**—ಅದೇ ಅಗ್ನಿಯು । **ಗೃಹಪತಿಃ**—ಗೃಹಗಳಲ್ಲೆಲ್ಲಾ ಒಡೆಯನಾಗಿದ್ದಾನೆ । **ಜಾತವೇದಾಃ**—ಜಾತಪ್ರಜ್ಞನಾದ ಅಗ್ನಿಯು । **ವಿಶ್ವಾ**—ಸಮಸ್ತವಾದ । **ಜನಿಮ**—ಜನ್ಮಗಳುಳ್ಳ ಪ್ರಾಣಿಗಳನ್ನೂ । **ವೇದ**—ತಿಳಿದಿದ್ದಾನೆ । **ಯಃ**—ಯಾವ ಅಗ್ನಿಯು । **ದೇವಾನಾಂ**—ಇಂದ್ರಾದಿ ದೇವತೆಗಳಿಗೂ । **ಉತ**—ಮತ್ತು । **ಮರ್ತ್ಯಾನಾಂ**—ಮಾನವರಿಗೂ । **ಯಜಿಷ್ಠಃ**—ಅತ್ಯಂತ ಪೂಜ್ಯನೂ । **ಋತಾವಾ**—ಸತ್ಯಾತ್ಮನೂ ಆಗಿರುವನೋ । **ಸಃ**—ಅದೇ ಅಗ್ನಿಯು । **ಪ್ರ ಯಜತಾಂ**—(ಸಕಲ ದೇವತೆಗಳನ್ನೂ) ನಮ್ಮ ಪರವಾಗಿ ಅತಿಶಯವಾಗಿ ಪೂಜಿಸಲಿ.

॥ ಭಾವಾರ್ಥ ॥

ಹೋಮಸಂಪಾದಕನೂ, ಪ್ರಕಾಶಮಾನನೂ ಆದ ಅಗ್ನಿಯು ಗೃಹಪತಿಯಾಗಿದ್ದಾನೆ. ಜಾತಪ್ರಜ್ಞನಾದ ಅಗ್ನಿಯು ಸಮಸ್ತವಾದ :ಉತ್ಪನ್ನ ವಸ್ತುಗಳನ್ನೂ ತಿಳಿದಿದ್ದಾನೆ. ಯಾವ ಅಗ್ನಿಯು ಇಂದ್ರಾದಿ ದೇವತೆಗಳಿಗೂ ಮತ್ತು ಮಾನವರಿಗೂ ಅತ್ಯಂತ ಪೂಜ್ಯನೂ ಸತ್ಯಾತ್ಮನೂ ಆಗಿರುವನೋ ಆದೇ ಅಗ್ನಿಯು ಸಕಲ ದೇವತೆಗಳನ್ನೂ ನಮ್ಮ ಪರವಾಗಿ ಅತಿಶಯವಾಗಿ ಪೂಜಿಸಲಿ.

## English Translation.

Agni is the invoker of the gods, the lord of the house, the ruler, who knows all that is, knows all existing beings; he is the most assiduous worshipper amongst gods or men: let him who is observant of truth offer worship.

॥ ವಿಶೇಷವಿಷಯಗಳು ॥

ವ್ಯೂಳ್ಹವೆಂಬ ದಶರಾತ್ರಯಾಗದ ಐದನೆಯ ದಿವಸ ಆಗ್ನಿಮಾರುತಶಸ್ತ್ರಮಂತ್ರಪಠನಕಾಲದಲ್ಲಿ **ಅಗ್ನಿರ್ಹೋತಾ** ಎಂದು ಮೊದಲಾಗುವ ಈ ಸೂಕ್ತದ ೧೩-೧೫ ನೆಯ ಋಕ್ಕುಗಳನ್ನು ಜಾತವೇದಸ್ಸಂಬಂಧವಾದ ನಿವಿದ್ಧಾನೀಯ ಮಂತ್ರಗಳನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಅಗ್ನಿರ್ಹೋತಾ ಗೃಹಪತಿಃ ಸ ರಾಜೇತಿ ತಿಸ್ರಃ** ಎಂಬ ಸೂತ್ರದಿಂದ (ಆ ೮-೯) ವಿವೃತವಾಗಿರುವುದು. ಪತ್ನೀಸಂಯಾಜ ಹೋಮದಲ್ಲಿ ಈ ಋಕ್ಕನ್ನು ಗೃಹಪತಿ ಸಂಬಂಧವಾದ ಮೊದಲನೇ ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **ಅಗ್ನಿರ್ಹೋತಾ ಗೃಹಪತಿಃ ಸ ರಾಜಾ ಹವ್ಯವಾಳಗ್ನಿರಜರಃ ಪಿತಾ ನ ಇತಿ ಪತ್ನೀಸಂಯಾಜಾಃ** ಎಂಬ ಸೂತ್ರದಿಂದ (ಆ. ೧-೧೦) ವಿವೃತವಾಗಿರುವುದು. ಮತ್ತು ಆಶ್ವಿನಶಸ್ತ್ರಮಂತ್ರಗಳಲ್ಲಿ ಈ ಋಕ್ಕನ್ನು ಪ್ರತಿಪನ್ಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಅಗ್ನಿರ್ಹೋತಾ ಗೃಹಪತಿಃ ಸ ರಾಜೇತಿ ಪ್ರತಿಪದೇಕಪಾತಿನೀ ಪಚ್ಛಃ** ಎಂಬ ಸೂತ್ರದಿಂದ (ಆ. ೬-೫) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಅಗ್ನೇ ಯದದ್ಯ ವಿಶೋ ಅಧ್ವರಸ್ಯ ಹೋತಃ ಪಾವಕಶೋಚೇ ವೇಷ್ಟ್ವಂ ಹಿ ಯಜ್ವಾ ।
ಋತಾ ಯಜಾಸಿ ಮಹಿನಾ ವಿ ಯದ್ಭೂರ್ಹವ್ಯಾ ವಹ ಯವಿಷ್ಠ ಯಾ ತೇ ಅದ್ಯ ॥ ೧೪ ॥

॥ ಪದಪಾಠಃ ॥

ಅಗ್ನೇ । ಯತ್ । ಅದ್ಯ । ವಿಶಃ । ಅಧ್ವರಸ್ಯ । ಹೋತರಿತಿ । ಪಾವಕಽಶೋಚೇ । ವೇಃ । ತ್ವಂ । ಹಿ । ಯಜ್ವಾ ।
ಋತಾ । ಯಜಾಸಿ । ಮಹಿನಾ । ವಿ । ಯತ್ । ಭೂಃ । ಹವ್ಯಾ । ವಹ । ಯವಿಷ್ಠ । ಯಾ । ತೇ । ಅದ್ಯ ॥

॥ ಸಾಯಣಭಾಷ್ಯಂ ॥

ಅಗ್ನೇ ಯದದ್ಯೇತಿ ದರ್ಶಪೂರ್ಣಮಾಸಯೋಃ ಸ್ವಿಷ್ಟಕೃತೋ ಯಾಜ್ಯಾ । ಸೂತ್ರಿತಂ ಚ । ಅಗ್ನೇ ಯದದ್ಯ ವಿಶೋ ಅಧ್ವರಸ್ಯ ಹೋತರಿತ್ಯೇನವಾನಂ ಯಜತಿ । ಆ. ೧-೬ । ಇತಿ ॥

ಹೇ ಅಧ್ವರಸ್ಯ ಹೋತರ್ಯಜ್ಞಸ್ಯ ನಿಷ್ಪಾದಕ ಪಾವಕಶೋಚೇ ಶೋಧಕದೀಪ್ತೇ ಏವಂಭೂತ ಹೇ ಅಗ್ನೇ ಅದ್ಯಾಸ್ಮಿನ್ಕಾಲೇ ವಿಶೋ ಮನುಷ್ಯಸ್ಯ ಯಜಮಾನಸ್ಯ ಯತ್ಕರ್ತವ್ಯಂ ತದ್ವೇಃ । ಕಾಮಯಸ್ವ । ಹಿ ಯಸ್ಮಾತ್ತ್ವಂ ಯಜ್ವಾ ದೇವಾನಾಂ ಯಷ್ಟಾ ಭವಸಿ ತಸ್ಮಾತ್ತ್ವಮೃತಾ ಋತೇ ಯಜ್ಞೇ ಯಜಾಸಿ । ದೇವಾನ್ಯಜ । ಅಪಿ ಚ ಮಹಿನಾ ಮಹಿಮ್ನಾ ಸ್ವಮಾಹಾತ್ಮ್ಯೇನ ಯದ್ಯಸ್ಮಾದ್ವಿ ಭೂಃ ವಿಭವಸಿ ವ್ಯಾಪ್ತೋ ಭವಸಿ ಅತಃ ಕಾರಣಾತ್ ಹೇ ಯವಿಷ್ಠ ಯುವತಮಾಗ್ನೇ ತೇ ತುಭ್ಯಂ ತ್ವದರ್ಥಮದ್ಯೇದಾನೀಂ ಯಾ ಯಾನಿ ಹವ್ಯಾನಿ ಜುಹುಮಸ್ತಾನಿ ಹವ್ಯಾ ಹವ್ಯಾನಿ ಹವೀಂಷಿ ವಹ । ಸ್ವಕೀಯಾಂ ಸ್ವಿಷ್ಟಕೃದಾಖ್ಯಾಂ ತನುಂ ಪ್ರಾಪಯ ॥

॥ ಪ್ರತಿಪದಾರ್ಥ ॥

**ಅಧ್ವರಸ್ಯ**—ಯಜ್ಞದ । **ಹೋತಃ**—ಸಂಪಾದಕನೂ । **ಪಾವಕಶೋಚೇ**—ಶುದ್ಧಿಕಾರಕವಾದ ಪ್ರಕಾಶವುಳ್ಳವನೂ ಆದ । **ಅಗ್ನೇ**—ಎಲೈ ಅಗ್ನಿಯೇ । **ಅದ್ಯ**—ಈ ಯಾಗಕಾಲದಲ್ಲಿ । **ವಿಶಃ**—ಮಾನವನಾದ ಯಜಮಾನನ । **ಯತ್**—ಯಾವ ಕರ್ಮವಿದೆಯೋ ಅದನ್ನು । **ವೇಃ**—ಇಚ್ಛಿಸು । **ಹಿ**—ಏತಕ್ಕೆಂದರೆ । **ತ್ವಂ**—ನೀನು । **ಯಜ್ವಾ**—ದೇವತೆಗಳ ಪೂಜಕನಾಗಿದ್ದೀಯೆ (ಆದುದರಿಂದಲೇ) । **ಋತಾ**—ಯಜ್ಞದಲ್ಲಿ । **ಯಜಾಸಿ**—ದೇವತೆಗಳನ್ನು ಪೂಜಿಸು । **ಮಹಿನಾ**—ನಿನ್ನ ಮಹಿಮೆಯಿಂದಲೇ । **ಯತ್**—ಯಾವ ಕಾರಣದಿಂದ । **ವಿ ಭೂಃ**—ಸರ್ವತ್ರ ವ್ಯಾಪಿಸಿರುವೆಯೋ (ಆ ಕಾರಣದಿಂದಲೇ) । **ಯವಿಷ್ಠ**—ಅತ್ಯಂತ ಯುವಕನಾದ ಎಲೈ ಅಗ್ನಿಯೇ । **ತೇ**—ನಿನ್ನನ್ನುದ್ದೇಶಿಸಿ । **ಅದ್ಯ**—ಈ ಯಾಗಕಾಲದಲ್ಲಿ । **ಯಾ ಹವ್ಯಾ**—ಯಾವ ಹವಿಸ್ಸುಗಳು (ಅರ್ಪಿತವಾಗುವುವೋ ಅವುಗಳನ್ನು) । **ವಹ**—ದೇವತೆಗಳಲ್ಲಿಗೆ ವಹಿಸು.

॥ ಭಾವಾರ್ಥ ॥

ಯಜ್ಞಸಂಪಾದಕನೂ, ಶುದ್ಧಿಕಾರಕವಾದ ಪ್ರಕಾಶವುಳ್ಳವನೂ ಆದ ಎಲೈ ಅಗ್ನಿಯೇ, ಈ ಯಾಗಕಾಲದಲ್ಲಿ ಮಾನವ ಯಜಮಾನನ ಯಾವ ಕರ್ಮವಿದೆಯೋ ಅದನ್ನು ಇಚ್ಛಿಸು. ನೀನು ದೇವಪೂಜಕನಾಗಿರುವುದರಿಂದಲೇ ಯಜ್ಞದಲ್ಲಿ ದೇವತೆಗಳನ್ನು ಪೂಜಿಸು. ಅತ್ಯಂತ ಯುವಕನಾದ ಎಲೈ ಅಗ್ನಿಯೇ, ನೀನು ನಿನ್ನ ಮಹಿಮೆಯಿಂದ ಸರ್ವತ್ರ ವ್ಯಾಪಿಸಿದ್ದೀಯೆ. ಆ ಕಾರಣದಿಂದಲೇ ನಿನ್ನನ್ನುದ್ದೇಶಿಸಿ ಹವಿಸ್ಸುಗಳು ಅರ್ಪಿತವಾಗುತ್ತವೆ. ಅವುಗಳನ್ನೆಲ್ಲಾ ದೇವತೆಗಳಿಗೆ ವಹಿಸು, ಅವರಿಗೆ ಅರ್ಪಿಸು.

## English Translation.

Agni, minister of the sacrifice, bright with purifying lustre, approve of that (worship) which is this day celebrated by the institutor of the rite :

you verily are the sacrificer, therefore address the worship (to the gods); and since by your greatness you are all-pervading, therefore, youngest (of the gods), accept the oblations which are to-day (presented) to you.

|| ವಿಶೇಷವಿಷಯಗಳು ||

**ಅಗ್ನೇ ಯದದ್ಯ** ಎಂಬ ಈ ಋಕ್ಕನ್ನು ದರ್ಶಪೂರ್ಣಮಾಸಯಾಗಗಳ ಸ್ವಿಷ್ಟಕೃದ್ಧೋಮದಲ್ಲಿ ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಅಗ್ನೇ ಯದದ್ಯ ವಿಶೋ ಅಧ್ವರಸ್ಯ ಹೋತರಿತ್ಯನವಾನಂ ಯಜತಿ** ಎಂಬ ಸೂತ್ರದಿಂದ (ಆ ೧-೬) ವಿನ್ಯತವಾಗಿರುವುದು.

|| ಸಂಹಿತಾಪಾಠಃ ||

ಅಭಿ ಪ್ರಯಾಂಸಿ ಸುಧಿತಾನಿ ಹಿ ಖ್ಯೋ ನಿ ತ್ವಾ ದಧೀತ ರೋದಸೀ ಯಜಧ್ಯೈ ।
ಅವಾ ನೋ ಮಘವನ್ವಾಜಸಾತಾವಗ್ನೇ ವಿಶ್ವಾನಿ ದುರಿತಾ ತರೇಮ ತಾ
ತರೇಮ ತವಾವಸಾ ತರೇಮ ॥೧೫॥

|| ಪದಪಾಠಃ ||

ಅಭಿ । ಪ್ರಯಾಂಸಿ । ಸುऽಧಿತಾನಿ । ಹಿ । ಖ್ಯಃ । ನಿ । ತ್ವಾ । ದಧೀತ । ರೋದಸೀ ಇತಿ । ಯಜಧ್ಯೈ ।
ಅವ । ನಃ । ಮಘಃऽವನ್ । ವಾಜಃಸಾತೌ । ಅಗ್ನೇ । ವಿಶ್ವಾನಿ । ದುಃऽಇತಾ । ತರೇಮ । ತಾ । ತರೇಮ ।
ತವ । ಅವಸಾ । ತರೇಮ ॥ ೧೫ ॥

। ಸಾಯಣಭಾಷ್ಯಂ ॥

**ಹೇ ಅಗ್ನೇ ಸುಧಿತಾನಿ ಸುನಿಹಿತಾನಿ ವೇದ್ಯಾಮಾಸಾದಿತಾನಿ ಪ್ರಯಾಂಸ್ಯನ್ನಾನಿ ಹವಿರ್ಲಕ್ಷಣಾನ್ಯಭಿ ಖ್ಯಃ । ಅಭಿಪಶ್ಯಸಿ । ಹಿ ಪೂರಕಃ । ತಾದೃಶಂ ತ್ವಾಂ ರೋದಸೀ ದ್ಯಾವಾಪೃಥಿವ್ಯಾವೇತದುಪಲಕ್ಷಿತಾನ್ ಸರ್ವಾನ್ ದೇವಾನ್ಯಜಧ್ಯೈ ಯಷ್ಟುಂ ನಿ ದಧೀತ । ಅಯಂ ಯಜಮಾನೋ ನಿಹಿತವಾನ್ । ಹೇ ಮಘವನ್ನಗ್ನೇ ನೋऽಸ್ಮಾನ್ವಾಜಸಾತೌ ಸಂಗ್ರಾಮೇऽನ್ನಸ್ಯ ಸಂಭಜನೇ ವಾ ನಿಮಿತ್ತಭೂತೇऽವ । ರಕ್ಷ । ವಯಂ ಚ ವಿಶ್ವಾನಿ ಸರ್ವಾಣಿ ದುರಿತಾ ದುರಿತಾನಿ ದುಃಖಾನಿ ತರೇಮ । ಅತಿಕ್ರಾಮೇಮ । ಅನ್ಯದ್ಗತಂ ॥**

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಸುಧಿತಾನಿ**—ವೇದಿಯಲ್ಲಿ ಅರ್ಪಿತಗಳಾದ | **ಪ್ರಯಾಂಸಿ**—ಹವಿಸ್ಸುಗಳನ್ನು | **ಅಭಿ ಖ್ಯಃ**—ಕೃಪೆಯಿಂದ ವೀಕ್ಷಿಸು | **ರೋದಸೀ**—ದ್ಯಾವಾಪೃಥಿವಿಗಳು | **ಯಜಧ್ಯೈ**—(ದೇವತೆಗಳನ್ನು) ಯಜ್ಞದಿಂದ ಪೂಜಿಸಲು | **ತ್ವಾ ನಿ ದಧೀತೆ**—ನಿನ್ನನ್ನು ನಿಯಮಿಸಿವೆ | **ಮಘವನ್**—ಧನವಂತನಾದ | **ಅಗ್ನೇ**—ಎಲೈ ಅಗ್ನಿಯೇ | **ನಃ**—ನಮ್ಮನ್ನು | **ವಾಜಸಾತೌ**—ಅನ್ನಾರ್ಥವಾಗಿ ಮಾಡುವ ಯುದ್ಧದಲ್ಲಿ | **ಅವ**—ರಕ್ಷಿಸು | **ವಿಶ್ವಾನಿ**—ಸಮಸ್ತವಾದ | **ದುರಿತಾ**—ದುಃಖಗಳನ್ನೂ | **ತರೇಮ**—ನಾವು ದಾಟುವಂತೆ ಮಾಡು | **ತವ**—ನಿನ್ನ | **ಅವಸಾ**—ರಕ್ಷಣೆಯಿಂದಲೇ | **ತಾ**—ಆ ದುಃಖಗಳನ್ನೆಲ್ಲಾ | **ತರೇಮ**—ದಾಟುವಂತಾಗಲಿ.

॥ ಭಾವಾರ್ಥ ॥

ಎಲೈ ಅಗ್ನಿಯೇ, ವೇದಿಯಲ್ಲಿ ಅರ್ಪಿತಗಳಾದ ಹವಿಸ್ಸುಗಳನ್ನು ಕೃಪೆಯಿಂದ ವೀಕ್ಷಿಸು. ದೇವತೆಗಳನ್ನು ಯಜ್ಞದಿಂದ ಪೂಜಿಸಲು ದ್ಯಾವಾಪೃಥಿವಿಗಳು ನಿನ್ನನ್ನು ನಿಯಮಿಸಿವೆ. ಧನವಂತನಾದ ಎಲೈ ಅಗ್ನಿಯೇ, ನಮ್ಮನ್ನು ಅನ್ನಾರ್ಥವಾಗಿ ಮಾಡುವ ಈ ಯುದ್ಧದಲ್ಲಿ ರಕ್ಷಿಸು. ಸಮಸ್ತವಾದ ದುಃಖಗಳನ್ನೂ ನಾವು ದಾಟುವಂತೆ ಮಾಡು ನಿನ್ನ ರಕ್ಷಣೆಯಿಂದಲೇ ನಾವು ಆ ದುಃಖಗಳನ್ನೆಲ್ಲಾ ದಾಟುವಂತಾಗಲಿ.

English Translation.

Look, Agni, upon the (sacrificial) viands duly deposited (upon the altar): Heaven and Earth detain you to sacrifice (to the gods): opulent Agni, protect us in battle, whereby we may pass safe over all evils: may we pass over those of a prior existence; may we pass over them by your protection.

॥ ಸಂಹಿತಾಪಾಠಃ ॥

ಅಗ್ನೇ ವಿಶ್ವೇಭಿಃ ಸ್ವನೀಕ ದೇವೈರೂರ್ಣಾವಂತಂ ಪ್ರಥಮಃ ಸೀದ ಯೋನಿಂ ।
ಕುಲಾಯಿನಂ ಘೃತವಂತಂ ಸವಿತ್ರೇ ಯಜ್ಞಂ ನಯ ಯಜಮಾನಾಯ ಸಾಧು ॥ ೧೬ ॥

॥ ಪದಪಾಠಃ ॥

ಅಗ್ನೇ । ವಿಶ್ವೇಭಿಃ । ಸುऽಅನೀಕ । ದೇವೈಃ । ಊರ್ಣಾऽವಂತಂ । ಪ್ರಥಮಃ । ಸೀದ । ಯೋನಿಂ ।
ಕುಲಾಯಿನಂ । ಘೃತऽವಂತಂ । ಸವಿತ್ರೇ । ಯಜ್ಞಂ । ನಯ । ಯಜಮಾನಾಯ । ಸಾಧು ॥ ೧೬ ॥

॥ ಸಾಯಣಭಾಷ್ಯಂ ॥

ಅಗ್ನಿ ಪ್ರಣಯನೇಽಗ್ನೇ ವಿಶ್ವೇಭಿರಿತ್ಯೇಷಾನುವಕ್ತವ್ಯಾ । ಸೂತ್ರಿತಂ ಚ । ಅಗ್ನೇ ವಿಶ್ವೇಭಿಃ ಸ್ವನೀಕ ದೇವೈರಿತ್ಯರ್ಧರ್ಚ ಆರಮೇತ್ । ಆ ೨-೧೭ । ಇತಿ ॥

ಹೇ ಸ್ವನೀಕ ಸುಜ್ವಾಲಾಗ್ನೇ ವಿಶ್ವೇಭಿರ್ವಿಶ್ವೈಃ ಸರ್ವೈರ್ದೇವೈಃ ಸಹೋರ್ಣಾವಂತಮೂರ್ಣಾಸ್ತುಕಾವಂತಂ ಯೋನಿಮುತ್ತರವೇದಿಲಕ್ಷಣಂ ಸ್ಥಾನಂ ಪ್ರಥಮಃ ಸರ್ವೇಷು ದೇವೇಷು ಮುಖ್ಯಸ್ತ್ವಂ ಸೀದ । ಉಪವಿಶ । ಕೀದೃಶಂ ಯೋನಿಂ । ಕುಲಾಯಿನಂ । ಕುಲಾಯೋ ನೀಡಂ । ತತ್ಸದೃಶಂ ಗುಲ್ಗುಲ್ವಾದಿಸಂಭರಣೋಪೇತಂ । ತಥಾ ಚ ಶ್ರೂಯತೇ । ಕುಲಾಯಮಿವ ಹ್ಯೇತದ್ಯಜ್ಞೇ ಕ್ರಿಯತೇ ಯತ್ಪೈತುದಾರವಾಃ ಪರಿಧಯೋ ಗುಲ್ಗುಲೂರ್ಣಾಸ್ತುಕಾಃ ಸುಗಂಧಿತೇಜನಾನಿ । ಐ. ಬ್ರಾ. ೧-೨೮ । ಇತಿ । ಘೃತವಂತಂ ವ್ಯಾಘಾರಣಾಜ್ಯಯುಕ್ತಂ । ಏವಮುತ್ತರವೇದ್ಯಾಂ ನಿಷಣ್ಣಸ್ತ್ವಂ ಸವಿತ್ರೇ ಹವಿಷಾಂ ಪ್ರೇರಯಿತ್ರೇ ಯಜಮಾನಾಯ ॥ ಷಷ್ಠ್ಯರ್ಥೇ ಚತುರ್ಥ್ಯೇಷಾ ॥ ಈದೃಶಸ್ಯ ಯಜಮಾನಸ್ಯ ಯಜ್ಞಂ ಸಾಧ್ವಾರ್ಜವೇನ ನಯ । ದೇವಾನ್ಪ್ರಾಪಯ ॥

॥ ಪ್ರತಿಪದಾರ್ಥ ॥

**ಸ್ವನೀಕ**—ಶ್ರೇಷ್ಠವಾದ ಜ್ವಾಲೆಯುಳ್ಳ । **ಅಗ್ನೇ**—ಎಲೈ ಅಗ್ನಿಯೇ । **ಊರ್ಣಾವಂತಂ**—ಉಣ್ಣೆಯಂತೆ ಮೃದುವಾದ ಆಸನವುಳ್ಳದ್ದೂ । **ಘೃತವಂತಂ**—ಆಜ್ಯೋಪೇತವಾದುದೂ । **ಕುಲಾಯಿನಂ**—ಗೂಡಿನಂತೆ ಅಡಕವಾದುದೂ ಆದ । **ಯೋನಿಂ**—ಯಜ್ಞವೇದಿಯಲ್ಲಿ । **ಪ್ರಥಮಃ**—ಸಕಲ ದೇವತೆಗಳಿಗೂ ಮುಖ್ಯನಾದ ನೀನು । **ವಿಶ್ವೇಭಿಃ**—ಸಮಸ್ತವಾದ । **ದೇವೈಃ**—ದೇವತೆಗಳೊಡನೆ । **ಸೀದ**—ಕುಳಿತುಕೊ । **ಸವಿತ್ರೇ**—ಹವಿಸ್ಸನ್ನು ಅರ್ಪಿಸುವ । **ಯಜಮಾನಾಯ**—ಯಜಮಾನನ । **ಯಜ್ಞಂ**—ಯಜ್ಞಭಾಗವನ್ನು । **ಸಾಧು**—ಉತ್ತಮ ರೀತಿಯಲ್ಲಿ । **ನಯ**—ದೇವತೆಗಳಲ್ಲಿಗೆ ಕೊಂಡುಹೋಗು.

॥ ಭಾವಾರ್ಥ ॥

ಶ್ರೇಷ್ಠವಾದ ಜ್ವಾಲೆಯುಳ್ಳ ಎಲೈ ಅಗ್ನಿಯೇ, ಉಣ್ಣೆಯಂತೆ ಮೃದುವಾದ ಆಸನವುಳ್ಳದ್ದೂ, ಆಜ್ಯೋಪೇತವಾದುದೂ, ಗೂಡಿನಂತೆ ಅಡಕವಾದುದೂ ಆದ ಈ ಯಜ್ಞವೇದಿಯಲ್ಲಿ ಸಕಲ ದೇವತೆಗಳಿಗೂ ಮುಖ್ಯನಾದ ನೀನು ಸಮಸ್ತ ದೇವತೆಗಳೊಡನೆ ಕುಳಿತುಕೊ. ಹವಿಸ್ಸನ್ನು ಅರ್ಪಿಸುವ ಯಜಮಾನನ ಯಜ್ಞಭಾಗವನ್ನು ಉತ್ತಮವಾದ ರೀತಿಯಲ್ಲಿ ದೇವತೆಗಳಲ್ಲಿಗೆ ವಹಿಸು.

## English Translation.

Bright-rayed Agni, sit down first with all the gods, upon the altar lined with wool, a nest (of perfumes) and suffused with ghee, and rightly convey (to the deities) the sacrifice of the institutor of the rite, of the presenter of the oblation.

|| ವಿಶೇಷವಿಷಯಗಳು ||

ಅಗ್ನಿ ಪ್ರಣಯನವೆಂಬ, ಅಗ್ನಿಯನ್ನು ಉತ್ತರವೇದಿಗೆ ತೆಗೆದುಕೊಂಡು ಹೋಗಿ ಸ್ಥಾಪಿಸುವ ಯಜ್ಞಾಂಗ ಕರ್ಮದಲ್ಲಿ **ಅಗ್ನೇ ವಿಶ್ವೇಭಿಃ** ಎಂಬ ಈ ಋಕ್ಕನ್ನು ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ— **ಅಗ್ನೇ ವಿಶ್ವೇಭಿಃ ಸ್ವನೀಕದೇವೈರಿತ್ಯರ್ಧರ್ಚ ಆರಮೇತ್** ಎಂಬ ಸೂತ್ರದಿಂದ (ಆ. ೨-೧೭) ವಿವೃತವಾಗಿರುವುದು.

ಅಗ್ನಿಪ್ರಣಯನವೆಂಬ ಕರ್ಮದಲ್ಲಿ ಹೋತೃವು ಒಟ್ಟು ೮ ಋಕ್ಕುಗಳನ್ನು ಪಠಿಸುವನು. ಅವುಗಳಲ್ಲಿ **ಅಗ್ನೇ ವಿಶ್ವೇಭಿಃ** ಎಂಬ ಈ ಋಕ್ಕು ಐದನೆಯದು. ಇದರ ವಿನಿಯೋಗದ ವಿಷಯವಾಗಿ ಐತರೇಯ ಬ್ರಾಹ್ಮಣದಲ್ಲಿ (ಐ. ಬ್ರಾ. ೫-೨) ಈ ರೀತಿ ವಿವರಣೆ ಇರುವುದು—

> **ಅಗ್ನೇ ವಿಶ್ವೇಭಿಃ ಸ್ವನೀಕದೇವೈರೂರ್ಣಾವಂತಂ ಪ್ರಥಮಃ ಸೀದ ಯೋನಿಮಿತಿ ವಿಶ್ವೈರೇವೈನಂ ತದ್ದೇವೈಃ ಸಹಾಸಾದಯತಿ । ಕುಲಾಯಿನಂ ಘೃತವಂತಂ ಸವಿತ್ರ ಇತಿ ಕುಲಾಯಮಿವ ಹ್ಯೇತದ್ಯಜ್ಞೇ ಕ್ರಿಯತೇ ಯತ್ಪೈತುದಾರವಾಃ ಪರಿಧಯೋ ಗುಗ್ಗುಲೂರ್ಣಾಸ್ತುಕಾಃ ಸುಗಂಧಿತೇಜನಾನೀತಿ ಯಜ್ಞಂ ನಯ ಯಜಮಾನಾಯ ಸಾಧ್ವಿತಿ ಯಜ್ಞಮೇವ ತದೃಜುಧಾ ಪ್ರತಿಷ್ಠಾಪಯತಿ ॥** (ಐ. ಬ್ರಾ. ೫-೨)

ಎಲೈ ಅಗ್ನಿಯೇ, ಜ್ವಾಲಾಖ್ಯವಾದ ಸೇನೆಗಳಿಂದ ಯುಕ್ತನಾದ ನೀನು ಸಮಸ್ತ ದೇವತೆಗಳಿಗೂ ಮುಖ್ಯನಾಗಿ ಈ ಉತ್ತರವೇದಿಯೆಂಬ ನಾಭಿಸ್ಥಾನದಲ್ಲಿ ಬಂದು ಕುಳಿತುಕೋ, ಎಂದು ಈ ಋಕ್ಕಿನ ಪೂರ್ವಾರ್ಧದ ಮುಖ್ಯಾಭಿಪ್ರಾಯವು. ಇಲ್ಲಿ **ವಿಶ್ವೇಭಿಃ** ಎಂಬ ಪದಪ್ರಯೋಗದಿಂದ ಅಗ್ನಿಯೊಡನೆ ಸಮಸ್ತ ದೇವತೆಗಳನ್ನು ಸ್ಥಾಪಿಸಲಾಗಿದೆ ಯೆಂದು ನಿರ್ದೇಶಿಸಲಾಗಿರುವುದು ಎಂದರೆ ಅಗ್ನಿಯು ಸಮಸ್ತ ದೇವತೆಗಳ ಸಹಿತನಾಗಿ ಉಣ್ಣೆಯ ದಾರಗಳನ್ನು ಹಾಸಿ ಮೆತ್ತಗೆಮಾಡಿರುವ ಪಕ್ಷಿಯ ಗೂಡಿನಂತಿರುವ ಉತ್ತರವೇದಿಯಲ್ಲಿ (ಯಜ್ಞಕುಂಡದಲ್ಲಿ) ಕೂಡುವನೆಂದಭಿಪ್ರಾಯವು. ಕಾಷ್ಠಾದಿಗಳಿಂದ ಸಮೃದ್ಧವಾಗಿಯೂ, ಘೃತಸಿಕ್ತವಾಗಿಯೂ ಇರುವ ಯಜ್ಞದ ನಾಭಿಪ್ರದೇಶವಾದ ಉತ್ತರ ವೇದಿಯಲ್ಲಿದ್ದು ಯಜಮಾನನ ಯಜ್ಞಕರ್ಮಗಳನ್ನು ಚೆನ್ನಾಗಿ ನೆರವೇರಿಸು ಎಂದು ಈ ಋಕ್ಕಿನ ಉತ್ತರಾರ್ಧದ ಅಭಿಪ್ರಾಯವು. ಇಲ್ಲಿ ಮೂರನೆಯೂ ಪಾದದಲ್ಲಿ ಹೇಳಿರುವ **ಕುಲಾಯಿನಂ ಘೃತವಂತಂ** ಎಂಬ ಶಬ್ದಗಳಿಂದ ಪಕ್ಷಿಯ ಗೂಡು ಸೂಚಿತವಾಗುವುದು. ಎಂದರೆ ಪಕ್ಷಿಯು ತನ್ನ ಗೂಡನ್ನು ಖದಿರ ಅಥವಾ ದೇವದಾರುವೃಕ್ಷದ ಸಣ್ಣ ಸಣ್ಣ ಕಡ್ಡಿಗಳು, ಗುಗ್ಗುಲು (ಅಂಟು) ಉಣ್ಣೆಯ ದಾರಗಳು, ಒಂದುವಿಧ ಸುವಾಸನೆಯುಳ್ಳ ಹುಲ್ಲುಗರಿಕೆ ಇವುಗಳನ್ನೆಲ್ಲಾ ಸೇರಿಸಿ ಹೆಣೆದು ಗೂಡನ್ನು ಕಟ್ಟುವುದು. ಅಗ್ನಿಯ ನಾಭಿಸ್ಥಾನವೂ (ಯಜ್ಞಕುಂಡ) ಆ ಗೂಡಿ ನಂತಿರುವುದೆಂದು ಇಲ್ಲಿ ಹೋಲಿಸಿದೆ. ಹೇಗೆಂದರೆ, ಗೂಡನ್ನು ಕಟ್ಟುವಾಗ ಪಕ್ಷಿಯು ಕಡ್ಡಿಗಳನ್ನು ಉಪಯೋಗಿಸುವು ದಷ್ಟೆ. ಇಲ್ಲಿ ಅಗ್ನಿಯ ಸುತ್ತಲೂ ಇಟ್ಟಿರುವ ಪರಿಧಿಯೆಂಬ ಕಾಷ್ಠಗಳೇ ಕಡ್ಡಿಗಳು. ಹಾಗೆಯೇ ಅಂಟಿಗೆ ಬದಲಾಗಿ ಹೋಮಕ್ಕಾಗಿ ಸಿದ್ಧಪಡಿಸಿಟ್ಟಿರುವ ಘೃತಾದಿಸುಗಂಧದ್ರವ್ಯವೂ, ಉಣ್ಣೆಯ ದಾರಗಳಿಗೆ ಬದಲಾಗಿ ಆಡು ಮೊದಲಾದ ಯಜ್ಞಪಶುಗಳೂ, ಹುಲ್ಲುಗರಿಕೆಗೆ ಬದಲಾಗಿ ಸಮಿತ್ತುಗಳೂ, ಅಗ್ನಿಯ ಸುತ್ತಲೂ ಸಿದ್ಧಪಡಿಸಿ ಇಟ್ಟಿರುವುದರಿಂದ ಅಗ್ನಿಗಾಗಿ ಸ್ಥಾಪಿತವಾಗಿರುವ ಉತ್ತರವೇದಿಯನ್ನು (ಅಗ್ನಿಕುಂಡವನ್ನು) ಪಕ್ಷಿಯ ಗೂಡಿಗೆ ಹೋಲಿಸಿ ವರ್ಣಿಸಿದೆ.

ಇಂತಹ ಪಕ್ಷಿಯ ಗೂಡಿನಂತಿರುವ ಉತ್ತರವೇದಿಸ್ಥಾನದಲ್ಲಿ ಸ್ಥಾಪಿತನಾದ ಅಗ್ನಿಯು ಯಜಮಾನನ ಯಜ್ಞಕಾರ್ಯಗಳನ್ನು ಚೆನ್ನಾಗಿ ನೆರವೇರಿಸಲಿ ಎಂಬ ಪ್ರಾರ್ಥನೆಯು ಇಲ್ಲಿ ಉಕ್ತವಾಗಿದೆ.

ಅಗ್ನಿಪ್ರಣಯನವೆಂಬ ಯಜ್ಞಾಂಗವಾದ ಕರ್ಮದ ವಿಸ್ತಾರವಾದ ವಿವರಣೆಯನ್ನು ನಾವು ಋ.ಸಂ. ಭಾಗ ೧೪, ರಲ್ಲಿ 541-549ನೇ ಪುಟಗಳಲ್ಲಿ ವಿವರಿಸಿರುವುದನ್ನು ನೋಡಿ.

॥ ಸಂಹಿತಾಪಾಠಃ ॥

ಇಮಮು ತ್ಯಮಥರ್ವವದಗ್ನಿಂ ಮಂಥಂತಿ ವೇಧಸಃ ।
ಯಮಂಕೂಯಂತಮಾನಯನ್ನಮೂರಂ ಶ್ಯಾವ್ಯಾಭ್ಯಃ ॥ ೧೭ ॥

॥ ಪದಪಾಠಃ ॥

ಇಮಂ । ಊಂ ಇತಿ । ತ್ಯಂ । ಅಥರ್ವऽವತ್ । ಅಗ್ನಿಂ । ಮಂಥಂತಿ । ವೇಧಸಃ ।
ಯಂ । ಅಂಕುऽಯಂತಂ । ಆ । ಅನಯನ್ । ಅಮೂರಂ । ಶ್ಯಾವ್ಯಾಭ್ಯಃ ॥ ೧೭ ॥

॥ ಸಾಯಣಭಾಷ್ಯಂ ॥

ವೇಧಸಃ ಕರ್ಮಣಾಂ ವಿಧಾತಾರ ಋತ್ವಿಜ ಇಮಂ ದೃಶ್ಯಮಾನಂ ತ್ಯಂ ತಂ ಪೂರ್ವೋಕ್ತಗುಣಮಗ್ನಿಮಥರ್ವವತ್ ಯಥಾಥರ್ವಾಖ್ಯ ಋಷಿಃ ಪುರಾಮಥ್ನಾತ್ತಥಾ ಮಂಥಂತಿ । ಮಥ್ನಂತಿ । ಅರಣ್ಯೋಃ ಸಕಾಶಾಜ್ಜನಯಂತಿ । ಅಂಕೂಯಂತಂ । ಕುತ್ಸಿತಮಂಚನಂ ಗಮನಮಂಕು । ತದಾತ್ಮನ ಇಚ್ಛಂತಂ ದೇವೇಭ್ಯೋ ನಿರ್ಗತ್ಯೇತಸ್ತತಃ ಪಲಾಯಮಾನಮಮೂರಮಮೂಢಂ ಯಮಗ್ನಿಂ ಶ್ಯಾವ್ಯಾಭ್ಯಃ । ಶ್ಯಾವೀತಿ ರಾತ್ರಿನಾಮ । ತತ್ರ ಭವಾಸ್ತಮಸಃ ಸಂಹತಯಃ ಶ್ಯಾವ್ಯಾಃ । ತಾಭ್ಯಃ ಸಕಾಶಾದಾನಯನ್ ಆಗಮಯನ್ ತಂ ಮಂಥಂತೀತ್ಯನ್ವಯಃ ॥

॥ ಪ್ರತಿಪದಾರ್ಥ ॥

**ವೇಧಸಃ**—ಕರ್ಮಕರ್ತರಾದ ಋತ್ವಿಕ್ಕುಗಳು । **ತ್ಯಂ**— ಪ್ರಸಿದ್ಧನಾದ । **ಇಮಂ ಅಗ್ನಿಂ**— ಈ ಅಗ್ನಿಯನ್ನು । **ಅಥರ್ವವತ್**—ಅಥರ್ವಾಂಗಿರಸನೆಂಬ ಋಷಿಯು ಹಿಂದೆ ಮಥಿಸಿದಂತೆ । **ಮಂಥಂತಿ**— ಮಥಿಸಿ ಪ್ರಜ್ವಲಿತನಾಗುವಂತೆ ಮಾಡುತ್ತಾರೆ । **ಅಂಕೂಯಂತಂ**—ವಕ್ರಗಮವುಳ್ಳವನೂ । **ಅಮೂರಂ**—(ಅದರೂ ಸಹ) ಮೌಢ್ಯರಹಿತನೂ ಆದ । **ಯಂ**—ಯಾವ ಅದೇ ಅಗ್ನಿಯನ್ನು । **ಶ್ಯಾವ್ಯಾಭ್ಯಃ**— ರಾತ್ರಿಯ ಕಗ್ಗತ್ತಲೆಗಳಿಂದ । **ಆ ಅನಯನ್**— ಹೊರಕ್ಕೆ ಬರಮಾಡುತ್ತಾರೆ.

|| ಭಾವಾರ್ಥ ||

ಕರ್ಮಕರ್ತರಾದ ಋತ್ವಿಕ್ಕುಗಳು ಪ್ರಸಿದ್ಧನಾದ ಈ ಅಗ್ನಿಯನ್ನು ಅಥರ್ವಾಂಗಿರಸಋಷಿಯು ಹಿಂದೆ ಮಥಿಸಿದಂತೆ ಮಥಿಸಿ ಪ್ರಜ್ವಲಿತನಾಗುವಂತೆ ಮಾಡುತ್ತಾರೆ. ವಕ್ರಗಮನವುಳ್ಳವನೂ ಆದರೂ ಸಹ ಮೌಢ್ಯರಹಿತನೂ ಆದ ಅದೇ ಅಗ್ನಿಯನ್ನು ರಾತ್ರಿಯ ಕಗ್ಗತ್ತಲೆಗಳಿಂದ ಹೊರಕ್ಕೆ ಬರಮಾಡಲು ಮಥಿಸುತ್ತಾರೆ.

English Translation.

The priests churn you Agni, as was done by Atharvan, and bring him from the glooms of night, wandering deviously, but not bewildered.

|| ವಿಶೇಷವಿಷಯಗಳು ||

**ಅಥರ್ವವತ್**—ಈ ಋಷಿಯು ತಾನು ಮಾಡಿದ ಯಜ್ಞದಲ್ಲಿ ಅಗ್ನಿಯನ್ನು ಚೆನ್ನಾಗಿ ಉದ್ದೀಪನಗೊಳಿಸಿದನು ಎಂಬ ವಿಷಯವು ಈ ಋಕ್ಕಿನಲ್ಲಿಯೂ **ತ್ವಾಮಗ್ನೇ ಪುಷ್ಕರಾದಧ್ಯಥರ್ವಾ ನಿರಮಂಥತ** (ಋ. ಸಂ. ೬-೧೬-೧೪) ಎಂಬ ಋಕ್ಕಿನಲ್ಲಿಯೂ ಇತರ ವೇದಗಳಲ್ಲಿಯೂ ಉಕ್ತವಾಗಿದೆ. ಈ ಅಥರ್ವನೆಂಬ ಋಷಿಯು ಪುರಾತನ ಋಷಿಗಳ ಪಟ್ಟಿಯಲ್ಲಿ ಸೇರಿಸಲ್ಪಟ್ಟಿದ್ದಾನೆ. ಈ ಅಥರ್ವನು ಅಗ್ನಿಯನ್ನು ಉತ್ಪತ್ತಿಮಾಡಿದ ವಿಷಯವನ್ನೂ ಇತರ ವಿಷಯಗಳನ್ನೂ ಇದೇ ಭಾಗದ ೧೬ ನೆಯ ಸೂಕ್ತದ ೧೩, ೧೪ ನೆಯ ಋಕ್ಕಿನ ವಿಶೇಷ ವಿಷಯಗಳಲ್ಲಿ ವಿವರಿಸಲಾಗಿದೆ.

|| ಸಂಹಿತಾಪಾಠಃ ||

ಜನಿಷ್ವಾ ದೇವವೀತಯೇ ಸರ್ವತಾತಾ ಸ್ವಸ್ತಯೇ ।
ಆ ದೇವಾನ್ವಕ್ಷ್ಯಮೃತಾ ಋತಾವೃಧೋ ಯಜ್ಞಂ ದೇವೇಷು ಪಿಸ್ಪೃಶಃ ॥೧೪॥

॥ ಪದಪಾಠಃ ॥

ಜನಿಷ್ವ । ದೇವಽವೀತಯೇ । ಸರ್ವಽತಾತಾ । ಸ್ವಸ್ತಯೇ ।
ಆ । ದೇವಾನ್ । ವಕ್ಷಿ । ಅಮೃತಾನ್ । ಋತಽವೃಧಃ । ಯಜ್ಞಂ । ದೇವೇಷು । ಪಿಸ್ಪೃಶಃ ॥ ೧೪ ॥

|| ಸಾಯಣಭಾಷ್ಯಂ ||

**ಹೇ ಅಗ್ನೇ ಸರ್ವತಾತಾ ಸರ್ವೈಸ್ತಾಯಮಾನೇ ಯಜ್ಞೇ ಮಥ್ಯಮಾನಸ್ತ್ವಂ ಜನಿಷ್ವ ಪ್ರಾದುರ್ಭವ । ಕಿಮರ್ಥಂ । ದೇವವೀತಯೇ ದೇವಕಾಮಾಯ ಯಜಮಾನಾಯ ॥ ಷಷ್ಠ್ಯರ್ಥೇ ಚತುರ್ಥ್ಯೇಷಾ ॥ ಈದೃಶಸ್ಯ ಯಜಮಾನಸ್ಯ ಸ್ವಸ್ತಯೇಽವಿನಾಶಾರ್ಥಂ । ಜನಿತ್ವಾ ಚಾಮೃತಾನ್ಮರಣ-**

ರಹಿತಾನ್ಯತಾವೃಧೋ ಯಜ್ಞಸ್ಯ ವರ್ಧಯಿತ್ರ್ಯಾನ್ ದೇವಾನಾ ವಕ್ಷಿ । ಆವಹ । ತದನಂತರಂ ತೇಷು ದೇವೇಷ್ವಸ್ಮದೀಯಂ ಯಜ್ಞಂ ಪಿಸ್ಪೃಶಃ । ಸ್ಪರ್ಶಯ । ಪ್ರಾಪಯೇತ್ಯರ್ಥಃ ||

|| ಪ್ರತಿಪದಾರ್ಥ ||

(ಎಲೈ ಅಗ್ನಿಯೇ) **ಸರ್ವತಾತಾ**—ಈ ಯಜ್ಞದಲ್ಲಿ | **ದೇವವೀತಯೇ**—ದೇವತೆಗಳ ಸಾನ್ನಿಧ್ಯವನ್ನಪೇಕ್ಷಿಸುವ ಈ ಯಜಮಾನನ | **ಸ್ವಸ್ತಯೇ**—ಕಲ್ಯಾಣಕ್ಕಾಗಿ | **ಜನಿಷ್ವ**—ಉತ್ಪನ್ನನಾಗು | **ಅಮೃತಾನ್**—ಮರಣಧರ್ಮರಹಿತರೂ | **ಋತಾವೃಧಃ**—ಯಜ್ಞವರ್ಧಕರೂ ಆದ | **ದೇವಾನ್**—ದೇವತೆಗಳನ್ನು | **ಆ ವಕ್ಷಿ**—ಕರೆದುಕೊಂಡು ಬಾ | **ದೇವೇಷು**—ಆ ದೇವತೆಗಳಲ್ಲಿ | **ಯಜ್ಞಂ**—ನಮ್ಮ ಯಜ್ಞಭಾಗವನ್ನು | **ಪಿಸ್ಪೃಶಃ**—ಸೇರಿಸು.

|| ಭಾವಾರ್ಥ ||

ಎಲೈ ಅಗ್ನಿಯೇ, ಈ ಯಜ್ಞದಲ್ಲಿ ದೇವತೆಗಳ ಸಾನ್ನಿಧ್ಯವನ್ನು ಅಪೇಕ್ಷಿಸುವ ಈ ಯಜಮಾನನ ಕಲ್ಯಾಣಕ್ಕಾಗಿ ಉತ್ಪನ್ನನಾಗು. ಮರಣಧರ್ಮರಹಿತರೂ, ಯಜ್ಞವರ್ಧಕರೂ ಆದ ದೇವತೆಗಳನ್ನು ಕರೆದುಕೊಂಡು ಬಾ. ಆ ದೇವತೆಗಳಿಗೆ ನಮ್ಮ ಯಜ್ಞವನ್ನು ಅರ್ಪಿಸು.

## English Translation.

Be born, Agni, at the sacrifice, for the welfare of the offerer (of the oblation) to the gods: bring hither the immortal deities, the augmenters of the (sacred) rite: present our sacrifice to the gods.

|| ಸಂಹಿತಾಪಾಠಃ ||

ವಯಮು ತ್ವಾ ಗೃಹಪತೇ ಜನಾನಾಮಗ್ನೇ ಅಕರ್ಮ ಸಮಿಧಾ ಬೃಹಂತಂ|
ಅಸ್ಥೂರಿ ನೋ ಗಾರ್ಹಪತ್ಯಾನಿ ಸಂತು ತಿಗ್ಮೇನ ನಸ್ತೇಜಸಾ ಸಂ ಶಿಶಾಧಿ||೧೯||

|| ಪದಪಾಠಃ ||

ವಯಂ । ಊಂ ಇತಿ । ತ್ವಾ । ಗೃಹऽಪತೇ । ಜನಾನಾಂ । ಅಗ್ನೇ । ಅಕರ್ಮ । ಸಂऽಇಧಾ । ಬೃಹಂತಂ ।
ಅಸ್ಥೂರಿ । ನಃ । ಗಾರ್ಹऽಪತ್ಯಾನಿ । ಸಂತು । ತಿಗ್ಮೇನ । ನಃ । ತೇಜಸಾ । ಸಂ । ಶಿಶಾಧಿ ॥ ೧೯ ॥

|| ಸಾಯಣಭಾಷ್ಯಂ ||

**ಹೇ ಗೃಹಪತೇ ಯಜ್ಞಾನಾಂ ಪಾಲಕಾಗ್ನೇ ಜನಾನಾಂ ಪ್ರಾಣಿನಾಂ ಮಧ್ಯೇ ವಯಮು ವಯಮೇವ ತ್ವಾ ತ್ವಾಂ ಸಮಿಧಾ ಸಮಿಂಧನೇನ ಬೃಹಂತಂ ಮಹಾಂತಮಕರ್ಮ । ಕೃತವಂತಃ ಸ್ಮಃ । ಅತಃ ಕಾರಣಾತ್ ನೋಽಸ್ಮಾಕಂ ಗಾರ್ಹಪತ್ಯಾನಿ ಗೃಹಪತಿತ್ವಾನ್ಯಸ್ಥೂರ್ಯಸ್ಥೂರೀಣಿ । ಏಕಾಶ್ವಯುಕ್ತಃ ಶಕಟಃ ಸ್ಥೂರಿರಿತ್ಯುಚ್ಯತೇ ತದ್ವಿಪರೀತೋ ಬಹುಭಿರಶ್ವೈರುಪೇತಃ ಶಕಟೋಽಸ್ಥೂರಿಃ । ತೇನ ಚ ಸಂಪೂರ್ಣತಾ ಲಕ್ಷ್ಯತೇ । ಅಸ್ಥೂರೀಣಿ ಪುತ್ರಪಶುಧನಾದಿಭಿಃ ಸಂಪೂರ್ಣಾನಿ ಭವಂತು । ಅಪಿ ಚ ನೋಽಸ್ಮಾನ್ ತಿಗ್ಮೇನ ತೀಕ್ಷ್ಣೇನ ತೇಜಸಾ ಸಂ ಶಿಶಾಧಿ । ಸಮ್ಯಜ್ಞಿತ್ಯ । ಸಮ್ಯಕ್ ತೀಕ್ಷ್ಣೀಕುರು । ಸಂಯೋಜಯೇತ್ಯರ್ಥಃ ||**

|| ಪ್ರತಿಪದಾರ್ಥ ||

**ಗೃಹಪತೇ**—ಯಜ್ಞಪಾಲಕನಾದ । **ಅಗ್ನೇ**—ಎಲೈ ಅಗ್ನಿಯೇ । **ಜನಾನಾಂ**—ಪ್ರಾಣಿಗಳ ನಡುವೆ । **ವಯಮು**—ನಾವೇನೇ ! **ತ್ವಾ**—ನಿನ್ನನ್ನು । **ಸಮಿಧಾ**—ಸಮಿತ್ತುಗಳಿಂದ । **ಬೃಹಂತಂ**—ಪ್ರಭೂತವಾಗಿ ಬೆಳೆಯುವಂತೆ । **ಅಕರ್ಮ**—ಮಾಡಿದ್ದೇವೆ । **ನಃ**—ನಮ್ಮ । **ಗಾರ್ಹಪತ್ಯಾನಿ**—ಗೃಹಸ್ವಾಮ್ಯತ್ವವನ್ನು । **ಅಸ್ಥೂರಿ**—ಪುತ್ರಪಶ್ವಾದಿಸಕಲ ಸಂಪದ್ಯುಕ್ತವನ್ನಾಗಿಮಾಡು । **ನಃ**—ನಮ್ಮನ್ನು । **ತಿಗ್ಮೇನ**—ತೀಕ್ಷ್ಣವಾದ **ತೇಜಸಾ**—ಕಾಂತಿಯಿಂದ । **ಸಂ ಶಿಶಾಧಿ**—ತೀಕ್ಷ್ಣವಾಗುವಂತೆ ಮಾಡು (ಶುದ್ಧರನ್ನಾಗಿ ಮಾಡು).

|| ಭಾವಾರ್ಥ ||

ಯಜ್ಞಪಾಲಕನಾದ ಎಲೈ ಅಗ್ನಿಯೇ, ಪ್ರಾಣಿಗಳ ನಡುವೆ ನಾವೇ ನಿನ್ನನ್ನು ಸಮಿತ್ತುಗಳಿಂದ ಪ್ರಭೂತವಾಗಿ ಬೆಳೆಯುವಂತೆ ಮಾಡಿದ್ದೇವೆ. ನಮ್ಮ ಗೃಹದ ಸ್ವಾಮ್ಯತ್ವವನ್ನು ಪುತ್ರಪಶ್ವಾದಿಸಕಲಸಂಪದ್ಯುಕ್ತವಾಗುವಂತೆ ಮಾಡು. ನಮ್ಮನ್ನು ತೀಕ್ಷ್ಣವಾದ ಕಾಂತಿಯಿಂದ ಶುದ್ಧರಾಗಿಯೂ ಪ್ರಚೋದಿತರೂ ಆಗುವಂತೆ ಮಾಡು.

## English Translation.

Lord of the house, Agni, we, amongst men, promote your increase by fuel : may our domestic fires be supplied with all that is essential : enliven us with brilliant radiance.

**ಅಸ್ಥೂರಿ**—ಈ ಶಬ್ದಕ್ಕೆ ಭಾಷ್ಯಕಾರರು—**ಅಸ್ಥೂರಿ ಅಸ್ಥೂರೀಣಿ । ಏಕಾಶ್ವಯುಕ್ತಃ ಶಕಟಃ ಸ್ಥೂರಿರಿತ್ಯುಚ್ಯತೇ । ತದ್ವಿಪರೀತೋ ಬಹುಭಿರಶ್ವೈರುಪೇತಃ ಶಕಟೋಽಸ್ಥೂರಿಃ । ತೇನ ಚ ಸಂಪೂರ್ಣತಾ ಲಕ್ಷ್ಯತೇ । ಅಸ್ಥೂರೀಣಿ ಪುತ್ರಪಶುಧನಾದಿಭಿಃ ಸಂಪೂರ್ಣಾನಿ ಭವಂತು ।** ಎಂದು ಹೇಳಿದ್ದಾರೆ. ಎಂದರೆ ಒಂದು ಕುದುರೆಯನ್ನು ಮಾತ್ರ ಹೂಡಿರುವ ಗಾಡಿಗೆ ಸ್ಥೂರಿಯೆಂದು ಹೆಸರು. ಇಲ್ಲಿ ಅಸ್ಥೂರಿ ಎಂದು ಇರುವುದರಿಂದ

ಅನೇಕ ಕುದುರೆಗಳಿಂದ ಸಹಿತವಾದ ರಥವೆಂಬ ಅರ್ಥವು ಸೂಚಿತವಾಗುವುದು. ಅಂತಹ ರಥವಿದ್ದಮೇಲೆ ಅದಕ್ಕನುಸಾರವಾಗಿ ಪಶುಪುತ್ರಾದಿಗಳು ಇರಲೇಬೇಕು. ಆದುದರಿಂದ ಅನೇಕ ಅಶ್ವಗಳು, ರಥಗಳು, ಪಶುಗಳು ಇತರ ಸಂಪತ್ತು ಇವುಗಳು ನಮಗೆ ದೊರೆಯುವಂತೆ ಮಾಡು ಎಂದು ಅಗ್ನಿಯನ್ನು ಪ್ರಾರ್ಥಿಸಲಾಗಿದೆ.

# ಹದಿನಾರನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ದ್ವಿತೀಯೇಽನುವಾಕೇಽಷ್ಟ ಸೂಕ್ತಾನಿ। ತತ್ರ ತ್ವಮಗ್ನೇ ಯಜ್ಞಾನಾಮಿತ್ಯಷ್ಟಾಚತ್ವಾರಿಂಶದೃಚಂ ಪ್ರಥಮಂ ಸೂಕ್ತಂ ಭರದ್ವಾಜಸ್ಯಾರ್ಷಮಾಗ್ನೇಯಂ। ಆದ್ಯಾ ಷಷ್ಠೀ ಚ ವರ್ಧಮಾನಾ ಗಾಯತ್ರೀ ಷಟ್ಕಸಪ್ತಕಾಷ್ಟಕಾಃ ಸಾ ವರ್ಧಮಾನೇತ್ಯುಕ್ತಲಕ್ಷಣೋಪೇತತ್ವಾತ್ । ಸಪ್ತವಿಂಶ್ಯನುಷ್ಟುಪ್ । ಆ ತೇ ಅಗ್ನೇ ಅಗ್ನಿಂ ದೇವಾಸ ಇತ್ಯೇತೇ ಋಚಾವನುಷ್ಟುಭೌ । ತಯೋಃ ಪೂರ್ವಾ ವೀತೀ ಯೋ ದೇವಮಿತಿ ತ್ರಿಷ್ಟುಪ್ । ಶಿಷ್ಟಾ ದ್ವಾಚತ್ವಾರಿಂಶದೃಚೋ ಗಾಯತ್ರ್ಯಃ । ತಥಾ ಚಾನುಕ್ರಮ್ಯತೇ । ತ್ವಮಗ್ನೇಽಷ್ಟಾ-ಚತ್ವಾರಿಂಶದ್ಗಾಯತ್ರಂ ವರ್ಧಮಾನಾದ್ಯಾ ಷಷ್ಠೀ ಚ ಸಪ್ತವಿಂಶ್ಯನುಷ್ಟುಪ್ ತ್ರಿಷ್ಟುಪ್ಪೂರ್ವೇ ಚಾಂತ್ಯೇ ಇತಿ ॥ ಪ್ರಾತರನುವಾಕಾಶ್ವಿನಶಸ್ತ್ರಯೋರಾಗ್ನೇಯೇ ಕ್ರತೌ ಗಾಯತ್ರೇ ಛಂದಸೀದಂ ಸೂಕ್ತಮುಚ್ಯತೇ । ತತ್ರಾಂತ್ಯಾಸ್ತಿಸ್ರ ಋಚ ಉದ್ಧರ್ತವ್ಯಾಃ । ಸೂತ್ರ್ಯತೇ ಹಿ । ತ್ವಮಗ್ನೇ ಯಜ್ಞಾನಾಮಿತಿ ತಿಸ್ರ ಉತ್ತಮಾ ಉದ್ಧರೇತ್ । ಆ. ೪-೧೩ । ಇತಿ ॥ ವಿಶ್ವಜಿತ್ಯಗ್ನಿಮಾರುತೇ ಬೃಹತ್ಸಾಮ ಯದ್ಯಗ್ನಿಷ್ಟೋಮಸಾಮ ಸ್ಯಾತ್ತದಾನೀಮಾದ್ಯಾಃ ಷಡೃಚಃ ಸ್ತೋತ್ರಿಯಾನುರೂಪಾರ್ಥಾಃ । ಸೂತ್ರಿತಂ ಹಿ । ತ್ವಮಗ್ನೇ ಯಜ್ಞಾ-ನಾಮಿತಿ ಸ್ತೋತ್ರಿಯಾನುರೂಪೌ । ಆ. ೮-೭ । ಇತಿ ॥**

ಅನುವಾದವು—ಆರನೆಯ ಮಂಡಲದ ಎರಡನೆಯ ಅನುವಾಕದಲ್ಲಿ ಎಂಟು ಸೂಕ್ತಗಳಿರುವವು. ಅವುಗಳಲ್ಲಿ **ತ್ವಮಗ್ನೇ ಯಜ್ಞಾನಾಂ** ಎಂಬ ಈ ಸೂಕ್ತವು ಮೊದಲನೆಯದು. ಇದರಲ್ಲಿ ನಲವತ್ತೆಂಟು ಋಕ್ಕುಗಳಿರುವವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು; ಅಗ್ನಿಯು ದೇವತೆಯು; ಈ ಸೂಕ್ತದ ಮೊದಲನೆಯ ಮತ್ತು ಆರನೆಯ ಋಕ್ಕುಗಳು **ವರ್ಧಮಾನಾ ಗಾಯತ್ರೀ** ಎಂಬ ಛಂದಸ್ಸಿನದು. ಈ ವರ್ಧಮಾನಾ ಎಂಬ ಛಂದಸ್ಸಿನಲ್ಲಿ ಮೂರು ಪಾದಗಳಿರುವವು. ಮೊದಲನೆಯ ಪಾದದಲ್ಲಿ ಆರು ಅಕ್ಷರಗಳೂ, ಎರಡನೆಯ ಪಾದದಲ್ಲಿ ಏಳು ಅಕ್ಷರಗಳೂ, ಮೂರನೆಯ ಪಾದದಲ್ಲಿ ಎಂಟು ಅಕ್ಷರಗಳೂ ಇರುವವು ಎಂದು ಈ ಛಂದಸ್ಸಿನ ಲಕ್ಷಣವನ್ನು ಅನುಕ್ರಮಣಿಕೆಯಲ್ಲಿ ಹೇಳಿದೆ. ಈ ಸೂಕ್ತದ ಇಪ್ಪತ್ತೇಳನೆಯ ಋಕ್ಕೂ **ಆ ತೇ ಅಗ್ನೇ, ಅಗ್ನಿಂ ದೇವಾಸಃ** ಎಂಬ ನಲವತ್ತೇಳು ಮತ್ತು ನಲವತ್ತೆಂಟನೆಯ ಋಕ್ಕುಗಳೂ ಅನುಷ್ಟುಪ್‌ಛಂದಸ್ಕವು. **ವೀತೀ ಯೋ ದೇವಂ** ಎಂಬ ನಲವತ್ತಾರನೆಯ ಋಕ್ಕು ತ್ರಿಷ್ಟುಪ್‌ಛಂದಸ್ಕವು. ಉಳಿದ ನಲವತ್ತೆರಡು ಋಕ್ಕುಗಳೂ ಗಾಯತ್ರೀಛಂದಸ್ಕವು. ಅನುಕ್ರಮಣಿಕೆಯಲ್ಲಿ—**ತ್ವಮಗ್ನೇಽಷ್ಟಾಚತ್ವಾರಿಂಶದ್ಗಾಯತ್ರಂ ವರ್ಧಮಾನಾದ್ಯಾ ಷಷ್ಠೀ ಚ ಸಪ್ತವಿಂಶ್ಯನುಷ್ಟುಪ್ ತ್ರಿಷ್ಟುಪ್ಪೂರ್ವೇ ಚಾಂತ್ಯೇ** ಎಂದು ಹೇಳಿರುವುದು. ಪ್ರಾತರನುವಾಕಮಂತ್ರ ಮತ್ತು ಆಶ್ವಿನಶಸ್ತ್ರಮಂತ್ರಪಠನದಲ್ಲಿ ಆಗ್ನೇಯಕ್ರತುಸಂಬಂಧವಾದ ಗಾಯತ್ರೀಛಂದಸ್ಸಿನ ಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು

ಹೇಳಲಾಗಿದೆ. ಆದರೆ ಕೊನೆಯ ಮೂರು ಋಕ್ಕುಗಳನ್ನು ಬಿಟ್ಟುಬಿಡಬೇಕು. ಈ ವಿಷಯವು ಆಶ್ವಲಾಯನ ಶ್ರೌತಸೂತ್ರದ—**ತ್ವಮಗ್ನೇ ಯಜ್ಞಾನಾಮಿತಿ ತಿಸ್ರ ಉತ್ತಮಾಮುದ್ಧರೇತ್** ಎಂಬ ಸೂತ್ರದಿಂದ (ಆ. ೪-೧೩) ವಿವೃತವಾಗಿರುವುದು. ಮತ್ತು **ವಿಶ್ವಜಿತ್** ಎಂಬ ಯಾಗದಲ್ಲಿ ಆಗ್ನಿಮಾರುತಶಸ್ತ್ರಮಂತ್ರಗಳನ್ನು ಪಠಿಸುವಾಗ **ಬೃಹತ್ಸಾಮ** ಮಂತ್ರಕ್ಕಾಗಿ ಅಗ್ನಿಷ್ಟೋಮಸಾಮಮಂತ್ರವನ್ನು ಪಠಿಸುವ ಸಂದರ್ಭದಲ್ಲಿ ಈ ಸೂಕ್ತದ ಮೊದಲಿನ ಆರು ಋಕ್ಕುಗಳನ್ನು ಸ್ತೋತ್ರಿಯಾನುರೂಪಮಂತ್ರಗಳನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ತ್ವಮಗ್ನೇ ಯಜ್ಞಾನಾಮಿತಿ ಸ್ತೋತ್ರಿಯಾನುರೂಪೌ** ಎಂಬ ಸೂತ್ರದಿಂದ (ಆ. ೮-೭) ವಿವೃತವಾಗಿರುವುದು.

## ಸೂಕ್ತ—೧೬

ಮಂಡಲ—೬ ॥ ಅನುವಾಕ—೨ ॥ ಸೂಕ್ತ—೧೬ ॥
ಅಷ್ಟಕ—೪ ॥ ಅಧ್ಯಾಯ—೫ ॥ ವರ್ಗ—೨೧, ೨೨, ೨೩, ೨೪, ೨೫, ೨೬, ೨೭, ೨೮, ೨೯, ೩೦ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೪೮ ॥
॥ ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ॥
॥ ದೇವತಾ—ಅಗ್ನಿಃ ॥
॥ ಛಂದಃ—೧, ೬. ವರ್ಧಮಾನಾ । ೨–೫, ೭–೨೬, ೨೮–೪೫. ಗಾಯತ್ರೀ । ೪೬. ತ್ರಿಷ್ಟುಪ್ । ೨೭, ೪೭, ೪೮. ಅನುಷ್ಟುಪ್ ।

॥ ಸಂಹಿತಾಪಾಠಃ ॥

ತ್ವಮಗ್ನೇ ಯಜ್ಞಾನಾಂ ಹೋತಾ ವಿಶ್ವೇಷಾಂ ಹಿತಃ ।
ದೇವೇಭಿರ್ಮಾನುಷೇ ಜನೇ ॥ ೧ ॥

॥ ಪದಪಾಠಃ ॥

ತ್ವಂ । ಅಗ್ನೇ । ಯಜ್ಞಾನಾಂ । ಹೋತಾ । ವಿಶ್ವೇಷಾಂ । ಹಿತಃ ।
ದೇವೇಭಿಃ । ಮಾನುಷೇ । ಜನೇ ॥ ೧ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಂ ವಿಶ್ವೇಷಾಂ ಸರ್ವೇಷಾಂ ಸಪ್ತಸಂಸ್ಥಾರೂಪೇಣ ಭಿನ್ನಾನಾಂ ಯಜ್ಞಾನಾಂ ಹೋತಾ ಹೋಮನಿಷ್ಪಾದಕೋಽಸಿ । ಯದ್ವಾ । ಯಜ್ಞಾನಾಂ ಸಂಬಂಧೀ ದೇವಾನಾಮಾಹ್ವಾತಾ ಭವಸಿ । ಕುತ ಇತ್ಯತ ಆಹ । ಯಸ್ಮಾತ್ತ್ವಂ ಮಾನುಷೇ ಮನೋಃ ಸಂಬಂಧಿನಿ ಮನುಷ್ಯೇ ಜನೇ ಯಜಮಾನೇ ದೇವೇಭಿರ್ದೇವೈರ್ಹಿತೋ ಹೋತೃತ್ವೇನ ನಿಹಿತೋಽಸಿ ತಸ್ಮಾದಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಯಸ್ಮಾತ್**—ಯಾವ ಕಾರಣದಿಂದ । **ಮಾನುಷೇ**—ಮನುಸಂಬಂಧಿಯಾದವನೂ । **ಜನೇ**—ಯಜಮಾನನೂ ಆದ ಮಾನವನಲ್ಲಿ । **ದೇವೇಭಿಃ**—ದೇವತೆಗಳಿಂದ । **ಹಿತಃ**—ಸ್ಥಾಪಿತನಾಗಿದ್ದೀಯೋ (ಆದುದರಿಂದಲೇ) । **ತ್ವಂ**—ನೀನು । **ವಿಶ್ವೇಷಾಂ**—ಸಮಸ್ತವಾದ । **ಯಜ್ಞಾನಾಂ**—ಯಜ್ಞಗಳಿಗೂ । **ಹೋತಾ**—ನಿಷ್ಪಾದಕನಾಗಿದ್ದೀಯೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಮನುಸಂಬಂಧಿಯಾದ ಈ ಯಜಮಾನನಲ್ಲಿ ದೇವತೆಗಳಿಂದ ಸ್ಥಾಪಿತನಾಗಿದ್ದೀಯೆ. ಆದುದರಿಂದಲೇ ನೀನು ಸಮಸ್ತ ಯಜ್ಞಗಳಿಗೂ ನಿಷ್ಪಾದಕನಾಗಿದ್ದೀಯೆ.

## English Translation.

You, Agni, have been appointed by the gods, the ministrant for men, the descendants of Manu, at all sacrifices.

॥ ವಿಶೇಷವಿಷಯಗಳು ॥

**ಅಗ್ನೇ ತ್ವಂ ವಿಶ್ವೇಷಾಂ ಯಜ್ಞಾನಾಂ ಹೋತಾ—ಹೇ ಅಗ್ನೇ ತ್ವಂ ಸರ್ವೇಷಾಂ ಸಪ್ತಸಂಸ್ಥಾರೂಪೇಣ ಭಿನ್ನಾನಾಂ ಯಜ್ಞಾನಾಂ ಹೋಮನಿಷ್ಪಾದಕೋಽಸಿ ।** ಎಲೈ ಅಗ್ನಿಯೇ, ನೀನು ಸಪ್ತಸಂಸ್ಥಾ ಪ್ರಭೇದಗಳಿಂದ ವಿಧವಿಧವಾದ ಸಮಸ್ತ ಯಜ್ಞಗಳಲ್ಲಿಯೂ ಹೋಮನಿಷ್ಪಾದಕನಾಗಿಯೂ, ದೇವತೆಗಳನ್ನು ಆಹ್ವಾನ ಮಾಡುವ ಹೋತೃವಾಗಿಯೂ ಇದ್ದುಕೊಂಡು ಆ ಯಜ್ಞಗಳನ್ನು ಸಾಂಗವಾಗಿ ನೆರವೇರುವಂತೆ ಮಾಡುವೆ ಎಂದಭಿಪ್ರಾಯವು. ಇಲ್ಲಿ ಸಪ್ತಸಂಸ್ಥೆಗಳೆಂದರೇನು ಎಂಬ ವಿಷಯದಲ್ಲಿ ವಿವರಣೆಯು ಅವಶ್ಯಕವು. ಸೋಮಯಾಗದಲ್ಲಿ ಏಳು ಪ್ರಭೇದಗಳಿವೆ. ಇವುಗಳನ್ನು ಸಪ್ತಸೋಮ ಸಂಸ್ಥೆಗಳೆಂದು ಕರೆಯುವುದು ರೂಢಿಯಾಗಿದೆ. ಆವುಗಳಿಗೆ—

**ಅಗ್ನಿಷ್ಟೋಮ, ಅತ್ಯಗ್ನಿಷ್ಟೋಮ, ಉಕ್ಥ್ಯ, ಷೋಡಶೀ, ಅತಿರಾತ್ರ, ಅಪ್ತೋರ್ಯಾಮ, ವಾಜಪೇಯ** ಎಂದು ಹೆಸರುಗಳು. ಇವುಗಳಲ್ಲಿ ಅಗ್ನಿಷ್ಟೋಮಯಾಗವು ಪ್ರಕೃತಿಸ್ವರೂಪವಾಗಿರುವುದು. ಎಂದರೆ ಈ ಯಾಗವು ಉಳಿದ ಸೋಮಯಾಗಗಳಿಗೆ ಮೂಲಭೂತವಾಗಿರುವುದು (Base) ಇದು ಕೆಲವು ವ್ಯತ್ಯಾಸಗಳನ್ನು ಹೊಂದಿ ಉಳಿದ ಆರು ಸೋಮಯಾಗಗಳಾಗುವವು.

॥ ಸಂಹಿತಾಪಾಠಃ ॥

**ಸ ನೋ ಮಂದ್ರಾಭಿರಧ್ವರೇ ಜಿಹ್ವಾಭಿರ್ಯಜಾ ಮಹಃ ।**
**ಆ ದೇವಾನ್ವಕ್ಷಿ ಯಕ್ಷಿ ಚ ॥ ೨ ॥**

॥ ಪದಪಾಠಃ ॥

ಸಃ । ನಃ । ಮಂದ್ರಾಭಿಃ । ಅಧ್ವರೇ । ಜಿಹ್ವಾಭಿಃ । ಯಜ । ಮಹಃ ।

ಆ । ದೇವಾನ್ । ವಕ್ಷಿ । ಯಕ್ಷಿ । ಚ ॥ ೨ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಸ ತ್ವಂ ನೋಽಸ್ಮಾಕಮಧ್ವರೇ ಯಜ್ಞೇ ಮಂದ್ರಾಭಿರ್ಮದಕರೀಭಿಃ ಸ್ತುತ್ಯಾಭಿರ್ವಾ ಜಿಹ್ವಾಭಿರ್ಜ್ವಾಲಾಭಿರ್ಮಹೋ ಮಹತೋ ದೇವಾನ್ಯಜ । ಹವಿರ್ಭಿಸ್ತರ್ಪಯ । ಕಥಂ ತದಿತ್ಯುಚ್ಯತೇ । ದೇವಾನ್ಯಷ್ಟವ್ಯಾನಿಂದ್ರಾದೀನಾ ವಕ್ಷಿ । ಆವಹ । ತತೋ ಯಕ್ಷಿ ಚ । ಯಜ ಚ । ಹವೀಂಷಿ ತೇಭ್ಯೋ ದೇಹೀತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಸಃ**—ಪ್ರಸಿದ್ಧನಾದ ಅದೇ ನೀನು । **ನಃ**—ನಮ್ಮ । **ಅಧ್ವರೇ**—ಯಜ್ಞದಲ್ಲಿ । **ಮಂದ್ರಾಭಿಃ**—ಸುಖಕಾರಕಗಳಾದ । **ಜಿಹ್ವಾಭಿಃ**—ಜ್ವಾಲೆಗಳೊಡನೆ । **ಮಹಃ**—ಮಹತ್ಸ್ವರೂಪವುಳ್ಳ । **ದೇವಾನ್**—ದೇವತೆಗಳನ್ನು । **ಯಜ**—ಪೂಜಿಸು । **ದೇವಾನ್**—ಆ ದೇವತೆಗಳನ್ನು । **ಆ ವಕ್ಷಿ**—ಕರೆದುಕೊಂಡು ಬಾ । **ಯಕ್ಷಿ ಚ**—ಅವರನ್ನು ಪೂಜಿಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಪ್ರಸಿದ್ಧನಾದ ನೀನು ನಮ್ಮ ಯಜ್ಞದಲ್ಲಿ ಸುಖಕಾರಕಗಳಾದ ನಿನ್ನ ಜ್ವಾಲೆಗಳೊಡನೆ ಮಹತ್ಸ್ವರೂಪವುಳ್ಳ ದೇವತೆಗಳನ್ನು ಪೂಜಿಸು. ಆ ದೇವತೆಗಳನ್ನು ನಮ್ಮಲ್ಲಿಗೆ ಕರೆದುಕೊಂಡು ಬಂದು ಅವರನ್ನು ಪೂಜಿಸು.

## English Translation.

Therefore at our sacrifice offer oblations to the great deities with exhilarating flames : bring hither the gods : offer them worship.

॥ ಸಂಹಿತಾಪಾಠಃ ॥

ವೇತ್ಥಾ ಹಿ ವೇಧೋ ಅಧ್ವನಃ ಪಥಶ್ಚ ದೇವಾಂಜಸಾ ।

ಅಗ್ನೇ ಯಜ್ಞೇಷು ಸುಕ್ರತೋ ॥ ೩ ॥

॥ ಪದಪಾಠಃ ॥

ವೇತ್ಥ । ಹಿ । ವೇಧಃ । ಅಧ್ವನಃ । ಪಥಃ । ಚ । ದೇವ । ಅಂಜಸಾ ।

ಅಗ್ನೇ । ಯಜ್ಞೇಷು । ಸುಕ್ರತೋ ಇತಿ ಸುಽಕ್ರತೋ ॥ ೩ ॥

॥ ಸಾಯಣಭಾಷ್ಯಂ ॥

ಪಾಥಿಕೃತ್ಯಾಮಗ್ನೇಃ ಪಥಿಕೃತೋಽನುವಾಕ್ಯಾ ವೇತ್ಥೇತ್ಯೇಷಾ । ಸೂತ್ರಿತಂ ಚ । ವೇತ್ಥಾ ಹಿ ವೇಧೋ ಅಧ್ವನ ಆ ದೇವಾನಾಮಪಿ ಪಂಥಾಮಗನ್ಮ । ಆ. ೩-೧೦ । ಇತಿ ॥

ಹೇ ವೇಧೋ ವಿಧಾತಃ ಸುಕ್ರತೋ ಶೋಭನಕರ್ಮನ್ದೇವ ದಾನಾದಿಗುಣಯುಕ್ತಾಗ್ನೇ ತ್ವಂ ಯಜ್ಞೇಷು ದರ್ಶಪೂರ್ಣಮಾಸಾದಿಯಾಗೇಷ್ವಧ್ವನೋ ಮಹಾಮಾರ್ಗಾನ್ ಪಥಶ್ಚ ಕ್ಷುದ್ರಮಾರ್ಗಾಂಶ್ಚಾಂಜಸಾರ್ಜವೇನ ವೇತ್ಥ । ಜಾನಾಸಿ । ಹಿ ಯಸ್ಮಾದೇವಂ ತಸ್ಮಾತ್ಕಾರಣಾದ್ಯಜ್ಞಮಾರ್ಗಾದ್ಭ್ರಷ್ಟಂ ಯಜಮಾನಂ ಪುನಸ್ತಂ ಮಾರ್ಗಂ ಪ್ರಾಪಯೇತ್ಯರ್ಥಃ ॥

॥ ಪ್ರತಿಪದಾರ್ಥ ॥

**ವೇಧಃ**—ಸೃಷ್ಟಿಕರ್ತನೂ | **ಸುಕ್ರತೋ**—ಶ್ರೇಷ್ಠವಾದ ಕರ್ಮಕರ್ತನೂ | **ದೇವ**—ದೇವತಾತ್ಮನೂ ಆದ | **ಅಗ್ನೇ**—ಎಲೈ ಅಗ್ನಿಯೇ | **ಯಜ್ಞೇಷು**—ನಮ್ಮ ದರ್ಶಪೂರ್ಣಮಾಸಾದಿ ಯಾಗಗಳಲ್ಲಿ | **ಅಧ್ವನಃ**—ಮಹಾಮಾರ್ಗಗಳನ್ನೂ | **ಪಥಶ್ಚ**—ಸಣ್ಣಮಾರ್ಗಗಳನ್ನೂ | **ಅಂಜಸಾ**—ಸಾಕ್ಷಾದ್ದೃಷ್ಟಿಯಿಂದಲೇ | **ವೇತ್ಥ ಹಿ**—ನೀನು ತಿಳಿಯುತ್ತೀಯಲ್ಲವೇ !

॥ ಭಾವಾರ್ಥ ॥

ಸೃಷ್ಟಿಕರ್ತನೂ, ಶ್ರೇಷ್ಠವಾದ ಕರ್ಮಕರ್ತನೂ, ದೇವತಾತ್ಮನೂ ಆದ ಎಲೈ ಅಗ್ನಿಯೇ ನಮ್ಮ ದರ್ಶಪೂರ್ಣಮಾಸಾದಿ ಯಾಗಗಳಲ್ಲಿ ನೀನು ಮಹಾಮಾರ್ಗಗಳನ್ನೂ, ಸಣ್ಣ ಮಾರ್ಗಗಳನ್ನೂ (ಎಂದರೆ ಯಜ್ಞಮಾಡುವ ಸಮಸ್ತ ವಿಧಾನಗಳನ್ನೂ) ನಿನ್ನ ಸಾಕ್ಷಾದ್ದೃಷ್ಟಿಯಿಂದಲೇ ತಿಳಿದಿದ್ದೀಯಲ್ಲವೇ.

## English Translation.

Agni, doer of great deeds, creator, you know (how to traval over) with speed (great) roads and (little) paths at sacrifices.

॥ ವಿಶೇಷವಿಷಯಗಳು ॥

**ಅಗ್ನಯೇ ಪಥಿಕೃತೇ**—ಎಂದು ಪಥಿಕೃದಗ್ನಿಯನ್ನುದ್ದೇಶಿಸಿ ಮಾಡುವ ಹೋಮದಲ್ಲಿ **ವೇತ್ಥಾ** ಎಂಬ ಈ ಋಕ್ಕನ್ನು ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ವೇತ್ಥಾ ಹಿ ವೇಧೋ ಅಧ್ವನ ಆ ದೇವಾನಾಮಪಿ ಪಂಥಾಮಗನ್ಮ** ಎಂಬ ಸೂತ್ರದಿಂದ (ಆ. ೩-೧೦) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ತ್ವಾಮೀಳೇ ಅಧ ದ್ವಿತಾ ಭರತೋ ವಾಜಿಭಿಃ ಶುನಂ ।
ಈಜೇ ಯಜ್ಞೇಷು ಯಜ್ಞಿಯಂ ॥ ೪ ॥

॥ ಪದಪಾಠಃ ॥

ತ್ವಾಂ । ಈಳೇ । ಅಧ । ದ್ವಿತಾ । ಭರತಃ । ವಾಜಿऽಭಿಃ । ಶುನಂ ।
ಈಜೇ । ಯಜ್ಞೇಷು । ಯಜ್ಞಿಯಂ ॥ ೪ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಾಂ ಭರತೋ ದೌಷ್ಯಂತಿರೇತತ್ಸಂಜ್ಞೋ ರಾಜಾ ವಾಜಿಭಿಃ । ವಾಜೋ ಹವಿರ್ಲಕ್ಷಣಮನ್ನಂ । ತದ್ವದ್ಭಿರ್ಋತ್ವಿಗ್ಭಿಃ ಸಹ ದ್ವಿತಾ ದ್ವಿವಿಧಮಿಷ್ಟಪ್ರಾಪ್ತ್ಯನಿಷ್ಟಪರಿಹಾರರೂಪೇಣ ದ್ವಿಧಾ ಭಿನ್ನಂ ಶುನಂ ಸುಖಮುದ್ದಿಶ್ಯೇಳೇ । ಸ್ತುತವಾನ್ । ಸ್ತುತ್ವಾ ಚ ಯಜ್ಞಿಯಂ ಯಜ್ಞಾರ್ಹಂ ತ್ವಾಂ ಯಜ್ಞೇಷು॥ ತೃತೀಯಾರ್ಥೇ ಸಪ್ತಮೀ ॥ ಯಜ್ಞೈರೀಜೇ । ಇಷ್ಟವಾನ್ । ತಸ್ಮೈ ತ್ವಮುಭಯವಿಧಂ ಸುಖಂ ಪ್ರಾದಾ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ತ್ವಾಂ**—ನಿನ್ನನ್ನುದ್ದೇಶಿಸಿ । **ಭರತಃ**—ದುಷ್ಯಂತಪುತ್ರನಾದ ಭರತನು । **ವಾಜಿಭಿಃ**—ಹವಿಸ್ಸಿನ ರೂಪದ ಅನ್ನಗಳೊಡನೆ । **ದ್ವಿತಾ ಶುನಂ**—ಇಷ್ಟಪ್ರಾಪ್ತಿ ಮತ್ತು ಅನಿಷ್ಟನಿವೃತ್ತಿ ಎಂಬ ಎರಡು ವಿಧವಾದ ಸುಖಗಳಿಗಾಗಿ । **ಈಳೇ**—ಸ್ತುತಿಸಿದ್ದಾನೆ । **ಯಜ್ಞಿಯಂ**—ಯಜ್ಞಾರ್ಹನಾದ ನಿನ್ನನ್ನು । **ಯಜ್ಞೇಷು**—ಯಜ್ಞಗಳಿಂದ । **ಈಜೇ**—ಪೂಜಿಸಿದ್ದಾನೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ದುಷ್ಯಂತಪುತ್ರನಾದ ಭರತನು ಹವಿಸ್ಸಿನ ರೂಪದ ಅನ್ನಗಳೊಡನೆ ಇಷ್ಟಪ್ರಾಪ್ತಿ ಮತ್ತು ಅನಿಷ್ಟನಿವೃತ್ತಿ ಎಂಬ ಎರಡು ವಿಧವಾದ ಸುಖಗಳಿಗಾಗಿ ಸ್ತುತಿಸಿದ್ದಾನೆ. ಯಜ್ಞಾರ್ಹನಾದ ನಿನ್ನನ್ನು ಯಜ್ಞಗಳಿಂದ ಪೂಜಿಸಿದ್ದಾನೆ ಅವನಿಗೆ ಆ ಎರಡು ವಿಧವಾದ ಸುಖಗಳನ್ನೂ ಅನುಗ್ರಹಿಸು.

## English Translation.

Bharata, with the presenters of the oblation, has joyfully praised you in your (two-fold capacity), and has worshiped you, the adorable with sacrifices.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಭರತನೆಂಬ ರಾಜನ ಪ್ರಸ್ತಾಪವಿದೆ, ಇವನು ದುಷ್ಯಂತನ ಪುತ್ರನೆಂದು ಸಾಯಣರು ಹೇಳಿದ್ದಾರೆ. ಭರತನೆಂಬ ರಾಜನು ಋಗ್ವೇದಕಾಲದಲ್ಲಿ ಅತಿ ಪ್ರಬಲರಾಗಿದ್ದ ಭರತರೆಂಬ ಆರ್ಯಜನಾಂಗದ ಜನರಿಗೆ ರಾಜನಾಗಿದ್ದನೆಂದು ತಿಳಿಯಬರುವುದು. ಪ್ರಾಯಶಃ ಈ ರಾಜನಿಂದಲೇ ಆ ಜನಾಂಗದವರಿಗೆ ಆ ಹೆಸರು ಬಂದಿರಬಹುದು. ವಿಶ್ವಾಮಿತ್ರ ಋಷಿಯು ಈ ರಾಜನಿಗೆ ಅಥವಾ ಇವನ ಸಂತತಿಯವರಿಗೆ ಪುರೋಹಿತನಾಗಿದ್ದನೆಂದೂ ಈ ಭರತ ಜನಾಂಗದವರಲ್ಲಿ ವಿಶ್ವಾಮಿತ್ರನಿಗೆ ಬಹಳ ಸ್ನೇಹವಿಶ್ವಾಸಗಳಿದ್ದವೆಂದೂ ತಿಳಿಯಬರುತ್ತದೆ. ಋ. ಸಂ. ೩-೩೩-೧೧, ೧೨ ನೆಯ ಋಕ್ಕುಗಳಲ್ಲಿ ವಿಪಾಟ್ಛುತುದ್ರಿ ನದಿಗಳನ್ನು ಸ್ತುತಿಸುವಾಗ ಭರತಕುಲದ ರಾಜರು ಅಥವಾ ಅವರ ಅನುವರ್ತಿಗಳು ನದಿಯನ್ನು ದಾಟಲನುಕೂಲವಾಗುವಂತೆ ತಮ್ಮ ನೀರನ್ನು ಕಡಿಮೆಮಾಡಿಕೊಳ್ಳಬೇಕೆಂದು ಆ ನದಿಗಳನ್ನು ಪ್ರಾರ್ಥಿಸಿದ್ದಾನೆ. ಭರತಜನಾಂಗದ ವಿವರಣೆಯೂ, ಇವರೊಡನೆ ಭರದ್ವಾಜಋಷಿಗಿರುವ ಸಂಬಂಧವೂ ವಿಸ್ತಾರವಾಗಿರುವುದರಿಂದ ಅದನ್ನು ಮುಂದೆ ವಿವರಿಸಲಾಗುವುದು. ಆದರೆ ಈ ಭರತರಾಜನು ದುಷ್ಯಂತನ ಪುತ್ರನೆಂದು ಭಾಷ್ಯಕಾರರು ಹೇಳಿರುವುದಕ್ಕೆ ಐತರೇಯ ಬ್ರಾಹ್ಮಣದಲ್ಲಿ ಸಮರ್ಥನೆ ಇದೆ. ಇಂದ್ರನ ಮಹಾಭಿಷೇಕಸಂದರ್ಭದಲ್ಲಿ ಪ್ರಸಿದ್ಧರಾದ ಅನೇಕ ರಾಜರುಗಳ ರಾಜ್ಯಾಭಿಷೇಕ ವರ್ಣನೆಗಳೂ ಇವೆ. ಅವುಗಳಲ್ಲಿ ದುಷ್ಯಂತಪುತ್ರನಾದ ಭರತನೆಂಬ ರಾಜನ ರಾಜ್ಯಾಭಿಷೇಕ ವರ್ಣನೆಯೂ ಇದೆ. ಅದನ್ನೇ ಇಲ್ಲಿ ವಿವರಿಸುವೆವು.

**ಏತೇನ ಹ ವಾ ಐಂದ್ರೇಣ ಮಹಾಭಿಷೇಕೇಣ ದೀರ್ಘತಮಾ ಮಾಮತೇಯೋ ಭರತಂ ದೌಷ್ಷಂ-ತಿಮಭಿಷಿಷೇಚ ತಸ್ಮಾದು ಭರತೋ ದೌಷ್ಷಂತಿಃ ಸಮಂತಂ ಸರ್ವತಃ ಪೃಥಿವೀಂ ಜಯನ್ಪರೀ-ಯಾಯಾಶ್ವೈರು ಚ ಮೇಧ್ಯೈರೀಜೇ ॥**

(ಐ. ಬ್ರಾ. ೩೯-೨೩)

ಇಂದ್ರನ ಮಹಾಭಿಷೇಕ ವರ್ಣನೆಯನ್ನೂ ಅದನ್ನು ದೇವತೆಗಳು ನೆರವೇರಿಸಿದ ಕ್ರಮವನ್ನು ಹಿಂದೆಯೇ ಹೇಳಲಾಗಿದೆಯಷ್ಟೆ. ಆ ಕ್ರಮವನ್ನನುಸರಿಸಿ ಅಭಿಷಿಕ್ತರಾದ ರಾಜರುಗಳಲ್ಲಿ ದುಷ್ಷಂತಪುತ್ರನಾದ ಭರತನೆಂಬ ರಾಜನೂ ಒಬ್ಬನು. ಮಮತಾ ಎಂಬ ಸ್ತ್ರೀಯ ಪುತ್ರನಾದ ದೀರ್ಘತಮಾಃ ಎಂಬ ಪ್ರಸಿದ್ಧನಾದ ಋಷಿಯು ಈ ಭರತರಾಜನ ಪಟ್ಟಾಭಿಷೇಕ ವಿಧಿಗಳನ್ನು ನೆರವೇರಿಸಿದನು. ಅನಂತರ ಭರತನು ದಿಗ್ವಿಜಯಕ್ಕಾಗಿ ಹೊರಟು ಭೂಮಂಡಲದಲ್ಲಿ ಸಂಚರಿಸಿ ನಾನಾ ದೇಶಗಳನ್ನು ಜಯಿಸಿ ಉತ್ತಮವೂ, ಯಜ್ಞಾರ್ಹವೂ ಆದ ಅಶ್ವಗಳಿಂದ ಅಶ್ವಮೇಧಯಾಗವನ್ನು ಮಾಡಿದನು.

**ತದಪ್ಯೇತೇ ಶ್ಲೋಕಾ ಅಭಿಗೀತಾಃ ।**

ಈ ಭರತಾಭಿಷೇಕದ ಮಹತ್ವವನ್ನು ತಿಳಿಸುವುದಕ್ಕಾಗಿ ಐದು ಶ್ಲೋಕಗಳನ್ನು ಪಠಿಸುವರು. ಅವುಗಳ ವಿವರಣೆಯು ಈ ರೀತಿ ಇದೆ—

**ಹಿರಣ್ಯೇನ ಪರೀವೃತಾನ್ಕೃಷ್ಣಾನ್ ಶುಕ್ಲದತೋ ಮೃಗಾನ್ ।**
**ಮಷ್ಣಾರೇ ಭರತೋಽದದಾಚ್ಛತಂ ಬದ್ಧಾನಿ ಸಪ್ತ ಚ ॥ ೧ ॥**

ಈ ಭರತನೆಂಬ ರಾಜನು ಪಟ್ಟಾಭಿಷೇಕಕಾಲದಲ್ಲಿ ಮಷ್ಣಾರವೆಂಬ ದೇಶದಲ್ಲಿ ಕಪ್ಪುಬಣ್ಣದ್ದೂ, ಬೆಳ್ಳಗಿರುವ ಕೊಂಬುಗಳುಳ್ಳದ್ದೂ ಸುವರ್ಣಾಭರಣಗಳಿಂದ ಅಲಂಕೃತವಾದದ್ದೂ ಆದ ಒಂದುನೂರು ಏಳು ಆನೆಗಳ ಹಿಂಡನ್ನು ದಾನ ಮಾಡಿದನು.

ಭರತಸ್ಯೈಷ ದೌಷ್ಷಂತೇರಗ್ನಿಃ ಸಾಚೀಗುಣೇ ಚಿತಃ ।
ಯಸ್ಮಿನ್ಸಹಸ್ರಂ ಬ್ರಾಹ್ಮಣಾ ಬದ್ವಶೋ ಗಾ ವಿಭೇಜಿರೇ ॥ ೨ ॥

ದುಷ್ಷಂತಪುತ್ರನಾದ ಈ ಭರತರಾಜನು ಸಾಚೀಗುಣವೆಂಬ ದೇಶದಲ್ಲಿ ಅಗ್ನಿಚಯನವೆಂಬ ಯಜ್ಞಕರ್ಮವನ್ನು ನೆರವೇರಿಸಿದಾಗ ಸಾವಿರಾರು ಗೋವುಗಳನ್ನು ಬ್ರಾಹ್ಮಣರಿಗೆ ದಾನಮಾಡಿ ಹಂಚಿಕೊಟ್ಟನು.

ಅಷ್ಟಾಸಪ್ತತಿಂ ಭರತೋ ದೌಷ್ಷಂತಿರ್ಯಮುನಾಮನು ।
ಗಂಗಾಯಾಂ ವೃತ್ರಘ್ನೇಽಬಧ್ನಾತ್ಪಂಚಪಂಚಾಶತಂ ಹಯಾನ್ ॥ ೩ ॥

ದುಷ್ಷಂತಪುತ್ರನಾದ ಈ ಭರತರಾಜನು ಇಂದ್ರನನ್ನುದ್ದೇಶಿಸಿ ಅಶ್ವಮೇಧಯಾಗ ಮಾಡುವುದಕ್ಕಾಗಿ ಯಮುನಾ ನದೀ ತೀರದಲ್ಲಿ ಯಜ್ಞಾರ್ಹವಾದ ಎಪ್ಪತ್ತೆಂಟು ಉತ್ತಮಾಶ್ವಗಳನ್ನೂ, ಗಂಗಾನದಿಯ ತೀರದಲ್ಲಿ ವೃತ್ರಘ್ನವೆಂಬ ದೇಶದಲ್ಲಿ ಐವತ್ತೈದು ಅಶ್ವಗಳನ್ನೂ ಕಟ್ಟಿ ಸಿದ್ಧಪಡಿಸಿದ್ದನು. (ಎಂದರೆ ಅಶ್ವಮೇಧಯಾಗವನ್ನು ಮಾಡಿದನು)

ತ್ರಯಸ್ತ್ರಿಂಶಚ್ಛತಂ ರಾಜಾಶ್ವಾನ್ ಬಧ್ವಾಯಂ ಮೇಧ್ಯಾನ್ ।
ದೌಷ್ಷಂತಿರತ್ಯಗಾದ್ರಾಜ್ಞೋ ಮಾಯಾಂ ಮಾಯವತ್ತರಃ ॥ ೪ ॥

ದುಷ್ಷಂತಪುತ್ರನಾದ ಈ ರಾಜನು ಗಂಗಾ ಯುಮುನಾತೀರಗಳಲ್ಲಿ ಒಟ್ಟು ನೂರಮೂವತ್ತು ಮೂರು ಯಜ್ಞಾರ್ಹವಾದ ಅಶ್ವಗಳನ್ನು ಯಜ್ಞಕ್ಕಾಗಿ ಕಟ್ಟಿ ಸಿದ್ಧಪಡಿಸಿದ್ದನೆಂದು ಹಿಂದೆಯೇ ಹೇಳಿದೆಯಷ್ಟೆ. ಆರೀತಿ ಯಜ್ಞಾರ್ಥವಾಗಿ ಅಶ್ವಗಳನ್ನು ಸಿದ್ಧಪಡಿಸಿದನಂತರ ಈ ರಾಜನು ತನ್ನ ಶತ್ರುರಾಜರುಗಳನ್ನು ನಾನಾ ಉಪಾಯಗಳಿಂದಲೂ, ಶಕ್ತಿಸಾಮರ್ಥ್ಯಗಳಿಂದಲೂ ಜಯಿಸಿದನು.

ಮಹಾಕರ್ಮ ಭರತಸ್ಯ ನ ಪೂರ್ವೇ ನಾಪರೇ ಜನಾಃ ।
ದಿವಂ ಮರ್ತ್ಯ ಇವ ಹಸ್ತಾಭ್ಯಾಂ ನೋದಾಪುಃ ಪಂಚ ಮಾನವಾ ಇತಿ ॥
(ಐ. ಬ್ರಾ. ೩೯-೨೩)

ಇಂತಹ ಮಹಾಕಾರ್ಯವನ್ನು ಭರತವಂಶದವರಲ್ಲಿ ಹಿಂದೆ ಯಾರೂ ಮಾಡಿರಲಿಲ್ಲ. ಮುಂದೆ ಮಾಡುವುದೂ ಇಲ್ಲ. ಬ್ರಾಹ್ಮಣಾದಿ ಪಂಚಜನರಲ್ಲಿ ಮನುಷ್ಯನಾದವನು ಸ್ವರ್ಗಲೋಕವನ್ನು ತನ್ನ ಕೈಗಳಿಂದ ಮುಟ್ಟಲು ಹೇಗೆ ಸಾಧ್ಯವಿಲ್ಲವೋ ಹಾಗೆ ಭರತರಾಜನು ನೆರವೇರಿಸಿದ ಇಂತಹ ಅಗಾಧಕರ್ಮವನ್ನು ಯಾರೂ ಮಾಡಲಾರರು.

ಇವೆಲ್ಲವೂ ಭರತನ ಗುಣಪ್ರಶಂಸೆಯು. ಚಾರಿತ್ರಿಕಸಂಬಂಧವಾದ ಈ ರಾಜನ ವಿಷಯವಿಮರ್ಶೆಯನ್ನು ಮುಂದೆ ಮಾಡುವೆವು.

॥ ಸಂಹಿತಾಪಾಠಃ ॥

ತ್ವಮಿಮಾ ವಾರ್ಯಾ ಪುರು ದಿವೋದಾಸಾಯ ಸುನ್ವತೇ ।
ಭರದ್ವಾಜಾಯ ದಾಶುಷೇ ॥ ೫ ॥

॥ ಪದಪಾಠಃ ॥

ತ್ವಂ । ಇಮಾ । ವಾರ್ಯಾ । ಪುರು । ದಿವಃऽದಾಸಾಯ । ಸುನ್ವತೇ ।

ಭರತ್ऽವಾಜಾಯ । ದಾಶುಷೇ ॥ ೫ ॥

॥ ಸಾಯಣಭಾಷ್ಯಂ ॥

**ಹೇ ಅಗ್ನೇ ತ್ವಮಿಮಾ ಇಮಾನಿ ದೃಶ್ಯಮಾನಾನಿ ಪುರು ಪುರೂಣಿ ಬಹೂನಿ ವಾರ್ಯಾ ವಾರ್ಯಾಣಿ ವರಣೀಯಾನಿ ಸಂಭಜನೀಯಾನಿ ಧನಾನಿ ದಿವೋದಾಸಾಯ ಸುನ್ವತೇ । ಉಪ್ರೋಪಮಮೇತತ್ । ಯಥಾ ಸೋಮಾಭಿಷವಂ ಕುರ್ವತೇ ದಿವೋದಾಸಾಖ್ಯಾಯ ರಾಜ್ಞೇ ಪ್ರಾದಾಸ್ತಥಾ ದಾಶುಷೇ ಹವೀಂಷಿ ದತ್ತವತೇ ಭರದ್ವಾಜಾಯ ಋಷಯೇ ದೇಹೀತಿ ಶೇಷಃ ॥**

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ತ್ವಂ**—ನೀನು । **ಇಮಾ**—ಇಲ್ಲಿ ಪ್ರಸಿದ್ಧವಾದವೂ । **ಪುರು**—ಅತ್ಯಧಿಕವಾದವೂ । **ವಾರ್ಯಾ**—ಎಲ್ಲರ ಆದರಣೆಗೆ ಪಾತ್ರವಾದವೂ ಆದ ಧನಗಳನ್ನು । **ಸುನ್ವತೇ**—ಸೋಮರಸವನ್ನು ಹಿಂಡಿ ಅರ್ಪಿಸುವ । **ದಿವೋದಾಸಾಯ**-ದಿವೋದಾಸನಿಗೆ (ಕೊಟ್ಟಿರುವಂತೆಯೇ)। **ದಾಶುಷೇ**—ಹವಿಸ್ಸನ್ನರ್ಪಿಸುವ । **ಭರದ್ವಾಜಾಯ**-ಭರದ್ವಾಜನಾದ ನನಗೂ ಸಹ (ಕೊಟ್ಟು ಅನುಗ್ರಹಿಸು).

॥ ಭಾವಾರ್ಥ ॥

ಎಲೈ ಅಗ್ನಿಯೇ, ಇಲ್ಲಿ ಪ್ರಸಿದ್ಧವಾದವೂ, ಅತ್ಯಧಿಕವಾದವೂ ಎಲ್ಲರ ಆದರಣೆಗೂ ಪಾತ್ರವಾದವೂ ಆದ ಧನಗಳನ್ನು ಸೋಮರಸವನ್ನು ಹಿಂಡಿ ಅರ್ಪಿಸಿದ ದಿವೋದಾಸನಿಗೆ ಕೊಟ್ಟಿರುವಂತೆಯೇ, ಹವಿಸ್ಸನ್ನರ್ಪಿಸುವ ನನಗೂ ಸಹ ಕೊಟ್ಟು ಅನುಗ್ರಹಿಸು.

## English Translation.

As you have conferred these many blessings upon Divodasa when presenting libations, (so now grant them) to the actual offerer, Bharadwaja.

॥ ವಿಶೇಷವಿಷಯಗಳು ॥

**ದಿವೋದಾಸಾಯ**—ದಿವೋದಾಸ ಅಥವಾ ದಿವೋದಾಸ ಅತಿಥಿಗ್ವ ಎಂಬ ಹೆಸರಿನ ರಾಜನು ವೇದಗಳ ಕಾಲದಲ್ಲಿ ಬಹಳ ಪ್ರಸಿದ್ಧಿಯಾಗಿದ್ದ ಒಬ್ಬ ರಾಜನು ಇವನು ವಧ್ರ್ಯಶ್ವ ಎಂಬುವನ ಪುತ್ರನು ಮತ್ತು ಸುದಾಸನೆಂಬುವನಿಗೆ ತಂದೆಯು. ಈ ಸುದಾಸನು ಭರತಜನಾಂಗದಲ್ಲಿ ತ್ರಿತ್ಸು ಎಂಬ ವಂಶದ ರಾಜರಲ್ಲಿ ಪ್ರಸಿದ್ಧನಾದವನು. ಆದುದರಿಂದ ದಿವೋದಾಸನೂ ಸಹ ಭರತನೆಂದೂ (ಋ. ಸಂ. ೬-೧೬-೪, ೫, ೧೯) ಸುದಾಸನಂತೆ ಇವನೂ ಸಹ ತುರ್ವಶರಿಗೂ, ಯದುಗಳಿಗೂ ಪ್ರತಿಕಕ್ಷಿಯಾದ ಶತ್ರುರಾಜನಾಗಿದ್ದನೆಂದೂ ಋ. ಸಂ ೭-೧೯-೮ ಮೊದಲಾದ ಸ್ಥಳಗಳಲ್ಲಿ ಹೇಳಿದೆ. ಇವನ ಮುಖ್ಯ ಶತ್ರುವೆಂದರೆ ಶಂಬರನೆಂಬ ಅಸುರನು, ಅಥವಾ ದಾಸನು. ಈ ಶಂಬರನು ಬೆಟ್ಟಗುಡ್ಡಗಳಲ್ಲಿ ವಾಸಿಸುತ್ತಿದ್ದ ಈ ದೇಶದ ಪೂರ್ವನಿವಾಸಿಗಳ ಮುಖ್ಯಸ್ಥನೆಂದೂ (ಋ. ಸಂ. ೧-೧೩೦-೭;

೨-೧೨-೧೧; ೬-೨೬-೫; ೭-೧೮-೨೦) ಇವನನ್ನು ದಿವೋದಾಸನು ಅನೇಕಾವರ್ತಿ ಸೋಲಿಸಿದನೆಂದೂ ಋ. ಸಂ. ೧-೧೧೨-೧೪; ೧-೧೧೬-೧೮; ೧-೧೧೯-೪; ೧-೧೩೦-೭ ರಿಂದ ೧೦; ೨-೧೯-೬; ೪-೨೬-೩; ೪-೩೦-೨೦; ೬-೨೬-೩; ೬-೨೬-೫; ೬-೪೩-೧; ೬-೪೭-೨೧, ೨೨; ೯-೬೧-೨ ಎಂಬ ಋಕ್ಕುಗಳಲ್ಲಿ ವರ್ಣಿತವಾಗಿದೆ. ಮತ್ತು ಋ. ಸಂ. ೧-೧೧೯-೪ ರಲ್ಲಿ ಈ ದಿವೋದಾಸನೆಂಬ ರಾಜನು ಯಜ್ಞವನ್ನು ಮಾಡಲು ಉಪಕ್ರಮಿಸಿದಾಗ ಶಂಬರನೆಂಬ ರಾಕ್ಷಸನಿಂದ ಅವನ ಯಜ್ಞವು ನಷ್ಟವಾಗಿ ಅವನಿಗೂ ಅಪಾಯವು ಉಂಟಾಗುವುದನ್ನು ತಿಳಿದು ಅಶ್ವಿನೀ ದೇವತೆಗಳು ಶಂಬರಾಸುರನನ್ನು ಕೊಂದು ದಿವೋದಾಸನನ್ನು ರಕ್ಷಿಸಿದರು ಎಂದು ವರ್ಣನೆ ಇದೆ. ಇವನು ಅಗ್ನಿಯನ್ನು ವಿಶೇಷವಾಗಿ ಆರಾಧಿಸುತ್ತಿದ್ದುದರಿಂದ ಋ. ಸಂ. ೮-೧೦೩-೨ ಎಂಬ ಋಕ್ಕಿನಲ್ಲಿ ಅಗ್ನಿಯನ್ನು ಇವನ ಹೆಸರಿನಿಂದಲೇ ಕರೆದಿರುವುದು ಕಂಡುಬರುವುದು. ಋ ಸಂ. ೬-೬೧-೧ ಎಂಬ ಋಕ್ಕಿನಲ್ಲಿಯೂ ಅದರ ಮುಂದಿನ ಕೆಲವು ಋಕ್ಕುಗಳಲ್ಲಿಯೂ ಈ ದಿವೋದಾಸನು ಪಣಿಗಳು, ಪಾರಾವತರು, ಬೃಸಯರು ಎಂಬುವನೊಡನೆ ಸರಸ್ವತೀನದೀತೀರದಲ್ಲಿ ಯುದ್ಧಮಾಡಿದ ವರ್ಣನೆ ಇರುವುದು. ಋ. ಸಂ. ೧-೧೧೨-೧೩, ೧೪; ೧-೧೧೬-೧೮; ೬-೧೬-೫; ೬-೩೧-೪ ಮೊದಲಾದ ಸ್ಥಳಗಳಲ್ಲಿ ಇವನ ಹೆಸರು ಭರದ್ವಾಜಋಷಿಯ ಅಥವಾ ಆ ಋಷಿಯ ವಂಶಸ್ಥರ ಹೆಸರಿನ ಜತೆಯಲ್ಲಿ ಪಠಿತವಾಗಿರುವುದು ಕಂಡುಬರುವುದು. ಋ. ಸಂ. ೧-೧೩೦-೧೦ ರಲ್ಲಿ ದಿವೋದಾಸನ ವಂಶಸ್ಥರೆಂದು ಅಥವಾ ಅವನ ಪ್ರಜೆಗಳೆಂದು ಸೂಚಿಸುವ **ದಿವೋದಾಸೇಭಿಃ** ಎಂಬ ಬಹುವಚನಶಬ್ದದ ಪ್ರಯೋಗವಿರುವುದು. ದಿವೋದಾಸನ ಹೆಸರು ೩, ೫, ೮, ೧೦ ನೆಯ ಮಂಡಲಗಳಲ್ಲಿ ಕಂಡುಬರುವುದಿಲ್ಲ.

॥ ಸಂಹಿತಾಪಾಠಃ ॥

ತ್ವಂ ದೂತೋ ಅಮರ್ತ್ಯ ಆ ವಹಾ ದೈವ್ಯಂ ಜನಂ ।
ಶೃಣ್ವನ್ವಿಪ್ರಸ್ಯ ಸುಷ್ಟುತಿಂ ॥ ೬ ॥

॥ ಪದಪಾಠಃ ॥

ತ್ವಂ । ದೂತಃ । ಅಮರ್ತ್ಯಃ । ಆ । ವಹ । ದೈವ್ಯಂ । ಜನಂ ।
ಶೃಣ್ವನ್ । ವಿಪ್ರಸ್ಯ । ಸುಽಸ್ತುತಿಂ ॥ ೬ ॥

॥ ಸಾಯಣಭಾಷ್ಯಂ ॥

**ಅಮರ್ತ್ಯಾಽಮರಣಧರ್ಮಾಸ್ತ್ವಂ ದೂತೋ ಭೂತ್ವಾ ದೈವ್ಯಂ ದೇವಸಂಬಂಧಿನಂ ಜನಮಾವಹ । ಅಸ್ಮದ್ಯಜ್ಞ ಆನಯ । ಕಿಂ ಕುರ್ವನ್ । ವಿಪ್ರಸ್ಯ ಮೇಧಾವಿನೋ ಭರದ್ವಾಜಸ್ಯ ಸುಷ್ಟುತಿಂ ಶೋಭನಾಂ ಸ್ತುತಿಂ ಶೃಣ್ವನ್ ॥**

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಅಮರ್ತ್ಯಃ**—ಮರಣಧರ್ಮರಹಿತನಾದ | **ತ್ವಂ**—ನೀನು | **ದೂತಃ**—ದೇವದೂತನಾಗಿದ್ದು | **ವಿಪ್ರಸ್ಯ**—ಮೇಧಾವಿಯಾದ ಭರದ್ವಾಜನ | **ಸುಷ್ಟುತಿಂ**—ಶ್ರೇಷ್ಠವಾದ ಸ್ತುತಿಯನ್ನು | **ಶೃಣ್ವನ್**—ಕೇಳುತ್ತಾ | **ದೈವ್ಯಂ**—ದೇವಸಂಬಂಧಿಗಳಾದ | **ಜನಂ**—ಜನರನ್ನು ಎಂದರೆ ದೇವತೆಗಳನ್ನು | **ಆ ವಹ**—ಕರೆದುಕೊಂಡು ಬಾ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಮರಣಧರ್ಮರಹಿತನಾದ ನೀನು ದೇವದೂತನಾಗಿದ್ದು ಮೇಧಾವಿಯಾದ ಭರದ್ವಾಜನ ಶ್ರೇಷ್ಠವಾದ ಸ್ತುತಿಯನ್ನು ಕೇಳುತ್ತಾಯಜ್ಞಾರ್ಹರಾದ ದೇವತೆಗಳನ್ನು ಕರೆದುಕೊಂಡು ಬಾ.

## English Translation.

Hearing the adoration of the sage, you, who are the immorta messenger, bring hither the celestial people.

॥ ಸಂಹಿತಾಪಾಠಃ ॥

ತ್ವಾಮಗ್ನೇ ಸ್ವಾಧ್ಯೋ೩ ಮರ್ತಾಸೋ ದೇವವೀತಯೇ ।
ಯಜ್ಞೇಷು ದೇವಮೀಳತೇ ॥ ೭ ॥

॥ ಪದಪಾಠಃ ॥

ತ್ವಾಂ । ಅಗ್ನೇ । ಸುಽಆಧ್ಯಃ । ಮರ್ತಾಸಃ । ದೇವಽವೀತಯೇ ।
ಯಜ್ಞೇಷು । ದೇವಂ । ಈಳತೇ ॥ ೭ ॥

॥ ಸಾಯಣಭಾಷ್ಯಂ ॥

**ಹೇ ಅಗ್ನೇ ದೇವಂ ದ್ಯೋತಮಾನಂ ತ್ವಾಂ ಸ್ವಾಧ್ಯಃ ಶೋಭನಾಧ್ಯಾನಾ ಮರ್ತಾಸೋ ಮನುಷ್ಯಾ ದೇವವೀತಯೇ ದೇವಾನಾಂ ತರ್ಪಣಾರ್ಥಂ ಯಜ್ಞೇಷ್ವೀಳತೇ । ಸ್ತುವಂತಿ ಯಾಚಂತೇ ವಾ ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ | **ದೇವಂ**—ಪ್ರಕಾಶಮಾನನಾದ | **ತ್ವಾಂ**—ನಿನ್ನನ್ನುದ್ದೇಶಿಸಿ | **ಸ್ವಾಧ್ಯಃ**—ಉತ್ತಮವಾದ ಸ್ತುತಿಯನ್ನು ಪಠಿಸುವ | **ಮರ್ತಾಸಃ**—ಮಾನವರು | **ಯಜ್ಞೇಷು**—ಯಜ್ಞಗಳಲ್ಲಿ | **ದೇವವೀತಯೇ**—ದೇವತೆಗಳನ್ನು ತೃಪ್ತಿಪಡಿಸಲು | **ಈಳತೇ**—ಸ್ತುತಿಸುತ್ತಾರೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಪ್ರಕಾಶಮಾನನಾದ ನಿನ್ನನ್ನು ಉತ್ತಮವಾದ ಸ್ತುತಿಗಳಿಂದ ಸ್ತುತಿಸುವ ಮಾನವರು ಯಜ್ಞಗಳಲ್ಲಿ ದೇವತೆಗಳನ್ನು ತೃಪ್ತಿಪಡಿಸಲು ಸ್ತುತಿಸುತ್ತಾರೆ.

English Translation.

Pious mortals invoke you, divine Agni, at sacrifiees to convey their (sacrificial) food to the gods.

॥ ಸಂಹಿತಾಪಾಠಃ ॥

ತವ ಪ್ರ ಯಕ್ಷಿ ಸಂದೃಶಮುತ ಕ್ರತುಂ ಸುದಾನವಃ ।
ವಿಶ್ವೇ ಜುಷಂತ ಕಾಮಿನಃ ॥ ೮ ॥

॥ ಪದಪಾಠಃ ॥

ತವ । ಪ್ರ । ಯಕ್ಷಿ । ಸಂಽದೃಶಂ । ಉತ । ಕ್ರತುಂ । ಸುಽದಾನವಃ ।
ವಿಶ್ವೇ । ಜುಷಂತ । ಕಾಮಿನಃ ॥ ೮ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತವ ಸಂದೃಶಂ ಸಮ್ಯಗ್ದರ್ಶನೀಯಂ ಯದ್ವಾ ಸಮ್ಯಗ್ದ್ರಷ್ಟಾರಂ ಸರ್ವಸ್ಯ ಭಾಸಕಂ ತೇಜಃ ಪ್ರ ಯಕ್ಷಿ । ಪ್ರಯಜೇ । ಪ್ರಕರ್ಷೇಣ ಪೂಜಯಾಮಿ । ಉತಾಪಿ ಚ ಸುದಾನವಃ ಸುದಾನೋಃ ಶೋಭನದಾನಸ್ಯ ತವ ಕ್ರತುಂ ಕರ್ಮ ಪ್ರಜ್ಞಾನಂ ವಾ ಪೂಜಯಾಮಿ। ನ ಕೇವಲಮಹಮೇವ ಕಿಂತ್ವನ್ಯೇ ವಿಶ್ವೇ ಸರ್ವೇಽಪಿ ಯಜಮಾನಾಃ ಕಾಮಿನಸ್ತ್ವದನುಗ್ರಹಾತ್ತೈಸ್ತೈಃ ಕಾಮ್ಯೈರುಪೇತಾಃ ಸಂತೋ ಜುಷಂತ । ತ್ವದೀಯಂ ಸಂದೃಶಂ ಕ್ರತುಂ ಚ ಸೇವಂತೇ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ತವ**—ನಿನ್ನ । **ಸಂದೃಶಂ**—ಆಕರ್ಷಕವಾದ ಅಥವಾ ಎಲ್ಲವನ್ನೂ ಪ್ರಕಾಶಪಡಿಸುವ ತೇಜಸ್ಸನ್ನು । **ಪ್ರ ಯಕ್ಷಿ**—ಚೆನ್ನಾಗಿ ಪೂಜಿಸುತ್ತೇನೆ । **ಉತ**—ಮತ್ತು । **ಸುದಾನವಃ**—ಉತ್ಕೃಷ್ಟವಾದ ಧನಾದಿಗಳನ್ನು ಕೊಡುವ ನಿನ್ನ । **ಕ್ರತುಂ**—ಕರ್ಮವನ್ನು ಅಥವಾ ಪ್ರಜ್ಞಾನವನ್ನು । **ವಿಶ್ವೇ**—ಸಮಸ್ತ ಯಜಮಾನರೂ । **ಕಾಮಿನಃ**—ನಿನ್ನ ಅನುಗ್ರಹದಿಂದ ತಮ್ಮ ತಮ್ಮ ಇಷ್ಟಾರ್ಥಗಳನ್ನು ಪಡೆದವರಾಗಿ । **ಜುಷಂತ**—ಪ್ರಶಂಸೆಮಾಡುತ್ತಾರೆ.

॥ ಪ್ರತಿಪದಾರ್ಥ ॥

ಎಲೈ ಅಗ್ನಿಯೇ, ಎಲ್ಲವನ್ನೂ ಪ್ರಕಾಶಪಡಿಸುವ ನಿನ್ನ ಆಕರ್ಷಕವಾದ ತೇಜಸ್ಸನ್ನು ನಾನು ಪೂಜಿಸುತ್ತೇನೆ. ಧನಪ್ರದನಾದ ನಿನ್ನ ಉತ್ಕೃಷ್ಟ ಕರ್ಮಗಳನ್ನೂ, ಪ್ರಜ್ಞೆಗಳನ್ನೂ ನಿನ್ನ ಅನುಗ್ರಹದಿಂದ ಇಷ್ಟಾರ್ಥಗಳನ್ನೂ ಪಡೆದಿರುವ ಯಜಮಾನರು ಪ್ರಶಂಸೆಮಾಡುತ್ತಾರೆ. ನಾನೂ ನಿನ್ನ ಆ ಕರ್ಮವನ್ನು ಅತಿಶಯವಾಗಿ ಸ್ತುತಿಸುತ್ತೇನೆ.

## English Translation

I glorify your splendour, and the acts of you, the liberal giver : all who, (through your favour) enjoy their desires, glorify you.

॥ ಸಂಹಿತಾಪಾಠಃ ॥

ತ್ವಂ ಹೋತಾ ಮನುರ್ಹಿತೋ ವಹ್ನಿರಾಸಾ ವಿದುಷ್ಟರಃ ।
ಅಗ್ನೇ ಯಕ್ಷಿ ದಿವೋ ವಿಶಃ ॥ ೯ ॥

॥ ಪದಪಾಠಃ ॥

ತ್ವಂ । ಹೋತಾ । ಮನುಃऽಹಿತಃ । ವಹ್ನಿಃ । ಆಸಾ । ವಿದುಃऽತರಃ ।
ಅಗ್ನೇ । ಯಕ್ಷಿ । ದಿವಃ । ವಿಶಃ ॥ ೯ ॥

॥ ಸಾಯಣಭಾಷ್ಯಂ ॥

**ಹೇ ಅಗ್ನೇ ತ್ವಂ ಹೋತಾ ಹೋತೃತ್ವೇನ ಮನುರ್ಹಿತೋ ಮನುನಾಹಿತೋऽಸಿ । ಆಸಾಸ್ಯೇನಾಸ್ಯಭೂತಯಾ ಜ್ವಾಲಯಾ ವಹ್ನಿರ್ಹವಿಷಾಂ ವೋಢಾ ವಿದುಷ್ಟರೋऽತಿಶಯೇನ ವಿದ್ವಾನ್ । ಅತಃ ಕಾರಣಾತ್ತ್ವಂ ದಿವೋ ದ್ಯುಲೋಕಸಂಬಂಧಿನೀರ್ವಿಶೋ ದೈವೀಃ ಪ್ರಜಾ ಯಕ್ಷಿ । ಯಜ ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ತ್ವಂ**—ನೀನು । **ಹೋತಾ**—ಹೋಮಸಂಪಾದಕನಾಗಿ । **ಮನುರ್ಹಿತಃ**—ಮನುವಿನಿಂದ ಸ್ಥಾಪಿತವಾಗಿದ್ದೀಯೆ । **ಆಸಾ**—ಜ್ವಾಲಾರೂಪವಾದ ನಿನ್ನ ಮುಖದಿಂದ । **ವಹ್ನಿಃ**—ಹವಿಸ್ಸನ್ನು ವಹಿಸುವವನೂ । **ವಿದುಷ್ಟರಃ**—ಅತಿಶಯವಾದ ಜ್ಞಾನವುಳ್ಳವನೂ ಆದ ನೀನು । **ದಿವಃ**—ದ್ಯುಲೋಕಸಂಬಂಧಿಗಳಾದ । **ವಿಶಃ**—ದೇವತಾರೂಪರಾದ ಪ್ರಜೆಗಳನ್ನು । **ಯಕ್ಷಿ**—ಪೂಜಿಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ನೀನು ಹೋತೃವಿನ ಸ್ಥಾನದಲ್ಲಿ ಮನುವಿನಿಂದ ಸ್ಥಾಪಿತನಾಗಿದ್ದೀಯೆ. ಜ್ವಾಲಾರೂಪವಾದ ನಿನ್ನ ಮುಖದಿಂದ ಹವಿಸ್ಸನ್ನು ವಹಿಸುವನೂ ಅತಿಶಯವಾದ ಜ್ಞಾನವುಳ್ಳವನೂ ಆದ ನೀನು ದ್ಯುಲೋಕಸಂಬಂಧಿಗಳಾದ ದೇವತಾರೂಪರಾದ ಪ್ರಜೆಗಳನ್ನು ಎಂದರೆ ದೇವತೆಗಳನ್ನು ಪೂಜಿಸು.

## English Translation.

You have been appointed by Manu, the invoker of the gods, the most wise, bearer of oblations (to them) by your mouth : worship, Agni, the people of heaven.

॥ ವಿಶೇಷವಿಷಯಗಳು ॥

**ಮನುರ್ಹಿತಃ**—ಋಗ್ವೇದದಲ್ಲಿ ಮನುವಿನ ಹೆಸರು ಅನೇಕಕಡೆ ಪಠಿತವಾಗಿದ್ದರೂ ಹೆಚ್ಚು ವಿವರಣೆ ಎಲ್ಲಿಯೂ ದೊರಕುವುದಿಲ್ಲ. ಮನುವು ಮಾನವಕುಲಕ್ಕೆ ಮೂಲಪುರುಷನೆಂದೂ ಯಜ್ಞಯಾಗಾದಿಗಳ ಅನುಷ್ಠಾನುಕ್ರಮದಲ್ಲಿ ಮಾರ್ಗದರ್ಶಕನೆಂದೂ ತಿಳಿಯಬಹುದು. ಈ ಮನುವಿನ ಸಂಬಂಧವಾದ ವಿವರಣೆಯು ಋ. ಸಂ. ಭಾಗ ೧ ಪುಟ 107–108 ಮೊದಲಾದ ಸ್ಥಳಗಳಲ್ಲಿ ಉಕ್ತವಾಗಿರುವುದನ್ನು ನೋಡಿ.

॥ ಸಂಹಿತಾಪಾಠಃ ॥

ಅಗ್ನ ಆ ಯಾಹಿ ವೀತಯೇ ಗೃಣಾನೋ ಹವ್ಯದಾತಯೇ ।

ನಿ ಹೋತಾ ಸತ್ಸಿ ಬರ್ಹಿಷಿ ॥ ೧೦ ॥

॥ ಪದಪಾಠಃ ॥

ಅಗ್ನೇ । ಆ । ಯಾಹಿ । ವೀತಯೇ । ಗೃಣಾನಃ । ಹವ್ಯऽದಾತಯೇ ।

ನಿ । ಹೋತಾ । ಸತ್ಸಿ । ಬರ್ಹಿಷಿ ॥ ೧೦ ॥

॥ ಸಾಯಣಭಾಷ್ಯಂ ॥

ದರ್ಶಪೂರ್ಣಮಾಸಯೋಃ ಸಾಮಿಧೇನೀಷ್ವಗ್ನ ಆ ಯಾಹೀತ್ಯಾದ್ಯಾಸ್ತಿಸ್ರಃ । ಸೂತ್ರಿತಂ ಚ । ಅಗ್ನ ಆ ಯಾಹಿ ವೀತಯೇ ಗೃಣಾನ ಈಳೇನ್ಯೋ ನಮಸ್ಯಸ್ತಿರಃ । ಆ. ೧–೨ । ಇತಿ ॥ ಗಾರ್ಹಪತ್ಯಾಹವನೀಯಯೋರ್ಮಿಥಃ ಸಂಸರ್ಗೇಽಗ್ನಯೇ ವೀತಯೇಽಷ್ಟಾಕಪಾಲಃ ಪುರೋಡಾಶಃ । ತಸ್ಯಾಗ್ನ ಆ ಯಾಹೀತ್ಯೇಷಾನುವಾಕ್ಯಾ । ಸೂತ್ರಿತಂ ಚ । ಅಗ್ನ ಆ ಯಾಹಿ ವೀತಯೇ ಯೋ ಅಗ್ನಿಂ ದೇವವೀತಯೇ । ಆ. ೩–೧೩ । ಇತಿ ॥

**ಹೇ ಅಗ್ನೇ ತ್ವಮಾ ಯಾಹಿ । ಆಗಚ್ಛ । ಕಿಮರ್ಥಂ । ವೀತಯೇ ಹವಿಷಾಂ ಭಕ್ಷಣಾರ್ಥಂ । ಕಿಂಚ ಹವ್ಯದಾತಯೇ ಹವ್ಯಾನಿ ಹವೀಂಷಿ ದೇವೇಭ್ಯೋ ದಾತುಂ । ಗೃಣಾನಃ ಸ್ತೂಯಮಾನಸ್ತ್ವಂ ಬರ್ಹಿಷ್ಯಾಸ್ತೀರ್ಣೇ ದರ್ಭೇ ಹೋತಾ ಸನ್ ನಿ ಷತ್ಸಿ । ನಿಷೀದ । ಉಪವಿಶ ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ವೀತಯೇ**—ಹವಿಸ್ಸನ್ನು ಭಕ್ಷಿಸುವುದಕ್ಕಾಗಿಯೂ । **ಹವ್ಯದಾತಯೇ**—ಹವಿಸ್ಸನ್ನು ದೇವತೆಗಳಿಗೆ ಹಂಚುವುದಕ್ಕಾಗಿಯೂ । **ಆ ಯಾಹಿ**—ದಯಮಾಡು । **ಗೃಣಾನಃ**—ಸ್ತುತನಾಗತಕ್ಕ ನೀನು । **ಬರ್ಹಿಷಿ**—ದರ್ಭಾಸನದಮೇಲೆ । **ಹೋತಾ**—ಹೋಮಸಂಪಾದಕನಾಗಿ । **ನಿ ಸತ್ಸಿ**—ಕುಳಿತುಕೊ.

ಎಲೈ ಅಗ್ನಿಯೇ, ಹವಿಸ್ಸನ್ನು ಭಕ್ಷಿಸುವುದಕ್ಕಾಗಿಯೂ ಮತ್ತು ದೇವತೆಗಳಿಗೆ ಹಂಚುವುದಕ್ಕಾಗಿಯೂ ದಯಮಾಡು. ಸ್ತುತನಾಗತಕ್ಕ ನೀನು ದರ್ಭಾಸನದಮೇಲೆ ಹೋಮಸಂಪಾದಕನಾಗಿ ಕುಳಿತುಕೊ.

## English Translation.

Come, Agni, to the (sacrificial) food : being lauded, (come) to convey the oblation, (to the gods) : sit down as the ministrant priest upon the sacred grass.

॥ ವಿಶೇಷವಿಷಯಗಳು ॥

ದರ್ಶಪೂರ್ಣಮಾಸಯಾಗಗಳಲ್ಲಿ—**ಅಗ್ನ ಆ ಯಾಹಿ** ಎಂದು ಮೊದಲಾಗುವ ಮೂರು ಋಕ್ಕುಗಳನ್ನು (ಈ ಸೂಕ್ತದ ೧೦-೧೨ ಋಕ್ಕುಗಳನ್ನು) ಸಾಮಿಧೇನೀಮಂತ್ರಗಳನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಅಗ್ನ ಆ ಯಾಹಿ ವೀತಯೇ ಗೃಣಾನ ಈಳೇಽನ್ಯೋ ನಮಸ್ಯಸ್ತಿರಃ** ಎಂಬ ಸೂತ್ರದಿಂದ (ಆ. ೧-೨) ವಿವೃತವಾಗಿರುವುದು. ಮತ್ತು ಪ್ರಮಾದವಶದಿಂದ **ಗಾರ್ಹಪತ್ಯ, ಆಹವನೀಯ** ಎಂಬ ಎರಡು ಅಗ್ನಿಗಳ ಸಂಸರ್ಗವಾದರೆ ಆಗ **ಅಗ್ನಯೇ ವೀತಯೇಽಷ್ಟಾಕಪಾಲಃ ಪುರೋಡಾಶಃ** ಎಂದು ಹೋಮಮಾಡಬೇಕು. **ಆಗ ಅಗ್ನ ಆ ಯಾಹಿ** ಎಂಬ ಈ ಋಕ್ಕನ್ನು ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಅಗ್ನ ಆ ಯಾಹಿ ವೀತಯೇ ಯೋ ಅಗ್ನಿಂ ದೇವವೀತಯೇ**—ಎಂಬ ಸೂತ್ರದಿಂದ (ಆ ೩-೧೩) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ತಂ ತ್ವಾ ಸಮಿದ್ಭಿರಂಗಿರೋ ಘೃತೇನ ವರ್ಧಯಾಮಸಿ ।
ಬೃಹಚ್ಛೋಚಾ ಯವಿಷ್ಠ್ಯ ॥ ೧೧ ॥

॥ ಪದಪಾಠಃ ॥

ತಂ । ತ್ವಾ । ಸಮಿತ್ಽಭಿಃ । ಅಂಗಿರಃ । ಘೃತೇನ । ವರ್ಧಯಾಮಸಿ ।
ಬೃಹತ್ । ಶೋಚ । ಯವಿಷ್ಠ್ಯ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ಅಂಗಿರೋಽಂಗನಾದಿಗುಣಯುಕ್ತ ಅಂಗಾರರೂಪ ವಾಂಗಿರಸಃ ಪುತ್ರ ವಾಗ್ನೇ ತಂ ಪೂರ್ವೋಕ್ತಗುಣಂ ತ್ವಾ ತ್ವಾಂ ಸಮಿದ್ಭಿಃ ಸಮಿಂಧನಹೇತುಭಿರ್ದಾರುಭಿರ್ಘೃತೇನಾಜ್ಯೇನ ಚ ವರ್ಧಯಾಮಸಿ । ವರ್ಧಯಾಮಃ । ಅತೋ ಹೇ ಯವಿಷ್ಠ್ಯ ಯುವತಮಾಗ್ನೇ ಬೃಹನ್ಮಹದತ್ಯಂತಂ ಶೋಚ । ದೀಪ್ಯಸ್ವ ॥

॥ ಪ್ರತಿಪದಾರ್ಥ ॥

**ಅಂಗಿರಃ**—ಅಂಗಿರನಾಮಕನಾದ ಎಲೈ ಅಗ್ನಿಯೇ । **ತಂ**—ಪ್ರಸಿದ್ಧವಾದ ಗುಣಗಳುಳ್ಳ । **ತ್ವಾ**—ನಿನ್ನನ್ನು । **ಸಮಿದ್ಭಿಃ**—ಸಮಿತ್ತುಗಳಿಂದಲೂ । **ಘೃತೇನ**—ಆಜ್ಯಾರ್ಪಣೆಯಿಂದಲೂ । **ವರ್ಧಯಾಮಸಿ**—ಪ್ರವೃದ್ಧನಾಗುವಂತೆ ಮಾಡುತ್ತೇವೆ । **ಯವಿಷ್ಠ್ಯ**—ಅತ್ಯಂತ ಯುವಕನಾದ ಎಲೈ ಅಗ್ನಿಯೇ । **ಬೃಹತ್**—ಅತಿಶಯವಾಗಿ । **ಶೋಚ**—ಪ್ರಕಾಶಿಸು.

॥ ಭಾವಾರ್ಥ ॥

ಅಂಗಿರನಾಮಕನಾದ ಎಲೈ ಅಗ್ನಿಯೇ, ಪ್ರಸಿದ್ಧವಾದ ಗುಣಗಳುಳ್ಳ ನಿನ್ನನ್ನು ಸಮಿತ್ತುಗಳಿಂದಲೂ, ಆಜ್ಯಾಹುತಿಯಿಂದಲೂ ಪ್ರವೃದ್ಧನಾಗುವಂತೆ ಮಾಡುತ್ತೇವೆ. ಅತ್ಯಂತ ಯುವಕನಾದ ಎಲೈ ಅಗ್ನಿಯೇ, ನೀನು ಅತಿಶಯವಾಗಿ ಪ್ರಕಾಶಿಸು.

## English Translation.

We augment you, Angiras, with fuel and with butter : blaze fiercely, youngest (of the gods).

॥ ವಿಶೇಷವಿಷಯಗಳು ॥

**ಅಂಗಿರಃ**—ಇಲ್ಲಿ ಅಂಗಿರಃ ಎಂಬ ಶಬ್ದವನ್ನು ಅಗ್ನಿಯನ್ನು ಸಂಬೋಧನೆ ಮಾಡುವುದಕ್ಕಾಗಿ ಉಪಯೋಗಿಸಿದೆ. ಋಗ್ವೇದದಲ್ಲಿ ಅಗ್ನಿಯನ್ನು ಸಂಬೋಧನೆ ಮಾಡುವ ಅನೇಕ ಸಂದರ್ಭಗಳಲ್ಲಿ ಅಂಗಿರಃ ಎಂಬ ಶಬ್ದದ ಪ್ರಯೋಗವಿರುವುದು. ಋ. ಸಂ. ೧–೧–೬ ; ೧–೩೧–೧ ; ೧–೩೧–೧೭ ; ೪–೩–೧೫ ; ೪–೯–೭ ; ೫–೮–೪ ; ೫–೧೦–೭ ; ೫–೧೧–೬ ; ಇತ್ಯಾದ್ಯನೇಕ ಋಕ್ಕುಗಳಲ್ಲಿ ಅಗ್ನಿಯನ್ನು **ಅಂಗಿರಃ** ಎಂಬ ಶಬ್ದದಿಂದ ಕರೆದಿದೆ. ಅಗ್ನಿಗೆ ಈ ಹೆಸರು ಬರಲು ಕಾರಣವೇನು ? ಅಗ್ನಿಗೂ ಅಂಗಿರಾ ಋಷಿಗೂ ಇರುವ ಸಂಬಂಧವೇನು ? ಇವೇ ಮೊದಲಾದ ವಿಷಯಗಳನ್ನು ಋ. ಸಂ. ಭಾಗ ೧, ಪುಟ 640–641 ; ಭಾಗ ೩ ಪುಟ 520 ; ಭಾಗ ೫ ಪುಟ 672 ; ಭಾಗ ೬ ಪುಟ 442 ; ಭಾಗ ೧೦ ಪುಟ 269 ಇತ್ಯಾದಿ ಸ್ಥಳಗಳಲ್ಲಿ ವಿಸ್ತಾರವಾಗಿ ವಿವರಿಸಲಾಗಿದೆ.

|| ಸಂಹಿತಾಪಾಠಃ ||

ಸ ನಃ ಪೃಥು ಶ್ರವಾಯ್ಯಮಚ್ಛಾ ದೇವ ವಿವಾಸಸಿ ।
ಬೃಹದಗ್ನೇ ಸುವೀರ್ಯಂ ॥ ೧೨ ॥

|| ಪದಪಾಠಃ ||

ಸಃ । ನಃ । ಪೃಥು । ಶ್ರವಾಯ್ಯಂ । ಅಚ್ಛ । ದೇವ । ವಿವಾಸಸಿ ।
ಬೃಹತ್ । ಅಗ್ನೇ । ಸುऽವೀರ್ಯಂ ॥ ೧೨ ॥

॥ ಸಾಯಣಭಾಷ್ಯಂ ॥

ಹೇ ದೇವ ದ್ಯೋತಮಾನಾಗ್ನೇ ಸ ಪೂರ್ವೋಕ್ತಗುಣಸ್ತ್ವಂ ಪೃಥು ವಿಸ್ತೀರ್ಣಂ ಶ್ರವಾಯ್ಯಂ ಶ್ರವಣೀಯಂ ಪ್ರಶಸ್ಯಂ ಬೃಹನ್ಮಹತ್ಸುವೀರ್ಯಂ ಶೋಭನವೀರ್ಯೋಪೇತಂ ಧನಂ 'ನೋಽಸ್ಮಾನಚ್ಛ । ವಿವಾಸಸಿ । ಅಭಿಗಮಯ । ಅತ್ರ ವಾಜಸನೇಯಕಂ । ಅಚ್ಛಾ ದೇವ ವಿವಾಸಸೀತಿ ತನ್ನೋ ಗಮಯೇ-ತ್ಯೇವೈತದಾಹೇತಿ ॥

॥ ಪ್ರತಿಪದಾರ್ಥ ॥

**ದೇವ**-ಪ್ರಕಾಶಮಾನನಾದ । **ಅಗ್ನೇ**-ಎಲೈ ಅಗ್ನಿಯೇ । **ಸಃ**-ಮೇಲೆ ವರ್ಣಿತನಾದ ನೀನು । **ಪೃಥು**—ವಿಸ್ತೃತವಾದುದೂ । **ಶ್ರವಾಯ್ಯಂ**—ಪ್ರಶಸ್ತವಾದುದೂ । **ಬೃಹತ್**—ಮಹತ್ತಾದುದೂ । **ಸುವೀರ್ಯಂ**—ಶ್ರೇಷ್ಠವಾದ ವೀರ್ಯೋಪೇತವಾದುದೂ ಆದ ಧನವನ್ನು । **ನಃ**—ನಮ್ಮ । **ಅಚ್ಛ**—ಅಭಿಮುಖವಾಗುವಂತೆ । **ವಿವಾಸಸಿ**—ಕಳುಹಿಸಿಕೊಡು.

॥ ಭಾವಾರ್ಥ ॥

ಪ್ರಕಾಶಮಾನನಾದ ಎಲೈ ಅಗ್ನಿಯೇ, ಮೇಲೆ ವರ್ಣಿತನಾದ ನೀನು ವಿಸ್ತೃತವಾದುದೂ, ಪ್ರಶಸ್ತವಾದುದೂ, ಮಹತ್ತಾದುದೂ, ಶ್ರೇಷ್ಠವಾದ ವೀರ್ಯೋಪೇತವಾದುದೂ ಆದ ಧನವನ್ನು ನಮಗೆ ಅಭಿಮುಖವಾಗುವಂತೆ ಕಳುಹಿಸಿಕೊಡು.

## English Translation.

Divine Agni, bestow upon us (wealth), excellent, great, and (comprehending) worthy male descendants.

|| ಸಂಹಿತಾಪಾಠಃ ||

ತ್ವಾಮಗ್ನೇ ಪುಷ್ಕರಾದಧ್ಯಥರ್ವಾ ನಿರಮಂಥತ ।
ಮೂರ್ಧ್ನೋ ವಿಶ್ವಸ್ಯ ವಾಘತಃ || ೧೩ ||

|| ಪದಪಾಠಃ ||

ತ್ವಾಂ । ಅಗ್ನೇ । ಪುಷ್ಕರಾತ್ । ಅಧಿ । ಅಥರ್ವಾ । ನಿಃ । ಅಮಂಥತ ।
ಮೂರ್ಧ್ನಃ । ವಿಶ್ವಸ್ಯ । ವಾಘತಃ || ೧೩ ||

|| ಸಾಯಣಭಾಷ್ಯಂ ||

ಅಗ್ನಿಮಂಥನೇ ತ್ವಾಮಗ್ನೇ ಪುಷ್ಕರಾದಧೀತ್ಯಾದ್ಯಾಸ್ತಿಸ್ರ ಋಚೋಽನೂಚ್ಯಾಃ । ಸೂತ್ರಿತಂ ಚ । ತ್ವಾಮಗ್ನೇ ಪುಷ್ಕರಾದಧೀತಿ ತಿಸ್ರಣಾಮರ್ಧರ್ಚಂ ಶಿಷ್ಟ್ವಾವರಮೇತ್ । ಆ. ೨-೧೬ । ಇತಿ ||

ಹೇ ಅಗ್ನೇ ಅಥರ್ವ್ಯತತ್ಸಂಜ್ಞಕ ಋಷಿಸ್ತ್ವಾಂ ಪುಷ್ಕರಾದಧಿ ಪುಷ್ಕರಪರ್ಣೇ ನಿರಮಂಥತ । ಅರಣ್ಯೋಃ ಸಕಾಶಾದಜನಯತ್ । ಕೀದೃಶಾತ್ಪುಷ್ಕರಾತ್ । ಮೂರ್ಧ್ನೋ ಮೂರ್ಧವದ್ಧಾರಕಾದ್ವಿಶ್ವಸ್ಯ ಸರ್ವಸ್ಯ ಜಗತೋ ವಾಘತೋ ವಾಹಕಾತ್ । ಪುಷ್ಕರಪರ್ಣೇ ಹಿ ಪ್ರಜಾಪತಿರ್ಭೂಮಿಮಪ್ರಥಯತ್ ತತ್ಪುಷ್ಕರಪರ್ಣೇಽಪ್ರಥಯತ್ । ತೈ. ಬ್ರಾ. ೧-೧-೩-೬ । ಇತಿ ಶ್ರುತೇಃ । ಭೂಮಿಶ್ಚ ಸರ್ವಜಗತ ಆಧಾರಭೂತೇತಿ ಪುಷ್ಕರಪರ್ಣಸ್ಯ ಸರ್ವಜಗದ್ಧಾರಕತ್ವಂ । ಅತ್ರ ಪುಷ್ಕರಶಬ್ದೇನ ಪುಷ್ಕರಪರ್ಣಮಭಿಧೀಯತ ಇತಿ । ಏತಚ್ಚ ತೈತ್ತಿರೀಯಕೇ ವಿಸ್ಪಷ್ಟಮಾಮ್ನಾತಂ । ತ್ವಾಮಗ್ನೇ ಪುಷ್ಕರಾದಧೀತ್ಯಾಹ ಪುಷ್ಕರಪರ್ಣೇ ಹ್ಯೇನಮುಪಶ್ರಿತಮವಿಂದತ್ । ತೈ. ಸಂ. ೫-೧-೪-೪ । ಇತಿ ||

|| ಪ್ರತಿಪದಾರ್ಥ ||

**ಅಗ್ನೇ**—ಎಲೈ ಅಗ್ನಿಯೇ । **ಅಥರ್ವಾ**—ಅಥರ್ವಸಂಜ್ಞಕನಾದ ಋಷಿಯು । **ತ್ವಾಂ**—ನಿನ್ನನ್ನು । **ಮೂರ್ಧ್ನಃ**—ಶಿರೋರೂಪವಾದುದೂ । **ವಿಶ್ವಸ್ಯ**—ಸಕಲ ಜಗತ್ತಿಗೂ । **ವಾಘತಃ**—ವಾಹಕವಾದುದೂ ಆದ । **ಪುಷ್ಕರಾತ್ ಅಧಿ**—ಪುಷ್ಕರಪರ್ಣದ ಮೇಲೆ । **ನಿರಮಂಥತ**—ಮಥಿಸಿ ಉತ್ಪನ್ನನಾಗುವಂತೆ ಮಾಡಿದನು.

|| ಭಾವಾರ್ಥ ||

ಎಲೈ ಅಗ್ನಿಯೇ, ಅಥರ್ವಸಂಜ್ಞನಾದ ಋಷಿಯು ನಿನ್ನನ್ನು ಶಿರೋರೂಪವಾದುದೂ, ಸಕಲ ಜಗತ್ತಿಗೂ ವಾಹಕವಾದುದೂ ಆದ ಪುಷ್ಕರಪರ್ಣದ ಮೇಲೆ ಮಥಿಸಿ ಉತ್ಪನ್ನನಾಗುವಂತೆ ಮಾಡಿದನು.

## English Translation.

The sage, Atharvan, extracted you from upon the lotus-leaf, the head, the support of the universe.

|| ವಿಶೇಷವಿಷಯಗಳು ||

**ತ್ವಾಮಗ್ನೇ ಪುಷ್ಕರಾದಧಿ** ಎಂಬ ಈ ಋಕ್ಕನ್ನು ಅಗ್ನಿಮಥನಕಾಲದಲ್ಲಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ— **ತ್ವಾಮಗ್ನೇ ಪುಷ್ಕರಾದಧೀತಿ ತಿಸೃಣಾಮರ್ಧರ್ಚಂ ಶಿಷ್ಟ್ವಾತ್ತರಮೋತ್** ಎಂಬ ಸೂತ್ರದಿಂದ (**ಆ.** ೨-೧೬) ವಿವೃತವಾಗಿರುವುದು ಐತರೇಯಬ್ರಾಹ್ಮಣದಲ್ಲಿ ಹೇಳಿರುವ ಅಗ್ನಿಮಥನವಿಷಯವಾದ ವಿವರಣೆಯನ್ನು **ನಾವು** ಇದೇ ಸೂಕ್ತದ ೪೦, ೪೧, ೪೨ ನೇ ಋಕ್ಕುಗಳ ವಿಶೇಷ ವಿಷಯಗಳಲ್ಲಿ ತಿಳಿಸಿದೇವೆ. ಪ್ರಕೃತ ಋಕ್ಕನ್ನು ಯಾವ ಸಂದರ್ಭದಲ್ಲಿ ಪಠಿಸಬೇಕೆಂಬುದನ್ನೂ ಮತ್ತು ಈ ಋಕ್ಕಿಗೆ ಸಂಬಂಧಪಟ್ಟ ಇತರ ವಿವರಣೆಗಳನ್ನೂ ಅಲ್ಲಿ ನೋಡಿ ತಿಳಿಯಬಹುದು.

ಪ್ರಕೃತವಾದ ಮಂತ್ರದಲ್ಲಿ ಅಥರ್ವ ಋಷಿಯು ಪುಷ್ಕರದಿಂದ ಅಗ್ನಿಯನ್ನು ಮಥಿಸಿದ ವಿಷಯವು ಪ್ರಶಂಸಿತವಾಗಿದೆ. ಅಲ್ಲದೇ, ಪುಷ್ಕರವು ವಿಶ್ವಕ್ಕೆ ಮೂರ್ಧವೆಂದೂ, ಸಕಲಜಗದ್ವಾಹಕವೆಂದೂ ಸ್ತುತವಾಗಿದೆ. ಜಗದ್ಧಾರಕ ಮತ್ತು ಜಗದ್ವಾಹಕರೂಪವಾದ ಪುಷ್ಕರದಿಂದ ಅಗ್ನಿಯ ಉತ್ಪತ್ತಿಯು ಅಥರ್ವಋಷಿಯ ಪ್ರಯತ್ನದಿಂದ ಸಂಭವಿಸಿತು ಎಂಬುದು ಮಂತ್ರದ ತಾತ್ಪರ್ಯವು. ಈ ವರ್ಣನವು ಲೌಕಿಕವಾದ ಪುಷ್ಕರಪತ್ರದ ಅಥವಾ ಪುಷ್ಕರಪುಷ್ಪದ ವರ್ಣನೆಯಾಗಿರಲು ಸಾಧ್ಯವಿಲ್ಲ ಪುಷ್ಕರಪದವು ವಿಶ್ವವ್ಯಾಪಕವಾದುದೂ ವಿಶ್ವಾಧಾರವಾದುದೂ ಆದ ಲೌಕಿಕ ಮತ್ತ ಅಲೌಕಿಕ ಜಗತ್ತುಗಳನ್ನೆಲ್ಲಾ ಧರಿಸಿರುವ ತತ್ತ್ವವನ್ನು ಪ್ರತಿಬಿಂಬಿಸುವುದಾಗಿದೆ ಆದರೆ ಅದಕ್ಕೆ ಪುಷ್ಕರವೆಂಬ ಹೆಸರು ಏತಕ್ಕೆ ಪ್ರಸಿದ್ಧವಾಯಿತು, **ಪುಷ್ಕರ** ಶಬ್ದದ ಅರ್ಥವೇನು ಎಂಬ ವಿಷಯವನ್ನು ತಿಳಿಯಬೇಕಾದುದು ಅವಶ್ಯವಾಗಿರುತ್ತದೆ.

ಸಾಯಣರು ಈ ಮಂತ್ರದ ಭಾಷ್ಯದಲ್ಲಿ ಪುಷ್ಕರಶಬ್ದಕ್ಕೆ **ಪುಷ್ಕರಪರ್ಣ** ವೆಂದರ್ಥಮಾಡಿ, ಪುಷ್ಕರಪರ್ಣಕ್ಕೂ ಪೃಥ್ವಿಗೂ ತಾದಾತ್ಮ್ಯವನ್ನು ತೋರಿಸಿದ್ದಾರೆ. ಈ ತಾದಾತ್ಮ್ಯವು ಪೃಥ್ವಿಗೂ ಜಗದ್ಧಾರಕತ್ವವಿದೆಯೆಂದು ತೋರಿಸುತ್ತದೆ. ಇಲ್ಲಿ ಪೃಥ್ವಿಯೆಂದರೆ ಕೇವಲ ರೂಢಿಯಲ್ಲಿರತಕ್ಕ ಅರ್ಥಮಾತ್ರವಲ್ಲ. ಸಕಲ ಲೋಕಗಳೂ ಪೃಥ್ವೀಶಬ್ದವಾಚ್ಯವಾಗಿರುವ ಸಂದರ್ಭಗಳೂ ಅನೇಕವಾಗಿವೆ. ಈ ವಿಸ್ತೃತವಾದ ಅರ್ಥವಿರಬೇಕಾದರೆ, ಪುಷ್ಕರಶಬ್ದದ ನಿಷ್ಕೃಷ್ಟವಾದ ಅರ್ಥವೇನು ?

ನಿರುಕ್ತಕಾರರು ಪೋಷಿಸು ಎಂಬರ್ಥವನ್ನು ಕೊಡುವ **ಪುಷ್** ಧಾತುವಿನಿಂದ ಈ ಪದದ ನಿಷ್ಪತ್ತಿಯಾಗಿದೆಯೆಂದು ತಿಳಿಸಿದ್ದಾರೆ. (**ಪುಷಃ ಕಿತ್ । ಪುಷ್ಯತೇಃ ಕರಃ** ಎಂಬ ಉಣಾದಿಸೂತ್ರವಿರುತ್ತದೆ. **ಉ. ಸೂ.** ೪-೪) ಸಕಲ **ಭೂತ**ಗಳನ್ನೂ **ಪೋಷಿಸು**ವುದರಿಂದ ಅಂತರಿಕ್ಷಕ್ಕೆ ಪುಷ್ಕರಶಬ್ದವು ರೂಢವಾಗಿದೆಯೆಂಬುದು ನಿರುಕ್ತಕಾರರ **ಮತ.** (ನಿ. ೫-೧೪). ಯಾಸ್ಕರು ಋಕ್ಸಂಹಿತಾವಾಕ್ಯವನ್ನು ಉದಾಹರಿಸಿ ಈ ಪದದ ನಿರ್ವಚನವನ್ನು ವಿವರಿಸಿದ್ದಾರೆ. ಈ ಶಬ್ದವು— **ಅಂಬರಂ, ವಿಯತ್, ವ್ಯೋಮ............ಪುಷ್ಕರಂ, ಸಗರಃ** ಇತ್ಯಾದಿ ಅಂತರಿಕ್ಷನಾಮಗಳಲ್ಲಿ **ಪಠಿತ**ವಾಗಿದೆ. (ನಿ. ೨-೧೦). ಅನಂತರ ರೂಪನಿಷ್ಪತ್ತಿಯನ್ನು ತಿಳಿಸುತ್ತಾರೆ.

**ಉತಾಸಿ ಮೈತ್ರಾವರುಣೋ ವಸಿಷ್ಠೋರ್ವಶ್ಯಾ ಬ್ರಹ್ಮನ್ಮನಸೋಽಧಿಜಾತಃ ।**
**ದ್ರಪ್ಸಂ ಸ್ಕನ್ನಂ ಬ್ರಹ್ಮಣಾ ದೈವ್ಯೇನ ವಿಶ್ವೇದೇವಾಃ ಪುಷ್ಕರೇ ತ್ವಾದದಂತ ॥**

(ಋ. ಸಂ ೭-೩೩-೧೧)

ಎಂಬ ಮಂತ್ರದಲ್ಲಿ ಪುಷ್ಕರದಲ್ಲಿ ವಸಿಷ್ಠನ ಜನನವೃತ್ತಾಂತವನ್ನು ತಿಳಿಸುತ್ತದೆ. (ಈ ಮಂತ್ರದ ಪೂರ್ಣವಾದ ತಾತ್ಪರ್ಯವನ್ನು ಮುಂದೆ ವಿವರಿಸಲಾಗುತ್ತದೆ) ಈ ಮಂತ್ರವನ್ನು ನಿರುಕ್ತಕಾರರು ಉದಾಹರಿಸಿ ಇಲ್ಲಿ ಪುಷ್ಕರ ಶಬ್ದದ ರೂಪ ನಿಷ್ಪತ್ತಿಯನ್ನೂ ಈ ಶಬ್ದದ ಮುಖ್ಯತಾತ್ಪರ್ಯವನ್ನೂ ಈ ರೀತಿ ತಿಳಿಸಿದ್ದಾರೆ.

**" ಪುಷ್ಕರಮಂತರಿಕ್ಷಂ ಪೋಷತಿ ಭೂತಾನ್ಯುದಕಂ । ಪುಷ್ಕರಂ ಪೂಜಾಕರಂ ಪೂಜಯಿತವ್ಯಂ ವಾ । ಇದಮಪೀತರತ್ ಪುಷ್ಕರಮೇತಸ್ಮಾದೇವ ಪುಷ್ಕರಂ ವಪುಷ್ಕರಂ ವಾ । ಪುಷ್ಪಂ ಪುಷ್ಪತೇಃ ॥** (ನಿ ೫-೧೪)

(ಮೇಲೆ ತಿಳಿಸಿರುವಂತೆ) **ಪುಷ್** ಧಾತುವಿನಿಂದ ಪುಷ್ಕರಶಬ್ದದ ನಿಷ್ಪತ್ತಿಯಾಗಿದೆ. ಜಗತ್ತನ್ನು ಪೋಷಿಸುವುದರಿಂದಲೂ ಪೂಜಾಕರವಾದುದರಿಂದಲೂ ಈ ಹೆಸರು. ಲೋಕಪ್ರಸಿದ್ಧವಾದ ಕಮಲಪುಷ್ಪವೂ ಸಹ ಈ ಕಾರಣದಿಂದಲೇ ಎಂದರೆ ಪೂಜಾಸಾಧನವಾದುದರಿಂದಲೇ **ಪುಷ್ಕರ** ವೆಂಬ ಹೆಸರಿನಿಂದ ಕರೆಯಲ್ಪಟ್ಟಿದೆಯೆಂಬ ವಿವರಣೆಯಿದೆ. ಆದುದರಿಂದ **ಪುಷ್ಕರ** ಶಬ್ದಕ್ಕೆ ಪ್ರಥಮತಃ **ಅಂತರಿಕ್ಷವೆಂದೇ** ಅರ್ಥ. ಈ ಅರ್ಥದಲ್ಲೇ ಸಂಹಿತಾದಿಗಳೆಲ್ಲೆಲ್ಲಾ ಈ ಪದದ ಪ್ರಯೋಗವಿರುತ್ತದೆ. ಆದರೆ, ಈ ವಿವರಣೆಯು ಇನ್ನು ಕೆಲವೆಡೆಗಳಲ್ಲಿ ಹೇಳಿರುವ ವಿವರಣೆಗಿಂತಲೂ ವಿರುದ್ಧವಾಗಿರುತ್ತದೆ. ಉದಾಹರಣೆಗೆ, ಪ್ರಕೃತವಾದ ಮಂತ್ರದಲ್ಲಿ (೬-೧೬-೧೩) ಸಾಯಣರು ಪುಷ್ಕರಕ್ಕೂ ಪೃಥ್ವಿಗೂ ತಾದಾತ್ಮ್ಯವನ್ನು ಹೇಳಿದ್ದಾರೆ. ಆದುದರಿಂದ ಪುಷ್ಕರಶಬ್ದವು ಪೃಥ್ವೀತತ್ತ್ವವನ್ನು ಪ್ರತಿಬಿಂಬಿಸುವುದೇ ಅಥವಾ ಅಂತರಿಕ್ಷತತ್ತ್ವವನ್ನೇ ಎಂಬ ಪ್ರಶ್ನೆಯು ಸಹಜವಾಗಿರುತ್ತದೆ. ಆದರೆ, ಈ ರೀತಿ, ಒಂದು ಸಲ ಪೃಥ್ವೀ, ಇನ್ನೊಂದು ಸಲ ಅಂತರಿಕ್ಷ ಎಂದು ಅರ್ಥಮಾಡುವುದರಲ್ಲಿ ಏನೂ ವಿರುದ್ಧಾಂಶವಿರುವುದಿಲ್ಲ. ಹೇಗೆಂದರೆ, ಪೃಥ್ವಿಯೆಂಬುದಕ್ಕೆ ಕೇವಲ ಲೌಕಿಕವಾಗಿ ರೂಢಿಯಲ್ಲಿರುವ ಭೂಭಾಗಮಾತ್ರವಲ್ಲ. ಮೂರು ಲೋಕಗಳೂ ಈ ಪದದಿಂದಲೇ ನಿರ್ದಿಷ್ಟವಾಗಿರುವ ಸನ್ನಿವೇಶಗಳೂ ಅನೇಕವಿರುತ್ತವೆ. ಉದಾಹರಣೆಗೆ,

**ಪರಃ ಸೋ ಅಸ್ತು ತನ್ವಾ೩ ತನಾ ಚ ತಿಸ್ರಃ ಪೃಥಿವೀರಧೋ ಅಸ್ತು ವಿಶ್ವಾಃ ।**
**ಪ್ರತಿ ಶುಷ್ಯತು ಯಶೋ ಅಸ್ಯ ದೇವಾ ಯೋ ನೋ ದಿವಾ ದಿಪ್ಸತಿ ಯಶ್ಚ ನಕ್ತಂ ॥**
(ಋ. ಸಂ. ೭-೧೦೪-೧೧)

ಎಂಬಲ್ಲಿ ರಾಕ್ಷಸರ ನಾಶಮಾಡಬೇಕೆಂದು ದೇವತೆಗಳನ್ನು ಪ್ರಾರ್ಥಿಸಿದೆ. ಅಂತಹ ರಾಕ್ಷಸರು ಎಲ್ಲೆಲ್ಲಿ ಇರಲು ಸಾಧ್ಯವೆಂಬುದನ್ನು ವಿವರಿಸುತ್ತಾ ಅವರು ಮೂರು ಲೋಕಗಳಲ್ಲೂ ವ್ಯಾಪಿಸಿರಲೂ ಸಾಧ್ಯವೆಂಬುದನ್ನು ತಿಳಿಸಿದೆ. ಆ ಮೂರು ಲೋಕಗಳೂ ಒಟ್ಟಿಗೆ ಇಲ್ಲಿ **ಪೃಥಿವೀ** ಶಬ್ದ ವಾಚ್ಯವಾಗಿರುತ್ತವೆ. ಸಾಯಣರು ಇಲ್ಲಿ **ಪೃಥಿವೀ** ಶಬ್ದಕ್ಕೆ ಲೋಕತ್ರಯವೆಂದು ಸ್ಪಷ್ಟವಾಗಿ ಅರ್ಥವನ್ನು ಹೇಳಿದ್ದಾರೆ. ಇದರಂತೆಯೇ ಹಿಂದೆ, **ಯದಿಂದ್ರಾಗ್ನೀ ಅವಮಸ್ಯಾಂ ಪೃಥಿವ್ಯಾಂ** (ಋ. ಸಂ. ೧-೧೦೮-೯) ಎಂಬ ಮಂತ್ರದ ತಾತ್ಪರ್ಯವನ್ನು ವಿವರಿಸುವಾಗಲೂ ಸಹ **ಪೃಥಿವೀ** ಶಬ್ದಕ್ಕೆ ಮೂರು ಲೋಕಗಳು ಎಂಬರ್ಥವುಂಟೆಂದು ತಿಳಿಸಿದೆ. ಆದುದರಿಂದ ಪುಷ್ಕರ ಪದಕ್ಕೆ ಪೃಥ್ವಿಯೆಂದರ್ಥಮಾಡಿದರೆ, ಕೇವಲ ಭೂಮಿಯೆಂದರ್ಥವಲ್ಲ. ಲೋಕತ್ರಯವನ್ನು ಪ್ರತಿಬಿಂಬಿಸುವ ಮಹತ್ತತ್ತ್ವವೆಂಬುದನ್ನು ಅರಿಯಬೇಕು. ಅಂತಹ ವಿಸ್ತೃತವಾದ ಅರ್ಥವಿದ್ದರೆ, ಪುಷ್ಕರದಲ್ಲಿ ಅಗ್ನಿಯ ಮಥನವಾಗಿ ಅಗ್ನಿಯು ಪ್ರಾದುರ್ಭವಿಸಿದನು, ವಸಿಷ್ಠನು ಉದ್ಭವಿಸಿದನು ಎಂಬ ವಾಕ್ಯಗಳ ಅರ್ಥವೇನು ಎಂಬುದನ್ನು ಪ್ರಕೃತದಲ್ಲಿ ಪರಿಶೀಲಿಸಬೇಕಾಗುತ್ತದೆ.

ವಿಶ್ವಸೃಷ್ಟಿಗೆ ಮೂಲವೂ, ವಿಶ್ವಾಧಾರವೂ, ವಿಶ್ವವ್ಯಾಪಕವೂ ಆದ ಯಾವ ಬ್ರಹ್ಮವೃಕ್ಷವೆಂಬ ಮಹತ್ತತ್ತ್ವವು ಸಂಹಿತೆಯಲ್ಲಿಯೂ ಬ್ರಾಹ್ಮಣಾದಿಗಳಲ್ಲಿಯೂ ಪ್ರಸಿದ್ಧವಾಗಿದೆಯೋ ಅದೇ ಮಹತ್ತತ್ತ್ವವು ಪ್ರಕೃತದಲ್ಲಿ ಪುಷ್ಕರಶಬ್ದ ವಾಚ್ಯವಾಗಿದೆಯೆಂದು ಧಾರಾಳವಾಗಿ ಹೇಳಬಹುದಾಗಿದೆ. ಆದರೆ ಅಲ್ಲಿ ವರ್ಣಿತವಾಗಿರುವ ಅಂಶಗಳೂ ಪ್ರಕೃತದಲ್ಲಿ ವರ್ಣಿತವಾಗಿರುವ ಅಂಶವೂ ಒಂದೇ ವಿಧವಾಗಿದೆಯೇ ಮತ್ತು ಎರಡೂ ಒಂದೇ ತತ್ತ್ವವಿಕಾಸದ ವಿವರವನ್ನು ತಿಳಿಸುವುದೇ ಎಂಬ ವಿಷಯದಲ್ಲಿ ನಿಷ್ಕೃಷ್ಟವಾದ ಅಭಿಪ್ರಾಯವನ್ನು ಹೊಂದಬೇಕಾಗಿರುತ್ತದೆ.

**ಕಿಂ ಸ್ವಿದ್ವನಂ ಕ ಉ ಸ ವೃಕ್ಷ ಆಸ ಯತೋ ದ್ಯಾವಾಪೃಥಿವೀ ನಿಷ್ಟತಕ್ಷುಃ ।**
**ಮನೀಷಿಣೋ ಮನಸಾ ಪೃಚ್ಛತೇದು ತದ್ಯದಧ್ಯತಿಷ್ಠದ್ಭುವನಾನಿ ಧಾರಯನ್ ॥**
(ಋ ಸಂ. ೧೦-೮೧-೪)

ದ್ಯಾವಾಪೃಥಿವಿಗಳೆಲ್ಲವೂ ಯಾವ ಉಪಕರಣ ಮತ್ತು ನಿಮಿತ್ತಗಳಿಂದ ನಿರ್ಮಿತವಾದವೋ ಆ (ಬ್ರಹ್ಮ) ವೃಕ್ಷವಾವುದು? ಆ ವನವಾವುದು ? ಎಲೈ ಮಹರ್ಷಿಗಳೇ, ಭುವನವನ್ನೆಲ್ಲಾ ಧರಿಸಿರುವ ಕಾಲದಲ್ಲಿ ಆ (ಬ್ರಹ್ಮವೃಕ್ಷರ) ಸ್ಥಾನವಾವುದಾಗಿದ್ದಿತು ಎಂಬುದನ್ನು ನಿಮ್ಮ ಮನಸ್ಸಿನಲ್ಲಿ ಧ್ಯಾನರೂಪವಾದ ಕ್ರಿಯೆಯಿಂದ ಅರಿಯಿರಿ ಎಂಬ ಈ ಪ್ರಶ್ನೆಗೆ ಉತ್ತರವಾಗಿ ತೈತ್ತಿರೀಯ ಬ್ರಾಹ್ಮಣದಲ್ಲಿ,

**"ಬ್ರಹ್ಮ ವನಂ ಬ್ರಹ್ಮ ಸ ವೃಕ್ಷ ಆಸೀತ್ । ಯತೋ ದ್ಯಾವಾಪೃಥಿವೀ ನಿಷ್ಟತಕ್ಷುಃ । ಮನೀಷಿಣೋ ಮನಸಾ ವಿಬ್ರವೀಮಿ ವಃ । ಬ್ರಹ್ಮಾಧ್ಯತಿಷ್ಠದ್ಭುವನಾನಿ ಧಾರಯನ್ ॥**
(ತೈ. ಬ್ರಾ. ೨-೮-೯-೬)

ಬ್ರಹ್ಮವೇ ಈ ವನವು, ಬ್ರಹ್ಮವೇ ಈ ವೃಕ್ಷವು. ಮೂಲದಿಂದಲೇ ದ್ಯಾವಾಪೃಥಿವಿಗಳೆಲ್ಲವೂ, ಸೃಷ್ಟವಾದವು. ಎಲೈ ಮಹರ್ಷಿಗಳೇ, ಈ ವೃಕ್ಷವೇ ವಿಶ್ವಧಾರಕವೆಂದು ತಿಳಿಯಿರಿ ಎಂದು ತಿಳಿಸಿದೆ. ಇಂತಹ ಸನ್ನಿವೇಶಗಳಲ್ಲಿ ಯಾವ ತತ್ತ್ವವನ್ನು ವೃಕ್ಷವೆಂದು ವರ್ಣಿಸಿದೆಯೋ ಅದೇ ಪ್ರಕೃತವಾದ ಮಂತ್ರದಲ್ಲಿ ಪುಷ್ಕರವೆಂದು ವರ್ಣಿತವಾಗಿದೆ. ಕ್ಷೀರಾರ್ಣವದಲ್ಲಿ ಶೇಷಶಾಯಿಯಾದ ಮೂಲದೇವನ ನಾಭಿಯಿಂದ ಈ ವೃಕ್ಷವು ಹೊರಟು ವಿಶ್ವವನ್ನು ವ್ಯಾಪಿಸುತ್ತದೆ ಎನ್ನುವಂತೆಯೇ, ಅದೇ ನಾಭಿಯಿಂದ ಈ ಪುಷ್ಕರವು ಉತ್ಪನ್ನವಾಗಿ ಇದೇ ಸೃಷ್ಟಿಕರ್ತನಿಗೂ ಆಧಾರವಾಗಿರುತ್ತದೆ ಎಂದು ವರ್ಣಿತವಾಗಿದೆ. ಈ ಪದ್ಮವು ತನ್ನ ವಿಕಸಿತವಾದ ಹೃದಯದಲ್ಲಿ ವಿಶ್ವಕರ್ತನಾದ ಪರಬ್ರಹ್ಮನನ್ನೇ ಧರಿಸಿರುತ್ತದೆ **ನಾಭಿಜ, ಅಬ್ಜಜ, ಅಬ್ಜಯೋನಿ, ಕಮಲಾಸನ, ಪದ್ಮಾಸನ** ಇತ್ಯಾದಿಯಾದ ವಿಶೇಷಣಗಳಿಂದ ಈ ಬ್ರಹ್ಮನು ವರ್ಣಿತನಾಗಿದ್ದಾನೆ. ಅರ್ಣವಸ್ಥನಾದ **ನಾರಾಯಣನು, ಪದ್ಮನಾಭ, ಪುಷ್ಕರನಾಭ** ಇತ್ಯಾದಿಯಾಗಿಯೂ ಸಹ ವರ್ಣಿತನಾಗಿದ್ದಾನೆ. ಆದುದರಿಂದ **ಬ್ರಹ್ಮವೃಕ್ಷ** ಮತ್ತು ಬ್ರಹ್ಮಾಸನವಾದ **ಪದ್ಮ** ಇವೆರಡೂ ಒಂದೇ ಆದರೂ ಸಹ ಇವುಗಳ ವರ್ಣನೆಯಲ್ಲಿ ಸ್ವಲ್ಪ ವ್ಯತ್ಯಾಸವಿರುತ್ತದೆ. ಬ್ರಹ್ಮವೃಕ್ಷವು ಸಕಲ ಭೂತಗಳನ್ನೂ ಒಳಗೊಂಡು ವಿಶ್ವವ್ಯಾಪಿಯಾಗಿದೆಯೆಂದು ಪ್ರಶಂಸಿತವಾಗಿದೆ. ಬ್ರಹ್ಮಾಸನವಾದ ಈ ಪುಷ್ಕರವು ಸಕಲ ಭೂತಗಳಿಗೂ ಪೋಷಕವಾಗಿ ವಿಶ್ವಾಧಾರವಾಗಿದೆಯೆಂದು ಪ್ರಶಂಸಿತವಾಗಿದೆ. ಭೌತಿಕದೃಷ್ಟಿಯಿಂದ ಇವರ ವ್ಯಾಪಕತ್ವವು ವರ್ಣಿತವಾಗಿಲ್ಲದಿದ್ದರೂ ಸಹ, ಆಧ್ಯಾತ್ಮಿಕದೃಷ್ಟಿಯಿಂದ ಇದೂ ಸರ್ವವ್ಯಾಪಿಯೆಂದು ವರ್ಣಿತವಾಗಿರುವ ಸಂದರ್ಭಗಳೂ ಅನೇಕವಾಗಿವೆ. ಯಾವ ಈ ಪುಷ್ಕರವನ್ನು ಹೃತ್ಪುಂಡರೀಕವೆಂದು ವರ್ಣಿಸಿದೆಯೋ. ಅದನ್ನೇ ವಿಶ್ವವ್ಯಾಪಿಯಾದ ಮಹಾತತ್ತ್ವವೆಂದೂ ಪ್ರಶಂಸಿಸಿದೆ.

**ಅಥ ಯದಿದಮಸ್ಮಿನ್ ಬ್ರಹ್ಮಪುರೇ ದಹರಂ ಪುಂಡರೀಕಂ ವೇಶ್ಮ ದಹರೋಽಸ್ಮಿನ್ನಂತರಾಕಾಶಸ್ತ-
ಸ್ಮಿನ್‌ಯದಂತಸ್ತದನ್ವೇಷ್ಟವ್ಯಂ ತದ್ವಾವ ವಿಜಿಜ್ಞಾಸಿತವ್ಯಂ ।**

(ಛಾ. ಉ. ೮-೧-೧)

ಬ್ರಹ್ಮಪುರವೆಂದು ವರ್ಣಿತವಾಗಿರುವ ಈ ಹೃದಯದಲ್ಲಿ ಪುಂಡರೀಕರೂಪವಾದ ಒಂದು ವಸತಿಯಿರುತ್ತದೆ. ಇದರ ಭೌತಿಕರೂಪವು ಅಲ್ಪವಾದುದು. ಇದರ ಒಳಗಡೆ ಒಂದು ಅಲ್ಪವಾದ ಅವಕಾಶವಿರುತ್ತದೆ ಅದನ್ನೇ ಅನ್ವೇಷಣಮಾಡಿ ಅದರ ರಹಸ್ಯವನ್ನು ತಿಳಿಯತಕ್ಕದ್ದು ಎಂದು ದಹರಾಕಾಶದ ಆಧಾರವಾದ ಯಾವ ಹೃತ್ಪುಂಡರೀಕವುಂಟೋ ಅದೇ ಪುಂಡರೀಕವು ವಿಶ್ವವ್ಯಾಪಿಯೆಂದೂ ಸಹ ಸ್ತುತವಾಗಿದೆ

**ಯಾವಾನ್ವಾ ಅಯಮಾಕಾಶಸ್ತಾವಾನೇಷೋಽಂತರ್ಹೃದಯ ಆಕಾಶ ಉಭೇ ಅಸ್ಮಿನ್ ದ್ಯಾವಾ ಪೃಥಿವೀ ಅಂತರೇವ ಸಮಾಹಿತೇ ಉಭಾವಗ್ನಿಶ್ಚ ವಾಯುಶ್ಚ ಸೂರ್ಯಾಚಂದ್ರಮಸಾವುಭೌ ವಿದ್ಯುನ್ನಕ್ಷತ್ರಾಣಿ ಯಚ್ಚಾಸ್ಯೇಹಾಸ್ತಿ ಯಚ್ಚ ನಾಸ್ತಿ ಸರ್ವಂ ತದಸ್ಮಿನ್‌ಸಮಾಹಿತಮಿತಿ ।**

(ಛಾಂ. ಉ. ೮-೧-೩)

ಯಾವ ಈ ದಹರಾಕಾಶವಿರುತ್ತದೆಯೋ, ಇದರಲ್ಲೇ ದ್ಯಾವಾಪೃಥಿವಿಗಳೂ, ಅಗ್ನಿಯೂ, ವಾಯುವೂ, ಸೂರ್ಯಾಃ ಚಂದ್ರಮಸರೂ, ವಿದ್ಯುತ್ತೂ, ನಕ್ಷತ್ರಗಳೂ, ಭಾವರೂಪ ಮತ್ತು ಅಭಾವರೂಪವಾದ ಸಮುಸ್ತವಸ್ತುಗಳು ಇತ್ಯಾದಿಯಾಗಿ ಸಕಲವೂ ಅಡಗಿವೆ.

**ಅಥ ಯ ಏಷೋಽಂತರೇ ಹೃತ್ಪುಷ್ಕರ ಏವಾಶ್ರಿತೋಽನ್ನಮತ್ತಿ ಸ ಏಷೋಽಗ್ನಿರ್ದಿವಿ ಶ್ರಿತ-
ಸೌರಃ ಕಾಲಾಖ್ಯೋಽದೃಶ್ಯಃ ಸರ್ವಭೂತಾನ್ಯನ್ನಮತ್ತೀತಿ ॥**

(ಮೈತ್ರ್ಯುಪನಿಷತ್ ೬-೨)

ಈ ಹೃತ್ಪುಂಡರೀಕದಲ್ಲಿ ಯಾವ ಪುರುಷನು ಸ್ಥಿತನಾಗಿ ಅನ್ನವನ್ನು ಭುಜಿಸುವನೋ ಅವನೇ ಅಂತರಿಕ್ಷದಲ್ಲಿ ಕಾಲಾಖ್ಯನೂ, ಅದೃಶ್ಯನೂ, ಸಕಲವನ್ನೂ ಭಕ್ಷಿಸುವವನೂ ಆದ ಸೂರ್ಯರೂಪನಾದ ಅಗ್ನಿಯಾಗಿದ್ದಾನೆ

**ಕಃ ಪುಷ್ಕರಃ ಕಿಂ ಮಯೋ ವೇತಿ । ಇದಂ ವಾವ ತತ್ಪುಷ್ಕರಂ ಯೋಽಯಮಾಕಾಶೋಽಸ್ಯೇ ಮಾಶ್ಚತಸ್ರೋ ದಿಶಶ್ಚತಸ್ರ ಉಪದಿಶೋದಲಸಂಸ್ಥಾ ಆಸಂ । ಅರ್ವಾಗ್ವಿಚರತ ಏತೌ ಪ್ರಾಣಾ-
ದಿತ್ಯಾ ಏತಾ ಉಪಾಸೀತೋಮಿತ್ಯೇತದಕ್ಷರೇಣ ವ್ಯಾಹೃತಿಭಿಃ ಸಾವಿತ್ರ್ಯಾ ಚೇತಿ ॥**

(ಮೈತ್ರ್ಯುಪನಿಷತ್ ೬-೨)

ಈ ಪುಷ್ಕರವಾವುದು ? ಇದರ ಸ್ವರೂಪವೇನು ? ಇದರಲ್ಲಿ ಅಡಕವಾಗಿರುವ ತತ್ತ್ವವೇನು ? ಎಂದರೆ ಈ ಪುಷ್ಕರವೇ ಬಾಹ್ಯಾಕಾಶವು. ಬಾಹ್ಯಾಕಾಶವ್ಯಾಪಕವಾದ ನಾಲ್ಕು ದಿಕ್ಕುಗಳೂ ಮತ್ತು ನಾಲ್ಕು ಅವಾಂತರ ದಿಕ್ಕುಗಳೂ ಸಹ ಈ ಪುಷ್ಕರದ ಪರ್ಣಗಳು. ಹೃದಯಸ್ಥವಾದುದೂ ಪ್ರಾಣರೂಪವಾದುದೂ ಆದ ಈ ಹೃತ್ಪುಂಡರೀಕಾಕಾಶವೂ ಮತ್ತು ಬಾಹ್ಯಾಕಾಶದಲ್ಲಿ ವ್ಯಾಪಿಸಿರುವ ಆದಿತ್ಯನೂ ಪರಸ್ಪರವಾಗಿ ಆಕೃಷ್ಟವಾಗಿದ್ದಾರೆ. ಓಂಕಾರರೂಪವಾದ ವ್ಯಾಹೃತಿಗಳಿಂದಲೂ, ಗಾಯತ್ರೀ ಮಂತ್ರದಿಂದಲೂ ಇದರ ಉಪಾಸನೆಯನ್ನು ಮಾಡಬೇಕು. ಈ ಪುಷ್ಕರವೇ ಪೃಥ್ವಿಯು ಮತ್ತು ಇದೇ ಅಗ್ನಿಯು. (ಪುರಾಣಾದಿಗಳಲ್ಲಿ ಯಾವ ಕ್ಷೀರಸಾಗರವೆಂದು ವರ್ಣಿತವಾಗಿದೆಯೋ ಆ) ಅರ್ಣವವೇ

ಈ ಪುಷ್ಕರವು.. ಎಂದರೆ, ವಿಶ್ವತತ್ತ್ವವನ್ನೆಲ್ಲಾ ಅಡಗಿಸಿಕೊಂಡಿರುವ ವಸ್ತುವು ಎಂದಿರುತ್ತದೆ. ಇದನ್ನೇ ಶತಪಥ ಬ್ರಾಹ್ಮಣದಲ್ಲಿ ವರ್ಣಿಸುತ್ತಾ, **ಸತ್ಯಕ್ಕೂ** ಪುಷ್ಕರಕ್ಕೂ ತಾದಾತ್ಮ್ಯವನ್ನು ಹೇಳಿದೆ. ಅಲ್ಲದೆ ಪುಷ್ಕರವನ್ನು ಸತ್ಯ ಯೋನಿಯೆಂದೂ ತಿಳಿಸಿದೆ. ಆದರೆ ಸತ್ಯಕ್ಕೆ ಯೋನಿಯು ಪೃಥಿವ್ಯಾದಿನಾನಾರೂಪಗಳಲ್ಲಿರಬಹುದು. ಅವುಗಳಲ್ಲಿ ಪುಷ್ಕರವೂ ಒಂದು ಎಂದು ಹೇಳಬಹುದು ಅಥವಾ ಪೃಥಿವೀಪುಷ್ಕರಾದಿಗಳೆಲ್ಲವೂ ಒಂದೇ ತತ್ತ್ವವನ್ನು ಪ್ರತಿಬಿಂಬಿಸುವುವು ಎಂದಾದರೂ ಹೇಳಬಹುದು. ಇವುಗಳೆಲ್ಲದರ ತಾದಾತ್ಮ್ಯವನ್ನೂ ತಿಳಿಸುವ ವಾಕ್ಯಗಳನ್ನು ಶತಪಥಬ್ರಾಹ್ಮಣದಲ್ಲಿ ಕಾಣಬಹುದು.

**ಅಥ ಪುಷ್ಕರಪರ್ಣಮುಪದಧಾತಿ। ಯೋನಿರ್ವೈ ಪುಷ್ಕರಪರ್ಣಂ। ಯೋನಿಮೇವೈತದುಪದಧಾತಿ।**
(ಶ. ಬ್ರಾ. ೭-೪-೧-೭)

ಅನಂತರ ವೇದಿಯ ಮಧ್ಯಭಾಗದಲ್ಲಿ ಪುಷ್ಕರಪರ್ಣವು ಇಡಲ್ಪಡುತ್ತದೆ. ಪುಷ್ಕರವೇ ಅಗ್ನಿಯ ಉತ್ಪತ್ತಿಗೆ ಯೋನಿಯಾದುದರಿಂದ, ಪುಷ್ಕರ ರೂಪವಾದ ಯೋನಿಯನ್ನು ಸ್ಥಾಪಿಸುತ್ತಾನೆ. **ಯದ್ವೇವ ಪುಷ್ಕರಪರ್ಣಮುಪದಧಾತಿ** ಈ ಪುಷ್ಕರಪರ್ಣವನ್ನು ಏತಕ್ಕೆ ಸ್ಥಾಪಿಸಬೇಕು ? ಎಂಬ ಪ್ರಶ್ನೆಗೆ ಉತ್ತರವು ಈ ರೀತಿಯಿರುತ್ತದೆ.

**ಆಪೋ ವೈ ಪುಷ್ಕರಂ ತಾಸಾಮಿಯಂ ಪರ್ಣಂ ಯಥಾ ಹ ವಾ ಇದಂ ಪುಷ್ಕರಪರ್ಣಮಪ್ಸ್ವಧ್ಯಾಹಿತಮೇವಮಿಯಮಪ್ಸ್ವಧ್ಯಾಹಿತಾ ಸೇಯಂ ಯೋನಿರಗ್ನೇರಿಯಗ್ಂ ಹ್ಯಗ್ನಿರಸ್ಯೈ ಹಿ ಸರ್ವೋಽಗ್ನಿಶ್ಚೀಯತ ಇಮಾಮೇವೈತದುಪದಧಾತಿ ತಾಮನಂತರ್ಹಿತಾಗ್ಂ ಸತ್ಯಾದುಪದಧಾತೀಮಾಂ ತತ್ಸತ್ಯೇ ಪ್ರತಿಷ್ಠಾಪಯತಿ ತಸ್ಮಾದಿಯಗ್ಂ ಸತ್ಯೇ ಪ್ರತಿಷ್ಠಿತಾ.. ............॥**
(ಶ. ಬ್ರಾ. ೭-೪-೧-೮)

ಪುಷ್ಕರವೆಂದರೆ, ಅಪ್ತತ್ತ್ವವೆಂದರ್ಥ. ಅದರಲ್ಲಿ ಈ ಪೃಥ್ವಿಯೇ ಒಂದು ಪರ್ಣವು. ಯಾವ ರೀತಿಯಲ್ಲಿ ಪುಷ್ಕರಪರ್ಣವು ಉದಕದ ಮೇಲೆ ಪ್ರಸರಿಸಿ ಇರುತ್ತದೆಯೋ ಅದರಂತೆಯೇ ಈ ಪೃಥ್ವಿಯೂ ಸಹ ಅಂತರಿಕ್ಷರೂಪವಾದ ಉದಕದಲ್ಲಿ ಪ್ರಸರಿಸಿ ಪ್ರಕಾಶಿಸುತ್ತಿದೆ. ಈ ಪೃಥ್ವಿಯೇ ಯಜ್ಞವೇದಿಯೂ ಆಗಿರುವುದರಿಂದ, ಅಗ್ನಿಯ ಉತ್ಪತ್ತಿಗೆ ಇದೇ ಯೋನಿ ಎಂದೂ ಅರಿಯಬೇಕು. ಆದುದರಿಂದ ಪುಷ್ಕರಪರ್ಣದ ಸ್ಥಾಪನೆಯಿಂದ ಈ ಪೃಥ್ವಿಯನ್ನೇ ಸ್ಥಾಪಿಸಿದಂತಾಯಿತು. ಸತ್ಯದಿಂದ ಬಾಹ್ಯವಾಗದಿರಲೆಂಬುದೇ ಈ ಸ್ಥಾಪನೆಯ ಉದ್ದಿಶ್ಯವಾಗಿದೆ. ಆದುದರಿಂದ ಪುಷ್ಕರದ ಸ್ಥಾಪನೆಯು, ಈ ಪೃಥ್ವಿಯನ್ನು ಸತ್ಯದ ಆಧಾರದ ಮೇಲೆ ಸ್ಥಾಪಿತವಾಗಿದೆಯೆಂಬ ಅಂಶವನ್ನು ತಿಳಿಸುತ್ತದೆ. ಈ ಪೃಥ್ವಿಯೇ ಸಕಲ ಲೋಕಗಳ ಮಧ್ಯದಲ್ಲಿಯೂ ಸಹ ಪೂರ್ಣವಾದ ಸತ್ಯಸ್ವರೂಪವನ್ನು ಹೊಂದಿರುತ್ತದೆ.

**ಅಪಾಂ ಪೃಷ್ಠಮಸಿ। ಯೋನಿರಗ್ನೇರಿತಿ। ಅಪಾಗ್ಂಹೀಯಂ ಪೃಷ್ಠಂ ಯೋನಿರ್ಹೀಯಮಗ್ನೇಃ ಸಮುದ್ರಮಭಿತಃ ಪಿನ್ವಮಾನಮಿತಿ ಸಮುದ್ರೋ ಹೀಮಾಮಭಿತಃ ಪಿನ್ವತೇ ವರ್ಧಮಾನೋ ಮಹಾಗ್ಂ.... ಪುಷ್ಕರ ಇತಿ ವರ್ಧಮಾನೋ ಮಹೀಯಸ್ವ ಪುಷ್ಕರ ಇತ್ಯೇತದ್ದಿವೋ ಮಾತ್ರಯಾ ವರಿಮ್ಣಾ ಪ್ರಥಸ್ವೇತ್ಯನುವಿಮಾಷ್ಟ್ಯ್ರಸೌ ವಾ ಆದಿತ್ಯ ಏಷೋಽಗ್ನಿರ್ನೋ ಹೈತಮನ್ಯೋ ದಿವೋ ವರಿಮಾ॥**

(ಶ. ಬ್ರಾ. ೭-೪-೧-೯)

ಎಲೈ ಪುಷ್ಕರವೇ, ನೀನು ಅಪ್ಪುಗಳಿಗೆ ಪೃಷ್ಠರೂಪನಾಗಿದ್ದೀಯೆ. ಎಲೈ ಅಗ್ನಿಯ ಉತ್ಪತ್ತಿಪಾತ್ರವೇ, ಈ ಪೃಥ್ವಿಯೇ ಅಪ್ಪುಗಳ ಪೃಷ್ಠವೂ ಅಗ್ನಿಯ ಯೋನಿಯೂ ಆಗಿರುತ್ತದೆ. ಈ ಪೃಥ್ವಿಯ ಸುತ್ತಲೂ ಸಮುದ್ರವು (ಅಂತರಿಕ್ಷವು) ವಿಸ್ತೃತವಾಗಿ ಹರಡುತ್ತದೆ. ಆದುದರಿಂದ ಎಲೈ ಸತ್ಯಾಶ್ರಯವೇ, ಪುಷ್ಕರದಮೇಲೆ ಪ್ರಸರಿಸಿ ಸ್ಥಾಪಿತನಾಗು ಅಂತರಿಕ್ಷದ ವ್ಯಾಪ್ತಿಯಿಂದಲೂ ಅದೇ ವಿಸ್ತೃತಿಯಿಂದಲೂ ಪ್ರಸರಿಸು. ಈ ಅಗ್ನಿಯೇ ಆದಿತ್ಯನ ರೂಪಾಂತರವಾಗಿದೆ. ಆದಿತ್ಯನನ್ನು ಧರಿಸಲು ಯಾವರೀತಿ ಅತ್ಯಂತ ವಿಸ್ತೃತವಾದ ಅಂತರಿಕ್ಷದಿಂದ ಮಾತ್ರ ಸಾಧ್ಯವೋ, ಅದೇರೀತಿ ಈ ಅಗ್ನಿಯನ್ನು ಧರಿಸಲು ತದಾಶ್ರಯವು. ಅಗ್ನಿರೂಪಿಯಾದ ಆದಿತ್ಯನನ್ನು ಧರಿಸಲು ಅತ್ಯಂತ ವಿಸ್ತೃತಿಯುಳ್ಳದ್ದಾಗಿರಬೇಕು. ಆದುದರಿಂದ ನೀನೂ ಅಂತರಿಕ್ಷರೂಪವನ್ನೇ ಹೊಂದಿ ಅಗ್ನಿಯನ್ನು ನನ್ನಲ್ಲಿ ಧರಿಸು ಎಂದು ಅಗ್ನಿಯೋನಿಯಾದ ಪುಷ್ಕರವು ಪ್ರಾರ್ಥಿತವಾಗಿದೆ.

ಈ ಮೇಲಿನ ವರ್ಣನೆಯಲ್ಲಿ ಪುಷ್ಕರದ ಎರಡು ಅಂಶಗಳು ಸ್ಪಷ್ಟವಾಗಿದೆ. ಮೊದಲನೆಯದಾಗಿ ಪುಷ್ಕರವು ಅಗ್ನಿಯ ಯೋನಿಯು, ಎರಡನೆಯದಾಗಿ ಪುಷ್ಕರವು ಅಂತರಿಕ್ಷದ ವಿಸ್ತೃತಿಯುಳ್ಳದ್ದಾಗಿರುತ್ತದೆ. ಬಾಹ್ಯವಾದ ಪುಷ್ಕರವು ಹೃದಯಾಂತರ್ಗತವಾದ ಪುಷ್ಕರದ (ಹೃತ್ಪುಂಡರೀಕದ) ಪ್ರತೀಕಮಾತ್ರವಾಗಿರುತ್ತದೆ. ಆದುದರಿಂದ ಅದೇ ಅಂತರಿಕ್ಷದ ವಿಸ್ತೃತಿಯು ಹೃತ್ಪುಂಡರೀಕದ್ದೂ ಆಗಿರುವುದರಿಂದ ಇದರಲ್ಲೇ ದ್ಯಾವಾಪೃಥಿವಿಗಳೆಲ್ಲವೂ ಅಡಕವಾಗಿರುತ್ತವೆ. ಶರೀರಾಂತರ್ಗತವಾದ ಹೃತ್ಪುಂಡರೀಕದ ಸ್ವರೂಪವನ್ನು ತಿಳಿಯುವುದಕ್ಕೆ ಮೊದಲು **ಪುಷ್ಕರ**ವೆಂಬ ರೂಪಕದ ತಾತ್ಪರ್ಯವೇನು ಎಂಬುದನ್ನು ವಿಮರ್ಶಿಸಬೇಕು.

ಋಕ್ಸಂಹಿತೆಯಲ್ಲಿ ಪುಷ್ಕರದ ರೂಪಕವು ನಿರ್ದಿಷ್ಟವಾಗಿರುವುದರಲ್ಲಿ ವಸಿಷ್ಠನ ಉತ್ಪತ್ತಿಯನ್ನು ವಿವರಿಸುವ ಪ್ರಕರಣವೇ ಮೊಟ್ಟಮೊದಲನೆಯದಾಗಿರುತ್ತದೆ. ಪ್ರಕೃತವಾದ ಮಂತ್ರದಲ್ಲಿ ಅಗ್ನಿಯ ಉತ್ಪತ್ತಿಯನ್ನು ತಿಳಿಸುವುದೂ ಅದೇರೀತಿಯಲ್ಲಿರುತ್ತದೆ. ವಸಿಷ್ಠನ ಉತ್ಪತ್ತಿ ಕ್ರಮವು ಸಂಹಿತೆಯಲ್ಲಿ ಈ ರೀತಿ ವರ್ಣಿತವಾಗಿದೆ.

**ಉತಾಸಿ ಮೈತ್ರಾವರುಣೋ ವಸಿಷ್ಠೋರ್ವಶ್ಯಾ ಬ್ರಹ್ಮನ್ಮನಸೋಽಧಿಜಾತಃ ।**
**ದ್ರಪ್ಸಂ ಸ್ಕನ್ನಂ ಬ್ರಹ್ಮಣಾ ದೈವ್ಯೇನ ವಿಶ್ವೇ ದೇವಾಃ ಪುಷ್ಕರೇ ತ್ವಾದದಂತ ॥**

(೭-೩೩-೧೧)

ಬ್ರಹ್ಮಶ್ರೇಷ್ಠನಾದ ಎಲೈ ವಸಿಷ್ಠನೇ, ಮೈತ್ರಾವರುಣರ ಸಂಬಂಧಿಯಾಗಿ ಉರ್ವಶಿಯಲ್ಲಿ ನೀನು ಜನಿಸಿದವನು. ಪವಿತ್ರನಾದ ನಿನ್ನನ್ನು ಸಕಲ ದೇವತೆಗಳೂ ಸಹ ದೈವಿಕವಾದ ಕ್ರಿಯೆಗಳಿಂದ ಉಪಚರಿಸಿದರು ಮತ್ತು ವೇದೋಕ್ತವಾದ ಮಂತ್ರಗಳಿಂದ ನಿನ್ನನ್ನು ಪುಷ್ಕರದಲ್ಲಿ ಧರಿಸಿದರು ಎಂದು ಪ್ರಶಂಸಿಸಿದೆ. ಇದೇ ಅಂಶವನ್ನು ಬೃಹದ್ದೇವತೆಯಲ್ಲಿ ಈ ರೀತಿ ತಿಳಿಸಿದೆ.

**ತಯೋರಾದಿತ್ಯಯೋಃ ಸತ್ರೇ ದೃಷ್ಟ್ವಾಪ್ಸರಸಮುರ್ವಶೀಂ ।**
**ರೇತಶ್ಚಸ್ಕಂದ ತತ್ಕುಂಭೇ ನ್ಯಪತದ್ವಾಸತೀವರೇ ॥**
**ತೇನೈವ ತು ಮುಹೂರ್ತೇನ ವೀರ್ಯವಂತೌ ತಪಸ್ವಿನಾ ।**
**ಅಗಸ್ತ್ಯಶ್ಚ ವಸಿಷ್ಠಶ್ಚ ತತ್ರರ್ಷೀ ಸಂಬಭೂವತುಃ ॥**
**ಬಹುಧಾ ಪತಿತೇ ಶುಕ್ರೇ ಕಲಶೇಽಥ ಜಲೇ ಸ್ಥಲೇ ।**

ಸ್ಥಲೇ ವಸಿಷ್ಠಸ್ತು ಮುನಿಃ ಸಂಭೂತ ಋಷಿಸತ್ತಮಃ ॥
ಕುಂಭೇಸ್ತ್ವಗಸ್ತ್ಯಃ ಸಂಭೂತೋ ಜಲೇ ಮತ್ಸ್ಯೋ ಮಹಾದ್ಯುತಿಃ ।
ಉದಿಯಾಯ ತತೋಽಗಸ್ತ್ಯಃ ಶಮ್ಯಾಮಾತ್ರೋ ಮಹಾಯಶಾಃ ॥
ಮಾನೇನ ಸಂಮಿತೋ ಯಸ್ಮಾತ್ ತಸ್ಮಾನ್ಮಾನ್ಯ ಇಹೋಚ್ಯತೇ ।
ಯದ್ವಾ ಕುಂಭಾದೃಷಿರ್ಜಾತಃ ಕುಂಭೇನಾಪಿ ಹಿ ಮೀಯತೇ ॥
ಕುಂಭ ಇತ್ಯಭಿಧಾನಂ ತು ಪರಿಮಾಣಸ್ಯ ಲಕ್ಷ್ಯತೇ ।
ತತೋಽಪ್ಸು ಗೃಹ್ಯಮಾಣಾಸು ವಸಿಷ್ಠಃ ಪುಷ್ಕರೇ ಸ್ಥಿತಃ ॥
ಸರ್ವತ್ರ ಪುಷ್ಕರಂ ತತ್ರ ವಿಶ್ವೇ ದೇವಾ ಅಧಾರಯನ್ ।
ಉತ್ಥಾಯ ಸಲಿಲಾತ್ತಸ್ಮಾದಥ ತೇಪೇ ಮಹತ್ತಪಃ ॥

(ಬೃ. ದೇ. ೫-೧೪೯ ರಿಂದ ೧೫೫)

ಆದಿತ್ಯರಾದ ಮಿತ್ರ ಮತ್ತು ವರುಣರಿಬ್ಬರೂ ಸಹ ಸತ್ರಕಾಲದಲ್ಲಿ ಉರ್ವಶಿಯನ್ನು ನೋಡಿದರು. ಆಗ ಒಡನೆಯೇ ಕಾಮಮೋಹಿತರಾದುದರಿಂದ ಅವರ ವೀರ್ಯಸ್ಖಲನವಾಯಿತು. ಆಗ ಅದು ವಸತೀವರಿಯೆಂಬ ಪಾತ್ರೆಯೊಳಗೆ ಬಿದ್ದಿತು. ಆ ಒಡನೆಯೇ ವೀರ್ಯವಂತರೂ, ತಪಸ್ವಿಗಳೂ ಆದ ಅಗಸ್ತ್ಯನೂ ಮತ್ತು ವಸಿಷ್ಠನೂ ಸಹ ಅದರಿಂದ ಉತ್ಪನ್ನರಾದರು. ಸ್ಖಲಿತವಾದ ಆ ವೀರ್ಯವು ಕುಂಭದಲ್ಲಿಯೂ, ಉದಕದಲ್ಲಿಯೂ, ಪೃಥ್ವಿಯ ಮೇಲೂ ಬಿದ್ದಿತು. ಪೃಥ್ವಿಯ ಮೇಲೆ ಬಿದ್ದ ಭಾಗದಿಂದ ವಸಿಷ್ಠನು ಉತ್ಪನ್ನನಾದನು. ಕುಂಭದಲ್ಲಿ ಬಿದ್ದ ಭಾಗದಿಂದ ಅಗಸ್ತ್ಯನೂ, ಅಪ್ಪಿನಲ್ಲಿ ಬಿದ್ದ ಭಾಗದಿಂದ ಪ್ರಕಾಶಮಾನವಾದ ಮತ್ಸ್ಯವೂ ಉತ್ಪನ್ನವಾದವು. ಅಗಸ್ತ್ಯನು ಮಾತ್ರ ಶಮ್ಯಾಪರಿಮಿತಿಯುಳ್ಳವನಾಗಿ ಮಾನದಿಂದ (ಕುಂಭ) ಸಂಭೂತನಾದುದರಿಂದ ಮಾನ್ಯನೆಂದು ಇವನ ಹೆಸರಾಯಿತು. ಆದ ರಿಂದಲೇ ಕುಂಭಸಂಭವನೆಂದೂ ಪ್ರಸಿದ್ಧನಾದನು. ಅನಂತರ ಉದಕಗ್ರಹಣವಾದ ಕಾಲದಲ್ಲಿ ವಸಿಷ್ಠನು ಪುಷ್ಕರದಲ್ಲಿ ಸ್ಥಿತನಾಗಿರತಕ್ಕ ವಿಷಯವು ಗೋಚರವಾಯಿತು. ಆಗ ಪುಷ್ಕರಸ್ಥಿತನಾದ ವಸಿಷ್ಠನನ್ನು ಸಕಲ ದೇವತೆಗಳೂ ಪರಿಗ್ರಹಿಸಿ ಪ್ರಶಂಸಿದರು. ಉದಕದಿಂದ ಬಹಿರ್ಗತನಾಗಿ ವಸಿಷ್ಠನು ತಪಸ್ಸನ್ನಾಚರಿಸಿದನು.

ನಾಮಾಸ್ಯ ಗುಣತೋ ಜಜ್ಞೇ ವಸತೇಃ ಶ್ರೈಷ್ಠ್ಯಕರ್ಮಣಃ ।

(ಬೃ. ದೇ. ೫-೧೫೬)

ಅವನ ಶ್ರೇಷ್ಠವಾದ ಗುಣಗಳಿಂದಲೂ ಉತ್ತಮವಾದ ಕರ್ಮಗಳಿಂದಲೂ ಅವನಿಗೆ ಈ ಹೆಸರು ಪ್ರಸಿದ್ಧವಾಯಿತು. ಶ್ರೇಷ್ಠತ್ವವನ್ನು ತೋರಿಸುವ **ವಸ್** ಧಾತುವಿನಿಂದ **ವಸಿಷ್ಠ** ಎಂಬ ನಾಮವು ನಿಷ್ಪನ್ನವಾಗಿದೆಯೆಂದು ಬೃಹದ್ದೇವತಾ ವಾಕ್ಯದ ವಿವರಣೆಯಿರುತ್ತದೆ.

ಇದೇ ರೀತಿ ಪ್ರಕೃತವಾದ ಮಂತ್ರದಲ್ಲಿ ಪುಷ್ಕರದಲ್ಲಿ ಅಗ್ನಿಮಥನದ ಸ್ವರೂಪವೂ ಅಗ್ನಿಯ ಉತ್ಪತ್ತಿ ಕ್ರಮವೂ ವರ್ಣಿತವಾಗಿದೆ. ಅಥರ್ವವೇದದಲ್ಲೂ ಸಹ ಇದೇ ವಿಷಯವು ತಿಳಿಸಲಟ್ಟಿದೆ. ಆದರೆ ವಿವರಣೆಯಲ್ಲಿ ಸ್ವಲ್ಪ ವ್ಯತ್ಯಾಸವಿರುತ್ತದೆ. (ಅ. ವೇ. ೧೦-೮-೩೪) ಈ ರೀತಿ, ಇಂತಹ ಸಂದರ್ಭಗಳಲ್ಲೆಲ್ಲಾ **ತ್ರಿತ್ವದ** ನಿರ್ದೇಶವು ಗಮನಾರ್ಹವಾದುದು.

**ಪಿತೃ**=ಮಿತ್ರ, ವರುಣ, ದ್ಯೌಃ । **ಮಾತೃ**=ಉರ್ವಶೀ, ಪೃಥ್ವೀ । **ಪುತ್ರ**=ವಸಿಷ್ಠ, ಅಗ್ನಿ, ಆಯು ।

ಈ ರೀತಿ ದೇವಪಿತೃತ್ವ, ದೇವಮಾತೃತ್ವ ಮತ್ತು ದೇವಪುತ್ರತ್ವ ಎಂಬ ತ್ರಿತ್ವವು ಸಂಹಿತೆಗಳಲ್ಲಿ ಪ್ರಸಿದ್ಧವಾಗಿ ಪ್ರಶಂಸಿತವಾಗಿದೆ. ಅಲ್ಲದೇ **ಅಗ್ನಿ, ವಸಿಷ್ಠ** ಮತ್ತು **ಆಯು** ಈ ಮೂರು ದೇವಪುತ್ರರಿಗೂ **ತಾದಾತ್ಮ್ಯ**ವನ್ನು ತಿಳಿಸತಕ್ಕ ಸಂದರ್ಭಗಳೂ ಅನೇಕವಾಗಿರುತ್ತವೆ. **ವಿಶಾಯುರಗ್ನೇ, ವಿಶ ಆವಿವಾಸಸಿ** (೧-೩೧-೫) **ವಿಶ್ವಾಯುರಗ್ನೇ ಗುಹಾ ಗುಹಂ ಗಾಃ** (೧-೬೭-೬) ಇತ್ಯಾದಿ ಮಂತ್ರಗಳಲ್ಲೂ,

**" ಆ ಯಸ್ತೇ ಅಗ್ನ ಇಧತೇ ಅನೀಕಂ ವಸಿಷ್ಠ ಶುಕ್ರ ದೀದಿವಃ ಪಾವಕ ।**

(ಋ. ಸಂ. ೭-೧-೮)

ಇತ್ಯಾದಿ ಮಂತ್ರಗಳಿಂದಲೂ ಈ ಅಭಿಪ್ರಾಯವು ಸ್ಪಷ್ಟವಾಗುತ್ತದೆ. ಇಂತಹ ಸಂದರ್ಭಗಳಲ್ಲಿ **ವಿಶ್ವಾಯು, ವಸಿಷ್ಠ** ಎಂಬ ಪದಗಳು **ಅಗ್ನಿಯ** ಗುಣಗಳನ್ನು ವರ್ಣಿಸುವ ವಿಶೇಷಣಪದಗಳೆಂದೂ ಹೇಳಬೇಕಾಗುತ್ತದೆ. ಆದರೆ, ಪುಷ್ಕರದಿಂದ ಅಗ್ನಿಯು ಉತ್ಪನ್ನನಾದನು ಎಂಬುದಕ್ಕೂ, ಪುಷ್ಕರದಲ್ಲಿ ವಸಿಷ್ಠನು ಸ್ಥಿತನಾಗಿದ್ದನು ಎಂಬುದಕ್ಕೂ ತಾತ್ಪರ್ಯ ಭೇದವುಂಟೇ ಅಥವಾ ಇಲ್ಲವೇ ಎಂಬುದೂ ಒಂದಂಶ. ಮೊದಲು **ಪುಷ್ಕರೇ ಸ್ಥಿತಃ** ಎಂದಿರುವಾಗ **ಸ್ಥಿತಃ** ಎನ್ನುವ ಪದಕ್ಕೆ ನಿಷ್ಕೃಷ್ಟವಾದ ಅರ್ಥವೇನು ಎಂಬುದನ್ನು ತಿಳಿಯಬೇಕು.

**ಸ್ಥಿತಃ** ಎಂಬ ಪದಕ್ಕೆ ಪುಷ್ಕರದಲ್ಲಿ ನಿಂತಿದ್ದನು ಎಂಬ ಅರ್ಥವನ್ನು ಹೇಳುವುದು ಸರಿಯಲ್ಲ. **ಸ್ಥಿತಃ** ಎಂಬುದಕ್ಕೆ ಸ್ವರೂಪತಃ ಆವಿರ್ಭೂತನಾಗಿ ಕಾಣಿಸಿಕೊಂಡನು ಎಂದರ್ಥ. **ಬ್ರಹ್ಮಾಣಮೀಶಂ ಕಮಲಾಸನಸ್ಥಂ** (ಭ. ಗೀ. ೧೧-೧೫) ಎಂಬ ಗೀತಾವಾಕ್ಯದಲ್ಲೂ **"ಸ್ಥಿತಂ ಚ ಯಚ್ಚ ಸಚ್ಚ ತ್ಯಚ್ಚ"** (ಬೃ. ಉ. ೨-೩-೧) ಇತ್ಯಾದ್ಯುಪನಿಷದ್ವಾಕ್ಯಗಳಲ್ಲೂ ಸಹ **ಸ್ಥಿತ** ಶಬ್ದಕ್ಕೆ ಆವಿರ್ಭೂತವಾಗಿರುವುದು, ವ್ಯಾಪಿಸಿರುವುದು ಎಂಬರ್ಥವಿರುವಂತೆಯೇ ಪ್ರಕೃತದಲ್ಲಿಯೂ ಹೇಳಬೇಕಾಗುತ್ತದೆ.

ಮೇಲೆ ವಿವರಿಸಿರುವಂತೆ ಪುಷ್ಕರಸ್ಥನಾದ ವಸಿಷ್ಠನಿಗೂ, ಪುಷ್ಕರೋತ್ಪನ್ನನಾದ ಅಗ್ನಿಗೂ ತಾದಾತ್ಮ್ಯವೊಂದು ಕಡೆ; ಅಲ್ಲದೇ, **ಪುಷ್ಕರ, ಪೃಥ್ವೀ, ಅಂತರಿಕ್ಷ , ಅಪ್ಪು** ಇವುಗಳ ತಾದಾತ್ಮ್ಯವೊಂದು ಕಡೆ; ಹೀಗೆ ಇಂತಹ ಸಂದರ್ಭಗಳಲ್ಲಿರತಕ್ಕ ವರ್ಣನಗಳೆಲ್ಲವೂ ಒಂದೇ ಅಂಶದ ವರ್ಣನವೇ ಆಗಿವೆಯೆಂದು ಹೇಳಬಹುದೇ ಎಂಬ ವಿಷಯವನ್ನು ನಿಷ್ಕೃಷ್ಟವಾಗಿ ತಿಳಿಯಲು ಇನ್ನೂ ಕೆಲವು ವಿಷಯಗಳನ್ನು ಪರಿಶೀಲಿಸಬೇಕಾಗುತ್ತದೆ.

ಪುಷ್ಕರಸ್ಥವೆಂದು ಯಾವ ತತ್ತ್ವವು ವರ್ಣಿತವಾಗಿದೆಯೋ ಅದೇ ಪೃಥಿವೀಸ್ಥವೆಂದೂ ವರ್ಣಿತವಾಗಿರುತ್ತದೆ. ಉದಕದಿಂದ ಉತ್ಪನ್ನವಾದ ಸಕಲ ವಸ್ತುವೂ ಪೃಥ್ವಿಯನ್ನೇ ಆಧಾರವಾಗಿಟ್ಟುಕೊಂಡು ಸ್ಥಿತವಾಗತಕ್ಕದ್ದು. ಪೃಥ್ವೀರೂಪವಾದ ಪುಷ್ಕರದಲ್ಲಿ ಸ್ಥಿತನಾಗಿರತಕ್ಕವನೇ ಶಾಶ್ವತವಾದ ಸ್ಥಿತಿಯುಳ್ಳವನು.

**"ಪುಂಡರೀಕಂ ನವದ್ವಾರಂ........ ತಸ್ಮಿನ್ ಯದ್ಯಕ್ಷಮಾತ್ಮನ್ವತ್ ತದ್ವೈ ಬ್ರಹ್ಮವಿದೋ ವಿದುಃ ।**

(ಅ. ವೇ. ೧೦-೮-೪೩)

ಬ್ರಹ್ಮರೂಪವಾದ **ಯಕ್ಷವು** ಸ್ಥಿತವಾಗಿರುವುದೂ, ಆತ್ಮನ್ವಂತವಾಗಿರುವ ಬ್ರಹ್ಮಾಸನರೂಪವಾಗಿರುವುದೂ, ನವದ್ವಾರವುಳ್ಳದ್ದೂ ಆದ ಪುಂಡರೀಕದ ದರ್ಶನವೇ ಬ್ರಹ್ಮವಿತ್ತುಗಳ ಅನ್ವೇಷಣದ ಗುರಿ ಎಂಬ ಯಾವ ಬ್ರಹ್ಮಪುರವು ವರ್ಣಿತವಾಗಿದೆಯೋ, ಅದನ್ನೇ ಛಾಂದೋಗ್ಯೋಪನಿಷತ್ತಿನಲ್ಲಿ,

**ಯಾ ವೈ ಸಾ ಪೃಥಿವೀಯಂ ವಾವ ಸಾ ಯದಿದಮಸ್ಮಿನ್ ಪುರುಷೇ ಶರೀರಮಸ್ಮಿನ್ ಹೀಮೇ ಪ್ರಾಣಾಃ ಪ್ರತಿಷ್ಠಿತಾ ಏತದೇವ ನಾತಿಶೀಯಂತೇ ॥**

(ಛಾ. ಉ. ೩-೧೨ ೩)

ಯಾವ ಪೃಥ್ವೀರೂಪವಾದ ತತ್ತ್ವವುಂಟೋ ಅದೇ ತತ್ತ್ವವು ಪುರುಷಶರೀರರೂಪದಲ್ಲಿಯೂ ಇರುತ್ತದೆ. ಅದರಲ್ಲೇ ಈ ಪ್ರಾಣತತ್ತ್ವಗಳೆಲ್ಲಾ ಅಡಗಿವೆ. ಅವು ಆ ಶರೀರವನ್ನು ಮೀರಿರುವುದಿಲ್ಲ ಎಂದು ಸ್ತುತವಾಗಿದೆ. ಸಾಯಣರು ಪ್ರಕೃತವಾದ ಮಂತ್ರದಲ್ಲಿ ಸೂಚಿತವಾಗುವ ತಾತ್ಪರ್ಯವನ್ನು ಈ ಮಂತ್ರದ ಭಾಷ್ಯದಲ್ಲಿ (೬-೧೬-೧೩) ವಿವರಿಸುವಾಗ ಇದೇ ತಾತ್ಪರ್ಯವನ್ನು ತಿಳಿಸಿದ್ದಾರೆ.

**" ಭೂಮಿಶ್ಚ ಸರ್ವಜಗತ ಆಧಾರಭೂತೇತಿ ಪುಷ್ಕರಪರ್ಣಸ್ಯ ಸರ್ವಜಗದ್ಧಾರಕತ್ವಂ ॥ "**

(ಸಾ. ಭಾ)

ಪುಷ್ಕರವೆಂದರೆ ಪುಷ್ಕರಪರ್ಣವೆಂದರ್ಥ. ಪೃಥ್ವಿಯೇ ಈ ರೀತಿಯಲ್ಲಿ ನಿರ್ದಿಷ್ಟವಾಗಿದೆ. ಪೃಥ್ವಿಯು ಸರ್ವಜಗದ್ಧಾರಕವಾದುದರಿಂದ ಪುಷ್ಕರಪರ್ಣವೂ ಸರ್ವಜಗದ್ಧಾರಕವೆಂದು ಸ್ತುತವಾಗಿದೆ. ಇದೇ ವಿಷಯವನ್ನು ತೈತ್ತಿರೀಯ ಬ್ರಾಹ್ಮಣದಲ್ಲೂ ತಿಳಿಸುತ್ತಾ,

**ಸೋಽಪಶ್ಯತ್ಪುಷ್ಕರಪರ್ಣಂ ತಿಷ್ಠತ್ । ಸೋಽಮನ್ಯತ ।................ .. .... ಸ ಪೃಥಿವೀಮಧ ಆರ್ಛತ್ । ತಸ್ಯಾ ಉಪಹತ್ಯೋದಮಜ್ಜತ್ । ತತ್ಪುಷ್ಕರಪರ್ಣೇಽಪ್ರಥಯತ್ । ಯದಪ್ರಥಯತ್ । ತತ್ಪೃಥಿವ್ಯೈ ಪೃಥಿವಿತ್ವಂ ॥** (ತೈ. ಬ್ರಾ. ೧-೧-೩ ೬)

ಜಗತ್ಸೃಷ್ಟಿಕರ್ತನಾದ ಪ್ರಜಾಪತಿಯು ಜಗತ್ತನ್ನು ಸೃಷ್ಟಿಸಿದ ಕ್ರಮವನ್ನು ಇಲ್ಲಿ ತಿಳಿಸಿದೆ. ಜಗತ್ಸೃಷ್ಟಿಗೆ ಪೂರ್ವದಲ್ಲಿ ಸಕಲವೂ ಉದಕರೂಪವೇ ಆಗಿದ್ದಿತು. ಆಗ ಪ್ರಜಾಪತಿಯು ಭೂತಜಾತಗಳ ಸೃಷ್ಟಿಯು ಯಾವ ರೀತಿಯಲ್ಲಿ ಆಗಲ್ಪಡಸಾಧ್ಯ ಎಂಬ ವಿಷಯದಲ್ಲಿ ಧ್ಯಾನರೂಪವಾದ ಯೋಜನೆಯುಳ್ಳವನಾಗಿ ಅದೇ ಸಲಿಲದಲ್ಲಿ ಊರ್ಧ್ವವಾಗಿರುವ ಪುಷ್ಕರಪರ್ಣವನ್ನು ಕಂಡನು. ಆಗ, ಸ್ಥಾವರಜಂಗಮಾತ್ಮಕವಾದ ಸಕಲಜಗತ್ತಿಗೂ ಇದೇ ಪುಷ್ಕರಪರ್ಣವು ಆಧಾರಭೂತವಾಗಿರತಕ್ಕದ್ದು ಎಂದು ಸಂಕಲ್ಪಿಸಿ ಭೂತಾಧಾರವಾದ ಪೃಥ್ವಿಯನ್ನು ಉದಕದಲ್ಲಿ ಗ್ರಹಿಸಲು ಪುಷ್ಕರಪರ್ಣದ ಸಮೀಪದಲ್ಲೇ ನೀರಿನಲ್ಲಿ ಮುಳುಗಿದನು. ಆಗ ಮೃದ್ರೂಪವಾದ ಪೃಥ್ವಿಯನ್ನು ತೆಗೆದು ಪುಷ್ಕರದಲ್ಲಿಟ್ಟು ಅದನ್ನು ವಿಸ್ತೃತವಾಗಿ ಹರಡುವಂತೆ ಮಾಡಿದನು. ಅದೇ ಜಗದಾಧಾರವಾದ ಪೃಥಿವಿಯಾಯಿತು. ಆದುದರಿಂದ ಸಲಿಲ, ಅಂತರಿಕ್ಷ, ಪುಷ್ಕರ, ಪೃಥ್ವೀ ಇವೆಲ್ಲವೂ ಒಂದೇಮೂಲದ ರೂಪಾಂತರಗಳಾದುವು, ಎಂಬುದೂ ಇದರಿಂದ ತಿಳಿಯುತ್ತದೆ ಅಥವಾ ಪುಷ್ಕರವೇ ಪೃಥ್ವಿರೂಪದಲ್ಲಿ ಪರಿಣತವಾಯಿತು ಎಂದೂ ಹೇಳಬಹುದು.

**ತ್ವಾಮಗ್ನೇ ಪುಷ್ಕರಾದಧೀತ್ಯಾಹ ಪುಷ್ಕರಪರ್ಣೇ ಹ್ಯೇನಮುಪಾಶ್ರಿತಮವಿಂದತ್ ।**

(ತೈ. ಸಂ, ೫-೧-೪-೪)

ಪುಷ್ಕರವರ್ಣದಲ್ಲಿ ಆಶ್ರಿತನಾದ ಅಗ್ನಿಯನ್ನು ಅಂಗಿರಸ್ಸುಗಳು ಸಾಕ್ಷಾತ್ಕರಿಸಿದರು ಎಂಬ ತೈತ್ತಿರೀಯ ಸಂಹಿತಾ ವಾಕ್ಯವೂ ಸಾಯಣರಿಂದ ಉದಾಹೃತವಾಗಿದೆ. ಅಲ್ಲಿಗೂ ಕೂಡ ಪೃಥ್ವಿಗೂ ಪುಷ್ಕರಕ್ಕೂ ತಾದಾತ್ಮ್ಯವನ್ನು ತೋರಿಸುವುದೇ ಉದ್ದಿಶ್ಯವಾಗಿದೆ. **ಅಪಾಂನಪಾತ್** ಎಂಬ ವಿಶೇಷಣವು ಸಲಿಲದಿಂದ ಉತ್ಪನ್ನನಾದ ಅಗ್ನಿಯ ಸ್ವರೂಪವನ್ನು ತಿಳಿಸುತ್ತದೆ. ಪುಷ್ಕರಪರ್ಣವೂ ಸಹ ಅದೇ ಮಹತ್ಸಲಿಲಾವಯವವಾದುದರಿಂದ ಪುಷ್ಕರಪರ್ಣದಲ್ಲಿ ಉಪಾಶ್ರಿತನಾದ ಅಗ್ನಿಯೂ ಅಪಾಂನಪಾತ್ ಎಂಬ ವಿಶೇಷಣದಿಂದಲೇ ವರ್ಣಿತನಾಗಿದಾನೆ ಆದರೆ, ಅಗ್ನಿಯು ಪುಷ್ಕರಪರ್ಣದಲ್ಲಿ ಆಶ್ರಯವನ್ನು ಹೊಂದಿದ್ದನು ಎಂಬುದಕ್ಕೂ ವಸಿಷ್ಠನು ಪುಷ್ಕರಪರ್ಣದಲ್ಲಿ ಸ್ಥಿತನಾಗಿದ್ದನು ಎಂಬುದಕ್ಕೂ ಏನು ಸಂಬಂಧ, ಅವೆರಡು ಅಂಶಗಳನ್ನೂ ಒಟ್ಟಿಗೆ ಸೇರಿಸಬೇಕಾದ ಸಂದರ್ಭವೇನು ಎಂದು ಪ್ರಶ್ನಿಸಿದರೆ, ವಸಿಷ್ಠನೂ ಸಹ ಅಗ್ನಿಯ ರೂಪಾಂತರವೇ ಎಂಬುದನ್ನು ಮೇಲೆ ಸೂಕ್ಷ್ಮವಾಗಿ ತಿಳಿಸಿದೆ. ಅಗ್ನಿಗೂ ವಸಿಷ್ಠನಿಗೂ ತಾದಾತ್ಮ್ಯವನ್ನು ಹೇಳಿರುವ ಸಂದರ್ಭಗಳೂ ಅನೇಕವಿರುತ್ತವೆ.

**"ಅದಬ್ಧವ್ರತಪ್ರಮತಿರ್ವಸಿಷ್ಠ ಇತ್ಯಗ್ನಿರ್ವೈ ದೇವಾನಾಂ ವಸಿಷ್ಠಃ"**

(ಐ ಬ್ರಾ ೧-೨೮)

ಎಂಬಲ್ಲಿ ಋಕ್ಸಂಹಿತಾ ವಾಕ್ಯವನ್ನು ವಿವರಿಸುತ್ತಾ (೨-೯-೧) ಅತಿಶಯವಾಗಿ ನಿವಾಸಹೇತುವಾದುದರಿಂದ ಅಗ್ನಿಯೇ ದೇವತೆಗಳಲ್ಲೆಲ್ಲಾ ಉತ್ತಮನಾದ **ವಸಿಷ್ಠ**ನು ಎಂಬ ತಾದಾತ್ಮ್ಯವನ್ನು ಸ್ಪಷ್ಟವಾಗಿ ತೋರಿಸಿದೆ. ಅದೇ ಅಲ್ಲದೇ ಯಾವ ಪ್ರಜಾಪತಿಯು ಸಲಿಲಾವೃತವಾಗಿದ್ದ ಭೂತಜಾತಗಳನ್ನು ಪುಷ್ಕರಪರ್ಣದಲ್ಲಿ ಸ್ಥಿತವಾಗಿರುವಂತೆ ಮಾಡಿದನೋ ಅದೇ ಪ್ರಜಾಪತಿಯೇ ವಸಿಷ್ಠನೆಂದೂ ವರ್ಣಿತನಾಗಿದ್ದಾನೆ.

**ಪ್ರಜಾಪತಿರ್ಹ ವಾ ಏತೇನಾಗ್ರೇ ಯಜ್ಞೇನೇಜೇ।................ಸ ವೈ ದಕ್ಷೋ ನಾಮ। ತದ್ಯದೇ-
ನೇನ ಸೋಽಗ್ರೇಽಯಜತ ತಸ್ಮಾದ್ದಾಕ್ಷಾಯಣಯಜ್ಞೋ ನಾಮೋತ್ಯೈನಮೇಕೇ ವಸಿಷ್ಠಯಜ್ಞ
ಇತ್ಯಾಚಕ್ಷತ ಏಷ ವೈ ವಸಿಷ್ಠ ಏತಮೇವ ತದನ್ವಾಚಕ್ಷತೇ ಸ ಏತೇನ ಯಜ್ಞೇನೇಜೇ।**

(ಶ.ಬ್ರಾ. ೨-೪-೪-೨)

ಪ್ರಜಾಪತಿಯು ಪ್ರಥಮತಃ ಸಂತಾನೇಚ್ಛೆಯುಳ್ಳವನಾಗಿ ಯಜ್ಞದಿಂದ ಯಜ್ಞವನ್ನು ಆರಾಧಿಸಿದನು. ಅವನೇ ದಕ್ಷಾಖ್ಯನು ಆ ಯಜ್ಞವೇ ದಾಕ್ಷಾಯಣಯಜ್ಞವೆಂದು ಪ್ರಸಿದ್ಧವಾಯಿತು. ಇದೇ ಪ್ರಜಾಪತಿಯೇ ವಸಿಷ್ಠನೆಂದೂ ಪ್ರಖ್ಯಾತನಾದುದರಿಂದ ಇದನ್ನು ವಸಿಷ್ಠಯಜ್ಞವೆಂದೂ ಕರೆಯುವ ವಾಡಿಕೆಯಿದೆ, ಎಂದು ಶತಪಥಬ್ರಾಹ್ಮಣದಲ್ಲಿ ಪ್ರಜಾಪತಿಗೂ ವಸಿಷ್ಠನಿಗೂ ತಾದಾತ್ಮ್ಯವನ್ನು ತೋರಿಸಿದೆ. ವಸಿಷ್ಠರೂಪನಾದ ಈ ಪ್ರಜಾಪತಿಯೇ ಪುಷ್ಕರದ ಆಧಾರದಮೇಲೆ ಜಗತ್ತನ್ನು ಸೃಷ್ಟಿಸಿದನು ಎಂಬ ವರ್ಣನವು ಅನೇಕ ಕಡೆಗಳಲ್ಲಿರುತ್ತದೆ. ಉದಾಹರಣೆಗೆ—

**ತಸ್ಯ ನಾಭೇರಭೂತ್ಪದ್ಮಂ ಸಹಸ್ರಾರ್ಕೋರುದೀಧಿತಿ।
ಸರ್ವಜೀವನಿಕಾಯೈಕೋ ಯತ್ರ ಸ್ವಯಮಭೂತ್ಸ್ವರಾಟ್॥
ಸೋಽನುವಿಷ್ಟೋ ಭಗವತಾ ಯಃ ಶೇತೇ ಸಲಿಲಾಶಯೇ।
ಲೋಕಸಂಸ್ಥಾಂ ಯಥಾಪೂರ್ವಂ ನಿರ್ಮಮೇ ಸಂಸ್ಥಯಾ ಸ್ವಯಾ॥**

**(ಶ್ರೀಮದ್ಭಾಗವತಂ** ೩-೨೦-೧೫, ೧೬)

ಪ್ರಜಾಪತಿಯ ನಾಭಿಯಿಂದ ಒಂದು ಪದ್ಮವು ಹೊರಹೊರಟಿತು. ಅದು ಸಹಸ್ರಸೂರ್ಯನಂತೆ ಪ್ರಕಾಶಿಸುತ್ತಿದ್ದಿತು. ಆ ಪದ್ಮದಲ್ಲಿಯೇ ಸ್ವಯಂಭುವಾದ ಪ್ರಜಾಪತಿಯು ಸ್ವಾರಾಜ್ಯವನ್ನು ಹೊಂದಿದ್ದನು ಮತ್ತು ಅದು ಸಕಲ ಜೀವಿಗಳಿಗೂ ನಿಕೇತನವಾಗಿದ್ದಿತು. ಅದರಲ್ಲಿಯೇ ಭಗವಂತನು ಪ್ರವೇಶಿಸಿದನು. ಅದು ಸಲಿಲದಲ್ಲಿ ಸ್ಥಿತವಾಗಿದ್ದು ಲೋಕವ್ಯವಹಾರಕ್ಕೆ ಆಧಾರವೂ, ಸಾಧಕವೂ ಆಯಿತು ಎಂಬುದಾಗಿ ಪ್ರಜಾಪತಿಯ ಸೃಷ್ಟಿಸಂಕಲ್ಪವರ್ಣನವೂ, ಜಗದಾಧಾರವಾದ ಪುಷ್ಕರದ ವರ್ಣನವೂ ಸಂಹಿತಾದಿಗಳಲ್ಲಿರುವಂತೆಯೇ ಪುರಾಣಾದಿಗಳಲ್ಲಿಯೂ ಇರುತ್ತದೆ.

ವಿಶ್ವಕ್ಕೆ ನಾಭಿರೂಪವಾದ ಯಜ್ಞವೇದಿಯು ಯಾವರೀತಿ ಅಗ್ನಿಯೋನಿಯೆಂದು ಪ್ರಸಿದ್ಧವಾಗಿದೆಯೋ ಅದರಂತೆಯೇ, ಪುಷ್ಕರವೂ ಅಗ್ನಿಯ ಯೋನಿಯೂ ಆಧಾರವೂ ಆಗಿರುತ್ತದೆ

**" ಅಗ್ನಿರ್ದೇವೇಭ್ಯ ಉದಕ್ರಾಮತ್ಸೋಽಪಃ ಪ್ರಾವಿಶತ್ತೇ ದೇವಾಃ ಪ್ರಜಾಪತಿಮಬ್ರುವಂಸ್ತ್ವಮಿಮಮನ್ವಿಚ್ಛ ........ಪುಷ್ಕರಪರ್ಣೇ ವಿವೇದ "**

(ಶ. ಬ್ರಾ. ೭-೩-೨-೧೪)

ಅಗ್ನಿಯು ದೇವತೆಗಳಿಂದ ಮರೆಯಾದಾಗ ದೇವತೆಗಳು ಪ್ರಜಾಪತಿಯನ್ನು ಕುರಿತು "ನೀನು ಅಗ್ನಿಯ ಪಿತೃವು. ನಿನಗೆ ಅವನು ಕಾಣಿಸಿಕೊಳ್ಳುತ್ತಾನೆ. ಆದುದರಿಂದ ಅವನೆಲ್ಲಿದ್ದಾನೆಂಬುದನ್ನು ಹುಡುಕಿ ತಿಳಿ" ಎಂದು ಪ್ರಾರ್ಥಿಸಿದಾಗ ಪ್ರಜಾಪತಿಯು ಅಗ್ನಿಗಾಗಿ ಹುಡುಕಿ ಕೊನೆಗೆ **ಪುಷ್ಕರಪರ್ಣಸ್ಥನಾದ** ಅಗ್ನಿಯನ್ನು ಕಂಡುಹಿಡಿದನು ಎಂದಿದೆ. ಅಗ್ನಿಯೋನಿಯಾದ ವೇದಿಯು ವಿಶ್ವಕ್ಕೆಲ್ಲಾ ನಾಭಿರೂಪವೆಂದಿರುವಂತೆಯೇ, ಅಗ್ನಿಯೋನಿಯಾದ ಪುಷ್ಕರವೂ ವಿಶ್ವಕ್ಕೆಲ್ಲಾ ನಾಭಿರೂಪವೆಂದು ಪ್ರಶಂಸಿತವಾಗಿದೆ ಈ ವಿಷಯವನ್ನು ಶತಪಥಬ್ರಾಹ್ಮಣದಲ್ಲಿ ತಿಳಿಸುತ್ತಾ, ಮೇಲೆ ವಿವರಿಸಿರುವ ಸಕಲವಾದ ಅಂಶಗಳನ್ನೂ ಸ್ಪಷ್ಟವಾಗಿ ತಿಳಿಸಿದೆ. ಅಗ್ನಿಯೋನಿಯೂ, ವಿಶ್ವನಾಭಿಯೂ ಆದ ಯಜ್ಞವೇದಿಯನ್ನು ನಿರ್ಮಿಸುವಾಗ **ಪುಷ್ಕರ, ಪೃಥ್ವೀ, ಸಲಿಲ, ಸತ್ಯ** ಇವೆಲ್ಲಕ್ಕೂ ತಾದಾತ್ಮ್ಯವನ್ನು ತೋರಿಸಿ, ಪ್ರಕೃತವಾದ ಮಂತ್ರದಲ್ಲಿ ವರ್ಣಿಸಿರುವಂತೆ ಸತ್ಯಾತ್ಮಕವಾದ ಪುಷ್ಕರಪರ್ಣವೇ ಜಗದ್ಧಾರಕವೂ ವಾಹಕವೂ ಆಗಿರುತ್ತದೆ ಎಂಬ ವಿಷಯವನ್ನು ವರ್ಣಿಸಿದೆ ಯಜ್ಞವೇದಿಯನ್ನು ನಿರ್ಮಿಸುವಾಗ ಆಚರಿಸುವ ಕ್ರಮವನ್ನು ಈ ರೀತಿ ತಿಳಿಸಿದೆ.

**ಅಥ ಪುಷ್ಕರಪರ್ಣಮುಪದಧಾತಿ । ಯೋನಿರ್ವೈ ಪುಷ್ಕರಪರ್ಣಂ ಯೋನಿಮೇವೈತದುಪದಧಾತಿ।**

(ಶ. ಬ್ರಾ. ೭-೪-೧-೭)

ಪುಷ್ಕರಪರ್ಣವೇ ಅಗ್ನಿಯೋನಿಯಾದುದರಿಂದ ಅದನ್ನು ಯಜ್ಞವೇದಿಯ ಮಧ್ಯದಲ್ಲಿ ಅಲಂಕಾರರೂಪದಲ್ಲಿರತಕ್ಕದ್ದು. (ಅಗ್ನಿಯ ಉತ್ಪತ್ತಿಗೆ ಮೂಲವೆಂದಭಿಪ್ರಾಯವು)

**ಯದ್ವೇವ ಪುಷ್ಕರಪರ್ಣಮುಪದಧಾತಿ । ಆಪೋ ವೈ ಪುಷ್ಕರಂ ತಾಸಾಮಿಯಂ ಪರ್ಣಂ ಯಥಾ ಹ ವಾ ಇದಂ ಪುಷ್ಕರಪರ್ಣಮಪ್ಸ್ವಧ್ಯಾಹಿತಮೇವಮಿಯಮಪ್ಸ್ವಧ್ಯಾಹಿತಾ ಸೇಯಂ ಯೋನಿರಗ್ನೇರಿಯಗ್ಂ ಹ್ಯಗ್ನಿರಸ್ಯೈ ಹಿ ಸರ್ವೋಽಗ್ನಿಶ್ಚೀಯತ ಇಮಾಮೇವೈತದುಪದಧಾತಿ ತಾಮನಂತರ್ಹಿತಾಗ್ಂ ಸತ್ಯಾದುಪದಧಾತೀಮಾಂ ತತ್ಸತ್ಯೇ ಪ್ರತಿಷ್ಠಾಪಯತಿ ತಸ್ಮಾದಿಯಗ್ಂ ಸತ್ಯೇ ಪ್ರತಿಷ್ಠಿತಾ........ ॥**

(ಸ. ಬ್ರಾ. ೭-೪-೧-೮)

ಯಜ್ಞವೇದಿಯ ಮಧ್ಯದಲ್ಲಿ ಪುಷ್ಕರಪರ್ಣವನ್ನು ಏತಕ್ಕಿಡಬೇಕು ? ಎಂದರೆ, ಪುಷ್ಕರವೇ ಸಲಿಲವು ಈ ಪೃಥ್ವಿಯೇ ಓಂದು:ದಳವು. ಪುಷ್ಕರಪರ್ಣವು ಸಲಿಲದಲ್ಲಿ ಹರಡಿರುವಂತೆಯೇ ಈ ಪೃಥ್ವಿಯೂ ಅಂತರಿಕ್ಷರೂಪವಾದ ಸಲಿಲದಲ್ಲಿ ಹರಡಿರುತ್ತದೆ. ಈ ಪೃಥ್ವಿಯೇ ಅಗ್ನಿಯೋನಿಯು. ಇದರಲ್ಲೇ ·ಯಜ್ಞವೇದಿಯೂ ನಿರ್ಮಿತವಾಗುತ್ತದೆ. ಅದರಿಂದ ಅಗ್ನಿಯುಉತ್ಪನ್ನನಾಗುತ್ತಾನೆ. ಆದುದರಿಂದ ಯಜ್ಞವೇದಿಯ ನಡುವೆ ಪುಷ್ಕರಪರ್ಣವನ್ನಿಡುವುದರಿಂದ ಪೃಥ್ವಿ ಯನ್ನೇ ಅದರಲ್ಲಿ ಸ್ಥಾಪಿಸಿದಂತಾಯಿತು. ಆದರಿಂದ ಪೃಥ್ವಿಯನ್ನು ಸತ್ಯದಲ್ಲೇ ಸ್ಥಾಪಿಸಿದಂತಾಯಿತು. ಈ ಸ್ಥಾಪನವು ಪುಷ್ಕರರೂಪಿಯಾದ ಪೃಥ್ವಿಗೂ ಸತ್ಯಕ್ಕೂ ತಾದಾತ್ಮ್ಯವನ್ನೇ ತೋರಿಸುತ್ತದೆ.

**ಅಪಾಂ ಪೃಷ್ಠಮಸಿ । ಯೋನಿರಗ್ನೇರಿತಿ । ಅಪಾಂ ಹೀಯಂ ಪೃಷ್ಠಂ ಯೋನಿರ್ಹೀಯಮಗ್ನೇಃ ಸಮುದ್ರಮಭಿತಃ ಪಿನ್ವಮಾನಮಿತಿ ಸಮುದ್ರೋ ಹೀಮಾಮಭಿತಃ ಪಿನ್ವತೇ..........**

(ಶ. ಬ್ರಾ. ೭-೪-೧-೯)

ಎಂಬಲ್ಲಿ ಸಲಿಲಮಧ್ಯದಲ್ಲಿ ವಿಸ್ತೃತವಾಗಿ ಹರಡಿರುವ ಪುಷ್ಕರದಲ್ಲಿರುವ ಅಗ್ನಿಯ ವರ್ಣನವಿದೆ. ಈ ವಿವರಣವನ್ನು ಮೇಲೆ ತಿಳಿಸಿದೆ. ಅನಂತರ,

**ಯದ್ವೇವ ಪುಷ್ಕರಪರ್ಣ ಉಪದಧಾತಿ । ಪ್ರತಿಷ್ಠಾ ವೈ ಪುಷ್ಕರಪರ್ಣಮಿಯಂ ವೈ ಪುಷ್ಕರಪರ್ಣಮಿಯಮು ವ್ವೈ ಪ್ರತಿಷ್ಠಾ ಯೋ ವಾ ಅಸ್ಯಾಮಪ್ರತಿಷ್ಠಿತೋಽಪಿ ದೂರೇ ಸನ್ನಪ್ರತಿಷ್ಠಿತ ಏವ ಸ ರಶ್ಮಿಭಿರ್ವಾ ಏಷೋಽಸ್ಯಾಂ ಪ್ರತಿಷ್ಠಿತೋಽಸ್ಯಾಮೇವೈನಮೇತತ್ಪ್ರತಿಷ್ಠಾಯಾಂ ಪ್ರತಿಷ್ಠಾಪಯತಿ ॥**

(ಶ. ಬ್ರಾ. ೭-೪-೧-೧೨)

ಪುಷ್ಕರಪರ್ಣವನ್ನು ಏತಕ್ಕೆ ಸ್ಥಾಪಿಸಬೇಕೆಂಬುದೇ ಪುನಃ ಪ್ರಶ್ನೆ. ಪುಷ್ಕರವೇ ಈ ಪೃಥ್ವಿಯು. ಈ ಪೃಥ್ವಿಯು ಸಕಲಕ್ಕೂ ಆಧಾರವಾಗಿರುತ್ತದೆ. ಆದುದರಿಂದ ಪುಷ್ಕರವೂ, ಸಕಲಕ್ಕೂ ಧಾರಕವೂ, ಆಧಾರವೂ ಆಗಿರುತ್ತದೆ. ಈ ಪೃಥ್ವಿಯಲ್ಲಿ ಯಾವನು ಸ್ಥಿರವಾಗಿ ನೆಲೆಸಿಲ್ಲವೋ ಅವನು ಯಾವಾಗಲೂ ಅಸ್ಥಿರವಾದ ಸ್ಥಿತಿಯುಳ್ಳವನಾಗಿಯೇ ಇರುತ್ತಾನೆ. ಅಂತರಿಕ್ಷದಲ್ಲಿರುವ ಆದಿತ್ಯನೂ ಸಹ ತನ್ನ ಕಿರಣಗಳ ರೂಪದಿಂದ ಈ ಪೃಥ್ವಿಯನ್ನೇ ಆಧಾರವನ್ನಾಗಿಟ್ಟುಕೊಂಡು ಸ್ಥಿರತೆಯನ್ನು ಪಡೆದಿದ್ದಾನೆ. ಆದುದರಿಂದ ಈ ಪುಷ್ಕರವನ್ನು ಯಜ್ಞವೇದಿಯಲ್ಲಿ ಸ್ಥಾಪಿಸಿದರೆ, ಅಗ್ನಿಗೂ ಸಹ ಪೃಥ್ವೀ ರೂಪವಾದ ಆಧಾರವನ್ನು ಕಲ್ಪಿಸಿದಂತೆ ಆಯಿತು ಎಂದಿದೆ. ಆದರೆ ಇದಕ್ಕೆ ಪುಷ್ಕರವೆಂಬ ಹೆಸರು ಬರಲು ಕಾರಣ ವೇನು ಎಂದರೆ ಅದಕ್ಕೆ ಉತ್ತರವು ಈರೀತಿಯಲ್ಲಿರುತ್ತದೆ.

**ಇಂದ್ರೋ ವೃತ್ರಗ್ಂಹತ್ವಾ ನಾಸ್ತೃಷೀತಿ ಮನ್ಯಮಾನೋಽಪಃ ಪ್ರಾವಿಶತ್ತಾ ಅಬ್ರವೀದ್ಬಿಭೇಮಿ ವೈ ಪುರಂ ಮೇ ಕುರುತೇತಿ ಸ ಯೋಽಪಾಗ್ಂ ರಸ ಆಸೀತ್ತಮೂರ್ಧ್ವಗ್ಂ ಸಮುದೌಹಂಸ್ತಾಮಸ್ಮೈ ಪುರಮಕುರ್ವಂಸ್ತದ್ಯದಸ್ಮೈ ಪುರಮಕುರ್ವಂಸ್ತಸ್ಮಾತ್ಪುಷ್ಕರಂ ಪೂಷ್ಕರಂ ಹ ವೈ ತತ್ಪುಷ್ಕರಮಿತ್ಯಾಚಕ್ಷತೇ ಪರೋಽಕ್ಷಂ ಪರೋಽಕ್ಷಕಾಮಾ ಹಿ ದೇವಾಃ ॥**

(ಶ. ಬ್ರಾ. ೭-೪-೧-೧೩)

ಇಂದ್ರನು ವೃತ್ರಾಸುರನನ್ನು ವಜ್ರಾಯುಧದಿಂದ ಹೊಡೆದನಂತರವೂ ಇನ್ನೂ ಅವನ ಪತನವಾಗಿಲ್ಲವೆಂದು ತಿಳಿದು ಭೀತಿಯಿಂದ ಸಲಿಲದೊಳಗೆ ಪ್ರವೇಶಿಸಿದನು. ಆಗ ದೇವತೆಗಳನ್ನು ಕುರಿತು, "ನನಗೆ ಭೀತಿಯಾಗುತ್ತಿದೆ. ನನಗೆ ರಕ್ಷಣೆಗಾಗಿ ಒಂದು ಪುರವನ್ನು ಕಲ್ಪಿಸಿರಿ" ಎಂದು ಪ್ರಾರ್ಥಿಸಿದನು. ಆಗ ಸಲಿಲದ ರಸವನ್ನು ಸಂಗ್ರಹಿಸಿ ಅದರಿಂದ ಒಂದು ರಕ್ಷಣಾಯುತವಾದ ಪುರವನ್ನು ಕಲ್ಪಿಸಿದರು. ಪುರದ ಕರಣವನ್ನು ಮಾಡಿದುದರಿಂದ (**ಪೂಃ ಕರ**) ಅದಕ್ಕೆ **ಪುಷ್ಕರ**ವೆಂಬ ಹೆಸರಾಯಿತು. ದೇವತೆಗಳು ಪರೋಕ್ಷಕಾಮರಾದುದರಿಂದ **ಪುಷ್ಕರ**ವನ್ನು **ಪೂಷ್ಕರ**ವೆಂಬ ಹೆಸರಿನಿಂದ ಕರೆದರು ಎಂಬ ಈ ಪುಷ್ಕರದ ಆಧಾರತ್ವವೂ, ದೃಢತೆಯೂ ವರ್ಣಿತವಾಗಿರುತ್ತದೆ. ವಿಶ್ವಾಧಾರವಾದ ಯಾವ ಸಲಲಿದಲ್ಲಿ ವಿಶ್ವಸೃಷ್ಟಿಗೆ ಪೂರ್ವಭಾವಿಯಾಗಿ ಸ್ಥಿತನಾಗಿದ್ದನೋ ಅದೇ ಸಲಿಲದ ರಸವೇ ಈ ಪುಷ್ಕರವೆಂಬುದೂ, ಇದೇ ಪುಷ್ಕರವೇ ಪೃಥ್ವೀರೂಪವಲ್ಲಿ ವಿಸ್ತೃತವಾಗಿದೆಯೆಂಬುದೂ ಸ್ಪಷ್ಟವಾಗಿದೆ.

(ಇದೇ ಪುಷ್ಕರವಮೇಲೆ ಆದಿತ್ಯಮಂಡಲವನ್ನು ಪ್ರತಿಬಿಂಬಿಸುವ ಹಿರಣ್ಯಪಾತ್ರೆಯನ್ನಿಡುತ್ತಾರೆ. ಈ ಆದಿತ್ಯ ಮಂಡಲದ ಪ್ರತಿನಿಧಿಯಾದ ಹಿರಣ್ಯಪಾತ್ರೆಯು ಪರಮಪುರುಷನನ್ನು ಪ್ರತಿಬಿಂಬಿಸುತ್ತವೆ.)

ಈ ರೀತಿ ಸಕಲ ವಿಶ್ವಕ್ಕೂ ಆಧಾರಭೂತವೆಂದು ವರ್ಣಿತವಾಗಿರುವ ಈ ಪುಷ್ಕರವು ಜಗನ್ಮೂಲವಾದ ಸಲಿಲದ ಸಾರವಾಗಿದೆ. ಈ ಸಲಿಲತತ್ತ್ವವು ವಿಶ್ವವ್ಯಾಪಕವಾಗಿಯೂ, ವಿಶ್ವಪೋಷಕವಾಗಿಯೂ ಇರುತ್ತದೆ. ವಾರುಣಾಶ್ವವೆಂದು ಪ್ರಸಿದ್ಧವಾದ ಆದಿತ್ಯತತ್ತ್ವವು ಅಂತರಿಕ್ಷರೂಪವಾದ ಅಪ್ಪಿನಲ್ಲಿ ಸ್ಥಿರವಾದ ಆಶ್ರಯ ಪಡೆದಿರುವನು ಎಂದು ಹಿಂದೆ ಕೆಲವೆಡೆಗಳಲ್ಲಿ ವಿವರಿಸಿರುವಂತೆ (ಋ. ಸಂ. ಭಾಗ ೧೨ ಪೇಜು 233) ಪ್ರಕೃತದಲ್ಲಿಯೂ ಸಹ ಈ ಪುಷ್ಕರದ ಆಶ್ರಯವನ್ನು ಪಡೆದವರೆಲ್ಲರೂ ಸ್ಥಿರವಾದ ಸ್ಥಿತಿಯನ್ನು ಪಡೆಯುತ್ತಾರೆಂದು ತಾತ್ಪರ್ಯವು. ವಾರುಣಾಶ್ವದ ಆಶ್ರಯವಾದ ಯಾವ ಅಂತರಿಕ್ಷರೂಪವಾದ ಸಲಿಲದ ವರ್ಣನೆಯು ಹಿಂದೆ ಸ್ಪಷ್ಟವಾಗಿದೆಯೋ, ಅದೇ ರೀತಿಯ ವರ್ಣನವು ಪುಷ್ಕರರೂಪವಾದ ಆಶ್ರಯ ಮತ್ತು ಆಧಾರದ ವಿಷಯದಲ್ಲೂ ಇರುತ್ತದೆ. ಈ ವಿವರಣದಲ್ಲಿ ಅಗ್ನಿಯ ಮೂರ್ತ್ಯಂತರವಾದ ವಸಿಷ್ಠನ ನೌಕಾರೂಪವಾದ ಪುಷ್ಕರವು ವರ್ಣಿತವಾಗಿದೆ.

**ಆ ಯದ್ರುಹಾವ ವರುಣಶ್ಚ ನಾವಂ ಪ್ರ ಯತ್ಸಮುದ್ರಮೀರಯಾವ ಮಧ್ಯಂ ।**
**ಅಧಿ ಯದಪಾಂ ಸ್ನುಭಿಶ್ಚರಾವ ಪ್ರ ಪ್ರೇಂಖ ಈಂಖಯಾವಹೈ ಶುಭೇ ಕಂ ॥**

(ಋ. ಸಂ. ೭. ೮೮. ೩)

ನಾನೂ (ವಸಿಷ್ಠ) ಮತ್ತು ವರುಣನೂ ಒಟ್ಟಿಗೆ ನೌಕೆಯನ್ನು ಹತ್ತಿ ಅಂತರಿಕ್ಷರೂಪವಾದ ಸಮುದ್ರಕ್ಕೆ ಯಾವಾಗ ಪ್ರವೇಶಿಸುವೆವೋ ಯಾವಾಗ ಸಲಿಲಮಧ್ಯಕ್ಕೆ ಪ್ರವೇಶಿಸುವೆವೋ ಆಗ ನಾವಿಬ್ಬರೂ ದೋಲಾಯಮಾನವಾದುದೂ ಸುಖಕರವಾದುದೂ ಆದ ಯಾತ್ರೆಯನ್ನನುಭವಿಸುತ್ತೇವೆ.

**ವಸಿಷ್ಠಂ ಹ ವರುಣೋ ನಾವ್ಯಾಧಾದೃಷಿಂ ಚಕಾರ ಸ್ವಪಾ ಮಹೋಭಿಃ ।**
**ಸ್ತೋತಾರಂ ವಿಪ್ರಃ ಸುದಿನತ್ವೇ ಅಹ್ನಾಂ ಯಾನ್ನು ದ್ಯಾವಸ್ತತನನ್ಯಾದುಷಾಸಃ ॥**

(ಋ. ಸಂ. ೭-೮೮-೪)

ಯಾವಾಗ ವಸಿಷ್ಠನನ್ನು ವರುಣನು ನೌಕೆಯಲ್ಲಿ ಅಂತರಿಕ್ಷಯಾತ್ರೆಗಾಗಿ ಕುಳ್ಳಿರಿಸಿದನೋ ಮತ್ತು ಯಾವಾಗ ತನ್ನ ರಕ್ಷಣೆಗೊಳಗಾದ ಅವನನ್ನು ಸತ್ಕರ್ಮಕಾರಕನನ್ನಾಗಿ ಮಾಡಿದನೋ ಆಗ ವಿಪ್ರನಾದ ವಸಿಷ್ಠನು ತನ್ನ ಪೂಜಕನಿಗೆ ಸುಖಕರವೂ, ದೀರ್ಘವೂ ಆದ ಅಹೋರಾತ್ರಗಳನ್ನು ಕಲ್ಪಿಸಿದನು. ಈ ವಸಿಷ್ಠನ ನೌಕೆಯು ಜೀವಯಾತ್ರೆಯನ್ನು ನಡೆಸುವ ಚೇತನದ ಯಾನವನ್ನು ಪ್ರತಿಬಿಂಬಿಸುತ್ತದೆ. ಪುಷ್ಕರವೇ ಈ ಯಾನವು

ಪುಷ್ಕರರೂಪವಾದ ಈ ಯಾನವು ಎರಡು ವಿಧವಾಗಿರುತ್ತದೆ. ಒಂದು ಪೃಥ್ವಿಯನ್ನೂ ಇನ್ನೊಂದು ಅಂತರಿಕ್ಷವನ್ನೂ ಪ್ರತಿಬಿಂಬಿಸುತ್ತದೆ. ಆದರೆ ಪೃಥ್ವೀ ಮತ್ತು ಅಂತರಿಕ್ಷ ಇವೆರಡೂ ಭಿನ್ನತತ್ತ್ವಗಳೆಂಬರ್ಥವಲ್ಲ. ಪೃಥ್ವಿಯು ಅಂತರಿಕ್ಷದ ಪ್ರತಿಕೃತಿಯಾಗಿಯೇ ಇರುತ್ತದೆ.

**ಅಪಾಂ ಪೃಷ್ಠಮಸಿ ಸಪ್ರಥಾ ಉರ್ವಗ್ನಿಂ ಭರಿಷ್ಯದಪರಾವಪಿಷ್ಠಂ ।**
**ವರ್ಧಮಾನಂ ಮಹ ಆ ಚ ಪುಷ್ಕರಂ ದಿವೋ ಮಾತ್ರಯಾ ವರಿಣಾ ಪ್ರಥಸ್ವ ॥**
(ತೈ. ಸಂ. ೪-೧-೩-೧)

ಎಲೈ ಪೃಥ್ವಿಯೇ ನೀನು ನೀರುಗಳಿಗೆ ಪೃಷ್ಠರೂಪದಲ್ಲಿದ್ದೀಯೆ. ಅಗ್ನಿಯನ್ನು ವಹಿಸುವ ವಿಸ್ತೃತಿಯನ್ನು ಹೊಂದಿದ್ದೀಯೆ. ಪುಷ್ಕರದ ದಾರ್ಢ್ಯವನ್ನೂ ಅಂತರಿಕ್ಷದ ವಿಸ್ತೃತಿಯನ್ನೂ ಹೊಂದು ಎಂದು ಅಂತರಿಕ್ಷದ ಸಮಾನ ಧರ್ಮತ್ವವು ಪ್ರಶಂಸಿತವಾಗಿದೆ. ಇದೇ ಅಂಶವನ್ನು ಐತರೇಯ ಬ್ರಾಹ್ಮಣದಲ್ಲಿ ಇನ್ನೂ ಸ್ಪಷ್ಟವಾಗಿ ತಿಳಿಸಿದೆ.

**ಅಸ್ಯ ವೈ ಲೋಕಸ್ಯಾಸೌ ಲೋಕೋಽನುರೂಪೋಽಮುಷ್ಯ ಲೋಕಸ್ಯಾಯಂ ಲೋಕೋಽನು ರೂಪಃ ।** (ಐ. ಬ್ರಾ. ೮-೨)

ಪೃಥಿವ್ಯಂತರಿಕ್ಷಲೋಕಗಳೆರಡೂ ಒಂದಕ್ಕೊಂದು ಅನುರೂಪಗಳಾಗಿವೆ. ಒಂದರ ಪ್ರತಿಬಿಂಬವೇ ಇನ್ನೊಂದೆಂದರ್ಥ. ಇವೆರಡೂ ಭಿನ್ನತತ್ತ್ವಗಳಲ್ಲವೆಂಬುದೇ ತಾತ್ಪರ್ಯ. ಅಥವಾ ಇವನ್ನೇ **ಪರಸಲಿಲ** ಮತ್ತು **ಅಪರಸಲಿಲ**ವೆಂದೂ ಕರೆಯಬಹುದು. ಇದನ್ನೇ ಪೃಥಿವೀಸ್ಥವಾದ ಸಮುದ್ರ ಮತ್ತು ಅಂತರಿಕ್ಷಸ್ಥವಾದ ಸಮುದ್ರವೆಂಬ ಎರಡು ವಿಭಾಗಮಾಡಿ ಕರೆದಿರುವ ವಿಷಯವನ್ನು ನಿರುಕ್ತಕಾರರ ವಾಕ್ಯಗಳಲ್ಲಿರುವ ವಿವರಣೆಯ ಸಹಿತವಾಗಿ ಹಿಂದೆ ತಿಳಿಸಿದೆ. (ಹಿಂದೆ **ಸಮುದ್ರ** ವಿಷಯವನ್ನು ತಿಳಿಸುವಾಗ ಈ ಅಂಶವನ್ನು ವಿವರಿಸಿದೆ). ಇದನ್ನೇ ಶತಪಥಬ್ರಾಹ್ಮಣದಲ್ಲೂ ವಿವರಿಸುತ್ತಾ,

**"ಅಗ್ನೇ ದಿವೋ ಅರ್ಣಮಚ್ಛಾ ಜಿಗಾಸೀತಿ । ಅಪೋ ವಾ ಅಸ್ಯ ದಿವೋ ಅರ್ಣಃ"**
(ಶ ಬ್ರಾ. ೭-೧-೧-೨೪)

ಎಲೈ ಅಗ್ನಿಯೇ, ನೀನು ಧೂಮರೂಪದಲ್ಲಿ ಅಂತರಿಕ್ಷ ಸಮುದ್ರದ ಪ್ರವಾಹವನ್ನು ಪ್ರವೇಶಿಸುತ್ತೀಯೆ ಇತ್ಯಾದಿ ವಾಕ್ಯಗಳಿಂದ ತಿಳಿಸಿದೆ. ಇದೇ ಅಲ್ಲದೇ, ಇದೇ ಅಭಿಪ್ರಾಯವನ್ನು ಇನ್ನೂ ವಿವರಿಸುತ್ತಾ,

**"ತೌ ಹೋಚತುಃ । ಮುಖ್ಯೌ ವಾ ಆವಾಂ ಯಜ್ಞಸ್ಯ ಸ್ವೋ ಯಾವಧ್ವರ್ಯೂ ಇಹ ನಾವಿಮಂ ಪುರಸ್ತಾದ್ಗ್ರಹಂ ಪರ್ಯಾಹರತಾಭಿ ದ್ವಿದೇವತ್ಯಾನೀತಿ ತಾಭ್ಯಾಮೇತಂ.......... ................ ತೃತೀಯ ಏವ ವಷಟ್ಕ್ರಿಯತೇಽಥ ಯದಶ್ವಿನಾವಿತೀಮೇ ಹೀದಗ್ಂ ಸರ್ವಮಾಶ್ನುವಾತಾಂ ಪುಷ್ಕರಸ್ರಜಾವಿತ್ಯಗ್ನಿರೇವಾಸ್ಯೈ ಪುಷ್ಕರಮಾದಿತ್ಯೋಽಮುಷ್ಯೈ ॥**
(ಶ. ಬ್ರಾ. ೪-೧-೫-೧೬)

ಎಂಬಲ್ಲಿ ಪುಷ್ಕರಸ್ರಜಗಳನ್ನು ಧರಿಸಿರುವ ಅಶ್ವಿನೀದೇವತೆಗಳ ಪ್ರಶಂಸೆಯಿರುತ್ತದೆ. ಈ ಪ್ರಶಂಸೆಯಲ್ಲಿ, ಅಗ್ನಿಯು ಪೃಥ್ವಿಯ ಪುಷ್ಕರವೆಂದೂ, ಸೂರ್ಯನು ಅಂತರಿಕ್ಷದ ಪುಷ್ಕರವೆಂದೂ ಪ್ರಶಂಸಿತವಾಗಿದೆ.

ಈ ವಿಧವಾಗಿ ಪುಷ್ಕರರೂಪನಾದ ಅಗ್ನಿಯೇ ಪುಷ್ಕರದಲ್ಲಿ ತನ್ನ ಅಸ್ತಿತ್ವವನ್ನು ಪಡೆದನು ಎಂಬ ವರ್ಣನೆಯು ಪ್ರಕೃತವಾದ ಮಂತ್ರದಲ್ಲಿ ಸಕಲ ಜಗದ್ಧಾರಕವೂ ಜಗದ್ವಾಹಕವೂ ಆದ ಪುಷ್ಕರದ ಸ್ವರೂಪವನ್ನು ತಿಳಿಸುತ್ತದೆ.

ವಿಶ್ವವಾಹಕವೂ, ವಿಶ್ವಾಧಾರಕವೂ ಆದ ಈ ಪುಷ್ಕರದಲ್ಲಿ ಅಥರ್ವಋಷಿಯು ಅಗ್ನಿಯನ್ನು ಮಥಿಸಿ ಉತ್ಪನ್ನ ಮಾಡಿದನು ಎಂಬುದರಲ್ಲಿ ಆಧ್ಯಾತ್ಮಿಕವಾದ ತಾತ್ಪರ್ಯವಿರುತ್ತದೆ. ಈ ಅಥರ್ವಋಷಿಯಾರು ? ಇವನು ದೈವಾಂಶ ಸಂಭೂತನೇ ಅಥವಾ ಕೇವಲ ಮಾನವರ ಗುಂಪಿಗೆ ಸೇರಿದವನೇ ಎಂಬ ವಿಷಯವು ಪರ್ಯಾಲೋಚಿಸಲ್ಪಡಬೇಕಾದು ದಾಗಿದೆ. ಅಥರ್ವಋಷಿಯ ವಿಷಯವನ್ನು ತೈತ್ತಿರೀಯಸಂಹಿತೆಯಲ್ಲಿ ಈ ರೀತಿ ತಿಳಿಸಿದೆ —

**ಪ್ರಜಾಪ್ರತಿರ್ವಾ ಅಥರ್ವಾಽಗ್ನಿರೇವ ದಧ್ಯಙ್ಙಾಥರ್ವಣಸ್ತಸ್ಯೇಷ್ಟಕಾ ।**

(ತೈ. ಸಂ. ೫-೬-೬-೩)

ಎಂಬಲ್ಲಿ ಅಥರ್ವನೇ ಪ್ರಜಾಪತಿಯೆಂದೂ ತತ್ಪುತ್ರನಾದ ದಧೀಚಿಯೇ ಅಗ್ನಿಯೆಂದೂ ತಿಳಿಸಿದೆ. ಮೇಲೆ ಪುಷ್ಕರದ ಸ್ವರೂಪವನ್ನು ವರ್ಣಿಸಿದಾಗ ವಿಶ್ವಸೃಷ್ಟಿಗೆ ಪೂರ್ವಭಾವಿಯಾಗಿ ಪ್ರಜಾಪತಿಯು ಯಾವ ರೀತಿ ಸಲಿಲಸ್ಥನಾಗಿ ಪುಷ್ಕರ ವನ್ನು ತನ್ನ ಸೃಷ್ಟಿಗೆ ಆಧಾರವನ್ನಾಗಿ ಮಾಡಿಕೊಂಡನೆಂದು ತಿಳಿಸಿದೆಯೋ ಅಂತಹ ಸೃಷ್ಟಿಕರ್ತನಾದ ಪ್ರಜಾಪತಿಯೇ ಅಥರ್ವ ಸಂಜ್ಞಿತನಾಗಿ ಅಗ್ನಿಯನ್ನು ಮಥಿಸಿ ಉತ್ಪನ್ನಮಾಡಿದನು ಎಂದು ಪ್ರಕೃತವಾದ ಮಂತ್ರದ ವಿವರಣೆಯಿರುತ್ತದೆ ಇದೇ ಅಥರ್ವನು ಅಗ್ನಿಯನ್ನು ಮಥಿಸಿದ ವಿಷಯವನ್ನೂ ಸಹ ಪ್ರಕೃತವಾದ ಮಂತ್ರವನ್ನೇ ಪಠಿಸಿ ತಿಳಿಸಿದೆ. (ತೈ. ಸಂ. ೩-೫-೧೧-೩). ಉಪನಿಷತ್ತುಗಳಲ್ಲೆಲ್ಲಾ ಅಥರ್ವನು ಬ್ರಹ್ಮಜ್ಞಾನಿಯೆಂದು ಬಹಳ ಪ್ರಸಿದ್ಧನಾಗಿದ್ದಾನೆ.

**ಓಂ ಬ್ರಹ್ಮಾ ದೇವಾನಾಂ ಪ್ರಥಮಃ ಸಂಬಭೂವ ವಿಶ್ವಸ್ಯ ಕರ್ತಾ ಭುವನಸ್ಯ ಗೋಪ್ತಾ ।**
**ಸ ಬ್ರಹ್ಮವಿದ್ಯಾ ಸರ್ವವಿದ್ಯಾಂಪ್ರತಿಷ್ಠಾಮಥರ್ವಾಯ ಜ್ಯೇಷ್ಠಪುತ್ರಾಯ ಪ್ರಾಹ ॥**
**ಅಥರ್ವಣೇ ಯಾಂ ಪ್ರವದೇತ ಬ್ರಹ್ಮಾಥರ್ವಾ ತಾಂ ಪುರೋವಾಚಾಂಗಿರೇ ಬ್ರಹ್ಮವಿದ್ಯಾಂ ॥**

(ಮು. ಉ. ೧-೧-೧)

ಸಕಲ ದೇವತೆಗಳಲ್ಲಿ ಬ್ರಹ್ಮನು ಪ್ರಥಮತಃ ಉದ್ಭವಿಸಿದನು. ಅವನೇ ಸಕಲ ವಿಶ್ವಕ್ಕೂ ಕರ್ತನಾಗಿಯೂ ಗೋಪ್ತೃ ವಾಗಿಯೂ ಆದನು. ಸಕಲ ವಿದ್ಯೆಗಳಿಗೂ ಆಧಾರಭೂತವಾದ ಬ್ರಹ್ಮವಿದ್ಯೆಯನ್ನು ಬ್ರಹ್ಮನು ತನ್ನ ಜ್ಯೇಷ್ಠಪುತ್ರನಾದ ಅಥರ್ವನಿಗೆ ಉಪದೇಶಿಸಿದನು. ಅಥರ್ವನು ಅದನ್ನು ಅಂಗಿರಾ ಋಷಿಗೆ ಅನಂತರ ಉಪದೇಶಿಸಿದನು, ಎಂದು ಮಾನವರಿಗೆ ಲಭಿಸಿದ ಬ್ರಹ್ಮವಿದ್ಯಾಲಾಭಕ್ಕೆಲ್ಲಾ ಅಥರ್ವನೇ ಮೂಲಪ್ರಾಯನೆಂದು ಅನೇಕವಿಧದಲ್ಲಿ ಅಥರ್ವನು ಸ್ತುತನಾಗಿದ್ದಾನೆ. ಪ್ರಕೃತವಾದ ಮಂತ್ರದಲ್ಲಿ ವರ್ಣಿತವಾದ ಅಂಶವನ್ನು ಶತಪಥದಲ್ಲಿ ಈ ರೀತಿ ವಿವರಿಸಿದೆ.

**ಅಥರ್ವಾ ತ್ವಾ ಪ್ರಥಮೋ ನಿರಮಂಥದಗ್ನ ಇತಿ ಪ್ರಾಣೋ ವಾ ಅಥರ್ವಾ ಪ್ರಾಣೋ ವಾ ಏತಮಗ್ನೇ ನಿರಮಂಥತ್ತದ್ಯೋಽಸಾವಗ್ರೇಽಗ್ನಿರಸೃಜ್ಯತ ।**

**ತ್ವಾಮಗ್ನೇ ಪುಷ್ಕರಾದಥರ್ವಾ ನಿರಮಂಥತೇತ್ಯಾಪೋ ವೈ ಪುಷ್ಕರಂ... ....... .... .. ... ವಾಘತಃ ಸರ್ವಸ್ಯ ಮೂರ್ಧ್ನ ಇತ್ಯೇತತ್ ।**

(ಶ. ಬ್ರಾ. ೬-೪-೨-೧, ೨)

ಅಗ್ನಿಯೇ ಸರ್ವಾಧಾರಕನು. ಈ ಅಗ್ನಿಯನ್ನು ಅಥರ್ವನೇ ಪ್ರಥಮತಃ ಉತ್ಪನ್ನನಾಗುವಂತೆ ಮಾಡಿದನು. ಅಥರ್ವನು ಪ್ರಾಣರೂಪನು. ಈ ಪ್ರಾಣವೇ ಅಗ್ನಿಮಥನದ ಸಾಧಕವಾಯಿತು. ಪುಷ್ಕರದಿಂದ ಅಗ್ನಿಯ ಪ್ರಾದುರ್ಭಾವವಾಗು ವಂತೆ ಮಾಡಿದನು ಎಂದು ಯಾವ ಪುಷ್ಕರದ ಪ್ರಶಂಸೆಯಿದೆಯೋ ಅದೇ ಸಲಿಲವು. ಪ್ರಾಣರೂಪನಾದ ಅಥರ್ವನು

ಸಲಿಲದಿಂದ ಅಗ್ನಿಯು ಉತ್ಪನ್ನನಾಗುವಂತೆ ಮಾಡಿದನು ಎಂದು ಆಧ್ಯಾತ್ಮಿಕರಹಸ್ಯವನ್ನೊಳಗೊಂಡ ವಿವರವು ತಿಳಿಸಲ್ಪಟ್ಟಿದೆ. ಇನ್ನೊಂದು ವಿಶೇಷವನ್ನೂ ಗಮನಿಸಬೇಕು. **“ವಾಘತಃ ಸರ್ವಸ್ಯ ಮೂರ್ಧ್ನ ಇತ್ಯೇತತ್”** ಎಂಬುದಕ್ಕೆ ಪ್ರತಿಯೊಬ್ಬ ಯಜಮಾನನ ಶಿರಸ್ಸಿನಿಂದಲೂ ಮತ್ತು ವಿಶ್ವದ ಶಿರಸ್ಸಿನಿಂದಲೇ ಪ್ರಾದುರ್ಭವಿಸುವಂತೆ ಮಾಡಿದನು ಎಂದಿದೆ.

ಸೃಷ್ಟಿಕಾಲದನಂತರ ಪ್ರಥಮತಃ ಅಗ್ನಿಯ ಪ್ರಾದುರ್ಭಾವಕ್ಕೆ ಅಥರ್ವನೇ ಕಾರಣನಾದುದರಿಂದ ಯಜ್ಞ ಕ್ರಿಯೆಗಳನ್ನು ಆಚರಿಸುವವರೆಲ್ಲರೂ ಅಥರ್ವನು ಆಚರಿಸಿದ ಕ್ರಮವನ್ನೇ ಅನುಸರಿಸುತ್ತಾರೆ.

**ಇಮಮು ತ್ಯಮಥರ್ವವದಗ್ನಿಂ ಮಂಥಂತಿ ವೇಧಸಃ ।**
**ಯಮಂಕೂಯಂತಮಾನಯನ್ನಮೂರಂ ಶ್ಯಾವ್ಯಾಭ್ಯಃ ॥**

(ಋ. ಸಂ. ೬-೧೫-೧೭)

ಪ್ರಾಜ್ಞನೂ, ಮೇಧಾವಿಯೂ ಆದ ಈ ಅಗ್ನಿಯನ್ನು ಹಿಂದೆ ಅಥರ್ವನು ಯಾವ ರೀತಿಯಲ್ಲಿ ಮಥಿಸಿ ಉತ್ಪನ್ನನಾಗುವಂತೆ ಮಾಡಿದನೋ ಅದೇ ರೀತಿಯಲ್ಲಿ ಉಳಿದ ಋತ್ವಿಕ್ಕುಗಳೂ ಅದೇ ನಿಯಮವನ್ನನುಸರಿಸಿ ಅಗ್ನಿಮಥನ ಕ್ರಿಯೆಯನ್ನು ನೆರವೇರಿಸುತ್ತಾರೆ ಎಂದು ಅಥರ್ವನ ಮಾರ್ಗದರ್ಶಿತ್ವವು ಸ್ತುತವಾಗಿದೆ.

**ಅಗ್ನಿರ್ಜಾತೋ ಅಥರ್ವಣಾ ವಿದದ್ವಿಶ್ವಾನಿ ಕಾವ್ಯಾ ।**
**ಭುವದ್ದೂತೋ ವಿವಸ್ವತೋ ವಿ ವೋ ಮದೇ ಪ್ರಿಯೋ ಯಮಸ್ಯ ಕಾವ್ಯೋ ವಿವಕ್ಷಸೇ ॥**

(ಋ. ಸಂ. ೧೦-೨೧-೫)

ಅಥರ್ವನ ಮಥನ ಕ್ರಿಯೆಯಿಂದ ಉತ್ಪನ್ನವಾದ ಅಗ್ನಿಯು ಸಮಸ್ತ ಸ್ತೋತೃಕರ್ಮಗಳನ್ನೂ ಅರಿಯುತ್ತಾನೆ. ಸಕಲ ಯಜಮಾನರಿಗೂ ದೂತನಾಗಿ ಲೋಕೋಪಕಾರಿಯಾಗುತ್ತಾನೆಂದು ಸ್ತುತಿಸಿರುವುದರಲ್ಲಿ, ಈ ಲೋಕೋಪಕಾರಕ್ಕೆ ಅಥರ್ವನೇ ಕಾರಣನಾದನೆಂದು: ಅಥರ್ವಋಷಿಯ ಪ್ರಶಂಸೆಯಿರುತ್ತದೆ. ಲೋಕದ ಸತ್ಯಮಾರ್ಗಪ್ರವರ್ತನಕ್ಕೂ ಸಹ ಈ ಅಥರ್ವನೇ ಕಾರಣನೂ ಮಾರ್ಗದರ್ಶಕನೂ ಆದನು ಎಂದು **“ಯಜ್ಞೈರಥರ್ವಾ ಪ್ರಥಮೋ ವಿ ಧಾರಯದ್ದೇವಾ ದಕ್ಷೈರ್ಭೃಗವಃ ಸಂ ಚಿಕಿತ್ರಿರೇ”** (ಋ. ಸಂ. ೧೦-೯೨-೧೦) ಇತ್ಯಾದಿ ವಾಕ್ಯಗಳಲ್ಲಿ ಸ್ತುತಿಸಿದೆ. ಅದೇ ಅಲ್ಲದೇ,

**ಯಜ್ಞೈರಥರ್ವಾ ಪ್ರಥಮಃ ಪಥಸ್ತತೇ ತತಃ ಸೂರ್ಯೋ ವ್ರತಪಾ ವೇನ ಆಜನಿ ।**
**ಆ ಗಾ ಆಜದುಶನಾ ಕಾವ್ಯಃ ಸಚಾ ಯಮಸ್ಯ ಜಾತಮಮೃತಂ ಯಜಾಮಹೇ ॥**

(ಋ. ಸಂ. ೧-೮೩-೫)

ಪಣಿಗಳು ಗೋವುಗಳನ್ನು ಅಪಹರಿಸಿದಾಗ ಅಥರ್ವನೆಂಬ ಋಷಿಯು ಇಂದ್ರನನ್ನುದ್ದೇಶಿಸಿ ಯಜ್ಞಮಾಡಿದನು. ಆ ಯಜ್ಞದ ಸಹಾಯದಿಂದ ಗೋವುಗಳು ಅಪಹೃತವಾದ ಮಾರ್ಗಗಳನ್ನು ಅವನು ಎಲ್ಲರಿಗಿಂತಲೂ ಮೊದಲು ಕಂಡು ಹಿಡಿದನು. ಆಮೇಲೆ ವ್ರತಗಳ ಪಾಲಕನೂ, ಕಾಂತಿಯುತನೂ ಆದ ಇಂದ್ರನು ಸೂರ್ಯನ ರೂಪದಲ್ಲಿ ದಾರಿಯನ್ನು ತೋರಿಸಿಕೊಡಲು ಆವಿರ್ಭೂತನಾದನು. ಅಥರ್ವನು ಈ ಸಹಾಯದಿಂದ ಗೋವುಗಳನ್ನು ಪುನಃ ಹೊಂದಿದನು. ಇತ್ಯಾದಿಯಾಗಿಯೂ ಸಹ ಅಥರ್ವನ ಲೋಕೋಪಕಾರವು ಪ್ರಶಂಸಿತವಾಗಿದೆ.

ಇಂತಹ ಮಹಾನುಭಾವನಾದ ಅಥರ್ವನು ದೇವತೆಗಳಿಗೆ ಸಖನಾಗಿ ದ್ಯುಲೋಕದಲ್ಲಿ ವಾಸಿಸುತ್ತಿರುವನೆಂದು ಅಥರ್ವವೇದದಲ್ಲಿ ಸ್ತುತಿಸಿದೆ. (ಅ. ವೇ. ೪-೧-೭) ಅಥರ್ವನಿಗೆ ಇಂತಹ ಮಾಹಾತ್ಮ್ಯವಿದ್ದುದರಿಂದಲೇ, ಅವನಿಂದ ಉತ್ಪನ್ನನಾದ ಯಜ್ಞಾಗ್ನಿಯೂ ಸಹ ಈ ಸಂಜ್ಞೆಯಿಂದಲೇ ನಿರ್ದಿಷ್ಟನಾಗಿದ್ದಾನೆ.

**ಆ ನೂನಮಶ್ವಿನೋಽರ್ಋಷಿಃ ಸ್ತೋಮಂ ಚಿಕೇತ ವಾಮಯಾ ।**
**ಆ ಸೋಮಂ ಮಧುಮತ್ತಮಂ ಘರ್ಮಂ ಸಿಂಚಾದಥರ್ವಣಿ ॥**
(ಋ. ಸ. ೮-೯-೭)

ಇತ್ಯಾದಿ ವಾಕ್ಯಗಳಲ್ಲಿ ಅಥರ್ವನಿಂದ ನಿರ್ಮಥಿತನಾದುದರಿಂದ ಅಗ್ನಿಯೂ ಸಹ **ಅಥರ್ವನ್** ಎಂದೇ ಸ್ತುತನಾಗಿದ್ದಾನೆಂದು ತಿಳಿಸಿದೆ. ನಿರುಕ್ತಕಾರರು **ಅಥರ್ವನ್** ಶಬ್ದದ ನಿರ್ವಚನವನ್ನು ಈ ರೀತಿ ತಿಳಿಸಿದ್ದಾರೆ.

**" ಅಥರ್ವಾಣೋಽಥನವಂತಃ । ಥರ್ವತಿಶ್ಚರತಿಕರ್ಮಾ ತತ್ಪ್ರತಿಷೇಧಃ "**
(ನಿ. ೧೧-೧೯)

ಯಾವಾಗಲೂ ಸಂಚಾರಕ್ರಮವಿಲ್ಲದವರು ಎಂದರೆ ಸ್ಥಿರಪ್ರಕೃತಿಗಳು, ಚಂಚಲಸ್ವಭಾವದವರಲ್ಲ, ಆತ್ಮೇಶ್ವರರು ಎಂಬ ತಾತ್ಪರ್ಯವೆಂದು ಅಥರ್ವನ ಮತ್ತು ತದ್ವಂಶೀಯರ ಸ್ವರೂಪವನ್ನು ತಿಳಿಸಿದೆ. ಈ ಮಹರ್ಷಿಯ ಮಹತ್ತ್ವವನ್ನು ಪುರಾಣಾದಿಗಳಲ್ಲಿ ಈ ರೀತಿ ಪ್ರಶಂಸಿಸಿದೆ.

**ತತಃ ಸ ಭಗವಾಂಸ್ತತ್ರ ಅಂಗಿರಾಃ ಸಮದೃಶ್ಯತ ।**
**ಅಥರ್ವವೇದಮಂತ್ರೈಶ್ಚ ದೇವೇಂದ್ರಂ ಸಮಪೂಜಯತ್ ॥**
**ತತಸ್ತು ಭಗವಾನಿಂದ್ರಃ ಸಂಹೃಷ್ಟಃ ಸಮಪದ್ಯತ ।**
**ವರಂ ಚ ಪ್ರದದೌ ತಸ್ಮೈ ಅಥರ್ವಾಂಗಿರಸೇ ತದಾ ॥**
**ಅಥರ್ವಾಂಗಿರಸಂ ನಾಮ ವೇದೇಽಸ್ಮಿನ್ನೈ ಭವಿಷ್ಯತಿ ।**
**ಉದಾಹರಣಮೇತದ್ಧಿ ಯಜ್ಞಭಾಗಂ ಚ ಲಪ್ಸ್ಯಸೇ ॥**
(ಮಹಾಭಾರತಂ. ಉ. ಪ. ೧೮-೫ ರಿಂದ ೭)

ಅನಂತರ ಅಂಗಿರಸನು ಇಂದ್ರನ ಮುಂದೆ ನಿಂತು ಅಥರ್ವವೇದ ಮಂತ್ರಗಳಿಂದ ಇಂದ್ರನನ್ನು ಸ್ತುತಿಸಿದನು. ಇದರಿಂದ ಇಂದ್ರನು ಸಂತುಷ್ಟನಾಗಿ ಆ ಮಹರ್ಷಿಯನ್ನು ಕುರಿತು—ಅಥರ್ವವೇದದಲ್ಲಿ ಅಥರ್ವಾಂಗಿರಸವೆಂಬ ಭಾಗವೊಂದುಂಟಾಗಿ ಆ ಮಂತ್ರಕ್ಕೆ ನೀನೇ ಋಷಿ ಎಂಬುದಕ್ಕೆ ಇದೇ ನಿದರ್ಶಕವಾಗಲಿ. ನೀನು ಯಜ್ಞದಲ್ಲಿ ಮುಖ್ಯವಾದ ಭಾಗವನ್ನು ಪಡೆಯುವೆ ಎಂದನು. ಇತ್ಯಾದಿಯಾಗಿ ಪ್ರಶಂಸಿಸಿದೆ.

॥ ಸಂಹಿತಾಪಾಠಃ ॥

ತಮು ತ್ವಾ ದಧ್ಯಙ್ಙೃಷಿಃ ಪುತ್ರ ಈಧೇ ಅಥರ್ವಣಃ ।
ವೃತ್ರಹಣಂ ಪುರಂದರಂ ॥ ೧೪ ॥

॥ ಪದಪಾಠಃ ॥

**ತಂ । ಊಂ ಇತಿ । ತ್ವಾ । ದಧ್ಯಙ್ । ಋಷಿಃ । ಪುತ್ರಃ । ಈಧೇ । ಅಥರ್ವಣಃ ।**

**ವೃತ್ರಽಹನಂ । ಪುರಂಽದರಂ ॥ ೧೪ ॥**

॥ ಸಾಯಣಭಾಷ್ಯಂ ॥

**ಹೇ ಅಗ್ನೇ ಯ ಉಕ್ತಗುಣಸ್ತಮು ತಮೇವ ತ್ವಾಮಥರ್ವಣಃ ಪುತ್ರೋ ದಧ್ಯಙ್ ಏತತ್ಸಂಜ್ಞ ಋಷಿರೀಧೇ । ದೀಪಿತವಾನ್ । ಕೀದೃಶಂ । ವೃತ್ರಹಣಮಾವರಕಾಣಾಂ ಶತ್ರೂಣಾಂ ಹಂತಾರಂ ಪುರಂದರಮಸುರಪುರಾಣಾಂ ದಾರಯಿತಾರಂ ॥**

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ವೃತ್ರಹಣಂ**—ವೃತ್ರಾಸುರನ ಹಂತಕನೂ । **ಪುರಂದರಂ**—ಶತ್ರುಪಟ್ಟಣಗಳ ನಾಶಕನೂ ಆದ । **ತಮು ತ್ವಾ**—ಅದೇ ನಿನ್ನನ್ನು । **ಅಥರ್ವಣಃ**—ಅಥರ್ವಋಷಿಯ । **ಪುತ್ರಃ**—ಪುತ್ರನಾದ । **ದಧ್ಯಙ್**—ದಧೀಚಿಯೆಂಬ । **ಋಷಿಃ**—ಋಷಿಯು । **ಈಧೇ**—ಪ್ರಜ್ವಲಿತನಾಗುವಂತೆ ಮಾಡಿದನು.

॥ ಭಾವಾರ್ಥ ॥

ಎಲೈ ಅಗ್ನಿಯೇ, ವೃತ್ರಾಸುರನ ಹಂತಕನೂ, ಶತ್ರುಪಟ್ಟಣಗಳ ನಾಶಕನೂ ಆದ ಅದೇ ನಿನ್ನನ್ನು ಅಥರ್ವ ಋಷಿಯ ಪುತ್ರನಾದ ದಧೀಚಿಋಷಿಯು ಪ್ರಜ್ವಲಿತನಾಗುವಂತೆ ಮಾಡಿದನು.

## English Translation.

The Rishi, Dadhyanch, the son of Atharavan, kindled the slayer of Vritra, the destroyer of the cities of the Asuras.

॥ ವಿಶೇಷವಿಷಯಗಳು ॥

**ದಧ್ಯಙ್ ಋಷಿಃ**—ದಧ್ಯಂಚ್ ಅಥವಾ ದಧೀಚಿ ಎಂಬ ಋಷಿಯು ಪುರಾಣಾದಿಗಳಲ್ಲಿ ಪ್ರಸಿದ್ಧನಾದವನು. ಭಾಷ್ಯಕಾರರು ಇಲ್ಲಿ ಒಂದು ಉಪಾಖ್ಯಾನವನ್ನು ಹೇಳಿರುವರು—ಅಥರ್ವನೆಂಬುವನ ಪುತ್ರನಾದ ದಧ್ಯಂಚ್ ಎಂಬ ಋಷಿಯು ಜೀವಿಸಿದ್ದಾಗ ಅವನ ದರ್ಶನದಿಂದ ಅಸುರರು ಭೀತರಾಗಿ ಓಡಿಹೋಗಿದ್ದರು. ಅವನು ಮೃತನಾಗಿ ಸ್ವರ್ಗಕ್ಕೆ ಹೋದ ಬಳಿಕ ಅಸುರರು ನಿರ್ಭಯವಾಗಿ ಭೂಮಿಯೆಲ್ಲವನ್ನೂ ವ್ಯಾಪಿಸಿದರು. ಬಳಿಕ ಇಂದ್ರನು ಈ ಅಸುರರೊಡನೆ ಯುದ್ಧಮಾಡಲಶಕ್ತನಾಗಿ ಆ ಋಷಿಯನ್ನು ಹುಡುಕಿದನು. ಋಷಿಯು ಸ್ವರ್ಗಸ್ಥನಾದನೆಂದು ತಿಳಿಯಬಂದಿತು. ಆಗ ಇಂದ್ರನು ಸಮೀಪದಲ್ಲಿದ್ದವರನ್ನು ಕುರಿತು ಆ ಋಷಿಯ ಅಂಗಗಳಲ್ಲಿ ಯಾವುದಾದರೂ ಅವಶೇಷವಿದೆಯೇ ಎಂದು ಕೇಳಲು ಆಗ ಅವರು—ದಧೀಚಿಋಷಿಯು ಒಂದಾನೊಂದು ಕಾಲದಲ್ಲಿ ಅಶ್ವಿನೀದೇವತೆಗಳಿಗೆ ಮಧುವಿದ್ಯವನ್ನು ಕಲಿಸಿದ ಕುದುರೆಯ ತಲೆಬುರುಡೆಯು ಮಾತ್ರ ಇರುವುದೆಂದೂ, ಅದು ಸಹ ಎಲ್ಲಿರುವುದೋ ಗೊತ್ತಿಲ್ಲವೆಂದೂ ಹೇಳಿದರು. ಆಗ ಇಂದ್ರನು ಅದನ್ನು ಹುಡುಕುವಂತೆ ಅವರಿಗೆ ಹೇಳಲು, ಅವರು ಅದು ಕುರುಕ್ಷೇತ್ರದ ಸಮೀಪದಲ್ಲಿರುವ

ಶರ್ಯಣಾವತ್ ಎಂಬ ಸರೋವರದಲ್ಲಿ ಬಿದ್ದಿರುವುದನ್ನು ಹುಡುಕಿ ತೆಗೆದುಕೊಂಡು ಬಂದರು. ಇಂದ್ರನು ಆ ತಲೆ ಬುರುಡೆಯ ಮೂಳೆಗಳಿಂದ ಅಸುರರನ್ನು ಜಯಿಸಿದನು. ಎಂದರೆ, ಒಂಭತ್ತುಸಲ ಎಂದರೆ ಎಂಟನೂರು ಹತ್ತಾವರ್ತಿ ಅಸುರರ ಮಾಯಾಜಾಲವನ್ನು ವಿಫಲಗೊಳಿಸಿದನು. ಇಲ್ಲಿ ಒಂಭತ್ತುಸಲ ತೊಂಭತ್ತು ಎಂಬ ಸಂಖ್ಯೆಯನ್ನು ವಿವರಿಸುವಾಗ ಭಾಷ್ಯಕಾರರು—ಮೂರು ಲೋಕಗಳಲ್ಲಿರುವ ದೇವತೆಗಳನ್ನು ಜಯಿಸಲು ಮೊದಲು ಅಸುರರಿಗೆ ಮೂರು ವಿಧವಾದ ಮಾಯಾಭೇದಗಳಿದ್ದವು. ಅವುಗಳಲ್ಲಿ ಒಂದೊಂದೂ ವರ್ತಮಾನ ಭೂತ ಭವಿಷ್ಯತ್ ಎಂದು ಮೂರು ವಿಧವಾಗಿದ್ದುದರಿಂದ ಒಟ್ಟು ಒಂಭತ್ತು ವಿಧಗಳಾದವು. ಮತ್ತೆ ಆ ಒಂಭತ್ತು ಮಾಯೆಗಳು ಉತ್ಸಾಹಾದಿ ಶಕ್ತಿತ್ರಯಗಳಿಂದ ಕೂಡಿ ೯×೩=೨೭ ಆದುವು. ಮತ್ತೆ ಅವು ಸಾತ್ವಿಕಾದಿ ಗುಣತ್ರಯಗಳಿಂದ ಕೂಡಿ ೨೭×೩=೮೧ ಆದುವು. ಈ ಎಂಭತ್ತೊಂದು ಮಾಯೆಗಳು ದಶದಿಕ್ಕುಗಳಲ್ಲಿ ಆಚರಿಸಲ್ಪಡುವುದರಿಂದ ಒಟ್ಟು ೮೧×೧೦=೮೧೦ ಅಥವಾ ಒಂಭತ್ತುಸಲ ತೊಂಭತ್ತು ೯×೯೦=೮೧೦ ಆದುವು. ಈ ವಿಧವಾದ ವೃತ್ರರೂಪವಾದ ಅಸುರರ ಮಾಯಾಜಾಲಗಳನ್ನು ಇಂದ್ರನು ನಿರರ್ಥಕಗೊಳಿಸಿದನು ಎಂದು ವಿವರಿಸಿರುವರು (ಋ. ಸಂ. ೧-೮೪-೧೬).

ಸ್ಕಂದಸ್ವಾಮಿಯು ಬೇರೊಂದು ಇತಿಹಾಸವನ್ನು ಹೇಳಿರುವರು—ಪೂರ್ವದಲ್ಲಿ ಕಾಲಕಂಜರೆಂಬ ಅಸುರರಿದ್ದರು. ಅವರು ಪ್ರಬಲರಾಗಿ ದೇವತೆಗಳನ್ನು ಕೊಲ್ಲುತ್ತಾ ತುಂಬಾ ತೊಂದರೆ ಕೊಡುತ್ತಿದ್ದರು. ಆಗ ದೇವತೆಗಳು ಬ್ರಹ್ಮನ ಸಮೀಪಕ್ಕೆ ಹೋಗಿ ಈ ಅಸುರರನ್ನು ಸಂಹಾರಮಾಡಲು ಉಪಾಯವನ್ನು ತಿಳಿಸಬೇಕೆಂದು ಪ್ರಾರ್ಥಿಸಲು, ಬ್ರಹ್ಮನು-ಎಲೈ ದೇವತೆಗಳಿರಾ, ದಧ್ಯಙ್ ಎಂಬ ಋಷಿಯು ಇರುವನು. ನೀವು ಅವನ ಸಮೀಪಕ್ಕೆ ಹೋಗಿರಿ, ಅವನು ಅಸುರರ ಸಂಹಾರವಿಷಯದಲ್ಲಿ ತಕ್ಕ ಉಪಾಯವನ್ನು ತಿಳಿಸುವನು ಎಂದನು. ದೇವತೆಗಳು ಬ್ರಹ್ಮನ ಮಾತಿನಂತೆ ದಧೀಚಿ ಋಷಿಯ ಸಮೀಪಕ್ಕೆ ಹೋಗಿ ಬ್ರಹ್ಮನು ತಮ್ಮನ್ನು ಕಳುಹಿಸಿರುವನೆಂದು ಅರಿಕೆಮಾಡಿದರು. ಆ ಋಷಿಯು ಯೋಗ ದೃಷ್ಟಿಯಿಂದ ಇವರು ಬಂದ ಕಾರ್ಯವನ್ನು ತಿಳಿದು ಯೋಗಸಮಾಧಿಯಿಂದ ತನ್ನ ಪ್ರಾಣಗಳನ್ನು ವಿಸರ್ಜಿಸಿದನು. ಆಗ ಆ ಋಷಿಯ ಮೂಳೆಗಳಿಂದ ಇಂದ್ರನು ಅಸುರರನ್ನು ಸಂಹಾರಮಾಡಿದನು. ಈ ವಿಷಯವೇ ಈ ಋಕ್ಕಿನಲ್ಲಿ (ಋ. ಸಂ. ೧–೮೦–೧೬) ವಿವರಿಸಲ್ಪಟ್ಟಿರುವುದೆಂದು ಸ್ಕಂದಸ್ವಾಮಿಯು ವಿವರಿಸಿರುವರು.

ದಧೀಚಿಋಷಿಯ ತಲೆಯು ಕುದುರೆಯ ತಲೆಯಹಾಗಿದ್ದಿತೆಂದೂ ಅದು ಅಶ್ವಿನೀದೇವತೆಗಳಿಂದ ಅವನಿಗೆ ಕೊಡಲ್ಪಟ್ಟಿದ್ದಿತೆಂದೂ ಪ್ರತೀತಿ ಇರುವುದು. ದಧೀಚಿಋಷಿಯು ಮೃತನಾದಮೇಲೆ ಕುದುರೆ ತಲೆಯಂತಿದ್ದ ಅವನ ಶಿರಸ್ಸನ್ನು ಇಂದ್ರನು ಹುಡುಕಿದನು. ಅದು ಒಂದು ಪರ್ವತದ ಮರೆಯಲ್ಲಿ ಶರ್ಯಣಾವತಿಯೆಂಬ ಒಂದು ಸರೋವರದಲ್ಲಿ ಸಿಕ್ಕಿತೆಂದು ಋ. ಸಂ. ೧-೮೪-೧೩ ರಲ್ಲಿ ವಿವರಿಸಲಾಗಿರುವುದು.

ದಧೀಚಿಋಷಿಗೆ ಕುದುರೆಯ ಶಿರಸ್ಸು ಹೇಗೆ ಬಂತೆಂಬ ವಿಚಾರದಲ್ಲಿ ಸ್ಕಂದಸ್ವಾಮಿಯು ಒಂದು ಪೂರ್ವೇತಿಹಾಸವನ್ನು ಹೇಳಿರುವರು—ಅಥರ್ವಣ ಪುತ್ರನಾದ ದಧೀಚಿಋಷಿಗೆ ಇಂದ್ರನು ಮಧುವೆಂಬ ಪರಬ್ರಹ್ಮನ ಸ್ವರೂಪವನ್ನು ಉಪದೇಶಮಾಡಿ ಇದನ್ನು ಯಾರಿಗೂ ಹೇಳಕೂಡದೆಂದೂ ಹಾಗೆ ಒಂದು ವೇಳೆ ಹೇಳಿದರೆ ನಿನ್ನ ತಲೆಯು ಬಿದ್ದುಹೋಗುವುದೆಂದೂ ಹೇಳಿದನು ಕೆಲವು ಕಾಲದ ಮೇಲೆ ಅಶ್ವಿನೀದೇವತೆಗಳು ಆ ದಧೀಚಿಋಷಿಯ ಸಮೀಪಕ್ಕೆ ಬಂದು ಇಂದ್ರನು ನಿನಗೆ ತಿಳಿದ ಬ್ರಹ್ಮಸ್ವರೂಪವನ್ನು ವಿವರಿಸೆನಲು, ದಧೀಚಿಋಷಿಯು ಅವನನ್ನು ಕುರಿತು ಈ ವಿಷಯವನ್ನು ನಾನು ನಿಮಗೆ ತಿಳಿಸಿದಲ್ಲಿ ನನ್ನ ತಲೆಯು ಬಿದ್ದುಹೋಗುವುದೆಂದು ಇಂದ್ರನು ಹೇಳಿರುವನು. ಆ ಭಯದಿಂದ

ನಾನು ಹೇಳುವುದಿಲ್ಲವೆನ್ನಲು, ಅಶ್ವಿನೀದೇವತೆಗಳು ಅದಕ್ಕಾಗಿ ಚಿಂತಿಸಬೇಡ, ನಿನ್ನ ತಲೆಯುಬಿದ್ದುಹೋದರೆ ಬೇರೆ ತಲೆಯನ್ನು ನಿನಗೆ ಕೊಡುವುವೆಂದರು. ದಧೀಚಿಯು ಅದಕ್ಕೆ ಸಮ್ಮತಿಸಿ ಹೇಳಿದನು. ಅದರಿಂದ ದಧೀಚಿಋಷಿಯ ಶಿರಸ್ಸು ಬಿದ್ದುಹೋಗಲು ಅಶ್ವಿನೀದೇವತೆಗಳು ಒಂದು ಕುದುರೆಯ ಶಿರಸ್ಸನ್ನು ಕತ್ತರಿಸಿ ತಂದು ದಧೀಚಿಋಷಿಯ ಶರೀರಕ್ಕೆ ಸೇರಿಸಿದರು. ಅದರಿಂದ ದಧೀಚಿಋಷಿಯ ಶಿರಸ್ಸು ಕುದುರೆಯ ಶಿರಸ್ಸಿನಂತಿರುವುದು ಎಂದು ವರ್ಣಿತವಾಗಿದೆ ಈ ವಿಷಯವನ್ನು ಕಕ್ಷೀವಾನ್ ಎಂಬ ಋಷಿಯು ಋ. ಸಂ. ೧-೧೧೬-೧೨ ಮತ್ತು ೧-೧೧೭-೨೨ಋಕ್ಕುಗಳಲ್ಲಿ ವರ್ಣಿಸಿರುವನು.

ಈ ಋಷಿಯ ಹೆಸರು ಋಗ್ವೇದ ಸಂಹಿತೆಯಲ್ಲಿ ೧-೮೦-೧೬- ; ೧-೮೪-೧೩ ; ೧-೮೪-೧೪ ; ೧-೧೧೬-೧೨; ೧-೧೧೭-೨೨; ೧-೧೧೯-೯ ಮೊದಲಾದ ಋಕ್ಕುಗಳಲ್ಲಿಯೂ ತೈತ್ತಿರೀಯ ಸಂಹಿತಾ. ೫-೧-೪-೪ ; ೫-೬-೬-೩ ಕಾಠಕ ಸಂಹಿತಾ ೧೯-೪ ; ಶತಪಥ ಬ್ರಾಹ್ಮಣ ೪-೧-೫-೧೮ ; ೬-೪-೨-೩ ; ೧೪-೧-೧-೧೮ ; ೧೪-೧-೧-೨೦ ; ೧೪-೧-೧-೨೫ ; ೧೪-೧-೪-೧೩ ; ಬೃಹದಾರಣ್ಯಕೋಪನಿಷತ್ ೨-೫-೨೨ ; ೪-೫-೨೮ ಮೊದಲಾದ ಸ್ಥಳಗಳಲ್ಲಿ ಪಠಿತವಾಗಿದೆ.

॥ ಸಂಹಿತಾಪಾಠಃ ॥

ತಮು ತ್ವಾ ಪಾಥ್ಯೋ ವೃಷಾ ಸಮೀಧೇ ದಸ್ಯುಹಂತಮಂ ।
ಧನಂಜಯಂ ರಣೇರಣೇ ॥ ೧೫ ॥

॥ ಪದಪಾಠಃ ॥

ತಂ । ಊಂ ಇತಿ । ತ್ವಾಂ । ಪಾಥ್ಯಃ । ವೃಷಾ । ಸಂ । ಈಧೇ । ದಸ್ಯುಹನ್ऽತಮಂ ।
ಧನಂऽಜಯಂ । ರಣೇऽರಣೇ ॥ ೧೫ ॥

॥ ಸಾಯಣಭಾಷ್ಯಂ ॥

ಪಾಥ್ಯೋ ವೃಷಾ ನಾಮ ಕಶ್ಚಿದೃಷಿಃ ತಮು ತಮೇವ ತ್ವಾ ತ್ವಾಂ ಹೇ ಅಗ್ನೇ ಸಮೀಧೇ । ಸಮೈಂಧ । ಸಮದೀಪಯತ್ । ಕೀದೃಶಂ । ದಸ್ಯುಹಂತಮಮತಿಶಯೇನ ದಸ್ಯೂನಾಮುಪಕ್ಷಪಯಿತ್ರೂಣಾಂ ಶತ್ರೂಣಾಂ ಹಂತಾರಂ ರಣೇ ರಣೇ ಯುದ್ಧೇ ಯುದ್ಧೇ ಧನಂಜಯಂ ಧನಾನಾಂ ಜೇತಾರಂ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ದಸ್ಯುಹಂತಮಂ**—ಶತ್ರುನಾಶಕನೂ। **ರಣೇರಣೇ**—ಪ್ರತಿಯೊಂದು ಯುದ್ಧದಲ್ಲಿಯೂ। **ಧನಂಜಯಂ**—ಧನವನ್ನು ಸಂಪಾದಿಸುವವನೂ ಆದ। **ತಮು ತ್ವಾ**—ಅದೇ ನಿನ್ನನ್ನು। **ಪಾಥ್ಯಃ**—ಪಥ್ಯ ಪುತ್ರನಾದ। **ವೃಷಾ**—ವೃಷನೆಂಬ ಋಷಿಯು। **ಸಮೀಧೇ**—ಅತಿಶಯವಾಗಿ ಪ್ರಜ್ವಲಿತನಾಗುವಂತೆ ಮಾಡಿದನು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಶತ್ರುನಾಶಕನೂ ಪ್ರತಿಯೊಂದು ಯುದ್ಧದಲ್ಲಿಯೂ ಧನವನ್ನು ಸಂಪಾದಿಸುವವನೂ ಆದ ಅದೇ ನಿನ್ನನ್ನು ಪಥ್ಯಪುತ್ರನಾದ ವೃಷನೆಂಬ ಋಷಿಯು ಅತಿಶಯವಾಗಿ ಪ್ರಜ್ವಲಿತನಾಗುವಂತೆ ಮಾಡಿದನು.

## English Translation.

(The Rishi) Pathya, the showerer, kindled you, the destroyer of the Dasyu, the winner of spoil in battle.

॥ ವಿಶೇಷವಿಷಯಗಳು ॥

**ಪಾಥ್ಯಃ ವೃಷಾ**— ಪಥ್ಯ ಎಂಬ ಋಷಿಯ ಹೆಸರು ಈ ಋಕ್ಕಿನಲ್ಲಲ್ಲದೆ ಇನ್ನೆಲ್ಲಿಯೂ ಇಲ್ಲ. ಆದರೆ ವೃಷಾ ಎಂಬ ಋಷಿಯ ಹೆಸರು ಈ ಋಕ್ಕಿನಲ್ಲಿಯೂ, ಋ. ಸಂ. ೧-೩೬-೧೦ ಎಂಬ ಋಕ್ಕಿನಲ್ಲಿಯೂ ಮಾತ್ರವಿರುವುದು. ಎರಡು ಸ್ಥಳಗಳಲ್ಲಿಯೂ ಈ ಋಷಿಯು ಅಗ್ನಿಯನ್ನು ಚೆನ್ನಾಗಿ ಉದ್ದೀಪನಗೊಳಿಸುವ ವಿಷಯದ ಪ್ರಸ್ತಾಪವೇ ಇದೆ. ಇನ್ನೆಲ್ಲಿಯೂ ಈ ಋಷಿಯ ಹೆಸರು ಇಲ್ಲದಿರುವುದರಿಂದ ಇವನ ವಿಷಯದಲ್ಲಿ ಹೆಚ್ಚಾಗಿ ಏನನ್ನು ಹೇಳಲು ಸಾಧ್ಯವಿಲ್ಲ.

॥ ಸಂಹಿತಾಪಾಠಃ ॥

ಏಹ್ಯೂ ಷು ಬ್ರವಾಣಿ ತೇಽಗ್ನ ಇತ್ಥೇತರಾ ಗಿರಃ ।
ಏಭಿರ್ವರ್ಧಾಸ ಇಂದುಭಿಃ ॥ ೧೬ ॥

॥ ಪದಪಾಠಃ ॥

ಆ । ಇಹಿ । ಊಂ ಇತಿ । ಸು । ಬ್ರವಾಣಿ । ತೇ । ಅಗ್ನೇ । ಇತ್ಥಾ । ಇತರಾಃ । ಗಿರಃ ।
ಏಭಿಃ । ವರ್ಧಾಸೇ । ಇಂದುಽಭಿಃ ॥ ೧೬ ॥

॥ ಸಾಯಣಭಾಷ್ಯಂ ॥

ಉಕ್ಥ್ಯೇ ಕ್ರತೌ ತೃತೀಯಸವನೇ ಮೈತ್ರಾವರುಣಸ್ಯೈಹ್ಯೂ ಷ್ವಿತ್ಯಾದಿಕೌ ತೃಚೌ ಸ್ತೋತ್ರಿಯಾನುರೂಪೌ । ಅ. ೬-೧ ॥ ಅಭಿಪ್ಲವಿಕೇಷೂಕ್ಥ್ಯೇಷು ತ್ರೇತೌ ವೈಕಲ್ಪಿಕೌ ಸ್ತೋತ್ರಿಯಾನುರೂಪೌ । ಅಭಿಪ್ಲವಿಕೇಷೂಕ್ಥ್ಯೇಷು ಸೂತ್ರಿತಂ ಚ । ಏಹ್ಯೂ ಷು ಬ್ರವಾಣಿ ತ ಅಗ್ನಿರಗಾಮಿ ಭಾರತಃ । ಅ. ೭-೮ । ಇತಿ ॥ ಪೌನರಾಧೇಯಿಕ್ಯಾಮಿಷ್ಟಾವುತ್ತರಾಜ್ಯಭಾಗಸ್ಯೈಹ್ಯೂ ಷ್ವಿತ್ಯನುವಾಕ್ಯಾ । ಸೂತ್ರಿತಂ ಚ । ಏಹ್ಯೂ ಷು ಬ್ರವಾಣಿ ತ ಇತ್ಯಾಗ್ನೇಯಾವಾಜ್ಯಭಾಗೌ । ಅ. ೨-೮ । ಇತಿ ॥

ಹೇ ಅಗ್ನ ಏಹಿ । ಆಗಚ್ಛ । ತೇ ತುಭ್ಯಂ ತ್ವದರ್ಥಂ ಗಿರಃ ಸ್ತುತೀರಿತ್ಥೇತ್ಥಮನೇನ ಪ್ರಕಾರೇಣ ಸು ಸುಷ್ಠು ಬ್ರವಾಣೀತ್ಯಾಶಾಸ್ಯತೇ । ತಾಃ ಸ್ತುತೀಃ ಶೃಣ್ವಿತ್ಯರ್ಥಃ । ಉ ಇತ್ಯೇತತ್ಪೂರಕಂ । ಇತರಾ ಅಸುರೈಃ ಕೃತಾಃ ಸ್ತುತೀಃ ಶೃಣ್ವತಿ ಶೇಷಃ । ತಥಾ ಚ ಬ್ರಾಹ್ಮಣಂ । ಅಗ್ನ ಇತ್ಥೇತರಾ ಗಿರ ಇತ್ಯಸುರ್ಯೋ ಹ ವಾ ಇತರಾ ಗಿರಃ । ಐ. ಬ್ರಾ. ೩-೪೯ । ಇತಿ । ಅಪಿ ಚಾಗತಸ್ತ್ವಮೇಭಿರೇತೈರಿಂದುಭಿಃ ಸೋಮೈರ್ವರ್ಧಾಸೇ । ವರ್ಧಸ್ವ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಏಹಿ**—ದಯಮಾಡು । **ಇತರಾಃ**—ಇತರರಿಂದ ಪಠಿತವಾದ । **ಗಿರಃ**—ಸ್ತುತಿಗಳನ್ನೂ ಸಹ । **ತೇ**—ನಿನ್ನನ್ನುದ್ದೇಶಿಸಿ । **ಇತ್ಥಾ**—ಈ ವಿಧ್ಯುಕ್ತಪ್ರಕಾರವಾಗಿಯೂ । **ಸು**—ಅತಿಶಯವಾಗಿಯೂ । **ಬ್ರವಾಣಿ**—ಪಠಿಸುವೆನು । **ಏಭಿಃ**—ಈ ಸ್ತುತಿಗಳಿಂದಲೂ । **ಇಂದುಭಿಃ**—ಈ ಸೋಮಗಳಿಂದಲೂ । **ವರ್ಧಾಸೇ**—ನೀನು ಪ್ರವೃದ್ಧನಾಗುತ್ತೀಯೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ದಯಮಾಡು. ಇತರರಿಂದ ಪಠಿತವಾದ ಸ್ತುತಿಗಳನ್ನೂ ಸಹ ನಿನ್ನನ್ನುದ್ದೇಶಿಸಿ ಈ ವಿಧ್ಯುಕ್ತಪ್ರಕಾರವಾಗಿಯೂ ಮತ್ತು ಅತಿಶಯವಾಗಿಯೂ ಪಠಿಸುತ್ತೇನೆ. ಈ ಸ್ತುತಿಗಳಿಂದಲೂ ಮತ್ತು ಈ ಸೋಮಗಳಿಂದಲೂ ನೀನು ಪ್ರವೃದ್ಧನಾಗುತ್ತೀಯೆ.

## English Translation.

Come, Agni, that I may address to you other praises in this manner: augment with these libations.

॥ ವಿಶೇಷವಿಷಯಗಳು ॥

ಉಕ್ಥ್ಯವೆಂಬ ಯಾಗದ ತೃತೀಯಸವನಕಾಲದಲ್ಲಿ ಮೈತ್ರಾವರುಣನೆಂಬ ಋತ್ವಿಜನು **ಏಹ್ಯೂ ಷು** ಎಂದು ಮೊದಲಾಗುವ ಎರಡು ತೃಚಗಳನ್ನು (ಈ ಸೂಕ್ತದ ೧೬-೨೧ ಋಕ್ಕುಗಳನ್ನು) ಸ್ತೋತ್ರಿಯಾನುರೂಪ ಮಂತ್ರಗಳನ್ನಾಗಿ ಪಠಿಸಬೇಕೆಂದೂ ಅದರಂತೆ ಅಭಿಪ್ಲವಸಂಬಂಧವಾದ ಉಕ್ಥ್ಯಯಾಗಗಳಲ್ಲಿಯೂ ಈ ಋಕ್ಕುಗಳನ್ನು ವಿಕಲ್ಪವಾಗಿ ಸ್ತೋತ್ರಿಯಾನುರೂಪ ಮಂತ್ರಗಳಿಗಾಗಿ ಉಪಯೋಗಿಸಬೇಕೆಂದೂ ಆಶ್ವಲಾಯನ ಶ್ರೌತಸೂತ್ರದ—**ಏಹ್ಯೂ ಷು ಬ್ರವಾಣಿ ತೆ ಅಗ್ನಿರಗಾಮಿ ಭಾರತಃ** ಎಂಬ ಸೂತ್ರದಿಂದ (ಆ. ೭-೮) ವಿವೃತವಾಗಿರುವುದು. ಮತ್ತು ಪುನರಾಧೇಯವೆಂಬ ಇಷ್ಟಿಯಲ್ಲಿ **ಏಹ್ಯೂ ಷು** ಎಂಬ ಈ ಋಕ್ಕನ್ನು ಆಜ್ಯಭಾಗದ ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಏಹ್ಯೂ ಷು ಬ್ರವಾಣಿ ತ ಇತ್ಯಾಗ್ನೇಯೌವಾಜ್ಯಭಾಗೌ** ಎಂಬ ಸೂತ್ರದಿಂದ (ಆ. ೨-೮) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಯತ್ರ ಕ್ವ ಚ ತೇ ಮನೋ ದಕ್ಷಂ ದಧಸ ಉತ್ತರಂ ।

ತತ್ರಾ ಸದಃ ಕೃಣವಸೇ ॥ ೧೭ ॥

॥ ಪದಪಾಠಃ ॥

ಯತ್ರ । ಕ್ವ । ಚ । ತೇ । ಮನಃ । ದಕ್ಷಂ । ದಧಸೇ । ಉತ್ऽತರಂ ।

ತತ್ರ । ಸದಃ । ಕೃಣವಸೇ ॥ ೧೭ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತೇ ತವ ಮನೋಽನುಗ್ರಹಾತ್ಮಕಮಂತಃಕರಣಂ ಯತ್ರ ಯಸ್ಮಿನ್ದೇಶೇ ಕ್ವ ಚ ಕಸ್ಮಿಂಶ್ಚಿದ್ಯಜಮಾನೇ ವರ್ತತೇ ತತ್ರ ತಸ್ಮಿನ್ಯಜಮಾನ ಉತ್ತರಮುದ್ಧತತರಂ ಶ್ರೇಷ್ಠಂ ದಕ್ಷಂ ಬಲಕರಮನ್ನಂ ವಾ ದಧಸೇ । ಧಾರಯಸಿ । ತಥಾ ಸದಃ ಸ್ಥಾನಂ ಚ ಕೃಣವಸೇ । ತಸ್ಮಿನ್ಯಜಮಾನೇ ಕರೋಷಿ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ತೇ**—ನಿನ್ನ । **ಮನಃ**—ಅನುಗ್ರಹಾತ್ಮಕವಾದ ಮನಸ್ಸು । **ಯತ್ರ**—ಯಾವ ಪ್ರದೇಶದಲ್ಲಾಗಲಿ । **ಕ್ವ ಚ**—ಯಾವ ಯಜಮಾನನಲ್ಲಾಗಲಿ (ಪ್ರೇರಿತವಾಗುವುದೋ) । **ತತ್ರ**—ಆ ಪ್ರದೇಶದಲ್ಲೂ ಮತ್ತು ಆ ಯಜಮಾನನಲ್ಲೂ । **ಉತ್ತರಂ**—ಅಧಿಕತರವಾದುದೂ । **ದಕ್ಷಂ**—ಬಲಯುತವಾದುದೂ ಆದ ಅನ್ನವನ್ನು । **ದಧಸೇ**—ಹೊಂದಿಸುತ್ತೀಯೆ । **ಸದಃ**—ಉತ್ತಮವಾದ ಸ್ಥಾನವನ್ನೂ । **ಕೃಣವಸೇ**—ಉಂಟುಮಾಡಿಕೊಳ್ಳುತ್ತೀಯೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಿನ್ನ ಅನುಗ್ರಹಾತ್ಮಕವಾದ ಮನಸ್ಸು ಯಾವ ಪ್ರದೇಶದಲ್ಲಾಗಲಿ, ಯಾವ ಯಜಮಾನನಲ್ಲಾಗಲಿ ಪ್ರೇರಿತವಾದರೂ ಸಹ ಆ ಪ್ರದೇಶದಲ್ಲೂ, ಆ ಯಜಮಾನನಲ್ಲೂ ಅಧಿಕತರವಾದುದೂ, ಮತ್ತು ಬಲಯುತವಾದುದೂ ಆದ ಅನ್ನವನ್ನು ನೀನು ಹೊಂದಿಸುತ್ತೀಯೆ. ಮತ್ತು ಉತ್ತಮವಾದ ಸ್ಥಾನವನ್ನೂ ಉಂಟುಮಾಡಿಕೊಳ್ಳುತ್ತೀಯೆ.

## English Translation.

Wherever, and upon whatever your mind is directed, you bestow uncommon vigour, and there you make your abode.

|| ಸಂಹಿತಾಪಾಠಃ ||

ನಹಿ ತೇ ಪೂರ್ತಮಕ್ಷಿಪದ್ಭುವನ್ನೇಮಾನಾಂ ವಸೋ ।
ಅಥಾ ದುವೋ ವನವಸೇ || ೧೮ ||

|| ಪದಪಾಠಃ ||

ನಹಿ । ತೇ । ಪೂರ್ತಂ । ಅಕ್ಷಿಽಪತ್ । ಭುವತ್ । ನೇಮಾನಾಂ । ವಸೋ ಇತಿ ।
ಅಥ । ದುವಃ । ವನವಸೇ । || ೧೮ ||

|| ಸಾಯಣಭಾಷ್ಯಂ ||

ಹೇ ಅಗ್ನೇ ತೇ ತ್ವದೀಯಂ ಪೂರ್ತಂ ಪೂರಕಂ ತೇಜೋಽಕ್ಷಿಪದಕ್ಷ್ಣೋಃ ಪಾತಕಂ ವಿನಾಶಕಂ ನಹಿ ಭುವತ್ । ನ ಭವತು । ಸರ್ವದಾಸ್ಮಾಕಂ ದರ್ಶನಸಾಮರ್ಥ್ಯಂ ಕರೋತು । ಹೇ ನೇಮಾನಾಂ ವಸೋ । ನೇಮಶಬ್ದೋಽಲ್ಪವಾಚೀ । ಮನುಷ್ಯಾಣಾಂ ಮಧ್ಯೇ ಕತಿಪಯಾನಾಂ ಯಜಮಾನಾನಾಂ ವಾಸಕ । ಅಥಾತಃ ಕಾರಣಾತ್ ದುವೋಽಸ್ಮಾಭಿರ್ಯಜಮಾನೈಃ ಕೃತಂ ಪರಿಚರಣಂ ವನವಸೇ । ಸಂಭಜಸ್ವ ||

|| ಪ್ರತಿಪದಾರ್ಥ ||

**ನೇಮಾನಾಃ**—ನಮ್ಮಂಥ ಕೆಲವು ಯಜಮಾನರಿಗೆ | **ವಸೋ**—ವಸತಿದಾಯಕನಾದ ಎಲೈ ಅಗ್ನಿಯೇ | **ತೇ**—ನಿನ್ನ | **ಪೂರ್ತಂ**—ಪೂರಕವಾದ ತೇಜಸ್ಸು | **ಅಕ್ಷಿಪತ್**—ನಮ್ಮ ಕಣ್ಣುಗಳನ್ನು ಕೊರೆಯುವ ತೀಕ್ಷ್ಣತೆಯುಳ್ಳದ್ದಾಗಿ | **ನಹಿ ಭುವತ್**—ಆಗದಿರಲಿ | **ಅಥ**—ಆ ಕಾರಣದಿಂದಲೇ | **ದುವಃ**—ನಮ್ಮ ಸೇವೆಗಳನ್ನು | **ವನವಸೇ**—ಸೇವಿಸು.

|| ಭಾವಾರ್ಥ ||

ನಮ್ಮಂಥ ಯಜಮಾನರಿಗೆ ಮಾತ್ರ ವಸತಿದಾಯಕನಾದ ಎಲೈ ಅಗ್ನಿಯೇ, ನಿನ್ನ ಪೂರ್ಣವಾದ ತೇಜಸ್ಸು ನಮ್ಮ ಕಣ್ಣುಗಳನ್ನು ಕೊರೆಯುವ ತೀಕ್ಷ್ಣತೆಯುಳ್ಳದ್ದಾಗಿ ಆಗದಿರಲಿ. ಆ ಕಾರಣದಿಂದಲೇ ನಮ್ಮ ಸೇವೆಗಳನ್ನು ಸೇವಿಸು.

## English Translation.

Let not your full (blaze) be distressing to the eye, giver of dwellings, to your humble votaries, and therefore accept our worship.

॥ ಸಂಹಿತಾಪಾಠಃ ॥

ಆಗ್ನಿರಗಾಮಿ ಭಾರತೋ ವೃತ್ರಹಾ ಪುರುಚೇತನಃ ।

ದಿವೋದಾಸಸ್ಯ ಸತ್ಪತಿಃ ॥ ೧೯ ॥

॥ ಪದಪಾಠಃ ॥

ಆ । ಅಗ್ನಿಃ । ಅಗಾಮಿ । ಭಾರತಃ । ವೃತ್ರಽಹಾ । ಪುರುಽಚೇತನಃ ॥

ದಿವಃಽದಾಸಸ್ಯ । ಸತ್ಽಪತಿಃ ॥ ೧೯ ॥

॥ ಸಾಯಣಭಾಷ್ಯಂ ॥

ಅಯಮಗ್ನಿರಾಗಾಮಿ । ಅಸ್ಮಾಭಿಃ ಸ್ತುತಿಭಿರಭ್ಯಗಮ್ಯತೆ । ಕೀದೃಶಃ । ಭಾರತೋ ಹವಿಷಾಂ ಭರ್ತಾ ದಿವೋದಾಸಸ್ಯೈತತ್ಸಂಜ್ಞಸ್ಯ ರಾಜ್ಞೋ ವೃತ್ರಹಾ ವೃತ್ರಾಣಾಂ ಶತ್ರೂಣಾಂ ಹಂತಾ ಪುರುಚೇತನಃ ಪುರೂಣಾಂ ಬಹೂನಾಂ ಚೇತಯಿತಾ ಜ್ಞಾತಾ । ಸರ್ವಜ್ಞ ಇತ್ಯರ್ಥಃ । ಸತ್ಪತಿಃ ಸತಾಂ ಯಜಮಾನಾನಾಂ ಪಾಲಯಿತಾ ॥

॥ ಪ್ರತಿಪದಾರ್ಥ ॥

**ಭಾರತಃ**—ಹವಿಸ್ಸನ್ನು ಭರಿಸುವವನೂ । **ದಿವೋದಾಸಾಯ**—ದಿವೋದಾಸನೆಂಬ ರಾಜನ । **ವೃತ್ರಹಾ**—ಶತ್ರುನಾಶಕನೂ । **ಪುರುಚೇತನಃ**—ಸರ್ವಜ್ಞನೂ । **ಸತ್ಪತಿಃ**—ಸಜ್ಜನರಾದ ಯಜಮಾನರ ಪಾಲಕನೂ ಆದ । **ಅಗ್ನಿಃ**—ಅಗ್ನಿಯು । **ಆ ಅಗಾಮಿ**—(ನಮ್ಮ ಸ್ತುತಿಗಳಿಂದ) ಬರಮಾಡಲ್ಪಟ್ಟಿದ್ದಾನೆ.

॥ ಭಾವಾರ್ಥ ॥

ಹವಿಸ್ಸನ್ನು ಭರಿಸುವವನೂ, ದಿವೋದಾಸನೆಂಬ ರಾಜನ ಶತ್ರುನಾಶಕನೂ ಸರ್ವಜ್ಞನೂ ಸಜ್ಜನರಾದ ಯಜಮಾನರ ಪಾಲಕನೂ ಆದ ಅಗ್ನಿಯು ನಮ್ಮ ಸ್ತುತಿಗಳಿಂದ ಇಲ್ಲಿಗೆ ಬರಮಾಡಲ್ಪಟ್ಟಿದ್ದಾನೆ।

## English Translation.

Agni, the bearer (of oblations), the destroyer of the enemies of Divodasa, the cognizant of many, the protector of the good, has been brought hither (by our praises).

॥ ವಿಶೇಷವಿಷಯಗಳು ॥

**ದಿವೋದಾಸಾಯ**—ದಿವೋದಾಸನ ವಿಷಯವನ್ನು ನಾವು 570-571 ನೇ ಪೇಜುಗಳಲ್ಲಿ ವಿವರಿಸಿರುವುದನ್ನು ನೋಡಿ.

॥ ಸಂಹಿತಾಪಾಠಃ ॥

ಸ ಹಿ ವಿಶ್ವಾತಿ ಪಾರ್ಥಿವಾ ರಯಿಂ ದಾಶನ್ಮಹಿತ್ವನಾ ।
ವನ್ವನ್ನವಾತೋ ಅಸ್ತೃತಃ ॥ ೨೦ ॥

॥ ಪದಪಾಠಃ ॥

ಸಃ । ಹಿ । ವಿಶ್ವಾ । ಅತಿ । ಪಾರ್ಥಿವಾ । ರಯಿಂ । ದಾಶತ್ । ಮಹಿऽತ್ವನಾ ।
ವನ್ವನ್ । ಅವಾತಃ । ಅಸ್ತೃತಃ ॥ ೨೦ ॥

॥ ಸಾಯಣಭಾಷ್ಯಂ ॥

ಸ ಹಿ ಖಲ್ವಗ್ನಿರ್ವಿಶ್ವಾ ವಿಶ್ವಾನಿ ಸರ್ವಾಣಿ ಪಾರ್ಥಿವಾ ಪೃಥಿವ್ಯಾಂ ಭವಾನಿ ಭೂತಜಾತಾನಿ ಮಹಿತ್ವನಾ ಮಹತ್ತ್ವೇನ ಸ್ವಮಹಿಮ್ನಾತಿಕ್ರಾಮನ್ ರಯಿಂ ಧನಂ ದಾಶತ್ । ಅಸ್ಮಭ್ಯಂ ದದಾತು । ಯದ್ವಾ । ವಿಶ್ವಂ ಸರ್ವಂ ಪಾರ್ಥಿವಂ ಪೃಥಿವ್ಯಾಂ ವಿದ್ಯಮಾನಂ ರಯಿಂ ಧನಮತಿ ಅತಿಶಯೇನ ದಾಶತ್ । ದದಾತು । ಕೀದೃಶೋಽಗ್ನಿಃ । ಮಹಿತ್ವನಾ ಮಹತ್ತ್ವೇನ ತೇಜಸಾ ವನ್ವನ್ ಕಾಷ್ಠಾನಿ ಶತ್ರೂನ್ವಾ ಹಿಂಸನ್ ಅವಾತೋಽನ್ಯೈಃ ಶತ್ರುಭಿರಪ್ರತಿಗತೋಽಸ್ತೃತಃ ಕೇನಾಪ್ಯಹಿಂಸಿತಃ ॥

॥ ಪ್ರತಿಪದಾರ್ಥ ॥

**ವನ್ವನ್**—ಶತ್ರುಹಿಂಸಕನೂ । **ಅವಾತಃ**—ಶತ್ರುಗಳಿಂದ ಅಪ್ರತಿಹತನೂ । **ಅಸ್ತೃತಃ**—ಯಾರಿಂದಲೂ ಹಿಂಸಿಸಲ್ಪಡದವನೂ ಆದ । **ಸ ಹಿ**—ಅದೇ ಅಗ್ನಿಯು । **ವಿಶ್ವಾ**—ಸಮಸ್ತವಾದ । **ಪಾರ್ಥಿವಾ**— ಪೃಥ್ವಿಯ ಐಶ್ವರ್ಯವನ್ನೂ । **ಮಹಿತ್ವನಾ**—ತನ್ನ ಆಧಿಕ್ಯದಿಂದ ಮೀರಿಸುವ । **ರಯಿಂ**—ಧನವನ್ನು । **ದಾಶತ್**—ನಮಗೆ ಅನುಗ್ರಹಿಸಿ ಕೊಡಲಿ.

॥ ಭಾವಾರ್ಥ ॥

ಶತ್ರುಹಿಂಸಕನೂ, ಶತ್ರುಗಳಿಂದ ಅಪ್ರತಿಹತನೂ, ಯಾರಿಂದಲೂ ಹಿಂಸಿಸಲ್ಪಡದವನೂ ಆದ ಅದೇ ಅಗ್ನಿಯು ಸಮಸ್ತವಾದ ಪೃಥ್ವಿಯ ಐಶ್ವರ್ಯವನ್ನೂ ತನ್ನ ಆಧಿಕ್ಯದಿಂದ ಮೀರಿಸುವ ಧನವನ್ನೂ ನನಗೆ ಅನುಗ್ರಹಿಸಿ ಕೊಡಲಿ.

## English Translation.

Surpassing all earthly things, may he bestow upon us riches, destroying his enemies by his greatness, unresisted, unassailed.

॥ ಸಂಹಿತಾಪಾಠಃ ॥

ಸ ಪ್ರತ್ನವನ್ನವೀಯಸಾಗ್ನೇ ದ್ಯುಮ್ನೇನ ಸಂಯತಾ ।
ಬೃಹತ್ತತಂಥ ಭಾನುನಾ ॥ ೨೧ ॥

॥ ಪದಪಾಠಃ ॥

ಸಃ । ಪ್ರತ್ನऽವತ್ । ನವೀಯಸಾ । ಅಗ್ನೇ । ದ್ಯುಮ್ನೇನ । ಸಂऽಯತಾ ।
ಬೃಹತ್ । ತತಂಥ । ಭಾನುನಾ ॥ ೨೧ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಯಃ ಪೂರ್ವೋಕ್ತಗುಣವಿಶಿಷ್ಟಃ ಸ ತಾದೃಶಸ್ತ್ವಂ ಪ್ರತ್ನವತ್ ಪ್ರತ್ನೇನ ಪುರಾಣೇನ ನವೀಯಸಾ ನವತರೇಣ ದ್ಯುಮ್ನೇನ ದ್ಯೋತಮಾನೇನ ಸಂಯತಾ ಸಂಗಚ್ಛತಾ ಸಮ್ಯಗ್ವ್ಯಾಪ್ನುವತಾ ಭಾನುನಾ ತೇಜಸಾ ಬೃಹನ್ಮಹದಂತರಿಕ್ಷಂ ತತಂಥ । ವಿಸ್ತಾರಯಸಿ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ ।। **ಸಃ**—ಹಿಂದೆಲ್ಲಾ ವರ್ಣಿತನಾದ ನೀನು । **ಪ್ರತ್ನವತ್**—ಹಿಂದೆಲ್ಲಾ ಇದ್ದಂತೆ ಈಗಲೂ ಇರತಕ್ಕ । **ನವೀಯಸಾ**—ನೂತನವಾದುದೂ । **ದ್ಯುಮ್ನೇನ**—ಪ್ರಕಾಶಮಾನವಾದುದೂ । **ಸಂಯತಾ**—ಸಂಘಾತರೂಪದಲ್ಲಿರತಕ್ಕದ್ದೂ ಆದ । **ಭಾನುನಾ**—ನಿನ್ನ ತೇಜಸ್ಸಿನಿಂದ । **ಬೃಹತ್**—ಅತಿ ವಿಸ್ತೃತವಾದ ಅಂತರಿಕ್ಷವನ್ನು । **ತತಂಥ**—ಇನ್ನೂ ವಿಸ್ತೃತವಾಗುವಂತೆ ವ್ಯಾಪಿಸಿದ್ದೀಯೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಹಿಂದೆಲ್ಲಾ ವರ್ಣಿತನಾದ ನೀನು, ಪೂರ್ವಕಾಲದಲ್ಲೆಲ್ಲಾ ಇದ್ದಂತೆ ಈಗಲೂ ಇರುವ ನೂತನವಾದುದೂ, ಪ್ರಕಾಶಮಾನವಾದುದೂ, ಸಂಘಾತರೂಪದಲ್ಲಿರತಕ್ಕದ್ದೂ ಆದ ನಿನ್ನ ತೇಜಸ್ಸಿನಿಂದ ಅತಿ ವಿಸ್ತೃತವಾದ ಅಂತರಿಕ್ಷವನ್ನು ಇನ್ನೂ ವಿಸ್ತೃತವಾಗುವಂತೆ ವ್ಯಾಪಿಸಿದ್ದೀಯೆ.

## English Translation.

You have overspread, Agni, this vast (firmament) with radiant concentrated lustre, recent like that of old.

|| ಸಂಹಿತಾಪಾಠಃ ||

ಪ್ರ ವಃ ಸಖಾಯೋ ಅಗ್ನಯೇ ಸ್ತೋಮಂ ಯಜ್ಞಂ ಚ ಧೃಷ್ಣುಯಾ |
ಅರ್ಚ ಗಾಯ ಚ ವೇಧಸೇ || ೨೨ ||

|| ಪದಪಾಠಃ ||

ಪ್ರ | ವಃ | ಸಖಾಯಃ | ಅಗ್ನಯೇ | ಸ್ತೋಮಂ | ಯಜ್ಞಂ | ಚ | ಧೃಷ್ಣುಽಯಾ |
ಅರ್ಚ | ಗಾಯ | ಚ | ವೇಧಸೇ || ೨೨ ||

|| ಸಾಯಣಭಾಷ್ಯಂ ||

ಹೇ ಸಖಾಯಃ ಸಮಾನಖ್ಯಾನಾ ಋತ್ವಿಜೋ ವೋ ಯೂಯಂ ಧೃಷ್ಣುಯಾ ಶತ್ರೂಣಾಂ ಧರ್ಷಕಾಯ ವೇಧಸೇ ವಿಧಾತ್ರೇಽಗ್ನಯೇ ಸ್ತೋಮಂ ಸ್ತೋತ್ರಂ ಗಾಯ | ಗಾಯತ | ತಥಾ ಯಜ್ಞಂ ಯಜನಸಾಧನಂ ಹವಿಶ್ಚ ಪ್ರಾರ್ಚ | ಪ್ರಯಚ್ಛ ||

|| ಪ್ರತಿಪದಾರ್ಥ ||

**ಸಖಾಯಃ**—ಸ್ನೇಹಿತರಾದ ಋತ್ವಿಕ್ಕುಗಳೇ | **ವಃ**—ನೀವು | **ಧೃಷ್ಣುಯಾ**—ಶತ್ರುಧರ್ಷಕನೂ | **ವೇಧಸೇ**—ಸೃಷ್ಟಿಕರ್ತನೂ ಆದ | **ಅಗ್ನಯೇ**—ಅಗ್ನಿಯನ್ನುದ್ದೇಶಿಸಿ | **ಸ್ತೋಮಂ**—ಸ್ತೋತ್ರವನ್ನು | **ಗಾಯ**—ಪಠಿಸಿರಿ | **ಯಜ್ಞಂ ಚ**—ಯಜ್ಞಸಾಧನವಾದ ಹವಿಸ್ಸನ್ನೂ | **ಪ್ರ ಅರ್ಚ**—ಅರ್ಪಿಸಿರಿ.

|| ಭಾವಾರ್ಥ ||

ಸಖರಾದ (ಸ್ನೇಹಿತರಾದ) ಎಲೈ ಋತ್ವಿಕ್ಕುಗಳೇ, ಶತ್ರುಧರ್ಷಕನೂ, ಸೃಷ್ಟಿಕರ್ತನೂ ಆದ ಅಗ್ನಿಯನ್ನುದ್ದೇಶಿಸಿ ಸ್ತೋತ್ರವನ್ನು ಪಠಿಸಿರಿ. ಮತ್ತು ಯಜ್ಞಸಾಧನವಾದ ಹವಿಸ್ಸನ್ನೂ ಅರ್ಪಿಸಿರಿ.

## English Translation.

Sing praise and offer sacrifice, my friends, to the foe-diseomfiting, the creator, Agni.

| ವಿಶೇಷವಿಷಯಗಳು |

**ಸಖಾಯಃ**—ಯಜ್ಞಾದಿಗಳಲ್ಲಿ ಭಾಗವಹಿಸಿ ಯಜಮಾನನ ವಿಷಯದಲ್ಲಿ ಸಹಕರಿಸಿ ಕೆಲಸಮಾಡುವ ಋತ್ವಿಗ್ಜನರನ್ನು ಯಜ್ಞಮಾಡುವ ಯಜಮಾನನಿಗೆ ಸ್ನೇಹಿತರೆಂದು ಕರೆಯುವುದು ರೂಢಿಯು. **ಋತ್ವಿಜೋ ವಾ ಅಸ್ಯ ಸಖಾಯಃ** ಎಂದು ತೈತ್ತರೀಯ ಸಂಹಿತಾ ವಾಕ್ಯವಿರುವುದು.

॥ ಸಂಹಿತಾಪಾಠಃ ॥

ಸ ಹಿ ಯೋ ಮಾನುಷಾ ಯುಗಾ ಸೀದದ್ಧೋತಾ ಕವಿಕ್ರತುಃ ।
ದೂತಶ್ಚ ಹವ್ಯವಾಹನಃ ॥ ೨೩ ॥

॥ ಪದಪಾಠಃ ॥

ಸಃ । ಹಿ । ಯಃ । ಮಾನುಷಾ । ಯುಗಾ । ಸೀದತ್ । ಹೋತಾ । ಕವಿಽಕ್ರತುಃ ।
ದೂತಃ । ಚ । ಹವ್ಯಽವಾಹನಃ ॥ ೨೩ ॥

॥ ಸಾಯಣಭಾಷ್ಯಂ ॥

ಸ ಹಿ ಸ ಖಲ್ವಗ್ನಿಃ ಸೀದತ್ । ಸೀದತು । ಅಸ್ಮದೀಯೇ ಯಜ್ಞೇ ಬರ್ಹಿಷ್ಯುಪವಿಶತು । ಯೋಽಗ್ನಿರ್ಹೋತಾ ದೇವಾನಾಮಾಹ್ವಾತಾ ಕವಿಕ್ರತುಃ ಕ್ರಾಂತಪ್ರಜ್ಞೋ ಮಾನುಷಾ ಯುಗಾ ಮಾನುಷಾಣಿ ಯುಗಾನಿ ಮನುಷ್ಯಸಂಬಂಧಿನೋ ಯಜ್ಞಾರ್ಹಾನ್ಕಾಲವಿಶೇಷಾನ್ ಯೇಷು ಯಾಗಾ ಅನುಷ್ಠೀಯಂತೇ ॥ ಅತ್ಯಂತಸಂಯೋಗೇ ದ್ವಿತೀಯಾ ॥ ಏತಾವಂತಂ ಕಾಲಂ ದೇವಾನಾಂ ದೂತಃ । ಸ ಹವ್ಯವಾಹನೋ ಹವಿಷಾಂ ವೋಢಾ ಚ ಭವತಿ ॥

॥ ಪ್ರತಿಪದಾರ್ಥ ॥

**ಯಃ**—ಯಾವ ಅಗ್ನಿಯು । **ಹೋತಾ**—ಹೋಮಸಂಪಾದಕನೂ । **ಕವಿಕ್ರತುಃ**—ಕ್ರಾಂತಪ್ರಜ್ಞನೂ । **ಮಾನುಷಾ ಯುಗಾ**—ಪ್ರತಿಯೊಂದು ಮಾನವರ ಯುಗದಲ್ಲಿಯೂ । **ದೂತಃ**—ದೇವದೂತನಾಗಿರುವವನೂ । **ಹವ್ಯವಾಹನಃ**—ಹವಿಸ್ಸನ್ನು ವಹಿಸುವವನೂ ಆಗಿರುವನೋ । **ಸ ಹಿ**—ಅದೇ ಅಗ್ನಿಯು । **ಸೀದತ್**—(ನಮ್ಮ ಯಜ್ಞವೇದಿಯಲ್ಲಿ) ಸ್ಥಾಪಿತನಾಗಲಿ.

॥ ಭಾವಾರ್ಥ ॥

ಹೋಮಸಂಪಾದಕನೂ, ಕ್ರಾಂತಪ್ರಜ್ಞನೂ, ಪ್ರತಿಯೊಂದು ಮಾನವರ ಯುಗದಲ್ಲಿಯೂ ದೇವದೂತನಾಗಿರುವವನೂ ಮತ್ತು ಹವಿರ್ವಾಹಕನೂ ಆದ ಅದೇ ಅಗ್ನಿಯು ನಮ್ಮ ಯಜ್ಞವೇದಿಯಲ್ಲಿ (ಕುಳಿತುಕೊಳ್ಳಲಿ) ಸ್ಥಾಪಿತನಾಗಿರಲಿ.

English Translation.

May that Agni indeed sit down (at our sacrifice), who in every age of man has been the invoker the of gods, the doer of wise deeds, the messenger of the gods, the bearer of oblations

॥ ಸಂಹಿತಾಪಾಠಃ ॥

ತಾ ರಾಜಾನಾ ಶುಚಿವ್ರತಾದಿತ್ಯಾನ್ಮಾರುತಂ ಗಣಂ ।
ವಸೋ ಯಕ್ಷೀಹ ರೋದಸೀ ॥ ೨೪ ॥

॥ ಪದಪಾಠಃ ॥

ತಾ । ರಾಜಾನಾ । ಶುಚಿಽವ್ರತಾ । ಆದಿತ್ಯಾನ್ । ಮಾರುತಂ । ಗಣಂ ।
ವಸೋ ಇತಿ । ಯಕ್ಷಿ । ಇಹ । ರೋದಸೀ ಇತಿ ॥ ೨೪ ॥

॥ ಸಾಯಣಭಾಷ್ಯಂ ॥

ತಾ ತೌ ಪ್ರಸಿದ್ಧೌ ರಾಜಾನಾ ರಾಜಮಾನೌ ಶುಚಿವ್ರತಾ ಶುಚಿಕರ್ಮಾಣೌ ಮಿತ್ರಾವರುಣಾವಾದಿತ್ಯಾನದಿತೇಃ ಪುತ್ರಾನ್ ಧಾತ್ರಾದೀನ್ಮಾರುತಂ ಗಣಂ ಮರುತಾಂ ಸಂಘಂ ಚ ರೋದಸೀ ದ್ಯಾವಾಪೃಥಿವ್ಯೌ ಚ ಏತಾನ್ದೇವಾನ್ ಹೇ ವಸೋ ವಾಸಕಾಗ್ನ ಇಹಾಸ್ಮಿನ್ಯಜ್ಞೇ ಯಕ್ಷಿ । ಯಜ ॥

॥ ಪ್ರತಿಪದಾರ್ಥ ॥

**ವಸೋ**—ವಸತಿದಾಯಕನಾದ ಎಲೈ ಅಗ್ನಿಯೇ । **ಇಹ**—ಈ ಯಜ್ಞದಲ್ಲಿ । **ತಾ**—ಪ್ರಸಿದ್ಧರಾದವರೂ । **ರಾಜಾನಾ**—ಪ್ರಕಾಶಮಾನರಾದವರೂ । **ಶುಚಿವ್ರತಾ**—ಶುದ್ಧವಾದ ಕರ್ಮವುಳ್ಳವರೂ ಆದ ಮಿತ್ರಾವರುಣರನ್ನೂ । **ಆದಿತ್ಯಾನ್**—ಆದಿತ್ಯರನ್ನೂ । **ಮಾರುತಂ ಗಣಂ**—ಮರುದ್ಗಣವನ್ನೂ । **ರೋದಸೀ**—ದ್ಯಾವಾಪೃಥಿವಿಗಳನ್ನೂ । **ಯಕ್ಷಿ**—ಪೂಜಿಸು.

॥ ಭಾವಾರ್ಥ ॥

ವಸತಿದಾಯಕನಾದ ಎಲೈ ಅಗ್ನಿಯೇ, ಈ ಯಜ್ಞದಲ್ಲಿ ಪ್ರಸಿದ್ಧರಾದವರೂ, ಪ್ರಕಾಶಮಾನರೂ, ಶುದ್ಧವಾದ ಕರ್ಮವುಳ್ಳವರೂ ಆದ ಮಿತ್ರಾವರುಣರನ್ನೂ ಆದಿತ್ಯರನ್ನೂ ಮರುದ್ಗಣವನ್ನೂ ದ್ಯಾವಾಪೃಥಿವಿಗಳನ್ನೂ ಪೂಜಿಸು.

## English Translation.

Giver of dwellings, worship on this occasion the two regal divinities, Mitra and Varuna, whos acts are holy, the Adityas, the company of the Maruts, and heaven and earth.

॥ ಸಂಹಿತಾಪಾಠಃ ॥

ವಸ್ವೀ ತೇ ಅಗ್ನೇ ಸಂದೃಷ್ಟಿರಿಷಯತೇ ಮರ್ತ್ಯಾಯ ।
ಊರ್ಜೋ ನಪಾದಮೃತಸ್ಯ ॥ ೨೫ ॥

॥ ಪದಪಾಠಃ ॥

ವಸ್ವೀ । ತೇ । ಅಗ್ನೇ । ಸಂऽದೃಷ್ಟಿಃ । ಇಷऽಯತೇ । ಮರ್ತ್ಯಾಯ ।
ಊರ್ಜಃ । ನಪಾತ್ । ಅಮೃತಸ್ಯ ॥ ೨೫ ॥

॥ ಸಾಯಣಭಾಷ್ಯಂ ॥

ಹೇ ಊರ್ಜೋ ನಪಾದ್ಬಲಸ್ಯ ಪುತ್ರಾಗ್ನೇ ಅಮೃತಸ್ಯ ಮರಣರಹಿತಸ್ಯ ತೇ ತವ ಸಂದೃಷ್ಟಿರ್ದೀಪ್ತಿರ್ವಸ್ವೀ ವಾಸಯಿತ್ರೀ । ಪ್ರಶಸ್ಯೇತ್ಯರ್ಥಃ । ಸಾ ಮರ್ತ್ಯಾಯ ಮನುಷ್ಯಾಯ ಯಜಮಾನಾಯೇಷಯತೇ । ಇಷಮನ್ನಮಿಚ್ಛತಿ । ದದಾತೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ಊರ್ಜಃ ನಪಾತ್**—ಶಕ್ತಿಪುತ್ರನಾದ । **ಅಗ್ನೇ**—ಎಲೈ ಅಗ್ನಿಯೇ । **ಅಮೃತಸ್ಯ**—ಮರಣರಹಿತನಾದ । **ತೇ**—ನಿನ್ನ । **ಸಂದೃಷ್ಟಿಃ**—ಪ್ರಭೆಯು । **ವಸ್ವೀ**—ಪ್ರಶಸ್ಯವಾಗಿದ್ದು । **ಮರ್ತ್ಯಾಯ**—ಮಾನವನಾದ ಯಜಮಾನನಿಗೆ । **ಇಷಯತೇ**—ಅನ್ನವನ್ನು ಒದಗಿಸುತ್ತದೆ.

॥ ಭಾವಾರ್ಥ ॥

ಶಕ್ತಿಪುತ್ರನಾದ ಎಲೈ ಅಗ್ನಿಯೇ, ಮರಣರಹಿತವಾದ ನಿನ್ನ ಪ್ರಭೆಯು ಪ್ರಶಸ್ಯವಾಗಿದ್ದು ಮಾನವನಾದ ಯಜಮಾನನಿಗೆ ಅನ್ನವನ್ನು ಒದಗಿಸುತ್ತದೆ.

English Translation.

Son of strength, Agni, the glorious radiance of you who are immortal, bestows food upon (your) mortal worshipper.

॥ ಸಂಹಿತಾಪಾಠಃ ॥

ಕ್ರತ್ವಾ ದಾ ಅಸ್ತು ಶ್ರೇಷ್ಠೋऽದ್ಯ ತ್ವಾ ವನ್ವನ್ತ್ಸುರೇಕ್ಣಾಃ ।
ಮರ್ತ ಆನಾಶ ಸುವೃಕ್ತಿಂ ॥ ೨೬ ॥

|| ಪದಪಾಠಃ ||

ಕ್ರತ್ವಾ | ದಾಃ | ಅಸ್ತು | ಶ್ರೇಷ್ಠಃ | ಅದ್ಯ | ತ್ವಾ | ವನ್ವನ್ | ಸುऽರೇಕ್ಣಾಃ |

ಮರ್ತಃ | ಆನಾಶ | ಸುऽವೃಕ್ತಿಂ || ೨೬ ||

|| ಸಾಯಣಭಾಷ್ಯಂ ||

ಹೇ ಅಗ್ನೇ ಅದ್ಯೇದಾನೀಂ ಕ್ರತ್ವಾ ಕರ್ಮಣಾ ಪರಿಚರಣಾತ್ಮನಾ ತ್ವಾಂ ವನ್ವನ್ ಸಂಭಜನ್ ದಾ ಹವೀಂಷಿ ದಾತಾ ಯಜಮಾನಃ ಶ್ರೇಷ್ಠೋಽತಿಶಯೇನ ಪ್ರಶಸ್ಯೋಽಸ್ತು | ಸುರೇಕ್ಣಾಃ ಶೋಭನಧನಶ್ಚಾಸ್ತು| ತಥಾ ಸ ಮರ್ತೋ ಮನುಷ್ಯಃ ಸುವೃಕ್ತಿಂ ತ್ವದ್ವಿಷಯಾಂ ಸುಷ್ಟುತಿಂ ಆನಾಶ | ವ್ಯಾಪ್ನೋತು | ತವ ಸರ್ವದಾ ಸ್ತೋತಾ ಭವತ್ವಿತ್ಯರ್ಥಃ ||

|| ಪ್ರತಿಪದಾರ್ಥ ||

(ಎಲೈ ಅಗ್ನಿಯೇ) ಅದ್ಯ—ಈಗ | ಕ್ರತ್ವಾ—ಯಾಗಾದಿ ಕರ್ಮಗಳಿಂದ | ವನ್ವನ್—ನಿನ್ನನ್ನು ಪೂಜಿಸುವವನೂ | ದಾಃ—ಹವಿಸ್ಸುಗಳನ್ನರ್ಪಿಸುವವನೂ ಆದ ಯಜಮಾನನು | ಶ್ರೇಷ್ಠಃ—ಅತ್ಯಂತ ಪ್ರಶಸ್ಯನಾಗಿ | ಅಸ್ತು—ಆಗಿರಲಿ | ಸುರೇಕ್ಣಾಃ—ಅತಿಶಯವಾದ ಧನವಂತನೂ ಆಗಿರಲಿ | ಮರ್ತಃ—ಮಾನವನಾದ ಅದೇ ಯಜಮಾನನು | ಸುವೃಕ್ತಿಂ—ಅತ್ಯುತ್ತಮವಾದ ಸ್ತುತಿಯನ್ನು | ಆನಾಶ—ನಿನಗೆ ಅರ್ಪಿಸುವವನಾಗಲಿ.

|| ಭಾವಾರ್ಥ ||

ಎಲೈ ಅಗ್ನಿಯೇ, ಈಗ ಯಾಗಾದಿಕರ್ಮಗಳಿಂದ ನಿನ್ನನ್ನು ಪೂಜಿಸುವವನೂ, ಹವಿಸ್ಸುಗಳನ್ನರ್ಪಿಸುವವನೂ ಆದ ಯಜಮಾನನು ಅತ್ಯಂತ ಪ್ರಶಸ್ಯನಾಗಿ ಆಗಿರಲಿ. ಅತಿಶಯವಾದ ಧನವಂತನೂ ಆಗಿರಲಿ. ಮಾನವನಾದ ಅದೇ ಯಜಮಾನನು ಅತ್ಯುತ್ತಮವಾದ ಸ್ತುತಿಯನ್ನು ನಿನಗರ್ಪಿಸುವವನಾಗಲಿ.

## English Translation

May the donor (of the oblation), propitiating you by his acts to-day, be exalted, and (rendered) very opulent: may (such) mortal be diligent in (your) praise.

—o—

|| ಸಂಹಿತಾಪಾಠಃ ||

ತೇ ತೇ ಅಗ್ನೇ ತ್ವೋತಾ ಇಷಯಂತೋ ವಿಶ್ವಮಾಯುಃ |

ತರಂತೋ ಅರ್ಯೋ ಅರಾತೀರ್ವನ್ವಂತೋ ಅರ್ಯೋ ಅರಾತೀಃ || ೨೭ ||

॥ ಪದಪಾಠಃ ॥

ತೇ । ತೇ । ಅಗ್ನೇ । ತ್ವಾಽಊತಾಃ । ಇಷಯಂತಃ । ವಿಶ್ವಂ । ಆಯುಃ ।

ತರಂತಃ । ಅರ್ಯಃ । ಅರಾತೀಃ । ವನ್ವಂತಃ । ಅರ್ಯಃ । ಅರಾತೀಃ ॥ ೨೭ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತೇ ತ್ವದೀಯಾ ಯೇ ತ್ವಾಂ ಸ್ತುವಂತಿ ತೇ ಸ್ತೋತಾರಸ್ತ್ವೋತಾಸ್ತ್ವಯೋತಾ ರಕ್ಷಿತಾ ಅತ ಏವೇಷಯಂತ ಇಷಮಾತ್ಮನ ಇಚ್ಛಂತಃ ಸಂತೋ ವಿಶ್ವಂ ಸರ್ವಮಾಯುರನ್ನಂ ಲಭಂತ ಇತಿ ಶೇಷಃ । ಆಯುರೇವ ವಾ ಶತವರ್ಷಲಕ್ಷಣಮಿಷಯಂತ ಇಚ್ಛಂತಃ ಪ್ರಾಪ್ನುವಂತೀತಿ ಶೇಷಃ । ತಥಾರ್ಯೋಽರೀನಭಿಗಂತ್ರೀರರಾತೀಃ ಕಾಶ್ಚಿಚ್ಛತ್ರುಸೇನಾಸ್ತರಂತೋಽತಿಕ್ರಾಮಂತೋಽರ್ಯೋಽಭಿಗಂತ್ರೀರರಾತೀಃ ಕಾಶ್ಚನ ಶತ್ರುಸೇನಾ ವನ್ವಂತೋ ಹಿಂಸಂತಶ್ಚ ಭವಂತೀತಿ ಶೇಷಃ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಇಷಯಂತಃ**—ಅನ್ನವನ್ನು ಇಚ್ಛಿಸಿದವರಾಗಿ । **ತೇ**—ಯಾರು ನಿನ್ನನ್ನು ಸ್ತುತಿಸುವರೋ । **ತೇ**—ಅಂತಹ ಸ್ತೋತೃಗಳು । **ತ್ವೋತಾಃ**—ನಿನ್ನಿಂದ ರಕ್ಷಿತರಾಗಿಯೂ । **ಅರ್ಯಃ**—ತಮ್ಮೆದುರು ಬೀಳುವ । **ಅರಾತೀಃ**—ಶತ್ರುಗಳನ್ನು । **ತರಂತಃ**—ಸೋಲಿಸುತ್ತಲೂ । **ಅರ್ಯಃ**—ಎದುರುಬೀಳುವ । **ಅರಾತೀಃ**—ಶತ್ರುಗಳನ್ನು । **ವನ್ವಂತಃ**—ನಾಶಪಡಿಸುತ್ತಲೂ । **ವಿಶ್ವಂ**—ಸಮಸ್ತವಾದ । **ಆಯುಃ**—ಅನ್ನವನ್ನೂ (ಹೊಂದುತ್ತಾರೆ).

॥ ಭಾವಾರ್ಥ ॥

ಎಲೈ ಅಗ್ನಿಯೇ, ಅನ್ನವನ್ನು ಇಚ್ಛಿಸಿದವರಾಗಿ ಯಾರು ನಿನ್ನನ್ನು ಸ್ತುತಿಸುವರೋ, ಅಂತಹ ಸ್ತೋತೃಗಳು ನಿನ್ನಿಂದ ರಕ್ಷಿತರಾಗಿಯೂ ತಮ್ಮೆದುರು ಬೀಳುವ ಶತ್ರುಗಳನ್ನು ಸೋಲಿಸುತ್ತಲೂ ಮತ್ತು ನಾಶಪಡಿಸುತ್ತಲೂ ಸಮಸ್ತ ಅನ್ನವನ್ನೂ ಹೊಂದುತ್ತಾರೆ

## English Translation.

Those, Agni, who are protected by you, wishing for the whole (term of) life (obtain it), overcoming hostile assailants, destroying hostile assailants.

॥ ಸಂಹಿತಾಪಾಠಃ ॥

ಅಗ್ನಿಸ್ತಿಗ್ಮೇನ ಶೋಚಿಷಾ ಯಾಸದ್ವಿಶ್ವಂ ನ್ಯ೧ತ್ರಿಣಂ ।

ಅಗ್ನಿರ್ನೋ ವನತೇ ರಯಿಂ ॥ ೨೮ ॥

॥ ಪದಪಾಠಃ ॥

ಅಗ್ನಿಃ । ತಿಗ್ಮೇನ । ಶೋಚಿಷಾ । ಯಾಸತ್ । ವಿಶ್ವಂ । ನಿ । ಅತ್ರಿಣಂ ।
ಅಗ್ನಿಃ । ನಃ । ವನತೇ । ರಯಿಂ ॥ ೨೮ ॥

॥ ಸಾಯಣಭಾಷ್ಯಂ ॥

ಅಯಮಗ್ನಿಸ್ತಿಗ್ಮೇನ ತೀಕ್ಷ್ಣೇನ ಶೋಚಿಷಾ ತೇಜಸಾ ವಿಶ್ವಂ ಸರ್ವಮತ್ರಿಣಮತ್ತಾರಂ ರಾಕ್ಷಸಾದಿಕಂ ನಿ ಯಾಸತ್ । ನಿಹಂತು । ಅಪಿ ಚ ನೋಽಸ್ಮಭ್ಯಮಗ್ನೀ ರಯಿಂ ಧನಂ ವನತೇ । ದದಾತು ॥

॥ ಪ್ರತಿಪದಾರ್ಥ ॥

ಅಗ್ನಿಃ—ಅಗ್ನಿಯು । ತಿಗ್ಮೇನ—ತೀಕ್ಷ್ಣವಾದ । ಶೋಚಿಷಾ—ತೇಜಸ್ಸಿನಿಂದ । ವಿಶ್ವಂ—ಸಮಸ್ತವಾದ । ಅತ್ರಿಣಂ—ರಾಕ್ಷಸಾದಿಗಳನ್ನೂ । ನಿ ಯಾಸತ್—ನಾಶಮಾಡಲಿ । ನಃ—ನಮಗೆ । ಅಗ್ನಿಃ—ಅಗ್ನಿಯು । ರಯಿಂ—ಧನವನ್ನು । ವನತೇ—ಅನುಗ್ರಹಿಸಲಿ.

॥ ಭಾವಾರ್ಥ ॥

ಅಗ್ನಿಯು ತೀಕ್ಷ್ಣವಾದ ತನ್ನ ತೇಜಸ್ಸಿನಿಂದ ಸಮಸ್ತವಾದ ರಾಕ್ಷಸಾದಿಗಳನ್ನೂ ನಾಶಮಾಡಲಿ. ನಮಗೆ ಅಗ್ನಿಯು ಧನವನ್ನು ಅನುಗ್ರಹಿಸಲಿ.

## English Translation.

May Agni, with his sharp flame, demolish the devourer (of the oblation): may Agni grant us riches.

॥ ಸಂಹಿತಾಪಾಠಃ ॥

ಸುವೀರಂ ರಯಿಮಾ ಭರ ಜಾತವೇದೋ ವಿಚರ್ಷಣೇ ।
ಜಹಿ ರಕ್ಷಾಂಸಿ ಸುಕ್ರತೋ ॥ ೨೯ ॥

॥ ಪದಪಾಠಃ ॥

ಸುಽವೀರಂ । ರಯಿಂ । ಆ । ಭರ । ಜಾತಽವೇದಃ । ವಿಽಚರ್ಷಣೇ ।
ಜಹಿ । ರಕ್ಷಾಂಸಿ । ಸುಕ್ರತೋ ಇತಿ ಸುಽಕ್ರತೋ ॥ ೨೯ ॥

|| ಸಾಯಣಭಾಷ್ಯಂ ||

**ಹೇ ಜಾತವೇದೋ ಜಾತಪ್ರಜ್ಞಾನ ಜಾತಧನ ವಾ ವಿಚರ್ಷಣೇ ವಿಶೇಷೇಣ ದ್ರಷ್ಟರಗ್ನೇ ಸುವೀರಂ ಶೋಭನೈರ್ವೀರೈಃ ಪುತ್ರಪೌತ್ರಾದಿಭಿರುಪೇತಂ ರಯಿಂ ಧನಮಾ ಭರ । ಆಹರ । ತಥಾ ಹೇ ಸುಕ್ರತೋ ಸುಕರ಼್ಮನ್ನಗ್ನೇ ರಕ್ಷಾಂಸಿ ಚ ಜಹಿ । ವಿನಾಶಯ ॥**

॥ ಪ್ರತಿಪದಾರ್ಥ ॥

**ಜಾತವೇದಃ**—ಜಾತವೇದೋರೂಪನೂ । **ವಿಚರ್ಷಣೇ**—ಅತಿಶಯವಾದ ದರ್ಶನಶಕ್ತಿಯುಳ್ಳವನೂ ಆದ ಎಲೈ ಅಗ್ನಿಯೇ । **ಸುವೀರಂ**—ಶ್ರೇಷ್ಠವಾದ ವೀರರಿಂದ ಕೂಡಿದ । **ರಯಿಂ**—ಧನವನ್ನು । **ಆ ಭರ**—ಒದಗಿಸಿಕೊಡು । **ಸುಕ್ರತೋ**—ಶ್ರೇಷ್ಠವಾದ ಕರ್ಮಕರ್ತನಾದ ಎಲೈ ಅಗ್ನಿಯೇ । **ರಕ್ಷಾಂಸಿ**—ರಾಕ್ಷಸಾದಿಗಳನ್ನು । **ಜಹಿ**—ನಾಶಮಾಡು.

॥ ಭಾವಾರ್ಥ ॥

ಜಾತವೇದೋರೂಪನೂ, ಅಥವಾ ಸಕಲವನ್ನೂ ತಿಳಿದವನೂ ಅತಿಶಯವಾದ ದರ್ಶನಶಕ್ತಿಯುಳ್ಳವನೂ ಆದ ಎಲೈ ಅಗ್ನಿಯೇ, ಶ್ರೇಷ್ಠವಾದ ವೀರರಿಂದ ಕೂಡಿದ ಧನವನ್ನು ಒದಗಿಸಿಕೊಡು. ಶ್ರೇಷ್ಠವಾದ ಕರ್ಮಕರ್ತನಾದ ಎಲೈ ಅಗ್ನಿಯೇ, ರಾಕ್ಷಸಾದಿಗಳನ್ನು ನಾಶಮಾಡು.

## English Translation.

Jatavedas, all-beholder, bring us wealth with good posterity: doer of good deeds, destroy the Rakshasas.

|| ಸಂಹಿತಾಪಾಠಃ ||

ತ್ವಂ ನಃ ಪಾಹ್ಯಂಹಸೋ ಜಾತವೇದೋ ಅಘಾಯತಃ ।
ರಕ್ಷಾ ಣೋ ಬ್ರಹ್ಮಣಸ್ಕವೇ ॥ ೩೦ ॥

॥ ಪದಪಾಠಃ ॥

ತ್ವಂ । ನಃ । ಪಾಹಿ । ಅಂಹಸಃ । ಜಾತऽವೇದಃ । ಅಘऽಯತಃ ।
ರಕ್ಷ । ನಃ । ಬ್ರಹ್ಮಣಃ । ಕವೇ ॥ ೩೦ ॥

॥ ಸಾಯಣಭಾಷ್ಯಂ ॥

**ಹೇ ಜಾತವೇದಸ್ತ್ವಂ ನೋಽಸ್ಮಾನಂಹಸಃ ಪಾಪಾತ್ಪಾಹಿ । ರಕ್ಷ । ತಥಾ ಹೇ ಬ್ರಹ್ಮಣಸ್ಕವೇ ಸ್ತುತಿರೂಪಸ್ಯ ಮಂತ್ರಸ್ಯ ಕವೇ ಕಾವಯಿತಃ ಶಬ್ದಯಿತರಗ್ನೇ । ಅಗ್ನಿರ್ಹಿ ಶಬ್ದಮುತ್ಪಾದಯತಿ । ತಥಾ**

**ಚ ಸ್ಮರ್ಯತೇ । ಮನಃ ಕಾಯಾಗ್ನಿಮಾಹಂತಿ ಸ ಪ್ರೇರಯತಿ ಮಾರುತಂ । ಮಾರುತಸ್ತೂರಸಿ ಚರನ್ ಮಂದ್ರಂ ಜನಯತಿ ಸ್ವರಮಿತಿ । ತಾದೃಶಾಗ್ನೇಽಘಾಯತೋಽಘಮನರ್ಥಮಸ್ಮಾಕಮಿಚ್ಛತಃ ಶತ್ರೋಃ ಸಕಾಶಾನ್ನೋಽಸ್ಮಾನ್ರಕ್ಷ ॥**

॥ ಪ್ರತಿಪದಾರ್ಥ ॥

**ಜಾತವೇದಃ**—ಸರ್ವಜ್ಞನಾದ ಎಲೈ ಅಗ್ನಿಯೇ । **ತ್ವಂ**—ನೀನು । **ನಃ**—ನಮ್ಮನ್ನು । **ಅಂಹಸಃ**—ಪಾಪದಿಂದ । **ಪಾಹಿ**—ರಕ್ಷಿಸು । **ಬ್ರಹ್ಮಣಸ್ಕವೇ**—ಸ್ತುತಿಪಾಠಕನಾದ ಎಲೈ ಅಗ್ನಿಯೇ । **ಅಘಾಯತಃ**—ನಮಗೆ ಕೆಡಕನ್ನುಂಟುಮಾಡುವ ಶತ್ರುವಿನಿಂದ । **ನಃ**—ನಮ್ಮನ್ನು । **ರಕ್ಷ**—ರಕ್ಷಿಸು.

॥ ಭಾವಾರ್ಥ ॥

ಜಾತವೇದೋರೂಪನಾದ ಎಲೈ ಅಗ್ನಿಯೇ, ನೀನು ನಮ್ಮನ್ನು ಪಾಪದಿಂದ ರಕ್ಷಿಸು. ಸ್ತುತಿಪಾಠಕನಾದ ಎಲೈ ಅಗ್ನಿಯೇ, ನಮಗೆ ಕೆಡಕನ್ನುಂಟುಮಾಡುವ ಶತ್ರುವಿನಿಂದ ನಮ್ಮನ್ನು ರಕ್ಷಿಸು.

## English Translation.

Preserve us, Jatavedas, from sin: enunciator of prayer, protect us from the malevolent.

॥ ವಿಶೇಷವಿಷಯಗಳು ॥

**ಬ್ರಹ್ಮಣಸ್ಕವೇ—ಸ್ತುತಿರೂಪಸ್ಯ ಮಂತ್ರಸ್ಯ ಕವೇ ಕಾವಯಿತಃ ಶಬ್ದಯಿತರಗ್ನೇ ।** ಸ್ತುತಿರೂಪವಾದ ಮಂತ್ರಗಳಿಗೆ ಕರ್ತೃವಾಗಿ ಅವುಗಳನ್ನು ಉಚ್ಚರಿಸುವಂತೆ ಮನುಷ್ಯರನ್ನು ಪ್ರೇರಿಸುವವನಾದ್ದರಿಂದ ಇಲ್ಲಿ ಅಗ್ನಿಯನ್ನು ಬ್ರಹ್ಮಣಸ್ಕವೇ ಎಂಬ ಶಬ್ದದಿಂದ ಸಂಬೋಧಿಸಿದೆ. **ಅಗ್ನಿರ್ಹಿ ಶಬ್ದಮುತ್ಪಾದಯತಿ—**

**ಮನಃ ಕಾಯಾಗ್ನಿಮಾಹಂತಿ ಸ ಪ್ರೇರಯತಿ ಮಾರುತಂ ।**
**ಮಾರುತಸ್ತೂರಸಿ ಚರನ್ ಮಂದ್ರಂ ಜನಯತಿ ಸ್ವರಂ ॥**

(ಪಾಣಿನೀಯ ಶಿಕ್ಷಾ ೬-೭)

ಅಗ್ನಿಯು ಹೇಗೆ ಶಬ್ದಪ್ರೇರಕನು ಎಂದರೆ, ಮನಸ್ಸಿನಲ್ಲಿ ಉತ್ಪನ್ನವಾಗುವ ಭಾವಗಳು ಶರೀರದಲ್ಲಿ (ಜಾಠರಾಗ್ನಿರೂಪದಿಂದ) ನೆಲಸಿರುವ ಅಗ್ನಿಯನ್ನು ಪ್ರಚೋದಿಸುವವು. ಆ ಅಗ್ನಿಯು ಶರೀರದ ಹೃದಯಾದಿಗಳಲ್ಲಿ ಸಂಚರಿಸುತ್ತಿರುವ ವಾಯುವನ್ನು ಪ್ರೇರಿಸುವುದು. ಆ ವಾಯುವು ಮೆಲ್ಲಗೆ ಸ್ವರವನ್ನು ಅಥವಾ ಶಬ್ದವನ್ನು ಬಾಯಿನಿಂದ ಹೊರಡಿಸುವುದು ಎಂದು ಪಾಣಿನೀಯ ಶಿಕ್ಷೆಯಲ್ಲಿ ಹೇಳಿದೆ. ಆದುದರಿಂದ ಮನಸ್ಸಿನಲ್ಲಿ ಉತ್ಪನ್ನವಾಗುವ ಭಾವಗಳನ್ನು ವಾಕ್ಯರೂಪದಲ್ಲಿ ಹೊರಗೆಡವಬೇಕಾದರೆ ಅಗ್ನಿಯ ಸಹಾಯವು ಅವಶ್ಯಕವು. ಆದುದರಿಂದ ಇಲ್ಲಿ ಸ್ತೋತ್ರರೂಪವಾದ ವಾಕ್ಯಗಳನ್ನು ರಚಿಸುವ ಕವಿಯೆಂದು ಅಗ್ನಿಯನ್ನು ಸ್ತುತಿಸಲಾಗಿದೆ.

॥ ಸಂಹಿತಾಪಾಠಃ ॥

ಯೋ ನೋ ಅಗ್ನೇ ದುರೇವ ಆ ಮರ್ತೋ ವಧಾಯ ದಾಶತಿ ।
ತಸ್ಮಾನ್ನಃ ಪಾಹ್ಯಂಹಸಃ ॥ ೩೧ ॥

॥ ಪದಪಾಠಃ ॥

ಯಃ । ನಃ । ಅಗ್ನೇ । ದುಃಽಏವಃ । ಆ । ಮರ್ತಃ । ವಧಾಯ । ದಾಶತಿ ।
ತಸ್ಮಾತ್ । ನಃ । ಪಾಹಿ । ಅಂಹಸಃ ॥ ೩೧ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ದುರೇವೋ ದುಷ್ಟಾಭಿಪ್ರಾಯೋ ಯೋ ಮರ್ತೋ ಮನುಷ್ಯೋ ವಧಾಯ ಸ್ವಸ್ಯಾಯುಧಾಯ ನೋಽಸ್ಮಾನಾ ದಾಶತಿ ಅಭಿಪ್ರಯಚ್ಛತಿ । ಆಯುಧೇನಾಸ್ಮಾನ್ಹಂತೀತ್ಯರ್ಥಃ । ತಸ್ಮಾನ್ಮನುಷ್ಯಾದಂಹಸಃ ಪಾಪಾಚ್ಚ ನೋಽಸ್ಮಾನ್ಪಾಹಿ । ರಕ್ಷ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । ದುರೇವಃ—ದುಷ್ಟಬುದ್ಧಿಯುಳ್ಳ । ಯಃ—ಯಾವ । ಮರ್ತಃ—ಮಾನವನು । ವಧಾಯ—ಕೊಲ್ಲಲು । ನಃ—ನಮ್ಮ ಮೇಲೆ । ಆ ದಾಶತಿ—ಆಯುಧಗಳನ್ನು ಪ್ರಯೋಗಿಸುವನೋ । ತಸ್ಮಾತ್—ಆ ಮಾನವನಿಂದಲೂ । ಅಂಹಸಃ—ಪಾಪದಿಂದಲೂ । ನಃ—ನಮ್ಮನ್ನು । ಪಾಹಿ—ರಕ್ಷಿಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ದುಷ್ಟಬುದ್ಧಿಯುಳ್ಳ ಯಾವ ಮಾನವನು ನಮ್ಮನ್ನು ಕೊಲ್ಲಲು ನಮ್ಮಮೇಲೆ ಆಯುಧಗಳನ್ನು ಪ್ರಯೋಗಿಸುವನೋ ಆ ಮಾನವನಿಂದಲೂ ಮತ್ತು ಪಾಪದಿಂದಲೂ ನಮ್ಮನ್ನು ರಕ್ಷಿಸು.

English Translation.

The malevolent mortal who threatens us with murderous weapon, from him defend us, and also from sin.

॥ ಸಂಹಿತಾಪಾಠಃ ॥

ತ್ವಂ ತಂ ದೇವ ಜಿಹ್ವಯಾ ಪರಿ ಬಾಧಸ್ವ ದುಷ್ಕೃತಂ ।
ಮರ್ತೋ ಯೋ ನೋ ಜಿಘಾಂಸತಿ ॥ ೩೨ ॥

॥ ಪದಪಾಠಃ ॥

ತ್ವಂ । ತಂ । ದೇವ । ಜಿಹ್ವಯಾ । ಪರಿ । ಬಾಧಸ್ವ । ದುಃऽಕೃತಂ ॥
ಮರ್ತಃ । ಯಃ । ನಃ । ಜಿಘಾಂಸತಿ ॥ ೩೨ ॥

॥ ಸಾಯಣಭಾಷ್ಯಂ ॥

ಹೇ ದೇವ ದ್ಯೋತಮಾನಾಗ್ನೇ ತ್ವಂ ತಂ ವಕ್ಷ್ಯಮಾಣಂ ದುಷ್ಕೃತಂ ದುಷ್ಕರ್ಮಕಾರಿಣಂ ಮನುಷ್ಯಂ ಜಿಹ್ವಯಾ ಜ್ವಾಲಯಾ ಪರಿ ಬಾಧಸ್ವ । ಸರ್ವತೋ ಜಹಿ । ಯೋ ಮರ್ತೋ ಮನುಷ್ಯೋ ನೋऽಸ್ಮಾನ್ ಜಿಘಾಂಸತಿ ಹಂತುಮಿಚ್ಛತಿ ॥

॥ ಪ್ರತಿಪದಾರ್ಥ ॥

ದೇವ—ಪ್ರಕಾಶಮಾನನಾದ ಎಲೈ ಅಗ್ನಿಯೇ । ಯಃ—ಯಾವ । ಮರ್ತಃ—ಮಾನವನು । ನಃ—ನಮ್ಮನ್ನು । ಜಿಘಾಂಸತಿ—ಕೊಲ್ಲಲಿಚ್ಛಿಸುವನೋ । ತಂ—ಅಂತಹ । ದುಷ್ಕೃತಂ—ಕೆಟ್ಟಕೆಲಸವನ್ನು ಮಾಡುವವನನ್ನು । ತ್ವಂ—ನೀನು । ಜಿಹ್ವಯಾ—ನಿನ್ನ ಜ್ವಾಲೆಯಿಂದ । ಪರಿ ಬಾಧಸ್ವ—ಪೂರ್ಣವಾಗಿ ನಾಶಪಡಿಸು.

॥ ಭಾವಾರ್ಥ ॥

ಪ್ರಕಾಶಮಾನನಾದ ಎಲೈ ಅಗ್ನಿಯೇ, ಯಾವ ಮಾನವನು ನಮ್ಮನ್ನು ಕೊಲ್ಲಲಿಚ್ಛಿಸುವನೋ ಅಂತಹ ದುಷ್ಕರ್ಮಕಾರಿಯನ್ನು ನಿನ್ನ ಜ್ವಾಲೆಯಿಂದ ಪೂರ್ಣವಾಗಿ ನಾಶಮಾಡು.

English Translation.

Scatter, divine Agni, by your flame, that evil-doer, the man who seeks to kill us.

॥ ಸಂಹಿತಾಪಾಠಃ ॥

ಭರದ್ವಾಜಾಯ ಸಪ್ರಥಃ ಶರ್ಮ ಯಚ್ಛ ಸಹಂತ್ಯ ।
ಅಗ್ನೇ ವರೇಣ್ಯಂ ವಸು ॥ ೩೩ ॥

॥ ಪದಪಾಠಃ ॥

ಭರತ್ऽವಾಜಾಯ । ಸऽಪ್ರಥಃ । ಶರ್ಮ । ಯಚ್ಛ । ಸಹಂತ್ಯ ।
ಅಗ್ನೇ । ವರೇಣ್ಯಂ । ವಸು ॥ ೩೩ ॥

॥ ಸಾಯಣಭಾಷ್ಯಂ ॥

**ಹೇ ಸಹಂತ್ಯ ಶತ್ರೂಣಾಮಭಿಭವಿತರಗ್ನೇ ಭರದ್ವಾಜಾಯ ಮಹ್ಯಮೃಷಯೇ ಸಪ್ರಥಃ ಸರ್ವತಃ ಪೃಥು ವಿಸ್ತೀರ್ಣಂ ಶರ್ಮ ಸುಖಂ ಗೃಹಂ ವಾ ಯಚ್ಛ । ದೇಹಿ । ತಥಾ ವರೇಣ್ಯಂ ವರಣೀಯಂ ವಸು ಧನಂ ಚ ದೇಹಿ ॥**

॥ ಪ್ರತಿಪದಾರ್ಥ ॥

**ಸಹನ್ತ್ಯ**— ಶತ್ರುಧರ್ಷಕನಾದ| **ಅಗ್ನೇ**—ಎಲೈ ಅಗ್ನಿಯೇ| **ಭರದ್ವಾಜಾಯ**—ಭರದ್ವಾಜನಾಮಕನಾದ ನನಗೆ । **ಸಪ್ರಥಃ**—ಅತ್ಯಂತ ಪ್ರಭೂತವಾದ । **ಶರ್ಮ**—ಸುಖವನ್ನು । **ಯಚ್ಛ**—ಕೊಡು । **ವರೇಣ್ಯಂ**—ಅತ್ಯಂತ ಆದೃತವಾದ । **ವಸು**— ಧನವನ್ನೂ ಕೊಡು.

॥ ಭಾವಾರ್ಥ ॥

ಶತ್ರುಧರ್ಷಕನಾದ ಎಲೈ ಅಗ್ನಿಯೇ, ಭರದ್ವಾಜನಾಮಕನಾದ ನನಗೆ ಅತ್ಯಂತ ಪ್ರಭೂತವಾದ ಸುಖವನ್ನು ಕೊಡು. ಎಲ್ಲರಿಗೂ ಅತ್ಯವಶ್ಯಕವಾಗಿ ಬೇಕಾದ ಶ್ರೇಷ್ಠವಾದ ಧನವನ್ನೂ ಕೊಡು.

English Translation.

Subduer of foes, grant to Bharadwaja infinite happiness and desirable wealth.

॥ ಸಂಹಿತಾಪಾಠಃ ॥

ಅಗ್ನಿರ್ವೃತ್ರಾಣಿ ಜಂಘನದ್ದ್ರವಿಣಸ್ಯುರ್ವಿಪನ್ಯಯಾ ।
ಸಮಿದ್ಧಃ ಶುಕ್ರ ಆಹುತಃ ॥ ೩೪ ॥

॥ ಪದಪಾಠಃ ॥

ಅಗ್ನಿಃ । ವೃತ್ರಾಣಿ । ಜಂಘನತ್ । ದ್ರವಿಣಸ್ಯುಃ । ವಿಪನ್ಯಯಾ ।
ಸಂऽಇದ್ಧಃ । ಶುಕ್ರಃ । ಆऽಹುತಃ ॥ ೩೪ ॥

**ಪೌರ್ಣಮಾಸ್ಯಾಮಾಗ್ನೇಯಸ್ಯಾಜ್ಯಭಾಗಸ್ಯಾನುವಾಕ್ಯಾಗ್ನಿರ್ವೃತ್ರಾಣೀತ್ಯೇಷಾ । ಸೂತ್ರಿತಂ ಚ । ಅಗ್ನಿರ್ವೃತ್ರಾಣಿ ಜಂಘನದಿತಿ ಪೂರ್ವಸ್ಯಾಜ್ಯಭಾಗಸ್ಯಾನುವಾಕ್ಯಾ । ಆ. ೧-೫ । ಇತಿ ॥ ಇಷ್ಟಿಪಶುಸೋಮೇಷು ಚ ಯತ್ರ ವೃಧನ್ವಂತೌ ಪುಷ್ಟಿಮಂತಾವಿತ್ಯಾದಿವಿಶೇಷವಿಧಿರ್ನ ದೃಶ್ಯತೇ ತತ್ರ ಸರ್ವತ್ರೈಷೈವ**

**ಪ್ರಥಮಾಜ್ಯಭಾಗಾನುವಾಕ್ಯಾ || ಉಪಸದ್ಯಾಗ್ನೇಯಸ್ಯೈಷಾನುವಾಕ್ಯಾ ಸಾಯಂಕಾಲೀನಸ್ಯ ತ್ವೇಷೈವ ಯಾಜ್ಯಾ | ಸೂತ್ರಿತಂ ಚ | ಅಗ್ನಿರ್ವೃತ್ರಾಣಿ ಜಂಘನದ್ಯ ಉಗ್ರ ಇವ ಶರ್ಯಾಹೇತಿ ವಿಪರ್ಯಾಸೋ ಯಾಜ್ಯಾನುವಾಕ್ಯಾನಾಂ | ಅ. ೪-೮ | ಇತಿ ||**

**ವಿಪನ್ಯಯಾ ಸ್ತುತ್ಯಾ ಸ್ತೂಯಮಾನೋ ದ್ರವಿಣಸ್ಯುರ್ದ್ರವಿಣಂ ಧನಂ ಸ್ತೋತೄಣಾಮಿಚ್ಛನ್ ಯದ್ವಾ ಹವಿರ್ಲಕ್ಷಣಂ ಧನಮಾತ್ಮನ ಇಚ್ಛನ್ನಗ್ನಿರ್ವೃತ್ರಾಣ್ಯಾವರಕಾಣಿ ರಕ್ಷಃಪ್ರಭೃತೀನಿ ತಮಾಂಸಿ ವಾ ಜಂಘನತ್ | ಭೃಶಂ ಹಂತು | ಕೀದೃಶೋಽಗ್ನಿಃ | ಸಮಿದ್ಧಃ ಸಮ್ಯಗ್ದೀಪ್ತಃ ಅತ ಏವ ಶುಕ್ರಃ ಶುಕ್ಲವರ್ಣ ಆಹುತೋ ಹವಿರ್ಭಿರಭಿಹುತಃ ||**

|| ಪ್ರತಿಪದಾರ್ಥ ||

**ವಿಪನ್ಯಯಾ**—ಸ್ತುತಿಗಳಿಂದ ಪ್ರಶಂಸಿತನಾದವನೂ | **ದ್ರವಿಣಸ್ಯುಃ**—ಸ್ತೋತೃಗಳಿಗೆ ಧನದಾನಮಾಡಲಿಚ್ಛಿಸುವವನೂ | **ಸಮಿದ್ಧಃ**—ಪೂರ್ಣವಾಗಿ ಪ್ರಜ್ವಲಿತನೂ | **ಶುಕ್ರಃ**—ತೇಜಸ್ವಿಯೂ | **ಆಹುತಃ**—ಹವಿಸ್ಸುಗಳ ಆಹುತಿಯನ್ನರ್ಪಿಸಲ್ಪಟ್ಟವನೂ ಆದ | **ಅಗ್ನಿಃ**—ಅಗ್ನಿಯು | **ವೃತ್ರಾಣಿ**—ಶತ್ರುಗಳನ್ನು | **ಜಂಘನತ್**—ಪೂರ್ಣವಾಗಿ ನಾಶಮಾಡಲಿ.

|| ಭಾವಾರ್ಥ ||

ಸ್ತುತಿಗಳಿಂದ ಪ್ರಶಂಸಿತನಾದವನೂ, ಸ್ತೋತೃಗಳಿಗೆ ಧನವನ್ನು ಕೊಡಲಿಚ್ಛಿಸುವವನೂ, ಪೂರ್ಣವಾಗಿ ಪ್ರಜ್ವಲಿತನೂ, ತೇಜಸ್ವಿಯೂ, ಹವಿಸ್ಸುಗಳ ಆಹುತಿಯನ್ನು ಸ್ವೀಕರಿಸುವವನೂ ಆದ ಅಗ್ನಿಯು ಶತ್ರುಗಳನ್ನು ಪೂರ್ಣವಾಗಿ ನಾಶಮಾಡಲಿ.

## English Translation.

May Agni, propitiated by praise, desirous of (sacrificial) affluence, kindled, bright, and fed with burnt offerings, destroy all adversaries.

|| ವಿಶೇಷವಿಷಯಗಳು ||

ದರ್ಶಪೂರ್ಣಮಾಸಯಾಗಗಳಲ್ಲಿ ಪೌರ್ಣಮಾಸಿಯಲ್ಲಿ ಮಾಡುವ ಯಾಗದಲ್ಲಿ **ಅಗ್ನಿರ್ವೃತ್ರಾಣಿ** ಎಂಬ ಈ ಋಕ್ಕನ್ನು ಆಜ್ಯಭಾಗಹೋಮದ ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಅಗ್ನಿರ್ವೃತ್ರಾಣಿ ಜಂಘನದಿತಿ ಪೂರ್ವಸ್ಯಾಜ್ಯಭಾಗಸ್ಯಾನುವಾಕ್ಯಾ** ಎಂಬ ಸೂತ್ರದಿಂದ (ಅ. ೧-೫) ವಿವೃತವಾಗಿರುವುದು. ಮತ್ತು ಇಷ್ಟಿ, ಪಶುಯಾಗ, ಸೋಮಯಾಗ ಇವುಗಳಲ್ಲಿ **ವೃಧನ್ವತೀ. ಪುಷ್ಟಿಮತೀ** ಮೊದಲಾದ ವಿಶೇಷವಿಧಿಗಳು ಇಲ್ಲದಿರುವ ಸಂದರ್ಭಗಳಲ್ಲಿ ಮೊದಲನೆಯ ಆಜ್ಯಭಾಗದ ಅನುವಾಕ್ಯಾಮಂತ್ರಕ್ಕಾಗಿ **ಅಗ್ನಿರ್ವೃತ್ರಾಣಿ** ಎಂಬ ಈ ಋಕ್ಕಿನ ವಿನಿಯೋಗವಿರುವುದು. ಮತ್ತು ಉಪಸತ್ ಎಂಬ ಇಷ್ಟಿಯಲ್ಲಿಯೂ ಅಗ್ನಿಯನ್ನುದ್ದೇಶಿಸಿ ಮಾಡುವ ಹೋಮದಲ್ಲಿ ಈ ಋಕ್ಕನ್ನು ಅನುವಾಕ್ಯಾಮಂತ್ರವನ್ನಾಗಿಯೂ, ಸಾಯಂಕಾಲದಲ್ಲಿ ಮಾಡುವ ಹೋಮದಲ್ಲಿ ಯಾಜ್ಯಾಮಂತ್ರವನ್ನಾಗಿಯೂ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಅಗ್ನಿರ್ವೃತ್ರಾಣಿ ಜಂಘನದ್ಯ ಉಗ್ರ ಇವ ಶರ್ಯಾಹೇತಿ ವಿಪರ್ಯಾಸೋ ಯಾಜ್ಯಾನುವಾಕ್ಯಾನಾಂ** ಎಂಬ ಸೂತ್ರದಿಂದ (ಅ. ೪-೮) ವಿವೃತವಾಗಿರುವುದು.

ದ್ರವಿಣಸ್ಯುಃ—ಇಲ್ಲಿ ದ್ರವಿಣವೆಂದರೆ ಧನ ಅಥವಾ ಹವಿಸ್ಸು ಎಂದು ಎರಡು ವಿಧ ಅರ್ಥಗಳನ್ನು ಭಾಷ್ಯಕಾರರು ಹೇಳಿದ್ದಾರೆ. ಧನವೆಂದರ್ಥಮಾಡಿದರೆ ದ್ರವಿಣಸ್ಯುಃ ಎಂಬ ಪದಕ್ಕೆ ಅಗ್ನಿಯು ತನ್ನಲ್ಲಿರುವ ಧನವನ್ನು ತನ್ನನ್ನು ಭಜಿಸುವವರಿಗೆ ಕೊಡಲು ಇಚ್ಛಿಸುವನು ಎಂದರ್ಥವು. ಹವಿಸ್ಸೆಂದು ಅರ್ಥಮಾಡುವುದಾದರೆ ಯಜ್ಞದಲ್ಲಿ ಯಜಮಾನರು ಅಥವಾ ಋತ್ವಿಗ್ಜನರು ಅರ್ಪಿಸುವ ಹವಿರ್ಲಕ್ಷಣರೂಪವಾದ ಧನವನ್ನು, (ಅನ್ನವನ್ನು) ಅಗ್ನಿಯು (ಹೋಮರೂಪದಲ್ಲಿ) ಇಚ್ಛಿಸುವನು ಎಂದಭಿಪ್ರಾಯವು.

॥ ಸಂಹಿತಾಪಾಠಃ ॥

ಗರ್ಭೇ ಮಾತುಃ ಪಿತುಷ್ಪಿತಾ ವಿದಿದ್ಯುತಾನೋ ಅಕ್ಷರೇ ।
ಸೀದನ್ನೃತಸ್ಯ ಯೋನಿಮಾ ॥ ೩೫ ॥

॥ ಪದಪಾಠಃ ॥

ಗರ್ಭೇ । ಮಾತುಃ । ಪಿತುಃ । ಪಿತಾ । ವಿಽದಿದ್ಯುತಾನಃ । ಅಕ್ಷರೇ ।
ಸೀದನ್ । ಋತಸ್ಯ । ಯೋನಿಂ । ಆ ॥ ೩೫ ॥

। ಸಾಯಣಭಾಷ್ಯಂ ।

ಅತ್ರ ಮಾತೃಪಿತೃಶಬ್ದಾಭ್ಯಾಂ ಭೂದ್ಯಾವಾಭಿಧೀಯೇತೇ । ದ್ಯೌರ್ವಃ ಪಿತಾ ಪೃಥಿವೀ ಮಾತಾ। ಋಗ್ವೇ. ೧-೧೯೧-೬ । ಇತಿ ಶ್ರುತೇಃ । ಮಾತುರ್ಭೂಮ್ಯಾ ಗರ್ಭೇ ಗರ್ಭಸ್ಥಾನೇ ಮಧ್ಯೇಽಕ್ಷರೇ ಕ್ಷರಣರಹಿತೇ ವೇದ್ಯಾಖ್ಯೇ ಸ್ಥಾನೇ ವಿದಿದ್ಯುತಾನೋ ವಿಶೇಷೇಣ ದೀಪ್ಯಮಾನಃ ಪಿತುಃ ಪಿತಾ ದ್ಯುಲೋಕಸ್ಯ ಪಾಲಯಿತಾ ಹವಿಷಾಂ ಪ್ರದಾನೇನ । ಏವಂಭೂತೋಽಗ್ನಿರ್ಋತಸ್ಯ ಯಜ್ಞಸ್ಯ ಯೋನಿಮುತ್ತರವೇದ್ಯಾಖ್ಯಂ ಧಿಷ್ಣ್ಯಂ ॥ ಸಪ್ತಮ್ಯರ್ಥೇ ದ್ವಿತೀಯಾ ॥ ಆ ಸೀದನ್ ಉತ್ತರವೇದ್ಯಾಮುಪವಿಶನ್ ಅಗ್ನಿರ್ವೃತ್ರಾಣಿ ಜಂಘನದಿತ್ಯನ್ವಯಃ ॥

॥ ಪ್ರತಿಪದಾರ್ಥ ॥

ಮಾತುಃ—ಪೃಥ್ವಿಯ । ಗರ್ಭೇ—ಮಧ್ಯಭಾಗವಾದುದೂ । ಅಕ್ಷರೇ—ನಾಶರಹಿತವಾದುದೂ ಆದ ವೇದಿಯಲ್ಲಿ । ವಿದಿದ್ಯುತಾನಃ—ಪ್ರಕಾಶಿಸುವವನೂ । ಪಿತುಃ—ದ್ಯುಲೋಕಕ್ಕೆ । ಪಿತಾ—ಪಾಲಕನೂ ಆದ ಅಗ್ನಿಯು । ಋತಸ್ಯ—ಯಜ್ಞದ । ಯೋನಿಂ—ಉತ್ತರವೇದಿರೂಪವಾದ ಸ್ಥಾನದಲ್ಲಿ । ಆ ಸೀದನ್—ಸ್ಥಿತನಾಗಿ (ಶತ್ರುಗಳನ್ನು ನಾಶಮಾಡುತ್ತಾನೆ).

॥ ಭಾವಾರ್ಥ ॥

ಪೃಥ್ವಿಯ ಮಧ್ಯಭಾಗವಾದುದೂ, ನಾಶರಹಿತವಾದುದೂ ಆದ ಯಜ್ಞವೇದಿಯಲ್ಲಿ ಪ್ರಕಾಶಿಸುವವನೂ, ದ್ಯುಲೋಕಕ್ಕೆ ಪಾಲಕನೂ ಆದ ಅಗ್ನಿಯು ಯಜ್ಞದ ಉತ್ತರವೇದಿರೂಪವಾದ ಸ್ಥಾನದಲ್ಲಿ ಸ್ಥಿತನಾಗಿ (ಕುಳಿತು) ಶತ್ರುಗಳನ್ನು ನಾಶಮಾಡುತ್ತಾನೆ.

## English Translation.

Radiant in the embryo of the maternal (earth), on the imperishable (altar); the cherisher of the paternal (heaven), sitting on the seat of sacrifice.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ **ಮಾತುಃ**—ಎಂಬ ಶಬ್ದವು ಪೃಥಿವಿಯನ್ನೂ, **ಪಿತುಃ** ಎಂಬ ಶಬ್ದವು ದ್ಯುಲೋಕವನ್ನು ನಿರ್ದೇಶಿಸುವುದು. ಗರ್ಭವೆಂದರೆ ಈ ದ್ಯಾವಾಪೃಥಿವಿಗಳ ಮಧ್ಯದಲ್ಲಿರುವ ಪ್ರದೇಶವು. ದ್ಯಾವಾಪೃಥಿವಿಗಳು ಅಗ್ನಿಗೆ ತಂದೆತಾಯಿಗಳ ಸ್ಥಾನದಲ್ಲಿರುವ ವಿಷಯವನ್ನು—

**ದ್ಯೌರ್ನಃ ಪಿತಾ ಪೃಥಿವೀ ಮಾತಾ ಸೋಮೋ ಭ್ರಾತಾದಿತಿಃ ಸ್ವಸಾ ।**
(ಋ. ಸಂ. ೧-೧೯೧-೬)

ಎಂಬ ಋಕ್ಕು ಸಮರ್ಥಿಸುವುದೆಂದು ಭಾಷ್ಯಕಾರರು ಈ ಋಕ್ಕನ್ನು ಉದಾಹರಣೆಯಾಗಿ ಕೊಟ್ಟಿದ್ದಾರೆ. ಈ ಋಕ್ಕಿನ ಅರ್ಥವು ಸ್ಪಷ್ಟವಾಗಿಯೇ ಇದೆ.

**ಋತಸ್ಯ ಯೋನಿಂ**—ಋತವೆಂದರೆ ಸತ್ಯ ಅಥವಾ ಯಜ್ಞ. ಇಲ್ಲಿ ಯಜ್ಞವೆಂಬರ್ಥದಲ್ಲಿ ಪ್ರಯುಕ್ತವಾಗಿದೆ. ಯೋನಿಯೆಂದರೆ—ಉತ್ಪತ್ತಿಸ್ಥಾನ ಅಥವಾ ನಾಭಿಪ್ರದೇಶ, ಮಧ್ಯಸ್ಥಾನ. ಆದುದರಿಂದ **ಋತಸ್ಯ ಯೋನಿಂ** ಎಂದರೆ ಯಜ್ಞದ ನಾಭಿಸ್ಥಾನರೂಪದಲ್ಲಿರುವ ಉತ್ತರವೇದಿಯೆಂದರ್ಥವು.

---

॥ ಸಂಹಿತಾಪಾಠಃ ॥

ಬೃಹ್ಮ ಪ್ರಜಾವದಾ ಭರ ಜಾತವೇದೋ ವಿಚರ್ಷಣೇ ।
ಅಗ್ನೇ ಯದ್ದೀದಯದ್ದಿವಿ ॥ ೩೬ ॥

॥ ಪದಪಾಠಃ ॥

ಬೃಹ್ಮ । ಪ್ರಜಾऽವತ್ । ಆ । ಭರ । ಜಾತऽವೇದಃ । ವಿऽಚರ್ಷಣೇ ।
ಅಗ್ನೇ । ಯತ್ । ದೀದಯತ್ । ದಿವಿ ॥ ೩೬ ॥

|| ಸಾಯಣಭಾಷ್ಯಂ ||

**ಹೇ ಜಾತವೇದೋ ಜಾತಾನಾಂ ವೇದಿತರ್ವಿಚರ್ಷಣೇ ವಿಶೇಷೇಣ ದ್ರಷ್ಟರಗ್ನೇ ಪ್ರಜಾವತ್ಪುತ್ರ-ಪೌತ್ರಸಹಿತಂ ಬ್ರಹ್ಮಾನ್ನಮಸ್ಮಾ ಭರ । ಆಹರ । ಯದ್ಬ್ರಹ್ಮ ದಿವಿ ದ್ಯುಲೋಕೇ ದೀದಯದ್ದೀಪ್ಯತೇ ದೇವೇಷು ಮಧ್ಯೇ ಯತ್ಪ್ರಶಸ್ತಮನ್ನಂ ರಾಜತೇ ತದಾಹರೇತ್ಯರ್ಥಃ ||**

|| ಪ್ರತಿಪದಾರ್ಥ ||

**ಜಾತವೇದಃ**—ಸರ್ವವನ್ನೂ ತಿಳಿದವನೂ । **ವಿಚರ್ಷಣೇ**—ಅತಿಶಯವಾದ ದರ್ಶನಶಕ್ತಿಯುಳ್ಳವನೂ ಆದ । **ಅಗ್ನೇ**—ಎಲೈ ಅಗ್ನಿಯೇ । **ಯತ್**—ಯಾವ ಅನ್ನವು । **ದಿವಿ**—ದ್ಯುಲೋಕದಲ್ಲಿ । **ದೀದಯತ್**—ಅತಿಶಯವಾಗಿ ಪ್ರಕಾಶಿಸುವುದೋ ಅಂತಹ । **ಪ್ರಜಾವತ್**—ಪುತ್ರಾದಿಗಳಿಂದ ಕೂಡಿದ । **ಬ್ರಹ್ಮ**—ಅನ್ನವನ್ನು । **ಆ ಭರ**—ನಮಗೆ ಒದಗಿಸು.

|| ಭಾವಾರ್ಥ ||

ಜಾತವೇದೋರೂಪನೂ, ಅತಿಶಯವಾದ ದರ್ಶನಶಕ್ತಿಯುಳ್ಳವನೂ ಆದ ಎಲೈ ಅಗ್ನಿಯೇ, ಯಾವ ಅನ್ನವು ದ್ಯುಲೋಕದಲ್ಲಿ ಅತಿಶಯವಾಗಿ ಪ್ರಕಾಶಿಸುವುದೋ ಅಂತಹ ಪುತ್ರಾದಿಗಳಿಂದ ಕೂಡಿದ ಅನ್ನವನ್ನು ನಮಗೆ ಒದಗಿಸು.

## English Translation.

Bring to us, Jatavedas, all-beholder, food with progeny; such (food) as is brilliant in heaven.

|| ವಿಶೇಷವಿಷಯ ||

**ಪ್ರಜಾವತ್ ಬ್ರಹ್ಮ**—ಬ್ರಹ್ಮಶಬ್ದಕ್ಕೆ ಸ್ತೋತ್ರವೆಂದೂ, ಅನ್ನವೆಂದೂ ಅರ್ಥವು. ಪುತ್ರಾದಿಗಳಿಂದ ಕೂಡಿದ ಅನ್ನವೆಂದರೆ ಪುತ್ರಪೌತ್ರಾದಿಸಂತತಿಯನ್ನೂ ಅವರ ಮತ್ತು ನಮ್ಮ ಪೋಷಣಾರ್ಥವಾಗಿ ಆಹಾರ (ಅನ್ನ) ವನ್ನೂ ಕೊಡಬೇಕೆಂದು ಅಗ್ನಿಯನ್ನು ಪ್ರಾರ್ಥಿಸಲಾಗಿದೆ.

|| ಸಂಹಿತಾಪಾಠಃ ||

ಉಪ ತ್ವಾ ರಣಸಂದೃಶಂ ಪ್ರಯಸ್ವಂತಃ ಸಹಸ್ಕೃತ ।
ಅಗ್ನೇ ಸಸೃಜ್ಮಹೇ ಗಿರಃ ॥ ೩೭ ॥

|| ಪದಪಾಠಃ ||

ಉಪ । ತ್ವಾ । ರಣऽಸಂದೃಶಂ । ಪ್ರಯಸ್ವಂತಃ । ಸಹಃऽಕೃತ ।
ಅಗ್ನೇ । ಸಸೃಜ್ಮಹೇ । ಗಿರಃ ॥ ೩೭ ॥

॥ ಸಾಯಣಭಾಷ್ಯಂ ॥

ಹೇ ಸಹಸ್ಕೃತ ಸಹಸಾ ಬಲೇನೋತ್ಪನ್ನಾಗ್ನೇ ಪ್ರಯಸ್ವಂತೋ ಹವಿರ್ಲಕ್ಷಣಾನ್ನವಂತೋ ವಯಂ ರಣ್ವಸಂದೃಶಂ ರಮಣೀಯಸಂದರ್ಶನಂ ಸ್ತೋತವ್ಯಸಂದರ್ಶನಂ ವಾ ತ್ವಾ ತ್ವಾಮುಪ ಪ್ರತಿ ಗಿರಃ ಸ್ತುತೀಃ ಸಸೃಜ್ಮಹೇ । ವಿಸೃಜಾಮಃ । ಉಚ್ಚಾರಯಾಮ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಸಹಸ್ಕೃತ**—ಶಕ್ತಿಪುತ್ರನಾದ । **ಅಗ್ನೇ**—ಎಲೈ ಅಗ್ನಿಯೇ । **ಪ್ರಯಸ್ವಂತಃ**—(ನಾವು) ಹವಿಸ್ಸನ್ನು ಅರ್ಪಿಸುತ್ತಾ । **ರಣ್ವಸಂದೃಶಂ**—ರಮಣೀಯವಾದ ರೂಪವುಳ್ಳ । **ತ್ವಾ ಉಪ**—ನಿನ್ನನ್ನುದ್ದೇಶಿಸಿ । **ಗಿರಃ**—ಸ್ತುತಿಗಳನ್ನು । **ಸಸೃಜ್ಮಹೇ**—ಪಠಿಸುತ್ತೇವೆ.

॥ ಭಾವಾರ್ಥ ॥

ಶಕ್ತಿಪುತ್ರನಾದ ಎಲೈ ಅಗ್ನಿಯೇ, ನಿನಗೆ ಹವಿಸ್ಸನ್ನು ಅರ್ಪಿಸುತ್ತಾ ರಮಣೀಯವಾದ ರೂಪವುಳ್ಳ ನಿನ್ನನ್ನುದ್ದೇಶಿಸಿ ಸ್ತುತಿಗಳನ್ನು ಪಠಿಸಿ ನಿನ್ನನ್ನು ಪ್ರಶಂಸಿಸುತ್ತೇವೆ.

**English Translation.**

Strength-begotten Agni, we, offering (sacrificial) food, address praises to you who are of pleasing aspect.

॥ ಸಂಹಿತಾಪಾಠಃ ॥

ಉಪಚ್ಛಾಯಾಮಿವ ಘೃಣೇರಗನ್ಮ ಶರ್ಮ ತೇ ವಯಂ ।
ಅಗ್ನೇ ಹಿರಣ್ಯಸಂದೃಶಃ ॥ ೩೮ ॥

॥ ಪದಪಾಠಃ ॥

ಉಪ । ಛಾಯಾಂಽಇವ । ಘೃಣೇಃ । ಅಗನ್ಮ । ಶರ್ಮ । ತೇ । ವಯಂ ।
ಅಗ್ನೇ । ಹಿರಣ್ಯಽಸಂದೃಶಃ ॥ ೩೮ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಹಿರಣ್ಯಸಂದೃಶೋ ಹಿತರಮಣೀಯತೇಜಸೋ ಹಿರಣ್ಯವದ್ರೋಚಮಾನತೇಜಸೋ ವಾ ಘೃಣೇರ್ದೀಪ್ತಸ್ಯ ತೇ ತವ ಶರ್ಮ ಶರಣಮಾಶ್ರಯಣಮುಪಾಗನ್ಮ । ಉಪಗಚ್ಛಾಮ । ತತ್ರ ದೃಷ್ಟಾಂತಃ । ಛಾಯಾಮಿವ । ಯಥಾ ಘರ್ಮಾರ್ತಾಃ ಸಂತಪ್ತಾಶ್ಛಾಯಾಮುಪಗಚ್ಛಂತಿ ತದ್ವತ್ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಛಾಯಾಂ ಇವ**—ಬಿಸಿಲಿನಿಂದ ಬಳಲಿದವನು ನೆರಳನ್ನು ಆಶ್ರಯಿಸುವಂತೆ । **ಹಿರಣ್ಯಸಂದೃಶಃ**—ಹಿರಣ್ಯದಂತೆ ಆಕರ್ಷಕವಾದ ರೂಪವುಳ್ಳವನೂ । **ಘೃಣೇ**—ಪ್ರಕಾಶಮಾನನೂ ಆದ । **ತೇ**—ನಿನ್ನ । **ಶರ್ಮ**—ಆಶ್ರಯವನ್ನು । **ಉಪ ಅಗನ್ಮ**—ಪಡೆಯುತ್ತೇವೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಬಿಸಿಲಿನಿಂದ ಬಳಲಿದವನು ನೆರಳನ್ನು ಆಶ್ರಯಿಸುವಂತೆ ಹಿರಣ್ಯದಂತೆ ಆಕರ್ಷಕವಾದ ರೂಪವುಳ್ಳವನೂ, ಪ್ರಕಾಶಮಾನನೂ ಆದ ನಿನ್ನ ಆಶ್ರಯವನ್ನು ಪಡೆಯುತ್ತೇವೆ.

॥ [illegible] ॥

We have recourse, Agni, to the shelter of you, the lustrous, the golden-feathered, as to the shade (of a tree).

॥ ಸಂಹಿತಾಪಾಠಃ ॥

ಯ ಉಗ್ರ ಇವ ಶರ್ಯಹಾ ತಿಗ್ಮಶೃಂಗೋ ನ ವಂಸಗಃ ।
ಅಗ್ನೇ ಪುರೋ ರುರೋಜಿಥ ॥ ೩೯ ॥

॥ ಪದಪಾಠಃ ॥

ಯಃ । ಉಗ್ರಃऽಇವ । ಶರ್ಯऽಹಾ । ತಿಗ್ಮಽಶೃಂಗಃ । ನ । ವಂಸಗಃ ।
ಅಗ್ನೇ । ಪುರಃ । ರುರೋಜಿಥ ॥ ೩೯ ॥

॥ ಸಾಯಣಭಾಷ್ಯಂ ॥

ಉಪಸದಿ ಪ್ರಾತಃಕಾಲೀನಸ್ಯಾಗ್ನೇಯಸ್ಯ ಯ ಉಗ್ರ ಇವೇತಿ ಯಾಜ್ಯಾ ಸಾಯಂಕಾಲೀನಸ್ಯ ತ್ವೈಷೈವಾನುವಾಕ್ಯಾ । ಸೂತ್ರಿತಂ ಚ । ಅಗ್ನಿರ್ವೃತ್ರಾಣಿ ಜಂಘನದ್ಯ ಉಗ್ರ ಇವ ಶರ್ಯಹಾ । ಆ. ೪–೮ । ಇತಿ ॥

ಯೋಽಗ್ನಿರುಗ್ರ ಇವೋದ್ಗೂರ್ಣಬಲೋ ಧನ್ವೀವ ಶರ್ಯಹಾ ಶರ್ಯೈರ್ವಾಣೈಃ ಶತ್ರೂಣಾಂ ಹಂತಾ ತಿಗ್ಮಶೃಂಗೋ ನ ವಂಸಗಸ್ತೀಕ್ಷ್ಣಶೃಂಗೋ ವನನೀಯಗತಿರ್ವೃಷಭ ಇವ ಹೇ ಅಗ್ನೇ ಸ ತ್ವಂ ಪುರ ಆಸುರೀಸ್ತಿಸ್ರಃ ಪುರೀ ರುರೋಜಿಥ । ಭಗ್ನವಾನಸಿ । ರುದ್ರೋ ವಾ ಏಷ ಯದಗ್ನಿಃ । ತೈ. ಬ್ರಾ. ೨ ೧–೩–೧ ।

**ಇತಿ ಶ್ರುತೇಃ । ರುದ್ರಕೃತಮಪಿ ತ್ರಿಪುರದಹನಮಗ್ನಿಕೃತಮೇವೇತ್ಯಗ್ನಿಃ ಸ್ತೂಯತೇ । ಯದ್ವಾ । ತ್ರಿಪುರದಹನಸಾಧನಭೂತೇ ಬಾಣೇಽಗ್ನೇರನೀಕತ್ವೇನಾವಸ್ಥಾನಾದಗ್ನಿಃ ಪುರಾಣಿ ಭಗ್ನವಾನಿತ್ಯುಚ್ಯತೇ । ದೇವಾಸುರಾ ವಾ ಏಷು ಲೋಕೇಷು ಸಮಯತಂತ । ಐ. ಬ್ರಾ. ೧-೨೩ । ಇತ್ಯಾದಿಕಂ ಬ್ರಾಹ್ಮಣ-ಮನುಸಂಧೇಯಂ ॥**

॥ ಪ್ರತಿಪದಾರ್ಥ ॥

**ಅಗ್ನೇ**— ಎಲೈ ಅಗ್ನಿಯೇ । **ಯಃ**— ಯಾವ ನೀನು । **ಶರ್ಯಹಾ** – ಬಾಣಗಳಿಂದ ಶತ್ರುಗಳನ್ನು ಕೊಲ್ಲುವವನೂ । **ಉಗ್ರ ಇವ** – ಭಯಂಕರನೂ ಆದ ಧನ್ವಿಯಂತೆಯೂ । **ತಿಗ್ಮಶೃಂಗಃ**— ತೀಕ್ಷ್ಣವಾದ ಕೊಂಬುಳ್ಳ । **ವಂಸಗೋ ನ**— ವನವೃಷಭದಂತೆಯೂ ಇರುವೆಯೋ (ಅಂತಹ ನೀನು) । **ಪುರಃ**— ಶತ್ರುಪಟ್ಟಣಗಳನ್ನು । **ರುರೋಜಿಥ**— ನಾಶಪಡಿಸಿದ್ದೀಯೆ

॥ ಭಾವಾರ್ಥ ॥

ಎಲೈ ಅಗ್ನಿಯೇ, ಯಾವ ನೀನು ಬಾಣಗಳಿಂದ ಶತ್ರುಗಳನ್ನು ಕೊಲ್ಲುವವನೂ, ಭಯಂಕರನೂ ಆದ ಧನ್ವಿಯಂತೆಯೂ (ಬಿಲ್ಲುಗಾರ) ತೀಕ್ಷ್ಣವಾದ ಕೊಂಬುಳ್ಳ ವನವೃಷಭದಂತೆಯೂ ಇರುವೆಯೋ ಅಂತಹ ನೀನು ಶತ್ರುಪಟ್ಟಣಗಳನ್ನು ನಾಶಪಡಿಸಿದ್ದೀಯೆ.

## English Translation.

You, Agni, who are like a fierce archer, or like a sharp-horned bull, have destroyed the cities (of the Asuras).

॥ ವಿಶೇಷವಿಷಯಗಳು ॥

ಉಪಸತ್ ಎಂಬ ಯಾಗದಲ್ಲಿ ಅಗ್ನಿಯನ್ನುದ್ದೇಶಿಸಿ ಮಾಡುವ ಹೋಮದಲ್ಲಿ **ಯ ಉಗ್ರ ಇವ** ಎಂಬ **ಈ** ಋಕ್ಕನ್ನು ಪ್ರಾತಃಕಾಲದಲ್ಲಿ ಯಾಜ್ಯಾಮಂತ್ರವನ್ನಾಗಿಯೂ, ಸಾಯಂಕಾಲದಲ್ಲಿ ಅನುವಾಕ್ಯಾಮಂತ್ರವನ್ನಾಗಿಯೂ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಅಗ್ನಿರ್ವೃತ್ರಾಣಿ ಜಂಘನದ್ಯ ಉಗ್ರಇವ ಶರ್ಯಹಾ** ಎಂಬ ಸೂತ್ರದಿಂದ (ಆ ೪-೮) ವಿವೃತವಾಗಿರುವುದು.

ಈ ಋಕ್ಕಿನಲ್ಲಿ ಅಗ್ನಿಯು ಶತ್ರುಗಳಾದ ಅಸುರರ ಪಟ್ಟಣಗಳನ್ನು ನಾಶಮಾಡಿದನೆಂಬ ವಿಷಯವು ಉಕ್ತವಾಗಿದೆ ಇಲ್ಲಿ ಭಾಷ್ಯಕಾರರು— **ರುದ್ರೋ ವಾ ಏಷ ಯದಗ್ನಿಃ** (ತೈ. ಬ್ರಾ. ೨-೧-೩-೧) ಎಂದರೆ ಅಗ್ನಿಯೇ ರುದ್ರನು ಎಂಬ ಶ್ರುತಿವಾಕ್ಯವನ್ನು ಉದಾಹರಿಸಿ ಅಗ್ನಿಯು ಅಸುರರ ಪಟ್ಟಣಗಳನ್ನು ನಾಶಮಾಡಿದನೆಂದರೆ ಅಗ್ನಿರೂಪನಾದ ರುದ್ರನೇ ಅಸುರರ ಪಟ್ಟಣಗಳನ್ನು ನಾಶಮಾಡಿದನು ಎಂಬಭಿಪ್ರಾಯವನ್ನು ಸೂಚಿಸಿ ಇದರ ಸಮರ್ಥನೆಗಾಗಿ ಐತರೇಯಬ್ರಾಹ್ಮಣ ವಾಕ್ಯವನ್ನು ಉದಾಹರಿಸಿದ್ದಾರೆ—

**ದೇವಾಸುರಾ ವಾ ಏಷು ಲೋಕೇಷು ಸಮಯತಂತ ತೇ ವಾ ಅಸುರಾ ಇಮಾನೇವ ಲೋಕಾನ್ಪುರೋಽಕುರ್ವತ ಯಥೌಜೀಯಾಂಸೋ ಬಲೀಯಾಂಸ ಏವಂ ತೇ ವಾ**

**ಅಯಸ್ಮಯೀಮೇವೇಮಾಮಕುರ್ವತ ರಜತಾಮಂತರಿಕ್ಷಂ ಹರಿಣೀಂ ದಿವಂ ತೇ ತಥೇ-ಮಾಂಲ್ಲೋಕಾನ್ಪುರೋಽಕುರ್ವತ ತೇ ದೇವಾ ಅಬ್ರುವನ್ ಪುರೋ ವಾ ಇಮೇಽಸುರಾ ಇಮಾಂಲ್ಲೋಕಾನಕ್ರತ ಪುರ ಇಮಾಂಲ್ಲೋಕಾನ್ಪ್ರತಿಕರವಾಮಹಾ ಇತಿ ತಥೇತಿ ॥**

(ಐ ಬ್ರಾ. ೪–೨೩)

ಪೂರ್ವದಲ್ಲಿ ದೇವತೆಗಳೂ, ಅಸುರರೂ ಯುದ್ಧಸನ್ನದ್ಧರಾದರು. ಯುದ್ಧಕಾಲದಲ್ಲಿ ರಾಜರು ಶತ್ರುಸೈನ್ಯಗಳು ತಮ್ಮ ನಗರಕ್ಕೆ ನುಗ್ಗದಂತೆ ಮಾಡಲು ಅಭೇದ್ಯವಾದ ದುರ್ಗಾದಿಗಳನ್ನೂ, ಕೋಟೆಗಳನ್ನೂ ರಚಿಸಿಕೊಳ್ಳುವುದು ಸಹಜವಷ್ಟೆ. ಅದರಂತೆ ಅಸುರರು ಬಲವಾದ ಮೂರು ದುರ್ಗಗಳನ್ನು ರಚಿಸಿಕೊಂಡರು. ಈ ಭೂಮಿಯನ್ನು ಕಬ್ಬಿಣದ ಕೋಟೆಯಿಂದಲೂ, ಅಂತರಿಕ್ಷಲೋಕವನ್ನು ರಜತ (ಬೆಳ್ಳಿಯ) ಪ್ರಾಕಾರ ಅಥವಾ ಕೋಟೆಯಿಂದಲೂ, ದ್ಯುಲೋಕವನ್ನು ಚಿನ್ನದ ಕೋಟೆಯಿಂದಲೂ ಸುತ್ತುಗಟ್ಟಿ ಪ್ರಬಲವಾದ ದುರ್ಗಗಳನ್ನಾಗಿ ಪರಿವರ್ತಿಸಿದರು. ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ ಈ ವಿಷಯವು ಈ ರೀತಿ ಉಕ್ತವಾಗಿದೆ—

**ತೇಷಾಮಸುರಾಣಾಂ ತಿಸ್ರಃ ಪುರ ಆಸನ್ನಯಸ್ಮಯ್ಯವಮಾಥ ರಜತಾಥ ಹರಿಣೀ ತಾ ದೇವಾ ಜೇತುಂ ನಾಶಕ್ನುವನ್ತಾ ಉಪಸದೈವಾಜಿಗೀಷನ್ ತಸ್ಮಾದಾಹುರ್ಯಶ್ಚೈವಂ ವೇದ ಯಶ್ಚ ನೋಪಸದಾ ವೈ ಮಹಾಪುರಂ ಜಯಂತೀತಿ ತ ಇಷುಗ್ಂ ಸಮಸ್ಕುರ್ವತಾಗ್ನಿಮನೀಕಗ್ಂ ಸೋಮಗ್ಂ ಶಲ್ಯಂ ವಿಷ್ಣುಂ ತೇಜನಂ ತೇಽಬ್ರುವನ್ ಕ ಇಮಾಮಸಿಷ್ಯತೀತಿ ರುದ್ರ ಇತ್ಯಬ್ರುವನ್ ರುದ್ರೋ ವೈ ಕ್ರೂರಃ ಸೋಽಸ್ಯತ್ವಿತಿ ಸೋಽಬ್ರವೀದ್ವರಂ ವೃಣಾ ಅಹಮೇವ ಪಶೂನಾಮಧಿಪತಿರಸಾನೀತಿ ತಸ್ಮಾದ್ರುದ್ರಃ ಪಶೂನಾಮಧಿಪತಿಸ್ತಾಗ್ಂ ರುದ್ರೋ ವಾ ಸೃಜತ್ಸ ತಿಸ್ರಃ ಪುರೋ ಭಿತ್ವೈಭ್ಯೋ ಲೋಕೇಭ್ಯೋಽಸುರಾನ್ಪ್ರಾಣುದತ ॥**

(ತೈ. ಸಂ. ೬–೨–೩–೧ ೨)

ಪೂರ್ವದಲ್ಲಿ ದೇವಾಸುರರಿಗೆ ಯುದ್ಧವಾದಾಗ ಅಸುರರ ವಶದಲ್ಲಿ ಮೂರು ಪಟ್ಟಣಗಳಿದ್ದವು. ಅವುಗಳಲ್ಲಿ ಒಂದು ಕಬ್ಬಿಣದ ಕೋಟೆಯಿಂದಲೂ, ಇನ್ನೊಂದು ಬೆಳ್ಳಿಯ ಕೋಟೆಯಿಂದಲೂ, ಮತ್ತೊಂದು ಚಿನ್ನದ ಕೋಟೆಯಿಂದಲೂ ಆವರಿಸಲ್ಪಟ್ಟು ಶತ್ರುಗಳಿಗೆ ಅಭೇದ್ಯವಾಗಿದ್ದವು. ಈ ಪಟ್ಟಣಗಳಿಗೆ ಮುತ್ತಿಗೆಹಾಕಿ ಅವುಗಳನ್ನು ಜಯಿಸಲು ದೇವತೆಗಳಿಗೆ ಸಾಧ್ಯವಾಗಲಿಲ್ಲ. ಆದುದರಿಂದ ದೇವತೆಗಳೆಲ್ಲರೂ ಸಭೆಸೇರಿ ಈ ಪಟ್ಟಣಗಳನ್ನು ಮುತ್ತಿಗೆಹಾಕಿ ಜಯಿಸುವ ಬಗೆ ಹೇಗೆ? ಇವನ್ನು ಜಯಿಸುವ ಶಕ್ತಿಯುಳ್ಳವರು ನಮ್ಮಲ್ಲಿರುವರೇ ಎಂದು ದೀರ್ಘಾಲೋಚನೆಮಾಡಿ ಕೊನೆಗೆ ಒಂದು ನಿರ್ಧಾರಕ್ಕೆ ಬಂದರು. ಆ ಪಟ್ಟಣಗಳಿಗೆ ಗುರಿಯಿಟ್ಟು ಹೊಡೆಯುವುದಕ್ಕಾಗಿ ಬಿಲ್ಲುಬಾಣಗಳನ್ನು ಸಜ್ಜುಗೊಳಿಸಿದರು ಬಿಲ್ಲಿಗೆ ಹೂಡಿ ಹೊಡೆಯುವ ಬಾಣವು ಬಹಳ ತೀಕ್ಷ್ಣವಾಗಿಯೂ, ಶಕ್ತಿಯುಳ್ಳದ್ದಾಗಿಯೂ ಇರಬೇಕಾದುದು ಅತ್ಯವಶ್ಯಕವು. ಆದುದರಿಂದ ಬಾಣವನ್ನು ತಯಾರಿಸುವಾಗ ಅಗ್ನಿಯನ್ನೇ ಅದರ ತುದಿ (ಮೊನೆ) ಯನ್ನಾಗಿಯೂ, ಸೋಮವನ್ನು ಶಲ್ಯವನ್ನಾಗಿಯೂ, (ಬಾಣದ ಮೇಲುಭಾಗ) ವಿಷ್ಣುವನ್ನು ಬಾಣದ ಕಡ್ಡಿಯನ್ನಾಗಿಯೂ ಮಾಡಿದರು. ಈ ರೀತಿ ಬಾಣವನ್ನು ಸಿದ್ಧಪಡಿಸಿದ ಮೇಲೆ ಈ ಬಾಣವನ್ನು ಬಿಲ್ಲಿನ ಹೆದೆಗೇರಿಸಿ ಹೊಡೆಯಲು ನಮ್ಮಲ್ಲಿ ಶಕ್ತರಾದವರು ಯಾರು ಎಂದು ಹುಡುಕಿನೋಡಿದರು. ಬಳಿಕ ಈ ಕೆಲಸವನ್ನು ಮಾಡಲು ರುದ್ರನೇ ಸರಿ ಎಂದು ನಿಶ್ಚಯಿಸಿದರು ಏಕೆಂದರೆ ಶತ್ರುಗಳನ್ನು ಎದುರಿಸುವುದರಲ್ಲಿ ಕ್ರೂರಿಯಾಗಿ ವರ್ತಿಸುವವನು

ರುದ್ರನು ಹೊರತು ಬೇರೊಬ್ಬರಿಲ್ಲ ಎಂದು ಅವರಿಗೆ ತಿಳಿಯಿತು. ಆಗ ಅವರು ರುದ್ರನ ಬಳಿಗೆ ಹೋಗಿ-ಎಲೈ ರುದ್ರನೇ, ನೀನು ದೇವತೆಗಳಿಗೆ ಸಹಾಯವಮಾಡುವುದಕ್ಕಾಗಿ ನಾವು ಸಿದ್ಧಪಡಿಸಿರುವ ಈ ಬಾಣವನ್ನು ನಿನ್ನ ಬಿಲ್ಲಿನಲ್ಲಿ ಹೂಡಿ ಅಸುರರ ಪಟ್ಟಣಗಳಿಗೆ ಗುರಿಯಿಟ್ಟು ಹೊಡೆದು ಅವುಗಳನ್ನು ನಾಶಪಡಿಸಬೇಕು ಎಂದು ಪ್ರಾರ್ಥಿಸಿದರು. ಅದಕ್ಕೆ ರುದ್ರನು—ಒಳ್ಳೇದು, ಹಾಗೆಯೇ ಆಗಲಿ. ಆದರೆ ನಾನು ಈ ಕಷ್ಟಸಾಧ್ಯವಾದ ಕಾರ್ಯವನ್ನು ಮಾಡುವುದಕ್ಕೆ ಪ್ರತಿಫಲವಾಗಿ ನೀವು ನನಗೆ ಒಂದು ವರವನ್ನು ಕೊಡಬೇಕು. ಪಶುಗಳಿಗೆಲ್ಲಾ ನಾನೇ ಅಧಿಪತಿಯಾಗಬೇಕು. ಈ ವರವನ್ನು ನೀವು ಕೊಟ್ಟರೆ ನಿಮ್ಮ ಕಾರ್ಯವನ್ನು ಮಾಡುತ್ತೇನೆ ಎಂದನು. ಈ ಕಾರಣಕ್ಕಾಗಿಯೇ ರುದ್ರನು ಪಶುಗಳಿಗೆ ಅಧಿಪತಿಯೆಂದು ಪ್ರಸಿದ್ಧನಾದನು. ರುದ್ರನ ಮಾತಿಗೆ ದೇವತೆಗಳು ಒಪ್ಪಲಾಗಿ ರುದ್ರನು ದೇವತೆಗಳು ಸಿದ್ಧಪಡಿಸಿದ್ದ ಬಾಣವನ್ನು ಬಿಲ್ಲಿನಲ್ಲಿ ಹೂಡಿ ಅಸುರಪಟ್ಟಣಗಳಿಗೆ ಗುರಿಯಿಟ್ಟು ಹೊಡೆದು ಅವುಗಳನ್ನು ನಾಶ ಮಾಡಿದನು ಎಂಬ ಕಥೆಯು ಐತರೇಯಬ್ರಾಹ್ಮಣದಲ್ಲಿಯೂ, ತೈತ್ತಿರೀಯಸಂಹಿತೆಯಲ್ಲಿಯೂ ಉಕ್ತವಾಗಿದೆ.

ಈ ಸಂದರ್ಭದಲ್ಲಿ ಬಾಣವನ್ನು ನಿರ್ಮಿಸುವಾಗ ದೇವತೆಗಳು ಅಗ್ನಿಯನ್ನೇ ಅದರ ಮೊನೆಯನ್ನಾಗಿ (the point of the arrow) ಮಾಡಿದ್ದರಿಂದಲೂ ಹರಿತವಾದ ಆ ಮೊನೆಯೇ ಅಸುರರ ಪಟ್ಟಣಗಳನ್ನು ನಾಶಮಾಡಲು ಕಾರಣವಾದುದರಿಂದಲೂ ಪ್ರಕೃತ ಋಕ್ಕಿನಲ್ಲಿ ಅಗ್ನಿಯು ಶತ್ರುಗಳಾದ ಅಸುರರ ಪಟ್ಟಣಗಳನ್ನು ನಾಶಪಡಿಸಿದನೆಂಬ ವಿಷಯವು ವಿವರಿಸಲ್ಪಟ್ಟಿದೆ.

---

॥ ಸಂಹಿತಾಪಾಠಃ ॥

ಆ ಯಂ ಹಸ್ತೇ ನ ಖಾದಿನಂ ಶಿಶುಂ ಜಾತಂ ನ ಬಿಭ್ರತಿ ॥

ವಿಶಾಮಗ್ನಿಂ ಸ್ವಧ್ವರಂ ॥ ೪೦ ॥

॥ ಪದಪಾಠಃ ॥

ಆ । ಯಂ । ಹಸ್ತೇ । ನ । ಖಾದಿನಂ । ಶಿಶುಂ । ಜಾತಂ । ನ । ಬಿಭ್ರತಿ ।

ವಿಶಾಂ । ಅಗ್ನಿಂ । ಸುಽಅಧ್ವರಂ ॥ ೪೦ ॥

॥ ಸಾಯಣಭಾಷ್ಯಂ ॥

ಅಗ್ನಿಮಂಥನೇ ಜಾಯಮಾನೇಽಗ್ನಾ ವಾ ಯಂ ಹಸ್ತ ಇತ್ಯೇಷಾನುವಾಕ್ಯಾ । ಸೂತ್ರಿತಂ ಚ । ಆ ಯಂ ಹಸ್ತೇ ನ ಖಾದಿನಮಿತ್ಯರ್ಧರ್ಚ ಆರಮೇತ್ । ಆ. ೨-೧೬ । ಇತಿ ॥

ಮಂಥನೋತ್ಪನ್ನಂ ಯಮಗ್ನಿಂ ಶಿಶುಂ ಜಾತಂ ನ ಜಾತಂ ಪುತ್ರಮಿವ ಹಸ್ತ ಆ ಬಿಭ್ರತಿ ಹಸ್ತೇಷ್ವಭಿಮುಖಂ ಧಾರಯಂತ್ಯಧ್ವರ್ಯವಃ । ಪೂರ್ವೋ ನಶಬ್ದಃ ಪುರಸ್ತಾದುಪಚಾರೋಽಪ್ಯುಪಮಾರ್ಥೀಯಃ । ಖಾದಿನಂ ನ ಭಕ್ಷಕಂ ವ್ಯಾಘ್ರಾದಿಮಿವ । ಯಥಾ ತಂ ಬಿಭ್ರತಃ ಪುರುಷಾ ಅವಹಿತಾಸ್ತಥಾಭೂತಾ ಇತ್ಯರ್ಥಃ । ಯದ್ವಾ ಸಂಪ್ರತ್ಯರ್ಥೇ । ಸಂಪ್ರತೀದಾನೀಂ ಖಾದಿನಂ ಹವಿಷಾಂ ಭಕ್ಷಕಂ ಯಮಗ್ನಿಂ ಹಸ್ತೇ ಧಾರಯಂತಿ ವಿಶಾಂ ಜನಾನಾಂ ಸ್ವಧ್ವರಂ ಶೋಭನಯಾಗಸ್ಯ ನಿಷ್ಪಾದಕಂ ತಮಗ್ನಿಂ ಹೇ ಋತ್ವಿಜಃ ಪರಿಚರತೇತಿ ಶೇಷಃ ॥

॥ ಪ್ರತಿಪದಾರ್ಥ ॥

**ಖಾದಿನಂ ನ**—ಸರ್ವಭಕ್ಷಕವಾದ ವ್ಯಾಘ್ರಾದಿಗಳಂತೆ । **ಯಂ**—ಯಾವ ಅಗ್ನಿಯನ್ನು । **ಜಾತಂ**—ಆಗ ತಾನೇ ಉತ್ಪನ್ನವಾದ । **ಶಿಶುಂ ನ**—ಶಿಶುವಿನಂತೆ । **ಹಸ್ತೇ**—ಕೈಯಿನಲ್ಲಿ । **ಆ ಬಿಭ್ರತಿ**—ಋತ್ವಿಕ್ಕುಗಳು ಧರಿಸಿರುವರೋ ಅಂತಹವನೂ (ಮತ್ತು) । **ವಿಶಾಂ**—ಪ್ರಜೆಗಳಿಗೆ । **ಸ್ವಧ್ವರಂ**-ಶ್ರೇಷ್ಠವಾದ ಯಾಗಸಂಪಾದಕನೂ ಆದ । **ಅಗ್ನಿಂ**—ಅಗ್ನಿಯನ್ನು (ಪೂಜಿಸಿರಿ).

॥ ಭಾವಾರ್ಥ ॥

ಸರ್ವಭಕ್ಷಕವಾದ ವ್ಯಾಘ್ರಾದಿಗಳಂತೆ ಹವಿರ್ಭಕ್ಷಕನಾದ ಯಾವ ಅಗ್ನಿಯನ್ನು ಆಗ ತಾನೇ ಉತ್ಪನ್ನವಾದ ಶಿಶುವಿನಂತೆ ಕೈಯಲ್ಲಿ ಋತ್ವಿಕ್ಕುಗಳು ಸ್ವೀಕರಿಸುವರೋ ಅಂತಹವನೂ ಮತ್ತು ಪ್ರಜೆಗಳಿಗೆ ಶ್ರೇಷ್ಠವಾದ ಯಾಗ ಸಂಪಾದಕನೂ ಆದ ಅಗ್ನಿಯನ್ನು ಪೂಜಿಸಿರಿ.

## English Translation.

(Worship) that Agni whom (the priests) bear in their hands like a new-born babe, the devourer (of the oblation), the (conveyer of the) holy sacrifices of men.

॥ ವಿಶೇಷವಿಷಯಗಳು ॥

ಅಗ್ನಿಮಂಥನಕಾಲದಲ್ಲಿ ಅಗ್ನಿಯನ್ನು ಉತ್ಪತ್ತಿಮಾಡಿದಕೂಡಲೇ **ಆ ಯಂ ಹಸ್ತೇ** ಎಂಬ ಈ ಋಕ್ಕನ್ನು ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಆ ಯಂ ಹಸ್ತೇ ನ ಖಾದಿನಮಿತ್ಯರ್ಧರ್ಚ ಆರಮೇತ್** ಎಂಬ ಸೂತ್ರದಿಂದ (ಆ. ೨-೧೬) ವಿವೃತವಾಗಿರುವುದು.

ಈ ಸೂಕ್ತದ ೪೦, ೪೧, ೪೨ ನೆಯ ಋಕ್ಕುಗಳು ಅಗ್ನಿಮಂಥನ ಕರ್ಮದಲ್ಲಿ ಬಹುಮುಖ್ಯವಾದ ಮಂತ್ರಗಳಾಗಿರುವುವು. ಅವುಗಳನ್ನು ಪಠಿಸುವ ಕ್ರಮವೂ, ವಿವರಣೆಯೂ ಐತರೇಯಬ್ರಾಹ್ಮಣದಲ್ಲಿ ವಿಸ್ತಾರವಾಗಿದೆ. ಅದನ್ನೇ ಇಲ್ಲಿ ಮಂತ್ರ ಮತ್ತು ಅವಶ್ಯಕವಾದ ವಿವರಣೆಸಹಿತವಾಗಿ ವಿವರಿಸಿದ್ದೇವೆ—

## ಅಗ್ನಿಮಂಥನಕರ್ಮದ ವಿವರಣೆಯು

(ಐತರೇಯಬ್ರಾಹ್ಮಣದಲ್ಲಿರುವಂತೆ)

ಯಜ್ಞದಲ್ಲಿ ಅಗ್ನಿಯನ್ನು ಉತ್ಪತ್ತಿಮಾಡುವಾಗ ಅಶ್ವತ್ಥವೃಕ್ಷದ ಅಥವಾ ಶಮೀವೃಕ್ಷದ ಎರಡು ಮರದ ತುಂಡುಗಳನ್ನು ಒಂದರಮೇಲೊಂದನ್ನಿಟ್ಟು ಬಲವಾಗಿ ಕಡೆಯುವರು. ಆದರಿಂದ ಅಗ್ನಿಯು ಉತ್ಪನ್ನನಾಗುವನು. ಈ ವಿಷಯದಲ್ಲಿ—

**ಶಮೀಗರ್ಭಾದಗ್ನಿಂ ಮಂಥತಿ । ಏಷಾ ವಾ ಅಗ್ನೇರ್ಯಜ್ಞಿಯಾ ತನೂಃ । ತಾಮೇವಾಸ್ಮೈ ಜನಯತಿ ॥**

(ತೈ. ಬ್ರಾ. ೧-೧-೯-೧)

ಎಂದು ತೈತ್ತರೀಯಬ್ರಾಹ್ಮಣವಾಕ್ಯವಿರುವುದು. ಯಜ್ಞಾದಿಗಳಲ್ಲಿ ಅಗ್ನಿಯನ್ನು ಮಂತ್ರಪೂರ್ವಕವಾಗಿಯೂ, ಸಂಸ್ಕಾರಸಹಿತವಾಗಿಯೂ ಮಥಿಸಿ ಉತ್ಪನ್ನಮಾಡುವ ವಿಧಾನವನ್ನು ಐತರೇಯಬ್ರಾಹ್ಮಣದಲ್ಲಿ (ಐ. ಬ್ರಾ. ೩-೫) ಈ ರೀತಿ ಹೇಳಿರುವುದು. ಈ ಋಕ್ಕಿನಲ್ಲಿ ಅಗ್ನಿಮಥನವಿಚಾರವು ಉಕ್ತವಾಗಿರುವುದರಿಂದ ಆ ಕ್ರಮವನ್ನು ಇಲ್ಲಿ ವಿವರಿಸುವುದು ಯುಕ್ತವಾಗಿದೆ. ಯಜ್ಞದಲ್ಲಿ ಸೋಮವಿಕ್ರಯಣವೆಂಬ (ಸೋಮಲತೆಯನ್ನು ಪರ್ವತವನಾದಿಗಳಿಂದ ತಂದವರಿಂದ ಕ್ರಯಕ್ಕೆ ಪಡೆಯುವುದು) ಕರ್ಮವು ಸಮಾಪ್ತಿಯಾದ ಮೇಲೆ ಅಗ್ನಿಮಥನಕಾರ್ಯವು ಪ್ರಾರಂಭವಾಗುವುದು ಆಗ ಅಧ್ವರ್ಯುವೆಂಬ ಋತ್ವಿಜನು ಹೋತೃವೆಂಬ ಋತ್ವಿಜನುದ್ದೇಶಿಸಿ ಈ ರೀತಿ ಹೇಳುವನು—

> **ಅಗ್ನಯೇ ಮಥ್ಯಮಾನಾಯಾನುಬ್ರೂಹೀತ್ಯಾಹಾಧ್ವರ್ಯುರಭಿ ತ್ವಾ ದೇವ ಸವಿತರಿತಿ ಸಾವಿತ್ರೀಮನ್ವಾಹ ತದಾಹುರ್ಯದಗ್ನಯೇ ಮಥ್ಯಮಾನಾಯಾನುವಾಚಾಹಾಥ ಕಸ್ಮಾತ್ಸಾವಿತ್ರೀಮನ್ವಾಹೇತಿ । ಸವಿತಾ ವೈ ಪ್ರಸವಾನಾಮೀಶೇ ಸವಿತೃಪ್ರಸೂತ ಏವೈನಂ ತನ್ಮಂಥತಿ ತಸ್ಮಾತ್ಸಾವಿತ್ರೀಮನ್ವಾಹ ।**

ಅಧ್ವರ್ಯುವು ಹೋತೃವನ್ನುದ್ದೇಶಿಸಿ— **ಅಗ್ನಯೇ ಮಥ್ಯಮಾನಾಯನುಬ್ರೂಹಿ** ಎಂಬ ಪ್ರೈಷಮಂತ್ರವನ್ನು ಹೇಳುವನು. ಪ್ರೈಷಮಂತ್ರವೆಂದರೆ ಯಜ್ಞದಲ್ಲಿ ನಾನಾ ಕರ್ಮಗಳನ್ನು ಮಾಡುವಾಗ ಅಧ್ವರ್ಯು ಮೊದಲಾದವರು ಸಂಬಂಧಪಟ್ಟ ಜನರನ್ನುದ್ದೇಶಿಸಿ ಇಂತಿಂತಹ ಕರ್ಮವನ್ನು (ಅಥವಾ ಹೋಮವನ್ನು) ಮಾಡು ಎಂದು ಆಜ್ಞಾರೂಪವಾಗಿ ವಿಧಿಸುವ ಮಂತ್ರಪಠನವು. ಅದನ್ನು ಕೇಳಿ ಹೋತೃವು—

> **ಅಭಿ ತ್ವಾ ದೇವ ಸವಿತರೀಶಾನಂ ವಾರ್ಯಾಣಾಂ । ಸದಾವನ್ ಭಾಗಮೀಮಹೇ ॥**
>
> (ಋ. ಸಂ. ೧-೨೪-೩)

ಎಂಬ ಸವಿತೃದೇವತಾಕವಾದ ಮಂತ್ರವನ್ನು (ಸಾವಿತ್ರೀ ಋಕ್ಕನ್ನು) ಪಠಿಸುವನು. ಇಲ್ಲಿ ಒಂದು ಸಂಶಯವು ತಲೆದೋರುವುದು. ಅಗ್ನಿಮಂಥನಕ್ಕಾಗಿ ಅವಶ್ಯಕವಾದ ಮಂತ್ರವನ್ನು ಹೇಳಬೇಕೆಂದು ಅಧ್ವರ್ಯುವು ಹೋತೃವಿಗೆ ನಿರ್ದೇಶಮಾಡಿದ್ದರೂ, ಹಾಗೆ ಮಾಡದೆ ಹೋತೃವು ಸವಿತೃದೇವತಾಪರವಾದ ಋಕ್ಕನ್ನು ಪಠಿಸಲು ಕಾರಣವೇನು ? ಇದು ತಪ್ಪಲ್ಲವೇ ಎಂದರೆ, ಹಾಗಲ್ಲ. **ಸವಿತಾ ವೈ ಪ್ರಸವಾನಾಮೀಶೇ**—ಎಂಬ ವಾಕ್ಯದಂತೆ ಯಜ್ಞಾದಿ ಸಮಸ್ತ ಕರ್ಮಗಳಲ್ಲಿಯೂ ಯಾವುದನ್ನು ಉತ್ಪತ್ತಿಮಾಡಬೇಕಾದರೂ ಆ ಉತ್ಪತ್ತಿಗೆಲ್ಲಾ ಸವಿತೃವು ಸ್ವಾಮಿ (ಅಧಿಪತಿ) ಯಾಗಿರುವುದರಿಂದ ಇಲ್ಲಿ ಅಗ್ನಿಮಥನವೆಂಬ ಅಗ್ನ್ಯುತ್ಪತ್ತಿಕಾರ್ಯಾರಂಭಕ್ಕಾಗಿ ಸವಿತೃದೇವತೆಯ ಅನುಜ್ಞೆಯನ್ನು ಕೇಳುವುದು ಸಹಜವಾಗಿದೆ. ಅದಕ್ಕಾಗಿಯೇ ಹೋತೃವು ಮೊದಲು ಸವಿತೃದೇವತಾಪರವಾದ ಋಕ್ಕನ್ನು ಪಠಿಸಿರುವನು.

> **ಮಹೀ ದ್ಯೌಃ ಪೃಥಿವೀ ಚ ನ ಇತಿ ದ್ಯಾವಾಪೃಥಿವೀಯಾಮನ್ವಾಹ । ತದಾಹುರ್ಯದಗ್ನಯೇ ಮಥ್ಯಮಾನಾಯಾನುವಾಚಾಹಾಥ ಕಸ್ಮಾದ್ದ್ಯಾವಾಪೃಥಿವೀಯಾಮನ್ವಾಹೇತಿ ದ್ಯಾವಾಪೃಥಿವೀಭ್ಯಾಂ ವಾ ಏತಂ ಜಾತಂ ದೇವಾಃ ಪರ್ಯಗೃಹ್ಣಂಸ್ತಾಭ್ಯಾಮೇವಾದ್ಯಾಪಿ ಪರಿಗೃಹೀತಸ್ತಸ್ಮಾದ್ದ್ಯಾವಾಪೃಥಿವೀಯಾಮನ್ವಾಹ ॥**

ಅನಂತರ ಹೋತೃವು ಮುಂದುವರಿದುದು—

> **ಮಹೀ ದ್ಯೌಃ ಪೃಥಿವೀ ಚ ನ ಇಮಂ ಯಜ್ಞಂ ಮಿಮಿಕ್ಷತಾಂ ।**
>
> **ಪಿಪೃತಾಂ ನೋ ಭರೀಮಭಿಃ ॥** (ಋ. ಸಂ. ೧-೨೨-೧೩)

ಎಂಬ ದ್ಯಾವಾಪೃಥಿವೀದೇವತಾಕವಾದ ಋಕ್ಕನ್ನು ಪಠಿಸುವನು. ಇದಕ್ಕೆ ಕೆಲವರ ಆಕ್ಷೇಪಣೆಯು—ಅಗ್ನಿಮಥನ ಕಾರ್ಯಕ್ಕಾಗಿ ಅಗ್ನಿಪರವಾದ ಋಕ್ಕನ್ನು ಹೇಳೆಂದರೆ ಈ ಹೋತೃವು ದ್ಯಾವಾಪೃಥಿವೀಪರವಾದ ಋಕ್ಕನ್ನು ಪಠಿಸುವುದೇತಕ್ಕೆ? ಎಂದರೆ, ಹಿಂದೆ ದೇವತೆಗಳು ಅಗ್ನಿಯು ಉತ್ಪನ್ನನಾದಾಗ ಅವನನ್ನು ದ್ಯಾವಾಪೃಥಿವಿಗಳ (ಭೂಮಿ ಸ್ವರ್ಗಗಳ) ಮಧ್ಯದಲ್ಲಿ ಪರಿಗ್ರಹಿಸಿರುವರು. (ಹಿಡಿದರು) ಆದ್ದರಿಂದ ಈಗಲೂ ಹಾಗೆಯೇ ಮಾಡಬೇಕು. ಪಾವಕನಾಮಕನಾದ ಅಗ್ನಿಯು ಭೂಮಿಯಿಂದಲೂ, ಸೂರ್ಯರೂಪನಾದ ಅಗ್ನಿಯು ಸ್ವರ್ಗದಿಂದಲೂ, ಪರಿಗ್ರಹಿಸಲ್ಪಟ್ಟಿರುವುದರಿಂದ ಅಗ್ನಿ ಪರಿಗ್ರಹಕ್ಕಾಗಿ ದ್ಯಾವಾಪೃಥಿವೀದೇವತಾಕವಾದ ಋಕ್ಕನ್ನು ಪಠಿಸಬೇಕಾದುದು ನ್ಯಾಯವಾಗಿದೆ.

**ತ್ವಾಮಗ್ನೇ ಪುಷ್ಕರಾದಧೀತಿ ತೃಚಮಾಗ್ನೇಯಂ ಗಾಯತ್ರಮನ್ವಾಹಾಗ್ನೌ ಮಥ್ಯಮಾನೇ ಸ್ವಯೈವೈನಂ ತದ್ದೇವತಯಾ ಸ್ವೇನ ಛಂದಸಾ ಸಮರ್ಧಯತಿ । ಅಥರ್ವಾ ನಿರಮಂಥತೇತಿ ರೂಪಸಮೃದ್ಧಮೇತದ್ವೈ ಯಜ್ಞಸ್ಯ ಸಮೃದ್ಧಂ ಯದ್ರೂಪಸಮೃದ್ಧಂ ಯತ್ಕರ್ಮ ಕ್ರಿಯಮಾಣಮೃಗಭಿವದತಿ ॥**

ಬಳಿಕ ಹೋತೃವು ಅಗ್ನಿಮಥನಕ್ಕಾಗಿ ಅಗ್ನಿದೇವತಾಕವಾದ—

**ತ್ವಾಮಗ್ನೇ ಪುಷ್ಕರಾದಧ್ಯಥರ್ವಾ ನಿರಮಂಥತ । ಮೂರ್ಧ್ನೋ ವಿಶ್ವಸ್ಯ ವಾಘತಃ ।**
**ತಮು ತ್ವಾ ದಧ್ಯಙ್ಙೃಷಿಃ ಪುತ್ರ ಈಧೇ ಅಥರ್ವಣಃ । ವೃತ್ರಹಣಂ ಪುರಂದರಂ ॥**
**ತ ಮು ತ್ವಾ ಪಾಥ್ಯೋ ವೃಷಾ ಸಮೀಧೇ ದಸ್ಯುಹಂತಮಂ । ಧನಂಜಯಂ ರಣೇರಣೇ ॥**

(ಋ. ಸಂ. ೬-೧೬-೧೩, ೧೪, ೧೫)

ಎಂಬ ಮೂರು ಋಕ್ಕುಗಳನ್ನು ಪಠಿಸುವನು. ಈ ಮೂರು ಋಕ್ಕುಗಳು ಅಗ್ನಿದೇವತೆಯನ್ನೇ ಸ್ತುತಿಸತಕ್ಕವು. ಮತ್ತು ಅಗ್ನಿಗೆ ಪ್ರಿಯವಾದ ಗಾಯತ್ರೀಛಂದಸ್ಸಿನ ಋಕ್ಕುಗಳೇ ಆಗಿರುವುವು. ಏಕೆಂದರೆ, ಅಗ್ನಿಯೂ, ಗಾಯತ್ರೀಛಂದಸ್ಸೂ ಎರಡೂ ಪ್ರಜಾಪತಿಯಿಂದಲೇ ಉತ್ಪನ್ನವಾಗಿರುವುದರಿಂದ ಗಾಯತ್ರೀಛಂದಸ್ಸು ಅಗ್ನಿಗೆ ಸ್ವಕೀಯಛಂದಸ್ಸೆಂದು ಹೇಳಲ್ಪಡುವುದು. ಈಗ ಮೊದಲನೆಯ ಋಕ್ಕಿನ ಎರಡನೆಯ ಪಾದದಲ್ಲಿ **ಅಥರ್ವಾ ನಿರಮಂಥತ**—ಅಥರ್ವಾ ಎಂಬ ಋಷಿಯು ಅಗ್ನಿಯನ್ನು ಮಥನಮಾಡಿ ಉತ್ಪತ್ತಿಮಾಡಿದನು ಎಂದು ಹೇಳಿದೆಯಷ್ಟೆ ಈ ಅಥರ್ವಾ ಎಂಬ ಋಷಿಯು ಎಲ್ಲರಿಗಿಂತ ಮೊದಲು ಅಗ್ನಿಯನ್ನು ಅರಣಿಗಳಲ್ಲಿ ಮಥಿಸಿ ಉತ್ಪತ್ತಿಮಾಡಿದನು ಆದ್ದರಿಂದ ಅಥರ್ವಣ ಋಷಿಗೆ ಪುತ್ರನಾಗಿ ಜನಿಸಿದ ಅಗ್ನಿಯು ಯಜ್ಞದಲ್ಲಿ ಸಮೃದ್ಧವಾಗಿ ಬೆಳದು ವೃದ್ಧಿಯನ್ನು ಹೊಂದುವನು ಎಂಬ ಪ್ರಾರ್ಥನೆ ಇದೆ ಈ ಕಾರಣಕ್ಕಾಗಿ ಅಗ್ನಿಯು ಅರಣಿಗಳಿಂದ ರೂಪಗೊಂಡು ಉತ್ಪನ್ನನಾಗಿ (ಎಂದರೆ ಸಂಪೂರ್ಣ ಅಗ್ನಿರೂಪದಿಂದ) ಯಜ್ಞಕರ್ಮದಲ್ಲಿ ಅಭಿವೃದ್ಧಿಗೊಂಡು (ದೊಡ್ಡದಾಗಿ ಪ್ರಜ್ವಲಿಸುತ್ತಾ) ಪ್ರಕಾಶಿಸಲಿ ಎಂಬ ಅರ್ಥವನ್ನು ಕೊಡುವ ಈ ಋಕ್ಕುಗಳನ್ನು ಪಠಿಸುವುದು ಸಹಜವಾಗಿದೆ. ಯಜ್ಞದಲ್ಲಿ ಯಾವ ಮಂತ್ರವನ್ನು ಪಠಿಸಿದರೂ ಆ ಮಂತ್ರದ ಅರ್ಥವು ಆಯಾ ಕರ್ಮಕ್ಕನುಗುಣವಾಗಿ ಅದನ್ನು ವಿವರಿಸುವಂತಿರಬೇಕು ಇದನ್ನು ರೂಪಸಮೃದ್ಧಿಯೆಂದು ಹೇಳುವರು.

**ಸ ಯದಿ ನ ಜಾಯೇತ ಯದಿ ಚಿರಂ ಜಾಯೇತ ರಾಕ್ಷೋಘ್ನ್ಯೋ ಗಾಯತ್ರ್ಯೋಽನೂಚ್ಯಾಃ ಅಗ್ನೇ ಹಂಸಿನ್ಯ೧ತ್ರಿಣಮಿತ್ಯೇತಾಃ ರಕ್ಷಸಾಮಪಹತ್ಯೈ ರಕ್ಷಾಂಸಿ ವಾ ಏನಂ ತರ್ಹ್ಯಾಲಭಂತೇ ಯರ್ಹಿ ನ ಜಾಯತೇ ಯರ್ಹಿ ಚಿರಂ ಜಾಯತೇ ॥**

ಹಿಂದೆ ಹೇಳಿದ ಐದು ಋಕ್ಕುಗಳನ್ನು ಪಠಿಸುತ್ತಾ ಅರಣಿಗಳಲ್ಲಿ ಅಗ್ನಿಮಂಥನವನ್ನು ಮಾಡಬೇಕು. ಹೀಗೆ ಮಾಡಿದರೂ ಅಗ್ನಿಯು ಉತ್ಪತ್ತಿಯಾಗದೆ ಇದ್ದರೆ ಅಥವಾ ಬಹಳ ಕಾಲದವರೆಗೂ, ಹೊಗೆ ಮುಂತಾದ್ದು ಬರುತ್ತಾ ನಿಧಾನವಾಗಿ ಉತ್ಪತ್ತಿಯಾದರೆ ಆಗ ಗಾಯತ್ರೀಛಂದಸ್ಸನ ರಾಕ್ಷೋಘ್ನವೆಂಬ ಈ ಕೆಳಗಿನ ಸೂಕ್ತವನ್ನು ಪಠಿಸಬೇಕು—

**ಅಗ್ನೇ ಹಂಸಿ ನ್ಯ೧ ತ್ರಿಣಂ ದೀದ್ಯನ್ಮರ್ತ್ಯೇಷ್ವಾ । ಸ್ವೇ ಕ್ಷಯೇ ಶುಚಿವ್ರತ ॥**
**ಉತ್ತಿಷ್ಠಸಿ ಸ್ವಾಹುತೋ ಘೃತಾನಿ ಪ್ರತಿಮೋದಸೇ । ಯತ್ತ್ವಾ ಸ್ರುಚಃ ಸಮಸ್ಥಿರನ್ ॥**
**ಸ ಆಹುತೋ ವಿ ರೋಚತೇಽಗ್ನಿರೀಳೇನ್ಯೋ ಗಿರಾ । ಸ್ರುಚಾ ಪ್ರತೀಕಮಜ್ಯತೇ ॥**
**ಘೃತೇನಾಗ್ನಿಃ ಸಮಜ್ಯತೇ ಮಧುಪ್ರತೀಕ ಆಹುತಃ । ರೋಚಮಾನೋ ವಿಭಾವಸುಃ ।**
**ಜರಮಾಣಃ ಸಮಿಧ್ಯಸೇ ದೇವೇಭ್ಯೋ ಹವ್ಯವಾಹನ । ತಂ ತ್ವಾ ಹವಂತ ಮರ್ತ್ಯಾಃ ॥**
**ತಂ ಮರ್ತಾ ಅಮರ್ತ್ಯಂ ಘೃತೇನಾಗ್ನಿಂ ಸಪರ್ಯತ । ಅದಾಭ್ಯಂ ಗೃಹಪತಿಂ ॥**
**ಅದಾಭ್ಯೇನ ಶೋಚಿಷಾಗ್ನೇ ರಕ್ಷಸ್ತ್ವಂ ದಹ । ಗೋಪಾ ಋತಸ್ಯ ದೀದಿಹಿ ।**
**ಸ ತ್ವಮಗ್ನೇ ಪ್ರತೀಕೇನ ಪ್ರತ್ಯೋಷ ಯಾತುಧಾನ್ಯಃ । ಉರುಕ್ಷಯೇಷು ದೀದ್ಯತ್ ॥**
**ತಂ ತ್ವಾ ಗೀರ್ಭಿರುರುಕ್ಷಯಾ ಹವ್ಯವಾಹಂ ಸಮೀಧಿರೇ । ಯಜಿಷ್ಠಂ ಮಾನುಷೇ ಜನೇ ॥**
(ಋ. ಸಂ. ೧೦-೧೧೮-೧ ರಿಂದ ೯)

ಈ ಸೂಕ್ತದಲ್ಲಿ ಒಂಭತ್ತು ಋಕ್ಕುಗಳಿರುವುವು. ಇವುಗಳು ರಾಕ್ಷಸರನ್ನು ಓಡಿಸಿ ಅವರನ್ನು ಕೊಲ್ಲುವುವು. ಆದ್ದರಿಂದ ಈ ಋಕ್ಕುಗಳನ್ನು ಪಠಿಸುವುದರಿಂದ ರಾಕ್ಷಸರು ನಾಶವಾಗುವರು. ಅಗ್ನಿಯನ್ನು ಮಥನಮಾಡುವ ಕಾಲದಲ್ಲಿ ಅಗ್ನಿಯು ಉತ್ಪನ್ನನಾಗದಿರುವುದೂ ಅಥವಾ ವಿಳಂಬವಾಗಿ ಉತ್ಪನ್ನವಾಗುವುದೂ ಸಹ ಏತಕ್ಕೆಂದರೆ, ಈ ರಾಕ್ಷಸರು ಅಗ್ನಿಯನ್ನು ಪ್ರತಿಬಂಧಿಸಿ ಅವನನ್ನು ಬಿಡದೆ ತಮ್ಮ ಅಧೀನದಲ್ಲಿಟ್ಟುಕೊಂಡಿರುವರು. ಆದುದರಿಂದ ಅಗ್ನಿಯನ್ನು ಬಿಡುಗಡೆ ಮಾಡುವುದಕ್ಕಾಗಿ ರಾಕ್ಷಸರ ಹನನವು ಅವಶ್ಯಕವು. ಅದಕ್ಕಾಗಿ ಈ ಒಂಭತ್ತು ಋಕ್ಕುಗಳ ರಕ್ಷೋಹನನ ಸೂಕ್ತವನ್ನು ಪಠಿಸಬೇಕೆಂದು ಹೇಳಿರುವುದು.

**ಸ ಯದ್ಯೇಕಸ್ಯಾಮೇವಾನೂಕ್ತಾಯಾಂ ಜಾಯೇತ ಯದಿ ದ್ವಯೋರಥೋತ ಬ್ರುವಂತು ಜಂತವ ಇತಿ ಜಾತಾಯ ಜಾತವತೀಮಭಿರೂಪಾಮನುಬ್ರೂಯಾತ್ ॥**

ರಕ್ಷೋಘ್ನಸೂಕ್ತವನ್ನು ಪಠಿಸುತ್ತಿರುವಾಗ ಮಧ್ಯದಲ್ಲಿ ಒಂದು ಋಕ್ಕನ್ನು ಪಠಿಸಿದಮೇಲೆ ಅಗ್ನಿಯು ಉತ್ಪನ್ನವಾದರೆ ಅಥವಾ ಎರಡು, ಮೂರು ಇತ್ಯಾದಿ ಋಕ್ಕುಗಳ ಪಠನಾನಂತರ ಉತ್ಪನ್ನವಾದರೆ ಆ ಕ್ಷಣವೇ,

**ಉತ ಬ್ರುವಂತು ಜಂತವ ಉದಗ್ನಿರ್ವೃತ್ರಹಾಜನಿ । ಧನಂಜಯೋ ರಣೇರಣೇ ॥**
(ಋ. ಸಂ. ೧-೭೪-೩)

ಎಂಬ ಋಕ್ಕನ್ನು ಕೂಡಲೇ ಪಠಿಸಬೇಕು. ಏಕೆಂದರೆ, ಈ ಋಕ್ಕಿನಲ್ಲಿ ಪ್ರತಿಪಾದಿತವಾಗಿರುವ ವಿಷಯವು ಅಗ್ನಿಯ ಉತ್ಪತ್ತಿಗೆ ಅನುಕೂಲವಾಗಿರುವುದು. ಈ ಅನುಕೂಲವಾಗಿರುವುದೆಂಬ ವಿಷಯವನ್ನು ಹೇಳುವುದಕ್ಕಾಗಿಯೇ **ಜಾತವತೀಂ** ಎಂಬ ಶಬ್ದಪ್ರಯೋಗವಿರುವುದು. ಅನಂತರ **ಉದಗ್ನಿರ್ವೃತ್ರಹಾಜನಿ** ಎಂಬ ಎರಡನೆಯ ಪಾದದಲ್ಲಿ

ಅಜನಿ ಉತ್ಪನ್ನನಾದನು ಎಂಬ ಜನ್ಮಸೂಚಕವಾದ ಪದವು ಪಠಿತವಾಗಿದೆ. ಆದುದರಿಂದ ಅಗ್ನಿಯು ಉತ್ಪತ್ತಿಯಾದ ಕೂಡಲೇ ಅನುರೂಪವಾದ ಈ ಋಕ್ಕನ್ನು ಆ ಕೂಡಲೇ ಪಠಿಸಬೇಕೆಂದು ಹೇಳಿರುವುದು.

> ಯದ್ಯಜ್ಞೇಽಭಿರೂಪಂ ತತ್ಸಮೃದ್ಧಂ ಆ ಯಂ ಹಸ್ತೇನ ಖಾದಿನಮಿತಿ ಹಸ್ತಾಭ್ಯಾಂ ಹ್ಯೇನಂ ಮಂಥಂತಿ ಶಿಶುಂ ಜಾತಮಿತಿ ಶಿಶುರಿವ ವಾ ಏಷ ಪ್ರಥಮಜಾತೋ ಯದಗ್ನಿಃ ನ ಬಿಭ್ರತಿ ವಿಶಾಮಗ್ನಿಂ ಸ್ವಧ್ವರಮಿತಿ ಯದ್ವೈ ದೇವಾನಾಂ ನೇತಿ ತದೇಷಾಮೋ೩ ಮಿತಿ ಪ್ರ ದೇವಂ ದೇವವೀತಯೇ ಭರತಾ ವಸುವಿತ್ತಮಮಿತಿ ಪ್ರಹ್ರಿಯಮಾಣಾಯಾಭಿರೂಪಾ ಯದ್ಯಜ್ಞೇಽಭಿರೂಪಂ ತತ್ಸಮೃದ್ಧಂ ಆ ಸ್ವೇ ಯೋನೌ ನಿಷೀದತ್ವಿತಿ ಏಷ ಹ ವಾ ಅಸ್ಯ ಸ್ವೋ ಯೋನಿರ್ಯದಗ್ನಿರಗ್ನೇಃ ॥

ಇದುವರೆಗೆ ಅಗ್ನಿಮಥನಕ್ಕಾಗಿ ಪ್ರಯೋಗಿಸಲ್ಪಡುವ ಆರು ಋಕ್ಕುಗಳನ್ನು (ಅಭಿತ್ವಾ, ಮಹೀದ್ಯೌಂ, ತ್ವಾಮಗ್ನೇ, ತಮುತ್ವಾ, ತಮುತ್ವಾ, ಉತಬ್ರುವಂತು ಎಂಬ ಆರು ಋಕ್ಕುಗಳನ್ನು) ಹೇಳಿ ಈಗ—

> ಆ ಯಂ ಹಸ್ತೇ ನ ಖಾದಿನಂ ಶಿಶುಂ ಜಾತಂ ನ ಬಿಭ್ರತಿ । ವಿಶಾಮಗ್ನಿಂ ಸ್ವಧ್ವರಂ ॥
>
> (ಋ. ಸಂ ೬-೧೬-೪೦)

ಎಂಬ ಏಳನೆಯ ಋಕ್ಕನ್ನು ಹೋತೃವು ಪಠಿಸುವನು. ಈ ಋಕ್ಕಿನ ಅರ್ಥವು ಈ ರೀತಿ ಇರುವುದು. ಹೊಸದಾಗಿ ಹುಟ್ಟಿದ ಮಗುವನ್ನು ಕೈಗಳಿಂದ ಎತ್ತಿಕೊಳ್ಳುವಂತೆ ಅರಣಿಯಲ್ಲಿ ಉತ್ಪನ್ನನಾದ ಅಗ್ನಿಯನ್ನು ಋತ್ವಿಕ್ಕುಗಳು ಕೈಗಳಿಂದ ಎತ್ತಿಕೊಳ್ಳುವರು. ಈ ಶಿಶುರೂಪದ ಅಗ್ನಿಯು ಪ್ರಜೆಗಳು ಮಾಡುವ ಯಜ್ಞದಲ್ಲಿ ಮುಖ್ಯಪಾತ್ರವಹಿಸುವವನಾಗಿಯೂ ಹವಿರಾದಿಗಳನ್ನು ಭಕ್ಷಿಸುವವನಾಗಿಯೂ ಇರುವನು, ಎಂದು ಇದರ ಮುಖ್ಯಾಭಿಪ್ರಾಯವು. ಮೊದಲನೆಯ ಪಾದದಲ್ಲಿ ಹಸ್ತಶಬ್ದಪ್ರಯೋಗವು—ಈ ಅಗ್ನಿಯನ್ನು ಋತ್ವಿಕ್ಕುಗಳು ತಮ್ಮ ಹಸ್ತಗಳಿಂದ ಮಥಿಸುವರು. ಅದ್ದರಿಂದ ಕೈಗಳಲ್ಲಿ ಎತ್ತಿಕೊಳ್ಳುವರು ಎಂದು ಹೇಳಿದೆ. ಎರಡನೆಯ ಪಾದದಲ್ಲಿ ಆಗತಾನೇ ಉತ್ಪನ್ನನಾದ ಅಗ್ನಿಗೆ ಹುಟ್ಟಿದ ಮಗುವಿನ ದೃಷ್ಟಾಂತವನ್ನು ಹೇಳಿದೆ. ಇಲ್ಲಿ ಉಪಯೋಗಿಸುವ ನ ಎಂಬ ಪದವು ಓಂ ಎಂಬ ಅಂಗೀಕಾರಾರ್ಥವನ್ನು ಸೂಚಿಸುವುದು. ಲೋಕಭಾಷೆಯಲ್ಲಿ ನ ಎಂಬ ಶಬ್ದವು ನಿಷೇಧಾರ್ಥವನ್ನು ಮಾತ್ರ ಸೂಚಿಸುವುದು. ಆದರೆ ವೇದಗಳಲ್ಲಿ ಈ ಶಬ್ದವು ನಿಷೇಧಾರ್ಥವನ್ನೂ, ಉಪಮಾರ್ಥವನ್ನೂ, ಅಂಗೀಕಾರಾರ್ಥವನ್ನೂ ಸೂಚಿಸುವುದು. ಇಲ್ಲಿ ಅಂಗೀಕಾರಾರ್ಥವೆಂದೇ ಅಭಿಪ್ರಾಯವು. ಮತ್ತು ದೇವಾನಾಂ ಎಂಬ ಪದಕ್ಕೆ ದೇವತೆಗಳನ್ನು ಪ್ರತಿಪಾದಿಸುವ ಮಂತ್ರಗಳಿಂದಾಗಲಿ ಅಥವಾ ವರ್ಣವ್ಯತ್ಯಯದಿಂದ ವೇದಾನಾಂ—ವೇದಗಳ ಸಂಬಂಧವಾದ ಎಂದಾಗಲಿ ಅರ್ಥವಾಗಬಹುದು. ಇನ್ನು ಅಗ್ನಿಮಥನದ ಎಂಟನೆಯ ಋಕ್ಕನ್ನು, ಎಂದರೆ—

> ಪ್ರ ದೇವಂ ದೇವವೀತಯೇ ಭರತಾ ವಸುವಿತ್ತಮಂ । ಆ ಸ್ವೇ ಯೋನೌ ನಿ ಷೀದತು ॥
>
> (ಋ. ಸಂ. ೬-೧೬-೪೧)

ಎಂಬ ಋಕ್ಕನ್ನು ಹೋತೃವು ಪಠಿಸುವನು. ಎಲೈ ಋತ್ವಿಜರೇ, ಈಗ ಉತ್ಪನ್ನನಾದ ಅಗ್ನಿಯನ್ನು ಅವನ ಸ್ವಸ್ಥಾನವಾದ ಆಹವನೀಯಕುಂಡದಲ್ಲಿ ಇಡಿರಿ. ಅಗ್ನಿಯ ಸ್ವಸ್ಥಾನವಾದ ಅಲ್ಲಿ ಅವನು ಕುಳಿತುಕೊಳ್ಳಲಿ ಎಂಬರ್ಥವಿರುವ ಈ ಋಕ್ಕು ಅಗ್ನಿಯನ್ನು ಆಹವನೀಯಕುಂಡದಲ್ಲಿ ಇಡುವ ಕರ್ಮಕ್ಕೆ ಸಮಯೋಚಿತವಾಗಿರುವುದು. ಇಲ್ಲಿ ಪ್ರತಿ ಕರ್ಮದಲ್ಲಿಯೂ

ಪಠಿಸುವ ಪ್ರೈಷಮಂತ್ರಕ್ಕೆ ಅನುಸಾರವಾಗಿ ಹೋತೃವು ಆಯಾ ಕರ್ಮಕ್ಕೆ ಸಮಯೋಚಿತವಾದುದೂ ಸರಿಯಾದ ಅರ್ಥವುಳ್ಳದ್ದೂ ಆದ ಮಂತ್ರವನ್ನು ಪಠಿಸುವನು. ಹೇಗೆಂದರೆ—ಅಗ್ನಿಯು ಉತ್ಪನ್ನನಾದಕೂಡಲೇ ಅಧ್ವರ್ಯುವು ಹೋತೃವನ್ನು ಕುರಿತು—**ಜಾತಾಯಾನುಬ್ರೂ ೩ ಹಿ** ಎಂದು ಪ್ರೈಷಮಂತ್ರವನ್ನು ಹೇಳುವನು. ಆದಕ್ಕೆ ಪ್ರತ್ಯುತ್ತರವಾಗಿ ಹೋತೃವು ಸಮಯೋಚಿತವಾದ **ಉತ ಬ್ರುವಂತು ಜಂತವಃ** ಎಂಬ ಋಕ್ಕನ್ನು ಪಠಿಸುವನು. ಹಾಗೆಯೇ ಉತ್ಪನ್ನನಾದ ಅಗ್ನಿಯನ್ನು ಆಹವನೀಯವೆಂಬ ಕುಂಡದಲ್ಲಿ ಇಡುವಾಗ ಅಧ್ವರ್ಯುವು-**ಪ್ರಹ್ರಿಯಮಾಣಾಯಾನುಬ್ರೂ ೩ ಹಿ** ಎಂದು ಪ್ರೈಷಮಂತ್ರವನ್ನು ಹೇಳಿದಕೂಡಲೇ ಹೋತೃವು ಆ ಸಂದರ್ಭಕ್ಕೆ ಸರಿಯಾದ **ಪ್ರ ದೇವಂ ದೇವವೀತಯೇ** ಎಂಬ ಋಕ್ಕನ್ನು ಪಠಿಸುವನು. ಇದರಂತೆ ಪ್ರತಿ ಕರ್ಮದಲ್ಲಿಯೂ ನಡೆಯುವುದೆಂದು ತಿಳಿಯಬೇಕು. ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ ಈ ವಿಷಯವಾಗಿ ಈ ರೀತಿ ಹೇಳಿದೆ—

> **ಅಗ್ನಯೇ ಮಥ್ಯಮಾನಾಯಾನುಬ್ರೂಹೀತ್ಯಾಹ ಸಾವಿತ್ರೀಮೃಚಮನ್ವಾಹ ಸವಿತೃಪ್ರಸೂತ ಏವೈನಂ ಮಂಥತಿ ಜಾತಾಯಾನುಬ್ರೂಹಿ ಪ್ರಹ್ರಿಯಮಾಣಾಯಾನುಬ್ರೂಹೀತ್ಯಾಹ ಕಾಂಡೇಕಾಂಡ ಏವೈನಂ ಕ್ರಿಯಮಾಣೇ ಸಮರ್ಧಯತಿ ಗಾಯತ್ರೀಃ ಸರ್ವಾ ಅನ್ವಾಹ ॥**
>
> (ತೈ. ಸಂ. ೬-೩-೫-೨, ೩)

ಇತ್ಯಾದಿ. ಈ ವಿಷಯವನ್ನೇ ಇಲ್ಲಿ **ಯದ್ಯಜ್ಞೇಽಭಿರೂಪಂ ತತ್ಸಮೃದ್ಧಂ** ಎಂಬ ವಾಕ್ಯದಿಂದ ವಿವರಿಸಿರುವುದು. ಎಂದರೆ ಆಯಾ ಕರ್ಮಗಳಲ್ಲಿ ಆಯಾ ಕರ್ಮಕ್ಕೆ ತಕ್ಕಂತೆ ಅನುರೂಪವಾದ ಮಂತ್ರವನ್ನು ಹೇಳಿ ಯಜ್ಞವನ್ನು ನೆರವೇರಿಸಬೇಕು. ಎಲ್ಲಾ ಮಂತ್ರಗಳೂ ಗಾಯತ್ರೀಛಂದಸ್ಕವಾಗಿರಬೇಕು ಎಂದು ಮುಖ್ಯಾಭಿಪ್ರಾಯವು. ಕೊನೆಯಲ್ಲಿ **ಆ ಸ್ವೇ ಯೋನೌ ನಿಷೀದತು** ಎಂದು ಹೇಳಿದ ಕೂಡಲೇ ಅಗ್ನಿಯನ್ನು ಆಹವನೀಯಕುಂಡದಲ್ಲಿ ಸ್ಥಾಪಿಸುವರು. ಏಕೆಂದರೆ ಆಹವನೀಯಸ್ಥಾನವೇ ಮಥಿತನಾದ (ಆಗತಾನೇ ಉತ್ಪನ್ನನಾದ) ಅಗ್ನಿಯ ಸ್ಥಾನವೆಂದು ಹೇಳಲ್ಪಡುವುದು.

> ಆ ಜಾತಂ ಜಾತವೇದಸೀತಿ ಜಾತ ಇತರೋ ಜಾತವೇದಾ ಇತರಃ **ಪ್ರಿಯಂ ಶಿಶೀತಾತಿಥಿಮಿತ್ಯೇಷ** ಹ ವಾ ಅಸ್ಯ ಪ್ರಿಯೋಽತಿಥಿರ್ಯದಗ್ನಿರಗ್ನೇಃ **ಸ್ಯೋನ ಆ ಗೃಹಪತಿಮಿತಿ ಶಾಂತ್ಯಾಮೇವೈನಂ ತದ್ದಧಾತಿ । ಅಗ್ನಿನಾಗ್ನಿಃ ಸಮಿಧ್ಯತೇ ಕವಿರ್ಗೃಹಪತಿರ್ಯುವಾ । ಹವ್ಯವಾಡ್ಜುಹ್ವಾಸ್ಯ** ಇತ್ಯಭಿರೂಪಾ **ಯದ್ಯಜ್ಞೇಽ**ಭಿರೂಪಂ ತತ್ಸಮೃದ್ಧಂ । **ತ್ವಂ ಹ್ಯಗ್ನೇ ಅಗ್ನಿನಾ ವಿಪ್ರೋ** ವಿಪ್ರೇಣ **ಸನ್ತ್ಸತೇತಿ** ವಿಪ್ರ ಇತರೋ ವಿಪ್ರ **ಇತರಃ ಸನ್ನಿತರಃ ಸನ್ನಿತರಃ ಸಖಾ ಸಖ್ಯಾ** ಸಮಿಧ್ಯಸ ಇತ್ಯೇಷ ಹ ವಾ **ಅಸ್ಯ ಸ್ವಃ ಸಖಾ ಯದಗ್ನಿರಗ್ನೇಃ ॥**

ಈಗ ಹೋತೃವು ಒಂಭತ್ತನೇ ಋಕ್ಕಾದ—

> **ಆ ಜಾತಂ ಜಾತವೇದಸಿ ಪ್ರಿಯಂ ಶಿಶೀತಾತಿಥಿಂ । ಸ್ಯೋನ ಆ ಗೃಹಪತಿಂ ॥**
>
> (ಋ. ಸಂ. ೬-೧೬-೪೨)

ಎಂಬ ಮಂತ್ರವನ್ನು ಪಠಿಸುವನು. ಈ ಋಕ್ಕಿನ ಮುಖ್ಯಾಭಿಪ್ರಾಯವೇನೆಂದರೆ—ಈ ಋಕ್ಕಿನಲ್ಲಿ ಎರಡು ವಿಧವಾದ ಅಗ್ನಿಗಳನ್ನು ನಿರ್ದೇಶಿಸಿದೆ. **ಜಾತಂ**—ಎಂದರೆ, ಆಗತಾನೆ ಮಥನಮಾಡಿ ಉತ್ಪತ್ತಿಮಾಡಿರುವ ಅಗ್ನಿಯೇ ಮೊದಲನೆಯದು. ಆಗತಾನೇ ಉತ್ಪನ್ನನಾದುದರಿಂದ ಇದನ್ನು **ಜಾತಂ** ಎಂಬ ಪದದಿಂದ ನಿರ್ದೇಶಿಸಿರುವುದು. **ಆಹವನೀಯಾಗ್ನಿ**

ಕುಂಡದಲ್ಲಿ ಮೊದಲೇ ಸ್ಥಾಪಿತವಾಗಿರುವುದು ಎರಡನೆಯದು. ಇದಕ್ಕೆ **ಜಾತವೇದಸಂ** ಎಂದು ಹೇಳುವರು. ಮಥನದಿಂದ ಉತ್ಪನ್ನವಾದ ಅಗ್ನಿಯ ಸ್ವರೂಪವನ್ನು ತಿಳಿದಿರುವವನಾದ್ದರಿಂದ ಆಹವನೀಯಾಗ್ನಿಗೆ ಜಾತವೇದಸಂ ಎಂದು ಅರ್ಥವಿವರಣೆ ಮಾಡಿದೆ. ಇಲ್ಲಿ ಆಹವನೀಯಾಗ್ನಿ ಸ್ಥಾನದಲ್ಲಿ ಮೊದಲೇ ಸ್ಥಾಪಿತವಾಗಿದ್ದ ಜಾತವೇದಸವೆಂಬ ಅಗ್ನಿಗೆ ಹೊಸದಾಗಿ ಮಥಿತವಾದ ಅಗ್ನಿಯು ಪ್ರೀತಿಪಾತ್ರನಾದ ಅತಿಥಿಯಂತಿರುವುದು. ಆದುದರಿಂದ ಪ್ರಿಯನೂ, ಅತಿಥಿಸ್ವರೂಪನೂ ಆದ ಈ ಮಥಿತಾಗ್ನಿಯನ್ನು ಸುಖನಿವಾಸಸಿದ್ಧಿಗಾಗಿ ಆಹವನೀಯಾಗ್ನಿಕುಂಡದಲ್ಲಿ ಸ್ಥಾಪಿಸಲಾಗುವುದು ಎಂದು ಮುಖ್ಯಾಭಿಪ್ರಾಯವು. ಅನಂತರ ಹೋತೃವು—

**ಅಗ್ನಿನಾಗ್ನಿಃ ಸಮಿಧ್ಯತೇ ಕವಿರ್ಗೃಹಪತಿರ್ಯುವಾ । ಹವ್ಯವಾಡ್ಜುಹ್ವಾಸ್ಯಃ ॥**

(ಋ. ಸಂ. ೧-೧೨-೬)

ಎಂಬ ಹತ್ತನೆಯ ಋಕ್ಕನ್ನು ಪಠಿಸುವನು. ಇದರ ಅರ್ಥವು—ಮೊದಲೇ ಆಹವನೀಯ ಕುಂಡದಲ್ಲಿ ಸ್ಥಾಪಿಸಿದ್ದ ಅಗ್ನಿಯ ಜೊತೆಗೆ ಹೊಸದಾಗಿ ಮಥಿತವಾದ ಅಗ್ನಿಯು ಸೇರಿ ಚೆನ್ನಾಗಿ ಪ್ರಕಾಶಮಾನನಾಗಿ ಬೆಳಗುವುದು ಈ ಮಥಿತಾಗ್ನಿಯು ಸರ್ವರನ್ನು ತಿಳಿಯುವ ಕ್ರಾಂತದರ್ಶಿಯು, ಗೃಹದ ಅಥವಾ ಯಜಮಾನನ ಪಾಲಕನು, ನಿತ್ಯತರುಣನು, ದೇವತೆಗಳಿಗೆ ಹವ್ಯಾದಿಗಳನ್ನು ವಹಿಸುವವನು, ಜುಹೂ ಎಂಬ ಹೋಮಸಾಧನವಾದ ಸೌಟನ್ನು ಮುಖದಲ್ಲಿ (ಬಾಯಲ್ಲಿ) ಇಟ್ಟುಕೊಂಡಿರುವವನು. (ಎಂದರೆ ಜುಹೂ ಎಂಬ ಸೌಟಿನಿಂದ ಆಜ್ಯಾದಿಗಳನ್ನು ಅಗ್ನಿಯ ಜ್ವಾಲೆಯಲ್ಲಿ ಹೋಮಮಾಡುವುದರಿಂದ **ಜುಹ್ವಾಸ್ಯಃ** ಎಂದು ಅಗ್ನಿಯನ್ನು ಕರೆಯಲಾಗಿದೆ.) ಈ ರೀತಿ ಕಾಲಕ್ಕೆ ಅನುರೂಪವಾದ ಮಂತ್ರವನ್ನು ಇಲ್ಲಿ ಪಠಿಸಲಾಗಿದೆ. ಇದಾದ ಬಳಿಕ ಹೋತೃವು—

**ತ್ವಂ ಹ್ಯಗ್ನೇ ಅಗ್ನಿನಾ ವಿಪ್ರೋ ವಿಪ್ರೇಣ ಸನ್ತ್ಸತಾ । ಸಖಾ ಸಖ್ಯಾ ಸಮಿಧ್ಯಸೇ ॥**

(ಋ. ಸಂ. ೮-೪೩-೧೪)

ಎಂಬ ಋಕ್ಕನ್ನು ಪಠಿಸುವನು. ಎಲೈ ನೂತನಾಗ್ನಿಯೇ, ಮೇಧಾವಿಯಾದ ನೀನು ಮೇಧಾವಿಯಾದ ಆಹವನೀಯಾಗ್ನಿಯೊಡನೆ ಸೇರಿ, ಸ್ನೇಹಿತನು ಸ್ನೇಹಿತನೊಡನೆ ಸೇರಿ ಸುಖಿಸುವಂತೆ ಸುಖವಾಗಿರು ಎಂಬಭಿಪ್ರಾಯವು.

**ತಂ ಮರ್ಜಯಂತ ಸುಕ್ರತುಂ ಪುರೋಯಾವಾನಮಾಜಿಷು । ಸ್ವೇಷು ಕ್ಷಯೇಷು ವಾಜಿನಮಿತಿ ಏಷ ಹ ವಾ ಅಸ್ಯ ಸ್ವಃ ಕ್ಷಯೋ ಯದಗ್ನಿರಗ್ನೇಃ । ಯಜ್ಞೇನ ಯಜ್ಞಮಯಜಂತ ದೇವಾ ಇತ್ಯುತ್ತಮಯಾ ಪರಿದಧಾತಿ । ಯಜ್ಞೇನ ವೈ ತದ್ದೇವಾ ಯಜ್ಞಮಯಜಂತ ಯದಗ್ನಿನಾಗ್ನಿಮಯಜಂತ ತೇ ಸ್ವರ್ಗಂ ಲೋಕಮಾಯನ್ ತಾನಿ ಧರ್ಮಾಣಿ ಪ್ರಥಮಾನ್ಯಾಸನ್ । ತೇ ಹ ನಾಕಂ ಮಹಿಮಾನಃ ಸಚಂತ ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾ ಇತಿ ಛಂದಾಸಿ ವೈ ಸಾಧ್ಯಾ ದೇವಾಸ್ತೇಽಗ್ರೇಽಗ್ನಿನಾಗ್ನಿಮಯಜಂತ ತೇ ಸ್ವರ್ಗಂ ಲೋಕಮಾಯನ್ ॥**

ಅನಂತರ ಹೋತೃವು—**ತಂ ಮರ್ಜಯಂತ ಸುಕ್ರತುಂ** (ಋ. ಸಂ. ೮-೮೪-೮) ಎಂಬ ಋಕ್ಕನ್ನು ಪಠಿಸುವನು. ಹೀಗೆ ಹೇಳಿ ಅಗ್ನಿಯ ಸ್ವಕೀಯನಿವಾಸಸ್ಥಾನವಾದ ಆಹವನೀಯಾಗ್ನಿಯಲ್ಲಿ ಸ್ಥಾಪಿಸಿ ಅನಂತರ ಅಗ್ನಿಮಥನದಲ್ಲಿ ಕೊನೆಯ ಋಕ್ಕಾದ ಎಂದರೆ ೧೩ನೆಯ ಋಕ್ಕಾದ **ಯಜ್ಞೇನ ಯಜ್ಞಮಯಜಂತ ದೇವಾಃ** (ಋ. ಸಂ. ೧೦-೯೦-೧೬)

ಎಂಬ ಋಕ್ಕನ್ನು ಹೋತೃವು ಪಠಿಸಿ ಅಗ್ನಿಮಥನಕಾರ್ಯವನ್ನು ಮುಗಿಸುವನು. ಇಲ್ಲಿ ಮಥಿತಾಗ್ನಿಯನ್ನು (ಪ್ರಹ್ರಿಯಮಾಣಾಗ್ನಿಯನ್ನು) ಆಹವನೀಯಾಗ್ನಿಯೊಡನೆ ಸೇರಿಸಿ ಸ್ಥಾಪಿಸುವುದೇ **ಅಗ್ನಿನಾಗ್ನಿಮಯಜಂತ** ಎಂದು ಹೇಳಲ್ಪಡುವುದು. ಅಥವಾ ಈ ಕರ್ಮವನ್ನೇ **ಯಜ್ಞೇನ ಯಜ್ಞಮಯಜಂತ ದೇವಾಃ** ಎಂಬ ಕೊನೆಯ ಋಕ್ಕಿನಲ್ಲಿ ಹೇಳಿರುವುದು. ಇಲ್ಲಿ ಸಾಧ್ಯಾಃ ಎಂಬ ಶಬ್ದಕ್ಕೆ ಗಾಯತ್ರ್ಯಾದಿ ಛಂದಸ್ಸುಗಳಿಗೆ ಅಭಿಮಾನಿದೇವತೆಗಳು ಎಂದರ್ಥವು. ಈ ದೇವತೆಗಳು ಪೂರ್ವದಲ್ಲಿ ಮಥಿತಾಗ್ನಿಯಿಂದ ಆಹವನೀಯಾಗ್ನಿಯನ್ನು ಪೂಜಿಸಿದರು. ಅದರಿಂದ ಅವರು ಸ್ವರ್ಗಲೋಕವನ್ನು ಪಡೆದರು

**ಆದಿತ್ಯಾಶ್ಚೈವೇಹಾಸನ್ನಂಗಿರಸಶ್ಚ ತೇಽಗ್ರೇಽಗ್ನಿನಾಗ್ನಿಮಯಜಂತ ತೇ ಸ್ವರ್ಗಂ ಲೋಕಮಾ-ಯನ್ ಸೈಷಾ ಸ್ವರ್ಗ್ಯಾಹುತಿರ್ಯದಗ್ನ್ಯಾಹುತಿರ್ಯದಿ ಹ ವಾ ಅಪ್ಯಬ್ರಾಹ್ಮಣೋಕ್ತೋ ಯದಿ ದುರುಕ್ತೋಕ್ತೋ ಯಜತೇಽಥ ಹೈಷಾಹುತಿರ್ಗಚ್ಛತ್ಯೇವ ದೇವಾನ್ನ ಪಾಪ್ಮನಾ ಸಂಸೃಜ್ಯತೇ ಗಚ್ಛತ್ಯಸ್ಯಾಹುತಿರ್ದೇವಾನ್ನಾಸ್ಯಾಹುತಿಃ ಪಾಪ್ಮನಾ ಸಂಸೃಜ್ಯತೇ ಯ ಏವಂ ವೇದ ॥**

ಇದರಂತೆಯೇ ಆದಿತ್ಯರೂ, ಅಂಗಿರಸರೂ ಹಿಂದೆ ಹೇಳಿದಂತೆ ಯಜ್ಞವನ್ನು ಮಾಡಿ ಸ್ವರ್ಗಲೋಕಕ್ಕೆ ಹೋದರು. ಈ ಅಗ್ನ್ಯಾಹುತಿಯು ಸ್ವರ್ಗಲೋಕಕ್ಕೆ ನೇರವಾದ ಮಾರ್ಗವು. ಇಂತಹ ಯಜ್ಞಕರ್ಮದಲ್ಲಿ ಪ್ರವರ್ತಿಸುತ್ತಿರುವಾಗ ಮುಖ್ಯಪುರೋಹಿತನು ಶಾಸ್ತ್ರೋಕ್ತವಾದ ಬ್ರಾಹ್ಮಣನಲ್ಲದಿದ್ದರೂ, ಅಥವಾ ಕೆಟ್ಟಮನುಷ್ಯನಾದರೂ ಯಜ್ಞದಲ್ಲಿ ನೆರವೇರಿಸಲ್ಪಡುವ ಅಗ್ನ್ಯಾಹುತಿಯು ಮಾತ್ರ ಯಜಮಾನನನ್ನು ಸ್ವರ್ಗಕ್ಕೆ ಸೇರಿಸುವುದು. ಪುರೋಹಿತನ ದೋಷಾದಿಗಳು ಯಜ್ಞಮಾಡುವ ಯಜಮಾನನಿಗೆ ಸಂಬಂಧಪಡುವುದಿಲ್ಲ. ಎಂದರೆ ಅದರಿಂದ ಯಜಮಾನನಿಗೆ ಕೆಡಕಾಗುವುದಿಲ್ಲ. ಮೇಲೆ ವಿವರಿಸಿರುವ ಈ ಅಗ್ನ್ಯಾಹುತಿಯ ಕ್ರಮವನ್ನು ಯಾವನು ತಿಳಿದಿರುವನೋ ಅವನು ಸ್ವರ್ಗದಲ್ಲಿ ದೇವತೆಗಳನ್ನು ಸೇರುವನು. ಅವನಿಗೆ ಯಾವ ವಿಧವಾದ ಪಾಪದ ಸಂಪರ್ಕವೂ ಇರುವುದಿಲ್ಲ.

ಇಲ್ಲಿ ಶಾಸ್ತ್ರೋಕ್ತವಾದ ಬ್ರಾಹ್ಮಣನಲ್ಲದಿದ್ದರೂ ಎಂದು ಮೇಲಿನ ವಾಕ್ಯದಲ್ಲಿ ಹೇಳಿರುವುದಷ್ಟೆ. ಅದಕ್ಕೆ ವಿವರಣೆಯು ಅವಶ್ಯಕವು---ಜನ್ಮಮಾತ್ರದಿಂದ ಬ್ರಾಹ್ಮಣನಾಗಿ ಯಾಜನಾಧಿಕಾರವನ್ನು (ಯಜ್ಞಮಾಡಿಸುವ ಅಧಿಕಾರವನ್ನು) ಪಡೆದಿದ್ದರೂ ಕೆಲವು ಬ್ರಾಹ್ಮಣರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ದೋಷಭಾಗಿಗಳಾಗುವರು ಈ ಅಬ್ರಾಹ್ಮಣರಲ್ಲಿ ಆರು ವಿಧವೆಂದು ಸ್ಮೃತಿಗಳಲ್ಲಿ ಹೇಳಲ್ಪಟ್ಟಿರುವುದು. ಹೇಗೆಂದರೆ—

**ಅಬ್ರಾಹ್ಮಣಾಸ್ತು ಷಟ್ ಪ್ರೋಕ್ತಾ ಇತಿ ಶಾತಾತಪೋಽಬ್ರವೀತ್ ।**
**ಆದ್ಯಸ್ತು ರಾಜಭೃತ್ಯಃ ಸ್ಯಾದ್ದ್ವಿತೀಯಃ ಕ್ರಯವಿಕ್ರಯೀ ॥**
**ತೃತೀಯೋ ಬಹುಯಾಜ್ಯಾಖ್ಯಶ್ಚತುರ್ಥೋಽಶ್ರೌತಯಾಜಕಃ ।**
**ಪಂಚಮೋ ಗ್ರಾಮಯಾಜೀ ಚ ಷಷ್ಠೋ ಬ್ರಹ್ಮಬಂಧುಃ ಸ್ಮೃತಃ ॥**

ಅಬ್ರಾಹ್ಮಣರೆಂದರೆ ಯಾರು ಎಂಬ ವಿಷಯದಲ್ಲಿ ಶಾತಾತಪರೆಂಬುವರು ಈ ರೀತಿ ಹೇಳಿರುವರು. (೧) **ರಾಜಭೃತ್ಯರು,** ಎಂದರೆ ಜೀವನೋಪಾಯಕ್ಕಾಗಿ ರಾಜನನ್ನೇ ಆಶ್ರಯಿಸಿ ಅವನ ಸೇವೆಮಾಡುವವರು. (೨) ಕ್ರಯವಿಕ್ರಯಾದಿಗಳಿಂದ ಜೀವಿಸುವವರು ಅಂಗಡಿ ಮುಂತಾದ್ದನ್ನು ಇಟ್ಟು ಪದಾರ್ಥಗಳನ್ನು ಮಾರಿ ಜೀವಿಸುವವರು. (೩) ಜೀವನೋಪಾಯಕ್ಕೆ ಸಾಕಾದಷ್ಟು ಪರಮಾನವಿದ್ದರೂ ಅಧಿಕಧನ ಸಂಪಾದನೆ ಮಾಡಬೇಕೆಂಬ ದುರಾಶೆಯಿಂದ ಯಾರಿಗೆಂದರವರಿಗೆ ಯಜ್ಞ

(ಅಥವಾ ಪೌರೋಹಿತ್ಯ) ಮಾಡಿಸುವುದನ್ನೇ ತಮ್ಮ ವೃತ್ತಿಮಾಡಿಕೊಂಡಿರುವವರಿಗೆ ಬಹುಯಾಜಿಗಳೆಂದು ಹೆಸರು. (೪) **ಅಶ್ರೌತಯಾಜಕರು,** ಎಂದರೆ ಶ್ರೌತಕಾರ್ಯಗಳನ್ನು ಎಂದರೆ ಯಜ್ಞಾದಿಗಳನ್ನು ಮಾಡಲು ವೇದಾಧ್ಯಯನ ಸಂಪನ್ನರಾಗಿದ್ದರೂ ಆ ರೀತಿ ಶ್ರೌತಕರ್ಮಗಳಲ್ಲಿ ಪ್ರವರ್ತಿಸದೆ. ಇತರರಿಗೂ ಮಾಡಿಸದೆ ಶ್ರೇಷ್ಠವಲ್ಲದ ಸ್ಮಾರ್ತ ಕರ್ಮಗಳಲ್ಲಿಯೇ ಪ್ರವರ್ತಿಸುವವರಿಗೆ ಅಶ್ರೌತಯಾಜಕರೆಂದು ಹೆಸರು. (೫) **ಗ್ರಾಮಯಾಜಕರು,** ಎಂದರೆ ಗ್ರಾಮಗಳಲ್ಲಾಗಲಿ, ನಗರಗಳಲ್ಲಾಗಲಿ, ಯೋಗ್ಯರಾಗಲಿ, ಅಯೋಗ್ಯರಾಗಲಿ ಯಾರಿಗೆ ಬೇಕಾದರೂ ದ್ರವ್ಯಾಶೆಗಾಗಿ ಯಜ್ಞಮಾಡಿಸತಕ್ಕವರಿಗೆ ಗ್ರಾಮನಗರಯಾಜಕರೆಂದು ಹೆಸರು. (೬) **ಬ್ರಹ್ಮಬಂಧು** ಎಂದರೆ ಸೂರ್ಯೋದಯಾಸ್ತಮಯ ಗಳಲ್ಲಿ ಕಾಲಕ್ಕೆ ಸರಿಯಾಗಿ ಸಂಧ್ಯಾದಿಕರ್ಮಗಳನ್ನು ಆಚರಿಸದೆ ಇರತಕ್ಕವರಿಗೆ ಬ್ರಹ್ಮಬಂಧುಗಳೆಂದು ಹೆಸರು. ಈ ಆರು ವಿಧವಾದ ಪುರೋಹಿತರು ಮಾಡಿಸುವ ಕರ್ಮಕ್ಕೆ ಅಬ್ರಾಹ್ಮಣೋಕ್ತ ಅಥವಾ ದುರುಕ್ತೋಕ್ತ ಎಂದು ಮೇಲೆ ಹೇಳಿರುವುದು.

> **ತಾ ಏತಾಸ್ತ್ರಯೋದಶಾನ್ವಾಹ ರೂಪಸಮೃದ್ಧಾ ಏತದ್ವೈ ಯಜ್ಞಸ್ಯ ಸಮೃದ್ಧಂ ಯದ್ರೂಪ-ಸಮೃದ್ಧಂ ಯತ್ಕರ್ಮ ಕ್ರಿಯಮಾಣಮೃಗಭಿವದತಿ । ತಾಸಾಂ ತ್ರಿಃಪ್ರಥಮಾಮನ್ವಾಹ ತ್ರಿರುತ್ತಮಾಂ ತಾಃ ಸಪ್ತದಶ ಸಂಪದ್ಯಂತೇ ಸಪ್ತದಶೋ ವೈ ಪ್ರಜಾಪತಿರ್ದ್ವಾದಶ ಮಾಸಾಃ ಪಂಚರ್ತವಸ್ತಾವಾನ್ಸಂವತ್ಸರಃ ಸಂವತ್ಸರಃ ಪ್ರಜಾಪತಿಃ ಪ್ರಜಾಪತ್ಯಾಯತನಾಭಿರೇವಾಭೀ ರಾಧ್ನೋತಿ ಯ ಏವಂ ವೇದ ತ್ರಿಃ ಪ್ರಥಮಾಂ ತ್ರಿರುತ್ತಮಾಮನ್ವಾಹ ಯಜ್ಞಸ್ಯೈವ ತದ್ಬರ್ಸೌ ನಹ್ಯತಿ ಸ್ಥೇಮ್ನೇ ಬಲಾಯಾವಿಸ್ರಂಸಾಯ ॥**
>
> (ಐ. ಬ್ರಾ. ೩-೫)

ಈ ರೀತಿ ಅಗ್ನಿಮಥನಕಾರ್ಯದಲ್ಲಿ ಉಪಯೋಗಿಸುವ ಋಕ್ಕುಗಳು ಒಟ್ಟು ಹದಿಮೂರು. ರಕ್ಷೋಘ್ನದೇವತಾಕವಾದ ೯ ಋಕ್ಕುಗಳು ಇವರಲ್ಲಿ ಸೇರುವುದಿಲ್ಲ. ಈ ಹದಿಮೂರು ಋಕ್ಕುಗಳನ್ನು ಆಯಾ ಕಾಲಗಳಲ್ಲಿ ಪಠಿಸುವುದರಿಂದ ಅಗ್ನಿಮಥನ, ಅಗ್ನ್ಯುತ್ಪತ್ತಿ, ಅಗ್ನಿಯನ್ನು ತೆಗೆದುಕೊಂಡುಹೋಗಿ ಆಹವನೀಯದಲ್ಲಿ ಸ್ಥಾಪಿಸುವುದು, ಅಲ್ಲಿ ಆಹವನೀಯಾಗ್ನಿಯೊಡನೆ ಸೇರಿಸುವುದು ಎಂಬ ಈ ಕರ್ಮಗಳೆಲ್ಲಾ ಸಮಯೋಚಿತವಾದ ಋಕ್ಕುಗಳ ಪಠನದಿಂದ ಸಾಂಗವಾಗಿ ನೆರವೇರುವುದಕ್ಕೆ ರೂಪಸಮೃದ್ಧಿಯೆಂದು ಹೆಸರು. ಈ ಹದಿಮೂರು ಋಕ್ಕುಗಳಲ್ಲಿ ಮೊದಲನೆಯ ಋಕ್ಕನ್ನು (**ಅಭಿ ತ್ವಾ ದೇವ ಸವಿತಃ** ಎಂಬ ಈಋಕ್ಕನ್ನೂ) ಕೊನೆಯ ಋಕ್ಕನ್ನೂ (**ಯಜ್ಞೇನ ಯಜ್ಞಮಯಜಂತ ದೇವಾಃ** ಎಂಬ ಋಕ್ಕನ್ನೂ) ಹೋತೃವು ಮೂರಾವರ್ತಿ ಪಠಿಸಬೇಕು. ಆದ್ದರಿಂದ ಒಟ್ಟು ಈ ಅಗ್ನಿಮಥನಕಾರ್ಯದಲ್ಲಿ ಹದಿನೇಳು ಋಕ್ಕನ್ನು ಪಠಿಸಿದಂತಾಯಿತು. ಪ್ರಜಾಪತಿಯು ಸಪ್ತದಶಸಂಖ್ಯಾ (ಹದಿನೇಳು) ಸ್ವರೂಪನು. ಏಕೆಂದರೆ ಹನ್ನೆರಡು ತಿಂಗಳು. ಐದು ಋತುಗಳೂ ಸೇರಿ ಒಂದು ಸಂವತ್ಸರವಾಗುವುದು ಆ ಸಂವತ್ಸರವೇ ಪ್ರಜಾಪತಿಯು. ಆದುದರಿಂದ ಪ್ರಜಾಪತಿಯಲ್ಲಿ ನಿಹಿತವಾದ ಈ ಋಕ್ಕುಗಳ ಅರ್ಥವನ್ನು ತಿಳಿದವನು ಅಭಿವೃದ್ಧಿಯನ್ನು ಹೊಂದುತ್ತಾನೆ. ಮೊದಲನೆಯ ಮತ್ತು ಕೊನೆಯ ಋಕ್ಕುಗಳ್ನು ಮೂರುಮೂರಾವರ್ತಿ ಪಠಿಸುವುದರಿಂದ ಯಜ್ಞದ ಕಟ್ಟುಗಳು (ಗಂಟುಗಳು) ದೃಢವಾಗಿಯೂ, ಬಿಗುವಾಗಿಯೂ ಆಗಿ ಜಾರಿಹೋಗದಂತೆ ಸ್ಥಿರವಾಗಿ ನಿಲ್ಲಲು ಅವಕಾಶವಾಗುವುದು. ಎಂದು ಅಗ್ನಿಮಥನಕಾರ್ಯದ ವಿವರಣೆಯು ಐತರೇಯಬ್ರಾಹ್ಮಣದಲ್ಲಿ (ಐ ಬ್ರಾ. ೩-೫) ನಿರೂಪಿಸಲ್ಪಟ್ಟಿರುವುದು.

॥ ಸಂಹಿತಾಪಾಠಃ ॥

ಪ್ರ ದೇವಂ ದೇವವೀತಯೇ ಭರತಾ ವಸುವಿತ್ತಮಂ ।

ಆ ಸ್ವೇ ಯೋನೌ ನಿ ಷೀದತು ॥ ೪೦ ॥

॥ ಪದಪಾಠಃ ॥

ಪ್ರ । ದೇವಂ । ದೇವಽವೀತಯೇ । ಭರತ । ವಸುವಿತ್ಽತಮಂ ।

ಆ । ಸ್ವೇ । ಯೋನೌ । ನಿ । ಸೀದತು ॥ ೪೦ ॥

॥ ಸಾಯಣಭಾಷ್ಯಂ ॥

ಅಗ್ನಿಮಂಥನೇ ಜಾತಸ್ಯಾಗ್ನೇರಾಹವನೀಯೇ ಪ್ರಹರಣಸಮಯೇ ಪ್ರ ದೇವಂ ದೇವವೀತಯ ಇತಿ ತೃಚೋಽನುವಕ್ತವ್ಯಃ । ಸೂತ್ರಿತಂ ಚ । ಪ್ರ ದೇವಂ ದೇವವೀತಯ ಇತಿ ದ್ವೇ ಅಗ್ನಿನಾಗ್ನಿಃ ಸಮಿಧ್ಯತೇ । ಆ. ೨-೧೬ । ಇತಿ ॥

ಹೇ ಅಧ್ವರ್ಯವೋ ದೇವಂ ದ್ಯೋತಮಾನಂ ವಸುವಿತ್ತಮಂ ವಸೂನಾಂ ಧನಾನಾಂ ವೇದಯಿತಾರಂ ಲಂಭಯಿತಾರಮಗ್ನಿಂ ಪ್ರ ಭರತ । ಪ್ರಹರತ । ಆಹವನೀಯೇಽಗ್ನೌ ಪ್ರಕ್ಷಿಪತ । ಕಿಮರ್ಥಂ । ದೇವವೀತಯೇ । ದೇವಾನಾಂ ಭಕ್ಷಣಾರ್ಥಂ । ತಥಾ ಚ ಬ್ರಾಹ್ಮಣಂ । ಪ್ರ ದೇವಂ ದೇವವೀತಯೇ ಭರತಾ ವಸುವಿತ್ತಮಮಿತಿ ಪ್ರಹ್ರಿಯಮಾಣಾಯಾಭಿರೂಪಾ ಯದ್ಯಜ್ಞೇಽಭಿರೂಪಂ ತತ್ಸಮೃದ್ಧಂ । ಐ. ಬ್ರಾ. ೧-೧೬ । ಇತಿ । ಸ ಚಾಗ್ನಿಃ ಸ್ವೇ ಯೋನೌ ಕಾರಣೇ ಸ್ಥಾನ ಆಹವನೀಯ ಆ ನಿ ಷೀದತು । ಅಭಿನಿಷಣ್ಣೋ ಭವತು । ಬ್ರಾಹ್ಮಣಂ ಚ ಭವತಿ । ಏಷ ಹ ವಾ ಅಸ್ಯ ಸ್ವೋ ಯೋನಿರ್ಯದಗ್ನಿರಗ್ನೇಃ । ಐ. ಬ್ರಾ. ೧-೧೬ । ಇತಿ ॥

॥ ಪ್ರತಿಪದಾರ್ಥ ॥

(ಎಲೈ ಅಧ್ವರ್ಯುಗಳೇ) **ದೇವಂ**—ದೇವತಾತ್ಮನೂ । **ವಸುವಿತ್ತಮಂ**—ಅಧಿಕವಾದ ಧನವನ್ನು ಹೊಂದಿಸುವವನೂ ಆದ ಅಗ್ನಿಯನ್ನು । **ದೇವವೀತಯೇ**—ದೇವತೆಗಳಿಗಾಗಿ ಹವಿಸ್ಸನ್ನು ಭಕ್ಷಿಸಲು । **ಪ್ರ ಭರತ**—ಸ್ಥಾಪಿಸಿರಿ । (ಅದೇ ಅಗ್ನಿಯು) **ಸ್ವೇ ಯೋನೌ**—ತನ್ನ ಸ್ಥಾನವಾದ ಆಹವನೀಯದಲ್ಲಿ । **ಆ ನಿ ಷೀದತು**—ಕುಳಿತುಕೊಳ್ಳಲಿ.

॥ ಭಾವಾರ್ಥ ॥

ಎಲೈ ಅಧ್ವರ್ಯುಗಳೇ, ದೇವಾತಾತ್ಮನೂ, ಅಧಿಕವಾದ ಧನವನ್ನು ಹೊಂದಿಸುವವನೂ ಆದ ಅಗ್ನಿಯನ್ನು ದೇವತೆಗಳಿಗಾಗಿ ಹವಿಸ್ಸನ್ನು ಭಕ್ಷಿಸಲು ಸ್ಥಾಪಿಸಿರಿ. ಅದೇ ಅಗ್ನಿಯು ತನ್ನ ಸ್ಥಾನವಾದ ಆಹವನೀಯದಲ್ಲಿ ಕುಳಿತುಕೊಳ್ಳಲಿ.

## English Translation.

Conduct the divine (Agni), the bestower of infinite wealth, to (receive charge of) the food of the gods: let him sit down on his appropriate seat.

**। ವಿಶೇಷವಿಷಯಗಳು ।**

ಅಗ್ನಿಮಂಥನಕಾಲದಲ್ಲಿ ಅಗ್ನಿಯು ಉತ್ಪನ್ನನಾದ ಮೇಲೆ ಆ ಅಗ್ನಿಯನ್ನು ಆಹವನೀಯವೆಂಬ ಅಗ್ನಿಕುಂಡದಲ್ಲಿ ಸ್ಥಾಪಿಸುವಾಗ—**ಪ್ರ ದೇವಂ ದೇವವೀತಯೇ** ಎಂಬ ಈ ಋಕ್ಕನ್ನೂ ಮುಂದಿನ ಋಕ್ಕನ್ನೂ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಪ್ರ ದೇವಂ ದೇವವೀತಯ ಇತಿ ದ್ವೇ ಅಗ್ನಿನಾಗ್ನಿಃ ಸಮಿಧ್ಯತೇ** ಎಂಬ ಸೂತ್ರದಿಂದ (ಆ. ೨-೧೬) ವಿವೃತವಾಗಿರುವುದು.

ಅಗ್ನಿಮಥನಕರ್ಮವನ್ನು ಇದರ ಹಿಂದಿನ ಋಕ್ಕಿನ (೪೦ ನೇ ಋಕ್ಕಿನ) ವಿಶೇಷವಿಷಯಗಳಲ್ಲಿ ವಿಸ್ತಾರವಾಗಿ ವಿವರಿಸಿದೆ. ಅದನ್ನು ನೋಡಿ.

**। ಸಂಹಿತಾಪಾಠಃ ।**

ಆ ಜಾತಂ ಜಾತವೇದಸಿ ಪ್ರಿಯಂ ಶಿಶೀತಾತಿಥಿಂ ।
ಸ್ಯೋನ ಆ ಗೃಹಪತಿಂ ॥ ೪೨ ॥

**। ಪದಪಾಠಃ ।**

ಆ । ಜಾತಂ । ಜಾತಽವೇದಸಿ । ಪ್ರಿಯಂ । ಶಿಶೀತ । ಅತಿಥಿಂ ।
ಸ್ಯೋನೇ । ಆ । ಗೃಹಽಪತಿಂ ॥ ೪೨ ॥

॥ ಸಾಯಣಭಾಷ್ಯಂ ॥

**ಹೇ ಅಧ್ವರ್ಯವೋ ಜಾತಂ ಪ್ರಾದುರ್ಭೂತಮತಿಥಿಂ । ಲುಪ್ತೋಪಮಮೇತತ್ । ಅತಿಥಿಮಿವ ಪ್ರಿಯಂ ಅತ ಏವ ಗೃಹಪತಿಂ ಗೃಹಾಣಾಂ ಸ್ವಾಮಿನಮಗ್ನಿಂ ಜಾತವೇದಸಿ ಜಾತಪ್ರಜ್ಞೇ ಸ್ಯೋನೇ ಸುಖಕರ ಆಹವನೀಯೇಽಗ್ನೌ ವಾ ಶಿಶೀತ ॥ ಅಂತರ್ಣೀತಣ್ಯರ್ಥಸ್ಯ ಶೀಙ ಏತದ್ರೂಪಂ ॥ ಶಾಯಯತ । ಸ್ಥಾಪಯತ ॥ ಯದ್ವಾ । ಶ್ಯೈಙ್ ಗತಾವಿತ್ಯಸ್ಯ ಛಾಂದಸಂ ರೂಪಂ ॥ ಗಮಯತ । ಪ್ರಾಪಯತೇತ್ಯರ್ಥಃ ॥ ಶೋ ತನೂಕರಣ ಇತ್ಯಸ್ಯ ವಾ ರೂಪಂ ॥ ಶ್ಯತ । ತೀಕ್ಷ್ಣೀಕುರುತ । ಸಂಸ್ಕುರುತ । ಪ್ರಹರತೇತಿ ಯಾವತ್ । ದ್ವಿತೀಯ ಆಕಾರಃ ಪೂರಕಃ । ಜಾತ ಇತರೋ ಜಾತವೇದಾ ಇತರಃ । ಐ. ಬ್ರಾ. ೧-೧೬ । ಇತ್ಯಾದಿಕಂ ಬ್ರಾಹ್ಮಣಮತ್ರಾನುಸಂಧೇಯಂ ॥**

॥ ಪ್ರತಿಪದಾರ್ಥ ॥

(ಎಲೈ ಅಧ್ವರ್ಯುಗಳೇ) **ಜಾತಂ**—ಉತ್ಪನ್ನನಾದವನೂ । **ಅತಿಥಿಃ**—ಅತಿಥಿಯಂತೆ । **ಪ್ರಿಯಂ**—ಹಿತಕರನೂ । **ಗೃಹಪತಿಂ**—ಗೃಹದ ಪಾಲಕನೂ ಆದ ಅಗ್ನಿಯನ್ನು । **ಜಾತವೇದಸಿ**—ಜ್ಞಾನಕ್ಕೆ ಆಧಾರವಾದುದೂ । **ಸ್ಯೋನೇ**—ಸುಖಕರವಾದುದೂ ಆದ ಆಹವನೀಯದಲ್ಲಿ । **ಆ ಶಿಶೀತ**—ಸ್ಥಾಪಿಸಿರಿ.

॥ ಭಾವಾರ್ಥ ॥

ಎಲೈ ಅಧ್ವರ್ಯುಗಳೇ, ಉತ್ಪನ್ನನಾದವನೂ, ಅತಿಥಿಯಂತೆ ಹಿತಕರನೂ, ಗೃಹದ ಪಾಲಕನೂ ಆದ ಅಗ್ನಿಯನ್ನು ಜ್ಞಾನಕ್ಕೆ ಆಧಾರವಾದುದೂ ಸುಖಕರವಾದುದೂ ಆದ ಆಹವನೀಯದಲ್ಲಿ ಸ್ಥಾಪಿಸಿರಿ.

## English Translation.

(Welcome him) as soon as born, like a beloved guest, and place the lord of the mansion upon the sacred (altar) whence wisdom is derived.

॥ ವಿಶೇಷವಿಷಯಗಳು ॥

ಈ ಋಕ್ಕಿನ ವಿಶೇಷವಿನಿಯೋಗ ಮತ್ತು ವಿವರಣೆಗಾಗಿ ಇದೇ ಸೂಕ್ತದ ೪೧ನೇ ಋಕ್ಕಿನ ವಿಶೇಷ ವಿಷಯಗಳಲ್ಲಿರುವ ಅಗ್ನಿಮಂಥನವೆಂಬ ಕರ್ಮದ ವಿವರಣೆಯ ಕೊನೆಯಭಾಗವನ್ನು ನೋಡಿ.

॥ ಸಂಹಿತಾಪಾಠಃ ॥

ಅಗ್ನೇ ಯುಕ್ಷ್ವಾ ಹಿ ಯೇ ತವಾಶ್ವಾಸೋ ದೇವ ಸಾಧವಃ ।
ಅರಂ ವಹಂತಿ ಮನ್ಯವೇ ॥ ೪೩ ॥

॥ ಪದಪಾಠಃ ॥

ಅಗ್ನೇ । ಯುಕ್ಷ್ವ । ಹಿ । ಯೇ । ತವ । ಅಶ್ವಾಸಃ । ದೇವ । ಸಾಧವಃ ।
ಅರಂ । ವಹಂತಿ । ಮನ್ಯವೇ ॥ ೪೩ ॥

॥ ಸಾಯಣಭಾಷ್ಯಂ ॥

**ಹೇ ದೇವ ದ್ಯೋತಮಾನಾಗ್ನೇ ತಾನಶ್ವಾನ್ಯುಕ್ಷ್ವ । ಅತ್ಮೀಯೇ ರಥೇ ಯೋಜಯ । ಯೇ ತವ ತ್ವದೀಯಾಃ ಸಾಧವಃ ಸಾಧಕಾಃ ಸುಶೀಲಾ ವಾಶ್ವಾಸೋಽಶ್ವಾ ಅರಮಲಂ ಪರ್ಯಾಪ್ತಂ ವಹಂತಿ । ಕಿಮರ್ಥಂ । ಮನ್ಯವೇ । ಮನ್ಯತೇ ಯಷ್ಟವ್ಯತ್ವೇನ ದೇವಾನಸ್ರೇತಿ ಮನ್ಯುರ್ಯಾಗಃ । ತದರ್ಥಂ ತಾನಶ್ವಾನ್ರಥೇ ಯುಕ್ಷ್ವೇತ್ಯರ್ಥಃ । ಹಿ ಖಲು ॥**

॥ ಪ್ರತಿಪದಾರ್ಥ ॥

**ದೇವ**—ದೇವಾತ್ಮನಾದ । **ಅಗ್ನೇ**—ಎಲೈ ಅಗ್ನಿಯೇ । **ತವ**—ನಿನ್ನ । **ಸಾಧವಃ**—ಸತ್ತ್ವಭಾವವುಳ್ಳ । **ಯೇ**—ಯಾವ । **ಅಶ್ವಾಸಃ**—ಅಶ್ವಗಳು । **ಅರಂ**—ಸುಖಕರವಾಗಿ । **ವಹಂತಿ**—ವಹಿಸುವವೋ (ಆ ಅಶ್ವಗಳನ್ನು) । **ಮನ್ಯವೇ**—ಯಜ್ಞಾರ್ಥವಾಗಿ । **ಯುಕ್ಷ್ವ**—ರಥಕ್ಕೆ ಸೇರಿಸು.

॥ ಭಾವಾರ್ಥ ॥

ದೇವತಾತ್ಮನಾದ ಎಲೈ ಅಗ್ನಿಯೇ, ನಿನ್ನ ಸತ್ತ್ವಭಾವವುಳ್ಳ ಯಾವ ಅಶ್ವಗಳು ಸುಖಕರವಾಗಿ ನಿನ್ನನ್ನು ವಹಿಸುವವೋ ಆ ಅಶ್ವಗಳನ್ನು ಯಜ್ಞಾರ್ಥವಾಗಿ ಬರುವುದಕ್ಕಾಗಿ ರಥಕ್ಕೆ ಸೇರಿಸು

English Translation

Harness, divine Agni, your well-trained horses; they bear you quickly to the sacrifice.

॥ ಸಂಹಿತಾಪಾಠಃ ॥

ಅಚ್ಛಾ ನೋ ಯಾಹ್ಯಾ ವಹಾಭಿ ಪ್ರಯಾಂಸಿ ವೀತಯೇ ।

ಆ ದೇವಾನ್ತ್ಸೋಮಪೀತಯೇ ॥ ೪೪ ॥

॥ ಪದಪಾಠಃ ॥

ಅಚ್ಛ । ನಃ । ಯಾಹಿ । ಆ । ವಹ । ಅಭಿ । ಪ್ರಯಾಂಸಿ । ವೀತಯೇ ।

ಆ । ದೇವಾನ್ । ಸೋಮಽಪೀತಯೇ ॥ ೪೪ ॥

॥ ಸಾಯಣಭಾಷ್ಯಂ ॥

**ಹೇ ಅಗ್ನೇ ನೋಽಸ್ಮಾನಚ್ಛಾಭಿಮುಖ್ಯೇನ ಯಾಹಿ । ಆಗಚ್ಛ । ತಥಾ ಪ್ರಯಾಂಸಿ ಹವಿರ್ಲಕ್ಷಣಾನ್ಯನ್ನಾನ್ಯಭಿಲಕ್ಷ್ಯ ದೇವಾನಾ ವಹ । ಕಿಮರ್ಥಂ । ವೀತಯೇ ತೇಷಾಂ ಹವಿಷಾಂ ಸ್ವಾದನಾರ್ಥಂ । ತಥಾ ಸೋಮಪೀತಯೇ ಸೋಮಪಾನಾರ್ಥಂ ಚ ತಾನ್ದೇವಾನಾ ವಹ ॥**

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ನಃ**—ನಮಗೆ । **ಅಚ್ಛ**—ಅಭಿಮುಖವಾಗಿ **ಯಾಹಿ**—ದಯಮಾಡು । **ವೀತಯೇ**—ಹವಿರ್ಭಕ್ಷಣಕ್ಕಾಗಿ । **ಪ್ರಯಾಂಸಿ**—ಹವಿಸ್ಸುಗಳಿಗೆ ಅಭಿಮುಖವಾಗಿ । **ದೇವಾನ್**—ದೇವತೆಗಳನ್ನು । **ಆ ವಹ**—ಕರೆದುಕೊಂಡು ಬಾ । । **ಸೋಮಪೀತಯೇ**—ಸೋಮಪಾನಾರ್ಥವಾಗಿಯೂ । **ಆ (ವಹ)**—ಅವರನ್ನು ಕರೆದುಕೊಂಡು ಬಾ.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಮಗೆ ಅಭಿಮುಖವಾಗಿ ದಯಮಾಡು. ಹವಿರ್ಭಕ್ಷಣಕ್ಕಾಗಿ ದೇವತೆಗಳನ್ನು ಹವಿಸ್ಸಿಗೆ ಅಭಿಮುಖರಾಗಿ ಕರೆದುಕೊಂಡು ಬಾ. ಸೋಮಪಾನಾರ್ಥವಾಗಿಯೂ ಅವರನ್ನು ಕರೆದುಕೊಂಡು ಬಾ.

## English Translation.

Come, Agni, to our presence ; bring hither the gods to partake of the (srcrificial) viands, to drink the Soma juice.

॥ ಸಂಹಿತಾಪಾಠಃ ॥

ಉದಗ್ನೇ ಭಾರತ ದ್ಯುಮದಜಸ್ರೇಣ ದವಿದ್ಯುತತ್ ।
ಶೋಚಾ ವಿ ಭಾಹ್ಯಜರ ॥ ೪೫ ॥

॥ ಪದಪಾಠಃ ॥

ಉತ್ । ಅಗ್ನೇ । ಭಾರತ । ದ್ಯುಽಮತ್ । ಅಜಸ್ರೇಣ । ದವಿದ್ಯುತತ್ ।
ಶೋಚ । ವಿ । ಭಾಹಿ । ಅಜರ ॥ ೪೫ ॥

॥ ಸಾಯಣಭಾಷ್ಯಂ ॥

ಹೇ ಭಾರತ ಹವಿಷಾಂ ಭರ್ತರಗ್ನ ಉಚ್ಛೋಚ । ಉದ್ಗತತರಂ ದೀಪ್ಯಸ್ವ। ತದೇವ ವಿವೃಣೋತಿ। ಹೇ ಅಜರ ಜರಾರಹಿತಾಗ್ನೇ ದವಿದ್ಯುತತ್ ಭೃಶಂ ದ್ಯೋತಮಾನಸ್ತ್ವಂ ದ್ಯುಮತ್ ದ್ಯುಮತಾ ದೀಪ್ತಿಮತಾ ॥ ಸುಪಾಂ ಸುಲುಗಿತಿ ತೃತೀಯಾಯಾ ಲುಕ್ ॥ ಅಜಸ್ರೇಣಾವಿಚ್ಛೇದೇನ ತೇಜಸಾ ವಿ ಭಾಹಿ । ವಿಶೇಷೇಣ ಪ್ರಕಾಶಸ್ವ ॥ ಯದ್ವಾ । ಭಾತಿರತ್ರಾಂತರ್ಣೀತಣ್ಯರ್ಥಃ ॥ ತ್ವಂ ಪ್ರಥಮಮುದ್ದೀಪ್ಯಸ್ವ ಪಶ್ಚಾದಾತ್ಮೀಯೇನ ತೇಜಸಾ ಸರ್ವಂ ಜಗತ್ಪ್ರಕಾಶಯೇತಿ ಯೋಜನೀಯಂ ॥

॥ ಪ್ರತಿಪದಾರ್ಥ ॥

**ಭಾರತ**—ಹವಿಸ್ಸನ್ನು ಭರಿಸುವ । **ಅಗ್ನೇ**—ಎಲೈ ಅಗ್ನಿಯೇ । **ಉತ್ ಶೋಚ**—ಅತಿಶಯವಾಗಿ ಪ್ರಕಾಶಿಸು । **ಅಜರ**—ನಾಶರಹಿತನಾದ ಅಗ್ನಿಯೇ । **ದವಿದ್ಯುತತ್**—ಅತ್ಯಂತ ಪ್ರಭಾಯುತನಾಗಿ । **ದ್ಯುಮತ್**—ಕಾಂತಿಯುತವಾದುದೂ । **ಅಜಸ್ರೇಣ**—ನಿರಂತರವಾದುದೂ ಆದ ತೇಜಸ್ಸಿನೊಡನೆ । **ವಿ ಭಾಹಿ**—ಅತಿಶಯವಾಗಿ ಪ್ರಕಾಶಿಸು.

|| ಭಾವಾರ್ಥ ||

ಹವಿಸ್ಸನ್ನು ಭರಿಸತಕ್ಕ ಎಲೈ ಅಗ್ನಿಯೇ, ನೀನು ಅತಿಶಯವಾಗಿ ಪ್ರಕಾಶಿಸು. ನಾಶರಹಿತನಾದ ಎಲೈ ಅಗ್ನಿಯೇ, ನೀನು ಅತ್ಯಂತ ಪ್ರಭಾಯುತನಾಗಿದ್ದು, ಕಾಂತಿಯುತವಾದುದೂ ನಿರಂತರವಾದುದೂ ಆದ ತೇಜಸ್ಸಿನೊಡನೆ ಅತಿಶಯವಾಗಿ ಪ್ರಕಾಶಿಸು.

## English Translation

Blaze up, Agni, bearer of oblations : shine, undecaying Agni, radiant with undecaying lustre.

|| ಸಂಹಿತಾಪಾಠಃ ||

ವೀತೀ ಯೋ ದೇವಂ ಮರ್ತೋ ದುವಸ್ಯೇದಗ್ನಿಮೀಳೀತಾಧ್ವರೇ ಹವಿಷ್ಮಾನ್ ।
ಹೋತಾರಂ ಸತ್ಯಯಜಂ ರೋದಸ್ಯೋರುತ್ತಾನಹಸ್ತೋ ನಮಸಾ ವಿವಾಸೇತ್ ॥ ೪೬ ॥

|| ಪದಪಾಠಃ ||

ವೀತೀ । ಯಃ । ದೇವಂ । ಮರ್ತಃ । ದುವಸ್ಯೇತ್ । ಅಗ್ನಿಂ । ಈಳೀತ । ಅಧ್ವರೇ । ಹವಿಷ್ಮಾನ್ ।
ಹೋತಾರಂ । ಸತ್ಯಽಯಜಂ । ರೋದಸ್ಯೋಃ । ಉತ್ತಾನಽಹಸ್ತಃ । ನಮಸಾ । ಆ । ವಿವಾಸೇತ್ ॥

|| ಸಾಯಣಭಾಷ್ಯಂ ||

ಯೋ ಮರ್ತೋ ಮನುಷ್ಯೋ ಹವಿಷ್ಮಾನ್ಹವಿರ್ಭಿರ್ಯುಕ್ತೋ ಯಜಮಾನೋ ವೀತೀ ವೀತ್ಯಾ ಕಾಂತೇನ ಹವಿರ್ಲಕ್ಷಣೇನಾನ್ನೇನ ಯಂ ಕಂಚನ ದೇವಂ ದುವಸ್ಯೇತ್ ಪರಿಚರೇತ್ ತಸ್ಮಿನ್ನಧ್ವರೇ ಯಜ್ಞೇಽಗ್ನಿಮೀಳೀತ । ಸ್ತುವೀತ । ಸರ್ವೇಷು ಯಾಗೇಷ್ವಗ್ನಿಃ ಪೂಜ್ಯತ ಇತ್ಯರ್ಥಃ । ಕೀದೃಶಮಗ್ನಿಂ । ರೋದಸ್ಯೋರ್ದ್ಯಾವಾಪೃಥಿವ್ಯೋರ್ಲೋಕದ್ವಯೇ ವರ್ತಮಾನಾನಾಂ ಹೋತಾರಮಾಹ್ವಾತಾರಂ ಸತ್ಯಯಜಂ ಸತ್ಯೇನಾವಿತಥೇನ ಹವಿಷಾ ಯಷ್ಟಾರಂ । ಕಿಂಚಾಯಂ ಯಜಮಾನ ಈದೃಶಮಗ್ನಿಮುತ್ತಾನಹಸ್ತಃ ಕೃತಾಂಜಲಿಪುಟಃ ಸನ್ ನಮಸಾ ನಮಸ್ಕಾರೇಣ ಹವಿಷಾ ವಾ ಆ ವಿವಾಸೇತ್ । ಪರಿಚರೇತ್ ॥

॥ ಪ್ರತಿಪದಾರ್ಥ ॥

**ಯಃ**—ಯಾವ । **ಮರ್ತಃ**—ಮಾನವನು । **ಹವಿಷ್ಮಾನ್**—ಹವಿಸ್ಸನ್ನು ಹೊಂದಿ । **ವೀತೀ**—ಹವಿಸ್ಸಿನಿಂದ । **ದೇವಂ**—ಯಾವುದಾದರೂ ದೇವತೆಯನ್ನು । **ದುವಸ್ಯೇತ್**—ಪೂಜಿಸುವನೋ । **ಅಧ್ವರೇ**—ಅದೇ ಯಾಗಕಾಲದಲ್ಲಿ ಆ ಯಜಮಾನನು । **ರೋದಸ್ಯೋಃ**—ದ್ಯಾವಾಪೃಥಿವಿಗಳಿಗೆ । **ಹೋತಾರಂ**—ಆಹ್ವಾನವನ್ನು ಕೊಡುವವನೂ । **ಸತ್ಯಯಜಂ**—ಸತ್ಯಾತ್ಮಕವಾದ ಯಜ್ಞಮಾಡುವವನೂ ಆದ । **ಅಗ್ನಿಂ**—ಅಗ್ನಿಯನ್ನೂ । **ಈಳೀತ**—ಸ್ತುತಿಸತಕ್ಕದ್ದು । **ಉತ್ತಾನಹಸ್ತಃ**—ಮುಗಿದ ಕೈಯನ್ನು ಮೇಲಕ್ಕೆತ್ತಿ । **ನಮಸಾ**—ನಮಸ್ಕಾರಪೂರ್ವಕವಾಗಿ । **ಆ ವಿವಾಸೇತ್**—ಉಪಚರಿಸತಕ್ಕದ್ದು.

॥ ಭಾವಾರ್ಥ ॥

ಹವಿರ್ಯುಕ್ತನಾದ ಯಾವ ಮಾನವನು ಹವಿಸ್ಸಿನಿಂದ ಯಾವ ದೇವತೆಯನ್ನು ಪೂಜಿಸಿದರೂ ಸಹ ತದಂಗವಾಗಿ ಆ ಯಾಗಕಾಲದಲ್ಲಿ ದ್ಯಾವಾಪೃಥಿವಿಗಳಿಗೆ ಆಹ್ವಾನವನ್ನು ಕೊಡುವವನೂ ಸತ್ಯಾತ್ಮಕವಾದ ಯಜ್ಞಮಾಡುವವನೂ ಆದ ಅಗ್ನಿಯನ್ನೂ ಸ್ತುತಿಸತಕ್ಕದ್ದು. ಮುಗಿದ ಕೈಯನ್ನು ಮೇಲಕ್ಕೆತ್ತಿ ನಮಸ್ಕಾರಪೂರ್ವಕವಾಗಿ ಉಪಚರಿಸತಕ್ಕದ್ದು.

## English Translation.

Whatever mortal, offering oblations, worships a deity with (sacrificial) food, let him at the ceremony also worship Agni, the invoker of heaven and earth, the sacrificer with truth; let him adore (Agni) with uplifted hands.

—o—

॥ ಸಂಹಿತಾಪಾಠಃ ॥

ಆ ತೇ ಅಗ್ನ ಋಚಾ ಹವಿರ್ಹೃದಾ ತಷ್ಟಂ ಭರಾಮಸಿ ।
ತೇ ತೇ ಭವಂತೂಕ್ಷಣ ಋಷಭಾಸೋ ವಶಾ ಉತ ॥ ೪೭ ॥

॥ ಪದಪಾಠಃ ॥

ಆ । ತೇ । ಅಗ್ನೇ । ಋಚಾ । ಹವಿಃ । ಹೃದಾ । ತಷ್ಟಂ । ಭರಾಮಸಿ ।
ತೇ । ತೇ । ಭವಂತು । ಉಕ್ಷಣಃ । ಋಷಭಾಸಃ । ವಶಾಃ । ಉತ ॥ ೪೭ ॥

॥ ಸಾಯಣಭಾಷ್ಯಂ ॥

ಅನಯಾಧ್ಯಯನಂ ಪ್ರಶಸ್ಯತ ಇತ್ಯಾಶ್ವಲಾಯನೋ ಮನ್ಯತೇ । ಗೃ. ೧-೧-೫ । ಹೇ ಅಗ್ನೇ ತೇ ತುಭ್ಯಂ ಹೃದಾ ಹೃದಯೇನ ತಷ್ಟಂ ಸಂಸ್ಕೃತಮೃಚಾ ಋಗ್ರೂಪೇಣ ವರ್ತಮಾನಂ ಹವಿರ್ವಾಚಮೇವ

ಹವಿಃ ಕೃತ್ವಾ ಆ ಭರಾಮಸಿ । ಆಹರಾಮಃ । ತೆ ಇತಿ ತಚ್ಛಬ್ದೇನ ಪ್ರಕೃತಮೃಗ್ರೂಪಂ ಹವಿಃ ಪರಾಮೃಶ್ಯತೇ । ಪ್ರತಿನಿರ್ದಿಶ್ಯಮಾನಾಪೇಕ್ಷಯಾ ಪುಂಸ್ತ್ವಬಹುತ್ವೇ । ಋಗ್ರೂಪಂ ತದ್ಧವಿಸ್ತೇ ತುಭ್ಯಮುಕ್ಷಣ ಉಕ್ಷಾಣಃ ಸೇಚನಸಮರ್ಥಾ ಋಷಭಾಸ ಋಷಭಾ ಉತಾಪಿ ಚ ವಶಾಶ್ಚ ಭವಂತು । ಋಷಭವಶಾರೂಪೇಣ ಪರಿಣತಂ ಸತ್ ತೃಪ್ತ್ಯೈ ಕ್ಷಣಾಯ ಭವತ್ವಿತಿ ಶೇಷಃ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ತೇ**—ನಿನ್ನನ್ನುದ್ದೇಶಿಸಿ । **ಹೃದಾ**—ಹೃತ್ಪೂರ್ವಕವಾಗಿ । **ತಷ್ಟಂ**—ಸಂಸ್ಕೃತವಾದುದೂ । **ಋಚಾ**—ಋಗ್ರೂಪವಾದುದೂ ಆದ । **ಹವಿಃ**—ಹವಿಸ್ಸನ್ನು । **ಆ ಭರಾಮಸಿ**—ಅರ್ಪಿಸುತ್ತೇವೆ (ಇದೇ ಹವಿಸ್ಸು) । **ತೇ**—ನಿನಗೆ । **ಉಕ್ಷಣಃ**—ಸೇಚನಸಾಮರ್ಥ್ಯವುಳ್ಳ । **ಋಷಭಾಸಃ**—ವೃಷಭಗಳಾಗಿಯೂ । **ವಶಾಃ**—ಗೋವುಗಳಾಗಿಯೂ । **ಭವಂತು**—ಆಗಿರಲಿ.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಿನ್ನನ್ನುದ್ದೇಶಿಸಿ ಹೃತ್ಪೂರ್ವಕವಾಗಿ ಸುಸಂಸ್ಕೃತವಾದುದೂ, ಋಗ್ರೂಪವಾದುದೂ ಆದ ಹವಿಸ್ಸನ್ನು ಅರ್ಪಿಸುತ್ತೇವೆ. ಇದೇ ಹವಿಸ್ಸು ನಿನಗೆ ಸೇಚನಸಾಮರ್ಥ್ಯವುಳ್ಳ ವೃಷಭಗಳಂತೆ ಶಕ್ತಿಯುತವಾಗಿಯೂ ಗೋವುಗಳಂತೆ ಹವಿರ್ಯೋಗ್ಯವಾದ ಆಜ್ಯಾದಿಗಳನ್ನು ಒದಗಿಸುವುದಾಗಿಯೂ ಆಗಿರಲಿ.

**English Translation.**

We offer to you, Agni, the oblation sanctified by the heart, and (identified) with the sacred verse : may the vigorous bulls and the cows be (as such an oblation) to you.

॥ ವಿಶೇಷವಿಷಯಗಳು ॥

ಈ ಸೂಕ್ತದ ಈ ಋಕ್ಕಿನಲ್ಲಿ ವೇದಾಧ್ಯಯನದ ಪ್ರಶಂಸೆಯು ಉಕ್ತವಾಗಿರುವುದೆಂದು ಆಶ್ವಲಾಯನ ಮಹರ್ಷಿಯ ಅಭಿಮತವಾಗಿದೆ. (ಆ. ಗೃ. ೧-೧-೫) ವೇದಾಧ್ಯಯನವು ಸಿದ್ಧಿಸುವುದಕ್ಕಾಗಿ ಈ ಋಕ್ಕಿನಿಂದ ಮನಸ್ಸಿನಲ್ಲಿ ಅಗ್ನಿಯನ್ನೇ ಧ್ಯಾನಮಾಡುತ್ತಾ ಆಜ್ಯಾದಿಹವಿಸ್ಸನ್ನು ಅಗ್ನಿಯಲ್ಲಿ ಹೋಮಮಾಡಬೇಕೆಂದೂ ಅದರಿಂದ ಅಗ್ನಿಗೆ ತೃಪ್ತಿಯಾಗುವುದೆಂದೂ ಶ್ರೌತಗೃಹ್ಯಸೂತ್ರಾದಿಗಳ ಕರ್ತೃವಾದ ಆಶ್ವಲಾಯನ ಮಹರ್ಷಿಗಳ ಅಭಿಪ್ರಾಯವಾಗಿದೆ.

॥ ಸಂಹಿತಾಪಾಠಃ ॥

ಅಗ್ನಿಂ ದೇವಾಸೋ ಅಗ್ರಿಯಮಿಂಧತೇ ವೃತ್ರಹಂತಮಂ ।
ಯೇನಾ ವಸೂನ್ಯಾಭೃತಾ ತೃಳ್ಹಾ ರಕ್ಷಾಂಸಿ ವಾಜಿನಾ ॥ ೪೮ ॥

|| ಪದಪಾಠಃ ||

ಅಗ್ನಿಂ | ದೇವಾಸಃ | ಅಗ್ರಿಯಂ | ಇಂಧತೇ | ವೃತ್ರಹನ್ಽತಮಂ |

ಯೇನ | ವಸೂನಿ | ಆಽಭೃತಾ | ತೃಳ್ಹಾ | ರಕ್ಷಾಂಸಿ | ವಾಜಿನಾ || ೪೮ ||

|| ಸಾಯಣಭಾಷ್ಯಂ ||

ಅಗ್ರಿಯಂ ಮುಖ್ಯಂ ವೃತ್ರಹಂತಮಮತಿಶಯೇನ ವೃತ್ರಸ್ಯ ಹಂತಾರಮಿಮಮಗ್ನಿಂ ದೇವಾಸೋ ದೇವಾ ಇಂಧತೇ | ದೀಪಯಂತಿ | ಯೇನಾಗ್ನಿನಾ ವಸೂನ್ಯಸುರೈರಪಹೃತಾನಿ ಧನಾನಿ ಹವಿರ್ಲಕ್ಷಣಾನ್ಯನ್ನಾನಿ ವಾಭೃತಾಸುರಸಕಾಶಾದ್ಯಜಮಾನಾದ್ವಾಹೃತಾನಿ | ಯೇನ ಚ ವಾಜಿನಾ ಬಲವತಾಗ್ನಿನಾ ರಕ್ಷಾಂಸಿ ಯಜ್ಞವಿರೋಧೀನಿ ತೃಳ್ಹಾ ತೃಢಾನಿ ಹಿಂಸಿತಾನಿ ತಮಗ್ನಿಮಿಂಧತ ಇತ್ಯನ್ವಯಃ ||

|| ಪ್ರತಿಪದಾರ್ಥ ||

**ಯೇನ**—ಯಾವ ಅಗ್ನಿಯಿಂದ | **ವಸೂನಿ**—ಅಸುರರಿಂದ ಅಪಹೃತವಾದ ಧನಗಳು | **ಆಭೃತಾ**—ಹಿಂದಕ್ಕೆ ತರಲ್ಪಟ್ಟವೋ | **ವಾಜಿನಾ**—ಶಕ್ತಿಯುತನಾದ ಯಾವ ಅಗ್ನಿಯಿಂದ | **ರಕ್ಷಾಂಸಿ**—ಅಸುರರೆಲ್ಲಾ | **ತೃಳ್ಹಾ**—ಹಿಂಸಿತರಾದರೋ ಅಂತಹ | **ಅಗ್ರಿಯಂ**—ಎಲ್ಲರಿಗಿಂತಲೂ ಮುಖ್ಯನೂ | **ವೃತ್ರಹಂತಾರಂ**—ವೃತ್ರನಾಶಕನೂ ಆದ | **ಅಗ್ನಿಂ**—ಅಗ್ನಿಯನ್ನು | **ದೇವಾಸಃ**—ದೇವತೆಗಳು | **ಇಂಧತೇ**—ಪ್ರಜ್ವಲಿಸುವಂತೆ ಮಾಡುತ್ತಾರೆ.

|| ಭಾವಾರ್ಥ ||

ಯಾವ ಅಗ್ನಿಯಿಂದ ಅಸುರರಿಂದ ಅಪಹೃತವಾದ ಧನಗಳು ಹಿಂದಕ್ಕೆ ತರಲ್ಪಟ್ಟವೋ ಮತ್ತು ಶಕ್ತಿಯತನಾದ ಯಾವ ಅಗ್ನಿಯಿಂಧ ಅಸುರರೆಲ್ಲಾ ಹಿಂಸಿತರಾದರೋ ಅಂತಹ ದೇವತೆಗಳಲ್ಲೆಲ್ಲಾ ಮುಖ್ಯನಾದವನೂ ವೃತ್ರನಾಶಕನೂ ಆದ ಅಗ್ನಿಯನ್ನು ದೇವತೆಗಳು ಪ್ರಜ್ವಲಿಸುವಂತೆ ಮಾಡುತ್ತಾರೆ.

## English Translation.

The gods kindle Agni as the chief (of them); as the special destroyer of Vritra; by whom the treasures (of the Asuras) are carried off; by whom the Rakshasas are destroyed.

|| ವಿಶೇಷವಿಷಯಗಳು ||

**ವೃತ್ರಹಂತಾರಂ**—ಇಲ್ಲಿ ವೃತ್ರಶಬ್ದಕ್ಕೆ ಶತ್ರು ಎಂದೂ ಅರ್ಥವಿರುವುದರಿಂದ ಶತ್ರುಗಳಾದ ರಾಕ್ಷಸಾದಿಗಳನ್ನು ನಿಗ್ರಹಿಸುವ (ರಕ್ಷೋಹಾಗ್ನಿ) ಅಗ್ನಿಯನ್ನು ಸ್ತುತಿಸಲಾಗಿದೆ.

**ವಸೂನಿ ಆಭೃತಾ ವಾಜಿನಾ ರಕ್ಷಾಂಸಿ ತೃಳ್ಹಾ**—ವಸುಶಬ್ದಕ್ಕೆ ಧನವೆಂದರ್ಥವು. ಇಲ್ಲಿ ಭಾಷ್ಯಕಾರರು ಈ ಶಬ್ದಕ್ಕೆ ಎರಡು ವಿಧವಾದ ಅರ್ಥಗಳನ್ನು ಹೇಳಿದ್ದಾರೆ. ಹವಿರ್ಲಕ್ಷಣಾನ್ಯನ್ನಾನಿ ಹವೀರೂಪದಲ್ಲಿರುವ ಅನ್ನಗಳು

ಎಂದೂ **ಅಸುರ್ಯೈರಪಹೃತಾನಿ ಧನಾನಿ**—ಅಸುರರಿಂದ ಅಪಹರಿಸಲ್ಪಟ್ಟ ಧನಗಳು ಎಂದೂ ಎರಡುವಿಧ ಅರ್ಥಗಳಿವೆ. ಈ ಋಕ್ಕಿನಲ್ಲಿ **ರಕ್ಷಾಂಸಿ ತೃಳ್ಹಾ**—ಅಸುರರು ಅಗ್ನಿಯಿಂದ ಹಿಂಸಿತರಾದರು ಎಂಬ ವಿಷಯವಿರುವುದರಿಂದ **ವಸೂನಿ** ಎಂಬ ಶಬ್ದಕ್ಕೆ **ಅಸುರ್ಯೈರಪಹೃತಾನಿ ಧನಾನಿ** ಎಂಬ ಎರಡನೆಯ ಅರ್ಥವೇ ಸಮಂಜಸವಾಗಿರುವುದು. ಇಂತಹ ಅಗ್ನಿಯನ್ನು ದೇವತೆಗಳು ಯಜ್ಞದಲ್ಲಿ ತಮ್ಮ ಹವಿರ್ಭಾಗವನ್ನು ಅಗ್ನಿಯಮೂಲಕ ಪಡೆಯುವುದಕ್ಕಾಗಿ ಚೆನ್ನಾಗಿ ಪ್ರಜ್ವಲಿಸುದಂತೆ ಮಾಡಿದರು ಎಂದು ಮುಖ್ಯಾಭಿಪ್ರಾಯವು.

**ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।**
**ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥**

**ಇತಿ ಶ್ರೀಮದ್ರಾಜಾಧಿರಾಜ ಪರಮೇಶ್ವರ ವೈದಿಕಮಾರ್ಗಪ್ರವರ್ತಕ ಶ್ರೀ ವೀರಬುಕ್ಕಭೂಪಾಲಸಾಮ್ರಾಜ್ಯ-ಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ ವೇದಾರ್ಥಪ್ರಕಾಶೇ ಋಕ್ಸಂಹಿತಾಭಾಷ್ಯೇ ಚತುರ್ಥಾಷ್ಟಕೇ ಪಂಚಮೋಽಧ್ಯಾಯಃ ಸಮಾಪ್ತಃ**

**॥ ಓಂ ತತ್ಸತ್ ॥**

ಇಲ್ಲಿಗೆ ಶ್ರೀಸಾಯಣಭಾಷ್ಯಸಹಿತವೂ ಕರ್ನಾಟಕ ಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯ ನಾಲ್ಕನೆಯ ಅಷ್ಟಕದಲ್ಲಿ
ಐದನೆಯ ಅಧ್ಯಾಯವು ಮುಗಿದುದು.

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತು ತೇ ॥

**॥ ಶುಭಂ ಭೂಯಾತ್ ॥**

**॥ ಮಂಗಳಂ ॥**

॥ ಶ್ರೀಃ ॥

॥ ಶ್ರೀ ಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಃಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥

**ಸಾಯಣಭಾಷ್ಯಸಹಿತಾ**

# ಋಗ್ವೇದಸಂಹಿತಾ

**॥ ಚತುರ್ಥಾಷ್ಟಕೇ ಷಷ್ಠೋಽಧ್ಯಾಯಃ ॥**

**ನಾಲ್ಕನೆಯ ಅಷ್ಟಕದಲ್ಲಿ ಆರನೆಯ ಅಧ್ಯಾಯವು**

## ಆರನೆಯ ಮಂಡಲದ ಸೂಕ್ತಗಳು ೧೭—೨೮

## ಪೀಠಿಕೆ

ಭರದ್ವಾಜಋಷಿದೃಷ್ಟವಾದ ಈ ಆರನೆಯ ಮಂಡಲದಲ್ಲಿ ೧-೧೬ ಸೂಕ್ತಗಳು ಅಗ್ನಿದೇವತಾಕವಾಗಿವೆ. ಅವುಗಳನ್ನು ಹಿಂದಿನ ಅಧ್ಯಾಯದಲ್ಲಿ ವಿವರಿಸಲಾಯಿತು. ಮುಂದಿನ ೧೭–೪೬ ಸೂಕ್ತಗಳು ಇಂದ್ರದೇವತಾಕವು. ಪ್ರಕೃತ ಆರನೆಯ ಅಧ್ಯಾಯವು ೧೭–೨೮ ಸೂಕ್ತಗಳನ್ನು (ಒಟ್ಟು ಹನ್ನೊಂದು) ಮಾತ್ರ ಒಳಗೊಂಡಿರುವುದರಿಂದ ಈ ಅಧ್ಯಾಯದ ಸೂಕ್ತಗಳೆಲ್ಲಾ ಇಂದ್ರನನ್ನು ಸ್ತುತಿಸುವ ಮಂತ್ರಗಳೇ ಆಗಿವೆ. ೨೮ ನೆಯ ಸೂಕ್ತದಲ್ಲಿ ಮಾತ್ರ ಆರು ಋಕ್ಕುಗಳಿಗೆ ಗೋವುಗಳು ದೇವತೆಯೆಂದು ಹೇಳಿದ್ದರೂ ಒಟ್ಟು ಸೂಕ್ತವು ಇಂದ್ರದೇವತಾಕವೆಂದೇ ವಿಕಲ್ಪವಾಗಿ ಹೇಳಿದೆ. ಇಂದ್ರನ ವಿಷಯವಾದ ವಿಸ್ತಾರವಾದ ವಿವರಣೆಯನ್ನು ನಾವು ಋ. ಸಂ. ಭಾಗ ೧೬ ರಲ್ಲಿ 631–683 ಪುಟಗಳಲ್ಲಿಯೂ ಇನ್ನೂ ಅನೇಕ ಸ್ಥಳಗಳಲ್ಲಿಯೂ ವಿಸ್ತಾರವಾಗಿ ವಿವರಿಸಿದೇವೆ. ಆದ್ದರಿಂದ ಇಲ್ಲಿ ಇಂದ್ರಶಬ್ದದ ರೂಪನಿಷ್ಪತ್ತಿಯನ್ನು ಮಾತ್ರ ವಿವರಿಸಿ ಮುಂದೆ ಆಯಾ ಮಂತ್ರಗಳಲ್ಲಿ ಇರಬಹುದಾದ ಇಂದ್ರನ ಸಂಬಂಧವಾದ ಪ್ರತ್ಯೇಕ ವಿಷಯಗಳಿದ್ದರೆ ಅವುಗಳನ್ನು ಮಾತ್ರ ಅಲ್ಲಲ್ಲಿ ಸೂಚಿಸಲಾಗುವುದು.

**ಇಂದ್ರ**—ಭಾಷ್ಯಕಾರರು ಇಂದ್ರಶಬ್ದದ ನಿಷ್ಪತ್ತಿಯನ್ನು ವಿವರಿಸುವಾಗ ಯಾಸ್ಕರು ಹೇಳಿರುವ ನಿರುಕ್ತವನ್ನೇ ಉದಹರಿಸಿದ್ದಾರೆ—

> **ಇಂದ್ರ ಇರಾಂ ದೃಣಾತೀತಿ ವೇರಾಂ ದದಾತೀತಿ ವೇರಾಂ ದಧಾತೀತಿ ವೇರಾಂ ದಾರಯತೀತಿ ವೇರಾಂ ಧಾರಯತೀತಿ ವೇಂದವೇ ದ್ರವತೀತಿ ವೇಂದೌ ರಮತ ಇತಿ ವೇಂಧೇ ಭೂತಾನೀತಿ ವಾ ತದ್ಯದೇನಂ ಪ್ರಾಣೈಃ ಸಮೈಂಧಂಸ್ತದಿಂದ್ರಸ್ಯೇಂದ್ರತ್ವಮಿತಿ ವಿಜ್ಞಾಯತ ಇದಂಕರಣಾದಿ-ತ್ಯಾಗ್ರಾಯಣ ಇದಂದರ್ಶನಾದಿತ್ಯೌಪಮನ್ಯವ ಇಂದತೇರ್ವೈಶ್ವರ್ಯಕರ್ಮಣ ಇಂದಞ್ಛತ್ರೂ-ಣಾಂ ದಾರಯಿತಾ ವಾ ದ್ರಾವಯಿತಾ ವಾದರಯಿತಾ ಚ ಯಜ್ವನಾಂ ಇತಿ । ನಿ. ೧೦-೮ ॥**

ಇದರ ಅರ್ಥಾನುವಾದವನ್ನು ಅವರೇ ಮಾಡಿದ್ದಾರೆ—

(1) **ದೄ ವಿದಾರಣ ಇತಿ ಧಾತುಃ । ಇರಾಮನ್ನಮುದ್ದಿಶ್ಯ ತನ್ನಿಷ್ಪಾದಕಜಲಸಿದ್ಧ್ಯರ್ಥಂ ದೃಣಾತಿ ಮೇಘಂ ವಿದೀರ್ಣಂ ಕರೋತೀತೀಂದ್ರಃ**—ದೄ ಎಂಬ ಧಾತುವಿಗೆ ಸೀಳುವುದು, ಕತ್ತರಿಸುವುದು ಎಂದರ್ಥವು. ಇರಾ ಎಂದರೆ ಅನ್ನವು (ಆಹಾರವು) ಓಷಧಿವನಸ್ಪತಿಗಳಿಂದ ಎಂದರೆ ಸಸ್ಯವರ್ಗದಿಂದ ನಮಗೆ ಲಭಿಸುವುದು. ಆ ಸಸ್ಯವರ್ಗವು ಬೆಳೆಯಬೇಕಾದರೆ ಜಲವು ಅವಶ್ಯಕವು. ಆ ಜಲಕ್ಕಾಗಿ ಎಂದರೆ ಮಳೆ ಹುಯ್ಯುವುದಕ್ಕಾಗಿ ಮೇಘವನ್ನು (ವಿದ್ಯುತ್, ವಜ್ರಾಯುಧದಿಂದ) ಕತ್ತರಿಸುವವನಾದಕಾರಣ **ಇಂದ್ರ**ನೆಂಬ ಹೆಸರಾಯಿತು.

(2) **ಡುದಾಞ್ ದಾನ ಇತಿ ಧಾತುಃ । ಇರಾಮನ್ನಂ ವೃಷ್ಟಿನಿಷ್ಪಾದನೇನ ದದಾತೀತೀಂದ್ರಃ ॥ ದಾ** ಎಂಬ ಧಾತುವಿಗೆ ಕೊಡುವುದು ಎಂದರ್ಥವು. ಇರಾಂ ಎಂದರೆ ಅನ್ನವನ್ನು ವೃಷ್ಟಿ (ಮಳೆಯ) ಮೂಲಕ ಕೊಡುವವನಾದುದರಿಂದ ಇಂದ್ರನೆಂದು ಹೆಸರು.

(3) **ಧಾಞ್ ಪೋಷಣಾರ್ಥಃ । ಇರಾಮನ್ನಂ ತೃಪ್ತಿಕಾರಣಂ ಸಸ್ಯಂ ದಧಾತಿ ಜಲಪ್ರದಾನೇನ ಪುಷ್ಣಾತೀತೀಂದ್ರಃ ॥ ಧಾ** ಎಂಬ ಧಾತುವಿಗೆ ಪೋಷಣೆಮಾಡುವುದು ಎಂದರ್ಥವು. ಅನ್ನವನ್ನು ಕೊಡುವ ಸಸ್ಯಾದಿಗಳನ್ನು ಜಲಪ್ರಧಾನದಿಂದ (ಮಳೆಯಿಂದ) ಪೋಷಿಸುವವನಾದ ಕಾರಣ ಇಂದ್ರನೆಂದು ಹೆಸರು.

(4) **ಇರಾಮುತ್ಪಾದಯಿತುಂ ಕರ್ಷಕಮುಖೇನ ಭೂಮಿಂ ವಿದಾರಯತೀತೀಂದ್ರಃ ।** ಆಹಾರೋತ್ಪಾದನೆಗಾಗಿ ಭೂಮಿಯನ್ನು ಉಳಬೇಕಷ್ಟೆ. ಭೂಮಿಯನ್ನು ಉಳುವಾಗ ಅದನ್ನು ನೇಗಲಿನಿಂದ ಸೀಳುವಂತೆ ಮಾಡಿ ಬೆಳೆಗೆ ಅನುಕೂಲಪಡಿಸುವವನಾದುದರಿಂದ ಇಂದ್ರನೆಂದು ಹೆಸರು.

(5) **ಪೂರ್ವೋಕ್ತಪೋಷಣಮುಖೇನೇರಾಂ ಧಾರಯತಿ ವಿನಾಶರಾಹಿತ್ಯೇನ ಸ್ಥಾಪಯತೀ-ತೀಂದ್ರಃ ।** ಹಿಂದೆ ಹೇಳಿದಂತೆ ಸಸ್ಯಾದಿಗಳನ್ನು ಪೋಷಣೆಮಾಡಿ ಅವುಗಳು ನಾಶವಾಗದಂತೆ ಸಂರಕ್ಷಿಸತಕ್ಕವನಾದುದರಿಂದ ಇಂದ್ರನೆಂದು ಹೆಸರು.

(6) ಇಂದುಃ ಸೋಮೋ ವಲ್ಲೀರಸಃ । ತದರ್ಥಂ ಯಾಗಭೂಮೌ ದ್ರವತಿ ಧಾವತೀತೀಂದ್ರಃ । ಇಂದುವೆಂದರೆ ಸೋಮಲತೆಯಿಂದ ಸಿದ್ಧಪಡಿಸಿದ ಸೋಮರಸವು. ಯಜ್ಞಭೂಮಿಯಲ್ಲಿ ಇಂತಹ ಸೋಮಪಾನಾರ್ಥವಾಗಿ ಧಾವಿಸಿ (ಬೇಗನೆ ಓಡಿ) ಬರುವವನಾದುದರಿಂದ ಇಂದ್ರ ನೆಂದು ಹೆಸರು.

(7) ಇಂದೌ ಯಥೋಕ್ತೇ ಸೋಮೇ ರಮತೇ ಕ್ರೀಡತೀತೀಂದ್ರಃ । ಹಿಂದೆ ಹೇಳಿದ ಸೋಮರಸ ದಿಂದ ತೃಪ್ತನಾಗಿ ವಿಹರಿಸುವವನಾದುದರಿಂದ ಇಂದ್ರನೆಂದು ಹೆಸರು.

(8) ಞಿಇಂಧೀ ದೀಪ್ತಾವಿತಿ ಧಾತುಃ । ಭೂತಾನಿ ಪ್ರಾಣಿದೇಹಾನಿಂಧೇ ಜೀವಚೈತನ್ಯ-ರೂಪೇಣಾಂತಃಪ್ರವಿಶ್ಯ ದೀಪಯತೀತೀಂದ್ರಃ ॥ ಇಂಧ್ ಧಾತುವಿಗೆ, ಬೆಳಗುವುದು, ಪ್ರಕಾಶಿಸುವುದು ಎಂದರ್ಥ. ಪ್ರಾಣಿಗಳ ಶರೀರಗಳಲ್ಲಿ ಚೈತನ್ಯರೂಪದಿಂದ ಪ್ರವೇಶಿಸಿ ಅವುಗಳು ತಮ್ಮ ತಮ್ಮ ಕೃತ್ಯಗಳನ್ನು ಮಾಡುವಂತೆ ಪ್ರೇರಿಸುತ್ತಾ ಬೆಳಗುತ್ತಿರುವವನಾದುದ ರಿಂದ ಇಂದ್ರನೆಂದು ಹೆಸರು.

(9) ಯದ್ಯಸ್ಮಾತ್ಕಾರಣಾದೇನಂ ಪರಮಾತ್ಮರೂಪಮಿಂದ್ರಂ ದೇವಂ ಪ್ರಾಣೈರ್ವಾಕ್ಚಕ್ಷು-ರಾದೀಂದ್ರಿಯೈಃ ಪ್ರಾಣಾಪಾನಾದಿವಾಯುಭಿಶ್ಚ ಸಹಿತಂ ಸಮ್ಯಂಧನ್ನುಪಾಸಕಾ ಧ್ಯಾನೇನ ಸಮ್ಯಕ್ಪ್ರಕಾಶಿತವಂತಸ್ತತ್ತಸ್ಮಾತ್ಕಾರಣಾದಿಂದ್ರನಾಮ ಸಂಪನ್ನಂ । ಪರಮಾತ್ಮನಾದ ಈ ದೇವನನ್ನು ಉಪಾಸಕರು ವಾಕ್ಚಕ್ಷುರಾದೀಂದ್ರಿಯಗಳಿಂದಲೂ, ಪ್ರಾಣಾಪಾನಾದಿ ವಾಯುಗಳಿಂದಲೂ ಸೇರಿಸಿ ಧ್ಯಾನ್ಯದಿಂದ ಚೆನ್ನಾಗಿ ಪ್ರಕಾಶಿಸುತ್ತಿರುವಂತೆ ಭಾವಿಸುವವರಾದ್ದರಿಂದ ಇಂದ್ರನೆಂಬ ಹೆಸರಾಯಿತು.

(10) ಆಗ್ರಾಯಣನಾಮಕೋ ಮುನಿರಿದಂಕರಣಾದಿಂದ್ರ ಇತಿ ನಿರ್ವಚನಂ ಮನ್ಯತೇ । ಇಂದ್ರೋ ಹಿ ಪರಮಾತ್ಮರೂಪೇಣೇದಂ ಜಗತ್ಕರೋತಿ—ಇದಂಕರಣ ಎಂದರೆ ಪರಮಾತ ರೂಪದಿಂದ ಇಂದ್ರನು ಈ ಜಗತ್ತನ್ನು ನಿರ್ಮಾಣಮಾಡುವುದರಿಂದ (ಸೃಷ್ಟಿಸುವುದರಿಂದ) ಈ ದೇವನಿಗೆ ಇಂದ್ರನೆಂದು ಹೆಸರು ಬಂದಿತು ಎಂದು ಆಗ್ರಾಯಣನೆಂಬ ಮುನಿಯು ಹೇಳುವನು.

(11) ಔಪಮನ್ಯವನಾಮಕೋ ಮುನಿರಿದಂದರ್ಶನಾದಿಂದ್ರ ಇತಿ ನಿರ್ವಚನಮಾಹ । ಇದಮಿತ್ಯಾ-ಪರೋಕ್ಷ್ಯಮುಚ್ಯತೇ । ಔಪಮನ್ಯವನೆಂಬ ಮುನಿಯು ಇದನ್ನು ಎಂದರೆ ಎಲ್ಲವನ್ನೂ ನೋಡುವವನಾದುದರಿಂದ ಇಂದ್ರನೆಂದು ಹೆಸರಾಯಿತು ಎಂದು ಹೇಳುವನು. ಇಲ್ಲಿ ಇದಂ ಎಂದರೆ ಅಪರೋಕ್ಷ್ಯ, ಕಣ್ಣಿಗೆ ಪ್ರತ್ಯಕ್ಷವಾಗಿ ಗೋಚರಿಸದಿರುವುದು. ಆದುದರಿಂದಲೇ, "ಪರೋಕ್ಷಪ್ರಿಯಾ ಇವ ಹಿ ದೇವಾಃ" ಎಂದು ಶ್ರುತಿಯು ಹೇಳುತ್ತಿರುವುದು.

(12) ಇದಿ ಪರಮೈಶ್ವರ್ಯೇ ಇತಿ ಧಾತುಃ । ಸ್ವಮಾಯಯಾ ಜಗದ್ರೂಪತ್ವಂ ಪರಮೈಶ್ವರ್ಯಂ । ತದ್ಯೋಗಾದಿಂದ್ರಃ । ಇದಿ ಧಾತುವಿಗೆ ಪರಮೈಶ್ವರ್ಯವೆಂಬ ಅರ್ಥವಿರುವುದು. ಈ ದೇವ

ನಿಗೆ ತನ್ನ ಮಾಯೆಯಿಂದ ಜಗದ್ರೂಪತ್ವವೆಂಬ ಪರಮೈಶ್ವರ್ಯವಿರುವುದರಿಂದ ಇಂದ್ರನೆಂಬ ಹೆಸರಾಯಿತು. ಈ ಅಭಿಪ್ರಾಯವನ್ನು **"ಇಂದ್ರೋ ಮಾಯಾಭಿಃ ಪುರುರೂಪ ಈಯತೇ"** (ಋ. ಸಂ. ೬-೪೭-೧೮) ಎಂಬ ವೇದವಾಕ್ಯವು ಸಮರ್ಥಿಸುವುದು.

(13) **ಇನಶಬ್ದಸ್ಯೇಶ್ವರವಾಚಕಸ್ಯಾಕಾರಲೋಪೇ ಸತಿ ನಕಾರಾಂತಮಿನ್ನಿತಿ ಪದಂ ಭವತಿ । ದ್ರಾ ಭಯ ಇತಿ ಧಾತುಃ । ಸ ಚ ಪರಮೇಶ್ವರಃ ಶತ್ರೂಣಾಂ ದಾರಯಿತಾ ಭೀಷಯಿತೇತೀಂದ್ರಃ ॥** ಇನಶಬ್ದವು ಈಶ್ವರವಾಚಕವು. ಈ ಇನಶಬ್ದದ ನಕಾರದಮೇಲಿರುವ ಅಕಾರವು ಲೋಪವಾದರೆ ಇನ್ ಎಂಬ ಪದವು ಸಿಗ್ಗುವುದು. ದ್ರಾ ಎಂಬ ಧಾತುವಿಗೆ ಭಯವೆಂದರ್ಥವು. ಪರಮೇಶ್ವರನಾದ ಆ ದೇವನು ಶತ್ರುಗಳಿಗೆ ಭಯವನ್ನುಂಟುಮಾಡುವವನಾದ್ದರಿಂದ ಅವನಿಗೆ ಇಂದ್ರ ನೆಂಬ ಹೆಸರು.

(14) **ದ್ರು ಗತಾವಿತಿ ಧಾತುಃ । ಶತ್ರೂಣಾಂ ದ್ರಾವಯಿತಾ ಪಲಾಯನಂ ಪ್ರಾಪಯಿತೇತೀಂದ್ರಃ ॥** ದ್ರು ಎಂಬ ಧಾತುವಿಗೆ ಗತ್ಯರ್ಥ ಎಂದರೆ, ಹೋಗು, ಓಡಿಹೋಗು ಎಂದರ್ಥವು ಈ ದೇವನು ಶತ್ರುಗಳನ್ನು ಓಡಿಹೋಗುವಂತೆ ಮಾಡುವನಾದ್ದರಿಂದ ಇವನಿಗೆ ಇಂದ್ರನೆಂದು ಹೆಸರು.

(15) **ಯಜ್ವನಾಂ ಯಾಗಾನುಷ್ಠಾಯಿನಾಮಾದರಯಿತಾ ಭಯಸ್ಯ ಪರಿಹರ್ತಾ**—ತನ್ನನ್ನು ಯಾಗಾದಿಗಳಿಂದ ಆರಾಧಿಸುವವರನ್ನು ಆದರಿಸಿ ಅವರ ಭಯವನ್ನು ಪರಿಹಾರಮಾಡುವವನಾದುದರಿಂದ ಈ ದೇವನಿಗೆ ಇಂದ್ರನೆಂದು ಹೆಸರು.

ಇದರಂತೆಯೇ ಇಂದ್ರಶಬ್ದಕ್ಕೆ ಅನೇಕ ನಿರ್ವಚನವನ್ನು ಕಲ್ಪಿಸಬಹುದು.

# ಹದಿನೇಳನೆಯ ಸೂಕ್ತವು

**॥ ಸಾಯಣಭಾಷ್ಯಂ ॥**

**ಚತುರ್ಥಾಷ್ಟಕೇ ಷಷ್ಠೋಽಧ್ಯಾಯ ಆರಭ್ಯತೇ ॥ ಷಷ್ಠೇ ಮಂಡಲೇ ದ್ವಿತೀಯೇಽನುವಾಕೇ ಪ್ರಥಮಂ ಸೂಕ್ತಂ ವ್ಯಾಖ್ಯಾತಂ । ತತ್ರ ಪಿಬಾ ಸೋಮಮಿತಿ ದ್ವಿತೀಯಂ ಸೂಕ್ತಂ ಭರದ್ವಾಜಸ್ಯಾರ್ಷಂ ತ್ರೈಷ್ಟುಭಂ । ಅಂತ್ಯಾ ದ್ವಿಪದಾ ತ್ರಿಷ್ಟುಪ್। ತಥಾ ಚಾನುಕ್ರಾಂತಂ । ಪಿಬ ಪಂಚೋನೈಂದ್ರಂ ತ್ರೈಷ್ಟುಭಂ ದ್ವಿಪದಾಂತಮಿತಿ ॥ ಅಭಿಜಿತಿ ಮರುತ್ವತೀಯಶಸ್ತ್ರ ಏತನ್ನಿವಿದ್ಧಾನಂ । ಸೂತ್ರಿತಂ ಚ । ಪಿಬಾ ಸೋಮಂ ತಮು ಷ್ಟುಹೀತಿ ಮಧ್ಯಂದಿನಃ । ಆ. ೮-೫ । ಇತಿ ॥ ಸಮೂಳ್ಹೇ ದಶರಾತ್ರೇಽಷ್ಟಮೇಽಹನಿ ಮರುತ್ವತೀಯಶಸ್ತ್ರ ಏತತ್ಸೂಕ್ತಂ । ಸೂತ್ರಿತಂ ಚ । ಪಿಬಾ ಸೋಮಮಭಿ ತಮುಸ್ಯ ದ್ಯಾವಾಪೃಥಿವೀ । ಆ. ೮-೭ । ಇತಿ ॥ ಸೂರ್ಯಸ್ತುನ್ನಾಮ್ನ್ಯೇಕಾಹೇ ಮರುತ್ವತೀಯ ಏತತ್ಸೂಕ್ತಂ ನಿವಿದ್ಧಾನಂ । ಸೂತ್ರ್ಯತೇ ಹಿ । ಸೂರ್ಯಸ್ತುತಾ ಯಶಸ್ಕಾಮಃ ಪಿಬಾ ಸೋಮಮಭಿ। ಆ. ೯-೮। ಇತಿ । ಮಹಾವ್ರತೇಽಪಿ ಮರುತ್ವತೀಯ**

**ಏತತ್ಸೂಕ್ತಂ । ತಥೈವ ಪಂಚಮಾರಣ್ಯಕೇ ಸೂತ್ರಿತಂ । ಪಿಬಾ ಸೋಮಮಭಿ ಯಮುಗ್ರ ತರ್ದಃ ಕಯಾ ಶುಭಾ ಸವಯಸಃ ಸನೀಳಾಃ । ಐ. ಆ. ೫-೧-೧ । ಇತಿ ॥ ಮಾಧ್ಯಂದಿನೇ ಸವನ ಆದ್ಯಾಸ್ತಿಸ್ರೋ ಹೋತೃಮೈತ್ರಾವರುಣಬ್ರಾಹ್ಮಣಾಚ್ಛಂಸಿನಾಂ ಪ್ರಸ್ಥಿತಯಾಜ್ಯಾಃ । ಸೂತ್ರಿತಂ ಚ । ಪಿಬಾ ಸೋಮಮಭಿ ಯಮುಗ್ರ ತರ್ದ ಇತಿ ತಿಸ್ರೋಽರ್ವಾಙೇಹಿ ಸೋಮಕಾಮಂ ತ್ವಾಹುಃ । ಆ. ೫-೫ । ಇತಿ ॥**

ಅನುವಾದವು—ನಾಲ್ಕನೆಯ ಅಷ್ಟಕದಲ್ಲಿ ಆರನೆಯ ಅಧ್ಯಾಯದ ವಿವರಣೆಯನ್ನು ಪ್ರಾರಂಭಿಸಲಾಗುವುದು. ಆರನೆಯ ಮಂಡಲದ ಎರಡನೆಯ ಅನುವಾಕದಲ್ಲಿ ಮೊದಲನೆಯ ಸೂಕ್ತವನ್ನು ಹಿಂದಿನ ಅಧ್ಯಾಯದಲ್ಲಿಯೇ ವಿವರಿಸಿದ್ದಾಯಿತು. **ಪಿಬಾ ಸೋಮಂ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಎರಡನೆಯ ಸೂಕ್ತವು. ಈ ಸೂಕ್ತದಲ್ಲಿ ಹದಿನೈದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು; ಇಂದ್ರನು ದೇವತೆಯು; ತ್ರಿಷ್ಟುಪ್ ಛಂದಸ್ಸು; ಕೊನೆಯ ಋಕ್ಕು ಮಾತ್ರ **ದ್ವಿಪದಾ** ಎಂಬ ಛಂದಸ್ಸಿನದು. ಅನುಕ್ರಮಣಿಕೆಯಲ್ಲಿ—**ಪಿಬ ಪಂಚೋನೈಂದ್ರಂ ತ್ರೈಷ್ಟುಭಂ ದ್ವಿಪದಾಂತಂ** ಎಂದು ಹೇಳಿರುವುದು. ಅಭಿಜಿದ್ಯಾಗದಲ್ಲಿ (ಅಥವಾ ಯಾಗದ ಅಭಿಜಿತ್ ಎಂದು ಹೇಳಲ್ಪಡುವದಿವಸದಲ್ಲಿ) ಮರುತ್ವತೀಯಶಸ್ತ್ರಮಂತ್ರಗಳ ಮಧ್ಯದಲ್ಲಿ ಈ ಸೂಕ್ತವನ್ನು ನಿವಿದ್ಧಾನೀಯಸೂಕ್ತವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಪಿಬಾ ಸೋಮಂ ತಮು ಷ್ಟುಹೀತಿ ಮಧ್ಯಂದಿನಃ** ಎಂಬ ಸೂತ್ರದಿಂದ ವಿವೃತವಾಗಿರುವುದು. (ಆ. ೮-೫) ಸಮೂಳ್ಹವೆಂಬ ದಶರಾತ್ರಯಾಗದಲ್ಲಿ ಎಂಟನೆಯ ದಿವಸ ಪಠಿಸುವ ಮರುತ್ವತೀಯಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ಪಿಬಾ ಸೋಮಮಭಿ ತಮಸ್ಯ ದ್ಯಾವಾಪೃಥಿವೀ** ಎಂಬ ಸೂತ್ರದಿಂದ (ಆ. ೮-೭) ವಿವೃತವಾಗಿರುವುದು. ಮತ್ತು **ಸೂರ್ಯಸ್ತುತ್** ಎಂಬ ಏಕಾಹಯಾಗದಲ್ಲಿ ಮರುತ್ವತೀಯಶಸ್ತ್ರಮಂತ್ರಗಳ ಮಧ್ಯದಲ್ಲಿ ಈ ಸೂಕ್ತವನ್ನು ನಿವಿದ್ಧಾನೀಯಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಸೂರ್ಯಸ್ತುತಾ ಯಶಸ್ಕಾಮಃ ಪಿಬಾ ಸೋಮಮಭಿ** ಎಂಬ ಸೂತ್ರದಿಂದ ವಿವೃತವಾಗಿರುವುದು. ಮಹಾವ್ರತವೆಂಬ ಯಾಗದಲ್ಲಿಯೂ ಕೂಡ ಮರುತ್ವತೀಯಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಐತರೇಯಾರಣ್ಯಕದ ಪಂಚಮಾರಣ್ಯಕದಲ್ಲಿ—**ಪಿಬಾ ಸೋಮಮಭಿ ಯಮುಗ್ರ ತರ್ದಃ ಕಯಾ ಶುಭಾ ಸವಯಸಃ ಸನೀಳಾಃ** ಎಂಬ ವಾಕ್ಯದಿಂದ (ಐ. ಆ. ೫-೧-೧) ನಿರ್ದಿಷ್ಟವಾಗಿರುವುದು. ಮತ್ತು ಮಾಧ್ಯಂದಿನಸವನಕಾಲದಲ್ಲಿ ಈ ಸೂಕ್ತದ ಮೊದಲಿನ ಮೂರು ಋಕ್ಕುಗಳನ್ನು ಹೋತೃ, ಮೈತ್ರಾವರುಣ, ಬ್ರಾಹ್ಮಣಾಚ್ಛಂಸಿ ಎಂಬ ಋತ್ವಿಜರು ಪಠಿಸಬೇಕಾದ ಪ್ರಸ್ಥಿತಯಾಜ್ಯಾಮಂತ್ರಗಳಿಗಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಪಿಬಾ ಸೋಮಮಭಿ ಯಮುಗ್ರ ತರ್ದ ಇತಿ ತಿಸ್ರೋಽರ್ವಾಙೇಹಿ ಸೋಮಕಾಮಂ ತ್ವಾಹುಃ** ಎಂಬ ಸೂತ್ರದಿಂದ (ಆ. ೫-೫) ವಿವೃತವಾಗಿರುವುದು.

## ಸೂಕ್ತ—೧೭

ಮಂಡಲ—೬॥ ಅನುವಾಕ—೨ ॥ ಸೂಕ್ತ—೧೭ ॥
ಅಷ್ಟಕ—೪ ॥ ಅಧ್ಯಾಯ—೬ ॥ ವರ್ಗ—೧, ೨, ೩. ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೫ ॥
॥ ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ॥
॥ ದೇವತಾ—ಇಂದ್ರಃ ॥
॥ ಛಂದಃ—೧-೧೪. ತ್ರಿಷ್ಟುಪ್ । ೧೫. ದ್ವಿಪದಾ ॥

॥ ಸಂಹಿತಾಪಾಠಃ ॥

ಪಿಬಾ ಸೋಮಮಭಿ ಯಮುಗ್ರ ತರ್ದ ಊರ್ವಂ ಗವ್ಯಂ ಮಹಿ ಗೃಣಾನ ಇಂದ್ರ ।
ವಿ ಯೋ ಧೃಷ್ಣೋ ವಧಿಷೋ ವಜ್ರಹಸ್ತ ವಿಶ್ವಾ ವೃತ್ರಮಮಿತ್ರಿಯಾ ಶವೋಭಿಃ ॥ ೧ ॥

॥ ಪದಪಾಠಃ ॥

ಪಿಬ । ಸೋಮಂ । ಅಭಿ । ಯಂ । ಉಗ್ರ । ತರ್ದಃ । ಊರ್ವಂ । ಗವ್ಯಂ । ಮಹಿ । ಗೃಣಾನಃ । ಇಂದ್ರ ।
ವಿ । ಯಃ । ಧೃಷ್ಣೋ ಇತಿ । ವಧಿಷಃ । ವಜ್ರಽಹಸ್ತ । ವಿಶ್ವಾ । ವೃತ್ರಂ । ಅಮಿತ್ರಿಯಾ । ಶವಃಽಭಿಃ ॥೧ ॥

॥ ಸಾಯಣಭಾಷ್ಯಂ ॥

ಹೇ ಉಗ್ರೋದ್ಗೂರ್ಣಬಲೇಂದ್ರ ಗೃಣಾನೋಽಂಗಿರೋಭಿಃ ಸ್ತೂಯಮಾನಸ್ತ್ವಂ ಯಂ ಸೋಮಮಭ್ಯುದ್ದಿಶ್ಯ । ಪಾತುಮಿತ್ಯರ್ಥಃ । ಮಹಿ ಮಹದ್ಗವ್ಯಂ ಗೋಸಂಬಂಧ್ಯೂರ್ವಂ ಪಣಿಭಿರಾಹೃತಂ ಸಮೂಹಂ ತರ್ದಃ ಪ್ರಕಾಶಿತವಾನಸಿ ॥ ತೃದಿರ್ಹಿಂಸಾಕರ್ಮಾತ್ರ ಪ್ರಕಾಶನಾರ್ಥಃ ॥ ತಂ ಸೋಮಂ ಪಿಬ। ಪಾನಂ ಕುರು । ಹೇ ಧೃಷ್ಣೋ ಶತ್ರೂಣಾಂ ಧರ್ಷಕ ವಜ್ರಹಸ್ತ ವಜ್ರಪಾಣೇ ಹೇ ಇಂದ್ರ ಯಸ್ತ್ವಂ ಶವೋಭಿರ್ಬಲೈಃ ಸಹಿತಃ ಸನ್ ವಿಶ್ವಾ ವಿಶ್ವಂ ವೃತ್ರಮಾವರಕಮಮಿತ್ರಿಯಾಮಿತ್ರಿಯಂ ಶತ್ರುಂ ॥ ಅಮಿತ್ರ ಶಬ್ದಾತ್ ದ್ವಿತೀಯೈಕವಚನಸ್ಯೇಯಾದೇಶಃ ॥ ವಿ ವಧಿಷಃ ವ್ಯವಧೀಃ ಸ ತ್ವಂ ಸೋಮಂ ಪಿಬೇತಿ ಸಂಬಂಧಃ ॥

॥ ಪ್ರತಿಪದಾರ್ಥ ॥

**ಉಗ್ರ**—ಭಯಂಕರವಾದ ಶಕ್ತಿಯುಳ್ಳ । **ಇಂದ್ರ**—ಎಲೈ ಇಂದ್ರನೇ । **ಗೃಣಾನಃ**—ಅಂಗಿರಸ್ಸುಗಳಿಂದ ಸ್ತುತನಾದ ನೀನು । **ಯಂ ಅಭಿ**—ಯಾವ ಸೋಮವನ್ನು ಪಾನಮಾಡಲುದ್ದೇಶಿಸಿ । **ಊರ್ವಂ**—ಪಣಿಗಳಿಂದ ಅಪಹೃತವಾದ । **ಗವ್ಯಂ**—ಗೋಸಮೂಹವನ್ನು । **ತರ್ದಃ**—ಪ್ರಕಾಶಪಡಿಸಿದೆಯೋ । **(ತಂ) ಸೋಮಂ**—ಆ ಸೋಮವನ್ನೇ । **ಪಿಬ**—ಪಾನಮಾಡು । **ಧೃಷ್ಣೋ**—ಶತ್ರುಧರ್ಷಕನೂ । **ವಜ್ರಹಸ್ತ**—ವಜ್ರಾಯುಧವನ್ನು ಹಿಡಿದಿರುವವನೂ ಆದ ಎಲೈ ಇಂದ್ರನೇ । **ಯಃ**—ಯಾವ ನೀನು । **ಶವೋಭಿಃ**—ನಿನ್ನ ಬಲಗಳಿಂದ ಕೂಡಿಕೊಂಡು । **ವಿಶ್ವಾ**—ಸಮಸ್ತವಾದುದೂ । **ವೃತ್ರಂ**—ಆವರಕವಾದುದೂ ಆದ । **ಅಮಿತ್ರಿಯಾ**—ಶತ್ರುಸಮೂಹವನ್ನು । **ವಿ ವಧಿಷಃ**—ನಾಶಮಾಡಿದ್ದೀಯೋ (ಅಂತಹ ನೀನು ಸೋಮವನ್ನು ಪಾನಮಾಡು).

॥ ಭಾವಾರ್ಥ ॥

ಭಯಂಕರವಾದ ಶಕ್ತಿಯುಳ್ಳ ಎಲೈ ಇಂದ್ರನೇ, ಅಂಗಿರಸ್ಸುಗಳಿಂದ ಸ್ತುತನಾದ ನೀನು ಯಾವ ಸೋಮವನ್ನು ಪಾನಮಾಡಲುದ್ದೇಶಿಸಿ ಪಣಿಗಳಿಂದ ಅಪಹೃತವಾದ ಗೋಸಮೂಹವನ್ನು ಪ್ರಕಾಶಪಡಿಸಿದೆಯೋ ಆ ಸೋಮವನ್ನೇ

ಪಾನಮಾಡು. ಶತ್ರುಧರ್ಷಕನೂ ವಜ್ರಾಯುಧವನ್ನು ಹಿಡಿದಿರುವವನೂ ಆದ ಎಲೈ ಇಂದ್ರನೇ, ಯಾವ ನೀನು ನಿನ್ನ ಬಲಗಳಿಂದ ಕೂಡಿಕೊಂಡು ಸಮಸ್ತವಾದುದೂ, ಆವರಕವಾದುದೂ ಆದ ಶತ್ರುಸಮೂಹವನ್ನು ನಾಶಮಾಡಿದ್ದೀಯೋ ಅಂತಹ ನೀನು ಸೋಮವನ್ನು ಪಾನಮಾಡು.

## English Translation.

Fierce Indra, glorified by us, drink that Soma, (animated) by which you have discovered the vast herd of cattle (stolen by the Panis), and, overcomer of enemies, wielder of the thunderbolt, you have slain, by your, strength all opposing foes.

|| ವಿಶೇಷವಿಷಯಗಳು ||

ಪೂರ್ವದಲ್ಲಿ ಪಣಿಗಳೆಂಬ ಅಸುರರು ಅಂಗಿರಾಋಷಿಗಳ ಗೋವುಗಳನ್ನು ಅಪಹರಿಸಿ ಅವುಗಳನ್ನು ಯಾರಿಗೂ ಕಾಣದಂತೆ ಪರ್ವತದ ಗುಹೆಗಳಲ್ಲಿ ಬಚ್ಚಿಟ್ಟಿದ್ದರು. ಆ ಗೋವುಗಳ ಬಿಡುಗಡೆಗಾಗಿ ಅಂಗಿರಾಋಷಿಗಳು ಯಜ್ಞದಲ್ಲಿ ಇಂದ್ರನನ್ನು ಸ್ತುತಿಸಿ ಅವನಿಗೆ ಪಾನಾರ್ಥವಾಗಿ ಸೋಮರಸವನ್ನರ್ಪಿಸಿದರು. ಗೋವುಗಳನ್ನು ಬಿಡಿಸಲು ಇಂದ್ರನು ಶಕ್ತಿಯುತನಾಗಲೆಂದೂ, ಅದಕ್ಕಾಗಿ ಸೋಮಪಾನಮಾಡಬೇಕೆಂದೂ ಪ್ರಕೃತ ಋಕ್ಕಿನಲ್ಲಿ ಇಂದ್ರನನ್ನು ಪ್ರಾರ್ಥಿಸಲಾಗಿದೆ.

|| ಸಂಹಿತಾಪಾಠಃ ||

ಸ ಈಂ ಪಾಹಿ ಯ ಋಜೀಷೀ ತರುತ್ರೋ ಯಃ ಶಿಪ್ರವಾನ್ವೃಷಭೋ

ಯೋ ಮತೀನಾಂ ।

ಯೋ ಗೋತ್ರಭಿದ್ವಜ್ರಭೃದ್ಯೋ ಹರಿಷ್ಠಾಃ ಸ ಇಂದ್ರ ಚಿತ್ರಾँ ಅಭಿ ತೃಂಧಿ

ವಾಜಾನ್ || ೨ ||

| ಪದಪಾಠಃ |

ಸಃ । ಈಂ । ಪಾಹಿ । ಯಃ । ಋಜೀಷೀ । ತರುತ್ರಃ । ಯಃ । ಶಿಪ್ರऽವಾನ್ । ವೃಷಭಃ । ಯಃ । ಮತೀ-

ನಾಂ ।

ಯಃ । ಗೋತ್ರऽಭಿತ್ । ವಜ್ರऽಭೃತ್ । ಯಃ । ಹರಿऽಸ್ಥಾಃ । ಸಃ । ಇಂದ್ರ । ಚಿತ್ರಾನ್ । ಅಭಿ । ತೃಂಧಿ ।

ವಾಜಾನ್ || ೨ ||

॥ ಸಾಯಣಭಾಷ್ಯಂ ॥

**ಹೇ ಇಂದ್ರ ಋಜೀಷೀ । ಋಜೀಷಶಬ್ದೇನ ಗತರಸಃ ಸೋಮೋಽಭಿಧೀಯತೇ । ತದ್ವಾನ್ಯಸ್ತ್ವಂ ತರುತ್ರಃ ಶತ್ರೂಣಾಂ ತಾರಕೋಽಸಿ ಯಸ್ತ್ವಂ ಶಿಪ್ರವಾನ್ ಶೋಭನಹನುರಸಿ ಯಸ್ತ್ವಂ ಮತೀನಾಂ ಸ್ತೋತೄಣಾಂ ॥ ಮನ್ಯತೇಃ ಸ್ತುತಿಕರ್ಮಣಃ ಕರ್ತರಿ ಕ್ತಿಚ್ ॥ ವೃಷಭಃ ಕಾಮಾನಾಂ ವರ್ಷಿತಾಸಿ ಸ ತ್ವಮೀಮೇನಂ ಸೋಮಂ ಪಾಹಿ । ಪಿಬ । ಹೇ ಇಂದ್ರ ಯಸ್ತ್ವಂ ವಜ್ರಭೃದ್ವಜ್ರಧರೋ ಯಸ್ತ್ವಂ ಗೋತ್ರಭಿದ್ಗೋತ್ರಾಣಾಂ ಪರ್ವತಾನಾಂ ಮೇಘಾನಾಂ ವಾ ಭೇತ್ತಾಸಿ ಯಸ್ತ್ವಂ ಹರಿಷ್ಠಾ ಹರ್ಯೋಃ ಸ್ಥಾತಾಸಿ ಹೇ ಇಂದ್ರ ಸ ತ್ವಂ ಚಿತ್ರಾನ್ ವಿಚಿತ್ರಾನ್ ವಾಜಾನನ್ನಾನ್ಯಭಿ ತೃಂಧಿ । ಅಸ್ಮಭ್ಯಂ ಪ್ರಕಾಶಯ ॥**

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಋಜೀಷೀ**—ಗತರಸವಾದ ಸೋಮವನ್ನು ಹೊಂದಿರುವ । **ಯಃ**—ಯಾವ ನೀನು । **ತರುತ್ರಃ**—ಶತ್ರುಗಳನ್ನು ಮೀರಿಸಿ ಸೋಲಿಸುವೆಯೋ । **ಯಃ**—ಯಾವ ನೀನು । **ಶಿಪ್ರವಾನ್**—ಉತ್ತಮವಾದ ಕೆನ್ನೆಯುಳ್ಳವನೋ । **ಯಃ**—ಯಾವ ನೀನು । **ಮತೀನಾಂ**—ಸ್ತೋತೃಗಳಿಗೆ । **ವೃಷಭಃ**—ಕಾಮವರ್ಷಕನಾಗಿದ್ದೀಯೋ । **ಸಃ**—ಅಂತಹ ನೀನು । **ಈಂ**—ಈ ಸೋಮವನ್ನು । **ಪಾಹಿ**—ಕುಡಿ । **ಇಂದ್ರ**—ಎಲೈ ಇಂದ್ರನೇ । **ವಜ್ರಭೃತ್**—ವಜ್ರಧರನಾದ । **ಯಃ**—ಯಾವ ನೀನು । **ಗೋತ್ರಭಿತ್**—ಪರ್ವತಗಳ ಭೇದಕನಾಗಿರುವೆಯೋ । **ಯಃ**—ಯಾವ ನೀನು । **ಹರಿಷ್ಠಾಃ**—ಅಶ್ವಗಳ ಸ್ಥಾಪಕನಾಗಿದ್ದೀಯೋ । **ಸಃ**—ಅಂತಹ ನೀನು । **ಚಿತ್ರಾನ್**—ನಾನಾಬಗೆಯಾದ । **ವಾಜಾನ್**—ಅನ್ನಗಳನ್ನು । **ಅಭಿ ತೃಂಧಿ**—ನಮಗೆ ಪ್ರಕಾಶಪಡಿಸು.

॥ ಭಾವಾರ್ಥ ॥

ಎಲೈ ಇಂದ್ರನೇ, ಗತರಸವಾದ ಸೋಮವನ್ನು ಹೊಂದಿರುವ ಯಾವ ನೀನು ಶತ್ರುಗಳನ್ನು ಮೀರಿಸಿ ಸೋಲಿಸುವೆಯೋ, ಯಾವ ನೀನು ಉತ್ತಮವಾದ ಕೆನ್ನೆಯುಳ್ಳವನೋ, ಯಾವ ನೀನು ಸ್ತೋತೃಗಳಿಗೆ ಕಾಮವರ್ಷಕನಾಗಿದ್ದೀಯೋ ಅಂತಹ ನೀನು ಈ ಸೋಮರಸವನ್ನು ಕುಡಿ. ಎಲೈ ಇಂದ್ರನೇ, ವಜ್ರಧರನಾದ ಯಾವ ನೀನು ಪರ್ವತಗಳ ಭೇದಕನಾಗಿರುವೆಯೋ, ಯಾವ ನೀನು ಅಶ್ವಗಳ ಸ್ಥಾಪಕನಾಗಿದ್ದೀಯೋ ಅಂತಹ ನೀನು ನಾನಾ ಬಗೆಯಾದ ಅನ್ನಗಳನ್ನು ನಮಗೆ ಒದಗಿಸಿ ಕೊಡು.

English Translation.

Drink it, Indra, you who enjoy the flavourless Soma; you who are the preservr, the handsome-chinned, the showerer (of benefits) on those who praise you; you are the breaker of the mountains, the wielder of the thunderbolt, the curber of steeds, bestow us various food.

॥ ವಿಶೇಷವಿಷಯಗಳು ॥

**ಋಜೀಷೀ**—ಋಜೀಷವೆಂದರೆ ರಸವನ್ನು ಹಿಂಡಿ ತೆಗೆದಮೇಲೆ ಉಳಿದಿರುವ ಸೋಮಲತೆಯ ಸಿಪ್ಪೆಗಳು. ಇವುಗಳಲ್ಲಿ ಸೋಮರಸವು ಹೆಚ್ಚಾಗಿರುವುದಿಲ್ಲ. ಆದ್ದರಿಂದ ಈ ಸಿಪ್ಪೆಗಳನ್ನು ನೀರಿನಲ್ಲಿ ಚೆನ್ನಾಗಿ ನೆನೆಯಿಸಿ ಉಳಿದಿರುವ

ಅಲ್ಪಸ್ವಲ್ಪ ರಸವನ್ನು ಮತ್ತೊಂದಾವರ್ತಿ ಚೆನ್ನಾಗಿ ಹಿಂಡಿ ತೆಗೆಯುವರು. ಇದರ ಜೊತೆಗೆ ಯವಧಾನ್ಯದ ಹಿಟ್ಟನ್ನು ಬೆರೆಸಿ ಯಜ್ಞದ ತೃತೀಯಸವನಕಾಲದಲ್ಲಿ ಇಂದ್ರನಿಗೆ ಅರ್ಪಿಸುವರು. ಇಂತಹ ಋಜೀಷದಲ್ಲಿರುವ ಸೋಮವನ್ನು ಪಾನಮಾಡುವವನಾದ್ದರಿಂದ ಇಂದ್ರನನ್ನು ಋಜೀಷೀ ಎಂದು ಸಂಬೋಧಿಸುವುದು ಋಗ್ವೇದದಲ್ಲಿ ವಿಶೇಷವಾಗಿ ಕಂಡು ಬರುವುದು. ಋಜೀಷಶಬ್ದದ ವಿಸ್ತಾರವಾದ ವಿವರಣೆಯನ್ನು ನಾವು ಸೋಮಾಹರಣೋಪಾಖ್ಯಾನದಲ್ಲಿ ವಿಸ್ತಾರವಾಗಿ ಹಿಂದೆಯೇ ವಿವರಿಸಿದ್ದೇವೆ.

॥ ಸಂಹಿತಾಪಾಠಃ ॥

ಏವಾ ಪಾಹಿ ಪ್ರತ್ನಥಾ ಮಂದತು ತ್ವಾ ಶ್ರುಧಿ ಬ್ರಹ್ಮ ವಾವೃಧಸ್ವೋತ ಗೀರ್ಭಿಃ ।
ಆವಿಃ ಸೂರ್ಯಂ ಕೃಣುಹಿ ಪೀಪಿಹೀಷೋ ಜಹಿ ಶತ್ರೂಁರಭಿ ಗಾ ಇಂದ್ರ ತೃಂಧಿ ॥ ೩ ॥

॥ ಪದಪಾಠಃ ॥

ಏವ । ಪಾಹಿ । ಪ್ರತ್ನऽಥಾ । ಮಂದತು । ತ್ವಾ । ಶ್ರುಧಿ । ಬ್ರಹ್ಮ । ವವೃಧಸ್ವ । ಉತ । ಗೀಃऽಭಿಃ ।
ಆವಿಃ । ಸೂರ್ಯಂ । ಕೃಣುಹಿ । ಪೀಪಿಹಿ । ಇಷಃ । ಜಹಿ । ಶತ್ರೂನ್ । ಅಭಿ । ಗಾಃ । ಇಂದ್ರ । ತೃಂಧಿ ॥೩॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ಪ್ರತ್ನಥಾ ಪ್ರತ್ನಾನ್ಪೂರ್ವಾನ್ ಸೋಮಾನ್ಯಥಾಪಿಬಸ್ತಥೈವೈವಮಿಮಮಸ್ಮದೀಯಂ ಸೋಮಂ ಪಾಹಿ । ಪಿಬ । ಸ ಚ ಸೋಮಸ್ತ್ವಯಾ ಪೀತಃ ಸನ್ ತ್ವಾ ತ್ವಾಂ ಮಂದತು । ಮದಯತು । ಬ್ರಹ್ಮಾಸ್ಮಾಭಿಃ ಕೃತಂ ಸ್ತೋತ್ರಂ ಶ್ರುಧಿ । ಶೃಣು । ಉತಾಪಿ ಚ ಗೀರ್ಭಿಃ ಸ್ತುತಿರೂಪಾಭಿರ್ವಾಗ್ಭಿರ್ವವೃಧಸ್ವ । ತ್ವಂ ವರ್ಧಸ್ವ । ಅಪಿ ಚ ಸೂರ್ಯಂ ಸರ್ವಸ್ಯ ಪ್ರೇರಕಂ ದೇವಮಾವಿಷ್ಕೃಣುಹಿ । ಆವಿಷ್ಕುರು। ವಯಂ ಸೂರ್ಯಂ ಯಥಾ ಪಶ್ಯೇಮ ತಥಾ ಕುರ್ವಿತ್ಯರ್ಥಃ । ಇಷೋऽನ್ನಾನಿ ಚ ಪೀಪಿಹಿ । ಅಸ್ಮಭ್ಯಂ ಪ್ಯಾಯಯ । ಶತ್ರೂನಸ್ಮತ್ಸಪತ್ನಾನ್ ಜಹಿ । ನಾಶಯ । ಹೇ ಇಂದ್ರ ತ್ವಂ ಪಣಿಭಿರಪಹೃತಾ ಗಾ ಅಭಿ ತೃಂಧಿ । ಪ್ರಕಾಶಯ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಪ್ರತ್ನಥಾ**—ಹಿಂದಿನ ಸೋಮರಸಗಳನ್ನು ಪಾನಮಾಡಿದಂತೆಯೇ । **ಏವ**—ಈಗ ಅರ್ಪಿತವಾದ ರಸವನ್ನೂ । **ಪಾಹಿ**—ಪಾನಮಾಡು । **ತ್ವಾ**—ನಿನ್ನನ್ನು । **ಮಂದತು**—ಈ ರಸವು ತೃಪ್ತಿಗೊಳಿಸಲಿ । **ಬ್ರಹ್ಮ**—ನಮ್ಮ ಸ್ತುತಿಯನ್ನು । **ಶ್ರುಧಿ**—ಕೇಳು । **ಉತ**—ಮತ್ತು । **ಗೀರ್ಭಿಃ**—ನಮ್ಮ

ಸ್ತುತಿಗಳಿಂದ । **ವವೃಧಸ್ವ**—ವೃದ್ಧಿಯನ್ನು ಹೊಂದು । **ಸೂರ್ಯಂ**—ಸೂರ್ಯನನ್ನು । **ಆವಿಃ ಕೃಣುಹಿ**—ಪ್ರಕಾಶಪಡಿಸು । **ಇಷಃ**—ಅನ್ನಗಳನ್ನು । **ಪೀಪಿಹಿ**—ನಮಗೆ ಹೊಂದಿಸು । **ಶತ್ರೂನ್**—ನಮ್ಮ ಶತ್ರುಗಳನ್ನು । **ಜಹಿ**—ನಾಶಪಡಿಸು । ಇಂದ್ರ—ಎಲೈ ಇಂದ್ರನೇ । **ಗಾಃ**—ಅಪಹೃತವಾದ ಗೋವುಗಳನ್ನು । **ಅಭಿ ತೃಂಧಿ**—ಹಿಂದಕ್ಕೆ ಬರಮಾಡು

॥ ಭಾವಾರ್ಥ ॥

ಎಲೈ ಇಂದ್ರನೇ, ಹಿಂದಿನ ಸೋಮರಸಗಳನ್ನು ಪಾನಮಾಡಿದಂತೆಯೇ, ಈಗ ಅರ್ಪಿತವಾದ ರಸವನ್ನೂ ಪಾನಮಾಡು. ನಿನ್ನನ್ನು ಈ ರಸವು ತೃಪ್ತಿಗೊಳಿಸಲಿ. ನಮ್ಮ ಸ್ತುತಿಯನ್ನು ಕೇಳು. ಮತ್ತು ನಮ್ಮ ಸ್ತುತಿಗಳಿಂದ ವೃದ್ಧಿಯನ್ನು ಹೊಂದು. ಸೂರ್ಯನನ್ನು ಪ್ರಕಾಶಪಡಿಸು ನಮಗೆ ಅನ್ನಗಳನ್ನು ಹೊಂದಿಸು. ನಮ್ಮ ಶತ್ರುಗಳನ್ನು ನಾಶಪಡಿಸು. ಎಲೈ ಇಂದ್ರನೇ, ಅಪಹೃತವಾದ ಗೋವುಗಳನ್ನು ಹಿಂದಕ್ಕೆ ಬರಮಾಡು.

## English Translation.

Drink it as of old, and may it exhilarate you : hear our prayer, and be exalted by our praises ; make the sum visible, nourish us with food, destory our enemies, rescue the cattle.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿಯೂ ಇಂದ್ರನನ್ನು ಸೋಮಪಾನಮಾಡಬೇಕೆಂದು ಪ್ರಾರ್ಥಿಸಲಾಗಿದೆ. ಹಿಂದೆ ಅನೇಕ ಯಜ್ಞಗಳಲ್ಲಿ ಇಂದ್ರನು ಯಾವರೀತಿ ಸೋಮಪಾನಮಾಡಿ ಯಜಮಾನರನ್ನು ಅನುಗ್ರಹಿಸಿದನೋ ಅದರಂತೆ ಈಗಲೂ ಸೋಮಪಾನಮಾಡಿ ಪಣಿಗಳಿಂದ ಅಪಹೃತವಾದ ಗೋವುಗಳನ್ನು ಬಿಡಿಸಬೇಕೆಂದು ಇಂದ್ರನು ಪ್ರಾರ್ಥಿತನಾಗಿದ್ದಾನೆ. ಮತ್ತು ಇಂದ್ರನು ಗೋವುಗಳನ್ನು ಬಿಡಿಸಿದಮೇಲೆ ಅಂಧಕಾರದಿಂದ ಆವೃತನಾಗಿದ್ದ ಸೂರ್ಯನನ್ನು ಅಂತರಿಕ್ಷದಲ್ಲಿ ಸ್ಥಾಪಿಸಿ ಪ್ರಕಾಶಿಸುವಂತೆ ಮಾಡಿದ ವಿಷಯವೂ ಸಹ ಇಲ್ಲಿ ಉಕ್ತವಾಗಿದೆ.

॥ ಸಂಹಿತಾಪಾಠಃ ॥

ತೇ ತ್ವಾ ಮದಾ ಬೃಹದಿಂದ್ರ ಸ್ವಧಾವ ಇಮೇ ಪೀತಾ ಉಕ್ಷಯಂತ ದ್ಯುಮಂತಂ ।
ಮಹಾಮನೂನಂ ತವಸಂ ವಿಭೂತಿಂ ಮತ್ಸರಾಸೋ ಜರ್ಹೃಷಂತ ಪ್ರಸಾಹಂ ॥ ೪ ॥

॥ ಪದಪಾಠಃ ॥

ತೇ । ತ್ವಾ । ಮದಾಃ । ಬೃಹತ್ । ಇಂದ್ರ । ಸ್ವಧಾऽವಃ । ಇಮೇ । ಪೀತಾಃ । ಉಕ್ಷಯಂತ । ದ್ಯುಽಮಂತಂ ।

ಮಹಾಂ । ಅನೂನಂ । ತವಸಂ । ವಿऽಭೂತಿಂ । ಮತ್ಸರಾಸಃ । ಜರ್ಹೃಷಂತ । ಪ್ರऽಸಹಂ ॥ ೪ ॥

॥ ಸಾಯಣಭಾಷ್ಯಂ ॥

ಹೇ ಸ್ವಧಾವೋऽನ್ನವನ್ನಿಂದ್ರ ಮದಾ ಮದಕರಾಸ್ತ ಇಮೇ ಪೀತಾಃ ಸೋಮಾ ದ್ಯುಮಂತಂ ದೀಪ್ತಿಮಂತಂ ತ್ವಾ ತ್ವಾಂ ಬೃಹದತ್ಯಂತಮುಕ್ಷಯಂತ । ಸೇಚಯಂತು । ಅಪಿ ಚ ಹೇ ಇಂದ್ರ ತ್ವಾಂ ಮತ್ಸರಾಸೋ ಮದಕರಾಃ ಸೋಮಾ ಜರ್ಹೃಷಂತ । ಭೃಶಂ ಹರ್ಷಯಂತು । ಕೀದೃಶಂ । ಮಹಾಂ ಮಹಾಂತಂ ಪ್ರಭೂತಮನೂನಂ ಸರ್ವಗುಣೈರ್ನ್ಯೂನತಾರಹಿತಂ । ಸಂಪೂರ್ಣಗುಣಮಿತ್ಯರ್ಥಃ । ತವಸಂ ಪ್ರವೃದ್ಧಂ ವಿಭೂತಿಂ ವಿಭವಂತಂ ಪ್ರಸಾಹಂ ಶತ್ರೂಣಾಮಭಿಭವಿತಾರಂ ॥

॥ ಪ್ರತಿಪದಾರ್ಥ ॥

**ಸ್ವಧಾವಃ**—ಅನ್ನವಂತನಾದ । **ಇಂದ್ರ**—ಎಲೈ ಇಂದ್ರನೇ। **ಮದಾಃ**—ಮದಕಾರಕಗಳೂ । **ಪೀತಾಃ**—ಪಾನಮಾಡಲ್ಪಟ್ಟವೂ ಆದ । **ತೇ ಇಮೇ**—ಈ ಸೋಮರಸಗಳು । **ದ್ಯುಮಂತಂ**—ಕಾಂತಿಯುತನಾದ । **ತ್ವಾಂ**—ನಿನ್ನನ್ನು । **ಬೃಹತ್**—ಅತಿಯಾಗಿ । **ಉಕ್ಷಯಂತ**—ತುಂಬಿಕೊಳ್ಳಲಿ । **ಮತ್ಸರಾಸಃ**—ಮದಕಾರಕಗಳಾದ ಈ ಸೋಮರಸಗಳು । **ಮಹಾಂ**—ಮಹಾತ್ಮನೂ । **ಅನೂನಂ**—ಸರ್ವಗುಣಸಂಪನ್ನನೂ । **ತವಸಂ**—ಪ್ರವೃದ್ಧನೂ । **ವಿಭೂತಿಂ**—ಪ್ರಭಾವವುಳ್ಳವನೂ । **ಪ್ರಸಾಹಂ**—ಶತ್ರುಧರ್ಷಕನೂ ಆದ ನಿನ್ನನ್ನು । **ಜರ್ಹೃಷಂತ**—ಸಂತೋಷಗೊಳಿಸಲಿ.

॥ ಭಾವಾರ್ಥ ॥

ಅನ್ನವಂತನಾದ ಎಲೈ ಇಂದ್ರನೇ, ಮದಕಾರಕಗಳೂ, ಪಾನಮಾಡಲ್ಪಟ್ಟವೂ ಆದ ಈ ಸೋಮರಸಗಳು ಕಾಂತಿಯುತನಾದ ನಿನ್ನನ್ನು ಅತಿಯಾಗಿ ತುಂಬಿಕೊಳ್ಳಲಿ. ಮದಕಾರಕಗಳಾದ ಈ ಸೋಮರಸಗಳು ಮಹಾತ್ಮನೂ, ಸರ್ವಗುಣಸಂಪನ್ನನೂ, ಪ್ರವೃದ್ಧನೂ ಪ್ರಭಾವವುಳ್ಳವನೂ, ಶತ್ರುಧರ್ಷಕನೂ ಆದ ನಿನ್ನನ್ನು ಸಂತೋಷಗೊಳಿಸಲಿ.

## English Translation.

Abounding in food, Indra, let these exhilarating draughts copiously bedew you, the resplendent : let the inebriating juices delight you, who are mighty, deficient in no (excellence), powerful, manifold, the overcomer of foes.

। ಸಂಹಿತಾಪಾಠಃ ।

ಯೇಭಿಃ ಸೂರ್ಯ॑ಮು॒ಷಸಂ॑ ಮಂದ॒ಸಾನೋಽವಾ॑ಸ॒ಯೋಽಪ॑ ದೃ॒ಳ್ಹಾನಿ॒
ದರ್ದ್ರ॑ತ್ ।
ಮ॒ಹಾಮದ್ರಿಂ॒ ಪರಿ॒ ಗಾ ಇಂ॑ದ್ರ॒ ಸಂತಂ॑ ನು॒ತ್ಥಾ ಅಚ್ಯು॑ತಂ॒ ಸದ॑ಸ॒ಸ್ಪರಿ॒
ಸ್ವಾತ್ ॥ ೫ ॥

। ಪದಪಾಠಃ ।

ಯೇಭಿಃ । ಸೂರ್ಯಂ । ಉ॒ಷಸಂ॑ । ಮಂ॒ದ॒ಸಾನಃ । ಅವಾ॑ಸಯಃ । ಅಪ॑ । ದೃ॒ಳ್ಹಾನಿ॑ । ದರ್ದ್ರ॑ತ್ ।
ಮ॒ಹಾಂ । ಅದ್ರಿಂ॑ । ಪರಿ॑ । ಗಾಃ । ಇಂ॒ದ್ರ॒ । ಸಂತಂ॑ । ನು॒ತ್ಥಾಃ । ಅಚ್ಯು॑ತಂ । ಸದ॑ಸಃ । ಪರಿ॑ । ಸ್ವಾತ್ । ೫॥

। ಸಾಯಣಭಾಷ್ಯಂ ।

ಹೇ ಇಂದ್ರ ಯೇಭಿರ್ಯೈಃ ಸೋಮೈರ್ಮಂದಸಾನೋ ಮೋದಮಾನಸ್ತ್ವಂ ಸೂರ್ಯಂ ಸರ್ವಸ್ಯ ಪ್ರೇರಕಂ ದೇವಮುಷಸಮುಷೋದೇವತಾಂ ಚಾವಾಸಯಃ ಸ್ವಸ್ಥಾನೇ ನ್ಯವಾಸಯಃ । ಅಥವಾ ಸೂರ್ಯೋಷಸೌ ಯಥಾ ತಮಾಂಸಿ ವಿವಾಸಯತಸ್ತಥಾಕಾರ್ಷೀಃ । ಕಿಂ ಕುರ್ವನ್ । ದೃಳ್ಹಾನಿ ದೃಢಾನಿ ತಮಾಂಸ್ಯಪ ದರ್ದ್ರತ್ ಅಪದಾರಯನ್ । ಕಿಂಚ ಹೇ ಇಂದ್ರ ತ್ವಂ ಪಣಿಭಿರಪಹೃತಾ ಗಾಃ ಪರಿ ಸಂತಂ ಪರಿತೋ ವಿದ್ಯಮಾನಂ ಮಹಾಂ ಮಹಾಂತಮದ್ರಿಂ ಪರ್ವತಂ ನುತ್ಥಾಃ । ಅನುದಃ । ಕೀದೃಶಂ । ಸ್ವಾತ್ಸ್ವಕೀಯಾತ್ಸದಸಃ ಸ್ಥಾನಾತ್ಪರಿ ಪರಿತೋಽಚ್ಯುತಮವಿಚಾಲಿತಂ ವಿನಾಶರಹಿತಂ । ಸ್ಥಿರಮಿತ್ಯರ್ಥಃ ॥

। ಪ್ರತಿಪದಾರ್ಥ ।

(ಎಲೈ ಇಂದ್ರನೇ) **ಯೇಭಿಃ**—ಯಾವ ಆದೇ ಸೋಮರಸಗಳಿಂದ । **ಮಂದಸಾನಃ**—ತೃಪ್ತಿಯನ್ನು ಹೊಂದಿದ ನೀನು । **ಸೂರ್ಯಂ**—ಸೂರ್ಯನನ್ನೂ । **ಉಷಸಂ**— ಉಷಸ್ಸನ್ನೂ । **ಅವಾಸಯಃ**— ಅವರವರ ಸ್ಥಾನದಲ್ಲಿ ಸ್ಥಾಪಿಸಿದೆ । **ದೃಳ್ಹಾನಿ**—ಕಗ್ಗತ್ತಲೆಗಳನ್ನು । **ಅಪ ದರ್ದ್ರತ್**—ದೂರಕ್ಕೆ ಓಡಿಸಿದೆ । **ಇಂದ್ರ**— ಎಲೈ ಇಂದ್ರನೇ । **ಸ್ವಾತ್ ಸದಸಃ ಪರಿ**— ತನ್ನ ಸ್ವಸ್ಥಾನದಿಂದ । **ಅಚ್ಯುತಂ**— ಚಲಿಸದೇ ನಿಂತಿದ್ದುದೂ । **ಗಾಃ ಪರಿ**—ಗೋವುಗಳ ಸುತ್ತಲೂ । **ಸಂತಂ**—ವ್ಯಾಪಿಸಿದ್ದುದೂ । **ಮಹಾಂ**—ವಿಸ್ತೃತವಾದುದೂ ಆದ । **ಅದ್ರಿಂ**—ಪರ್ವತವನ್ನು । **ನುತ್ಥಾಃ**—ಭೇಧಿಸಿಕೊಂಡು ಒಳಕ್ಕೆ ನುಗ್ಗಿದೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಯಾವ ಆದೇ ಸೋಮರಸಗಳ ಪಾನದಿಂದ ತೃಪ್ತಿಯನ್ನು ಹೊಂದಿದ ನೀನು ಸೂರ್ಯನನ್ನೂ ಮತ್ತು ಉಷಸ್ಸನ್ನೂ ಅವರವರ ಸ್ಥಾನದಲ್ಲಿ ಸ್ಥಾಪಿಸಿದೆ. ಕಗ್ಗತ್ತಲೆಗಳನ್ನು ದೂರಕ್ಕೆ ಓಡಿಸಿದೆ. ಎಲೈ ಇಂದ್ರನೇ,

ತನ್ನ ಸ್ವಸ್ಥಾನದಿಂದ ಚಲಿಸದೇ ಅಚಲವಾದುದೂ ಗೋವುಗಳನ್ನು ಸುತ್ತುವರಿದು ವ್ಯಾಪಿಸಿದುದೂ, ವಿಸ್ತೃತವಾದುದೂ ಆದ ಪರ್ವತವನ್ನೂ ಭೇದಿಸಿ ಒಳಕ್ಕೆ ನುಗ್ಗಿಹೋದೆ

### English Translation.

By which (juices) being exhilarated you have appointed the sun and the dawn (to their offices), driving away the solid (glooms) : you have penetrated, Indra, the mountain, unmoved from its own seat, concealing the cattle.

॥ ವಿಶೇಷವಿಷಯಗಳು ॥

ಈ ಸೂಕ್ತದ ಮೂರನೆಯ ಋಕ್ಕಿನಲ್ಲಿ ವಿವರಿಸಿರುವಂತೆ ಈ ಋಕ್ಕಿನಲ್ಲಿಯೂ ಸಹ ಇಂದ್ರನು ಪರ್ವತ ಗುಹೆಗಳಲ್ಲಿದ್ದ ಗೋವುಗಳನ್ನು ಬಿಡಿಸಿದನಂತರ ಅಂತರಿಕ್ಷದಲ್ಲಿ ಅಂಧಕಾರಾವೃತರಾಗಿದ್ದ ಉಷಸ್ಸನ್ನೂ, ಸೂರ್ಯನನ್ನೂ ಮತ್ತೆ ಪ್ರಕಾಶಿಸುವಂತೆ ಮಾಡಿದನು ಎಂಬ ವಿಷಯವು ಉಕ್ತವಾಗಿದೆ.

॥ ಸಂಹಿತಾಪಾಠಃ ॥

ತವ ಕ್ರತ್ವಾ ತವ ತದ್ದಂಸನಾಭಿರಾಮಾಸು ಪಕ್ವಂ ಶಚ್ಯಾ ನಿ ದೀಧಃ ।
ಔರ್ಣೋರ್ದುರ ಉಸ್ರಿಯಾಭ್ಯೋ ವಿ ದೃಳ್ಹೋದೂರ್ವಾದ್ಗಾ ಅಸೃಜೋ
ಅಂಗಿರಸ್ವಾನ್ ॥ ೬ ॥

॥ ಪದಪಾಠಃ ॥

ತವ । ಕ್ರತ್ವಾ । ತವ । ತತ್ । ದಂಸನಾಭಿಃ । ಆಮಾಸು । ಪಕ್ವಂ । ಶಚ್ಯಾ । ನಿ । ದೀಧರಿತಿ ದೀಧಃ ।
ಔರ್ಣೋಃ । ದುರಃ । ಉಸ್ರಿಯಾಭ್ಯಃ । ವಿ । ದೃಳ್ಹಾ । ಉತ್ । ಊರ್ವಾತ್ । ಗಾಃ । ಅಸೃಜಃ । ಅಂಗಿ-
ರಸ್ವಾನ್ ॥ ೬ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತವ ಕ್ರತ್ವಾ ತ್ವದೀಯಯಾ ಪ್ರಜ್ಞಯಾ ತವ ದಂಸನಾಭಿಸ್ತ್ವದೀಯೈಃ ಕರ್ಮಭಿಃ ಶಚ್ಯಾ ಸಾಮರ್ಥ್ಯೇನಾಮಾಸ್ವಪಕ್ವಾಸು ಗೋಷು ಪಕ್ವಂ ಪರಿಣತಂ ತತ್ಪ್ರಸಿದ್ಧಂ ಪಯೋ ನಿ ದೀಧಃ । ನಿತರಾಂ ಧಾರಯಸಿ । ಅಪಿ ಚ ಹೇ ಇಂದ್ರ ತ್ವಮುಸ್ರಿಯಾಭ್ಯೋ ಗೋಭ್ಯಃ । ಗಾ ನಿರ್ಗಮಯಿತುಮಿತ್ಯರ್ಥಃ । ದೃಳ್ಹಾ ದೃಢಾನಿ । ವಲೇನ ಪಾಷಾಣಾದಿಭಿರ್ದೃಢೀಕೃತಾನೀತ್ಯರ್ಥಃ । ದುರೋ ದ್ವಾರಾಣಿ

ವ್ಯೈಳೋಃ । ಉದ್ಘಾಟಿತವಾನಸಿ । ಅಂಗಿರಸ್ವಾನಂಗಿರೋಭಿರ್ಯುಕ್ತಸ್ತ್ವಮೂರ್ವಾತ್ಸೈವಮೂಹಾತ್ । ಗೋಷ್ಠಾದಿತ್ಯರ್ಥಃ । ಗಾ ಉದಸೃಜಃ । ಉದಗಮಯಃ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ತವ** — ನಿನ್ನ । **ಕ್ರತ್ವಾ** — ಪ್ರಜ್ಞೆಯಿಂದಲೂ । **ತವ** — ನಿನ್ನ । **ದಂಸನಾಭಿಃ** — ಕರ್ಮಗಳಿಂದಲೂ । **ಶಚ್ಯಾ** — ಸಾಮರ್ಥ್ಯದಿಂದಲೂ । **ಆಮಾಸು** — ಅಪಕ್ವವಾದ ಗೋವುಗಳಲ್ಲಿ । **ಪಕ್ವಂ** — ಪಕ್ವವಾದುದೂ । **ತತ್** — ಪ್ರಸಿದ್ಧವಾದುದೂ ಆದ ಕ್ಷೀರವನ್ನು । **ನಿ ದೀಧಃ** — ಧರಿಸುವಂತೆ ಮಾಡಿದೆ । **ಉಸ್ರಿಯಾಭ್ಯಃ** — ಆ ಗೋವುಗಳಿಗೆ (ಪ್ರವೇಶಿಸಲು) । **ದೃಹ್ಳಾ** — ಅತ್ಯಂತ ದೃಢವಾದ । **ದುರಃ** — ದ್ವಾರಗಳನ್ನು । **ವಿ ಔರ್ಣೋಃ** — ಬಿಡಿಸಿ ತೆರೆಯುವಂತೆ ಮಾಡಿದೆ । **ಅಂಗಿರಸ್ವಾನ್** — ಅಂಗಿರಸ್ಸುಗಳೊಂದಿಗೆ ಇದ್ದ ನೀನು । **ಊರ್ವಾತ್** — ಗೋವುಗಳ ಕೊಟ್ಟಿಗೆಯಿಂದ । **ಗಾಃ** — ಗೋವುಗಳನ್ನು । **ಉತ್ ಅಸೃಜಃ** — ಹೊರಕ್ಕೆ ಬಿಡಿಸಿದೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನ ಪ್ರಜ್ಞೆಯಿಂದಲೂ, ನಿನ್ನ ಕರ್ಮಗಳಿಂದಲೂ, ಸಾಮರ್ಥ್ಯದಿಂದಲೂ ಸಹ ಅಪಕ್ವವಾದ ಗೋವುಗಳಲ್ಲಿ ಪಕ್ವವಾದುದೂ, ಪ್ರಸಿದ್ಧವಾದುದೂ ಆದ ಕ್ಷೀರವನ್ನು ಧರಿಸುವಂತೆ ಮಾಡಿದೆ. ಆ ಗೋವುಗಳ ಪ್ರವೇಶಕ್ಕೆ ಅತ್ಯಂತ ದೃಢವಾದ ದ್ವಾರಗಳನ್ನು ಬಿಡಿಸಿ ತೆರೆಯುವಂತೆ ಮಾಡಿದೆ. ಅಂಗಿರಸ್ಸುಗಳೊಂದಿಗೆ ಇದ್ದ ನೀನು ಗೋವುಗಳ ಕೊಟ್ಟಿಗೆಯಿಂದ ಗೋವುಗಳನ್ನು ಹೊರಕ್ಕೆ ಬಿಡಿಸಿ ಹೊರಕ್ಕೆ ಬರುವಂತೆ ಮಾಡಿದೆ.

## English Translation.

By your wisdom, by your deeds, through your power, you have developed the mature (milk) in the immature (udders), you have opened the strong doors for the cattle (to come forth): associated with the Angirasas, you have liberated the cows from their fold.

॥ ವಿಶೇಷವಿಷಯಗಳು ॥

ಇಂದ್ರನ ಪ್ರಜ್ಞೆಯೂ, ಸಾಮರ್ಥ್ಯಾತಿಶಯಗಳೂ ಅಗಾಧವಾಗಿವೆ. ಅದುವರಿಗೂ ಹಾಲನ್ನು ಕೊಡದಿದ್ದ ಗೋವುಗಳು ಕರುವನ್ನು ಹಾಕಿದ ಕೂಡಲೇ ಹಾಲನ್ನು ಕೊಡಲು ಪ್ರಾರಂಭಿಸುವವು. ಇಂತಹ ಅಪಕ್ವವಾದ ಗೋವುಗಳಲ್ಲಿ ಕ್ಷೀರವು ತುಂಬಿಕೊಂಡಿರುವಂತೆ ಮಾಡುವುದು ಇಂದ್ರನ ಸಾಹಸಕಾರ್ಯಗಳಲ್ಲಿ ಒಂದಾಗಿದೆ. ಪರ್ವತ ಗುಹೆಗಳಲ್ಲಿ ಪಣಿಗಳು ಕೂಡಿದ್ದ ಗೋವುಗಳನ್ನು ಬಿಡಿಸುವುದಕ್ಕಾಗಿ ಗುಹೆಯ ದ್ವಾರಗಳಿಗೆ ಅಡ್ಡಲಾಗಿ ಮುಚ್ಚಿದ್ದ ಕಲ್ಲುಬಂಡೆಗಳಲ್ಲಿ ತೆಗೆದು ಗೋವುಗಳು ಹೊರಗೆ ಬರುವಂತೆ ಮಾಡಿದನು ಇಂದ್ರನು ಮಾಡಿದ ಸಾಹಸಕಾರ್ಯಗಳಲ್ಲಿ ಇದು ಎರಡನೆಯದು. ಈ ಎರಡುವಿಧ ಕಾರ್ಯಗಳನ್ನು ಇಂದ್ರನು ಮಾಡಿದನೆಂದು ಇಂದ್ರನ ಶಕ್ತಿಸಾಮರ್ಥ್ಯಗಳನ್ನೂ, ಗುಣಗಳನ್ನೂ ಇಲ್ಲಿ ವರ್ಣಿಸಲಾಗಿದೆ. ಗೋವುಗಳಲ್ಲಿ ಕ್ಷೀರವನ್ನು ತುಂಬುವುದೂ ಅಂತರಿಕ್ಷದಲ್ಲಿ ಸೂರ್ಯನನ್ನು ಸ್ಥಾಪಿಸಿ ಪ್ರಕಾಶಿಸುವಂತೆ ಮಾಡುವ ವಿಷಯವೂ ಸಹ—

ಆಮಾಸು ಪಕ್ವಮೈರಯ ಆ ಸೂರ್ಯಂ ರೋಹಯೋ ದಿವಿ ।

(ಋ. ಸಂ. ೮-೮೯-೭)

ಇತ್ಯಾದಿ ಋಕ್ಕುಗಳಲ್ಲಿ ವಿವರಿಸಲಾಗಿದೆ.

॥ ಸಂಹಿತಾಪಾಠಃ ॥

ಪಪ್ರಾಥ ಕ್ಷಾಂ ಮಹಿ ದಂಸೋ ವ್ಯುರ್ವೀಮುಪ ದ್ಯಾಮೃಷ್ವೋ ಬೃಹ-
ದಿಂದ್ರ ಸ್ತಭಾಯಃ ।
ಅಧಾರಯೋ ರೋದಸೀ ದೇವಪುತ್ರೇ ಪ್ರತ್ನೇ ಮಾತರಾ ಯಹ್ವೀ ಋತಸ್ಯ॥

॥ ಪದಪಾಠಃ ॥

ಪಪ್ರಾಥ । ಕ್ಷಾಂ । ಮಹಿ । ದಂಸಃ । ವಿ । ಉರ್ವೀಂ । ಉಪ । ದ್ಯಾಂ । ಋಷ್ವಃ । ಬೃಹತ್ । ಇಂದ್ರ । ಸ್ತಭಾಯಃ ।
ಅಧಾರಯಃ । ರೋದಸೀ ಇತಿ । ದೇವಪುತ್ರೇ ಇತಿ ದೇವಽಪುತ್ರೇ । ಪ್ರತ್ನೇ ಇತಿ । ಮಾತರಾ । ಯಹ್ವೀ ಇತಿ । ಋತಸ್ಯ ॥ ೭ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ಮಹಿ ಮಹತಾ ದಂಸೋ ದಂಸಸಾ ಕರ್ಮಣೋರ್ವೀಂ ವಿಸ್ತೀರ್ಣಾಂ ಕ್ಷಾಂ ಭೂಮಿಂ ವಿ ಪಪ್ರಾಥ । ವಿಶೇಷೇಣ ಪೂರಿತವಾನಸಿ ॥ ಪ್ರಾ ಪೂರಣ ಇತಿ ಧಾತುಃ ॥ ಹೇ ಇಂದ್ರ ಋಷ್ವೋ ಮಹಾಂಸ್ತ್ವಂ ಬೃಹದ್ಬೃಹತೀಂ ದ್ಯಾಂ ದಿವಮುಪ ಸ್ತಭಾಯಃ । ಉಪಸ್ತಭ್ನಾಸಿ । ನಿರಾಲಂಬಂ ವಿತಿಷ್ಠಂತೀ ದ್ಯೌರ್ಯಥಾ ನ ಪತತೀಂದ್ರಸ್ತಥಾ ಕರೋತೀತ್ಯರ್ಥಃ । ಅಪಿ ಚ ತ್ವಂ ರೋದಸೀ ದ್ಯಾವಾಪೃಥಿವ್ಯಾವಧಾರಯಃ । ಪೋಷಣೈರ್ಧಾರಯಸಿ । ಕೀದೃಶ್ಯೌ । ದೇವಪುತ್ರೇ । ದೇವಾಃ ಪುತ್ರಾ ಯಯೋಸ್ತೇ । ಪ್ರತ್ನೇ ಪುರಾಣೇ ಮಾತರಾ ಮಾತರೌ ನಿರ್ಮಾತ್ರ್ಯಾವೃತಸ್ಯೋದಕಸ್ಯ ಯಜ್ಞಸ್ಯ ವಾ ಯಹ್ವೀ ಯಹ್ವ್ಯೌ ಮಹತ್ಯೌ । ಯದ್ವಾ । ವಿಶ್ವಸ್ಯ ಮಾತರಾವೃತಸ್ಯ ಬ್ರಹ್ಮಣೋ ಯಹ್ವೀ ಪುತ್ರ್ಯೌ । ಯಹುರಿತ್ಯಪತ್ಯನಾಮೈತತ್ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) ಮಹಿ—ಮಹತ್ತಾದ । ದಂಸಃ—ಕರ್ಮದಿಂದ । ಉರ್ವೀಂ—ಅತಿ ವಿಸ್ತೃತವಾದ । ಕ್ಷಾಂ—ಭೂಮಿಯನ್ನು । ವಿ ಪಪ್ರಾಥ—ವ್ಯಾಪಿಸಿದ್ದೀಯೆ । ಇಂದ್ರ—ಎಲೈ ಇಂದ್ರನೇ । ಋಷ್ವಃ—

ಮಹಾತ್ಮನಾದ ನೀನು । **ಬೃಹತ್**—ಅತಿ ಪ್ರಭೂತವಾದ । **ದ್ಯಾಂ**—ದ್ಯುಲೋಕವನ್ನು । **ಉಪ ಸ್ತಭಾಯುಃ**—ಎತ್ತಿ ಹಿಡಿದಿದ್ದೀಯೆ । **ದೇವಪುತ್ರೇ**—ದೇವತೆಗಳೇ ಪುತ್ರರಾಗಿ ಉಳ್ಳವರೂ । **ಪ್ರತ್ನೇ**—ಪುರಾತನರೂ । **ಮಾತರಾ**—ಸಕಲಲಕ್ಕೂ ನಿರ್ಮಾಪಕರೂ । **ಋತಸ್ಯ**—ಯಜ್ಞಕ್ಕೆ । **ಯಹ್ವೀ**—ಮಹತ್ತಾದ ಜನಕರೂ ಆದ । **ರೋದಸೀ**—ದ್ಯಾವಾಪೃಥಿವಿಗಳನ್ನು । **ಅಧಾರಯಃ**—ಎತ್ತಿ ಹಿಡಿದಿದ್ದೀಯೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ನಿನ್ನ ಮಹತ್ಕರ್ಮದಿಂದ ಅತಿ ವಿಸ್ತೃತವಾದ ಪೃಥ್ವಿಯನ್ನು ವ್ಯಾಪಿಸಿದ್ದೀಯೆ. ಮಹಾತ್ಮನಾದ ನೀನು ಅತಿಪ್ರಭೂತವಾದ ದ್ಯುಲೋಕವನ್ನು ಎತ್ತಿ ಹಿಡಿದಿದ್ದೀಯೆ. ದೇವತೆಗಳನ್ನೇ ಪುತ್ರರನ್ನಾಗಿ ಉಳ್ಳವರೂ, ಪುರಾತನರೂ, ಸಕಲಲಕ್ಕೂ ನಿರ್ಮಾಪಕರೂ, ಯಜ್ಞಕ್ಕೆ ಮಹತ್ತಾದ ಜನಕರೂ ಆದ ದ್ಯಾವಾಪೃಥಿಗಳನ್ನು ಎತ್ತಿ ಹಿಡಿದಿದ್ದೀಯೆ.

English Translation.

You have filled the wide earth, Indra, with (the fame of) your deeds: you, the mighty one, have propped up the vast heaven: you have sustained the heaven and earth, whose children are the gods, (and who are) the old and mighty parents of sacrifice.

॥ ಸಂಹಿತಾಪಾಠಃ ॥

ಅಧ ತ್ವಾ ವಿಶ್ವೇ ಪುರ ಇಂದ್ರ ದೇವಾ ಏಕಂ ತವಸಂ ದಧಿರೇ ಭರಾಯ ।
ಅದೇವೋ ಯದಭ್ಯೌಹಿಷ್ಟ ದೇವಾನ್ತ್ಸ್ವರ್ಷಾತಾ ವೃಣತ ಇಂದ್ರಮತ್ರ ॥೮॥

॥ ಪದಪಾಠಃ ॥

ಅಧ । ತ್ವಾ । ವಿಶ್ವೇ । ಪುರಃ । ಇಂದ್ರ । ದೇವಾಃ । ಏಕಂ । ತವಸಂ । ದಧಿರೇ । ಭರಾಯ ।
ಅದೇವಃ । ಯತ್ । ಅಭಿ । ಔಹಿಷ್ಟ । ದೇವಾನ್ । ಸ್ವಃऽಸಾತಾ । ವೃಣತೇ । ಇಂದ್ರಂ । ಅತ್ರ ॥ ೮ ॥

॥ ಸಾಯಣಭಾಷ್ಯಂ ॥

ಅಧಾಧುನಾಸ್ಮಿನ್ಕಾಲೇ ವಿಶ್ವೇ ದೇವಾಃ ಸರ್ವೇ ಮರುದಾದಯೋ ಹೇ ಇಂದ್ರ ಏಕಂ ಮುಖ್ಯಂ ತವಸಂ ಪ್ರವೃದ್ಧಂ ಬಲವಂತಂ ತ್ವಾ ತ್ವಾಂ ಭರಾಯ ಸಂಗ್ರಾಮಾಯ ಪುರೋ ದಧಿರೇ । ಪುರಸ್ತಾಚ್ಚಕ್ರಿರೇ। ಯದ್ಯದಾದೇವೋ ವೃತ್ರೋಽಸುರೋ ದೇವಾನಭ್ಯೌಹಿಷ್ಟ ಸಂಗ್ರಾಮಾರ್ಥಮಭಿಗತವಾನ್ ॥ ಹಿಹಸಿಗಗ-

ತಿಕರ್ಮಾ ॥ ಕಿಂಚಾಸ್ಮಿನ್ಕಾಲೇ ಸ್ವರ್ಷಾತಾ ಸ್ವರ್ಷಾತೌ ಸಂಗ್ರಾಮ ಇಂದ್ರಂ ವೃಣತೇ । ಸಂಭಜಂತೇ ಸ್ಮ । ಮರುತ ಇತಿ ಶೇಷಃ । ಮರುತೋ ಹೀಂದ್ರಂ ದೇವೇಷು ಪಲಾಯಿತೇಷು ಸಮಭಜನ್ನಿತ್ಯರ್ಥಃ । ಅಧುನಾ ಪುರೋ ದಧಿರ ಇತಿ ಸಂಬಂಧಃ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಯತ್**—ಯಾವಾಗ । **ಅದೇವಃ**—ವೃತ್ರನು । **ದೇವಾನ್**—ದೇವತೆಗಳನ್ನು । **ಅಭ್ಯೌಹಿಷ್ಟ**—ಪ್ರತಿಭಟಿಸಿದನೋ । **ಅಧ**—ಆ ಕಾಲದಲ್ಲಿ । **ವಿಶ್ವೇ ದೇವಾಃ**—ಸಕಲ ದೇವತೆಗಳೂ । **ಏಕಂ**—ಮುಖ್ಯನಾದವನೂ । **ತವಸಂ**—ಬಲಶಾಲಿಯಾದವನೂ ಆದ । **ತ್ವಾ**—ನಿನ್ನನ್ನು । **ಭರಾಯ**—ಸಂಗ್ರಾಮಾರ್ಥವಾಗಿ । **ಪುರಃ ದಧಿರೇ**—ತಮ್ಮ ಮುಂದಿಟ್ಟುಕೊಂಡರು । **ಅತ್ರ ಸ್ವರ್ಷಾತಾ**—ಇಂತಹ ಸಂಗ್ರಾಮದಲ್ಲಿ । (**ಮರುತಃ**—ಮರುತ್ತುಗಳು) । **ಇಂದ್ರಂ**—ಇಂದ್ರನನ್ನು । **ವೃಣತೇ**—ಸೇವಿಸುತ್ತಾರೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಯಾವಾಗ ವೃತ್ರನು ದೇವತೆಗಳನ್ನು ಪ್ರತಿಭಟಿಸಿದನೋ ಆ ಕಾಲದಲ್ಲಿ ಸಕಲ ದೇವತೆಗಳೂ ಮುಖ್ಯನಾದವನೂ, ಬಲಶಾಲಿಯಾದವನೂ ಆದ ನಿನ್ನನ್ನು ಸಂಗ್ರಾಮಾರ್ಥವಾಗಿ ಮುಂದಿಟ್ಟುಕೊಂಡರು. ಇಂತಹ ಸಂಗ್ರಾಮಗಳಲ್ಲಿ ಮರುತ್ತುಗಳು ಇಂದ್ರನ ಜತೆಯಲ್ಲಿದ್ದು ಅವನನ್ನು ಸೇವಿಸುತ್ತಾರೆ.

## English Translation.

All the gods then placed you, Indra, as their mighty chief in front for battle: when the impious (Asuras) assailed the deities: the Maruts supported Indra in the conflict.

॥ ವಿಶೇಷವಿಷಯಗಳು ॥

ಇಲ್ಲಿಂದ ಮುಂದಿನ ನಾಲ್ಕೈದು ಋಕ್ಕುಗಳಲ್ಲಿ ಇಂದ್ರನು ವೃತ್ರಾಸುರನನ್ನು ಸಂಹಾರಮಾಡಿದನೆಂದು ವರ್ಣಿಸಲಾಗಿದೆ. ವೃತ್ರಹನನ ಕಾಲದಲ್ಲಿ ಮರುದ್ದೇವತೆಗಳು ಇಂದ್ರನ ಜತೆಯಲ್ಲಿದ್ದು ಇಂದ್ರನಿಗೆ ಸಹಾಯಮಾಡಿದ ವಿಷಯದ ಪ್ರಸ್ತಾಪವೂ ಇದೆ.

॥ ಸಂಹಿತಾಪಾಠಃ ॥

ಅಧ ದ್ಯೌಶ್ಚಿತ್ತೇ ಅಪ ಸಾ ನು ವಜ್ರಾದ್ದ್ವಿತಾನಮದ್ಭಿಯಸಾ ಸ್ವಸ್ಯ ಮನ್ಯೋಃ ।
ಅಹಿಂ ಯದಿಂದ್ರೋ ಅಭ್ಯೋಹಸಾನಂ ನಿ ಚಿದ್ವಿಶ್ವಾಯುಃ ಶಯಥೇ ಜಘಾನ ॥ ೯ ॥

॥ ಪದಪಾಠಃ ॥

ಅಥ । ದ್ಯೌಃ । ಚಿತ್ । ತೇ । ಅಪ । ಸಾ । ನು । ವಜ್ರಾತ್ । ದ್ವಿತಾ । ಅನಮತ್ । ಭಿಯಸಾ । ಸ್ವಸ್ಯ ।
ಮನ್ಯೋಃ ।

ಅಹಿಂ । ಯತ್ । ಇಂದ್ರಃ । ಅಭಿ । ಓಹಸಾನಂ । ನಿ । ಚಿತ್ । ವಿಶ್ವಽಆಯುಃ । ಶಯಥೇ । ಜಘಾನ ॥೯॥

॥ ಸಾಯಣಭಾಷ್ಯಂ ॥

ಸಾ ಪ್ರಸಿದ್ಧಾ ದೇವಾನಾಮಾಶ್ರಯತ್ವೇನ ದ್ಯೌಶ್ಚಿತ್ ದ್ಯುಲೋಕೋಽಪಿ ಹೇ ಇಂದ್ರ ಅಥಾಧುನಾಸ್ಮಿನ್ಕಾಲೇ ದ್ವಿತಾ ದ್ವಿಧಾ ದ್ವಿಪ್ರಕಾರಾತ್ತೇ ತ್ವದೀಯಾದ್ವಜ್ರಾತ್ಸ್ವಸ್ಯಾತ್ಮೀಯಾನ್ಮನ್ಯೋಃ ಕ್ರೋಧಾಚ್ಚ ಭಿಯಸಾ ಭಯೇನಾಪಾನಮತ್ । ಅಪನನಾಮ । ನು ಇತಿ ಪೂರಣಃ । ವಿಶ್ವಾಯುರ್ಬಹ್ವನ್ನ ಇಂದ್ರೋ ಯದ್ಯದಾಭ್ಯೋಹಸಾನಮಭಿಗಚ್ಛಂತಮಹಿಂ ವೃತ್ರಂ ಶಯಥೇ ಶಯನನಿಮಿತ್ತೇ । ಮರಣಾಯೇತ್ಯರ್ಥಃ । ನಿ ಜಘಾನ ನ್ಯವಧೀತ್ । ಚಿದಿತಿ ಪೂರಣಃ । ಯದಾ ವೃತ್ರಂ ಜಘಾನಾಸ್ಮಿನ್ಕಾಲೇ ದ್ಯೌರ್ನನಾಮೇತಿ ಸಂಬಂಧಃ ॥

॥ ಪ್ರತಿಪದಾರ್ಥ ॥

**ವಿಶ್ವಾಯುಃ**—ಪ್ರಭೂತವಾದ ಅನ್ನವುಳ್ಳ । **ಇಂದ್ರಃ**—ಇಂದ್ರನಾದ ನೀನು । **ಯತ್**—ಯಾವಾಗ । **ಅಭ್ಯೋಹಸಾನಂ**—ಪ್ರತಿಭಟಿಸತಕ್ಕ । **ಅಹಿಂ**—ವೃತ್ರನನ್ನು । **ಶಯಥೇ**—ನಾಶವಾಗಲು । **ನಿ ಜಘಾನ**—ಸಂಹರಿಸಿದೆಯೋ । **ಅಥ**—ಆ ಕಾಲದಲ್ಲಿ । **ಸಾ**—ಪ್ರಸಿದ್ಧವಾದ । **ದ್ಯೌಶ್ಚಿತ್**—ದ್ಯುಲೋಕವೂ ಸಹ । **ತೇ**—ನಿನ್ನ । **ದ್ವಿತಾ**—ಎರಡು ವಿಧವಾದ ಶಕ್ತಿಯಿಂದ (ಎಂದರೆ) । **ವಜ್ರಾತ್**—ವಜ್ರಾಯುಧದಿಂದಲೂ । **ಸ್ವಸ್ಯ**—ನಿನ್ನ । **ಮನ್ಯೋಃ**—ಕ್ರೋಧದಿಂದಲೂ ಉಂಟಾದ । **ಭಿಯಸಾ**—ಭಯದಿಂದ । **ಅಪ ಅನಮತ್**—ನಮ್ರತೆಯಿಂದ ಬಾಗಿತು.

॥ ಭಾವಾರ್ಥ ॥

ಎಲೈ ಇಂದ್ರನೇ, ಪ್ರಭೂತವಾದ ಅನ್ನವುಳ್ಳವನೂ, ಒಡೆಯನೂ ಆದ ನೀನು ನಿನ್ನನ್ನು ಪ್ರತಿಭಟಿಸತಕ್ಕ ವೃತ್ರನನ್ನು ನಾಶಮಾಡಲು ಯಾವಾಗ ಸಂಹರಿಸಿದೆಯೋ, ಆ ಕಾಲದಲ್ಲಿ ಪ್ರಸಿದ್ಧವಾದ ದ್ಯುಲೋಕವೂ ಸಹ ನಿನ್ನ ಎರಡುವಿಧವಾದ ಶಕ್ತಿಯಿಂದ, ಎಂದರೆ, ನಿನ್ನ ವಜ್ರಾಯುಧದಿಂದಲೂ ಮತ್ತು ನಿನ್ನ ಕ್ರೋಧದಿಂದಲೂ ಉಂಟಾದ ಭೀತಿಯಿಂದ ನಮ್ರವಾಗಿ ಬಾಗಿತು.

## English Translation.

The heaven bowed down in the two-fold dread of your thundeıbolt, and your individual wrath, when Indra, the giver of food, struck to the sleep (of death) the assailing Ahi.

|| ಸಂಹಿತಾಪಾಠಃ ||

ಅಧ ತ್ವಷ್ಟಾ ತೇ ಮಹ ಉಗ್ರ ವಜ್ರಂ ಸಹಸ್ರಭೃಷ್ಟಿಂ ವವೃತಚ್ಛತಾಶ್ರಿಂ ।
ನಿಕಾಮಮರಮಣಸಂ ಯೇನ ನವಂತಮಹಿಂ ಸಂ ಪಿಣಗೃಜೀಷಿನ್ ॥ ೧೦ ॥

|| ಪದಪಾಠಃ ||

ಅಧ । ತ್ವಷ್ಟಾ । ತೇ । ಮಹಃ । ಉಗ್ರ । ವಜ್ರಂ । ಸಹಸ್ರಽಭೃಷ್ಟಿಂ । ವವೃತತ್ । ಶತಽಅಶ್ರಿಂ ।
ನಿಽಕಾಮಂ । ಅರಽಮನಸಂ । ಯೇನ । ನವಂತಂ । ಅಹಿಂ । ಸಂ । ಪಿಣಕ್ । ಋಜೀಷಿನ್ ॥ ೧೦ ॥

|| ಸಾಯಣಭಾಷ್ಯಂ ||

ಅಥಾಧುನಾ ಹೇ ಉಗ್ರೋದ್ಗೂರ್ಣಬಲೇಂದ್ರ ಮಹೋ ಮಹತಸ್ತೇ ತವ ತ್ವಷ್ಟಾ ದೇವಶಿಲ್ಪೀ ವಜ್ರಂ ವವೃತತ್ । ನ್ಯವರ್ತಯತ್ । ನಿಷ್ಪನ್ನಂ ಕೃತವಾನ್ । ಕೀದೃಶಂ । ಸಹಸ್ರಭೃಷ್ಟಿಂ ಸಹಸ್ರಧಾರಂ ಶತಾಶ್ರಿಂ ಶತಪರ್ವಾಣಂ । ಹೇ ಋಜೀಷಿನ್ ಗತರಸಸೋಮವನ್ನಿಂದ್ರ ತ್ವಂ ಯೇನ ವಜ್ರೇಣ ನಿಕಾಮಂ । ನಿಯತಃ ಕಾಮೋ ಯಸ್ಯ ತಂ । ಅರಮಣಸಂ । ಶತ್ರೂಣಾಮರಮಭಿಗಂತೃ ಮನೋ ಯಸ್ಯ ತಂ । ನವಂತಂ ಶಬ್ದಾಯಮಾನಮಹಿಂ ವೃತ್ರಮಸುರಂ ಸಂ ಪಿಣಕ್ ಸಂಪಿಷ್ಟವಾನಸಿ ತಂ ವಜ್ರಂ ಕೃತವಾನಿತ್ಯರ್ಥಃ ॥

|| ಪ್ರತಿಪದಾರ್ಥ ||

**ಋಜೀಷಿನ್**—ಗತರಸವಾದ ಸೋಮರಸವುಳ್ಳವನೂ । **ಉಗ್ರ**—ಭಯಂಕರರೂಪನೂ ಆದ ಇಂದ್ರನೇ । **ಯೇನ**—ಯಾವ ವಜ್ರದಿಂದ । **ಅರಮಣಸಂ**—ಎದುರುಬೀಳುವ ಪ್ರವೃತ್ತಿಯುಳ್ಳವನೂ । **ನವಂತಂ**—ಶಬ್ದ ಕಾರಕನೂ ಆದ । **ಅಹಿಂ**—ವೃತ್ರನನ್ನು । **ನಿಕಾಮಂ**—ನಿಮಗೆ ತೃಪ್ತಿಯಾಗುವವರೆಗೆ । **ಸಂ ಪಿಣಕ್**—ಚೂರ್ಣ ಮಾಡಿದೆಯೋ (ಅಂತಹ) । **ಸಹಸ್ರಭೃಷ್ಟಿಂ**—ಸಹಸ್ರಧಾರೆಯುಳ್ಳದ್ದೂ । **ಶತಾಶ್ರಿಂ**—ನೂರು ಅಲಗುಗಳುಳ್ಳದ್ದೂ ಆದ । **ವಜ್ರಂ**—ವಜ್ರಾಯುಧವನ್ನು । **ಮಹಃ**—ಮಹದ್ರೂಪವುಳ್ಳ । **ತೇ**—ನಿನಗೆ । **ತ್ವಷ್ಟಾ**—ದೇವಶಿಲ್ಪಿಯಾದ ತ್ವಷ್ಟೃವು । **ಅಧ**—ಆ ಕಾಲದಲ್ಲಿ । **ವವೃತತ್**—ನಿರ್ಮಿಸಿಕೊಟ್ಟನು.

|| ಭಾವಾರ್ಥ ||

ಗತರಸವಾದ ಸೋಮವುಳ್ಳವನೂ, ಭಯಂಕರರೂಪನೂ ಆದ ಎಲೈ ಇಂದ್ರನೇ, ಯಾವ ವಜ್ರದಿಂದ ಎದುರು ಬೀಳುವ ಪ್ರವೃತ್ತಿಯುಳ್ಳವನೂ, ಶಬ್ದಕಾರಕನೂ ಆದ ವೃತ್ರನನ್ನು ನಿನಗೆ ತೃಪ್ತಿಯಾಗುವವರೆಗೆ ಹೊಡೆದು ಚೂರ್ಣ ಮಾಡಿದೆಯೋ ಅಂತಹ ಸಹಸ್ರಧಾರೆಯುಳ್ಳದ್ದೂ, ಶತಪರ್ವವುಳ್ಳದ್ದೂ ಆದ ವಜ್ರಾಯುಧವನ್ನು ಮಹದ್ರೂಪವುಳ್ಳ ನಿನಗೆ ದೇವಶಿಲ್ಪಿಯಾದ ತ್ವಷ್ಟೃವು ಸಕಾಲದಲ್ಲಿ ನಿರ್ಮಿಸಿಕೊಟ್ಟನು.

## English Translation.

Fierce Indra, Twashtri constructed for you, the mighty one, the thousand-edged, the hundred-angled thunderbolt, wherewith you have crushed the ambitious, audacious, loud-shouting Ahi.

**ಸಹಸ್ರಭೃಷ್ಟಿಂ ಶತಾಶ್ರಿಂ ವಜ್ರಂ ಮಹಃ ತೇ ತ್ವಷ್ಟಾ ಅಧ ವವೃತತ್**---ಈ ಋಕ್ಕಿನಲ್ಲಿ ವಜ್ರಾಯುಧದ ವರ್ಣನೆ ಇದೆ. ಈ ವಜ್ರಾಯುಧಕ್ಕೆ ಸಾವಿರಾರು ಅಲಗುಗಳೂ ನೂರಾರು ಹರಿತವಾದ ಮೊನೆಗಳು ಇರುವವು. ಇಂತಹ ವಜ್ರಾಯುಧವನ್ನು ದೇವಶಿಲ್ಪಿಯಾದ ತ್ವಷ್ಟೃವು ಇಂದ್ರನಿಗಾಗಿ ಮಾಡಿಕೊಟ್ಟನೆಂದು ಇಲ್ಲಿ ಹೇಳಿದೆ.

**ಅಹನ್ನಹಿಂ ಪರ್ವತೇ ಶಿಶ್ರಿಯಾಣಂ ತ್ವಷ್ಟಾಸ್ಮೈ ವಜ್ರಂ ಸ್ವರ್ಯಂ ತತಕ್ಷ ।**
(ಋ. ಸಂ. ೧-೩೨-೨)

**ಮಹ್ಯಂ ತ್ವಷ್ಟಾ ವಜ್ರಮತಕ್ಷದಾಯಸಂ ಮಯಿ ದೇವಾಸೋಽವೃಜನ್ನಪಿ ಕ್ರತುಂ ।**
(ಋ. ಸಂ. ೧೦-೪೮-೩)

ಇತ್ಯಾದಿ ಋಕ್ಕುಗಳಲ್ಲಿ ತ್ವ ಷ್ಟೃವು ಇಂದ್ರನಿಗೆ ಉಕ್ಕಿನಿಂದ ವಜ್ರಾಯುಧವನ್ನು ಮಾಡಿಕೊಟ್ಟ ವರ್ಣನೆ ಇದೆ.

॥ ಸಂಹಿತಾಪಾಠಃ ॥

ವರ್ಧಾನ್ಯಂ ವಿಶ್ವೇ ಮರುತಃ ಸಜೋಷಾಃ ಪಚಚ್ಛತಂ ಮಹಿಷಾಁ ಇಂದ್ರ ತುಭ್ಯಂ ।
ಪೂಷಾ ವಿಷ್ಣುಸ್ತ್ರೀಣಿ ಸರಾಂಸಿ ಧಾವನ್ವೃತ್ರಹಣಂ ಮದಿರಮಂಶುಮಸ್ಮೈ ॥

॥ ಪದಪಾಠಃ ॥

ವರ್ಧಾನ್ । ಯಂ । ವಿಶ್ವೇ । ಮರುತಃ । ಸऽಜೋಷಾಃ । ಪಚತ್ । ಶತಂ । ಮಹಿಷಾನ್ । ಇಂದ್ರ । ತುಭ್ಯಂ ।
ಪೂಷಾ । ವಿಷ್ಣುಃ । ತ್ರೀಣಿ । ಸರಾಂಸಿ । ಧಾವನ್ । ವೃತ್ರऽಹನಂ । ಮದಿರಂ । ಅಂಶುಂ । ಅಸ್ಮೈ ॥ ೧೧॥

। ಸಾಯಣಭಾಷ್ಯಂ ।

ಸಜೋಷಾಃ ಸಹ ಪ್ರೀಯಮಾಣಾ ವಿಶ್ವೇ ಮರುತಃ ಸರ್ವೇ ದೇವಾ ಹೇ ಇಂದ್ರ ಯಂ ತ್ವಾಂ ವರ್ಧಾನ್ ಸ್ತೋತ್ರೈರ್ವರ್ಧಯಂತಿ ಹೇ ಇಂದ್ರ ತಸ್ಮೈ ತುಭ್ಯಂ ಪೂಷೈತನ್ನಾಮಕೋ ದೇವೋ ವಿಷ್ಣು-

**ರೀತೆನ್ನಾಮಿಕೆಸ್ಟ್ ಶತಂ ಶತಸಂಖ್ಯಾಕಾನ್ಮಹಿಷಾನ್ ಪುಂಪಶೂನ್ ಪಚತ್ । ಪಚೇತ್ । ಅಪಿ ಚಾಸ್ಮೈ ತುಭ್ಯಂ ಸರಾಂಸಿ ದ್ರೋಣಕಲಶಪೂತಭೃದಾಧವನೀಯಾಖ್ಯಾನಿ ತ್ರೀಣಿ ಪಾತ್ರಾಣ್ಯಂಶುಂ ಸೋಮಂ ಧಾವನ್ । ಅಗಚ್ಛನ್ । ಸೋಮ್ಯೈಃ ಪಾತ್ರಾಣಿ ಪೂರ್ಯಂತ ಇತ್ಯರ್ಥಃ । ಕೀದೃಶಂ ಸೋಮಂ । ಮದಿರಂ ಮದಕರಂ ವೃತ್ರಹಣಂ ವೃತ್ರಾಣಾಂ ಶತ್ರೂಣಾಂ ಹಂತಾರಂ । ಅತ್ರ ವೃತ್ರಹಣ್ಯಾಬ್ದೇನ ಸೋಮೋಽಭಿಧೀಯತೇ । ಪೀತೇ ಹಿ ಸತಿ ಸೋಮೇ ವೃತ್ರಾಣಿ ಹಂತುಮಿಂದ್ರಃ ಸಮರ್ಥೋ ಭವತೀತಿ ಯಾವತ್ ॥**

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ಸಜೋಷಾಃ**—ಸಮಾನವಾದ ಪ್ರೀತಿಯುಳ್ಳ । **ವಿಶ್ವೇ ಮರುತಃ**—ಸಕಲಮರುತ್ತುಗಳೂ । **ಯಂ**—ಯಾವ ನಿನ್ನನ್ನು । **ವರ್ಧಾನ್**—ಸ್ತುತಿಸಿ ಪ್ರವೃದ್ಧನನ್ನಾಗಿ ಮಾಡಿದರೋ । **ತುಭ್ಯಂ**—ಅಂತಹ ನಿನಗಾಗಿ । **ಪೂಷಾ**—ಪೂಷದೇವನೂ । **ವಿಷ್ಣುಃ**—ವಿಷ್ಣುವೂ । **ಶತಂ**—ಶತಸಂಖ್ಯಾಕವಾದ । **ಮಹಿಷಾನ್**—ಪುಂಪಶುಗಳನ್ನು । **ಪಚತ್**— ಪಕ್ವಮಾಡಲಿ । **ಅಸ್ಮೈ**— ನಿನಗಾಗಿ । **ತ್ರೀಣಿ ಸರಾಂಸಿ**—ದ್ರೋಣಕಲಶ, ಪೂತಭೃತ್ ಮತ್ತು ಆಧವನೀಯಗಳೆಂಬ ಮೂರು ಪಾತ್ರೆಗಳೂ ಸಹ । **ಮದಿರಂ**—ಮದಕರವಾದುದೂ । **ವೃತ್ರಹಣಂ**—ವೃತ್ರನಾಶಕವಾದುದೂ ಆದ । **ಅಂಶುಂ**—ಸೋಮವನ್ನು । **ಧಾವನ್**—ಒದಗಿಸಲಿ.

॥ ಭಾವಾರ್ಥ ॥

ಎಲೈ ಇಂದ್ರನೇ, ಸಮಾನವಾದ ಪ್ರೀತಿಯುಳ್ಳ ಸಕಲ ಮರುತ್ತುಗಳೂ ಯಾವ ನಿನ್ನನ್ನು ಸ್ತುತಿಸಿ ಪ್ರವೃದ್ಧನನ್ನಾಗಿ ಮಾಡಿದರೋ ಅಂತಹ ನಿನಗಾಗಿ ಪೂಷದೇವನೂ ವಿಷ್ಣುವೂ ಶತಸಂಖ್ಯಾಕವಾದ ಪುಂಪಶುಗಳನ್ನು ! ಪಕ್ವಮಾಡಲಿ. ದ್ರೋಣಕಲಶ, ಪೂತಭೃತ್ ಮತ್ತು ಆಧವನೀಯವೆಂಬ ಮೂರು ಪಾತ್ರೆಗಳೂ ಸಹ ನಿನಗಾಗಿ ಮದಕರವಾದುದೂ, ವೃತ್ರನಾಶಕವಾದುದೂ ಆದ ಸೋಮವನ್ನು ಒದಗಿಸಲಿ.

## English Translation.

For you, Indra, whom all the Maruts, alike pleased, exalt, may Pushan and Vishnu dress for you a hundred buffaloes, and to him may the three streams flow with the inebriating, foe-destroying Soma.

॥ ವಿಶೇಷವಿಷಯಗಳು ॥

**ಪೂಷಾ ವಿಷ್ಣುಃ ಶತಂ ಮಹಿಷಾನ್ ಪಚತ್**—ಎಲೈ ಇಂದ್ರನೇ ಪೂಷನೆಂಬ ದೇವನೂ, ವಿಷ್ಣುವೂ ನಿನಗಾಗಿ ನೂರು ಪಶುಗಳನ್ನೂ (ಕೋಣಗಳನ್ನೂ) ಪಕ್ವಮಾಡಲಿ ಎಂದು ಪ್ರಾರ್ಥಿಸಲಾಗಿದೆ. ಇಂದ್ರನು ಈ ಪಶುಗಳ ಮಾಂಸವನ್ನು ಭಕ್ಷಿಸುವ ವಿಷಯವು ಅನೇಕಕಡೆ ಉಕ್ತವಾಗಿದೆ. ಆದರೆ ಒಂದೊಂದುಕಡೆ ಒಂದೊಂದು ಸಂಖ್ಯಾ ನಿರ್ದೇಶವಿದೆ. ಉದಾಹರಣೆಗಾಗಿ—

**ಪಚಂತಿ ತೇ ವೃಷಭಾँ ಅತ್ಸಿ ತೇಷಾಂ ಪೃಕ್ಷೇಣ ಯನ್ಮಘವನ್ ಹೂಯಮಾನಃ ।**

(ಋ. ಸಂ. ೧೦-೨೮-೩)

ಎಲೈ ಇಂದ್ರನೇ, ಯಜ್ಞವಮಾಡುವ ಯಜಮಾನರು ನಿನಗಾಗಿ ವೃಷಭ ಅಥವಾ ಎತ್ತುಗಳನ್ನು ಎಂದರೆ ಎತ್ತುಗಳ ಮಾಂಸವನ್ನು ಪಕ್ವಮಾಡುವರು. ಅದನ್ನು ನೀನು ಭಕ್ಷಿಸುತ್ತೀಯೆ ಎಂದು ಈ ಋಕ್ಕಿನಲ್ಲಿ ಹೇಳಿದೆ. ಇಲ್ಲಿ ಎಷ್ಟು ಎತ್ತುಗಳು ಎಂಬ ವಿಷಯದಲ್ಲಿ ಸಂಖ್ಯಾನಿರ್ದೇಶವಿಲ್ಲ.

**ಅವಾ ತೇ ತುಮ್ರಂ ವೃಷಭಂ ಪಚಾನಿ ತೀವ್ರಂ ಸುತಂ ಪಂಚದಶಂ ನಿ ಷಿಂಚಂ ।**

(ಋ. ಸಂ. ೧೦–೨೭–೨)

ಇಂದ್ರನಿಗಾಗಿ ಒಂದು ಎತ್ತನ್ನು (ಅದರ ಮಾಂಸವನ್ನು) ಬೇಯಿಸುವುದಾಗಿಯೂ ಹದಿನೈದು ಪಾತ್ರೆಗಳಲ್ಲಿ ಸೋಮರಸ ವನ್ನು ಸಿದ್ಧಪಡಿಸಿ ಅರ್ಪಿಸುವುದಾಗಿಯೂ ಋಷಿಯು ಹೇಳಿದ್ದಾನೆ.

**ಘಸತ್ತ ಇಂದ್ರ ಉಕ್ಷಣಃ ಪ್ರಿಯಂ ಕಾಚಿತ್ಕರಂ ಹವಿರ್ವಿಶ್ವಸ್ಮಾದಿಂದ್ರ ಉತ್ತರಃ ।**

(ಋ. ಸಂ. ೧೦–೮೬–೨)

ಇಂದ್ರನು ಎತ್ತಿನ ಮಾಂಸವನ್ನು ತಿನ್ನಲಿ. ಪ್ರಿಯಕರವಾದ ಹವಿಸ್ಸನ್ನು ಭಕ್ಷಿಸಲಿ.

**ಉಕ್ಷ್ಣೋ ಹಿ ಮೇ ಪಂಚದಶ ಸಾಕಂ ಪಚಂತಿ ವಿಂಶತಿಂ ।**

(ಋ. ಸಂ. ೧೦–೮೬–೧೪)

ಯಜಮಾನರು ನನಗಾಗಿ ಹದಿನೈದು ಮತ್ತು ಇಪ್ಪತ್ತು ವೃಷಭಗಳನ್ನು (ಎತ್ತುಗಳನ್ನು) ಪಕ್ವಮಾಡುತ್ತಾರೆ ಎಂದು ಇಂದ್ರನು ಹೇಳಿದ್ದಾನೆ.

**ಶತಂ ಮಹಿಷಾನ್ ಕ್ಷೀರಪಾಕಮೋದನಂ ವರಾಹಮಿಂದ್ರ ಏಮುಷಂ ।**

(ಋ. ಸಂ. ೮–೭೭–೧೦)

ಇಲ್ಲಿ ನೂರು ಮಹಿಷಗಳನ್ನು ಪಾಕಮಾಡಿದ ವಿಷಯವೂ

**ಸಖಾ ಸಖ್ಯೇ ಅಪಚತ್ತೂಯಮಗ್ನಿರಸ್ಯ ಕ್ರತ್ವಾ ಮಹಿಷಾ ತ್ರಿ ಶತಾನಿ ।**

(ಋ. ಸಂ. ೫–೨೯–೭)

ಇಲ್ಲಿ ಮುನ್ನೂರು ಮಹಿಷಗಳ ಮಾಂಸವನ್ನು ಪಕ್ವಮಾಡಿದ ವಿಷಯದ ಪ್ರಸ್ತಾಪವೂ ಇದೆ.

॥ ಸಂಹಿತಾಪಾಠಃ ॥

## ಆ ಕ್ಷೋದೋ ಮಹಿ ವೃತಂ ನದೀನಾಂ ಪರಿಷ್ಠಿತಮಸೃಜ ಊರ್ಮಿಮಪಾಂ। ತಾಸಾಮನು ಪ್ರವತ ಇಂದ್ರ ಪಂಥಾಂ ಪ್ರಾರ್ದಯೋ ನೀಚೀರಪಸಃ ಸಮುದ್ರಂ ॥ ೧೨ ॥

॥ ಪದಪಾಠಃ ॥

**ಆ । ಕ್ಷೋದಃ । ಮಹಿ । ವೃತಂ । ನದೀನಾಂ । ಪರಿಽಸ್ಥಿತಂ । ಅಸೃಜಃ । ಊರ್ಮಿಂ । ಅಪಾಂ । ತಾಸಾಂ । ಅನು । ಪ್ರಽವತಃ । ಇಂದ್ರ । ಪಂಥಾಂ । ಪ್ರ । ಆರ್ದಯಃ । ನೀಚೀಃ । ಅಪಸಃ । ಸಮುದ್ರಂ ॥**

॥ ಸಾಯಣಭಾಷ್ಯಂ ॥

**ಹೇ ಇಂದ್ರ ತ್ವಂ ಮಹಿ ಮಹದ್ವೃತಂ ವೃತ್ರೇಣ ಪರಿವೃತಮಾಚ್ಛಾದಿತಂ ಪರಿಸ್ಥಿತಂ ಪರಿತಃ ಸ್ಥಿತಂ ನದೀನಾಂ ಸಿಂಧೂನಾಂ ಸಂಬಂಧಿ ಕ್ಷೋದ ಉದಕಮಾಸೃಜಃ । ಆ ಸಮಂತಾತ್ಸೃಷ್ಟವಾನಸಿ । ಯೇನ ನದ್ಯಃ ಪೂರ್ಣಾಃ ಪ್ರವಹೇಯುಸ್ತದಿತ್ಯರ್ಥಃ । ಅಪಾಮುದಕಾನಾಮೂರ್ಮಿಂ ಸಮೂಹಂ ಸೃಷ್ಟವಾನಸಿ । ಪುನರ್ವಚನಮಾದರಾರ್ಥಂ । ಹೇ ಇಂದ್ರ ತಾಸಾಂ ನದೀನಾಂ ಸಂಬಂಧಿನಃ ಪಂಥಾಂ ಪಥೋ ಮಾರ್ಗಾನ್ ಪ್ರವತಃ ಪ್ರವಣಾನನ್ವಕಾರ್ಷೀರಿತಿ ಶೇಷಃ । ಅನ್ವಿತ್ಯುಪಸರ್ಗಯೋಗ್ಯಕ್ರಿಯಾಧ್ಯಾಹಾರಃ । ಕಿಂಚ ನೀಚೀಃ ಪ್ರವಣಾಭಿಮುಖೀಃ । ವೇಗಯುಕ್ತಾ ಇತ್ಯರ್ಥಃ । ಅಪಸೋಽಪ ಉದಕಾನಿ । ಅಪಸ ಇತ್ಯಪ ಏವಾರ್ಥೇ ವರ್ತತೇ । ಸಮುದ್ರಮುದಧಿಂ ಪ್ರಾರ್ದಯಃ । ಪ್ರಾಗಮಯಃ । ಅತ್ರಾರ್ದಯತಿರ್ಗಯನಕರ್ಮಾ ॥**

। ಪ್ರತಿಪದಾರ್ಥ ।

(ಎಲೈ ಇಂದ್ರನೇ) **ಮಹಿ**— ಪ್ರಭೂತವಾದುದೂ । **ವೃತಂ**—ವೃತ್ರನಿಂದ ತಡೆಯಲ್ಪಟ್ಟುದೂ । **ಪರಿಸ್ಥಿತಂ**—ಸುತ್ತುವರೆದು ನಿಂತಿರುವುದೂ ಆದ । **ನದೀನಾಂ ಕ್ಷೋದಃ**—ನದಿಗಳ ಉದಕವನ್ನು । **ಆ ಅಸೃಜಃ**—ಬಿಡಿಸಿ ಹರಿಯುವಂತೆ ಮಾಡಿದೆ । **ಇಂದ್ರ**—ಎಲೈ ಇಂದ್ರನೇ । **ತಾಸಾಂ**—ಆ ನದಿಗಳ । **ಅಪಾಂ**—ಉದಕಗಳ । **ಊರ್ಮಿಂ**—ಪ್ರವಾಹಗಳನ್ನು । **ಪ್ರವತಃ ಪಂಥಾಂ**—ಪ್ರವಾಹಮಾರ್ಗಗಳುಳ್ಳದ್ದನ್ನಾಗಿ । **ಅನು**—ಮಾಡಿದ । **ನೀಚೀಃ**—ತಗ್ಗುಪ್ರದೇಶಗಳಲ್ಲಿ ಹರಿಯುವ । **ಅಪಸಃ**—ಉದಕಗಳನ್ನು । **ಸಮುದ್ರಂ**—ಉದಧಿಗೆ । **ಪ್ರಾರ್ದಯಃ**— ಹರಿಯುವಂತೆ ಮಾಡಿದೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಪ್ರಭೂತವಾದುದೂ, ವೃತ್ರನಿಂದ ತಡೆಯಲ್ಪಟ್ಟುದೂ, ಸುತ್ತುವರೆದು ನಿಂತಿರುವುದೂ ಆದ ನದಿಗಳ ಉದಕವನ್ನು ಬಿಡಿಸಿ ಹರಿಯುವಂತೆ ಮಾಡಿದೆ. ಎಲೈ ಇಂದ್ರನೇ, ಅದೇ ಪ್ರವಾಹಗಳಿಗೆ ಮಾರ್ಗಗಳನ್ನೂ ಉಂಟುಮಾಡಿದೆ. ತಗ್ಗುಪ್ರದೇಶಗಳಿಗೆ ಹರಿಯುವ ಉದಕಗಳನ್ನು ಉದಧಿಗೆ ಹರಿಯುವಂತೆ ಮಾಡಿದೆ.

## English Translation.

You have set free the greatly obstructed and arrested water of the rivers, the afflux of the waters : you have directed them, Indra, upon their downward paths : you have sent them rapidly down to the ocean.

|| ಸಂಹಿತಾಪಾಠಃ ||

ಏವಾ ತಾ ವಿಶ್ವಾ ಚಕೃವಾಂಸಮಿಂದ್ರಂ ಮಹಾಮುಗ್ರಮಜುರ್ಯಂ ಸಹೋದಾಂ ।
ಸುವೀರಂ ತ್ವಾ ಸ್ವಾಯುಧಂ ಸುವಜ್ರಮಾ ಬ್ರಹ್ಮ ನವ್ಯಮವಸೇ ವವೃತ್ಯಾತ್ ॥

|| ಪದಪಾಠಃ ||

ಏವ । ತಾ । ವಿಶ್ವಾ । ಚಕೃಽವಾಂಸಂ । ಇಂದ್ರಂ । ಮಹಾಂ । ಉಗ್ರಂ । ಅಜುರ್ಯಂ । ಸಹಃಽದಾಂ ।
ಸುಽವೀರಂ । ತ್ವಾ । ಸುಽಆಯುಧಂ । ಸುಽವಜ್ರಂ । ಆ । ಬ್ರಹ್ಮ । ನವ್ಯಂ । ಅವಸೇ । ವವೃತ್ಯಾತ್ ॥೧೩॥

|| ಸಾಯಣಭಾಷ್ಯಂ ||

ಹೇ ಇಂದ್ರ ತ್ವಾ ತ್ವಾಂ ನವ್ಯಂ ನೂತನಮನ್ಯೈರಕೃತಪೂರ್ವಂ ಬ್ರಹ್ಮಾಸ್ಮಾಭಿಃ ಕೃತಂ ಸ್ತೋತ್ರಮವಸೇಽಸ್ಮಾಕಂ ರಕ್ಷಣಯಾ ವವೃತ್ಯಾತ್। ಆವರ್ತಯತು । ಕೀದೃಶಂ ತ್ವಾಂ। ಏವೈವಮುಕ್ತಪ್ರಕಾರೇಣ ತಾ ತಾನಿ ಪ್ರಸಿದ್ಧಾನಿ ವಿಶ್ವಾ ವಿಶ್ವಾನಿ ಸರ್ವಾಣಿ ಕರ್ಮಾಣಿ ಚಕೃವಾಂಸಂ ಕೃತವಂತಮಿಂದ್ರಮೀಶ್ವರಂ ಮಹಾಂ ಮಹಾಂತಮುಗ್ರಮೋಜಸ್ವಿನಮಜುರ್ಯಮಜರಂ ಸಹೋದಾಂ ಸಹಸೋ ಬಲಸ್ಯ ದಾತಾರಂ ಸುವೀರಂ ಶೋಭನಾ ವೀರಾ ಮರುತೋ ಯಸ್ಯ ತಂ ಸ್ವಾಯುಧಂ ಶೋಭನಾಯುಧಂ ಸುವಜ್ರಂ ಶೋಭನವಜ್ರೋಪೇತಂ ||

|| ಪ್ರತಿಪದಾರ್ಥ ||

(ಎಲೈ ಇಂದ್ರನೇ) **ಏವ**—ಮೇಲೆ ವರ್ಣಿತವಾದಂತೆ । **ತಾ ವಿಶ್ವಾ**—ಸಮಸ್ತ ಕರ್ಮಗಳನ್ನೂ । **ಚಕೃವಾಂಸಂ**—ನೆರವೇರಿಸಿದವನೂ । **ಇಂದ್ರಂ**—ಪ್ರಭುವಾದವನೂ । **ಮಹಾಂ**—ಮಹಾತ್ಮನೂ । **ಉಗ್ರಂ**—ಓಜಸ್ವಿಯೂ । **ಅಜುರ್ಯಂ**—ಜರಾರಹಿತನೂ । **ಸಹೋದಾಂ**—ಬಲಪ್ರದನೂ । **ಸುವೀರಂ**—ವೀರರಾದ ಮರುತ್ತುಗಳುಳ್ಳವನೂ । **ಸ್ವಾಯುಧಂ**—ಉತ್ತಮವಾದ ಆಯುಧಗಳುಳ್ಳವನೂ । **ಸುವಜ್ರಂ**—ವಜ್ರಾಯುಧ ವಿಶಿಷ್ಟನೂ ಆದ । **ತ್ವಾ**—ನಿನ್ನನ್ನು । **ನವ್ಯಂ**—ನೂತನವಾದ । **ಬ್ರಹ್ಮ**—(ನಮ್ಮ)ಸ್ತೋತ್ರವು । **ಅವಸೇ**—ನಮ್ಮ ರಕ್ಷಣಾರ್ಥವಾಗಿ । **ಆ ವವೃತ್ಯಾತ್**—ಕರೆತರಲಿ.

|| ಭಾವಾರ್ಥ ||

ಎಲೈ ಇಂದ್ರನೇ ಮೇಲೆಲ್ಲಾ ವರ್ಣಿತವಾದಂತೆ ಸಕಲ ಕರ್ಮಗಳನ್ನು ನೆರವೇರಿಸಿದವನೂ, ಪ್ರಭುವಾದವನೂ ಮಹಾತ್ಮನೂ, ಓಜಸ್ವಿಯೂ, ಜರಾರಹಿತನೂ, ಬಲಪ್ರದನೂ, ವೀರರಾದ ಮರುತ್ತುಗಳೊಡನಿರುವವನೂ, ಉತ್ತಮವಾದ ಆಯುಧವುಳ್ಳವನೂ , ವಜ್ರಾಯುಧವಿಶಿಷ್ಟನೂ ಆದ ನಿನ್ನನ್ನು ನೂತನವಾದ ನಮ್ಮ ಸ್ತೋತ್ರವು ನಮ್ಮ ರಕ್ಷಣಾರ್ಥವಾಗಿ ಕರೆತರಲಿ.

## English Translation.

May our new prayer bring to our protection you, Indra, who are the maker of all these (things that exist) : who are mighty, fierce, undecaying the giver of strength, having excellent descendants, the Maruts, well-armed, the bearer of the thunderbolt.

॥ ಸಂಹಿತಾಪಾಠಃ ॥

ಸ ನೋ ವಾಜಾಯ ಶ್ರವಸ ಇಷೇ ಚ ರಾಯೇ ಧೇಹಿ ದ್ಯುಮತ ಇಂದ್ರ ವಿಪ್ರಾನ್ ।
ಭರದ್ವಾಜೇ ನೃವತ ಇಂದ್ರ ಸೂರೀನ್ದಿವಿ ಚ ಸ್ಮೈಧಿ ಪಾರ್ಯೇ ನ ಇಂದ್ರ ॥

॥ ಪದಪಾಠಃ ॥

ಸಃ । ನಃ । ವಾಜಾಯ । ಶ್ರವಸೇ । ಇಷೇ । ಚ । ರಾಯೇ । ಧೇಹಿ । ದ್ಯುಽಮತಃ । ಇಂದ್ರ । ವಿಪ್ರಾನ್ । ಭರತ್ಽವಾಜೇ । ನೃಽವತಃ । ಇಂದ್ರ । ಸೂರೀನ್ । ದಿವಿ । ಚ । ಸ್ಮ । ಏಧಿ । ಪಾರ್ಯೇ । ನಃ । ಇಂದ್ರ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಸ ತ್ವಂ ದ್ಯುಮತೋ ದೀಪ್ತಿಮತೋ ವಿಪ್ರಾನ್ಮೇಧಾವಿನೋ ನೋಽಸ್ಮಾನ್ವಾಜಾಯ ಬಲಾಯ ಶ್ರವಸೇ ಯಶಸ ಇಷೇ ಚಾನ್ನಾಯ ಚ ರಾಯೇ ಧನಾಯ ಧೇಹಿ । ಧಾರಯ । ಅಪಿ ಚ ಹೇ ಇಂದ್ರ ಭರದ್ವಾಜೇ ಮಯಿ ನೃವತೋ ಮನುಷ್ಯವತಃ । ಪರಿಚಾರಕಯುಕ್ತಾನಿತ್ಯರ್ಥಃ । ಸೂರೀನ್ ತವ ಸ್ತೋತೄನ್ ಪುತ್ರಪೌತ್ರಾನ್ ಕುರ್ವಿತಿ ಶೇಷಃ । ಹೇ ಇಂದ್ರ ತ್ವಂ ಪಾರ್ಯೇ ಪಾರಣೀಯ ಆಗಾಮಿನಿ ಚ ದಿವಿ ದಿವಸ ಏಧಿ ಸ್ಮ ನಃ । ಅಸ್ಮಾಕಂ ರಕ್ಷಿತಾ ಖಲು ಭವೇತ್ಯರ್ಥಃ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ಸಃ**—ಪ್ರಸಿದ್ಧನಾದ ನೀನು । **ದ್ಯುಮತಃ**—ಕಾಂತಿಯುತರಾದವರೂ । **ವಿಪ್ರಾನ್**—ಮೇಧಾವಿಗಳೂ ಆದ । **ನಃ**—ನಮ್ಮನ್ನು । **ವಾಜಾಯ**—ಶಕ್ತಿಗಾಗಿಯೂ । **ಶ್ರವಸೇ**—ಕೀರ್ತಿಗಾಗಿಯೂ । **ಇಷೇ**—ಅನ್ನಕ್ಕಾಗಿಯೂ । **ರಾಯೇ ಚ**—ಧನಕ್ಕಾಗಿಯೂ ಸಹ । **ಧೇಹಿ**—ಧರಿಸು । **ಇಂದ್ರ**—ಎಲೈ ಇಂದ್ರನೇ । **ಭರದ್ವಾಜೇ**—ಭರದ್ವಾಜನಾದ ನನಗೆ । **ನೃವತಃ**—ಸೇವಕರೊಡಗೂಡಿದವರೂ । **ಸೂರೀನ್**—ನಿನ್ನನ್ನು ಸ್ತುತಿಸತಕ್ಕವರೂ ಆದ ಪುತ್ರಾದಿಗಳನ್ನು (ಅನುಗ್ರಹಿಸು) । **ಇಂದ್ರ**—ಎಲೈ ಇಂದ್ರನೇ । **ಪಾರ್ಯೇ ಚ ದಿವಿ**—ಮುಂದಿನ ದಿನಗಳಲ್ಲೂ ಸಹ । **ನಃ**—ನಮಗೆ । **ಏಧಿ ಸ್ಮ**—ರಕ್ಷಕನಾಗಿರು.

॥ ಭಾವಾರ್ಥ ॥

ಎಲೈ ಇಂದ್ರನೇ, ಪ್ರಸಿದ್ಧನಾದ ನೀನು ಕಾಂತಿಯುತರಾದವರೂ, ಮೇಧಾವಿಗಳೂ ಆದ ನಮ್ಮನ್ನು ನಮಗೆ ಅನ್ನಲಾಭಾರ್ಥರಾಗಿಯೂ, ಯಶಃಪ್ರಾಪ್ತಿಗಾಗಿಯೂ, ಶಕ್ತಿಲಾಭಾರ್ಥಕ್ಕಾಗಿಯೂ, ಧನಲಾಭಕ್ಕಾಗಿಯೂ ಅವುಗಳನ್ನು ಕೊಟ್ಟು ಪೋಷಿಸು ಭರದ್ವಾಜನಾದ ನನಗೆ ಸೇವಕರೊಡಗೂಡಿದವರೂ, ನಿನ್ನನ್ನು ಸ್ತುತಿಸತಕ್ಕವರೂ ಆದ ಪುತ್ರಾದಿಗಳನ್ನು ಅನುಗ್ರಹಿಸು. ಎಲೈ ಇಂದ್ರನೇ, ಮುಂದಿನ ದಿನಗಳಲ್ಲೂ ಸಹ ನಮಗೆ ರಕ್ಷಕನಾಗಿರು.

## English Translation.

Resplendent Indra, uphold us who are devout, for (the obtaining of) food, of sustenance, of nourishment, of wealth : bestow upon Bharadwaja pious posterity, with numerous attendants : be with us, Indra, every future day.

॥ ವಿಶೇಷವಿಷಯಗಳು ॥

ಈ ಸೂಕ್ತದ ಉಪಸಂಹಾರರೂಪವಾದ ಈ ಋಕ್ಕಿನಲ್ಲಿಯೂ ಮುಂದಿನ ಋಕ್ಕಿನಲ್ಲಿಯೂ ತನಗೆ ಧನಾದಿಗಳನ್ನೂ, ಅನ್ನವನ್ನೂ, ವೀರರಾದ ಪುತ್ರರನ್ನೂ, ದೀರ್ಘವಾದ ಆಯುಸ್ಸನ್ನೂ ಕೊಡಬೇಕೆಂದು ಭರದ್ವಾಜಋಷಿಯು ಇಂದ್ರನನ್ನು ಪ್ರಾರ್ಥಿಸಿದ್ದಾನೆ.

॥ ಸಂಹಿತಾಪಾಠಃ ॥

ಅಯಾ ವಾಜಂ ದೇವಹಿತಂ ಸನೇಮ ಮದೇಮ ಶತಹಿಮಾಃ ಸುವೀರಾಃ ।

॥ ಪದಪಾಠಃ ॥

ಅಯಾ । ವಾಜಂ । ದೇವऽಹಿತಂ । ಸನೇಮ । ಮದೇಮ । ಶತऽಹಿಮಾಃ । ಸುऽವೀರಾಃ ॥ ೧೫ ॥

॥ ಸಾಯಣಭಾಷ್ಯಂ ॥

ಷಷ್ಠೇಽಹನಿ ತೃತೀಯಸವನೇ ಬ್ರಾಹ್ಮಣಾಚ್ಛಂಸಿಶಸ್ತ್ರೇಽನುರೂಪತೃಚಸ್ಯಾಯಾ ವಾಜಮಿತಿ ತೃತೀಯಾ । ಸೂತ್ರಿತಂ ಚ । ಅಯಾ ವಾಜಂ ದೇವಹಿತಂ ಸನೇಮೇತಿ ಸ್ತೋತ್ರಿಯಾನುರೂಪೌ । ಆ. ೮-೩ । ಇತಿ ॥

ಅಯಾನಯಾ ಸ್ತುತ್ಯಾ ದೇವಹಿತಂ ದೇವೇನ ದ್ಯೋತಮಾನೇಂದ್ರೇಣ ದತ್ತಂ ವಾಜಮನ್ನಂ ಸನೇಮ । ವಯಂ ಸಂಭಜೇಮ । ಅಪಿ ಚ ಸುವೀರಾಃ ಶೋಭನಪುತ್ರೋಪೇತಾ ವಯಂ ಶತಹಿಮಾಃ ಶತಂ ಸಂವತ್ಸರಾನ್ ಮದೇಮ । ಹೃಷ್ಯಾಮ ॥

॥ ಪ್ರತಿಪದಾರ್ಥ ॥

**ಅಯಾ**—ಈ ಸ್ತುತಿಯ ಫಲವಾಗಿ | **ದೇವಹಿತಂ**—ಇಂದ್ರನಿಂದ ದತ್ತವಾದ | **ವಾಜಂ**—ಅನ್ನವನ್ನು | **ಸನೇಮ**—(ನಾವು) ಭುಜಿಸುವಂತಾಗಲಿ | **ಸುವೀರಾಃ**—ಶ್ರೇಷ್ಠರಾದ ಪುತ್ರರೊಡಗೂಡಿ ನಾವು | **ಶತಹಿಮಾಃ**—ನೂರು ಸಂವತ್ಸರಗಳು | **ಮದೇಮ**—ಸಂತುಷ್ಟರಾಗಿರೋಣ.

॥ ಭಾವಾರ್ಥ ॥

ಈ ಸ್ತುತಿಯ ಫಲವಾಗಿ ಇಂದ್ರನಿಂದ ದತ್ತವಾದ ಅನ್ನವನ್ನು ನಾವು ಭುಜಿಸುವಂತಾಗಲಿ. ಶ್ರೇಷ್ಠವಾದ ಪುತ್ರರೊಡಗೂಡಿದ ನಾವು ನೂರು ಸಂವತ್ಸರಗಳು ಸಂತೋಷದಿಂದಿರೋಣ

## English Translation.

May we, by this (praise), obtain food granted by the deity: may we, blessed with excellent male descendants, be happy for a hundred wintness.

# ಹದಿನೆಂಟನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ತಮು ಷ್ಟುಹೀತಿ ಪಂಚದಶರ್ಚಂ ತೃತೀಯಂ ಸೂಕ್ತಂ ಭರದ್ವಾಜಸ್ಯಾರ್ಷಂ ತ್ರೈಷ್ಟುಭಮೈಂದ್ರಂ। ತಥಾ ಚಾನುಕ್ರಮ್ಯತೇ । ತಮು ಷ್ಟುಹೀತಿ ॥ ಅಭಿಜಿತಿ ನಿಷ್ಕೇವಲ್ಯ ಏತನ್ನಿವಿದ್ಧಾನಂ । ಸೂತ್ರಿತಂ ಚ । ತಮು ಷ್ಟುಹೀತಿ ಮಧ್ಯಂದಿನಃ । ಆ. ೮-೫ । ಇತಿ ॥ ಇಂದ್ರಾಗ್ನ್ಯೋಃ ಕುಲಾಯನಾಮ್ನ್ಯೇಕಾಹೇಽಪಿ ನಿಷ್ಕೇವಲ್ಯ ಏತನ್ನಿವಿದ್ಧಾನಂ । ಸೂತ್ರಿತಂ ಚ । ತಿಷ್ಠಾ ಹರೀ ತಮು ಷ್ಟುಹೀತಿ ಮಧ್ಯಂದಿನಃ । ಆ. ೯-೭ । ಇತಿ ॥ ಮಹಾವ್ರತೇಽಪಿ ನಿಷ್ಕೇವಲ್ಯೇ ॥ ತಥೈವ ಪಂಚಮಾರಣ್ಯಕೇ ಸೂತ್ರಿತಂ । ತಮು ಷ್ಟುಹಿ ಯೋ ಅಭಿಭೂತ್ಯೋಜಾಃ ಸುತ ಇತ್ತ್ವಂ ನಿಮಿಶ್ಲ ಇಂದ್ರ ಸೋಮ ಇತಿ ತ್ರೀಣಿ । ಐ. ಆ. ೫-೨-೨ । ಇತಿ ॥**

ಅನುವಾದವು—**ತಮು ಷ್ಟುಹಿ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಹದಿನೈದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು; ಇಂದ್ರನು ದೇವತೆಯು; ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ—**ತಮು ಷ್ಟುಹಿ** ಎಂದು ಹೇಳಿರುವುದು. ಅಭಿಜಿದ್ಯಾಗದಲ್ಲಿ ಪಠಿಸುವ ನಿಷ್ಕೇವಲ್ಯ ಶಸ್ತ್ರಮಂತ್ರಗಳ ಮಧ್ಯದಲ್ಲಿ **ತಮು ಷ್ಟುಹಿ** ಎಂಬ ಸೂಕ್ತವನ್ನು ನಿವಿದ್ಧಾನಸೂಕ್ತವನ್ನಾಗಿ ಸೇರಿಸಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ತಮು ಷ್ಟುಹಿ ಮಧ್ಯಂದಿನಃ** ಎಂಬ ಸೂತ್ರದಿಂದ (ಆ. ೮-೫) ವಿವೃತವಾಗಿರುವುದು. ಇಂದ್ರಾಗ್ನಿಗಳನ್ನುದ್ದೇಶಿಸಿ ಮಾಡುವ ಕುಲಾಯವೆಂಬ ಯಾಗದಲ್ಲಿಯೂ, ನಿಷ್ಕೇವಲ್ಯಶಸ್ತ್ರಮಂತ್ರದಲ್ಲಿ ಈ ಸೂಕ್ತವನ್ನು ನಿವಿತ್ಸೂಕ್ತವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ತಿಷ್ಠಾ ಹರೀ ತಮು ಷ್ಟುಹೀತಿ**

**ಮಧ್ಯಂದಿನಃ** ಎಂಬ ಸೂತ್ರದಿಂದ (ಆ. ೯-೭) ವಿವೃತವಾಗಿರುವುದು. ಮತ್ತು ಮಹಾವ್ರತವೆಂಬ ಯಾಗದಲ್ಲಿಯೂ ಸಹ ನಿಷ್ಕೇವಲ್ಯಶಸ್ತ್ರಮಂತ್ರಗಳಲ್ಲಿ ಈ ಸೂಕ್ತದ ವಿನಿಯೋಗವಿರುವುದೆಂದು ಐತರೇಯಾರಣ್ಯಕದ ಪಂಚಮಾರಣ್ಯಕದಲ್ಲಿ (ಐ. ಆ. ೫-೨-೨) **ತಮು ಷ್ಟುಹಿ ಯೋ ಅಭಿಭೂತ್ಯೋಜಾಃ ಸುತೆ ಇತ್ಥ್ವಂ ನಿಮಿತ್ಲ ಇಂದ್ರ ಸೋಮ ಇತಿ ತ್ರೀಣಿ** ಎಂಬ ವಾಕ್ಯದಿಂದ ನಿರ್ದಿಷ್ಟವಾಗಿರುವುದು.

## ಸೂಕ್ತ—೧೮

ಮಂಡಲ—೬ ‖ ಅನುವಾಕ—೨ ‖ ಸೂಕ್ತ—೧೮ ‖
ಅಷ್ಟಕ—೪ ‖ ಅಧ್ಯಾಯ—೬ ‖ ವರ್ಗ—೪, ೫, ೬ ‖
‖ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೫ ‖
‖ ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ‖
‖ ದೇವತಾ—ಇಂದ್ರಃ ‖
‖ ಛಂದಃ—ತ್ರಿಷ್ಟುಪ್ ‖

‖ ಸಂಹಿತಾಪಾಠಃ ‖

ತಮು ಷ್ಟುಹಿ ಯೋ ಅಭಿಭೂತ್ಯೋಜಾ ವನ್ವನ್ನವಾತಃ ಪುರುಹೂತ ಇಂದ್ರಃ।
ಅಷಾಳ್ಹಮುಗ್ರಂ ಸಹಮಾನಮಾಭಿರ್ಗೀರ್ಭಿರ್ವರ್ಧ ವೃಷಭಂ ಚರ್ಷಣೀನಾಂ ‖ ೧ ‖

‖ ಪದಪಾಠಃ ‖

ತಂ । ಊಂ ಇತಿ । ಸ್ತುಹಿ । ಯಃ । ಅಭಿಭೂತಿऽಓಜಾಃ । ವನ್ವತ್ । ಅವಾತಃ । ಪುರುऽಹೂತಃ । ಇಂದ್ರಃ ।
ಅಷಾಳ್ಹಂ । ಉಗ್ರಂ । ಸಹಮಾನಂ । ಆಭಿಃ । ಗೀಃऽಭಿಃ । ವರ್ಧ । ವೃಷಭಂ । ಚರ್ಷಣೀನಾಂ ‖ ೧ ‖

‖ ಸಾಯಣಭಾಷ್ಯಂ ‖

ಅಭಿಭೂತ್ಯೋಜಾ ಅಭಿಭಾವುಕತೇಜಾ ವನ್ವನ್ ಶತ್ರೂನ್ಹಿಂಸನ್ ಅವಾತಃ ಶತ್ರುಭಿರಹಿಂಸಿತಃ ‖ ವನೋತೇರ್ನಿಷ್ಠಾಂತಸ್ಯ ನಞ್ಪೂರ್ವಸ್ಯ ರೂಪಂ । ಯದ್ವಾ ವಾತೇರ್ವಾತಂ ‖ ಅನಭಿಗತಃ ಪುರುಹೂತೋ ಬಹುಭಿರಾಹೂತೋ ಯ ಇಂದ್ರೋऽಸ್ತೀತಿ ಶೇಷಃ । ಹೇ ಭರದ್ವಾಜ ತಮು ಷ್ಟುಹಿ । ತಮೇವೇಂದ್ರಂ ಸ್ತುಹಿ । ಅಪಿ ಚಾಭಿರ್ವಕ್ಷ್ಯಮಾಣಾಭಿರ್ಗೀರ್ಭಿಃ ಸ್ತುತಿರೂಪಾಭಿರ್ವಾಗ್ಭಿಸ್ತಮಿಂದ್ರಂ ವರ್ಧ । ವರ್ಧಯ । ಕೀದೃಶಂ । ಅಷಾಳ್ಹಮನಭಿಭೂತಮುಗ್ರಮುದ್ಗೂರ್ಣಬಲಮೋಜಸ್ವಿನಂ ವಾ ಸಹಮಾನಂ ಶತ್ರೂನಭಿಭವಂತಂ ಚರ್ಷಣೀನಾಂ ಪ್ರಜಾನಾಂ ಸಂಬಂಧಿನಂ ವೃಷಭಂ ವರ್ಷಿತಾರಂ ‖

॥ ಪ್ರತಿಪದಾರ್ಥ ॥

**ಅಭಿಭೂತ್ಯೋಜಾಃ**— ಶತ್ರುಧರ್ಷಕವಾದ ಓಜಸ್ಸುಳ್ಳವನೂ | **ವನ್ವನ್**— ಶತ್ರುಹಿಂಸಕನೂ | **ಅವಾತಃ**— ಯಾರಿಂದಲೂ ಹಿಂಸಿಸಲ್ಪಡದಿರುವವನೂ | **ಪುರುಹೂತಃ**— ಅನೇಕರಿಂದ ಕರೆಯಲ್ಪಡುವವನೂ ಆದ | **ಯಃ**— ಯಾವ | **ಇಂದ್ರಃ**— ಇಂದ್ರನಿರುವನೋ | **ತಮು**— ಅವನನ್ನೇ | **ಸ್ತುಹಿ**— ಸ್ತುತಿಸು | **ಅಷಾಳ್ಹಂ**— ಅಪ್ರತಿಹತನೂ | **ಉಗ್ರಂ**— ಭಯಂಕರನೂ | **ಸಹಮಾನಂ**— ಶತ್ರುಗಳನ್ನು ಎದುರಿಸುವ ಶಕ್ತಿಯುಳ್ಳವನೂ **ಚರ್ಷಣೀನಾಂ**— ಪ್ರಜೆಗಳಿಗೆ | **ವೃಷಭಂ**— ಇಷ್ಟಾರ್ಥಪ್ರದನೂ ಆದ ಇಂದ್ರನನ್ನು | **ಅಭಿಃ ಗೀರ್ಭಿಃ**— ಇದೇ ಸ್ತುತಿಗಳಿಂದ | **ವರ್ಧ**— ಪ್ರವೃದ್ಧನಾಗುವಂತೆ ಮಾಡು.

॥ ಭಾವಾರ್ಥ ॥

ಶತ್ರುಧರ್ಷಕವಾದ ಓಜಸ್ಸುಳ್ಳವನೂ, ಶತ್ರುಹಿಂಸಕನೂ ಯಾರಿಂದಲೂ ಹಿಂಸಿಸಲ್ಪಡದಿರುವವನೂ, ಅನೇಕರಿಂದ ಕರೆಯಲ್ಪಡುವವನೂ ಆದ ಯಾವ ಇಂದ್ರನಿರುವನೋ ಅವನನ್ನೇ ಸ್ತುತಿಸು. ಅಪ್ರತಿಹನೂ, ಭಯಂಕರನೂ, ಶತ್ರುಗಳನ್ನು ಎದುರಿಸುವ ಶಕ್ತಿಯುಳ್ಳವೂ, ಪ್ರಜೆಗಳಿಗೆ ಇಷ್ಟಾರ್ಥಪ್ರದನೂ ಆದ ಇಂದ್ರನನ್ನು ಇದೇ ಸ್ತುತಿಗಳಿಂದ ಪ್ರವೃದ್ಧನಾಗುವಂತೆ ಮಾಡು.

## English Translation.

Praise him who is Indra, the invoked of many, endowed with overpowering vigour, the destroyer (of foes), unharmed by them; exalt with these praises the irresistible, fierce, victorious Indra, the showerer (of benefits) upon mankind.

॥ ಸಂಹಿತಾಪಾಠಃ ॥

ಸ ಯುಧ್ಮಃ ಸತ್ವಾ ಖಜಕೃತ್ಸಮದ್ವಾ ತುವಿಮ್ರಕ್ಷೋ ನದನುಮಾಁ ಋಜೀಷೀ |
ಬೃಹದ್ರೇಣುಶ್ಚ್ಯವನೋ ಮಾನುಷೀಣಾಮೇಕಃ ಕೃಷ್ಟೀನಾಮಭವತ್ಸಹಾವಾ ||

॥ ಪದಪಾಠಃ ॥

ಸ | ಯುಧ್ಮಃ | ಸತ್ವಾ | ಖಜಽಕೃತ್ | ಸಮತ್ಽವಾ | ತುವಿಽಮ್ರಕ್ಷಃ | ನದನುಽಮಾನ್ | ಋಜೀಷೀ |
ಬೃಹತ್ಽರೇಣುಃ | ಚ್ಯವನಃ | ಮಾನುಷೀಣಾಂ | ಏಕಃ | ಕೃಷ್ಟೀನಾಂ | ಅಭವತ್ | ಸಹಽವಾ || ೨ ||

। ಸಾಯಣಭಾಷ್ಯಂ ।

**ಬೃಹದ್ರೇಣುರ್ಬೃಹತೋ ಮಹತೋ ರೇಣೋಃ ಪಾಂಸೋರುತ್ಥಾಪಕಃ । ಸಂಗ್ರಾಮೇಷ್ವಿತಿ ಯಾವತ್ । ಏಕೋ ಮುಖ್ಯಃ ಸಹಾವಾ ಬಲವಾನ್ ಸ ಇಂದ್ರೋ ಮಾನುಷೀಣಾಂ ಮನೋಃ ಸಂಬಂಧಿನೀನಾಂ ಕೃಷ್ಟೀನಾಂ ಪ್ರಜಾನಾಂ ಯಜಮಾನಾನಾಂ ಚ್ಯವನೋಽಭಿಗಂತಾಭವತ್ । ಆಸೀತ್ । ಕೀದೃಶಃ । ಯುಧ್ಮೋ ಯೋದ್ಧಾ ಸತ್ವಾ ದಾತಾ ॥ ಸನೋತೇರಿದಂ ರೂಪಂ ॥ ಖಜಕೃತ್ ಖಜಾನಾಂ ಸಂಗ್ರಾಮಾಣಾಂ ಕರ್ತಾ ॥ ಖಜ ಇತಿ ಸಂಗ್ರಾಮನಾಮೈತತ್ ॥ ಸಮದ್ವಾ । ಯಜಮಾನೈಃ ಸಹ ಮದಃ ಸಮತ್ ತದ್ವಾನ್ । ತುವಿಮ್ರಕ್ಷಃ । ಮೃಕ್ಷತಿಃ ಸಂಸ್ನೇಹನಕರ್ಮಾ ॥ ತುವೀನಾಂ ಬಹೂನಾಂ ವರ್ಷಣೇನ ಸಂಸ್ನೇಹನಕರ್ತಾ ನದನುಮಾನ್ ಶಬ್ದವಾನ್ನೃಜೀಷೀ । ಋಜೀಷಶಬ್ದೇನ ಸವನದ್ವಯಾಭಿಷುತಃ ಪುನಸ್ತೃತೀಯಸವನೇಽಪ್ಯಭಿಷುತಃ ಸೋಮ ಉಚ್ಯತೇ । ತದ್ವಾನ್ ॥**

॥ ಪ್ರತಿಪದಾರ್ಥ ॥

**ಯುಧ್ಮಃ**—ಯೋಧನೂ । **ಸತ್ವಾ**—ಉದಾರವಾದ ದಾನಿಯೂ । **ಖಜಕೃತ್**— ಸಂಗ್ರಾಮಗಳ ಕರ್ತನೂ । **ಸಮದ್ವಾ**—ಯಜಮಾನರೊಂದಿಗೆ ಸಂತೋಷಪಡುವವನೂ । **ತುವಿಮ್ರಕ್ಷಃ**—ಅನೇಕರಿಗೆ ಸಹಾಯ ಕರ್ತನೂ । **ನದನುಮಾನ್**—ಶಬ್ದವಂತನೂ । **ಋಜೀಷೀ**—ಗತರಸವಾದ ಸೋಮವುಳ್ಳವನೂ ಆದ । **ಸಃ**—ಆ ಇಂದ್ರನು । **ಬೃಹದ್ರೇಣುಃ**—(ಸಂಗ್ರಾಮಗಳಲ್ಲಿ) ಪ್ರಭೂತವಾಗಿ ಧೂಳನ್ನೆಬ್ಬಿಸುವವನೂ । **ಏಕಃ**—ಅತಿ ಮುಖ್ಯನೂ । **ಸಹಾವಾ**—ಶಕ್ತಿಯುತನೂ । **ಮಾನುಷೀಣಾಂ**— ಮನುಸಂಬಂಧಿಗಳಾದ । **ಕೃಷ್ಟೀನಾಂ**—ಪ್ರಜೆಗಳಿಗೆ । **ಚ್ಯವನಃ**—ರಕ್ಷಕನಾಗಿಯೂ । **ಅಭವತ್**—ಆಗಿದ್ದಾನೆ.

॥ ಭಾವಾರ್ಥ ॥

ಯೋಧನೂ, ಉದಾರವಾದ ದಾನಿಯೂ, ಯುದ್ಧಗಳ ಕರ್ತನೂ ಯಜಮಾನರೊಂದಿಗೆ ಸಂತೋಷಪಡುವವನೂ, ಅನೇಕರಿಗೆ ಸಹಾಯಕರ್ತನೂ, ಶಬ್ದವಂತನೂ, ಋಜೀಷವುಳ್ಳವನೂ ಆದ ಇಂದ್ರನು ಸಂಗ್ರಾಮಗಳಲ್ಲಿ ಪ್ರಭೂತವಾಗಿ ಧೂಳನ್ನೆಬ್ಬಿಸುವವನೂ ಅತಿಮುಖ್ಯನೂ, ಶಕ್ತಿಯುತನೂ ಮತ್ತು ಮನುಸಂಬಂಧಿಗಳಾದ ಪ್ರಜೆಗಳಿಗೆ ರಕ್ಷಕನಾಗಿಯೂ ಆಗಿದ್ದಾನೆ.

## English Translation

He is ever the combatant, the donor, the engaged in battle, the sympathizer (with the sacrificer), the benefactor of many, the loud-sounding, the partaker of the stale libation, the stirrer up of dust (in strife), the chief protector of men, the descendants of Manu, the endowed with strength.

॥ ಸಂಹಿತಾಪಾಠಃ ॥

ತ್ವಂ ಹ ನು ತ್ಯದದಮಾಯೋ ದಸ್ಯೂಂರೇಕಃ ಕೃಷ್ಟೀರವನೋರಾರ್ಯಾಯ ।
ಅಸ್ತಿ ಸ್ವಿನ್ನು ವೀರ್ಯಂ೧ ತತ್ತ ಇಂದ್ರ ನ ಸ್ವಿದಸ್ತಿ ತದೃತುಥಾ ವಿ ವೋಚಃ॥

॥ ಪದಪಾಠಃ ॥

ತ್ವಂ । ಹ । ನು । ತ್ಯತ್ । ಅದಮಾಯಃ । ದಸ್ಯೂನ್ । ಏಕಃ । ಕೃಷ್ಟೀಃ । ಅವನೋಃ । ಆರ್ಯಾಯ ।
ಅಸ್ತಿ । ಸ್ವಿತ್ । ನು । ವೀರ್ಯಂ । ತತ್ । ತೇ । ಇಂದ್ರ । ನ । ಸ್ವಿತ್ । ಅಸ್ತಿ । ತತ್ । ಋತುऽಥಾ ।
ವಿ । ವೋಚಃ ॥ ೩ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ಯತ್ಸ್ಯ ಸ ತ್ವಂ । ತ್ಯದಿತಿ ತಚ್ಛಬ್ದಪರ್ಯಾಯಃ । ಅತ್ರ ಲಿಂಗವ್ಯತ್ಯಯಃ । ದಸ್ಯೂನ್ ಕರ್ಮಹೀನಾನ್ ಜನಾನ್ ನು ಕ್ಷಿಪ್ರಮದಮಯಃ । ದಾಂತಾನಕರೋಃ । ಹಶಬ್ದಃ ಪೂರಣಾರ್ಥಃ । ಅಪಿ ಚೈಕೋ ಮುಖ್ಯಸ್ತ್ವಂ ಕೃಷ್ಟೀಃ ಪುತ್ರದಾಸಾದೀನಾರ್ಯಾಯ ಕರ್ಮಕೃತೇ ಜನಾಯಾವನೋಃ । ಅದದಾಃ । ಏವಂ ಸ್ತುವನ್ನಪ್ಯೃಷಿರಿಂದ್ರಂ ಯದಾ ನಾದ್ರಾಕ್ಷೀತ್ತದಾ ತಸ್ಯ ವೀರ್ಯಸದ್ಭಾವೇ ವಿಚಿಕಿತ್ಸಮಾನಃ ಪರಾರ್ಧರ್ಚಮಾಹ । ಹೇ ಇಂದ್ರ ತೇ ತವ ಯತ್ಪೂರ್ವಮುಕ್ತಂ ತದ್ವೀರ್ಯಂ ಸಾಮರ್ಥ್ಯಂ ಸ್ವಿನ್ನ್ವಸ್ತಿ । ಕಿಂಸ್ವಿದ್ಭವತಿ । ಸ್ವಿನ್ನ್ವಿತಿ ವಿಚಿಕಿತ್ಸಾಯಾಂ । ಯದ್ವಾ ನಾಸ್ತಿ ಸ್ವಿತ್ । ತದ್ಬಲಮೃತುಥಾ ಕಾಲೇ ಕಾಲೇ ವಿ ವೋಚಃ । ವಿಶೇಷೇಣ ಬ್ರೂಹಿ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) ತ್ಯತ್—ಕರ್ಮಗಳಿಂದ ಪ್ರಸಿದ್ಧನಾದವನು । ತ್ವಂ ಹಿ ನು—ನೀನೇ ಅಲ್ಲವೇ ? ದಸ್ಯೂನ್—ಕರ್ಮರಹಿತರಾದ ದಸ್ಯುಜನರನ್ನು । ಅದಮಯಃ—ಶಮನಮಾಡಿರುವೆ । ಏಕಃ—ಎಲ್ಲರಿಗೂ ಮುಖ್ಯನಾದ ನೀನೇ । ಆರ್ಯಾಯ—ಕರ್ಮನಿರತನಾದ ಆರ್ಯನಿಗೆ । ಕೃಷ್ಟೀಃ—ಪುತ್ರಾದಿಪ್ರಜೆಗಳನ್ನು । ಅವನೋಃ—ಕೊಟ್ಟಿರುವೆ । ಇಂದ್ರ—ಎಲೈ ಇಂದ್ರನೇ । ತೇ—ನಿನ್ನ । ತತ್ ವೀರ್ಯಂ—ಹಿಂದೆ ವರ್ಣಿತವಾದ ಸಾಮರ್ಥ್ಯವು । ಸ್ವಿನ್ನು ಅಸ್ತಿ—ಸತ್ಯವಾಗಿಯೂ ಇರುವುದೇ ? । ನಾಸ್ತಿ ಸ್ವಿತ್—ಅಥವಾ ಇಲ್ಲವೇ? । ತತ್—(ಒಂದು ವೇಳೆ ಇದ್ದರೆ) ಆ ಬಲವನ್ನು । ಋತುಥಾ—ಆಯಾ ಕಾಲಾನುಗುಣವಾಗಿ । ವಿ ವೋಚಃ—ಪ್ರಕಟಪಡಿಸು.

॥ ಭಾವಾರ್ಥ ॥

ಎಲೈ ಇಂದ್ರನೇ, ಕರ್ಮಗಳಿಂದ ನಿನ್ನ ಪ್ರಸಿದ್ಧಿಯು ಎಲ್ಲೆಲ್ಲೂ ಹರಡಿದೆ. ನೀನು ಕರ್ಮರಹಿತರಾದ ದಸ್ಯುಜನರನ್ನು ಶಮನಮಾಡಿರುವೆ ಎಲ್ಲರಿಗೂ ಮುಖ್ಯನಾದ ನೀನೇ ಕರ್ಮನಿರತನಾದ ಆರ್ಯನಿಗೆ ಪುತ್ರಾದಿಪ್ರಜೆಗಳನ್ನು ಕೊಟ್ಟಿರುವೆ. ಎಲೈ ಇಂದ್ರನೇ, ಹಿಂದೆಲ್ಲಾ ವರ್ಣಿತವಾದ ನಿನ್ನ ಸಾಮರ್ಥ್ಯವು ಸತ್ಯವಾಗಿಯೂ ನಿನ್ನಲ್ಲಿ ಇರುವುದೆ ಅಥವಾ ಇಲ್ಲವೇ? ಒಂದುವೇಳೆ ಇದ್ದರೆ, ಆ ನಿನ್ನ ಸಾಮರ್ಥ್ಯವನ್ನು ಆಯಾ ಕಾಲಾನುಗುಣವಾಗಿ ಪ್ರಕಾಶಪಡಿಸು.

## English Translation.

You are he who has quickly humbled the Dasyus ; you are the chief one who has given posterity to the Arya; but Indra, is not verily your power such? if it be not, then in due season confess.

॥ ಸಂಹಿತಾಪಾಠಃ ॥

ಸದಿದ್ಧಿ ತೇ ತುವಿಜಾತಸ್ಯ ಮನ್ಯೇ ಸಹಃ ಸಹಿಷ್ಠ ತುರತಸ್ತುರಸ್ಯ ।
ಉಗ್ರಮುಗ್ರಸ್ಯ ತವಸಸ್ತವೀಯೋಽರಧ್ರಸ್ಯ ರಧ್ರತುರೋ ಬಭೂವ ॥ ೪ ॥

॥ ಪದಪಾಠಃ ॥

ಸತ್ । ಇತ್ । ಹಿ । ತೇ । ತುವಿऽಜಾತಸ್ಯ । ಮನ್ಯೇ । ಸಹಃ । ಸಹಿಷ್ಠ । ತುರತಃ । ತುರಸ್ಯ ।
ಉಗ್ರಂ । ಉಗ್ರಸ್ಯ । ತವಸಃ । ತವೀಯಃ । ಅರಧ್ರಸ್ಯ । ರಧ್ರಽತುರಃ । ಬಭೂವ ॥ ೪ ॥

॥ ಸಾಯಣಭಾಷ್ಯಂ ॥

ಪೂರ್ವಮಂತ್ರ ಇಂದ್ರಸ್ಯ ಬಲಸದಸದ್ಭಾವಂ ಸಂದಿಹ್ಯಾನಯಾ ಬಲಮಸ್ತ್ಯೇವೇತ್ಯವಧಾರಯನ್ನಾಹ । ಹಿ ಯಸ್ಮಾದರ್ಥೇ । ಹಿ ಯಸ್ಮಾತ್ಕಾರಣಾತ್ ಹೇ ಸಹಿಷ್ಠ ಬಲವತ್ತಮೇಂದ್ರ ತುವಿಜಾತಸ್ಯ ಬಹುಯಜ್ಞೇಷು ಪ್ರಾದುರ್ಭೂತಸ್ಯ ತುರತೋಽಸ್ಮಾನ್ ಹಿಂಸತಸ್ತುರಸ್ಯ ಶತ್ರೂಣಾಂ ಹಿಂಸಿತುರ್ಬಲವತೋ ವಾ ತೇ ತವ ಸಹೋ ಬಲಂ ಸದಿದ್ವಿದ್ಯಮಾನಮೇವಾಹಂ ಮನ್ಯೇ । ಉಗ್ರಸ್ಯೋಜಸ್ವಿನಸ್ತವಸಃ ಪ್ರವೃದ್ಧಸ್ಯಾರಧ್ರಸ್ಯ ಶತ್ರುಭಿರ್ವಶೀಕರ್ತುಮಶಕ್ಯಸ್ಯ ॥ ರಧೇರ್ವಶೀಕರಣಾರ್ಥಸ್ಯ ರೂಪಂ॥ ರಧ್ರತುರೋ ವಶೀಕರಣೀಯಾನಾಂ ಸಪತ್ನಾನಾಂ ಹಿಂಸಕಸ್ಯ ತವ ಬಲಂ ಬಭೂವ । ಭವತ್ಯೇವ । ಕೀದೃಶಂ । ಉಗ್ರಮುದ್ಗೂರ್ಣಂ ತವೀಯಃ ಪ್ರವೃದ್ಧತರಂ । ಯತಸ್ತ್ವಂ ವೃತ್ರಾದೀನ್ ಶತ್ರೂನ್ ಹಂಸ್ಯತಸ್ತೇ ಬಲಂ ವಿದ್ಯತ ಏವೇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಸಹಿಷ್ಠ**—ಅತ್ಯಂತ ಶಕ್ತಿಯುತನಾದ ಎಲೈ ಇಂದ್ರನೇ । **ತುವಿಜಾತಸ್ಯ**—ಅನೇಕ ಯಜ್ಞಗಳಲ್ಲಿ ಗೋಚರಿಸುವವನೂ । **ತುರತಃ**—ನಮ್ಮ ಹಿಂಸಕನಾದ ಶತ್ರುವಿಗೆ । **ತುರಸ್ಯ**—ಹಿಂಸಾಕಾರಕನೂ ಆದ । **ತೇ**—ನಿನ್ನ । **ಸಹಃ**—ಬಲವು । **ಸದಿತ್**—ಸತ್ಯಾತ್ಮಕವೆಂದೇ । **ಮನ್ಯೇ**—ನಂಬಿದ್ದೇನೆ । **ಉಗ್ರಸ್ಯ**—ಭಯಂಕರನೂ ।

**ತವಸಃ**—ಶಕ್ತಿಯುತನೂ । **ಅರಧ್ರಸ್ಯ**—ಅಪ್ರತಿಹತನೂ ಆದ ನಿನ್ನ ಶಕ್ತಿಯು । **ಉಗ್ರಂ**—ಅತಿಭಯಂಕರವಾಗಿಯೂ । **ತವೀಯಃ**—ಅತ್ಯಂತ ಶಕ್ತಿಯುತವಾದುದೂ । **ರಧ್ರತುರಃ**—ಶತ್ರುಹಿಂಸಕವಾಗಿಯೂ । **ಬಭೂವ**—ಆಗಿರುತ್ತದೆ.

॥ ಭಾವಾರ್ಥ ॥

ಅತ್ಯಂತ ಶಕ್ತಿಯುತನಾದ ಎಲೈ ಇಂದ್ರನೇ, ಅನೇಕ ಯಜ್ಞಗಳಲ್ಲಿ ಪ್ರಾದುರ್ಭೂತನಾಗುವವನೂ ನಮ್ಮನ್ನು ಹಿಂಸಿಸುವ ಶತ್ರುವಿಗೆ ಹಿಂಸಾಕಾರಕನೂ ಆದ ನಿನ್ನ ಬಲವು ಸತ್ಯಾತ್ಮಕವೆಂದೇ ನಂಬಿದ್ದೇನೆ. ಭಯಂಕರನೂ, ಶಕ್ತಿಯುತನೂ, ಅಪ್ರತಿಹತನೂ ಆದ ನಿನ್ನ ಶಕ್ತಿಯು ಅತಿಭಯಂಕರವಾಗಿಯೂ, ಅತ್ಯಂತ ಶಕ್ತಿಯುತವಾದುದೂ, ಶತ್ರುಹಿಂಸಕವಾಗಿಯೂ ಆಗಿರುತ್ತದೆ.

## English Translation.

Yet, most mighty one, I believe that power is verily always in you who are manifest at many rites, and are the enemy of (our) enemies; (the power) that is fierce in the fierce one, most mighty in the mighty one, most unassailable in the subduer (of foes).

॥ ಸಂಹಿತಾಪಾಠಃ ॥

ತನ್ನಃ ಪ್ರತ್ನಂ ಸಖ್ಯಮಸ್ತು ಯುಷ್ಮೇ ಇತ್ಥಾ ವದದ್ಭಿರ್ವಲಮಂಗಿರೋಭಿಃ ।
ಹನ್ನಚ್ಯುತಚ್ಯುದ್ದಸ್ಮೇಷಯಂತಮೃಣೋಃ ಪುರೋ ವಿ ದುರೋ ಅಸ್ಯ
ವಿಶ್ವಾಃ ॥ ೫ ॥

॥ ಪದಪಾಠಃ ॥

ತತ್ । ನಃ । ಪ್ರತ್ನಂ । ಸಖ್ಯಂ । ಅಸ್ತು । ಯುಷ್ಮೇ ಇತಿ । ಇತ್ಥಾ । ವದತ್ಽಭಿಃ । ವಲಂ । ಅಂಗಿರಃಽಭಿಃ ।
ಹನ್ । ಅಚ್ಯುತಽಚ್ಯುತ್ । ದಸ್ಮ । ಇಷಯಂತಂ । ಋಣೋಃ । ಪುರಃ । ವಿ । ದುರಃ । ಅಸ್ಯ । ವಿಶ್ವಾಃ ॥೫॥

॥ ಸಾಯಣಭಾಷ್ಯಂ ॥

ಪ್ರತ್ನಂ ಪುರಾಣಂ । ಚಿರಕಾಲಾನುವರ್ತೀತ್ಯರ್ಥಃ । ತತ್ಪ್ರಸಿದ್ಧಂ ನೋಽಸ್ಮದೀಯಂ ಸಖ್ಯಂ ಸ್ತುತ್ಯಸ್ತೋತೃಲಕ್ಷಣಂ ಸಖಿತ್ವಂ ಹೇ ಇಂದ್ರ ಯುಷ್ಮೇ ಯುಷ್ಮಾಸ್ವಸ್ತು । ಪೂಜಾರ್ಥಂ ಬಹುವಚನಂ ।

**ಹೇ ಅಚ್ಯುತಚ್ಯುದಚ್ಯುತಾನಾಮವಿಚಲಿತಾನಾಂ ಚ್ಯಾವಕ ಹೇ ದಸ್ಮ ದರ್ಶನೀಯೇಂದ್ರ ತ್ವಮಿಷಯಂತ-ಮಾಯುಧಾನಿ ಪ್ರೇರಯಂತಂ ವಲಮೇತನ್ನಾಮಾನಮಸುರಮಿತ್ಥಾ ಸತ್ಯಮೇವ ವದದ್ಭಿಸ್ತ್ವಾಂ ಸ್ತುವದ್ಭಿರಂಗಿರೋಭಿಃ ಸಹ ಹನ್ । ಹತವಾನಸಿ । ಅಪಿ ಚಾಸ್ಯ ವಲಸ್ಯ ಪುರೋ ನಗರಾಣಿ ವ್ಯೃಣೋಃ । ವ್ಯಗಮಯಃ । ವಿಯುಕ್ತಾನ್ಯಕಾರ್ಷೀರಿತ್ಯರ್ಥಃ । ವಿಶ್ವಾಃ ಸರ್ವಾ ದುರಃ ಪುರೀಣಾಂ ದ್ವಾರಶ್ಚ ವ್ಯೃಣೋಃ ॥**

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಪತ್ನಂ**—ಪುರಾತನವಾದುದೂ । **ತತ್**—ಪ್ರಸಿದ್ಧವಾದುದೂ ಆದ । **ನಃ ಸಖ್ಯಂ**—ನಮ್ಮ ಸ್ನೇಹವು । **ಯುಷ್ಮೇ**—ನಿನ್ನೊಡನೆ । **ಅಸ್ತು**—ಶಾಶ್ವತವಾಗಿರಲಿ । **ಅಚ್ಯುತಚ್ಯುತ್**—ಅಚಲವಾದ ಪರ್ವತಾದಿಗಳನ್ನು ಚಲಿಸುವಂತೆ ಮಾಡುವವನೂ । **ದಸ್ಮ**—ಆಕರ್ಷಕನೂ ಆದ ಎಲೈ ಇಂದ್ರನೇ । **ಇಷಯಂತಂ**—ಆಯುಧದಿಂದ ಪ್ರಹರಿಸುತ್ತಿದ್ದ । **ವಲಂ**—ವಲನೆಂಬ ಅಸುರನನ್ನು । **ಇತ್ಥಾ**—ಸತ್ಯವಾಗಿಯೂ । **ವದದ್ಭಿಃ**—ನಿನ್ನನ್ನು ಸ್ತುತಿಸುತ್ತಿದ್ದ । **ಅಂಗಿರೋಭಿಃ**—ಅಂಗಿರಸ್ಸುಗಳೊಂದಿಗೆ ಸೇರಿ । **ಹನ್**—ಕೊಂದಿದ್ದೀಯೆ । **ಅಸ್ಯ**—ಇದೇ ವಲನ । **ಪುರಃ**—ಪಟ್ಟಣಗಳನ್ನು । **ವಿ ಋಣೋಃ**—ನಾಶಪಡಿಸಿದ್ದೀಯೆ । **ವಿಶ್ವಾಃ**—ಸಮಸ್ತವಾದ । **ದುರಃ**—ಪಟ್ಟಣದ ದ್ವಾರಗಳನ್ನೂ (ಸೀಳಿದ್ದೀಯೆ)

॥ ಭಾವಾರ್ಥ ॥

ಎಲೈ ಇಂದ್ರನೇ, ಪುರಾತನವಾದುದೂ ಪ್ರಸಿದ್ಧವಾದುದೂ ಆದ ನಮ್ಮ ಸ್ನೇಹವು ನಿನ್ನೊಡನೆ ಶಾಶ್ವತವಾಗಿರಲಿ. ಅಚಲವಾದ ಪರ್ವತಾದಿಗಳನ್ನೂ ಚಲಿಸುವಂತೆ ಮಾಡುವವನೂ, ಆಕರ್ಷಕನೂ ಆದ ಎಲೈ ಇಂದ್ರನೇ, ಆಯುಧದಿಂದ ಪ್ರಹರಿಸುತ್ತಿದ್ದ ವಲನೆಂಬ ಅಸುರನನ್ನು ನೀನು ನಿನ್ನನ್ನು ಸ್ತುತಿಸುತ್ತಿದ್ದ ಅಂಗಿರಸ್ಸುಗಳೊಂದಿಗೆ ಕೂಡಿ ಸತ್ಯವಾಗಿಯೂ ಕೊಂದಿದ್ದೀಯೆ. ಇದೇ ವಲನಪಟ್ಟಣಗಳನ್ನು ನಾಶಮಾಡಿದ್ದೀಯೆ. ಸಮಸ್ತವಾದ ಪಟ್ಟಣದ ದ್ವಾರಗಳನ್ನೂ ಸೀಳಿಹಾಕಿದ್ದೀಯೆ.

English Translation.

May that our ancient friendship with you ever endure, as when along with the Angirasas, celebrating your praises, you beautiful Indra, caster down of the immoveable (rocks), slew Vala hnrling (his darts against you), and forced open his cities, and all his gates.

॥ ವಿಶೇಷವಿಷಯಗಳು ॥

ವಲನೆಂಬ ಅಸುರನು ದೇವತೆಗಳ ಗೋವುಗಳನ್ನು ಅಪಹರಿಸಿ ಒಂದು ಗುಹೆಯಲ್ಲಿ ಬಚ್ಚಿಟ್ಟಿದ್ದನು. ಆಗ ಇಂದ್ರನು ತನ್ನ ಸೈನ್ಯಸಹಾಯದಿಂದ ಆ ಗುಹೆಯನ್ನು ಮುತ್ತಿ ಗುಹೆಯಲ್ಲಿದ್ದ ಗೋವುಗಳನ್ನು ಬಿಡಿಸಿದನು ಎಂಬ ಈ ವಿಷಯವು ಯಜುರ್ವೇದದ ತೈ. ಸಂ ೨-೧-೧-೧ ರಲ್ಲಿ ಈ ರೀತಿ ವಿವರಿಸಲ್ಪಟ್ಟಿರುವುದು—

ಇಂದ್ರೋ ವಲಸ್ಯ ಬಿಲಮಪೌರ್ಣೋತ್ಸ ಯ ಉತ್ತಮಃ ಪಶುರಾಸೀತ್ತಂ ಪೃಷ್ಠಂ ಪ್ರತಿ ಸಂಗೃಹ್ಯೋದಕ್ಖಿದತ್ತಗ್ಂ ಸಹಸ್ರಂ ಪಶವೋಽನೂದಾಯನ್ತ್ಸ ಉನ್ನತೋಽಭವದ್ಯಃ ಪಶುಕಾಮಃ ಸ್ಯಾತ್ಸ ಏತನ್ಮೈಂದ್ರಮುನ್ನತಮಾ ಲಭೇತೇಂದ್ರಮೇವ ಸ್ವೇನ ಭಾಗಧೇಯೇನೋಪ ಧಾವತಿ ಸ ಏವಾಸ್ಮೈ ಪಶೂನ್ಪ್ರಯಚ್ಛತಿ ಪಶುಮಾನೇವ ಭವತ್ಯುನ್ನತೋ ಭವತಿ ॥

ಈ ವಿಷಯವು ಋಗ್ವೇದದ ಇತರ ಮಂತ್ರಗಳಲ್ಲಿಯೂ, ಇತರ ವೇದಗಳಲ್ಲಿಯೂ ಅಲ್ಲಲ್ಲಿ ವಿವರಿಸಲ್ಪಟ್ಟಿದೆ. ಋಗ್ವೇದದಲ್ಲಿ ಈ ವಲನ ವಿಷಯವು— ಋ. ಸಂ. ೧-೬೨-೪, ೨-೧೧-೨೦; ೨-೧೪-೩; ೨-೧೫-೮; ೨-೧೨-೩; ೨-೨೪-೩; ೩-೩೦-೧೦; ೩-೩೪-೧೦; ೪-೫೦-೫; ೬-೧೮-೫; ೬-೩೯-೨; ೮-೧೪-೭; ೮-೨೪-೩೦; ೧೦-೬೨-೨; ೧೦-೬೭-೬; ೧೦-೬೮-೫; ೧೦-೬೮-೬; ೧೦-೬೮-೯; ೧೦-೬೮-೧೦; ೧೦-೧೩೮-೧ ಎಂಬ ಋಕ್ಕುಗಳಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಈ ವಲನ ಸೈನಿಕರಿಗೆ ಪಣಿಗಳೆಂದು ಹೇಳುವ ರೂಢಿಯಿದೆ. ಇವರು ಗೋವುಗಳನ್ನು ಕದ್ದು ಗುಹೆಗಳಲ್ಲಿ ಬಚ್ಚಿಡುತ್ತಿದ್ದರೆಂದು ಅನೇಕ ಕಡೆಗಳಲ್ಲಿ ಹೇಳಿದೆ.

ಋಗ್ವೇದದಲ್ಲಿ ಪಣಿ ಶಬ್ದಕ್ಕೆ ವ್ಯಾಪಾರಾದಿಗಳನ್ನು ಮಾಡುವ ಧನಿಕರೆಂದು ಅರ್ಥವಿದ್ದರೂ ಅವನು ಯಜ್ಞಾದಿಗಳನ್ನು ಮಾಡದೆ ಮತ್ತು ದಕ್ಷಿಣೆ ದಾನಾದಿಗಳನ್ನು ಕೊಡದಿರುವ ಮನುಷ್ಯನೆಂದೂ ಅರ್ಥವಿರುವುದರಿಂದ ಅವನನ್ನು ನಿಕೃಷ್ಟಭಾವನೆಯಿಂದ ನೋಡುವುದಲ್ಲದೆ ಅವನು ಗೌರವಾರ್ಹನಲ್ಲದವನೆಂದೂ, ನೀಚಮನುಷ್ಯನೆಂದೂ ಋಷಿಗಳು ಭಾವಿಸಿದ್ದಂತೆ ತೋರುವುದು. ಕೆಲವು ಕಡೆ ಪಣಿ ಎಂಬುವನು ಒಬ್ಬ ಪ್ರತ್ಯೇಕ ವ್ಯಕ್ತಿಯಾಗಿ ಕಂಡುಬರುವುದಾದರೂ ಈ ಶಬ್ದದ ಬಹುವಚನ ಪ್ರಯೋಗವು ವಿಶೇಷವಾಗಿರುವುದರಿಂದ ಪಣಿ ಎಂದು ಒಂದು ವರ್ಗದ ಜನರನ್ನು ಸೂಚಿಸುವುದಾಗಿರುವುದೆಂದು ತಿಳಿಯಬೇಕು.

ಪಣಿ ಎಂಬುವರ ವಿಷಯದಲ್ಲಿ ಒಂದು ಉಪಾಖ್ಯಾನವನ್ನು ಭಾಷ್ಯಕಾರರು ಉದಹರಿಸಿರುವರು. ಪಣಿ ಎಂಬ ರಾಕ್ಷಸರು ದೇವಲೋಕದಲ್ಲಿದ್ದ ಹಸುಗಳನ್ನು ಅಪಹರಿಸಿ ಅವುಗಳನ್ನು ಒಂದು ಪರ್ವತದ ಗುಹೆಯಲ್ಲಿ ಬಚ್ಚಿಟ್ಟಿದ್ದರು. ಇದನ್ನು ಹುಡುಕುವುದಕ್ಕಾಗಿ ಇಂದ್ರನು ಸರಮಾ ಎಂಬ ದೇವಶುನಿ (ದೇವಲೋಕದ ಹೆಣ್ಣುನಾಯಿ) ಯನ್ನು ಕಳುಹಿಸಿದನು. ಆ ಶುನಿಯು ಪಣಿಗಳ ಬಳಿಗೆ ಹೋಗಿ ಅವರನ್ನು ಒಳ್ಳೆಯ ಮಾತುಗಳಿಂದ ಮಿತ್ರರನ್ನಾಗಿ ಮಾಡಿ ಹಸುಗಳನ್ನು ತರುವುದಕ್ಕೆ ಸಹಾಯಮಾಡಿತು ಮರುತ್ತುಗಳ ಸಹಾಯದಿಂದ ಇಂದ್ರನು ಆ ಪರ್ವತಗುಹೆಯನ್ನು ನಾಶಪಡಿಸಿ ಅಲ್ಲಿದ್ದ ಹಸುಗಳನ್ನು ತಂದನೆಂದು ಈ ಉಪಾಖ್ಯಾನದಲ್ಲಿ ಹೇಳಿದೆ. ಋಗ್ವೇದಸಂಹಿತೆಯ ಹತ್ತನೆಯ ಮಂಡಲದ ೧೦೮ ನೆಯ ಸೂಕ್ತದಲ್ಲಿ ಈ ವಿಚಾರವಾಗಿ ಸರಮಾ ಎಂಬ ದೇವಶುನಿಗೂ ಪಣಿಗಳೆಂಬ ರಾಕ್ಷಸರಿಗೂ ನಡೆದ ಸಂಭಾಷಣೆಯು ವಿಸ್ತಾರವಾಗಿ ಇರುವುದು.

ಈ ಪಣಿಗಳೆಂಬುವರು ಈ ದೇಶದ ಪೂರ್ವನಿವಾಸಿಗಳೆಂದೂ ಇವರು ವ್ಯಾಪಾರಾದಿಗಳಲ್ಲಿ ತೊಡಗಿದ್ದರೆಂದೂ ಕೆಲವರ ಅಭಿಮತವು. ಇವರು ಯಜ್ಞಾದಿಗಳನ್ನು ಮಾಡದೆ ಯಾವ ಸತ್ಕರ್ಮಾನುಷ್ಠಾನದಲ್ಲಿಯೂ ಆಸಕ್ತಿಯಿಲ್ಲದೆ ನ್ಯಾಯ ಅಥವಾ ಅನ್ಯಾಯಮಾರ್ಗದಿಂದ ಕೇವಲ ದ್ರವ್ಯಸಂಪಾದನೆಯೇ ಮುಖ್ಯವೆಂದು ಪರಿಗಣಿಸಿ ಅದರಂತೆ ನಡೆಯುತ್ತಿದ್ದುದರಿಂದ ಇವರನ್ನು ಆರ್ಯರು ದಸ್ಯುಗಳೆಂತಲೂ, ನೀಚವೃತ್ತಿಯ ಮನುಷ್ಯರೆಂತಲೂ ಭಾವಿಸಿ ಆ ವಿಧವಾದ ಅಭಿಪ್ರಾಯಗಳನ್ನು ಮಂತ್ರಾದಿಗಳಲ್ಲಿ ಹೊರಗೆಡವಿದ್ದಾರೆ ಅಂತೂ ಋಗ್ವೇದದಲ್ಲಿ ಈ ಪಣಿಗಳೆಂಬುವರನ್ನು ನಿಕೃಷ್ಟಭಾವನೆಯಿಂದ ನೋಡಲಾಗಿದೆ. ಪಣಿಗಳ ವಿಷಯವಾಗಿ ಋಗ್ವೇದದಲ್ಲಿ ಅನೇಕ ಋಕ್ಕುಗಳಿರುವವು. ಅವುಗಳಲ್ಲಿ—

**ಪಣಯೋಃ**— ಎಂಬ ಶಬ್ದವು— ಋ. ಸಂ. ೧-೧೨೪-೧೦; ೧-೧೫೧-೯; ೪-೫೧-೩; ೬-೨೦-೪; ೧೦-೧೦೮-೭; ೧೦-೧೦೮-೮; ೧೦-೧೦೮-೨; ೧೦-೧೦೮-೪; ೧೦-೧೦೮-೬; ೧೦ ೧೦೮-೧೦; ೧೦-೧೦೮-೧೧ ಎಂಬ ಋಕ್ಕುಗಳಲ್ಲಿಯೂ

**ಪಣಿಃ**— ಋ. ಸಂ. ೧-೩೩-೩; ೧-೧೮೦-೭; ೫-೬೧-೮;

**ಪಣಿನಾ**— ಋ. ಸಂ. ೪-೨೫-೭;

**ಪಣಿನಾ ಇವ**— ಋ. ಸಂ ೧-೩೨-೧೧;

**ಪಣಿऽಭಿಃ**— ಋ. ಸಂ. ೪-೫೮-೪;

**ಪಣಿಭ್ಯಃ**— ಋ. ಸಂ. ೯-೨೨-೭;

**ಪಣಿಂ**— ಋ. ಸಂ. ೧-೯೩-೪; ೬-೪೪-೨೨; ೬-೫೧-೧೪; ೬-೬೧-೧; ೮-೪೫-೧೪; ೮-೭೫-೭; ೧೦-೬೭-೬, ೧೦-೧೫೬-೩;

**ಪಣೀನ್**— ಋ. ಸಂ ೧-೧೮೪-೨; ೬-೩೩-೨; ೬-೩೯-೨; ೭-೬-೩; ೭-೧೯-೯; ೮-೨೬-೧೦; ೮-೬೪-೨; ೮-೬೬-೧೦; ೧೦-೬೦-೬;

**ಪಣೀನಾಂ**— ಋ. ಸಂ. ೨-೨೪-೬; ೬-೪೫-೩೧; ೬-೫೩-೫; ೬-೫೩-೭; ೭-೯-೨; ೯-೩-೨;

**ಪಣೀಃ**— ಋ. ಸಂ. ೧-೮೩-೪; ೧-೧೮೨-೩; ೩-೫೮-೨; ೫-೩೪-೭; ೬-೧೩-೩; ೬-೫೩-೩; ೬-೫೩-೬; ೧೦-೯೨-೯೩;

**ಪಣೌ**— ಋ. ಸಂ. ೮-೯೭-೨.

ಎಂಬ ಋಕ್ಕುಗಳಲ್ಲಿ ಪಠಿತವಾಗಿವೆ. ಈ ಪಣಿಗಳೆಂಬುವರು ವಲನೆಂಬ ಅಸುರನ ಸೈನಿಕರೆಂದು ಹೇಳುವ ರೂಢಿಯಿದೆ. ಇವರು ಗೋವುಗಳನ್ನು ಕದ್ದು ಗುಹೆಗಳಲ್ಲಿ ಬಚ್ಚಿಟ್ಟದ್ದರೆಂಬ ವಿಷಯವು ಅನೇಕ ಋಕ್ಕುಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುವುದು.

॥ ಸಂಹಿತಾಪಾಠಃ ॥

ಸ ಹಿ ಧೀಭಿರ್ಹವ್ಯೋ ಅಸ್ತ್ಯುಗ್ರ ಈಶಾನಕೃನ್ಮಹತಿ ವೃತ್ರತೂರ್ಯೇ ।
ಸ ತೋಕಸಾತಾ ತನಯೇ ಸ ವಜ್ರೀ ವಿತಂತಸಾಯ್ಯೋ ಅಭವತ್ಸಮತ್ಸು ॥೬॥

॥ ಪದಪಾಠಃ ॥

ಸಃ । ಹಿ । ಧೀಭಿಃ । ಹವ್ಯಃ । ಅಸ್ತಿ । ಉಗ್ರಃ । ಈಶಾನऽಕೃತ್ । ಮಹತಿ । ವೃತ್ರऽತೂರ್ಯೇ ।
ಸಃ । ತೋಕऽಸಾತಾ । ತನಯೇ । ಸಃ । ವಜ್ರೀ । ವಿತಂತಸಾಯ್ಯಃ । ಅಭವತ್ । ಸಮತ್ऽಸು ॥ ೬ ॥

॥ ಸಾಯಣಭಾಷ್ಯಂ ॥

ಉಗ್ರ ಓಜಸ್ವೀಶಾನಕೃತ್ । ಸ್ತೋತೄನೀಶಾನಾನ್ ಸಮರ್ಥಾನ್ಕರೋತೀತೀಶಾನಕೃತ್ । ಸ ಇಂದ್ರೋ ಮಹತಿ ಪ್ರಭೂತೇ ವೃತ್ರತೂರ್ಯೇ ಸಂಗ್ರಾಮೇ । ವೃತ್ರತೂರ್ಯ ಇತಿ ಸಂಗ್ರಾಮನಾಮೈತತ್ । ಧೀಭಿಃ ಸ್ತೋತೃಭಿಃ ಸ್ತುತಿಭಿರ್ವಾ ಹವ್ಯೋ ಜಯಾರ್ಥಿಭಿರಾಹ್ವಾತವ್ಯೋಽಸ್ತಿ । ಭವತಿ । ಹಿಶಬ್ದಃ ಪಾದಪೂರಣಃ । ತೋಕಸಾತಾ ತೋಕಸ್ಯ ಪುತ್ರಸ್ಯ ಸಾತೌ ಲಾಭೇ ನಿಮಿತ್ತೇ ತನಯೇ ತತ್ಪುತ್ರೇ ನಿಮಿತ್ತೇ ಸತಿ ಸ ಇಂದ್ರ ಆಹ್ವಾತವ್ಯೋಽಸ್ತಿ । ವಜ್ರೀ ವಜ್ರವಾನ್ ಸ ಇಂದ್ರಃ ಸಮತ್ಸು ಸಂಗ್ರಾಮೇಷು ವಿತಂತಸಾಯ್ಯೋ ವಿಶೇಷೇಣ ವಿಸ್ತಾರ್ಯಃ ಸ್ತೋತೃಭಿರ್ವಂದನೀಯೋಽಭವತ್ । ಭವತಿ । ಯದ್ವಾ । ವಿತಂತಸಾಯ್ಯಃ ಶತ್ರೂಣಾಂ ಹಿಂಸಕಃ ॥ ತಂತಸ ಇತಿ ಧಾತುರ್ಹಿಂಸಾಕರ್ಮಾ । ತಸ್ಯ ಕರ್ತರಿ ರೂಪಂ ॥

॥ ಪ್ರತಿಪದಾರ್ಥ ॥

**ಉಗ್ರಃ**—ಓಜಸ್ವಿಯೂ । **ಈಶಾನಕೃತ್**—ಸ್ತೋತೃಗಳನ್ನು ಸಮರ್ಥರನ್ನಾಗಿ ಮಾಡುವವನೂ ಆದ । **ಸಃ ಹಿ**—ಅದೇ ಇಂದ್ರನು । **ಮಹತಿ**—ಪ್ರಭೂತವಾದ । **ವೃತ್ರತೂರ್ಯೇ**—ಯುದ್ಧದಲ್ಲಿ । **ಧೀಭಿಃ**—ಸ್ತುತಿಕರ್ತರಿಂದ । **ಹವ್ಯಃ**—ಪ್ರಾರ್ಥಿತನಾಗಿ । **ಅಸ್ತಿ**—ಆಗುತ್ತಾನೆ । **ತೋಕಸಾತಾ**—ಪುತ್ರಲಾಭದ ನಿಮಿತ್ತವಾಗಿಯೂ । **ತನಯೇ**—ಪೌತ್ರಾದಿಗಳ ನಿಮಿತ್ತವಾಗಿಯೂ । **ಸಃ**—ಅದೇ ಇಂದ್ರನು ಆಹೂತನಾಗುತ್ತಾನೆ । **ವಜ್ರೀ**—ವಜ್ರಾಯುಧಯುಕ್ತನಾದ । **ಸಃ**—ಇಂದ್ರನು । **ಸಮತ್ಸು**—ಸಂಗ್ರಾಮಗಳಲ್ಲಿ । **ವಿತಂತಸಾಯ್ಯಃ**—ಅತಿಶಯ ಪೂಜ್ಯನಾಗಿ । **ಅಭವತ್**—ಆಗುತ್ತಾನೆ.

॥ ಭಾವಾರ್ಥ ॥

ಓಜಸ್ವಿಯೂ, ಸ್ತೋತೃಗಳಿಗೆ ಶಕ್ತಿದಾಯಕನೂ ಆದ ಅದೇ ಇಂದ್ರನು ಪ್ರಭೂತವಾದ ಯುದ್ಧದಲ್ಲಿ ಸ್ತುತಿಕರ್ತರಿಂದ ಪ್ರಾರ್ಥಿತನಾಗುತ್ತಾನೆ. ಪುತ್ರಲಾಭದ ನಿಮಿತ್ತವಾಗಿಯೂ, ಪೌತ್ರಾದಿಗಳ ನಿಮಿತ್ತವಾಗಿಯೂ ಅದೇ ಇಂದ್ರನು ಆಹೂತನಾಗುತ್ತಾನೆ. ವಜ್ರಯುಕ್ತನಾದ ಇಂದ್ರನು ಸಂಗ್ರಾಮಗಳಲ್ಲಿ ಅತಿಶಯವಾಗಿ ಪೂಜ್ಯನಾಗಿರುತ್ತಾನೆ.

## English Translation.

Fierce Indra, maker of rulers, you are he who is to be invoked with praises in a great conflict ; you are he (who is to be invoked) for sons and graddsons, he, the wielder of the thunderbolt, who is to be especially glorified in battles.

॥ ಸಂಹಿತಾಪಾಠಃ ॥

ಸ ಮಜ್ಮನಾ ಜನಿಮ ಮಾನುಷಾಣಾಮಮರ್ತ್ಯೇನ ನಾಮ್ನಾತಿ ಪ್ರ ಸರ್ಸ್ರೇ ।

ಸ ದ್ಯುಮ್ನೇನ ಸ ಶವಸೋತ ರಾಯಾ ಸ ವೀರ್ಯೇಣ ನೃತಮಃ ಸಮೋಕಾಃ ॥

। ಪದಪಾಠಃ ।

ಸಃ । ಮಜ್ಮನಾ । ಜನಿಮ । ಮಾನುಷಾಣಾಂ । ಅಮರ್ತ್ಯೇನ । ನಾಮ್ನಾ । ಅತಿ । ಪ್ರ । ಸರ್ಸ್ರೇ ।

ಸಃ । ದ್ಯುಮ್ನೇನ । ಸಃ । ಶವಸಾ । ಉತ । ರಾಯಾ । ಸಃ । ವೀರ್ಯೇಣ । ನೃಽತಮಃ । ಸಂಽಓಕಾಃ ॥

। ಸಾಯಣಭಾಷ್ಯಂ ।

ಸ ಇಂದ್ರೋಽಮರ್ತ್ಯೇನ ವಿನಾಶರಹಿತೇನ ನಾಮ್ನಾ ಶತ್ರೂಣಾಂ ನಮಯಿತ್ರಾ ಮಜ್ಮನಾ ಬಲೇನ । ಮಜ್ಮನೇತಿ ಬಲನಾಮೈತತ್ । ಮಾನುಷಾಣಾಂ ಮನುಷ್ಯಾಣಾಂ ಜನಿಮ ಜನ್ಮ । ಸಂಘಮಿತ್ಯರ್ಥಃ । ಅತಿ ಪ್ರ ಸರ್ಸ್ರೇ । ಅತಿಪ್ರಪೇದೇ । ಸ ಇಂದ್ರೋ ದ್ಯುಮ್ನೇನ ಯಶಸಾ ಸಮೋಕಾಃ ಸಮಾನಸ್ಥಾನೋ ಭವತಿ । ಕಿಂಚ ಸ ಇಂದ್ರಃ ಶವಸಾ ಬಲೇನ ಸಮೋಕಾ ಭವತಿ । ಉತಾಪಿ ಚ ನೃತಮೋ ನೇತೃತಮಃ ಸ ಇಂದ್ರೋ ರಾಯಾ ಧನೇನ ವೀರ್ಯೇಣ ಸಾಮರ್ಥ್ಯೇನ ಚ ಸಮೋಕಾ ಭವತಿ ॥

॥ಪ್ರತಿಪದಾರ್ಥ ॥

**ಸಃ**—ಇಂದ್ರನು । **ಅಮರ್ತ್ಯೇನ**—ಮರಣರಹಿತವಾದುದೂ । **ನಾಮ್ನಾ**—ಶತ್ರುಗಳನ್ನು ಬಗ್ಗುವಂತೆ ಮಾಡುವುದೂ ಆದ । **ಮಜ್ಮನಾ**—ಬಲದಿಂದ । **ಮಾನುಷಾಣಾಂ**—ಮಾನವರ । **ಜನಿಮ**—ಸಂತತಿಯನ್ನು । **ಅತಿ ಪ್ರಸಸ್ರೇ**—ಅತಿಯಾಗಿ ವಿಸ್ತರಿಸಿದನು । **ಸಃ**—ಇಂದ್ರನು । **ದ್ಯುಮ್ನೇನ**—ಯಶಸ್ಸಿನೊಂದಿಗೆ । **ಸಮೋಕಾಃ**—ಒಟ್ಟಿಗೆ ವಾಸಮಾಡುತ್ತಾನೆ । **ಸಃ**—ಅವನು । **ಶವಸಾ**—ಬಲದೊಂದಿಗೆ (ಒಟ್ಟಿಗಿರುತ್ತಾನೆ) । **ಉತ**—ಮತ್ತು । **ನೃತಮಃ**—ಮಾನವರಲ್ಲಿ ಶ್ರೇಷ್ಠನಾದ । **ಸಃ**—ಇಂದ್ರನು । **ರಾಯಾ**—ಧನದೊಂದಿಗೂ । **ವಿರ್ಯೇಣ**—ಸಾಮರ್ಥ್ಯದೊಂದಿಗೂ (ಒಟ್ಟಿಗಿರುತ್ತಾನೆ).

। ಭಾವಾರ್ಥ ॥

ಇಂದ್ರನು ಮರಣರಹಿತವಾದುದೂ, ಶತ್ರುಗಳನ್ನು ಬಗ್ಗುವಂತೆ ಮಾಡುವುದೂ ಆದ ಬಲದಿಂದ ಮಾನವರ ಸಂತತಿಯನ್ನು ವೃದ್ಧಿಯಾಗುವಂತೆ ಮಾಡಿದನು. ಇಂದ್ರನು ಯಶಸ್ಸಿನೊಂದಿಗೂ, ಬಲದೊಂದಿಗೂ, ಧನದೊಂದಿಗೂ, ಸಾಮರ್ಥ್ಯದೊಂದಿಗೂ ಒಟ್ಟಿಗಿರುತ್ತಾನೆ ಎಂದರೆ ಇಂದ್ರನ ಜೊತೆಯಲ್ಲಿಯೇ ಧನಬಲಾದಿಗಳೆಲ್ಲಾ ಇರುತ್ತವೆ.

## English Translation.

With immortal, foe-humiliating might, he has promoted the (multiplied) birth of mankind ; he, the chief of leaders, dwells in the same dwelling with fame, with strength, with riches, with heroism.

॥ ಸಂಹಿತಾಪಾಠಃ ॥

ಸ ಯೋ ನ ಮುಹೇ ನ ಮಿಥೂ ಜನೋ ಭೂತ್ಸುಮಂತುನಾಮಾ ಚುಮುರಿಂ ಧುನಿಂ ಚ ।

ವೃಣಕ್ಪಿಪ್ರುಂ ಶಂಬರಂ ಶುಷ್ಣಮಿಂದ್ರಃ ಪುರಾಂ ಚ್ಯೌತ್ನಾಯ ಶಯಥಾಯ ನೂ ಚಿತ್ ॥ ೮ ॥

॥ ಪದಪಾಠಃ ॥

ಸಃ । ಯಃ । ನ । ಮುಹೇ । ನ । ಮಿಥು । ಜನಃ । ಭೂತ್ । ಸುಮಂತುऽನಾಮಾ । ಚುಮುರಿಂ । ಧುನಿಂ । ಚ ।

ವೃಣಕ್ । ಪಿಪ್ರುಂ । ಶಂಬರಂ । ಶುಷ್ಣಂ । ಇಂದ್ರಃ । ಪುರಾಂ । ಚ್ಯೌತ್ನಾಯ । ಶಯಥಾಯ । ನು । ಚಿತ್ ॥

॥ ಸಾಯಣಭಾಷ್ಯಂ ॥

ಯ ಇಂದ್ರೋ ನ ಮುಹೇ ಸಂಗ್ರಾಮೇ ಕದಾಪಿ ನ ಮುಹ್ಯತಿ । ಯಶ್ಚ ಮಿಥು ಮಿಥ್ಯಾ ವೃಥಾ ಜನೋ ಜನಯಿತಾ ನ ಭೂತ್ ನ ಭವತಿ ಕಿಂತು ಸುಮಂತುನಾಮಾ ಪ್ರಜ್ಞಾನನಾಮಾ । ಪ್ರಖ್ಯಾತನಾಮೇತ್ಯರ್ಥಃ । ಸ ಇಂದ್ರಃ ಪುರಾಂ ಶತ್ರುಸಂಬಂಧಿನೀನಾಂ ಪುರೀಣಾಂ ಚ್ಯೌತ್ನಾಯ ಚ್ಯವನಾಯ ನಾಶನಾಯ ಶಯಥಾಯ ಶತ್ರೂಣಾಂ ಮರಣಾಯ ಚ ನೂ ಚಿತ್ ಶೀಘ್ರಮೇವ ಕರ್ಮ ಕುರುತ ಇತಿ ಶೇಷಃ । ತಥಾ ಚುಮುರಿಂ ಧುನಿಂ ಚೈತನ್ನಾಮಕಾವಸುರೌ ವೃಣಕ್ । ಅವೃಣಕ್ । ಹಿಂಸಿತವಾನಸಿ ॥ ವೃಣಕ್ತಿರ್ಹಿಂಸಾಕರ್ಮಾ ॥ ಅಪಿ ಚ ಪಿಪ್ರುಂ ಶಂಬರಂ ಶುಷ್ಣಮೇತನ್ನಾಮಕಾನ್ ತ್ರೀನಸುರಾನ್ ಹಿಂಸಿತವಾನಸಿ ॥

॥ ಪ್ರತಿಪದಾರ್ಥ ॥

**ಯಃ**—ಯಾವ ಇಂದ್ರನು । **ನ ಮುಹೇ**—ಸಂಗ್ರಾಮಗಳಲ್ಲಿ ಭ್ರಾಂತಿಗೊಳ್ಳುವುದಿಲ್ಲವೋ । **ಮಿಥು**—ವ್ಯರ್ಥವಾದ । **ಜನಃ**—ಉತ್ಪಾದಕನಾಗಿ । **ನ ಭೂತ್**—ಆಗುವುದಿಲ್ಲವೋ ಅಂತಹ । **ಸುಮಂತುನಾಮಾ**—ಪ್ರಸಿದ್ಧವಾದ ಕೀರ್ತಿಯುಳ್ಳ । **ಸಃ ಇಂದ್ರಃ**—ಅದೇ ಇಂದ್ರನು । **ಪುರಾಂ**—ಶತ್ರು ಪಟ್ಟಣಗಳ । **ಚ್ಯೌತ್ನಾಯ**—ನಾಶಕ್ಕಾಗಿಯೂ । **ಶಯಥಾಯ**—ಶತ್ರುಗಳ ಸಂಹಾರಕ್ಕಾಗಿಯೂ । **ನೂ ಚಿತ್**—ಕ್ಷಿಪ್ರವಾಗಿಯೇ (ಪ್ರಯತ್ನಿಸುವನು) । **ಚುಮುರಿಂ**—ಚುಮುರಿಯೆಂಬುವನನ್ನೂ । **ಧುನಿಂ ಚ**—ಧುನಿಯೆಂಬ ಅಸುರನನ್ನೂ । **ವೃಣಕ್**—ನಾಶಪಡಿಸಿದನು । **ಪಿಪ್ರುಂ**—ಪಿಪ್ರುವನ್ನೂ । **ಶಂಬರಂ**—ಶಂಬರನನ್ನೂ । **ಶುಷ್ಣಂ**—ಶುಷ್ಣನನ್ನೂ (ಸಂಹರಿಸಿದನು)

|| ಭಾವಾರ್ಥ ||

ಯಾವ ಇಂದ್ರನು ಸಂಗ್ರಾಮಗಳಲ್ಲಿ ಭ್ರಾಂತಿಗೊಳ್ಳುವುದಿಲ್ಲವೋ ಮತ್ತು ಯಾವನ ಕಾರ್ಯಕಲಾಪಗಳು ಯಾವುದೂ ವ್ಯರ್ಥವಾಗುವುದಿಲ್ಲವೋ ಅಂತಹ ಪ್ರಸಿದ್ಧವಾದ ಕೀರ್ತಿಯುಳ್ಳ ಅದೇ ಇಂದ್ರನು ಶತ್ರುಪಟ್ಟಣಗಳ ನಾಶಕ್ಕಾಗಿಯೂ ಮತ್ತು ಶತ್ರುಗಳ ಸಂಹಾರಕ್ಕಾಗಿಯೂ ಕ್ಷಿಪ್ರವಾಗಿಯೇ ಪ್ರಯತ್ನಿಸುವನು. ಅದೇ ಇಂದ್ರನು ಚುಮುರಿ, ಧುನಿ, ಪಿಪ್ರು, ಶಂಬರ ಮತ್ತು ಶುಷ್ಣ ಎಂಬ ಅನೇಕ ರಾಕ್ಷಸರನ್ನು ಸಂಹರಿಸಿದನು.

## English Translation.

He who is never perplexed, who is no engenderer of that which is in vain, whose name is renowned, who promptly (exerts himself) for the overturning of the cities (of the Asuras), and for the destruction (of his foes); you (Indra), have indeed slain Chumuri, Dhuni, Pipru, Sambara and Sushna.

। ವಿಶೇಷವಿಷಯಗಳು ।

**ಶುಷ್ಣ**—ಇವನ ಹೆಸರು ಸುಮಾರು ೪೦ ಸಲ ಬರುತ್ತದೆ. ಕುತ್ಸನ ಮುಖ್ಯ ಶತ್ರು. ಈ ಕುತ್ಸನಿಗೋಸ್ಕರ ಅಥವಾ ಕುತ್ಸನ ಜೊತೆಯಲ್ಲಿ, ಇಂದ್ರನು ಶುಷ್ಣನನ್ನು ನಿರ್ಮೂಲಮಾಡುತ್ತಾನೆ. (೪-೧೬-೧೨, ೫-೨೯-೯, ಇತ್ಯಾದಿ) ಅವನಿಗೆ ಕೊಂಬುಗಳಿವೆ (೧-೩೩-೧೨). ಮೊಟ್ಟೆಗಳಿವೆ (೬-೧೦-೧೦, ೧೧) ಅಂದರೆ ಮೊಟ್ಟೆಗಳಿಂದಾದ ಮರಿಗಳು (೧೦-೨೨-೧೧ನ್ನು ಹೋಲಿಸಿ), ಇದರಿಂದ ಶುಷ್ಣನೂ ಒಂದು ಸರ್ಪವೆನ್ನಬಹುದು. ಬುಸುಗುಟ್ಟುತ್ತಾನೆ (ಶ್ವಸನಃ ೧-೫೪-೫). ಆರುಸಲ ಇವನಿಗೆ ಅಶುಷ (ನುಂಗುವ) ಎಂಬ ವಿಶೇಷಣವು ಅಗ್ನಿಗೆ ಮಾತ್ರ ಉಪಯೋಗಿಸಲ್ಪಟ್ಟಿದೆ. ಅವನಿಗೆ ಬಲವಾದ ಕೋಟೆಗಳು (೧-೫೧-೧೧) ಅಥವಾ ಕೋಟೆ (೪-೩೦-೧೩) ಇದೆ, ಇವು ಚಲಿಸುವ ಕೋಟೆಗಳು (೮-೧-೨೮). ಇಂದ್ರನು ಶುಷ್ಣನ ಕೋಟೆಗಳನ್ನು ನಾಶಮಾಡಿ ನೀರುಗಳನ್ನು ಬಿಡುಗಡೆಮಾಡುತ್ತಾನೆ (೧-೫೧-೧೧), ಶುಷ್ಣನನ್ನು ಬಡಿದು ಜಲಧಿಯನ್ನು ಸಂಪಾದಿಸುತ್ತಾನೆ. (ವಾಲ ೩-೮) ಅಥವಾ ಶುಷ್ಣನ ವಂಶವನ್ನು ನಿರ್ಮೂಲಮಾಡಿ ಸ್ವರ್ಗೀಯೋದಕವನ್ನು (ಸ್ವರ್ವತೀಃ) ಗಳಿಸುತ್ತಾನೆ (೮-೪೦-೧೦) ನಾಲ್ಕುಸಲ ಶುಷ್ಣನಿಗೆ "ಕುಯವ'' (ಕೆಟ್ಟ ಧಾನ್ಯವನ್ನುಂಟುಮಾಡುವವನು) ಎಂಬ ವಿಶೇಷಣವಿದೆ ಕುಯವ ಎಂಬುದೇ ಎರಡು ಸಲ ಪ್ರಾಯಶಃ ಶುಷ್ಣನಿಗೆ ಬದಲಾಗಿ ಉಪಯೋಗಿಸಿರುವಂತೆ ಇದೆ. (೧-೧೦೩-೮, ೧-೧೦೪-೩). ಇಂದ್ರ ಶುಷ್ಣರ ಯುದ್ಧದ ಪರಿಣಾಮವು ಜಲವಿಮೋಚನೆ ಮಾತ್ರವಲ್ಲ, ಗೋವುಗಳ ಅಥವಾ ಸೂರ್ಯನ ಪ್ರಾಪ್ತಿಗೂ ಆಗಬಹುದು. (೮-೮೫-೧೭). ಇಂದ್ರನೊಡನೆ ಯುದ್ಧಮಾಡುವಾಗ, ಶುಷ್ಣನು ಅಂಧಕಾರದಲ್ಲಿ ಓಡಾಡುತ್ತಾನೆ. ಹಿಮದ ಮಗ ಮತ್ತು ದಾನವನೆನ್ನಿಸಿಕೊಳ್ಳುತ್ತಾನೆ (೫-೩೨-೪). ಶುಷ್ಣನು ಅಮೃತವನ್ನು ತನ್ನಲ್ಲಿ ಇಟ್ಟುಕೊಂಡಿರುವ ದಾನವನು (ಕಾಠಕ).

ಮೇಲೆ ಹೇಳಿದ ವಾಕ್ಯಗಳಿಂದ ಶುಷ್ಣನು ಅನಾವೃಷ್ಟಿಕಾರಕನೆನ್ನಬಹುದು. 'ಶುಷ್ಣ' ಪದದ ಮೂಲವಾದ ಶುಷ್ ಧಾತುನಿಗೆ ಬುಸುಗುಟ್ಟು ಅಥವಾ ಒಣಗಿಸು ಎಂದರ್ಥ. ಇದೂ ಅನಾವೃಷ್ಟಿಕಾರಕನೆಂಬುದನ್ನು ಸಮರ್ಥಿಸುತ್ತದೆ

**ಶಂಬರಃ**— ಈ ಹೆಸರು ಸುಮಾರು ಇಪ್ಪತ್ತು ಸಲ ಬರುತ್ತದೆ. ಇತರ ಪಿಶಾಚಿಗಳೊಡನೆಯೇ ಶಂಬರನು ಪ್ರಸಕ್ತನಾಗಿರುವುದು. ಅದರಲ್ಲಿಯೂ ಚೆನ್ನಾಗಿ ಶುಷ್ಣ, ಪಿಪ್ರು (೧-೧೦೧-೨, ೧-೧೦೩-೮, ೨-೧೯-೬, ೬-೧೮-೮) ಮತ್ತು ವರ್ಚಿಗಳೊಡನೆ; ಅಹಿ ಮತ್ತು ಶಂಬರರ ಮೇಲೆ ಯುದ್ಧಮಾಡುವಾಗ, ಮರುತ್ತುಗಳು ಇಂದ್ರನಿಗೆ ಸಹಾಯಮಾಡಿದರು. (೩ ೪೭ ೪), ಶಂಬರನನ್ನು ಭೇದಿಸಿದಾಗ, ಇಂದ್ರನು ಆಕಾಶವನ್ನೇ ನಡುಗಿಸಿದನು. (೧-೫೪-೪). ಪರ್ವತದ ಮೇಲೆ ವಾಸಿಸುತ್ತಿದ್ದ ಶಂಬರನನ್ನು ಹುಡುಕಿ (೨-೧೨-೧೧) ಪರ್ವತದಿಂದ ಕೆಳಕ್ಕುರುಳಿಸಿದನು (೧-೧೩೦-೭; ೬-೨೬-೫) ಕುಲಿತರನ ಪುತ್ರನಾದ ಶಂಬರನೆಂಬ ದಾಸನನ್ನು ಇಂದ್ರನು ದೊಡ್ಡ ಪರ್ವತದಿಂದ ಉರುಳಿಸಿದನು. (೪-೩೦-೧೪). ತಾನೊಬ್ಬ ಸಣ್ಣ ದೇವತೆಯೆಂದು ತಿಳಿದುಕೊಂಡಿದ್ದು, ಶಂಬರನನ್ನು ಹೊಡೆದು, ಉನ್ನತ ಪ್ರದೇಶದಿಂದ ಬೀಳಿಸಿದನು. (೭ ೧೮-೨೦) ತೊಂಭತ್ತು (೧-೧೩೦-೭), ಸಾಧಾರಣವಾಗಿ ತೊಂಭತ್ತೊಂಭತ್ತು (೨-೧೯-೬ ಇತ್ಯಾದಿ) ಅಥವಾ ನೂರು (೨-೧೪ ೬ ಇತ್ಯಾದಿ) ದುರ್ಗಗಳು ಅವನ ಅಧೀನದಲ್ಲಿವೆ. ಒಂದು ಸಲ ನಪುಂಸಕಾಂತವಾದ ಈ ಪದಕ್ಕೆ ಶಂಬರನ ಕೋಟೆಗಳು ಎಂಬರ್ಥವಿದೆ. ಇವುಗಳನ್ನು ಬೃಹಸ್ಪತಿಯು ಭೇದಿಸಿ, ನಿಧಿಗಳಿಂದ ಯುಕ್ತವಾಗಿದ್ದ ಪರ್ವತ ಪ್ರದೇಶವನ್ನು ಪ್ರವೇಶಿಸಿದನು (೨-೨೪-೨). ಅತಿಥಿಗ್ವ (೧-೫೧-೬), ಸಾಧಾರಣವಾಗಿ ದಿವೋದಾಸ (೨-೧೯-೬, ಇತ್ಯಾದಿ) ಒಂದೊಂದು ಸಲ ಇಬ್ಬರೂ (೧-೧೩೦-೭, ೨-೨೬-೩), ಇವರುಗಳಿಗೋಸ್ಕರ, ಇಂದ್ರನು ಶಂಬರನನ್ನು ಧ್ವಂಸಮಾಡುತ್ತಾನೆ.

**ಪಿಪ್ರು**— ಇಂದ್ರನ ಆಶ್ರಿತನಾದ (ವಾಲ. ೧-೧೦) ಋಜಿಶ್ವನ ಶತ್ರು; ಈ ಋಜಿಶ್ವನು ಇಂದ್ರನಿಗೆ ಸೋಮರಸವನ್ನರ್ಪಿಸಿ, ಪಿಪ್ರುವಿನಮೇಲೆ ಯುದ್ಧದಲ್ಲಿ, ಸಹಾಯಪಡೆಯುತ್ತಾನೆ. (೫-೨೯-೧೧; ೧೦-೯೯-೧೧). ಇಂದ್ರನು ಋಜಿಶ್ವನಿಂದ ಯುಕ್ತನಾಗಿ (೧-೧೦೧-೧, ೨; ೧೦-೧೩೮-೩) ಅಥವಾ ಅವನಿಗೋಸ್ಕರ (೪-೧೬-೧೩; ೬-೨೦-೭) ಪಿಪ್ರುವನ್ನು ಸೋಲಿಸಿದನು. ಅಹಿಯ ಮಾಯೆಗಳಿಂದ ಯುಕ್ತನಾದ ಪಿಪ್ರುವಿನ ಅಧೀನದಲ್ಲಿ ಅನೇಕ ಕೋಟೆಗಳಿವೆ. ಇಂದ್ರನು ಇವುಗಳನ್ನು ಭೇದಿಸುತ್ತಾನೆ (೧-೫೧-೫, ೬-೨೦-೭). ಪಿಪ್ರುವೆಂಬ ದಾಸ ಮತ್ತು ಕೆಲವರನ್ನು ಇಂದ್ರನು ವಧಿಸಿ, ಸೇನುಗಳನ್ನು ಹೊರಡಿಸಿದನು (೮-೩೨-೨). ಸೂರ್ಯನು ಆಕಾಶಮಧ್ಯದಲ್ಲಿ, ತನ್ನ ರಥವನ್ನು ಬಿಚ್ಚಿದಾಗ, ಪಿಪ್ರುವಿಗೆ ಅನುರೂಪನಾದ ಯೋಧನನ್ನು ಆರ್ಯನು ಕಂಡನು. ಋಜಿಶ್ವಯುಕ್ತನಾದ ಇಂದ್ರನು, ಮಾಯಿಯಾದ ಪಿಪ್ರು ಎಂಬ ಅಸುರನ ಬಲವಾದ ಕೋಟೆಗಳನ್ನು ಧ್ವಂಸಮಾಡಿದನು (೧೦-೧೩೮-೩). ಕಾಡುಮೃಗರೂಪನಾದ ಪಿಪ್ರುವನ್ನು ಇಂದ್ರನು ಋಜಿಶ್ವನಿಗೆ ಒಪ್ಪಿಸಿದನು ಐವತ್ತು ಸಾವಿರ ಕಪ್ಪುಜನರನ್ನು ಸೋಲಿಸಿ ದುರ್ಗಗಳನ್ನು ಭೇದಿಸಿದನು (೪-೧೬-೧೩). ಋಜಿಶ್ವನೊಡನೆ ಸೇರಿಕೊಂಡು ಇಂದ್ರನು ಕೃಷ್ಣವರ್ಣದವರ ಸಂತತಿಯನ್ನೇ ನಾಶಮಾಡಿದನು. (೧೧೧-೧). ಇವನಿಗೆ ಅಸುರ, ದಾಸ ಎಂಬ ಎರಡೂ ವಿಶೇಷಣಗಳಿರುವುದರಿಂದ ಮನುಷ್ಯರ ಶತ್ರುವೂ ಆಗಿರಬಹುದೆಂದು ಕೆಲವರ ಅಭಿಪ್ರಾಯ.

**ಧುನಿ ಮತ್ತು ಚುಮುರಿಃ**— ಸಾಧಾರಣವಾಗಿ ಎರಡು ಹೆಸರುಗಳೂ ಒಟ್ಟಿಗೇ ಬರುತ್ತವೆ. ಒಂದು ಸಲ ಚುಮುರಿಯೊಂದೇ ಬಂದಿದೆ. ಒಂದು ಸಲ ದ್ವಂದ್ವವಾಗಿಯೂ (೬-೨೦-೧೩) ಉಪಯೋಗಿಸಿದೆ, ಇದರಿಂದ ಇವರಿಬ್ಬರದೂ ಸಂಬಂಧ ಎಷ್ಟು ನಿಕಟವಾದುದೆಂದು ತಿಳಿದುಬರುತ್ತದೆ. ಇಂದ್ರನು ಇವರಿಬ್ಬರನ್ನು ನಿದ್ರಾಮಗ್ನರನ್ನಾಗಿ ಮಾಡಿದನು (೨-೧೫-೯, ೬-೨೦-೧೩, ೭-೧೯-೪), ಚುಮುರಿ ಒಬ್ಬನಿಗೂ ಇದೇ ರೀತಿ ಆಗಿದೆ (೬-೨೬-೬). ಶಂಬರ, ಪಿಪ್ರು, ಶುಷ್ಣ ಮೊದಲಾದವರೊಡನೆ, ಇವರನ್ನೂ ಇಂದ್ರನು ಧ್ವಂಸಮಾಡಿ, ಅವರ ಕೋಟೆಗಳನ್ನು ನಾಶಮಾಡಿದನು.

(೬-೧೮-೮). ತನಗೋಸ್ಕರ ಸೋಮರಸವನ್ನು ಸಿದ್ಧಪಡಿಸಿದ (೬-೨೦-೧೩) ದಭೀತಿಗೋಸ್ಕರ ಇವರಿಬ್ಬರನ್ನೂ ಇಂದ್ರನು ನಾಶಮಾಡಿದನು, ಅಥವಾ ನಿದ್ರಿತರಾಗಿ ಮಾಡಿದನು (೧೦-೧೧೩-೯), ಮತ್ತು ದಭೀತಿಯು ಅವನ ಭಕ್ತಿಗೆ ತಕ್ಕ ಪ್ರತಿಫಲವನ್ನು ದೇವತೆಗಳಿಂದ ಪಡೆದನು (೬-೨೬-೬). ಇಂದ್ರನು ದಭೀತಿಗೋಸ್ಕರ ಮೂವತ್ತುಸಾವಿರ ದಸ್ಯುಗಳಿಗೆ ನಿದ್ರೆಬರುವಂತೆ ಮಾಡಿ (೪-೩೦-೨೧), ಅವನಿಗೋಸ್ಕರ ದಸ್ಯುಗಳನ್ನು ಹಗ್ಗವಿಲ್ಲದೆ ಬಂಧಿಸಿದನು (೨-೧೩-೯). ಇತ್ಯಾದಿ

|| ಸಂಹಿತಾಪಾಠಃ ||

ಉದಾವತಾ ತ್ವಕ್ಷಸಾ ಪನ್ಯಸಾ ಚ ವೃತ್ರಹತ್ಯಾಯ ರಥಮಿಂದ್ರ ತಿಷ್ಠ ।
ಧಿಷ್ವ ವಜ್ರಂ ಹಸ್ತ ಆ ದಕ್ಷಿಣತ್ರಾಭಿ ಪ್ರ ಮಂದ ಪುರುದತ್ರ ಮಾಯಾಃ ||

|| ಪದಪಾಠಃ ||

**ಉತ್ಽಅವತಾ । ತ್ವಕ್ಷಸಾ । ಪನ್ಯಸಾ । ಚ । ವೃತ್ರಽಹತ್ಯಾಯ । ರಥಂ । ಇಂದ್ರ । ತಿಷ್ಠ ।**
**ಧಿಷ್ವ । ವಜ್ರಂ । ಹಸ್ತೇ । ಆ । ದಕ್ಷಿಣಽತ್ರಾ । ಅಭಿ । ಪ್ರ । ಮಂದ । ಪುರುಽದತ್ರ । ಮಾಯಾಃ ।।**

|| ಸಾಯಣಭಾಷ್ಯಂ ||

**ಹೇ ಇಂದ್ರ ಉದವತೋದ್ಗಚ್ಛತಾ ।। ಅವತಿರತ್ರ ಗತಿಕರ್ಮಾ ।। ತ್ವಕ್ಷಸಾ ಶತ್ರೂಣಾಂ ತನೂಕರ್ತ್ರಾ ಪನ್ಯಸಾ ಸ್ತುತ್ಯತರೇಣ ಬಲೇನ ಯುಕ್ತಸ್ತ್ವಂ ವೃತ್ರಹತ್ಯಾಯ ಶತ್ರುಹನನಾಯ ಸ್ವಕೀಯಂ ರಥಂ ಚ ತಿಷ್ಠ । ಆರೋಹ । ತಥಾ ದಕ್ಷಿಣತ್ರಾ ದಕ್ಷಿಣೇ ಹಸ್ತೇ ಪಾಣೌ ವಜ್ರಂ ಸ್ವಕೀಯಮಾಯುಧಮಾ ಧಿಷ್ವ । ಆಧತ್ಸ್ವ । ತದನಂತರಂ ಹೇ ಪುರುದತ್ರ ಬಹುಧನೇಂದ್ರ ತ್ವಮಾಸುರೀರ್ಮಾಯಾ ಅಭ್ಯಭಿಗಮ್ಯ ಪ್ರ ಮಂದ । ಪ್ರಕರ್ಷೇಣ ಜಹಿ । ಅತ್ರ ಮಂದತಿರ್ವಧಕರ್ಮಾ ।।**

|| ಪ್ರತಿಪದಾರ್ಥ ||

**ಇಂದ್ರ**—ಎಲೈ ಇಂದ್ರನೇ । **ಉದವತಾ**—ಏರುತ್ತಿರುವ ವೇಗವುಳ್ಳದ್ದೂ । **ತ್ವಕ್ಷಸಾ**—ಶತ್ರುನಾಶಕವಾದುದೂ । **ಪನ್ಯಸಾ**—ಸ್ತುತ್ಯರ್ಹವಾದುದೂ ಆದ ಶಕ್ತಿಯೊಡಗೂಡಿದ ನೀನು । **ವೃತ್ರಹತ್ಯಾಯ**—ವೃತ್ರನಾಶಕ್ಕೋಸ್ಕರವಾಗಿ । **ರಥಂ ಚ**—ನಿನ್ನ ರಥವನ್ನು । **ತಿಷ್ಠ**—ಹತ್ತಿ ಕುಳಿತುಕೊ । **ದಕ್ಷಿಣತ್ರಾ**—ಬಲಭಾಗದ । **ಹಸ್ತೇ**—ಕೈಯಿನಲ್ಲಿ । **ವಜ್ರಂ**—ವಜ್ರಾಯುಧವನ್ನು । **ಆ ಧಿಷ್ವ**—ಎತ್ತಿ ಹಿಡಿ । **ಪುರುದತ್ರ**—ಬಹುಧನವುಳ್ಳ ಎಲೈ ಇಂದ್ರನೇ । **ಮಾಯಾಃ ಅಭಿ**—ಶತ್ರುಗಳ ವಂಚನೆಗಳನ್ನು ಎದುರಿಸಿ । **ಪ್ರ ಮಂದ**—ಪೂರ್ಣವಾಗಿ ಜಯಿಸು.

॥ ಭಾವಾರ್ಥ ॥

ಎಲೈ ಇಂದ್ರನೇ, (ಬೆಳೆಯುತ್ತಿರುವ) ಏರುತ್ತಿರುವ ವೇಗವುಳ್ಳದ್ದೂ, ಶತ್ರುನಾಶಕವಾದುದೂ, ಸ್ತುತ್ಯರ್ಹವಾದುದೂ ಆದ ಶಕ್ತಿಯೊಡಗೂಡಿದ ನೀನು ವೃತ್ರನಾಶಕ್ಕೋಸ್ಕರವಾಗಿ ನಿನ್ನ ರಥವನ್ನು ಹತ್ತಿ ಕುಳಿತುಕೊ. ಬಲಭಾಗದ ಕೈಯಿನಲ್ಲಿ ವಜ್ರಾಯುಧವನ್ನು ಎತ್ತಿ ಹಿಡಿ. ಪ್ರಭೂತವಾದ ಧನವುಳ್ಳ ಎಲೈ ಇಂದ್ರನೇ, ಶತ್ರುಗಳ ವಂಚನೆಗಳನ್ನೆಲ್ಲಾ ಎದುರಿಸಿ ಅವರನ್ನು ಪೂರ್ಣವಾಗಿ ಜಯಿಸು.

## English Translation.

(Endownd) with upward-rising, foe-thinning, and glorified (vigour), ascend your car for the destruction of Vritra: take the thunderbolt in your right hand, and baffle, giver of wealth, the devices (of the Asuras).

॥ ಸಂಹಿತಾಪಾಠಃ ॥

ಅಗ್ನಿರ್ನ ಶುಷ್ಕಂ ವನಮಿಂದ್ರ ಹೇತೀ ರಕ್ಷೋ ನಿ ಧಕ್ಷ್ಯಶನಿರ್ನ ಭೀಮಾ ।
ಗಂಭೀರಯ ಋಷ್ವಯಾ ಯೋ ರುರೋಜಾಧ್ವಾನಯದ್ದುರಿತಾ ದಂಭಯಚ್ಚ ॥ ೧೦ ॥

॥ ಪದಪಾಠಃ ॥

ಅಗ್ನಿಃ । ನ । ಶುಷ್ಕಂ । ವನಂ । ಇಂದ್ರ । ಹೇತೀ । ರಕ್ಷಃ । ನಿ । ಧಕ್ಷಿ । ಅಶನಿಃ । ನ । ಭೀಮಾ ।
ಗಂಭೀರಯಾ । ಋಷ್ವಯಾ । ಯಃ । ರುರೋಜ । ಅಧ್ವನಯತ್ । ದುಃऽಇತಾ । ದಂಭಯತ್ । ಚ ॥ ೧೦ ॥

॥ ಸಾಯಣಭಾಷ್ಯಂ ॥

ಅಗ್ನಿರ್ನಾಗ್ನಿರಿವ । ನಶಬ್ದ ಉಪಮಾರ್ಥೀಯಃ । ಯಥಾಗ್ನಿಃ ಶುಷ್ಕಂ ನೀರಸಂ ವನಂ ವೃಕ್ಷಸಮೂಹಂ ದಹತಿ ಹೇ ಇಂದ್ರ ಹೇತಿಸ್ತ್ವದೀಯಂ ವಜ್ರಂ ತದ್ವಚ್ಛತ್ರೂನ್ನಾಶಯತಿ । ತದೇವಾಹ । ಅಶನಿರ್ನ ಭೀಮಾ । ಯಥಾಶನಿರ್ಭೀಮಾ ಭವತಿ ತದ್ವದ್ಭಯಂಕರಸ್ತ್ವಂ ರಕ್ಷೋ ರಾಕ್ಷಸಂ ನಿ ಧಕ್ಷಿ । ವಜ್ರೇಣ ನಿತರಾಂ ದಹ । ಯ ಇಂದ್ರೋ ಗಭೀರಯಾ ಶತ್ರುಭಿರಧರ್ಷಣೀಯಯಾ ಋಷ್ವಯಾ ಮಹತ್ಯಾ ॥ ಋಷ್ವ ಇತಿ ಮಹನ್ನಾಮೈತತ್ ॥ ಹೇತ್ಯಾ ರುರೋಜ ಶತ್ರೂನ್ಬಭಂಜ । ಅಧ್ವನಯತ್ ಯುದ್ಧೇ ಗರ್ಜನಲಕ್ಷಣಂ ಶಬ್ದಂ ಕರೋತಿ । ತಥಾ ಚ ದುರಿತಾ ದುರಿತಾನಿ ದಂಭಯಚ್ಚ ಭಿನತ್ತಿ ಚ । ಸ ತ್ವಂ ರಕ್ಷೋ ನಿ ಧಕ್ಷೀತಿ ಪೂರ್ವೇಣಾನ್ವಯಃ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಶುಷ್ಕಂ**—ಒಣಗಿಹೋದ । **ವನಂ**—ವೃಕ್ಷಸಮೂಹಗಳನ್ನು । **ಅಗ್ನಿರ್ನ**—ಅಗ್ನಿಯು ದಹಿಸಿಬಿಡುವಂತೆ । **ಹೇತಿಃ**—ನಿನ್ನ ವಜ್ರಾಯುಧವೂ ಶತ್ರುಗಳನ್ನು ನಾಶಪಡಿಸುತ್ತದೆ । **ಯಃ**—ಯಾವ ನೀನು । **ಗಂಭೀರಯಾ**— ಮಹಚ್ಛಕ್ತಿಯುಳ್ಳದ್ದೂ । **ಋಷ್ವಯಾ**—ಅತಿಶಯವಾದುದೂ ಆದ ಆಯುಧದಿಂದ । **ರುರೋಜ**—ಶತ್ರುಗಳನ್ನು ಸೀಳಿದೆಯೋ । **ಅಧ್ವನಯತ್**—ಯುದ್ಧದಲ್ಲಿ ಶಬ್ದವನ್ನು ಮಾಡಿದೆಯೋ । **ದುರಿತಾ**—ಪಾಪಗಳನ್ನೆಲ್ಲಾ । **ದಂಭಯಚ್ಚ**—ನಾಶಪಡಿಸಿದೆಯೋ (ಅಂತಹ) । **ಅಶನಿಃ ನ ಭೀಮಾ**—ನಿನ್ನ ವಜ್ರಾಯುಧದಂತೆಯೇ ಭಯಂಕರವಾದ ನೀನು । **ರಕ್ಷಃ**—ರಾಕ್ಷಸರನ್ನು । **ನಿ ಧಕ್ಷಿ**—ಪೂರ್ಣವಾಗಿ ನಾಶಗೊಳಿಸು

॥ ಭಾವಾರ್ಥ ॥

ಎಲೈ ಇಂದ್ರನೇ, ಒಣಗಿಹೋದ ವೃಕ್ಷಸಮೂಹಗಳನ್ನು ಅಗ್ನಿಯು ದಹಿಸಿಬಿಡುವಂತೆ ನಿನ್ನ ವಜ್ರಾಯುಧವೂ ಸಹ ಶತ್ರುಗಳನ್ನು ನಾಶಪಡಿಸುತ್ತದೆ. ಯಾವ ನೀನು ನಿನ್ನ ಮಹತ್ತಾದುದೂ, ಪ್ರಭೂತವಾದ ಶಕ್ತಿಯುಳ್ಳದ್ದೂ ಆದ ಆಯುಧದಿಂದ ಶತ್ರುಗಳನ್ನು ಸೀಳಿದೆಯೋ ಮತ್ತು ಯುದ್ಧದಲ್ಲಿ ಶಬ್ದವನ್ನು ಮಾಡುತ್ತಾ ಪಾಪಗಳನ್ನೆಲ್ಲಾ ನಾಶಪಡಿಸಿದೆಯೋ ಅಂತಹ ನಿನ್ನ ವಜ್ರಾಯುಧದಂತೆಯೇ ಭಯಂಕರನಾದ ನೀನು ರಾಕ್ಷಸರನ್ನು ಪೂರ್ಣವಾಗಿ ನಾಶಗೊಳಿಸು.

## English Translation.

In like manner as Agni consumes the dry forest, so, Indra, your weapon (destroys your enemies) as (formidable as your) fearful shaft, consume the Rakshasas : you who have crushed them with your resistless and mighty (weapon), have shouted aloud (in the combat) and demolished all evil things.

॥ ಸಂಹಿತಾಪಾಠಃ ॥

ಆ ಸಹಸ್ರಂ ಪಥಿಭಿರಿಂದ್ರ ರಾಯಾ ತುವಿದ್ಯುಮ್ನ ತುವಿವಾಜೇಭಿರರ್ವಾಕ್ ।
ಯಾಹಿ ಸೂನೋ ಸಹಸೋ ಯಸ್ಯ ನೂ ಚಿದದೇವ ಈಶೇ ಪುರುಹೂತ
ಯೋತೋಃ ॥ ೧೧ ॥

॥ ಪದಪಾಠಃ ॥

ಆ । ಸಹಸ್ರಂ । ಪಥಿಽಭಿಃ । ಇಂದ್ರ । ರಾಯಾ । ತುವಿಽದ್ಯುಮ್ನ । ತುವಿಽವಾಜೇಭಿಃ । ಅರ್ವಾಕ್ ।
ಯಾಹಿ । ಸೂನೋ ಇತಿ । ಸಹಸಃ । ಯಸ್ಯ । ನು । ಚಿತ್ । ಅದೇವಃ । ಈಶೇ । ಪುರುಽಹೂತ ।
ಯೋತೋಃ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ತುವಿದ್ಯುಮ್ನ ಬಹುಧನ ಹೇ ಸಹಸಃ ಸೂನೋ ಬಲಸ್ಯ ಪುತ್ರೇಂದ್ರ। ಓಜಸೋ ಜಾತಮುತ ಮನ್ಯ ಏನಂ । ಋಗ್ವೇ ೧೦-೭೩-೧೦ । ಇತಿ ನಿಗಮಾಂತರೇ ಬಲಪುತ್ರತ್ವಂ ಸಿದ್ಧಂ । ರಾಯಾ ಧನೇನ ಯುಕ್ತಸ್ತ್ವಂ ಸಹಸ್ರಂ ಸಹಸ್ರೇಣ । ಬಹುಭಿರಿತ್ಯರ್ಥಃ । ತುವಿವಾಜೇಭಿರ್ಬಹುಬಲೈಃ ಪಥಿಭಿಃ । ಪತಂತಿ ಗಚ್ಛಂತ್ಯೇಭಿರಿತಿ ಪಂಥಾನೋ ವಾಹಾಃ । ತೈರರ್ವಾಕ್ ಮದಭಿಮುಖಃ ಸನ್ ಆ ಯಾಹಿ । ಆಗಚ್ಛ। ಹೇ ಪುರುಹೂತ ಬಹುಭಿರಾಹೂತೇಂದ್ರ ಯಸ್ಯ ತವ ಯೋತೋರ್ಬಲಾದಿಭಿಃ ಪೃಥಕ್ಕರ್ತುಮದೇವಃ ಕಶ್ಚಿದಸುರೋ ನೂ ಚಿದೀಶೇ ನೇಷ್ಟೇ । ಅತ್ರ ನೂ ಚಿದಿತಿ ನಿಷೇಧಾರ್ಥೇ ವರ್ತತೇ ॥

। ಪ್ರತಿಪದಾರ್ಥ ।

**ತುವಿದ್ಯುಮ್ನ**—ಪ್ರಭೂತವಾದ ಧನವುಳ್ಳವನೂ। **ಸಹಸಃ ಸೂನೋ**—ಶಕ್ತಿಪುತ್ರನೂ ಆದ। **ಇಂದ್ರ**—ಎಲೈ ಇಂದ್ರನೇ। **ರಾಯಾ**—ಧನಯುತನಾದ ನೀನು। **ಸಹಸ್ರಂ**—ಬಹುಸಂಖ್ಯಾಕವಾದುದೂ। **ತುವಿವಾಜೇಭಿಃ**—ಬಹು ಬಲವುಳ್ಳವೂ ಆದ। **ಪಥಿಭಿಃ**—ಅಶ್ವಗಳಿಂದ ಕೂಡಿ। **ಅರ್ವಾಕ್**—ನಮಗಭಿಮುಖವಾಗಿ **ಆ ಯಾಹಿ**—ದಯಮಾಡು। **ಪುರುಹೂತ**—ಅನೇಕರಿಂದ ಕರೆಯಲ್ಪಡತಕ್ಕ ಎಲೈ ಇಂದ್ರನೇ। **ಯಸ್ಯ**—ಯಾವ ನಿನ್ನನ್ನು। **ಯೋತೋಃ**—ನಿನ್ನ ಶಕ್ತಿಗಳಿಂದ ಬೇರೆಮಾಡಲು। **ಅದೇವಃ**—ಅಸುರನು। **ನೂ ಚಿತ್ ಈಶೇ**—ಕೊಂಚವೂ ಶಕ್ತನಾಗಲಾರನು.

॥ ಭಾವಾರ್ಥ ॥

ಪ್ರಭೂತವಾದ ಧನವುಳ್ಳವನೂ, ಶಕ್ತಿಪುತ್ರನೂ ಆದ ಎಲೈ ಇಂದ್ರನೇ ಧನಯುತನಾದ ನೀನು ಬಹುಸಂಖ್ಯಾಕವಾದುದೂ ಬಹುಬಲವುಳ್ಳವೂ ಆದ ವಾಹನಗಳಿಂದ ಕೂಡಿ ನಮಗಭಿಮುಖವಾಗಿ ದಯಮಾಡು. ಅನೇಕರಿಂದ ಕರೆಯಲ್ಪಡತಕ್ಕ ಎಲೈ ಇಂದ್ರನೇ, ನಿನ್ನನ್ನು ನಿನ್ನ ಶಕ್ತಿಗಳಿಂದ ಬೇರೆಮಾಡಲು ಅಸುರನು ಕೊಂಚವೂ ಶಕ್ತನಾಗಲಾರನು.

## English Translation.

Opulent Indra, Son of strength, the invoked of many, whose union (with energy) the impious is unable to disjoion, come down to us with thousands of riches by very powerful conveyances.

॥ ಸಂಹಿತಾಪಾಠಃ ॥

ಪ್ರ ತುವಿದ್ಯುಮ್ನಸ್ಯ ಸ್ಥವಿರಸ್ಯ ಘೃಷ್ವೇರ್ದಿವೋ ರರಪ್ಶೇ ಮಹಿಮಾ ಪೃಥಿವ್ಯಾಃ।
ನಾಸ್ಯ ಶತ್ರುರ್ನ ಪ್ರತಿಮಾನಮಸ್ತಿ ನ ಪ್ರತಿಷ್ಠಿಃ ಪುರುಮಾಯಸ್ಯ ಸಹ್ಯೋಃ ॥

॥ ಪದಪಾಠಃ ॥

ಪ್ರ । ತುವಿಽದ್ಯುಮ್ನಸ್ಯ । ಸ್ಥವಿರಸ್ಯ । ಘೃಷ್ವೇಃ । ದಿವಃ । ರರಪ್ಶೇ । ಮಹಿಮಾ । ಪೃಥಿವ್ಯಾಃ ।
ನ । ಅಸ್ಯ । ಶತ್ರುಃ । ನ । ಪ್ರತಿಽಮಾನಂ । ಅಸ್ತಿ । ನ । ಪ್ರತಿಽಸ್ಥಿಃ । ಪುರುಽಮಾಯಸ್ಯ । ಸಹ್ಯೋಃ ॥೧೨॥

॥ ಸಾಯಣಭಾಷ್ಯಂ ॥

ತುವಿದ್ಯುಮ್ನಸ್ಯ ಬಹುಯಶಸೋ ಬಹುಧನಸ್ಯ ವಾ ಸ್ಥವಿರಸ್ಯ ಪ್ರವೃದ್ಧಸ್ಯ ಘೃಷ್ವೇಃ ಶತ್ರೂಣಾಂ ಘರ್ಷಕಸ್ಯೇಂದ್ರಸ್ಯ ಮಹಿಮಾ ಮಹತ್ತ್ವಂ ದಿವೋ ದ್ಯುಲೋಕಾತ್ಪೃಥಿವ್ಯಾ ಭೂಮೇಶ್ಚ ಪ್ರ ರರಪ್ಶೇ । ಪ್ರರಿರಿಚೇ । ವಿರಪ್ಶೀತಿ ಮಹನ್ನಾಮಸು ಪಾಠಾತ್ ನಾಮ್ನಾಂ ಚ ಪ್ರಾಯೇಣ ಧಾತುಜನ್ಯತ್ವಾತ್ ರಪ್ಶತಿರತ್ರಾತಿಶಯೇವಾಚೀ । ಪುರುಮಾಯಸ್ಯ ಬಹುಪ್ರಜ್ಞಸ್ಯ ಸಹ್ಯೋಃ ಶತ್ರೂಣಾಮಭಿಭವಿತುರಸ್ಯೇಂದ್ರಸ್ಯ ಶತ್ರುಃ ಶಾತಯಿತಾ ನಾಸ್ತಿ । ಪ್ರತಿಮಾನಂ ಪ್ರತಿನಿಧಿರ್ನಾಸ್ತಿ । ಅಸ್ಯ ಪ್ರತಿಷ್ಠಿಃ ಪ್ರತಿಷ್ಠಾಶ್ರಯೋ ನಾಸ್ತಿ । ಸ ಏವ ಸರ್ವಸ್ಯ ಪ್ರತಿಷ್ಠೇತ್ಯರ್ಥಃ ॥

॥ ಪ್ರತಿಪದಾರ್ಥ ॥

**ತುವಿದ್ಯುಮ್ನಸ್ಯ**—ಪ್ರಭೂತವಾದ ಧನವುಳ್ಳವನೂ । **ಸ್ಥವಿರಸ್ಯ**—ಪ್ರವೃದ್ಧನೂ । **ಘೃಷ್ವೇಃ**—ಶತ್ರುನಾಶಕನೂ ಆದ ಇಂದ್ರನ । **ಮಹಿಮಾ**—ಪ್ರಭಾವವು । **ದಿವಃ**—ದ್ಯುಲೋಕಕ್ಕಿಂತಲೂ । **ಪೃಥಿವ್ಯಾಃ**—ಭೂಮಿಗಿಂತಲೂ । **ಪ್ರ ರರಪ್ಶೇ**—ಅಧಿಕವಾಗಿ ವಿಸ್ತರಿಸಿದೆ । **ಪುರುಮಾಯಸ್ಯ**—ಬಹುಪ್ರಜ್ಞೆಯುಳ್ಳವನೂ । **ಸಹ್ಯೋಃ**—ಶತ್ರುವನ್ನು ಸೋಲಿಸುವವನೂ ಆದ । **ಅಸ್ಯ**—ಇಂದ್ರನಿಗೆ । **ಶತ್ರುಃ**—ಹಿಂಸಕನು । **ನ**—ಯಾರೂ ಇಲ್ಲ । **ಪ್ರತಿಮಾನಂ**—ಇಂದ್ರನಿಗೆ ಸಮಾನನಾದವನೂ । **ನ ಅಸ್ತಿ**—ಯಾರೂ ಇಲ್ಲ । **ಪ್ರತಿಷ್ಠಿಃ**—ಅಧಿಕನೂ (ಆಶ್ರಯದಾತನೂ) । **ನ**—ಯಾರೂ ಇಲ್ಲ.

॥ ಭಾವಾರ್ಥ ॥

ಪ್ರಭೂತವಾದ ಧನವುಳ್ಳವನೂ, ಪ್ರವೃದ್ಧನೂ, ಶತ್ರುನಾಶಕನೂ ಆದ ಇಂದ್ರನ ಪ್ರಭಾವವು ದ್ಯುಲೋಕಕ್ಕಿಂತಲೂ ಮತ್ತು ಪೃಥ್ವಿಗಿಂತಲೂ ಅಧಿಕವಾಗಿ ವಿಸ್ತರಿಸಿದೆ. ಬಹು ಪ್ರಜ್ಞೆಯುಳ್ಳವನೂ, ಶತ್ರುವನ್ನು ಸೋಲಿಸುವವನೂ ಆದ ಇಂದ್ರನನ್ನು ಹಿಂಸಿಸುವರು ಯಾರೂ ಇಲ್ಲ. ಆ ಇಂದ್ರನಿಗೆ ಸಮಾನನಾಗಲಿ ಅಥವಾ ಅಧಿಕಗುಣದಿಂದ ಕೂಡಿದ ಆಶ್ರಯದಾತನಾಗಲಿ ಯಾರೂ ಇಲ್ಲ. ಅವನೇ ಅತ್ಯಧಿಕನು ಸಕಲರಿಗೂ ಆಶ್ರಯದಾತನು.

## English Translation.

The vastness of the affluent, ancient (Indra), the demolisher (of foes), exceeds that of the heaven and earth : there is no antagonist, no counterpart, no recipient of him abounding in wisdom, victorious (in war).

॥ ಸಂಹಿತಾಪಾಠಃ ॥

ಪ್ರ ತತ್ತೇ ಅದ್ಯಾ ಕರಣಂ ಕೃತಂ ಭೂತ್ಕುತ್ಸಂ ಯದಾಯುಮತಿಥಿಗ್ವ-
ಮಸ್ಮೈ ।
ಪುರೂ ಸಹಸ್ರಾ ನಿ ಶಿಶಾ ಅಭಿ ಕ್ಷಾಮುತ್ತೂರ್ವಯಾಣಂ ಧೃಷತಾ ನಿನೇಥ ॥

॥ ಪದಪಾಠಃ ॥

ಪ್ರ । ತತ್ । ತೇ । ಅದ್ಯ । ಕರಣಂ । ಕೃತಂ । ಭೂತ್ । ಕುತ್ಸಂ । ಯತ್ । ಆಯುಂ । ಅತಿಥಿಽಗ್ವಂ । ಅಸ್ಮೈ ।
ಪುರು । ಸಹಸ್ರಾ । ನಿ । ಶಿಶಾಃ । ಅಭಿ । ಕ್ಷಾಂ । ಉತ್ । ತೂರ್ವಯಾಣಂ । ಧೃಷತಾ । ನಿನೇಥ ॥ ೧೩ ॥

॥ ಸಾಯಣಭಾಷ್ಯಂ ॥

ಅದ್ಯೇದಾನೀಮಪಿ ಹೇ ಇಂದ್ರ ತೇ ತ್ವಯಾ ಕೃತಂ ಕರಣಂ ತತ್ಕರ್ಮ ಪ್ರ ಭೂತ್ । ಪ್ರಭವತಿ । ಪ್ರಕಾಶತೇ । ಕಿಂ ತದಿತ್ಯುಚ್ಯತೇ । ಕುತ್ಸಂ ಶುಷ್ಣಾದ್ರಾಕ್ಷಸಾದೇತನ್ನಾಮಾನಮೃಷಿಂ ಚಾಯುಂ ಶತ್ರುಭ್ಯಃ ಸಕಾಶಾದೇತತ್ಸಂಜ್ಞಕಂ ಪೌರೂರವಸಮತಿಥಿಗ್ವಮತಿಥೀನಾಮಭಿಗಂತಾರಂ ದಿವೋದಾಸಂ ಚ ಶಂಬರಾದ್ರರಕ್ಷಿಥೇತಿ ಯತ್ಕರಣಂ ತತ್ಪ್ರಭವತೀತಿ ಪೂರ್ವೇಣ ಸಂಬಂಧಃ । ರರಕ್ಷಿಥೇತಿ ದ್ವಿತೀಯಾಶ್ರುತೇರುಚಿತಕ್ರಿಯಾಧ್ಯಾಹಾರಃ । ಅಪಿ ಚಾಸ್ಮಾ ಅನಂತರೋಕ್ತಾಯಾತಿಥಿಗ್ವಾಯ ಪುರು ಪುರೂಣಿ ಬಹೂನಿ ಸಹಸ್ರಾ ಸಹಸ್ರಾಣಿ ಶಂಬರಸ್ಯ ಧನಾನಿ ನಿ ಶಿಶಾಃ । ಅದದಾಃ । ಇಂದ್ರಃ ಶಂಬರಂ ಹತ್ವಾ ತಸ್ಯ ಧನಾನಿ ದಿವೋದಾಸಾಯ ದದಾವಿತ್ಯರ್ಥಃ । ತಥಾ ಹೇ ಇಂದ್ರ ಧೃಷತಾ ಧರ್ಷಣೇನ ತ್ವದೀಯೇನ ವಜ್ರೇಣ ಶಂಬರಂ ಹತ್ವಾ ಕ್ಷಾಂ ಪೃಥಿವೀಮಭಿ ಅಭಿಲಕ್ಷ್ಯ ಪೃಥಿವ್ಯಾಂ ವರ್ತಮಾನಂ ತೂರ್ವಯಾಣಂ ತ್ವರಿತಗಮನಂ ದಿವೋದಾಸಮುನ್ನಿನೇಥ । ಅಪದ್ಭ್ಯ ಉದಗಮಯಃ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಕುತ್ಸಂ**—ಕುತ್ಸನನ್ನೂ । **ಆಯುಂ**—ಆಯುವನ್ನೂ । **ಅತಿಥಿಗ್ವಂ**—ಅತಿಥಿಗ್ವನನ್ನೂ (ಅವರವರ ಶತ್ರುಗಳಿಂದ ರಕ್ಷಿಸಲು)। **ಯತ್**—ಯಾವ ಮಹತ್ಕಾರ್ಯವನ್ನು ಮಾಡಿದೆಯೋ । **ತೇ**—ನಿನ್ನ ।

**ತತ್**—ಅಂತಹ । **ಕೃತಂ ಕರಣಂ**—ಕರ್ಮವು । **ಅದ್ಯ**—ಈಗಲೂ ಕೂಡ । **ಪ್ರ ಭೂತ್**—ಪ್ರಸಿದ್ಧವಾಗಿದೆ । **ಅಸ್ಮೈ**—ಈ ಅತಿಥಿಗ್ವನಿಗೆ । **ಪುರು**—ಅಧಿಕವಾದುದೂ । **ಸಹಸ್ರಾ**—ಸಹಸ್ರಸಂಖ್ಯಾಕವಾದುದೂ ಆದ ಧನವನ್ನು । **ನಿ ಶಿಶಾಃ**—ಕೊಟ್ಟಿರುವೆ । **ಧೃಷತಾ**—ಶತ್ರುನಾಶಕವಾದ ನಿನ್ನ ಶಕ್ತಿಯಿಂದ । **ಕ್ಷಾಂ ಅಭಿ**—ಪೃಥ್ವಿಗಭಿಮುಖವಾಗಿ ಬಿದ್ದಿದ್ದ । **ತೂರ್ವಯಾಣಂ**—ತ್ವರಿತಗಮನವುಳ್ಳ (ದಿವೋದಾಸನನ್ನು) । **ಉತ್ ನಿನೇಥ**—ಮೇಲಕ್ಕೆತ್ತಿರುವೆ (ಕಾಪಾಡಿರುವೆ).

। **ಭಾವಾರ್ಥ** ।

ಎಲೈ ಇಂದ್ರನೇ, ಕುತ್ಸನನ್ನೂ, ಆಯುವನ್ನೂ ಅಧಿತಿಗ್ವನನ್ನೂ ಸಹ ಅವರವರ ಶತ್ರುಗಳಿಂದ ರಕ್ಷಿಸಲು ಯಾವ ಮಹತ್ಕಾರ್ಯವನ್ನು ಮಾಡಿದೆಯೋ ನಿನ್ನ ಅಂತಹ ಕರ್ಮವು ಈಗಲೂ ಕೂಡ ಪ್ರಸಿದ್ಧವಾಗಿದೆ. ಈ ಅತಿಥಿಗ್ವನಿಗೆ ಅತ್ಯಧಿಕವಾದ ಧನವನ್ನು ಕೊಟ್ಟಿರುವೆ. ಶತ್ರುನಾಶಕವಾದ ನಿನ್ನ ಶಕ್ತಿಯಿಂದ ಪೃಥ್ವಿಗಭಿಮುಖವಾಗಿ ಬಿದ್ದಿದ್ದ ತ್ವರಿತಗಮನವುಳ್ಳ ದಿವೋದಾಸನನ್ನು ಮೇಲಕ್ಕೆತ್ತಿ ಕಾಪಾಡಿರುವೆ.

## English Translation.

That exploit is celebrated in the present day (which you have) achived for Kutsa, for Ayu, for Atithigvan : to him you have given many thousands (of riches), and you have quickly elevated Turvayana over the earth by your power.

॥ ವಿಶೇಷವಿಷಯಗಳು ॥

**ಕುತ್ಸಂ ಆಯುಂ ಅತಿಥಿಗ್ವಂ**—ಇಲ್ಲಿ ಈ ಮೂರು ಜನರ ವಿಷಯವನ್ನು ಒಟ್ಟಿಗೆ ಚರ್ಚಿಸಿ ವಿವರಿಸಲಾಗುವುದು.

ಇಲ್ಲಿ **ಕುತ್ಸ**ಶಬ್ದಕ್ಕೆ ಎರಡು ವಿಧವಾದ ಅರ್ಥವನ್ನು ಹೇಳಬಹುದೆಂದು ಸಾಯಣರ ವಿವರಣೆಯು ತಿಳಿಸುತ್ತದೆ. ಮೊದಲನೆಯದಾಗಿ, **ಕುತ್ಸಂ-ಕರ್ತನಸಾಧನಂ** ಕತ್ತರಿಸುವ ಸಾಧನವಾದ ಎಂದು ವಜ್ರಾಯುಧಕ್ಕೆ ವಿಶೇಷಣವಾಗಿಯೂ ಎರಡನೆಯದಾಗಿ, **ಕುತ್ಸಂ ಕುತ್ಸನಾಮಾನಂ ಋಷಿಂ** । ಕುತ್ಸನೆಂಬ ಋಷಿಯನ್ನು ಎಂದೂ ವಿವರಿಸಿದ್ದಾರೆ. ಋಷಿಯೆಂದರ್ಥಮಾಡಿದರೆ ಶುಷ್ಣನೆಂಬ ಅಸುರನನ್ನು ಕೊಂದು ಕುತ್ಸನಿಗೆ ಸಹಾಯಮಾಡಿದನೆಂದು ಇಂದ್ರನ ಪ್ರಶಂಸೆಯಾಗುತ್ತದೆ.

ಕುತ್ಸನಿಗೂ, ಇಂದ್ರನಿಗೂ ಇರತಕ್ಕ ಸಂಬಂಧವು ಅತ್ಯಂತ ನಿಕಟವಾದುದೆಂದು ಋಕ್ಸಂಹಿತೆಯಲ್ಲಿರುವ ವರ್ಣನೆಗಳಿಂದ ತಿಳಿಯುತ್ತದೆ. ಕುತ್ಸನಿಗೆ ಆರ್ಜುನೇಯ ಎಂಬ ವಿಶೇಷಣವು ಅನೇಕ ಕಡೆಗಳಲ್ಲಿರುತ್ತದೆ ಆರ್ಜುನೇಯ ಎಂಬ ಪದಕ್ಕೆ **ಅರ್ಜುನೀ** ಎಂಬ ಹೆಂಗಸಿನ ಮಗನೆಂದಾಗಬಹುದು. ಅಥವಾ **ಅರ್ಜುನ ಇತೀಂದ್ರಸ್ಯ ನಾಮ । ತಸ್ಯ ಪುತ್ರಃ** ಇಂದ್ರನಿಗೆ ಅರ್ಜುನನೆಂದು ಹೆಸರು. ಕುತ್ಸನು ಇವನ ಪುತ್ರನಾದುದರಿಂದ ಆರ್ಜುನೇಯನೆಂಬ ವಿಶೇಷಣವು ಸಹಜವಾಗಿದೆ ಎಂದು ಇನ್ನೊಂದು ವಿಧವಾಗಿ ಅರ್ಥವನ್ನು ಹೇಳಬಹುದು. ಇಂದ್ರನಿಗೆ **ಅರ್ಜುನ** ಎಂಬ ಹೆಸರುಂಟು ಎಂದು ಸಮರ್ಥಿಸಲು ಸಾಯಣರು, ಕೆಲವೆಡೆಗಳಲ್ಲಿ,

**ಏತದ್ವಾ ಇಂದ್ರಸ್ಯ ಗುಹ್ಯಂ ನಾಮ ಯದರ್ಜುನಃ ।**

ಎಂಬ ವಾಜಸನೇಯಸಂಹಿತಾಮಂತ್ರವನ್ನು ದಾಹರಿಸಿದ್ದಾರೆ. ಆದರೆ,

**ಅಹಂ ಕುತ್ಸಮಾರ್ಜುನೇಯಂ ನ್ಯೃಂಜೇऽಹಂ ಕವಿರುಶನಾ ಪಶ್ಯತಾ ಮಾ ।**

(ಋ. ಸಂ. ೪-೨೬-೧)

**ದಾಸಂ ಯಚ್ಛುಷ್ಣಂ ಕುಯವಂ ನ್ಯಸ್ಮಾ ಅರಂಧಯ ಆರ್ಜುನೇಯಾಯ ಶಿಕ್ಷನ್ ।**

(ಋ ಸಂ. ೭-೧೯-೨)

**ವಹತ್ಕುತ್ಸಮಾರ್ಜುನೇಯಂ ಶತಕ್ರತುಃ ತ್ಸರದ್ಗಂಧರ್ವಮಸ್ತೃತಂ ।**

(ಋ. ಸಂ. ೮-೧-೧೧)

ಎಂಬ ಋಕ್ಕುಗಳಲ್ಲಿ ಇರತಕ್ಕ **ಆರ್ಜುನೇಯ** ಪದಗಳಿಗೆಲ್ಲಾ ಸಾಯಣರೂ ಸಹ **ಅರ್ಜುನ್ಯಾಃ ಪುತ್ರಂ ಕುತ್ಸಂ । ಅರ್ಜುನೀ** ಎಂಬ ಹೆಂಗಸಿನ ಪುತ್ರನಾದ ಕುತ್ಸನೆಂದೇ ಅರ್ಥಮಾಡಿದ್ದಾರೆ. **ಅರ್ಜುನ, ಅರ್ಜುನೀ** ಎಂಬ ಪದಗಳೂ ಇಂದ್ರಸಂಬಂಧವಾದವು ಎಂದು ಶ್ರುತ್ಯಂತರಗಳಲ್ಲಿ ಹೇಳಿರುವುದರಿಂದ ಮೇಲಿನ ಎರಡು ವಿಧವಾದ ವಿವರಣೆಗಳೂ ಒಂದೇ ಅರ್ಥವನ್ನು ಕೊಡುವುವು ಎಂದು ಹೇಳಬಹುದು. ಉದಾಹರಣೆಗೆ—

**ಫಲ್ಗುನೀಷ್ವಗ್ನೀ ಆದಧೀತ । ಏತಾ ವಾ ಇಂದ್ರನಕ್ಷತ್ರಂ ಯತ್ಫಲ್ಗುನ್ಯೋऽಪ್ಯಸ್ಯ ಪ್ರತಿನಾಮ್ನ್ಯೋऽರ್ಜುನೋ ಹ ವೈ ನಾಮೇಂದ್ರೋ ಯದಸ್ಯ ಗುಹ್ಯಂ ನಾಮಾರ್ಜುನ್ಯೋ ವೈ ನಾಮೈತಾಸ್ತಾ ಏತತ್ಪರೋಕ್ಷಮಾಚಕ್ಷತೇ ಫಲ್ಗುನ್ಯ ಇತಿ ಕೋ ಹ್ಯೇತಸ್ಯಾರ್ಹತಿ ಗುಹ್ಯಂ ನಾಮ..........:....... ।** (ಶ. ಬ್ರಾ. ೨-೧-೨-೧೧)

**ಇಂದ್ರೋ ಭವತಿ ಯಚ್ಚ ಕ್ಷತ್ರಿಯೋ ಯದು ಚ ಯಜಮಾನಸ್ತಸ್ಮಾದಾಹಾರಿಷ್ಯೋऽರ್ಜುನ ಇತಿ ।** (ಶ. ಬ್ರಾ. ೫-೪-೩-೭)

ಫಲ್ಗುನಿಗಳು ಐಂದ್ರನಕ್ಷತ್ರಗಳು. ಹೆಸರಿನಲ್ಲಿಯೂ ಹೊಂದಿಕೆಯಿದೆ. ಇಂದ್ರನಿಗೂ ಅರ್ಜುನನೆಂಬ ಹೆಸರು. ಫಲ್ಗುನಿಗಳಿಗೂ ಅರ್ಜುನಿಗಳೆಂಬ ಹೆಸರು ಎಂಬುದಾಗಿ ಶತಪಥಬ್ರಾಹ್ಮಣದಲ್ಲಿಯೂ ಇತರ ಕಡೆಗಳಲ್ಲಿಯೂ ಹೇಳಿರುವುದರಿಂದ ಕುತ್ಸನನ್ನು ಇಂದ್ರಪುತ್ರ, ಅರ್ಜುನೀಪುತ್ರ ಎಂದು ಎರಡು ವಿಧವಾಗಿಯೂ ಕರೆಯಬಹುದೆಂದು ಹೇಳಬಹುದು. ಋಕ್ಸಂಹಿತೆಯಲ್ಲಿ ಅನೇಕ ಕಡೆಗಳಲ್ಲಿ **ಕುತ್ಸನು** ಇಂದ್ರನ ಸಹಾಯದಿಂದಲೇ ತನ್ನ ಶತ್ರುಗಳನ್ನು ಜಯಿಸುತ್ತಾನೆಂದು ಇಂದ್ರಕುತ್ಸರ ಸಂಬಂಧವನ್ನು ತೋರಿಸಿದೆ.

**ತ್ವಂ ಶುಷ್ಣಂ ವೃಜನೇ ಪೃಕ್ಷ ಆಣೌ ಯೂನೇ ಕುತ್ಸಾಯ ದ್ಯುಮತೇ ಸಚಾಹನ್ ।**

(ಋ. ಸಂ. ೧-೬೩-೩)

**ಕುತ್ಸಾಯ ಯತ್ರ ಪುರುಹೂತ ವನ್ವಞ್ಛುಷ್ಣಮನಂತೈಃ ಪರಿಯಾಸಿ ವಧೈಃ ।**

(ಋ. ಸಂ ೧-೧೭೫-೯)

ಎಂಬ ಋಕ್ಕುಗಳಲ್ಲಿಯೂ, ಹೀಗೆಯೇ ಇತರ ಅನೇಕ ಕಡೆಗಳಲ್ಲಿಯೂ ಇಂದ್ರನು ಕುತ್ಸನಿಗೆ ಸಹಾಯಮಾಡಲು ಶುಷ್ಣನನ್ನು ಕೊಂದನು ಎಂಬ ವರ್ಣನೆಯಿದೆ. ಮತ್ತು,

ಅಹಂ ಪಿತೇವ ವೇತಸೂಁರಭಿಷ್ಟಯೇ ತುಗ್ರಂ ಕುತ್ಸಾಯ ಸ್ಮದಿಭಂ ಚ ರಂಧಯಂ ।

(ಋ. ಸಂ. ೧೦-೪೯-೪)

ಕುತ್ಸನಿಗಾಗಿ ನಾನು ವೇತಸು, ತುಗ್ರ, ಸ್ಮದಿಭ ಇತ್ಯಾದಿ ಶತ್ರುಗಳನ್ನೆಲ್ಲಾ ಸೋಲಿಸಿ, ನನ್ನ ಮಿತ್ರನಿಗೆ ಸಹಾಯ ಮಾಡಿದೆನು ಎಂದು ಇಂದ್ರನೇ ಹೇಳಿಕೊಂಡಿದ್ದಾನೆ. ಆದರೆ,

ತ್ವಮಸ್ಮೈ ಕುತ್ಸಮತಿಥಿಗ್ವಮಾಯುಂ ಮಹೇ ರಾಜ್ಞೇ ಯೂನೇ ಅರಂಧನಾಯಃ ।

(ಋ. ಸಂ. ೧-೫೩-೧೦)

ಯ ಆಯುಂ ಕುತ್ಸಮತಿಥಿಗ್ವಮರ್ದಯೋ ವಾವೃಧಾನೋ ದಿವೇದಿವೇ ।

(ಋ. ಸಂ. ೮-೫೩-೧೦)

ಇತ್ಯಾದಿ ಋಕ್ಕುಗಳಲ್ಲಿ ಇಂದ್ರನು ಕುತ್ಸಾದಿಗಳನ್ನು ಸೋಲಿಸಿದುದಾಯೂ ವರ್ಣಿತವಾಗಿದೆ.

॥ ಸಂಹಿತಾಪಾಠಃ ॥

ಅನು ತ್ವಾಹಿಘ್ನೇ ಅಧ ದೇವ ದೇವಾ ಮದನ್ವಿಶ್ವೇ ಕವಿತಮಂ ಕವೀನಾಂ ।
ಕರೋ ಯತ್ರ ವರಿವೋ ಬಾಧಿತಾಯ ದಿವೇ ಜನಾಯ ತನ್ವೇ ಗೃಣಾನಃ ॥

॥ ಪದಪಾಠಃ ॥

ಅನು । ತ್ವಾ । ಅಹಿಽಘ್ನೇ । ಅಧ । ದೇವ । ದೇವಾಃ । ಮದನ್ । ವಿಶ್ವೇ । ಕವಿಽತಮಂ । ಕವೀನಾಂ ।
ಕರಃ । ಯತ್ರ । ವರಿವಃ । ಬಾಧಿತಾಯ । ದಿವೇ । ಜನಾಯ । ತನ್ವೇ । ಗೃಣಾನಃ ॥ ೧೪ ॥

॥ ಸಾಯಣಭಾಷ್ಯಂ ॥

ಅನುಕ್ರೀನಾಮ್ನ್ಯೇಕಾಹೇ ಮರುತ್ವತೀಯಶಸ್ತ್ರೇಽನು ತ್ವಾಹಿಘ್ನ ಇತಿ ಸೂಕ್ತಮುಖೀಯಾ । ಸೂತ್ರಿತಂ ಚ । ಅನು ತ್ವಾಹಿಘ್ನೇ ಅಧ ದೇವ ದೇವಾ ಅನು ತೇ ದಾಯಿ ಮಹ ಇಂದ್ರಿಯಾಯ । ಆ. ೯-೫ । ಇತಿ ॥

ಹೇ ದೇವ ದ್ಯೋತಮಾನೇಂದ್ರ ತ್ವಾ ತ್ವಾಮಧಾಸ್ಮಿನ್ಕಾಲೇ ವಿಶ್ವೇ ಸರ್ವೇ ದೇವಾಃ ಸ್ತೋತಾರೋಽಹಿಘ್ನೇ ಮೇಘಹನನಾಯ । ವೃಷ್ಟಿಪ್ರದಾನಾಯೇತ್ಯರ್ಥಃ । ಅನು ಮದನ್ । ಅನುಮದಂತಿ । ಅನುಸ್ತುವಂತಿ । ಕೀದೃಶಂ ತ್ವಾಂ । ಕವೀನಾಂ ಮೇಧಾವಿನಾಂ ಮಧ್ಯೇ ಕವಿತಮಮತ್ಯಂತಂ ಕವಿಂ । ಯತ್ರ ಯಸ್ಮಿನ್ಕಾಲೇ ಗೃಣಾನಃ ಸ್ತೋತೃಭಿಃ ಸ್ತೂಯಮಾನಸ್ತ್ವಂ ಬಾಧಿತಾಯ ದಾರಿದ್ರ್ಯಾದಿಭಿಃ

ಪೀಡಿತಾಯ ದಿವೇ ಸ್ತೋತ್ರೇ ಜನಾಯ ತನ್ವೇ ಸ್ತೋತ್ರ್ಯಾಣಾಂ ತನಯಾಯ ಚ ವರಿವೋ ಧನಂ ಕರಃ ಅಕರೋಃ ಅದದಾಃ । ಅಥವಾ ಹೇ ದೇವೇಂದ್ರ ಅಥಾಸ್ಮಿನ್ಕಾಲೇ ವಿಶ್ವೇ ಸರ್ವೇ ದೇವಾಃ ಸುರಾಃ । ಅಹಿರ್ವೃತ್ರ ಏವೋಚ್ಯತೇ । ತಸ್ಯ ಹನನಾಯ ಕವೀನಾಂ ಕವಿತಮಂ ತ್ವಾಮನುಮದಂತಿ । ಯತ್ರ ಯಸ್ಮಿನ್ ಸ್ತೋತ್ರೇ ಸತಿ ಬಾಧಿತಾಯಾಸುರೈಃ ಪೀಡಿತಾಯ ದಿವೇ ದ್ಯುಲೋಕನಿವಾಸಾಯ ಜನಾಯ ತನ್ವೇ ಶೋಭಾಯೈ ವೃತ್ರಹನನೇನ ತವ ಶೋಭಾರ್ಥಂ ವರಿವಶ್ಚಕರ್ಥ ॥

॥ ಪ್ರತಿಪದಾರ್ಥ ॥

**ದೇವ**— ಪ್ರಕಾಶಮಾನನಾದ ಎಲೈ ಇಂದ್ರನೇ । **ಯತ್ರ**— ಯಾವ ವೇಳೆಯಲ್ಲಿ । **ಗೃಣಾನಃ**— ಸ್ತುತನಾದ ನೀನು । **ಬಾಧಿತಾಯ**— ದಾರಿದ್ರ್ಯದಿಂದ ಹಿಂಸಿತನಾದ । **ದಿವೇ ಜನಾಯ**— ಸ್ತೋತೃಜನಕ್ಕೂ । **ತನ್ವೇ**— ಅವನ ಪುತ್ರಾದಿಗಳಿಗೂ । **ವರಿವಃ**— ಧನವನ್ನು । **ಕರಃ**— ದಾನಮಾಡಿದೆಯೋ । **ಅಧ**— ಅಂತಹ ಕಾಲದಲ್ಲಿ । **ಕವಿನಾಂ**— ಮೇಧಾವಿಗಳಲ್ಲೆಲ್ಲಾ । **ಕವಿತಮಂ**— ಅತ್ಯಂತ ಮೇಧಾವಿಯಾದ । **ತ್ವಾ**— ನಿನ್ನನ್ನು । **ವಿಶ್ವೇ ದೇವಾಃ**— ಸಕಲ ಸ್ತೋತೃಗಳೂ । **ಅಹಿಘ್ನೇ**— ವೃತ್ರನಾಶಕ್ಕಾಗಿ । **ಅನು ಮದನ್**— ಒಟ್ಟಿಗೆ ಸೇರಿಕೊಂಡು ಸ್ತುತಿಸುತ್ತಾರೆ.

॥ ಭಾವಾರ್ಥ ॥

ಪ್ರಕಾಶಮಾನನಾದ ಇಂದ್ರನೇ, ಯಾವ ವೇಳೆಯಲ್ಲಿ ಸ್ತುತಿಕರ್ತರಿಂದ ಸ್ತುತನಾದ ನೀನು ದಾರಿದ್ರ್ಯದಿಂದ ಹಿಂಸಿತರಾದ ಸ್ತೋತೃಜನಕ್ಕೂ ಅವರ ಪುತ್ರಾದಿಗಳಿಗೂ ಧನವನ್ನು ದಾನಮಾಡುವೆಯೋ ಅಂತಹ ಕಾಲದಲ್ಲಿ ಕವಿಗಳಲ್ಲೆಲ್ಲಾ ಉತ್ತಮಕವಿಯಾದ ನಿನ್ನನ್ನು ಸಕಲ ಸ್ತೋತೃಗಳೂ ಸಹ ವೃತ್ರನಾಶಕ್ಕಾಗಿ ಒಟ್ಟಿಗೆ ಸೇರಿಕೊಂಡು ಸ್ತುತಿಸುತ್ತಾರೆ.

## English Translation.

Divine Indra, all the gods have glorified you, the wisest of the wise, for the destruction of Ahi: when propitiated, you have given wealth to the distressed worshipper, and to his posterity.

॥ ಸಂಹಿತಾಪಾಠಃ ॥

ಅನು ದ್ಯಾವಾಪೃಥಿವೀ ತತ್ತ ಓಜೋಽಮರ್ತ್ಯಾ ಜಿಹತ ಇಂದ್ರ ದೇವಾಃ ।
ಕೃಷ್ವಾ ಕೃತ್ನೋ ಅಕೃತಂ ಯತ್ತೇ ಅಸ್ತ್ಯುಕ್ಥಂ ನವೀಯೋ ಜನಯಸ್ವ ಯಜ್ಞೈಃ ॥ ೧೫ ॥

॥ ಪದಪಾಠಃ ॥

**ಅನು । ದ್ಯಾವಾಪೃಥಿವೀ ಇತಿ । ತತ್ । ತೇ । ಓಜಃ । ಅಮರ್ತ್ಯಃ । ಜಿಹತೇ । ಇಂದ್ರ । ದೇವಾಃ । ಕೃಷ್ವ । ಕೃತ್ನೋ ಇತಿ । ಅಕೃತಂ । ಯತ್ । ತೇ । ಅಸ್ತಿ । ಉಕ್ಥಂ । ನವೀಯಃ । ಜನಯಸ್ವ । ಯಜ್ಞೈಃ ॥ ೧೫ ॥**

॥ ಸಾಯಣಭಾಷ್ಯಂ ॥

**ಹೇ ಇಂದ್ರ ತೇ ತ್ವದೀಯಂ ತತ್ಪ್ರಸಿದ್ಧಮೋಜೋ ಬಲಂ ದ್ಯಾವಾಪೃಥಿವೀ ಅನು ಜಿಹಾತೇ। ಅಮರ್ತ್ಯ ಅಮರಣಧರ್ಮಾಣೋ ದೇವಾಸ್ತ್ವದೀಯಂ ಬಲಮನು ಜಿಹತೇ। ಅನುಗಚ್ಛಂತಿ। ಹೇ ಕೃತ್ನೋ ಬಹೂನಾಂ ಕರ್ಮಣಾಂ ಕರ್ತಸ್ತೇ ತ್ವದೀಯಮಕೃತಂ ಯತ್ಕರ್ಮಾಸ್ತಿ ತತ್ಕೃಷ್ವ। ಕುರುಷ್ವ। ತದನಂತರಂ ಯಜ್ಞೈರ್ಯಜ್ಞೇಷು ನವೀಯೋ ನವತರಮುಕ್ಥಂ ಸ್ತೋತ್ರಂ ಜನಯಸ್ವ ॥**

॥ ಪ್ರತಿಪದಾರ್ಥ ॥

**ಇಂದ್ರ**— ಎಲೈ ಇಂದ್ರನೇ । **ತೇ**— ನಿನ್ನ । **ತತ್**— ಪ್ರಸಿದ್ಧವಾದ । **ಓಜಃ**— ಶಕ್ತಿಯನ್ನು । **ದ್ಯಾವಾಪೃಥಿವೀ**— ದ್ಯಾವಾಪೃಥಿವಿಗಳು । **ಅನು ಜಿಹತೇ**— ಒಪ್ಪಿಕೊಳ್ಳುತ್ತವೆ । **ಅಮರ್ತ್ಯಃ**— ಮರಣರಹಿತರಾದ । **ದೇವಾಃ**— ದೇವತೆಗಳೂ । **ಅನು**— ಒಪ್ಪಿಕೊಳ್ಳುತ್ತಾರೆ । **ಕೃತ್ನೋ**— ಅನೇಕ ಕರ್ಮಕರ್ತನಾದ ಎಲೈ ಇಂದ್ರನೇ । **ತೇ**— ನಿನ್ನ । **ಅಕೃತಂ**— ಇಲ್ಲಿಯ ವರೆಗೆ ಮಾಡದಿರುವ । **ಯತ್**— ಯಾವ ಕರ್ಮವು । **ಅಸ್ತಿ**— ಇದೆಯೋ । **ಕೃಷ್ವ** ಅದನ್ನು ನೆರವೇರಿಸು । **ಯಜ್ಞೈಃ**— ಯಜ್ಞಗಳಲ್ಲಿ । **ನವೀಯಃ**— ನೂತನವಾದ । **ಉಕ್ಥಂ**— ಸ್ತೋತ್ರವನ್ನು । **ಜನಯಸ್ವ**— ನಿರ್ಮಿಸು.

॥ ಭಾವಾರ್ಥ ॥

ಎಲೈ ಇಂದ್ರನೇ, ಪ್ರಸಿದ್ಧವಾದ ನಿನ್ನ ಶಕ್ತಿಯನ್ನು ದ್ಯಾವಾಪೃಥಿವಿಗಳೂ ದೇವತೆಗಳೂ ಒಪ್ಪಿದ್ದಾರೆ. ಅನೇಕ ಕರ್ಮಕರ್ತನಾದ ಎಲೈ ಇಂದ್ರನೇ. ನಿನ್ನ ಕರ್ಮಗಳಲ್ಲಿ ಇನ್ನೂ ಮಾಡದಿರುವ ಕರ್ಮಗಳನ್ನೆಲ್ಲಾ ಈಗ ನೆರವೇರಿಸು. ಈ ಯಜ್ಞದಲ್ಲಿ ನೂತನವಾದ ಸ್ತುತಿಯನ್ನು ನಿರ್ಮಿಸು.

## English Translation.

The heaven and earth, and the immortal gods acknowledge your might: doer of many deeds, do that which is yet undone by you, give birth to a new hymn at (your) sacrifices.

# ಹತ್ತೊಂಭತ್ತನೆಯ ಸೂಕ್ತವು

|| ಸಾಯಣಭಾಷ್ಯಂ ||

**ಮಹಾँ ಇಂದ್ರ ಇತಿ ತ್ರಯೋದಶರ್ಚಂ ಚತುರ್ಥಂ ಸೂಕ್ತಂ ಭರದ್ವಾಜಸ್ಯಾರ್ಷಂ ತ್ರೈಷ್ಟುಭಮೈಂದ್ರಂ । ಅನುಕ್ರಾಂತಂ ಚ । ಮಹಾನ್ತ್ಸಪ್ತೋನೇತಿ ॥ ಮಾಧ್ಯಂದಿನೇ ಸವನೇ ಸೋಮಾತಿರೇಕೇ ಶಸ್ತ್ರಂ ಭವತಿ । ತತ್ರೇದಂ ಸೂಕ್ತಂ । ಸೂತ್ರಿತಂ ಚ । ಮಹಾँ ಇಂದ್ರೋ ನೃವದ್ವಿಷ್ಣೋರ್ನು ಕಂ । ಆ. ೬-೭ । ಇತಿ ॥ ಸಮೂಳ್ಹೇ ದ್ವಿತೀಯೇ ಛಂದೋಮೇ ಮರುತ್ವತೀಯೆಶಸ್ತ್ರ ಏತತ್ಸೂಕ್ತಂ । ಸೂತ್ರಿತಂ ಚ । ಮಹಾँ ಇಂದ್ರೋ ನೃವದಿತಿ ಮರುತ್ವತೀಯಂ । ಆ. ೮-೭ । ಇತಿ ॥**

ಅನುವಾದವು—**ಮಹಾँ ಇಂದ್ರಃ** ಎಂಬ ಈ ಸೂಕ್ತವು. ಎರಡನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು. ಇದರಲ್ಲಿ ಹದಿಮೂರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು; ಇಂದ್ರನು ದೇವತೆಯು; ತ್ರಿಷ್ಟುಪ್‌ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಮಹಾನ್ತ್ಸಪ್ತೋನಾ** ಎಂದು ಹೇಳಿರುವುದು. ಮಾಧ್ಯಂದಿನಸವನ ಕಾಲದಲ್ಲಿ ಸೋಮಾತಿರೇಕಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ಮಹಾँ ಇಂದ್ರೋ ನೃವದ್ವಿಷ್ಣೋರ್ನು ಕಂ** ಎಂಬ ಸೂತ್ರದಿಂದ (ಆ. ೬-೭) ವಿವೃತವಾಗಿರುವುದು. ಮತ್ತು ಸಮೂಳ್ಹವೆಂಬ ಯಾಗದಲ್ಲಿ ಎರಡನೆಯ ಛಂದೋಮಾಮಂತ್ರಗಳಿಗಾಗಿ ಪಠಿಸುವ ಮರುತ್ವತೀಯಶಸ್ತ್ರಮಂತ್ರಗಳಲ್ಲಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ-**ಮಹಾँ ಇಂದ್ರೋ ನೃವದಿತಿ ಮರುತ್ವತೀಯಂ** ಎಂಬ ಸೂತ್ರದಿಂದ (ಆ. ೮-೭) ವಿವೃತವಾಗಿರುವುದು.

## ಸೂಕ್ತ—೧೯

ಮಂಡಲ— ೬ ॥ ಅನುವಾಕ—೨ ॥ ಸೂಕ್ತ—೧೯ ॥
ಅಷ್ಟಕ—೪ ॥ ಅಧ್ಯಾಯ—೬ ॥ ವರ್ಗ—೭, ೮ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೩ ॥
॥ ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ॥
॥ ದೇವತಾ—ಇಂದ್ರಃ ॥
॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

**ಮಹಾँ ಇಂದ್ರೋ ನೃವದಾ ಚರ್ಷಣಿಪ್ರಾ ಉತ ದ್ವಿಬರ್ಹಾ ಅಮಿನಃ ಸಹೋಭಿಃ ।**

**ಅಸ್ಮದ್ರ್ಯಗ್ವಾವೃಧೇ ವೀರ್ಯಾಯೋರುಃ ಪೃಥುಃ ಸುಕೃತಃ ಕರ್ತೃಭಿರ್ಭೂತ್॥**

॥ ಪದಪಾಠಃ ॥

ಮಹಾನ್ । ಇಂದ್ರಃ । ನೃಽವತ್ । ಆ । ಚರ್ಷಣಿಽಪ್ರಾಃ । ಉತ । ದ್ವಿಽಬರ್ಹಾಃ । ಅಮಿನಃ । ಸಹಃಽಭಿಃ ।

ಅಸ್ಮದ್ರ್ಯ್ಕ್ । ವವೃಧೇ । ವೀರ್ಯಾಯ । ಉರುಃ । ಪೃಥುಃ । ಸುಽಕೃತಃ । ಕರ್ತೃಽಭಿಃ । ಭೂತ್ ॥ ೧ ॥

॥ ಸಾಯಣಭಾಷ್ಯಂ ॥

ನೃವತ್ ಯಥಾ ನೇತಾ ರಾಜಾ ಭೃತ್ಯಾದೀನಾಂ ಕಾಮಾನಾಂ ಪೂರಯಿತಾ ತದ್ವತ್ ಚರ್ಷಣಿಪ್ರಾಶ್ಚರ್ಷಣೀನಾಂ ಸ್ತೋತೃಜನಾನಾಂ ಕಾಮಾನಾಂ ಪೂರಕೋ ಮಹಾನ್ಪ್ರಭೂತ ಇಂದ್ರ ಆ ಗಚ್ಛತು । ಆ ಇತ್ಯುಪಸರ್ಗದರ್ಶನಾದ್ಗಚ್ಛತ್ವಿತ್ಯಾಖ್ಯಾತಸ್ಯಾಧ್ಯಾಹಾರಃ । ಉತಾಪಿ ಚ ದ್ವಿಬರ್ಹಾ ದ್ವಯೋರ್ಲೋಕಯೋಃ ಪರಿವೃಢಃ ಸಹೋಭಿಃ ಶತ್ರುಬಲೈರಮಿನೋಽಹಿಂಸನೀಯ ಇಂದ್ರೋಽಸ್ಮದ್ರ್ಯಗಸ್ಮದಭಿಮುಖಂ ಯಥಾ ಭವತಿ ತಥಾ ವೀರ್ಯಾಯ ವೀರಕರ್ಮಕರಣಾಯ ವವೃಧೇ । ವರ್ಧತೇ । ಉರುಃ ಶರೀರೇಣ ವಿಸ್ತೀರ್ಣಃ ಪೃಥುರ್ಗುಣೈಃ ಪ್ರಥಿತಃ ಕರ್ತೃಭಿರ್ಯಜಮಾನೈಃ ಸುಕೃತೋ ಭೂತ್ । ಸುಷ್ಠು ಪರಿಚರಿತೋ ಭವತಿ ॥

॥ ಪ್ರತಿಪದಾರ್ಥ ॥

**ನೃವತ್**—ದೊರೆಯು ಪ್ರಜೆಗಳ ಇಷ್ಟಾರ್ಥಗಳನ್ನು ಪೂರೈಸುವಂತೆ । **ಚರ್ಷಣಿಪ್ರಾಃ**—ಸ್ತೋತೃಗಳ ಕಾಮಪೂರಕನಾಗಿಯೂ । **ಮಹಾನ್**—ಮಹಾತ್ಮನಾಗಿಯೂ ಇರುವ । **ಇಂದ್ರಃ**—ಇಂದ್ರನು । **ಆ (ಗಚ್ಛತು)**—ದಯಮಾಡಲಿ । **ಉತ**—ಮತ್ತು । **ದ್ವಿಬರ್ಹಾಃ**—ಎರಡು ಲೋಕಗಳಲ್ಲಿಯೂ ಪ್ರವೃದ್ಧನಾಗಿಯೂ । **ಸಹೋಭಿಃ** ಶತ್ರುಬಲಗಳಿಂದ । **ಅಮಿನಃ**—ಅಹಿಂಸಿತನಾಗಿಯೂ ಸಹ । **ಅಸ್ಮದ್ರ್ಯಕ್**—ನಮಗಭಿಮುಖವಾಗಿ । **ವೀರ್ಯಾಯ**—ನಮ್ಮ ವೀರ್ಯವನ್ನು (ಶಕ್ತಿಯನ್ನು) ಅಧಿಕಮಾಡಲು । **ವವೃಧೇ**—ವೃದ್ಧಿಯನ್ನು ಹೊಂದುತ್ತಾನೆ । **ಉರುಃ**—ವಿಸ್ತೃತವಾದ ರೂಪವುಳ್ಳವನೂ । **ಪೃಥುಃ**—ಅತ್ಯಧಿಕವಾದ ಗುಣವುಳ್ಳವನೂ ಆಗಿ । **ಕರ್ತೃಭಿಃ** ಯಜಮಾನರಿಂದ । **ಸುಕೃತಃ ಭೂತ್**—ಪೂಜಿಸಲ್ಪಡುತ್ತಾನೆ.

॥ ಭಾವಾರ್ಥ ॥

ದೊರೆಯು ಪ್ರಜೆಗಳ ಇಷ್ಟಾರ್ಥವನ್ನು ಪೂರೈಸುವಂತೆ ಸ್ತೋತೃಗಳ ಕಾಮಪೂರಕನಾಗಿಯೂ ಮಹಾತ್ಮನಾಗಿಯೂ ಇರುವ ಇಂದ್ರನು ದಯಮಾಡಲಿ. ದ್ಯಾವಾಪೃಥಿವಿಗಳಲ್ಲೆಲ್ಲಾ ಪ್ರವೃದ್ಧನಾಗಿಯೂ ಶತ್ರುಬಲಗಳಿಂದ ಅಹಿಂಸಿತನಾಗಿಯೂ ನಮಗಭಿಮುಖನಾಗಿ ನಮ್ಮ ಶಕ್ತಿಯನ್ನು ಅಧಿಕಮಾಡಲು ತಾನು ವೃದ್ಧಿಯನ್ನು ಹೊಂದುತ್ತಾನೆ. ವಿಸ್ತೃತವಾದ ರೂಪವುಳ್ಳವನೂ ಅತ್ಯಧಿಕವಾದ ಗುಣವುಳ್ಳವನೂ ಆಗಿ ಯಜಮಾನರಿಂದ ಪೂಜಿಸಲ್ಪಡುತ್ತಾನೆ.

## English Translation.

May the great Indra, who is as a monarch, the fulfiller (of the desires) of men, come hither: may he who is mighty over the two (realms

of space), uninjurable by (hostile) efforts, increase (in capacity) for heroism in our presence : may he who is great (in body), eminent (in qualities), be honoured by the performers (of pious acts).

॥ ವಿಶೇಷವಿಷಯಗಳು ॥

**ಅಮಿನಃ**—ಅಹಿಂಸಿತನಾದವನು ; ಇಂದ್ರನ ಬಲಪರಾಕ್ರಮಗಳು ಬಹಳವಾಗಿರುವುದರಿಂದ ಶತ್ರುವು ಎಷ್ಟೇ ಬಲಯುತನಾಗಿದ್ದರೂ ಇಂದ್ರನನ್ನು ಹಿಂಸಿಸಲು ಸಾಧ್ಯವಿಲ್ಲ ಎಂದಭಿಪ್ರಾಯವು. ಯಾಸ್ಕರು ಈ ಶಬ್ದದ ವಿಷಯದಲ್ಲಿ—

**ಅಮಿನಃ । ಅಮಿನೋಽಮಿತಮಾತ್ರೋ ಮಹಾನ್ ಭವತ್ಯಭ್ಯಮಿತೋ ವಾ । ಅಮಿನಃ ಸಹೋಭಿಃ ಇತ್ಯಪಿ ನಿಗಮೋ ಭವತಿ ॥**

(ನಿ. ೬—೧೬)

ಎಂದು ನಿರ್ವಚನವನ್ನು ಹೇಳಿದ್ದಾರೆ **ಅಮಿನಃ** ಎಂಬ ಈ ಶಬ್ದವು ಮಾಙ್ ಮಾನೇ ಎಂಬ ಧಾತುವಿನಿಂದ ನಿಷ್ಪನ್ನವಾಗಿ ಅಳತೆಮಾಡಲು ಸಾಧ್ಯವಿಲ್ಲದ (immeasurable) ಬಲಪರಾಕ್ರಮವುಳ್ಳವನು ಎಂಬರ್ಥವನ್ನು ಕೊಡುವುದು. ದೊಡ್ಡವನು ಅಥವಾ ಹಿಂಸಿಸಲ್ಪಡಲು ಸಾಧ್ಯವಿಲ್ಲದವನು (**ಅಹಿಂಸಿತಃ**; invulnerable) ಎಂದೂ ಅರ್ಥವು. ಈ ಶಬ್ದದ ಅರ್ಥವನ್ನು ವಿವರಿಸುವುದಕ್ಕಾಗಿ—**ಅಮಿನಃ ಸಹೋಭಿಃ** ಎಂಬ ಪ್ರಕೃತ ಋಕ್ಕನ್ನೇ ಉದಾಹರಣೆಯಾಗಿ ಕೊಟ್ಟಿರುವರು. ಇಂದ್ರನ ಬಲಪರಾಕ್ರಮಗಳು ಇಷ್ಟೇ ಸರಿ ಎಂದು ಯಾರೂ ಅಳತೆಮಾಡಲು ಎಂದರೆ ನಿರ್ದಿಷ್ಟವಾಗಿ, ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಇವನ ಶಕ್ತಿಸಾಮರ್ಥ್ಯಾದಿಗಳು ಅಗಾಧವಾಗಿವೆ. ಆದ್ದರಿಂದಲೇ ಇಂದ್ರನನ್ನೂ ಎಂತಹ ಶತೃವೂ ಹಿಂಸಿಸಲು ಸಾಧ್ಯವಿಲ್ಲ ಎಂದು ಮುಖ್ಯಾಭಿಪ್ರಾಯವು.

**ದ್ವಿಬರ್ಹಾಃ**—ದ್ವಿ ಎಂದರೆ ಎರಡು, ಬರ್ಹ ಎಂದರೆ ದೊಡ್ಡದು. ಆದ್ದರಿಂದ ಈ ಶಬ್ದಕ್ಕೆ ಎರಡು ಸ್ಥಾನಗಳಲ್ಲಿ ಎಂದರೆ ಸ್ವರ್ಗಾಂತರಿಕ್ಷಗಳಲ್ಲಿಯೂ ಅತಿಶಯವಾಗಿ ಪ್ರವೃದ್ಧನಾದವನು ಎಂದರ್ಥವು. ಯಾಸ್ಕರು ಈ ಶಬ್ದಕ್ಕೆ—

**ದ್ವಿಬರ್ಹಾಃ ದ್ವಯೋಃ ಸ್ಥಾನಯೋಃ ಪರಿವೃಢೋ ಮಧ್ಯಮೇ ಚ ಸ್ಥಾನ ಉತ್ತಮೇ ಚ । ಉತ ದ್ವಿಬರ್ಹಾ ಅಮಿನಃ ಸಹೋಭಿಃ ಇತ್ಯಪಿ ನಿಗಮೋ ಭವತಿ ॥**

(ನಿ. ೬-೧೭)

ಎಂದು ನಿರ್ವಚನವನ್ನು ಹೇಳಿದಾರೆ. ಎರಡು ಸ್ಥಾನಗಳಲ್ಲಿ ಎಂದರೆ ಮಧ್ಯಮಸ್ಥಾನವಾದ ಅಂತರಿಕ್ಷದಲ್ಲಿ ವೈದ್ಯುತಾತ್ಮನಾಗಿಯೂ (ಎಂದರೆ ಮಿಂಚಿನ ರೂಪದಲ್ಲಿಯೂ) ಸ್ವರ್ಗದಲ್ಲಿ ಸೂರ್ಯರೂಪದಿಂದಲೂ ವ್ಯಾಪಿಸಿ ಬೆಳಗುತ್ತಿರುವವನು ಎಂದಭಿಪ್ರಾಯವು. ಎಂದರೆ ಸ್ವರ್ಗಲೋಕದಲ್ಲಿ ಪ್ರಕಾಶಿಸುತ್ತಿರುವ ಸೂರ್ಯನೂ, ಅಂತರಿಕ್ಷದಲ್ಲಿ ಗೋಚರಿಸುವ ವೈದ್ಯುತಪ್ರಕಾಶವೂ (ಮಿಂಚೂ) ಸಹ ಇಂದ್ರನ ಸ್ವರೂಪಗಳೇ ಆಗಿರುವುವು ಎಂದು ಮುಖ್ಯಾಭಿಪ್ರಾಯವು. ಇಲ್ಲಿ **ಉತ ದ್ವಿಬರ್ಹಾ ಅಮಿನಃ ಸಹೋಭಿಃ** ಎಂದು ಪ್ರಕೃತ ಋಕ್ಕನ್ನೇ ಉದಾಹರಣೆಯಾಗಿ ಕೊಟ್ಟಿರುವರು.

**ಮಹಾँ ಇಂದ್ರಃ—ಮಹಾನ್ ಇಂದ್ರಃ ।** ಇಂದ್ರನಿಗೆ **ಮಹಾನ್** (ದೊಡ್ಡವನು) ಎಂಬ ಪ್ರಶಸ್ತಿಯು ಹೇಗೆ ಬಂತೆಂಬ ವಿಷಯುದಲ್ಲಿ ಐತರೇಯ ಬ್ರಾಹ್ಮಣ್ಯದಲ್ಲಿ ಒಂದು ಪೂರ್ವೇತಿಹಾಸವಿದೆ—

**ಇಂದ್ರೋ ವೈ ವೃತ್ರಂ ಹತ್ವಾ ಸರ್ವಾ ವಿಜಿತೀರ್ವಿಜಿತ್ಯಾಬ್ರವೀತ್ಪ್ರಜಾಪತಿಮಹಮೇತದಸಾನಿ ಯತ್ತ್ವಮಹಂ ಮಹಾನಸಾನೀತಿ ಸ ಪ್ರಜಾಪತಿರಬ್ರವೀದಥ ಕೋಽಹಮಿತಿ ಯದ್ಯೇವೈತದವೋಚ ಇತ್ಯಬ್ರವೀತ್ತತೋ ವೈ ಕೋ ನಾಮ ಪ್ರಜಾಪತಿರಭವತ್ಕೋ ವೈ ನಾಮ ಪ್ರಜಾಪತಿರ್ಯನ್ಮಹಾನಿಂದ್ರೋಽಭವತ್ತನ್ಮಹೇಂದ್ರಸ್ಯ ಮಹೇಂದ್ರತ್ವಂ ।**

(ಐ. ಬ್ರಾ. ೧೨-೨೧)

ಪೂರ್ವದಲ್ಲಿ ಇಂದ್ರನು ವೃತ್ರನನ್ನು ಸಂಹಾರಮಾಡಿದನಂತರ ಭೂಮಂಡಲದ ಸಮಸ್ತ ಪ್ರದೇಶಗಳನ್ನೂ ಜಯಿಸಿ, ಪ್ರಜಾಪತಿಯನ್ನು ಕುರಿತು—ಎಲೈ ಪ್ರಜಾಪತಿಯೇ, ಈಗ ನೀನು ಮಹತ್ಸ್ಥಾನವನ್ನು ಗಳಿಸಿ ಪೂಜ್ಯನಾಗಿರುವೆಯಷ್ಟೆ. ಇನ್ನುಮೇಲೆ ನಿನ್ನ ಮಹತ್ಪದವಿಯು ನನಗೆ ಬೇಕು ಎಂದನು. ಅದಕ್ಕೆ ಪ್ರಜಾಪತಿಯು ನನ್ನ ಪದವಿಯನ್ನು ನೀನು ತೆಗೆದುಕೊಂಡರೆ, ಆಗ ನಾನು ಯಾರು (ಕಃ) ನನ್ನ ಸ್ಥಾನಮಾನವೇನು ಎಂದು ಕೇಳಲು, ಅದಕ್ಕೆ ಇಂದ್ರನು—ಎಲೈ ಪ್ರಜಾಪತಿಯೇ, ಈಗ ನೀನೇ ಹೇಳಿದಂತೆ ನಿನ್ನ ಹೆಸರು ಇನ್ನುಮೇಲೆ ಕಃ (ಯಾರು) ಎಂದಾಗುವುದು. ಎಂದರೆ ಕ ಶಬ್ದವಾಚ್ಯನಾಗುವೆ ಎಂದನು. ಆದುದರಿಂದ ಆ ಕಾಲ ಮೊದಲುಗೊಂಡು ಪ್ರಜಾಪತಿಯು ಕ ಶಬ್ದವಾಚ್ಯನಾದನು. ಈ ವಿಷಯವು ಪ್ರಸಿದ್ಧವಾಗಿರುವುದು. ಆದುದರಿಂದಲೇ ಯಾವುದಾದರೂ ದಾನವನ್ನು ಸ್ವೀಕರಿಸುವಾಗ ಪಠಿಸಬೇಕಾದ ಪ್ರತಿಗ್ರಹಮಂತ್ರಗಳಲ್ಲಿ ಈ ವಿಷಯವು ಉಕ್ತವಾಗಿರುವುದು. ಎಂದರೆ—**ಕ ಇದಂ ಕಸ್ಮಾ ಅದಾದಿತ್ಯಾಹ । ಪ್ರಜಾಪತಿರ್ವೈ ಕಃ । ಪ್ರಜಾಪತಯ ಏವ ತದ್ದದಾತಿ** ಎಂದು ಇತರ ವೇದಗಳ ಬ್ರಾಹ್ಮಣವಾಕ್ಯವಿರುವುದು. ಕ ಶಬ್ದಕ್ಕೆ ಸುಖವೆಂಬ ಅರ್ಥವಿರುವುದರಿಂದ ಪ್ರಜಾಪತಿ ಸಂಬಂಧವಾದ ವ್ಯವಹಾರಗಳಲ್ಲಿಯೂ, ವಿಷಯಗಳಲ್ಲಿಯೂ ಪ್ರಜಾಪತಿಯು ಸುಖಸ್ವರೂಪನು ಎಂದೇ ಹೇಳಲ್ಪಡುವನು. ಈ ರೀತಿ ಪ್ರಜಾಪತಿಯ ಮಹತ್ತ್ವವನ್ನು ಇಂದ್ರನು ಸ್ವೀಕರಿಸಿದುದರಿಂದ ಇಂದ್ರನಿಗೆ **ಮಹಾನ್** ಎಂಬ ಅಭಿಧಾನವು ಬಂದಿತು. ಎಂದರೆ—ಇಂದ್ರನು ಮಹಾನಿಂದ್ರನಾದನು ಈ ವಿಷಯವು ಇತರ ವೇದಗಳಲ್ಲಿ-**ಇಂದ್ರೋ ವೃತ್ರಮಹನ್ತಂ ದೇವಾ ಅಬ್ರುವನ್ಮಹಾನ್ವಾ ಅಯಮಭೂದ್ಯೋ ವೃತ್ರಮವಧೀದಿತಿ ತನ್ಮಹೇಂದ್ರಸ್ಯ ಮಹೇಂದ್ರತ್ವಂ ।** ಇಂದ್ರನು ವೃತ್ರನನ್ನು ಸಂಹಾರಮಾಡಿದ ವಿಷಯವನ್ನು ದೇವತೆಗಳು ಪ್ರಶಂಸಿಸುತ್ತಾ ಈ ಇಂದ್ರನು ವೃತ್ರನನ್ನು ಸಂಹಾರಮಾಡಿದ್ದರಿಂದ ಮಹೇಂದ್ರನಾದನು. (ಮಹತ್ಪದವಿಯನ್ನು ಗಳಿಸಿದನು) ಎಂದರೆ ಎಲ್ಲಾ ದೇವತೆಗಳಿಗಿಂತಲೂ ಶ್ರೇಷ್ಠನಾದನು. ಇಂದ್ರನಿಗೆ ಮಹೇಂದ್ರನೆಂಬ ಹೆಸರು ಬರಲು ಇದೇ ಕಾರಣವು—ಎಂದು ಹೇಳಿದೆ.

**ಸ ಮಹಾನ್ಭೂತ್ವಾ ದೇವತಾ ಅಬ್ರವೀದುದ್ಧಾರಂ ಮ ಉದ್ಧರತೇತಿ ಯಥಾಪ್ಯೇತರ್ಹಿ ಇಚ್ಛತಿ ಯೋ ವೈ ಭವತಿ ಯಃ ಶ್ರೇಷ್ಠತಾಮಶ್ನುತೇ ಸ ಮಹಾನ್ಭವತಿ ತಂ ದೇವಾ ಅಬ್ರುವನ್ ಸ್ವಯಮೇವ ಬ್ರೂಷ್ವ ಯತ್ತೇ ಭವಿಷ್ಯತೀತಿ ಸ ಏತಂ ಮಾಹೇಂದ್ರಂ ಗ್ರಹಮಬ್ರೂತ ಮಾಧ್ಯಂದಿನಂ ಸವನಾನಾಂ ನಿಷ್ಕೇವಲ್ಯಮುಕ್ಥಾನಾಂ ತ್ರಿಷ್ಟುಭಂ ಛಂದಸಾಂ ಪೃಷ್ಠಂ ಸಾಮ್ನಾಂ ತಮಸ್ಮಾ ಉದ್ಧಾರಮುದಹರನ್ ಉದಸ್ಮಾ ಉದ್ಧಾರಂ ಹರಂತಿ ಯ ಏವಂ ವೇದ ।**

ಬಳಿಕ ಇಂದ್ರನು ಮೇಲೆ ಹೇಳಿದಂತೆ ಮಹತ್ವದವಿಯನ್ನು ಗಳಿಸಿ ದೇವತೆಗಳನ್ನು ಕರೆದು ಇಂತೆಂದನು—ಎಲೈ ದೇವತೆಗಳೇ, ನಾನು ಮಹತ್ವದವಿಯನ್ನು ಗಳಿಸಿರುವುದರಿಂದ ಇದರ ನಿಮಿತ್ತವಾಗಿ ಎಂದರೆ ನನ್ನನ್ನು ಅಭಿನಂದಿಸುವುದಕ್ಕಾಗಿ ಗೌರವಸೂಚಕವಾದ ಸತ್ಕಾರವೊಂದನ್ನು ಏರ್ಪಡಿಸಿ ಎಂದನು. ಲೋಕವ್ಯವಹಾರದಲ್ಲಿಯೂ ಸಹ ಒಬ್ಬ ಪುರುಷನಿಗೆ ಅತುಳೈಶ್ವರ್ಯಪ್ರಾಪ್ತಿಯಾಗಲಿ, ವಿದ್ಯಾದಿಗಳಲ್ಲಿ ಪ್ರಶಸ್ತಿಯಾಗಲಿ, ರಾಜಸನ್ಮಾನವಾಗಲಿ, ಲಭಿಸಿದಲ್ಲಿ ಅಂತಹ ಪುರುಷನು ಜನರ ಮಧ್ಯೆ ಗಣ್ಯನಾದವನೆಂದು ಪ್ರಸಿದ್ಧನಾಗಿರುವುದರಿಂದ ಜನರು ಸಾಧಾರಣವಾಗಿ ಅಂತಹ ಪುರುಷನನ್ನು ಅಭಿನಂದಿಸಲು ಸತ್ಕಾರಕೂಟವನ್ನು ಏರ್ಪಡಿಸುವುದು ರೂಢಿಯಷ್ಟೆ. ಅದರಂತೆ ಇಂದ್ರನು ದೇವತೆಗಳನ್ನು ಈ ವಿಷಯವಾಗಿ ಪ್ರಶ್ನೆಮಾಡಿದನು. ದೇವತೆಗಳೂ ಸಹ ಇಂದ್ರನ ಮಾತನ್ನನುಮೋದಿಸಿ—ಎಲೈ ಇಂದ್ರನೇ, ಈ ಸತ್ಕಾರಸಮಾರಂಭವನ್ನು ಯಾವ ರೀತಿ ಮಾಡಬೇಕು? ಹೇಗೆ ಮಾಡಿದರೆ ನಿನಗೆ ಸಂತೋಷವಾಗುವುದು? ಅದನ್ನು ನೀನೇ ಹೇಳಬೇಕು. ನಾವು ಅದರಂತೆ ನಡೆಸುವೆವು ಎನ್ನಲು, ಅದಕ್ಕೆ ಇಂದ್ರನು—ಗ್ರಹಗಳ (ಗ್ರಹವೆಂದರೆ ಸೋಮವನ್ನು ಪಾನಮಾಡುವ ಪಾತ್ರವಿಶೇಷ) ಮಧ್ಯದಲ್ಲಿ ಮಹೇಂದ್ರ ಗ್ರಹವು (ಮಹೇಂದ್ರನಾದ ನನಗೆ ಅರ್ಪಿಸುವ ಸೋಮಪಾನ ಪಾತ್ರೆಯು) ಎಲ್ಲಾ ಗ್ರಹಗಳಿಗಿಂತ ಶ್ರೇಷ್ಠವಾದುದಾಗಿರಬೇಕು. ಅದರಂತೆಯೇ, ಪ್ರಾತಃಸವನ, ಮಾಧ್ಯಂದಿನ ಸವನ, ತೃತೀಯಸವನಗಳೆಂಬ ಮೂರು ಸವನಗಳಲ್ಲಿ ಮಾಧ್ಯಂದಿನಸವನವೂ, ಆಶ್ವಿನಶಸ್ತ್ರ, ಮರುತ್ವತೀಯ ಮೊದಲಾದ ಶಸ್ತ್ರ (ಮಂತ್ರ) ಗಳಲ್ಲಿ ನಿಷ್ಕೇವಲ್ಯಶಸ್ತ್ರವೂ, ಗಾಯತ್ರ್ಯಾದಿಛಂದಸ್ಸುಗಳಲ್ಲಿ ತ್ರಿಷ್ಟುಪ್‌ಛಂದಸ್ಸೂ ಸಾಮಗಾನಗಳ ಮಧ್ಯದಲ್ಲಿ ಪೃಷ್ಠಸ್ತೋತ್ರನಿಷ್ಪಾದಕವಾದ ಬೃಹದ್ರಥಂತರಸಾಮವೂ, ಶ್ರೇಷ್ಠವಾಗಿರುವುದೆಂದು ನೀವು ಅನುಮೋದಿಸಬೇಕು. ಏಕೆಂದರೆ ಅವುಗಳೆಲ್ಲಾ ನನಗೆ ಪ್ರಿಯವಾಗಿರುವವು. ಇದೇ ನೀವು ನನಗೆ ಮಾಡುವ ಸತ್ಕಾರವು ಎಂದನು. ದೇವತೆಗಳು ಹಾಗೆಯೇ ಆಗಲೆಂದೊಪ್ಪಿ ಯಜ್ಞಾದಿಗಳಲ್ಲಿ ಮಾಹೇಂದ್ರಗ್ರಹಾದಿಗಳಿಗೆ ಶ್ರೇಷ್ಠತೆಯನ್ನು ಅನುಮೋದಿಸಿದರು. ಈ ವಿಷಯವು ಇತರ ವೇದಗಳಲ್ಲಿಯೂ—**ಸ ಏತಂ ಮಾಹೇಂದ್ರಮುದಹರತ ವೃತ್ರಂ ಹತ್ವಾನ್ಯಾಸು ದೇವತಾಸ್ವಧೀತಿ ಯನ್ಮಾಹೇಂದ್ರೋ ಗೃಹ್ಯತ ಉದ್ಧಾರಮೇವ ತಂ ಯಜಮಾನ ಉದ್ಧರತೇನ ಪ್ರಜಾಸ್ವಧಿ** । ಎಂದು ಹೇಳಿರುವುದು. ಈ ವಿಷಯವನ್ನು ಯಜ್ಞಮಾಡುವ ಯಾವ ಯಜಮಾನನು ತಿಳಿಯುವನೋ ಅವನು ಜನರಲ್ಲಿ ಶ್ರೇಷ್ಠತೆಯನ್ನೂ, ಗಣ್ಯಸ್ಥಾನವನ್ನೂ ಪಡೆಯುವನು.

॥ ಸಂಹಿತಾಪಾಠಃ ॥

ಇಂದ್ರಮೇವ ಧಿಷಣಾ ಸಾತಯೇ ಧಾದ್ಬೃಹಂತಮೃಷ್ವಮಜರಂ ಯುವಾನಂ।
ಅಷಾಳ್ಹೇನ ಶವಸಾ ಶೂಶುವಾಂಸಂ ಸದ್ಯಶ್ಚಿದ್ಯೋ ವಾವೃಧೇ ಅಸಾಮಿ ॥೨॥

॥ ಪದಪಾಠಃ ॥

**ಇಂದ್ರಂ । ಏವ । ಧಿಷಣಾ । ಸಾತಯೇ । ಧಾತ್ । ಬೃಹಂತಂ । ಋಷ್ವಂ । ಅಜರಂ । ಯುವಾನಂ ।**

**ಅಷಾಳ್ಹೇನ । ಶವಸಾ । ಶೂಶುವಾಂಸಂ । ಸದ್ಯಃ । ಚಿತ್ । ಯಃ । ವವೃಧೇ । ಅಸಾಮಿ ॥ ೨ ॥**

॥ ಸಾಯಣಭಾಷ್ಯಂ ॥

**ಧಿಷಣಾಸ್ಮದೀಯಾ ಸ್ತುತಿಃ ಸಾತಯೇ ದಾನಾಯೇಂದ್ರಮೇವ ಧಾತ್ । ಧಾರಯತಿ । ಕೀದೃಶಂ। ಬೃಹಂತಂ ಮಹಾಂತಮೃಷ್ವಂ ಗಂತಾರಮಜರಂ ಜರಾರಹಿತಂ ಯುವಾನಂ ನಿತ್ಯತರುಣಮಷಾಳ್ಹೇನ ಶತ್ರುಭಿರನಭಿಭೂತೇನ ಶವಸಾ ಬಲೇನ ಶೂಶುವಾಂಸಂ ಪ್ರವೃದ್ಧಂ ॥ ಶ್ವಯತೇರಿದಂ ರೂಪಂ ॥ ಯ ಇಂದ್ರಃ ಸದ್ಯಶ್ಚಿತ್ಸದ್ಯ ಏವ ಜಾತಮಾತ್ರಃ ಸನ್ ಅಸಾಮ್ಯನಲ್ಪಮಧಿಕಂ ಯಥಾ ಭವತಿ ತಥಾ ವವೃಧೇ ವರ್ಧತೇ ॥**

॥ ಪ್ರತಿಪದಾರ್ಥ ॥

**ಯಃ**—ಯಾವ ಇಂದ್ರನು । **ಸದ್ಯಶ್ಚಿತ್**—ಉತ್ಪನ್ನನಾದೊಡನೆಯೇ । **ಅಸಾಮಿ**—ಅತ್ಯಧಿಕವಾಗಿ । **ವವೃಧೇ**—ಬೆಳೆದನೋ (ಅಂತಹ) । **ಬೃಹಂತಂ**—ಮಹದ್ರೂಪವುಳ್ಳವನೂ । **ಋಷ್ವಂ**—ವೇಗಗಾಮಿಯೂ । **ಅಜರಂ**—ಜರಾರಹಿತನೂ । **ಯುವಾನಂ**—ನಿತ್ಯತರುಣನೂ । **ಅಷಾಳ್ಹೇನ**—ಅಪ್ರತಿಹತವಾದ । **ಶವಸಾ**—ಬಲದಿಂದ । **ಶೂಶುವಾಂಸಂ**—ಮಹತ್ವವನ್ನು ಹೊಂದುವವನೂ ಆದ । **ಇಂದ್ರಮೇವ**—ಇಂದ್ರನನ್ನೇ । **ಧಿಷಣಾ**—ನಮ್ಮ ಸ್ತುತಿಯು । **ಸಾತಯೇ**—ದಾನಾರ್ಥವಾಗಿ । **ಧಾತ್**—ಧರಿಸುತ್ತದೆ.

॥ ಭಾವಾರ್ಥ ॥

ಯಾವ ಇಂದ್ರನು, ಉತ್ಪನ್ನನಾದೊಡನೆಯೇ ಅತ್ಯಧಿಕವಾಗಿ ಬೆಳೆದನೋ ಅಂತಹ ಮಹದ್ರೂಪವುಳ್ಳವನೂ ವೇಗಗಾಮಿಯೂ ಜರಾರಹಿತನೂ ನಿತ್ಯತರುಣನೂ ಅಪ್ರತಿಹತವಾದ ಬಲದಿಂದ ಮಹತ್ತ್ವವನ್ನು ಹೊಂದುವವನೂ ಆದ ಇಂದ್ರನನ್ನೇ ನಮ್ಮ ಸ್ತುತಿಯು ದಾನಾರ್ಥವಾಗಿ ಸಮಾಪಿಸುತ್ತದೆ.

## English Translation.

Our praise encourages Indra to munificence, the vast, quick-moving, undecaying, ever-youthful Indra, mighty with unsurpassable strength, who rapidly grows to greatness.

॥ ಸಂಹಿತಾಪಾಠಃ ॥

ಪೃಥೂ ಕರಸ್ನಾ ಬಹುಲಾ ಗಭಸ್ತೀ ಅಸ್ಮದ್ರ್ಯ೧ಕ್ಸಂ ಮಿಮೀಹಿ ಶ್ರವಾಂಸಿ ।
ಯೂಥೇವ ಪಶ್ವಃ ಪಶುಪಾ ದಮೂನಾ ಅಸ್ಮಾँ ಇಂದ್ರಾಭ್ಯಾ ವವೃತ್ಸ್ವಾಜೌ ॥

॥ ಪದಪಾಠಃ ॥

ಪೃಥೂ ಇತಿ । ಕರಸ್ನಾ । ಬಹುಲಾ । ಗಭಸ್ತೀ ಇತಿ । ಅಸ್ಮದ್ರ್ಯ೧ಕ್ । ಸಂ । ಮಿಮೀಹಿ । ಶ್ರವಾಂಸಿ । ಯೂಥಾಽಇವ । ಪಶ್ವಃ । ಪಶುಽಪಾಃ । ದಮೂನಾಃ । ಅಸ್ಮಾನ್ । ಇಂದ್ರ । ಅಭಿ । ಆ । ವವೃತ್ಸ್ವ । ಆಜೌ ॥ ೩ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ಪೃಥೂ ವಿಸ್ತೀರ್ಣೌ ಕರಸ್ನಾ ಕರ್ಮಣಾಂ ಕರ್ತಾರೌ ಬಹುಲಾ ಬಹುಪ್ರದೌ ಗಭಸ್ತೀ ತ್ವದೀಯೌ ಬಾಹೂ ಶ್ರವಾಂಸ್ಯನ್ನಾನಿ । ದಾತುಮಿತಿ ಶೇಷಃ । ಅಸ್ಮದ್ರ್ಯಗಸ್ಮದಭಿಮುಖಂ ಸಂ ಮಿಮೀಹಿ । ಕುರು । ಕಿಂಚ ಹೇ ಇಂದ್ರ ದಮೂನಾ ದಾಂತಮನಾಸ್ತ್ವಮಾಜೌ ಸಂಗ್ರಾಮೇಽಸ್ಮಾನಭ್ಯಾ ವವೃತ್ಸ್ವ । ಅಭ್ಯಾವರ್ತಸ್ವ । ತತ್ರ ದೃಷ್ಟಾಂತಃ । ಪಶುಪಾಃ ಪಶೂನಾಂ ಪಾಲಕಃ ಪಶ್ವಃ ಪಶೂನಾಂ ಯೂಥೇವ ಯೂಥಾನಿ ಯಥಾವರ್ತಯತಿ ತದ್ವತ್ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಪೃಥೂ**—ವಿಸ್ತೃತವಾದವೂ । **ಕರಸ್ನಾ**—ಕರ್ಮಗಳನ್ನು ಮಾಡತಕ್ಕವೂ । **ಬಹುಲಾ**—ಅಧಿಕವಾಗಿ ದಾನಮಾಡತಕ್ಕವೂ ಆದ । **ಗಭಸ್ತೀ**—ನಿನ್ನ ಎರಡು ಬಾಹುಗಳನ್ನೂ । **ಶ್ರವಾಂಸಿ**—ಅನ್ನಗಳನ್ನು ನಮಗೆ ದಾನಮಾಡಲು । **ಅಸ್ಮದ್ರ್ಯ೧ಕ್**—ನಮಗಭಿಮುಖವಾಗಿ । **ಸಂ ಮಿಮೀಹಿ**—ಪ್ರಸರಿಸು । **ಪಶುಪಾಃ**—ಗೋಪಾಲಕನು । **ಪಶ್ವಃ**—ಪಶುಗಳ । **ಯೂಥೇವ**—ಮಂದೆಗಳನ್ನು ಸುತ್ತುವರೆದು ರಕ್ಷಿಸುವಂತೆ । **ಇಂದ್ರ**—ಎಲೈ ಇಂದ್ರನೇ । **ದಮೂನಾಃ**—ದಾಂತಮನಸ್ಕನಾದ ನೀನು । **ಆಜೌ**—ಯುದ್ಧದಲ್ಲಿ । **ಅಸ್ಮಾನ್**—ನಮ್ಮನ್ನು । **ಅಭಿ ಆ ವವೃತ್ಸ್ವ**—ಸುತ್ತುವರೆದು ನಿಂತು ರಕ್ಷಿಸು.

ಭಾವಾರ್ಥ

ಎಲೈ ಇಂದ್ರನೇ, ವಿಸ್ತೃತವಾದವೂ ಕರ್ಮಕಾರಿಗಳೂ ಮತ್ತು ಅತ್ಯಧಿಕವಾಗಿ ದಾನಮಾಡತಕ್ಕವೂ ಆದ ನಿನ್ನ ಎರಡು ಬಾಹುಗಳನ್ನೂ ನಮಗೆ ಅನ್ನದಾನಮಾಡುವುದಕ್ಕಾಗಿ ನಮಗಭಿಮುಖವಾಗಿ ಪ್ರಸರಿಸು. (ನೀಡು) ಎಲೈ ಇಂದ್ರನೇ, ಗೋಪಾಲಕನು ಪಶುಗಳ ಮಂದೆಗಳನ್ನು ಸುತ್ತುವರೆದು ರಕ್ಷಿಸುವಂತೆ ದಾಂತಮನಸ್ಕನಾದ ನೀನು ಯುದ್ಧದಲ್ಲಿ ನಮ್ಮನ್ನು ಸುತ್ತುವರೆದು ನಿಂತು ರಕ್ಷಿಸು.

English Translation.

Extend towards us your long, active and bountiful hands, (to bring us) food : be about us, lowly-minded in ..., in battle, as a herdsman (tends) the herds of cattle.

॥ ಸಂಹಿತಾಪಾಠಃ ॥

ತಂ ವ ಇಂದ್ರಂ ಚತಿನಮಸ್ಯ ಶಾಕೈರಿಹ ನೂನಂ ವಾಜಯಂತೋ ಹುವೇಮ।
ಯಥಾ ಚಿತ್ಪೂರ್ವೇ ಜರಿತಾರ ಆಸುರನೇದ್ಯಾ ಅನವದ್ಯಾ ಅರಿಷ್ಟಾಃ ॥ ೪ ॥

॥ ಪದಪಾಠಃ ॥

ತಂ । ವಃ । ಇಂದ್ರಂ । ಚತಿನಂ । ಅಸ್ಯ । ಶಾಕೈಃ । ಇಹ । ನೂನಂ । ವಾಜಽಯಂತಃ । ಹುವೇಮ ।
ಯಥಾ । ಚಿತ್ । ಪೂರ್ವೇ । ಜರಿತಾರಃ । ಆಸುಃ । ಅನೇದ್ಯಾಃ । ಅನವದ್ಯಾಃ । ಅರಿಷ್ಟಾಃ ॥ ೪ ॥

॥ ಸಾಯಣಭಾಷ್ಯಂ ॥

ನೂನಮದ್ಯೇಹಾಸ್ಮಿನ್ಯಜ್ಞೇ ವಾಜಯಂತೋಽನ್ನಮಿಚ್ಛಂತೋ ವಯಂ ಸ್ತೋತಾರಃ ಶಾಕೈಃ ಶಕ್ತೈಃ ಸಮರ್ಥೈರಸ್ಯ ತವ ಸಹಾಯೈರ್ಮರುದ್ಭಿಃ ಸಹಿತಂ ಚತಿನಂ ಶತ್ರೂಣಾಂ ಚಾತಕಂ। ನಾಶಕಮಿತ್ಯರ್ಥಃ। ಇಂದ್ರಂ ಪರಮೇಶ್ವರಂ ತಂ ವಃ ಪ್ರಸಿದ್ಧಂ ತ್ವಾಂ ಹುವೇಮ। ಸ್ತುಮಃ। ಯಥಾ ಚಿದ್ಯಥೈವ ಪೂರ್ವೇ ಪುರಾತನಾ ಜರಿತಾರಃ ಸ್ತೋತಾರೋಽನೇದ್ಯಾ ಅನಿಂದ್ಯಾ ಅನವದ್ಯಾಃ ಪಾಪರಹಿತಾ ಅರಿಷ್ಟಾ ಅಹಿಂಸಿತಾಶ್ಚಾಸುಃ ಬಭೂವುಃ ಹೇ ಇಂದ್ರ ತ್ವತ್ಪ್ರಸಾದಾದ್ವಯಮಪಿ ತಥೈವ ಭವೇಮೇತ್ಯರ್ಥಃ ।

॥ ಪ್ರತಿಪದಾರ್ಥ ॥

**ಇಹ**— ಈ ಯಜ್ಞದಲ್ಲಿ । **ವಾಜಯಂತಃ**—ಅನ್ನಾಪೇಕ್ಷಿಗಳಾದ ನಾವು । **ಅಸ್ಯ ಶಾಕೈಃ**—ಇಂದ್ರನ ಸಹಾಯಕರಾದ ಮರುತ್ತುಗಳೊಡಗೂಡಿ । **ಚತಿನಂ**—ಶತ್ರುನಾಶಕನಾಗಿಯೂ । **ತಂ**—ಪ್ರಸಿದ್ಧನಾಗಿಯೂ ಇರುವ । **ವಃ ಇಂದ್ರಂ**—ಇಂದ್ರನಾದ ನಿನ್ನನ್ನು। **ಹುವೇಮ**—ಸ್ತುತಿಸುತ್ತೇವೆ । **ಯಥಾ ಚಿತ್**—ಯಾವ ರೀತಿಯಲ್ಲಿ । **ಪೂರ್ವೇ**—ನಮ್ಮ ಪುರಾತನರು । **ಜರಿತಾರಃ**—ಸ್ತೋತೃಗಳಾಗಿಯೂ । **ಅನೇದ್ಯಾಃ**—ಅನಿಂದ್ಯರಾಗಿಯೂ । **ಅನವದ್ಯಾಃ**—ಪಾಪರಹಿತರಾಗಿಯೂ । **ಅರಿಷ್ಟಾಃ**—ಅಹಿಂಸಕರಾಗಿಯೂ । **ಆಸುಃ**—ಇದ್ದರೋ (ಅದರಂತೆಯೇ ನಾವೂ ಇರುವಂತಾಗಲಿ).

॥ ಭಾವಾರ್ಥ ॥

ಈ ಯಜ್ಞದಲ್ಲಿ ಅನ್ನಾಪೇಕ್ಷಿಗಳಾದ ನಾವು ತನ್ನ ಸಹಾಯಕರಾದ ಮರುತ್ತುಗಳೊಡಗೂಡಿ ಶತ್ರುನಾಶಕನಾಗಿಯೂ, ಪ್ರಸಿದ್ಧನಾಗಿಯೂ ಇರುವ ಇಂದ್ರನನ್ನು ಸ್ತುತಿಸುತ್ತೇವೆ. ಎಲೈ ಇಂದ್ರನೇ, ನಮ್ಮ ಪುರಾತನರು ಯಾವ ರೀತಿ ಸ್ತೋತೃಗಳಾಗಿಯೂ, ಅನಿಂದ್ಯರೂ, ಪಾಪರಹಿತರೂ, ಅಹಿಂಸಕರೂ ಆಗಿದ್ದರೋ ಅದರಂತೆಯೇ ನಾವೂ ಆಗಿರುವಂತಾಗಲಿ.

## English Translation

Desiring sustenance, we invoke you, the renowned Indra, on this occasion, the destroyer (of enemies), together with his powerful allies (the Maruts): as his ancient adorers have been, (may we be), exempt from blame, irreproachable, unharmed.

॥ ಸಂಹಿತಾಪಾಠಃ ॥

ಧೃತವ್ರತೋ ಧನದಾಃ ಸೋಮವೃದ್ಧಃ ಸ ಹಿ ವಾಮಸ್ಯ ವಸುನಃ ಪುರುಕ್ಷುಃ।
ಸಂ ಜಗ್ಮಿರೇ ಪಥ್ಯಾ೩ ರಾಯೋ ಅಸ್ಮಿನ್ತ್ಸಮುದ್ರೇ ನ ಸಿಂಧವೋ
ಯಾದಮಾನಾಃ ॥ ೫ ॥

॥ ಪದಪಾಠಃ ॥

ಧೃತಽವ್ರತಃ । ಧನಽದಾಃ । ಸೋಮಽವೃದ್ಧಃ । ಸಃ । ಹಿ । ವಾಮಸ್ಯ । ವಸುನಃ । ಪುರುಽಕ್ಷುಃ ।
ಸಂ । ಜಗ್ಮಿರೇ । ಪಥ್ಯಾಃ । ರಾಯಃ । ಅಸ್ಮಿನ್ । ಸಮುದ್ರೇ । ನ । ಸಿಂಧವಃ । ಯಾದಮಾನಾಃ ॥ ೫ ॥

॥ ಸಾಯಣಭಾಷ್ಯಂ ॥

ಸ ಹಿ ಸ ಖಲ್ವಿಂದ್ರೋ ಧೃತವ್ರತೋ ಧೃತಕರ್ಮಾ । ಧನದಾಃ ಸ ಏವ ಧನಪ್ರದಃ । ಕೀದೃಶಸ್ಯ ಧನಸ್ಯೇತ್ಯಾಕಾಂಕ್ಷಾಯಾಮುಪಸರ್ಜನೀಭೂತಸ್ಯಾಪಿ ಧನಸ್ಯ ವಿಶೇಷಣೇ ವಾಮಸ್ಯ ವಸುನ ಇತಿ । ವಾಮಸ್ಯ ವನನೀಯಸ್ಯ ವಸುನಃ ಶ್ರೇಷ್ಠಸ್ಯ । ಯದ್ವಾ । ವಸುನೋ ಧನಸ್ಯ ಸ್ವಾಮೀತಿ ಶೇಷಃ । ಸೋಮವೃದ್ಧಃ ಸ ಏವ ಸೋಮೇನ ಪ್ರವೃದ್ಧಃ । ಪುರುಕ್ಷುರ್ಬಹ್ವನ್ನಃ ಸ ಏವ । ಅಸ್ಮಿನ್ನಿಂದ್ರ ಏವ ಪಥ್ಯಾಃ ಸ್ತೋತೄಣಾಂ ಹಿತಾನಿ ರಾಯೋ ಧನಾನಿ ಸಂ ಜಗ್ಮಿರೇ । ಸಂಗಚ್ಛಂತೇ । ತತ್ರ ದೃಷ್ಟಾಂತಃ । ಸಿಂಧವೋ ನದ್ಯಃ ಸಮುದ್ರೇ ನ ಯಥಾ ಸಮುದ್ರೇ ಯಾದಮಾನಾ ಅಭಿಗಚ್ಛಂತ್ಯಸ್ತದ್ವತ್ ॥

॥ ಪ್ರತಿಪದಾರ್ಥ ॥

**ಸ ಹಿ**—ಪ್ರಸಿದ್ಧನಾದ ಆ ಇಂದ್ರನೇ । **ಧೃತವ್ರತಃ**—ನಿಯತವಾಗಿ ವಹಿಸಿದ ಕರ್ಮವುಳ್ಳವನಾಗಿಯೂ । **ವಾಮಸ್ಯ**—ಆಕರ್ಷಕವೂ । **ವಸುನಃ**—ಶ್ರೇಷ್ಠವೂ ಆದ । **ಧನದಾಃ**—ಧನಪ್ರದನಾಗಿಯೂ ಆಗಿದ್ದಾನೆ । **ಸೋಮವೃದ್ಧಃ**—ಸೋಮಪಾನದಿಂದ ಪ್ರವೃದ್ಧನೂ । **ಪುರುಕ್ಷುಃ**—ಅತ್ಯಧಿಕವಾದ ಅನ್ನವಂತನೂ ಆಗಿದ್ದಾನೆ ।

**ಸಮುದ್ರೇ**—ಸಮುದ್ರದಲ್ಲಿ । **ಯಾದಮಾನಾಃ**—ಒಟ್ಟಿಗೆ ಹೋಗಿ ಸೇರುವ । **ಸಿಂಧವಃ ನ**—ನದಿಗಳೆಲ್ಲವೂ ಒಟ್ಟಿಗೆ ಪ್ರವೇಶಿಸುವಂತೆ । **ಅಸ್ಮಿನ್**—ಈ ಇಂದ್ರನಲ್ಲೇ । **ಪಥ್ಯಾಃ**—ಸ್ತೋತೃಗಳಿಗೆ ಒಳ್ಳೆಯದನ್ನು ಮಾಡತಕ್ಕ । **ರಾಯಃ**—ಧನಗಳು । **ಸಂ ಜಗ್ಮಿರೇ**—ಸೇರಿಕೊಳ್ಳುತ್ತವೆ.

॥ ಭಾವಾರ್ಥ ॥

ಪ್ರಸಿದ್ಧನಾದ ಆ ಇಂದ್ರನೇ, ನಿಯತವಾಗಿ ವಹಿಸಿದ ಕರ್ಮವುಳ್ಳವನಾಗಿಯೂ, ಆಕರ್ಷಕವೂ, ಶ್ರೇಷ್ಠವೂ ಆದ ಧನಪ್ರದನಾಗಿಯೂ ಆಗಿದ್ದಾನೆ ಸೋಮಪಾನದಿಂದ ಪ್ರವೃದ್ಧನೂ, ಅತ್ಯಧಿಕವಾದ ಅನ್ನವಂತನೂ ಆಗಿದ್ದಾನೆ. ಸಮುದ್ರದಲ್ಲಿ ಹೋಗಿ ಸೇರುವ ನದಿಗಳೆಲ್ಲವೂ ಒಟ್ಟಿಗೆ ಸಮುದ್ರವನ್ನು ಪ್ರವೇಶಿಸಿ ಒಂದಾಗುವಂತೆ ಸ್ತೋತೃಗಳಿಗೆ ಹಿತಕರಗಳಾದ ಧನಗಳೆಲ್ಲವೂ ಈ ಇಂದ್ರನಲ್ಲೇ ಒಟ್ಟಿಗೆ ಸೇರಿಕೊಳ್ಳುತ್ತವೆ.

English Translation.

In him who is observant of pious rites, who is a giver of wealth, who is exalted by the Soma beverage, the (lord) of desirable riches, the distributor of food, (in him) the treasures fit (for his worshippers) congregate like rivers flowing into the ocean.

॥ ಸಂಹಿತಾಪಾಠಃ ॥

ಶವಿಷ್ಠಂ ನ ಆ ಭರ ಶೂರ ಶವ ಓಜಿಷ್ಠಮೋಜೋ ಅಭಿಭೂತ ಉಗ್ರಂ ।
ವಿಶ್ವಾ ದ್ಯುಮ್ನಾ ವೃಷ್ಣ್ಯಾ ಮಾನುಷಾಣಾಮಸ್ಮಭ್ಯಂ ದಾ ಹರಿವೋ
ಮಾದಯಧ್ಯೈ ॥ ೬ ॥

॥ ಪದಪಾಠಃ ॥

ಶವಿಷ್ಠಂ । ನಃ । ಆ । ಭರ । ಶೂರ । ಶವಃ । ಓಜಿಷ್ಠಂ । ಓಜಃ । ಅಭಿಽಭೂತೇ । ಉಗ್ರಂ ।
ವಿಶ್ವಾ । ದ್ಯುಮ್ನಾ । ವೃಷ್ಣ್ಯಾ । ಮಾನುಷಾಣಾಂ । ಅಸ್ಮಭ್ಯಂ । ದಾಃ । ಹರಿಽವಃ । ಮಾದಯಧ್ಯೈ ॥ ೬॥

॥ ಸಾಯಣಭಾಷ್ಯಂ ॥

ಹೇ ಶೂರ ವಿಕ್ರಾಂತೇಂದ್ರ ಶವಿಷ್ಠಂ ಬಲವತ್ತಮಂ ಶವೋ ಬಲಂ ನೋಽಸ್ಮಭ್ಯಮಾ ಭರ । ಆಹರ । ಹೇ ಅಭಿಭೂತೇ ಶತ್ರೂಣಾಮಭಿಭಾವುಕೇಂದ್ರ ಉಗ್ರಮುಪ್ರಸಹ್ಯಮೋಜಿಷ್ಠಮೋಜಸ್ವಿತಮಮೋಜೋ ದೀಪ್ತಿಮಸ್ಮಭ್ಯಮಾ ಭರ । ವಿಶ್ವಾ ವಿಶ್ವಾನಿ ಸರ್ವಾಣಿ ವೃಷ್ಣ್ಯಾ ವೃಷ್ಣ್ಯಾನಿ ಸೇಚನಸಮರ್ಥಾನಿ

ದ್ಯುಮ್ನಾ ದ್ಯುಮ್ನಾನಿ ದ್ಯೋತಮಾನಾನಿ ಯಾನಿ ಧನಾನಿ ಮಾನುಷಾಣಾಂ ಮನುಷ್ಯಾಣಾಂ ಭೋಗ್ಯತಯಾ ಕಲ್ಪಿತಾನಿ ಹೇ ಹರಿವೋ ಹರಿವನ್ನಿಂದ್ರ ತಾನಿ ಧನಾನಿ ಮಾದಯಧ್ಯಾ ಅಸ್ಮಾನ್ಮಾದಯಿತುಮಸ್ಮಭ್ಯಂ ದಾಃ । ಪ್ರಯಚ್ಛ ॥

। ಪ್ರತಿಪದಾರ್ಥ ॥

**ಶೂರ**— ಪರಾಕ್ರಮಿಯಾದ ಎಲೈ ಇಂದ್ರನೇ । **ಶವಿಷ್ಠಂ**—ಅತ್ಯಂತ ವೀರ್ಯವುಳ್ಳ । **ಶವಃ**—ಬಲವನ್ನು । **ನಃ**—ನಮಗೆ । **ಆ ಭರ**—ಒದಗಿಸಿಕೊಡು । **ಅಭಿಭೂತೇ**—ಶತ್ರುಧರ್ಷಕನಾದ ಇಂದ್ರನೇ । **ಉಗ್ರಂ**—(ಶತ್ರು) ಭಯಂಕರವಾದುದೂ । **ಓಜಿಷ್ಠಂ**—ಅತ್ಯಂತ ಓಜಸ್ಸಿನಿಂದ ಕೂಡಿದುದೂ ಆದ । **ಓಜಃ**—ಅಂತಶ್ಶಕ್ತಿಯನ್ನು (ಒದಗಿಸು) । **ಹರಿವಃ**—ಹರಿನಾಮಕವಾದ ಅಶ್ವವುಳ್ಳ ಎಲೈ ಇಂದ್ರನೇ । **ಮಾನುಷಾಣಾಂ**—ಮಾನವರ ಹಿತಕಾರಿಯಾದವೂ । **ವೃಷ್ಣ್ಯಾ**—ತೃಪ್ತಿಕಾರಕವೂ । **ವಿಶ್ವಾ**—ಸಮಸ್ತವೂ ಆದ । **ದ್ಯುಮ್ನಾ**—ಧನಗಳನ್ನು । **ಮಾದಯಧ್ಯೈ**—ನಮ್ಮ ತೃಪ್ತ್ಯರ್ಥವಾಗಿ । **ಅಸ್ಮಭ್ಯಂ**—ನಮಗೆ । **ದಾಃ**—ಕೊಡು.

॥ ಭಾವಾರ್ಥ ॥

ಪರಾಕ್ರಮಿಯಾದ ಇಂದ್ರನೇ, ನಮಗೆ ಅತ್ಯಂತ ವೀರ್ಯವುಳ್ಳ ಬಲವನ್ನು ಅನುಗ್ರಹಿಸು. ಶತ್ರುಧರ್ಷಕನಾದ ಇಂದ್ರನೇ, ಶತ್ರುಗಳಿಗೆ ಭಯಜನಕವಾದುದೂ, ಅತ್ಯಂತ ಓಜಸ್ಸಿನಿಂದ ಕೂಡಿದುದೂ ಆದ ಅಂತಶ್ಶಕ್ತಿಯನ್ನೂ ನಮಗೆ ಒದಗಿಸು. ಹರಿನಾಮಕವಾದ ಅಶ್ವವುಳ್ಳ ಎಲೈ ಇಂದ್ರನೇ, ಮಾನವರ ಹಿತಕಾರಿಯಾದವೂ ತೃಪ್ತಿಕಾರಕವಾದವೂ ಆದ ಸಮಸ್ತ ಧನಗಳನ್ನು ನಮ್ಮ ತೃಪ್ತ್ಯರ್ಥವಾಗಿ ನಮಗೆ ಕೊಡು.

## English Translation.

Bestow upon us, hero Indra, most vigorous vigour: subduer (of enemies, bestow upon us) most energetic and fierce energy: grant, lord of steeds, all the bright and invigorating (treasures) fit for men, to make us happy.

। ಸಂಹಿತಾಪಾಠಃ ॥

ಯಸ್ತೇ ಮದಃ ಪೃತನಾಷಾಳವೃಧ್ರ ಇಂದ್ರ ತಂ ನ ಆ ಭರ ಶೂಶುವಾಂಸಂ।
ಯೇನ ತೋಕಸ್ಯ ತನಯಸ್ಯ ಸಾತೌ ಮಂಸೀಮಹಿ ಜಿಗೀವಾಂಸಸ್ತ್ವೋತಾಃ॥

। ಪದಪಾಠಃ ॥

ಯಃ । ತೇ । ಮದಃ । ಪೃತನಾಷಾಟ್ । ಅವೃಧ್ರಃ । ಇಂದ್ರ । ತಂ । ನಃ । ಆ । ಭರ । ಶೂಶುಽವಾಂಸಂ।
ಯೇನ । ತೋಕಸ್ಯ । ತನಯಸ್ಯ । ಸಾತೌ । ಮಂಸೀಮಹಿ । ಜಿಗೀವಾಂಸಃ । ತ್ವಾಽಊತಾಃ ॥ ೭ ॥

॥ ಸಾಯಣಭಾಷ್ಯಂ ॥

**ಪೃತನಾಷಾಟ್ ಶತ್ರುಸೇನಾನಾಮಭಿಭವಿತಾಮೃಧ್ರೋಽಹಿಂಸಿತೋ ಯೋ ಮದೋ ಹರ್ಷೋ ಹೇ ಇಂದ್ರ ತೇ ತ್ವಯಾ ದೇಯಃ ಶೂಶುವಾಂಸಂ ಪ್ರವೃದ್ಧಂ ತಂ ಮದಂ ನೋಽಸ್ಮಭ್ಯಮಾ ಭರ । ಆಹರ । ತ್ವೋತಾಸ್ತ್ವಯಾ ರಕ್ಷಿತಾ ಜಿಗೀವಾಂಸೋ ಜಿತವಂತೋ ವಯಂ ತೋಕಸ್ಯ ಪುತ್ರಸ್ಯ ತನಯಸ್ಯ ತತ್ಪುತ್ರಸ್ಯ ಚ ಸಾತೌ ಲಾಭೇ ನಿಮಿತ್ತಭೂತೇ ಸತಿ ಯೇನ ಹರ್ಷೇಣ ಮಂಸೀಮಹಿ ತ್ವಾಂ ಸ್ತುವೀಮಹಿ ತಮಾ ಭರೇತಿ ಪೂರ್ವೇಣಾನ್ವಯಃ ॥**

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಪೃತನಾಷಾಟ್**—ಶತ್ರುಧರ್ಷಕವಾದುದೂ । **ಅಮೃಧ್ರಃ**– ಶತ್ರುವಿನಿಂದ ಅಹಿಂಸಿತವಾದುದೂ ಆದ । **ಯಃ ಮದಃ**—ಯಾವ ಹರ್ಷವಿದೆಯೋ । (ಮತ್ತು) **ತ್ವೋತಾಃ**—ನಿನ್ನಿಂದ ರಕ್ಷಿತ ರಾದವರೂ । **ಜಿಗೀವಾಂಸಃ**—ಜಯಾಪೇಕ್ಷಿಗಳೂ ಆದ ನಾವು । **ತೋಕಸ್ಯ ಸಾತೌ**—ಪುತ್ರಾರ್ಥವಾಗಿಯೂ । **ತನಯಸ್ಯ**—ಪೌತ್ರಾರ್ಥವಾಗಿಯೂ । **ಯೇನ**—ಯಾವ ಹರ್ಷದಿಂದ । **ಮಂಸೀಮಹಿ**—ನಿನ್ನನ್ನು ಸ್ತುತಿಸುವೆವೋ (ಅಂತಹ) । **ತೇ**—ನಿನ್ನಿಂದ ದತ್ತವಾಗುವುದೂ । **ಶೂಶುವಾಂಸಂ**—ಅಧಿಕವಾದ ಪ್ರಮಾಣವುಳ್ಳದ್ದೂ ಆದ । **ತಂ**—ಅದೇ ಹರ್ಷವನ್ನು । **ನಃ**—ನಮಗೂ । **ಆ ಭರ**—ಒದಗಿಸು.

॥ ಭಾವಾರ್ಥ ॥

ಎಲೈ ಇಂದ್ರನೇ, ಶತ್ರುಧರ್ಷಕವಾದುದೂ, ಶತ್ರುವಿನಿಂದ ಅಹಿಂಸಿತವಾದುದೂ ಆದ ಯಾವ ಹರ್ಷವಿದೆಯೋ ಮತ್ತು ನಿನ್ನಿಂದ ರಕ್ಷಿತರಾಗಿಯೂ ಜಯಾಪೇಕ್ಷಿಗಳೂ ಆದ ನಾವು ನಮ್ಮ ಪೌತ್ರಾದಿಗಳ ನಿಮಿತ್ತವಾಗಿ ಯಾವ ಹರ್ಷದಿಂದ ನಿನ್ನನ್ನು ಸ್ತುತಿಸುವೆವೋ ಅಂತಹ ನಿನ್ನಿಂದ ದತ್ತವಾಗಿರುವುದೂ ಮತ್ತು ಅಧಿಕಪ್ರಮಾಣವುಳ್ಳದ್ದೂ ಆದ ಅದೇ ಹರ್ಷವನ್ನು ನಮಗೂ ಒದಗಿಸು.

## English Translation.

Impart to us, Indra, that your invigorating exultation which overcomes enemies, and is irresistible, whereby, protected by you, triumphant we may glorify you for the sake of (obtaining) sons and grandsons.

॥ ಸಂಹಿತಾಪಾಠಃ ॥

ಆ ನೋ ಭರ ವೃಷಣಂ ಶುಷ್ಮಮಿಂದ್ರ ಧನಸ್ಪೃತಂ ಶೂಶುವಾಂಸಂ ಸುದಕ್ಷಂ।
ಯೇನ ವಂಸಾಮ ಪೃತನಾಸು ಶತ್ರೂನ್ತವೋತಿಭಿರುತ ಜಾಮೀಁರಜಾ-
ಮೀನ್ ॥ ೮ ॥

|| ಪದಪಾಠಃ ||

ಆ । ನಃ । ಭರ । ವೃಷಣಂ । ಶುಷ್ಮಂ । ಇಂದ್ರ । ಧನಽಸ್ಪೃತಂ । ಶೂಶುಽವಾಂಸಂ । ಸುಽದಕ್ಷಂ ।

ಯೇನ । ವಂಸಾಮ । ಪೃತನಾಸು । ಶತ್ರೂನ್ । ತವ । ಊತಿಽಭಿಃ । ಉತ । ಜಾಮೀನ್ । ಅಜಾಮೀನ್ || ೮ ||

|| ಸಾಯಣಭಾಷ್ಯಂ ||

ಹೇ ಇಂದ್ರ ತ್ವಂ ವೃಷಣಂ ವರ್ಷಿತಾರಂ ಶುಷ್ಮಂ ಸೇನಾಲಕ್ಷಣಂ ಬಲಂ ನೋಽಸ್ಮಭ್ಯಮಾ ಭರ । ಆಹರ । ಕೀದೃಶಂ । ಧನಸ್ಪೃತಂ ಧನಸ್ಯ ಪಾಲಕಂ ಶೂಶುವಾಂಸಂ ಪ್ರವೃದ್ಧಂ ಸುದಕ್ಷಂ ಶೋಭನಬಲಂ । ಹೇ ಇಂದ್ರ ತವೋತಿಭಿಸ್ತ್ವದೀಯಾಭೀ ರಕ್ಷಾಭಿಃ ಪೃತನಾಸು ಸಂಗ್ರಾಮೇಷು || ಪೃತನಾ ಇತಿ ಸಂಗ್ರಾಮನಾಮ || ಯೇನ ಬಲೇನ ಶತ್ರೂನ್ವಂಸಾಮ ಹನಾಮ । ಉತೇತ್ಯತ್ರ ಭಿನ್ನಕ್ರಮಃ । ಜಾಮೀನ್ಬಂಧೂನುತಾಪಿ ಚಾಜಾಮೀನ್ ಶತ್ರೂಂಶ್ಚ ಯೇನ ಶುಷ್ಮೇಣ ವಂಸಾಮ ತಂ ಶುಷ್ಮಮಾ ಭರೇತಿ ಪೂರ್ವೇಣ ಸಂಬಂಧಃ ||

|| ಪ್ರತಿಪದಾರ್ಥ ||

ಇಂದ್ರ—ಎಲೈ ಇಂದ್ರನೇ । **ತವ ಊತಿಭಿಃ**—ನಿನ್ನ ರಕ್ಷಣೆಗಳೊಡನೆ । **ಪೃತನಾಸು**—ಯುದ್ಧಗಳಲ್ಲಿ । **ಯೇನ**—ಯಾವ ಬಲದಿಂದ । **ಜಾಮೀನ್**—ಬಂಧುರೂಪದಲ್ಲಿರಲಿ । **ಉತ**—ಅಥವಾ । **ಅಜಾಮೀನ್**—ಬಂಧುವಲ್ಲದೆ ಇರಲಿ । **ಶತ್ರೂನ್**—(ಎಲ್ಲಾ ರೂಪದ) ಶತ್ರುಗಳನ್ನೂ । **ವಂಸಾಮ**—ಕೊಲ್ಲಬಲ್ಲೆವೋ ಅಂತಹುದೂ । **ಧನಸ್ಪೃತಂ**—ನಮ್ಮ ಧನಕ್ಕೆ ಪಾಲಕವಾದುದೂ । **ಶೂಶುವಾಂಸಂ**—ವೃದ್ಧಿಯನ್ನು ಹೊಂದತಕ್ಕದ್ದೂ । **ಸುದಕ್ಷಂ**—ಉತ್ತಮವಾದ ಸಾಮರ್ಥ್ಯವನ್ನುಳ್ಳದ್ದೂ । **ವೃಷಣಂ**—ಇಷ್ಟಾರ್ಥಪ್ರದವಾದದ್ದೂ ಆದ । **ಶುಷ್ಮಂ**—ಬಲವನ್ನು । **ನಃ**—ನಮಗೆ । **ಆ ಭರ**—ಒದಗಿಸಿಕೊಡು.

|| ಭಾವಾರ್ಥ ||

ಎಲೈ ಇಂದ್ರನೇ, ನಿನ್ನ ರಕ್ಷಣೆಗಳೊಡನೆ ಯುದ್ಧಗಳಲ್ಲಿ ಯಾವ ಬಲದಿಂದ ನಮ್ಮ ಸಕಲ ಶತ್ರುಗಳನ್ನೂ ಎಂದರೆ ಅವರು ಬಂಧುರೂಪದಲ್ಲಿರಲಿ ಅಥವಾ ಬಂಧುಗಳಲ್ಲದಿರಲಿ, ಸಕಲರನ್ನೂ ಕೊಲ್ಲಬಲ್ಲೆವೋ ಅಂತಹುದೂ, ನಮ್ಮ ಧನವನ್ನು ಸಂರಕ್ಷಿಸಬಲ್ಲುದೂ, ವೃದ್ಧಿಯನ್ನು ಹೊಂದತಕ್ಕದ್ದೂ, ಉತ್ತಮವಾದ ಸಾಮರ್ಥ್ಯವನ್ನುಳ್ಳದ್ದೂ ಮತ್ತು ಇಷ್ಟಾರ್ಥಪ್ರದಾಯಕವಾದದ್ದೂ ಆದ ಬಲವನ್ನು ನಮಗೆ ಒದಗಿಸಿಕೊಡು.

## English Translation.

Bestow upon us, Indra, vigorous strength, the realizer of wealth, great and propitious, wherewith, through your protection, we may destroy our enemies in battles, whether they be kinsmen or strangers.

|| ಸಂಹಿತಾಪಾಠಃ ||

ಆ ತೇ ಶುಷ್ಮೋ ವೃಷಭ ಏತು ಪಶ್ಚಾದೋತ್ತರಾದಧರಾದಾ ಪುರಸ್ತಾತ್ ।
ಆ ವಿಶ್ವತೋ ಅಭಿ ಸಮೇತ್ವರ್ವಾಙಿಂದ್ರ ದ್ಯುಮ್ನಂ ಸ್ವರ್ವದ್ಧೇಹ್ಯಸ್ಮೇ ॥೯॥

|| ಪದಪಾಠಃ ||

ಆ । ತೇ । ಶುಷ್ಮಃ । ವೃಷಭಃ । ಏತು । ಪಶ್ಚಾತ್ । ಆ । ಉತ್ತರಾತ್ । ಅಧರಾತ್ । ಆ । ಪುರಸ್ತಾತ್ । ಆ । ವಿಶ್ವತಃ । ಅಭಿ । ಸಂ । ಏತು । ಅರ್ವಾಙ್ । ಇಂದ್ರ । ದ್ಯುಮ್ನಂ । ಸ್ವಃऽವತ್ । ಧೇಹಿ । ಅಸ್ಮೇ ಇತಿ ॥ ೯ ॥

|| ಸಾಯಣಭಾಷ್ಯಂ ||

ಹೇ ಇಂದ್ರ ವೃಷಭೋ ವರ್ಷಿತಾ ತೇ ತ್ವದೀಯಂ ಶುಷ್ಮೋ ಬಲಮರ್ವಾಙಸ್ಮದಭಿಮುಖಃ ಸನ್ ಪಶ್ಚಾತ್ಪಶ್ಚಿಮಭಾಗಾದೈತು । ಆಗಚ್ಛತು । ಉತ್ತರಾದುತ್ತರಭಾಗಾದಾಗಚ್ಛತು । ಅಧರಾದ್ದಕ್ಷಿಣಾಚ್ಚೈತು । ಪುರಸ್ತಾತ್ಪೂರ್ವಭಾಗಾಚ್ಚಾಗಚ್ಛತು । ವಿಶ್ವತಃ ಸರ್ವಸ್ಮಾದ್ದಿಗ್ಭಾಗಾದಭಿ ಅಸ್ಮಾನಭಿಲಕ್ಷ್ಯ ಸಮೇತು । ಸಮ್ಯಗಾಗಚ್ಛತು । ಹೇ ಇಂದ್ರ ತ್ವಂ ಸ್ವರ್ವತ್ಸುಖಯುಕ್ತಂ ದ್ಯುಮ್ನಂ ಧನಮಸ್ಮೇ ಅಸ್ಮಭ್ಯಂ ಧೇಹಿ । ಪ್ರಯಚ್ಛ ॥

|| ಪ್ರತಿಪದಾರ್ಥ ||

(ಎಲೈ ಇಂದ್ರನೇ) **ವೃಷಭಃ**—ಕಾಮವರ್ಷಕವಾದುದೂ । **ತೇ**—ನಿನ್ನ ಸಂಬಂಧಿಯಾದುದೂ ಆದ । **ಶುಷ್ಮಃ**—ಬಲವು । **ಅರ್ವಾಙ್**—ನಮಗಭಿಮುಖವಾಗಿ । **ಪಶ್ಚಾತ್**—ಪಶ್ಚಿಮಭಾಗದಿಂದ । **ಆ ಏತು**—ಬರಲಿ । **ಉತ್ತರಾತ್**—ಉತ್ತರಭಾಗದಿಂದ । **ಆ (ಏತು)**—ಬರಲಿ । **ಅಧರಾತ್**—ದಕ್ಷಿಣ ದಿಕ್ಕಿನಿಂದ । **ಆ (ಏತು)**—ಬರಲಿ । **ಪುರಸ್ತಾತ್**—ಪೂರ್ವದಿಕ್ಕಿನಿಂದ । **ಆ (ಏತು)**—ಬಂದು ಸೇರಲಿ । **ವಿಶ್ವತಃ**—ಸಮಸ್ತ ದಿಕ್ಕಿನಿಂದಲೂ । **ಅಭಿ**—ನಮಗಭಿಮುಖವಾಗಿ । **ಆ ಸಮೇತು**—ಬಂದು ನಮ್ಮನ್ನು ಸೇರಿಕೊಳ್ಳಲಿ । **ಇಂದ್ರ**—ಎಲೈ ಇಂದ್ರನೇ । **ಸ್ವರ್ವತ್**—ಸುಖಯುಕ್ತವಾದ । **ದ್ಯುಮ್ನಂ**—ಧನವನ್ನು । **ಅಸ್ಮೇ**—ನಮಗೆ । **ಧೇಹಿ**—ಕೊಡು.

|| ಭಾವಾರ್ಥ ||

ಎಲೈ ಇಂದ್ರನೇ, ಕಾಮವರ್ಷಕವಾದುದೂ, ನಿನ್ನ ಸಂಬಂಧಿಯಾದುದೂ ಆದ ಬಲವು ನಮಗಭಿಮುಖವಾಗಿ ಪಶ್ಚಿಮ ಭಾಗದಿಂದಲೂ, ಉತ್ತರದಿಕ್ಕಿನಿಂದಲೂ, ಪೂರ್ವ ಮತ್ತು ದಕ್ಷಿಣ ದಿಕ್ಕುಗಳಿಂದಲೂ ಸಹ ಬರಲಿ. ಸಮಸ್ತ ದಿಕ್ಕುಗಳಿಂದಲೂ ಆ ಬಲವು ಬಂದು ನಮ್ಮನ್ನು ಸೇರಿಕೊಳ್ಳಲಿ. ಎಲೈ ಇಂದ್ರನೇ, ನಮಗೆ ಸುಖಯುಕ್ತವೂ ಮತ್ತು ಸುಖಕಾರಕವೂ ಆದ ಧನವನ್ನು ಕೊಡು.

## English Translation.

May your invigorating strength come from the west, from the north, from the south, from the east; may it come to us from every quarter: grant us riches combined with felicity.

॥ ಸಂಹಿತಾಪಾಠಃ ॥

ನೃವತ್ತ ಇಂದ್ರ ನೃತಮಾಭಿರೂತೀ ವಂಸೀಮಹಿ ವಾಮಂ ಶ್ರೋಮತೇಭಿಃ ।
ಈಕ್ಷೇ ಹಿ ವಸ್ವ ಉಭಯಸ್ಯ ರಾಜನ್ಧಾ ರತ್ನಂ ಮಹಿ ಸ್ಥೂರಂ ಬೃಹಂತಂ ॥

॥ ಪದಪಾಠಃ ॥

ನೃಽವತ್ । ತೇ । ಇಂದ್ರ । ನೃಽತಮಾಭಿಃ । ಊತೀ । ವಂಸೀಮಹಿ । ವಾಮಂ । ಶ್ರೋಮತೇಭಿಃ ।
ಈಕ್ಷೇ । ಹಿ । ವಸ್ವಃ । ಉಭಯಸ್ಯ । ರಾಜನ್ । ಧಾಃ । ರತ್ನಂ । ಮಹಿ । ಸ್ಥೂರಂ । ಬೃಹಂತಂ ॥ ೧೦ ॥

॥ ಸಾಯಣಭಾಷ್ಯಂ ॥

ನೃವನ್ಮನುಷ್ಯೈಃ ಪರಿಚಾರಕಜನೈರ್ಯುಕ್ತಂ ಶ್ರೋಮತೇಭಿಃ ಶ್ರೋತವ್ಯೈರ್ಯಶೋಭಿಃ ಸಹಿತಂ ವಾಮಂ ವನನೀಯಂ ಧನಂ ಹೇ ಇಂದ್ರ ತೇ ತ್ವತ್ತೋ ನೃತಮಾಭಿರ್ನೇತೃತಮಾಭಿರೂತೀ ಊತಿಭೀ ರಕ್ಷಾಭಿರ್ವಂಸೀಮಹಿ। ವಯಂ ಸಂಭಜೇಮಹಿ। ಹಿ ಯಸ್ಮಾತ್ಕಾರಣಾತ್ ಹೇ ರಾಜನ್ ರಾಜಮಾನೇಂದ್ರ ತ್ವಮುಭಯಸ್ಯ ಪಾರ್ಥಿವಸ್ಯ ದಿವ್ಯಸ್ಯ ಚ ವಸ್ವೋ ಧನಸ್ಯೇಕ್ಷೇ ಈಶಿಷೇ ತಸ್ಮಾತ್ಕಾರಣಾನ್ಮಹಿ ಮಹಾಂತಂ ಸ್ಥೂರಂ ವಿಪುಲಂ ಬೃಹಂತಂ ಗುಣೈಃ ಪರಿವೃಢಂ ರತ್ನಂ ರಮಣೀಯಂ ಧನಂ ॥ ಅತ್ರ ರತ್ನಶಬ್ದಃ ಪುಲ್ಲಿಂಗಃ ॥ ಧಾಃ । ಧೇಹಿ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ತೇ**—ನಿನ್ನಿಂದ ದತ್ತವಾದುದೂ । **ನೃತಮಾಭಿಃ**—ಮಾರ್ಗದರ್ಶಕಗಳಾದ । **ಊತೀ**—ರಕ್ಷಣೆಗಳೊಡನೆ ಕೂಡಿದುದೂ । **ನೃವತ್**—ಪುತ್ರಾದಿಯುಕ್ತವಾದುದೂ । **ಶ್ರೋಮತೇಭಿಃ**—ಯಶಸ್ಸುಗಳಿಂದ ಕೂಡಿದುದೂ । **ವಾಮಂ**—ಆಕರ್ಷಕವಾದುದೂ ಆದ । **ಧನಂ**—ಧನವನ್ನು । **ವಂಸೀಮಹಿ**—(ನಾವು) ಅನುಭವಿಸುವಂತಾಗಲಿ । **ರಾಜನ್**—ಪ್ರಭುವಾದ ಎಲೈ ಇಂದ್ರನೇ । **ಹಿ**—ಯಾವ ಕಾರಣದಿಂದ । **ಉಭಯಸ್ಯ**—ದ್ಯಾವಾಪೃಥಿವಿಗಳೆರಡಕ್ಕೂ ಸೇರಿದ । **ವಸ್ವಃ**—ಧನಕ್ಕೆಲ್ಲಾ । **ಈಕ್ಷೇ**—ನೀನು ಒಡೆಯನಾಗಿದ್ದೀಯೋ (ಆ ಕಾರಣದಿಂದಲೇ) । **ಮಹಿ**—ಮಹತ್ತಾದುದೂ । **ಸ್ಥೂರಂ**—ವಿಸ್ತೃತವಾದುದೂ । **ಬೃಹಂತಂ**—ಅಧಿಕಗುಣವುಳ್ಳದ್ದೂ । **ರತ್ನಂ**—ರಮಣೀಯವಾದುದೂ ಆದ ಧನವನ್ನು । **ಧಾಃ**—ಕೊಡು.

|| ಭಾವಾರ್ಥ ||

ಎಲೈ ಇಂದ್ರನೇ, ನಿನ್ನಿಂದ ದತ್ತವಾದುದೂ, ಮಾರ್ಗದರ್ಶಕಗಳಾದ ರಕ್ಷಣೆಗಳೊಡನೆ ಕೂಡಿದುದೂ, ಪುತ್ರಾದಿಯುಕ್ತವಾದುದೂ, ಯಶಸ್ಸುಗಳಿಂದ ಕೂಡಿದುದೂ, ಆಕರ್ಷಕವಾದುದೂ ಆದ ಧನವನ್ನು ನಾವು ಅನುಭವಿಸುವಂತಾಗಲಿ ಪ್ರಭುವಾದ ಎಲೈ ಇಂದ್ರನೇ, ಯಾವ ಕಾರಣದಿಂದ ದ್ಯಾವಾಪೃಥಿವಿಗಳೆರಡಕ್ಕೂ ಸೇರಿದ ಧನಕ್ಕೆಲ್ಲಾ ನೀನು ಒಡೆಯನಾಗಿದ್ದೀಯೋ ಆ ಕಾರಣದಿಂದಲೇ, ಮಹತ್ತಾದುದೂ, ವಿಸ್ತೃತವಾದುದೂ, ಅಧಿಕಗುಣವುಳ್ಳದ್ದೂ, ರಮಣೀಯವಾದುದೂ ಆದ ಧನವನ್ನು ಕೊಡು.

English Translation.

We enjoy, Indra, through your guiding protection, desirable affluence along with descendants and reputation: grant us, sovereign, you rule over (earthly and heavenly) riches, vast, desirablr, and infinite treasure.

॥ ವಿಶೇಷವಿಷಯಗಳು ॥

**ಈಕ್ಷೇ**— ಈ ಶಬ್ದಕ್ಕೆ ಯಾಸ್ಕರು— **ಈಕ್ಷ ಈಶಿಷೇ । ಈಕ್ಷೇ ಹಿ ವಸ್ವ ಉಭಯಸ್ಯ ರಾಜನ್ ಇತ್ಯಪಿ ನಿಗಮೋ ಭವತಿ** (ನಿ. ೬-೭) ಎಂದು ನಿರ್ವಚನವನ್ನು ಹೇಳಿದಾರೆ. **ಈಕ್ಷೇ** ಎಂಬ ಶಬ್ದಕ್ಕೆ **ಈಶಿಷೇ** ಎಂಬ ಶಬ್ದದ ಅರ್ಥವೇ ಎಂದರೆ ನೀನು ಪ್ರಭುತ್ವಮಾಡುತ್ತೀಯೇ, ರಾಜ್ಯವಾಳುತ್ತೀಯೆ ಎಂದರ್ಥವಿರುವುದು. ಇಲ್ಲಿ ಪ್ರಕೃತ ಋಕ್ಕನ್ನೇ ಉದಾಹರಣೆಯಾಗಿ ಕೊಟ್ಟಿರುವರು. ಎಲೈ ರಾಜನಾದ ಇಂದ್ರನೇ, ನೀನು ದ್ಯಾವಾಪೃಥಿವಿಗಳೆಂಬ ಎರಡು ಲೋಕಗಳಲ್ಲಿರುವ ಸಮಸ್ತ ಧನಕ್ಕೂ ಪ್ರಭುವಾಗಿರುವೆ ಎಂದು ಈ ವಾಕ್ಯದ ಅರ್ಥವು.

॥ ಸಂಹಿತಾಪಾಠಃ ॥

ಮರುತ್ವಂತಂ ವೃಷಭಂ ವಾವೃಧಾನಮಕವಾರಿಂ ದಿವ್ಯಂ ಶಾಸಮಿಂದ್ರಂ ।
ವಿಶ್ವಾಸಾಹಮವಸೇ ನೂತನಾಯೋಗ್ರಂ ಸಹೋದಾಮಿಹ ತಂ ಹುವೇಮ ॥

॥ ಪದಪಾಠಃ ॥

ಮರುತ್ವಂತಂ । ವೃಷಭಂ । ವವೃಧಾನಂ । ಅಕವ಼ಽಅರಿಂ । ದಿವ್ಯಂ । ಶಾಸಂ । ಇಂದ್ರಂ ।
ವಿಶ್ವಽಸಹಂ । ಅವಸೇ । ನೂತನಾಯ । ಉಗ್ರಂ । ಸಹಃಽದಾಂ । ಇಹ । ತಂ । ಹುವೇಮ ॥ ೧೧ ॥

॥ ಸಾಯಣಭಾಷ್ಯಂ ॥

**ಇಹಾಸ್ಮಿನ್ಯಜ್ಞೇ ನೂತನಾಯಾಭಿನವಾಯಾವಸೇ ರಕ್ಷಣಾಯ ತಂ ಪ್ರಸಿದ್ಧಮಿಂದ್ರಂ ಹುವೇಮ । ಸ್ತುಮಃ । ಅಪ್ಸ್ವಯಾಮೋ ವಾ । ಕೀದೃಶಂ । ಮರುತ್ವಂತಂ ಮರುದ್ಭಿರ್ಯುಕ್ತಂ ವೃಷಭಂ ಕಾಮಾನಾಂ**

**ವರ್ಷಿತಾರಂ ವವೃಧಾನಂ ಪ್ರವೃದ್ಧಮಕವಾರಿಮಕುತ್ಸಿತಶತ್ರುಂ ದಿವ್ಯಂ ದ್ಯೋತಮಾನಂ ಶಾಸಂ ಶಾಸಿತಾರಂ ವಿಶ್ವಸಹಂ ವಿಶ್ವಸ್ಯ ಲೋಕಸ್ಯಾಭಿಭವಿತಾರಮುಗ್ರಮೋಜಸ್ವಿನಂ ಸಹೋದಾಂ ಬಲಪ್ರದಂ ॥**

॥ ಪ್ರತಿಪದಾರ್ಥ ॥

**ಮರುತ್ವಂತಂ**—ಮರುತ್ತುಗಳೊಡನೆ ಕೂಡಿರುವವನೂ | **ವೃಷಭಂ**—ಕಾಮವರ್ಷಕನೂ | **ವವೃಧಾನಂ**-ಪ್ರವೃದ್ಧನೂ | **ಅಕವಾರಿಂ**—ಶತ್ರುಗಳಿಂದ ಅದೂಷ್ಯನೂ | **ದಿವ್ಯಂ**—ಪ್ರಕಾಶಮಾನನೂ | **ಶಾಸಂ**—ಪ್ರಭುವೂ | **ವಿಶ್ವಸಹಂ**—ಲೋಕವನ್ನೆಲ್ಲಾ ನಿಯಮಿಸುವವನೂ | **ಉಗ್ರಂ**—ಭಯಂಕರನೂ | **ಸಹೋದಾಂ**—ಬಲಪ್ರದನೂ | **ತಂ**—ಪ್ರಸಿದ್ಧನೂ ಆದ | **ಇಂದ್ರಂ**—ಇಂದ್ರನನ್ನು | **ಇಹ**—ಈ ಯಜ್ಞಕಾಲದಲ್ಲಿ | **ನೂತನಾಯ**—ನೂತನವಾದ | **ಅವಸೇ**—ರಕ್ಷಣಾರ್ಥವಾಗಿ | **ಹುವೇಮ**—ಪ್ರಾರ್ಥಿಸಿ ಕರೆಯುತ್ತೇವೆ.

॥ ಭಾವಾರ್ಥ ॥

ಮರುತ್ತುಗಳೊಡನೆ ಕೂಡಿರುವವನೂ, ಕಾಮವರ್ಷಕನೂ, ಪ್ರವೃದ್ಧನೂ, ಶತ್ರುಗಳಿಂದ ಅದೂಷ್ಯನೂ, ಪ್ರಕಾಶಮಾನನೂ, ಪ್ರಭುವೂ, ಲೋಕನಿಯಾಮಕನೂ, ಭಯಂಕರನೂ. ಬಲಪ್ರದನೂ ಪ್ರಸಿದ್ಧನೂ ಆದ ಇಂದ್ರನನ್ನು ಈ ಯಜ್ಞಕಾಲದಲ್ಲಿ ನೂತನವಾದ ರಕ್ಷಣಾರ್ಥವಾಗಿ ಪ್ರಾರ್ಥಿಸಿ ಕರೆಯುತ್ತೇವೆ.

## English Translation.

We invoke on this occasion for his present protection, that Indra who is attended by the Maruts; who is the showerer (of benefits); augmenting (in powess); the unreviled of foes, radiant, ruling, all-subduing, fierce, the giver of strength.

॥ ಸಂಹಿತಾಪಾಠಃ ॥

ಜನಂ ವಜ್ರಿನ್ಮಹಿ ಚಿನ್ಮನ್ಯಮಾನಮೇಭ್ಯೋ ನೃಭ್ಯೋ ರಂಧಯಾ ಯೇಷ್ವಸ್ಮಿ ।
ಅಧಾ ಹಿ ತ್ವಾ ಪೃಥಿವ್ಯಾಂ ಶೂರಸಾತೌ ಹವಾಮಹೇ ತನಯೇ ಗೋಷ್ವಪ್ಸು ॥

॥ ಪದಪಾಠಃ ॥

ಜನಂ । ವಜ್ರಿನ್ । ಮಹಿ । ಚಿತ್ । ಮನ್ಯಮಾನಂ । ಏಭ್ಯಃ । ನೃಽಭ್ಯಃ । ರಂಧಯ । ಯೇಷು । ಅಸ್ಮಿ ।
ಅಧ । ಹಿ । ತ್ವಾ । ಪೃಥಿವ್ಯಾಂ । ಶೂರಽಸಾತೌ । ಹವಾಮಹೇ । ತನಯೇ । ಗೋಷು । ಅಪ್ಽಸು ॥೧೨॥

॥ ಸಾಯಣಭಾಷ್ಯಂ ॥

**ಯೇಷು ಯೇಷಾಂ ನೃಣಾಂ ಮಧ್ಯೇಽಹಮಸ್ಮಿ ಏಕೋ ಭವಾಮಿ ಹೇ ವಜ್ರಿನ್ ವಜ್ರವನ್ನಿಂದ್ರ ತ್ವಮೇಭ್ಯೋ ನೃಭ್ಯೋ ಮನುಷ್ಯೇಭ್ಯೋ ಮಹಿ ಮಹದತ್ಯಂತಮಾತ್ಮಾನಂ ಮನ್ಯಮಾನಂ ಜನಂ। ಬಹುಮನ್ಯಮಾನಮಿತ್ಯರ್ಥಃ। ರಂಧಯ। ವಶೀಕುರು। ಚಿದಿತಿ ಪಾದಪೂರಣಃ। ಅಥಾಧುನಾ ಪೃಥಿವ್ಯಾಂ ಭೂಮ್ಯಾಂ ಶೂರಸಾತೌ ಯುದ್ಧೇ ಪ್ರವೃತ್ತೇ ಸತಿ ತನಯೇ ಪುತ್ರೇ ನಿಮಿತ್ತೇ ಚ ಗೋಷು ಪಶುಷ್ವಪ್ಸು-ದಕೇಷು ಚ ನಿಮಿತ್ತೇಷು ಹೇ ಇಂದ್ರ ತ್ವಾ ದ್ಯುಲೋಕೇ ಸ್ಥಿತಂ ತ್ವಾಂ ಹವಾಮಹೇ। ವಯಮಾಹ್ವ-ಯಾಮಃ ॥**

॥ ಪ್ರತಿಪದಾರ್ಥ ॥

**ವಜ್ರಿನ್**—ವಜ್ರಾಯುಧಧಾರಿಯಾದ ಎಲೈ ಇಂದ್ರನೇ। **ಯೇಷು**—ಯಾವ ಮಾನವರ ನಡುವೆ। **ಅಸ್ಮಿ**—ನಾನೂ ಒಬ್ಬನಾಗಿ ಇದ್ದೇನೆಯೋ। **ಏಭ್ಯಃ ನೃಭ್ಯಃ**—ಅಂತಹ ಮಾನವರ ಗುಂಪಿನಲ್ಲಿ। **ಮಹಿ ಮನ್ಯಮಾನಂ**—ತನ್ನನ್ನೇ ಅಧಿಕವೆಂದು ತಿಳಿದು ಅಹಂಕಾರಪಡತಕ್ಕ। **ಜನಂ**—ಪುರುಷನನ್ನು। **ರಂಧಯ**—ದಮನಮಾಡು। **ಅಧ**—ಈಗ। **ಪೃಥಿವ್ಯಾಂ**—ಪೃಥ್ವಿಯಲ್ಲಿ। **ಶೂರಸಾತೌ**—ಯುದ್ಧವು ಪ್ರಾಪ್ತವಾದಾಗ। **ತನಯೇ**—ಪುತ್ರಾರ್ಥವಾಗಿಯೂ। **ಗೋಷು**—ಪಶುನಿಮಿತ್ತವಾಗಿಯೂ। **ಅಪ್ಸು**—ಉದಕನಿಮಿತ್ತವಾಗಿಯೂ। **ತ್ವಾ**—ನಿನ್ನನ್ನು। **ಹವಾಮಹೇ**—ಪ್ರಾರ್ಥಿಸುತ್ತೇವೆ.

॥ ಭಾವಾರ್ಥ ॥

ವಜ್ರಧರನಾದ ಎಲೈ ಇಂದ್ರನೇ, ಯಾವ ಮಾನವರ ನಡುವೆ ನಾನೂ ಒಬ್ಬನಾಗಿದ್ದೇನೆಯೋ, ಅಂತಹ ಮಾನವರ ಗುಂಪಿನಲ್ಲಿ ತನ್ನನ್ನೇ ಅಧಿಕವೆಂದು ತಿಳಿದು ಅಹಂಕಾರ ಪಡತಕ್ಕ ಪುರುಷನ್ನು ನೀನು ದಮನಮಾಡು. ಈಗ :ಪೃಥ್ವಿಯಲ್ಲಿ ಯುದ್ಧವು ಪ್ರಾಪ್ತವಾದಾಗ ಪುತ್ರಾರ್ಥವಾಗಿಯೂ, ಪಶುನಿಮಿತ್ತವಾಗಿಯೂ, ಉದಕನಿಮಿತ್ತವಾಗಿಯೂ ನಿನ್ನನ್ನು ಪ್ರಾರ್ಥಿಸುತ್ತೇವೆ.

## English Translation.

Wielder of the thunderbolt, humble that man who looks upon himself as the greatest amongst those men of whom I am: we invoke you now to (descend) upon the earth at the time of battle, and for (the sake of obtaining) sons and grandsons.

॥ ಸಂಹಿತಾಪಾಠಃ ॥

ವಯಂ ತ ಏಭಿಃ ಪುರುಹೂತ ಸಖ್ಯೈಃ ಶತ್ರೋಃಶತ್ರೋರುತ್ತರ ಇತ್ಸ್ಯಾಮ।
ಘ್ನಂತೋ ವೃತ್ರಾಣ್ಯುಭಯಾನಿ ಶೂರ ರಾಯಾ ಮದೇಮ ಬೃಹತಾ ತ್ವೋ-
ತಾಃ ॥ ೩ ॥

|| ಪದಪಾಠಃ ||

ವಯಂ । ತೇ । ಏಭಿಃ । ಪುರುऽಹೂತ । ಸಖ್ಯೈಃ । ಶತ್ರೋಃऽಶತ್ರೋಃ । ಉತ್ऽತರೇ । ಇತ್ । ಸ್ಯಾಮ ।
ಘ್ನಂತಃ । ವೃತ್ರಾಣಿ । ಉಭಯಾನಿ । ಶೂರ । ರಾಯಾ । ಮದೇಮ । ಬೃಹತಾ । ತ್ವಾऽಊತಾಃ ॥ ೧೩ ॥

॥ ಸಾಯಣಭಾಷ್ಯಂ ॥

ಹೇ ಪುರುಹೂತ ಪುರುಭಿರಾಹೂತೇಂದ್ರ ಏಭಿಃ ಪ್ರಸಿದ್ಧೈಃ ಸಖ್ಯೈಃ ಸ್ತೋತ್ರಲಕ್ಷಣೈಃ ಸಖಿಕರ್ಮಭಿಸ್ತೇ ತ್ವಯಾ ಸಹ ವಯಮುಭಯಾನಿ ಜಾಮಿರೂಪಾಣ್ಯಜಾಮಿರೂಪಾಣಿ ವೃತ್ರಾಣ್ಯಮಿತ್ರಾಣಿ ಘ್ನಂತೋ ಹಿಂಸಂತಃ ಶತ್ರೋಃ ಶತ್ರೋಃ ಸರ್ವಸ್ಮಾಚ್ಛತ್ರೋರುತ್ತರ ಇತ್ಸ್ಯಾಮ । ಅಧಿಕಾ ಏವ ಭವೇಮ । ಹೇ ಶೂರ ವಿಕ್ರಾಂತೇಂದ್ರ ತ್ವೋತಾ ವಯಂ ತ್ವಯಾ ರಕ್ಷಿತಾಃ ಸಂತೋ ಬೃಹತಾ ಮಹತಾ ರಾಯಾ ಧನೇನ ಮದೇಮ । ಹೃಷ್ಯಾಮ ॥

॥ ಪ್ರತಿಪದಾರ್ಥ ॥

**ಪುರುಹೂತ**—ಅನೇಕರಿಂದ ಕರೆಯಲ್ಪಡತಕ್ಕ ಎಲೈ ಇಂದ್ರನೇ । **ಏಭಿಃ**—ಪ್ರಸಿದ್ಧವಾದ । **ಸಖ್ಯೈಃ**—ನಿನ್ನ ಸ್ನೇಹಕರ್ಮಗಳಿಂದ । **ತೇ**—ನಿನ್ನೊಡಗೂಡಿದ್ದು । **ವಯಂ**—ನಾವು । **ಉಭಯಾನಿ**—ಬಂಧು ಮತ್ತು ಅಬಂಧುರೂಪವಾದ । **ವೃತ್ರಾಣಿ**—ಎರಡು ವಿಧವಾದ ಶತ್ರುಗಳನ್ನೂ । **ಘ್ನಂತಃ**—ಹಿಂಸಿಸುತ್ತಾ । **ಶತ್ರೋಃ**—ಸಕಲ ಶತ್ರುವಿಗಿಂತಲೂ । **ಉತ್ತರೇ ಇತ್**—ಅತ್ಯಧಿಕವಾದ ಸ್ಥಿತಿಯಲ್ಲಿ । **ಸ್ಯಾಮ**—ಇರುವಂತಾಗಲಿ । **ಶೂರ**—ಪರಾಕ್ರಮಿಯಾದ ಎಲೈ ಇಂದ್ರನೇ । **ತ್ವೋತಾಃ**—ನಿನ್ನಿಂದ ರಕ್ಷಿತರಾಗಿ । **ಬೃಹತಾ**—ಅತ್ಯಧಿಕವಾದ । **ರಾಯಾ**—ಧನದೊಡನೆ । **ಮದೇಮ**—ಹರ್ಷಿಸುವಂತಾಗಲಿ.

॥ ಭಾವಾರ್ಥ ॥

ಅನೇಕರಿಂದ ಕರೆಯಲ್ಪಡತಕ್ಕ ಎಲೈ ಇಂದ್ರನೇ, ಪ್ರಸಿದ್ಧವಾದ ನಿನ್ನ ಸ್ನೇಹಕರ್ಮಗಳಿಂದ ನಿನ್ನೊಡಗೂಡಿದ್ದು ನಮ್ಮ ಬಂಧು ಮತ್ತು ಅಬಂಧುರೂಪವಾದ ಎಲ್ಲಾ ರೂಪದ ಶತ್ರುಗಳನ್ನೂ ಹಿಂಸಿಸುತ್ತಾ ಸಕಲ ಶತ್ರುಗಳಿಗಿಂತಲೂ ಅತ್ಯಧಿಕವಾದ ಸ್ಥಿತಿಯಲ್ಲಿರುವಂತಾಗಲಿ. ಪರಾಕ್ರಮಿಯಾದ ಎಲೈ ಇಂದ್ರನೇ, ನಿನ್ನಿಂದ ರಕ್ಷಿತರಾಗಿ ನಾವು ಅತ್ಯಧಿಕವಾದ ಧನದೊಡನೆ ಹರ್ಷಿತರಾಗುವಂತಾಗಲಿ.

## English Translation.

Invoked of many, may we, through these your friendly (praises), ever be superior to successive foes, destroying, oh hero, both (classes of) enemies, (kindred or unallied); and may we, protected by you, be happy with abundant riches.

# ಇಪ್ಪತ್ತನೆಯ ಸೂಕ್ತವು

|| ಸಾಯಣಭಾಷ್ಯಂ ||

**ದ್ಯೌರ್ನ ಯ ಇಂದ್ರೇತಿ ತ್ರಯೋದಶರ್ಚಂ ಪಂಚಮಂ ಸೂಕ್ತಂ ಭರದ್ವಾಜಸ್ಯಾರ್ಷಮೈಂದ್ರಂ ತ್ರೈಷ್ಟುಭಂ । ವಿ ಪಿಪ್ರೋರಿತ್ಯೇಷಾ ಸಪ್ತಮೀ ದಶಾಕ್ಷರಚತುಷ್ಪಯುಕ್ತಾ ವಿರಾಟ್ । ಅನುಕ್ರಮ್ಯತೇ ಚ । ದ್ಯೌರ್ನ ವಿ ಪಿಪ್ರೋರ್ವಿರಾಡಿತಿ॥ ಪೃಷ್ಠ್ಯಷಡಹಸ್ಯ ಷಷ್ಠೇಽಹನಿ ತೃತೀಯಸವನ ಉಕ್ಥ್ಯಸ್ತೋತ್ರಾಣಿ ಯದಿ ದ್ವಿಪದಾಸು ಸ್ತುವೀರನ್ ಯದಿ ವಾಗ್ನಿಷ್ಟೋಮಸಂಸ್ಥಃ ಸ್ಯಾತ್ತದಾನೀಂ ಮಾಧ್ಯಂದಿನೇ ಸವನೇಽಚ್ಛಾವಾಕಃ ಸ್ವಶಸ್ತ್ರ ಆರಂಭಣೀಯಾಭ್ಯ ಊರ್ಧ್ವಮೇತತ್ಸೂಕ್ತಂ ಶಂಸೇತ್ । ಸೂತ್ರಿತಂ ಚ । ದ್ಯೌರ್ನ ಯ ಇಂದ್ರೇತ್ಯಚ್ಛಾವಾಕಃ । ಆ. ೮-೪। ಇತಿ ॥ ಇದಮೇವ ಸೂಕ್ತಮಿಂದ್ರಾವಿಷ್ಣ್ವೋರುತ್ಕ್ರಾಂತಿನಾಮ್ನ್ಯೇಕಾಹೇ ನಿಷ್ಕೇವಲ್ಯನಿವಿದ್ಧಾನಂ । ದ್ಯೌರ್ನ ಯ ಇಂದ್ರೇತಿ ಮಾಧ್ಯಂದಿನಃ । ಆ. ೯-೭। ಇತಿ ॥**

ಅನುವಾದವು—**ದ್ಯೌರ್ನ ಯ ಇಂದ್ರ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಐದನೆಯ ಸೂಕ್ತವು. ಇದರಲ್ಲಿ ಹದಿಮೂರು ಋಕ್ಕುಗಳಿರುವುವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು; ಇಂದ್ರನು ದೇವತೆಯು; ತ್ರಿಷ್ಟುಪ್ ಛಂದಸ್ಸು. **ವಿ ಪಿಪ್ರೋಃ** ಎಂಬ ಏಳನೆಯ ಋಕ್ಕು ಹತ್ತು ಹತ್ತು ಅಕ್ಷರಗಳ ನಾಲ್ಕುಪಾದಗಳಿಂದ ಸಹಿತವಾದ ವಿರಾಟ್‌ಛಂದಸ್ಕವು. ಅನುಕ್ರಮಣಿಕೆಯಲ್ಲಿ—**ದ್ಯೌರ್ನ ವಿ ಪಿಪ್ರೋರ್ವಿರಾಟ್** ಎಂದು ಹೇಳಿರುವುದು. **ಪೃಷ್ಠ್ಯಷಡಹ**ವೆಂಬ ಯಾಗದ ಆರನೆಯ ದಿವಸ ತೃತೀಯ ಸವನಕಾಲದಲ್ಲಿ ಉಕ್ಥ್ಯಸ್ತೋತ್ರಗಳನ್ನು ದ್ವಿಪದಾವಿರಾಟ್‌ಛಂದಸ್ಸಿನ ಋಕ್ಕುಗಳಿಂದ ಪಠಿಸುವ ಸಂದರ್ಭದಲ್ಲಿಯಾಗಲಿ ಅಥವಾ ಅಗ್ನಿಷ್ಟೋಮ ಸಂಸ್ಥೆಯಲ್ಲಾದರೆ ಮಾಧ್ಯಂದಿನಸವನಕಾಲದಲ್ಲಿ ಅಚ್ಛಾವಾಕನೆಂಬ ಋತ್ವಿಜನು ತನ್ನ ಶಸ್ತ್ರಮಂತ್ರಗಳನ್ನು ಆರಂಭಿಸಿದನಂತರ ಈ ಸೂಕ್ತವನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ದ್ಯೌರ್ನ ಯ ಇಂದ್ರೇತ್ಯಚ್ಛಾವಾಕಃ** ಎಂಬ ಸೂತ್ರದಿಂದ (ಆ. ೮-೪) ವಿವೃತವಾಗಿರುವುದು. ಮತ್ತು ಇಂದ್ರಾವಿಷ್ಣುದೇವತೆಗಳನ್ನುದ್ದೇಸಿಸಿ ಮಾಡುವ ಉತ್ಕ್ರಾಂತಿಯೆಂಬ ಏಕಾಹಯಾಗದಲ್ಲಿ ಈ ಸೂಕ್ತವನ್ನು ನಿಷ್ಕೇವಲ್ಯಶಸ್ತ್ರಮಂತ್ರಗಳ ಮಧ್ಯದಲ್ಲಿ ನಿವಿದ್ಧಾನೀಯಸೂಕ್ತವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ದ್ಯೌರ್ನ ಯ ಇಂದ್ರೇತಿ ಮಧ್ಯಂದಿನಃ** ಎಂಬ ಸೂತ್ರದಿಂದ (ಆ. ೯-೭) ವಿವೃತವಾಗಿರುವುದು.

## ಸೂಕ್ತ—೨೦

ಮಂಡಲ—೬ || ಅನುವಾಕ—೨ || ಸೂಕ್ತ—೨೦ ||

ಅಷ್ಟಕ—೪ || ಅಧ್ಯಾಯ—೬ || ವರ್ಗ— ೯, ೧೦ ||

|| ಸೂಕ್ತದಲ್ಲಿರುವ ಋಕ್ಸಂಖ್ಯೆ—೧೩ ||

|| ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ||

|| ದೇವತಾ—ಇಂದ್ರಃ ||

|| ಛಂದಃ—೧-೬, ೮-೧೩. ತ್ರಿಷ್ಟುಪ್ | ೭. ವಿರಾಟ್ ||

|| ಸಂಹಿತಾಪಾಠಃ ||

ದ್ಯೌರ್ನ ಯ ಇಂದ್ರಾಭಿ ಭೂಮಾರ್ಯಸ್ತಸ್ಥೌ ರಯಿಃ ಶವಸಾ ಪೃತ್ಸು ಜನಾನ್ ।

ತಂ ನಃ ಸಹಸ್ರಭರಮುರ್ವರಾಸಾಂ ದದ್ಧಿ ಸೂನೋ ಸಹಸೋ ವೃತ್ರತುರಂ॥

|| ಪದಪಾಠಃ ||

ದ್ಯೌಃ। ನ। ಯಃ। ಇಂದ್ರ। ಅಭಿ। ಭೂಮ। ಅರ್ಯಃ। ತಸ್ಥೌ। ರಯಿಃ। ಶವಸಾ। ಪೃತ್ऽಸು। ಜನಾನ್ ।

ತಂ। ನಃ। ಸಹಸ್ರऽಭರಂ। ಉರ್ವರಾऽಸಾಂ। ದದ್ಧಿ। ಸೂನೋ ಇತಿ। ಸಹಸಃ। ವೃತ್ರऽತುರಂ ॥ ೧ ॥

|| ಸಾಯಣಭಾಷ್ಯಂ ||

ಯೋ ರಯಿಃ ಪುತ್ರರೂಪಂ ಧನಂ ಶವಸಾ ಬಲೇನ ಪೃತ್ಸು ಸಂಗ್ರಾಮೇಷ್ವರ್ಯೋಽರೀನ್ ಶತ್ರೂನ್ ಜನಾನಭಿ ತಸ್ಥೌ ಆಕ್ರಾಮೇತ್ । ತತ್ರ ದೃಷ್ಟಾಂತಃ । ದ್ಯೌರ್ನ । ದ್ಯೋತಮಾನಃ ಸೂರ್ಯೋ ಯಥಾ ಭೂಮ ಭೂತಾನ್ಯಾಕ್ರಾಮತಿ ತದ್ವತ್ । ಹೇ ಸಹಸಃ ಸೂನೋ ಬಲಸ್ಯ ಪುತ್ರೇಂದ್ರ ತ್ವಂ ತಂ ಪುತ್ರಂ ನೋಽಸ್ಮಭ್ಯಂ ದದ್ಧಿ । ದೇಹಿ । ಕೀದೃಶಂ । ಸಹಸ್ರಭರಂ ಸಹಸ್ರಸ್ಯ ಧನಸ್ಯ ಭರ್ತಾರಮುರ್ವರಾಸಾಮುರ್ವರಾಣಾಂ ಸಸ್ಯಾಢ್ಯಾನಾಂ ಭೂಮೀನಾಂ ಸನಿತಾರಂ ಸಂಭಕ್ತಾರಂ ವೃತ್ರತ್ತುರಂ ವೃತ್ರಾಣಾಂ ಶತ್ರೂಣಾಂ ತರಿತಾರಂ ತುರ್ವಿತಾರಂ ವಾ ॥

|| ಪ್ರತಿಪದಾರ್ಥ ||

**ಸಹಸಃ ಸೂನೋ**—ಶಕ್ತಿಪುತ್ರನಾದ । **ಇಂದ್ರ**—ಎಲೈ ಇಂದ್ರನೇ । **ಭೂಮ**—ಸಕಲ ಭೂತಜಾತಗಳನ್ನೂ । **ದ್ಯೌಃ ನ**—ಸೂರ್ಯನು ತನ್ನ ಕಿರಣಗಳಿಂದ ಆಕ್ರಮಿಸುವಂತೆ । **ಯಃ ರಯಿಃ**—ಯಾವ ಪುತ್ರರೂಪವಾದ ಧನವು । **ಶವಸಾ**—ತನ್ನ ಬಲದಿಂದ । **ಪೃತ್ಸು**—ಸಂಗ್ರಾಮಗಳಲ್ಲಿ । **ಅರ್ಯಃ ಜನಾನ್**—ಶತ್ರುಜನರನ್ನೆಲ್ಲಾ । **ಅಭಿತಸ್ಥೌ**—ಆಕ್ರಮಿಸುವುದೋ । **ತಂ**—ಅಂತಹುದೂ । **ಸಹಸ್ರಭರಂ**—ಸಹಸ್ರರೂಪವಾದ ಐಶ್ವರ್ಯವನ್ನು ಭರಿಸತಕ್ಕದ್ದೂ । **ಉರ್ವರಾಸಾಂ**—ಸಕಲ ಸಸ್ಯಾದಿಗಳಿಂದಲೂ ಭರಿತವಾದ ಪೃಥ್ವಿಯನ್ನು ಅನುಭವಿಸತಕ್ಕದ್ದೂ । **ವೃತ್ರತುರಂ**—ಶತ್ರುನಾಶಕವಾದುದೂ ಆದ ಪುತ್ರಸಂಪತ್ತನ್ನು । **ನಃ**—ನಮಗೆ । **ದದ್ಧಿ**—ಒದಗಿಸಿಕೊಡು.

|| ಭಾವಾರ್ಥ ||

ಶಕ್ತಿಪುತ್ರನಾದ ಎಲೈ ಇಂದ್ರನೇ, ಸಕಲ ಭೂತಗಳನ್ನೂ ಸೂರ್ಯನು ತನ್ನ ಕಿರಣಗಳಿಂದ ಆಕ್ರಮಿಸುವಂತೆ ಯಾವ ಪುತ್ರರೂಪವಾದ ಧನವು ತನ್ನ ಬಲದಿಂದ ಸಂಗ್ರಾಮದಲ್ಲಿ ಶತ್ರುಜನರನ್ನೆಲ್ಲಾ ಆಕ್ರಮಿಸುವುದೋ ಅಂತಹುದೂ ಸಹಸ್ರರೂಪವಾದ ಐಶ್ವರ್ಯವನ್ನು ಭರಿಸತಕ್ಕದ್ದೂ, ಸಕಲ ಸಸ್ಯಾದಿಗಳಿಂದಲೂ ಭರಿತವಾದ ಪೃಥ್ವಿಯನ್ನು ಅನುಭವಿಸತಕ್ಕದ್ದೂ, ಶತ್ರುನಾಶಕವಾದುದೂ ಆದ ಪುತ್ರಸಂಪತ್ತನ್ನು ನಮಗೆ ಒದಗಿಸಿಕೊಡು.

## English Translation.

Indra, Son of strength, grant us (a son), the possessor of thousands, the owner of cultivated lands, the subduer of foes, the riches that may overcome men in battles by strength, as the radiant (sun) overspreads the earth by his rays.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಸರಿಯಾದ ಕರ್ತೃಪದವು ಇರುವುದಿಲ್ಲ ರಯಿಃ ಎಂಬ ಶಬ್ದಕ್ಕೆ ಧನವೆಂದರ್ಥವಿದ್ದರೂ ಭಾಷ್ಯಕಾರರು ಪುತ್ರರೂಪವಾದ ಧನವೆಂದು ಅರ್ಥಮಾಡಿ ಅದನ್ನೇ ಕರ್ತೃಪದದ ಸ್ಥಾನದಲ್ಲಿ ಅಧ್ಯಾಹಾರಮಾಡಿರುವರು. ಪುತ್ರನೆಂದು ವಿವರಿಸುವ ಗುಣಗಳು ಯಾವುದನ್ನೂ ಇಲ್ಲಿ ಹೇಳಿಲ್ಲವಾದರೂ ವೃತ್ರತುರಂ—ಶತ್ರುನಾಶಕವಾದುದು ಎಂಬ ವಿಶೇಷಣವು ಭಾಷ್ಯಕಾರರ ವಿವರಣೆಯನ್ನು ಸ್ವಲ್ಪಮಟ್ಟಿಗೆ ಸಮರ್ಥಿಸುವುದು.

॥ ಸಂಹಿತಾಪಾಠಃ ॥

ದಿವೋ ನ ತುಭ್ಯಮನ್ವಿಂದ್ರ ಸತ್ರಾಸುರ್ಯಂ ದೇವೇಭಿರ್ಧಾಯಿ ವಿಶ್ವಂ ।
...ಂ ಯದ್ವೃತ್ರಮಪೋ ವವ್ರಿವಾಂಸಂ ಹನ್ನೃಜೀಷಿನ್ವಿಷ್ಣುನಾ ಸಚಾನಃ ॥

॥ ಪದಪಾಠಃ ॥

ದಿವ... ...ಭ್ಯಂ । ಅನು । ಇಂದ್ರ । ಸತ್ರಾ । ಅಸುರ್ಯಂ । ದೇವೇಭಿಃ । ಧಾಯಿ । ವಿಶ್ವಂ ।
ಅಹಿ... ವೃತ್ರಂ । ಅಪಃ । ವವ್ರಿವಾಂಸಂ । ಹನ್ । ಋಜೀಷಿನ್ । ವಿಷ್ಣುನಾ । ಸಚಾ... ॥

॥ ಸಾಯಣಭಾಷ್ಯಂ ॥

...ರ್ನ ಸೂರ್ಯಾಯೇವ ಹೇ ಇಂದ್ರ ತುಭ್ಯಂ ಸತ್ರಾ ಸತ್ಯಮೇವ ವಿಶ್ವಂ ವ್ಯಾ... ಸು-ರ್ಯ... ...ಂ ಬಲಂ ದೇವೇಭಿರ್ದೇವೈಃ ಸ್ತೋತೃಭಿರನು ಧಾಯಿ । ವ್ಯಧಾಯಿ । ಅಕಾರಿ । ಸ್... ...ತೃಭಿಃ ಸ್ತೂ... ...ನಾ ದೇವತಾ ಬಲವತೀ ಭವತೀತ್ಯರ್ಥಃ । ಹೇ ಋಜೀಷಿನ್ ವಿಗತರಸಸೋಮ... ಪ್ರ ವಿಷ್ಣು... ...ನಾ ಸಂಗಚ್ಛಮಾನಸ್ತ್ವಂ ॥ ಷಚ ಸಮವಾಯೆ ಇತಿ ಧಾತೋ ರೂಪಂ ॥ ಯದ... ...ಸುರ್ಯ... ...ದಕಾನಿ ವವ್ರಿವಾಂಸಂ ಪರಿವೃಣ್ವಂತಮಹಿಮಾಗತ್ಯ ಹಂತಾರಂ ವೃತ್ರಮಸುರ... ...ನ್ ಅವ... ...ಂ ವ್ಯಧಾಯೀತಿ ಪೂರ್ವೇಣ ಸಂಬಂಧಃ ॥

॥ ಪ್ರತಿಪದಾರ್ಥ ॥

**ಋಜೀಷಿನ್ ಇಂದ್ರ**–ಋಜೀಷಸಂಜ್ಞಕವಾದ ಸೋಮವನ್ನು ಹೊಂದಿರುವ ಎಲೈ ಇಂದ್ರನೇ | **ವಿಷ್ಣುನಾ**–ವಿಷ್ಣುವಿನೊಂದಿಗೆ | **ಸಚಾನಃ**—ಕೂಡಿಕೊಂಡು | **ಯೆತ್**—ಯಾವ ಬಲದಿಂದ | **ಅಪಃ**—ಉದಕಗಳನ್ನು **ವವ್ರಿವಾಂಸಂ**—ತಡೆಯತಕ್ಕ | **ಅಹಿಂ**—ಶತ್ರುವಾದ | **ವೃತ್ರಂ**—ವೃತ್ರನನ್ನು | **ಹನ್**—ಕೊಂದೆಯೋ ಅಂತಹ | **ವಿಶ್ವಂ**—ಸರ್ವವ್ಯಾಪಕವಾದ | **ಅಸುರ್ಯಂ**—ಬಲವು | **ದಿವೋ ನ**—ಸೂರ್ಯನಲ್ಲಿ ಸಕಲಶಕ್ತಿಗಳೂ ಅರ್ಪಿತವಾಗಿರುವಂತೆ | **ದೇವೇಭಿಃ**—ಸಕಲ ದೇವತೆಗಳಿಂದಲೂ | **ಸತ್ರಾ**—ಸತ್ಯವಾಗಿಯೂ | **ತುಭ್ಯಂ**—ನಿನಗೆ | **ಅನು ಧಾಯಿ**—ಅರ್ಪಿತವಾಗಿದೆ.

॥ ಭಾವಾರ್ಥ ॥

ಋಜೀಷಸಂಜ್ಞಕವಾದ ಸೋಮವನ್ನು ಪಾನಮಾಡುವ ಎಲೈ ಇಂದ್ರನೇ, ವಿಷ್ಣುವಿನೊಂದಿಗೆ ಕೂಡಿಕೊಂಡು ಯಾವ ಬಲದಿಂದ ನೀನು ಉದಕಗಳನ್ನು ತಡೆಯತಕ್ಕ ವೃತ್ರನನ್ನು ಕೊಂದೆಯೋ ಅಂತಹ ಸೂರ್ಯನಲ್ಲಿ ಸಕಲ ಶಕ್ತಿಗಳೂ ಅರ್ಪಿತವಾಗಿರುವಂತೆ ಸಕಲ ದೇವತೆಗಳಿಂದಲೂ ಸತ್ಯವಾಗಿಯೂ ನಿನಗೆ ಅರ್ಪಿತವಾಗಿದೆ.

## English Translation.

To you, Indra, as to the sun, all strength has verily been given by the gods; so that, drinker of the stale Soma, associated with Vishnu, you might slay the hostile Ahi obstructing waters.

॥ ವಿಶೇಷವಿಷಯಗಳು ॥

**ಋಜೀಷಿನ್**—ಈ ಶಬ್ದದ ಅರ್ಥವನ್ನು ನಾವು ಹಿಂದೆಯೇ ವಿವರಿಸಿದ್ದೇವೆ. ಸೋಮಲತೆಗಳನ್ನು ಕಲ್ಲುಗಳಿಂದ ಜಜ್ಜಿ ರಸವನ್ನು ಹಿಂಡಿದಮೇಲೆ ಉಳಿಯುವ ಸಿಪ್ಪೆಗಳು. ಇದಕ್ಕೆ ಋಜೀಷವೆಂದು ಹೆಸರು. ಇವುಗಳಲ್ಲಿರುವ ಅಲ್ಪಸ್ವಲ್ಪ ರಸವನ್ನು ಇನ್ನೊಂದಾವರ್ತಿ ಹಿಂಡಿ ತೆಗೆದು ಅದರ ಜೊತೆಗೆ ಯವಧಾನ್ಯದ ಹಿಟ್ಟನ್ನು ಬೆರಸಿ ತೃತೀಯ ಸವನಕಾಲದಲ್ಲಿ ಇಂದ್ರನಿಗೆ ಅರ್ಪಿಸುವರು. ಆದುದರಿಂದ ಎಂದರೆ ಋಜೀಷದಲ್ಲಿರುವ ಸೋಮರಸವನ್ನು ಪಾನಮಾಡುವವನಾದ್ದರಿಂದ ಇಂದ್ರನನ್ನು ಋಜೀಷಿನ್ ಎಂದು ಕರೆಯುವುದು ರೂಢಿಯಾಗಿದೆ.

॥ ಸಂಹಿತಾಪಾಠಃ ॥

ತೂರ್ವನ್ನೋಜೀಯಾನ್ತವಸಸ್ತವೀಯಾನ್ಕೃತಬ್ರಹ್ಮೇಂದ್ರೋ ವೃದ್ಧಮಹಾಃ ।
ರಾಜಾಭವನ್ಮಧುನಃ ಸೋಮ್ಯಸ್ಯ ವಿಶ್ವಾಸಾಂ ಯತ್ಪುರಾಂ ದರ್ತ್ನುಮಾವತ್॥

॥ ಪದಪಾಠಃ ॥

**ತೂರ್ವನ್ । ಓಜೀಯಾನ್ । ತವಸಃ । ತವೀಯಾನ್ । ಕೃತಽಬ್ರಹ್ಮಾ । ಇಂದ್ರಃ । ವೃದ್ಧಽಮಹಾಃ । ರಾಜಾ । ಅಭವತ್ । ಮಧುನಃ । ಸೋಮ್ಯಸ್ಯ । ವಿಶ್ವಾಸಾಂ । ಯತ್ । ಪುರಾಂ । ದರ್ತ್ನುಂ । ಆವತ್ ॥ ೩ ॥**

॥ ಸಾಯಣಭಾಷ್ಯಂ ॥

ಯದ್ಯದೇಂದ್ರೋ ವಿಶ್ವಾಸಾಂ ಸರ್ವಾಸಾಂ ಪುರಾಂ ಪುರೀಣಾಂ ದರ್ತ್ನುಂ ದಾರಕಂ ವಜ್ರಮಾವತ್ ಪ್ರಾಪತ್ ತದಾ ಸೋಮ್ಯಸ್ಯ ಸೋಮಮಯಸ್ಯ ಮಧುನೋ ಮಧುರರಸಸ್ಯ ರಾಜಾಭವತ್ । ಸ್ವಾಮ್ಯಾಸೀತ್ । ಕೀದೃಶಃ । ತೂರ್ವನ್ ಹಿಂಸಕಾನ್ ಹಿಂಸನ್ನೋಜೀಯಾನತಿಶಯೇನೌಜಸ್ವೀ ತವಸೋ ಬಲವತಸ್ತವೀಯಾನ್ಬಲವತ್ತರಃ ಕೃತಬ್ರಹ್ಮಾ । ಕೃತಂ ಬ್ರಹ್ಮ ಸ್ತೋತ್ರಂ ಯಸ್ಮೈ ಸ್ತೋತೃಭಿಃ ಸಃ । ಅಥವಾ ಕೃತಂ ದತ್ತಂ ಬ್ರಹ್ಮಾನ್ನಂ ಯೇನ ಸ್ತೋತೃಭ್ಯಃ ಸಃ । ವೃದ್ಧಮಹಾ ವೃದ್ಧತೇಜಾಃ । ಏವಂಭೂತ ಇಂದ್ರೋ ರಾಜಾಭವದಿತಿ ॥

॥ ಪ್ರತಿಪದಾರ್ಥ ॥

**ತೂರ್ವನ್**—ಶತ್ರುಹಿಂಸಕನೂ । **ಓಜೀಯಾನ್**—ಓಜಸ್ವಿಯೂ । **ತವಸಃ**—ಶಕ್ತಿವಂತರಿಗಿಂತಲೂ । **ತವೀಯಾನ್**—ಅಧಿಕವಾದ ಶಕ್ತಿಯುಳ್ಳವನೂ । **ಕೃತಬ್ರಹ್ಮಾ**—ತನ್ನನ್ನುದ್ದೇಶಿಸಿ ನಿರ್ಮಿತವಾದ ಸ್ತುತಿಯುಳ್ಳವನೂ । **ವೃದ್ಧಮಹಾಃ**—ಪ್ರವೃದ್ಧವಾದ ತೇಜಸ್ಸುಳ್ಳವನೂ ಆದ । **ಇಂದ್ರಃ**—ಇಂದ್ರನು । **ಯತ್**—ಯಾವಾಗ । **ವಿಶ್ವಾಸಾಂ**—ಸಮಸ್ತವಾದ । **ಪುರಾಂ**—ಶತ್ರುಪಟ್ಟಣಗಳ । **ದರ್ತ್ನುಂ**—ದಾರಕವಾದ ವಜ್ರಾಯುಧವನ್ನು । **ಆವತ್**—ಹಿಡಿದನೋ (ಆಗಲೇ) । **ಮಧುನಃ**—ಮಧುರವಾದ । **ಸೋಮ್ಯಸ್ಯ**—ಸೋಮರಸಕ್ಕೆ । **ರಾಜಾ**—ಸ್ವಾಮಿಯಾಗಿ । **ಅಭವತ್**—ಆದನು.

॥ ಭಾವಾರ್ಥ ॥

ಶತ್ರುಹಿಂಸಕನೂ, ಓಜಸ್ವಿಯೂ, ಶಕ್ತರಲ್ಲೆಲ್ಲಾ ಅಧಿಕವಾದ ಶಕ್ತಿಯುಳ್ಳವನೂ, ತನ್ನನ್ನೇ ಉದ್ದೇಶಿಸಿ ನಿರ್ಮಿತವಾದ ಸ್ತೋತ್ರವುಳ್ಳವನೂ ಪ್ರವೃದ್ಧವಾದ ತೇಜಸ್ಸುಳ್ಳವನೂ ಆದ ಇಂದ್ರನು ಯಾವಾಗ ಸಮಸ್ತವಾದ ಶತ್ರುಪಟ್ಟಣಗಳನ್ನೆಲ್ಲಾ ನಾಶಪಡಿಸತಕ್ಕ ವಜ್ರಾಯುಧವನ್ನು ಕೈಯಲ್ಲಿ ಹಿಡಿದನೋ ಆಗಲೇ, ಮಧುರವಾದ ಸೋಮರಸಕ್ಕೆ ಸ್ವಾಮಿಯಾದನು.

## English Translation.

When Indra, the destroyer, the most mighty, the strongest of the strong, the giver of food, the possessor of vast splendour, received (the thunderbolt), the shatterer of all the cities (of the Asuras), he became the lord of the sweet Soma beverage.

॥ ಸಂಹಿತಾಪಾಠಃ ॥

ಶತೈರಪದ್ರನ್ಪಣಯ ಇಂದ್ರಾತ್ರ ದಶೋಣಯೇ ಕವಯೇಽರ್ಕಸಾತೌ ।
ವಧೈಃ ಶುಷ್ಣಸ್ಯಾಶುಷಸ್ಯ ಮಾಯಾಃ ಪಿತ್ವೋ ನಾರಿರೇಚೀತ್ಕಿಂ ಚನ ಪ್ರ ॥೪॥

॥ ಪದಪಾಠಃ ॥

ಶತೈಃ । ಅಪದ್ರನ್ । ಪಣಯಃ । ಇಂದ್ರ । ಅತ್ರ । ದಶಽಓಣಯೇ । ಕವಯೇ । ಅರ್ಕಽಸಾತೌ ।
ವಧೈಃ । ಶುಷ್ಣಸ್ಯ । ಅಶುಷಸ್ಯ । ಮಾಯಾಃ । ಪಿತ್ವಃ । ನ । ಅರಿರೇಚೀತ್ । ಕಿಂ । ಚನ । ಪ್ರ ॥ ೪ ॥

॥ ಸಾಯಣಭಾಷ್ಯಂ ॥

ಅತ್ರಾಸ್ಮಿನ್ನರ್ಕಸಾತೌ । ಅರ್ಕೋಽನ್ನಂ ಸಂಭಜ್ಯತೇಽಸ್ಮಿನ್ನಿತ್ಯರ್ಕಸಾತಿರ್ಯುದ್ಧಂ । ತಸ್ಮಿನ್ದಶೋಣಯೇ ಬಹುಹವಿಷ್ಕಾಯ ಕವಯೇ ಮೇಧಾವಿನಃ ॥ ಷಂಚಮ್ಯರ್ಥೇ ಚತುರ್ಥೀ ॥ ಹೇ ಇಂದ್ರ ತತ್ಸಹಾಯಾತ್ಕುತ್ಸಾದ್ಬಿಭ್ಯತಃ ಪಣಯ ಏತನ್ನಾಮಕಾಸುರಾಃ ಶತೈಃ ಶತಸಂಖ್ಯಾಕೈರ್ಬಲೈಃ ಸಾರ್ಧಮಪದ್ರನ್ ಅಪಾದ್ರವನ್ । ಅಪಲಾಯಂತ । ಅಪಿ ಚೇಂದ್ರೋಽಶುಷಸ್ಯಾಶುಷ್ಕಸ್ಯ । ಸಂಪೂರ್ಣಬಲಸ್ಯೇತ್ಯರ್ಥಃ । ಶುಷ್ಣಸ್ಯೈತನ್ನಾಮಕಾಸುರಸ್ಯ ಕುತ್ಸಸ್ಯ ಶತ್ರೋರ್ಮಾಯಾಃ ಕಪಟಾನ್ವಧೈರ್ಹನನಸಾಧನೈರಾಯುಧೈರ್ನ ಪ್ರಾರಿರೇಚೀತ್ । ಪ್ರರಿಕ್ತಾನತಿರಿಕ್ತಾನ್ನಾಕರೋತ್ । ಪಿತ್ವೋಽನ್ನಸ್ಯ । ಪಿತುರಿತ್ಯನ್ನನಾಮೈತತ್। ಕಿಂಚನ ಕಿಂಚಿದಪಿ ನ ಪ್ರಾರಿರೇಚೀತ್ । ತದೀಯಮನ್ನಂ ಸರ್ವಮಪ್ಯಪಾಹಾರಯತ್ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ | **ಅತ್ರ ಅರ್ಕಸಾತೌ**—ಅನ್ನಾರ್ಥವಾಗಿ ಮಾಡುವ ಈ ಯುದ್ಧದಲ್ಲಿ | **ದಶೋಣಯೇ**—ಪ್ರಭೂತವಾದ ಹವಿಸ್ಸುಳ್ಳವನೂ | **ಕವಯೇ**—ಮೇಧಾವಿಯೂ ಆದ ಕುತ್ಸನಿಂದ | **ಪಣಯಃ**–ಪಣಿಗಳು (ನಿನ್ನ ಬಲಕ್ಕೆ ಬೆದರಿ) | **ಶತೈಃ**—ಶತಸಂಖ್ಯಾಕವಾದ ತಮ್ಮ ಸೈನ್ಯಗಳೊಡನೆ | **ಅಪದ್ರನ್**—ಓಡಿಹೋದರು | (**ಇಂದ್ರಃ**—ಇಂದ್ರನು) | **ಅಶುಷಸ್ಯ**—ಪೂರ್ಣವಾದ ಬಲವುಳ್ಳ | **ಶುಷ್ಣಸ್ಯ**—ಶುಷ್ಣನೆಂಬ ಅಸುರನ | **ಮಾಯಾಃ**—ವಂಚನೆಗಳನ್ನು | **ವಧೈಃ**—ವಧಸಾಧನವಾದ ತನ್ನ ಆಯುಧಗಳಿಂದ ತಡೆದು | **ನ ಪ್ರ ಅರಿರೇಚೀತ್**—ತನ್ನ ಶಕ್ತಿಯನ್ನು ಮೀರಲವಕಾಶಕೊಡದೆ ನಾಶಪಡಿಸಿದನು | **ಪಿತ್ವಃ**—ಅವನ ಅನ್ನಕ್ಕೆ | **ಕಿಂಚನ ಪ್ರ**—ಕೊಂಚವೂ ಉಳಿವಿಲ್ಲದೆ ಎಲ್ಲವನ್ನೂ ಅಪಹರಿಸಿದನು.

॥ ಭಾವಾರ್ಥ ॥

ಎಲೈ ಇಂದ್ರನೇ, ಅನ್ನಾರ್ಥವಾಗಿ ನಡೆಯುವ ಈ ಯುದ್ಧದಲ್ಲಿ ಪ್ರಭೂತವಾದ ಹವಿಸ್ಸುಳ್ಳವನೂ, ಮೇಧಾವಿಯೂ ಆದ ಕುತ್ಸನಿಂದ ಪಣಿಗಳು ಬೆದರಿ ಓಡಿಹೋದರು. ಅವರ ಪಲಾಯನಕ್ಕೆ, ಕುತ್ಸನನ್ನು ರಕ್ಷಿಸುವ ನಿನ್ನ ಬಲವೇ

ಕಾರಣವು. ಇಂದ್ರನು ಪೂರ್ಣವಾದ ಬಲವುಳ್ಳ ಶುಷ್ಣನೆಂಬ ಅಸುರನ ವಂಚನೆಗಳನ್ನು ವಧಸಾಧನವಾದ ತನ್ನ ಆಯುಧಗಳಿಂದ ತಡೆದು ತನ್ನ ಶಕ್ತಿಯನ್ನು ಅವನು ಮೀರದಿರುವಂತೆ ಅವನನ್ನು ನಾಶಪಡಿಸಿದನು. ಅವನ ಅನ್ನಕ್ಕೆ ಕೊಂಚವೂ ಉಳಿವಿಲ್ಲದೇ ಎಲ್ಲವನ್ನೂ ಅಪಹರಿಸಿದನು.

## English Translation.

The Panis, Indra, fled, with hundreds (of Asuras), from the sage, your worshipper (and ally) in battle: neither did he, (Indra), suffer the decptions of the powerful Sushna to prevail over his weapons, nor did he (leave him) any of his sustenance.

|| ವಿಶೇಷವಿಷಯಗಳು ||

ಈ ಋಕ್ಕಿನಲ್ಲಿಯೂ ಮುಂದಿನ ಋಕ್ಕಿನಲ್ಲಿಯೂ ಕುತ್ಸನಿಗೆ ಸಹಾಯಮಾಡುವುದಕ್ಕಾಗಿ ಶುಷ್ಣನೆಂಬ ಅಸುರನನ್ನು ಇಂದ್ರನು ಕೊಂದು ಅವನ ಸೈನಿಕರಾದ ಪಣಿಗಳೆಂಬ ಅಸುರರನ್ನು ಯುದ್ಧದಲ್ಲಿ ಚದುರಿಸಿ ಓಡಿಸಿದ ವಿಷಯವು ವರ್ಣಿತವಾಗಿರುವುದು. ಕುತ್ಸನಿಗೆ ಸಹಾಯಮಾಡುವುದಕ್ಕಾಗಿಯೇ ಇಂದ್ರನು ಶುಷ್ಣನನ್ನು ಸಂಹರಿಸಿದ ವಿಷಯವು ಅನೇಕ ಋಕ್ಕುಗಳಲ್ಲಿ ಹೇಳಿದೆ—

**ತ್ವಂ ಶುಷ್ಣಂ ವೃಜನೇ ಪೃಕ್ಷ ಆಣೌ ಯೂನೇ ಕುತ್ಸಾಯ ದ್ಯುಮತೇ ಸಚಾಹನ್ ।**
(ಋ. ಸಂ ೧-೬೩-೩)

**ಕುತ್ಸಾಯ ಯತ್ರ ಪುರುಹೂತ ವನ್ವಞ್ಛುಷ್ಣಮನಂತೈಃ ಪರಿಯಾಸಿ ವಧೈಃ ।**
(ಋ. ಸಂ. ೧-೧೭೪-೯)

ಎಂಬ ಋಕ್ಕುಗಳಲ್ಲಿಯೂ ಹೀಗೆಯೇ ಋ. ಸಂ. ೧-೧೭೪-೫; ೧-೧೭೫-೪ ಇತ್ಯಾದಿ ಋಕ್ಕುಗಳಲ್ಲಿಯೂ ಸಹ ಇಂದ್ರನು ಕುತ್ಸನಿಗೆ ಸಹಾಯಮಾಡುವುದಕ್ಕಾಗಿ ಶುಷ್ಣನನ್ನು ಕೊಂದನು ಎಂದು ಹೇಳಿದೆ. ಮತ್ತು—

**ಅಹಂ ಪಿತೇವ ವೇತಸೂँರಭಿಷ್ಟಯೇ ತುಗ್ರಂ ಕುತ್ಸಾಯ ಸ್ಮದಿಭಂ ಚ ರಂಧಯಂ ।**
(ಋ. ಸಂ. ೧೦-೪೯-೪)

ಕುತ್ಸನಿಗಾಗಿ ನಾನು ವೇತಸು, ತುಗ್ರ, ಸ್ಮದಿಭ ಎಂಬುವರನ್ನು ಸೋಲಿಸಿದೆನು ಎಂದು ಇಂದ್ರನೇ ಹೇಳಿಕೊಂಡಿದಾನೆ.

॥ ಸಂಹಿತಾಪಾಠಃ ॥

ಮಹೋ ದ್ರುಹೋ ಅಪ ವಿಶ್ವಾಯು ಧಾಯಿ ವಜ್ರಸ್ಯ ಯತ್ಪತನೇ ಪಾದಿ ಶುಷ್ಣಃ ।
ಉರು ಷ ಸರಥಂ ಸಾರಥಯೇ ಕರಿಂದ್ರಃ ಕುತ್ಸಾಯ ಸೂರ್ಯಸ್ಯ ಸಾತೌ ॥

॥ ಪದಪಾಠಃ ॥

ಮಹಃ । ದ್ರುಹಃ । ಅಪ । ವಿಶ್ವಽಆಯು । ಧಾಯಿ । ವಜ್ರಸ್ಯ । ಯತ್ । ಪತನೇ । ಪಾದಿ । ಶುಷ್ಣಃ ।
ಉರು । ಸಃ । ಸಽರಥಂ । ಸಾರಥಯೇ । ಕಃ । ಇಂದ್ರಃ । ಕುತ್ಸಾಯ । ಸೂರ್ಯಸ್ಯ । ಸಾತೌ ॥ ೫ ॥

॥ ಸಾಯಣಭಾಷ್ಯಂ ॥

ಯದ್ಯದಾ ಸ ಶುಷ್ಣೋಽಸುರೋ ವಜ್ರಸ್ಯ ಪತನೇ ಪಾತೇ ಪಾದಿ ಅಗಚ್ಛತ್ । ಅಮ್ರಿಯತೇತ್ಯರ್ಥಃ । ತದಾ ಮಹೋ ಮಹತೋ ದ್ರುಹೋ ದ್ರೋಗ್ಧುಃ ಶುಷ್ಣಸ್ಯ ಸಂಬಂಧಿ ವಿಶ್ವಾಯು ಸರ್ವಗತಂ। ಬಲಮಿತಿ ಶೇಷಃ । ಅಪ ಧಾಯಿ । ಅಪಹಿತಮಕಾರಿ । ತಿರಸ್ಕೃತಮಿತ್ಯರ್ಥಃ । ಸ ಇಂದ್ರಃ ಸಾರಥಯೇ ಸಾರಥಿಭೂತಾಯ ಕುತ್ಸಾಯ ಸರಥಂ ಸಮಾನರಥಂ ಸೂರ್ಯಸ್ಯ ಸಾತೌ ಭಜನೇ ನಿಮಿತ್ತಭೂತ ಉರು ವಿಸ್ತೀರ್ಣಂ ಯಥಾ ಭವತಿ ತಥಾ ಕಃ । ಅಕರೋತ್ । ತಥಾ ಚೋಕ್ತಂ । ಕುತ್ಸಾಯೇಂದ್ರೋಽಸುರಂ ಶುಷ್ಣಂ ಜಿಘಾಂಸುಃ ಕುತ್ಸಮಾತ್ಮನಃ ಸಾರಥಿಂ ಕಲ್ಪಯಿತ್ವಾ। ಅಸ್ಯ ಶತ್ರುಂ ಶುಷ್ಣಮಹಂಸ್ತತಶ್ಚ ಕುತ್ಸಸ್ಯ ರಕ್ಷಾಂ ಬಹುಲಾಂ ಚಕಾರೇತ್ಯನಯೋಚ್ಯತ ಇತಿ ॥

॥ ಪ್ರತಿಪದಾರ್ಥ ॥

**ಯತ್**—ಯಾವಾಗ । **ಶುಷ್ಣಃ**—ಶುಷ್ಣನೆಂಬ ಅಸುರನು । **ವಜ್ರಸ್ಯ**—ವಜ್ರಾಯುಧದ । **ಪತನೇ**—ಪ್ರಹಾರದ ಫಲವಾಗಿ । **ಪಾದಿ**—ಮೃತಿಯನ್ನು ಹೊಂದಿದನೋ (ಆಗ) । **ಮಹಃ**—ಮಹಚ್ಛಕ್ತಿಯುಳ್ಳವನೂ । **ದ್ರುಹಃ**—ಮೋಸಗಾರನೂ ಆದ ಅವನ । **ವಿಶ್ವಾಯು**—ಸರ್ವಗಾಮಿಯಾದ ಶಕ್ತಿಯು । **ಅಪ ಧಾಯಿ**—ಮರೆಯಾಯಿತು । **ಸಃ ಇಂದ್ರಃ**—ಅದೇ ಇಂದ್ರನು । **ಸಾರಥಯೇ**—ತನ್ನ ಸಾರಥಿಯಾದ । **ಕುತ್ಸಾಯ**—ಕುತ್ಸನಿಗಾಗಿ । **ಸರಥಂ**—ಇಬ್ಬರಿಗೂ ಸಮಾನವಾದ ಒಂದೇ ರಥವನ್ನು । **ಸೂರ್ಯಸ್ಯ ಸಾತೌ**—ಸೂರ್ಯನ ಪೂಜಾನಿಮಿತ್ತವಾಗಿ । **ಉರು**—ಅತ್ಯಂತ ವಿಸ್ತೃತವಾದುದನ್ನಾಗಿ । **ಕಃ**—ಮಾಡಿದನು.

॥ ಭಾವಾರ್ಥ ॥

ಯಾವಾಗ ಶುಷ್ಣನೆಂಬ ಅಸುರನು ವಜ್ರಾಯುಧದ ಪ್ರಹಾರದ ಫಲವಾಗಿ ಮೃತಿಯನ್ನು ಹೊಂದಿದನೋ ಆಗ ಮಹಚ್ಛಕ್ತಿಯುಳ್ಳವನೂ, ಮೋಸಗಾರನೂ ಆದ ಅವನ ಸರ್ವಗಾಮಿಯಾದ ಶಕ್ತಿಯು ಮರೆಯಾಯಿತು. ಅದೇ ಇಂದ್ರನು ತನ್ನ ಸಾರಥಿಯಾದ ಕುತ್ಸನಿಗಾಗಿ ಇಬ್ಬರಿಗೂ ಸಮಾನವಾದ ಒಂದೇ ರಥವನ್ನು ಸೂರ್ಯನ ಪೂಜಾನಿಮಿತ್ತವಾಗಿ ಅತ್ಯಂತ ವಿಸ್ತೃತವಾದುದನ್ನಾಗಿ ಮಾಡಿದನು.

When Sushna passed away upon the falling of the thunderbolt, then the universal strength of the great oppressor was annihilated ; and Indra enlarged their common car for (the use of) his charioteer Kutsa, for (the sake of) the worship of the sun.

॥ ಸಂಹಿತಾಪಾಠಃ ॥

ಪ್ರ ಶ್ಯೇನೋ ನ ಮದಿರಮಂಶುಮಸ್ಮೈ ಶಿರೋ ದಾಸಸ್ಯ ನಮುಚೇರ್ಮಥಾಯನ್ ।
ಪ್ರಾವನ್ನಮೀಂ ಸಾಪ್ಯಂ ಸಸಂತಂ ಪೃಣಗ್ರಾಯಾ ಸಮಿಷಾ ಸಂ ಸ್ವಸ್ತಿ ॥ ೬ ॥

॥ ಪದಪಾಠಃ ॥

ಪ್ರ । ಶ್ಯೇನಃ । ನ । ಮದಿರಂ । ಅಂಶುಂ । ಅಸ್ಮೈ । ಶಿರಃ । ದಾಸಸ್ಯ । ನಮುಚೇಃ । ಮಥಾಯನ್ ।
ಪ್ರ । ಆವತ್ । ನಮೀಂ । ಸಾಪ್ಯಂ । ಸಸಂತಂ । ಪೃಣಕ್ । ರಾಯಾ । ಸಂ । ಇಷಾ । ಸಂ । ಸ್ವಸ್ತಿ ॥ ೬ ॥

॥ ಸಾಯಣಭಾಷ್ಯಂ ॥

ಶ್ಯೇನಃ ಸುಪರ್ಣಶ್ಚ । ನೇತ್ಯಯಂ ಶಬ್ದಃ ಸಮುಚ್ಚಯೇ ವರ್ತತೇ । ಅಸ್ಮಾ ಇಂದ್ರಾಯ ಮದಿರಂ ಮದಕರಮಂಶುಂ ಸೋಮಂ । ಪ್ರೇತಿ ಆ ಇತ್ಯಸ್ಯಾರ್ಥೇ ವರ್ತತೇ । ಆಹರತ್ ।; ಉಪಸರ್ಗದರ್ಶನಾಚ್ಚಾಖ್ಯಾತಮಧ್ಯಾಹ್ರಿಯತೇ । ಕಿಂಚಾಯಮಿಂದ್ರೋಽಪಿ ದಾಸಸ್ಯ ಪ್ರಾಣಿನಾಮುಪಕ್ಷಪಯಿತುರ್ನಮುಚೇರೇತನ್ನಾಮ್ನೋಽಸುರಸ್ಯ ಶಿರಃ ಶೀರ್ಷಂ ಮಥಾಯನ್ ಮಂಥನಂ ಕುರ್ವನ್ ಸಾಪ್ಯಂ ಸಪಸ್ಯ ಪುತ್ರಂ ಸಸಂತಂ ಸ್ವಪಂತಂ ನಮೀಮೇತತ್ಸಂಜ್ಞಕಮೃಷಿಂ ಪ್ರಾವತ್ । ಪ್ರಾರಕ್ಷತ್ । ಸ್ವಸ್ತ್ಯವಿನಾಶೇನ ರಾಯಾ ಪಶ್ವಾದಿಧನೇನೇಷಾನ್ನೇನ ಚ ತಮೃಷಿಂ ಸಂ ಪೃಣಕ್ । ಸಮಯೋಜಯತ್ ॥

॥ ಪ್ರತಿಪದಾರ್ಥ ॥

**ಶ್ಯೇನಃ** ಶ್ಯೇನಪಕ್ಷಿಯು । **ಅಸ್ಮೈ**—ಈ ಇಂದ್ರನಿಗೆ । **ಮದಿರಂ**—ಮದಕಾರಕವಾದ । **ಅಂಶುಂ**—ಸೋಮವನ್ನು । **ಪ್ರ**—ತಂದುಕೊಟ್ಟಿತು । **ದಾಸಸ್ಯ**—ಹಿಂಸಕನಾದ । **ನಮುಚೇಃ**—ನಮುಚಿಯ । **ಶಿರಃ**—ಶಿರಸ್ಸನ್ನು । **ಮಥಾಯನ್**—ಕತ್ತರಿಸುತ್ತಾ । **ಸಾಪ್ಯಂ**—ಸಪನಪುತ್ರನೂ । **ಸಸಂತಂ**—ನಿದ್ರಿಸುತ್ತಿದ್ದವನೂ ಆದ । **ನಮೀಂ**—ನಮಿಯೆಂಬ ಋಷಿಯನ್ನು । **ಪ್ರಾವತ್**—ರಕ್ಷಿಸಿದನು । **ಸ್ವಸ್ತಿ**—ನಾಶರಹಿತವಾದ । **ರಾಯಾ**—ಧನದಿಂದಲೂ । **ಇಷಾ**—ಅನ್ನದಿಂದಲೂ । **ಸಂ ಪೃಣಕ್**—ಆ ಋಷಿಯನ್ನು ತುಂಬಿಸಿದನು.

॥ ಭಾವಾರ್ಥ ॥

ಸುಪರ್ಣಪಕ್ಷಿಯು ಇಂದ್ರನಿಗೆ ಮದಕಾರಕವಾದ ಸೋಮವನ್ನು ತಂದುಕೊಟ್ಟಿತು. ಹಿಂಸಕನಾದ ನಮುಚಿಯ ಶಿರಸ್ಸನ್ನು ಕತ್ತರಿಸುತ್ತಾ ಸಪನಪುತ್ರನೂ ನಿದ್ರಿಸುತ್ತಿದ್ದವನೂ ಆದ ನಮಿಯೆಂಬ ಋಷಿಯನ್ನು ರಕ್ಷಿಸಿದನು. ನಾಶರಹಿತವಾದ ಧನದಿಂದಲೂ ಅನ್ನದಿಂದಲೂ ಆ ಋಷಿಯನ್ನು ಸಂಪದ್ಯುಕ್ತನನ್ನಾಗಿ ಮಾಡಿದನು.

## English Translation.

And the hawk bore to Indra the exhilarating Soma, when bruising the head of the oppressor Namachi, and protecting the slumbering Nami, the son of Saya, he provided,' for the well-being (of the sage), riches and food.

|| ವಿಶೇಷವಿಷಯಗಳು ||

ಸುಪರ್ಣ ಅಥವಾ ಶ್ಯೇನಪಕ್ಷಿಯು ಸ್ವರ್ಗದಲ್ಲಿದ್ದ ಸೋಮವನ್ನು ತಂದ ವಿಚಾರವನ್ನೂ, ಇಂದ್ರನು ನಮುಚಿಯೆಂಬ ರಾಕ್ಷಸನನ್ನು ಸಂಹಾರಮಾಡಿದ ವಿಷಯವನ್ನೂ ನಾವು ಇದೇ ಭಾಗದಲ್ಲಿ ಹಿಂದೆಯೇ ವಿಸ್ತಾರವಾಗಿ ವಿವರಿಸಿದ್ದೇವೆ. ನಮುಚಿಯ ವಿಷಯವು ಋ. ಸಂ. ಭಾಗ ೧೦ ಪುಟ 550 ರಲ್ಲಿಯೂ ಉಕ್ತವಾಗಿದೆ.

|| ಸಂಹಿತಾಪಾಠಃ ||

ವಿ ಪಿಪ್ರೋರಹಿಮಾಯಸ್ಯ ದೃಳ್ಹಾಃ ಪುರೋ ವಜ್ರಿಞ್ಛವಸಾ ನ ದರ್ದಃ ।
ಸುದಾಮಂತದ್ರೇಕ್ಣೋ ಅಪ್ರಮೃಷ್ಯಮೃಜಿಶ್ವನೇ ದಾತ್ರಂ ದಾಶುಷೇ ದಾಃ ॥

|| ಪದಪಾಠಃ ||

ವಿ । ಪಿಪ್ರೋಃ । ಅಹಿಽಮಾಯಸ್ಯ । ದೃಳ್ಹಾಃ । ಪುರಃ । ವಜ್ರಿನ್ । ಶವಸಾ । ನ । ದರ್ದರಿತಿ ದರ್ದಃ ।
ಸುಽದಾಮನ್ । ತತ್ । ರೇಕ್ಣಃ । ಅಪ್ರಽಮೃಷ್ಯಂ । ಋಜಿಶ್ವನೇ । ದಾತ್ರಂ । ದಾಶುಷೇ । ದಾಃ ॥ ೭ ॥

|| ಸಾಯಣಭಾಷ್ಯಂ ||

ಹೇ ವಜ್ರಿನ್ ವಜ್ರವನ್ನಿಂದ್ರ ತ್ವಮಹಿಮಾಯಸ್ಯಾಹಂತ್ರ್ಯೋ ಮಾಯಾ ಯಸ್ಯ ಪಿಪ್ರೋರೇತನ್ನಾಮ್ನೋಽಸುರಸ್ಯ ಸಂಬಂಧಿನೀರ್ದೃಳ್ಹಾ ದೃಢಾನಿ ಪುರಃ ಪ್ರಾಕಾರಾದೀನಿ ದುರ್ಗಾಣಿ ಶವಸಾ ಬಲೇನ ವಿ ದರ್ದಃ । ವಿದಾರಿತವಾನಸಿ । ನೇತಿ ಪಾದಪೂರಣಃ । ತ್ವಂ ಪಿಪ್ರೋರ್ನೃಮಣಃ ಪ್ರಾರುಜಃ ಪುರಃ । ಋಗ್ವೇ. ೧-೫೧-೫ । ಶತಂ ಪೂರ್ಭಿರಾಯಸೀಭಿರ್ನಿ ಪಾಹಿ । ಋಗ್ವೇ. ೭-೩-೭ । ಇತಿ ದರ್ಶನಾತ್ । ಅಪಿ ಚ ಹೇ ಸುದಾಮನ್ ಶೋಭನದಾನೇಂದ್ರ ತ್ವಂ ದಾತ್ರಂ ಹವಿರ್ಲಕ್ಷಣಂ ಧನಂ ದಾಶುಷೇ ದತ್ತವತ ಋಜಿಶ್ವನ ಏತನ್ನಾಮಕಾಯ ರಾಜರ್ಷಯೇಽಪ್ರಮೃಷ್ಯಂ ಕೇನಾಪ್ಯಬಾಧ್ಯಂ ತತ್ತ್ರಸ್ಯ ಸ್ವಭೂತಂ ರೇಕ್ಣೋ ಧನಂ ದಾಃ । ಅದಾಃ । ದತ್ತವಾನಸಿ ॥

|| ಪ್ರತಿಪದಾರ್ಥ ||

**ವಜ್ರಿನ್**—ವಜ್ರಾಯುಧಧಾರಿಯಾದ ಎಲೈ ಇಂದ್ರನೇ | **ಅಹಿಮಾಯಸ್ಯ**—ನಾಶಕರನಾದ ಮಾಯಾ ಕಾರ್ಯಗಳುಳ್ಳ | **ಪಿಪ್ರೋಃ**—ಪಿಪ್ರುನಾಮಕನಾದ ಅಸುರನ | **ದೃಳ್ಹಾಃ**—ದೃಢವಾದ | **ಪುರಃ**—ದುರ್ಗಗಳನ್ನು | **ಶವಸಾ**—ನಿನ್ನ ಬಲದಿಂದ | **ವಿ ದರ್ದಃ**—ಸೀಳಿರುವೆ| **ಸುದಾಮನ್**—ಶ್ರೇಷ್ಠವಾದ ದಾನಿಯಾದ ಎಲೈ ಇಂದ್ರನೇ| **ದಾತ್ರಂ**—ಹವಿಸ್ಸಿನ ರೂಪವಾದ ಧನವನ್ನು | **ದಾಶುಷೇ**—ಅರ್ಪಿಸತಕ್ಕ | **ಋಜಿಶ್ವನೇ**—ಋಜಿಶ್ವನಾಮಕನಾದ ರಾಜರ್ಷಿಗೆ | **ಅಪ್ರಮೃಷ್ಯಂ**—ಯಾರಿಂದಲೂ ನಾಶಪಡಿಸಲಾಗದ | **ತತ್ ರೇಕ್ಣಃ**—ನಿನ್ನ ಸಂಬಂಧಿಯಾದ ಧನವನ್ನು | **ದಾಃ**—ಕೊಟ್ಟಿರುವೆ.

|| ಭಾವಾರ್ಥ ||

ವಜ್ರಾಯುಧಧಾರಿಯಾದ ಎಲೈ ಇಂದ್ರನೇ, ನಾಶಕರವಾದ ಮಾಯಾಕಾರ್ಯಗಳುಳ್ಳವನೂ, ಪಿಪ್ರುನಾಮಕನೂ ಆದ ಅಸುರನ ದೃಢವಾದ ದುರ್ಗಗಳನ್ನು ನಿನ್ನ ಬಲದಿಂದ ಸೀಳಿರುವೆ. ಶ್ರೇಷ್ಠವಾದ ದಾನಿಯಾದ ಎಲೈ ಇಂದ್ರನೇ, ಹವಿಸ್ಸಿನ ರೂಪವಾದ ಧನವನ್ನು ಅರ್ಪಿಸತಕ್ಕ ಋಜಿಶ್ವನಾಮಕನಾದ ರಾಜರ್ಷಿಗೆ ಯಾರಿಂದಲೂ ನಾಶಪಡಿಸಲಾಗದ ನಿನ್ನ ಧನವನ್ನು ಕೊಟ್ಟಿರುವೆ.

## English Translation.

You have scattered by force, wielder of the thunderbolt, the strong cities of the deadly-deluding Pipru : you have given, bountiful Indra, uninjurable wealth to Rijiswat, the donor of sacrificial gifts.

|| ವಿಶೇಷವಿಷಯಗಳು ||

**ಪಿಪ್ರು ಮತ್ತು ಋಜಿಶ್ವನ್**—ಪಿಪ್ರು ಎಂಬ ಅಸುರನು ಇಂದ್ರನ ಶತ್ರುವು. ಋಜಿಶ್ವಾ ಎಂಬ ಋಷಿಯನ್ನು ಕಾಪಾಡುವುದಕ್ಕಾಗಿ ಇಂದ್ರನು ಈ ಅಸುರನನ್ನು ಸೋಲಿಸಿದನೆಂದು ಋಗ್ವೇದದ ಅನೇಕ ಋಕ್ಕುಗಳಲ್ಲಿ, ಎಂದರೆ ಋ. ಸಂ. ೧-೧೦೧-೨ ; ೪-೧೬-೧೩ ; ೫-೨೯-೧೧ ; ೬-೨೦-೭ ; ೮-೪೯-೧೦ ; ೧೦-೯೯-೧೧ ; ೧೦-೧೩೮-೩ ; ೧-೧೦೩-೮ , ೨-೧೪-೫ ; ೬-೧೮-೮ ಎಂಬ ಋಕ್ಕುಗಳಲ್ಲಿ ಹೇಳಿದೆ. ಮತ್ತು ಋ. ಸಂ. ೧-೫೧-೫ ; ೬-೨೦-೭ ನೆಯ ಋಕ್ಕುಗಳಲ್ಲಿ ಪಿಪ್ರುವಿನ ಪಟ್ಟಣದ ವಿಷಯದ ಪ್ರಸ್ತಾಪವಿದೆ. ಋ. ಸಂ. ೮-೩೨-೨ ; ೧೦-೧೩೮-೩ ನೆಯ ಋಕ್ಕುಗಳಲ್ಲಿ ಇವನನ್ನು ದಾಸ ಮತ್ತು ಅಸುರ ಎಂದು ಕರೆದಿದೆ. ಋ. ಸಂ. ೧-೧೦೧-೧ ; ೪-೧೬-೧೩ ರಲ್ಲಿ ಇವನು ಈ ದೇಶದ ಪೂರ್ವನಿವಾಸಿಗಳಾದ ಕಪ್ಪುಜನರೊಡನೆ ಸಂಬಂಧವಿಟ್ಟುಕೊಂಡಿದ್ದನೆಂಬ ಭಾವನೆಯು ಭಾಸವಾಗುವುದು

ಋಜಿಶ್ವನ್ ಎಂಬುವನ ಹೆಸರು ಋಗ್ವೇದದಲ್ಲಿ ಋ. ಸಂ. ೧-೫೧-೫ ; ೧-೫೩-೮ ; ೧-೧೦೧-೧ ; ೬-೨೦-೭ ; ೮-೪೯-೧೦ ; ೧೦-೯೯-೧೧ ; ೧೦-೧೩೮-೩ ಎಂಬ ಋಕ್ಕುಗಳಲ್ಲಿ ಪಠಿತವಾಗಿರುವುದು. ಆದರೆ ಹೆಚ್ಚು ಸಂಗತಿಗಳೇನೂ ತಿಳಿಯುವಂತಿಲ್ಲ. ಪಿಪ್ರು ಎಂಬ ಅಸುರನೊಡನೆ ಇಂದ್ರನು ಯುದ್ಧಮಾಡುವಾಗ ಇಂದ್ರನಿಗೆ ಇವನು ಸಹಾಯಮಾಡಿದ ವಿಷಯವು ಸೂಚಿತವಾಗಿರುವುದು. ಋ. ಸಂ ೪-೧೬-೧೩ ; ೫-೨೯-೧೧ ಎಂಬ ಋಕ್ಕುಗಳಲ್ಲಿ ಇವನು ವಿದಥಿನ ಎಂಬುವನ ಪುತ್ರನಾದ ವೈದಥಿನ ಎಂದು ಸ್ಪಷ್ಟವಾಗಿ ಕರೆಯಲ್ಪಟ್ಟಿರುವುದು ಕಂಡುಬರುವುದು.

|| ಸಂಹಿತಾಪಾಠಃ ||

ಸ ವೇತಸುಂ ದಶಮಾಯಂ ದಶೋಣಿಂ ತೂತುಜಿಮಿಂದ್ರಃ ಸ್ವಭಿಷ್ಟಿಸುಮ್ನಃ।
ಆ ತುಗ್ರಂ ಶಶ್ವದಿಭಂ ದ್ಯೋತನಾಯ ಮಾತುರ್ನ ಸೀಮುಪ ಸೃಜಾ
ಇಯಧ್ಯೈ ॥ ೮ ॥

॥ ಪದಪಾಠಃ ॥

ಸಃ । ವೇತಸುಂ । ದಶऽಮಾಯಂ । ದಶऽಓಣಿಂ । ತೂತುಜಿಂ । ಇಂದ್ರಃ । ಸ್ವಭಿಷ್ಟಿऽಸುಮ್ನಃ ।
ಆ । ತುಗ್ರಂ । ಶಶ್ವತ್ । ಇಭಂ । ದ್ಯೋತನಾಯ । ಮಾತುಃ । ನ । ಸೀಂ । ಉಪ । ಸೃಜ । ಇಯಧ್ಯೈ ॥

॥ ಸಾಯಣಭಾಷ್ಯಂ ॥

ಸ್ವಭಿಷ್ಟಿಸುಮ್ನಃ ಸುಷ್ಠ್ವಭ್ಯೇಷಣೀಯಾನ್ಯಭಿಗಮ್ಯಾನಿ ಸುಮ್ನಾನಿ ಸುಖಾನಿ ಯೇನ ದೇಯಾನಿ ಸ ಇಂದ್ರೋ ದಶಮಾಯಂ ಬಹುವಂಚನಂ ವೇತಸುಂ ವೇತಸುನಾಮಾನಮಸುರಂ ದಶೋಣಿಮೇತನ್ನಾಮಕಂ ಚ ತೂತುಜಿಂ ತೂತುಜಿನಾಮಕಂ ಚ ಆ ಅಪಿ ಚ ತುಗ್ರಂ ತುಗ್ರನಾಮಕಮಸುರಂ ತಥೇಭಮೇತನ್ನಾಮಕಮಸುರಂ ಚೇಯಧ್ಯಾ ಏತುಂ ದ್ಯೋತನಾಯೈತತ್ಸಂಜ್ಞಾಯ ರಾಜ್ಞೇ ಶಶ್ವದುಪ ಸೃಜ । ಉಪಾಸೃಜತ್ । ವಶೀಚಕಾರ । ತತ್ರ ದೃಷ್ಟಾಂತಃ । ಮಾತುರ್ನ ಮಾತುರ್ಜನನ್ಯಾ ಇವ ಪುತ್ರಂ । ಯಥಾ ಮಾತ್ರೇ ಪುತ್ರೋ ವಶೀಭವತಿ ತದ್ವದ್ವಶಂಚಕಾರೇತ್ಯರ್ಥಃ । ಸೀಮಿತಿ ಪಾದಪೂರಣಃ ॥

॥ ಪ್ರತಿಪದಾರ್ಥ ॥

**ಮಾತುಃ ನ**—ತಾಯಿಯ ಮುಂದೆ ಪುತ್ರನು ವಿಧೇಯನಾಗಿ ಮುಂದೆ ಬರುವಂತೆ । **ಸ್ವಭಿಷ್ಟಿಸುಮ್ನಃ**—ಆಕರ್ಷಕವಾದ ಧನವನ್ನು ಕೊಡತಕ್ಕ । **ಸಃ ಇಂದ್ರಃ**—ಅದೇ ಇಂದ್ರನು । **ದಶಮಾಯಂ**—ಅನೇಕ ರೀತಿಯಲ್ಲಿ ವಂಚಕನಾದ । **ವೇತಸುಂ**—ವೇತಸು ನಾಮಕನಾದ ಅಸುರನನ್ನೂ । **ದಶೋಣಿಂ**—ದಶೋಣಿಯನ್ನೂ । **ತೂತುಜಿಂ**—ತೂತುಜಿಎಂಬುವನನ್ನೂ । **ಆ**—ಮತ್ತು । **ತುಗ್ರಂ**—ತುಗ್ರನೆಂಬ ಅಸುರನನ್ನೂ । **ಇಭಂ**—ಇಭನೆಂಬ ಅಸುರನನ್ನೂ । **ದ್ಯೋತನಾಯ**—ದ್ಯೋತನನೆಂಬ ರಾಜನ ಎದುರಿಗೆ । **ಇಯಧ್ಯೈ**—ನಮ್ರತೆಯಿಂದ ಬರಲು । **ಶಶ್ವತ್**—ಪೂರ್ಣವಾಗಿ ವಿಧೇಯರಾಗಿರುವಂತೆ । **ಉಪ ಸೃಜ**—ಅವನ ವಶಮಾಡಿದನು.

॥ ಭಾವಾರ್ಥ ॥

ಆಕರ್ಷಕವಾದ ಧನವನ್ನು ಕೊಡತಕ್ಕ ಅದೇ ಇಂದ್ರನು ಅನೇಕ ರೀತಿಯಲ್ಲಿ ವಂಚಕನಾದ ವೇತಸುನಾಮಕನಾದ ಅಸುರನನ್ನೂ, ಹಾಗೆಯೇ, ದಶೋಣಿ, ತೂತುಜಿ, ತುಗ್ರ ಮತ್ತು ಇಭ ಎಂಬ ಅಸುರರನ್ನೂ ಸಹ ತಾಯಿಯ ಮುಂದೆ ಪುತ್ರನು ವಿಧೇಯನಾಗಿ ಮುಂದೆ ಬರುವಂತೆ ದ್ಯೋತನನೆಂಬ ರಾಜನ ಎದುರಿಗೆ ನಮ್ರತೆಯಿಂದ ಬರಲು ಪೂರ್ಣವಾಗಿ ವಿಧೇಯರಾಗಿರುವಂತೆ ಅವನ ವಶಮಾಡಿದನು.

## English Translation.

Indra, the granter of wished-for felicity, compelled the many-fraudulent Vetasu and Dasoni, Tutuji, Tugra, and Ibha, always to come submissively to (the Raja) Dyotana, as a son (comes before a mother.)

|| ವಿಶೇಷವಿಷಯಗಳು ||

ಈ ಋಕ್ಕಿನಲ್ಲಿ ವೇತಸು, ದಶೋಣಿ, ತೂತುಜಿ, ತುಗ್ರ, ಇಭ ಎಂಬ ಅಸುರರನ್ನು ಇಂದ್ರನು ಸೋಲಿಸಿ ದ್ಯೋತನ ಎಂಬ ರಾಜನವಶಕ್ಕೆ ಒಪ್ಪಿಸಿದನೆಂದು ಹೇಳಿದೆ

ವೇತಸು ಎಂಬ ಅಸುರನನ್ನು ಇಂದ್ರನು ಸೋಲಿಸಿದ ವಿಷಯವು—

**ಅಹಂ ಪಿತೇವ ವೇತಸೂँರಭಿಷ್ಟಯೇ ತುಗ್ರಂ ಕುತ್ಸಾಯ ಸ್ಮದಿಭಂ ಚ ರಂಧಯಂ ।**
(ಋ. ಸಂ. ೧೨–೪೯–೪)

ಎಂಬ ಋಕ್ಕಿನಲ್ಲಿಯೂ ಋ. ಸಂ. ೪–೫೮–೫ ; ೬–೨೬–೪ ; ೬–೨೦–೮ ; ೧೦–೪೯–೪ ಎಂಬ ಋಕ್ಕುಗಳಲ್ಲಿಯೂ ಉಕ್ತವಾಗಿದೆ. **ತುಗ್ರ** ಎಂಬುದು ಈ ಋಕ್ಕಿನಲ್ಲಿಯೂ ಉದಾಹರಣೆಗಾಗಿ ಕೊಟ್ಟಿರುವ ೧೦-೪೯-೪ ರಲ್ಲಿಯೂ ಆ ಹೆಸರಿನ ಒಬ್ಬ ಅಸುರನನ್ನು ನಿರ್ದೇಶಿಸುತ್ತದೆ. ಇತರ ಕಡೆಗಳಲ್ಲಿ ತುಗ್ರ ಎಂಬುದು ಒಬ್ಬ ಪ್ರಸಿದ್ಧನಾದ ರಾಜನೆಂದೂ ಇವನ ಮಗನಾದ ಭುಜ್ಯವನ್ನು ಅಶ್ವಿನೀದೇವತೆಗಳು ಸಮುದ್ರದಲ್ಲಿ ಮುಳುಗುವುದನ್ನು ತಪ್ಪಿಸಿ ಕಾಪಾಡಿದರೆಂದೂ ಅನೇಕಕಡೆ ಹೇಳಿದೆ. ಆದ್ದರಿಂದ ರಾಜನಾದ ತುಗ್ರ ಎಂಬುವನೇ ಬೇರೆ ಅಸುರನಾದ ತುಗ್ರ ಎಂಬುವನೇ ಬೇರೆ ಎಂಬ ವಿಷಯದಲ್ಲಿ ಸಂಶಯಕ್ಕವಕಾಶವಿಲ್ಲ.

**ದಶೋಣಿಂ**—ಇವನ ಹೆಸರು ಋ. ಸಂ. ೬–೨೦-೪; ೬-೨೦-೮ ; ೧೦-೯೬-೧೨ ; ೮-೫೨-೨ ಎಂಬ ಋಕ್ಕುಗಳಲ್ಲಿಯೂ,

**ತೂತುಜಿಂ**—ಋ. ಸಂ ೪-೩೨-೨; ೭-೨೮-೩ ; ೬–೨೦–೮ ; ೧೦–೨೨–೩ ; ೧೦–೩೫–೬ ಎಂಬ ಋಕ್ಕುಗಳಲ್ಲಿಯೂ,

**ಇಭಂ**— ಋ· ಸಂ. ೯–೫೭–೩ ; ೬–೨೦–೮ ; ೧–೮೪–೧೭; ೪–೪–೧ ಎಂಬ ಋಕ್ಕುಗಳಲ್ಲಿಯೂ ಪಠಿತವಾಗಿದೆ. ಇವರ ವಿಷಯವನ್ನು ಮುಂದೆ ವಿಸ್ತಾರವಾಗಿ ವಿವರಿಸಲಾಗುವುದು.

---

॥ ಸಂಹಿತಾಪಾಠಃ ॥

ಸ ಈಂ ಸ್ಪೃಧೋ ವನತೇ ಅಪ್ರತೀತೋ ಬಿಭ್ರದ್ವಜ್ರಂ ವೃತ್ರಹಣಂ ಗಭಸ್ತೌ ।
ತಿಷ್ಠದ್ಧರೀ ಅಧ್ಯಸ್ತೇವ ಗರ್ತೇ ವಚೋಯುಜಾ ವಹತ ಇಂದ್ರಮೃಷ್ವಂ ॥೯॥

॥ ಪದಪಾಠಃ ॥

ಸಃ । ಈಂ । ಸ್ಪೃಧಃ । ವನತೇ । ಅಪ್ರತಿಽಇತಃ । ಬಿಭ್ರತ್ । ವಜ್ರಂ । ವೃತ್ರಽಹನಂ । ಗಭಸ್ತೌ ॥

ತಿಷ್ಠತ್ । ಹರೀ ಇತಿ । ಅಧಿ । ಅಸ್ತಾಽಇವ । ಗರ್ತೇ । ವಚಃಽಯುಜಾ । ವಹತಃ । ಇಂದ್ರಂ । ಋಷ್ವಂ ॥

॥ ಸಾಯಣಭಾಷ್ಯಂ ॥

ಗಭಸ್ತೌ ಹಸ್ತೇ ವೃತ್ರಹಣಂ ವೃತ್ರಾಣಾಂ ಶತ್ರೂಣಾಂ ಹಂತಾರಂ ವಜ್ರಂ ಸ್ವಕೀಯಮಾಯುಧಂ ಬಿಭ್ರದ್ಧಾರಯನ್ ಅಪ್ರತೀತಃ ಶತ್ರುಭಿರಪ್ರತಿಗತಃ ಸ ಇಂದ್ರಃ ಸ್ಪೃಧಃ ಸ್ಪರ್ಧಮಾನಾನೀಮಿಮಾನ್ವೃತ್ರಪ್ರಭೃತೀನ್ ಶತ್ರೂನ್ ವನತೇ । ಹಂತಿ । ಹರೀ ಸ್ವಕೀಯಾವಶ್ವಾವಧಿ ತಿಷ್ಠತ್ । ಆರೋಹತಿ । ತತ್ರ ದೃಷ್ಟಾಂತಃ । ಅಸ್ತೇವ ಗರ್ತೇ । ಯಥಾ ಕ್ಷೇಪ್ತಾ ಶೂರೋ ರಥೇಽಧಿತಿಷ್ಠತಿ ತದ್ವತ್ । ತಥಾ ವಚೋಯುಜಾ ವಚೋಮಾತ್ರೇಣ ಯುಜ್ಯಮಾನೌ । ಯದ್ವಾ । ಸ್ತೋತೄಣಾಂ ಸ್ತುತಿಭಿರ್ಯುಜ್ಯಮಾನೌ ತೌ ಹರೀ ಚ ಋಷ್ವಂ ಮಹಾಂತಮಿಂದ್ರಂ ವಹತಃ ॥

॥ ಪ್ರತಿಪದಾರ್ಥ ॥

**ಗಭಸ್ತೌ**—ತನ್ನ ಹಸ್ತದಲ್ಲಿ । **ವೃತ್ರಹಣಂ**—ಶತ್ರುನಾಶಕವಾದ । **ವಜ್ರಂ**—ವಜ್ರಾಯುಧವನ್ನು । **ಬಿಭ್ರತ್**—ಧರಿಸಿ । **ಅಪ್ರತೀತಃ**—ಅಪ್ರತಿಹತನಾಗಿ । **ಸಃ**—ಅದೇ ಇಂದ್ರನು । **ಸ್ಪೃಧಃ**—ತನ್ನೊಡನೆ ಸ್ಪರ್ಧಿಸುವ । **ಈಂ**—ವೃತ್ರಾದಿಗಳನ್ನು । **ವನತೇ**—ನಾಶಪಡಿಸುತ್ತಾನೆ । **ಗರ್ತೇ**—ರಥದಲ್ಲಿ । **ಅಸ್ತೇವ**—ಶತ್ರುನಾಶಕನಾದ ಶೂರನು ಹತ್ತಿ ಕುಳಿತುಕೊಳ್ಳುವಂತೆ । **ಹರೀ**—ತನ್ನ ಅಶ್ವಗಳನ್ನು । **ಅಧಿ ತಿಷ್ಠತ್**—ಹತ್ತಿ ಕುಳಿತುಕೊಳ್ಳುತ್ತಾನೆ । **ವಚೋಯುಜಾ**—ಕೇವಲ ವಾಕ್ಕಿನ ಆದೇಶದಿಂದಲೇ ರಥಕ್ಕೆ ಸೇರಿಕೊಳ್ಳತಕ್ಕ ಆ ಅಶ್ವಗಳು । **ಋಷ್ವಂ**—ಮಹಾತ್ಮನಾದ । **ಇಂದ್ರಂ**—ಇಂದ್ರನನ್ನು । **ವಹತಃ**—ವಹಿಸುತ್ತವೆ.

॥ ಭಾವಾರ್ಥ ॥

ಅಪ್ರತಿಹತನಾದ ಇಂದ್ರನು ತನ್ನ ಹಸ್ತದಲ್ಲಿ ಶತ್ರುನಾಶಕವಾದ ವಜ್ರಾಯುಧವನ್ನು ಧರಿಸಿ ತನ್ನೊಡನೆ ಸ್ಪರ್ಧಿಸುವ ವೃತ್ರಾದಿಗಳನ್ನು ನಾಶಪಡಿಸುತ್ತಾನೆ. ಶತ್ರುನಾಶಕನಾದ ಶೂರನು ರಥದಲ್ಲಿ ಹತ್ತಿ ಕುಳಿತುಕೊಳ್ಳುವಂತೆ ಇಂದ್ರನು ತನ್ನ ಅಶ್ವಗಳನ್ನು (ಕಟ್ಟಿದ ರಥದಲ್ಲಿ) ಹತ್ತಿ ಕುಳಿತುಕೊಳ್ಳುತ್ತಾನೆ. ಕೇವಲ ವಾಕ್ಕಿನ ಅಪ್ಪಣೆಯಿಂದಲೇ ರಥಕ್ಕೆ ಸೇರಿಕೊಳ್ಳತಕ್ಕ ಆ ಅಶ್ವಗಳು ಮಹಾತ್ಮನಾದ ಇಂದ್ರನನ್ನು ವಹಿಸುತ್ತವೆ.

## English Translation.

Bearing in his hand the foe-destroying thunderbolt, Indra, unresisted, demolishing these his adversaries ; he mounts his two-horse (car), as warrior (ascends) his chariot ; harnessed at a word, his steeds convey the mitgty Indra.

॥ ಸಂಹಿತಾಪಾಠಃ ॥

ಸನೇಮ ತೇಽವಸಾ ನವ್ಯ ಇಂದ್ರ ಪ್ರ ಪೂರವಃ ಸ್ತವಂತ ಏನಾ ಯಜ್ಞೈಃ ।
ಸಪ್ತ ಯತ್ಪುರಃ ಶರ್ಮ ಶಾರದೀರ್ದರ್ಧನ್ದಾಸೀಃ ಪುರುಕುತ್ಸಾಯ ಶಿಕ್ಷನ್ ॥

॥ ಪದಪಾಠಃ ॥

ಸನೇಮ । ತೇ । ಅವಸಾ । ನವ್ಯಃ । ಇಂದ್ರ । ಪ್ರ । ಪೂರವಃ । ಸ್ತವಂತೇ । ಏನಾ । ಯಜ್ಞೈಃ ।
ಸಪ್ತ । ಯತ್ । ಪುರಃ । ಶರ್ಮ । ಶಾರದೀಃ । ದರ್ತ್ । ಹನ್ । ದಾಸೀಃ । ಪುರುऽಕುತ್ಸಾಯ । ಶಿಕ್ಷನ್॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತೇ ತ್ವದೀಯೇನಾವಸಾ ರಕ್ಷಣೇನ ನವ್ಯೋ ನವೀಯೋ ನವತರಂ ತ್ವಯಾ ದೀಯಮಾನಂ ಧನಂ ಸನೇಮ। ವಯಂ ಸ್ತೋತಾರೋ ಭಜೇಮಹಿ। ಪೂರವೋ ಮನುಷ್ಯಾಃ ಸ್ತೋತಾರ ಏನಾನೇನ ಸ್ತೋತ್ರೇಣ ಯುಕ್ತೈರ್ಯಜ್ಞೈಃ ಪ್ರ ಸ್ತವಂತೇ। ತ್ವಾಂ ಸ್ತುವಂತಿ। ಯದ್ಯಸ್ಮಾತ್ಕಾರಣಾದ್ದಾಸೀಃ ಕರ್ಮಣಾಮುಪಕ್ಷಪಯಿತ್ರೀಃ ಶತ್ರುಪ್ರಜಾ ಹನ್ ಘ್ನನ್ ಹಿಂಸನ್ ಪುರುಕುತ್ಸಾಯೈತನ್ನಾಮಕಾಯ ರಾಜ್ಞೇ ಶಿಕ್ಷನ್ ಧನಾನಿ ಪ್ರಯಚ್ಛನ್ ಹೇ ಇಂದ್ರ ತ್ವಂ ಶಾರದೀಃ ಶರನ್ನಾಮ್ನೋಽಸುರಸ್ಯ ಸಂಬಂಧಿನೀಃ ಸಪ್ತ ಸಪ್ತಸಂಖ್ಯಾಕಾಃ ಪುರಃ ಪುರೀಃ ಶರ್ಮ ಶರ್ಮಣಾ ವಜ್ರೇಣ ದರ್ತ್ ವಿದಾರಿತವಾನಸಿ ತಸ್ಮಾತ್ಕಾರಣಾತ್ತ್ವಾಂ ಸ್ತೋತಾರಃ ಸ್ತುವಂತೀತ್ಯರ್ಥಃ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ತೇ—ನಿನ್ನ । ಅವಸಾ—ರಕ್ಷಣೆಯಿಂದ (ಅನುಗೃಹೀತರಾಗಿ) । ನವ್ಯಃ—ನೂತನವಾದ ಧನವನ್ನು । ಸನೇಮ—ನಾವು ಹೊಂದುವಂತಾಗಲಿ (ಎಲೈ ಇಂದ್ರನೇ) । ಯತ್—ಯಾವ ನಿನ್ನ ಮಾಹಾತ್ಮ್ಯದಿಂದ । ದಾಸೀಃ—ಹಿಂಸಕರಾದ ಅಸುರರನ್ನು । ಹನ್—ನಾಶಪಡಿಸಿದೆಯೋ । ಪುರುಕುತ್ಸಾಯ—ಪುರುಕುತ್ಸನೆಂಬ ರಾಜನಿಗೆ । ಶಿಕ್ಷನ್—ಧನಗಳನ್ನು ಕೊಡುತ್ತಾ । ಶಾರದೀಃ—ಶರನ್ನಾಮಕನಾದ ಅಸುರನಿಗೆ ಸೇರಿದ । ಸಪ್ತ ಪುರಃ—ಏಳು ಪಟ್ಟಣಗಳನ್ನೂ । ಶರ್ಮ—ವಜ್ರಾಯುಧದಿಂದ । ದರ್ತ್—ಸೀಳಿದೆಯೋ (ಅದೇ ಮಾಹಾತ್ಮ್ಯವನ್ನು ಪ್ರಶಂಸಿಸಿ) । ಪೂರವಃ—ಮಾನವರಾದ ಸ್ತೋತೃಗಳು । ಏನಾ—ಈ ಸ್ತುತಿಗಳಿಂದ ಕೂಡಿದ । ಯಜ್ಞೈಃ—ಯಜ್ಞಗಳಿಂದ । ಪ್ರ ಸ್ತವಂತೇ—ನಿನ್ನನ್ನು ಸ್ತುತಿಸುತ್ತಾರೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನ ರಕ್ಷಣೆಯಿಂದ ನಾವು ಅನುಗೃಹೀತರಾಗಿ ನೂತನವಾದ ಧನವನ್ನು ಹೊಂದುವಂತಾಗಲಿ. ಎಲೈ ಇಂದ್ರನೇ, ಯಾವ ನಿನ್ನ ಮಾಹಾತ್ಮ್ಯದಿಂದ ಹಿಂಸಕರಾದ ಅಸುರರನ್ನು ನಾಶಪಡಿಸಿದೆಯೋ, ಮತ್ತು ಪುರುಕುತ್ಸನೆಂಬ ರಾಜನಿಗೆ ಧನಗಳನ್ನು ಕೊಡುತ್ತಾ ಶರನ್ನಾಮಕನಾದ ಅಸುರನಿಗೆ ಸೇರಿದ ಏಳು ಪಟ್ಟಣ

ಗಳನ್ನೂ ವಜ್ರಾಯುಧದಿಂದ ಸೀಳಿದೆಯೋ ಅದೇ ಮಾಹಾತ್ಮ್ಯವನ್ನು ಪ್ರಶಂಸಿಸಿ ಮಾನವರಾದ ಸ್ತೋತೃಗಳು ಈ ಸ್ತುತಿಗಳಿಂದ ಕೂಡಿದ ಯಜ್ಞಗಳಿಂದ ನಿನ್ನನ್ನು ಸ್ತುತಿಸುತ್ತಾರೆ.

## English Translation.

(Favoured) by your protection, Indra, we solicit new (wealth): by this adoration men glorify you at sacrifices, for that you have shattered with your bolt the seven cities of Sharat, killing the opponents (of sacred rites), and giving (their spoils) to Purukutsa.

|| ವಿಶೇಷವಿಷಯಗಳು ||

ಪುರುಕುತ್ಸನ ವಿಷಯವನ್ನು ನಾವು ಹಿಂದೆಯೇ ವಿವರಿಸಿದೇವೆ.

|| ಸಂಹಿತಾಪಾಠಃ ||

ತ್ವಂ ವೃಧ ಇಂದ್ರ ಪೂರ್ವ್ಯೋ ಭೂರ್ವರಿವಸ್ಯನ್ನುಶನೇ ಕಾವ್ಯಾಯ ।
ಪರಾ ನವವಾಸ್ತ್ವಮನುದೇಯಂ ಮಹೇ ಪಿತ್ರೇ ದದಾಥ ಸ್ವಂ ನಪಾತಂ॥೧೧॥

|| ಪದಪಾಠಃ ||

ತ್ವಂ । ವೃಧಃ । ಇಂದ್ರ । ಪೂರ್ವ್ಯಃ । ಭೂಃ । ವರಿವಸ್ಯನ್ । ಉಶನೇ । ಕಾವ್ಯಾಯ ।
ಪರಾ । ನವಽವಾಸ್ತ್ವಂ । ಅನುಽದೇಯಂ । ಮಹೇ । ಪಿತ್ರೇ । ದದಾಥ । ಸ್ವಂ । ನಪಾತಂ ॥ ೧೧ ॥

|| ಸಾಯಣಭಾಷ್ಯಂ ||

ಹೇ ಇಂದ್ರ ಪೂರ್ವ್ಯಃ ಪುರಾತನಸ್ತ್ವಂ ಕಾವ್ಯಾಯ ಕವಿಪುತ್ರಾಯೋಶನ ಉಶನಸೇ ಭಾರ್ಗವಾಯ ವರಿವಸ್ಯನ್ ಧನಮಿಚ್ಛನ್ ವೃಧೋ ಭೂಃ । ಸ್ತೋತೄಣಾಂ ವರ್ಧಕೋ ಭವಸಿ । ಅನುದೇಯಮನುದಾತವ್ಯಂ ಧನಂ ನವವಾಸ್ತ್ವಮೇತನ್ನಾಮಕಮಸುರಂ ಪರಾಹತ್ಯ ಸ್ವಂ ಸ್ವಕೀಯಮೌಶನಸಂ ನಪಾತಂ ಯುದ್ಧೇ ಶತ್ರುಭಿರ್ಗೃಹೀತಂ ಪುತ್ರಂ ಮಹೇ ಮಹತೇ ಪಿತ್ರೇ ಪಾಲಯಿತ್ರೇ ಉಶನಸೇ ಪರಾ ದದಾಥ । ತಸ್ಯ ಶತ್ರುಂ ಹತ್ವಾ ಪ್ರಕರ್ಷೇಣ ದತ್ತವಾನಸಿ ॥

|| ಪ್ರತಿಪದಾರ್ಥ ||

ಇಂದ್ರ—ಎಲೈ ಇಂದ್ರನೇ । ಪೂರ್ವ್ಯಃ ತ್ವಂ—ಪುರಾತನನಾದ ನೀನು । ಕಾವ್ಯಾಯ—ಕವಿಪುತ್ರನಾದ । ಉಶನೇ—ಉಶನಸ್ಸಿಗಾಗಿ । ವರಿವಸ್ಯನ್—ಧನವನ್ನು ಇಚ್ಛಿಸಿ । ವೃಧಃ ಭೂಃ—ಸ್ತೋತೃಗಳಿಗೆ

ವೃದ್ಧಿಕಾರಕನಾಗಿದ್ದೀಯೆ । **ನವವಾಸ್ತ್ವಂ**—ನವವಾಸ್ತ್ವನೆಂಬ ಅಸುರನನ್ನು । **ಪರಾ (ಹತ್ಯ)**—ನಾಶಪಡಿಸಿ । **ಅನುದೇಯಂ**—ಹಿಂದಕ್ಕೆ ಕೊಡಬೇಕಾದ । **ಸ್ವಂ ನಪಾತಂ**—ಉಶನಸ್ಸಿನ ಪುತ್ರನನ್ನು । **ಮಹೇ ಪಿತ್ರೇ**—ಮಹಾತ್ಮನಾದ ಪಿತೃವಿಗೆ ಎಂದರೆ ಉಶನಸ್ಸಿಗೆ । **(ಪರಾ) ದದಾಥ**—ಹಿಂತಿರುಗಿ ಒಪ್ಪಿಸಿದೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಪುರಾತನನಾದ ನೀನು ಕವಿಪುತ್ರನಾದ ಉಶನಸ್ಸಿಗಾಗಿ ಧನವನ್ನು ಇಚ್ಛಿಸಿ ಸ್ತೋತೃಗಳಿಗೆ ವೃದ್ಧಿಕಾರಕನಾಗಿದ್ದೀಯೆ ನವವಾಸ್ತ್ವನೆಂಬ ಅಸುರನನ್ನು ನಾಶಪಡಿಸಿ ಪುತ್ರನನ್ನು ಮಹಾತ್ಮನಾದ ಉಶನಸ್ಸಿಗೆ ಹಿಂತಿರುಗಿಸಿ ಒಪ್ಪಿಸಿದೆ.

English Translation.

Desirous of opulence, you, Indra, have been an ancient benefactor of Ushanas, the son of Kavi : having slain Navavastwa, you have given back his own grandson, who was (fit) to be restored to the grandfather.

॥ ವಿಶೇಷವಿಷಯಗಳು ॥

**ನವವಾಸ್ತ್ವಂ**—ನವವಾಸ್ತ್ವನೆಂಬುವನ ಹೆಸರು ಋಗ್ವೇದದಲ್ಲಿ ಮೂರು ಕಡೆ ಮಾತ್ರ ಇದೆ. ಋ. ಸಂ. ೧-೩೬-೧೮ ರಲ್ಲಿ ಅಗ್ನಿಯು ಇವನನ್ನು ಸೋಲಿಸಿದನೆಂದೂ ಋ. ಸಂ. ೬-೨೦-೧೧ ರಲ್ಲಿ ಇವನನ್ನು ಇಂದ್ರನು ಸೋಲಿಸಿ ಇವನ ವಶದಲ್ಲಿದ್ದ ಉಶನಸ್ ಎಂಬುವನ ಪುತ್ರನನ್ನು ಅವನ ತಂದೆಯ ವಶಕ್ಕೆ ಕೊಟ್ಟನೆಂದೂ ಋ. ಸಂ. ೧೦-೪೯-೬ ರಲ್ಲಿ ಇಂದ್ರನು ಇವನನ್ನು ಸೋಲಿಸಿದನೆಂಬ ವಿಷಯದ ವರ್ಣನೆಯೂ ಇದೆ. ಇವನನ್ನು ಎರಡು ಕಡೆ ಬೃಹದ್ರಥನೆಂದೂ ಕರೆದಿದೆ.

॥ ಸಂಹಿತಾಪಾಠಃ ॥

ತ್ವಂ ಧುನಿರಿಂದ್ರ ಧುನಿಮತೀರೃಣೋರಪಃ ಸೀರಾ ನ ಸ್ರವಂತೀಃ ।
ಪ್ರ ಯತ್ಸಮುದ್ರಮತಿ ಶೂರ ಪರ್ಷಿ ಪಾರಯಾ ತುರ್ವಶಂ ಯದುಂ ಸ್ವಸ್ತಿ ॥

॥ ಪದಪಾಠಃ ॥

ತ್ವಂ । ಧುನಿಃ । ಇಂದ್ರ । ಧುನಿಽಮತೀಃ । ಋಣೋಃ । ಅಪಃ । ಸೀರಾಃ । ನ । ಸ್ರವಂತೀಃ ।

ಪ್ರ । ಯತ್ । ಸಮುದ್ರಂ । ಅತಿ । ಶೂರ । ಪರ್ಷಿ । ಪಾರಯ । ತುರ್ವಶಂ । ಯದುಂ । ಸ್ವಸ್ತಿ ॥ ೧೨ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಧುನಿಃ ಶತ್ರೂಣಾಂ ಕಂಪಯಿತಾ ತ್ವಂ ಧುನಿಮತೀರ್ಧುನಿನಾಮಾಸುರೋ ಯಾಸು ನಿರೋಧಕತಯಾ ವಿದ್ಯತೇ ತಾ ಅಪ ಉದಕಾನಿ ಸೀರಾ ನ ನದೀರಿವ ಸ್ರವಂತೀಃ ಪ್ರವಹಂತೀರ್ಯುಣೋಃ। ಅಗಮಯಃ। ಧುನಿಂ ಹತ್ವಾ ತೇನ ನಿರೋಧಿತಾನ್ಯುದಕಾನಿ ಪ್ರವಾಹಯತೀತ್ಯರ್ಥಃ। ಹೇ ಶೂರ ವೀರೇಂದ್ರ ಯದ್ಯದಾ ಸಮುದ್ರಮತಿ ಅತಿಕ್ರಮ್ಯ ಪ್ರ ಪರ್ಷಿ ಪ್ರತೀರ್ಣೋ ಭವಸಿ ತದಾ ಸಮುದ್ರಪಾರೇ ತಿಷ್ಠಂತಂ ತುರ್ವಶಂ ಯದುಂ ಚ ಸ್ವಸ್ತಿ ಕ್ಷೇಮೇಣ ಪಾರಯ । ಅಪಾರಯಃ । ಸಮುದ್ರಮತಾರಯಃ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ಧುನಿಃ**—ಶತ್ರುಗಳನ್ನು ನಡುಗಿಸುವ । **ತ್ವಂ**—ನೀನು । **ಧುನಿಮತೀಃ**—ಧುನಿಯೆಂಬ ಅಸುರನಿಂದ ಪ್ರತಿಬಂಧಿತವಾದ । **ಅಪಃ**—ಉದಕಗಳನ್ನು । **ಸೀರಾ ನ**—ನದಿಗಳಂತೆ। **ಸ್ರವಂತೀಃ**—ಹರಿಯುವ ಪ್ರವಾಹಗಳುಳ್ಳವನ್ನಾಗಿ । **ಋಣೋಃ**-ಪರಿವರ್ತಿಸಿರುವೆ । **ಶೂರ**-ಪರಾಕ್ರಮಿಯಾದ ಎಲೈ ಇಂದ್ರನೇ । **ಯತ್**—ಯಾವಾಗ । **ಸಮುದ್ರಂ**—ಸಮುದ್ರವನ್ನು । **ಅತಿ ಪ್ರ ಪರ್ಷಿ**—ದಾಟಿ ದಡವನ್ನು ಸೇರುವೆಯೋ (ಆಗ) । **ತುರ್ವಶಂ**—ತುರ್ವಶನನ್ನೂ । **ಯದುಂ**—ಯದುವನ್ನೂ । **ಸ್ವಸ್ತಿ**—ಕ್ಷೇಮವಾಗಿ । **ಪಾರಯ**—ದಾಟಿಸುತ್ತೀಯೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಶತ್ರುಗಳನ್ನು ನಡಗುವಂತೆ ಮಾಡುವ ನೀನು ಧುನಿಯೆಂಬ ಅಸುರನಿಂದ ಪ್ರತಿಬಂಧಿತವಾದ ಉದಕಗಳನ್ನು ನದಿಗಳಂತೆ ಹರಿಯುವ ಪ್ರವಾಹಗಳುಳ್ಳವಾಗಿ ಪರಿವರ್ತಿಸಿರುವೆ. ಪರಾಕ್ರಮಿಯಾದ ಎಲೈ ಇಂದ್ರನೇ, ಯಾವಾಗ ನೀನು ಸಮುದ್ರವನ್ನು ದಾಟಿ ದಡವನ್ನು ಸೇರುವೆಯೋ ಆಗ ತುರ್ವಶನನ್ನೂ, ಯದುವನ್ನೂ ಕ್ಷೇಮದಿಂದ ದಾಟಿಸುತ್ತೀಯೆ.

## English Translation.

You, Indra, who make (your enemies) tremble, have caused the waters, detained by Dhuni, to flow like rushing rivers : so, hero, when, having crossed the ocean, you have reached the shore, you have brought over in safety Turvasa and Yadu.

॥ ವಿಶೇಷವಿಷಯಗಳು ॥

ಧುನಿ ಎಂಬ ಅಸುರನ ವಿಷಯವನ್ನು ನಾವು ಹಿಂದೆಯೇ ಹೇಳಿದ್ದೇವೆ.

**ತುರ್ವಶಂ, ಯದುಂ—ಯದು** ಮತ್ತು **ತುರ್ವಶ** ಎಂಬ ಎರಡು ವ್ಯಕ್ತಿಗಳ ಹೆಸರು ಬರುವ ಕಡೆಗಳಲ್ಲೆಲ್ಲಾ ಅವರಿಬ್ಬರೂ ರಾಜರ್ಷಿಗಳೆಂದೂ ಇಂದ್ರಾಗ್ನಿಗಳ ಅನುಗ್ರಹಕ್ಕೆ ಪಾತ್ರರಾದವರೆಂದೂ ತಿಳಿಯುತ್ತದೆ. **ಯದುಷು ತುರ್ವಶೇಷು** ಎಂದು ಬಹುವಚನಗಳು ಈ ಎರಡು ಹೆಸರುಗಳೂ ಜೊತೆಯಲ್ಲಿ ಬಂದಿರುವುದು. ಋಕ್ಸಂಹಿತೆಯಲ್ಲೆಲ್ಲಾ ಇದೊಂದೇ ಸ್ಥಳದಲ್ಲಿ ಎಂದು ಹೇಳಬಹುದು.

**ಅಗ್ನಿನಾ ತುರ್ವಶಂ ಯದುಂ ಪರಾವತ ಉಗ್ರಾದೇವಂ ಹವಾಮಹೇ ।**

(ಋ. ಸಂ. ೧-೩೬-೧೮)

**ತ್ವಮಾವಿಥ ನರ್ಯಂ ತುರ್ವಶಂ ಯದುಂ ತ್ವಂ ತುರ್ವೀತಿಂ ವಯ್ಯಂ ಶತಕ್ರತೋ ।**

(ಋ ಸಂ. ೧-೫೪-೬)

ಇತ್ಯಾದಿ ಋಕ್ಕುಗಳಲ್ಲಿ ಇಬ್ಬರು ರಾಜರ್ಷಿಗಳೂ ಅಗ್ನಿಯ ಮತ್ತು ಇಂದ್ರನ ರಕ್ಷಣೆಯನ್ನು ಪಡೆದುದು ಹೇಳಲ್ಪಟ್ಟಿದೆ. ತುರ್ವಶನ ಮುಖ್ಯವಾದ ಸಾಹಸಕೃತ್ಯವು ಸುದಾಸನೊಂದಿಗೆ ಯುದ್ಧಮಾಡಿದುದು.

**ಪುರೋಳಾ ಇತ್ತುರ್ವಶೋ ಯಕ್ಷುರಾಸೀದ್ರಾಯೇ ಮತ್ಸ್ಯಾಸೋ ನಿಶಿತಾ ಅಪೀವ ।**

**ಶ್ರುಷ್ಟಿಂ ಚಕ್ರುರ್ಭೃಗವೋ ದ್ರುಹ್ಯವಶ್ಚ ಸಖಾ ಸಖಾಯಮತರದ್ವಿಷೂಚೋಃ ।**

(ಋ. ಸಂ. ೭-೧೮-೬)

ಎಂಬ ಋಕ್ಕಿನಲ್ಲಿ **ತುರ್ವಶನ** ಯುದ್ಧವು ವರ್ಣಿತವಾಗಿದೆ. ಆದರೆ ತುರ್ವಶನು ಇಲ್ಲಿ ಇಂದ್ರನಿಂದ ಸಹಾಯವನ್ನು ಪಡೆದನೇ ಅಥವಾ ನಿಗ್ರಹವನ್ನು ಪಡೆದನೇ ಎಂಬುದೇ ವಿಶದವಾಗಿಲ್ಲ. ಸಾಯಣರು ಎರಡು ವಿಧವಾದ ಅರ್ಥವನ್ನೂ ಹೇಳಿದ್ದಾರೆ. ಮೊದಲನೆಯದಾಗಿ ತುರ್ವಶನು ಇಂದ್ರನ ಸಖನಾದ ಸುದಾಸನೊಂದಿಗೆ ಯುದ್ಧಕ್ಕೆ ಹೋದಾಗ ಇಂದ್ರನು ತುರ್ವಶನನ್ನು ನಿಗ್ರಹಿಸಿ ತನ್ನ ಸ್ನೇಹಿತನನ್ನು ರಕ್ಷಿಸಿದನು ಎಂದೂ, ಎರಡನೆಯದಾಗಿ ತುರ್ವಶನಿಗೂ ಅವನ ವಿರೋಧಿಗಳಿಗೂ ಯುದ್ಧವು ಸಂಭವಿಸಿದ ಕಾಲದಲ್ಲಿ ಇಂದ್ರನು ಸಖನಾದ ತುರ್ವಶನಿಗೆ ಸಹಾಯಮಾಡಿದನೆಂದೂ ಹೇಳಿದೆ. ಆದ್ದರಿಂದ ಈ ಋಕ್ಕಿನ ತಾತ್ಪರ್ಯವು ವಿಶದವಾಗಿಲ್ಲ. ಇದೇ ರೀತಿ ಯದು ಮತ್ತು ತುರ್ವಶ ಇಬ್ಬರೂ ಸಹ ಇಂದ್ರನಿಂದ ಪರಾಜಯವನ್ನು ಪಡೆದುದಾಗಿ,

**ಪುರಃ ಸದ್ಯ ಇತ್ಥಾಧಿಯೇ ದಿವೋದಾಸಾಯ ಶಂಬರಂ ।**

**ಅಧ ತ್ಯಂ ತುರ್ವಶಂ ಯದುಂ ॥**

(ಋ. ಸಂ ೯-೬೧-೨)

ಎಂಬ ಋಕ್ಕಿನಲ್ಲಿ ಹೇಳಿದೆ. ಇದರಿಂದ ಇಂದ್ರನು ತನ್ನ ಸಖನಾದ **ದಿವೋದಾಸ**ನಿಗಾಗಿ ಯದುವನ್ನೂ ತುರ್ವಶನನ್ನೂ ನಿಗ್ರಹಿಸಿದುದಾಗಿ ತಿಳಿಯುತ್ತದೆ. ಆದರೆ,

**ಪ್ರಯತ್ಸಮುದ್ರಮತಿ ಶೂರ ಪರ್ಷಿ ಪಾರಯಾ ತುರ್ವಶಂ ಯದುಂ ಸ್ವಸ್ತಿ ।**

(ಋ. ಸಂ. ೧-೧೭೪-೯)

**ಉತ ತ್ಯಾ ತುರ್ವಶಾಯದೂ ಅಸ್ನಾತಾರಾ ಶಚೀಪತಿಃ ।**

**ಇಂದ್ರೋ ವಿದ್ವಾँ ಅಪಾರಯತ್ ।** (ಋ. ಸಂ. ೪-೩೦-೧೭)

**ತ್ವಮಪೋ ಯದವೇ ತುರ್ವಶಾಯಾರಮಯಃ ಸುದುಘಾಃ ಪಾರ ಇಂದ್ರ ।**

(ಋ. ಸಂ ೫-೩೧-೮)

**ಮಹತ್ತೇ ವೃಷ್ಣೋ ಅಭಿಚಕ್ಷ್ಯಂ ಕೃತಂ ಪಶ್ಯೇಮ ತುರ್ವಶಂ ಯದುಂ ।**

(ಋ. ಸಂ. ೮-೪-೭)

ಇತ್ಯಾದ್ಯನೇಕ ಋಕ್ಕುಗಳಲ್ಲಿ **ಯದು** ಮತ್ತು **ತುರ್ವಶ**ರಿಬ್ಬರೂ **ಇಂದ್ರ**ನಿಂದ ಸಾಕ್ಷಾತ್ತಾಗಿ ಸಹಾಯವನ್ನು ಪಡೆದ ವಿಷಯವು ಹೇಳಿದೆ.

|| ಸಂಹಿತಾಪಾಠಃ ||

ತವ ಹ ತ್ಯದಿಂದ್ರ ವಿಶ್ವಮಾಜೌ ಸಸ್ತೋ ಧುನೀಚುಮುರೀ ಯಾ ಹ ಸಿಷ್ವಪ್।
ದೀದಯದಿತ್ತುಭ್ಯಂ ಸೋಮೇಭಿಃ ಸುನ್ವನ್ದಭೀತಿರಿಧ್ಮಭೃತಿಃ ಪಕ್ಥ್ಯ೧-
ರ್ಕೈಃ || ೧೩ ||

|| ಪದಪಾಠಃ ||

ತವ । ಹ । ತ್ಯತ್ । ಇಂದ್ರ । ವಿಶ್ವಂ । ಆಜೌ । ಸಸ್ತಃ । ಧುನೀಚುಮುರೀ ಇತಿ । ಯಾ । ಹ । ಸಿಷ್ವಪ್ ।
ದೀದಯತ್ । ಇತ್ । ತುಭ್ಯಂ । ಸೋಮೇಭಿಃ । ಸುನ್ವನ್ । ದಭೀತಿಃ । ಇಧ್ಮಽಭೃತಿಃ । ಪಕ್ಥೀ । ಅರ್ಕೈಃ ||

|| ಸಾಯಣಭಾಷ್ಯಂ ||

ಹೇ ಇಂದ್ರ ಆಜೌ ಸಂಗ್ರಾಮೇ ತವ ಹ ತವೈವ ವಿಶ್ವಂ ವ್ಯಾಪ್ತಂ ತ್ಯತ್ತಾದೃಶಂ ಕರ್ಮ ಭವತಿ । ಕೀದೃಶಮಿತಿ ತದುಚ್ಯತೇ । ಯಾ ಯೌ ಧುನೀಚುಮುರೀ । ಧುನಿಶ್ಚ ಚುಮುರಿಶ್ಚೇತ್ಯೇತನ್ನಾಮಕಾವಸುರೌ ಸಿಷ್ವಪ್ ತ್ವಮಸ್ವಾಪಯಃ ತಾವಸುರೌ ಸಸ್ತಃ । ಸಂಗ್ರಾಮೇ ಸುಪ್ತವಂತೌ ಮೃತಾವಿತ್ಯರ್ಥಃ || ಭೂತಾರ್ಥೇ ವ್ಯತ್ಯಯೇನ ಲಟ್ । ದ್ವಿತೀಯೋ ಹಶಬ್ದಃ ಪಾದಪೂರಣಃ || ತದನಂತರಂ ಹೇ ಇಂದ್ರ ತುಭ್ಯಂ ತ್ವದರ್ಥಂ ಸುನ್ವನ್ ಸೋಮಾನಭಿಷುಣ್ವನ್ ಪಕ್ಥೀ ಪಕ್ಥವಾನ್ ಹವೀಂಷಿ ಪಕ್ತವಾನಿಧ್ಮಭೃತಿರಿಧ್ಮಾನಾಂ ಭರ್ತಾಹರ್ತಾ ವಾ ದಭೀತಿರ್ನಾಮ ರಾಜರ್ಷಿಃ ಸೋಮೇಭಿಃ ಸೋಮೈರರ್ಕೈರ್ಹವಿಲಕ್ಷಣೈರನ್ನೈರ್ದೀದಯದಿತ್ । ದೀಪ್ಯತ ಏವ । ಧುನಿಂ ಚುಮುರಿಂ ತಸ್ಮೈ ಜಘಂಥೇತ್ಯರ್ಥಃ । ತ್ವಂ ನಿ ದಸ್ಯುಂ ಚುಮುರಿಂ ಧುನಿಂ ಚ । ಋಗ್ವೇ. ೭-೧೯-೪ । ಇತಿ ಹಿ ದರ್ಶನಾತ್ ||

|| ಪ್ರತಿಪದಾರ್ಥ ||

**ಇಂದ್ರ**--ಎಲೈ ಇಂದ್ರನೇ । **ಆಜೌ**—ಯುದ್ಧದಲ್ಲಿ । **ವಿಶ್ವಂ**—ಸಮಸ್ತವಾದುದೂ । **ತ್ಯತ್**—ಪ್ರಸಿದ್ಧವಾದುದೂ ಆದ ಯಾವ ಕರ್ಮವುಂಟೋ ಅದು । **ತವ ಹ**—ನಿನ್ನ ಕರ್ಮವೇ ಆಗಿದೆ । **ಯಾ**—ಯಾವ । **ಧುನೀಚುಮುರೀ**—ಧುನಿ ಮತ್ತು ಚುಮುರೀ ಎಂಬ ಅಸುರರನ್ನು । **ಸಿಷ್ವಪ್**---ಅಲಸರಾಗುವಂತೆ ಮಾಡಿದೆಯೋ ಅವರು । **ಸಸ್ತಃ**—ಸಂಗ್ರಾಮದಲ್ಲಿ ಸತ್ತುಬಿದ್ದರು (ಎಲೈ ಇಂದ್ರನೇ) । **ತುಭ್ಯಂ**—ನಿನ್ನನ್ನುದ್ದೇಶಿಸಿ । **ಸುನ್ವನ್**—ಸೋಮವನ್ನು ಹಿಂಡುವವನೂ । **ಪಕ್ಥೀ**—ಹವಿಸ್ಸುಗಳನ್ನು ಪಕ್ವಮಾಡಿ ಅರ್ಪಿಸುವವನೂ । **ಇಧ್ಮ ಭೃತಿಃ**—ಇಧ್ಮಗಳನ್ನು ಸಂಗ್ರಹಿಸುವವನೂ ಆದ । **ದಭೀತಿಃ**—ದಭೀತಿಯೆಂಬ ರಾಜರ್ಷಿಯು । **ಸೋಮೇಭಿಃ**—ಸೋಮಗಳಿಂದಲೂ । **ಅರ್ಕೈಃ**—ಹವಿಸ್ಸಿನ ರೂಪದ ಅನ್ನಗಳಿಂದಲೂ । **ದೀದಯದಿತ್**—ನಿನ್ನನ್ನು ಪ್ರಕಾಶಿಸುವಂತೆ ಮಾಡುತ್ತಾನೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಯುದ್ಧದಲ್ಲಿ ಸಮಸ್ತವಾದುದೂ, ಪ್ರಸಿದ್ಧವಾದುದೂ ಆದ ಯಾವ ಕರ್ಮವುಂಟೋ ಅದು ನಿನ್ನ ಕರ್ಮವೇ ಆಗಿದೆ. ಯಾವ ಧುನಿ ಮತ್ತು ಚುಮುರೀ ಎಂಬ ಅಸುರರನ್ನು ಅಲಸರಾಗುವಂತೆ ಮಾಡಿದೆಯೋ ಅವರು ಸಂಗ್ರಾಮದಲ್ಲಿ ಸತ್ತುಬಿದ್ದರು. ಎಲೈ ಇಂದ್ರನೇ, ನಿನ್ನನ್ನುದ್ದೇಶಿಸಿ ಸೋಮವನ್ನು ಹಿಂಡುವವನೂ ಹವಿಸ್ಸುಗಳನ್ನು ಪಕ್ವವಾಗುವಂತೆ ಮಾಡಿ ಅರ್ಪಿಸುವವನೂ, ಇಧ್ಮಗಳನ್ನು ಸಂಗ್ರಹಿಸುವವನೂ ಆದ ದಭೀತಿಯೆಂಬ ರಾಜರ್ಷಿಯು ಸೋಮಗಳಿಂದಲೂ ಹವಿಸ್ಸಿನ ರೂಪದ ಅನ್ನಗಳಿಂದಲೂ ನಿನ್ನನ್ನು ಪ್ರಕಾಶಿಸುವಂತೆ ಮಾಡುತ್ತಾನೆ. (ಪೂಜಿಸುತ್ತಾನೆ)

## English Translation.

All this, Indra, has been your work in war : you have put to sleep, (in death), the slumbering Dhuni and Chumuri ; and thereupon Dabhiti, pouring the libition, preparing the oblation, and supplying the fuel, has glorified you with Soma offerings.

॥ ವಿಶೇಷವಿಷಯಗಳು ॥

**ದಭೀತಿಂ**—ದಭೀತಿಯು ಯೋಧನೆಂದು ಕೆಲವು ಕಡೆಯೂ ಋಷಿಯೆಂದು ಕೆಲವುಕಡೆಯೂ ಹೇಳಿದೆ.

**ಇಂದ್ರೋ ಧುನಿಂ ಚ ಚುಮುರಿಂ ಚ ದಂಭಯಞ್ಛ್ರದ್ಧಾಮನಸ್ಯಾ ಶೃಣುತೇ ದಭೀತಯೇ ।**

(ಋ. ಸಂ. ೧೦-೧೧೩-೯)

**ಸ್ವಪ್ನೇನಾಭ್ಯುಪ್ಯಾ ಚುಮುರಿಂ ಧುನಿಂ ಚ ಜಘಂಥ ದಸ್ಯುಂ ಪ್ರ ದಭೀತಿಮಾವಃ ।**

(ಋ. ಸಂ. ೨-೧೫-೯)

ಎಂಬ ಋಕ್ಕುಗಳಲ್ಲಿ **ದಭೀತಿಯನ್ನು** ರಾಜರ್ಷಿಯೆಂದೂ ಅವನಿಗಾಗಿ ಇಂದ್ರನು ಚುಮುರಿ ಮತ್ತು ಧುನಿಗಳನ್ನು ಜಯಿಸಿದುದಾಗಿಯೂ ಹೇಳಿದೆ. ಅವನು ಇಂದ್ರನಿಗೆ ಸೋಮರಸವನ್ನು ಹಿಂಡಿ ಅರ್ಪಿಸಿ ಅದರಿಂದ ಇಂದ್ರನ ಅನುಗ್ರಹವನ್ನು ಪಡೆದನೆಂದು ಗೊತ್ತಾಗುತ್ತದೆ.

**ಅಸ್ವಾಪಯದ್ದಭೀತಯೇ ಸಹಸ್ರಾ ತ್ರಿಂಶತಂ ಹಥೈಃ । ದಾಸಾನಾಮಿಂದ್ರೋ ಮಾಯಯಾ ।**

(ಋ. ಸಂ. ೪-೩೦-೨೧)

**ಅರಜ್ಜೌ ದಸ್ಯೂನ್ತ್ಸಮುನಬ್ದಭೀತಯೇ ಸುಪ್ರಾವ್ಯೋ ಅಭವಃ ಸಾಸ್ಯುಕ್ಥೈಃ ।**

(ಋ. ಸಂ. ೨-೧೩-೯)

ಎಂಬ ಋಕ್ಕುಗಳಲ್ಲಿ ಇಂದ್ರನು **ದಭೀತಿಗಾಗಿ** ಮುವತ್ತುಸಹಸ್ರ ದಾಸರುಗಳನ್ನು (ಕಪ್ಪು ಜನರನ್ನು) ನಿದ್ರಾವಶರನ್ನಾಗಿ ಮಾಡಿದುದೂ, ದಸ್ಯುಗಳನ್ನೆಲ್ಲಾ ಹಗ್ಗವಿಲ್ಲದೇ ಬಂಧಿಸಿದುದೂ ವರ್ಣಿತವಾಗಿದೆ.

# ಇಪ್ಪತ್ತೊಂದನೆಯ ಸೂಕ್ತವು

|| ಸಾಯಣಭಾಷ್ಯಂ ||

**ಇಮಾ ಉ ತ್ವೇತಿ ದ್ವಾದಶರ್ಚಂ ಷಷ್ಠಂ ಸೂಕ್ತಂ ಭರದ್ವಾಜಸ್ಯಾರ್ಷಂ ತ್ರೈಷ್ಟುಭಮೈಂದ್ರಂ । ನವಮ್ಯೇಕಾದಶೀ ಚ ವೈಶ್ವದೇವ್ಯೌ । ತಥಾ ಚಾನುಕ್ರಮ್ಯತೇ । ಇಮಾ ಉ ದ್ವಾದಶ ನವಮ್ಯೇಕಾದಶ್ಯೌ ವೈಶ್ವದೇವ್ಯಾವಿತಿ ॥ ಉಪಹವ್ಯನಾಮ್ನ್ಯೇಕಾಹ ಇದಂ ಸೂಕ್ತಂ ಮರುತ್ವತೀಯನಿವಿದ್ಧಾನಂ । ಸೂತ್ರಿತಂ ಚ । ಇಮಾ ಉ ತ್ವಾ ಯ ಏಕ ಇದಿತಿ ಮಧ್ಯಂದಿನಃ । ಆ. ೯-೭ । ಇತಿ ॥ ಇಂದ್ರಾವಿಷ್ಣ್ವೋರುತ್ಕ್ರಾಂತಿನಾಮ್ನ್ಯೇಕಾಹೇಽಪೀದಂ ಮರುತ್ವತೀಯನಿವಿದ್ಧಾನಂ । ಸೂತ್ರಿತಂ ಚ । ಇಮಾ ಉ ತ್ವಾ ದ್ಯೌರ್ನ ಯ ಇಂದ್ರೇತಿ ಮಧ್ಯಂದಿನಃ । ಆ. ೯-೭ । ಇತಿ ॥ ತೃತೀಯೇ ಛಂದೋಮೇಽಪಿ ಮರುತ್ವತೀಯ ಇದಂ ಸೂಕ್ತಂ । ಸೂತ್ರಿತಂ ಚ । ಪ್ರ ಮಂದಿನ ಇಮಾ ಉ ತ್ವೇತಿ ಮರುತ್ವತೀಯಂ । ಆ. ೮-೭ । ಇತಿ ॥**

ಅನುವಾದವು—**ಇಮಾ ಉ ತ್ವಾ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಆರನೆಯ ಸೂಕ್ತವು. ಇದರಲ್ಲಿ ಹನ್ನೆರಡು ಋಕ್ಕುಗಳಿರುವವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು; ಇಂದ್ರನು ದೇವತೆಯು; ತ್ರಿಷ್ಟುಪ್ ಛಂದಸ್ಸು. ಈ ಸೂಕ್ತದ ಒಂಭತ್ತು ಮತ್ತು ಹನ್ನೊಂದನೆಯ ಋಕ್ಕುಗಳು ವಿಶ್ವೇದೇವತಾಕವು. ಅನುಕ್ರಮಣಿಕೆಯಲ್ಲಿ—**ಇಮಾ ಉ ದ್ವಾದಶ ನವಮ್ಯೇಕಾದಶ್ಯೌ ವೈಶ್ವದೇವ್ಯೌ** ಎಂದು ಹೇಳಿರುವುದು. ಉಪಹವ್ಯವೆಂಬ ಏಕಾಹಯಾಗದಲ್ಲಿ ಈ ಸೂಕ್ತವನ್ನು ಮರುತ್ವತೀಯಶಸ್ತ್ರಮಂತ್ರಗಳ ಮಧ್ಯದಲ್ಲಿ ನಿವಿದ್ಧಾನೀಯಸೂಕ್ತವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಇಮಾ ಉ ತ್ವಾ ಯ ಏಕ ಇದಿತಿ ಮಧ್ಯಂದಿನಃ** ಎಂಬ ಸೂತ್ರದಿಂದ (ಆ. ೯-೭) ವಿವೃತವಾಗಿರುವುದು. ಇಂದ್ರಾವಿಷ್ಣುದೇವತೆಗಳನ್ನುದ್ದೇಶಿಸಿ ಮಾಡುವ ಉತ್ಕ್ರಾಂತಿಯೆಂಬ ಏಕಾಹಯಾಗದಲ್ಲಿಯೂ ಮರುತ್ವತೀಯಶಸ್ತ್ರಮಂತ್ರಗಳ ನಡುವೆ ಈ ಸೂಕ್ತವನ್ನು ನಿವಿದ್ಧಾನೀಯಸೂಕ್ತವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಇಮಾ ಉ ತ್ವಾ ದ್ಯೌರ್ನ ಯ ಇಂದ್ರೇತಿ ಮಧ್ಯಂದಿನಃ** ಎಂಬ ಸೂತ್ರದಿಂದ (ಆ. ೯-೭) ವಿವೃತವಾಗಿರುವುದು. ತೃತೀಯ ಛಂದೋಮಾ ಮಂತ್ರಗಳಲ್ಲಿ ಮರುತ್ವತೀಯ ಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ಪ್ರ ಮಂದಿನ ಇಮಾ ಉ ತ್ವೇತಿ ಮರುತ್ವತೀಯಂ** ಎಂಬ ಸೂತ್ರದಿಂದ (ಆ ೮-೭) ವಿವೃತವಾಗಿರುವುದು.

## ಸೂಕ್ತ—೨೧

ಮಂಡಲ—೬ ॥ ಅನುವಾಕ—೨ ॥ ಸೂಕ್ತ—೨೧ ॥

ಅಷ್ಟಕ—೪ ॥ ಅಧ್ಯಾಯ—೬ ॥ ವರ್ಗ—೧೧,,೧೨ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೨ ॥

॥ ಋಷಿ—ಭರದ್ವಾಜೋ ಬಾರ್ಹಸ್ಪತ್ಯಃ ॥

॥ ದೇವತಾ—೧-೮, ೧೦, ೧೨. ಇಂದ್ರಃ ॥ ೯,೧೧. ವಿಶ್ವೇದೇವಾಃ ॥

॥ ಛಂದಃ—ತ್ರಿಷ್ಟುಪ್ ॥

|| ಸಂಹಿತಾಪಾಠಃ ||

ಇಮಾ ಉ ತ್ವಾ ಪುರುತಮಸ್ಯ ಕಾರೋರ್ಹವ್ಯಂ ವೀರ ಹವ್ಯಾ ಹವಂತೇ |
ಧಿಯೋ ರಥೇಷ್ಠಾಮಜರಂ ನವೀಯೋ ರಯಿರ್ವಿಭೂತಿರೀಯತೇ ವಚಸ್ಯಾ||

|| ಪದಪಾಠಃ ||

ಇಮಾಃ | ಊಂ ಇತಿ | ತ್ವಾ | ಪುರುಽತಮಸ್ಯ | ಕಾರೋಃ | ಹವ್ಯಂ | ವೀರ | ಹವ್ಯಾಃ | ಹವಂತೇ |
ಧಿಯಃ | ರಥೇಽಸ್ಥಾಂ | ಅಜರಂ | ನವೀಯಃ | ರಯಿಃ | ವಿಽಭೂತಿಃ | ಈಯತೇ | ವಚಸ್ಯಾ || ೧ ||

|| ಸಾಯಣಭಾಷ್ಯಂ ||

ಪುರುತಮಸ್ಯ ಬಹುಲಂ ಕಾಮಂ ಕಾಂಕ್ಷತಃ || ತಮು ಅಭಿಕಾಂಕ್ಷಾಯಾಮಿತಿ ಧಾತುಃ || ಕಾರೋಃ ಸ್ತೋತುರ್ಭರದ್ವಾಜಸ್ಯ ಸಂಬಂಧಿನ್ಯೋ ಹವ್ಯಾಃ ಸ್ತುತ್ಯಾಃ ಪ್ರಶಸ್ಯಾ ಇಮಾ ಧಿಯಃ ಸ್ತುತಯೋ ಹೇ ವೀರ ಶೂರೇಂದ್ರ ಹವ್ಯಂ ತ್ವಾ ತ್ವಾಂ ಹವಂತೇ | ಹ್ವಯಂತಿ | ಕೀದೃಶಂ | ರಥೇಸ್ಥಾಂ ರಥೇ ಸ್ಥಿತಮಜರಂ ಜರಾರಹಿತಂ ನವೀಯೋ ನವೀಯಾಂಸಂ ನವತರಂ | ಉ ಇತಿ ಪೂರಣಃ | ಅಪಿ ಚ ವಚಸ್ಯಾ ಸ್ತುತ್ಯಾ ಶ್ರೇಷ್ಠಾ ವಿಭೂತಿರ್ಜಗತೋ ವಿಭವಹೇತೂ ರಯಿರ್ಹವಿರ್ಲಕ್ಷಣಂ ಧನಮೀಯತೇ | ತ್ವಾಮಭಿಗಚ್ಛತಿ ||

|| ಪ್ರತಿಪದಾರ್ಥ ||

**ವೀರ**—ಶೂರನಾದ ಎಲೈ ಇಂದ್ರನೇ | **ಪುರುತಮಸ್ಯ**—ಅಧಿಕವಾದ ಅಪೇಕ್ಷೆಯುಳ್ಳವನೂ | **ಕಾರೋಃ**—ಸ್ತುತಿಕರ್ತನೂ ಆದ ಭರದ್ವಾಜನ | **ಹವ್ಯಾಃ**—ಪ್ರಶಸ್ಯವಾದ | **ಇಮಾಃ ಧಿಯಃ**—ಈ ಸ್ತುತಿಗಳು | **ರಥೇಸ್ಥಾಂ**—ರಥಾರೂಢನೂ | **ಅಜರಂ**—ಜರಾರಹಿತನೂ | **ನವೀಯಃ**—ನೂತನರೂಪವುಳ್ಳವನೂ | **ಹವ್ಯಂ**—ಪೂಜ್ಯನೂ ಆದ | **ತ್ವಾ**—ನಿನ್ನನ್ನು | **ಹವಂತೇ**—ಪ್ರಾರ್ಥಿಸಿ ಕರೆಯುತ್ತವೆ | (ಅಲ್ಲದೇ) **ವಚಸ್ಯಾ**—ಶ್ರೇಷ್ಠವಾದುದೂ | **ವಿಭೂತಿಃ**—ಜಗತ್ಸಂಪತ್ತಿಹೇತುವಾದುದೂ ಆದ | **ರಯಿಃ**—ಹವಿಸ್ಸಿನರೂಪದ ಧನವು | **ಈಯತೇ**—ನಿನ್ನನ್ನು ಬಂದು ಸೇರುತ್ತದೆ.

|| ಭಾವಾರ್ಥ ||

ಶೂರನಾದ ಎಲೈ ಇಂದ್ರನೇ, ಅಧಿಕವಾದ ಅಪೇಕ್ಷೆಯುಳ್ಳವನೂ, ಸ್ತುತಿಕರ್ತನೂ ಆದ ಭರದ್ವಾಜನ ಪ್ರಶಸ್ಯವಾದ ಈ ಸ್ತುತಿಗಳು ರಥಾರೂಢನೂ, ಜರಾರಹಿತನೂ, ನೂತನರೂಪವುಳ್ಳವನೂ, ಪೂಜ್ಯನೂ ಆದ ನಿನ್ನನ್ನು ಪ್ರಾರ್ಥಿಸಿ ಕರೆಯುತ್ತವೆ. ಅಲ್ಲದೇ, ಶ್ರೇಷ್ಠವಾದುದೂ, ಜಗತ್ಸಂಪತ್ತಿಹೇತುವಾದುದೂ ಆದ ಹವಿಸ್ಸಿನರೂಪದ ಧನವು ನಿನ್ನನ್ನು ಬಂದು ಸೇರುತ್ತದೆ.

## English Translation.

These earnest adorations of the much-desiring worshipper glorify you, hero, Indra, who are adorable: mounted on your car, undecaying, ever new, and to whom the wealth (of sacrifice), the most excellent opulence proceeds.

॥ ಸಂಹಿತಾಪಾಠಃ ॥

ತಮು ಸ್ತುಷ ಇಂದ್ರಂ ಯೋ ವಿದಾನೋ ಗಿರ್ವಾಹಸಂ ಗೀರ್ಭಿರ್ಯಜ್ಞ-
ವೃದ್ಧಂ ।
ಯಸ್ಯ ದಿವಮತಿ ಮಹ್ನಾ ಪೃಥಿವ್ಯಾಃ ಪುರುಮಾಯಸ್ಯ ರಿರಿಚೇ ಮಹಿತ್ವಂ ॥

॥ ಪದಪಾಠಃ ॥

ತಂ । ಊಂ ಇತಿ । ಸ್ತುಷೇ । ಇಂದ್ರಂ । ಯಃ । ವಿದಾನಃ । ಗಿರ್ವಾಹಸಂ । ಗೀಃऽಭಿಃ । ಯಜ್ಞऽವೃದ್ಧಂ॥
ಯಸ್ಯ । ದಿವಂ । ಅತಿ । ಮಹ್ನಾ । ಪೃಥಿವ್ಯಾಃ । ಪುರುऽಮಾಯಸ್ಯ । ರಿರಿಚೇ । ಮಹಿऽತ್ವಂ ॥ ೨ ॥

॥ ಸಾಯಣಭಾಷ್ಯಂ ॥

ಯ ಇಂದ್ರೋ ವಿದಾನಃ ಸರ್ವಂ ವಿದ್ವಾನ್ ಸರ್ವೈರ್ಜ್ಞಾಯಮಾನೋ ವಾ ಗಿರ್ವಾಹಸಂ ಗೀರ್ಭಿರ್ವಹನೀಯಂ ಯಜ್ಞವೃದ್ಧಂ ಯಜ್ಞೈಃ ಪ್ರವೃದ್ಧಂ ತಮು ತಮೇವೇಂದ್ರಂ ಸ್ತುಷೇ । ಸ್ತುವೇ । ಪುರುಮಾಯಸ್ಯ ಬಹುಪ್ರಜ್ಞಸ್ಯ ಬಹುವಂಚನಸ್ಯ ವಾ ಯಸ್ಯೇಂದ್ರಸ್ಯ ಮಹಿತ್ವಂ ಮಾಹಾತ್ಮ್ಯಂ ದಿವಂ ದಿವೋ ದ್ಯುಲೋಕಾತ್ ॥ ಪಂಚಮ್ಯರ್ಥೇ ದ್ವಿತೀಯಾ ॥ ಪೃಥಿವ್ಯಾ ಭೂಲೋಕಾನ್ಮಹ್ನಾ ಮಹಿಮ್ನಾತಿ ರಿರಿಚೇ ಅತಿರಿಚ್ಯತೇ ತಂ ಸ್ತುವ ಇತಿ ಸಂಬಂಧಃ ॥

। ಪ್ರತಿಪದಾರ್ಥ ।

**ಯಃ**—ಯಾವ ಇಂದ್ರನು । **ವಿದಾನಃ**—ಸಕಲವನ್ನೂ ಅರಿತಿರುವನೋ ಅಂತಹ । **ಗೀರ್ಭಿಃ**—ಸ್ತುತಿಗಳಿಂದ । **ಗಿರ್ವಾಹಸಂ**—ಪ್ರಶಂಸಿತನೂ । **ಯಜ್ಞವೃದ್ಧಂ**—ಯಜ್ಞಗಳಿಂದ ವೃದ್ಧಿಯನ್ನು ಹೊಂದತಕ್ಕವನೂ ಆದ । **ತಮು ಇಂದ್ರಂ**—ಅದೇ ಇಂದ್ರನನ್ನೇ । **ಸ್ತುಷೇ**—ಸ್ತುತಿಸುತ್ತೇನೆ । **ಪುರುಮಾಯಸ್ಯ**—ಅತ್ಯಧಿಕವಾದ ಜ್ಞಾನವುಳ್ಳ । **ಯಸ್ಯ**—ಯಾವ ಇಂದ್ರನ । **ಮಹಿತ್ವಂ**—ಮಾಹಾತ್ಮ್ಯವು । **ದಿವಂ**—ದ್ಯುಲೋಕಕ್ಕಿಂತಲೂ । **ಪೃಥಿವ್ಯಾಃ**—ಭೂಲೋಕಕ್ಕಿಂತಲೂ । **ಮಹ್ನಾ**—ಸ್ವಮಹಿಮೆಯಿಂದ । **ಅತಿ ರಿರಿಚೇ**—ಮೀರಿದ್ದುದೋ ಅಂತಹ ಇಂದ್ರನನ್ನು (ನಾನು ಸ್ತುತಿಸುತ್ತೇನೆ).

॥ ಭಾವಾರ್ಥ ॥

ಯಾವ ಇಂದ್ರನು ಸಕಲವನ್ನೂ ಅರಿತಿರುವನೋ ಅಂತಹವನೂ ಸ್ತುತಿಗಳಿಂದ ಪ್ರಶಂಸಿತನೂ ಯಜ್ಞಗಳಿಂದ ವೃದ್ಧಿಯನ್ನು ಹೊಂದತಕ್ಕವನೂ ಆದ ಅದೇ ಇಂದ್ರನನ್ನೇ ಸ್ತುತಿಸುತ್ತೇನೆ. ಅತ್ಯಧಿಕವಾದ ಜ್ಞಾನವುಳ್ಳ ಯಾವ ಇಂದ್ರನ ಮಾಹಾತ್ಮ್ಯವು ದ್ಯುಲೋಕವನ್ನೂ, ಭೂಲೋಕವನ್ನೂ ತನ್ನ ಸ್ವಮಹಿಮೆಯಿಂದ ಮೀರಿರುವುದೋ ಅಂತಹ ಇಂದ್ರನನ್ನು ನಾನು ಸ್ತುತಿಸುತ್ತೇನೆ.

## English Translation.

I glorify that Indra who is the propitiated by praises, exalted by sacrifices, who knows all things ; the magnitude of whom, the possessor of various wisdom, exceeds in vastness (that of) heaven and earth

॥ ಸಂಹಿತಾಪಾಠಃ ॥

ಸ ಇತ್ತಮೋಽವಯುನಂ ತತನ್ವತ್ಸೂರ್ಯೇಣ ವಯುನವಚ್ಚಕಾರ ।
ಕದಾ ತೇ ಮರ್ತಾ ಅಮೃತಸ್ಯ ಧಾಮೇಯಕ್ಷಂತೋ ನ ಮಿನಂತಿ ಸ್ವಧಾವಃ ॥ ೩ ॥

॥ ಪದಪಾಠಃ ॥

ಸಃ । ಇತ್ । ತಮಃ । ಅವಯುನಂ । ತತನ್ವತ್ । ಸೂರ್ಯೇಣ । ವಯುನಽವತ್ । ಚಕಾರ ।
ಕದಾ । ತೇ । ಮರ್ತಾಃ । ಅಮೃತಸ್ಯ । ಧಾಮ । ಇಯಕ್ಷಂತಃ । ನ । ಮಿನಂತಿ । ಸ್ವಧಾಽವಃ ॥ ೩ ॥

॥ ಸಾಯಣಭಾಷ್ಯಂ ॥

ಸ ಇತ್ಸ ಏವೇಂದ್ರೋಽವಯುನಮಪ್ರಜ್ಞಾನಂ । ಪ್ರಜ್ಞಾನನಾಶನಮಿತ್ಯರ್ಥಃ । ತತನ್ವದ್ವ್ಯಾಪ್ತಿಯುಕ್ತೇನ ವಿಸ್ತೀರ್ಯಮಾಣಂ ತಮೋಽಂಧಕಾರಂ ದಿವಿ ಸೂರ್ಯೇಣ ದಿವ್ಯಾರೋಪಿತೇನ ದೇವೇನ ವಯುನವತ್ಪ್ರಕಾಶವಚ್ಚಕಾರ । ಕೃತವಾನ್ । ಪರೋಽರ್ಧರ್ಚಃ ಪ್ರತ್ಯಕ್ಷಕೃತಃ । ಹೇ ಸ್ವಧಾವೋ ಬಲವನ್ನಿಂದ್ರ ಮರ್ತಾ ಮನುಷ್ಯಾ ಅಮೃತಸ್ಯ ನಿತ್ಯಸ್ಯ ತೇ ತ್ವದೀಯಂ ಧಾಮ ಸ್ವರ್ಗಾಖ್ಯಂ ಸ್ಥಾನಂ । ತತ್ರಸ್ಥಾನ್ದೇವಾನಿತ್ಯರ್ಥಃ । ಇಯಕ್ಷಂತೋ ಯಷ್ಟುಮಿಚ್ಛಂತಃ ಕದಾ ಕದಾಚಿತ್ । ಸರ್ವದೇತ್ಯರ್ಥಃ । ನ ಮಿನಂತಿ । ಕಿಮಪಿ ಪ್ರಾಣಿಜಾತಂ ನ ಹಿಂಸಂತಿ ॥

॥ ಪ್ರತಿಪದಾರ್ಥ ॥

**ಸ ಇತ್**—ಅದೇ ಇಂದ್ರನು । **ಅವಯುನಂ**—ಪ್ರಕಾಶ (ಪ್ರಬೋಧ) ರಹಿತವಾದುದೂ । **ತತನ್ವತ್**—ವೃತ್ರನಿಂದ ವಿಸ್ತೃತವಾದುದೂ ಆದ । **ತಮಃ**—ಅಂಧಕಾರವನ್ನು । **ಸೂರ್ಯೇಣ**—ಸೂರ್ಯನಿಂದ । **ವಯುನವತ್**—ಪ್ರಕಾಶಿತವಾಗುವಂತೆ (ಜ್ಞಾನಯೋಗ್ಯವಾಗುವಂತೆ) । **ಚಕಾರ**—ಮಾಡಿದನು । **ಸ್ವಧಾವಃ**—ಶಕ್ತಿಯುತನಾದ ಎಲೈ ಇಂದ್ರನೇ । **ಮರ್ತಾಃ**—ಮಾನವರು । **ಅಮೃತಸ್ಯ**—ಮರಣರಹಿತವಾದ । **ತೇ**—ನಿನ್ನ । **ಧಾಮ**—ಸ್ಥಾನವನ್ನು (ಸ್ವರ್ಗದಲ್ಲಿರುವ ದೇವತೆಗಳನ್ನು) । **ಇಯಕ್ಷಂತಃ**—ಪೂಜಿಸಲಿಚ್ಛಿಸಿ । **ಕದಾ**—ಯಾವಾಗಲೂ । **ನ ಮಿನಂತಿ**—ಯಾವ ಪ್ರಾಣಿಯನ್ನೂ ಹಿಂಸಿಸುವುದಿಲ್ಲ.

॥ ಭಾವಾರ್ಥ ॥

ಪ್ರಸಿದ್ಧನಾದ ಇಂದ್ರನು ಪ್ರಕಾಶರಹಿತವಾದುದೂ, ವೃತ್ರನಿಂದ ವಿಸ್ತೃತವಾದುದೂ ಆದ ಅಂಧಕಾರವನ್ನು ಸೂರ್ಯನಿಂದ ಪ್ರಕಾಶಿತವಾಗುವಂತೆ ಮಾಡಿದನು. ಶಕ್ತಿಯುತನಾದ ಎಲೈ ಇಂದ್ರನೇ, ಮಾನವರು ಮರಣರಹಿತವಾದ ನಿನ್ನ ಸ್ವರ್ಗದಲ್ಲಿರುವ ದೇವತೆಗಳನ್ನು ಪೂಜಿಸಲಿಚ್ಛಿಸಿ ಯಾವಾಗಲೂ ಯಾವ ಪ್ರಾಣಿಯನ್ನೂ ಹಿಂಸಿಸುವುದಿಲ್ಲ.

## English Translation.

He who made the indistinct, wide-spreading darkness distinct wtth the sun : whenever, possessor of strength, mortals are seekir g to adore the dwelling of you who are immortal, they harm not (any living being).

॥ ವಿಶೇಷವಿಷಯಗಳು ॥

**ಸ ಇತ್ ಅವಯುನಂ ತತನ್ವತ್ ತಮಃ ಸೂರ್ಯೇಣ ವಯುನವತ್ ಚಕಾರ**—ಇಂದ್ರನು ಪ್ರಕಾಶ ರಹಿತವಾದುದೂ ವೃತ್ರನಿಂದ ಆಚ್ಛಾದಿತವಾದುದೂ ಆದ ತಮಸ್ಸನ್ನು ಎಂದರೆ ಅಂಧಕಾರವನ್ನು ಸೂರ್ಯನ ಮೂಲಕ ಪ್ರಕಾಶವಾಗುವಂತೆ ಮಾಡಿದನು. ಈ ವಿಷಯದಲ್ಲಿ ವಯುನವತ್ ಎಂಬ ಶಬ್ದಕ್ಕೆ ಯಾಸ್ಕರು—

**ವಯುನಂ ವೇತೇಃ ಕಾಂತಿರ್ವಾ ಪ್ರಜ್ಞಾ ವಾ । ಸ ಇತ್ತಮೋಽವಯುನಂ ತತನ್ವತ್ಸೂರ್ಯೇಣ ವಯುನವಚ್ಚಕಾರ । ತಮೋಽಪ್ರಜ್ಞಾನಂ ತತನ್ವತ್ ಸೂತಂ ಸೂರ್ಯೇಣ ಪ್ರಜ್ಞಾನವಚ್ಚಕಾರ ॥**

(ನಿ. ೫-೧೫)

ಎಂದು ನಿರ್ವಚನವನ್ನು ಹೇಳಿ ಇದೇ ಋಕ್ಕನ್ನು ಉದಾಹರಣೆಯಾಗಿ ಕೊಟ್ಟಿದಾರೆ. ಎಂದರೆ, ವಯುನಶಬ್ದವು ವಿ ಧಾತುವಿನಿಂದ ನಿಷ್ಪನ್ನವಾಗಿ ಕಾಂತಿ (ಪ್ರಕಾಶ) ಅಥವಾ ಪ್ರಜ್ಞೆ ಎಂಬರ್ಥವನ್ನು ಕೊಡುವುದು. ಪ್ರಕೃತ ಋಕ್ಕಿನಲ್ಲಿ ಸೂರ್ಯನು ಅಂಧಕಾರಾವೃತನಾಗಿದ್ದುದರಿಂದ ಎಲ್ಲೆಲ್ಲಿಯೂ ಕತ್ತಲೆಯು ಆವರಿಸಿತ್ತು. ಆಗ ಪ್ರಕಾಶ ಅಥವಾ ಬೆಳಕಿಲ್ಲದ್ದರಿಂದ ಯಾವ ವಸ್ತುವನ್ನೂ ನೋಡಲು ಅಥವಾ ನೋಡಿ ತಿಳಿಯಲು ಸಾಧ್ಯವಾಗುತ್ತಿರಲಿಲ್ಲ ಈ ಸ್ಥಿತಿಯಲ್ಲಿ ಇಂದ್ರನು ಎಲ್ಲೆಲ್ಲಿಯೂ ಆವರಿಸಿದ್ದ ಅಂಧಕಾರವನ್ನು ಸೂರ್ಯನ ಬೆಳಕಿನಿಂದ ಹೋಗಲಾಡಿಸಿ ಸಮಸ್ತವಸ್ತುಗಳೂ ಪ್ರಕಾಶದಿಂದ ಕಾಣುವಂತೆ ಮಾಡಿದನು ಮತ್ತು ಅವುಗಳನ್ನು ಜನರು ಪ್ರಜ್ಞೆಯಿಂದ ತಿಳಿಯುವಂತಾಯಿತು ಎಂದು ಮುಖ್ಯಾಭಿಪ್ರಾಯವು.

। ಸಂಹಿತಾಪಾಠಃ ।

ಯಸ್ತಾ ಚಕಾರ ಸ ಕುಹ ಸ್ವಿದಿಂದ್ರಃ ಕಮಾ ಜನಂ ಚರತಿ ಕಾಸು ವಿಕ್ಷು ।
ಕಸ್ತೇ ಯಜ್ಞೋ ಮನಸೇ ಶಂ ವರಾಯ ಕೋ ಅರ್ಕ ಇಂದ್ರ ಕತಮಃ ಸ
ಹೋತಾ ॥ ೪ ॥

॥ ಪದಪಾಠಃ ।

ಯಃ । ತಾ । ಚಕಾರ । ಸಃ । ಕುಹ । ಸ್ವಿತ್ । ಇಂದ್ರಃ । ಕಂ । ಆ । ಜನಂ । ಚರತಿ । ಕಾಸು । ವಿಕ್ಷು ।
ಕಃ । ತೇ । ಯಜ್ಞಃ । ಮನಸೇ । ಶಂ । ವರಾಯ । ಕಃ । ಅರ್ಕಃ । ಇಂದ್ರ । ಕತಮಃ । ಸ । ಹೋತಾ ॥

॥ ಸಾಯಣಭಾಷ್ಯಂ ॥

ಯ ಇಂದ್ರಸ್ತಾ ತಾನ್ಯುಕ್ತಪ್ರಸಿದ್ಧಾನಿ ವೃತ್ರವಧಾದೀನಿ ಕರ್ಮಾಣಿ ಚಕಾರ ಅಕರೋತ್ ಸ ಇಂದ್ರೋಽದ್ಯ ಕುಹ ಸ್ವಿತ್ ಕ್ವ ಸ್ವಿದ್ವರ್ತತೇ ಕಂ ಜನಂ ಕಮಪಿ ದೇಶಮಾ ಚರತಿ ಕಾಸು ವಿಕ್ಷು ಪ್ರಜಾಸು ವರ್ತತ ಇತೀಂದ್ರಸ್ಯ ವಿಭೂತಿಮಹತ್ತ್ವಾನ್ನ ನಿಶ್ಚೇತುಂ ಶಕ್ಯಂ । ಅಥ ಪ್ರತ್ಯಕ್ಷಸ್ತುತಿಃ । ಹೇ ಇಂದ್ರ ಕಃ ಕೀದೃಶೋ ಯಜ್ಞಸ್ತೇ ತವ ಮನಸೇ ಚೇತಸೇ ಶಂ ಸುಖಕರೋ ಭವತಿ । ವರಾಯ ತವ ವರಣಾಯ ಕಃ ಕೀದೃಶೋಽರ್ಕೋ ಮಂತ್ರಃ ಸಮರ್ಥೋ ಭವತಿ । ಹೋತಾಹ್ವಾತಾ ತವ ವರಣಾಯ ಯಃ ಸಮರ್ಥೋ ಭವತಿ ಸ ಹೋತಾ ಕತಮಶ್ಚ ಭವತಿ ॥

॥ ಪ್ರತಿಪದಾರ್ಥ ॥

**ಯಃ**—ಯಾವ ಇಂದ್ರನು । **ತಾ**—ಪ್ರಸಿದ್ಧವಾದ ಕರ್ಮಗಳನ್ನು । **ಚಕಾರ**—ಮಾಡಿದನೋ । **ಸಃ ಇಂದ್ರಃ**—ಆ ಇಂದ್ರನು । **ಕುಹ ಸ್ವಿತ್**—ಈಗ ಯಾವ ಪ್ರದೇಶದಲ್ಲಿದ್ದಾನೆ ? । **ಕಂ ಜನಂ**—ಯಾವ ಪ್ರದೇಶದಲ್ಲಿ । **ಆ ಚರತಿ**—ಸಂಚರಿಸುತ್ತಾನೆ । **ಕಾಸು ವಿಕ್ಷು**—ಯಾವ ಪ್ರಜೆಗಳೊಂದಿಗೆ ವ್ಯವಹರಿಸುತ್ತಾನೆ । **ಇಂದ್ರ**—ಎಲೈ ಇಂದ್ರನೇ । **ಕಃ**—ಯಾವ ವಿಧವಾದ । **ಯಜ್ಞಃ**—ಯಜ್ಞವು । **ತೇ**—ನಿನ್ನ । **ಮನಸೇ**—ಹೃದಯಕ್ಕೆ । **ಶಂ**—ಸುಖಕರವಾಗಿರುತ್ತದೆ । **ವರಾಯ**—ನಿನ್ನನ್ನು ಆರಿಸಿ ಪಡೆಯಲು । **ಕಃ ಅರ್ಕಃ**—ಯಾವ ಮಂತ್ರವು ಸಮರ್ಥವಾಗಿದೆ । **ಹೋತಾ ಸಃ**—ನಿನ್ನನ್ನು ಸ್ತುತಿಸುವವನು (ಹೋತೃವು) । **ಕತಮಃ**—ಎಂತಹವನು.

। ಭಾವಾರ್ಥ ।

ಯಾವ ಇಂದ್ರನು ಪ್ರಸಿದ್ಧವಾದ ಕರ್ಮಗಳನ್ನು ಮಾಡಿದನೋ ಆ ಇಂದ್ರನು ಈಗ ಯಾವ ಪ್ರದೇಶದಲ್ಲಿದ್ದಾನೆ? ಯಾವ ಪ್ರದೇಶದಲ್ಲಿ ಸಂಚರಿಸುತ್ತಾನೆ ? ಎಂತಹ ಪ್ರಜೆಗಳೊಂದಿಗೆ ವ್ಯವಹರಿಸುತ್ತಾನೆ ? ಎಲೈ ಇಂದ್ರನೇ, ಯಾವ ವಿಧವಾದ ಯಜ್ಞವು ನಿನ್ನ ಹೃದಯಕ್ಕೆ ಸುಖಕರವಾಗಿರುತ್ತದೆ ? ನಿನ್ನನ್ನು ಆರಿಸಿ ಪಡೆಯಲು ಯಾವ ಮಂತ್ರವು ಸಮರ್ಥವಾಗಿದೆ, ನಿನ್ನನ್ನು ಸ್ತುತಿಸುವ ಹೋತೃವು ಎಂತಹವನು ?

## English Translation.

What is he, the Indra who has done these deeds ? what region does he frequent ? among what people (does he abide) ? what worship, Indra, gives satisfaction to your mind ? what praise is able to gratify you ? which of your invokers (is most acceptable to you) ?

॥ ಸಂಹಿತಾಪಾಠಃ ॥

ಇದಾ ಹಿ ತೇ ವೇವಿಷತಃ ಪುರಾಜಾಃ ಪ್ರತ್ನಾಸ ಆಸುಃ ಪುರುಕೃತ್ಸಖಾಯಃ ।
ಯೇ ಮಧ್ಯಮಾಸ ಉತ ನೂತನಾಸ ಉತಾವಮಸ್ಯ ಪುರುಹೂತ ಬೋಧಿ ॥

॥ ಪದಪಾಠಃ ॥

ಇದಾ । ಹಿ । ತೇ । ವೇವಿಷತಃ । ಪುರಾಽಜಾಃ । ಪ್ರತ್ನಾಸಃ । ಆಸುಃ । ಪುರುಽಕೃತ್ । ಸಖಾಯಃ ॥
ಯೇ । ಮಧ್ಯಮಾಸಃ । ಉತ । ನೂತನಾಸಃ । ಉತ । ಅವಮಸ್ಯ । ಪುರುಽಹೂತ । ಬೋಧಿ । ೫ ॥

॥ ಸಾಯಣಭಾಷ್ಯಂ ॥

ಪುರಾಜಾಃ ಪೂರ್ವಸ್ಮಿನ್ಕಾಲೇ ಜಾತಾಃ ಪ್ರತ್ನಾಸಃ ಪುರಾಣಾ ಅಂಗಿರಃಪ್ರಭೃತಯ ಇದಾ ಹೀದಾನೀಮಿವ । ಹಿಶಬ್ದ ಉಪಮಾರ್ಥೇ ವರ್ತತೇ ವೇವಿಷತಃ ಕರ್ಮಾಣಿ ಪ್ರಾಪ್ನುವಂತೋ ಹೇ ಪುರುಕೃತ್ ಬಹೂನಾಂ ಕರ್ಮಣಾಂ ಕರ್ತರಿಂದ್ರ ತೇ ತವ ಸಖಾಯಃ ಸ್ತೋತಾರ ಆಸುಃ । ಬಭೂವುಃ । ಯೇ ಮಧ್ಯಮಾಸೋ ಮಧ್ಯಮಕಾಲಜಾ ಉತಾಪಿ ಚ ಯೇ ನೂತನಾಸೋಽದ್ಯತನಾ ಯತಸ್ತೇಽಪಿ ಸರ್ವೇ ತೇ ಸ್ತೋತಾರೋ ಬಭೂವುಃ ಅತಃ ಕಾರಣಾದುತಾಪಿ ಚಾವಮಸ್ಯಾರ್ವಾಚೀನಸ್ಯ ಮಮಾಪಿ ಸ್ತೋತ್ರಂ ಹೇ ಪುರುಹೂತ ಬಹುಭಿರಾಹೂತೇಂದ್ರ ತ್ವಂ ಬೋಧಿ । ಬುಧ್ಯಸ್ವ ॥

। ಪ್ರತಿಪದಾರ್ಥ ।

**ಪುರುಕೃತ್**-ಬಹುಕರ್ಮವನ್ನು ನೆರವೇರಿಸುವ ಎಲೈ ಇಂದ್ರನೇ । **ಪುರಾಜಾಃ**-ಪೂರ್ವದಲ್ಲಿ ಹುಟ್ಟಿದವರೂ । **ಪ್ರತ್ನಾಸಃ**—ಪುರಾತನರೂ ಆದ ಅಂಗಿರಃ ಪ್ರಭೃತಿಗಳು । **ಇದಾ ಹಿ**—ಈ ಕಾಲದಲ್ಲಿರುವಂತೆಯೇ । **ವೇವಿಷತಃ**—ಕರ್ಮಗಳನ್ನು ಮಾಡುತ್ತಾ । **ತೇ**—ನಿನ್ನ । **ಸಖಾಯಃ**—ಸುಹೃತ್ತುಗಳಾಗಿ । **ಆಸುಃ**—ಆಗಿದ್ದರು । **ಯೇ**—ಯಾರು । **ಮಧ್ಯಮಾಸಃ**—ಮಧ್ಯಕಾಲದಲ್ಲಿ ಉತ್ಪನ್ನರಾದರೋ । **ಉತ**—ಮತ್ತು । **ನೂತನಾಸಃ**—ಈಗಿನ

ಕಾಲದಲ್ಲಿ ಉತ್ಪನ್ನರಾಗಿರುವರೋ (ಅವರೆಲ್ಲರೂ ನಿನ್ನ ಸುಹೃತ್ತುಗಳೇ ಆಗಿದ್ದಾರೆ) ಆದುದರಿಂದ | **ಅವಮಸ್ಯ**—ಈ ಅರ್ವಾಚೀನನಾದ ನನ್ನ ಸ್ತುತಿಯನ್ನೂ | **ಪುರುಹೂತ**—ಅನೇಕರಿಂದ ಕರೆಯಲ್ಪಡತಕ್ಕ ಎಲೈ ಇಂದ್ರನೇ | **ಬೋಧಿ**—ತಿಳಿ.

|| ಭಾವಾರ್ಥ ||

ಅನೇಕ ಕರ್ಮಗಳನ್ನು ನೆರವೇರಿಸುವ ಎಲೈ ಇಂದ್ರನೇ, ಪೂರ್ವದಲ್ಲಿ ಉತ್ಪನ್ನರಾದವರೂ, ವೃದ್ಧರೂ ಆದ ಅಂಗಿರಃಪ್ರಭೃತಿಗಳು ಈ ಕಾಲದಲ್ಲಿ ಇರುವಂತೆಯೇ ಕರ್ಮಗಳನ್ನು ಮಾಡುತ್ತಾ ನಿನಗೆ ಸ್ನೇಹಿತರಾಗಿ ಆಗಿದ್ದರು. ಯಾರು ಮಧ್ಯಕಾಲದಲ್ಲಿ ಉತ್ಪನ್ನರಾದರೋ ಅವರೆಲ್ಲರೂ ನಿನ್ನ ಸುಹೃತ್ತುಗಳೇ ಆಗಿದ್ದಾರೆ. ಆದುದರಿಂದ ಈ ಅರ್ವಾಚೀನನಾದ ನನ್ನ ಸ್ತುತಿಯನ್ನು ತಿಳಿ.

## English Translation.

Doer of many deeds, these elders, born former times, engaged in sacred rites, have been, as they are now, your friends ; so have those of mediaeval and those of recent (date) : therefore, invoked of many, take notice of your (present) humble (adorer).

---

|| ಸಂಹಿತಾಪಾಠಃ ||

ತಂ ಪೃಚ್ಛಂತೋಽವರಾಸಃ ಪರಾಣಿ ಪ್ರತ್ನಾ ತ ಇಂದ್ರ ಶ್ರುತ್ಯಾನು ಯೇಮುಃ |
ಅರ್ಚಾಮಸಿ ವೀರ ಬ್ರಹ್ಮವಾಹೋ ಯಾದೇವ ವಿದ್ಮ ತಾತ್ತ್ವಾ ಮಹಾಂತಂ || ೬ ||

|| ಪದಪಾಠಃ ||

ತಂ | ಪೃಚ್ಛಂತಃ | ಅವರಾಸಃ | ಪರಾಣಿ | ಪ್ರತ್ನಾ | ತೇ | ಇಂದ್ರ | ಶ್ರುತ್ಯಾ | ಅನು | ಯೇಮುಃ |
ಅರ್ಚಾಮಸಿ | ವೀರ | ಬ್ರಹ್ಮಽವಾಹಃ | ಯಾತ್ | ಏವ | ವಿದ್ಮ | ತಾತ್ | ತ್ವಾ | ಮಹಾಂತಂ || ೬ ||

|| ಸಾಯಣಭಾಷ್ಯಂ ||

ಹೇ ವೀರ ಶೂರ ಬ್ರಹ್ಮವಾಹೋ ಬ್ರಹ್ಮಭಿರ್ಮಂತ್ರೈರ್ವಹನೀಯೇಂದ್ರ ಅವರಾಸೋಽರ್ವಾಚೀನಾ ಮನುಷ್ಯಾಸ್ತ್ವಮುಕ್ತಗುಣೋಪೇತಂ ತ್ವಾಂ ಪೃಚ್ಛಂತೋಽರ್ಚಂತಃ || ಪೃಚ್ಛತಿರರ್ಚತಿಕರ್ಮಾ ||

**ಪರಾಣಿ ಪ್ರಕೃಷ್ಟಾನಿ ಪ್ರತ್ನಾ ಪ್ರತ್ನಾನಿ ಪುರಾಣಾನಿ ಶ್ರುತ್ಯಾ ಶ್ರುತ್ಯಾನಿ ಶ್ರೋತವ್ಯಾನಿ ತೇ ತ್ವದೀಯಾನಿ ಕರ್ಮಾಣ್ಯನು ಯೇಮುಃ । ಅನುಯಮನಂ ನಿಬಂಧನಂ । ಸ್ತುತಿರೂಪಾಭಿರ್ವಾಗ್ಭಿರ್ನಿಬಬಂಧುಃ । ತಥಾ ವಯಮು ಮಹಾಂತಂ ಪ್ರಭೂತಂ ತ್ವಾ ತ್ವಾಮರ್ಚಾಮಸಿ । ಅರ್ಚಾಮಃ । ಸ್ತುಮಃ । ಯಾದೇವ ಯಾನ್ಯೇವ ಕರ್ಮಾಣಿ ವಿದ್ಮ ಜಾನೀಮಃ ತಾತ್ತೈಃ ಕರ್ಮಭಿಃ ಸ್ತುಮ ಇತಿ ಸಂಬಂಧಃ ॥**

॥ಪ್ರತಿಪದಾರ್ಥ ॥

**ವೀರ**—ಶೂರನೂ । **ಬ್ರಹ್ಮವಾಹಃ**—ಸ್ತುತಿಯಿಂದ ವಹಿಸಲ್ಪಡುವವನೂ ಆದ । **ಇಂದ್ರ**—ಎಲೈ ಇಂದ್ರನೇ । **ಅವರಾಸಃ**—ವಿನೀತರಾದ ಮಾನವರು । **ತಂ**—ನಿನ್ನನ್ನು । **ಪೃಚ್ಛಂತಃ**—ಪೂಜಿಸುತ್ತಾ । **ಪರಾಣಿ**—ಉತ್ಕೃಷ್ಟವಾದುದೂ । **ಪ್ರತ್ನಾ**—ಪುರಾತನವಾದುದೂ । **ಶ್ರುತ್ಯಾ**—ಪ್ರಸಿದ್ಧವಾದುದೂ ಆದ । **ತೇ**—ನಿನ್ನ ಕರ್ಮಗಳನ್ನು । **ಅನು ಯೇಮುಃ**—ಪ್ರಶಂಸಿಸಿದ್ದಾರೆ (ಅದೇ ರೀತಿಯಲ್ಲಿ) । **ಮಹಾಂತಂ**—ಪ್ರಭೂತಗುಣಗಳುಳ್ಳ । **ತ್ವಾ**—ನಿನ್ನನ್ನು । **ಅರ್ಚಾಮಸಿ**—ನಾವೂ ಪೂಜಿಸುತ್ತೇವೆ । **ಯಾದೇವ**—ಯಾವ ಕರ್ಮಗಳನ್ನು । **ವಿದ್ಮಃ**—ಅರಿಯುತ್ತೇವೆಯೋ । **ತಾತ್**—ಆ ಕರ್ಮಗಳ ಸಹಾಯದಿಂದಲೇ ಸ್ತುತಿಸುತ್ತೇವೆ.

॥ ಭಾವಾರ್ಥ ॥

ಶೂರನೂ ಸ್ತುತಿವಾಹ್ಯನೂ ಆದ ಎಲೈ ಇಂದ್ರನೇ, ವಿನೀತರಾದ ಮಾನವರು ನಿನ್ನನ್ನು ಪೂಜಿಸುತ್ತಾ ಉತ್ಕೃಷ್ಟವಾದವೂ, ಪುರಾತನವಾದವೂ, ಪ್ರಸಿದ್ಧವಾದವೂ ಆದ ನಿನ್ನ ಕರ್ಮಗಳನ್ನು ಪ್ರಶಂಸಿಸಿದ್ದಾರೆ. ಅದೇ ರೀತಿಯಲ್ಲಿ ಪ್ರಭೂತಗುಣಗುಳ್ಳ ನಿನ್ನನ್ನು ನಾವೂ ಪೂಜಿಸುತ್ತೇವೆ. ಯಾವ ಕರ್ಮಗಳನ್ನು ನಾವು ಅರಿಯುತ್ತೇವೆಯೋ ಅವುಗಳಿಂದಲೇ ನಿನ್ನನ್ನು ಪೂಜಿಸುತ್ತೇವೆ.

## English Translation

Humble (worshippers), adoring him, commemorate, Indra, your excellent, ancient, and glorious (deeds): so, hero, who are attracted by prayer, we praise you who are mighty, for those great actions with which we are acquainted.

॥ ಸಂಹಿತಾಪಾಠಃ ॥

ಅಭಿ ತ್ವಾ ಪಾಜೋ ರಕ್ಷಸೋ ವಿ ತಸ್ಥೇ ಮಹಿ ಜಜ್ಞಾನಮಭಿ ತತ್ಸು ತಿಷ್ಠ ।
ತವ ಪ್ರತ್ನೇನ ಯುಜ್ಯೇನ ಸಖ್ಯಾ ವಜ್ರೇಣ ಧೃಷ್ಣೋ ಅಪ ತಾ ನುದಸ್ವ ॥೭॥

॥ ಪದಪಾಠಃ ॥

ಅಭಿ । ತ್ವಾ । ಪಾಜಃ । ರಕ್ಷಸಃ । ವಿ । ತಸ್ಥೇ । ಮಹಿ । ಜಜ್ಞಾನಂ । ಅಭಿ । ತತ್ । ಸು । ತಿಷ್ಠ ।
ತವ । ಪ್ರತ್ನೇನ । ಯುಜ್ಯೇನ । ಸಖ್ಯಾ । ವಜ್ರೇಣ । ಧೃಷ್ಣೋ ಇತಿ । ಅಪ । ತಾ । ನುದಸ್ವ ॥ ೭ ॥

॥ ಸಾಯಣಭಾಷ್ಯಂ ॥

ರಕ್ಷಸೋ ರಕ್ಷಸಾಂ ಸಂಬಂಧಿ ಪಾಜಃ ಸೇನಾಲಕ್ಷಣಂ ಬಲಂ ಹೇ ಇಂದ್ರ ತ್ವಾಭಿ ತ್ವಾಮಭಿಮುಖಂ ವಿ ತಸ್ಥೇ । ಪ್ರತಿಷ್ಠತೇ । ತಥಾ ತ್ವಮಪಿ ಮಹಿ ಮಹಜ್ಜಜ್ಞಾನಂ ಪ್ರಾದುರ್ಭವತ್ತದ್ಬಲಮಭಿ ಅಭಿಮುಖಃ ಸನ್ ಸು ಸುಷ್ಠು ತಿಷ್ಠ । ಸ್ಥಿರೋ ಭವ । ಸ್ಥಿತ್ವಾ ಚ ಹೇ ಧೃಷ್ಣೋ ಶತ್ರೂಣಾಂ ಧರ್ಷಕೇಂದ್ರ ತವ ತ್ವದೀಯೇನ ವಜ್ರೇಣ ತಾ ತದ್ಬಲಮಪ ನುದಸ್ವ । ಅಪಗತಂ ಪ್ರೇರಯ । ಭಿಂಧೀತ್ಯರ್ಥಃ । ಕೀದೃಶೇನ । ಪ್ರತ್ನೇನ ಪುರಾಣೇನ ಯುಜ್ಯೇನ ಯೋಜ್ಯೇನ ಸಖ್ಯಾ ನಿತ್ಯಸಹಾಯೇನ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ರಕ್ಷಸಃ—ರಾಕ್ಷಸರ । ಪಾಜಃ—ಸೇನಾರೂಪವಾದ ಶಕ್ತಿಯು । ತ್ವಾ ಅಭಿ—ನಿನ್ನನ್ನು ಸುತ್ತುವರಿದು । ವಿ ತಸ್ಥೇ—ನಿಂತಿದೆ । ಜಜ್ಞಾನಂ—ನಿನ್ನ ಮುಂದೆ ಆವಿರ್ಭೂತವಾದುದೂ । ಮಹಿ—ಮಹಚ್ಛಕ್ತಿಯುಳ್ಳದ್ದೂ ಆದ । ತತ್ ಅಭಿ—ಅದೇ ಬಲವನ್ನು ಎದುರಿಸಿ । ಸು ತಿಷ್ಠ—ಸ್ಥಿರವಾಗಿ ನಿಲ್ಲು । ಧೃಷ್ಣೋ—ಶತ್ರುನಾಶಕನಾದ ಇಂದ್ರನೇ । ಪ್ರತ್ನೇನ—ಪುರಾತನವಾದುದೂ । ಯುಜ್ಯೇನ—ಶತ್ರುಗಳ ಮೇಲೆ ಪ್ರಯೋಗಿಸಲ್ಪಡುವುದೂ । ಸಖ್ಯಾ—ಸಖಿಭೂತವಾದುದೂ ಆದ । ತವ ವಜ್ರೇಣ—ನಿನ್ನ ವಜ್ರಾಯುಧದಿಂದ । ತಾ—ಆ ಬಲವನ್ನು । ಅಪ ನುದಸ್ವ—ನಾಶಪಡಿಸು.

॥ ಭಾವಾರ್ಥ ॥

ಎಲೈ ಇಂದ್ರನೇ, ರಾಕ್ಷಸರ ಸೇನಾರೂಪವಾದ ಶಕ್ತಿ ... ನಿನ್ನನ್ನು ಸುತ್ತುಕೊಂಡು ನಿಂತಿದೆ. ನಿನ್ನ ಮುಂದೆ ಆವಿರ್ಭೂತವಾದುದೂ, ಮಹಚ್ಛಕ್ತಿಯುಳ್ಳದ್ದೂ ಆದ ಅದೇ ಬಲವನ್ನು ಎದುರಿಸಿ ಸ್ಥಿರನಾಗಿ ನಿಲ್ಲು. ಶತ್ರುನಾಶಕನಾದ ಎಲೈ ಇಂದ್ರನೇ, ಪುರಾತನವಾದುದೂ, ಶತ್ರುಗಳ ಮೇಲೆ ಪ್ರಯೋಗಿಸ್ಪಡುವುದೂ, ಸಖೀಭೂತವಾದುದೂ ಆದ ನಿನ್ನ ವಜ್ರಾಯುಧದಿಂದ ಆ ಬಲವನ್ನು ನಾಶಪಡಿಸು.

## English Translation.

The strength of the Rakshasas is concentrated against you: bear up well against that mighty manifested (effort): scatter them, valiant (Indra), with your old associate, your friend, the thunderbolt.

॥ ಸಂಹಿತಾಪಾಠಃ ॥

ಸ ತು ಶ್ರುಧೀಂದ್ರ ನೂತನಸ್ಯ ಬ್ರಹ್ಮಣ್ಯತೋ ವೀರ ಕಾರುಧಾಯಃ ।
ತ್ವಂ ಹ್ಯಾಪಿಃ ಪ್ರದಿವಿ ಪಿತೄಣಾಂ ಶಶ್ವದ್ಬಭೂಥ ಸುಹವ ಏಷ್ಟೌ ॥ ೮ ॥

॥ ಪದಪಾಠಃ ॥

ಸಃ । ತು । ಶ್ರುಧಿ । ಇಂದ್ರ । ನೂತನಸ್ಯ । ಬ್ರಹ್ಮಣ್ಯತಃ । ವೀರ । ಕಾರುऽಧಾಯಃ ।
ತ್ವಂ । ಹಿ । ಆಪಿಃ । ಪ್ರऽದಿವಿ । ಪಿತೄಣಾಂ । ಶಶ್ವತ್ । ಬಭೂಥ । ಸುऽಹವಃ । ಆऽಇಷ್ಟೌ ॥ ೮ ॥

॥ ಸಾಯಣಭಾಷ್ಯಂ ॥

ಹೇ ಕಾರುಧಾಯಃ ಕಾರೂಣಾಂ ಸ್ತೋತೄಣಾಂ ಧಾರಕ ಹೇ ವೀರೇಂದ್ರ ಸ ಪ್ರಸಿದ್ಧಸ್ತ್ವಂ ನೂತನಸ್ಯೇದಾನೀಂತನಸ್ಯ ಬ್ರಹ್ಮಣ್ಯತೋ ಬ್ರಹ್ಮ ಸ್ತೋತ್ರಂ ಕರ್ತುಮಿಚ್ಛತೋ ಮಮ ಸ್ತೋತ್ರಂ ತು ಕ್ಷಿಪ್ರಂ ಶ್ರುಧಿ । ಶೃಣುಹಿ । ಯಸ್ಮಾತ್ಕಾರಣಾತ್ ಹೇ ಇಂದ್ರ ತ್ವಮೇಷ್ಟಾವಾಯಜನೇऽಭಿಕಾಮನೇ ವಾ ಸತಿ ಸುಹವಃ ಶೋಭನಾಹ್ವಾನಃ ಸನ್ ಪ್ರದಿವಿ ಪೂರ್ವಸ್ಮಿನ್ಕಾಲೇ ಪಿತೄಣಾಮಂಗಿರಸಾಮಾಪಿರ್ಬಂಧುಃ ಶಶ್ವಚ್ಚಿರಕಾಲಂ ಬಭೂಥ ಅಭೂಃ ತಸ್ಮಾತ್ಕಾರಣಾನ್ಮದೀಯಂ ಸ್ತೋತ್ರಂ ಶ್ರುಧೀತಿ ಸಂಬಂಧಃ ॥

॥ ಪ್ರತಿಪದಾರ್ಥ ॥

**ಕಾರುಧಾಯಃ**—ಸ್ತೋತೃಗಳ ಧಾರಕನೂ । **ವೀರ**—ಶೂರನೂ ಆದ । **ಇಂದ್ರ**—ಎಲೈ ಇಂದ್ರನೇ । **ಯತ್**—ಯಾವ ಅನುಗ್ರಹದಿಂದ । **ತ್ವಂ**—ನೀನು । **ಏಷ್ಟೌ**—ಯಜ್ಞಕಾಲದಲ್ಲಿ । **ಸುಹವಃ**—ಉತ್ತಮವಾಗಿ ಪ್ರಾರ್ಥಿತನಾಗಿ । **ಪ್ರದಿವಿ**—ಹಿಂದೆಲ್ಲಾ । **ಪಿತೄಣಾಂ**—ನಮ್ಮ ಪಿತೃಪಿತಾಮಹಾದಿಗಳಾದ ಅಂಗಿರಸ್ಸುಗಳಿಗೆ । **ಆಪಿಃ**—ಬಂಧುವಾಗಿ । **ಶಶ್ವತ್**—ಸರ್ವದಾ । **ಬಭೂಥ**—(ಸಹಾಯಕನಾಗಿ) ಆಗಿದ್ದೆಯೋ (ಆ ಅನುಗ್ರಹದಿಂದಲೇ) । **ಸಃ**—ಪ್ರಸಿದ್ಧನಾದ ನೀನು । **ನೂತನಸ್ಯ**—ಈ ಕಾಲದಲ್ಲಿ ಉತ್ಪನ್ನನೂ । **ಬ್ರಹ್ಮಣ್ಯತಃ**—ನಿನ್ನನ್ನು ಸ್ತುತಿಸುವವನೂ ಆದ ನನ್ನ ಸ್ತುತಿಯನ್ನು । **ತು**—ಕ್ಷಿಪ್ರವಾಗಿ । **ಶ್ರುಧಿ**—ಕೇಳು.

॥ ಭಾವಾರ್ಥ ॥

ಸ್ತೋತೃಗಳ ಧಾರಕನೂ, ಶೂರನೂ ಆದ ಎಲೈ ಇಂದ್ರನೇ, ಯಾವ ಅನುಗ್ರಹಬುದ್ಧಿಯಿಂದ ನೀನು ಯಜ್ಞಕಾಲದಲ್ಲಿ ಉತ್ತಮವಾಗಿ ಪ್ರಾರ್ಥಿತನಾಗಿ ಹಿಂದೆಲ್ಲಾ ನಮ್ಮ ಪಿತೃಪಿತಾಮಹಾದಿಗಳಾದ ಅಂಗಿರಸ್ಸುಗಳಿಗೆ ಬಂಧುವಾಗಿ ಸರ್ವದಾ ಸಹಾಯಕನಾಗಿದ್ದೆಯೋ, ಆ ಅನುಗ್ರಹದಿಂದಲೇ ಪ್ರಸಿದ್ಧನಾದ ನೀನು ಈ ಕಾಲದಲ್ಲಿ ಉತ್ಪನ್ನನೂ, ನಿನ್ನನ್ನು ಸ್ತುತಿಸುವವನೂ ಆದ ನನ್ನ ಸ್ತುತಿಯನ್ನು ಕ್ಷಿಪ್ರವಾಗಿ ಕೇಳು.

## English Translation.

Supportor of (your) worshipers, hero, Indra, listen (to the praises) of your present adorer, for you have always attended to invocations at sacrifices in ancient times, as the kinsman of our forefathers.

॥ ಸಂಹಿತಾಪಾಠಃ ॥

ಪ್ರೋತಯೇ ವರುಣಂ ಮಿತ್ರಮಿಂದ್ರಂ ಮರುತಃ ಕೃಷ್ವಾವಸೇ ನೋ ಅದ್ಯ ।
ಪ್ರ ಪೂಷಣಂ ವಿಷ್ಣುಮಗ್ನಿಂ ಪುರಂಧಿಂ ಸವಿತಾರಮೋಷಧೀಃ ಪರ್ವತಾಂಶ್ಚ ॥ ೯ ॥

॥ ಪದಪಾಠಃ ॥

ಪ್ರ । ಊತಯೇ । ವರುಣಂ । ಮಿತ್ರಂ । ಇಂದ್ರಂ । ಮರುತಃ । ಕೃಷ್ವ । ಅವಸೇ । ನಃ । ಅದ್ಯ ।
ಪ್ರ । ಪೂಷಣಂ । ವಿಷ್ಣುಂ । ಅಗ್ನಿಂ । ಪುರಂऽಧಿಂ । ಸವಿತಾರಂ । ಓಷಧೀಃ । ಪರ್ವತಾನ್ । ಚ ॥ ೯ ॥

॥ ಸಾಯಣಭಾಷ್ಯಂ ॥

ಅಸ್ಯಾಮೃಚಿ ವಿಶ್ವೇ ದೇವಾಃ ಸ್ತೂಯಂತೇ । ಹೇ ಭರದ್ವಾಜ ಅದ್ಯೇದಾನೀಂ ವರುಣಂ ರಾತ್ರ್ಯಭಿಮಾನಿನಂ ಚ ಮಿತ್ರಮಹರಭಿಮಾನಿನಂ ಚ ಮಿತ್ರಮಹರಭಿಮಾನಿನಂ ಚೇಂದ್ರಂ ಚ ಪ್ರಸಿದ್ಧಂ ಮರುತೋ ಮರುದ್ಗಣಾಂಶ್ಚ ನೋಽಸ್ಮಾಕಮೂತಯೇ ತರ್ಪಣಾಯಾವಸೇ ರಕ್ಷಣಾಯ ಚ ಪ್ರ ಕೃಷ್ವ । ಅಭಿಮುಖೀಕುರುಷ್ವ । ಕಿಂಚ ಪೂಷಣಮೇತತ್ಸಂಜ್ಞಕಂ ಚ ವಿಷ್ಣುಂ ಸರ್ವವ್ಯಾಪಿನಂ ದೇವಂ ಚ ಪುರಂಧಿಂ ಪುರುಧಿಯಂ ಪುರುಕರ್ಮಾಣಮಗ್ನಿಂ ಚ ಸವಿತಾರಂ ಸರ್ವಸ್ಯ ಪ್ರೇರಕಂ ದೇವಮೋಷಧೀರೋಷಧ್ಯಭಿಮಾನಿನೋ ದೇವಾನ್ ಪರ್ವತಾಂಶ್ಚಾದ್ರೀನಿತ್ಯೇತಾನ್ ದೇವಾನಸ್ಮಾಕಂ ತರ್ಪಣಾಯ ರಕ್ಷಣಾಯ ಚ ಪ್ರ ಕೃಷ್ವ । ಸ್ತುತ್ಯಾಭಿಮುಖೀಕುರು ॥

॥ ಪ್ರತಿಪದಾರ್ಥ ॥

(ಎಲೈ ಭರದ್ವಾಜನೇ) **ಅದ್ಯ**—ಈಗ । **ವರುಣಂ**—ವರುಣನನ್ನೂ । **ಮಿತ್ರಂ**—ಮಿತ್ರನನ್ನೂ । **ಇಂದ್ರಂ**—ಇಂದ್ರನನ್ನೂ । **ಮರುತಃ**—ಮರುದ್ಗಣವನ್ನೂ । **ಪೂಷಣಂ**—ಪೂಷದೇವನನ್ನೂ । **ವಿಷ್ಣುಂ**—ವಿಷ್ಣುವನ್ನೂ । **ಪುರಂಧಿಂ**—ಅನೇಕ ಕರ್ಮಕರ್ತನಾದ । **ಅಗ್ನಿಂ**—ಅಗ್ನಿಯನ್ನೂ । **ಸವಿತಾರಂ**—ಸವಿತೃದೇವನನ್ನೂ । **ಓಷಧೀಃ**—ಓಷಧಿಗಳ ಅಭಿಮಾನದೇವತೆಗಳನ್ನೂ । **ಪರ್ವತಾಂಶ್ಚ**—ಪರ್ವತಾಭಿಮಾನಿದೇವತೆ

ಗಳನ್ನೂ । **ನಃ**—ನಮ್ಮ । **ಊತಯೇ**—ತೃಪ್ತ್ಯರ್ಥವಾಗಿಯೂ । **ಅವಸೇ**—ರಕ್ಷಣಾರ್ಥವಾಗಿಯೂ । **ಪ್ರ ಕೃಷ್ವ**—ನಮ್ಮ ಅಭಿಮುಖವಾಗಿರುವಂತೆ ಮಾಡು.

॥ ಭಾವಾರ್ಥ ॥

ಎಲೈ ಭರದ್ವಾಜನೇ, ವರುಣನನ್ನೂ, ಮಿತ್ರನನ್ನೂ, ಇಂದ್ರನನ್ನೂ, ಮರುದ್ಗಣವನ್ನೂ, ಪೂಷದೇವನನ್ನೂ, ವಿಷ್ಣುವನ್ನೂ, ಅನೇಕ ಕರ್ಮಕರ್ತನಾದ ಅಗ್ನಿಯನ್ನೂ, ಸವಿತೃದೇವನನ್ನೂ ಓಷಧಿಗಳ ಅಭಿಮಾನದೇವತೆಗಳನ್ನೂ, ಪರ್ವತಾಭಿಮಾನಿದೇವತೆಗಳನ್ನೂ ನಮ್ಮ ತೃಪ್ತ್ಯರ್ಥವಾಗಿಯೂ ಮತ್ತು ರಕ್ಷಣಾರ್ಥವಾಗಿಯೂ ಅಭಿಮುಖವಾಗಿರುವಂತೆ ಮಾಡು.

## English Translation.

Propitiate to-day, for our protection and preservation, Varuna, Mitra, Indra, and the Maruts, Pushan, Vishnu, Agni of many rites, Savitri, the herbs, the mountains.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಭರದ್ವಾಜಋಷಿಯು ವರುಣನೇ ಮೊದಲಾದ ವಿಶ್ವೇದೇವತೆಗಳನ್ನು ಸ್ತುತಿಸುತ್ತಾ ತನ್ನನ್ನೇ ಸಂಬೋಧಿಸಿಕೊಂಡಿದ್ದಾನೆ ಎಂದರೆ ತಾನೇ ಈ ಸೂಕ್ತದ ಋಷಿಯಾಗಿದ್ದರೂ ಇತರರನ್ನು ಸಂಬೋಧಿಸುವ ರೀತಿಯಲ್ಲಿ ಪ್ರಥಮಪುರುಷದಿಂದಲೇ ತನ್ನನ್ನು ನಿರ್ದೇಶಿಸಿದ್ದಾನೆ.

॥ ಸಂಹಿತಾಪಾಠಃ ॥

ಇಮ ಉ ತ್ವಾ ಪುರುಶಾಕ ಪ್ರಯಜ್ಯೋ ಜರಿತಾರೋ ಅಭ್ಯರ್ಚಂತ್ಯರ್ಕೈಃ ।
ಶ್ರುಧೀ ಹವಮಾ ಹುವತೋ ಹುವಾನೋ ನ ತ್ವಾವಾँ ಅನ್ಯೋ ಅಮೃತ ತ್ವದಸ್ತಿ ॥ ೧೦ ॥

॥ ಪದಪಾಠಃ ॥

ಇಮೇ । ಊಂ ಇತಿ । ತ್ವಾ । ಪುರುऽಶಾಕ । ಪ್ರಯಜ್ಯೋ ಇತಿ ಪ್ರಯಜ್ಯೋ । ಜರಿತಾರಃ । ಅಭಿ । ಅರ್ಚಂತಿ । ಅರ್ಕೈಃ ।

ಶ್ರುಧಿ । ಹವಂ । ಆ । ಹುವತಃ । ಹುವಾನಃ । ನ । ತ್ವಾऽವಾನ್ । ಅನ್ಯಃ । ಅಮೃತ । ತ್ವತ್ । ಅಸ್ತಿ ॥೧೦॥

॥ ಸಾಯಣಭಾಷ್ಯಂ ॥

**ಹೇ ಪುರುಶಾಕ ಬಹುಶಕ್ತೇ ಹೇ ಪ್ರಯಜ್ಯೋ ಪ್ರಕೃಷ್ಟೇನ ಯಜನೀಯೇಂದ್ರ ತ್ವಾ ತ್ವಾಮಿಮೇ ಜರಿತಾರಃ ಸ್ತೋತಾರೋಽರ್ಕೈರರ್ಚನೀಯೈಃ ಸ್ತೋತ್ರೈರಭ್ಯರ್ಚಂತಿ । ಅಭಿಷ್ಟುವಂತಿ । ತಥಾ ಹೇ ಅಮೃತ ಅಮರಣಶೀಲೇಂದ್ರ ಹುವಾನಃ ಸ್ತೂಯಮಾನಸ್ತ್ವಮಾ ಹುವತೋಽಭಿಷ್ಟುವತೋ ಮಮ ಹವಂ ಸ್ತೋತ್ರಂ ಶ್ರುಧಿ । ಶೃಣು । ಕಿಂಚ ತ್ವಾವಾನ್ ತ್ವತ್ಸದೃಶೋ ದೇವಸ್ತ್ವದನ್ಯೋ ನಾಸ್ತಿ ॥**

॥ ಪ್ರತಿಪದಾರ್ಥ ॥

**ಪುರುಶಾಕ**—ನಾನಾಶಕ್ತಿಯುಳ್ಳವನೂ । **ಪ್ರಯಜ್ಯೋ**— ಉತ್ತಮವಾದ ಪೂಜಾಯೋಗ್ಯನೂ ಆದ ಎಲೈ ಇಂದ್ರನೇ । **ತ್ವಾ**—ನಿನ್ನನ್ನು । **ಇಮೇ ಜರಿತಾರಃ**—ಈ ಸ್ತೋತೃಗಳು । **ಅರ್ಕೈಃ**—ಸ್ತುತಿಗಳಿಂದ । **ಅಭ್ಯರ್ಚಂತಿ**—ಪೂಜಿಸುತ್ತಾರೆ । **ಅಮೃತ**—ಮರಣರಹಿತನಾದ ಎಲೈ ಇಂದ್ರನೇ । **ಹುವಾನಃ**—ನಮ್ಮಿಂದ ಸ್ತುತ ನಾಗುವ ನೀನು । **ಆ ಹುವತಃ**—ನಿನ್ನನ್ನು ಸ್ತುತಿಸುವ ನನ್ನ । **ಹವಂ**—ಸ್ತೋತ್ರವನ್ನು । **ಶ್ರುಧಿ**—ಕೇಳು । **ತ್ವಾವಾನ್**—ನಿನಗೆ ಸದೃಶನಾದ ದೇವನು । **ತ್ವದನ್ಯಃ**—ನಿನ್ನನ್ನು ಬಿದು ಬೇರೆಯಾರೂ । **ನ ಅಸ್ತಿ**—ಇಲ್ಲವೇ ಇಲ್ಲ.

॥ ಭಾವಾರ್ಥ ॥

ನಾನಾವಿಧವಾದ ಶಕ್ತಿಯುಳ್ಳವನೂ, ಉತ್ತಮವಾದ ಪೂಜಾಯೋಗ್ಯನೂ ಆದ ಎಲೈ ಇಂದ್ರನೇ, ನಿನ್ನನ್ನು ಈ ಸ್ತೋತೃಗಳು ಸ್ತುತಿಗಳಿಂದ ಪೂಜಿಸುತ್ತಾರೆ ಮರಣರಹಿತನಾದ ಎಲೈ ಇಂದ್ರನೇ, ನಮ್ಮಿಂದ ಸ್ತುತನಾಗುವ ನೀನು ನಿನ್ನನ್ನು ಸ್ತುತಿಸುವ ನನ್ನ ಸ್ತೋತ್ರವನ್ನು ಕೇಳು. ನಿನಗೆ ಸದೃಶನಾದ ದೇವನು ನೀನಲ್ಲದೇ ಬೇರೊಬ್ಬರಿಲ್ಲ.

## English Translation.

Indra, of great power, and to be devoutly worshipped, these your adorers glorify you with hymns : do you, who are invoked, hear the invocation of (him) invoking you, for there is no other divinity than you, immortal (Indra), such as you are.

॥ ಸಂಹಿತಾಪಾಠಃ ॥

ನೂ ಮ ಆ ವಾಚಮುಪ ಯಾಹಿ ವಿದ್ವಾನ್ವಿಶ್ವೇಭಿಃ ಸೂನೋ ಸಹಸೋ ಯಜತ್ರೈಃ ।
ಯೇ ಅಗ್ನಿಜಿಹ್ವಾ ಋತಸಾಪ ಆಸುರ್ಯೇ ಮನುಂ ಚಕ್ರುರುಪರಂ ದಸಾಯ ॥ ೧೧ ॥

॥ ಪದಪಾಠಃ ॥

ಸು । ಮೇ । ಆ । ವಾಚಂ । ಉಪ । ಯಾಹಿ । ವಿದ್ವಾನ್ । ವಿಶ್ವೇಭಿಃ । ಸೂನೋ ಇತಿ । ಸಹಸಃ । ಯಜತ್ರೈಃ ।

ಯೇ । ಅಗ್ನಿಽಜಿಹ್ವಾಃ । ಋತಽಸಾಪಃ । ಆಸುಃ । ಯೇ । ಮನುಂ । ಚಕ್ರುಃ । ಉಪರಂ । ದಸಾಯ ॥೧೧॥

॥ ಸಾಯಣಭಾಷ್ಯಂ ॥

ಇಯಂ ಚ ವೈಶ್ವದೇವೀಶ್ಯ್ಚಕ್ತಂ । ಹೇ ಸಹಸಃ ಸೂನೋ ಬಲಸ್ಯ ಪುತ್ರೇಂದ್ರ ವಿದ್ವಾನ್ ಸರ್ವಜ್ಞಸ್ತ್ವಂ ಯಜತ್ರೈರ್ಯಜನೀಯೈರ್ವಿಶ್ವೇಭಿಃ ಸರ್ವೈರ್ದೇವೈಃ ಸಹ ಸು ಕ್ಷಿಪ್ರಂ ಮೇ ಮದೀಯಾ ವಾಚಃ ಸ್ತುತಿರೂಪಾಣಿ ವಚಾಂಸ್ಯುಪಾಭಿ ಆ ಯಾಹಿ । ಆಗಚ್ಛ । ಏವಂಭೂತಮಿಂದ್ರಂ ಪ್ರಾರ್ಥಯತ ಐಂದ್ರಶ್ಚಾತ್ಸೂಕ್ತಸ್ಯ । ಯೇ ದೇವಾ ಅಗ್ನಿಜಿಹ್ವಾಃ । ಅಗ್ನಿರ್ಜಿಹ್ವಾಸ್ಥಾನೀಯೋ ಯೇಷಾಂ ತೇ । ಋತಸಾಪ ಋತಂ ಯಜ್ಞಂ ಸ್ಪೃಶಂತ ಆಸುರ್ಭವಂತಿ ಯೇ ಚ ದೇವಾ ದಸಾಯ ಶತ್ರೂಣಾಮುಪಕ್ಷೇಪಣಾಯ ಮನುಂ ರಾಜರ್ಷಿಮುಪರಂ ದಸ್ಯೂನಾಮುಪರಿಭವಂ ಚಕ್ರುಃ ಕೃತವಂತಃ ತೈಃ ಸಹಾಗಚ್ಛೇತಿ ಪೂರ್ವೇಣ ಸಂಬಂಧಃ ॥

॥ ಪ್ರತಿಪದಾರ್ಥ ॥

**ಸಹಸಃ ಸೂನೋ**—ಶಕ್ತಿಪುತ್ರನಾದ ಇಂದ್ರನೇ । **ವಿದ್ವಾನ್**— ಸರ್ವಜ್ಞನಾದ ನೀನು । **ಯೇ**—ಯಾವ ದೇವತೆಗಳು । **ಅಗ್ನಿಜಿಹ್ವಾಃ**—ಅಗ್ನಿಜ್ವಾಲೆಯೇ ಜಿಹ್ವೆಯುಳ್ಳವರಾಗಿಯೂ। **ಋತಸಾಪಃ**—ಯಜ್ಞದಲ್ಲಿ ಭಾಗವನ್ನು ವಹಿಸುವವರಾಗಿಯೂ । **ಆಸುಃ**—ಆಗಿರುವರೋ (ಮತ್ತು) । **ಯೇ**—ಯಾವ ದೇವತೆಗಳು । **ದಸಾಯ**—ಶತ್ರುನಾಶಕ್ಕಾಗಿ । **ಮನುಂ**—ರಾಜರ್ಷಿಯಾದ ಮನುವನ್ನು । **ಉಪರಂ**—ಶತ್ರುವಿಗಿಂತಲೂ ಉತ್ತಮನನ್ನಾಗಿ । **ಚಕ್ರುಃ**—ಮಾಡಿದರೋ (ಅಂತಹ) । **ಯಜತ್ರೈಃ**—ಪೂಜ್ಯರೂ । **ವಿಶ್ವೇಭಿಃ**—ಸಮಸ್ತರೂ ಆದ ದೇವತೆಗಳೊಡನೆ । **ಸು**—ಶೀಘ್ರವಾಗಿ । **ಮೇ ಉಪ**—ನನ್ನ ಸ್ತುತಿಗಳಿಗೆ ಅಭಿಮುಖವಾಗಿ । **ಆ ಯಾಹಿ**—ದಯಮಾಡು.

॥ ಭಾವಾರ್ಥ ॥

ಎಲೈ ಶಕ್ತಿಪುತ್ರನಾದ ಇಂದ್ರನೇ, ಸರ್ವಜ್ಞನಾದ ನೀನು, ಅಗ್ನಿರೂಪವಾದ ಜಿಹ್ವೆಯುಳ್ಳವರಾಗಿ ಯಜ್ಞದಲ್ಲಿ ಭಾಗವಹಿಸುವವರೂ, ಶತ್ರುನಾಶಕ್ಕಾಗಿ ಮನುವನ್ನು ಶತ್ರುಗಳಿಗಿಂತಲೂ ಉತ್ತಮನನ್ನಾಗಿ ಮಾಡಿದವರೂ ಆದ ಸಕಲ ದೇವತೆಗಳೊಡನೆಯೂ ಸಹ ನನ್ನ ಸ್ತುತಿಗಭಿಮುಖನಾಗಿ ದಯಮಾಡು.

## English Translation.

Come quickly, Son of strength, you who know (all things), upon my prayer; together with all the adorable (divinities): they who, with the tongue of Agni, are partakers of the sacrifice, who rendered Manu (victorious) over his adversaries.

|| ಸಂಹಿತಾಪಾಠಃ ||

**ಸ ನೋ ಬೋಧಿ ಪುರಏತಾ ಸುಗೇಷೂತ ದುರ್ಗೇಷು ಪಥಿಕೃದ್ವಿದಾನಃ ।**

**ಯೇ ಅಶ್ರಮಾಸ ಉರವೋ ವಹಿಷ್ಠಾಸ್ತೇಭಿರ್ನ ಇಂದ್ರಾಭಿ ವಕ್ಷಿ ವಾಜಂ ॥**

|| ಪದಪಾಠಃ ||

**ಸಃ । ನಃ । ಬೋಧಿ । ಪುರಃऽಏತಾ । ಸುऽಗೇಷು । ಉತ । ದುಃऽಗೇಷು । ಪಥಿऽಕೃತ್ । ವಿದಾನಃ ।**

**ಯೇ । ಅಶ್ರಮಾಸಃ । ಉರವಃ । ವಹಿಷ್ಠಾಃ । ತೇಭಿಃ । ನಃ । ಇಂದ್ರ । ಅಭಿ । ವಕ್ಷಿ । ವಾಜಂ ॥ ೧೨ ॥**

|| ಸಾಯಣಭಾಷ್ಯಂ ||

**ಹೇ ಇಂದ್ರ ಪಥಿಕೃದ್ವರ್ತ್ಮನಾಂ ಕರ್ತಾ ವಿದಾನಃ ಸರ್ವಂ ವಿದ್ವಾನ್ ಸ ತ್ವಂ ಸುಗೇಷು ಸುಖೇನ ಗಂತವ್ಯೇಷೂತಾಪಿ ಚ ದುರ್ಗೇಷು ದುಃಖೇನ ಗಂತವ್ಯೇಷು ಚ ಮಾರ್ಗೇಷು ನೋऽಸ್ಮಾಕಂ ಪುರಏತಾ ಪುರೋ ಗಂತಾ ಬೋಧಿ । ಭವ ॥ ಬೋಧೀತಿ ಭವತೇರ್ಲೋಣ್ಮಧ್ಯಮಪುರುಷೈಕವಚನಸ್ಯ ಛಾಂದಸಂ ರೂಪಂ ॥ ಅಶ್ರಮಾಸಃ ಶ್ರಮರಹಿತಾ ಉರವೋ ಮಹಾಂತೋ ವಹಿಷ್ಠಾ ವೋಢೃತಮಾಸ್ತವ ಯೇऽಶ್ವಾಃ ಸಂತಿ ಹೇ ಇಂದ್ರ ತೇಭಿಸ್ತೈರಶ್ವೈರ್ನೋऽಸ್ಮಭ್ಯಂ ವಾಜಮನ್ನಮಭಿ ವಕ್ಷಿ । ಅಭಿವಹ ॥**

। ಪ್ರತಿಪದಾರ್ಥ ।

**ಇಂದ್ರ**—ಎಲೈ ಇಂದ್ರನೇ । **ಪಥಿಕೃತ್**—ಮಾರ್ಗಕರ್ತನೂ । **ವಿದಾನಃ**—ಸರ್ವಜ್ಞನೂ ಆದ । **ಸಃ**—ನೀನು । **ಸುಗೇಷು**—ಸುಖವಾಗಿ ಸಂಚರಿಸತಕ್ಕದ್ದೂ । **ಉತ**—ಮತ್ತು । **ದುರ್ಗೇಷು**—ದುಃಖದಿಂದ ಸಂಚರಿಸತಕ್ಕದ್ದೂ ಆದ ಮಾರ್ಗಗಳಲ್ಲಿ । **ನಃ**—ನಮ್ಮ । **ಪುರ ಏತಾ**—ಮುಂಗಾಮಿಯಾಗಿ । **ಬೋಧಿ**—ಆಗಿರು । **ಯೇ**—ಯಾವ ನಿನ್ನ ಅಶ್ವಗಳು । **ಅಶ್ರಮಾಸಃ**—ಶ್ರಮರಹಿತಗಳಾಗಿಯೂ । **ಉರವಃ**—ಮಹಚ್ಛಕ್ತಿಯುಳ್ಳವಾಗಿಯೂ । **ವಹಿಷ್ಠಾಃ**—ವಹನಯೋಗ್ಯವಾಗಿಯೂ ಇವೆಯೋ । **ತೇಭಿಃ**—ಅವುಗಳೊಂದಿಗೆ । **ನಃ**—ನಮಗೆ । **ವಾಜಂ**—ಅನ್ನವನ್ನು । **ಅಭಿ ವಕ್ಷಿ**—ವಹಿಸಿಕೊಂಡು ಬಾ.

। ಭಾವಾರ್ಥ ॥

ಎಲೈ ಇಂದ್ರನೇ, ಮಾರ್ಗಕರ್ತನೂ ಸರ್ವಜ್ಞನೂ ಆದ ನೀನು ಸುಖವಾಗಿ ಸಂಚರಿಸತಕ್ಕದ್ದೂ ಅಥವಾ ದುಃಖದಿಂದ ಸಂಚರಿಸತಕ್ಕದ್ದೂ ಆದ ಸಕಲ ವಿಧವಾದ ಮಾರ್ಗಗಳಲ್ಲಿಯೂ ಸಹ ನಮಗೆ ಮಾರ್ಗದರ್ಶಕನಾಗಿರು. ಶ್ರಮರಹಿತವಾದವೂ, ಮಹತ್ತಾದ ಶಕ್ತಿಯುಳ್ಳವೂ, ವಹನಯೋಗ್ಯವೂ ಆದ ಅಶ್ವಗಳೊಂದಿಗೆ ನಮಗೆ ಅನ್ನವನ್ನು ವಹಿಸಿಕೊಂಡು ಬಾ

English Translation.

Costructor of paths, who are cognizant (of all things), be our preceder, whether in easy or difficult (ways) : bring to us food, Indra, with those your (steeds), who are unwearied, large, and bearers of great burdens.

## ಇಪ್ಪತ್ತೆರಡನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಯ ಏಕ ಇದಿತ್ಯೇಕಾದಶರ್ಚಂ ಸಪ್ತಮಂ ಸೂಕ್ತಂ ಭರದ್ವಾಜಸ್ಯಾರ್ಷಂ ತ್ರೈಷ್ಟುಭಮೈಂದ್ರಂ । ತಥಾ ಚಾನುಕ್ರಾಂತಂ । ಯ ಏಕ ಏಕಾದಶೇತಿ ॥ ಅಭಿಪ್ಲವಿಕೇ ಪ್ರಥಮೇಽಹನಿ ದಶರಾತ್ರಸ್ಯ ಪ್ರಥಮೇಽಹನಿ ಚ ಮಾಧ್ಯಂದಿನಸವನೇ ಬ್ರಾಹ್ಮಣಾಚ್ಛಂಸಿಶಸ್ತ್ರೇಽಹೀನಸೂಕ್ತಸ್ಯ ಸ್ಥಾನೇ ತ್ರೀಣಿ ಸಂಪಾತಸೂಕ್ತಾನಿ । ತೇಷ್ವಿದಂ ದ್ವಿತೀಯಂ ಸೂಕ್ತಂ । ಸೂತ್ರಿತಂ ಚ । ಯ ಏಕ ಇದ್ಧವ್ಯಸ್ತಿಗ್ಮಶೃಂಗಃ । ಆ. ೭-೫ । ಇತಿ ॥ ಉಪಹವ್ಯನಾಮ್ನ್ಯೇಕಾಹೇಽಪೀದಂ ನಿಷ್ಕೇವಲ್ಯನಿವಿದ್ಧಾನಂ । ಸೂತ್ರಿತಂ ಚ । ಯ ಏಕ ಇದಿತಿ ಮಧ್ಯಂದಿನಃ । ಆ. ೯-೭ । ಇತಿ ॥**

ಅನುವಾದವು— **ಯ ಏಕ ಇತ್** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಏಳನೆಯ ಸೂಕ್ತವು. ಇದರಲ್ಲಿ ಹನ್ನೊಂದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು; ಇಂದ್ರನು ದೇವತೆಯು; ತ್ರಿಷ್ಟುಪ್‌ಛಂದಸ್ಸು. ಅನುಕ್ರಮಣಿಕೆಯಲ್ಲಿ— **ಯ ಏಕ ಏಕಾದಶ** ಎಂದು ಹೇಳಿರುವುದು. ಅಭಿಪ್ಲವಸಂಬಂಧವಾದ ಯಾಗದ ಮೊದಲನೆಯ ದಿವಸ ಮತ್ತು ದಶರಾತ್ರವೆಂಬ ಯಾಗದ ಮೊದಲನೆಯ ದಿವಸದಲ್ಲಿಯೂ ಸಹ ಮಾಧ್ಯಂದಿನ ಸವನಕಾಲದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು ಪಠಿಸುವ ಶಸ್ತ್ರಮಂತ್ರಗಳಲ್ಲಿ ಅಹೀನಸೂಕ್ತಕ್ಕಾಗಿ ಮೂರು ಸಂಪಾತಸೂಕ್ತಗಳನ್ನು ಪಠಿಸಬೇಕು. ಅವುಗಳಲ್ಲಿ ಈ ಸೂಕ್ತವು ಎರಡನೆಯದು. ಈ ವಿಷಯವು ಆಶ್ವಲಾಯನ ಶ್ರೌತಸೂತ್ರದ— **ಯ ಏಕ ಇದ್ಧವ್ಯಸ್ತಿಗ್ಮಶೃಂಗಃ** ಎಂಬ ಸೂತ್ರದಿಂದ (ಆ. ೭-೫) ವಿವೃತವಾಗಿರುವುದು. ಮತ್ತು ಉಪಹವ್ಯ ಎಂಬ ಏಕಾಹಯಾಗದಲ್ಲಿಯೂ ಸಹ ನಿಷ್ಕೇವಲ್ಯಶಸ್ತ್ರಮಂತ್ರಗಳ ಮಧ್ಯದಲ್ಲಿ ಈ ಸೂಕ್ತವನ್ನು ನಿವಿದ್ಧಾನೀಯಸೂಕ್ತವನ್ನಾಗಿ ಸೇರಿಸಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಯ ಏಕ ಇದಿತಿ ಮಧ್ಯಂದಿನಃ** ಎಂಬ ಸೂತ್ರದಿಂದ (ಆ. ೯-೭) ವಿವೃತವಾಗಿರುವುದು.

### ಸೂಕ್ತ—೨೨

ಮಂಡಲ—೬ ॥ ಅನುವಾಕ—೨ ॥ ಸೂಕ್ತ—೨೨ ॥

ಅಷ್ಟಕ—೪ ॥ ಅಧ್ಯಾಯ—೬ ॥ ವರ್ಗ—೧೩, ೧೪ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೧ ॥

॥ ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ॥

॥ ದೇವತಾ—ಇಂದ್ರಃ ॥

॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಯ ಏಕ ಇದ್ಧವ್ಯಶ್ಚರ್ಷಣೀನಾಮಿಂದ್ರಂ ತಂ ಗೀರ್ಭಿರಭ್ಯರ್ಚ ಆಭಿಃ ।
ಯಃ ಪತ್ಯತೇ ವೃಷಭೋ ವೃಷ್ಣ್ಯಾವಾನ್ತ್ಸತ್ಯಃ ಸತ್ವಾ ಪುರುಮಾಯಃ
ಸಹಸ್ವಾನ್ ॥ ೧ ॥

॥ ಪದಪಾಠಃ ॥

ಯಃ । ಏಕಃ । ಇತ್ । ಹವ್ಯಃ । ಚರ್ಷಣೀನಾಂ । ಇಂದ್ರಂ । ತಂ । ಗೀಃऽಭಿಃ । ಅಭಿ । ಅರ್ಚ । ಆಭಿಃ ।
ಯಃ । ಪತ್ಯತೇ । ವೃಷಭಃ । ವೃಷ್ಣ್ಯಽವಾನ್ । ಸತ್ಯಃ । ಸತ್ವಾ । ಪುರುಽಮಾಯಃ । ಸಹಸ್ವಾನ್ ॥ ೧ ॥

। ಸಾಯಣಭಾಷ್ಯಂ ।

ಯ ಇಂದ್ರಶ್ಚರ್ಷಣೀನಾಂ ಪ್ರಜಾನಾಮಾಪತ್ಸ್ವೇಕ ಇದೇಕ ಏವ ಹವ್ಯೋ ಹ್ವಾತವ್ಯ ಆಭಿರ್ಗೀರ್ಭಿಃ ಸ್ತುತಿರೂಪಾಭಿರ್ವಾಗ್ಭಿಸ್ತಮಿಂದ್ರಮಭ್ಯರ್ಚೇ । ಅಭಿಷ್ಟೌಮಿ । ಯ ಇಂದ್ರಃ ಪತ್ಯತೇ ಸ್ತೋತೄನಭಿಗಚ್ಛತಿ । ಯದ್ವಾ । ಪತ್ಯತೇ ಲೋಕಾನಾಮೀಷ್ಟೇ । ಕೀದೃಶಃ । ವೃಷಭಃ ಕಾಮಾನಾಂ ವರ್ಷಿತಾ ವೃಷ್ಣ್ಯಾವಾನ್ಬಲವಾನ್ ಸತ್ಯೋಽವಿಸಂವಾದೀ ಸತ್ವಾ ಶತ್ರೂಣಾಂ ಸಾದಯಿತಾ ಕಾಮಾನಾಂ ದಾತಾ ವಾ ॥ ಸದೇರ್ವಾ ಸನೋತೇರ್ವೇದಂ ರೂಪಂ ॥ ಪುರುಮಾಯೋ ಬಹುಪ್ರಜ್ಞಃ ಸಹಸ್ವಾನಭಿಭವನವಾನ್ ತಮಿಂದ್ರಮಭಿಷ್ಟೌಮೀತಿ ಸಂಬಂಧಃ ॥

॥ ಪ್ರತಿಪದಾರ್ಥ ॥

**ವೃಷಭಃ**—ಕಾಮವರ್ಷಕನೂ । **ವೃಷ್ಣ್ಯಾವಾನ್**—ಶಕ್ತಿವಂತನೂ । **ಸತ್ಯಃ**—ಸತ್ಯಾತ್ಮಕನೂ । **ಸತ್ವಾ**—ಇಷ್ಟಾರ್ಥಪ್ರದನೂ । **ಪುರುಮಾಯಃ**—ನಾನಾವಿಧವಾದ ಪ್ರಜ್ಞೆಯುಳ್ಳವನೂ । **ಸಹಸ್ವಾನ್**—ಶತ್ರುಗಳನ್ನು ಸೋಲಿಸುವ ಶಕ್ತಿಯುಳ್ಳವನೂ ಆದ । **ಯಃ**—ಯಾವ ಇಂದ್ರನು । **ಚರ್ಷಣೀನಾಂ**—ಮಾನವರಲ್ಲೆಲ್ಲಾ । **ಏಕ ಇತ್**—ಅದ್ವಿತೀಯನಾದ । **ಹವ್ಯಃ**—ಪೂಜ್ಯನೋ । **ಯಃ**—ಯಾವ ಇಂದ್ರನು । **ಪತ್ಯತೇ**—ಸ್ತೋತೃಗಳಿಗೆ ಅಭಿಮುಖನಾಗುವನೋ । **ತಂ ಇಂದ್ರಂ**—ಅದೇ ಇಂದ್ರನನ್ನು । **ಆಭಿಃ ಗೀರ್ಭಿಃ**—ಈ ಸ್ತುತಿಗಳಿಂದ । **ಅಭ್ಯರ್ಚೇ**—ಪೂಜಿಸುತ್ತೇನೆ.

। ಭಾವಾರ್ಥ ।

ಕಾಮವರ್ಷಕನೂ, ಶಕ್ತಿವಂತನೂ, ಸತ್ಯಾತ್ಮಕನೂ, ಇಷ್ಟಾರ್ಥಪ್ರದನೂ, ನಾನಾವಿಧವಾದ ಪ್ರಜ್ಞೆಯುಳ್ಳವನೂ, ಶತ್ರುಗಳನ್ನು ಸೋಲಿಸುವ ಶಕ್ತಿಯುಳ್ಳವನೂ ಆದ ಯಾವ ಇಂದ್ರನು ಮಾನವರಲ್ಲೆಲ್ಲಾ ಅದ್ವಿತೀಯನಾದ ಪೂಜ್ಯನಾಗಿರುವನೋ, ಯಾವ ಇಂದ್ರನು ಸ್ತೋತೃಗಳಿಗೆ ಅಭಿಮುಖನಾಗುವನೋ ಅದೇ ಇಂದ್ರನನ್ನು ಈ ಸ್ತುತಿಗಳಿಂದ ಪೂಜಿಸುತ್ತೇನೆ.

## English Translation.

I glorify with these praises, Indra, who alone is to be invoked by man : who comes (to his worshippers) the showerer (of benefits), the vigorous, the observer of truth, the subduer of foes, the possessor of manifold knowledge, the mighty.

॥ ಸಂಹಿತಾಪಾಠಃ ॥

ತಮು ನಃ ಪೂರ್ವೇ ಪಿತರೋ ನವಗ್ವಾಃ ಸಪ್ತ ವಿಪ್ರಾಸೋ ಅಭಿ ವಾಜ-
ಯಂತಃ ।
ನಕ್ಷದ್ದಾಭಂ ತತುರಿಂ ಪರ್ವತೇಷ್ಠಾಮದ್ರೋಘವಾಚಂ ಮತಿಭಿಃ ಶವಿಷ್ಠಂ॥

॥ ಪದಪಾಠಃ ॥

ತಂ । ಊಂ ಇತಿ । ನಃ । ಪೂರ್ವೇ । ಪಿತರಃ । ನವಽಗ್ವಾಃ । ಸಪ್ತ । ವಿಪ್ರಾಸಃ । ಅಭಿ । ವಾಜಯಂತಃ ।
ನಕ್ಷತ್ಽದಾಭಂ । ತತುರಿಂ । ಪರ್ವತೇಽಸ್ಥಾಂ । ಅದ್ರೋಘಽವಾಚಂ । ಮತಿಽಭಿಃ । ಶವಿಷ್ಠಂ ॥ ೨ ॥

॥ ಸಾಯಣಭಾಷ್ಯಂ ॥

ಪೂರ್ವೇ ಪ್ರತ್ನಾ ನವಗ್ವಾ ನವಭಿರ್ಮಾಸೈಃ ಸತ್ರಮನುಷ್ಠಿತವಂತಃ ಸಪ್ತ ಸಪ್ತಸಂಖ್ಯಾಕಾ ವಿಪ್ರಾಸೋ ವಿಪ್ರಾ ಮೇಧಾವಿನೋ ವಾಜಯಂತೋ ವಾಜಮನ್ನಂ ಹವಿರ್ಲಕ್ಷಣಮಿಂದ್ರಸ್ಯ ಕುರ್ವಂತಃ । ಇಂದ್ರಂ ವಾ ವಾಜಿನಂ ಬಲಿನಂ ಕುರ್ವಂತಃ ॥ ತತ್ಕರೋತೀತಿ ಣಿಚ್ ॥ ಏವಂಭೂತಾ ನೋಽಸ್ಮಾಕಂ ಪಿತರೋಽಂಗಿರಸಸ್ತಮು ತಮೇವೇಂದ್ರಂ ಮತಿಭಿಃ ಸ್ತುತಿಭಿರಭಿ । ತುಷ್ಟುವುರಿತಿ ಶೇಷಃ । ಕೀದೃಶಂ । ನಕ್ಷದ್ದಾಭಂ ॥ ನಕ್ಷತಿರ್ಗತಿಕರ್ಮಾ ॥ ಅಭಿಗಚ್ಛತಾಂ ಶತ್ರೂಣಾಂ ದಂಭಿತಾರಂ ಹಿಂಸಿತಾರಂ ತತುರಿಂ ತರಿತಾರಂ ಪರ್ವತೇಷ್ಠಾಂ ಪರ್ವತೇಷ್ವವಸ್ಥಿತಮದ್ರೋಘವಾಚಂ । ಅದ್ರೋಗ್ಧ್ರ್ಯಾನತಿಕ್ರಮಣೀಯಾ ವಾಗಾಜ್ಞಾರೂಪಾ ಯಸ್ಯ ತಂ । ಶವಿಷ್ಠಂ ಬಲವತ್ತಮಂ ॥

॥ ಪ್ರತಿಪದಾರ್ಥ ॥

**ಪೂರ್ವೇ**—ಪುರಾತನರೂ । **ನವಗ್ವಾಃ**—ನವಗ್ವ ಸಂಜ್ಞಕರೂ । **ಸಪ್ತ**—ಸಪ್ತ ಸಂಖ್ಯಾತರೂ । **ವಿಪ್ರಾಸಃ**—ಮೇಧಾವಿಗಳೂ । **ವಾಜಯಂತಃ**—ಅನ್ನೇಚ್ಛುಗಳೂ ಆದ । **ನಃ ಪಿತರಃ**—ನಮ್ಮ ಪಿತೃಗಳಾದ ಅಂಗಿರಸ್ಸುಗಳು । **ನಕ್ಷದ್ದಾಭಂ**—ಎದರುಬೀಳುವ ಶತ್ರುಗಳನ್ನು ತಡೆಯುವವನೂ । **ತತುರಿಂ**—ಶೀಘ್ರಗಾಮಿಯೂ ।

**ಪರ್ವತೇಷ್ಠಾಂ**—ಪರ್ವತದಲ್ಲಿ ಸ್ಥಿತನೂ | **ಅದ್ರೋಘವಾಚಂ**—ಅನುಲ್ಲಂಘಿತವಾದ ಆಜ್ಞೆಯುಳ್ಳವನೂ | **ಶವಿಷ್ಠಂ**—ಶಕ್ತಿಯುತನೂ ಆದ | **ತಮು**—ಅದೇ ಇಂದ್ರನನ್ನು | **ಮತಿಭಿಃ**—ಸ್ತುತಿಗಳಿಂದ | **ಅಭಿ (ತುಷ್ಟುವುಃ)**—ಸ್ತುತಿಸಿದರು.

॥ ಭಾವಾರ್ಥ ॥

ಪ್ರಾಚೀನರೂ, ನವಗ್ವಸಂಜ್ಞಕರೂ, ಸಪ್ತಸಂಖ್ಯಾಕರೂ, ಮೇಧಾವಿಗಳೂ, ಅಸ್ಮೇಚ್ಛುಗಳೂ, ನಮ್ಮ ಪಿತೃಗಳೂ ಆದ ಅಂಗಿರಸ್ಸುಗಳು ಎದುರುಬೀಳುವ ಶತ್ರುಗಳನ್ನು ತಡೆಯುವವನೂ, ಶೀಘ್ರಗಾಮಿಯೂ ಪರ್ವತಸ್ಥನೂ, ಅನುಲ್ಲಂಘಿತವಾದ ಆಜ್ಞೆಯುಳ್ಳವನೂ, ಶಕ್ತಿಯುತನೂ ಆದ ಆದೇ ಇಂದ್ರನನ್ನು ಸ್ತುತಿಗಳಿಂದ ಸ್ತುತಿಸಿದನು.

## English Translation.

To him the seven sages, our ancient, progenitors, performing the nine days' rite, were offerers of (sacrificil) food, celebrating with hymns the very strong (Indra) the humiliator of foes, the traveser of the heavens, the dweller in the clouds, whose commands are not be disobeyed.

॥ ವಿಶೇಷವಿಷಯಗಳು ॥

**ನಕ್ಷದ್ದಾಭಂ**—ಈ ಶಬ್ದಕ್ಕೆ ಯಾಸ್ಕರು ನಿರುಕ್ತವನ್ನು ಹೇಳಿದ್ದಾರೆ.

**ನಕ್ಷದ್ದಾಭಮಶ್ನುವಾನದಾಭಮಭ್ಯಶನೇನ ದಭ್ನೋತೀತಿ । ನಕ್ಷದ್ದಾಭಂ ತತುರಿಂ ಪರ್ವತೇಷ್ಠಾಮಿತ್ಯಪಿ ನಿಗಮೋ ಭವತಿ ॥**

(ನಿ ೬-೩)

ಎಂದರೆ—**ಯೋಽಭ್ಯಶನೇನ ದಭ್ನೋತಿ ಹಿನಸ್ತಿ ಸ ನಕ್ಷದ್ದಾಭ ಇತ್ಯುಚ್ಯತೇ ।** ನಕ್ಷದ್ದಾಭ ಎಂದರೆ ಸಮೀಪಕ್ಕೆ ಬರಲು ಉದ್ಯುಕ್ತನಾದ ಪುರುಷನನ್ನು ಯಾರು ಹಿಂಸಿಸುವನೋ ಎಂದರೆ ಪ್ರಹರಿಸುವನೋ ಅವನಿಗೆ ನಕ್ಷದ್ದಾಭನೆಂದು ಹೆಸರು. ಅಥವಾ ತನ್ನ ಸಮೀಪಕ್ಕೆ ಅಥವಾ ಎದುರಿಗೆ ಬರುತ್ತಿರುವ ಶತ್ರುವನ್ನು ವೇಗದಿಂದ ಮುನ್ನುಗ್ಗಿ ಆಯುಧದಿಂದ ಹೊಡಿಯುವವನಿಗೆ ನಕ್ಷದ್ದಾಭನೆಂದು ಹೆಸರು. ಮತ್ತು ಪರ್ವತದಲ್ಲಿ ವಾಸಮಾಡುವವನಿಗೂ ಈ ಹೆಸರು ಅನ್ವಯಿಸುವುದು ಈ ವಿಷಯದಲ್ಲಿ **ನಕ್ಷದ್ದಾಭಂ ತತುರಿಂ ಪರ್ವತೇಷ್ಠಾಂ** ಎಂದು ಪ್ರಕೃತ ಋಕ್ಕನ್ನೇ ಉದಾಹರಣೆಯಾಗಿ ಹೇಳಿರುವರು.

॥ ಸಂಹಿತಾಪಾಠಃ ॥

ತಮೀಮಹ ಇಂದ್ರಮಸ್ಯ ರಾಯಃ ಪುರುವೀರಸ್ಯ ನೃವತಃ ಪುರುಕ್ಷೋಃ ।
ಯೋ ಅಸ್ಕೃಧೋಯುರಜರಃ ಸ್ವರ್ವಾನ್ತಮಾ ಭರ ಹರಿವೋ ಮಾದ-
ಯಧ್ಯೈ ॥ ೩ ॥

॥ ಪದಪಾಠಃ ॥

ತಂ । ಈಮಹೇ । ಇಂದ್ರಂ । ಅಸ್ಯ । ರಾಯಃ । ಪುರುऽವೀರಸ್ಯ । ನೃऽವತಃ । ಪುರುऽಕ್ಷೋಃ ।

ಯಃ । ಅಸ್ಕೃಧೋಯುಃ । ಅಜರಃ । ಸ್ವಃऽವಾನ್ । ತಂ । ಆ । ಭರ । ಹರಿऽವಃ । ಮಾದಯಧ್ಯೈ ॥ ೩॥

॥ ಸಾಯಣಭಾಷ್ಯಂ ॥

ಪುರುವೀರಸ್ಯ ಬಹುಪುತ್ರಪೌತ್ರಯುಕ್ತಸ್ಯ ನೃವತಃ ಪರಿಚಾರಕಜನಸಹಿತಸ್ಯ ಪುರುಕ್ಷೋರ್ಬಹ್ವನ್ನಸ್ಯ ಬಹುಯಶಸೋ ವಾಸ್ಯ ರಾಯ ಇದಂ ಧನಂ ॥ ದ್ವಿತೀಯಾರ್ಥೇ ಷಷ್ಠೀ ॥ ತಮಿಂದ್ರಮೀಮಹೇ । ಯಾಚಾಮಹೇ । ಯೋ ರಯಿರಸ್ಕೃಧೋಯುರವಿಚ್ಛಿನ್ನೋಽಜರೋ ಜರಾಹಾನಿರಹಿತಃ ಸ್ವರ್ವಾನ್ ಸುಖಯುಕ್ತೋ ಹೇ ಹರಿವೋ ಹರಿವನ್ ಸ್ವಕೀಯಾಶ್ವೋಪೇತೇಂದ್ರ ತ್ವಂ ತಂ ರಯಿಂ ಮಾದಯಧ್ಯಾ ಅಸ್ಮಾನ್ಮಾದಯಿತುಮಾಭರ । ಆಹರ ॥

॥ ಪ್ರತಿಪದಾರ್ಥ ॥

**ಪುರುವೀರಸ್ಯ**—ಅನೇಕ ವೀರಪುತ್ರಾದಿಗಳಿಂದ ಕೂಡಿದುದೂ । **ನೃವತಃ**—ಸೇವಕಜನರಿಂದ ಕೂಡಿದುದೂ । **ಪುರುಕ್ಷೋಃ**—ಪಶ್ವಾದಿಧನಯುಕ್ತವಾದುದೂ ಆದ । **ಅಸ್ಯ ರಾಯಃ**—ಈ ಸಂಪತ್ತಿಗಾಗಿ । **ತಂ ಇಂದ್ರಂ**—ಅದೇ ಇಂದ್ರನನ್ನು । **ಈಮಹೇ**—ಯಾಚಿಸುತ್ತೇವೆ । **ಹರಿವಃ**—ಹರಿನಾಮಕವಾದ ಅಶ್ವಗಳುಳ್ಳ ಎಲೈ ಇಂದ್ರನೇ । **ಯಃ**—ಯಾವ ಧನವು । **ಅಸ್ಕೃಧೋಯುಃ**—ವಿಚ್ಛಿತಿಯಿಲ್ಲದೆ ಶಾಶ್ವತವಾಗಿರತಕ್ಕದ್ದೂ । **ಅಜರಃ**—ಜರಾರಹಿತವಾದುದೂ । **ಸ್ವರ್ವಾನ್**—ಸುಖಯುಕ್ತವಾದುದೂ ಆಗಿರುವುದೋ । **ತಂ**—ಆ ಧನವನ್ನು । **ಮಾದಯಧ್ಯೈ**—ನಮ್ಮ ಸಂತೃಪ್ತಿಗಾಗಿ । **ಆ ಭರ**—ತಂದೊದಗಿಸು.

॥ ಭಾವಾರ್ಥ ॥

ಅನೇಕ ವೀರಪುತ್ರಾದಿಗಳಿಂದ ಕೂಡಿದುದೂ, ಸೇವಕಜನರಿಂದ ತುಂಬಿದುದೂ, ಪಶ್ವಾದಿಧನಯುಕ್ತವಾದುದೂ ಆದ ಈ ಸಂಪತ್ತಿಗಾಗಿ ಅದೇ ಇಂದ್ರನನ್ನು ಯಾಚಿಸುತ್ತೇವೆ. ಹರಿನಾಮಕವಾದ ಅಶ್ವಗಳುಳ್ಳ ಎಲೈಇಂದ್ರನೇ, ಯಾವ ಧನವು ವಿಚ್ಛಿತ್ತಿಯಿಲ್ಲದೆ ಶಾಶ್ವತವಾಗಿರತಕ್ಕದ್ದೂ. ಜರಾರಹಿತವಾದುದೂ, ಸುಖಯುಕ್ತವಾದುದೂ ಆಗಿರುವುದೋ ಆ ಧನವನ್ನು ನಮ್ಮ ಸಂತೃಪ್ತಿಗಾಗಿ ತಂದೊಗಿಸು.

## English Translation.

We solicit that Indra for wealth, comprehending numerous descendants, followers, and much cattle, and which is undisturbed, imperishable, and the source of felicity : such riches, lord of steeds, bestow upon us to make us happy.

॥ ವಿಶೇಷವಿಷಯಗಳು ॥

**ಅಸ್ಕೃಧೋಯುಃ**—ಈ ಶಬ್ದಕ್ಕೆ ಯಾಸ್ಕರು ನಿರ್ವಚನವನ್ನು ಹೇಳುತ್ತಾ—

**ಅಸ್ಕೃಧೋಯುರಕೃಧ್ವಾಯುಃ । ಕೃಧ್ವಿತಿ ಹ್ರಸ್ವನಾಮ ನಿಕೃತ್ತಂ ಭವತಿ । ಯೋ ಅಸ್ಕೃಧೋಯುರಜರಃ ಸ್ವರ್ವಾನ್ ಇತ್ಯಪಿ ನಿಗಮೋ ಭವತಿ ॥**

(ನಿ. ೬-೩)

**ಅಸ್ಕೃಧೋಯುಃ**—ಎಂದರೆ ದೀರ್ಘಾಯುಸ್ಸುಳ್ಳವನು ಎಂದರ್ಥವು. **ಕೃಧು** ಎಂಬ ಶಬ್ದಕ್ಕೆ **ನಿಕೃತ್ತಂ**—ಕತ್ತರಿಸಲ್ಪಟ್ಟ, ಮೊಟಕಾದ ಎಂದರ್ಥವು. ಅಕೃಧವೆಂದರೆ-ಮೊಟಕಲ್ಲದ, ದೀರ್ಘವಾದ, ಆಯುಃ-ಆಯುಸ್ಸುಳ್ಳವನು. ಆದ್ದರಿಂದ ಅಸ್ಕೃಧೋಯುಃ ಅಥವಾ ಅಕೃಧ್ವಾಯುಃ ಎಂಬ ಶಬ್ದಕ್ಕೆ ಹ್ರಸ್ವವಲ್ಲದ ಎಂದರೆ ದೀರ್ಘವಾದ ಆಯುಸ್ಸುಳ್ಳವನು, ಬಹುಕಾಲ ಜೀವಿಸಿರುವವನು ಎಂದಭಿಪ್ರಾಯವು. ಈ ವಿಷಯದಲ್ಲಿ ಪ್ರಕೃತ ಋಕ್ಕನ್ನೇ ನಿರುಕ್ತಕಾರರು ಉದಾಹರಿಸಿರುವರು.

॥ ಸಂಹಿತಾಪಾಠಃ ॥

ತನ್ನೋ॑ ವಿ ವೋ॑ಚೋ॒ ಯದಿ॑ ತೇ॑ ಪು॒ರಾ ಚಿ॑ಜ್ಜರಿ॒ತಾರ॑ ಆನ॒ಶುಃ ಸು॒ಮ್ನ-

ಮಿಂದ್ರ ।

ಕಸ್ತೇ॑ ಭಾ॒ಗಃ ಕಿಂ ವಯೋ॑ ದುಧ್ರ ಖಿದ್ವಃ ಪುರುಹೂತ ಪುರೂವಸೋಽ-

ಸುರ॒ಘ್ನಃ ॥ ೪ ॥

॥ ಪದಪಾಠಃ ॥

ತತ್ । ನಃ॒ । ವಿ । ವೋ॒ಚಃ॒ । ಯದಿ॑ । ತೇ॒ । ಪು॒ರಾ । ಚಿ॒ತ್ । ಜ॒ರಿ॒ತಾರಃ॑ । ಆ॒ನ॒ಶುಃ । ಸು॒ಮ್ನಂ । ಇಂ॒ದ್ರ॒ ।

ಕಃ । ತೇ॒ । ಭಾ॒ಗಃ । ಕಿಂ । ವಯಃ॑ । ದು॒ಧ್ರ॒ । ಖಿ॒ದ್ವಃ॒ । ಪುರು॑ಽಹೂತ । ಪು॒ರು॒ವ॒ಸೋ॒ ಇತಿ॑ ಪುರು॑ಽವಸೋ ।

ಅ॒ಸು॒ರ॒ಽಘ್ನಃ ॥ ೪ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಯದಿ ತೇ ತವ ಪುರಾ ಚಿತ್ಪೂರ್ವಸ್ಮಿನ್ಕಾಲೇ ಜರಿತಾರಃ ಸ್ತೋತಾರಃ ಸುಮ್ನಂ ಸುಖಮಾನಶುಃ ತತ್ತತ್ಸುಖಂ ನೋಽಸ್ಮಾಕಂ ವಿ ವೋಚಃ । ವಿಬ್ರೂಹಿ । ದುಧ್ರ ದುರ್ಧರ ಹೇ ಖಿದ್ವಃ ಶತ್ರೂಣಾಂ ಖೇದಯಿತರ್ಹೇ ಪುರುಹೂತ ಹೇ ಪುರುವಸೋ ಇಂದ್ರ ಅಸುರಘ್ನೋಽಸುರಾಣಾಂ ಹಂತುಸ್ತೇ ತವ ಯಜ್ಞೇಷು ಕೋ ಭಾಗಃ ಕ್ಲೃಪ್ತಃ । ವಯೋ ಹವಿರ್ಲಕ್ಷಣಮನ್ನಂ ಕಿಂ ಕ್ಲೃಪ್ತಂ ।

ಯದಿ । ಕೇಚಿಚ್ಚಿರಂತನಾಃ ಪೂರ್ವಕಾಲೇऽಪಿ ತ್ವತ್ತಃ ಸಕಾಶಾತ್ಸುಖಂ ಲೇಭಿರೇ ತರ್ಹ್ಯಹಮಪಿ ತತ್ಸುಖಂ ಲಪ್ಸ್ಯೈ ಇತಿ ವಿಚಾರ್ಯ ಸುಖಪ್ರಾಪ್ತಿವಿಲಂಬೋ ಮಮಾಸೋಢವ್ಯೋ ಭವೇದಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಯದಿ**—ಒಂದು ವೇಳೆ । **ಪುರಾ ಚಿತ್**—ಹಿಂದಿನ ಕಾಲದಲ್ಲಿ । **ತೇ**—ನಿನ್ನ । **ಜರಿತಾರಃ**—ಸ್ತೋತೃಗಳು । **ಸುಮ್ನಂ**—ಸುಖವನ್ನು । **ಆನಶುಃ**—ಹೊಂದಿದ್ದೇ ಆದರೆ । **ತತ್**—ಅದೇ ಸುಖವನ್ನು । **ನಃ**—ನಮಗೂ ಸಹ । **ವಿ ವೋಚಃ**—ತಿಳಿಯಪಡಿಸು (ಒದಗಿಸು) । **ಮಧ್ರ**—ಅಪ್ರತಿಹತವಾದ ಶಕ್ತಿಯುಳ್ಳವನೂ । **ಖಿದ್ವಃ**—ಶತ್ರುಗಳನ್ನು ದುಃಖಗೊಳಿಸುವವನೂ । **ಪುರುಹೂತ**—ಅನೇಕರಿಂದ ಕರೆಯಲ್ಪಡುವವನೂ । **ಪುರುವಸೋ**—ಅತ್ಯಧಿಕವಾದ ಧನವುಳ್ಳವನೂ ಆದ ಎಲೈ ಇಂದ್ರನೇ । **ಅಸುರಘ್ನಃ**—ಅಸುರರನ್ನು ನಾಶಪಡಿಸತಕ್ಕ । **ತೇ**—ನಿನಗೆ । **ಕಃ ಭಾಗಃ**—ಯಜ್ಞದ ಯಾವ ಭಾಗವು ನಿಯಮಿತವಾಗಿದೆ ? । **ವಯಃ ಕಿಂ**—ಯಾವ ರೂಪದ ಹವಿಸ್ಸು ನಿಯಮಿತವಾಗಿದೆ ?

॥ ಭಾವಾರ್ಥ ॥

ಎಲೈ ಇಂದ್ರನೇ, ಹಿಂದಿನ ಕಾಲದಲ್ಲಿ ನಿನ್ನ ಸ್ತೋತೃಗಳು ಯಾವುದಾದರೂ ಸುಖವನ್ನು ಹೊಂದಿದ್ದೇ ಆದರೆ ಅದೇ ಸುಖವನ್ನು ನಮಗೂ ಸಹ ಒದಗಿಸು. ಅಪ್ರತಿಹತವಾದ ಶಕ್ತಿಯುಳ್ಳವನೂ ಶತ್ರುಗಳನ್ನು ದುಃಖಗೊಳಿಸುವವನೂ ಅನೇಕರಿಂದ ಕರೆಯಲ್ಪಡುವವನೂ ಅತ್ಯಧಿಕವಾದ ಧನವುಳ್ಳವನೂ ಆದ ಎಲೈ ಇಂದ್ರನೇ ಅಸುರರನ್ನು ನಾಶಪಡಿಸತಕ್ಕ ನಿನಗೆ ಯಜ್ಞದ ಯಾವ ಭಾಗವು ನಿಯಮಿತವಾಗಿದೆ ? ಯಾವ ರೂಪದ ಹವಿಸ್ಸು ನಿಯಮಿತವಾಗಿದೆ ?

English Translation.

If Indra, your worshippers have formerly obtained felicity, confer that also upon us : irresistible Indra, subduer of foes, invoked of many abounding in wealth, what is the portion, what the offering (due) to you who are the slayer of the Asuras ?

॥ ಸಂಹಿತಾಪಾಠಃ ॥

ತಂ ಪೃಚ್ಛಂತೀ ವಜ್ರಹಸ್ತಂ ರಥೇಷ್ಠಾಮಿಂದ್ರಂ ವೇಪೀ ವಕ್ವರೀ ಯಸ್ಯ ನೂ ಗೀಃ ।
ತುವಿಗ್ರಾಭಂ ತುವಿಕೂರ್ಮಿಂ ರಭೋದಾಂ ಗಾತುಮಿಷೇ ನಕ್ಷತೇ ತುಮ್ರಮಚ್ಛ ॥ ೫ ॥

॥ ಪದಪಾಠಃ ॥

ತಂ । ಪೃಚ್ಛಂತೀ । ವಜ್ರಽಹಸ್ತಂ । ರಥೇಽಸ್ಥಾಂ । ಇಂದ್ರಂ । ವೇಪೀ । ವಕ್ವರೀ । ಯಸ್ಯ । ನು । ಗೀಃ ।
ತುವಿಽಗ್ರಾಭಂ । ತುವಿಽಕೂರ್ಮಿಂ । ರಭಃಽದಾಂ । ಗಾತುಂ । ಇಷೇ । ನಕ್ಷತೇ । ತುಮ್ರಂ । ಅಚ್ಛ ॥ ೫ ॥

॥ ಸಾಯಣಭಾಷ್ಯಂ ॥

ಪೂರ್ವಯೋಪಾಲಬ್ಧ ಇಂದ್ರ ಋಷಯೇ ಕಾಮಾನ್ಪ್ರಾಯಚ್ಛತ್ ತತಃ ಸ ಕಾಮಪೂರ್ಣ ಋಷಿರಾಹ । ವಜ್ರಹಸ್ತಂ ವಜ್ರಪಾಣಿಂ ರಥೇಷ್ಠಾಂ ರಥೇ ಸ್ಥಿತಂ ತಮಿಂದ್ರಂ ಪೃಚ್ಛಂತ್ಯರ್ಚಯಂತೀ ॥ ಪೃಚ್ಛತಿರರ್ಚತಿಕರ್ಮಾ ॥ ವೇಪೀ । ವೇಪೋ ಯಾಗಾದಿಲಕ್ಷಣಂ ಕರ್ಮ । ತದ್ವತೀ ವಕ್ವರೀ ಗುಣಾನಾಂ ವಕ್ತ್ರೀ ಗೀರೀದೃಶೀ ಸ್ತುತಿರ್ಯಸ್ಯ ಯಜಮಾನಸ್ಯ ಭವತಿ । ಕೀದೃಶಮಿಂದ್ರಂ ಪೃಚ್ಛಂತೀ । ತುವಿಗ್ರಾಭಂ ತುವೀನಾಂ ಬಹೂನಾಂ ಗ್ರಹಿತಾರಂ ತುವಿಕೂರ್ಮಿಂ ಬಹುಕರ್ಮಾಣಂ ರಭೋದಾಂ ರಭಸೋ ಬಲಸ್ಯ ದಾತಾರಂ । ನು ಇತಿ ಪೂರಣಃ । ಸ ಯಜಮಾನೋ ಗಾತುಂ ಸುಖಮಿಷೇ । ಗಚ್ಛತಿ । ಕಿಂಚ ತುಮ್ರಂ ಮ್ಲಾಪಯಿತಾರಂ ಶತ್ರುಮಚ್ಛಾಭಿಮುಖಂ ನಕ್ಷತೇ । ಗಚ್ಛತಿ ॥

॥ ಪ್ರತಿಪದಾರ್ಥ ॥

**ವಜ್ರಹಸ್ತ**—ಕೈಯಲ್ಲಿ ವಜ್ರಾಯುಧವನ್ನು ಹಿಡಿದಿರುವವನೂ । **ರಥೇಷ್ಠಾಂ**—ರಥದಲ್ಲಿ ಕುಳಿತಿರುವವನೂ । **ತುವಿಗ್ರಾಭಂ**—ಅನೇಕರನ್ನು ಸ್ವೀಕರಿಸುವವನೂ । **ತುವಿಕೂರ್ಮಿಂ**—ಅನೇಕ ಕಾರ್ಯಕರ್ತನೂ । **ರಭೋದಾಂ**—ಶಕ್ತಿದಾಯಕನೂ ಆದ । **ತಂ ಇಂದ್ರಂ**—ಇಂದ್ರನನ್ನು । **ಪೃಚ್ಛಂತೀ**—ಪೂಜಿಸುತ್ತಾ । **ವೇಪೀ**—ಯಾಗಾದಿಕರ್ಮಗಳೂ । **ವಕ್ವರೀ**—ಗುಣಪ್ರಶಂಸಕವಾದ । **ಗೀಃ**—ಸ್ತುತಿಯೂ । **ಯಸ್ಯ**—ಯಾವ ಯಜಮಾನನಿಗೆ ಸೇರಿರುವುದೋ (ಆ ಯಜಮಾನನು) । **ಗಾತುಂ**—ಸುಖವನ್ನು । **ಇಷೇ**—ಪಡೆಯುತ್ತಾನೆ । **ತುಮ್ರಂ**—ಶತ್ರುವನ್ನು । **ಅಚ್ಛ**—ಎದುರಿಸಿ । **ನಕ್ಷತೇ**—ಮುನ್ನುಗ್ಗುತ್ತಾನೆ.

॥ ಭಾವಾರ್ಥ ॥

ಕೈಯಲ್ಲಿ ವಜ್ರಾಯುಧವನ್ನು ಹಿಡಿದಿರುವವನೂ, ರಥದಲ್ಲಿ ಕುಳಿತಿರುವವನೂ, ಅನೇಕರನ್ನು ಸ್ವೀಕರಿಸುವವನೂ, ಅನೇಕ ಕಾರ್ಯಕರ್ತನೂ, ಶಕ್ತಿದಾಯಕನೂ ಆದ ಇಂದ್ರನನ್ನು ಪೂಜಿಸುತ್ತಾ ಯಾಗಾದಿಕರ್ಮಗಳೂ, ಇಂದ್ರನ ಗುಣ ಪ್ರಶಂಸಕವಾದ ಸ್ತುತಿಯೂ ಯಾವ ಯಜಮಾನನಿಂದ ನಿರ್ವಹಿಸಲ್ಪಡುವುದೋ ಆ ಯಜಮಾನನು ಸುಖವನ್ನು ಪಡೆಯುತ್ತಾನೆ. ಮತ್ತು ಧೈರ್ಯದಿಂದ ಶತ್ರುವನ್ನು ಎದುರಿಸಿ ಮುನ್ನುಗ್ಗುತ್ತಾನೆ.

## English Translation.

He whose ceremonial and eulogistic hymn is commemorating Indra, the holder of the thunderbolt, seated in his car, the accepter of many, the

doer of many great deeds, the bestower of strength, proceeds promptly to acquire happines, and encounters (with confidence) the malevolent.

॥ ಸಂಹಿತಾಪಾಠಃ ॥

ಅಯಾ ಹ ತ್ಯಂ ಮಾಯಯಾ ವಾವೃಧಾನಂ ಮನೋಜುವಾ ಸ್ವತವಃ ಪರ್ವತೇನ ।
ಅಚ್ಯುತಾ ಚಿದ್ವೀಳಿತಾ ಸ್ವೋಜೋ ರುಜೋ ವಿ ದೃಳ್ಹಾ ಧೃಷತಾ ವಿರಪ್ಶಿನ್॥

॥ ಪದಪಾಠಃ ॥

ಅಯಾ । ಹ । ತ್ಯಂ । ಮಾಯಯಾ । ವವೃಧಾನಂ । ಮನಃऽಜುವಾ । ಸ್ವऽತವಃ । ಪರ್ವತೇನ ।
ಅಚ್ಯುತಾ । ಚಿತ್ । ವೀಳಿತಾ । ಸುऽಓಜಃ । ರುಜಃ । ವಿ । ದೃಳ್ಹಾ । ಧೃಷತಾ । ವಿऽರಪ್ಶಿನ್ ॥ ೬ ॥

॥ ಸಾಯಣಭಾಷ್ಯಂ ॥

ಹೇ ಸ್ವತವಃ ಸ್ವಭೂತಬಲೇಂದ್ರ ತ್ವಂ ಮನೋಜುವಾ ಮನೋವದ್ಗಚ್ಛತಾನೇನ ಪರ್ವತೇನ ಬಹುಪರ್ವಣಾ ಸ್ವಕೀಯೇನಾಯುಧೇನ ವಜ್ರೇಣ । ವಜ್ರೇಣ ಶತಪರ್ವಣಾ । ಋಗ್ವೇ. ೧-೮೦-೬ । ಇತಿ ದರ್ಶನಾತ್ । ಅಯಾನಯಾ ಮಾಯಯಾ ವಾವೃಧಾನಂ ವರ್ಧಮಾನಂ ತ್ಯಂ ಪ್ರಸಿದ್ಧಂ ವೃತ್ರಂ ವಿ ರುಜಃ। ವಿಶೇಷೇಣಾಭಾಂಕ್ಷೀಃ । ತಥಾ ಹೇ ಸ್ವೋಜಃ ಶೋಭನತೇಜೋ ಹೇ ವಿರಪ್ಶಿನ್ ಹೇ ಮಹನ್ನಿಂದ್ರ ತ್ವಮಚ್ಯುತಾಚ್ಯುತಾನಿ ಚಿದ್ವಿನಾಶರಹಿತಾನ್ಯಪಿ ವೀಳಿತಾ ವೀಳಿತಾನ್ಯಶಿಥಿಲೀಕೃತಾನಿ ದೃಳ್ಹಾ ದೃಢಾನಿ ಪುರಾಣಿ ಧೃಷತಾ ಧರ್ಷಕೇಣ ವಜ್ರೇಣ ವಿ ರುಜಃ । ಭಗ್ನವಾನಸಿ ॥

॥ ಪ್ರತಿಪದಾರ್ಥ ॥

**ಸ್ವತವಃ**—ಸ್ವಾಭಾವಿಕವಾಗಿಯೇ ಇರತಕ್ಕ ಶಕ್ತಿಯುಳ್ಳ ಎಲೈ ಇಂದ್ರನೇ । **ಮನೋಜುವಾ**—ಮನೋವೇಗದಂತೆ ವೇಗವುಳ್ಳದ್ದೂ । **ಪರ್ವತೇನ**—ಅಲಗುಗಳುಳ್ಳದ್ದೂ ಆದ ವಜ್ರಾಯುಧದಿಂದ। **ಅಯಾ ಮಾಯಯಾ**—ಇಂತಹ ಮೋಸಗಳಿಂದ। **ವವೃಧಾನಂ**—ವೃದ್ಧಿಯನ್ನು ಹೊಂದುವವನೂ । **ತ್ಯಂ**—ಪ್ರಸಿದ್ಧನೂ ಆದ ವೃತ್ರನನ್ನು । **ವಿ ರುಜಃ**—ನಾಶಪಡಿಸಿದ್ದೀಯೆ । **ಸ್ವೋಜಃ**—ಶ್ರೇಷ್ಠವಾದ ಓಜಸ್ಸುಳ್ಳವನೂ । **ವಿರಪ್ಶಿನ್**—ಮಹಾತ್ಮನೂ ಆದ ಎಲೈ ಇಂದ್ರನೇ । **ಅಚ್ಯುತಾ**—ಚ್ಯುತಿಯಿಲ್ಲದವೂ । **ವೀಳಿತಾ**—ಶಿಥಿಲವಲ್ಲದವೂ । **ದೃಳ್ಹಾ ಚಿತ್**—ದೃಢವಾಗಿರುವುವೂ ಆಗಿದ್ದರೂ ಸಹ (ಶತ್ರುಪಟ್ಟಣಗಳನ್ನು) । **ಧೃಷತಾ**—ಧರ್ಷಕವಾದ ವಜ್ರಾಯುಧದಿಂದ (ನಾಶಪಡಿಸಿದ್ದೀಯೆ).

ಸ್ವಾಭಾವಿಕವಾದ ಶಕ್ತಿಯುಳ್ಳ ಎಲೈ ಇಂದ್ರನೇ, ಮನೋವೇಗದಂತೆ ವೇಗವುಳ್ಳದ್ದೂ, ಹರಿತವಾದ ಅಲಗುಗಳುಳ್ಳದ್ದೂ ಆದ ವಜ್ರಾಯುಧದಿಂದ ಮೋಸಕಾರ್ಯಗಳಿಂದ ವೃದ್ಧಿಯನ್ನು ಹೊಂದತಕ್ಕ ವೃತ್ರನನ್ನು ನಾಶಪಡಿಸಿದ್ದೀಯೆ. ಚ್ಯುತಿಯಿಲ್ಲದವೂ, ಶಿಥಿಲವಲ್ಲದವೂ ಆದ ಶತ್ರುಪಟ್ಟಣಗಳು ಎಷ್ಟೇ ದೃಢವಾಗಿದ್ದರೂ ಸಹ ಆ ಶತ್ರುಪಟ್ಟಣಗಳನ್ನು ನಿನ್ನ ಧರ್ಷಕವಾದ ವಜ್ರಾಯುಧದಿಂದ ನಾಶಪಡಿಸಿದ್ದೀಯೆ.

English Translation.

Self-invigorated Indra, you have crushed by your knotted (thunder-bolt), quick as thought, that Vritra, growing in strength by this cunning: very radiant and mighty (Indra), you have demolished by (your) irresistible (shaft) the unyielding, compact, and strong (cities of the Asuras).

॥ ಸಂಹಿತಾಪಾಠಃ ॥

ತಂ ವೋ ಧಿಯಾ ನವ್ಯಸ್ಯಾ ಶವಿಷ್ಠಂ ಪ್ರತ್ನಂ ಪ್ರತ್ನವತ್ಪರಿತಂಸಯಧ್ಯೈ ।
ಸ ನೋ ವಕ್ಷದನಿಮಾನಃ ಸುವಹ್ಮೇಂದ್ರೋ ವಿಶ್ವಾನ್ಯತಿ ದುರ್ಗಹಾಣಿ ॥ ೭ ॥

॥ ಪದಪಾಠಃ ॥

ತಂ । ವಃ । ಧಿಯಾ । ನವ್ಯಸ್ಯಾ । ಶವಿಷ್ಠಂ । ಪ್ರತ್ನಂ । ಪ್ರತ್ನಽವತ್ । ಪರಿಽತಂಸಯಧ್ಯೈ ।
ಸಃ । ನಃ । ವಕ್ಷತ್ । ಅನಿಽಮಾನಃ । ಸುಽವಹ್ಮಾ । ಇಂದ್ರಃ । ವಿಶ್ವಾನಿ । ಅತಿ । ದುಃಽಗಹಾನಿ ॥ ೭ ॥

॥ ಸಾಯಣಭಾಷ್ಯಂ ॥

ನವ್ಯಸ್ಯಾ ನವತರಯಾ ಧಿಯಾ ಸ್ತುತ್ಯಾ ಶವಿಷ್ಠಂ ಬಲವತ್ತಮಂ ಪ್ರತ್ನಂ ಪುರಾಣಂ ಹೇ ಇಂದ್ರ ತಂ ವಸ್ತ್ವಾಂ ಪ್ರತ್ನವತ್ ಚಿರಂತನಾ ಋಷಯ ಇವ ಪರಿತಂಸಯಧ್ಯೈ ಪರಿತೋ ವಿಸ್ತಾರಯಿತುಂ । ಅಹಂ ಪ್ರವೃತ್ತೋಽಸ್ಮೀತಿ ಶೇಷಃ । ಅನಿಮಾನೋಽಪರಿಮಾಣಃ ಸುವಹ್ಮಾ ಶೋಭನವಹನಃ ಸ ಇಂದ್ರೋ ವಿಶ್ವಾನಿ ಸಮಸ್ತಾನಿ ದುರ್ಗಹಾಣಿ ದುರ್ಗಾಣಿ ನೋಽಸ್ಮಭ್ಯಮತಿ ವಕ್ಷತ್ । ಅತಿವಹತು ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) । ಶವಿಷ್ಠಂ—ಅತ್ಯಂತ ಶಕ್ತಿಯುತನೂ । ಪ್ರತ್ನಂ—ಪುರಾತನನೂ । ತಂ—ಪ್ರಸಿದ್ಧನೂ ಆದ । ವಃ—ನಿನ್ನನ್ನು । ಪ್ರತ್ನವತ್—ಪುರಾತನರಾದ ಋಷಿಗಳು ಪ್ರಶಂಸಿಸಿದಂತೆ । ನವ್ಯಸ್ಯಾ—ನೂತನವಾದ । ಧಿಯಾ—ಸ್ತುತಿಯಿಂದ । ಪರಿತಂಸಯಧ್ಯೈ—ವಿಸ್ತರಿಸಿ ಪ್ರಶಂಸಿಸಲುಪಕ್ರಮಿ

ಸಿದ್ಧೇನೆ । **ಅನಿಮಾನಃ**—ಪರಿಚ್ಛಿತ್ತಿಯಿಲ್ಲದವನೂ । **ಸುವಹಾ**—ಶ್ರೇಷ್ಠವಾದ ವಸ್ತುಗಳನ್ನು ವಹಿಸುವವನೂ ಆದ । **ಸಃ ಇಂದ್ರಃ**—ಅದೇ ಇಂದ್ರನು । **ನಃ**—ನಮಗೆ । **ವಿಶ್ವಾನಿ**—ಸಮಸ್ತವಾದುದೂ । **ದುರ್ಗಹಾಣಿ**—ಕಠಿಣವಾದುದೂ ಆದ ಜಯಗಳನ್ನೂ । **ಅತಿ ವಕ್ಷತ್**—ಒದಗಿಸಿಕೊಡಲಿ (ಕಷ್ಟಗಳಿಂದಲೂ ಪಾಲಿಸಲಿ).

॥ ಭಾವಾರ್ಥ ॥

ಎಲೈ ಇಂದ್ರನೇ, ಅತ್ಯಂತ ಶಕ್ತಿಯುತನೂ, ಪುರಾತನನೂ, ಪ್ರಸಿದ್ಧನೂ ಆದ ನಿನ್ನನ್ನು ಪುರಾತನರಾದ ಋಷಿಗಳು ಪ್ರಶಂಸಿಸಿದಂತೆ ನಾನೂ ನೂತನವಾದ ಸ್ತುತಿಯಿಂದ ವಿಸ್ತರಿಸಿ ಪ್ರಶಂಸಿಸಲುಪಕ್ರಮಿಸಿದ್ದೇನೆ. ಪರಿಚ್ಛಿತ್ತಿಯಿಲ್ಲದವನೂ ಶ್ರೇಷ್ಠವಾದ ವಸ್ತುಗಳನ್ನು ವಹಿಸುವವನೂ ಆದ ಅದೇ ಇಂದ್ರನು ನಮಗೆ ಸಮಸ್ತವಾದುದೂ ಕಠಿಣವಾದುದೂ ಆದ ಜಯಗಳನ್ನೂ ಒದಗಿಸಿಕೊಡಲಿ. ನಮ್ಮನ್ನು ಕಷ್ಟಗಳಿಂದಲೂ ದಾಟಿಸಲಿ.

## English Translation.

(I have undertaken) to spread around with a new hyma, as it was done of old, (the glory of) you, the ancient and most mighty (Indra): may that Indra, who is illimitable, and is a sure conveyance, bear us over all difficulties.

॥ ಸಂಹಿತಾಪಾಠಃ ॥

ಆ ಜನಾಯ ದ್ರುಹ್ವಣೇ ಪಾರ್ಥಿವಾನಿ ದಿವ್ಯಾನಿ ದೀಪಯೋಽಂತರಿಕ್ಷಾ ।
ತಪಾ ವೃಷನ್ವಿಶ್ವತಃ ಶೋಚಿಷಾ ತಾನ್ಬ್ರಹ್ಮದ್ವಿಷೇ ಶೋಚಯ ಕ್ಷಾಮಪಶ್ಚ ॥ ೮ ॥

॥ ಪದಪಾಠಃ ॥

ಆ । ಜನಾಯ । ದ್ರುಹ್ವಣೇ । ಪಾರ್ಥಿವಾನಿ । ದಿವ್ಯಾನಿ । ದೀಪಯಃ । ಅಂತರಿಕ್ಷಾ ।
ತಪ । ವೃಷನ್ । ವಿಶ್ವತಃ । ಶೋಚಿಷಾ । ತಾನ್ । ಬ್ರಹ್ಮದ್ವಿಷೇ । ಶೋಚಯ । ಕ್ಷಾಂ । ಅಪಃ । ಚ ॥೮॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ದ್ರುಹ್ವಣೇ ಸಾಧುಜನಾನಾಂ ದ್ರೋಗ್ಧ್ರೇ ಜನಾಯ ಜನಸ್ಯ ರಾಕ್ಷಸಾದೇಃ ॥ ಷಷ್ಠ್ಯರ್ಥೇ ಚತುರ್ಥೀ ॥ ಪಾರ್ಥಿವಾನಿ ಪೃಥಿವ್ಯಾಂ ಭವಾನಿ ದಿವ್ಯಾನಿ ದಿವಿ ಭವಾನ್ಯಂತರಿಕ್ಷಾಂತರಿಕ್ಷೇ ಭವಾನಿ ಚ ಸ್ಥಾನಾನ್ಯಾ ದೀಪಯಃ । ಆ ಸಮಂತಾತ್ತಾಪಯ । ಹೇ ವೃಷನ್ ಕಾಮಾನಾಂ ವರ್ಷಿತರಿಂದ್ರ

ಶ್ವಂ ವಿಶ್ವತಃ ಸರ್ವತೋ ವಿದ್ಯಮಾನಾನ್ ತಾನ್ರಾಕ್ಷಸಾದೀನ್ ಶೋಚಿಷಾ ತ್ವದೀಯಯಾ ದೀಪ್ತ್ಯಾ ತಪ । ದಹ । ಕಿಂಚ ಬ್ರಹ್ಮದ್ವಿಷೇ ಬ್ರಾಹ್ಮಣದ್ವೇಷ್ಟ್ರೇ ರಾಕ್ಷಸಾದಯೇ । ಬ್ರಹ್ಮದ್ವಿಷಂ ದಗ್ಧುಮಿತ್ಯರ್ಥಃ । ಕ್ಷಾಂ ಪೃಥಿವೀಮಪಶ್ಚಾಂತರಿಕ್ಷಂ ಶೋಚಯ । ದೀಪಯ । ಅಪ ಇತ್ಯಂತರಿಕ್ಷನಾಮೈತತ್ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ದ್ರುಹ್ವಣೇ**—ದ್ರೋಹಮಾಡತಕ್ಕ । **ಜನಾಯ**—ರಾಕ್ಷಸಾದಿಗಳಿಗೆ । **ಪಾರ್ಥಿವಾನಿ**—ಪೃಥಿವಿಗೆ ಸಂಬಂಧಿಸಿದವೂ । **ದಿವ್ಯಾನಿ**—ದ್ಯುಲೋಕಕ್ಕೆ ಸಂಬಂಧಿಸಿದವೂ । **ಅಂತರಿಕ್ಷಾ**—ಅಂತರಿಕ್ಷಕ್ಕೆ ಸಂಬಂಧಿಸಿದವೂ ಆದ ಸ್ಥಾನಗಳನ್ನೆಲ್ಲಾ । **ಆ ದೀಪಯಃ**—ಹತ್ತಿ ಉರಿಯುವಂತೆ ಮಾಡು । **ವೃಷನ್**—ಕಾಮವರ್ಷಕನಾದ ಎಲೈ ಇಂದ್ರನೇ । **ವಿಶ್ವತಃ**—ಸರ್ವತ್ರ ವ್ಯಾಪಿಸಿರುವ । **ತಾನ್**—ಆ ರಾಕ್ಷಸಾದಿಗಳನ್ನು । **ಶೋಚಿಷಾ**—ನಿನ್ನ ಪ್ರಭೆಯಿಂದ । **ತಪ**—ದಹಿಸು । **ಬ್ರಹ್ಮದ್ವಿಷೇ**—ಬ್ರಾಹ್ಮಣಕರ್ಮವನ್ನು ದ್ವೇಷಿಸುವ ಕರ್ಮಭ್ರಷ್ಟನಿಗೂ । **ಕ್ಷಾಂ**—ಪೃಥ್ವಿಯನ್ನೂ । **ಅಪಶ್ಚ**—ಅಂತರಿಕ್ಷವನ್ನೂ । **ಶೋಚಯ**—ಉರಿಯುವಂತೆ ಮಾಡು.

॥ ಭಾವಾರ್ಥ ॥

ಎಲೈ ಇಂದ್ರನೇ, ದ್ರೋಹಮಾಡತಕ್ಕ ರಾಕ್ಷಸಾದಿಗಳಿಗೆ ಪೃಥಿವಿಗೆ ಸಂಬಂಧಿಸಿದವೂ, ದ್ಯುಲೋಕಕ್ಕೆ ಸಂಬಂಧಿಸಿದವೂ ಅಂತರಿಕ್ಷಕ್ಕೆ ಸಂಬಂಧಿಸಿದವೂ ಆದ ಸ್ಥಾನಗಳನ್ನೆಲ್ಲಾ ಹತ್ತಿ ಉರಿಯುವಂತೆ ಮಾಡು. ಕಾಮವರ್ಷಕನಾದ ಇಂದ್ರನೇ, ಸರ್ವತ್ರ ವ್ಯಾಪಿಸಿರುವ ಆ ರಾಕ್ಷಸಾದಿಗಳನ್ನು ನಿನ್ನ ಪ್ರಭೆಯಿಂದ ದಹಿಸು. ವೈದಿಕಕರ್ಮಗಳನ್ನು ದ್ವೇಷಿಸುವ ಕರ್ಮಭ್ರಷ್ಟನಿಗೂ ಸಹ ಪೃಥ್ವಿಯನ್ನೂ, ಅಂತರಿಕ್ಷವನ್ನೂ ಉರಿಯುವಂತೆ ಮಾಡು.

## English Translation.

Make hot the regions of earth, of heaven, of mid air, for the oppressive race (of the Rakshasas) : showerer (of benefits). consume them everywhere with your radiance, make the heaven and the firmament (too) hot for the impious,

॥ ಸಂಹಿತಾಪಾಠಃ ॥

ಭುವ್ರೋ ಜನಸ್ಯ ದಿವ್ಯಸ್ಯ ರಾಜಾ ಪಾರ್ಥಿವಸ್ಯ ಜಗತಸ್ತ್ವೇಷಸಂದೃಕ್ ।

ಧಿಷ್ವ ವಜ್ರಂ ದಕ್ಷಿಣ ಇಂದ್ರ ಹಸ್ತೇ ವಿಶ್ವಾ ಅಜುರ್ಯ ದಯಸೇ ವಿ ಮಾಯಾಃ ॥ ೯ ॥

॥ ಪದಪಾಠಃ ॥

**ಭುವಃ । ಜನಸ್ಯ । ದಿವ್ಯಸ್ಯ । ರಾಜಾ । ಪಾರ್ಥಿವಸ್ಯ । ಜಗತಃ । ತ್ವೇಷऽಸಂದೃಕ್ ।**

**ಧಿಷ್ವ । ವಜ್ರಂ । ದಕ್ಷಿಣೇ । ಇಂದ್ರ । ಹಸ್ತೇ । ವಿಶ್ವಾಃ । ಅಜುರ್ಯ । ದಯಸೇ । ವಿ । ಮಾಯಾಃ ॥ ೯ ॥**

॥ ಸಾಯಣಭಾಷ್ಯಂ ॥

**ಹೇ ತ್ವೇಷಸಂದೃಕ್ ದೀಪ್ತದರ್ಶನೇಂದ್ರ ದಿವ್ಯಸ್ಯ ದಿವಿ ಭವಸ್ಯ ಜನಸ್ಯ ರಾಜೇಶ್ವರೋ ಭುವಃ । ಭವಸಿ । ಜಗತೋ ಜಂಗಮಸ್ಯ ಪಾರ್ಥಿವಸ್ಯ ಚ ರಾಜಾ ಭವಸಿ । ದಕ್ಷಿಣೇ ಹಸ್ತೇ ವಜ್ರಂ ಧಿಷ್ವ । ನಿಧೇಹಿ । ತೇನ ಚ ನಿಹಿತೇನ ವಜ್ರೇಣ ವಿಶ್ವಾಃ ಸರ್ವಾ ಅಸುರೀರ್ಮಾಯಾ ವಿ ದಯಸೇ । ವಿಬಾಧಸೇ ॥ ದಯ ದಾನಹಿಂಸಾಗತಿರಕ್ಷಣೇಷ್ವಿತಿ ಧಾತುಃ ॥ ಹೇ ಇಂದ್ರಾಜುರ್ಯ ಜರಯಿತುಮಶಕ್ಯೇಂದ್ರ ತ್ವಮಿತಿ ॥**

॥ ಪ್ರತಿಪದಾರ್ಥ ॥

**ತ್ವೇಷಸಂದೃಕ್**— ಕಾಂತಿಯುತವಾದ ರೂಪವುಳ್ಳ ಎಲೈ ಇಂದ್ರನೇ । **ದಿವ್ಯಸ್ಯ**—ದ್ಯುಲೋಕದಲ್ಲಿರುವ । **ಜನಸ್ಯ**—ದೇವಾದಿಗಳಿಗೆ । **ರಾಜಾ**—ಈಶ್ವರನಾಗಿ । **ಭುವಃ**—ಆಗಿದ್ದೀಯೆ । **ಜಗತಃ**—ಜಂಗಮಾತ್ಮಕವಾದ । **ಪಾರ್ಥಿವಸ್ಯ**—ಭೂಲೋಕದ ಜನರಿಗೂ (ರಾಜನಾಗಿದ್ದೀಯೆ) । **ದಕ್ಷಿಣೇ ಹಸ್ತೇ**—ನಿನ್ನ ದಕ್ಷಿಣಹಸ್ತದಲ್ಲಿ । **ವಜ್ರಂ**—ವಜ್ರಾಯುಧವನ್ನು । **ಧಿಷ್ವ**—ಹಿಡಿ । **ಅಜುರ್ಯ**—ಕುಂದಿಸಲಾಗದ ಶಕ್ತಿಯುಳ್ಳ । **ಇಂದ್ರ**—ಎಲೈ ಇಂದ್ರನೇ । **ವಿಶ್ವಾಃ**—ಸಮಸ್ತವಾದ । **ಮಾಯಾಃ**—ಅಸುರೀಮಾಯೆಗಳನ್ನೂ । **ವಿ ದಯಸೇ**—ನಾಶಪಡಿಸುತ್ತೀಯೆ.

॥ ಭಾವಾರ್ಥ ॥

ಕಾಂತಿಯುತವಾದ ರೂಪವುಳ್ಳ ಇಂದ್ರನೇ, ದ್ಯುಲೋಕದಲ್ಲಿರುವ ದೇವಾದಿಗಳಿಗೂ, ಜಂಗಮಾತ್ಮಕವಾದ ಭೂಲೋಕದ ಜನರಿಗೂ ನೀನು ರಾಜನಾಗಿದ್ದೀಯೆ ಕುಂದಿಸಲಾಗದ ಶಕ್ತಿಯುಳ್ಳ ಎಲೈ ಇಂದ್ರನೇ ನಿನ್ನ ಬಲಗೈಯಲ್ಲಿ ವಜ್ರಾಯುಧವನ್ನು ಹಿಡಿದು ಸಮಸ್ತವಾದ ಅಸುರೀಮಾಯೆಗಳನ್ನೂ ನಾಶಪಡಿಸು.

## English Translation.

Bright-flaming Indra, you are the king of the people of heaven, and of the moving races of earth : grasp in your right hand the thunderbolt, wherewith, Indra, who are beyond all praise, you baffle all the devices (of the Asuras).

॥ ಸಂಹಿತಾಪಾಠಃ ॥

ಆ ಸಂಯತಮಿಂದ್ರ ಣಃ ಸ್ವಸ್ತಿಂ ಶತ್ರುತೂರ್ಯಾಯ ಬೃಹತೀಮಮೃಧ್ರಾಂ।
ಯಯಾ ದಾಸಾನ್ಯಾರ್ಯಾಣಿ ವೃತ್ರಾ ಕರೋ ವಜ್ರಿನ್ತ್ಸುತುಕಾ ನಾಹು-
ಷಾಣಿ ॥ ೧೦ ॥

॥ ಪದಪಾಠಃ ॥

ಆ । ಸಂऽಯತಂ । ಇಂದ್ರ । ನಃ । ಸ್ವಸ್ತಿಂ । ಶತ್ರುऽತೂರ್ಯಾಯ । ಬೃಹತೀಂ । ಅಮೃಧ್ರಾಂ ।
ಯಯಾ । ದಾಸಾನಿ । ಆರ್ಯಾಣಿ । ವೃತ್ರಾ । ಕರಃ । ವಜ್ರಿನ್ । ಸುऽತುಕಾ । ನಾಹುಷಾಣಿ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಶತ್ರುತೂರ್ಯಾಯ ಶತ್ರೂಣಾಂ ತಾರಣಾಯ ಬೃಹತೀಂ ಮಹತೀಮಮೃಧ್ರಾಮ- ಹಿಂಸಿತಾಂ ಸಂಯತಂ ಸಂಯತೀಂ ಸಂಗಚ್ಛಮಾನಾಂ ಸ್ವಸ್ತಿಂ ಕ್ಷೇಮಲಕ್ಷಣಾಂ ಸಂಪದಂ ಹೇ ಇಂದ್ರ ನೋऽಸ್ಮಭ್ಯಮಾ ಭರ । ವಜ್ರಿನ್ವಜ್ರವನ್ನಿಂದ್ರ ಯಯಾ ಸ್ವಸ್ತ್ಯಾ ದಾಸಾನಿ ಕರ್ಮಹೀನಾನಿ ಮನುಷ್ಯಜಾ- ತಾನ್ಯಾರ್ಯಾಣಿ ಕರ್ಮಯುಕ್ತಾನಿ ಕರಃ ಅಕರೋಃ । ನಾಹುಷಾಣಿ ಮನುಷ್ಯಸಂಬಂಧೀನಿ । ನಹುಷಾ ಇತಿ ಮನುಷ್ಯನಾಮೈತತ್ । ವೃತ್ರಾ ವೃತ್ರಾಣಿ ಶತ್ರೂನ್ ಸುತುಕಾ ಸುತುಕಾನಿ ಶೋಭನಹಿಂಸೋಪೇ- ತಾನ್ಯಕರೋಃ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಯಯಾ**—ಯಾವ ನಿನ್ನ ಶಕ್ತಿಯಿಂದ । **ದಾಸಾನಿ**—ಕರ್ಮಹೀನರಾದ । ಜನರನ್ನು । **ಆರ್ಯಾಣಿ**—ಕರ್ಮಯುಕ್ತರನ್ನಾಗಿ । **ಕರಃ**—ಮಾಡಿದಯೋ । **ನಾಹುಷಾಣಿ**—ಮನುಷ್ಯಸಂಬಂಧಿ ಯಾದ । **ವೃತ್ರಾ**-ಶತ್ರುಗಳನ್ನು । **ಸುತುಕಾ**-ಸುಲಭವಾಗಿ ಕೆಳಗೆಬೀಳುವಂತೆ ಮಾಡಿದಯೋ ಅಂತಹ । **ಬೃಹತೀಂ**—ಮಹತ್ತಾದುದೂ । **ಅಮೃಧ್ರಾಂ**—ಅಹಿಂಸಿತವಾದುದೂ । **ಸಂಯತಂ**—ನಿಧಿರೂಪವಾದುದೂ । **ಸ್ವಸ್ತಿಂ**—ಮಂಗಳಕರವಾದುದೂ ಆದ ಸಂಪತ್ತನ್ನು । **ನಃ**—ನಮಗೆ । **ಶತ್ರುತೂರ್ಯಾಯ**—ಶತ್ರುಜಯಕ್ಕಾಗಿ । **ಆ (ಭರ)**—ಒದಗಿಸು.

॥ ಭಾವಾರ್ಥ ॥

ಎಲೈ ಇಂದ್ರನೇ, ಯಾವ ಸಂಪತ್ತಿನಿಂದ ಕರ್ಮಹೀನರಾದ ಜನರನ್ನು ಕರ್ಮಯುಕ್ತರನ್ನಾಗಿ ಮಾಡಿದೆಯೋ ಮನುಷ್ಯಸಂಬಂಧಿಯಾದ ಶತ್ರುಗಳನ್ನು ಸುಲಭವಾಗಿ ಕೆಳಗೆಬೀಳುವಂತೆ ಮಾಡಿದೆಯೋ ಅಂತಹ ಮಹತ್ತಾದುದೂ ಅಹಿಂಸಿತವಾದುದೂ, ನಿಧಿರೂಪವಾದುದೂ, ಮಂಗಳಕರವಾದುದೂ ಆದ ಸಂಪತ್ತನ್ನು ನಮಗೆ ಶತ್ರುಜಯಕ್ಕಾಗಿ ಒದಗಿಸು

## English Translation.

Bring to us, Indra, concentrated, vast, and unassailable prosperity beyond the reach of enemies, and by which, wielder of the thunderbolt, you have rendered human enemies, whether Dasas or Aryas, easy to be overcome.

॥ ಸಂಹಿತಾಪಾಠಃ ॥

ಸ ನೋ ನಿಯುದ್ಭಿಃ ಪುರುಹೂತ ವೇಧೋ ವಿಶ್ವವಾರಾಭಿರಾ ಗಹಿ ಪ್ರಯಜ್ಯೋ ।
ನ ಯಾ ಅದೇವೋ ವರತೇ ನ ದೇವ ಆಭಿರ್ಯಾಹಿ ತೂಯಮಾ ಮದ್ರ್ಯದ್ರಿಕ್ ॥ ೧೧ ॥

॥ ಪದಪಾಠಃ ॥

ಸಃ । ನಃ । ನಿಯುತ್ಽಭಿಃ । ಪುರುಽಹೂತ । ವೇಧಃ । ವಿಶ್ವಽವಾರಾಭಿಃ । ಆ । ಗಹಿ । ಪ್ರಯಜ್ಯೋ ಇತಿ ಪ್ರಽಯಜ್ಯೋ ।
ನ । ಯಾಃ । ಅದೇವಃ । ವರತೇ । ನ । ದೇವಃ । ಆ । ಆಭಿಃ । ಯಾಹಿ । ತೂಯಂ । ಆ । ಮದ್ರ್ಯದ್ರಿಕ್ ॥

॥ ಸಾಯಣಭಾಷ್ಯಂ ॥

ಹೇ ಪುರುಹೂತ ಹೇ ವೇಧೋ ವಿಧಾತರ್ಹೇ ಪ್ರಯಜ್ಯೋ ಪ್ರಕೃಷ್ಟೇನ ಯಜನೀಯೇಂದ್ರ ಸ ತ್ವಂ ವಿಶ್ವವಾರಾಭಿರ್ವಿಶ್ವೈರ್ವರಣೀಯಾಭಿಃ ಸಂಭಜನೀಯಾಭಿರ್ನಿಯುದ್ಭಿರಶ್ವೈರ್ನೋಽಸ್ಮಾನಾ ಗಹಿ । ಆಗಚ್ಛ । ಅದೇವೋಽಸುರೋ ಯಾ ನಿಯುತೋ ಯಾನಶ್ವಾನ್ನ ವರತೇ ನ ವಾರಯತಿ ದೇವಶ್ಚ ನ ವರತೇ ಆಭಿರ್ನಿಯುದ್ಭಿಸ್ತೂಯಮಾ ಕ್ಷಿಪ್ರಮೇವ ಮದ್ರ್ಯದ್ರಿಕ್ ಮದಭಿಮುಖಃ ಸನ್ ಆ ಯಾಹಿ । ಆಗಚ್ಛ ॥ ಅದ್ರ್ಯಾಗಮಸ್ಯ ದ್ವಿರ್ವಚನಂ ಛಾಂದಸಂ ॥

॥ ಪ್ರತಿಪದಾರ್ಥ ॥

**ಪುರುಹೂತ**—ಅನೇಕರಿಂದ ಕರೆಯಲ್ಪಡುವವನೂ । **ವೇಧಃ**—ಸೃಷ್ಟಿಕರ್ತನೂ । **ಪ್ರಯಜ್ಯೋ**—ಉತ್ತಮವಾದ ಪೂಜಾರ್ಹನೂ ಆದ ಎಲೈ ಇಂದ್ರನೇ । **ಸಃ**—ಪ್ರಸಿದ್ಧನಾದ ನೀನು । **ವಿಶ್ವಾವಾರಾಭಿಃ**—ಎಲ್ಲರಿಂದಲೂ ಆದರಿಸಲ್ಪಡುವ । **ನಿಯುದ್ಭಿಃ**—ನಿನ್ನ ಅಶ್ವಗಳೊಡನೆ । **ನಃ**—ನಮ್ಮಲ್ಲಿಗೆ । **ಆ ಗಹಿ**—ದಯಮಾಡು।

**ಅದೇವಃ**—ಅಸುರನು | **ಯೋಃ**—ಯಾವ ಅಶ್ವಗಳನ್ನು | **ನ ವರತೇ**—ತಡೆಯಲಾರನೋ | **ದೇವಃ**—ದೇವತೆಯೂ ಕೂಡ | **ನ**—ತಡೆಯಲಾರನೋ | **ಅಭಿಃ**—ಅಂತಹ ಅಶ್ವಗಳೊಡನೆ | **ತೂಯಂ ಆ**—ಶೀಘ್ರವಾಗಿ ಬಾ | **ಮದ್ರ್ಯದ್ರಿಕ್**—ನನಗಭಿಮುಖನಾಗಿ | **ಆ ಯಾಹಿ**—ದಯಮಾಡು.

**॥ ಭಾವಾರ್ಥ ॥**

ಅನೇಕರಿಂದ ಕರೆಯಲ್ಪಡುವವನೂ, ಸೃಷ್ಟಿಕರ್ತನೂ, ಉತ್ತಮವಾದ ಪೂಜಾರ್ಹನೂ ಆದ ಎಲೈ ಇಂದ್ರನೇ, ಪ್ರಸಿದ್ಧನಾದ ನೀನು ಎಲ್ಲರಿಂದಲೂ ಆದರಿಸಲ್ಪಡುವ ನಿನ್ನ ಅಶ್ವಗಳೊಡನೆ ನಮ್ಮಲ್ಲಿಗೆ ದಯಮಾಡು. ದೇವತೆಯಾಗಲಿ ಅಥವಾ ಅಸುರನಾಗಲಿ ಯಾವ ಅಶ್ವಗಳನ್ನು ತಡೆಯಲಾರರೋ ಅಂತಹ ಅಶ್ವಗಳೊಡನೆ ನನಗಭಿಮುಖನಾಗಿ ದಯಮಾಡು.

## English Translation.

Invoked of many, creator, object of sacrifice, come to us with your all-admired steeds, whom neither Asura nor deity arrests : come with them quickly to our presenee.

# ಇಪ್ಪತ್ತಮೂರನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಸುತ ಇದಿತಿ ದಶರ್ಚಮಷ್ಟಮಂ ಸೂಕ್ತಂ ಭರದ್ವಾಜಸ್ಯಾರ್ಷಂ ತ್ರೈಷ್ಟುಭಮೈಂದ್ರಂ । ಸುತ ಇದ್ದಶೇತ್ಯನುಕ್ರಾಂತಂ ॥ ವಿಷುವತಿ ನಿಷ್ಕೇವಲ್ಯ ಇದಂ ಸೂಕ್ತಂ । ಸೂತ್ರಿತಂ ಚ। ಸುತ ಇತ್ತ್ವಮೇಷ ಪ್ರ ಪೂರ್ವೀಃ । ಆ. ೮-೬ । ಇತಿ ॥ ಮಹಾವ್ರತೇऽಪಿ ನಿಷ್ಕೇವಲ್ಯ ಇದಮಾದೀನಿ ತ್ರೀಣಿ ಸೂಕ್ತಾನಿ । ತಥೈವ ಪಂಚಮಾರಣ್ಯಕೇ ಸೂತ್ರಿತಂ । ಸುತ ಇತ್ತ್ವಂ ನಿಮಿಶ್ಲ ಇಂದ್ರ ಸೋಮ ಇತಿ ತ್ರೀಣಿ । ಐ. ಆ. ೫-೨-೨ । ಇತಿ ॥**

ಅನುವಾದವು—**ಸುತ್ ಇತ್** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಎಂಟನೆಯ ಸೂಕ್ತವು. ಇದರಲ್ಲಿ ಹತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು ; ಇಂದ್ರನು ದೇವತೆಯು ; ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಸುತ ಇದ್ದಶ** ಎಂದು ಹೇಳಿರುವುದು. ವಿಷುವದ್ಯಾಗದಲ್ಲಿ ನಿಷ್ಕೇವಲ್ಯಶಸ್ತ್ರ ಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ಸುತ ಇತ್ತ್ವಮೇಷ ಪ್ರ ಪೂರ್ವೀಃ** ಎಂಬ ಸೂತ್ರದಿಂದ (ಆ. ೮-೬) ವಿವೃತವಾಗಿರುವುದು. ಮತ್ತು ಮಹಾವ್ರತದಲ್ಲಿಯೂ ಸಹ ನಿಷ್ಕೇವಲ್ಯ ಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದಿಂದ ಮುಂದಿನ ಮೂರು ಸೂಕ್ತಗಳ ವಿನಿಯೋವಿರುವುದೆಂದು ಐತರೇಯಾರಣ್ಯಕದ ಪಂಚಮಾ ರಣ್ಯಕದ—**ಸುತ ಇತ್ತ್ವಂ ನಿಮಿಶ್ಲ ಇಂದ್ರ ಸೋಮ ಇತಿ ತ್ರೀಣಿ** ಎಂಬ ವಾಕ್ಯದಿಂದ (ಐ ಆ. ೫-೨-೨) ನಿರ್ದಿಷ್ಟವಾಗಿರುವುದು.

## ಸೂಕ್ತ—೨೩

ಮಂಡಲ—೬॥ ಅನುವಾಕ—೨ ॥ ಸೂಕ್ತ—೨೩ ॥
ಅಷ್ಟಕ—೪ ॥ ಅಧ್ಯಾಯ—೬ ॥ ವರ್ಗ—೧೫, ೧೬ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೦ ॥
॥ ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ॥
॥ ದೇವತಾ—ಇಂದ್ರಃ ॥
॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಸುತ ಇತ್ತ್ವಂ ನಿಮಿಶ್ಲ ಇಂದ್ರ ಸೋಮೇ ಸ್ತೋಮೇ ಬ್ರಹ್ಮಣಿ ಶಸ್ಯಮಾನ ಉಕ್ಥೇ ।
ಯದ್ವಾ ಯುಕ್ತಾಭ್ಯಾಂ ಮಘವನ್ಹರಿಭ್ಯಾಂ ಬಿಭ್ರದ್ವಜ್ರಂ ಬಾಹ್ವೋರಿಂದ್ರ ಯಾಸಿ ॥ ೧ ॥

॥ ಪದಪಾಠಃ ॥

ಸುತೇ । ಇತ್ । ತ್ವಂ । ನಿಽಮಿಶ್ಲಃ । ಇಂದ್ರ । ಸೋಮೇ । ಸ್ತೋಮೇ । ಬ್ರಹ್ಮಣಿ । ಶಸ್ಯಮಾನೇ । ಉಕ್ಥೇ ।
ಯತ್ । ವಾ । ಯುಕ್ತಾಭ್ಯಾಂ । ಮಘಽವನ್ । ಹರಿಽಭ್ಯಾಂ । ಬಿಭ್ರತ್ । ವಜ್ರಂ । ಬಾಹ್ವೋಃ । ಇಂದ್ರ । ಯಾಸಿ ॥ ೧ ॥

॥ ಸಾಯಣಭಾಷ್ಯಂ ॥

ಸೋಮೇ ಸುತ ಇದಭಿಷುತ ಏವ ಸತಿ ಬ್ರಹ್ಮಣಿ ಬೃಹತಿ ಮಹತಿ ಸ್ತೋಮೇ ಸ್ತೋತ್ರ ಉಚ್ಚಾರ್ಯಮಾಣೇ ಸತ್ಯುಕ್ಥೇ ಶಸ್ತ್ರೇ ಶಸ್ಯಮಾನೇ ಸತಿ ಹೇ ಇಂದ್ರ ತ್ವಂ ನಿಮಿಶ್ಲೋ ನಿಮಿಶ್ರಃ ಸನ್ ಹರೀ ಸಂಯೋಜಯನ್ ಹೇ ಮಘವನ್ಧನವನ್ನಿಂದ್ರ ತ್ವಂ ಬಾಹ್ವೋರ್ಹಸ್ತಯೋರ್ವಜ್ರಂ ಸ್ವಕೀಯಮಾಯುಧಂ ಬಿಭ್ರದ್ಧಾರಯನ್ ಯುಕ್ತಾಭ್ಯಾಂ ರಥೇ ನಿಯುಕ್ತಾಭ್ಯಾಂ ಹರಿಭ್ಯಾಮಶ್ವಾಭ್ಯಾಂ ಯಾಸಿ ಯದ್ವಾಗಚ್ಛಸೀತಿ ಯಚ್ಛ ತತ್ಸೋಮೇಽಭಿಷುತ ಇತಿ ಸಂಬಂಧಃ ॥

॥ ಪ್ರತಿಪದಾರ್ಥ ॥

**ಮಘವನ್**—ಧನವಂತನಾದ । **ಇಂದ್ರ**—ಇಂದ್ರನೇ । **ಸೋಮೇ**—ಸೋಮರಸವು । **ಸುತೇ ಇತ್**—ಯಾವಾಗ ಹಿಂಡಲ್ಪಡುವುದೋ ಒಡನೆಯೇ । **ಬ್ರಹ್ಮಣಿ**—ಮಹತ್ತಾದ । **ಸ್ತೋಮೇ**—ಸ್ತೋತ್ರವು (ಪಠಿತವಾದೊಡನೆಯೇ) । **ಉಕ್ಥೇ**—ಶಸ್ತ್ರವು । **ಶಸ್ಯಮಾನೇ**—ಪಠಿತವಾದೊಡನೆಯೇ । **ತ್ವಂ**—ನೀನು । **ನಿಮಿಶ್ಲಃ**—

ನಿನ್ನ ಅಶ್ವಗಳನ್ನು ರಥಕ್ಕೆ ಯೋಜಿಸಿ | **ಬಾಹ್ವೋಃ**—ನಿನ್ನ ಹಸ್ತಗಳಲ್ಲಿ | **ವಜ್ರಂ**—ವಜ್ರಾಯುಧವನ್ನು | **ಬಿಭ್ರತ್**—ಧರಿಸಿಕೊಂಡು | **ಯುಕ್ತಾಭ್ಯಾಂ**—ರಥಗಳೊಡನೆ ಯುಕ್ತವಾಗಿರುವ | **ಹರಿಭ್ಯಾಂ**—ಅಶ್ವಗಳೊಡನೆ | **ಯದ್ವಾ ಯಾಸಿ**—ದಯಮಾಡು.

॥ ಭಾವಾರ್ಥ ॥

ಧನವಂತನಾದ ಎಲೈ ಇಂದ್ರನೇ, ಯಾವಾಗ ಸೋಮರಸವು ಹಿಂಡಲ್ಪಡುವುದೋ, ಯಾವಾಗ ಮಹತ್ತಾದ ಸ್ತೋತ್ರವು ಪಠಿತವಾಗುವುದೋ, ಮತ್ತು ಯಾವಾಗ ಶಸ್ತ್ರಮಂತ್ರವು ಪಠಿತವಾಗುವುದೋ ಆ ಒಡನೆಯೇ ನೀನು ನಿನ್ನ ಅಶ್ವಗಳನ್ನು ರಥಕ್ಕೆ ಯೋಜಿಸಿ ನಿನ್ನ ಹಸ್ತಗಳಲ್ಲಿ ವಜ್ರಾಯುಧವನ್ನು ಧರಿಸಿಕೊಂಡು ರಥಗಳೊಡನೆ ಯುಕ್ತವಾಗಿರುವ ಅಶ್ವಗಳೊಡನೆ ದಯಮಾಡು.

English Translation.

When the Soma Juice, Indra, is being effused, the sacred hymn chanted, the prayer recited, be prepared (to harness your horses), or, Maghavan, with your horses ready harnessed, come (hither), bearing the thunderbolt in your hand.

॥ ಸಂಹಿತಾಪಾಠಃ ॥

ಯದ್ವಾ ದಿವಿ ಪಾರ್ಯೇ ಸುಷ್ವಿಮಿಂದ್ರ ವೃತ್ರಹತ್ಯೇಽವಸಿ ಶೂರಸಾತೌ |
ಯದ್ವಾ ದಕ್ಷಸ್ಯ ಬಿಭ್ಯುಷೋ ಅಬಿಭ್ಯದರಂಧಯಃ ಶರ್ಧತ ಇಂದ್ರ ದಸ್ಯೂನ್ ‖ ೨ ‖

॥ ಪದಪಾಠಃ ॥

ಯತ್ | ವಾ | ದಿವಿ | ಪಾರ್ಯೇ | ಸುಷ್ವಿಂ | ಇಂದ್ರ | ವೃತ್ರಽಹತ್ಯೇ | ಅವಸಿ | ಶೂರಽಸಾತೌ |
ಯತ್ | ವಾ | ದಕ್ಷಸ್ಯ | ಬಿಭ್ಯುಷಃ | ಅಬಿಭ್ಯತ್ | ಅರಂಧಯಃ | ಶರ್ಧತಃ | ಇಂದ್ರ | ದಸ್ಯೂನ್ ‖ ೨ ‖

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ದಿವಿ ದ್ಯುಲೋಕೇ ಶೂರಸಾತೌ ಶೂರೈರ್ಭಟೈಃ ಸಂಭಜನೀಯೇ ವೃತ್ರಹತ್ಯೇ ಯುದ್ಧೇ ಚ ಪಾರ್ಯೇ ಪ್ರಾಪ್ತವ್ಯೇ ಸತಿ ಸುಷ್ವಿಮಭಿಷೋತಾರಂ ಯಜಮಾನಮವಸಿ ಯದ್ವಾ ರಕ್ಷಸೀತಿ

ಯಚ್ಚ । ವೇತಿ ಸಮುಚ್ಚಯೇ । ದಕ್ಷಸ್ಯ ಯಜ್ಞಾದಿಷು ಸಮರ್ಥಸ್ಯ ಬಿಭ್ಯುಷಃ ಶತ್ರುಭ್ಯೋ ಬಿಭ್ಯತೋ ಜನಸ್ಯ ಶರ್ಧತಃ ಸಂಗ್ರಾಮ ಉತ್ಸಹಮಾನಾನ್ದಸ್ಯೂನುಪಕ್ಷಪಯಿತ್ಯಾನ್ ಶತ್ರೂನ್ ಹೇ ಇಂದ್ರ ತ್ವಮ-ಬಿಭ್ಯದ್ಭೀತಿರಹಿತಃ ಸನ್ ಅರಂಧಯೋ ಯದ್ವಾ ವಶೀಕರೋಷೀತಿ ಯಚ್ಚ ತತ್ಸರ್ವಂ ಸೋಮೇಽಭಿಷುತ ಇತಿ ಪೂರ್ವೇಣ ಸಂಬಂಧಃ ॥ ತಥಾ ಚೋಕ್ತಂ । ಯದ್ವಾಪ್ಯೋರ್ಧಾರಯನ್ವಜ್ರಂ ಹರಿಭ್ಯಾಂ ಯಾಸಿ ವೃತ್ರಹನ್ । ಯಚ್ಚ ರಕ್ಷಸಿ ಸಂಗ್ರಾಮೇ ನೄನ್ ಸೋಮಮಭಿಷುಣ್ವತಃ ॥ ಯಚ್ಚ ಕರ್ಮ ಸುದಕ್ಷಸ್ಯ ಯಜಮಾನಸ್ಯಾಪಾರಯಃ । ವಶೀಕರೋಷಿ ತಾಂಸ್ತಸ್ಮೈ ಬಿಭ್ಯತೇ ಭೀತಿವರ್ಜಿತಃ ॥ ತತ್ಸೋಮೇಽಭಿ-ಷುತೇ ಸ್ತೋತ್ರಶಸ್ತ್ರಯೋಶ್ಚ ಪ್ರವೃತ್ತಯೋಃ । ಇತಿ ದ್ವ್ಯೃಚೋಽಯಮೇಕಾರ್ಥಃ ಸುತ ಇತ್ಯೇವಮಿತಿ ದ್ವಯಮಿತಿ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ದಿವಿ**—ದ್ಯುಲೋಕದಲ್ಲಿ । **ಶೂರಸಾತೌ**—ಶೂರರೊಡನೆ ಹೋರಾಡ ತಕ್ಕದ್ದೂ । **ವೃತ್ರಹತ್ಯೇ**—ಶತ್ರುನಾಶಕವಾದುದೂ ಆದ ಯುದ್ಧದಲ್ಲಿ । **ಪಾರ್ಯೇ**—ನಿರತನಾಗಿದ್ದರೂ । **ಸುಷ್ವಿಂ**—ಸೋಮವನ್ನು ಹಿಂಡಿ ಅರ್ಪಿಸುವ ಯಜಮಾನನನ್ನು । **ಅವಸಿ**—ರಕ್ಷಿಸುವೆಯೆಂಬುದು । **ಯದ್ವಾ**—ಯಾವು ದುಂಟೋ (ಅದೂ) । **ದಕ್ಷಸ್ಯ**—ಯಾಗಮಾಡಲು ಸಮರ್ಥನೂ । **ಬಿಭ್ಯುಷಃ**—ಶತ್ರುಗಳಿಂದ ಭೀತನೂ ಆದ ಯಜಮಾನನಿಗೆ । **ಶರ್ಧತಃ**—ಹಿಂಸಕರಾದ । **ದಸ್ಯೂನ್**—ಶತ್ರುಗಳನ್ನು । **ಇಂದ್ರ**—ಎಲೈ ಇಂದ್ರನೇ । **ಅಬಿಭ್ಯತ್**—ಭೀತಿರಹಿತನಾಗಿ । **ಅರಂಧಯಃ**—ಕೆಳಕ್ಕೆ ಬಿಳಿಸಿದೆಯೆಂಬುದು । **ಯದ್ವಾ**—ಯಾವುದುಂಟೋ (ಅವೆಲ್ಲವೂ ಸೋಮಾಭಿಷವವಾದೊಡನೆಯೇ ನೆರವೇರಿದವು.)

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ದ್ಯುಲೋಕದಲ್ಲಿ ಶೂರರೊಡನೆ ಹೋರಾಡತಕ್ಕದು ಶತ್ರುನಾಶಕವಾದುದೂ ಆದ ಯುದ್ಧದಲ್ಲಿ ನಿರತನಾಗಿದ್ದರೂ, ಸೋಮವನ್ನು ಹಿಂಡಿ ಅರ್ಪಿಸುವ ಯಜಮಾನನನ್ನು ರಕ್ಷಿಸುವೆಯೆಂಬುದು ಯಾವು ದುಂಟೋ ಅದೂ, ಯಾಗಮಾಡಲು ಸಮರ್ಥನೂ, ಶತ್ರುಗಳಿಂದ ಭೀತನೂ ಆದ ಯಜಮಾನನಿಗೆ ಹಿಂಸಕರಾದ ಶತ್ರು ಗಳನ್ನು ಭೀತಿರಹಿತನಾಗಿ ಕೆಳಕ್ಕೆ ಬಿಳಿಸಿದೆಯೆಂಬುದು ಯಾವುದುಂಟೋ ಅವೆಲ್ಲವೂ ಸೋಮಾಭಿಷವವಾದೊಡನೆಯೇ ನೆರವೇರಿದವು.

## English Translation.

Or as, although engaged in heaven in the horo-animating conflict with foes, you protect the offerer of the libation, and humble, undaunted Indra, the Dasyus, the disturbers of the pious and terrified worshipper, (so come when the Soma is effused).

॥ ಸಂಹಿತಾಪಾಠಃ ॥

ಪಾತಾ ಸುತಮಿಂದ್ರೋ ಅಸ್ತು ಸೋಮಂ ಪ್ರಣೇನೀರುಗ್ರೋ ಜರಿತಾರ-
ಮೂತೀ ।
ಕರ್ತಾ ವೀರಾಯ ಸುಷ್ವಯ ಉ ಲೋಕಂ ದಾತಾ ವಸು ಸ್ತುವತೇ
ಕೀರಯೇ ಚಿತ್ ॥ ೩ ॥

॥ ಪದಪಾಠಃ ॥

ಪಾತಾ । ಸುತಂ । ಇಂದ್ರಃ । ಅಸ್ತು । ಸೋಮಂ । ಪ್ರಽನೇನೀಃ । ಉಗ್ರಃ । ಜರಿತಾರಂ । ಊತೀ ।
ಕರ್ತಾ । ವೀರಾಯ । ಸುಸ್ವಯೇ । ಊಂ ಇತಿ । ಲೋಕಂ । ದಾತಾ । ವಸು । ಸ್ತುವತೇ । ಕೀರಯೇ । ಚಿತ್ ॥ ೩ ॥

॥ ಸಾಯಣಭಾಷ್ಯಂ ॥

ಇಂದ್ರಃ ಸುತಮಭಿಷುತಂ ಸೋಮಂ ಪಾತಾಸ್ತು । ಪಾನಶೀಲೋ ಭವತು ॥ ತೃನಂತತ್ವಾನ್ನ ಲೋಕಾವ್ಯಯನಿಷ್ಠೇತಿ ಷಷ್ಠೀಪ್ರತಿಷೇಧಃ ॥ ಕೀದೃಶಃ । ಊತೀ ಊತ್ಯಾ ಮಾರ್ಗೇಣ ಜರಿತಾರಂ ಸ್ತೋತಾರಂ ಪ್ರಣೇನೀಃ ಪ್ರಕರ್ಷೇಣ ನೇತೋಗ್ರ ಉದ್ಗೂರ್ಣೋ ವೀರಾಯ ಯಜ್ಞಾದಿಕರ್ಮಸು ದಕ್ಷಾಯ ಸುಷ್ವಯೇ ಸೋಮಾಭಿಷವಂ ಕುರ್ವತೇ ಯಜಮಾನಾಯ ಲೋಕಂ ಸ್ಥಾನಂ ಕರ್ತಾ । ದಾತೇತ್ಯರ್ಥಃ । ಉ ಇತಿ ಪಾದಪೂರಣಃ । ಸ್ತುವತೇ ಸ್ತೋತ್ರಂ ಕುರ್ವತೇ ಕೀರಯೇ ಚಿತ್ ॥ ಚಿದಿತಿ ಚಾರ್ಥೇ ॥ ಸ್ತೋತ್ರೇ ಚ । ಕೀರಿರಿತಿ ಸ್ತೋತೃನಾಮೈತತ್ । ವಸು ಧನಂ ದಾತಾಸ್ತು ॥

॥ ಪ್ರತಿಪದಾರ್ಥ ॥

**ಊತೀ**—ತನ್ನ ರಕ್ಷಣೆಗಳಿಂದ । **ಜರಿತಾರಂ**—ಸ್ತೋತೃವನ್ನು । **ಪ್ರಣೇನೀಃ**—ಸುರಕ್ಷಿತವಾದ ಪ್ರದೇಶಕ್ಕೆ ಒಯ್ಯುವವನೂ । **ವೀರಾಯ**—ಸಮರ್ಥನಾದವನೂ । **ಸುಷ್ವಯೇ**—ಸೋಮವನ್ನು ಹಿಂಡಿ ಅರ್ಪಿಸುವವನೂ ಆದ ಯಜಮಾನನಿಗೆ । **ಲೋಕಂ**—ಉತ್ತಮವಾದ ಸ್ಥಾನವನ್ನು । **ಕರ್ತಾ**—ನಿರ್ಮಿಸುವವನೂ । **ಸ್ತುವತೇ**—ಸ್ತೋತ್ರಮಾಡತಕ್ಕವನೂ ಆದ । **ಕೀರಯೇ ಚಿತ್**—ಸ್ತೋತೃವಿಗೂ । **ವಸು**—ಧನವನ್ನು । **ದಾತಾ**—ಕೊಡುವವನೂ । **ಉಗ್ರಃ**—ಭಯಂಕರನೂ ಆದ । **ಇಂದ್ರಃ**—ಇಂದ್ರನು । **ಸುತಂ ಸೋಮಂ**—ಹಿಂಡಿ ಸಿದ್ಧವಾಗಿರುವ ಸೋಮವನ್ನು । **ಪಾತಾ**—ಪಾನಮಾಡುವವನಾಗಿ । **ಅಸ್ತು**—ಆಗಲಿ.

॥ ಭಾವಾರ್ಥ ॥

ತನ್ನ ರಕ್ಷಣೆಗಳಿಂದ ಸ್ತೋತೃವನ್ನು ಸುರಕ್ಷಿತವಾದ ಪ್ರದೇಶಕ್ಕೆ ಒಯ್ಯುವವನೂ, ಯಜ್ಞಕಾರ್ಯಸಮರ್ಥನಾಗಿ ಸೋಮವನ್ನು ಹಿಂಡಿ ಅರ್ಪಿಸುವ ಯಜಮಾನನಿಗೆ ಉತ್ತಮವಾದ ಸ್ಥಾನವನ್ನು ನಿರ್ಮಿಸುವವನೂ ಸ್ತುತಿಕರ್ತನಾದ

ಸ್ತೋತೃವಿಗೆ ಧನವನ್ನು ಕೊಡುವವನೂ, ಭಯಂಕರನೂ ಆದ ಇಂದ್ರನು ಇಲ್ಲಿ ಹಿಂಡಿ ಸಿದ್ಧವಾಗಿರುವ ಸೋಮವನ್ನು ಪಾನಮಾಡಲಿ.

English Translation

May Indra be the drinker of the effused Soma, he who is the fierce conductor of the worshipper to security: may he be the donor of the world to the presenter of the libation, the giver of wealth to the man who adores him.

॥ ಸಂಹಿತಾಪಾಠಃ ॥

ಗಂತೇಯಾಂತಿ ಸವನಾ ಹರಿಭ್ಯಾಂ ಬಭ್ರಿರ್ವಜ್ರಂ ಪಪಿಃ ಸೋಮಂ ದದಿರ್ಗಾಃ ।

ಕರ್ತಾ ವೀರಂ ನರ್ಯಂ ಸರ್ವವೀರಂ ಶ್ರೋತಾ ಹವಂ ಗೃಣತಃ ಸ್ತೋಮವಾಹಾಃ ॥ ೪ ॥

॥ ಪದಪಾಠಃ ॥

ಗಂತಾ । ಇಯಂತಿ । ಸವನಾ । ಹರಿಽಭ್ಯಾಂ । ಬಭ್ರಿಃ । ವಜ್ರಂ । ಪಪಿಃ । ಸೋಮಂ । ದದಿಃ । ಗಾಃ ।

ಕರ್ತಾ । ವೀರಂ । ನರ್ಯಂ । ಸರ್ವಽವೀರಂ । ಶ್ರೋತಾ । ಹವಂ । ಗೃಣತಃ । ಸ್ತೋಮಽವಾಹಾಃ ॥ ೪ ॥

॥ ಸಾಯಣಭಾಷ್ಯಂ ॥

ಇಂದ್ರೋ ಹರಿಭ್ಯಾಂ ಸ್ವಕೀಯಾಭ್ಯಾಮಿಯಂತಿ ಹೃದಯಸ್ಥಾನಿ ತ್ರೀಣಿ ಸವನಾ ಸವನಾನಿ ಗಂತಾ ಗಮನಶೀಲೋ ಭವತು । ಕೀದೃಶಃ । ವಜ್ರಂ ಸ್ವಕೀಯಮಾಯುಧಂ ಬಭ್ರಿರ್ಭರ್ತಾ ಧಾರಕಃ ಸೋಮಮಭಿಷುತಂ ಪಪಿಃ ಪಾತಾ ಗಾ ದದಿರ್ದಾತಾ ನರ್ಯಂ ಮನುಷ್ಯಹಿತಂ ಸರ್ವವೀರಂ ಬಹುಪುತ್ರೋಪೇತಂ ವೀರಂ ಪುತ್ರಂ ಕರ್ತಾ ಯಜಮಾನಾಯ ದಾತಾ ಗೃಣತಃ ಸ್ತುವತಃ ಸ್ತೋತುಃ ಸಂಬಂಧಿ ಹವಂ ಸ್ತೋತ್ರಂ ಶ್ರೋತಾ ಶ್ರಾವಕಃ ಸ್ತೋಮವಾಹಾಃ ಸ್ತೋಮೈಃ ಸ್ತೋತ್ರೈರ್ವಹನೀಯಃ ॥

॥ ಪ್ರತಿಪದಾರ್ಥ ॥

**ವಜ್ರಂ**—ವಜ್ರಾಯುಧವನ್ನು । **ಬಭ್ರಿಃ**—ಧರಿಸಿರುವವನೂ । **ಸೋಮಂ**—ಸೋಮರಸವನ್ನು । **ಪಪಿಃ**—ಪಾನಮಾಡುವವನೂ । **ಗಾಃ**—ಗೋವುಗಳನ್ನು । **ದದಿಃ**—ದಾನಮಾಡುವವನೂ । **ನರ್ಯಂ**—ಮಾನವರಿಗೆ ಹಿತಕರವಾದವನೂ । **ಸರ್ವವೀರಂ**—ಸರ್ವಸಮರ್ಥನೂ ಆದ । **ವೀರಂ**—ವೀರಪುತ್ರನನ್ನು ।

**ಕರ್ತಾ**—(ಯಜಮಾನನಿಗೆ) ಅನುಗ್ರಹಿಸುವವನೂ । **ಗೃಣತಃ**—ಸ್ತೋತೃವಿನ । **ಹವಂ**—ಸ್ತೋತ್ರವನ್ನು । **ಶ್ರೋತಾ**—ಕೇಳತಕ್ಕವನೂ । **ಸ್ತೋಮವಾಹಾಃ**—ಸ್ತೋತ್ರಗಳಿಂದ ವಹಿಸಲ್ಪಡುವವನೂ ಆದ ಇಂದ್ರನು । **ಹರಿಭ್ಯಾಂ**—ತನ್ನ ಅಶ್ವಗಳೊಡನೆ । **ಇಯಂತಿ**—ಆಕರ್ಷಕವಾದ । **ಸವನಾ**—ಮೂರು ಸವನಗಳಿಗೂ । **ಗಂತಾ**—ಬರುವವನಾಗಲಿ.

|| ಭಾವಾರ್ಥ ||

ವಜ್ರಾಯುಧವನ್ನು ಧರಿಸಿರುವವನೂ, ಸೋಮರಸವನ್ನು ಪಾನಮಾಡುವವನೂ, ಗೋವುಗಳನ್ನು ದಾನ ಮಾಡುವವನೂ ಮತ್ತು ಮಾನವರಿಗೆ ಹಿತಕರನೂ, ಸರ್ವಸಮರ್ಥನೂ ಆದ ವೀರಪುತ್ರನನ್ನು ಯಜಮಾನನಿಗೆ ಅನುಗ್ರಹಿಸುವವನೂ, ಸ್ತೋತೃವಿನ ಸ್ತುತಿಯನ್ನು ಕೇಳತಕ್ಕವನೂ, ಸ್ತೋತ್ರಗಳಿಂದ ವಹಿಸಲ್ಪಡುವವನೂ ಆದ ಇಂದ್ರನು ತನ್ನ ಅಶ್ವಗಳೊಡನೆ ಆಕರ್ಷಕವಾದ ಮೂರು ಸವನಗಳಿಗೂ ಬರುವವನಾಗಲಿ.

## English Translation.

May Indra, with his steeds, come to as many (daily) rites (as may be celebrated), bearing the thunderbolt, drinking the Soma, bestowing cattle, granting manly and multiplied posterity, hearing the invocation of his adorer, and being the accepter of (our) praises.

|| ಸಂಹಿತಾಪಾಠಃ ||

ಅಸ್ಮೈ ವಯಂ ಯದ್ವಾವಾನ ತದ್ವಿವಿಷ್ಮ ಇಂದ್ರಾಯ ಯೋ ನಃ ಪ್ರದಿವೋ ಅಪಸ್ಕಃ ।
ಸುತೇ ಸೋಮೇ ಸ್ತುಮಸಿ ಶಂಸದುಕ್ಥೇಂದ್ರಾಯ ಬ್ರಹ್ಮ ವರ್ಧನಂ ಯಥಾಸತ್ ॥ ೫ ॥

|| ಪದಪಾಠಃ ||

ಅಸ್ಮೈ । ವಯಂ । ಯತ್ । ವವಾನ । ತತ್ । ವಿವಿಷ್ಮಃ । ಇಂದ್ರಾಯ । ಯಃ । ನಃ । ಪ್ರದಿವಃ । ಅಪಃ । ಕರಿತಿ ಕಃ ।
ಸುತೇ । ಸೋಮೇ । ಸ್ತುಮಸಿ । ಶಂಸತ್ । ಉಕ್ಥಾ । ಇಂದ್ರಾಯ । ಬ್ರಹ್ಮ । ವರ್ಧನಂ । ಯಥಾ । ಅಸತ್ ॥ ೫ ॥

॥ ಸಾಯಣಭಾಷ್ಯಂ ॥

ಪ್ರದಿವಃ ಪುರಾಣೋ ಯ ಇಂದ್ರೋ ನೋಽಸ್ಮದರ್ಥಮಪಃ ಪೋಷಣಾದಿಕಂ ಕರ್ಮ ಕಃ ಕರೋತಿ ಅಯಮಿಂದ್ರೋ ಯತ್ಸ್ತೋತ್ರಾದಿಕಂ ವನಾನ ಕಾಮಯತೇಽಸ್ಮಾ ಇಂದ್ರಾಯ ವಯಂ ತದ್ವಿವಿಷ್ಮಃ । ವ್ಯಾಪ್ನುಮಃ । ಕುರ್ಮ ಇತ್ಯರ್ಥಃ । ಸೋಮೇ ಸುತೇಽಭಿಷುತೇ ಸತಿ ಸ್ತುಮಸಿ । ಸ್ತುಮಃ । ಇಂದ್ರಾಯ ಸ್ತೋತ್ರಾಣಿ ಕುರ್ಮಃ । ಉಕ್ಥೋಕ್ಥಾನಿ ಶಸ್ತ್ರಾಣಿ ಶಂಸತ್ ಶಂಸಂತಃ ॥ ಪ್ರಥಮಾಬಹುವಚನಸ್ಯ ಲುಕ್ ॥ ಬ್ರಹ್ಮ ಹವಿರ್ಲಕ್ಷಣಮನ್ನಮಿಂದ್ರಾಯೇಂದ್ರಾರ್ಥಂ ವರ್ಧನಂ ಯಥಾ ವೃದ್ಧಿಕರಮಸತ್ ಸ್ಯಾತ್ ತಥಾ ಕುರ್ಮ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಪ್ರದಿವಃ**—ಪುರಾತನನಾದ । **ಯಃ**—ಯಾವ ಇಂದ್ರನು । **ನಃ**—ನಮ್ಮ ಹಿತಕ್ಕಾಗಿ । **ಅಪಃ**—ಪೋಷಣಾದಿ ಕರ್ಮಗಳನ್ನು । **ಕಃ**—ಮಾಡುವನೋ (ಮತ್ತು) । **ಯತ್**—ಯಾವ ಸ್ತೋತ್ರಗಳನ್ನು । **ವನಾನ**—ಇಚ್ಛಿಸುವನೋ । **ಅಸ್ಮೈ ಇಂದ್ರಾಯ**—ಅದೇ ಇಂದ್ರನನ್ನುದ್ದೇಶಿಸಿ । **ತದ್ವಿವಿಷ್ಮಃ**—ತೃಪ್ತಿಯಿಂದ ತುಂಬುವಂತೆ ಪೂಜಿಸುತ್ತೇವೆ । **ವಯಂ**—ನಾವು । **ಸೋಮೇ**—ಸೋಮರಸವು । **ಸುತೇ**—ಹಿಂಡಲ್ಪಟ್ಟಾಗ । **ಸ್ತುಮಸಿ**—ಸ್ತುತಿಸುತ್ತೇವೆ । **ಉಕ್ಥಾ**—ಉಕ್ಥರೂಪವಾದ ಸ್ತುತಿಗಳನ್ನು । **ಶಂಸತ್**—ಪಠಿಸುತ್ತೇವೆ । **ಬ್ರಹ್ಮ**—ಹವಿಸ್ಸಿನ ರೂಪದ ಅನ್ನವನ್ನು । **ಇಂದ್ರಾಯ**—ಇಂದ್ರನನ್ನುದ್ದೇಶಿಸಿ । **ವರ್ಧನಂ ಯಥಾ**—ಅವನ ಶಕ್ತಿಯು ವೃದ್ಧಿಯನ್ನು ಹೊಂದುವ ರೀತಿಯಲ್ಲಿ । **ಅಸತ್**—ಅರ್ಪಿಸುತ್ತೇವೆ.

॥ ಭಾವಾರ್ಥ ॥

ಪುರಾತನನಾದ ಯಾವ ಇಂದ್ರನು ನಮ್ಮ ಹಿತಕ್ಕಾಗಿ ಪೋಷಣಾದಿಕರ್ಮಗಳನ್ನು ಮಾಡುವನೋ ಮತ್ತು ಯಾರು ನಮ್ಮ ಸ್ತುತಿಗಳನ್ನಿಚ್ಛಿಸುವನೋ ಅದೇ ಇಂದ್ರನನ್ನುದ್ದೇಶಿಸಿ ನಾವು ಸ್ತುತಿಸುತ್ತೇವೆ. ಮತ್ತು ಅದಕ್ಕಿಂತಲೂ ಮೊದಲು ಸೋಮರಸವನ್ನು ಸಿದ್ಧಪಡಿಸುತ್ತೇವೆ. ಉಕ್ಥರೂಪವಾದ ಸ್ತುತಿಗಳನ್ನು ಪಠಿಸುತ್ತೇವೆ ಇಂದ್ರನನ್ನುದ್ದೇಶಿಸಿ ಅವನ ಶಕ್ತಿಯು ವೃದ್ಧಿಯನ್ನು ಹೊಂದುವ ರೀತಿಯಲ್ಲಿ ಹವಿಸ್ಸಿನ ರೂಪದ ಅನ್ನವನ್ನು ಅರ್ಪಿಸುತ್ತೇವೆ.

## English Translation.

To that Indra, who of old has rendered us good offices, we address (the praises) that he is pleased by: we celebrate him when the Soma is effused, repeating the prayer that the (sacrificial) food (offered) to Indra may be for his augmentation.

॥ ಸಂಹಿತಾಪಾಠಃ ॥

ಬ್ರಹ್ಮಾಣಿ ಹಿ ಚಕೃಷೇ ವರ್ಧನಾನಿ ತಾವತ್ತ ಇಂದ್ರ ಮತಿಭಿರ್ವಿವಿಷ್ಮಃ ।
ಸುತೇ ಸೋಮೇ ಸುತಪಾಃ ಶಂತಮಾನಿ ರಾಂದ್ರ್ಯಾ ಕ್ರಿಯಾಸ್ಮ ವಕ್ಷಣಾನಿ
ಯಜ್ಞೈಃ ॥ ೬ ॥

॥ ಪದಪಾಠಃ ॥

ಬ್ರಹ್ಮಾಣಿ । ಹಿ । ಚಕೃಷೇ । ವರ್ಧನಾನಿ । ತಾವತ್ । ತೇ । ಇಂದ್ರ । ಮತಿಽಭಿಃ । ವಿವಿಷ್ಮಃ ।
ಸುತೇ । ಸೋಮೇ । ಸುತಽಪಾಃ । ಶಂಽತಮಾನಿ । ರಾಂದ್ರ್ಯಾ । ಕ್ರಿಯಾಸ್ಮ । ವಕ್ಷಣಾನಿ । ಯಜ್ಞೈಃ ॥೬॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ಹಿ ಯಸ್ಮಾತ್ಕಾರಣಾತ್ ಬ್ರಹ್ಮಾಣಿ ಸ್ತೋತ್ರಾಣಿ ವರ್ಧನಾನಿ ಸ್ವಯಮೇವ ವೃದ್ಧಿಕರಾಣಿ ಚಕೃಷೇ ಕೃತವಾನಸಿ ತಸ್ಮಾತ್ಕಾರಣಾತ್ತಾವತ್ತಾವಂತಿ ತಾದೃಶಾನಿ ಸ್ತೋತ್ರಾಣಿ ತೇ ತುಭ್ಯಂ ಮತಿಭಿರ್ಬುದ್ಧಿಭಿರ್ವಯಂ ವಿವಿಷ್ಮಃ । ವ್ಯಾಪ್ನುಮಃ । ವರ್ಧನಾನಿ ಸ್ತೋತ್ರಾಣಿ ಮಮ ಯಥಾ ಭವೇಯುಸ್ತ್ವಂ ತಾದೃಶಾನಿ ಕಲ್ಪಿತವಾನಸೀತ್ಯರ್ಥಃ । ಅಪಿ ಚ ಹೇ ಸುತಪಾ ಅಭಿಷುತಸ್ಯ ಸೋಮಸ್ಯ ಶಂತಮಾನಿ ಸುಖಕೃತ್ತಮಾನಿ ರಾಂದ್ರ್ಯಾ ರಾಂದ್ರ್ಯಾಣಿ ರಮಣೀಯಾನಿ ಯಜ್ಞೈರ್ಹವಿರ್ಭಿರ್ಯುಕ್ತಾನಿ ವಕ್ಷಣಾನಿ ವಾಹಕಾನಿ ಸ್ತೋತ್ರಾಣಿ ಕ್ರಿಯಾಸ್ಮ । ಕರವಾಮ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಹಿ**—ಯಾವ ಕಾರಣದಿಂದ । **ಬ್ರಹ್ಮಾಣಿ**—ಸ್ತೋತ್ರಗಳನ್ನು **ವರ್ಧನಾನಿ**—ನಿನ್ನ ವೃದ್ಧಿಗೆ ಹೇತುಗಳೆಂದು । **ಚಕೃಷೇ**—ಮಾಡಿಕೊಂಡಿದ್ದೀಯೋ । **ತಾವತ್**—ಅಂತಹ ಸ್ತುತಿಗಳನ್ನೇ । **ತೇ**—ನಿನ್ನನ್ನುದ್ದೇಶಿಸಿ । **ಮತಿಭಿಃ**—ನಮ್ಮ ಪ್ರಜ್ಞೆಗಳಿಂದ ಕೂಡಿ (ಅರ್ಪಿಸಿ) । **ವಿವಿಷ್ಮಃ**—ನಿನ್ನನ್ನು ತೃಪ್ತಿಗೊಳಿಸುವೆವು । **ಸುತಪಾಃ**—ಸೋಮರಸವನ್ನು ಪಾನಮಾಡುವ ಎಲೈ ಇಂದ್ರನೇ । **ಸೋಮೇ**—ಸೋಮರಸವು । **ಸುತೇ**—ಹಿಂಡಲ್ಪಟ್ಟಾಗ । **ಶಂತಮಾನಿ**—ಸುಖಕರವಾದವೂ । **ರಾಂದ್ರ್ಯಾ**—ರಮಣೀಯವಾದವೂ । **ಯಜ್ಞೈಃ**—ಯಜ್ಞಗಳೊಡನೆ ಕೂಡಿದವೂ । **ವಕ್ಷಣಾನಿ**—ವಾಹಕವಾದವೂ ಆದ ಸ್ತುತಿಗಳನ್ನು । **ಕ್ರಿಯಾಸ್ಮ**—ಪಠಿಸುತ್ತೇವೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಯಾವ ಸ್ತುತಿಗಳನ್ನು ನೀನು ನಿನ್ನ ವೃದ್ಧಿಗೆ ಹೇತುಗಳೆಂದು ತಿಳಿದುಕೊಂಡಿದ್ದೀಯೋ ಅಂತಹ ಸ್ತುತಿಗಳನ್ನೇ ನಿನ್ನನ್ನುದ್ದೇಶಿಸಿ ನಮ್ಮ ಪ್ರಜ್ಞೆಗಳಿಂದ ಕೂಡಿ ಅರ್ಪಿಸಿ ನಿನ್ನನ್ನು ತೃಪ್ತಿಗೊಳಿಸುವೆವು. ಸೋಮರಸವನ್ನು ಪಾನಮಾಡುವ ಎಲೈ ಇಂದ್ರನೇ, ಸೋಮರಸವು ಹಿಂಡಲ್ಪಟ್ಟಾಗ, ಸುಖಕರವಾದವೂ, ರಮಣೀಯವಾದವೂ, ಯಜ್ಞಗಳೊಡನೆ ಕೂಡಿದವೂ, ವಾಹಕವಾದವೂ ಆದ ಸ್ತುತಿಗಳನ್ನು ಪಠಿಸುತ್ತೇವೆ.

## English Translation.

Since, Indra you have made the (sacred) prayers (the means of) your augmentation, we address such to you, along with our praises: may we, drinker of the effused libation, offer gratifying and acceptable eulogies with (our) sacrifices.

॥ ಸಂಹಿತಾಪಾಠಃ ॥

ಸ ನೋ ಬೋಧಿ ಪುರೋಳಾಶಂ ರರಾಣಃ ಪಿಬಾ ತು ಸೋಮಂ ಗೋಋಜೀಕಮಿಂದ್ರ ।

ಏದಂ ಬರ್ಹಿರ್ಯಜಮಾನಸ್ಯ ಸೀದೋರುಂ ಕೃಧಿ ತ್ವಾಯತ ಉ ಲೋಕಂ ॥

॥ ಪದಪಾಠಃ ॥

ಸಃ । ನಃ । ಬೋಧಿ । ಪುರೋಳಾಶಂ । ರರಾಣಃ । ಪಿಬ । ತು । ಸೋಮಂ । ಗೋಽಋಜೀಕಂ । ಇಂದ್ರ ।

ಆ । ಇದಂ । ಬರ್ಹಿಃ । ಯಜಮಾನಸ್ಯ । ಸೀದ । ಉರುಂ । ಕೃಧಿ । ತ್ವಾಽಯತಃ । ಊಂ ಇತಿ । ಲೋಕಂ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ರರಾಣೋ ರಮಮಾಣಃ ಸ ತ್ವಂ ನೋಽಸ್ಮದೀಯಂ ಪುರೋಡಾಶಮೇತಲ್ಲಕ್ಷಣಂ ಹವಿರ್ಬೋಧಿ । ಬುಧ್ಯಸ್ವ । ಕಿಂಚ ಗೋಋಜೀಕಂ ಗೋವಿಕಾರದಧ್ಯಾದಿಭಿಃ ಸಂಸ್ಕೃತಮಭಿಷುತಂ ಸೋಮಂ ತು ಕ್ಷಿಪ್ರಂ ಪಿಬ । ಪಿಬೇಃ । ತದರ್ಥಂ ಚ ಯಜಮಾನಸ್ಯ ಸಂಬಂಧೀದಂ ಬರ್ಹಿರಾ ಸೀದ । ಅಭಿವಿಶ । ತದನಂತರಂ ತ್ವಾಯತಸ್ತ್ವಾಮಿಚ್ಛತೋ ಯಜಮಾನಸ್ಯ ಲೋಕಂ ಸ್ಥಾನಮುರುಂ ವಿಸ್ತೀರ್ಣಂ ಕೃಧಿ । ಕುರು ॥ ಉ ಇತಿ ಪೂರಣಃ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ರರಾಣಃ**—ಹರ್ಷವನ್ನು ಹೊಂದಿರುವ । **ಸಃ**—ನೀನು । **ನಃ**—ನಮ್ಮಿಂದ ಅರ್ಪಿತವಾದ । **ಪುರೋಡಾಶಂ**—ಪುರೋಡಾಶರೂಪವಾದ ಹವಿಸ್ಸನ್ನು । **ಬೋಧಿ**—ತಿಳಿ । **ಗೋಋಜೀಕಂ**—ದಧ್ಯಾದಿಗಳಿಂದ ಮಿಶ್ರಿತವಾದ । **ಸೋಮಂ**—ಸೋಮರಸವನ್ನು । **ತು**—ಕ್ಷಿಪ್ರವಾಗಿ । **ಪಿಬ**—ಪಾನಮಾಡು । **ಯಜಮಾನಸ್ಯ**—ಯಜಮಾನನಿಂದ ಸಿದ್ಧಪಡಿಸಿದ । **ಇದಂ ಬರ್ಹಿಃ**—ಈ ದರ್ಭಾಸನದ ಮೇಲೆ । **ಆ ಸೀದ**—ಕುಳಿತುಕೊ **ತ್ವಾಯತಃ**—ನಿನ್ನ ಸೇವೆಯನ್ನಿಚ್ಛಿಸುವ ಯಜಮಾನನ । **ಲೋಕಂ**—ಸ್ಥಾನವನ್ನು । **ಉರುಂ**—ವಿಸ್ತೃತವಾದುದನ್ನಾಗಿ । **ಕೃಧಿ**—ಮಾಡು.

॥ ಭಾವಾರ್ಥ ॥

ಎಲೈ ಇಂದ್ರನೇ, ಹರ್ಷವನ್ನು ಹೊಂದಿರುವ ನೀನು ನಮ್ಮಿಂದ ಅರ್ಪಿತವಾದ ಪುರೋಡಾಶರೂಪವಾದ ಹವಿಸ್ಸನ್ನು ತಿಳಿ. ದಧ್ಯಾದಿಗಳಿಂದ ಮಿಶ್ರಿತವಾದ ಸೋಮರಸವನ್ನು ಕ್ಷಿಪ್ರವಾಗಿ ಪಾನಮಾಡು. ಯಜಮಾನನಿಂದ ಸಿದ್ಧಪಡಿಸಿದ ಈ ದರ್ಭಾಸನದ ಮೇಲೆ ಕುಳಿತುಕೊ. ನಿನ್ನ ಸೇವೆಯನ್ನಿಚ್ಛಿಸುವ ಯಜಮಾನನ ಸ್ಥಾನವನ್ನು ವಿಸ್ತೃತವಾದುದನ್ನಾಗಿ ಮಾಡು.

English Translation.

Accept, Indra, who are condescending, our cakes and butter: drink the Soma mixed with curds: sit down upon this sacred grass (strewn by) the worshipper: grant ample possessions to him who depends upon you.

॥ ಸಂಹಿತಾಪಾಠಃ ॥

ಸ ಮಂದಸ್ವಾ ಹ್ಯನು ಜೋಷಮುಗ್ರ ಪ್ರ ತ್ವಾ ಯಜ್ಞಾಸ ಇಮೇ
ಅಶ್ನುವಂತು ।
ಪ್ರೇಮೇ ಹವಾಸಃ ಪುರುಹೂತಮಸ್ಮೇ ಆ ತ್ವೇಯಂ ಧೀರವಸ ಇಂದ್ರ
ಯಮ್ಯಾಃ ॥ ೮ ॥

॥ ಪದಪಾಠಃ ॥

ಸಃ । ಮಂದಸ್ವ । ಹಿ । ಅನು । ಜೋಷಂ । ಉಗ್ರ । ಪ್ರ । ತ್ವಾ । ಯಜ್ಞಾಸಃ । ಇಮೇ । ಅಶ್ನುವಂತು ।
ಪ್ರ । ಇಮೇ । ಹವಾಸಃ । ಪುರುऽಹೂತಂ । ಅಸ್ಮೇ ಇತಿ । ಆ । ತ್ವಾ । ಇಯಂ । ಧೀಃ । ಅವಸೇ ।
ಇಂದ್ರ । ಯಮ್ಯಾಃ ॥ ೮ ॥

। ಸಾಯಣಭಾಷ್ಯಂ ॥

ಹೇ ಉಗ್ರೋದ್ಗೂರ್ಣಬಲೇಂದ್ರ ಸ ತ್ವಮನು ಜೋಷಂ ಕಾಮಾನುಗುಣಂ ಯಥಾ ಭವತಿ ತಥಾ ಮಂದಸ್ವ । ಮೋದಸ್ವ ॥ ಹಿಶಬ್ದಃ ಪಾದಪೂರಣಃ । ಹಿಯೋಗೇ ಮಂದಸ್ವೇತ್ಯಾಖ್ಯಾತಸ್ಯ ವ್ಯತ್ಯಯಾತ್ಸರ್ವಾನುದಾತ್ತತ್ವಂ ॥ ಇಮೇ ಯಜ್ಞಾಸೋ ಯಜ್ಞಾಃ ಸೋಮಾಸ್ತ್ವಾ ತ್ವಾಂ ಪ್ರಾಶ್ನುವಂತು । ಪ್ರಾಪ್ನುವಂತು । ಹೇ ಪುರುಹೂತ ಬಹುಭಿರಾಹೂತೇಂದ್ರ ತ್ವಾಮಸ್ಮೇ ಅಸ್ಮದೀಯಾನೀಮೇ ಹವಾಸೋ ಹವಾಃ ಸ್ತೋತ್ರಾಣಿ ಪ್ರಾಪ್ನುವಂತು । ಇಯಂ ಧೀಃ ಸ್ತುತಿಸ್ತ್ವಾ ತ್ವಾಮವಸೇऽಸ್ಮಾಕಂ ರಕ್ಷಣಾಯಾ ಯಮ್ಯಾಃ । ಆಯಚ್ಛತು । ನಿಯಚ್ಛತು ॥

|| ಪ್ರತಿಪದಾರ್ಥ ||

**ಉಗ್ರ**—ಅತ್ಯಧಿಕವಾದ ಬಲವುಳ್ಳ ಎಲೈ ಇಂದ್ರನೇ | **ಸಃ**—ನೀನು | **ಅನು ಜೋಷಂ**—ನಿನಗೆ ತೃಪ್ತಿಯಾಗುವಷ್ಟು | **ಮಂದಸ್ವ**—ಹರ್ಷವನ್ನನುಭವಿಸು | **ಇಮೇ ಯಜ್ಞಾಸಃ**—ಈ ಸೋಮರಸಗಳು | **ತ್ವಾ**—ನಿನ್ನನ್ನು | **ಪ್ರ ಅಶ್ನುವಂತು**—ವ್ಯಾಪಿಸಲಿ | **ಪುರುಹೂತ**—ಅನೇಕರಿಂದ ಕರೆಯಲ್ಪಡತಕ್ಕ | **ಇಂದ್ರ**—ಎಲೈ ಇಂದ್ರನೇ | **ಅಸ್ಮೇ**—ನಮ್ಮಿಂದ ಪಠಿತವಾದ | **ಇಮೇ ಹವಾಸಃ**—ಈ ಸ್ತುತಿಗಳು | **ಪ್ರ**—ಬಂದು ನಿನ್ನನ್ನು ಸೇರಲಿ | **ಇಯಂ ಧೀಃ**—ಈ ಕರ್ಮಗಳೂ | **ತ್ವಾ**—ನಿನ್ನನ್ನು | **ಅವಸೇ**—ನಮ್ಮ ರಕ್ಷಣೆಗೆ ಪ್ರೇರಿಸಲು | **ಆ ಯೋವ್ಯಾಃ**—ಬಂದು ಸೇರಿಕೊಳ್ಳಲಿ.

|| ಭಾವಾರ್ಥ ||

ಅತ್ಯಧಿಕವಾದ ಬಲವುಳ್ಳ ಎಲೈ ಇಂದ್ರನೇ, ನಿನಗೆ ತೃಪ್ತಿಯುಂಟಾಗುವಷ್ಟು ಹರ್ಷವನ್ನನುಭವಿಸು. ಈ ಸೋಮರಸಗಳು ನಿನ್ನನ್ನು ವ್ಯಾಪಿಸಕೊಳ್ಳಲಿ. ಅನೇಕರಿಂದ ಕರೆಯಲ್ಪಡತಕ್ಕ ಇಂದ್ರನೇ, ನಮ್ಮಿಂದ ಪಠಿತವಾದ ಈ ಸ್ತುತಿಗಳು ಬಂದು ನಿನ್ನನ್ನು ಸೇರಲಿ. ನಿನ್ನನ್ನು ನಮ್ಮ ರಕ್ಷಣೆಗೆ ಪ್ರೇರಿಸಲು ನಿನ್ನನ್ನು ಬಂದು ಸೇರಲಿ.

## English Translation.

Rejoice, fierce Indra, according to your pleasure : let these libations reach you : invoked of many, may these our invocations ascend to you : may this praise influence you for protection.

|| ಸಂಹಿತಾಪಾಠಃ ||

ತಂ ವಃ ಸಖಾಯಃ ಸಂ ಯಥಾ ಸುತೇಷು ಸೋಮೇಭಿರೀಂ ಪೃಣತಾ ಭೋಜಮಿಂದ್ರಂ |

ಕುವಿತ್ತಸ್ಮಾ ಅಸತಿ ನೋ ಭರಾಯ ನ ಸುಷ್ವಿಮಿಂದ್ರೋಽವಸೇ ಮೃಧಾತಿ ||

|| ಪದಪಾಠಃ ||

ತಂ | ವಃ | ಸಖಾಯಃ | ಸಂ | ಯಥಾ | ಸುತೇಷು | ಸೋಮೇಭಿಃ | ಈಂ | ಪೃಣತ | ಭೋಜಂ | ಇಂದ್ರಂ |

ಕುವಿತ್ | ತಸ್ಮೈ | ಅಸತಿ | ನಃ | ಭರಾಯ | ನ | ಸುಷ್ವಿಂ | ಇಂದ್ರಃ | ಅವಸೇ | ಮೃಧಾತಿ || ೯ ||

|| ಸಾಯಣಭಾಷ್ಯಂ ||

ಹೇ ಸಖಾಯಃ ಸ್ತೋತಾರೋ ವೋ ಯೂಯಂ ಸೋಮೇಷು ಸುತೇಷ್ವಭಿಷುತೇಷು ಸತ್ಸು ಭೋಜಂ ದಾತಾರಂ ತಮಿಮೇತಮಿಂದ್ರಂ ಸೋಮೇಭಿಃ ಸೋಮೈರ್ಯಥಾಕಾಮಂ ಸಂ ಪೃಣತ । ಸಂಪೂರಯತ । ತಸ್ಮಾ ಇಂದ್ರಾಯ ಕುವಿದ್ಬಹೂಪಕರಣಂ । ಕುವಿದಿತಿ ಬಹುನಾಮೈತತ್ । ಅಸತಿ । ಅಸ್ತು । ಕಿಮರ್ಥಂ । ನೋಽಸ್ಮಾಕಂ ಭರಾಯ ಭರಣಾಯ ಪೋಷಣಾಯ । ಇಂದ್ರಃ ಸುಷ್ವಿಮಭಿಷವಣ-ಶೀಲಂ ಯಜಮಾನಮವಸೇ ತರ್ಪಣಾಯ ನ ವೃಧಾತಿ । ನ ಬಾಧತೇ ||

|| ಪ್ರತಿಪದಾರ್ಥ ||

**ಸಖಾಯಃ**—ಎಲೈ ಸ್ತೋತೃಗಳೇ । **ವಃ**—ನೀವು । **ಸುತೇಷು**—ಸೋಮರಸವು ಹಿಂಡಲ್ಪಟ್ಟಾಗ । **ಭೋಜಂ**—ದಾತೃವೂ । **ತಂ**—ಪ್ರಸಿದ್ಧನೂ ಆದ । **ಈಂ ಇಂದ್ರಂ**—ಇದೇ ಇಂದ್ರನನ್ನು । **ಸೋಮೇಭಿಃ**—ಸೋಮರಸಗಳಿಂದ । **ಸಂ ಪೃಣತ**—ತೃಪ್ತಿಪಡಿಸಿರಿ । **ನಃ**—ನಮ್ಮ । **ಭರಾಯ**—ಪೋಷಣೆಗಾಗಿ । **ತಸ್ಮೈ**—ಆ ಇಂದ್ರನಿಗೆ । **ಕುವಿತ್**—ಅತ್ಯಧಿಕವಾದ ಭಾಗವು । **ಅಸತಿ**—ಇರಲಿ । **ಇಂದ್ರಃ**—ಇಂದ್ರನು । **ಸುಷ್ವಿಂ**—ಸೋಮವನ್ನು ಹಿಂಡಿ ಅರ್ಪಿಸುವ ಯಜಮಾನನನ್ನು । **ಅವಸೇ**—ತೃಪ್ತ್ಯರ್ಥವಾಗಿ । **ನ ವೃಧಾತಿ**—ಹಿಂಸಿಸುವುದಿಲ್ಲ.

**|| ಭಾವಾರ್ಥ ||**

ಎಲೈ ಸ್ತೋತೃಗಳೇ, ನೀವು ಸೋಮರಸವನ್ನು ಹಿಂಡಿದಾಗ ದಾತೃವೂ, ಪ್ರಸಿದ್ಧನೂ ಆದ ಇದೇ ಇಂದ್ರನನ್ನು ಸೋಮರಸಗಳಿಂದ ತೃಪ್ತಿಪಡಿಸಿರಿ. ನಮ್ಮ ಪೋಷಣೆಗಾಗಿ ಆ ಇಂದ್ರನಿಗೆ ಅತ್ಯಧಿಕವಾದ ಭಾಗವು ಕ್ಲೃಪ್ತವಾಗಿರಲಿ. ಸೋಮವನ್ನು ಹಿಂಡಿ ಅರ್ಪಿಸುವ ಯಜಮಾನನನ್ನು ತನ್ನ ತೃಪ್ತ್ಯರ್ಥವಾಗಿ ಇಂದ್ರನು ಹಿಂಸಿಸುವುದಿಲ್ಲ.

## English Translation.

Friends, when the libations are effused, satisfy that liberal Indra with the Soma juices: let there be plenty for him, that (he may provide) for our nourishment: Indra never neglects the carc of him who presents copious libations.

**|| ಸಂಹಿತಾಪಾಠಃ ||**

ಏವೇದಿಂದ್ರಃ ಸುತೇ ಅಸ್ತಾವಿ ಸೋಮೇ ಭರದ್ವಾಜೇಷು ಕ್ಷಯದಿನ್ಮಘೋನಃ ।
ಅಸದ್ಯಥಾ ಜರಿತ್ರ ಉತ ಸೂರಿರಿಂದ್ರೋ ರಾಯೋ ವಿಶ್ವವಾರಸ್ಯ ದಾತಾ ||

॥ ಪದಪಾಠಃ ॥

ಏವ । ಇತ್ । ಇಂದ್ರಃ । ಸುತೇ । ಅಸ್ತಾವಿ । ಸೋಮೇ । ಭರತ್ऽವಾಜೇಷು । ಕ್ಷಯತ್ । ಇತ್ ।
ಮಘೋನಃ ।

ಅಸತ್ । ಯಥಾ । ಜರಿತ್ರೇ । ಉತ । ಸೂರಿಃ । ಇಂದ್ರಃ । ರಾಯಃ । ವಿಶ್ವऽವಾರಸ್ಯ । ದಾತಾ ॥ ೧೦ ॥

॥ ಸಾಯಣಭಾಷ್ಯಂ ॥

ಮಘೋನೋ ಧನವತೋ ಹವಿಷ್ಮತೋ ಯಜಮಾನಸ್ಯ ಕ್ಷಯದೀಶ್ವರ ಇಂದ್ರಃ ಸೋಮೇ ಸುತೇಽಭಿಷುತೇ ಸತಿ ಭರದ್ವಾಜೇಷು ಭರದ್ವಾಜೇ ಮಯ್ಯೇವೈವಮಸ್ತಾವಿ। ಸ್ತುತೋಽಭೂತ್। ಇಂದ್ರೋ ಜರಿತ್ರೇ ಸ್ತೋತ್ರೇ ಸೂರಿಃ ಸನ್ಮಾರ್ಗೇ ಪ್ರೇರಕೋ ಯಥಾಸತ್ ಭವೇತ್ । ಉತಾಪಿ ಚ ವಿಶ್ವವಾರಸ್ಯ ವಿಶ್ವೈರ್ವರಣೀಯಸ್ಯ ರಾಯೋ ಧನಸ್ಯ ದಾತಾ ಯಥಾ ಭವೇತ್ ತಥಾಸ್ತಾವೀತಿ ಸಂಬಂಧಃ ॥ ಇದಿತಿ ದ್ವಯಂ ಪೂರಣಂ ॥

॥ ಪ್ರತಿಪದಾರ್ಥ ॥

**ಯಥಾ**—ಯಾವ ರೀತಿಯಲ್ಲಿ । **ಇಂದ್ರಃ**—ಇಂದ್ರನು । **ಜರಿತ್ರೇ**—ಸ್ತೋತೃವಿಗೆ । **ಸೂರಿಃ**—ಸನ್ಮಾರ್ಗಪ್ರೇರಕನಾಗಿ । **ಅಸತ್**—ಆಗುವನೋ । **ಉತ**—ಮತ್ತು । **ವಿಶ್ವವಾರಾಯ**—ಎಲ್ಲರಿಂದಲೂ ಅಪೇಕ್ಷಿತವಾದ । **ರಾಯಃ**—ಧನಕ್ಕೆ (ಧನದ) । **ದಾತಾ**—ದಾತೃವಾಗಿ (ಆಗುವನೋ ಅದೇ ರೀತಿಯಲ್ಲಿ) । **ಮಘೋನಃ**—ಹವಿಸ್ಸಿನ ರೂಪದ ಧನವಂತನಾದ ಯಜಮಾನನಿಗೆ । **ಕ್ಷಯತ್ ಇತ್**—ಈಶ್ವರನಾದ । **ಇಂದ್ರಃ**—ಇಂದ್ರನು । **ಸೋಮೇ**—ಸೋಮರಸವು । **ಸುತೇ**—ಹಿಂಡಲ್ಪಟ್ಟಾಗ । **ಭರದ್ವಾಜೇಷು**—ಭರದ್ವಾಜನಾದ ನನ್ನಿಂದ । **ಏವ ಇತ್**—ಈ ರೀತಿಯಲ್ಲಿಯೇ । **ಅಸ್ತಾವಿ**—ಸ್ತುತಿಸಲ್ಪಟ್ಟನು.

॥ ಭಾವಾರ್ಥ ॥

ಯಾವ ವಿಧದಲ್ಲಿ ಇಂದ್ರನು ಸ್ತೋತೃವಿಗೆ ಸನ್ಮಾರ್ಗಪ್ರೇರಕನಾಗಿ ಆಗುವನೋ ಮತ್ತು ಎಲ್ಲರಿಂದಲೂ ಅಪೇಕ್ಷಿತವಾದ ಧನದ ದಾತೃವಾಗಿ ಆಗುವನೋ ಆ ವಿಧದಲ್ಲಿಯೇ, ಹವಿಸ್ಸಿನ ರೂಪದ ಧನವಂತನಾದ ಯಜಮಾನನಿಗೆ ಈಶ್ವರನಾದ ಇಂದ್ರನು ಸೋಮರಸವು ಹಿಂಡಲ್ಪಟ್ಟಾಗ ಭರದ್ವಾಜನಾದ ನನ್ನಿಂದ ಈ ವಿಧವಾಗಿಯೇ ಸ್ತುತಿಸಲ್ಪಟ್ಟನು.

## English Translation.

Thus has Indra, the lord of the opulent, been glorified by the Bharadwajas, upon the libation being effused, that he may be the director of his eulogist (to virtue), that Indra may be the giver of all desirable riches.

# ಇಪ್ಪತ್ತನಾಲ್ಕನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ತೃತೀಯೇಽನುವಾಕೇ ವಿಂಶತಿ ಸೂಕ್ತಾನಿ। ತತ್ರ ವೃಷಾ ಮದ ಇತಿ ದಶರ್ಚಂ ಪ್ರಥಮಂ ಸೂಕ್ತಂ ಭರದ್ವಾಜಸ್ಯಾರ್ಷಂ ತ್ರೈಷ್ಟುಭಮೈಂದ್ರಂ । ವೃಷೇತ್ಯನುಕ್ರಾಂತಂ ॥ ವಿಷುವತಿ ನಿಷ್ಕೇವಲ್ಯ ಏತತ್ಸೂಕ್ತಂ । ಸೂತ್ರಿತಂ ಚ । ವೃಷಾ ಮದಃ ಪ್ರ ಮಂಹಿಷ್ಠಾಯ ॥ ಆ. ೮-೬ । ಇತಿ ॥**

ಅನುವಾದವು—ಆರನೆಯ ಮಂಡಲದ ಮೂರನೆಯ ಅನುವಾಕದಲ್ಲಿ ಇಪ್ಪತ್ತು ಸೂಕ್ತಗಳಿರುವವು. ಅವುಗಳಲ್ಲಿ **ವೃಷಾ ಮದಃ** ಎಂಬ ಈ ಸೂಕ್ತವು ಮೊದಲನೆಯದು. ಇದರಲ್ಲಿ ಹತ್ತು ಋಕ್ಕುಗಳಿರುವವು ಈ ಸೂಕ್ತಕ್ಕೆ ಭರದ್ವಾಜನು ಋಷಿಯು ; ಇಂದ್ರನು ದೇವತೆಯು ; ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ—**ವೃಷಾ** ಎಂದು ಮೊದಲಾಗಿ ಹೇಳಿರುವುದು ವಿಷುವದ್ಭಾಗದಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ವೃಷಾ ಮದಃ ಪ್ರ ಮಂಹಿಷ್ಠಾಯ** ಎಂಬ ಸೂತ್ರದಿಂದ (ಆ. ೮-೬) ವಿವೃತವಾಗಿರುವುದು.

## ಸೂಕ್ತ—೨೪

ಮಂಡಲ—೬ ॥ ಅನುವಾಕ—೩ ॥ ಸೂಕ್ತ—೨೪ ॥
ಅಷ್ಟಕ—೪ ॥ ಅಧ್ಯಾಯ—೬ ॥ ವರ್ಗ—೧೭, ೧೮ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೧೦ ॥
॥ ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ॥
॥ ದೇವತಾ—ಇಂದ್ರಃ ॥
॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

**ವೃಷಾ ಮದ ಇಂದ್ರೇ ಶ್ಲೋಕ ಉಕ್ಥಾ ಸಚಾ ಸೋಮೇಷು ಸುತಪಾ ಋಜೀಷೀ ।**
**ಅರ್ಚತ್ರ್ಯೋ ಮಘವಾ ನೃಭ್ಯ ಉಕ್ಥೈರ್ದ್ಯುಕ್ಷೋ ರಾಜಾ ಗಿರಾಮಕ್ಷಿತೋತಿಃ ॥ ೧ ॥**

॥ ಪದಪಾಠಃ ॥

**ವೃಷಾ । ಮದಃ । ಇಂದ್ರೇ । ಶ್ಲೋಕಃ । ಉಕ್ಥಾ । ಸಚಾ । ಸೋಮೇಷು । ಸುತಽಪಾಃ । ಋಜೀಷೀ ।**
**ಅರ್ಚತ್ರ್ಯಃ । ಮಘಽವಾ । ನೃಽಭ್ಯಃ । ಉಕ್ಥೈಃ । ದ್ಯುಕ್ಷಃ । ರಾಜಾ । ಗಿರಾಂ । ಅಕ್ಷಿತಽಊತಿಃ ॥ ೧ ॥**

॥ ಸಾಯಣಭಾಷ್ಯಂ ॥

**ಸೋಮೇಷು ಸೋಮವತ್ಸು ಯಾಗೇಷ್ವಿಂದ್ರೇ ಸೋಮಪಾನಜನಿತೋ ಮದೋ ವೃಷಾ ಯಜಮಾನಸ್ಯ ಕಾಮಾನಾಂ ವರ್ಷಕೋ ಭವತಿ । ಯದ್ವಾ । ಸರ್ವಜನಾಹ್ಲಾದಕಸ್ಯ ವರ್ಷಣಸ್ಯ ಕರ್ತಾ ಭವತಿ । ಉಕ್ಥೋಕ್ಥೇನ ಶಸ್ತ್ರೇಣ ಸಚಾ ಸಹ ಶ್ಲೋಕಃ ಸ್ತೋತ್ರರೂಪಃ ಶಬ್ದೋ ವೃಷಾ ಭವತಿ । ಸುತಪಾ ಅಭಿಷುತಸ್ಯ ಸೋಮಸ್ಯ ಪಾತಾ ಋಜೀಷ್ಯೃಜೀಷಂ ಗತರಸಮಪಿ ಸೋಮಂ ನ ಪರಿತ್ಯಜನ್ಮಘವಾ ಧನವಾನ್ ಸ ಚೇಂದ್ರೋ ನೃಭ್ಯಃ ಸ್ತುತೀನಾಂ ನೇತೃಭ್ಯ ಉಕ್ಥೈಃ ಸ್ತೋತ್ರೈರರ್ಚತ್ರ್ಯೋಽರ್ಚನೀಯೋ ಭವತಿ । ದ್ಯುಕ್ಷೋ ದ್ಯುಲೋಕನಿವಾಸೋ ಗಿರಾಂ ಸ್ತುತೀನಾಂ ರಾಜೇಶ್ವರ ಇಂದ್ರೋಽಕ್ಷಿತೋತಿರಕ್ಷೀಣ-ರಕ್ಷಣ್ಚ ಭವತಿ ॥**

॥ ಪ್ರತಿಪದಾರ್ಥ ॥

**ಸೋಮೇಷು**—ಸೋಮವನ್ನು ಅರ್ಪಿಸುವ ಯಾಗಗಳಲ್ಲಿ । **ಇಂದ್ರೇ**—ಇಂದ್ರನಲ್ಲಿ ಉತ್ಪನ್ನವಾದ । **ಮದಃ**-ಹರ್ಷವು। **ವೃಷಾ**-ಯಜಮಾನರಿಗೆ ಕಾಮವರ್ಷಕವಾಗಿ ಆಗುತ್ತದೆ। **ಉಕ್ಥಾ ಸಚಾ**—ಶಸ್ತ್ರಮಂತ್ರದೊಡನೆ ಕೂಡಿದ । **ಶ್ಲೋಕಃ**—ಇಂದ್ರಸ್ತುತಿಯೂ ಸಹ (ಕಾಮವರ್ಷಕವಾಗಿರುತ್ತದೆ) । **ಸುತಪಾಃ**—ಸೋಮಪಾನವನ್ನು ಮಾಡುವವನೂ । **ಋಜೀಷೀ**—ಋಜೀಷಸಂಜ್ಞಕವಾದ ಸೋಮಪಾನಮಾಡುವವನೂ । **ಮಘವಾ**-ಧನವಂತನೂ ಆದ ಇಂದ್ರನು । **ನೃಭ್ಯಃ**—ಸ್ತುತಿಕರ್ತರಾದ ಮಾನವರಿಗೆ । **ಉಕ್ಥೈಃ**—ಶಸ್ತ್ರಮಂತ್ರಗಳ ಪಠನೆಯ ಮೂಲಕ । **ಅರ್ಚತ್ರ್ಯಃ**- ಪೂಜನೀಯನಾಗಿ ಆಗುತ್ತಾನೆ । **ದ್ಯುಕ್ಷಃ**—ದ್ಯುಲೋಕನಿವಾಸಿಯೂ । **ಗಿರಾಂ**—ಸ್ತುತಿಗಳಿಗೆ । **ರಾಜಾ**—ಈಶ್ವರನೂ ಆದ ಇಂದ್ರನು । **ಅಕ್ಷಿತೋತಿಃ**—ನಾಶರಹಿತವಾದ ರಕ್ಷಣೆಯುಳ್ಳವನೂ ಆಗುತ್ತಾನೆ.]

॥ ಭಾವಾರ್ಥ ॥

ಸೋಮವನ್ನು ಅರ್ಪಿಸತಕ್ಕ ಯಾಗಗಳಲ್ಲಿ ಇಂದ್ರನಲ್ಲಿ ಉತ್ಪನ್ನವಾದ ಹರ್ಷವು ಯಜಮಾನನಿಗೆ ಕಾಮವರ್ಷಕವಾಗಿ ಆಗುತ್ತದೆ. ಶಸ್ತ್ರಮಂತ್ರದೊಡನೆ ಕೂಡಿದ ಇಂದ್ರಸ್ತುತಿಯೂ ಸಹ ಕಾಮವರ್ಷಕವಾಗಿರುತ್ತದೆ. ಸೋಮಪಾನವನ್ನು ಮಾಡುವವನೂ, ಋಜೀಷಸಂಜ್ಞಕವಾದ ಸೋಮವುಳ್ಳವನೂ, ಧನವಂತನೂ ಆದ ಇಂದ್ರನು ಸ್ತುತಿಕರ್ತರಾದ ಮಾನವರಿಗೆ ಶಸ್ತ್ರಮಂತ್ರಗಳ ಪಠನೆಯ ಮೂಲಕ ಪೂಜನೀಯನಾಗಿ ಆಗುತ್ತಾನೆ. ದ್ಯುಲೋಕನಿವಾಸಿಯೂ ಸ್ತುತಿಗಳಿಗೆ ಈಶ್ವರನೂ ಆದ ಇಂದ್ರನು ನಾಶರಹಿತವಾದ ರಕ್ಷಣೆಯುಳ್ಳವನೂ ಆಗುತ್ತಾನೆ.

## English Translation.

At the rites at which the Soma (is offered) the exhilaration (produced) in Indra is a shower (of benefits to the offerer); so is the chaunted hymn with the (recited) prayer : therefore the drinker of the Soma, the partaker of the stale Soma, Maghavan, is to be propitiated by men with praises; dweller in heaven, he is the lord of sacred songs, unwearied in the protection (of his votaries).

॥ ಸಂಹಿತಾಪಾಠಃ ॥

ತತುರಿರ್ವೀರೋ ನರ್ಯೋ ವಿಚೇತಾಃ ಶ್ರೋತಾ ಹವಂ ಗೃಣತ ಉರ್ವ್ಯೂತಿಃ ।
ವಸುಃ ಶಂಸೋ ನರಾಂ ಕಾರುಧಾಯಾ ವಾಜೀ ಸ್ತುತೋ ವಿದಥೇ ದಾತಿ
ವಾಜಂ ॥ ೨ ॥

॥ ಪದಪಾಠಃ ॥

ತತುರಿಃ । ವೀರಃ । ನರ್ಯಃ । ವಿऽಚೇತಾಃ । ಶ್ರೋತಾ । ಹವಂ । ಗೃಣತಃ । ಉರ್ವಿऽಊತಿಃ ।
ವಸುಃ । ಶಂಸಃ । ನರಾಂ । ಕಾರುऽಧಾಯಾಃ । ವಾಜೀ । ಸ್ತುತಃ । ವಿದಥೇ । ದಾತಿ । ವಾಜಂ ॥ ೨ ॥

॥ ಸಾಯಣಭಾಷ್ಯಂ ॥

ವಾಜ್ಯನ್ನವಾನಿಂದ್ರೋ ವಿದಥೇ ಯಜ್ಞೇऽಸ್ಮಾಭಿಃ ಸ್ತುತಃ ಸನ್ ವಾಜಮನ್ನಂ ದಾತಿ। ಅಸ್ಮಭ್ಯಂ ದದಾತಿ । ಕೀದೃಶ ಇಂದ್ರಃ । ತತುರಿಃ ಶತ್ರೂಣಾಂ ಹಿಂಸಕೋ ವೀರೋ ವಿಕ್ರಾಂತೋ ನರ್ಯೋ ನರಹಿತೋ ವಿಚೇತಾ ವಿವಿಕ್ತಜ್ಞಾನೋ ಹವಮಸ್ಮದೀಯಂ ಸ್ತೋತ್ರಂ ಶ್ರೋತಾ ಗೃಣತಃ ಸ್ತುವತಃ ಸ್ತೋತೃಜನಸ್ಯೋರ್ವ್ಯೂತಿರ್ವಿಸ್ತೃತರಕ್ಷೋ ವಸುರ್ವಾಸಯಿತಾ ನರಾಂ ನೃಣಾಂ ಸ್ತೋತೃಜನಾನಾಂ ಶಂಸಃ ಶಂಸನೀಯಃ ಕಾರುಧಾಯಾಃ ಕಾರೂಣಾಂ ಸ್ತೋತೄಣಾಂ ಧಾರಯಿತಾ । ಏವಂಭೂತ ಇಂದ್ರೋ ವಾಜಂ ದದಾತೀತಿ ಸಂಬಂಧಃ ॥

॥ ಪ್ರತಿಪದಾರ್ಥ ॥

**ತತುರಿಃ**—ಶತ್ರುಹಿಂಸಕನೂ । **ವೀರಃ**—ಪರಾಕ್ರಮಿಯೂ । **ನರ್ಯಃ**—ನರರಿಗೆ ಹಿತಕಾರಿಯೂ । **ವಿಚೇತಾಃ**—ವಿವೇಕಪೂರಿತವಾದ ಜ್ಞಾನವುಳ್ಳವನೂ । **ಹವಂ**—ನಮ್ಮ ಸ್ತುತಿಯನ್ನು । **ಶ್ರೋತಾ**—ಕೇಳ ತಕ್ಕವನೂ । **ಗೃಣತಃ**—ಸ್ತುತಿಸುವ ಯಜಮಾನನನ್ನು । **ಉರ್ವ್ಯೂತಿಃ**—ಅಧಿಕವಾಗಿ ರಕ್ಷಿಸುವವನೂ । **ವಸುಃ**—ವಸತಿದಾಯಕನೂ । **ನರಾಂ**—ಸ್ತೋತೃಜನರಿಗೆ । **ಶಂಸಃ**—ಪೂಜನೀಯನೂ । **ಕಾರುಧಾಯಾಃ**—ಸ್ತೋತೃಗಳ ಧಾರಕನೂ । **ವಾಜೀ**—ಅನ್ನವಂತನೂ ಆದ ಇಂದ್ರನು । **ವಿದಥೇ**—ಯಜ್ಞಗಳಲ್ಲಿ । **ಸ್ತುತಃ (ಸನ್)**—ಸ್ತುತಿಸಲ್ಪಟ್ಟವನಾಗಿ । **ವಾಜಂ**—ಅನ್ನವನ್ನು । **ದಾತಿ**—ನಮಗೆ ಕೊಡಲಿ.

॥ ಭಾವಾರ್ಥ ॥

ಶತ್ರುಹಿಂಸಕನೂ, ಪರಾಕ್ರಮಿಯೂ ನರರಿಗೆ ಹಿತಕಾರಿಯೂ ವಿವೇಕಪೂರಿತವಾದ ಜ್ಞಾನವುಳ್ಳವನೂ ನಮ್ಮ ಸ್ತುತಿಯನ್ನು ಕೇಳತಕ್ಕವನೂ, ಸ್ತುತಿಸುವ ಯಜಮಾನನನ್ನು ಅಧಿಕವಾಗಿ ರಕ್ಷಿಸುವವನೂ, ವಸತಿದಾಯಕನೂ ಸ್ತೋತೃಜನರಿಗೆ ಪೂಜನೀಯನೂ, ಸ್ತೋತೃಗಳ ಧಾರಕನೂ, ಅನ್ನವಂತನೂ ಆದ ಇಂದ್ರನು ಯಜ್ಞಗಳಲ್ಲಿ ಸ್ತುತಿಸಲ್ಪಟ್ಟವನಾಗಿ ನಮಗೆ ಅನ್ನವನ್ನು ಕೊಡಲಿ.

## English Translation.

The surpasser (of foes), a hero, the friend of man, the discriminator, the hearer of the invocation, the great protector of his adorers, the giver of dwellings, the ruler of man, the cherisher of his worshippers, the bestower of food, grants us, when glorified at the sacrifice, (abundant) sustenance.

॥ ಸಂಹಿತಾಪಾಠಃ ॥

ಅಕ್ಷೋ ನ ಚಕ್ರ್ಯೋಃ ಶೂರ ಬೃಹನ್ಪ್ರ ತೇ ಮಹ್ನಾ ರಿರಿಚೇ ರೋದಸ್ಯೋಃ।
ವೃಕ್ಷಸ್ಯ ನು ತೇ ಪುರುಹೂತ ವಯಾ ವ್ಯೂ೩ತಯೋ ರುರುಹುರಿಂದ್ರ ಪೂ-
ರ್ವೀಃ ॥ ೩ ॥

॥ ಪದಪಾಠಃ ॥

ಅಕ್ಷಃ । ನ । ಚಕ್ರ್ಯೋಃ । ಶೂರ । ಬೃಹನ್ । ಪ್ರ । ತೇ । ಮಹ್ನಾ । ರಿರಿಚೇ । ರೋದಸ್ಯೋಃ ।
ವೃಕ್ಷಸ್ಯ । ನು । ತೇ । ಪುರು೨ಹೂತ । ವಯಾಃ । ವಿ । ಊತಯಃ । ರುರುಹುಃ। ಇಂದ್ರ। ಪೂರ್ವೀಃ ॥೩॥

॥ ಸಾಯಣಭಾಷ್ಯಂ ॥

ಹೇ ಶೂರ ವಿಕ್ರಾಂತೇಂದ್ರ ಬೃಹನ್ ಮಹಾನ್ ತೇ ತ್ವದೀಯೋ ಮಹ್ನಾ ಮಹಿಮಾ ರೋದಸ್ಯೋರ್ದ್ಯಾವಾಪೃಥಿವ್ಯೋಃ ಪ್ರ ರಿರಿಚೇ । ಅತಿರಿಚ್ಯತೇ ।' ದ್ಯಾವಾಪೃಥಿವೀಭ್ಯಾಮಿತ್ಯರ್ಥಃ । ಅತ್ರ ದೃಷ್ಟಾಂತಃ । ಚಕ್ರ್ಯೋಶ್ಚಕ್ರಯೋರಕ್ಷೋ ನ । ರಥಸಂಬಂಧ್ಯಕ್ಷೋ ಯಥಾ ಚಕ್ರಾಭ್ಯಾಂ ಬಹಿರ್ಗತಸ್ತದ್ವತ್ । ಹೇ ಪುರುಹೂತ ಬಹುಭಿರಾಹೂತೇಂದ್ರ ತ್ವದೀಯಾಃ ಪೂರ್ವೀರ್ಬಹ್ವ್ಯ ಊತಯೋ ರಕ್ಷಾ ವಿ ರುರುಹುಃ । ವಿಶೇಷೇಣ ರೋಹಂತಿ । ತತ್ರ ದೃಷ್ಟಾಂತಃ । ವೃಕ್ಷಸ್ಯ ನು । ಯಥಾ ವೃಕ್ಷಸ್ಯ ವಯಾಃ ಶಾಖಾ ವಿರೋಹಂತಿ ತದ್ವತ್ ॥

॥ ಪ್ರತಿಪದಾರ್ಥ ॥

**ಶೂರ**—ಪರಾಕ್ರಮಿಯಾದ ಎಲೈ ಇಂದ್ರನೇ । **ಚಕ್ರ್ಯೋಃ**—ಚಕ್ರಗಳನ್ನೂ ಮೀರಿ ಪ್ರಸರಿಸಿರುವ । **ಅಕ್ಷೋ ನ**—ಇರಚಿಯಂತೆ । **ತೇ**—ನಿನ್ನ । **ಬೃಹನ್**—ಮಹತ್ತಾದ । **ಮಹ್ನಾ**—ಮಹಿಮೆಯು । **ರೋದಸ್ಯೋಃ**—ದ್ಯಾವಾಪೃಥಿವಿಗಳಿಗಿಂತಲೂ ಅಧಿಕವಾಗಿ । **ಪ್ರ ರಿರಿಚೇ**—ಮೀರಿ ಪ್ರಸರಿಸಿದೆ । **ಪುರುಹೂತ**—ಅನೇಕರಿಂದ ಕರೆಯಲ್ಪಡತಕ್ಕ । **ಇಂದ್ರ**—ಇಂದ್ರನೇ । **ವೃಕ್ಷಸ್ಯ ನು ವಯಾಃ**—ವೃಕ್ಷದ ಶಾಖೆಗಳು ಯಾವ

ರೀತಿ ಊರ್ಧ್ವಮುಖವಾಗಿ ವ್ಯಾಪಿಸಿವೆಯೋ ಹಾಗೆ | **ಪೂರ್ವೀಃ**---ಅತ್ಯಧಿಕವಾದ | **ತೇ ಊತಯಃ**---ನಿನ್ನ ರಕ್ಷಣೆಗಳು | **ವಿ ರುರುಹುಃ**---ವಿಶೇಷವಾಗಿ ಪ್ರಸರಿಸಿವೆ.

|| ಭಾವಾರ್ಥ ||

ಪರಾಕ್ರಮಿಯಾದ ಎಲೈ ಇಂದ್ರನೇ, ಚಕ್ರಗಳನ್ನೂ ಮೀರಿ ಪ್ರಸರಿಸುವ ಇರಚಿಯಂತೆ ನಿನ್ನ ಮಹತ್ತಾದ ಮಹಿಮೆಯು ದ್ಯಾವಾಪೃಥಿವಿಗಳಿಗಿಂತಲೂ ಅಧಿಕವಾಗಿ ಪ್ರಸರಿಸಿದೆ. ಅನೇಕರಿಂದ ಕರೆಯಲ್ಪಡತಕ್ಕ ಇಂದ್ರನೇ, ವೃಕ್ಷದ ಶಾಖೆಗಳು ಯಾವರೀತಿ ಸರ್ವಮುಖದಿಂದಲೂ ವ್ಯಾಪಿಸಿದೆಯೋ ಹಾಗೆ ಅತ್ಯಧಿಕವಾದ ನಿನ್ನ ರಕ್ಷಣೆಗಳು ವಿಶೇಷವಾಗಿ ವ್ಯಾಪಿಸಿವೆ.

## English Translation.

Mighty hero, by your magnitude, (the extant) of heaven and earth is exceeded, as the axle by the (circumference of the) wheels : invoked of many, your numerous benefits, Indra, spread out like the branches of a tree.

|| ವಿಶೇಷವಿಷಯಗಳು ||

ಈ ಋಕ್ಕಿನಲ್ಲಿರುವ---**ವೃಕ್ಷಸ್ಯ ನು ತೇ ಪುರುಹೂತ ವಯಾಃ** ಎಂಬ ವಾಕ್ಯಕ್ಕೆ ಯಾಸ್ಕರು ಈ ರೀತಿ ನಿರ್ವಚನವನ್ನು ಹೇಳಿದಾರೆ---

**ವೃಕ್ಷಸ್ಯ ನು ತೇ ಪುರುಹೂತ ವಯಾಃ । ವೃಕ್ಷಸ್ಯೇವ ತೇ ಪುರುಹೂತ ಶಾಖಾಃ । ವಯಾಃ ಶಾಖಾಃ ವೇತೇರ್ವಾತಾಯನಾ ಭವಂತಿ । ಶಾಖಾಃ ಖಶಯಾಃ ಶಕ್ನೋತೇರ್ವಾ ।**

(ನಿ. ೧-೪)

**ವಯಾಃ** ಎಂಬ ಶಬ್ದವು ವಿ ಚಲಿಸು ಎಂಬ ಧಾತುವಿನಿಂದ ನಿಷ್ಪನ್ನವಾಗಿ ವೃಕ್ಷದ ಶಾಖೆಗಳು ಎಂಬರ್ಥವನ್ನು ಸೂಚಿಸುವುದು. ಈ ಶಾಖೆಗಳು ಅಥವಾ ಕೊಂಬೆಗಳು ಗಾಳಿಯಿಂದ ಚಲಿಸುವವು. ಆದುದರಿಂದ **ವಯಾಃ** ಎಂಬ ಶಬ್ದಕ್ಕೆ ಗಾಳಿಯಿಂದ ಚಲಿಸುವ (ಅಳ್ಳಾಡುವ) ವೃಕ್ಷದ ಕೊಂಬೆಗಳು ಎಂದರ್ಥವು. ಅಥವಾ **ವಯಾಃ** ಅಥವಾ **ಶಾಖಾಃ** ಎಂಬ ಶಬ್ದವು **ಶಕ್** ನಿಂತಿರು ಎಂಬ ಧಾತುವಿನಿಂದಲಾದರೂ ನಿಷ್ಪನ್ನವಾಗಬಹುದು. ಹೇಗೆಂದರೆ--- **ಶಾಖಾ** ಎಂಬ ಶಬ್ದದ ಅಕ್ಷರಗಳನ್ನು ವ್ಯತ್ಯಸ್ತಮಾಡುವುದರಿಂದ **ಖಶಾ** ಎಂದಾಗುವುದು. **ಖ** ಎಂದರೆ ಅಂತರಿಕ್ಷದಲ್ಲಿ **ಶಾ** ಇರುವವು ಅಥವಾ ನೆಲಸಿರುವವು. ಆದ್ದರಿಂದ ವೃಕ್ಷದ ಕೊಂಬೆಗಳಿಗೆ **ಶಾಖಾಃ** ಅಥವಾ **ವಯಾಃ** ಎಂದು ಹೆಸರು ಎಂದು ನಿರ್ವಚನವಾಕ್ಯದ ಮುಖ್ಯಾಭಿಪ್ರಾಯವು.

॥ ಸಂಹಿತಾಪಾಠಃ ॥

ಶಚೀವತಸ್ತೇ ಪುರುಶಾಕ ಶಾಕಾ ಗವಾಮಿವ ಸ್ರುತಯಃ ಸಂಚರಣೀಃ ।
ವತ್ಸಾನಾಂ ನ ತಂತಯಸ್ತ ಇಂದ್ರ ದಾಮನ್ವಂತೋ ಅದಾಮಾನಃ ಸುದಾಮನ್ ॥ ೪ ॥

॥ ಪದಪಾಠಃ ॥

ಶಚೀऽವತಃ । ತೇ । ಪುರುऽಶಾಕ । ಶಾಕಾಃ । ಗವಾಂऽಇವ । ಸ್ರುತಯಃ । ಸಂऽಚರಣೀಃ ।
ವತ್ಸಾನಾಂ । ನ । ತಂತಯಃ । ತೇ । ಇಂದ್ರ । ದಾಮನ್ऽವಂತಃ । ಅದಾಮಾನಃ । ಸುऽದಾಮನ್ ॥ ೪ ॥

॥ ಸಾಯಣಭಾಷ್ಯಂ ॥

ಹೇ ಪುರುಶಾಕ ಬಹುಕರ್ಮನ್ನಿಂದ್ರ ಶಚೀವತಃ ಪ್ರಜ್ಞಾವತಸ್ತೇ ತ್ವದೀಯಾಃ ಶಾಕಾಃ ಶಕ್ತಯಃ ಕರ್ಮಾಣಿ ವಾ ಸರ್ವತಃ ಸಂಚರಂತೀತಿ ಶೇಷಃ । ತತ್ರ ದೃಷ್ಟಾಂತಃ । ಗವಾಮಿವ ಧೇನೂನಾಂ ಸ್ರುತಯೋ ಮಾರ್ಗಾ ಯಥಾ ಸಂಚರಣೀಃ ಸರ್ವತ್ರ ಸಂಚಾರಿಣೋ ಭವಂತಿ ತದ್ವತ್ । ಅಪಿ ಚ ವತ್ಸಾನಾಂ ನ ತಂತಯಃ । ತಂತಿರ್ನಾಮ ದೀರ್ಘಪ್ರಸಾರಿತಾ ರಜ್ಜುಃ ಯತ್ರ ನಿಯತೈರ್ವಿಶಾಖದಾಮಭಿರ್ಬಹವೋ ವತ್ಸಾ ಬಧ್ಯಂತೇ । ಯಥಾ ತಂತಯೋ ಬಹೂನಾಂ ವತ್ಸಾನಾಂ ಬಂಧಕಾ ಹೇ ಸುದಾಮನ್ ಶೋಭನದಾನೇಂದ್ರ ತಥಾ ತೇ ತ್ವದೀಯಾಃ ಶಾಕಾ ದಾಮನ್ವಂತೋ ಬಂಧನವಂತೋ ಬಹೂನಾಂ ಶತ್ರೂಣಾಂ ಬಂಧಕಾ ಅದಾಮಾನಃ ಸ್ವಯಮನ್ಯೈರಬದ್ಧಾಃ ॥

॥ ಪ್ರತಿಪದಾರ್ಥ ॥

**ಪುರುಶಾಕ**— ನಾನಾಕರ್ಮಗಳುಳ್ಳ ಎಲೈ ಇಂದ್ರನೇ । **ಶಚೀವತಃ**— ಪ್ರಜ್ಞಾವಂತನಾದ । **ತೇ**— ನಿನ್ನ । **ಶಾಕಾಃ**— ಶಕ್ತಿಗಳು । **ಗವಾಂ**— ಗೋವುಗಳ । **ಸ್ರುತಯಃ ಇವ**— ಸಂಚಾರಮಾರ್ಗಗಳಂತೆ । **ಸಂಚರಣೀಃ**— ಸರ್ವತ್ರ ಪ್ರಸರಿಸಿ ಸಂಚಾರಯೋಗ್ಯವಾಗಿವೆ । **ವತ್ಸಾನಾಂ**— ಕರುಗಳನ್ನು ಕಟ್ಟುವ । **ತಂತಯೋ ನ**— ಹಗ್ಗಗಳಂತೆ । **ಸುದಾಮನ್**— ಶ್ರೇಷ್ಠವಾದ ದಾನಿಯಾದ । **ಇಂದ್ರ**— ಎಲೈ ಇಂದ್ರನೇ । **ತೇ**— ನಿನ್ನ ಶಕ್ತಿಗಳು । **ದಾಮನ್ವಂತಃ**— ಶತ್ರುಗಳನ್ನು ಬಂಧಿಸತಕ್ಕವಾಗಿಯೂ । **ಅದಾಮಾನಃ**— ತಾವು ಮಾತ್ರ ಬಂಧಿತವಾಗಿಲ್ಲದೆಯೂ ಇರುತ್ತವೆ.

॥ ಭಾವಾರ್ಥ ॥

ಅನೇಕ ಕರ್ಮಗಳುಳ್ಳ ಇಂದ್ರನೇ, ಗೋವುಗಳ ಸಂಚಾರಮಾರ್ಗಗಳು ಸರ್ವತ್ರ ಪ್ರಸರಿಸಿ ಹರಡಿದ್ದರೂ ಪುನಃ ಒಟ್ಟುಗೂಡುವಂತೆ, ಪ್ರಜ್ಞಾವಂತನಾದ ನಿನ್ನ ನಾನಾವಿಧವಾದ ಶಕ್ತಿಗಳು ಸರ್ವತ್ರ ಪ್ರಸರಿಸಿ ಸಂಚರಿಸಿದರೂ ಪುನಃ ಒಟ್ಟುಗೂಡಿ ಸೇರುತ್ತವೆ. ಶ್ರೇಷ್ಠವಾದ ದಾನಿಯಾದ ಎಲೈ ಇಂದ್ರನೇ, ನಿನ್ನ ಶಕ್ತಿಗಳು ಶತ್ರುಗಳನ್ನು ಬಂಧಿಸತಕ್ಕವಾಗಿಯೂ ಮತ್ತು ತಾವು ಮಾತ್ರ ಬಂಧಿತವಾಗಿಲ್ಲದೆಯೂ ಇರುತ್ತವೆ.

## English Translation.

Accomplisher of many acts, the energies of you who are (ever) active (congregate from all directions), like the converging tracks of cattle : they are the bonds (of foes) themselves unfettered, munifiicent Indra, like the tethers of (many) calves.

॥ ಸಂಹಿತಾಪಾಠಃ ॥

ಅನ್ಯದದ್ಯ ಕರ್ವರಮನ್ಯದು ಶ್ವೋಽಸಚ್ಚ ಸನ್ಮುಹುರಾಚಕ್ರಿರಿಂದ್ರಃ ।
ಮಿತ್ರೋ ನೋ ಅತ್ರ ವರುಣಶ್ಚ ಪೂಷಾರ್ಯೋ ವಶಸ್ಯ ಪರ್ಯೇತಾಸ್ತಿ ॥೫॥

॥ ಪದಪಾಠಃ ॥

ಅನ್ಯತ್ । ಅದ್ಯ । ಕರ್ವರಂ । ಅನ್ಯತ್ । ಊಂ ಇತಿ । ಶ್ವಃ । ಅಸತ್ । ಚ । ಸತ್ । ಮುಹುಃ । ಆಽ-
ಚಕ್ರಿಃ । ಇಂದ್ರಃ ।
ಮಿತ್ರಃ । ನಃ । ಅತ್ರ । ವರುಣಃ । ಚ । ಪೂಷಾ । ಅರ್ಯಃ । ವಶಸ್ಯ । ಪರಿಽಏತಾ । ಅಸ್ತಿ ॥ ೫ ॥

॥ ಸಾಯಣಭಾಷ್ಯಂ ॥

ಅಯಮಿಂದ್ರೋಽದ್ಯಾಸ್ಮಿನ್ದಿವಸೇಽನ್ಯತ್ಕರ್ವರಂ । ಕರ್ಮನಾಮೈತತ್ । ಕರ್ಮ ಕರೋತಿ । ಅನ್ಯದು ಅನ್ಯದೇವೋಕ್ತವಿಲಕ್ಷಣಮೇವ ಕರ್ಮ ಶ್ವಃ ಪರಸ್ಮಿನ್ದಿನೇ ಕರೋತಿ । ಏತದೇವ ವಿವ್ರಿಯತೇ । ಅಸಚ್ಚಾಶುಭಮಶನಿಪಾತನಾದಿಕಂ ಸತ್ ವರ್ಷಣಾದಿಕಂ ಶೋಭನಂ ಕರ್ಮ ಚ । ಯದ್ವಾ । ತ್ರಿಶಿರಸೋ ವಿಶ್ವರೂಪಸ್ಯ ವಧಾದಿಕಮಸತ್ಕರ್ಮ ಲೋಕೋಪದ್ರವಕಾರಿಣೋ ವೃತ್ರಾದೇರಸುರಸ್ಯ ವಧಾದಿರೂಪಂ ಸತ್ಕರ್ಮ ಚ ಮುಹುಃ ಪುನಃ ಪುನರಸಾವಿಂದ್ರ ಆಚಕ್ರಿಃ ಕರ್ತಾ ಭವತಿ । ಏವಂ ಪರಸ್ಪರವಿಲಕ್ಷಣಂ ಕರ್ಮ ಸ್ವಮಹಿಮ್ನಾ ಪುನಃ ಪುನರಾವರ್ತಯನ್ ಪ್ರತಿದಿವಸಮನ್ಯದೇವ ಪರೇಷಾಮಸಾಧಾರಣಂ ಕರ್ಮ ಕರೋತೀತ್ಯರ್ಥಃ । ಏವಂವಿಧ ಇಂದ್ರೋಽತ್ರಾಸ್ಮಿನ್ಯಜ್ಞೇ ನೋಽಸ್ಮಾಕಂ ವಶಸ್ಯ ಕಾಮಯಿತವ್ಯಸ್ಯ ಫಲಸ್ಯ ಸ್ವರ್ಗಾದೇಃ ಪರ್ಯೇತಾಸ್ತಿ । ಪರಿಗಮಯಿತಾ ಭವತು ॥ ಅಸ್ತೇರ್ಲೇಟಿ ರೂಪಂ ॥ ಮಿತ್ರೋಽಹರಭಿಮಾನೀ ದೇವೋ ವರುಣೋ ರಾತ್ರ್ಯಭಿಮಾನೀ ಪೂಷಾ ಪೋಷಕೋ ದೇವೋಽರ್ಯಃ ಪ್ರೇರಕಃ ಸವಿತೈತೇ ಚೇಂದ್ರೇಣ ನಿಯಮ್ಯಮಾನಾ ಅಸ್ಮದೀಯಸ್ಯ ಕಾಮಸ್ಯ ಪರಿಗಮಯಿತಾರಃ ಸಂತು । ಯದ್ವಾ ।

**ಮಿತ್ರಾದಯೋಽಸ್ಯತ್ರ ಸ್ವಪ್ರಧಾನ್ಯೇನಾಭಿಧೀಯಂತೇ । ಮಿತ್ರಾದಯ ಇಂದ್ರಃ ಪ್ರತ್ಯೇಕಮಸ್ಮದೀಯಸ್ಯ ಕಾಮಸ್ಯ ಪರ್ಯೇತಾಸ್ತು । ತಥಾ ಬೃಹದ್ದೇವತಾಯಾಮುಕ್ತಂ । ಪ್ರೋತಯೋಽನ್ಯದಿತಿ ತ್ವೇತೇ ವೈಶ್ವದೇವ್ಯಾವೃಚೌ ಸ್ಮೃತೇ ಇತಿ ॥**

॥ ಪ್ರತಿಪದಾರ್ಥ ॥

**ಇಂದ್ರಃ**—ಇಂದ್ರನು । **ಅದ್ಯ**—ಈ ದಿವಸ (ಒಂದು ದಿನ) । **ಅನ್ಯತ್**—ಒಂದು ವಿಧವಾದ ಕರ್ಮವನ್ನು ಮಾಡುತ್ತಾನೆ । **ಶ್ವಃ**—ನಾಳೆ (ಇನ್ನೊಂದು ದಿನ) । **ಅನ್ಯದು**—ಬೇರೆ ವಿಧವಾದ ಕೆಲಸವನ್ನು ಮಾಡುತ್ತಾನೆ । **ಅಸಚ್ಚ**—ಅಶುಭವಾದ ಕರ್ಮವನ್ನೂ । **ಸತ್**—ಸತ್ಕರ್ಮವನ್ನೂ । **ಇಂದ್ರಃ**—ಇಂದ್ರನು । **ಮುಹುಃ**—ಪದೇಪದೇ । **ಆಚಕ್ರಿಃ**—ನೆರವೇರಿಸುತ್ತಾನೆ (ಇಂತಹ ಪರಾಕ್ರಮಿಯಾದ ಇಂದ್ರನು) । **ಅತ್ರ**—ಈ ಯಜ್ಞದಲ್ಲಿ । **ನಃ**—ನಮಗೆ । **ವಶಸ್ಯ**—ಅಪೇಕ್ಷಿತವಾದ ಸ್ವರ್ಗಾದಿಗಳಿಗೆ । **ಪರ್ಯೇತಾಸ್ತಿ**—ಪ್ರವರ್ತಕನಾಗಲಿ । **ಮಿತ್ರಃ**—ಮಿತ್ರನೂ । **ವರುಣಃ**—ವರುಣನೂ । **ಪೂಷಾ**—ಪೂಷದೇವನೂ । **ಅರ್ಯಃ ಚ**—ಪೂಜ್ಯನಾದ ಸವಿತೃವೂ (ಇಂದ್ರನೊಡಗೂಡಿ ನಮಗೆ ಸಹಾಯಕರಾಗಲಿ).

॥ ಭಾವಾರ್ಥ ॥

ನಾನಾಕರ್ಮಗಳಿಗೆ ಶಕ್ತನಾದ ಇಂದ್ರನು ಇಂದು ಒಂದು ವಿಧವಾದ ಕರ್ಮವನ್ನೂ, ಇನ್ನೊಂದು ದಿನ ಇನ್ನೊಂದು ವಿಧವಾದ ಕರ್ಮವನ್ನೂ ಮಾಡುತ್ತಾನೆ. ಶುಭಾಶುಭ ಕರ್ಮಗಳೆಲ್ಲವನ್ನೂ ಇಂದ್ರನು ಪದೇ ಪದೇ ನೆರವೇರಿಸುತ್ತಾನೆ. ಇಂತಹ ಪರಾಕ್ರಮಿಯಾದ ಇಂದ್ರನು ಈ ಯಜ್ಞದಲ್ಲಿ ನಮಗೆ ಅಪೇಕ್ಷಿತಗಳಾದ ಸ್ವರ್ಗಾದಿಗಳಿಗೆ ಪ್ರವರ್ತಕನಾಗಲಿ. ಮಿತ್ರನೂ, ವರುಣನೂ, ಪೂಷದೇವನೂ ಮತ್ತು ಪೂಜ್ಯನಾದ ಸವಿತೃವೂ ಸಹ ಇಂದ್ರನೊಡಗೂಡಿ ನಮಗೆ ಸಹಾಯಕರಾಗಿರಲಿ.

## English Translation.

Indra achieves one act to-day, another to-morrow, evil and good repeatedly : may he, and Mitra, Varuna, Pushan, Arya, be on this occasion promoters of the desired result.

॥ ಸಂಹಿತಾಪಾಠಃ ॥

ವಿ ತ್ವದಾಪೋ ನ ಪರ್ವತಸ್ಯ ಪೃಷ್ಠಾದುಕ್ಥೇಭಿರಿಂದ್ರಾನಯಂತ ಯಜ್ಞೈಃ ।
ತಂ ತ್ವಾಭಿಃ ಸುಷ್ಟುತಿಭಿರ್ವಾಜಯಂತ ಆಜಿಂ ನ ಜಗ್ಮುರ್ಗಿರ್ವಾಹೋ
ಅಶ್ವಾಃ ॥ ೬ ॥

|| ಪದಪಾಠಃ ||

**ವಿ । ತ್ವತ್ । ಆಪಃ । ನ । ಪರ್ವತಸ್ಯ । ಪೃಷ್ಠಾತ್ । ಉಕ್ಥೇಭಿಃ । ಇಂದ್ರ । ಅನಯಂತ । ಯಜ್ಞೈಃ ।**

**ತಂ । ತ್ವಾ । ಅಭಿಃ । ಸುಸ್ತುತಿಽಭಿಃ । ವಾಜಯಂತಃ । ಆಜಿಂ । ನ । ಜಗ್ಮುಃ । ಗಿರ್ವಾಹಃ । ಅಶ್ವಾಃ ॥**

॥ ಸಾಯಣಭಾಷ್ಯಂ ॥

**ಹೇ ಇಂದ್ರ ತ್ವತ್ತ್ವತ್ಸಕಾಶಾದುಕ್ಥೇಭಿರುಕ್ಥೈಃ ಶಸ್ತ್ರೈರ್ಯಜ್ಞೈರ್ಹವಿರ್ಭಿಶ್ಚ ಸ್ತೋತಾರಃ ಕಾಮಾನಾತ್ಮನೋ ವ್ಯನಯಂತ । ವಿವಿಧಂ ಪ್ರಾಪಯಂತಿ । ತತ್ರ ದೃಷ್ಟಾಂತಃ । ಪರ್ವತಸ್ಯಾದ್ರೇಃ ಪೃಷ್ಠಾದುಪರಿಭಾಗಾದಾಪೋ ನ ಅಪ ಉದಕಾನಿ ಯಥಾ ತದ್ವತ್ । ಅಪಿ ಚ ಹೇ ಗಿರ್ವಾಹೋ ಗೀರ್ಭಿಃ ಸ್ತುತಿರೂಪಾಭಿರ್ವಾಗ್ಭಿರ್ವಹನೀಯೇಂದ್ರ ತಂ ಪ್ರಸಿದ್ಧಂ ತ್ವಾ ತ್ವಾಂ ವಾಜಯಂತೋ ಬಲಿನಂ ಕುರ್ವಂತಃ । ಯದ್ವಾ । ವಾಜಮನ್ನಮಿಚ್ಛಂತೋ ಭರದ್ವಾಜಾಃ ಸ್ತೋತಾರ ಆಭಿಃ ಪೂರ್ವೋಕ್ತಾಭಿಃ ಸುಷ್ಟುತಿಭಿಃ ಶೋಭನಾಭಿಃ ಸ್ತುತಿಭಿರ್ಜಗ್ಮುಃ । ಪ್ರಾಪುಃ । ಕ್ಷಿಪ್ರಗಮನೇ ದೃಷ್ಟಾಂತಃ । ಅಶ್ವಾ ವಾಹಾ ಆಜಿಂ ನ ಸಂಗ್ರಾಮಂ ಯಥಾ ಶೀಘ್ರಂ ಪ್ರಾಪುಸ್ತದ್ವತ್ ॥**

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ ! **ಪರ್ವತಸ್ಯ**—ಪರ್ವತದ । **ಪೃಷ್ಠಾತ್**—ಮೇಲ್ಭಾಗದಿಂದ । **ಆಪಃ ನ**—ಉದಕಗಳು ವೇಗವಾಗಿ ಕೆಳಕ್ಕೆ ಹರಿದುಬರುವಂತೆ । **ತ್ವತ್**—ನಿನ್ನಿಂದ । **ಉಕ್ಥೇಭಿಃ**—ಶಸ್ತ್ರಮಂತ್ರಗಳಿಂದಲೂ । **ಯಜ್ಞೈಃ**—ಹವಿಸ್ಸಿನ ಅರ್ಪಣೆಗಳಿಂದಲೂ । **ವಿ ಅನಯಂತ**—(ಯಜ್ಞಕರ್ತರು) ತಮಗೆ ಬೇಕಾದ ವಸ್ತುಗಳನ್ನು । ಕೆಳಕ್ಕೆ ಇಳಿದು ಬರುವಂತೆ ಮಾಡುತ್ತಾರೆ । **ಗಿರ್ವಾಹಃ**—ಸ್ತುತಿಗಳಿಂದ ವಾಹ್ಯನಾದ ಎಲೈ ಇಂದ್ರನೇ । **ಅಶ್ವಾಃ**—ಅಶ್ವಗಳು । **ಆಜಿಂ ನ**—ಸಂಗ್ರಾಮಕ್ಕೆ ವೇಗವಾಗಿ ಹೋಗಿ ಸೇರುವಂತೆ । **ವಾಜಯಂತಃ**—ಅನ್ನಾರ್ಥಿಗಳಾದ ಋಷಿಗಳು । **ತಂ ತ್ವಾ**—ಪ್ರಸಿದ್ಧನಾದ ನಿನ್ನನ್ನು । **ಆಭಿಃ ಸುಷ್ಟುತಿಭಿಃ**—ಈ ಸ್ತುತಿಗಳಿಂದ ಪ್ರಾರ್ಥಿಸಿ । **ಜಗ್ಮುಃ**—ಸೇರಿಕೊಳ್ಳುತ್ತಾರೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಪರ್ವತದ ಮೇಲ್ಭಾಗದಿಂದ ಉದಕಗಳು ವೇಗವಾಗಿ ಕೆಳಕ್ಕೆ ಹರಿದು ಬರುವಂತೆ, ಯಜ್ಞಕರ್ತರು ತಮಗೆ ಬೇಕಾದ ವಸ್ತುಗಳನ್ನು ತಮ್ಮ ಶಸ್ತ್ರಮಂತ್ರಗಳಿಂದಲೂ, ಹವಿಸ್ಸುಗಳಿಂದಲೂ ನಿನ್ನನ್ನು ಪೂಜಿಸಿ ಪಡೆಯುತ್ತಾರೆ. ಸ್ತುತಿಗಳಿಂದ ವಾಹ್ಯನಾದ ಎಲೈ ಇಂದ್ರನೇ, ಅಶ್ವಗಳು ಸಂಗ್ರಾಮಕ್ಕೆ ವೇಗವಾಗಿ ಹೋಗಿ ಸೇರುವಂತೆ ಅನ್ನಾರ್ಥಿಗಳಾದ ಋಷಿಗಳು ಪ್ರಸಿದ್ಧನಾದ ನಿನ್ನನ್ನು ಈ ಸ್ತುತಿಗಳಿಂದ ಪ್ರಾರ್ಥಿಸಿ ಸೇರಿಕೊಳ್ಳುತ್ತಾರೆ.

## English Translation.

By praises and by sacrifices, Indra, (men) bring down (what they desire) from you, as waters (descend) from the top of the mountain:

desirous of food, they approach you, who are accessible by praise, with these their eulogies, as (eagerly as) coursers rush to battle.

|| ಸಂಹಿತಾಪಾಠಃ ||

ನ ಯಂ ಜರಂತಿ ಶರದೋ ನ ಮಾಸಾ ನ ದ್ಯಾವ ಇಂದ್ರಮವಕರ್ಶಯಂತಿ ।
ವೃದ್ಧಸ್ಯ ಚಿದ್ವರ್ಧತಾಮಸ್ಯ ತನೂಃ ಸ್ತೋಮೇಭಿರುಕ್ಥೈಶ್ಚ ಶಸ್ಯಮಾನಾ ॥೭॥

|| ಪದಪಾಠಃ ||

ನ । ಯಂ । ಜರಂತಿ । ಶರದಃ । ನ । ಮಾಸಾಃ । ನ । ದ್ಯಾವಃ । ಇಂದ್ರಂ । ಅವ್ಽಕರ್ಶಯಂತಿ ।
ವೃದ್ಧಸ್ಯ । ಚಿತ್ । ವರ್ಧತಾಂ । ಅಸ್ಯ । ತನೂಃ । ಸ್ತೋಮೇಭಿಃ । ಉಕ್ಥೈಃ । ಚ । ಶಸ್ಯಮಾನಾ ॥ ೭ ॥

|| ಸಾಯಣಭಾಷ್ಯಂ ||

ಶರದಃ ಸಂವತ್ಸರಾ ಯಮಿಂದ್ರಂ ನ ಜರಂತಿ ನ ಜರಯಂತಿ ನಾಪಕ್ಷೀಣಯಂತಿ । ತಥಾ ಮಾಸಾಶ್ಚ ನಾಪಕ್ಷೀಣಯಂತಿ । ತಥಾ ದ್ಯಾವೋ ದಿವಸಾಶ್ಚ ಯಮಿಂದ್ರಂ ನಾವಕರ್ಶಯಂತಿ ನಾಲ್ಪೀಭಾವಯಂತಿ ವೃದ್ಧಸ್ಯ ಚಿತ್ ಪ್ರವೃದ್ಧಸ್ಯಾಪ್ಯಸ್ಯೇಂದ್ರಸ್ಯ ತನೂಃ ಶರೀರಂ ಸ್ತೋಮೇಭಿರಸ್ಮದೀಯೈಃ ಸ್ತೋತ್ರೈರುಕ್ಥೈಶ್ಚ ಶಸ್ತ್ರೈಶ್ಚ ಶಸ್ಯಮಾನಾ ಸ್ತೂಯಮಾನಾ ಸತೀ ವರ್ಧತಾಂ । ಪ್ರವೃದ್ಧಾ ಭವತು ॥

|| ಪ್ರತಿಪದಾರ್ಥ ||

ಯಂ ಇಂದ್ರಂ— ಯಾವ ಇಂದ್ರನನ್ನು । ಶರದಃ— ಸಂವತ್ಸರಗಳು । ನ ಜರಂತಿ— ಕ್ಷಯಿಸುವಂತೆ ಮಾಡುವುದಿಲ್ಲವೋ । ಮಾಸಾಃ— ಮಾಸಗಳೂ (ಶಿಥಿಲನನ್ನಾಗಿ ಮಾಡುವುದಿಲ್ಲವೋ) । ದ್ಯಾವಃ— ದಿವಸಗಳೂ ಕೂಡ । ನ ಅವಕರ್ಶಯಂತಿ— ಕ್ಷಯಿಸುವಂತೆ ಮಾಡುವುದಿಲ್ಲವೋ (ಅಂತಹ) । ವೃದ್ಧಸ್ಯ ಚಿತ್— ಪ್ರವೃದ್ಧನಾದ । ಅಸ್ಯ— ಇದೇ ಇಂದ್ರನ । ತನೂಃ— ಶರೀರವು । ಸ್ತೋಮೇಭಿಃ— ನಮ್ಮ ಸ್ತುತಿಗಳಿಂದಲೂ । ಉಕ್ಥೈಶ್ಚ— ಶಸ್ತ್ರಮಂತ್ರಗಳಿಂದಲೂ । ಶಸ್ಯಮಾನಾ— ಸ್ತುತಿಸಲ್ಪಟ್ಟು । ವರ್ಧತಾಂ— ವೃದ್ಧಿಯನ್ನು ಹೊಂದಲಿ.

|| ಭಾವಾರ್ಥ ||

ಯಾವ ಇಂದ್ರನನ್ನು ಸಂವತ್ಸರಗಳಾಗಲಿ, ಮಾಸಗಳಾಗಲಿ ಅಥವಾ ದಿವಸಗಳಾಗಲಿ ಶಿಥಿಲನನ್ನಾಗಿಯೂ, ಕ್ಷಯಿಸುವಂತೆಯೂ ಮಾಡಲಾರವೋ ಅಂತಹ ಪ್ರವೃದ್ಧನಾದ ಅದೇ ಇಂದ್ರನ ಶರೀರವು ನಮ್ಮ ಸ್ತುತಿಗಳಿಂದಲೂ, ಶಸ್ತ್ರಗಳಿಂದಲೂ ಸ್ತುತಿಸಲ್ಪಟ್ಟು ವೃದ್ಧಿಯನ್ನು ಹೊಂದಲಿ.

## English Translation.

May the person of that vast Indra, celebrated by praises and prayers, ever increase; Indra, whom neither years nor months make old, nor days enfeeble.

॥ ಸಂಹಿತಾಪಾಠಃ ॥

ನ ವೀಳವೇ ನಮತೇ ನ ಸ್ಥಿರಾಯ ನ ಶರ್ಧತೇ ದಸ್ಯುಜೂತಾಯ ಸ್ತವಾನ್ ।
ಅಜ್ರಾ ಇಂದ್ರಸ್ಯ ಗಿರಯಶ್ಚಿದೃಷ್ವಾ ಗಂಭೀರೇ ಚಿದ್ಭವತಿ ಗಾಧಮಸ್ಮೈ ॥೮॥

॥ ಪದಪಾಠಃ ॥

ನ । ವೀಳವೇ । ನಮತೇ । ನ । ಸ್ಥಿರಾಯ । ನ । ಶರ್ಧತೇ । ದಸ್ಯುಽಜೂತಾಯ । ಸ್ತವಾನ್ ।
ಅಜ್ರಾಃ । ಇಂದ್ರಸ್ಯ । ಗಿರಯಃ । ಚಿತ್ । ಋಷ್ವಾಃ । ಗಂಭೀರೇ । ಚಿತ್ । ಭವತಿ । ಗಾಧಂ । ಅಸ್ಮೈ ।೮॥

ಸ್ತವಾನಸ್ಮಾಭಿಃ ಸ್ತೂಯಮಾನ ಇಂದ್ರೋ ವೀಳವೇ ದೃಢಗಾತ್ರಾಯ ಯಜಮಾನಾಯ ನ ನಮತೇ । ನ ವಶೀಭವತಿ । ಸ್ಥಿರಾಯ ಯುದ್ಧೇಽವಿಚಲಿತಾಯ ಚ ನ ನಮತೇ । ಶರ್ಧತೇ ಉತ್ಸಹಮಾನಾಯ ದಸ್ಯುಜೂತಾಯ ಕರ್ಮವರ್ಜಿತೈಃ ಪ್ರೇರಿತಾಯ ಯಜಮಾನಾಯ ನ ವಶೀಭವತಿ । ಯದ್ಯಪಿ ಸ್ತೋತಾರೋ ಬಹುಗುಣಾಃ ಸಂತಿ ತಥಾಪೀಂದ್ರಸ್ತೇಭ್ಯೋ ದಸ್ಯುಸಹಿತೇಭ್ಯೋ ನ ವಶೀಭವತೀತ್ಯರ್ಥಃ। ಅಪಿ ಚ ಋಷ್ವಾ ಮಹಾಂತೋ ಗಿರಯಶ್ಚಿತ್ಪರ್ವತಾ ಅಪೀಂದ್ರಸ್ಯಾಜ್ರಾಃ ಸುಗಮನಾಃ ಕ್ಷೇಪಣೀಯಾ ಭವಂತಿ । ಗಂಭೀರೇ ಚಿದಗಾಧೇಽಪಿ ಸ್ಥಾನೇಽಸ್ಮಾ ಇಂದ್ರಾಯ ಗಾಧಮೇವ ಸ್ಥಾನಂ ವಿಷಯೋ ಭವತಿ ॥

॥ ಪ್ರತಿಪದಾರ್ಥ ॥

**ಸ್ತವಾನ್**—ನಮ್ಮಿಂದ ಸ್ತುತನಾಗುವ ಇಂದ್ರನು । **ವೀಳವೇ**—ದೃಢವಾದ ಶರೀರವುಳ್ಳವನಿಗೂ । **ನ ನಮತೇ**—ವಶನಾಗಿ ನಮ್ರನಾಗುವುದಿಲ್ಲ । **ಸ್ಥಿರಾಯ**—ದೃಢವಾದ ಶಕ್ತಿಯುಳ್ಳ ಶತ್ರುವಿಗೂ । **ನ**—ವಶನಾಗುವುದಿಲ್ಲ । **ಶರ್ಧತೇ**—ಶಕ್ತಿಯಿಂದ ಉತ್ಸಾಹವನ್ನು ಹೊಂದಿದ । **ದಸ್ಯುಜೂತಾಯ**—ಕರ್ಮವರ್ಜಿತನಾದ ಪುರುಷನಿಗೂ । **ನ**—ವಶನಾಗುವುದಿಲ್ಲ । **ಋಷ್ವಾಃ**—ಮಹತ್ಸ್ವರೂಪಗಳುಳ್ಳ । **ಗಿರಯಶ್ಚಿತ್**—ಪರ್ವತಗಳೂ ಕೂಡ । **ಇಂದ್ರಸ್ಯ**—ಇಂದ್ರನಿಗೆ । **ಅಜ್ರಾಃ**—ಸುಲಭವಾಗಿ ಗಮ್ಯವಾಗುತ್ತವೆ । **ಗಂಭೀರೇ ಚಿತ್**—ಅತ್ಯಂತ ಆಳವಾದ ಸಮುದ್ರದಲ್ಲಿಯೂ । **ಅಸ್ಮೈ**—ಈ ಇಂದ್ರನಿಗೆ । **ಗಾಧಂ**—ನೆಲಪ್ರದೇಶವು । **ಭವತಿ**—ಸಿಕ್ಕುತ್ತದೆ.

‖ ಭಾವಾರ್ಥ ‖

ನಮ್ಮಿಂದ ಸ್ತುತನಾಗುವ ಇಂದ್ರನು ದೃಢವಾದ ಶರೀರವುಳ್ಳವನಿಗೂ ವಶನಾಗಿ ನಮ್ರನಾಗುವುದಿಲ್ಲ. ದೃಢವಾದ ಶಕ್ತಿಯುಳ್ಳ ಶತ್ರುವಿಗೂ ವಶನಾಗುವುದಿಲ್ಲ. ಮಹತ್ಸ್ವರೂಪವುಳ್ಳ ಪರ್ವತಗಳೂ ಕೂಡ ಇಂದ್ರನಿಗೆ ಸುಲಭವಾಗಿ ಗಮ್ಯವಾಗುತ್ತವೆ. ಅತ್ಯಂತ ಆಳವಾದ ಸಮುದ್ರದಲ್ಲಿಯೂ ಈ ಇಂದ್ರನಿಗೆ ನೆಲದ ಪ್ರದೇಶವು (ತಳವು) ಸಿಕ್ಕುತ್ತದೆ.

English Translation.

Glorified by us, he bows not down to the robust, nor to the resolute, nor the persevering (worshipper) who is instigated by the (irreligious) Dasyus: the lofty mountains are easy of access to Indra; to him there is a bottom in the (lowest) deep.

‖ ಸಂಹಿತಾಪಾಠಃ ‖

ಗಂಭೀರೇಣ ನ ಉರುಣಾಮತ್ರಿನ್ಪ್ರೇಷೋ ಯಂಧಿ ಸುತಪಾವನ್ವಾಜಾನ್ ।
ಸ್ಥಾ ಊ ಷು ಊರ್ಧ್ವ ಊತೀ ಅರಿಷಣ್ಯನ್ನಕ್ತೋರ್ವ್ಯುಷ್ಟೌ ಪರಿತಕ್ಮ್ಯಾ-
ಯಾಂ ‖ ೯ ‖

‖ ಪದಪಾಠಃ ‖

ಗಂಭೀರೇಣ । ನಃ । ಉರುಣಾ । ಅಮತ್ರಿನ್ । ಪ್ರ । ಇಷಃ । ಯಂಧಿ । ಸುತಽಪಾವನ್ । ವಾಜಾನ್ ।
ಸ್ಥಾಃ । ಊಂ ಇತಿ । ಸು । ಊರ್ಧ್ವಃ । ಊತೀ । ಅರಿಷಣ್ಯನ್ । ಅಕ್ತೋಃ । ವಿಽಉಷ್ಟೌ । ಪರಿಽ-
ತಕ್ಮ್ಯಾಯಾಂ ‖ ೯ ‖

‖ ಸಾಯಣಭಾಷ್ಯಂ ‖

ಹೇ ಅಮತ್ರಿನ್। ಅಮತ್ರಂ ಬಲಂ। ತದ್ವನ್ ಹೇ ಸುತಪಾವನ್ ಸುತಸ್ಯ ಸೋಮಸ್ಯ ಪಾತರಿಂದ್ರ ಗಂಭೀರೇಣ ಕೇನಾಪಿ ದುರವಗಾಹೇನೋರುಣಾ ವಿಸ್ತೀರ್ಣೇನ ಮನಸಾ ನೋಽಸ್ಮಭ್ಯಮಿಷೋಽನ್ನಾನಿ ವಾಜಾನ್ಬಲಾನಿ ಚ ಪ್ರ ಯಂಧಿ । ಪ್ರಯಚ್ಛ । ಕಿಂಚಾಕ್ತೋಃ ರಾತ್ರೇರ್ವ್ಯುಷ್ಟೌ ವಿವಾಸೇಽಹ್ನಿ ಪರಿತ-ಕ್ಮ್ಯಾಯಾಂ ರಾತ್ರೌ ಹೇ ಇಂದ್ರ ತ್ವಮೂತೀ ಅಸ್ಮಾಕಂ ರಕ್ಷಾಯೈ ಹೇ ಇಂದ್ರ ಅರಿಷಣ್ಯನ್ನಹಿಂಸಂಸ್ತ್ವ-ಮೂರ್ಧ್ವ ಉದ್ಯುಕ್ತಃ ಸ್ಥಾ ಊ ಷು । ಸುಷ್ಠು ತಿಷ್ಠೈವ ‖

॥ ಪ್ರತಿಪದಾರ್ಥ ॥

**ಅಮತ್ರಿನ್**—ಶಕ್ತಿಯುತನೂ । **ಸುತಪಾವನ್**—ಸೋಮಪಾನವನ್ನು ಮಾಡುವವನೂ ಆದ ಎಲೈ ಇಂದ್ರನೇ। **ಗಂಭೀರೇಣ**—ಗಹನವಾದುದೂ। **ಉರುಣಾ**—ವಿಸ್ತೃತವಾದುದೂ ಆದ ಧ್ಯೇಯದಿಂದ। **ನಃ**—ನಮಗೆ । **ಇಷಃ**—ಅನ್ನಗಳನ್ನೂ । **ವಾಜಾನ್**—ಶಕ್ತಿಗಳನ್ನೂ । **ಪ್ರ ಯಂಧಿ**—ಒದಗಿಸಿಕೊಡು । **ಅಕ್ತೋಃ ವ್ಯುಷ್ಟೌ**—ರಾತ್ರಿಯು ಕಳೆದು ಹಗಲಾದಾಗಲೂ । **ಪರಿತಕ್ಮ್ಯಾಯಾಂ**—ರಾತ್ರಿಯಾದಾಗಲೂ । **ಅರಿಷಣ್ಯನ್**—ಹಿಂಸಾರಹಿತನಾಗಿ । **ಊತೀ**—ನಮ್ಮ ರಕ್ಷಣೆಗಾಗಿ । **ಊರ್ಧ್ವಃ**—ಉದ್ಯುಕ್ತನಾಗಿಯೂ । **ಸ್ಥಾ ಊಷು**—ಸ್ಥಿರವಾಗಿಯೂ ನಿಲ್ಲು.

॥ ಭಾವಾರ್ಥ ॥

ಶಕ್ತಿಯುತನೂ ಸೋಮಪಾನವನ್ನು ಮಾಡುವವನೂ ಆದ ಎಲೈ ಇಂದ್ರನೇ, ಗಹನವಾದುದೂ, ವಿಸ್ತೃತವಾದುದೂ ಆದ ಧ್ಯೇಯದಿಂದ ನಮಗೆ ಅನ್ನಗಳನ್ನೂ, ಶಕ್ತಿಗಳನ್ನೂ ಒದಗಿಸಿಕೊಡು. ರಾತ್ರಿಕಾಲದಲ್ಲೂ ಮತ್ತು ಹಗಲುಕಾಲದಲ್ಲೂ ಹಿಂಸಾರಹಿತನಾಗಿದ್ದು ನಮ್ಮ ರಕ್ಷಣೆಯಲ್ಲಿಯೇ ಉದ್ಯುಕ್ತನಾಗಿರು.

**English Translation.**

Powerful Indra, drinker of the Soma juice, (actuated) by a profound and comprehensive (purpose), grant us food and strength: be ever diligent, benevolent Indra, for our protection by day and by night.

॥ ಸಂಹಿತಾಪಾಠಃ ॥

ಸಚಸ್ವ ನಾಯಮವಸೇ ಅಭೀಕ ಇತೋ ವಾ ತಮಿಂದ್ರ ಪಾಹಿ ರಿಷಃ ।
ಅಮಾ ಚೈನಮರಣ್ಯೇ ಪಾಹಿ ರಿಷೋ ಮದೇಮ ಶತಹಿಮಾಃ ಸುವೀರಾಃ ॥

॥ ಪದಪಾಠಃ ॥

ಸಚಸ್ವ । ನಾಯಂ । ಅವಸೇ । ಅಭೀಕೇ । ಇತಃ । ವಾ । ತಂ । ಇಂದ್ರ । ಪಾಹಿ । ರಿಷಃ ।
ಅಮಾ । ಚ । ಏನಂ । ಅರಣ್ಯೇ । ಪಾಹಿ । ರಿಷಃ । ಮದೇಮ । ಶತಽಹಿಮಾಃ । ಸುಽವೀರಾಃ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ನಾಯಂ ಕರ್ಮಣಾಂ ಸ್ತುತೀನಾಂ ಚ ನೇತಾರಮಭೀಕೇ ಸಂಗ್ರಾಮೇಽವಸೇ ರಕ್ಷಣಾಯ ಸಚಸ್ವ । ಸೇವಸ್ವ । ಇತೋ ವಾಸ್ಮಾತ್ಸಂನಿಕೃಷ್ಟಾಚ್ಚ ರಿಷಃ ಶತ್ರೋರಮುತೋ ವಿಪ್ರಕೃಷ್ಟಾ-

**ಚ್ಛತ್ರೋಕ್ಷ । ವಾಶಬ್ದೋಽನುಕ್ತೇನ ವಿವಕ್ಷಿತೇನ ಸಮುಚ್ಚಯಃ । ಹೇ ಇಂದ್ರ ತಂ ಸ್ತೋತಾರಂ ಪಾಹಿ । ರಕ್ಷ । ತಥಾಮಾ ಚ ಗೃಹೇ ಚ । ಅಮೇತಿ ಗೃಹನಾಮ । ಅರಣ್ಯೇ ಕಾನನೇ ಚ ರಿಷಃ ಶತ್ರೋಃ ಪಾಹಿ । ತಂ ರಕ್ಷ । ತದನಂತರಂ ಸುವೀರಾಃ ಶೋಭನಪುತ್ರಾ ವಯಂ ಶತಹಿಮಾಃ ಶತಸಂವತ್ಸರಾನ್ಮದೇಮ । ಹೃಷ್ಯಾಮ ॥**

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ನಾಯಂ**—ಕರ್ಮಗಳಿಗೆ ನೇತೃವಾದ ಯಜಮಾನನನ್ನು । **ಅಭೀಕೇ**—ಸಂಗ್ರಾಮದಲ್ಲಿ । **ಅವಸೇ**—ರಕ್ಷಣಾರ್ಥವಾಗಿ । **ಸಚಸ್ವ**—ಹಿಂಬಾಲಿಸಿ (ಅವನ ಜೊತೆಯಲ್ಲಿಯೇ ಇರು) । **ಇತೋ ವಾ**—ಹತ್ತಿರದಲ್ಲಿರುವವನಾಗಲಿ (ಅಥವಾ ದೂರದಲ್ಲಿರುವವನಾಗಲಿ ಆದ) । **ರಿಷಃ**—ಶತ್ರುವಿನಿಂದ । **ತಂ**—ಆ ಸ್ತೋತೃವನ್ನು । **ಪಾಹಿ**—ರಕ್ಷಿಸು । **ಅಮಾ ಚ**—ಗೃಹದಲ್ಲಿಯೂ । **ಅರಣ್ಯೇ**—ಕಾನನದಲ್ಲಿಯೂ ಇರುವ । **ರಿಷಃ**—ಶತ್ರುವಿನಿಂದ । **ಏನಂ**—ಈ ಯಜಮಾನನನ್ನು । **ಪಾಹಿ**—ರಕ್ಷಿಸು । **ಸುವೀರಾಃ**—ಉತ್ತಮವಾದ ವೀರಪುತ್ರರೊಡಗೂಡಿದ ನಾವು । **ಶತಹಿಮಾಃ**—ನೂರು ಸಂವತ್ಸರಗಳವರೆಗೂ । **ಮದೇಮ**—ಸಂತೋಷವನ್ನನುಭವಿಸುವಂತಾಗಲಿ.

॥ ಭಾವಾರ್ಥ ॥

ಎಲೈ ಇಂದ್ರನೇ, ಕರ್ಮಗಳಿಗೆ ನೇತೃವಾದ ಯಜಮಾನನನ್ನು ಸಂಗ್ರಾಮದಲ್ಲಿ ಅವನ ರಕ್ಷಣಾರ್ಥವಾಗಿ ಹಿಂಬಾಲಿಸಿ ಅವನ ಜೊತೆಯಲ್ಲಿಯೇ ಇರು. ಹತ್ತಿರದಲ್ಲಿರುವವನಾಗಲಿ ಅಥವಾ ದೂರದಲ್ಲಿರುವವನಾಗಲಿ ಆದ ಶತ್ರುವಿನಿಂದ ಆ ಸ್ತೋತೃವನ್ನು ರಕ್ಷಿಸು. ಗೃಹದಲ್ಲಿಯೂ ಅರಣ್ಯದಲ್ಲಿಯೂ ಇರುವ ಸಕಲ ಶತ್ರುಗಳಿಂದಲೂ ಅವನನ್ನು ರಕ್ಷಿಸು. ಉತ್ತಮವಾದ ವೀರಪುತ್ರರೊಡಗೂಡಿದ ನಾವು ನೂರು ವರ್ಷಗಳವರೆಗೆ ಸಹ ಸಂತೋಷವನ್ನನುಭವಿಸುವಂತಾಗಲಿ.

## English Translation.

Accompany, Indra, the leader in battle for his protection ; defend him against a near (or distant) foe ; protect him from an enemy, whether in (his) house or in a forest, and may we, blessed with excellent male descendants, be happy for a hundred winters.

## ಇಪ್ಪತ್ತೈದನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಯಾ ತ ಊತಿರಿತಿ ನವರ್ಚಂ ದ್ವಿತೀಯಂ ಸೂಕ್ತಂ ಭರದ್ವಾಜಸ್ಯಾರ್ಷಂ ತ್ರೈಷ್ಟುಭಮೈಂದ್ರಂ । ತಥಾ ಚಾನುಕ್ರಾಂತಂ । ಯಾ ತೇ ನವೇತಿ ॥ ಷೃಷ್ಠ್ಯಾಭಿಪ್ಲವಷಡಹಯೋರ್ದ್ವಿತೀಯೇಽಹನೀದಂ ಸೂಕ್ತಂ ನಿಷ್ಕೇವಲ್ಯನಿವಿದ್ಧಾನಂ । ಸೂತ್ರಿತಂ ಚ । ಯಾ ತ ಊತಿರವಮೇತಿ ಮಧ್ಯಂದಿನಃ । ಅ. ೭-೬ । ಇತಿ ॥**

ಅನುವಾದವು—**ಯಾ ತೆ ಊತಿಃ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಎರಡನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು; ಇಂದ್ರನು ದೇವತೆಯು; ತ್ರಿಷ್ಟುಪ್‌ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಯಾ ತೇ ನವ** ಎಂದು ಹೇಳಿರುವುದು. ಪೃಷ್ಠ್ಯ ಮತ್ತು ಅಭಿಪ್ಲವ ಷಡಹವೆಂಬ ಯಾಗಗಳ ಎರಡನೆಯ ದಿನಸದಲ್ಲಿ ಪಠಿಸುವ ನಿಷ್ಕೇವಲ್ಯಶಸ್ತ್ರಮಂತ್ರಗಳ ಮಧ್ಯದಲ್ಲಿ ಈ ಸೂಕ್ತವನ್ನು ನಿವಿದ್ಧಾನೀಯಸೂಕ್ತವನ್ನಾಗಿ ಸೇರಿಸಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಯಾ ತ ಊತಿರವಮೇತಿ ಮಧ್ಯಂದಿನಃ** ಎಂಬ ಸೂತ್ರದಿಂದ (ಆ. ೭-೬) ವಿವೃತವಾಗಿರುವುದು

## ಸೂಕ್ತ—೨೫

ಮಂಡಲ—೬ ॥ ಅನುವಾಕ—೩ ॥ ಸೂಕ್ತ—೨೫ ॥

ಅಷ್ಟಕ—೪ ॥ ಅಧ್ಯಾಯ—೬ ॥ ವರ್ಗ—೧೯, ೨೦ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ॥

॥ ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ॥

॥ ದೇವತಾ—ಇಂದ್ರಃ ॥

॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

**ಯಾ ತ ಊತಿರವಮಾ ಯಾ ಪರಮಾ ಯಾ ಮಧ್ಯಮೇಂದ್ರ ಶುಷ್ಮಿನ್ನಸ್ತಿ ।**

**ತಾಭಿರೂ ಷು ವೃತ್ರಹತ್ಯೇಽವೀರ್ನ ಏಭಿಶ್ಚ ವಾಜೈರ್ಮಹಾನ್ನ ಉಗ್ರ ॥ ೧ ॥**

॥ ಪದಪಾಠಃ ॥

ಯಾ । ತೇ । ಊತಿಃ । ಅವಮಾ । ಯಾ । ಪರಮಾ । ಯಾ । ಮಧ್ಯಮಾ । ಇಂದ್ರ । ಶುಷ್ಮಿನ್ । ಅಸ್ತಿ । ತಾಭಿಃ । ಊಂ ಇತಿ । ಸು । ವೃತ್ರಽಹತ್ಯೇ । ಅವೀಃ । ನಃ । ಏಭಿಃ । ಚ । ವಾಜೈಃ । ಮಹಾನ್ । ನಃ । ಉಗ್ರ ॥ ೧ ॥

॥ ಸಾಯಣಭಾಷ್ಯಂ ॥

ಹೇ ಶುಷ್ಮಿನ್ ಬಲವನ್ನಿಂದ್ರ ತೇ ತ್ವದೀಯಾ ಯೋತಿರ್ಯಾ ರಕ್ಷಾವಮಾಧಮಾಸ್ತಿ । ಯಾ ಪರಮೋತ್ಕೃಷ್ಟಾಸ್ತಿ । ಯಾ ಮಧ್ಯಮಾಸ್ತಿ ತಾಭಿರೂತಿಭಿರ್ವೃತ್ರಹತ್ಯೇ ಯುದ್ಧೇ ನೋಽಸ್ಮಾನ್ ಸು ಅತ್ಯಂತಮವೀಃ । ಪಾಲಯ । ಕಿಂಚ ಹೇ ಉಗ್ರೋದ್ಗೂರ್ಣೇಂದ್ರ ಮಹಾಂಸ್ತ್ವಮೇಭಿರ್ಭೋಜ್ಯಸಾಧನೈರ್ವಾಜೈರನ್ನೈಶ್ಚ ನೋಽಸ್ಮಾನ್ ಸಂಯೋಜಯೇತಿ ಶೇಷಃ ॥

॥ಪ್ರತಿಪದಾರ್ಥ॥

**ಶುಷ್ಮಿನ್**—ಶಕ್ತಿಯುತನಾದ । **ಇಂದ್ರ**—ಎಲೈ ಇಂದ್ರನೇ । **ತೇ**—ನಿನ್ನ । **ಯಾ ಊತಿಃ**—ಯಾವ ರಕ್ಷಣೆಯು । **ಅವಮಾ ಅಸ್ತಿ**—ಸಾಧಾರಣದ್ದಾಗಿದೆಯೋ । **ಯಾ**—ಯಾವುದು । **ಪರಮಾ**—ಉತ್ಕೃಷ್ಟವಾದದ್ದಾಗಿದೆಯೋ । **ಯಾ**—ಯಾವುದು । **ಮಧ್ಯಮಾ**—ಮಧ್ಯಮ ದರ್ಜೆಯುಳ್ಳದ್ದಾಗಿದೆಯೋ । **ತಾಭಿಃ**—ಅಂತಹ ಎಲ್ಲಾ ರಕ್ಷಣೆಗಳೊಡನೆಯೂ । **ವೃತ್ರಹತ್ಯೇ**—ಶತ್ರುನಾಶಕವಾದ ಯುದ್ಧದಲ್ಲಿ । **ನಃ**—ನಮ್ಮನ್ನು । **ಸು**—ಅತಿಶಯವಾಗಿ । **ಅವೀಃ**—ರಕ್ಷಿಸು । **ಉಗ್ರ**—ಅತ್ಯಧಿಕವಾದ ಶಕ್ತಿಯುಳ್ಳ ಎಲೈ ಇಂದ್ರನೇ । **ಮಹಾನ್**—ಮಹತ್ಸ್ವರೂಪವುಳ್ಳ ನೀನು । **ಏಭಿಃ**—ಭೋಗಯೋಗ್ಯವಾದ । **ವಾಜೈಃ**—ಈ ಅನ್ನಗಳಿಂದ । **ನಃ**—ನಮ್ಮನ್ನು (ಸಂಪದ್ಯುಕ್ತರನ್ನಾಗಿ ಮಾಡು).

॥ ಭಾವಾರ್ಥ ॥

ಶಕ್ತಿಯುತನಾದ ಎಲೈ ಇಂದ್ರನೇ, ನಿನ್ನ ಅನೇಕ ವಿಧವಾದ ರಕ್ಷಣೆಗಳಿಂದ ಎಂದರೆ, ಅವು ಅತ್ಯುತ್ತಮವಾದವಾಗಿರಲಿ, ಮಧ್ಯಮದರ್ಜೆಯುಳ್ಳವಾಗಿರಲಿ ಅಥವಾ ಸಾಧಾರಣವಾದವಾಗಿರಲಿ, ಅವೆಲ್ಲಾ ರಕ್ಷಣೆಗಳೊಡನೆಯೂ ಸಹ ಶತ್ರುನಾಶಕವಾದ ಯುದ್ಧದಲ್ಲಿ ನಮ್ಮನ್ನು ಅತಿಶಯವಾಗಿ ರಕ್ಷಿಸು. ಅತ್ಯಧಿಕವಾದ ಶಕ್ತಿಯುಳ್ಳ ಎಲೈ ಇಂದ್ರನೇ, ಮಹತ್ಸ್ವರೂಪವುಳ್ಳ ನೀನು ಭೋಗಯೋಗ್ಯವಾದ ಈ ಅನ್ನಗಳಿಂದ ನಮ್ಮನ್ನು ಸಂಪದ್ಯುಕ್ತರನ್ನಾಗಿ ಮಾಡು.

## English Translation.

Powerful Indra, with these (your protections), whether the protection be little, great, or middling, defend us for the destruction of our foes: supply us, fierce Indra, who are mighty, with those viands (that are needed).

॥ ಸಂಹಿತಾಪಾಠಃ ॥

ಆಭಿಃ ಸ್ಪೃಧೋ ಮಿಥತೀರರಿಷಣ್ಯನ್ನಮಿತ್ರಸ್ಯ ವ್ಯಥಯಾ ಮನ್ಯುಮಿಂದ್ರ ।
ಆಭಿರ್ವಿಶ್ವಾ ಅಭಿಯುಜೋ ವಿಷೂಚೀರಾರ್ಯಾಯ ವಿಶೋಽವ ತಾರೀ-
ರ್ದಾಸೀಃ ॥ ೨ ॥

॥ ಪದಪಾಠಃ ॥

ಆಭಿಃ । ಸ್ಪೃಧಃ । ಮಿಥತೀಃ । ಅರಿಷಣ್ಯನ್ । ಅಮಿತ್ರಸ್ಯ । ವ್ಯಥಯ । ಮನ್ಯುಂ । ಇಂದ್ರ ।
ಆಭಿಃ । ವಿಶ್ವಾಃ । ಅಭಿಽಯುಜಃ । ವಿಷೂಚೀಃ । ಆರ್ಯಾಯ । ವಿಶಃ । ಅವ । ತಾರೀಃ । ದಾಸೀಃ ॥ ೨ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಆಭಿರಸ್ಮದೀಯಾಭಿಃ ಸ್ತುತಿಭಿರ್ಮಿಥತೀಃ ಶತ್ರುಸೈನ್ಯಾನಿ ಹಿಂಸತೀಃ ಸ್ಪೃಧೋಽಸ್ಮದೀಯಾಃ ಸೇನಾ ಅರಿಷಣ್ಯನ್ನಹಿಂಸನ್ । ಪಾಲಯನ್ನಿತ್ಯರ್ಥಃ । ಅಮಿತ್ರಸ್ಯ ಶತ್ರೋರ್ಮನ್ಯುಂ ಸಂಗ್ರಾಮಾದಿಷು ವಿದ್ಯಮಾನಂ ಕೋಪಂ ವ್ಯಥಯ । ನಾಶಯ । ಅಪಿ ಚಾಭಿಃ ಸ್ತುತಿಭಿರೇವಾಭಿಯುಜೋಽಭಿಯೋಕ್ತ್ರೀರ್ವಿಷೂಚೀಃ ಸರ್ವತೋ ವಿದ್ಯಮಾನಾ ದಾಸೀಃ ಕರ್ಮಣಾಮುಪಕ್ಷಪಯಿತ್ರೀರ್ವಿಶ್ವಾಃ ಸರ್ವಾ ವಿಶಃ ಪ್ರಜಾ ಆರ್ಯಾಯ ಯಜ್ಞಾದಿಕರ್ಮಕೃತೇ ಯಜಮಾನಾಯಾವ ತಾರೀಃ । ವಿನಾಶಯ ॥

॥ ಪ್ರತಿಪದಾರ್ಥ ॥

**ಇಂದ್ರ** — ಎಲೈ ಇಂದ್ರನೇ । **ಆಭಿಃ** — ನಮ್ಮಿಂದ ಪಠಿತವಾದ ಈ ಸ್ತುತಿಗಳ ಸಹಾಯದಿಂದ । **ಮಿಥತೀಃ** — ಶತ್ರು ಸೈನ್ಯಗಳನ್ನು ಹಿಂಸಿಸುತ್ತಲೂ । **ಸ್ಪೃಧಃ** — ನಮ್ಮ ಸೈನ್ಯಗಳನ್ನು । **ಅರಿಷಣ್ಯನ್** — ಹಿಂಸಿಸದೇ । **ಅಮಿತ್ರಸ್ಯ** — ಶತ್ರುವಿನ । **ಮನ್ಯುಂ** — ಕ್ರೋಧವನ್ನು । **ವ್ಯಥಯ** — ನಾಶಪಡಿಸು । **ಆಭಿಃ** — ಈ ಸ್ತುತಿಗಳಿಂದಲೇ (ಇವುಗಳ ಸಹಾಯದಿಂದಲೇ) । **ಅಭಿಯುಜಃ** — ಎದುರುಬೀಳುವವರೂ । **ವಿಷೂಚೀಃ** — ಎಲ್ಲೆಲ್ಲೂ ಹರಡಿರುವವರೂ । **ದಾಸೀಃ** — ಕರ್ಮಕ್ಕೆ ವಿಘ್ನವನ್ನುಂಟುಮಾಡುವವರೂ ಆದ । **ವಿಶ್ವಾ ವಿಶಃ** — ಸಕಲ ವಿರೋಧಿ ಜನರನ್ನೂ । **ಆರ್ಯಾಯ** — ಯಜ್ಞಕರ್ತನಾದ ಯಜಮಾನನಿಗಾಗಿ । **ಅವ ತಾರೀಃ** — ನಾಶಪಡಿಸು.

॥ ಭಾವಾರ್ಥ ॥

ಎಲೈ ಇಂದ್ರನೇ, ನಮ್ಮಿಂದ ಪಠಿತವಾದ ಈ ಸ್ತುತಿಗಳ ಸಹಾಯದಿಂದ ಶತ್ರು ಸೈನ್ಯಗಳನ್ನು ಹಿಂಸಿಸುತ್ತಲೂ ನಮ್ಮ ಸೈನ್ಯಗಳನ್ನು ಹಿಂಸಿಸದೇ ರಕ್ಷಿಸುತ್ತಲೂ ಶತ್ರುವಿನ ಕ್ರೋಧವನ್ನು ನಾಶಪಡಿಸು. ಈ ಸ್ತುತಿಗಳ ಸಹಾಯದಿಂದಲೇ ಎದುರುಬೀಳುವವರೂ, ಎಲ್ಲೆಲ್ಲೂ ಹರಡಿರುವವರೂ, ಕರ್ಮಕ್ಕೆ ವಿಘ್ನಮಾಡುವವರೂ ಆದ ಸಕಲ ವಿರೋಧಿ ಜನರನ್ನೂ ಯಜ್ಞಕರ್ತನಾದ ಯಜಮಾನನಿಗಾಗಿ ನಾಶಪಡಿಸು.

## English Translation.

(Induced) by these (praises), protecting our assailing host, baffle, Indra, the wrath of the enemy : (induced) by them, overthrow, on the part of the Arya, all the servile races everywhere abiding.

॥ ಸಂಹಿತಾಪಾಠಃ ॥

ಇಂದ್ರ ಜಾಮಯ ಉತ ಯೇಽಜಾಮಯೋಽರ್ವಾಚೀನಾಸೋ ವನುಷೋ ಯುಯುಜ್ರೇ ।

ತ್ವಮೇಷಾಂ ವಿಥುರಾ ಶವಾಂಸಿ ಜಹಿ ವೃಷ್ಣ್ಯಾನಿ ಕೃಣುಹಿ ಪರಾಚಃ ॥ ೩ ॥

॥ ಪದಪಾಠಃ ॥

ಇಂದ್ರ । ಜಾಮಯಃ । ಉತ । ಯೇ । ಅಜಾಮಯಃ । ಅರ್ವಾಚೀನಾಸಃ । ವನುಷಃ । ಯುಯುಜ್ರೇ । ತ್ವಂ । ಏಷಾಂ । ವಿಥುರಾ । ಶವಾಂಸಿ । ಜಹಿ । ವೃಷ್ಣ್ಯಾನಿ । ಕೃಣುಹಿ । ಪರಾಚಃ ॥ ೩ ॥

। ಸಾಯಣಭಾಷ್ಯಂ ।

ಹೇ ಇಂದ್ರ ಜಾಮಯೋ ಜ್ಞಾತಿರೂಪಾಃ ಸಂನಿಕೃಷ್ಟಾ ಯೇ ಶತ್ರವಃ । ಉತಾಪಿ ಚಾಜಾಮಯೋ ದೂರದೇಶೇ ಸ್ಥಿತಾ ಯೇ ಶತ್ರವೋಽರ್ವಾಚೀನಾಸೋಽಸ್ಮದಭಿಮುಖಾ ವನುಷೋ ಹಿಂಸಂತೋ ಯುಯುಜ್ರೇ ಉದ್ಯುಕ್ತಾ ಭವಂತಿ ಏಷಾಮುಭಯವಿಧಾನಾಂ ಶತ್ರೂಣಾಂ ಸಂಬಂಧೀನಿ ಶವಾಂಸಿ ಬಲಾನಿ ವಿಥುರಾ ವಿಥುರಾಣಿ ಹೀನಾನಿ ತ್ವಂ ಕುರ್ವಿತಿ ಶೇಷಃ । ತಥಾ ವೃಷ್ಣ್ಯಾನ್ಯೇಷಾಂ ವೀರ್ಯಾಣಿ ಜಹಿ । ನಾಶಯ । ಕಿಂಚ ಪರಾಚ ಉಭಯವಿಧಾನ್ ಶತ್ರೂನ್ಪರಾಚಃ ಪರಾಙ್ಮುಖಾನ್ ಕೃಣುಹಿ। ಕುರು ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ಜಾಮಯಃ—ನಮ್ಮ ಬಂಧುಗಳಾಗಲಿ । ಉತ—ಅಥವಾ । ಅಜಾಮಯಃ—ಬಂಧುಗಳಲ್ಲದಿರಲಿ । ಯೇ—ಯಾವ ನಮ್ಮ ಶತ್ರುಗಳು । ಅರ್ವಾಚೀನಾಸಃ—ನಮಗೆ ಎದುರುಬೀಳುವವರಾಗಿಯೂ । ವನುಷಃ—ನಮ್ಮನ್ನು ಹಿಂಸಿಸುವವರಾಗಿಯೂ । ಯುಯುಜ್ರೇ—ಯುದ್ಧಕ್ಕೆ ಸಿದ್ಧರಾಗಿರುವರೋ । ಏಷಾಂ—ಇಂತಹ ಎರಡು ಗುಂಪಿನವರ । ಶವಾಂಸಿ—ಶಕ್ತಿಗಳನ್ನು । ವಿಥುರಾ—ವ್ಯರ್ಥವಾಗುವಂತೆ । ತ್ವಂ—ನೀನು (ಮಾಡು) । ವೃಷ್ಣ್ಯಾನಿ—ಅವರ ವೀರ್ಯಗಳನ್ನೆಲ್ಲಾ । ಜಹಿ—ನಾಶಪಡಿಸು । ಪರಾಚಃ—ಅವರೆಲ್ಲರೂ ಪರಾಙ್ಮುಖರಾಗುವಂತೆ । ಕೃಣುಹಿ—ಮಾಡು. .

॥ ಭಾವಾರ್ಥ ॥

ಎಲೈ ಇಂದ್ರನೇ, ನಮ್ಮ ಬಂಧುಗಳಾಗಲಿ ಅಥವಾ ಬಂಧುಗಳಲ್ಲದಿರಲಿ ಯಾವ ನಮ್ಮ ಶತ್ರುಗಳು ನಮಗೆ ಎದುರು ಬಿಳುವವರಾಗಿಯೂ ನಮ್ಮನ್ನು ಹಿಂಸಿಸುವವರಾಗಿಯೂ ಯುದ್ಧಕ್ಕೆ ಸಿದ್ಧರಾಗಿರುವರೋ ಇಂತಹ ಎರಡು ಗುಂಪಿನವರ ಶಕ್ತಿಗಳನ್ನೂ ವ್ಯರ್ಥವಾಗುವಂತೆ ಮಾಡು. ಅವರ ವೀರ್ಯಗಳನ್ನೆಲ್ಲಾ ನಾಶಪಡಿಸು. ಅವರೆಲ್ಲರೂ ಪರಾಙ್ಮುಖರಾಗುವಂತೆ ಮಾಡು.

## English Translation.

Annihilate, Indra, the strength of those who, whether kinsmen or unrelated, present themselves before us, exerting themselves as adversaries: enfeeble their prowess, put them to flight.

॥ ಸಂಹಿತಾಪಾಠಃ ॥

ಶೂರೋ ವಾ ಶೂರಂ ವನತೇ ಶರೀರೈಸ್ತನೂರುಚಾ ತರುಷಿ ಯತ್ಕೃಣ್ವೈತೇ।
ತೋಕೇ ವಾ ಗೋಷು ತನಯೇ ಯದಪ್ಸು ವಿ ಕ್ರಂದಸೀ ಉರ್ವರಾಸು
ಬ್ರವೈತೇ ॥ ೪ ॥

॥ ಪದಪಾಠಃ ॥

ಶೂರಃ । ವಾ । ಶೂರಂ । ವನತೇ । ಶರೀರೈಃ । ತನೂऽರುಚಾ । ತರುಷಿ । ಯತ್ । ಕೃಣ್ವೈತೇ ಇತಿ ।
ತೋಕೇ । ವಾ । ಗೋಷು । ತನಯೇ । ಯತ್ । ಅಪ್ऽಸು । ವಿ । ಕ್ರಂದಸೀ ಇತಿ । ಉರ್ವರಾಸು ।
ಬ್ರವೈತೇ ಇತಿ ॥ ೪ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಶೂರಸ್ತ್ವದನುಗೃಹೀತೋ ವೀರಃ ಶರೀರೈರಂಗೈಃ ಶೂರಂ ವಾ ವೀರಮಪಿ ವನತೇ । ಹಂತಿ । ವೇತ್ಯಯಮಪೀತ್ಯಸ್ಯಾರ್ಥೇ ವರ್ತತೇ । ಯದ್ವಾ। ವೇತ್ಯನೇನ ವಿಕಲ್ಪಾಭಿಧಾಯಕೇನಾಶೂರೋ ವಾ ತ್ವದನುಗೃಹೀತಃ ಸನ್ ಶೂರಂ ವನತೇ । ಕದಾ ವನತ ಇತ್ಯೇತದಾಹ । ತನೂರುಚಾ ಶರೀರೇಣ ಶೋಭಮಾನೌ ಪರಸ್ಪರವಿರೋಧಿನೌ ತರುಷಿ ಯುದ್ಧೇ ಯದ್ಯದಾ ಕೃಣ್ವೈತೇ ಸಂಗ್ರಾಮಂ ಕುರ್ವಾತೇ। ಯದ್ಯದಾ ಚ ತೋಕೇ ವಾ ಪುತ್ರನಿಮಿತ್ತೇ ವಾ ಗೋಷು ನಿಮಿತ್ತಭೂತಾಸು ವಾ ತನಯೇ ಪೌತ್ರೇ ನಿಮಿತ್ತಭೂತೇ ವಾಪ್ಸೂದಕೇಷು ನಿಮಿತ್ತೇಷು ವೋರ್ವರಾಸು ಸರ್ವಸಸ್ಯಾಢ್ಯಾಸು ಭೂಮಿಷು ನಿಮಿತ್ತಾಸು ಕ್ರಂದಸೀ ಕ್ರಂದಮಾನಾವಾಕ್ರೋಶಂತೌ ವಿ ಬ್ರವೈತೇ ವಿವದೇತೇ । ಹೇ ಇಂದ್ರ ಪುತ್ರಾದಿ-ಲಾಭಜಯಸ್ತ್ವದನುಗೃಹೀತಸ್ಯ ಭವತೀತ್ಯರ್ಥಃ ॥

। ಪ್ರತಿಪದಾರ್ಥ ।

(ಎಲೈ ಇಂದ್ರನೇ) **ತನೂರುಚಾ**---ತಮ್ಮ ಶರೀರಸೌಷ್ಠವದಿಂದ ಪ್ರಕಾಶಿಸುತ್ತಿರುವ ಎರಡು ಪಿರೋಧ ಗುಂಪಿನವರು । **ತರುಷಿ**—ಯುದ್ಧದಲ್ಲಿ । **ಯತ್**—ಯಾವಾಗ । **ಕೃಣ್ವತೇ**—ಯುದ್ಧ ಮಾಡುವರೋ । **ಯತ್**—ಯಾವಾಗ । **ತೋಕೇ ವಾ**—ಪುತ್ರನಿಮಿತ್ತವಾಗಿಯಾಗಲಿ । **ಗೋಷು**—ಗೋನಿಮಿತ್ತವಾಗಿಯಾಗಲಿ । **ತನಯೇ**--ಪೌತ್ರನಿಮಿತ್ತವಾಗಿಯಾಗಲಿ । **ಅಪ್ಸು**—ಉದಕನಿಮಿತ್ತವಾಗಿಯಾಗಲಿ । **ಉರ್ವರಾಸು**—ಸಸ್ಯಾತ್ಮಕವಾದ ಭೂಮಿಯ ನಿಮಿತ್ತವಾಗಿಯಾಗಲಿ । **ಕ್ರಂದಸೀ**—ಕೋಪದ ಆರ್ಭಟದೊಡನೆ । **ವಿ ಬ್ರವೈತೇ**—ಕಠಿಣವಾದ ವಾಗ್ವ್ಯವಹಾರವನ್ನು ನಡೆಸುವರೋ (ಅಂತಹ ಸಂದರ್ಭಗಳಲ್ಲಿ) । **ಶೂರಃ**—ನಿನ್ನಿಂದ ಅನುಗೃಹೀತನಾದ ಶೂರನು । **ಶರೀರೈಃ**—ತನ್ನ ಅಂಗಸಾಮರ್ಥ್ಯಗಳಿಂದ । **ಶೂರಂ ವಾ**—ತನ್ನ ಶತ್ರುವು ಶೂರನಾದರೂ ಸಹ ಅವನನ್ನು । **ವನತೇ**—ನಾಶಪಡಿಸುತ್ತಾನೆ.

। ಭಾವಾರ್ಥ ।

ಎಲೈ ಇಂದ್ರನೇ, ತಮ್ಮ ಶರೀರಸೌಷ್ಠವದಿಂದ ಪ್ರಕಾಶಿಸುತ್ತಿರುವ ಎರಡು ವಿರೋಧಗುಂಪಿನವರು ಯುದ್ಧದಲ್ಲಿ ಯಾವಾಗ ಕಾದಾಡುವರೋ, ಯಾವಾಗ ಪುತ್ರನಿಮಿತ್ತವಾಗಿಯಾಗಲಿ, ಗೋನಿಮಿತ್ತವಾಗಿಯಾಗಲಿ, ಪೌತ್ರನಿಮಿತ್ತವಾಗಿಯಾಗಲಿ, ಉದಕನಿಮಿತ್ತವಾಗಿಯಾಗಲಿ ಅಥವಾ ಸಸ್ಯಾತ್ಮಕವಾದ ಭೂನಿಮಿತ್ತವಾಗಿಯಾಗಲಿ, ಕೋಪದ ಆರ್ಭಟದೊಡನೆ ಕಠಿಣವಾದ ವಾಗ್ವ್ಯವಹಾರವನ್ನು ನಡೆಸುವರೋ ಅಂತಹ ಸಂದರ್ಭಗಳಲ್ಲಿ ನಿನ್ನಿಂದ ಅನುಗೃಹೀತನಾದ ಶೂರನು ತನ್ನ ದೇಹಬಲದಿಂದಲೇ ತನ್ನ ಶತ್ರುವು ಶೂರನಾದರೂ ಸಹ ಅವನನ್ನು ನಾಶಪಡಿಸುತ್ತಾನೆ.

## English Translation.

The hero, (favoured by you), assuredly slays the (hostile) hero by his bodily prowess, when, both excelling in personal strength, they strive together in conflict, or when, clamorous, they dispute for (the sake of) sons, of grandsons, of cattle, of water, of land.

॥ ಸಂಹಿತಾಪಾಠಃ ।

ನಹಿ ತ್ವಾ ಶೂರೋ ನ ತುರೋ ನ ಧೃಷ್ಣುರ್ನ ತ್ವಾ ಯೋಧೋ ಮನ್ಯ-
ಮಾನೋ ಯುಯೋಧ ।
ಇಂದ್ರ ನಕಿಷ್ಟ್ವಾ ಪ್ರತ್ಯಸ್ತ್ಯೇಷಾಂ ವಿಶ್ವಾ ಜಾತಾನ್ಯಭ್ಯಸಿ ತಾನಿ ॥ ೫ ॥

। ಪದಪಾಠಃ ।

ನಹಿ । ತ್ವಾ । ಶೂರಃ । ನಃ । ತುರಃ । ನ । ಧೃಷ್ಣುಃ । ನ । ತ್ವಾ । ಯೋಧಃ । ಮನ್ಯಮಾನಃ । ಯುಯೋಧ ।
ಇಂದ್ರ । ನಕಿಃ । ತ್ವಾ । ಪ್ರತಿ । ಅಸ್ತಿ । ಏಷಾಂ । ವಿಶ್ವಾ । ಜಾತಾನಿ । ಅಭಿ । ಅಸಿ । ತಾನಿ ॥ ೫ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಾ ತ್ವಯಾ ಸಹ ಶೂರೋ ವಿಕ್ರಾಂತಜನೋ ನಹಿ ಯುಯೋಧ । ನ ಯುಧ್ಯತೇ । ತಥಾ ತುರೋಽನ್ಯೇಷಾಂ ಶತ್ರೂಣಾಂ ಹಿಂಸಕೋಽತಸ್ತ್ವಯಾ ನ ಯುಯೋಧ । ಧೃಷ್ಣುರ್ಧರ್ಷಕೋ

**ನ ಯುಯೋಧ। ಮನ್ಯಮಾನೋ ಯುದ್ಧೇ ಶತ್ರುಧ್ನನ್ ಯೋಧೋ ಭಟಸ್ತ್ವಾ ತ್ವಯಾ ನ ಯುಯೋಧ। ಹೇ ಇಂದ್ರ ಏಷಾಂ ಶೂರಾದೀನಾಂ ಮಧ್ಯೇ ಕಶ್ಚನ ತ್ವಾ ತವ ನಕಿಃ ಪ್ರತ್ಯಸ್ತಿ । ಪ್ರತಿನಿಧಿರ್ನಾಸ್ತಿ। ವಿಶ್ವಾ ವಿಶ್ವಾನಿ ಜಾತಾನಿ ಪ್ರಾದುರ್ಭೂತಾನಿ ತಾನಿ ಶೂರಾದೀನಿ ತ್ವಮಭ್ಯಸಿ । ಅಭಿಭವಸಿ ॥**

। ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ತ್ವಾ**—ನಿನ್ನೊಡನೆ । **ಶೂರಃ**—ಯಾವ ಪರಾಕ್ರಮಿಯೂ ! **ನಹಿ ಯುಯೋಧ**—ಯುದ್ಧಮಾಡಲಾರನು । **ತುರಃ**—ಯಾವ ವೇಗಗಾಮಿಯಾದ ಶತ್ರುವೂ । **ನ**—ಎದುರಿಸ ಲಾರನು । **ಧೃಷ್ಣುಃ**—ಇತರರನ್ನು ಪ್ರತಿಭಟಿಸುವ ಸಾಮರ್ಥ್ಯವಿರುವವನೂ ಸಹ । **ನ**—ನಿನ್ನನ್ನು ಎದುರಿಸಲಾರನು । **ಮನ್ಯಮಾನಃ**—ಸ್ವಾಭಿಮಾನದೊಡನೆ ಕೂಡಿರುವ । **ಯೋಧಃ**—ಯಾವ ಭಟನೂ । **ತ್ವಾ**—ನಿನ್ನೊಡನೆ । **ನ**—ಯುದ್ಧಮಾಡಲಾರನು **ಇಂದ್ರ**—ಎಲೈ ಇಂದ್ರನೇ । **ಏಷಾಂ**—ಈ ಶೂರರ ನಡುವೆ । **ತ್ವಾ**—ನಿನಗೆ । **ನಕಿಃ ಪ್ರತ್ಯಸ್ತಿ**—ಸಮಾನನಾದ ವೀರನು ಯಾರೂ ಇಲ್ಲ । **ವಿಶ್ವಾ**—ಸಮಸ್ತವಾದವೂ । **ಜಾತಾನಿ**—ಉತ್ಪನ್ನ ವಾದವೂ ಆದ । **ತಾನಿ**—ಅಂತಹ ವೀರ್ಯವಸ್ತುಗಳನ್ನೆಲ್ಲಾ । **ಅಭ್ಯಸಿ**—ನೀನು ಕೆಳಗಾಣಿಸುತ್ತೀಯೆ

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನೊಡನೆ ಯಾವ ಪರಾಕ್ರಮಿಯೂ ಯುದ್ಧಮಾಡಲಾರನು ಯಾವ ವೇಗಗಾಮಿ ಯಾದ ಶತ್ರುವೂ ನಿನ್ನನ್ನು ಎದುರಿಸಲಾರನು. ಇತರರನ್ನೆಲ್ಲಾ ಪ್ರತಿಭಟಿಸುವ ಸಾಮರ್ಥ್ಯವಿರುವವನೂ ಸಹ ನಿನ್ನನ್ನು ಎದುರಿಸಲಾರನು. ಸ್ವಾಭಿಮಾನದೊಡನೆ ಕೂಡಿರುವ ಯಾವ ಭಟನೂ ನಿನ್ನೊಡನೆ ಯುದ್ಧಮಾಡಲಾರನು. ಎಲೈ ಇಂದ್ರನೇ, ಈ ಶೂರರ ನಡುವೆ ನಿನಗೆ ಸಮಾನನಾದ ವೀರನು ಯಾರೂ ಇಲ್ಲ ಜಗತ್ತಿನಲ್ಲಿ ಉತ್ಪನ್ನವಾದ ಸಮಸ್ತವೀರ್ಯವಸ್ತುಗಳಿಗೂ ನೀನೇ ಪ್ರಭುವಾಗಿದ್ದೀಯೆ.

## English Translation.

But you (no one) resists, neither the hero, nor the fleet runner nor the resolute, nor the combatant confiding (in his valour); neither of these, Indra. is a match for you: you are superior to all these persons.

। ಸಂಹಿತಾಪಾಠಃ ।

ಸ ಪತ್ಯತ ಉಭಯೋರ್ನೃಮ್ಣಮಯೋರ್ಯದೀ ವೇಧಸಃ ಸಮಿಥೇ
ಹವಂತೇ ।
ವೃತ್ರೇ ವಾ ಮಹೋ ನೃವತಿ ಕ್ಷಯೇ ವಾ ವ್ಯಚಸ್ವಂತಾ ಯದಿ ವಿತಂತಸೈತೇ॥

॥ ಪದಪಾಠಃ ॥

ಸಃ । ಪತ್ಯತೇ । ಉಭಯೋಃ । ನೃಮ್ಣಂ । ಅಯೋಃ । ಯದಿ । ವೇಧಸಃ । ಸಂऽಇಥೇ । ಹವಂತೇ ।

ವೃತ್ರೇ । ವಾ । ಮಹಃ । ನೃऽವತಿ । ಕ್ಷಯೇ । ವಾ । ವ್ಯಚಸ್ವಂತಾ । ಯದಿ । ವಿತಂತಸೈತೇ ಇತಿ ॥ ೬ ॥

। ಸಾಯಣಭಾಷ್ಯಂ ।

ಅಯೋರನಯೋರುಭಯೋರ್ಮಧ್ಯೇ ಸ ಜನೋ ನೃಮ್ಣಂ ಧನಂ ಪತ್ಯತೇ । ಈಷ್ಟೇ । ತಯೋರ್ಮಧ್ಯೇ ಕ ಈಷ್ಟ ಇತ್ಯೇತದುಭಯಮಾಹ । ಯದಿ ಯಸ್ಯ ಜನಸ್ಯ । ಯದೀತಿ ನಿಪಾತೋ ಯಸ್ಯಾರ್ಥೇ ವರ್ತತೇ । ಸಮಿಥೇ ಯಜ್ಞೇ ವೇಧಸಃ ಕರ್ಮಣಾಂ ವಿಧಾತಾರ ಋತ್ವಿಜೋ ಹವಂತೇ ಇಂದ್ರಂ ಸ್ತುವಂತಿ ಸ ಈಷ್ಟ ಇತಿ ಸಂಬಂಧಃ । ಮಹೋ ಮಹತಿ ಪ್ರಭೂತೇ ವೃತ್ರೇ ವಾ ನಿರೋಧೇ ನಿಮಿತ್ತೇ ವಾ ನೃವತಿ ಪರಿಚಾರಕಮನುಷ್ಯಯುಕ್ತೇ ಕ್ಷಯೇ ವಾ ಗೃಹನಿಮಿತ್ತೇ ವಾ ವ್ಯಚಸ್ವಂತೌ ಯದಿ ಯೌ ಜನೌ । ಯದೀತಿ ಯಾವಿತ್ಯರ್ಥೇ ವರ್ತತೇ । ವಿತಂತಸೈತೇ ವಿಯುಧ್ಯೇತೇ ತಯೋರ್ಮಧ್ಯ ಇತಿ ಸಂಬಂಧಃ ॥ ತಸೇರುಪಕ್ಷಯಕರ್ಮಣೋ ವಿಪೂರ್ವಾದ್ವಿತಂತಸೈತೇ ಇತಿ ಭವತಿ । ಯದ್ವಾ । ತಂತಸ ಇತಿ ಧಾತುಃ ಕಂಡ್ವಾದಿಷು ಪಠ್ಯತೇ ತಸ್ಮಾದಿದಂ ರೂಪಮಿತಿ ॥

॥ ಪ್ರತಿಪದಾರ್ಥ ॥

**ಮಹಃ**—ಮಹತ್ತಾದ । **ವೃತ್ರೇ**—ಯುದ್ಧದಲ್ಲಿ । **ನೃವತಿ**—ಭೃತ್ಯಾದಿಗಳ ನಿಮಿತ್ತವಾಗಿಯಾಗಲಿ । **ಕ್ಷಯೇ ವಾ**—ಗೃಹನಿಮಿತ್ತವಾಗಿಯಾಗಲಿ । **ಯದಿ**—ಯಾವ ಎರಡು ವಿರೋಧಗುಂಪಿನವರು । **ವ್ಯಚಸ್ವಂತಾ**—ಒಬ್ಬರನ್ನೊಬ್ಬರು ಸೋಲಿಸಬೇಕೆಂಬ ಸ್ಪರ್ಧೆಯಿಂದ । **ವಿತಂತಸೈತೇ**—ಹೋರಾಡುವರೋ । **ಅಯೋಃ ಉಭಯೋಃ**—ಈ ಎರಡು ಗುಂಪಿನವರಲ್ಲಿ । **ಯದಿ**—ಯಾವ ಯಜಮಾನನಿಗಾಗಿ । **ಸಮಿಥೇ**—ಯಜ್ಞದಲ್ಲಿ । **ವೇಧಸಃ**—ಋತ್ವಿಕ್ಕುಗಳು । **ಹವಂತೇ**—ಇಂದ್ರನನ್ನು ಸ್ತುತಿಸುವರೋ । **ಸಃ**—ಅವನು ಮಾತ್ರ । **ನೃಮ್ಣಂ**—ಧನವನ್ನು । **ಪತ್ಯತೇ**—ಹೊಂದುತ್ತಾನೆ.

। ಭಾವಾರ್ಥ ।

ಮಹತ್ತಾದ ಯುದ್ಧದಲ್ಲಿ ಭೃತ್ಯಾದಿಗಳ ನಿಮಿತ್ತವಾಗಿಯಾಗಲಿ, ಗೃಹನಿಮಿತ್ತವಾಗಿಯಾಗಲಿ ಯಾವ ಎರಡು ವಿರೋಧಗುಂಪಿನವರು ಒಬ್ಬರನ್ನೊಬ್ಬರು ಸೋಲಿಸಬೇಕೆಂಬ ಸ್ಪರ್ಧೆಯಿಂದ ಹೋರಾಡುವರೋ ಈ ಎರಡು ಗುಂಪಿನವರಲ್ಲಿ ಯಾವ ಯಜಮಾನನಿಗಾಗಿ ಯಜ್ಞದಲ್ಲಿ ಋತ್ವಿಕ್ಕುಗಳು ಇಂದ್ರನನ್ನು ಸ್ತುತಿಸುವರೋ ಅವನು ಮಾತ್ರ ಧನವನ್ನು ಹೊಂದುತ್ತಾನೆ.

## English Translation.

Of both these (disputants), that one acquires wealth whose priests invoke (Indra) at the sacrifice, whether they contend emulous for (the overthrow of) a powerful enemy, or for a dwelling peopled with dependants.

॥ ಸಂಹಿತಾಪಾಠಃ ॥

ಅಧ ಸ್ಮಾ ತೇ ಚರ್ಷಣಯೋ ಯದೇಜಾನಿಂದ್ರ ತ್ರಾತೋತ ಭವಾ ವರೂತಾ ।
ಅಸ್ಮಾಕಾಸೋ ಯೇ ನೃತಮಾಸೋ ಅರ್ಯ ಇಂದ್ರ ಸೂರಯೋ ದಧಿರೇ ಪುರೋ ನಃ ॥ ೭ ॥

॥ ಪದಪಾಠಃ ॥

ಅಧ । ಸ್ಮ । ತೇ । ಚರ್ಷಣಯಃ । ಯತ್ । ಏಜಾನ್ । ಇಂದ್ರ । ತ್ರಾತಾ । ಉತ । ಭವ । ವರೂತಾ ।
ಅಸ್ಮಾಕಾಸಃ । ಯೇ । ನೃತಮಾಸಃ । ಅರ್ಯಃ । ಇಂದ್ರ । ಸೂರಯಃ । ದಧಿರೇ । ಪುರಃ । ನಃ ॥ ೭ ॥

॥ ಸಾಯಣಭಾಷ್ಯಂ ॥

ಅಧ ಸ್ಮಾಪಿ ಚ ಹೇ ಇಂದ್ರ ತೇ ತ್ವದೀಯಾಶ್ಚರ್ಷಣಯಃ ಪುರುಷಾ ಯದ್ಯದೈಜಾನ್ ಏಜೇಯುರ್ಭೀತ್ಯಾ ಕಂಪೇಯುಃ ತ್ವಂ ತೇಷಾಂ ತ್ರಾತಾ ಪಾಲಕೋ ಭವ । ಉತಾಪಿ ಚ ವರೂತಾ ಸಂಭಕ್ತಾ ಭವ । ಅಸ್ಮಾಕಾಸೋಽಸ್ಮದೀಯಾ ನೃತಮಾಸೋ ನೇತೃತಮಾ ಯೇ ಮನುಷ್ಯಾ ಹೇ ಇಂದ್ರ ತ್ವಾಮರ್ಯೋಽರಯೋ । ಪ್ರಾಪಯಿತಾರ ಇತ್ಯರ್ಥಃ । ತೇಷಾಂ ತ್ರಾತಾ ಭವ । ಹೇ ಇಂದ್ರ ಸೂರಯೋ ಯೇ ಸ್ತೋತಾರೋ ನೋಽಸ್ಮಾನ್ಪುರೋ ದಧಿರೇ ಪುರಶ್ಚಕ್ರಿರೇ ತೇಷಾಂ ಚ ತ್ರಾತಾ ಭವೇತಿ ॥

॥ ಪ್ರತಿಪದಾರ್ಥ ॥

**ಅಧ ಸ್ಮ**—ಆದುದರಿಂದ । **ಇಂದ್ರ**—ಎಲೈ ಇಂದ್ರನೇ । **ತೇ**—ನಿನ್ನನ್ನು ಆರಾಧಿಸುವ । **ಚರ್ಷಣಯಃ**—ಮಾನವರು । **ಯತ್**—ಯಾವಾಗ । **ಏಜಾನ್**—ಕಂಪಿಸುವರೋ । **ತ್ರಾತಾ**—(ಅವರಿಗೆ) ರಕ್ಷಕನಾಗಿ । **ಭವ**—ಆಗು । **ಉತ**—ಮತ್ತು । **ವರೂತಾ**—ಅವರಿಗೆ ಆಶ್ರಯದಾತನಾಗು । **ಅಸ್ಮಾಕಾಸಃ**—ನಮ್ಮಂತಹ । **ನೃತಮಾಸಃ**—ಶ್ರೇಷ್ಠವಾದ ಬುದ್ಧಿಯುಳ್ಳ ಮಾನವರಲ್ಲಿ । **ಯೇ**—ಯಾರು । **ಅರ್ಯಃ**—ನಿನ್ನನ್ನು ಸಮೀಪಿಸುವರೋ (ಅವರನ್ನು ರಕ್ಷಿಸು) । **ಇಂದ್ರ**—ಎಲೈ ಇಂದ್ರನೇ । **ಸೂರಯಃ**—ಯಾವ ಸ್ತೋತೃಗಳು । **ನಃ**—ನಮ್ಮನ್ನು । **ಪುರಃ ದಧಿರೇ**—ಯಜ್ಞಕ್ಕೆ ಪ್ರಧಾನರನ್ನಾಗಿ ಮಾಡಿರುವರೋ (ಅವರನ್ನೂ ರಕ್ಷಿಸು).

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನನ್ನು ಆರಾಧಿಸುವ ಮಾನವರು ಯಾವಾಗ ಕಂಪಿಸುವರೋ ಆಗ ಅವರ ಭಯವನ್ನು ಹೋಗಲಾಡಿಸಿ ಅವರನ್ನು ರಕ್ಷಿಸು. ಅವರಿಗೆ ಆಶ್ರಯದಾತನಾಗಿರು, ನಮ್ಮಂತಹ ಶ್ರೇಷ್ಠವಾದ ಬುದ್ಧಿಯುಳ್ಳ ಮಾನವರಲ್ಲಿ ಯಾರು ನಿನ್ನನ್ನು ಸಮೀಪಿಸುವರೋ ಅವರನ್ನೂ ರಕ್ಷಿಸು. ಎಲೈ ಇಂದ್ರನೇ, ಯಾವ ಸ್ತೋತೃಗಳು ನಮ್ಮನ್ನು ಯಜ್ಞಕ್ಕೆ ಪ್ರಧಾನರನ್ನಾಗಿ ಮಾಡಿರುವರೋ ಅವರನ್ನೂ ರಕ್ಷಿಸು.

## English Translation.

Therefore, Indra, when your people tremble (with fear), protect them; be to them a defender: may those who are our chief leaders be enjoyers (of your favour), as well as those (your) worshippers who have placed us foremost (to perform the sacrifice).

---

॥ ಸಂಹಿತಾಪಾಠಃ ॥

ಅನು ತೇ ದಾಯಿ ಮಹ ಇಂದ್ರಿಯಾಯ ಸತ್ರಾ ತೇ ವಿಶ್ವಮನು ವೃತ್ರಹತ್ಯೇ।
ಅನು ಕ್ಷತ್ರಮನು ಸಹೋ ಯಜತ್ರೇಂದ್ರ ದೇವೇಭಿರನು ತೇ ನೃಷಹ್ಯೇ ॥೮॥

॥ ಪದಪಾಠಃ ॥

ಅನು । ತೇ । ದಾಯಿ । ಮಹೇ । ಇಂದ್ರಿಯಾಯ । ಸತ್ರಾ । ತೇ । ವಿಶ್ವಂ । ಅನು । ವೃತ್ರಽಹತ್ಯೇ ।
ಅನು । ಕ್ಷತ್ರಂ । ಅನು । ಸಹಃ । ಯಜತ್ರ । ಇಂದ್ರ । ದೇವೇಭಿಃ । ಅನು । ತೇ । ನೃಽಸಹ್ಯೇ ॥ ೮ ॥

॥ ಸಾಯಣಭಾಷ್ಯಂ ॥

ಸಾಕಮೇಧೇಷು ಮಾಹೇಂದ್ರ್ಯಾಮಿಷ್ಟಾವಿಂದ್ರಸ್ಯ ವೃತ್ರಘ್ನೋ ಯಾಜ್ಯಾ । ಸೂತ್ರಿತಂ ಚ । ಅನು ತೇ ದಾಯಿ ಮಹ ಇಂದ್ರಿಯಾಯ ವಿಶ್ವಕರ್ಮನ್ಹವಿಷಾ ವಾವೃಧಾನಃ । ಆ. ೩-೧೮ । ಇತಿ ॥ ಆನುಕ್ರೀನಾಮ್ನ್ಯೇಕಾಹೇ ನಿಷ್ಕೇವಲ್ಯ ಏಷೈವ ಸೂಕ್ತಮುಖೀಯಾ । ಸೂತ್ರಿತಂ ಚ । ಅನು ತೇ ದಾಯಿ ಮಹ ಇಂದ್ರಿಯಾಯ ಕಥೋ ನು ತೇ ಪರಿ ಚರಾಣಿ ವಿದ್ವಾನಿತಿ ದ್ವೇ । ಆ. ೯-೫ । ಇತಿ ॥

ಹೇ ಇಂದ್ರ ಮಹೇ ಮಹತೇ ತೇ ತುಭ್ಯಮಿಂದ್ರಿಯಾಯೈಶ್ವರ್ಯಾರ್ಥಮನು ದಾಯಿ । ಅನ್ವದಾಯಿ । ಅನುದೀಯತೇ ಸ್ಮ । ವೃತ್ರಹತ್ಯೇ ವೃತ್ರವಧೇ ನಿಮಿತ್ತೇ ತೇ ತುಭ್ಯಂ ವಿಶ್ವಂ ಸಮಸ್ತಂ ಸತ್ರಾ ಸತ್ಯಮನು ದಾಯಿ । ಕೈಃ ಕಿಮನುದಾಯೀತಿ ತದುಭಯಮಾಹ । ಯೇನ ವಿಶ್ವಂ ಬಿಭರ್ಷಿ ತತ್ಕ್ಷತ್ರಂ ಬಲಮನು ದಾಯಿ । ಯೇನ ಶತ್ರೂನಭಿಭವತಿ । ತದ್ಗುಣವಿಶಿಷ್ಟಂ ಸಹೋ ಬಲಮನು ದಾಯಿ । ಹೇ ಯಜತ್ರ ಯಜನೀಯೇಂದ್ರ ತೇ ತುಭ್ಯಂ ನೃಷಹ್ಯೇ ಯುದ್ಧೇ ದೇವೇಭಿಸ್ತೈಸ್ಸರ್ವೈರ್ದೇವೈರೇತತ್ಸರ್ವಮನು ದಾಯಿ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) ಮಹೇ—ಮಹಸ್ಸ್ವರೂಪವುಳ್ಳ । ತೇ—ನಿನಗೆ । ಇಂದ್ರಿಯಾಯ—ಸಕಲ ಐಶ್ವರ್ಯಗಳೂ । ಅನು ದಾಯಿ—ಕ್ರಮವಾಗಿ ಅರ್ಪಿತವಾಗಿವೆ । ವೃತ್ರಹತ್ಯೇ—ಶತ್ರುನಾಶಕ್ಕಾಗಿ । ತೇ—

ನಿನಗೆ | **ವಿಶ್ವಂ**—ಸಮಸ್ತವಾದ | **ಸತ್ರಾ**—ಸತ್ಯಸ್ವರೂಪವೂ | **ಅನು**—ಅರ್ಪಿತವಾಗಿದೆ | **ಕ್ಷತ್ರಂ**—ಲೋಕಪಾಲಕವಾದ ಶಕ್ತಿಯೂ ಸಹ | **ಅನು**—ಕೊಡಲ್ಪಟ್ಟಿದೆ | **ಸಹಃ**—ಶತ್ರುನಾಶಕವಾದ ಬಲವೂ ಸಹ | **ಅನು**—ನಿನ್ನಲ್ಲೇ ಅರ್ಪಿತವಾಗಿದೆ | **ಯಜತ್ರ**—ಪೂಜ್ಯನಾದ | **ಇಂದ್ರ**—ಇಂದ್ರನೇ | **ತೇ**—ನಿನಗೆ | **ನೃಷಹ್ಯೇ**—ಯುದ್ಧದಲ್ಲಿ | **ದೇವೇಭಿಃ**—ದೇವತೆಗಳಿಂದ | **ಅನು**—(ಈ ಎಲ್ಲಾ ಸಂಪತ್ತುಗಳು) ಕೊಡಲ್ಪಟ್ಟಿವೆ.

|| ಭಾವಾರ್ಥ ||

ಎಲೈ ಇಂದ್ರನೇ ಮಹತ್ಸ್ವರೂಪವುಳ್ಳ ನಿನಗೆ ಸಕಲ ಐಶ್ವರ್ಯಗಳೂ ಅರ್ಪಿತವಾಗಿವೆ. ಶತ್ರುನಾಶಕ್ಕಾಗಿ ನಿನ್ನಲ್ಲೇ ಸಕಲ ಸತ್ಯಸ್ವರೂಪವೂ ಅರ್ಪಿತವಾಗಿದೆ. ಲೋಕಪಾಲಕವಾದ ಶಕ್ತಿಯೂ ಶತ್ರುನಾಶಕವಾದ ಬಲವೂ ನಿನಗೇ ಅರ್ಪಿತವಾಗಿದೆ. ಪೂಜ್ಯನಾದ ಎಲೈ ಇಂದ್ರನೇ, ನಿನಗೆ ಯುದ್ಧದಲ್ಲಿ ದೇವತೆಗಳಿಂದ ಈ ಎಲ್ಲ ಸಂಪತ್ತುಗಳೂ ಕೊಡಲ್ಪಟ್ಟಿವೆ.

## English Translation.

All (power) has been successively conceded verily to you, Indra, who are mighty, for the destruction of the foe: suitable vigour, suitable strength in battle (has been given) to you, adorable Indra, by the goods.

|| ವಿಶೇಷವಿಷಯಗಳು ||

ಸಾಕಮೇಧಯಾಗಗಳಲ್ಲಿ ಮಾಹೇಂದ್ರ ದೇವತೆಯನ್ನುದ್ದೇಶಿಸಿ ಮಾಡುವ ಇಷ್ಟಿಯಲ್ಲಿ ವೃತ್ರಘ್ನ ಇಂದ್ರನನ್ನುದ್ದೇಶಿಸಿ ಮಾಡುವ ಹೋಮದಲ್ಲಿ **ಅನು ತೇ ದಾಯಿ** ಎಂಬ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಅನು ತೇ ದಾಯಿ ಮಹ ಇಂದ್ರಿಯಾಯ ವಿಶ್ವಕರ್ಮನ್ ಹವಿಷಾ ವಾವೃಧಾನಃ** ಎಂಬ ಸೂತ್ರದಿಂದ (ಆ. ೨-೧೮) ವಿವೃತವಾಗಿರುವುದು. ಮತ್ತು ಅನುಕ್ರೀ ಎಂಬ ಏಕಾಹಯಾಗದಲ್ಲಿ ನಿಷ್ಕೇವಲ್ಯ ಶಸ್ತ್ರಮಂತ್ರಗಳ ಪ್ರಾರಂಭದಲ್ಲಿ ಈ ಋಕ್ಕನ್ನು ಸೂಕ್ತದ ಪ್ರಾರಂಭಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಅನು ತೇ ದಾಯಿ ಮಹ ಇಂದ್ರಿಯಾಯ ಕಥೋ ನು ತೇ ಪರಿ ಚರಾಣಿ ವಿದ್ವಾನಿತಿ ದ್ವೇ** ಎಂಬ ಸೂತ್ರದಿಂದ (ಆ. ೨-೫) ವಿವೃತವಾಗಿರುವುದು.

|| ಸಂಹಿತಾಪಾಠಃ ||

ಏವಾ ನಃ ಸ್ಪೃಧಃ ಸಮಜಾ ಸಮತ್ಸ್ವಿಂದ್ರ ರಾರಂಧಿ ಮಿಥತೀರದೇವೀಃ |
ವಿದ್ಯಾಮ ವಸ್ತೋರವಸಾ ಗೃಣಂತೋ ಭರದ್ವಾಜಾ ಉತ ತ ಇಂದ್ರ ನೂನಂ || ೯ ||

|| ಪದಪಾಠಃ ||

ಏವ | ನಃ | ಸ್ಪೃಧಃ | ಸಂ | ಅಜ | ಸಮತ್ಽಸು | ಇಂದ್ರ | ರರಂಧಿ | ಮಿಥತೀಃ | ಅದೇವೀಃ |
ವಿದ್ಯಾಮ | ವಸ್ತೋಃ | ಅವಸಾ | ಗೃಣಂತಃ | ಭರತ್ಽವಾಜಾಃ | ಉತ | ತೇ | ಇಂದ್ರ | ನೂನಂ || ೯ ||

|| ಸಾಯಣಭಾಷ್ಯಂ ||

ಹೇ ಇಂದ್ರ ಏವ್ಮೈವಂ ಸ್ತುತಸ್ತ್ವಂ ನೋಽಸ್ಮದೀಯಾಃ ಸ್ಪೃಧಃ ಶತ್ರುಸೇನಾಃ ಸಮತ್ಸು ಸಂಗ್ರಾಮೇಷು ಸಮಜ | ಶತ್ರುವಧಾರ್ಥಂ ಪ್ರೇರಯ | ಕಿಂಚ ಮಿಥತೀರ್ಹಿಂಸತೀರದೇವೀರಾಸುರೀಃ ಸೇನಾ ರರಂಧಿ | ಅಸ್ಮದರ್ಥಂ ವಶೀಕುರು | ಉತಾಪಿ ಚ ಹೇ ಇಂದ್ರ ತೇ ಗೃಣಂತಸ್ತ್ವಾಂ ಸ್ತುವಂತೋ ಭರದ್ವಾಜಾ ವಯಮವಸಾನ್ನೇನ ಸಹ ವಸ್ತೋರ್ವಾಸಸ್ಯ | ನಿವಾಸಮಿತ್ಯರ್ಥಃ | ನೂನಮವಶ್ಯಂ ವಿದ್ಯಾಮ | ಲಭೇಮಹಿ ||

|| ಪ್ರತಿಪದಾರ್ಥ ||

**ಇಂದ್ರ**—ಎಲೈ ಇಂದ್ರನೇ | **ಏವ**—ಈ ರೀತಿ ಸ್ತುತನಾದ ನೀನು | **ನಃ**—ನಮ್ಮ | **ಸ್ಪೃಧಃ**—(ಶತ್ರುಗಳೊಡನೆ) ಹೋರಾಡುವ ಸೈನ್ಯಗಳನ್ನು | **ಸಮತ್ಸು**—ಸಂಗ್ರಾಮಗಳಲ್ಲಿ | **ಸಮಜ**—ಹುರಿದುಂಬಿಸು | **ಮಿಥತೀಃ**—ನಮ್ಮನ್ನು ಹಿಂಸಿಸುವ | **ಅದೇವೀಃ**—ಶತ್ರುಸೈನ್ಯಗಳನ್ನು | **ರರಂಧಿ**—ನಾಶಪಡಿಸು (ನಮಗೆ) ವಶವಾಗುವಂತೆ ಮಾಡು | **ಉತ**—ಮತ್ತು | **ಇಂದ್ರ**—ಎಲೈ ಇಂದ್ರನೇ | **ತೇ**—ನಿನ್ನನ್ನು | **ಗೃಣಂತಃ**—ಸ್ತುತಿಸತಕ್ಕವರೂ | **ಭರದ್ವಾಜಾಃ**—ಭರದ್ವಾಜವಂಶಕ್ಕೆ ಸೇರಿದವರೂ ಆದ ನಾವು | **ಅವಸಾ**—ಅನ್ನಸಂಪತ್ತಿನಿಂದ ಕೂಡಿದ | **ವಸ್ತೋಃ**—ವಾಸಸ್ಥಾನಗಳನ್ನು | **ನೂನಂ**—ಖಂಡಿತವಾಗಿಯೂ | **ವಿದ್ಯಾಮ**—ಹೊಂದುವಂತಾಗಲಿ.

|| ಭಾವಾರ್ಥ ||

ಎಲೈ ಇಂದ್ರನೇ, ಈ ರೀತಿ ಸ್ತುತನಾದ ನೀನು ನಮ್ಮ ಶತ್ರುಗಳೊಡನೆ ಹೋರಾಡುವ ಸೈನ್ಯಗಳನ್ನು ಸಂಗ್ರಾಮಗಳಲ್ಲಿ ಹುರಿದುಂಬಿಸು. ನಮ್ಮನ್ನು ಹಿಂಸಿಸುವ ಶತ್ರುಸೈನ್ಯಗಳನ್ನು ನಾಶಪಡಿಸು. ಅಥವಾ ನಮಗೆ ವಶವಾಗುವಂತೆ ಮಾಡು. ಎಲೈ ಇಂದ್ರನೇ, ನಿನ್ನನ್ನು ಸ್ತುತಿಸತಕ್ಕವರೂ, ಭರದ್ವಾಜನ ವಂಶಕ್ಕೆ ಸೇರಿದವರೂ ಆದ ನಾವು ಅನ್ನಸಂಪತ್ತಿನಿಂದ ಕೂಡಿದ ವಾಸಸ್ಥಾನಗಳನ್ನು ಖಂಡಿತವಾಗಿಯೂ ಹೊಂದುವಂತಾಗಲಿ.

## English Translation.

So (glorified by us), Indra, animate us (to overcome) our enemies in battle: overthrow our impious, malevolent (foes), and may we Bharadwajas, praising you, assuredly possess habitations, with (abundant) food.

# ಇಪ್ಪತ್ತಾರನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಶ್ರುಧೀ ನ ಇಂದ್ರೇತ್ಯಷ್ಟರ್ಚಂ ತೃತೀಯಂ ಸೂಕ್ತಂ ಭರದ್ವಾಜಸ್ಯಾರ್ಷಂ ತ್ರೈಷ್ಟುಭಮೈಂದ್ರಂ । ತಥಾ ಚಾನುಕ್ರಮ್ಯತೇ । ಶ್ರುಧೀ ನೋಽಷ್ಟಾವಿತಿ । ವಿನಿಯೋಗೋ ಲೈಂಗಿಕಃ ॥**

ಅನುವಾದವು—**ಶ್ರುಧೀ ನ ಇಂದ್ರ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು ಇದರಲ್ಲಿ ಎಂಟು ಋಕ್ಕುಗಳಿರುವುವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು ; ಇಂದ್ರನು ದೇವತೆಯು ; ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಶ್ರುಧೀ ನೋಽಷ್ಟೌ** ಎಂದು ಹೇಳಿರುವುದು. ವಿನಿಯೋಗವು ಲೈಂಗಿಕವು.

## ಸೂಕ್ತ—೨೬

ಮಂಡಲ—೬ ॥ ಅನುವಾಕ—೩ ॥ ಸೂಕ್ತ—೨೬ ॥
ಅಷ್ಟಕ—೪ ॥ ಅಧ್ಯಾಯ—೬ ॥ ವರ್ಗ—೨೧, ೨೨ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೮ ॥
॥ ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ॥
॥ ದೇವತಾ—ಇಂದ್ರಃ ॥
॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಶ್ರುಧೀ ನ ಇಂದ್ರ ಹ್ವಯಾಮಸಿ ತ್ವಾ ಮಹೋ ವಾಜಸ್ಯ ಸಾತೌ ವಾವೃಷಾಣಾಃ ।
ಸಂ ಯದ್ವಿಶೋಽಯಂತ ಶೂರಸಾತಾ ಉಗ್ರಂ ನೋಽವಃ ಪಾರ್ಯೇ ಅಹನ್ದಾಃ ॥ ೧ ॥

॥ ಪದಪಾಠಃ ॥

ಶ್ರುಧಿ । ನಃ । ಇಂದ್ರ । ಹ್ವಯಾಮಸಿ । ತ್ವಾ । ಮಹಃ । ವಾಜಸ್ಯ । ಸಾತೌ । ವವೃಷಾಣಾಃ ।
ಸಂ । ಯತ್ । ವಿಶಃ । ಅಯಂತ । ಶೂರಽಸಾತೌ । ಉಗ್ರಂ । ನಃ । ಅವಃ । ಪಾರ್ಯೇ । ಅಹನ್ । ದಾಃ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರ ವವೃಷಾಣಾಃ ಸೋಮೈಸ್ತ್ವಾಂ ಸಿಂಚಂತೋ ವಯಂ ಸ್ತೋತಾರೋ ಮಹೋ ಮಹತೋ ವಾಜಸ್ಯಾನ್ನಸ್ಯ ಸಾತೌ ಲಾಭಾರ್ಥಂ ತ್ವಾ ತ್ವಾಂ ಹ್ವಯಾಮಸಿ । ಆಹ್ವಯಾಮಃ । ಹೇ ಇಂದ್ರ**

ತ್ವಂ ನೋ೭ಸ್ಮಾಕಂ ತದಾಹ್ವಾನಂ ಶ್ರುಧಿ । ಶೃಣು । ಯದ್ಯದಾ ವಿಶೋ ಜನಾಃ ಶೂರಸಾತೌ ಯುದ್ಧೇ ಸಮಯಂತ ಸಂಗಚ್ಛಂತೇ ತದಾ ಪಾರ್ಯೇ೭ಂತಿಮೇ೭ಹನ್ನಹನಿ ದಿವಸೇ ನೋ೭ಸ್ಮಭ್ಯಮುಗ್ರಮುದ್ಗೂರ್ಣಮವೋ ರಕ್ಷಣಂ ದಾಃ । ಅದಾಃ । ಪ್ರಯಚ್ಛ ॥

॥ ಪ್ರತಿಪದಾರ್ಥ ॥

ಇಂದ್ರ— ಎಲೈ ಇಂದ್ರನೇ । **ವವೃಷಾಣಾಃ**—ಸೋಮವನ್ನು ಅರ್ಪಿಸುವ ನಾವು । **ಮಹಃ**—ಮಹತ್ತಾದ । **ವಾಜಸ್ಯ**—ಅನ್ನದ । **ಸಾತೌ**— ಲಾಭಾರ್ಥವಾಗಿ । **ತ್ವಾ**—ನಿನ್ನನ್ನು । **ಹ್ವಯಾಮಸಿ**— ಪ್ರಾರ್ಥಿಸಿ ಕರೆಯುತ್ತೇವೆ । **ನಃ**— ನಮ್ಮ ಸ್ತುತಿಯನ್ನು । **ಶ್ರುಧಿ**—ಕೇಳು । **ಪಾರೇ ಅಹನ್** – ಮುಂದಿನ ದಿನಗಳಲ್ಲಿ । **ಯತ್**—ಯಾವಾಗ । **ವಿಶಃ**—ಜನರು । **ಶೂರಸಾತೌ**—ಯುದ್ಧದಲ್ಲಿ । **ಸಂ ಅಯಂತ**—ಒಟ್ಟಿಗೆ ಸೇರುವರೋ (ಆಗ) । **ನಃ**—ನಮಗೆ । **ಉಗ್ರಂ**— ಅತ್ಯಧಿಕವಾದ ಶಕ್ತಿಯನ್ನು । **ಅವಃ**—ರಕ್ಷಣೆಯನ್ನೂ । **ದಾಃ**—ಒದಗಿಸು.

ಎಲೈ ಇಂದ್ರನೇ, ಸೋಮವನ್ನು ಅರ್ಪಿಸುವ ನಾವು ಮಹತ್ತಾದ ಅನ್ನಲಾಭಾರ್ಥವಾಗಿ ನಿನ್ನನ್ನು ಪ್ರಾರ್ಥಿಸಿ ಕರೆಯುತ್ತೇವೆ. ನಮ್ಮ ಸ್ತುತಿಯನ್ನು ಕೇಳು. ಮುಂದಿನ ದಿನಗಳಲ್ಲಿ ಯಾವಾಗ ಜನರು ಯುದ್ಧದಲ್ಲಿ ಒಟ್ಟಿಗೆ ಸೇರುವರೋ ಆಗ ನಮಗೆ ಅತ್ಯಧಿಕವಾದ ಶಕ್ತಿಯನ್ನೂ ರಕ್ಷಣೆಯನ್ನೂ ಒದಗಿಸು.

English Translation.

Hear us, Indra, when, offering libations, we call upon you for obtaining abundant food: grant us decided protection when on a future day men are assembling for battle.

॥ ಸಂಹಿತಾಪಾಠಃ ॥

ತ್ವಾಂ ವಾಜೀ ಹವತೇ ವಾಜಿನೇಯೋ ಮಹೋ ವಾಜಸ್ಯ ಗಧ್ಯಸ್ಯ ಸಾತೌ ।
ತ್ವಾಂ ವೃತ್ರೇಷ್ವಿಂದ್ರ ಸತ್ಪತಿಂ ತರುತ್ರಂ ತ್ವಾಂ ಚಷ್ಟೇ ಮುಷ್ಟಿಹಾ ಗೋಷು ಯುಧ್ಯನ್ ॥ ೨ ॥

॥ ಪದಪಾಠಃ ॥

ತ್ವಾಂ । ವಾಜೀ । ಹವತೇ । ವಾಜಿನೇಯಃ । ಮಹಃ । ವಾಜಸ್ಯ । ಗಧ್ಯಸ್ಯ । ಸಾತೌ ।
ತ್ವಾಂ । ವೃತ್ರೇಷು । ಇಂದ್ರ । ಸತ್೭ಪತಿಂ । ತರುತ್ರಂ । ತ್ವಾಂ । ಚಷ್ಟೇ । ಮುಷ್ಟಿ೭ಹಾ । ಗೋಷು । ಯುಧ್ಯನ್ ॥

॥ ಸಾಯಣಭಾಷ್ಯಂ ॥

ವಾಜೀ ಹವಿರ್ಲಕ್ಷಣಾನ್ನವಾನ್ವಾಜಿನೇಯೋ ವಾಜಿನ್ಯಾಃ ಪುತ್ರೋ ಭರದ್ವಾಜೋ ಹೇ ಇಂದ್ರ ತ್ವಾಂ ಗಧ್ಯಸ್ಯ ಸರ್ವೈಃ ಪ್ರಾಪ್ಯಸ್ಯ ಮಹೋ ಮಹತೋ ವಾಜಸ್ಯಾನ್ನಸ್ಯ ಸಾತೌ ಲಾಭೇ ನಿಮಿತ್ತೇ ಹವತೇ । ಸ್ತೌತಿ । ಅಪಿ ಚ ಹೇ ಇಂದ್ರ ಸತ್ಪತಿಂ ಸಜ್ಜನಾನಾಂ ಪಾಲಕಂ ತರುತ್ರಂ ದುರ್ಜನಾನಾಂ ತಾರಕಂ ತ್ವಾಂ ವೃತ್ರೇಷೂಪದ್ರವೇಷು ನಿಮಿತ್ತೇಷು ಭರದ್ವಾಜೋ ಹವತೇ । ಮುಷ್ಟಿಹಾ ಮುಷ್ಟಿಬಲೇನ ಶತ್ರೂಣಾಂ ಹಂತಾ ಗೋಷು ನಿಮಿತ್ತಭೂತಾಸು ಯುಧ್ಯನ್ ಶತ್ರುಭಿಃ ಸಹ ಯುದ್ಧಂ ಕುರ್ವನ್ ಭರದ್ವಾಜಸ್ತ್ವಾಂ ಚಷ್ಟೇ ಪಶ್ಯತಿ । ಪ್ರತಿಪಾಲಯತೇ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) । ವಾಜೀ—ಹವಿಸ್ಸಿನ ರೂಪದ ಅನ್ನವಂತನೂ । ವಾಜಿನೇಯಃ—ವಾಜಿನೀ ಎಂಬುವಳ ಪುತ್ರನೂ ಆದ ಭರದ್ವಾಜನು । ತ್ವಾಂ—ನಿನ್ನನ್ನು । ಗಧ್ಯಸ್ಯ—ಎಲ್ಲರಿಂದಲೂ ಅಪೇಕ್ಷಿತವಾದುದೂ । ಮಹಃ—ಮಹತ್ತಾದುದೂ ಆದ । ವಾಜಸ್ಯ—ಅನ್ನದ । ಸಾತೌ—ಲಾಭಾರ್ಥವಾಗಿ । ಹವತೇ—ಸ್ತುತಿಸುತ್ತಾನೆ (ಮತ್ತು) । ಇಂದ್ರ—ಎಲೈ ಇಂದ್ರನೇ । ಸತ್ಪತಿಂ—ಸಜ್ಜನರ ಪಾಲಕನೂ । ತರುತ್ರಂ—ದುರ್ಜನರನ್ನು ಅತಿಕ್ರಮಿಸುವನೂ ಆದ । ತ್ವಾಂ—ನಿನ್ನನ್ನು । ವೃತ್ರೇಷು—ಶತ್ರುನಾಶಕವಾದ ಯುದ್ಧದಲ್ಲಿ । ಮುಷ್ಟಿಹಾ—ಮುಷ್ಟಿಪ್ರಹಾರದಿಂದ ಶತ್ರುವನ್ನು ಕೊಲ್ಲುವವನೂ । ಗೋಷು ಯುಧ್ಯನ್—ಗೋವುಗಳ ನಿಮಿತ್ತವಾಗಿ ಯುದ್ಧ ಮಾಡುವವನೂ ಆದ ಭರದ್ವಾಜನು । ತ್ವಾಂ—ನಿನ್ನನ್ನು । ಚಷ್ಟೇ—ನಿರೀಕ್ಷಿಸುತ್ತಿರುತ್ತಾನೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಹವಿಸ್ಸಿನ ರೂಪದ ಅನ್ನವಂತನೂ ವಾಜಿನೀ ಎಂಬುವಳ ಪುತ್ರನೂ ಆದ ಭರದ್ವಾಜನು ಎಲ್ಲರಿಂದಲೂ ಅಪೇಕ್ಷಿತವಾದುದೂ, ಮಹತ್ತಾದುದೂ ಆದ ಅನ್ನದ ಲಾಭಾರ್ಥವಾಗಿ ನಿನ್ನನ್ನು ಸ್ತುತಿಸುತ್ತಾನೆ. ಎಲೈ ಇಂದ್ರನೇ, ಸಜ್ಜನರ ಪಾಲಕನೂ, ದುರ್ಜನರನ್ನು ಅತಿಕ್ರಮಿಸುವನೂ ಆದ ನಿನ್ನನ್ನು ಶತ್ರುನಾಶಕವಾದ ಯುದ್ಧದಲ್ಲಿ ಮುಷ್ಟಿಪ್ರಹಾರದಿಂದ ಶತ್ರುವನ್ನು ಕೊಲ್ಲುವವನೂ ಗೋವುಗಳ ನಿಮಿತ್ತವಾಗಿ ಯುದ್ಧಮಾಡುವವನೂ ಆದ ಭರದ್ವಾಜನು ನಿರೀಕ್ಷಿಸುತ್ತಾನೆ.

## English Translation.

The son of Vajini (Bharadwaja), offering (sacrificial) viands, invokes you for (the sake of) acquiring obtainable and abundant food : (he invokes) you, Indra, the preserver of the good, the defender (from the wicked), when enemies (assail him) : he depends upon you when, lifting up his fist, he is fighting for (his) cattle.

|| ಸಂಹಿತಾಪಾಠಃ ||

ತ್ವಂ ಕವಿಂ ಚೋದಯೋಽರ್ಕಸಾತೌ ತ್ವಂ ಕುತ್ಸಾಯ ಶುಷ್ಣಂ ದಾಶುಷೇ ವರ್ಕ್ |
ತ್ವಂ ಶಿರೋ ಅಮರ್ಮಣಃ ಪರಾಹನ್ನತಿಥಿಗ್ವಾಯ ಶಂಸ್ಯಂ ಕರಿಷ್ಯನ್ ||೩||

|| ಪದಪಾಠಃ ||

ತ್ವಂ | ಕವಿಂ | ಚೋದಯಃ | ಅರ್ಕಽಸಾತೌ | ತ್ವಂ | ಕುತ್ಸಾಯ | ಶುಷ್ಣಂ | ದಾಶುಷೇ | ವರ್ಕ್ |
ತ್ವಂ | ಶಿರಃ | ಅಮರ್ಮಣಃ | ಪರಾ | ಅಹನ್ | ಅತಿಥಿಽಗ್ವಾಯ | ಶಂಸ್ಯಂ | ಕರಿಷ್ಯನ್ || ೩ ||

|| ಸಾಯಣಭಾಷ್ಯಂ ||

ಹೇ ಇಂದ್ರ ತ್ವಮರ್ಕಸಾತಾವನ್ನಲಾಭಾರ್ಥಂ ಕವಿಂ ಭಾರ್ಗವಮೃಷಿಂ ಚೋದಯಃ | ಅಚೋದಯಃ | ಪ್ರೇರಯ | ಕಿಂಚ ಹೇ ಇಂದ್ರ ತ್ವಂ ದಾಶುಷೇ ಹವಿರ್ದತ್ತವತೇ ಕುತ್ಸಾಯ ಶುಷ್ಣಮಸುರಂ ವರ್ಕ್ | ಛೇದಿತವಾನಸಿ || ವರ್ಗಿತಿ ವೃಣಕ್ತೇಶ್ಛೇದನಾರ್ಥಸ್ಯ ಲುಙಿ ರೂಪಂ || ತಥಾ ತ್ವಮತಿಥಿಗ್ವಾಯಾತಿಥೀನಾಮಭಿಗಂತ್ರೇ ದಿವೋದಾಸಾಯ ಶಂಸ್ಯಂ ಸ್ತುತ್ಯಂ ಸುಖಂ ಕರಿಷ್ಯನ್ ಅಮರ್ಮಣೋ ಮರ್ಮಹೀನಮಾತ್ಮಾನಂ ಮನ್ಯಮಾನಸ್ಯ ಶಂಬರಸ್ಯ ಶಿರಃ ಶೀರ್ಷಂ ಪರಾಹನ್ | ಅವಧೀಃ ||

|| ಪ್ರತಿಪದಾರ್ಥ ||

(ಎಲೈ ಇಂದ್ರನೇ) | **ತ್ವಂ**—ನೀನು | **ಅರ್ಕಸಾತೌ**—ಅನ್ನಲಾಭಾರ್ಥವಾದ ಯುದ್ಧದಲ್ಲಿ | **ಕವಿಂ**—ಭಾರ್ಗವ ಋಷಿಯನ್ನು | **ಚೋದಯಃ**—ಹುರಿದುಂಬಿಸಿದೆ | **ತ್ವಂ**—ನೀನು | **ದಾಶುಷೇ**—ಹವಿಸ್ಸನ್ನರ್ಪಿಸಿದ | **ಕುತ್ಸಾಯ**—ಕುತ್ಸನಿಗೋಸ್ಕರ | **ಶುಷ್ಣಂ**—ಶುಷ್ಣನೆಂಬ ಅಸುರನನ್ನು | **ವರ್ಕ್**—ಛೇದಿಸಿದೆ | **ತ್ವಂ**—ನೀನು | **ಅತಿಥಿಗ್ವಾಯ**—ಅತಿಥಿಗಳನ್ನು ಪೂಜಿಸುವ ದಿವೋದಾಸನಿಗೆ | **ಶಂಸ್ಯಂ**—ಪ್ರಶಸ್ಯವಾದ ಸುಖವನ್ನು | **ಕರಿಷ್ಯನ್**—ಉಂಟುಮಾಡಬೇಕೆಂದಿಚ್ಛಿಸಿ | **ಅಮರ್ಮಣಃ**—ತಾನು ಅಪ್ರತಿಹತನೆಂಬ ಅಭಿಮಾನದಿಂದ ಕೂಡಿದ ಶಂಬರಾಸುರನ | **ಶಿರಃ**—ಶಿರಸ್ಸನ್ನು | **ಪರಾಹನ್**—ಕತ್ತರಿಸಿದೆ.

|| ಭಾವಾರ್ಥ ||

ಎಲೈ ಇಂದ್ರನೇ, ನೀನು ಅನ್ನಲಾಭಾರ್ಥವಾದ ಯುದ್ಧದಲ್ಲಿ ಭಾರ್ಗವ ಋಷಿಯನ್ನು ಹುರಿದುಂಬಿಸಿದೆ. ಹವಿಸ್ಸನ್ನರ್ಪಿಸಿದ ಕುತ್ಸನಿಗಾಗಿ ಶುಷ್ಣನೆಂಬ ಅಸುರನನ್ನು ಛೇದಿಸಿದೆ. ಅತಿಥಿಗಳನ್ನು ಪೂಜಿಸುವ ದಿವೋದಾಸನಿಗೆ ಪ್ರಶಸ್ಯವಾದ ಸುಖವನ್ನು ಉಂಟುಮಾಡಬೇಕೆಂದು ಅಪೇಕ್ಷಿಸಿ ತಾನು ಅಪ್ರತಿಹತನೆಂಬ ದುರಭಿಮಾನದಿಂದ ಕೂಡಿದ ಶಂಬರಾಸುರನ ಶಿರಸ್ಸನ್ನು ಕತ್ತರಿಸಿದೆ.

## English Translation.

You have animated the sage with (the hope of) obtaining food : you have cut to pieces Sushna for Kutsa, the donor of the oblation : you have struck off the head (of Sambara), imagining himself invulnerable, intending to give pleasure to Atithigvan.

॥ ವಿಶೇಷವಿಷಯಗಳು ॥

ಕುತ್ಸನ ವಿಷಯವನ್ನು ಇದೇ ಭಾಗದ 694-696 ಪುಟಗಳಲ್ಲಿಯೂ ಶುಷ್ಣ—636 ಮತ್ತು 724 ನೆಯ ಪುಟಗಳಲ್ಲಿಯೂ, ದಿವೋದಾಸ—ಭಾಗ 9 ಪುಟ 467 ರಲ್ಲಿಯೂ, ಶಂಬರ ಇದೇ ಭಾಗದ 687 ಮತ್ತು ಭಾಗ 5—694 ; 8—274 ; 10—550 ರಲ್ಲಿಯೂ ವಿವರಿಸಲಾಗಿದೆ.

॥ ಸಂಹಿತಾಪಾಠಃ ॥

ತ್ವಂ ರಥಂ ಪ್ರ ಭರೋ ಯೋಧಮೃಷ್ವಮಾವೋ ಯುಧ್ಯಂತಂ ವೃಷಭಂ ದಶದ್ಯುಂ ।
ತ್ವಂ ತುಗ್ರಂ ವೇತಸವೇ ಸಚಾಹನ್ತ್ವಂ ತುಜಿಂ ಗೃಣಂತಮಿಂದ್ರ ತೂತೋಃ ॥

॥ ಪದಪಾಠಃ ॥

ತ್ವಂ । ರಥಂ । ಪ್ರ । ಭರಃ । ಯೋಧಂ । ಋಷ್ವಂ । ಆವಃ । ಯುಧ್ಯಂತಂ । ವೃಷಭಂ । ದಶಽದ್ಯುಂ ।
ತ್ವಂ । ತುಗ್ರಂ । ವೇತಸ್ವೇ । ಸಚಾ । ಅಹನ್ । ತ್ವಂ । ತುಜಿಂ । ಗೃಣಂತಂ । ಇಂದ್ರ । ತೂತೋರಿತಿ ತೂತೋಃ ॥ ೪ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ವೃಷಭಸಂಜ್ಞಕಾಯ ರಾಜ್ಞೇ ಯೋಧಂ ಯುದ್ಧಸಾಧನಮೃಷ್ವಂ ಮಹಾಂತಂ ರಥಂ ಪ್ರ ಭರಃ । ಪ್ರಾಪಯಃ । ಅಪಿ ಚ ಯುಧ್ಯಂತಂ ಶತ್ರುಭಿಃ ಸಹ ಯುದ್ಧಂ ಕುರ್ವಂತಂ ದಶದ್ಯುಂ ದಶ ದಿವಸಾ ಯುಧ್ಯತೋ ಯಸ್ಯ ಗತಾಸ್ತಂ ವೃಷಭಮೇತದಾಖ್ಯಂ ರಾಜಾನಮಾವಃ । ಯುದ್ಧಾದರಕ್ಷಃ । ಕಿಂಚ ತ್ವಂ ವೇತಸವ ಏತನ್ನಾಮ್ನೇ ರಾಜ್ಞೇ ಸಚಾ ಸಹಾಯಭೂತಃ ಸನ್ ತುಗ್ರಮಸುರಮಹನ್ । ಹತವಾನಸಿ । ವೇತಸುರ್ನಾಮ ಕಶ್ಚಿದಸುರಃ । ಅತ್ರ ತಸ್ಮಾದನ್ಯೋಽಸಾವುಚ್ಯತೇ । ಯದ್ವಾ । ವೇತಸವ ಇತಿ ತೃತೀಯಾರ್ಥೇ ಚತುರ್ಥೀ । ವೇತಸುನಾಸುರೇಣ ಸಹಿತಂ ತುಗ್ರಂ ಹತವಾನಸಿ । ತಥಾ ಚ

**ಮಂತ್ರಾಂತರೇ ಶ್ರೂಯತೇ । ಅಹಂ ಪಿತೇವ ವೇತಸೂಁರಭಿಷ್ಟಯೇ ತುಗ್ರಂ ಕುತ್ಸಾಯ ಸ್ಮದಿಭಂ ಚ ರಂಧಯಂ । ಋಗ್ವೇ. ೧೦-೪೯-೪ । ಇತಿ ॥ ಹೇ ಇಂದ್ರ ತ್ವಂ ಗೃಣಂತಂ ತ್ವಾಂ ಸ್ತುವಂತಂ ತುಜಮೇತದಾಖ್ಯಂ ರಾಜಾನಂ ತೂತೋಃ । ಅವರ್ಧಯಃ ॥**

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ತ್ವಂ**—ನೀನು । **ಯೋಧಂ**—ಯುದ್ಧಸಾಧನವಾದುದೂ । **ಋಷ್ವಂ**—ಮಹತ್ತಾದುದೂ ಆದ । **ರಥಂ**—ರಥವನ್ನು । **ಪ್ರ ಭರಃ**—(ವೃಷಭನೆಂಬ ರಾಜನಿಗೆ) ಒದಗಿಸಿದೆ । **ದಶದ್ಯುಂ**—ಹತ್ತು ದಿವಸಗಳ ಕಾಲ । **ಯುಧ್ಯಂತಂ**—ಯುದ್ಧಮಾಡುತ್ತಿದ್ದ । **ವೃಷಭಂ**—ಅದೇ ವೃಷಭನನ್ನು । **ಆವಃ**—ರಕ್ಷಿಸಿದೆ । **ತ್ವಂ**—ನೀನು । **ವೇತಸವೇ**—ವೇತಸುವೆಂಬ ರಾಜನಿಗೆ । **ಸಚಾ**—ಸಹಾಯಮಾಡುವವನಾಗಿದ್ದು । **ತುಗ್ರಂ**—ತುಗ್ರನೆಂಬ ಅಸುರನನ್ನು । **ಅಹನ್**—ಕೊಂದಿರುವೆ । **ಇಂದ್ರ**—ಎಲೈ ಇಂದ್ರನೇ । **ತ್ವಂ**—ನೀನು । **ಗೃಣಂತಂ**—ನಿನ್ನನ್ನು ಸ್ತುತಿಸುವ । **ತುಜಂ**—ತುಜನೆಂಬ ರಾಜನನ್ನು । **ತೂತೋಃ**—ಪ್ರವೃದ್ಧನನ್ನಾಗಿ ಮಾಡಿದೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಯುದ್ಧಸಾಧನವಾದುದೂ, ಮಹತ್ತಾದುದೂ ಆದ ರಥವನ್ನು ವೃಷಭನೆಂಬ ರಾಜನಿಗೆ ಒದಗಿಸಿದೆ. ಹತ್ತು ದಿವಸಗಳ ಕಾಲ ಯುದ್ಧಮಾಡುತ್ತಿದ್ದ ಅದೇ ವೃಷಭನನ್ನು ರಕ್ಷಿಸಿದೆ. ನೀನು ವೇತಸುವೆಂಬ ರಾಜನಿಗೆ ಸಹಾಯಮಾಡುವವನಾಗಿದ್ದು ಅವನಿಗಾಗಿ ತುಗ್ರನೆಂಬ ಅಸುರನನ್ನು ಕೊಂದಿರುವೆ. ಎಲೈ ಇಂದ್ರನೇ, ನೀನು ನಿನ್ನನ್ನು ಸ್ತುತಿಸುವ ತುಜನೆಂಬ ರಾಜನನ್ನು ಪ್ರವೃದ್ಧನನ್ನಾಗಿ ಮಾಡಿದೆ.

## English Translation.

You have brought to Vrishabha a great war-chariot; you have protected him warring for ten days: you have slain Tugra along with Vetasu: you have exalted Tuji glorifying you.

॥ ವಿಶೇಷವಿಷಯಗಳು ॥

**ವೃಷಭಂ**—ಭಾಷ್ಯಕಾರರು ವೃಷಭ ಎಂಬ ರಾಜನನ್ನು ಎಂದು ಅರ್ಥಮಾಡಿದಾರೆ ಈ ರಾಜನು ಯಾರು? ಇವನ ವಿಷಯವೇನು ಎಂಬುದು ಗೊತ್ತಾಗುವಂತಿಲ್ಲ.

**ಶಂಬರಂ**—ಇವನ ವಿಷಯವು 687 ನೇ ಪುಟದಲ್ಲಿಯೂ, 5—694, 8—274, 10—550 ರಲ್ಲಿಯೂ ವಿವರಿಸಲ್ಪಟ್ಟಿದೆ.

**ದಿವೋದಾಸಂ**—ಇವನ ವಿಷಯವೂ ಋ. ಸಂ. ಭಾಗ 9 ಪುಟ 467 ರಲ್ಲಿ ವಿವೃತವಾಗಿದೆ.

॥ ಸಂಹಿತಾಪಾಠಃ ॥

ತ್ವಂ ತದುಕ್ಥಮಿಂದ್ರ ಬರ್ಹಣಾ ಕಃ ಪ್ರ ಯಚ್ಛತಾ ಸಹಸ್ರಾ ಶೂರ ದರ್ಷಿ ।
ಅವ ಗಿರೇರ್ದಾಸಂ ಶಂಬರಂ ಹನ್ಪ್ರಾವೋ ದಿವೋದಾಸಂ ಚಿತ್ರಾಭಿರೂತೀ॥೫॥

॥ ಪದಪಾಠಃ ॥

ತ್ವಂ । ತತ್ । ಉಕ್ಥಂ । ಇಂದ್ರ । ಬರ್ಹಣಾ । ಕರಿತಿ ಕಃ। ಪ್ರ । ಯತ್ । ಶತಾ । ಸಹಸ್ರಾ। ಶೂರ। ದರ್ಷಿ ।
ಅವ । ಗಿರೇಃ । ದಾಸಂ । ಶಂಬರಂ । ಹನ್ । ಪ್ರ । ಆವಃ । ದಿವಃऽದಾಸಂ । ಚಿತ್ರಾಭಿಃ । ಊತೀ ॥ ೫ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಬರ್ಹಣಾ ಬರ್ಹಣಃ ಶತ್ರೂಣಾಂ ಹಿಂಸಕಸ್ತ್ವಮುಕ್ಥಂ ಪ್ರಶಸ್ಯಂ ತತ್ಕರ್ಮ ಕಃ । ಅಕರೋಃ । ಕಿಂ ತತ್ಕರ್ಮೇತ್ಯುಚ್ಯತೇ । ಹೇ ಶೂರ ವೀರೇಂದ್ರ ತ್ವಂ ಶತಾ ಶತಾನಿ ಸಹಸ್ರಾ ಸಹಸ್ರಾಣಿ ಚ ಶಂಬರಸ್ಯಾನುಚರಾನ್ ಭಟಾನ್ಪ್ರ ದರ್ಷಿ। ವಿದಾರಿತವಾನಸಿ। ತಥಾ ಚ ನಿಗಮಾಂತರೇ। ಅಧ್ವರ್ಯವೋ ಯಃ ಶತಂ ಶಂಬರಸ್ಯ । ಋಗ್ವೇ. ೨-೧೪-೬ । ಇತಿ ॥ ತಥಾ ತ್ವಂ ದಾಸಂ ಯಜ್ಞಾದಿಕರ್ಮಣಾಮುಪಕ್ಷಪಯಿತಾರಂ ಗಿರೇಃ ಪರ್ವತಾನ್ನಿರ್ಗತಂ ಶಂಬರಮಸುರಮವ ಹನ್ । ಅವಾವಧೀಃ । ತಥಾಪಿ ಶ್ರೂಯತೇ । ಯಃ ಶಂಬರಂ ಪರ್ವತೇಷು ಕ್ಷಿಯಂತಂ । ಋಗ್ವೇ. ೨-೧೨-೧೧ । ಇತಿ । ಕಿಂಚ ಚಿತ್ರಾಭಿರ್ವಿಚಿತ್ರಾಭಿರೂತೀ ಊತಿಭೀ ರಕ್ಷಾಭಿರ್ದಿವೋದಾಸಂ ರಾಜಾನಂ ಪ್ರಾವಃ। ಪ್ರಕರ್ಷೇಣ ಪಾಲಯಸಿ ಸ್ಮ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಬರ್ಹಣಾ**—ಶತ್ರುಹಿಂಸಕನಾದ । **ತ್ವಂ**—ನೀನು । **ಉಕ್ಥಂ**—ಪ್ರಶಸ್ಯವಾದ । **ತತ್**—ಅನೇಕ ಕರ್ಮಗಳನ್ನು । **ಕಃ**—ಮಾಡಿದ್ದೀಯೆ । **ಯತ್**—ಯಾವುದೆಂದರೆ । **ಶೂರ**—ಪರಾಕ್ರಮಿಯಾದ ಎಲೈ ಇಂದ್ರನೇ । **ಶತಾ**—ಶತಸಂಖ್ಯಾಕವೂ । **ಸಹಸ್ರಾ**—ಸಹಸ್ರಸಂಖ್ಯಾಕವೂ ಆದ ಶಂಬರನ ಅನುಚರರನ್ನು । **ಪ್ರ ದರ್ಷಿ**—ಸೀಳಿಹಾಕಿರುವೆ । **ದಾಸಂ**—ಕರ್ಮಹಿಂಸಕನೂ । **ಗಿರೇಃ**—ಪರ್ವತದಿಂದ ಹೊರಹೊರಟವನೂ ಆದ । **ಶಂಬರಂ**—ಶಂಬರನೆಂಬ ಅಸುರನನ್ನು । **ಅವಾ ಹನ್**—ಕೊಂದಿರುವೆ । **ಚಿತ್ರಾಭಿಃ**—ಅನೇಕ ವಿಧವಾದ । **ಊತೀ**—ರಕ್ಷಣೆಗಳಿಂದ । **ದಿವೋದಾಸಂ**—ದಿವೋದಾಸನೆಂಬ ರಾಜನನ್ನು । **ಪ್ರಾವಃ**—ರಕ್ಷಿಸಿರುವೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಶತ್ರುಹಿಂಸಕನಾದ ನೀನು ಪ್ರಶಸ್ಯವಾದ ಅನೇಕ ಕರ್ಮಗಳನ್ನು ಮಾಡಿದ್ದೀಯೆ. ಅವು ಯಾವುವೆಂದರೆ—ಪರಾಕ್ರಮಿಯಾದ ಎಲೈ ಇಂದ್ರನೇ, ನೀನು ಶತಸಂಖ್ಯಾಕವೂ ಸಹಸ್ರಸಂಖ್ಯಾಕವೂ ಆದ ಶಂಬರನ ಅನುಚರರನ್ನು ಸೀಳಿ ಹಾಕಿರುವೆ. ಕರ್ಮಹಿಂಸಕನೂ, ಪರ್ವತದಿಂದ ಹೊರಹೊರಟವನೂ ಆದ ಶಂಬರನೆಂಬ ಅಸುರನನ್ನು ಕೊಂದಿರುವೆ. ಅನೇಕವಿಧವಾದ ರಕ್ಷಣೆಗಳಿಂದ ದಿವೋದಾಸನೆಂಬ ರಾಜನನ್ನು ರಕ್ಷಿಸಿರುವೆ.

## English Translation.

Indra, you are the subduer (of foes), you have achieved a glorious (deed), inasmuch as you have scattered, hero, the hundreds and thousands (of the host of Sambara), have slain the slave Sambara (when issuing) from the mountain, and have protected Divodasa with marvellous protections.

॥ ವಿಶೇಷವಿಷಯಗಳು ॥

ಶಂಬರಂ ದಿವೋದಾಸಂ—ಹಿಂದಿನ ಋಕ್ಕನ್ನು ನೋಡಿ.

॥ ಸಂಹಿತಾಪಾಠಃ ॥

ತ್ವಂ ಶ್ರದ್ಧಾಭಿರ್ಮಂದಸಾನಃ ಸೋಮೈರ್ದಭೀತಯೇ ಚುಮುರಿಮಿಂದ್ರ ಸಿಷ್ವಪ್ ।
ತ್ವಂ ರಜಿಂ ಪಿಠೀನಸೇ ದಶಸ್ಯನ್ಷಷ್ಟಿಂ ಸಹಸ್ರಾ ಶಚ್ಯಾ ಸಚಾಹನ್ ॥ ೬ ॥

॥ ಪದಪಾಠಃ ॥

ತ್ವಂ । ಶ್ರದ್ಧಾಭಿಃ । ಮಂದಸಾನಃ । ಸೋಮೈಃ । ದಭೀತಯೇ । ಚುಮುರಿಂ । ಇಂದ್ರ । ಸಿಸ್ವಪ್ ।
ತ್ವಂ । ರಜಿಂ । ಪಿಠೀನಸೇ । ದಶಸ್ಯನ್ । ಷಷ್ಟಿಂ । ಸಹಸ್ರಾ । ಶಚ್ಯಾ । ಸಚಾ । ಅಹನ್ ॥ ೬ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಶ್ರದ್ಧಾಭಿಃ ಶ್ರದ್ಧಾಪುರಃಸರಮಾದರಾತಿಶಯೇನಾನುಷ್ಠಿತೈಃ ಕರ್ಮಭಿರ್ಮಂದಸಾನೋ. ಮೋದಮಾನಃ । ಯಚ್ಛ್ರದ್ಧಯಾ ಯುಕ್ತಂ ಕರ್ಮ ತತ್ಸಾರವದ್ಭವತಿ । ತಥಾ ಚ ಶ್ರೂಯತೇ । ಯದೇವ ವಿದ್ಯಯಾ ಕರೋತಿ ಶ್ರದ್ಧಯೋಪನಿಷದಾ ತದೇವ ವೀರ್ಯವತ್ತರಂ ಭವತಿ । ಛಾಂ. ಉ. ೧-೧-೧೦ । ಇತಿ । ಸೋಮೈಶ್ಚ ಮಂದಸಾನಸ್ತ್ವಂ ದಭೀತಯ ಏತನ್ನಾಮಕಾಯ ರಾಜರ್ಷಯೇ ಚುಮುರಿಮೇತದಾಖ್ಯಮಸುರಂ ಸಿಷ್ವಪ್ । ಅಸ್ವಾಪಯಃ । ಅವಧೀರಿತ್ಯರ್ಥಃ । ಕಿಂಚ ಹೇ ಇಂದ್ರ ತ್ವಂ ಪಿಠೀನಸ ಏತನ್ನಾಮಕಾಯ ರಜಿಮೇತದಾಖ್ಯಾಂ ಕನ್ಯಾಂ ವಾ ರಾಜ್ಯಂ ವಾ ದಶಸ್ಯನ್ ಪ್ರಯಚ್ಛನ್ ಶಚ್ಯಾ ಪ್ರಜ್ಞಯಾ ಷಷ್ಟಿಂ ಷಷ್ಟಿಸಂಖ್ಯಾಕಾನಿ ಸಹಸ್ರಾ ಭಟಾನಾಂ ಸಹಸ್ರಾಣಿ ಸಚಾ ಸಹ ಯುಗಪದೇವಾಹನ್ । ಅವಧೀಃ ॥

|| ಪ್ರತಿಪದಾರ್ಥ ||

**ಇಂದ್ರ**—ಎಲೈ ಇಂದ್ರನೇ | **ಶ್ರದ್ಧಾಭಿಃ**—ಶ್ರದ್ಧಾಪೂರ್ವಕವಾದ ಕರ್ಮಗಳಿಂದಲೂ | **ಸೋಮ್ಯೈಃ**—ಸೋಮರಸಗಳಿಂದಲೂ | **ಮಂದಸಾನಃ**—ತೃಪ್ತಿಗೊಂಡವನಾಗಿ | **ತ್ವಂ**—ನೀನು | **ದಭೀತಯೇ**—ದಭೀತಿಯೆಂಬ ರಾಜರ್ಷಿಗಾಗಿ | **ಚುಮುರಿಂ**—ಚುಮುರಿಯೆಂಬ ಅಸುರನನ್ನು | **ನಿಷ್ವಪ್**—ದೀರ್ಘನಿದ್ರೆಯನ್ನು ಹೊಂದುವಂತೆ ಮಾಡಿದೆ | **ತ್ವಂ**—ನೀನು | **ಪಿಠೀನಸೇ**—ಪಿಠೀನಸನೆಂಬುವನಿಗೆ | **ರಜಿಂ**—ರಜಿಯೆಂಬ ಕನ್ಯೆಯನ್ನು | **ದಶಸ್ಯನ್**—ಕೊಡಲಿಚ್ಛಿಸಿ | **ಶಚ್ಯಾ**—ನಿನ್ನ ಪ್ರಜ್ಞೆಯಿಂದ | **ಷಷ್ಟಿಂ ಸಹಸ್ರಾ**—ಅರವತ್ತು ಸಹಸ್ರಸಂಖ್ಯೆಯುಳ್ಳ ಯೋಧರನ್ನು | **ಸಚಾ**—ಒಂದೇ ಕಾಲದಲ್ಲಿ | **ಅಹನ್**—ನಾಶಪಡಿಸಿಡೆ.

|| ಭಾವಾರ್ಥ ||

ಎಲೈ ಇಂದ್ರನೇ, ಶ್ರದ್ಧಾಪೂರ್ವಕವಾದ ಕರ್ಮಗಳಿಂದಲೂ ಸೋಮರಸಗಳಿಂದಲೂ ತೃಪ್ತಿಗೊಂಡವನಾಗಿ ನೀನು ದಭೀತಿಯೆಂಬ ರಾಜರ್ಷಿಗಾಗಿ ಚುಮುರಿಯೆಂಬ ಅಸುರನನ್ನು ಸಾಯಿಸಿದೆ. ಪಿಠೀನಸನೆಂಬುವನಿಗೆ ರಜಿಯೆಂಬ ಕನ್ಯೆಯನ್ನು ಕೊಡಲಿಚ್ಛಿಸಿ ನಿನ್ನ ಪ್ರಜ್ಞೆಯಿಂದ ಅರವತ್ತು ಸಹಸ್ರಸಂಖ್ಯೆಯುಳ್ಳ ಯೋಧರನ್ನು ಒಂದೇ ಕಾಲದಲ್ಲಿ ನಾಶಪಡಿಸಿದೆ

English Translation.

Delighted by libations offered with faith, you have consigned Chumuri to the sleep (of death) on behalf of Dabhiti, and bestowing (the maiden) Raji upon Pithinas, you have, by your contrivance, destroyed sixty thousand (warriors) at once.

|| ವಿಶೇಷವಿಷಯಗಳು ||

**ದಭೀತಿ**—ಇದೇ ಭಾಗದ 738ನೇ ಪುಟವನ್ನು ನೋಡಿ.

**ಚುಮುರಿ**—ಇದೇ ಭಾಗದ 687ನೇ ಪುಟವನ್ನು ನೋಡಿ.

**ಪಿಠೀನಸೇ ರಜಿಂ**—ಈ ಹೆಸರುಗಳು ಋಗ್ವೇದದಲ್ಲಿ ಈ ಋಕ್ಕಿನಲ್ಲಲ್ಲದೆ ಮತ್ತೆಲ್ಲಿಯೂ ಇಲ್ಲವಾದ್ದರಿಂದ ಇವರ ವಿಷಯವಾಗಿ ಹೆಚ್ಚಾಗಿ ಯಾವ ಸಂಗತಿಯೂ ತಿಳಿಯುವಂತಿಲ್ಲ. ಭಾಷ್ಯಕಾರರು ಪಿಠೀನಸ್ ಎಂಬುವನ್ನು ಇಂದ್ರನಿಗೆ ಸ್ನೇಹಿತನಾದ ಓರ್ವ ಮನುಷ್ಯನೆಂದೂ ಇವನಿಗೆ ಸಹಾಯಮಾಡುವುದಕ್ಕಾಗಿ ರಜಿ ಎಂಬ ಕನ್ಯೆಯನು ಅವನಿಗೆ ಒದಗಿಸಿಕೊಟ್ಟನೆಂದೂ ವಿವರಣೆಮಾಡಿದ್ದಾರೆ.

|| ಸಂಹಿತಾಪಾಠಃ ||

ಅಹಂ ಚನ ತತ್ಸೂರಿಭಿರಾನಶ್ಯಾಂ ತವ ಜ್ಯಾಯ ಇಂದ್ರ ಸುಮ್ನಮೋಜಃ |

ತ್ವಯಾ ಯತ್ಸ್ತವಂತೇ ಸಧವೀರ ವೀರಾಸ್ತ್ರಿವರೂಥೇನ ನಹುಷಾ ಶವಿಷ್ಠ ||೭||

॥ ಪದಪಾಠಃ ॥

ಅಹಂ । ಚನ । ತತ್ । ಸೂರಿऽಭಿಃ । ಆನಶ್ಯಾಂ । ತವ । ಜ್ಯಾಯಃ । ಇಂದ್ರ । ಸುಮ್ನಂ । ಓಜಃ ।

ತ್ವಯಾ । ಯತ್ । ಸ್ತವಂತೇ । ಸಧ್ಽವೀರ । ವೀರಾಃ । ತ್ರಿಽವರೂಥೇನ । ನಹುಷಾ । ಶವಿಷ್ಠ ॥ ೭ ॥

॥ ಸಾಯಣಭಾಷ್ಯಂ ॥

ಹೇ ಸಧವೀರ ವೀರೈಃ ಸಹಿತ ಶವಿಷ್ಠ ಬಲವತ್ತಮೇಂದ್ರ ವೀರಾಃ ಸ್ತೋತಾರಸ್ತ್ರಿವರೂಥೇನ । ತ್ರೀಣಿ ವರೂಥಾನ್ಯಾವರಕಾಣಿ ಭುವನಾನಿ ಯಸ್ಯ ತೇನ । ನಹುಷಾ ಶತ್ರೂಣಾಂ ಬಂಧಕೇನ ತ್ವಯಾ ದತ್ತಂ ಯತ್ಸುಮ್ನಂ ಸುಖಮೋಜೋ ಬಲಂ ಚ ಸ್ತವಂತೇ ಸ್ತುವಂತಿ ಹೇ ಇಂದ್ರ ತವ ತ್ವಯಾ ದತ್ತಂ ಜ್ಯಾಯೋಽತಿಶಯೇನ ಪ್ರಶಸ್ಯಂ ತತ್ಸುಮ್ನಮೋಜೋಽಹಂ ಚನಾಹಮಪಿ ಭರದ್ವಾಜೋ ಸೂರಿಭಿರ್ಮದೀಯೈಃ ಸ್ತೋತೃಭಿಃ ಸಹಾನಶ್ಯಾಂ । ಪ್ರಾಪ್ನುಯಾಂ ॥

॥ ಪ್ರತಿಪದಾರ್ಥ ॥

**ಸಧವೀರ**—ವೀರರೊಡನೆ ಕೂಡಿದವನೂ । **ಶವಿಷ್ಠ**—ಅತ್ಯಂತ ಬಲಶಾಲಿಯೂ ಆದ ಎಲೈ ಇಂದ್ರನೇ । **ತ್ರಿವರೂಥೇನ**—ತ್ರಿಲೋಕರಕ್ಷಕನೂ । **ನಹುಷಾ**—ಶತ್ರುಗಳನ್ನು ಬಂಧಿಸುವವನೂ ಆದ । **ತ್ವಯಾ**—ನಿನ್ನಿಂದ ದತ್ತವಾದ । **ಯತ್**—ಯಾವ । **ಸುಮ್ನಂ**—ಸುಖವನ್ನೂ । **ಓಜಃ**—ಬಲವನ್ನೂ । **ವೀರಾಃ**—ಸ್ತೋತೃಗಳು । **ಸ್ತವಂತೇ**—ಸ್ತುತಿಸುತ್ತಾರೆಯೋ । **ಇಂದ್ರ**—ಎಲೈ ಇಂದ್ರನೇ । **ತವ**—ನಿನ್ನಿಂದ ಕೊಡಲ್ಪಟ್ಟುದೂ । **ಜ್ಯಾಯಃ**—ಪ್ರಶಸ್ಯವಾದುದೂ ಆದ । **ತತ್**—ಅದೇ ಸುಖವನ್ನೂ ಬಲವನ್ನೂ । **ಅಹಂ ಚನ**—ನಾನೂ ಸಹ । **ಸೂರಿಭಿಃ**—ನನ್ನೊಡನಿರುವ ಸ್ತೋತೃಗಳೊಡನೆ । **ಆನಶ್ಯಾಂ**—ಹೊಂದುವಂತಾಗಲಿ.

॥ ಭಾವಾರ್ಥ ॥

ವೀರರೊಡನೆ ಕೂಡಿದವನೂ ಅತ್ಯಂತ ಬಲಶಾಲಿಯೂ ಆದ ಎಲೈ ಇಂದ್ರನೇ, ತ್ರಿಲೋಕರಕ್ಷಕನೂ, ಶತ್ರುಗಳನ್ನು ಬಂಧಿಸುವವನೂ ಆದ ನಿನ್ನಿಂದ ದತ್ತವಾದ ಯಾವ ಸುಖವನ್ನೂ ಬಲವನ್ನೂ ಸ್ತೋತೃಗಳು ಸ್ತುತಿಸುತ್ತಾರೆಯೋ ಎಲೈ ಇಂದ್ರನೇ, ನಿನ್ನಿಂದ ಕೊಡಲ್ಪಟ್ಟುದೂ, ಪ್ರಶಸ್ಯವಾದುದೂ ಆದ ಅದೇ ಸುಖವನ್ನೂ ಬಲವನ್ನೂ ನಾನೂ ಮತ್ತು ನನ್ನೊಡನಿರುವ ಇತರ ಸ್ತೋತೃಗಳೂ ಹೊಂದುವಂತಾಗಲಿ.

## English Translation.

May I, with my fellow-worshippers, obtain that your most excellent felicity and vigour, which, most might Indra, associate of heroes, the pious celebrate (as bestowed) by you, who are the humiliator (of foes), the protector of the three (worlds).

॥ ಸಂಹಿತಾಪಾಠಃ ॥

ವಯಂ ತೇ ಅಸ್ಯಾಮಿಂದ್ರ ದ್ಯುಮ್ನಹೂತೌ ಸಖಾಯಃ ಸ್ಯಾಮ ಮಹಿನ ಪ್ರೇಷ್ಠಾಃ ।
ಪ್ರಾತರ್ದನಿಃ ಕ್ಷತ್ರಶ್ರೀರಸ್ತು ಶ್ರೇಷ್ಠೋ ಘನೇ ವೃತ್ರಾಣಾಂ ಸನಯೇ ಧನಾನಾಂ ॥ ೮ ॥

॥ ಪದಪಾಠಃ ॥

ವಯಂ । ತೇ । ಅಸ್ಯಾಂ । ಇಂದ್ರ । ದ್ಯುಮ್ನಽಹೂತೌ । ಸಖಾಯಃ । ಸ್ಯಾಮ । ಮಹಿನ । ಪ್ರೇಷ್ಠಾಃ । ಪ್ರಾತರ್ದನಿಃ । ಕ್ಷತ್ರಽಶ್ರೀಃ । ಅಸ್ತು । ಶ್ರೇಷ್ಠಃ । ಘನೇ । ವೃತ್ರಾಣಾಂ । ಸನಯೇ । ಧನಾನಾಂ ॥ ೮ ॥

॥ ಸಾಯಣಭಾಷ್ಯಂ ॥

ಹೇ ಮಹಿನ ಪೂಜನೀಯೇಂದ್ರ ತೇ ತ್ವದರ್ಥಂ ಸಖಾಯಃ ಸ್ತೋತಾರೋ ವಯಮಸ್ಯಾಂ ದ್ಯುಮ್ನಹೂತಾವಸ್ಮಿನ್ಧನನಿಮಿತ್ತೇ ಸ್ತೋತ್ರೇ ಪ್ರೇಷ್ಠಾ ಅತಿಶಯೇನ ಪ್ರಿಯಾಃ ಸ್ಯಾಮ । ಭವೇಮ । ಪ್ರಾತರ್ದನಿಃ । ಪ್ರತರ್ದನೋ ನಾಮ ರಾಜಾ । ತಸ್ಯ ಪುತ್ರಃ ಕ್ಷತ್ರಶ್ರೀರೇತನ್ನಾಮಕೋ ಮಮ ಯಾಜ್ಯೋ ರಾಜಾ ಶ್ರೇಷ್ಠೋಽಸ್ತು । ಸರ್ವೇಷಾಮುತ್ಕೃಷ್ಟೋ ಭವತು । ಕಿಮರ್ಥಂ । ವೃತ್ರಾಣಾಂ ಶತ್ರೂಣಾಂ ಘನೇ ವಧಾಯ ಚ ಧನಾನಾಂ ವಸೂನಾಂ ಸನಯೇ ಸಂಭಜನಾಯ ಚ ಶ್ರೇಷ್ಠೋಽಸ್ತ್ವಿತಿ ಸಂಬಂಧಃ ॥

॥ ಪ್ರತಿಪದಾರ್ಥ ॥

**ಮಹಿನ**—ಪೂಜ್ಯನಾದ । **ಇಂದ್ರ**—ಎಲೈ ಇಂದ್ರನೇ । **ತೇ**—ನಿನ್ನ । **ಸಖಾಯಃ**—ಸುಹೃತ್ತುಗಳಾದ । **ವಯಂ**—ನಾವು । **ಅಸ್ಯಾಂ ದ್ಯುಮ್ನಹೂತೌ**—ಧನಾರ್ಥವಾದ ಈ ಸ್ತೋತ್ರಕಾಲದಲ್ಲಿ । **ಪ್ರೇಷ್ಠಾಃ**—ನಿನಗೆ ಅತ್ಯಂತ ಪ್ರಿಯತಮರಾಗಿ । **ಸ್ಯಾಮ**—ಆಗಿರುವಂತಾಗಲಿ । **ವೃತ್ರಾಣಾಂ**—ಶತ್ರುಗಳ । **ಘನೇ**—ನಾಶಕ್ಕಾಗಿಯೂ । **ಧನಾನಾಂ**—ಧನಗಳ । **ಸನಯೇ**—ಪ್ರಾಪ್ತಿಗಾಗಿಯೂ । **ಪ್ರಾತರ್ದನಿಃ**—ಪ್ರತರ್ದನನ ಪುತ್ರನಾದ । **ಕ್ಷತ್ರಶ್ರೀಃ**—ಕ್ಷತ್ರಶ್ರೀ ಎಂಬ ದೊರೆಯು । **ಶ್ರೇಷ್ಠಃ ಅಸ್ತು**—ಎಲ್ಲರಿಗಿಂತಲೂ ಉತ್ಕೃಷ್ಟನಾಗಿರಲಿ.

॥ [illegible] ॥

ಪೂಜ್ಯನಾದ ಎಲೈ ಇಂದ್ರನೇ, ನಿನ್ನ ಸ್ನೇಹಿತರಾದ ನಾವು ಧನಾರ್ಥವಾಗಿ ಮಾಡುವ ಈ ಸ್ತೋತ್ರಕಾಲದಲ್ಲಿ ನಿನಗೆ ಅತ್ಯಂತ ಪ್ರಿಯತಮರಾಗಿ ಆಗಿರುವಂತಾಗಲಿ. ಶತ್ರುಗಳ ನಾಶಕ್ಕಾಗಿಯೂ, ಧನಗಳ ಪ್ರಾಪ್ತಿಗಾಗಿಯೂ ಪ್ರತರ್ದನನ ಪುತ್ರನಾದ ಕ್ಷತ್ರಶ್ರೀ ಎಂಬ ದೊರೆಯು ಎಲ್ಲರಿಗಿಂತಲೂ ಉತ್ಕೃಷ್ಟನಾಗಿರಲಿ.

## English Translation.

ay we, adorable Indra, your friends, at this your worship offered for (the acquirement of) wealth, be held most dear to you : may Kshatrashri, the son of Pratardana, (my patron), be most illustrious through the destruction of foes, and the attainment of riches.

|| ವಿಶೇಷವಿಷಯಗಳು ||

**ಪ್ರಾತರ್ದನಿಃ ಕ್ಷತ್ರಶ್ರೀಃ**— ಪ್ರತರ್ದನನ ಪುತ್ರನು. ಪ್ರತರ್ದನನೆಂಬುವನು ದಿವೋದಾಸನ ವಂಶೀಯನೆಂದು ಕೌಶೀತಕೀಬ್ರಾಹ್ಮಣದಲ್ಲಿ (ಕೌ. ಬ್ರಾ. ೨೬-೫) ಹೇಳಿದೆ. ಕಾಠಕಸಂಹಿತೆಯಲ್ಲಿ (ಕಾ. ಸಂ. ೨೧-೧೦) ಈ ರಾಜನಿಗೆ ಭರದ್ವಾಜಋಷಿಯು ಪುರೋಹಿತನಾಗಿದ್ದನೆಂಬ ವಿವರಣೆ ಇದೆ. ಕೌಶೀತಕೀ ಉಪನಿಷತ್ತಿನಲ್ಲಿ (ಕೌ. ಉ. ೩-೧) ಈ ರಾಜನು ಯುದ್ಧದಲ್ಲಿ ಮೃತಯನ್ನೈದಿದ ವಿಷಯದ ಪ್ರಸ್ತಾಪವಿದೆ. ಇವನ ಪುತ್ರನಾದ ಕ್ಷತ್ರಶ್ರೀಃ ಎಂಬುವನ ವಿಷಯದಲ್ಲಿ ಹೆಚ್ಚು ಸಂಗತಿಯೇನೂ ತಿಳಿದುಬಂದಿಲ್ಲ.

# ಇಪ್ಪತ್ತೇಳನೆಯ ಸೂಕ್ತವು

|| ಸಾಯಣಭಾಷ್ಯಂ ||

**ಕಿಮಸ್ಯ ಮದ ಇತ್ಯಷ್ಟರ್ಚಂ ಚತುರ್ಥಂ ಸೂಕ್ತಂ ಭರದ್ವಾಜಸ್ಯಾರ್ಷಂ । ಅನುಕ್ರಾಂತಂ ಚ । ಕಿಮಸ್ಯಾಂತ್ಯಾ ಚಾಯಮಾನಸ್ಯಾಭ್ಯಾವರ್ತಿನೋ ದಾನಸ್ತುತಿಃ । ಭರದ್ವಾಜ ಋಷಿಃ । ತ್ರಿಷ್ಟುಪ್ ಛಂದಃ । ಅಂತ್ಯಾಯಾಸ್ತು ದಾನಸ್ತುತಿರೂಪತ್ವಾದ್ಯಾ ತೇನೋಚ್ಯತ ಇತಿ ನ್ಯಾಯೇನ ದಾನಮೇವ ದೇವತಾ । ವಿನಿಯೋಗೋ ಲೈಂಗಿಕಃ ||**

ಅನುವಾದವು—**ಕಿಮಸ್ಯ ಮದೇ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು. ಇದರಲ್ಲಿ ಎಂಟು ಋಕ್ಕುಗಳಿರುವವು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು. ಅನುಕ್ರಮಣಿಕೆಯಲ್ಲಿ—**ಕಿಮಸ್ಯಾಂತ್ಯಾ ಚಾಯಮಾನಸ್ಯಾಭ್ಯಾವರ್ತಿನೋ ದಾನಸ್ತುತಿಃ** ಎಂದು ಹೇಳಿರುವುದು. ಇಂದ್ರನು ದೇವತೆಯು; ಎಂಟನೆಯ ಋಕ್ಕಿಗೆ **ಅಭ್ಯಾವರ್ತಿ ಚಾಯಮಾನ** ಎಂಬ ರಾಜನ ದಾನಸ್ತುತಿಯೇ ದೇವತೆಯು. ತ್ರಿಷ್ಟುಪ್ ಛಂದಸ್ಸು. ವಿನಿಯೋಗವು ಲೈಂಗಿಕವು.

## ಸೂಕ್ತ—೨೭

ಮಂಡಲ—೬ || ಅನುವಾಕ—೩ || ಸೂಕ್ತ—೨೭ ||
ಅಷ್ಟಕ—೪ || ಅಧ್ಯಾಯ—೬ || ವರ್ಗ—೨೩, ೨೪ ||

|| ಸೂಕ್ತದಲ್ಲಿರುವ ಋಕ್ಸಂಖ್ಯೆ—೮ ||
|| ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ||
|| ದೇವತಾ—೧-೭, ಇಂದ್ರಃ । ೮. ಅಭ್ಯಾವರ್ತಿನಶ್ಚಾಯಮಾನಸ್ಯ ದಾನಸ್ತುತಿಃ ||
|| ಛಂದಃ—ತ್ರಿಷ್ಟುಪ್ ||

॥ ಸಂಹಿತಾಪಾಠಃ ॥

ಕಿಮ॑ಸ್ಯ ಮದೇ॒ ಕಿಮ್ವ॑ಸ್ಯ ಪೀ॒ತಾವಿಂದ್ರಃ॒ ಕಿಮ॑ಸ್ಯ ಸ॒ಖ್ಯೇ ಚ॑ಕಾರ ।
ರಣಾ॑ ವಾ॒ ಯೇ ನಿ॒ಷದಿ॒ ಕಿಂ ತೇ ಅ॑ಸ್ಯ ಪು॒ರಾ ವಿ॑ವಿದ್ರೇ॒ ಕಿಮು॒ ನೂತ॑ನಾಸಃ ॥

॥ ಪದಪಾಠಃ ॥

ಕಿಂ । ಅ॒ಸ್ಯ॒ । ಮದೇ॑ । ಕಿಂ । ಊ॒ಂ ಇತಿ॑ । ಅ॒ಸ್ಯ॒ । ಪೀ॒ತೌ । ಇಂದ್ರಃ॑ । ಕಿಂ । ಅ॒ಸ್ಯ॒ । ಸ॒ಖ್ಯೇ । ಚ॒ಕಾ॒ರ॒ ।
ರಣಾಃ॑ । ವಾ॒ । ಯೇ । ನಿ॒ऽಸದಿ॑ । ಕಿಂ । ತೇ । ಅ॒ಸ್ಯ॒ । ಪು॒ರಾ । ವಿ॒ವಿ॒ದ್ರೇ॒ । ಕಿಂ । ಊ॒ಂ ಇತಿ॑ । ನೂತ॑ನಾಸಃ ॥೧॥

॥ ಸಾಯಣಭಾಷ್ಯಂ ॥

ಭರದ್ವಾಜ ಋಷಿಃ ಫಲವಿಲಂಬನಾಸಹಿಷ್ಣುಃ ಸನ್ ಅನಯೇಂದ್ರಮಾಕ್ಷಿಪತಿ । ಅಸ್ಯ ಸೋಮಸ್ಯ ಮದೇ ಸತೀಂದ್ರಃ ಕಿಂ ಚಕಾರ । ಕೃತವಾನ್ । ಕಿಮು ಕಿಂಚಾಸ್ಯ ಸೋಮಸ್ಯ ಪೀತೌ ಪಾನೇ ಸತಿ ಕಿಂ ಚಕಾರ । ಅಸ್ಯ ಸೋಮಸ್ಯ ಸಖ್ಯೇ ಸಖಿತ್ವೇ ಕಿಂ ಚಕಾರ । ಪಾನಾತ್ಪೂರ್ವಮಿಂದ್ರಃ ಸೋಮೇನ ಸಹ ವಸತೀತ್ಯರ್ಥಃ । ಅಸ್ಯ ಸೋಮಸ್ಯ ನಿಷದಿ ಗೃಹೇ ರಣಾ ವಾ ಯೇ ಸ್ತೋತಾರಶ್ಚ ಸಂತಿ ತೇ ಸ್ತೋತಾರಃ ಪುರಾ ಪೂರ್ವಂ ಹೇ ಇಂದ್ರ ತೇ ತ್ವತ್ತಃ ಕಿಂ ವಿವಿದ್ರೇ । ಕಿಂ ಲೇಭಿರೇ । ನೂತನಾಸೋ ನೂತನಾ ಇದಾನೀಂತನಾಃ ಸ್ತೋತಾರಶ್ಚ ಕಿಮು ಲೇಭಿರೇ ॥

॥ ಪ್ರತಿಪದಾರ್ಥ ॥

**ಅಸ್ಯ**— ಈ ಸೋಮರಸದಿಂದ ಲಭಿಸಿದ । **ಮದೇ**—ಹರ್ಷದ ಫಲವಾಗಿ । **ಇಂದ್ರಃ**—ಇಂದ್ರನು । **ಕಿಂ ಚಕಾರ**—ಏನನ್ನು ಮಾಡಿದನು । **ಅಸ್ಯ**—ಈ ಸೋಮದ । **ಪೀತಾ**—ಪಾನದ ಫಲವಾಗಿ । **ಕಿ ಮು**—ಏನನ್ನು ಮಾಡಿದನು । **ಅಸ್ಯ**—ಈ ಸೋಮದ । **ನಿಷದಿ**—ಗೃಹದಲ್ಲಿ । **ರಣಾ**—ಸ್ತುತಿಸುವ । **ಯೇ ವಾ**—ಯಾವ ಸ್ತೋತೃಗಳಿರುವರೋ ಅವರಲ್ಲಿ । **ಪುರಾ**—ಹಿಂದಿದ್ದ ಸ್ತೋತೃಗಳು । **ತೇ**—ನಿನ್ನಿಂದ । **ಕಿಂ ವಿವಿದ್ರೇ**—ಏನನ್ನು ಪಡೆದರು । **ನೂತನಾಸಃ**—ಪ್ರಕೃತ ಕಾಲದಲ್ಲಿರುವ ಸ್ತೋತೃಗಳು । **ಕಿಮು**— ಏನನ್ನು ಪಡೆದರು ?

॥ ಭಾವಾರ್ಥ ॥

ಈ ಸೋಮರಸದಿಂದ ಲಭಿಸಿದ ಹರ್ಷದ ಫಲವಾಗಿ ಇಂದ್ರನು ಸ್ತೋತೃಗಳಿಗೆ ಯಾವ ಪ್ರತಿಫಲವನ್ನು ಕೊಟ್ಟನು ? ಈ ಸೋಮದ ಪಾನದ ಫಲವಾಗಿ ಏನನ್ನು ಮಾಡಿದನು ? ಈ ಸೋಮದ ಗೃಹದಲ್ಲಿ (ಯಜ್ಞಗೃಹದಲ್ಲಿ) ಸ್ತುತಿಸುವ ಯಾವ ಸ್ತೋತೃಗಳಿರುವರೋ, ಅವರಲ್ಲಿ ಹಿಂದಿದ್ದ ಸ್ತೋತೃಗಳು ನಿನ್ನಿಂದ ಏನನ್ನು ಪಡೆದರು? ಪ್ರಕೃತ ಕಾಲದಲ್ಲಿರುವ ಸ್ತೋತೃಗಳು ಏನನ್ನು ಪಡೆದಿದ್ದಾರೆ?

## English Translation.

What has Indra done in the exhilaration of this (Soma)? what has he done on quaffing this (libation)? what has he done in friendship for this (Soma)? what have former, what have recent adorers obtained from you in the chamber of this (libation)?

|| ವಿಶೇಷವಿಷಯಗಳು ||

ಈ ಋಕ್ಕಿನಲ್ಲಿ ಋಷಿಯು, ಇಂದ್ರನ ಸೋಮಪಾನದಿಂದ ಲಭ್ಯವಾಗತಕ್ಕ ಪ್ರಯೋಜನಗಳೇನು ಎಂಬ ವಿಷಯದಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿ ಅವುಗಳಿಗೆ ಮುಂದಿನ ಋಕ್ಕಿನಲ್ಲಿ ಪ್ರತ್ಯುತ್ತರವನ್ನು ಹೇಳಿದಾನೆ.

|| ಸಂಹಿತಾಪಾಠಃ ||

ಕದಸ್ಯ ಮದೇ ಕದ್ವಸ್ಯ ಪೀತಾವಿಂದ್ರಃ ಕದಸ್ಯ ಸಖ್ಯೇ ಚಕಾರ ।
ರಣಾ ವಾ ಯೇ ನಿಷದಿ ಕಿಂ ತೇ ಅಸ್ಯ ಪುರಾ ವಿವಿದ್ರೇ ಕದು ನೂತನಾಸಃ ॥೨॥

|| ಪದಪಾಠಃ ||

ಕತ್ । ಅಸ್ಯ । ಮದೇ । ಕತ್ । ಊಂ ಇತಿ । ಅಸ್ಯ । ಪೀತೌ । ಇಂದ್ರಃ । ಕತ್ । ಅಸ್ಯ । ಸಖ್ಯೇ । ಚಕಾರ ।
ರಣಾಃ । ವಾ । ಯೇ । ನಿಽಸದಿ । ಕಿಂ । ತೇ । ಅಸ್ಯ । ಪುರಾ । ವಿವಿದ್ರೇ । ಕತ್ । ಊಂ ಇತಿ । ನೂತನಾಸಃ ॥ ೨ ॥

|| ಸಾಯಣಭಾಷ್ಯಂ ||

ಏವಮಾಕ್ಷಿಪ್ತ ಇಂದ್ರಸ್ತಸ್ಮಾ ಋಷಯ ಈಪ್ಸಿತಂ ಧನಂ ಪ್ರದದೌ । ತದನಂತರಮೃಷಿರಿಂದ್ರಸಕಾಶಾತ್ಸಂಪೂರ್ಣಕಾಮಃ ಸನ್ ಪುರಾ ಯಾನ್ಯುಪಾಲಂಭಪ್ರತಿಪಾದಕಾನಿ ವಾಕ್ಯಾನ್ಯುವೋಚೇದಾನೀಂ ತಾನಿ ನಿರಾಕರೋತಿ। ಇಂದ್ರೋಽಸ್ಯ ಸೋಮಸ್ಯ ಮದೇ ಕತ್ ಶುಭಂ ಕರ್ಮ ಚಕಾರ। ಅಸ್ಯ ಸೋಮಸ್ಯ ಪೀತೌ ಪಾನೇ ಕತ್ ಶುಭಂ ಕರ್ಮ ಚಕಾರ । ಅಸ್ಯ ಸಖ್ಯೇ ಕತ್ ಶುಭಂ ಚಕಾರ । ಯೇ ರಣಾ ವಾ ಸ್ತೋತಾರಸ್ತ ತೇ ನಿಷದಿ ಗೃಹೇ । ಯಜ್ಞಗೃಹ ಇತ್ಯರ್ಥಃ । ಪುರಾ ಪೂರ್ವಂ ಹೇ ಇಂದ್ರ ತೇ ತ್ವತ್ತಃ ಕತ್ ಶುಭಂ ಕರ್ಮ ವಿವಿದ್ರೇ । ಲೇಭಿರೇ । ನೂತನಾಸ ಇದಾನೀಂತನಾಃ ಸ್ತೋತಾರಃ ಕದು ಶುಭಮೇವ ಕರ್ಮ ಲೇಭಿರೇ ॥

|| ಪ್ರತಿಪದಾರ್ಥ ||

ಇಂದ್ರಃ—ಇಂದ್ರನು । ಅಸ್ಯ—ಈ ಸೋಮರಸದ ಪಾನದಿಂದ । ಮದೇ—ತೃಪ್ತನಾದಾಗ । ಕತ್—ಸತ್ಕರ್ಮಗಳನ್ನು । ಚಕಾರ—ಮಾಡಿದನು । ಅಸ್ಯ—ಈ ಸೋಮದ । ಪೀತೌ—ಪಾನದ ಫಲವಾಗಿ । ಕತ್—

ಸತ್ಕರ್ಮವನ್ನು ಮಾಡಿದನು । **ಅಸ್ಯ**—ಈ ಸೋಮದ ರಸದೊಂದಿಗಿರುವ । **ಸಖ್ಯೇ**—ಸ್ನೇಹದ ಫಲವಾಗಿ । **ಸತ್**—ಸತ್ಕರ್ಮವನ್ನು ಮಾಡಿದನು । (ಎಲೈ ಇಂದ್ರನೇ) **ಯೇ**—ಯಾವ । **ರಣಾ ನಾ**—ಸ್ತೋತೃಗಳು । **ನಿಷದಿ**—ಯಜ್ಞಗೃಹದಲ್ಲಿ । **ಪುರಾ**—ಹಿಂದೆಲ್ಲಾ ಇದ್ದರೋ । **ತೇ**—ಅವರೆಲ್ಲರೂ । **ಸತ್**—ಸತ್ಫಲವನ್ನು । **ವಿವಿದ್ರೇ**—(ನಿನ್ನಿಂದ) ಪಡೆದರು । **ನೂತನಾಸಃ**—ಈಗಿರತಕ್ಕ ಸ್ತೋತೃಗಳೂ । **ಸ ದು**—ಸತ್ಫಲವನ್ನೇ ಪಡೆಯುತ್ತಾರೆ.

|| ಭಾವಾರ್ಥ ||

ಇಂದ್ರನು ಸೋಮದ ಪಾನದಿಂದ ತೃಪ್ತನಾದಾಗ ಸತ್ಕರ್ಮಗಳನ್ನು ಮಾಡಿದನು. ಈ ಸೋಮದ ಪಾನದ ಫಲವಾಗಿ ಸತ್ಕರ್ಮಗಳನ್ನೇ ಮಾಡಿದನು. ಅಲ್ಲದೇ, ಈ ಸೋಮರಸದೊಂದಿಗಿರುವ ಸ್ನೇಹದ ಫಲವಾಗಿಯೂ ಸತ್ಕರ್ಮವನ್ನೇ ಮಾಡಿದನು. ಎಲೈ ಇಂದ್ರನೇ, ಯಾವ ಸ್ತೋತೃಗಳು ಯಜ್ಞಗೃಹದಲ್ಲಿ ಹಿಂದೆಲ್ಲಾ ಇದ್ದರೋ, ಅವರೆಲ್ಲರೂ ನಿನ್ನಿಂದ ಸತ್ಫಲವನ್ನೇ ಪಡೆದರು. ಈಗಿರತಕ್ಕ ಸ್ತೋತೃಗಳೂ ಸಹ ಸತ್ಫಲವನ್ನೇ ಪಡೆಯುತ್ತಾರೆ

## English Translation.

Verily, in the exhilaration of this (Soma) Indra has done a good deed; on quaffing the libation (he has done) a good deed; (he has done) a good deed in friendship for this Soma: former as well as recent adorers have obtained good of you in the chamber (of the libation).

। ಸಂಹಿತಾಪಾಠಃ ॥

ನಹಿ ನು ತೇ ಮಹಿಮನಃ ಸಮಸ್ಯ ನ ಮಘವನ್ಮಘವತ್ತ್ವಸ್ಯ ವಿದ್ಮ ।
ನ ರಾಧಸೋರಾಧಸೋ ನೂತನಸ್ಯೇಂದ್ರ ನಕಿರ್ದದೃಶ ಇಂದ್ರಿಯಂ ತೇ ॥೩॥

। ಪದಪಾಠಃ ॥

ನಹಿ । ನು । ತೇ । ಮಹಿಮನಃ । ಸಮಸ್ಯ । ನ । ಮಘऽವನ್ । ಮಘವತ್ऽತ್ವಸ್ಯ । ವಿದ್ಮ ॥
ನ । ರಾಧಸಃऽರಾಧಸಃ । ನೂತನಸ್ಯ । ಇಂದ್ರ । ನಕಿಃ । ದದೃಶೇ । ಇಂದ್ರಿಯಂ । ತೇ ॥ ೩ ॥

। ಸಾಯಣಭಾಷ್ಯಂ ।

ಹೇ ಮಘವನ್ಧನವನ್ನಿಂದ್ರ ತೇ ತ್ವದೀಯಸ್ಯ ಸಮಸ್ಯ ಸಮಸ್ತಸ್ಯ ಮಹಿಮನೋ ಮಹಿಮ್ನೋ ಮಹಿಮಾನಂ ನಹಿ ವಿದ್ಮ । ವಯಂ ನ ಜಾನೀಮಃ ॥ ನುಶಬ್ದಃ ಪೂರಣಃ ॥ ತಥಾ ಮಘವತ್ತ್ವಸ್ಯ

ತ್ವದೀಯಸ್ಯ ಧನಿಕತ್ವಸ್ಯ ಚ ವಯಂ ನ ಜಾನೀಮಃ । ನೂತನಸ್ಯ ಸ್ತುತ್ಯಸ್ಯ ರಾಧಸೋ ರಾಧಸಸ್ತ್ವ-ದೀಯಂ ಸರ್ವಂ ಧನಂ ಚ ನ ಜಾನೀಮಃ ॥ ಸರ್ವತ್ರ ದ್ವಿತೀಯಾರ್ಥೇ ಷಷ್ಠೀ ॥ ಹೇ ಇಂದ್ರ ತೇ ತ್ವದೀಯಮಿಂದ್ರಿಯಂ ಸಾಮರ್ಥ್ಯಂ ನಕಿರ್ದದೃಶೇ ಕೇನಾಪಿ ನ ದೃಶ್ಯತೇ ॥

॥ ಪ್ರತಿಪದಾರ್ಥ ॥

**ಮಘವನ್**—ಧನವಂತನಾದ ಎಲೈ ಇಂದ್ರನೇ । **ತೇ**—ನಿನ್ನ । **ಸಮಸ್ಯ**-ಸಮಸ್ತವಾದ । **ಮಹಿಮನಃ**—ಮಾಹಾತ್ಮ್ಯವನ್ನು । **ನಹಿ ವಿದ್ಮ**—ನಾವು ಅರಿಯಲಾರೆವು । **ಮಘವತ್ತ್ವಸ್ಯ**—ನಿನ್ನ ಸಂಪತ್ತಿನ ಆಧಿಕ್ಯವನ್ನೂ । **ನ**—ಅರಿಯಲಾರೆವು । **ನೂತನಸ್ಯ**—ಸ್ತುತ್ಯವಾದ । **ರಾಧಸೋರಾಧಸಃ**—ನಿನ್ನ ಅಪರಿಮಿತವಾದ ಐಶ್ವರ್ಯವನ್ನೂ । **ನ**—ಅರಿಯಲಾರೆವು । **ಇಂದ್ರ**—ಎಲೈ ಇಂದ್ರನೇ । **ತೇ**—ನಿನ್ನ । **ಇಂದ್ರಿಯಂ**—ಸಾಮರ್ಥ್ಯವನ್ನು । **ನಕಿಃ ದದೃಶೇ**—ಯಾರೂ ನೋಡಲು ಸಮರ್ಥರಲ್ಲ.

॥ ಭಾವಾರ್ಥ ॥

ಧನವಂತನಾದ ಎಲೈ ಇಂದ್ರನೇ, ನಿನ್ನ ಸಂಪೂರ್ಣವಾದ ಮಾಹಾತ್ಮ್ಯವೇನೆಂಬುದನ್ನು ನಾವು ಅರಿಯೆವು. ನಿನ್ನ ಸಂಪತ್ತಿನ ಆಧಿಕ್ಯವನ್ನೂ ಅರಿಯಲಾರೆವು. ನಿನ್ನ ಅಪರಿಮಿತವಾದ ಐಶ್ವರ್ಯವೇನೆಂಬುದು ನಮಗೆ ಗೊತ್ತಿಲ್ಲ. ಎಲೈ ಇಂದ್ರನೇ, ನಿನ್ನ ಸಾಮರ್ಥ್ಯವನ್ನು ಅರ್ಥಮಾಡಿಕೊಳ್ಳಲು ಯಾರಿಗೂ ಸಾಧ್ಯವಿಲ್ಲ

## English Translation.

We acknowledge no one, Maghavan, of greatness equal to you, nor one of like affluence, nor one of equally glorifiable riches, nor has (such as) your power been ever seen (in any other).

॥ ಸಂಹಿತಾಪಾಠಃ ॥

ಏತತ್ತ್ಯತ್ತ ಇಂದ್ರಿಯಮಚೇತಿ ಯೇನಾವಧೀರ್ವರಶಿಖಸ್ಯ ಶೇಷಃ ।
ವಜ್ರಸ್ಯ ಯತ್ತೇ ನಿಹತಸ್ಯ ಶುಷ್ಮಾತ್ಸ್ವನಾಚ್ಚಿದಿಂದ್ರ ಪರಮೋ ದದಾರ ॥೪॥

॥ ಪದಪಾಠಃ ॥

ಏತತ್ । ತ್ಯತ್ । ತೇ । ಇಂದ್ರಿಯಂ । ಅಚೇತಿ । ಯೇನ । ಅವಧೀಃ । ವರಽಶಿಖಸ್ಯ । ಶೇಷಃ ।
ವಜ್ರಸ್ಯ । ಯತ್ । ತೇ । ನಿಽಹತಸ್ಯ । ಶುಷ್ಮಾತ್ । ಸ್ವನಾತ್ । ಚಿತ್ । ಇಂದ್ರ । ಪರಮಃ । ದದಾರ ॥೪॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಯೇನ ವೀರ್ಯೇಣ ವರಶಿಖಸ್ಯ । ವರಶಿಖೋ ನಾಮ ಕಶ್ಚಿದಸುರಃ । ತಸ್ಯ ಶೇಷಃ ಶೇಷಾಂಸಿ ಪುತ್ರಾನ್ । ಶೇಷ ಇತ್ಯಪತ್ಯನಾಮ್ಸೈತತ್ । ಅವಧೀಃ ಅಹಿಂಸೀಃ ತೇ ತ್ವದೀಯಮೇತತ್ತ್ಯತ್ತ್ವಿದಮಿಂದ್ರಿಯಂ ವೀರ್ಯಮಚೇತಿ । ಅಸ್ಮಾಭಿರಜ್ಞಾಯಿ । ಹೇ ಇಂದ್ರ ಯದ್ಯಸ್ಮಾಚ್ಛುಷ್ಮಾದ್ಬಲಾನ್ನಿಹತಸ್ಯ ಪ್ರೇರಿತಸ್ಯ ತ್ವದೀಯವಜ್ರಸ್ಯ ಸ್ವನಾಚ್ಚಿತ್ ಧ್ವನೇರೇವ ಪರಮೋ ವರಶಿಖಸ್ಯ ಪುತ್ರಾಣಾಂ ಮಧ್ಯೇ ಬಲಾದ್ಯಾಧಿಕ್ಯೇನೋತ್ಕೃಷ್ಟಃ ಕಶ್ಚಿತ್ಪುತ್ರೋ ದದಾರ ಅದೀರ್ಯತ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ಯೇನ—ಯಾವ ನಿನ್ನ ವೀರ್ಯದಿಂದ । ವರಶಿಖಸ್ಯ—ವರಶಿಖನೆಂಬ ಅಸುರನ । ಶೇಷಃ—ಪುತ್ರರನ್ನೆಲ್ಲಾ । ಅವಧೀಃ—ಕೊಂದೆಯೋ । ತೇ ಯತ್ ಶುಷ್ಮಾತ್—ಯಾವ ನಿನ್ನ ಬಲದಿಂದ । ನಿಹತಸ್ಯ—ಎಸೆಯಲ್ಪಟ್ಟ । ವಜ್ರಸ್ಯ—ವಜ್ರಾಯುಧದ । ಸ್ವನಾತ್ ಚಿತ್—ಧ್ವನಿಯಿಂದಲೇ । ಪರಮಃ—ವರಶಿಖನ ಪುತ್ರನಾದ ಪರಮನು (ಅವರಲ್ಲೆಲ್ಲಾ ಅತ್ಯಂತ ಬಲಶಾಲಿಯು) । ದದಾರ—ಸೀಳಲ್ಪಟ್ಟನೋ। ಏತತ್ತ್ಯತ್—ಅಂತಹ । ತೇ ಇಂದ್ರಿಯಂ—ನಿನ್ನ ವೀರ್ಯವು । ಅಚೇತಿ—ನಮ್ಮಿಂದ ತಿಳಿಯಲ್ಪಟ್ಟಿದೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಯಾವ ನಿನ್ನ ವೀರ್ಯದಿಂದ ವರಶಿಖನೆಂಬ ಅಸುರನ ಪುತ್ರರನ್ನೆಲ್ಲಾ ಕೊಂದೆಯೋ, ಯಾವ ನಿನ್ನ ಬಲದಿಂದ ಎಸೆಯಲ್ಪಟ್ಟ ವಜ್ರಾಯುಧದ ಧ್ವನಿಯಿಂದಲೇ ವರಶಿಖನ ಪುತ್ರನಾದ ಪರಮನು ಅವರಲ್ಲೆಲ್ಲಾ ಅತ್ಯಂತ ಬಲಶಾಲಿಯಾಗಿದ್ದರೂ ಸೀಳಲ್ಪಟ್ಟನೋ ಅಂತಹ ನಿನ್ನ ಶಕ್ತಿಸಾಮರ್ಥ್ಯವನ್ನು ನಾವು ಬಲ್ಲೆವು.

## English Translation.

Such as your power (is) it has been comprehended (by us) as that wherewith you have slain the race of Varasikha, when the boldest (of them) was demolished by the noise of your thunderbolt hurled with (all your) force.

॥ ವಿಶೇಷವಿಷಯಗಳು ॥

ವರಶಿಖಸ್ಯ, ಪರಮಃ— ವರಶಿಖನೆಂಬುವನು ಒಬ್ಬ ಅಸುರ ರಾಜನು. ಇವನನ್ನು ಅಭ್ಯಾವರ್ತೀ ಚಾಯಮಾನ ಎಂಬ ಇನ್ನೊಬ್ಬ ರಾಜನು ಸೋಲಿಸಿದ ವಿಷಯವು ಈ ಋಕ್ಕಿನಲ್ಲಿಯೂ ಮುಂದಿನ ಋಕ್ಕಿನಲ್ಲಿಯೂ ಹೇಳಲ್ಪಟ್ಟಿದೆ. ಪರಮ ಎಂಬುವನು ವರಶಿಖನ ಪುತ್ರನು.

॥ ಸಂಹಿತಾಪಾಠಃ ॥

ವಧೀದಿಂದ್ರೋ ವರಶಿಖಸ್ಯ ಶೇಷೋಽಭ್ಯಾವರ್ತಿನೇ ಚಾಯಮಾನಾಯ ಶಿಕ್ಷನ್ ।
ವೃಚೀವತೋ ಯದ್ಧರಿಯೂಪೀಯಾಯಾಂ ಹನ್ಪೂರ್ವೇ ಅರ್ಧೇ ಭಿಯಸಾಪರೋ ದರ್ತ್ ॥ ೫ ॥

॥ ಪದಪಾಠಃ ॥

ವಧೀತ್ । ಇಂದ್ರಃ । ವರಽಶಿಖಸ್ಯ । ಶೇಷಃ । ಅಭಿಽಆವರ್ತಿನೇ । ಚಾಯಮಾನಾಯ । ಶಿಕ್ಷನ್ ।
ವೃಚೀವತಃ । ಯತ್ । ಹರಿಽಯೂಪೀಯಾಯಾಂ । ಹನ್ । ಪೂರ್ವೇ । ಅರ್ಧೇ । ಭಿಯಸಾ । ಅಪರಃ । ದರ್ತ್ ॥ ೫ ॥

॥ ಸಾಯಣಭಾಷ್ಯಂ ॥

ಪೂರ್ವೋಕ್ತಮೇವಾರ್ಥಮನಯಾ ವಿವೃಣೋತಿ । ಅಯಮಿಂದ್ರಶ್ಚಾಯಮಾನಾಯ ಚಯಮಾನಸ್ಯ ರಾಜ್ಞಃ ಪುತ್ರಾಯಾಭ್ಯಾವರ್ತಿನ ಏತನ್ನಾಮಕಾಯ ರಾಜ್ಞೇ: ಶಿಕ್ಷನ್ ಈಪ್ಸಿತಾನಿ ವಸೂನಿ ಪ್ರಯಚ್ಛನ್ ವರಶಿಖಸ್ಯಾಸುರಸ್ಯ ಶೇಷಃ ಪುತ್ರಾನ್ವಧೀತ್ । ಅವಧೀತ್ । ಅಹಿಂಸೀತ್ । ವರಶಿಖಸ್ಯ ಪುತ್ರಾನ್ ಕಥಮವಧೀದಿತ್ಯುಚ್ಯತೇ । ಯದ್ಯದಾಯಮಿಂದ್ರೋ ಹರಿಯೂಪೀಯಾಯಾಂ । ಹರಿಯೂಪೀಯಾ ನಾಮ ಕಾಚಿನ್ನದೀ ಕಾಚಿನ್ನಗರೀ ವಾ । ತಸ್ಯಾಂ ಪೂರ್ವೇಽರ್ಧೇ ಪ್ರಾಗ್ಭಾಗೇ ಸ್ಥಿತಾನ್ ವೃಚೀವತಃ । ವೃಚೀವಾನ್ ನಾಮ ವರಶಿಖಸ್ಯ ಕುಲೋತ್ಪನ್ನಃ ಪೂರ್ವಃ । ತದ್ಗೋತ್ರಜಾನ್ವರಶಿಖಸ್ಯ ಪುತ್ರಾನ್ ಹನ್ ಅವಧೀತ್ ತದಾಪರೋಽಪರಭಾಗೇ ಸ್ಥಿತೋ ವರಶಿಖಸ್ಯ ಶ್ರೇಷ್ಠಃ ಪುತ್ರೋ ಭಿಯಸಾ ಭೀತ್ಯಾ ದರ್ತ್ । ದೀರ್ಣೋಽಭೂತ್ ॥

॥ ಪ್ರತಿಪದಾರ್ಥ ॥

ಇಂದ್ರಃ—ಇಂದ್ರನು । **ಚಾಯಮಾನಾಯ**— ಚಯಮಾನನ ಪುತ್ರನಾದ । **ಅಭ್ಯಾವರ್ತಿನೇ**— ಅಭ್ಯಾವರ್ತಿಯೆಂಬ ರಾಜನಿಗೆ । **ಶಿಕ್ಷನ್**—ಅಪೇಕ್ಷಿತವಾದ ಧನಗಳನ್ನು ಕೊಡಬೇಕೆಂದು । **ವರಶಿಖಸ್ಯ**— ವರಶಿಖನೆಂಬ ಅಸುರನ । **ಶೇಷಃ**—ಪುತ್ರರನ್ನು । **ವಧೀತ್**—ಕೊಂದನು । **ಯತ್**—ಯಾವಾಗ । **ಹರಿಯೂಪೀಯಾಯಾಂ**—ಹರಿಯೂಪೀಯಾ ಎಂಬ ನದಿಯ ಅಥವಾ ನಗರಿಯ । **ಪೂರ್ವೇ ಅರ್ಧೇ**—ಪೂರ್ವ ಭಾಗದ ದಡದಲ್ಲಿದ್ದ । **ವೃಚೀವತಃ**—ವೃಚೀವದ್ವಂಶದ ಎಲ್ಲಾ ಪುತ್ರರನ್ನೂ । **ಹನ್**—ಕೊಂದನೋ (ಆಗ) । **ಅಪರಃ**—ಆಚೆ ನದಿಯ ಬೇರೆ ದಡದಲ್ಲಿದ್ದ ವರಶಿಖನ ಇನ್ನೊಬ್ಬ ಪುತ್ರನು । **ಭಿಯಸಾ**—ಭೀತಿಯಿಂದ । **ದರ್ತ್**—ಸೀಳಲ್ಪಟ್ಟನು.

॥ ಭಾವಾರ್ಥ ॥

ಇಂದ್ರನು ಚಯಮಾನನ ಪುತ್ರನಾದ ಅಭ್ಯಾವರ್ತಿಯೆಂಬ ರಾಜನಿಗೆ ಅಪೇಕ್ಷಿತಗಳಾದ ಧನಗಳನ್ನು ಕೊಡಬೇಕೆಂದು ವರಶಿಖನೆಂಬ ಅಸುರನ ಪುತ್ರರನ್ನು ಕೊಂದನು. ಯಾವಾಗ ಹರಿಯೂಪೀಯಾ ಎಂಬ ನದಿಯ ಪೂರ್ವಭಾಗದ ದಡದಲ್ಲಿದ್ದ ವೃಚೀವದ್ವಂಶದ ಎಲ್ಲಾ ಪುತ್ರರನ್ನೂ ಕೊಂದನೋ ಆಗ ಅದೇ ನದಿಯ ಬೇರೆ ದಡದಲ್ಲಿದ್ದ ವರಶಿಖನ ಇನ್ನೊಬ್ಬ ಪುತ್ರನು ಭೀತಿಯಿಂದಲೇ ಸೀಳಲ್ಪಟ್ಟನು (ಸತ್ತುಹೋದನು).

## English Translation.

Favouring Abhyavartin, the son of Chayamana, Indra destroyed the race of Varasikha, killing the descendants of Vrichivat, (who were stationed) on the Hariyupiya, on the eastern part, whilst the western (troop) was scattered through fear.

॥ ವಿಶೇಷವಿಷಯಗಳು ॥

**ಹರಿಯೂಪೀಯಾಯಾಂ**—ಹರಿಯೂಪೀಯಾ ಎಂಬುದು ಒಂದು ನದಿಯ ಹೆಸರೆಂದು ಭಾವಿಸಲ್ಪಟ್ಟಿದೆ. ಈ ಹೆಸರು ಈ ಸೂಕ್ತದ ೫ ಮತ್ತು ೬ನೇ ಋಕ್ಕಿನಲ್ಲಿ ಮಾತ್ರ ಇದೆ, ಮತ್ತೆಲ್ಲಿಯೂ ಇಲ್ಲ. ಈ ನದಿಯ ದಡದ ಮೇಲೆ ಅಭ್ಯಾವರ್ತೀ ಚಾಯಮಾನ ಎಂಬ ಹೆಸರಿನ ರಾಜನು ವೃಚೀವಂತರೆಂಬ ಜನಾಂಗದ ರಾಜಪುತ್ರರನ್ನು ಅಥವಾ ಯೋಧರನ್ನು ಯುದ್ಧಮಾಡಿ ಸಂಹಾರಮಾಡಿರುವ ವಿಷಯವು ಉಕ್ತವಾಗಿದೆ.

॥ ಸಂಹಿತಾಪಾಠಃ ॥

ತ್ರಿಂಶಚ್ಛತಂ ವರ್ಮಿಣ ಇಂದ್ರ ಸಾಕಂ ಯವ್ಯಾವತ್ಯಾಂ ಪುರುಹೂತ ಶ್ರವಸ್ಯಾ।
ವೃಚೀವಂತಃ ಶರವೇ ಪತ್ಯಮಾನಾಃ ಪಾತ್ರಾ ಭಿಂದಾನಾ ನ್ಯರ್ಥಾನ್ಯಾಯನ್॥

॥ ಪದಪಾಠಃ ॥

ತ್ರಿಂಶತ್ऽಶತಂ । ವರ್ಮಿಣಃ । ಇಂದ್ರ । ಸಾಕಂ । ಯವ್ಯಾऽವತ್ಯಾಂ । ಪುರುऽಹೂತ । ಶ್ರವಸ್ಯಾ ।
ವೃಚೀವಂತಃ । ಶರವೇ । ಪತ್ಯಮಾನಾಃ । ಪಾತ್ರಾ । ಭಿಂದಾನಾಃ । ನಿऽಅರ್ಥಾನಿ । ಆಯನ್ ॥ ೬ ॥

॥ ಸಾಯಣಭಾಷ್ಯಂ ॥

ಇದಾನೀಮುಕ್ತಮೇವಾರ್ಥಂ ವಿವೃಣೋತಿ । ಹೇ ಪುರುಹೂತ ಬಹುಭಿರಾಹೂತೇಂದ್ರ ಶ್ರವಸ್ಯಾ ಶ್ರವಸ್ಯಯಾ । ಶ್ರವೋऽನ್ನಂ ಯಶೋ ವಾ । ತದ್ವಾಂಛಯಾ ಯುದ್ಧೇ ತ್ವಾಂ ಜಿತ್ವಾನ್ನಂ ಪ್ರಾಪ್ನುಯಾಮ

ಯಶೋ ವಾ ಪ್ರಾಪ್ನುಯಾಮೇತಿ ಕಾಮಯಮಾನಾಃ ಶರವೇ ಹಿಂಸಾಯೈ । ತ್ವಾಂ ಹಿಂಸಿತುಮಿತ್ಯರ್ಥಃ । ಪತ್ಯಮಾನಾ ಅಭಿಪತಂತೋಽಭಿಗಚ್ಛಂತಃ ಪಾತ್ರಾ ಪಾತ್ರಾಣಿ ಯಜ್ಞಸಾಧನಾನಿ ಭಿಂದಾನಾ ಭಿಂದಂತೋ ವರ್ಮಿಣಃ ಕವಚಭೃತಸ್ತ್ರಿಂಶಚ್ಛತಂ ತ್ರಿಂಶದಧಿಕಶತಸಂಖ್ಯಾಕಾ ವೃಚೀವಂತೋ ವರಶಿಖಸ್ಯ ಪುತ್ರಾಃ ಸಾಕಂ ಯುಗಪದೇವ ಯವ್ಯಾವತ್ಯಾಂ ಪೂರ್ವೋಕ್ತಾಯಾಂ ಹರಿಯೂಪೀಯಾಯಾಂ ನ್ಯರ್ಥಾನ್ಯರ್ಥಶೂನ್ಯಾನ್ಯಾಯನ್ । ಅಗಚ್ಛನ್ । ವಿನಾಶಂ ಪ್ರಾಪುರಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಪುರುಹೂತ**— ಅನೇಕರಿಂದ ಕರೆಯಲ್ಪಡತಕ್ಕ । **ಇಂದ್ರ**— ಎಲೈ ಇಂದ್ರನೇ । **ಶ್ರವಸ್ಯಾ**— ಅನ್ನೇಚ್ಛೆಯುಳ್ಳವರೂ । **ಶರವೇ**— ನಿನ್ನನ್ನು ಹಿಂಸಿಸಲು । **ಪತ್ಯಮಾನಾಃ**— ಒಟ್ಟುಗೂಡಿದವರೂ । **ಪಾತ್ರಾ**— ಯಜ್ಞಸಾಧನಗಳಾದ ಪಾತ್ರೆಗಳನ್ನು । **ಭಿಂದಾನಾಃ**— ನಾಶಮಾಡಿದವರೂ । **ವರ್ಮಿಣಃ**— ಯುದ್ಧಕವಚವನ್ನು ಧರಿಸಿದವರೂ । **ತ್ರಿಂಶಚ್ಛತಂ**— ನೂರಮೂವತ್ತು ಸಂಖ್ಯೆಯುಳ್ಳವರೂ ಆದ । **ವೃಚೀವಂತಃ**— ವರಶಿಖನ ಪುತ್ರರು । **ಸಾಕಂ**— ಒಟ್ಟಿಗೆ । **ಯವ್ಯಾವತ್ಯಾಂ**— ಹರಿಯೂಪೀಯಾ ನದಿಯ ದಡದಲ್ಲಿ । **ನ್ಯರ್ಥಾನಿ**— ಅರ್ಥಶೂನ್ಯರಾಗಿ । **ಆಯನ್**— ನಾಶವನ್ನು ಹೊಂದಿದರು.

॥ ಭಾವಾರ್ಥ ॥

ಅನೇಕರಿಂದ ಕರೆಯಲ್ಪಡತಕ್ಕ ಎಲೈ ಇಂದ್ರನೇ, ಅನ್ನೇಚ್ಛೆಯುಳ್ಳವರೂ ನಿನ್ನನ್ನು ಹಿಂಸಿಸಲು ಒಟ್ಟುಗೂಡಿದವರೂ, ಯಜ್ಞಸಾಧನಗಳಾದ ಪಾತ್ರೆಗಳನ್ನು ನಾಶಮಾಡಿದವರೂ, ಯುದ್ಧಕವಚವನ್ನು ಧರಿಸಿದವರೂ. ನೂರಮೂವ್ವತ್ತು ಸಂಖ್ಯೆಯುಳ್ಳವರೂ ಆದ ವರಶಿಖನ ಪುತ್ರರು ಒಟ್ಟಿಗೆ ಹರಿಯೂಪೀಯಾ ನದಿಯ ದಡದಲ್ಲಿ ಅರ್ಥಶೂನ್ಯರಾಗಿ ನಾಶವನ್ನೈದಿದರು.

## English Translation.

Indra, the invoked of many, thirty hundred mailed warriors (were collected) together on the Yavyavati, to acquire glory, but the Vrichivats advancing hostilely, and breaking the sacrificial vessels, went to (their own) annihilation.

॥ ಸಂಹಿತಾಪಾಠಃ ॥

ಯಸ್ಯ ಗಾವಾವರುಷಾ ಸೂಯವಸ್ಯೂ ಅಂತರೂ ಷು ಚರತೋ ರೇರಿಹಾಣಾ।
ಸ ಸೃಂಜಯಾಯ ತುರ್ವಶಂ ಪರಾದಾದ್ವೃಚೀವತೋ ದೈವವಾತಾಯ ಶಿಕ್ಷನ್ ॥ ೭ ॥

|| ಪದಪಾಠಃ ||

ಯಸ್ಯ । ಗಾವೌ । ಅರುಷಾ । ಸುಯವಸ್ಯೂ ಇತಿ ಸುಽಯವಸ್ಯೂ । ಅಂತಃ । ಊಂ ಇತಿ । ಸು। ಚರತಃ।
ರೇರಿಹಾಣಾ ।

ಸಃ । ಸೃಂಜಯಾಯ । ತುರ್ವಶಂ । ಪರಾ । ಅದಾತ್ । ವೃಚೀವತಃ । ದೈವಽವಾತಾಯ । ಶಿಕ್ಷನ್ ॥ ೭ ॥

॥ ಸಾಯಣಭಾಷ್ಯಂ ॥

ಅರುಷಾರುಷೌ ರೋಚಮಾನೌ ಸುಯವಸ್ಯೂ ಶೋಭನತೃಣಾನೀಚ್ಛಂತೌ ರೇರಿಹಾಣಾ ಲೇಲಿಹಾನೌ ಪುನಃ ಪುನರ್ಘಾಸಮಾಸ್ವಾದಯಂತೌ। ಯದ್ವಾ। ಗತಿವಿಶೇಷಂ ಕುರ್ವಂತೌ। ಯಸ್ಯೇಂದ್ರಸ್ಯ ಸಂಬಂಧಿನೌ ಗಾವಾವಶ್ವಾವಂತರ್ದ್ಯಾವಾಪೃಥಿವ್ಯೋರ್ಮಧ್ಯೇಽನ್ತರಿಕ್ಷೇ ಚರತೋ ಗಚ್ಛತಃ ॥ ಉ ಸು ಇತೀಮೌ ಪೂರಣೌ ॥ ಸ ಇಂದ್ರಃ ಸೃಂಜಯಾಯೈತನ್ನಾಮಕಾಯ ರಾಜ್ಞೇ ತುರ್ವಶಂ ರಾಜಾನಾಂ ಪರಾದಾತ್ । ಪ್ರದದೌ । ಕಿಂ ಕುರ್ವನ್ । ವೃಚೀವತೋ ವಾರಶಿಖಾನ್ ದೈವವಾತಾಯ ದೇವವಾತವಂಶೋತ್ಪನ್ನಾಯಾಭ್ಯಾವರ್ತಿನೇ ರಾಜ್ಞೇ ಶಿಕ್ಷನ್ ವಶೀಕುರ್ವನ್ । ತೇಷಾಂ ಧನಾನಿ ಪ್ರಯಚ್ಛನ್ನಿತಿ ವಾ ॥

॥ ಪ್ರತಿಪದಾರ್ಥ ॥

**ಯಸ್ಯ**—ಯಾವ ಇಂದ್ರನ । **ಅರುಷಾ**—ಹೊಂಬಣ್ಣವುಳ್ಳವೂ (ಆಕರ್ಷಕವೂ) । **ಸುಯವಸ್ಯೂ**—ಶ್ರೇಷ್ಠವಾದ ತೃಣವನ್ನು ಇಚ್ಛಿಸುವುವೂ । **ರೇರಿಹಾಣಾ**—ಕುಪ್ಪಳಿಸಿ ಓಡುವುವೂ ಆದ । **ಗಾವೌ**—ಅಶ್ವಗಳು । **ಅಂತಃ**—ದ್ಯಾವಾಪೃಥಿವಿಗಳ ನಡುವೆ । **ಚರತಃ**—ಸಂಚರಿಸುವವೋ । **ಸಃ**—ಆ ಇಂದ್ರನು । **ವೃಚೀವತಃ**—ವಾರಶಿಖರನ್ನು । **ದೈವವಾತಾಯ**—ದೇವವಾತನೆಂಬುವನ ವಂಶೋತ್ಪನ್ನನಾದ ಅಭ್ಯಾವರ್ತಿಗೆ । **ಶಿಕ್ಷನ್**—ವಶಪಡಿಸುತ್ತಾ । **ಸೃಂಜಯಾಯ**—ಸೃಂಜಯನೆಂಬ ರಾಜನಿಗೆ । **ತುರ್ವಶಂ**—ತುರ್ವಶನೆಂಬ ಶತ್ರುರಾಜನನ್ನು । **ಪರಾದಾತ್**—ವಶಪಡಿಸಿದನು.

|| ಭಾವಾರ್ಥ ||

ಯಾವ ಇಂದ್ರನ ಹೊಂಬಣ್ಣವುಳ್ಳವೂ, ಆಕರ್ಷಕವೂ, ಶ್ರೇಷ್ಠವಾದ ತೃಣವನ್ನು ಇಚ್ಛಿಸುವುವೂ ಕುಪ್ಪಳಿಸಿ ಓಡುವುವೂ ಆದ ಅಶ್ವಗಳು ದ್ಯಾವಾಪೃಥಿವಿಗಳ ನಡುವೆ ಸಂಚರಿಸುವುವೋ ಆ ಇಂದ್ರನು ವರಶಿಖನ ಪುತ್ರರನ್ನು ದೇವವಾತವಂಶೋತ್ಪನ್ನನಾದ ಅಭ್ಯಾವರ್ತಿಗೆ ವಶಪಡಿಸಿದನು. ಸೃಂಜಯನೆಂಬ ರಾಜನಿಗೆ ತುರ್ವಶನೆಂಬ ಶತ್ರುರಾಜನನ್ನು ವಶಪಡಿಸಿದನು.

## English Translation.

He whose bright prancing horses, delighted with choice fodder, proceed between (heaven and earth), gave up Turvasa to Srinjaya, subjecting the Vrichivats to the descendant of Devavata, (Abhyavartin).

|| ವಿಶೇಷವಿಷಯಗಳು ||

**ಸೃಂಜಯೋಯ**—ಸೃಂಜಯ ಎಂಬ ಜನಾಂಗದ ರಾಜನು. ಇವನು ಬಹಳ ಪ್ರಸಿದ್ಧನಾಗಿದ್ದನು. ಅಭ್ಯಾವರ್ತಿ ಚಾಯಮಾನ ಎಂಬ ರಾಜನು ವರಶಿಖನೊಡನೆ ಯುದ್ಧಮಾಡಿ ಅವನನ್ನು ಸೋಲಿಸಿರುವುದಾಗಿ ಈ ಸೂಕ್ತದಲ್ಲಿರುವ ಯುದ್ಧವರ್ಣನೆಯಿಂದ ತಿಳಿಯಬಹುದಾಗಿದೆ ಈ ಅಭ್ಯಾವರ್ತಿ ಎಂಬ ರಾಜನು ದೇವವಾತ ಎಂಬುವನ ವಂಶೀಕನು. ಸೃಂಜಯನೆಂಬುವನೂ ಈ ವಂಶದವನೇ ಆಗಿರುವ್ವದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಇವರಿಬ್ಬರೂ ಒಂದೇ ವ್ಯಕ್ತಿಯೇ ಎಂಬ ವಿಷಯದಲ್ಲಿ ಪಾಶ್ಚಾತ್ಯಪಂಡಿತರು ಸಂಶಯವನ್ನು ವ್ಯಕ್ತಪಡಿಸಿದ್ದಾರೆ. ಈ ಸೂಕ್ತದಲ್ಲಿ ಉಕ್ತವಾಗಿರುವ ವೃಚಿವಂತರು ಪ್ರಾಯಶಃ ತುರ್ವಶರೇ ಆಗಿರಬಹುದು ಅಥವಾ ಅವರ ಮಿತ್ರರಾಗಿರಬಹುದು. ಸೃಂಜಯನು ದೇವರಾತ ಎಂಬುವನ ಪುತ್ರನೆಂದು ಋ. ಸಂ. ೪-೧೫-೪ ರಲ್ಲಿ ಹೇಳಿದೆ ಈ ಸೃಂಜಯನಿಗೂ ಅಭ್ಯಾವರ್ತಿಗೂ ಇಂದ್ರನು ಯುದ್ಧದಲ್ಲಿ ಸಹಾಯಮಾಡಿದ ವಿಷಯವು ಈ ಸೂಕ್ತದಲ್ಲಿ ಉಕ್ತವಾಗಿದೆ.

—o—

|| ಸಂಹಿತಾಪಾಠಃ ||

ದ್ವಯಾಁ ಅಗ್ನೇ ರಥಿನೋ ವಿಂಶತಿಂ ಗಾ ವಧೂಮಂತೋ ಮಘವಾ ಮಹ್ಯಂ ಸಂರಾಟ್ ।
ಅಭ್ಯಾವರ್ತೀ ಚಾಯಮಾನೋ ದದಾತಿ ದೂಣಾಶೇಯಂ ದಕ್ಷಿಣಾ ಪಾರ್ಥವಾನಾಂ ॥ ೮ ॥

। ಪದಪಾಠಃ ।

ದ್ವಯಾನ್ । ಅಗ್ನೇ । ರಥಿನಃ । ವಿಂಶತಿಂ । ಗಾಃ । ವಧೂऽಮಂತಃ । ಮಘऽವಾ । ಮಹ್ಯಂ । ಸಂऽರಾಟ್ ।
ಅಭಿऽಆವರ್ತೀ । ಚಾಯಮಾನಃ । ದದಾತಿ । ದುಃऽನಶಾ । ಇಯಂ । ದಕ್ಷಿಣಾ । ಪಾರ್ಥವಾನಾಂ ॥ ೮ ॥

॥ ಸಾಯಣಭಾಷ್ಯಂ ॥

ಅಧುನಾ ಭರದ್ವಾಜಃ ಸ್ವಸ್ಮಾ ಅಭ್ಯಾವರ್ತಿನಾ ದತ್ತಂ ಧನಜಾತಮಗ್ನಯೇ ಪ್ರಕಥಯತಿ । ಹೇ ಅಗ್ನೇ ಮಘವಾ ಧನವಾನ್ ಪ್ರಭೂತದಾನೋ ವಾ ಸಮ್ರಾಟ್ ರಾಜಸೂಯಯಾಜೀ ಚಾಯಮಾನಶ್ಚಾಯಮಾನಸ್ಯ ಪುತ್ರೋಽಭ್ಯಾವರ್ತ್ಯೇತದಾಖ್ಯೋ ರಾಜಾ ರಥಿನೋ ರಥಸಹಿತಾನ್ವಧೂಮತಃ ಸ್ತ್ರೀಯುಕ್ತಾನ್ ದ್ವಯಾನ್ಮಿಥುನಭೂತಾನ್ ವಿಂಶತಿಂ ವಿಂಶತಿಸಂಖ್ಯಾಕಾನ್ ಗಾಃ ಪಶೂನ್ಮಹ್ಯಂ ದದಾತಿ । ಪ್ರಾಯಚ್ಛತ್ । ಪಾರ್ಥವಾನಾಂ ಪೃಥೋರ್ವಂಶಜಸ್ಯಾಭ್ಯಾವರ್ತಿನೋ ರಾಜ್ಞಃ ಸಂಬಂಧಿನೀ । ಪೂಜಾರ್ಥಂ ಬಹುವಚನಂ ॥ ಇಯಂ ದಕ್ಷಿಣಾ ದುರ್ನಶಾ ಕೇನಾಪಿ ನಾಶಯಿತುಮಶಕ್ಯಾ ಭವತಿ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಮಘವಾ**—ಧನವಂತನೂ । **ಸಮ್ರಾಟ್**—ಸಾರ್ವಭೌಮನೂ । **ಚಾಯಮಾನಃ**—ಚಯಮಾನನ ಪುತ್ರನೂ ಆದ । **ಅಭ್ಯಾವರ್ತೀ**—ಅಭ್ಯಾವರ್ತಿಯೆಂಬ ರಾಜನು । **ರಥಿನಃ**—ರಥಸಹಿತವೂ । **ದ್ವಯಾನ್**—ಮಿಥುನರೂಪವುಳ್ಳವೂ । **ವಧೂಮತಃ**—ಸ್ತ್ರೀಸಹಿತವೂ । **ವಿಂಶತಿಂ**—ವಿಂಶತಿ (ಇಪ್ಪತ್ತು) ಸಂಖ್ಯಾಕವೂ ಆದ । **ಗಾಃ**—ಪಶುಗಳನ್ನು । **ಮಹ್ಯಂ**—ನನಗೆ । **ದದಾತಿ**—ಕೊಟ್ಟಿದ್ದಾನೆ । **ಪಾರ್ಥವಾನಾಂ**—ಪೃಥುವಂಶೋತ್ಪನ್ನನಾದ ಈ ಅಭ್ಯಾವರ್ತಿಯ । **ಇಯಂ ದಕ್ಷಿಣಾ**—ಈ ದಕ್ಷಿಣಾರೂಪವಾದ ದಾನವು । **ದುರ್ನಶಾ**—ಯಾರಿಂದಲೂ ನಾಶಪಡಿಸಲು ಸಾಧ್ಯವಿಲ್ಲ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಧನವಂತನೂ, ಸಾರ್ವಭೌಮನೂ, ಜಯಮಾನನ ಪುತ್ರನೂ ಆದ ಅಭ್ಯಾವರ್ತಿಯೆಂಬ ರಾಜನು ರಥಸಹಿತವೂ, ಮಿಥುನರೂಪವುಳ್ಳವೂ, ಸ್ತ್ರೀಸಹಿತವೂ, ವಿಂಶತಿಸಂಖ್ಯಾಕವೂ ಆದ ಪಶುಗಳನ್ನು ನನಗೆ ಕೊಟ್ಟಿದ್ದಾನೆ. ಪೃಥುವಂಶೋತ್ಪನ್ನನಾದ ಈ ಅಭ್ಯಾವರ್ತಿಯ ದಕ್ಷಿಣೆಯು ಯಾರಿಂದಲೂ ನಾಶಪಡಿಸಲು ಸಾಧ್ಯವಿಲ್ಲ.

## English Translation.

The opulent supreme sovereign Abhyavartin, the son of Chayamana, presents, Agni, to me two damsels riding in cars, and twenty cows: this donation of the descendent of Prithu cannot be destroyed.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಅಭ್ಯಾವರ್ತಿ ಎಂಬ ರಾಜನು ಪೃಥುವಂಶೋತ್ಪನ್ನನೆಂದೂ, ಇವನು ಈ ಸೂಕ್ತದ್ರಷ್ಟೃವಾದ ಭರದ್ವಾಜಋಷಿಗೆ ರಥ, ಗೋವು ಮೊದಲಾದವುಗಳನ್ನು ಕೊಟ್ಟನೆಂದೂ ವಿವರಿಸಿ, ಆ ರಾಜನ ದಾನಸ್ತುತಿಯ ಪ್ರಶಂಸೆಯನ್ನೂ ವಿವರಿಸಲಾಗಿದೆ. ಈ ಋಕ್ಕಿನಲ್ಲಿ ಭರದ್ವಾಜಋಷಿಯು ಈ ದಾನದ ವಿಷಯವನ್ನು ಅಗ್ನಿಗೆ ಹೇಳಿದ್ದಾನೆ.

# ಇಪ್ಪತ್ತೆಂಟನೆಯ ಸೂಕ್ತವು

## ಪೀಠಿಕೆ

ಈ ಸೂಕ್ತದಲ್ಲಿ ಗೋವುಗಳನ್ನು ಸ್ತುತಿಸಲಾಗಿದೆ. ಗೋವುಗಳಲ್ಲಿ ಆರ್ಯರೂ, ಋಷಿಗಳೂ ಯಾವ ವಿಧವಾದ ಪೂಜ್ಯಭಾವನೆಯನ್ನೂ, ಪ್ರೀತ್ಯಾದರ ಗೌರವಗಳನ್ನೂ ಇಟ್ಟಿದ್ದರೆಂದೂ ಅವುಗಳನ್ನು ಅತ್ಯಾಸಕ್ತಿಯಿಂದ ಕಾಪಾಡುತ್ತಿದ್ದರೆಂದೂ ಈ ಸೂಕ್ತದಲ್ಲಿರುವ ವಿವರಣೆಗಳಿಂದ ವ್ಯಕ್ತವಾಗುವುದು. ಹಿಂದಿನಿಂದ ಬಂದ ಆ ಪೂಜ್ಯಭಾವನೆಯೇ ಈಗಲೂ ಸ್ವಲ್ಪಮಟ್ಟಿಗೆ (ಹಿಂದಿನಷ್ಟು ಇಲ್ಲ) ಭಾರತೀಯರಲ್ಲಿ-ಅದರಲ್ಲೂ ಆಸ್ತಿಕರಲ್ಲಿ-ಇರುವುದು. ಈ ನಮ್ಮ ಭಾರತ

ದೇಶದಲ್ಲಿ ಮಾತ್ರ ಗೋವನ್ನು ಪೂಜ್ಯಭಾವನೆಯಿಂದ ಗೌರವಿಸುತ್ತಾರೆ. ಇತರ ದೇಶಗಳಲ್ಲಿ ಗೋವುಗಳಿಂದ ದೊರೆಯುವ ಪ್ರಯೋಜನಗಳಿಗಾಗಿ ಅವುಗಳನ್ನು ಸಾಕುತ್ತಾರೆ. ಆದರೆ ವಸ್ತುಸ್ಥಿತಿಯು ಕ್ರಮೇಣ ವ್ಯತ್ಯಸ್ತವಾಗುತ್ತಿದೆ. ಈಗ ನಾವು ಆಹಾರಕ್ಕಾಗಿ ಉಪಯೋಗಿಸುತ್ತಿರುವ ಹಾಲು, ಮೊಸರು, ತುಪ್ಪ ಮೊದಲಾದ ವಸ್ತುಗಳು ಗೋವುಗಳಿಂದ ನಮಗೆ ನೇರವಾಗಿ ದೊರಕುವವು. ಇದಲ್ಲದೆ ನಾವು ಪ್ರತಿದಿನವೂ ಭುಜಿಸುತ್ತಿರುವ ಅನ್ನಾದ್ಯಾಹಾರಗಳೂ, ಉಪಯೋಗಿಸುತ್ತಿರುವ ವಸ್ತ್ರಾದಿಗಳೂ (ಬಟ್ಟೆಗಳು) ಅವುಗಳ ಶ್ರಮದ ಫಲವಾಗಿಯೇ ದೊರೆಯುವವು ಎಂಬ ವಿಷಯವನ್ನು ಅನೇಕರು ಯೋಚಿಸದಿರುವುದು ವಿಷಾದಕರವು. ಹೇಗೆಂದರೆ ನಮಗೆ ಪ್ರತಿದಿನವೂ ಬೇಕಾದ ಭತ್ತ ಮತ್ತು ಇತರ ಧಾನ್ಯಗಳು, ಬಟ್ಟೆಗಾಗಿ ಬೇಕಾಗುವ ಹತ್ತಿ ಇವೆಲ್ಲವೂ ಭೂಮಿಯಲ್ಲಿ ಬೆಳೆಯುವುದರಿಂದ ದೊರೆಯುತ್ತವೆ. ಭೂಮಿಯಲ್ಲಿ ಬೆಳೆಯಬೇಕಾದರೆ ಸರಿಯಾದ ವ್ಯವಸಾಯವು ಅವಶ್ಯಕವು. ಆ ವ್ಯವಸಾಯವು ಈ ದೇಶದಲ್ಲಿ ದನಗಳಿಲ್ಲದೆ ಸಾಧ್ಯವಿಲ್ಲ. ಆದುದರಿಂದ ನಾವು ಪಡೆಯುತ್ತಿರುವ ಸೌಲಭ್ಯಗಳಿಗಾಗಿಯೂ ಅತ್ಯವಶ್ಯಕವಾದ ಆಹಾರವಸ್ತ್ರಾದಿಗಳಿಗಾಗಿಯೂ ಗೋವುಗಳನ್ನು ಕೃತಜ್ಞತೆಯಿಂದ ಕಾಣಬೇಕಾದುದು ನಮ್ಮ ಕರ್ತವ್ಯವು. ಈ ಕರ್ತವ್ಯವು ಈಗ ಎಂದರೆ ಈ ಕಾಲದಲ್ಲಿ ಅದೂ ನಮ್ಮ ದೇಶದಲ್ಲಿ ಸರಿಯಾಗಿ ಪಾಲಿಸಲ್ಪಡುತ್ತಿಲ್ಲವೆಂಬ ವಿಷಯವನ್ನು ನಾವು ಅತಿ ವಿಷಾದದಿಂದ ಹೇಳಬೇಕಾಗಿದೆ

॥ ಸಾಯಣಭಾಷ್ಯಂ ॥

**ಆ ಗಾವ ಇತ್ಯಷ್ಟರ್ಚಂ ಪಂಚಮಂ ಸೂಕ್ತಂ। ಅತ್ರೇಯಮನುಕ್ರಮಣಿಕಾ। ಆ ಗಾವೋ ಗವ್ಯಂ ದ್ವಿತೀಯ್ಯೈಂದ್ರೀ ವಾಂತ್ಯಶ್ಚ ಪಾದೋಽಂತ್ಯಾನುಷ್ಟುಪ್ ಜಾಗತಸ್ತ್ರ್ಯೃಚೋ ದ್ವಿತೀಯಾದಿರಿತಿ। ಭರದ್ವಾಜ ಋಷಿಃ। ಇಂದ್ರೋ ಯಜ್ವನ ಇತ್ಯಾದ್ಯಸ್ತ್ರ್ಯೃಚೋ ಜಾಗತಃ। ಉಪೇದಮಿತ್ಯಂತ್ಯಾನುಷ್ಟುಪ್ ಶಿಷ್ಟಾಶ್ಚತಸ್ರಸ್ತ್ರಿಷ್ಟುಭಃ। ಕೃತ್ಸ್ನಸ್ಯ ಗೌರ್ದೇವತಾ ದ್ವಿತೀಯಾಯಾಃ ಸೂಕ್ತಾಂತ್ಯಪಾದಸ್ಯ ಚ ವಿಕಲ್ಪೇನೇಂದ್ರೋ ದೇವತಾ॥ ಗವಾಮುಪಸ್ಥಾನ ಏತತ್ಸೂಕ್ತಂ। ಸೂತ್ರಿತಂ ಚ। ಆಗಾವೀಯಮೇಕೇ। ಆ. ಗೃ. ೨-೧೦-೭। ಇತಿ॥**

ಅನುವಾದವು—**ಆ ಗಾವಃ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಐದನೆಯ ಸೂಕ್ತವು. ಇದರಲ್ಲಿ ಎಂಟು ಋಕ್ಕುಗಳಿರುವುವು. ಅನುಕ್ರಮಣಿಕೆಯಲ್ಲಿ, **ಆ ಗಾವೋ ಗವ್ಯಂ ದ್ವಿತೀಯ್ಯೈಂದ್ರೀ ವಾಂತ್ಯಶ್ಚ ಪಾದೋಽಂತ್ಯಾನುಷ್ಟುಪ್ ಜಾಗತಸ್ತ್ರ್ಯೃಚೋ ದ್ವಿತೀಯಾದಿಃ** ಎಂದು ಹೇಳಿರುವುದು. ಈ ಸೂಕ್ತಕ್ಕೆ ಭರದ್ವಾಜನು ಋಷಿಯು; ಒಟ್ಟು ಸೂಕ್ತಕ್ಕೆಲ್ಲಾ ಗೌಃ (ಗೋವು) ದೇವತೆಯಾಗಿದ್ದರೂ ಎರಡನೆಯ ಋಕ್ಕಿಗೂ ಕೊನೆಯ ಋಕ್ಕಿನ ಕೊನೆಯ ಪಾದಕ್ಕೂ ವಿಕಲ್ಪವಾಗಿ ಇಂದ್ರನೂ ದೇವತೆಯು. ಈ ಸೂಕ್ತದ ಇಂದ್ರೋ ಯಜ್ವನೇ (ಎರಡನೆಯ ಋಕ್ಕು) ಎಂದು ಮೊದಲಾಗುವ ಮೂರು ಋಕ್ಕುಗಳು ಜಗತೀಛಂದಸ್ಕವು. ಉಪೇದಂ ಎಂಬ ಕೊನೆಯ ಋಕ್ಕು ಅನುಷ್ಟುಪ್ ಛಂದಸ್ಕವು. ಉಳಿದ ನಾಲ್ಕು ಋಕ್ಕುಗಳು ತ್ರಿಷ್ಟುಪ್‌ಛಂದಸ್ಕವು. ಗೋದೇವತೆಗಳ ಉಪಸ್ಥಾನದಲ್ಲಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನ ಗೃಹ್ಯಸೂತ್ರದ **ಆಗಾವೀಯಮೇಕೇ** ಎಂಬ ಸೂತ್ರದಿಂದ (ಆ. ಗೃ. ೨-೧೦ ೭) ವಿವೃತವಾಗಿರುವುದು.

## ಸೂಕ್ತ—೨೮

ಮಂಡಲ—೬ || ಅನುವಾಕ—೩ || ಸೂಕ್ತ—೨೮ ||
ಅಷ್ಟಕ—೪ || ಅಧ್ಯಾಯ—೬ || ವರ್ಗ—೨೫ ||
|| ಸೂಕ್ತದಲ್ಲಿರುವ ಋಕ್ಸಂಖ್ಯೆ—೮ ||
|| ಋಷಿಃ—ಭರದ್ವಾಜೋ ಬಾರ್ಹಸ್ಪತ್ಯಃ ||
|| ದೇವತಾ—೧, ೩–೭, ೮ ರಲ್ಲಿ ೧, ೨, ೩ ಪಾದಗಳು. ಗಾವಃ | ೨, ೮ ರಲ್ಲಿ ೪ ನೆಯ ಪಾದ. ಗಾವ ಇಂದ್ರೋ ವಾ ||
|| ಛಂದಃ—೧, ೫–೭. ತ್ರಿಷ್ಟುಪ್ | ೨–೪. ಜಗತೀ | ೮. ಅನುಷ್ಟುಪ್ ||

| ಸಂಹಿತಾಪಾಠಃ |

ಆ ಗಾವೋ ಅಗ್ಮನ್ನುತ ಭದ್ರಮಕ್ರನ್ತ್ಸೀದಂತು ಗೋಷ್ಠೇ ರಣಯಂತ್ವಸ್ಮೇ |
ಪ್ರಜಾವತೀಃ ಪುರುರೂಪಾ ಇಹ ಸ್ಯುರಿಂದ್ರಾಯ ಪೂರ್ವೀರುಷಸೋ ದುಹಾನಾಃ || ೧ ||

|| ಪದಪಾಠಃ ||

ಆ | ಗಾವಃ | ಅಗ್ಮನ್ | ಉತ | ಭದ್ರಂ | ಅಕ್ರನ್ | ಸೀದಂತು | ಗೋಽಸ್ಥೇ | ರಣಯಂತು | ಅಸ್ಮೇ ಇತಿ |
ಪ್ರಜಾಽವತೀಃ | ಪುರುಽರೂಪಾಃ | ಇಹ | ಸ್ಯುಃ | ಇಂದ್ರಾಯ | ಪೂರ್ವೀಃ | ಉಷಸಃ | ದುಹಾನಾಃ ||

|| ಸಾಯಣಭಾಷ್ಯಂ ||

ಗಾವ ಆಗ್ಮನ್ | ಅಸ್ಮದೀಯಂ ಗೃಹಮಾಗಚ್ಛಂತು | ಉತಾಪಿ ಚ ಭದ್ರಂ ಭಜನೀಯಂ ಶುಭಮಕ್ರನ್ | ಕುರ್ವಂತು | ತಥಾ ಗೋಷ್ಠೇಽಸ್ಮದೀಯೇ ಗವಾಂ ಸ್ಥಾನೇ ಸೀದಂತು | ಉಪವಿಶಂತು | ತದನಂತರಮಸ್ಮೇ ಅಸ್ಮಾಸು ರಣಯಂತು | ರಮಂತಾಂ | ಅಪಿ ಚೇಹಾಸ್ಮಿನ್ ಗೋಷ್ಠೇ ಪುರುರೂಪಾ ನಾನಾವರ್ಣಾ ಗಾವಃ ಪ್ರಜಾವತೀಃ ಪ್ರಜಾವತ್ಯಃ ಸಂತತಿಸಹಿತಾಃ ಪೂರ್ವೀರ್ಬಹ್ವ್ಯ ಇಂದ್ರಾಯೇಂದ್ರಾರ್ಥಮುಷಸ ಉಷಃಕಾಲಾನ್ ಪ್ರತಿ ದುಹಾನಾ ದೋಹಮಾನಾಃ ಸ್ಯುಃ | ಭವೇಯುಃ ||

| ಪ್ರತಿಪದಾರ್ಥ ||

**ಗಾವಃ**—ಗೋವುಗಳು| **ಆ ಅಗ್ಮನ್**—ನಮ್ಮ ಮನೆಗೆ ಬರಲಿ| **ಉತ**—ಮತ್ತು| **ಭದ್ರಂ**—ಮಂಗಳನ್ನು| **ಅಕ್ರನ್**—ಉಂಟುಮಾಡಲಿ | **ಗೋಷ್ಠೇ**—ನಮ್ಮ ಕೊಟ್ಟಿಗೆಯಲ್ಲಿ | **ಸೀದಂತು**—ಬಂದು ಮಲಗಲಿ | **ಅಸ್ಮೇ**—ನಮ್ಮಲ್ಲಿ | **ರಣಯಂತು**—ಪ್ರೀತಿಯುಳ್ಳವಾಗಿರಲಿ (ಸಂತೋಷದಾಯಕವಾಗಿರಲಿ) | **ಇಹ**—ಈ ಕೊಟ್ಟಿಗೆಯಲ್ಲಿ| **ಪುರುರೂಪಾಃ**—ನಾನಾವರ್ಣವುಳ್ಳವೂ | **ಪ್ರಜಾವತೀಃ**—ಒಳ್ಳೆಯ ಕರುಗಳುಳ್ಳವೂ | **ಪೂರ್ವೀಃ**—ಬಹು

**ಸಂಖ್ಯಾಕವೂ** ಆದ ಗೋವುಗಳು । **ಇಂದ್ರಾಯ**— ಇಂದ್ರಾರ್ಥವಾಗಿ । **ಉಷಸಃ**— ಉಷಃಕಾಲಗಳಲ್ಲಿ । **ದುಹಾನಾಃ**— ಹಾಲನ್ನು ಕರೆಯುತ್ತಾ । **ಸ್ಯುಃ**— ಇರಲಿ.

॥ ಭಾವಾರ್ಥ ॥

ನಮ್ಮಲ್ಲಿಗೆ ಗೋವುಗಳು ಬಂದು ತುಂಬಲಿ. ನಮಗೆ ಮಂಗಳವನ್ನುಂಟುಮಾಡಲಿ. ನಮ್ಮ ಕೊಟ್ಟಿಗೆಯಲ್ಲಿ ಬಂದು ಮಲಗಲಿ. ಅವು ನಮ್ಮಲ್ಲಿ ಪ್ರೀತಿಯನ್ನು ತೋರಿಸಿ ನಮ್ಮನ್ನು ಸುಖಪಡಿಸಲಿ. ನಾನಾವರ್ಣವುಳ್ಳವೂ, ಒಳ್ಳೆಯ ಕರುಗಳುಳ್ಳವೂ, ಬಹುಸಂಖ್ಯಾಕವೂ ಆದ ಗೋವುಗಳು ಇಂದ್ರಾರ್ಥವಾಗಿ ಉಷಃಕಾಲಗಳಲ್ಲಿ ಹಾಲನ್ನು ಕರೆಯುತ್ತಿರಲಿ.

## English Translation.

May the cows come and bring good fortune: let them lie down in (our) stalls and be pleased with us: may the many-coloured cows here be prolific, and yield milk for Indra on many dawns.

|| ವಿಶೇಷವಿಷಯಗಳು ||

ಈ ಋಕ್ಕಿನಲ್ಲಿಯೂ ಮುಂದಿನ ಋಕ್ಕುಗಳಲ್ಲಿಯೂ ಅರ್ಥವಿವರಣೆಯು ಬಹು ಸುಲಭವಾಗಿಯೂ, ಸ್ಪಷ್ಟವಾಗಿಯೂ ಇರುವುದರಿಂದ ವಿಶೇಷ ವಿವರಣೆಯು ಅವಶ್ಯಕವಿಲ್ಲ.

॥ ಸಂಹಿತಾಪಾಠಃ ॥

**ಇಂದ್ರೋ॒ ಯಜ್ವ॑ನೇ ಪೃಣ॒ತೇ ಚ॑ ಶಿಕ್ಷ॒ತ್ಯುಪೇದ್ದ॑ದಾತಿ॒ ನ ಸ್ವಂ ಮು॑ಷಾ॒ಯತಿ ।**
**ಭೂಯೋ॑ಭೂಯೋ ರ॒ಯಿಮಿದ॑ಸ್ಯ ವ॒ರ್ಧಯ॒ನ್ನಭಿ॑ನ್ನೇ ಖಿ॒ಲ್ಯೇ ನಿ ದ॑ಧಾತಿ ದೇವ॒ಯುಂ ॥ ೨ ॥**

|| ಪದಪಾಠಃ ||

**ಇಂದ್ರಃ । ಯಜ್ವ॑ನೇ । ಪೃ॒ಣ॒ತೇ । ಚ॒ । ಶಿ॒ಕ್ಷ॒ತಿ॒ । ಉಪ॑ । ಇತ್ । ದ॒ದಾ॒ತಿ॒ । ನ । ಸ್ವಂ । ಮು॒ಷಾ॒ಯ॒ತಿ॒ ।**
**ಭೂಯಃ॑ಽಭೂಯಃ । ರ॒ಯಿಂ । ಇತ್ । ಅ॒ಸ್ಯ॒ । ವ॒ರ್ಧಯ॑ನ್ । ಅಭಿ॑ನ್ನೇ । ಖಿ॒ಲ್ಯೇ । ನಿ । ದ॒ಧಾ॒ತಿ॒ । ದೇ॒ವ॒ಽಯುಂ ॥ ೨ ॥**

॥ ಸಾಯಣಭಾಷ್ಯಂ ॥

**ಇಂದ್ರೋ ಯಜ್ವನೇ ಯಜನಶೀಲಾಯ ಪೃಣತೇ ಚ ಸ್ತುತಿಭಿಃ ಪ್ರೀಣಯಿತ್ರೇ ಚ ಸ್ತೋತ್ರೇ ಶಿಕ್ಷತಿ । ಅಪೇಕ್ಷಿತಂ ಧನಂ ದದಾತಿ । ನ ಕೇವಲಂ ಸಕೃದೇವ ದಾನಮಪಿ ತು ಸರ್ವದೇತ್ಯಾಹ ।**

**ಉಪೇದ್ದದಾತಿ । ಉಪೇತ್ಯ ಸರ್ವದಾ ದದಾತ್ಯೇವ । ಯಜ್ವನಃ ಸ್ತೋತುಶ್ಚ ಸ್ವಂ ಸ್ವಭೂತಂ ಧನಂ ನ ಮುಷಾಯತಿ । ಕದಾಚಿದಪಿ ನಾಪಹರತಿ । ಅಪಿ ಚಾಸ್ಯೋಭಯವಿಧಸ್ಯ ರಯಿಂ ಧನಮಾತ್ಮನಾ ದತ್ತಂ ಭೂಯೋ ಭೂಯಃ ಪುನಃಪುನರ್ವರ್ಧಯನ್ನಿತ್ ವೃದ್ಧಿಂ ಪ್ರಾಪಯನ್ನೇವ ದೇವಯುಂ ದೇವಮಿಂದ್ರಮಾತ್ಮನ ಇಚ್ಛಂತಂ ತಂ ಜನಮಭಿನ್ನೇ ಶತ್ರುಭಿರಭೇದ್ಯೇ ಖಿಲ್ಯೇ । ಖಿಲಮಪ್ರತಿಹತಂ ಸ್ಥಾನಂ । ತದೇವ ಖಿಲ್ಯಂ ॥ ಸ್ವಾರ್ಥಿಕೋ ಯತ್ ॥ ಅನ್ಯೈರ್ಗಂತುಮಶಕ್ಯೇ ಸ್ಥಲೇ ನಿ ದಧಾತಿ । ನಿಕ್ಷಿಪತಿ । ನಿವಾಸಯತೀತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಇಂದ್ರಃ**—ಇಂದ್ರನು । **ಯಜ್ವನೇ**—ಯಾಗಮಾಡುಪವನೂ । **ಶೃಣತೇ**—ಸ್ತುತಿಸುವವನೂ ಆದ ಯಜಮಾನನಿಗೆ । **ಶಿಕ್ಷತಿ**—ಅಪೇಕ್ಷಿತವಾದ ಧನವನ್ನು ಕೊಡುತ್ತಾನೆ । **ಉಪೇತ್**—ಅವನನ್ನು ತಾನೇ ಸಮೀಪಿಸಿ । **ದದಾತಿ**—ಕೊಡುತ್ತಾನೆ । **ಸ್ವಂ**—ತಾನು ಕೊಟ್ಟ ಧನವನ್ನು । **ನ ಮುಷಾಯತಿ**—ಪುನಃ ಅಪಹರಿಸುವುದಿಲ್ಲ । **ಅಸ್ಯ**—ಈ ಯಜಮಾನನ । **ರಯಿಂ**—ಧನವನ್ನು । **ಭೂಯೋಭೂಯಃ**—ಪುನಃಪುನಃ । **ವರ್ಧಯನ್ ಇತ್**—ವೃದ್ಧಿಯನ್ನು ಹೊಂದುವಂತೆ ಮಾಡುತ್ತಲೇ । **ದೇವಯುಂ**—ದೇವತಾಪೂಜಕನಾದ ಅವನನ್ನು । **ಅಭಿನ್ನೇ**—ಶತ್ರುಗಳಿಂದ ಒಡೆಯಲು ಸಾಧ್ಯವಿಲ್ಲದ । **ಖಿಲ್ಯೇ**— ರಕ್ಷಣಾಪ್ರದೇಶದಲ್ಲಿ । **ನಿ ದಧಾತಿ**—ಇಟ್ಟಿರುತ್ತಾನೆ.

॥ ಭಾವಾರ್ಥ ॥

ಇಂದ್ರನು ಯಜ್ಞಕರ್ತನೂ, ಸ್ತುತಿಕರ್ತನೂ ಆದ ಯಜಮಾನನಿಗೆ ಅಪೇಕ್ಷಿತವಾದ ಧನವನ್ನು ಕೊಡುತ್ತಾನೆ. ಅವನನ್ನು ತಾನೇ ಸಮೀಪಿಸಿಕೊಡುತ್ತಾನೆ. ತಾನು ಕೊಟ್ಟ ಧನವನ್ನು ಪುನಃ ಅಪಹರಿಸುವುದಿಲ್ಲ. ಈ ಯಜಮಾನನ ಧನವನ್ನು ಪುನಃಪುನಃ ವೃದ್ಧಿಯನ್ನು ಹೊಂದುವಂತೆ ಮಾಡುತ್ತಲೇ ದೇವತಾಪೂಜಕನಾದ ಅವನನ್ನು ಶತ್ರುಗಳಿಂದ ಪ್ರವೇಶಿಸಲು ಸಾಧ್ಯವಿಲ್ಲದ ರಕ್ಷಣಾಪ್ರದೇಶದಲ್ಲಿ ಇಟ್ಟಿರುತ್ತಾನೆ.

## English Translation.

Indra grants the desires of the man who offers to him sacrifice and praise; he ever bestows upon him wealth, and deprives him not of that which is his own: again and again increasing his riches, he places the devout man in an inaccessible fortress.

॥ ಸಂಹಿತಾಪಾಠಃ ॥

**ನ ತಾ ನಶಂತಿ ನ ದಭಾತಿ ತಸ್ಕರೋ ನಾಸಾಮಾಮಿತ್ರೋ ವ್ಯಥಿರಾ ದಧರ್ಷತಿ।**
**ದೇವಾಂಶ್ಚ ಯಾಭಿರ್ಯಜತೇ ದದಾತಿ ಚ ಜ್ಯೋಗಿತ್ತಾಭಿಃ ಸಚತೇ ಗೋಪತಿಃ ಸಹ ॥ ೩ ॥**

॥ ಪದಪಾಠಃ ॥

ನ । ತಾಃ । ನಶಂತಿ । ನ । ದಭಾತಿ । ತಸ್ಕರಃ । ನ । ಆಸಾಂ । ಅಮಿತ್ರಃ । ವ್ಯಥಿಃ । ಆ । ದಧರ್ಷತಿ । ದೇವಾನ್ । ಚ । ಯಾಭಿಃ । ಯಜತೇ । ದದಾತಿ । ಚ । ಜ್ಯೋಕ್ । ಇತ್ । ತಾಭಿಃ । ಸಚತೇ । ಗೋಽಪತಿಃ । ಸಹ ॥ ೩ ॥

॥ ಸಾಯಣಭಾಷ್ಯಂ ॥

ದೈವೀನಾಂ ಹವಿಃಷು ನ ತಾ ನಶಂತಿ ನ ತಾ ಅರ್ವೇತಿ ಗೋದೇವತಾಯಾ ಯಾಜ್ಯಾಪುರೋನುವಾಕ್ಯೇ । ಆ. ೬-೧೪ ॥ ಗೋಸ್ತೋಮೇಽಪಿ ಮರುತ್ವತೀಯನಿಷ್ಕೇವಲ್ಯಯೋರೇತೇ ಸೂಕ್ತಮುಖೀಯೇ । ಸೂತ್ರಿತಂ ಚ । ನ ತಾ ಅರ್ವಾ ರೇಣುಕಕಾಟೋ ಅಶ್ನುತೇ ನ ತಾ ನಶಂತಿ ನ ದಭಾತಿ ತಸ್ಕರಃ । ಆ. ೯-೫ । ಇತಿ ॥

ತಾ ಗಾವೋ ನ ನಶಂತಿ । ಅಸ್ಮತ್ಸಕಾಶಾನ್ನ ನಶ್ಯಂತು । ಕಿಂಚ ತಸ್ಕರಶ್ಚೋರೋಽಪಿ ನ ದಭಾತಿ । ಅಸ್ಮದೀಯಾ ಗಾ ನ ಹಿಂಸ್ಯಾತ್ । ತಥಾಮಿತ್ರೋಽಮಿತ್ರಸ್ಯ ಶತ್ರೋಃ ಸಂಬಂಧಿ ವ್ಯಥಿಃ ಶಸ್ತ್ರಮಾಸಾಮಿಮಾ ಗಾ ನಾ ದಧರ್ಷತಿ । ನಾಕ್ರಮತು । ಗೋಪತಿರೇವಂಭೂತಾನಾಂ ಗವಾಂ ಸ್ವಾಮೀ ಯಜಮಾನೋ ಯಾಭಿರ್ಗೋಭಿರ್ದೇವಾಂಶ್ಚೇಂದ್ರಾದೀನುದ್ದಿಶ್ಯ ಯಜತೇ ಯಜನಂ ಕರೋತಿ । ಯಾ ಗಾ ಇಂದ್ರಾರ್ಥಂ ದದಾತಿ ಚ ಪ್ರಯಚ್ಛತಿ ಚ ತಾಭಿಸ್ತಾದೃಶೀಭಿರ್ಗೋಭಿಃ ಸಹ ಜ್ಯೋಗಿತ್ ಚಿರಕಾಲಮೇವ ಸಚತೇ । ಸಂಗಚ್ಛತಾಂ ॥

॥ ಪ್ರತಿಪದಾರ್ಥ ॥

**ತಾಃ**—ನಮ್ಮ ಗೋವುಗಳು । **ನ ನಶಂತಿ**—ನಾಶವಾಗದಿರಲಿ । **ತಸ್ಕರಃ**—ಚೋರನು । **ನ ದಭಾತಿ**—ಕದಿಯದಿರಲಿ । **ಅಮಿತ್ರಃ**—ಶತ್ರುಸಂಬಂಧಿಯಾದ । **ವ್ಯಥಿಃ**—ಶಸ್ತ್ರವು । **ಆಸಾಂ**—ಈ ಗೋವುಗಳನ್ನು । **ನ ಆ ದಧರ್ಷತಿ**—ಆಕ್ರಮಿಸದಿರಲಿ । **ಗೋಪತಿಃ**—ಈ ಗೋವುಗಳ ಪತಿಯಾದ ಯಜಮಾನನು । **ಯಾಭಿಃ**—ಯಾವ ಗೋವುಗಳ ಸಹಾಯದಿಂದ । **ದೇವಾಂಶ್ಚ**—ಇಂದ್ರಾದಿದೇವತೆಗಳನ್ನುದ್ದೇಶಿಸಿ । **ಯಜತೇ**—ಯಜ್ಞವನ್ನಾಚರಿಸುವನೋ । **ದದಾತಿ ಚ**—ಮತ್ತು ಹವಿಸ್ಸನ್ನು ಅರ್ಪಿಸುವನೋ । **ತಾಭಿಃ ಸಹ**—ಆ ಗೋವುಗಳೊಡನೆ । **ಜ್ಯೋಗಿತ್**—ಚಿರಕಾಲ । **ಸಚತೇ**—ಸೇರಿಕೊಂಡಿರಲಿ.

॥ ಭಾವಾರ್ಥ ॥

ನಮ್ಮ ಗೋವುಗಳು ನಾಶವಾಗದಿರಲಿ. ಅವನ್ನು ಚೋರನು ಕದಿಯದಿರಲಿ. ಶತ್ರುಸಂಬಂಧಿಯಾದ ಶಸ್ತ್ರವು ಈ ಗೋವುಗಳಮೇಲೆ ಬೀಳದಿರಲಿ. ಈ ಗೋವುಗಳ ಪತಿಯಾದ ಯಜಮಾನನು ಯಾವ ಗೋವುಗಳ ಸಹಾಯದಿಂದ ಇಂದ್ರಾದಿದೇವತೆಗಳನ್ನುದ್ದೇಶಿಸಿ ಯಜ್ಞವನ್ನಾಚರಿಸುವನೋ ಮತ್ತು ಹವಿಸ್ಸನ್ನರ್ಪಿಸುವನೋ ಆ ಗೋವುಗಳೊಡನೆ ಚಿರಕಾಲ ಸೇರಿಕೊಂಡು ಸುಖವಾಗಿರಲಿ.

## English Translation.

Let not the Cows be lost: let not thief carry them away: let no hostile weapon fall upon them: may the master of the cattle be long possessed of those with which he sacrifices, and which he presents to the gods.

॥ ವಿಶೇಷವಿಷಯಗಳು ॥

ದೈವಿಯೆಂಬ ಹವಿಸ್ಸನ್ನು ಹೋಮಮಾಡುವಾಗ **ನ ತಾ ನಶಂತಿ** (೩ನೇ ಋಕ್ಕು) **ನ ತಾ ಅರ್ವಾ** (೪ನೆಯ ಋಕ್ಕು) ಎಂಬ ಎರಡು ಋಕ್ಕುಗಳನ್ನು ಗೋದೇವತೆಯ ಯಾಜ್ಯಾ ಮತ್ತು ಪುರೋನುವಾಕ್ಯಾಮಂತ್ರಗಳನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದಲ್ಲಿ (ಆ. ೬–೧೪) ವಿವೃತವಾಗಿದೆ. ಮತ್ತು ಗೋಸ್ತೋಮದಲ್ಲಿಯೂ ಸಹ ಮರುತ್ವತೀಯ ಮತ್ತು ನಿಷ್ಕೇವಲ್ಯ ಶಸ್ತ್ರಮಂತ್ರಗಳ ಪ್ರಾರಂಭಕಾಲದಲ್ಲಿ ಈ ಋಕ್ಕುಗಳನ್ನು ಸೂಕ್ತದ ಪ್ರಾರಂಭ ಋಕ್ಕುಗಳನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ನ ತಾ ಅರ್ವಾ ರೇಣುಕಕಾಟೋ ಅಶ್ನುತೇ ನ ತಾ ನಶಂತಿ ನ ದಭಾತಿ ತಸ್ಕರಃ** ಎಂಬ ಸೂತ್ರದಿಂದ (ಆ. ೯-೫) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ನ ತಾ ಅರ್ವಾ ರೇಣುಕಕಾಟೋ ಅಶ್ನುತೇ ನ ಸಂಸ್ಕೃತತ್ರಮುಪ ಯಂತಿ
ತಾ ಅಭಿ ।
ಉರುಗಾಯಮಭಯಂ ತಸ್ಯ ತಾ ಅನು ಗಾವೋ ಮರ್ತಸ್ಯ ವಿ ಚರಂತಿ
ಯಜ್ವನಃ ॥ ೪ ॥

॥ ಪದಪಾಠಃ ॥

ನ । ತಾಃ । ಅರ್ವಾ । ರೇಣುಽಕಕಾಟಃ । ಅಶ್ನುತೇ । ನ । ಸಂಸ್ಕೃತಽತ್ರಂ । ಉಪ । ಯಂತಿ । ತಾಃ । ಅಭಿ ।

ಉರುಽಗಾಯಂ । ಅಭಯಂ । ತಸ್ಯ । ತಾಃ । ಅನು । ಗಾವಃ । ಮರ್ತಸ್ಯ । ವಿ । ಚರಂತಿ । ಯಜ್ವನಃ ॥೪॥

॥ ಸಾಯಣಭಾಷ್ಯಂ ॥

**ರೇಣುಕಕಾಟೋ ರೇಣೋಃ ಪಾರ್ಥಿವಸ್ಯ ರಜಸ ಉದ್ಭೇದಕಃ ॥ ಕಟಿರ್ಭೇದನಕರ್ಮಾ ॥ ಅರ್ವಾ ಯುದ್ಧಾರ್ಥಮಾಗತೋಽಶ್ವೋ ತಾ ಗಾ ನಾಶ್ನುತೇ । ನ ಪ್ರಾಪ್ನುಯಾತ್ । ತಥಾ ತಾ ಗಾವಃ ಸಂಸ್ಕೃತತ್ರಂ ವಿಶಸನಾದಿಸಂಸ್ಕಾರಂ ನಾಭ್ಯುಪ ಯಂತಿ । ನಾಭಿಗಚ್ಛಂತು । ಅಪಿ ಚ ತಾ ಗಾವೋ**

ಯಜ್ವನೋ ಯಾಗಶೀಲಸ್ಯ ತಸ್ಯ ಮರ್ತಸ್ಯ ಮನುಷ್ಯಸ್ಯೋರುಗಾಯಂ ವಿಸ್ತೀರ್ಣಗಮನಮಭಯಂ ಭಯವರ್ಜಿತಂ ಪ್ರದೇಶಮನೂದ್ದಿಶ್ಯ ವಿ ಚರಂತಿ । ವಿಶೇಷೇಣ ಗಚ್ಛಂತು ॥

॥ ಪ್ರತಿಪದಾರ್ಥ ॥

**ರೇಣುಕಕಾಟಃ**—ಧೂಳನ್ನು ಎಬ್ಬಿಸತಕ್ಕ । **ಅರ್ವಾ**—ಅಶ್ವವು । **ತಾಃ**—ಆ ಗೋವುಗಳನ್ನು । **ನ ಅಶ್ನುತೇ**—ಎದುರಿಸಿ ಅವುಗಳ ಮೇಲೆ ಮುನ್ನುಗ್ಗದಿರಲಿ । **ತಾಃ**—ಅದೇ ಗೋವುಗಳು । **ಸಂಸ್ಕೃತತ್ರಂ**—ವಿಶಸನಾದಿ ಸಂಸ್ಕಾರವನ್ನು (ಯಜ್ಞಪಶುತ್ವವನ್ನು) । **ನ ಅಭ್ಯುಪಯಂತಿ**—ಹೊಂದದಿರಲಿ । **ತಾಃ ಗಾವಃ**—ಅದೇ ಗೋವುಗಳು । **ಯಜ್ವನಃ**—ಯಾಗಮಾಡುವ । **ತಸ್ಯ ಮರ್ತಸ್ಯ**—ಮಾನವನ । **ಉರುಗಾಯಂ**—ವಿಸ್ತೃತವಾಗಿ ಸಂಚರಿಸಲು ಯೋಗ್ಯವಾದುದೂ । **ಅಭಯಂ**—ಭಯವರ್ಜಿತವಾದುದೂ ಆದ । **ಅನು**—ಪ್ರದೇಶಗಳಲ್ಲಿ। **ವಿ ಚರಂತಿ**—ಸ್ವತಂತ್ರವಾಗಿ ಸಂಚರಿಸಲಿ

॥ ಭಾವಾರ್ಥ ॥

ಧೂಳನ್ನು ಎಬ್ಬಿಸುವ ಗಡುಸಾದ ಅಶ್ವವು ನಮ್ಮ ಆ ಗೋವುಗಳನ್ನು ಎದುರಿಸಿ ಅವುಗಳ ಮೇಲೆ ಬೀಳದಿರಲಿ. ಅದೇ ಗೋವುಗಳು ಯಜ್ಞದಲ್ಲಿ ಪಶುಗಳಾಗಿದ್ದು ಆ ಛೇದನವನ್ನು ಹೊಂದದೇ ಇರಲಿ. ಮತ್ತು ಯಜ್ಞಕರ್ತನ ವಿಸ್ತೃತವಾಗಿ ಸಂಚರಿಸಲು ಯೋಗ್ಯವಾದವೂ ಭಯವರ್ಜಿತವೂ ಆದ ಪ್ರದೇಶಗಳಲ್ಲಿ ಸ್ವತಂತ್ರವಾಗಿ ಸಂಚರಿಸಲಿ.

English Translation.

Let not the dust-spurning (war)-horse reach them; nor let them fall in the way of sacrificial consecration: let the cattle of the man who offers sacrifice wander about at large and without fear.

॥ ಸಂಹಿತಾಪಾಠಃ ॥

ಗಾವೋ ಭಗೋ ಗಾವ ಇಂದ್ರೋ ಮೇ ಅಚ್ಛಾನ್ ಗಾವಃ ಸೋಮಸ್ಯ
ಪ್ರಥಮಸ್ಯ ಭಕ್ಷಃ ।
ಇಮಾ ಯಾ ಗಾವಃ ಸ ಜನಾಸ ಇಂದ್ರ ಇಚ್ಛಾಮೀದ್ಧೃದಾ ಮನಸಾ
ಚಿದಿಂದ್ರಂ ॥ ೫ ॥

॥ ಪದಪಾಠಃ ॥

ಗಾವಃ । ಭಗಃ । ಗಾವಃ । ಇಂದ್ರಃ । ಮೇ । ಅಚ್ಛಾನ್ । ಗಾವಃ । ಸೋಮಸ್ಯ । ಪ್ರಥಮಸ್ಯ । ಭಕ್ಷಃ ।
ಇಮಾಃ । ಯಾಃ । ಗಾವಃ । ಸಃ । ಜನಾಸಃ । ಇಂದ್ರಃ । ಇಚ್ಛಾಮಿ । ಇತ್ । ಹೃದಾ । ಮನಸಾ । ಚಿತ್ ।
ಇಂದ್ರಂ ॥ ೫ ॥

॥ ಸಾಯಣಭಾಷ್ಯಂ ॥

ಗಾವ ಏವ ಮಹ್ಯಂ ಭಗೋ ಧನಂ ಭವಂತು । ಇಂದ್ರಶ್ಚ ಮೇ ಮಹ್ಯಂ ಗಾವೋ ಗಾ ಅಚ್ಛಾನ್। ಯಚ್ಛತು । ಗಾವಃ ಪ್ರಥಮಸ್ಯ ಹವಿಷಾಂ ಶ್ರೇಷ್ಠಸ್ಯ ಸೋಮಸ್ಯ ಭಕ್ಷೋ ಭಕ್ಷಣಂ ಭವಂತು । ಅಭಿಷುತಸ್ಯ ಹಿ ಸೋಮಸ್ಯ ಗವ್ಯೇನಾಜ್ಯಾದಿನಾ ಸಂಶ್ರಯಣತ್ವಾತ್। ಹೇ ಜನಾಸೋ ಜನಾ ಇಮಾ ಏವಂಭೂತಾ ಯಾ ಗಾವಃ ಸಂತಿ ಸಃ । ತಾ ಇತ್ಯರ್ಥಃ । ತಾ ಏವ ಗಾವ ಇಂದ್ರೋ ಭವಂತಿ । ದಧಿಘೃತಾದಿರೂಪೇಣೇಂದ್ರಸ್ಯಾಪ್ಯಾಯನತ್ವಾತ್ । ಏವಂಭೂತಮಿಂದ್ರಂ ಹೃದಾ ಶ್ರದ್ಧಾಯುಕ್ತೇನ ಮನಸಾ ಚಿತ್ ॥ ಚಿದಿತ್ಯಪ್ಯರ್ಥೇ ॥ ಇಚ್ಛಾಮಿಾತ್ । ಕಾಮಯ ಏವ । ಸಾಧನಭೂತಾಭಿರ್ಗೋಭಿರೇವಂಭೂತಮಿಂದ್ರಂ ಯಷ್ಟುಮಿಚ್ಛಾಮಿಾತ್ಯರ್ಥಃ ॥

॥ ಪ್ರತಿಪದಾರ್ಥ ॥

**ಗಾವಃ**—ಗೋವುಗಳು । **ಭಗಃ**—ನನಗೆ ಧನರೂಪವಾಗಿವೆ । **ಇಂದ್ರಃ**—ಇಂದ್ರನು । **ಮೇ**—ನನಗೆ । **ಗಾವಃ**—ಗೋವುಗಳನ್ನು । **ಅಚ್ಛಾನ್**—ಕೊಡಲಿ । **ಗಾವಃ**—ಗೋವುಗಳು । **ಪ್ರಥಮಸ್ಯ**—ಮೊದಲು ಅರ್ಪಿತವಾಗತಕ್ಕ । **ಸೋಮಸ್ಯ**—ಸೋಮಕ್ಕೆ । **ಭಕ್ಷಃ**—ಭಕ್ಷಣವಾಗಿ ಆಗಿರಲಿ । **ಜನಾಸಃ**—ಎಲ್ಲೈ ಮಾನವರೇ । **ಇಮಾಃ**—ಈ ರೀತಿಯಾದ । **ಯಾ ಗಾವಃ**—ಯಾವ ಗೋವುಗಳಿವೆಯೋ । **ಸ ಇಂದ್ರ**—ಅವು ಆ ಇಂದ್ರನ ಸ್ವರೂಪಗಳೇ ಆಗಿವೆ । **ಇಂದ್ರಂ**—ಇಂತಹ ಇಂದ್ರನನ್ನು । **ಹೃದಾ**—ಶ್ರದ್ಧಾಪೂರ್ವಕವಾದ । **ಮನಸಾ ಚಿತ್**—ಮನಸ್ಸಿನೊಡನೆ । **ಇಚ್ಛಾಮಿಾತ್**—ಖಂಡಿತ ಅಪೇಕ್ಷಿಸುತ್ತೇನೆ.

॥ ಭಾವಾರ್ಥ ॥

ಗೋವುಗಳು ನನಗೆ ಧನರೂಪವಾಗಿವೆ. ಇಂದ್ರನು ನನಗೆ ಗೋವುಗಳನ್ನು ಕೊಡಲಿ. ಗೋವುಗಳು ಮೊದಲು ಅರ್ಪಿತವಾಗತಕ್ಕ ಸೋಮಕ್ಕೆ ಕ್ಷೀರಾದಿಗಳನ್ನು ಒದಗಿಸಲಿ. ಎಲ್ಲೈ ಮಾನವರೇ, ಈ ರೀತಿಯಾದ ಯಾವ ಗೋವುಗಳಿವೆಯೋ ಅವು ಆ ಇಂದ್ರನ ಸ್ವರೂಪಗಳೇ ಆಗಿವೆ. ಇಂತಹ ಇಂದ್ರನನ್ನು ಶ್ರದ್ಧಾಪೂರ್ವಕವಾದ ಮನಸ್ಸಿನೊಡನೆ ಖಂಡಿತ ಅಪೇಕ್ಷಿಸುತ್ತೇನೆ.

## English Translation.

May the Cows be (for our) affluence : may Indra grant me cattle : may the cows yeild the food of the first libation : these Cows, oh men, are Indra, the Indra whom I desire with heart and mind.

॥ ಸಂಹಿತಾಪಾಠಃ ॥

ಯೂಯಂ ಗಾವೋ ಮೇದಯಥಾ ಕೃಶಂ ಚಿದಶ್ರೀರಂ ಚಿತ್ಕೃಣುಥಾ ಸುಪ್ರತೀಕಂ ।

ಭದ್ರಂ ಗೃಹಂ ಕೃಣುಥ ಭದ್ರವಾಚೋ ಬೃಹದ್ವೋ ವಯ ಉಚ್ಯತೇ ಸಭಾಸು || ೬ ||

|| ಪದಪಾಠಃ ||

ಯೂಯಂ | ಗಾವಃ | ಮೇದಯಥ | ಕೃಶಂ | ಚಿತ್ | ಅಶ್ರೀರಂ | ಚಿತ್ | ಕೃಣುಥ| ಸುऽಪ್ರತೀಕಂ | ಭದ್ರಂ | ಗೃಹಂ | ಕೃಣುಥ| ಭದ್ರऽವಾಚಃ | ಬೃಹತ್ | ವಃ | ವಯಃ | ಉಚ್ಯತೇ | ಸಭಾಸು || ೬ ||

|| ಸಾಯಣಭಾಷ್ಯಂ ||

ಹೇ ಗಾವೋ ಯೂಯಂ ಮೇದಯಥ | ಆಪ್ಯಾಯನಂ ಕುರುಥೇತ್ಯರ್ಥಃ | ತಥಾ ಕೃಶಂ ಚಿತ್ ಕ್ಷೀಣಮಪ್ಯಶ್ರೀರಂ ಚಿದಮಂಗಲಮಪಿ ಸುಪ್ರತೀಕಂ ಶೋಭನಾಂಗಂ ಕೃಣುಥ | ಕುರುಥ | ಹೇ ಭದ್ರವಾಚಃ ಕಲ್ಯಾಣಧ್ವನ್ಯುಪೇತಾ ಗಾವೋऽಸ್ಮದೀಯಂ ಗೃಹಂ ಭದ್ರಂ ಕಲ್ಯಾಣಂ ಕೃಣುಥ | ಗೋಭಿರುಪೇತಂ ಕುರುಥ | ಸಭಾಸು ಯಾಗಪರಿಷತ್ಸು ಹೇ ಗಾವೋ ಯುಷ್ಮಾಕಂ ಬೃಹನ್ಮಹದ್ವಯೋऽನ್ನಮುಚ್ಯತೇ | ಸರ್ವೈರ್ದೀಯತ ಇತ್ಯರ್ಥಃ ||

|| ಪ್ರತಿಪದಾರ್ಥ ||

**ಗಾವಃ**—ಎಲೈ ಗೋವುಗಳೇ | **ಯೂಯಂ**—ನೀವು | **ಮೇದಯಥ**—ಸಂತೋಷವನ್ನುಂಟು ಮಾಡಿರಿ | **ಕೃಶಂ ಚಿತ್**—ಕ್ಷೀಣವಾಗಿದ್ದರೂ | **ಅಶ್ರೀರಂ ಚಿತ್**—ಅವಲಕ್ಷಣವಾಗಿದ್ದರೂ | **ಸುಪ್ರತೀಕಂ ಕೃಣುಥ**—ಅಂತಹ ನಮ್ಮ ಅಂಗಗಳನ್ನು ಲಕ್ಷಣವಾಗಿರುವಂತೆ ಮಾಡಿರಿ | **ಭದ್ರವಾಚಃ**—ಮಂಗಳಕರವಾದ ಧ್ವನಿಗಳುಳ್ಳ ಎಲೈ ಗೋವುಗಳೇ | **ಗೃಹಂ**—ನಮ್ಮ ಗೃಹವನ್ನು | **ಭದ್ರಂ**—ಕಲ್ಯಾಣಾತ್ಮಕವನ್ನಾಗಿ | **ಕೃಣುಥ**—ಮಾಡಿರಿ | **ಸಭಾಸು**—ಯಜ್ಞಸಭೆಗಳಲ್ಲಿ | **ಬೃಹತ್**—ಪ್ರಭೂತವಾದ | **ವಯಃ**—ಅನ್ನವು | **ವಃ**—ನಿಮಗೆ | **ಉಚ್ಯತೇ**—ಅರ್ಪಿತವಾಗುತ್ತದೆ.

|| ಭಾವಾರ್ಥ ||

ಎಲೈ ಗೋವುಗಳೇ, ನೀವು ನಮಗೆ ಸಂತೋಷವನ್ನುಂಟುಮಾಡಿರಿ. ನಮ್ಮ ಅಂಗಗಳು ಕ್ಷೀಣವಾಗಿದ್ದರೂ ಅವಲಕ್ಷಣವಾಗಿದ್ದರೂ ಅಂತಹ ನಮ್ಮ ಅಂಗಗಳನ್ನು ಲಕ್ಷಣವಾಗಿರುವಂತೆ ಮಾಡಿರಿ. ಮಂಗಳಕರಗಳಾದ ಧ್ವನಿಗಳುಳ್ಳ ಎಲೈ ಗೋವುಗಳೇ, ನಮ್ಮ ಗೃಹವನ್ನು ಕಲ್ಯಾಣಾತ್ಮಕವನ್ನಾಗಿ ಮಾಡಿರಿ. ನಿಮಗೆ ಯಜ್ಞಸಭೆಗಳಲ್ಲಿ ಪ್ರಭೂತವಾದ ಅನ್ನವು ಅರ್ಪಿತವಾಗುತ್ತದೆ.

## English Translation.

Do you, Cows, give us nourishment : render the emaciated, the unlovely body the reverse : do you, whose lowing is the auspicious, make my dwelling prosperous : great is the abundance that is attributed to you in religious assemblies.

॥ ಸಂಹಿತಾಪಾಠಃ ॥

ಪ್ರಜಾವತೀಃ ಸೂಯವಸಂ ರಿಶಂತೀಃ ಶುದ್ಧಾ ಅಪಃ ಸುಪ್ರಪಾಣೇ ಪಿಬಂತೀಃ।
ಮಾ ವಃ ಸ್ತೇನ ಈಶತ ಮಾಘಶಂಸಃ ಪರಿ ವೋ ಹೇತೀ ರುದ್ರಸ್ಯ ವೃಜ್ಯಾಃ॥

॥ ಪದಪಾಠಃ ॥

ಪ್ರಜಾಽವತೀಃ । ಸುಽಯವಸಂ । ರಿಶಂತೀಃ । ಶುದ್ಧಾಃ । ಅಪಃ । ಸುಽಪ್ರಪಾನೇ । ಪಿಬಂತೀಃ ।
ಮಾ । ವಃ । ಸ್ತೇನಃ । ಈಶತ । ಮಾ । ಅಘಽಶಂಸಃ । ಪರಿ । ವಃ । ಹೇತಿಃ । ರುದ್ರಸ್ಯ। ವೃಜ್ಯಾಃ॥ ೭ ॥

॥ ಸಾಯಣಭಾಷ್ಯಂ ॥

ಹೇ ಗಾವೋ ಯೂಯಂ ಪ್ರಜಾವತೀಃ ಪ್ರಜಾವತ್ಯೋ ವತ್ಸಾಭಿರ್ಯುಕ್ತಾ ಭವತೇತಿ ಶೇಷಃ । ಸುಯವಸಂ ಶೋಭನತೃಣಂ ರಿಶಂತೀ ರಿಶಂತ್ಯೋ ಭಕ್ಷಣಾರ್ಥಂ ಹಿಂಸಂತ್ಯೋ ಭವತ । ಸುಪ್ರಪಾಣೇ ಸುಖೇನ ಪಾತವ್ಯೇ ತಟಾಕಾದೌ ಶುದ್ಧಾ ನಿರ್ಮಲಾ ಅಪ ಉದಕಾನಿ ಪಿಬಂತೀಃ ಪಿಬಂತ್ಯಶ್ಚ ಭವತ । ವೋ ಯುಷ್ಮಾನ್ ಸ್ತೇನಸ್ತಸ್ಕರೋ ಮೇಶತ । ಮೇಶಿಷ್ಟ । ಈಶ್ವರೋ ಮಾ ಭೂತ್ । ತಥಾಪ್ಯಘಶಂಸೋ ವ್ಯಾಘ್ರಾದಿಃ ಶತ್ರುರ್ಮೇಶತ । ಅಪಿ ಚ ವೋ ಯುಷ್ಮಾನ್ರುದ್ರಸ್ಯ ಕಾಲಾತ್ಮಕಸ್ಯ ಪರಮೇಶ್ವರಸ್ಯ ಹೇತಿರಾಯುಧಂ ಚ ಪರಿ ವೃಜ್ಯಾಃ । ಪರಿವೃಣಕ್ತು । ಪರಿಹರತು ॥

॥ ಪ್ರತಿಪದಾರ್ಥ ॥

(ಎಲೈ ಗೋವುಗಳೇ) **ಪ್ರಜಾವತೀಃ**—ಕರುಗಳೊಡನೆ ಕೂಡಿದವರಾಗಿ ಆಗಿರಿ। **ಸುಯವಸಂ**—ಶ್ರೇಷ್ಠವಾದ ತೃಣವನ್ನು । **ರಿಶಂತೀಃ**—ಮೇಯುತ್ತಾ ಇರಿ। **ಸುಪ್ರಪಾಣೇ**—ಸುಖವಾಗಿ ಕುಡಿಯಲು ಯೋಗ್ಯವಾದ ಕೊಳದಲ್ಲಿ। **ಶುದ್ಧಾಃ**—ನಿರ್ಮಲವಾದ । **ಅಪಃ**—ಉದಕಗಳನ್ನು। **ಪಿಬಂತೀಃ**—ಪಾನಮಾಡುತ್ತಿರಿ । **ವಃ**—ನಿಮಗೆ । **ಸ್ತೇನಃ**—ಚೋರನು । **ಮಾ ಈಶತ**—ಒಡೆಯನಾಗದಿರಲಿ । **ಅಘಶಂಸಃ**—ನಿಮಗೆ ಕೇಡನ್ನುಂಟುಮಾಡುವ ವ್ಯಾಘ್ರಾದಿಗಳು । **ಮಾ**—ನಿಮಗೆ ಹಿಂಸೆಮಾಡದಿರಲಿ। **ವಃ**—ನಿಮ್ಮನ್ನು । **ರುದ್ರಸ್ಯ**—ರುದ್ರನ । **ಹೇತಿಃ**—ಆಯುಧವು । **ಪರಿ ವೃಜ್ಯಾಃ**—ಆವರಿಸದಿರಲಿ (ನಿಮ್ಮಮೇಲೆ ಬೀಳದಿರಲಿ).

॥ ಭಾವಾರ್ಥ ॥

ಎಲೈ ಗೋವುಗಳೇ, ನೀವು ನಿಮ್ಮ ಕರುಗಳೊಡಗೂಡಿದವರಾಗಿರಿ. ಶ್ರೇಷ್ಠವಾದ ತೃಣವನ್ನು ಮೇಯುತ್ತಿರಿ ಸುಖವಾಗಿ ಕುಡಿಯಲು ಯೋಗ್ಯವಾದ ಕೊಳದಲ್ಲಿ ನಿರ್ಮಲವಾದ ಉದಕಗಳನ್ನು ಪಾನಮಾಡುತ್ತಿರಿ. ನಿಮಗೆ ಚೋರನು ಒಡೆಯನಾಗದಿರಲಿ. ನಿಮಗೆ ಕೇಡನ್ನುಂಟುಮಾಡುವ ವ್ಯಾಘ್ರಾದಿಗಳು ಹಿಂಸೆಮಾಡದಿರಲಿ. ರುದ್ರನ ಆಯುಧವು ನಿಮ್ಮಮೇಲೆ ಬೀಳದಿರಲಿ.

## English Translation.

May you, Cows, have many calves grazing upon food pasture, and drinking pure water at accessible ponds : may no thief be your master : no beast of prey (assail you), and may the (fatal) weapon of Rudra avoid you.

॥ ಸಂಹಿತಾಪಾಠಃ ॥

ಉಪೇದಮುಪಪರ್ಚನಮಾಸು ಗೋಷೂಪ ಪೃಚ್ಯತಾಂ ।
ಉಪ ಋಷಭಸ್ಯ ರೇತಸ್ಯುಪೇಂದ್ರ ತವ ವೀರ್ಯೇ ॥ ೮ ॥

॥ ಪದಪಾಠಃ ॥

ಉಪ । ಇದಂ । ಉಪऽಪರ್ಚನಂ । ಆಸು । ಗೋಷು । ಉಪ । ಪೃಚ್ಯತಾಂ ।
ಉಪ । ಋಷಭಸ್ಯ । ರೇತಸಿ । ಉಪ । ಇಂದ್ರ । ತವ । ವೀರ್ಯೇ ॥ ೮ ॥

॥ ಸಾಯಣಭಾಷ್ಯಂ ॥

ಆಸು ಗೋಷ್ವಿದಮುಪಪರ್ಚನಮಾಪ್ಯಾಯನಮುಪ ಪೃಚ್ಯತಾಂ । ಸಂಪೃಚ್ಯತಾಂ । ಹೇ ಇಂದ್ರ ತವ ವೀರ್ಯೇ ತ್ವದೀಯವೀರ್ಯೇ ನಿಮಿತ್ತ ಋಷಭಸ್ಯ ಗವಾಂ ಗರ್ಭಮಾದಧಾನಸ್ಯ ವೃಷಭಸ್ಯ ರೇತಸೀದಮುಪಪರ್ಚನಮಾಪ್ಯಾಯನಂ । ಗೋಷು ಹ್ಯಾಪ್ಯಾಯಿತಾಸು ಸತೀಷು ತತ್ಸಂಬಂಧಿಕ್ಷೀರಾದಿ-ಹವಿರ್ದ್ವಾರೇಣೇಂದ್ರ ಆಪ್ಯಾಯಿತೋ ಭವತೀತ್ಯರ್ಥಃ । ಉಪೇತಿ ಪುನರ್ವಚನಂ ಪಾದಭೇದಾನಾಂ ಪೂರಣಾರ್ಥಮಿತಿ ॥

॥ ಪ್ರತಿಪದಾರ್ಥ ॥

ಆಸು ಗೋಷು— ಈ ಗೋವುಗಳಲ್ಲಿ । ಇದಂ ಉಪಪರ್ಚನಂ— ಈ ವಿಧವಾದ ಪುಷ್ಟಿಯು । ಉಪ ಪೃಚ್ಯತಾಂ— ಪ್ರಾರ್ಥಿತವಾಗಲಿ । ಇಂದ್ರ— ಎಲೈ ಇಂದ್ರನೇ । ತವ— ನಿನ್ನ । ವೀರ್ಯೇ— ವೀರ್ಯ ಪ್ರಕಟನೆಗಾಗಿ । ಋಷಭಸ್ಯ— ವೃಷಭದ । ರೇತಸಿ — ರೇತಸ್ಸಿನಲ್ಲಿ ವೀರ್ಯವಿರಲಿ.

॥ ಭಾವಾರ್ಥ ॥

ಈ ಗೋವುಗಳಲ್ಲಿ ಮೇಲೆ ಹೇಳಿರುವ ಪುಷ್ಟಿಯಿರಲೆಂದು ಪ್ರಾರ್ಥಿತವಾಗಲಿ. ಎಲೈ ಇಂದ್ರನೇ, ನಿನ್ನ ವೀರ್ಯಾಭಿವೃದ್ಧಿಗಾಗಿ ವೃಷಭದ ರೇತಸ್ಸಿನಲ್ಲಿ ವೀರ್ಯವಿರಲಿ.

## English Translation.

Let the nourishment of Cows be solicited, let the vigour of the bull (be requsted), Indra, for your invigoration.

॥ ವಿಶೇಷವಿಷಯಗಳು ॥

ಪಶುಗಳಲ್ಲಿ ಎಂದರೆ ಗೋವುಗಳಲ್ಲಿ ಪುಷ್ಟಿಯಿರುವುದರಿಂದ ಅವುಗಳು ಹಾಲನ್ನು ಸಮೃದ್ಧಿಯಾಗಿ ಕರೆಯುವವು. ಹಾಲಿನಿಂದ ದಧಿಘೃತಾದಿಗಳು ಉಂಟಾಗಿ ಯಜ್ಞಾದಿಗಳಲ್ಲಿ ಉಪಯೋಗಿಸುವ ಘೃತ (ಆಜ್ಯವು) ದೊರೆಯುವುದು. ಆಜ್ಯಾದಿಗಳಿಂದ ಇಂದ್ರಾದಿ ದೇವತೆಗಳನ್ನುದ್ದೇಶಿಸಿ ಹೋಮಮಾಡುವುದರಿಂದ ಆ ದೇವತೆಗಳಿಗೆ ತೃಪ್ತಿಯಾಗುವುದು. ಈ ಕಾರಣದಿಂದ ಗೋವುಗಳಲ್ಲಿ ಪುಷ್ಟಿಯಿರಲೆಂದು ಪ್ರಾರ್ಥಿತವಾಗಿದೆ. ಮತ್ತು ಗೋವುಗಳು ಕರುಗಳನ್ನು ಹಾಕಿದಾಗ ಮಾತ್ರ ಕೆಲವುಕಾಲ ಹಾಲನ್ನು ಕರೆಯುವುದರಿಂದ ಕರುಗಳನ್ನು ಹಾಕುವುದಕ್ಕಾಗಿ ವೃಷಭದಲ್ಲಿ ವೀರ್ಯವಿರಲಿ ಎಂಬ ವಿಷಯವೂ ಇಲ್ಲಿ ಉಕ್ತವಾಗಿದೆ. ಗೋಸಂತತಿಯ ಅಭಿವೃದ್ಧಿಗಾಗಿ ವೃಷಭದ ರೇತಸ್ಸಿನಲ್ಲಿ ವೀರ್ಯವು ಇರುವುದು ಆವಶ್ಯಕವು. ಅದರಂತೆ ಯಜ್ಞಕ್ಕೆ ಕ್ಷೀರಾದಿಗಳು ಸಮೃದ್ಧಿಯಾಗಿ ದೊರೆಯಬೇಕಾದರೆ ಗೋವುಗಳು ಕರುವನ್ನು ಹಾಕಿ ಪುಷ್ಟಿಯಾಗಿರಬೇಕಾದುದೂ ಆವಶ್ಯಕವು. ಆದುದರಿಂದ ಈ ಎರಡು ಕಾರ್ಯಗಳೂ ಅತ್ಯವಶ್ಯಕವೆಂದೂ ಇವು ಇಂದ್ರನ ಶಕ್ತಿಸಾಮರ್ಥ್ಯದಿಂದಲೇ ಉಂಟಾಗುವುದೆಂದೂ ಈ ಋಕ್ಕಿನಲ್ಲಿ ಸ್ಪಷ್ಟವಾಗಿ ವಿವರಿಸಿದೆ.

---

ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥

ಇತಿ ಶ್ರೀಮದ್ರಾಜಾಧಿರಾಜ ಪರಮೇಶ್ವರ ವೈದಿಕಮಾರ್ಗಪ್ರವರ್ತಕ ಶ್ರೀ ವೀರಬುಕ್ಕಭೂಪಾಲಸಾಮ್ರಾಜ್ಯಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ ವೇದಾರ್ಥಪ್ರಕಾಶೇ ಋಕ್ಸಂಹಿತಾಭಾಷ್ಯೇ ಚತುರ್ಥಾಷ್ಟಕೇ ಷಷ್ಠೋಽಧ್ಯಾಯಃ ಸಮಾಪ್ತಃ

॥ ಓಂ ತತ್ಸತ್ ॥

ಇಲ್ಲಿಗೆ ಶ್ರೀಸಾಯಣಭಾಷ್ಯಸಹಿತವೂ ಕರ್ನಾಟಕ ಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯ ನಾಲ್ಕನೆಯ ಅಷ್ಟಕದಲ್ಲಿ
ಆರನೆಯ ಅಧ್ಯಾಯವು ಮುಗಿದುದು.

---

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತು ತೇ ॥
॥ ಶುಭಂ ಭೂಯಾತ್ ॥
॥ ಮಂಗಳಂ ॥